ವಿ. ಸೀ. : ನೂರರ ನೆನಪು

ಜನ್ಮಶತಾಬ್ದಿ ಸ್ಮರಣೆ

ಸಂಪಾದಕರು :

ಪ್ರೊ. ಎಲ್. ಎಸ್. ಶೇಷಗಿರಿ ರಾವ್

ಎಂ. ವಿ. ವೆಂಕಟೇಶ ಮೂರ್ತಿ

ವಿ. ಸೀ. ಸಂಪದ (ವಿ. ಸೀ. ಸಂಸ್ಮರಣ ವೇದಿಕೆ)

ರಾಜೀವನಗರ, ಬನಶಂಕರಿ 3 ನೇ ಸ್ಟೇಜ್, ಬೆಂಗಳೂರು–560 085

V. Si. : NOORARA NENAPU : Birth Centenary Tributes from Friends, Students & Admirers, Collected & Edited by Prof. L. S. Seshagiri Rao & M. V. Venkatesh Murthy, Published by V. Si. Sampada, (V. Si. Samsmarana Vedike), No. 25, 'Vasundhara','C' Cross, Rajivnagar, BSK III Stage, IV Phase, Bangalore–560 085.

Pages : xiv + 32 + 608

Price : Rs. 260/–

First Impression : 1999 © Reserved

ಬೆಲೆ : ಇನ್ನೂರ ಅರವತ್ತು ರೂಪಾಯಿಗಳು

ವಿ. ಸೀ. ಸಂಪದ (ವಿ. ಸೀ. ಸಂಸ್ಮರಣ ವೇದಿಕೆ)
25, 'ವಸುಂಧರಾ', 'ಸಿ' ಕ್ರಾಸ್, ರಾಜೀವನಗರ,
ಬನಶಂಕರಿ 3ನೇ ಸ್ಟೇಜ್, 4ನೇ ಫೇಸ್, ಬೆಂಗಳೂರು–85

ಅಧ್ಯಕ್ಷರು : ಡಾ. ಎಚ್. ಕೆ. ರಂಗನಾಥ್

ಉಪಾಧ್ಯಕ್ಷರು : ಎಂ. ಮಲ್ಲಿಕಾರ್ಜುನಯ್ಯ
ಪ್ರೊ. ಎಂ. ಎಚ್. ಕೃಷ್ಣಯ್ಯ
ಪ್ರೊ. ಕೆ. ಎಸ್. ಕಲ್ಲಾಪುರ

ಕಾರ್ಯದರ್ಶಿ : ಪ್ರೊ. ಎಂ. ವಿ. ಸತ್ಯನಾರಾಯಣ

ಕೋಶಾಧಿಕಾರಿ : ಕೆ. ಬಿ. ಷಣ್ಮುಖಪ್ಪ

ಸದಸ್ಯರು : ಮತ್ತೂರು ಕೃಷ್ಣಮೂರ್ತಿ
ವಿ. ಎಸ್. ಕೃಷ್ಣಮೂರ್ತಿ
ಎಚ್. ವಿ. ವೆಂಕಟಸುಬ್ಬಯ್ಯ
ಅ. ಬಾ. ಶೆಟ್ಟಿ ಪೊಳಲಿ (ಮಣಿಪಾಲ)
ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ
ಎಸ್. ಸತ್ಯನಾರಾಯಣ
ಶ್ರೀಮತಿ ಮೀನಾ ವಾಂಗೀಕರ್ (ಪುಣೆ)
ಶ್ರೀಮತಿ ಅಂದನೂರು ಶೋಭ
ಮುನಿಧರ್ಮಯ್ಯ
ಎಂ. ವಿ. ವಿ. ಮೂರ್ತಿ

ಮುದ್ರಕರು
ನೇತ್ರಾ ಪ್ರಿಂಟರ್ಸ್
ಬೆಂಗಳೂರು–೫೬೦ ೦೧೯

ಪರಿವಿಡಿ

ಅರಿಕೆ		ಎಲ್. ಎಸ್. ಶೇಷಗಿರಿ ರಾವ್	ix

ಕಾವ್ಯಾಂಜಲಿ

1.	ಸೀತಣ್ಣ	ಮಾಸ್ತಿ ವೆಂಕಟೇಶ ಅಯ್ಯಂಗಾರ್	3
2.	ಪಂಪಾಯಾತ್ರೆ ಮತ್ತು "ವಿ.ಸೀ."	ದ. ರಾ. ಬೇಂದ್ರೆ	5
3.	ಕವಿ ವಿ.ಸೀ.	ಎಂ. ವಿ. ಸೀತಾರಾಮಯ್ಯ	6
4.	ಶುಚಿಯ ಆರಾಧಕ	ವೇಣುಗೋಪಾಲ ಸೊರಬ	7
5.	ನಿಜದ ಬೆಳಕ ಕಂಡವರು	ಕೆ. ಎಸ್. ನರಸಿಂಹಸ್ವಾಮಿ	8
6.	ಇಂದು ನಮ್ಮ ನೆನಪಿಗೆ	ಜಿ. ಎಸ್. ಶಿವರುದ್ರಪ್ಪ	9
7.	ಕಾಮಧೇನು	'ಸಾಕ್ಷಿ' (ಆರ್. ಜಿ. ಕುಲಕರ್ಣಿ)	10
8.	ವಿ.ಸೀ. ಅವರಿಗೆ	ಕ. ವೆಂ. ರಾಜಗೋಪಾಲ	12
9.	ಮಹಾನುಭಾವ	ಸುಜನಾ	13
10.	ನಮ್ಮ ಹಾಡು	ನಾ. ಗೀತಾಚಾರ್ಯ	14

ಸ್ಮರಣ

1.	ಸರಳ, ಮಧುರ, ವಿರಳ ಜೀವನ	ಶಿವರಾಮ ಕಾರಂತ	17
2.	ಚಿರಸ್ಮರಣೀಯ ವಿ.ಸೀ.	ರಂ. ಶ್ರೀ. ಮುಗಳಿ	25
3.	ಸರ್ವಂಕಷ ವ್ಯಕ್ತಿತ್ವ	ಪಿ. ವಿ. ಜೋಶಿ	31
4.	ಸರಳ ಜೀವನ, ಉನ್ನತ ಚಿಂತನ	ಜಿ. ಎಸ್. ದೀಕ್ಷಿತ್	36
5.	ಸಾಮಿರದ ನೆನಪು	ಎಸ್. ಆರ್. ಮಳಗಿ	40
6.	ವಿ.ಸೀ. As ವಿ ಸೀ.	ಕೌಲಗಿ ಶೇಷಾಚಾರ್	45
7.	ಮಾರ್ಗದರ್ಶನ ಮಾಡಿದ ಹಿರಿಯರು	ಜಿ. ವೆಂಕಟಸುಬ್ಬಯ್ಯ	50
8.	ಶತಮಾನದ ಸವಿ	ಎಸ್ಕೆ. ಕುಲಕರ್ಣಿ	55
9.	ರಸಜೀವಿ	ಎಸ್. ವಿ. ಪರಮೇಶ್ವರ ಭಟ್ಟ	60
10.	ಸಂಸ್ಕೃತಿಯ ಉತ್ಕೃಷ್ಟ ಪ್ರತೀಕ	ಕೆ. ಎಸ್. ನರಸಿಂಹಸ್ವಾಮಿ	62
11.	ಅವಿಸ್ಮರಣೀಯ ಸ್ಮರಣೆಗಳು	ಕಯ್ಯಾರ ಕಿಞ್ಞಣ್ಣ ರೈ	67
12.	ನನ್ನ ನೆನಪಿನಲ್ಲಿ ನೆಲೆಸಿದ ವಿ.ಸೀ.	ಎನ್. ರಂಗನಾಥ ಶರ್ಮಾ	71

13.	ಕಲಾತಪಸ್ವಿ	ಸಮೇತನಹಳ್ಳಿ ರಾಮರಾವ್	81
14.	ಪುಣ್ಯ ಚೇತನ	ಬನ್ನಂಜೆ ರಾಮಾಚಾರ್ಯ	87
15.	ವಿ.ಸೀ. ವಂದೇ	ಕೆ. ನರಸಿಂಹಮೂರ್ತಿ	92
16.	ದೊಡ್ಡತನಕ್ಕೆ ತಲೆ ಬಾಗಿದೆ	ಜಿ. ಆರ್. ಲಕ್ಷ್ಮಣರಾವ್	95
17.	ಮುಂಬಯಿಯಲ್ಲಿ ವಿ.ಸೀ.	ವ್ಯಾಸರಾಯ ಬಲ್ಲಾಳ	99
18.	ನೆನಪಿನಲ್ಲಿ ನಿಂತ ಹಿರಿಯರು	ಎಚ್. ವೈ. ಶಾರದಾಪ್ರಸಾದ್	103
19.	ಪ್ರಸಾರತಜ್ಞ	ಎಚ್. ಕೆ. ರಂಗನಾಥ್	107
20.	ಸುಸಂಸ್ಕೃತ ಚೇತನ	ಕು.ಶಿ. ಹರಿದಾಸಭಟ್	113
21.	ಸುಸಂಸ್ಕೃತ ಹಿರಿಯ ಜೀವ	ಎಲ್. ಎಸ್. ಶೇಷಗಿರಿ ರಾವ್	118
22.	ಶುಚಿ ರುಚಿ ಸೌಜನ್ಯಗಳ ಸಾಕಾರಮೂರ್ತಿ	ಬಿ. ಸಿ. ರಾಮಚಂದ್ರಶರ್ಮ	126
23.	ಸುಂದರ ನೆನಪುಗಳ ಚಿನ್ನದ ಗಣಿ	ಎಚ್. ಕೆ. ರಾಮಚಂದ್ರ ಮೂರ್ತಿ	130
24.	ನನ್ನ ಪೂಜ್ಯ ವಿದ್ಯಾಗುರು	ಎನ್. ಬಸವಾರಾಧ್ಯ	136
25.	ನೂರು ನಮನಗಳು	ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್	140
26.	ನಮ್ಮ ಊರಿನ ಕಾಡಿನ ಹಾಗೆ....	ಶೇಷನಾರಾಯಣ	147
27.	ಕೆಲವು ಮಾಸದ ನೆನಪುಗಳು	ಚಿನ್ನವೀರ ಕಣವಿ	152
28.	ದೊಡ್ಡ ರೀತಿಯಲ್ಲಿ ಬದುಕಿದವರು	ಕೀರ್ತಿನಾಥ ಕುರ್ತಕೋಟಿ	157
29.	ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ	ಮತ್ತೂರು ಕೃಷ್ಣಮೂರ್ತಿ	162
30.	ವಿ.ಸೀ. ಕೆಲವು ನೆನಪುಗಳು	ಎಸ್. ಎನ್. ಶಿವಸ್ವಾಮಿ	172
31.	ರೂಪಾರಾಧಕ	ಟಿ. ಮಹಾಬಲೇಶ್ವರ ಭಟ್ಟ	175
32.	ಮಾರ್ಗದರ್ಶಕ ಬೆಳಕು	ಕೆ. ಬಿ. ಪ್ರಭು ಪ್ರಸಾದ್	179
33.	ನನ್ನ ಗೌರವದ ಗುರುಗಳು	ಪ್ರಭುಶಂಕರ	187
34.	ನಗುಮೊಗದ ವಿ.ಸೀ.	ಎಂ. ಚಿದಾನಂದಮೂರ್ತಿ	195
35.	ನಾಡಿನ ಸಂಸ್ಕೃತಿಯನ್ನು ಕಟ್ಟುವವರು	ಜಿ. ಎಸ್. ಸಿದ್ಧಲಿಂಗಯ್ಯ	199
36.	ನೋವುಂಡು ನಲಿವು ನೀಡುವವರು	ಸಾ. ಶಿ. ಮರುಳಯ್ಯ	203
37.	ವಿ.ಸೀ. ಒಂದು ಸ್ಮರಣೆ	ಡಿ. ಎಸ್. ಗುರುರಾಜರಾವ್	207
38.	ಗುರು ವಿ.ಸೀ. ನಾನು ಕಂಡಂತೆ	ಶಾ. ಬಾಲುರಾವ್	212
39.	ಕನ್ನಡದ ಹಿರಿಯ ಆಚಾರ್ಯ	ಯು. ಆರ್. ಅನಂತಮೂರ್ತಿ	230
40.	ವಿ.ಸೀ. ಒಂದು ನೆನಪು	ಜಿ. ರಾಮಕೃಷ್ಣ	232
41.	ಸೂಕ್ಷ್ಮಗ್ರಾಹಿ ವಿದ್ವಾಂಸ	ಟಿ. ವಿ. ವೆಂಕಟಾಚಲಶಾಸ್ತ್ರಿ	236
42.	ಮೃದು ಮಧುರ ವ್ಯಕ್ತಿತ್ವ	ಚಿ. ನ. ಮಂಗಳಾ	240
43.	ನೆನಪೇ ಒಂದು ಸುಖ	ಪಂಚಾಕ್ಷರಿ ಹಿರೇಮಠ	246
44.	ಸ್ಫೂರ್ತಿಯ ಸೆಲೆ	ಕೃಷ್ಣಾನಂದ ಕಾಮತ್	250

45.	ನೊಳ್ಳಾವು ನೊಳ್ಳಾವೇ	ಆ. ರಾ. ಮಿತ್ರ	254
46.	ನಾನು ಕಂಡ ವಿ.ಸೀ.	ಭಮತೀಂದ್ರ ನಾಡಿಗ್	259
47.	ಉದ್ಧಾರ ಪಟ್ಟಿಗಳ ಅಪೂರ್ವ ಜೀವನ	ಕೆ. ಎಸ್. ನಿಸಾರ್ ಅಹಮದ್	272
48.	ನೆನಪುಗಳ ಮೆಲಕು	ಹಂಪ ನಾಗರಾಜಯ್ಯ	287
49.	ನೆನಪಿನಂಗಳದಿಂದ	ನಿರ್ಮಲಾ ಆನಂದಾರ್	291
50.	ನೆನಪಿನ ಹಿನ್ನೋಟದಲ್ಲಿ	ಸೂ. ಪುಟ್ಟಪ್ಪಯ್ಯಂ	296
51.	ನಗ್ನ ಪುರಂಧ್ರ ಬದುಕು	ಲಲಿತಮ್ಮ ಡಾ. ಚಂದ್ರಶೇಖರ್	300
52.	ಹೃದಯವಂತ ವಿ.ಸೀ.	ಎಸ್. ಆರ್. ರಾಮಸ್ವಾಮಿ	304
53.	ಉತ್ತರ ಕನ್ನಡ ಜಲ್ಲೆಯಲ್ಲಿ ವಿ.ಸೀ.	ಜ್ಯೋತ್ಸ್ನಾ ಕಾಮತ್	318
54.	ವಿ.ಸೀ. ಒಡನಾಟದ ನೆನಪುಗಳು	ಎನ್. ಆರ್. ನಾಯಕ	322
55.	ಬದುಕ ಪ್ರೀತಿಸುವ ಚೈತನ್ಯ ತುಂಬಿದ ವಿ.ಸೀ.	ವಿಜಯಾ	334
56.	ಗುರು ಸದೃಶರು	ಎಮ್. ರಾಮಚಂದ್ರ	347
57.	ಪರಿಶುದ್ಧ ಜೀವನ	ಎಸ್. ಪಿ. ಪದ್ಮಪ್ರಸಾದ್	355
58.	ಪುಣ್ಯ ಪುರುಷ	ಆ. ಬಾ. ಶೆಟ್ಟಿ ಪೊಳಲಿ	358
59.	ಪ್ರಾತಃಸ್ಮರಣೀಯರು	ಪಿ. ಎಂ. ಹೆಗಡೆ	368
60.	ವಿಶಿಷ್ಟ ಸೀಮಾಪುರುಷ	ಜಿ. ಅಶ್ವತ್ಥನಾರಾಯಣ	372
61.	ಅಪರೂಪದ ಜೀವ	ಕೆ. ಎಸ್. ಕಲ್ಲಾಪುರ	379
62.	ಅಂತಿಮ ದರ್ಶನ	ಚಿರಂಜೀವಿ	398

ನಮನ

1.	ಚಿಕ್ಕಮೂರ್ತಿ, ದೊಡ್ಡ ಕೀರ್ತಿ	ಕೌಂಡಿನ್ಯ	405
2.	ಕೇ ಪಿ ನೋ ದಿವಸಾ ಗತಾಃ	ಗೌರೀಶ್ವರಿ ವೆಂಕುಸುಬ್ಬಯ್ಯ	410
3.	ಪುಣ್ಯಸ್ಮರಣೆ	ಬಿ. ಪಿ. ರಾಧಾಕೃಷ್ಣ	413
4.	ಆದರ್ಶ ಗುರು	ಎಚ್. ಎಸ್. ದೊರೆಸ್ವಾಮಿ	420
5.	ಸಮರ್ಥ ಉಪಾಧ್ಯಾಯರು	ಆರ್. ಎಸ್. ರಾಮರಾವ್	423
6.	ಅಮರ ಸ್ಮೃತಿ	ಕೆ. ಎಸ್. ನಾರಾಯಣಸ್ವಾಮಿ	431
7.	ವಿದ್ಯಾರ್ಥಿಯಾಗಿದ್ದದ್ದು ಭಾಗ್ಯ	ಡಿ. ಎಂ. ಚಂದ್ರಶೇಖರ್	438
8.	ವಿಚಿತ್ರ ನೆನಪುಗಳು	ಸಿ. ವಿ. ಗೋವಿಂದರಾವ್	440
9.	ಪಾಲು ಜೇನು ಕೂಡಿದಂತಿರುತ್ತಿದ್ದ ಪಾಠ	ಬಿ. ವಿ. ಕೃಷ್ಣಮೂರ್ತಿ	447
10.	ಅಸಾಧಾರಣ ಪ್ರೌಢಿಮೆಯ ವಿ.ಸೀ.	ಡಿ. ನಂಜುಂಡಯ್ಯ	449
11.	ಮಾನವೀಯತೆಯ ಮಹಾವ್ಯಕ್ತಿ	ವಿ. ಸತ್ಯನಾರಾಯಣ	452
12.	ನಮ್ಮ ಮೇಷ್ಟ್ರು	ಸಿ. ಆರ್. ರಾವ್	455

13.	ನವಿರಾದ ನಡೆಯವರು	ಜಿ. ಎ. ನರಸಿಂಹಮೂರ್ತಿ	459
14.	ಶಿಷ್ಯಚಿತ್ತಾಪಹಾರಕ	ಎನ್. ಎಸ್. ರಾಮಸ್ವಾಮಿ ಅಯ್ಯರ್	464
15.	ನಾ ಕಂಡ ವಿ.ಸೀ	ಬಿ. ಎಸ್. ವೆಂಕಟರಾವ್	467
16.	ಸಂಸ್ಕೃತಿಯ ಸಾಕಾರ ರೂಪ	ಡಿ. ಆರ್. ವೆಂಕಟರಮಣನ್	471
17.	ಪ್ರಾತಃಪೂಜ್ಯ	ಎಂ. ನರೇಂದ್ರಬಾಬು	474
18.	ದೊಡ್ಡತನಕ್ಕೆ ಇನ್ನೊಂದು ಹೆಸರು	ಸಿ. ಎಚ್. ಪ್ರಹ್ಲಾದರಾವ್	477
19.	ತಸ್ಮೈ ಶ್ರೀ ಗುರವೇ ನಮಃ	ಟಿ. ಎ. ಲಕ್ಷ್ಮೀನಾರಾಯಣ ಶೆಟ್ಟಿ	479
20.	ಗುರುವರ್ಯ	ರತ್ನಮ್ಮ	482
21.	ನಲ್ಮೆಯ ನೆನಪುಗಳು	ನೀಲತ್ತಹಳ್ಳಿ ಕಸ್ತೂರಿ	485
22.	ಗುರು ವಿ.ಸೀ.	ಬಿ. ಎನ್. ಸಂಪತ್	491
23.	ವಿ.ಸೀ.ಯವರ ತರಗತಿಗಳಲ್ಲಿ.....	ಖಜಾನೆ ಕೃಷ್ಣಮೂರ್ತಿ	.494
24.	ಪ್ರೀತಿ ಗೌರವಗಳನ್ನು ಗೆದ್ದ ಹಿರಿಯರು	ಎಸ್. ದತ್ತಾತ್ರಿ	503
25.	ಒಂದು ನೆನಪು	ಕಮಲಾ ರಾಮಸ್ವಾಮಿ	511
26.	ಒಂದಿಷ್ಟು ನೆನಪುಗಳು	ಜಿ. ಎಸ್. ಅವಧಾನಿ	515

ವಂದನ

1.	ಧೀಮಂತ ವ್ಯಕ್ತಿ	ಬಾಪು ರಾಮಣ್ಣ	529
2.	ಗೌರವಾಸ್ಪದ ಗುರು	ಹೊ. ಶ್ರೀನಿವಾಸಯ್ಯ	531
3.	ನಮ್ಮ ಊರಿನ ಅಳಿಯಂದಿರು	ಸಿ. ಎನ್. ಬಸವರಾಜ್	534
4.	ಒಂದು ಪುಣ್ಯ ಸ್ಮರಣೆ	ಎನ್. ನಂಜುಂಡಶಾಸ್ತ್ರಿ	536
5.	ವಿ.ಸೀ. ನೆನಪು	ಜಿ. ಟಿ. ನಾರಾಯಣರಾವ್	539
6.	ಅವರಿಗೆ ಅವರೇ ಹೋಲಿಕೆ	ನಾ. ನಾಗಪ್ಪ	541
7.	ಕಂಡವರೆಂದೂ ಮರೆಯಲಾರರು	ದೇವಂಗಿ ಟಿ. ಚಂದ್ರಶೇಖರ	544
8.	ನಿರ್ಮಲ, ಉದಾತ್ತ ಜೀವನ	ಆದ್ಯ ರಾಮಾಚಾರ್ಯ	547
9.	ವಿ.ಸೀ. ನೆನಪುಗಳು	ಶ್ರೀಮತಿ ವರದಾ ರಾಮರಾವ್ ಪಂಜೆ	549
		ಪಡುಕೋಣೆ ಪ್ರಭಾಶಂಕರ ರಾವ್	550
		ಶ್ರೀಮತಿ ವೃಂದಾ ಪಡುಕೋಣೆ	552
		ಜಯವಂತಿ ದಿ. ಹಿರೇಬೆಟ್	554
10.	ನೆನಪಿನ ಸುರುಳಿಯಿಂದ	ಬಿ. ಆರ್. ವಾಡಪ್ಪಿ	556
11.	ಮಾನವತೆಯ ಮಂದಾರ	ಅಮೃತ ಸೋಮೇಶ್ವರ	558
12.	ಮಹಾನುಭಾವ	ಎಂ. ಎಸ್. ಅಪ್ಪ	560
13.	ಚೈತನ್ಯ ಚಿಮ್ಮಿಸುವ ಸಂಜೀವಿನಿ	ವಸಂತ ಕುಷ್ಟಗಿ	564
14.	ಅಪೂರ್ವ ವ್ಯಕ್ತಿತ್ವ	ಏರ್ಯ ಲಕ್ಷ್ಮೀನಾರಾಯಣ ಆಳ್ವ	568
15.	ನೆನಪೇ ನಿತ್ಯ ಚೈತನ್ಯದಾಯಿ	ಬಿ. ಎಸ್. ಗುಂಡೂರಾವ್	570

16.	ಹೂವಿನೊಡನೆ ನಾರು	ರಾಮಚಂದ್ರ ಉಚ್ಚಿಲ	573
17.	ಸ್ಮರಣೆಯೇ ಪವಿತ್ರ	ಸುರೇಂದ್ರ ದಾನಿ	576
18.	ಅತ್ಯಪರೂಪ ವ್ಯಕ್ತಿ	ನರಸಿಂಹಸ್ವಾಮಿ	578
19.	ಸದ್ಭಾವನೆಯ ಸಹೃದಯರು	ಬಿ. ಎಸ್. ಕೇಶವರಾವ್	582
20.	ಅಳಿಸಲಾಗದ ಸುಂದರ ಚಿತ್ರ	ಎಂ. ಎಸ್. ಮೂರ್ತಿ	586
	ಅನುಬಂಧಗಳು		591
	ಲೇಖಕರ ವಿಳಾಸ		599

ಅರಿಕೆ

ಸುಮಾರು ಅರ್ಧ ಶತಮಾನದ ಹಿಂದೆ, ಮಾಸ್ತಿಯವರು ತಮ್ಮ 'ನವರಾತ್ರಿ'ಯಲ್ಲಿ ತಮ್ಮ ಹಿರಿಯರು ಮತ್ತು ಸ್ನೇಹಿತರಲ್ಲಿ ಕೆಲವರ ಮೂರ್ತಿಗಳನ್ನು ಮಾತುಗಳಲ್ಲಿ ಕಡೆದು ನಿಲ್ಲಿಸಿದರು. ಇಂತಹ ಮೂರ್ತಿಗಳಲ್ಲಿ 'ಸೀತಣ್ಣ'ನವರದೂ – ವಿ.ಸೀ. ಅವರದೂ – ಒಂದು. ವಿ.ಸೀ. ಅವರ ವಿಷಯ ನಾವು ಹೇಳಬಹುದಾದ ಮಾತುಗಳಲ್ಲಿ ಬಹುಪಾಲನ್ನು ಮಾಸ್ತಿ ಅಲ್ಲಿ ಹೇಳಿದ್ದಾರೆ. ತಮ್ಮ ವಿಷಯ, ತಮ್ಮ ಕೃತಿಗಳ ವಿಷಯ ಡೋಲು ಬಜಾಯಿಸಲೊಲ್ಲದ ಸಂಕೋಚ, ಜಂಬ–ಅಸಡ್ಡೆಗಳೆಂದು ಜನ ತಪ್ಪು ತಿಳಿಯುವ ಮಾತಿನ ಅತಿಮಿತಿ ಮತ್ತು ಗಾಂಭೀರ್ಯ, ಅನ್ಯಾಯಕ್ಕೆ ಪ್ರತ್ಯುತ್ತರವಾದ ಮೌನ, ಸಹನೆ ವಜ್ರಕಠೋರ ದಾರ್ಢ್ಯದೊಂದಿಗೆ ಮೃದು – ಮನಸ್ಸು ಇಂತಹ ಹಲವಾರು ಗುಣಗಳನ್ನು ಸ್ಮರಿಸುತ್ತಾರೆ ಮಾಸ್ತಿಯವರು; ಷೇಕ್ಸ್‌ಪಿಯರ್‌ನ ಒಬ್ಬ ನಾಯಕಿಯ ವಿಷಯದಲ್ಲಿ ಬರುವ ಮಾತುಗಳನ್ನು – "She sat like patience on a monument smiling at grief" – ಉದ್ಧರಿಸಿ, ಈ ನಾಯಕಿಯಂತಹ ನಾಯಕರು ಸೀತಣ್ಣ ಎನ್ನುತ್ತಾರೆ. ಮಾಸ್ತಿಯವರ ನುಡಿಚಿತ್ರ ಇಂದೂ ವಿಶಿಷ್ಟ ಒಳನೋಟಗಳ ಸೃಷ್ಟಿ ಎಂದೇ ಕಾಣುತ್ತದೆ.

ಮಾಸ್ತಿಯವರು

ಮೊತ್ತದಲಿ
ಬುದ್ಧಿ ಅನುಭವ ಯೋಚನೆಗಳ ವಿಸ್ತಾರದಲಿ
ಸೀತಣ್ಣ ನಮ್ಮ ನಾಡಿನ ಇಂದಿನತ್ಯಂತ
ಮೇಲ್ತರದ ಸಾಧಕರ ಪಂಕ್ತಿಯಲಿ ನಿಂತಿಹರು

ಎಂದಿದ್ದಾರೆ. ತಮ್ಮ ನಲವತ್ತೈದು–ಐವತ್ತನೆಯ ವಯಸ್ಸಿನ ಹೊತ್ತಿಗೇ ಮಾಸ್ತಿಯವರಂತಹ ಹಿರಿಯರಿಂದ ಇಂತಹ ಮೆಚ್ಚಿಕೆಯನ್ನು ಪಡೆದ 'ಸೀತಣ್ಣ' ನವರ ಕೃತಿಗಳನ್ನು ಉಳಿಸಿಡುವ ಮಹತ್ವದ ಕಾರ್ಯವನ್ನು ಕೈಕೊಂಡ 'ವಿ.ಸೀ. ಸಂಪದ', ಅವರ ಶತಮಾನೋತ್ಸವ ಸಂದರ್ಭದಲ್ಲಿ ಅವರನ್ನು ಕಂಡಿದ್ದವರ ಬರಹಗಳಲ್ಲಿ ಅವರ ವ್ಯಕ್ತಿತ್ವವನ್ನು ಇಂದಿನವರ ಮನಸ್ಸಿನಲ್ಲಿ ನಿಲ್ಲಿಸಲು ಬಯಸಿತು. ಆ ಬಯಕೆಯ ಮೂರ್ತರೂಪ **'ವಿ.ಸೀ. ನೂರರ ನೆನಪು'**.

ಬರಹಗಾರರಾಗಿ ವಿ.ಸೀ. ಅವರ ರಚನೆಗಳ ಹರಹು ಬಹು ವಿಸ್ತಾರವಾದದ್ದು, ವೈವಿಧ್ಯ ಶ್ರೀಮಂತವಾದದ್ದು. ಕವಿ, ನಾಟಕಕಾರ, ಪ್ರಬಂಧಕಾರ; ವ್ಯಕ್ತಿತ್ವಗಳನ್ನು ಮಾತುಗಳಲ್ಲಿ ಕಡೆದು ನಿಲ್ಲಿಸುವ ಶಿಲ್ಪಿ; ನೆನಪುಗಳ ಭಂಡಾರವನ್ನು ತೆರೆದಿಡಬಲ್ಲ ಭಾಗ್ಯವಂತ. ಚಿಂತನೆಯನ್ನೆಬ್ಬಿಸುವ ವೈಚಾರಿಕ ಬರಹಗಾರ. ವಿಮರ್ಶಕ. ಅರ್ಥಶಾಸ್ತ್ರದಲ್ಲಿ ಕನ್ನಡದಲ್ಲಿ ಪ್ರಾರಂಭದಲ್ಲಿ ಬಂದ ಕೃತಿಯನ್ನು ಕೊಟ್ಟ ತಜ್ಞ. ಸಮರ್ಥ ಅನುವಾದಕ.

ಕನ್ನಡದಲ್ಲಿ ಹೇಗೆಯೋ ಹಾಗೆಯೇ ಇಂಗ್ಲಿಷಿನಲ್ಲಿಯೂ ಭಾಷೆಯ ಪ್ರಭು. ಸಾಹಿತಿ ವಿ.ಸೀ. ಅವರ ಕೃತಿಗಳ ಮೌಲ್ಯಮಾಪನ ಸಮಗ್ರ ಸಾಹಿತ್ಯದ ಸಂಪುಟಗಳ ಮುನ್ನುಡಿಗಳಲ್ಲಿ ನಡೆದಿದ್ದರೂ, ವಿಸ್ತಾರವಾದ ಲೇಖಕ ಬಳಗದಿಂದ ಈ ಕಾರ್ಯ ಮತ್ತೆ ನಡೆಯಬೇಕಾಗಿದೆ.

ವಿ.ಸೀ. ಅವರ ವ್ಯಕ್ತಿತ್ವವೂ ಇಷ್ಟೇ ಶ್ರೀಮಂತವಾದದ್ದು, ಬಹುಮುಖಿವಾದದ್ದು. ಆ ವ್ಯಕ್ತಿತ್ವವನ್ನು ಸ್ಮರಿಸಿಕೊಂಡಾಗ, ಒಬ್ಬ ಸೂಕ್ಷ್ಮ ಮನಸ್ಸಿನ, ಜೀವಂತ ಆದರ್ಶಗಳ ಶ್ರದ್ಧಾವಂತ ಕಾರ್ಯಶೀಲ ಆರಾಧನೆಯ, ತೀಕ್ಷ್ಣ ವೈಚಾರಿಕತೆ – ಸೂಕ್ಷ್ಮ ಭಾವನೆಗಳ ಸಂಗಮವಾದ ಹಿರಿಯರನ್ನು ಸ್ಮರಿಸಿಕೊಳ್ಳುತ್ತೇವೆ. ಇದೇ ಒಂದು ವಿಶಿಷ್ಟ ಅನುಭವ. ಜೊತೆಗೆ, ವಿ.ಸೀ. ಅವರ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳುವುದು ಒಂದು ರೀತಿಯಲ್ಲಿ ಕನ್ನಡ ನಾಡಿನ ಚರಿತ್ರೆಯ ಒಂದು ಅವಧಿಯನ್ನು ಅರ್ಥಮಾಡಿಕೊಳ್ಳುವುದಕ್ಕೊಂದು ಹಾದಿ. ಅವರು ಹಿರಿಯರಾಗಿ, ಗುರುಗಳಾಗಿ, ಸಹ ಅಧ್ಯಾಪಕರಾಗಿ, ಸ್ನೇಹಿತರಾಗಿ, ಒಂದು ಕುಟುಂಬದ ಹಿರಿಯರಾಗಿ, ಅವರ ಬದುಕು–ವ್ಯಕ್ತಿತ್ವಗಳ ಹಲವು ಮುಖಗಳನ್ನು ಕಾಣುವ ಪ್ರಯತ್ನ ಈ ನೆನಪಿನ ಕಾಣಿಕೆ.

೨

ಈ ಜಗತ್ತಿನಲ್ಲಿ ಮಾನಸಿಕ ನೆಮ್ಮದಿಯನ್ನು ಬಯಸುವವರು ಹುಟ್ಟುವ ಮೊದಲು ಒಂದು ವರವನ್ನು ಬೇಡಿಕೊಂಡು ಬರಬೇಕು – ಭಾವಸೂಕ್ಷ್ಮತೆ ('ಸೆನ್‌ಸಿಟಿವ್‌ನೆಸ್') ಇರದಿರಲಿ ಎಂದು. ಈ ವರವನ್ನು ಪಡೆದುಕೊಂಡು ಬಾರದವರು ಭಾವಸೂಕ್ಷ್ಮತೆಯನ್ನು ಕಳಚಿ ದಪ್ಪ ಚರ್ಮವನ್ನು ಬೆಳೆಸಿಕೊಳ್ಳಬೇಕು. ವರವನ್ನು ಪಡೆದುಕೊಳ್ಳದೆ, ದಪ್ಪ ಚರ್ಮವನ್ನೂ ಬೆಳೆಸಿಕೊಳ್ಳದೆ ಹೋದರು ವಿ.ಸೀ. ನಮ್ಮ ಜಗತ್ತಿನಲ್ಲಿ 'ಸೆನ್‌ಸಿಟಿವ್' ಆದಷ್ಟೂ ಮನಸ್ಸಿಗೆ ನೋವು, ಚಿಂತನಶೀಲರಾದಷ್ಟೂ ಮನಸ್ಸಿಗೆ ಭಾರ. ಇದೇ ವಿ.ಸೀ.ಯವರ ಪಾಡಾಯಿತು. ಆದರೆ ಇದೇ ಇವರನ್ನು 'ಲವಬಲ್' ವ್ಯಕ್ತಿಯನ್ನಾಗಿ ಮಾಡಿತು. ಬಹು ಕುತೂಹಲಕರ ವ್ಯಕ್ತಿತ್ವವನ್ನು ಅವರಿಗೆ ತಂದುಕೊಟ್ಟಿತು. ಸೂಕ್ಷ್ಮ ಸಂವೇದನೆ ಇಲ್ಲದವನು ಚೆಲುವಿಗೆ ಮಾರು ಹೋಗಲಾರ, ಹಿರಿಮೆಯನ್ನು ಗುರುತಿಸಿ ನಮಿಸಲಾರ, ಅನುಕಂಪವನ್ನು ತೋರಲಾರ. ಅವರ ಸ್ವಭಾವವು ಒಂದು ರೀತಿಯಲ್ಲಿ ಅವರ ಬದುಕಿಗೆ ಶ್ರೀಮಂತಿಕೆಯನ್ನು ತಂದುಕೊಟ್ಟಿತು.

ಇಲ್ಲಿನ ಲೇಖನಗಳಲ್ಲಿ ವಿ.ಸೀ. ಅವರ ವ್ಯಕ್ತಿತ್ವದ ಹಲವು ಮುಖಗಳು ಕಣ್ಣ ಮುಂದೆ ನಿಲ್ಲುತ್ತವೆ; ಹಾಗೆಯೇ ಅವರ ಭಾವಸೂಕ್ಷ್ಮತೆ, ಅಂತಃಕರಣ, ಸೌಜನ್ಯ, ಶುಚಿತ್ವದಲ್ಲಿ ಶ್ರದ್ಧೆ, ಸಹನೆ ಎಲ್ಲ ಸ್ಫುಟಗೊಳ್ಳುತ್ತವೆ. ಅವರ ವ್ಯಕ್ತಿತ್ವವನ್ನು ವೈಭವೀಕರಿಸಿ ಅವರನ್ನು ಪರಿಪೂರ್ಣರೆಂದು ಘೋಷಿಸುವ ಪ್ರಯತ್ನ ಇಲ್ಲ; ಆದರೆ ಹೊರಗಣ್ಣು, ಒಳಗಣ್ಣು ಗುರುತಿಸಬಹುದಾದ ಸೌಂದರ್ಯವನ್ನು ಗುರುತಿಸಿದ ವಿ.ಸೀ., ತಮ್ಮ ಸುತ್ತ ಇದ್ದವರಿಗೆ ಪ್ರೀತಿ ಸಂತೋಷಗಳನ್ನು ಕೊಟ್ಟ ವಿ.ಸೀ. ಹೀಗಿದ್ದರು ಎಂದು ಸ್ಮರಿಸಿ ಸಂತೋಷಪಡುವ ಪ್ರಯತ್ನವಿದೆ.

೩

ವಿ.ಸೀ. ಸಾಹಿತ್ಯದ ವಿದ್ಯಾರ್ಥಿಯಷ್ಟೇ ಅಲ್ಲ, ಅರ್ಥಶಾಸ್ತ್ರದ ವಿದ್ಯಾರ್ಥಿಯೂ ಆಗಿದ್ದರು. ಜೊತೆಗೆ ಇತಿಹಾಸ, ಧರ್ಮಶಾಸ್ತ್ರ, ಕಾನೂನು ಮೊದಲಾದುವನ್ನು ತಾವೇ ಆಸಕ್ತಿಯಿಂದ ಓದಿಕೊಂಡವರು. ಅವರು ಬರೆಯಲು ಪ್ರಾರಂಭಿಸಿದ್ದು, ಅಧ್ಯಾಪಕ ಜೀವನವನ್ನು ಪ್ರಾರಂಭಿಸಿದ್ದು ಭಾರತದಲ್ಲಿ ಪರಿವರ್ತನ ಯುಗದಲ್ಲಿ. ನಮ್ಮ ನವೋದಯ ಕವಿಗಳಲ್ಲಿ ಭಾರತದೊಳಗಿನ ಮತ್ತು ಭಾರತದಾಚೆಗಿನ ಸಮಕಾಲೀನ ಚಿಂತನೆಗೆ, ಆಗು ಹೋಗುಗಳಿಗೆ ಅತ್ಯಂತ ತೀಕ್ಷ್ಣವಾಗಿ ಸ್ಪಂದಿಸಿದವರು ವಿ.ಸೀ. (ಇದಕ್ಕೆ ಕಮ್ಯೂನಿಸಂ ಒಂದೇ ಅಪವಾದ ಎಂದು ಕಾಣುತ್ತದೆ.) ಜಗತ್ತಿನಲ್ಲೆಲ್ಲ ಪ್ರಶ್ನೆಯ ಮನೋಭಾವ, ಬಂಡಾಯದ ಮನೋಭಾವ, ಸಂದೇಹದ ಮನೋಭಾವ ತೀವ್ರವಾಗುತ್ತಿದ್ದ ಯುಗ ಅವರದು. ೧೯ನೆಯ ಶತಮಾನದ ಮಧ್ಯಭಾಗದಲ್ಲಿ ಯೂರೋಪಿನಲ್ಲಿ ಪ್ರಾರಂಭವಾದ ಸಂದೇಹ – ಆಧ್ಯಾತ್ಮಿಕ ತಳಮಳ (ಭಿನ್ನವಾದ ಪರಿಸರದಲ್ಲಿ) ಭಾರತದಲ್ಲಿ ಪ್ರಾರಂಭವಾಗುತ್ತಿತ್ತು. ಒಂದಿಗೇ ಹಲವಾರು ತೀರಾ ವಿರುದ್ಧ ಸ್ವರೂಪಗಳ ಆಗುಹೋಗುಗಳು (ಗಾಂಧೀಜಿಯವರ ಬೆಳೆಯುತ್ತಿದ್ದ ಪ್ರಭಾವ, ಎರಡು ಮಹಾಯುದ್ಧಗಳು, ಆರ್ಥಿಕ ಕುಸಿತ, ಫ್ರಾಯ್ಡ್‌ನ ಸಿದ್ಧಾಂತಗಳು) ಪ್ರಭಾವ ಬೀರಿದ ಯುಗ. ನವೋದಯ ಕವಿಗಳಲ್ಲಿ ದೇವರಿದ್ದಾನೆಯೆ (ದೇವತೆಗಳಿದ್ದಾರೆಯೆ) ಎನ್ನುವ ಪ್ರಶ್ನೆ ವಿ.ಸೀ. ಅವರನ್ನು ಮಾತ್ರ ತೀವ್ರವಾಗಿ ಕಲಕಿದಂತೆ ಕಾಣುತ್ತದೆ.

ಎಲ್ಲ ಸಂದೇಹ ತಳಮಳಗಳ ಮಧ್ಯೆ ತಮ್ಮ ಸಾಹಿತ್ಯದಲ್ಲಿಯೂ ಬದುಕಿನಲ್ಲಿಯೂ ಪ್ರೀತಿ ವಿಶ್ವಾಸಗಳಲ್ಲಿ ವಿ.ಸೀ. ಸಂತೋಷವನ್ನು ಕಂಡುಕೊಂಡರು; ಶುಚಿ ಸ್ಥೈರ್ಯಗಳಲ್ಲಿ ಅರ್ಥವನ್ನು ಕಂಡುಕೊಂಡರು. ಬದುಕಿದ್ದಾಗ ಕುಟುಂಬದ ಹಿರಿಯರಾಗಿ, ಅಧ್ಯಾಪಕರಾಗಿ, ಸ್ನೇಹಿತರಾಗಿ, ಮೇಲಿನ ಅಧಿಕಾರಿಯಾಗಿ, ಹತ್ತು ಜನದ ಮಧ್ಯೆ ಬಾಳಿದ ಚೇತನವಾಗಿ ಪ್ರೀತಿವಿಶ್ವಾಸಗಳನ್ನು ಗಳಿಸಿಕೊಂಡರು. ಡಿ.ವಿ.ಜಿ. ಒಮ್ಮೆ 'ನಮ್ಮ ಸೀತಾರಾಮಯ್ಯ ಮಾತನಾಡಿದರೆ ಪ್ರಶ್ನೆಗಳು ಒಂದಾದ ಮೇಲೊಂದು ಏಳುತ್ತಿರುತ್ತವೆ" ಎಂದು ಅರ್ಧ ಹಾಸ್ಯವಾಗಿ, ಅರ್ಧ 'ಸೀರಿಯಸ್' ಆಗಿ ಹೇಳಿದರು. ವಿ.ಸೀ. ತಮ್ಮ ಪ್ರಶ್ನೆಗಳಿಂದ ಯಾವುದೇ ವಿಷಯವನ್ನು ಸರಳಗೊಳಿಸುವ ಅಪಾಯವನ್ನು ದೂರವಿಟ್ಟರು. 'ಎಮ್ಮ ಮನೆಯಂಗಳದಿ' ಅನುಭವಿಸಿದ ಹೃದಯ, 'ಹಣಪ್ರಪಂಚ' ಚಿಂತಿಸಿದ ವಿಚಾರಶಕ್ತಿ, ಎರಡೂ ಅವರವೇ. ಅಧ್ಯಾಪಕರಾಗಿ ವಿಷಯಗಳನ್ನು ತಿಳಿಸಿಕೊಟ್ಟು, ಗುರುವಾಗಿ ಮಾರ್ಗದರ್ಶನ ಮಾಡಿದರು. ಇದರಿಂದಲೇ ಅವರು ಕಣ್ಮರೆಯಾದ ಹದಿನೈದು ವರ್ಷಗಳ ನಂತರವೂ ಅವರ ನೆನಪು ಸಂತೋಷವನ್ನು ಕೊಡುತ್ತದೆ, ಅವರ ವ್ಯಕ್ತಿತ್ವ ಗೌರವವನ್ನು ಮೂಡಿಸುತ್ತದೆ. ಅವರು ವಿಶಿಷ್ಟ ವ್ಯಕ್ತಿ, ಒಂದಿಗೇ ತಮ್ಮ ಯುಗದ ಶ್ರೇಷ್ಠ ಪ್ರತಿನಿಧಿ.

ಇವೆಲ್ಲದರ ಜೊತೆಗೆ ಅವರು intensely human. 'ರಸರಹಿತವಾಗಿಹುದು ಇಂದು ಜೀವನವು' ಎಂದು ಕವನವನ್ನು ಬರೆದು, ಅದನ್ನು ಹಾಡಲು ಭೈರವ ರಾಗವನ್ನು ಸೂಚಿಸುತ್ತಾರೆ. ಜಗತ್ತಿನ ಭವಿಷ್ಯವೇನು ಎಂದು ಕಳವಳ ಪಡುತ್ತಲೇ ರುಮಾಲು ಸರಿಯಾಗಿ

ಬಂದಿದೆಯೋ ಇಲ್ಲವೋ ಎಂದು ಕಳವಳ ಪಡುವರು. ಭಾರತದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದು ಹೇಗೆ ಎಂದು ವಿವರಿಸುತ್ತಲೇ ಹೋಟಲಿನ ಮಾಣಿಗೆ ದೋಸೆಯ ಹವ ಹೇಗಿರಬೇಕು ಎಂದು ಮಾರ್ಗದರ್ಶನ ಮಾಡುವರು. ಶ್ರೀ ಎಸ್. ಆರ್. ರಾಮಸ್ವಾಮಿ ಒಂದು ಪ್ರಸಂಗವನ್ನು ವರ್ಣಿಸುತ್ತಾರೆ.

"ಅಡಿಗೆ ಮನೆಯ ಮೂಲೆಯಲ್ಲಿ ಬೆಚ್ಚಗೆ ಕುಳಿತು, ತಾವು ಕಾಣದ, ಕೇಳದ ಯುದ್ಧಾದಿ ಸಂದರ್ಭಗಳನ್ನು ವರ್ಣಿಸುವ ಕವಿಗಳ ಅವಾಸ್ತವ ನಿರ್ಮಿತಿಗಳನ್ನು – ಕೂರಸಿಯ ರುಳಪನ್ನೂ ರಕ್ತದೋಕುಳಿಯನ್ನೂ – ವಿ.ಸೀ. ಒಂದು ಉಪನ್ಯಾಸದಲ್ಲಿ ಪ್ರಸ್ತಾಪಿಸಿ, ಒಂದು ಉದಾಹರಣೆಯನ್ನೂ ಹೇಳಿ, ಸಭಿಕರಲ್ಲಿ ನಗುವಿನ ಲಹರಿಗಳನ್ನೆಬ್ಬಿಸಿದರು. ನಗು ಕೊಂಚ ಅಡಗಿದ ಮೇಲೆ ಹೇಳಿದರು ವಿ.ಸೀ.:

"I wrote these lines myself, thirty years ago!"

೪

ಇಂಥ ಹಿರಿಯರನ್ನು ಕಂಡಿದ್ದ ನೂರಕ್ಕೂ ಹೆಚ್ಚು ಮಂದಿ ಸ್ನೇಹಿತರು, ಶಿಷ್ಯರು, ಅಭಿಮಾನಿಗಳು ಇಲ್ಲಿ ಅವರನ್ನು ತಮ್ಮ ತಮ್ಮ ಅನುಭವಗಳ ಬೆಳಕಿನಲ್ಲಿ, ತಮ್ಮ ತಮ್ಮ ದೃಷ್ಟಿಯಿಂದ ಸ್ಮರಿಸಿಕೊಂಡು ನಮನ ಸಲ್ಲಿಸಿದ್ದಾರೆ. 'ವಿ.ಸೀ. ಸಂಪದ'ದ ಪ್ರಾರ್ಥನೆಯನ್ನು ಮನ್ನಿಸಿ ಲೇಖನಗಳನ್ನು ಬರೆದುಕೊಟ್ಟ ಈ ಎಲ್ಲ ಸಹೃದಯರಿಗೆ ನಾವು ಕೃತಜ್ಞರು.

ಪುಸ್ತಕವು ನಮ್ಮ ನಿರೀಕ್ಷೆಯನ್ನು ಬಹುವಾಗಿ ಮೀರುವುದೆಂಬ ಭಯದಿಂದ ಮತ್ತು ಪುನರಾವೃತ್ತಿಯನ್ನು ಆದಷ್ಟು ಕಡಿಮೆ ಮಾಡುವ ಅಪೇಕ್ಷೆಯಿಂದ ಕೆಲವು ಲೇಖನಗಳಲ್ಲಿ ಕೆಲವು ಭಾಗಗಳನ್ನು ಬಿಡಲಾಗಿದೆ. ಅದಕ್ಕಾಗಿ ಆ ಲೇಖಕರಲ್ಲಿ ಕ್ಷಮೆ ಬೇಡುತ್ತೇವೆ. ಆದಾಗ್ಯೂ ಒಂದೆರಡು ಅಂಶಗಳಲ್ಲಿ ಅಷ್ಟಿಷ್ಟು ಪುನರಾವೃತ್ತಿ ಇನ್ನೂ ಉಳಿದಿದೆ. ಲೇಖನದ ಒಟ್ಟಂದ ಕೆಡಬಹುದೆಂಬ ಭೀತಿಯಿಂದ ಅವನ್ನು ಉಳಿಸಿಕೊಂಡಿದೆ. ಪುಸ್ತಕವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದೆ: ಹತ್ತು ಕವಿತೆಗಳನ್ನೊಳಗೊಂಡ ಮೊದಲನೆಯದು 'ಕಾವ್ಯಾಂಜಲಿ'. ಸುಮಾರು ೬೦–೬೨ ಲೇಖನಗಳಿರುವ ಭಾಗ 'ಸ್ಮರಣ'ವಾಗಿದೆ. ವಿದ್ಯಾರ್ಥಿಗಳಾಗಿದ್ದ ಹಲವರು ಸ್ಮರಿಸಿರುವ ಮೂರನೆಯ ಭಾಗ 'ನಮನ'ವಾಗಿದ್ದರೆ, ಅವರನ್ನು ಬಲ್ಲವರಾಗಿದ್ದ ಸುಮಾರು ೨೩ ಮಂದಿಯ ಲೇಖನಗಳು ನಾಲ್ಕನೆಯ 'ವಂದನ' ಭಾಗವಾಗಿದೆ. ಇದು ಕೇವಲ ಸ್ಥೂಲ ವರ್ಗೀಕರಣ ಮಾತ್ರ. ಎರಡನೆಯ ಭಾಗದ ಲೇಖನ ಮೂರನೆಯದರಲ್ಲಿಯೊ ಮೂರನೆಯದು ಎರಡು ಅಥವಾ ನಾಲ್ಕನೆಯದರಲ್ಲಿಯೊ ಸೇರಬಹುದಿತ್ತೆನ್ನಿಸಬಹುದು. ಎಲ್ಲ ಲೇಖಕರೂ ಅವರನ್ನು ಬಲ್ಲವರೇ; ಎಲ್ಲರ ಲೇಖನವೂ ಸ್ಮರಣೆಯೇ. 'ಕಾವ್ಯಾಂಜಲಿ'ಗೆ ಮುಂಚೆ ಕೆಲವು ಭಾವಚಿತ್ರಗಳನ್ನು ಕೊಡಲಾಗಿದೆ. ಅನುಬಂಧವಾಗಿ ಅವರ ಬದುಕು, ಸಾಹಿತ್ಯದ ಮೈಲಿಗಲ್ಲಿನ ವಿವರಗಳಿವೆ.

ವಿ.ಸೀ. ಅವರನ್ನು ಕುರಿತು ಹಲವರು ಲೇಖಕರು ಈಗಾಗಲೇ ಪುಸ್ತಕಗಳನ್ನೂ ಲೇಖನಗಳನ್ನೂ ಬರೆದಿದ್ದಾರೆ. ಅವರು ಹಲವು ಗೌರವ ಗ್ರಂಥಗಳ ಕೇಂದ್ರವೂ ಆಗಿದ್ದಾರೆ.

ಈ ಪ್ರಕಟಣೆಗಳಿಂದ ಸಣ್ಣ ಸಣ್ಣ ಭಾಗಗಳನ್ನು ಉದ್ಧರಿಸಿ ಬಳಸಿಕೊಳ್ಳುವ ಸ್ವಾತಂತ್ರ್ಯವನ್ನು ವಹಿಸಿದ್ದೇವೆ. ಇವುಗಳಿಂದ ಈ ಪುಸ್ತಕದ ಶ್ರೀಮಂತಿಕೆ ಹೆಚ್ಚಿದೆ. ಈ ಲೇಖಕರಿಗೆ, ಸಂಪಾದಕರಿಗೆ ಮತ್ತು ಪ್ರಕಾಶಕರಿಗೆ ನಾವು ಕೃತಜ್ಞರು. ವಿ.ಸೀ. ಅವರ ಬರಹಗಳಿಂದಲೂ ಕೆಲವು ಭಾಗಗಳನ್ನು ಉದ್ಧರಿಸಿ, ಈ ಪುಸ್ತಕದಲ್ಲಿಯೂ ಅವರ ದನಿಯೇ ಕೇಳುವಂತೆ ಮಾಡಲು ಪ್ರಯತ್ನಿಸಿದ್ದೇವೆ.

ತಮ್ಮ ಪುಸ್ತಕವು ಬಹು ಅಂದವಾಗಿ, ಅಚ್ಚುಕಟ್ಟಾಗಿ ಹೊರಬರಬೇಕೆಂಬುದು ವಿ.ಸೀ. ಅವರ ಅಪೇಕ್ಷೆ; ಈ ವಿಷಯದಲ್ಲಿ ರಾಜಿ ಇಲ್ಲ. ಅವರು ಬಯಸಿದ – ಸಾಧಿಸಿದ ಮಟ್ಟವನ್ನು ನಾವು ಮುಟ್ಟಲಾರೆವು. ಆದರೂ ಪುಸ್ತಕವನ್ನು ಸುಂದರವಾಗಿ ಸಿದ್ಧಪಡಿಸುವುದರಲ್ಲಿ 'ನೇತ್ರಾ ಪ್ರಿಂಟರ್ಸ್' ಮುದ್ರಣಾಲಯದ ಗೆಳೆಯರೂ ಅಂದವಾದ ರಕ್ಷಾಪುಟದ ವಿನ್ಯಾಸವನ್ನು ಮೂರಕಿಸಿಕೊಡಲು ಶ್ರೀ ನಾಗೇಂದ್ರಕುಮಾರ್ ಅವರೂ ಶ್ರಮಿಸಿದ್ದಾರೆ; ಅವರಿಗೆ ನಾವು ಕೃತಜ್ಞರು.

ಜ

ವಿ.ಸೀ. ಅವರ ಜನ್ಮ ಶತಮಾನೋತ್ಸವದ ಸಂಭ್ರಮದ ಸಂದರ್ಭದಲ್ಲಿ ಈ ಗ್ರಂಥವನ್ನು ನಾನು ಸಂಪಾದಕನಾಗಿ ಸಿದ್ಧಪಡಿಸಬೇಕೆಂದು ಆದೇಶಿಸಿ 'ವಿ.ಸೀ. ಸಂಪದ' ನನ್ನನ್ನು ಗೌರವಿಸಿದೆ. ನನ್ನ ಗುರುಗಳಿಗೆ ಈ ಕಾಣಿಕೆಯನ್ನು ಅರ್ಪಿಸಲು ಅವಕಾಶಮಾಡಿಕೊಟ್ಟ 'ವಿ.ಸೀ. ಸಂಪದ'ದ ಸ್ನೇಹಿತರಿಗೆ – ಮುಖ್ಯವಾಗಿ ಅಧ್ಯಕ್ಷ ಡಾ. ರಂಗನಾಥರಿಗೆ – ನಾನು ಕೃತಜ್ಞ. ಸಂಪಾದಕನೆಂಬ ಗೌರವವನ್ನು ನನಗೆ ಬಿಟ್ಟುಕೊಟ್ಟು ಕೆಲಸದ ಹೊಣೆಯ ಬಹುಭಾಗವನ್ನು ಶ್ರೀ ಎಂ. ಎ. ವೆಂಕಟೇಶ ಮೂರ್ತಿಯವರು ನಿರ್ವಹಿಸಿದ್ದಾರೆ. ಈ ಪ್ರಕಟಣೆಯ ಲೋಪದೋಷಗಳಿಗೆ ನಾನೇ ಬಹುಮಟ್ಟಿಗೆ ಕಾರಣ. ಶ್ರೀ ವೆಂಕಟೇಶ ಮೂರ್ತಿಯವರು ಲೇಖನಗಳ ಜೋಡಣೆ, ಪುಸ್ತಕದ ಮುದ್ರಣ, ಅಂದ ಎಲ್ಲಕ್ಕೆ ಗಮನ ಕೊಟ್ಟಿದ್ದಾರೆ. ಎಂದೂ ಅವರೊಂದಿಗೆ ಕೆಲಸ ಮಾಡುವುದು ಒಂದು ಸಂತೋಷ.

ಡಿ.ವಿ.ಜಿ. ಅವರನ್ನುದ್ದೇಶಿಸಿ ವಿ.ಸೀ. ಹೇಳಿದ ಮಾತುಗಳನ್ನು ವಿ.ಸೀ. ಅವರ ಚೇತನಕ್ಕೂ ಅನ್ವಯಿಸಿ ನಾವು ಹೇಳಬಹುದು:

ಬಾಳ್ಗೆ ದೀಪವಾಗಿದ್ದೊಂದು ಬೆಳಕು
ಆರಿ ಹೋಯಿತು ನಮಗೆ ಕಾಯವಾಗಿ.
ಆದರಿದೆ ದೃಢವಾದ ನಿಮ್ಮ ಕೊರಲು–
ಹೊಳಲುಗೊಡುವ
ನುತಿಯಾಗಿ ನಡೆಯಾಗಿ ಉಲ್ಲಾಸವಾಗಿ.

–ಎಲ್. ಎಸ್. ಶೇಷಗಿರಿ ರಾವ್



ಚಿರಪರಿಚಿತ ಆಕೃತಿ



ಕನ್ನಡವನ್ನು ಕಟ್ಟಿ ಬೆಳಸಿದ ಹಿರಿಯರೊಂದಿಗೆ–೧



ಕನ್ನಡವನ್ನು ಕಟ್ಟಿ ಬೆಳಸಿದ ಹಿರಿಯರೊಂದಿಗೆ–೨



ಕನ್ನಡವನ್ನು ಕಟ್ಟಿ ಬೆಳಸಿದ ಒರಿಯರೊಂದಿಗೆ–೩




ಕನ್ನಡವನ್ನು ಕಟ್ಟಿ ಬೆಳಸಿದ ಹಿರಿಯರೊಂದಿಗೆ–೪



ಕನ್ನಡವನ್ನು ಕಟ್ಟಿ ಬೆಳಸಿದ ಹಿರಿಯರೊಂದಿಗ–ಚ



ವಿಶ್ವವಿದ್ಯಾನಿಲಯದ ಸೇವೆಯಲ್ಲಿ–೧



ವಿಶ್ವವಿದ್ಯಾನಿಲಯದ ಸೇವೆಯಲ್ಲಿ–೨

ವಿದ್ಯಾವರ್ಧಕ ಸಂಘದ ನಿಷ್ಪತ್ತಿಯ ಸಂದರ್ಭದಲ್ಲಿ ಮೈಸೂರಿನಲ್ಲಿ ಸಮಾವೇಶಗೊಂಡ



ಡಾ. ಎಸ್. ರಾಧಾಕೃಷ್ಣನ್ ಅವರೊಡನೆ ಆತ್ಮೀಯ ಕ್ಷಣಗಳು



ಜಯಚಾಮರಾಜೇಂದ್ರರು, ಶಿವರಾಮ ಕಾರಂತ, ಮೂರ್ತಿರಾವ್ ಮತ್ತು
ಕುವೆಂಪುರೊಂದಿಗೆ



ಮಾಸ್ತಿ ಮತ್ತು ಟಿ. ಎಂ. ಎ. ಪೈ ಅವರೊಂದಿಗೆ




ದಿಗ್ಗಜ ಡಿ.ವಿ.ಜಿ. ಯವರೊಂದಿಗೆ



ಶಂ.ಬಾ ಜೋಶಿಯವರೊಂದಿಗ



ಕಲಾತಪಸ್ವಿ ಕೆ. ವೆಂಕಟಪ್ಪನವರೊಂದಿಗೆ




ಜಿ. ಪಿ. ರಾಜರತ್ನಂ ಮತ್ತು ಎ. ಆರ್. ಕೃಷ್ಣಶಾಸ್ತ್ರಿಗಳೊಂದಿಗೆ





ರಾಳ್ಳಪಲ್ಲಿ ಮತ್ತು ಮಾಸ್ತಿಯವರೊಂದಿಗೆ



ಕಾರಂತ ಮತ್ತು ಕೆ. ಕೆ. ಹೆಬ್ಬಾರರೊಂದಿಗೆ



ಪಿ. ವಿ. ಜೋಶಿ, ಕೆ.ಎಸ್.ನ. ಮತ್ತು ಶ್ರೀರಂಗರೊಂದಿಗೆ



ಶ್ರೀರಂಗರೊಂದಿಗೆ



ಪಿ. ಎಂ. ಇನಾಂದಾರ್‌ರೊಡನೆ



ಪಿ.ಸಿ. "ಮಯಾಕಾವ"




೧. ಮಾಸ್ತಿಯವರ ಸಂದರ್ಶನ



೨. ಆಧುನಿಕ ಕನ್ನಡದ ದಿಗ್ಗಜರೊಂದಿಗೆ



೩. ಆಧುನಿಕ ಕನ್ನಡಾಭಿಮಾನಿಗಳೊಂದಿಗೆ



ಎಪ್ಪತ್ತರ ಸಮಾನ



ಕುಮಟಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ



ಕನ್ನಡ ಸಾಹಿತ್ಯ ಪರಿಷತ್ತಿನ ಸನ್ಮಾನ




ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸ್ವೀಕಾರ



ಪ್ರಶಸ್ತಿ ಸ್ವೀಕಾರದ ನಂತರ ಭಾಷಣ



ನಾಗೇಂದ್ರರಾಯರಿಗೆ ಪ್ರಶಸ್ತಿ ಪ್ರದಾನ



ಶ್ರೀರಂಗ, ಕಾರಂತ, ಗೋಕಾಕ್‌ರೊಡನೆ




ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಯಾಗಿ



ಬಿ.ಸೀ. ಮನೆ



ಸಹಪಾಠಿಗಳೊಂದಿಗೆ (೧೯೧೨)



ಮಂದಸ್ಮಿತ




ಮನೆಯ ಮುಂದಿನ ಅಂಗಳದಲ್ಲಿ



ಸಹಧರ್ಮಿಣಿಯೊಂದಿಗೆ




ಕುಟುಂಬ ವತ್ಸಲ



ಸಮುದ್ರ ತೀರದಲ್ಲಿ ಮರಳ ಮೇಲೆ : ಏಕಾಂಗಿಯಾಗಿ




ಸಹಧರ್ಮಿಣಿಯೊಡನೆ



ಲಂಡನ್ನಿನಲ್ಲಿ ಮತ್ತೂರರೊಡನೆ



ಟಾಮ್ ಬುಷಾರೊಡನೆ




ಕೇಂಬ್ರಿಜ್ ಪರಿಸರದಲ್ಲಿ ಗಾಲಿ ಕುರ್ಚಿಯಲ್ಲಿ






ಮನೆಗೆ ಬಂದಿದ್ದ ಉಸ್ತಾದ್ ಬಿಸ್ಮಿಲ್ಲಾಖಾನ್‌ರೊಂದಿಗೆ



ಮಲ್ಲಿಕಾರ್ಜುನ ಮನ್ಸೂರರೊಡನೆ



ಕೊನೆಯ ದಿನಗಳಲ್ಲಿ
(ತಮ್ಮ ಮನೆಯ ಬಾಗಿಲ ಬಳಿ)



ಆರ್. ಕೆ. ಲಕ್ಷ್ಮಣ್ ಅವರ ದೃಷ್ಟಿಯಲ್ಲಿ



ಪ್ರೊ. ಸಾ.ಕೃ.ರಾ. ಅವರು ಕಂಡಂತೆ



ಎಂ. ಎಸ್. ಮೂರ್ತಿ ಅವರ ರೇಖಾಚಿತ್ರ

ನಂದೇ ಹಾಗೆ ನಿಲ್ಲಿಸಿಬಿಟ್ಟಿ?

ಬೇಕಾಗಿದ್ದಾಗ ಬರುವುದು;
ಬಿಸಿ ಹೊಗೆಯಾಗಬೇಕು;
ಬೆಳಿಗ್ಗೆ ಎದ್ದಾಗ ಬಾಯಲ್ಲಿ
ತಳದ ತಳ್ಳಿಕೆಯ ನೀಳ್ಗಲು;
ತಲೆಯ ಕೂದಲೆ ಸೀಳಲು
ಬಿಸಿ ಹೊಗೆಯ ಸೆಳೆಯಲು
ಒಲವು ಬಿಸು ಎದೆಯಾನಂದ ಹೆಚ್ಚಿಸಿತ್ತು ॥

ಮುಚ್ಚಳ ಮಲಗಿಸಿಬಿಟ್ಟಿ ?

ಇಂದ್ರನೀಲಾಕಾಶ
ಇಳೆಯ ಚಿತ್ರಪಟ
ಮುತ್ತಿನಬಳ್ಳಿ
ನಕ್ಷತ್ರಗಳ ಬಿಟ್ಟ [illegible]
ದಿವ ಬೆಳಕ ನೀಡುವುದು
ಎಂದು ಕಾದಿದ್ದವಳಿವಳು

[illegible]

15.5.[illegible]

My dear Kumar

[illegible] Suffering Sathanka [illegible] I could not help it. As Carl [illegible] forwarded. Only I do not understand the strength of Confidence I am still with Lakshmi major [illegible] I find it difficult to [illegible] I [illegible] Carl [illegible] I am able to [illegible] Carl [illegible] I shall go back [illegible] what else I have I have: then I could find

[illegible] Star a place. All things [illegible] I had, have blessed me in the ways of Thy Jesus, have [illegible] I am thankful to [illegible] Thy Mother in [illegible] Heart touch have Born in a [illegible] the day before yesterday Ravindra [illegible] Geetha Thankful. [illegible] Star on the Before [illegible] Jesus Bless)

[illegible] How are you all? Confirmed [illegible] my children. A little more time may be my [illegible] I am [illegible] to be free [illegible] of thy days me

[illegible] me in a [illegible] shall be grateful [illegible] may [illegible] long [illegible] what called I do? [illegible] I expect this? This [illegible] Thy Jesus [illegible] it was a little as they [illegible] Spirit Daily [illegible] Spirit that I am glad my [illegible] now this there is [illegible] me [illegible] [illegible] [illegible]

I

ಕಾವ್ಯಾಂಜಲಿ

ಸೀತಣ್ಣ

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಮೌನ ಮಾತಿಗೂ ಮಿಗಿಲು; ಕಲ್ಲಿನಲಿ ಆತ್ಮವಿದೆ:
ಇದ ನೀವು ಬಲ್ಲಿರಾ? ಇಲ್ಲ? ಬನ್ನಿರಿ ಇಲ್ಲಿ:
ಸೀತಣ್ಣನನು ನೋಡಿ: ಈ ಹದನ ಗ್ರಹಿಸುವಿರಿ.
ಕವಿ; ಬರೆದ ಬರಹ ತಕ್ಕಷ್ಟಿಹುದು; ಕೆಲವು ಕೃತಿ
ಜನಮೆಚ್ಚಿ ನಾಡಿನಲಿ ನಾಣ್ಯವಾಗಿವೆ ಕೆಲವು.
ಅಂತೆ ಚೆಲುವಾದ ಬಲತರುವ ಕೃತಿ ಬೇರೆಯವು
ಹಲವಿಹವು: ಮಂದಿ ಇವುಗಳ ಹೆಸರ ಕಾಣರು.
ಸೀತಣ್ಣ ಎಂದೆ ಆಗಲಿ ತಮ್ಮ ಕಾವ್ಯವನು
ಸಭೆಗಳೆದುರಲಿ ಓದುವವರಲ್ಲ. ಎಂತಿರಲಿ
ತಾವಾಗಿ ತಾನು ಇಂತಹ ಪದ್ಯ ಬರೆದಿಹೆನು
ಎಂದು ಹೇಳುವರಲ್ಲ. ಇಂತಾಗಿ ಇವರ ಕೃತಿ
ಜನಕೆ ಎಸಗಲು ಬಲ್ಲ ಒಳ್ಳಿತನು ಎಸಗಿಲ್ಲ.
ಲೋಕ ಸಾಹಿತ್ಯದ ಸುಗಾಢ ಪರಿಚಯದಿಂದ
ಇವರ ರುಚಿ ತುಂಬ ಹಸನಾಗಿ ಹದವಾಗಿಹುದು.
ಬಾಳು ಇವರನು ತೀರ ಕಷ್ಟದಲಿ ನಾದಿಹುದು.
ಜನರಾದರೂ ಇವರಿಗನ್ಯಾಯ ಮಾಡಿಹರು.
ಸನೆ ಆದರು ಬಾಯ ತೆರೆಯದಿಹ ಇವರ ಪರಿ
ಹಿರಿಯ ತಾಣಗಳ ಜನರಿಗೆ ಹೆಮ್ಮೆಯೆಂಬಂದ
ಕಾಣುವುದು. ಸಮಯ ಬಂದಾಗ ಅಂತಪ್ಪ ಜನ
ಇವರಿಗೆ ವಿರೋಧವನು ಮಾಡುವರು. ಅವರೇನು?
ಹತ್ತಿರದ ಜನ ಕೂಡ ಇಂಥ ಗಾಂಭೀರ್ಯವನು
ಗಾಂಭೀರ್ಯವೆಂದು ತಿಳಿಯರು. ನಮ್ಮ ಕಂಡರೆ
ಇವರಿಗಕ್ಕರೆಯಿಲ್ಲವೆಂದೆ ನೆಂಟರ ತಿಳಿವು.

ಇದಕ್ಕೆಲ್ಲ ಇವರ ಉತ್ತರ ಮೌನ. ಷೇಕ್ಸ್‌ಪಿಯರ್
ತನ್ನೊಂದು ನಾಟಕದ ನಾಯಕಿಯ ವಿಷಯ She
Sat like patience on a monument smiling at
Grief ಎಂದು ಬಣ್ಣಿಸಿರುವನು. ನಮ್ಮ ಸೀತಣ್ಣ
ಆ ನಾಯಕಿಯ ತೆರನ ಒಬ್ಬ ನಾಯಕ. ಬಾಳು
ಕಷ್ಟವನು ತರುವುದೇ, ತರಲಿ, ಆಯಿತು ಏನು?
ಸಹಿಸಿದರೆ ಮುಗಿಯಿತು. ಸಹಿಸುವುದು ಸಾಧ್ಯವೇ?
ನೋಡುವ; ನಮ್ಮಿಂದ ಆದಷ್ಟು ಸಹಿಸುವ.
ಇದು ಇವರ ರೀತಿ. ಎಂದಾದರೂ ಈ ಮಾತ
ನನಗೆ ತಿಳಿಸಿರುವರೆಂದಲ್ಲ; ಈ ತಿಳಿಸುವುದು
ಇವರ ಪದ್ಧತಿಯಲ್ಲ; ನನಗಿಂತು ತೋರಿಹುದು.
ಇವರ ಈ ಜಿನಮನೋಧರ್ಮ ಹೆನ್ಲೀ ಕವಿಯ
ಅಪರಾಜಿತನ ಆತ್ಮಗೀತದಲಿ ಬಹುಚೆನ್ನ
ವರ್ಣನೆಯ ಪಡೆದಿಹುದು. ಇಂಥ ವಜ್ರಕಠೋರ
ದಾರ್ಢ್ಯದಿಂದಿವರು ಜೀವನ ಪಥವ ನಡೆದರೂ
ಕಷ್ಟದಲಿ ಸಿಲುಕಿರುವ ಇತರ ಜೀವವ ಕಂಡು
ಹೂವಂತೆ ಬಾಡುವರು, ಬೆಣ್ಣೆಯೆನೆ ಕರಗುವರು.
ದೇವರನು ಕರೆದು ಯಾವುದೆ ನೋವ ಭಾರವನು
ಅವನ ಹೆಗಲಲಿ ಹೇರುವುದು ಇವರಿಗೊಪ್ಪದು.
ಈ ಮನೋಧರ್ಮ ಈ ಅನುಭವದ ಫಲವಾಗಿ
ಲೋಕ ಇವರಿಗೆ ಸುಖದ ನೆಲೆಯಲ್ಲ, ಚೇತನದ
ಶಿಕ್ಷಣ ಪರೀಕ್ಷಣದ ಗರಡಿಯೆಂಬಂತಿಹುದು.
ಅಂತೆ ಸೀತಣ್ಣ ಜಗದಿತಿಹಾಸದಲಿ ಬಹುಶಃ
ನೋವ ಸಂಗತಿಗಳನೆ ಅಯ್ದೆತ್ತಿ ಹಿಡಿದವರು.
ಅಲ್ಲೆಲ್ಲ ನೋವ ಮೂಡಿಸಿದ ಬೇರನು ಬಿಡಿಸಿ
ಅದರ ಪರಿಯೇನೆಂದು ತೋರುವರು. ಮೊತ್ತದಲಿ
ಬುದ್ಧಿ ಅನುಭವ ಯೋಚನೆಗಳ ವಿಸ್ತಾರದಲಿ
ಸೀತಣ್ಣ ನಮ್ಮ ನಾಡಿನ ಇಂದಿನತ್ಯಂತ
ಮೇಲ್ತರದ ಸಾಧಕರ ಪಂಕ್ತಿಯಲಿ ನಿಂತಿಹರು.

"ನವರಾತ್ರಿ"ಯಿಂದ

ಪಂಪಾಯಾತ್ರೆ ಮತ್ತು "ಏ. ಸೀ."

ದ. ರಾ. ಬೇಂದ್ರೆ

೧

ಜೀವಕ್ಕೆ ಕಳೆ ಕಡಮೆ ಇರುವದುಂಟು
ಭಾವಕ್ಕು ಹುಸಿಬಣ್ಣ ಬರುವದುಂಟು.
ಜೀವಭಾವಕ್ಕೊಂದು ಸಾಂಗತ್ಯವಿಲ್ಲದಿರೆ
ಅಪಸರದ ಮಾಲೆಯನು ತರುವದುಂಟು.
ಹೀಗಿಹುದ ನೋಡಿಹೆನು — ಎಂದ ಮೇಲೆ,
"ಹಾಳಿಗೂ ಬಾಳುಂಟೇ?"
ಉಂಟು, ಉಂಟು!

೨

ನಾಲಗೆಗೆ ನಿಲುಕದಾ ನುಡಿಗಳುಂಟು
ನುಡಿಗಳಿಗು ನಿಲುಕದಾ ಭಾವವುಂಟು.
ಭಾವಗಳ ಬೀಸುಬಲೆಯಲ್ಲಿ ದೊರೆಯದೆ ನುಸುಳಿ
ದಾಟಿರುವ ನೈಜ ಬೇರೊಂದು ಉಂಟು.
ಹೀಗೆಂದು ಕೇಳಿದೆನು — ಎಂದ ಮೇಲೆ,
"ಮೌನಕ್ಕೆ ಮಾತುಂಟೆ?"
ಉಂಟು, ಉಂಟು!

'ಉಯ್ಯಾಲೆ'ಯಿಂದ

ಕವಿ ವಿ.ಸೀ.

ಎಂ. ವಿ. ಸೀತಾರಾಮಯ್ಯ

ಸೆಳೆಗೊಂಬು, ಎಳೆಬಳ್ಳಿ, ನಿನ್ನೊಡಲು: ಕಲೆ ಕಡಲು—
ತುಂಬಿ, ಅಲೆಯಲೆ–ಲಯದ ಲಲಿತ ವಿನ್ಯಾಸದಲಿ
ನಡೆನುಡಿಯ ಚಿಗುರಾಗಿ, ಹೂತು ಮೃದುಹಾಸದಲಿ,
ಕೆಳೆಯ ಕಂಪನು ಬೀರಿ, ತಾಯ್ಗೆ ಕಾಣಿಕೆಗೊಡಲು
ಫಲಿಸಿವೆ 'ದ್ರಾಕ್ಷಿ–ದಾಳಿಂಬೆ'ಗಳು; ಸಮ 'ನೆಳಲು–
ಬೆಳಕು' ; ಮೂಡಣ ಪಡುವಣ ದಿಕ್ಕು ದಿಕ್ಕಿನ ಗಾಳಿ–
ಸೇವನೆಯ ಭಾವನೆಯ ಬಿತ್ತರದ ಬಾಳ್ ಬಾಳಿ
ನೆಲ ಬಿಡದೆ ಬಾನ್ ಮುಟ್ಟಿ ಸಿದ್ಧ ಸರ್ವವ ಕೊಳಲು.
ನೋವಿನಲಿ ನಲವ, ವಿರಸದಲಿ ಸರಸವನರಸಿ
ಪರಿಣಮಿಸಿ ಹೃದಯದೊಳ್ ಸ್ನಿಗ್ಧತೆಯ ತುಂಬಿರಲು
ಅರಿವು – ಕಿಡಿ ಸೋಂಕೆ ಬೆಳಗಿವೆ ನುಡಿಯ 'ದೀಪಗಳು.'
ಭಾವ ಭೃಂಗ ಶ್ರುತಿಗೆ ಬಾಳ ತಾಳವನಿರಿಸಿ
ರಸಿಕ ಜೀವನ ತರಂಗಿಸಿ ರಾಗವಾಗಿರಲು,
ಹೊಸ ಹುಟ್ಟಿನಲಿ ಚಿಲುಮೆ ಚಿಮ್ಮಿದವು 'ಗೀತಗಳು.'

'ವಿ.ಸೀ.'ಯಿಂದ

ಶುಚಿಯ ಆರಾಧಕ

ವೇಣುಗೋಪಾಲ ಸೊರಬ

ಒಳಗಿನ ಮನೆಯ ಒಪ್ಪಗೊಳಿಸುತ್ತ
ಹೊಸ ಕಿರಣಗಳ ತೋರಣವ ಕಟ್ಟಿ
ಈ ಚಿತ್ರಗಳಿಗಿವೆ ಇವೇ ಸ್ಥಾನ ಎಂದು
ನಿರ್ದೇಶಿಸುವ ಶುಚಿಯ ಆರಾಧಕ

ಕಲೆಯೆ? ಸಂಗೀತವೆ? ಮಾತುಕತೆಯೆ?
ರಸಿಕತೆಗೆ ಬಂದೊದಗಿದ ಅಪಸ್ಮಾರದಲ್ಲಿ
ತಿಳಿವಿನ ತಿಳಿವು ಎಂದರೇನೆಂದು ಬಗೆ
ಕದಡದೆಯೆ ಪನ್ನೀರು ಚಿಮುಕಿಸಿದಂತೆ

ಆತ್ಮೀಯವಾದ ಸ್ವರಸಂಧಾನ
ಆಡಿದ ಮಾತು ಮಾತಿನನುರಣನ
ತಂತಿ ಮೀಟಿದರೆ ಎಲ್ಲಿ ನೋಯುವುದೋ ಎಂಬ
ಬುದ್ಧ ಕರುಣೆಗೆ ಅನುನಯದ ಲೇಪ

ಜೀವ ಆಯ್ಕೆಯಿಂದ ಬಂದದ್ದಲ್ಲ
ಬದುಕು ಬರಬಹುದಲ್ಲ—
ಎಲೆಗೆ ಹಚ್ಚುವ ಸುಣ್ಣ
ಮಾತಿಗೆ ಹಚ್ಚುವ ಪ್ರತ್ಯಯ
ಪ್ರತಿಯೊಂದರಲ್ಲೂ ಅದೆ ಸಣ್ಣಂಚಿನದೆ ಶಿಸ್ತು

ತೆರೆದ ತೋಳುಗಳೆರಡೂ
ತಬ್ಬುವಷ್ಟು ಜೀವನ ಸೌಂದರ್ಯದ
ಪ್ರೀತಿ ಉಕ್ಕಿಸಿಕೊಂಡ ಹಾಲು.

'ಬಿಂಬ'ದಿಂದ

ನಿಜದ ಬೆಳಕ ಕಂಡವರು

ಕೆ. ಎಸ್. ನರಸಿಂಹಸ್ವಾಮಿ

ಅಮಾವಾಸ್ಯೆಯ ಕತ್ತಲಲ್ಲಿ
ನಕ್ಷತ್ರದ ಬೆಳಕಿನಲ್ಲಿ
ನಮ್ಮ ಪಯಣ ಸಾಗಿದೆ.
ಬೇಲಿಯಲ್ಲಿ ಮಲ್ಲಿಗೆ ಹೂ
ಅರಳಿ ಅರಳಿ ಬಾಡಿದೆ.
ಹೆಜ್ಜೆ ನೋವು ಎನ್ನಲಿಲ್ಲ,
ಮುಂದೆ ಮುಂದೆ ಹೋದರವರು
ನಮಗೆ ಮುನ್ನ ಎದ್ದವರು.
ತೆಳು ಶಾಲನು ಹೊದ್ದವರು,
ನೇರ ದಾರಿ ಹಿಡಿದವರು,
ಶಾಂತವಾಗಿ ನುಡಿದವರು.
ದೇವಲೋಕ ಮರ್ತ್ಯಲೋಕ
ಇಲ್ಲೆ ಇಲ್ಲೆ ಎಂದವರು,
ಹೆರರ ನೋವಿಗಾಗಿ ಅತ್ತು,
ಎದೆಯ ತುಂಬ ನೊಂದವರು.
ನಿಜದ ಬೆಳಕ ಕಂಡವರು,
ನಾಡು ನುಡಿಗೆ ದುಡಿದವರು.
ಬೀರುವಿನಲಿ ಪೇಟವಿಟ್ಟು
ಮೂಲೆಯಲ್ಲಿ ಕೋಲನಿಟ್ಟು
ಬರುವೆನೆಂದು ಮನೆಗೆ ಹೇಳಿ
ಬಾರದೊಂದು ಕಡೆಗೆ ಹೋದ
ರಚನಾತ್ಮಕ ಧೀರರು.
ಅಮಾವಾಸ್ಯೆಯ ಕತ್ತಲಲ್ಲಿ
ನಕ್ಷತ್ರದ ಬೆಳಕಿನಲ್ಲಿ
ಮಲ್ಲಿಗೆ ನರುಗಂಪಿನಲ್ಲಿ
ಕಾಣಬಹುದು ಅವರನು.

ಇಂದು ನಮ್ಮ ನೆನಪಿಗೆ

ಜಿ. ಎಸ್. ಶಿವರುದ್ರಪ್ಪ

ಸ್ವಚ್ಛ ಬಿಳಿಯ ಕಚ್ಚೆ ಪಂಚೆ
ಮುಚ್ಚು ಕೋಟು ಪೇಟ
ಹೃದಯದಂತರಾಳವನ್ನು
ಹಿಡಿವ ಮಿಡಿವ ನೋಟ.

ಮಾತೆಲ್ಲವು ಪುಟಿವ ಚಿಲುಮೆ
ಉತ್ಸಾಹದ ಹೊನಲು,
ಪ್ರೀತಿ–ಸ್ನೇಹ–ವಿಶ್ವಾಸಕೆ
ಸದಾ ತೆರೆದ ಬಾಗಿಲು.

ಅರ್ಥಶಾಸ್ತ್ರದಿಂದ ಹಿಡಿದು
ಗೀತ–ಕಾವ್ಯ–ಕಲೆಗಳ
ಪರಿಣತಿಯಲಿ ಹೊಮ್ಮಿಸಿದರು
ಹೊಚ್ಚ ಹೊಸತು ದನಿಗಳ.

ಪುರುಷಕಾರ ರಸಿಕತೆಗಳ
ಶುಚಿಜೀವನ ಪ್ರೀತಿಗೆ
ವಿ. ಸೀ. ಎಂಬುದೊಂದು ಹೆಸರು
ಇಂದು ನಮ್ಮ ನೆನಪಿಗೆ.

ಕಾಮಧೇನು

'ಸಾಕ್ಷಿ' (ಆರ್. ಜಿ. ಕುಲಕರ್ಣಿ)

ಧಾರವಾಡದಿಂದ ಬಂದ
ಕರುವು ನಾನು ಒಂಟಿಯು
ಹುಡುಕುತಿದ್ದೆ ಸ್ನೇಹರಸದ
ಕಾಮಧೇನು ತಾಯನು

ಒಮ್ಮೆ ಒಮ್ಮೆ ಒಂದು ಸಲವು
ನಿಮ್ಮ ಸ್ನೇಹ ಕಂಡೆನು
ಮರೆಯಲಾಗದಂಥ ಭಾವ
ತೊಟ್ಟು ಮಾಡಿ ಕುಡಿದೆನು.

ತಮ್ಮ ಅರಿವು, ತಮ್ಮ ಶ್ರದ್ಧೆ,
ತಮ್ಮ ಶಂಕೆ ಸಹಜವು
ಹಾಲಿನಂಥ ಕವಿತೆಯದಕೆ
ತಾನೆ ತಾನೆ ಬಂದವು

ಶಬ್ದವಾಗಲಿಲ್ಲ ಹೆಸರು
ಭಾವವಾಗಿ ಹೊಳೆದವು
ಶಬರಿ, ಯಮನು, ಗಂಡು ಹೆಣ್ಣು
ನಿತ್ಯವ್ಯಕ್ತಿಯಾದವು.

ಎಲ್ಲರಲ್ಲಿ ಸ್ನೇಹಬಂಧ
ಸಾವಕಾಶ ಅರಳಿದೆ
ಅವನು ಅವಳು ಎಂಬ ಮಂತ್ರ
ಸಪ್ತಪದಿಯು ಆಗಿದೆ.

ಅಲ್ಲಿ, ಇಲ್ಲಿ, ಎಲ್ಲ ಕಡೆಗು
ಸ್ನೇಹ ಗಟ್ಟಿಗೊಂಡಿದೆ
ಕಣ್ಣು ತೆರೆದು ಕಾಣಬೇಕು
ರಸದ ಬೆಳಕು ಕಂಡಿದೆ.

ಭಾವದಲ್ಲಿ ಅರಿವು ಕೂಡಿ
ರಸವು ಮೂಡಿ ಬಂದಿತೊ!
ಪರದ ತತ್ವ ಇಹದಿ ಬೆರತು
ಸಾಮರಸ್ಯ ಹುಟ್ಟಿತೊ!!

ವಿ.ಸೀ. ಅವರಿಗೆ

ಕ. ವೆಂ. ರಾಜಗೋಪಾಲ

ಹಳೆಯ ತಲೆತುಂಬ ಕಲೆಯ ಚಿಂತನೆ ಗೂಡು
ಪಟ್ಟ ಬವಣೆಗೆ ಪಂಚ ಕಲಶದ ಹಾಡು–
ಶುಭ್ರ ಚಿಂತನೆಗೆ ತೆರೆದ ಬಾಗಿಲು ಹಲವು ನೂರು
ಲಾಲ್‌ಬಾಗಿನಲ್ಲಿ ಸಂಜೆ ಸಂಚಾರ– ವಿಚಾರ–
ಇರುವಿಕೆಯಲ್ಲಿ ಹಲವು ನೂರು ಗಾವುದದಾಚೆ
ಮುಗಿಲತ್ತ ನೋಡುವ ಕಡಲ ಗಂಭೀರತೆ–
ಮುಗಿಲ ದಂಡೆಯಲ್ಲೂ ಹರಿದಾಡುವಭಿಮಾನಕ್ಕೆ
ಗಾಜು ಬಟ್ಟಲಿನ ದ್ರಾಕ್ಷಿ ಗೊಂಚಲಿನ ಸರಕು–
ಸ್ವಾಭಿಮಾನವೆ ಸಲೀಸು ಸಂಚಾರ ಹೊರಟ ಹಾಗೆ
ಅಧ್ಯಾಪನಕ್ಕೆ ಸದಾ ಶ್ರೀರಕ್ಷೆಯ ಮಜಲು–
ಸಂಚಾರದಲ್ಲಿ ನಿರತಭಾವಗಳ ಮೋಡಿಹರಹು
ವಿನಯಕ್ಕೆ ನಡೆನೀತಿಗೆ ಪ್ರೀತಿಗೆ ಸೌಜನ್ಯಕ್ಕೆ –
ವಿ.ಸೀ. ಎಂದರೆ, ಕನ್ನಡ ನಾಡು ನುಡಿಯ ಹರಿಕಾರ
ಸಂಪ್ರದಾಯದ ಶಿಷ್ಟ ಸರಪಳಿಯ ಹಿಡಿದವರು–
ನಿಜ ನೆನಪುಗಳ ಮಾಲೆ ಹೂಗುಚ್ಚವಿರಲಿ ಸಹಜ.

ಮಹಾನುಭಾವ

ಸುಜನಾ

ತೀಡಿ ತಿದ್ದಿದ ಪೇಟ, ತೀಡಿ ತಿದ್ದಿದ ಕೋಟು,
ನಿರಿಗೊಂಡ ಅಚ್ಚ ಬಿಳಿ ಪಂಚೆ;
ಕಡೆದು ನಿಲ್ಲಿಸಿದ ಪಂಚಲೋಹದ ವಿಗ್ರಹದ ಮಾತು;
ಗರಿಮುರಿಯದಚ್ಚು ಬೆಲ್ಲದ ಮಾಟ;
ತಾಳೆ ಹೂ ದಳವ ಬಿಚ್ಚಿದಂತೆಲ್ಲ ಹೆಚ್ಚುವುದು ಕಂಪು,
ನಯಗೊಳ್ಳುವುದು ಎಸಳು;
ಸೊಡರ ಗೊಂಚಲ ಹಚ್ಚಿ ತೂಗು ಬಿಟ್ಟಿರುವ ದೀಪಸ್ತಂಭ;
ಬೆಣಚು ಕಲ್ಲಿನ ಪಾತ್ರದಲಿ ಮರ್ಮರಿಸಿ ಹರಿದಿರುವ
ಕಾರ್ತಿಕದ ಧರ್ಮಸ್ಥಳದ ಹೊಳೆ;
ಮಾತ ಮಾಗಿಸುತ ಮಾಗುತ್ತ ಹೋದ ಜೀವ;
ಮಿದು ಪದದೊಳಗೆ ಹದಗಂಡ ಭಾವ;
ಗಾರುಗೊಳಿಸದೆ ನಯವ, ಮತ್ತೆ ನಯದೊಳು ಜಾರಿಸದೆ,
ಭಾವ ವಿನಯವ ಅರಳಿಸಿದ ಜೀವ;
ಜೀವ ಪ್ರಣಯವ ಗೌರವಿಸಿದ ಮಹಾನುಭಾವ!

ನಮ್ಮ ಹಾಡು

ನಾ. ಗೀತಾಚಾರ್ಯ

ನಿಮ್ಮ ಮನೆಯಂಗಳದಿ ಬೆಳೆದೆಲ್ಲ ಹೂವನ್ನು
ಕನ್ನಡದ ಮಡಿಲಲ್ಲಿ ತುಂಬಿಸಿದಿರಿ.
ಅರಳುತಿದೆ ಹೂವು, ಬೆಳಗುತಿದೆ ನೋಡಿ,

ನಲಿಯುತ್ತ ಹೊರಟಿರ; ನೋಡಲಾಗದೆ ಇನ್ನು
ಶಬರಿಯನು ಕಾಣಲು ಕೊಂಡಿರ ಪಂಪಾಯಾತ್ರೆ.
ಸೇರಿದಿರಿ ಸೃಜಿಸಿದ ಕವಿಕಾವ್ಯ ಪರಂಪರೆಯಲಿ.
ಆ ನೀಟು, ರಸಿಕತೆ, ಹೌದು ನಿಮ್ಮದೇ ಶೈಲಿ.

ಸಾಧ್ಯವಾಗದೆಮಗೆ, ಹಲವು ಹೊಲಗಳ ಉಳುಮೆ
ಕರಗತವು ನಿಮಗೆ. ನಿಮ್ಮನಳೆಯಲು ನಮಗೆ,
ಆಗಿಲ್ಲ ಇನ್ನೂ ಮನ್ನಿಸುವಿರಾ ವಿ.ಸೀ;
ಹರಿಸಿಲ್ಲ ಚಿತ್ತ, ಕೊಟ್ಟಿಲ್ಲ ಒಂದೂ ಪ್ರಶಸ್ತಿ.
ಎತ್ತರದವರು ತಗ್ಗದಿರಲೆಂದು ಬಾಗಿಲನೆ
ಎತ್ತರಿಸಿದವರೆ, ನಿಮ್ಮ ಹೆಚ್ಚೆಯ ಪಾಡು
ಅರಲು ಬರಲಾಗದಿರಲಿ, ಅದೆ ನಮ್ಮ ಹಾಡು.

II

ಸ್ಮರಣ

ಸರಳ, ಮಧುರ, ವಿರಳ ಜೀವನ

ಶಿವರಾಮ ಕಾರಂತ

ನನ್ನ ಬದುಕಿನ ಮೇಲೆ ನಿಡುಗಾಲ ಪ್ರಭಾವ ಬೀರಿದ ವ್ಯಕ್ತಿಗಳ ಸಂಖ್ಯೆ ತೀರ ಕಡಿಮೆ. ನಾವು ನಮ್ಮ ಜೀವನದ ಯಾತ್ರೆಯನ್ನು ನಡೆಯಿಸುವಾಗ ಅನೇಕರನ್ನು ಸಂಧಿಸುತ್ತೇವೆ. ಅವರಲ್ಲಿ ನಮಗೆ ದುಃಖ ಕೊಡುವವರೂ ಇರುತ್ತಾರೆ; ಸಂತೋಷ ಕೊಡುವವರೂ ಇರುತ್ತಾರೆ. ಅವರೆಲ್ಲ ಸ್ವಲ್ಪ ಕಾಲ ನಮ್ಮ ಜೀವನದಲ್ಲಿ ಸಂಧಿಸುತ್ತಾರೆ ; ಅನಂತರ ಹೊರಟು ಹೋಗುತ್ತಾರೆ. ಆದರೆ ತಮ್ಮ ಬದುಕಿನಿಂದ ನಮ್ಮ ಬದುಕಿನ ಮೇಲೆ ಅಚ್ಚೊತ್ತಿ ಕೊನೆಯ ತನಕವೂ ಸ್ಮರಣೆಯನ್ನು ಉಳಿಸುವವರ ಸಂಖ್ಯೆ ಕೇವಲ ಒಂದು ಮುಷ್ಟಿಯ ಬೆರಳುಗಳಷ್ಟು ಮಂದಿಯೂ ಇರುವುದಿಲ್ಲ. ನಮಗೆ ಸಾವಿರ ಸಾವಿರ ಜನರ ಸಂಪರ್ಕ ಆಗಿಯೇ ಆಗುತ್ತದೆ. ಅಂಥವರಿಂದ ಉಂಟಾಗುವ ಪ್ರಭಾವ ನಮ್ಮನ್ನು ಹೊಂದಿರುವಂತೆ ಅವರನ್ನೂ ಹೊಂದಿರುತ್ತದೆ. ಅವರ ಬದುಕಿನ ಮೌಲ್ಯಕ್ಕೂ ನಮ್ಮದಕ್ಕೂ ಹೊಂದಿಕೆ ಇರುವಲ್ಲಿ ಅವರ ನೆನಪು ನಮ್ಮನ್ನು ಹೆಚ್ಚಾಗಿ ಅಂಟಿಕೊಳ್ಳಬಲ್ಲುದು. ತಮ್ಮ ಬದುಕಿನಲ್ಲಿ ಸೊಗಸು ಏನು, ಅದರ ಸತ್ವ ಏನು, ಸರಸ ಏನು, ವಿರಸ ಏನು–ಎಂಬುದನ್ನು ತಮ್ಮ ಬದುಕಿನಿಂದಲೇ ತೋರಿಸುತ್ತ ಬಾಳಿದವರು, ನನ್ನ ಬದುಕಿನ ಎಟುಕಿಗೆ ದೊರೆತ ವ್ಯಕ್ತಿಗಳಲ್ಲಿ ಸೀತಾರಾಮಯ್ಯನವರು ಬಲು ಗಣ್ಯರು.

೧೯೩೦ರ ತರುವಾಯ ಅವರು ನಮ್ಮ ಊರಿಗೆ ಹಲವು ಬಾರಿ ಬಂದವರು. ಬಂದಾಗಲೆಲ್ಲ ಅವರು ತಮ್ಮ ಕವನಗಳನ್ನು ಬೇಕಷ್ಟು ಓದಿ ಹೇಳಿದವರು. ನನ್ನಂಥ ಬೆಪ್ಪರಿಗೆ ಅವು ಚೆನ್ನಾಗಿಯೇ ಕಂಡಿವೆ. ಆದರೆ ಇಂದಿನ ದಿನಗಳಲ್ಲಿ ಅವೇ ಕವನಗಳನ್ನು ಕುರಿತು ಯಾರೂ ಸೊಲ್ಲೆತ್ತುತ್ತಲಿಲ್ಲ. ಅದನ್ನು ನೋಡುವಾಗ– ಇಂದಿನ ದಿನ ನಮ್ಮ ಜನರ ಮೌಲ್ಯಮಾಪನೆಯಲ್ಲಿ ವ್ಯತ್ಯಾಸ ಬಂದಿದೆಯೇ–ಎಂಬ ಸಂದಿಗ್ಧ ಕಾಣಿಸುತ್ತದೆ. ಆದರೆ ಕವನಗಳನ್ನು ತೂಗುವಲ್ಲಿ–ಅವುಗಳ ಸೃಷ್ಟಿಗೆ ಹೇತುವಾದ ಸ್ಫೂರ್ತಿ ನೀಡಿದ ಅಂಶಗಳನ್ನು ನಾನು ವಿ. ಸೀ. ಅವರ ಕವನಗಳಲ್ಲಿ ಗುರುತಿಸಿದವನು. ಆದರೆ ಇಂದಿನ ನಮಗೆ ಕಾವ್ಯ ವಸ್ತುವಿಗಿಂತ ತಂತ್ರ ಪ್ರಧಾನವೆನಿಸುತ್ತಿದೆ ಎಂಬ ಸಂಶಯ ನನಗೆ.

ನಾನು ಸಾಮಾನ್ಯವಾಗಿ ಇಂದಿನ ಕಾದಂಬರಿಗಳನ್ನು ತೂಗುವ ವಿಮರ್ಶಕರ ಗೋಷ್ಠಿಯನ್ನು ನಿರೀಕ್ಷಿಸಿದಾಗಲೆಲ್ಲ ತಂತ್ರವನ್ನು ಕುರಿತು ಯಾವತ್ತು ವಿಮರ್ಶಾದೃಷ್ಟಿ ಹರಿಯುತ್ತದೆ. ಸಾಹಿತ್ಯ ಜೀವನದ ಯಾವ ವಸ್ತುವನ್ನು ಬಿಂಬಿಸುತ್ತದೆ ಎಂದು ಮಾತಾಡುವವರನ್ನು ಕಾಣುತ್ತಲಿಲ್ಲ. ಬರವಣಿಗೆ ಚಮತ್ಕಾರವೋ, ತಂತ್ರವೋ ಪ್ರಧಾನವೆನಿಸಿದೆ. ಅಲಂಕಾರ ನಮಗೆ ಮುಖ್ಯವೇ, ಸೃಜನಶೀಲತೆಯನ್ನು ಪ್ರೇರಿಸಿದ ವಸ್ತು, ಅನುಭವ ಇವೆಲ್ಲ ಮುಖ್ಯವೇ–ಎಂಬ ದೃಷ್ಟಿ ಕಾಣಿಸುತ್ತಲಿಲ್ಲ. ಈ ವಿಚಾರದಲ್ಲಿ ನಮ್ಮ ಮಾನದಂಡ ಅಡ್ಡಹಾದಿ ಹಿಡಿದಂತೆ ನನಗೆ ಕಾಣಿಸುತ್ತಿದೆ.

ನಾನಂತು ಕವನಗಳ ಬಗ್ಗೆ ಹೆಚ್ಚಿಗೆ ತಲೆಕೆಡಿಸಿಕೊಂಡವನಲ್ಲ. ಆದರೆ ಕಾವ್ಯಗೋಷ್ಠಿಗಳಲ್ಲಿ ಏನೇನು ಅನ್ನುತ್ತೀರಿ ಎಂದು ಕೇಳಿದಾಗ–ನವ್ಯವೋ, ಗಿವ್ಯವೋ ಅಂಥ ಇನ್ನೇನನ್ನೋ ಬಣ್ಣಿಸುವಾಗಲೆಲ್ಲ ಅದನ್ನು ತಿಳಿಸುವವರು ತಮ್ಮಿಂದಲೇ ಅದು ತೊಡಗಿತು ಎಂಬಂತೆ ಸಾರುತ್ತಾರೆ. ಅವರಿಗಿಂತ ಹಿಂದಿನವರು ಅಂಥ ಕೆಲಸಕ್ಕೆ ಹೋಗಿರಲಿಲ್ಲ ಎಂಬ ಪರಿಪಾಠ ಕಾಣಿಸುತ್ತಿದೆ. ಇದು ನನಗೆ ಆಶ್ಚರ್ಯ ಹುಟ್ಟಿಸುವ ಸಂಗತಿ! ನಿಮಗೆ ನೀವೇ ಗಾತ್ರದಲ್ಲಿ ಹಿಗ್ಗಿದವರಾಗಿ ಕಾಣಿಸಿ, ನಿಮ್ಮ ಹಿಂದಿನವರು ಯಾರೂ ಇದ್ದಿಲ್ಲ ಎಂಬಂತೆ ಚಿತ್ರಿಸುವ ರೀತಿ ಬೆರಗು ಬರಿಸುತ್ತದೆ. ನೀವು ನಿಮ್ಮ ಗಾತ್ರವನ್ನು ತುಸು ಕುಗ್ಗಿಸಿಕೊಂಡರೆ ಒಳಿತು. ನಿಮ್ಮಿಂದ ಮೊದಲೂ ಕವಿಗಳು ಇದ್ದೇ ಇದ್ದರು ಎಂಬ ಭಾವನೆಯಿಂದ ವರ್ತಿಸಿದಲ್ಲಿ ಸಾಹಿತ್ಯದ ಆರೋಗ್ಯಕ್ಕೆ ಹಿತವಾದೀತು ಅನಿಸುತ್ತದೆ! ನಿಮ್ಮ ಹಿಂದೆಯೂ ಸಾಹಿತ್ಯ ಇತ್ತು ಎಂದು ತಿಳಿದರೆ ಒಳಿತಲ್ಲವೇ? ವಿ.ಸೀ.ಯವರ ಕವನಗಳ ಸ್ಥಾನ ಶೂನ್ಯ ಎಂಬ ನಮ್ಮ ವರ್ತನೆ ಆಧುನಿಕ ಸಾಹಿತ್ಯದ ಇತಿಹಾಸಕ್ಕೆ ಸಲ್ಲಿಸುವ ಅಪಚಾರವಾದೀತು.

ನನ್ನ, ಅವರ ಒಡನಾಟ ನಿಡುಗಾಲದ್ದು : ಅವರೊಡನೆ ನಿರ್ದಾಕ್ಷಿಣ್ಯವಾಗಿ ನಾನು ಇಂಥ ವಿಷಯಗಳನ್ನು ಚರ್ಚಿಸಿದವನು. ಎಷ್ಟೋ ಬಾರಿ ನಾನು ಬರೆದ ಏನಾದರೊಂದನ್ನು ಅವರ ಮುಂದೆ ಓದಿ ಹೇಳಿ "ಹೇಗೆನಿಸುತ್ತದೆ ಇದು?" ಎಂದು ಕೇಳಿದವನು. ಪ್ರತಿಬಾರಿಯೂ ಅವರು "ಚೆನ್ನಾಗಿದೆ" ಎಂದವರು. ಒಮ್ಮೆ ನಾನು ರೇಗಿ ಅವರಿಗೆಂದೆ– "ಸ್ವಾಮಿ, ಚೆನ್ನಾಗಿದೆ ಎಂದೇ ಬರೆದದ್ದು ನಾನು; ಅದನ್ನು ನೀವು ನನಗೆ ಹೇಳಬೇಕಾಗಿಲ್ಲ. ಅದರಲ್ಲಿ ಸರಿಗಾಣದ ಅಂಶ ಯಾವುದೆಂದು ತಿಳಿಸಿ" ಎನ್ನಬೇಕಾಯಿತು. ಅವರು ವಿನಯದಿಂದ "ಇಲ್ಲ ಕಾರಂತ್ : ನಾನು ನನಗೆ ಕಂಡದ್ದನ್ನು ಹೇಳಿದರೆ ಜನರು ಏನೇನೋ ತಿಳಿದಾರು" ಎಂದರು. ಅದಕ್ಕೆ ನಾನೆಂದೆ : "ನನಗೂ ನಿಮಗೂ ಪರಿಚಯವಾಗಿ ಹತ್ತಿಪ್ಪತ್ತು ವರ್ಷಗಳೇ ಸಂದಿವೆ. ಹಾಗೆ ಇದ್ದಾಗಲೂ ನೀವು ನನ್ನನ್ನು ತಿಳಿಯಲಾರದೆ ಹೋದಿರಿ! ಸ್ಪಷ್ಟವಾಗಿ ಇದು ಸರಿ, ಇದು ಸರಿಯಲ್ಲ ಎಂದು ತಿಳಿಸಿದರೆ ಏನಾಗುತ್ತದೆ? ಯಾಕೆ ತಿಳಿಸಬಾರದು?" ಎಂದು ಖಂಡಿಸಿದೆ. ಮುಂದೆ ಅವರು ನನ್ನೊಡನೆ ಯಾವತ್ತು ವಿಷಯಗಳಲ್ಲಿ ನಿರ್ಭೀತ ವಿಮರ್ಶೆಯನ್ನು ಮಾಡಲು ತೊಡಗಿದರು!

ಒಡೆದು ಹರಿಹಂಚಾಗಿದ್ದ ಕರ್ನಾಟಕದಲ್ಲಿ ಒಡೆಯದೆ ಇರುವ ದೊಡ್ಡ ಬದುಕನ್ನು ಅವರು ನಡೆಯಿಸಿದರು. ಕರ್ನಾಟಕ ಎಂದೆ ನಾನು. ನಮ್ಮ ಹಳೆಯ ಮೈಸೂರಿನ ಮಿತ್ರರ ಭಾವನೆಯಲ್ಲಿ ಮೈಸೂರಿನ ಹೊರಗೆ ಕರ್ನಾಟಕ ಇರಲಿಲ್ಲ. ಧಾರವಾಡ ಬೇರೆ, ಬಿಜಾಪುರ

ಬೇರೆ, ರಾಯಚೂರು ಬೇರೆ, ಒಂದರ ಸಂಪರ್ಕ ಇನ್ನೊಂದಕ್ಕೆ ಇರಲಿಲ್ಲ. ಹೀಗಾಗಿ ಯಾವುದೇ ದೊಡ್ಡ ವ್ಯಕ್ತಿ ಕನ್ನಡ ದೇಶದಲ್ಲಿ ಇರುವುದಾದರೆ ಅವರು ನಮ್ಮ ಊರಲ್ಲೇ ಹುಟ್ಟಿದವರಾಗಬೇಕು! ಅಂತಹ ಕಾಲದಲ್ಲಿ, ಒಡೆದ ಕರ್ನಾಟಕ ಒಂದಾಗಬೇಕಿದ್ದ ಕಾಲದಲ್ಲಿ, ಕನ್ನಡಿಗರ ಪರವಾಗಿ ತಮ್ಮ ಬದುಕಿನಿಂದ, ಮಾತಿನಿಂದ, ವಿಚಾರ ಶೀಲತೆಯಿಂದ ಸಮಗ್ರ ಕರ್ನಾಟಕ ದೇಶದ–ಅದು ಗುಲ್ಬರ್ಗಾ ಇರಲಿ, ಹೈದರಾಬಾದೇ ಇರಲಿ, ದಕ್ಷಿಣ ಕನ್ನಡವೇ ಇರಲಿ–ಮೈಸೂರಿನ ಗಡಿಯನ್ನು ದಾಟಿ ಹೋಗಿ, ದೇಶದ ನೆನಪನ್ನು ಉಳಿಸಿದ ವ್ಯಕ್ತಿಗಳಲ್ಲಿ ಸೀತಾರಾಮಯ್ಯನವರು ಪ್ರಮುಖರು. ಇಲ್ಲಿನವರು ಅಲ್ಲಿಗೆ ಹೋಗಿ ಮನ್ನಣೆ ಪಡೆದದ್ದುಂಟು, ಅಲ್ಲಿನವರಿಂದ ಆರತಿ ಎತ್ತಿಸಿಕೊಂಡದ್ದುಂಟು, ಅಂಥ ಅನೇಕ ಹಿರಿಯರು ನಮ್ಮಲ್ಲಿದ್ದಾರೆ. ಅಂಥವರು ಅಲ್ಲಿಂದ ಸ್ವಂತ ಊರಿಗೆ ಮರಳಿದ ಮೇಲೆ ತಿರುಗಿ ಹೊರಗೆ ಹೋದದ್ದಿಲ್ಲ; ಹೊರಗಿನವರ ನೆನಪು ತಂದುಕೊಂಡಿಲ್ಲ.

ನನ್ನ ಕನ್ನಡನಾಡಿನ ಹೊರಗಿನ ಸಂಚಾರದಲ್ಲಿ ಹಲವರನ್ನು ಮಾತನಾಡಿಸಿದ್ದೇನೆ. ಅವರಲ್ಲಿ ಸಣ್ಣವರಿದ್ದಾರೆ; ದೊಡ್ಡವರಿದ್ದಾರೆ: ವಕೀಲರಿದ್ದಾರೆ ; ಶಾಲಾ ಮಾಸ್ತರರಿದ್ದಾರೆ. ಇಂಥವರೊಡನೆ ನಾನು "ನಿಮಗೆ ಮೈಸೂರವರ ವಿಚಾರ ಏನು ಅನಿಸುತ್ತದೆ" ಎಂದು ಕೇಳಿದರೆ, ಅವರ ನೆನಪಿಗೆ ಮೊದಲು ಬರುವ ವ್ಯಕ್ತಿ ಸೀತಾರಾಮಯ್ಯನವರು! ಆ ರೀತಿಯ ಬಾಂಧವ್ಯವನ್ನು ವಿಶಾಲ ಕರ್ನಾಟಕದ ಜನತೆಯಲ್ಲಿ ಅಂದಿನ ದಿನಗಳಲ್ಲಿ ಬೆಳೆಯಿಸಿಕೊಂಡು ಬಂದ ವ್ಯಕ್ತಿ ಅವರು. ತಮ್ಮ ಸಂಪರ್ಕಕ್ಕೆ ಬಂದ ಹಲವರ ಮನಸ್ಸಿನಲ್ಲಿ ಅಚ್ಚೊತ್ತಿ ಉಳಿದ ವ್ಯಕ್ತಿ ಅವರು. ಅವರ ಜೀವನ ಸರಳ, ಮಧುರ, ವಿರಳ. ಅಷ್ಟೊಂದು ಸುಂದರ ಬದುಕನ್ನು ಅವರು ಹೇಗೆ ನಡೆಯಿಸಲು ಶಕ್ತರಾದರು ಎಂಬುದೂ ಒಂದು ಸೋಜಿಗದ ಸಂಗತಿಯೇ!

ಬದುಕಿನಲ್ಲಿ ಎಷ್ಟೆಷ್ಟು ಕಹಿ ಇರಬಹುದೋ ಅದನ್ನೆಲ್ಲ ಉಂಡವರು ಅವರು; ಒಂದಲ್ಲ, ಹಲವು ತೆರನ ಕಹಿಯನ್ನು ತಮ್ಮ ಬದುಕಿನಲ್ಲಿ ಅರಗಿಸಿ ಕೊಂಡವರು; ನೊಂದವರು, ಕೊರಗಿದವರು. ಹಣದ ವಿಚಾರದಲ್ಲಿ ಮಿತ್ರರನ್ನು ಪಾರು ಮಾಡಲು ಹೋಗಿ ಕೊನೆಯ ತನಕ ತಾವೇ ದಂಡ ತೆತ್ತು ತೆತ್ತು ಕಂಗಾಲಾದವರು. ಅಷ್ಟಿದ್ದರೂ ಯಾರೊಬ್ಬರ ಬಗ್ಗೆ ಒಂದೇ ಒಂದು ಕೆಟ್ಟ ಮಾತನ್ನು ಆಡಿದವರಲ್ಲ. ಅನೇಕ ಬಾರಿ ಪರಿಹಾಸ್ಯಕ್ಕಾಗಿ ನಾನು ಅವರಿಗೆ "ನಿಮಗೆ ಹಾಗೆಯೇ ಆಗಬೇಕು" ಎಂದು ಹೇಳಿದ್ದುಂಟು. ತಮ್ಮನ್ನು ನೋಯಿಸಿದವರ ವಿಚಾರದಲ್ಲೂ ಅವರ ಬಾಯಿಂದ ಕೆಟ್ಟ ಮಾತು ಬಂದುದನ್ನು ನಾನು ಕೇಳಿಲ್ಲ. ಅವರ ಮನಸ್ಸಿನ ಔದಾರ್ಯ, ನಡೆನುಡಿಗಳ ಶುಚಿ, ಯೋಚನೆ–ಭಾವನೆಗಳಲ್ಲೂ ಕಾಣಿಸುತ್ತಿದ್ದ ನಯವನ್ನು ಎಷ್ಟು ನೆನೆದರೂ ಸಾಲದು. ಅವರ ಬಾಳಿನ ಶುಚಿಯನ್ನು ಕುರಿತು ನಾಲ್ಕು ಮಾತುಗಳನ್ನು ನಾನು ಹೇಳಿದುದಾದರೆ ಅದು ಕೇವಲ ಮಾತಿನ ಚಮತ್ಕಾರಕ್ಕಾಗಿ ಹೇಳಿದ ಮಾತೆಂದು ತಿಳಿಯಬಾರದು.

ನಮ್ಮ ಕರ್ನಾಟಕ ದೊಡ್ಡ ದೇಶ; ಅದರಲ್ಲಿ ನಾವು ಕಂಡು ಸಂತೋಷ ಪಡಬಹುದಾದ ನಿಸರ್ಗ ಸೌಂದರ್ಯ ಧಾರಾಳವಾಗಿದೆ. ಅವನ್ನು ನೋಡದೆಯೂ ಕವನಗಳನ್ನು ಗೀಚಬಲ್ಲವರಿದ್ದೇ ಇದ್ದಾರೆ. ಕವನಕ್ಕೆ ಬೇಕಾಗುವ ಪ್ರಾಸಮಯ ಶಬ್ದಗಳನ್ನು, ವರ್ಣನೆಗಳನ್ನು ನಾವು ಹಿಂದಿನಿಂದಲೂ ಕೇಳಿ ಬಂದವರೇ. ಅಲ್ಲಿನ ಶುಕಪಿಕಾದಿಗಳು,

ಹಲವಾರು ಪುಷ್ಪ ಜಾತಿಗಳು ಕೇಳಿ ಪರಿಚಿತವಾದುವೇ. ಆದರೆ ಅವನ್ನು ಕಂಡೇ ಕಾಣಬೇಕು, ಪ್ರತ್ಯಕ್ಷ ಅನುಭವ ಪಡೆಯಬೇಕೆಂಬ ಹಟವನ್ನು ತೊಟ್ಟ ಸಾಹಿತಿಗಳು ನಮ್ಮಲ್ಲಿರುವರಾದರೆ, ನನಗೆ ತಿಳಿದವರಲ್ಲಿ ಇಬ್ಬರ ನೆನಪು ನನಗೆ ಬಂದೀತು– ಎ. ಎನ್. ಮೂರ್ತಿರಾಯರು ಮತ್ತು ವಿ. ಸೀತಾರಾಮಯ್ಯನವರು. ಮಿಕ್ಕವರ ಸೌಂದರ್ಯ ಪ್ರಜ್ಞೆಯನ್ನು ಕುರಿತು ನನ್ನ ಆಕ್ಷೇಪ ಏನೇನೂ ಇಲ್ಲ. ನನಗೆ ಅಂಥ ಒಂದು ನೆನಪು ಅಳಿಯದೆ ಉಳಿದಿದೆ. ನಾನೊಮ್ಮೆ ಕೆಲವು ಸಾಹಿತಿ ಮಿತ್ರರನ್ನು – ಘಟಾನುಘಟಿಗಳನ್ನು – ಸಂಚಾರಕ್ಕೆ ಕರೆದೊಯ್ದಾಗ ಭಟ್ಕಳ ಕಡಲ ತೀರದ ಗುಡ್ಡವೊಂದನ್ನು ಏರಿದ ನೆನಪಿದೆ. ನಮ್ಮ ಮೂಡಣದಲ್ಲಿ ನೀಲ ಪಶ್ಚಿಮ ಘಟ್ಟದ ಶ್ರೇಣಿ ಕಾಣಿಸಿದರೆ, ಪಡುವಣದಲ್ಲಿ ಅತಿ ದೂರದ ತನಕ ಹಾಸಿದ ನೀಲ ಕಡಲಿದೆ. ಅವನ್ನು ಮೂವರು ಮಹಾ ಸಾಹಿತಿಗಳು ನಿಂತು ನೋಡುತ್ತಿದ್ದ ನೆನಪು ನನಗೆ. ಸೀತಾರಾಮಯ್ಯ ಇನ್ನಾವುದೋ ಒಂದು ಮೂಲೆಯಲ್ಲಿ ಕುಳಿತು ಅವನ್ನು ಮೂಕಮೌನದಿಂದ ನೋಡುತ್ತಿದ್ದರು. ಆ ನಿಂತು ನೋಡುತ್ತಿದ್ದವರು ಕಡಲನ್ನು ಸಾಕ್ಷಿಯಾಗಿರಿಸಿಕೊಂಡು, ಮೈ ಮರೆತು ಸಂಭಾಷಣಾ ಮಗ್ನರಾಗಿದ್ದರು. ಸೀತಾರಾಮಯ್ಯ ಅಂಥವರಲ್ಲ. ನಿಸರ್ಗವನ್ನು ನೋಡುವಾಗ ಅವರು ಆ ದೃಶ್ಯದಲ್ಲಿ ತಲ್ಲೀನ. ಕಡಲ ತಡಿಗೆ ಹೋದರೆ ಅಲ್ಲಿನ ಮರಳ ನೆಲವನ್ನು ತುಳಿಯುತ್ತ ಹೋಗುತ್ತಲೇ ಇರುತ್ತಾರೆ ; ಇನ್ನೊಂದರ ಗಮನ ಅವರಿಗಿಲ್ಲ. ಮೊದಲು ಹೇಳಿದ ಮೂವರು ಮಹಾ ಸಾಹಿತಿಗಳು ಅಲ್ಲಿ ನಿಂತು ಅರ್ಧ ಘಂಟೆ ಕಾಲ ಗಂಟಲು ಬರಿದು ಮಾಡಿ, ಸಮುದ್ರಕ್ಕೆ ಅಪ್ಪಣೆಕೊಟ್ಟು ಹೊರಟು ಬಂದರು. ತಾವು ಏನನ್ನು ನೋಡುತ್ತಿದ್ದೇವೆಯೋ ಆ ನೋಟದಲ್ಲಿ ಬೆರೆತು ಮಗ್ನರಾಗುವುದು ಸೀತಾರಾಮಯ್ಯನವರ ಗುಣ. ಅಂಥ ಗುಣವನ್ನು ನಾನು ಅವರಲ್ಲಿ ಚೆನ್ನಾಗಿ ಗುರುತಿಸಿದ್ದೇನೆ.

ಅವರು ಹಲವಾರು ವಿಷಯಗಳನ್ನು ಕುರಿತು ಚಿಂತಿಸಿದವರು; ತಿಳಿಸಿದವರು. ಅದನ್ನು ಎಷ್ಟು ನೆನಪು ಮಾಡಿಕೊಂಡರೂ ಸಾಲದು. ಈಗಷ್ಟೆ ನನ್ನ ಮಿತ್ರ ಶೇಷಗಿರಿರಾಯರು ಎತ್ತಿ ತಿಳಿಸಿದ ವಿಷಯ ಸಾಹಿತ್ಯಕ್ಕೆ ಸಂಬಂಧಿಸಿದ್ದಲ್ಲ. ಅದು ದೇಶದ ಆರ್ಥಿಕಕ್ಕೆ ಸಂಬಂಧಿಸಿದ್ದು. ಹಿಂದಿನ ದಿನಗಳಲ್ಲಿ ದಿಲ್ಲಿಯ 'ಕೌನ್ಸಿಲ್ ಒಫ್ ಸ್ಟೇಟಿ'ನಲ್ಲಿ ದಿ॥ ನೆಹರೂರವರು, ಸತ್ಯ ಮೂರ್ತಿಯವರು ಸದಸ್ಯರಾಗಿದ್ದ ಕಾಲದ ಕತೆ ಅದು. ಅಂಥವರು ಸರಕಾರದ ಮುಂದೆ ದೇಶದ ಅಭಿವೃದ್ಧಿಗಾಗಿ 'ಇಂಥಿಂಥದ್ದಾಗಬೇಕು' ಎಂದು ಸರಕಾರದೊಡನೆ ವಾದಿಸಿದಾಗಲೆಲ್ಲ ಅಂದಿನ ಅರ್ಥಮಂತ್ರಿಯಿಂದ "ಎಲ್ಲಿಂದ ಹಣ ತರಲಿ?" ಎಂಬ ಪ್ರತ್ಯುತ್ತರ ಬರುತ್ತಿತ್ತು. ಆಗ ನಮ್ಮವರು ಮೂಕರಾಗುತ್ತಿದ್ದರು. ನಮ್ಮ ಮಿತ್ರರಾದ ವಿ. ಸೀತಾರಾಮಯ್ಯನವರು ಮೊದಲಿನಿಂದಲೂ ಅರ್ಥಶಾಸ್ತ್ರದ ಪತ್ರಿಕೆಗಳನ್ನು, ಅಂಕೆ ಸಂಖ್ಯೆಗಳನ್ನು ಸಂಗ್ರಹಿಸಿ ಅಭ್ಯಸಿಸಿದವರು. ಅವರಿಗೆ ಕಾಣಿಸಿದ ಸಂಗತಿಯೆಂದರೆ 'ಸರಕಾರ ಯಾಕೆ ಹಣವಿಲ್ಲ ಎನ್ನುತ್ತದೆ?' ಎಂದು. ನಮ್ಮ ಭಾರತದ ಹಣಕಾಸಿನ ಬೆಂಬಲಕ್ಕಾಗಿ ಲಂಡನಿನಲ್ಲಿ ಶೇಖರಿಸಿ ಇರಿಸಿದ ಚಿನ್ನ ಇಲ್ಲವೇ? ಅಂದಿನ ದಿನಗಳಲ್ಲಿ ಒಂದು ಪವನು ತೂಕಕ್ಕೆ ೩೫ ರೂಪಾಯಿ ಬೆಲೆ ಇತ್ತು. ಇಂಗ್ಲೆಂಡಿನ ಬ್ಯಾಂಕಿನಲ್ಲಿ ಅದಕ್ಕೆ ಕೇವಲ ರೂ. ೧೫ರಂತೆ ಬೆಲೆ ಹಿಡಿದು ಇರಿಸಿಕೊಂಡಿದ್ದರು. ಅದನ್ನು ಚಾಲತಿ ಚಿನ್ನದ ಧಾರಣೆಯಲ್ಲಿ ಪರಿಗಣಿಸಿದರೆ, ನಮ್ಮ ಚಿನ್ನದ ಬೆಂಬಲದಿಂದ ಎಷ್ಟೋ ಕೋಟಿ ರೂಪಾಯಿಗಳ

ನೋಟುಗಳನ್ನು ಮುದ್ರಿಸಿ, ಪ್ರಸಾರ ಮಾಡಲು ಬಂದೀತು– ಎಂಬ ಸಂಶಯ ಸೀತಾರಾಮಯ್ಯನವರಲ್ಲಿ ಮೂಡಿತ್ತು. ಅವರು ತಮ್ಮ ಹಿರಿಯ ಅಧಿಕಾರಿಗಳಾದ, ಅರ್ಥಶಾಸ್ತ್ರ ಬಲ್ಲ ಎನ್. ಎಸ್. ಸುಬ್ಬರಾಯರೊಡನೆ ಅದೇ ವಿಷಯವನ್ನು ಪ್ರಸ್ತಾಪಿಸಿದ್ದುಂಟು. ಹಣದ ಅಭಾವವನ್ನು ಕುರಿತು ಭಾರತ ಸರಕಾರ ಚಡಪಡಿಸುತ್ತಿರುವ ಅಂದಿನ ಪರಿಸ್ಥಿತಿಯಲ್ಲಿ 'ಆ ರೀತಿ ಮಾಡಬಾರದೇಕೆ' ಎಂಬ ಭಾವನೆ ಅವರಲ್ಲಿ ಒತ್ತಿ ಬಂತು. ಆ ಕಾಲದಲ್ಲಿ ಸೀತಾರಾಮಯ್ಯನವರ ಶಿಷ್ಯರೇ ಆಗಿದ್ದ ಎಚ್. ವಿ. ಆರ್. ಅಯ್ಯಂಗಾರರವರು ರಿಸರ್ವ ಬ್ಯಾಂಕಿನ ಗವರ್ನರರಾಗಿದ್ದರು. ಅವರೊಡನೆ ಚರ್ಚಿಸುವ ಆಸೆಯಾಗಿ ಒಂದು ದಿನ ನನ್ನೊಡನೆ ಈ ಕೆಲಸಕ್ಕಾಗಿ "ಅವರಿರುವ ಮುಂಬಯಿಗೆ ಹೋಗಿ ಬರೋಣವೇ" ಎಂದರು. ನಾನು ಸದಾ ಸಂಚಾರಿ. ಹಾಗಾಗಿ ಒಪ್ಪಿದೆ. ನನಗೆ ಹಣಕಾಸಿನ ರೂಪಾಯಿ, ಆಣೆ, ಪೈಯ ವಿಚಾರ ಗೊತ್ತಿಲ್ಲ. ಆದರೂ ಅವರ ಜತೆಯಲ್ಲಿ ಮುಂಬಯಿಗೆ ಹೋದೆ. ಅಲ್ಲಿ ಎಚ್. ವಿ. ಆರ್ ಅಯ್ಯಂಗಾರರವರ ಮನೆಯಲ್ಲಿ ಅವರನ್ನು ಕಂಡು ಚರ್ಚಿಸಿದರು. ಅವರು "ಹೌದು, ಹೌದು," ಎಂದುದಲ್ಲದೆ "ನೀವು ಕೌನ್ಸಿಲ್ ಒಫ್ ಸ್ಟೇಟಿನ ನಮ್ಮ ಸದಸ್ಯರಾದ ನೆಹರು ಮತ್ತು ಸತ್ಯಮೂರ್ತಿಯವರು ಇಬ್ಬರಿಗೆ ನಿಮ್ಮ ಸೂಚನೆಯನ್ನು ತಿಳಿಸಿ" ಎಂದರು. ಅವರು ಹಾಗೆ ಅವರಿಬ್ಬರಿಗೂ ಪತ್ರ ಬರೆದರು. ಆ ಕಾಗದಗಳು ಹೋದವು. ಸತ್ಯಮೂರ್ತಿಯವರು ಇವರ ಪತ್ರಕ್ಕೆ ಉತ್ತರವನ್ನು ಕೊಡಲಿಲ್ಲ. ನೆಹರೂರವರು ಉತ್ತರ ಕೊಟ್ಟರು. ಅದು ಹೀಗಿತ್ತು: "ನೀವು ಇಕಾನೊಮಿಕ್ ಟೈಮ್ಸ್ ಪತ್ರಿಕೆಯ ಮನು ಸುಭೇದಾರರವರಿಗೆ ಬರೆಯಿರಿ" ಎಂದು. ಅದು ಸೀತಾರಾಮಯ್ಯನವರಿಗೆ ಧೈರ್ಯ ಕೊಟ್ಟಿತು. ಆದರೆ ಅವರು, ಆ ವಿಷಯದಲ್ಲಿ ಪತ್ರಿಕೆಗೆ ಲೇಖನ ಕಳುಹಿಸುವ ಬದಲು ಇಂಗ್ಲೆಂಡಿನ ಅರ್ಥಶಾಸ್ತ್ರಜ್ಞ ಸರ್ ಜಾನ್ ಮೇನಾರ್ಡ್ ಕೇನ್ಸ್ ರವರಿಗೆ ತಮ್ಮ ಈ ಸೂಚನೆಯನ್ನು ತಿಳಿಸಿದರು. ಅವರು ಸೀತಾರಾಮಯ್ಯನವರಿಗೆ "ಆ ರೀತಿ ಮಾಡಬಾರದ್ದಕ್ಕೆ ಯಾವ ವಾದವೂ ಇಲ್ಲ" ಎಂಬ ಉತ್ತರ ಬರೆದರು. ಮುಂದೆ ಇಂಗ್ಲೆಂಡಿನಲ್ಲಿ ಚಾಲತಿ ಹಣದ ಕೊರತೆ ಬಂದಾಗ ಅಲ್ಲಿನ ಛಾನ್ಸಲರ್ ಒಫ್ ದಿ ಎಕ್ಸ್ಚೆಕರ್, ಸರ್ ಜಾನ್ ಸೈಮನ್ನರು (೧೯೩೭–೪೦ರಲ್ಲಿ) ಎರಡೆರಡು ಬಾರಿ ಚಾಲತಿ ಚಿನ್ನದ ಬೆಲೆಯನ್ನು ಪೇಟೆಯ ಧಾರಣೆಯಂತೆ ಪರಿಗಣಿಸಿ ನೋಟುಗಳನ್ನು ಮುದ್ರಿಸಿ ಪ್ರಸಾರಕ್ಕೆ ತಂದರು. ಇವರ ಸೂಚನೆಗ ಇಂಥ ವಿಚಾರಗಳಲ್ಲಿ ಗಮನ ಹರಿಸುವ ಬುದ್ಧಿವಂತರು ಎಷ್ಟು ಎಂಬುದು ಇದರಿಂದ ತಿಳಿಯುತ್ತದೆ. ಇಂದಿನ ಸರಕಾರ ಮೂರೋ, ನಾಲ್ಕೋ ಸಾಸಿರ ಕೋಟಿಗಳಷ್ಟು ಸಾಲ ಮಾಡಿ ಕುಳಿತಿರಲು ಕಾರಣ? ಅರ್ಥಶಾಸ್ತ್ರವನ್ನು ಕುರಿತು ನಮ್ಮ ಮುಂದಾಳುಗಳ ಅಜ್ಞಾನದಿಂದಾಗಿ ಅವರು ಮಾಡಿದ ಸಾಲಕ್ಕೆ ಕಂಗಾಲಾಗುವ ಪರಿಸ್ಥಿತಿ ನಮಗೆ ಬಂದಿದೆ.

ಇನ್ನು ಇಂಥ ಹಲವಾರು ವಿಷಯಗಳಲ್ಲಿ ಸೀತಾರಾಮಯ್ಯನವರ ಮನಸ್ಸು ಹರಿದ ರೀತಿಯ ಪರಿವು ನಮಗಾಗಬೇಕು. ಅವರ ಅಭಿರುಚಿ, ತಿಳಿವನ್ನು ಕುರಿತು ತಿಳಿದ ನನಗೆ ಏನೇನೂ ಆಶ್ಚರ್ಯವಾಗುವುದಿಲ್ಲ. ಕೆಲವೊಮ್ಮೆ ನಾನು ಅವರ ದೃಷ್ಟಿಯನ್ನು ಪರಿಹಾಸ್ಯಕ್ಕಾಗಿ ಟೀಕಿಸಿದ್ದುಂಟು. ಹಿಂದಣ ನಾಲ್ಕನೆಯ ದಶಕದ ಆರಂಭದಲ್ಲಿ ನಮ್ಮ ಕನ್ನಡ ಸಾಹಿತ್ಯ

ಪರಿಷತ್ತಿನವರು, ಬೇಸಗೆಯಲ್ಲಿ ಸಾರ್ವಜನಿಕರ ಸಲುವಾಗಿ ವಸಂತೋತ್ಸವವನ್ನು ಜರುಗಿಸತೊಡಗಿದರು. ಈ ಬಗ್ಗೆ ಏರ್ಪಡಿಸಿದ ವಿದ್ಯಾಪ್ರಸಾರಕ್ಕೆ ಯೋಜಿಸಿದ ಮೊದಲನೆಯ ಸ್ಥಾನ ಕವಿತಾ ವಾಚನ. ನನ್ನಂತಹ ಬೆಪ್ಪುತಕ್ಕಡಿಯ ಗದ್ಯವಲ್ಲ. ಆ ಕಾಲಕ್ಕೆ ನಾನು 'ಗ್ನಾನ' ಎಂಬ ಜ್ಞಾನವಿಪರ್ಯಾಸವನ್ನು ಕುರಿತ, ವ್ಯಂಗ್ಯ ಬರಹ ಬರೆದಿದ್ದೆ. ಪರಿಷತ್ತಿನ ಹಿರಿಯರು ನನ್ನನ್ನು ಕೇಳಿದಾಗ "ನನ್ನ ಗ್ನಾನ ಓದಿಯೇನು; ಕವನವನ್ನಲ್ಲ" ಅಂದೆ. ಮುಂದೆ ಹಾಗೆಯೇ ಮಾಡಿದೆ. ಆ ಬರಹಕ್ಕೆ ಸೀತಾರಾಮಯ್ಯನವರೊಡನೆ "ಇದಕ್ಕೊಂದು ಮುನ್ನುಡಿ ಬರೆದುಕೊಡಿ" ಎಂದೆ. ಅವರು ನಗುತ್ತಾ ನನ್ನ ಬರಹವನ್ನು ಕುರಿತು "It is an ass that kicks on all sides" ಎಂದರು. ನಾನು ಅವರ ಅದೇ ವಾಕ್ಯದ ಕನ್ನಡ ಅನುವಾದ "ಸುತ್ತಲೂ ಲತ್ತೆ ಕೊಡುವ ಕತ್ತೆ ಇದು" ಎಂಬ ವಾಕ್ಯವನ್ನು ಆ ಪುಸ್ತಕದೊಡನೆ ಪ್ರಕಟಿಸಿದೆ.

ಸೀತಾರಾಮಯ್ಯನವರು ಆಗಾಗ ಹಲವು ಊರುಗಳಿಗೆ ಹೋದವರು. ಅನೇಕ ಬಾರಿ ನಿತ್ಯಜೀವನದಲ್ಲಿ ತಮ್ಮವರಿಂದ, ತಮ್ಮ ಸಮಾಜದಿಂದ ಬೇಕಷ್ಟು ಅಪಚಾರಕ್ಕೆ ಗುರಿಯಾದವರು. ನನಗೆ ಅಂಥ ಅಪಚಾರವಾಗಿದ್ದರೆ ಅಲ್ಲಿಂದಲ್ಲಿಗೆ ಬೈದುಬಿಟ್ಟೇನು. ಅವರೆಂದೂ ಹಾಗೆ ಮಾಡಿದವರಲ್ಲ. ಅವರು ಎಂದೂ ತಮ್ಮ ನಾಲಗೆಯಿಂದ ಕೆಟ್ಟ ನುಡಿಯನ್ನು ಸೂಸಿದವರಲ್ಲ. ವಾಕ್ಕಾಯಗಳೆರಡರಲ್ಲೂ ಶುಚಿಯನ್ನು ಕಾಯ್ದುಕೊಂಡು ಬಂದ ಸಂಭಾವಿತರು ಅವರು. ನಾನೂ, ಅವರೂ ಇಂಥ ವಿಚಾರಗಳಲ್ಲಿ ಹಲವು ಬಾರಿ ಜಗಳ ಮಾಡಿದ ಗೆಳೆಯರು.

ಅವರು ತಮ್ಮ ಕೊನೆಗಾಲಕ್ಕಿಂತ ತುಸು ಮೊದಲು, ಮೊದಲ ಬಾರಿಗೆ ಲಂಡನಿನ ಭಾರತೀಯ ವಿದ್ಯಾಭವನದವರಿಂದ ಆಮಂತ್ರಿತರಾಗಿ ಲಂಡನಿಗೆ ಹೋದರು. ಆಗ ನಡೆದ ಒಂದು ಘಟನೆಯನ್ನು ಕುರಿತು ವಿದ್ಯಾಭವನದ ಮತ್ತೂರು ಕೃಷ್ಣಮೂರ್ತಿಯವರು ತಿಳಿಸಿದ್ದುದನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅವರು ಲಂಡನು ತಲ್ಪಿದ ಮರುದಿನವೇ ಕೃಷ್ಣಮೂರ್ತಿಯವರಿಗೆ ಬೇರೊಂದು ಕರೆಯ ಸಲುವಾಗಿ ಮಾರ್ಸೇಲ್ಸ ಪುರಸಭೆಯ ಕಾರ್ಯಕ್ಕೆ ಹೋಗಬೇಕಾಗಿತ್ತು. ಹೀಗಾಗಿ "ನಾನು ಬೆಳಿಗ್ಗೆ ಅಲ್ಲಿಗೆ ಹೋಗಿ ರಾತ್ರಿ ಮರಳುತ್ತೇನೆ" ಎಂದು ತಮ್ಮ ಅತಿಥಿ ಸೀತಾರಾಮಯ್ಯನವರಿಗೆ ತಿಳಿಸಿದರು. "ನಾನು ನಿಮ್ಮ ಜತೆಗೆ ಬಂದರೇನು?" ಎಂದು ಕೇಳಿದರು ಸೀತಾರಾಮಯ್ಯ. ಹಾಗೆ ಅವರ ಜತೆಗೆ ಹೋದವರಿಗೆ, ಮಾರ್ಸೇಲ್ಸ ನಗರದ ಮೇಯರನ ಪರಿಚಯವಾಗಿ, ಅವರುಭಯತರರು ಬಲು ಹೊತ್ತು ಮಾತಾಡಿಕೊಂಡಿದ್ದರಂತೆ. ಅವರ ಸಂಭಾಷಣೆಯ ವಿಷಯ ಆ ಮಾರ್ಸೇಲ್ಸ ನಗರವನ್ನು ಕುರಿತೇ ಆಗಿತ್ತು. ಅಂದಿನ ಭಾಷಣದಲ್ಲಿ ಮೇಯರರವರು ಸಭಿಕರೊಡನೆ ಮಾತಾಡುವಾಗ ಸೀತಾರಾಮಯ್ಯನವರನ್ನು ತೋರಿಸಿ, "ಈ ನಮ್ಮ ಮಿತ್ರರಿಗೆ, ಮಾರ್ಸೇಲ್ಸನ ವಿಚಾರದಲ್ಲಿ ನನಗಿಂತ ಹೆಚ್ಚು ತಿಳಿವು ಇದೆ" ಎಂದು ಸಾರಿದರಂತೆ. ನಿಜಕ್ಕೂ ಇದು ಅವರ ವಿಷಯದಲ್ಲಿ ಹೆಮ್ಮೆ ತಾಳಬಹುದಾದ ವಿಷಯ. ಸೀತಾರಾಮಯ್ಯನವರ ತಿಳಿವು ಎಷ್ಟು ವಿಶಾಲ ಎಂದು ಸೂಚಿಸುವ ಒಂದು ಪ್ರಶಂಸೆಯಾಗಿತ್ತು ಅದು. ಅವರು ಜ್ಞಾನಸಂಗ್ರಹಕ್ಕಾಗಿ ಪಡುತ್ತಿದ್ದ ಶ್ರಮವನ್ನೂ, ಅವರ ವಿಶಾಲ ಅಭಿರುಚಿಗಳನ್ನೂ ಕುರಿತು ತಿಳಿದಾಗ ಅವರು ಬದುಕಿದ್ದ ಕಾಲದಲ್ಲಿ ನಮ್ಮ ಜನರು ಅವರಿಂದ ಪಡೆಯಬಹುದಾದ

ಲಾಭವನ್ನು ಪಡೆದೆವೇ? — ಎಂಬ ಅನುಮಾನವನ್ನು ಮೂಡಿಸೀತು. ಎಲ್ಲ ರೀತಿಗಳಲ್ಲೂ ದೊಡ್ಡ ಬಾಳನ್ನು ನಡೆಯಿಸಿದ ವ್ಯಕ್ತಿ ಅವರು. ತಮ್ಮ ಬರಹಗಳಿಂದ, ವಿಚಾರಶೀಲತೆಯಿಂದ ಪರಿಪುಷ್ಟರಾದವರು ಅವರು. ನಾನು ಚಿತ್ರಕಲೆಯನ್ನು ಕುರಿತು ಅಭ್ಯಾಸ ನಡೆಯಿಸುತ್ತಿದ್ದ ಕಾಲದಲ್ಲಿಯೇ, ಅವರು ರೋಗರ್ ಫ್ರೈಯಂತಹ ಬ್ರಿಟಿಷ್ ಕಲಾವಿಮರ್ಶಕರ ಬರಹವನ್ನು ಓದುತ್ತಿದ್ದುದನ್ನು ಬಲ್ಲೆ. ಆ ಕಾಲಕ್ಕೆ ಅವರು ಲಂಡನಿಗೆ ಹೋದವರಲ್ಲ. ನಾನು ಹೋಗಿರಲಿಲ್ಲ. ಅವರಿಗೆ ವಿದೇಶಿ ಚಿತ್ರಕಲೆಯ ಪರಿಚಯವಾದದ್ದು ಕಪ್ಪುಬಿಳುಪು ಪ್ರತಿಕೃತಿಗಳಿಂದಲೇ. ಆದರೂ ಪೈಂಟಿಂಗ್ ವಿಚಾರದಲ್ಲಿ ವಿದೇಶೀಯರು ಯಾವೆಲ್ಲ ಸಿದ್ಧಾಂತಗಳನ್ನು ಮಂಡಿಸುತ್ತಿದ್ದಾರೆ– ಎಂಬುದನ್ನು ಓದಿಕೊಳ್ಳುತ್ತಿದ್ದರು. ಅವರು ಆಸಕ್ತಿ ತಾಳಿದ ವಿಷಯಗಳ ಕ್ಷೇತ್ರ, ಅವರ ತಿಳಿವಿನ ವಿಸ್ತಾರ, ಮತ್ತು ಅವರ ಸ್ನೇಹಿತರ ಬಳಗ ದೊಡ್ಡದು. ಈ ನಿಮ್ಮ ಬೆಂಗಳೂರಲ್ಲಿ ಅವರಿಗೆ ಎಷ್ಟು ಜನ ಮಿತ್ರರಿದ್ದಾರೋ ನಾನರಿಯೆ. ಆದರೆ ಬಿಜಾಪುರದಲ್ಲಿ ಎಷ್ಟೊಂದು ಮಿತ್ರರಿದ್ದರು, ಧಾರವಾಡದಲ್ಲಿ ಎಷ್ಟೊಂದು ಸ್ನೇಹಿತರಿದ್ದರು ಎಂಬುದನ್ನು ಬಲ್ಲೆ. ಹೊರಗಿನ ಜನ ಅವರಿಗೆ ಎಷ್ಟೊಂದು ಮನ್ನಣೆ ಕೊಡುತ್ತಿದ್ದರು ಎಂಬುದನ್ನೂ ಬಲ್ಲೆ. ಅದೆಲ್ಲ ಸಾಧ್ಯವೇ ಎಂದು ಅಚ್ಚರಿ ಪಡಬೇಕಿಲ್ಲ. ಅವರ ಸ್ನೇಹಪರತೆ, ವಿಶಾಲ ತಿಳಿವು ಮತ್ತು ವಿಚಾರ ವಿನಿಮಯದ ಪರಿಪಾಠದಿಂದ ಅವರು ಬಹಳ ಜನರಿಗೆ ಪ್ರಿಯರಾಗಿದ್ದರು. ನನ್ನ ಪುತ್ತೂರಿನಲ್ಲಿ ಬಹಳ ಮಂದಿ ಅವರ ಅಭಿಮಾನಿಗಳಾಗಿದ್ದಾರೆ. ಅಂಥವರಲ್ಲಿ ವಕೀಲರಿದ್ದಾರೆ, ಉಪಾಧ್ಯಾಯರಿದ್ದಾರೆ. ಅವರನ್ನು ಭೇಟಿಯಾದಾಗ ಅವರೊಡನೆ ತಮಗೆ ತಿಳಿದಿರದ ಅನೇಕ ವಿಷಯಗಳನ್ನು ಕೆದಕಿ ಕೆದಕಿ ಕೇಳಿ ತಿಳಿಯುತ್ತಿದ್ದರು.

ಅಂಥ ಒಂದು ದೊಡ್ಡ ಬದುಕನ್ನು ಇಂದು ನಾವು ಕಳೆದುಕೊಂಡಿದ್ದೇವೆ. ನನ್ನ ಪಾಲಿಗೆ ಅವರ ಬದುಕು ಮರೆಯಲಾರದ್ದು. ಅದು ಅಷ್ಟೊಂದು ದೊಡ್ಡದಾಗಿತ್ತು. ಅವರ ನಡವಳಿಕೆ ಹಾಗಿತ್ತು; ದೊಡ್ಡಸ್ತಿಕೆ ಹಾಗಿತ್ತು. ಅವರ ಭಾವಜೀವನ ಅಷ್ಟೇ ಹಿರಿದಾಗಿತ್ತು. ಒಂದು ದೃಷ್ಟಿಯಿಂದ ಒಬ್ಬ ಪ್ರಾಧ್ಯಾಪಕ ಎಷ್ಟೆಲ್ಲ ಪೂರ್ಣತೆಯನ್ನು ಪಡೆಯಬಹುದೋ ಅಷ್ಟೊಂದು ಪೂರ್ಣತೆಯನ್ನು ಅವರು ಸಾಧಿಸಿದ್ದರು. ಈ ಮಾತನ್ನು ನಾನು ಹೇಳುತ್ತಿರುವ ಉದ್ದೇಶ–ಇಂದು ನಮ್ಮ ಪ್ರಾಧ್ಯಾಪಕರು ಒಂದೊಂದೇ ವಿಷಯಕ್ಕೆ ಅಂಟಿಕೊಂಡವರು ಎಂಬುದರಿಂದ. ಅದು ಭೌತಶಾಸ್ತ್ರ ಇರಬಹುದು, ಇತಿಹಾಸ ಇರಬಹುದು. ಆದರೆ ಅವೆಲ್ಲ ಒಂದಕ್ಕೊಂದು ಅಂಟಿಕೊಂಡ ವಿಷಯಗಳು, ಸಂಬಂಧವುಳ್ಳ ವಿಷಯಗಳು ಎಂಬುದನ್ನು ನಾವು ಮರೆಯುತ್ತಿದ್ದೇವೆ. ಪಾಶ್ಚಾತ್ಯ ವಿದ್ವಾಂಸರು ಒಂದೆರಡಲ್ಲ, ಹಲವಾರು ವಿಷಯಗಳಲ್ಲಿ ಡಾಕ್ಟರೇಟು ಪದವಿಗಳನ್ನು ಸಂಪಾದಿಸುತ್ತಾರೆ. ಜ್ಞಾನ ಕ್ಷೇತ್ರಗಳ ಪರಸ್ಪರ ಸಂಬಂಧದಿಂದಾಗಿ, ಕೇವಲ ಒಂದೊಂದೇ ಕ್ಷೇತ್ರದ ಪದವಿ ಸಾಕಾಗದು. ಬದುಕಿನ ವೈಶಾಲ್ಯದ ಅರಿವಿಗೂ ಅಂಥ ಕೆಲಸ ಅವಶ್ಯ.

ಅವರ ಮುಂಡಾಸಿನ ಮೇಲೆ ನನಗೆ ಅಸೂಯೆ! ಅದನ್ನು ಅಷ್ಟು ಚೊಕ್ಕವಾಗಿ, ಆಕಾರ ಶುದ್ಧವಾಗಿ ಇರಿಸಿಕೊಂಡವರು ಅವರು. ಒಮ್ಮೆ ಅದೇ ರುಮಾಲೆ ಕೆಳಗೆ ಬಿದ್ದಾಗ ನಾನು ಕೈತಟ್ಟಿ ಹಾಸ್ಯ ಮಾಡಿದ್ದೂ ಉಂಟು. "ಹಾಗೆಯೇ ಆಗಬೇಕು" ಎಂದುದುಂಟು.

ಅವರ ಜತೆಗೆ ಅಲೆದಾಡಲು ಹೊರಟಾಗ ನಾನು ನಿತ್ಯದಂತೆ ಒಂದು ಜುಬ್ಬ ಧರಿಸಿ ಹೆಗಲ ಮೇಲೆ ಒಂದು ಟವೆಲು ಹಾಕಿ ಹೊರಡುವುದುಂಟು. ಅವರು ನನ್ನನ್ನು ಅದಕ್ಕಾಗಿ ವಕ್ರದೃಷ್ಟಿಯಿಂದ ಕಂಡಾರು. "ಏನು ನಿಮ್ಮ ಆಕ್ಷೇಪ?" ಎಂದು ಕೇಳಿದೆ! ಅವರು "ಈ ವೇಷ ಸ್ಮಶಾನಕ್ಕೆ ಹೋಗಿ ಮರಳುವವರದ್ದು" ಎಂದರು. "ನಾನೂ ಅದೇ ಭಾವನೆಯಿಂದ ಇಲ್ಲಿಗೆ ಬಂದವನು" ಅಂದುದುಂಟು! ಹೀಗೆ ಅವರೊಡನೆ ಅನೇಕ ಬಾರಿ ಜಗಳಾಡುತ್ತಿದ್ದವನು ನಾನು. ಅದೇ ಅವರ ದೊಡ್ಡಸ್ತಿಕೆಯ ನೆನಪಾದರೆ, ವಿಸ್ಮಯವಾಗುತ್ತದೆ. ಅವರು ಇಂದು ತೀರಿ ಹೋಗಿದ್ದರೂ, ನನ್ನ ಪಾಲಿಗೆ ಬದುಕಿಯೇ ಇದ್ದಾರೆ.....

ಸದಭಿರುಚಿಯಿಂದ ಕೆಟ್ಟವರು

"ಲೋಕದಲ್ಲಿ ಅನೇಕರು, ಅನೇಕ ರೀತಿಯಿಂದ ಕೆಡುತ್ತಾರೆ. ಅದರಲ್ಲಿ ಸದಭಿರುಚಿಯಿಂದ ಯಾರಾದರೂ ಕೆಟ್ಟು ಹೋದವರಿದ್ದರೆ ಅದು ವಿ.ಸೀ. – ಎನ್ನುತ್ತೇನೆ ನಾನು. ಅವರ ರೀತಿಯ "ಮನೆ ಹಾಗಿರಬೇಕು; ಅದರ ಫರ್ನಿಚರ್ ಹೀಗಿರಬೇಕು; ಸ್ಟುಡಿಯೋ ಮೆಗೆಜಿನಿನಲ್ಲಿ ಈ ಚಿತ್ರ ಬಂದಿದೆ."

"ಚಿತ್ರ ಹಾಗಿರಬೇಕು. ಅದರ ಬಣ್ಣ ಹೀಗಿರಬೇಕು. ರೇಖೆ ಇಂತಿರಬೇಕು. ಹರ್ಬರ್ಟ್ ರೀಡ್ ಹೀಗನ್ನುತ್ತಾನೆ. ರೋಗರ್ ಫ್ರ್ಯಾ ಹಾಗನ್ನುತ್ತಾನೆ–" ಎಂದು ಮೆಟೇಸಿಯ ಚಿತ್ರ ಪ್ರತಿ ನೋಡಿ ನಿಟ್ಟುಸಿರೆಳೆಯುತ್ತಾರೆ.

"ಅಷ್ಟೂ ಬೇಡ, ತಿಂಗಳವರೆ ಹಾಕಿ ಹುಳಿ ಹೀಗೆ ಮಾಡಬೇಕು. ಪೊಂಗಲ್ ಹಾಗಾಗಬೇಕು" ಎನ್ನುವವರೆಗೂ, ನಾಡಿಗೆ ಸಲ್ಲದ ನಾಜೂಕೂ ಕಿಸೆಗೆ ಸಲ್ಲದ ನಾಜೂಕೂ ಒಂದು ಪ್ರಾಣಿಯಲ್ಲಿ ತುಂಬಿಕೊಂಡಿದ್ದರೆ, ಅಂಥ ಪ್ರಾಣಿ ಕನ್ನಡ ನಾಡಿನಲ್ಲಿ ಬದುಕಬೇಕು ಹೇಗೆ?"

ಶಿವರಾಮ ಕಾರಂತ
'ವಿ.ಸೀ.' ಪು. ೫

ಚಿರಸ್ಮರಣೀಯ ವಿ.ಸೀ.

ರಂ. ಶ್ರೀ. ಮುಗಳಿ

ಶ್ರೀ ವಿ.ಸೀ. ಅವರು ತಮ್ಮ ಗುರುಗಳಾದ ಬಿ.ಎಂ.ಶ್ರೀ.ಯವರ ಜೊತೆಗೆ ಕರ್ನಾಟಕದಲ್ಲಿ ಆ ತುದಿಯಿಂದ ಈ ತುದಿಯವರೆಗೆ ಪ್ರವಾಸ ಮಾಡುತ್ತಿದ್ದರು. ಆ ಸಮಯದಲ್ಲಿ ತಮ್ಮ ಅನಾನುಕೂಲಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳದೆ ಅತ್ಯಂತ ಶ್ರದ್ಧೆಯಿಂದ, ಗುರುಭಕ್ತಿಯಿಂದ ಶ್ರೀಯವರ ಬೇಕು-ಬೇಡಗಳನ್ನು ಗಮನಿಸಿ, ಅದರಂತೆ ಅವರಿಗೆ ತೊಂದರೆ ಆಗಬಾರದು, ಅವರಿಗೆ ಬೇಕಾದ ಸೌಕರ್ಯಗಳು ದೊರೆಯಬೇಕು ಎಂದು ಬಹಳ ಪ್ರಯತ್ನ ಮಾಡುತ್ತಿದ್ದರು. ಅವರ ಈ ಕರ್ನಾಟಕ ಪ್ರವಾಸ ಕಾಲದಲ್ಲಿ ಒಮ್ಮೆ ಸಾಂಗ್ಲಿಯಲ್ಲಿ ನನ್ನ ಮನೆಗೂ ಬಂದಿದ್ದರು. ಬಂದು ಅವರು ಮಾಡಿದ ಮೊದಲ ಕೆಲಸವೆಂದರೆ ನನ್ನ ಮನೆಯವರ ಹತ್ತಿರ ಹೋಗಿ 'ನೋಡಿ, ಶ್ರೀಯವರಿಗೆ ಊಟದಲ್ಲಿ ತುಂಬಾ ಪಥ್ಯವಿದೆ, ಅವರಿಗೆ ಡಯಾಬಿಟಿಸ್ ಕಾಯಿಲೆ ಇರುವುದರಿಂದ ಅವರು ಗೋಧಿಯಿಂದ ಮಾಡಿದ ಪದಾರ್ಥಗಳನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ಹಾಗೆ ತಾವು ದಯವಿಟ್ಟು ಅವರ ಸಲುವಾಗಿ ಮಾಡಬೇಕು' ಎಂದು ಹೇಳಿದ್ದು. ಅವರು ಬಂದ ಪ್ರತಿಸಲವೂ ಈ ಕಾರ್ಯಕ್ರಮವಿರುತ್ತಿತ್ತು. ತಮ್ಮ ಗುರುಗಳ ವಿಷಯದಲ್ಲಿ ಅವರ ನಿಷ್ಠೆ ಎಷ್ಟು ಇತ್ತೆಂಬುದರ ವಿಷಯ ಇಲ್ಲಿ ಕಂಡು ಬರುತ್ತದೆ.

ಶ್ರೀಯವರು ಕನ್ನಡದ ಮೇಲಿನ ಪ್ರೇಮದಿಂದ ಅನೇಕ ಕಡೆ ಸುತ್ತಾಡಿದರು. ಮುಧೋಳ, ಜಮಖಂಡಿ ಇಂಥ ಊರುಗಳಿಗೆ ಹೋದರು. ಎಲ್ಲಿಗೆ ಕರೆದರೂ ಹೋಗಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಆದ್ದರಿಂದ ವಿ.ಸೀ. ಅವರಿಗೆ ಶ್ರೀಯವರನ್ನು ನೋಡಿಕೊಳ್ಳಲು ಬಹಳ ಕಷ್ಟವಾಗುತ್ತಿತ್ತು. ಆದರೂ ನಿಷ್ಠೆಯಿಂದ ವ್ರತವೆಂಬಂತೆ ಅದನ್ನು ಪಾಲಿಸಿದರು. ಒಂದೊಂದು ಸಲ ರಾತ್ರಿ ಹನ್ನೆರಡು ಗಂಟೆಯಾಗುತ್ತಿತ್ತು. ಅಂಥದರಲ್ಲಿಯೂ ಶ್ರೀಯವರಿಗೆ ಅಭಿಮಾನದಿಂದ ಜನರು ಭರ್ಜರಿ ಊಟಕ್ಕೆ ಸಿದ್ಧತೆ ಮಾಡಿ ಕಾದಿರುತ್ತಿದ್ದರು. ಆದರೆ ಆ ಯಾವುದನ್ನೂ ಅವರು ಮುಟ್ಟುವುದು ಸಾಧ್ಯವಿರುತ್ತಿರಲಿಲ್ಲ. ವಿ.ಸೀ.ಯವರು ಮುಂಚಿತವಾಗಿ ಹೋಗಿ 'ತಾಯಿ ನೀವು ಮಾಡಿದ ಅಡಿಗೆ ನಮಗಾಗಿ ಉಪಯೋಗವಾಗಬಹುದೇ ಹೊರತು ಶ್ರೀಯವರು ಇದು ಯಾವುದನ್ನೂ ಮುಟ್ಟುವ ಹಾಗಿಲ್ಲ, ಅವರಿಗೆ ಬೇಕಾದ್ದು ಗೋಧಿಯ ಊಟ' ಎಂದು ಹೇಳುತ್ತಿದ್ದರು. ಹೀಗೆ ನಿತಾಂತ ಗುರುಭಕ್ತಿಯಿಂದ ಅವರ

ಆರೋಗ್ಯಕ್ಕೆ ತೊಂದರೆಯಾಗಬಾರದೆಂದು ನೋಡಿಕೊಂಡಿದ್ದನ್ನು ನಾನು ತುಂಬಾ ಮೆಚ್ಚಿಕೊಂಡಿದ್ದೆ. ವಿ.ಸೀ. ಯವರು ತಾವು ಸ್ವತಃ ಮಧ್ಯವಯಸ್ಸಿನವರಾದರೂ ತಮ್ಮ ತೊಂದರೆಗಳನ್ನು ಗಮನಿಸದೆ, ಶ್ರೀಯವರ ಆರೋಗ್ಯದ ಕಡೆಗೆ ಎಷ್ಟು ಗಮನ ಕೊಡುತ್ತಿದ್ದರೆಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ಒಮ್ಮೆ ಜಮಖಂಡಿಯಂಥ ಊರಿನಲ್ಲಿ ರಾತ್ರಿ ಭಾಷಣ ಮಾಡಬೇಕಾಗಿ ಬಂತು. ಶ್ರೀಯವರು ಭಾಷಣ ಮಾಡಲು ಸಿದ್ಧರಾದರು. ಅವರ ಆರೋಗ್ಯಕ್ಕೆ ತೊಂದರೆ ಆದೀತೆಂದು ವಿ.ಸೀ.ಯವರು ಹೇಳಿ ನೋಡಿದರು. ಆದರೆ ಶ್ರೀಯವರು ಕೇಳಲಿಲ್ಲ. ಈ ರೀತಿ ತಮ್ಮ ಆಯುಷ್ಯದ ಕೊನೆಯ ಭಾಗದಲ್ಲಿಯೂ ಶ್ರೀಯವರು ನವರಾತ್ರಿಯ ಸಮಯದ ನಾಡಹಬ್ಬಕ್ಕೆ ಪ್ರತಿಯೊಂದು ದಿನ ಒಂದೊಂದು ಊರಿಗೆ ಹೋಗಿ ಅದ್ಭುತವಾದ ಭಾಷಣಗಳನ್ನು ಮಾಡಿದರು. ಒಂದೆರಡು ಕಡೆಯಂತೂ ಅವರು ಭಾಷಣ ಮಾಡುವಾಗ ಮೈ ರೋಮಾಂಚಿತವಾಗಿ ಕಂಪಿಸುತ್ತಿತ್ತು. ಕನ್ನಡದ ವಿಷಯ ಮಾತನಾಡುವುದೆಂದರೆ ಅಷ್ಟು ಉತ್ಸಾಹ ಅವರಿಗೆ. ವಿ.ಸೀ. ಯವರಿಗೆ ಅವರನ್ನು ಹೇಗೆ ತಡೆಯಬೇಕೊ ಗೊತ್ತಾಗದೆ ತಾವೂ ಜೊತೆಗೆ ಹೋಗುತ್ತಿದ್ದರು. ಕೊನೆಯ ಈ ನಾಡಹಬ್ಬದ ಭಾಷಣಗಳನ್ನು ಮುಗಿಸಿಕೊಂಡು ಶ್ರೀಯವರು ಧಾರವಾಡಕ್ಕೆ– ಆಗ ಅವರು ಧಾರವಾಡ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದರು– ಬಂದರು; ಸ್ವಲ್ಪ ಕಾಯಿಲೆಯಿಂದ ಮಲಗಿದ್ದರು. ವಿ.ಸೀ. ಯವರಿಗೆ, ಅವರ ಮಿತ್ರರಿಗೆ ಶ್ರೀಯವರು ತುಂಬಾ ಆಯಾಸ ಮಾಡಿಕೊಂಡಿದ್ದಾರೆ, ಏನಾದೀತೊ ಎಂಬ ಭಯ. ಆದರೆ ಆ ಯಾವ ಯೋಚನೆಯೂ ಶ್ರೀಯವರಿಗಿರಲಿಲ್ಲ. ಉತ್ಸಾಹ ತುಂಬಿದ ಆ ಕನ್ನಡಾಭಿಮಾನವೇ ಅವರ ಕೀರ್ತಿಯನ್ನು ಎಷ್ಟು ದಿಗಂತಕ್ಕೆ ಏರಿಸಿತೊ ಅಷ್ಟು ಅವರ ಆರೋಗ್ಯ ಕುಸಿಯುವಂತೆ ಮಾಡಿತು. ಏಕೆಂದರೆ ಆ ಭಾಷಣ ಮುಗಿದ ಮೇಲೆ ಶ್ರೀಯವರು ಮನೆಗೆ ಬಂದು ಮಲಗಿಕೊಂಡರು; ಆರೋಗ್ಯ ಕೆಟ್ಟಿತು. ಅವರಿಗೆ ಹೃದಯಾಘಾತವಾಯಿತು, ಕಾಲವಶರಾದರು ಎಂಬುದು ಕನ್ನಡನಾಡಿಗೆ ಈಗ ಗೊತ್ತಿರುವ ವಿಷಯ. ಮುಖ್ಯವಾದ ಸಂಗತಿ ಎಂದರೆ, ಈ ಎಲ್ಲ ಉದಾಹರಣೆಗಳಿಂದ ವಿ.ಸೀ.ಯವರು ತಾವು ಎಷ್ಟು ಆಧುನಿಕ ಮನೋಧರ್ಮದವರಾಗಿದ್ದರೊ ಅಷ್ಟೇ ಒಂದು ಪ್ರಾಚೀನ ಪರಂಪರೆಯಲ್ಲಿಯ ಗುರುಭಕ್ತಿಯನ್ನೂ ತೋರಿಸುತ್ತಿದ್ದರು ಎಂಬುದು. ಇದು ಬಹುವಾಗಿ ಮೆಚ್ಚಬೇಕಾದಂಥ ವಿಚಾರ. ಅನೇಕ ವಿಚಾರಗಳಲ್ಲಿ ಅವರ ಮನಸ್ಸು ಆಧುನಿಕವಾಗಿತ್ತು. ಆದರೆ ಈ ವಿಷಯದಲ್ಲಿ ಮಾತ್ರ ಅವರು ಹಳೆಯ ಕಾಲದ ಒಬ್ಬ ಶಿಷ್ಯನಂತೆ ತಮ್ಮ ಗುರುವಿಗೆ ನಡೆದುಕೊಳ್ಳುತ್ತಿದ್ದರು.

ವಿ.ಸೀ.ಯವರನ್ನು ನಾನು ಅನೇಕ ಸಂದರ್ಭಗಳಲ್ಲಿ ಕಂಡಿದ್ದೇನೆ, ಅವರ ಜೊತೆಗೆ ಚರ್ಚೆ ಮಾಡಿದ್ದೇನೆ. ಭಿನ್ನಾಭಿಪ್ರಾಯಗಳಿಂದ ಕೂಡಿ ನಾವಿಬ್ಬರೂ ಎಷ್ಟೋ ಸಲ ಸ್ನೇಹಪೂರ್ವಕವಾಗಿ ಜಗಳ ಮಾಡಿದ್ದೇವೆ. ಅನೇಕರಿಗೆ ಗೊತ್ತಿರುವಂತೆ ಅವರ ಚಾಮರಾಜಪೇಟೆಯ ಮನೆಯಲ್ಲಿ ಒಂದು ಚಿಕ್ಕ ಕೋಣೆ, ಅದೇ ಮೊಗಸಾಲೆ. ಅಲ್ಲಿ ಯಾವ ಕುರ್ಚಿ ಮೇಜು ಇರಲಿಲ್ಲ. ಒಂದು ಜಮಖಾನೆ ಹಾಸಿರುತ್ತಿದ್ದರು. ಆದರೆ ಸುತ್ತೆಲ್ಲ ಇರುವ ಪುಸ್ತಕಗಳ ಸಾಲು ನೋಡಿದರೆ ಅವರು ಎಷ್ಟು ಪುಸ್ತಕಪ್ರಿಯರೆಂಬುದನ್ನು ತಿಳಿಯಬಹುದಿತ್ತು. ಅವರು ಮುಖ್ಯವಾಗಿ ಓದಿದ್ದು ಅರ್ಥಶಾಸ್ತ್ರ, ಆದರೆ ಪಾಠ ಹೇಳಿದ್ದು ಕನ್ನಡದ ವಿಷಯ.

ಇದರಿಂದ ಅವರಿಗೆ ಒಂದು ಆತಂಕ ಅಥವಾ ಯೋಚನೆ: ನಾನು ಅಲ್ಲಿಯೂ ಸಲ್ಲದ, ಇಲ್ಲಿಯೂ ಸಲ್ಲದ ಒಬ್ಬ ವ್ಯಕ್ತಿ ಆಗಿದ್ದೇನೆ ಎಂದು. ಅರ್ಥಶಾಸ್ತ್ರವನ್ನು ಓದಿ ಅದಕ್ಕೆ ಸಂಬಂಧಿಸಿದ "ಹಣಪ್ರಪಂಚ"ದಂತಹ ಉತ್ಕೃಷ್ಟ ಪುಸ್ತಕವನ್ನು ಬರೆದರು. ಆ ವಿಷಯದಲ್ಲಿ up to date ತಿಳಿವಳಿಕೆಯಿದ್ದವರು. ಆದರೆ ಅರ್ಥಶಾಸ್ತ್ರಿಗಳು ಎಂಬವರು ಅವರಿಗೆ ಮನ್ನಣೆ ಕೊಡುತ್ತಿರಲಿಲ್ಲ. ಸಾಹಿತ್ಯದಲ್ಲಿ ವಿದ್ವಾಂಸರಾಗಿದ್ದರು. ಭಾಷೆ ಮತ್ತು ಕನ್ನಡಕ್ಕೆ ಸಂಬಂಧಿಸಿದ ಎಲ್ಲ ಪುಸ್ತಕ ಓದುತ್ತಿದ್ದರು. ಆದರೆ ಈ ಕನ್ನಡ ಪಂಡಿತರು ನನ್ನ ಕನ್ನಡಕ್ಕೆ ಮನ್ನಣೆ ಕೊಡುತ್ತಿಲ್ಲ ಎಂದು. ಅವರು ಕನ್ನಡ ಭಾಷಣ ಮಾಡುವಾಗ – ಕ್ಲಾಸಲ್ಲಿ ಪಾಠವಿರಲಿ, ಎಲ್ಲಿಯೇ ಉಪನ್ಯಾಸ ಕೊಡಲಿ–ಅವರಿಗೆ ಮಾತಾಡುತ್ತ ಮಾತಾಡುತ್ತ ಇಂಗ್ಲಿಷ್ ಮಾತಿನ ಸ್ಫೂರ್ತಿ, ಉತ್ಸಾಹ ಬರುತ್ತಿತ್ತು. ಎಂದರೆ, ಕನ್ನಡ ವಿಷಯವನ್ನು ಇಂಗ್ಲಿಷಲ್ಲಿ ವಿವರಿಸುವುದು ಅವರಿಗೆ ಬಹಳ ಪ್ರಿಯವಾದ ವಿಚಾರ. ಅವರಿಗೆ ನಾನು ಹೀಗೆ ಯಾರಿಂದಲೂ ಮನ್ನಣೆ ಪಡೆಯದೆ ತ್ರಿಶಂಕು ಸ್ಥಿತಿಯಲ್ಲಿದ್ದೇನೆಂಬ ಅರಿವು ತುಂಬಾ ಇತ್ತು. ಒಮ್ಮೆ ನಾನು ಯಾವುದೊ ಪುಸ್ತಕ ಕಾಣಿಕೆ ಕೊಡಲು ಅವರ ಮನೆಗೆ ಹೋದೆ. ಅಲ್ಲಿ ಯಥಾಪ್ರಕಾರ ಹಾಸಿದ್ದ ಜಮಖಾನೆಯ ಮೇಲೆ ಕುಳಿತು ನಾನು ಬರೆಯಬಹುದಾದ್ದನ್ನು ಊಹಿಸಿ ಹೇಳಿದರು: "ಮುಗಳಿಯವರೆ, ದಯವಿಟ್ಟು ಬರಿ ವಿ.ಸೀ. ಅವರಿಗೆ ಕೊಟ್ಟ ಕಾಣಿಕೆ ಎಂದು ಬರೆಯಿರಿ, ಪ್ರೊಫೆಸರ್ ಅಥವಾ ಡಾಕ್ಟರ್ ಎಂಬುದನ್ನು ಸೇರಿಸಬೇಡಿ" ಎಂದು ಕಡ್ಡಾಯವಾಗಿ ಹೇಳಿದರು. ಇದರಿಂದ ಸೂಚಿತವಾಗುವುದೆಂದರೆ ತಮಗೆ ಸಲ್ಲತಕ್ಕ ಬಿರುದು ಬಾವಲಿಗಳು ಗೌರವ ಸಿಗಲಿಲ್ಲ; ಆದ್ದರಿಂದ ಯಾರೂ ಉಪಚಾರಕ್ಕೆ ತಮ್ಮನ್ನು 'ಪ್ರೊಫೆಸರ್' ಎನ್ನಬಾರದು ಎಂದು. ಪ್ರೊಫೆಸರ್ ಯೋಗ್ಯತೆ ಪಡೆದಿದ್ದರೂ ಕೂಡ ಅವರು ಕೊನೆವರೆಗೆ ಪ್ರೊಫೆಸರ್ ಆಗಲಿಲ್ಲ. ಯಾವ ವಿಚಾರದಲ್ಲಿಯೂ ಪ್ರೊಫೆಸರಾಗಲಿಲ್ಲ. ಹೀಗಾಗಿ ಅವರ ಮನಸ್ಸಿನ ಸೂಕ್ಷ್ಮತೆಯ ಜೊತೆಗೆ ಅವರ ಹೊಟ್ಟೆಯೊಳಗಿದ್ದ ಆತಂಕವೂ ನನಗೆ ಗೊತ್ತಾಯಿತು. ಮನುಷ್ಯ ಎಷ್ಟೇ ದೊಡ್ಡವನಾದರೂ ಕೂಡ ಅವನಲ್ಲಿ ಸ್ವಾಭಿಮಾನವೆಂಬುದು ಯಾವಾಗಲೂ ಜಾಗ್ರತವಾಗಿರುತ್ತದೆ, ಆಗ ಅವನು ಸಣ್ಣತನವನ್ನೇ ತೋರಿಸುತ್ತಾನೆ. ಇದು ಅತ್ಯಂತ ಸ್ವಾಭಾವಿಕ ವಿಚಾರ. ತನಗೆ ಸಿಗಬೇಕಾದ ಮನ್ನಣೆ ಪಂಡಿತರಿಂದ ಅಥವಾ ತಜ್ಞರಿಂದ ಸಿಗದೆ ಹೋದರೆ, ಎಂಥ ದೊಡ್ಡ ವ್ಯಕ್ತಿಯೂ ಕೂಡ ಎಷ್ಟೇ ವಿನಮ್ರನಾಗಿ ನಡೆದರೂ ಒಂದು ಅವ್ಯಕ್ತ ನೋವಿನಿಂದ ಕೂಡಿ, ತನ್ನ ಆಯುಷ್ಯದುದ್ದಕ್ಕೂ ತನ್ನೊಳಗೇ ಅವಿತಿಟ್ಟು ಬದುಕುತ್ತಿರುತ್ತಾನೆ. ಒಮ್ಮೊಮ್ಮೆ ಅದು ಅನಿವಾರ್ಯವಾಗಿ ಪ್ರಕಟವಾಗುತ್ತದೆ. ಇದನ್ನು ವಿ.ಸೀ. ಯವರಲ್ಲಿಯೂ ನಾವು ಕಾಣಬಹುದಾಗಿತ್ತು.

ವಿ.ಸೀ. ಅವರು ತಮ್ಮ ಸಾಂಸಾರಿಕ ಜೀವನದಲ್ಲಿ ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿದರು. ಆದರೆ ಅವುಗಳನ್ನು ಅಷ್ಟಾಗಿ ಹೊರಗಿನ ಜನಕ್ಕೆ ತೋರಗೊಡಲಿಲ್ಲ. ಈ ಸಂಸ್ಕಾರ ಅವರಲ್ಲಿ ಕಂಡು ಬರುತ್ತಿತ್ತು. ತಮ್ಮ ವೇಷ ಭೂಷಣ ಮುಂತಾದ್ದರಲ್ಲಿ ಅವರು ತುಂಬಾ ಅಚ್ಚುಕಟ್ಟಾಗಿದ್ದರು. ಮೈಸೂರು ರುಮಾಲು– ಇದರ ಬಗ್ಗೆಯಂತೂ ಅವರು ಲೇಖನವನ್ನೇ ಬರೆದಿದ್ದಾರೆ– ತಮ್ಮ ಉಡುಗೆ, ತೊಡುಗೆ ಅಂದವಾಗಿರಬೇಕು ಎಂಬುದನ್ನು ಅವರು ತಮ್ಮ ವೇಷಭೂಷಣದಿಂದ ತೋರಿಸಿ ಕೊಡುತ್ತಿದ್ದರು. ಅಷ್ಟೇ ಅಲ್ಲ, ನಾವು

ಮಾಡುವ ಪ್ರತಿಯೊಂದು ಕೆಲಸವೂ ತುಂಬಾ ಅಚ್ಚುಕಟ್ಟಾಗಿರಬೇಕು ಎಂಬುದನ್ನು ಅವರು ತಮ್ಮ ಕವಿತೆಯ ಪುಸ್ತಕವನ್ನು ಮುದ್ರಿಸಿದಾಗ ತೋರಿಸಿದರು. ಅದಕ್ಕೆ Sense of detail ಎನ್ನಬಹುದು. ವಿವರಪ್ರಜ್ಞೆ ಮತ್ತು ಸೌಂದರ್ಯ ಪ್ರಜ್ಞೆ – Sense of beauty – ಇವೆರಡನ್ನೂ ಅವರಲ್ಲಿ ನೋಡಬಹುದಿತ್ತು. ಅವರ ಗೀತಗಳು, ದೀಪಗಳು ಇದಕ್ಕೆ ನಿದರ್ಶನಗಳು. ಬಹಳ ಚೆಂದಾದ ಕಾಗದವನ್ನೇ ಬಳಸಬೇಕು, ದುಡ್ಡಿನ ಬಗ್ಗೆ ಅವರಿಗೆ ಯೋಚನೆ ಇರಲಿಲ್ಲ. ಇದು ಕ್ವಚಿತ್ತಾಗಿ ನಮ್ಮ ಸಾಹಿತಿಗಳಲ್ಲಿ ಕಂಡು ಬರುತ್ತದೆ. ಈ ಪುಸ್ತಕಗಳ ಮುದ್ರಣಕ್ಕಾಗಿ, ಅವಕ್ಕಾಗಿ ಬಳಸುವ ಕಾಗದಕ್ಕಾಗಿ ಎಷ್ಟು ಅಚ್ಚುಕಟ್ಟುತನವನ್ನು ಅವರು ತೋರಿಸುತ್ತಿದ್ದರು ಎಂಬುದನ್ನು ನೋಡಿದರೆ, ಕನ್ನಡನಾಡಿನ ಮಟ್ಟಿಗೆ ಇಂಥ ಸೌಂದರ್ಯ ಪ್ರಜ್ಞೆಯನ್ನು ಪುಸ್ತಕ ಮುದ್ರಣದಲ್ಲಿ ತೋರಿಸಿದವರು ಅತಿ ಕಡಿಮೆಯೆನ್ನಬೇಕು.

ನನ್ನದೂ ಅವರದೂ ತುಂಬಾ ಬೇರೆಯದೇ ಆದ ಮನೋಧರ್ಮ. ನಾನು ಸ್ವಲ್ಪ ದೈವಭಕ್ತಿ ಮತ್ತು ಆಧ್ಯಾತ್ಮಿಕತೆಯನ್ನು ಬೆಳಸಿಕೊಂಡು ಬಂದಿರುವುದರಿಂದ ಆ ವಿಷಯವಾಗಿ ಮಾತನಾಡಿದಾಗ ಅವರು ಅಷ್ಟು ಮೆಚ್ಚುತ್ತಿರಲಿಲ್ಲ. ಆದರೆ ವಾದ ಮಾಡಿ ಕೊನೆಗೆ "ಸರಿಯಪ್ಪ, ನಿನ್ನ ಹಾದಿ ನಿನಗೆ" ಎಂದು ಹೇಳಿ ಮುಗಿಸಿ ಬಿಡುತ್ತಿದ್ದರು. ಅವರ ಜೊತೆಗೆ ವಾದ ಮಾಡುವುದೂ ಕೂಡ ಒಂದು ದೃಷ್ಟಿಯಿಂದ ಸಂತೋಷದ ವಿಚಾರವೇ. ಏಕೆಂದರೆ ಯಾವುದನ್ನೂ ಅವರು ಮನಸ್ಸಿನಲ್ಲಿ ಮುಚ್ಚಿಟ್ಟುಕೊಳ್ಳುತ್ತಿರಲಿಲ್ಲ. ತೆರೆದ ಮನಸ್ಸು ಅವರದು. ಅವರ ಮನೋಧರ್ಮ ಕೆಲವು ವಿಷಯಗಳಲ್ಲಿ ಡಿ.ವಿ.ಜಿ. ಅವರ ಮನೋಧರ್ಮಕ್ಕೆ ಸಮಾನವಾದದ್ದು. ನನ್ನದು ಮಾಸ್ತಿಯವರ ಮನೋಧರ್ಮಕ್ಕೆ ಹತ್ತಿರವಾದದ್ದು. ಇದು ನಾವು ಬೆಳೆದು ಬಂದ ರೀತಿ. ಕಾಲ ಮುಂದೆ ಮುಂದೆ ಹೋದಂತೆ ಅನೇಕ ಬದಲಾವಣೆಗಳು ಆಗುತ್ತಿವೆ. ಸಾಹಿತಿಗಳ ಮನೋಧರ್ಮವೂ ಬದಲಾಗುತ್ತಿದೆ. ಬಹುಶಃ ನಮ್ಮಂಥವರಿಗೆ ಇನ್ನು ಸಹಮತವಾದವರ ಸಹವಾಸ ದೊರೆಯಲಾರದು, ಅಥವಾ ಕಡಿಮೆಯೆನ್ನಬಹುದು. ಆದರೆ ವಿ.ಸೀ.ಯವರಾಗಲಿ, ಡಿವಿಜಿಯವರಾಗಲಿ, ನಾನಾಗಲಿ, ನಮ್ಮ ನಮ್ಮ ಬೆಳವಣಿಗೆಯನ್ನು ನಾವು ಪ್ರಾಮಾಣಿಕವಾಗಿ ಮಾಡಿಕೊಂಡು ನಮ್ಮ ನಮ್ಮ ದಾರಿಯಲ್ಲಿ ನಾವು ಹೊರಟಿದ್ದೇವೆ. ಅದು ಸರಿಯೊ ತಪ್ಪೊ ಕಾಲವೇ ನಿರ್ಣಯಿಸಬೇಕು.

ಈ ಪ್ರಾಮಾಣಿಕ ವ್ಯಕ್ತಿತ್ವದಲ್ಲಿ ನಂಬಿಕೆ– ಇದು ವಿ.ಸೀ. ಯವರಂತೆ ನನಗೂ ಕೂಡ ಅತ್ಯಂತ ಪ್ರಿಯವಾದ್ದು. ಯಾರೂ ಮೆಚ್ಚುಗೆಯ ಸಲುವಾಗಿ ಬೇರೆಯವರ ವಿಚಾರಗಳನ್ನು ಒಪ್ಪಿಕೊಂಡು ಒಂದು ಸಲ ಹಾಗೆ, ಒಂದು ಸಲ ಹೀಗೆ ಆಗಬಾರದು. ಹಾಗೆ ಕೆಲವು ಸಲ ಸಾಹಿತಿಗಳು ಆಗುವುದುಂಟು. ಅದನ್ನು ಮಾತ್ರ ನಮ್ಮ ಕಾಲದ ಹಿರಿಯರು ಮತ್ತು ನಾನು ಅನುಸರಿಸಿಕೊಂಡು ಬಂದಿದ್ದೇವೆ. ನಮ್ಮ ಬರವಣಿಗೆ – ಅಲ್ಲಿ ಯಾವುದೇ ರೀತಿಯ ಗುಣ ದೋಷವಿರಲಿ– ಅದು ಅತ್ಯಂತ ಪ್ರಾಮಾಣಿಕವಾಗಿದೆ. ಈಗಿನ ಕಾಲದವರು– ಯಾವುದೇ ಒಂದು ಪಂಥಕ್ಕೆ ಅವರು ಸೇರಲಿ, ಆ ಪಂಥದ ವಿಷಯದಲ್ಲಿ ಪ್ರಾಮಾಣಿಕವಾದ ತಿಳಿವಳಿಕೆ ಮತ್ತು ನಂಬಿಕೆಯನ್ನು ಬೆಳಸಿಕೊಂಡು, ನಾನೊಬ್ಬನೇ ಉಳಿದರೂ ಚಿಂತೆಯಿಲ್ಲ, ನಿ ದಾರಿಯಲ್ಲಿಯೇ ಹೋಗುತ್ತೇನೆಂಬ ಧೈರ್ಯವನ್ನು ತೋರಿಸಬೇಕು. ಇಷ್ಟೇ ನನ್ನ ಸೂಚನೆ.

ವಿ.ಸೀ. ಅವರ ಬಗ್ಗೆ ಇನ್ನೂ ಕೆಲವು ನೆನಪುಗಳಿವೆ. ಅವರು ಇಂಗ್ಲಿಷನ್ನು ತುಂಬಾ

ಓದಿಕೊಂಡವರು. ಒಳ್ಳೆಯ ಭಾಷಣಕಾರರಾಗಿದ್ದವರು. ಕನ್ನಡ ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಇಂಗ್ಲಿಷಲ್ಲಿ ಮಾತಾಡಬೇಕೆಂದು ಇಂಗ್ಲೆಂಡಿಗೆ ಹೋದರು. ದುರ್ದೈವವಶಾತ್ ಇಂಗ್ಲೆಂಡ್ ತಲುಪಿದ ಮರುದಿನವೇ ಒಂದು ಬಗೆಯ ಪಾರ್ಶ್ವವಾಯು ಪೀಡಿತರಾದರು. ಅಲ್ಲಿ ಆರೋಗ್ಯ ಸರಿಪಡಿಸಿಕೊಂಡು ಬೇಗ ನಮ್ಮಲ್ಲಿಗೆ ಹಿಂದಿರುಗಿದರು. ಕನ್ನಡದ ಬಗ್ಗೆ ಇಂಗ್ಲಿಷಲ್ಲಿ ಡಿವಿಜಿ ಅಥವಾ ಬಿ.ಎಂ.ಶ್ರೀ. ಅವರ ಹಾಗೆ ಮಾತಾಡಬಲ್ಲ ಶಕ್ತಿ ಇದ್ದವರು. ತಮ್ಮನ್ನು ಕಾಯಿಲೆ ಈ ರೀತಿ ಹಣ್ಣು ಮಾಡಿತಲ್ಲ ಎಂದು ಅವರಿಗೆ ದುಃಖವಾಗಿರಬೇಕು. ಹಾಗಾದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮಾಡಿದ ಒಂದೆರಡು ಭಾಷಣದಲ್ಲಿ ಈ ಪಾರ್ಶ್ವವಾಯುವಿನ ಪರಿಣಾಮವಾಗಿದ್ದ ಕಾರಣ ಸ್ವಲ್ಪ ನೋವಿನಿಂದಲೇ ಮಾತಾಡುತ್ತಿದ್ದರು. ಒಂದು ಸಂದರ್ಭದಲ್ಲಿಯಂತೂ ಆ ವೇದಿಕೆಯ ಮೇಲೆ ಮಾತಾಡಿದ್ದು ಇನ್ನೂ ನನಗೆ ನೆನಪಿದೆ: "ಮೇಲಿನಿಂದ ಬಂದಿರುವ ಸಂದೇಶದ ಪತ್ರವನ್ನು ನಾನು ಜೇಬಿನಲ್ಲಿ ಹಾಕಿಕೊಂಡೇ ತಿರುಗಾಡುತ್ತಿದ್ದೇನೆ. ಯಾವಾಗ ಏನಾಗುತ್ತೆ ಹೇಳಬರುವುದಿಲ್ಲ" ಎಂದು ಅದನ್ನು ಸೂಚಿಸಿದ್ದರು. ಜೇಬಿನಲ್ಲಿ ಕೈಹಾಕಿ ಆ ಮಾತು ಹೇಳುತ್ತಿದ್ದರು. ಇದನ್ನು ಎಷ್ಟು ಜನರು ನೆನಪಿಟ್ಟಿದ್ದಾರೊ ನೆನಪಿಲ್ಲ.

ಒಟ್ಟಿನಲ್ಲಿ ಒಂದು ಮಾತು ಮಾತ್ರ ಹೇಳಬಹುದು: ಅವರ ಅರ್ಥಶಾಸ್ತ್ರದಲ್ಲಿಯ ಅಸಾಧಾರಣ ಪಾಂಡಿತ್ಯ, ಕನ್ನಡ ಭಾಷಾ ಸಾಹಿತ್ಯಗಳ ಬಗ್ಗೆ ಪ್ರೇಮ ಮತ್ತು ಪ್ರೌಢವ್ಯಾಸಂಗ– ಇವನ್ನು ನಮ್ಮ ಜನರು ಹೆಚ್ಚಾಗಿ ತಿಳಿದುಕೊಳ್ಳಲಿಲ್ಲ. ಅವರ ಕೊನೆಕೊನೆಯ ಕೆಲವು ಪುಸ್ತಕಗಳ ಮುನ್ನುಡಿಯನ್ನು ನೋಡಿದರೆ ಅವರ ಮನಸ್ಸಿಗೆ ಉಂಟಾಗಿದ್ದ ಕಹಿ ಕಂಡು ಬರುತ್ತದೆ. ಅನೇಕರು ಜೀವನದಲ್ಲಿ ಈ ದುಃಖವನ್ನು ಅನುಭವಿಸುತ್ತಾರೆ. ಅದನ್ನು ತಡೆದುಕೊಳ್ಳಲಾರದೆ ಅನೇಕ ಮಾತುಗಳಲ್ಲಿ ಆ ನೋವನ್ನು ತೋಡಿಕೊಳ್ಳುತ್ತಾರೆ. ಸಾಹಿತಿಗಳೂ ಕೂಡ ಮನುಷ್ಯರೇ; ಅವರೂ ಇಂಥ ಭಾವನೆಗಳನ್ನು ವಿಚಾರಗಳನ್ನು ತೋಡಿಕೊಂಡಿದ್ದಾರೆ. ವಿ.ಸೀ.ಯವರೇನೂ ಇದಕ್ಕೆ ಅಪವಾದವಾಗಿರಲಿಲ್ಲ. ಆದರೆ ಕನ್ನಡ ಭಾಷೆ, ಸಾಹಿತ್ಯಗಳಿಗೆ ಅವರು ಕೊಟ್ಟಿರುವ ಕಾಣಿಕೆ ಚಿರಸ್ಮರಣೀಯವಾದ್ದು. ಅವರು ತೋರಿದ ಗುರುಭಕ್ತಿಯಂತೂ ಅನನ್ಯವಾದ್ದು. ಯಾವ ಮನುಷ್ಯ ತನ್ನ ದುಃಖವನ್ನು ನುಂಗಿಕೊಂಡು ಜಗತ್ತಿಗೆ ತನ್ನಲ್ಲಿದ್ದ ಒಳ್ಳೆಯ ವಿಚಾರ ಮತ್ತು ಭಾವನೆಗಳನ್ನು ಪುಸ್ತಕ ಮತ್ತು ಭಾಷಣದ ರೂಪದಲ್ಲಿ ಅಭಿವ್ಯಕ್ತ ಮಾಡುತ್ತಾನೊ ಅಂಥವನ ಸಂಸ್ಕೃತಿ ಪ್ರಶಂಸನೀಯವಾದದ್ದು. ನಮ್ಮ ಹೊಸಕಾಲದ ಬೆಳೆವಂಥ ತರುಣರು ಇದೊಂದು ಅನುಕರಿಸಬೇಕಾದ ಆದರ್ಶವೆಂಬುದನ್ನು ಅರಿತುಕೊಳ್ಳಬೇಕು. ಅನೇಕರ ಜೊತೆ ನಮ್ಮ ಭಿನ್ನಾಭಿಪ್ರಾಯವಿರಬಹುದು. ಆದರೆ ಅವರ ವಿಷಯದಲ್ಲಿ ನಾವು ನಮ್ಮ ಮನಸ್ಸನ್ನು ಕೆಡಸಿಕೊಂಡು ಅವರಿಂದ ದೂರದೂರ ಹೋಗುವಂಥ ಪ್ರವೃತ್ತಿಯನ್ನು ಬೆಳಸಿಕೊಳ್ಳಬಾರದು. ಅದು ಒಳ್ಳೆಯದಲ್ಲ. ವಿ.ಸೀ. ಅವರಂಥ ವ್ಯಕ್ತಿಗಳಿಂದ ಮತ್ತು ಅವರ ಕಾಲದ ಇತರ ವ್ಯಕ್ತಿಗಳಿಂದ ಬೆಳೆಯುತ್ತಿರುವ ಹೊಸ ಪೀಳಿಗೆ ಈ ವಿಷಯವನ್ನು ಅರಿತು ಮನನ ಮಾಡಬೇಕು. ಅದರಂತೆ ನಡೆಯುವ ಪ್ರಯತ್ನವನ್ನು ಮಾಡಬೇಕು. ನಾವು ಬೇರೆ ಬೇರೆ ಮನೋಧರ್ಮದವರಾದರೂ ಕೂಡ ನಮ್ಮ ಅಂತಃಕರಣದಲ್ಲಿ ಒಬ್ಬರೊಬ್ಬರ ಬಗ್ಗೆ ಪ್ರೀತಿಸೌಹಾರ್ದತೆಯನ್ನು ಬೆಳಸಿಕೊಳ್ಳುತ್ತ

ಹೋಗಬೇಕು. ಮತಭೇದವಾಗಿದೆಯೆಂಬ ಕಾರಣದಿಂದ ನಾವು ಅವರಿಂದ ದೂರ ಸಿಡಿದು ನಿಲ್ಲಬಾರದು. ವಿ.ಸೀ. ಅವರ ಜೀವನ ಮತ್ತು ನಡವಳಿಕೆಯಿಂದ ಇಂಥ ಪಾಠವನ್ನು ಕಲಿಯಬೇಕಾದ್ದು ತುಂಬಾ ಅವಶ್ಯವಾಗಿದೆ.

ರೂಪಾರಾಧಕ

ನೀನು ಮೂಡಿಸಿದ್ದ ಮುಗುಳು
ನೀನು ಹಾಡಿಸಿದ್ದ ಬೆಳಗು
ನೆಲದ ಮೂಡು ಮುಳುಗಿನಂತೆ ಕೊನೆಗು ಬಾಳ್ವವು.
ನೀನು ಪಾದ ಪೂಜೆಗೆಯ್ದ
ನೇಹ, ನಲುಮೆ, ಭಕ್ತಿ, ಶ್ರದ್ಧೆ,
ನಿರ್ವಂಚಿತ ಬುದ್ಧಿ ನಾಡಿನೆದೆಯನಾಳ್ವವು.

ನಿನ್ನ ಧೀರ ಲಲಿತ ವಾಣಿ
ಬೀರ ಕಡಗವನ್ನು ನಾಡ
ಕೈಗೆ ತೊಡಿಸುತಭಯವೊರೆದು ನಿತ್ಯ ನಲಿವಳು;
ದಿನಕದೊಂದು ಹೊಸ ಪ್ರಪಂಚ;
ಇಂದಿನ ಸಿರಿ ನಾಳೆ ಸಂಚ–
ವೆಂದು ಚೆಲುವಿಗಿಹ ಚಿರಂತನತೆಯನುಲಿವಳು.

ಅಂದಿನ ದಿನ ನೀನೊರೆವುದು
ಸಿಡಿಲು ಮಂತ್ರಿಸಿರುವ ವಾಣಿ;
ಮಿಂಚಿನ ದೀಪದ, ಮೊಳಗಿನ ಗಂಟೆಯ ಮೇಳದಲಿ;
ಅಂದಿನ ದಿನ ನೀ ಮಿಡಿವುದು
ಚೆಲುವೆ ಮೋಹಿಸಿರುವ ವೀಣೆ
ದೇವಕನ್ನೆಯರ ಮೃದಂಗ ಮಂಗಲ ತಾಳದಲಿ.

ವಿ. ಕೃ. ಗೋಕಾಕ
'ರೂಪಾರಾಧಕ' ಪು. ೭, ೯

ಸರ್ವಂಕಷ ವ್ಯಕ್ತಿತ್ವ

ಪಿ. ವಿ. ಜೋಶಿ

ವಿ.ಸೀ. ಎಂಬ ಒಂದು ವಿದೇಶೀಯ, ಒಂದು ದೇಶೀಯ ಆದ್ಯಾಕ್ಷರಗಳ ಸಂಯುಕ್ತ ಸಂಕ್ಷಿಪ್ತ ನಾಮದಿಂದ ಖ್ಯಾತರಾಗಿದ್ದ ವೆಂಕಟರಾಮಯ್ಯ ಸೀತಾರಾಮಯ್ಯನವರ (೧೮೯೯–೧೯೮೩) ಮನೆತನ ಅಚ್ಚ ವೈದಿಕರದು. ಬಾಲ್ಯ ಬೆಂಗಳೂರು ನೆರೆಹೊರೆಯ ಗ್ರಾಮಾಂತರಗಳಲ್ಲಿ ಕಳೆಯಿತು. ಶಾಲೆ ಕಾಲೇಜು ಶಿಕ್ಷಣ ಬೆಂಗಳೂರು ಮೈಸೂರುಗಳಲ್ಲಿ. ಅವರು ಕ್ರಮವಾಗಿ ಅಧ್ಯಯನ ಮಾಡಿದ ವಿಷಯಗಳು ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ತತ್ವಶಾಸ್ತ್ರ. ಪ್ರೀತಿಯಿಂದ ಓದಿದ್ದು ಇಂಗ್ಲಿಷ್ ಮತ್ತು ಇಂಗ್ಲಿಷ್ ದ್ವಾರಾ ಲಭ್ಯವಿದ್ದ ಪಾಶ್ಚಿಮಾತ್ಯ ಸಾಹಿತ್ಯ. ಅಧ್ಯಾಪಕರಾಗಿ ಪಾಠ ಹೇಳಿದ್ದು ಮತ್ತು ಸಾಹಿತ್ಯ ರಚನೆ ಮಾಡಿದ್ದು ಕನ್ನಡದಲ್ಲಿ. ಅವರ ಆಸಕ್ತಿಯ ಕ್ಷೇತ್ರವಂತೂ ವಿಶ್ವವ್ಯಾಪಿಯಾದದ್ದು. ಮಾರ್ಷಲ್, ಕೇನ್ಸ್, ರಸ್ಸೆಲ್, ಬ್ರಾಡ್ಲೇ, ಸಾರ್ತ್ರೆ, ಟಾಲ್‌ಸ್ಟಾಯ್, ಡೊಸ್ಟೊವ್‌ಸ್ಕಿ, ಕಾಫ್ಕಾ, ಷಾ, ಪೌಂಡ್, ಎಲಿಯಟ್, ಸಿಲ್ವಿಯಾಪ್ಲಾಥ್ ಓದಿದಷ್ಟೇ ಆಸ್ಥೆಯಿಂದ ರಾಮಾಯಣ ಮಹಾಭಾರತಗಳನ್ನೂ ಭಾಸ ಕಾಳಿದಾಸರನ್ನೂ, ಡಾ॥ ಕಾಣೆಯವರ ಧರ್ಮಶಾಸ್ತ್ರವನ್ನೂ ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆ, ಅಲಂಕಾರಶಾಸ್ತ್ರ, ಛಂದಃಶಾಸ್ತ್ರಗಳನ್ನೂ ರಿಸರ್ವ್ ಬ್ಯಾಂಕಿನ ವಾರ್ಷಿಕ ವರದಿಗಳನ್ನೂ ಪ್ಲಾನಿಂಗ್ ಕಮೀಷನ್ನಿನ ರಿಪೋರ್ಟುಗಳನ್ನೂ ಆಯವ್ಯಯದ ಅಂದಾಜು ಪತ್ರಿಕೆಯ ಎಲ್ಲಾ ಸಂಪುಟಗಳನ್ನೂ ಓದುತ್ತಿದ್ದರಲ್ಲದೆ, ಅಧಿಕೃತರೊಡನೆ ಚರ್ಚಿಸುವಷ್ಟು ಆಯಾ ಪ್ರಪಂಚದಲ್ಲಿ ಗತಿಯುಳ್ಳವರಾಗಿದ್ದರು. ಇದು ಮಾತ್ರವಲ್ಲದೆ ಸಂಗೀತ ಪ್ರಪಂಚದಲ್ಲಿ ಬಾಖ್–ಬೇಠೋವನ್‌ನಿಂದ ಮೋಜಾರ್ಟ್–ವಾಗ್ನರ್‌ವರೆಗೆ ಪಾಶ್ಚಿಮಾತ್ಯ ಸಂಗೀತ, ತಾನ್‌ಸೇನ್ ಸೂರದಾಸರಿಂದ ಫಯ್ಯಾಜ್‌ಖಾನ್, ಡಾಗರ್ ಬಂಧುಗಳು, ಕರೀಮ್‌ಖಾನ್, ಮಲ್ಲಿಕಾರ್ಜುನ ಮನ್ಸೂರರವರೆಗೆ ಔತ್ತರೇಯ ಸಂಗೀತಗಳನ್ನೂ ಆಸ್ಥೆಯಿಂದ ಕೇಳಿ ಗುಣದೋಷಗಳ ವಿಮರ್ಶೆ ಮಾಡಬಲ್ಲವರಾಗಿದ್ದರು. ಚಿತ್ರಕಲೆ ಶಿಲ್ಪಕಲೆಗಳಲ್ಲೂ ಗ್ರೀಕ್ ಇಟಾಲಿಯನ್ ಆಧುನಿಕ ಐರೋಪ್ಯ ಸಮಗ್ರ ಭಾರತೀಯ ಪ್ರಪಂಚದ ಒಳಹೊರಗುಗಳನ್ನು ಬಲ್ಲವರಾಗಿದ್ದರು. ಅವರ ಆಸಕ್ತಿಗಳನ್ನೆಲ್ಲ ವಿವರವಾಗಿ ಹೇಳಹೊರಟರೆ ಇಂತಹ ಒಬ್ಬ ವ್ಯಕ್ತಿ ಇರುವದೇ ಅಸಂಭವವೆಂದು ಅವರನ್ನು ಪ್ರತ್ಯಕ್ಷ ಕಾಣದೆ ಇದ್ದವರಿಗೆ ತೋರೀತು. ಇಂತಹ ಒಂದು ಸರ್ವಂಕಷ ವ್ಯಕ್ತಿತ್ವ ವಿ.ಸೀ. ಅವರದು.

ಇಂಥ ವ್ಯಕ್ತಿತ್ವ ರೂಪಿತವಾಗುವದು ಸಾಧ್ಯವಾಗಬೇಕಿದ್ದರೆ ಅಂದಿನ-ಅಂದರೆ ೧೯೧೭ ರಿಂದ ೧೯೨೨ರವರೆಗಿನ ಕಾಲದಲ್ಲಿಯ - ಮೈಸೂರು ನಗರದಲ್ಲಿ ಮತ್ತು ಮಹಾರಾಜಾ ಕಾಲೇಜಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಪ್ರಪಂಚದ ಮೂಲೆ ಮೂಲೆಗಳಿಂದ ಕಲೆಹಾಕಿದ ವಿದ್ವಾಂಸರ, ಕಲಾವಿದರ, ಸಂಗೀತಗಾರರ ಸಾನ್ನಿಧ್ಯವಿರುವಲ್ಲಿ ಮಾತ್ರ ಸಾಧ್ಯ ಎಂದುಕೊಂಡರೂ, ವಿ.ಸೀ. ಅಂಥವರು ಇನ್ನೊಬ್ಬರು ಅವರ ಸಮಕಾಲೀನರಲ್ಲಿಯೇ ಆಗಲಿಲ್ಲವೆನ್ನುವುದೇ ಅವರ ಹೆಚ್ಚುಗಾರಿಕೆ. "ಕಾಲೆಜ್ ದಿನಗಳು" ಎಂಬ ಅವರ ಸ್ಮರಣೆಗಳಲ್ಲಿ ಅಂದಿನ ಮೈಸೂರಿನ ಮತ್ತು ಕಾಲೆಜಿನ ಚಿತ್ರ ಹೃದಯಂಗಮವಾದಂತೆ ಯಾವ ಪೆರಿಕ್ಲೀಸನ ಅಥೆನ್ಸ್ ನಗರವಾಗಲಿ, ವಿಕ್ರಮಾದಿತ್ಯನ ಉಜ್ಜಯಿನೀ ನಗರವಾಗಲೀ ಎಲ್ಲಿಯೂ ಚಿತ್ರಿತವಾಗಿಲ್ಲ. ರಾಳ್ಳಪಲ್ಲಿ ಅನಂತ ಕೃಷ್ಣ ಶರ್ಮರ ಶುದ್ಧ ದೇಶೀಯ ಪರಂಪರೆಯ ವಿದ್ವಾಂಸರಿಂದ ಮೊದಲಾಗಿ ಹಿರಿಯಣ್ಣನವರು, ರಾಧಾಕೃಷ್ಣನ್, ಬಿ.ಎಂ. ಶ್ರೀಕಂಠಯ್ಯ, ಸಿ. ಆರ್. ರೆಡ್ಡಿ, ವಾಡಿಯಾ, ರಾಲೋ ಅವರ ಶುದ್ಧ ಪಾಶ್ಚಾತ್ಯ ಪರಂಪರೆಯವರೆಗೆ ಪಸರಿಸಿದ ಆ ಸಾರಸ್ವತ ಪ್ರಪಂಚದ ಮಳಿಬಿಲ್ಲು ಬಣ್ಣಗಳು ಹೃದಯಂಗಮವಾಗಿರುವಂತೆ ಆ ಸಮನ್ವಯ ಉದ್ಬೋಧಕವೂ ಆಗಿದೆ. 'ಇಂಗ್ಲಿಷ್ ಗೀತ'ಗಳ ಭಾಷಾಂತರದಿಂದ ಹೊಸಗನ್ನಡ ಭಾವಗೀತೆ ಅಚ್ಚ ದೇಶೀಯ ಮಟ್ಟಗಳಲ್ಲಿ ಹೇಗೆ ಉದಯವಾಯಿತು ಎಂಬುದು ಸಹಜವೆಂಬಂತೆ ತೋರುತ್ತದೆ. ಮಾನವ ಕುಲದ ಬೌದ್ಧಿಕ ಆಸ್ತಿ ಪೂರ್ವ ಪಶ್ಚಿಮಗಳೆಂಬ ಪಕ್ಷಪಾತವಿಲ್ಲದೆ ಎಲ್ಲರಿಗೂ ಲಭ್ಯವೆಂಬುದನ್ನು ಮನಗಾಣಿಸುತ್ತದೆ. ಇದರ ಸಾಕ್ಷಾತ್ಕಾರವೇ ವಿ.ಸೀ. ವ್ಯಕ್ತಿತ್ವ.

ಆ ಸಮನ್ವಯದ ಪರಂಪರೆ ಬೆಳೆಯದೆ, ಹಳಗನ್ನಡ, ಹೊಸಗನ್ನಡ, ನವೋದಯ, ನವ್ಯ, ಬಂಡಾಯ, ದಲಿತ, ಬಲಿತ ಇತ್ಯಾದಿ ಇನ್ನೇನೇನೋ ಬೇರೆ ಬೇರೆಯಾಗಿ ಬೆಳೆದಿರುವದು ನಮ್ಮ ಜನಾಂಗದ ದುರ್ಭಾಗ್ಯ. ಕನ್ನಡವೆನ್ನುವದು ಒಂದು, ಅದು ಸಮಕಾಲೀನ ಅವಶ್ಯಕತೆಯಂತೆ ಬದಲಾಯಿಸುತ್ತ ಬೆಳೆಯುತ್ತ ಇರುವದೇ ಹೊರತು ಹಿಂದಿನದು ಅಳಿದು ಹೊಸದು ಬರುವುದಿಲ್ಲ ಎಂಬ ತಿಳಿವಳಿಕೆ ಮೂಡದೆ, ಎಲ್ಲಿಯವರೆಗೆ ಅಲ್ಪಮತಿಗಳು ತಮ್ಮ ಸ್ವಾರ್ಥಹಿತ ಸಾಧನೆಗಾಗಿ ಹಳೆಯದು, ಹೊಸದು, ನಮ್ಮದು, ಹೆರವರದು ಎಂದು ದ್ವೇಷಾಸೂಯೆಗಳನ್ನು ಬೆಳೆಸುತ್ತಿರುವರೊ-ಅವರೆಗೆ ಇಂದಿನ ಕನ್ನಡ ಜನಾಂಗಕ್ಕೆ ಭವಿತವ್ಯವಿಲ್ಲ.

ಅಂತಹ ಒಂದು ಸಮನ್ವಯ ಸಿದ್ಧಿ ಯಾವದೇ ವ್ಯಕ್ತಿಯ ಅಭಿಲಾಷೆಯಿಂದಲ್ಲ, "ಭುವನದ ಭಾಗ್ಯದಿಂದಮಕ್ಕುಂ ನೋಡಾ" ಎಂಬ ಕವಿವಾಣಿಯೇ ಅಂತತೋಗತ್ವಾ ಸತ್ಯವಾದದ್ದು. ಏಕೆಂದರೆ ವಿ.ಸೀ. ಅವರ ಅಭಿಲಾಷೆಯಂತೆ ಮುಂಬಯಿ ನಗರದ ಕರೆನ್ಸಿ ಆಫೀಸಿನಲ್ಲಿ ಅರ್ಥಶಾಸ್ತ್ರದ ಎಂ. ಎ. ಪದವಿ ಪಡೆದ ಏಕಮಾತ್ರ ವ್ಯಕ್ತಿಯೆಂದು ಆ ಆಫೀಸಿನ ಮುಖ್ಯಾಧಿಕಾರಿಯ ಅಭಿಮಾನಕ್ಕೆ ಪಾತ್ರರಾಗಿದ್ದು ಉನ್ನತ ಪದವಿಗೆ ಏರುವ ಅವಕಾಶಗಳನ್ನು ಮುನ್ನೋಡುತ್ತಿದ್ದಾಗ ಅವರ ಆರೋಗ್ಯಸ್ಥಿತಿ ಏಕೆ ವಿಷಮಿಸಬೇಕಾಗಿತ್ತು? ಕನ್ನಡದಲ್ಲಿ ಯಾವ ಪದವಿಯನ್ನೂ ಪಡೆಯದೆ ಇದ್ದರೂ ಇವರನ್ನು ಎ. ಆರ್. ಕೃಷ್ಣಶಾಸ್ತ್ರಿಗಳು, ವೆಂಕಣ್ಣಯ್ಯನವರು, ಬಿ.ಎಂ. ಶ್ರೀಕಂಠಯ್ಯನವರು ಕನ್ನಡದ ಕೆಲಸಕ್ಕೆ ಏಕೆ ಒತ್ತಾಯಿಸಬೇಕಿತ್ತು?

ತಾವು ಪಡೆದ ಪದವಿಗೆ ಅನುಗುಣವಾಗಿ ಆಯ್ದುಕೊಂಡ ಭಾರತ ಸರ್ಕಾರದ ನೌಕರಿಯನ್ನು ಬಿಟ್ಟು ಇಲ್ಲಿ ಯಾವ ಖಚಿತ ಭರವಸೆಯೂ ಇಲ್ಲದ ಕನ್ನಡ ಕಾರ್ಯಕ್ಕೆ ಇವರು ಸಮ್ಮತಿಸಿದ್ದು ಹೇಗೆ?

ಹೀಗೆ ಕನ್ನಡಕ್ಕೆ ಲಭ್ಯರಾದ ವಿ.ಸೀ.ಯವರು ಸ್ವಾಂತಃಸುಖಾಯ ಬರೆದ ಸಾಹಿತ್ಯ ಪ್ರಕಾರವೆಂದರೆ ಭಾವಗೀತೆಯೊಂದೇ ಎಂದು ತೋರುತ್ತದೆ. ಬಹುಶಃ ಹಾಗೆಂದೇ ಅವುಗಳನ್ನು ಬರೆಬರೆದಂತೆ ಅವರು ಪ್ರಕಟಿಸಲಿಲ್ಲ. ಅಭಿಮಾನಿಗಳು ಕೇಳಿದಾಗ ಬರೆದಿಟ್ಟವುಗಳಲ್ಲಿ ಕೆಲವನ್ನು ಆಯ್ದುಕೊಟ್ಟರು. ಸ್ವಂತದ ವಿಷಯಗಳನ್ನು ಮಾತಾಡುವುದಕ್ಕೆ ಅವರಿಗೆ ಎಂದಿಗೂ ತುಂಬಾ ಸಂಕೋಚವೇ. ಆದ್ದರಿಂದ ಕೆಲವನ್ನು ಪ್ರಕಟಿಸದೆ ಇಟ್ಟದ್ದೇಕೆ ಎಂದು ಯಾರೂ ಕೇಳಲಿಲ್ಲ. ಅವರು ಹೇಳಲಿಲ್ಲ. ಈಗ ಪ್ರಕಟವಾಗುತ್ತಿರುವ "ಸ್ನೇಹ–ವಿಶ್ವಾಸ" ಸಮಗ್ರ ಕವನ ಸಂಪುಟದಲ್ಲಿ ಅವರು ಪ್ರಕಟಿಸದೇ ಬಿಟ್ಟವುಗಳಲ್ಲಿ ಕೆಲವನ್ನು ಆಯ್ಕೆ ಮಾಡಿ ಸಂಗ್ರಹಿಸಲಾಗಿದೆ. ಭಾವಗೀತೆಯ ಗುಣಮಟ್ಟದಲ್ಲಿ ಅವು ಅವರಾಗಿ ಆಯ್ದು ಪ್ರಕಟಿಸಿದ ಯಾವ ಗೀತಕ್ಕಿಂತಲೂ ಕಡಮೆ ಎನ್ನುವಂತಿಲ್ಲವೆಂಬುದನ್ನು ಸಹೃದಯರು ಕಾಣಬಹುದು.

ಅವರ ಗದ್ಯ ಕೃತಿಗಳಲ್ಲಿ ಪ್ರಸಾದವೆನ್ನುವ ಗುಣ ಹೆಚ್ಚಾಗಿ ಎದ್ದು ಕಾಣುವುದು ಅವರ 'ಪಂಪಾಯಾತ್ರೆ,' 'ಬೆಳುದಿಂಗಳು,' 'ಮೈಸೂರು ರುಮಾಲು' ಇಂತಹ ಪ್ರಬಂಧಗಳಲ್ಲಿ. ಕನ್ನಡ ಲಲಿತ ಪ್ರಬಂಧ ಪ್ರಕಾರಕ್ಕೆ ಅವರ ಕೊಡುಗೆ ದೊಡ್ಡದು. ಆದರೆ ಅಂತಹ ಪ್ರಬಂಧಗಳನ್ನು ಅವರು ಹೆಚ್ಚಾಗಿ ಬರೆಯಲಿಲ್ಲ. ಅಂತಹ ಬರವಣಿಗೆಯಲ್ಲಿ ವ್ಯಕ್ತವಾಗುವುದು ತನ್ನ ಅಭಿರುಚಿ, ತನ್ನ ವ್ಯಕ್ತಿತ್ವ ಮಾತ್ರ, ಅದೇನು ಮಹಾ ಎಂದುಕೊಂಡರೆಂದು ತೋರುತ್ತದೆ. ಏಕೆಂದರೆ ಅವರ ಆಸಕ್ತಿ ಇದ್ದದ್ದು ಮನುಕುಲದ ಬುದ್ಧಿ ಭಾವನಾತ್ಮಕ ಪ್ರಪಂಚದಲ್ಲಿ ಉತ್ತಮವಾದದ್ದನ್ನು ತಾನು ಕಾಣಬೇಕು, ತನ್ನವರಿಗೆ ತೋರಿಸಬೇಕು ಎಂಬುದರಲ್ಲಿ. ಆದ್ದರಿಂದ ಅವರ ಭಾವಗೀತೆಗಳನ್ನು, ಕೆಲವೇ ಗದ್ಯಪ್ರಬಂಧಗಳನ್ನು ಬಿಟ್ಟರೆ ಅವರ ಸೃಜನಾತ್ಮಕ ಕೃತಿಗಳೆಂದರೆ ಕೆಲವೇ ನಾಟಕಗಳು. ಒಂದರ ವಿಷಯ ಪರ್ಷಿಯದ ಇತಿಹಾಸದಿಂದ ಎತ್ತಿಕೊಂಡದ್ದು. ಒಂದು ತೆಲುಗು ಆಖ್ಯಾಯಿಕೆ. ಇನ್ನುಳಿದುವೆಲ್ಲ ಮಹಾಭಾರತ ರಾಮಾಯಣಗಳಿಂದ ಎತ್ತಿಕೊಂಡವು. ಉದ್ದೇಶ ಆಯಾ ಗ್ರಂಥಗಳಲ್ಲಿ ವ್ಯಕ್ತವಾಗಿರುವ ಮನುಷ್ಯ ಸ್ವಭಾವದ ಉನ್ನತಿ, ಶೀಲ, ಪರಾಕ್ರಮ, ಸಹನೆ, ಔದಾರ್ಯಗಳ ಉದಾಹರಣೆಗಳನ್ನು ಎತ್ತಿತೋರಿಸುವುದು. ಇಂಥದಿನ್ನೂ ಎಷ್ಟೋ ಇದೆ ಎಂದು ಮತ್ತೆ ಮತ್ತೆ ಹೇಳುತ್ತಾರೆ. ಹಾಗೆಯೇ ಇಂಗ್ಲಿಷ್ ಅಮೆರಿಕನ್ ಸಾಹಿತ್ಯದಲ್ಲಿ ವಿಶಿಷ್ಟವೆಂದು ತಮಗೆ ತೋರಿದ ಗೀತ, ನಾಟಕ, ಕಾದಂಬರಿಗಳನ್ನೂ ಅನುವಾದಿಸಿದ್ದಾರೆ.

ಅವರು ವ್ಯಾಪಕವಾಗಿ ಮತ್ತು ತುಂಬಾ ಆಸ್ಥೆಯಿಂದ ಮಾಡಿದ ಕೆಲಸವೆಂದರೆ ಕವಿಪ್ರತಿಭೆ, ಕಲಾನುಭವ, ಕಲೆ–ಸಾಹಿತ್ಯ ವಿಮರ್ಶೆಗಳನ್ನು ಕುರಿತು ಮಾಡಿದ ಭಾಷಣಗಳು ಮತ್ತು ಬರೆದ ಪ್ರಬಂಧಗಳು. ಅವುಗಳಲ್ಲಿ ಒಂದೊಂದು ಗ್ರಂಥದ ವಿಮರ್ಶೆಯೆಂದೋ ಅವಲೋಕನವೆಂದೋ ಬರೆದ ಪ್ರಬಂಧಗಳಲ್ಲಿ ಅವರ ಕಲ್ಪನೆ ಭಾಷೆಗಳು ವಿಶದವಾಗಿದ್ದು, ಅಪರೂಪವಾದ ದೃಷ್ಟಿಕೋನಗಳನ್ನು ತೆರೆದು ತೋರಿಸುತ್ತಾರೆ. ವಿಮರ್ಶೆಯಲ್ಲಿ "ಮೌಲ್ಯಮಾಪನ"

ಎಂಬ ಕಲ್ಪನೆಯನ್ನು ಅವರು ಒತ್ತಿ ಒತ್ತಿ ಹೇಳಿದರೂ ಅದನ್ನು ಅನ್ವಯಿಸುವುದರಲ್ಲಿ ಗುಣಗಳಲ್ಲಿ ಪಕ್ಷಪಾತವನ್ನೂ ದೋಷಗಳಲ್ಲಿ ಔದಾಸೀನ್ಯವನ್ನೂ ತೋರುವುದು ಅವರ ಸ್ವಭಾವಿಕ ಸೌಜನ್ಯದ ರೀತಿ. ಅನ್ವಯಿಕ ವಿಮರ್ಶೆಯಲ್ಲಿ ಅವರ ವಿಚಾರಗಳನ್ನು ಗ್ರಹಿಸಿ ಆರಗಿಸಿಕೊಂಡಷ್ಟು ಸುಖವಾಗಿ ಅವರ ತತ್ವ ಚಿಂತನೆಯನ್ನು ಕುರಿತ ಭಾಷಣ, ಪ್ರಬಂಧಗಳನ್ನು ಗ್ರಹಿಸುವುದು ಅಸಾಧ್ಯ. ಅವುಗಳಲ್ಲೂ ಮೊದಲು ಪ್ರಕಟವಾದ "ಕವಿಕಾವ್ಯದೃಷ್ಟಿ" ಎಂಬ ಸಂಕಲನದಲ್ಲಿರುವಷ್ಟು ವಿಶದತೆಯೂ ಮುಂದೆ ಕಡಮೆಯಾಗುತ್ತ ಹೋಗುತ್ತದೆ. "ಸಾಹಿತ್ಯ : ಸಂಪ್ರದಾಯ, ಹೊಸಮಾರ್ಗ"ದಲ್ಲಿಯ ಪ್ರಬಂಧಗಳನ್ನು ಸ್ವಲ್ಪ ಕಷ್ಟವಿಂದ ಗ್ರಹಿಸಬಹುದು: ಅವರೆ "ಅರ್ಥ ಮತ್ತು ಮೌಲ್ಯ", "ಕಲಾನುಭವ" ಎಂಬ ಎರಡು ಪ್ರಬಂಧಗಳು ಕಬ್ಬಿಣದ ಕಡಲೆಗಳೇ. ಆಯಾ ಶಾಸ್ತ್ರಗಳಲ್ಲಿ ಸಾಕಷ್ಟು ಗತಿಯನ್ನು ಪಡೆಯದ, ಅಧ್ಯಯನ ಸಿದ್ಧತೆಗಳಿಲ್ಲದ ಓದುಗರಿಗೆ ಹೀಗಾಗುವುದು ಅನಿವಾರ್ಯ ಎಂದು ಅವರು ಅಂದದ್ದು ನಿಜ. ಆದರೆ ಅದನ್ನು ಒಪ್ಪುವುದು ಕಷ್ಟ. ನಿಜವಾದ ಕಾರಣ, ನನಗೆ ಕಾಣುವಂತೆ, ಈ ವಿಷಯವನ್ನು ಒತ್ತಟ್ಟಿಗೆ ಗ್ರಹಿಸಿ ಒಂದು ಗ್ರಂಥ ರೂಪದಲ್ಲಿ ವಿವರಿಸದೆ ಖಂಡಖಂಡವಾಗಿ ವ್ಯಾಖ್ಯಾನಗಳಿಂದೊ ಸಾಂದರ್ಭಿಕ ಪ್ರಬಂಧಗಳಿಂದೋ ಎತ್ತಿಕೊಂಡು ಅಲ್ಲಿಯ ಸ್ಥಳ ಕಾಲಗಳ ಅವಕಾಶಗಳಿಗೆ ಸೀಮಿತಗೊಳಿಸಿದ್ದು. ಈ ಕ್ಷೇತ್ರದಲ್ಲಿ ಪೌರ್ವಾತ್ಯ ಪಾಶ್ಚಾತ್ಯ ಚಿಂತನಗಳ ಸಮನ್ವಯ ಉಪಯುಕ್ತವಾದದ್ದು, ಸಾಧ್ಯವಾದದ್ದು. ಅದಿನ್ನೂ ಸಮರ್ಥರಾದವರಿಂದ ಆಗಬೇಕಿದೆ. ಇಲ್ಲಿ ವಿ.ಸೀ.ಯವರ ಸಾಮಾನ್ಯ ಉದ್ದೇಶದಂತೆ ಒಂದು ಆಕರ್ಷಕವಾದ ವಿಚಾರಧಾರೆಯನ್ನು ಕುರಿತು ಕುತೂಹಲವನ್ನೂ ಉತ್ಸಾಹವನ್ನೂ ಕೆರಳಿಸುವ ಕಾರ್ಯ ಮಾತ್ರ ಸಫಲವಾಗಿದೆ.

ಕನ್ನಡ ಸಾಹಿತ್ಯಕ್ಕೆ ವಿ.ಸೀ. ಯವರದೇ ವಿಶಿಷ್ಟವಾದ ಕೊಡುಗೆ, ಇನ್ನಾರಿಂದಲೂ ಆಗಲಾರದಂತಹುದು, ಅವರು ಬರೆದ ವ್ಯಕ್ತಿಚಿತ್ರಗಳು "ಮಹನೀಯರು" ಎಂಬ ಚಿಕ್ಕ ಸಂಪುಟದಲ್ಲಿಯೂ "ಹಿರಿಯರು ಗೆಳೆಯರು" ಎಂಬ ದೊಡ್ಡ ಸಂಪುಟದಲ್ಲಿಯೂ ಸಂಕಲಿತವಾಗಿರುವುವು. ಅವುಗಳಲ್ಲಿ ಅವರ ಬರವಣಿಗೆ ರೋಚಕವಾಗಿರುವಷ್ಟೇ ಉದ್ಬೋಧಕವೂ ಆಗಿದೆ. ಅಲ್ಲಿ ಆಯಾ ವ್ಯಕ್ತಿಗಳ ಗುಣೋತ್ಕರ್ಷ ಎದ್ದು ಕಾಣುವಂತೆಯೇ ವಿ.ಸೀ.ಯವರ ಸೌಜನ್ಯ, ನಿರ್ಮಾತ್ಸರ್ಯ ಗುಣಗಳೂ ಎದ್ದು ಕಾಣುತ್ತವೆ. ಈ ಶಾಶ್ವತವಾದ ಅಂಶಗಳು ಮಾತ್ರವಲ್ಲದೆ ಕನ್ನಡ ನಾಡಿನ ಇತಿಹಾಸದ ಒಂದರ್ಧ ಶತಮಾನದಷ್ಟು ಕಾಲದ ಸಾಮಾಜಿಕ ಇತಿಹಾಸವನ್ನೇ ಇಲ್ಲಿ ಕಾಣಬಹುದು. ಆ ಐವತ್ತು ವರ್ಷಗಳ ಕಾಲಖಂಡವನ್ನು ಕುರಿತು ಕಾಲಪುರುಷನಿಗೆ ಇದೆಂತಹ ಪಕ್ಷಪಾತ ಎನ್ನಿಸುವಂತೆ ಅಲ್ಲಿ ಮಹಾವ್ಯಕ್ತಿಗಳು ಸಂದಣಿಸುವುದು ಹೇಗೆ ಸಾಧ್ಯ? ಅದಕ್ಕೆ ವಾಸ್ತವಿಕವಾದ ಉತ್ತರ: ಕಾಲಪುರುಷನಿಗೆ ಪಕ್ಷಪಾತವಿರಲಿಕ್ಕಿಲ್ಲ; ಅಂತಹ ಮಹನೀಯರು ಬೇರೆ ಕಾಲಖಂಡಗಳಲ್ಲಿಯೂ ಇರಬಹುದು; ಆದರೆ ಅಂಥವರನ್ನು ಗುರುತಿಸಿ ಕೀರ್ತಿಸಿರುವ ವಿ.ಸೀ.ಯವರಂಥ ಗುಣಗ್ರಾಹಿಗಳಾದ ಸಜ್ಜನರು ವಿರಳ ಎಂಬುದು. ಮುಂದಿನ ಕಾಲದ ಸಾಹಿತಿಗಳಿಗೆ ತೆರೆದು ತೋರಿಸಿದ ಒಂದು ಸಾಹಿತ್ಯ ಪ್ರಕಾರವೇ ಇದು ಎನ್ನಬಹುದು.

ವಿ.ಸೀ.ಯವರ ಸಮಗ್ರ ಓದಿನ, ಅನುಭವದ, ಚಿಂತನದ ಒಂದು ಅಲ್ಪಾಂಶ

ಮಾತ್ರವನ್ನು ಅವರು ತಮ್ಮ ಆಪ್ತಮಿತ್ರರೊಡನೆ ಸಂಭಾಷಣೆಗಳಲ್ಲಿ ಹಂಚಿದರು. ಅವರಿಗೆ ಇನ್ನೂ ಹೆಚ್ಚಿನ ಸಾಧನ ಸ್ವಾತಂತ್ರ್ಯ ವಿರಾಮಗಳು ದೊರೆತಿದ್ದರೆ, ಅವರ ಆಪ್ತಮಿತ್ರರ ಯೋಗ್ಯತೆ ಸಿದ್ಧತೆಗಳು ಇನ್ನೂ ಎಷ್ಟೋ ಪಾಲು ಹೆಚ್ಚಿನವಾಗಿದ್ದರೆ, ಆ ಪ್ರಪಂಚದ ವ್ಯಾಪ್ತಿ ಇನ್ನೂ ಬೆಳೆಯಬಹುದಿತ್ತು. ಏನಿದ್ದರೂ ಅದು ಕಾಲಹತ. ಅದರ ಒಂದು ಅಲ್ಪಾಂಶ ಹತ್ತರಲ್ಲೊಂದೂ ಅಲ್ಲ–ಬರವಣಿಗೆಗೆ ಇಳಿದದ್ದು, ಪ್ರಕಟವಾದದ್ದು ಇನ್ನೂ ಕಡಿಮೆ. ಪೂರ್ಣ ಪ್ರಕಟನೆಯ ಭಾಗ್ಯ ದೊರೆತದ್ದು ಬೆರಳಿಣಿಕೆಗೆ ಬರುವಷ್ಟು ಮಾತ್ರ. ಹೀಗೆ ಅಲ್ಪವೊಂದೂ ಪ್ರಕಟಣೆಗೆ ಲಭ್ಯವಾಗಿರುವ ಮೊತ್ತದ ವಿಸ್ತಾರವೇ ಹತ್ತು ಸಾವಿರ ಪುಟಗಳಷ್ಟಾದರೂ ಆದೀತು. ಅದು "ಜನಪ್ರಿಯ" ವಲ್ಲವೆಂದು ಕಾಲಗರ್ಭದಲ್ಲಿ ಮರೆಯಾಗಲಿಕ್ಕೆ ಬಿಟ್ಟರೆ ಕನ್ನಡನಾಡಿನ ಇತಿಹಾಸಕ್ಕೆ ತುಂಬಿ ಬಾರದ ನಷ್ಟವಾದೀತು.

ಜನನಾಂತರ ಸೌಹೃದ

"ನನ್ನ ಅವರ ಮೊದಲ ಪರಿಚಯವಾಗಿ ಸುಮಾರು ಮೂವತ್ತೇಳು ವರ್ಷಗಳೇ ಆದವು. ಈ ಅವಧಿಯಲ್ಲಿ ಅಂದು ವಿಜಾಪುರದಲ್ಲಿ ಮಾಸ್ತಿಯವರೊಂದಿಗೆ ಅವರನ್ನು ನನ್ನ ಮನೆಗೆ ಕರೆದುಕೊಂಡು ಹೋದಂದು ಮೊದಲಾದ ಪರಿಚಯ, ಅಲ್ಪಾವಧಿಯಲ್ಲಿಯೇ ಸ್ನೇಹವಾಗಿ, ಪ್ರೀತಿಯಾಗಿ, ಒಂದು ಬಗೆಯ ಜನನಾಂತರ ಸೌಹೃದವೆನ್ನಬೇಕಾದ ಭಾವಬಂಧನವಾಗಿ ಬೆಳೆದು ನಿಂತದ್ದು ನನ್ನ ಬದುಕಿನ ಒಂದು ಭಾಗ್ಯವಾಗಿದೆ. ಈ ಮಾತು ಉಪಚಾರದ ಅತ್ಯುಕ್ತಿಯಾಗಿ ಕಾಣುವುದು ಸಾಧ್ಯವಿದೆ. ಆದರೆ ಅಂಥ ಮಾತಿನಿಂದಲ್ಲದೆ ಬೇರೆಯಾಗಿ ನನಗೆನಿಸಿದ್ದನ್ನು ಹೇಳುವುದು ಸಾಧ್ಯವಿಲ್ಲವಾಗಿದೆ."

ವಿ. ಎಂ. ಇನಾಂದಾರ್

'ವಿ.ಸೀ.–ಒಂದು' ಪು. iv

ಸರಳ ಜೀವನ, ಉನ್ನತ ಚಿಂತನ

ಜಿ. ಎಸ್. ದೀಕ್ಷಿತ್

ವಿ.ಸೀ. ಅವರ ಹೆಸರನ್ನು ನಾನು ಮೊದಲು ಕೇಳಿದ್ದು ೧೯೩೦-೩೧ರಲ್ಲಿ. ಆಗ ನಾನು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಬಿ.ಎ.ಆನರ್ಸ್ ತರಗತಿಯಲ್ಲಿ ಓದುತ್ತಿದ್ದೆ. ನನ್ನ ಎರಡನೆ ಭಾಷೆ ಸಂಸ್ಕೃತವಾಗಿತ್ತು. ಕನ್ನಡವನ್ನು ತೆಗೆದುಕೊಂಡ ನನ್ನ ಸಹಪಾಠಿಗಳಿಗೆ ವಿ.ಸೀ. ಅವರ ಪಂಪಾಯಾತ್ರೆ ಪಠ್ಯ ಪುಸ್ತಕವಾಗಿತ್ತು. ಅವರು ಪಂಪಾಯಾತ್ರೆಯಲ್ಲಿಯ ಸನ್ನಿವೇಶಗಳನ್ನು ನೆನೆಸಿಕೊಂಡು ನಕ್ಕು ನಕ್ಕು ನನ್ನನ್ನೂ ನಗಿಸುತ್ತಿದ್ದರು. ನಾನು ಆ ಪುಸ್ತಕವನ್ನು ಓದಬೇಕೆಂಬ ಕುತೂಹಲವನ್ನು ನನ್ನಲ್ಲಿ ಹುಟ್ಟಿಸಿದರು. ನಾನು ಅದನ್ನು ಓದಿ ಅದರ ಕನ್ನಡವನ್ನೂ ಹಾಸ್ಯ ಸನ್ನಿವೇಶಗಳನ್ನೂ ನನ್ನ ಸಹಪಾಠಿಗಳಷ್ಟೇ ಮೆಚ್ಚಿದೆ. ಆಗ ವಿ.ಸೀ. ಅವರು ಬೆಂಗಳೂರು ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ಅವರು ನನ್ನ ಗುರುಗಳಾಗದಿದ್ದರೂ ನನಗೆ ಅವರು ಗುರುಸಮಾನರಾಗಿದ್ದರು. ನನ್ನ ಜನ್ಮದಲ್ಲಿಯೇ ಭಾರೀ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದಾಗ ನನಗೆ ಸಹಾಯ ಮಾಡಿದವರಲ್ಲಿ ಅವರು ಪ್ರಮುಖರು. ಆ ಪರಿಸ್ಥಿತಿಯ ಹಿನ್ನೆಲೆ ಹೀಗಿತ್ತು.

ನಾನು ಒರಿಸ್ಸಾದಲ್ಲಿಯ ಪರ್ಲಾಕಿ ಮಂಡಿಯಲ್ಲಿ ಒಂದು ಕಾಲೇಜಿನಲ್ಲಿ ೧೯೩೩ರಿಂದ ೧೯೩೯ರವರೆಗೂ ಉಪನ್ಯಾಸಕನಾಗಿದ್ದೆ. ಅಲ್ಲಿಗೆ ಹೋಗುವ ಮುಂಚೆ ನನ್ನ ಗುರುಗಳೂ ಹಿತೈಷಿಗಳೂ ಮಹಾರಾಜಾ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರೂ ಆಗಿದ್ದ ಡಾ. ಎಂ. ಎಚ್. ಕೃಷ್ಣರವರಿಗೆ ಮೈಸೂರಿನಲ್ಲಿ ಕೆಲಸ ಖಾಲಿಯಾದ ಕೂಡಲೆ ತಿಳಿಸಿ ಎಂದು ಕೇಳಿಕೊಂಡಿದ್ದೆ. ೧೯೩೯ರಲ್ಲಿ ಒಂದು ಕೆಲಸ ಖಾಲಿ ಆಯಿತೆಂದು ಅವರಿಂದ ಒಂದು ಟೆಲಿಗ್ರಾಂ ಬಂತು. ಮುಂದಾಲೋಚನೆ ಮಾಡದೇ ನಾನು ನನ್ನ ಕೆಲಸಕ್ಕೆ ರಾಜೀನಾಮೆಕೊಟ್ಟು ಬರುತ್ತೇನೆಂದು ಟೆಲಿಗ್ರಾಂ ಕೊಡಲಿಕ್ಕೆ ಹೋದೆ. ಅಷ್ಟರಲ್ಲಿಯೆ ಡಾ. ಕೃಷ್ಣರವರಿಂದ ಎರಡನೆ ಟೆಲಿಗ್ರಾಂ ರಾಜೀನಾಮೆ ಕೊಡಬೇಡವೆಂದು ಬಂತು. ಪರ್ಲಾಕಿ ಮಂಡಿ ಕಾಲೇಜಿನವರು ನನ್ನ ರಾಜೀನಾಮೆ ಹಿಂತೆಗೆದುಕೊಳ್ಳಲು ಒಪ್ಪಲಿಲ್ಲ. ಇದ್ದ ಕೆಲಸವನ್ನು ಕಳೆದುಕೊಂಡೆ. ಸಿಗುತ್ತದೆನ್ನುವ ಕೆಲಸ ಸಿಗಲಿಲ್ಲ. ಅದೇ ಇನ್ನು ಮದುವೆ ಮಾಡಿಕೊಂಡಿದ್ದೆ. ವೃದ್ಧ ಮಾತಾಪಿತೃಗಳನ್ನು ನಾನೇ ಪೋಷಿಸಬೇಕಾಗಿತ್ತು. ಮೈಸೂರಿನಿಂದ ಸೂರತ್ತಿನವರೆಗೂ ಎಲ್ಲ ಖಾಸಗಿ ಕಾಲೇಜುಗಳ ಬಾಗಿಲುಗಳನ್ನು ತಟ್ಟಿದೆ. ಯಾವದೂ ತೆಗೆಯಲಿಲ್ಲ. ಒಂದೇ ಒಂದು ಕಾಲೇಜಿನಲ್ಲಿ ಒಂದು ಅವಕಾಶವಿತ್ತು. ಅದು ಸಾಂಗ್ಲಿಯಲ್ಲಿಯ ವಿಲ್ಲಿಂಗಡನ್ ಕಾಲೇಜು.

ಅದರ ಪ್ರಿನ್ಸಿಪಾಲರು ಪ್ರಸಿದ್ಧ ಕನ್ನಡ ಸಾಹಿತಿ ವಿ. ಕೃ. ಗೋಕಾಕರು. ವಿ.ಸೀ. ಅವರು ಅವರ ಸ್ನೇಹಿತರು. ವಿ.ಸೀ. ಅವರಿಂದ ಪರಿಚಯ ಪತ್ರ ತೆಗೆದುಕೊಂಡು ಹೋದರೆ ಕೆಲಸ ಸುಲಭವಾಗುತ್ತದೆಂದು ಸ್ನೇಹಿತರು ಸೂಚಿಸಿದರು. ನನಗೆ ವಿ.ಸೀ. ಅವರ ಪರಿಚಯವಿರಲಿಲ್ಲ. ಆದರೂ ೧೯೪೦ರ ಬೇಸಿಗೆಯಲ್ಲಿ ಅವರ ಮನೆಗೆ ಹೋಗಿ ನನ್ನ ಕರುಣ ಕಥೆಯನ್ನು ಅವರಿಗೆ ಹೇಳಿದೆ. ಅವರು ಸಾವಧಾನವಾಗಿ ಕೇಳಿ ನನ್ನಿಂದ ಏನಾಗಬೇಕೆಂದು ಕೇಳಿದರು. ನೀವು ಪ್ರಿ. ಗೋಕಾಕರಿಗೆ ಒಂದು ಪತ್ರವನ್ನು ಕೊಟ್ಟರೆ ನನಗೆ ಸಹಾಯವಾಗಬಹುದೆಂದು ಹೇಳಿದೆ. ಒಳಗಡೆ ಹೋಗಿ ಒಂದು ಬಿಳಿ ಹಾಳೆಯನ್ನು ತಂದು ನಾನು ಹೇಳಿದ್ದನ್ನು ಸೊಗಸಾದ ಇಂಗ್ಲಿಷಿನಲ್ಲಿ ಬರೆದು ನನ್ನ ಕೈಯಲ್ಲಿಟ್ಟರು. ಅದನ್ನು ತೆಗೆದುಕೊಂಡು ಹೋಗಿ ಪ್ರಿ. ಗೋಕಾಕರಿಗೆ ಕೊಟ್ಟೆ. ನನಗೆ ಅಲ್ಲಿ ಕೆಲಸ ಸಿಗುವಲ್ಲಿ ಆ ಪತ್ರ ಮಹತ್ವದ ಪಾತ್ರವನ್ನು ವಹಿಸಿತ್ತು. ಹೀಗೆ ಎಂತಹ ಪರಿಸ್ಥಿತಿಯಲ್ಲಿ ತಮಗೆ ಗೊತ್ತಿಲ್ಲದ ಒಬ್ಬ ಯುವಕನಿಗೆ ಅಭಯ ಹಸ್ತವಿತ್ತವರನ್ನು ಮರೆಯಲು ಸಾಧ್ಯವೇ? ಅವರೇ ಒಂದು ಸಂದರ್ಭದಲ್ಲಿ ಹೇಳುವ ಹಾಗೆ "ಕಷ್ಟದಲ್ಲಿ ಇರುವಾಗ ಯಾರೊ ಒಬ್ಬರಾಡಿದ ಮಾತು ಅಮೃತಸತ್ವವಾಗಬಲ್ಲದು." ನನ್ನ ವಿಷಯದಲ್ಲಿ ಇದು ಅಕ್ಷರಶಃ ಸತ್ಯವಾಯಿತು.

ಮುಂದೆ ವಿ.ಸೀ. ಅವರ ನನ್ನ ಭೇಟಿ ೧೯೪೫ರಲ್ಲಿ ಆಯಿತು. ಆಗ ಮದ್ರಾಸಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಸೇರಿತು. ಟಿ. ಪಿ. ಕೈಲಾಸಂ ಅವರು ಅದರ ಅಧ್ಯಕ್ಷರಾಗಿದ್ದರು. ಅದು ಒಂದು ಪಾಲಿಟೆಕ್ನಿಕ್ ಶಾಲೆಯಲ್ಲಿ ನಡೆಯಿತು. ಆಗಿನ ದಿನಗಳಲ್ಲಿ ಸಾಹಿತ್ಯ ಸಮ್ಮೇಳನಕ್ಕೆ ಸಾವಿರಾರು ಜನರು ಬರುತ್ತಿರಲಿಲ್ಲ. ಅದೂ ಅಲ್ಲದೆ ಮದ್ರಾಸು ಕನ್ನಡಿಗರಿಗೆ ದೂರವಾಗಿತ್ತು. ಬಂದ ನೂರಾರು ಜನರನ್ನು ಆ ಪಾಲಿಟೆಕ್ನಿಕ್ ಕ್ಲಾಸ್ ರೂಮುಗಳಲ್ಲಿ ಇಳಿಸಿದ್ದರು. ಸಮ್ಮೇಳನದ ಅಧಿವೇಶನವು ಅದೇ ಕಟ್ಟಡದ ಸಭಾಗೃಹದಲ್ಲಿ ಏರ್ಪಡಿಸಲಾಗಿತ್ತು. ಪ್ರತಿನಿಧಿಗಳಿಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಾಡುವ ಪ್ರಮೇಯವೇ ಇರಲಿಲ್ಲ. ಒಂದೇ ಕಟ್ಟಡದಲ್ಲಿ ಎಲ್ಲಾ ಕಾರ್ಯಕ್ರಮಗಳೂ ನಡೆಯುತ್ತಿದ್ದವು. ನಾನು ಮತ್ತು ನನ್ನ ಶ್ರೀಮತಿ ಈ ಸಮ್ಮೇಳನಕ್ಕೆ ಹೋಗಿದ್ದೆವು. ವಿ.ಸೀ. ಮತ್ತು ಅವರ ಒಬ್ಬ ಮಗಳು ಅಲ್ಲಿಗೆ ಬಂದಿದ್ದರು. ಅದೃಷ್ಟವಶಾತ್ ನಾವು ಅವರು ಒಂದೇ ದೊಡ್ಡ ರೂಮಿನಲ್ಲಿ ೩-೪ ದಿನ ಜತೆಗಿರುವ ಅವಕಾಶ ದೊರಕಿತು. ವಿ.ಸೀ. ಅವರ ಪರಿಚಯ ನಿಕಟವಾಯಿತು. ಇದರ ಜತೆಗೆ ಅವರ ಹತ್ತಿರ ಮೇಲಿಂದ ಮೇಲೆ ಬರುತ್ತಿದ್ದ ಪಡುಕೋಣೆ ರಮಾನಂದರಾಯರ ಪರಿಚಯವೂ ಆಯಿತು. ರಮಾನಂದರಾಯರು ವಿ.ಸೀ.ಯವರ ಆತ್ಮೀಯ ಸ್ನೇಹಿತರು. ಇಬ್ಬರೂ ಒಬ್ಬರನ್ನು ಬಿಟ್ಟು ಇನ್ನೊಬ್ಬರು ಇರುತ್ತಿರಲಿಲ್ಲ. ರಮಾನಂದರಾಯರು ಮದ್ರಾಸು ಪ್ರಾಂತ್ಯದ ವಿದ್ಯಾಖಾತೆಯಲ್ಲಿ ಕೆಲಸ ಮಾಡುತ್ತಿದ್ದರು. ಮದ್ರಾಸಿನಲ್ಲಿಯೂ ಕೆಲಸ ಮಾಡಿದ್ದರು. ಸಮ್ಮೇಳನದ ವ್ಯವಸ್ಥೆಯಲ್ಲಿ ಸಹಜವಾಗಿ ಅವರ ಪಾತ್ರವಿತ್ತು. ಅವರ ಮಗಳು ಜಯವಂತಿ ಅಧಿವೇಶನದಲ್ಲಿ ಪ್ರಾರ್ಥನೆಯನ್ನು ಸುಶ್ರಾವ್ಯವಾಗಿ ಹಾಡಿದರು. ಮುಂದೆ ಇವರು ಸುಗಮ ಸಂಗೀತದಲ್ಲಿ ದೊಡ್ಡ ಹೆಸರು ಮಾಡಿದರು. ನಾನು ಮುಂದೆ ಇತರ ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ಹೋಗಿದ್ದೇನೆ. ಆದರೆ ಮದ್ರಾಸ್ ಸಾಹಿತ್ಯ ಸಮ್ಮೇಳನದಲ್ಲಿ ಇದ್ದಂಥ ಮನೆಯ ವಾತಾವರಣ ಇನ್ನೆಲ್ಲಿಯೂ ಇರಲಿಲ್ಲ. ಇಂತಹ ವಾತಾವರಣದಲ್ಲಿ ವಿ.ಸೀ. ಅವರ ಸಹವಾಸ ನನಗೆ ದೊರಕಿದ್ದು ನನ್ನ ಸುಕೃತ.

ಈ ಸಮ್ಮೇಳನವಾದ ಮೇಲೆ ಅನೇಕ ವರ್ಷ ವಿ.ಸೀ. ಅವರ ಸಂಪರ್ಕ ಬರಲಿಲ್ಲ. ೧೯೫೫ರಲ್ಲಿ ನಾನು ಧಾರವಾಡದ ಕರ್ನಾಟಕದ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಪ್ರಾಧ್ಯಾಪಕನಾಗಿ ನೇಮಕನಾದೆ. ಅದೇ ವೇಳೆಗೆ ಈ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರ ಹುದ್ದೆ ಖಾಲಿಯಾಗಿತ್ತು. ಅದಕ್ಕೆ ಯೋಗ್ಯ ನೇಮಕವಾಗಬೇಕಾಗಿತ್ತು. ಆದೇ ಇನ್ನು ವಿ.ಸೀ. ಅವರು ನಿವೃತ್ತರಾಗಿ, ಆಕಾಶವಾಣಿ ಕೆಲಸಕ್ಕೆ ಇನ್ನು ಸೇರಿರಲಿಲ್ಲ. ಅವರು ಅರ್ಥಶಾಸ್ತ್ರದಲ್ಲಿ ಎಂ. ಎ. ಮಾಡಿ, 'ಹಣಪ್ರಪಂಚ'ವೆನ್ನುವ ಪ್ರಸಿದ್ಧ ಪುಸ್ತಕವನ್ನು ಬರೆದದ್ದು ತಿಳಿದ ನಮ್ಮಂಥವರಿಗೆ ವಿ.ಸೀ. ಅವರನ್ನು ನೇಮಿಸಿದ್ದರೆ ಎಷ್ಟು ಚೆನ್ನಾಗಿರುತ್ತೆಂದು ಅನಿಸಿತು. ಅವರ ಹಿನ್ನೆಲೆ ತಿಳಿಯದ ಉತ್ತರ ಕರ್ನಾಟಕದವರು ಅವರನ್ನು ಕನ್ನಡ ಸಾಹಿತಿಯೆಂದು ಗುರುತಿಸುತ್ತಿದ್ದರೆ ವಿನಹ ಅರ್ಥಶಾಸ್ತ್ರದಲ್ಲಿ ಅವರಿಗಿದ್ದ ಪ್ರೌಢಿಮೆ, ಒಲವು ಅವರಿಗೆ ಗೊತ್ತಿರಲಿಲ್ಲ. ಗೊತ್ತಿದ್ದರೂ ವಿ.ಸೀ. ಅವರು ಎಲ್ಲಿಯೂ ಅರ್ಥಶಾಸ್ತ್ರವನ್ನು ಬೋಧಿಸದೆ ಇದ್ದುದರಿಂದ ಅವರನ್ನು ಪ್ರಾಧ್ಯಾಪಕರನ್ನಾಗಿ ಮಾಡುವುದು ಅಸಾಧ್ಯವಾಗಿತ್ತು. ಹೇಗಾದರೂ ಸಾಧ್ಯವಾಗಿದ್ದರೆ, ಕರ್ನಾಟಕ ವಿಶ್ವವಿದ್ಯಾಲಯ ಅರ್ಥಶಾಸ್ತ್ರದ ಅಭ್ಯಾಸಕ್ಕೆ ಮತ್ತು ಸಂಶೋಧನೆಗೆ ದೊಡ್ಡ ಹೆಸರು ಸಿಗುವ ಹಾಗೆ ಮಾಡುವ ಸಾಮರ್ಥ್ಯ ವಿ.ಸೀ. ಅವರಲ್ಲಿತ್ತು. 'ಹಣಪ್ರಪಂಚ'ದಂತಹ ಅನೇಕ ಮೌಲಿಕ ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗುತ್ತಿದ್ದವು.

ಈ ರೀತಿಯಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೂ ಅವರಿಗೂ ಸಂಬಂಧವಾಗದೆ ಇದ್ದರೂ ಇನ್ನೊಂದು ವಿಧದಲ್ಲಿ ಅವರಿಗೂ ಈ ವಿಶ್ವವಿದ್ಯಾಲಯಕ್ಕೂ ಸಂಬಂಧವಾಯಿತು. ೧೯೬೪ರಲ್ಲಿ ಹೊನ್ನಾವರದಲ್ಲಿ ಹೊಸ ಕಾಲೇಜು ಸ್ಥಾಪನೆಯಾದಾಗ ವಿ.ಸೀ. ಅವರು ನಾಲ್ಕು ವರ್ಷ ಆ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರಾಗಿ ಆ ಕಾಲೇಜನ್ನು ಭದ್ರವಾದ ಬುನಾದಿಯ ಮೇಲೆ ಕಟ್ಟಿದರು. ಉತ್ತರ ಕನ್ನಡ ಜಿಲ್ಲೆಗೂ ವಿ.ಸೀ. ಅವರಿಗೂ ಮಧುರ ಬಾಂಧವ್ಯವಿತ್ತು. ೧೯೩೧ರಷ್ಟು ಹಿಂದೆ ಕಾರವಾರದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು. ಕುಮಟೆಯಲ್ಲಿ ೧೯೫೩ರಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ನಿಸರ್ಗರಮ್ಯ ಕಡಲತೀರದ ಹೊನ್ನಾವರದಲ್ಲಿ ವಿ.ಸೀ. ಅವರು ಬಹಳ ನೆಮ್ಮದಿಯಿಂದ ಇದ್ದರು. ಹತ್ತಿರವಿರುವ ಯಕ್ಷಗಾನ ಕಲಾವಿದರಾದ ಹಾಸ್ಯಗಾರ ಮನೆತನದವರ ಪರಿಚಯ ಮಾಡಿಕೊಂಡು ಅವರ ಬಗ್ಗೆ ಬರೆಯುವಷ್ಟು ಅವರಿಗೆ ಹತ್ತಿರದವರಾದರು. ಅದೇ ವೇಳೆಗೆ ವಿಶ್ವವಿದ್ಯಾಲಯದ ಮುಖ್ಯಸ್ಥಳವಾದ ಧಾರವಾಡಕ್ಕೂ ಅವರಿಗೂ ನೆಂಟಸ್ತನ ಆರಂಭವಾಯಿತು. ಈ ಕಾಲದಲ್ಲಿಯೆ ನಾನು ಅವರನ್ನು ಅನೇಕ ಸಲ ನೋಡುವ ಅವಕಾಶ ದೊರಕಿತು. ಅವರು ಸೆನೆಟ್, ಅಕಾಡೆಮಿಕ್ ಕೌನ್ಸಿಲ್ಲಿನ ಸಭೆಗಳಿಗೆ ತಪ್ಪದೆ ಬರುತ್ತಿದ್ದರು. ನಾನೂ ಈ ಸಭೆಗಳ ಸದಸ್ಯನಾಗಿದ್ದೆ. ಈ ಸಭೆಗಳಲ್ಲಿ ಅವರು ಪ್ರಮುಖ ಭಾಗ ವಹಿಸುತ್ತಿದ್ದರು. ಕುಲಪತಿ ಪಾವಟೆಯವರಿಗೂ ಅವರಿಗೂ ಸೌಹಾರ್ದಯುತ ಸಂಬಂಧವಿತ್ತು. ವಿಶೇಷ ಉಪನ್ಯಾಸ ಕೊಡಲು ಒಂದು ಸಲ ಬಂದಿದ್ದರು. ನಾನು ಒಂದು ಸಲ ಹೊನ್ನಾವರದ ಅವರ ಕಾಲೇಜಿಗೆ ಭೇಟಿ ಕೊಡುವ ಅವಕಾಶ ಸಿಕ್ಕಿತ್ತು. ಆ ಭೇಟಿಯನ್ನು ನಾನು ಎಂದಿಗೂ ಮರೆಯುವ ಹಾಗಿಲ್ಲ. ನಾವು ಕಾಲೇಜಿಗೆ ಹೋದಾಗ ಸಂಜೆ ಹೊತ್ತು. ವಿ.ಸೀ. ಅವರು ನನಗೂ ನನ್ನ ಜತೆಗೆ ಬಂದವರಿಗೂ ಕಾಲೇಜನ್ನು ತೋರಿಸಲು ಬಂದರು. ನಾನು ಅವರನ್ನು ಅನೇಕ ಸಲ ನೋಡಿದ್ದೇನೆ. ಆದರೆ

ಆ ಸಂಜೆ ಹೊನ್ನಾವರದ ಪ್ರಶಾಂತ ವಾತಾವರಣದಲ್ಲಿ ಗಿಡಗಳ ಮಧ್ಯೆ ಕಂಗೊಳಿಸುತ್ತಿದ್ದ ಆ ಕಾಲೇಜಿನಲ್ಲಿ ವಿ.ಸೀ. ಅವರು ಹಿಂದೆ ಎಂದೂ ನಾನು ನೋಡದಿದ್ದ ಉಲ್ಲಸಿತ ವ್ಯಕ್ತಿಯಾಗಿ ಕಂಡರು. ತಮ್ಮ ಕೆಲಸದಲ್ಲಿ ಹಿಂದೆ ಎಂದೂ ಸಿಗದ ನೆಮ್ಮದಿ ಅವರದಾಗಿತ್ತೆಂದು ನನ್ನ ಊಹೆ. ಅವರ ವೇಷವೇ ಅವರ ಆರಾಮದ ಮನಃಸ್ಥಿತಿಯನ್ನು ತೋರಿಸುತ್ತಿತ್ತು. ಗರಿಗರಿ ಪೇಟಾ ಆಗಲಿ, ಅವರ ಮಾಮೂಲು ಕೋಟಾಗಲಿ ಅವರು ಹಾಕಿರಲಿಲ್ಲ. ಅವುಗಳ ಬದಲು ಒಂದು ಸಾದಾ ಉತ್ತರೀಯವನ್ನು ಹೊದ್ದಿದ್ದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಅವರ ವಿದ್ವತ್ತಿಗೆ ಮತ್ತು ಅವರ ಸೇವೆಯ ಜ್ಯೇಷ್ಠತೆಗೆ ಸಿಗಬೇಕಾದ ಮನ್ನಣೆ ಸಿಕ್ಕಿರಲಿಲ್ಲ. ಅಂಥ ಕಹಿ ಅನುಭವ ಹೊಂದಿದ ಅನೇಕರು ಒಂದು ತರಹ ಸಿನಿಕರಾಗಿ ಜೀವನದಲ್ಲಿ ತಾವು ಉತ್ಸಾಹವನ್ನು ಕಳೆದುಕೊಂಡದ್ದಲ್ಲದೆ, ಅವರ ಹತ್ತಿರ ಬಂದವರಿಗೆ ತಮಗೆ ಆದ ಅನ್ಯಾಯವನ್ನು ಹೇಳಿಕೊಂಡು ಕೇಳುಗರಿಗೆ ಬೇಸರವಾಗುವ ಹಾಗೆ ಮಾಡುತ್ತಾರೆ. ಹೊನ್ನಾವರ ಕಾಲೇಜಿನಲ್ಲಿ ನಾನು ನೋಡಿದ ವಿ.ಸೀ. ಅವರು ಹಿಂದೆ ತಮಗಾದ ಅನ್ಯಾಯವನ್ನು ಎಂದೊ ಮರೆತು ತಾವು ಸಂತೃಪ್ತರಾಗಿದ್ದುದಲ್ಲದೆ ತಮ್ಮ ಹತ್ತಿರ ಬಂದವರನ್ನು ಸಂತೃಪ್ತರಾಗಲು ಸ್ಫೂರ್ತಿಯನ್ನು ಕೊಡುವ ಹಾಗಿದ್ದರು.

ಹೊನ್ನಾವರ ಕಾಲೇಜಿನಿಂದ ನಿವೃತ್ತರಾದ ಮೇಲೆ ನಾನು ಅನೇಕ ಸಲ ವಿ.ಸೀ. ಅವರನ್ನು ಅವರ ಚಾಮರಾಜಪೇಟೆ ನಿವಾಸದಲ್ಲಿ ಭೇಟಿಯಾಗಿದ್ದೇನೆ. ಹೋದಾಗಲೆಲ್ಲಾ ತಿಂಡಿ ತೀರ್ಥಗಳಿಲ್ಲದೆ ಅತಿಥಿಗಳನ್ನು ಅವರು ಬೀಳ್ಕೊಡುತ್ತಿರಲ್ಲಿಲ್ಲ. ಅವರೊಡನೆ ಮಾತನಾಡುವುದೇ ಒಂದು ವಿದ್ಯಾಭ್ಯಾಸ. ಪ್ರಚಲಿತ ಸಮಸ್ಯೆಗಳ ಬಗ್ಗೆ ಗಾಢವಾದ ಆಲೋಚನೆ ಅಭ್ಯಾಸಗಳನ್ನು ಅವರು ಮಾಡುತ್ತಿದ್ದರು. ಹೀಗೆ ಮಾಡುವುದಕ್ಕೆ ಅವರಿಗೆ ಮೂರು ಇಂಗ್ಲೀಷ್ ನಿಯತ ಕಾಲಿಕೆಗಳು ಸಹಾಯ ಮಾಡುತ್ತಿದ್ದವು. ಅವು ಯಾವುವೆಂದರೆ, 'ದಿ ಇಕಾನಮಿಸ್ಟ್', 'ದಿ ಲಿಸೆನರ್' ಮತ್ತು 'ದಿ ಟೈಮ್ಸ್ ಲಿಟೆರರಿ ಸಪ್ಲಿಮೆಂಟ್'. ಇವುಗಳಲ್ಲಿ 'ದಿ ಇಕಾನಮಿಸ್ಟ್' ಪ್ರಪಂಚದ ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಚರ್ಚಿಸುತ್ತದೆ. 'ದಿ ಲಿಸೆನರ್' ಬಿ.ಬಿ.ಸಿ.ಯಲ್ಲಿ ಯಾರ ಯಾರ ಭಾಷಣಗಳಲ್ಲಿ ಮುಖ್ಯವಾದವನ್ನು ಕೊಡುತ್ತದೆ. ಬಿ.ಬಿ.ಸಿ. ತನ್ನಲ್ಲಿ ಆಗುವ ಭಾಷಣಗಳು ಅತ್ಯಂತ ಶ್ರೇಷ್ಠವಾದುವೆಂಬುದನ್ನು ನೋಡಿಕೊಳ್ಳುತ್ತದೆ. 'ದಿ ಟೈಮ್ಸ್ ಲಿಟೆರರಿ ಸಪ್ಲಿಮೆಂಟ್' ನಲ್ಲಿ ಇಂಗ್ಲೆಂಡಿನಲ್ಲಿ ಮತ್ತು ಹೊರಗೆ ಎಲ್ಲಾ ವಿಷಯಗಳ ಮೇಲೂ ಪ್ರಕಟವಾಗುವ ಶ್ರೇಷ್ಠ ಪುಸ್ತಕಗಳ ವಿಮರ್ಶೆಯನ್ನು ಆ ವಿಷಯಗಳಲ್ಲಿ ತಜ್ಞರಾದವರು ಮಾಡುತ್ತಾರೆ. ಈಚೆಗೆ ಈ ನಿಯತಕಾಲಿಕೆಗಳ ಚಂದಾ ಹಣ ಎಷ್ಟು ಹೆಚ್ಚಾಗಿದೆಯೆಂದರೆ ವಿಶ್ವವಿದ್ಯಾಲಯದಂಥ ಸಂಸ್ಥೆಗಳು ಕೂಡ ಅವುಗಳನ್ನು ತರಿಸುವುದನ್ನು ಬಿಟ್ಟು ಬಿಟ್ಟಿವೆ. ಆದರೆ ವಿ.ಸೀ.ಯವರು ಅವುಗಳನ್ನು ಕೊನೆಯವರೆಗೂ ತಾವೇ ಚಂದಾ ತೆತ್ತು ತರಿಸುತ್ತಿದ್ದರು. ಇದು ಹೇಗೆ ಇವರಿಗೆ ಸಾಧ್ಯವಾಯಿತೊ ದೇವರೇ ಬಲ್ಲ. Simple living ಮತ್ತು High thinking ಗೆ ವಿ.ಸೀ. ಅವರು ಪ್ರಸಿದ್ಧರು. Simple living ಗೆ ಯಾವ furniture ಇಲ್ಲದ ಇವರ ಕೂತುಕೊಳ್ಳುವ ರೂಮು ಸಾಕ್ಷಿಯಾದರೆ, ಮೇಲೆ ಹೇಳಿದ ನಿಯತಕಾಲಿಕೆಗಳು ಇವರ High thinking ಗೆ ಸಾಕ್ಷಿ. ಇಂಥವರ ಸರಳ ಜೀವನ ಮತ್ತು ಉನ್ನತ ಚಿಂತನೆಗಳು ನಮಗೆ ಸದಾ ಮಾರ್ಗದರ್ಶಿಯಾಗಬೇಕು.

ಸಾವಿರದ ನೆನಪು

ಎಸ್. ಆರ್. ಮಳಗಿ

ನನಗೆ ಪೂಜ್ಯರೂ ಹಿರಿಯರೂ ಆಗಿದ್ದ ಹಳೆಯ ತಲೆಮಾರಿನ ಆಧುನಿಕ ಕನ್ನಡ ಸಾಹಿತಿಗಳಲ್ಲಿ ವಿ. ಸೀ. ನಾಮಾಂಕಿತ ವಿ. ಸೀತಾರಾಮಯ್ಯನವರು ಒಬ್ಬರು. ಅವರ ವ್ಯಕ್ತಿತ್ವ ಅಸಾಮಾನ್ಯವಾದುದು. ನನ್ನ ದೃಷ್ಟಿಯಲ್ಲಿ ವಿ.ಸೀ. ನಮ್ಮ ನಾಡತಾಯಿ ಪಡೆದ ಧೀಮಂತ ಸಾಹಿತಿ, ಪ್ರಜ್ಞಾವಂತ ಕವಿ. ಈ ಶತಮಾನವು ಪ್ರಾರಂಭವಾಗುವ ತುಸು ಮೊದಲೆ ಹುಟ್ಟಿ ಬೆಳೆಯುತ್ತ ಬಂದ ಇವರ ವಿಶಿಷ್ಟ ವ್ಯಕ್ತಿತ್ವವು ಕ್ರಮೇಣ ರೂಪುಗೊಳ್ಳತೊಡಗಿದುದು ಇವರ ಯಶಸ್ವೀ ವಿದ್ಯಾರ್ಥಿ ದೆಸೆಯಲ್ಲಿ; ವಿಶೇಷವಾಗಿ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಇವರಿಗೆ ಪಾಠ ಹೇಳುತ್ತಿದ್ದ ಗುರುಗಳಾದ ಸಿ. ಆರ್. ರೆಡ್ಡಿ, ಎಸ್. ರಾಧಾಕೃಷ್ಣನ್, ಎನ್. ಎಸ್. ಸುಬ್ಬರಾವ್, ಬಿ. ಎಂ. ಶ್ರೀಕಂಠಯ್ಯನವರು, ಹಿರಿಯಣ್ಣನವರು ಮುಂತಾದ ಅಂದಿನ ವಿಖ್ಯಾತ ವಿದ್ವನ್ಮಣಿಗಳ ಪ್ರಭಾವದಲ್ಲಿ ಎಂದು ಕೇಳಿ ಬಲ್ಲೆ. ನನಗೆ ಕುತೂಹಲ ಕೆರಳಿಸಿದ ಸಂಗತಿಯೆಂದರೆ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ತತ್ವಶಾಸ್ತ್ರಗಳಲ್ಲಿ ಸರ್ ಶೇಷಾದ್ರಿ ಬಂಗಾರ ಪದಕದೊಂದಿಗೆ ಬಿ.ಎ. ಪದವಿಯನ್ನೂ ಅರ್ಥಶಾಸ್ತ್ರದಲ್ಲಿ ಉಚ್ಚಶ್ರೇಣಿಯ ಎಂ. ಎ. ಪದವಿಯನ್ನೂ ಪಡೆದಿದ್ದ ಇವರು, ಮುಂಬಯಿಯಲ್ಲಿ ತಮ್ಮ ಪದವಿಗನುಗುಣವಾಗಿ ದೊರೆತಿದ್ದ ಭಾರತ ಸರ್ಕಾರದ ನೌಕರಿಯನ್ನು ಒಂದು ವರ್ಷದಲ್ಲೆ ತೊರೆದು, ಕನ್ನಡದಲ್ಲಿ ಯಾವೊಂದು ಪದವಿಯನ್ನೂ ಗಳಿಸದೆ ಇದ್ದರೂ ಕನ್ನಡ ಸೇವೆಗೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು, ಪ್ರಖ್ಯಾತ ಕನ್ನಡ ಪ್ರಾಧ್ಯಾಪಕ, ಕವಿ, ವಿಮರ್ಶಕ, ಪ್ರಬಂಧಕಾರ, ನಾಟಕಕಾರ, ವಾಗ್ಮಿ ಎಂದು ಮುಂತಾಗಿ ಚಿರಂತನ ಹೆಸರುಗಳಿಸಿದ್ದುದು!

ಮುಂಬಯಿಯಿಂದ ಮರಳಿ ಬಂದ ಇವರು ಮೈಸೂರಿನ ಶಾರದಾವಿಲಾಸ ಪ್ರೌಢಶಾಲೆಯಲ್ಲಿ ಉಪಾಧ್ಯಾಯ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತ ಹಳಗನ್ನಡ ಕಾವ್ಯ, ವ್ಯಾಕರಣ, ಛಂದಸ್ಸು, ಅಲಂಕಾರ, ಕಾವ್ಯ ಮೀಮಾಂಸೆ, ಕನ್ನಡ ನಾಡು ನುಡಿಗಳ ಚರಿತ್ರೆ ಇತ್ಯಾದಿಗಳಲ್ಲಿ ವಿಶ್ವವಿದ್ಯಾಲಯದ ರೂಢಿಯ ಕ್ರಮಕ್ಕೆ ಒಳಪಡದೆ, ಸ್ವಂತ ಪರಿಶ್ರಮದಿಂದ ವ್ಯಾಸಂಗ ನಡೆಸಿ, ಇವುಗಳಲ್ಲಿ ಗಾಢ ಪರಿಣತಿ ಹೊಂದಿದುದು ಇವರ ನಿಶಿತ ಮತಿ ಹಾಗೂ ನಿಜವಾದ ಕನ್ನಡದ ಆಸಕ್ತಿಗೆ ಸಾಕ್ಷಿ! ಈ ಹೊತ್ತಿಗೆ, ಅಂದಿನ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ದಿಗ್ಗಜಗಳೆನಿಸಿದ್ದ ಬಿ. ಎಂ. ಶ್ರೀ., ಎ. ಆರ್. ಕೃಷ್ಣಶಾಸ್ತ್ರೀ, ಟಿ. ಎಸ್. ವೆಂಕಣ್ಣಯ್ಯ, ರಾಳ್ಳಪಲ್ಲಿ

ಅನಂತ ಕೃಷ್ಣಶರ್ಮ ಮುಂತಾದವರ ಗಮನ ಸೆಳೆದಿದ್ದ ವಿ.ಸೀ.ಯವರು ೧೯೨೮ರಲ್ಲಿ ಬೆಂಗಳೂರಿನ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕವಾದುದು ಇವರ ಬಾಳಬಟ್ಟೆಯನ್ನು ಬದಲಾಯಿಸಿತು. ಅಂದಿನಿಂದ ತೊಡಗಿದ ಇವರ ಕನ್ನಡ ಸಾಹಿತ್ಯಸೇವೆ ಅವ್ಯಾಹತವಾಗಿ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ವಿಜೃಂಭಿಸಿತು. ಇವರ ಜ್ಞಾನಾರ್ಜನೆಯ ಹಸಿವು ತೀವ್ರತಮ. ಅಧ್ಯಯನ ಅಧ್ಯಾಪನ ವೃತ್ತಿಗಳಿರಡೂ ಕೊನೆಯವರೆಗೆ ಪ್ರತಿನಿಮಿಷವನ್ನೂ ವ್ಯಾಪಿಸಿದ್ದವು. ಇವರ ಆಸಕ್ತಿ ಹಾಗೂ ವ್ಯಾಸಂಗಗಳ ವ್ಯಾಪ್ತಿ ಕನ್ನಡ ಸಾಹಿತ್ಯಕ್ಕಷ್ಟೇ ಸೀಮಿತವಾಗಿರದೆ, ಅದಕ್ಕೆ ಪೋಷಕವಾಗುವಂತೆ, ಸಂಸ್ಕೃತ ಸಾಹಿತ್ಯ ಪಾಶ್ಚಾತ್ಯ ಸಾಹಿತ್ಯಗಳನ್ನೂ ಒಳಗೊಂಡಿತ್ತು. ಇಷ್ಟಲ್ಲದೆ, ಭಾರತೀಯ ಹಾಗೂ ಪಾಶ್ಚಾತ್ಯ ಶಾಸ್ತ್ರೀಯ ಸಂಗೀತ, ನೃತ್ಯ, ನಾಟಕ, ಚಿತ್ರ, ಶಿಲ್ಪ ಮುಂತಾದವುಗಳ ಬಗೆಗೆ ಪಾಲಿಸಿಕೊಂಡು ಬಂದ ಅಭಿಜಾತ ಕಲಾಭಿರುಚಿ ಪರಿಶುದ್ಧ, ಸೂಕ್ಷ್ಮ ಹಾಗೂ ಸ್ವೋಪಜ್ಞವಾಗಿತ್ತು. ಇಂಥ ಬಹುಶ್ರುತ ವ್ಯಕ್ತಿತ್ವದ ಅರಳುವಿಕೆಗೆ ವ್ಯಕ್ತಿಯ ಅಂತರಾಳದಲ್ಲಿ ಹುದುಗಿದ್ದ ಅನುವಂಶಿಕ ಸಂಸ್ಕಾರಗಳ ಬೀಜಸತ್ವವೇ ಮೂಲಕಾರಣ ಎಂದು ನನ್ನ ಅನಿಸಿಕೆ. ಹೊರಗಿನ ವ್ಯಕ್ತಿಗಳ ಇಲ್ಲವೆ ಶಕ್ತಿಗಳ ಪ್ರಭಾವ ಪ್ರೇರಣೆಗಳೇನಿದ್ದರೂ ಅವೆಲ್ಲ ಆ ಬೀಜಸತ್ವಕ್ಕೆ ಪೂರಕ, ಪೋಷಕ, ಅನುಷಂಗಿಕವೆಂದೇ ಹೇಳಬೇಕು.

ನಾನು ವಿ.ಸೀ. ಅವರನ್ನು ಮೊದಲ ಬಾರಿ ಕಂಡುದು ೧೯೩೧–೩೨ರ ಸುಮಾರಿಗೆ ಎಂದು ನೆನಪು. ಆಗ ನಾನು ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದೆ. ಆ ದಿನಗಳಲ್ಲಿ ಧಾರವಾಡವು ಉತ್ತರ ಕರ್ನಾಟಕ ಭಾಗದಲ್ಲಿ ಅದ್ವಿತೀಯ ವಿದ್ಯಾಕೇಂದ್ರವಾಗಿತ್ತು. ಅಲ್ಲದೆ ಸಾಹಿತ್ಯಿಕ, ಸಾಂಸ್ಕೃತಿಕ, ರಾಜಕೀಯ ಆಂದೋಲನಗಳಿಗೆ ಗಂಡು ಮೆಟ್ಟಿನ ಸ್ಥಳವೆಂದು ಹೆಸರಾಗಿತ್ತು. ಹರಿದು ಹಂಚಿಹೋಗಿದ್ದ ಕರ್ನಾಟಕದ ವಿವಿಧ ಭಾಗಗಳ ವಿದ್ವಜ್ಜನರನ್ನು, ಕನ್ನಡ ಸಾಹಿತ್ಯ ಸಂಸ್ಕೃತಿಗಳಿಗೆ ಸ್ಫೂರ್ತಿಯ ಬುಗ್ಗೆಯಾಗಿದ್ದ ಧಾರವಾಡವು ಆಕರ್ಷಿಸುತ್ತಿತ್ತು. ಒಮ್ಮೆ ಕಾಲೇಜಿನ ಕರ್ನಾಟಕ ಸಂಘಕ್ಕೆ ವಿ.ಸೀ. ಅವರನ್ನು ಆಮಂತ್ರಿಸಲಾಗಿತ್ತು. ೬೬–೬೭ ವರ್ಷಗಳ ಕಾಲದ ನಂತರವೂ ಈ ಸಂದರ್ಭದ ನೆನಪು (ವಿವರಗಳು ಮಸುಕು ಮಸುಕಾಗಿದ್ದರೂ) ನನ್ನ ಮನಸ್ಸಿನಲ್ಲಿ ಅಚ್ಚಳಿಯದಿದೆ. ಎಂದಿನಂತೆ, ಕಾಲೇಜಿನ ಭವ್ಯ ಗ್ಯಾಲರಿ ಹಾಲಿನಲ್ಲಿ ಅವರ ಉಪನ್ಯಾಸವೇರ್ಪಟ್ಟಿತ್ತು. ವಿಷಯ: 'ರನ್ನನ ಗದಾಯುದ್ಧ.' ಸಭಾಗೃಹವು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಂದ, ಪ್ರಾಧ್ಯಾಪಕ ವರ್ಗದವರಿಂದ, ನಗರದ ಹಲವಾರು ಸಾಹಿತ್ಯಾಸಕ್ತರಿಂದ ಕಿಕ್ಕಿರಿದು ತುಂಬಿತ್ತು. ಸಂಘದ ಅಧ್ಯಕ್ಷ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ವಿ. ಟಿ. ಸಾಸನೂರರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಮೇಲೆ ಪ್ರಾಧ್ಯಾಪಕ ಆರ್. ವಿ. ಜಾಗಿರದಾರರು (ಅನಂತರ ಶ್ರೀರಂಗರೆಂದು ಪ್ರಸಿದ್ಧರಾದವರು) ಇನ್ನಿತರ ಪ್ರಾಧ್ಯಾಪಕರು ಉಪಸ್ಥಿತರಿದ್ದರು. 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಮೇಳ ಗೀತೆಯ ನಂತರ, ಅಧ್ಯಕ್ಷರು ಪ್ರಾಸ್ತಾವಿಕವಾಗಿ, ವಿ.ಸೀ.ಯವರ ವಿದ್ವತ್ತು ಹಾಗೂ ಸಾಹಿತ್ಯ ಸಾಧನೆಗಳನ್ನು ಕುರಿತು ತುಂಬ ಸ್ವಾರಸ್ಯಕರ ಮಾತುಗಳನ್ನು ಹೇಳಿ ಸ್ವಾಗತಿಸಿದ ಮೇಲೆ, ವಿ.ಸೀ. ಉಪನ್ಯಾಸಕ್ಕೆಂದು ಎದ್ದುನಿಂತರು. ವಿದ್ಯಾರ್ಥಿಗಳು ಅತ್ಯುತ್ಸಾಹದಿಂದ ಚಪ್ಪಾಳೆತಟ್ಟಿ ಮುಖ್ಯ ಅತಿಥಿಗಳಿಗೆ ಗೌರವ

ಸೂಚಿಸಿದರು. ವಿ.ಸೀ. ತಮ್ಮ ಉಪನ್ಯಾಸದಲ್ಲಿ ಮೊದಲು ರನ್ನ ಕವಿಯ ಮಹತಿಯನ್ನು ಕವಿಯ ಸ್ವೋಕ್ತಿಗಳಿಂದಲೆ ಗದಾಯುದ್ಧ ಕಾವ್ಯದ ಪದ್ಯಗಳನ್ನು ಉದ್ಧರಿಸಿ ವಿಶದ ಪಡಿಸುತ್ತ, ಭೀಮ – ದುರ್ಯೋಧನರ ಗದಾಯುದ್ಧ ಪ್ರಸಂಗವನ್ನು ಎತ್ತಿಕೊಂಡರು: ರನ್ನ ಕವಿಯ ನಾಟ್ಯ ಪ್ರತಿಭೆ ಅಲ್ಲಿ ಹೇಗೆ ದುಮುದುಮಿಸುವಂತೆ ಚಿತ್ರಿಸಿದೆ ಎಂಬುದನ್ನು ವಿವರಿಸತೊಡಗಿದರು. ವ್ಯಾಸಕೃತ ಮೂಲ ಮಹಾಭಾರತ, ಪಂಪಭಾರತಗಳೊಂದಿಗೆ ಹೋಲಿಸುತ್ತ, ರನ್ನನ ಹಲವಾರು ಪದ್ಯಗಳನ್ನು ಒಂದಾದ ಮೇಲೊಂದರಂತೆ ಉದ್ಧರಿಸುತ್ತ, ಉಚಿತಾನುಚಿತ ಅಂಶಗಳನ್ನು ಎತ್ತಿ ತೋರಿಸುತ್ತ ಸಮಂಜಸವೆನಿಸುವಂತೆ ತೌಲನಿಕ ವಿಮರ್ಶೆ ನೀಡಿದರು. ಅವರ ವಿದ್ವತ್ತಿಗೆ, ಸ್ಮೃತಿ ಶಕ್ತಿಗೆ, ವಿಶೇಷವಾಗಿ ಅವರ ವಾಗ್ಧಾರೆಗೆ ಸಭಿಕರು ಮೂಕವಿಸ್ಮಿತರಾಗಿದ್ದರು! ಸುಮಾರು ಒಂದು ಗಂಟೆಯವರೆಗೆ ಸಭೆಯಲ್ಲಿ ವಿದ್ಯುತ್ ಸಂಚಾರವಾದಂತಿತ್ತು! ಮರುದಿನ 'ಇಕೊನೊಮಿಕ್ಸ್ ಅಸೋಸಿಯೇಶನ್' ಪರವಾಗಿ, ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಅಂದಿನ ಪ್ರಚಲಿತ ವಿಚಾರಗಳನ್ನು ಕುರಿತು ಇಂಗ್ಲಿಷಿನಲ್ಲಿ ಉಪನ್ಯಾಸವಿತ್ತರು. ಆಗಲೂ ಅವರ ವಾಗ್ಝರಿಯಲ್ಲಿ ಅದೇ ರಭಸ, ಅದೇ ಆವೇಶ, ಅದೇ ಬಗೆಯ ಸೂಕ್ಷ್ಮ ಹಾಗೂ ತೂಕದ ವಿಮರ್ಶೆ.

ವಿ.ಸೀ.ಯವರು ಮತ್ತೊಮ್ಮೆ ಧಾರವಾಡಕ್ಕೆ ಬಂದಾಗ, ಅವರನ್ನು ಪ್ರತ್ಯಕ್ಷ ಕಂಡು ಮಾತಾಡಿ ಪರಿಚಯ ಮಾಡಿಕೊಳ್ಳುವ ಸಂದರ್ಭವೊಂದು ತಾನಾಗಿ ಒದಗಿ ಬಂತು. ವಿದ್ಯಾರ್ಥಿಯಾಗಿದ್ದ ನನಗೆ ಅದೊಂದು ಭಾಗ್ಯವೆನಿಸಿತ್ತು: ಒಂದು ಉಪನ್ಯಾಸವನ್ನು ಮುಗಿಸಿಕೊಂಡು, ಶ್ರೀರಂಗರೊಂದಿಗೆ ವಿ. ಸೀ. ಯವರು ಅವರ ಮನೆಗೆ ಹೊರಟಿದ್ದಾಗ, ಕಾಲೇಜಿನ ಆವರಣದಲ್ಲಿ ಗೆಳೆಯರೊಂದಿಗಿದ್ದ ನನ್ನನ್ನು ಶ್ರೀರಂಗರು ಕೈಮಾಡಿ ಕರೆದರು. ನಾನು ಲಗುಬಗೆಯಿಂದ ಅವರ ಹತ್ತಿರ ಹೋದಾಗ, ಶ್ರೀರಂಗರು ವಿ.ಸೀ.ಯವರಿಗೆ "ಈತ–ಸೇತುರಾಮ ಮಳಗಿ" ಎಂದು ತೋರಿಸಿದರು. ನಾನು ವಿನಯದಿಂದ ಅವರಿಗೆ ಕೈಮುಗಿದು ಬಾಗಿನಿಂತೆ. ಆಗ ಅವರು ನನ್ನ ಬೆನ್ನ ಮೇಲೆ ಕೈಯಿಟ್ಟು "ಏನಪ್ಪ, ನಾನು ನಿನ್ನ ಕವಿತೆಯನ್ನು 'ಪ್ರಬುದ್ಧ ಕರ್ನಾಟಕ' ಪತ್ರಿಕೆಯಲ್ಲಿ ನೋಡಿದೆ. ಎ. ಆರ್. ಕೃಷ್ಣಶಾಸ್ತ್ರಿಗಳಿಗೆ ಮೆಚ್ಚಿಕೆಯಾದ ಕವಿತೆಯಲ್ಲವೆ ಅದು?" ಎನ್ನುತ್ತ ಮುಗುಳುನಗೆ ಸೂಸಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ, ನನ್ನ ಬೆನ್ನು ಚಪ್ಪರಿಸಿ ಕಳಿಸಿಕೊಟ್ಟರು. ಆಗ ಅವರೊಂದಿಗೆ ನನ್ನ ಗುರುಗಳಾಗಿದ್ದ ಏ. ಟಿ. ಸಾಸನೂರರೂ ಇದ್ದರು. ಇದೊಂದು ನನ್ನ ವಿದ್ಯಾರ್ಥಿ ಜೀವನದಲ್ಲಿಯ ಮರೆಯಲಾರದ ರಸನಿಮಿಷ! ಕರ್ನಾಟಕ ಕಾಲೇಜಿನ ಮಿಸಲೆನಿಯಲ್ಲಿ ಪ್ರಕಟವಾಗಿದ್ದ 'ಮಗು' ಎಂಬ ನನ್ನದೊಂದು ಕವಿತೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಎ. ಆರ್. ಕೃಷ್ಣಶಾಸ್ತ್ರಿಗಳ ಕಣ್ಣಿಗೆ ಬಿದ್ದು, ಅವರು ಅದನ್ನು ಮೆಚ್ಚಿ, ನಮ್ಮ ಕಾಲೇಜಿನ ಪ್ರಿನ್ಸಿಪಾಲ್ ಘ್ಯಾರನ್ ಅವರ ಅನುಮತಿ ಪಡೆದು ತಮ್ಮ ಸಂಪಾದಕತ್ವದಲ್ಲಿದ್ದ 'ಪ್ರಬುದ್ಧ ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಇದು ನಡೆದುದು ೧೯೩೧ರ ಸುಮಾರಿಗೆ. ಪ್ರಬುದ್ಧ ಕರ್ನಾಟಕದ ಆ ಸಂಚಿಕೆಯ ಒಂದು ಪ್ರತಿಯನ್ನೂ ಉದಾರ ಹೃದಯದ ಶಾಸ್ತ್ರಿಗಳು ನನಗೆ ಕಳಿಸಿ ಉಪಕರಿಸಿದ್ದರು. ವಿ.ಸೀ.ಯವರೇ ನನ್ನನ್ನು ಕರೆಸಿ ಮಾತಾಡಿಸಿದ್ದರ ಹಿನ್ನೆಲೆಯಿದು. ಇಷ್ಟು ಕಾಲ ನನ್ನ ನೆನಪಿನಲ್ಲಿದ್ದ ಈ ರಸನಿಮಿಷವನ್ನು ಬರಹಕ್ಕಿಳಿಸುವ ಸಂದರ್ಭ ಈ

ಲೇಖನದಿಂದ ನನಗೊದಗಿದೆ. ಆಗ ನನ್ನ ಸ್ನೇಹಿತರಾಗಿದ್ದ ಪಿ. ವಿ. ಜೋಶಿಯವರೂ ನನ್ನ ಜೊತೆಗಿದ್ದರು.

ಅನಂತರ, ವಿ.ಸೀ.ಯವರನ್ನು ಕಂಡು ಮಾತನಾಡಿಸಿದ ಇನ್ನೊಂದು ಸಂದರ್ಭವೊದಗಿದ್ದು ೧೯೩೭-೩೮ರ ಸುಮಾರಿಗೆ. ಅದು ನನ್ನ ಮಿತ್ರರಾಗಿದ್ದ (ಅನಂತರ ನನ್ನ ಸಹೋದ್ಯೋಗಿಯಾಗಿದ್ದ) ಪ್ರಾಧ್ಯಾಪಕ ಸ. ಸ. ಮಾಳವಾಡರ ಮದುವೆಯ ಶುಭ ಸಮಾರಂಭದಲ್ಲಿ. ಗದುಗಿನ ಮಹಾಲಕ್ಷ್ಮೀ ನಾಟ್ಯಮಂದಿರದಲ್ಲಿ ಸಾಯಂಕಾಲ ಏರ್ಪಡಿಸಿದ್ದ ಆರತಕ್ಷತೆಯ ಸಮಯವದು. ಶ್ರೀರಂಗರೊಂದಿಗೆ ವಿ.ಸೀ.ಯವರೂ ಈ ಸಮಾರಂಭಕ್ಕೆ ಆಗಮಿಸಿದ್ದರು. ನನ್ನ ಗೆಳೆಯರಾಗಿದ್ದ ಟಿ. ರೂಬೆನ್, ಎನ್ಕೆ, ಮತ್ತಿತರರೂ ನನ್ನೊಡನಿದ್ದ ನೆನಪು. ಈ ಶುಭ ಸಂದರ್ಭದಲ್ಲಿ ಲಘುಸಂಗೀತ ಕಾರ್ಯಕ್ರಮವೂ ಇತ್ತು. ನಾನು ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ ಸಭೆ ಸಮಾರಂಭಗಳಲ್ಲಿ ಬೇಂದ್ರೆ, ಕುವೆಂಪು, ವಿ.ಸೀ., ಕೆ. ಎಸ್. ನರಸಿಂಹಸ್ವಾಮಿ, ಜಿ. ಪಿ. ರಾಜರತ್ನಂ ಮುಂತಾದ ಕವಿಗಳ ಭಾವಗೀತೆಗಳನ್ನು ಭಾವಕ್ಕನುಗುಣವಾಗಿ ನನ್ನದೇ ಆದ ಧಾಟಿಯಲ್ಲಿ ಹಾಡುತ್ತಿದ್ದೆ. ಇದನ್ನು ಅರಿತಿದ್ದ ಮಾಳವಾಡರು ನನಗೂ ಒಂದೆರಡು ಭಾವಗೀತೆಗಳನ್ನು ಹಾಡಲು ಸೂಚಿಸಿದರು. ಆ ಸಂದರ್ಭಕ್ಕೆ ತಕ್ಕುದೆಂದು ವಿ.ಸೀ.ಯವರ 'ಮನೆ ತುಂಬಿಸುವುದು' ಗೀತವನ್ನು ಹಾಡಿದೆ. ಸಮಾರಂಭದಲ್ಲಿದ್ದ ಜನರು ಮೆಚ್ಚಿಕೆ ಸೂಚಿಸಿ ಇನ್ನೊಂದನ್ನು ಹಾಡಲು ಹೇಳಿದರು. ಆಗ 'ಕುವೆಂಪು' ಅವರ 'ತೇನೆಹಕ್ಕಿ' ಕವನವನ್ನು ಹಾಡಿದೆ. ಸಮಾರಂಭವು ಮುಗಿಯುತ್ತ ಬಂದಂತೆ ನಾಟ್ಯ ಮಂದಿರದ ಹೊರಗೆ ಹೋದಾಗ ವಿ.ಸೀ. ಯವರು ನನ್ನೆಡೆಗೆ ಬಂದು ಮಾತಾಡಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಬೆನ್ನು ತಟ್ಟಿದರು. ನನಗೆ ಬಹಳ ಸಂತೋಷವಾಯಿತು. ಆಗ ಅವರು ಮಾತು ಮುಂದುವರಿಸುತ್ತ ತಮ್ಮ ಆ ಗೀತೆಗೆ 'ಭೂಪಾಳಿ' ರಾಗ ಎಂದು ಕವನ ಸಂಗ್ರಹದಲ್ಲಿ ಸೂಚಿಸಿದ್ದನ್ನು ನೆನಪಿಸುತ್ತ 'ಆ ರಾಗದಲ್ಲಿ ಹಾಡಿದ್ದರೆ ಚೆನ್ನಾಗಿತ್ತಲ್ಲವೆ?' ಎಂದು ಪ್ರಶ್ನಿಸಿದರು. ಹಾಗೆಯೆ ಕುವೆಂಪು ಅವರ 'ತೇನೆಹಕ್ಕಿ' ಕವಿತೆಗೆ ಮತ್ತಾವುದೋ ರಾಗವನ್ನು ಸೂಚಿಸಿ, 'ಆ ರಾಗದಲ್ಲಿ ಹಾಡಿದ್ದರೆ ಆ ಕವಿತೆಯಲ್ಲಿಯ ಉತ್ಸಾಹದ ಭಾವ ಇನ್ನೂ ಹೆಚ್ಚು ಉಕ್ಕುವಂತಾಗುತ್ತಿತ್ತು. ನೀನು ಹಾಡಿದ ಧಾಟಿಯಲ್ಲಿ ಕರುಣರಸದ ಛಾಯೆಯಿತ್ತಲ್ಲವೆ?' ಎಂದರು. ಆಗ ನಾನು, "ನನಗೆ ರಾಗಜ್ಞಾನವಿಲ್ಲ, ಸಾರ್; ಕವಿತೆಯ ಭಾವ ನನಗೆ ಹೊಳೆದಂತೆ ಅದಕ್ಕೆ ತಕ್ಕ ಧಾಟಿಯನ್ನು ಹಚ್ಚಿ ಹಾಡುವುದು ನನ್ನ ರೂಢಿ, ಸಾರ್. ಮತ್ತೆ 'ತೇನೆಹಕ್ಕಿ' ಕವನದಲ್ಲಿ 'ಮೇಲೆ ನೋಡೆ ಬರಿಯ ಬಾನು ಕಾಣೆ ನೀನು ಹಕ್ಕಿಯೇ' ಎಂದು ಮುಂತಾಗಿ ಕವಿಯ ಕೊರಗೂ ಅಲ್ಲಿದೆಯಲ್ಲವೆ? ಇದಕ್ಕಾಗಿ ನನ್ನ ಧಾಟಿಯಲ್ಲಿ ಕರುಣದ ಛಾಯೆಯಿದೆ ಎಂದೆ. ಅದಕ್ಕೆ ಅವರು, "ಸರಿ, ಕೆಲವೆಡೆಗಳಲ್ಲಿ ಉತ್ಸಾಹದ ಭಾವವೂ ಇದೆಯಲ್ಲವೆ? ಇರಲಿ, ರಾಗಜ್ಞಾನವನ್ನು ಅರಿತು ಹಾಡಿದರೆ ಚೆನ್ನಲ್ಲವೆ?" ಎಂದು ಉಪದೇಶಿಸಿ ನನ್ನ ಬೆನ್ನು ತಟ್ಟಿ ಕಳಿಸಿದರು. ವಿ.ಸೀ. ಯವರ ಸ್ವಭಾವ ಸಹಜ ಸಹೃದಯತೆಯನ್ನೂ ನನ್ನಂಥ ವಿದ್ಯಾರ್ಥಿಗಳನ್ನು ಹತ್ತಿರ ಕರೆದು ಮಾತಾಡಿಸಿ ತಿಳಿಹೇಳಿ ತಿದ್ದುವ ಕಳಕಳಿಯನ್ನೂ ನಾನು ಕಂಡುದು ಆಗಲೇ.

ಇದಕ್ಕಿಂತ ಹೆಚ್ಚಾಗಿ ವಿ.ಸೀ. ಯವರ ನಿಕಟ ಸಾನ್ನಿಧ್ಯದ ಭಾಗ್ಯ ನನಗಿರಲಿಲ್ಲವಲ್ಲ

ಎಂಬ ಕೊರಗು ನನಗೆ. ನನ್ನ ಆತ್ಮೀಯ ಮಿತ್ರರಾಗಿದ್ದ ಪಿ. ವಿ. ಜೋಶಿ, ವಿ. ಎಂ. ಇನಾಂದಾರ್, ರಾವ್ ಬಹದ್ದೂರ್ (ಆರ್. ಬಿ. ಕುಲಕರ್ಣಿ), ಎಸ್ಕೆ, ಎಚ್. ಕೆ. ರಂಗನಾಥ್ ಮುಂತಾದವರು ಅವರ ಸ್ನೇಹದ ಸವಿಯುಂಡುದನ್ನು ನಾನು ಬಲ್ಲೆ. ನಾನು ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ವರ್ಗವಾಗಿ ಬಂದುದು ೧೯೬೧ರಲ್ಲಿ. ಆಗ ಕನ್ನಡ ವಿಭಾಗದ ಮುಖ್ಯಸ್ಥರು ಜಿ.ಪಿ. ರಾಜರತ್ನಂ ಆಗಿದ್ದರು. ವಿ.ಸೀ.ಯವರು ಇದೇ ಸ್ಥಾನದಿಂದ ೧೯೫೫ರಲ್ಲಿ ನಿವೃತ್ತರಾದುದನ್ನು ಅವರಿಂದ ಕೇಳಿ ತಿಳಿದಿದ್ದೆ. ಆಗ ಬೆಂಗಳೂರಲ್ಲಿ ನನ್ನ ವಾಸ ಈಗಿನಂತೆಯೆ ರಾಜಾಜಿನಗರದ ಒಂದನೆಯ ಬ್ಲಾಕಿನಲ್ಲಿ, ವಿ.ಸೀ.ಯವರು ಚಾಮರಾಜಪೇಟೆಯಲ್ಲಿ. ಆಗಾಗ ಕನ್ನಡ ಸಾಹಿತ್ಯ ಪರಿಷತ್ತಿನ ಸಭೆಗಳಲ್ಲಿ ಇತರ ಕಡೆಗಳಲ್ಲಿ ಅವರನ್ನು ಕಾಣುತ್ತಿದ್ದೆ. ಆಗ ಅವರು ಅನೇಕ ಸಾಹಿತ್ಯ ಕಾರ್ಯಕಲಾಪಗಳಲ್ಲಿ ತೊಡಗಿರುತ್ತಿದ್ದರು.

೧೯೬೩ರಲ್ಲಿ ರಂ. ಶ್ರೀ ಮುಗಳಿಯವರು ಮತ್ತು ನಾನು ಹಲಸಂಗಿಗೆ ಒಂದು ಕಾರ್ಯಕ್ರಮಕ್ಕೆಂದು ಹೋಗುವ ಮುನ್ನ, ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದ ವಿ.ಸೀ. ಯವರನ್ನು ಕಾಣಲು ಅವರ ಮನೆಗೆ ಹೋಗಿದ್ದೆವು. ಭೆಟ್ಟಿಯಾಗಿ ಕೈಮುಗಿದಾಗ ಬನ್ನಿ ಕುಳಿತುಕೊಳ್ಳಿ ಎಂದು ಹೇಳಿ ಕ್ಷೇಮ ಸಮಾಚಾರ ವಿಚಾರಿಸಿದರು. ಮೊಗದ ಮೇಲೆ ಮುಗುಳು ನಗೆಯಿತ್ತು. ಅವರು ಹೆಚ್ಚು ಮಾತಾಡಲಾರದಾಗಿದ್ದರು. ಕೆಲಹೊತ್ತು ಹತ್ತಿರ ಕುಳಿತು ಬೇಗ ಗುಣವಾಗಲೆಂದು ಹಾರೈಸಿ ಹೊರಗೆ ಬಂದೆವು. ಅಲ್ಲಿ ಅವರ ಮಕ್ಕಳು ಭೆಟ್ಟಿಯಾಗಿದ್ದರು. "He is sinking day by day" ಎಂದು ಅವರು ಹೇಳಿದ್ದು ನನಗೆ ನೆನಪಿದೆ. ಮನಸ್ಸಿಗೆ ವ್ಯಥೆಯಾಯಿತು. ಹಲಸಂಗಿಯಿಂದ ಮರಳಿದಾಗ ಅವರ ನಿಧನದ ವಾರ್ತೆ ತಿಳಿಯಿತು. ಸಾವಿರಾರು ಜನ ಆತ್ಮೀಯರನ್ನು, ಸ್ನೇಹಿತರನ್ನು, ಅಭಿಮಾನಿಗಳನ್ನು, ಆಪ್ತೇಷ್ಟರನ್ನು ಅಗಲಿ ಹೋಗಿದ್ದರು — ಸಾವಿರದ ನೆನಪನುಳಿಸಿ!

ವಿ.ಸೀ. As ವಿ.ಸೀ.

ಕೌಲಗಿ ಶೇಷಾಚಾರ್

ನಾನು ಮೊಟ್ಟ ಮೊದಲು ವಿ. ಸೀತಾರಾಮಯ್ಯನವರನ್ನು ನೋಡಿದ್ದು ೧೯೨೫ನೆ ಇಸವಿಯಲ್ಲಿ. ಆಗ ನಾನು ಹೈಸ್ಕೂಲ್ ವಿದ್ಯಾರ್ಥಿ. ಒಂದು ಸಂಜೆ ನನ್ನ ಮಿತ್ರನೊಡನೆ ರಸ್ತೆಯಲ್ಲಿ ಹೋಗುತ್ತಿದ್ದಾಗ ದೂರದಿಂದ ಬರುತ್ತಿದ್ದ ವ್ಯಕ್ತಿಯನ್ನು ತೋರಿಸಿ 'ಅವರೇ ಸೀತಾರಾಮಯ್ಯನವರು, ಕನ್ನಡ ಕವಿಗಳು, ಶಾರದಾ ವಿಲಾಸ ಹೈಸ್ಕೂಲಿನಲ್ಲಿ ಉಪಾಧ್ಯಾಯರು' ಎಂದು ನನ್ನ ಮಿತ್ರ ತಿಳಿಸಿದ. ಮತ್ತೆ ಅವರನ್ನು ನೋಡಿದ್ದು ೨೦ ವರ್ಷಗಳ ನಂತರ. ನನ್ನ ಸಹಪಾಠಿ ಮತ್ತು ಮಿತ್ರ ಎಸ್. ಎಸ್. ರಾಘವಾಚಾರ್ಯರು ವಿಶ್ವವಿದ್ಯಾನಿಲಯದ ತತ್ತ್ವ ಶಾಸ್ತ್ರ ವಿಭಾಗದಲ್ಲಿ ಉಪನ್ಯಾಸಕರಾಗಿದ್ದರು. ಅವರನ್ನು ಕಾಣಲು ಪದೇ ಪದೇ ಮಹಾರಾಜಾ ಕಾಲೇಜಿಗೆ ಹೋಗುತ್ತಿದ್ದೆ. ಒಮ್ಮೆ ನನ್ನ ಮಿತ್ರರೊಡನೆ ಮಾತನಾಡುತ್ತಿದ್ದಾಗ ವಿ.ಸೀ. ಅವರು (ಆಗ ಅವರು ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು) ನನ್ನ ಮಿತ್ರರ ಯೋಗ ಕ್ಷೇಮವನ್ನು ವಿಚಾರಿಸಿ, ನನ್ನನ್ನು ನೋಡಿ 'ಇವರ್ಯಾರು?' ಎಂದರು. ನನ್ನ ಪರಿಚಯವಾದ ಮೇಲೆ ವಿ.ಸೀ. 'ನೀವು ಸಂಸ್ಕೃತವನ್ನು ಅಭ್ಯಾಸ ಮಾಡಿದ್ದೀರಿ. ಕನ್ನಡವನ್ನು ತಿಳಿದವರಾಗಿದ್ದೀರಿ. ನಿಮ್ಮಂಥವರು ಕನ್ನಡಕ್ಕೆ ಸಹಾಯ ಮಾಡಬಾರದೆ?' ಎಂದರು. ಆಗ ಅವರು ಪ್ರಬುದ್ಧ ಕರ್ನಾಟಕದ ಸಂಪಾದಕರಾಗಿದ್ದರು. ಅದಕ್ಕೆ ಲೇಖನವೊಂದನ್ನು ಬರೆದು ಕೊಡಿ ಎಂದು ಹೇಳಿದಾಗ 'ನಾನು ಈವರೆಗೆ ಲೇಖನವನ್ನು ಬರೆದಿಲ್ಲ. ನಿಮಗಾಗಿ ಬರೆದು ಕೊಡುತ್ತೇನೆ. ಅದು ನಿಮಗೆ ಒಪ್ಪಿಕೆಯಾದರೆ ಸ್ವೀಕರಿಸಿ' ಎಂದೆ. ಅದಕ್ಕೆ ಅವರು 'ಮೊದಲು ಬರೆದು ಕೊಡಿ, ಆಮೇಲೆ ಬಾಕಿ ವಿಚಾರ' ಎಂದು ಹೇಳಿ ಹೊರಟು ಹೋದರು.

ಮಹಾಮಹೋಪಾಧ್ಯಾಯ ಡಾ. ಪಿ. ವಿ. ಕಾಣೆ ಅವರು ಬರೆದಿರುವ 'ಹಿಸ್ಟರಿ ಆಫ್ ಸ್ಯಾನ್ಸ್‌ಕ್ರಿಟ್ ಪೊಯೆಟಿಕ್ಸ್' ಎಂಬ ಗ್ರಂಥದಿಂದ 'ರಸ ಸಂಪ್ರದಾಯ'ದ ಭಾಗವನ್ನು ಅನುವಾದ ಮಾಡಿ ವಿ.ಸೀ. ಅವರಿಗೆ ಕೊಟ್ಟೆ. ಅದನ್ನು ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟಿಸಿಯೇ ಬಿಟ್ಟರು. ಅದರಿಂದ ನನ್ನಲ್ಲಿ ಆತ್ಮವಿಶ್ವಾಸವು ಮೂಡಿ ಬಂದು ಕಾಣೆಯವರ ಪುಸ್ತಕವನ್ನು ಅನುವಾದ ಮಾಡಿ 'ಅಲಂಕಾರ ಶಾಸ್ತ್ರ' ಎಂಬ ಹೆಸರಿನಲ್ಲಿ ಪ್ರಕಟಿಸಿದೆ. ಈ ಪುಸ್ತಕಕ್ಕೆ ಮೈಸೂರು ವಿಶ್ವವಿದ್ಯಾನಿಲಯದಿಂದ ೨೫೦ ರೂಪಾಯಿಗಳ ಸಂಭಾವನೆ ದೊರಕ್ಕಿದ್ದಲ್ಲದೆ (ಇದಕ್ಕೆ ಕಾರಣ ನನ್ನ ಮಿತ್ರ ಎಂ. ಪಿ. ಎಲ್. ಶಾಸ್ತ್ರಿಗಳು) ಮದರಾಸ್

(ಈಗ ಚಿಕ್ಕ) ವಿಶ್ವವಿದ್ಯಾನಿಲಯದ ಕನ್ನಡ ವಿದ್ವಾನ್ ಪರೀಕ್ಷೆಗೆ ಇದನ್ನು ಪಠ್ಯ ಪುಸ್ತಕವನ್ನಾಗಿ ಆರಿಸಲಾಗಿತ್ತು. ಪರರಲ್ಲಿರುವ ಗುಣವನ್ನು ಗುರುತಿಸಿ, ಅವರಿಂದ ಒಳ್ಳೆಯ ಕೆಲಸವನ್ನು ಮಾಡಿಸುವ ಸಾಮರ್ಥ್ಯವನ್ನು ವಿ.ಸೀ. ಮೈಗೂಡಿಸಿಕೊಂಡಿದ್ದರು. ನಾನು ಬರುಬರುತ್ತಾ ಅವರಿಗೆ ತೀರ ಹತ್ತಿರವಾದೆ. ಮುಕ್ತ ಮನಸ್ಸಿನಿಂದ ಆತ್ಮೀಯತೆಯಿಂದ ನನ್ನಲ್ಲಿ ಮಾತನಾಡುತ್ತಿದ್ದರಲ್ಲದೆ ತಮ್ಮ ಜೀವನದ ಅನೇಕ ವಿಚಾರಗಳನ್ನು ಹೇಳುತ್ತಿದ್ದರು.

ಮೊದಲಿಗೆ ಅವರ ವಾಸ ಬೆಂಗಳೂರಿನಲ್ಲಿ. ಅಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮುಗಿಸಿ ಕಾಲೇಜು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದರು. ಚೌಬೀನೆ ವ್ಯಾಪಾರಿಗಳಾಗಿದ್ದ ನೀಲಕಂಠರಾಯರೆಂಬುವರು ವಿ.ಸೀ.ಗೆ ಊಟವಸತಿಗಳಿಗೆ ಆಶ್ರಯವನ್ನು ನೀಡಿದರು. ನೀಲಕಂಠರಾಯರ ಪತ್ನಿ ವಿ.ಸೀ.ಗೆ ತೋರಿದ ವಾತ್ಸಲ್ಯದ ಬಗೆಯನ್ನು ನನ್ನಲ್ಲಿ ಹೇಳಿ ಕಣ್ಣೀರು ಸುರಿಸಿದ್ದುಂಟು. ವಿ.ಸೀ. ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಕಾಲದಲ್ಲಿ ಪ್ರತಿ ಭಾನುವಾರ ಸಂಜೆ ಅವರ ಮನೆಗೆ ಹೋಗುತ್ತಿದ್ದೆ. ಆಗ ರಾಳ್ಳಪಲ್ಲಿ ಅನಂತಕೃಷ್ಣಶರ್ಮಾ ಮತ್ತು ಕೆ. ವಿ. ರಾಘವಾಚಾರ್ ಬರುತ್ತಿದ್ದರು. ನಾವೆಲ್ಲರೂ ಕೂಡಿ ಕುಕ್ಕರಹಳ್ಳಿ ಕೆರೆಯನ್ನು ಸುತ್ತು ಹಾಕಿ ಬರುತ್ತಿದ್ದೆವು. ಉತ್ತಮ ಮಟ್ಟದ ಚರ್ಚೆಯಿಂದ ನಮ್ಮ ನಡಿಗೆ ಸಾಗುತ್ತಿತ್ತು. ನನ್ನ ಪಾಲಿಗೆ ಅವು ಸುದಿನಗಳಾಗಿದ್ದುವು.

ವಿ.ಸೀ. ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಎನ್. ಎಸ್. ಸುಬ್ಬರಾಯರು ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಉತ್ತಮ ದರ್ಜೆಯ ಎಂ.ಎ. ಪದವೀಧರರಾಗಿದ್ದರು. ಅತ್ಯಂತ ಮೇಧಾವಿಯೆಂದು ಪ್ರಸಿದ್ಧರಾಗಿದ್ದರು. ವಿ.ಸೀ. ಇವರ ಅಚ್ಚು ಮೆಚ್ಚಿನ ಶಿಷ್ಯ. ಬಿ.ಎ. ಪರೀಕ್ಷೆಯನ್ನು ಮುಗಿಸಿ ವಿ.ಸೀ. ಬೆಂಗಳೂರಿಗೆ ಹೋದರು. ಒಮ್ಮೆ ಸುಬ್ಬರಾಯರು ಬೆಂಗಳೂರಿಗೆ ಬಂದಿದ್ದಾಗ ಅವರು ಮೈಸೂರಿಗೆ ಹೊರಡುವ ದಿನ ರೈಲ್ವೆ ನಿಲ್ದಾಣದಲ್ಲಿ ಭೇಟಿ ಮಾಡಲು ವಿ.ಸೀ. ಹೋದರು. ಯೋಗಕ್ಷೇಮ ವಿಚಾರಿಸಿ ಪರೀಕ್ಷೆ ಕುರಿತು ಮಾತನಾಡಿ ಬೀಳ್ಕೊಡುವಾಗ ಸುಬ್ಬರಾಯರು ವಿ.ಸೀ. ಜೇಬಿನಲ್ಲಿ ಎರಡು ಸಾವರಿನ್ (ಚಿನ್ನ) ನಾಣ್ಯಗಳನ್ನು ಹಾಕಿ ಶುಭವನ್ನು ಕೋರಿದರು. ಸುಬ್ಬರಾಯರಿಗೆ ವಿ. ಸೀ. ಅವರನ್ನು ವಿಶ್ವವಿದ್ಯಾನಿಲಯಕ್ಕೆ ಸೇರಿಸಬೇಕೆಂಬ ಹಂಬಲವಿತ್ತು. ಅದಕ್ಕಾಗಿ ಮಹಾಪ್ರಯತ್ನವನ್ನು ಮಾಡಿ ಸಫಲರಾದರು. ವಿ. ಸೀ. ಅವರಲ್ಲಿದ್ದ ಕನ್ನಡ ಪ್ರತಿಭೆಯನ್ನು ಗುರುತಿಸಿ ಅದನ್ನೇ ಬಂಡವಾಳವನ್ನಾಗಿಟ್ಟು ಕೊಂಡು, ಕನ್ನಡದಲ್ಲಿ ಎಂ. ಎ. ಪದವಿಯಿಲ್ಲದಿದ್ದರೂ ಸರ್ಕಾರಕ್ಕೆ ವಿಶೇಷವಾದ ಶಿಫಾರಸನ್ನು ಮಾಡಿ ಕನ್ನಡ ವಿಭಾಗದಲ್ಲಿ ಉಪನ್ಯಾಸಕ ಹುದ್ದೆಯನ್ನು ದೊರಕಿಸಿಕೊಟ್ಟರು. ಸುಬ್ಬರಾಯರ ಮಾತಿಗೆ ಆಗ ಸರ್ಕಾರದಲ್ಲಿ ತುಂಬ ಬೆಲೆ ಇದ್ದ ಕಾಲ. ಹೀಗೆ ವಿ. ಸೀ. ಶಾರದಾ ವಿಲಾಸ್ ಹೈಸ್ಕೂಲಿನ ಹುದ್ದೆಯನ್ನು ಬಿಟ್ಟು ವಿಶ್ವವಿದ್ಯಾನಿಲಯವನ್ನು ಸೇರಿದರು.

ಪರರ ಕಷ್ಟದಲ್ಲಿ ನೆರವಿಗೆ ನಿಂತು ತಾವೇ ನಷ್ಟವನ್ನು ಅನುಭವಿಸಿದ್ದೂ ಉಂಟು. ಜೀವನದ ನಾನಾ ಮುಖಗಳನ್ನು ಕಂಡು ಸಾಕಷ್ಟು ಅನುಭವಗಳನ್ನು ಪಡೆದಿದ್ದ ವಿ. ಸೀ. ಅವರಲ್ಲಿ ಯಾರಾದರೂ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡಾಗ ಅವಕ್ಕೆ ಉಪಯುಕ್ತವೂ ಮತ್ತು ಸಮಯೋಚಿತವೂ ಆದ ಪರಿಹಾರವನ್ನು ಅವರು ಸೂಚಿಸುತ್ತಿದ್ದರು. ನನ್ನದೇ ಒಂದು ಅನುಭವವನ್ನು ತಿಳಿಸುತ್ತೇನೆ.

೧೯೫೦ನೆ ಇಸವಿಯ ಸಮಯ. ಉಡುಪಿ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಲ್ ಹುದ್ದೆ ತೆರವಾಗಿತ್ತು. ಉಡುಪಿಯಲ್ಲಿದ್ದ ನನ್ನ ಮಿತ್ರರು ನನ್ನ ಹೆಸರನ್ನು ನನಗೆ ತಿಳಿಸದೆ ಆಡಳಿತ ಮಂಡಳಿಗೆ ಸೂಚಿಸಿದ್ದರು. ಕೂಡಲೆ ಹುದ್ದೆಯನ್ನು ಸ್ವೀಕರಿಸುವಂತೆ ಆಹ್ವಾನ ಬಂತು. ಆದರೆ ನನಗೆ ಅಲ್ಲಿಗೆ ಹೋಗಲು ಉತ್ಸಾಹವಿರಲಿಲ್ಲ. ಆದರೂ ವಿ. ಸೀ. ಯನ್ನು ಭೇಟಿ ಮಾಡಿ ಅವರ ಸಲಹೆಯನ್ನು ಕೇಳಿದೆ. 'ಮೊದಲು ಒಪ್ಪಿಕೊಳ್ಳಿ. ಈ ಸಂದರ್ಭವನ್ನು ಬಿಡಬೇಡಿ. ಒಂದು ದೊಡ್ಡ ವಿದ್ಯಾಸಂಸ್ಥೆ ನಿಮ್ಮ ಕೈಸೇರಲಿದೆ. ನೀವು ಸ್ವತಂತ್ರವಾಗಿರಬಹುದು. ಅಲ್ಲದೆ ಆ ಸಂಸ್ಥೆಯನ್ನು ಬೆಳಸಬಹುದು. ಸಮಾಜದಲ್ಲಿ ನಿಮ್ಮ ಪ್ರತಿಷ್ಠೆ ಹೆಚ್ಚುತ್ತದೆ. ಅಪ್ರಾರ್ಥಿತವಾಗಿ ಬಂದುದನ್ನು ಬಿಡುವುದು ವಿವೇಕವಲ್ಲ' ಎಂದು ಹೇಳಿ ನನ್ನ ಮನಸ್ಸನ್ನು ಬದಲಾಯಿಸಿದರು. ಹೊರಡುವಾಗ ಮನೆಯ ಗೇಟ್‌ವರೆಗೂ ಬಂದು 'ನೋಡಿ ನೀವು ಒಟ್ಟುಕುಟುಂಬದಲ್ಲಿ ಇದ್ದೀರಿ. ನಿಮ್ಮ ಪತ್ನಿಗೆ ಸ್ವತಂತ್ರವಾಗಿ ಸಂಸಾರ ಮಾಡಲು ಅವಕಾಶ ದೊರೆತು ನಿಮಗಿಂತಲೂ ಹೆಚ್ಚು ಆನಂದ ಪಡುತ್ತಾಳೆ. ಇದು ನಿಮ್ಮ ಮನಸ್ಸಿನಲ್ಲಿ ಇರಲಿ' ಎಂಬ ಹೃದಯಸ್ಪರ್ಶಿ ಮಾತನ್ನು ಹೇಳಿ ಶುಭವನ್ನು ಕೋರಿದರು. ಅವರ ಆಶೀರ್ವಾದವನ್ನು ಪಡೆದು ಹುದ್ದೆಗೆ ಸೇರಿದೆ. ಸಾಕಷ್ಟು ಪ್ರತಿಷ್ಠೆಯನ್ನೂ ಸಂಪಾದಿಸಿದೆ. ಅಂದಿನಿಂದ ವಿ. ಸೀ. ನನಗೆ ಪ್ರಾತಃಸ್ಮರಣೀಯರಾದರು. ನಾನು ಉಡುಪಿಯಲ್ಲಿದ್ದಾಗ ಮೂರು ಸಲ ನನ್ನಲ್ಲಿಗೆ ಬಂದಿದ್ದರು. ಸಂತೋಷ ಪಟ್ಟು ಹೋದರು.

ಹೊಸ ಹೊಸ ವಿಚಾರಗಳು ಹೊರಬಂದಾಗ, ಅವು ಯಾವುದೇ ಭಾಷೆಯಲ್ಲಿರಲಿ, ಅವನ್ನು ಹೇಗಾದರೂ ಸಂಗ್ರಹಿಸಬೇಕೆಂಬ ಪ್ರವೃತ್ತಿಯನ್ನು ವಿ.ಸೀ. ಬೆಳಸಿಕೊಂಡಿದ್ದರು. ಸುಮಾರು ೧೯೪೫ನೆ ಇಸವಿ. ಮುಂಬಯಿನ ಮರಾಠಿ ವಿದ್ವಾಂಸ ಎಂ. ಟಿ. ಪಟವರ್ಧನ್ ಎಂಬುವರು 'ಛಂದೋರಚನಾ' ಎಂಬ ವಿಮರ್ಶಾತ್ಮಕ ಪುಸ್ತಕವನ್ನು ಪ್ರಕಟಿಸಿದ್ದರು. ಅದರ ಪೀಠಿಕೆಯಲ್ಲಿ ಛಂದಃಶಾಸ್ತ್ರದ ಇತಿಹಾಸವನ್ನು ಕೊಡಲಾಗಿತ್ತು. ಅದರ ಕನ್ನಡಾನುವಾದ ವಿ. ಸೀ. ಅವರಿಗೆ ಬೇಕಿತ್ತು. ಒಮ್ಮೆ ಅವರ ಮನೆಗೆ ಹೋಗಿದ್ದಾಗ 'ಏನಪ್ಪ, ನಿಮಗೆ ಮರಾಠಿ ಭಾಷೆ ಗೊತ್ತಿದೆಯಲ್ಲವೆ? ನನಗೊಂದು ಉಪಕಾರ ಮಾಡುತ್ತೀರಾ?' ಎಂದರು. ವಿಷಯವೇನೆಂದು ಕೇಳಿದ್ದಕ್ಕೆ ಆ ಪುಸ್ತಕವನ್ನು ನನ್ನ ಕೈಯಲ್ಲಿರಿಸಿ 'ಪೀಠಿಕೆಯಲ್ಲಿರುವ ಛಂದಃಶಾಸ್ತ್ರದ ಇತಿಹಾಸಭಾಗವನ್ನು ಕನ್ನಡಿಸಿಕೊಡಿ' ಎಂದರು. ಆ ವೇಳೆಗೆ ಅವರು ಪ್ರಕಾಶಕರಿಂದ ಅನುವಾದಕ್ಕೆ ಒಪ್ಪಿಕೆಯನ್ನು ಪಡೆದುಕೊಂಡಿದ್ದರು. 'ಸರ್, ಈ ಡ್ರೈ ಸಬ್ಜೆಕ್ಟನ್ನು ಎಷ್ಟು ಜನ ಓದಬಲ್ಲರು? ಎಷ್ಟು ಜನ ಅರ್ಥ ಮಾಡಿಕೊಳ್ಳಬಲ್ಲರು?' ಎಂದು ನಾನು ಹೇಳಿದಾಗ, 'ಅಯ್ಯಾ, ನಾನು ಓದುತ್ತೇನೆ. ನನಗೆ ಬೇಕಾಗಿದೆ. ಎಂ.ಎ. ತರಗತಿಗೆ ಪಾಠ ಹೇಳುತ್ತಿದ್ದೇನೆ. ವಿಷಯಸಂಗ್ರಹ ಮಾಡಬೇಕಲ್ಲ' ಎಂದರು. ಮರುಮಾತನಾಡದೆ ಪುಸ್ತಕವನ್ನು ಸ್ವೀಕರಿಸಿ ಅವರಿಗೆ ಬೇಕಾದುದನ್ನು ಅನುವಾದ ಮಾಡಿಕೊಟ್ಟೆ. ಪ್ರಬುದ್ಧ ಕರ್ನಾಟಕದಲ್ಲಿ ಅದನ್ನು ಪ್ರಕಟಿಸಿದರು. ನಾನು ಉಡುಪಿಯಿಂದ ನಿವೃತ್ತನಾಗಿ ಮೈಸೂರಿಗೆ ಬಂದು ನೆಲಸಿದ ಮೇಲೆ ಒಂದು ದಿನ ಕನ್ನಡ ವಿದ್ವಾಂಸರಾದ ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿಯವರ ಪರಿಚಯವಾಯಿತು. ಕೂಡಲೆ ಅವರು 'ನೀವು ಪ್ರಬುದ್ಧ ಕರ್ನಾಟಕಕ್ಕೆ ಛಂದಃಶಾಸ್ತ್ರದ ಬಗ್ಗೆ ಲೇಖನವನ್ನು ಬರೆದಿದ್ದರಲ್ಲವೆ? ನಾನು ಅದನ್ನು ಓದಿದ್ದೇನೆ. ಚೆನ್ನಾಗಿದೆ'

ಎಂದರು. ಲೇಖನ ಪ್ರಕಟವಾಗಿ ಆ ವೇಳೆಗೆ ಇಪ್ಪತ್ತೈದು ವರ್ಷಗಳು ಕಳೆದಿದ್ದವು. ಆಗ ನಾನು ವಿ. ಸೀ. ಅವರಿಗೆ ಹೇಳಿದ್ದ ಮಾತು ಸುಳ್ಳಾಯಿತೆಂದು ಆನಂದಪಟ್ಟೆ.

ವಿ. ಸೀ. ಅವರಿಗೆ ವಿನಯ ಎಷ್ಟಿತ್ತೋ ಅಷ್ಟೇ ಹಿರಿಯರಲ್ಲಿ ಗೌರವಬುದ್ಧಿ ಇತ್ತು. ಡಾ. ಕಾಣೆಯವರ ಹೆಸರನ್ನು ಈ ಹಿಂದೆ ತಿಳಿಸಿದ್ದೇನೆ. ಅವರು ಮುಂಬಯಿಯಲ್ಲಿ ಜೀವನಕ್ಕಾಗಿ ವಕೀಲ್ ವೃತ್ತಿಯನ್ನು ಕೈಗೊಂಡಿದ್ದರೂ ಅವರ ಒಲವು ಅಲಂಕಾರಶಾಸ್ತ್ರ, ಧರ್ಮಶಾಸ್ತ್ರಗಳ ಕಡೆಗೇ ಹೆಚ್ಚಾಗಿತ್ತು. "ಎ ಹಿಸ್ಟರಿ ಆಫ್ ಧರ್ಮಶಾಸ್ತ್ರ" ಎಂಬ ಗ್ರಂಥವನ್ನು ಐದು ಬೃಹತ್ ಸಂಪುಟಗಳಲ್ಲಿ ಬರೆದಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲೂ ಖ್ಯಾತಿಗಳಿಸಿದ್ದ ಸಂಸ್ಕೃತ ವಿದ್ವಾಂಸರು. ನನಗೆ ಅವರ ಪರಿಚಯ ಚೆನ್ನಾಗಿತ್ತು. ೧೯೫೧ನೆ ಇಸವಿ ಮೇ ತಿಂಗಳಲ್ಲಿ ಊಟಿಗೆ ಹೋಗಲು ಮೈಸೂರಿಗೆ ಬಂದಿದ್ದರು. ನನಗೆ ಮೊದಲೇ ತಿಳಿಸಿದ್ದರಿಂದ ವಿ. ಸೀ.ಗೆ ಡಾ. ಕಾಣೆ ಬರುವ ವಿಚಾರವನ್ನು ತಿಳಿಸಿದೆ. ಅವರನ್ನು ಭೇಟಿ ಮಾಡಬೇಕೆಂಬ ಆಸೆಯನ್ನು ತಿಳಿಸಿದರು. ನಾನು ಅವರನ್ನು ಮಾಡರ್ನ್ ಹಿಂದೂ ಹೊಟೇಲಿಗೆ ಕರೆದು ಕೊಂಡು ಹೋಗಿ ಕಾಣೆಯವರಿಗೆ ವಿ. ಸೀ. ಅವರ ಪರಿಚಯವನ್ನು ಮಾಡಿಕೊಟ್ಟೆ. ಸಂಭಾಷಣೆ ಮುಗಿದ ಮೇಲೆ ವಿ. ಸೀ. ಭಾವಪರವಶರಾಗಿ ಕಾಣೆ ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡಿದರು. ಕಾಣೆ ಅವರಿಗೆ ಕಸಿವಿಸಿ ಆಯಿತು. "Professor, what are you doing? Please – please" ಎಂದು ಹೇಳುತ್ತಿರುವಾಗಲೇ "Sir, allow me to offer my respects to your great scholarship" ಎಂದು ವಿ.ಸೀ. ಹೇಳಿ ಎದ್ದರು. ಕಾಣೆ ಅವರು ವಿ.ಸೀ. ಕೈಕುಲುಕಿ, "I am happy to have met you" ಎಂದು ಬೀಳ್ಕೊಟ್ಟರು.

ವಿ.ಸೀ. ಗೆ ಸಂಗೀತದಲ್ಲಿ ತುಂಬ ಅಭಿರುಚಿ. ಅವರು ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ನಡೆದ ಒಂದು ವಿನೋದ ಪ್ರಸಂಗವನ್ನು ನನಗೆ ಹೇಳಿದ್ದರು. ಒಂದು ದಿನ ವೀಣೆ ಶೇಷಣ್ಣನವರ ಮನೆಯಲ್ಲಿ ಯಾರದೊ ತಾಫೆ, ಎಂದರೆ ಭರತನಾಟ್ಯಾಭಿನಯದ ಏರ್ಪಾಡಾಗಿತ್ತು. ಪ್ರವೇಶ ಶೇಷಣ್ಣನವರ ಆಪ್ತರಿಗೆ ಮಾತ್ರ. ಬೇರೆಯವರು ಬರದಂತೆ ಹೆಬ್ಬಾಗಿಲಲ್ಲಿ ಕಾವಲಿತ್ತು. ವಿ.ಸೀ.ಗೆ ಕಛೇರಿಗೆ ಹೋಗಲೇಬೇಕೆಂಬ ಹಟ. ಅವರು ಮತ್ತು ಅವರ ಸ್ನೇಹಿತರು ಸೇರಿ ಆ ರಾತ್ರಿ ಶೇಷಣ್ಣನವರ ಮನೆಗೆ ಬಂದರು. ಮುಂಭಾಗದಲ್ಲಿ ಏಣಿಯ ಸಹಾಯದಿಂದ ಮಹಡಿಯನ್ನು ತಲುಪಿ ಒಂದು ಮೂಲೆಯಲ್ಲಿ ಹೋಗಿ ಕುಳಿತರು. ಸ್ವಲ್ಪ ಹೊತ್ತಿನಲ್ಲಿ ಶೇಷಣ್ಣನವರು ಬಂದು ಇವರನ್ನು ನೋಡಿ 'ನೀವು ಯಾರು, ಹೇಗೆ ಬಂದಿರಿ?' ಎಂದು ಪ್ರಶ್ನಿಸಿದರು. ವಿದ್ಯಾರ್ಥಿಗಳು ತಾವು ಬಂದ ರೀತಿಯನ್ನು ತಿಳಿಸಿದಾಗ ಶೇಷಣ್ಣನವರು ಕೋಪದಿಂದ 'ಈಗ ಸುಬ್ಬರಾಯ (ಪ್ರೊ. ಎನ್. ಎಸ್. ಸುಬ್ಬರಾಯರು) ಬರ್ತಾನೆ, ನೀವು ಮಾಡಿದ್ದನ್ನ ಹೇಳ್ತೀನಿ.' ಎಂದು ಗದರಿಸಿ ಹೋದರು. ವಿದ್ಯಾರ್ಥಿಗಳಿಗೆ ಒಂದು ಕಡೆ ಭಯ. ಸುಬ್ಬರಾಯರು ತುಂಬ ಶಿಸ್ತಿನವರು. ಮತ್ತೊಂದು ಕಡೆ ನಾಟ್ಯದ ಆಕರ್ಷಣೆ. ಈ ದ್ವಂದ್ವದಲ್ಲಿ ತೊಳಲಾಡುತ್ತಾ ಅಲ್ಲಿಯೇ ಉಳಿದು ನಾಟ್ಯವನ್ನು ಸವಿದರು. ಮುಗಿದ ಮೇಲೆ ಸುಬ್ಬರಾಯರು ತಮ್ಮ ವಿದ್ಯಾರ್ಥಿಗಳನ್ನು ಗುರುತಿಸಿ, 'I am glad you are all interested in Art' ಎಂದು ಹೇಳಿ ಹೊರಟು ಹೋದರು.

ಶೇಷಣ್ಣನವರಿಂದ ಯಾವ ಪುಕಾರೂ ಬರಲಿಲ್ಲವೆಂದು ವಿದ್ಯಾರ್ಥಿಗಳ ಮನಸ್ಸು ಹಗುರವಾಯಿತು.

ವಿ.ಸೀ.ಯ ಅತಿಥಿ ಸತ್ಕಾರವಂತೂ ವಿಶೇಷ ರೀತಿಯದು. ಅವರಲ್ಲಿ ಯಾರು ಹೋದರೂ ಬಹಾಪಾನ ಮಾಡದೆ ಬರಲು ಸಾಧ್ಯವೇ ಇರಲಿಲ್ಲ. ಒಮ್ಮೆ ಪಂಚೆ ಮಂಗೇಶರಾಯರು ಇವರಲ್ಲಿ ಅತಿಥಿಗಳಾಗಿ ಬಂದಿದ್ದ ಸಂದರ್ಭ. ಪಂಚೆ ಅವರಿಗೆ ಸಿಗರೇಟು ಸೇದುವ ಅಭ್ಯಾಸ. ಇದು ವಿ.ಸೀ.ಗೆ ತಿಳಿದಿತ್ತು. ಅವರು ಬರುವ ಮೊದಲೇ ಒಂದು ಉತ್ತಮ ದರ್ಜೆಯ ಸಿಗರೇಟ್ ಪ್ಯಾಕನ್ನು ಕೊಳ್ಳಲು ಅಂಗಡಿಗೆ ಹೋದರು. ಅಂಗಡಿಯವನು ಅವರನ್ನು ಬಲ್ಲವನು. ಆಶ್ಚರ್ಯದಿಂದ 'ಏನು ಸ್ವಾಮಿ, ಇದು ಯಾವಾಗಿನಿಂದ?' ಎಂದು ಪ್ರಶ್ನೆ ಮಾಡಿದ. ಆಗ ವಿ.ಸೀ. 'ನನಗಲ್ಲಪ್ಪ, ನನ್ನ ಮನೆಗೆ ಸ್ನೇಹಿತರು ಬರ್ತಾರೆ, ಅವರಿಗೆ' ಎಂದು ಹೇಳಿದರು. ಪಂಚೆಯವರಿಗೆ ಪ್ಯಾಕನ್ನು ಕೊಟ್ಟಾಗ ಸಿಟ್ಟಿನಿಂದ 'ನೀವೇಕೆ ತಂದಿರಿ? ನನಗೆ ಇದೊಂದು ಕೆಟ್ಟ ಅಭ್ಯಾಸ' ಎಂದು ಹೇಳಿ ಪ್ಯಾಕನ್ನು ಸ್ವೀಕರಿಸಿದರು. ಇದನ್ನೂ ವಿ.ಸೀ. ನನಗೆ ಹೇಳಿದ್ದರು.

ವಿ.ಸೀ. ಹಾಸ್ಯ ಪ್ರಿಯರು. ಅದರೆ ಇವರ ಹಾಸ್ಯ ಆಪ್ತರಿದ್ದಾಗ ಮಾತ್ರ ಹೊರಬರುತ್ತಿತ್ತು. ಒಮ್ಮೆ ನಾನು ಅವರೊಡನೆ ಮಾತನಾಡುತ್ತಿದ್ದಾಗ ಮಾಧ್ವರ ವಿಚಾರ ಬಂತು. ಆಗ ಅವರು 'ನೀವು ಮಾಧ್ವರು, ಪ್ರಚಂಡರು; ತರ್ಕದಿಂದ ಅದ್ವೈತವನ್ನು ಬಗೆದು ಹಾಕುತ್ತೀರಿ' ಎಂದು ಹೇಳಿ 'ಎದ್ದೆದ್ದು ಗುದ್ದಿದನು ಮಧ್ವರಾಯ' ಎಂದು ಹೇಳಿ ತಾವೂ ನಕ್ಕು ನನ್ನನ್ನೂ ನಗಿಸಿದರು.

ಬಹುಮುಖ ಪಾಂಡಿತ್ಯ, ವಿನಯ, ಸಹೃದಯತೆ, ರಸಿಕತೆ, ಸಹಿಷ್ಣುತೆ, ಸೌಜನ್ಯ, ಆರ್ಜವ, ಪರೋಪಕಾರ, ಹಿರಿಯರಲ್ಲಿ ಗೌರವ — ಇವೇ ಮುಂತಾದ ಸುಸಂಸ್ಕೃತನಿಗೆ ಇರಬೇಕಾದ ಆದರ್ಶಗುಣಗಳು ವಿ. ಸೀ.ಯಲ್ಲಿ ಎದ್ದು ಕಾಣುತ್ತಿದ್ದುವು. ಅವರ ಆಚಾರ ವಿಚಾರ ಉಚ್ಚಾರ ಎಲ್ಲವೂ ಉದಾತ್ತವಾದುವು. ಇದನ್ನು ಬರೆಯುವಾಗ ತತ್ತ್ವಜ್ಞಾನಿಯೂ ವೃತ್ತಿಯಲ್ಲಿ ವೈದ್ಯನೂ ಮತ್ತು ಸಮಾಜ ಸೇವಕನೂ ಆಗಿದ್ದ ಡಾ. ಆಲ್ಬರ್ಟ್ ಸ್ವೀಷ್ಟ್ಜರ್ ಮಹನೀಯನ ಮಾತು ನೆನಪಿಗೆ ಬರುತ್ತದೆ. "Man belongs to Man. Fortunate are those who find some good cause in which they can act as a man to other men. Their own humanity will be enriched." ಅಂಥ 'ಫಾರ್ಚ್ಯುನೇಟ್' (ಅದೃಷ್ಟವಂತ) ಗುಂಪಿಗೆ ಸೇರಿದವರಾಗಿದ್ದರು ವಿ.ಸೀ.

ನನ್ನ ಜೀವನದಲ್ಲಿ ನೆಲೆ ಕಂಡುಕೊಳ್ಳುವಂತೆ ಮಾರ್ಗದರ್ಶನ ನೀಡಿದ ಪ್ರಾತಃ ಸ್ಮರಣೀಯ ಉದಾತ್ತ ಚೇತನ ವಿ. ಸೀ. ಗೆ ಕವಿ ವಾಣಿಯನ್ನಾಶ್ರಯಿಸಿ ನನ್ನ ನಮನವನ್ನು ಸಲ್ಲಿಸುತ್ತೇನೆ:

ವದನಂ ಪ್ರಸಾದಸದನಂ ಸದಯಂ ಹೃದಯಂ ಸುಧಾಮುಚೋ ವಾಚಃ।
ಕರಣಂ ಪರೋಪಕರಣಂ ಏಷಾಂ ಕೇಷಾಂ ನ ತೇ ವಂದ್ಯಾಃ ॥

ಮಾರ್ಗದರ್ಶನ ಮಾಡಿದ ಹಿರಿಯರು

ಜಿ. ವೆಂಕಟಸುಬ್ಬಯ್ಯ

ಸುಮಾರು ೧೯೫೬ನೆಯ ಇಸವಿಯಲ್ಲಿ ರಷ್ಯಾದೇಶದ ಕೆಲವರು ಪ್ರಸಿದ್ಧ ಲೇಖಕರೂ ಕಲೆಗಾರರೂ ಭಾರತಕ್ಕೆ ಒಂದು ಸಾಂಸ್ಕೃತಿಕ ನಿಯೋಗದಲ್ಲಿ ಆಗಮಿಸಿದ್ದರು. ಅವರೆಲ್ಲರೂ ಬೆಂಗಳೂರಿಗೆ ಬಂದಾಗ ಅವರನ್ನು ಆಹ್ವಾನಿಸಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಸತ್ಕಾರ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಆ ಸಮಯದಲ್ಲಿ ಪರಿಷತ್ತಿನ ಅಧ್ಯಕ್ಷರಾಗಿ ಶ್ರೀ ಎ. ಎನ್. ಮೂರ್ತಿರಾಯರು, ಕಾರ್ಯದರ್ಶಿಯಾಗಿ ನಾನು ಕಾರ್ಯವನ್ನು ನಿರ್ವಹಿಸುತ್ತಿದ್ದೆವು. ಈ ಸತ್ಕಾರ ಸಮಾರಂಭದ ದಿವಸ ಮೂರ್ತಿರಾಯರು ಊರಿನಲ್ಲಿರುವುದು ಸಾಧ್ಯವಾಗದೆ ಹೋದುದರಿಂದ, ಅವರ ಪರವಾಗಿ ರಷ್ಯಾ ಸಾಂಸ್ಕೃತಿಕ ನಿಯೋಗದ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ನಡೆಸುವ ಹಿರಿತನವನ್ನು ವಿ. ಸೀತಾರಾಮಯ್ಯನವರಿಗೆ ವಹಿಸಲಾಯಿತು. ಅವರು ಕಾರ್ಯಸಮಿತಿಯ ಪ್ರಮುಖ ಸದಸ್ಯರಾಗಿದ್ದರು. ಸಭೆಗೆ ಬೆಂಗಳೂರಿನ ಹಿರಿಯ ಸಾಹಿತಿಗಳೂ ಕಲೆಗಾರರೂ ಬಂದು ಸಭೆಯ ಗೌರವವನ್ನು ಹೆಚ್ಚಿಸಿದ್ದರು. ಅಂದು ವಿ. ಸೀತಾರಾಮಯ್ಯನವರು ಮಾಡಿದ ಭಾಷಣ ತುಂಬ ಪ್ರಭಾವಶಾಲಿಯಾಗಿತ್ತು. ಕರ್ನಾಟಕದ ಬಗ್ಗೆ, ಅದರ ಸಾಹಿತ್ಯ ಮತ್ತು ಸಂಸ್ಕೃತಿಗಳ ಬಗ್ಗೆ ಸಂಗ್ರಹವಾದರೂ ಸಾರವತ್ತಾದ ವಿವರಗಳನ್ನು ನೀಡಿ, ಭಾರತದ ಮತ್ತು ರಷ್ಯಾದೇಶದ ವಿಸ್ತಾರವನ್ನು ಹೋಲಿಸಿ ರಷ್ಯಾದೇಶದ ವಿಸ್ತಾರವನ್ನು ಹೊಗಳಿ, ಕೊನೆಯಲ್ಲಿ "But in point of patriotism we are second to none" ಎಂದು ಘೋಷಿಸಿದರು. ಈ ಮಾತಿಗೆ ಸಭೆ ಎರಡು ನಿಮಿಷದ ಚಪ್ಪಾಳೆ ಹಾಕಿ ಪ್ರೋತ್ಸಾಹ ನೀಡಿತು. ರಷ್ಯಾದೇಶದ ಸಾಂಸ್ಕೃತಿಕ ನಿಯೋಗದ ಪ್ರಮುಖರು ತಮ್ಮ ಉತ್ತರದಲ್ಲಿ "That was a very informative and eloquent speech" ಎಂದು ಹಾರ್ದಿಕವಾದ ಮೆಚ್ಚುಗೆಯನ್ನು ಸೂಚಿಸಿದರು. ಸಭೆ ಮತ್ತೆ ಚಪ್ಪಾಳೆಯ ಸುರಿಮಳೆಯನ್ನು ಸುರಿಸಿತು. ಸಮಾರಂಭವು ತುಂಬ ಯಶಸ್ವಿಯಾಯಿತು. ಅಂದು ಸಭೆಯಲ್ಲಿದ್ದ ಅ. ನ. ಕೃಷ್ಣರಾಯರು "ಸಾಂಸ್ಕೃತಿಕ ನಿಯೋಗಕ್ಕೆ ಇಂಥ ಸತ್ಕಾರವೂ ಮಾತುಗಾರಿಕೆಯೂ ಬೇಕು" ಎಂದು ಹೃದಯ ತುಂಬಿ ಹೊಗಳಿದರು. ಸಭೆಯಾದ ಬಳಿಕ ಅನೇಕ ದಿನಗಳ ತನಕ ಆ ಸಭೆಯ ಏರ್ಪಾಡಿನ ಮತ್ತು ವಿ. ಸೀತಾರಾಮಯ್ಯನವರ ಭಾಷಣದ ಬಗ್ಗೆ ಸಾರ್ವಜನಿಕರು ಮೆಚ್ಚಿಗೆಯ ಮಾತು

ಗಳನ್ನಾಡುತ್ತಿದ್ದರು. ವಿ. ಸೀತಾರಾಮಯ್ಯನವರ ಭಾಷಣದ ಕಲೆಗಾರಿಕೆಯನ್ನೂ ಭಾಷೆಯ ಶೈಲಿಯ ಸೊಗಸನ್ನೂ ವಿಷಯಸಂಗ್ರಹದ ವ್ಯಾಪ್ತಿಯನ್ನೂ ನೆನಪಿಡಲು ಅಂದಿನ ಸಭೆ ಒಂದು ಸಾರ್ಥಕ ದೃಷ್ಟಾಂತವಾಗಿತ್ತು.

ಆ ಬಳಿಕ ನಡೆದ ಇಷ್ಟೇ ಪ್ರಭಾವವನ್ನು ಬೀರಿದ ಮತ್ತೊಂದು ಸಭೆಯೂ ನೆನಪಿಗೆ ಬರುತ್ತದೆ. ಇದು ನಡೆದ ವರ್ಷದ ನೆನಪಿಲ್ಲ. ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಸಿದ್ಧ ವಿಮರ್ಶಕರಾಗಿದ್ದ ಐ. ಎ. ರಿಚರ್ಡ್ಸ್ ಅವರು ಭಾರತಕ್ಕೆ ಬಂದಿದ್ದರು. ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ರಿಚರ್ಡ್ಸ್ ಅವರ ಭಾಷಣವನ್ನು ಏರ್ಪಡಿಸಲಾಗಿತ್ತು. ಅಂದಿನ ಸಭೆಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದವರು ಸೀತಾರಾಮಯ್ಯನವರು. ಅಂದು ರಿಚರ್ಡ್ಸ್ ಅವರು ಸೊಗಸಾಗಿ ಸಾಹಿತ್ಯವಿಮರ್ಶೆಯ ಸೂತ್ರಗಳನ್ನು ನಿರೂಪಿಸಿದರು. ವಿ. ಸೀತಾರಾಮಯ್ಯನವರ ಅಧ್ಯಕ್ಷ ಭಾಷಣವೂ ಅಷ್ಟೇ ಪ್ರಭಾವಯುತವಾಗಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಬಹು ಮೆಚ್ಚಿಗೆಗೆ ಪಾತ್ರವಾಯಿತು.

ವಿ. ಸೀ. ಯವರ ಭಾಷಣವಿದೆಯೆಂದರೆ ಜನ ಸದಾ ತುಂಬಿರುತ್ತಿದ್ದರು. ಬಿ. ಎಂ. ಶ್ರೀಕಂಠಯ್ಯನವರು ಕನ್ನಡದ ಹಿರಿಮೆಯ ಮತ್ತು ಕರ್ನಾಟಕದ ಏಕೀಕರಣದ ಅಗತ್ಯದ ವಿಷಯವಾಗಿ ಪ್ರಚಾರಮಾಡುತ್ತಿದ್ದ ಕಾಲ ಅದು. ಅನೇಕ ಯುವಕರು ಈ ಕಾರ್ಯದಲ್ಲಿ ಭಾಗವಹಿಸಬೇಕೆಂಬುದು ಅವರ ಆಶಯವಾಗಿತ್ತು. ಆದರೆ ಕನ್ನಡದ ಅಂದಿನ ಯುವ ವಿದ್ವಾಂಸರಲ್ಲಿ ಅಷ್ಟು ಆಸಕ್ತಿ ಕಂಡು ಬರಲಿಲ್ಲ. ವಿ.ಸೀ.ಯವರು ಮಾತ್ರ ತಮ್ಮ ಉಪಾಧ್ಯಾಯರಾದ ಬಿ.ಎಂ.ಶ್ರೀ.ಯವರ ಮಾತನ್ನು ಅಕ್ಷರಶಃ ಪಾಲಿಸಿದರು. ಕರ್ನಾಟಕದ ಉದ್ದಗಲಕ್ಕೆ ವಿ.ಸೀ.ಯವರಷ್ಟು ಪ್ರವಾಸ ಮಾಡಿದವರಾಗಲಿ, ಭಾಷಣ ಮಾಡಿದವರಾಗಲಿ ಬಿ.ಎಂ.ಶ್ರೀ.ಯವರ ಶಿಷ್ಯರಲ್ಲಿ ಬೇರೆ ಯಾರೂ ಇಲ್ಲವೆಂದೇ ಹೇಳಬೇಕು. ರಾಜರತ್ನಂ ಅವರು ಈ ಕೆಲಸವನ್ನು ಸಾಕಷ್ಟು ಯಶಸ್ವಿಯಾಗಿ ಸಾಧಿಸಿದ ಮತ್ತೊಬ್ಬರು. ಕರ್ನಾಟಕದ ಉದ್ದಗಲಕ್ಕೆ ವಿ.ಸೀ.ಯವರು ಹೀಗೆ ಪ್ರವಾಸ ಮಾಡಿ ನೂರಾರು ಭಾಷಣಗಳನ್ನು ಮಾಡಿದುದರ ಪರಿಣಾಮವಾಗಿ ದೇಶದ ಎಲ್ಲ ಕಡೆ ಅವರಿಗೆ ನೂರಾರು ಜನ ಮಿತ್ರರಾದರು. ಪಂಜೆ ಮಂಗೇಶರಾವ್, ಉಗ್ರಾಣ ಮಂಗೇಶರಾವ್, ಗೋವಿಂದ ಪೈ, ಶಿವರಾಮ ಕಾರಂತ, ಶ್ರೀರಂಗ, ಪಡುಕೋಣೆ ರಮಾನಂದರಾವ್, ಪದ್ಮನಾಭ ಪುರಾಣಿಕ, ಕೃಷ್ಣಕುಮಾರ ಕಲ್ಲೂರು, ಡಾ. ಮೇಲುಕೋಟೆ, ಹೆಬ್ಬಾರ್, ಮುಳಿಯ ತಿಮ್ಮಪ್ಪಯ್ಯ ಮುಂತಾದವರೆಲ್ಲರೂ ವಿ.ಸೀ. ಯವರ ಸ್ನೇಹದ ಪರಿಣಾಮವಾಗಿ ಮೈಸೂರು ಬೆಂಗಳೂರುಗಳಿಗೆ ಆಗಮಿಸಿ ಸಭೆಗಳಲ್ಲಿ ಭಾಗವಹಿಸುತ್ತಿದ್ದರು. ಈ ದೃಷ್ಟಿಯಿಂದ ತುಂಗಭದ್ರೆಯ ಉತ್ತರ–ದಕ್ಷಿಣಕ್ಕೆ ಹಾಕಿದ ಸುವರ್ಣ ಸೇತುವೆಯಂತಿದ್ದರು ವಿ.ಸೀ. ಕರ್ನಾಟಕದ ದೇಶವಷ್ಟೇ ಅಲ್ಲ ಗುಜರಾತ್, ಬಂಗಾಳ ಮುಂತಾದ ಪ್ರದೇಶಗಳಿಂದ ಕೂಡ ಉಮಾಶಂಕರ ಜೋಶಿ, ಗುಲಾಬ್ದಾಸ್ ಬ್ರೋಕರ್ ಮುಂತಾದವರು ಕರ್ನಾಟಕಕ್ಕೆ ಬರುತ್ತಿದ್ದರು. ಮದರಾಸಿನ ಡಾ. ವಿ. ರಾಘವನ್ ಅವರು ವಿ.ಸೀ.ಯವರ ಹತ್ತಿರದ ಮಿತ್ರರಲ್ಲಿ ಒಬ್ಬರಾಗಿದ್ದರು. ಕೇರಳ, ಹೈದರಾಬಾದು ಪ್ರದೇಶಗಳಲ್ಲಿಯೂ ಇವರಿಗೆ ಸ್ನೇಹಿತರಾದವರು ಅನೇಕರಿದ್ದರು.

ಬೆಂಗಳೂರಿನ ಯುವ ಸಾಹಿತಿಗಳಿಗೆ ವಿ.ಸೀ.ಯವರ ಮಾರ್ಗದರ್ಶನ ಸದಾ ಉಕ್ಕುವ ತಲಿಪರಿಗೆಯಾಗಿತ್ತು. ಒಂದು ದೃಷ್ಟಾಂತವನ್ನು ಹೇಳಬಹುದು. ೧೯೩೦ನೆಯ ಇಸವಿಯ ನೋಬೆಲ್ ಬಹುಮಾನವಿಜೇತನಾದ ಇಟಲಿಯ ಲ್ಯುಗಿ ಪಿರಾಂಡಿಲೋ ಎಂಬಾತನ ಕಾದಂಬರಿಗಳೂ ನಾಟಕಗಳೂ ಇಂಗ್ಲಿಷಿಗೆ ಅನುವಾದಗೊಂಡು ಇಂಗ್ಲೆಂಡಿನಲ್ಲಿ ಬಹುಪ್ರಶಂಸೆಗೆ ಪಾತ್ರವಾದವು. ಆ ತರುಣದಲ್ಲಿ ವಿ.ಸೀ.ಯವರು ಪಿರಾಂಡಿಲೋ ರಚಿತ ಗ್ರಂಥಗಳಲ್ಲಿ ಯಾವ ಯಾವುವು ಇಂಗ್ಲಿಷಿಗೆ ಅನುವಾದಗೊಂಡವೋ ಅವುಗಳನ್ನೆಲ್ಲ ಅವರು ಬೋಧನೆ ಮಾಡುತ್ತಿದ್ದ ಬೆಂಗಳೂರು ಇಂಟರ್ ಮೀಡಿಯೆಟ್ ಕಾಲೇಜಿನ ಪುಸ್ತಕ ಭಂಡಾರಕ್ಕೆ ತರಿಸಿ, ಯುವಕ ಸಾಹಿತಿಗಳು ಅವುಗಳನ್ನು ಓದಲು ಪ್ರೋತ್ಸಾಹ ಮಾಡಿದರು. ಆಗಲೇ ನಮಗೆ 'ಫಾಂಟಮಾರ' ಎಂಬ ಕಾದಂಬರಿಯೂ 'Six Characters in search of an Author' ಎಂಬ ನಾಟಕವೂ ಪರಿಚಯವಾದುದು. ಇಟಲಿಯ ಆ ಪ್ರಸಿದ್ಧ ಲೇಖಕನ ಬಗ್ಗೆ ಯುವಕರಲ್ಲಿ ಒಂದು ವಿಚಾರಸಂಕಿರಣವೂ ಏರ್ಪಾಟಾಗಿತ್ತು. ಹೀಗೆ ಹೊಸಬೆಳಕು ಎಲ್ಲಿಂದ ಬರಲಿ, ಅದನ್ನು ತಮ್ಮ ಬಳಿಗೆ ಬರಮಾಡಿಕೊಳ್ಳುವ ಮತ್ತು ಅದರ ಬಗ್ಗೆ ಪ್ರಚಾರ ಮಾಡುವ ವಿ.ಸೀ.ಯವರ ಹಿರಿಮೆ ತುಂಬ ಮಾನ್ಯತೆ ಪಡೆಯಿತು.

ಇಂಗ್ಲೆಂಡಿನ ದಿ ಇಕಾನಮಿಸ್ಟ್, ಬಿ.ಬಿ.ಸಿ. ಲಿಸೆನರ್, ಟೈಮ್ಸ್ ಲಿಟೆರರಿ ಸಪ್ಲಿಮೆಂಟ್ ಇತ್ಯಾದಿ ನಿಯತಕಾಲಿಕೆಗಳನ್ನು ವಿ.ಸೀ. ಸ್ವಂತ ಖರ್ಚಿನಲ್ಲಿ ಮನೆಗೆ ತರಿಸುತ್ತಿದ್ದರು. ಏನೇ ಹೊಸ ವಿಷಯಗಳು ಅವುಗಳಲ್ಲಿ ಪ್ರಕಟವಾದರೆ, ಅವು ಬೆಂಗಳೂರಿನ ಯುವಕ ಸಾಹಿತಿಗಳಿಗೆ ದೊರಕುತ್ತಿದ್ದುದು ವಿ.ಸೀ.ಯವರ ಸಹವಾಸದಲ್ಲಿ. ಆದುದರಿಂದಲೆ ಅವರ ಮನೆಗೆ ಸಾಹಿತ್ಯ ಮಿತ್ರರು ಲಗ್ಗೆ ಹಾಕುತ್ತಿದ್ದುದು.

ಸ್ಮರಣೆ ಒಂದು ದೊಡ್ಡ ಆಸ್ತಿ. ವಿ.ಸೀ. ಯವರಿಗೆ ಈ ಶಕ್ತಿಯೂ ದೇವದತ್ತವಾಗಿತ್ತು. ಅವರ ಅಪಾರವಾದ ಸ್ಮರಣಶಕ್ತಿಯಿಂದ ಎಂದೋ ಓದಿದ, ಕೇಳಿದ ಕಾವ್ಯ ಭಾಗಗಳನ್ನೂ ಗ್ರಂಥ ಸಂದರ್ಭಗಳನ್ನೂ ಅವರು ಕೂಡಲೆ ನೆನೆದು ಹೇಳುತ್ತಿದ್ದರು. ಅವರಿಂದ ಹೀಗೆ ಕೇಳಿ ತಿಳಿದ ಪ್ರಸಂಗಗಳು ಅವರ ಸ್ನೇಹಿತರಿಗೂ ಯುವ ಮಿತ್ರರಿಗೂ ಶಿಷ್ಯರಿಗೂ ಒಂದು ದೊಡ್ಡ ಭಂಡಾರವಾಗುತ್ತಿತ್ತು. ಅವರ ಮನೆಯಲ್ಲಿ ದೊರಕುತ್ತಿದ್ದ ಆದರ ಆತಿಥ್ಯವನ್ನು ಇಂದಿಗೂ ನೆನೆಯುವ ಅನೇಕರಿದ್ದಾರೆ.

೧೯೭೯ರಲ್ಲಿ ಅವರಿಗೆ ೮೦ ತುಂಬಿದ ದಿನ ಸ್ನೇಹವಲಯದ ನಾವು ಕೆಲವರು ಅವರನ್ನು ಕಂಡು ಒಂದು ಸಂತೋಷದ ಕಾಣಿಕೆಯನ್ನು ಕೊಟ್ಟು ಬರಲು ನಿರ್ಧಾರ ಮಾಡಿದೆವು. ಇದರಲ್ಲಿ ಇದ್ದದ್ದು ನಾಲ್ಕೈದು ಜನ ಮಾತ್ರ. ನಾವು ಅವರ ಮನೆಗೆ ಕಾಲಿಡುವಾಗಲೇ ಅವರು "What is this High Power Committee doing here?" ಎಂದು ಸ್ವಾಗತಿಸಿದರು. ಅವರಿಗೆ ಹೂವಿನ ಹಾರಹಾಕಿ, ಅವರಿಗೆ ಪ್ರಿಯವಾದ ಮಲ್ಲಿನ ಪಂಚೆಯನ್ನು ಕಾಣಿಕೆಯಾಗಿತ್ತು, ಫಲಗಳನ್ನು ನೀಡಿದಾಗ ಅವರ ಕಣ್ಣಲ್ಲಿ ನೀರು ಬಂತು. ಆ ದೃಶ್ಯ ಇಂದೂ ಕಣ್ಮುಂದೆ ಕಟ್ಟಿದಂತಿದೆ. ಅಂದು ಅವರೊಡನೆ ಕಳೆದ ಒಂದು ಗಂಟೆಯ ಹೊತ್ತು ನಮಗೆಲ್ಲ ಸಾಹಿತ್ಯದ ಸಮಾರಾಧನೆಯಾಯಿತು. ಸದಾ ನಮ್ಮ ನೆನಪಿನಲ್ಲಿ ಉಳಿಯುವ ಒಂದು ಸಂದರ್ಭವಾಗಿ ಅದನ್ನು ನಾನು ಕಾಪಾಡಿಕೊಂಡಿದ್ದೇನೆ.

ಒಮ್ಮೆ ಒಂದು ವಿಚಿತ್ರ ಸನ್ನಿವೇಶ ಒದಗಿಬಂತು. ನಾನು ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿದ್ದ ಕಾಲ. ಪರಿಷತ್ತಿನ ಜಾಣ, ಕಾವ ಪರೀಕ್ಷೆಗಳಿಗೆ ತಮ್ಮ ಒಂದು ಪುಸ್ತಕವನ್ನು ಪಠ್ಯವನ್ನಾಗಿ ಮಾಡಬೇಕೆಂದು ನನ್ನನ್ನು ಶ್ರೀ 'A' ಅವರು ಕೇಳಿದರು. ಅವರಿಗೆ ನಾನು ಒಂದು ಪತ್ರವನ್ನು ಬರೆದು ವಿ.ಸೀ.ಯವರು ಆ ಸಮಿತಿಯ ಅಧ್ಯಕ್ಷರೆಂದೂ ಅವರಿಗೂ ಒಂದು ಪತ್ರವನ್ನು ಬರೆದರೆ ಅನುಕೂಲವಾಗಬಹುದು ಎಂದೂ ತಿಳಿಸಿದೆ. ಅವರು ನನ್ನ ಪತ್ರವನ್ನು ಅಪಾರ್ಥ ಮಾಡಿಕೊಂಡು ವಿ.ಸೀ.ಯವರಿಗೆ ಪತ್ರ ಬರೆದು ಅದರಲ್ಲಿ ಹೀಗೆ ತಿಳಿಸಿದ್ದರು: "ಪರಿಷತ್ತಿನ ಜಾಣ ಪರೀಕ್ಷೆಗೆ ನನ್ನ ಪುಸ್ತಕವನ್ನು ಪಠ್ಯಮಾಡಲು ತಾವು ಅಡ್ಡಿಯಾಗಿದ್ದೀರಿ ಎಂದು ಜಿ. ವೆಂಕಟಸುಬ್ಬಯ್ಯನವರು ಪತ್ರ ಬರೆದಿದ್ದಾರೆ. ದಯಮಾಡಿ ನನ್ನ ಪುಸ್ತಕಕ್ಕೆ ತಮ್ಮ ಸಹಾಯವನ್ನು ನೀಡಬೇಕಾಗಿ ಪ್ರಾರ್ಥನೆ". ವಿ.ಸೀ.ಯವರು ಈ ಪತ್ರದಲ್ಲಿ ಕೆಳಗಡೆ, "I am innocent" ಎಂದು ಬರೆದು ಸಹಿಹಾಕಿ ನನಗೆ ಕಳುಹಿಸಿದರು. ನನಗೆ ಮನಸ್ಸಿಗೆ ತುಂಬ ಬೇಸರವಾಯಿತು. ನನ್ನ ಬಗ್ಗೆ ವಿ.ಸೀ. ಏನು ಭಾವನೆ ಹೊಂದಿದ್ದಾರೆ ಎಂಬುದನ್ನು "I am innocent" ಎಂಬ ವಾಕ್ಯ ತಿಳಿಸುತ್ತಿತ್ತು. ಬಹು ಅಂಜಿಕೆಯಿಂದ ಅಪರಾಧಿಯಂತೆ ನಾನು ಅವರ ಬಳಿಗೆ ಹೋಗಿ ಶ್ರೀ 'A' ಅವರಿಗೆ ನಾನು ಬರೆದಿದ್ದ ಪತ್ರದ ನಕಲನ್ನು ತೋರಿಸಿದೆ. ಆ ಪತ್ರವನ್ನು ಓದುವಾಗ ಖಿನ್ನವಾಗಿದ್ದ ಅವರ ಮುಖ ಇದ್ದಕ್ಕಿದ್ದಂತೆ ಪ್ರಸನ್ನವಾಗಿ "You are also innocent" ಎಂದು ಗಟ್ಟಿಯಾಗಿ ಹೇಳಿ ನನ್ನನ್ನು ತಬ್ಬಿಕೊಂಡರು. 'ಬದುಕಿದೆಯಾ ಬಡಜೀವವೇ' ಎಂದು ಸಮಾಧಾನ ಹೊಂದಿ ಹಿಂದಿರುಗಲು ಹೊರಟೆ. ಆದರೆ ವಿ.ಸೀ. ಬಿಡಲಿಲ್ಲ. ನನ್ನನ್ನು ತುಂಬ ಹೊತ್ತು ಹತ್ತಿರ ಕೂರಿಸಿಕೊಂಡು ಪತ್ರ ವ್ಯವಹಾರದ ಅನೇಕ ಕಥೆಗಳನ್ನು ಹೇಳಿ ತಿಂಡಿ ತೀರ್ಥ ಕೊಟ್ಟು ಕಳುಹಿಸಿದರು.

ಬಹು ಹಿಂದೆ ಅವರು ಬೆಂಗಳೂರಿನಲ್ಲಿ ಪ್ರದರ್ಶಿತವಾಗುತ್ತಿದ್ದ ಎಲ್ಲ ಪ್ರಸಿದ್ಧ ಸಿನಿಮಾಗಳನ್ನು ಮೊದಲ ದಿನವೇ ನೋಡುತ್ತಿದ್ದರು. ಅವರೊಡನೆ ಇಂಥ ಸಂದರ್ಭಗಳಲ್ಲಿ ಜೊತೆಯಲ್ಲಿ ಇರುತ್ತಿದ್ದವರಲ್ಲಿ ಕೆ. ವಿ. ಅಯ್ಯರ್ ಅವರು ಒಬ್ಬರು. ಆಗಿನ ಕಾಲದಲ್ಲಿ ಯಾವ ಉತ್ತಮ ಚಿತ್ರಕ್ಕೂ ಮೊದಲ ದಿನ ಟಿಕೆಟ್ಟುಗಳು ದೊರೆಯುತ್ತಿರಲಿಲ್ಲ. ಅದಕ್ಕೆ ಬಹು ಮುಂಚೆ ಯಾರನ್ನಾದರೂ ಕಳಿಸಿ ಟಿಕೆಟ್ಟುಗಳನ್ನು ತರಿಸುತ್ತಿದ್ದರು. ಹೋಗುತ್ತ ಬರುತ್ತ ಜತೆಗಾರರೊಡನೆ ಆ ಚಿತ್ರದ ಬಗ್ಗೆ ಬಂದಿದ್ದ ವಿವರಗಳನ್ನು ವಿವರಿಸುವುದು, ವಿಮರ್ಶೆ ಮಾಡುವುದು ಅವರ ಪದ್ಧತಿಯಾಗಿತ್ತು. ಸಿನಿಮಾ ನೋಡಿದ ಒಂದು ವಾರ ಸ್ನೇಹಿತರೊಡನೆ ಅದರ ಬಗ್ಗೆ ಮಾತುಕತೆ ನಡೆಯುತ್ತಿತ್ತು. ಇಂಗ್ಲಿಷ್ ನಾಟಕ ಪ್ರದರ್ಶನ, ನೃತ್ಯ, ಚಿತ್ರಕಲೆ ಇವುಗಳಲ್ಲೆಲ್ಲ ಆಸಕ್ತಿಯನ್ನು ಬೆಳೆಸಿಕೊಂಡಿದ್ದದ್ದು ಅವರ ವಿಶಿಷ್ಟ ಗುಣವಾಗಿತ್ತು. ಅವರು ಕಾಲೇಜಿನಲ್ಲಿ ಎನ್. ಎಸ್ ಸುಬ್ಬರಾಯರ ಶಿಷ್ಯರಾಗಿ ಅಭ್ಯಾಸ ಮಾಡಿದ್ದ ಚರಿತ್ರೆ ಅವರಿಗೆ ತುಂಬ ಸಹಾಯಮಾಡುತ್ತಿತ್ತು. ಶಿಲ್ಪ, ದರ್ಶನಶಾಸ್ತ್ರ, ಸಂಗೀತ ಕ್ಷೇತ್ರಗಳು ಅವರಿಗೆ ಹೊರತಾಗಿರಲ್ಲ.

ಸಾಹಿತಿ ಮಿತ್ರರ ಬಗ್ಗೆ ಸದಾ ಅವರು ವಿಶ್ವಾಸದ ಮಾತನ್ನಾಡುತ್ತಿದ್ದರು. ಕೆ. ವಿ. ಪುಟ್ಟಪ್ಪನವರ ವಿವಾಹ ಸಂದರ್ಭದಲ್ಲಿ ಅವರಿಗೆ ಉಡುಗೊರೆಯಾಗಿ ಕಳಿಸಿದ ಕವನ

'ಸಪ್ತಪದಿ'. ತೀ.ನಂ.ಶ್ರೀ.ಯವರ 'ಭಾರತೀಯ ಕಾವ್ಯಮೀಮಾಂಸೆ'ಯನ್ನು ವಿಮರ್ಶೆಮಾಡುತ್ತ 'ಇಂಥ ಗ್ರಂಥ ಇಂಗ್ಲಿಷ್ ಭಾಷೆಯಲ್ಲಿಯೂ ಬಂದಿಲ್ಲ' ಎಂದು ಪ್ರಶಂಸಿಸಿದರು. ಉದಯೋನ್ಮುಖ ಲೇಖಕರು ಅವರ ಬಳಿಗೆ ಹೋಗಿ ತಮ್ಮ ಬರಹಗಳನ್ನು ತೋರಿಸಿದರೆ ಅವರ ಬಗ್ಗೆ ಪ್ರೋತ್ಸಾಹವನ್ನು ನೀಡಿ, ಅಗತ್ಯವಾದ ಕೆಲವು ತಿದ್ದುಪಾಟುಗಳನ್ನು ಮಾಡಿ ಸಹಾಯವನ್ನು ಒದಗಿಸುತ್ತಿದ್ದರು.

ಬಹಳ ಹಿಂದೆ ಅವರು ತಮ್ಮ ಕವನಗಳನ್ನು ಹಾಡಿ ತೋರಿಸಿದ್ದುದುಂಟು – ಹತ್ತಿರದ ಮಿತ್ರರಿಗೆ ಮಾತ್ರ. ಅಂಥ ಒಂದೆರಡು ಸಂದರ್ಭಗಳಲ್ಲಿ ನಾನು ಆಗಂತುಕನಾಗಿ ಅವಕಾಶ ಪಡೆದುದುಮುಂಟು. ಕಾವ್ಯ ವಾಚನವೆಂಬುದು ಎಷ್ಟು ಪರಿಣಾಮದಾಯಕವಾದ ಕಲೆ ಎಂಬುದನ್ನು ಅವರಿಂದ ಕಲಿಯಬೇಕು. ಸ್ವಂತ ಕಾವ್ಯವಾಗಲಿ, ಇತರರ ಕವನವಾಗಲಿ ಅದಕ್ಕೆ ಬೇಕಾದ ಬೀಸು, ಕಾಕು, ಘೋಷ ಇವುಗಳನ್ನು ಅವರು ಒದಗಿಸುತ್ತಿದ್ದರು. ಯಾವ ಕಾರಣದಿಂದಲೋ ಅವರ ಕವನಗಳ ವಾಚನವನ್ನು ಅವರು ನಿಲ್ಲಿಸಿ ಬಿಟ್ಟರು. ಅದರ ವಿವರ ನನಗೆ ತಿಳಿಯದು.

ಅವರ ಜೀವನದ ಒಂದು ಸನ್ನಿವೇಶ ನನಗೆ ಸದಾ ನೆನಪಿಗೆ ಬರುತ್ತ ಇರುತ್ತದೆ. ಅದು ಅವರು ಎಪ್ಪತ್ತೈದು ವರ್ಷಗಳನ್ನು ದಾಟಿದಾಗ ಸತ್ಕಾರ ಸಮಿತಿಯ ಪರವಾಗಿ ಐಬಿಎಚ್ ಪ್ರಕಾಶನದವರು "ವಿ.ಸೀ. ೭೫" ಎಂಬ ಗ್ರಂಥವನ್ನು ಮುದ್ರಿಸಿ ಒಂದು ಸಮಾರಂಭದಲ್ಲಿ ಅದನ್ನು ವಿ.ಸೀ. ಯವರಿಗೆ ಸಮರ್ಪಿಸಲು ಎಲ್ಲ ಏರ್ಪಾಡುಗಳನ್ನು ಮಾಡಿದ್ದರು. ಅದೇ ದಿನ ಬೆಳಗ್ಗೆ ಶ್ರೀಮತಿ ವಿ.ಸೀ. ಅವರು ತೀರಿಕೊಂಡರು. ಸಮಾರಂಭ ನಿಂತು ಹೋಯಿತು. ಮತ್ತೆ ಆ ಸಮಾರಂಭ ಆಗಲೇ ಇಲ್ಲ ಎಂಬುದು ಅದಕ್ಕೆ ಸಂಬಂಧಪಟ್ಟ ಎಲ್ಲರನ್ನೂ ಇಂದೂ ಕಾಡುತ್ತಿದೆ.

ವಿ.ಸೀ. ಎಂದ ಕೂಡಲೆ ಮನಸ್ಸಿನಲ್ಲಿ ಅನುರಣಿಸುತ್ತದೆ ಅವರ 'ಅಭೀ' ಕವನದ ಈ ಸಾಲುಗಳು :

ಮಣಿಯದಿಹ ಮನವೊಂದು, ಸಾಧಿಸುವ ಹಟವೊಂದು
ನಿಜದ ನೇರಕೆ ನಡೆವ ನಿಶ್ಚಲತೆಯೊಂದು
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು
ಅಭೀ, ಅಭೀ, ಅಭೀ ಎಂಬ ತಾರಕವಾಕ್ಯ
ನಾಡಿಯನು ನಡಸುತಿರೆ, ಬಾಳನ್ನು ತಿದ್ದುತಿರೆ
ನಡೆ ಮುಂದಕೆನ್ನುತ್ತೆ ಕೂಗುತಿವೆ, ನುಗ್ಗಿಸುತಿವೆ.

ಹೀಗೆ ಬಾಳಿದವರು ವಿ.ಸೀ.

ನನ್ನ ಜೀವನದಲ್ಲಿ ಬಹುಕಾಲ ನಾನು ನೆನಪಿಟ್ಟು ಕೃತಜ್ಞನಾಗಿರಬೇಕಾದಂಥ ವಿಶ್ವಾಸವನ್ನು ನೀಡಿ, ಅನೇಕ ಕಷ್ಟ ಪರಿಸ್ಥಿತಿಯಲ್ಲಿ ತಿಳಿವಳಿಕೆಯನ್ನು ಒದಗಿಸಿ, ಸಾಹಿತ್ಯದ ಬದುಕು ಎಂಥದೆಂಬುದನ್ನು ಪ್ರತ್ಯಕ್ಷವಾಗಿ ತೋರಿಸಿ, ನನ್ನ ಬದುಕಿಗೆ ಜೀವಂತ ಮಾರ್ಗದರ್ಶನ ಮಾಡಿದ ಈ ಹಿರಿಯರನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಕರ್ತವ್ಯ.

ಶತಮಾನದ ಸವಿ

ಎಸ್. ಕುಲಕರ್ಣಿ

೧೯೩೫ – ಕರ್ನಾಟಕ ಕಾಲೇಜ್, ಕರ್ನಾಟಕದ ಸಂಘದ ವಾರ್ಷಿಕೋತ್ಸವ. ಮುಖ್ಯ ಅತಿಥಿ– ವಿ.ಸೀ. ನಾವೆಲ್ಲಾ ಆಗ ಜೂನಿಯರ್ ಬಿ. ಎ. ಕನ್ನಡ ಆನರ್ಸ್ ವಿದ್ಯಾರ್ಥಿಗಳು. ನಮ್ಮ ಗುರುಗಳಾದ ಪ್ರೊ. ಅ. ತು. ಸಾಸನೂರ ಅವರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಡುತ್ತ "ಇವರು ಪ್ರೊ. ವಿ. ಸೀತಾರಾಮಯ್ಯನವರು ಅನ್ನುವುದಕ್ಕಿಂತ ಇವರು 'ವಿ. ಸೀ.' ಅಂದು ಬಿಟ್ಟರೆ ಸಾಕು, ಸಾಹಿತ್ಯ ಲೋಕಕ್ಕೆ ಇದೇ ಸವಿಯಾದ ಸುಪರಿಚಿತ ಹೆಸರು" ಎಂದರು. ಸತ್ಯ, ಜೀವನ, ವಾಸ್ತವತೆ ಮೌಲ್ಯಗಳನ್ನು ಕುರಿತು ರಾಘವಾಂಕನ ಹರಿಶ್ಚಂದ್ರ ಕಾವ್ಯದ "ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು" ಎಂಬುದರ ತಾತ್ಪರ್ಯವನ್ನು ತಮ್ಮ ಭಾಷಣದಲ್ಲಿ ವಿ.ಸೀ. ವಿವೇಚಿಸುತ್ತ "ಹರಿಶ್ಚಂದ್ರನ ಬದುಕಿನಿಂದ ನಾವು ಕಲಿಯುವುದೇನು ಎಂದರೆ 'ಸತ್ಯ ಹೇಳಿದರೆ ಸುಡುಗಾಡು ಕಾಯಬೇಕಾಗುತ್ತದೆ' ಎಂದು ಮಾತ್ರ ವಿದ್ಯಾರ್ಥಿಗಳು ತಿಳಿಯಬಾರದು" ಎಂದು ನುಡಿದಾಗ, ಗ್ಯಾಲರಿಹಾಲ್ ನಗೆಗಡಲಲ್ಲಿ ಹಡಗದಂತೆ ತೇಲಾಡಿತ್ತು.

೧೯೪೦ – ಡಿಸೆಂಬರ್ ಕೊನೆಯಲ್ಲಿ ಧಾರವಾಡದಲ್ಲಿ ಇಪ್ಪತ್ತೈದನೆಯ ಸಾಹಿತ್ಯ ಸಮ್ಮೇಳನ. ನಾನು ಕಾರ್ಯದರ್ಶಿಯಾಗಿದ್ದೆ. ವಿ.ಸೀ. ಅವರೂ ಬಂದಿದ್ದರು. ಒಂದು ಸಂಜೆ ನಮ್ಮ ಸಮೀಪದ ಪುಟ್ಟ ಮನೆಗೆ ಭೆಟ್ಟಿ ಕೊಡಬೇಕೆಂದು ವಿನ್ನವಿಸಿದೆ. ವಿ.ಸೀ. ಒಡನೆಯೆ ಒಪ್ಪಿದರು. ಕಡಪಾ ಬೈಲಿನ ಸಮ್ಮೇಳನದ ಪೆಂಡಾಲ್‌ನಿಂದ ಹೆಣ್ಣು ಮಕ್ಕಳ ಟ್ರೈನ್ಡಿಂಗ್ ಕಾಲೆಜ್ ಮಗ್ಗುಲಿಗೆ ಲೈನಬಜಾರದಲ್ಲಿ ನಮ್ಮ ಮನೆ. ಮನೆಗೆ ಪೀಠೋಪಕರಣಗಳಿರಲಿಲ್ಲ. ಒಬ್ಬ ಮಾಸ್ತರನ ಮನೆ ಅದು. ವಿ.ಸೀ. ಪಡಸಾಲೆಯ ಚಾಪೆಯ ಮೇಲೆಯೇ ಪ್ರಶಸ್ತವಾಗಿ ಕುಳಿತರು. "ನಮ್ಮ ಕಡೆ ನಿಮ್ಮ ಹಾಂಗ ಕಾಫಿ ಮಾಡಲಿಕ್ಕೆ ಬರೋದಿಲ್ಲ" ಎನ್ನುವ ಪುರುಸೊತ್ತಿಲ್ಲದೆಯೆ – "ನನಗೆ ನಿಮ್ಮ ಚಾ ನೇ ಆದೀತು" ಎಂದರು. "ಚಾ ಮತ್ತು ಕಾಫಿ ಒಂದೊಂದಕ್ಷರ ಕೂಡಿ ಚಾಪಿ ಆಗೇದ, ಚಾಪಿ ಮ್ಯಾಲೆ ಕೂತು ಚಾ ಕುಡಿದರ ಸಾಕಲ್ಲ, ಅರ್ಧಾ ಕಾ–ಪಿನೂ ಆಗತದ" ಎಂದೆ. ವಿ.ಸೀ. ಜೋರಾಗಿ ನಕ್ಕರು. ನಾನು "ಧಾರವಾಡದ ಚಾ ಮೆಚ್ಚುವ ನೀವು ಧಾರವಾಡ ಭಾಷಾ ಯಾಕ ಮೆಚ್ಚೋದಿಲ್ಲ?" "ನಾನೆಲ್ಲಿ ಹಾಗೆ ಅಂದಿದೀನಪ್ಪ?" ಎಂದು ಗಾಬರಿಯಿಂದ ಕೇಳಿದರು. "ನನ್ನ 'ನಡು

ಮನೆಯಲ್ಲಿ' ಏಕಾಂಕ ಸಂಗ್ರಹ ಪರಿಷತ್ ಪತ್ರಿಕಾದಲ್ಲಿ ವಿಮರ್ಶೆ ಮಾಡ್ತಾ 'ಧಾರವಾಡ ಭಾಷೆಯ ಸಂಭಾಷಣೆಗಳು ಅರ್ಥವಾಗುವುದಿಲ್ಲ' ಅಂದಿದ್ದೀರಿ" ಎಂದು ನುಡಿದೆ. ಮತ್ತೆ- "ನಿಮ್ಮ ಕತೆಯ ಭಾಷೆ ನಾವು ತಿಳಕೋತೀವಿ. ನೀವೂ ಯಾಕ ನಮ್ಮ ಭಾಷೆ ತಿಳಕೋಬಾರ್ದು?" ಎಂದಾಗ ವಿ.ಸೀ. ನನ್ನ ಮಾತು ಮೆಚ್ಚಿಕೊಂಡರು. "ನಿಜ, ನಿಮ್ಮಲ್ಲಿ ಕೈಲಾಸಂ ತಿಳಕೊಂಡಿದ್ದೀರಿ. ನಮ್ಮಲ್ಲಿ ಶ್ರೀರಂಗರು ಇನ್ನೂ ಅರ್ಥಾನೇ ಆಗಿಲ್ಲ. ಆಗಬೇಕು" ಎಂದು ಅಭಿಪ್ರಾಯಪಟ್ಟಾಗ ನನಗೆ ಸಂತೋಷವಾಗಿತ್ತು.

ವಿ.ಸೀ. ಯವರು 'ಪ್ರಬುದ್ಧ ಕರ್ನಾಟಕ'ದ ಪ್ರಬುದ್ಧ ಸಂಪಾದಕರಾಗಿ ಅದರ ವಿಶೇಷ ಬೆಳ್ಳಿಯ ಸಂಚಿಕೆಯನ್ನು ೧೯೪೩ರಲ್ಲಿ ಹೊರಡಿಸಿದರು. ವಿ.ಸೀ.ಪೂರ್ವದಲ್ಲಿ ಅಶ್ವಿನೀ ದೇವತೆಗಳೆಂದು ಮಾಸ್ತಿ ಅವರಿಂದ ಕರೆಯಲ್ಪಟ್ಟ ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರಿ ಅವರು 'ಪ್ರಬುದ್ಧ ಕರ್ನಾಟಕ'ದ ಸಮರ್ಥ ಸಂಪಾದಕರಾಗಿ ಹೋಗಿದ್ದರು. ಈಗ ಬೆಳ್ಳಿಯ ಸಂಚಿಕೆಗೆ ತಾವು ಸಂಪಾದಕರಾಗಿದ್ದರೂ ತಾವು, ತಮ್ಮ ಹೆಸರು ಹಿನ್ನೆಲೆಯಲ್ಲೇ ಇಟ್ಟು, ತಮ್ಮ ಹಿಂದಿನ ಹಿರಿಯ ಸಂಪಾದಕ ಬಳಗವನ್ನು ಗೌರವದಿಂದ ಮುಂದೆ ಮಾಡಿರುವುದು ವಿ.ಸೀ. ಅವರ ಹೆಚ್ಚುಗಾರಿಕೆ. ೧೯೧೯ರಲ್ಲಿ 'ಪ್ರಬುದ್ಧ ಕರ್ನಾಟಕ'ದ ಮೊದಲನೆಯ ಸಂಚಿಕೆಯಲ್ಲಿ ಸಂಪಾದಕೀಯ ನುಡಿಗಳನ್ನು ಬರೆದ 'ನಿರ್ಮಮತ್ವ' ಸಾಧಕರಾದ ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೇರಕ ಶಕ್ತಿಯಾಗಿ ಹಿಂದೆ ನಿಂತು 'ಕರ್ನಾಟಕ ಸಂಘ' ದ ಸ್ಥಾಪನೆಯೊಂದಿಗೆ 'ಪ್ರಬುದ್ಧ ಕರ್ನಾಟಕ' ಪತ್ರಿಕೆಯ ಸ್ಥಾಪನೆಯೂ ಅಸ್ತಿತ್ವದಲ್ಲಿ ಬಂದ ಬಗೆಯನ್ನು ವಿವರಿಸಿದ ಭಾಗವನ್ನೆಲ್ಲಾ ಈ ಬೆಳ್ಳಿಯ ಸಂಚಿಕೆಯ ಮೊದಲ ಮಾತಾಗಿ ಪ್ರಕಟಿಸಿರುವುದು ವಿ.ಸೀ. ಅವರ 'ನಿರ್ಮಮತ್ವ'ದ ನಿದರ್ಶನವಾಗಿದೆ.

ಪ್ರತಿಭಾವಂತ ತರುಣರನ್ನು ಗುರುತಿಸುವ ಕಾರ್ಯವನ್ನು ವಿ.ಸೀ. ಅವರು ಮೈಸೂರು ಬೆಂಗಳೂರುಗಳಲ್ಲಷ್ಟೆ ಅಲ್ಲದೆ ಉತ್ತರ ಕರ್ನಾಟಕಕ್ಕೂ ವಿಸ್ತರಿಸಿದರು. ಧಾರವಾಡದ ತರುಣ ಬರೆಹಗಾರರಲ್ಲಿ ತಮ್ಮ ಆಸಕ್ತಿಯನ್ನು ತೋರಿ 'ಪ್ರಬುದ್ಧ ಕರ್ನಾಟಕ'ದ ಬೆಳ್ಳಿಯ ಸಂಚಿಕೆಗೆ ಅವರ ಬರೆವಣಿಗೆಯ ಸೃಜನಶೀಲ ಬಲವನ್ನು ದುಡಿಸಿಕೊಂಡು 'ಪ್ರಬುದ್ಧ ಕರ್ನಾಟಕ'ವು ಅಖಿಂಡ ಕರ್ನಾಟಕದ ಅಭಿಮಾನದ ಪತ್ರಿಕೆಯೆಂಬ ಪ್ರೀತಿ ಬಲಗೊಂಡು ನೆಲೆಗೊಳ್ಳುವಂತೆ ಮಾಡಿದರು.

"ನನ್ನ ಕಾವ್ಯಾಭಿರುಚಿಗೆ ಅಂದು ಅವರು (ವಿ.ಸೀ.) ದಯಪಾಲಿಸಿದ ಸಂಸ್ಕಾರ ಇಂದಿಗೂ ನನ್ನಲ್ಲಿ ಸ್ಥಾಯಿಯಾಗಿದೆ" ಎಂದು ಮಿತ್ರ ಗೌರೀಶ ಕಾಯ್ಕಿಣಿ ಅವರು ತಮ್ಮ ಒಂದು ಲೇಖನದಲ್ಲಿ ಹೇಳಿದ್ದಾರೆ. ಅದೇ ರೀತಿ ನನ್ನ ಗದ್ಯಾಭಿವೃದ್ಧಿಗೆ ವಿ.ಸೀ. ಅವರೇ ಒಂದು ರೀತಿ ಪ್ರಥಮ ಗುರು ಎಂದರೆ ತಪ್ಪಾಗಲಿಕ್ಕಿಲ್ಲ. ನನ್ನಲ್ಲಿ ಯಾವ ವಿಶ್ವಾಸವಿಟ್ಟು ತಮ್ಮ ಬೆಳ್ಳಿ ಸಂಚಿಕೆ (ಪ್ರಬುದ್ಧ ಕರ್ನಾಟಕ)ಗೆ 'ಕನ್ನಡದಲ್ಲಿ ಆಧುನಿಕ ಗದ್ಯ ಬೆಳೆದು ಬಂದ ಬಗೆ'ಯ ಬಗೆಗೆ ೧೯೪೪ರಲ್ಲಿ ಲೇಖ ಬರೆಯಿಸಿದರೊ ಏನೊ! ಅದು ನನ್ನ ಗದ್ಯ ಬೆಳೆಯಲು ನೀರೆರೆಯಿತು. ಈಗ ೫೫ ವರ್ಷಗಳ ಹಿಂದೆ ತಯಾರಿಸಿದ ಈ ಐತಿಹಾಸಿಕ ಲೇಖನವುಳ್ಳ ಆ ಬೆಳ್ಳಿಯ ಸಂಚಿಕೆ ಇಂದಿಗೂ ನನ್ನ ಒಂದು ಅಭಿಮಾನದ ಸಂಕೇತವಾಗಿ ಸಂಶೋಧನ

ಸೃಷ್ಟಿಯಾಗಿ ನನ್ನ ಬಳಿ ಉಳಿದಿದೆ. ನನ್ನ ಜೊತೆಗೆ ಈ ಬೆಳ್ಳಿ ಸಂಚಿಕೆಗೆ ಬರೆದವರಲ್ಲಿ ಧಾರವಾಡ ಕಡೆಯ ಪ್ರಮುಖ ಲೇಖಕರಾದ ಶ್ರೀರಂಗ, ರಂ. ಶ್ರೀ. ಮುಗಳಿ ಮೊದಲಾದವರೂ ಇದ್ದಾರೆ. ಕವಿ ಬೇಂದ್ರೆ ಅವರಂತೂ ಎಂದಿನಿಂದಲೊ 'ಪ್ರಬುದ್ಧ ಕರ್ನಾಟಕ'ವನ್ನು ತಮ್ಮ ಕವಿತೆ, ಸಾಹಿತ್ಯ ಲೇಖನಗಳಿಂದ ಪೋಷಿಸುತ್ತ ಬಂದವರು.

ವಿ. ಸೀ. ನನ್ನ ಬಗೆಗೆ ನೀಡಿದ, ಪ್ರೋತ್ಸಾಹಿಸಿದ ಉದಾರ ಗುಣಗಳು ಅವಿಸ್ಮರಣೀಯ. 'ದಾಸ ಸಾಹಿತ್ಯ' ಎಂಬ ಪುಸ್ತಕವನ್ನು ಸಂಪಾದಿಸಬೇಕಾದರೆ, ನನ್ನಿಂದ 'ದಾಸ ಸಾಹಿತ್ಯದ ಪ್ರಾಚೀನತೆ ಹಾಗೂ ಮರಾಠೀ ಅಭಂಗಗಳಿಗೆ ಕೀರ್ತನೆ ಉಗಾಭೋಗಗಳ ಹೋಲಿಕೆ' – ಎಂಬ ವಿಷಯವಾಗಿ ಒಂದು ಲೇಖನ ಬರೆಯ ಹೇಳಿದರು. ವಿ.ಸೀ. ಹೇಳಿದ್ದಾರೆಂದ ಮೇಲೆ ಅವರ ಹೆಸರು ಕೆಡಬಾರದಲ್ಲವೆ? ನಾನು ಸ್ವಲ್ಪ ಶ್ರಮವಹಿಸಿ ಲೇಖನ ತಯಾರಿಸಿ ಅವರಿಗೆ ತೋರಿಸಿದೆ. ಅವರು ಮೆಚ್ಚಿಕೊಂಡರು. ಅದು ಆ ಸಂಪುಟದಲ್ಲಿ ಸೇರ್ಪಡೆ ಆಯಿತು.

ಈ ಮುಂಚೆ ಆಕಾಶವಾಣಿ ಬೆಂಗಳೂರು ಕೇಂದ್ರದಿಂದ ಅವರ ಸಂಪಾದಕತ್ವದಲ್ಲಿ 'ಪ್ರಸಾರಿಕಾ' ಎಂಬ ಪತ್ರಿಕೆಯೊಂದು ಪ್ರಕಟವಾಗುತ್ತಿತ್ತು. ಅದರಲ್ಲಿ ನನ್ನ ಒಂದು ಪ್ರಸಾರ ಪ್ರಹಸನ, 'ನೆಲಸಮತಾವಾದಿ' ಸೇರ್ಪಡೆಯಾದುದು ನನಗೊಂದು ಗರಿಯನ್ನು ಮೂಡಿಸಿತ್ತು. ನಾಲ್ಕು ಜನ ಅದನ್ನು ಮೆಚ್ಚಿಕೊಂಡೂ ಇದ್ದರು.

ವಿ.ಸೀ. ಅವರು ಎಂತಹ ಸ್ನೇಹಜೀವಿ, ಪರಗುಣ ಪ್ರೋತ್ಸಾಹಿ ಎಂಬುದನ್ನು ನಾನು ಅವರ ಒಡನಾಟದಲ್ಲಿ ಕಳೆದ ಅರುವತ್ತು ವರ್ಷಗಳಿಂದ ಕಂಡುಕೊಂಡಿದ್ದೇನೆ. ಸ್ನೇಹಿತರು ಎಂದರೆ ವಿ.ಸೀ. ಅವರಿಗೂ ಅಷ್ಟೇ ಜೀವ. "ಸತ್ಯವನ್ನು ಪ್ರಿಯವಾಗಿಸಬಲ್ಲ ಸಹೃದಯತೆಗೆ ವಿ.ಸೀ. ನಿಚ್ಚಳ ನಿದರ್ಶನ" – ಎಂಬ ಗೌರೀಶರ ಉಕ್ತಿಗೊಂದು ನಿದರ್ಶನ ವಿ.ಸೀ. ಅವರ ಕೆಳಗಿನ ಸಾಲುಗಳು:

"ಸ್ವರ್ಗದೊಳಗೀ ಸ್ನೇಹ ದೊರೆವುದೇನು?
ಈ ಪರಿಯ ಸೌಹಾರ್ದ ಕೆಳೆಯ ವೈಭವವು?
ಇಲ್ಲದಿರೆ ಎನಗಿಲ್ಲೆ ನೂರು ಜನ್ಮಗಳಲಿ
ಎಲ್ಲ ಪರಿ ಮಮತೆಗಳ ಸತ್ಯ ಜೀವನವು."

ವಿ.ಸೀ. ಅವರ ಸ್ನೇಹಶ್ರೀಮಂತಿಕೆ ಕೊಡು–ಕೊಳಿಯಲ್ಲಲ್ಲ, ಬರಿ ಕೊಡುಗೆಯಲ್ಲೇ ಕಂಡು ಬರುತ್ತಿತ್ತೆಂದು ಹೇಳಿದರೆ ತಪ್ಪಲ್ಲ; ಅದು ಅವರ ಸ್ನೇಹರೀತಿಗೊಂದು ಶೃಂಗ ಪ್ರಾಯವಾಗಿದ್ದಿತು.

೧೯೫೮ – ಬೆಂಗಳೂರು ಆಕಾಶವಾಣಿ 'ಸ್ಪೋಕನ್‌ವರ್ಡ್' (ಭಾಷಣ, ಸಂಭಾಷಣ, ಸಂದರ್ಶನ) ಪ್ರೊಡ್ಯೂಸರ್ ಅವರು ಆಗಿದ್ದಾಗ ನಾನು 'ಪ್ರೋಗ್ರಾಂ ಎಗ್ಸಿಕ್ಯೂಟಿವ್' ಎಂದಿದ್ದೆ. ಆಗಾಗ ಪ್ರಸಾರ ಕಾರ್ಯಕ್ಕೆ ಸಂಬಂಧಿಸಿಯೊ, ಸಂಬಂಧಿಸದಯೊ ಅವರೊಡನೆ ಒಂದಿಷ್ಟು ಮಾತುಕತೆಯಾಡಿ ಮಾತು ಮಾತು ಮಥಿಸಿಬಂದ ಅವರ ಬುದ್ಧಿಯ ನವನೀತವನ್ನೊ ಬುದ್ಧಿಯ ಬುತ್ತಿಯನ್ನೊ ಉಂಡು, ತಣಿದು ತೇಗುತ್ತಿದ್ದೆ; ಅಲ್ಲ ತೇಗುತ್ತಿದ್ದೆವು. ಯಾಕೆಂದರೆ ಅವರೊಡನೆ ಹರಟೆ ಮಾತುಕತೆಯೆಂದರೆ ನಾಲ್ಕಾರು ಜನ

ಜೊತೆ ಇರಲೇಬೇಕು. ಶ್ರೀರಂಗರು ಡ್ರಾಮಾ ಪ್ರೊಡ್ಯೂಸರ್, ನಾ. ಕಸ್ತೂರಿ ಗ್ರಾಮಾಂತರ ಶಾಲಾ ಪ್ರಸಾರಗಳ ಪ್ರೊಡ್ಯೂಸರ್! ಇಂತಹ ದಿಗ್ಗಜಗಳಿದ್ದಾಗ ಬೆಂಗಳೂರು ಆಕಾಶವಾಣಿ ಕೇಂದ್ರ ಒಂದು ಆಸ್ಥಾನ ಸಭೆಯಂತೆ ಶೋಭಿಸುತ್ತಿತ್ತು. ತಮ್ಮ ರೂಂನಲ್ಲಿ ನಾಲ್ಕು ಜನ ಸೇರಿದರೆ ವಿ.ಸೀ. ಅವರಿಗೆ ಎಷ್ಟು ಖುಷಿ ಎಂದರೆ ಜವಾನನ ಕೈಯಲ್ಲಿ ನೂರು ರೂಪಾಯಿ ನೋಟು ಕೊಟ್ಟು ಸೋಹನ್ ಹಲ್ವಾ (ಅದೂ ಕೆಂಪೇಗೌಡ ರಸ್ತೆಯ ವಿಶಿಷ್ಟ ಅಂಗಡಿಯಲ್ಲೇ), ಸಮೀಪದ 'ಸುಖಾನಂದ ಹೋಟೆಲ್' ನಿಂದ ದೋಸೆ-ಕಾಫಿ ತರಿಸುವರು. ಸಂಗೀತ ವಿದ್ವಾನ್ ದೊರೆಸ್ವಾಮಿ ಅಯ್ಯಂಗಾರರಿಗೆ ಬರಹೇಳುವರು (ಅವರು ಸಂಗೀತ ವಿಭಾಗದ ಪ್ರೊಡ್ಯೂಸರ್). ಶ್ರೀರಂಗರು, ಕಸ್ತೂರಿ, ಎಚ್. ಕೆ. ರಂಗನಾಥ್, ಎಸ್. ಕೃಷ್ಣಮೂರ್ತಿ, ಅನಾಯಾಸವಾಗಿ ಆಗಾಗ ಬರುತ್ತಿದ್ದ ಕವಿ ಪು.ತಿ.ನ. – ಇಂತಹ ಘಟಾನುಘಟಿಗಳ ಒಡ್ಡೋಲಗದಲ್ಲಿ ವಿ.ಸೀ. ಅವರ ಸ್ನೇಹ ಸಂತೋಷ ಕೂಟ! ಕೇಳಬೇಕೆ? ಇನ್ನೊಬ್ಬರಿಂದ ಒಂದು ಕಾಸೂ ಆ ವೆಚ್ಚಕ್ಕೆ ಸೇರುವಂತಿಲ್ಲ! ಇಂತಹ ಧಾರಾಳತನ.

ವಿ.ಸೀ. ಅವರು ಬಾಯ್ಸವಿಯಲ್ಲೂ ಬಹುಶ್ರುತರು. ಈ ಬಗ್ಗೆ ಅವರೇ ಹೇಳುವರು. ಒಮ್ಮೆ ಪುಣೆಯ ಕರ್ನಾಟಕ ಸಂಘದ ಮುಖ್ಯ ಅತಿಥಿಯಾಗಿ ವಾರ್ಷಿಕ ಸಮಾರಂಭಕ್ಕೆ ಹೋಗಿದ್ದರಂತೆ. ಅಂದು ರಾತ್ರಿ ಮೇಲಿಗೆ ಅವರ ಮರು ಪ್ರಯಾಣದ ಟಿಕೆಟ್ ರಿಜರ್ವ್ ಆಗಿತ್ತು. ರಾತ್ರಿ ಅವರ ಬೀಳ್ಕೊಡುಗೆಯ ಮೇಜವಾನಿ. ಆ ಬಿಸಿ ಬಿಸಿ ಚಪಾತಿ, ಆ ಶ್ರೀಖಂಡದ ಸವಿ ವಿ.ಸೀ. ಅವರಿಗೆ ಎಷ್ಟು ಖುಷಿ ತಂದಿತೆಂದರೆ ಈ ಸವಿಯೂಟದ ಸಂಭ್ರಮದಲ್ಲಿ ವಿ.ಸೀ. ರೈಲು ಟೈಂ ಮರೆತೇ ಬಿಟ್ಟು – 'ರಿಜರ್ವೇಶನ್ ನಾಳೆಗೆ ಬದಲು ಮಾಡಿಸಿಬಿಡಿ ಅಪ್ಪ' ಎಂದು ನಕ್ಕು ಹೇಳಿಬಿಟ್ಟರಂತೆ! ಶ್ರೀಖಂಡದ ಮಹಿಮೆ ಅದು!

"ಕವಿ-ಕಾವ್ಯ-ದರ್ಶನ" ಎಂಬ ವಿಶಿಷ್ಟ ಕಾವ್ಯ-ಸಂಗೀತ-ಗಮಕ ಕಾರ್ಯಕ್ರಮ ವಿ.ಸೀ. ಅವರ ವೈಶಿಷ್ಟ್ಯಪೂರ್ಣ ಕಾರ್ಯಕ್ರಮ. ಅದರ ಜೊತೆಗೆ 'ಕಾವ್ಯರಂಗ'ವೂ ಒಂದು. ನಾನು ವಿ.ಸೀ. ಅವರಿಗೆ ಈ 'ಕಾವ್ಯರಂಗ'ದ ಸಹಾಯಕನಾಗಿದ್ದೆ. ಕವಿ ಕುಮಾರವ್ಯಾಸ ಭಾರತದ ರಸವತ್ತಾದ ಸನ್ನಿವೇಶಗಳು, ನಿರೂಪಣೆಯ ಧ್ವನಿಗಳು ಮತ್ತು ಭಾರತದ ಆಯ್ದ ಭಾಗದ ಗಮಕ. ಇದು ಕಾವ್ಯರಂಗದ ರೂಪರೇಷೆ. ಅಂದು ಭಾನುವಾರ. ಮುದ್ದಾಂ ಭಾನುವಾರವನ್ನೇ ಆರಿಸಿದ್ದರ್ರು. ಎಂದರೆ ನಿರಾಂತಕವಾಗಿ ಮೂರು ತಾಸಾದರೂ ರಿಹರ್ಸಲ್ ನಡೆಯಬಹುದೆಂದು. ಖ್ಯಾತ ರಂಗ ಕಲಾವಿದೆ ಬಿ. ಜಯಮ್ಮನವರೂ ಅದರಲ್ಲಿ ಭಾಗವಹಿಸಿದ್ದರು. ವಿ.ಸೀ. ಅವರು ಕಾವ್ಯ ಭಾಗವನ್ನು ಅರ್ಥೈಸಿ ಹೇಳುವ ಹದವಾದ ರಸಮಯ ರೀತಿಗೆ ಎಲ್ಲರೂ ಗರ್ಕಾಗಿ ಬಿಟ್ಟಿದ್ದರು. ವಿ.ಸೀ. ಅವರ ಅರ್ಥೈಕೆಯೆ ಇನ್ನೂ ನಡೆದಾಗ ಹನ್ನೆರಡೂವರೆ! ಎಲ್ಲರೂ ಹಸಿದವರೆ!

"ನಡೆಯಿರಿ, ಒಂದು ಸೊಗಸಾದ ಹೋಟೆಲ್‌ಗೆ ಹೋಗಿ ಊಟ ಮಾಡೋಣ" ಎಂದು ಬಿಟ್ಟರು ಪ್ರೊಡ್ಯೂಸರ್! ನಾನು ನಿರ್ದೇಶಕರ ಅನುಮತಿ ಪಡೆದು ಕಾರ್ ಆರ್ಡರ್ ಏನೋ ಹಾಕಿದೆ. ಆದರೆ ಇಷ್ಟು ಜನ ಕಲಾವಿದರು – ಅದರಲ್ಲೂ ಪ್ರತಿಷ್ಠಿತರು – ಅವರ ಹೋಟೆಲ್ ಊಟದ ವೆಚ್ಚ? ಅಷ್ಟರಲ್ಲಿಯೆ ಬಹುಶಃ ನನ್ನ ಮುಖಮಂಡಲದ ಚಿಹ್ನೆಯನ್ನು ಗುರುತಿಸಿಯೊ ಏನೊ – "ಕುಲಕರ್ಣಿ, ಈ ಅತಿಥಿಗಳಿಗೆ ಊಟ ನನ್ನ ಸಂತೋಷಕ್ಕಾಗಿ.

ನಾನು ವೆಚ್ಚವಹಿಸುವವನು" ಎಂದು ನುಡಿದರು. ಆಯಿತು ನೂರು ರೂಪಾಯಿ ಮಿಕ್ಕಿ. ವಿ.ಸೀ. ಅವರ 'ಹಣ ಪ್ರಪಂಚ'ಕ್ಕೆ ಪೆಟ್ಟು ತಟ್ಟಿರಬೇಕು. ಆದರೆ ಆತಿಥೇಯನಾಗಿ ಖುಷಿ ಪಟ್ಟವರು ರಸಋಷಿ ವಿ.ಸೀ.

ಮುಂದೆ ವಿ.ಸೀ. ಅವರಾಗಲಿ, ಶ್ರೀರಂಗರಾಗಲಿ, ಕಸ್ತೂರಿಯವರಾಗಲಿ ತಂತಮ್ಮ ನಿವೃತ್ತಿ ಅವಧಿಯವರೆಗೂ ಆಕಾಶವಾಣಿಯ ಸೇವೆಯಲ್ಲಿ ನಿಲ್ಲಲಿಲ್ಲ. ಏನೇನೋ ಕಾರಣಗಳಿಗಾಗಿ ತ್ಯಾಗಪತ್ರ ನೀಡಿ ಹೊರಬಿದ್ದುಬಿಟ್ಟರು. ಡಾ. ನಟೇಶರು ಬೆಂಗಳೂರು ಕೇಂದ್ರದ ನಿರ್ದೇಶಕರಾಗಿದ್ದಾಗ 'ಶ್ರೀ' ಅವರ 'ಅಶ್ವತ್ಥಾಮನ್', 'ಪಾರಸಿಕರು', ಕುವೆಂಪು 'ಸ್ಮಶಾನ ಕುರುಕ್ಷೇತ್ರ'ಗಳು ವಿ.ಸೀ. ನಿರ್ದೇಶನದಲ್ಲಿ ಯಶಸ್ವಿ ಪ್ರಸಾರಗೊಂಡವು.

ವಿ.ಸೀ. ಅವರ

ಎಮ್ಮ ಮನೆಯಂಗಳದಿ ಬೆಳಿದೊಂದು ಹೂವನ್ನು
ನಿಮ್ಮ ಮಡಿಲೊಳಗಿಡಲು ತಂದಿರುವೆವು;
ಕೊಳ್ಳಿರೀ ಮಗುವನ್ನು ಎಮ್ಮ ಮನೆ ಬೆಳಕನ್ನು
ನಿಮ್ಮ ಮನೆಯನು ತುಂಬಲೊಪ್ಪಿಸುವೆವು.

ಎಂಬ ಹೃದಯಸ್ಪರ್ಶಿ ಬೀಳ್ಕೊಡುಗೆಯ ಭಾವಗೀತ ಖ್ಯಾತ ಗಮಕಿ ಸಂಪತ್ಕುಮಾರಾಚಾರ್ಯರಿಂದ ಮೈಸೂರು ಭಾಗದ ಮನೆಮನೆಗಳಲ್ಲಿ ಕಾಳಿದಾಸನ 'ಯಾಸ್ಯತ್ಯದ್ಯ ಶಕುಂತಲೇತಿ' ಎಂಬ ಕಣ್ವಗೀತೆಯನ್ನೂ ಮರೆಸಿ, ಎಲ್ಲ ಮದುವೆಯ ಮಂಟಪಗಳ ಮನೋಮಂದಿರಗಳನ್ನು ಬೆಳಗಿ ಹೃದಯಗಳನ್ನು ಮುಟ್ಟಿ, ಕರುಳನ್ನು ತಟ್ಟಿ ಕಣ್ಣೀರು ಸುರಿಸಿ ಹಚ್ಚಿದ ಖ್ಯಾತಿ! ಇಂತಹ ಖ್ಯಾತಿಯ ವಿ.ಸೀ. ಅವರ ಈ ಗೀತೆಗೆ ನಾನು ಬೆಂಗಳೂರು ಆಕಾಶವಾಣಿಯಲ್ಲಿದ್ದಾಗ ಐದಾರು **stanza**ಗಳ ಒಂದು ಅಣಕವಾಡು ರಚಿಸಿದ್ದೆ. ಹತ್ತು ವರ್ಷಗಳ ಹೆತ್ತ ಹೆಗ್ಗಣದಂತಹ 'ಮೊದ್ದುಮಣಿ'ಯನ್ನು ಅಪ್ಪ ಶಾಲೆಗೆ ಹಾಕುತ್ತಾನೆ. ಮಗುವನ್ನು ಮಾಸ್ತರರ ವಶಕ್ಕೆ ಒಪ್ಪಿಸಿ, ಒತ್ತರಿಸಿ ಬರುವ ಅಣಕದ ಕಣ್ಣೀರು ಸುರಿಸುತ್ತ ಹೇಳುತ್ತಾನೆ:

ಎಮ್ಮ ಮನೆ ಹಿತ್ತಲದಿ ಬೆಳೆದ ಕುಂಬಳಕಾಯಿ
ನಿಮ್ಮ ತಲೆ ಮೇಲಿಡಲು ತಂದಿರುವೆವು।
ಕೊಳ್ಳಿರೀ ಮಗುವನ್ನು ಎಮ್ಮ ಮನೆ ಕೊಳಕನ್ನು
ನಿಮ್ಮ ಒಡಲನು ತುಂಬಲೊಪ್ಪಿಸುವೆವು ॥

ಅಣಕವಾಡು ಹೀಗೇ ಮುಂದುವರಿಯುತ್ತದೆ. ಇದಕ್ಕೆ ವಿ.ಸೀ. ಅವರ ಪ್ರತಿಕ್ರಿಯೆ? ನಿಮಗೆ ಕುತೂಹಲ ಅಲ್ಲವೆ? ನನಗೂ ಅಂದು ಭಯ ಆತಂಕಗಳು. ಇದು ಪ್ರಸಾರವಾಗುವಾಗ ವಿ.ಸೀ. ಅವರ ಸಮ್ಮುಖದಲ್ಲೇ ನಾನು ಕುಳಿತಿದ್ದೆ. ಮೂಲ ಬಿಂಬದ ಮೌಲ್ಯವೇನು, ಈ ವಿಕೃತ ಪ್ರತಿಬಿಂಬದ ಅಪಮೌಲ್ಯವೇನು! ಆದರೆ ವಿ.ಸೀ. ಅವರು ಒಳ್ಳೇ **sport** ಎಂದೇ ಹೇಳಬೇಕು. ಈ ಅಣಕವಾಡನ್ನು ಕೇಳಿ ಅಣಕು ವಿವಹೇಳನೆಗಳಿಲ್ಲದೆ ಎಲ್ಲರೊಡನೆ ಅವರೂ ನಕ್ಕಿದ್ದೇ ನಕ್ಕಿದ್ದು! ಉದಾರವಾದ, ಉತ್ತೇಜಕವಾದ ಆ ಲೀಲಾಮಯವಾದ ನಗೆ, ಇನ್ನೆಲ್ಲಿ ಸಿಕ್ಕೀತು ನಮಗೆ?

ರಸಜೀವಿ

ಎಸ್. ವಿ. ಪರಮೇಶ್ವರ ಭಟ್ಟ

ನನಗೆ ಈಗ ಎಂಭತ್ತೈದನೆಯ ವರ್ಷ ನಡೆಯುತ್ತಿದೆ. ನನ್ನ ವಿದ್ಯಾರ್ಥಿ ದೆಸೆಯಲ್ಲಿ ನಾನಿದ್ದಾಗ ನಡೆದ ಘಟನೆಗಳನ್ನು ಕುರಿತು ಬರೆಯುತ್ತಿದ್ದೇನೆ. ಈ ಬರವಣಿಗೆಯಲ್ಲಿ ದೋಷಗಳಿರುವುದು ಸಹಜ. ನನ್ನನ್ನೂ ಶ್ರೀ ವಿ. ಸೀತಾರಾಮಯ್ಯನವರನ್ನೂ ಬಲ್ಲ ಹಿರಿಯರು ಇಲ್ಲಿನ ಸರಿತಪ್ಪುಗಳನ್ನು ಗುರುತಿಸಿ, ಸರಿಯಾದುದನ್ನು ಗ್ರಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅತಿಥಿಗಳಾಗಿಯೋ ಅಭ್ಯಾಗತರಾಗಿಯೋ ಬಂದವರನ್ನು–ಅವರು ಚಿಕ್ಕವರಿರಲಿ, ದೊಡ್ಡವರಿರಲಿ – ವಿ.ಸೀ. ಅವರು ತಾವು ಕುಳಿತುಕೊಳ್ಳುತ್ತಿದ್ದ ಕೊಠಡಿಗೆ ಬರಮಾಡಿ ಕೊಳ್ಳುತ್ತಿದ್ದರು. ಅವರ ಕೊಠಡಿಯಲ್ಲಿ ಕುರ್ಚಿ ಮೇಜು ಬೆಂಚು ಮೊದಲಾದವುಗಳು ಇರುತ್ತಿರಲಿಲ್ಲ. ಒಂದು ದೊಡ್ಡ ಚಾಪೆ ಹಾಸಿರುತ್ತಿತ್ತು. ಗೋಡೆಗೆ ಒರಗಿಸಿಟ್ಟಿದ್ದ ಒಂದು ಪಕ್ಕದಲ್ಲಿ ಒಂದು ಸುತ್ತಿಟ್ಟ ಹಾಸಿಗೆಯ ಸುರುಳಿ ಇರುತ್ತಿತ್ತು. ಬಂದವರು ಮಾರ್ಗಾಯಾಸವನ್ನು ಪರಿಹರಿಸಿಕೊಂಡರು ಎನ್ನುವಷ್ಟರಲ್ಲಿ ಒಳಗಿನಿಂದ ಬಂಧುವೊಬ್ಬರು ಕಾಫಿ ತರುತ್ತಿದ್ದರು. ಅದು ಕುಡಿದಾದ ಮೇಲೆ ವಿ.ಸೀ. ಮಾತಿಗೆ ಆರಂಭಿಸುತ್ತಿದ್ದರು. ನನಗೆ ಮನೆಯ ಕಾಫಿ ಕುಡಿಯುವ ಹುಚ್ಚು ಬಹಳ. ಒಳ್ಳೆಯ ಕಾಫಿ ಕುಡಿಯುವ ಆಸೆ ಆದಾಗಲೆಲ್ಲ ನಾನು ವಿ.ಸೀ. ಅವರ ಮನೆಗೆ ಧಾವಿಸುತ್ತಿದ್ದೆ. ಅವರ ಎದುರಿನಲ್ಲಿ ಪದ್ಮಾಸನ ಹಾಕಿ ಕುಳಿತು ಕೊಳ್ಳುತ್ತಿದ್ದೆ. ವಿ.ಸೀ. ಅವರು ಮಾತಿಗೆ ಆರಂಭಿಸುತ್ತಿದ್ದರು.

"ನೀನು ನನ್ನ ಮನೆಗೆ ನಡೆದು ಬಂದೆಯಲ್ಲ, ಆಗ ನೀನು ತಲೆದೂಗುತ್ತ ಬಂದೆ. ರೆಪ್ಪೆ ತೆರೆದು ಮುಚ್ಚಿ ತೆರೆದು ಮುಚ್ಚಿ ಬರುತ್ತಿದ್ದೆ. ನೀನು ಕಾಲುಗಳನ್ನು ಎತ್ತಿ ಹಾಕುತ್ತಿದ್ದೆ. ಕೈಗಳನ್ನು ತೂಗುತ್ತ ಬಂದೆ. ನಿನ್ನ ಎದೆ ಡಬ್‌ಲಬ್ ಡಬ್‌ಲಬ್ ಎಂದು ಹೊಡೆದು ಕೊಳ್ಳುತ್ತಿತ್ತು. ನಿನ್ನ ನಾಡಿ ಮಂದವಾಗಿ ಮಿಡಿಯುತ್ತಿತ್ತು. ಇವುಗಳಲ್ಲೆಲ್ಲಾ ಒಂದು ರೀತಿಯ ಲಯ ಕಾಣಬರುತ್ತಿತ್ತು. ಈ ಲಯವನ್ನೇ ನಾವು ಛಂದೋರಚನೆಯಲ್ಲಿ ಬೇರೊಂದು ರೀತಿಯಲ್ಲಿ ಕಾಣುತ್ತೇವೆ."

ಹೀಗೆ ಹೇಳಿದವರೇ ಮೆಲ್ಲಗೆ ವಿ.ಸೀ. ಹಾಡತೊಡಗಿದರು :

ಅರಸಿನ ಕುಲವೋ, ಏನಿದ್ದೇನು!
ಸುರವಧು ರೂಪೋ, ಏನಿದ್ದೇನು!
ಗುಣವೋ, ಸೊಬಗೋ, ಏನಿದ್ದೇನು!
ಪದುಮಾ ಇದ್ದುವು ನಿನಗೆಲ್ಲಾ.
ಪದುಮಾ, ಎಚ್ಚತ್ತಳುವುದೆ ಅಲ್ಲದೆ
ಕಣ್ಣೆವು ನಿನ್ನನು ಕಾಣುವುವೆ? –
ನೆನಸಿಕೊಳುವೆ, ಬಿಸುಸುಯ್ಯುವೆ, ಇರುಳನು
ನಿನಗೆಯೆ ಮೀಸಲು ತೆಗೆದಿಡುವೆ.

ಈ ಕವನದಲ್ಲಿ ಇರುವ ಲಯ, ಆದರ ಹಾಸು ಬೀಸು, ಏರಿಳಿತ ಇವುಗಳನ್ನೆಲ್ಲ ವಿವರವಾಗಿ ತಿಳಿಸಿದರು. ಅವರು ಮನೆಯಲ್ಲಿಯೇ ಆಗಲಿ, ತರಗತಿಯಲ್ಲಿಯೇ ಆಗಲಿ ಕನ್ನಡದ ಪಾಠಗಳನ್ನು ಇಂಗ್ಲಿಷ್‌ನಲ್ಲಿಯೇ ಮಾಡುತ್ತಿದ್ದರು.

ವಿ.ಸೀ. ಅವರಿಗೆ ಮಾಸ್ತಿಯವರ ಬರಹಗಳು ಬಹಳ ಇಷ್ಟ. ಅವರ ಸರಸ ಸರಳ ಸುಂದರ ಶೈಲಿಯನ್ನು ಮೆಚ್ಚಿ ಬಾಯಿ ತುಂಬ ಹೊಗಳುತ್ತಿದ್ದರು.

ಒಮ್ಮೆ ನಾನು ವರ್ಡ್ಸ್‌ವರ್ತ್ ಕವಿಯ ಮೈಖೇಲ್ ಕವನವನ್ನು ಮಾಚಯ್ಯ ಎಂಬ ಹೆಸರಿನಲ್ಲಿ ಅನುವಾದ ಮಾಡಿ ವಿ.ಸೀ. ಅವರಿಗೆ ತೋರಿಸಿದೆ. ಅಲ್ಲಿ ಮಾಚಯ್ಯ ದಂಪತಿಗಳನ್ನು ಈರ–ಈರಿ ಎಂದು ಅನುವಾದ ಮಾಡಿದ್ದೆ. ವಿ.ಸೀ. ಅವರು ಗಾಬರಿಗೊಂಡರು. ಕೂಡಲೇ ಅವರು ಹೇಳಿದರು: 'Change the names ಈರ and ಈರಿ.It jars upon the ear. B.M.S. does not like it' ಎಂದರು. ಆಗ ನಾನು ಒಪ್ಪಿ ಅವರನ್ನು ಮಾಚ–ಮಾಚಿಯರೆಂದು ಬರೆದೆ. ವಿ.ಸೀ. ಅವರೂ ಒಪ್ಪಿಕೊಂಡರು. ಆ ಕವನಕ್ಕೆ ಬಿ.ಎಂ.ಶ್ರೀ. ಅವರ ಬಂಗಾರದ ಪದಕವೂ ಬಂದಿತು. ವಿ.ಸೀ. ಅವರಿಗೆ ಆದ ಸಂತೋಷಕ್ಕೆ ಪಾರವೇ ಇರಲಿಲ್ಲ.

ವಿ.ಸೀ. ಅವರದು ಬಹಳ ಸೂಕ್ಷ್ಮವಾದ ಕವಿಹೃದಯ. ಅವರು ಒಬ್ಬ ರಸಪುರುಷರು.

ಹೂವನ್ನು 'ಕೊಯ್ಯುವುದು' ಎನ್ನುವುದನ್ನು ಅವರು ಸಹಿಸುತ್ತಿರಲಿಲ್ಲ. ಹೂವನ್ನು ಆಯಬೇಕು, ಬಿಡಿಸಬೇಕು ಎಂದು ಅವರು ಹೇಳುತ್ತಿದ್ದರು, "ಹೂವು ಎಷ್ಟು ಮೃದು, ಎಷ್ಟು ಕೋಮಲ! ಎಂತಹ ಬಣ್ಣ ಅದರದು, ಎಂತಹ ಪರಿಮಳ! ಅಂತಹ ದೇವರಿಗೆ ಸಮನಾದ ಹೂವನ್ನು ಕೊಯ್ಯುವುದು ಎಂದು ಹೇಳಬಹುದೆ? ಕೊಯ್ಯುವುದಕ್ಕೆ ಅದೇನು ಮರವೆ?" ಎಂದು ಅವರು ಕೇಳುತ್ತಿದ್ದರು. ಅವರು ಹಾಕುವ ಚಪ್ಪಲಿಯೂ ಬಹಳ ನಾಜೂಕಾಗಿರಬೇಕು. ಕುಡಿಯುವ ಕಾಫಿ ಆಗಲಿ, ಟೀ ಆಗಲಿ, ಅದರ ರುಚಿ ಮಾತ್ರವಲ್ಲ, ಅದರ ಬಣ್ಣವೂ ಅವರಿಗೆ ಮುಖ್ಯ.

ಇಂತಹ ರಸಜೀವಿ, ಇಂತಹ ಸಹೃದಯಿ, ಇಂತಹ ಶಿಷ್ಯವಾತ್ಸಲ್ಯ ಪ್ರಪೂರ್ಣಹೃದಯಿ ನಮಗೆ ಎಲ್ಲಿ ದೊರೆಯುತ್ತಾರೆ! ಇವರು ತ್ರಿಕಾಲಸ್ಮರಣೀಯರು. ಇವರನ್ನು ನೆನೆಯುವುದು ಸಂಧ್ಯಾವಂದನೆ ಮಾಡಿದ ಹಾಗೆ.

ಶ್ರೀ ವಿ.ಸೀ. ಅವರಿಗೆ ನನ್ನ ಸಾವಿರ ನಮನಗಳು.

ಸಂಸ್ಕೃತಿಯ ಉತ್ಕೃಷ್ಟ ಪ್ರತೀಕ

ಕೆ. ಎಸ್. ನರಸಿಂಹಸ್ವಾಮಿ

ವಿ.ಸೀ. ಯವರು ೧೯೩೬ರಲ್ಲಿ ಮೈಸೂರಲ್ಲಿಯೇ ನನಗೆ ಪರಿಚಿತರಾಗಿದ್ದರೂ, ಅಕ್ಟೋಬರ್ ೧೯೫೫ಳನೇ ಇಸವಿಯಲ್ಲಿ ನಾನು ಬೆಂಗಳೂರಿಗೆ ವರ್ಗವಾಗಿ ಬಂದ ಮೇಲೆ ಅವರ ಸಂಪರ್ಕ ಹೆಚ್ಚು ಹತ್ತಿರವಾಯಿತು. ಆಗ ನಾನು ಕೆಲಸ ಮಾಡುತ್ತಿದ್ದ ಹೌಸಿಂಗ್ ಬೋರ್ಡ್ ಕಚೇರಿ ಚಾಮರಾಜಪೇಟೆ ಗ್ರೈನ್ ಮರ್ಚೆಂಟ್ಸ್ ಬ್ಯಾಂಕ್ ಮಹಡಿಯ ಮೇಲಿತ್ತು. ವಿ.ಸೀ. ಅವರ ಮನೆ ಚಾಮರಾಜಪೇಟೆ ಎರಡನೇ ಮುಖ್ಯ ರಸ್ತೆಯಲ್ಲಿತ್ತು.

ಕಚೇರಿ ಕೆಲಸ ಮುಗಿಸಿಕೊಂಡು ಪ್ರತಿಸಂಜೆ ನಾನು ಅವರ ಮನೆಗೆ ಹೋಗುತ್ತಿದ್ದೆ. ಅವರು ನನಗಾಗಿ ಕಾದಿರುತ್ತಿದ್ದರು. 'ನೋಡಿ, ಈ ಇಂಗ್ಲಿಷ್ ಕವಿತೆ ಓದುತ್ತೇನೆ, ಕೇಳಿ' ಎನ್ನುತ್ತಿದ್ದರು. ಆ ತರಗತಿಯ ಒಬ್ಬನೇ ವಿದ್ಯಾರ್ಥಿಯಾಗಿ ನಾನು ಅವರ ಮಾತುಗಳನ್ನು ಗಮನವಿಟ್ಟು ಕೇಳುತ್ತಲಿದ್ದೆ. ಅವರು ನನಗೆ ಎಜ್ರಾ ಪೌಂಡ್, ಎಲಿಯಟ್, ಆಡೆನ್ ಮುಂತಾದ ಇಂಗ್ಲೆಂಡಿನ ಶ್ರೇಷ್ಠ ಕವಿಗಳ ಕವನಗಳನ್ನು ಓದಿ, ಅವುಗಳ ಶಕ್ತಿ ಸೌಂದರ್ಯಗಳನ್ನು ಪರಿಚಯ ಮಾಡಿಕೊಟ್ಟರು. ಎಲಿಯಟ್‌ನ "Four Quartets" ಕವನ ಸಂಗ್ರಹವನ್ನು ನನಗೆ ಪಾಠ ಹೇಳಿದ ಗುರು ವಿ.ಸೀ. ಅವರು.

ಒಮ್ಮೆ "Letters from Ezra Pound" ಎಂಬ ಪುಸ್ತಕವನ್ನು ತಂದುಕೊಟ್ಟು ವಿ.ಸೀ. 'ಇದನ್ನು ಓದಿ' ಎಂದರು. ಅದರಲ್ಲಿ ಒಂದು ಕಡೆ 'Until some one is honest, we get nothing clear' ಎಂಬ ಮಾತಿದೆ. ಅದು ನನಗೆ ತುಂಬಾ ಹಿತವಾಯಿತು. ನನಗೆ ಆಧುನಿಕ ಇಂಗ್ಲಿಷ್ ಕವಿಗಳ ಕವಿತೆ, ಇಂಗ್ಲಿಷ್ ನವ್ಯ ಕಾವ್ಯದ ಹಾದಿ ಪರಿಚಯವಾದದ್ದು ಹೀಗೆ– ವಿ.ಸೀ. ಅವರ ಕೊಠಡಿಯಲ್ಲಿ. ಅವರ ಬೋಧನೆ ಅರ್ಧ ಇಂಗ್ಲಿಷಲ್ಲಿ, ಅರ್ಧ ಕನ್ನಡದಲ್ಲಿ ನಡೆಯುತ್ತಿತ್ತು. ಇಂಗ್ಲಿಷ್ ಮತ್ತು ಕನ್ನಡ ಕವಿತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಅವರು ವಾಚನ ಮಾಡುತ್ತಿದ್ದರು.

"ಏನಾದರೂ ಹೊಸ ಕವಿತೆ ಬರೆದು ತಂದಿದ್ದೀರಾ?" ಎಂದು ಅವರು ನನ್ನನ್ನು ಕೇಳುತ್ತಿದ್ದರು. ನಾನು ಜೇಬಿನಿಂದ ಅಂದೋ ಅದಕ್ಕಿಂತ ಹಿಂದೋ ಬರೆದಿದ್ದ ಕವನವನ್ನು ತೆಗೆದು ಓದುತ್ತಿದ್ದೆ. ನಾನು ಓದಿದ್ದು ಸಾಲದೆ ಅವರೇ ಅದನ್ನು ಕೈಗೆತ್ತಿಕೊಂಡು ಓದುತ್ತಿದ್ದರು. 'ನೀವು ಚೆಲುವಾದ ಕವನವನ್ನೇನೋ ಬರೆದಿದ್ದೀರಿ; ಆದರೆ ಚೆನ್ನಾಗಿ ಓದುತ್ತಿಲ್ಲ' ಎನ್ನುತ್ತಿದ್ದರು.

ಒಂದು ದಿನ ನಾನು ನನ್ನ "ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ" ಎಂಬ ಕವನವನ್ನು ಓದಿದೆ. ಅವರು ಆ ಕವನವನ್ನು ನನಗಿಂತ ಚೆನ್ನಾಗಿ ವಾಚನ ಮಾಡಿ, 'ಬರೆದರೆ ಇಂಥವನ್ನು ಬರೆಯಬೇಕು' ಎಂದರು. ಅವರಿಗೆ ಆ ಕವನ ಎಷ್ಟು ಪ್ರಿಯವಾಯಿತೆಂದರೆ ಅದನ್ನು ಇಂಗ್ಲಿಷಿಗೆ ಅನುವಾದ ಮಾಡಿದರು. 'ತ್ರಿವೇಣಿ' ಪತ್ರಿಕೆಯಲ್ಲಿ ಅದು ಅಚ್ಚಾಯಿತು. ಅನುವಾದ ಮೂಲ ಕವನದಷ್ಟೇ ಸುಂದರವಾಗಿತ್ತು. ಆ ಕವನದ ಸೊಗಸನ್ನು ಅವರು ಅನೇಕರಿಗೆ ಪರಿಚಯ ಮಾಡಿಕೊಟ್ಟರು.

ಅಂತೆಯೇ ಅವರು ನನ್ನ 'ರೈಲ್ವೆ ನಿಲ್ದಾಣದಲ್ಲಿ' ಎಂಬ ಕವನವನ್ನೂ ಇಂಗ್ಲಿಷಿಗೆ ಅನುವಾದ ಮಾಡುತ್ತ "ಇದರಲ್ಲಿ ಪದಗಳೇ ಇಲ್ಲವಲ್ರೀ ಅನುವಾದ ಮಾಡುವುದಕ್ಕೆ!" ಎಂದರು. ಅದರಲ್ಲಿ ಒಂದು Stanza ಹೀಗೆ ಬರುತ್ತದೆ.

'ಬಿಸಿ ನೀರಿದೆಯೇ ಮೀನಾ
ಮಗುವಿನ ಹಾಲಿನ ಪುಡಿಗೆ'
'ಬೇಕಾದಷ್ಟಿದೆಯಮ್ಮ
ಕಣ್ಣಲ್ಲೂ ಜೊತೆಗೆ.'

ಅದನ್ನು ಓದುತ್ತಾ 'ಇಷ್ಟು ಅಡಕವಾಗಿ ಬರೆಯುವುದು ನಿಮ್ಮಿಂದ ಮಾತ್ರ ಸಾಧ್ಯ' ಎಂದು ಹೇಳಿದರು. ಆಗ ಅವರ ಕಣ್ಣಿನಲ್ಲಿ ಒಂದು ಹನಿ ನೀರು ಇಳಿದಿತ್ತು. ಅಷ್ಟು ಹೊತ್ತಿಗೆ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಬಂದರು. ವಿ.ಸೀ. ಈ ಕವನವನ್ನು ಅವರಿಗೂ ಓದಿದರು. ಶಾಸ್ತ್ರಿಗಳ ಕಣ್ಣಲ್ಲೂ ನೀರು ಬಂತು.

'ಕಿಟಕಿಯ ಮುಚ್ಚಿಕೊ, ಮೀನಾ
ಕಿಡಿ ಬೀಳುವುದೊಳಗೆ'
'ಕಿಟಕಿಯ ಮುಚ್ಚಿದೆನಮ್ಮ
ಕಿಡಿ ಬೀಳದ ಹಾಗೆ.'

ಎಂದು ಆ ಕವನ ಮುಗಿಯುತ್ತದೆ. ವಿ.ಸೀ 'This is great' ಎಂದರು.

ಪ್ರತಿದಿನ ಸಂಜೆ ವಿ.ಸೀ., ನಾನು ಮತ್ತು ಶಾಸ್ತ್ರಿಗಳು ಮಾವಳ್ಳಿ ಟಿಫಿನ್ ರೂಮ್ಸ್‌ಗೆ ಹೋಗುತ್ತಿದ್ದೆವು. ಉಪಾಹಾರ ಸೇವಿಸಿ, ಅಲ್ಲಿಂದ ಲಾಲ್‌ಬಾಗಿಗೆ ತೆರಳಿ, ಮರದ ಕೆಳಗೆ ಕೂರುತ್ತಿದ್ದೆವು. ಆಗ ಸಾಹಿತ್ಯಕ ವಿಷಯಗಳು ಚರ್ಚೆಗೆ ಬರುತ್ತಿದ್ದವು. ಶಾಸ್ತ್ರಿಗಳು ಸಂಸ್ಕೃತದಿಂದ ಆಯ್ಕೆಮಾಡಿದ ಶ್ಲೋಕಗಳನ್ನು ಹಾಡುತ್ತಿದ್ದರು. ವಿ.ಸೀ. ಇಂಗ್ಲೆಂಡಲ್ಲಿ, ಬೇರಲ್ಲಿ ಕವಿತೆ ಹೇಗೆ ಬೆಳೆಯುತ್ತಿದೆ, ಏನೇನು ಬದಲಾವಣೆಗಳಾಗುತ್ತಿವೆ ಎಂಬುದನ್ನು ವಿವರಿಸುತ್ತಿದ್ದರು. ನಾನು ಮಾತ್ರ ಸಾಮಾನ್ಯವಾಗಿ ಮೌನಿಯಾಗಿ ಕುಳಿತು ಬಿಡುತ್ತಿದ್ದೆ. ಶಾಸ್ತ್ರಿಗಳು ಸಂಸ್ಕೃತ ಕವಿತೆಯನ್ನು ಬಲು ಆಕ್ಕರೆಯಿಂದ ನಮ್ಮ ಗಮನಕ್ಕೆ ತರುತ್ತಿದ್ದರು. ಹಳೆಯ ಸಂಪ್ರದಾಯ ಅವರಿಗೆ ಗೊತ್ತಿತ್ತು. ಆದರೆ ನೂತನ ಸಂಪ್ರದಾಯಗಳನ್ನೂ ಅವರು ಸ್ವಾಗತಿಸುತ್ತಿದ್ದರು. ಅಂಥ ವಿದ್ವಾಂಸರು ಈಗೀಗ ಅಪರೂಪ. "ಶಾಸ್ತ್ರಿಗಳ ಹಾಗೆ ರಾಮಾಯಣ ಪಾರಾಯಣ ಮಾಡುವವರು ಈ ದೇಶದಲ್ಲಿಯೇ ಹಲವರಿಲ್ಲ"

ಎನ್ನುತ್ತಿದ್ದರು ವಿ.ಸೀ. ವಿ.ಸೀ. ಅವರು ಬಹುಶ್ರುತರು. ಮಾತಾಡಿದಂತೆ ಅವರು ಬರೆಯುತ್ತಿದ್ದರು: ಇಂಗ್ಲಿಷಾಗಲಿ, ಕನ್ನಡವಾಗಲಿ.

ಹೀಗೆ ಹಲವು ವರ್ಷಗಳು ಕಳೆದವು. ಶಾಸ್ತ್ರಿಗಳು ತೀರಿಕೊಂಡರು. ಮೂವರಾಗಿದ್ದ ಲಾಲ್‌ಬಾಗ್ ಯಾತ್ರಿಕರು ಇಬ್ಬರಾದೆವು. ಮಾವಳ್ಳಿ ಟಿಫಿನ್ ರೂಮ್ಸ್‌ನಲ್ಲಿ ಕಾಫಿ ಕುಡಿಯುತ್ತ ಕುಳಿತಿರುವಾಗ ನಮ್ಮನ್ನು ಅಗಲಿದ ಶಾಸ್ತ್ರಿಗಳನ್ನು ಇಬ್ಬರೂ ಪದೇ ಪದೇ ಜ್ಞಾಪಿಸಿಕೊಳ್ಳುತ್ತಿದ್ದೆವು.

ವಿ.ಸೀ. ಅರ್ಥಶಾಸ್ತ್ರಜ್ಞರು. 'ಹಣ ಪ್ರಪಂಚ'ವೆಂಬ ಸೊಗಸಾದ ಪುಸ್ತಕವನ್ನು ಬರೆದರು. ಆದರೂ ತಮ್ಮ ಆದಾಯಕ್ಕಿಂತ ಹೆಚ್ಚು ಖರ್ಚು ಮಾಡುತ್ತಿದ್ದರು. ತಮ್ಮ ಕಷ್ಟ, ನೋವು ಹೆಚ್ಚಾದಾಗಲೂ ಸಾಹಿತ್ಯದಿಂದ ಆಗಬಹುದಾದ ಸಂತೋಷವನ್ನು ಅವರು ಮರೆಯಲಿಲ್ಲ. ಅವರ ಸಾಹಿತ್ಯಾಸಕ್ತಿ ಅವರ ಬಾಳಿನ ನೋವನ್ನು ದೂರ ಮಾಡಿತು ಎಂದು ನನಗೆ ತೋರುತ್ತದೆ. ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರಾಗಿದ್ದಾಗ ಮತ್ತು ಬೆಂಗಳೂರು ಆಕಾಶವಾಣಿಯಲ್ಲಿ Producer (Spoken word) ಆಗಿದ್ದಾಗ ಬಿಳಿಯ ರುಮಾಲನ್ನು ಧರಿಸುತ್ತಿದ್ದರು. ಬರೀತಲೆಯಲ್ಲಿ ಅವರು ಎಂದೂ ಹೊರಗೆ ಕಾಣಿಸಿಕೊಳ್ಳಲಿಲ್ಲ. ನಗರ ಜೀವನದ ಸಂಸ್ಕೃತಿಯ ಮಾದರಿಯಾಗಿದ್ದರು ವಿ.ಸೀ.

ಚಾಮರಾಜಪೇಟೆಯ ಅವರ ಮನೆಯ ಕೋಣೆಯಲ್ಲಿ ಚಾಪೆಗಳನ್ನು ಹಾಕಿದ್ದರೂ, ಒಂದೇ ಒಂದು ಕುರ್ಚಿ ಇತ್ತು. ಅವರನ್ನು ಕಾಣಲು ಬಂದವರೂ ಚಾಪೆಯ ಮೇಲೇ ಕೂರುತ್ತಿದ್ದರು. ವಿ.ಸೀ. ಅವರ ಸೂಚನೆಯನ್ನರಿತು ಅವರ ಶ್ರೀಮತಿಯವರು ಬಂದವರಿಗೆ ದೊಡ್ಡ ದೊಡ್ಡ ಲೋಟಗಳಲ್ಲಿ ಕಾಫಿಯನ್ನು ತಂದು ಇಡುತ್ತಿದ್ದರು. ಕೆಲವರು 'ಇನ್ನೊಂದು ಲೋಟ ತನ್ನಿ' ಎಂದು ತರಿಸಿ ಅರ್ಧ ಕಾಫಿಯನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ನಾನೂ ಹಾಗೆಯೇ ಮಾಡುತ್ತಿದ್ದೆ. ಅದಕ್ಕೆ ಒಮ್ಮೆ ವಿ.ಸೀ. 'ಇದೇನು ನೀವು ಅರ್ಧ ಕಾಫಿ ಮಾತ್ರ ತೆಗೆದುಕೊಳ್ಳುತ್ತಿದ್ದೀರಿ?' ಎಂದದ್ದುಂಟು.

ಅವರ ಮನೆಯಲ್ಲಿ ಅವರ ಕೋಣೆಯೊಂದೇ ವಿಶಾಲವಾದದ್ದು. ಅಲ್ಲಿ ಸಾಲು ಸಾಲಾಗಿ ಕಪಾಟುಗಳಲ್ಲಿ ಪುಸ್ತಕಗಳು ಕಂಗೊಳಿಸುತ್ತಿದ್ದವು. ಉತ್ತರದಿಂದ, ದಕ್ಷಿಣದಿಂದ ವಿದ್ವಾಂಸರು ಅವರಲ್ಲಿಗೆ ಬರುತ್ತಿದ್ದರು. ಎಷ್ಟು ದೂರದ ವಿದ್ವಾಂಸರ ಮಾತುಕತೆಗಳನ್ನು ಆ ಕೋಣೆ ಕೇಳಿದೆಯೊ ದೇವರೇ ಬಲ್ಲ! ವಿ.ಸೀ. ಅವರು ತಮ್ಮ ಕವಿತೆಗಳನ್ನು ಬದಿಗಿಟ್ಟು, ನನ್ನ ಕವಿತೆಗಳನ್ನು ಅವರಿಗೆಲ್ಲ ವಾಚನ ಮಾಡಿ ತೋರಿಸುತ್ತಿದ್ದರು. ಆಧುನಿಕ ಕನ್ನಡ ಕವಿತೆಯನ್ನು ಅವರಷ್ಟು ಚೆನ್ನಾಗಿ ವಾಚನ ಮಾಡುವವರು ಅಪೂರ್ವ.

ಟಿ. ಎಸ್. ವೆಂಕಣ್ಣಯ್ಯನವರು ಎತ್ತರದ ಆಳು. ಅವರು ವಿ.ಸೀ. ಅವರ ಈ ಕೋಣೆಯನ್ನು ತಲೆಬಾಗಿ ಪ್ರವೇಶಿಸುತ್ತಿದ್ದರು. ಇಂಥ ದೊಡ್ಡ ವಿದ್ವಾಂಸರು ತಲೆ ತಗ್ಗಿಸಿ ಏಕೆ ಒಳಬರಬೇಕು ಎಂದು ವಿ.ಸೀ. ಆ ಬಾಗಿಲನ್ನು ತೆಗೆಸಿ ಹಾಕಿ ಎತ್ತರದ ಇನ್ನೊಂದನ್ನು ಅಲ್ಲಿ ಇಡಿಸಿದರು. ವೆಂಕಣ್ಣಯ್ಯನವರಾದರೋ ವಿನಯಸಂಪನ್ನರು. ಹೊಸ ಬಾಗಿಲನ್ನು ಗಮನಕ್ಕೆ ತಂದುಕೊಳ್ಳದೆ ತಲೆ ತಗ್ಗಿಸಿಯೇ ಒಳಕ್ಕೆ ಬರುತ್ತಿದ್ದರು.

ಒಂದು ಮಾತು ಕವಿತೆಗೆ ಬಂದಾಗ ಅದರ ಭಾವ ಹೇಗೆ ಮಾರ್ಪಡುತ್ತದೆ, ಹಸಿರು ಗರಿಕೆಯನ್ನು ಮೇದ ಹಸುವಿನ ಹಾಲು ಏಕೆ ಬಿಳಿಗಿರುತ್ತದೆ ಎಂದವರು ಒಮ್ಮೆ ಪ್ರಶ್ನೆ ಎತ್ತಿದರು. ಅನುಭವಗಳು ಬೇರೆಯಾದರೂ ಅವು ಕವಿತೆಗೆ ಬಂದಾಗ ಹೇಗೆ ಮಾರ್ಪಡಿಸಲ್ಪಡುತ್ತವೆ ಎಂಬುದನ್ನು ಕುರಿತು ಚರ್ಚೆ ಮಾಡಿದೆವು. ಅವರು ಇಂಥ ಪ್ರಶ್ನೆಗಳನ್ನೇ ಹಾಕುತ್ತಿದ್ದರು. ಉತ್ತರಗಳನ್ನೂ ಅವರೇ ಕೊಡುತ್ತಿದ್ದರು. ಕವಿತೆಯ ಬಗೆಗೆ ಅವರು ಒಂದು ನಿರ್ದಿಷ್ಟ ಅಭಿಪ್ರಾಯವನ್ನು ಇಟ್ಟುಕೊಂಡಿದ್ದರು. ನನ್ನ ಮಿತ್ರರಾದ ಎಸ್. ಆರ್. ರಾಮಸ್ವಾಮಿಯವರು ಒಮ್ಮೆ "ಮೇಷ್ಟರೇ, ನಿಮ್ಮ ಕವಿತೆ ಹೊಸತಾದರೂ ಅದರ ಭಾಷೆ ಮಾತ್ರ ಏಕೆ ನಡುಗನ್ನಡದ್ದಾಗಿರುತ್ತದೆ?" ಎಂದು ಕೇಳಿದ್ದುಂಟು. "ನಾನು ಹಳೆಗಾಲದವನಪ್ಪ" ಎಂಬುದು ಅವರ ಉತ್ತರ.

ವಿ.ಸೀ. ಅವರಿಗೆ ಸಂಗೀತದ ಮೇಲೆ ತುಂಬಾ ಪ್ರೀತಿ. ತಮ್ಮ ಎಳೆತನದಲ್ಲಿ ಸಂಗೀತ ಶಾಸ್ತ್ರರತ್ನ ವಾಸುದೇವಾಚಾರ್ಯರ ಬಳಿ ಇವರು ಸ್ವಲ್ಪ ಕಾಲ ಸಂಗೀತ ಕಲಿತರಂತೆ. ೧೯೫೫ರ ಮುಗಿವಿನಲ್ಲೊಂದು ದಿನ ಸಂಗೀತ ವಿದುಷಿ ಲಲಿತಾ ಶಿವರಾಂ ಉಭಯಕರ್ ಅವರ ಬಂಗಲೆಗೆ ಶ್ರೀಮತಿ ವಿಮಲಾ ರಂಗಾಚಾರ್ ಅವರು ನಮ್ಮಿಬ್ಬರನ್ನೂ ಕರೆದುಕೊಂಡು ಹೋದರು. ಶ್ರೀಮತಿ ಉಭಯಕರ್ ನನ್ನ ಎರಡೋ ಮೂರೋ ಹಾಡುಗಳನ್ನು ತಂಬೂರಿಯ ಶೃತಿಯಲ್ಲಿ ಹಾಡಿದರು. ಉತ್ತರಾದಿ ಸಂಗೀತವನ್ನು ನಾನು ಅಷ್ಟಾಗಿ ಮೆಚ್ಚಿಕೊಂಡಿರಲಿಲ್ಲ. ಅಂದು ಆಕೆಯ ಗಾನವನ್ನು ಕೇಳಿ ಬೆರಗಾದೆ. ವಿ.ಸೀ. ಅವರು ನನ್ನ ಭಾವಗೀತೆಗಳನ್ನು ಆಕೆ ಹಾಡಿದ್ದನ್ನು ಕೇಳಿ "ಸೊಗಸಾದ ಶಾರೀರ, ಭಾವಪೂರ್ಣವಾದ ಗಾಯನ" ಎಂದು ಪ್ರಶಂಸಿಸಿದರು. ಆ ಸಂಗೀತ ಈಗಲೂ ನನ್ನ ಕಿವಿಯಲ್ಲಿ ಮೊಳಗುತ್ತಿದೆ.

ಒಮ್ಮೆ ವಿ.ಸೀ. ಯವರು ನನ್ನನ್ನು ನಮ್ಮ ಅತಿ ಶ್ರೇಷ್ಠ ಕಲೆಗಾರರಲ್ಲಿ ಒಬ್ಬರಾದ ಕೀರ್ತಿಶೇಷ ಕೆ. ವೆಂಕಟಪ್ಪನವರ ಮನೆಗೆ ಕರೆದುಕೊಂಡು ಹೋಗಿದ್ದರು. ಆಗ ಅವರು ವೀಣೆಯನ್ನು ನುಡಿಸುತ್ತಿದ್ದರು. "ಹೀಗೆ ವೀಣೆ ನುಡಿಸುವವರು ಇವರೊಬ್ಬರೇ" ಎಂದು ವಿ.ಸೀ. ಹೇಳಿದರು.

ವಿ.ಸೀ.ಯವರು ಸಂಸಾರದಲ್ಲಿ ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ಎಲ್ಲವನ್ನೂ ಅವರು ನಗುನಗುತ್ತಲೇ ಸಹಿಸಿದರು. ಅವರಿಗೆ ಎಪ್ಪತ್ತೈದು ತುಂಬಿದಾಗ ಕೆಲವು ಮಿತ್ರರೂ, ನಾನೂ ಅವರನ್ನು ಅಭಿನಂದಿಸಬೇಕೆಂದು ಯೋಜನೆಯೊಂದನ್ನು ಹಾಕಿಕೊಂಡೆವು. ಸಾರ್ವಜನಿಕ ಸಮಾರಂಭವೊಂದನ್ನು ಇಟ್ಟುಕೊಂಡೆವು. ಆಹ್ವಾನಪತ್ರಿಕೆಗಳನ್ನೂ ಕಳಿಸಿದ್ದಾಯಿತು. ದುರದೃಷ್ಟವಶಾತ್ ಅಂದಿನ ಪ್ರಾತಃಕಾಲವೇ ಅವರ ಶ್ರೀಮತಿಯವರು ತೀರಿಕೊಂಡರು. ಇದನ್ನು ಆಹ್ವಾನಿತರಿಗೆ ತಿಳಿಸುವ ಸಲುವಾಗಿ ಕಾರ್ಯಕ್ರಮವನ್ನು ಮುಂದೂಡಲಾಗಿದೆಯೆಂದು ಬೋರ್ಡ್ ಬರೆಸಿ ಪುರಭವನದ ಹೊರಗಿಟ್ಟೆವು. ಸಂತೋಷಕೂಟಕ್ಕೆಂದು ಬಂದ ಜನ ಕಣ್ಣೀರು ಹಾಕಿ ಅವರಿಗೆ ಸಾಂತ್ವನ ಹೇಳಿ ಹೋದರು.

ವಿ.ಸೀ. ಅವರಿಗೆ ಒಮ್ಮೆಯಾದರೂ ಇಂಗ್ಲೆಂಡಿಗೆ ಹೋಗಿ ಬರಬೇಕೆಂಬ ಆಸೆಯಿತ್ತು. ಭಾರತೀಯ ವಿದ್ಯಾಭವನದವರು ಅವರನ್ನು ಲಂಡನ್ನಿಗೆ ಕರೆಸಿಕೊಂಡರು. ಆದರೆ ಲಂಡನ್ ತಲುಪಿದ ಮರುದಿನವೇ ಅವರಿಗೆ ಪಾರ್ಶ್ವವಾಯುವಾಗಿ ಆಸ್ಪತ್ರೆಗೆ ಸೇರಿಸಲಾಯಿತು.

ಹೋದ ಕೆಲಸ ಕೈಗೂಡದೆ ತಿಂಗಳ ಬಳಿಕ ಅವರು ಬೆಂಗಳೂರಿಗೆ ವಾಪಸ್ಸಾದರು. ೧೯೬೦ರಲ್ಲಿ ಮತ್ತೆ ಅನಾರೋಗ್ಯ ಕಾಣಿಸಿಕೊಂಡಿತು. ನೆನಪು ತುಂಬಾ ಕ್ಷೀಣಿಸಿತು. ೧೯೬೩ರ ಸೆಪ್ಟೆಂಬರ್ ೪ ರಂದು ಅವರು ತೀರಿಕೊಂಡರು. ಬದುಕಿನಷ್ಟೇ ಅವರ ಸಾವು ಕೂಡ ಸರಳವಾಗಿತ್ತು.

ಅವರು ಈಗೆಲ್ಲೋ ನಕ್ಷತ್ರಪುಂಜದಲ್ಲಿ ಸೇರಿಹೋಗಿದ್ದಾರೆ. ಅವರಿಗೆ ಬಲು ಹತ್ತಿರದವನಾಗಿದ್ದ ನನಗಂತೂ ಅವರ ನೆನಪು ಉಕ್ಕಿ ಬರುತ್ತಿರುತ್ತದೆ. ಆ ಸುಸಂಸ್ಕೃತ ಜೀವ ಕಷ್ಟಸುಖಗಳಾಚೆಗೆ ಎಲ್ಲೋ ಹೋಗಿದೆ. ನಾನು ಲಾಲ್‌ಬಾಗಿಗೆ ಹೋಗಿಯೇ ದಶಕಗಳಾಗಿವೆ. ಸಂಸ್ಕೃತಿಯ ಉತ್ಕೃಷ್ಟ ಪ್ರತೀಕವಾಗಿದ್ದ ಅವರು ನನ್ನ ಹೃದಯದಲ್ಲಿ ಸೇರಿಹೋಗಿದ್ದಾರೆ. ಹೂವಿನಂತೆ ಅರಳಿ ಪರಿಮಳದಂತೆ ನನ್ನನ್ನು ದಾಟಿಕೊಂಡು ಹೋಗಿರುವ ಆ ಹಿರಿಯ ಜೀವಕ್ಕೆ ಇದೋ ನನ್ನ ನಮನ.

'ಸ್ವರ್ಗದೊಳಗೀ ಸ್ನೇಹ ದೊರೆವುದೇನು?'

"ಅವರನ್ನು ಕುರಿತು ನೆನೆದಾಗಲೆಲ್ಲ, ಅವರ ಹತ್ತಿರ ಇರುವಾಗಲೆಲ್ಲ 'ಸ್ವರ್ಗದೊಳಗೀ ಸ್ನೇಹ ದೊರೆವುದೇನು?' ಎಂದೇ ಅನಿಸುತ್ತದೆ. ನನಗೆ ಅವರಲ್ಲಿ ಅದೇ ಬಹಳ ದೊಡ್ಡದಾಗಿ ಕಂಡಿದೆ. ಅವರ ಆರ್ದ್ರವಾದ, ಉದಾರವಾದ, ನಿರ್ಮಲವಾದ ಹೃದಯವಂತಿಕೆ ಹಿರಿಕಿರಿಯರ ಜೊತೆಯಲ್ಲಿಯ ಅವರ ನಡೆನುಡಿಗಳಲ್ಲಿ ಸ್ನೇಹದ ಒಂದು ಬಗೆಯಾಗಿ, ಒಂದು ನಿತ್ಯ ಪ್ರಸಾದವಾಗಿ, ಕಾಣಿಸಿಕೊಳ್ಳುತ್ತದೆ. ಸಾಹಿತ್ಯ, ಸಂಸ್ಕೃತಿ, ಕಲೆ ಮುಂತಾದ ಕಾರ್ಯವಿಶೇಷಗಳಲ್ಲಿಯಾದರೆ ಹಿರಿದಾದದ್ದರ ಬಗೆಯಲ್ಲಿ, ದೊಡ್ಡದಾದದ್ದರ ಬಗೆಯಲ್ಲಿ, ಬದುಕಿಗೆ ಸಾರ್ಥಕ್ಯ ಭಾವವನ್ನು ಒದಗಿಸಬಲ್ಲ ಎಲ್ಲ ಅನುಭವದ ಬಗೆಯಲ್ಲಿ, ಒಂದು ನಿರಂತರವಾದ ನಿಷ್ಠೆಯಾಗಿ, ಅದೇ ಹೃದಯವಂತಿಕೆ ಸಹಜವಾದ ಔದಾರ್ಯದಿಂದ ಪ್ರತಿಸ್ಪಂದಿಸಬಲ್ಲ ಅವರ ವ್ಯಕ್ತಿತ್ವದ ಮಾನವೀಯ ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ. ಅಂಥ ಹೃದಯವಂತಿಕೆಯನ್ನು ನನ್ನ ಬದುಕಿನ ಅರುವತ್ತೊಂದು ವರ್ಷಗಳಲ್ಲಿ ಬೇರೆಡೆ ಎಲ್ಲಿಯೂ ಕಂಡಿಲ್ಲ. ನನ್ನ ನಡೆ ನುಡಿಗಳ ಮೇಲೆ, ನನ್ನ ತಿಳುವಳಿಕೆಯ ಸಾಮರ್ಥ್ಯದ ಮೇಲೆ, ನನ್ನಲ್ಲಿಯ ಅಭಿರುಚಿ, ವಿಮರ್ಶನಶಕ್ತಿ, ವಿವೇಚನೆ, ಒಟ್ಟು ಬದುಕನ್ನು ಕಾಣುವ ನೋಟದ ಮೇಲೆ ಅವರ ಹೃದಯವಂತಿಕೆ ಬೀರಿದ ಪ್ರಭಾವ ಇಷ್ಟು ಎಂದು ಹೇಳುವುದು ಕಷ್ಟ. ಮನುಷ್ಯ ಮನುಷ್ಯನಾಗಿ ಬಾಳಬೇಕು, ಬೆಳೆಯಬೇಕು; ಕಲೆ, ಸಾಹಿತ್ಯ, ತತ್ವ, ಎಲ್ಲವೂ ಅಷ್ಟಕ್ಕಾಗಿ; ಅವೆಲ್ಲವುಗಳ ಮುಖಾಂತರ ಸಿದ್ಧಿಸಬೇಕಾದ ಬುದ್ಧಿಭಾವನೆಗಳ ಸಂಸ್ಕರಣವೆಲ್ಲವೂ ಸ್ನೇಹಮಯಿಯಾಗಿ ಬಾಳಿ ತನ್ನ ಮತ್ತು ತನ್ನವರ ಬಾಳನ್ನು ಹಸನವಾಗಿಸಿ ಮೇಲಕ್ಕೆತ್ತುವುದಕ್ಕಾಗಿ, ಎಂದು ನಂಬಿ, ನಡೆದು, ನಡೆಯಿಸಬಲ್ಲ ಅವರ ಸಹವಾಸದ ಪ್ರಭಾವ ಒಂದು ಪುಣ್ಯ ವಿಶೇಷದ ಫಲ ಎಂದು ನನ್ನಂತೆ ಹಲವರು ಭಾವಿಸಿದ್ದರೆ ಅದೊಂದು ಆಶ್ಚರ್ಯದ ವಿಷಯವಲ್ಲ."

ವಿ. ಎಂ. ಇನಾಂದಾರ್

'ವಿ.ಸೀ.–೭೫' ಪು. iv–v

ಅವಿಸ್ಮರಣೀಯ ಸ್ಮರಣೆಗಳು

ಕಯ್ಯಾರ ಕಿಞ್ಞಣ್ಣ ರೈ

'ವಿ.ಸೀ.' ಎಂಬೀ ಎರಡಕ್ಷರಗಳಿಂದಲೇ ಖ್ಯಾತನಾಮರಾದ ಡಾ॥ ವಿ. ಸೀತಾರಾಮಯ್ಯನವರನ್ನು ನಾನು ಸುಮಾರು ಅರುವತ್ತು ವರ್ಷಗಳ ಹಿಂದಿನ ಕಾಲದಿಂದಲೇ ಒಳ್ಳೆಯ ಕವಿಯೆಂದು, ಉತ್ತಮ ಸಾಹಿತಿಯೆಂದು, ಅಸಾಮಾನ್ಯ ವಾಗ್ಮಿಯೆಂದು, ಶ್ರೇಷ್ಠ ಅಧ್ಯಾಪಕರೆಂದು ತಿಳಿದುಕೊಂಡವನು. ಮೈಸೂರಿನಿಂದ 'ಪ್ರಬುದ್ಧ ಕರ್ನಾಟಕ', ಧಾರವಾಡದಿಂದ 'ಜಯಕರ್ನಾಟಕ' ಇಂತಹ ಪತ್ರಿಕೆಗಳಲ್ಲಿ ಅಂದಿನ ಪ್ರತಿಭಾಶಾಲೀ ಕನ್ನಡ ಕವಿ ಲೇಖಕ ಸಾಹಿತಿಗಳು ಬರೆಯುತ್ತಿದ್ದರು. ದಕ್ಷಿಣ ಕನ್ನಡದ ಕವಿ, ಸಾಹಿತಿಗಳನ್ನು ಲೇಖನಗಳ, ಗ್ರಂಥಗಳ ಮೂಲಕ ತಿಳಿದುಕೊಂಡುದಲ್ಲದೆ, ಡಾ॥ ಕಾರಂತರು, ರಾಷ್ಟ್ರ ಕವಿ ಗೋವಿಂದ ಪೈಗಳು, ಪಂಜೆಯವರು, ಎಂ. ಎನ್. ಕಾಮತರು, ಕಡೆಂಗೋಡ್ಲು ಪ್ರಭೃತಿ ಮಹನೀಯರನ್ನು ಆಗಾಗ ಕಂಡು ಮಾತನಾಡಿಯೂ ಹೆಚ್ಚಿನ ಸಂಪರ್ಕ ಪಡೆದಿದ್ದೆ; ಆದರೆ ಡಿ.ವಿ.ಜಿ, ಬೇಂದ್ರೆ, ಕುವೆಂಪು, ಬಿ.ಎಂ.ಶ್ರೀ., ಎಂ.ಆರ್.ಶ್ರೀ., ವಿ.ಸೀ. ಇಂತಹವರನ್ನು ನನ್ನ ಬಾಲ್ಯ ಕಾಲದಲ್ಲಿಯೇ ತಿಳಿದುಕೊಂಡದ್ದು ಆ ಪತ್ರಿಕೆಗಳ ಮೂಲಕವೇ ಆಗಿದೆ. ಅಂತಹ ತಿಳುವಳಿಕೆ ನನ್ನ ಸಾಹಿತ್ಯ ಜೀವನದಲ್ಲಿ ಹೆಚ್ಚಿನ ಫಲಪರಿಣಾಮಗಳನ್ನು ನೀಡಿದೆ ಎಂದು ಇಂದಿಗೂ ಅಭಿಮಾನದಿಂದ ನೆನೆಯುತ್ತಿದ್ದೇನೆ.

ವಿ.ಸೀ. ಅವರನ್ನು ನಾನು ಮೊದಲು ಕಂಡದ್ದು, ಅವರ ಕವಿತಾ ವಾಚನ, ಭಾಷಣಗಳನ್ನು ಕೇಳಿದ್ದು ಪುತ್ತೂರಿನ ದಸರಾ ಮಹೋತ್ಸವ ಸಂದರ್ಭದಲ್ಲಿ. ಪ್ರಾಚೀನ ಕಾಲದಿಂದಲೇ ಮೈಸೂರು ಮಹಾರಾಜರ ಆಶ್ರಯದಲ್ಲಿ ಅಲ್ಲಿ ದಸರಾ ಉತ್ಸವ ನಡೆಯುತ್ತಾ ಇತ್ತು. ಅಮೇಲೆ ಕರ್ನಾಟಕ ರಾಜ್ಯ ಒಂದಾಗಬೇಕು, ಕನ್ನಡಿಗರು ಒಗ್ಗೂಡಬೇಕೆಂದು ಬಯಸಿದ ನಮ್ಮ ಧುರೀಣರು, ಶ್ರೀ ಆಲೂರು ವೆಂಕಟರಾಯರಂಥವರು ದಸರಾ ಉತ್ಸವವನ್ನು ನಾಡಹಬ್ಬವಾಗಿ ರಾಜ್ಯಾದ್ಯಂತ, ಕನ್ನಡಿಗರಿರುವಲ್ಲೆಲ್ಲಾ ಆಚರಿಸಬೇಕೆಂದು ಕರೆಯಿತ್ತಂತೆ ಎಲ್ಲೆಲ್ಲೂ ದಸರಾ ನಾಡಹಬ್ಬ ಆಚರಿಸಲ್ಪಟ್ಟಿತು. ಆಗ ಕರ್ನಾಟಕ ರಾಜ್ಯ ಮೈಸೂರು, ಹೈದರಾಬಾದು, ಮದ್ರಾಸು, ಮುಂಬಯಿ ಮುಂತಾದ ಹಲವು ರಾಜ್ಯಗಳಲ್ಲಿ ಹಂಚಿ ಹೋಗಿದ್ದರೂ, ಈ ನಾಡಹಬ್ಬದ ಆಚರಣೆ ಸರ್ವತ್ರ ನಾಡು ನುಡಿಗಳ ಅಭಿಮಾನಿಗಳಿಂದ ಆಚರಿಸಲ್ಪಟ್ಟು ಕನ್ನಡಿಗರನ್ನು ಒಗ್ಗೂಡಿಸುವಲ್ಲಿ ಸಹಾಯಕವಾಯಿತೆಂಬುದನ್ನು ನಾವು ಅಭಿಮಾನಪೂರ್ವಕ ಸ್ಮರಿಸಬೇಕಾಗಿದೆ.

ಪುತ್ತೂರಲ್ಲಿ ಡಾ|| ಶಿವರಾಮ ಕಾರಂತರ ನೇತೃತ್ವದಲ್ಲಿ, ಮೊಳಹಳ್ಳಿ ಶಿವರಾಯರಂಥವರ ಬೆಂಬಲದಿಂದ ಹತ್ತು ದಿನಗಳ ತನಕವೂ ವಿವಿಧ ಸಾಹಿತ್ಯ ಕಲಾ ಸಂಸ್ಕೃತಿಗಳ ಕಾರ್ಯಕ್ರಮಗಳು ಆಚರಿಸಲಾಗುತ್ತಿತ್ತು. ಅಲ್ಲಿಗೆ ಧಾರವಾಡದ ಬೇಂದ್ರೆ, ಮೈಸೂರಿನ ಬಿ.ಎಂ.ಶ್ರೀ., ವೆಂಕಣ್ಣಯ್ಯ, ಬೆಂಗಳೂರಿನ ವಿ.ಸೀ., ಮಾಸ್ತಿ ಇಂತಹ ಕನ್ನಡದ ಕವಿ ಶ್ರೇಷ್ಠರೂ ವಾಗ್ಮಿಗಳೂ ಆಮಂತ್ರಿತರಾಗುತ್ತಿದ್ದರು. ಆಗ ನಾನು ವಿದ್ಯಾರ್ಥಿ; ಪ್ರತಿ ವರ್ಷವೆಂಬಂತೆ ನಾನೂ ಆ ಉತ್ಸವಕ್ಕೆ ಪ್ರೇಕ್ಷಕನಾಗಿ ಹೋಗುತ್ತಿದ್ದೆ. ಕವಿಗೋಷ್ಠಿಗಳಲ್ಲಿ ಕವನ ವಾಚನ ಕೂಡ ಮಾಡುತ್ತಿದ್ದೆ. ಬೇಂದ್ರೆ, ಬಿ.ಎಂ.ಶ್ರೀ, ವಿ.ಸೀ. ಕಡೆಂಗೋಡ್ಲು, ಪಂಜೆ, ಇಂಥವರೇ ಹೆಚ್ಚಾಗಿ ಭಾಗವಹಿಸುತ್ತಿದ್ದ ಕವಿಗೋಷ್ಠಿಗಳಲ್ಲಿ ವಿ.ಸೀ. ಅವರೂ ಕವನ ವಾಚನಮಾಡಿ ಪ್ರೇಕ್ಷಕರನ್ನು ಸಂತೋಷಗೊಳಿಸುತ್ತಿದ್ದರು. ಆ ಉತ್ಸವ ಸಂದರ್ಭ, ಸ್ವತಃ ಡಾ|| ಕಾರಂತರು, ಅವರ ಪತ್ನಿ ಲೀಲಾ ಕಾರಂತರ ಜತೆಯಲ್ಲಿ, ಕಾರಂತರದೇ ಶೈಲಿಯ ನರ್ತನ ಕಾರ್ಯಕ್ರಮ ನೀಡುತ್ತಿದ್ದರು. ಇಂತಹ ನರ್ತನ ಕಾರ್ಯಕ್ರಮವನ್ನು ಪ್ರಶಂಸಿಸಿ ವಿ. ಸೀ. ಅವರು ಒಂದು ಕವನ ಸಂಗ್ರಹದಲ್ಲಿ 'ಕಾಲನಟ' ಎಂಬ ಕವನವನ್ನು ಆ ಉತ್ತಮ ಕವನ ಸಂಗ್ರಹದ ಮೊದಲಿಗೇ ಕೊಟ್ಟಿರುತ್ತಾರೆ. ಕವನದಲ್ಲಿ ಕಾರಂತರ ಹೆಸರು ಇಲ್ಲದಿದ್ದರೂ ಅಲ್ಲಿನ ಕಾರ್ಯಕ್ರಮಗಳಲ್ಲಿ ಪ್ರೇಕ್ಷಕನಾಗಿಯೇ ಹೆಚ್ಚಾಗಿ ಭಾಗವಹಿಸುತ್ತಿದ್ದ ನನಗೆ ಆ ಕವಿತೆ ವಿ.ಸೀ. ಅವರು ಕಾರಂತರ ಮೇಲಿನ ಅಭಿಮಾನದಿಂದ ಬರೆದುದೆಂದು ಸರಿಯಾಗಿ ತಿಳಿಯುತ್ತದೆ. ವಿ.ಸೀ.ಯವರು ಆ ಸಂದರ್ಭ ಪುತ್ತೂರಿಗೆ ಆಹ್ವಾನಿತರಾಗಿ ಬಂದಿದ್ದರೂ, ಅಲ್ಲಿಂದ ಅವರು ಇತರ ಸಾಹಿತಿಗಳೊಂದಿಗೆ, ರಾಜರತ್ನಂ ಮೊದಲಾದವರ ಜತೆ ಮಂಗಳೂರಲ್ಲಿ ಉಡುಪಿಯಲ್ಲಿ ಕೂಡ ಜರಗುವ ನಾಡಹಬ್ಬಗಳಲ್ಲಿ ಭಾಗವಹಿಸುತ್ತಿದ್ದರು. ಒಮ್ಮೆ ಉಡುಪಿಯಲ್ಲಿ ವಿ.ಸೀ., ರಾಜರತ್ನಂ ಆಮಂತ್ರಿತರಾಗಿ ಭಾಷಣ ಮಾಡುತ್ತಿದ್ದ ದಸರಾ ಉತ್ಸವದ ಸಭೆಯೊಂದರಲ್ಲಿ ನಾನೂ ಭಾಷಣಕ್ಕೆ ಆಹ್ವಾನಿತನಾಗಿ ಮಾತನಾಡಿದ ಸಂದರ್ಭ ಈಗಲೂ ನೆನಪಿದೆ. ನಾನಂದು, ಆಗ ಪ್ರಚಲಿತವಾಗಿರುವ ಪ್ರಗತಿಶೀಲ ಸಾಹಿತ್ಯ ಕುರಿತಾಗಿ ಭಾಷಣಮಾಡಿದೆ; ಅಧ್ಯಕ್ಷರಾಗಿದ್ದ ವಿ.ಸೀ., ಭಾಷಣಕಾರರಲ್ಲೊಬ್ಬರಾಗಿದ್ದ ರಾಜರತ್ನಂ ಕೂಡ ನನ್ನ ಭಾಷಣದ ವಿಷಯವನ್ನು ಎತ್ತಿ ಮಾತನಾಡಿ ಪ್ರೋತ್ಸಾಹಿಸಿದ್ದರು.

ವಿ.ಸೀ. ಅವರು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದರೂ, ಮುಂದೆ ಕನ್ನಡ ಭಾಷೆಯಲ್ಲಿ ಅತ್ಯಂತ ಆಕರ್ಷಕವಾದ ಶೈಲಿಯಲ್ಲಿ 'ಹಣ ಪ್ರಪಂಚ' ಎಂಬ ಶ್ರೇಷ್ಠ ಕೃತಿಯನ್ನು ರಚಿಸಿ ಕೀರ್ತಿಶಾಲಿಗಳಾದರೂ, ಮೈಸೂರು ವಿಶ್ವವಿದ್ಯಾಲಯಕ್ಕೆ ಕನ್ನಡ ಪ್ರಾಧ್ಯಾಪಕರಾಗಿ ಸೇರಿ ದುಡಿದದ್ದು ಕನ್ನಡಿಗರ ಭಾಗ್ಯವೆನಬೇಕು. ಮುಂದೆ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತರಾಗುವ ತನಕವೂ ಕನ್ನಡಕ್ಕೆ ಅವರಿಂದ ಅಪಾರವಾದ ಕೊಡುಗೆ ಸಂದಿದೆ. ಅಧ್ಯಾಪಕರಾಗಿ ವಿದ್ಯಾರ್ಥಿಗಳಲ್ಲಿ ಕನ್ನಡದ ಹಾಗೂ ಸಾಹಿತ್ಯದ ಅಭಿಮಾನ ಹುಟ್ಟಿಸಿದ್ದಾರೆ; ವಾಗ್ಮಿಗಳಾಗಿ ತಮ್ಮ ಅಮೂಲ್ಯ ವಿಷಯ ವಿಚಾರಧಾರೆಗಳಿಂದ ಶ್ರೋತೃಗಳನ್ನು ತಲ್ಲೀನಗೊಳಿಸಿದ್ದಾರೆ. ಅವರ ಎಲ್ಲಾ ಕವನ, ಸಾಹಿತ್ಯ ಭಾಷಣಗಳಲ್ಲಿ ವಿ.ಸೀ.ಯವರಿಗೆ ಇರುವ ಕನ್ನಡ ಸಂಸ್ಕೃತ ಇಂಗ್ಲೀಷ್ ಭಾಷೆಗಳ ಅಗಾಧ ಪಾಂಡಿತ್ಯ ಶ್ರೋತೃಗಳನ್ನು ಬೆರಗುಗೊಳಿಸುತ್ತಿತ್ತು. ವಿ.ಸೀ. ಅವರು ಆಂಗ್ಲ ಭಾಷೆಯಲ್ಲೂ

ಶ್ರೇಷ್ಠ ವಾಗ್ಮಿಗಳಾಗಿದ್ದರು. "ಅಭಿಜ್ಞ" ಎಂಬೊಂದು ಕವಿತೆಯ ಸಂಸ್ಕೃತ ಶಿರೋನಾಮೆ, 'ಮನೆ ತುಂಬಿಸುವುದು' ಎಂಬ ಜನಪ್ರಿಯ ಹಾಡು ಸಂಸ್ಕೃತದಿಂದ ಮೂಲಕ್ಕಿಂತಲೂ ಚೆಲುವಾಗಿ ಕನ್ನಡಕ್ಕೆ ಭಟ್ಟಿ ಇಳಿಸಿದ್ದು, ಅವರು ರಚಿಸಿದ 'ಅಭಿಜ್ಞಾನ ಶಾಕುಂತಲ ನಾಟಕದ ವಿಮರ್ಶೆ' ಇಂತಹ ಕೃತಿಗಳೇ ಅವರ ಸಂಸ್ಕೃತ ಪಾಂಡಿತ್ಯಕ್ಕೆ ಸಾಕ್ಷಿಗಳಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತು ಮೈಸೂರಿನ ಮಹಾರಾಜರ ಕೃಪಾಶ್ರಯದಿಂದ ಸ್ಥಾಪಿತವಾಗಿ ಪೋಷಿಸಲ್ಪಟ್ಟಿದ್ದರೂ, ಆ ಮಹಾಸಂಸ್ಥೆ ಕರ್ನಾಟಕ ರಾಜ್ಯ ನಿರ್ಮಾಣಕ್ಕಿಂತ ಮೊದಲೇ ಅಖಿಲ ಕರ್ನಾಟಕ ಸಂಸ್ಥೆಯಾಗಿ, ವಿಶಾಲ ದೃಷ್ಟಿಯಲ್ಲಿ ಕೆಲಸ ಮಾಡುವರೆ ವಿ.ಸೀ. ಮಾಸ್ತಿಯಂಥವರ ಮುಂದಾಳುತನವೇ ಹೆಚ್ಚಿನ ಕಾರಣವಾಗಿದೆ. ಧಾರವಾಡದ ವಿದ್ಯಾವರ್ಧಕ ಸಂಘ, ಒಂದು ದೃಷ್ಟಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗಿಂತ ಪ್ರಾಚೀನವಾಗಿ ಅಖಿಲ ಕರ್ನಾಟಕ ದೃಷ್ಟಿಯಿಂದ ದುಡಿದರೂ, ಮುಂದೆ ಕನ್ನಡ ಸಾಹಿತ್ಯ ಪರಿಷತ್ತು ಮಾಡಿದ ಸಂಘಟನೆಯಿಂದ, ವಿದ್ಯಾವರ್ಧಕ ಸಂಘಕ್ಕಿಂತ ಸಾಹಿತ್ಯ ಪರಿಷತ್ತು ಹೆಚ್ಚು ಜನಪ್ರಿಯವಾಯಿತು. ಮಾಸ್ತಿಯವರ ಜತೆಯಲ್ಲಿ ವಿ.ಸೀ.ಯವರು ಆಗಾಗ ಕಾಸರಗೋಡಿಗೂ ಬರುತ್ತಿದ್ದರು. ನಾನಿರುವ ಹಳ್ಳಿ ಪ್ರದೇಶವಾದ ಪೆರಡಾಲಕ್ಕೂ ಅವರ ಜತೆಯಲ್ಲಿ ಆಗಮಿಸಿದ್ದಾರೆ. ಒಂದು ಸಭೆಯಲ್ಲಿ ಮಾಸ್ತಿಯವರ 'ಯಶೋಧರೆ' ಕೃತಿಯ ಕುರಿತು ಉತ್ತಮ ಭಾಷಣ ನೀಡಿದ್ದು ನನಗೆ ಇನ್ನೂ ಮರೆತಿಲ್ಲ; ಅದು ಜನಮನಾಕರ್ಷಕವಾಗಿತ್ತು. ಮಾಸ್ತಿಯವರ ಹಿರಿಯ ಯೋಗ್ಯತೆಯನ್ನು ಎತ್ತಿ ತೋರಿಸುವಂತಿತ್ತು.

ವಿ.ಸೀ. ಅವರು ಬೆಂಗಳೂರಿನ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದರೂ, ಮುಂದೆ ಹೊನ್ನಾವರದಲ್ಲಿ ಕಾಲೇಜ್ ಪಿನ್ಸಿಪಾಲರಾಗಿ ದುಡಿದರು. ಕಾರವಾರದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಕವಿ ಗೋಷ್ಠಿಯ ಅಧ್ಯಕ್ಷರಾದುದು ಮಾತ್ರವಲ್ಲ, ೧೯೫೩ರಲ್ಲಿ ೩೬ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೂ ಅಧ್ಯಕ್ಷರಾಗಿ ಆಯ್ಕೆಗೊಂಡು ಮನ್ನಣೆ ಪಡೆದರು. ಮುಂದೆ ಕೆಲಕಾಲ ಬೆಂಗಳೂರು ಆಕಾಶವಾಣಿಯ ಕಾರ್ಯ ನಿರ್ವಾಹಕರಾಗಿಯೂ ವೃತ್ತಿ ಕೈಕೊಂಡಿದ್ದರು. ಹೀಗೆ ನಿವೃತ್ತರಾದ ಮೇಲೂ ವೃತ್ತಿ ಕೈಕೊಳ್ಳುವರೆ ಅವರಿಗೆ ಕುಟುಂಬ ಪೋಷಣೆಗೆ ಸಾಕಷ್ಟು ಆರ್ಥಿಕ ಸ್ಥಿತಿ ಅನುಕೂಲವಿಲ್ಲದಿರುವುದೂ ಮಾತ್ರವಲ್ಲ, ಸದಾ ಉದ್ಯೋಗ ನಿರತನಾಗಿರಬೇಕೆಂಬುದೂ ಕಾರಣಗಳಿರಬಹುದು. ನಾನು ಮೈಸೂರಲ್ಲಿ ಆಕಾಶವಾಣಿ ಪ್ರಾರಂಭವಾದ ಮೊದಲಿಗೇ ಆಹ್ವಾನಿತನಾಗಿ ಹೋಗುತ್ತಿದ್ದೆ; ಮತ್ತೆ ಬೆಂಗಳೂರಲ್ಲಿ ಕೇಂದ್ರ ಪ್ರಾರಂಭವಾದಾಗ ಅಲ್ಲಿಗೂ ಆಹ್ವಾನಿತನಾಗುತ್ತಿದ್ದೆ; ಇಂತಹ ಸಂದರ್ಭಗಳಲ್ಲಿ ಒಮ್ಮೆ ವಿ.ಸೀ.ಯವರನ್ನೂ ಬೇಂದ್ರೆಯವರನ್ನೂ ಬೆಂಗಳೂರು ಕೇಂದ್ರದಲ್ಲಿ ಕಾರ್ಯನಿರ್ವಾಹಕರಾಗಿದ್ದುದನ್ನು ಕಂಡೆ. ಅಂದು ಒಂದು ಕವಿಗೋಷ್ಠಿ ಇತ್ತು. ಗೋಕಾಕರು, ಮುಗಳಿಯವರು, ವಿ.ಸೀ., ಬೇಂದ್ರೆಯವರೂ ಅದರಲ್ಲಿ ಪಾಲ್ಗೊಂಡರೆಂದು ತೋರುತ್ತದೆ. ಗೋಕಾಕರು ಆಗ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ಮರುದಿನ ಅವರು ತಮ್ಮ ಬೆಂಗಳೂರು ನಿವಾಸಕ್ಕೆ ಕವಿಗೋಷ್ಠಿ ಹಾಗೂ ಭೋಜನಕ್ಕೆ ನಮ್ಮನ್ನೆಲ್ಲಾ ಆಮಂತ್ರಿಸಿದರು. ನಾನೂ ಹೋದೆ. ಭರ್ಜರಿ ಊಟವಾಯಿತು. ಕವಿ ಗೋಷ್ಠಿಯೂ ಜರಗಿತು. ಅಲ್ಲಿ ನನ್ನ 'ಚಿಂತನ' ಎಂಬ ಕವನವನ್ನು ಓದಿದೆ; ಅದನ್ನು ಮೆಚ್ಚಿದ

ಮುಗಳಿಯವರು, ಅವರು ಸಂಪಾದಿಸಿದ ಒಂದು ಕವನ ಸಂಕಲನದಲ್ಲಿ ಅದನ್ನು ಸೇರಿಸಿ ಪ್ರಕಟಗೊಳಿಸಿದರು.

ಅಚ್ಚುಕಟ್ಟಾದ ಉಡುಗೆ ತೊಡುಗೆ ವಿ.ಸೀ. ಅವರದು. ಶುಭ್ರ ಬಿಳಿ ಪಂಚೆ; ಎದೆ ಮುಚ್ಚಿದ ಭರ್ಜರಿ ಕೋಟು; ತಲೆಗೆ ಮೈಸೂರು ಮುಂಡಾಸು; ಕನ್ನಡಕ ಧಾರಿ. ಮಾತು ಸದಾ ವಿನಯ ಪರ; ತುಂಬಾ ಸಜ್ಜನರು. ಸಂಸ್ಕೃತಿ ಸಂಪನ್ನರು. ಹಿಂದೆ ಹೇಳಿದಂತೆ ಇತರರ ಯೋಗ್ಯತೆಯನ್ನು ಮೆಚ್ಚಿ ಕೊಂಡಾಡುವವರು. ಅದರಿಂದ ಅವರ ಮಾನ್ಯತೆ ಇನ್ನಷ್ಟು ಹೆಚ್ಚುತ್ತಿತ್ತು. ಸಂಭಾಷಣೆಯಲ್ಲಿ ವಿನೋದದ ಲಹರಿಯೂ ಇತ್ತು; ಪಾಂಡಿತ್ಯದ ಆಳವೂ ಹೊಳೆಯುತ್ತಿತ್ತು. ಅವರ ೩೬ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ವಿಚಾರ ಪರಿಪ್ಲುತ; ಕನ್ನಡದ ವೈಶಿಷ್ಟ್ಯಗಳನ್ನು, ಕರ್ನಾಟಕದ ಸಮಸ್ಯೆಗಳನ್ನು ವಿಪುಲವಾಗಿ ವಿಸ್ತಾರವಾಗಿ ಎಳೆ ಎಳೆಯಾಗಿ ಬಿಡಿಸಿ ತಿಳಿಸಿದ ಆ ಭಾಷಣ ಸದಾ ಸ್ಮರಣೀಯ. ಕರ್ನಾಟಕದ ಏಕೀಕರಣದ ವಿಚಾರವನ್ನು ಅದರಲ್ಲಿ ಬಿಡಿಸಿ ಬಿಡಿಸಿ ಹೇಳಿದ್ದಾರೆ. ಕನ್ನಡ ಸಾಹಿತ್ಯದ ವಿಪುಲತೆ ವೈವಿಧ್ಯವನ್ನು ಪ್ರಶಂಸಿಸಿದ್ದಾರೆ. ಅವರ ಆ ಸಾಹಿತ್ಯ ಸಮ್ಮೇಳನದ ಭಾಷಣದ ಒಂದು ಭಾಗವನ್ನು ಇಲ್ಲಿ ಉದ್ಧರಿಸುತ್ತೇನೆ.

"ನಮ್ಮ ಅದೃಷ್ಟದಿಂದ ಹಿರಿಯರಲ್ಲಿ, ನಾಡಿನ ನಾಲ್ಕು ಕಡೆಯೂ ಮೊದಲ ಸಾಲಿನ ಶ್ರೀ ಗೋವಿಂದ ಪೈ, ಡಿ.ವಿ.ಜಿ, ಮಾಸ್ತಿ, ಬೇಂದ್ರೆ ಮುಂತಾದ ಕೃತಿಕಾರರು ಈಗಿಗೂ ದೊಡ್ಡ ಹೊಸ ಕೃತಿಗಳನ್ನು ದಾನ ಮಾಡುತ್ತಿದ್ದಾರೆ; ಆ ತರುವಾಯದ ಶ್ರೀ ಪುಟ್ಟಪ್ಪ, ಗೋಕಾಕ್, ರಾಜರತ್ನಂ, ನರಸಿಂಹಾಚಾರ್, ಕಡೆಂಗೋಡ್ಲು, ಮುಗಳಿ ಮುಂತಾದವರ ಸಾಧನೆ ಇನ್ನೊಂದು ಬಗೆಯ ಉತ್ಕೃತಿಗಳನ್ನು ನಾಡಿಗೆ ನೀಡಿದೆ. ಅವರ ಈಚೆಗೆ ನರಸಿಂಹಸ್ವಾಮಿ, ಕಿಞ್ಞಣ್ಣ ರೈ, ಮುಂತಾದವರ ಕೃತಿ ವಿಶೇಷಗಳು ಮೆರೆದಿವೆ. ಇಂದು, ಅಡಿಗ, ಶರ್ಮ, ಶ್ರೀಧರ, ಎಕ್ಕುಂಡಿ, ಕಣವಿ ಮುಂತಾದವರು ಹಳೆಯ ದಾರಿಯನ್ನು ದಾಟಿ ಹೊಸ ಪ್ರವೇಶವೊಂದನ್ನು ರೂಪಿಸುತ್ತಿದ್ದಾರೆ." ಈ ವಿಶ್ಲೇಷಣೆಯಲ್ಲಿ ನನ್ನಂತಹ ಕಿರಿಯನ ಹೆಸರನ್ನೂ ಸೇರಿಸಿ ಬೆನ್ನು ತಟ್ಟಿದ್ದನ್ನು ನಾನು ಮರೆಯಲಾರೆ.

ವಿ.ಸೀ.ಯವರ ಹೆಸರು ಕನ್ನಡ ಸಾಹಿತ್ಯವಿರುವನಕ ಅವಿಸ್ಮರಣೀಯ.

ನನ್ನ ನೆನಪಿನಲ್ಲಿ ನೆಲೆಸಿದ ವಿ.ಸೀ.

ಎನ್. .ರಂಗನಾಥಶರ್ಮ

ನನಗೆ ವಿ.ಸೀ. ಯವರ ಪರಿಚಯ ಬಹಳ ವರ್ಷಗಳಿಂದ ಇತ್ತಾದರೂ ಅದು ಪರೋಕ್ಷವಾದದ್ದು. ಅವರು ವಿಶ್ವವಿದ್ಯಾಲಯದಿಂದ ನಿವೃತ್ತರಾಗಿ ಬೆಂಗಳೂರು ಆಕಾಶವಾಣಿ ಕೇಂದ್ರವನ್ನು ಸೇರಿದ ಮೇಲೆ ಪ್ರತ್ಯಕ್ಷ ಪರಿಚಯ. ಅದು ನಿಕಟವಾಗಿ ಆತ್ಮೀಯವಾದದ್ದು ಮಾತ್ರ ಅವರ ಜೀವನದ ಅಂತ್ಯಭಾಗದಲ್ಲಿ – ಸುಮಾರು ಹದಿನೈದು ವರ್ಷಗಳಷ್ಟು. ಅವರನ್ನು ಕಂಡಾಗಲೆಲ್ಲ ನನ್ನ ನೆನಪಿಗೆ ಬರುತ್ತಿದ್ದ ಪದ್ಯ ಇದು–

ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು
ನಿಮ್ಮ ಮಡಿಲೊಳಗಿಡಲು ತಂದಿರುವೆವು;
ಕೊಳ್ಳಿರೀ ಮಗುವನ್ನು ಎಮ್ಮ ಮನೆ ಬೆಳಕನ್ನು
ನಿಮ್ಮ ಮನೆಯನು ತುಂಬಲೊಪ್ಪಿಸುವೆವು.

ವಿ.ಸೀ.ಯವರ ರಚನೆ ಇದು. ಮದುವೆಯಾದ ಮಗಳನ್ನು ಗಂಡಿನವರಿಗೆ ಒಪ್ಪಿಸುವಾಗ ಹೆಣ್ಣಿನ ತಾಯಿತಂದೆಯರು ನುಡಿಯುವ ಸಂದರ್ಭ. ಕಾವ್ಯದಲ್ಲಿ ಇದೊಂದು ವರ್ಣನೀಯವಾದ ಮನೋಜ್ಞ ಸಂನಿವೇಶವೆಂದು ಮಾರ್ಗದರ್ಶಿಯಾಗಿ ಸ್ಫೂರ್ತಿಯನ್ನಿತ್ತವನು ಮಹಾಕವಿ ಕಾಳಿದಾಸ. ಅಭಿಜ್ಞಾನ ಶಾಕುಂತಲದಲ್ಲಿ ಕಣ್ವರು ಶಕುಂತಲೆಯನ್ನು ಪತಿಗೃಹಕ್ಕೆ ಕಳಿಸುವಾಗ ಈ ಬಗೆಯ ವರ್ಣನೆಯುಂಟು. ಈ ರಸಮಯ ಸನ್ನಿವೇಶವನ್ನು ಬಿಡಲಾರದೆ ನಮ್ಮ ಕನ್ನಡದ ಮಹಾಕವಿ ಪಂಪನು ಆದಿ ಪುರಾಣದಲ್ಲಿ ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ಬಣ್ಣಿಸಿದ್ದಾನೆ. ಶ್ರೀಮತಿಯನ್ನು ಮದುವೆಯಾದ ವಜ್ರಜಂಘನೊಡನೆ ಹೆಣ್ಣನ್ನು ಕಳಿಸುವ ಸಂದರ್ಭದಲ್ಲಿ ಆ ವರ್ಣನೆ ಬಂದಿದೆ. ತಂದೆಯು ಮಗಳಿಗೂ ಅಳಿಯನಿಗೂ ಮಾಡಿದ ಹಿತೋಪದೇಶವಂತೂ ಪಂಪನಲ್ಲಿ ಶಾಕುಂತಲ ನಾಟಕದಲ್ಲಿರುವ ಎರಡು ಪ್ರಸಿದ್ಧ ಶ್ಲೋಕಗಳ ಅನುವಾದವೋ ಎಂಬಷ್ಟು ಸಾಮ್ಯವನ್ನು ಪಡೆದಿದೆ. ಇರಲಿ.

ವಿ.ಸೀ. ಯವರ ಮೇಲ್ಕಂಡ ಪದ್ಯದ ಸೊಬಗು ಅನ್ಯಾದೃಶವಾದದ್ದು. ಹೆತ್ತವರು ಮಗಳನ್ನು ಎಷ್ಟು ಪ್ರೀತಿವಾತ್ಸಲ್ಯಗಳಿಂದ ಸಾಕಿ ಬೆಳೆಸಿದ್ದಾರೆಂಬುದನ್ನು ತಿಳಿಸುವುದಕ್ಕೆ 'ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು' ಎಂಬ ಒಂದು ಸಾಲು ಸಾಕು. ಮಗಳ ಕೋಮಲತೆಯನ್ನು ಸೌಂದರ್ಯವನ್ನು ವ್ಯಂಜಿಸುವುದಕ್ಕೆ 'ಹೂವನ್ನು' ಎಂಬ ಒಂದು ಪದ

ಸಾಕು. 'ಇನ್ನು ಮೇಲೆ ಇವಳು ನೂತನ ಪರಿಸರದಲ್ಲಿ ಬಾಳಬೇಕಾಗಿದೆ. ಬಳ್ಳಿಯಿಂದ ಕಿತ್ತು ತಂದ ಹೂವಿನಂತೆ ಆಗಿದ್ದಾಳೆ. ಈ ಹೂ ಬಾಡದಂತೆ ನೋಡಿಕೊಳ್ಳಬೇಕಾದ ಹೊಣೆ ಇನ್ನು ಮೇಲೆ ನಿಮ್ಮದು' ಎಂಬ ಆಶಯವನ್ನು ಈ ಪದ್ಯದ ಎರಡನೆಯ ಸಾಲು ತಿಳಿಸುವುದು. 'ಕೊಳ್ಳಿರೀ ಮಗುವನ್ನು, ನಮ್ಮ ಮನೆ ಬೆಳಕನ್ನು' ಇದು ನಾನಾರ್ಥಗಳನ್ನೊಳಗೊಂಡು ಕಾವ್ಯಧರ್ಮದಿಂದ ಪುಷ್ಟವಾದ ಪಂಕ್ತಿ. ಈ ಹುಡುಗಿ ನಮ್ಮ ಮನೆಯ ಬೆಳಕಾಗಿದ್ದವಳು. ಇವಳು ವಿದ್ಯಾವತಿ. ಗೃಹಕೃತ್ಯವನ್ನು ಬಲ್ಲವಳು. ಸಂಸಾರದಲ್ಲಿ ತೊಡಕು ಬಂದಾಗ ಅದನ್ನು ಬಿಡಿಸಿ ದಾರಿತೋರಿಸುತ್ತಿದ್ದವಳು. ಚಿನ್ನದ ಪುತ್ಥಳಿಯಂತೆ ಮನೆಯ ತುಂಬ ಓಡಾಡಿ ಕೊಂಡಿದ್ದವಳು – ಎಂಬ ಅರ್ಥವ್ಯಕ್ತಿ ಈ ಪಂಕ್ತಿಯಲ್ಲಿದೆ. 'ನಿಮ್ಮ ಮನೆಯನು ತುಂಬಲೊಪ್ಪಿಸುವೆವು' – ಇನ್ನು ಈ ಬೆಳಕು ನಿಮ್ಮ ಮನೆಯಲ್ಲಿ ತುಂಬಿಕೊಳ್ಳುವುದು. ಇವಳನ್ನೊಪ್ಪಿಸುವಾಗ ನಮ್ಮ ಮನೆಗೆ ಕತ್ತಲು ಕವಿದಂತಾಯಿತು ಎಂದು ಅಭಿಪ್ರಾಯ. ಒಂದು ಚಿಕ್ಕ ಪದ್ಯದಲ್ಲಿ ಚೇತೋಹಾರಿಯಾದ ಎಂತಹ ಸುಂದರ ಕಲ್ಪನೆ ಇದೆ! ಪಂಪ ಕಾಳಿದಾಸರ ವರ್ಣನೆಗಳಲ್ಲಿ ತಾಯಿತಂದೆಗಳಿಗೆ ಮಗಳ ವಿರಹದಿಂದಾದ ಶೋಕಸಂವೇದನೆ ಗಾಢವಾಗಿದೆಯಾದರೂ ಶ್ರೀಮತಿ–ಶಕುಂತಲೆಯರ ಸದ್ಗುಣ ಸೌಶೀಲ್ಯಾದಿಗಳ ಚಿತ್ರಣವಿಲ್ಲ. ವಿ.ಸೀ. ಯವರ ಪದ್ಯದಲ್ಲಿ ಅಭಿವ್ಯಕ್ತವಾದ ಸೌಂದರ್ಯ ಸೌಶೀಲ್ಯಾದಿಗಳು ಹೆತ್ತವರ ಕರುಳ ಅಳಲನ್ನು ಇಮ್ಮಡಿಯಾಗಿ ಅಭಿವ್ಯಂಜಿಸುತ್ತವೆ. ಇದು ಅನುರಣನಧ್ವನಿಗೆ ಉತ್ತಮವಾದ ಉದಾಹರಣೆ. ಈ ಪದ್ಯದ ಚೆಲುವನ್ನು ಯಾವ ಸಹೃದಯನು ಮೆಚ್ಚದಿದ್ದಾನು? ಕವಿಯನ್ನು ನೆನೆಸಿಕೊಳ್ಳದೆ ಇದ್ದಾನು?

* * *

ಬೆಂಗಳೂರು ವಿಶ್ವವಿದ್ಯಾಲಯದ ಸಂಸ್ಕೃತ ಶಾಖೆಯು ಸೆಂಟ್ರಲ್ ಕಾಲೇಜಿನಲ್ಲಿ ಅಲಂಕಾರ ಶಾಸ್ತ್ರದ ಮೇಲೆ ಒಂದು ವಿಚಾರಗೋಷ್ಠಿಯನ್ನೇರ್ಪಡಿಸಿತ್ತು. ಎರಡು ದಿನಗಳವರೆಗೆ ನಡೆದ ಈ ಗೋಷ್ಠಿ ೧೯೬೦–೬೧ ರಲ್ಲಿ ಆಯಿತೆಂದೂ ಆಗ ಟಿ. ಪಿ. ಇಸ್ಸಾರ್ ಅವರು ರಿಜಿಸ್ಟ್ರಾರ್ ಆಗಿದ್ದರೆಂದೂ ನೆನಪು. ಗೋಷ್ಠಿಯ ಸಮಾರೋಪ ಭಾಷಣ ಮಾಡಲು ವಿ.ಸೀ. ಯವರನ್ನು ಆಹ್ವಾನಿಸಿದ್ದರು. ಅವರ ಭಾಷಣ ಇಂಗ್ಲಿಷಿನಲ್ಲಿ ನಡೆಯಿತು. ಅವರ ಮಾತು ಅಲಂಕಾರಶಾಸ್ತ್ರವನ್ನು ಕೈಬಿಟ್ಟು ಕಾವ್ಯ ಸಾಹಿತ್ಯದ ಕಡೆಗೆ ತಿರುಗಿತು. ನನಗೆ ಸಂಸ್ಕೃತ ಭಾಷೆ ಬಾರದು– ಎಂದು ಹೇಳುತ್ತಲೇ ರಾಮಾಯಣ, ಮಹಾಭಾರತಗಳಿಂದ, ಭಾಸಕಾಳಿದಾಸರ ನಾಟಕಗಳಿಂದ ಆಯ್ದ ಶ್ಲೋಕಗಳನ್ನು ವಿ.ಸೀ. ಯವರು ನಿರರ್ಗಳವಾಗಿ ಉಪಯೋಗಿಸುತ್ತಿದ್ದರು. ಸಂನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿ ಶ್ಲೋಕದ ಸೌಂದರ್ಯವನ್ನು ಎತ್ತಿ ತೋರಿಸುತ್ತಿದ್ದರು. ಸೌಂದರ್ಯದ ವಿಶ್ಲೇಷಣೆ ಒಮ್ಮೆ ತಾರವನ್ನು ಮುಟ್ಟಿದಾಗ ಶ್ರೋತೃಗಳ ಚಪ್ಪಾಳೆ ಮೊಳಗಿತು. ಉತ್ತೇಜಿತರಾದ ವಿ.ಸೀ. 'Now I am sixty one!' ಎಂದು ನುಡಿಯುತ್ತ ತಮ್ಮ ಎದೆಯನ್ನು ಮುಟ್ಟಿಕೊಂಡರು. ಮತ್ತೆ ಚಪ್ಪಾಳೆ ಬಿತ್ತು. ಅಂದಿನ ಸಮಾರೋಪ ಭಾಷಣವು ಸರ್ವರಂಜಿನಿಯಾಗಿತ್ತು.

* * *

ಕನ್ನಡ ಸಾಹಿತ್ಯ ಪರಿಷತ್ತಿನ ಎದುರಿಗಿರುವ ಸಂಸ್ಕೃತ ಕಾಲೇಜು ನನ್ನ ಜೀವಿಕಾ ಕ್ಷೇತ್ರ. ಸಂಜೆ ಅಲ್ಲಿಂದ ನಾನು ಹೊರಟಾಗ ವಿ.ಸೀ.ಯವರ ದರ್ಶನವಾಗುತ್ತಿತ್ತು. ಹಸ್ತ ದಂಡವನ್ನಾಡಿಸುತ್ತ ಬರುತ್ತಿರುವ ಭವ್ಯಾಕೃತಿಯ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು. ಅವರ ಪಕ್ಕದಲ್ಲಿ ಮಾಮೂಲಿ ದಿರಸಿನ (Dress) ವಿ.ಸೀ.ಯವರು. ಅವರಿಬ್ಬರೂ ಜೊತೆಯಾಗಿ ಸಂಜೆಯ ಹೊತ್ತು ತಿರುಗಾಡುವುದನ್ನು ಚಾಮರಾಜಪೇಟೆಯಲ್ಲಿ ಬಹಳ ಸಲ ಕಂಡಿದ್ದೇನೆ. ಸಮಾರೋಪ ಭಾಷಣವಾದ ಮೇಲೊಂದು ದಿನ ವಿ.ಸೀ.ಯವರು ದಾರಿಯಲ್ಲಿ ಕಂಡಾಗ "ನಿಮ್ಮ ಭಾಷಣ ಆಪ್ಯಾಯನವಾಗಿತ್ತು. ನಮ್ಮೆಲ್ಲರಿಗೂ ತುಂಬ ಸಂತೋಷವಾಯಿತು" ಎಂದು ನುಡಿದೆ. ವಿ.ಸೀ. ಯವರು ನಗುತ್ತ "ನಿಮ್ಮೆಲ್ಲರ ಸಂತೋಷವೇ ನನ್ನ ಸಂತೋಷ" ಎಂದರು. ಹೀಗೆ ಅವರನ್ನು ನೋಡಿದಾಗ ಒಂದೆರಡು ಕುಶಲಪ್ರಶ್ನೆ, ಅಷ್ಟೆ.

* * *

ನರಸಿಂಹರಾಜ ಕಾಲೊನಿಯ ಹತ್ತನೆಯ ಅಡ್ಡರಸ್ತೆಯಲ್ಲಿದ್ದ ವಠಾರದಲ್ಲೊಂದು ಕಡೆ ನಾನು ವಾಸವಾಗಿದ್ದೆ. ಅನಧ್ಯಯನದ ವಿರಾಮವಿದ್ದುದರಿಂದ ಮನೆಯಲ್ಲಿದ್ದೆ. ಅಪರಾಹ್ಣ ನಾಲ್ಕು ಘಂಟೆಯ ಸಮಯದಲ್ಲಿ ಬಾಗಿಲು ಬಡಿದ ಶಬ್ದವಾಯಿತು. ಬಾಗಿಲು ತೆಗೆದು ನೋಡಿದಾಗ ಸಾಕ್ಷಾತ್ ವಿ.ಸೀ.ಯವರು ಪ್ರತ್ಯಕ್ಷವಾಗಿ ನಿಂತಿದ್ದರು! ಸಂತೋಷ, ಸಂಭ್ರಮ, ಆಶ್ಚರ್ಯಗಳಿಂದ ಅವರನ್ನು ಸ್ವಾಗತಿಸಿ, ದಡಬಡನೆ ಒಂದು ಖುರ್ಚಿಯನ್ನು ತಂದು ಮನೆಯೆದುರಿನ ಅಂಗಳದಲ್ಲಿ ಅವರನ್ನು ಕುಳ್ಳಿರಿಸಿದೆ (ಮನೆಯೊಳಗೆ ಸರಿಯಾದ ಸ್ಥಳವಿರಲಿಲ್ಲವಾದ್ದರಿಂದ!). ಇನ್ನೊಂದು ಖುರ್ಚಿಯನ್ನು ಎಳೆದು ತಂದು ನಾನೂ ಅವರೆದುರಿಗೆ ಆಸೀನನಾದೆ. ಕುಶಲಪ್ರಶ್ನೆಗಳಾದ ಮೇಲೆ ಹೇಳಿದರು–

ವಿ.ಸೀ. : ನಿಮ್ಮಿಂದ ಒಂದು ಕೆಲಸವಾಗಬೇಕಾಗಿತ್ತು. ಅದಕ್ಕಾಗಿ ಬಂದಿದ್ದೇನೆ.

ನಾನು : ಇಷ್ಟೇಕೆ ಶ್ರಮ ತೆಗೆದುಕೊಂಡಿರಿ? ಹೇಳಿ ಕಳಿಸಿದ್ದರೆ ನಾನೇ ಬರುತ್ತಿದ್ದೆ. ಸಂಸ್ಕೃತ ಕಾಲೇಜಿಗೆ ನಿಮ್ಮ ಮನೆ ಹತ್ತಿರದಲ್ಲಿದೆ.

ವಿ.ಸೀ. : ಇದು ನನ್ನ ಕಾರ್ಯವಾದ್ದರಿಂದ ನಾನೇ ಬರಬೇಕು. ಇದೇ ಉಚಿತ. ಅಲ್ಲದೆ ನನಗೆ ಒಂದು ನಿರ್ಣಯವಾಗಬೇಕಾಗಿದೆ. ಐ.ಬಿ.ಎಚ್.ನವರು 'ಕವಿ ಕಾವ್ಯ ಪರಂಪರೆ' ಎಂಬ ಗ್ರಂಥಮಾಲೆಯನ್ನು ಆರಂಭಿಸಿದ್ದಾರೆ. ನಾನು ಅದರ ಸಂಪಾದಕ. ಪ್ರಾಚೀನ ಕನ್ನಡ ಕಾವ್ಯದ ಮೇಲೆ ಒಂದೊಂದು ಗ್ರಂಥ ಬರುತ್ತದೆ. ಒಂದು ಗ್ರಂಥದಲ್ಲಿ ಅನೇಕ ವಿದ್ವಾಂಸರ ಲೇಖನಗಳಿರುತ್ತವೆ. ನಾನು ಒಂದು ಸಮೀಕ್ಷೆಯನ್ನು ಬರೆಯುತ್ತೇನೆ.

ನಾನು : ಒಳ್ಳೆಯ ಕೆಲಸವೇ. ನನ್ನಿಂದೇನಾಗಬೇಕು?

ವಿ.ಸೀ. : ಈಗ ಒಂದನೆಯ ನಾಗವರ್ಮನ ಮೇಲೆ ಒಂದು ಪುಸ್ತಕ, ಎರಡನೇ ನಾಗವರ್ಮನ ಮೇಲೆ ಒಂದು ಪುಸ್ತಕ ಬರುತ್ತದೆ. 'ಕಾವ್ಯಾವಲೋಕನ'ದ ಮೇಲೆ ನಿಮ್ಮಿಂದ ಒಂದು ಲೇಖನ ಬೇಕು.

ನಾನು : ಅದು ನನಗೆ ಸಾಧ್ಯವೆ? ಬ್ರಹ್ಮನನ್ನೇ ಕಾಳಿದಾಸನು 'ವೇದಾಭ್ಯಾಸಜಡ' ಎಂದು ಬಿಟ್ಟಿದ್ದಾನೆ! ನಾನು ವ್ಯಾಕರಣಾಭ್ಯಾಸಜಡ.

ವಿ.ಸೀ. : (ನಕ್ಕು) ಹಾಗಲ್ಲ! ನೀವು ಅಲಂಕಾರ ಶಾಸ್ತ್ರವನ್ನು ಅಭ್ಯಾಸ ಮಾಡಿದ್ದೀರಿ. ಹಳಗನ್ನಡ ಕಾವ್ಯಗಳನ್ನೂ ಬಲ್ಲಿರಿ. ವ್ಯಾಕರಣ–ಸಾಹಿತ್ಯ ಇವೆರಡೂ ಒಳ್ಳೆಯ ಜೋಡಿ!

ಈ ಪ್ರಕಾರ ಸಂಭಾಷಣೆ ನಡೆಯಿತು. ಆಮೇಲೆ ಒಂದನೆಯ ನಾಗವರ್ಮ ಎಂಬ ಕೃತಿಗೆ ಅನುಬಂಧ ರೂಪವಾಗಿ ಎರಡು ಲೇಖನಗಳನ್ನು ನಾನು ಬರೆಯಬೇಕೆಂದು ಹೇಳಿದರು. ಒಂದು ಜಯಕೀರ್ತಿಯ ಛಂದೋನುಶಾಸನ. ಇನ್ನೊಂದು ಜನಾಶ್ರಯೀ ಛಂದೋವಿಚಿತಿ. ಅವೆರಡು ಕನ್ನಡ ಛಂದಸ್ಸಿನ ವಿಷಯವಾಗಿ ಸಂಸ್ಕೃತದಲ್ಲಿ ಬರೆದ ಗ್ರಂಥಗಳು. ವಿ.ಸೀ. ಯವರು ಅನುವಾದಿಸಬೇಕಾದ ಭಾಗಗಳನ್ನು ತೋರಿಸಿ "ಇದರ ರಚನೆ ತುಂಬ ಕ್ಲಿಷ್ಟವಾಗಿದೆ. ಹೇಗಾದರೂ ಇದನ್ನು ಭೇದಿಸಬೇಕು" ಎಂದರು. ಬರವಣಿಗೆಯ ರೀತಿಯನ್ನು ವಿವರಿಸಿದರು.

ವಿ.ಸೀ. ಯವರು ವಿಖ್ಯಾತ ಕೀರ್ತಿಶಾಲಿಗಳು..ಆ ದೊಡ್ಡ ಮನುಷ್ಯರು ತಾವಾಗಿ ಮನೆ ಬಾಗಿಲಿಗೆ ಬಂದು ಒತ್ತಾಯಿಸಿದಾಗ ನಾನು ಹೇಗೆ ನಿರಾಕರಿಸಲಿ? ಅಳುಕುತ್ತಲೇ ಒಪ್ಪಿದೆ. ನೆರವಿಗೆ ಬೇಕಾದ ಗ್ರಂಥಗಳನ್ನು ಕೈ ಚೀಲದಿಂದ ತೆಗೆದುಕೊಟ್ಟರು. "ಲೇಖನ ಸಿದ್ಧವಾದ ಮೇಲೆ ನಾನು ತರಿಸಿಕೊಳ್ಳುತ್ತೇನೆ" ಎಂದರು. "ಸಂಸ್ಕೃತ ಕಾಲೇಜಿಗೆ ನಿಮ್ಮ ಮನೆ ಹತ್ತಿರವಿದೆ. ನಾನೇ ತಂದುಕೊಡುತ್ತೇನೆ" ಎಂದು ಹೇಳಿದೆ.

ವಿ.ಸೀ. : ನನ್ನ ಮನೆಯನ್ನು ನೋಡಿದ್ದೀರಾ?

ನಾನು : ನೋಡಿದ್ದೇನೆ.

ವಿ.ಸೀ. : ನೋಡಿದ್ದೀರಿ; ಒಳಗೆ ಬಂದಿಲ್ಲ!

ನಾನು : ಇನ್ನು ಮೇಲೆ ಬರುತ್ತೇನೆ!

ವಿ.ಸೀ. : ನೀವು ಬರುತ್ತಿರಬೇಕು!

* * *

ಛಂದಃಶಾಸ್ತ್ರಕ್ಕೆ ಸಂಬಂಧಿಸಿದ ಎರಡು ಅನುಬಂಧಗಳನ್ನು ಮೊದಲು ಬರೆದುಕೊಟ್ಟೆ. ವಿ.ಸೀ.ಯವರು ಓದಿನೋಡಿ "ಅಂತೂ ಕಬ್ಬಿಣದ ಕಡಲೆಗಳನ್ನು ಒಡೆದಿದ್ದೀರಿ" ಎಂದು ನುಡಿದು ಸಂತೋಷಿಸಿದರು. ಆಮೇಲೆ 'ಕಾವ್ಯಾವಲೋಕನ'ಕ್ಕೆ ಸಂಬಂಧಿಸಿದಂತೆ 'ಭಾರತೀಯ ಕಾವ್ಯ ಮೀಮಾಂಸೆಯ ಹಿನ್ನೆಲೆ' ಎಂಬ ಹೆಸರಿನ ಒಂದು ಪ್ರಬಂಧವನ್ನು ಬರೆದು ಒಪ್ಪಿಸಿದೆ. ಎಲ್ಲವೂ ಕವಿ ಕಾವ್ಯ ಪರಂಪರೆಯಲ್ಲಿ ಪ್ರಕಟವಾದವು. ಅಲ್ಲಿಂದ ಮುಂದೆ ನನಗೆ ವಿ.ಸೀ. ಯವರ ಪರಿಚಯ ಹತ್ತಿರವಾಯಿತು; ದೃಢವಾಯಿತು; ಆತ್ಮೀಯವಾಯಿತು. ಇದಕ್ಕೆ ಆ ಕಾವ್ಯ ರಸಿಕರ ಸೌಜನ್ಯ ಸೌಹಾರ್ದಗಳೇ ಮುಖ್ಯಕಾರಣ. ಆಮೇಲೆ ಅವರ ಮನೆಗೆ ಕೇವಲ ದರ್ಶನಕ್ಕಾಗಿ ನೂರಾರು ಬಾರಿ ಹೋಗಿದ್ದೇನೆ.

* * *

ನಾನು ಹೋಗುತ್ತಿದ್ದುದು ಅವರ ವಾಗ್ವಿಲಾಸವನ್ನು ಕೇಳುವುದಕ್ಕಾಗಿ. ಅವರ ಮಾತಿನ ಮೋಡಿ ನನ್ನನ್ನು ಸೆಳೆದಿತ್ತು. ಪ್ರಸ್ತಾವಕ್ಕೆ ಬರುತ್ತಿದ್ದ ವಿಷಯ ಸಾಹಿತ್ಯವೇ. ವ್ಯಾಕರಣ, ಶಿಕ್ಷಾ, ಛಂದಸ್ಸು – ಇವು ಯಾವಾಗಲಾದರೂ ಇಣುಕುತ್ತಿದ್ದುದುಂಟು. ಸಾಹಿತ್ಯದಲ್ಲಿ ರಾಮಾಯಣ, ಮಹಾಭಾರತ, ಕಾಳಿದಾಸನ ಅಭಿಜ್ಞಾನ ಶಾಕುಂತಲ – ಈ ಮೂರಕ್ಕೆ ಅಗ್ರಸ್ಥಾನ. ನನಗೆ ನವ್ಯಸಾಹಿತ್ಯದಲ್ಲಿ ಹೆಚ್ಚು ಅಭಿನಿವೇಶವಿಲ್ಲವೆಂಬುದನ್ನು ಅವರು ಹೇಗೋ ಕಂಡುಕೊಂಡಿದ್ದರು. ಅವರ ಮನೆಗೆ ಹೋದಾಗಲೆಲ್ಲ "ನೀವು ಆಗಾಗ ಬರುತ್ತಿರಿ. ನೀವು ಬಂದರೆ ನನಗೆ ಹರ್ಷವಾಗುತ್ತದೆ" ಎಂದು ಹೇಳುತ್ತಿದ್ದರು. ನನಗೆ ಬೇಕಾದದ್ದೂ ಅದೇ!

* * *

ಒಂದು ದಿನ ವಿಭೀಷಣನ ಚಾರಿತ್ರವು ಪ್ರಸ್ತುತವಾಯಿತು. "ಅವನು ವಿಪತ್ಕಾಲದಲ್ಲಿ ಅಣ್ಣನಾದ ರಾವಣನಿಗೆ ಕೈಗೊಟ್ಟಿದ್ದಾನೆ. ಅವನು ರಾಜದ್ರೋಹಿ ಎಂದು ಕೆಲವರು ಆಕ್ಷೇಪಿಸುತ್ತಾರೆ" ಎಂದೆ. ವಿ.ಸೀ.ಯವರು ಹೇಳಿದರು: "ಹೇಗೆ ಮಾಡಿದರೂ ಆಕ್ಷೇಪಿಸುವುದಕ್ಕೆ ಬರುತ್ತದೆ. ರಾವಣನಿಗೆ ಸಹಾಯಮಾಡಿದರೆ, 'ಧರ್ಮಜ್ಞನಾಗಿ ಧರ್ಮವನ್ನು ಹೇಳತಕ್ಕವನಾಗಿ ಧರ್ಮ ದ್ರೋಹಿಯಾದ ಅಣ್ಣನಿಗೆ ಸಹಾಯಮಾಡಿದ ಎಂದು ನಿಂದಿಸಬಹುದು. ರಾವಣನಿಗೆ ಹಿತೋಪದೇಶ ಮಾಡಿದಾಗ ಅವನು ತಮ್ಮನನ್ನು ಎಷ್ಟು ಕೆಟ್ಟ ಮಾತುಗಳನ್ನಾಡಿ ಧಿಕ್ಕರಿಸಿದ. ಮಾನವಂತರು ಯಾರೂ ಅದನ್ನು ಸಹಿಸಿಕೊಂಡಿರಲಾರರು."

"ವಿಭೀಷಣನು ರಾಮನಿಗೆ ಸಹಾಯಮಾಡದೆ ತಟಸ್ಥನಾಗಿರಬಹುದಾಗಿತ್ತು" ಎಂದು ನಾನು ಹೇಳಿದೆ. ವಿ.ಸೀ. ಯವರು "ಆಗ ವಿಭೀಷಣ ಹೇಡಿ, ಸಮಯಸಾಧಕ; ರಾಮ ಗೆದ್ದರೆ ರಾಮ ಪಕ್ಷ, ರಾವಣ ಗೆದ್ದರೆ ರಾವಣನ ಪಕ್ಷ ಎನ್ನಬಹುದು!" ಎಂದು ಹೇಳಿ ನಕ್ಕರು. ಅನಂತರ "ಯುದ್ಧ ಮಾಡುವಾಗ ಕುಂಭಕರ್ಣನ ಎದುರಿಗೆ ವಿಭೀಷಣ ಬರುತ್ತಾನೆ. ವಿಭೀಷಣನು ಮಾಡಿದ್ದು ಸರಿಯೆಂದು ಅವನು ಹೇಳುತ್ತಾನೆ. 'ವಿಭೀಷಣ, ನಮ್ಮ ಕುಲದಲ್ಲಿ ನೀನೊಬ್ಬನಾದರೂ ಉಳಿದಿರುತ್ತೀಯೆ' ಎಂದು ವ್ಯಾಪಕಾರ್ಥದ ಒಂದು ಮಾತನ್ನು ಹೇಳುತ್ತಾನೆ. ಆಮೇಲೆ ವಿಭೀಷಣನು ದೂರ ಹೋಗಿ ಗದೆಯನ್ನು ಊರಿಕೊಂಡು ತಲೆತಗ್ಗಿಸಿ ನಿಂತುಬಿಡುತ್ತಾನೆ. ನೋಡಿದ್ದೀರೇನು? ಅವನ ಮನಸ್ಸಿನ ಹೊಯ್ದಾಟವನ್ನದು ತೋರಿಸುತ್ತದೆ" ಎಂದರು. ಆ ಸಂದರ್ಭದ ರಾಮಾಯಣದ ಶ್ಲೋಕ ಹೀಗಿದೆ–

ಏವಮುಕ್ತ್ವಾಶ್ರುಪೂರ್ಣಾಕ್ಷೋ ಗದಾಪಾಣಿರ್ವಿಭೀಷಣಃ ।
ಏಕಾಂತಮಾಶ್ರಿತೋ ಭೂತ್ವಾ ಚಿಂತಯಾಮಾಸ ಸಂಸ್ಥಿತಃ ॥

ನಾನು ಈ ಶ್ಲೋಕವನ್ನು ಹೇಳಿ "ಈ ಮಾತಿನ ಮಹತ್ವ, ಅರ್ಥವ್ಯಕ್ತಿ ಎಷ್ಟಿದೆಯೆಂಬುದನ್ನು ನಾನು ಗಮನಿಸಿರಲಿಲ್ಲ" ಎಂದೆ. ವಿ.ಸೀ.ಯವರು ಎದ್ದು ಹೋಗಿ ತಾವು ಬರೆದಿದ್ದ 'ವಾಲ್ಮೀಕಿ ರಾಮಾಯಣ' ಎಂಬ ಪುಸ್ತಕವನ್ನು ನನಗೆ ಕೊಟ್ಟರು. ಸ್ವತಃ ಇಂಗ್ಲಿಷಿನಲ್ಲಿ ಬರೆದ ಪುಸ್ತಕಕ್ಕೆ ಅವರೇ ಕನ್ನಡದಲ್ಲಿ ಮಾಡಿದ ಪರಿವರ್ತನೆ ಅದು. ನವದೆಹಲಿಯ ಸಾಹಿತ್ಯ ಅಕ್ಯಾಡಮಿಯ ಪ್ರಕಟನೆ.

* * *

ಇನ್ನೊಂದು ದಿನ ಹೋದಾಗ ಆ ಪುಸ್ತಕದ ವಿಚಾರ ಬಂದಿತು. "ನನಗೆ ಸಂಸ್ಕೃತ ಬರುವುದಿಲ್ಲ" ಎಂದರು. "ನಿಮ್ಮ ವಾಲ್ಮೀಕಿ ರಾಮಾಯಣ ಪುಸ್ತಕವನ್ನೋದಿದವರು ಆ ಮಾತನ್ನೊಪ್ಪುವುದಿಲ್ಲ. ರಾಮಾಯಣದ ಆದ್ಯಂತಗಳಿಲ್ಲವನ್ನೂ ವ್ಯಾಸಂಗ ಮಾಡಿದ್ದೀರೆಂದು ಆ ಪುಸ್ತಕವೇ ಹೇಳುತ್ತದೆ" ಎಂದೆ. ಅದರಲ್ಲಿ ವಿ.ಸೀ.ಯವರೇ ವಿವರಿಸಿದ್ದ ೨-೩ ಪ್ರಸಂಗಗಳನ್ನು ನಿರೂಪಿಸಿ ನನ್ನ ಮೆಚ್ಚುಗೆಯನ್ನು ತಿಳಿಸಿದೆ. "ಅದನ್ನು ಪೂರ್ತಿಯಾಗಿ ಓದಿದ್ದೀರಿ. ಅದೇ ನನಗೆ ಸಂತೋಷ" ಎಂಬ ಪ್ರತಿಕ್ರಿಯೆ ಬಂದಿತು.

* * *

ವಿ.ಸೀ.ಯವರ ವಾಲ್ಮೀಕಿ ರಾಮಾಯಣ ಉತ್ಕೃಷ್ಟವಾದ ಒಂದು ವಿಮರ್ಶಾತ್ಮಕ ಗ್ರಂಥ. ಇದನ್ನೋದುವಾಗ ಇದೊಂದು ವಿಮರ್ಶೆಯೆನಿಸದೆ, ಸುಂದರವಾದ ಒಂದು ಮಹಾಕಾವ್ಯವನ್ನು ಓದುತ್ತಿದ್ದೇವೆ ಎನ್ನಿಸುತ್ತದೆ. ಹೆಸರಾಂತ ಚಿತ್ರಕಾರನು ಬಗೆಬಗೆಯ ಬಣ್ಣದ ಭವ್ಯಚಿತ್ರಗಳನ್ನು ಬರೆದು ಸಾಲಾಗಿ ತೂಗುಹಾಕಿರುವಂತೆ ಕಾಣುತ್ತದೆ. ಇದು ಮೇಲು ಮೇಲಿನ ವಿಮರ್ಶೆಯಲ್ಲ. ಒಂದೊಂದು ಮಣಿಯನ್ನು ಕರಂಡದಿಂದ ಹೊರತೆಗೆದು ಒರಸಿ ಉಜ್ಜಿ ತೋರಿಸುವ ರತ್ನಪಡಿ ವ್ಯಾಪಾರಿಯಂತೆ, ರಾಮಾಯಣದಲ್ಲಿ ಬರುವ ಒಂದೊಂದು ಪಾತ್ರದ ಗುಣಶೀಲಸ್ವಭಾವಗಳನ್ನು ಅವರವರ ಮಾತು, ಕ್ರಿಯೆಗಳಿಂದಲೇ ವ್ಯಕ್ತಪಡಿಸಿ ವಿ.ಸೀ.ಯವರು ತಮ್ಮ ತಕ್ಕಡಿಯಲ್ಲಿ ತೂಗಿ ಬಿಡುತ್ತಾರೆ. ಬೆಲೆ ಕಟ್ಟುವ ಕೆಲಸ ಓದುಗರದು! ರಾಮಾಯಣದ ಮುಖ್ಯಕಥೆಯನ್ನು ಹೇಳಿ, ಕುಟುಂಬ ಜೀವನದ ಬಗೆಗಳನ್ನು ವಿವರಿಸಿ, ಅಲ್ಲಿಯ ವ್ಯಕ್ತಿಗಳನ್ನು ಪರಿಚಯಮಾಡಿಸಿ, ಕೆಲವು ವಿಶೇಷ ಪ್ರಸಂಗಗಳನ್ನು ಚಿತ್ರಿಸಿ, ವಾಲ್ಮೀಕಿಯ ಕವಿತೆಯ ಸೌಂದರ್ಯಸಾರವನ್ನು ಬಡಿಸಿ ಕುಡಿಸುತ್ತಾರೆ. ಇದನ್ನೋದಿದ ಮೇಲೆ, ಅದರ ಆನಂದವನ್ನು ಅನುಭವಿಸಿದ ಮೇಲೆ, ವಿಸ್ತಾರವಾದ ರಾಮಾಯಣವನ್ನೋದುವುದು ಇನ್ನೇಕೆ? – ಎಂದು ತೋರಿದರೆ ಆಶ್ಚರ್ಯವೆನ್ನಿಸದು. ಕಡೆಯಲ್ಲಿ ಉಪಸಂಹರಿಸುವಾಗ ವಿ.ಸೀ.ಯವರು ಬರೆದ ಫಲಶ್ರುತಿ ಇದು–

"ವಾಲ್ಮೀಕಿ ಕೃತಿಯ ಕೀರ್ತಿ ಪ್ರತಿಭೆ ಇರುವುದು ಅಲ್ಲಿನ ಪದ್ಯದ ಘೋಷದಲ್ಲಿ;.... ಶ್ರವ್ಯವಾಗಿ ಕೇಳಿದವರಿಗೆಲ್ಲ ಅನನ್ಯಸಾಧಾರಣವಾದ ಒಂದು ಅನುಭವವಾಗುತ್ತದೆ. ಅದರ ಸ್ಥಳವನ್ನು ತುಂಬುವ ಬೇರೊಂದಿಲ್ಲ..... ಭಾವೋನ್ನತಿ ಉಳ್ಳದಾಗಿ ಅತೀವ ಸುಂದರವೂ ಮೌಲ್ಯವುಳ್ಳದ್ದೂ ಆದ ಬದುಕಿನ ಪ್ರಕಾರವೊಂದು ರಾಮಾಯಣದ ಗುಣವನ್ನು ಎತ್ತಿ ಕಾಣಿಸುತ್ತದೆ. ಭರತಖಂಡದ ಇನ್ನಾವ ಕೃತಿರಚನೆಗೂ ಲಕ್ಷಣವಲ್ಲದ ಒಂದು ರಾಜಗಾಂಭೀರ್ಯ ಅದರದು. ಆದ್ದರಿಂದ ಭಾರತೀಯರಿಗೆ ಅದು ಪೂಜ್ಯವಾಗಿದೆ."

* * *

ವಿ.ಸೀ.ಯವರು ಕುಳಿತಿರುತ್ತಿದ್ದ ಪ್ರಕೋಷ್ಠದಲ್ಲಿ ಸುತ್ತಲೂ ಸಾಲಾಗಿ ಜೋಡಿಸಿದ ಪುಸ್ತಕಗಳ ರಾಶಿ. ಪುಣೆಯ ಭಂಡಾರಕರ್ ಸಂಶೋಧನ ಸಂಸ್ಥೆಯು ಪ್ರಕಟಿಸಿದ ಮಹಾಭಾರತ ಸಂಪುಟಗಳ ಒಂದು ಸಾಲು ಅಲ್ಲಿತ್ತು. ಒಂದು ದಿನ ಅದನ್ನು ನೋಡುತ್ತಿದ್ದಾಗ "ಮಹಾಭಾರತದ ಕೃಷ್ಣ ಚಾರಿತ್ರ" ಎಂಬ ಪುಸ್ತಕವನ್ನು ವಿ.ಸೀ.ಯವರು ನನಗೆ ಕೊಟ್ಟರು. ಅವರು ಬರೆದ ಹಸ್ತಾಕ್ಷರದ ಪ್ರಕಾರ ೨೫-೧೦-೧೯೭೮ರಲ್ಲಿ.

ನಾನು ಆಸಕ್ತಿಯಿಂದ ಅದನ್ನೋದಿದ್ದೇನೆ. ಒಬ್ಬ ಕೃಷ್ಣನ ಚಾರಿತ್ರವನ್ನು ಚಿತ್ರಿಸುವುದಕ್ಕಾಗಿ ೨೭೦ ಪುಟಗಳ ದೊಡ್ಡ ಪ್ರಬಂಧವನ್ನೇ ಬರೆದಿದ್ದಾರೆ. ಭಾರತದಲ್ಲಿ ವಿರಾಟಪರ್ವದಿಂದ ಎಲ್ಲೆಲ್ಲಿಯೂ ಅವನ ಓಡಾಟ. ಭಾರತದ ಸೂತ್ರಧಾರನೇ ಅವನು.

ಶ್ರೀಕೃಷ್ಣನ ಗುಣಶೀಲಾದಿಗಳನ್ನು ವಿ.ಸೀ.ಯವರು ಪಟ್ಟಿಮಾಡಿ ಹೇಳುವುದಿಲ್ಲ. ಅವನ ಪ್ರವೇಶ, ಅವನ ಮಾತು, ಅವನ ಸುಳಿವು ಎಲ್ಲೆಲ್ಲಿಯೋ ಆ ಪ್ರಸಂಗವನ್ನು ರಮಣೀಯವಾಗಿ ಚಿತ್ರಿಸಿ, ಕೃಷ್ಣನ ಬುದ್ಧಿಶಕ್ತಿ, ವಾಗ್ಮಿತೆ, ಲೋಕೋಪಕಾರ ಪ್ರವಣತೆ, ಧರ್ಮನಿಷ್ಠೆ – ಮೊದಲಾದವನ್ನು ವಾಚಕರೇ ಸ್ಪಷ್ಟವಾಗಿ ಗುರುತಿಸಿಕೊಳ್ಳುವಂತೆ ಮಾಡುತ್ತಾರೆ. ಮೂಲ ಶ್ಲೋಕಗಳನ್ನು ಉದಾಹರಿಸಿ ಅರ್ಥ ಬರೆದು, ಆ ಪ್ರಕರಣಕ್ಕೊಂದು ಕಳಿಯನ್ನು ತುಂಬಿಸುತ್ತಾರೆ. ಕೃಷ್ಣನು ಭಗವಂತನ ಅವತಾರವೆಂದು ನಂಬಿದವರು, ನಂಬದವರು ಯಾರೂ ನೊಂದುಕೊಳ್ಳಲು ಅವಕಾಶವಿಲ್ಲ. ದೇವರ ಅವತಾರವಾದರೂ ಮನುಷ್ಯನಾಗಿ ಹುಟ್ಟಿದ ಮೇಲೆ ಮನುಷ್ಯನಂತೆ ನಡೆದುಕೊಳ್ಳಬೇಕೆಂಬುದು ತತ್ವ.

ಕೃಷ್ಣನು ಧೀರ, ವೀರ, ಮಹಾಬುದ್ಧಿಶಾಲಿ, ನಯನೀತಿಗಳನ್ನು ಬಲ್ಲವನು, ಅಪಾರ ಕರುಣಾಶಾಲಿ, ಲೋಕಹಿತವನ್ನು ಬಯಸತಕ್ಕವನು, ರಾಜಕೀಯ ನಿಪುಣ, ಧರ್ಮರಕ್ಷಣೆಯಲ್ಲಿ ತತ್ಪರ, ಹಿರಿಯರಾದ ಭೀಷ್ಮದ್ರೋಣಾದಿಗಳಿಗೂ ಮಾನ್ಯ, ಪೂಜ್ಯ ಇತ್ಯಾದಿ ಗುಣಗಣಗಳು ಹೊರಹೊಮ್ಮುವ ಮನೋಜ್ಞವಾದ ಚಿತ್ರಣ ಇಲ್ಲಿದೆ. ಮಹಾಭಾರತವೇ ಕಣ್ಣುಮುಂದೆ ಬಂದು ನಿಲ್ಲುವಂತೆ ವಿ.ಸೀ.ಯವರು ಕೌಶಲದಿಂದ ನೆಯ್ದ ಬರವಣಿಗೆ ಇದು. ಅವರಿಗೆ ಪ್ರಿಯವಾದ ಗುಣ, ನಡತೆಗಳು ಯಾವುವೆಂಬದನ್ನು ಈ ಗ್ರಂಥವೇ ಹೇಳಿಬಿಡುತ್ತದೆ. ದೀರ್ಘಕಾಲದ ಸಿದ್ಧತೆಗಳಿಂದ ವಿಶೇಷವಾಗಿ ಪರಿಶ್ರಮಿಸಿ ರಚಿಸಿದ ಗ್ರಂಥವಿದು. ಆದರೂ ಮುದ್ರಣಕ್ಕೆ ಮೊದಲು ಪುನಃಪರಿಶೀಲನೆ ನಡೆದಿಲ್ಲ. ವಾಕ್ಯರಚನೆಯಲ್ಲಿ ಅನೇಕ ಲೋಪದೋಷಗಳು ಉಳಿದುಕೊಂಡಿವೆ. ನಮ್ಮ ಪುಣ್ಯಯೋಗದಿಂದ ಪುನರ್ಮುದ್ರಣದ ಸಂದರ್ಭ ಒದಗಿದರೆ, ಮೊದಲು ಸರಿಯಾದ ಪರಿಶೋಧನೆ ಆವಶ್ಯಕ. ನನ್ನ ದೃಷ್ಟಿಯಲ್ಲಿ, ವಿ.ಸೀ.ಯವರ ವಾಲ್ಮೀಕಿ ರಾಮಾಯಣ, ಕೃಷ್ಣಚಾರಿತ್ರ ಇವೆರಡೇ ಅವರ ಕೀರ್ತಿ ಧ್ವಜವನ್ನು ಎತ್ತಿ ಹಿಡಿಯಲು ಸಾಕು.

* * *

ವಿ.ಸೀ.ಯವರಿಗೆ ಸ್ತ್ರೀಯರಲ್ಲಿ ಅಥವಾ ಸ್ತ್ರೀಪಾತ್ರಗಳಲ್ಲಿ ಒಂದು ಬಗೆಯ ಪಕ್ಷಪಾತ ದೃಷ್ಟಿ ಇತ್ತು. ವಾತ್ಸಲ್ಯ, ಮರುಕ ಎನ್ನಬಹುದು. ಒಂದು ದಿನ ಕುಂತಿ–ಗಾಂಧಾರಿಯರ ಪಾತ್ರಗಳನ್ನು ವಿಶ್ಲೇಷಣ ಮಾಡತೊಡಗಿದರು. ಅದೊಂದು ಉಪನ್ಯಾಸದಂತೆ ಬೆಳೆಯಿತು. ನಾನೊಬ್ಬನೇ ಶ್ರೋತಾರ! ಅವರ ವಾಗ್ವಿಲಾಸವನ್ನು ಆಸ್ವಾದಿಸುತ್ತ ಏಕಚಿತ್ತದಿಂದ ಆಲಿಸುತ್ತಿದ್ದೆ. ಕಡೆಯಲ್ಲಿ "ಇದು ಸಾಹಿತ್ಯಸೌಂದರ್ಯ. ಮನುಷ್ಯನಿಗೆ ದೊರಕಿರುವ ಭಾಗ್ಯ! ಸೌಭಾಗ್ಯ!" ಎಂದು ಉಪಸಂಹರಿಸಿದರು.

* * *

ಒಮ್ಮೆ ಸಲ ಶಕುಂತಲೆಯ ವಿಷಯವಾಗಿ ಮಾತಾಡುತ್ತ "ಅವಳು ದುಷ್ಯಂತನನ್ನು 'ಅನಾರ್ಯ' ಎಂದಳಲ್ಲ, ಅದೊಂದು ಮಾತು ಸಾಲದೆ? ಅವನನ್ನು ಚಪ್ಪಲಿಯಿಂದ ಹೊಡೆದಂತಾಯಿತು" ಎಂದುಬಿಟ್ಟರು. ನಾನು "ಮಹಾಭಾರತದ ಶಕುಂತಲೆ ಹಾಗೆ ಹೇಳಿದ್ದರೆ ಅದು ಸರಿಯೇ. ಕಾಳಿದಾಸನೆ ಶಾಕುಂತಲ ನಾಟಕದಲ್ಲಿ ಅದು ಅನ್ವಯಿಸುವುದಿಲ್ಲ. ದುರ್ವಾಸರ ಶಾಪ ಅಡ್ಡಬಂದಿತ್ತು. ದುಷ್ಯಂತನ ತಪ್ಪೇನೂ ಇಲ್ಲ" ಎಂದು ನುಡಿದೆ. ವಿ.ಸೀ.ಯವರು ಏನೂ ಹೇಳಲಿಲ್ಲ.

* * *

ಪಾಣಿನಿಯ ಶಿಕ್ಷಾಶಾಸ್ತ್ರದ ವಿಷಯದಲ್ಲಿ ಮಾತು ಉಪಕ್ರಮವಾದಾಗ "ವರ್ಣಗಳ ಸ್ಥಾನ, ಪ್ರಯತ್ನ, ಉಚ್ಚಾರಣ ಕ್ರಮ, ಉಚ್ಚಾರಣೆಯಲ್ಲಾಗುವ ದೋಷಗಳು, ಹ್ರಸ್ವ ಅಕಾರದಲ್ಲಿಯ ಉಚ್ಚಾರಣ ಭೇದ" – ಇವನ್ನು ಕುರಿತು ಹೇಳಿದೆ. ವಿ.ಸೀ.ಯವರು "ಶಿಕ್ಷಾ ಶಾಸ್ತ್ರದ ವಿಚಾರವಾಗಿ ಕನ್ನಡದಲ್ಲಿ ಯಾವ ಪುಸ್ತಕವೂ ಬಂದಂತೆ ಕಾಣುವುದಿಲ್ಲ. ನೀವು ಒಂದು ಪುಸ್ತಕವನ್ನು ಬರೆಯಿರಿ. ನಮ್ಮ ಜನರಿಗೆ ಈ ವಿಚಾರ ತಿಳಿದಿರಬೇಕು" ಎಂದರು. ಕೆಲವು ದಿನಗಳ ಮೇಲೆ ಮತ್ತೆ ಜ್ಞಾಪಿಸಿದರು. ನನ್ನ ದೌರ್ಭಾಗ್ಯ. ಅವರ ಇದೊಂದು ಸೂಚನೆಯನ್ನು ಇನ್ನೂ ನಡೆಸಲಾಗಲಿಲ್ಲ.

* * *

ಪೂಜ್ಯರಾದ ರಾಳ್ಳಪಳ್ಳಿ ಅನಂತಕೃಷ್ಣಶರ್ಮರು ವಿಜಯನಗರದಲ್ಲಿರುವ ನನ್ನ ಮನೆಗೆ ಯಾವುದೋ ನಿಮಿತ್ತದಿಂದ ಆಗಮಿಸಿದ್ದರು. ಸ್ವಲ್ಪ ಹೊತ್ತು ಮಾತಾಡಿ ನಿರ್ಗಮಿಸಿದರು. ನಾನು ವಿ.ಸೀ.ಯವರ ಮನೆಗೆ ಹೋದಾಗ ಅದು ನೆನಪಿಗೆ ಬರಲು, ರಾಳ್ಳಪಳ್ಳಿಯವರಲ್ಲಿ ನನಗಿದ್ದ ಗೌರವ ಬುದ್ಧಿಯನ್ನು ಕೆಲವು ಮಾತುಗಳಲ್ಲಿ ತಿಳಿಸಿದೆ. ನನ್ನ ಎಲ್ಲ ಮಾತುಗಳನ್ನು ಕಬಳಿಸುವಷ್ಟು ಅರ್ಥವ್ಯಕ್ತಿಯಿದ್ದ ಒಂದು ಮಾತು ವಿ.ಸೀ.ಯವರ ಬಾಯಿಂದ ಬಂದಿತು– "ರಾಳ್ಳಪಳ್ಳಿಯವರ ಪಾದಗಳಿಗೆ ಒಂದು ಸಲ ನಮಸ್ಕಾರ ಮಾಡಿದರೆ ನಮ್ಮ ಆಯುಸ್ಸು ಹತ್ತು ವರ್ಷ ಹೆಚ್ಚುತ್ತದೆ! ಹತ್ತು ವರ್ಷ!"

* * *

ವಿ.ಸೀ.ಯವರು ಲಂಡನ್ನಿಗೆ ಹೋಗಿದ್ದಾಗ ಅನಾರೋಗ್ಯವುಂಟಾಗಿ ಆಸ್ಪತ್ರೆಗೆ ಸೇರಿದ್ದರು. ಆಸ್ಪತ್ರೆಯ ನರ್ಸುಗಳು ವಿಶೇಷವಾದ ಪ್ರೀತ್ಯಾದರಗಳಿಂದ ಇವರನ್ನು ಉಪಚರಿಸುತ್ತಿದ್ದರಂತೆ. ಅದನ್ನು ನೆನೆಸಿಕೊಂಡು ವಿ.ಸೀ.ಯವರು ಆ ನರ್ಸುಗಳ ಉಪಚಾರದ ಬಗೆಯನ್ನು ಎಷ್ಟೋ ಸಲ ನನ್ನೆದುರಿಗೆ ಕೊಂಡಾಡಿದ್ದುಂಟು. ಇದೊಂದು ಅಪೂರ್ವವಾದ, ಅಂತೆಯೇ ಪ್ರಶಂಸನೀಯವಾದ ಕೃತಜ್ಞತಾ ಸ್ಮರಣೆ.

* * *

ಒಮ್ಮೆ ನಾನು ಡೆಲ್ಲಿಗೆ ಹೋಗಬೇಕಾದ ಪ್ರಸಂಗವನ್ನು ವಿ.ಸೀ.ಯವರಿಗೆ ತಿಳಿಸಿದೆ. ವಾಪಸ್ಸು ಬರುವುದು ಯಾವಾಗ ಎಂದು ಕೇಳಿದರು. "ಹದಿನೈದು ದಿನಗಳಾಗಬಹುದು. ಹರಿದ್ವಾರ, ಹೃಷೀಕೇಶ, ಕಾಶಿ ಮೊದಲಾದ ಸ್ಥಳಗಳಿಗೆ ಹೋಗಿ ಬರಬೇಕೆಂದಿದ್ದೇನೆ" ಎಂದು ನುಡಿದೆ. "ಜೊತೆಗೆ ಸಹಾಯಕ್ಕೆ ಯಾರು?" ಎಂದಾಗ, 'ಶ್ರೀರಾಮ ಸಹಾಯ' ಎಂದೆ. "ಉತ್ತರ ದೇಶದಲ್ಲಿ ರೈಲು ಪ್ರಯಾಣ ಕಷ್ಟ. ನೂಕುನುಗ್ಗಲು ಅಧಿಕ" ಎಂದು ಎಚ್ಚರಿಕೆಯ ಮಾತನ್ನು ಹೇಳಿ ಹೀಗೆಂದರು. "ಹರಿದ್ವಾರದಲ್ಲಿ ಮೈಸೂರು ಛತ್ರ ಇದೆ. ಅದನ್ನು ನೋಡಿ ಕೊಳ್ಳತಕ್ಕವರು ನನ್ನ ಬೀಗರು. ಅಲ್ಲಿಗೆ ಹೋಗಿ. ಅವರಿಗೆ ನಾನು ಕಾಗದ ಬರೆಯುತ್ತೇನೆ. ಹೃಷೀಕೇಶದಲ್ಲಿಯೂ ಅವರು ಸೌಕರ್ಯವನ್ನು ಕಲ್ಪಿಸಿಕೊಡುತ್ತಾರೆ. ಕಾಶಿಯಲ್ಲಿ ನನ್ನ ಅಳಿಯ ಇದ್ದಾನೆ. ನೀವು ಅಲ್ಲಿರಬಹುದು. ಪತ್ರವನ್ನು ಬರೆಯುತ್ತೇನೆ" ಎಂದು ಹೇಳಿ ಅವರ ವಿಳಾಸವನ್ನು ಬರೆದುಕೊಟ್ಟರು.

ನಾನು ಹರಿದ್ವಾರಕ್ಕೆ ಹೋದಾಗ ಅವರ ಬೀಗರು ಆದರದಿಂದ ನನ್ನನ್ನು ಉಪಚರಿಸಿದರು. ಹೃಷೀಕೇಶವನ್ನು ನೋಡಿ ಬರಲು ಜನಸಹಾಯವನ್ನು ಒದಗಿಸಿದರು. ಅವರಿಂದ ನನಗೆ ತುಂಬ ಉಪಕಾರವಾಯಿತು. ಕಾಶಿಯಲ್ಲಿ ನನಗೆ ಪರಿಚಿತರಾದ ಗೋಕರ್ಣದ ಪುರೋಹಿತರ ವಸತಿಯಲ್ಲಿ ಇದ್ದೆ. ವಿ.ಸೀ.ಯವರ ಅಳಿಯಂದಿರ ಮನೆಗೆ ಹೋಗಿಬಂದೆ.

ಅಯಾಚಿತವಾಗಿ, ತಾವಾಗಿಯೇ ಮುಂದೆ ಬಂದು, ಅವರು ಮಾಡುತ್ತಿದ್ದ ಉಪಕಾರಗಳಿಗೆ ಇದೊಂದು ನಿದರ್ಶನ.

* * *

ಅವರಿಗೆ ತಿಂಡಿತಿನಿಸುಗಳಲ್ಲಿದ್ದ ಅಭಿರುಚಿ ಎಲ್ಲರಿಗೂ ತಿಳಿದದ್ದು. ಒಂದು ದಿನ ಸಂಜೆ ಅವರ ಮಗನನ್ನು ಕರೆದು ಚಾಮರಾಜಪೇಟೆ ಚೌಕಕ್ಕೆ ಹೋಗಿ ಬೋಂಡಾಗಳನ್ನು ತರಬೇಕೆಂದು ಹೇಳಿದರು. ನನ್ನ ಕಡೆ ನೋಡಿ "ಅಲ್ಲೊಬ್ಬ ಬೋಂಡಾಗಳನ್ನು ಚೆನ್ನಾಗಿ ಮಾಡುತ್ತಾನೆ" ಎಂದು ಹೇಳಿ ಹುಬ್ಬು ಹಾರಿಸಿದರು! ಆ ವೈಖರಿಯನ್ನು ನೋಡಬೇಕು! ನಾನು ಹೊರಡುವುದರಲ್ಲಿದ್ದೆ. "ನೀವು ಅಂಗಡಿ ಬೋಂಡಾ ತಿನ್ನುವುದಿಲ್ಲ. ಇನ್ನೊಂದು ಸಲ ಕಾಫಿಯನ್ನು ಕುಡಿಯಿರಿ?" ಎಂದು ಹೇಳಿ ಬಿಸ್ಕತ್ತು ಕಾಫಿಗಳನ್ನು ತರಿಸಿ ಒತ್ತಾಯದಿಂದ ತಿನ್ನಿಸಿ ಕುಡಿಸಿಯೇ ಕಳಿಸಿದರು. ಅವರ ಮನೆಗೆ ಹೋದಾಗಲೆಲ್ಲ ಮೊದಲು ಕಾಫೀ ಸೇವನೆ ಆಗಲೇಬೇಕು.

* * *

ಅವರ ಪತ್ನಿ ಸರೋಜಮ್ಮನವರು ತೀರಿಹೋದಾಗ ವಿ.ಸೀ.ಯವರನ್ನು ಕಂಡು ಬರಲು ಹೋಗಿದ್ದೆ. ಕೋಣೆಯಲ್ಲಿ ಚಾಪೆಯ ಮೇಲೆ ಏಕಾಕಿಯಾಗಿ ಕುಳಿತಿದ್ದರು. ನಾನು ಎದುರಿಗೆ ಮೌನದಿಂದ ಉಪವಿಷ್ಟನಾದೆ. ಸ್ವಲ್ಪ ಹೊತ್ತಿನ ಮೇಲೆ ವಿ.ಸೀ. ಹೇಳಿದರು: "ಜೀವನದಲ್ಲಿ ಸಿಹಿ, ಕಹಿ ಇದ್ದೇ ಇದೆ. 'ಸುಖದುಃಖೇ ಸಮೇಕೃತ್ವಾ.' ಬೇವು–ಬೆಲ್ಲ

ಎರಡನ್ನೂ ಕಲಸಿ ತಿನ್ನಬೇಕು. ನೀವು ಅನುಭವಿಸುತ್ತಿರುವುದೇ ನನಗೆ. ನಿಮ್ಮೆಲ್ಲರ ಸಾಲಿನಲ್ಲಿ ನಾನೊಬ್ಬ.” ನಾನು ಏನೋ ಎರಡು ಮಾತು ಹೇಳಿ ಎದ್ದು ಬಂದೆ.

* * *

ಕಡೆಯ ದಿನಗಳಲ್ಲಿ ಅವರ ಆರೋಗ್ಯ ಕೆಟ್ಟಿತ್ತು. ದೇಹಸ್ಥಿತಿ ಉಲ್ಬಣವಾಗಿದೆಯೆಂದು ತಿಳಿದೊಡನೆ ಅವರ ಮನೆಗೆ ಹೋದೆ. ವಿ.ಸೀ.ಯವರನ್ನು ಒಂದು ಮಂಚದ ಮೇಲೆ ಮಲಗಿಸಿದ್ದರು. ಏದುವ ಮೇಲುಸಿರು ತೀವ್ರವಾಗಿತ್ತು. ನೋಡಿಕೊಳ್ಳುತ್ತಿದ್ದ ಅವರ ಮಕ್ಕಳು ನನ್ನ ಹೆಸರನ್ನು ೨–೩ ಸಲ ಹೇಳಿದಾಗ, ಕಣ್ಣನ್ನು ಅರ್ಧತೆರೆದು ನೋಡಿದಂತೆ ತೋರಿತು. ಕೈ ಮುಗಿದು ಭಾರವಾದ ಹೃದಯದಿಂದ ಹೊರಟುಬಂದೆ. ಅಂದಿಗೆ ಸರಿಯಾಗಿ ಮೂರನೆಯ ದಿನವೇ ಅವರ ಇಹಲೋಕಯಾತ್ರೆ ಮುಗಿಯಿತು. ನನಗೆ ಗೊತ್ತಾದದ್ದು ಐದನೆಯ ದಿನ. ಅವರ ಮಕ್ಕಳಿಗೆ ಮಾಮೂಲಿ ಸಾಂತ್ವನವನ್ನು ಹೇಳಿ ಬಂದೆ.

* * *

ಸಾವಿರಾರು ವರ್ಷಗಳಿಂದ ಬೆಳೆದು ಸಂಪುಷ್ಟವಾದ ಭಾರತೀಯ ಸಂಸ್ಕೃತಿ ಯಾವುದು? – ಎಂದು ಕೇಳಿದರೆ ನಾನು ವಿ.ಸೀ.ಯವರನ್ನು ಬೆರಳಿಟ್ಟು ತೋರಿಸುತ್ತೇನೆ. ತನ್ನ ಸೌರಭ ಸೌಭಾಗ್ಯ ಕೋಮಲತೆಗಳಿಂದ ಎಲ್ಲರಿಗೂ ಬೇಕಾದ, ಯಾರನ್ನೂ ನೋಯಿಸದ ಅರಳಿದ ಮಲ್ಲಿಗೆ ಹೂ ವಿ.ಸೀ.

* * *

ಕರೆಯದೆ, ಕೆಲಸವಿಲ್ಲದೆ, ಇನ್ನೊಬ್ಬರ ಮನೆಗೆ ಹೋಗುವ ಪರಿಪಾಠ ನನಗಿಲ್ಲ. ಇದಕ್ಕೆ ಎರಡು ವಿನಾಯಿತಿಗಳಿದ್ದವು. ಒಂದು ಡಿ.ವಿ.ಜಿ.ಯವರ ಮನೆಗೆ. ಇನ್ನೊಂದು ವಿ.ಸೀ.ಯವರ ಮನೆಗೆ.

ಕಲಾತಪಸ್ವಿ

ಸಮೇತನಹಳ್ಳಿ ರಾಮರಾವ್

ಸನ್ಮಾನ್ಯ ವಿ. ಸೀತಾರಾಮಯ್ಯನವರ ತಂದೆ ಬೆಂಗಳೂರು ಜಿಲ್ಲೆಯ ಹೊಸಕೋಟೆಯ ಪಕ್ಕದ ಚಿಕ್ಕಹುಲ್ಲೂರಿನವರು. ಆ ಕಾರಣ ಇವರು ನನ್ನ ಜಿಲ್ಲೆಯ, ಅದರಲ್ಲಿಯೂ ನನ್ನ ತಾಲ್ಲೂಕಿನವರೇ ಎಂಬುದು ನನ್ನ ಮನಸ್ಸಿಗೊಂದು ನೆಮ್ಮದಿಯ ಸಂಗತಿ. ನನ್ನ ಊರು ಸಮೇತನಹಳ್ಳಿ ಚಿಕ್ಕ ಹುಲ್ಲೂರಿಗೆ ದಕ್ಷಿಣಕ್ಕೆ ಐದಾರು ಮೈಲಿಗಳ ದೂರದಲ್ಲಿದೆ. ಅವರು ಒಮ್ಮೆ ಮಾತನಾಡುತ್ತಿದ್ದಾಗ, "ನಾನು ಹುಟ್ಟಿದುದು ಇಪ್ಪತ್ತನೆಯ ಶತಮಾನದ ಹೊಸ್ತಿಲ ದಿನಗಳಲ್ಲಿ. ಹತ್ತೊಂಬತ್ತನೆಯ ಶತಮಾನದ ಹಳತು ಮತ್ತು ಇಪ್ಪತ್ತನೆಯ ಶತಮಾನದ ಹೊಸತುಗಳಿರಡನ್ನೂ ಬೆಸೆದುಕೊಂಡು ಹುಟ್ಟಿದವನು" ಎಂದು ಸ್ವಲ್ಪ ಹೆಮ್ಮೆ ಬೆರೆತ ದನಿಯಿಂದಲೇ ಹೇಳಿದ್ದರು. ನಾನು "ಹಳೆಯ ಬೇರಿನಿಂದ ಹುಟ್ಟಿದ ಈ ಹೊಸ ಚಿಗುರು ನಮ್ಮ ಪೀಳಿಗೆಯ ಭಾಗ್ಯವಾಯಿತು" ಎಂದು ಸಂತೋಷ ಪಟ್ಟಿದ್ದೆನು.

ಬೆಂಗಳೂರಿನ ಯಲಹಂಕ ಬಾಗಿಲ ಆಂಜನೇಯ ದೇಗುಲದ ಎದುರಿಗಿದ್ದ ಲಂಡನ್ ಮಿಷನ್ ಹೈಸ್ಕೂಲಿಗೆ – ಈಗ ಅದು ಸೆಂಟ್ರಲ್ ಪ್ರೀಯೂನಿವರ್ಸಿಟಿ ಕಾಲೇಜ್ ಎಂದೇನೋ ಆಗಿದೆ– ನಾನು ಹೈಸ್ಕೂಲಿನ ಮೊದಲನೆಯ ತರಗತಿಗೆ(Fourth Form) ಸೇರಿದಾಗ, ೧೯೩೪–೩೫ ರಲ್ಲಿ ವಿ.ಸೀ. ಯವರ ಒಂದು ಪುಸ್ತಕ 'ಪಂಪಾಯಾತ್ರೆ' ನನಗೆ ಪಠ್ಯಪುಸ್ತಕ ಆಗಿದ್ದಿತು. ಇವರ ಹೆಸರು ನನ್ನ ಕಿವಿಗೆ ಮೊದಲನೆಯ ಸಾರಿಗೆ ಬಿದ್ದುದು ಆಗಲೇ. ಆಗ ನಾನು ಅದಕ್ಕೆ ಅಷ್ಟೇನೂ ಪ್ರಾಮುಖ್ಯವನ್ನು ಕೊಡಲಿಲ್ಲ. ಆಗ ನಾನು ಬಳೇಪೇಟೆಯ ಶ್ರೀನಿವಾಸ ಮಂದಿರದ ಓಣಿಯಲ್ಲಿದ್ದ ಚಿಕ್ಕಗರಡಿಯ ಪಕ್ಕದ ಒಂದು ಕೊಠಡಿಯಲ್ಲಿ ಇತರ ಮಿತ್ರರೊಡನೆ ಇದ್ದೆನು. ನನ್ನ ಈ ಕೊಠಡಿಯ ಸಹಭಾಗಿಯೊಬ್ಬರು ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಕಲಾ (Arts) ವಿಭಾಗದಲ್ಲಿ ಓದುತ್ತಿದ್ದರು. ಇವರಿಗೆ 'ಕರ್ನಾಟಕ ಕಾದಂಬರೀ ಸಂಗ್ರಹ' ಪಠ್ಯವಾಗಿದ್ದಿತು. ಆ ಗ್ರಂಥದ ಪಾಠವನ್ನು ವಿ.ಸೀ. ಯವರು ತೆಗೆದುಕೊಳ್ಳುತ್ತಿದ್ದರಂತೆ. ಆಗ ಈ ನನ್ನ ಮಿತ್ರರು ವಿ.ಸೀ.ಯವರ ಬಹುಶ್ರುತವಾದ ಪಾಂಡಿತ್ಯವನ್ನು, ವಾಗ್ವೈಖರಿಯನ್ನು, ಅವರು ನಿಲ್ಲುತ್ತಿದ್ದ ಭಂಗಿಯನ್ನು, ಭಾವದ ಪ್ರದರ್ಶನದ ಸೊಗಸನ್ನು, ಅನುಭವಿಸುತ್ತಿದ್ದ ಆನಂದವನ್ನು ನಮಗೆ ಬಣ್ಣಿಸುತ್ತಿದ್ದರು. ಅದನ್ನು ಕೇಳಿದಾಗ ನಾನು ರೋಮಾಂಚನಗೊಳ್ಳುತ್ತಿದ್ದೆನು. ಅದು ನನ್ನ ನರ ನಾಡಿಗಳನ್ನು

ವ್ಯಾಪಕವಾಗಿ ತುಂಬಿಕೊಂಡಿತು. 'ಮಹಾಶ್ವೇತೆ' ಎಂಬ ನನ್ನ ನಾಟಕ ರಚನೆಗೆ ಹೀಗೆ ವಿ.ಸೀ.ಯವರು ಪರೋಕ್ಷವಾಗಿ ಪೀಠಿಕೆಯನ್ನು ಹಾಕಿದ್ದರು.

ನಾನು ಇದ್ದ ಲಂಡನ್ ಮಿಷನ್ ಹೈಸ್ಕೂಲಿಗೂ ವಿ.ಸೀ.ಯವರು ಇದ್ದ ಇಂಟರ್ ಮೀಡಿಯೆಟ್ ಕಾಲೇಜಿಗೂ ಕೇವಲ ನೂರಿನ್ನೂರು ಗಜಗಳ ದೂರವಷ್ಟೆ. ಅಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳು ನನಗೆ ನನ್ನ ಕೊಠಡಿಯ ಮಿತ್ರರಿಂದ ತಿಳಿಯುತ್ತಿದ್ದಿತು. ನಾನು ಅವುಗಳಲ್ಲಿ ಯಾವುದೇ ಕಾರ್ಯಕ್ರಮಗಳನ್ನಾದರೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ವಿ.ಸೀ. ಯವರನ್ನು ನಾನು ಮೊದಲ ಬಾರಿಗೆ ನೋಡಿದುದು ಅಲ್ಲಿಯೇ. ಬಾದಾಮಿಯ ತೆಳು ಬಣ್ಣದ ಮುಚ್ಚುಕತ್ತಿನ ಮೇಲಂಗಿ (ಕೋಟು), ಶುಭ್ರವಾದ ಮ್ಯಾಂಚೆಸ್ಟರಿನ ತೆಳುವಾದ ಮತ್ತು ನಯವಾದ ಪಂಚೆ ಕಚ್ಚೆಯುಡುಗೆ, ಜರಿ ಇಲ್ಲದ ಮೈಸೂರು ರುಮಾಲುಗಳಲ್ಲಿ ಅಲ್ಲಿ ವಿ.ಸೀ. ಕಾಣಿಸಿಕೊಳ್ಳುತ್ತಿದ್ದರು. ಅವರ ಉಡುಗೆ ತೊಡುಗೆಗಳ ಆ ಒಪ್ಪ ಓರಣಗಳು ಅವರ ಹೃದಯದ ಚೆಲುವನ್ನು ರಸಾರ್ದ್ರತೆಗಳನ್ನು ಬಿಡಿಸಿಡುತ್ತಿದ್ದವು. ಅವರು ಸಭೆಗಳಲ್ಲಿ ಒಮ್ಮೊಮ್ಮೆ ಮಾತನಾಡುತ್ತಿದ್ದರು. ಅವರ ವಾಕ್ಪ್ರೌಢಿಮೆ ಅವರಿಗೇ ವಿಶಿಷ್ಟವಾದುದು. ಭಾವಗಳಿಗೆ ಮತ್ತು ವಾಕ್ಯವಿನ್ಯಾಸಗಳಿಗೆ ತಡಕಾಡದ ನಿರರ್ಗಳವಾದ ಆ ಓಟ, ಯೋಗ್ಯಪದಗಳ ಆ ಜೋಡಣೆ, ರಸೋತ್ಪತ್ತಿಯ ಇಂಪು, ವಿದ್ವತ್ತಿನ ಆ ತಿಳಿವು, ಮಾತುಗಾರಿಕೆಯ ಆ ಸೊಗಸು, ಮನಸ್ಸನ್ನು ಸೂರೆಗೊಳ್ಳುವ ಆ ಮೋಡಿ, ಆ ಬಲುಹು ಮತ್ತು ಬಿನ್ನಣಾದಿಗಳನ್ನು ನಾನು ಮನಸಾರೆ ಸವಿದಿದ್ದೇನೆ. ನಾನೇನಾದರೂ ಇಂಟರ್ ಮೀಡಿಯೆಟ್‌ಗೆ ಹೋದರೆ, ಇವರಿಂದ ಕನ್ನಡವನ್ನು ಕಲಿಯುವ ಮಹಾಭಾಗ್ಯ ನನ್ನದಾಗುತ್ತದೆ ಎಂಬ ಕನಸನ್ನೂ ಅಲ್ಲಿ ಆಗ ಕಾಣುತ್ತಿದ್ದೆನು. ನನ್ನ ಆ ಕನಸು ನನಸಾಗಲಿಲ್ಲ. ಆದರೆ ಒಬ್ಬ ಲೇಖಕನಾಗಿ ನಾನು ಅವರನ್ನು ಸಮೀಪಿಸಿದುದು ಉಂಟು; ಅವರ ಪ್ರೇಮ ವಿಶ್ವಾಸಗಳನ್ನು ಗಳಿಸಿದುದೂ ಉಂಟು.

ನಾನು ಯಾವುದೇ ಕಾಲೇಜಿನ ವಿದ್ಯಾರ್ಥಿಯಲ್ಲ. ತನ್ಮೂಲಕ ನಾನು ಅವರ ವಿದ್ಯಾರ್ಥಿಯೂ ಅಲ್ಲ. ಅವರ ಪಾಲಿಗೆ ನಾನೊಬ್ಬ ದಾರಿಹೋಕನೆಂದಾದರೂ ಸರಿಹೋಗುತ್ತದೆ. ಆದ್ದರಿಂದ ಅವರು ನನ್ನನ್ನು ಉಪೇಕ್ಷೆಯಿಂದ ಕಾಣಬಹುದಿತ್ತು. ಅದು ತಪ್ಪೇನೂ ಆಗುತ್ತಿರಲಿಲ್ಲ. ಕನ್ನಡ ಕೈಂಕರ್ಯದ ಆ ದಿನಗಳಲ್ಲಿ, ನನ್ನ ಹಿರಿಯ ಪೀಳಿಗೆಯ ಇಂತಹ ವಿದ್ವಾಂಸರಲ್ಲಿ, ಕನ್ನಡದ ಬೆಳಿವಣಿಗೆಗೆ ಕಿರಿಯರನ್ನು ಹುರಿದುಂಬಿಸುವ, ಉತ್ತೇಜನದಿಂದ ಮೇಲಕ್ಕೆತ್ತುವ ಸಹೃದಯತೆ ಮತ್ತು ಔದಾರ್ಯಗಳು ತುಂಬಿದ್ದುವು. ಇದಕ್ಕೆ ಅಪವಾದವಾಗಿ, ತಾವಾಯಿತು ತಮ್ಮ ಪಾಡಾಯಿತು ಎಂಬ ಮನೋಭೂಮಿಕೆಯುಳ್ಳವರೂ ಅಲ್ಲೊಬ್ಬರು ಇಲ್ಲೊಬ್ಬರು ಆಗ ಇದ್ದಿರಬಹುದು. ಮೇಲೆ ಉರಿವ ಸೊಡರಿನ ಕೆಳಗೇ ನೆರಳೂ ಇರುತ್ತದಲ್ಲದೆ? ಅದನ್ನು ಸಮಾಜಧರ್ಮ ಮತ್ತು ಪ್ರಕೃತಿ ಧರ್ಮ ಎಂಬ ಸಮಾಧಾನವನ್ನು ಬೇಕಾದರೆ ತಂದುಕೊಳ್ಳಬಹುದು. ವಿ.ಸೀ. ಅಂತಹ ಕತ್ತಲಿನಿಂದ ಹೊರಕ್ಕೆ ಹಾರಿ ನಿಂತವರು. ನನ್ನಂತಹ ಕಿರಿಯ ಬರಹಗಾರರು ಅವರತ್ತ ಬೆಳಕಿಗಾಗಿ ಒಂದು ಹೆಜ್ಜೆಯನ್ನು ಎತ್ತಿ ಇಟ್ಟರೆ, ಅವರು ತಮ್ಮ ಎರಡು ಹೆಜ್ಜೆಗಳನ್ನು ಎತ್ತಿ ಮುಂದಕ್ಕೆ ಇಡುವಂತಹ ಸಂಪನ್ನರು.

ನಾನು, ಬೆಂಗಳೂರಿನ ಅವರ ಚಾಮರಾಜಪೇಟೆಯ ಆಂಜನೇಯ ದೇವಸ್ಥಾನದ ರಸ್ತೆಯ – ಈಗ ಅದನ್ನು 'ವಿ. ಸೀತಾರಾಮಯ್ಯ ರಸ್ತೆ' ಎಂದೇ ಕರೆದು ಬೆಂಗಳೂರು ನಗರ ಪಾಲಿಕೆ ತನ್ನ ಮುಡಿಗೊಂದು ಹೊಸ ನವಿಲುಗರಿಯನ್ನು ಸಿಕ್ಕಿಸಿಕೊಂಡಿದೆ– ಪೂರ್ವದಂಚಿನ ಮೊದಲನೆಯ ಮನೆಯ ಅವರ ಕೊಠಡಿಗೆ ಹೋದಾಗಲೆಲ್ಲ, ಅಲ್ಲಿ ಅವರೊಡನೆ ಸಾಧಾರಣವಾಗಿ ಇಬ್ಬರೋ, ಮೂವರೋ ಸಾಹಿತ್ಯಾಸಕ್ತರು ಕುಳಿತಿರುತ್ತಿದ್ದರು. ಜೇನು ನೊಣಗಳು ಮಕರಂದ ತುಂಬಿರುವ ಹೂಗಳನ್ನು ಮಾತ್ರವೇ ತೊಳ ತೊಳಲಿ ಅರಸಿಯಾವು.

ವಿ.ಸೀ. ಯವರು ಸರಳ ಜೀವಿಗಳು, ಆಡಂಬರವಿಲ್ಲದ ಋಜು ಮಾರ್ಗಿಗಳು ಎಂಬುದನ್ನು ಮನೆಯ ಅವರ ಹೊರಕೋಣೆ ಸಾರಿ ಹೇಳುವಂತಿದ್ದಿತು. ದಕ್ಷಿಣಕ್ಕೆ ಮುಖ ಮಾಡಿದ್ದ ಅವರ ಗಿಡ್ಡನೆಯ ಮನೆಯನ್ನು ಹೊಕ್ಕರೆ, ನಮ್ಮ ಬಲ ಭಾಗದ ಕೋಣೆಯೇ ಅವರ ಸಾಹಿತ್ಯ ತಪಸ್ಸಿನ ನೆಲೆದಾಣ. ಅಲ್ಲಿ ಕುರ್ಚಿ ಮೇಜುಗಳ ಯಾವುದೇ ಆಡಂಬರ ಇರಲಿಲ್ಲ. ಕೊಠಡಿಯ ತೆಂಕಣ ಬದಿಯ ಗೋಡೆಗೆ ಆತುಕೊಂಡಂತೆ ಹಾಸಿದ ಒಂದು ಚಾಪೆ, ಆ ಚಾಪೆಯ ಪಡುವಣಂಚಿನ ಗೋಡೆಗಾನಿಸಿದಂತೆ ಒಂದು ಪುಟ್ಟ ಹಾಸಿಗೆಯ ಸುರುಳಿ. ಅದಕ್ಕೊರಗಿ ಪೂರ್ವಾಭಿಮುಖವಾಗಿ ಕುಳಿತವರೇ ವಿ.ಸೀ. ಅವರ ಬಲ ಭಾಗದ ಚಾಪೆಯಂಚಿನಲ್ಲಿ ನೆಲದ ಮೇಲೆಯೇ ಸಾಲಾಗಿ ಜೋಡಿಸಿದ ಒಂದು ಪುಸ್ತಕಗಳ ಸಾಲು ಓರಣಗೊಂಡು ನಿಂತಿರುತ್ತಿದ್ದಿತು. ಹೋದ ನಾನು – ಅವರೊಬ್ಬರೇ ಇದ್ದಾಗ ಹಾಸಿಗೆಗೆ ಒರಗಿ ಪುಸ್ತಕವೊಂದನ್ನು ಕೈಯಲ್ಲಿ ಹಿಡಿದು ನೋಡುತ್ತಿರುತ್ತಿದ್ದರೆ– 'ನಮಸ್ಕಾರ ಸಾರ್' ಎಂದಾಗ, ಅವರು ಎದ್ದು ಕುಳಿತು, ಪುಸ್ತಕವನ್ನು ಒಂದು ಬದಿಗಿರಿಸಿ, ಹಸನ್ಮುಖಿರಾಗಿ 'ಬನ್ನಿ,' 'ಬನ್ನಿ' ಎಂದು ಸ್ವಾಗತಿಸುತ್ತಿದ್ದರು. ಅವರ ಆ ಕರೆಯಲ್ಲಿ ಪ್ರೇಮ ತುಂಬಿರುತ್ತಿದ್ದಿತು. ಅದರಲ್ಲಿ ಯಾವುದೇ ಕರೆ ಕೊರೆಗಳ ನೆರಳಾದರೂ ನನಗೆ ಎಂದೂ ಗೋಚರಿಸಿದುದಿಲ್ಲ. ತಿಂಡಿಯ ವೇಳೆಯಾಗಿದ್ದರೆ, ಅದರಲ್ಲಿ ಪಾಲ್ಗೊಳ್ಳುವ ಪುಣ್ಯ ಯಾರಿಗೂ ತಪ್ಪಿದುದಲ್ಲ. ಬೇರೆಯ ವೇಳೆಗಳಲ್ಲಿಯಾದರೆ, ಹೊಗೆಯುಗುಳುವ ಕಮ್ಮೆನ್ನುವ ಕಾಫಿ / ಟೀ ಮಾತ್ರ ಯಾರಿಗೂ ಅತ್ಯಗತ್ಯವಾದುದಾಗಿದ್ದಿತು. ಅಲ್ಲಿ ಸೂಟು ಧರಿಸಿದವರಿಗೆಂದು ಒಂದು ಕುರ್ಚಿಯೇನೋ ಇತ್ತು. ಕೊಠಡಿಯ ಉತ್ತರ ಭಾಗದಲ್ಲಿ ಎರಡು ಮರದ ಬೀರುಗಳು ಪುಸ್ತಕಗಳು ಹಲವನ್ನು ತುಂಬಿಕೊಂಡು ನಿಂತಿರುತ್ತಿದ್ದುವು.

ನಾನು ಸಾಧಾರಣವಾಗಿ ನನ್ನ ಹೊಸದೊಂದು ಪ್ರಕಟಣೆ ಬಂದಾಗಲೆಲ್ಲ ಅದನ್ನು ಕೊಡಲು ಹೋಗುತ್ತಿದ್ದೆನು. ಪುಸ್ತಕವನ್ನು ತೆಗೆದುಕೊಂಡ ವಿ.ಸೀ. ಅದರ ಹಾಳೆಗಳನ್ನು ಒಂದೊಂದನ್ನಾಗಿ ತಿರುವಿ ಹಾಕುತ್ತ, "ಏನೆಷ್ಟನ್ನೆಲ್ಲ ಬರೆದು ಬಿಟ್ಟಿದ್ದೀರಪ್ಪ!" ಎಂಬ ಉದ್ಗಾರದಿಂದ ಸಂತಸಪಡುತ್ತಿದ್ದರು. ನಾನು ಹಿಂದೆ ಕೊಟ್ಟಿದ್ದ ಪುಸ್ತಕವನ್ನು ಕುರಿತು "ನನ್ನ ಹಿಂದಣ ಪುಸ್ತಕವನ್ನು ಓದಿದಿರಾ ಸಾರ್?" ಎಂದಾಗ "ಓದಿದೆನಪ್ಪ, ಓದಿದ್ದೇನೆ. ತುಂಬ ಚೆನ್ನಾಗಿ ಬರೆಯುತ್ತಿದ್ದೀರಿ. ಬರೆಯಿರಿ" ಎಂದು ಆಶೀರ್ವದಿಸುತ್ತಿದ್ದರು. ಅಲ್ಲಿ ಆಗ ನಮ್ಮ ಮಾತು ಹತ್ತು ಕಡೆಗೆ ಹೊರಳುತ್ತಿದ್ದಿತು. ಅವರ ಮಾತಿನಲ್ಲಿ ಖಚಿತತೆ, ನಯ, ನುಣ್ಪು, ಜೀವನದ ಅತೀವ ಶ್ರದ್ಧೆ, ಬದುಕಿನ ಬೆಳವಣಿಗೆ, ಉತ್ಸಾಹ, ನಲಿವು ನೋವುಗಳ

ಎತೆಬಿತದ ದ್ವಂದ್ವ, ಬಾಳಿನ ರಸಗಂಧ ಮುಂತಾದವುಗಳು ಸೋದಾಹರಣೆಯಿಂದ ಎಳೆಯೆಳೆಯಾಗಿ ಬೀಳುವ ಅವರ ಆ ತಂಪಿನ ತುಂತುರಿನ ಇಂಪು ಸೊಂಪುಗಳು ಅದೇ ಬೇರೆಯಾವುವುಗಳು; ವಿ.ಸೀ.ಯವರಿಗೇ ವಿಶಿಷ್ಟವಾದವುಗಳು. ಅವರ ಮಾತಿನಲ್ಲಿ ಬೇಸರ ರವೆಯಷ್ಟಾದರೂ ಕಾಣುತ್ತಿರಲಿಲ್ಲ.

ವಿ.ಸೀ. ಯವರದು ತೆಳ್ಳನೆಯ ಸ್ವಲ್ಪ ಕುಳ್ಳು ಎನ್ನಬಹುದಾದ ದೇಹವೇ. ಆದರೆ ಬದುಕಿನ ಸತ್ಯ ಅಥವಾ ಸೌಂದರ್ಯಗಳನ್ನು ಹರಡಿ ತೋರುವಾಗ, ನಯ ಮತ್ತು ಸೊಗಸುಗಳನ್ನು ಬಣ್ಣಿಸುವಾಗ, ಈ ವಾಮನ ತನ್ನ ಮೂರಡಿಗಳಿಂದ ವಿಶ್ವವನ್ನೇ ಎಟುಕಿಸಿಕೊಳ್ಳುವ ಆ ಎದೆಗಾರಿಕೆ ಮತ್ತು ಧೈರ್ಯೋತ್ಸಾಹಗಳನ್ನು, ಅವರನ್ನು ಸಂಪರ್ಕಿಸಿದವರು ಯಾರೇ ಆಗಲಿ ಕಾಣದೆ ಹೋಗಲಾರರು. ಲೋಕದ ಕ್ರೌರ್ಯ, ಹೇಡಿತನ, ಪ್ರಮತ್ತತೆ, ಕುಟಿಲತೆ, ಅಪಾಮಾರ್ಗಗಳನ್ನು ಕುರಿತು ಹೇಳುವಾಗ ಅವರ ಮುಖ ಉದ್ವೇಗದಿಂದ ತುಂಬಿಹೋಗಿ ಕೆಂಪಗಾಗಿ ಹೋಗುತ್ತಿದ್ದಿತು; ಧ್ವನಿಯಲ್ಲಿ ಆ ಭಾವಕ್ಕೆ ಸಹಜವಾದ ಗಡುಸುತನ ತುಂಬಿಕೊಂಡು ಒಂದು ವೀರವಾಣಿಯೇ ಹೊಮ್ಮುತ್ತಿದ್ದಿತು.

ಬೆಂಗಳೂರಿನ ಲಾಲ್‌ಬಾಗ್ ಅವರಿಗೆ ಬಹು ಪ್ರಿಯವಾದ ಜಾಗ. ಅಲ್ಲಿ ತಿರುಗಾಡುವುದೆಂದರೆ ಅವರ ರಸಿಕ ಮನಸ್ಸಿಗೆ ಸಮ್ಮುದವೋ ಸಮ್ಮುದ! ಅಲ್ಲಿ ನಾನು ಅವರೊಡನೆ ತಿರುಗಾಡಿದಾಗಲೆಲ್ಲ ಅಲ್ಲಿನ ಫಲಾಹಾರ ಮಂದಿರಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಗರಿಗರಿಯ ಮಸಾಲೆ ದೋಸೆಯನ್ನು ತರಿಸುತ್ತಿದ್ದರು. ಅದನ್ನು ತಿನ್ನಿಸುತ್ತ ತಿನ್ನುತ್ತ ಆನಂದಿಸುವರು. ಒಳ್ಳೆಯ ಕಾಫಿಯೋ, ಟೀಯೋ ಬರುತ್ತಿದ್ದಿತು. ಅದನ್ನು ಹೀರುತ್ತ ಮುದವಡುವರು. ಅದರ ವೆಚ್ಚವನ್ನು ಕೊಡಲು ನನಗೆ ಒಮ್ಮೆಯಾದರೂ ಅವಕಾಶವನ್ನು ಬಿಡುತ್ತಿರಲಿಲ್ಲ.

ಈ ಕೆಂಪು ತೋಟದ 'ಬಿಳಿ ಹಸುರು ಕೆಂಪುಗಳು ಕಣ್ಣ ರಂಜಿಸಿಕೊಳ್ಳುವ ಎಲ್ಲ ರಂಗುಗಳ' ಮತ್ತು ಎಲ್ಲೆಲ್ಲಿಯೂ ತಳಿರು, ಹೂ, ಹಸುರು, ಹೊಂಗೆಂಪುಗಳ ಮೇಲಾಟದ ಕೆಂಪುವೂ ಸಾಲ್ಮರಗಳ ನೆರಳಿನಲ್ಲಿ ನಡೆದಾಡಿದ, ನಲಿದ ಮತ್ತು ಆ ಸೊಗಸನ್ನುಂಡ ವಿ.ಸೀ.ಯವರ ರಸಿಕ ಹೃದಯ ಮತ್ತು ಕವಿ ಮನಸ್ಸು ತನ್ನಂತೆಯೇ ಭಾವುಕ ಮಂದಿ ಅದನ್ನು ಕಂಡು ತಣಿಯಲೆಂದು ಹಾಡಿತು:

ಹಕ್ಕಿ ಹೂ ತಳಿರುಗಳ ಹರಡು ಸೌಂದರ್ಯಗಳ
ಸುಗ್ಗಿ ಸಂಭ್ರಮದೊಳಾಳಿ ಬನ್ನಿ
ಮಧುಮಾಸದೀ ಸವಿಯ ಬೆಡಗು ಹೋಹುದು ಬೇಗ
ನಡೆವಾಗ ಇದನುಣಲು ಓಡಿಬನ್ನಿ.

ಭಾವ ಚೇತನದ ಈ ಪ್ರಜ್ಞೆ ಕಲಾತಪಸ್ವಿಗಲ್ಲದೆ ಬೇರೆಯವರಿಗೆ ಬರಲಾರದು.

ಅಲ್ಲಿ ತಿರುಗಾಡುವಾಗ ವಿ.ಸೀ. ತಮ್ಮ ವಿದ್ಯಾರ್ಥಿ ದಿನಗಳನ್ನು ಸ್ಮರಿಸಿಕೊಳ್ಳುತ್ತಿದ್ದರು. ತಮ್ಮ ಗುರುವೃಂದದ ವಿದ್ವತ್ತು, ಪ್ರತಿಭೆ, ಪಾಠ ಹೇಳುವ ಆ ಸೊಗಸುಗಳನ್ನು ಬಣ್ಣಿಸುವಾಗ, ನಡೆಯುವುದನ್ನು ನಿಲ್ಲಿಸಿ, ಅದೇ ಭಂಗಿಯಲ್ಲಿ ನಿಂತು, ಕಣ್ಣ ಮುಂದೆ ಕಟ್ಟುವಂತೆ ಅಭಿನಯದೊಂದಿಗೆ ಹೇಳುತ್ತಿದ್ದರು. ತಮ್ಮ ಗುರು ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರ

ಮಾತು ಬಂದಾಗ, ಭಾವಪರವಶರಾಗಿ ಮಾತನಾಡುತ್ತಿದ್ದರು. ತಮಿಳು ಸಂಗೀತಗಾರರ ಸಂಸ್ಕೃತೋಚ್ಚಾರಣೆಯನ್ನು ಅಸಹನೆಯಿಂದ ಲೇವಡಿ ಮಾಡುತ್ತಿದ್ದರು.

ಸಂಸರ ನಾಟಕಗಳ ವಿಷಯವಾಗಿ ನಾನು ಅವರ ಗಮನವನ್ನು ಸೆಳೆಯುತ್ತಿದ್ದೆನು. ಅವುಗಳ ಬಗೆಗೆ ಅವರಿಗೆ ಮೆಚ್ಚುಗೆ ಇರಲಿಲ್ಲವೆಂದೇನೂ ಇಲ್ಲ. ಸಂಸ ಒಂದು ಸಾರಿ ಇವರಿಗೆ ಕಾಗದವನ್ನು ಬರೆದಿದ್ದರಂತೆ. ಬರೆದಿದ್ದ ಮರುದಿನವೋ ಅಥವಾ ಆ ಮರುದಿನವೋ ಸಂಸ ವಿ.ಸೀ. ಯವರ ಮನೆಯ ಬಾಗಿಲನ್ನು ತಟ್ಟಿದರು; ಕಾಣಿಸಿಕೊಂಡರು. ಅವರ ಮಾನಸಿಕ ಸ್ಥಿತಿಯನ್ನು ವಿ.ಸೀ. ಚೆನ್ನಾಗಿ ಬಲ್ಲವರು. ಅವರೇ ಬಾಗಿಲನ್ನು ತೆರೆದು 'ಬನ್ನಿ ಕುಳಿತುಕೊಳ್ಳಿರಿ' ಎಂದರು. ಬಂದಿದ್ದ ಸಂಸ ತಿವಿಯುವಂತೆ 'ಇಲ್ಲ, ಕುಳಿತುಕೊಳ್ಳುವುದಿಲ್ಲ. ನಾನು ಬರೆದಿದ್ದೇನಲ್ಲ ಕಾಗದ, ಅದನ್ನು ನನಗೆ ಹಿಂದಕ್ಕೆ ಕೊಟ್ಟು ಬಿಡಿ. ಹೋಗುತ್ತೇನೆ' ಎಂದರಂತೆ. ವಿ.ಸೀ. ಅಷ್ಟೇ ತಾಳ್ಮೆಯಿಂದ 'ನೋಡಿ ಸಂಸ, ಕಾಗದವನ್ನೇನೋ ಕೊಡುತ್ತೇನೆ. ಆ ಕಾಗದವನ್ನು ನೀವು ನನಗೆ ಬರೆದಿರುವುದು. ನ್ಯಾಯವಾಗಿ ಅದು ನನ್ನದೇ. ನಾನು ಕೊಡಬೇಕಾದುದಿಲ್ಲ. ಆದರೂ ಕೊಡುತ್ತೇನೆ, ತೆಗೆದುಕೊಂಡು ಹೋಗಿ' ಎಂದು ಕೊಟ್ಟು ಬಿಟ್ಟರಂತೆ. ಸಂಸ ನಿಂತಂತೆಯೇ ಮರು ಮಾತನಾಡದೆ ಧಿಮಧಿಮನೆ ನಡೆದು ಹೋದರಂತೆ. ನಾನು 'ನೀವು ಕೊಟ್ಟುದಾದರೂ ಏಕೆ?' ಎಂದು ಕೇಳಿದೆ. ವಿ.ಸೀ. ನಕ್ಕು ಹೇಳಿದರು. 'ಕೊಡದಿದ್ದರೆ? ಆತನ ಕಣ್ಣಿನ ದೃಷ್ಟಿ ಯಾರನ್ನಾದರೂ ನಡುಗಿಸುವಂತಹುದು ರಾಮರಾವ್. ಜತೆಗೆ ಆ ದೀರ್ಘಕಾಯ! ಆ ಆಜಾನುಬಾಹು! ಕೊಟ್ಟು ಕಳಿಸಿಬಿಟ್ಟೆನಪ್ಪ' ಎಂದು ಮತ್ತೊಮ್ಮೆ ನಕ್ಕು ಬಿಟ್ಟರು. ನಾನು ಆ ವೇಳೆಗೆ ಶ್ರೀ ರಾಜರತ್ನಂರವರು ಸಂಪಾದಿಸಿ ಪ್ರಕಟಿಸಿರುವ 'ಸಂಸಕವಿ' ಯನ್ನು ಓದಿದ್ದುದಲ್ಲದೆ, ಅವರ ಬಾಯಿಂದಲೂ ಸಂಸರ ಭಾವಾತಿರೇಕಗಳ ಬಗ್ಗೆ ಅಲ್ಪ ಸ್ವಲ್ಪವಾಗಿ ಕೇಳಿದ್ದುದರಿಂದ ನನಗೆ ಅದಕ್ಕೆ ಉತ್ತರವನ್ನು ಹೇಳಲು ಬೇರೆ ಮಾತು ಬರಲಿಲ್ಲ. ನಾನೂ ನಕ್ಕೆನು.

ವಿ.ಸೀ.ಯವರ ಪಾಂಡಿತ್ಯ ಪ್ರತಿಭೆಗಳನ್ನು ಅಳೆದು ಹೇಳುವುದು ಅಷ್ಟೇನೂ ಸುಲಭವಲ್ಲ. ನಾನು ಅವುಗಳ ಸವಿ ಸೊಗಸುಗಳನ್ನು, ಅಗಾಧತೆಯನ್ನು, ಹರಹು, ಎತ್ತರ, ಬಿತ್ತರಗಳನ್ನು ಕಂಡುಕೊಳ್ಳಲು ಸ್ವಲ್ಪ ಮಟ್ಟಿಗೆ ಪ್ರಯತ್ನಿಸಿದ್ದೇನೆ. ಅವರ ಜ್ಞಾನ ಜ್ಯೋತಿಯ ಮಹಾಪ್ರಸರಣವೆಂಥದೆಂಬುದನ್ನು ಒಂದು ಘಟನೆಯ ಮೂಲಕ ಹೇಳಬೇಕೆನ್ನಿಸುತ್ತದೆ. ನಾನು ಹಾಸನದಲ್ಲಿದ್ದಾಗ ಅಲ್ಲಿನ 'ಮಿತ್ರವೃಂದ' ಸಾಂಸ್ಕೃತಿಕ ಸಂಸ್ಥೆಯ ಸ್ಥಾಪಕ ಸಂಚಾಲಕನಾಗಿದ್ದೆನು. ಆಗ ವಿ.ಸೀ. ಚಿಕ್ಕಮಗಳೂರಿನ ಇಂಟರ್ ಮೀಡಿಯೆಟ್ ಕಾಲೇಜಿನ ಸೂಪರಿಂಟೆಂಡೆಂಟ್ ಆಗಿದ್ದರು. ಇಲ್ಲಿ ಹಾಸನದಲ್ಲಿ ಶ್ರೀ ಎಂ. ಯಾಮುನಾಚಾರ್ಯರು ಇಲ್ಲಿನ ಇಂಟರ್ ಮೀಡಿಯೆಟ್ ಕಾಲೇಜಿನ ಸೂಪರಿಂಟೆಂಡೆಂಟರಾಗಿದ್ದರು. ಯಾಮುನಾಚಾರ್ಯರ ಬೆಂಬಲ 'ಮಿತ್ರವೃಂದ'ಕ್ಕೆ ತುಂಬ ಬಲವಾದುದಾಗಿದ್ದಿತು.

ಒಂದು ಸಮಾರಂಭವನ್ನು 'ಮಿತ್ರವೃಂದ' ತರಾತುರಿಯಲ್ಲಿ ಏರ್ಪಡಿಸಬೇಕಾಯಿತು. ಒಬ್ಬೊಬ್ಬ ಮುಖ್ಯ ಅತಿಥಿಯೂ ಒಂದೊಂದು ವಿಷಯದ ಮೇಲೆ ಮಾತನಾಡಬೇಕಾದ ವ್ಯವಸ್ಥೆ ಇದ್ದಿತು. ವಿ.ಸೀ.ಯವರು ಸಮಾರಂಭಕ್ಕೆ ಬರಲು ಒಪ್ಪಿಕೊಂಡುಬಿಟ್ಟರು. ಆದರೆ ನಾವು ಅವರಿಗೆ ಅವರು ಮಾತನಾಡಬೇಕಾದ ವಿಷಯವನ್ನು ಮಾತ್ರ ತಿಳಿಸಲು

ಸಮಯಾವಕಾಶವಿರಲಿಲ್ಲ. ಕರಪತ್ರಗಳು, ಆಹ್ವಾನ ಪತ್ರಗಳು ಅಚ್ಚಾಗಬೇಕಿದ್ದಿತು. ಅವುಗಳಲ್ಲಿ ವಿ.ಸೀ. ಯವರು ಮಾತನಾಡುವ ವಿಷಯವನ್ನು ಸೇರಿಸಬೇಕಿತ್ತಲ್ಲ. ನಮ್ಮ ಈ ಸಂಕಟವನ್ನು ನಾವು ಯಾಮುನಾಚಾರ್ಯರಲ್ಲಿ ತೋಡಿಕೊಂಡೆವು. ಯಾಮುನಾಚಾರ್ಯರು ಸ್ವಲ್ಪ ಯೋಚಿಸಿ 'ಧರ್ಮದ ಸ್ವರೂಪ' ಎಂಬುದನ್ನು ಹಾಕಿ ಎಂದರು. ನಾಳೆ ಸಮಾರಂಭ. ಈ ಬೆಳಿಗ್ಗೆ ಕರಪತ್ರಗಳು ಅಚ್ಚಾಗಿ ಹಾಸನದಲ್ಲಿಲ್ಲ ಹರಡಿಕೊಂಡವು. ಕರಪತ್ರವನ್ನಾಗಲಿ, ಆಹ್ವಾನ ಪತ್ರಿಕೆಯನ್ನಾಗಲಿ ನಾವು ವಿ.ಸೀ. ಯವರಿಗೆ ಕಳುಹಿಸಲಿಲ್ಲ. ಒಂದು ವೇಳೆ ಕಳಿಸಿದ್ದಿದ್ದರೂ ಅದು ಚಿಕ್ಕಮಗಳೂರಿನಲ್ಲಿದ್ದ ಅವರಿಗೆ ತಲಪುತ್ತಿರಲಿಲ್ಲ.

ವಿ.ಸೀ. ಬಂದರು. ನಾವು ಅವರನ್ನು ಬಸ್ ನಿಲ್ದಾಣದಲ್ಲಿ ಸ್ವಾಗತಿಸಿ ಸಮಾರಂಭವನ್ನು ಏರ್ಪಡಿಸಿದ್ದ ಕಾರೋನೇಷನ್ ಹಾಲ್‌ನತ್ತ ಹೊರಟೆವು. ದಾರಿಯಲ್ಲಿ ನಾವು ಅವರಿಗೆ ವಿಷಯವನ್ನು ತಿಳಿಸಲಾಗದ ಸಂಕಟವನ್ನು ತೋಡಿಕೊಂಡೆವು. ಅವರು ಸಮಾಧಾನದಿಂದಲೇ ಅಂದರು, "ಆಯಿತು ಬಿಡಿ, ಇಂತಹವು ಕೆಲವು ಸಾರಿ ಆಗುತ್ತದೆ. ಈಗ ನಾನು ಯಾವ ವಿಷಯದ ಮೇಲೆ ಮಾತನಾಡಬೇಕು ಹೇಳಿ?" ಎಂದರು. ಮುದ್ರಣದ ಕರಪತ್ರವನ್ನು ಅವರ ಕೈಗೆ ಕೊಟ್ಟಾಗ ಅದನ್ನು ನೋಡಿ, ಒಂದು ಮುಗುಳ್ನಗೆಯನ್ನು ಬೀರಿ, ಅದನ್ನು ಜೇಬಿಗಿರಿಸಿಕೊಂಡರು. ತಿಂಡಿ ಫಲಾಹಾರಗಳಾದ ಮೇಲೆ, ವಿ.ಸೀ. ವೇದಿಕೆಯನ್ನೇರಿ ಕುಳಿತರು. ಸಭಾಂಗಣ ಕಿಕ್ಕಿರಿದು ತುಂಬಿದ್ದಿತು.

ವಿ.ಸೀ. 'ಧರ್ಮದ ಸ್ವರೂಪ'ದ ಮೇಲೆ ಮಾತನಾಡಿದರು! ಸುಮಾರು ಒಂದೂವರೆ ಗಂಟೆಗಳ ಕಾಲ ಅವರಿಗೆ ಸಹಜವಾದ ನಿರರ್ಗಳವಾದ ಶೈಲಿಯಲ್ಲಿ ಭಾವಪೂರ್ಣರಾಗಿ ಮಾತನಾಡಿದರು. ವಿ.ಸೀ.ಯವರ ಶೈಲಿ ಅದು ಅವರದೇ ಆದುದು. ಬೇರೊಬ್ಬರಿಗೆ ಬರುವಂತಹುದಲ್ಲ. ಅದು ಅನನುಕರಣೀಯವಾದುದು. ವಿ.ಸೀ. ಯವರ ಈ ಪ್ರತಿಭೆ, ಈ ಉತ್ಪತ್ತಿ, ಮನಮೋಹಕವಾದ ಈ ಚಾತುರ್ಯ, ವೀರ್ಯ, ಸೌಂದರ್ಯ, ವಿದ್ವತ್ತು, ವಿಲಾಸ ಮತ್ತು ವಿಭ್ರಮಗಳು ಸಭಿಕರನ್ನು ಮೂಕ ವಿಸ್ಮಿತರನ್ನಾಗಿ ಮಾಡಿತ್ತು.

ನಾನು ವಿ.ಸೀ.ಯವರ ಕೃತಿಗಳನ್ನು ಓದಿದ್ದೇನೆ; ಓದುತ್ತಲೂ ಇದ್ದೇನೆ. ಅವರ 'ಸೊಹ್ರಾಬ್ ರುಸ್ತುಂ' 'ಆಗ್ರಹ,' ಮುಂತಾದ ನಾಟಕಗಳಾಗಲಿ, 'ಗೀತಗಳು,' 'ದೀಪಗಳು' 'ನೆಳಲು ಬೆಳಕು' ಕವನಗಳಾಗಲಿ, ಒಂದೊಂದೂ ಅನರ್ಘ್ಯ ಜೀವರತ್ನಗಳಂತೆ ಸಾಹಿತ್ಯಲೋಕದಲ್ಲಿ ಚಿರಸ್ಥಾಯಿಯಾಗಿ ನಿಲ್ಲಬಲ್ಲವುಗಳು. ಅವರ 'ಕವಿಕಾವ್ಯದೃಷ್ಟಿ', 'ಅಶ್ವತ್ಥಾಮನ್', 'ಕೃಷ್ಣಚಾರಿತ್ರ' ಮುಂತಾದ ವಿಮರ್ಶೆಗಳು ಅಧ್ಯಯನ ಶೀಲರಿಗೆ ಹೆಬ್ಬೊಡರುಗಳಾಗಿ ಚಿರಕಾಲ ಬೆಳಕನ್ನು ಕೊಡಬಲ್ಲವುಗಳು.

ವಿ.ಸೀ. ತಮ್ಮ ಉದ್ದಾಮ ಗುಣವನ್ನು ಕನ್ನಡದ ನೆಲದ ಮೇಲೆ ತುಂಬಿ ಹೋದರು. ಮಾನವನ ಬದುಕನ್ನು ಒಂದು ಮಂಗಳಕರವಾದ ದೃಷ್ಟಿಯಿಂದ ಕಂಡರು; ಹಾಗೆಯೇ ತಮ್ಮ ಶಿಷ್ಯಗಡಣವನ್ನು ಬೆಳೆಯಿಸಿದರು; ಭವದ ಭವ್ಯತೆಯನ್ನು ಎತ್ತಿ ತೋರಿಸಿದರು; ಗಗನ ಗಾಂಭೀರ್ಯವನ್ನು, ಸಮಾಜ ಜೀವನದ ರಸ ಸಮುದ್ರದ ಹದ, ಪರಿಪಕ್ವತೆ, ಪರಿಪೂರ್ಣತೆ ಮತ್ತು ಸೊಗಸಿನ ಸಂಕೀರ್ಣತೆಗಳನ್ನು ಬಿಡಿಸಿ ತೋರಿಸಿದರು.

ಪುಣ್ಯ ಚೇತನ

ಬನ್ನಂಜೆ ರಾಮಾಚಾರ್ಯ

ಹಲವು ವರ್ಷಗಳ ಹಿಂದಿನ ಮಾತು. ಉಡುಪಿಯಲ್ಲಿ ನಾಡಹಬ್ಬದ ಸಂಭ್ರಮ. ವಿ. ಕಡೆಕಾರು ರಾಜಗೋಪಾಲ ಕೃಷ್ಣ ರಾಯರ, ವಿ. ಕೊರಡ್ಕಲ್ ಶ್ರೀನಿವಾಸ ರಾಯರ ಸಾರಥ್ಯದಲ್ಲಿ ಕರ್ನಾಟಕ ಸಂಘವು ಹಲ ವರ್ಷ ಈ ಹಬ್ಬವನ್ನು ನಡೆಸುತ್ತಿತ್ತು. ತರುಣರಾದ ವಿ. ಎಸ್. ವೆಂಕಟರಾಜ, ವಿ. ಪಾ. ವೆಂ. ಮುಂತಾದವರು ಉದಯವಾಗುತ್ತಿದ್ದ ಕಾಲ. ವರ್ಷ ಜ್ಞಾಪಕವಿಲ್ಲ. ಒಂದು ಕಾರ್ಯಕ್ರಮದಲ್ಲಿ ಒಬ್ಬ ಮಿತ್ರರು "ಬಾನಿನಗಲಕೆ ನೆಲಸಿ, ದೆಸೆ ದೆಸೆಗೆ ಕಟ್ಟಿ, ನಡೆ ನೋಟಕೆರಚಿರುವ ಕಸ್ತೂರಿ ನಾಡು, ಅಗೆದಲ್ಲಿ ಹೊಳೆ ಹೊನ್ನು ನುಡಿಯು ದಾಂಗುಡಿ ಹಾಡು, ಅಡಿತಳದ ಅರಿಮೆಟ್ಟು ಗಂಡುಮೆಟ್ಟು– ವೀರ ಸಿರಿ ಕಲೆ ಬೀಡು ಎನ್ನ ತಾಯ್ನಾಡು...." ಎಂಬ ಕವನವನ್ನು ಭೈರವಿಯಲ್ಲಿ ತೊಡಗಿ ಮೋಹನ–ಕೇದಾರ ಗೌಳಗಳ ರಾಗಮಾಲಿಕೆಯಲ್ಲಿ ಹಾಡಿದಾಗ ಸಭೆ ರೋಮಾಂಚನಗೊಂಡು ತನ್ಮಯತೆಯಿಂದ ಆಲಿಸುತ್ತಿತ್ತು. ನನ್ನ ಹತ್ತಿರ ಕುಳಿತವರು ಇದು ವಿ.ಸೀ.ಯವರ 'ಕನ್ನಡ ನಾಡು' ಎಂಬ ಕವನ ಎಂದು ಹೇಳಿದರು. ವಿ.ಸೀ.ಯವರೂ ಕಾರ್ಯಕ್ರಮಕ್ಕೆ ಆಹ್ವಾನಿತರಾಗಿ ದಯಮಾಡಿಸಿದ್ದರು. ಒಂದು ಹತ್ತು ವರ್ಷ ಉಡುಪಿಗೆ ಆ ಭಾಗ್ಯ ಇತ್ತು. ಮಾಸ್ತಿ, ವಿ.ಸೀ. ಕಡೆಂಗೋಡ್ಲು, ಶ್ರೀರಂಗ, ಆನಂದ ಕಂದ, ಬೇಂದ್ರೆ ಮೊದಲಾದ ಉತ್ತುಂಗ ಸಾಹಿತಿಗಳು ಆಹೂತರಾಗುತ್ತಿದ್ದರು. ಪುತ್ತೂರಿಗೆ ವಿ. ಶಿವರಾಮ ಕಾರಂತರ ಆಹ್ವಾನಕ್ಕೆ ಬರುತ್ತಿದ್ದವರು ಉಡುಪಿಗೂ ಬರುತ್ತಿದ್ದರು. ಸತ್ಯಕಾಮರು ಸರಕಾರದ ಕಣ್ಣು ತಪ್ಪಿಸಲು ಗುಪ್ತನಾಮದಿಂದ ಉಡುಪಿಗೆ ಬಂದು ಸಂಸ್ಕೃತ ಕಾಲೇಜು ಸೇರಿ ಸ್ಥಾಪಿಸಿದ 'ಕಲಾವೃಂದ' ದವರೂ ಆಗಾಗ ಹಿರಿಯರನ್ನು ಆಹ್ವಾನಿಸಿ ಭಾಷಣ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. "ತೇ ಹಿ ನೋ ದಿವಸಾ ಗತಾಃ."

ವಿ.ಸೀ. ಅವರು ಆಗಲೆ ಜನತೆಯ ಪ್ರೀತಿ ಆದರಗಳಿಗೆ ಪಾತ್ರರಾಗಿದ್ದರು. ಅವರ ಮಾತುಗಳನ್ನು ಆಲಿಸಿದ ಬಳಿಕ, ಕೆಲ ಹೊತ್ತು ಅವರೊಡನೆ ಇದ್ದು ಅಮೃತ ಕ್ಷಣಗಳನ್ನು ಕಳೆದ ಬಳಿಕ –

ವಾಕ್ಯೈಃ ಸಾತಿಶಯೈಃ ಶ್ರಾವ್ಯೈಃ
ಮಧುರೈಃ ನಾತಿನಿಷ್ಠುರೈಃ
ಹಿತೋಪದೇಶ ಜನನೈಃ — ಎಂಬ ಮಾತು ಇಂಥವರನ್ನು ನೋಡಿಯೆ

ಹುಟ್ಟಿರಬೇಕು ಎನ್ನಿಸಿತು. ಅವರ ವಿದ್ವತ್ತು ಅಪಾರ. 'ವಿದ್ಯಾದದಾತಿ ವಿನಯಂ' ಎಂಬ ಲೋಕೋಕ್ತಿಗೆ ಇವರೆ ಉದಾಹರಣೆ. ಯಾರೊಡನೆಯೂ ಕಠಿಣವಾಗಿ ನಡೆಯಲೂ ನುಡಿಯಲೂ ಗೊತ್ತೇ ಇಲ್ಲದವರು. ಯಾರ ಮನಸ್ಸನ್ನೂ ನೋಯಿಸಲಾರರು. ಶುಚಿಯಾದ ಬದುಕು, ಸಜ್ಜನಿಕೆ–ಸಾತ್ವಿಕತೆ ಅವರ ಉಸಿರು. ಎಲ್ಲರಲ್ಲೂ ಪ್ರೇಮಲವಾದ ಕೋಮಲವಾದ ಮನಸು. ಅವರ ಕಾವ್ಯ ಪ್ರಪಂಚವನ್ನು ಕಂಡಾಗ "ನಾನ್ ಋಷಿಃ ಕುರುತೇ ಕಾವ್ಯಂ" ಎಂಬುದನ್ನು ಒಪ್ಪಲೇಬೇಕು.

ಹಾಗೆಂದು ಅವರನ್ನು ವೇದಾಭ್ಯಾಸ ಜಡರೆಂದಾಗಲೀ ಪರಂಪರೆಯ ದಾಸರೆಂದಾಗಲೀ ಗುರುತಿಸಿದರೆ ತಪ್ಪಾಗುತ್ತದೆ. "ಶತಂ ಜೀವೇಮ ಶರದಃ" ಎಂಬ ಕವಿತೆಯನ್ನು ಬರೆದವರೆ "ಯಾರೋ ಉಳುವರು, ಯಾರೋ ದಣಿವರು, ಯಾರೋ ಕೊಯ್ವರು, ಯಾರೋ ಉಂಬರು, ಯಾರೋ ನಗುವರು, ಯಾರೋ ಕುಣಿವರು, ಯಾರೋ ಬೆವರನು ಬಸಿವರು" ಎಂಬ ರುದ್ರ ಗೀತೆಯನ್ನೂ ಹಾಡಿದ್ದಾರೆ.

ಧರ್ಮ ದೇವರು ಕಟ್ಟು ಕಟ್ಟಳೆ ಯಾರಿಗೀ ಯಮಪಾಶವು?
ಕರುಣೆಯಿಲ್ಲದ ಧನಿಕರಾಯರ ಮನೆಯ ಕಾಪಿನ ತಂತ್ರವು?

ಮಿಂಚು ಮಿಂಚಲಿ ಸಿಡಿಲು ಸಿಡಿಯಲಿ ಧನದ ಸೊಕ್ಕುಗಳುರಿಯಲಿ

ಎಂದೂ ಗುಡುಗಿದ್ದಾರೆ.

ಯುಗದಗಲ ಜಗದಗಲ ಎಡರೆದ್ದು ನಿಂತಾವು!
ಸೆಮ್ಮಾಜರಬ್ಬರವು ನಡುಗಿಸೀತು!
ಕುಲವೆಂಬ ಮತವೆಂಬ ಕೆಳೆಯೆಂಬ ನಾಡೆಂಬ
ಮಮತೆಗಳು ದಾರಿಯಲಿ ಕತ್ತಲಿಟ್ಟಾವು!
ಅಭೀಃ ಅಭೀಃ ಅಭೀಃ ಎಂಬ ಧ್ರುವತಾರಗೆಯು
ಕತ್ತಲಲಿ ತವಿಲಲ್ಲಿ ದಿಕ್ಕನ್ನು ಕಾಣಿಪುದು
ನಿಜಕಿಟ್ಟ ಮುಸುಕೆತ್ತಿ ಮರೆತೆರೆವುದು.

ಎಂದು ಅಭಯವನ್ನೂ ನೀಡುತ್ತಾರೆ.

ವಿ.ಸೀ. ಯವರದ್ದು ಪಕ್ವವಾದ ಮನಸ್ಸು. ಅದು ಋಜುವನ್ನು ಕಂಡು ಉಲ್ಲಾಸದಿಂದ ಹಾಡುವುದು. ಚಲುವನ್ನು ಕಂಡಾಗ ಎದೆ ತುಂಬಿ ಕುಣಿವುದು. ತಪ್ಪನ್ನು ಕಂಡಾಗ ಸಹನೆಯ ಕಡಲಾಗುವುದು. ಅನ್ಯಾಯವನ್ನು ಕಂಡಾಗ ಬೆಂಕಿಯ ಕಿಡಿ ಕಾರುವುದು. ನಿಜದ ಬೆಳಕು ತಿಳಿದಾಗ ಪುರಂದರ ದಾಸರಂತೆ 'ದೇವ ನೀನೆಮಗಿತ್ತು ಕಾಯಬೇಕಯ್ಯ' ಎಂದು ಶರಣಾಗುತ್ತದೆ. ಗಾಂಧೀಜಿಯವರ ನೆನಪಾದಾಗ "ಓ ತಂದೆ ಗಾಂಧಿ : ಜನಕೆ ಶುಚಿತರುವು ಪಾಯವನ್ನಿನ್ನೊಮ್ಮೆ ಕಲಿಸು" ಎಂದು ಬೇಡಿ ತಲೆ ಬಾಗುತ್ತದೆ. ವಿ.ಸೀ. ಉಪಾಧ್ಯಾಯರಾಗಿದ್ದರೂ ಅವರು ತತ್ವಜ್ಞಾನಿಯೂ ಹೌದು. ರಾಗೋಪಾಸಕ ರಸಋಷಿಯೂ ಹೌದು. ಪರಿಣತ ಅರ್ಥಶಾಸ್ತ್ರಿಯೂ ಉದ್ದಾಮ ಸಾಹಿತಿಯೂ ಹೌದು. ಪ್ರಬುದ್ಧ ಸಂಪಾದಕರೂ ಹೌದು. ಬಹುಶ್ರುತ ವಿದ್ವಾಂಸರೂ ಹೌದು. ಅವರ ಕೈಯಲ್ಲಿ ಹೂವೂ ಇದೆ, ವೀಣೆಯೂ ಇದೆ, ಚಾಟಿಯೂ ಇದೆ. ತತ್ತ್ವಜ್ಞಾನದ ದೀವಟಿಗೆಯೂ ಇದೆ. ಅವರು ಏನನ್ನಿತ್ತರೂ ಅದು

ವ್ಯಾಕ್ಷಿ–ವಾಳಿಂಬೆಯೆ ಆಗಿರುತ್ತದೆ. ಅದು ಕನ್ನಡ ಶಾರದೆಯ ಅನುಗ್ರಹ. ಅವರಿಗೆ ಸಾಟಿಯಾದವರು ಅವರೆ.

ವಿ.ಸೀ. ಯವರು ಉಡುಪಿಗೆ ಬಂದಿದ್ದಾಗ ಗೌರವ ಸಲ್ಲಿಸಲು ಅವರ ಬಳಿಗೆ ಹೋದೆ. ಅವರು ಬಹಳ ಪ್ರೀತಿಯಿಂದ, ಬಹು ಆತ್ಮೀಯತೆಯಿಂದ ಸ್ವಾಗತವಿತ್ತು 'ಜಯಂತಿ' ಯಲ್ಲಿ ಕರ್ನಾಟಕ ಏಕೀಕರಣದ ಬಗೆಗೆ ನೀವು ಬರೆದ ಲೇಖನವನ್ನು ಓದಿದೆ. ಚೆನ್ನಾಗಿ ಬರೆದಿದ್ದೀರಿ" ಎಂದು ಕೈ ಹಿಡಿದು ಕುಳ್ಳಿರಿಸಿದ್ದು ನಾನು ಮರೆಯಲಾರದ ಸಂದರ್ಭ. ನಾನು ಆಗ ವಸ್ತುತಃ ದಂಗಾಗಿ ಹೋದೆ. ಏಕೆಂದರೆ ಆ ಲೇಖನವನ್ನು ನಾನು "ಪಾನ್ ಬೆನೆಂಜ್" ಎಂಬ ಗುಪ್ತನಾಮದಿಂದ ಬರೆದಿದ್ದೆ. ಅದನ್ನವರು ಗುರುತಿಸಿ ಪ್ರಶಂಸಿಸಿದ್ದನ್ನು ನೆನೆದಾಗಲೆಲ್ಲ ನನಗೆ ಈಗಲೂ ಹೃದಯ ಆನಂದದಿಂದ ಉಬ್ಬುತ್ತದೆ. ಅವರ ಆ ಸ್ನೇಹಮಯ ಹೃದಯ, ನಿಷ್ಕಲ್ಮಷ ಮುಖಭಾವ, ಪ್ರೀತಿ ಸೂಸುವ ನಗು ಎಂದೂ ಮರೆಯಲಾರದಂಥವು. ನಾನು ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯನಾಗಿದ್ದಾಗ ಕಾರ್ಯ ಸಮಿತಿ ಸಭೆಗೆ ಹೋಗಿದ್ದ ವೇಳೆ ಪರಿಷದಧ್ಯಕ್ಷರಾದ ದಿ. ಎಂ. ಆರ್. ಶ್ರೀನಿವಾಸ ಮೂರ್ತಿಯವರು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಓರ್ವರಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರ ಸಹಿತ ನಮಗೆಲ್ಲರಿಗೂ ವಿ.ಸೀ. ಯವರು ಒಂದು ಮಧ್ಯಾಹ್ನ ಭೋಜನಕೂಟವಿತ್ತಿದ್ದರು. ಅಲ್ಲಿ ಅವರು ನನ್ನನ್ನು ಕಂಡಾಗ ಉಡುಪಿಯಲ್ಲಿ ತೋರಿದ ವಾತ್ಸಲ್ಯವನ್ನೇ ತೋರಿದ್ದೂ ಮರೆಯಲಾರದ ಅನುಭವ. "ಹಗೆ ಇಲ್ಲದ ಬಗೆ, ಅಸೂಯೆ ಇಲ್ಲದ ಮನಸ್ಸು, ಗುಣವನ್ನು ಗೌರವಿಸುವ ಪ್ರವೃತ್ತಿ, ಎಲ್ಲರಲ್ಲೂ ದೇವರನ್ನು ಕಾಣುವ ಶ್ರದ್ಧೆ ಬೇಕು. ಇವನ್ನು ಬೆಳೆಯಿಸಿಕೊಳ್ಳುವ ಯತ್ನ ಬೇಕು. ಆಗ ಮನುಷ್ಯ ಬುದ್ಧನಾಗಲು ಶಕ್ತನಾಗುತ್ತಾನೆ. ಸರ್ವತ್ರ ಶಾಂತಿ ನೆಲಸುತ್ತದೆ." ಇದು ವಿ.ಸೀ. ವೇದಾಂತ ಎನ್ನಬಹುದು.

ಕೆಲ ವಿಮರ್ಶಕರೆನಿಸುವವರು ವಿಮರ್ಶೆಯ ಹೆಸರಿನಲ್ಲಿ ಒಂದು ನಂಬಿಕೆಯ ನೆರಳಿನಲ್ಲಿ ನಿಂತು ಇನ್ನೊಂದರ ಸೊಗಸನ್ನು ಕೀಳಾಗಿ ಕಾಣುವುದರ ಕುರಿತು ವಿ.ಸೀ. ಯವರ ಹೂಮನಸು ತುಂಬ ನೊಂದುಕೊಂಡಿರಬೇಕು. ಆದುದರಿಂದ ನವ್ಯ–ಪ್ರಗತಿಶೀಲ ಮುಂತಾಗಿ ಸಾಹಿತ್ಯದ ಸಿರಿಯನ್ನು ಸೀಳುವುದರ ವಿರುದ್ಧ ಅವರು ಮರುಗುತ್ತಾರೆ. ನಾನು ಅ.ನ.ಕೃ. ಅವರ ಸಂಧ್ಯಾರಾಗ ಕಾದಂಬರಿಯ ಕುರಿತು ಬರೆದ ವಿಮರ್ಶಾತ್ಮಕ ಲೇಖನವೊಂದು 'ಸಂಧ್ಯಾರಾಗ ಪ್ರಶಸ್ತಿ' ಎಂಬ ಪುಸ್ತಕದಲ್ಲಿ ಪ್ರಕಟವಾಗಿತ್ತು. ಆ ಪುಸ್ತಕ ಪಠ್ಯಪುಸ್ತಕವಾಗಿಯೂ ಪರಿಗಣಿತವಾಗಿತ್ತು ಎಂದು ಕೇಳಿದ್ದೆ. ನಾನು ಆ ಕುರಿತು ಪ್ರಸ್ತಾಪಿಸಿದೆ. ಅವರಿಂದ ಟೀಕೆಯಾಗಲೀ, ಹೊಗಳಿಕೆಯಾಗಲೀ ಬಂದೀತು ಎಂದು ನಿರೀಕ್ಷಿಸಿಯೇ ಆ ಮಾತನ್ನು ಪ್ರಸ್ತಾಪಿಸಿದ್ದು. ಅವರು ಸ್ವಲ್ಪ ಹೊತ್ತು ಮೌನವಾಗಿದ್ದು ಸ್ವಲ್ಪ ಮೃದುವಾಗಿ ನಕ್ಕು "ನಾನು ನೊಂದುಕೊಂಡ ವಿಮರ್ಶೆಗಳು ಬೇರೆ ಥರದವು. ನಿಮ್ಮ ಬರಹ ಚೆನ್ನಾಗಿಯೇ ಇತ್ತು" ಎಂದರು. ನನ್ನ ಪುಣ್ಯ. ನಾನು ನಿಜಕ್ಕೂ ಉಬ್ಬಿಹೋದೆ.

ಒಮ್ಮೆ ಕವಿ ಸಾಹಿತಿಗಳ ಬಗೆಗೆ ಮಾತಾಡುತ್ತ ಬೇಂದ್ರೆ, ಅಡಿಗ, ಕುವೆಂಪು ಅವರ ಕಾವ್ಯದ ಕುರಿತು ಪ್ರಸ್ತಾಪಿಸಿ "ಬೇಂದ್ರೆ ಶ್ರೇಷ್ಠ ಕವಿ. ಅವರ ನಾಲಗೆಯಲ್ಲಿ ಶಾರದೆ

ಕುಣಿಯುತ್ತಿದ್ದಾಳೆ ಎನ್ನಿಸುತ್ತದೆ. ಆದರೆ ಪುಟ್ಟಪ್ಪ ಅವರ ಬಗೆಗೆ ಹೀಗೆ ಹೇಳಲಾಗುವುದಿಲ್ಲ. ನನ್ನ ಗ್ರಹಣಶಕ್ತಿಯ ದೋಷವೂ ಇದ್ದೀತು. ಕುವೆಂಪು ಕಾವ್ಯದಲ್ಲಿ ರಸಭಾವಗಳಿಗಿಂತಲೂ ಸಂಸ್ಕೃತ ಶಬ್ದಗಳ ಅಬ್ಬರವೆ ಹೆಚ್ಚಿನಿಸುತ್ತದೆ" ಎಂದೆ. ವಿ.ಸೀ. ಅವರಿಗೆ ಈ ಮಾತು ಸರಿ ಎನ್ನಿಸಲಿಲ್ಲ. ಅವರು ಬಹು ನಯವಾಗಿ ಹೇಳಿದರು. "ಅವರು ದೊಡ್ಡವರು. ಬಿ.ಎಂ.ಶ್ರೀ., ಕೃಷ್ಣಶಾಸ್ತ್ರಿಗಳು, ಡಿ.ವಿ.ಜಿ., ಕುವೆಂಪು ಎಲ್ಲ ಯುಗ ಪ್ರವರ್ತಕರು. ಕನ್ನಡ ಸಾಹಿತ್ಯದ ಶಕ್ತಿಯನ್ನೂ ವರ್ಚಸ್ಸನ್ನೂ ಹೆಚ್ಚಿಸಿದವರು. ಅಂಥ ಹಿರಿಯರ ಕೃತಿಗಳನ್ನು ಓದುವಾಗ ಆಸ್ವಾದಿಸುವಾಗ ಕವಿ ಹೃದಯದ ಹತ್ತಿರಕ್ಕೆ, ಎತ್ತರಕ್ಕೆ ಹೋಗುವುದು ಅವಶ್ಯ. ಮಾತನಾಡುವಾಗ ಸಂಯಮ ಬೇಕು. ಅಶುಚಿಯಾದ ಪಾತ್ರದಲ್ಲಿ ಪಾನಕವೂ ರುಚಿ ಕೆಡುತ್ತದೆ" ಎಂಬ ಕವಿ ಮಾತು ಹೇಳಿದ್ದಲ್ಲದೆ, "ಗುಣವನ್ನು ಸವಿಯುವ ಪ್ರವೃತ್ತಿ ಬೆಳೆದಾಗ ಸಣ್ಣ ಪುಟ್ಟ ದೋಷವೂ ಗೌಣವಾಗುತ್ತದೆ. ಕಾಳಿದಾಸ ಹೇಳಿದಂತೆ "ಏಕೋಹಿ ದೋಷೋ ಗುಣ ಸನ್ನಿಪಾತೇ...." ಎಂದರು. ಆ ಮೇಲೆ ಯಾವುದೋ ವಿಷಯಾಂತರದ ಪ್ರವೇಶಕ್ಕೆ ಸಜ್ಜಾದರು. ತಿದ್ದಿಕೊಳ್ಳುವ ಮನಸ್ಸಿದ್ದವರಿಗೆ ಇಷ್ಟು ಸಾಕು. ವಿ.ಸೀ. ಯವರೂ ಯುಗಪ್ರವರ್ತಕರಾದ ಹಿರಿಯರು. ಅವರ ನಯವಂತಿಕೆಯನ್ನೂ ಪ್ರಾಜ್ಞ ಪ್ರಜ್ಞೆಯನ್ನೂ ನೆನೆದಾಗಲೆಲ್ಲ ಜೀವಕ್ಕೆ ಹೊಸ ರಸಾಯನ ಉಣ್ಣಿಸಿದಂಥ ಅನುಭವ ಆಗುತ್ತದೆ.

ಒಮ್ಮೆ ನಾನು ವಿ.ಸೀ. ಯವರನ್ನು ಕಂಡಾಗ ನನ್ನೊಂದಿಗೆ ದಿ. ಕೃಷ್ಣ ಕುಮಾರ ಕಲ್ಲೂರರೂ ಇದ್ದರು. ಕಲ್ಲೂರರು ಆಗಿನ ಮುಂಬಯಿ ಸರಕಾರ ನೇಮಿಸಿದ ಪಶ್ಚಿಮ ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದರು ಎಂದು ನೆನಪು. ನಾನು ಮಲಪೆಯನ್ನು ಪ್ರಬುದ್ಧ ಬಂದರವನ್ನಾಗಿ ಮಾಡಬೇಕೆಂಬ ವಾದವನ್ನು ಮೆಚ್ಚಿದವನು. ವಿ. ಶ್ರೀನಿವಾಸ ಮಲ್ಯರು ಮಂಗಳೂರನ್ನು ಪ್ರಬುದ್ಧ ಬಂದರವನ್ನಾಗಿ ಅಭಿವೃದ್ಧಿ ಪಡಿಸಲು ಪಣ ತೊಟ್ಟವರು. ಕಲ್ಲೂರರು ಕಾರವಾರ ಬಂದರದ ಬೆನ್ನು ಹಿಡಿದವರು. ಗೆದ್ದವರು ಶ್ರೀನಿವಾಸ ಮಲ್ಯರು. ಆದರೆ ನನ್ನ ವಾದವನ್ನು ನಾನು ಬಿಟ್ಟಿರಲಿಲ್ಲ. ಕನಿಷ್ಠ ಕರಾವಳಿಯುದ್ದಕ್ಕೆ ರೈಲು ಮಾರ್ಗವಾದರೂ ಆಗಬೇಕು ಎಂದು ಹೇಳುತ್ತಿದ್ದೆ. (ಇದು ಈಗ ಸಿದ್ಧಿಸಿದೆ.) ಅದಕ್ಕೂ ಮೊದಲು ಹುಬ್ಬಳ್ಳಿ–ಕಾರವಾರ ರೈಲು ಬೇಕೆನ್ನುತ್ತಿದ್ದವರು ಕಲ್ಲೂರರು. ನಾವು ಭೇಟಿಯಾಗುವಾಗಲೆಲ್ಲ ನಮ್ಮ ನಡುವೆ ಇದೇ ಚರ್ಚೆ. ವಿ.ಸೀ.ಯವರಲ್ಲಿ ನಮ್ಮ ತರ್ಕದ ಪೆಟ್ಟಿಗೆ ಬಿಚ್ಚಬಯಸಿದಾಗ "ಹೀಗೆ ನಿಮ್ಮಿಬ್ಬರ ನಡುವೆ ಮತ ಭೇದ?" ಎಂದು ನಕ್ಕರಲ್ಲದೆ ಯಾವ ಅಭಿಪ್ರಾಯವನ್ನೂ ನೀಡಲಿಲ್ಲ. ನಾನು ಮತ್ತೂ ಮತ್ತೂ ಅವರ ಅಭಿಪ್ರಾಯದ ಬಗ್ಗೆ ಒತ್ತಾಯಿಸಿದಾಗ ವಿ.ಸೀ. ಹೇಳಿದರು. "ಅಭ್ಯಾಸ ಮಾಡಿರದ, ಆಮೂಲಾಗ್ರ ಅರಿತಿರದ ವಿಷಯದ ಬಗೆಗೆ ನಾನು ಏನಾದರೂ ಹೇಳುವ ಪರಿಪಾಟಯಿರಿಸಿಕೊಂಡಿಲ್ಲ!" ಇದು ವಿ.ಸೀ. ಯವರ ದೊಡ್ಡ ಗುಣ. ತನಗೆ ಸಾಕಷ್ಟು ಪರಿಜ್ಞಾನವಿಲ್ಲದ ವಿಷಯಗಳ ಕುರಿತು ಅವರು ಏನನ್ನೂ ಹೇಳಲೊಲ್ಲರು. ಒಂದೋ ತೆಳುವಾಗಿ ನಕ್ಕು ಬಿಡುತ್ತಾರೆ. ಒಂದೋ ಮೌನವಾಗಿ ಬಿಡುತ್ತಾರೆ. ಎಷ್ಟೋ ವಿಷಯಗಳಲ್ಲಿ ಅವರ ವರ್ತನೆಯೆ ಒಂದು ಸಮೀಚೀನ ಪಾಠವಾಗಿರುತ್ತದೆ. ಎಲ್ಲ ಕಾಲಕ್ಕೂ ಮಾರ್ಗದರ್ಶಿಯಾಗಿರುತ್ತದೆ.

ಇಲ್ಲಿ ಅವರ ರಾಗ ರಸ ಅನುಭವಗಳಿಂದ ಅದ್ದಿದ ಕಾವ್ಯದ ಶ್ರೀಮಂತಿಕೆಯನ್ನು

ರೇಖಿಸಲು ಯತ್ನಿಸಲಿಲ್ಲ. ನನಗೆ ಆ ಶಕ್ತಿ ಇದೆಯೆಂಬ ಭ್ರಮೆಯೂ ಇಲ್ಲ. ಅವರಿಗೆ ಪ್ರಿಯವಾದ ಮಂಗಳೂರು ಉಡುಪಿಗಳಿಗೆ ಬಂದಾಗಲೆಲ್ಲ ನಾನು ಅವರನ್ನು ಕಂಡು ಕೈ ಮುಗಿಯುವುದನ್ನು ಮರೆತಿರಲಿಲ್ಲ. ಅವರ ಹತ್ತಿರ ಇರುವ ಕ್ಷಣಗಳು ನನ್ನನ್ನು ಧನ್ಯನನ್ನಾಗಿ ಮಾಡಿದ ಪುಣ್ಯ ಕ್ಷಣಗಳಾಗಿದ್ದವು. 'ರಮಣ ಮಹರ್ಷಿಗಳ ಹತ್ತಿರ ಕುಳಿತಿದ್ದರೆ ಸಾಕು: ನಮ್ಮ ಮನಸ್ಸಿನ ಕಳೆ ತೊಲಗಿ ಹೊಸ ಬೆಳಕು ಗೋಚರಿಸುವುದು. ಸಾವಿರ ಮಾತು ಸಾಧಿಸದ್ದನ್ನು ಅವರ ಮೌನ ಸಾಧಿಸುತ್ತಿತ್ತು' ಎಂದು ಕೇಳಿದ್ದೇನೆ. ವಿ.ಸೀ. ಯವರಂಥ ಪುಣ್ಯ ಚೇತನದ ಸನಿಹದಲ್ಲಿದ್ದಾಗ ಈ ಮಾತಿನ ಸತ್ಯಾಂಶ ಅನುಭವಕ್ಕೆ ಬರುತ್ತದೆ.

ನನ್ನ ಆರಾಧ್ಯ ಕವಿ

"ಏನನ್ನು ಮಾಡಿದರೂ ಚೊಕ್ಕವಾಗಿ ಮಾಡಬೇಕು. ಸುಸಂಸ್ಕೃತ ರೀತಿಯಲ್ಲಿ ಮಾಡಬೇಕು. ಒಂದಲ್ಲ ಒಂದು ಕಾಲದಲ್ಲಿ ಎಲ್ಲರಿಗೂ ಬಾಳು ದುರ್ಭರವಾಗುತ್ತದೆ. ಅಂತಹ ಕಾಲದಲ್ಲಿ ಮನಸ್ಸಿನಲ್ಲಿರುವ ನಂಜನ್ನು ಕಾವ್ಯದ ಮೂಲಕ ಹೊರಗೆಡಹಬಾರದು. ತಾತ್ಕಾಲಿಕ ಸಮಾಧಾನವನ್ನು ಅಂತಹವು ತಂದರೂ, ಸಮಾಜದ ದೃಷ್ಟಿಯಿಂದ, ಎಲ್ಲರ ಒಳಿತಿನ ದೃಷ್ಟಿಯಿಂದ, ಹಾಗೆ ಮಾಡುವುದು ಸಾಧುವಲ್ಲ. ಯುವಜನರ ಮನ ಒಲಿಸಿಕೊಂಡು, ಹಿತವಿಹಿತ ಪಥದಲ್ಲಿ ನಡೆಯುವಂತೆ ಪ್ರೇರೇಪಿಸುವುದು, ಬರಹಗಾರನ ಆದ್ಯ ಕರ್ತವ್ಯ. Sense of Ethical Values ಅನ್ನು ಸರ್ವಥಾ ಮರೆಯಬಾರದು. ಇವುಗಳನ್ನೇ ಅವರು ಒತ್ತಿ ಒತ್ತಿ ಹೇಳುತ್ತಿದ್ದರು.

ನುಡಿದಂತೆ ನಡೆದರು. ಉಡುವ ನವಿರು ಪಂಚೆ, ತೊಡುವ ಅಂಗಿ, ಬಿಗಿದ ಪಾಗು, ಎಲ್ಲದರಲ್ಲೂ ಚೊಕ್ಕತನವಿದೆ. ತಿನ್ನುವ ತಿಂಡಿ, ಕುಡಿಯುವ ಪಾನೀಯ, ಮೆಲ್ಲುವ ವೀಳೆಯ ಇವುಗಳೆಲ್ಲದರಲ್ಲೂ ಉತ್ತಮ ರುಚಿ ಮತ್ತು ಅಂದ, ಎರಡೂ ಸಮನ್ವಯವಾಗಿದೆ. ನುಡಿಯುವ ಮಾತಿನಲ್ಲಿ, ಬಾಳಿನಲ್ಲಿ, ಇತರರಿಗೆ ನೋವಾಗದಂತೆ, ಹಲವರಿಗಾದರೂ ಹಿತವಾಗುವಂತೆ ನಡೆದುಕೊಂಡಿದ್ದಾರೆ. ಕಷ್ಮನಿಷ್ಠುರಗಳು ವೈಯಕ್ತಿಕವಾದುವು, ಅಂತರಂಗದಲ್ಲಿರಬೇಕಾದುವು, ಪ್ರದರ್ಶನಕ್ಕಲ್ಲ ಎಂದು ನುಡಿದಂತೆ ನಡೆದುಕೊಂಡಿದ್ದಾರೆ.

ಆಗಾದ ಕಾಲಕ್ಕೆ ಆಗಿ ಬಂದವರ ವಿಷಯದಲ್ಲಿ ವಿ.ಸೀ. ಯವರು ಕೃತಜ್ಞತೆಯಿಂದ ಕರಗಿ ಹೋಗುತ್ತಾರೆ. ಉಪಕಾರವನ್ನು ಸ್ಮರಿಸುವ ಆವೇಶದಲ್ಲಿ ಆಗುಹೋಗುಗಳ ಕಲ್ಪನೆಯೂ ಅವರಿಗೆ ಸಾಧ್ಯವಿಲ್ಲ. ಅಮಿತ ಕೃತಜ್ಞತೆಯೇ ಅವರ ಬಾಳನ್ನು ನಡಸಿರುವ ಒಂದು ಶಕ್ತಿ. ಅದೇ ಅವರ ಬಾಳನಡೆಗೆ ತುಸು ತೊಡಕೂ ಆಗಿರಬಹುದೋ ಎಂದನಿಸುತ್ತದೆ. Gratitude is like the perfume that the Violet bestows on the heel that crushes it ಎಂಬ ಆಂಗ್ಲ ಅನುಭಾವಿ ನುಡಿಯು ವಿ. ಸೀ. ಯವರನ್ನು ಕಂಡಾಗಲೆಲ್ಲ ಸ್ಮರಣೆಗೆ ಬರುತ್ತದೆ".

ರಾ. ಶಿ. (ಎಂ. ಶಿವರಾಂ)

'ವಿ.ಸೀ.–೭೫' ಪು. ೩೦೬–೭

ವಿ.ಸೀ. ವಂದೇ

ಕೆ. ನರಸಿಂಹಮೂರ್ತಿ

ಆರ್ದ್ರ ಅಂತಃಕರಣದ, ಉದಾರ ಹೃದಯದ, ಶುಚಿರುಚಿಗೆ ಹೆಸರಾದ ವಿ.ಸೀ. ಅವರ ಸುಸಂಸ್ಕೃತ ವ್ಯಕ್ತಿತ್ವವನ್ನು ವಿಶ್ವಾಸ ಗೌರವಗಳಿಂದ ನಾನು ನೆನೆಯದ ದಿನವಿಲ್ಲ. ಅವರ ಪರಿಚಯ ನನಗಾದುದು ಈಗ ಇರವತ್ತು ವರ್ಷಗಳ ಹಿಂದೆ, ನಾನು ಮೈಸೂರಿನಲ್ಲಿ ಇಂಗ್ಲಿಷ್ ಆನರ್ಸ್ ವಿದ್ಯಾರ್ಥಿಯಾಗಿದ್ದಾಗ. ಆದರೆ ಅದಕ್ಕೆ ಮೂರು ವರ್ಷಗಳ ಮುನ್ನವೇ ನನಗೆ ಅವರ ದೈನಂದಿನ ದರ್ಶನ ಭಾಗ್ಯ ಲಭಿಸುತ್ತಿದ್ದುದು ನಾನು ಬೆಂಗಳೂರು ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿದ್ದಾಗ. ನನ್ನ ದ್ವಿತೀಯ ಭಾಷೆ ಸಂಸ್ಕೃತವಾಗಿ ಅವರಲ್ಲಿ ನಾನು ಶಿಷ್ಯವೃತ್ತಿ ಮಾಡುವಂತಿರಲಿಲ್ಲ. ಆದರೆ ಅವರ ವಿದ್ವತ್ತಿನ ಹಾಗೂ ಅವರ ವಾಗ್ವೈಖರಿಯ ಕೀರ್ತಿ ಕಾಲೇಜಿನಲ್ಲೆಲ್ಲಾ ಪ್ರಚುರವಾಗಿ ಇತರ ಭಾಷಾ ವಿದ್ಯಾರ್ಥಿಗಳಿಗೂ ಅವರ ವಿಷಯದಲ್ಲಿ ಅಪಾರ ಗೌರವಾದರಗಳು ಮೂಡಿದ್ದವು. ಕನ್ನಡ ಅಧ್ಯಾಪಕರಲ್ಲಿ ಅವರನ್ನು ವಿಶಿಷ್ಟಗೊಳಿಸಿದ್ದ ಅಂಶವೆಂದರೆ ಅವರಿಗಿದ್ದ ಇಂಗ್ಲಿಷ್ ಭಾಷೆಯ ಮೇಲಿನ ಪ್ರಭುತ್ವದೊಂದಿಗೆ ಸಮಕಾಲೀನ ಇಂಗ್ಲಿಷ್ ಸಾಹಿತ್ಯದಲ್ಲಿಯೂ ಅಂದಿನ ಎಷ್ಟೋ ಇಂಗ್ಲಿಷ್ ಅಧ್ಯಾಪಕರಲ್ಲಿಯೂ ಇಲ್ಲದಿದ್ದ ಗಾಢ ಆಸಕ್ತಿ. ವೇಷಭೂಷಣಗಳಲ್ಲಿ ಸದಾ ಅವರಲ್ಲಿ ಕಂಡು ಬರುತ್ತಿದ್ದ ಶುಚಿತ್ವ ಅವರ ನಡೆನುಡಿಗಳಲ್ಲಿಯೂ ಗೋಚರವಾಗುತ್ತಿದ್ದುದು ಕಾಲೇಜಿನ ಸಕಲ ವಿದ್ಯಾರ್ಥಿವರ್ಗವನ್ನೇ ಆಕರ್ಷಿಸಿತ್ತು.

•ಅವರ ಪ್ರಥಮ ಸಂದರ್ಶನ ನನಗಾದುದು ಒಂದು ಅನಿರೀಕ್ಷಿತ ಘರ್ಷಣೆಯ ಸ್ವರೂಪದಲ್ಲಿ. ನನ್ನ ತರಗತಿಯ ಅಧ್ಯಾಪಕರು ತಮ್ಮ ಪೀರಿಯಡ್ ಮುಗಿಯುತ್ತಿದ್ದಂತೆ ತಮ್ಮ ಉಪನ್ಯಾಸವನ್ನು ಮೊಟಕುಗೊಳಿಸಿ ಹೊರಬಿದ್ದಿದ್ದರು. ಕಾರಿಡಾರಿಗೆ ಇಳಿದ ನನ್ನ ಸಹ ವಿದ್ಯಾರ್ಥಿ ಸಮೂಹ ವಿ.ಸೀ. ಅವರು ಇನ್ನೂ ಪಾಠಪ್ರವಚನದಲ್ಲಿ ತೊಡಗಿದ್ದ ತರಗತಿಯ ಮುಂದೆ ಹಾದು ಹೋಗುತ್ತ ಗಟ್ಟಿಯಾಗಿಯೇ ಮಾತಾಡಿಕೊಳ್ಳುತ್ತಲೂ ಜೋರಾಗಿಯೇ ನಗುತ್ತಲೂ ವಿ.ಸೀ. ಅವರ ಬೋಧನ ಸಮಾಧಿಗೆ ಸಹಜವಾಗಿಯೇ ಭಂಗ ತಂದಿದ್ದರು. ಹಠಾತ್ತನೆ ವಿ.ಸೀ. ಪಾಠ ಮಾಡುತ್ತಿದ್ದುದನ್ನು ನಿಲ್ಲಿಸಿ ಕಾರಿಡಾರಿಗೆ ಧಾವಿಸುವ ಹೊತ್ತಿಗೆ ಒಂಟಿಯಾಗಿಯೂ ಮೌನಿಯಾಗಿಯೂ ಹಿಂದೆ ಬರುತ್ತಿದ್ದ ಪಾಪದ ನಾನು ಅಲ್ಲಿಗೆ ತಲುಪಿದ್ದು ಅವರ ಸಿಟ್ಟನ್ನು ಎದುರಿಸಬೇಕಾಯಿತು. ಬಡಬಡನೆ ನಾಲ್ಕು ಬುದ್ಧಿಯ ಮಾತು

ಹೇಳಿ ಅವರ ತಮ್ಮ ತರಗತಿಗೆ ಮರಳಿ ತಮ್ಮ ಪ್ರವಚನವನ್ನು ಮುಂದುವರಿಸಿದರು. ಕಾಲೇಜಿನಲ್ಲಿ ಇಂಥ ಪ್ರಸಂಗಗಳು ಸರ್ವೇಸಾಧಾರಣವಾಗಿ ನಡೆಯುತ್ತಿದ್ದುದರಿಂದ ಇಂಥವುಗಳಲ್ಲೊಂದರಿಂದ ಯಾರೂ ತಲೆ ಕೆಡಿಸಿಕೊಳ್ಳಬೇಕಾಗಿರಲಿಲ್ಲವೆನ್ನಿ. ಆದರೆ ಸದಾ ಮೃದು ಭಾಷಿಯಾಗಿದ್ದ ಮೇಷ್ಟರ ಮುಖ ಕೆಂಪಾಗಿ ಕಂಪಿಸುತ್ತಿದ್ದಂತಿದ್ದ ಆ ಅಪರೂಪದ ದೃಶ್ಯ ನನ್ನನ್ನು ಮೂಕವಿಸ್ಮಿತನನ್ನಾಗಿಸಿದ್ದಿತಲ್ಲದೆ ನನ್ನ ಮನಃಪಟಲದಲ್ಲಿ ಇಂದಿಗೂ ಕೆತ್ತಿ ನಿಂತಂತಿದೆ. ಪಾಠ ಪ್ರವಚನದಲ್ಲಿ ಅವರು ತೋರಿಸುತ್ತಿದ್ದ ಏಕಾಗ್ರಚಿತ್ತತೆಯನ್ನೂ ವಿದ್ಯಾರ್ಥಿಗಳೊಡನೆ ಆ ಸಂದರ್ಭದಲ್ಲಿ ಅವರು ಸಾಧಿಸುತ್ತಿದ್ದ ಭಾವುಕ ಸಮಶ್ರುತಿಯನ್ನೂ ಇಂಥದೊಂದು ಪ್ರಸಂಗ ಎತ್ತಿ ತೋರಿಸುತ್ತದೆ.

ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಎರಡನೆಯ ವರ್ಷದ ಇಂಗ್ಲಿಷ್ ಆನರ್ಸ್ ವಿದ್ಯಾರ್ಥಿಯಾಗಿದ್ದಾಗ ನಾನು ಅಲ್ಲಿನ ಲಿಟರರಿ ಅಸೋಸಿಯೇಷನ್‌ನ ಕಾರ್ಯದರ್ಶಿಯಾಗಿದ್ದೆ. ಆ ವರ್ಷ ನಡೆಯುತ್ತಿದ್ದ ವಸಂತ ಸಾಹಿತ್ಯೋತ್ಸವವಿರಬೇಕು, ಕರ್ನಾಟಕ ಸಂಘದ ಕೆಲವು ಪ್ರಕಟಣೆಗಳನ್ನು ಪರಿಷತ್ತಿನ ಅವರಣದಲ್ಲಿ ಪ್ರದರ್ಶಿಸಲೂ ಬಹುಶಃ ಮಾರಾಟ ಮಾಡಲೂ ನಾನು ಬೆಂಗಳೂರಿಗೆ ಕಳುಹಿಸಲ್ಪಟ್ಟಿದ್ದೆ. ಆ ಸಂದರ್ಭದಲ್ಲಿ ವಿ.ಸೀ. ಅವರ ದರ್ಶನ ಭಾಗ್ಯ ಒದಗಿ ಬಂದು ಅವರಿಗೆ ನಮಸ್ಕರಿಸಿ ನಾನು ಬಂದಿದ್ದ ಉದ್ದೇಶವನ್ನು ತಿಳಿಸಿ ನನ್ನ ಪರಿಚಯವನ್ನೂ ಮಾಡಿಕೊಟ್ಟೆ. ಅದೇ ವರ್ಷ 'ಕನ್ನಡ ಸಣ್ಣ ಕತೆಯ ಸ್ವರೂಪ' ಎಂಬ ನನ್ನದೊಂದು ಪ್ರಬಂಧವನ್ನು ಇನ್ನೊಬ್ಬರು ಪ್ರಾತಃ ಸ್ಮರಣೀಯ ಹಿರಿಯರು ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು 'ಪ್ರಬುದ್ಧ ಕರ್ನಾಟಕ'ದ ಎರಡು ಸಂಚಿಕೆಗಳಲ್ಲಿ ಪ್ರಕಟಿಸಿದ್ದರು. ಆ ಸುದೀರ್ಘ ಪ್ರಬಂಧ ಕನ್ನಡ ಸಣ್ಣ ಕತೆಯ ಪಿತಾಮಹರೆಂದು ವಿಮರ್ಶೆ ಗೌರವಿಸುವ ಮಾಸ್ತಿಯವರ ಕಣ್ಣಿಗೆ ಬಿದ್ದುದಲ್ಲದೆ, ನನ್ನ ಪುಣ್ಯಕ್ಕೆ ಅವರಿಗೆ ಅದು ಚೆನ್ನ ಎನ್ನಿಸಿರಬೇಕೆ! ಪರಿಚಯದ ಪರಿಪ್ರಶ್ನೆಯಲ್ಲಿ ನಾನೇ ಆ ಪ್ರಬಂಧದ ಲೇಖಕನೆಂದು ಗೊತ್ತಾದೊಡನೆ ವಿ.ಸೀ. ಅವರು ನನ್ನನ್ನು ಬಾಚಿ ತಬ್ಬಿ ತೋರಿಸಿದ ವಿಶ್ವಾಸ ನಾನು ಎಂದೂ ಮರೆಯುವಂತಹುದಲ್ಲ. ಮುಂದೆ ವಿ.ಸೀ. ನನ್ನನ್ನು ಮಾಸ್ತಿಯವರ ಮುಂದೆ ನಿಲ್ಲಿಸಿದಾಗ ನಾನಿನ್ನೂ ವಿದ್ಯಾರ್ಥಿದೆಸೆಯಲ್ಲಿದ್ದ ಕಿರಿಯನೆಂದು ಗಮನಿಸಿದ ಅವರು 'ನೀನು ಯಾರೋ ಪಿಎಚ್.ಡಿ ಮಾಡಿದ್ದ ಮಹಾ ಪಂಡಿತ ಎಂದುಕೊಂಡಿದ್ದೆನಲ್ಲಪ್ಪಾ!' ಎನ್ನುತ್ತ ಅವರಿಗೂ ಮೀಸಲಾದ ಪ್ರಸನ್ನತೆಯ ಅತಿಶಯದಿಂದ ನಕ್ಕು ಆಶೀರ್ವದಿಸಿದ್ದುದು ಮುಂದೆ ಅವರಲ್ಲಿ ನಿರುತವೂ ನಾನು ಇಟ್ಟುಕೊಂಡಿದ್ದ ಆತ್ಮೀಯ ಅತ್ಯಂತ ಮೆಚ್ಚುಗೆಯ ಭಾವುಕ ಸಂಬಂಧಕ್ಕೆ ಅಡಿಗಲ್ಲಾಯಿತು. ಉದಯೋನ್ಮುಖ ಲೇಖಕರನ್ನು ಹೇಗೆ ಪ್ರೋತ್ಸಾಹಿಸಿ ಅವರಿಗೆ ಸೂಕ್ತ ಮಾರ್ಗದರ್ಶನ ಮಾಡುತ್ತಿದ್ದ ಪ್ರೀತಿ ವಾತ್ಸಲ್ಯಗಳ ಹಿರಿಯರ 'ತೇ ಹಿ ನೋ ದಿವಸಾಃ ಗತಾಃ'.

ನಾಲ್ಕು ವರ್ಷಗಳು ಸರಿದು ಆ ವೇಳೆಗೆ ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕನಾಗಿದ್ದ ನಾನು ಮೊದಲು ಬೆಂಗಳೂರಿನ ಇಂಟರ್‌ಮೀಡಿಯೆಟ್ ಕಾಲೇಜಿಗೂ ಒಂದೆರಡು ವರ್ಷಗಳಲ್ಲಿ ಸೆಂಟ್ರಲ್ ಕಾಲೇಜಿಗೂ ವರ್ಗವಾಗಿ ಬಂದೆ. ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಆನರ್ಸ್ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ನವ್ಯಕಾವ್ಯವನ್ನು ಬೋಧಿಸುವ ಕರ್ತವ್ಯ ನನಗೆ ವಹಿಸಲ್ಪಟ್ಟ ಮೇಲೆ ನನಗಿನ್ನೂ ಸಿಗದಿದ್ದ ಬೇರೆ ಬೇರೆ ಕಾವ್ಯ

ಸಂಕಲನಗಳನ್ನೂ ವಿಮರ್ಶಾಕೃತಿಗಳನ್ನೂ ಹಲವೆಡೆಗಳಲ್ಲಿ ನಾನು ಅರಸುತ್ತಿದ್ದೆ. ಎಲ್ಲಾ ಬಿಟ್ಟು ಇಂಟರ್‌ಮೀಡಿಯೆಟ್‌ನಂತಹ ಮಧ್ಯಂತರ ಕಾಲೇಜಿನ ಲೈಬ್ರರಿಯಲ್ಲಿ 'ಫೇಬರ್ ಅಂಡ್ ಫೇಬರ್' ಪ್ರಕಾಶನದ ಟಿ. ಎಸ್. ಎಲಿಯಟ್‌ನ 'ಟ್ರಯಂಫಲ್ ಮಾರ್ಚ್' ಹಾಗೂ 'ಡಿಫಿಕಲ್ಟೀಸ್ ಅಫ್ ಎ ಸ್ಟೇಟ್ಸ್‌ಮನ್' ಎಂಬ ಎರಡೇ ಕವನಗಳಿದ್ದ ಸಂಕಲನದ ಸುಂದರ ಪ್ರತಿಯನ್ನು ಕಂಡಾಗ ನನ್ನ ಅಚ್ಚರಿ ಹೇಳತೀರದು. ಹಾಗೆ ನಾನು ಅಚ್ಚರಿ ಪಡಬೇಕಾಗಿರಲಿಲ್ಲವೆನ್ನಿ. ಏಕೆಂದರೆ ಆ ಕಾಲೇಜಿನಲ್ಲಿ ಸ್ವಲ್ಪ ಹಿಂದೆ ವಿ.ಸೀ. ಅವರು ಇದ್ದರಷ್ಟೆ!

ಆಧುನಿಕ ಇಂಗ್ಲಿಷ್ ಸಾಹಿತ್ಯದಲ್ಲಿ ಅಳವಾದ ಆಸಕ್ತಿ ಬೆಳೆಸಿಕೊಂಡಿದ್ದ ಹಾಗೂ ಕಿರಿಯ ಪ್ರತಿಭಾಶಾಲಿಗಳಿಗೆ ಮಾರ್ಗದರ್ಶನ ಮಾಡಿ ಅವರನ್ನು ಮುಂದಕ್ಕೆ ತರಲು ಪ್ರಯತ್ನಿಸುತ್ತಿದ್ದ ವಿ.ಸೀ. ಅವರ ಸೃಜನಶೀಲ ಹಾಗೂ ಸಹೃದಯ ವ್ಯಕ್ತಿತ್ವದ ಪೂರ್ಣ ಪ್ರಭಾವವನ್ನು 'ಮೈಸೂರು ಮಲ್ಲಿಗೆ'ಯ ಕವಿ ಮುಂದೆ 'ಶಿಲಾಲತೆ' ಹಾಗೂ 'ತೆರೆದ ಬಾಗಿಲು' ಕವನ ಸಂಕಲನಗಳ ಕವಿಯಾದುದರಲ್ಲಿ ಕಾಣಬಹುದಾಗಿದೆ. ಅಂಥ ಆಚಾರ್ಯರಿಗೆ ನಮೋ ನಮಃ.

ಮುಂದೆ ವಿ.ಸೀ. ಅವರನ್ನು ಎಷ್ಟೋ ಬಾರಿ ಸಂಧಿಸಿದ್ದೇನೆ. ಸಾಹಿತ್ಯದ ಹಲವು ಮುಖಗಳನ್ನು ಕುರಿತು ಅವರೊಂದಿಗೆ ಚರ್ಚಿಸಿದ್ದೇನೆ. ಇತರರ ಜೊತೆಯಲ್ಲಿ ಅವರೊಡನೆ ನಡೆದ ಚರ್ಚೆಯಲ್ಲಿ ಭಾಗಿಯಾಗಿದ್ದೇನೆ. ಚರ್ಚೆಯಾಗುತ್ತಿದ್ದ ವಿಷಯಗಳು ಹೆಚ್ಚಾಗಿ ಕನ್ನಡ ಸಂಸ್ಕೃತ ಇಂಗ್ಲಿಷ್ ಸಾಹಿತ್ಯಗಳ ಉದ್ದಾಮ ಕೃತಿಗಳು ಹಾಗೂ ವಿ.ಸೀ. ಅವರದೇ ವಿಮರ್ಶಾ ಕೃತಿಗಳು. ಅವರಲ್ಲಿ ನಾನು ಸದಾ ಕಂಡದ್ದು ಅಪಾರ ವಿದ್ವತ್ತಿನ ಜೊತೆಗೆ ಅದಕ್ಕೆ ತಕ್ಕ ಅತೀವ ವಿನಯ. ಅವರ 'ವಾಲ್ಮೀಕಿ ರಾಮಾಯಣ' ಮತ್ತು 'ಮಹಾಭಾರತದ ಕೃಷ್ಣ ಚಾರಿತ್ರ' ಕೃತಿಗಳನ್ನು ಮತ್ತೊಮ್ಮೆ ಓದಿದಾಗ, ಅವರಿಗೆ ಅವುಗಳಲ್ಲಿನ ವಿಸ್ತಾರ ಅಧ್ಯಯನ ಹಾಗೂ ಆಳವಾದ ಒಳನೋಟಗಳನ್ನು ಕುರಿತು ನನ್ನ ಪ್ರಾಮಾಣಿಕ ಮೆಚ್ಚುಗೆಯನ್ನು ಒಮ್ಮೆ ಸೂಚಿಸುವ ಸದವಕಾಶ ಸಿಕ್ಕಾಗ, ಅವರು 'ನನಗೆ ತೋರಿದ್ದನ್ನು ತಿಳಿಸಿದ್ದೇನೆ, ಅಷ್ಟೆ' ಎಂದು ಮಾತ್ರ ನುಡಿದು ಇನ್ನೊಂದು ವಿಷಯಕ್ಕೆ ಹಾರಿದರು. ಅವರ ಕಾವ್ಯದ ಸೃಜನಶೀಲತೆ, ಪ್ರಯೋಗಶೀಲತೆ, ಸರಳತೆ, ಗೇಯತೆ, ಅಭಿವ್ಯಕ್ತವಾಗುವ ಜೀವನ ಪ್ರೀತಿ ಪೌರುಷಗಳು ಅದು ಹೇಗೆ ನಮ್ಮ ಸಂವಾದದಲ್ಲಿ ಪ್ರವೇಶಿಸಲು ಆಗಲೇ ಇಲ್ಲ. ಇದಕ್ಕೂ ಅವರ ವಿನಯವೇ ಕಾರಣ. ಅವರ ಸೃಜನಶೀಲತೆ, ಸಹೃದಯತೆ, ಸೌಜನ್ಯ, ವಿದ್ವತ್ತು, ವಾಗ್ವೈಖರಿ, ವಿನಯ, ಎಲ್ಲಕ್ಕಿಂತ ಹೆಚ್ಚಾಗಿ ಅವರ ಜೀವನೋತ್ಸಾಹ ಪ್ರೀತಿ ವಿಶ್ವಾಸಗಳು — ಇಂಥ ಅವರ ಗುಣ ವಿಶೇಷಗಳನ್ನು ನೆನೆದಾಗ ವಿ.ಸೀ. ಅಂಥವರು ವಿರಳ, ಅಂಥ ಉದಾರ ಹೃದಯದ ಉದಾತ್ತ ಮನಸ್ಸಿನ ವ್ಯಕ್ತಿಗಳನ್ನು We see rarely indeed ಎಂದು ಎನಿಸದಿರದು.

ದೊಡ್ಡತನಕ್ಕೆ ತಲೆ ಬಾಗಿದೆ

ಜಿ. ಆರ್. ಲಕ್ಷ್ಮಣರಾವ್

೧೯೩೯ರಲ್ಲಿ ನಾನು ಬಿ.ಎಸ್‌ಸಿ ಆನರ್ಸ್ ಮೊದಲ ವರ್ಷದ ವಿದ್ಯಾರ್ಥಿಯಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಸೇರಿದೆ. ಅಲ್ಲಿ ಮೊದಲ ಎರಡು ವರ್ಷ ನಾನು ವಿ.ಸೀ.ಯವರ ವಿದ್ಯಾರ್ಥಿ. ಅವರು ನಮ್ಮ ತರಗತಿಗೆ ಕನ್ನಡ ಪಾಠ ಹೇಳುತ್ತಿದ್ದರು. ಆ ದಿನಗಳಲ್ಲಿಯೂ ಎರಡು ವರ್ಷದ ತರುವಾಯ ನಾನು ಅದೇ ಕಾಲೇಜಿನಲ್ಲಿ ಅಧ್ಯಾಪಕನಾಗಿ ನೇಮಕಗೊಂಡು ಅವರ ಸಹೋದ್ಯೋಗಿಯಾಗಿದ್ದ ಕೆಲವು ವರ್ಷಗಳಲ್ಲಿಯೂ ಅವರು ನನ್ನ ಬಗ್ಗೆ ತೋರಿಸುತ್ತಿದ್ದ ಅಪಾರ ಶಿಷ್ಯವಾತ್ಸಲ್ಯದ ಸವಿನೆನಪನ್ನು ಈಗಲೂ ಕೆಲವು ವೇಳೆ ಮೆಲುಕು ಹಾಕುತ್ತಿರುತ್ತೇನೆ. ಅಂದಿನ ದಿನಗಳಲ್ಲಿ ಶುಚಿಯಾದ ಮತ್ತು ರುಚಿಯಾದ ತಿಂಡಿತಿನಿಸುಗಳಿಗೆ ಪ್ರಸಿದ್ಧಿ ಪಡೆದಿದ್ದ ಮಾವಳ್ಳಿ ಟಿಫಿನ್ ರೂಮ್ಸ್‌ನಲ್ಲಿ ಅನೇಕ ವೇಳೆ ನನ್ನ, ಅವರ ಅಕಸ್ಮಿಕ ಭೇಟಿ ಆಗುತ್ತಿತ್ತು. ಆಗ ಸಾಮಾನ್ಯವಾಗಿ ಅವರೊಂದಿಗೆ ಜಿ. ಪಿ. ರಾಜರತ್ನಂ ಅಥವಾ ಕೆ. ವಿ. ಅಯ್ಯರ್ ಇರುತ್ತಿದ್ದರು. ಆಗ ಅವರಿಗೆ ನಮಸ್ಕರಿಸಿ ಬೇರೊಂದು ಕಡೆ ಕುಳಿತುಕೊಳ್ಳಲು ಹೋದರೆ ಅವರು ಬಿಡುತ್ತಿರಲಿಲ್ಲ. ಅವರೊಂದಿಗೇ ಕುಳಿತುಕೊಳ್ಳಬೇಕು, ಅವರ ಖರ್ಚಿನಲ್ಲಿಯೇ ನನಗೂ ತಿಂಡಿ, ಕಾಫಿ ಆಗಬೇಕು.

೧೯೫೪-೫೫ರ ಸುಮಾರಿನಲ್ಲಿ ಅವರು ನಿವೃತ್ತರಾದ ತರುವಾಯ ಸ್ವಲ್ಪ ಕಾಲ ಬೆಂಗಳೂರಿನಲ್ಲಿದ್ದರೆಂದು ಕಾಣುತ್ತದೆ. ಅನಂತರ ಕಾಲೇಜೊಂದರ ಪ್ರಿನ್ಸಿಪಾಲ್ ಆಗಲು ಒಪ್ಪಿ ಹೊನ್ನಾವರಕ್ಕೆ ಹೊರಟು ಹೋದರು. ೧೯೫೬ರಲ್ಲಿ ನಾನು ಶಿವಮೊಗ್ಗಕ್ಕೆ ವರ್ಗವಾಗಿ ಹೋದೆ. ಅನಂತರ ಮೈಸೂರು ವಿಶ್ವವಿದ್ಯಾನಿಲಯವು ಪ್ರತ್ಯೇಕಗೊಂಡಾಗ ನನ್ನ ಸೇವೆಯನ್ನು ಆ ವಿಶ್ವವಿದ್ಯಾನಿಲಯಕ್ಕೆ ವಹಿಸಿದುದರಿಂದ ೧೯೬೧-೬೨ ರಲ್ಲಿ ಮೈಸೂರಿಗೆ ಬಂದೆ; ಮೈಸೂರಿನವನೇ ಆಗಿಹೋದೆ. ಹೀಗಾಗಿ ಅಲ್ಲಿಂದ ಹತ್ತು ಹದಿನೈದು ವರ್ಷ ಅವರನ್ನು ಭೇಟಿಯಾಗುವ ಸುಯೋಗ ನನಗೆ ಲಭಿಸಲೇ ಇಲ್ಲ.

೧೯೬೭-೬೮ರ ಸುಮಾರಿನಲ್ಲಿ ಪ್ರಬುದ್ಧ ಕರ್ನಾಟಕ ತ್ರೈಮಾಸಿಕದ ಸಂಪಾದಕರು ನನಗೊಂದು ಪುಸ್ತಕವನ್ನು ಕಳುಹಿಸಿ ಅದರ ವಿಮರ್ಶೆ ಬರೆದು ಕೊಡಬೇಕೆಂದು ಕೋರಿದರು. ಖ್ಯಾತ ಭಾರತೀಯ ವಿಜ್ಞಾನಿಗಳ ಜೀವನ ಮತ್ತು ಸಾಧನೆಗಳನ್ನು ಕುರಿತ ಆ ಪುಸ್ತಕಕ್ಕೆ ವಿ.ಸೀ. ಮುನ್ನುಡಿ ಬರೆದಿದ್ದರು. ನಾನು ವಿಮರ್ಶೆ ಬರೆದುಕೊಟ್ಟೆ. ಪುಸ್ತಕ

ಕಿಟ್ಟುವಾಗಿತ್ತು. ಎಷ್ಟು ಕಿಟ್ಟುವಾಗಿತ್ತೆಂದು ತೋರಿಸಲು ಪುಸ್ತಕದಿಂದ ವಾಕ್ಯಗಳನ್ನೂ ವಾಕ್ಯಸಮುಚ್ಚಯಗಳನ್ನೂ ವಿಪುಲವಾಗಿ ಉದ್ಧರಿಸಿ ನನ್ನ ಅಭಿಪ್ರಾಯವನ್ನು ಸಮರ್ಥಿಸಿದ್ದೆ. ಕೊನೆಯಲ್ಲಿ, "ಕೊನೆಯದಾಗಿ ಮುನ್ನುಡಿಯ ಬಗ್ಗೆ ಒಂದು ಮಾತು. ವಿಜ್ಞಾನವನ್ನೇ ಆಗಲಿ, ಇತರ ಶಾಸ್ತ್ರಗಳನ್ನೇ ಆಗಲಿ, ಕುರಿತ ವಿಚಾರ ಸಾಹಿತ್ಯ ಕೃತಿಯ ಮುಖ್ಯ ಉದ್ದೇಶ ಜ್ಞಾನಪ್ರಸಾರವೇ ಏನಾ ಮನರಂಜನೆಯಲ್ಲ. ವಿಜ್ಞಾನಿಗಳ ಜೀವನ ಚರಿತ್ರೆಗಳನ್ನೂ ಆ ಗುಂಪಿಗೇ ಸೇರಿಸಬೇಕು. ಅಂಥ ಕೃತಿಗೆ ಗಣ್ಯರೊಬ್ಬರು ಮುನ್ನುಡಿ ಬರೆದರೆ, ಅದು ಒಂದು ರೀತಿಯಲ್ಲಿ ಶಿಫಾರಸು ಪತ್ರವಾಗುವುದರಿಂದ ಕೃತಿಯಲ್ಲಿ ನಿರೂಪಿಸಿರುವ ವಿಷಯಗಳು ಸಾಮಾನ್ಯ ಓದುಗರ ವಿಶ್ವಾಸಕ್ಕೆ ಪಾತ್ರವಾಗುತ್ತವೆ. ವಿಷಯ ಅರ್ಥವಾಗದೆ ಹೋದರೋ ಅದನ ಜಟಿಲತೆಯ ಬಗ್ಗೆ ಮತ್ತು ತಮ್ಮ ಗ್ರಹಣಶಕ್ತಿಯ ಬಗ್ಗೆ ಅವರಿಗೆ ತಪ್ಪು ಭಾವನೆ ಮೂಡಲು ಅವಕಾಶವಾಗುತ್ತದೆ. ದಾಕ್ಷಿಣ್ಯಕ್ಕೆ ಕಟ್ಟು ಬಿದ್ದು ಮುನ್ನುಡಿ ಬರೆದುಕೊಡುವ ಪರಿಪಾಟವಿರುವ ಹಿರಿಯರು ತಮ್ಮಿಂದ ಜನತೆಗೆ ಆಗುವ ಅಪಕಾರ, ಅಪಚಾರಗಳನ್ನು ನೆನಪಿನಲ್ಲಿಡುವುದು ಅತ್ಯಗತ್ಯ" ಎಂಬ ಮಾತುಗಳನ್ನು ಸೇರಿಸಿದ್ದೆ.

ಅಲ್ಲಿಂದ ಕೆಲವು ತಿಂಗಳ ಬಳಿಕ, ೧೯೬೯ರ ಫೆಬ್ರವರಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯವರು ಏರ್ಪಡಿಸಿದ್ದ ಪ್ರಬುದ್ಧ ಕರ್ನಾಟಕದ ಸುವರ್ಣ ಮಹೋತ್ಸವ ಬಂದಿತು. ಅದರ ಅಂಗವಾಗಿ ನಾಲ್ಕೈದು ಸಾಹಿತ್ಯಕ ವಿಚಾರ ಗೋಷ್ಠಿಗಳು ನಡೆಯುವುದಿತ್ತು. ಆ ಪೈಕಿ ಒಂದು ಗೋಷ್ಠಿಯ ಅಧ್ಯಕ್ಷತೆ ವಹಿಸಲು ವಿ.ಸೀ. ಯವರನ್ನು ಆಹ್ವಾನಿಸಿದ್ದರು. ಅದಕ್ಕಾಗಿ ಅವರು ಮೈಸೂರಿಗೆ ಬಂದಿರುವ ವಿಷಯ ತಿಳಿಯಿತು. ಅವರನ್ನು ಎಲ್ಲಿ ಇಳಿಸಿದ್ದಾರೆಂಬುದನ್ನು ತಿಳಿದುಕೊಂಡು ಅವರನ್ನು ಕಾಣಲು ಹೋದೆ. ಕೊಠಡಿಯ ಬಾಗಿಲು ತಟ್ಟಿದಾಗ ಅವರೇ ಬಂದು ಬಾಗಿಲು ತೆರೆದರು. ಅವರಿಗೆ ಆಗ ವಯಸ್ಸು ಎಪ್ಪತ್ತು. ನಾನು ಅವರನ್ನು ನೋಡಿ ಹದಿನೈದು ವರ್ಷವಾಗಿತ್ತು. ಇದ್ದಕ್ಕಿದ್ದಂತೆ ಅವರು ವೃದ್ಧರಾಗಿರುವರೆಂಬಂತೆ ನನಗೆ ಭಾಸವಾಯಿತು. ಕೈ ಮುಗಿದು, "ನಮಸ್ಕಾರ ಸಾರ್, ನೆನಪಿದೆಯೇ?" ಎಂದೆ. ಅವರು "ಓಹೋ ಲಕ್ಷ್ಮಣರಾವ್! ಬನ್ನಿ, ಬನ್ನಿ, ನಿಮ್ಮನ್ನು ಹೇಗಪ್ಪಾ ಮರೆಯಲಿ? ಮೊನ್ನೆ ತಾನೆ ಬೆನ್ನಿಗೆ ಚೂರಿ ಹಾಕಿದ್ದೀರೀ?" ಎಂದು ತಮಾಷೆ ಮಾಡಿದರು. ನಾನು ಆ ಮಾತನ್ನು ಪಕ್ಕಕ್ಕೆ ತಳ್ಳಿ, "ನಿಮ್ಮನ್ನು ನೋಡಿ ಬಹಳ ದಿವಸವಾಗಿತ್ತು ಸಾರ್, ತುಂಬ ಸಂತೋಷವಾಯಿತು" ಎಂದು, ಅವರ ಆರೋಗ್ಯದ ಬಗ್ಗೆ, ಬೆಂಗಳೂರಿನಲ್ಲಿ ಅವರ ಚಟುವಟಿಕೆಗಳ ಬಗ್ಗೆ ವಿಚಾರಿಸಿದೆ. ಅರ್ಧ ಗಂಟೆ ಮಾತಾಡುತ್ತಿದ್ದು ಮನೆಗೆ ಬಂದೆ.

ಅವರು ಅಧ್ಯಕ್ಷತೆ ವಹಿಸಬೇಕಾಗಿದ್ದ ಗೋಷ್ಠಿ ಮರುದಿನವೇ ನಡೆಯಿತಂತೆ. ನಾನು ಹೋಗಿರಲಿಲ್ಲ. ಗೋಷ್ಠಿಗೆ ಹೋಗಿದ್ದ ಡಾ. ವರದರಾಜಾರಾಯರು ಆ ಸಂಜೆ ನನ್ನನ್ನು ಕಂಡಾಗ, "ವಿ.ಸೀ. ಅವರ ಅಧ್ಯಕ್ಷ ಭಾಷಣದಲ್ಲಿ ನಿಮ್ಮನ್ನು ನೆನಸಿಕೊಂಡರು. ನೀವು ಬರೆದಿರುವ ಯಾವುದೋ ಪುಸ್ತಕ ಪರಿಶೀಲನೆಯಲ್ಲಿ ಅವರನ್ನು ತರಾಟೆಗೆ ತೆಗೆದು ಕೊಂಡಿದ್ದೀರಂತೆ?" ಎಂದರು. ನಾನು ಚಿಂತೆಗೀಡಾದೆ. ನನ್ನ ಟೀಕೆಯನ್ನು ಅವರು ಬಹಳ ಗಂಭೀರವಾಗಿ ತೆಗೆದುಕೊಂಡಂತಿದೆ ಅನ್ನಿಸಿತು. ಅವರ ಮನಸ್ಸಿಗೆ ನೋವಾಗಿರಬಹುದೇ

ಎಂಬ ಸಂದೇಹ ಬಲವಾಗಿ ಕಾಡತೊಡಗಿತು. ಅವರು ಎಷ್ಟು ದೊಡ್ಡವರು, ನನ್ನನ್ನು ಎಷ್ಟು ಪ್ರೀತಿಯಿಂದ ಕಾಣುತ್ತಾರೆ, ಅಂಥವರ ಮನಸ್ಸು ನೋಯಿಸಿಬಿಟ್ಟೆನೇ ಎಂದು ಕಸಿವಿಸಿಗೊಂಡೆ. ಆ ಕಸಿವಿಸಿಯಲ್ಲೇ ಮನೆಗೆ ಹೋಗಿ ಮಲಗಿದೆ.

ಮರುದಿನ ಬೆಳಿಗ್ಗೆ ಎದ್ದವನೇ ಬೇಗ ಸ್ನಾನ ಮುಗಿಸಿ, ಅವರು ತಂಗಿದ್ದಲ್ಲಿಗೆ ಮತ್ತೆ ಓಡಿದೆ. ಅವರು ಬೆಂಗಳೂರಿಗೆ ಹಿಂದಿರುಗಲು ಬೆಳಿಗ್ಗೆ ಬೇಗ ಹೊರಟು ಬಿಟ್ಟಿರಬಹುದು ಎಂಬ ಆತಂಕವಿತ್ತು. ಅವರು ಇನ್ನೂ ಹೋಗಿರಲಿಲ್ಲ. ಎಂದಿನಂತೆ ಹಸನ್ಮುಖದಿಂದ ನನ್ನನ್ನು ಸ್ವಾಗತಿಸಿದರು. ಬೆಳಿಗ್ಗೆ ಇಷ್ಟು ಬೇಗ ಇವನೇಕೆ ಬಂದಿದ್ದಾನೆ ಎಂಬ ಪ್ರಶ್ನೆ ಅವರ ಮುಖಭಾವದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ನಾನು ಅಳುಕುವ ಧ್ವನಿಯಲ್ಲಿ, "ಮೊನ್ನೆ ನಾನು ನಿಮ್ಮನ್ನು ಕಾಣಲು ಬಂದಾಗ, ನಿಮ್ಮ ಬೆನ್ನಿಗೆ ನಾನು ಚೂರಿ ಹಾಕಿದೆ ಎಂದಿರಿ. ತಮಾಷೆ ಮಾಡುತ್ತಿದ್ದೀರಿ ಎಂದುಕೊಂಡು ಸುಮ್ಮನಾದೆ. ಮತ್ತೆ ನಿನ್ನೆ ಅಧ್ಯಕ್ಷ ಭಾಷಣದಲ್ಲಿ ನನ್ನ ಮಾತೆತ್ತಿ ನಿಮ್ಮನ್ನು ತರಾಟೆಗೆ ತೆಗೆದುಕೊಂಡೆ ಎಂದಿರಂತೆ. ಅದನ್ನು ಕೇಳಿದ ಮೇಲೆ ಚಿಂತೆಗಿಟ್ಟುಕೊಂಡಿತು. ಆ ವಿಮರ್ಶೆ ಬರೆದು ನಿಮ್ಮ ಮನಸ್ಸು ನೋಯಿಸಿದ್ದೇನೆ ಅನ್ನಿಸುತ್ತಿದೆ. ಅದಕ್ಕಾಗಿ ನಿಮ್ಮ ಕ್ಷಮೆ ಬೇಡಲು ಬಂದೆ" ಎಂದೆ. ಅವರು ನನ್ನ ಹೆಗಲ ಮೇಲೆ ಕೈ ಹಾಕಿ ನೇವರಿಸುತ್ತ, "ಛೇ! ಛೇ! ನಿಮಗೇಕೆ ಹಾಗನ್ನಿಸಿತು, ಲಕ್ಷ್ಮಣರಾವ್? ಮೊನ್ನೆ ನಾನು ಹಾಗಂದದ್ದು ನಿಜವಾಗಿಯೂ ತಮಾಷೆಗೇನೇ. ನಿನ್ನೆ ವಿಷಯ ಬೇರೆ. ನಾನು ಬಹಳ ನಿಷ್ಠುರ ಮನುಷ್ಯ ಅಂತ ಜನ ಆಡಿಕೊಳ್ಳೋದು ಕೇಳಿದ್ದೇನೆ. ಆ ಮಾತು ಬಂತು. ಆ ಸಂಬಂಧದಲ್ಲಿ ಹೇಳಿದೆ: ನಾನು ತುಂಬ ಮೃದು, ದಾಕ್ಷಿಣ್ಯಕ್ಕೆ ಮಣೆಯುವವನು, ಅದು ತಪ್ಪು ಅಂತ ಲಕ್ಷ್ಮಣರಾಯರು ನನ್ನನ್ನು ತರಾಟೆಗೆ ತೆಗೆದುಕೊಂಡಿದ್ದಾರೆ ಅಂದೆ. ಅಷ್ಟೇ ವಿನಾ ನನ್ನ ಮನಸ್ಸು ನೋಯೋ ಅಂಥದು ನೀವೇನು ಮಾಡಿದ್ದೀರಿ? ನೀವು ಬರೆದಿರುವುದೆಲ್ಲ ಸರಿಯಾಗೇ ಇದೆ. ಆ ಮುನ್ನುಡಿ ಬರೆದದ್ದು ನನ್ನ ಮೂರ್ಖತನ. ನೀವೇ ಬರೆದಿದ್ದೀರಲ್ಲಾ, ಹಾಗೆ ನಾನು ದಾಕ್ಷಿಣ್ಯಕ್ಕೆ ಕಟ್ಟು ಬಿದ್ದೆ. ನಾನೇನಪ್ಪಾ ಮಾಡಲಿ? ಇಳಿವಯಸ್ಸಿನಲ್ಲಿ ಕೆಲಸ ಒಪ್ಪಿಕೊಂಡು ದೂರದ ಹೊನ್ನಾವರಕ್ಕೆ ಹೋದೆ. ಅಲ್ಲಿಯ ಜನ ನನ್ನನ್ನು ತುಂಬಾ ಚೆನ್ನಾಗಿ ನಡೆಸಿಕೊಂಡರು. ಅವರಲ್ಲಿ ಆತ ಪ್ರಮುಖ. ಅಲ್ಲಿ ಎಲ್ಲರೂ ಆತನನ್ನು ತುಂಬಾ ಗೌರವಿಸುತ್ತಾರೆ. ಆತನೂ ತುಂಬ ಒಳ್ಳೆಯ ಮನುಷ್ಯ, ಉಪಕಾರಿ. ಆತ ಚೆನ್ನಾಗಿಯೂ ಬರೆಯುತ್ತಾರಪ್ಪ. ಆದರೆ ವಿಜ್ಞಾನಿಗಳ ಬಗ್ಗೆ ಮತ್ತು ಆ ವಿಜ್ಞಾನಿಗಳು ಮಾಡಿರೋ ಕೆಲಸದ ಬಗ್ಗೆ ಈತ ಬರೆಯಬಲ್ಲನೇ ಅಂತ ಯೋಚಿಸಬೇಕಾಗಿತ್ತು. ಹಾಗೆ ಮಾಡಲಿಲ್ಲ. ಆತ ಬಂದು ಕೇಳಿದರು. ಅವರಿಗೆ ಇಲ್ಲ ಅಂತ ಹೇಗೆ ಹೇಳಲಿ? ಬರೆದುಕೊಟ್ಟೆ. ಅದು ನಾನು ಮಾಡಿದ ತಪ್ಪು. ನೀವು ಎಲ್ಲಾ ಸರಿಯಾಗೇ ಬರೆದಿದ್ದೀರಿ" ಎಂದರು. ಅವರ ದೊಡ್ಡತನಕ್ಕೆ ತಲೆ ಬಾಗಿದೆ. ಅವರ ಬಗ್ಗೆ ನನಗಿದ್ದ ಗೌರವ ನೂರು ಮಡಿ ಆಯಿತು. ಅವರು ಮುಂದುವರಿದು, "ನಿಮ್ಮ ಚಿಂತೆ ದೂರ ತಳ್ಳಿಬಿಡಿ. ನೀವೀಗ ಬಂದದ್ದು ಇನ್ನೊಂದು ರೀತಿಯಲ್ಲಿ ಒಳ್ಳೆಯದಾಯಿತು. ಬರುವ ಏಪ್ರಿಲ್–ಮೇನಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್‌ನವರು ಬೆಂಗಳೂರಿನಲ್ಲಿ ಅನುವಾದಕರಿಗೆ ಒಂದು ವರ್ಕ್‌ಷಾಪ್ ಮಾಡುತ್ತಾರೆ. ಅದಕ್ಕೆ ನನ್ನ ಡೈರೆಕ್ಟರ್ ಮಾಡಿದ್ದಾರೆ. ವಿಜ್ಞಾನದ ಬರವಣಿಗೆ ಮಾಡಿರುವವರು ಇಬ್ಬರು ಮೂವರು

ಇರಲಿ ಅಂತ ನಿಮ್ಮ ಹೆಸರೂ ಅವರಿಗೆ ಕೊಟ್ಟಿದ್ದೀನಿ, ನಿಮಗೆ ಇಷ್ಟರಲ್ಲೇ ಆಹ್ವಾನ ಬರುತ್ತೆ. ಪುರಸತ್ತು ಮಾಡಿಕೊಂಡು ಬನ್ನಿ. ಎಂಟು ದಿನ ಒಟ್ಟಿಗೆ ಕೆಲಸ ಮಾಡಬಹುದು" ಅಂದರು. ಧನ್ಯತೆ, ಕೃತಜ್ಞತೆಗಳಿಂದ ನನ್ನ ಕಣ್ಣುಗಳು ಒದ್ದೆಯಾದುವು.

ಅಜಾತಶತ್ರು

"ಶ್ರೀ ವಿ.ಸೀ.ಯವರು ಸಿಟ್ಟಾದುದನ್ನು ನಾನು ಕಂಡಿಲ್ಲ. ಯಾವುದಾದರೊಂದು ವಿಷಯದಲ್ಲಿ ಮನಸ್ಸಿಗೆ ಅಸಹ್ಯತೆ ತೋರಿಬಂದರೆ ಮುಖಮುದ್ರೆಯಲ್ಲಾಗಲಿ, ಮಾತಿನ ಕಠೋರತೆಯಲ್ಲಾಗಲಿ ಅದನ್ನು ತೋರ್ಪಡಿಸುತ್ತಿರಲಿಲ್ಲ. ಮೌನವಾಗಿದ್ದು ಬಿಡುತ್ತಿದ್ದರು. ತಮ್ಮ ಅಸಹನೆಯನ್ನು ಇನ್ನೊಬ್ಬರೆದುರಿಗೆ ತೋರ್ಪಡಿಸಿದುದನ್ನು ನಾನಿದುವರೆಗೆ ಕಂಡಿಲ್ಲ. ಹೇಗೊ ಸಹಿಸಿಬಿಡುತ್ತಿದ್ದರು. ಸಮಯ ಸಿಕ್ಕಾಗ, ಪ್ರಸ್ತಾಪ ಬಂದಾಗ "ಅದು ಹೀಗಿದ್ದಿದ್ದರೆ ಅಥವಾ ಹಾಗೆ ಮಾಡಿದ್ದಿದ್ದರೆ ಚೆನ್ನಾಗಿರುತ್ತಿತ್ತೇನೊ" ಎಂದು ಸಲಹೆ ಕೊಟ್ಟಂತೆ ಹೇಳಿಬಿಡುತ್ತಿದ್ದರು. ಎಂತೆಂತಹ ಕಠಿಣ ಪರಿಸ್ಥಿತಿಯನ್ನೂ ತಾವೊಬ್ಬರೇ ಮನಸ್ಸಿನಲ್ಲಿ ಅನುಭವಿಸುತ್ತಿದ್ದರೆ ವಿನಾ ಇನ್ನೊಬ್ಬರನ್ನು 'ಇದು ತಪ್ಪು' ಎಂದು ಮೂದಲಿಸುತ್ತಿರಲಿಲ್ಲ. ಈ ತೆರನ ಸಹನೆ ಮಾನವಾತೀತ.

ವಿಧಿಯೂ, ದುರದೃಷ್ಟವೂ ಶ್ರೀ ವಿ.ಸೀ. ಯವರನ್ನು ಒಂದಲ್ಲ ಬಲುವೇಳೆ ಇಕ್ಕಟ್ಟಿನಲ್ಲಿ ಸಿಲುಕಿಸಿ ಪರೀಕ್ಷಿಸಿದೆ. ಮೂರ್ತಿ ಚಿಕ್ಕುದೇ ಆದರೂ ಕತ್ತೆತ್ತಿ ಹತ್ತು ಪುರುಷಪ್ರಮಾಣಕ್ಕೆ ಎದ್ದು ನಿಂತಿರುವ 'ಮಹಾಗುಮ್ಮಟ' ನಂತೆ ಆಗ ಅವರು ಅದನ್ನು ತಾಳುತ್ತಾರೆ. ಸುಖವೂ, ದುಃಖವೂ–ಎರಡೂ ಮುಖವಾಡಗಳನ್ನು ಧರಿಸಿದ ಮೋಸಗಾರರೆ (imposters) – ಎನ್ನುತ್ತಾರೆ ಅವರು. ಯಾರೊಬ್ಬರನ್ನೂ ಅವರು ತಮಗೆ ಆಗದವರನ್ನಾಗಿ ಇದುವರೆಗೂ ಮಾಡಿಕೊಂಡಿಲ್ಲ. ತಮ್ಮ ಕೈಲಾಗುವ ಸಹಾಯವನ್ನು ಇನ್ನೊಬ್ಬರಿಗೆ ಮಾಡಿಕೊಡುವವರೇ ವಿನಾ – ನನಗೆ ತಿಳಿದಂತೆ–ಅವರು ಇನ್ನೊಬ್ಬರ ಸಹಾಯವನ್ನು ಅಪೇಕ್ಷಿಸಿಯೂ ಇಲ್ಲ. ಇನ್ನೊಬ್ಬರ ಹೊಗಳುವಿಕೆಯನ್ನೂ ಅಪೇಕ್ಷಿಸಿದವರಲ್ಲ; ತೆಗಳುವಿಕೆಯನ್ನೂ ಮನಸ್ಸಿಗೆ ತಂದುಕೊಂಡವರಲ್ಲ. ಯಾರೊಬ್ಬರನ್ನೂ ಕೆಟ್ಟವರೆಂದಿಲ್ಲ; ಅನ್ನುವುದೂ ಇಲ್ಲ. "ಅವರವರ ಮನಸ್ಸು, ಸಮಯ ಸಂದರ್ಭಗಳು ಹೇಗಿತ್ತೊ, ಏನೋ?" ಎಂದುಬಿಡುತ್ತಾರೆ. ಅಂದು ಆಡಿದವರನ್ನೂ ಇಂದು ಕಂಡಾಗ ನಸುನಕ್ಕು, ಕುಶಲ ಕೇಳಿ ಇವರೇ ಮಾತನಾಡಿಸುತ್ತಾರೆ. 'ಇಂತಹ ಮಹಾನುಭಾವರನ್ನೂ, ಇದ್ದುದರಲ್ಲೇ ತೃಪ್ತಿಹೊಂದಿ ಬಾಳುತ್ತಿರುವವರನ್ನೂ ವಿಧಿ ಮತ್ತೆ ಮತ್ತೆ ಪರೀಕ್ಷಿಸುತ್ತಿದೆಯಲ್ಲಾ' ಎಂದು ನನಗೆನಿಸಿದೆ. 'ಪುಟ ಹಾಕಿದಷ್ಟೂ ಚಿನ್ನ ಮತ್ತೂ ಮತ್ತೂ ಅಪರಂಜಿಯಾಗುತ್ತೆ' ಎಂದೇನೋ? ಒಂದು ಸಲ ಅಪರಂಜಿ ಆಯಿತೆಂದರೆ, ಅದು ಮುಂದೆ ಸರ್ವಕಾಲಕ್ಕೂ ಅಪರಂಜಿಯಾಗಿಯೇ ಉಳಿಯುತ್ತದೆಯಲ್ಲವೆ? ಕಿಲುಬು ಕಟ್ಟುತ್ತದೆಯೇ? ಮಸಕು ಮುಸುಕುತ್ತದೆಯೆ? ಮತ್ತೆ ವಿಧಿ ಏಕೆ ಮೇಲಿಂದ ಮೇಲೆ ಪರೀಕ್ಷಿಸುತ್ತದೆ? "ಇದು ನನ್ನ ಮನಸ್ಸಿಗೆ ಹಿತ. ನಾನು ಹೀಗೇ ಇದ್ದು ಬಿಡುತ್ತೇನೆ" ಎಂಬುದು ಸ್ಥಿತಪ್ರಜ್ಞನ ವಾಕ್ಯ. ಎಷ್ಟು ಎಡರು ತೊಡರುಗಳು ಬರಲಿ, ಅವು ಆತನ ಮನಸ್ಸನ್ನು ಛಿದ್ರಿಸಲಾರವು. ಇದು ಶ್ರೀ ವಿ.ಸೀ.ಯವರ ಗಾಂಭೀರ್ಯ, ನಡೆ, ನುಡಿ, ಆಚಾರ, ಧರ್ಮ."

ಕೆ. ವಿ. ಅಯ್ಯರ್

'ವಿ.ಸೀ.–೭೫' ಪು. ೩೧೩–೧೪

ಮುಂಬಯಿಯಲ್ಲಿ ವಿ.ಸೀ.

ವ್ಯಾಸರಾಯ ಬಲ್ಲಾಳ

ಕನ್ನಡಿಗರಿಗೆಲ್ಲ ಪ್ರಾತಃಸ್ಮರಣೀಯರಾದ ವಿ.ಸೀ. ಅವರಿಗೆ ಮುಂಬಯಿ ಅಪರಿಚಿತ ಶಹರವೇನೂ ಆಗಿರಲಿಲ್ಲ. ಅಲ್ಲಿ ಕನ್ನಡಿಗರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದ ಇಪ್ಪತ್ತರ ದಶಕದ ಆದಿ ಭಾಗದಲ್ಲಿಯೇ ಎಲ್.ಎಲ್.ಬಿ. ವ್ಯಾಸಂಗ ಮಾಡಲೆಂದು ಅವರು ಅಲ್ಲಿದ್ದವರು. ಹಾಗೆಯೇ ಡೆಪ್ಯುಟಿ ಕಂಟ್ರೋಲರ್ ಆಫ್ ಕರೆನ್ಸಿ ಕಛೇರಿಯಲ್ಲಿ ನೌಕರಿ ಮಾಡಿಕೊಂಡಿದ್ದವರು. ಆದರೆ ಅವರು ಮುಂಬಯಿಯನ್ನು ಬಿಟ್ಟು ಬೆಂಗಳೂರಿಗೆ ಬಂದ ಮೇಲೆ ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಿದ ಪ್ರತಿಭಾನ್ವಿತ ಸಾಹಿತಿಯಾಗಿ, ಆದರ್ಶ ಪ್ರಾಧ್ಯಾಪಕರಾಗಿ, ಸಹೃದಯ ವಿಮರ್ಶಕರಾಗಿ, ಅರ್ಥಶಾಸ್ತ್ರಜ್ಞರಾಗಿ, ನಾಡನ್ನೆಲ್ಲ ಸುತ್ತಿದ ಭಾಷಣಕಾರರಾಗಿ ಕನ್ನಡ ಸಾಹಿತ್ಯದ ಇತಿಹಾಸದ ಮಹತ್ವದ ಪುಟಗಳಲ್ಲಿ ಮಿಂಚಿದವರು. ನಲುವತ್ತರ ದಶಕದ ಆದಿಯಲ್ಲಿ ನಾನು ಮುಂಬಯಿಗೆ ಹೋದ ಮೇಲೆ ವಿ.ಸೀ. ಯವರು ಮುಂಬಯಿಗೆ ಕೆಲವು ಸಂದರ್ಭಗಳಲ್ಲಿ ಬಂದದ್ದು ಗಣ್ಯ ಸಾಹಿತಿಯಾಗಿಯೇ.

ಮುಂಬಯಿಯ ಇಂದಿನ ಲಕ್ಷಗಟ್ಟಲೆ ಕನ್ನಡಿಗರು ವಿ.ಸೀ. ಅವರನ್ನು ಇಂದಿಗೂ ನೆನೆಸಿಕೊಳ್ಳುತ್ತಿರುವುದು ಅವರ ಕಾವ್ಯ ಪ್ರತಿಭೆಯ ಅತ್ಯಂತ ಜನಪ್ರಿಯ ಕವನದಿಂದ. ಅದು ಅವರ 'ಮನೆ ತುಂಬಿಸುವ ಹಾಡು.' ನನ್ನ ದೀರ್ಘ ಕಾಲದ ಮುಂಬಯಿ ವಾಸ್ತವ್ಯದಲ್ಲಿ ಹತ್ತಾರು ವಿವಾಹ ಸಮಾರಂಭಗಳಲ್ಲಿ ನಾನು ಭಾಗವಹಿಸಬೇಕಾಗಿದ್ದಾಗ ಈ ಹಾಡನ್ನು ಹಾಡಿದ್ದನ್ನು ಕೇಳಿದ್ದೇನೆ. ಅದನ್ನು ಕೇಳಿ ನೆರೆದವರು ಕಣ್ಣೀರನ್ನು ಇಳಿಸಿದ್ದನ್ನೂ ಕಂಡಿದ್ದೇನೆ. ಪ್ರಾಯಶಃ ಈ ಹಾಡಿನ ಪ್ರಭಾವದಿಂದಾಗಿಯೇ ಮಿತ್ರ ಕವಿ ಸನದಿಯವರು ನಾನು ನನ್ನ ಅರ್ಧ ಶತಮಾನಕ್ಕೂ ಹೆಚ್ಚು ಕಾಲದ ಮುಂಬಯಿ ವಾಸ್ತವ್ಯವನ್ನು ಮುಗಿಸಿ ಬೆಂಗಳೂರಿಗೆ ಬರಲು ನಿರ್ಧರಿಸಿದಾಗ, ನನ್ನನ್ನು ಬೀಳ್ಕೊಟ್ಟ ಒಂದು ಸಮಾರಂಭದಲ್ಲಿ 'ಮುಂಬಯಿಯ ಮನೆಯಂಗಳದಿ ಬೆಳೆದೊಂದು ಹೂವನ್ನು ಬೆಂಗಳೂರಿನ ಮಡಿಲೊಳಗೊಪ್ಪಿಸುವೆವು' ಎಂದದ್ದು.

ಕನ್ನಡಕ್ಕೊಬ್ಬರೇ ಎನಿಸಿದ್ದ ಶಿವರಾಮ ಕಾರಂತರ ಹಾಗೂ ವಿ.ಸೀ. ಯವರ ಸ್ನೇಹ ಸಂಬಂಧದ ವಿಚಾರ ಕನ್ನಡದ ಜನ ಮನಕ್ಕೆಲ್ಲ ತಿಳಿದಿದೆ. ಆದರೆ ದೀರ್ಘಕಾಲ ಮುಂಬಯಿಯಲ್ಲಿ ನೆಲೆಸಿದ್ದು, ಮುಂಬಯಿಯ ಹೆಚ್ಚಿನ ಕನ್ನಡದ ಚಟುವಟಿಕೆಗಳಿಗೆ

ಬೆನ್ನೆಲುಬಿನಂತಿದ್ದ ದಿವಂಗತ ಮೂಡಬಿದಿರೆ ಸಂಜೀವರಾಯರು ಹಾಗೂ ವಿ.ಸೀ. ಯವರಿಗೆ ಬೆಳೆದು ಬಂದ ಅಪೂರ್ವವೆನಿಸುವ ಸ್ನೇಹಸಂಬಂಧದ ವಿಚಾರ ಎರಡು ಮಾತು ಬರೆಯುವುದು ಪ್ರಸ್ತುತವೆಂದು ನನಗನಿಸುತ್ತಿದೆ.

ಸಂಜೀವರಾಯರು ಸಾಹಿತಿಯೇನಾಗಿರಲಿಲ್ಲ. ಸಂಗೀತ ರಸಿಕರೂ ಆಗಿರಲಿಲ್ಲ. ಅವರೆ ಅವರು ಗಾಂಧೀಜೀಯವರಿಂದ ಪ್ರಭಾವಿತರಾದವರು. ತನ್ನ ಜೀವಮಾನದುದ್ದಕ್ಕೂ ಕಾಂಗ್ರೆಸಿಗರಾಗಿ ಉಳಿದವರು. ಶಿಕ್ಷಣದ ಕುರಿತು ತೀವ್ರ ಕಳಕಳಿಯಿದ್ದ ಅವರು ಆಧುನಿಕ ಮೂಡಬಿದಿರೆಯ ನಿರ್ಮಾಪಕರೆಂದೂ ಕೀರ್ತಿ ಗಳಿಸಿದ್ದಾರೆ. ಮೂಡಬಿದಿರೆಯ ಸಾಮಾಜಿಕ ಚಟುವಟಿಕೆಗಳ ಕೇಂದ್ರವಾಗಿರುವ ಅಲ್ಲಿನ ಸಮಾಜ ಮಂದಿರ ಹಾಗೂ ಮಣಿಪಾಲ ಅಕಾಡೆಮಿಯ ನೆರವಿನಿಂದ ರಚಿಸಲ್ಪಟ್ಟ ಮಹಾವೀರ ಕಾಲೇಜು ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರು ಅವರು. ಸಂಜೀವರಾಯರಿಗೂ ವಿ.ಸೀ. ಯವರಿಗೂ ಬೆಳೆದು ಬಂದ ಸ್ನೇಹ ಸಂಬಂಧದಂತೆಯೇ ಶಿವರಾಮ ಕಾರಂತರ ಹಾಗೂ ಸಂಜೀವರಾಯರ ಸ್ನೇಹವೂ ಒಂದು ಅಪೂರ್ವ ಸಂಬಂಧ. ಶಿವರಾಮ ಕಾರಂತರು ೧೯೬೨ರಲ್ಲಿ ಪ್ರಕಟವಾದ ಅವರ 'ಆಳ ನಿರಾಳ' ಕಾದಂಬರಿಯನ್ನು ಮೂಡಬಿದಿರೆ ಸಂಜೀವರಾಯರಿಗೆ ಅರ್ಪಿಸಿದ್ದೆ ಈ ಸಂಬಂಧದ ಮಹತ್ವವನ್ನು ಸೂಚಿಸುತ್ತದೆ. ತೀರ ಸಾಮಾನ್ಯರಂತೆ ಜೀವನ ನಡೆಸುತ್ತಿದ್ದ ಸಂಜೀವರಾಯರ ಆದರ್ಶವ್ಯಕ್ತಿತ್ವದಲ್ಲಿ ಒಡೆದು ಕಾಣುತ್ತಿದ್ದುದು ಅವರ ಸಾಮಾಜಿಕ ಕಳಕಳಿ ಹಾಗೂ ತನ್ನ ಸ್ವಂತ ಸುಖ ಸೌಕರ್ಯಗಳನ್ನು ಕಡೆಗಣಿಸಿಯೂ ಇತರರನ್ನು ಅರಿತುಕೊಳ್ಳುವ, ಇತರರ ನೆರವಿಗೆ ಧಾವಿಸುವಂತಹ ಮನೋವೃತ್ತಿ. ಶುದ್ಧ ಖಾದಿಯನ್ನಲ್ಲದೆ ಅವರು ಬೇರೆ ಯಾವ ರೀತಿಯ ಬಟ್ಟೆಯನ್ನೂ ಧರಿಸುತ್ತಿರಲಿಲ್ಲ. ಶ್ರೀಮಂತಿಕೆಯ ಯಾವ ಆಡಂಬರವನ್ನೂ ತೋರಿಸದ ಅವರ ಮುಂಬಯಿಯ ಮಾತುಂಗಾ ವಿಭಾಗದ ಮೂರು ಕೋಣೆಗಳ ಮನೆಯಲ್ಲಿ ಎದ್ದು ಕಾಣುತ್ತಿದ್ದುದು ಒಂದು ಗಾಂಧೀಜೀಯ ಭಾವ ಚಿತ್ರ ಮಾತ್ರ. ಸ್ವತಃ ಸಾಹಿತಿಯಾಗಿರಲಿಲ್ಲವಾದರೂ ಮುಂಬಯಿಯ ಕರ್ನಾಟಕ ಸಂಘದ ಹಿರಿಯ ಪದಾಧಿಕಾರಿಯಾಗಿದ್ದುದರಿಂದ ಕನ್ನಡದ ಹಿರಿಯ ಸಾಹಿತಿಗಳ ಸಂಬಂಧ ಅವರಿಗೆ ಬಂದುದರಲ್ಲಿ ಆಶ್ಚರ್ಯವೇನೂ ಇಲ್ಲವಾದರೂ ಶಿವರಾಮ ಕಾರಂತರು ಹಾಗೂ ವಿ.ಸೀ. ಇವರಿಬ್ಬರ ಬಗೆಗೆ ಅವರು ತೋರಿಸುತ್ತಿದ್ದ ಸ್ನೇಹ, ಗೌರವಗಳು ವಿಶಿಷ್ಟ ರೀತಿಯವಾಗಿತ್ತೆಂದು ದೀರ್ಘಕಾಲ ಅವರ ಆತ್ಮೀಯತೆಯ ಲಾಭ ಪಡೆದಿದ್ದ ನನಗೆ ಚೆನ್ನಾಗಿ ತಿಳಿದಿದೆ. ಇದಕ್ಕೆ ಕಾರಣವೇನಿರಬಹುದೆಂದು ನಾನು ಯೋಚಿಸಿದ್ದೂ ಇದೆ. ನನ್ನ ತಿಳಿವಳಿಕೆಯಂತೆ ಸಂಜೀವರಾಯರಿಗೆ ವಿ.ಸೀ. ಯವರ ಪರಿಚಯವಾದದ್ದು ಪ್ರಾಯಶಃ ಮೂಡಬಿದಿರೆಯಲ್ಲಿ. ಮೂಡಬಿದಿರೆಯ ಸಮಾಜ ಮಂದಿರದಲ್ಲಿ ನವರಾತ್ರಿಯ ಸಾಂಸ್ಕೃತಿಕ ಹಬ್ಬಕ್ಕೆ ಕನ್ನಡದ ಪ್ರಮುಖ ಸಾಹಿತಿಗಳನ್ನು ಕರೆಸುವ ಸಂಪ್ರದಾಯ ಬೆಳೆದು ಬಂದಿತ್ತು. ಹೀಗೆ ಮೂಡಿದ ಪರಿಚಯದಲ್ಲೆ ಸಂಜೀವರಾಯರು ವಿ.ಸೀ. ಯವರ ಕುರಿತು ವಿಶಿಷ್ಟವೆನಿಸುವ ಗೌರವವನ್ನು ಬೆಳೆಸಿಕೊಂಡದ್ದು ಎಂದು ನನ್ನ ತಿಳಿವಳಿಕೆ. ಮುಂದೆ ಅವರು ಮುಂಬಯಿಯ ಸಾಹಿತ್ಯಕ ಸಭೆ ಸಮಾರಂಭಗಳಿಗೆಂದು ಬಂದಾಗಲೆಲ್ಲ ಸಂಜೀವರಾಯರ ಸನ್ಮಾನ್ಯ ಅತಿಥಿ. ಮುಂಬಯಿಗೆ ಬಂದ ಈ ಸನ್ಮಾನ್ಯ ಅತಿಥಿಯನ್ನು ಯಾವ ರೀತಿ ಗೌರವಿಸಬೇಕೆಂಬುದೇ

ಅವರ ಚಿಂತೆ. ತಾನು ಖಾದಿಯನ್ನೆ ಧರಿಸುತ್ತಿದ್ದುದರಿಂದ ಅವರಿಗೆ ಬೇರೆ ರೀತಿಯ ಬಟ್ಟೆಗಳ ಬಗ್ಗೆ ಪರಿಚಯವಾಗಲೀ ಆಸಕ್ತಿಯಾಗಲೀ ಇರಲಿಲ್ಲ. ಆದರೆ ವಿ.ಸೀ. ಯವರು ತನ್ನ ಪಂಚೆ ರುಮಾಲುಗಳ ಬಗೆಗೆ ತೋರಿಸುತ್ತಿದ್ದ ಆಸಕ್ತಿಯನ್ನು ಗಮನಿಸಿದ್ದ ಅವರು ನನ್ನೊಡನೆ ವಿ.ಸೀ. ಯವರಿಗೆ ಯಾವ ರೀತಿಯ ಪಂಚೆಯ ಜೋಡಿಯನ್ನು ಕೊಡುವುದು ಸೂಕ್ತ ಎಂದು ಚರ್ಚಿಸಿದ್ದಿದೆ. ಗಾಂಧೀಜಿಯವರ ಹುಟ್ಟು ದಿನವೂ ವಿ.ಸೀ. ಯವರ ಹುಟ್ಟು ದಿನವೂ ಒಂದೇ ಎಂದು ಸಂಜೀವರಾಯರಿಗೆ ತಿಳಿದಿತ್ತು. ಅವರಿಬ್ಬರ ಅಪೂರ್ವ ಸ್ನೇಹಕ್ಕೆ ಇದೂ ಒಂದು ಕಾರಣವೇ ಎಂಬ ಆಲೋಚನೆ ನನಗೆ ಬಂದದ್ದೂ ಇದೆ. ಸಂಜೀವರಾಯರು ವಿ.ಸೀ. ಯವರ ಜನ್ಮದಿನದಂದು ಮುಂಬಯಿಯಲ್ಲಷ್ಟೇ ಅಲ್ಲ, ಅವರು ಬೆಂಗಳೂರಿನಲ್ಲಿರುತ್ತಿದ್ದಾಗಲೂ ತನ್ನ ಬಂಧುವಿನ ಮೂಲಕ ಶುಭಾಶಯ ತಿಳಿಸಿ ಗೌರವ ಅರ್ಪಿಸಲು ಕೊಡುತ್ತಿದ್ದ ಸೂಚನೆಗಳ ಬಗ್ಗೆ ನನಗೆ ತಿಳಿದಿದೆ.

ವಿ.ಸೀ. ಯವರು ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಪ್ರತಿಭೆಯಿಂದ ಮೆರೆದ ಹಿರಿಯರಂತೆಯೇ ಅರ್ಥಶಾಸ್ತ್ರದ ಘನ ವಿದ್ವಾಂಸರೆಂದೂ ಸಂಜೀವರಾಯರಿಗೆ ತಿಳಿದಿತ್ತು. ಒಮ್ಮೆ ವಿ.ಸೀ. ಯವರು ಮುಂಬಯಿಗೆ ಬಂದಿದ್ದ ಸಂದರ್ಭದಲ್ಲಿ ಸಂಜೀವರಾಯರ ಮನೆಯಲ್ಲಿ ಸೋವಿಯೆತ್ ರಷ್ಯಾದಿಂದ ಚಿನ್ನ ತರಿಸಿಕೊಂಡು ನಮ್ಮ ಆರ್ಥಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರಬಹುದಾದ ಚಿನ್ನದ ನಿಧಿಯನ್ನು ಹೆಚ್ಚಿಸಿಕೊಳ್ಳುವ ವಿಚಾರ ಚರ್ಚೆ ನಡೆಸಿದ್ದು ನನಗೆ ನೆನಪಾಗುತ್ತಿದೆ. ವಿ.ಸೀ. ಯವರ ಈ ವಿಚಾರದ ಕುರಿತ ಆಸಕ್ತಿ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆಯುವ ತನಕವೂ ಮುಂದುವರಿದಿತ್ತು.

ವಿ.ಸೀ. ಯವರನ್ನು ಯಾವ ರೀತಿ ಉಪಚರಿಸಿದರೂ ಕಡಿಮೆಯೇ ಎಂದು ತಿಳಿದಿದ್ದ ಸಂಜೀವರಾಯರಿಗೆ ವಿ.ಸೀ. ಯವರ ಸಂಗೀತ ಪ್ರೀತಿಯ ಬಗ್ಗೆ ತಿಳಿದಿತ್ತು. ವಿ.ಸೀ. ಯವರು ಮುಂಬಯಿಯಲ್ಲಿದ್ದಾಗ ಪ್ರಸಿದ್ಧ ಷಣ್ಮುಖಾನಂದ ಸಭಾಗೃಹದಲ್ಲಿ ಬಡೇ ಗುಲಾಂ ಅಲಿ ಖಾನ್ ಅವರ ಸಂಗೀತ ಕಾರ್ಯಕ್ರಮದ ಏರ್ಪಾಡಾಗಿತ್ತು. ತಾನು ಸ್ವತಃ ಸಂಗೀತ ರಸಿಕನಲ್ಲದಿದ್ದರೂ ಸಂಜೀವರಾಯರು ಆ ಕಾರ್ಯಕ್ರಮಕ್ಕೆ ಒಳ್ಳೆಯ ಎರಡು ಟಿಕೇಟು ತರಿಸಿ ಅವರ ಜತೆಗೆಂದು ನನ್ನನ್ನೂ ಆ ಕಾರ್ಯಕ್ರಮಕ್ಕೆ ಹೋಗುವಂತೆ ಮಾಡಿದ ಸನ್ನಿವೇಶ ನನಗೆ ನೆನಪಾಗುತ್ತಿದೆ.

ಶಿವರಾಮ ಕಾರಂತರಿಗೆ ಖ್ಯಾತ ಕಲಾವಿದ ಕಟ್ಟಿಂಗೇರಿ ಕೃಷ್ಣ ಹೆಬ್ಬಾರರು ತೀರ ಆತ್ಮೀಯರಾಗಿದ್ದವರು. ಕಾರಂತರು, ಸಂಜೀವರಾಯರು ಹಾಗೂ ಕಲಾವಿದ ಹೆಬ್ಬಾರರದು ಒಂದು ಸ್ನೇಹ ವರ್ತುಲ. ಕಾರಂತರು ತನ್ನ ಯಕ್ಷಗಾನ ಬ್ಯಾಲೆ ಪ್ರಯೋಗಕ್ಕೆ ಮುಂಬಯಿಯನ್ನೆ ಮೊದಲು ಆರಿಸಿಕೊಂಡುದೂ ಸಂಜೀವರಾಯರ ಅಭಿಮಾನ ಹಾಗೂ ಸಂಘಟನಾ ಶಕ್ತಿಗಳನ್ನು ತಿಳಿದೇ. ಈ ಪ್ರಯೋಗಕ್ಕಾಗಿಯೇ ಜನ್ಮತಾಳಿದ ಸಂಸ್ಥೆ ಯಕ್ಷಗಾನ ಪುನರುಜ್ಜೀವನ ಸಮಿತಿ.- ಹೆಬ್ಬಾರರು ಅಧ್ಯಕ್ಷರಾಗಿದ್ದ ಈ ಸಮಿತಿಗೆ ಗೌರವ ಕಾರ್ಯದರ್ಶಿಯಾಗಿದ್ದವರು ಸಂಜೀವರಾಯರು. ವಿ.ಸೀ. ಯವರ ಸಂಗೀತಾಸಕ್ತಿಯಂತೆಯೇ ಅವರ ಕಲಾಭಿಮಾನದ ತಿಳಿವಳಿಕೆ ಇದ್ದ ಸಂಜೀವರಾಯರು ವಿ.ಸೀ.ಯವರು ಮುಂಬಯಿಗೆ ಬಂದಾಗಲೆಲ್ಲ ಕಲಾವಿದ ಹೆಬ್ಬಾರರನ್ನು ಕಾಣುವ, ಸ್ಟುಡಿಯೋ ಸಂದರ್ಶಿಸುವ,

ಕಲಾಕೃತಿಗಳನ್ನು ಕಾಣುವ ಹಾಗೂ ವಿ.ಸೀ. ಮತ್ತು ಹೆಬ್ಬಾರರ ಚರ್ಚೆಗಳಲ್ಲಿ ಭಾಗವಹಿಸುವ ಸ್ನೇಹಸೇತುವೆಯಂತಿದ್ದವರು. ಹೆಬ್ಬಾರರ ರೇಖಾಚಿತ್ರವಿದ್ದ ನನ್ನ ಮಗಳ ಮದುವೆಯ ಆಮಂತ್ರಣ ಪತ್ರಿಕೆಯನ್ನು ನೋಡಿ ಆಶೀರ್ವಾದದ ಎರಡು ಮಾತು ಬರೆದಿದ್ದ ವಿ.ಸೀ. ಯವರ ಪತ್ರ ಅವರ 'ಮನೆ ತುಂಬಿಸುವ ಹಾಡಿ'ನಂತೆಯೇ ಹೃದಯಸ್ಪರ್ಶಿಯಾಗಿತ್ತು.

ಸಂಜೀವರಾಯರು ವಿ.ಸೀ.ಯವರ ಸಾಹಿತ್ಯಕ ಪ್ರತಿಭೆಗೂ ಸ್ನೇಹಮಯ ವ್ಯಕ್ತಿತ್ವಕ್ಕೂ ಕೊಡುತ್ತಿದ್ದ ಗೌರವವನ್ನು ನೆನೆಸಿಕೊಂಡಾಗ ಇವರಿಬ್ಬರ ಆತ್ಮೀಯ ಸಂಬಂಧ ಬೆಳೆದು ಬಂದ ಬಗೆಗೆ ಕುತೂಹಲ ಹಾಗೂ ಆಶ್ಚರ್ಯ ಮೂಡುತ್ತದೆ. ವಿ.ಸೀ.ಯವರ ಬೆಂಗಳೂರಿನ ಚಾಮರಾಜಪೇಟೆಯ ಮನೆಯಲ್ಲಿ ನಾನು ಒಮ್ಮೆ ವಿ.ಸೀ.ಯವರನ್ನು ಕಂಡಾಗಲೂ ಅವರು ಮೊದಲು ವಿಚಾರಿಸಿದ್ದು ಸಂಜೀವರಾಯರ ಕುರಿತೆ. ವಿ.ಸೀ.ಯವರು ತನ್ನ ಜೀವಿತಾವಧಿಯಲ್ಲಿ ನಾಡನ್ನೆಲ್ಲ ಸುತ್ತಿದವರು. ಸಾವಿರಾರು ಜನರ ಸಂಪರ್ಕವನ್ನು ತಂದುಕೊಂಡವರು. ಆದರೆ ಶಿವರಾಮ ಕಾರಂತರನ್ನೂ, ವಿ.ಸೀ.ಯವರನ್ನೂ ಒಂದು ವಿಶಿಷ್ಟವೆನಿಸುವ ಗೌರವದಿಂದ ನೋಡಿದ್ದ ಸಂಜೀವರಾಯರಿಗೂ ವಿ.ಸೀ.ಯವರಿಗೂ ಬೆಳೆದು ಬಂದಿದ್ದ ಆತ್ಮೀಯತೆ ವಿ.ಸೀ. ಯವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ನೆನಪಿಸಬೇಕಾದ ಸಂಗತಿಯೆಂದೇ ನನಗೆ ತೋರುತ್ತಿದೆ.

ನನ್ನ ಕವಿ–ಕಾವ್ಯ ಗುರು

"ಹೊಸಗನ್ನಡ ಕವಿತೆಗಳನ್ನು ಹೇಗೆ ಓದುವುದೆಂದು ನಮಗೆ ಕಲಿಸಿದವರು ಶ್ರೀ ವಿ. ಸೀತಾರಾಮಯ್ಯನವರು. ಅವರು ಕಲಿಸಿದ್ದನ್ನು ಅನುಸರಿಸಿಕೊಂಡು ಹೋದಾಗ, ನನಗೂ ಕನ್ನಡದಲ್ಲಿ 'ಕವಿತೆ ಬರೆಯಬೇಕು' ಎಂಬ ಆಸೆಯನ್ನು ಉಂಟುಮಾಡಿದ್ದು 'ಶ್ರೀನಿವಾಸ' ಅವರ 'ಅರುಣ'ದೊಳಗಿನ 'ಸ್ಥಳಗಳ ಹೆಸರು'. 'ಪದ್ಯ ಬರೆಯು'ವ ಅಷ್ಟಕ್ಕೇ ತೃಪ್ತನಾಗಬೇಡ, ಸಾಹಿತ್ಯದ ಇತರ ಪ್ರಕಾರಗಳನ್ನೂ ಬರೆಯಲು ಯತ್ನಿಸು. ಬರೆಯುವುದರ ಜೊತೆಯಲ್ಲೇ ಚೆನ್ನಾಗಿ ಓದುವುದನ್ನೂ ಇರಿಸಿಕೊ. ಬರೀ ಕನ್ನಡ, ಇಂಗ್ಲಿಷ್ ಎಂದುಕೊಂಡರೆ ಸಾಲದು; ಜಗತ್ತಿನಲ್ಲಿರುವ ಎಲ್ಲ ಸಾಹಿತ್ಯಗಳ ಪರಿಚಯವನ್ನೂ ಪಡೆಯಬೇಕು, ಎಂಬ ಅರ್ಥಬರುವಂತೆ ಶ್ರೀ ವಿ.ಸೀ. ಅವರು ಆ ಆರಂಭದ ದಿವಸಗಳಲ್ಲಿ ನನಗೆ ಹೇಳದೆ ಇದ್ದಿದ್ದರೆ, ಅನಂತರ ನಾನು ಬರೆದ ಬಾಲಿಶವಾದ ಬರಹಗಳನ್ನು ಸಹನೆಯಿಂದ ಓದಿ ತಿದ್ದದೆ ಹೋಗಿದ್ದರೆ, ಮುಂದೆ ನನ್ನ ಬೆಳವಣಿಗೆಯನ್ನು ನೋಡಿ ಆತ್ಮೀಯವಾದ ಮೆಚ್ಚುಗೆಯ ಮಾತುಗಳನ್ನು ಹೇಳದೆ ಹೋಗಿದ್ದರೆ – ನಾನು ಈಗ ಓದಿಕೊಂಡಿರುವಷ್ಟನ್ನು ಓದುತ್ತಿದ್ದೆನೋ ಇಲ್ಲವೋ! ಈಗ ಬರೆದಿರುವಷ್ಟನ್ನು ಬರೆಯುತ್ತಿದ್ದೆನೋ ಇಲ್ಲವೋ! ವಿ.ಸೀ. ಅವರಿಗೆ ನಾನು ತರಗತಿಯಲ್ಲಿ ವಿದ್ಯಾರ್ಥಿಯಾಗದೆ ಹೋಗಿದ್ದರೂ ಅವರ ಜೊತೆಯಲ್ಲಿ ಇದ್ದು ಅನೇಕ ಪಾಠಗಳನ್ನು ಕಲಿತಿದ್ದೇನೆ."

ಜಿ. ಪಿ. ರಾಜರತ್ನಂ

'ವಿ.ಸೀ.–ಒಳ್ಳೆ' ಪು. ೩೨೧–೨೨

ನೆನಪಿನಲ್ಲಿ ನಿಂತ ಹಿರಿಯರು

ಎಚ್. ವೈ. ಶಾರದಾಪ್ರಸಾದ್

ವಿ. ಸೀ. ನನಗೆ ಪಾಠ ಹೇಳಿದ ಗುರುಗಳು; ನಮ್ಮ ತಂದೆಯವರ ಹತ್ತಿರದ ಮಿತ್ರರು; ಹೊಸಕನ್ನಡಕ್ಕೆ ಶಕ್ತಿ ತುಂಬಿದ ಲೇಖಕರಲ್ಲೊಬ್ಬರು. ಈ ರೀತಿ ಅವರ ಬಗ್ಗೆ ನನ್ನ ಗೌರವ, ಮಮತೆ, ಕೃತಜ್ಞತೆಗಳಿಗೆ ಮೂರು ಕಾರಣ. ಅವರನ್ನು ನೆನಸಿಕೊಂಡಾಗಲೆಲ್ಲ ಅವರ ಹಿರಿಮೆ, ವಾತ್ಸಲ್ಯ, ವಿಚಾರಗಾಂಭೀರ್ಯ, ಹೃದಯ ವೈಶಾಲ್ಯ, ವಿಸ್ಮಯ ತರಿಸುವಂಥ ಬಹುಮುಖ ಪಾಂಡಿತ್ಯ, ಜ್ಞಾನದಾಹ, ಸೌಂದರ್ಯ ಪ್ರಜ್ಞೆ ಮನಃಪಟಲವನ್ನು ತುಂಬುತ್ತವೆ. ಅಂತೆಯೇ ಅವರ ಸರಳವಾದ, ಚೊಕ್ಕಟವಾದ, ಬಿಳಿಬಣ್ಣಕ್ಕೆ ಪ್ರಾಧಾನ್ಯ ಕೊಟ್ಟ ಪೋಷಾಕೂ ಕಣ್ಣ ಮುಂದೆ ನಿಲ್ಲುತ್ತದೆ.

ಒಂದೊಂದು ಸಲ ನನಗೆ ಅನಿಸಿದ್ದುಂಟು ಅವರು ನಮ್ಮಲ್ಲಿ ಹುಟ್ಟಿದ್ದು ಕನ್ನಡದ ಅದೃಷ್ಟ, ಅವರ ದುರದೃಷ್ಟ ಎಂದು. ಇಂತಹ ವೈಚಾರಿಕ ಪ್ರತಿಭಾವಂತರು ವಿದೇಶದಲ್ಲಿ ಹುಟ್ಟಿದ್ದರೆ ದೊಡ್ಡ ಶೋಧನಾ ಸಂಸ್ಥೆಯ ಅಧ್ಯಕ್ಷರಾಗಿರುತ್ತಿದ್ದರು, ರಾಷ್ಟ್ರದ ಪತ್ರಿಕೆಗಳೆಲ್ಲ ಅವರನ್ನು **polymath** ಎಂಬುದಾಗಿ ಶ್ಲಾಘನೆ ಮಾಡುತ್ತಿದ್ದುವು; ನಾವೋ ನಲವತ್ತು ವರ್ಷ ದುಡಿಸಿ ಅವರಿಗೆ ಒಂದು ಪ್ರಾಧ್ಯಾಪಕಗಿರಿಯನ್ನೂ ಕೊಡದೆ ಹೋದೆವು; ನಿವೃತ್ತರಾದ ಮೇಲೂ ಆರ್ಥಿಕ ಚಿಂತೆಯಲ್ಲಿ ಮುಳುಗುವಂತೆ ಮಾಡಿದೆವು.

ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ನಲವತ್ತರ ದಶಕದ ಆದಿಭಾಗದಲ್ಲಿ ಅವರ ವಿದ್ಯಾರ್ಥಿಯಾಗುವ ಸುಯೋಗ ನನಗೆ ಒದಗಿತ್ತು. ಆ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ ಲೆಕ್ಚರರ್‌ಗಳು ಕುಳಿತುಕೊಳ್ಳುತ್ತಿದ್ದ Common room ಒಂದರಲ್ಲಿಯೇ ಇಡೀ ಕೆಲವು ವಿಶ್ವವಿದ್ಯಾಲಯಗಳಿಗೆ ಹೆಸರು ತರಬಹುದಾದಂಥ ಪಂಡಿತರು ಅನೇಕರಿದ್ದರು. ಅವರಲ್ಲಿ ವಿ.ಸೀ. ಅವರದೇ ಒಂದು ವಿಶಿಷ್ಟ ಸ್ಥಾನ. ಮಿಕ್ಕವರು ತಮ್ಮ ತಮ್ಮ ವಿಷಯಗಳಲ್ಲಿ ಮಾತ್ರ ನಿಷ್ಣಾತರಾಗಿದ್ದರೆ ಇವರ ಜ್ಞಾನ ಹತ್ತಾರು ಶಾಸ್ತ್ರಗಳಿಗೆ ಹಬ್ಬಿದಂತಹದು. ಪರೀಕ್ಷೆಯಲ್ಲಿ ಉತ್ತೀರ್ಣರಾಗಿಸಲು ಪಾಠಹೇಳುವ ಪ್ರವೃತ್ತಿಯಲ್ಲ ಅವರದು, ವಿದ್ಯಾರ್ಥಿ ತಕ್ಕ ಮನೋಬಲ ಆತ್ಮಬಲ ಪಡೆದುಕೊಂಡು ಸಾರ್ಥಕ ಜೀವನ ನಡೆಸಲು ಸಹಾಯಮಾಡುವುದು ಉಪಾಧ್ಯಾಯನ ಕರ್ತವ್ಯ ಎಂಬುದು ಅವರ ಅಭಿಪ್ರಾಯವೆಂದು ತೋರುತ್ತಿತ್ತು. ಅವರು ಕಾಳಿದಾಸನ ಶಾಕುಂತಲ ಪಾಠ ಮಾಡಿದ್ದು ನೆನಪಿಗೆ ಬರುತ್ತದೆ. ಬಸವಪ್ಪಶಾಸ್ತ್ರಿಗಳ

ಅನುವಾದ. ಮೂಲದ ಸೊಗಸು ಅನುವಾದಿತ ಪದ್ಯಗಳಲ್ಲಿ ಸೂಸುತ್ತಿರಲಿಲ್ಲ. ಆದರೆ ವಿ.ಸೀ. ಅವರು ಕಾಳಿದಾಸನ ವೈಶಿಷ್ಟ್ಯವನ್ನು ಎತ್ತಿ ಕಾಣಿಸಿದ್ದಲ್ಲದೆ ಶಾಕುಂತಲವು ಹೇಗೆ ಒಂದು ಇಡೀ ಕಾಲದ ಕನ್ನಡಿಯಾಗಿತ್ತು ಎಂದು ತೋರಿಸಿದರು. ಇವತ್ತು ಇದೇ ಹೇಳುತ್ತಾರೆ ಎಂದು ಊಹಿಸುವಂತಿರಲಿಲ್ಲ ವಿ.ಸೀ. ತರಗತಿಗಳು. ಒಂದೊಂದು ದಿನ ಒಂದೊಂದು ಹೊಸ ಕುತೂಹಲವಿರುತ್ತಿತ್ತು. His classes were unpredictable but his sustained eloquence was predictable. ಒಂದು ದಿನ ಜರ್ಮನ್ ಕವಿ ಗಯ್ಥೆಯ ಮೇಲೆ ಏಕೆ ಶಾಕುಂತಲ ಅಷ್ಟು ಪ್ರಭಾವ ಉಂಟುಮಾಡಿತು ಎಂಬುದರ ಬಗ್ಗೆ ಮಾತಾಡುವರು. ಹಾಗೆ ಮಾತಾಡುವಾಗ ಇಡೀ ಭಾರತೀಯ ಮತ್ತು ಐರೋಪ್ಯ ಸಾಹಿತ್ಯದ ತುಲನ ಮಾಡುವರು. ಇನ್ನೊಂದು ದಿನ ವ್ಯಕ್ತಿ–ನಿಸರ್ಗಗಳ ನಿರೂಪಣೆ ಕಾಳಿದಾಸನಲ್ಲಿ ಹೇಗೆ ಬಂದಿದೆ ಎಂಬುದನ್ನು ತೋರಿಸುವರು. ಶಕುಂತಲೆ ಕಣ್ವಾಶ್ರಮದಿಂದ ಹೊರಟ ದೃಶ್ಯ ಪಾಠ ಮಾಡಿದಾಗ ಮನಸ್ಸು ಎಷ್ಟು ತುಂಬಿಬಂತೆಂದರೆ ಇವರೇ ಅಲ್ಲವೆ ಮಗಳನ್ನು ಕಳಿಸಿಕೊಡುವ ಹಾಡು ಬರೆದ ಕವಿ ಎಂಬುದು ನೆನಪಾಗುತ್ತಿತ್ತು. ದುಷ್ಯಂತನ ಆಸ್ಥಾನದ ದೃಶ್ಯ ಬಂದಾಗ ದೊರೆ–ಪ್ರಜೆಗಳ ಸಂಬಂಧ ಚರ್ಚಿಸುತ್ತ ಬೇರೆ ಬೇರೆ ಕಾಲ, ರಾಷ್ಟ್ರಗಳಲ್ಲಿ ಯಾವ ಯಾವ ಕಲ್ಪನೆಗಳಿದ್ದವು ಎಂದು ಅವರು ವಿವರಿಸುತ್ತಿದ್ದರೆ ನಾವು ಇರುವುದು ಕನ್ನಡ ಸಾಹಿತ್ಯದ ತರಗತಿಯೋ ರಾಜ್ಯಶಾಸ್ತ್ರದ ತರಗತಿಯೋ ಎಂಬ ಭ್ರಮೆ ಬರುತ್ತಿತ್ತು. ಕೆಲವು ವಿದ್ಯಾರ್ಥಿಗಳಿಗೆ ಇದರಲ್ಲಿ ತಾಳ್ಮೆಯಿರುತ್ತಿರಲಿಲ್ಲ. ಎಲ್ಲಿಂದ ಎಲ್ಲಿಗೋ ಹಾರುತ್ತಾರೆ, ಇವೆಲ್ಲ ಪರೀಕ್ಷೆಯಲ್ಲಿ ಬರುತ್ತವೆಯೇ ಎಂದು ಅವರ ಪ್ರಶ್ನೆ. ಆದರೆ ವಿ.ಸೀ. ಅವರಿಗೆ ಪಾಠ ಹೇಳುವ ವೇದಿಕೆಯ ಮೇಲೆ ನಿಂತಾಗಲೂ ವಿಚಾರಗಳಲ್ಲಿ ವಿದ್ಯಾರ್ಥಿಗಳ ಆಸೆ ಕೆರಳಿಸಬೇಕೆಂಬ ಹಂಬಲ. "ಈ ಮಾತು ಬರ್ತದೆ ನೋಡಿ" ಎಂದು ಹೊಸವೆಷ್ಟೋ ಸಂಬಂಧಗಳನ್ನು ಎತ್ತಿ ತೋರಿಸುವುದರಲ್ಲಿ ಅವರಿಗೆ ಸಂತೋಷ. ಹಾಗೆ ಮಾಡುವಾಗ ಕನ್ನಡದಿಂದ, ಇಂಗ್ಲಿಷಿಂದ, ಸಂಸ್ಕೃತದಿಂದ ಉದಾಹರಣೆಗಳ ಸುರಿಮಳೆಯಾಗುತ್ತಿತ್ತು. ಕನ್ನಡವನ್ನು ಇಂಗ್ಲಿಷಿನಲ್ಲಿ ಪಾಠಮಾಡುವ ಮೇಷ್ಟರು ಎಂಬ ಕೀರ್ತಿ ವಿ.ಸೀ. ಅವರದಾಗಿತ್ತು. ನಾವು ಹದಿನೆಂಟು–ಹತ್ತೊಂಬತ್ತರ ಪಡ್ಡೆ ಹುಡುಗರಾಗಿರದೆ ಇನ್ನಷ್ಟು ಪ್ರಾಯದವರಾಗಿದ್ದರೆ ಅವರ ಬೋಧೆಯಿಂದ ಹೆಚ್ಚು ಪ್ರಯೋಜನ ಪಡೆಯುತ್ತಿದ್ದೆವೇನೋ. ಆದರೆ ಅವರ ಭಾಷೆಯ ಸೊಗಸನ್ನು ಅರ್ಥಮಾಡಿಕೊಂಡು ಮೆಚ್ಚುವ ಶಕ್ತಿಯೇನೋ ಇತ್ತು. ಅವರಂತೂ ನಮ್ಮ ಮಾನಸಿಕ ಮಟ್ಟವನ್ನು ಕಡೆಗಣಿಸಿ ಮಾತಾಡುತ್ತಿರಲಿಲ್ಲ. ಸಮಾನ ಸ್ಕಂಧರಂತೆ ಪರಿಗಣಿಸುತ್ತಿದ್ದರು. ಸಾಹಿತ್ಯ ಸೌಂದರ್ಯದ ಅನ್ವೇಷಣೆಯಲ್ಲಿ ಸಹಭಾಗಿಗಳು ಎಂಬಂತೆ ನೋಡಿಕೊಳ್ಳುತ್ತಿದ್ದರು. ಯಾವ ವಿದ್ಯಾರ್ಥಿಯನ್ನೂ ಅವರು ಏಕವಚನದಲ್ಲಿ ಮಾತಾಡಿಸಿದ್ದು ಕಾಣೆ. ಯಾರಲ್ಲಾದರೂ ಸ್ವಲ್ಪ ವಿಶೇಷ ಗುಣ ಕಂಡಾಗ ಅವರ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸುತ್ತಿದ್ದರು, ಪ್ರೋತ್ಸಾಹಿಸುತ್ತಿದ್ದರು.

ಮೊದಲೇ ಹೇಳಿದಂತೆ ಅವರು ನನ್ನ ತಂದೆ ಎಚ್. ಯೋಗನರಸಿಂಹಂರ ಹತ್ತಿರದ ಮಿತ್ರರಾಗಿದ್ದರು. ನನ್ನ ತಂದೆಗಿಂತ ಒಂದು ವರ್ಷ ಚಿಕ್ಕವರು. ಅದೇ ಹಿರಿಯ ಗುರುಗಳ ಪ್ರಭಾವಕ್ಕೆ ಒಳಗಾಗಿದ್ದವರು, ಸಾಹಿತ್ಯ ಸಂಗೀತಗಳಲ್ಲಿ ಒಲವು ಬೆಳೆಸಿಕೊಂಡವರು. ಎಲೆಯ

ಮರೆಯ ಕಾಯಂತಿದ್ದ ನನ್ನ ತಂದೆಯವರ ಬಗ್ಗೆ ಸುಂದರವಾದ ವ್ಯಕ್ತಿಚಿತ್ರ ಬರೆದು ನಮಗೆ ಉಪಕಾರ ಮಾಡಿದ್ದಾರೆ ವಿ.ಸೀ. ನಾನಿನ್ನೂ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ಅವರ "ಗೀತಗಳು" ಕಂಡಿದ್ದೆ. ಅವರೇ ನನ್ನ ತಂದೆಗೆ ಇತ್ತ ಪ್ರತಿಯಿರಬೇಕು. ಒಂದೆರಡು ಕವಿತೆಗಳ ಹೊರತು ಮಿಕ್ಕವು ಆಗ ನನ್ನ ಅರಿವಿಗೆ ಮೀರಿದ್ದಂಥವು. ಆದರೆ ಪುಸ್ತಕದ ಅಂದ ನನ್ನ ಮನಸ್ಸನ್ನು ಗೆದ್ದಿತ್ತು. ಪುಸ್ತಕವೆಂದರೆ ಹೀಗಿರಬೇಕು ಎನ್ನಿಸಿತ್ತು. ಮುದ್ರಣ, ಸಜ್ಜಾವಟ್ಟಿನಲ್ಲಿ "ಗೀತಗಳು"ವನ್ನು ಸರಿದೂಗುವ ಪುಸ್ತಕ ಈ ಅರವತ್ತು ವರ್ಷಗಳಲ್ಲಿ ಇನ್ನೊಂದು ಬಂದಿಲ್ಲ ಎಂದರೆ ತಪ್ಪಾಗಲಾರದು.

ಆಗಾಗ ವಿ.ಸೀ. ಬೆಂಗಳೂರಲ್ಲಿ ನಮ್ಮ ಮನೆಗೆ ಬರುತ್ತಿದ್ದುದುಂಟು. ನಮ್ಮ ತಂದೆಯವರೂ ಸಂಜೆಯ ಸುತ್ತಾಟಕ್ಕೆ ಹೊರಟಾಗ ಒಂದೆರಡು ಸಲ ಅವರ ಮನೆಗೆ ನನ್ನನ್ನು ಕರೆದುಕೊಂಡು ಹೋದದ್ದುಂಟು. ಅನಂತರ ನಾನು ಅವರ ಕೆಲವು ಪದ್ಯಗಳನ್ನು ಬಾಯಿಪಾಠ ಮಾಡಿದ್ದು, "ಯುಗದಗಲ ಜಗದಗಲ ಎಡರೆದ್ದು ನಿಂತಾವು" ಎಂಬುದು ಹೇಳುವಾಗ ಮೈನವಿರೇಳುತ್ತಿದ್ದುದು ನೆನಪಿಗೆ ಬರುತ್ತದೆ. ಅದೇ ಸಮಯದಲ್ಲಿ ಪರಿಷನ್ಮಂದಿರದಲ್ಲಿ ಅವರ ಭಾಷಣಗಳನ್ನು ಕೇಳಲು ಹೋಗುತ್ತಿದ್ದೆ. ವಾಕ್ಪ್ರವಾಹಕ್ಕೆ ಮಾತ್ರವಲ್ಲದೆ ವಿಚಾರಕ್ಕೆ ಪ್ರಾಮುಖ್ಯ ಕೊಡುತ್ತಿದ್ದ ಶೈಲಿ ಅವರದು. ಅನಂತರ ಮೈಸೂರಲ್ಲಿ ಅವರ ವಿದ್ಯಾರ್ಥಿಯಾದಾಗ ಗೆಳೆಯರ ಮಗ ಎಂಬ ಸಲಿಗೆಯೂ ಇತ್ತು. ನನ್ನ ಬೌದ್ಧಿಕ ಬೆಳವಣಿಗೆಯಲ್ಲಿ ಆಸಕ್ತಿ ತೋರಿಸಿದರು. ನನ್ನಿಂದ 'ಪ್ರಬುದ್ಧ ಕರ್ನಾಟಕ'ಕ್ಕೆ ಲೇಖನ ಬರೆಸಿದ್ದುಂಟು. ನಾಗರಿಕ ವಿಮಾನ ಸಂಚಾರಕ್ಕೆ ಸಂಬಂಧಿಸಿದ್ದು. ಆ ವಿಷಯದ ಮೇಲಿನ ಹತ್ತಾರು ವಿದೇಶೀ ಪತ್ರಿಕೆಗಳ ಲೇಖನಗಳನ್ನು ಕೊಟ್ಟು ಅದನ್ನು ಓದಿ ಆ ಆಧಾರದ ಮೇಲೆ ಬರೆಯೆಂದರು. ಅಂಥ ವಿಷಯಗಳ ಪರಿಚಯ ನಮ್ಮ ಜನಕ್ಕೆ ಆಗಬೇಕಪ್ಪ ಎಂದು ಅವರೆಂದುದು ನೆನಪಾಗುತ್ತದೆ.

ಅರ್ಧ ಶತಮಾನಕ್ಕೂ ಹೆಚ್ಚಿಗೆ ಕನ್ನಡಕ್ಕೆ ಸೇವೆ ಸಲ್ಲಿಸಿದ ಜೀವ ಅವರು. ಕವಿತೆ ಬರೆದರು, ನಾಟಕ ಬರೆದರು. ವಿಮರ್ಶೆ, ಪ್ರಬಂಧ, ವ್ಯಕ್ತಿ ಚಿತ್ರ, ಜೀವನ ಚರಿತ್ರೆ, ಆತ್ಮಕತೆ, ಯಾತ್ರಾವೃತ್ತ ಬರೆದರು. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಕಾನೂನು, ಸಂವಿಧಾನ ಧರ್ಮಶಾಸ್ತ್ರ, ಅಲಂಕಾರ ಶಾಸ್ತ್ರ, ಭಾಷಾಶಾಸ್ತ್ರ, ಸಾಹಿತ್ಯ ಚರಿತ್ರೆ, ಕಲೆ ಇವುಗಳಿಲ್ಲದರ ಮೇಲೆ ಲೇಖನ, ಪುಸ್ತಕ ಬರೆದರು. ಕನ್ನಡದಲ್ಲಿ ಮಾತ್ರವಲ್ಲದೆ ಇಂಗ್ಲಿಷಿನಲ್ಲಿಯೂ ಬರೆದರು. ಇಷ್ಟೊಂದು ವಿಷಯಗಳ ಮೇಲೆ ಇಷ್ಟು ಸ್ವಾರಸ್ಯವಾಗಿ ಅಧಿಕಾರಯುತವಾಗಿ ಅಚ್ಚುಕಟ್ಟಾಗಿ ಬರೆದವರು ಕನ್ನಡದಲ್ಲಿ ಡಿ. ವಿ. ಗುಂಡಪ್ಪನವರು, ಕಾರಂತರು ಮಾತ್ರ ಎನ್ನಬಹುದು.

ನಾನು ಸಾಹಿತ್ಯ ವಿಮರ್ಶಕನಲ್ಲವಾದ್ದರಿಂದ ಅವರ ಕವಿತೆಗಳ ಬಗ್ಗೆ ಮಿಕ್ಕ ರಚನೆಗಳ ಬಗ್ಗೆ ಅಳೆದು ಹೇಳುವ ಸಾಹಸಕ್ಕೆ ಹೋಗುವುದಿಲ್ಲ. ನಾನು ಕಾವ್ಯ ಓದಿಕೊಳ್ಳುವುದು ಆತ್ಮತೃಪ್ತಿಗೆ, ಸಂತೋಷಕ್ಕೆ. ವಿ.ಸೀ. ಅವರ ಕಾವ್ಯಸೃಷ್ಟಿ ಹೆಚ್ಚಿನ ಗಾತ್ರದ್ದಲ್ಲ. ಅವರು Major poet ಆಲ್ಲದಿರಬಹುದು, ಆದರೆ ನಿಜವಾದ ಕವಿ ಹೃದಯ ಅವರದು. ಅವರ ಪದ್ಯಗಳಲ್ಲಿ ಸೌಂದರ್ಯಾನುಭವವಿದೆ, ನಾದಮಾಧುರ್ಯವಿದೆ. ಜೊತೆಗೆ ಜೀವನದ ಅನೇಕ ಸಮಸ್ಯೆಗಳ ಬಗ್ಗೆ ಗಾಢವಾದ ಚಿಂತನೆಯಿದೆ. ಮನಸ್ಸಲ್ಲಿ ನಿಲ್ಲುವಂಥ ಸಾಲುಗಳನ್ನು ಬರೆಯುವ

ಸಾಮರ್ಥ್ಯವಿದೆ. ಆಧುನಿಕ ಜೀವನದ ಪ್ರಶ್ನೆಗಳ ಮೇಲೆ ಆಲೋಚಿಸಿದ್ದರೂ ಛಂದೋ ಬಂಧದಿಂದ ತಮ್ಮನ್ನು ಬಿಡುಗಡೆ ಮಾಡಿಕೊಳ್ಳದ್ದರಿಂದ ಅವರು ಸಾಂಪ್ರದಾಯಿಕರಾಗಿಯೇ ಉಳಿದರು. ಲೋಕಾಯತವಾದಿಗಳ ಪರಿಚಯವಿದ್ದರೂ ಒಟ್ಟಾರೆ ಆಸ್ತಿಕರಾದ್ದರಿಂದ ಬಂಡಾಯಗಾರನೆಂಬ ಬಿರುದು ಅವರಿಗೆ ಸಲ್ಲುವಂತಿರಲಿಲ್ಲ.

ಹೆಚ್ಚು ಮಾತಾಡಬೇಕಾದ್ದು ಅವರ ಗದ್ಯದ ಬಗ್ಗೆ. ಹೊಸಗನ್ನಡ ಗದ್ಯದ ಕರ್ತಾರರ ಪೈಕಿ ಅವರೊಬ್ಬರು. ಗದ್ಯದ ಕೆಲಸ ಬರೇ ಸಾಹಿತ್ಯಕ್ಕೆ ಸಹಾಯವಾಗುವುದು ಮಾತ್ರವಲ್ಲ; ಹತ್ತಾರು ಶಾಸ್ತ್ರಗಳ ಬಗ್ಗೆ, ಜೀವನಕ್ಕೆ ಸಂಬಂಧಿಸಿದ ವ್ಯವಹಾರಗಳ ಬಗ್ಗೆ ಸರಾಗವಾಗಿ, ಸಾರವತ್ತಾಗಿ, ಸಶಕ್ತವಾಗಿ ತಾಯ್ನುಡಿಯಲ್ಲಿ ಬರೆಯಲು ಅನುಕೂಲ ಮಾಡಿಕೊಡುವುದು ಗದ್ಯದ ಪಾತ್ರ. ವಿ.ಸೀ. ಅವರ ಗದ್ಯದಲ್ಲಿ ವಿಶೇಷ ಓಜಸ್ಸಿದೆ, ಖಚಿತತೆಯಿದೆ.

ಕನ್ನಡದಲ್ಲಿ ಎಷ್ಟು ಪ್ರಭಾವಶಾಲಿಯಾಗಿ ಬರೆಯುತ್ತಿದ್ದರೋ ಅದಕ್ಕಿಂತ ಇಂಗ್ಲಿಷಿನಲ್ಲಿ ಇನ್ನೂ ಚೆನ್ನಾಗಿ ಬರೆಯುತ್ತಿದ್ದರು ವಿ.ಸೀ. ಎನ್ನಬಹುದು. ಹಿಂದೂ ಪತ್ರಿಕೆಯಲ್ಲಿ, ಆರ್ಯನ್ ಪಾಥ್ ಮುಂತಾದ ನಿಯತ ಕಾಲಿಕೆಗಳಲ್ಲಿ ವಿ.ಸೀ. ಯವರ ಲೇಖನ, ಗ್ರಂಥ ವಿಮರ್ಶೆಗಳನ್ನು ಓದಿ ಮೆಚ್ಚಿದ ಅನೇಕರನ್ನು ನಾನು ಬಲ್ಲೆ. ದಿಲ್ಲಿಯ ಕೃಷ್ಣ ಚೈತನ್ಯರೆಂಬ ಲೇಖಕ-ಪಂಡಿತರಂತೂ ವಿ.ಸೀ. ಅವರ ಪಾಂಡಿತ್ಯಕ್ಕೆ ಮಾರು ಹೋಗಿದ್ದರು. ಆತನ ಪ್ರತಿಭೆಯೂ ವಿ.ಸೀ. ಅವರ ಪ್ರತಿಭೆಯಂತೆ ಬಹುಮುಖಿಯಾಗಿದ್ದುದರಿಂದ ಅವರಲ್ಲಿ ಬಂಧುಭಾವ ಬೆಳೆದು ಬಂದಿತ್ತು. ವಿ.ಸೀ. ಅವರ ಇಂಗ್ಲಿಷ್ ಬರಹಗಳನ್ನು ಸಂಪಾದಿಸಿ ಪ್ರಕಟಿಸುವ ಕಾರ್ಯವನ್ನು 'ವಿ.ಸೀ. ಸಂಪದ'ದವರು ಕೈಗೊಳ್ಳುತ್ತಾರೆಂದು ಆಶಿಸುತ್ತೇನೆ.

ಬೆಂಗಳೂರಿಗೆ ಹೋದಾಗ ಅವರನ್ನು ತಪ್ಪದೆ ಕಾಣುತ್ತಿದ್ದೆ. ಪುಸ್ತಕ ರಾಶಿಗಳ ನಡುವೆ ಕುಳಿತ ಅವರ ಚಿತ್ರ ಮರೆಯುವಂತಿಲ್ಲ. ಕೊನೆಯ ಎರಡು ಸಲ ಕಂಡಾಗ ಅವರ ಶಕ್ತಿ ಬಹಳ ಉಡುಗಿತ್ತು. ಹಳೆಯ ನೆನಪುಗಳನ್ನು ಆವಾಹನೆ ಮಾಡಿಕೊಳ್ಳುತ್ತ ಅವರ ದನಿ ಗದ್ಗದಿತವಾಯಿತು, ಕಣ್ಣಲ್ಲಿ ನೀರು ತುಂಬಿತ್ತು. ಜೀವನದಲ್ಲಿ ಸುಖಕ್ಕಿಂತ ಕಷ್ಟವನ್ನೇ ಹೆಚ್ಚು ಪಾಲು ಕಂಡಿದ್ದ ಜೀವ. ಆದರೆ ಎಂದೂ ಯಾರನ್ನೂ ದೂರಿದವರಲ್ಲ, ಹಳಿದವರಲ್ಲ, ಯಾರ ಬಗ್ಗೆಯೂ ಸಣ್ಣ ಮಾತಾಡಿದವರಲ್ಲ. ವಿಶಾಲವಾದ ಮನಸ್ಸು, ಆರ್ದ್ರವಾದ, ಸ್ವಚ್ಛವಾದ ಹೃದಯ. ಅಂತಹ ದೊಡ್ಡ ವ್ಯಕ್ತಿಯನ್ನು ನೆನೆಸಿಕೊಳ್ಳುವುದೇ ತೀರ್ಥ ಸ್ನಾನ ಮಾಡಿದಂತೆ.

ಪ್ರಸಾರತಜ್ಞ

ಎಚ್. ಕೆ. ರಂಗನಾಥ್

ಪ್ರಸಾರ ಪ್ರಪಂಚದಲ್ಲಿ ವಿ.ಸೀ. ಅವರ ಪಾತ್ರವನ್ನು ಕುರಿತು ನಾಲ್ಕು ಮಾತು ಬರೆಯಬೇಕೆಂದು ಬೆಂಗಳೂರು ಆಕಾಶವಾಣಿಯಲ್ಲಿ ವಿ.ಸೀ. ಅವರ 'ಇನ್‌ಡೆಕ್ಸ್ ಕಾರ್ಡ್' ತೆಗೆದು ನೋಡಿದೆ. ಪ್ರಸಾರ ಕಲೆಯಲ್ಲಿ ವಿ.ಸೀ. ಅವರಿಗಿರುವ ಸೂಕ್ಷ್ಮದರ್ಶನ ಹಾಗೂ ಆ ಕಲೆಯ ಮೇಲೆ ಅವರಿಗಿರುವ ಪ್ರಭುತ್ವವನ್ನು ಕಂಡುಂಡ ನನಗೆ ಕೂಡ ಆಶ್ಚರ್ಯ ತರುವಂತಹ ಮಾಹಿತಿಯನ್ನು ಅವರ ಕಾರ್ಡು ನನಗೆ ಕೊಟ್ಟಿತು. ಸುಮ್ಮನೆ ಕೈಗೆ ಸಿಕ್ಕಿದ ನಾಲ್ಕು ವರುಷಗಳ ಪ್ರಸಾರ ಮಾಹಿತಿಯನ್ನು ಒಳಗೊಂಡ ಅದರ ಅವಲೋಕನ ನನ್ನನ್ನು ತಬ್ಬಿಬ್ಬು ಮಾಡಿತು.

ಕಾವ್ಯರಂಗ – ಕುಮಾರವ್ಯಾಸ; ಪಾಶ್ಚಾತ್ಯ ರಾಷ್ಟ್ರಗಳಿಗೆ ಮೀಸಲಾದ ಪ್ರಸಾರದ ಸಲುವಾಗಿ ಬಿ.ಎಂ.ಶ್ರೀ. ಅವರ ವಿಷಯ ಇಂಗ್ಲಿಷಿನಲ್ಲಿ ಭಾಷಣ; ಸಂಗೀತದಲ್ಲಿ ಸಾಹಿತ್ಯದ ಸ್ಥಾನ; ನೆಹರೂ–ಅಂತರರಾಷ್ಟ್ರೀಯ ಮಾನವ; ಪಂಪಭಾರತದಲ್ಲಿನ ವೀರ; ಕಾವ್ಯಧಾರೆ; ಟಾಗೋರರ ಕಾವ್ಯಲಹರಿ; ನನ್ನ ಮೇಲೆ ಪ್ರಭಾವ ಬೀರಿದ ಪುಸ್ತಕಗಳು; ನಾಗರಿಕತೆ ಮತ್ತು ಸಂಸ್ಕೃತಿ; ಜನಪದ ಸಂಗೀತವನ್ನು ಕುರಿತ ಸಂಕಿರಣದ ಉದ್ಘಾಟನೆ; ಸ್ತ್ರೀ ಸಮಸ್ಯಾ ಚರ್ಚೆ; ಡಾ|| ಆ್ಯನಿ ಬೆಸೆಂಟ್; ಅಶ್ವತ್ಥಾಮನ್ – ನಾಟಕದ ನಿರ್ದೇಶನ; ನಾ ಕಂಡ ರಂಗಭೂಮಿ; ಆರ್ಥಿಕ ಅಭಿವೃದ್ಧಿ; ಭಾಷೆಗಳ ಕೊಡುಕೊಳ್ಳುವಿಕೆ; ಪುರಂದರದಾಸರು; ಭಾಷಾಂತರದ ಸಮಸ್ಯೆಗಳು; ಸ್ವತಂತ್ರ ಭಾರತದ ವೈಚಾರಿಕರು; ನಮ್ಮ ಧರ್ಮ; ಬಂಗಾಳೀ ಭಾಷೆಯಿಂದ ಕನ್ನಡಕ್ಕೆ ಪದ್ಯಾನುವಾದ; ಕಥಾ ಸಾಹಿತ್ಯದಲ್ಲಿ ಗಾಂಧೀಜಿ; ಯುಗಾದಿ ಸಾಹಿತ್ಯಗೋಷ್ಠಿ; ನಾಟಕ ರಚನೆಯಲ್ಲಿ ಹೊಸ ಪ್ರಯೋಗಗಳು; ತರುಣಭಾರತಿ ಕಾರ್ಯಕ್ರಮ; ರಾಷ್ಟ್ರೀಯ ಕವಿಮೇಳ; ಪುಸ್ತಕ ವಿಮರ್ಶೆ; Black money – a parallel economy; ಹೀಗೆ ಮತ್ತೂ ಮತ್ತೂ ಇತ್ಯಾದಿಗಳು ಕಾರ್ಡಿನ ತುಂಬ ಕಂಡು ಬಂದವು.

ಕನ್ನಡ ಭಾಷೆ, ಕಾವ್ಯ, ಸಾಹಿತ್ಯ, ವಿಮರ್ಶೆ ಇವು ವಿ.ಸೀ. ಅವರ ತವರು ರಂಗ. ಅವರು ಅರ್ಥಶಾಸ್ತ್ರದಲ್ಲಿಯೂ ಪದವೀಧರರೆಂಬುದೂ ಆ ಶಾಸ್ತ್ರದಲ್ಲಿ ನಿಷ್ಣಾತರೆಂಬುದೂ ಎಲ್ಲರಿಗೂ ತಿಳಿದ ಮಾತು. ಸಿದ್ಧ ಕವಿಗಳಾದ ಅವರು ಸಂಗೀತ ರಂಗದಲ್ಲಿ ಸಾಧಿಸಿಕೊಂಡಿರುವ ವ್ಯಾಪ್ತಿಯ ಪರಿಚಯ ಅವರನ್ನು ಹತ್ತಿರದಿಂದ ಬಲ್ಲ ಕೆಲವರಿಗೆ ಮಾತ್ರ

ಗೊತ್ತು. ನಾಟಕವಂತೂ ಸರಿ, ಸಿನೆಮಾ ಸಾಹಿತ್ಯದಿಂದ ಕ್ರಿಕೆಟ್‌ವರೆಗೆ ಏನೆಲ್ಲ ವಿಷಯಗಳ ಬಗೆಗೆ ನಿಷ್ಕೃಷ್ಟವಾದ ಮತ್ತು ಆಳವಾದ ಜ್ಞಾನ ಅವರಿಗುಂಟೆಂಬ ಮಾಹಿತಿಯನ್ನು ಅವರ ಕಾರ್ಡ್ ಉಚಿತವಾಗಿ ತಿಳಿಸಿದಾಗ ನನಗಂತೂ ಆಶ್ಚರ್ಯ.

ಇನ್ನು ಪ್ರಸಾರ ಮಾಧ್ಯಮದ ಅದೆಷ್ಟು ಪ್ರಭೇದಗಳಲ್ಲಿ ಅವರ ಸಿದ್ಧಹಸ್ತ ಅಡಿ, ಜರಡಿಯಾಡಿ, ಜಳ್ಳುಕಳೆದು ಕಾಳು ಮಾತುಗಳನ್ನು ಮೇಲೆತ್ತಿ ತಂದಿತೆಂದು ಕಂಡುಕೊಂಡಾಗ, ಅವರ ಮೇಲಿನ ಗೌರವ ಮತ್ತೂ ಒಂದು ಮೆಟ್ಟಿಲು ಮೇಲೇರುತ್ತದೆ. ಭಾಷಣ, ವ್ಯಾಖ್ಯಾನ, ವಿಚಾರ ಸಂಕಿರಣ, ಪದ್ಯವಾಚನ, ಧ್ವನಿಚಿತ್ರರಚನ, ನಾಟಕ ನಿರ್ದೇಶನ, ಪುಸ್ತಕ ವಿಮರ್ಶನ, ಪರಿಣತರೊಂದಿಗೆ ಸಂದರ್ಶನ, ಕವಿಸಮ್ಮೇಲನ, ಸರ್ವಧರ್ಮ ಮಥನ, ಸ್ತ್ರೀ ಸಮಸ್ಯೆಗಳ ವಿವೇಚನ, ನೆನಪಿನ ಪ್ರಕರಣ, ವಿದ್ಯಾರ್ಥಿಬೋಧನ, ದೇಶವಿದೇಶಗಳಲ್ಲಿನ ಆರ್ಥಿಕ, ಸಾಮಾಜಿಕ, ತಾಂತ್ರಿಕ ಮತ್ತು ರಾಜಕೀಯ ರಂಗಗಳಲ್ಲಿನ ಸಂಘರ್ಷ ಹಾಗೂ ಸೂಕ್ಷ್ಮತೆಗಳ ನಿಷ್ಕೃಷ್ಟ ದರ್ಶನ– ಹೀಗೆ ಒಂದೆ, ಎರಡೆ? ಅಲ್ಲದೆ, ತಿಳಿದವರಿಗೂ, ತಿಳಿಯದವರಿಗೂ, ಮಕ್ಕಳಿಗೂ, ಮಹಿಳೆಯರಿಗೂ, ಹಳ್ಳಿಯ ಬಂಧುಗಳಿಗೂ, ವಿದ್ಯಾರ್ಥಿಗಳಿಗೂ ತುಂಬ ರುಚಿಸುವಂತೆ, ಆ ವರ್ಗದ ತಿಳಿವಿಗೆ ತಕ್ಕಂತೆ, ಪ್ರಸಾರದಲ್ಲಿ ಮಾತ್ರ ಫಲಕೊಡಬಹುದಾದ ಮಾತುಗಳನ್ನು ಆರಿಸಿ, ವಾಕ್ಯಗಳನ್ನು ಹೆಣೆದು, ತಮ್ಮ ಶ್ರೀಮಂತ ಧ್ವನಿಯನ್ನು ದುಡಿಸಿಕೊಂಡು, ಮಾತು ಮಾತಿಗೆ ಜೀವ ತುಂಬಿ, "ಪ್ರಸಾರ ಮೆಂದರೆ ಹೀಗಿರಬೇಕು; ಇದೀಗ ಮಾದರಿ" ಎನಿಸುವಂತೆ ಮಾಡಿದ ನಿಷ್ಣಾತ ಪ್ರಸಾರಕರು ವಿ.ಸೀ. ಅವರಂಥ ಒಬ್ಬರೇ, ಒಂದು ಪ್ರಸಾರ ಸಂಸ್ಥೆಯ ಎಲ್ಲ ಬಗೆಯ Spoken word ಕಾರ್ಯಕ್ರಮಗಳನ್ನು ರೂಪಿಸಿ, ರಚಿಸಿ, ನಿರ್ದೇಶಿಸಿ, ಭಾಗವಹಿಸಿ ಸಮರ್ಥವಾಗಿ ನಡೆಯಿಸಿ ಕೊಡಬಲ್ಲರೆಂಬ ನಂಬಿಕೆ ನಿಚ್ಚಳವಾಗುತ್ತದೆ. ನಿಜ; ಸಂಗೀತದ ರಂಗ ಬೇರೆಯದು. ಆ ರಂಗದಲ್ಲಿಯೂ ಆಳವಾದ ಜ್ಞಾನ, ವಿಸ್ತಾರವಾದ ವ್ಯಾಪ್ತಿ, ಜೇಸಿನಂಥ ಕಂಠವನ್ನು ಸಾಧಿಸಿಕೊಂಡಿದ್ದರೂ ವಿ.ಸೀ.ಯವರು ಸಂಗೀತ ಕಛೇರಿಯನ್ನು ಮಾಡಿದ ಮಾಹಿತಿ ಇಲ್ಲ. ಅದರೆ, ಹಟತೊಟ್ಟರೆ ಮಾಡಿಯಾರು ಎಂಬ ಮಾತು ಹುಸಿ ಹೋಗುವುದಿಲ್ಲ!

ಕನ್ನಡ, ಇಂಗ್ಲಿಷ್ ಭಾಷೆಗಳ ಮೇಲೆ ಪ್ರಭುತ್ವ ಮತ್ತು ಆ ಭಾಷೆಗಳ ಸಾಹಿತ್ಯದಲ್ಲಿ ಪ್ರಗಲ್ಭವಾದ ಪಾಂಡಿತ್ಯಗಳನ್ನು ಪಡೆದವರಾದರೂ, ವಿ.ಸೀ. ಯಾವ ಒಂದು ವಿಚಾರ ದಲ್ಲಿಯೂ ತಮ್ಮದೇ ಕಡೆಯ ಮಾತೆಂದು ಪಟ್ಟು ಹಿಡಿದವರಲ್ಲ. ಮತ್ತೊಬ್ಬರ ಅಭಿಪ್ರಾಯ ಗಂಟಲಲ್ಲಿ ಇಳಿಯದಾದಾಗಲೂ ಅದನ್ನು ಹಳಿದವರಲ್ಲ. ವಿದ್ಯಾರ್ಥಿಗೆ ಇರಬೇಕಾದ ಜ್ಞಾನ ಅವರಲ್ಲಿ ಎಂದಿಗೂ ಹಿಂಗಲಿಲ್ಲ. ಎಂದೇ ಅವರು ಪ್ರಸಾರ ರಂಗದಲ್ಲಿ ನಿತ್ಯನವೀನರೆನಿಸಿ ಉಳಿದು ಅದರ ಪ್ರಭೇದಗಳ ಹಾಗೂ ಸಾಹಿತ್ಯಕ ಕಾರ್ಯಕ್ರಮಗಳ ಸಂಪತ್ತನ್ನು ಹೆಚ್ಚಿಸಿದರು.

'ಹಳೆಯ ಕಾಲದ' ವಿ.ಸೀ. ಅನುನಿತ್ಯ ಹೊಸತನವನ್ನು ಮೆರೆದು, ಏನೆಂಥ ವಿಷಯವಾದರೂ ಅದರ ಮೇಲೆ ಹೊಸ ದೃಷ್ಟಿಯನ್ನು ಹಾಯಿಸಿ ಹೊಸದನ್ನು ಸೃಷ್ಟಿಸಬಲ್ಲವರೆಂದೇ, ಆಕಾಶವಾಣಿ ಸಂಸ್ಥೆಗಳಲ್ಲಿ ಮಾಗಿದ ಪಾಂಡಿತ್ಯವಿದ್ದರೂ ಕಂದಾಚಾರಕ್ಕೆ ಮಣೆಯದ 'angry old men' ಎನಿಸಿಕೊಂಡ ಹಿರಿಯರನ್ನು Programme Producers ಆಗಿ ನಿಯಮಿಸಿದ ಸಮಯದಲ್ಲಿ, ವಿ.ಸೀ.ಯವರು ಬೆಂಗಳೂರು ಕೇಂದ್ರದ

ಸಾಹಿತ್ಯ ವಿಭಾಗದ ಕಾರ್ಯಕ್ರಮ ನಿಯೋಜಕರಾಗಿ ನೇಮಕಗೊಂಡರು. ಅವರು ಅಲ್ಲಿ ದುಡಿದ ಮೂರು ವರುಷಗಳ ಕಾಲಖಂಡ, ಕನ್ನಡ ಪ್ರಸಾರದ 'ಬಂಗಾರ ಘಟ್ಟ' ವೆನಿಸಿಕೊಂಡಿತು. ತಾವೇ ರಚಿಸಿ, ನಿರ್ದೇಶಿಸಿ, ಪ್ರಸಾರ ಮಾಡಿದ ಕಾರ್ಯಕ್ರಮಗಳ ಮಾತಿರಲಿ, ತಮ್ಮ ನೇತೃತ್ವದಲ್ಲಿ ನಡೆದ ಆ ನೂರಾರು ಪ್ರಸಾರ ಕಾರ್ಯಕ್ರಮಗಳನ್ನು ತಿದ್ದಿ, ಆ ಒಂದೊಂದು ಕೃತಿಯ ಪ್ರತಿಯೊಂದು ಪದವನ್ನೂ ತೂಗಿ ಅಳವಡಿಸಿ, ರಿಹರ್ಸಲ್‌ಗಳಲ್ಲಿ ಪ್ರಸಾರಕರ ಮಾತಿನ ರೀತಿಯನ್ನು ತಿದ್ದಿ ನೇರ್ಪಡಿಸಿ, ಈ ಎಲ್ಲ ಮಾಡುವಲ್ಲಿ, ತಮ್ಮ ಕಾರಣ, ಪ್ರಸಾರ ಅಷ್ಟು ಚೆನ್ನಾಯಿತು ಎಂಬ ಭಾವ ಪ್ರಸಾರಕರಲ್ಲಿ ಬಾರದಂತೆ ಎಚ್ಚರವಹಿಸಿ, ಆಡಿದವರಿಗೆ, ಮಾಡಿದವರಿಗೇ ಕೀರ್ತಿ ತಂದುಕೊಟ್ಟ ಕೀರ್ತಿ ವಿ.ಸೀ. ಅವರದು. ಅವರು ಪ್ರೊಡ್ಯೂಸರ್ ಆಗಿದ್ದ ಆ ಕಾಲಾವಧಿಯಲ್ಲಿ, ಯಾವ ಒಂದು ವಿಷಯದಲ್ಲಿ ಪರಿಣತಿ ಪಡೆದ ನಿಷ್ಣಾತರೂ, ತಮ್ಮ ಆ ವಿಷಯದ ಮೇಲೆ ವಿ.ಸೀ.ಯವರು ಮಾಡಿದ್ದ ವ್ಯವಸಾಯವಾದರೂ ಕಡಿಮೆಯದಲ್ಲ ಎಂಬುದನ್ನು ಕಂಡುಕೊಳ್ಳಬೇಕಾಯಿತು. 'ಥರ್ಮೋಡೈನಮಿಕ್ಸ್'ನ ಒಂದು ವಿಶಿಷ್ಟ ಪರಿಶೋಧನೆಯ ಬಗ್ಗೆ ಪರಿಚಯ ಪ್ರಸಾರ ಮಾಡಿದ 'ಡಾಕ್ಟರ್' ಒಬ್ಬರು "ಏನಪ್ಪ– ನಿಮ್ಮ ವಿ.ಸೀ! ನನ್ನ ಮಾತಿನ ರೀತೀನ ತಿದ್ದಲಿ ಬಿಡ್ರೀ – ಬೇಕಾದರೆ ಪದಗಳನ್ನು ಬದಲಾಯಿಸಲಿ; ಅದರೆ ಮೂಲ ವಿಷಯವನ್ನೇ ಎತ್ತಿ ಆಡಿಸಿ ಒಪ್ಪುವ ಹಾಗೆ ಛೇಂಬ್ ಮಾಡಿಬಿಟ್ಟರಲ್ಲಪ್ಪಾ! ಈ ಕನ್ನಡ ಸಾಹಿತಿ, ನನ್ನ ಥರ್ಮೋಡೈನಾಮಿಕ್ಸ್ ಎಲ್ಲಿ ಓದಿಕೊಂಡರಪ್ಪಾ? ಅದೂ ಅಷ್ಟು ಥರೋ ಆಗಿ!! ಅಸಾಧ್ಯ ಮನುಷ್ಯ ಬಿಡಿರಪ್ಪ–" ಎಂದು ಸ್ಟೂಡಿಯೋದಿಂದ ಹೊರಗೆ ಬಂದು ಮೂಗಿನ ಮೇಲೆ ಬೆರಳಿಟ್ಟುಕೊಂಡ ಸಂಗತಿ ಮರೆಯದಂಥದು.

ಹತ್ತು ಹಲವಾರು ಕಾರಣಗಳಿಂದಾಗಿ ಈಗ ನಡೆಯಲೇಬೇಕಾಗಿ ಬಂದಿರುವ Compromise with quality ಎಂಬ ಮಾತನ್ನು ವಿ.ಸೀ. ಕಂಡರಿಯರು. ಯಾವುದೇ ಪ್ರಸಾರ ಪ್ರಭೇದವಿರಲಿ, ಪ್ರಸಾರಕ – ಭಾಷಣಕಾರನೋ ಕಲಾವಿದನೋ – ಅದೆಂಥ ಕೋಡು ಬಂದವನೇ ಇರಲಿ, ವಾಂಛಲ್ಯಕ್ಕೆ ವಿ.ಸೀ. ಎಂದೂ ಒಳಗಾಗದವರು. ಪ್ರಸಾರ, ಅತ್ಯಂತ ಚಲುವಾಗಲೇಬೇಕೆಂಬ ಹಟದಿಂದ ಬಂದ ನಿಷ್ಠುರತೆ ಅವರದು. "ಹಾಗಲ್ಲಪ್ಪಾ ಸ" ಎಂದು ಅವರದೇ ವಿಶಿಷ್ಟ ಶೈಲಿಯಲ್ಲಿ ವಿ.ಸೀ. ಮತ್ತೆ ಮತ್ತೆ ಹತ್ತು ಸಲ ಪ್ರಸಾರಕನನ್ನು ತಿದ್ದಿದಾಗ ಬೇಸರವೇರುವ ಸ್ಥಿತಿಯನ್ನು ಮುಟ್ಟಿದ ಆತ, ಎಲ್ಲ ಮುಗಿದ ಮೇಲೆ, ತನ್ನ ಪ್ರಸಾರದ ಸಫಲತೆಗಾಗಿ, ಪಾಪ, ಈ ಪ್ರೊಡ್ಯೂಸರ್ ಇಷ್ಟೊಂದು ಕಷ್ಟಪಟ್ಟರಲ್ಲ ಎಂದು ಅರ್ಥವಾದಾಗಲೇ, ಆತ ಕೃತಜ್ಞತೆಯ ಭಾರದಿಂದ ತಲೆಬಾಗುತಿದ್ದದ್ದು.

ತಾವು ಕಾರ್ಯಕ್ರಮ ನಿಯೋಜಕರಾಗಿದ್ದ ಆ ಕಾಲದಲ್ಲಿ ವಿ.ಸೀ. ಕನ್ನಡ ಪ್ರಸಾರ ರಂಗದಲ್ಲಿ ಹತ್ತು ಹಲವಾರು ಪ್ರಯೋಗಗಳನ್ನು ಯಶಸ್ವಿಯಾಗಿಸಿದರು. ಹತ್ತೂ ಕಡೆಗಳಿಂದ ಪರಿಣತರನ್ನು ಪ್ರಸಾರ ಕೇಂದ್ರಕ್ಕೆ ಬಲವಂತವಾಗಿ ಬರಮಾಡಿಕೊಂಡರು. ಕಲೆ ಕಂಡ ಕಡೆ ಮುಂದಾಗಿ ಹೋಗಿ ಕೈ ಮುಗಿದು ಕರೆತಂದು ಅದರ ಸವಿಯನ್ನು ಊರಿಗೆಲ್ಲ ಹಂಚಿದರು. ಆಗಲೇ ಶಿವರಾಮ ಕಾರಂತರ 'ಯಕ್ಷಗಾನ ಬ್ಯಾಲೆ' ಬೆಂಗಳೂರಿನಿಂದ ಪ್ರಸಾರವಾದದ್ದು. ಸಂಸ್ಕೃತದ ಮೃಚ್ಛಕಟಿಕ, ರಂಗ–ಪ್ರಸಾರ ರಂಗಗಳಲ್ಲಿ ಬೆಳಕು ಕಂಡು ಮೊಳಗಿತು. ಕಾವ್ಯರಂಗ, ಸಾಹಿತ್ಯ ಪರಂಪರೆ ಮೊದಲಾದ ಪ್ರಸಾರ ಮಾಲಿಕೆಗಳು ಪ್ರಾರಂಭಗೊಂಡವು.

ಹಳಿಯವಕ್ಕೂ ಹೊಸತಕ್ಕೂ ಬೆಂಗಳೂರು ಕೇಂದ್ರ ಸೇತುವೆ ಕಟ್ಟಿತು. ಹಳೆಗಾಲದವರೂ ಅತ್ಯಾಧುನಿಕರೂ, ವಿ.ಸೀ.ಯವರಲ್ಲಿ ತಮ್ಮ ತಮ್ಮ ವಿಚಾರಗಳ ಅಭಿವ್ಯಕ್ತಿಯನ್ನೇ ಕಂಡುಕೊಂಡರು.

ವಿ.ಸೀ.ಯವರ ಪ್ರಸಾರ ಕಲೆಯ ಪ್ರಜ್ಞೆ ನಿತ್ಯಜಾಗೃತವಾದುದೆಂದು, ಅವರು ಆಕಾಶವಾಣಿಯಿಂದ ನಿವೃತ್ತರಾದ ನಾಲ್ಕಾರು ವರುಷಗಳ ನಂತರವೂ ಅವರ ನಾಟಕ 'ಶ್ರೀ ಶೈಲ ಶಿಖರ'ವನ್ನು ಪ್ರಸಾರಕ್ಕೆ ಅಳವಡಿಸಿ ಪ್ರಯೋಗಿಸಿದಾಗ ನಿಚ್ಚಳವಾಯಿತು. ಆ ನಾಟಕದ ಅಂತಿಮ ರಿಹರ್ಸಲ್‌ಗಳಲ್ಲಿ ತೊಡಗಿದ್ದ ಸಮಯ, ಆ ರಂಗ ಕೃತಿಯನ್ನು ಪ್ರಸಾರಕ್ಕಾಗಿ ಅಳವಡಿಸಿದ ರೀತಿ ಮತ್ತು ಪ್ರಸಾರ ತಂತ್ರದ ಬಗ್ಗೆ ಅವರ ಒಪ್ಪಿಗೆ ಪಡೆಯುವ ಸಲುವಾಗಿ ಆಹ್ವಾನಿಸಿ ಬರಮಾಡಿಕೊಂಡೆವು. ಅಂದು, ಅವರು ನಾಲ್ಕೈದು ತಾಸುಗಳ ಕಾಲ ಕಲಾವಿದರೊಂದಿಗೆ ಕುಳಿತು ಮಾತಿನ ರೀತಿಯನ್ನು ತಿದ್ದಿದರು. ನಾಟಕದ ಬಗೆಗೆ, ಅದರಲ್ಲಿನ ಪ್ರತಿಯೊಂದು ಪಾತ್ರದ ಬಗೆಗೆ ಹೊಸತೊಂದು ದೃಷ್ಟಿಯನ್ನೇ ನಿರ್ದೇಶಕನಿಗೂ ಕಲಾವಿದರಿಗೂ ತಂದುಕೊಟ್ಟರು. ಅವರು ಪಾತ್ರಗಳ ಭಾವಾಭಿವ್ಯಕ್ತಿ ಮಾಡಿದ ಪರಿ, ಅತ್ಯಂತ ಆದರ್ಶವೆನಿಸಿ, ಆವರೆಗೆ ಕಲಿತದ್ದನ್ನು ಅಳಿಸಿ, ಮರೆತು, ಬೇರೆ ರೀತಿಯಲ್ಲೇ ಕಲಿತು ಆಡಿದ್ದು ಅನಿವಾರ್ಯವಾಯಿತು. ಇನ್ನೂ ಅಲ್ಲಿ ಅಳವಡಿಸಬೇಕಾದ ಶಬ್ದ ಹಾಗೂ ನಾದವಿಶೇಷಗಳ ಲಕ್ಷಣ, ಪಾತ್ರ, ಲಂಬಗಳನ್ನು ಸಾಧಿಸುವ ಹೊಸ ಹೊಸ ಗುಟ್ಟುಗಳನ್ನು ಹೇಳಿಕೊಟ್ಟುದು ಮರೆಯದ ಅನುಭವವೆನಿಸಿತು. 'ಅಂತರನಾದ'ಗಳ ಧಾಟಿಗಳನ್ನು ಕುರುಕಿ, ಹಾಡಿ ತೋರಿದರು. ಇಲ್ಲಿಲ್ಲಿ ಇಂತಿಂಥ ವಾದ್ಯಗಳೇ ದುಡಿಯಬೇಕೆಂದು ನಿರ್ದೇಶಿಸಿ, ಸಾಧಿಸಿ, ಫಲ ಕಾಣಿಸಿದರು. ವಾದ್ಯ ನುಡಿದುದು ಸಾಲದೆನ್ನಿಸಿದಾಗ ತಾವೇ ಉಗ್ಗಡಿಸಿ, ಇಲ್ಲವೆ ತಂತಿಯಿಂದ ಎಳೆದಂತೆ ಧ್ವನಿಯನ್ನೆಳೆದರು. ಅದೂ ನಿಲುಕದೆಂದಾಗ ಕೈ ಬೆರಳುಗಳಿಂದ ಗಾಳಿಯಲ್ಲಿಯೇ ಚಿತ್ರಗಳನ್ನು ರಚಿಸಿ ತೋರಿದರು. ತಮ್ಮೆದೆಯಲ್ಲಿನ ಅತಿಸೂಕ್ಷ್ಮ ಭಾವನೆಗಳನ್ನು ಅವರ ಆ ಚಿತ್ತಾರಗಳೂ ತೋರಿಕೊಡಲಿಲ್ಲವೆನಿಸಿದಾಗ ಅಲೆ ಅಲೆಯಾಗಿ ದಿವ್ಯವಾದ ನಗೆ ನಕ್ಕರು. ಹೀಗೆ, ಯಾವುದೊಂದು **contract** ಅಥವಾ ಪ್ರತಿಫಲವಿಲ್ಲದೆ ತಾವೇ ಉದ್ದಕ್ಕೆ ದುಡಿದರೂ "ಪಾಪ, ಕಲಾವಿದರನ್ನೆಲ್ಲ ನಾನೆಷ್ಟು ಗೋಳು ಹೊಯ್ದುಕೊಂಡೆ" ಎಂದು ಮಮ್ಮಲ ಮರುಗಿದರು. ಬೆಂಗಳೂರಿನ ಅತ್ಯುತ್ತಮ ಹೊಟೆಲಿನಿಂದ ಎಲ್ಲರಿಗೂ ಮಸಾಲೆ ದೋಸೆಗಳು, ಕಾಫಿ ಬಂದಾಗಲೇ ವಿ.ಸೀ.ಯವರ ಕೈವಾಡ ನಮಗೆ ತಿಳಿದದ್ದು! ಮತ್ತೆ ಯಾರಾದರೂ ಬಿಲ್ಲು ಕೊಡಲು ಅವರು ಎಂದಾದರೂ ಬಿಟ್ಟಾರೆಯೆ? ಅಂಥದನ್ನು ಅವರ ಜಾತಕ ಒಪ್ಪಿಯೇ ಇಲ್ಲವಲ್ಲ!

ಬಿಲ್ಲು ಕೊಡುವ ಮಾತು ಬಂದಾಗ ಇನ್ನೊಂದು ವಿಷಯ ನೆನಪಾಗುತ್ತದೆ. ೧೯೫೩ರಲ್ಲಿ ಕುಮಟೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ವಿ.ಸೀ. ಅವರು ಮಾಡಿದ ಭಾಷಣದ ಪ್ರಸಾರವನ್ನು ಕುರಿತ ಸಂದರ್ಭ ಅದು. ಅಧ್ಯಕ್ಷ ಭಾಷಣವನ್ನು ಸಮ್ಮೇಳನದ ಇತರ ಕಾರ್ಯಕ್ರಮಗಳನ್ನು ಧ್ವನಿಮುದ್ರಿಸಿ ತರುವುದಕ್ಕಾಗಿ ಧಾರವಾಡ ಕೇಂದ್ರದಿಂದ ನಮ್ಮ "ರಿಕಾರ್ಡಿಂಗ್ ಯುನಿಟ್" ಜೊತೆ ಹೋಗಿದ್ದೆ. ಆಗ ಇನ್ನೂ ಟೇಪುಗಳ ಬಳಕೆ ಪ್ರಸಾರ ರಂಗಕ್ಕೆ ಬಂದಿರಲಿಲ್ಲ. 'ಡಿಸ್ಕ್' ಅಥವಾ ತಟ್ಟೆಗಳ ಮೇಲೆ

ಧ್ವನಿಮುದ್ರಿಸಿಕೊಳ್ಳುವ ಪರಿಪಾಠ. ಒಮ್ಮೆ ಅದರ ಮೇಲೆ ಧ್ವನಿ ಮುದ್ರಿಸಿಕೊಂಡ ನಂತರ ಅಳಿಸುವಂತಿಲ್ಲ. ಅದರಿಂದ ಅತ್ಯಂತ ಮುಖ್ಯವೆನಿಸಿದ ಭಾಗಗಳನ್ನಷ್ಟೆ ಮೊದಲು ನಿಗದಿ ಮಾಡಿಕೊಂಡು ತಟ್ಟೆಗಳನ್ನು ಕೊರೆಯಬೇಕು! ಅದರಿಂದ, ವಿ.ಸೀ.ಯವರ ಅಧ್ಯಕ್ಷಭಾಷಣದ ಅಚ್ಚು ಪ್ರತಿಯನ್ನು ಮೊದಲೇ ಗಿಟ್ಟಿಸಿಕೊಂಡು, ಓದಿ, ಧ್ವನಿಮುದ್ರಿಸಿಕೊಳ್ಳಬೇಕಾದ ಭಾಗಗಳನ್ನು ಗುರುತಿಸಿಕೊಂಡು, ಜನಸಮ್ಮರ್ದ ಉಕ್ಕಿ ಹರಿಯುತ್ತಿದ್ದ ಸಮ್ಮೇಳನದ ಮಹಾಮಂಟಪದಲ್ಲಿನ ಅಲಂಕೃತ ವೇದಿಕೆಯ ಮೀಸಲು ಜಾಗದಲ್ಲಿ ಸಿದ್ಧವಾಗಿ ಕುಳಿತೆವು. ಅಧ್ಯಕ್ಷ ವಿ.ಸೀ. ಅವರಿಗೆ ಅಂದು ದೊರೆತ ಜನತಾಸ್ವಾಗತ ಮರೆಯದಂಥದು. ಅವರು ಭಾಷಣ ಮಾಡಲು ಎದ್ದು ನಿಂತಾಗ, ಎರಡು ನಿಮಿಷಗಳ ಕಾಲ ಒಂದೇ ಸಮನೆ ಚಪ್ಪಾಳೆಯ ಸುರಿಮಳೆ. (ಆ ಶಬ್ದ ವಿಶೇಷವನ್ನು ಆನಂತರ, ಅನೇಕ ಬೇರೆ ಬೇರೆ ಕಾರ್ಯಕ್ರಮಗಳ ಪ್ರಸಾರದಲ್ಲಿ ಅದ್ಭುತ ಪರಿಣಾಮದ ಸಲುವಾಗಿ, ನಾಚಿಕೆ ಬಿಟ್ಟು ಬಳಸಿಕೊಂಡಿದ್ದೇವೆಂದು ಈಗ ಒಪ್ಪಿಕೊಳ್ಳುತ್ತೇನೆ!) ವಿ.ಸೀ. ಕೈಮುಗಿದು, ಅಚ್ಚಾದ ಭಾಷಣದ ಮೊದಲಿನೆರಡು ಮಾತುಗಳನ್ನು ಓದಿ, ಆನಂತರ ಅದನ್ನು ಕೈ ಬಿಟ್ಟು; ಮೈದುಂಬಿ ಬಂದವರಂತೆ ನಿರರ್ಗಳವಾಗಿ ಮಾತನಾಡಿದರು. ಆ ವಿಚಾರ ಧಾರೆ, ವಿದ್ವದ್ವಿವೇಚನೆ, ವಿನೋದ ವಾಗ್ಝರಿಗಳು ವಿ.ಸೀ.ಯವರ ಸ್ವಂತ ಸ್ವತ್ತು; ಸಂಪತ್ತು. ಏನು ಧ್ವನಿ ಮುದ್ರಿಸಿಕೊಳ್ಳಬೇಕು – ಏನು ಬಿಡಬೇಕು – ಎಂದು ತೋಚದೆ ತಬ್ಬಿಬ್ಬಾಗಿ, ಆದಷ್ಟೂ ಬೇಗ ಬೇಗ ತಟ್ಟೆಗಳನ್ನು ಅಳವಡಿಸಿ ಎಲ್ಲವನ್ನೂ ಧ್ವನಿ ಮುದ್ರಿಸಿಕೊಂಡೆವು. ಹತ್ತೇ ನಿಮಿಷಗಳಂತೆ ಸಭೆಗೆ ತೋರಿದ ಆ ಅವಧಿಯಲ್ಲಿ ವಿ.ಸೀ. ಒಂದೂ ಕಾಲ ತಾಸು ಮಾತನಾಡಿದ್ದರು.

ಮೂರು ದಿನಗಳ ಮಹೋತ್ಸವದ ನಂತರ, ಸವಿನೆನಪುಗಳ ತೂಗುತೊಟ್ಟಿಲಲ್ಲಿ ಓಲಾಡುತ್ತ, ವ್ಯಾನ್‌ನಲ್ಲಿ, ನಾವು ಆರೇಳು ಮಂದಿ ಮರಳಿ ಧಾರವಾಡಕ್ಕೆ ಹೊರೆಟೆವು. ಸುಮಾರು ಮೂವತ್ತು ಮೈಲು ದಾರಿ ಸವೆದಿರಬೇಕು. ಹರಿಯುತ್ತಿದ್ದ ತೊರೆಯೊಂದರ ಪಕ್ಕದಲ್ಲಿ ಸಮ್ಮೇಳನಾಧ್ಯಕ್ಷರ ಕಾರು ನಿಂತಿದೆ. ವಿ.ಸೀ. ಯವರು, ಗೆಳೆಯರೊಂದಿಗೆ, ತಮ್ಮ ಮನೆ ಮಂದಿಯೊಂದಿಗೆ, ರಸ್ತೆಯ ಆ ಬದಿಯಲ್ಲಿ ಸೇರಿಸಿದ್ದ ಕೆಂದುಗಾಯಿಗಳ ಎಳನೀರು ಕುಡಿಯುತ್ತಿದ್ದವರು, ನಮ್ಮ ಗಾಡಿ ಹತ್ತಿರಕ್ಕೆ ಬರುತ್ತಿದ್ದಂತೆಯೇ ರಸ್ತೆಯ ಮಧ್ಯಕ್ಕೆ ಬಂದು ಕೈ ಬೀಸಿ ನಿಲ್ಲಿಸಿದರು. 'ಇಳಿದು ಬನ್ನಿ. ಈ ಎಳನೀರು ರುಚಿ ನೋಡಿ, ಇಂಥದ್ದು ಇನ್ನೆಲ್ಲಿಯೂ ಸಿಕ್ಕುವುದ ಕಾಣೆ' ಎಂದು ಡ್ರೈವರ್ ಸಹಿತ ನಮ್ಮೆಲ್ಲರನ್ನೂ ಬಲವಂತದಿಂದ ಕೆಳಗಿಳಿಯಿಸಿ, ತಾವೇ ಅರಿಸಿ ಅರಿಸಿ ಕೆಂದುಗಾಯಿಗಳನ್ನು ಕಡಿವವನ ಕೈಗೆಕೊಟ್ಟು ಸಿಪ್ಪೆಹೆರೆಯಿಸಿ, ಕಣ್ಣು ಕೊರೆಯಿಸಿ ಕುಡಿಯಿಸಿದರು. ನಿಜವಾಗಿ ಅಮೃತ! ಒಂದಕ್ಕೇ ಹೊಟ್ಟೆ ತುಂಬಿದರೂ ಇನ್ನೊಂದು ಇನ್ನೊಂದು ಎಂದು ಪ್ರೀತಿಯ ಒತ್ತಾಯ. ಅಂಥ ಒಳ್ಳೆ ಎಳನೀರು ಕೊಟ್ಟದಕ್ಕಾಗಿ ಮಾರಿದಾತನಿಗೆ ಶಹಭಾಸ್‌ಗಿರಿ; ಕೇಳಿದ್ದಕ್ಕಿಂತ ಎಂಟಾಣೆ ಹೆಚ್ಚಿನ ಬಕ್ಷೀಸು! ನಾವು ಹೊಟ್ಟೆ ಗಡದ್ದು ಮಾಡಿಕೊಂಡು, ಗಾಡಿಯೇರಿ ಹೊರಡುವಷ್ಟರಲ್ಲಿ, ಹಿಂದಿನಿಂದ, ಬೆಂಗಳೂರಿಗೆ ಸಮ್ಮೇಳನದ ಪ್ರತಿನಿಧಿಗಳನ್ನು ಕರೆದೊಯ್ಯುತ್ತಿದ್ದ ಮೀಸಲು ಬಸ್ಸು ಬಂದಿತು. ವಿ.ಸೀ. ಯವರನ್ನು ನೋಡಿ ನಿಂತಿತು. "ಹಾ! ಇದೀಗ ಒಳ್ಳೆಯ

ಸಮಯಕ್ಕೆ ಇವರು ಬಂದಂತಾಯಿತು" ಎಂದು ಒಳಹಿಗ್ಗನ್ನು ತಗ್ಗಿಸಲಾರದ ವಿ.ಸೀ. ಊರಗಲ ಮುಖ ಮಾಡಿಕೊಂಡು, ಒಳಗಿದ್ದವರನ್ನೆಲ್ಲ ಒತ್ತಾಯ ಮಾಡಿ ಕೆಳಗಿಳಿಸಿದರು. ಕಾಯಿಗಳನ್ನು ತಾವೇ ಅರಿಸಿ ಅರಿಸಿ ಎಲ್ಲರಿಗೂ ಅಮೃತದಂಥ ಆ ಎಳನೀರು ಕುಡಿಸಿದರು. ಆ ಒಂದು ಅರ್ಧಗಂಟೆಯಲ್ಲಿ ರಸ್ತೆಯ ಬದಿಗೆ ಕುಡಿದ ಎಳನೀರಿನ ಕೆಂದು ತೆಂಗು, ರಾಶಿ ಬಿದ್ದಿತು.

ಧಾರವಾಡಕ್ಕೆ ಬಂದ ಮೇಲೆ ವಿ.ಸೀ.ಯವರ ಅಧ್ಯಕ್ಷಭಾಷಣವನ್ನು ಮತ್ತೆ ಮತ್ತೆ ಕೇಳಿದಾಗ, ಭಾಗಗಳನ್ನು ತುಂಡರಿಸಿ, ಪೋಣಿಸಿ ಅರ್ಧಗಂಟೆಯ ಪ್ರಸಾರಾವಧಿಗೆ ಅಳವಡಿಸುವುದು ನಿಜವಾಗಿ ಅಸಾಧ್ಯವೆನಿಸಿತು. ನಾನೂ ಇದ್ದ ಬುದ್ಧಿಯನ್ನೆಲ್ಲ ಕಸರತ್ತು ಮಾಡಿಸಿದೆ. ಹಾಳಾದ್ದು, ಭಾಷಣದ ಒಂದು ಪ್ಯಾರಾ ಇರಲಿ, ವಾಕ್ಯ ಬಿಡಿ, ಪದವನ್ನೂ ತೆಗೆದುಹಾಕುವಂತಿಲ್ಲ. ಏನು–ಯಾವುದು ಬಿಟ್ಟರೂ ನಷ್ಟವೆನಿಸಿತು. ಕೇಂದ್ರದ ನಿರ್ದೇಶಕರಾಗಿದ್ದ ವಾಕ್‌ನೀಸ್ ಅವರಿಗೆ ನನ್ನ ಫಜೀತಿಯ ವಿವರ ಕೊಟ್ಟೆ. "ಛೆ ಇದೆಂಥಾದ್ದು – ನೀನಾಡುವ ಮಾತು! ಎಂತೆಂಥವರ ಭಾಷಣವನ್ನೂ ಕತ್ತರಿಸಿ ತೆಗೆದಿದ್ದೇನೆ, ನೋಡುವ ಬಾ" ಎಂದು ತೋಳು ಏರಿಸಿ, ದಾಪುಗಾಲು ಹಾಕುತ್ತ ಅವರೇ ಸ್ವತಃ ಕಂಟ್ರೋಲ್ ರೂಮಿಗೆ ನಡೆದರು. ಅಲ್ಲಿ – ಇಲ್ಲಿ ಏನನ್ನಾದರೂ ತೆಗೆದು ಹಾಕಿ, ಕಾಲದ ಮಿತಿಗೆ ಅಳವಡಿಸಬೇಕೆಂದು ನಾವು ನಾಲ್ಕು ಜನ ಮೂರು ತಾಸುಗಳ ಕಾಲ ಹೆಣಗಿದೆವು. ಜಪ್ಪಯ್ಯ ಎನ್ನಲಿಲ್ಲ ಭಾಷಣ! "ಅಯ್ಯೋ ಅದನ್ನು ಬಿಡಬೇಡ" "ಛೆ ಇದನ್ನು ಬಿಟ್ಟರಾದೀತೆ" "ಏನನ್ನು ಬಿಟ್ಟರೂ ಆ ಇನ್ನೊಂದನ್ನು ಬಿಡಕೂಡದು" ಎಂದು ಗುದ್ದಾಡಿ, ಕಡೆಗೆ ಮಿ. ವಾಕ್‌ನೀಸರು "ಛೆ! ಛೆ! Your President is an impossible man. Have him in toto" ಎಂದು ಕೈ ಕೊಡವಿ, ಮೇಲೆದ್ದು ಬಿಟ್ಟರು.

ವಿಶೇಷ ಪ್ರಕಟಣೆಗಳನ್ನು ಮಾಡಿದೆವು. ಆ ರಾತ್ರಿ ಹತ್ತು ಗಂಟೆಯಿಂದ ಸುಮಾರು ಒಂದೂವರೆ ತಾಸಿನ ಅವಧಿಯ ರೇಡಿಯೋ ರಿಪೋರ್ಟು ವಿ.ಸೀ.ಯವರ ಸಂಪೂರ್ಣ ಭಾಷಣವನ್ನೇ ಶ್ರೋತೃವಿಗೆ ತಂದುಕೊಟ್ಟಿತು. ಧಾರವಾಡ ಕೇಂದ್ರದಿಂದ ಪ್ರಸಾರವಾದ ಅತ್ಯಂತ ಉದ್ದವಾದ, ಅತ್ಯಂತ ಉತ್ತಮವಾದ ಪ್ರಸಾರವರದಿಯ ಕಾರ್ಯಕ್ರಮಗಳು, ಎರಡೇ ಎರಡು; ಒಂದು ವಿ.ಸೀ. ಅವರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಭಾಷಣದ ವರದಿ; ಎರಡನೆಯದು ಡಾ. ಸಿ.ವಿ.ರಾಮನ್ ಅವರ ವಿಜ್ಞಾನ ಸಮ್ಮೇಳನದ ಅಧ್ಯಕ್ಷಭಾಷಣದ ವರದಿ.

ಸುಸಂಸ್ಕೃತ ಚೇತನ

ಕು. ಶಿ. ಹರಿದಾಸಭಟ್

ಒಂದು ವಿಶ್ವವಿದ್ಯಾನಿಲಯದ ಕುಲಪತಿಯನ್ನು ವಿ.ಸೀ. ಎಂಬ ಬೀಜಾಕ್ಷರಗಳಿಂದ ಕರೆಯುವುದು ರೂಢಿಯಾಗಿದ್ದರೂ ಕನ್ನಡದ ಮಟ್ಟಿಗೆ ಈ ಎರಡು ಅಕ್ಷರದ ಖ್ಯಾತಿ ವಿ. ಪ್ರೊ। ವಿ. ಸೀತಾರಾಮಯ್ಯನವರದ್ದು. ವಿಶ್ವವಿದ್ಯಾನಿಲಯಗಳು ಎಂಥ ಸುಸಂಸ್ಕೃತ ಮನುಷ್ಯನನ್ನು ತಯಾರುಗೊಳಿಸಬೇಕೋ, ತರಬೇತಿ ಮಾಡಬೇಕೋ ಅಂಥ ಒಬ್ಬ ಆದರ್ಶಪುರುಷರಾಗಿದ್ದರು ನಮ್ಮ ವಿ. ಸೀತಾರಾಮಯ್ಯನವರು. ಅವರಂಥ ಸುಸಂಸ್ಕೃತ ಹಾಗೂ ಸುಸಜ್ಜಿತ ಚೇತನಗಳು ಕನ್ನಡದಲ್ಲಿ ಬಹಳವಾಗಿಲ್ಲ ಎನ್ನುವಾಗಲೇ ನನ್ನ ನೆನಪು ವಿ.ಸೀ.ಯವರನ್ನಲ್ಲದೆ ಇತರ ಅನೇಕ ನವೋದಯದ ಹಿರಿಸಾಹಿತಿಗಳ ಸ್ಮರಣಪಥದಲ್ಲಿ ನಡೆಯಲೆಳಸುತ್ತದೆ. ಒಂದು ಯುಗಸಂಧಿಯಲ್ಲಿ ಹುಟ್ಟಿ ಆ ಯುಗಕ್ಕೆ ತಮ್ಮ ಬಹುಮುಖ ವ್ಯಕ್ತಿತ್ವ ಮತ್ತು ಬಹುಶ್ರುತ ಪಾಂಡಿತ್ಯದ ಮುದ್ರೆಯನ್ನೊತ್ತಿ ಆ ಕಾಲಮಾನವನ್ನೊಂದು ಮರೆಯಲಾಗದ ಪರ್ವಕಾಲವನ್ನಾಗಿ ಪರಿವರ್ತಿಸಿದ ಮಹನೀಯರು ಹಲವರಲ್ಲಿ ವಿ.ಸೀ. ಗೊಂದು ನಿಶ್ಚಿತ ಸ್ಥಾನವಿದೆ. ಕಾಲ ಅವರನ್ನು ನಿರ್ಮಿಸಿತು; ಆ ಕಾಲದ ಗುಣಲಕ್ಷಣಗಳನ್ನೂ ಪರಿಸರವನ್ನೂ ಅವರ ವ್ಯಕ್ತಿತ್ವ ಕಂಡರಿಸಿತು. ಅಂದಿನ ಸಾಹಿತ್ಯ ಪ್ರಕಾರಗಳಿಂದ ನಾವೆಷ್ಟೋ ಪ್ರಗತಿಶೀಲರಾಗಿ ಮುಂದುವರಿದಿದ್ದೇವೆ ಎನ್ನುವಾಗಲೂ ಅತ್ತ ತಿರುಗಿ ನೋಡಿದರೆ ನಾವು ಆಗ ಕೆಲಸ ಮಾಡಿದವರಿಗೆಲ್ಲ ಕೃತಜ್ಞರಾಗಿರಬೇಕಾದ ಅಗತ್ಯವಿದೆ.

*　　*　　*

ವಿ.ಸೀ. ಪಂಡಿತರಾಗಿದ್ದರು, ವರ್ಗದಲ್ಲಿ ಕನ್ನಡ ಪಾಠ ಹೇಳುತ್ತಿದ್ದರು. ಆದರೆ ಅವರ ಬೌದ್ಧಿಕ ಎಟುಕು ಸರ್ವಗ್ರಾಹಿಯಾದುದಾಗಿತ್ತು. ಮುಖ್ಯವಾಗಿ ಅರ್ಥಶಾಸ್ತ್ರದ ಅವರ ಪರಿಣತ ಆಸಕ್ತಿ ಅವರಲ್ಲಿ ಒಂದು ವಿಶಿಷ್ಟ ಶಕ್ತಿಯಾಗಿ ನಿಂತು ಅವರಿಂದ ಶಾಸ್ತ್ರ ಸಾಹಿತ್ಯದಲ್ಲೂ ಹಲ ಕೆಲವು ಮುಖ್ಯ ಕೆಲಸಗಳನ್ನು ಮಾಡಿಸಿ ತರುಣರಿಗೆ ದಾರಿದೀಪವಾಗಬಲ್ಲ ಕೃತಿಗಳನ್ನು ಕನ್ನಡಕ್ಕೆ ಕೊಡಮಾಡಿತು. ಮೊದಲು ಮಹಾರಾಜಾ ಕಾಲೇಜಿನಲ್ಲಿ, ಆಮೇಲೆ ಸೆಂಟ್ರಲ್ ಕಾಲೇಜಿನಲ್ಲಿ ಕೆಲವರ್ಷ ಅವರು ನಡೆಸಿದ ಪ್ರಾಧ್ಯಾಪಕ ವೃತ್ತಿ ಅವರಿಗೊಂದು ಶಿಷ್ಯಕೋಟಿಯನ್ನು ಸಂಗ್ರಹಿಸಿಕೊಟ್ಟಿತು. ವಿ.ಸೀ. ಲೆಕ್ಚರುಗಳನ್ನು ಮರೆಯುವುದು ಹೇಗೆ? ಅವರ ಸಾಹಿತ್ಯಪಾಠವೆಂದರೆ ಒಂದೊಂದು ಪಾಠವೂ ಬರೇ ಕನ್ನಡ ಸಾಹಿತ್ಯದ ಮನನವಲ್ಲ,

ಇಂಗ್ಲಿಷ್, ಫ್ರೆಂಚ್, ರಷಿಯನ್ ಸಾಹಿತ್ಯಗಳಿಂದ ವಿಪುಲ ಉದಾಹರಣೆ, ಉದ್ಧರಣೆ, ತುಲನೆ–ಇವೆಲ್ಲಕ್ಕೂ ಮಿಗಿಲಾಗಿ ಸಾಹಿತ್ಯದ ಬಗೆಗಿನ ಚಿರಂತನ ಉತ್ಸಾಹ. ಪಾಠಪಟ್ಟಿಯಲ್ಲಿರುವ ಪುಸ್ತಕದ ಸಾಲು ನಿರ್ಜೀವ ಸರಕಲ್ಲ–ಅದಕ್ಕೆ ರಕ್ತಮಾಂಸ ತುಂಬಿ ಅದು ಜೀವಂತವಾಗಿ ಅಭ್ಯಾಸಿಗಳ ಹೃದಯದಲ್ಲಿ ಸ್ಥಿರಗೊಳ್ಳಬೇಕು. ಅಷ್ಟು ಸಾಹಿತ್ಯೋಲ್ಲಾಸ ಅವರ ಪಾಠಗಳಲ್ಲಿ ತುಂಬಿರುತ್ತಿತ್ತು ಎಂದು ಅವರ ಭಾಗ್ಯಶಾಲಿ ಶಿಷ್ಯಗಣ ಹೇಳುವುದನ್ನು ಕೇಳಿದ್ದೇನೆ. 'ಶ್ರೀ' ಅವರ ಅಶ್ವತ್ಥಾಮನ್ ಪಾಠ ನಡೆಯುತ್ತಿದ್ದಾಗ ಯಾರಾದರೂ ಹೊರಗಡೆಯಿಂದ ಕೇಳಿದರೆ ಇದೇನೋ ಗ್ರೀಕ್ ನಾಟಕ 'ಏಜಾಕ್ಸ್'ನ್ನು ಯಾರೋ ಒಬ್ಬ ಇಂಗ್ಲಿಷ್ ಲೆಕ್ಚರರ್ ಪಾಠ ಹೇಳುತ್ತಿದ್ದನೇನೋ ಅನಿಸಬೇಕಂತೆ. ವಿ.ಸೀ. ಸಾಹಿತ್ಯ ಪ್ರವಚನಕ್ಕೆ ಭಾಷೆಯ ಗಡಿಯೇ ಇರಲಿಲ್ಲ. ಕನ್ನಡದಿಂದ ಇಂಗ್ಲಿಷಿಗೆ, ಇಂಗ್ಲಿಷಿಂದ ಸಂಸ್ಕೃತ ಕಾವ್ಯ ವಿಮರ್ಶೆಗಳಿಗೆ ಸೀಮೋಲ್ಲಂಘನ ಮಾಡಿ ಒಮ್ಮೆ ಅತ್ತ ಒಮ್ಮೆ ಇತ್ತ ಒಲೆದು, ಸಾಹಿತ್ಯದ ನಿರಂಕುಶ ಪ್ರಭುತ್ವವನ್ನು ಎಳೆಯರ ಮನದಲ್ಲಿ ಪ್ರತಿಷ್ಠಾಪಿಸುವುದು ಅವರ ಉದ್ದೇಶವಾಗಿರುತ್ತಿತ್ತು. ಅವರ ಕೈಕೆಳಗೆ ಕಲಿತ ವಿದ್ಯಾರ್ಥಿ ಜೀವನಪರ್ಯಂತ ಅಷ್ಟಿಷ್ಟಾದರೂ ಸಾಹಿತ್ಯದ ರಸಗಂಧವನ್ನು ತನ್ನ ಬದುಕಿನಲ್ಲಿ ಬೆರೆಸಿಕೊಳ್ಳದೆ ಇರಲಾರ– ಎಂಬಷ್ಟು ಪ್ರಭಾವಶಾಲಿ ಪ್ರವಚನ ಕ್ರಮ ಅದು.

* * *

ಇದಿಷ್ಟು ವರ್ಗದೊಳಗಿನ ಶಿಕ್ಷಣ ಕ್ರಮವಾದರೆ ಅಖಿಲ ಕರ್ನಾಟಕದಲ್ಲಿ ಅವರು ನಡೆಸಿಕೊಟ್ಟ ಸಾಹಿತ್ಯಸತ್ರ ನಾಡಿನ ಪುನಶ್ಚೇತನಕ್ಕೆ ಕಾರಣವಾಯಿತು. ಗುಲ್ಬರ್ಗದಿಂದ ಗುಂಡ್ಲು ಪೇಟೆಯವರೆಗೆ, ಉತ್ತರದಿಂದ ದಕ್ಷಿಣಕ್ಕೆ, ಕೋಲಾರದಿಂದ ಕಲ್ಲಡ್ಕಕ್ಕೆ ಪೂರ್ವ ಪಶ್ಚಿಮವಾಗಿ ವಿ.ಸೀ. ಉಪನ್ಯಾಸದ ಗಾಳಿ, ದಾಳಿ ಬೀಸಿತ್ತು. ಎಷ್ಟೊಂದು ಸ್ಥಳಗಳಲ್ಲಿ ಏನು ಮಾತಾಡಿದರೋ ಎಷ್ಟು ಮಾತಾಡಿದರೋ ಧ್ವನಿಮುದ್ರಿಕೆ ಇಲ್ಲದ ಆ ಕಾಲದಲ್ಲಿ ಲೆಕ್ಕವಿಟ್ಟವರಾರು? ಮಾತಾಡುವ ವೇಗವಾದರೂ ಎಂಥದು? ನಯಾಗರವೇ! ವಿಚಾರದ ಓಜಸ್ಸು, ಓಘ ಕೇಳುಗರನ್ನು ಸೆರೆಹಿಡಿದು ಗಂಟೆಗಟ್ಟಲೆ ಕೂರಿಸಬಲ್ಲದು. ಸಾಹಿತ್ಯ ಗ್ರಂಥಗಳು, ಲೇಖಕರು, ಉದ್ದಾಮರು ತನ್ನ ಚೇತನಕ್ಕೆ ತಂದುಕೊಟ್ಟ ಧನ್ಯತೆಯನ್ನು ಶ್ರೋತೃಗಳಿಗೆ ಮುಟ್ಟಿಸುವುದರಲ್ಲಿ ವಿ.ಸೀ. ಸಿದ್ಧಹಸ್ತರು. ಇಂಥ ಉಪನ್ಯಾಸ ಕಾರ್ಯಕ್ರಮ ಗಳಿಗಾಗಿ ಅವರು ಮಂಗಳೂರು, ಪುತ್ತೂರು, ಉಡುಪಿಗಳಿಗೆ ಬಂದಾಗಲೇ ಬರುವ ಸಂದರ್ಭದಲ್ಲೇ ವಿ.ಸೀ. ಅವರ ನಿಕಟ ಪರಿಚಯ ನನಗೆ ಆದದ್ದು; ಎಳೆಯರ ಮೇಲೆ ಅವರು ಇರಿಸುವ ಪ್ರೇಮ, ವಿಶ್ವಾಸ, ಆದರಗಳ ಸವಿಯನ್ನು ನಾನುಂಡದ್ದು. ೩೦–೩೫ ವರ್ಷಗಳ ನಮ್ಮ ಹೊಕ್ಕು ಬಳಕೆಯಲ್ಲಿ ಅವರ ತೆರೆಮನಸ್ಸು ಹೃದಯಗಳ ಪರಿಚಯವೂ ನನಗಾಯಿತು. ನಾನು ಅರ್ಥಶಾಸ್ತ್ರದ ಪುಸ್ತಕಗಳನ್ನು ಬರೆಯಲು ತೊಡಗಿದ ವೇಳೆ ವಿ.ಸೀ. ಮಾರ್ಗದರ್ಶನ ಬಯಸಿದ್ದೆ, ಅವರಿಂದ ಮುನ್ನುಡಿ ಬರೆಸಿದ್ದೆ, ಸಲಹೆ ಕೇಳಿದ್ದೆ. ಅವರ 'ಹಣ ಪ್ರಪಂಚ'ವೇ ನನ್ನ ಆದರ್ಶ ಕೃತಿಯಾಗಿತ್ತು ಈ ವಿಷಯದಲ್ಲಿ. 'ಹಣ ಪ್ರಪಂಚ'ದ ಬಳಿಕ ಹಲ ವರ್ಷಗಳ ತರುವಾಯ ಅವರು ರಿಸರ್ವ್ ಬ್ಯಾಂಕಿನ ಪರಿಚಯ ಗ್ರಂಥವೊಂದನ್ನು ಅನುವಾದ ಮಾಡಿದರು. ಅದನ್ನು ನನಗೆ ಕೊಟ್ಟು ಇದರ ಬಗ್ಗೆ ನಿನ್ನ ಅಭಿಪ್ರಾಯ ಕೊಡು

ಎಂದು ತಾಕೀತು ಮಾಡಿದರು. ನೀವು ಬರೆದ ಮೇಲೆ ಹೇಳುವುದೇನಿದೆ? – ಎಂದೆ. ಹಾಗಲ್ಲ, ಎಲ್ಲ ಅಭಿಪ್ರಾಯಗಳೂ ಗ್ರಾಹ್ಯವೇ ನನಗೆ. ನನ್ನದನ್ನು ನಾನು ಸಮರ್ಥಿಸಿಯೇನು, ಆದರೆ ಬೇರೊಂದು ಇರಲು ಸಾಧ್ಯವಿಲ್ಲವೇ? – ಎಂದು ಕೇಳುತ್ತಿದ್ದರು. ಅವರು ಪ್ರತಿಸಲ ಉಡುಪಿಗೆ ಬರುವಾಗಲೂ ಅವರ ಹೋಲ್ಡಾಲ್ ಸುರುಳಿ ಬಿಚ್ಚಿದರೆ ಅದರಲ್ಲಿ ಲಂಡನ್ 'ಇಕಾನಮಿಸ್ಟ್' ಉದುರುತ್ತಿತ್ತು – ಅದು ಅವರ ನಿತ್ಯ ಪಾಠದ ಪತ್ರಿಕೆ. ಅದರಲ್ಲಿ ಬಂದ ಟೀಕೆಗಳಿಗೆ ಸಮರ್ಪಕವಾದ ಪ್ರತಿ ಟೀಕೆ ಮಾಡಬಲ್ಲಷ್ಟು ಅರ್ಥಶಾಸ್ತ್ರ ಪಾಂಡಿತ್ಯ ಅವರಿಗೆ ಸಮನಿಸಿತ್ತು ಎಂದರೆ ನಂಬುವುದು ಕಷ್ಟ. ಅತಿಪ್ರಸರಣದ ಬಗ್ಗೆ ಅವರಿಗೆ ಅವರದೇ ಆದ ಸೂಚನೆಗಳಿದ್ದವು. ಅದನ್ನು ಸರಕಾರಕ್ಕೆ ಬರೆದು ತಿಳಿಸುವುದನ್ನು ತಮ್ಮ ಕರ್ತವ್ಯವೆಂದು ಭಾವಿಸಿದ್ದರು. ಏನೇ ಸ್ವಕೀಯ ಆರ್ಥಿಕ ತಾಪತ್ರಯವಿದ್ದರೂ 'ಇಕಾನಮಿಸ್ಟ್' ಮುಂತಾದ ಪತ್ರಿಕೆಗಳನ್ನು ಕೊಂಡು(!) ಓದುವುದು ತಮ್ಮ ಧರ್ಮವೆಂದು ತಿಳಿದ ಸಾಹಿತಿಗಳು ಬಿಡಿ, ಅರ್ಥಶಾಸ್ತ್ರಜ್ಞರೆಲ್ಲಿದ್ದಾರೆ? ಸಂಬಳ ಸಾವಿರ ಕೊಡಿ, ಎರಡು ಸಾವಿರವೇ ಮಾಡಿ, ಅದರಲ್ಲಿ ಒಂದಂಶ ತಮ್ಮ ವಿಷಯ ಜ್ಞಾನವನ್ನು ವಿಸ್ತರಿಸುವುದಕ್ಕಾಗಿ ಮೀಸಲಿಡಬೇಕು ಎಂಬ ಪ್ರಜ್ಞೆಯುಳ್ಳ ಅಧ್ಯಾಪಕವರ್ಗ ಈಗ ನಮ್ಮ ಪಂಡಿತಲೋಕದಲ್ಲಿ ಇದೆಯೆ? ಇದ್ದರೂ ಎಷ್ಟು?

* * *

ಒಮ್ಮೆ ಬೆಂಗಳೂರು ಆಕಾಶವಾಣಿಯಲ್ಲಿ 'ಖಾಸಗೀ ವಲಯಕ್ಕೆ ಸಂಪನ್ಮೂಲ ಸರಬರಾಜು' ಎಂಬ ವಿಷಯದಲ್ಲಿ ನನ್ನದೊಂದು ಭಾಷಣ ನಡೆಯಿತು. ಅದನ್ನು ಏರ್ಪಡಿಸಿದವರು ಅಲ್ಲಿನ ಒಂದು ವಿಭಾಗ ಮುಖ್ಯಸ್ಥರಾಗಿದ್ದ ವಿ.ಸೀ. ಅವರೇ. ಭಾಷಣದ ರಿಕಾರ್ಡಿಂಗ್ ಮುಗಿದ ಮೇಲೆ ನನ್ನ ಖಾಸಗೀ 'ಪರ' ವೆಂದು ಅವರಿಗನಿಸಿದ ಅಂಶಗಳನ್ನು ವಿ.ಸೀ. ತರಾಟೆಗೆ ತೆಗೆದುಕೊಂಡರು. ಸರಕಾರದ ಕರ ನೀತಿ, ಸಾಲ ಮೂಲಗಳ ನೀತಿ ಖಾಸಗೀ ವಲಯಕ್ಕೆ ಸಾಕಷ್ಟು ಬಂಡವಾಳ ಸಿಗದಂತೆ ಪ್ರವರ್ತಿಸಿದೆ ಎಂಬ ನನ್ನ ವಾದವನ್ನು ಅಲ್ಲಗಳೆದರು. ಯೋಜನಾತ್ಮಕವಾದ ಇಂಡಿಯಾ ಸರಕಾರದ ನೀತಿಯ ಕುರಿತು ಮೊದಲೆರಡು ಯೋಜನಾ ಕಾಲದಲ್ಲಿ ಅವರು ಸರ್ಕಾರಿ ಧೋರಣೆಗಳನ್ನು – ನೆಹರೂ ಸಮಾಜವಾದವನ್ನು ಕೂಡ –ಹಾರ್ದಿಕವಾಗಿ ಬೆಂಬಲಿಸುತ್ತಿದ್ದರೆಂದು ಕಾಣುತ್ತದೆ. ಒಂದು ಬಡದೇಶದಲ್ಲಿ ದೀನದಲಿತರಿಗೆ, (ಇವರಲ್ಲಿ ಮಧ್ಯಮವರ್ಗವೂ ಸೇರುತ್ತದೆ) ಸರ್ಕಾರವೇ ಮಾ, ಬಾಪ್ ಆಗದೆ ಬೇರೆ ವ್ಯವಸ್ಥೆ ಹೇಗೆ ಸಾಧ್ಯ? ಸಂಪತ್ತಿನ ಅನಾವ್ಯಯ, ಶೇಖರಣೆಗಳಿಂದ ಉಬ್ಬಿದ, ಕೊಬ್ಬಿದ ನವ ಶ್ರೀಮಂತವರ್ಗ, ತನ್ಮೂಲಕ ದೇಶದಲ್ಲಿ ವ್ಯಾಪಿಸಿದ ವಂಚನೆ, ಭ್ರಷ್ಟಾಚಾರಗಳ ಜಾಲಗಳನ್ನು ಕಂಡು ಅವರು ಮನನೊಂದು ಆಡುತ್ತಿದ್ದುದುಂಟು. ಒಬ್ಬ ಪ್ರಜ್ಞಾವಂತ ನಾಗರಿಕನ ನಿಟ್ಟಿನಲ್ಲಿ ಬರವಣಿಗೆ ಮೂಲಕ ಎಷ್ಟು ಸಾಧ್ಯವೋ ಅಷ್ಟು ಸ್ವಕರ್ತವ್ಯ ದೀಕ್ಷೆಯನ್ನು ಹೊತ್ತದ್ದುಂಟು.

* * *

ವಿ.ಸೀ. ಅವರ ದೂರ ಯಾ ನಿಕಟ ಯಾವ ಪರಿಚಯವುಳ್ಳವರಿಗೂ ಅವರ

ವ್ಯಕ್ತಿತ್ವದ ಕೋಮಲತೆ, ನಯ ನಾಜೂಕುಗಳ ತಿಳಿವು ಮೂಡಿಯೇ ಮೂಡುತ್ತದೆ. ವಿ.ಸೀ. ತಮ್ಮ ಮುಂಡಾಸನ್ನು ಕಟ್ಟುವ, ಜೋಪಾನವಾಗಿ ಇರಿಸುವ, ಅದರ ಸ್ವಚ್ಛತೆಯ ಕಾಳಜಿ ಮಾಡುವುದರ ಬಗ್ಗೆ ದಂತಕಥೆಗಳು ಹರಡಿವೆ. ಯಾವುದರ, ಯಾರ ಬಗ್ಗೂ ನಿಷ್ಠುರವಾಗಿ ಆಡದಿರುವ ಅವರ ವ್ರತವನ್ನು ಎಲ್ಲರೂ ಬಲ್ಲರು. ಒಮ್ಮೆ ದೀಪಾವಳಿ ಸಂಚಿಕೆಗೆ ನಾನು ಬರೆದ ವಿಮರ್ಶನ ಲೇಖನದಲ್ಲಿ ಕನ್ನಡದ ಒಂದೆರಡು ಗ್ರಂಥಗಳ ಬಗ್ಗೆ ಕಟುವಾಗಿ ಟೀಕಿಸಿದ್ದನ್ನು ಗಮನಿಸಿ ನನಗೊಂದು ಪತ್ರ ಬರೆದು 'It was ferocious. Did he deserve it?' (ನಿನ್ನ ಟೀಕೆ ಅತಿಭಯಂಕರವಾಗಿತ್ತು. ಅಂಥ ಅಪರಾಧ ಆತ ಮಾಡಿದ್ದನೇ?) ಎಂದು ನನ್ನ ಕೇಳಿದ್ದರು. 'ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್' ಎನ್ನುವ ವ್ರತ ಹಿಡಿದ ಕನ್ನಡದ ಈ ಹಿರಿಯ ವಿಮರ್ಶಕರು ನೋವಾಗದಂತೆ ವಿಮರ್ಶಿಸುವುದರಲ್ಲಿ ಜಾಣರಾಗಿದ್ದರು.

*　　*　　*

೮ ಅಡಿ x ೮ ಅಡಿಯ ಪುಟ್ಟ ಕೊಠಡಿಯೊಳಗೆ ಚಾಮರಾಜಪೇಟೆಯ ನಂಬ್ರ ೧, ೨ನೇ ಬೀದಿಯಲ್ಲಿ ಹಲಗ್ಹಾಲ ಸರಳವಾಗಿ ಜೀವನ ನಡೆಸಿದ ಕನ್ನಡದ ಈ ಹಿರಿ ಚೇತನದ ನೆನಪು ನನಗೆ ಒಂದೆರಡಲ್ಲ. ಪುಸ್ತಕ ಮುದ್ರಣದಲ್ಲಿ ಅವರು ಅಪೇಕ್ಷಿಸುತ್ತಿದ್ದ ಒಪ್ಪ ಓರಣದ ಮಾನದಂಡ ಈ ದೇಶದ್ದಾಗಿರಲಿಲ್ಲ, ಈ ಕಾಲದ್ದೂ ಆಗುವುದು ಸಾಧ್ಯವಲ್ಲ; ಅದು ವಿದೇಶಗಳ, ಅದರಲ್ಲೂ ಆಂಗ್ಲ ಪ್ರಕಟನೆಗಳ ಮಟ್ಟವನ್ನು ಮುಟ್ಟುವಂತೆ ಅವರು ನೋಡಿಕೊಳ್ಳುತ್ತಿದ್ದರು. 'ದ್ರಾಕ್ಷಿ–ದಾಳಿಂಬೆ,' 'ನೆಳಲು–ಬೆಳಕು' – ಈ ಕಾವ್ಯಸಂಕಲನಗಳ ಪ್ರಥಮ ಆವೃತ್ತಿಯನ್ನು ಮುದ್ರಣಕಲೆಯ ಯಾಂತ್ರೀಕರಣ ಈಗಿನಷ್ಟು ಇಲ್ಲದಿರುವಾಗಲು ಕೂಡ ಮಾದರಿ ಪ್ರಕಟನೆಗಳಂತೆ ಹೊರ ತಂದಿದ್ದರು. ಕಾಗದ, ಕವಚ, ಹೊರಚಿತ್ರ, ಒಳಚಿತ್ರ, ಅಚ್ಚು ಮೊಳೆಯ ಗಾತ್ರ ಎಲ್ಲವನ್ನೂ ಪರಾಂಬರಿಸಿ ಪ್ರಕಟನೆ ಒಂದು ಸುಂದರ ಕಲಾಭಿವ್ಯಕ್ತಿಯಾಗುವಂತೆ ಅವರು ಪೇಚಾಡುತ್ತಿದ್ದರು. ಇತ್ತೀಚಿನ ಇಪ್ಪತ್ತು ವರ್ಷಗಳಲ್ಲಿ ದುಬಾರಿ ಬೆಲೆಯಿಂದಾಗಿ ಇಂಥವು ಸಾಧ್ಯವಾಗದಿರುವ ಬಗ್ಗೆ ಕೊರಗುತ್ತಿದ್ದರು. ಇದೇ ಸಂದರ್ಭದಲ್ಲಿ ಅವರ ಸಂಗೀತಶಾಸ್ತ್ರ ಮತ್ತು ಕಲೆಗಳ ಕುರಿತ ಪಾಂಡಿತ್ಯವನ್ನೂ ಪ್ರಸ್ತಾವಿಸಬೇಕು. ಪುರಂದರದಾಸರ ಕುರಿತು ಅವರು ಎರಡು ದಶಕ ಪೂರ್ವದಲ್ಲಿ ಮದರಾಸಿನ ವಿದ್ವತ್ ಸಭೆಯಲ್ಲಿ ಮಾಡಿದ ಭಾಷಣಕ್ಕೆ ತಮಿಳಿನ ಹಿರಿ ತಲೆಗಳು ಕೂಡ ಮಣಿದುವಂತೆ. ಹೀಗೆ ಹಲವು ಕ್ಷೇತ್ರಗಳಲ್ಲಿ ತಮ್ಮ ವಿದ್ವತ್ತಿನಿಂದ ವ್ಯವಹರಿಸಿದ ಒಂದು ಅಪೂರ್ವ ಕನ್ನಡಿಗ ಚೇತನ ಇನ್ನಿಲ್ಲ. ಇಂಥ ಎಷ್ಟೋ ಚೇತನಗಳ ಬಗ್ಗೆ ವಿ.ಸೀ. ಅವರೇ ಬರೆದು ಸಮಕಾಲೀನ ಸಾಹಿತ್ಯೇತಿಹಾಸಕ್ಕೆ ಆಕರ ಸಾಮಗ್ರಿ ಒದಗಿಸಿದ್ದಾರೆ. ಅವರ ಮರಣಾನಂತರ ಆದರೂ ವಿ.ಸೀ. ಅವರ ಬಗ್ಗೆ, ಅವರ ಅಖಿಲ ಕರ್ನಾಟಕ ವ್ಯಾಪ್ತಿಯ ಕನ್ನಡ ಕಾಯಕದ ಬಗ್ಗೆ ಒಂದು ಸಂಘಟಿತ ಗ್ರಂಥ ಯತ್ನ ನಡೆದರೆ ಕನ್ನಡದ ಎರಡು ತಲೆಮಾರಿನ ಸಾಹಿತ್ಯೇತಿಹಾಸ ನಿರ್ಮಾಣಕ್ಕೆ ಶ್ರೇಷ್ಠ ಸಾಮಗ್ರಿ ಒದಗೀತು. ಅವರ ಶಿಷ್ಯಕೋಟಿ ಎಚ್ಚತ್ತು, ವಿ. ವಿ. ನಿಲಯಗಳನ್ನೆಚ್ಚರಿಸಿ, ಮಾಡಬೇಕಾದ ಒಂದು ಅವಶ್ಯ ಕರ್ತವ್ಯ ಇದು ಎಂದು ತೋರುತ್ತದೆ. ಕವಿ ಋಷಿ ಋಣವನ್ನು ಕನ್ನಡನಾಡು

ನಿಗಿಸಿಕೊಳ್ಳಬೇಕು. ಪೂರ್ವಸ್ಮರಣೆಯಿಂದಲಾದರೂ ಮರುಗಾಡಿನಲ್ಲಿ ಹರಿವ ಹೊಳೆಯಂತಿರುವ ನಮ್ಮ ಆರ್ವಾಚೀನ ಸಾಹಿತ್ಯವಾಹಿನಿ ನಳನಳಿಸುವುದೇ ಎಂದು ಪರೀಕ್ಷಿಸಬೇಕು. ಅಲ್ಲಿಯವರೆಗೆ ಕಣ್ಣಿಂದ ಮರೆಯಾದರೂ ಕನ್ನಡ ಸಾಹಿತ್ಯಾಕಾಶದಲ್ಲಿ ಧ್ರುವತಾರೆಯಾಗಿ ನಿಂತ ಕವಿ ಚೇತನಕ್ಕೆ ನಮೋ ಎನ್ನೋಣ.

('ಲೋಕಾಭಿರಾಮ', ಸಂ. ೪)

ಜೀವನದ ಕಾಂಕ್ಷೆಗಳನ್ನು ರೂಪಿಸಿದವರು

"ಪಿ.ಸೀ. ಯವರೊಡನೆ ನನ್ನ ಆತ್ಮೀಯ ಸಂಪರ್ಕ ಕಳೆದ ನಲುವತ್ತು ವರ್ಷಗಳ ಮೇಲಿಂದ ಇರುವುದಾದರೂ ಅವರ ವಿದ್ವತ್ತಿನ ಆಳ ನನಗಿನ್ನೂ ಎಟಕಲಿಲ್ಲ; ಅವರ ಸೌಜನ್ಯ, ಪ್ರೀತಿ, ವಿಶ್ವಾಸಗಳ ಗಾತ್ರ ಅಳೆಯಲು ನನಗಿನ್ನೂ ಸಾಧ್ಯವಾಗಲಿಲ್ಲ.

ವಿಷಯ ಯಾವುದೇ ಇರಲಿ, ಅವರೊಡನೆ ಒಂದು ಹತ್ತು ನಿಮಿಷ ಮಾತುಕತೆ ಬೆಳೆಸಿದರೆ ಸಾಕು, ನನ್ನ ಈ ಒಣೆಯ ವಯಸ್ಸಿನಲ್ಲೂ ನನಗೆ ಆ ವಿಷಯವನ್ನು ಕುರಿತು ಒಂದು ಹೊಸ ಬೆಳಕು, ಒಂದು ಹೊಸ ದೃಷ್ಟಿ, ಒಂದು ಹೊಸ ಅನುಭವ ಕೂಡಲೇ ಅವರಿಂದ ಲಭಿಸುವುದು. ಸಾಹಿತ್ಯದ ಯಾವ ಅಂಗವೇ ಇರಲಿ, ಲಲಿತ ಕಲೆಯ ಯಾವ ರೂಪವಾದರೂ ಆಗಲಿ (ಚಿತ್ರ, ಶಿಲ್ಪ, ನೃತ್ಯ, ರಂಗಭೂಮಿ ಇತ್ಯಾದಿ), ಮತ, ದರ್ಶನಗಳ ಯಾವ ಸ್ವರೂಪವೇ ಇರಲಿ, ಮನೋವಿಜ್ಞಾನ, ಆರ್ಥಿಕ ವಿಜ್ಞಾನ, ಅನೇಕ ವೇಳೆ ಭೌತವಿಜ್ಞಾನ ಕೂಡ – ಇವುಗಳಲ್ಲೆಲ್ಲ ಅವರಿಗಿರುವ ಜ್ಞಾನ ಸಂಪತ್ತು ಅಗಾಧವಾದುದು. ಅದನ್ನು ಅವರು ನಿಶ್ಚಿತ ಮಾತುಗಳಿಂದ ನಿವೇದಿಸಿಕೊಳ್ಳುವ ರೀತಿಯೂ ಅಚ್ಚರಿಯನ್ನು ಉಂಟುಮಾಡುವಂತಹದು. ಇದು ಅವರೊಡನೆ ಒಡನಾಡಿದವರಿಗೆಲ್ಲ ತಿಳಿದ ವಿಷಯವೇ. ಇಷ್ಟು ವಿದ್ವತ್ತು, ವರ್ಚಸ್ಸು ಅವರಲ್ಲಿ ಮನೆಮಾಡಿಕೊಂಡಿದ್ದರೂ ಅವರ ಸೌಜನ್ಯ, ನಮ್ರತೆ, ಆತ್ಮೀಯ ಭಾವ, ಸರಳತೆ ಯಾರ ಮನಸ್ಸನ್ನಾದರೂ ಆಕರ್ಷಿಸದೆ ಇರಲಾರವು.

ಮನಸ್ಸು ಕುಗ್ಗಿದಾಗ, ಎಲ್ಲಿಯೂ ಬೆಳಕನ್ನು ಕಾಣದಿದ್ದಾಗ, ನಾನು ಅನೇಕ ವೇಳೆ ಅವರ ಮನೆಗೆ ಹೋಗಿ ಅವರ ಬಳಿ ಸುಮ್ಮನೆ ಕುಳಿತುಕೊಂಡಿದ್ದೇನೆ. ನನ್ನ ಮನಸ್ಸಿನ ಸ್ಥಿತಿಯನ್ನು ಅವರಿಗೆ ತಿಳಿಸದಿದ್ದರೂ ಬರೇ ಅವರ ವಿದ್ವತ್ತಿನ ಮಾತುಕತೆಯಿಂದ – ವಿಷಯವು ಏನೇ ಇದ್ದಿರಲಿ – ನಾನು ಹುರುಪುಗೊಂಡಿದ್ದೇನೆ, ಪುನಃ ಚೇತರಿಸಿಕೊಂಡಿದ್ದೇನೆ. ಅಂತಹ ಪ್ರಚೋದಕ ಶಕ್ತಿ ಅವರ ಮಾತುಗಳಲ್ಲಿ ಸಹಜವಾಗಿ ಅಡಕವಾಗಿರುತ್ತದೆ....

ನನ್ನ ಜೀವನದ ಕಾಂಕ್ಷೆಗಳನ್ನು ರೂಪಿಸಿದ ಕೆಲವೇ ಮಹಸೀಯರಲ್ಲಿ ಪಿ.ಸೀ.ಯವರ ಸ್ಥಾನ ಹಿರಿದಾಗಿದೆ."

ಪ. ರಮಾನಂದ

'ಪಿ.ಸೀ.–ಒಳ್ಳೆ' ಪು. ೩೨೦–೨೧

ಸುಸಂಸ್ಕೃತ ಹಿರಿಯ ಜೀವ

ಎಲ್. ಎಸ್. ಶೇಷಗಿರಿ ರಾವ್

ನಮ್ಮ ಮನಸ್ಸು, ಸ್ವಭಾವ ರೂಪುಗೊಳ್ಳುತ್ತಿರುವ ಕಾಲದಲ್ಲಿ ತಾವೇ ಮೇಲ್ಪಂಕ್ತಿಯಾಗಿ, ಹೇಳದೆಯೇ ಕಲಿಸುವ, ಕಲಿಸುತ್ತಿದ್ದೇನೆ ಎಂದು ತಿಳಿಯದೆಯೇ ಕಲಿಸುವ ಹಿರಿಯರ ಸಾಮೀಪ್ಯ ಲಭ್ಯವಾಗುವುದು ಒಂದು ಪುಣ್ಯ. ಅಂತಹ ಪುಣ್ಯವಂತ ನಾನು. ಹಾಗೆ (ಸುಲಭವಾಗಿ ಕಲಿಯಲೊಲ್ಲದ ನನಗೂ) ಪಾಠ ಕಲಿಸಿದವರಲ್ಲಿ ಒಬ್ಬರು ವಿ.ಸೀ.

ಅವರ ವಿದ್ಯಾರ್ಥಿಯಾಗಿ ಪಡೆದುಕೊಂಡ ತಿಳಿವಳಿಕೆ ಕಡಮೆಯಲ್ಲ. ಸೆಂಟ್ರಲ್ ಕಾಲೇಜಿನಲ್ಲಿ ಒಂದು ವರ್ಷ 'ಕುಮಾರವ್ಯಾಸ ಪ್ರಶಸ್ತಿ' ಯ ಕೆಲವು ಲೇಖನಗಳನ್ನು ಪಾಠ ಹೇಳಿದರು. ಇನ್ನೊಂದು ವರ್ಷ ಕಾಳಿದಾಸನ 'ಶಾಕುಂತಲ' ಪಾಠ ಹೇಳಿದರು. ಆ ಕೃತಿಗಳ ವಿಷಯದಲ್ಲಿ ಅವರು ತಿಳಿಸಿಕೊಟ್ಟದ್ದು ಮೌಲಿಕವಾದದ್ದು. ಅದನ್ನು ನಾನೀಗ ಪ್ರಸ್ತಾಪಿಸುವುದಿಲ್ಲ. ಅವರು ಸಾಹಿತ್ಯವನ್ನು ಹೇಗೆ ಓದಬೇಕು ಎಂದು ತೋರಿಸಿಕೊಟ್ಟ ಗುರುಗಳು. ಕೃತಿಯ ಒಳಹೊಕ್ಕು ಬದುಕಿನೊಂದಿಗೆ ಅದಕ್ಕೆ ಸಂಬಂಧ ತಂದುಕೊಳ್ಳಬೇಕು ಎನ್ನುವುದನ್ನೂ ಕೃತಿಯನ್ನು ಅದರ ಕಾಲದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಂದರ್ಭದಲ್ಲಿಟ್ಟು ನೋಡಬೇಕು ಎನ್ನುವುದನ್ನೂ ತೋರಿಸಿಕೊಟ್ಟ ಗುರುಗಳು ಅವರು. 'ಕುಮಾರವ್ಯಾಸ ಪ್ರಶಸ್ತಿ' ಹೇಳುವಾಗ (ಅವರೇ ಬರೆದ) 'ಭಾರತಗಳಲ್ಲಿ ಶ್ರೀಕೃಷ್ಣ' ಲೇಖನವನ್ನು ಪಾಠ ಹೇಳಬೇಕಾಯಿತು. ಆ ಪಾಠವನ್ನು ಕೇಳಿದ್ದು ನನಗೊಂದು ವಿಶಿಷ್ಟ ಅನುಭವ. ಕೇಳುತ್ತ ಕೇಳುತ್ತ ನನಗೆ ಕೃಷ್ಣ ಜೀವಂತ ವ್ಯಕ್ತಿಯಾದ. ಹತ್ತಾರು ರಾಜ್ಯಗಳ ಕಿತ್ತಾಟ ಘರ್ಷಣೆಗಳನ್ನು ಕಂಡು, ರಾಜರ ದಬ್ಬಾಳಿಕೆಯನ್ನು ಕಂಡು, ತರುಣನಾಗಿದ್ದಾಗಲೇ ಇಡೀ ಭಾರತ ಒಂದು ದೇಶವಾಗಿ ಒಂದು ಒಳ್ಳೆಯ ಆಡಳಿತದಲ್ಲಿ ಬದುಕುವ ಗುರಿಯನ್ನು ಮನಸ್ಸಿನಲ್ಲಿಟ್ಟುಕೊಂಡು ವಿಶಾಲವಾದ, ವಿವರವಾದ ಯೋಜನೆಗಳನ್ನು ರೂಪಿಸಿಕೊಂಡು, ಗುರಿ ಮತ್ತು ಮಾರ್ಗ ಎರಡನ್ನೂ ಸ್ಪಷ್ಟ ಮಾಡಿಕೊಂಡು, ಮಾನವೀಯ ಸಂಬಂಧಗಳನ್ನು ಕಡೆಗಣಿಸದೆ ತನ್ನ ಗುರಿಯನ್ನು ಮರೆಯದೆ ಮಹಾನ್ ಸಾಧನೆಯನ್ನು ಮಾಡಿದ ರಾಜನೀತಿಜ್ಞನಾಗಿ ಅವನನ್ನು ಚಿತ್ರಿಸಿದರು. ಪವಾಡ ಪುರುಷನಾಗಿದ್ದ ಕೃಷ್ಣ ಇಂದಿಗೂ ಎಂದಿಗೂ ಪ್ರಸ್ತುತವಾಗುವ ಮಹತ್ಕಾರ್ಯ ವಿಧಾನದ ಶಿಲ್ಪಿಯಾಗಿ ನಮ್ಮ ಮುಂದೆ ರೂಪತಾಳಿ ನಿಂತ. 'ಅಭಿಜ್ಞಾನ ಶಾಕುಂತಳ'ದ ಶಿಲ್ಪ ಮೊದಲಾದುವನ್ನು ವಿವರಿಸಿದರು. ಜೊತೆಗೆ, ಕಣ್ವಾಶ್ರಮ, ರಾಜಧಾನಿ,

ಮರೀಚಾಶ್ರಮಗಳ ಜೀವನ ವಿಧಾನಗಳನ್ನು ಪಕ್ಕಪಕ್ಕದಲ್ಲಿಟ್ಟು ತೋರಿಸಿದರು. (ನಾನು ಅವರ ವಿದ್ಯಾರ್ಥಿಯಾಗಿದ್ದ ನಂತರ ಎರಡನೇ ವರ್ಷದಲ್ಲಿ ನಾನು ಸೆಂಟ್ರಲ್ ಕಾಲೇಜಿನ ಇಂಗ್ಲಿಷ್ ಆನರ್ಸ್ ತರಗತಿಗೆ ತೌಲನಿಕ ನಾಟಕದ ಅಧ್ಯಯನದಲ್ಲಿ 'ಶಾಕುಂತಳ' ಪಾಠ ಹೇಳಬೇಕಾಯಿತು. ವಿ.ಸೀ. ಅವರು ಪಾಠ ಮಾಡಿದ್ದ ರೀತಿ ನನಗೆ ತುಂಬಾ ನೆರವಾಯಿತು. ಅವರ ಅಭಿಪ್ರಾಯಗಳನ್ನೆಲ್ಲ ನಾನು ಒಪ್ಪದೆ ಹೋದರೂ ಸಾಹಿತ್ಯ ಕೃತಿಯ ಅಧ್ಯಯನದ ರೀತಿ ನನಗೆ ಸಹಾಯ ಮಾಡಿತು.)

ಆ ಕಾಲದಲ್ಲಿಯೇ ನಾನು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯನೂ ಕ್ರಿಯಾಶೀಲ ಕಾರ್ಯಕರ್ತನೂ ಆದದ್ದರಿಂದ ಅದರ ಒಬ್ಬ ಉಪಾಧ್ಯಕ್ಷರಾಗಿದ್ದ ವಿ.ಸೀ. ಅವರಿಗೆ ಕ್ರಮೇಣ ಸಮೀಪವಾದೆ. (ಇನ್ನೊಬ್ಬ ಉಪಾಧ್ಯಕ್ಷರು ಜಿ. ಪಿ. ರಾಜರತ್ನಂ ಅವರು.) ಈಗ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಗ್ರಂಥಾಲಯದ ಸ್ಥಳದಲ್ಲಿ ಆಗ ಒಂದು ಸಣ್ಣ ಕಟ್ಟಡ. ಅದರ ಮುಂಭಾಗ ಹೋಟಲು. ಹಿಂದುಗಡೆ ಎರಡು ಬಹು ಸಣ್ಣ ಸಣ್ಣ ಕೊಠಡಿಗಳು. ಒಂದು ಕನ್ನಡ ಅಧ್ಯಾಪಕರ ಕೊಠಡಿ. (ಅಲ್ಲಿ ಸಂಘದ ಪ್ರಕಟಣೆಗಳು ಕಟ್ಟುಕಟ್ಟಾಗಿ ಹಿಂದೆ ಸೇರಿದ್ದವು. ಇಬ್ಬರು ಅಧ್ಯಾಪಕರು ಕುಳಿತುಕೊಳ್ಳುವುದು ಕಷ್ಟವಾಗಿತ್ತು. ಸಾಮಾನ್ಯವಾಗಿ ಇಬ್ಬರಲ್ಲಿ ಒಬ್ಬರೇ ಅಲ್ಲಿ ಇರುತ್ತಿದ್ದುದು.) ಸಂಘದ ಕೆಲಸವನ್ನು ನಾವು ಸಂಜೆ ತರಗತಿ ಮುಗಿದನಂತರ ಮಾಡಬೇಕು. ಉತ್ಸಾಹದಿಂದ ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಿದ್ದೆವು. ಎಲ್ಲಕ್ಕೂ ಪ್ರೋತ್ಸಾಹ ನಮ್ಮ ಇಬ್ಬರು ಗುರುಗಳದು. ಇಬ್ಬರೂ ಎಲ್ಲ ವಿವರಗಳಿಗೆ ಗಮನ ಕೊಡುವರು, 'ಪ್ರಾರ್ಥನೆಗೆ ಯಾರು ಯೋಚಿಸಿದ್ದೀರ?' 'ಹೂವಿನ ಹಾರ ಯಾರು ಕೊಂಡುಕೊಂಡು ಬರುತ್ತಾರೆ' 'ಆಹ್ವಾನ ಪತ್ರಗಳು ಅಂಚೆಗೆ ಹೋದುವೆ?' — ಹೀಗೆ. ನಾವು ರಾಳ್ಳಪಲ್ಲಿ ಅನಂತಕೃಷ್ಣಶರ್ಮರಂತಹ ಹಿರಿಯರನ್ನು ಆಹ್ವಾನಿಸಿದರೆ ಮೊದಲು ಪರಿಚಯ ಪತ್ರ ಕೊಡುವರು. ಆದರೆ ಅವರು ವೇದಿಕೆಯ ಮೇಲೆ ಬರುತ್ತಿರಲಿಲ್ಲ. ಸಾಮಾನ್ಯವಾಗಿ ಬೇರೊಬ್ಬ ಹಿರಿಯ ಅಧ್ಯಾಪಕರನ್ನು ಅಧ್ಯಕ್ಷತೆಗೆ ಕರೆಯುವರು. ಉಳಿದುದೆಲ್ಲ ವಿದ್ಯಾರ್ಥಿಗಳ ಕಾರುಬಾರು; ಚುರುಕು–ದಕ್ಷರು ಎಂಬ ಕೀರ್ತಿ ಎಲ್ಲ ಅವರಿಗೆ. ಯಾವ ವಿದ್ಯಾರ್ಥಿಯನ್ನೂ ಅವರು 'ನೀನು' ಎಂದು ಕರೆದದ್ದಿಲ್ಲ – 'ನೀವು' ಎಂದೇ ಕರೆಯುವರು. ಸಂಜೆ ನಾವು ಸಂಘದ ಕೊಠಡಿಯಲ್ಲಿ ಕೆಲಸ ಮಾಡುತ್ತಿದ್ದರೆ, ಅಲ್ಲಿಗೇ ಮಸಾಲೆ ದೋಸೆ, ಕಾಫಿ ಕಳುಹಿಸುವರು, ಇಲ್ಲವೇ ತಮ್ಮ ಕೊಠಡಿಗೆ ತಿಂಡಿತರಿಸಿ ನಮ್ಮನ್ನು ಕರೆಯುವರು. ನಾವು ಸಂಕೋಚಪಟ್ಟುಕೊಂಡರೆ, "ಎಷ್ಟು ದೂರದಿಂದ ಬರುತ್ತೀರೊ, ಮನೆಗೆ ಹೋಗುವುದು ಎಷ್ಟು ಹೊತ್ತಾಗುವುದೊ, ಸಂಘದ ಕೆಲಸ ಮಾಡುತ್ತಿದ್ದೀರಿ" ಎನ್ನುವರು. ಆ ತಿಂಡಿ ಕಾಫಿಗಳು ಈ ಗುರುಗಳಲ್ಲಿ ಯಾರು ಆ ಸಂಜೆ ಅಲ್ಲಿದ್ದರೆ ಅವರ ಖರ್ಚಿನಲ್ಲಿ.

ವಿ.ಸೀ. ಸ್ವಲ್ಪ ಮುಂಗೋಪದವರು, ಅತಿ ಸೂಕ್ಷ್ಮದ ಸ್ವಭಾವ, ಎಂದಾದರೂ ನಮ್ಮ ಪ್ರೀತಿ ಗೌರವಗಳನ್ನು ಗೆದ್ದು ಬಿಟ್ಟರು. ಅವರ ಮನೆಗೆ ಹೋದಾಗ ನಮಗೆ ಅವರ ಆತ್ಮೀಯತೆಯ ಅರಿವಾಗುತ್ತಿತ್ತು. ಸಾಕಷ್ಟು ದೊಡ್ಡದಾಗಿದ್ದ ಕೊಠಡಿ ಬಹು ಚಿಕ್ಕದಾಗಿ ಕಾಣುವಷ್ಟು ಪುಸ್ತಕಗಳು– ಸಂಸ್ಕೃತ ಸಾಹಿತ್ಯ, ಕನ್ನಡ ಸಾಹಿತ್ಯ, ಇಂಗ್ಲಿಷ್ ಸಾಹಿತ್ಯ

ಅರ್ಥಶಾಸ್ತ್ರ, ತತ್ವಶಾಸ್ತ್ರ, ಚರಿತ್ರೆ ಮುಂತಾಗಿ ಹಲವು ಜ್ಞಾನಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕಗಳು. ಪಂಚೆಯುಟ್ಟು, ಒಂದು ಮಲ್ ಬನಿಯನ್ ಹಾಕಿಕೊಂಡ ಗುರುಗಳು ಚಾಪೆಯ ಮೇಲೆ ಕುಳಿತು ನಮ್ಮೊಡನೆ ಮಾತನಾಡುವರು. ಅವರ ಆತಿಥ್ಯವಂತೂ ಪ್ರಸಿದ್ಧವಾದದ್ದು. ನಮಗೆ ಪಿ.ಸೀ. ಅವರಲ್ಲಿ ಎಷ್ಟು ಪ್ರೀತಿ ಗೌರವಗಳು ಮೂಡಿದುವೆಂದರೆ ಒಮ್ಮೆ ಅಂತರ್‌ಕಾಲೇಜು ಚರ್ಚಾ ಸ್ಪರ್ಧೆಯಲ್ಲಿ ನಾನೂ ನನ್ನ ಸ್ನೇಹಿತರೂ (ಮುಂದೆ 'ಕತೆಗಾರ' ಪತ್ರಿಕೆಯ ಸಂಪಾದಕರು) ಜಿ. ಎ. ನರಸಿಂಹಮೂರ್ತಿ ಸಂಘಕ್ಕೆ ಬಹುಮಾನವನ್ನು ತಂದುಕೊಟ್ಟೆವು. ನನಗೆ ಮೊದಲನೆ ಬಹುಮಾನ, ಸ್ನೇಹಿತರಿಗೆ ಮೂರನೆ ಬಹುಮಾನ. ಪುಟ್ಟಣ್ಣ ಶೆಟ್ಟಿ ಪುರಸಭೆಯಲ್ಲಿ ಬಹುಮಾನದ ಪ್ರಕಟಣೆ ಆದಾಗ ರಾತ್ರಿ ಹತ್ತು ಗಂಟೆ. ಆ ಹೊತ್ತಿನಲ್ಲಿ ಇಬ್ಬರೂ ಬಹುಮಾನದ ಬಟ್ಟಲುಗಳನ್ನು ಹಿಡಿದುಕೊಂಡು ಚಾಮರಾಜಪೇಟೆಗೆ ಅವರ ಮನೆಗೆ ಹೋಗಿ ಬಾಗಿಲು ತಟ್ಟಿದೆವು. ಆಗ ಅವರ ಅಭಿನಂದನೆ, ಕಾಫಿ.

'ಪಿ.ಸೀ. ಇಂಗ್ಲಿಷಿನಲ್ಲಿ ಕನ್ನಡ ಪಾಠ ಹೇಳುವವರು' ಎಂಬ ಮಾತನ್ನು ಯಾರು ಹೇಳಿದರೋ, ಮಾತು ಚಮತ್ಕಾರವಾಗಿದೆ ಎಂದು ಬಾಯಿಂದ ಬಾಯಿಗೆ ದಾಟಿತು. ಪಿ.ಸೀ. ಅವರ ಪರಿಚಯವಿಲ್ಲದವರೂ ಅವರ ಹೆಸರು ಕೇಳಿದರೆ, 'ಓ, ಇಂಗ್ಲಿಷಿನಲ್ಲಿ ಕನ್ನಡ ಪಾಠ ಹೇಳುವವರು' ಎನ್ನುವಂತಾಯಿತು. ಇದು ವಿನೋದದ ಮಾತಷ್ಟೇ ಅಲ್ಲ, ಪಿ.ಸೀ. ಅವರಿಗೆ ಅಪಚಾರ. ಇತರ ಕನ್ನಡ ಅಧ್ಯಾಪಕರಿಗಿಂತ ಹೆಚ್ಚು ಇಂಗ್ಲಿಷ್ ಪದಗಳನ್ನು ವಾಕ್ಯಗಳನ್ನು ಅವರು ಬಳಸುತ್ತಿದ್ದರೆನ್ನುವುದು ನಿಜ. ಆದರೆ ಇದು ಹೋಲಿಕೆಯಿಂದ ಮಾತ್ರ ಒಪ್ಪಬಹುದಾದ ಮಾತು. ಕನ್ನಡದ ಶಬ್ದಕ್ಕೆ ಸಮಾನವಾಗಿ ಇಂಗ್ಲಿಷಿನಲ್ಲಿ ಒಂದು ಶಬ್ದವಿದ್ದರೆ ಅದನ್ನು ಹೇಳಿ, ಇಂಗ್ಲಿಷ್ ಶಬ್ದವನ್ನು ಹೇಳುವರು. ಪ್ರಸಿದ್ಧವಾದ ಅಥವಾ ಪರಿಣಾಮ ಕಾರಿಯಾದ ಇಂಗ್ಲಿಷ್ ಶಬ್ದವನ್ನು ಹೇಳುವರು, ಆದರೆ ಕನ್ನಡ ಅರ್ಥವನ್ನು ತಿಳಿಸದೆ ಇರುತ್ತಿರಲಿಲ್ಲ. (ದುಷ್ಯಂತನು ಎಷ್ಟು ಧರ್ಮಿಷ್ಠ ರಾಜ ಎಂಬುದರತ್ತ ಗಮನ ಸೆಳೆಯುತ್ತ ರಾಜತ್ವವನ್ನು ಕುರಿತು ವಿವರಿಸಿದರು, ಅಲ್ಲಿಂದ ಪ್ರಜಾಪ್ರಭುತ್ವದ ಸಾಧಕ – ಮಿತಿಗಳು. ನಿರಂಕುಶ ರಾಜನಿಗೆ ಬರಬಹುದಾದ ಗತಿಯನ್ನು ವಿವರಿಸುತ್ತ, ಕಡೆಗೆ ಓಡಿಹೋಗಲು ಒಂದು ಕುದುರೆ ಸಿಕ್ಕರೆ ಸಾಕು ಎನ್ನುವ ಸ್ಥಿತಿಗೆ ಬರುತ್ತಾನೆ ಎಂದು, 'A horse! a horse! my kingdom for a horse' ಎಂಬ ಪಂಕ್ತಿಯನ್ನು ಉದ್ಧರಿಸಿದರು). ಅವರ ಓದು ವಿಸ್ತಾರ. ಕಾಲೇಜಿನಲ್ಲಿ ಆನರ್ಸ್ ತರಗತಿಗೆ ಪಾಠವನ್ನು ಹೇಳುತ್ತಿದ್ದ ನಾನು, ಸಮಕಾಲೀನ ಇಂಗ್ಲಿಷ್ ಸಾಹಿತ್ಯ ವಿಮರ್ಶೆಯ ಹಲವು ವಿಚಾರರೀತಿಗಳನ್ನು ಪರಿಚಯ ಮಾಡಿಕೊಂಡದ್ದು ಅವರೊಡನೆ ಮಾತನಾಡುತ್ತ. 'Achieved content', 'will to form' ಎನ್ನುವ ಪದ ಮೊದಲು ಕೇಳಿದ್ದು ಅವರಿಂದ. ಟಿ. ಎಸ್. ಎಲಿಯೆಟ್, ಎಜ್ರಾ ಪೌಂಡ್ ಮೊದಲಾದವರ ವಿಷಯ ಅಧಿಕಾರಯುತವಾಗಿ ಮಾತಾಡಬಲ್ಲವರು ಅವರು. ಸೆಂಟ್ರಲ್ ಕಾಲೇಜು 'ಟೈಮ್ಸ್ ಲಿಟೆರರಿ ಸಪ್ಲಿಮೆಂಟ್' ತರಿಸುತ್ತಿರಲಿಲ್ಲ; ಪಿ.ಸೀ. ತರಿಸುತ್ತಿದ್ದರು. ವಿಮರ್ಶೆಯಲ್ಲಿ ಬಂದ ಹೊಸ ಪರಿಕಲ್ಪನೆಗಳನ್ನೂ ಪಾರಿಭಾಷಿಕ ಶಬ್ದಗಳನ್ನೂ ಅವರ ಮಾತಿನಲ್ಲಿ, ಬರಹದಲ್ಲಿ ಕಾಣುತ್ತಿದ್ದೆವು. ಇತರ ಸಂದರ್ಭಗಳಲ್ಲಿ ಬಂದ ಸೊಗಸಾದ ಮಾತುಗಳ ಕಡೆ ನಮ್ಮ

ಲಕ್ಷ್ಯ ಕೆಳೆಯುತ್ತಿದ್ದರು. ಒಮ್ಮೆ 'ಟೈಮ್ಸ್ ಲಿಟೆರರಿ ಸಪ್ಲಿಮೆಂಟ್'ನಲ್ಲಿ ಒಬ್ಬ ಮಹಾಸಿಡುಕನ ವಿಷಯ ಕೆಲವು ವಾಕ್ಯಗಳಿದ್ದವು. ಒಂದು ವಾಕ್ಯ: How dare you commit a joke in his presence? – ಎನ್ನುವ ವಾಕ್ಯವಿತ್ತು. (Commit ಎನ್ನುವ ಪದವನ್ನು ಇಂಗ್ಲಿಷಿನಲ್ಲಿ ತಪ್ಪು ಮಾಡು, ಅಪರಾಧ ಮಾಡು ಎನ್ನುವಾಗ ಬಳಸುತ್ತಾರೆ. ಆ ಮನುಷ್ಯನ ಎದುರಿಗೆ ಜೋಕ್ ಮಾಡುವುದೇ ಅಪರಾಧವಾಗುತ್ತಿತ್ತು ಎಂದು ಇಲ್ಲಿ ಆ ಪದವನ್ನು ಬಳಸಿ ಸೂಚಿಸಿತ್ತು.) ನಾನು ಪಿ.ಸೀ. ಅವರನ್ನು ನೋಡಲು ಹೋದಾಗ ಆಗ ತಾನೆ ಲೇಖನವನ್ನು ಓದಿ ಮುಗಿಸಿದ್ದರು. ವಾಕ್ಯವನ್ನು ನನಗೆ ಹೇಳಿ ಸಂತೋಷ ಪಟ್ಟು ಕೊಂಡರು. ಇಂಗ್ಲಿಷಿನ ಮೇಲೆ ಅವರ ಪ್ರಭುತ್ವ ಅಸಾಧಾರಣವಾದದ್ದು. ಅವರು ಇಂಗ್ಲಿಷ್ ಮಾತುಗಳನ್ನು ಕನ್ನಡ ತರಗತಿಯಲ್ಲಿ ಬಳಸುತ್ತಿದ್ದದ್ದು ನಿಜ. ಆದರೆ ಈ ಮಾತಿನಲ್ಲಿ ಕನ್ನಡದಲ್ಲಿ ವಿದ್ಯಾರ್ಥಿಗಳಿಗೆ ಸಾಕಷ್ಟು ತಿಳಿಸಿ ಕೊಡುತ್ತಿರಲಿಲ್ಲ ಎನ್ನುವ ಧ್ವನಿ ಇದ್ದರೆ ಅದು ಪಿ.ಸೀ.ಗೆ ಅನ್ಯಾಯ.

ಅವರ ವಿಶ್ವಾಸವನ್ನು ಬಳಸಿಕೊಂಡು ನಾನು ಅವರಿಗೆ ತೊಂದರೆ ಕೊಟ್ಟಿದ್ದುಂಟು. ಮಡಿಕೇರಿಗೆ ಅವರನ್ನು ಆಹ್ವಾನಿಸಿದೆ. ನಾನು ಸೂಚಿಸಿದ ದಿನಾಂಕದಂದು 'ಬರಲು ಸಾಧ್ಯವಿಲ್ಲ' ಎಂದು ಬರೆದರು. ಆ ಕಾಗದದ ಹಿಂದೆಯೇ ತಂತಿ ಬಂತು. 'Ignore telegram. Arriving.' ಕಾಲೇಜಿನಲ್ಲಿ ಬಹು ಸೊಗಸಾದ ಭಾಷಣ ಮಾಡಿದರು. ಮನೆಯಲ್ಲಿ ಮಾತನಾಡುತ್ತಿದ್ದಾಗ ಹೇಳಿದರು, "ನೋಡಿ ನೀವು ಸೂಚಿಸಿದ ದಿನದ ಹಿಂದಿನ ದಿನ ನಮ್ಮ ತಂದೆಯವರ ದಿನ. ನನ್ನ ಆರೋಗ್ಯವೂ ಚೆನ್ನಾಗಿರಲಿಲ್ಲ. ಮರುದಿನ ಇಷ್ಟು ದೂರ ಪ್ರಯಾಣ ಮಾಡುವುದು ಕಷ್ಟವಾಗುತ್ತದೆ ಎಂದು ಬರುವುದಿಲ್ಲ ಅಂತ ಕಾಗದ ಬರೆದೆ ಆಮೇಲೆ, 'ಶೇಷಗಿರಿ ರಾಯರು ಕರೆದರೆ ನನಗೆ ಸ್ವಲ್ಪ ಆರೋಗ್ಯವಿಲ್ಲ ಎಂದು ಹೋಗದೆ ಇರುವುದು ಹೇಗೆ ಅಂತ ಬಂದು ಬಿಟ್ಟೆ," ಎಂದರು. ಕೋಲಾರದ ಸರ್ಕಾರಿ ಕಾಲೇಜಿನ ಕರ್ನಾಟಕ ಸಂಘ ಪ್ರತಿ ವರ್ಷ ಸಂಭ್ರಮದಿಂದ ಒಂದು ಉತ್ಸವವನ್ನು ಆಚರಿಸುತ್ತಿತ್ತು. ನಾನು ಅದಕ್ಕೆ ಹೊಸ ರೂಪವನ್ನು ಕೊಟ್ಟೆ. 'ಕವಿವಂದನೆ' ಎಂದು ಅದನ್ನು ಕರೆದು, ಅಂದು ಒಬ್ಬ ಹಿರಿಯ ಕನ್ನಡ ಸಾಹಿತಿಗಳನ್ನು ಕರೆದು, ಅವರ ವಿಷಯ ಒಂದು ಭಾಷಣ ಮಾಡಿಸಿ, ಅವರು ಕವಿಗಳಾದರೆ ಅವರ ಕೆಲವು ಕವನಗಳನ್ನು ಹಾಡಿಸಿ, ವಿದ್ಯಾರ್ಥಿಗಳು ಸಾಹಿತಿಗಳನ್ನು ಕಾಣುವ ಕಾರ್ಯಕ್ರಮವನ್ನು ಯೋಚಿಸಿದೆ. ಈ ಕಾರ್ಯಕ್ರಮ ನನಗೆ ಹೊಳೆದದ್ದು ವರ್ಷ ಮುಗಿಯುತ್ತ ಬಂದಾಗ. ಕೆಲವೇ ದಿನಗಳಲ್ಲಿ ಕಾರ್ಯಕ್ರಮವನ್ನು ನಡೆಸಬೇಕಾಯಿತು. ಪಿ.ಸೀ. ಒಪ್ಪಿಕೊಂಡು ಬಂದರು. ಕೆಲವರು ವಿದ್ಯಾರ್ಥಿನಿಯರು ಮತ್ತು ಶ್ರೀಮತಿ ಶಕುಂತಳಾ ಬಾಯಿ ಅವರ ಕವನಗಳನ್ನು ಹಾಡಿದರು. ಪಿ.ಸೀ. ತುಂಬಾ ಸಂತೋಷಪಟ್ಟರು.

ಪಿ.ಸೀ. ತಮ್ಮ ಶಿಷ್ಯರಿಂದ ಪಡೆದ ಪ್ರೀತಿ ಗೌರವ, ಸ್ನೇಹಿತರಿಂದ ಪಡೆದ ಪ್ರೀತಿಗೌರವ, ಸಮಾಜದಿಂದ ಪಡೆದ ಪ್ರೀತಿ ಗೌರವ ಈ ವಿಷಯಗಳಲ್ಲಿ ಅದೃಷ್ಟವಂತರು. ಆದರೆ ಇನ್ನು ಕೆಲವು ವಿಷಯಗಳಲ್ಲಿ ಅವರದು ದುರದೃಷ್ಟ. ವಿಶ್ವವಿದ್ಯಾನಿಲಯ ಅವರನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ. ಅವರಿಗಿಂತ ವಯಸ್ಸಿನಲ್ಲಿ ಚಿಕ್ಕವರಾಗಿದ್ದು ಅವರಿಗಿಂತ

ಸ್ಥಾನವಲ್ಲಿ ಮೇಲಿದ್ದವರು ಸ್ವಲ್ಪ ಅಸಡ್ಡೆಯಿಂದಲೇ ಕಂಡರೆಂಬುದು ನನಗೇ ಗೊತ್ತು. ಇಂಗ್ಲೆಂಡಿಗೆ ಹೋಗಬೇಕು, ಷೇಕ್ಸ್‌ಪಿಯರನ ಜನ್ಮಸ್ಥಳ ನೋಡಬೇಕು, ಕೇಂಬ್ರಿಜ್-ಆಕ್ಸ್‌ಫರ್ಡ್ ನೋಡಬೇಕು ಎಂದು ಆಸೆಪಟ್ಟುಕೊಂಡು ಮುಪ್ಪಿನಲ್ಲಿ ಹೋದವರಿಗೆ ಹೋದ ದಿನವೇ ತೀವ್ರ ಅನಾರೋಗ್ಯವಾಯಿತು. ಅವರಿಗೆ ೭೫ ತುಂಬಿದಾಗ ಇರಬೇಕು, ಒಂದು ಮೊತ್ತ ಸಮಾರಂಭ ಮಾಡಬೇಕೆಂದೂ ನಿಧಿಯನ್ನು ಅರ್ಪಿಸಬೇಕೆಂದೂ ಅವರ ಶಿಷ್ಯರೂ ಗೆಳೆಯರೂ ನಾವು ಕೆಲವರು ಯೋಚಿಸಿ ಒಂದು ಸಮಿತಿಯನ್ನು ಮಾಡಿಕೊಂಡೆವು. ಶ್ರೀ ನಿಟ್ಟೂರು ಶ್ರೀನಿವಾಸರಾಯರು ಅಧ್ಯಕ್ಷರು, ಪ್ರೊ. ವಿ. ಎಂ. ಇನಾಂದಾರರು ಕೋಶಾಧಿಕಾರಿ, ನಾನು ನನ್ನ ಸ್ನೇಹಿತರು ಪ್ರೊ. ಎಚ್. ಕೆ. ರಾಮಚಂದ್ರ ಮೂರ್ತಿ ಕಾರ್ಯದರ್ಶಿಗಳು. ಎಲ್ಲ ವ್ಯವಸ್ಥೆಯಾಯಿತು. ಹಣವನ್ನು ಕೂಡಿಸಿದೆವು. ವಿ.ಸೀ. ಅವರ ಶ್ರೀಮತಿಯವರಿಗೆ ಆರೋಗ್ಯ ಸ್ವಲ್ಪ ಕೆಟ್ಟಿತ್ತು. ವೈದ್ಯರನ್ನು ಕೇಳಿಯೇ ನಾವು ಅದ್ಧೂರಿಯ ಸಮಾರಂಭಕ್ಕೆ ದಿನಾಂಕವನ್ನು ನಿರ್ಧರಿಸಿದೆವು. ಆಹ್ವಾನ ಪತ್ರಗಳು ಹೋದವು; ಎಲ್ಲ ಸಿದ್ಧತೆಯಾಯಿತು. ಅಂದೇ ಬೆಳಗಿನ ಜಾವ ಅವರ ಶ್ರೀಮತಿಯವರು ತೀರಿಕೊಂಡರು.

ಅವರು ಆಡಿದ ಕೆಲವು ಮಾತುಗಳು, ಸೂಚಿಸಿದ ಕೆಲವು ಅಭಿಪ್ರಾಯಗಳು ನನ್ನ ಮನಸ್ಸಿನಲ್ಲಿ ಉಳಿದಿವೆ. ನಾನು ವಿದ್ಯಾರ್ಥಿಯಾಗಿದ್ದಾಗ ವಿಶ್ವವಿದ್ಯಾನಿಲಯಾದ ವಿದ್ಯಾರ್ಥಿ ಸಂಘದಲ್ಲಿ ಒಂದು ಚರ್ಚಾಸ್ಪರ್ಧೆಗೆ ವಿಷಯವನ್ನು ಸೂಚಿಸಬೇಕೆಂದು ಪ್ರಾರ್ಥಿಸಿದೆವು. ಅವರು ಕೊಟ್ಟ ವಿಷಯ "India has lost the earth in pursuit of an uncertain heaven." ಇಂಗ್ಲಿಷ್ ಸೆಮಿನಾರಿನಲ್ಲಿ ಆಶುಭಾಷಣ ಸ್ಪರ್ಧೆಗೆ ವಿಷಯವನ್ನು ಕೇಳಿದೆವು. ಅವರು ಸೂಚಿಸಿದ ವಿಷಯ "Better a dead lion than a living dog." ಅವರು ಒಮ್ಮೆ ಆಡಿದ ಮಾತು ನಾನು ಬೆಚ್ಚಿ ಬೀಳುವಂತೆ ಮಾಡಿತು. ಆಂಜನೇಯನ ಮಾತು, ಅವನು ಅಂಜನಾದೇವಿಯ ಹೊಟ್ಟೆಯಲ್ಲಿ ಹುಟ್ಟಿದ ಕಥೆ ಇವುಗಳ ಮಾತು ಬಂತು. ವಿ.ಸೀ. ಥಟ್ಟನೆ, "ದಕ್ಷಿಣ ಭಾರತದವರ ಹಣೆಯ ಬರಹವೇ ಇದಾಯಿತು. ಉತ್ತರದವರ ವೀರ್ಯವನ್ನು ಹೊತ್ತು ಮಕ್ಕಳನ್ನು ಹೆತ್ತು ಕೊಟ್ಟು, ಅವರನ್ನು ಹೆಗಲ ಮೇಲೆ ಹೊತ್ತು ಸಂಭ್ರಮ ಪಡುವುದೇ ನಮ್ಮ ಹಣೆಯ ಬರಹ" ಎಂದರು. ಅಂದು ಅವರಿಗೆ ಏಕೆ ಮನಸ್ಸು ಕಹಿಯಾಗಿತ್ತೊ!

ಒಮ್ಮೆ ಅವರೊಡನೆ ಸ್ವಲ್ಪ ವಿರಸವಾದ ಪ್ರಸಂಗವನ್ನು ಹಿಂದೊಮ್ಮೆ ಹೇಳಿದ್ದೇನೆ. ನಾನು ಸಾಹಿತ್ಯ ಪರಿಷತ್ತಿನ. ಕಾರ್ಯದರ್ಶಿಯಾಗಿದ್ದಾಗ ತಿರುಮಲೆ ತಾತಾಚಾರ್ಯ ಶರ್ಮರು ಅಧ್ಯಕ್ಷರು. ವಿ.ಸೀ. ಚಿಕ್ಕಮಗಳೂರಿನ ಇಂಟರ್ ಮೀಡಿಯೆಟ್ ಕಾಲೇಜಿನ ಮುಖ್ಯಸ್ಥರು. ಶರ್ಮರು ಚಿಕ್ಕಮಗಳೂರಿನ ಒಂದು ಕಾರ್ಯಕ್ರಮಕ್ಕೆ ಹೋಗಬೇಕಾಗಿತ್ತು. "ಸೀತಾರಾಮಯ್ಯನವರು ಅಂದು ಊರಿನಲ್ಲಿರುತ್ತಾರೆಯೇ ತಿಳಿದುಕೊಳ್ಳಿ. ಇದ್ದರೆ ನಾನು ಅವರನ್ನು ಭೇಟಿಯಾಗುತ್ತೇನೆ" ಎಂದು ಶರ್ಮರು ಹೇಳಿದರು. ನಾನು ವಿ.ಸೀ. ಅವರಿಗೆ ಪತ್ರ ಬರೆದೆ. ಅವರ ಉತ್ತರ ಬಂದಾಗ ನನಗೆ ಗಾಬರಿಯಾಯಿತು. "ಚಕ್ರವರ್ತಿಗಳು ಬಂದಾಗ ಅವರನ್ನು ಸಾಮಂತ ರಾಜರು ಕಾಣಬೇಕೆಂದು ತಿಳಿಸುವಂತೆ ಪರಿಷತ್ತಿನ ಅಧ್ಯಕ್ಷರು ಇಲ್ಲಿಗೆ ಬಂದಾಗ ನಾನು ಅವರನ್ನು ಕಾಣಬೇಕೆಂದು ತಿಳಿಸಿ ನೀವು ಬರೆದ ಪತ್ರ ತಲುಪಿತು"

ಎಂದು ಬರೆದಿದ್ದರು. ಮತ್ತೆ ಅವರು ಬೆಂಗಳೂರಿಗೆ ಬಂದಾಗ ನಾನು ಅವರ ಮನೆಗೆ ಹೋಗಿ ಕಂಡೆ, "ತಮ್ಮ ವಿಷಯದಲ್ಲಿ ನಾನು ಹೀಗೆ ಉದ್ಧಟತನದಿಂದ ನಡೆದುಕೊಳ್ಳುವುದು ಸಾಧ್ಯವೆ! ತಾವು ನನ್ನ ತಪ್ಪನ್ನು ತೋರಿಸುವ ಅಧಿಕಾರವಿರುವ ಗುರುಗಳು, ಹಿರಿಯರು" ಎಂದು ಹೇಳಿ ನಾನು ಬರೆದ ಪತ್ರದ ಪ್ರತಿಯನ್ನು ಅವರ ಮುಂದಿಟ್ಟೆ. ನನ್ನ ಒಂದು ವಾಕ್ಯದಿಂದ ಇಷ್ಟೆಲ್ಲ ಅನಾಹುತವಾಗಿತ್ತು. "ಪರಿಷತ್ತಿನ ಅಧ್ಯಕ್ಷರು ತಮ್ಮನ್ನು ಕಾಣಬಯಸುತ್ತಾರೆ" ಎಂದು ಬರೆದಿದ್ದೆ. 'ತಮ್ಮನ್ನು' ಎಂದಾಗ ನನ್ನ ಮನಸ್ಸಿನಲ್ಲಿದ್ದದ್ದು ವಿ.ಸೀ. ಅವರನ್ನು; ಅವರು 'ತಮ್ಮನ್ನು, ಎಂದರೆ ಪರಿಷತ್ತಿನ ಅಧ್ಯಕ್ಷರನ್ನು (ವಿ.ಸೀ. ಅವರು) ಎಂದು ಭಾವಿಸಿಕೊಂಡಿದ್ದರು. ಒಂದು ನಿಮಿಷ ಸುಮ್ಮನಿದ್ದು, 'ಏನೋ ಕೆಟ್ಟ ಗಳಿಗೆ, ಮರೆತು ಬಿಡಿ' ಎಂದರು. ಅಲ್ಲಿಂದ ಹೊರಡುವ ಹೊತ್ತಿಗೆ ಅವರ ವಿಶ್ವಾಸ ನನ್ನ ಎಲ್ಲ ಆತಂಕವನ್ನೂ ತೊಡೆದುಬಿಟ್ಟಿತ್ತು.

ನನಗೆ ಇಂದೂ ವಿಷಾದವನ್ನುಂಟುಮಾಡುವ ಸಂಗತಿ ಎಂದರೆ, ಅವರ ಅಂತಿಮದರ್ಶನವನ್ನು ಪಡೆಯಲು ಸಾಧ್ಯವಾಗಲಿಲ್ಲ ಎನ್ನುವುದು. ಅವರು ತೀರಿಕೊಂಡಾಗ ನಾನು ಹೃದಯಾಘಾತದಿಂದ ಚೇತರಿಸಿಕೊಂಡು ಆಸ್ಪತ್ರೆಯಿಂದ ಮನೆಗೆ ಬಂದು ಕೆಲವೇ ದಿನಗಳು ಕಳೆದಿದ್ದವು. ವೈದ್ಯರಿಗೆ ದೂರವಾಣಿಯಲ್ಲಿ ಕೇಳಿದೆ, "ಹೋಗಿ ಗುರುಗಳಿಗೆ ನಮನ ಸಲ್ಲಿಸಿ ಬರಲೇ?" ಎಂದು. "ಖಂಡಿತ ಬೇಡ, ಆ ಅನುಭವವನ್ನು ತಡೆದುಕೊಳ್ಳುವ ಸ್ಥಿತಿಯಲ್ಲಿ ನೀವಿಲ್ಲ" ಎಂದುಬಿಟ್ಟರು ವೈದ್ಯರು.

ನನ್ನ ಮನಸ್ಸು ಮತ್ತು ಕಣ್ಣುಗಳಲ್ಲಿ ಉಳಿದಿರುವ ಅವರ ಕೊನೆಯ ಚಿತ್ರ ಒಂದು ಪಂಚೆಯನ್ನುಟ್ಟು, ಬನಿಯನ್ನನ್ನು ತೊಟ್ಟು, ಮಂಚದ ಮೇಲೆ ಹಾಸಿಗೆಯ ಮೇಲೆ ಕುಳಿತು ಮುಂದೆ ಪುಸ್ತಕವನ್ನಿಟ್ಟುಕೊಂಡು ಗಮನವನ್ನು ಕೇಂದ್ರೀಕರಿಸಲು ಪ್ರಯತ್ನಿಸುತ್ತಿರುವ, ಕೃಶ ದೇಹದ, ಒಮ್ಮೆ ಬೆಳಕಾಗಿದ್ದ ಕಣ್ಣುಗಳ ವಯೋವೃದ್ಧ – ಜ್ಞಾನವೃದ್ಧರದು. ಅವರನ್ನು ಕಡೆಯ ಬಾರಿ ಕಂಡಾಗ, ಎಂಬತ್ತು ದಾಟಿದ್ದ ಅವರು ಮುಂದೊಂದು ಪುಸ್ತಕ ಇಟ್ಟುಕೊಂಡು ಪುಟಗಳನ್ನು ತಿರುವಿ ಹಾಕುತ್ತಿದ್ದರು. 'ಏನು ಹುಡುಕುತ್ತಿದ್ದೀರಿ?' ಎಂದು ಕೇಳಿದೆ. ಅವರ ಮುಂದಿದ್ದದ್ದು ಆಂಗ್ಲ ವಿಮರ್ಶಕ ಟಿ.ಎಸ್ ಎಲಿಯೆಟನ ಪ್ರಬಂಧಗಳ ಸಂಗ್ರಹ. ಆತನ ಕೆಲವು ವಾಕ್ಯಗಳನ್ನು ಹೇಳಿ, 'ಅವನ್ನು ಹುಡುಕುತ್ತಿದ್ದೇನೆ' ಎಂದರು. ನಾನು ತೆಗೆದುಕೊಟ್ಟೆ. ಅವನ ಅಭಿಪ್ರಾಯವನ್ನು ಕುರಿತು ಎರಡು ಮಾತನಾಡಿದರು. ಅಷ್ಟು ಹೊತ್ತಿಗೆ ಲಕ್ಷ್ಯ ಬೇರೆಡೆ ಹೋಯಿತು. ಆದರೆ ಆಗಲೂ ನನ್ನ ಹೆಂಡತಿ–ಮಕ್ಕಳ ವಿಷಯ ಕೇಳಿದರು. ಅವತ್ತು ಪತ್ರಿಕೆಯಲ್ಲಿ ಬಂದಿದ್ದ ಒಂದು ಸುದ್ದಿಯನ್ನು ಪ್ರಸ್ತಾಪಿಸಿ, "ಈ ದೇಶದ ಗತಿ ಏನಪ್ಪಾ?" ಎಂದರು.

ಅವರು ನಮಗೆ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷಿನಿಂದ ಕನ್ನಡ ಅನುವಾದದ ಅಭ್ಯಾಸಕ್ಕಾಗಿ ಆರಿಸುತ್ತಿದ್ದ ಗದ್ಯಭಾಗಗಳು ವಿಶಿಷ್ಟವಾದವು; ಹೇಗೋ ಕೈಗೆ ಸಿಕ್ಕ ಗದ್ಯಬರಹವನ್ನು ತರುತ್ತಿರಲಿಲ್ಲ. ಗದ್ಯಭಾಗದ 'ಕಂಟೆಂಟ್' ಸಹ ನಮ್ಮ ಆಸಕ್ತಿಯನ್ನು ಪ್ರಚೋದಿಸುವಂತಿರುತ್ತಿತ್ತು. ಅಂಥ ಒಂದು ಭಾಗದ ಕಡೆಯ ಮಾತು ನನಗೆ ನೆನಪಿದೆ: "Civilization decrees that you shall drain the bitter cup to the last drop without a grimace." ಇದರಂತೆ ಬದುಕಿದ ಹಿರಿಯ ಜೀವ ವಿ.ಸೀ. ಒಮ್ಮೆ ಅವರು

ಡಿ.ವಿ.ಜಿ. ವಿಷಯ ಮಾತನಾಡುತ್ತ "ಮಹಾರಾಯ ಏನು ಕಷ್ಟವೋ ತಾಪತ್ರಯವೋ ಏನು ಬೇಸರವೋ ಒಂದು ದಿನವೂ ಅದನ್ನು ಪ್ರಸ್ತಾಪಿಸುವುದಿಲ್ಲ ನೋಡಿ" ಎಂದಿದ್ದರು. ಇದೇ ಮಾತು ವಿ.ಸೀ. ಅವರಿಗೂ ಅನ್ವಯಿಸುತ್ತಿತ್ತು. ಅವರ ಮಾತು, ಬರಹಗಳಲ್ಲಿ ಮತ್ತೆ ಮತ್ತೆ ಒಂದು ವಿಷಾದದ ಸ್ಥಾಯಿ ಕೇಳುತ್ತಿತ್ತು. ಶಬರಿಯಲ್ಲಿ ಅವರು, ಯಾವನೋ ದಿವ್ಯಪುರುಷನು ಬಂದಾನೆಂದು—

ಭರವಸೆಗಳಳಿಯವಾಗಿ
ಮನವೆಲ್ಲ ಬಯಕೆಯಾಗಿ
ಹಗಲೆಲ್ಲ ಕಾದು ಕೂಗಿ
ಇರುಳೆಲ್ಲ ಜಾಗರಾಗಿ

ಕಾಯುತ್ತಿರುವ ಜಗತ್ತಿನ ಸಂಕೇತವನ್ನು ಕಂಡರು.

ವಿ.ಸೀ. ಅವರನ್ನು ಸ್ಮರಿಸಿದಾಗ ನನಗೆ ತಕ್ಷಣ ನೆನಪು ಬರುವುದು: ತನ್ನ ತಾಯಿ ಅಹಲ್ಯೆ ರಾಮನ ಪಾದಸ್ಪರ್ಶದಿಂದ ಮತ್ತೆ ಮನುಷ್ಯಳಾಗಿ ಜೀವತಾಳಿದಳೆಂಬ ಸಂಗತಿಯನ್ನು ವಿಶ್ವಾಮಿತ್ರನಿಂದ ಕೇಳಿದಾಗ ಮಗ ಶತಾನಂದನ ಸಂಭ್ರಮವನ್ನು. ನರ್ಸಿಂಗ್ ಹೋಂನ ಮಂಚದ ಮೇಲೆ ಕುಳಿತು ವಿ.ಸೀ. ಇದನ್ನು ಪ್ರಸ್ತಾಪಿಸಿದಾಗ ಅವರ ಕಣ್ಣುಗಳಲ್ಲಿ ನೀರು ತುಳುಕಿದ್ದು; "ಶೇಷಗಿರಿ ರಾಯರು ಕರೆದಿರುವಾಗ ನನಗೆ ಸ್ವಲ್ಪ ಆರೋಗ್ಯವಿಲ್ಲ ಅಂತ ಹೋಗದಿರುವುದೇ ಎಂದುಕೊಂಡೆ" ಎನ್ನುವ ಮಾತು; "Better a dead lion than a living dog", "Civilization decrees that you shall drain the bitter cup to the last drop without a grimace" ಎನ್ನುವ ಮಾತುಗಳು; ಅವರು ಅನುವಾದಿಸಿದ ಒಂದು ಕವನದ

ಗಾಳಿಯಂದದಿ ನಾವು ಹೋದ ಮೇಲೂ
ವನ ಮಧುರವಾಗುವುವು ಇಂದಿನಂತೇ

ಎಂಬ ಸಾಲುಗಳು; ಅವರ ಸ್ವಭಾವಕ್ಕನುಗುಣವಾದ, ಜೀವನ ದೃಷ್ಟಿಗೆ ಕನ್ನಡಿ ಹಿಡಿಯುವ, (ನನಗೆ ಪ್ರಿಯವಾದ) ಲಾಲ್‌ಬಾಗಿನಲ್ಲಿ ಹೂಗಳನ್ನು ನೆತ್ತಿಯಿಂದ ಕೆಳಗಿನ ರೆಂಬೆಯವರೆಗೆ ಧರಿಸಿನಿಂತ ಮರದ ಬಣ್ಣನೆ :

ನೆಲದ ಆಳದಲೆಲ್ಲೊ ಒಡಲಿನಾಳದಲೆಲ್ಲೊ
ಕಾಣದೆಡೆಯಲಿ ಹುದುಗಿ ಕಾಪಾಡಿದ
ತಂಪನ್ನು ಕಂಪನ್ನು ಜೀವವನು ರಸವನ್ನು
ಕೊಂಬೆಕೊಂಬೆಗು ಇಡಿದು ಅರಳಿಸಿಹುದು.

ಈ ಸಾಲುಗಳು;

ಸ್ವರ್ಗದೊಳಗೀ ಸ್ನೇಹ ದೊರವುದೇನು?
ಈ ಪರಿಯ ಸೌಹಾರ್ದ ಕೆಳೆಯ ವೈಭವವು?

ಇಲ್ಲದಿರೆ ಎನಗಿಲ್ಲೆ ನೂರು ಜನ್ಮಗಳಿರಲಿ
ಎಲ್ಲ ಪರಿ ಮಮತೆಗಳ ಸತ್ಯಜೀವನವು

ಎನ್ನುವ ಸಾಲುಗಳು;

ಮಗುವಿಗೆ ಅವರ ಹರಕೆ

ನಿನ್ನ ಬಲವೇ ನಿನಗೆ ಕಾಪಹುದು, ಮಗುವೆ
ನಿನ್ನ ನೆಲೆ, ನಿನ್ನೋಳ್ಗೆ, ನಿಲುವ ನಿಲವು
ಹೆರರಾರ ಕಾವಲಿಗು ಕಾಯುತ್ತೆ ಬೇಡದಿರು
ಅಂಜದಿರು ಸೋಲದಿರು ಇರವ ಹಳಿದು.

ಜಗದೆಲ್ಲ ಪುಣ್ಯಗಳು ನಿನ್ನ ಬೆನ್ನಲಿ ನಿಂತು
ನಿನ್ನ ಗೆಲವಿಗೆ ಬಲವನೂಡಿ ಕಾಪಿಡಲಿ;
ನಗೆಬರಲಿ ಸೊಗವಿರಲಿ ನೊಗಹೊರಲಿ ಹೊಗೆಯಿಡಲಿ
ನರಳದಿರು ಕೊರಗದಿರು ತಾಳು ಮಗುವೆ.

ಎಂಬ ಸಾಲುಗಳು;

ಮತ್ತು, ಮಂಚದ ಮೇಲೆ ಕುಳಿತು ಪಂಚೆಯುಟ್ಟು, ಒಂದು ನೆಟ್ ಬನಿಯನ್ ತೊಟ್ಟು, ಎಲಿಯೆಟನ ಪ್ರಬಂಧಗಳ ಪುಟಗಳಲ್ಲಿ ಕಣ್ಣಾಡಿಸುತ್ತಿರುವ, ಕೃಶದೇಹದ ಎಂಬತ್ತೆರಡು ವರ್ಷದ ಜ್ಞಾನವೃದ್ಧರು.

ಶುಚಿ ರುಚಿ ಸೌಜನ್ಯಗಳ ಸಾಕಾರಮೂರ್ತಿ

ಬಿ. ಸಿ. ರಾಮಚಂದ್ರಶರ್ಮ

ಎಲ್ಲರ ಬದುಕಲ್ಲೂ ಇದು ನಿಜವೇನೋ. ಕೆಲವು ಘಟನೆಗಳ ನೆನಪು ಅಚ್ಚಳಿಯದೇ, ಒಳಗಣ್ಣಿಗೆ ಕಟ್ಟಿದ ಹಾಗೆ, ಉಳಿದುಬಿಡುತ್ತವೆ. ನನ್ನ ಬದುಕಿನ ಅಂಥದೊಂದು ನೆನಪು ವಿ. ಸೀತಾರಾಮಯ್ಯ ಅವರಿಗೆ ಸಂಬಂಧಪಟ್ಟದ್ದು.

೧೯೮೨ರ ಅಕ್ಟೋಬರ್ ತಿಂಗಳ ಒಂದು ಬೆಳಿಗ್ಗೆ ಆಫ್ರಿಕಾದ ಮಲಾವಿ ದೇಶದಿಂದ ರಜದ ಮೇಲೆ ಬೆಂಗಳೂರಿಗೆ ಬಂದಿದ್ದೆ. ಆ ಹೊತ್ತಿಗೆ ನನ್ನ 'ಈ ಶತಮಾನದ ನೂರು ಇಂಗ್ಲಿಷ್ ಕವನಗಳು' ಅನ್ನುವ ಸಂಕಲನ ಮೈಸೂರ್ ಪ್ರಿಂಟರ್ಸ್ ಅವರ ಕಡೆಯಿಂದ ಪ್ರಕಟವಾಗಿತ್ತು. ನನ್ನ ಹಿಂದಿನ ನವೋದಯ ಸಂಪ್ರದಾಯದ ಕವಿಗಳಲ್ಲಿ ಯಾರಿಗಾದರೂ ಆ ಪ್ರಯತ್ನದಲ್ಲಿ ಆಸಕ್ತಿ ಇರುವುದಾದರೆ ಅದು ನಿಸ್ಸಂದೇಹವಾಗಿ ವಿ.ಸೀ. ಅವರಿಗೆ ಅನ್ನುವದು ಗೊತ್ತಿದ್ದು ಅವರಲ್ಲಿಗೆ ಆ ಸಂಕಲನದ ಒಂದು ಪ್ರತಿಯೊಡನೆ ಹೋಗಿದ್ದೆ.

ವಿ.ಸೀ. ಅವರು ಹೊರ ಅಂಗಳದಲ್ಲಿ. ಮೈ ಬೆಚ್ಚಗಾಗಿಸುವಂತಿದ್ದ ಎಳೆ ಬಿಸಿಲಲ್ಲಿ, ಬೆಂಚೊಂದರ ಮೇಲೆ ಕೂತಿದ್ದರು. ನಾನು ನನ್ನ ಹೆಸರನ್ನು ಹೇಳಿದಾಗ ಅವರ ಕಣ್ಣಲ್ಲಿ ಮಿಂಚು ಹೊಳೆದಿರಲಿಲ್ಲ. ಎಂದಿನ ಅವರ ಸೌಜನ್ಯ ಕೂರುವಂತೆ ನನಗೆ ಹೇಳಿದ್ದರೂ ಆತ್ಮೀಯರಾದವರನ್ನು ಅನಿರೀಕ್ಷಿತವಾಗಿ ಕಂಡಾಗ ತುಟಿಯ ಸುತ್ತ ಸಾಮಾನ್ಯವಾಗಿ ಮೂಡುವ ಮುಗುಳುನಗು ಕಂಡಿರಲಿಲ್ಲ. ನಾನು ಕೊಟ್ಟ ಸಂಕಲನದ ಪುಟಗಳನ್ನು ಯಾಂತ್ರಿಕವಾಗಿ ತಿರುವು ಹಾಕಿದ್ದರೇ ಹೊರತು ಎಂಥ ಪ್ರತಿಕ್ರಿಯೆಯನ್ನೂ ತೋರಿರಲಿಲ್ಲ. ಅಲ್ಲಿದ್ದ ಯೇಟ್ಸ್, ಹಾರ್ಡಿ, ಎಲಿಯೆಟ್ ಹಾಗೂ ಆಡೆನ್ನರು ಬಹಿರಂಗ ಸಭೆಯೊಂದರ ಅಪರಿಚಿತರಾಗಿದ್ದು ಎದೆತಳದ ನೆನಪಿನೊಂದು ತಂತಿಯನ್ನು ಮೀಟಿರಲಿಲ್ಲ.

ಅರವತ್ತರ ದಶಕದಲ್ಲಿ, ಅಕ್ಟೋಬರ್–ನವೆಂಬರ್ ತಿಂಗಳುಗಳಲ್ಲಿ, ಲಂಡನ್ ನಗರವನ್ನು ನಾಮಾವಶೇಷವಾಗುವ ಹಾಗೆ ಮಾಡುತ್ತಿದ್ದ ಹೊಗೆಮಂಜು ವಿ.ಸೀ. ಅವರನ್ನು ಕವಿದ ಹಾಗಿತ್ತು. ಇಂಗ್ಲೆಂಡಿನ ಸಾಹಿತ್ಯದ ವೈಭವದ ನಿಕಟ ಪರಿಚಯವಿದ್ದ ವಿ.ಸೀ. ಕೆಲವೇ ವರ್ಷಗಳ ಹಿಂದೆ ಲಂಡನ್ನಿನ ಹೀತ್ರೋ ವಿಮಾನ ನಿಲ್ದಾಣದ ತನಕ ಹೋಗಿ, ಅಸ್ವಸ್ಥರಾಗಿ, ಹಿಂದಿರುಗಿ ಬಂದದ್ದನ್ನು ಕೇಳಿದ್ದ ನನಗೆ ಅವರ ಅಂದಿನ ಸ್ಥಿತಿಯನ್ನು ಕಂಡು ಕಣ್ಣು ಮಂಜಾಗಿತ್ತು. ಬದುಕಿಗೆ ಅರ್ಥ ಲಭ್ಯವಾಗುವ ಹಾಗೆ ಅಲ್ಲಿ ಇಲ್ಲಿ ಎದ್ದು ನಿಂತು ನಡೆಸುವ

ಎಲ್ಲ ಕೈಮರಗಳೂ ನೆಲಕ್ಕೆ ಬಿದ್ದು ಅತ್ಮ ಅನಾಥವಾಗುವ ಹಾಗೆ ಮಾಡಿದ್ದನ್ನು, ದಿಕ್ಸೂಚಿಯನ್ನು ಕಸಿದುಕೊಂಡು ನಾವಿಕನನ್ನು ವಿಸ್ಮೃತಿಯ ಕಡಲಲ್ಲಿ ಕೈಬಿಟ್ಟದ್ದನ್ನು ಕಂಡು ಕೋಪ ಬಂದಿತ್ತು.

ನನ್ನ ಗುರುತೂ ಸಿಗದಿದ್ದ ಮೇಲೆ ನಾನಲ್ಲಿರುವುದರಲ್ಲಿ ಅರ್ಥವಿಲ್ಲವೆನ್ನಿಸಿ ಎದ್ದಾಗ ವಿ.ಸೀ. ಅವರು ಕೈ ಚಾಚಿದ್ದರು. ಅವರ ಕೈಯನ್ನು ನಾನು ಒತ್ತಿದಾಗ, ತುಂಡಾದ ಎರಡು ತಂತಿಗಳ ಕೊನೆಗಳನ್ನು ಕೂಡಿಸಿದಾಗ ಹರಿಯುವ ವಿದ್ಯುತ್ತಿನಂಥ ಎಂಥ ಶಕ್ತಿ ಹರಿಯಿತೋ, ಅವರ ಕಣ್ಣಲ್ಲಿ ಫಕ್ಕನೊಂದು ಬೆಳಕು ಹೊಳೆದಿತ್ತು. ನನ್ನ ಹೆಸರನ್ನು ಎರಡು ಬಾರಿ ಅಂದು, ನನ್ನ ಸಂಸಾರದ ಯೋಗಕ್ಷೇಮವನ್ನು ವಿಚಾರಿಸಿದ್ದರು. ನಾನು ಕೊಟ್ಟಿದ್ದ ಸಂಕಲನದ ಪುಟಗಳನ್ನು ಇನ್ನೊಮ್ಮೆ ತಿರುವಿ ಅದರಲ್ಲಿದ್ದ ಕೆಲವೊಂದು ಕವಿಗಳ, ಕವನಗಳ ಹೆಸರನ್ನು ತುಂಬ ಪ್ರೀತಿಯಿಂದ ಮೆಲುಕು ಹಾಕುವ ಹಾಗೆ ಹೇಳಿಕೊಂಡು ಸುಖಿಪಟ್ಟಿದ್ದರು. ಅದಾದ ಒಂದು ಗಳಿಗೆಗೇ ತಮ್ಮನ್ನು ಅವರಿಸಿದ್ದ ಮರೆವಿನ ಬಗ್ಗೆ ಮಾತಾಡುವ ಪ್ರಯತ್ನ ಮಾಡುತ್ತಾ ಗಳಗಳನೆ ಅತ್ತಿದ್ದರು.

ನನ್ನ ಇಪ್ಪತ್ತೈದು ವರ್ಷಗಳ ಪರದೇಶಿ ವಾಸದಲ್ಲಿ ನಾನು ಹತ್ತು ಬಾರಿ ಬೆಂಗಳೂರಿಗೆ ಬಂದಿದ್ದೆ. ಬಂದಾಗಲೆಲ್ಲ ಕೆಲವರನ್ನು, ಹರಕೆ ಹೊತ್ತ ಅಯ್ಯಪ್ಪನ ಭಕ್ತನ ಹಾಗೆ, ತಪ್ಪದೇ ನೋಡುತ್ತಿದ್ದೆ. ಅವರಲ್ಲಿ ಒಬ್ಬರು ಮಾಸ್ತಿ, ಇನ್ನೊಬ್ಬರು ವಿ.ಸೀ. ನನ್ನ ಮೊದಲ ಕವನಗಳಲ್ಲಿ ಒಂದಕ್ಕೆ ತಮ್ಮ 'ಜೀವನ'ದಲ್ಲಿ ಜಾಗ ಕೊಟ್ಟು ನನ್ನನ್ನು ಕವಿಯನ್ನಾಗಿಸಿದ ಮಾಸ್ತಿ ಅವರನ್ನೂ, ನವೋದಯ-ನವ್ಯ ಕಾವ್ಯಗಳ ಸಂಧಿಕಾಲದಲ್ಲಿ ನನಗೆ ತಮ್ಮ ವಿಮರ್ಶಾತ್ಮಕ ಟೀಕೆಯಿಂದ, ಹೊಸದೊಂದು ಉಕ್ತಿ ಕಣ್ಣು ಬಿಡುತ್ತಿದ್ದಾಗ ಅದರ ಬಗ್ಗೆ ಅವರು ತೋರಿದ ಅಕೃತ್ರಿಮ ಉತ್ಸಾಹದಿಂದ ಪ್ರೋತ್ಸಾಹಿಸಿದ ವಿ.ಸೀ. ಅವರನ್ನೂ ನಾನು ಇವೊತ್ತೂ ಕೃತಜ್ಞತೆಯಿಂದ ನೆನೆಯುತ್ತೇನೆ. ನನ್ನ ಹೆಂಡತಿಗೆ ಖಿಣ ಹಾಗೂ ತೆಂಗಿನಕಾಯಿ ಕೊಟ್ಟು ಕಳಿಸುತ್ತಿದ್ದ ಮಾಸ್ತಿ, ಕಚ್ಚೆಪಂಚೆ ರುಮಾಲುಗಳ ಬಗ್ಗೆ ವಹಿಸುತ್ತಿದ್ದ ಕಾಳಜಿಯನ್ನೇ ತಮ್ಮ ಪುಸ್ತಕಗಳ ಅಚ್ಚಿನ ಬಗ್ಗೆಯೂ ತೋರಿ ಅವನ್ನು ನಮಗೆ ಕೊಟ್ಟು ಕಳಿಸುತ್ತಿದ್ದ ವಿ.ಸೀ. ನನ್ನ ವ್ಯಕ್ತಿತ್ವದ ಅಂಶಗಳಾಗಿ ಇವೊತ್ತಿಗೂ ಉಳಿದಿದ್ದಾರೆ ಅಂದುಕೊಂಡಿದ್ದೇನೆ.

ತಮ್ಮ ನಿಲುವಿಂದ, ಆಡುತ್ತಿದ್ದ ಮಾತುಗಳಿಂದ, ವಿ.ಸೀ. ಅವರು ಹೆಚ್ಚು ಪ್ರಭಾವ ಬೀರಿದ್ದು ನನ್ನ ಮೇಲಲ್ಲ, ನರಸಿಂಹಸ್ವಾಮಿ ಅವರ ಮೇಲೆ. ೧೯೫೦ರ ದಶಕದ ಮೊದಲ ವರ್ಷಗಳ ಮಾಸದ ನೆನಪು ನನ್ನಲ್ಲಿದೆ. ವಿ.ಸೀ. ಅವರು ಚಾಮರಾಜಪೇಟೆಯ ರಾಮೇಶ್ವರ ದೇವಸ್ಥಾನದ ಕೆಳಗೆ ವಾಸ ಮಾಡುತ್ತಿದ್ದಾಗ ನಾನು ಅದರ ಪಕ್ಕದಲ್ಲಿ ಎಂ.ವಿ.ಸೀ. ಅವರ ಮನೆಯಲ್ಲಿ ವಾಸಿಸುತ್ತಿದ್ದೆ. ನನ್ನ ಚಿಕ್ಕಪ್ಪ ಎಂ.ವಿ.ಸೀ. ಅವರ ಜೊತೆಗೆ ಸಾಹಿತ್ಯದ ಬಗ್ಗೆ ಆ ವರ್ಷಗಳಲ್ಲಿ ಮಾತಾಡುತ್ತಿದ್ದದ್ದು ಕಡಿಮೆ. ಮೊದಲ ಬಾರಿ ಬಿ.ಎಸ್.ಸಿ ಪರೀಕ್ಷೆಗೆ ಕಟ್ಟಿ ಫೇಲಾಗಿ, ನೊಣ ಹೊಡೆಯುತ್ತಿದ್ದ ನನಗೆ ಕನ್ನಡ-ಇಂಗ್ಲಿಷ್ ನಿಘಂಟುವಿನ ಕಚೇರಿಯಲ್ಲಿ ಅವರಿವರು ಬರೆದದ್ದನ್ನು ಕಾಪಿ ಮಾಡುವ ಕೆಲಸವನ್ನು ಕೊಡಿಸಿ ಸಾಹಿತ್ಯದ ಬಗ್ಗೆ ಆಸಕ್ತಿಯನ್ನು ಕುದುರಿಸಿದ್ದ ವಿ.ಸೀ. ಅವರ ಜೊತೆ ಮಾತಾಡುವುದಕ್ಕೆ ಯಾವ ಬಗೆಯ ಹಿಂಜರಿಕೆಯೂ ಇರಲಿಲ್ಲ. ಸಂಜೆ ವಾಕಿಂಗಿಗೆ ನಮ್ಮ ನೆರೆಮನೆಯಲ್ಲಿದ್ದ ಮೋಟಗಾನಹಳ್ಳಿ

ಸುಬ್ರಹ್ಮಣ್ಯಶಾಸ್ತ್ರಿ ಹಾಗೂ ನರಸಿಂಹಸ್ವಾಮಿಗಳ ಜೊತೆ ಪಿ.ಸೀ. ಅವರು ಹೊರಟಾಗ ನಾನೂ ಹೇಗೆ ಸೇರಿಕೊಂಡೆನೋ ನೆನಪಿಲ್ಲ.

ಲಾಲಬಾಗಿನ ಕಡೆ ಅಥವಾ ಇಕ್ಕೆಲಗಳಲ್ಲಿ ಮರಗಳಿದ್ದ ಇವ್ಹೊತ್ತಿನ ಕೆ. ಆರ್. ರಸ್ತೆಯ ಕಡೆ ನಡೆಯುತ್ತಿದ್ದಾಗ ಪಿ.ಸೀ. ಅವರ ಮಾತೆಲ್ಲ ಸಾಹಿತ್ಯದ ಬಗ್ಗೆ. ಅದೇ ತಾನೆ ಅವರು ಓದಿ ಮುಗಿಸಿದ್ದ ಯಾವುದೋ ಇಂಗ್ಲಿಷ್ ಪುಸ್ತಕ, ಒಂದು ಕವಿತೆ, ಸರ್ಕಾರ ಈಚೆಗೆ ತೆಗೆದುಕೊಂಡ ಒಂದು ತೀರ್ಮಾನ, ಪ್ರಗತಿಶೀಲ ಸಾಹಿತ್ಯ ಹಿಡಿದ ದಿಕ್ಕು. ವಿಷಯ ಯಾವುದಾಗಿದ್ದರೂ ಅವರ ಬಹುಪಾಲು ಮಾತು ಇಂಗ್ಲಿಷಿನಲ್ಲಿ. ಮನೆಯ ದಾರಿ ಹಿಡಿಯುವ ಮೊದಲು ಒಳ್ಳೆಯ ಒಂದು ಹೊಟೇಲಿನಲ್ಲಿ ನಿಂತು ಕಾಫಿ ತಿಂಡಿ ಮುಗಿಸುವ ಪರಿಪಾಟ.

ನರಸಿಂಹಸ್ವಾಮಿ ತಮ್ಮ ಕಾವ್ಯರಚನೆಯನ್ನು ಹೊಸದೊಂದು ದಿಕ್ಕಿಗೆ ಹೊರಳಿಸಿಕೊಂಡಿದ್ದಕ್ಕೆ, ನವ್ಯ ಮಾದರಿಯ ಕವನಗಳನ್ನು ಬರೆಯುವ ಪ್ರಯತ್ನ ಮಾಡಿ ಉತ್ತಮವಾದ ಕೆಲವು ಕವನಗಳನ್ನು ರಚಿಸುವುದಕ್ಕೆ ಕಾರಣವಾದವರು ಪಿ.ಸೀ. ಬದಲಾದ ಅವರ ಅಂಥ ಕೆಲವನ್ನು ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿ ಪ್ರೋತ್ಸಾಹಿಸಿದವರೂ ಅವರೇ.

ಅಂಥ ಉದಾರ ಬುದ್ಧಿ ಇದ್ದ ಪಿ.ಸೀ. ತಮ್ಮ ಸ್ವಂತ ಕವನಗಳನ್ನು ಬರೆದಾಗ ತಮ್ಮ ವಿಚಾರಗಳನ್ನು ಅನುಷ್ಠಾನಕ್ಕೆ ತರದೇ ಹೋದದ್ದು ಒಂದು ಆಶ್ಚರ್ಯ. ಇನ್ನೊಬ್ಬರ ಕವನಗಳಲ್ಲಿ ಆಡುಮಾತಿನ ಬಳಕೆ ಕಂಡುಬಂದಾಗ ಹಾಡಿ ಹೊಗಳುತ್ತಿದ್ದ ಅವರ ಭಾಷೆ ನವೋದಯದ ಕಾಲದ ಜಾಡಿನಲ್ಲೇ ಉಳಿದು ನರಳಿತು ಅನ್ನುವುದು ನನ್ನ ಅನ್ನಿಸಿಕೆ. ನವ್ಯಕಾವ್ಯವನ್ನು ಅವರ ಬುದ್ಧಿ ಮೆಚ್ಚಿಕೊಂಡಿದ್ದರೂ ಅವರ ಹೃದಯ ಮನಸಾರೆ ಒಪ್ಪಿಕೊಂಡಿಲ್ಲದೇಹೋದದ್ದು ಅದಕ್ಕೆ ಕಾರಣವಿರಬಹುದು.

೧೯೫೭ರಲ್ಲಿ ನಾನು ಹತ್ತು ಹೆಸರಾಂತ ಕವಿಗಳನ್ನು ಪ್ರಜಾವಾಣಿಗಾಗಿ ಸಂದರ್ಶಿಸಿದಾಗ ಆ ಮಾಲೆಗೆ ಮೊದಲು ಆರಿಸಿಕೊಂಡಿದ್ದು ಪಿ.ಸೀ. ಅವರನ್ನು. ನವ್ಯಕಾವ್ಯದ ಬಗ್ಗೆ ಆ ಹತ್ತು ಕವಿಗಳು ಆಡಿರುವುದನ್ನು ಓದಿದಾಗ ಕಣ್ಣಿಗೆ ಕಟ್ಟಿದ ಹಾಗೆ ಕಾಣುವುದು ಎರಡು: ೧) ಬೇಂದ್ರೆಯ ಅಸಹನೆ ಹಾಗೂ ೨) ಪಿ.ಸೀ. ಅವರ ವಿಚಾರವಂತಿಕೆ ತೆರೆದ ಬಾಗಿಲು. ಇಂಗ್ಲಿಷಿನ ನವ್ಯಕಾವ್ಯವನ್ನು ಗಮನವಿಟ್ಟು ಓದಿದ ಮೊದಲಿಗರಲ್ಲಿ ಮುಖ್ಯವಾಗಿದ್ದವರು ಪಿ.ಸೀ. ಎಲಿಯಟ್ ಕವಿಯ ರೀತಿಯನ್ನು ಉಂಬಳಿ ಪಡೆದವರು ನಾವೆಂದು ನಮ್ಮಲ್ಲಿ ಕೆಲವರು ಬೀಗುತ್ತಿದ್ದಾಗ ಅವನ ಕವನಗಳಿಗೆ ಪುಟದ ಮಾರ್ಜಿನ್ನಲ್ಲಿ ಟಿಪ್ಪಣಿಗಳನ್ನು ಬಹು ಹಿಂದೆಯೇ ಬರೆದಿಟ್ಟಿದ್ದವರು ಪಿ.ಸೀ. ಅವರ ಮನೆಯ ಮುಂದಿನ ಕೊಟಡಿಯಲ್ಲಿ ಸೇರಿಸಿಟ್ಟ ಹಾಗೆ ಕಾಣುತ್ತಿದ್ದದ್ದು ಎನ್‌ಕೌಂಟರ್, ಪರ್ಸ್‌ಪೆಕ್ಟಿವ್, ಟೈಮ್ಸ್ ಲಿಟೆರರಿ ಸಪ್ಲಿಮೆಂಟುಗಳ ಸಂಚಿಕೆಗಳು. ಮಾತಾಡುವಾಗ ಯಾವ ಅಂಶಕ್ಕಾದರೂ ರೆಫರೆನ್ಸ್ ಬೇಕಾಗಿದ್ದಾಗ ಅದೆಲ್ಲಿ ಸಿಗಬಹುದು ಅನ್ನುವ ಬಗ್ಗೆ ಅವರಿಗಿದ್ದ ಖಚಿತ ಜ್ಞಾನ ಅಚ್ಚರಿ ಮೂಡಿಸುತ್ತಿತ್ತು.

ಈ ಸಂದರ್ಭದಲ್ಲಿ ಹೆಸರಾಂತ ಇಂಗ್ಲಿಷ್ ವಿಮರ್ಶಕ ಐ. ಎ. ರಿಚರ್ಡ್ಸ್ ಬೆಂಗಳೂರಿಗೆ ಬಂದಿದ್ದರ ನೆನಪಾಗುವುದು ಸಹಜವೇನೋ. ಅವ್ಹೊತ್ತಿನ ಭಾಷಣಕ್ಕೆ ಅಧ್ಯಕ್ಷರಾಗಿದ್ದ ಪಿ.ಸೀ. ಆತನ ಕೆಲವೊಂದು ವಿಚಾರಗಳನ್ನು ಎತ್ತಿಕೊಂಡು ಚರ್ಚೆ ಮಾಡಿದ್ದು

ಅವರ ನಿಲುವಿನ ಖಚಿತತೆಗೆ, ತರ್ಕಶಕ್ತಿಗೆ, ಅಭಿವ್ಯಕ್ತಿಯ ಸ್ಪಷ್ಟತೆಗೆ ಪುರಾವೆಯನ್ನೊದಗಿಸಿ ಚಿಕ್ಕವರಾಗಿದ್ದ ನಮ್ಮೆಲ್ಲರ ಹೆಮ್ಮೆಗೆ ಕಾರಣವಾಗಿದ್ದು ನೆನಪಿದೆ.

ಸಾಹಿತ್ಯದ ವಿಷಯದಲ್ಲಿ ಅವರ ಸಮಕಾಲೀನರಿಗೆ ಸಾಧ್ಯವಾಗದೇ ಹೋದ ಉದಾರ ಬುದ್ಧಿಯಿದ್ದರೂ ಅವರ ತರಹದ ಜನಕ್ಕೆ ಸಹಜವಾಗಿದ್ದ ಮಡಿವಂತಿಕೆಯನ್ನು ಸಂಪೂರ್ಣವಾಗಿ ಬಿಟ್ಟುಕೊಡಲಾರದೇ ವಿ.ಸೀ. ನವ್ಯಕಾವ್ಯ 'ಮಲಗುವ ಕೋಣೆಯ ವ್ಯವಹಾರವನ್ನು ಬೀದಿಗೆ ಎಳೆದು ತರುತ್ತಿದೆ' ಎಂದು ಟೀಕೆ ಮಾಡಿದ್ದು ನನಗೆ ನೆನಪಿದೆ. ಆ ಕಾವ್ಯದ ಕೌಶಲ, ಛಂದಸ್ಸಿನ ಪ್ರಯೋಗ, ಪ್ರತಿಮಾ ವಿಧಾನಗಳನ್ನು ಮೆಚ್ಚಿಕೊಂಡ ವಿ.ಸೀ. ಅದಕ್ಕೆ ಹೃದಯಸಾರ ಸಾಲದು, ಅಬ್ಬರ ಜಾಸ್ತಿ, ಪ್ರೀತಿಯಲ್ಲೂ ನಂಬಿಕೆಯಿಲ್ಲದ ಅದರ **nihilistic** ದೃಷ್ಟಿಯಿಂದ ಸಮಾಜಕ್ಕೆ ಹಾನಿ ಖಚಿತವೆನ್ನುತ್ತಿದ್ದದ್ದೂ ನೆನಪಿದೆ. ಆಕಾಶವಾಣಿಯಲ್ಲಿ ಕೆಲವು ಕಾಲ ಪ್ರೊಡ್ಯೂಸರ್ ಆಗಿದ್ದವರು ನನ್ನಿಂದ 'ಕವಿತೆ ಹುಟ್ಟಿತು' ಅನ್ನುವ ರೂಪಕವನ್ನು ಬರೆಯಿಸಿಕೊಂಡು ಅದರಲ್ಲಿ ಚಕ್ರಕ್ಕೆ ಪ್ರಾಸವಾಗಿ ಬಳಸಿದ್ದ ಶುಕ್ರ ಅನ್ನುವ ಪದವನ್ನು ತೆಗೆಯುವುದು ಸಾಧ್ಯವೇ ಎಂದು ಕೇಳಿದ್ದು ನೆನಪಾಗುತ್ತಿದೆ. ರೇತಸ್ಸು ಅನ್ನುವ ಅರ್ಥವಿರುವ ಆ ಪದವನ್ನು ಟಿ. ಎನ್. ರುಕ್ಮಿಣಿ ಹಾಡುವುದು ಬೇಡವೆಂದ ಅವರ ವಾದವನ್ನು ನಾನು ಒಪ್ಪದೇ ಹೋದಾಗ, ಶುಕ್ರ ಅನ್ನುವ ಶಬ್ದ ಸಂಸ್ಕೃತ ತಿಳಿಯದವರಿಗೆ ಅರ್ಥವಾಗಲಾರದು, ಅಲ್ಲವೇ ಎಂದುಕೊಂಡು ಸಮಾಧಾನಗೊಂಡಿದ್ದೂ ನೆನಪಾಗುತ್ತಿದೆ.

ಎತ್ತರದ ವ್ಯಕ್ತಿ ಟಿ. ಎಸ್. ವೆಂಕಣ್ಣಯ್ಯ ಅವರ ತಲೆಗೆ ತಮ್ಮ ಕೋಣೆಯ ಬಾಗಿಲು ಬಡಿಯಬಹುದೆನ್ನುವ ಹೆದರಿಕೆಯಿಂದ ಆ ಬಾಗಿಲುವಾಡವನ್ನೇ ಬದಲಾಯಿಸಿದ, ಅವರ ಕಾವ್ಯ ಸಪ್ಪೆಯೆಂದಾಗ ಅನಂತಮೂರ್ತಿ ಎಂದೂ ಮರೆಯದ ಹಾಗೆ ಸಪ್ಪೆಯೂ ಒಂದು ರುಚಿಯೆಂದು ಹೇಳಿ ಬಾಯಿ ಮುಚ್ಚಿಸಿದ, ಆತ್ಮೀಯ ಸ್ನೇಹಿತನಿಗೆ ಜಾಮೀನಾಗಿ ನಿಂತು ಸಾವಿರಾರು ರೂಪಾಯಿಗಳ ಸಾಲವನ್ನು ಹೊತ್ತು ಅದರ ಬಗ್ಗೆ ಒಮ್ಮೆ ಕೂಡಾ ಮಾತಾಡದೇ ಶುಚಿ ರುಚಿ ಸೌಜನ್ಯಗಳ ಸಾಕಾರಮೂರ್ತಿಯಾಗಿ ಬದುಕಿದ ವಿ.ಸೀ. ಅವರನ್ನು ಜನ್ಮಶತಾಬ್ದಿಯ ಈ ಸಂದರ್ಭದಲ್ಲಿ ನಾನು ಕೃತಜ್ಞತೆಯಿಂದ ನೆನೆಯುತ್ತಿದ್ದೇನೆ.

ನನ್ನ ಐದನೇ ವಯಸ್ಸಿನಲ್ಲಿ ತೀರಿಕೊಂಡ ನನ್ನ ತಂದೆಯ ಸ್ಥಾನದಲ್ಲಿ ಕನ್ನಡದ ಅನೇಕ ಮಹನೀಯರನ್ನು ಕಲ್ಪಿಸಿಕೊಂಡು ನನ್ನ ಬದುಕನ್ನು ತಿದ್ದುಕೊಳ್ಳುತ್ತ ಬಂದಿದ್ದೇನೆ. ಅಂಥ ಮಹನೀಯರಲ್ಲಿ ಒಬ್ಬರಾಗಿ, ಜೊತೆಗೆ ಗುರುವೂ ಆಗಿ, ಕಾವ್ಯದ ಬಗ್ಗೆ ನನ್ನ ನಿಲುವನ್ನು ಕೊಂಚಮಟ್ಟಿಗಾದರೂ ತಿದ್ದಿದ ವಿ.ಸೀ. ಅವರ ನೆನಪು ಇವೊತ್ತಿಗೂ ಹಸಿರಾಗಿದೆ.

ಸುಂದರ ನೆನಪುಗಳ ಚಿನ್ನದ ಗಣಿ

ಎಚ್. ಕೆ. ರಾಮಚಂದ್ರ ಮೂರ್ತಿ

ಗುರುಗಳಾದ ಪೂಜ್ಯ ವಿ.ಸೀ. ಅವರನ್ನು ನೆನದಾಗಲೆಲ್ಲ ನನಗೆ W. S. Landor ನ ಈ ಮಾತುಗಳೇ ಮನಸ್ಸಿನಲ್ಲಿ ಪ್ರತಿಧ್ವನಿತವಾಗುತ್ತವೆ :

> I strove with none, for none was worth my strife,
> Nature I loved, and, next to nature, Art:
> I warmed both hands before the fire of life;
> It sinks, and I am ready to depart.

ಬಹುಶಃ ಇದಕ್ಕೆ ಕಾರಣ, ಈ ಸಾಲುಗಳು ಅವರಿಗೂ ತುಂಬಾ ಪ್ರಿಯವಾಗಿದ್ದವು. ನಾಲ್ಕಾರು ಬಾರಿ ಅವರು ಈ ಪುಟ್ಟ ಪದ್ಯವನ್ನು ಉದ್ಗರಿಸಿದ್ದುದು ನೆನಪಾಗುತ್ತದೆ. ಬೆಂಕಿ ಆರಿ ತಣ್ಣಗಾಗಿ, ಅವರ ನೆನಪಿನ ತಂಪು ಕಂಪುಗಳು ಮಾತ್ರ ಉಳಿದಿವೆ.

ನಾನು ಮೊಟ್ಟಮೊದಲು ಅವರನ್ನು ಕಂಡುದು, ಅವರ ಜತೆ ಮಾತನಾಡಿದುದು ಸುಮಾರು ೧೯೪೩ರ ಸೆಪ್ಟೆಂಬರ್‌ನಲ್ಲಿರಬೇಕು. ಆಗ ಮೈಸೂರು ಇಂಟರ್‌ಮಿಡಿಯೆಟ್ ಕಾಲೇಜಿ (ಈಗಿನ ಯುವರಾಜ ಕಾಲೇಜಿ)ನಲ್ಲಿ ಸೀನಿಯರ್ ಇಂಟರ್‌ಮಿಡಿಯೆಟ್‌ನಲ್ಲಿದ್ದೆ. ನನಗೆ ಆಗಿನ್ನೂ ಅವರು ನೇರವಾಗಿ 'ಮೇಷ್ಟ'ರಾಗಿರಲಿಲ್ಲ. ಅವರ ಬಗ್ಗೆ ದೂರದಿಂದಲೇ ಸಾಕಷ್ಟು ಕೇಳಿದ್ದೆ. ಅವರು ಬೆಂಗಳೂರಿನಿಂದ ಮೈಸೂರಿಗೆ ವರ್ಗವಾಗಿ ಬರುತ್ತಾರೆಂಬ ಸಂತೋಷ ವಾರ್ತೆಯಿಂದ ನನ್ನ ಕುತೂಹಲ ಕೆರಳಿತ್ತು. 'ಅವರು ಕನ್ನಡವನ್ನು ಇಂಗ್ಲಿಷಿನಲ್ಲಿ ಬೋಧಿಸುತ್ತಾರೆ', 'ವಿ.ಸೀ. ಅವರ ಇಂಗ್ಲಿಷ್ ಬಲುಸೊಗಸು', 'ಅವರೊಬ್ಬ ಅಸಾಧಾರಣ ರೀತಿಯ ಮೇಷ್ಟರು' ಎಂಬಿತ್ಯಾದಿ ಮಾತುಗಳ ಮೂಲಕ ಅವರ ಖ್ಯಾತಿ ಮೈಸೂರಿಗೂ ತಲುಪಿತ್ತು. ಮಹಾರಾಜ ಕಾಲೇಜಿಗೆ ಬಂದ ಮೇಲೂ ಅವರು ಇಂಟರ್‌ಮಿಡಿಯೆಟ್ ತರಗತಿಗಳಿಗೂ ಪಾಠ ಹೇಳುತ್ತಿದ್ದರು.

ಅವರು ನಾನಿದ್ದ ಸೆಕ್ಷನ್‌ಗೆ ಬರುವುದಿಲ್ಲ ಎಂದು ಗೊತ್ತಾದಾಗ ನನಗಾದ ನಿರಾಸೆ ಅಷ್ಟಿಷ್ಟಲ್ಲ. ಆದರೂ ನಾನು ಹೆದರುತ್ತಾ ಬೆದರುತ್ತಾ ಅವರ ಅಪ್ಪಣೆ ಇಲ್ಲದೆ ಅವರು 'ಯಶೋಧರ ಚರಿತ್ರೆ'ಯನ್ನು ಬೋಧಿಸುತ್ತಿದ್ದ ಇನ್ನು ಯಾವುದೋ ಸೆಕ್ಷನ್ನಿಗೆ ಹೋಗಿ

ಕೊನೆಯ ಬೆಂಚಿನಲ್ಲಿ ಕೂರುತ್ತಿದ್ದೆ– ಬಗ್ಗಿಸಿದ ತಲೆ ಎತ್ತದೆ. ಹಾಗೆ ಕೂತು ಸುಮಾರು ೧೦–೧೨ ಗಂಟೆಗಳ ಕಾಲ ಅವರ ಪಾಠ ಕೇಳಿದೆ ಎಂದು ನೆನಪು. ಆದರೂ ಏನೋ ಒಂದು ರೀತಿಯ ಅಳುಕು ಕಾಡುತ್ತಿತ್ತು.

ಒಂದು ದಿನ ಅವರನ್ನು ನೇರವಾಗಿ ಕೇಳಿಬಿಟ್ಟೆ: ಕ್ಷಮೆ ಯಾಚಿಸುವ ಧ್ವನಿಯಲ್ಲಿ. ಅವರ ಕ್ಲಾಸಿನಲ್ಲಿ ಕೂರಲು ಅಪ್ಪಣೆ ಬೇಡಿದಾಗ ಅವರು ಗಂಭೀರವದನರಾದರು. ಅದೇ ಸಮಯದಲ್ಲಿ ನಡೆಯುತ್ತಿದ್ದ ನನ್ನ ಕ್ಲಾಸಿನಿಂದ ತಪ್ಪಿಸಿಕೊಂಡು ಬೇರೊಬ್ಬ ಅಧ್ಯಾಪಕರ ತರಗತಿಯಲ್ಲಿ ಹಾಜರಾಗುವುದರ ಅನೌಚಿತ್ಯವನ್ನು ನನಗೆ ಅಪ್ರಿಯವಾಗದ ರೀತಿಯಲ್ಲಿ ತಿಳಿಯಹೇಳಿದರು. ಆದರೂ ನನ್ನ ಪೆಚ್ಚು ಮುಖವನ್ನು ನೋಡಿಯೋ ಏನೋ– 'ಸರಿಯಪ್ಪ..... ಹಾಗೂ ನಿಮಗೆ ಇಷ್ಟವಾದರೆ ಕ್ಲಾಸಿಗೆ ಬಂದು ಕುಳಿತುಕೊಳ್ಳಿ' ಎಂದರು. ಸುಮಾರು ೨–೩ ತಿಂಗಳ ಕಾಲ ನನಗೆ ಅವರು 'ಯಶೋಧರ ಚರಿತ್ರೆ'ಯನ್ನು ಬೋಧಿಸುತ್ತಿದ್ದ ಅನನ್ಯ ವೈಖರಿಯ ಪರಿಚಯವಾಯಿತು. ಜೈನಧರ್ಮದ ಹಿನ್ನೆಲೆಯಲ್ಲಿ ಮನುಷ್ಯರ ಪಾಪ–ಪುಣ್ಯದ ಸಮಸ್ಯೆಗಳು, ಕಾಮ ಅತಿರೇಕಕ್ಕೆ ತಿರುಗಿದಾಗ ಅದು ಪಡೆದುಕೊಳ್ಳುವ ವಿಕಾರಸ್ವರೂಪಗಳು, ಜನ್ಮಜನ್ಮಾಂತರವನ್ನು ದಾಟಿಬರುವ ರಾಗದ್ವೇಷಗಳು ಇವುಗಳನ್ನು ವಿ.ಸೀ. ವಿಶ್ಲೇಷಿಸುತ್ತಿದ್ದುದು ನೆನಪಾಗುತ್ತದೆ. ವಿ.ಸೀ. ನನ್ನ ಪ್ರೀತಿ ಆದರಗಳಿಗೆ ಪಾತ್ರರಾದ ಗುರುಗಳಾದುದು ಸಹ ಆಗಲೇ.

ನಾನು I ಮತ್ತು II ಆನರ್ಸ್ ತರಗತಿಗಳಲ್ಲಿದ್ದಾಗ ಅವರು ದ್ವಿತೀಯ ಭಾಷೆಯಾಗಿ ಕನ್ನಡದ ವಿದ್ಯಾರ್ಥಿಗಳಾದ ನಮಗೆ 'ಅಶ್ವತ್ಥಾಮನ್' ನಾಟಕ ಪಾಠ ಹೇಳುತ್ತಿದ್ದರು. ಗ್ರೀಕ್ ನಾಟಕದ ಉಗಮ, ಸಾಫೊಕ್ಲಿಸನ ದುರಂತಪ್ರಜ್ಞೆ, ಸಾಫೊಕ್ಲಿಸ್‌ನ ಮೂಲವನ್ನನುಸರಿಸಿದರೂ 'ಅಶ್ವತ್ಥಾಮನ್' ಹೇಗೆ, ಏಕೆ ಒಂದು ಅನ್ಯಾದೃಶ 'ಸ್ವತಂತ್ರ ಕೃತಿ' ಎಂಬಿತ್ಯಾದಿ ವಿಚಾರಗಳನ್ನು ತಲಸ್ಪರ್ಶಿಯಾಗಿ ಚರ್ಚಿಸುತ್ತಿದ್ದರು. ಇಂಗ್ಲಿಷ್ ಆನರ್ಸ್ ತರಗತಿಯಲ್ಲಿ ನಾವು ಅಧ್ಯಯನ ಮಾಡಬೇಕಾಗಿದ್ದ ಗ್ರೀಕ್ ನಾಟಕ ಸಾಹಿತ್ಯವನ್ನು ಅತ್ಯಂತ ಉಪಯುಕ್ತ ರೀತಿಯಲ್ಲಿ ಪರಿಚಯಿಸಿಕೊಟ್ಟವರು ವಿ.ಸೀ. ಅವರು. ಆಗ, ಶಾರದಾವಿಲಾಸ ಹೈಸ್ಕೂಲಿನ ಹಿಂಭಾಗದಲ್ಲಿದ್ದ ಅವರ ಮನೆಗೆ ಆಗಾಗ ಹೋಗುತ್ತಿದ್ದೆ. ಜೇಬ್ (Jebb) ಎಂಬ ವಿದ್ವಾಂಸನ ಸಾಫೊಕ್ಲಿಸ್ ನಾಟಕಗಳ (ಗದ್ಯ) ಭಾಷಾಂತರವನ್ನು ಕೊಟ್ಟು, ಸಾಫೊಕ್ಲಿಸನ ಎಲ್ಲಾ ನಾಟಕಗಳನ್ನೂ ಓದುವಂತೆ ಪ್ರೋತ್ಸಾಹಿಸಿದರು. ಗಿಲ್ಬರ್ಟ್ ಮರ್ರೆ (Gilbert Murry) ಯ ಯೂರಿಪಿಡಿಸ್ ನಾಟಕಗಳ ಭಾಷಾಂತರಗಳನ್ನು ಅವರೇ ಕೊಟ್ಟು ಓದಿಸಿದರು. ಸಾಹಿತ್ಯ ಸಂವೇದನೆ, ಉತ್ತಮ ಅಭಿರುಚಿ, ಕಾವ್ಯಾಸ್ವಾದನೆಗಳೆಂದರೆ ಏನೆಂಬುದನ್ನು ಪರಿಚಯ ಮಾಡಿಸಿದವರು ವಿ.ಸೀ. ಅವರು. ಇವೆಲ್ಲ ಆಗಿ ಹೋಗಿ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಕಳೆದಿದೆ. ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿಯಾದ ನನ್ನ ವ್ಯಕ್ತಿತ್ವಕ್ಕೆ ಒಂದು ರೂಪವನ್ನು ಕೊಟ್ಟವರು ಕನ್ನಡ ಮೇಷ್ಟರು ವಿ.ಸೀ. ಒಬ್ಬರೇ ಅನ್ನುವುದು ಇಲ್ಲಿ ನಾನು ಅವರಿಗೆ ಸಲ್ಲಿಸಬಹುದಾದ ನೆನಪಿನ ಕಾಣಿಕೆ.

ನಾನು ವಿದ್ಯಾರ್ಥಿಯಾಗಿದ್ದ ದಿನಗಳಲ್ಲಿ ನನ್ನ ಕೈಲಿ ನಾಲ್ಕಾರು ಇಂಗ್ಲಿಷಿನ ಲೇಖನಗಳನ್ನು ಭಾಷಾಂತರ ಮಾಡಿಸಿ, ಅಲ್ಲಲ್ಲಿ ತಿದ್ದಿ ಪರಿಷ್ಕರಿಸಿ ಪ್ರಕಟಿಸಿದರು. 'ಪ್ರಬುದ್ಧ

ಕರ್ನಾಟಕ'ದ ಸಂಪಾದಕರಾಗಿದ್ದಾಗ ಅವರು ಅನಟೋಲ್ ಫ್ರಾನ್ಸ್ (Anatole France) ಷೇಕ್ಸ್‌ಪಿಯರ್‌ನ 'ದಿ ಟೆಂಪೆಸ್ಟ್' (The Tempest) ನಾಟಕ ಕುರಿತು ಬರೆದಿದ್ದ ಸ್ವಾರಸ್ಯವಾದ ಪುಟ್ಟ ಲೇಖನವನ್ನು ಭಾಷಾಂತರ ಮಾಡುವಂತೆ ಹೇಳಿ ಅದನ್ನು ಪ್ರಕಟಿಸಿದರು. ನನ್ನ ದೃಷ್ಟಿಯಲ್ಲಿ, ಆ ಕಾಲದ 'ಪ್ರಬುದ್ಧ ಕರ್ನಾಟಕ'ವು ವಿದ್ಯಾರ್ಥಿಯೊಬ್ಬನ ಲೇಖನವನ್ನು ಪ್ರಕಟಿಸೀತು ಎನ್ನುವುದು ಸುಲಭದ ಮಾತಾಗಿರಲಿಲ್ಲ. ಆಗಿನ್ನೂ ಎರಡನೆಯ ಆನರ್ಸ್‌ನಲ್ಲಿದ್ದ ನನಗೆ ವಿಶ್ವವಿದ್ಯಾನಿಲಯದ ಚಿನ್ನದ ಪದಕ ದೊರಕಿದಷ್ಟು ಸಂತೋಷವಾಗಿತ್ತು.

ಅನೇಕ ವೇಳೆ ಅವರು ಬೇರೆ ಊರುಗಳಲ್ಲಿ ಸಾಹಿತ್ಯೋತ್ಸವಗಳನ್ನು ನಡೆಸಲು ಹೋದಾಗ ನನ್ನನ್ನು ಜತೆಯಲ್ಲಿ ಕರೆದೊಯ್ಯುತ್ತಿದ್ದರು. ೧೯೪೭–೪೮ರ ಸುಮಾರಿನಲ್ಲಿ ಒಮ್ಮೆ ನಾನು ಅವರೊಡನೆ ಕೊಡಗಿನ (ಆಗಿನ್ನೂ ಅದು ಸ್ವತಂತ್ರ ಕೊಡಗು ರಾಜ್ಯವಾಗಿ ಉಳಿದಿತ್ತು) ವೀರಾಜಪೇಟೆಯ ಕರ್ನಾಟಕ ಸಂಘದ ಉತ್ಸವಕ್ಕೆ ಹೋಗಿದ್ದೆ. ನಮ್ಮ ಜತೆ ಶ್ರೀಗಳಾದ ಕೆ. ವಿ. ರಾಘವಾಚಾರ್, ಕೆ. ಎಸ್. ನರಸಿಂಹಸ್ವಾಮಿ, ಎಚ್. ಕೆ. ರಂಗನಾಥ್, ನ. ಭದ್ರಯ್ಯ ಮುಂತಾದ ಹಿರಿಯರೂ ಇದ್ದರು. ವಿ.ಸೀ. ಅವರ ಕಾಫಿ ವ್ಯಸನದ ಬಗೆಗೆ ನನಗೆ ಪರಿಚಯವಾದುದು ಅಲ್ಲೇ. ಅಲ್ಲಿಂದ ಹೊರಡುವ ದಿನ ಬೆಳಿಗ್ಗೆ ೩–೪ ಜನ ವಿ.ಸೀ. ಅಭಿಮಾನಿಗಳ ಮನೆಯಲ್ಲಿ ಕಾಫಿ ಆಗಿತ್ತು. ಇನ್ನೇನು ಬಸ್ಸಿಗೆ ಹತ್ತಬೇಕೆನ್ನುವಾಗ ಇನ್ನೊಬ್ಬರು ಯಾರೋ ಮತ್ತೆ ಕಾಫಿಗೆ ಕರೆದು ಒತ್ತಾಯ ಮಾಡಿದರು. ನಾವೆಲ್ಲ ಒಕ್ಕೊರಲಿಂದ 'ನಮಗೆ ಬೇಡ,' 'ಬೇಡ'ವೆಂದಾಗ ವಿ.ಸೀ. ಹುಸಿಮುನಿಸಿನಿಂದ 'ನಮಗೆ ಬೇಡ' ಎನ್ನಲು ಏನಧಿಕಾರ ನಿಮಗೆ? ನೀವು ಕೂತಿರಿ, ನಾನು ಹೋಗಿ ಬರ್ತೇನೆ,' ಎಂದು ಹೊರಟೇ ಬಿಟ್ಟರು. ಆಗ ನಡೆದ ಇನ್ನೂ ಒಂದು ಪುಟ್ಟ ಘಟನೆ ನೆನಪಾಗುತ್ತದೆ. ನಮ್ಮನ್ನು ಅಲ್ಲಿಗೆ ಆಹ್ವಾನಿಸಿದ್ದವರು ಅಚ್ಚಕನ್ನಡದವರೇ ಆದ, ಅಲ್ಲಿ ಮ್ಯಾಜಿಸ್ಟ್ರೇಟ್ ಆಗಿದ್ದ – ಅವರ ಹೆಸರು ನೆನಪಿಲ್ಲ, ಎಂಥದೋ ಮೂರ್ತಿಯವರು ಅವರು – ಅವರು ವಿ.ಸೀ. ಅವರಿಗೆ ಒಂದು ಎಚ್ಚರಿಕೆಯ ಮಾತನ್ನು ಅತ್ಯಂತ ಸೂಕ್ಷ್ಮವಾಗಿ, ಸೂಚ್ಯವಾಗಿ ಹೇಳಿದ್ದರು. "ಸರ್, ಇಲ್ಲಿನ ಜನರಿಗೆ ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಸಮಗ್ರ ಕರ್ನಾಟಕದೊಡನೆ ಸೇರಲು ಸುತರಾಂ ಇಷ್ಟವಿಲ್ಲ. ತಾವು ದಯವಿಟ್ಟು ಆ ಬಗ್ಗೆ ಇವತ್ತಿನ ಸಂಜೆಯ ಕಾರ್ಯಕ್ರಮದಲ್ಲಿ ಪ್ರಸ್ತಾಪವೆತ್ತ ಬೇಡಿ" ಎಂದು ಬೇಡಿಕೊಂಡರು. ವಿ.ಸೀ. ಅವರಿಗೆ ಆ ಮಾತು ಪ್ರಿಯವಾಗಿ ತೋರಲಿಲ್ಲ. ಆದರೂ ತಮ್ಮ Host ಆಗಿದ್ದವರ ಮನಸ್ಸಿಗೆ ಮುಜುಗರವಾಗಬಾರದೆಂದು 'ಆಗಲಪ್ಪ' ಎಂದವರೇ ನಮ್ಮ ಕಡೆ ತಿರುಗಿ ಸ್ವಲ್ಪ ಕೀಟಲೆ ಬೆರೆತ ನಗೆ ಬೀರಿದರು.

ಸರಿ, ಸಂಜೆ ಕಾರ್ಯಕ್ರಮ, ಅಲ್ಲಿನ ಹೈಸ್ಕೂಲು ಸಭಾಂಗಣದಲ್ಲಿ ಪ್ರಾರಂಭವಾಯಿತು ಅನ್ನಿ. ಅಧ್ಯಕ್ಷ ಭಾಷಣದ ಹೊತ್ತಿಗೆ ಸಭೆಯಲ್ಲಿ ಸಾಕಷ್ಟು ಕಾವು ಏರಿತ್ತು. ನಾಲ್ಕಾರು ಕಡೆಗಳಿಂದ ಮೆಲುದನಿಯ ಪ್ರತಿಭಟನೆ, ಗೊಣಗಾಟ ಕೇಳಿ ಬರುತ್ತಿತ್ತು. ಪಂಜೆಯವರ ಸುಪ್ರಸಿದ್ಧ 'ಹುತ್ತರಿ ಹಾಡು' ಕವನವನ್ನು ಉದ್ಧರಿಸಿ ಮಾತನಾಡುತ್ತಿದ್ದ ವಿ.ಸೀ. ಅವರಿಗೆ ಒಮ್ಮೆಲೇ ಆವೇಶ ಏರಿ ಬಂತು. 'ಇದು ಅಗಸ್ತ್ಯನ ತಪದ ಮಣ್ಣೆ, ಇದು ಕಾವೇರಿ ತಾಯ ತವರ್ಮನೆ.....' ಎನ್ನುವ ಸಾಲುಗಳನ್ನು ಏರು ಧ್ವನಿಯಲ್ಲಿ ಉಚ್ಚರಿಸಿ, ಕೊಡಗಿನ ಅಸದೃಶ ಸೌಂದರ್ಯವನ್ನು ಬಣ್ಣಿಸಿದರು. ಇದನ್ನು ರಚಿಸಿದ ಕವಿ ಕೊಡಗಿನವರಲ್ಲ ಎಂದು ಬರೆ

ಎಳೆದರು. ಮರುಕ್ಷಣದಲ್ಲಿ ಕೊಡಗಿನವರ ವೀರ್ಯಸಾಹಸಮಯ ಚರಿತ್ರೆಯನ್ನು ಮೈ ಜುಮ್ಮೆನಿಸುವಂತೆ ವಿಶ್ಲೇಷಿಸಿದರು. ಮಾತು ಎತ್ತೆತ್ತಲೋ ಹರಿದು ವಿ. ಸೀ. ಕರ್ನಾಟಕ ಏಕೀಕರಣದ (ಭೂತ!) ಭವಿಷ್ಯಗಳ ಪ್ರಸ್ತುತತೆಯನ್ನು ಸುದೀರ್ಘವಾಗಿ ಬೆಳಸಿಯೇ ಬಿಟ್ಟರು. ಸಭೆಯಲ್ಲಿ, ಪ್ರತಿಭಟಿಸಲು ನಿಂತಿದ್ದ ಹತ್ತಾರು ಮಂದಿಯನ್ನು **snub** ಮಾಡಿ ಕೂರಿಸಿದರು. ವೇದಿಕೆಯ ಮೇಲೆ ಕುಳಿತಿದ್ದ ಮ್ಯಾಜಿಸ್ಟ್ರೇಟ್ ಮೂರ್ತಿಗಳ ಮುಖ ಬಿಳಿಚಿ ಹೋಗಿತ್ತು. ಪುಣ್ಯಕ್ಕೆ ಹೆಚ್ಚು ಪ್ರಮಾದವೇನೂ ಆಗದೆ, ಅಂದಿನ ಸಭೆ ಶಾಂತವಾಗಿ ಮುಕ್ತಾಯವಾಯಿತು. ಕೊಡಗಿನಿಂದ ಹಿಂತಿರುಗಿ ಬರುವಾಗ ಕೊಡಗಿನ ಎಲ್ಲೆಯಲ್ಲಿ ತಲೆಹರಟೆಯಾಡಿದ ಸುಂಕದ ಅಧಿಕಾರಿಯ ಜತೆ ಶ್ರೀ ಕೆ. ವಿ. ರಾಘವಾಚಾರ್ಯರು ವೀರಾವೇಶದಿಂದ ಯುದ್ಧಕ್ಕೆ ಇಳಿದ ಸಂದರ್ಭ ನಮ್ಮ ಪ್ರವಾಸದಲ್ಲಿ ಒಂದು ಮೋಜಿನ ಪ್ರಕರಣವಾಗಿ ಪರಿಣಮಿಸಿತು.

ವಿ. ಸೀ. 'ಕಾವ್ಯವಾಚನ ಮಾಡುತ್ತಾರೆ', 'ಭಾಷಣ ಮಾಡುತ್ತಾರೆ' ಅಂದರೆ ನಮಗೆಲ್ಲಾ ಅದೊಂದು ಅಪೂರ್ವ ಅನುಭವದ ನಿರೀಕ್ಷೆ. ಒಮ್ಮೆ ಅಂದಿನ ಮಹಾರಾಜರ ಕಾಲೇಜಿನ 'B. T. Hall' ನಲ್ಲಿ ಅವರು ವಿ. ಕೃ. ಗೋಕಾಕರ 'ಸಮುದ್ರ ಗೀತಗಳ' ವಾಚನ ನಡೆಸಿದುದು ಅವರ ವಾಗ್ವೈಭವದ ಮಹೋತ್ಸವವಾಯಿತು ನಮ್ಮ ಪಾಲಿಗೆ. ಸುಮಾರು ಒಂದು–ಒಂದೂವರೆ ಗಂಟೆಗಳ ಕಾಲ ತಮ್ಮ ಅಸ್ಖಲಿತವಾಣಿಯಲ್ಲಿ (ಅದರಲ್ಲಿ ೨೦% ಭಾಗ ಅವರ **impeccable** ಇಂಗ್ಲಿಷಿನಲ್ಲಿರುತ್ತಿತ್ತು) ಗೋಕಾಕರ ಕಾವ್ಯ ವಸ್ತುವಿನ **ಹೊಸತನ, ಚಿತ್ರಯುಕ್ತ ಶೈಲಿ** ಮುಂತಾದ ಅಂಶಗಳನ್ನು ಹತ್ತಾರು ದೃಷ್ಟಿಯಿಂದ ವೀಕ್ಷಿಸಿ, **ಕಾವ್ಯವನ್ನು** ಬಿಡಿಸಿ ಓದಿ ವಿಚಾರ ಮಾಡಿದರು. ರಾಳ್ಳಪಲ್ಲಿಯವರು 'ತ್ಯಾಗರಾಜರ ಕೃತಿ'ಗಳ ಬಗ್ಗೆ ಮಾತನಾಡಿದಾಗ, ಅನಕೃ ಹಲವಾರು ವರ್ಷಗಳ ನಂತರ ಮೈಸೂರಿಗೆ ಬಂದು ಕಾಲೇಜಿನಲ್ಲಿ ಭಾಷಣ ಮಾಡಿದಾಗ ವಿ.ಸೀ. ಮಾಡಿದ ಅಧ್ಯಕ್ಷ ಭಾಷಣಗಳು **memorable** ಸಂದರ್ಭಗಳು.

ವಿ.ಸೀ. ಅವರನ್ನು ನೆನೆಯುವಾಗ ನನ್ನ ಬದುಕಿನಲ್ಲಿ ಎಂದೂ ಮರೆಯಲಾಗದ ಇನ್ನೂ ಕೆಲವು ಸಂದರ್ಭಗಳು ಮರುಕಳಿಸಿದಂತಾಗುತ್ತವೆ. ೧೯೪೯ರ ನವೆಂಬರ್‌ನಲ್ಲಿ ಶೃಂಗೇರಿ ಬಳಿಯ ಕೊಪ್ಪದಲ್ಲಿ ನನ್ನ ಮದುವೆಯನ್ನು ಮುಗಿಸಿಕೊಂಡು ಬಂಧು ಮಿತ್ರರೊಂದಿಗೆ ಅರಸೀಕೆರೆ ರೈಲ್ವೆ ಸ್ಟೇಷನ್ನಿನಲ್ಲಿ ಬಂದು ಇಳಿದೆ. ಆಗ ತಾನೆ ವಿ.ಸೀ. ಪುಣೆಯಿಂದಲೊ ಏನೋ ಹಿಂತಿರುಗಿ ಬರುತ್ತಿದ್ದರು. ಪ್ಲಾಟ್‌ಫಾರಂನಲ್ಲಿ ನನ್ನನ್ನು ದೂರದಿಂದಲೇ ನೋಡಿ ಹತ್ತಿರ ಬಂದು ತಲೆದಡವಿ 'ನಿಮ್ಮ ಮದುವೆಗೆ ಬರಲಿಕ್ಕೆ ಆಗಲಿಲ್ಲಪ್ಪ – ನೀವು ಮೈಸೂರಿಗೆ ಹಿಂತಿರುಗಿ ಬಂದಾಗ ನಿಮ್ಮ 'ಹುಡುಗಿ'ಯನ್ನು ಕರೆದುಕೊಂಡು ನಮ್ಮ ಮನೆಗೆ ಬನ್ನಿ' ಎಂದರು. ಕಾಲುಮುಟ್ಟಿ ಸಾಷ್ಟಾಂಗ ನಮಸ್ಕಾರ ಮಾಡಿದಾಗ 'ನೀವು ನೂರುಕಾಲ ಹೀಗೆಯೇ ಸಂತೋಷವಾಗಿರಿ' ಎಂದು ಹರಸಿದರು. ನಮ್ಮಿಬ್ಬರ ಕಣ್ಣುಗಳೂ ಅನಿರ್ವಚನೀಯ ಕೃತಜ್ಞತೆ ಗೌರವಗಳಿಂದ ತುಂಬಿ ತುಳುಕಾಡಿದವು. ಮತ್ತೆ ಕಣ್ಣೀರು ಕರೆಯುತ್ತಲೇ ಈ ಮಾತುಗಳನ್ನು ಬರೆಯುತ್ತಿದ್ದೇನೆ.

ವಿ. ಸೀ. ಅವರ ಪ್ರೀತಿ–ಅಭಿಮಾನಗಳನ್ನು ನಾನು ಎಂದೂ ಹೇಗೂ ಬೆಲೆಕಟ್ಟಿ

ಅಳಿಯಲಾರೆ. ಹತ್ತಾರು ಸಲ ಅವರ ಮನೆಗೆ ಹೋದಾಗಲೂ ಕಾಫಿ ಕೊಟ್ಟು ಕೂರಿಸಿಕೊಂಡು ತಾವು ಓದಿ ಖುಷಿ ಪಟ್ಟ ಯಾವುದೋ ಪದ್ಯದ, ನಾಟಕದ, ವಿಮರ್ಶೆಯ ಮಾತುಗಳನ್ನು ಓದಿ ಹೇಳಿ ಬೆಚ್ಚನೆಯ ತಮ್ಮ ಅನುಭವವನ್ನು ನಮ್ಮ ಜತೆ ಹಂಚಿಕೊಳ್ಳುತ್ತಿದ್ದರು. ಇದು ನನ್ನ ಹಾಗೆಯೇ ಹಲವಾರು ಸಾಹಿತ್ಯ ವಿದ್ಯಾರ್ಥಿಗಳಿಗೆ ಲಭಿಸುತ್ತಿದ್ದ ಚಿನ್ನದಂಥ ಅನುಭವಗಳಷ್ಟೆ.

ವಿ. ಸೀ. ಅವರ ಅಸಾಧಾರಣ ವಿದ್ವತ್ತು, ಅವರ ವ್ಯಾಸಂಗದ ಹಿಮಾಲಯ ಸದೃಶವಾದ ಹರಹು, ಅವರ ಅತ್ಯುತ್ಕೃಷ್ಟ ಕಲಾಭಿಜ್ಞತೆಯ ಆಳ– ಇವನ್ನು ಕುರಿತು ಹೊಸದಾಗಿ ಹೇಳುವುದಕ್ಕೆ ನನ್ನ ಬಳಿ ಏನೂ ಉಳಿದಿಲ್ಲ. ಆದರೆ ಈಗಲೂ, ನನಗೆ ಅವರು ಆಗ ಓದಿ ಹೇಳಿದ್ದ ವಾಲ್ಟರ್ ಪೇಟರ್ (Walter Pater) ನ Renaissance ಗ್ರಂಥದಲ್ಲಿನ ಮೊನಾಲಿಸಾ ಚಿತ್ರದ ವರ್ಣನೆ, ನನ್ನ ಜತೆ ಪ್ರಸ್ತಾಪಿಸಿದ ಯೆಹುದಿ ಮೆನುಹಿನ್‌ರ ಪಿಟೀಲುವಾದನ ಕಚೇರಿಯ ಚಿರಸ್ಮರಣೀಯ ಅನುಭವ, ಕೆಲವೇ ತಿಂಗಳುಗಳ ಹಿಂದೆ ಅವರು ಬೆಂಗಳೂರಿನಲ್ಲಿ ಕೇಳಿದ ಬಡೆ ಗುಲಾಂ ಅಲಿಖಾನ್‌ರ ದರ್ಬಾರಿ ರಾಗ — ಇವುಗಳ ನೆನಪುಗಳು ನನ್ನ ಬದುಕಿನ ಅವಿಸ್ಮರಣೀಯ ಗಳಿಗೆಗಳಾಗಿವೆ.

ವಿ. ಸೀ. ಅವರ ಓದಿನ ಹರಹು ಎಂದೆನಲ್ಲ – ಅದರ ಕುರಿತು ಒಂದು ಘಟನೆ ಇದು. ೧೯೭೦ರ ದಶಕದಲ್ಲಿ ನನಗೆ ಬ್ರೆಕ್ಟ್‌ನ (Bertholt Brecht) ನಾಟಕಗಳ 'ಹುಚ್ಚು' ಹಿಡಿದಿತ್ತು. ಆಗ ಯಾರಿಗೂ ಅವನ ಕೃತಿಗಳು ಇಲ್ಲಿ ಸಿಕ್ಕುವುದು ಕಷ್ಟವಾಗಿತ್ತು. ಆದರೆ ಅಮೇರಿಕ, ಇಂಗ್ಲೆಂಡುಗಳಲ್ಲಿದ್ದ ನನ್ನ ನಿಕಟ ಬಂಧುಗಳ ಮೂಲಕ ಅವನ ಕೃತಿಗಳ ಭಾಷಾಂತರಗಳನ್ನು ತರಿಸಿ ಓದಿ, ಕಂಡ ಕಂಡವರ ಮುಂದೆ ಅವನ ಬಗ್ಗೆ ಗಳಹುತ್ತಾ ಅವರ ತಲೆ ಚಿಟ್ಟು ಹಿಡಿಸುತ್ತಿದ್ದೆ. ಏನೋ ಮಾತನಾಡುತ್ತ ವಿ.ಸೀ. ಅವರ ಮುಂದೆ "ಸರ್, ನಾನು ಹೆಚ್ಚು ಕಡಿಮೆ ಬ್ರೆಕ್ಟ್‌ನ ಎಲ್ಲಾ ನಾಟಕಗಳನ್ನೂ ಓದಿದೆ, ಆದರೆ ಅವನ St. Joan of the Stock Yards ಸಿಕ್ಕಲಿಲ್ಲವಲ್ಲಾ" ಎಂದು ಪೇಚಾಡಿದೆ. ಮರುಕ್ಷಣದಲ್ಲೇ ವಿ.ಸೀ. ತಮ್ಮ ಪುಸ್ತಕದ ಕಪಾಟಿನ ಕಡೆ ಬಗ್ಗಿ ನಾಟಕ ಸಂಗ್ರಹವೊಂದನ್ನು ತೆಗೆದುಕೊಟ್ಟರು. "ನೋಡಿ ನಾನು ಸಾಮಾನ್ಯವಾಗಿ ಯಾರಿಗೂ ಪುಸ್ತಕಗಳನ್ನು ಕೊಡಲ್ಲ – ನೀವು ಓದಿದ ಕೂಡಲೇ ವಾಪಸು ಕಳುಹಿಸಿ ಕೊಡುತ್ತೀರಿ ತಾನೇ?" (ಆಗ ನಾನು ಮೈಸೂರು ವಿಶ್ವವಿದ್ಯಾನಿಲಯದ ನಿಘಂಟು ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೆ) ಎಂದರು. ನನ್ನ ಆನಂದಕ್ಕೆ ಪಾರವಿಲ್ಲದಂತಾಗಿತ್ತು. ಒಂದು ರೀತಿ ಸಂತೋಷವಾಗುವಂತೆ ವಿ.ಸೀ. ನನ್ನ ಕೊಬ್ಬು ಇಳಿಸಿದ್ದರು. ಒಂದು ವಾರದೊಳಗೆ ಇಡೀ ನಾಟಕವನ್ನು ಜೆರಾಕ್ಸ್ ಮಾಡಿಸಿಕೊಂಡು, ಅಂಚೆ ಮೂಲಕ ಪುಸ್ತಕವನ್ನು ಅವರಿಗೆ ಕಳುಹಿಸಿಕೊಟ್ಟೆ. ಅಷ್ಟೆ ಅಲ್ಲ, ಅವರು ಕೇಳಿದ್ದ The Good Woman of Setzuan ನಾಟಕವನ್ನೂ ಅವರಿಗೆ ಕಳುಹಿಸಿದ್ದೆ. ಆ ನಾಟಕದ ಬಗ್ಗೆ ಹತ್ತಾರು ಮೂಲಗಳಿಂದ ನಾನು ಸಂಗ್ರಹಿಸಿದ್ದ ಮಾಹಿತಿಯೆಲ್ಲವನ್ನೂ ಬದಿಗಿಡುವ ರೀತಿಯಲ್ಲಿ ಅವರು ನನಗೆ (ಬ್ರೆಕ್ಟ್ ನಾಟಕಕ್ಕೆ ಮೂಲ ಸ್ಫೂರ್ತಿ ಒದಗಿಸಿದ) Ernst Toller ನ The Masses & Man, ಬರ್ನಾರ್ಡ್ ಷಾನ St. Joan ಮತ್ತು Major Barbara – ಈ ಮೂರು ನಾಟಕಗಳನ್ನು ತೌಲನಿಕ ದೃಷ್ಟಿಯಿಂದ ಓದಲು ಪ್ರೇರಣೆ ಒದಗಿಸಿದರು.

St. Joan ನಾಟಕದ ಕುರಿತು ಆ ದಿನ ಅವರು ಆಡಿದ ಮಾತುಗಳನ್ನು ಗುರುತು ಹಾಕಿ ಕೊಳ್ಳಲಿಲ್ಲವಲ್ಲಾ ಎಂದು ಪೇಚಾಡುವಂತಾಯಿತು. ನಾನು ಮೈಸೂರು ವಿಶ್ವವಿದ್ಯಾನಿಲಯಕ್ಕಾಗಿ ರಚಿಸಿದ 'ಮೋಲಿಯೆರ್' 'ಬ್ರೆಕ್ಟ್' ಎರಡೂ ಪುಸ್ತಕಗಳನ್ನು ಹಸ್ತಪ್ರತಿಯಲ್ಲಿ ಕೂಲಂಕಷವಾಗಿ ಓದಿ, ತುಂಬಾ ಬೆಲೆಬಾಳುವ ಸಲಹೆಗಳನ್ನು ಕೊಟ್ಟರು. ಪುಸ್ತಕಗಳು ಪ್ರಕಟವಾದ ಮೇಲೆ ಓದಿ ನನಗೆ ಧೈರ್ಯ ಬರುವಂಥ ಒಳ್ಳೆಯ ಮಾತುಗಳನ್ನು ಆಡಿದರು.

ನನ್ನ ಮಗಳು ವಿದ್ಯಾಳ ಮದುವೆಯ ದಿನ ೧೯೭೫ನೆಯ ಇಸವಿಯ ಡಿಸೆಂಬರ್‌ನ (ಕ್ರಿಸ್‌ಮಸ್ ದಿನ) ಆ ಕೆಟ್ಟ ಚಳಿಯಲ್ಲೂ ಸಂಜೆ ಬಂದು ವಧೂವರರನ್ನು ಆಶೀರ್ವದಿಸಿ ನನ್ನ ಬೆನ್ನು ತಟ್ಟಿ ಹೋದ ನೆನಪು ಹಚ್ಚ ಹಸುರಾಗಿ ಉಳಿದಿದೆ.

ಮಣಿಪಾಲದ ಸಾಹಿತ್ಯ ಸಮ್ಮೇಳನದಲ್ಲಿ ಆದ ರಂಪ–ರಾದ್ಧಾಂತವನ್ನು ಬೆಂಗಳೂರಿಗೆ ಬಂದು ನಾನು ಅವರಿಗೆ ಆದ್ಯಂತವಾಗಿ ವಿವರಿಸುವಾಗ ಅವರ ಜತೆ ಶ್ರೀ ಪಿ. ವಿ. ಜೋಶಿಯವರೂ ಇದ್ದರು. ಆಗ ಅವರು ಹೇಳಿದ ಒಂದು ಮಾತು ನೆನಪಾಗುತ್ತದೆ: 'ಹೋಗಲಿ ಬಿಡಿ, ನಾನು ಬರದೆ ಹೋದದ್ದು ನನಗೆ ನಷ್ಟವೇನಾಗಲಿಲ್ಲ, ಆದರೆ 'ದೊಡ್ಡವರ ಸಣ್ಣತನ' ನೆನೆದಾಗ ಹೀನಾಯವೆನಿಸುತ್ತೆ' ಎಂದು ಪೇಚಾಡಿದರು. ಆ ಎಲ್ಲ ರಗಳೆಗಳಿಗೂ ಪರಿಹಾರವೋ ಎಂಬಂತೆ ಸಮ್ಮೇಳನದ ಸಂದರ್ಭದಲ್ಲಿ ಸಮ್ಮೇಳನಾಧ್ಯಕ್ಷ ದಿ. ಅನಕೃ ನಡೆದುಕೊಂಡ 'ದೊಡ್ಡತನ'ದ ರೀತಿ ಬಗ್ಗೆ ಕೇಳಿ, ಅವರಿಗೆ ನಿಜವಾಗಿಯೂ ಸಂತೋಷವಾಗಿತ್ತು. 'ನಿಜ, that man can always rise to the occasion' ಎಂದಿದ್ದರು.

ವಿ.ಸೀ. ಈಗ ನನ್ನ ಪಾಲಿಗೆ ಸುಂದರ ನೆನಪುಗಳ ಚಿನ್ನದ ಗಣಿಯಾಗಿ ಉಳಿದಿದ್ದಾರೆ. ಅವರ ಪ್ರೀತಿ ಅಭಿಮಾನಗಳು ನನ್ನ ಬದುಕಿಗೆ ಅರ್ಥಸಂಪತ್ತುಗಳನ್ನು ತಂದುಕೊಟ್ಟಿವೆ. ಅವರನ್ನು ನೆನೆದಾಗಲೆಲ್ಲ ನನಗೆ ಮತ್ತೆ ಷೇಕ್ಸ್‌ಪಿಯರ್‌ನ 'More is thy due than more than all can pay' ಎನ್ನುವ ಹಳೆಯ ಮಾತುಗಳು ಕಣ್ಣೆದುರಿಗೆ ಸುಳಿಯುತ್ತವೆ. ಕೃತಜ್ಞತೆಯಿಂದ ತಲೆಬಾಗಿದಾಗ, ಶಬ್ದದಾಚೆಯ ನೆನಪುಗಳಿಂದ ಕಣ್ಣುಗಳು ತುಂಬಿದಾಗ, ನನ್ನ ಬದುಕು ಸಾರ್ಥಕ ಎನಿಸಿದವರಲ್ಲಿ ವಿ.ಸೀ. ಅವರದು ಅಗ್ರಸ್ಥಾನ.

ನನ್ನ ಪೂಜ್ಯ ವಿದ್ಯಾಗುರು

ಎನ್. ಬಸವಾರಾಧ್ಯ

ಸುಮಾರು ಐವತ್ತು ವರ್ಷಗಳ ಹಿಂದಿನ ಮಾತು. ನಾನು ಮೈಸೂರು ವಿಶ್ವವಿದ್ಯಾಲಯದಲ್ಲಿ ೧೯೪೬ ರಿಂದ ೧೯೫೦ರ ವರೆಗೆ ವಿದ್ಯಾರ್ಥಿಯಾಗಿದ್ದಾಗ ೧೯೪೭–೪೮ರಲ್ಲಿ ಪ್ರೊ. ವಿ. ಸೀತಾರಾಮಯ್ಯನವರು ನನಗೆ ಗುರುಗಳಾಗಿದ್ದರು. ನಾನು ಕನ್ನಡ ಬಿ. ಎ. ಆನರ್ಸ್ ಓದುತ್ತಿದ್ದಾಗ ಎಲ್ಲ ವಿಭಾಗಗಳ ಆನರ್ಸ್ ತರಗತಿ ವಿದ್ಯಾರ್ಥಿಗಳಿಗೆ ಕನ್ನಡ ಬೋಧಿಸುತ್ತಿದ್ದ ಸಾಮಾನ್ಯ ತರಗತಿ (ಜನರಲ್ ಕ್ಲಾಸ್) ಗಳನ್ನು ನನ್ನ ಗುರುಗಳು ತೆಗೆದುಕೊಳ್ಳುತ್ತಿದ್ದರು. ಇದಾದ ಕೂಡಲೆ ಕನ್ನಡ ಆನರ್ಸ್ ತರಗತಿ ನಡೆಯುತ್ತಿತ್ತು. ಈ ಎರಡು ತರಗತಿಗಳನ್ನು ಒಂದಾದ ಮೇಲೆ ಒಂದರಂತೆ ತೆಗೆದುಕೊಂಡು ನನ್ನ ಗುರುಗಳು ನಿರ್ವಹಿಸುತ್ತಿದ್ದ ವಿಧಾನ ನನ್ನ ಮನಸ್ಸಿನಲ್ಲಿ ಇಂದಿಗೂ ಅಚ್ಚಳಿಯದಂತೆ ಉಳಿದಿದೆ. ಶುಭ್ರ ಬಿಳಿಪಂಚೆ, ಕ್ಲೋಸ್ ಕಾಲರಿನ ಕೋಟು, ಮೈಸೂರು ಪೇಟ ಅವರ ದಿನನಿತ್ಯದ ತರಗತಿಯ ಉಡುಪಾಗಿತ್ತು. ನಾವು ಕೇವಲ ಎಂಟು ಮಂದಿ ವಿದ್ಯಾರ್ಥಿಗಳು ಮಾತ್ರ ಆನರ್ಸ್‌ನಲ್ಲಿದ್ದೆವು. ರಾಘವಾಂಕನ ಸಿದ್ಧರಾಮ ಚರಿತೆಯನ್ನು ಬೋಧಿಸುತ್ತಿದ್ದರು. ಈ ಎರಡೂ ತರಗತಿಗಳಲ್ಲಿ ಯಾವೊಬ್ಬ ವಿದ್ಯಾರ್ಥಿಯೂ ಆಲಸ್ಯಪಟ್ಟುಕೊಂಡದ್ದಾಗಲಿ, ಆಕಳಿಸಿದ್ದನ್ನಾಗಲಿ ನಾನೆಂದೂ ಕಂಡವನಲ್ಲ. ನನ್ನ ಗುರುಗಳು ಕನ್ನಡದಲ್ಲಿ ಪಾಠಪ್ರವಚನಗಳನ್ನು ಮಾಡುತ್ತಿದ್ದರು. ಸಂದರ್ಭೋಚಿತವಾಗಿ ಇಂಗ್ಲೀಷನ್ನು ಲೀಲಾಜಾಲವಾಗಿ ಬಳಸುತ್ತಿದ್ದರು. ಹೀಗಾಗಿ ವಿ. ಸೀತಾರಾಮಯ್ಯನವರು ಕನ್ನಡವನ್ನು ಇಂಗ್ಲೀಷಿನಲ್ಲಿ ಬೋಧಿಸುತ್ತಾರೆ ಎಂಬ ವದಂತಿಯೂ ಹರಡಿತ್ತು. ಆನರ್ಸ್ ತರಗತಿಗಳಲ್ಲಿ ಮಾತ್ರ ಅವರು ಬೋಧಿಸುತ್ತಿದ್ದ ವಿಧಾನ ನನ್ನ ಮನಸ್ಸಿನಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿದೆ. ಪಾಠವನ್ನು ಮಾಡುತ್ತ ತಮ್ಮ ಹಿಂದೆ ಇದ್ದ ಕಪ್ಪುಹಲಗೆಯ ಮೇಲೆ ಶಬ್ದಾರ್ಥಗಳನ್ನು, ವಿಶೇಷ ಮಾಹಿತಿಯನ್ನು ಏಕಕಾಲದಲ್ಲಿ ಬರೆಯುತ್ತಿದ್ದ ಸವ್ಯಸಾಚಿಗಳು. ನನ್ನ ವ್ಯಾಸಂಗ ಮುಗಿದ ಮೇಲೆ ನನ್ನ ಗುರುಗಳ ಸಂಪರ್ಕ ಸ್ವಲ್ಪಕಾಲ ತಪ್ಪಿಹೋಯಿತು. ನಾನು ವ್ಯಾಸಂಗ ಮುಗಿಸಿದ ಮೇಲೆ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಕೊಂಡೆ, ನನ್ನ ಗುರುಗಳು ನಿವೃತ್ತರಾದ ಮೇಲೆ ಬೆಂಗಳೂರಿನಲ್ಲಿ ನೆಲಸಿದರು.

ಬೆಂಗಳೂರಿನ ಸುಪ್ರಸಿದ್ಧ ಪ್ರಕಾಶನ ಸಂಸ್ಥೆಯಾದ ಇಂಡಿಯಾ ಬುಕ್ ಹೌಸ್‌ನ

ರೂವಾರಿಗಳಾದ ಶ್ರೀ ಜಿ. ಕೆ. ಅನಂತರಾಮ್ ಅವರು ಪ್ರಾಚೀನ ಕವಿಕಾವ್ಯ ಪರಂಪರೆ ಎಂಬ ಹೊಸ ವಿಭಾಗವನ್ನು ತೆರೆದು ನನ್ನ ಗುರುಗಳನ್ನು ಅದರ ಸಂಯೋಜಕರನ್ನಾಗಿ ಮಾಡಿದರು. ಈ ಕಾರ್ಯದಲ್ಲಿ ನನಗೆ ಗುರುಗಳು ಹರಿಹರನ ಬಗೆಗೆ ಲೇಖನಕ್ಕಾಗಿ ಪತ್ರ ಬರೆದರು. ಅವರ ಆಜ್ಞೆಯಂತೆ ನನ್ನ ಪಾಲಿನ ಕೆಲಸವನ್ನು ನಾನು ಮುಗಿಸಿಕೊಟ್ಟೆ.

ನಾನು ಮೈಸೂರಿನಲ್ಲಿ ನೆಲಸಿದ್ದರೂ ಬೆಂಗಳೂರಿಗೆ ಬಂದಾಗಲೆಲ್ಲ ಗುರುಗಳನ್ನು ಸಾಧ್ಯವಾದ ಮಟ್ಟಿಗೂ ಭೇಟಿಯಾಗಿಯೇ ಹೋಗುತ್ತಿದ್ದೆ. ಕರ್ಮಧರ್ಮ ಸಂಯೋಗದಿಂದ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಕಾರ್ಯಕ್ಕೆ ನೇಮಕಗೊಂಡು ಬೆಂಗಳೂರಿನಲ್ಲೇ ನೆಲಸಿದೆ. ಬೆಂಗಳೂರು ಆಕಾಶವಾಣಿ ಕೇಂದ್ರದಿಂದ "ನ್ಯಾಷನಲ್ ಟಾಕ್ಸ್" ಎಂಬ ಹೆಸರಿನಲ್ಲಿ ನಾಡಿನ ಶ್ರೇಷ್ಠವಿದ್ವಾಂಸರ ಉಪನ್ಯಾಸಗಳು ಪ್ರಸಾರಗೊಳ್ಳುತ್ತಿದ್ದುವು. ಇವುಗಳಲ್ಲಿ ಕೆಲವು ಉಪನ್ಯಾಸಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಬಿತ್ತರಿಸುವ ಕಾರ್ಯ ನನ್ನ ಪಾಲಿಗೆ ಬಂತು. ಈ ಉಪನ್ಯಾಸಗಳು ತುಂಬ ಪ್ರೌಢವಾಗಿ ದೀರ್ಘವಾಕ್ಯ ಪುಂಜಗಳಿಂದ ಕೂಡಿರುತ್ತಿದ್ದುವು. ಇವನ್ನು ಅನುವಾದ ಮಾಡುವುದು ಸುಲಭದ ಕೆಲಸವಾಗಿರಲಿಲ್ಲ. ನಾನು ಯಥಾಶಕ್ತಿಯಾಗಿ ಇವನ್ನು ಅನುವಾದ ಮಾಡಿ ನನ್ನ ಗುರುಗಳ ಬಳಿಗೆ ಹೋಗಿ ಅವನ್ನು ತೋರಿಸಿ ನನಗೆ ಸೂಕ್ತ ಮಾರ್ಗದರ್ಶನ ಮಾಡಬೇಕೆಂದು ಪ್ರಾರ್ಥಿಸಿಕೊಂಡೆ. ಮೂಲ ಇಂಗ್ಲೀಷ್ ಮತ್ತು ನಾನು ಮಾಡಿದ ಕನ್ನಡ ಅನುವಾದಗಳನ್ನು ಜೊತೆಗಿಟ್ಟುಕೊಂಡು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದ ಮಾಡಬೇಕಾದರೆ ಅನುಸರಿಸಬೇಕಾದ ವಿಧಾನಗಳನ್ನು ತಿಳಿಸಿದ್ದೇ ಅಲ್ಲದೆ ನಾನು ಮಾಡಿದ್ದ ಅನುವಾದವನ್ನೆಲ್ಲ ಸ್ವತಃ ತಿದ್ದಿಕೊಟ್ಟರು. ಅಲ್ಲಿಂದ ಮುಂದಕ್ಕೆ ಈ ಉಪನ್ಯಾಸಗಳನ್ನೆಲ್ಲಾ ಲೀಲಾಜಾಲವಾಗಿ ಅನುವಾದ ಮಾಡಿ ಪ್ರಸಾರ ಮಾಡಿದೆ. ಈ ಎಲ್ಲ ಕೀರ್ತಿ ಗೌರವಗಳಿಗೆ ನನ್ನ ಗುರುಗಳೇ ಪಾತ್ರರು.

ಪ್ರೊ. ವಿ. ಸೀತಾರಾಮಯ್ಯನವರು ಆಕಾಶವಾಣಿಯ ಕಾರ್ಯ ಯೋಜನೆಯಲ್ಲಿ ಕೆಲಕಾಲ ಕೆಲಸ ಮಾಡಿದರು. ಈ ಅವಧಿಯಲ್ಲಿ ಕೆಲವಾರು ಕಾರ್ಯಕ್ರಮಗಳಲ್ಲಿ ನನ್ನನ್ನು ತೊಡಗಿಸಿಕೊಂಡದ್ದನ್ನು ನಾನು ಎಂದೆಂದಿಗೂ ಮರೆಯಲಾರೆ. ಅನೇಕ ಶ್ರೇಷ್ಠ ಸಾರಸ್ವತ ಕಾರ್ಯಕ್ರಮಗಳು ಬಿತ್ತರಗೊಂಡದ್ದು ಇವರ ಕಾಲದಲ್ಲೇ ಎಂದರೆ ಅತಿಶಯೋಕ್ತಿಯಾಗಲಾರದು.

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಸಂಪಾದಕನಾಗಿದ್ದಾಗ ನನ್ನ ಗುರುಗಳು ಆಗಿಂದಾಗ್ಗೆ ನನ್ನ ಕಛೇರಿಗೆ ಬರುತ್ತಿದ್ದರು. ಅವರ ವ್ಯಾಸಂಗಕ್ಕೆ ಅಗತ್ಯವಾದ ಪುಸ್ತಕಗಳನ್ನು ಒದಗಿಸುತ್ತಿದ್ದೆ. ತಮ್ಮ ಕೆಲಸ ಮುಗಿದ ಮೇಲೆ ಅವನ್ನು ಕೂಡಲೆ ಹಿಂತಿರುಗಿಸುತ್ತಿದ್ದ ಈ ಮಾದರಿಯನ್ನು ಇತರರು ಕಲಿತುಕೊಳ್ಳುವಂತಾಗಬೇಕಾಗಿದೆ.

ನನ್ನ ಗುರುಗಳ ಅಕ್ಷರ ಸ್ವಲ್ಪ ಮೋಡಿ; ಬೇರೆಯವರು ಅವರ ಕೈಬರಹವನ್ನು ಓದುವುದು ಕಷ್ಟ. ಆ ಕಾಲಕ್ಕೆ ಪುಸ್ತಕ ವಿಮರ್ಶೆಗಳನ್ನು ಇಂಗ್ಲೀಷಿನಲ್ಲಿ ಬರೆದು ಪತ್ರಿಕೆಗಳಿಗೆ ಕಳಿಸುತ್ತಿದ್ದರು. ಬರವಣಿಗೆ ಓದುವುದು ಕಷ್ಟವೆಂದು ಅದನ್ನು ಬೆರಳಚ್ಚು ಮಾಡುತ್ತಿದ್ದರು. ನಾನು ಬೆರಳಚ್ಚು ಯಂತ್ರವನ್ನು ಅವರಿಗೆ ಕೊಡುತ್ತಿದ್ದೆ, ಒಂದೇ ಬೆರಳಿನಲ್ಲಿ ತಾವೇ ಟೈಪು ಮಾಡಿಕೊಳ್ಳುತ್ತಿದ್ದರು. ಇದನ್ನು ಕಂಡ ನಾನು ನನಗೆ ಟೈಪಿಂಗ್ ಬರುತ್ತಿದ್ದುದಲ್ಲದೆ

ಕಚೇರಿಯಲ್ಲಿ ಬೇರೆ ಟೈಪಿಸ್ಟುಗಳಿದ್ದುದರಿಂದ ನನ್ನ ಗುರುಗಳ ಬಳಿ ಹೋಗಿ 'ಸಾರ್ ನಾನು ಟೈಪು ಮಾಡಿಸಿ ಕೊಡುತ್ತೇನೆ. ತಾವೇಕೆ ಶ್ರಮಪಡಬೇಕು' ಎಂದು ಕೇಳಿಕೊಂಡೆ. ಅದಕ್ಕೆ ಅವರು 'ಬೇರೆಯವರಿಗೆ ನನ್ನ ಬರವಣಿಗೆ ಓದಲು ಬರುವಂತಿದ್ದರೆ ನಾನೇಕೆ ಟೈಪು ಮಾಡಬೇಕಿತ್ತಪ್ಪ?' ಎಂದರು.

ನಾನು ಕನ್ನಡ ರೀಡರ್ ಹುದ್ದೆಗೆ ಅರ್ಜಿಯನ್ನು ಸಲ್ಲಿಸಬೇಕಾದಾಗ ಅದಕ್ಕೆ ಇಬ್ಬರು ವಿದ್ವಾಂಸರ ಪರಿಚಯ ಪತ್ರಗಳನ್ನು ಲಗತ್ತಿಸಬೇಕಾಗಿತ್ತು. ಅದಕ್ಕಾಗಿ ನಾನು ಗುರುಗಳ ಮನೆಗೆ ಹೋಗಿ ಈ ವಿಷಯವನ್ನು ಅರಿಕೆ ಮಾಡಿಕೊಂಡೆ. ಕೂಡಲೆ ನನ್ನ ಗುರುಗಳು 'ನಿನಗೇಕಪ್ಪ ಸರ್ಟಿಫಿಕೇಟು? ನಿನ್ನ ವಿಷಯ ಎಲ್ಲರಿಗೆ ಗೊತ್ತಿಲ್ಲವೆ?' ಎಂದರು. ಆಗ ನಾನು 'ಅರ್ಜಿಯಲ್ಲಿ ಎರಡು ಸರ್ಟಿಫಿಕೇಟುಗಳನ್ನು ಲಗತ್ತಿಸಬೇಕು ಎಂಬ ನಿಯಮವಿದೆ ಸಾರ್' ಎಂದು ನಮ್ರವಾಗಿ ತಿಳಿಸಿದೆ. ಆ ಕೂಡಲೆ ಅಲ್ಲಿ ಇದ್ದ ಒಂದು ಕಾಗದವನ್ನು ತೆಗೆದುಕೊಂಡು ಕ್ಷಣಮಾತ್ರದಲ್ಲಿ ಬರೆದುಕೊಟ್ಟುಬಿಟ್ಟರು. ಆದರೆ ಅದನ್ನು ಓದುವವರಿಗೆ ಎಂಟೆರ್ದೆ ಬೇಕಾಗಿತ್ತು. ನಾನು ಅತ್ಯಂತ ಪ್ರಯಾಸಪಟ್ಟು ಆ ಪ್ರಶಸ್ತಿ ಪತ್ರವನ್ನು ಓದಿ ದಿಙ್ಮೂಢನಾದೆ. ಆ ಪತ್ರವನ್ನು ಇಂದಿಗೂ ಜೋಪಾನವಾಗಿಟ್ಟುಕೊಂಡಿದ್ದೇನೆ. ಈ ಪ್ರಶಸ್ತಿ ಪತ್ರವನ್ನು ಅರ್ಜಿಗೆ ಲಗತ್ತಿಸಿದ್ದರೂ ಆ ಹುದ್ದೆ ಮಾತ್ರ ನನಗೆ ಲಭ್ಯವಾಗಲಿಲ್ಲ.

ನಾನು ವಿಶ್ವವಿದ್ಯಾನಿಲಯದಿಂದ ನಿವೃತ್ತನಾಗುವ ಸಮಯ ಸನ್ನಿಹಿತವಾಗಿತ್ತು. ವಿಶ್ವವಿದ್ಯಾನಿಲಯದ ಅಧ್ಯಾಪಕವರ್ಗದವರಿಗೆ ನಿವೃತ್ತಿಯ ವಯಸ್ಸು ೬೦, ಉಳಿದವರಿಗೆ ೫೫. ನಾನು ನಿರ್ವಹಿಸುತ್ತಿದ್ದ ಹುದ್ದೆ ಶೈಕ್ಷಣಿಕವಾಗಿದ್ದು ಅದನ್ನು ಬೋಧನ ಕಾರ್ಯವೆಂದು ಪರಿಗಣಿಸಿ ನನ್ನ ಹುದ್ದೆಯ ನಿವೃತ್ತಿಯ ವಯೋಮಿತಿಯನ್ನು ೬೨ವತ್ತಕ್ಕೆ ಏರಿಸಬೇಕೆಂದು ಉಚ್ಚನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಸಲ್ಲಿಸಿದೆ. ನನ್ನ ಮೊಕದ್ದಮೆಯಲ್ಲಿ ನಾನು ರೀಡರ್ ಹುದ್ದೆಗೆ ಸಲ್ಲಿಸಿದ ಅರ್ಜಿಯ ಪ್ರತಿಯನ್ನು, ನನ್ನ ಇತರ ಗುರುಗಳು ಕೊಟ್ಟಿದ್ದ ಎಂಟು-ಹತ್ತು ಶಿಫಾರಸ್ಸು ಪತ್ರಗಳನ್ನು ಲಗತ್ತಿಸಿದ್ದೆ. ನನ್ನ ಮೊಕದ್ದಮೆ ವಿಚಾರಣೆಗೆ ಬಂದಿದ್ದಾಗ ಅದಕ್ಕೆ ಸಂಬಂಧಿಸಿದ ವಿವರಗಳನ್ನು ಪರಿಶೀಲಿಸುತ್ತಿದ್ದಾಗ ನನ್ನ ವಿದ್ಯಾಗುರುಗಳು ಕೊಟ್ಟಿದ್ದ ಶಿಫಾರಸ್ಸು ಪತ್ರಗಳನ್ನು ನೋಡುತ್ತಿದ್ದಾಗ ಪ್ರೊ. ವಿ. ಸೀತಾರಾಮಯ್ಯನವರು ಕೊಟ್ಟಿದ್ದ ಪತ್ರ ನ್ಯಾಯಮೂರ್ತಿಗಳನ್ನು ಆಕರ್ಷಿಸಿತು. ಅವರು ಅದನ್ನು ಓದಿದ ಕೂಡಲೇ ಪ್ರತಿ ಪಕ್ಷದ ವಕೀಲರ ಕಡೆ ತಿರುಗಿ 'ಪ್ರೊ. ವಿ. ಸೀತಾರಾಮಯ್ಯನವರು ನನ್ನ ಗುರುಗಳು, ಅವರು ಕೊಟ್ಟಿರುವ ಶಿಫಾರಸ್ಸು ಪತ್ರದಿಂದ ಶ್ರೀ ಬಸವಾರಾಧ್ಯರು ಶ್ರೇಷ್ಠ ವಿದ್ವಾಂಸರು ಎಂದು ವ್ಯಕ್ತಪಟ್ಟಿದೆ. ಇಂತಹ ವಿದ್ವಾಂಸರನ್ನು ೫೫ ವರ್ಷಗಳಿಗೆ ಏಕೆ ನಿವೃತ್ತಿಗೊಳಿಸಬೇಕು, ೬೦ ವರ್ಷಗಳವರೆಗೆ ಅವರ ಸೇವೆಯನ್ನು ಮುಂದುವರಿಸುವಂತೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ತಿಳಿಸಿಬಿಡಿ' ಎಂದು ಆದೇಶವಿತ್ತರು. ನನ್ನ ಗುರುಗಳ ಒಂದು ಶಿಫಾರಸು ಪತ್ರ ಎಷ್ಟು ಕೆಲಸ ಮಾಡಿತು ಎಂಬುದನ್ನು ನಾನು ಸದಾ ನೆನೆಯುತ್ತಲೇ ಇರುತ್ತೇನೆ.

ಪ್ರೊ. ವಿ. ಸೀತಾರಾಮಯ್ಯನವರು ಬೆಳಗ್ಗೆ ಮತ್ತು ಸಂಜೆ ಲಾಲ್‌ಬಾಗ್‌ಗೆ ವಾಯುವಿಹಾರಕ್ಕೆ ಹೋಗುತ್ತಿದ್ದರು. ಇದನ್ನು ನಾನು ಕಚೇರಿಯಲ್ಲಿ ಕೂತೇ ನೋಡುತ್ತಿದ್ದೆ. ಬೆಳಗಿನ ಹೊತ್ತು ಅವರೊಬ್ಬರೇ ಹೋಗುತ್ತಿದ್ದರು. ಸಂಜೆಯ ವೇಳೆಗೆ ಅವರ ಜೊತೆಗೆ

ಕೆ. ಎಸ್. ನರಸಿಂಹಸ್ವಾಮಿ, 'ಪ್ರಜಾಮತ'ದ ನಾಗರಾಜರಾವ್, ಕೆಲವೊಮ್ಮೆ ಆಸ್ಥಾನ ವಿದ್ವಾನ್ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳೂ ಸೇರಿಕೊಳ್ಳುತ್ತಿದ್ದರು. ಇವರೆಲ್ಲರಿಗೂ ಪ್ರತಿನಿತ್ಯ ಮಾವಳ್ಳಿ ಟಿಫನ್ ರೂಮ್ಸ್‌ನಲ್ಲಿ ಒಳ್ಳೆಯ ತಿಂಡಿಕೊಡಿಸಿ, ವಿನೋದವಾಗಿ ಸರಸ ಸಂಭಾಷಣೆಯೊಂದಿಗೆ ಅವರೊಡನೆ ಸುತ್ತಾಡಿಕೊಂಡು, ಸ್ವಲ್ಪ ಸಮಯ ಪ್ರಚಲಿತ ವಿದ್ಯಮಾನಗಳನ್ನು ಚರ್ಚಿಸಿಕೊಂಡು, ರಾತ್ರಿ ಮನೆಗೆ ಹಿಂತಿರುಗುವುದು ವಿ.ಸೀ. ಅವರ ದಿನಚರಿಯಾಗಿತ್ತು. ಒಮ್ಮೆ ಸಂಜೆ ೫.೩೦ಕ್ಕೆ ನನ್ನ ಗುರುಗಳು ವಾಯುವಿಹಾರಕ್ಕೆ ಹೊರಟು ಪರಿಷತ್ತಿನ ಬಳಿಗೆ ಬಂದಾಗ ನಾನು ಕಚೇರಿಯ ಕೆಲಸ ಮುಗಿಸಿ ಹೊರಬಂದೆ. ಗುರುಗಳಿಗೆ ವಂದಿಸಿದ ಮೇಲೆ 'ವಾಕಿಂಗ್ ಹೋಗೋಣ ಬರ್ತೀರೇನಪ್ಪಾ?' ಎಂದರು. 'ಆಗಲಿ ಹೋಗೋಣ ಸಾರ್' ಎಂದು ಅವರ ಜೊತೆ ಹೊರಟೆ; ಅಷ್ಟು ಹೊತ್ತಿಗೆ ಕೆ. ಎಸ್. ನರಸಿಂಹಸ್ವಾಮಿ ಅವರೂ ಬಂದು ನಮ್ಮ ಜೊತೆ ಸೇರಿಕೊಂಡರು. ಮೂವರೂ ಮಾವಳ್ಳಿ ಟಿಫನ್ ರೂಂಗೆ ಹೋದೆವು. ತಿಂಡಿ ತಿಂದದ್ದಾಯಿತು. ಬಿಲ್ ತಂದಿಟ್ಟಾಗ ನಾನು ಹಣ ಪಾವತಿ ಮಾಡಲು ಮುಂದಾದೆ. ಕೂಡಲೆ ನನ್ನ ಗುರುಗಳು 'ನೀನು ಸುಮ್ಮನಿರಪ್ಪಾ, ಈ ಕೆಲಸ ಮಾಡಬೇಡ' ಅಂದುಬಿಟ್ಟರು. ನಾನು ಸುಮ್ಮನಾದೆ. ಉಪಾಹಾರವಾದ ಮೇಲೆ ಮೂವರೂ ಲಾಲ್‌ಬಾಗ್ ಸುತ್ತಿಕೊಂಡು ಹಿಂತಿರುಗಿದೆವು. ನರಸಿಂಹಸ್ವಾಮಿಗಳು ತಮ್ಮ ಮನೆಗೆ ಹೋದರು; ನಾನೂ ನನ್ನ ಗುರುಗಳೂ ಚಾಮರಾಜಪೇಟೆಗೆ ಹಿಂತಿರುಗಿದೆವು. ನಮ್ಮ ಗುರುಗಳ ಮನೆ ಇದ್ದುದು ಚಾಮರಾಜಪೇಟೆಯ ಎರಡನೆಯ ಮುಖ್ಯರಸ್ತೆ, ನನ್ನ ಮನೆ ಇದ್ದುದು ಮೂರನೆಯ ಮುಖ್ಯ ರಸ್ತೆ. ಮೊದಲು ನನ್ನನ್ನು ಬೀಳ್ಕೊಡುತ್ತ 'ಏನಪ್ಪಾ ಬೇಸರ ಆಯಿತೆ? ತಡವಾಯಿತೆ?' ಎಂದೆಲ್ಲ ಕೇಳಿ ಕಳಿಸಿಕೊಟ್ಟರು.

ಪ್ರೊ. ವಿ. ಸೀತಾರಾಮಯ್ಯನವರು ಬಹು ಭಾಷಾಪಂಡಿತರು, ಪ್ರಕಾಂಡ ಪಂಡಿತರು, ಶ್ರೇಷ್ಠ ಅರ್ಥಶಾಸ್ತ್ರಜ್ಞರು, ಕವಿಗಳು, ವಿಮರ್ಶಕರು, ಪ್ರಬಂಧಕಾರರು, ದಾರ್ಶನಿಕರು, ಪ್ರಾಚೀನ-ಅರ್ವಾಚೀನ ಸಾಹಿತ್ಯವನ್ನು ಕರಗತ ಮಾಡಿಕೊಂಡಿದ್ದವರು, ಬಹುಶ್ರುತರು, ಉಜ್ವಲ ವಾಗ್ಮಿಗಳು, ಆಚಾರ ವಿಚಾರ ಸಂಪನ್ನರು, ಸಂಗೀತ-ಕಲೆಗಳಲ್ಲಿ ಅಪಾರ ಆಸಕ್ತಿಯುಳ್ಳವರಾಗಿದ್ದರು. ಇವೆಲ್ಲಕ್ಕಿಂತ ಮಿಗಿಲಾಗಿ ಸರಸ ಸಜ್ಜನ ಸಂಪನ್ನರು, ಮಹಾಮಾನವತಾವಾದಿ. ಇಂತಹ ಗುರುಗಳು 'ನ ಭೂತೋ ನ ಭವಿಷ್ಯತಿ.' ಇವರ ಶ್ರೀಪಾದಗಳಿಗೆ ನಮೋ ನಮೋ ಎಂದು ನಿರಂತರವಾಗಿ ನಮಿಸುತ್ತೇನೆ.

ನೂರು ನಮನಗಳು

ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್

ವಿ.ಸೀ.ಯವರನ್ನು ಸಂಧಿಸಿದ ಸಂದರ್ಭಗಳನ್ನೆಲ್ಲ ಎಣಿಕೆ ಮಾಡಲಾಗದು. ಆದರೆ ಅವರನ್ನು ನೆನಪಿಗೆ ತಂದುಕೊಂಡಾಗಲೆಲ್ಲ ಕಣ್ಣಿಗೆ ಕಟ್ಟಿದಂತೆ, ಅಚ್ಚುಕಟ್ಟಾಗಿ, ಅಚ್ಚಳಿಯದೆ ಉಳಿದುಕೊಂಡಿರುವ ಚಿತ್ರವೆಂದರೆ ಪರಿಶುದ್ಧವಾದ ಚೇತನದ್ದು. ಹೊರಗಿನಿಂದ ನೋಡುವಾಗ ಎದ್ದು ಕಾಣುತ್ತಿದ್ದ ಶುಚಿ, ರುಚಿ, ಒಪ್ಪ, ಓರಣಗಳು ಅವರ ಒಳಗೂ ಮನೆಮಾಡಿಕೊಂಡಿದ್ದುವು. ಅವರೊಂದಿಗೆ ಮಾತನಾಡುವಾಗ ಇವು ಅಡಿಗಡಿಗೆ ತೋರಿಕೊಳ್ಳುತ್ತಿದ್ದುವು. ಅವರ ಬದುಕನ್ನು, ಬರಹವನ್ನು ಗಮನಿಸಿದಾಗಲೂ ಇವುಗಳದ್ದೇ ಮೇಲಾಟ. ವಿ.ಸೀ. ಬೇರೆಯಲ್ಲ, ಶಿಸ್ತು ಬೇರೆಯಲ್ಲ. ಮಾತಿನಲ್ಲಿ ಎಷ್ಟು ಖಚಿತವೋ ಭಾವನೆಗಳಲ್ಲಿಯೂ ಅಷ್ಟೇ ದಾರ್ಢ್ಯ. ಹಾಗೆಂದು ನಿಷ್ಠುರತೆಯಿಲ್ಲ, ಸಿಡುಕಿಲ್ಲ, ಗಡುಸಿಲ್ಲ. ಗಂಡು ದೇಹದಲ್ಲಿ ಹೆಂಗಳೆಯ ಕರುಳು ಮಿಡಿಯಬಹುದೆನ್ನಲು ಅವರೊಂದು ನಿದರ್ಶನ.

ಅವರು ನನ್ನ ಒಡಲಲ್ಲಿ ಮೂಡಿಸಿದ ಇನ್ನೊಂದು ಚಿತ್ರ ಹಳೆಯ ಹಂದರದ ಮೇಲೆ ಹಬ್ಬಿಕೊಂಡ ಹಚ್ಚಹೊಸ ಬಳ್ಳಿಯದು. ಸ್ವರೂಪದಲ್ಲಿ ವಾಮನನಾದರೂ ಸ್ವಭಾವದಲ್ಲಿ ತ್ರಿವಿಕ್ರಮನೇ. ಒಂದು ಹೆಜ್ಜೆ ಸಂಪ್ರದಾಯದ ನೆಲೆಯಲ್ಲಿ; ಇನ್ನೊಂದು ವಿಚಾರವಂತಿಕೆಯ ಸುಳಿಯಲ್ಲಿ; ಮತ್ತೊಂದು ಹೆಜ್ಜೆ ಭಾವುಕತೆಯ ಬಿರುಸಿನಲ್ಲಿ. ಪ್ರಾಚೀನವೆನ್ನಬಹುದಾದ ಮೌಲ್ಯಗಳನ್ನೆ ನಂಬಿಕೊಂಡು ಬಾಳಿದವರಾದರೂ ಆಧುನಿಕವೆಂಬಂಥ ಪರಿಸರವನ್ನು ಏನೊಂದು ಗೊಂದಲವಿಲ್ಲದೆ ಒಳಮಾಡಿಕೊಂಡವರು. ಅವರು ಕಣ್ಣಿಗೆ ಹಚ್ಚಿಕೊಂಡ ಆದರ್ಶವೇನೋ ನಮ್ಮ ಸಂಸ್ಕೃತಿಯ ಒಳಪದರಗಳಲ್ಲಿ ಹಾಸುಹೊಕ್ಕಾಗಿ ಬರುವಂಥದೇ. ಅವರು ಬೆಳೆದದ್ದು ಇದರ ಬೆಳಕಿನಲ್ಲೇ; ಗುರುಹಿರಿಯರಿಂದ ಕಲಿತದ್ದು ಇದನ್ನೇ; ತಾವೂ ಆಲೋಚನೆ ಮಾಡಿ ತಮ್ಮ ಬಾಳುವೆಯಲ್ಲಿ ಅಳವಡಿಸಿಕೊಂಡದ್ದು ಇದನ್ನೇ. ಹಾಗೆಂದು ಕೋಣೆಯ ಕದ ಮುಚ್ಚಿಕೊಂಡು ಕತ್ತಲಲ್ಲಿ ಕೂಡುವ ಚೇತನವಲ್ಲ ಅವರದ್ದು. ಕೋಣೆಯಲ್ಲೇ ಇರುವವರಾದರೂ ಕಿಟಕಿಗಳನ್ನೆಲ್ಲ ತೆರೆದಿಟ್ಟುಕೊಂಡು ಹೊರಗಿನ ಬೆಳಕು ಧಾರಾಳವಾಗಿ ಒಳಗೆ ಬರಲು ಬಿಡುವವರು. 'ಹಳತೆಂದ ಮಾತ್ರಕ್ಕೆ ಒಳಿತೆನ್ನಬಹುದೆ? ಹೊಸತೆಂಬ ಕಾರಣಕ್ಕೇ ಹೊರದೂಡಬಹುದೆ?' ಎಂಬ ಕಾಳಿದಾಸನ ಮಾತು ಇವರಿಗೆ ಹಿಡಿಸಿರಬೇಕು.

ಒಲವಿಂದ ಕಲಿತದ್ದು ಅರ್ಥಶಾಸ್ತ್ರ; ಕಡೆಯವರೆಗೂ ಇದರ ಸೆಳೆತವೇನು ಸಡಿಲವಾಗಲಿಲ್ಲವೆನ್ನಿ. ಮನದಿಚ್ಛೆಯಿಂದ ಹಿಡಿದದ್ದು ಕನ್ನಡದ ಕೆಲಸ; ಇದೇ ಅವರ ಉಸಿರು ಎಂದರೂ ತಡೆದೀತು. ಕನ್ನಡವನ್ನು ಕಲಿಸಿದರು, ಕನ್ನಡದಲ್ಲಿ ಬರೆದರು, ಕನ್ನಡವನ್ನು ಕಟ್ಟಿದರು. ಆದರೆ ಅವರೆಂದೂ ಕನ್ನಡದ ಕಟ್ಟಾಳೆಂದು ಬೀಗಲಿಲ್ಲ; ಇಂಗ್ಲೀಷಿನ ಮೂಗನ್ನೇನು ಮುರಿಯಲಿಲ್ಲ. ಅವರ ಓದು, ಮಾತು, ಬರಹ ಎಲ್ಲವೂ ಕನ್ನಡದಲ್ಲಿ ಹೇಗೋ ಇಂಗ್ಲೀಷಿನಲ್ಲಿಯೂ ಹಾಗೆಯೆ ಸಾಗಿತು. ಓದು, ಮಾತುಗಳಲ್ಲಿ ಇಂಗ್ಲೀಷಿನದ್ದೇ ಒಂದು ಕೈಮಿಗಿಲು ಎನ್ನಿ. ಸಂಸ್ಕೃತ ಸಾಹಿತ್ಯದಲ್ಲೂ ಆಸಕ್ತಿ ಅಭಿರುಚಿಗಳಿಗೇನು ಕೊರತೆಯಿರದಿದ್ದರೂ ಹೇಳಿಕೊಳ್ಳುವಂಥ ಪರಿಶ್ರಮವೇನು ದಕ್ಕಲಿಲ್ಲ. ತಮಗಿಷ್ಟ ಬಂದ ಕಾವ್ಯವನ್ನು ಅನುವಾದದ ನೆರವಿಲ್ಲದೆಯೆ, ಮೂಲದಲ್ಲೇ ಓದಿ ಅನುಭವಿಸುವ, ಆಸ್ವಾದಿಸುವ ಸೌಲಭ್ಯವನ್ನೇನೋ ಪಡೆದುಕೊಂಡಿದ್ದರು.

ಹೆಸರೇನೋ ಸಾಹಿತ್ಯಕ್ಕೆ ಅಂಟಿಕೊಂಡು ಬಂದಿತಾದರೂ, ಅವರ ಅನುರಾಗ ಸಾಹಿತ್ಯಕ್ಕೇ ಮೀಸಲು ಎನ್ನುವಂತಿಲ್ಲ. ಸಂಗೀತದ ಮೇಲೆ ಅವರಿಗಿದ್ದ ಆಸಕ್ತಿಯ ಆಳ ಅಗಲಗಳು ಅಚ್ಚರಿಯನ್ನುಂಟು ಮಾಡುವಂಥವು. ಶಾಸ್ತ್ರೀಯ ಸಂಗೀತಕ್ಕೇ ಹಸೆಮಣೆ ಯಾದರೂ, ಕರ್ನಾಟಕ ಸಂಗೀತಕ್ಕೇ ಕದಲಾರತಿಯಾದರೂ, ಯಾವ ಸಂಗೀತಪ್ರಕಾರವನ್ನೂ ಹೊರದಬ್ಬುವವರಲ್ಲ, ಮೂಲೆಗೆ ತಳ್ಳುವವರಲ್ಲ. ಯಾವುದೇ ಸಂಗೀತವಾಗಲಿ ಅದು ಭಾವದ ಭಾಷೆ ಎಂದು ನಿಚ್ಚಳವಾಗಿ ನಂಬಿದ್ದವರು. ಹಿಂದೂಸ್ಥಾನೀ ಸಂಗೀತದ ರಾಗಗಳು ಅವರ ಆದರವನ್ನು ಸೂರೆಗೊಂಡಿದ್ದುವು. ಪಾಶ್ಚಾತ್ಯಸಂಗೀತದ ಪರಿಚಯ ಅವರಿಗೆ ಗಾಢವಾಗಿಯೆ ಇದ್ದಿತು. ಸಿನಿಮಾ ಸಂಗೀತವನ್ನೂ ಅವರು ಮೆಚ್ಚಿಕೊಂಡಿದ್ದುದುಂಟು. ಸಂಗೀತವೆಂದರೆ ಕೇಳ್ಮೆ ಮಾತ್ರವಲ್ಲದೆ, ಅಷ್ಟಿಷ್ಟು ಕಲಿಕೆಯೂ ಇದ್ದಿತು; ತಮ್ಮಷ್ಟಿಗೆ ತಾವೇ ಹಾಡಿಕೊಳ್ಳುತ್ತಿದ್ದರು; ತಮ್ಮ ಕವಿತೆಗಳಿಗೆ ತಾವೆ ರಾಗ ಹೊಂದಿಸುತ್ತಿದ್ದರು; ವಿನಿಕೆಗಳ ವಿಮರ್ಶೆ ಮಾಡುತ್ತಿದ್ದರು. ನನ್ನ ಗುರುಗಳಾದ ರಾಳ್ಲಪಲ್ಲಿಯವರು ಅವರ ಅಚ್ಚುಮೆಚ್ಚಿನ ಮಿತ್ರರಾಗಿದ್ದರೆಂದ ಮೇಲೆ ಕೇಳುವುದೇನು? ಅವರಿಬ್ಬರ ಸಾಹಿತ್ಯ–ಸಂಗೀತ–ರಸಿಕತೆಗಳ ಸಂಗಮ ಮೂರನೆಯವರಲ್ಲಿ ಕಾಣುವುದು ಕಷ್ಟ.

ಇನ್ನು, ಚಿತ್ರಕಲೆಯೇನು ಪಾಪ ಮಾಡಿತು? ಅದನ್ನೂ ಅವರು ಹತ್ತಿರ ಕರೆದುಕೊಂಡರು. ಚಿತ್ರ–ಶಿಲ್ಪಗಳಲ್ಲೂ ಕಾಲ–ದೇಶ–ಶೈಲಿಗಳ ಭೇದವಿಲ್ಲದೆ ಸೊಗಸಾಗಿದ್ದ ಯಾವುದನ್ನೂ ಮನಸಾರೆ ಮೆಚ್ಚಿಕೊಳ್ಳುತ್ತಿದ್ದರು. ಯೂರೋಪಿನ ಪುನರುಜ್ಜೀವನ ಯುಗದಲ್ಲಿ ತೋರಿಕೊಂಡ ಕಲೆಗಾರಿಕೆ ಅವರನ್ನು ವಿಶೇಷವಾಗಿ ಸೆಳೆಯಿತು. ನಮ್ಮಲ್ಲಿ ಬಂಗಾಳದ ಹಲವು ಚಿತ್ರಗಾರರ ಕೃತಿಗಳು ಅವರಿಗೆ ಪ್ರಿಯವಾಗಿದ್ದುವು. ನಾನು ಅವರೊಂದಿಗೆ ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿರುತ್ತಿದ್ದ ಮನೀಷಿ ದೇ ಅವರ ಸ್ಟುಡಿಯೋದಲ್ಲಿ ಕಳೆದ ಕಾಲವನ್ನು ಮರೆಯಲಾರೆ. ಮನೀಷಿಯ ಹುಚ್ಚು ಮನಸ್ಸಿನ ಹತ್ತು ಮುಖಗಳನ್ನು ಅವರು ಅಳೆಯುತ್ತಿದ್ದ ಬಗೆಯನ್ನು ಕಂಡು ಬೆರಗಾಗಿದ್ದೇನೆ. ಹಾಗೆಯೇ ಬೆಂಗಳೂರಿನ ಆರ್ಟ್ ಡಿಸೈನ್ ಸೆಂಟರ್‌ನ ನಿರ್ದೇಶಕರಾಗಿ ಬಂದ ಇನ್ನೊಬ್ಬ ಕಲಾವಿದ ಅಶೀತಕುಮಾರ ಹಾಲದಾರರ ಕೃತಿಗಳ ಬಗ್ಗೆ ಅವರೊಂದಿಗೆ ಅವರು ನಡೆಸುತ್ತಿದ್ದ ಮಾತುಕತೆಯನ್ನು ಕಿವಿ ಮಾತ್ರವಲ್ಲದೆ ಕಣ್ಣು, ಬಾಯಿ ತೆರೆದುಕೊಂಡು ಆಲಿಸಿದ್ದೇನೆ.

ಅವನೀಂದ್ರನಾಥ ಠಾಕುರರು 'ಪಯಣದ ತುದಿ' ಯೆಂಬ ಹೆಸರಿನ ವರ್ಣ ಚಿತ್ರವೊಂದನ್ನು ರಚಿಸಿದ್ದಾರೆ. ಅದರಲ್ಲಿ ವರ್ತಕನ ಒಂಟೆಯೊಂದು ದೂರದ ಪ್ರಯಾಣದಿಂದ ಬಳಲಿ ಕುಳಿತುಬಿಟ್ಟಿದೆ. ಅದು 'ಮಾಡರ್ನ್ ರೆವ್ಯೂ'ದಲ್ಲಿ ಪ್ರಕಟವಾದಾಗ ಅದರ ಬಗ್ಗೆ ವಿಪುಲವಾದ ವಿಮರ್ಶೆ ನಡೆಯಿತು. ಅದನ್ನು ಕುರಿತಂತೆ ವಿ.ಸೀ. ತಮ್ಮ ಅನಿಸಿಕೆಗಳನ್ನು ಹಾಲದಾರರಿಗೆ ತಿಳಿಸುತ್ತಿದ್ದರು. ತಿಳಿಸುವಾಗ ರವಿವರ್ಮನ ಚಿತ್ರಗಳು, ಪರ್ಶಿಯನ್ ಚಿತ್ರಗಳು, ಚುಗತಾಯ್ ಕೃತಿಗಳು, ಚೀನೀ ಚಿತ್ರಣ ಎಲ್ಲವೂ ಸಂಕೋಚವಿಲ್ಲದೆ ಇಣುಕಿ ನೋಡಿದುವು. 'ನಿಮ್ಮ ಪರಿಚಯದ ವ್ಯಾಪಕತೆ ಎಷ್ಟಿದೆ!' ಎಂದು ಹಾಲದಾರರು ಆಶ್ಚರ್ಯಪಟ್ಟರು. ಪರಿಚಯ ಮಾತ್ರವಲ್ಲ, ಒಳಗಣ್ಣು ಎಷ್ಟು ಚುರುಕಾಗಿದೆ ಎಂಬುದನ್ನೂ ಅವರು ಗಮನಿಸಿದರು.

ಇನ್ನೊಮ್ಮೆ, ರಾಣೀ ಚಾಂದಾ (ಮನೀಷಿ ದೇ ಸೋದರಿ, ಭಾರತ ಸರಕಾರದಲ್ಲಿ ಹಿರಿಯ ಅಧಿಕಾರಿಯಾಗಿದ್ದ ಅನಿಲಕುಮಾರ ಚಾಂದಾ ಅವರ ಹೆಂಡತಿ) ಜೊತೆಗೆ ಮಾತನಾಡುತ್ತಿರುವಾಗಲೂ ರವಿವರ್ಮನ ಶೈಲಿ, ಬಂಗಾಳದ ಶೈಲಿ ಎರಡರ ನಡುವೆ ಇರುವ ಅಂತರದ ಪ್ರಸ್ತಾಪ ಬಂದಿತು. ನಮ್ಮಲ್ಲಿ ಅ.ನ.ಕೃ. ರವಿವರ್ಮನನ್ನು ತೆಗಳಿ ಬಂಗಾಳಶೈಲಿಯನ್ನು ಎತ್ತಿ ಹಿಡಿದು ಬರೆದಿದ್ದರು. ರವಿವರ್ಮನು ಐರೋಪ್ಯ ವ್ಯಕ್ತಿಚಿತ್ರ ಕಲೆಯಿಂದ ಪ್ರಭಾವಿತನಾಗಿದ್ದನೆಂಬುದೇ ಮುಖ್ಯವಾಗಿ ಅ.ನ.ಕೃ. ಮನಸ್ಸಿಗೆ ಕಾರಣ. ವಿ.ಸೀ.ಯವರು ರವಿವರ್ಮನ ಕಲೆಯನ್ನು ಸ್ವಲ್ಪಮಟ್ಟಿಗೆ ಮೆಚ್ಚಿಕೊಂಡಿದ್ದರು. ಅವನ ಪೌರಾಣಿಕ ಪ್ರಸಕ್ತಿಯೇನು ಇವರಿಗೆ ಹಿಡಿಸದಿದ್ದರೂ, ವರ್ಣಸಂಯೋಜನೆ, ಕಥನ ಕೌಶಲ, ಭಾವನಿರೂಪಣೆಗಳಲ್ಲಿ ರವಿವರ್ಮನ ಚಾತುರ್ಯವನ್ನು ಮೆಚ್ಚಿಕೊಂಡಿದ್ದರು. ಇದನ್ನೆಲ್ಲ ಅವರು ರಾಣೀ ಚಾಂದಾ ಮುಂದೆ ಹೇಳುವಾಗ ಭಾವುಕರಾಗುತ್ತಿದ್ದುದನ್ನು ಆಕೆ ಗಮನಿಸಿದಳು. ಒಬ್ಬೊಬ್ಬ ಕಲೆಗಾರನಿಗೂ ತನ್ನ ಕಾಣ್ಕೆಯನ್ನು ಅಭಿವ್ಯಕ್ತಿಗೊಳಿಸುವಲ್ಲಿ ಸ್ವಾತಂತ್ರ್ಯವಿದೆಯೆಂಬುದನ್ನು ವಿ.ಸೀ. ಒತ್ತಿ ಹೇಳಿದರು; ಯಾವುದೇ ಕಲಾಪ್ರಕಾರವಾಗಲಿ ಎಲ್ಲ ವಿಧಗಳಲ್ಲೂ ಮೇಲ್ಮೆಯನ್ನು ಸಾಧಿಸಿದೆಯೆಂದು ಹೇಳುವಂತಿಲ್ಲ ಎಂಬುದು ಅವರ ನಿಲುವು. ವ್ಯಕ್ತಿಗಳಿಂದ ಶೈಲಿಯಾಗುವುದಲ್ಲದೆ, ಶೈಲಿಯಿಂದ ವ್ಯಕ್ತಿಯಾಗಲಾರ ಎಂದು ಆಗ ಅವರು ಹೇಳಿದ್ದು ನನ್ನ ನೆನಪಿನಲ್ಲಿದೆ.

ಇನ್ನು ಕಲಾತಪಸ್ವಿ ವೆಂಕಟಪ್ಪನವರ ವಿಚಾರವಂತೂ ಸರಿಯೇ ಸರಿ. ವೆಂಕಟಪ್ಪನವರನ್ನು ವಿ.ಸೀ. ಬಲ್ಲವರು ಮಾತ್ರವಲ್ಲದೆ ಮೆಚ್ಚಿಕೊಂಡಿದ್ದರು ಕೂಡ. ವೆಂಕಟಪ್ಪನವರು ಮೈಸೂರಿನಿಂದ ಕಾಲು ಕಿತ್ತುಕೊಂಡು ಬೆಂಗಳೂರಿಗೆ ಬಂದು ನೆಲೆಯಾಗಿ ನಿಂತ ತರುಣದಲ್ಲೇ ವಿ.ಸೀ. ವೆಂಕಟಪ್ಪ ಅವರಿಬ್ಬರೂ ಸಂಧಿಸಿದರಂತೆ; ಸಂದರ್ಭ ನನಗೆ ತಿಳಿಯದು. ಪ್ರಬುದ್ಧ ಕರ್ನಾಟಕಕ್ಕೆ ಸಂಬಂಧಿಸಿದಂತೆಯೋ ಏನೋ ವೆಂಕಟಪ್ಪನವರಿಂದ ಅವರ ಕೃತಿಗಳ ಛಾಯಾ ಚಿತ್ರಗಳನ್ನು ಪಡೆದುಕೊಳ್ಳಲೆಂದಿರಬೇಕು. ಅಂತೂ ಮತ್ತೆ ಮತ್ತೆ ಭೇಟಿಯಾದಾಗ ಅವರಿಬ್ಬರೂ ಒಬ್ಬರನ್ನೊಬ್ಬರು ಮೆಚ್ಚಿಕೊಂಡರು. ವೆಂಕಟಪ್ಪನವರು ಮೈಸೂರಿನಲ್ಲಿರುವಾಗ ಶೇಷಣ್ಣನವರಿಂದ ವೀಣೆಯನ್ನು ಕಲಿತಿದ್ದರು. ಆದರೆ ಇವರ ವಿನಿಕೆ ತಮ್ಮ ಸಂತೋಷಕ್ಕಷ್ಟೆ; ಬೇರೆಯವರ ಸಲುವಾಗಿ ಅಲ್ಲ. ಯಾರು ಕೇಳಿದರೂ ವೆಂಕಟಪ್ಪ

ವೀಣೆಯನ್ನು ನುಡಿಸುತ್ತಿರಲಿಲ್ಲ; ಜನರನ್ನು ಹತ್ತಿರವೇ ಸೇರಿಸುತ್ತಿರಲಿಲ್ಲವಲ್ಲ! ಸಂಗೀತ ರಸಿಕರಾದ ವಿ.ಸೀ. ಅವರ ವೀಣಾವಾದನವನ್ನು ಕೇಳಬೇಕೆಂದು ಕುತೂಹಲಿಯಾದದ್ದು ಸಹಜವೇ. ಆದರೆ ವೆಂಕಟಪ್ಪನವರ ಸಹವಾಸ ಕೊಳ್ಳಿಯಿಂದ ತಲೆ ತುರಿಸಿಕೊಂಡಂತೆ. ಎಷ್ಟೋ ಅಭ್ಯರ್ಥನೆ, ನಿರಾಕರಣೆಗಳಾದ ಮೇಲೆ ವಿ.ಸೀ.ಯವರೆದುರು ವೆಂಕಟಪ್ಪನವರ ವೀಣೆಕೆ ನಡೆಯಿತಂತೆ. ಇದನ್ನು ವೆಂಕಟಪ್ಪನವರೇ ನನಗೆ ತಿಳಿಸಿದರು.

ವೆಂಕಟಪ್ಪನವರ ಕೃತಿಗಳಲ್ಲಿ 'ಸಿದ್ಧಾರ್ಥನ ರಾಜ್ಯಪರಿತ್ಯಾಗ', 'ನಟರಾಜ', 'ಏಕಲವ್ಯ', 'ಕಣ್ವರು ಶಕುಂತಲೆಯನ್ನು ಬೀಳ್ಕೊಟ್ಟದ್ದು' — ಈ ಪ್ಲಾಸ್ಟರ್ ರಿಲೀಫ್ ಶಿಲ್ಪಗಳನ್ನು ವಿ.ಸೀ. ಬಹುವಾಗಿ ಕೊಂಡಾಡುತ್ತಿದ್ದರು. ನುರಿತ ಛಾಯಾ ಚಿತ್ರಗ್ರಾಹಕರಿಂದ ಅವುಗಳ ಚಿತ್ರಪ್ರತಿಕೃತಿಗಳನ್ನು ಮಾಡಿಸಿಟ್ಟುಕೊಂಡಿದ್ದರು. ತಮ್ಮ ಕವನ ಸಂಗ್ರಹಗಳು ಪ್ರಕಟವಾದಾಗ ಅವುಗಳಲ್ಲಿ ಕೆಲವನ್ನು ಬಳಸಿಕೊಂಡೂ ಇದ್ದರು. ಚಿತ್ರವು ಅಚ್ಚಾಗುವಾಗ ವಿ.ಸೀ. ವಹಿಸುತ್ತಿದ್ದ ಎಚ್ಚರ ವೆಂಕಟಪ್ಪನವರಿಗೆ ಮೆಚ್ಚುಗೆಯಾಯಿತು.

ದಿಟವಾಗಿ, ವಿ.ಸೀ. ತಮ್ಮ ಪುಸ್ತಕಗಳು ಪ್ರಕಟವಾಗುವಾಗ ಒಂದೊಂದು ವಿವರವನ್ನೂ ಆಸ್ಥೆಯಿಂದ ಗಮನಿಸುತ್ತಿದ್ದರಂತೆ. ಇದು ನನಗೆ ನೇರವಾಗಿ ತಿಳಿಯದ ವಿಚಾರ; ಇದನ್ನು ಕೇಳಿಬಲ್ಲೆ ಅಷ್ಟೆ. ಕಾಗದ, ಅಚ್ಚು, ಮುದ್ರಣ, ಹೊದಿಕೆ ಎಲ್ಲದರಲ್ಲೂ ಇದೇ ಬೇಕು, ಹೀಗೆಯೇ ಇರಬೇಕು ಎಂಬ ಹಟವಂತೆ; ಸುಲಭಕ್ಕೆ ಯಾವುದನ್ನೂ ಒಪ್ಪಿಕೊಳ್ಳುತ್ತಿರಲಿಲ್ಲವಂತೆ. ವೆಂಕಟಪ್ಪನವರ ಚಿತ್ರಗಳನ್ನು ತಮ್ಮ ಪುಸ್ತಕದಲ್ಲಿ ಬಳಸಿಕೊಳ್ಳುವಾಗ ಏನೆಲ್ಲ ಶ್ರಮ ವಹಿಸಿದರು, ಎಷ್ಟು ಕಷ್ಟಪಟ್ಟರು ಎಂಬುದನ್ನು ವೆಂಕಟಪ್ಪನವರೇ ನನಗೆ ಹೇಳಿದ್ದರು. 'ನಾನೆಲ್ಲಿ ಸಿಟ್ಟು ಮಾಡಿಕೊಳ್ಳುತ್ತೇನೋ ಎಂಬ ಭಯ ಅವರಿಗೆ!' ಎಂದು ಒಗ್ಗರಣೆಯನ್ನೂ ಸೇರಿಸಿದ್ದರು. ವೆಂಕಟಪ್ಪನವರನ್ನೂ ಅದೇ ಜಾಯಮಾನ; ಅದೇ ನಸಿನಸಿ; ಅದೇ ಹಟ, ಅದೇ ಮೊಂಡಾಟ ಎಂಬುದನ್ನೇನೋ ನಾನು ಬಲ್ಲೆ.

ವಿ.ಸೀ.ಯವರನ್ನು ಮೊದಲು ನಾನು ನೋಡಿದ್ದು ಯಾವಾಗೆಂಬುದು ನೆನಪಿಗೆ ಬರವೊಲ್ಲದು. ನಾನು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಅವರು ಮಾಡುತ್ತಿದ್ದ ಪಾಠವನ್ನು ಕೇಳಲು ಅವರ ತರಗತಿಗೆ ಹೋಗುತ್ತಿದ್ದುದು ನೆನಪಿದೆ. ಮನಃಶಾಸ್ತ್ರ ವಿಭಾಗದಲ್ಲಿ ಆನರ್ಸ್ ವಿದ್ಯಾರ್ಥಿಯಾಗಿದ್ದೆ; ನಾನು ಓದಬೇಕಾಗಿದ್ದ ಎರಡನೆಯ ಭಾಷೆ ಸಂಸ್ಕೃತವಾಗಿದ್ದಿತು. ಕನ್ನಡಕ್ಕೂ ನನಗೂ ಕಾಲೇಜಿನ ಕಡೆಯಿಂದ ಯಾವ ಸಂಬಂಧವೂ ಇರಲಿಲ್ಲ. ವಿ.ಸೀ.ಯವರು ಕನ್ನಡ ಅಧ್ಯಾಪಕರಾಗಿದ್ದವರು. ಅವರ ಪ್ರವಚನ ವೈಖರಿ ಕಾಲೇಜಿನಲ್ಲೆಲ್ಲ ಜನಜನಿತವಾದ ಸುದ್ದಿಯಾಗಿತ್ತು. ಹಾಗಾಗಿ ನಾವು ಐದಾರು ಮಂದಿ ಕನ್ನಡ ವಿದ್ಯಾರ್ಥಿಗಳಲ್ಲದಿದ್ದವರೂ ಅವರ ಪಾಠ ಕೇಳಲು ಹೋಗುತ್ತಿದ್ದೆವು. ಯಾರೂ ಅಡ್ಡಿ ಮಾಡುತ್ತಿರಲಿಲ್ಲ. ನಮಗೆ ಸ್ವಾರಸ್ಯವೆನಿಸಿದ್ದು ಅವರ ಮಾತು. ವಿಷಯ ಕನ್ನಡ ಸಾಹಿತ್ಯವೇ ಆದರೂ ಮಾತಿನಲ್ಲಿ ಕನ್ನಡ ಕಡಿಮೆ, ಇಂಗ್ಲೀಷ್ ಹೆಚ್ಚು. ಎರಡೂ ಸಮರಸವಾಗಿ ಕೂಡಿಕೊಳ್ಳುತ್ತಿದ್ದುವು. ಪದ್ಯ ವಿಚಾರಕ್ಕಿಂತ ಮಿಗಿಲಾಗಿ ಲೋಕಾಭಿರಾಮವೆನ್ನಬಹುದಾದ, ಆದರೆ ತುಂಬ ಪ್ರಬೋಧಕವಾದ ವಿಚಾರಸರಣಿ. ಮಳೆಗಾಲದ ನೆರೆಯಂತೆ ನಿರರ್ಗಳವಾಗಿ ಹರಿಯುವ ಮಾತು. ಕಣ್ಣೆದುರಿಗೆ ಟಿಪ್ಪಣಿಗಳೇನೂ ಇರವು.

ಎತ್ತಣಿಂದ ಭಾವನೆಗಳು ಬಂದು ನೆರೆಯುತ್ತಿದ್ದುವೋ ತಿಳಿಯದು. ಮಾತನಾಡುತ್ತ ಆಡುತ್ತ ಭಾವುಕರಾಗುವರು; ಭಾವನೆಯ ಗುಂಗಿನಲ್ಲಿ ಮೈಮರೆಯುವರು.

ಪ್ರವಚನದ ಪ್ರವಾಹದಲ್ಲಿ ಪ್ರಸಕ್ತವಾದ ಪಥ್ಯವಿಚಾರವೇನೆಂಬುದು ಅವರಿಗಾಗಲಿ ಅಲ್ಲಿದ್ದ ಇತರರಿಗಾಗಲಿ ಮುಖ್ಯವೆನಿಸುವಂತಿರಲಿಲ್ಲ. ಅವರ ಮಾತಷ್ಟೆ ಪ್ರಸಕ್ತವಾಗಿದ್ದುದು. ತಿಳಿವಳಿಕೆಗೆ ನೆರವಾಗುವ ಹಲವು ವಿವರಗಳನ್ನು ಎತ್ತಿ ಹೇಳುವಾಗ ಕೆಲವು ವಾಕ್ಯಗಳನ್ನು ಅಲ್ಲಿಂದ ಇಲ್ಲಿಂದ ಹೆಕ್ಕಿಕೊಂಡಂತೆ ಕಾಣಿಸುವರು; ಪುಸ್ತಕಗಳ ಆಕರಗಳನ್ನು ಸೂಚಿಸುವರು. ಅಲ್ಲಿ ನಮಗೆ ಕೆಲವರು ಉಪಾಧ್ಯಾಯರಿದ್ದರು; ಅವರಿಗೆ ತಲೆಯೆಂದರೆ ಪುಸ್ತಕಗಳ ಕಪಾಟು ಅಷ್ಟೆ. ವಿ.ಸೀ.ಯವರಾದರೆ ಹಾಗಲ್ಲ. ಪುಸ್ತಕಗಳಿಂದ ಪುಷ್ಟವಾದ ವಿಚಾರಧಾರೆಯಲ್ಲ ಅವರದ್ದು. ತಮ್ಮದೇ ಅದ ವಿಮರ್ಶೆ, ಪರಾಮರ್ಶೆ, ಚಿಂತನ, ಮನನ ಇವುಗಳ ಮೆರೆತವೇ ಅವರ ಮಾತು. ಬೇರೊಂದು ನದಿಗೆ ಮಾಡಿಕೊಂಡ ಕಾಲುವೆಯಲ್ಲ ಇದು; ಇದೇ ಒಂದು ಮಹಾನದಿ.

ಅವರ ಮಾತನ್ನು ಕೇಳುತ್ತಲಿದ್ದಂತೆ ಅದೆಷ್ಟು ವಿಚಾರಗಳು ನಮ್ಮ ಎಳೆಯ ತಲೆಯೊಳಗೆ ಇಳಿದುವೋ ತಿಳಿಯದು; ಅವರ ಮಾತಿನ ಮೋಡಿಯೊಳಗಂತೂ ಸಿಲುಕಿಕೊಂಡೆವು. ಈ ಮಾತಿನ ಮೋಡಿಯನ್ನು ಮುಂದೆಯೂ ನಾನು ಬೇಕಾದಷ್ಟು ಕಾಣುವುದಾದದ್ದು ನನ್ನ ಸೌಭಾಗ್ಯ. ಮೈಸೂರಿನಲ್ಲಿ ನಾನು ಓದನ್ನು ಮುಗಿಸಿ ಬೆಂಗಳೂರಿಗೆ ಬಂದು ಕೆಲಸ ಹಿಡಿದಾಗಲೂ ವಿ.ಸೀ.ಯವರನ್ನು ಅಡಿಗಡಿಗೆ ನೋಡುವುದಾಗುತ್ತಿತ್ತು. ಆಗಲೂ ಮಾತಿನ ಮೋಡಿಯೇನೋ ಇದ್ದಿತು. ಆದರೆ ತಲ್ಲಣಗೊಂಡ ಜೀವ ಎಂಬುದು ಅರಿವಿಗೆ ಬರುತ್ತಿದ್ದಿತು; ಮೋಡಿಯ ಹಿನ್ನೆಲೆಯಲ್ಲಿ ದುಗುಡವಿದ್ದಿತೆಂಬುದು ತಿಳಿಯುತ್ತಿದ್ದಿತು; ಬದುಕಿನ ಬಹುಮುಖವಾದ ಬವಣೆಗಳಲ್ಲಿ ನೊಂದಿದ್ದುದು ಯಾರ ಸೂಕ್ಷ್ಮಗ್ರಹಿಕೆಗಾದರೂ ತೋರಿಕೊಳ್ಳುತ್ತಿತ್ತು. ಭಾವನೆಗಳ ಕಾವೇನು ಕರಗಿರಲಿಲ್ಲ ; ಕಲ್ಪನೆಯ ಅಚ್ಚುಕಟ್ಟು ಕುಂದಿರಲಿಲ್ಲ ; ಮನಸ್ಸಿನಲ್ಲಿ ಆಲೋಚನೆಗಳ ತುಯ್ದಾಟ ಮೊದಲಿನಂತೆಯೆ ಇದ್ದಿತು; ಆದರ್ಶದ ಅನುಸಂಧಾನವೂ ಹಾಗೆಯೆ ಇದ್ದಿತು; ಎಲ್ಲವನ್ನೂ ತಿಳಿಯಬೇಕೆಂಬ ಕಾತರವೂ ಕಾಣುತ್ತಿತ್ತು. ಅವರ ಮಾತಿನ ಮಾಡಿ ಬರಡಾದುದಲ್ಲ, "ಹಾರಗುದುರಿ ಬೆನ್ನ ಏರಿ ದೂರ ದೂರ" ಹೋಗುವಂಥದೂ ಅಲ್ಲ. ಅವರ ಮಾತಿನ ಹಿಂದಿದ್ದ ಮನಸ್ಸು ವಾಸ್ತವಿಕತೆಯ ನಂಟನ್ನು ಗಟ್ಟಿಯಾಗಿಯೆ ಉಳಿಸಿಕೊಂಡಿದ್ದಿತು. ಬದುಕಿನಲ್ಲಿ ಉತ್ಸಾಹವಾದರೂ ಎಂದಿನಂತೆಯೆ ಗರಿಕೆದರಿ ಮೇಲೆ ಹಾರಲು ಹವಣಿಸುವ ಹಕ್ಕಿಯಂತೆ ಇದ್ದಿತು.

ಇದೇನು ವರವೋ ಶಾಪವೋ ಎಂದು ನಾನು ಆಗಾಗ ಅಂದುಕೊಳ್ಳುತ್ತಿದ್ದುದುಂಟು. ವ್ಯಕ್ತಿಯಲ್ಲಿ ಇಷ್ಟೊಂದು ಪ್ರತಿಭೆಯನ್ನೂ ಸಾಮರ್ಥ್ಯವನ್ನೂ ಸೂಕ್ಷ್ಮಸಂವೇದನೆಯನ್ನೂ ತುಂಬಿ, ಉಳಿದಂತೆ ಎಲ್ಲ ಅನುಕೂಲಗಳನ್ನೂ ಕಸಿದುಕೊಂಡ ವಿಧಿಗೆ ಏನನ್ನೋಣ? ಅವರಂಥ ಪ್ರಾಮಾಣಿಕ ಸಾಹಿತಿಗಳು ಯಾವ ಕಾಲದಲ್ಲಾಗಲಿ ವಿರಳರೇ. ಅವರ ಬರಹಗಳು ಬರಿಯ ಓದಿಗಲ್ಲ; ಬದುಕನ್ನು ತಿದ್ದಿಕೊಳ್ಳಲು ನೆರವಾಗುವಂಥವು, ಬದುಕಿನಲ್ಲೊಂದು ಸೊಗಸನ್ನು ಕಾಣಲು ದಾರಿ ಮಾಡಿಕೊಡುವಂಥದು; ಮತ್ತೆ ಮತ್ತೆ ಮನನಕ್ಕೆ ಅನುಕೂಲವಾದಂಥವು. ಇನ್ನು ಅವರ ಕವಿತೆಗಳೋ ಒಂದೊಂದೂ ಒಂದು

ತಿದ್ದಿ ಕಡೆದ ಪುತ್ಥಳಿ. ಕಲ್ಪನೆಯೋ ಕಥನವೋ ಭಾವವೋ ಗೇಯಲಕ್ಷಣವೋ ಏನಿಲ್ಲ ಅವರ ಕವಿತೆಗಳಲ್ಲಿ? ಅದರೂ ನಾಡವರಿಂದ ಮಹಾಕವಿಗಳೆನಿಸಿಕೊಂಡರೆ? ಅವರು ಕವಿಯೆಂಬುದನ್ನು ಒಪ್ಪಿಕೊಳ್ಳಲೂ ನಮ್ಮ ಸಾಹಿತ್ಯ ರಸಿಕರು ಹಿಂದೆ ಮುಂದೆ ನೋಡಿದರಲ್ಲ? ಕನ್ನಡ ಶಿಕ್ಷಕರಾಗಿ ಜೀವವನ್ನೇ ತೇದರು; ಅದಕ್ಕೆ ಅವರು ಪಡೆದುಕೊಂಡ ಪ್ರತಿಫಲವೇನು? ನಿರ್ಮಲವಾದ ಅಂತಃಕರಣದಿಂದ ಕನ್ನಡದ ಕೆಲಸಮಾಡಿದರು; ಅದನ್ನು ಗುರುತಿಸಿದವರು ಯಾರು? ಈ ಮಹಾನುಭಾವನಿಗೆ ಲಭ್ಯವಾದದ್ದು ದಿವ್ಯನಿರ್ಲಕ್ಷ್ಯ!

ಹಾಡಿ ಹೊಗಳಿದವರು ಯಾರು? ಕರೆದು ಮನ್ನಣೆಯ ಮಣೆ ಹಾಕಿದವರು ಯಾರು? ಕಡೆಗಾಲದಲ್ಲಿ ಕೆಲವು ಅಭಿಮಾನಿಗಳ ಔದಾರ್ಯದಿಂದ ದೂರದ ಯಾವುದೋ ಕಾಲೇಜಿನ ಪ್ರಾಂಶುಪಾಲರಾಗಿಯೋ, ಇಲ್ಲಿಯೇ ಆಕಾಶವಾಣಿಯ ವಿಭಾಗವೊಂದರ ಅಧಿಕಾರಿಯಾಗಿಯೋ ಅಷ್ಟಿಷ್ಟು ಮರ್ಯಾದೆಯ ಕೆಲಸವೊಂದನ್ನು ನಿರ್ವಹಿಸುವಂತಾಯಿತು; ಅದೂ ಅಲ್ಪಾವಧಿಯ ಸಂತೃಪ್ತಿ! ವಿದೇಶಪ್ರವಾಸದ ಬಯಕೆಯನ್ನು ತೀರಿಸಿಕೊಳ್ಳುವ ಅವಕಾಶವನ್ನೂ ವಿಧಿ ಒದಗಿಸಿ ಒಡನೆಯೆ ಕಸಿದುಕೊಂಡಿತು. ಮೊದಲಿಂದ ಕಡೆಯವರೆಗೂ ಬಡತನವೆ ಕಟ್ಟಿಟ್ಟ ಬುತ್ತಿಯಾಯಿತು.

ಹಣಕ್ಕಾಗಿ ಅವರೇನು ಹಾತೊರೆದವರಲ್ಲ. ಹಾಗಿದ್ದಿದ್ದರೆ ಕನ್ನಡಕ್ಕೆ ಕಾಲಿಡದೆ ತಮ್ಮ ಅರ್ಥಶಾಸ್ತ್ರ ಕ್ಷೇತ್ರದಲ್ಲೇ ಉಳಿದುಕೊಂಡು ರಿಸರ್ವ್‌ಬ್ಯಾಂಕಿನ ಗೌವರ್ನರಾಗಿ ನಿವೃತ್ತರಾಗುತ್ತಿದ್ದರು. ಇನ್ನು ಪ್ರಶಂಸೆ, ಪ್ರಶಸ್ತಿ, ಸನ್ಮಾನ, ಸಂಭಾವನೆಗಳಿಗೆಂದೂ ಬಾಯಿ ಬಿಟ್ಟುಕೊಂಡು ಕಾದು ಕೂತವರೂ ಅಲ್ಲ ; ಅವುಗಳಿಗಾಗಿ ಅಲ್ಲವಲ್ಲ ಅವರು ಮಾಡಿದ ಕೆಲಸ? ಆದರೆ ಸೂಕ್ಷ್ಮ ಸಂವೇದಿಯಾದ ಪ್ರತಿಭಾಶಾಲಿಗೆ ಅವನನ್ನು ಅರ್ಥಮಾಡಿಕೊಳ್ಳಬಲ್ಲ ಸಹೃದಯರಿದ್ದರೆ ಸಂತೋಷವಲ್ಲವೆ? ಒಳ್ಳೆಯ ಹಾಡುಗಾರನಿಗೆ ತಲೆದೂಗುವ ರಸಿಕನೊಬ್ಬ ಮುಂದೆ ಕೂತರೆ ಸಮಾಧಾನವಲ್ಲವೆ? ಕುಶಲನಾದ ಕಲಾವಿದನ ಕೃತಿಯನ್ನು ಅದರ ಸ್ವಾರಸ್ಯವನ್ನು ಬಲ್ಲವನೊಬ್ಬ ಕಣ್ಣರಳಿಸಿ ನೋಡಿದರೆ ಕಲಾವಿದನಿಗೆ ತೃಪ್ತಿಯಾಗುವುದಿಲ್ಲವೆ? ಈ ಬಗೆಯ ಸಂತೋಷ, ಸಮಾಧಾನ, ಸಂತೃಪ್ತಿಗಳು ವಿ.ಸೀ.ಯವರ · ಪಾಲಿಗೆ ಬರಲಿಲ್ಲವೇನೋ ಎಂದೆನಿಸುತ್ತದೆ.

ಅಜಾತಶತ್ರುವಾದ, ಸಂಪನ್ನಸಜ್ಜನರಾದ ಅವರು ಯಾರನ್ನೂ ಎದುರು ಹಾಕಿಕೊಳ್ಳುವ ಮಾತೇ ಇರಲಿಲ್ಲ. ವಿರಸವೆಂಬುದು ಅವರ ಸ್ವಭಾವದಲ್ಲೇ ಇರಲಿಲ್ಲ; ಅವರು ಬರಹದಲ್ಲಿ ಬದುಕಿನಲ್ಲಿ ಉದ್ದಿಮೆಯಲ್ಲಿ ಹಿಡಿದ ದಾರಿಯೇ ಸಮನ್ವಯದ್ದು. ಒದಗಿದ ಕಹಿಯನ್ನೆಲ್ಲ ಮೌನವಾಗಿ ನುಂಗಿಕೊಂಡು, ಸಿಹಿಯಷ್ಟನ್ನೆ ಇತರರಿಗೆ ಕೊಡುವ ಧೀರಚೇತನ ಅದು. ವಿಮರ್ಶಕರಾಗಿಯೂ ಅವರು ಯಾರನ್ನೂ ನೋಯಿಸಿದ್ದಿಲ್ಲ. ಯಾವ ಸಂದರ್ಭದಲ್ಲೂ ದೋಷಾನುಸಂಧಾನ ಅವರ ಪ್ರವೃತ್ತಿಯಲ್ಲ. ಹೀಗಿದ್ದರೂ ಅದೇಕೆ ಅವರು ಅವಜ್ಞೆಗೆ ಪಾತ್ರರಾದರು? ಎಲ್ಲಿಯೂ ಇರುವಂತೆ ನಮ್ಮಲ್ಲೂ ಗುಂಪುಗಾರಿಕೆಯ ಪಿಡುಗು ಇದಕ್ಕೆ ಕಾರಣವೆಂದು ನನ್ನ ಎಣಿಕೆ. ಕನ್ನಡದ ಮಡಿವಂತ ಭಕ್ತರಿಗೆ ಅವರು ಹೇಳಿ ಕೇಳಿ ಪರಕೀಯರು. ಯಾವುದೋ ಅರ್ಥಶಾಸ್ತ್ರವನ್ನು ಓಲೈಸಿ ಅದನ್ನು ಬಿಟ್ಟು ಕನ್ನಡದ ಗೋಡೆ ಹಾರಿ ಬಂದಿಳಿದವರು ಇವರು; ಅಷ್ಟಿಷ್ಟು ಬರೆದ ಮಾತ್ರಕ್ಕೆ, ಹಾಡುಗಳನ್ನು ಹೊಸೆದ

ಮಾತ್ರಕ್ಕೆ ಕನ್ನಡದ ಕಣ್ಮಣಿಯೆಂದು ಕನವರಿಸಬೇಕೆ? ಇನ್ನು, ಅರ್ಥಶಾಸ್ತ್ರದ ಮುತ್ಸದ್ದಿಗಳಿಗೆ ಇವರು ಕನ್ನಡಕ್ಕೆ ಒಲಿದವರೆಂಬ ಕೊರಗು. ಕಡೆಯವರೆಗೂ ವಿ.ಸೀ.ಯವರು ಅರ್ಥಶಾಸ್ತ್ರ ಚಿಂತನೆಯನ್ನು ಕೈಬಿಡಲಿಲ್ಲ; ಹಲವಾರು ಆರ್ಥಿಕ ಸಮಸ್ಯೆಗಳನ್ನು ಕುರಿತಂತೆ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಬರೆಯುತ್ತಲೆ ಇದ್ದರು. ಆದರೆ ಅದನ್ನೆಲ್ಲ ಮೂಸುವವರು ಯಾರು? ವಿಮರ್ಶೆಗೆ ತಂದುಕೊಂಡವರು ಯಾರು? ಅವರ ಚಿಂತನೆಗಳಿಗೆ ಬೆಲೆಕೊಟ್ಟವರು ಯಾರು?

ಕನ್ನಡ ಕ್ಷೇತ್ರದಲ್ಲೇ ಇವರು ಪಂಡಿತರೆಂದು ಇತರ ಕವಿಗಳು ದೂರವಿರಿಸಿದರು; ಕವಿಯೆಂದು ಪಂಡಿತರು ದೂರಮಾಡಿದರು. ನಾಟಕಕಾರರೆಂದು ಗದ್ಯಶಿಲ್ಪಿಗಳ ಎಣಿಕೆ; ಗದ್ಯ ಶಿಲ್ಪಿಯೆಂದು ನಾಟಕಕಾರರು ಭಾವಿಸಿದರು. ಸಾಹಿತಿಯೆಂದು ಸಂಗೀತಗಾರರ ಕಲ್ಪನೆ; ಸಂಗೀತದವರೆಂದು ಸಾಹಿತಿಗಳ ಮನೆವರಿಕೆ. ಸೃಜನಾತ್ಮಕ ಲೇಖಕರ ಎಣಿಕೆಯಲ್ಲಿ ಅವರು ವಿಮರ್ಶಕರು; ವಿಮರ್ಶಕರು ಇವರನ್ನೆಂದೂ ವಿಮರ್ಶಕರೆಂದು ಪರಿಗಣಿಸಲಿಲ್ಲ. ಬರಿಯ ಮಾತುಗಾರರೆಂದು ಬರಹಗಾರರು; ಬರಹಗಾರರೆಂದು ಮಾತುಗಾರರು. ಹೀಗೆ, ಅಲ್ಲಿಯೂ ಸಲ್ಲಲಿಲ್ಲ, ಇಲ್ಲಿಯೂ ಸಲ್ಲಲಿಲ್ಲ ಎಂಬಂತಾಯಿತು ಅವರ ಪಾಡು. ಇದು ಅವರಿಗೆ ಕೊಂಚ ಕಸವಿಸಿಯನ್ನು ಉಂಟುಮಾಡಿದ್ದರೆ ಆಶ್ಚರ್ಯವೇನಲ್ಲ. ಯಾವ ಸಂಪ್ರದಾಯದ ಬಲವಿದ್ದರೂ, ಸಂಸ್ಕಾರದ ಸಜ್ಜನಿಕೆಯಿದ್ದರೂ ಉಪ್ಪುಖಾರ ತಿಂದ ದೇಹವಲ್ಲವೆ? ಅವರೇನು ವಿರಕ್ತರಲ್ಲ, ಯೋಗಿಯಲ್ಲ, ಯತಿಯಲ್ಲ. ಈಜಬೇಕು, ಇದ್ದು ಜೈಸಬೇಕು ಎಂದೇ ನಂಬಿಕೊಂಡು ಬಾಳನ್ನು ಕಳೆದವರು. ಮೇಲಾಗಿ ರಸಿಕರು; ಸುಖ ಸಂತೋಷಗಳನ್ನು ಸಂಕೋಚವಿಲ್ಲದೆ ಬಯಸುವವರು. ಸತ್ಯಾನ್ವೇಷಕರಾದರೂ ಸೌಂದರ್ಯ ಪಕ್ಷಪಾತಿಗಳು. ರಸಾಭಾಸವಾದರೆ ಮನಸ್ಸಿಗೆ ನೆಮ್ಮದಿಯಿರುತ್ತದೆಯೆ?

ವಿ.ಸೀ.ಯವರ ಕಡೆಯ ದಿನಗಳಲ್ಲಿ ಅವರ ಬರಹಕ್ಕೆ ಒತ್ತಾಸೆಯಾಗಿ, ಊರುಗೋಲಾಗಿ ನಿಂತ ಕೆಲವರು ಕಿರಿಯಮಿತ್ರರು ಅವರ ಹಿರಿಮೆಯನ್ನು ಮನಗಂಡು ಅವರ ನೆನಪನ್ನು ಉಳಿಸಲೆತ್ನಿಸುತ್ತಿರುವುದು ಸಮಾಧಾನದ ಮಾತು. ವಿ.ಸೀ.ಯವರ ನೂರನೆಯ ಹುಟ್ಟುಹಬ್ಬವನ್ನು ಆಚರಿಸುವ ಸಂದರ್ಭವನ್ನೂ ಇರಿಸಿಕೊಂಡಿದ್ದಾರೆ. ವಿಪುಲವಾದ ಪೃಥ್ವಿ, ಅನವಧಿಯ ಕಾಲ ಎರಡೂ ಇರುವಾಗ ವಿ.ಸೀ.ಯವರ ಬದುಕು–ಬರಹಗಳು ಯಾರಿಗಾದರೂ ಎಂದಾದರೂ ಒಳ್ಳೆಯ ಬದುಕಿಗೆ ಸ್ಫೂರ್ತಿಯನ್ನೂ ಒಳ್ಳೆಯ ಕೆಲಸಕ್ಕೆ ಪ್ರೇರಣೆಯನ್ನೂ ಒದಗಿಸದೆ ಉಂಟೆ? ವಿ.ಸೀ.ಯವರ ಚೇತನಕ್ಕೆ ನೂರು ನಮನಗಳು.

ನಮ್ಮ ಊರಿನ ಕಾಡಿನ ಹಾಗೆ....

ಶೇಷನಾರಾಯಣ

ವಿ.ಸೀ.ಯವರ ಮುಖತಃ ಪರಿಚಯವಾಗುವುದಕ್ಕೆ ಮೊದಲೇ ಅವರ ಕೃತಿಗಳ ಬಗ್ಗೆ ನಮಗೆ ವಿಶೇಷ ಆಸಕ್ತಿ. ಆ ಕಾಲದಲ್ಲಿ ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು', ವಿ.ಸೀ.ಯವರ 'ಪಂಪಾಯಾತ್ರೆ' – ಇತ್ಯಾದಿ ಕೃತಿಗಳನ್ನು ನಾವು ಬಹುವಾಗಿ ಮೆಚ್ಚಿಕೊಂಡಿದ್ದೆವು ಮತ್ತು ಓದುತ್ತ ಇದ್ದೆವು. ಸಾಧ್ಯವಾದಷ್ಟೂ ಅವರ ಭಾಷಣವನ್ನು ಕೇಳಲು ನಾವು ತಪ್ಪಿಸಿಕೊಳ್ಳುತ್ತ ಇರಲಿಲ್ಲ. ಅವರ ಭಾಷಣದ ಸೊಗಸೇ ಸೊಗಸು. ಮೃದುವಾಗಿ ನವಿರಾಗಿ ಎಳೆಎಳೆಯಾಗಿ ತುಂತುರು ತುಂತುರಾಗಿ ಹೇಳಬೇಕಾದ ವಿಷಯಗಳನ್ನು ಸ್ಪಷ್ಟವಾಗಿ ಹೇಳುವ ಆ ವಾಗ್ವೈಖರಿ. ಆಗ ಅವರನ್ನು ನಾವು ಹಾಸ್ಯ ಮಾಡುತ್ತ ಇದ್ದುದೂ ಉಂಟು. ಸ್ವಲ್ಪವೂ ಓರೆಕೋರೆ ಆಗದ ಹಾಗೆ ಅಚ್ಚುಕಟ್ಟಾದ ಆ ರುಮಾಲು, ಉಡುಪು– ತುಂಬಾ ಶಿಸ್ತಾಗಿರುವ, ಇವರಿಗೆ ತದ್ವಿರುದ್ಧವಾಗಿದ್ದ – ಊಹೂ ಒರಟಾಗಿದ್ದ – ಕಾರಂತರು ಹೇಗೆ ಭಾರೀ ಗೆಳೆಯರಾದರೋ ಎಂದೂ ನಾವು ಮಾತಾಡಿಕೊಳ್ಳುತ್ತ ಇದ್ದೆವು. ಯಾರ ಭಾಷಣಗಳಿಗೆ ತಪ್ಪಿಸಿಕೊಂಡರೂ ಅನಕೃ, ಮಾಸ್ತಿ, ವಿ.ಸೀ. ಇಂಥವರ ಭಾಷಣಗಳಿಗೆ ನಾವು ತಪ್ಪಿಸಿಕೊಳ್ಳುತ್ತ ಇರಲಿಲ್ಲ. ಮಧ್ಯೆ ಅಪಶಕುನದಂತೆ ಎದ್ದು ಬಾರದೆ ಸಭೆ ಮುಗಿಯುವವರೆಗೂ ಶ್ರದ್ಧೆಯಿಂದ ಕೇಳಿಸಿಕೊಳ್ಳುತ್ತ ಕುಳಿತಿರುತ್ತಿದ್ದೆವು.

ವಿ.ಸೀ.ಯವರ ಭಾಷಣದ ಸೊಗಸೇ ಹಾಗೆ. ಯಾವ ವಿಷಯವೇ ಆಗಲಿ, ಇನ್ನೂ ಕೇಳುತ್ತಲೇ ಇರಬೇಕು ಎನ್ನುವ ಆಕಾಂಕ್ಷೆ. ಅನಕೃ ಬಿರುಗಾಳಿ ಆದರೆ ವಿ.ಸೀ. ತಂಗಾಳಿ.

ಬೆಂಗಳೂರನ್ನು ಬಿಟ್ಟು ನಾನು ಮೈಸೂರು ಸೇರಿಕೊಂಡ ಮೇಲೆ ವಿ.ಸೀ.ಯವರ ಭಾಷಣ ಕೇಳುವುದು ತಪ್ಪಿ ಹೋಯಿತು.

ಆಮೇಲೆ ನಾನು ಮತ್ತೆ ಬೆಂಗಳೂರಿಗೇ ಹಿಂದಿರುಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟದಲ್ಲಿ ವ್ಯವಸ್ಥಾಪಕನಾಗಿ ಸೇರಿಕೊಂಡೆ. ಆಗ ಚುನಾವಣೆ ನಡೆದು ಜಿ. ವೆಂಕಟಸುಬ್ಬಯ್ಯನವರು ಪರಿಷತ್ತಿನ ಅಧ್ಯಕ್ಷರಾಗಿದ್ದರು. ಕೆಲವು ತಿಂಗಳುಗಳ ಕಾಲ ನಿರಂಜನ ಕಾರ್ಯದರ್ಶಿ.

ಮೈಸೂರನ್ನು ಬಿಟ್ಟು ಬರುವುದು ಆಗ ನನಗೆ ಇಷ್ಟವಿಲ್ಲದಿದ್ದರೂ ನಿರಂಜನ ಮತ್ತು ತೀನಂಶ್ರೀ ಒತ್ತಾಯ ಮಾಡುತ್ತಲೇ ಮತ್ತೆ ಬೆಂಗಳೂರಿಗೆ ಬರಬೇಕಾಯಿತು; ಬಂದೆ.

ನಿರಂಜನ ಪರಿಷತ್ತಿನ ಕಾರ್ಯದರ್ಶಿಯಾಗಿದ್ದಾಗ, ಪರಿಷತ್ತಿನಲ್ಲಿ ಏನೋ ಸಮಾರಂಭ. ವಿ.ಸೀ.ಯವರ ಭಾಷಣ. ಭಾಷಣದ ಸಾರಾಂಶ ಏನು ಎನ್ನುವುದು ಈಗ ನನಗೆ ಮರೆತು ಹೋಗಿದೆ. ಅದರೆ ವಿಷಯ ಆರ್ಥಿಕ ವಿಚಾರಗಳಿಗೆ ಸಂಬಂಧ ಪಟ್ಟದ್ದು.

ವಿ. ಸೀ.ಯವರ ಸೊಗಸಾದ ಭಾಷಣವನ್ನು ಮೂರು ನಾಲ್ಕು ವರುಷಗಳು ಕಳೆದ ಮೇಲೆ ಕೇಳುವ ಸುಯೋಗ. ಆಗ ಏನೋ ಕೆಲಸವಾಗಿ ಬಸವರಾಜ ಕಟ್ಟೀಮನಿಯವರೂ ಬೆಂಗಳೂರಿಗೆ ಬಂದಿದ್ದರು. ನಮ್ಮೊಂದಿಗೆ ಇದ್ದರು. ನಾನು, ನಿರಂಜನ, ಕಟ್ಟೀಮನಿ–ಹೀಗೆ ಒಂದು ಸಾಲಿನಲ್ಲಿ ಕುಳಿತಿದ್ದೆವು. ನಮ್ಮ ಮುಂದಿನ ಸಾಲಿನಲ್ಲಿ ಮಾಸ್ತಿ, ನಿಟ್ಟೂರು ಶ್ರೀನಿವಾಸರಾಯರು ಮುಂತಾದವರು ಇದ್ದರು.

ವಿ.ಸೀ.ಯವರು ಭಾಷಣ ಮಾಡುತ್ತ ಇದ್ದಾಗ, ಮಧ್ಯೆ ರಿಸರ್ವ್ ಬ್ಯಾಂಕ್ ವಿಷಯ ಪ್ರಸ್ತಾಪಕ್ಕೆ ಬಂದು, ಇಂಗ್ಲಿಷಿನಲ್ಲಿ ಅದರ ವಿವರಣೆ ನೀಡಿದರು. ನಿರಂಜನ ಸುಮ್ಮನಿರಲಿಲ್ಲ. ಎದ್ದು ನಿಂತವರೇ "ಇಂಗ್ಲಿಷಿನಲ್ಲೇ ಭಾಷಣ ಮುಂದುವರಿಸಿ. ವಿವರಣೆ ನೀಡೋದಕ್ಕೆ ಕೇಳೋದಕ್ಕೆ ತುಂಬಾ ಚೆನ್ನಾಗಿರುತ್ತೆ" ಎಂದರು. ವಿ. ಸೀ.ಯವರು ಭಾಷಣ ನಿಲ್ಲಿಸಿ "ಹಾಗೇನು?" ಎಂದರು. ಒಡನೆ ನಾವು ಕುಳಿತಿದ್ದ ಕುರ್ಚಿಗಳ ಹಿಂಭಾಗದಿಂದ "ಕನ್ನಡಾ..... ಕನ್ನಡಾ..... " ಎಂಬ ಕೂಗು ಕೇಳಿ ಬಂತು. ಪರಿಷತ್ತಿನೊಳಗೆ ಕನ್ನಡವನ್ನು ಬಿಟ್ಟು ಇಂಗ್ಲಿಷ್ ಭಾಷಣ ಕೇಳಲು ಸಭಿಕರು ಸಿದ್ಧರಿರಲಿಲ್ಲ. ನಿರಂಜನ ಗೊಣಗಿಕೊಂಡರು:

"ಏನು ಸೊಗಸಾದ ಇಂಗ್ಲಿಷ್‌ರೀ ಅವರದ್ದು! ಇಂಗ್ಲಿಷ್‌ನಲ್ಲಿ ಭಾಷಣ ಮಾಡಿ ಬಿಟ್ರೆ ಕನ್ನಡದ ಮಹತ್ವ ಹೊರಟು ಹೋಗುತ್ತೇನು?" ಒರಟು ಸ್ವಭಾವದ ಒರಟು ಮಾತಿನ ಕಟ್ಟೀಮನಿ "ಎಲ್ಲ ಹುಂಬರು ಇದ್ದಾರ್ರೀ, ಹುಂಬರು" ಎಂದರು.

ಹೀಗೆ ವಿ.ಸೀ.ಯವರ ಪರಿಚಯ ಲಾಭ, ಅವರ ಭಾಷಣಗಳ ಮೇಲಿನ ವ್ಯಾಮೋಹ ಸಾಕಷ್ಟಿದ್ದರೂ ಅವರೊಂದಿಗಿನ ಒಡನಾಟ ನನಗೆ ಹೆಚ್ಚಿಗೆ ಇರಲಿಲ್ಲ. ಎದುರಿಗೆ ಸಿಕ್ಕಾಗ ಅಥವಾ ಸಭೆ ಸಮಾರಂಭಗಳಲ್ಲಿ ಅವರನ್ನು ನೋಡಿದಾಗ ಎಲ್ಲರಂತೆ ನಾನೂ ನಮಸ್ಕಾರ ಮಾಡುತ್ತ ಇದ್ದೆ. ಅವರೂ ಪ್ರತಿ ನಮಸ್ಕಾರ ಮಾಡುತ್ತ ಇದ್ದರು.

ಆಮೇಲೆ ಅವರೊಂದಿಗಿನ ನನ್ನ ಒಡನಾಟ ಜಾಸ್ತಿ ಆದದ್ದು, ನಾನು ಒಂದು ಮುದ್ರಣ ಸಂಸ್ಥೆಯನ್ನು ಪ್ರಾರಂಭಿಸಿದ ಮೇಲೆ. ಆಗ ಇಂಡಿಯಾ ಬುಕ್ ಹೌಸ್ ಪ್ರಕಟಣಾ ಕ್ಷೇತ್ರದಲ್ಲಿ ಇತ್ತು. ಅದರ ಬೆಂಗಳೂರಿನ ಶಾಖೆಯ ಮುಖ್ಯಸ್ಥ ಅನಂತರಾಮ್ ಅವರು "ಬರ್ತೀರೇನ್ರೀ, 'ಕಾಲೆಜ್ ದಿನಗಳು' ಮುದ್ರಣ ನಿಮ್ಮಲ್ಲಿ ಮಾಡಿಸ್ತೀನಿ. ವಿ.ಸೀ.ಯವರೊಂದಿಗೆ ಮಾತಾಡಿ ಬರೋಣ" ಎಂದರು.

ಆಗ ಇಂಡಿಯಾ ಬುಕ್ ಹೌಸ್‌ನವರಿಗೆ ಸ್ವಂತ ಮುದ್ರಣ ವ್ಯವಸ್ಥೆ ಇರಲಿಲ್ಲ. ಆಮೇಲೆ ಮಾಡಿಕೊಂಡರು. ಅವರ ತುಂಬಾ ಪುಸ್ತಕಗಳನ್ನು ನಾನು ಅಚ್ಚು ಮಾಡುತ್ತ ಇದ್ದೆ. ವಿ.ಸೀ.ಯವರ ಸಂಪಾದಕತ್ವದಲ್ಲಿ 'ಕವಿ ಕಾವ್ಯ ಪರಂಪರೆ' ಮಾಲೆಯನ್ನು ಇಂಡಿಯಾ ಬುಕ್ ಹೌಸ್ ಪ್ರಕಟಣೆಗೆ ತೆಗೆದುಕೊಂಡಿತ್ತು. ಸರಿ, ಅನಂತರಾಮ್ ಅವರ ಕೂಡ ನಾನು ವಿ.ಸೀ.ಯವರ ಮನೆಗೆ ಹೋದೆ. ಮೊದಲೇ ಪರಿಚಯ ಇದ್ದುದರಿಂದ ಈಗ ಹೊಸದಾಗಿ

ಪರಿಚಯ ಮಾಡಿಕೊಳ್ಳುವ ಹಾಗಿರಲಿಲ್ಲ. ನಾನು ಹೋದೊಡನೆ "ನಿಮ್ಮ ಲೇಖನ ತುಂಬಾ ಚೆನ್ನಾಗಿತ್ತಪ್ಪ. ವಾಸ್ತವ ಸ್ಥಿತಿ ವಿವರಿಸಿದ್ದೀರಿ. ಸೊಗಸಾಗಿತ್ತು" ಎಂದರು.

ವಿಷಯ ಇಷ್ಟೇ: ಪುಸ್ತಕೋದ್ಯಮದ ಕಷ್ಟನಷ್ಟಗಳು, ಅದರಲ್ಲಿ ನಡೆಯುವ ಅವ್ಯವಹಾರಗಳು ಮುಂತಾದುವನ್ನು ವಿವರಿಸಿ 'ಪ್ರಜಾವಾಣಿ'ಯಲ್ಲಿ ನಾನು ಲೇಖನ ಬರೆದಿದ್ದೆ. ಎರಡೂ ವಾರ 'ಪ್ರಜಾವಾಣಿ' ಸಾಪ್ತಾಹಿಕ ಪುರವಣಿಯಲ್ಲಿ ನನ್ನ ಈ ಲೇಖನಗಳು ಪ್ರಕಟವಾಗಿದ್ದವು.

ಮತ್ತೊಂದು ವಿಚಾರ : ನಾನು ಮೈಸೂರನ್ನು ಬಿಟ್ಟು, ಬೆಂಗಳೂರಿಗೆ – ಎಂದರೆ ಕನ್ನಡ ಸಾಹಿತ್ಯ ಪರಿಷತ್ತಿಗೆ – ಬರುವ ಮೊದಲು, ಒಂದೂವರೆ ವರುಷಗಳ ಕಾಲ, ನಾನು ಕೆಲಸ ಮಾಡುತ್ತ ಇದ್ದ ಖಾಸಗಿ ಪ್ರೆಸ್ಸಿನವರೊಂದಿಗೆ ಭಿನ್ನಾಭಿಪ್ರಾಯದಿಂದ ಕೆಲಸವನ್ನು ಬಿಟ್ಟು ಪುಸ್ತಕ ವ್ಯಾಪಾರ ಮಾಡಿಕೊಂಡಿದ್ದೆ. ಜಿಲ್ಲಾ ಕೇಂದ್ರಗಳಿಗೆ ಪುಸ್ತಕಗಳನ್ನು ಹೊತ್ತುಕೊಂಡು ಹೋಗಿ, ಮಾರಾಟ ಮಾಡಿ, ಬದುಕು ಸಾಗಿಸುತ್ತ ಇದ್ದೆ. ಆ ಅನುಭವಗಳೇ ಈ ಲೇಖನಗಳ ಸಾರಾಂಶ. ವಿ.ಸೀ.ಯವರಿಗೆ ಈ ಲೇಖನ ತುಂಬಾ ಹಿಡಿಸಿತ್ತು. ಅದಕ್ಕೇ ಅವರು ಹಾಗೆ ಹೇಳಿದ್ದು.

ಅನಂತರಾಮ್ ಅವರು "ಈಗ 'ಕಾಲೆಜ್ ದಿನಗಳು' ಇವರಲ್ಲಿ ಮುದ್ರಣ ಮಾಡಿಸ್ತೀನಿ ಸಾರ್, ಚೆನ್ನಾಗಿ ಮಾಡ್ತಾರೆ" ಎಂದರು. "ಹೌದೇನಪ್ಪ, ಸಂತೋಷ. ಮಾಡಿ" ಎಂದರು ವಿ.ಸೀ. 'ಕಾಲೆಜ್ ದಿನಗಳು' ಮುದ್ರಣ ಹೀಗೆ ನಮ್ಮಲ್ಲಿ ಪ್ರಾರಂಭವಾಯಿತು.

ಈಗ ನಾನು ಈ ಮುದ್ರಣದ ಕೆಲಸದ ಸಲುವಾಗಿ ಆಗಾಗ್ಗೆ ವಿ.ಸೀ.ಯವರ ಮನೆಗೆ ಹೋಗಬೇಕಾಗುತ್ತಿತ್ತು ; ಹೋಗುತ್ತ ಇದ್ದೆ. ಹಾಗಾಗಿ ಅವರಿಗೆ ತೀರಾ ಹತ್ತಿರದವನು ಆದೆ.

ಹೀಗೆಯೇ ಅವರ ಮನೆಗೆ ಹೋಗಿ ಮಾತಾಡುತ್ತ ಕುಳಿತಿದ್ದಾಗ, ಒಂದು ದಿನ, ಏನೋ ಪ್ರಸ್ತಾಪ ಬಂದು, ಅದು ನನ್ನ ವಿದ್ಯಾಭ್ಯಾಸದ ಕಡೆ ಹೊರಳಿತು. ಮಾತುಗಳೇ ಹಾಗೆ ಅಲ್ಲವೆ? ಎಲ್ಲಿಯೋ ಪ್ರಾರಂಭವಾಗಿ ಎಲ್ಲಿಯೋ ಉರುಳಿ ಸಿಡಿದು ಅದೆಲ್ಲಿಗೋ ಹೋಗಿ ದಡ ಮುಟ್ಟುತ್ತದೆ.

"ನೀವು ಯಾವ ಕಾಲೇಜಿನಲ್ಲಿ ಓದಿದಿರಿ?" ಎಂದು ಕೇಳಿದರು ವಿ.ಸೀ. ನಾನು ಜೋರಾಗಿ ನಕ್ಕು ಬಿಟ್ಟೆ. ವಿ.ಸೀ. ನನ್ನನ್ನು ನೋಡತೊಡಗಿದರು. "ನನಗೆ ಶಾಲಾ ವಿದ್ಯಾಭ್ಯಾಸ ಏನೇನೂ ಇಲ್ಲ, ಸಾರ್, ಕಾಲೆಜ್ ಇರಲಿ, ಹೈಸ್ಕೂಲು ಮೆಟ್ಟಲನ್ನೂ ನಾನು ತುಳಿದವನು ಅಲ್ಲ. ಪ್ರಾಥಮಿಕ ಶಾಲೆಯ ಓದು, ನಾಲ್ಕನೆಯ ತರಗತಿಯೊಂದಿಗೇ ನನ್ನ ಓದು ಮುಕ್ತಾಯ" ಎಂದೆ.

ವಿ.ಸೀ.ಯವರಿಗೆ ಆಶ್ಚರ್ಯವಾಯಿತು. "ಹೌದೆ?" ಎನ್ನುತ್ತ "ಹೇಗಪ್ಪಾ ನೀವು ಈ ಸಾಧನೆ ಮಾಡಿದಿರಿ? ಅಲ್ಲಿಗೆ ನೀವು ತುಂಬಾ ಕಷ್ಟ ಪಟ್ಟಿದ್ದೀರ ಅಂತ ಆಯ್ತು. ನಂಬೋಕೇ ಸಾಧ್ಯವಿಲ್ಲ" ಎಂದರು.

"ಹೌದು, ಸರ್. ಇದೇ ಮಾತನ್ನು ನಾನು ಹೀಗೇ ಮಾತು ಬಂದು ಎಚ್. ಎಂ. ಶಂಕರನಾರಾಯಣ ರಾಯರೊಂದಿಗೆ ಹೇಳಿದಾಗ ಅವರು ನಂಬಲೇ ಇಲ್ಲ. ಸುಳ್ಳು, ನೀವು ಕನ್ನಡ ಎಂ. ಎ. ಮಾಡಿದ್ದೀರಿ. ಬೇಕೆಂತ ಹೀಗೆಲ್ಲ ಹೇಳ್ತೀರಿ ಎಂದೇ ಸಾಧಿಸಿದರು" ಎಂದೆ.

ವಿ.ಸೀ.ಯವರು ಸ್ವಲ್ಪ ಹೊತ್ತು ಹಾಗೆಯೇ ನನ್ನನ್ನು ನೋಡುತ್ತ "ನೀವು ತಮಿಳಿನಲ್ಲಿಯೂ ಬರೆಯುತ್ತೀರಿ ಅಲ್ಲವೆ? ನಿಮ್ಮ ಮನೆ ಮಾತು ತಮಿಳೋ?" ಎಂದರು.

ನಾನು ತಮಿಳಿನಲ್ಲಿಯೂ ಬರೆಯುವ ವಿಚಾರ ವಿ.ಸೀ.ಯವರಿಗೆ ಗೊತ್ತಿತ್ತು. ನನಗೆ ತಮಿಳು ಭಾಷೆ ಬರುವುದರಿಂದಲೂ ತಮಿಳಿನಲ್ಲಿಯೂ ಕೃಷಿ ಮಾಡುತ್ತ ಇರುವುದರಿಂದಲೂ ನನ್ನ ಹೆಸರು ನಾರಾಯಣ ಎಂದು ಮುಗಿಯುವುದರಿಂದಲೂ ಅನೇಕರಿಗೆ ನಾನು ವೈಷ್ಣವ, ನನ್ನ ಮನೆ ಮಾತು ತಮಿಳು ಎಂದೇ ಭಾವನೆ. ಮಾಸ್ತಿಯವರೂ ಒಮ್ಮೆ ನನಗೆ ಇಂಥದೇ ಪ್ರಶ್ನೆಯನ್ನು ಹಾಕಿದ್ದರು. ವಿ.ಸೀ.ಯವರಿಗೂ ಅಂಥ ಸಂದೇಹವೇ ಇರಬೇಕು!

"ಇಲ್ಲ ಸಾರ್, ನನ್ನ ಮನೆ ಮಾತು ಕನ್ನಡವೇ. ನಾನು ನೂರಕ್ಕೆ ನೂರು ಕನ್ನಡಿಗ. ತಮಿಳು ಭಾಷೆ ಕಲಿತದ್ದು ಮಾತ್ರ" ಎಂದೆ. ವಿ.ಸೀ. ಮತ್ತೆ ನನ್ನನ್ನೇ ದಿಟ್ಟಿಸ ತೊಡಗಿದರು. ಹೌದೆ, ಇವನು ಹೇಳುವುದು ಎಲ್ಲವೂ ನಿಜವೆ ಎಂದು ತಿಳಿದುಕೊಳ್ಳುವ ಹಾಗೆ ಅವರ ಆ ನೋಟ. ವಿ.ಸೀ.ಯವರ ನೋಟವೇ ಅಂಥದು. ಇನ್ನೊಬ್ಬರ ಆಳ, ಅಗಲಗಳನ್ನು ಅಳೆಯುವಂಥದು.

ನಾನು ವಿವರಿಸಿದೆ : ಸ್ವಾತಂತ್ರ್ಯ ಪೂರ್ವದಲ್ಲಿಯೇ ನನ್ನ ಹದಿನೈದರ ಪ್ರಾಯದಲ್ಲಿ, ಎಲ್ಲರೂ ಶಾಲೆ ಕಾಲೇಜುಗಳಿಗೆ ಹೋಗುವ ದಿನಗಳಲ್ಲಿ ನಾನು ಊರು ಬಿಟ್ಟದ್ದು, ಆಮೇಲೆ ಹನ್ನೊಂದು ವರುಷಗಳ ಕಾಲ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಊರಿಗೆ ಹಿಂದಿರುಗದೆ ಅಲೆಮಾರಿಯಾಗಿ ಸುತ್ತಾಡಿಕೊಂಡಿದ್ದುದು, ದೀರ್ಘಕಾಲ ನಾನು ಮನೆಗೆ ಮರಳದಿರಲು ನಾನು ಸತ್ತೇ ಹೋಗಿದ್ದೇನೆ ಎಂದು ಮನೆಯವರು ಭಾವಿಸಿಕೊಂಡದ್ದು, ಈ ಸುತ್ತಾಟದಲ್ಲಿ ಬದುಕಿಗೆ ನಾನಾ ಬಗೆಯ ಜನ, ಕೆಳಸ್ತರದ ಕೆಲಸಗಳು ಎಂದು ಭಾವಿಸಿಕೊಂಡಿರುವ ಎಲ್ಲವನ್ನೂ ಮಾಡಿ ಬದುಕಿದ್ದು, ಸೋಡಾ ಫ್ಯಾಕ್ಟರಿಯಲ್ಲಿ, ಹೊಟೇಲ್, ಬೂಟ್ ಪಾಲಿಷ್, ಲಾರಿಗಳಿಗೆ ಜಲ್ಲಿ ಸಿಮೆಂಟು ಚೀಲ ಲೋಡುಮಾಡುವುದು, ಬಸ್‌ಸ್ಟಾಂಡ್ ರೈಲ್ವೆ ನಿಲ್ದಾಣಗಳಲ್ಲಿ ಪ್ರಯಾಣಿಕರ ಲಗ್ಗೇಜುಗಳನ್ನು ಹೊತ್ತು ಕೂಲಿ ಕೆಲಸ, ಬೀದಿ ಬೀದಿ ಸುತ್ತಿ ಬಾಳೆಹಣ್ಣು ಮಾರಾಟ, ಏನು ಬೇಕು? ಏನು ಬೇಡ? ಆಮೇಲೆ ಕಮ್ಯೂನಿಸ್ಟರೊಂದಿಗೆ ಒಡನಾಟ, ಬಳಿಕ ಆ ಭ್ರಮೆಯ ನಿವಾರಣೆ, ಈ ಮಧ್ಯೆ ಸಂಗೀತಗಾರನಾಗಬೇಕು ಎಂದು ಒಂದು ವರ್ಷಕಾಲ ಸಾ ಪಾ ಸಾ ಕಾಗೆಕೂಗು ಕೂಗಿಕೊಂಡು ಇನ್ನು ಹೀಗೆ ಕೂಗಿ ಪ್ರಯೋಜನವಿಲ್ಲ ಎಂದು ಅದನ್ನು ಬಿಟ್ಟದ್ದು, ಗಾಂಧೀಜಿ ಕೊಲೆಯಾದ ದಿನ ತಂಜಾವೂರಿನಲ್ಲಿ ಯಾರೋ ಹಿಂದೂ ಮಹಾಸಭಾದ ವಕೀಲರು ಒಬ್ಬರು ಪಾಯಸ ಹಂಚಿದರು ಎಂದು ಸುದ್ದಿಯಾಗಿ ಗುಂಪಿನೊಂದಿಗೆ ಸೇರಿಕೊಂಡು ಅವರ ಮನೆಯ ಮೇಲೆ ಕಲ್ಲು ತೂರಿ ಪೊಲೀಸರಿಂದ ಬಡಿಸಿಕೊಂಡದ್ದು, ಆಮೇಲೆ ಕನ್ನಡದ ಹುಚ್ಚು.....

ಎಲ್ಲವನ್ನೂ ಸಾವಕಾಶ ಕೇಳುತ್ತ "ಸಾಹಸೀಪ್ಪಾ. ನೀವು ತುಂಬಾ ಸಾಹಸಿ" ಎಂದರು ವಿ. ಸೀ.

ಆಮೇಲೆ ನನ್ನ ಪ್ರೆಸ್ಸಿನಿಂದಾಗಿ ನಾನು ಕೈಸುಟ್ಟುಕೊಂಡು, ಹೇಳತೀರದಷ್ಟು

ಕಷ್ಟಕೋಟಲೆಗಳನ್ನೂ ಹಿಂಸೆಯನ್ನೂ ಅನುಭವಿಸುತ್ತ ನಾಲ್ಕೂವರೆ ವರ್ಷಗಳ ಕಾಲ ನಾನು ಮದರಾಸಿನಲ್ಲಿ ಇರಬೇಕಾಯಿತು. ನನ್ನ ಕುಟುಂಬ ಬೆಂಗಳೂರಿನಲ್ಲಿಯೇ ಇತ್ತು. ಮೂರು ನಾಲ್ಕು ತಿಂಗಳಿಗೊಮ್ಮೆ ನಾನು ಬೆಂಗಳೂರಿಗೆ ಬರುತ್ತ ಇದ್ದೆ. ಹಾಗೆ ಒಂದು ಸಲ ಬಂದಾಗ ವಿ.ಸೀ.ಯವರನ್ನು ನೋಡಿ ಬರಲೆಂದು ಅವರ ಮನೆಗೆ ಹೋದೆ. "ಯಾಕಪ್ಪಾ, ಹೀಗಾಯ್ತು" ಎಂದರು ವಿ.ಸೀ. ಭಾರವಾದ ದನಿಯಲ್ಲಿ, ತಮಗೇ ಪೆಟ್ಟು ಬಿದ್ದವರ ಹಾಗೆ, ಪೆಟ್ಟು ತಿಂದು ನೋವನ್ನು ಅನುಭವಿಸುತ್ತ ಇರುವವರ ಹಾಗೆ. "ಏನೋ ಆಯ್ತು ಸಾರ್, ಈಗ ಅದೆಲ್ಲ ಹೇಳಿ ಏನೂ ಪ್ರಯೋಜನವಿಲ್ಲ" ಎಂದೆ. ಮತ್ತೆ ನಾನು ಮದರಾಸನ್ನು ಬಿಟ್ಟು ಬೆಂಗಳೂರಿಗೇ ಮರಳಿದಾಗ ವಿ.ಸೀ.ಯವರು ತಮ್ಮ ಮನೆಯಲ್ಲಿ ಇರಲಿಲ್ಲ. ಮನೆಯನ್ನು ಖಾಲಿಮಾಡಿ ಇನ್ನು ಮುಂದೆ ಆ ಮೈಸೂರು ರುಮಾಲಿನ ಮುಖವನ್ನು ಕಾಣಲು ಸಾಧ್ಯವಿಲ್ಲವೆನ್ನುವಂತೆ ದೂರ ದೂರ ಹೊರಟು ಹೋಗಿದ್ದರು.

ವಿ.ಸೀ., ಮಾಸ್ತಿಯಂಥ ಸಂಪನ್ನರು, ಅಂತಃಕರಣವುಳ್ಳವರು, ಮಾತಿನಲ್ಲೂ ಮತ್ತೊಬ್ಬರಿಗೆ ನೋವಾಗಬಾರದು ಹಾಗೆ ನಡೆದುಕೊಳ್ಳುತ್ತ ಇದ್ದ ಈ ಹಿರಿಯರು – ಈಗ ಬರೇ ನೆನಪು ಮಾತ್ರ. ಆದರೆ ಆ ನೆನಪು ಎಂದೂ ಮಾಸದ ನೆನಪು. ನಮ್ಮ ಊರಿನ ಕಾಡಿನ ಹಾಗೆ ಹಚ್ಚ ಹಸುರಾಗಿ ಗಾಂಭೀರ್ಯ ತುಂಬಿದ ಸಿರಿನೆನಪು; ಸಿಹಿನೆನಪು.

ಪಾವನವಾದ ಚಿತ್ತ

"ಸಾಹಿತ್ಯದ ಕೃಷಿ ವ್ಯಾಸಂಗಗಳಿಂದ, ಮಾನವ್ಯ ಸಂಸ್ಕೃತಿಯ ನೆಲೆ ಬೆಲೆ ಆಶೋತ್ತರಗಳಲ್ಲಿಯ ಅಚಲ ನಿಷ್ಠೆಯಿಂದ, ಚಿತ್ರ ಸಂಗೀತಾದಿ ಲಲಿತಕಲೆಗಳ ಸದಭಿರುಚಿಯ ಆರಾಧನೆಯಿಂದ, ಈ ಎಲ್ಲಕ್ಕೂ ಮಿಗಿಲಾಗಿ ಸದಾಕಾಲವೂ ಒಳ್ಳೆಯದಾದುದನ್ನು ಕುರಿತೇ, ಚೆಲುವಾಗಿರುವುದನ್ನು ಕುರಿತೇ ಚಿಂತಿಸುವ ಮನೋಧರ್ಮದಿಂದ ಒಂದು ಚಿತ್ತ ಪಾವನವಾಗಬಹುದಾದರೆ ಅಂಥ ಒಂದು ಪಾವನವಾದ ಚಿತ್ತವನ್ನು ಅವರ ಅಭಿಮಾನಿಗಳೆಲ್ಲರೂ ಅವರಲ್ಲಿ ಗುರುತಿಸಿದ್ದಾರೆ; ಅದರ ಒಂದು ಅವಿಷ್ಕಾರವಾದ ಸ್ನೇಹವನ್ನು ಕಂಡಿದ್ದಾರೆ, ಪಡೆದಿದ್ದಾರೆ".

ವಿ. ಎಂ. ಇನಾಂದಾರ್
'ವಿ.ಸೀ.–ಒಳ್ಳೆ' ಪು. vii

ಕೆಲವು ಮಾಸದ ನೆನಪುಗಳು

ಚೆನ್ನವೀರ ಕಣವಿ

ನಾನು ಹಾಯ್‌ಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ, ನನಗೆ ಹಾಗೂ ನನ್ನಂಥವರಿಗೆ ಹೊಸಗನ್ನಡ ಕಾವ್ಯದಲ್ಲಿ ಅಭಿರುಚಿ ಹುಟ್ಟಲು ಕಾರಣವಾದದ್ದು ಶ್ರೀಯವರು ಸಂಪಾದಿಸಿದ 'ಕನ್ನಡದ ಬಾವುಟ.' ಅಗಿನ ಪ್ರಮುಖ ಕವಿಗಳ ಆಯ್ದ ರಚನೆಗಳು ಒಂದೆಡೆ ಓದಲು ಅದರಲ್ಲಿ ದೊರೆತವು. ಅವುಗಳಲ್ಲಿ ವಿ.ಸೀ. ಅವರ ಮೂರು ಕವನಗಳಿವೆ. ಸರಳ ಹಾಗೂ ಲಲಿತ ಶೈಲಿಯಲ್ಲಿ 'ಲಾಲ್‌ಬಾಗ್' ಬಣ್ಣ ಬಣ್ಣವಾಗಿ ಕಣ್ಣಮುಂದೆ ಕಟ್ಟಿದರೆ, 'ಕಸ್ಮೈ ದೇವಾಯ' 'ಅಭೀಃ' ಕವಿತೆಗಳನ್ನು ನಮಷ್ಟಕ್ಕೆ ಗಟ್ಟಿಯಾಗಿ ಓದಿಕೊಳ್ಳುತ್ತ, ಅವುಗಳ ಭಾವ–ಅರ್ಥ ಆ ವಯಸ್ಸಿಗೆ ಎಟುಕದಿದ್ದರೂ ಆ ಪದ್ಯಗಳ ಧೀರವಾದ ನಡೆ ಪ್ರಭಾವಶಾಲಿಯಾಗಿ ಮನಸ್ಸನ್ನು ಸೆಳೆದಿದ್ದವು. ಉಳಿದ ಕವಿಗಳ ಜೊತೆಗೆ ವಿ.ಸೀ. ಹೆಸರು ನಮ್ಮ ಮನಸ್ಸಿನಲ್ಲಿ ನಾಟಿದ್ದು ಹೀಗೆ. ಕಾವ್ಯ ಗಾಯನ ಕಾರ್ಯಕ್ರಮದಲ್ಲಿ 'ಎಮ್ಮ ಮನೆಯಂಗಳದಿ' ಹಾಗೂ 'ಕಾದಿರುವಳು ಶಬರಿ' ಕವಿತೆಗಳೂ ಆಗಾಗ ಕಿವಿಗೆ ಬಿದ್ದು ಭಾವತರಂಗಗಳನ್ನು ಎಬ್ಬಿಸುತ್ತಿದ್ದವು. ಆಗ ಬಂದ ಗದ್ಯಕೃತಿಗಳನ್ನಂತೂ ಒಂದು ಸಲ ಓದಿದರೆ ಸಾಲದು, ಮತ್ತೆ ಮತ್ತೆ ಓದಬೇಕೆನಿಸುತ್ತಿತ್ತು. 'ಪಂಪಾಯಾತ್ರೆ' ಹಾಗೆ ಹತ್ತಾರು ಸಲ ಓದಿಸಿಕೊಂಡು ಸಂತೋಷ ನೀಡಿದ್ದನ್ನು ಇಂದಿಗೂ ಮರೆತಿಲ್ಲ.

*　　*　　*

ಧಾರವಾಡಕ್ಕೆ ಹೊರಗಿನಿಂದ ಯಾರಾದರೂ ಸಾಹಿತಿಗಳು ಬಂದಾಗ ಅವರ ಭಾಷಣಗಳನ್ನು ನಾನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಮೇಲಿಂದ ಮೇಲೆ ಧಾರವಾಡಕ್ಕೆ ಬರುತ್ತಿದ್ದವರೆಂದರೆ ಅ.ನ.ಕೃ. ಅವರ ಭಾಷಣಕ್ಕೆ ವಿದ್ಯಾರ್ಥಿಗಳು ಮುಗಿ ಬೀಳುತ್ತಿದ್ದರು. ಬಿ.ಎಂ.ಶ್ರೀ.ಯವರು ಕೆಲದಿನ ಧಾರವಾಡದಲ್ಲಿಯೇ ನೆಲಸಿದ್ದರಿಂದ ೨–೩ ಸಲ ಸಾರ್ವಜನಿಕ ಸಭೆಯಲ್ಲಿ ಅವರ ಮಾತುಗಾರಿಕೆಯನ್ನು ಕೇಳುವ ಭಾಗ್ಯ ಒದಗಿತ್ತು. ಬಹಳ ದಿವಸಗಳಿಂದ ನಾವು ನೋಡಬಯಸಿದ ಹಾಗೂ ಕೇಳಬಯಸಿದ ಸಾಹಿತಿಗಳಲ್ಲಿ ವಿ.ಸೀ. ಅವರೂ ಒಬ್ಬರಾಗಿದ್ದರು. ನಾನು ಬಿ.ಎ. ದಲ್ಲಿದ್ದಾಗ ಆ ಸುಯೋಗವೂ ಒದಗಿ ಬಂದಿತು.

೧೯೪೯–೧೯೫೦. ಮಹಾಕವಿ ರನ್ನನ ಸಹಸ್ರ ಸಾಂವತ್ಸರಿಕೋತ್ಸವದ ನಿಮಿತ್ತ ಕರ್ನಾಟಕ ವಿಶ್ವವಿದ್ಯಾಲಯ ಸಮಾರಂಭವೊಂದನ್ನು ಏರ್ಪಡಿಸಿತ್ತು. ವಿಶ್ವವಿದ್ಯಾಲಯ

ಸ್ಥಾಪನೆಗೊಂಡು ಅದೇ ತಾನೇ ಒಂದು ವರ್ಷವಾಗಿದ್ದಿತು. ಪ್ರೊ. ಮಾಳವಾಡರು ವಿಶೇಷ ಆಸ್ಥೆ ವಹಿಸಿದ್ದರಿಂದ ಕರ್ನಾಟಕ ಕಾಲೇಜಿನ ಬಾಟನಿಹಾಲ್ ಅಂದು ವಿದ್ಯಾರ್ಥಿಗಳಿಂದಲೂ ಸಾಹಿತ್ಯಾಸಕ್ತರಿಂದಲೂ ತುಂಬಿ ತುಳುಕುತ್ತಿತ್ತು. ಅಂದೇ ನನಗೆ ವಿ.ಸೀ.ಯವರ ಪ್ರಥಮ ದರ್ಶನವಾದದ್ದು. ಅಚ್ಚುಕಟ್ಟಾದ ಬಿಳಿರುಮಾಲು, ಅಚ್ಚಬಿಳಿ ಪಂಚೆ, ಮುಚ್ಚುಕೋಟು ಇವು ಅವರ ಮೊದಲ ಆಕರ್ಷಣೆಯಾಗಿದ್ದವು. ಆದರೆ ಉಳಿದೆಲ್ಲವನ್ನೂ ಮರೆಯುವಂತೆ ಮಾಡಿದ್ದು ರನ್ನನ ಕಾವ್ಯವನ್ನು ಕುರಿತು ಅವರು ಅಂದು ಮಾಡಿದ ಉದ್ಬೋಧಕವಾದ ಭಾಷಣ. ಸ್ವಚ್ಛವಾದ, ಸ್ಫುಟವಾದ ಕನ್ನಡದಲ್ಲಿ ಒತಪ್ರೋತವಾಗಿ ಸಾಗುತ್ತಿದ್ದಂತೆಯೇ ತಟ್ಟನೆ ಇಂಗ್ಲಿಷಿಗೆ ಹೊರಳಿ ತಮ್ಮ ಮಾತಿಗೆ ಇನ್ನಷ್ಟು ಪುಷ್ಟಿಯನ್ನು ಒದಗಿಸಿ ವಿಶದಗೊಳಿಸುವ ಅವರ ಭಾಷಣದ ರೀತಿ ಧಾರವಾಡದ ಶ್ರೋತೃಗಳಿಗೆ ಹೊಸ ಅನುಭವವನ್ನು ನೀಡಿತು. ಆಗ ಕರ್ನಾಟಕ ಕಾಲೇಜಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುತ್ತಿದ್ದ ಕನ್ನಡೇತರ ಅಧ್ಯಾಪಕರು ಅಂದಿನ ಭಾಷಣದಿಂದ ಪ್ರಭಾವಿತರಾದದ್ದನ್ನು ಕಂಡು ನಮಗೆ ಒಳಗೊಳಗೇ ಹೆಮ್ಮೆಯೆನಿಸಿತು. ಅತ್ತಿಮಬ್ಬೆಯನ್ನು ಕುರಿತ 'ಬಿಳಿಯರಳಿಯಂತೆ, ಗಂಗಾಜಳದಂತೆ....' ಎಂಬ ರನ್ನನ ಪದ್ಯವನ್ನು ಅಂದು ವಿ.ಸೀ. ಅವರು ಓದಿದ ಧಾಟಿ, ಕಾವ್ಯಾತ್ಮಕವಾಗಿ ವಿಶ್ಲೇಷಿಸಿದ ರೀತಿ, ಆ ಸಂದರ್ಭದ ಅವರ ಭಾವಭಂಗಿ ನನ್ನ ಮನಸ್ಸಿನಲ್ಲಿ ಇನ್ನೂ ಅಚ್ಚೊತ್ತಿ ನಿಂತಿದೆ.

* * *

ನನಗೆ ವಿ.ಸೀ. ಅವರ ಪ್ರತ್ಯಕ್ಷ ಪರಿಚಯವಾದದ್ದು ೧೯೫೪ರಲ್ಲಿ. ಅಷ್ಟೊತ್ತಿಗೆ ನಾನು ಎಂ.ಎ. ಮುಗಿಸಿ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಪ್ರಕಟಣ ವಿಭಾಗದಲ್ಲಿ ಕೆಲಸಕ್ಕೆ ಸೇರಿದ್ದೆ. ಆಗ ಗೋಕಾಕರು ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಸಾನೆ ಗುರೂಜಿಯವರಿಂದ ಪುಣೆಯಲ್ಲಿ ಸ್ಥಾಪಿಸಲ್ಪಟ್ಟ 'ಅಂತರ-ಭಾರತಿ' ಸಂಸ್ಥೆ ಮುಂಬಯಿ ರಾಜ್ಯದ ಭಾಷಾ ಸಮ್ಮೇಳನವೊಂದನ್ನು ಗದಗಿನಲ್ಲಿ ಏರ್ಪಡಿಸಲು ಯೋಜಿಸಿತ್ತು. ಭಾಗವತ ಎಂಬ ಹಿರಿಯರು ಆ ಸಂಸ್ಥೆಯ ಮುಖ್ಯಸ್ಥರಾಗಿದ್ದರು. ಎರಡು ದಿನಗಳ ಕಾರ್ಯಕ್ರಮವನ್ನು ರೂಪಿಸಲು ಅವರು ಗೋಕಾಕರನ್ನು ಕೇಳಿಕೊಂಡಿದ್ದರು. ಪ್ರೊ. ಮಾಳವಾಡರೂ, ನಾನೂ ಗೋಕಾಕರ ಜೊತೆಗೂಡಿ ಕಾರ್ಯಕ್ರಮದ ವಿವರಗಳನ್ನು ತಯಾರಿಸಿ ವಿ.ಸೀ. ಅವರನ್ನು ಅಧ್ಯಕ್ಷತೆ ವಹಿಸಲು ಕೇಳಿಕೊಳ್ಳಲಾಯಿತು. ಅದೇ ಹೊತ್ತಿಗೆ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯ (ಕನ್ನಡ)ರೂ ಆಗಿದ್ದರು. ಕನ್ನಡ, ಮರಾಠಿ, ಗುಜರಾತಿ, ಉರ್ದು ಭಾಷೆಯ ಪ್ರತಿನಿಧಿಗಳಾಗಿ ಬಂದಿದ್ದ ಲೇಖಕರೂ ಕವಿಗಳೂ ವಿಮರ್ಶಕರೂ ಸಾಹಿತ್ಯಕ ಚರ್ಚೆ ಕವಿಗೋಷ್ಠಿಗಳಲ್ಲಿ ಎರಡೂ ದಿನ ಲವಲವಿಕೆಯಿಂದ ಭಾಗವಹಿಸಿದ್ದರು. ವಿ.ಸೀ. ಯವರು ಅಧ್ಯಕ್ಷರಾಗಿ ಆ ಎಲ್ಲ ಕಾರ್ಯಕ್ರಮಗಳನ್ನು ನಡೆಸಿಕೊಟ್ಟ ರೀತಿ ಚೇತೋಹಾರಿಯಾಗಿತ್ತು. ಸ್ವತಃ ಮಾಸ್ತಿಯವರು ಸಮಾರೋಪ ಭಾಷಣದಲ್ಲಿ ಆ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

* * *

೧೯೫೬ ರಿಂದ ೫೮ರವರೆಗೆ ವಿ.ಸೀ. ಅವರು ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ Producer, Spoken word ಆಗಿದ್ದರಷ್ಟೆ. ಆ ಸಂದರ್ಭದಲ್ಲಿ ಸಾಹಿತ್ಯವನ್ನು

ಕುರಿತು ಒಂದು ಚರ್ಚೆಯನ್ನು ಆಕಾಶವಾಣಿಯ ಮೂಲಕ ನಡೆಸಲಾಯಿತು. ಆದರಲ್ಲಿ ಮಾಸ್ತಿ, ಡಿ.ವಿ.ಜಿ, ಕುವೆಂಪು, ಕಾರಂತ, ಅ.ನ.ಕೃ., ಜಿ. ಪಿ. ರಾಜರತ್ನಂ ಭಾಗವಹಿಸಿದ್ದರು. ಜೊತೆಯಲ್ಲಿ ನಿರ್ವಾಹಕರಾಗಿ ವಿ.ಸೀ. ಇದ್ದರು. ಆಗ ಬೆಂಗಳೂರು ಕೇಂದ್ರದಿಂದ ಪ್ರಕಟವಾಗುತ್ತಿದ್ದ 'ಆಕಾಶವಾಣಿ' ಸಂಚಿಕೆಯೊಂದರಲ್ಲಿ ಇವರೆಲ್ಲರ ಭಾವಚಿತ್ರ ಪ್ರಕಟವಾಗಿತ್ತು. ಕನ್ನಡ ಸಾಹಿತ್ಯದ ದಿಗ್ಗಜರೆಲ್ಲ ಒಂದೆಡೆ ಸೇರಿದ ಈ ಅಪರೂಪದ ಭಾವಚಿತ್ರವನ್ನು ನಾನು ಹೇಗೊ ಪ್ರಯತ್ನಪಟ್ಟು ಬೆಂಗಳೂರು ಆಕಾಶವಾಣಿಯವರಿಂದ ತರಿಸಿಕೊಂಡು ಕಟ್ಟು ಹಾಕಿಸಿ ಇಟ್ಟುಕೊಂಡೆ. ಆಗ ಧಾರವಾಡ ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿದ್ದ ಡಾ|| ಎಚ್. ಕೆ. ರಂಗನಾಥರು ಭಾವಚಿತ್ರವನ್ನು ದೊರಕಿಸುವಲ್ಲಿ ನನಗೆ ನೆರವಾಗಿದ್ದರು.

*　　*　　*

೧೯೫೭ ಇರಬಹುದು. ಬೆಂಗಳೂರು ಆಕಾಶವಾಣಿ ಕೇಂದ್ರ ಕರ್ನಾಟಕದ ಬೇರೆ ಬೇರೆ ಭಾಗಗಳ ಕವಿಗಳಿಂದೊಡಗೂಡಿದ ಕವಿಗೋಷ್ಠಿಯೊಂದನ್ನು ಆಮಂತ್ರಿತ ಶ್ರೋತೃಗಳೆದುರು ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಏರ್ಪಡಿಸಿದ್ದಿತು. ಕವಿಗಳಿಗೆ ಒಂದು ವಿಷಯವನ್ನು ಸೂಚಿಸಲಾಗಿತ್ತು – 'ಬುವಿ ನೀಡಿದ ಸ್ಫೂರ್ತಿ' ಎಂಬುದಾಗಿ. ಇದು ವಿ.ಸೀ.ಯವರ ಯೋಜನೆಯೇ ಆಗಿತ್ತು. ಅವರ ಅಧ್ಯಕ್ಷತೆಯಲ್ಲಿಯೇ ಗೋಷ್ಠಿ ನಡೆಯಿತು. 'ಮಣ್ಣಿನ ಮೆರವಣಿಗೆ' ಎಂಬ ನನ್ನ ಕವಿತೆ ಆ ಸಂದರ್ಭದಲ್ಲಿ ರಚಿತವಾದದ್ದು. ಜೊತೆಗೆ ಶಿವರುದ್ರಪ್ಪ, ರಾಮಚಂದ್ರಶರ್ಮ, ಎಕ್ಕುಂಡಿ ಮೊದಲಾದವರೂ ಗೋಷ್ಠಿಯಲ್ಲಿ ಭಾಗವಹಿಸಿ ತಮ್ಮ ಕವಿತೆಗಳ ವಾಚನ ಮಾಡಿದರು. ಕನ್ನಡದಲ್ಲಿ ನವ್ಯಕಾವ್ಯ ರಭಸದಿಂದ ಪ್ರಾರಂಭಗೊಂಡ ಕಾಲ ಅದು. ವಿ.ಸೀ. ತಮ್ಮ ಅಧ್ಯಕ್ಷ ಭಾಷಣದಲ್ಲಿ ಎಲಿಯಟ್, ಆಡೆನ್, ಸ್ಪೆಂಡರ್, ಲುಯಿ ಮಾಕ್‌ನೀಸ್ ಮೊದಲಾದ ಇಂಗ್ಲಿಷ್ ನವ್ಯ ಕವಿಗಳ ರಚನೆಗಳನ್ನು ಉದಾಹರಿಸುತ್ತ ಕನ್ನಡದಲ್ಲಿ ಬರುತ್ತಿರುವ ನವ್ಯ ಕವಿತೆಗಳ ಜಟಿಲತೆ ಕಿಷ್ಟತೆಯ ಬಗೆಗೂ ವಿವರಿಸಿದರು. ಇಲ್ಲಿಯ ತಳಮಳ ಮೈ ಮೇಲೆ ಬರಿಸಿಕೊಂಡದ್ದೆ? – ಎಂಬ ಸಂದೇಹ ವ್ಯಕ್ತಪಡಿಸಿದರು. ಆದರೆ ಅದರಲ್ಲಿ ಸಂಕುಚಿತ ಭಾವನೆಯಾಗಲೀ ಕೊಂಕು ನುಡಿಯಾಗಲಿ ಇರಲಿಲ್ಲ. ಬೇರೆ ಬೇರೆ ದೇಶಗಳಲ್ಲಿಯ ಸಾಹಿತ್ಯದ ಆಗುಹೋಗುಗಳ ಬಗೆಗಿನ ಅವರ ಅಭ್ಯಾಸ, ತಿಳಿವಳಿಕೆ, ಕಾಣಿಸುವ ಹೊಸ ನೋಟ ನನ್ನನ್ನು ನಿಜಕ್ಕೂ ಅಚ್ಚರಿಗೊಳಿಸಿತು.

ವಿ.ಸೀ. ಅವರನ್ನು ಅವರ ಮನೆಯಲ್ಲಿಯೇ ಕಾಣಬೇಕೆಂಬ ಹಂಬಲ ಮರುದಿನವೇ ಈಡೇರಿತು. ಜೊತೆಯಲ್ಲಿ ಶಿವರುದ್ರಪ್ಪನವರಿದ್ದರು. ನಮ್ಮ ನಮ್ಮ ಹೊಸ ಬರವಣಿಗೆಯ ಬಗ್ಗೆ ಪ್ರೀತಿಯಿಂದ ವಿಚಾರಿಸಿದರು. ಚಾಪೆಯ ಮೇಲೆ ದಿಂಬಿಗೊರಗಿ ಸುತ್ತ ಪುಸ್ತಕಗಳ ಸಾಲುಗಳ ನಡುವೆ ಕುಳಿತು ಅವರು ಮಾತಾಡುವದರಲ್ಲಿಯೇ ಒಂದು ಬಗೆಯ ಆತ್ಮೀಯತೆ, ಸೊಗಸು, ಸುಖ ನನಗೆ ಕಂಡು ಬಂದವು. ಜೊತೆಗೆ ತಿಂಡಿ, ಕಾಫಿ; ಎಲ್ಲದರಲ್ಲೂ ಒಂದು ಹದ, ರುಚಿ. 'ಸೌಂದರ್ಯ ಸಮೀಕ್ಷೆ'ಯ ಬಗ್ಗೆ ಶಿವರುದ್ರಪ್ಪನವರು ಥೀಸಿಸ್ ಬರೆಯುತ್ತಿರುವುದನ್ನು ತಿಳಿದು ಮಾತು ಆ ಕಡೆಗೆ ಹೊರಳಿತು. ಈ ವಿಷಯಕ್ಕೆ ನೆರವಾಗಬಲ್ಲ ಹಲವಾರು ಇಂಗ್ಲಿಷ್ ಗ್ರಂಥಗಳ ಹೆಸರು ಹೇಳಿದ್ದಲ್ಲದೆ ತಮ್ಮದೇ ಆದ ಕೆಲವು

ವಿಚಾರಗಳನ್ನು ತಿಳಿಯಪಡಿಸಲು ಅವರು ಮರೆಯಲಿಲ್ಲ. ಅವರ ಮಾತಿನಲ್ಲಿಯ ಆ ಹಾಸು-ಬೀಸನ್ನು ನಾನು ಉಳಿದೆಡೆಗಳಲ್ಲಿ ಅಷ್ಟರ ಮಟ್ಟಿಗೆ ಕಂಡುದಿಲ್ಲ.

* * *

೧೯೬೫ರಲ್ಲಿ ನಡೆದ ಅಖಿಲಭಾರತ ಲೇಖಕರ ಸಮ್ಮೇಳನವನ್ನು ಮುಗಿಸಿಕೊಂಡು ಬರುವಾಗ ವಿ.ಸೀ. ಅವರಲ್ಲಿ ಒಂದು ವಿಜ್ಞಾಪನೆ ಮಾಡಿಕೊಂಡಿದ್ದೆ – ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಿಶೇಷೋಪನ್ಯಾಸಗಳನ್ನು ನೀಡಬೇಕೆಂದು. ಅವರು ಒಪ್ಪಿಕೊಂಡದ್ದು ನನ್ನ ಸಂತೋಷವನ್ನು ಹೆಚ್ಚಿಸಿತು. ಒಂದು ವರ್ಷದ ನಂತರ ಅವರು ಅದನ್ನು ಈಡೇರಿಸಿಕೊಟ್ಟರು. ಆ ಹೊತ್ತಿಗೆ ಅವರು ಹೊನ್ನಾವರ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅದರಿಂದ ಇಡೀ ಉತ್ತರ ಕನ್ನಡ ಜಿಲ್ಲೆಗೇ ಹೊಸ ಚೈತನ್ಯ ಬಂದಂತಾಗಿತ್ತು – ಶೈಕ್ಷಣಿಕವಾಗಿ ಹಾಗೂ ಸಾಹಿತ್ಯಿಕವಾಗಿ. ಕುಲಪತಿ ಡಾ|| ಡಿ. ಸಿ. ಪಾವಟೆಯವರು ಉದ್ಘಾಟಿಸಿದ ಈ ಉಪನ್ಯಾಸ ಮಾಲೆ ನಾಲ್ಕು ದಿನ ಕೇಳುಗರಿಗೆ ಒಂದು ಹಬ್ಬವಾಗಿ ಪರಿಣಮಿಸಿತು. ವಿದ್ಯಾರ್ಥಿಗಳು, ವಿದ್ವಾಂಸರು ಹಾಗೂ ಸಾಹಿತ್ಯಾಸಕ್ತರಿಂದ ಕಿಕ್ಕಿರಿದಿರುತ್ತಿದ್ದ ಈ ಸಭೆಗೆ ಪ್ರತಿದಿನವೂ ಕವಿ ಬೇಂದ್ರೆಯವರೂ ಡಾ|| ಕೆ. ಕೃಷ್ಣಮೂರ್ತಿಯವರಂಥ ವಿದ್ವಾಂಸರೂ ಉಪಸ್ಥಿತರಿದ್ದುದು ವಿ.ಸೀ. ಯವರ ಸಂತೋಷವನ್ನು ಹೆಚ್ಚಿಸಿತ್ತು. 'ಸಾಹಿತ್ಯ : ಸಂಪ್ರದಾಯ ಮತ್ತು ಹೊಸಮಾರ್ಗ' ಎಂಬ ಪುಸ್ತಕರೂಪದಲ್ಲಿ ಈ ಭಾಷಣಗಳು ಅಚ್ಚಾಗಿ ೧೯೬೭ರಲ್ಲಿ ಪ್ರಕಟಗೊಂಡಿತು. ವಿ.ಸೀ. ಅವರ ವಿಮರ್ಶಾಕೃತಿಗಳಲ್ಲಿ ಇದನ್ನು ಮಹತ್ವದ ಗ್ರಂಥವಾಗಿ ಇಂದಿಗೂ ಪರಿಗಣಿಸಲಾಗುತ್ತಿದೆ. ಇದರಲ್ಲಿರುವ ಅಡಿಟಿಪ್ಪಣಿಗಳನ್ನು ಗಮನಿಸಿದರೆ, ವಿ.ಸೀ. ಒಂದು ವಿಷಯವನ್ನು ಕುರಿತು ಪ್ರತಿಪಾದಿಸುವಾಗ ಆನುಷಂಗಿಕವಾಗಿ ಬೇರೆ ಎಷ್ಟೊಂದು ಸಂಗತಿಗಳ ಕಡೆಗೆ ಅವರ ವಿಚಾರಗಳು ಹಬ್ಬಿ ಹರಡಿ ಅದರ ವ್ಯಾಪ್ತಿಯನ್ನು ಹೆಚ್ಚಿಸುತ್ತವೆಂಬುದು ವಿದಿತವಾಗುತ್ತದೆ. "ನನ್ನಲ್ಲಿ ಪ್ರಶ್ನೆಗಳು ಜಾಸ್ತಿ; ಇಲ್ಲದ ಪ್ರಶ್ನೆ ಎತ್ತಿ ಮನಸ್ಸನ್ನು ಅಸ್ವಸ್ಥ ಮಾಡಿಕೊಂಡಿದ್ದಾರೆಂದು ನನ್ನ ಬರವಣಿಗೆ ಆಕ್ಷೇಪಣೆಗೆ ಗುರಿಯಾಗಿದೆ. ನನ್ನ ದುರದೃಷ್ಟ" – ಇದು ವಿ.ಸೀ. ಅವರ ಆತ್ಮವಿಮರ್ಶೆಯ ವಿಶಿಷ್ಟ ಬಗೆ. ಈ ಮಾತು ಕೂಡ ಅಡಿಟಿಪ್ಪಣಿಯಲ್ಲಿ ಬಂದದ್ದೆ.

* * *

ಈ ಲೇಖನದ ಪ್ರಾರಂಭದಲ್ಲಿ ವಿ. ಸೀ. ಕರ್ನಾಟಕ ವಿಶ್ವವಿದ್ಯಾಲಯ ಏರ್ಪಡಿಸಿದ ರನ್ನ ಕವಿಯ ಸಾವಿರ ವರುಷದ ಹುಟ್ಟು ಹಬ್ಬದಲ್ಲಿ ಭಾಗವಹಿಸಿ ಭಾಷಣ ಮಾಡಿದ್ದರ ಬಗ್ಗೆ ಹೇಳಿರುವೆನಷ್ಟೆ. ಆಗ ಒಂದು ಸಂಗತಿ ಜರುಗಿತು. ಆಗ ಸಹಾಯಕ ಕುಲಸಚಿವರಾಗಿದ್ದ ಶ್ರೀ ಸದಾಶಿವ ಒಡೆಯರ ಅವರು ನನಗೆ ಇದನ್ನು ಆಮೇಲೆ ಹೇಳಿದರು. ಆ ವಿಷಯ ಇಷ್ಟು : ವಿ. ಸೀ. ಯವರ ಪ್ರಯಾಣ ಭತ್ಯದ ಕಾಗದವನ್ನು ತಯಾರಿಸಿ ವಿತ್ತಾಧಿಕಾರಿಗಳು ಅವರಿಂದ ಸಹಿ ಪಡೆದುಕೊಂಡರು. ಆಗಿನ ನಿಯಮದಂತೆ ಅದೇ ಬಿಲ್ಲಿನಲ್ಲಿ 'I generally travel in first class' ಎಂದು ಮುಂತಾಗಿ ಒಂದು statement ಗೂ ಅವರ ಸಹಿ ಬೇಕೆಂದು ವಿತ್ತಾಧಿಕಾರಿಗಳು ಕೇಳಿಕೊಂಡಾಗ ವಿ.ಸೀ. ಅದನ್ನು

ವಿರೋಧಿಸಿದರು. ಅವರು ಆಗ ಪ್ರಯಾಣಿಸಿದ್ದು ಪ್ರಥಮ ತರಗತಿಯಲ್ಲಿಯೇ ಎಂಬುದು ನಿಜವೇ. ಆದರೆ ಈ ಬಗೆಯ ಸರ್ವಸಾಧಾರಣ ಹೇಳಿಕೆಗೆ ತಾವು ಬದ್ಧರಾಗುವದು ಸಾಧ್ಯವಿಲ್ಲವೆಂದು ಅವರು ಸ್ಪಷ್ಟಪಡಿಸಿದರು. ವಿತ್ತಾಧಿಕಾರಿಗಳು ಈ ನಿಯಮದ ಇಕ್ಕಟ್ಟಿನಲ್ಲಿ ಸಿಕ್ಕು ಒದ್ದಾಡುತ್ತಿರುವಾಗ ಕುಲಪತಿಗಳಾದ ಪಾವಟೆಯವರು ತಮ್ಮ ವಿಶೇಷಾಧಿಕಾರವನ್ನು ಚಲಾಯಿಸಿ ಅವರನ್ನು ಪಾರುಗೊಳಿಸಿದರಂತೆ.

*　　*　　*

ಮಾನವನೆತ್ತರ ಆಗಸದೇರಿಗೆ
ಏರುವವರೆಗೂ ಏರೇವು
ಮಾನವ ಹೃದಯಕೆ ವಿಶ್ವವಿಶಾಲತೆ
ಹಾಯುವವರೆಗೂ ಹಾದೇವು

ವಿ.ಸೀ. ಅವರ ಕವಿತೆಯ ಈ ಸಾಲುಗಳು ಅವರ ವ್ಯಕ್ತಿತ್ವದ ವೈಶಿಷ್ಟ್ಯವನ್ನು, ವೈಶಾಲ್ಯವನ್ನು ಚೆನ್ನಾಗಿ ಪ್ರತಿಬಿಂಬಿಸುತ್ತವೆಯೆಂದು ನನ್ನ ಅನಿಸಿಕೆ.

ವಿಶಿಷ್ಟ ವ್ಯಕ್ತಿ

"ಅವರ ವ್ಯಾಸಂಗ ವಿಶ್ರಾಂತಿಯಿಲ್ಲದ್ದು. ಪಾಂಡಿತ್ಯ ಬಹುಮುಖವಾಗಿ ವಿಶಾಲಗಂಭೀರವಾದದ್ದು. ವಿಷಯನಿಷ್ಠೆಯಿಂದ ವಿವಿಧವಾಗಿ ಸ್ವಾರ್ಥಗಂಧರಹಿತವಾದದ್ದು. ಕಥೆ, ಕಾವ್ಯ, ನಾಟಕ, ಕಲೆ, ಅಲಂಕಾರ, ಛಂದಸ್ಸು, ತತ್ವಶಾಸ್ತ್ರ, ಅರ್ಥಶಾಸ್ತ್ರ, ಸಂಖ್ಯಾಶಾಸ್ತ್ರ, ದಂಡನೀತಿ, ಚರಿತ್ರೆ ಮುಂತಾದ ಹಲವು ಮಾರ್ಗಗಳಲ್ಲಿ ಅವರ ಪ್ರತಿಭೆ, ಪ್ರಾಚೀನ ಪ್ರತೀಚೀನ ಎಂಬ ಭೇದವಿಲ್ಲದೆ, ಬೇಜಾರು ಪಡದೆ ನಡೆದಿದೆ; ನಡೆಯುತ್ತಿದೆ. ವಿಮರ್ಶೆಯ ಶಕ್ತಿಯಿಂದ ಹರಿತವಾದ ರಚನೆಗಳಾಗಿ ಪರಿಣಮಿಸಿದೆ. ಸ್ವದೇಶ–ಪರದೇಶಗಳ, ಸ್ವಭಾಷೆ–ಪರಭಾಷೆಗಳ ಉದಾತ್ತ ರಚನೆಗಳ ಪ್ರಭಾವ ಪರಿಮಳ ತುಂಬಿ ತುಳುಕುವ ವಿಶಿಷ್ಟ ವ್ಯಕ್ತಿ ವಿ.ಸೀ. ಸಣ್ಣ ದೊಡ್ಡ ಎಂಬ ವಿವಕ್ಷೆಯಿಲ್ಲದ ಇವರ ಸ್ನೇಹ ಸ್ವಂತ ಯೋಗಕ್ಷೇಮಗಳಿಗೇ ಧಕ್ಕೆ ತರುವಷ್ಟು ತೀವ್ರವಾದದ್ದು. ಅದೊಂದು ಲೋಪವೆಂದರೂ ತಡೆಯುತ್ತೆ."

ರಾಳ್ಳಪಳ್ಳಿ ಅನಂತಕೃಷ್ಣಶರ್ಮ
'ವಿ.ಸೀ.–೭೫' ಪು. ೨೮೭

ದೊಡ್ಡ ರೀತಿಯಲ್ಲಿ ಬದುಕಿದವರು

ಕೀರ್ತಿನಾಥ ಕುರ್ತಕೋಟಿ

ನಾನು ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಮೊದಲ ಸಾರೆ ವಿ. ಸೀತಾರಾಮಯ್ಯ ನವರ ಭಾಷಣ ಕೇಳಿದ್ದು. ಅದೊಂದು ಮರೆಯಲಾಗದ ಅನುಭವ. ಎರಡನೆಯ ಸಲ ಕರ್ನಾಟಕ ಕಾಲೇಜಿನಲ್ಲಿ ರನ್ನನ ಸಾವಿರ ವರ್ಷಗಳ ಜಯಂತಿಯ ದಿನ ಅವರು ಇಂಗ್ಲಿಷಿನಲ್ಲಿ ಮಾಡಿದ ಭಾಷಣ ಕೇಳಿದ್ದೆ. ಆಗಿನ ಕಾಲಕ್ಕೆ ಹಿರಿಯರ ವಾಗ್ವೈಖರಿ ನಮ್ಮ ಮೇಲೆ ಬೀರಿದ ಪ್ರಭಾವ ಇಂದು ಪುನರುಕ್ತವಾಗಲಾರದು. ಆ ಮೇಲೆ ನನ್ನ 'ನಡೆದು ಬಂದ ದಾರಿ'ಯ ಸಾಹಿತ್ಯ ಪ್ರಬಂಧಗಳು ಪ್ರಕಟವಾದ ಮೇಲೆ ಅವರು ನನ್ನೊಡನೆ ಸ್ನೇಹದಿಂದಲೇ ಜಗಳವಾಡಿದರು. ಕೊನೆಯ ಸಾರೆ ವಿ. ಸೀ.ಯವರು ಇಂಗ್ಲಂಡಿನಿಂದ ತಿರುಗಿ ಬಂದ ಮೇಲೆ ಮಿತ್ರರಾದ ಹಾ. ಮಾ. ನಾಯಕರ ಜೊತೆಗೆ ಅವರ ಮನೆಯಲ್ಲಿ ಕಂಡಿದ್ದೆ. ಆಗ ವಿ. ಸೀ. ಯವರು ಬಹಳ ಹಣ್ಣಾಗಿದ್ದರು. ಇಂಗ್ಲಂಡಿನಲ್ಲಿಯ ಆಸ್ಪತ್ರೆಯ ತಮ್ಮ ಅನುಭವಗಳನ್ನು ಕುರಿತು ಮಾತಾಡಿದರು. ಬ್ರಿಟಿಷ್ ಸಂಸ್ಕೃತಿಯ ಬಗ್ಗೆ ಅವರಿಗಿದ್ದ ಅಭಿಮಾನ ಮಾತು ಮಾತಿನಲ್ಲಿ ವ್ಯಕ್ತವಾಗುತ್ತಿತ್ತು.

ವಿ.ಸೀ. ಯವರು ಈಗ ನಮ್ಮೊಡನೆ ಇಲ್ಲ. ಮಾತು ಕತೆಗಳಲ್ಲಿ, ಉಡಿಗೆ ತೊಡಿಗೆಗಳಲ್ಲಿ, ತಿನಿಸು ಊಟಿಸುಗಳಲ್ಲಿ ಅದರಂತೆಯೇ ಬರೆವಣಿಗೆಯಲ್ಲಿ ಅವರು ತೋರಿದ ಪರಿಷ್ಕಾರ ಈಗ ಒಂದು ಹಳೆಯ ಕತೆ. ಸೆಂಟ್ರಲ್ ಕಾಲೇಜಿನ ಸಭಾಂಗಣದಲ್ಲಿ ಒಂದು ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತ ಅವರು ಸಾಹಿತ್ಯದಲ್ಲಿ ಅಶ್ಲೀಲತೆಯ ಬಗ್ಗೆ ಮಾತಾಡಿದರು. ಪಂಪ ಹೇಗೆ ಎಗ್ಗಿಲ್ಲದೆ ಶೃಂಗಾರವನ್ನು ನಿರೂಪಿಸುತ್ತಾನೆಂದು ಹೇಳುತ್ತ ಒಂದು ಉದಾಹರಣೆಯನ್ನೂ ಕೊಟ್ಟರು. 'ಇಂದ್ರಾದ್ಯಮರರ್ ಬಂದೊಡೆ ಕಚ್ಚೆಯೊಳಿಟ್ಟು ಕಟ್ಟುವೆಂ' ಎಂಬ ಸೊಕ್ಕಿದ್ದ ಸೂಳೆ ಅರ್ಜುನನ ಸೌಂದರ್ಯವನ್ನು ಕಂಡು 'ಕಾಮರಸಂ ಭೋಂಕನೆ ಸೂಸೆ ತಡೆಯಲರಿಯದೆ ಇರ್ಗಚ್ಚೆಯಂ ಹಾಕಿದಳ್.' ಪಂಪನ ಈ ಕಾವ್ಯಪಂಕ್ತಿಯನ್ನು ಉದ್ಧರಿಸಿ ಅವರು ಅಶ್ಲೀಲತೆಯ ಸಮಸ್ಯೆಯ ಬಗ್ಗೆ ಪರಿಹಾರವನ್ನೇನೋ ಹೇಳಿದರು. ಆದರೆ ಅಷ್ಟು ಹೇಳಬೇಕಾದರೆ ಅವರು ನಾಚಿ ಕೆಂಪಾಗಿದ್ದರು.

ವಿ.ಸೀ. ಯವರು ನಮಗೆಲ್ಲ ಹಿರಿಯರು. ಆದರೆ ಆ ಕಾಲಕ್ಕೆ ಅವರಿಗಿಂತ ಹಿರಿಯರು ಇನ್ನೂ ಜೀವಿಸಿದ್ದರು. ನವೋದಯ ಕಾಲದ ಲೇಖಕರೆಲ್ಲ ಒಂದು ಸಾಹಿತ್ಯ ಪರಿವಾರಕ್ಕೆ

ಸೇರಿದ ಸದಸ್ಯರಾಗಿದ್ದರು. ಭಿನ್ನಾಭಿಪ್ರಾಯಗಳು, ಒಳಜಗಳ, ಸ್ಪರ್ಧೆ ಅವರಲ್ಲಿಯೂ ಇದ್ದವು. ಆದರೆ ಅವು ಪ್ರಕಟವಾಗುತ್ತಿರಲಿಲ್ಲ. ವಿ.ಸೀ.ಯವರು 'ಮಹನೀಯರು' ಎಂಬ ತಮ್ಮ ಪುಸ್ತಕದಲ್ಲಿ ತಮ್ಮ ಸ್ನೇಹಿತರ ಬಗ್ಗೆ, ತಮಗಿಂತ ಹಿರಿಯರಾದವರ ಬಗ್ಗೆ ಬರೆದಿದ್ದಾರೆ. ಈ ಪುಸ್ತಕವೆಂದರೆ ಕರ್ನಾಟಕದ ಸಾಂಸ್ಕೃತಿಕ ಪುನಃಸೃಷ್ಟಿ ಎಂಬ ಮಾತಿನ ಬಗ್ಗೆ ಸಂಶಯವೇ ಇಲ್ಲ. ಸಾಹಿತಿಗಳು ತುಂಗಭದ್ರೆಯ ಮೇಲೆ ಜೀವಂತ ಸೇತುವೆಗಳಾಗಬೇಕು, ಎಂದು ಅವರಿಗಿಂತ ಹಿರಿಯರಾಗಿದ್ದ ಬಿ. ಎಂ. ಶ್ರೀ. ಹೇಳಿದ್ದರಂತೆ. ಈ ಮಾತಿನಲ್ಲಿ ವಿ.ಸೀ.ಯವರಿಗೆ ಅಕ್ಷರಶಃ ನಂಬಿಕೆಯಿತ್ತು. ಹಿರಿಯರ ಬಗ್ಗೆ ವಿ.ಸೀ. ಯವರಿಗೆ ಅಗಾಧವಾದ ಗೌರವವಿತ್ತು, ಆದರೆ ಅವರು ಮೆಚ್ಚಿಕೊಂಡಿದ್ದ ಹಿರಿಯರು ಸಂಪ್ರದಾಯದ ವಿರುದ್ಧ ಬಂಡೆದ್ದವರು. ಹಿರಿಯರ ಮಾತಿನಲ್ಲಿ ಶ್ರದ್ಧೆಯಿದ್ದ ವಿ.ಸೀ.ಯವರು ಅವರ ದಂಗೆಯನ್ನೂ ಒಪ್ಪಿಕೊಂಡವರು. ಈ ವಿರೋಧಾಭಾಸ ಅವರ ಮನಸ್ಸಿಗೆ ತಟ್ಟಲಿಲ್ಲ. ಬಹುಶಃ ದಂಗೆಯ ಸ್ವರೂಪವೇ ವಿರೋಧದಿಂದ ಕೂಡಿದ್ದಾಗಿರುತ್ತದೆ.

ಬಿ.ಎಂ.ಶ್ರೀ.ಯವರ ಸಮಗ್ರಸಾಹಿತ್ಯಕ್ಕೆ ವಿ.ಸೀ.ಯವರು ಬರೆದಿರುವ ಸಮರ್ಥವಾದ ಮುನ್ನುಡಿ ಈ ವಿರೋಧಾಭಾಸದ ಕನ್ನಡಿಯಂತಿದೆ. 'ಆಳೌ ಬ್ರಿಟಾನಿಯಾ ಆಳು ತೆರೆಗಳನು' (Rule Brittania rule the waves) ಇದು ಬಿ.ಎಂ.ಶ್ರೀ.ಯವರ ಪದ್ಯ, ಒಂದು ಇಂಗ್ಲಿಷ್ ಕವಿತೆಯ ಭಾಷಾಂತರ. ಭಾಷಾಂತರ ಒಂದು ಸಂಕಲ್ಪಿತ ಕಾರ್ಯವಾಗಿರುವದರಿಂದ ಅದಕ್ಕೊಂದು ಉದ್ದೇಶವಿರುತ್ತದೆ, ನೈತಿಕ ಜವಾಬ್ದಾರಿಯಿರುತ್ತದೆ. ವಿ.ಸೀ.ಯವರು ಭಾಷಾಂತರದ ಉದ್ದೇಶದ ಸಮಸ್ಯೆಯನ್ನು ಎತ್ತಿ ತೋರಿಸಿ, ಶ್ರೀಯವರ ಭಾಷಾಂತರವನ್ನು ಸಮರ್ಥಿಸಿಕೊಂಡಿದ್ದಾರೆ. ನಮಗೆ ಬ್ರಿಟಿಷ್ ಸಂಸ್ಕೃತಿಯ ಸಂಪರ್ಕ ಬಂದದ್ದು ಇತಿಹಾಸದ ಒಂದು ಆಕಸ್ಮಿಕ. ಈ ಆಕಸ್ಮಿಕ ಸಂಗತಿಯ ರಾಜಕೀಯ ಅರ್ಥ ಎಷ್ಟೇ ಅಪ್ರಿಯವಾಗಿದ್ದರೂ ಈ ಐತಿಹಾಸಿಕ ಆಕಸ್ಮಿಕದ ಸಾಂಸ್ಕೃತಿಕ ಉಪಕಾರವನ್ನೂ ನಾವು ಮರೆಯುವಂತಿಲ್ಲವೆಂಬುದು ವಿ.ಸೀ.ಯವರ ದೃಢವಾದ ನಿಲುವು. ಈ ಸಂಗತಿಯ ರಾಜಕೀಯ ನಮಗೆ ಬೇಡ, ಆದರೆ ಆ ಸಂಸ್ಕೃತಿ ಬೇಕು ಎಂಬುದು ಅವರ ನಂಬಿಕೆಯಾಗಿತ್ತು. 'Rule Brittania rule the waves' ದಂಥ ಒಂದು ಸಾಮಾನ್ಯ ಕವಿತೆಯ ಸಾಂಸ್ಕೃತಿಕ ಉಪಕಾರ ಎಂಥದು ಎನ್ನುವುದನ್ನು ಮರೆತು ಬಿಟ್ಟರೂ ವಿ.ಸೀ.ಯವರ ನಿಲುವು ಒಪ್ಪಿಗೆಯಾಗುವಂಥದು ಎಂದು ಹೇಳಲು ಬರುವುದಿಲ್ಲ. ದೇಶಾಭಿಮಾನ ಕವಿತೆಯ ವಸ್ತುವಾಗುವದೇ ಭಾರತೀಯ ಕಾವ್ಯದಲ್ಲಿ ಆಗ ಒಂದು ಹೊಸ ಸಂಗತಿಯಾಗಿತ್ತು. ಅದೇ ಕಾರಣಕ್ಕಾಗಿ ಶ್ರೀಯವರ ಭಾಷಾಂತರವನ್ನು ಕನ್ನಡ ಕಾವ್ಯ ಒಪ್ಪಿಕೊಂಡು ಮುಂದೆ ಸಾಗಬೇಕು ಎನ್ನುವದು ವಿ.ಸೀ.ಯವರ ಅಭಿಪ್ರಾಯ. ಆದರೆ ಇಂಥ ಹೊಸ ಸಂಸ್ಕೃತಿಯ ರಾಜಕೀಯ ಅವರಿಗೆ ಅರ್ಥವಾಗಲಿಲ್ಲ. ನವೋದಯ ಕಾಲದಲ್ಲಿ ಅತ್ಯಂತ ಉತ್ಸಾಹದಿಂದ ಸೃಷ್ಟಿಕಾರ್ಯದಲ್ಲಿ ತೊಡಗಿದವರಿಗೆ ಈ ರಾಜಕೀಯ ಅರ್ಥವಾಗುವಂತೆಯೂ ಇರಲಿಲ್ಲ. ಇಂಗ್ಲಿಷ್ ಸಾಹಿತ್ಯದ ಮಾಟಗಾರಿಕೆಯಿಂದ ಇನ್ನೂ ನಮಗೆ ಬಿಡುಗಡೆ ದೊರಕಿಲ್ಲವೆಂದ ಮೇಲೆ, ಆಗಂತೂ ಅದರ ಸೆರೆಯಿಂದ ಬಿಡಿಸಿಕೊಳ್ಳುವದು ಹೋಗಲಿ, ಅದೂ ಒಂದು ಸೆರೆ ಎಂದು ತಿಳಿಯುವಂತೆಯೂ ಇರಲಿಲ್ಲ. ಬಂಧನ ಮತ್ತು ಬಿಡುಗಡೆ ಎಂಬ ಮಾತುಗಳಿಗೆ ಮೊದಲಿದ್ದ ಪಾರಮಾರ್ಥಿಕ

ಅರ್ಥ ಮರೆತು ಹೋಗಿ ಹೊಸ ರಾಜಕೀಯ ಅರ್ಥ ಒಂದು ಹಳೆಯ ಮಾತಾಗಿತ್ತು. ಆದರೆ ವಿ.ಸೀ. ಯಂಥ ಲೇಖಕರಿಗೆ ಆಗ ಬಂಧನ ಮತ್ತು ಬಿಡುಗಡೆ ಇವುಗಳ ಅರ್ಥ ಸಾಹಿತ್ಯಿಕವಾಗಿತ್ತು. ಹಳೆಯ ಸಾಹಿತ್ಯದ ನಿಯಮಗಳ ಬಂಧನದಿಂದ ಪಾರಾಗಿ ಬಂದು, ಹಳೆಯ ಸಾಹಿತ್ಯವನ್ನು ಹೊಸ ದೃಷ್ಟಿಯಿಂದ ನೋಡಿ, ಪರೀಕ್ಷಿಸುವ ಕೆಲಸವನ್ನು ಅವರು ಮಾಡಿದರು.

ಹಳೆ ಮತ್ತು ಹೊಸದರ ಮಂಥನದಲ್ಲಿ ಹುಟ್ಟಿಬಂದ ಹೊಸ ಸಾಹಿತ್ಯ ಕೊನೆಯವರೆಗೆ ಉಳಿಯುತ್ತದೆಂದು ಅವರು ಭಾವಿಸಿದರೋ ಏನೋ! ವಿ.ಸೀ.ಯವರು ಹೊಸ ಸಾಹಿತಿಗಳಲ್ಲಿ ಆಗ ಚಿಕ್ಕವರಾಗಿದ್ದರು. ಅದಕ್ಕಿಂತ ಹೆಚ್ಚಾಗಿ ಅವರು ಧೀಮಂತರಾಗಿದ್ದರು. ಅವರ ಧೀಮಂತಿಕೆ ಭಾರತೀಯ ಮತ್ತು ಯುರೋಪಿನ ಸಂಸ್ಕೃತಿಗಳ ಸಂಬಂಧದಲ್ಲಿಯ ಸ್ನೇಹ ಮತ್ತು ಸಂಘರ್ಷಗಳನ್ನು ಅರಿತುಕೊಳ್ಳಲು ಸಮರ್ಥವಾಗಿತ್ತು. ಸಾಹಿತ್ಯ, ಸಂಗೀತ, ಮತ್ತು ಕಲೆ ಈ ಮೂರು ಕ್ಷೇತ್ರಗಳಲ್ಲಿ ಅಲ್ಲದೆ ಹೊಸ ಅರ್ಥಪ್ರಪಂಚ– ಈ ಕ್ಷೇತ್ರಗಳಲ್ಲಿ ಅವರ ಬುದ್ಧಿ ಸ್ವಚ್ಛಂದವಾಗಿ ವಿಹರಿಸಬಲ್ಲದಾಗಿತ್ತು. 'ಧೀಮತಾಂ ಕಶ್ಚಿದ ವಿಷಯೋ ನಾಮ' (ಧೀಮಂತರಿಗೆ ಎಲ್ಲವೂ ಅವರ ಅಭ್ಯಾಸದ ವಿಷಯವಾಗಬಲ್ಲದು– ಕಾಳಿದಾಸ) ನಿಜ. ಆದರೆ ಧೀಮಂತಿಕೆಯ ಸಮಸ್ಯೆಯೆಂದರೆ ಅದು ಎಲ್ಲ ವಿಷಯಗಳಲ್ಲಿಯೂ ಸಮವಾಗಿ ಸೃಜನಶೀಲವಾಗಿರುವುದಿಲ್ಲ. ಇದೇ ಧೀಮಂತಿಕೆ ಹಳೆಯ ಸಾಹಿತ್ಯವನ್ನು ಹೊಸ ಕಾಲಕ್ಕೆ ಅಪ್ರಸ್ತುತವೆನ್ನಿಸುವಂತೆ ಮಾಡಿದ್ದು. ಯುರೋಪಿನ ಹೊಸ ಸಾಹಿತ್ಯ ಹಳೆಯ ಸಾಹಿತ್ಯದ ಮೌಲ್ಯಗಳನ್ನು ನಿರಾಕರಿಸಿ ಹುಟ್ಟಿದ್ದು, ಅದರಂತೆಯೇ ನಮ್ಮ ಹೊಸ ಸಾಹಿತ್ಯ ಹಳೆಯ ಸಾಹಿತ್ಯವನ್ನು ನಿರಾಕರಿಸದೆ ಹುಟ್ಟಲಾರದು. ನವೋದಯ ಸಾಹಿತ್ಯಕ್ಕೆ ಈ ಮಾತಿನಲ್ಲಿ ನಂಬಿಕೆಯಿತ್ತು. ಆದರೆ ಯುರೋಪಿನಲ್ಲಿ ಪ್ಲೇಟೋ, ಅರಿಸ್ಟಾಟಲ್‌ರು ಮತ್ತೆ ಮತ್ತೆ ಹುಟ್ಟಿ ಬರುವಂತೆ ನಮ್ಮಲ್ಲಿ ಯಾಕೆ ಆಗುವುದಿಲ್ಲ? ಇಂಗ್ಲಂಡಿನಲ್ಲಿಯೇ ಎಷ್ಟು ಸಲ ಸಾಹಿತ್ಯ ಇಂಗ್ಲಿಷ್ ತತ್ವವನ್ನು ಉಳಿಸಿಕೊಳ್ಳಲು ಹಟದಿಂದ ಪ್ರಯತ್ನಮಾಡಿ ಅದನ್ನು ಕಳೆದುಕೊಂಡಾಗಲೆಲ್ಲ ಗ್ರೀಕ್ ಸಾಹಿತ್ಯ ಪ್ರೇರಣೆಯನ್ನೊದಗಿಸುತ್ತದೆ. ನಮ್ಮಲ್ಲಿಯೂ ಸಾಹಿತ್ಯದ ಇತಿಹಾಸವನ್ನು ಬರೆಯುವ ಪ್ರಯತ್ನಗಳು ನಡೆದವು. ಶ್ರೀಯವರ ಸಂಪಾದಕತ್ವದಲ್ಲಿ 'ಕನ್ನಡ ಕೈಪಿಡಿ' ಪ್ರಕಟವಾಯಿತು. ಕನ್ನಡ ಸಾಹಿತ್ಯವನ್ನು ಕಲಿಯುವದು ಹೇಗೆಂಬುದನ್ನು ಈ ಗ್ರಂಥ ತೋರಿಸಿಕೊಟ್ಟಿತು. ವಿ.ಸೀ. ಯವರು 'ಕವಿ–ಕಾವ್ಯ–ಪರಂಪರೆ' ಯ ಸಂಪುಟಗಳನ್ನು ಸಂಪಾದಿಸಿದರು. ಕುಮಾರವ್ಯಾಸನ ಬಗೆಗಿನ ಸಂಪುಟದಲ್ಲಿ ಅವರು ನನ್ನದೊಂದು ಲೇಖನವನ್ನು ಪ್ರಕಟಿಸಿದ್ದಾರೆ. ಪಂಪನ ಕರ್ಣನ ಬಗ್ಗೆ ನಾನು ಬರೆದಿದ್ದ ಅಭಿಪ್ರಾಯಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿ ಒಂದೆರಡು ಟಿಪ್ಪಣಿಗಳನ್ನು ಬರೆದಿದ್ದಾರೆ. ಅವರಿಗೆ ಸಂಪಾದಕೀಯ ಸ್ವಾತಂತ್ರ್ಯವಿತ್ತು, ಅದನ್ನು ಉಪಯೋಗಿಸಿದರು. ಅದು ತಪ್ಪು ಅಲ್ಲ. ಆದರೆ ಈ ಸ್ವಾತಂತ್ರ್ಯವನ್ನು ಎಲ್ಲರ ಬಗ್ಗೆಯೂ ಅವರು ಉಪಯೋಗಿಸಲಿಲ್ಲ. ಈ ಮಾತನ್ನು ಹೇಳುವಾಗ ನನ್ನ ಗಮನವಿರುವದು ವಿ.ಸೀ.ಯವರ ಐತಿಹಾಸಿಕ ಚಿಂತನದ ಬಗ್ಗೆ. ಗ್ರಂಥ ಸಂಪಾದನೆ ಒಂದು ಮಹತ್ವದ ಶಾಸ್ತ್ರ ನಿಜ. ಆದರೆ ಅದರ ಹಿಂದಿನ ರಾಜಕೀಯವನ್ನೂ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು.

ವಿ.ಸೀ.ಯವರು ತಮ್ಮ ಯೌವನದ ಕಾಲದಲ್ಲಿ ನವೋದಯವನ್ನು ಒಪ್ಪಿಕೊಂಡವರು; ಮುಪ್ಪಿನಲ್ಲಿ ಅವರು ನವ್ಯವನ್ನು ಎದುರಿಸಬೇಕಾಯಿತು. ತಮ್ಮ ಕವನ ಸಂಗ್ರಹಗಳಿಗೆ ಅವರು ಎರಡೆರಡು ಮುನ್ನುಡಿಗಳನ್ನು ಬರೆದು ಈ ಕತೆಯನ್ನು ನಿರೂಪಿಸಬೇಕಾಯಿತು. ವೈಯಕ್ತಿಕವಾಗಿ ಅವರು ಅತ್ಯಂತ ಧೀಮಂತರು, ಆದರೆ ಐತಿಹಾಸಿಕವಾಗಿ ಅಸಹಾಯರು. ನವೋದಯದ ಸ್ವೀಕಾರ ಮತ್ತು ನವ್ಯದ ನಿರಾಕರಣೆ ಇವು ಒಬ್ಬ ವ್ಯಕ್ತಿಯ ಮೂಲಕವಾಗಿ ನಡೆದದ್ದಕ್ಕೆ ಈ ಮುನ್ನುಡಿಗಳು ಸಾಕ್ಷಿಯಾಗುತ್ತವೆ. ವಸಾಹತುಶಾಹಿಯ ಕಾಲದಲ್ಲಿ ರೂಪುಗೊಂಡ ಎಂಥ ಮನಸ್ಸೂ ಈ ಐತಿಹಾಸಿಕ ಜಗಳಗಳಲ್ಲಿ ಭಾಗವಹಿಸಿದಾಗ ತನ್ನ ನಿಜಸ್ವರೂಪವನ್ನು ಮರೆಯುವಂತಾಯಿತು. ವಿ.ಸೀ.ಯವರ ಮನಸ್ಸು ಪಾಶ್ಚಾತ್ಯ ವೈಚಾರಿಕತೆಯನ್ನು ಒಪ್ಪಿಕೊಂಡಿತ್ತು. ಭಾರತದ ವೈಚಾರಿಕ ಪ್ರಗತಿಗೆ ಅದು ಅತ್ಯಂತ ಅವಶ್ಯಕವೆಂದೂ ಅವರಿಗನಿಸಿತ್ತು. ವಿಮರ್ಶೆಯಲ್ಲಿ ಕೂಡ ಅವರದು ಪಾಶ್ಚಾತ್ಯ ನಿಲುವು. ನಮ್ಮ ಹಳೆಯ ಕಾವ್ಯಗಳನ್ನೆಲ್ಲ ಅವರು ಇದೇ ದೃಷ್ಟಿಕೋನದಿಂದ ನೋಡಿ ಪರೀಕ್ಷಿಸಿದರು.

ಇದು ವಿ. ಸೀ. ಯವರ ವೈಚಾರಿಕ ವ್ಯಕ್ತಿತ್ವದ ಒಂದು ಚಿತ್ರ. ಆದರೆ ಇದೇ ಅವರ ಸಂಪೂರ್ಣವಾದ ವ್ಯಕ್ತಿತ್ವವಲ್ಲ. ನವೋದಯ ಕಾಲದ ಎಲ್ಲ ಪ್ರಮುಖ ಲೇಖಕರಂತೆ ಅವರೂ ಸ್ನೇಹಕ್ಕೆ ಮಹತ್ವದ ಸ್ಥಾನವನ್ನು ಕೊಟ್ಟರು. ಅಲ್ಲದೆ ಅವರ ಮನಸ್ಸಿನ ಔದಾರ್ಯ ಬಹಳ ದೊಡ್ಡದಾಗಿತ್ತು. ನಾನು ಮೊದಲ ಸಲ ಅವರ ಮನೆಗೆ ಹೋದಾಗ ನನ್ನ ಜೊತೆಗೆ ಮನೋಹರ ಗ್ರಂಥಮಾಲೆಯ ಜಿ. ಬಿ. ಜೋಶಿಯವರೂ ಇದ್ದರು. ಮೊದಲು ನನ್ನ ಗುರುತು ಅವರಿಗೆ ಸಿಗಲಿಲ್ಲ. ನನ್ನ 'ನಡೆದು ಬಂದ ದಾರಿ'ಯ ಲೇಖನಗಳು ಆಗ ಪ್ರಕಟವಾಗಿದ್ದವು. "The moving finger writes and having writ moves on..... Nor all your tears can cancel half a line from it" – ಈ ಪದ್ಯದೊಂದಿಗೆ ನನ್ನ ಮೇಲೆ ಎರಗಿದರು. 'ನಮ್ಮ ಬರೆವಣಿಗೆಯ ಮೇಲೆ ತೀರ್ಪು ಹೇಳಲು ಏನು ಅಧಿಕಾರ ನಿನಗೆ? ನನ್ನ ವಿಮರ್ಶೆ 'ಅಸ್ವಸ್ಥ' ಎಂದು ಕರೆದೆಯಲ್ಲ? Do I have a sick mind?' ಕೊನೆಗೆ 'ಅಸ್ವಸ್ಥ' ಎಂದರೆ ಉತ್ತರ ಕರ್ನಾಟಕದಲ್ಲಿ restless ಎಂದು ಅರ್ಥವಾಗುತ್ತದೆ ಎಂದು ಹೇಳಿದಾಗ ಸಮಾಧಾನಗೊಂಡರು. ಆದರೆ ಎರಡು ಮೂರು ನಿಮಿಷಗಳಲ್ಲಿ ಅವರ ಸಿಟ್ಟು ಇಳಿಯಿತು. ಅವರ ಎದುರಿಗೆ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಕುಳಿತಿದ್ದರು. 'ಶಾಸ್ತ್ರಿಗಳೇ, ಈ ತರುಣ ಮುಂದಿನ ಪೀಳಿಗೆಯ ಮಹತ್ವದ ವಿಮರ್ಶಕ' ಎಂದೂ ಹೇಳಿದರು. ಆ ಹೊತ್ತಿಗೆ ಪ್ರೊ. ಇನಾಮದಾರ ಮತ್ತು ಶ್ರೀ ಪಿ. ವಿ. ಜೋಶಿಯವರು ಅವರನ್ನು ಕಾಣಲು ಬಂದರು. ಪುಣ್ಯಕ್ಕೆ ವಿಷಯಾಂತರವಾಯಿತು. ಆದರೆ ಆ ಗಳಿಗೆಯಲ್ಲಿ ಅವರ ವ್ಯಕ್ತಿತ್ವದ ಮಿಂಚಿನ ಸ್ಪರ್ಶದ ಅನುಭವ ನನಗಾಯಿತು. ಬೇಂದ್ರೆ, ಶ್ರೀರಂಗ, ಕಾರಂತ, ವಿ.ಸೀ., ಮಾಸ್ತಿಯವರಂಥ ಹಿರಿಯರು ನನ್ನನ್ನು ಪ್ರೀತಿಯಿಂದ, ಅಭಿಮಾನದಿಂದ ಸಾಕಿಕೊಂಡು ಬಂದರು.

ವಿ.ಸೀ. ಯವರಲ್ಲಿ ನಾನು ಎಂದಿಗೂ ಮೆಚ್ಚಿಕೊಂಡ ಬಹಳ ದೊಡ್ಡ ಗುಣವೆಂದರೆ ಅವರ ಮನಸ್ಸಿನ ಅಭಿಜಾತತೆ. ತಮಗಿಂತ ಹಿರಿಯರಾಗಿದ್ದ ವೆಂಕಣ್ಣಯ್ಯನವರು ತಮ್ಮ ಮನೆಗೆ ಬಂದಾಗಲೆಲ್ಲ, ಬಾಗಿ ಒಳಗೆ ಬರಬೇಕಾಗುತ್ತದೆಂದು ಅವರು ಬಾಗಿಲುವಾಡವನ್ನು

ಎತ್ತರವಾಗಿಸಿದರಂತೆ. ಇದು ಕೇವಲ ಹಿರಿಯರಿಗೆ ಅವರು ತೋರಿಸಿದ ಗೌರವದ ಸಂಕೇತವೆಂದು ತೋರುವುದಿಲ್ಲ. ಮಹತ್ತಾದದ್ದನ್ನು ಸ್ವಂತ ಜೀವನದಲ್ಲಿ ಸ್ವೀಕರಿಸುವಾಗ, ಸ್ವಂತದ ವ್ಯಕ್ತಿತ್ವದಲ್ಲಿ ಮತ್ತು ಪರಿಸರದಲ್ಲಿ ಬದಲಾವಣೆ ಮಾಡಿಕೊಳ್ಳುವದು ಅಗತ್ಯವೆಂಬ ಉದಾತ್ತ ಪ್ರಜ್ಞೆಯ ಒಂದು ಲಕ್ಷಣ ಇದು.

ವಿ.ಸೀ. ಯವರ ಈ ಉದಾತ್ತಪ್ರಜ್ಞೆ ಅವರಲ್ಲಿ ಭಾವಾವಿಷ್ಟತೆಯಾಗಿರಲಿಲ್ಲ. ಮಹತ್ತಾದದ್ದನ್ನು ಗುರುತಿಸಿ ಗೌರವ ನೀಡುವ ಪ್ರಜ್ಞೆ ಎಂದೂ ಪಕ್ಷಪಾತದಿಂದ ಕೂಡಿರಲಿಲ್ಲ. ವೆಂಕಣ್ಣಯ್ಯನವರು ಎತ್ತರವಾಗಿದ್ದರು, ಆದರೆ ಮಾಸ್ತಿಯವರು ಗಿಡ್ಡ ಆಳು. ಹಾಗೆಂದು ವಿ.ಸೀ.ಯವರ ಆದರ ಕುಳ್ಳಾಗಿರಲಿಲ್ಲ. ಮನುಷ್ಯರಲ್ಲೇ ಆಗಲಿ, ಕಾವ್ಯದಲ್ಲಿಯೇ ಆಗಲಿ, ಕಲೆಯಲ್ಲಿಯೇ ಆಗಲಿ ಅವರು ದೊಡ್ಡದಾದದ್ದನ್ನು ಗುರುತಿಸಿದರು. ಸಂಸ್ಕೃತ, ಕನ್ನಡ, ಇಂಗ್ಲಿಷ್ ಅಲ್ಲದೆ ಬಹುಶಃ ಗ್ರೀಕ್ ಭಾಷೆಯಲ್ಲಿಯ ಅತ್ಯುತ್ತಮವೆನ್ನಬಹುದಾದ ಸಾಹಿತ್ಯವನ್ನು ಅವರು ಅಭ್ಯಾಸ ಮಾಡಿದ್ದರು. ಸಂಗೀತ ಮತ್ತು ಚಿತ್ರಕಲೆಯಲ್ಲಿಯೂ ಅವರಿಗೆ ಆಳವಾದ ಪರಿಚಯ ಇತ್ತು. ದಿನನಿತ್ಯದ ಬದುಕಿನಲ್ಲಿಯೂ ಅವರದು ಶ್ರೇಷ್ಠವಾದ ಅಭಿರುಚಿಯಾಗಿತ್ತು ಎಂಬುದನ್ನು ಅವರ ಮೇರೆಯರಿಯದ ಆತಿಥ್ಯದ ಸವಿಯನ್ನು ಉಂಡ ನಮಗೆಲ್ಲ ಗೊತ್ತು.

ವಿ.ಸೀ.ಯವರ ತಲೆಮಾರಿಗೂ ನಮ್ಮ ತಲೆಮಾರಿಗೂ ಬಹಳ ಅಂತರವಿದೆ. ಅವರನ್ನು, ಅವರ ಆದರ್ಶ ಮತ್ತು ಕನಸುಗಳನ್ನು ಅರಿಯುವದು ನಮ್ಮ ಕರ್ತವ್ಯವಾಗಿದೆ. ಅದು ದೊಡ್ಡ ಮಾತೂ ಅಲ್ಲ. ಆದರೆ ವಿ.ಸೀ.ಯವರು ನಮ್ಮ ತಲೆಮಾರಿನವರನ್ನು ಅರಿತುಕೊಳ್ಳುವ ಪ್ರಯತ್ನಮಾಡಿದರಲ್ಲ, ಅದು ದೊಡ್ಡದು. ಅವರು ನವೋದಯಕಾಲದ ಮೊದಲಿಗರ ಜೊತೆಗೆ ದುಡಿದವರು, ಅದರ ಜೊತೆಗೆ ಭವಿಷ್ಯದ ಕಡೆಗೂ ಕಣ್ಣಿಟ್ಟವರು. ಕನ್ನಡ ಎಷ್ಟು ಎತ್ತರಕ್ಕೆ ಏರಬೇಕು, ಎಷ್ಟು ದಿಕ್ಕುಗಳಲ್ಲಿ ಹರಡಿಕೊಳ್ಳಬೇಕು, ಎಷ್ಟು ಆಳದಲ್ಲಿ ಬೇರು ಬಿಡಬೇಕು ಎಂಬುದನ್ನು ಕುರಿತು ಯೋಚಿಸಿದರು. ಮಂಗಳೂರು, ಧಾರವಾಡ, ಗುಲ್ಬರ್ಗಾ ಮತ್ತು ಬೀದರ ಜಿಲ್ಲೆಗಳಲ್ಲಿ ಮಿತ್ರರನ್ನು ಸಂಪಾದಿಸಿದರು. ಕರ್ನಾಟಕದ ಸಾಂಸ್ಕೃತಿಕ ಏಕೀಕರಣ ಇಂಥ ಸಾಹಿತಿಗಳ ಮೂಲಕವೇ ಆಯಿತೆಂಬುದು ಇಂದು ಐತಿಹಾಸಿಕ ಸತ್ಯವಾಗಿದೆ.

ಇದರ ಜೊತೆಗೇ ಇನ್ನೊಂದು ಮಾತನ್ನೂ ಹೇಳಬೇಕು. ವಿ.ಸೀ.ಯವರಲ್ಲಿ ಸಣ್ಣತನ ತಪ್ಪಿ ಕೂಡ ಮನೆ ಮಾಡಲಿಲ್ಲ. ಅವರು ದೊಡ್ಡದಾಗಿ ಚಿಂತಿಸಿದರು, ದೊಡ್ಡದಾಗಿಯೇ ಅನುಭವಿಸಿದರು, ಮತ್ತು ದೊಡ್ಡ ರೀತಿಯಲ್ಲಿ ಬದುಕಿದರು.

ಸುಖಸ್ಯಾನಂತರಂ ದುಃಖಂ, ದುಃಖಸ್ಯಾನಂತರಂ ಸುಖಂ

ಮತ್ತೂರು ಕೃಷ್ಣಮೂರ್ತಿ

ಇಪ್ಪತ್ನಾಲ್ಕು ವರ್ಷಗಳ ಹಿಂದೆ ನಡೆದದ್ದು.... ನಿನ್ನೆ ಮೊನ್ನೆ ನಡೆದ ಹಾಗೆ ಇದೆ. ಪೂಜ್ಯರಾದ ವಿ.ಸೀ. ಅವರು ಲಂಡನ್ನಿಗೆ ಬಂದರು. ಏಪ್ರಿಲ್ ೨೪ ೧೯೭೫. ಅಂದು ಸಂಜೆ ಸೌಥಾಂಪ್ಟನ್ನಿನಲ್ಲಿ ನಮ್ಮ ಭಾರತೀಯ ವಿದ್ಯಾಭವನದವರು ಪ್ರಸಿದ್ಧ ಭರತನಾಟ್ಯ ಕಲಾವಿದೆ ಶ್ರೀಮತಿ ರತಿ ಕಾರ್ತಿಗೇಶು ಎಂಬುವರ ನಾಟ್ಯ ಪ್ರದರ್ಶನವನ್ನೂ ಏರ್ಪಡಿಸಿದ್ದರು. ಮನೆಯವರು, ಕಲಾವಿದರು, ಅವರ ಬಂಧುಗಳು ಎಲ್ಲರೂ ಬೆಳಿಗ್ಗೆಯೇ ಕೋಚ್‌ನಲ್ಲಿ ಹೊರಟು ಹೋಗಿದ್ದರು. ನಾ ಮಾತ್ರ ಉಳಿದುಕೊಂಡೆ. ವಿ.ಸೀ. ಅವರ ವಿಮಾನ ೧೧.೪೫ಕ್ಕೆ ಲಂಡನ್ ಹೀಥ್ರೋ ವಿಮಾನ ನಿಲ್ದಾಣವನ್ನು ತಲುಪಿತು. ಅವರನ್ನು ಸ್ವಾಗತಿಸಲು ವಿಶೇಷ ವ್ಯವಸ್ಥೆ ಮಾಡಲಾಗಿತ್ತು. ಎಪ್ಪತ್ತೆರಡರ ಹೊಸ್ತಿಲಿನಲ್ಲಿದ್ದ ವಿ.ಸೀ. ಅವರು ಬರುತ್ತಿದ್ದಾಗ ಎಳೆಯ ಮಗುವಿನಂತೆ ಕಂಡರು. ಅವರ ಮುಖ ಅರಳಿತ್ತು. ಅವರ ಧೋತರ, ಕೋಟು, ಪೇಟಾ ಅಲ್ಲಿದ್ದ ಬಹುಮಂದಿಯ ಗಮನವನ್ನು ಸೆಳೆಯಿತು. ಕಾಲಿಗೆ ಎರಗಿ ಸ್ವಾಗತಿಸಿದೆ. ಅವರ ಸಂತೋಷವನ್ನು ಕಂಡು ಪುಳಕಿತನಾದೆ.

ಅನೇಕ ವರ್ಷಗಳ ಅಪೇಕ್ಷೆ

ಲಂಡನ್ ನೋಡಬೇಕು ಎಂಬುದು ವಿ.ಸೀ. ಅವರ ಅನೇಕ ವರ್ಷಗಳ ಅಪೇಕ್ಷೆಯಾಗಿದ್ದಿತು ಎಂದು ಅವರೇ ತಿಳಿಸಿದ್ದರು. ಮಹಾಭಾರತದ ಕೃಷ್ಣನನ್ನೂ, ಕುಮಾರವ್ಯಾಸನ ಕೃಷ್ಣನನ್ನೂ, ರಾಮಾಯಣ–ಮಹಾಭಾರತಗಳ ವ್ಯಕ್ತಿಗಳು ಹಲವರನ್ನೂ ನನಗೆ ಪರಿಚಯ ಮಾಡಿ ಕೊಟ್ಟಿದ್ದಾರೆ. ಅವರ ಈ ಉಪಕಾರಕ್ಕೆ ಕೃತಜ್ಞತೆ ಸಲ್ಲಿಸುವುದು ಹೇಗೆ ಎಂದು ಯೋಚಿಸುತ್ತಿದ್ದೆ. ವಿದ್ಯಾಭವನದ ಲಂಡನ್ ಶಾಖೆಯನ್ನು ತೆರೆಯಲು ಭವನದ ಮುಖ್ಯ ಅಧಿಕಾರಿಗಳು ನಿರ್ಧರಿಸಿ ನನ್ನನ್ನು ಕಳಿಸಿದರು. ೧೯೭೨ರ ಆಗಸ್ಟ್ ೫ ರಂದು ನಾನು ಲಂಡನ್ನಿಗೆ ಹೋದೆ. ೧೯೭೫ರ ಬೇಸಗೆಯಲ್ಲಿ ವಿ.ಸೀ. ಅವರನ್ನು ಲಂಡನ್ನಿಗೆ ಬರಬೇಕೆಂದು ಕೇಳಿಕೊಂಡಾಗ ಕೃಪೆಯಿಟ್ಟು ಒಪ್ಪಿದರು. ಬಂದರು.

ಕಾಣದೇ ಇದ್ದರೂ ಬ್ರಿಟನ್ನು ಅವರಿಗೆ ಪಕ್ಕದ ಮನೆಗಿಂತ ಹೆಚ್ಚು ನಿಕಟವಾಗಿದ್ದಿತು ಎನ್ನಬಹುದು! ವಿಮಾನ ನಿಲ್ದಾಣದಿಂದ ಭವನಕ್ಕೆ ಟ್ಯಾಕ್ಸಿಯಲ್ಲಿ ಬರುತ್ತಿದ್ದಾಗ ಬ್ರಿಟನ್ನಿನ

ಇತಿಹಾಸವನ್ನು ಹೇಳತೊಡಗಿದರು. ಸೆಯಿಂಟ್ ಪಾಲ್ಸ್ ಚರ್ಚು, ಪಾರ್ಲಿಮೆಂಟ್ ಹೌಸ್, ಬಿಗ್ ಬೆನ್, ವೆಸ್ಟ್ ಮಿನ್‌ಸ್ಟರ್ ಅಬೆಟೇಟ್ ಗ್ಯಾಲರಿ, ಮ್ಯಾಡಮ್ ಟುಸ್ಸಾಟ್, ಹೆರಾಡ್ಸ್ ಡಿಪಾರ್ಟ್‌ಮೆಂಟ್ ಸ್ಟೋರ್, ಟ್ರಫಾಲ್ಗರ್ ಸ್ಕ್ವೇರ್, ಪಿಕಡಿಲ್ಲಿ ಮಾರ್ಗವಾಗಿ ಹೋಗುತ್ತಿದ್ದಾಗ ಅವುಗಳ ಬಗೆಗೆ ಐದು ಹತ್ತು ನಿಮಿಷ ಹೇಳುತ್ತಿದ್ದರು. ಮೂಕನಾಗಿ ಬಿಟ್ಟೆ ನಾನು. ಮೂರು ವರ್ಷಗಳಿಂದ ಲಂಡನ್ನಿನಲ್ಲಿ ಇದ್ದೆ. ಇವರು ಹೇಳಿದ್ದರಲ್ಲಿ ನೂರರಲ್ಲಿ ಒಂದಷ್ಟನ್ನೂ ತಿಳಿದುಕೊಂಡಿರಲಿಲ್ಲ ನಾನು! ಲಂಡನ್ನನ್ನು ಮೊದಲಬಾರಿಗೆ ನೋಡುತ್ತಿದ್ದಾರೆ. ಅಲ್ಲೇ ಹುಟ್ಟಿ ಬೆಳೆದವರಂತೆ ಮಾತನಾಡುತ್ತಿದಾರೆ! ೨೪–೨೫ರ ಹರೆಯದವರಂತೆ ಕಂಡರು, ಒಂಬತ್ತು ಗಂಟೆಕಾಲ ಮುಂಬಯಿಯಿಂದ ರಾತ್ರಿ ಪ್ರಯಾಣ ಮಾಡಿ!

ಮನೆಗೆ ಬಂದೆವು. ಅಡಿಗೆ ಮಾಡಿಟ್ಟಿದ್ದರು. ಸ್ನಾನ ಮಾಡಿದರು. ಸ್ವಲ್ಪವೇ ಆಹಾರ ತೆಗೆದುಕೊಂಡರು. ಲಂಡನ್ನಿಗೆ ಬಂದ ಸಂತೋಷವೇ ಅವರ ಹೊಟ್ಟೆ ತುಂಬಿಸಿತ್ತು! ಸಾರಿನಲ್ಲಿ ಒಂದು ಸೌಟು ಅನ್ನ, ಮೊಸರಿನಲ್ಲಿ ಒಂದು ಸೌಟು ಅನ್ನ ಊಟ ಮಾಡಿದರು. ಮಾವಿನಕಾಯಿ ಉಪ್ಪಿನಕಾಯಿ ಸವಿದು, 'ನಮ್ಮೂರಲ್ಲೂ ಇಂಥ ಮೊಸರು ಇಲ್ಲ ಮತ್ತೂರ್' ಅಂದರು. ಹಾಲೆಂಡಿನಿಂದ ಇಂಗ್ಲೆಂಡಿಗೆ ದಿನವೊಂದಕ್ಕೆ ಹಾಲು ಪೂರೈಕೆ ಎಷ್ಟು ಬರುತ್ತೆ, ಎಷ್ಟು ವರ್ಗಗಳಿಂದ ಬರುತ್ತೆ, ಡೈರಿ ಫಾರ್ಮಿಂಗ್ ಹೇಗೆ ನಡಸುತ್ತಾರೆ, ಹಸುಗಳನ್ನು ಹೇಗೆ ನೋಡಿಕೊಳ್ಳುತ್ತಾರೆ, ಒಂದೊಂದು ಹಸುವೂ ಸರಾಸರಿ ಎಷ್ಟು ಹಾಲು ಕೊಡುತ್ತೆ — ಎಂಬುದರ ಬಗೆಗೆ ೧೫–೨೦ ನಿಮಿಷ ಮಾತಾಡಿದರು!!

ಬಂದ ದಿನವೇ ಸೌಥಾಂಪ್ಟನ್ ಯಾತ್ರೆ

"ತಾವು ವಿಶ್ರಾಂತಿ ಪಡೆಯಿರಿ. ರಾತ್ರಿ ಪ್ರಯಾಣವಾಗಿದೆ. ನಿದ್ದೆ ಮಾಡಲೇಬೇಕು ತಾವು. ಇಲ್ಲವಾದರೆ ೩–೪ ದಿನ 'ಜೆಟ್‌ಲ್ಯಾಗ್' (ನಿದ್ದೆಯ ಅಭಾವ) ಕಾಡುತ್ತದೆ. ಮನೆಯವರು ಸೌಥಾಂಪ್ಟನ್ನಿಗೆ ಹೋಗಿದ್ದಾರೆ. ಅಲ್ಲಿ ಸಂಜೆ ಭರತನಾಟ್ಯ ಕಾರ್ಯಕ್ರಮವಿದೆ. ನಾನೂ ರೈಲಲ್ಲಿ ಹೋಗಿ ರಾತ್ರಿಯೇ ಬರುತ್ತೇನೆ. ಫ್ಲಾಸ್ಕಿನಲ್ಲಿ ಕಾಫಿ ಇಟ್ಟಿದ್ದೇನೆ ಅಥವಾ ನಾನೂ ಇರಬೇಕು ಎಂದರೆ ಇದ್ದು ಬಿಡುತ್ತೇನೆ. ಆದೀತೆ?" ಎಂದು ಕೇಳಿದೆ.

"ನನಗೆ ಆಯಾಸವಾಗಿಲ್ಲಪ್ಪ. ನಾನೂ ನಿಮ್ಮ ಜತೆ ಬಂದರೆ ತೊಂದರೆ ಆಗದಷ್ಟೆ?" ಎಂದು ಕೇಳಿದರು.

"ತೊಂದರೆ ಇಲ್ಲ. ಆಯಾಸವಾಗುತ್ತದೆ ಎಂದು ಹಾಗಂದೆ" ಅಂದೆ.

"ವಿಮಾನದಲ್ಲಿ ನಿದ್ದೆ ಬಂದಿತು. ಆಯಾಸ ಇಲ್ಲ. ಅಲ್ಲದೆ ಈಗ ನಮ್ಮ ದೇಶದ ಸಮಯ ಸಂಜೆ ೫ ಅಲ್ಲವೆ?" ಅಂದರು. ಅಚ್ಚರಿಯಾಯಿತು ನನಗೆ!

"ಸೌಥಾಂಪ್ಟನ್ ಬ್ರಿಟನ್ನಿನ ಮುಖ್ಯವಾದ ಬಂದರು. ಭಾರತಕ್ಕೆ ಇವರ ಮೊದಲ ಹಡಗು ಹೊರಟದ್ದು ಅಲ್ಲಿಂದಲೇ...." ಅಂದರು!

"ಸರಿ ಹೋಗೋಣ" ಎಂದು ಹೇಳಿದೆ. ಉಡುಪು ಬದಲಿಸಿದರು. ಟ್ಯಾಕ್ಸಿಯಲ್ಲಿ ಹೊರಟು ವಾಟರ್‌ಲೂ ಸ್ಟೇಷನ್ನಿಗೆ ಬಂದೆವು. ಬೃಹದಾಕಾರದ ರೈಲ್ವೇ ನಿಲ್ದಾಣ. ಅದನ್ನು

ನೋಡುತ್ತ ನಿಂತು ಬಿಟ್ಟರು! ವಿ.ಸೀ. ಅವರ ಕುತೂಹಲ ದೃಷ್ಟಿಯನ್ನು ಕಂಡವರು ಭಾಗ್ಯವಂತರು. ಎಲ್ಲರಲ್ಲೂ ಎಲ್ಲದರಲ್ಲೂ ಅದೆಷ್ಟು ಆಸಕ್ತಿ, ಕುತೂಹಲ! ಗುಣಗಳನ್ನೇ, ವೈಶಿಷ್ಟ್ಯಗಳನ್ನೇ ಕಾಣುವ ಮನೋಭಾವ, ಸ್ನೇಹಪರತೆ! ಸ್ಮಿತವದನ, ಯಾರೇ ಆಗಲಿ ತಾವಾಗಿ ಮಾತನಾಡಿಸಿ ಪರಿಚಯ ಮಾಡಿಕೊಳ್ಳುವ ಸರಳತೆ.....! ಸನಿಹದಲ್ಲಿ ನಾಲ್ಕೈದು ವಾರ ಇದ್ದು ಕಾಣುವ ಭಾಗ್ಯ ಬಂದಿತು ಎಂದು ಉಬ್ಬಿಹೋದೆ ನಾನು. ವಿ.ಸೀ. ಅವರ ಜತೆ ಇದ್ದಷ್ಟು ಕಾಲವೂ ಜ್ಞಾನಾರ್ಜನೆ ಹೊರತು ಬೇರೊಂದೂ ಆಗುತ್ತಿರಲಿಲ್ಲ ಎಂಬುದು ಅವರ ಪರಿಚಿತರೆಲ್ಲರ ಅನುಭವದ ಮಾತು. ಜ್ಞಾನಭಂಡಾರವೇ ಆಗಿದ್ದ ಅವರ ಮುಖದಿಂದ ಹೊರಡುತ್ತಿದ್ದ ಒಂದೊಂದು ಮಾತೂ ಶಿಕ್ಷಣ, ಸಂಸ್ಕೃತಿ! ಸೌಜನ್ಯದ ನಿಧಿ ವಿ.ಸೀ. ಅವರು.

ಮೇಯರ್ ಅವರ ಪ್ರಶಂಸೆ

ಸೌಥಾಂಪ್ಟನ್ನಿಗೆ ಬಂದೆವು. ನೇರ ಟೌನ್‌ಹಾಲ್‌ಗೇ ಹೋದೆವು. ಅಲ್ಲೇ ಅಂದಿನ ಸಂಜೆಯ ಕಾರ್ಯಕ್ರಮ. ನಗರದ ಮೇಯರ್ ಅವರ ಕಾರ್ಯಾಲಯವಿದ್ದ ಟೌನ್‌ಹಾಲ್ ಕಟ್ಟಡ ಅದು. ಆ ಬೃಹತ್ ಕಟ್ಟಡವನ್ನು ಕಂಡೊಡನೆ "ಓಹೋಹೋ!! ನಮ್ಮ ವಿಧಾನ ಸೌಧದಲ್ಲಿ ಅರ್ಧದಷ್ಟಿರುವಂತೆ ಕಾಣುತ್ತದೆಯಪ್ಪಾ" ಎಂದರು. ಬ್ರಿಟನ್ನಿನಲ್ಲಿ ಕಾರ್ಪೋರೇಷನ್ ಹೇಗೆ ಕೆಲಸಮಾಡುತ್ತದೆ; ನಗರಾಭಿವೃದ್ಧಿ ಕೆಲಸ ಹೇಗೆ ನಡೆಯುತ್ತದೆ; ಮೇಯರ್‌ಗೆ ಇರುವ ಅಧಿಕಾರ, ಕೌನ್ಸಿಲರುಗಳ ಚುನಾವಣೆ ಹೇಗೆ ನಡೆಯುತ್ತದೆ ಎಂಬ ವಿವರಗಳನ್ನೆಲ್ಲ ತಿಳಿಸುತ್ತ ಬಂದರು!

ಕಾರ್ಯಕ್ರಮ ೬.೩೦ಕ್ಕೆ ಪ್ರಾರಂಭ. ಸೌಥಾಂಪ್ಟನ್ನಿನ ಮೇಯರ್ ಮುಖ್ಯ ಅತಿಥಿ. ೪೫ ನಿಮಿಷ ಮೊದಲೇ ಬಂದರು ಅವರು. ವಿ.ಸೀ. ಅವರ ಪರಿಚಯ ಮಾಡಿಕೊಟ್ಟೆ. ಅವರಿಬ್ಬರನ್ನೂ ಒಂದೆಡೆ ಕುಳಿತಿರಲು ವ್ಯವಸ್ಥೆ ಮಾಡಿ, ನಾನು ಕಾರ್ಯಕ್ರಮದ ಸಿದ್ಧತೆಯಲ್ಲಿ ತೊಡಗಿದೆ. ಪ್ರಯಾಣದ ದಣಿವು ತುಸವೂ ಕಾಣಲಿಲ್ಲ ಅವರ ಮುಖದಲ್ಲಿ.

"ತಾವೂ ವೇದಿಕೆಯ ಮೇಲೆ ಕೂರುವಿರಿ, ನಾಲ್ಕು ಮಾತಾಡುವಿರಿ ಸಾರ್" ಎಂದು ಕೇಳಿಕೊಂಡದ್ದಕ್ಕೆ ವಿ.ಸೀ. ಅವರು ಒಪ್ಪಿದರು. ಮೇಯರ್ ಅವರು ಮೊದಲು ಮಾತಾಡಿದರು. ಪಕ್ಕದಲ್ಲಿ ಕುಳಿತಿದ್ದ ವಿ.ಸೀ. ಅವರನ್ನು ತಾವೇ ಪರಿಚಯ ಮಾಡಿಕೊಡುತ್ತ—

"ಇವರು ಭಾರತದಿಂದ ಇಂದು ಬೆಳಿಗ್ಗೆ ಬಂದರು. ಇವರೊಂದಿಗೆ ೪೦-೪೫ ನಿಮಿಷ ಮಾತಾಡಿದೆ. ೪೦-೫೦ ವರ್ಷದ ಸ್ನೇಹ ಆದಂತೆ ಆಗಿದೆ ನನಗೆ. ನಾನು ಸೌಥಾಂಪ್ಟನ್ನಿನಲ್ಲೆ ಹುಟ್ಟಿ ಬೆಳೆದವನು. ನನಗೆ ಈಗ ೬೦ ವರ್ಷ. ಈ ಮಹನೀಯನ ಜತೆ ೩-೪ ದಿನ ಇದ್ದು, ಸೌಥಾಂಪ್ಟನ್ ಸಿಟಿಯ ಬಗೆಗೆ ನಾನು ತಿಳಿದುಕೊಳ್ಳಬೇಕೆಂದಿದ್ದೇನೆ" ಎಂದು ಹೇಳಿ ಮುಗಿಸಿದರು. ಮೂರು ನಾಲ್ಕು ನಿಮಿಷಕಾಲ ಸಭಿಕರು ಕರಘೋಷಗೈದರು. ೪೦ಕ್ಕೂ ಹೆಚ್ಚು ಆಂಗ್ಲೇಯರು ಇದ್ದರು!

ನನಗಾದ ಸಂತಸ, ನೆಮ್ಮದಿ, ತೃಪ್ತಿ ಅಷ್ಟಿಷ್ಟಲ್ಲ. ರತಿ ಕಾರ್ತಿಗೇಶುವಿನ

ಭರತನಾಟ್ಯವನ್ನು ನೋಡಿ ಮೆಚ್ಚಿಕೊಂಡರು. ನಾಟ್ಯಕಲೆಯ ಮೇಲೆ ಅವರೊಂದಿಗೆ ೪೦-೫೦ ನಿಮಿಷ ಮಾತಾಡಿದರು. ಯಾವ ವಿಷಯ ತೆಗೆದುಕೊಂಡರೂ ಚಿಲುಮೆ, ಬುಗ್ಗೆಯಿಂದ ನೀರು ಉಕ್ಕಿ ಉಕ್ಕಿ ಬರುವಂತೆ ಬರುತ್ತದೆ. ಅದೆಷ್ಟು ಓದಿದ್ದರೋ, ಓದಿದ್ದೆಲ್ಲ ಅದು ಹೇಗೆ ನೆನಪಿನಲ್ಲಿರುತ್ತಿತ್ತೋ, ಹೇಳತೊಡಗಿದರೆ ಗಂಗೆ-ಯಮುನೆಯರು ಹರಿದು ಬರುವಂತೆ ಹೇಗೆ ಬರುತ್ತಿತ್ತೋ! ಸನ್ನಿವೇಶದಲ್ಲಿ ತಾವು ಮುಳುಗಿ, ಪಾತ್ರ, ವ್ಯಕ್ತಿ ತಾವೇ ಆಗಿಬಿಡುತ್ತಿದ್ದರು. ಅವರಿಂದ ಒಮ್ಮೆ ಕೇಳಿದರೆ ಮರೆಯುವಂತೆ ಇರಲಿಲ್ಲ....

ಮೇಯರರ ಪತ್ರ

ಸೌಥಾಂಪ್ಟನ್ನಿನ ಮೇಯರ್, ವಿ.ಸೀ. ಅವರಿಗೆ ಒಂದು ಪತ್ರ ಬರೆದು, "Our meeting was too short but will remain in my memory for ever.... Have a good time in Britain" ಎಂದು ಬರೆದಿದ್ದರು. (ನಮ್ಮ ನಿಮ್ಮ ಭೇಟಿ ಅತ್ಯಲ್ಪ ಕಾಲದ್ದು ಆಯಿತು. ಆದರೆ ನನ್ನ ನೆನಪಿನಲ್ಲಿ ಚಿರಕಾಲ ಇರುವಂಥಾದ್ದು ಅದು. ಬ್ರಿಟನ್ನಿನಲ್ಲಿ ನೀವು ಇರುವಷ್ಟು ದಿನ ಸುಖಕರವಾಗಿರಲಿ.....)

ಆದರೆ ಆ ಪತ್ರ ಬರುವ ವೇಳೆಗೆ ವಿಧಿಯು good time ಅನ್ನು ಬದಲಿಸಿಬಿಟ್ಟಿತ್ತು....

ಸೌಥಾಂಪ್ಟನ್‌ನಿಂದ ಕೋಚಿನಲ್ಲಿ ಹೊರಡುವಾಗ ಬೆಳಗಿನ ಜಾವ ೩ ಆಗಿತ್ತು. ನೃತ್ಯ, ಕಾರ್ಯಕ್ರಮ ಚೆನ್ನಾಗಿದ್ದಿತು. ಅದಕ್ಕಿಂತ ಹೆಚ್ಚಾಗಿ ವಿ.ಸೀ. ಅವರ "Fans" – ಆರಾಧಕರ ಸಂಖ್ಯೆ ಹೆಚ್ಚಾಯಿತು. ಬಂದಿದ್ದ ಆಂಗ್ಲೇಯರು ಎಲ್ಲರೂ ಮಾತಾಡಿಸುತ್ತಿದ್ದರು. ಎಲ್ಲರೊಂದಿಗೂ ಚಿರಕಾಲದ ಪರಿಚಯದವರಂತೆ ವಿ.ಸೀ. ಮಾತಾಡುತ್ತಿದ್ದರು. ವಾಗ್ದೇವಿಯು ಬ್ರಹ್ಮನೊಂದಿಗೆ ಸರಸವಾಗಿ, ಸಂಭಾಷಣೆ ಮಾಡುತ್ತಿದ್ದ ಸಂದರ್ಭದಲ್ಲಿ ವಿ.ಸೀ. ಅವರು ಹುಟ್ಟಿದರೋ ಎಂದನಿಸುತ್ತಿತ್ತು ನನಗೆ. ಒಮ್ಮೆಯಾದರೂ ಅವರ ಮಾತು ಬೇಸರ ತರುತ್ತಿರಲಿಲ್ಲ! ಕಂಡು ಕಾಣದವರೊಂದಿಗೆ ಅದೆಷ್ಟು ಬೇಗ ಆತ್ಮೀಯರಾಗಿ ಬಿಡುತ್ತಿದ್ದರು ಎಂಬುದನ್ನು ಕಾಣುವ ಭಾಗ್ಯ ನನ್ನದಾಯಿತು ಎಂದು ಉಬ್ಬಿದೆ.....

ಎದೆ ಬಿರಿಯಿತು, ಆಕಾಶವೇ ಕವಿಯಿತು

ಕೋಚಿನಲ್ಲಿ ವಿ.ಸೀ. ಅವರ ಪಕ್ಕದಲ್ಲೇ ಕುಳಿತಿದ್ದೆ. ಶಾಲು ಒಂದನ್ನು ಹೊದಿಸಿದೆ. "ಇಂಡಿಯಾದಲ್ಲಿ ಈಗ ಬೆಳಿಗ್ಗೆ ಎಂಟು ಅಲ್ಲವೇನಪ್ಪ" ಅಂತ ಕೇಳಿದರು. ಹೌದು ಅಂದೆ. "ಆಯಾಸ ಆಗಿರಬೇಕಲ್ಲವೆ ಸಾರ್" ಅಂತ ಕೇಳಿದೆ. "ಈಗ ಸ್ವಲ್ಪ ದಣಿವಾದಂತೆ ಇದೆಯಪ್ಪ. ಮೈ-ಕೈ ನೋವಾದಂತೆ ಇದೆ...." ಅಂದರು. "ನಾನು ತಪ್ಪು ಮಾಡಿದೆ ಅನಿಸುತ್ತಿದೆ ಸಾರ್" ಅಂದೆ. "ಉಂಟೆ ಮತ್ತೂರ್, ಎಲ್ಲಾದರೂ ಉಂಟೆ.... ಸೌಥಾಂಪ್ಟನ್ ಯಾತ್ರೆ ಮಾಡಿಸಿಬಿಟ್ಟಿರಿ" ಎಂದು ಹೇಳಿ ೪-೫ ವರ್ಷದ ಮಗು ಸಂಭ್ರಮ ಪಡುವಂತೆ ಪಟ್ಟು ಹೇಳಿದರು. ಆದರೆ ಅವರು ದಣಿದಂತೆ ನನಗೆ ಕಂಡಿತು. ಎದೆ ಡವಡವ ಗುಟ್ಟುತ್ತಿತ್ತು. ೨೦-೨೨ ಗಂಟೆ ಕಾಲ ನಿದ್ದೆಯೇ ಇಲ್ಲದಂತಾಯಿತು ಎಂಬ ಭೀತಿ ನನ್ನನ್ನು ಕಾಡಿತು.

ಬ್ರಿಟಿಷ್ ಮ್ಯೂಸಿಯಂ ಬಳಿ, ನ್ಯೂ ಆಕ್ಸ್‌ಫರ್ಡ್ ಸ್ಟ್ರೀಟಿನ ೩೭ನೇ ನಂಬರ್‌ನಲ್ಲಿದ್ದ ನಮ್ಮ ವಿದ್ಯಾಭವನದ ಮುಂದೆ ಕೋಚ್ ಬಂದು ನಿಂತಾಗ ಬೆಳಗಿನ ಜಾವ ೫.೧೫. ವಿ.ಸೀ. ಅವರಿಗೆ ನಿದ್ದೆ ಹತ್ತಿತ್ತು. "ಸಾರ್ ಭವನ ಬಂದಿತು" ಎಂದೆ. 'ಆ್ಞ!' ಎಂದರು. 'ಇಳಿಯೋಣ' ಅಂದೆ. 'ಮ.....ಮ....ತ್ತೂ.....ರ್' ಎಂದು ಹೇಳುವುದಕ್ಕೇ ೧೦-೧೫ ಸೆಕೆಂಡ್ ತೆಗೆದುಕೊಂಡರು. 'ಸಾರ್, ನಿದ್ದೆಯೇ ಸಾರ್!' ಎಂದೆ. "ಇಲ್ಲಪ್ಪಾ, ಕಾಲಿನಲ್ಲಿ ಸಾ ಸಾ ಸ್ವಾಧೀನ ಇಲ್ಲಪ್ಪಾ" ಅಂದರು. ಮಾತು ತೊದಲಿತು. ಕುತ್ತಿಗೆ ಬಾಗಿತು.... ನನ್ನ ಎದೆ ಬಿರಿಯಿತು. 'ಸಾರ್!' ಎಂದು ಗಟ್ಟಿಯಾಗಿ ಅತ್ತೆ. ಕಾಲುಗಳ ಮೇಲೆ ಮುಖ ಇಟ್ಟು ಬಿಕ್ಕಿ ಬಿಕ್ಕಿ ಅತ್ತೆ... ದಿಕ್ಕು ತೋಚಲಿಲ್ಲ. ಆಕಾಶವೇ ತಲೆಯ ಮೇಲೆ ಕವಿದಂತಾಯಿತು. ಮೈಮುಮಡಿಕೊಂಡು ಬಿಟ್ಟಿತು. 'ಏನಪ್ಪಾ ಆಯಿತು?' ಎಂದು ಮೆಲ್ಲನೆ ಉಸಿರಿದರು.

ಡಾ|| ನಟರಾಜ ಎಂಬುವರು ನಮ್ಮ ಜತೆ ಬಂದಿದ್ದವರ ಪೈಕಿ ಒಬ್ಬರು. ನಾಟ್ಯಕಲಾವಿದೆ ರತಿಯವರ ದೊಡ್ಡಪ್ಪ. "ಮತ್ತೂರ್‌ಜಿ. ಕವಲ್ಯೆ ಪಡಾದಿಂಗೋ. Stroke ಪ್ಪೋಲಿರ್‌ಕ್. Ambulance ಕ್ಕೆ phone ಪಣ್ಣಿಂಗೋ. London Hospital ಕ್ಕೆ ಪ್ಪೋವ್ಪೋಂ....." ಅಂದರು.

ಇಬ್ಬರು ಮೂವರು ಎತ್ತಿಕೊಂಡು ಬಂದು ಕುರ್ಚಿಯ ಮೇಲೆ ಕೂರಿಸಿದೆವು. ಬಾಯಲ್ಲಿ ಎಂಜಲು ಇತ್ತು. ಅದನ್ನು ಉಗಿಯಬೇಕಾಗಿತ್ತು. ನನ್ನಾಕೆ ರಾಜಲಕ್ಷ್ಮಿ ಬೇಗ ಹೋಗಿ ಒಂದು ಪಾತ್ರೆ ತಂದಳು. ಅಕ್ಕಪಕ್ಕದಲ್ಲಿ ನೋಡುತ್ತ ಸಂಕೋಚ ಪಟ್ಟರು ವಿ.ಸೀ. ಅವರು. ನನಗೆ ಏನೂ ತೋಚಲಿಲ್ಲ. "ಉಗಿಯಿರಿ ಸಾರ್!" ಅಂದೆ. ಸುತ್ತ ಇದ್ದ ಹೆಂಗಸರನ್ನು ನೋಡಿ 'ಇವರೆದುರಿಗೆ ಉಗಿಯಲಿ ಹೇಗೆ?' ಎಂಬಂತೆ ಮುಖದಲ್ಲಿ ಸನ್ನೆ ಮಾಡಿದರು. ಹೆಂಗಸರು ಅತ್ತ ಸರಿದರು. ಬಹಳ ಸಂಕೋಚಪಟ್ಟುಕೊಂಡು ಆ ಪಾತ್ರೆಗೆ ಉಗಿದರು. ನಾನು ಮುಖ ಒರೆಸಿದೆ. 'ಏನಪ್ಪಾ, ಹೀಗೆ ನಿಮಗೆಲ್ಲ ಕಷ್ಟ ಕೊಡುವಂತಾಗಿ ಬಿಟ್ಟಿತಲ್ಲಾ' ಎಂದು ಅಸ್ಪಷ್ಟವಾಗಿ ಹೇಳಿದರು.

ಮರುದಿನ ಲಂಡನ್ ಆಸ್ಪತ್ರೆಗೆ

ಐದು ನಿಮಿಷದಲ್ಲಿ ಆಂಬುಲೆನ್ಸ್ ಬಂದಿತು. ಲಂಡನ್ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಪರೀಕ್ಷೆ ಮಾಡಿದರು. 'Not serious' ಅಂದರು. ಧಾರಾಳವಾಗಿ ಉಸಿರಾಡಿದೆ. ಡಾ|| ನಾರ್ಮನ್ ಅಂತ. ಅವರಲ್ಲಿಗೆ ಹೋಗಿ ಅಂಗಲಾಚಿ ಬೇಡಿಕೊಂಡೆ. "ವಿ.ಸೀ. ಅವರು ನಮ್ಮ ಭಾರತ ದೇಶದ ಅನರ್ಘ್ಯ ರತ್ನಗಳ ಪೈಕಿ ಒಬ್ಬರು. ನಿನ್ನೆ ತಾನೇ ಬಂದರು. ಸೌಥಾಂಪ್ಟನ್ನಿಗೆ ಹೋಗಿ ಇಂದು ಬೆಳಗಿನ ಜಾವ ವಾಪಸಾದೆವು. ಕೋಚಿನಿಂದ ಇಳಿಯಬೇಕು ಎನ್ನುವಾಗ ಸ್ವಾಧೀನ ಇಲ್ಲವಾಯಿತು. ನೀವು ಏನಾದರೂ ಮಾಡಿ ಇವರು ಯಥಾಸ್ಥಿತಿಗೆ ಬರುವಂತೆ ಮಾಡಬೇಕು. ನಿಮ್ಮ ದಮ್ಮಯ್ಯ, ಇವರಿಗೆ ಆಯಾಸ ಆಗುವಂತೆ ಮಾಡಿ ಪಾಪಕಾರ್ಯ ಮಾಡಿದೆ ಎಂಬ ಭೀತಿ ನನ್ನನ್ನು ಕಾಡುತ್ತಿದೆ. ನಿಮ್ಮನ್ನು ಬೇಡಿಕೊಳ್ಳುತ್ತೇನೆ" ಎಂದೆ.

"We shall try our best, it's all in the hands of God" ಎಂದರು. (ಶಕ್ತಿ ಮೀರಿ ಪ್ರಯತ್ನಿಸುತ್ತೇವೆ. ಫಲಿತಾಂಶ ದೇವರ ಕೈಯಲ್ಲಿ) ಎಲ್ಲ ವಿಧ ಪರೀಕ್ಷೆ ಆಯಿತು. ೨೪ ಗಂಟೆ ಕಳೆಯಿತು. ಬೆಂಗಳೂರಿಗೆ ಅವರ ಮಕ್ಕಳಿಗೆ ಸುದ್ದಿ ತಿಳಿಸಿದೆ. ಬರಸಿಡಿಲಿನಂತಹ ಸುದ್ದಿ ಆಗಿತ್ತು ಅವರಿಗೆ. ಕುಮಾರ್‌ಗೆ ಆಘಾತವೇ ಆಯಿತು.

ನನ್ನಾಕೆ– ನಾನು ಅರೆಕ್ಷಣವೂ ಆಸ್ಪತ್ರೆಯಿಂದ ಹೊರಗೆ ಹೋಗಲಿಲ್ಲ..... ಇನ್ನೊಂದು ದಿನ ಕಳೆಯಿತು. 'ಇಂಪ್ರೂವಿಂಗ್!' ಅಂದರು ಡಾ।। ನಾರ್ಮನ್.

ಮುಖದಲ್ಲಿ ಗೆಲುವು

ಮೂರನೆಯ ದಿನ ಬೆಳಿಗ್ಗೆ ವಿ.ಸೀ. ಎದ್ದರು. ನರ್ಸುಗಳು ಮುಖ ತೊಳೆದು, ಹಲ್ಲು ಉಜ್ಜಿ, ಬಾಯಿ ಮುಕ್ಕಳಿಸುವಂತೆ ಮಾಡಿದರು. ಮುಖ ಗೆಲುವಾಗಿ ಕಂಡಿತು. ನಮ್ಮಿಬ್ಬರ ಮುಖಗಳೂ ಅರಳಿದವು. "ಈಗ ಮಾತಾಡುವುದಕ್ಕೆ ಆಗುತ್ತದೆಯಲ್ಲವೆ ಸಾರ್? ಕೈ ಸಹ ತಾನಾಗಿ ಎತ್ತಿ, ಇಡಲು ಆದಂತೆ ಇದೆ" ಅಂದೆ.

"I feel better" ಎಂದರು.....!' "ನಾನು ತಪ್ಪು ಮಾಡಿಬಿಟ್ಟೆ ಸಾರ್... ನೀವು ಕ್ಷಮಿಸುವಿರಿ ಅಲ್ಲವೆ?" ಎಂದೆ. "ಸೌಥಾಂಪ್ಟನ್ನಿನಲ್ಲಿ ಅಷ್ಟೊಂದು ಜನರ ಮೆಚ್ಚುಗೆ ಬಂದಿತು, ನಾನು ಉಬ್ಬಿಹೋದೆ. ದೃಷ್ಟಿ ಆಯಿತು ಎಂಬಂತೆ ಆಗಿ ಬಿಟ್ಟಿತಲ್ಲಾ" ಅಂದೆ. "ಸುಖಸ್ಯಾನಂತರಂ ದುಃಖಂ, ದುಃಖಸ್ಯಾನಂತರಂ ಸುಖಂ. ಸಮುದ್ರದ ಅಲೆಯಂತೆ ಒಂದರ ನಂತರ ಒಂದಪ್ಪ.... ಅದಕ್ಕೆ ಎದೆಗುಂದಬಾರದು" ಎಂದರು. ಪಾರ್ಶ್ವವಾಯು ಹೊಡೆದು ೭೨ ಗಂಟೆ ಆದ ಮೇಲೆ ವಿ.ಸೀ. ಅವರ ಮುಖದಿಂದ ಬಂದ ಮೊದಲ ಮಾತು ಇದು! "ಹಾಗಾದರೆ ಈ ದುಃಖವು ನೀಗಿ ಸುಖದ ದಿನ ಬೇಗನೇ ಬರಬೇಕು, ಅಲ್ಲವೆ ಸಾರ್?" ಅಂತ ಕೇಳಿದೆ. ಅವರ ಕಾಲು ಅಮುಕುತ್ತ ಇದ್ದೆ. ಅವರಿಗೆ ಅದು ಹಿತವಾದಂತೆ ಕಂಡಿತು. 'ಬೇಡಪ್ಪಾ, ಬೇಡಪ್ಪಾ' ಎನ್ನುತ್ತಿದ್ದರು.

"ತಮಗೆ ಹೀಗಾದರೂ ನನಗೆ ಈ ಸೇವೆ ಮಾಡುವ ಭಾಗ್ಯ ಸಿಕ್ಕಿತು" ಅಂದೆ. ಮುಂದೆ ಮಾತಾಡಲಾಗಲಿಲ್ಲ ನನ್ನಿಂದ..... ನನಗೆ ಭಾಗ್ಯಬೇಕು ಎಂದು ಇವರು ನರಳಬೇಕೆ? ಲಜ್ಜಿತನಾದೆ.

ಹೀಗಾಯಿತು ಹೇಗೆ?

ವಿ.ಸೀ. ಅವರು ಹೇಳಿದಂತೆ ದುಃಖದ ನಂತರ ಸುಖ ಬರುತ್ತದೆ ಎಂಬ ಮಾತು ಬೇಗನೇ ನಿಜವಾಯಿತೋ, 'ನಮ್ಮ ಕೈಲಾದದ್ದನ್ನು ಮಾಡುತ್ತೇವೆ. ಫಲಿತಾಂಶ ದೇವರ ಕೈಯಲ್ಲಿ,' ಎಂದು ಹೇಳಿದ ಡಾ।। ನಾರ್ಮನ್‌ರ ಮಾತಿಗೆ ದೇವರು ಒಗೊಟ್ಟನೋ, 'ಗೋವಿಂದ, ಕೃಷ್ಣಾ! ನಾವು ಯಾವ ಪಾಪ ಮಾಡಿದ್ದಕ್ಕೆ ಈ ಶಿಕ್ಷೆ ಕೊಟ್ಟೆ ನಮಗೆ?' ಎಂದು ನಾವಿಬ್ಬರೂ ಮಾಡಿದ ಪ್ರಾರ್ಥನೆಯನ್ನು ಕೇಳಿ ಆ ಕೃಷ್ಣನ ಮನಕರಗಿತೋ, ಯಾವ ಒಂದು ಪ್ರಾಣಿಯ ಮನಸ್ಸೂ ನೋಯದಂತೆ ಶುಚಿಯಾದ, ಸತ್ಯ–ಧರ್ಮ ಭೂಯಿಷ್ಠವಾದ

ಜೀವನ ನಡೆಸಿದ ವಿ.ಸೀ. ಅವರ ಪುಣ್ಯ ಕರ್ಮದ ಫಲದ ಪರಿಣಾಮವೋ, ಪೂಜ್ಯ ವಿ.ಸೀ. ಅವರ ಅಸಂಖ್ಯ ಬಂಧು ಮಿತ್ರರ ಶುಭ ಹಾರೈಕೆಯ ಫಲವೋ, ತಮ್ಮನ್ನು ಹಡೆದ ತಂದೆಯನ್ನು ನೋಡಿಕೊಳ್ಳುವಂತೆ ನೋಡಿಕೊಂಡ ನಾಲ್ವರು ನರ್ಸುಗಳ ಆದರಾತಿಥ್ಯದ ಪರಿಣಾಮವೋ, 'ದೊಡ್ಡ ಜೀವ ಇದು. ಇನ್ನೂ ನಾಲ್ಕು ಕಾಲ ಇದ್ದರೆ ಸಮಾಜಕ್ಕೆ ಇನ್ನಷ್ಟು ಉಪಕಾರವಾಗುತ್ತದೆ, ಇರಲಿ' ಎಂದು ಆ ಮೃತ್ಯು ದೇವತೆಗೇ ಅನಿಸಿತೋ... ಯಾವ ಒಂದೋ – ಅಥವಾ ಎಲ್ಲದರ ಒಟ್ಟು ಪರಿಣಾಮವೋ – ದೈವ ಮಾತ್ರ ಬಲ್ಲುದು, ಹದಿನಾರನೆಯ ದಿನ ಆಸ್ಪತ್ರೆಯಿಂದ ಭವನಕ್ಕೆ ಬಂದರು.

ಸ್ನಾನಮಾಡಿ ತಾವೇ ಧೋತರ ಉಟ್ಟುಕೊಂಡರು. ಕೈಗಳಿಗೆ ಶಕ್ತಿ ಬಂದಿತ್ತು. ಕಚ್ಚೆ ಪಂಚೆ ಉಟ್ಟುಕೊಂಡು ಮುಂಭಾಗವನ್ನು ಎರಡೂ ಕೈಗಳಿಂದ ಇಸ್ತ್ರಿ ಮಾಡುವಂತೆ ನೀವಿಕೊಂಡು ನನ್ನ ನೋಡಿ ಮುಗುಳುನಗೆ ನಕ್ಕರು.

ತಾವೇ ಕೈಯಿಂದ ಊಟ ಮಾಡಿದರು. "ಒಂದೆರಡು ವಾರ ನೋಡಬೇಕಾದ ಕೆಲವು ಜಾಗಗಳನ್ನು ನೋಡಬೇಕು ಅನಿಸುತ್ತದೆಯಪ್ಪ. ಆ ಡಾಕ್ಟರಿಗೆ, ಆ ನರ್ಸುಗಳಿಗೆ ಒಂದೊಂದು ಪತ್ರ ಬರೆಯಬೇಕು" ಅಂದರು.

ಕುಮಾರಿ ಕೃಷ್ಣಾಳ ಸೇವೆ

ವಿದ್ಯಾಭವನದಲ್ಲಿ 'ಕೃಷ್ಣಾ' ಎಂಬ ಹುಡುಗಿ ಕೆಲಸ ಮಾಡುತ್ತಿದ್ದಳು. ಆಕೆ ಸ್ಕಾಟ್ಲೆಂಡಿನವಳು. ಆದರೆ ಭಾರತೀಯ ಸಂಸ್ಕೃತಿಗೆ ಮಾರು ಹೋಗಿದ್ದಳು. ಮೋರ್ಗನ್ ಎಂಬ ತನ್ನ ಹೆಸರನ್ನು ಬದಲಿಸಿ ಕೃಷ್ಣಾ ಎಂದು ಇಟ್ಟು ಕೊಂಡಿದ್ದಳು. ಯೋಗಾಭ್ಯಾಸ ಮಾಡಿ ಭವನದಲ್ಲಿ ಯೋಗದ ತರಗತಿಗಳನ್ನು ನಡೆಸುತ್ತಿದ್ದಳು.

ಪುರುಷಸೂಕ್ತ, ಶ್ರೀಸೂಕ್ತ, ನಾರಾಯಣಸೂಕ್ತ, ಶ್ರೀರುದ್ರ ಮೊದಲಾದ ವೇದ ಮಂತ್ರಗಳನ್ನು ಕಲಿತ ಆರೇಳು ಮಂದಿಯ ಪೈಕಿ ಇವಳೂ ಒಬ್ಬಳು. ಒಂದು ಸಲ ಹೇಳಿದರೆ ಸಾಕು, ಕಂಠಸ್ಥವಾಗಿ ಬಿಡುತ್ತಿತ್ತು. ಅಸಾಧಾರಣ ಬುದ್ಧಿಶಕ್ತಿ. ವಿ.ಸೀ. ಅವರನ್ನು ಕೇಂಬ್ರಿಜ್, ಬ್ರಿಟಿಷ್ ಮ್ಯೂಸಿಯಂ, ಸೇಂಟ್‌ಪಾಲ್ ಚರ್ಚ್, ಮ್ಯಾಡಂ ಟುಸಾಟ್, ಟವರ್ ಬ್ರಿಜ್, ಬಕಿಂಗ್ಹಾಂ ಪ್ಯಾಲೇಸ್, ವಿಂಬಲ್‌ಡನ್ ಟೆನ್ನಿಸ್ ಕೋರ್ಟ್, ಲಂಡನ್ ಟೈಂಸ್ಸ್ ಪತ್ರಿಕಾಲಯ, ಮೊದಲಾದ ಜಾಗಗಳಿಗೆ ಕಾರಿನಲ್ಲಿ ಹೋಗಿ ಗಾಲಿಯ ಕುರ್ಚಿಯಲ್ಲಿ (Wheel Chair) ಕೂರಿಸಿ ತಳ್ಳಿಕೊಂಡು ಹೋಗಿ ತೋರಿಸಿದಳು.

"ಮಗಳು ತಂದೆಗೆ ಮಾಡುವಂತೆ ಮಾಡುತ್ತೀಯಲ್ಲಮ್ಮಾ" ಎಂದು ವಿ.ಸೀ. ಅವರು ಆಕೆಗೆ ಹೇಳಿದಾಗ, "ನಿಮ್ಮಂತಹ ತಂದೆಯನ್ನು ಪಡೆಯಲು ನಾನು ಅದೆಷ್ಟು ಪುಣ್ಯ ಮಾಡಿದರೆ ತಾನೇ ಸಾಧ್ಯವಾಗುತ್ತದೆ?" ಎಂದು ಕೇಳಿದಳು.

ರಾಮಾಯಣ–ಮಹಾಭಾರತ ಪ್ರವಚನ

ವಿದ್ಯಾಭವನದಲ್ಲಿ ದಿನವೂ ಸಂಜೆ ರಾಮಾಯಣ–ಮಹಾಭಾರತದ ಕಥಾ ಸನ್ನಿವೇಶ

ಗಳನ್ನು ಹೇಳುತ್ತಿದ್ದರು. ಜಯದ್ರಥವಧೆ ವಿ.ಸೀ. ಅವರಿಗೆ ತುಂಬ ಇಷ್ಟದ ಭಾಗ. ಅವರಿಂದ ನಾನು ಹಿಂದೆ ಕೇಳಿದ್ದೆ, ಪುನಃ ಕೇಳಬೇಕು ಅನಿಸಿತು. ಹೇಳಿದರು. ಧ್ವನಿಸುರುಳಿಯಲ್ಲಿ ಅವರ ಮಾತನ್ನೆಲ್ಲ ಹಿಡಿದಿಟ್ಟೆ.

ಶ್ರೀ ಕೃಷ್ಣನ–ಅರ್ಜುನನ ಮೈತ್ರಿಯ ಬಗೆಗೆ ಹೇಳುತ್ತಿದ್ದಾಗ ವಿ.ಸೀ. ಅವರಲ್ಲಿ ಶ್ರೀ ಕೃಷ್ಣನೇ ಬಂದು ಆವಿರ್ಭವಿಸಿ ಮಾತನಾಡುತ್ತಿದಾನೋ ಎಂದನಿಸುತ್ತಿತ್ತು. ಭವನದಲ್ಲಿ ಇದ್ದ ಹದಿನೈದು ದಿನಗಳಲ್ಲಿ ವಿ.ಸೀ. ಅವರಿಗೆ ಬಹು ಮಂದಿ ಮಿತ್ರರಾದರು.

ಪ್ರತಿಮಾ ನಾಟಕ ವಾಚನ

ಭಾಸನ ಪ್ರತಿಮಾ ನಾಟಕವನ್ನು ಅವರು ಓದಿ ಕೇಳಬೇಕು ಎಂಬ ಆಸೆ ಬಹಳ ದಿನಗಳಿಂದ ಇತ್ತು. ೧೫–೧೬ ಜನ ದಿನಾಲೂ ಸಂಜೆ ಬಂದು ಸೇರುತ್ತಿದ್ದರು. 'ಈ ನಾಟಕವನ್ನು ಓದುವಿರಾ ಸಾರ್' ಎಂದು ಕೇಳಿಕೊಂಡೆ. 'ಆಗಲಿ' ಅಂದರು.

ಎರಡು ದಿನ ೯೦–೯೦ ನಿಮಿಷ ಓದಿದರು. ಎಲ್ಲರೂ ಬಹಳ ಕುತೂಹಲದಿಂದ ಕೇಳಿದರು. ಕೇಳಿದವರ ಪೈಕಿ ಇಟಲಿಯ ಟಾಮ್ ಬೂಷಾ ಎಂಬುವರು ಒಬ್ಬರು. ಭಾರೀ ಶ್ರೀಮಂತ ಈತ. ಆರು ಅಡಿ ಎರಡಂಗುಲ ಎತ್ತರ. ಸ್ಫುರದ್ರೂಪಿ. ಹಸನ್ಮುಖಿ. ವಿ.ಸೀ. ಅವರಿಗೆ ಪ್ರಿಯನಾಗಿದ್ದ ಕವಿ ಎಜ್ರಾ ಪೌಂಡ್ ಸಂಬಂಧಿ. ವಿ.ಸೀ. ಅವರ ಮೇಲೆ ಹೆಚ್ಚಿನ ಗೌರವ ಮೂಡಿತು ಆತನಿಗೆ. ವಿ.ಸೀ. ಅವರಿಗೂ ಆತ ಇಷ್ಟವಾದರು. 'ಮನಮೋಹಕ ರೂಪವು ದೇವರ ವಿಶೇಷ ಸೃಷ್ಟಿ, ಮತ್ತೂರ್' ಎನ್ನುತ್ತಿದ್ದರು.

ವಿ.ಸೀ. ಅವರು ಕತ್ತು ಎತ್ತಿಯೇ ಮಾತಾಡಬೇಕಿತ್ತು. ಜಿಂಕೆಯು ಜಿರಾಫೆಯೊಂದಿಗೆ ಮಾತಾಡುವಂತೆ ಕಾಣುತ್ತಿತ್ತು, ಅವರಿಬ್ಬರೂ ಮಾತಾಡುತ್ತಿದ್ದಾಗ! ನಾಟಕವಾಚನ ಮುಗಿದ ಮೇಲೆ 'ನಾಟಕದ ಕಥಾವಸ್ತು ಚನ್ನಾಗಿದೆ. ಆದರೆ ಅದಕ್ಕಿಂತ ಚನ್ನಾಗಿರುವುದು ನಿಮ್ಮ ನಿರೂಪಣೆ. ನಿಮ್ಮ ಪಾತ್ರ ನಿರೂಪಣೆಯನ್ನು ಕೇಳುವಾಗ ನಮ್ಮ ಅರಿವು ನಮಗೆ ಇರುವುದಿಲ್ಲ. ತಲೆಬಾಗಿ ನಮಿಸುತ್ತೇನೆ ನಿಮಗೆ "ಎಂದು ಬೂಷಾ ಹೇಳಿದಾಗ ವಿ.ಸೀ. ಅವರ ಕಂಗಳಿಂದ ಆನಂದಾಶ್ರು ತೊಟ್ಟಿಕ್ಕಿತು.

"ನಿಮಗೆ ಯಾವ ಪಾತ್ರ ಇಷ್ಟವಾಯಿತು ಟಾಂ?" ಎಂದು ವಿ.ಸೀ. ಅವರು ಕೇಳಿದಾಗ, "My heart bleeds for that poor Emperor Dasaratha...." ಎಂದು ಉತ್ತರ ಕೊಟ್ಟದ್ದನ್ನು ಕೇಳಿ ವಿ.ಸೀ. ಅವರು ಸುಮಾರು ೨–೩ ನಿಮಿಷ ನಕ್ಕಿದ್ದಾರೆ. ಅವರ ನಗುವನ್ನು ನೋಡುವುದು ಒಂದು ಸುಯೋಗ!

ಟಾಂ ತಮ್ಮ ರೋಲ್ಸ್ ರಾಯ್ಸ್ ಕಾರಿನಲ್ಲಿ ಇಡಿಯ ದಿನ ಲಂಡನ್ ನಗರವನ್ನು ತೋರಿಸಿಕೊಂಡು ಬಂದರು. ಆತನಿಂದಾಗಿ ವಿ.ಸೀ. ಬಹುವಾಗಿ ಮೆಚ್ಚಿ (ಕನ್ನಡಕ್ಕೂ ಅನುವಾದಿಸಿದ್ದ) ಬರ್ನಾರ್ಡ್ ಷಾರ ಪಿಗ್‌ಮೇಲಿಯನ್ ನಾಟಕವನ್ನು ನೋಡಿ ಬಂದರು. ಆಕ್ಸ್‌ಫರ್ಡ್ ನೋಡಲಾಗಲಿಲ್ಲವೆಂಬ ಕೊರತೆಯೊಂದು ಅವರಲ್ಲಿ ಉಳಿಯಿತು.

"ಒಂದು ತಿಂಗಳಾಗುತ್ತ ಬಂದಿತು, ಇನ್ನು ಹೊರಡಬೇಕಪ್ಪಾ. ಕಾಲೇಜಿನಲ್ಲಿದ್ದಾಗ

ಬ್ರಿಟನ್ ನೋಡಬೇಕು ಅನಿಸಿತ್ತು. ಅರ್ಧ ಪ್ರಪಂಚವನ್ನು ಆಳಿದ ಜನಾಂಗ ಇದು. ನೀವು ಆ ಆಸೆಯನ್ನು ನೆರವೇರಿಸಿದಿರಿ. ನೀವು ಚೆನ್ನಾಗಿರಿ, ಕೀರ್ತಿಶಾಲಿಗಳಾಗಿರಿ. ನಮ್ಮ-ನಿಮ್ಮದು ಯಾವುದೋ ಜನ್ಮದ ಋಣಾನುಬಂಧ...." ಎಂದರು.

"ಇಲ್ಲ ಸಾರ್, ನಾನು ನಿರ್ಭಾಗದೇಯ. ಇಲ್ಲಿಗೆ ಬಂದ ಮರುದಿನವೇ ತಮಗೆ ಹೀಗಾಗಬೇಕೆ?" ಎಂದೆ. "ಹಾಗಂದುಕೋಬೇಡಪ್ಪ. ಆಗುವುದು ಎಲ್ಲಿದ್ದರೂ ಆಗುತ್ತಿತ್ತು. ಬೆಂಗಳೂರಲ್ಲಿ ಆಗಿದ್ದಿದ್ದರೆ ಇಂಥ ಆಸ್ಪತ್ರೆ, ಈ ಚಿಕಿತ್ಸೆ, ಈ ನಿಗಾ ಇರುತ್ತಿತ್ತೇ? ಇಷ್ಟು ಬೇಗ ಗುಣಮುಖನಾಗುತ್ತಿದ್ದೆನೇ? ಇಲ್ಲಿಗೆ ಬಂದಾಗ ಈ ವ್ಯಾಧಿ ಬಂದದ್ದೂ ಒಂದು ವಿಧದಲ್ಲಿ ಒಳ್ಳೆಯದೇ ಆಯಿತು" ಅಂದರು.

ಏನನ್ನೋ ಕೇಳಬೇಕು ಎಂಬ ಸಂಕೋಚ ಅವರನ್ನು ಕಾಡುತ್ತಿದ್ದಂತೆ ಭಾಸವಾಯಿತು. ಎರಡು ಮೂರು ಬಾರಿ ನನ್ನ ಕಡೆ ನೋಡಿದರು.

"ಏನು ಸಾರ್?" ಅಂದೆ.

"ಮತ್ತೂರ್! ಈ ಚಿಕಿತ್ಸೆಗೆ ತುಂಬಾ ಖರ್ಚಾಗಿರಬೇಕಲ್ಲವೇನಪ್ಪ ನಿಮಗೆ? ನಿಮ್ಮ ಮೇಲೆ ಈ ಭಾರ ಹೊರಿಸಿಬಿಟ್ಟೆನಲ್ಲಾ ನಾನು" ಅಂದರು.

ಲಂಡನ್ ಹಾಸ್ಪಿಟಲ್‌ನ ಗೌರವ ಅತಿಥಿ.

ವಿ.ಸೀ. ಅವರು ಸೌಜನ್ಯದ ಗಣಿ. ದಾಕ್ಷಿಣ್ಯಪರರು. ಯಾರಿಗೂ, ಯಾವ ಪ್ರಾಣಿಗೂ ಕಷ್ಟ ಆಗಬಾರದು ತಮ್ಮಿಂದ ಎಂಬುದು ಅವರ ನೀತಿ. ಅದು ನನಗೆ ತಿಳಿದಿದ್ದಿತು. ಲಂಡನ್ ಹಾಸ್ಪಿಟಲ್‌ನ ಡಾ|| ನಾರ್ಮನ್ ಅವರಿಂದ ಪಡೆದ ಪತ್ರವನ್ನೂ ಜೇಬಿನಲ್ಲಿ ಇಟ್ಟಿದ್ದೆ. ತೋರಿಸಿದೆ. ಓದಿದರು. ಅವರ ಕಂಗಳಿಂದ ಹೊರಬಂದ ನೀರ ಹನಿ ಆ ಪತ್ರದ ಮೇಲೆ ಬಿದ್ದವು.

"Dear Mathoor,

My colleagues and myself are very pleased to know that Prof. V. Sitaramiah has fully recovered. The progress was remarkable, beyond our expectation.

It was my privilege to have met such a noble person. He is a gentleman. You have such a Guru. I envy you!

I hope, you will be pleased to know that we have treated him as our **honoured guest.**

Please convey our regards to Prof. Sitaramiah. The nurses and my fellow colleagues join me.

Yours Sincerely

ಈ ಪತ್ರವು ವಿ.ಸೀ. ಅವರ ಫೈಲಿನಲ್ಲಿ ಇರಬೇಕು. ಪತ್ರದ ಪೊಕ್ಕಣೆ ಕವಿಯಲ್ಲಿ ಇಂದಿಗೂ ಮೊಳಗುತ್ತಿದೆ.

ಆಡಿಗಡಿಗೆ ಡಾ|| ನಾರ್ಮನ್ ಅವರನ್ನು ನೋಡುತ್ತಿದ್ದೆ. 'ಪ್ರೊಫೆಸರ್ ಹೇಗಿದಾರೆ?' ಎಂದು ವಿಚಾರಿಸುತ್ತಿದ್ದರು. 'ಆ ವಯಸ್ಸಿನಲ್ಲಿ ಅಷ್ಟು ಬೇಗ ಗುಣವಾದದ್ದು ನಮಗೂ ಅಚ್ಚರಿ ತಂದಿತು' ಎಂದು ಹೇಳುತ್ತಿದ್ದರು.

ಪೂಜ್ಯ ವಿ. ಸೀ. ಅವರು ನಮ್ಮನ್ನು ಅಗಲುವುದಕ್ಕೆ ಒಂದು ವರ್ಷ ಮುಂಚೆ ಡಾ|| ನಾರ್ಮನ್ ತೀರಿಕೊಂಡರು. ನಾನು ಅವರ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಲು ಹೋಗಿದ್ದೆ. ವಿ. ಸೀ. ಅವರನ್ನು ಗುಣಪಡಿಸಿದ ಶ್ರೀಮನ್ನಾರಾಯಣನಂತಹ ವೈದ್ಯರು ಎಂದು ನಮಿಸಿ ಪುಷ್ಪಗುಚ್ಛ ಅರ್ಪಿಸಿದೆ.

ಹಿಂದಿನಂತೆ ಆದರು

ಹೀಥ್ರೋ ವಿಮಾನ ನಿಲ್ದಾಣದಿಂದ ವಿ.ಸೀ. ಅವರನ್ನು ಕಳಿಸಿಕೊಡುವಾಗ ಪಾದಗಳಿಗೆ ಎರಗಿದೆ. ಮೃದುವಾದ ಕೈಯಿಂದ ಹರಸಿದರು. "ತಾವು ಆಡಿಗಡಿಗೆ ಹೇಳುತ್ತೀರಿ. ಅದು ಒಂದೇ ತಿಂಗಳಲ್ಲಿ ನಿಜ ಆಯಿತು. "ಸುಖಸ್ಯಾನಂತರಂ ದುಃಖಂ, ದುಃಖಸ್ಯಾನಂತರಂ ಸುಖಂ." ಆದರೆ ಈ ಸುಖದ ಅಲೆಯು ಹತ್ತಾರು ವರ್ಷ ಇರಲಿ ಎಂದು ದೇವರನ್ನು ಪ್ರಾರ್ಥಿಸುತ್ತೇನೆ" ಎಂದೆ.

ನನ್ನ ಇಷ್ಟದೈವ ಶ್ರೀಕೃಷ್ಣ ನನ್ನ ಪ್ರಾರ್ಥನೆಯನ್ನು ನಡೆಸಿಕೊಟ್ಟ. ಪೂಜ್ಯ ಗುರುಗಳು ಹತ್ತು-ಹನ್ನೆರಡು ವರ್ಷ ಇದ್ದರು. ನಾಲ್ಕಾರು ಪುಸ್ತಕ ಬರೆದರು. ಭಾಷಣಗಳನ್ನು ಮಾಡಿದರು. ಹಿಂದಿನಂತೆ ಆದರು.

ವಿ.ಸೀ. – ಕೆಲವು ನೆನಪುಗಳು

ಎಸ್. ಎನ್. ಶಿವಸ್ವಾಮಿ

ಇದನ್ನು "ವಿ.ಸೀ. – ಕೆಲವು ಸವಿನೆನಪುಗಳು" ಎಂದು ಬರೆಯಲಾಗಲಿಲ್ಲವಲ್ಲಾ ಎನ್ನುವುದೇ ನನ್ನ ಕೊರಗು. ಅವರ ಬಗ್ಗೆ ನನ್ನ ಮನಸ್ಸಿನ ಮೇಲೆ ತೀವ್ರವಾದ ಪರಿಣಾಮವುಂಟುಮಾಡಿದ ನೆನಪು ಸವಿಯಲ್ಲ, ಬಹಳ ಕಹಿ. ವಿ.ಸೀ. ಯವರ ಜತೆಯಲ್ಲಿ ಕೆಲವು ವರ್ಷ ಕೆಲಸಮಾಡಿ (ರೇಡಿಯೋ ಕ್ಷೇತ್ರದಲ್ಲಿ) ಅವರ ಸಂಗದಲ್ಲಿ ಸವಿಯನ್ನೇ ಸವಿದು ನಲಿದಿದ್ದ ನಾನು ಬೆಂಗಳೂರು ಬಿಟ್ಟು ಬೇರೆ ಕೇಂದ್ರಗಳಿಗೆ ಹೋದ ಮೇಲೆ ಅವರ ಸುದ್ದಿ ಅಷ್ಟಿಷ್ಟು ಮಾತ್ರ ನನ್ನನ್ನು ತಲಪುತ್ತಿತ್ತು. ಅವುಗಳಲ್ಲೊಂದು, ಅವರು ಲಂಡನ್ನಿಗೆ ಹೋಗಿ ಅಲ್ಲಿ ಅಸ್ವಸ್ಥರಾಗಿ ಹಿಂದಿರುಗಿದ್ದರೆಂಬುದು. ಆಮೇಲೆ ನಾನು ಬೊಂಬಾಯಿಯಲ್ಲಿದ್ದಾಗ ನನ್ನನ್ನು ಮುಟ್ಟಿದ ಸುದ್ದಿ ವಿ.ಸೀ. ಯವರು ತಕ್ಕಮಟ್ಟಿಗೆ ಚೇತರಿಸಿಕೊಂಡಿದ್ದರೆನ್ನುವುದು. ಇದನ್ನು ಕೇಳಿದ ಮೇಲೆ ನಾನು ಈ ಸಲ ಬೆಂಗಳೂರಿಗೆ ಹೋದಾಗ ಬೇರೆ ಯಾರನ್ನು ನೋಡಲಿ, ಬಿಡಲಿ, ವಿ.ಸೀ.ಯವರನ್ನು ನೋಡಿಕೊಂಡು ಬರುವುದೆಂದು ನಿಶ್ಚಯಿಸಿದೆ. ಹಾಗೇ ಮಾಡಿದೆ. ಚಾಮರಾಜಪೇಟೆಯಲ್ಲಿ ನನಗೆ ಚಿರಪರಿಚಿತವಾಗಿದ್ದ ಅವರ ಮನೆಗೆ ಒಂದು ಬೆಳಿಗ್ಗೆ ಹೋದೆ. ಆಗ ಅವರು ಮನೆಯಲ್ಲಿಲ್ಲವೆಂದೂ ಸಾಹಿತ್ಯ ಪರಿಷತ್ತಿನ ಕಡೆಗೆ ಹೋಗಿದ್ದಾರೆಂದೂ ತಿಳಿದು ಬಂತು. ಅವರು ಪರಿಷತ್ತಿಗೆ ಹೋಗಿ ಬರುವಷ್ಟು ಶಕ್ತಿಶಾಲಿಯಾಗಿದ್ದರೆಂದು ಊಹಿಸಿ ಹರ್ಷದಿಂದ ನಾನು ಪರಿಷತ್ತಿನ ಕಡೆಗೆ ಕಾಲುಹಾಕಿದೆ.

ಆದರೆ ಬೀದಿಯ ಒಂದು ತಿರುವು ತಿರುಗುವುದರೊಳಗಾಗಿ ನಾನು ಕಂಡದ್ದು ಒಂದು ಹೃದಯ ವಿದ್ರಾವಕ ದೃಶ್ಯ. ವಿ.ಸೀ.ಯವರು ನಡೆಯಲು ಶ್ರಮಪಡುತ್ತ, ತಮ್ಮ ಮಗ ಕೃಷ್ಣಮೂರ್ತಿಯ ಹೆಗಲ ಮೇಲೆ ಕೈಯೂರಿ ಕುಂಟುತ್ತ ನನ್ನ ಮುಂದೆ ಹೋಗುತ್ತಿದ್ದದ್ದು. ಆವರೆಗೆ ನನ್ನ ನೆನಪಿನಲ್ಲಿದ್ದ ಠೀಕುಠಾಕು ವಸ್ತ್ರಧಾರಿ ವಿ.ಸೀ., ಲವಲವಿಕೆಯ ದಿಟ್ಟ ನಿಲುವಿನ ವಿ.ಸೀ., ಮಂದಹಾಸದಿಂದ ಮಿನುಗುವ ಮುಖಮುದ್ರೆಯ ವಿ.ಸೀ. ಅಲ್ಲಿರದೆ ಯಾತನೆಯಲ್ಲಿ ಅವರು ಕೃಶರಾಗಿ ದೈನ್ಯವಾಗಿ ತಲೆತಗ್ಗಿಸಿ ಕಾಲೆಳೆಯುತ್ತಿದ್ದರು. ಅವರು ತಲೆಯೆತ್ತಿ ನನ್ನನ್ನು ಗುರುತಿಸಿ ಏನೋ ಹೇಳಿದರು, ಸ್ಪಷ್ಟವಾಗಿರಲಿಲ್ಲ. ಆದರೆ ನನ್ನನ್ನು ನೋಡಿ ಅವರಿಗೆ ಸಂತೋಷವಾಗಿರಬೇಕು. ಅವರ ತುಟಿಯಂಚಿನಲ್ಲಿ ಸುಳಿನಗುವಿನ ಮಿಂಚು ಕಾಣಿಸಿತು. ಕಣ್ಣುಗಳಲ್ಲಿ ಹೊಳಪು. ಆದರೆ ಹಿಂದಿನ ತೀಕ್ಷ್ಣತೆ ಅವುಗಳಲ್ಲಿಲ್ಲ. ವಿ.ಸೀ.ಯವರ

ಮಾತುಗಳನ್ನು ಕೇಳುವುದಕ್ಕಿಂತಲೇ ಅವರೆದುರಿಗೆ ಹೋಗಿ ನಿಂತು ಅವರ ಅಮೂಲ್ಯ ಸಮಯ ಕಳೆಯುತ್ತಿದ್ದ ನನಗೆ ಮಾತಿಲ್ಲದ ಆ ದಿನದ ಅನುಭವ ಗರ ಬಡಿದ ಹಾಗಿತ್ತು. ನನ್ನ ಜೀವನದ ಅತ್ಯಂತ ಕಹಿ ಅನುಭವಗಳಲ್ಲೊಂದಾಗಿತ್ತು ಅದು.

ವಿ.ಸೀ. ಯವರನ್ನು ಕಾಣುವುದಕ್ಕೆ ಮುಂಚೆಯೇ, ಅಂದರೆ ನನ್ನ ಸ್ಕೂಲು ದಿನಗಳಲ್ಲೇ, ನಾನು ಅವರ ಬರೆಹಗಳಿಂದ ಆಕರ್ಷಿತನಾಗಿದ್ದೆ. "ಸೊಹ್ರಾಬ್ ರುಸ್ತುಂ" ನಾಟಕ ನನಗೆ ಪಠ್ಯಪುಸ್ತಕವಾಗಿತ್ತು. ಅದರಲ್ಲಿನ ತಂದೆಮಕ್ಕಳ ರೌದ್ರ ಸಂವಾದ ನನ್ನನ್ನು ಮರುಳು ಮಾಡಿತ್ತು. ಮುಂದೆ ನಾನು ಇಂಟರ್ ಮೀಡಿಯೆಟ್ ಹಾಗೂ ಸೆಂಟ್ರಲ್ ಕಾಲೇಜುಗಳ ವಿದ್ಯಾರ್ಥಿಯಾಗಿದ್ದಾಗ ವಿ.ಸೀ. ಯವರು ಅಲ್ಲಿ ಅಧ್ಯಾಪಕರಾಗಿದ್ದರು. ಅಷ್ಟೇ ಅಲ್ಲ, ಅವರ ಗುರುಗಳು ಬಿ. ಎಂ. ಶ್ರೀಕಂಠಯ್ಯನವರು ಆಗ ಇಂಗ್ಲಿಷ್ ಪ್ರಾಧ್ಯಾಪಕರು. ಹಾಗೇ ವಿ.ಸೀ.ಯವರ ಶಿಷ್ಯರೆಂದೇ ಹೇಳಿಕೊಳ್ಳುತ್ತಿದ್ದ ಜಿ. ಪಿ. ರಾಜರತ್ನಂ ಅವರೂ ಪ್ರಾಧ್ಯಾಪಕ ರಾಗಿದ್ದರು. ಈ ಮೂವರು ಮಹನೀಯರ ಪೈಕಿ ಬಿ.ಎಂ.ಶ್ರೀ.ಯವರೊಬ್ಬರೇ ನಮ್ಮ ತರಗತಿಗೆ ಪಾಠ ಹೇಳಿದವರು. ರಾಜರತ್ನಂ ಆಗಾಗ ಬದಲಿ ಅಧ್ಯಾಪಕರಾಗಿ ನಮ್ಮ ತರಗತಿಯನ್ನು ತೆಗೆದುಕೊಳ್ಳುತ್ತಿದ್ದರು. ವಿ.ಸೀ. ಯವರು ನಮ್ಮ ತರಗತಿಗೆ ನೇಮಕವಾಗಿರಲಿಲ್ಲ. ನಾನು ಬೇರೆ ಪಾಠಗಳನ್ನು ತಪ್ಪಿಸಿಕೊಂಡು ಅವರ ತರಗತಿಯ ವಿದ್ಯಾರ್ಥಿಯಲ್ಲದಿದ್ದರೂ ಹೋಗಿ ಕೂತು ಅವರ ಮಾತಿನ ಮೋಡಿ ಕೇಳಿಬರುತ್ತಿದ್ದೆ. ಅವರ ಭಾಷಾಸಂಪನ್ನತೆ, ವಾಗ್ಝೈ ಖರಿ, ವಿಶ್ಲೇಷಣಾ ಚಾತುರ್ಯಗಳನ್ನು ನಾನು ಹೀಗೆ ಕದ್ದು ಕೇಳಿ ಆನಂದಪಡುತ್ತಿದ್ದೆ. ಅವರಿಗೆ ತಮ್ಮ ತರಗತಿಯ ಕೊನೆಯ ಬೆಂಚಿನಲ್ಲಿ ಹೊರಗಿನ ವಿದ್ಯಾರ್ಥಿಯೊಬ್ಬನಿರುತ್ತಿದ್ದದ್ದು ಗೊತ್ತಿತ್ತಾದರೂ ಅವರೆಂದೂ ನನ್ನ ಹಾಜರಿಗೆ ಆಕ್ಷೇಪಣೆ ಮಾಡಲಿಲ್ಲ. ಅದು ಅವರ ಸೌಜನ್ಯ, ಸಾತ್ವಿಕತೆ.

ವಿ.ಸೀ. ಯವರು ತರಗತಿಯಲ್ಲಿ ಯಾವ ವಿಷಯ ತೆಗೆದುಕೊಂಡರೂ ಅತ್ಯಂತ ಸ್ವಾರಸ್ಯಕರವಾಗಿ ಅದನ್ನು ವಿವರಿಸುತ್ತಿದ್ದರು. ಒಮ್ಮೊಮ್ಮೆ ಅವರ ಪಾಠ ಇಂಗ್ಲಿಷ್‌ಗೆ ತಿರುಗಿ ಷೇಕ್ಸ್‌ಪಿಯರ್, ಮಿಲ್ಟನ್ ಮುಂತಾದವರ ಕೃತಿಗಳನ್ನಾವರಿಸುತ್ತಿತ್ತು. ನನ್ನನ್ನು ಮಂತ್ರ ಮುಗ್ಧನನ್ನಾಗಿಸಿದ ಅವರ ಅನೇಕ ತರಗತಿಗಳು ನೆನಪಿಗೆ ಬರುತ್ತವೆ. ಒಂದು ಸಲ ಅವರು ಶಾಕುಂತಲ ನಾಟಕದ ಪಾತ್ರವಿಶ್ಲೇಷಣೆ ಮಾಡುತ್ತ ಕವಿ ಕಾಳಿದಾಸ ಹೇಗೆ ಪ್ರತಿ ಪಾತ್ರವನ್ನೂ ಸಜೀವವಾಗಿ ಸೃಷ್ಟಿಸಿದ್ದನೆಂಬುದನ್ನು ವಿವರಿಸಿದ್ದು ಇಂದಿಗೂ ನನ್ನ ಕಿವಿಯಲ್ಲಿ ಮೊಳಗುತ್ತಿದೆ. ಶಾಕುಂತಲ ನಾಟಕದ ಉಪ ಪಾತ್ರಗಳು, ಅನಸೂಯ, ಪ್ರಿಯಂವದಾ, ಶಾರ್ಙ್ಗರವ, ಶಾರದ್ವತ, ಇವರುಗಳ ವ್ಯಕ್ತಿಚಿತ್ರಣ, ಅವರಲ್ಲಿನ ಸಾಮ್ಯ ವ್ಯತ್ಯಾಸಗಳ ಸೂಕ್ಷ್ಮವನ್ನು ಪರಿಚಯಿಸುವಾಗ ವಿ.ಸೀ.ಯವರ ಅಧ್ಯಯನದ ಆಳ, ವೈಪುಲ್ಯಗಳ ಅರಿವಾಗುತ್ತಿತ್ತು.

ಆಮೇಲೊಂದು ದಿನ ಅವರು ಬೆಂಗಳೂರು ರೇಡಿಯೋ ನಿಲಯದಲ್ಲಿ ಕೆಲಸ ಮಾಡುತ್ತಿದ್ದಾಗ ತಮ್ಮ "ಅಭಿಜ್ಞಾನ ಶಾಕುಂತಲ ನಾಟಕ" ಪುಸ್ತಕವನ್ನು ನನಗೆ ಕೊಟ್ಟರು. ನಾನು ಅದನ್ನು ಹಲವಾರು ಬಾರಿ ಓದಿಕೊಂಡು ಕಾಲೇಜಿನಲ್ಲಿ ಅವರ ತರಗತಿಯಲ್ಲಿ ಕಳೆದ ಮಧುರ ಕ್ಷಣಗಳನ್ನು ಮೆಲುಕುಹಾಕಿದೆ. ಅವರು ಪ್ರೀತ್ಯಾದರಗಳಿಂದ ನನಗೆ ಇನ್ನೂ ಕೆಲವು ಪುಸ್ತಕಗಳನ್ನು ದಯಪಾಲಿಸಿದ್ದರು. ಅವುಗಳ ಪೈಕಿ 'ಪಂಪಾಯಾತ್ರೆ' ಹೊಸಗನ್ನಡ ಶೈಲಿಗೆ

ಒಂದು ಉತ್ಕೃಷ್ಟ ಮಾದರಿಯೆಂದು ನನಗನ್ನಿಸಿತು. ಅದನ್ನು ನಾನು ಎಷ್ಟು ಸಲ ಓದಿದೆನೋ ಲೆಕ್ಕವೇ ಇಲ್ಲ.

ವಿ.ಸೀ. ಯವರ ಸಮಕ್ಷಮದಲ್ಲಿ ನಾನು ಕಳೆದ ಕೆಲವು ಸುಸಂಧಿಗಳನ್ನು ನೆನೆಸಿಕೊಳ್ಳುತ್ತ ಹೋಗುವುದೇ ನನಗೊಂದು ಗರ್ವ. ಒಂದೊಂದು ಸಂದರ್ಭವೂ ಸಾಹಿತ್ಯ, ಕಲೆ, ಸೌಂದರ್ಯ, ಸಂಸ್ಕೃತಿಗಳಲ್ಲಿನ ನನ್ನ ತಿಳುವಳಿಕೆಗೆ ಒರೆಹಚ್ಚಿ ನೋಡುವ, ಹೆಚ್ಚಿನ ವ್ಯಾಸಂಗದ ಅಭಿಲಾಷೆಯನ್ನು ಬೆಳೆಸಿಕೊಳ್ಳುವ ಅವಕಾಶವಾಗಿತ್ತು. ಕಾಲೇಜಿನಲ್ಲಿ ಮಾತ್ರವಲ್ಲದೆ ಹೀಗೆ ಜೀವನದುದ್ದಕ್ಕೂ ನಾನು ಅವರ ಶಿಷ್ಯನಾಗಿಯೇ ಬೆಳೆದೆ.

ವಿ.ಸೀ. ಯವರು ಮದರಾಸಿಗೆ ಬರುತ್ತಿದ್ದದ್ದು ಕೇವಲ ಒಂದು ದಿನಕ್ಕೆ ಮಾತ್ರ. ಆ ಅವಕಾಶ ಉಪಯೋಗಿಸಿಕೊಂಡು ನಾನು ಅವರಲ್ಲಿ ಕನ್ನಡ ಸಾರಸ್ವತ ಲೋಕದ ಹೊಸ ಹೊಸ ಜಾಡುಗಳನ್ನು ಕುರಿತು ಸಾಕಷ್ಟು ಚರ್ಚೆ ನಡೆಸುತ್ತಿದ್ದೆ. ಅಂದರೆ, ಹೊಸ ವಿಚಾರಗಳ ಮೇಲೆ ಅವರು ಬೆಳಕು ಚೆಲ್ಲುತ್ತಿದ್ದರೆ ನಾನು ಆಸಕ್ತಿಯಿಂದ ಕೇಳಿ ತಲೆದೂಗುತ್ತಿದ್ದೆ, ಅಷ್ಟೆ. ಆ ಹಿನ್ನೆಲೆಯಲ್ಲಿ ನಿರರ್ಗಳವಾದ ಅವರ ಮಾತಿನ ಸ್ವಾರಸ್ಯ, ಸ್ನೇಹದ ಕಂಪು ಇವನ್ನು ಸವಿಯುತ್ತಿದ್ದೆ.

ಇನ್ನು ಅವರು ನಿವೃತ್ತರಾಗಿ ಬೆಂಗಳೂರು ರೇಡಿಯೋ ನಿಲಯದಲ್ಲಿ ಕಾರ್ಯಕ್ರಮ ನಿರ್ದೇಶಕರಾಗಿ ಸೇರಿದ ಮೇಲಂತೂ ನಮ್ಮ ಮಾತುಕತೆಗಳಿಗೆ ಹೊಸ ಆಯಾಮ. ಈಗ ಹೆಚ್ಚು ಹೆಚ್ಚಾಗಿ ಕನ್ನಡ ವಾಙ್ಮಯದ ಶ್ರೇಷ್ಠ ವ್ಯಕ್ತಿಗಳನ್ನು ಕುರಿತು, ಬರೆಹಗಳ ಮೌಲ್ಯ ಕುರಿತು, ಕನ್ನಡದ ಅಪೂರ್ವ ಕೃತಿಗಳನ್ನು ರೇಡಿಯೋ ರೂಪಕ್ಕಿಳಿಸುವುದರಲ್ಲಿ ಬೇಕಾದ ತಾಂತ್ರಿಕ ಜಾಣ್ಮೆಯನ್ನು ಕುರಿತು, ಮಾತುಕತೆ. ಇತರ ಬರೆಹಗಾರರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಸೂಚಿಸುವಾಗ ವಿ.ಸೀ. ಯವರು ಬರೆಹಗಳಲ್ಲಿನ ಸ್ವೀಕಾರಯೋಗ್ಯ ಅಂಶಗಳನ್ನು ಕುರಿತು ಹೇಳುತ್ತಿದ್ದರೇ ಹೊರತು, ಅವುಗಳ ಕುಂದು ಕೊರತೆಗಳನ್ನು ಎಣಿಸುವ ಗೊಡವೆಗೆ ಹೋಗುತ್ತಿರಲಿಲ್ಲ. ಬರೆಹಗಾರರ ವೈಯಕ್ತಿಕ ಗುಣದೋಷಗಳ ಬಗ್ಗೆಯೂ ಅವರು ಮಾತನಾಡಿದ ನೆನಪು ನನಗಿಲ್ಲ. ಹಾಗೆ ನೋಡಿದರೆ ವಿ.ಸೀ.ಯವರದು ಎಲ್ಲರಲ್ಲೂ ಎಲ್ಲದರಲ್ಲೂ ಒಳ್ಳೆಯದನ್ನೇ ಗ್ರಹಿಸಬಲ್ಲ ಅಪೂರ್ವ ವಿಶ್ಲೇಷಣಾ ಕ್ರಮ. ನಾನು ರೇಡಿಯೋಗಾಗಿ ಬರೆದ 'ಮಹಾಸಾಮ್ರಾಜ್ಯ' ನಾಟಕ ಪ್ರಕಟವಾದಾಗ ಅದರ ಒಂದು ಪ್ರತಿಯನ್ನು ವಿ.ಸೀ.ಯವರಿಗೆ ಅರ್ಪಿಸಿದೆ. ಅವರು ಅದನ್ನು ಓದಿ 'ನಾಟಕ ಕೇಳಿ ಮೆಚ್ಚಿದ್ದೆ. ಓದುವುದಕ್ಕೂ ಚೆನ್ನಾಗಿದೆ' ಅಂದರು. ವಿಜಯನಗರದ "ಮಹಾ ಸಾಮ್ರಾಜ್ಯ"ದ ವಿಷಯದ ಮೇಲೆಯೇ ರಚಿತವಾಗಿದ್ದ ಶ್ರೇಷ್ಠತಮ ಗದ್ಯ ಕಾವ್ಯ "ಪಂಪಾಯಾತ್ರೆ"ಯ ಲೇಖಕರಾದ ವಿ.ಸೀ.ಯವರಿಂದ ಬಂದ ಈ ಶ್ಲಾಘನೆ ನನ್ನಂಥ ಕಿರಿಯ ಲೇಖಕನಿಗೆ ತಂದ ಹೆಮ್ಮೆ ಎಷ್ಟೆಂದು ಊಹಿಸಬಲ್ಲಿರಾ!

ರೂಪಾರಾಧಕ

ಟಿ. ಮಹಾಬಲೇಶ್ವರ ಭಟ್ಟ

ನನ್ನ ಆತ್ಮೀಯ ಹಿರಿಯರಾದ ಡಾ|| ಅ. ನ. ಕೃಷ್ಣರಾಯರು ಯಾವಾಗಲೂ ಡಾ|| ವಿ. ಸೀತಾರಾಮಯ್ಯನವರ ಬಗ್ಗೆ ತುಂಬಾ ಗೌರವಯುತವಾಗಿ ಮಾತನಾಡುತ್ತಿದ್ದರು. ವ್ಯಕ್ತಿ ಸಂಪನ್ನತೆಗೆ ಮಾದರಿ ವ್ಯಕ್ತಿ ಎಂದು ಹೇಳುತ್ತಿದ್ದರು. ಅ. ನ. ಕೃಷ್ಣರಾಯರ ಮಾತನ್ನು ಕೇಳಿದಾಗಲೆಲ್ಲಾ ವಿ.ಸೀತಾರಾಮಯ್ಯನವರನ್ನು ನೋಡಬೇಕೆಂಬ ಹಂಬಲ ಆಗುತ್ತಿತ್ತು. ಆದರೆ ವಿ.ಸೀ. ಯವರನ್ನು ಕಾಣುವುದು ಹೇಗೆ? ನನ್ನ ಜೊತೆಗೆ ಯಾರಾದರೂ ಬಂದರೆ ಒಳ್ಳೆಯದಿತ್ತು ಎಂಬ ಭಾವನೆ ನನ್ನದು. ಅದು ಸಾಧ್ಯವಾಗಲಿಲ್ಲ. ನಾನೇ ಒಮ್ಮೆ ಬೆಂಗಳೂರಿಗೆ ಹೋದಾಗ ಒಂದು ದಿನ ಬಿಡುವು ಮಾಡಿಕೊಂಡು ಅವರ ಮನೆಗೆ ಹೋಗಬೇಕೆಂದು ನಿಶ್ಚಯಿಸಿದೆ.

ಬೆಂಗಳೂರಿಗೆ ಹೋಗುವ ಮೊದಲು ಒಂದು ಪತ್ರವನ್ನು ಬರೆದು 'ನಾನು ತಮ್ಮನ್ನು ನೋಡಬೇಕಾಗಿದೆ. ಇಂತಹ ದಿನ ಬೆಳಿಗ್ಗೆ ೧೦ ಘಂಟೆಗೆ ತಮ್ಮಲ್ಲಿಗೆ ಬರುತ್ತೇನೆ' ಎಂದು ಬರೆದೆ. ಅದೇ ದಿನ ಸಮಯಕ್ಕೆ ಸರಿಯಾಗಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಹೋಗುವ ಚಾಮರಾಜ ಪೇಟೆಯ ರಸ್ತೆಯಲ್ಲಿ ಇರುವ ಅವರ ಮನೆಗೆ ಹೋದೆ. ಚಿಕ್ಕದಾದ ಮನೆ, ನಿರಾಡಂಬರ, ಸರಳ ಸೌಜನ್ಯದ ಪ್ರತೀಕ. ಚಾಪೆ, ಒಂದೇ ಒಂದು ಕುರ್ಚಿ; ಕೋಟು, ರುಮಾಲು ಕಳಚಿಡಲು ಪ್ರತ್ಯೇಕ ಸ್ಥಳ. ರೇಡಿಯೋದಲ್ಲಿ ದೊರೆಸ್ವಾಮಿ ಅಯ್ಯಂಗಾರರ ವೀಣೆಯ ಧ್ವನಿ ಕೇಳಿ ಬರುತ್ತಿತ್ತು. ಮುಂಭಾಗದ ಬಾಗಿಲು ತೆರೆದಿತ್ತು. ವಿ.ಸೀ.ಯವರು ಹೊರಬಂದು "ಬನ್ನಿ, ನೀವು ಬರಬಹುದೆಂದು ಹೊರಗಡೆ ಹೋಗಿದ್ದವನು ಈಗಷ್ಟೇ ಬಂದೆ" ಎಂದು ರುಮಾಲು, ಕೋಟು ಕಳಚಿಟ್ಟರು. "ಸಮಯಕ್ಕೆ ಸರಿಯಾಗಿ ಬಂದಿರಿ. ಬಹಳ ಜನ ಬರುತ್ತೇನೆ ಎಂದು ತಿಳಿಸುತ್ತಾರೆ. ಬೆಳಿಗ್ಗೆ ಬರುತ್ತೇನೆ ಎಂದವರು ಸಂಜೆ ಬರುತ್ತಾರೆ. ಮನೆಗೆ ಬರುತ್ತೇನೆ ಎಂದರೆ, ನಾವು ಕಾಯಬೇಕಲ್ಲ" ಎಂದರು. ಅಷ್ಟರಲ್ಲಿ ವಿ.ಸೀ. ಯವರ ಪತ್ನಿ ಶ್ರೀಮತಿ ಸರೋಜಮ್ಮನವರು ನಮಗಿಬ್ಬರಿಗೂ ಕಾಫಿಯನ್ನು ತಂದಿತ್ತರು. ನಂತರ ನಮ್ಮಿಬ್ಬರ ಮಾತು ಶುರುವಾಯಿತು. ಸುಮಾರು ಎರಡು ಘಂಟೆಗಳ ಕಾಲದ ಮಾತಿನಲ್ಲಿ ಅ. ನ. ಕೃಷ್ಣರಾಯರು, ವಿ.ಸೀ.ಯವರ ಬಗ್ಗೆ ಏನು ಗೌರವಯುತ ಪೂಜ್ಯ ಭಾವನೆಯ ಮಾತನ್ನು ಆಡಿದ್ದರೋ, ಅದರ ಎರಡರಷ್ಟು ಗೌರವ ಭಾವನೆ ನನಗೆ

ವಿ.ಸೀ. ಯವರಲ್ಲಿ ಮೂಡಿತು. ಇವರನ್ನು ಒಮ್ಮೆ ಸಾಗರಕ್ಕೆ ಕರೆದುಕೊಂಡು ಬರಬೇಕೆಂದು, ಸಾಗರದ ಜನರಿಗೆ ಇವರನ್ನು ಪರಿಚಯಿಸಬೇಕೆಂದು ನಿರ್ಧರಿಸಿ ಹೊರಬಂದೆ. "ಆಗಾಗ ಬನ್ನಿ" ಎಂಬ ಮಾತನ್ನು ವಿ.ಸೀ.ಯವರು ಹೇಳಲು ಮರೆಯಲಿಲ್ಲ.

೧೯೬೧ ಮೇ ತಿಂಗಳ ೨೮ರಂದು ಸಾಗರದ ಪುರಭವನದಲ್ಲಿ ಶಿವಮೊಗ್ಗ ಜಿಲ್ಲಾ ಬರಹಗಾರರ ಪ್ರಥಮ ಸಮ್ಮೇಳನ. ವಿ. ಸೀತಾರಾಮಯ್ಯನವರಿಂದ ಉದ್ಘಾಟನೆ. ಪುರಭವನ ಕಿಕ್ಕಿರಿದು ತುಂಬಿದೆ. ವಿ.ಸೀ. ಯವರು ಎರಡು ಘಂಟೆಗಳ ಕಾಲ ಮಾತನಾಡಿದರು. ವಿಶಾಲ ವಿದ್ವತ್ತು, ತೀಕ್ಷ್ಣ ಚಿಂತನ, ಸೃಜನ ಶೀಲತೆ, ಸಾರಸ್ವತ ವೈವಿಧ್ಯಗಳಿಂದ ಕೂಡಿದ ಇವರ ಮಾತುಗಳು ಸಮ್ಮೇಳನಕ್ಕೆ ಬಂದ ಪ್ರತಿನಿಧಿಗಳಿಗೆ ತುಂಬಾ ತಂಪು ನೀಡಿತು. ಸಂತೋಷ ಕೊಟ್ಟಿತು. ಆ ಮೇಲೆ ಹತ್ತಾರು ಬಾರಿ ನಾನು ಅವರ ಮನೆಗೆ ಹೋಗಿದ್ದೇನೆ. ಒಂದೆರಡು ಬಾರಿ ಊಟ ಸಹ ಮಾಡಿದ್ದೇನೆ. ೧೯೬೪ರಲ್ಲಿ ಹೊನ್ನಾವರದಲ್ಲಿ ನಾಲ್ಕು ವರ್ಷಗಳ ಕಾಲ ಮಲೆನಾಡು ಪ್ರೋಗ್ರೆಸ್ಸಿವ್ ಎಜುಕೇಶನ್ ಸೊಸೈಟಿಯವರು ಆರಂಭಿಸಿದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿರುವಾಗ ಬೆಂಗಳೂರಿನಿಂದ ಸಾಗರದ ತನಕ ರೈಲಿನಲ್ಲಿ ಬಂದು, ಸಾಗರದ ನನ್ನ ಮನೆಯಲ್ಲಿ ಕೆಲವು ಕಾಲ ವಿಶ್ರಾಂತಿ ಪಡೆದು, ನಂತರ ಬಸ್ಸಿನಲ್ಲಿ ಸಾಗರದಿಂದ ಹೊನ್ನಾವರಕ್ಕೆ ಪ್ರಯಾಣ ಮಾಡುತ್ತಿದ್ದರು. ನನ್ನ ಅವರ ಪರಿಚಯ, ಹತ್ತಿರದ ಸಂಬಂಧ ಸುಮಾರು ಮೂವತ್ತೊಂದು ವರ್ಷಗಳು ಸಂದುಹೋಯಿತು. ಆ ಪುಣ್ಯಜೀವಿಯ ಸಂಪರ್ಕ ನನಗೆ ದೊರಕಿದ್ದುದು ನನ್ನ ಭಾಗ್ಯವೆಂದೇ ಹೇಳಬೇಕಾಗಿದೆ.

ವಿ.ಸೀ.ಯವರು ಬದುಕಿದ್ದರೆ ಅವರಿಗೆ ಇದೇ ೧೯೯೮ ಅಕ್ಟೋಬರ್ ಎರಡಕ್ಕೆ ಒಂದು ನೂರು ವರ್ಷವಾಗುತ್ತಿತ್ತು. ಅವರು ಹುಟ್ಟಿ ನೂರು ವರ್ಷವಾಯಿತು ಅಂದರೆ ನಂಬುವುದು ಕಷ್ಟ. ಅವರ ದಿನಚರಿಯ ಪದ್ಧತಿ ಮೂವತ್ತು ವರ್ಷದವರಾಗಿದ್ದಾಗ ಇದ್ದಂತೆಯೇ ಕೊನೆಯ ತನಕವೂ ಇತ್ತು : ಅದೇ ಶಿಸ್ತು, ಅದೇ ವಿನಯ, ಅದೇ ಆದರ್ಶ.

ವಿ.ಸೀ. ಒಬ್ಬ ಸೌಮ್ಯ ಪುರುಷ. ನಾಜೂಕಿನ ವ್ಯಕ್ತಿ. ಗರಿ ಗರಿಯಾಗಿ ತಿದ್ದಿದ ರುಮಾಲು, ಎದೆ ಮುಚ್ಚಿದ ಕೋಟು, ನೀಟಾದ ಪಂಚೆ, ಸಾದಾ ಚಪ್ಪಲಿ. ಸಂಜೆಯ ಕಾಲದಲ್ಲಿ ಕೈಯಲ್ಲಿ ಛತ್ರಿ ಹಿಡಿದು ವಾಯುವಿಹಾರಕ್ಕೆ ಹೊರಟಾಗ, ಅವರ ವ್ಯಕ್ತಿತ್ವದ ಚೆಲುವನ್ನು ನೋಡಲು ಆನಂದ.

ಹಿಂದಿನ ಮತ್ತು ಇಂದಿನ ಕಾಲದ ಸಾಹಿತಿಗಳಲ್ಲಿ ವಿ.ಸೀ. ಯವರಿಗೊಂದು ವಿಶಿಷ್ಟ ಸ್ಥಾನ. ಅವರು ಸಾಹಿತ್ಯ ಲೋಕದ ಅನನ್ಯ ವ್ಯಕ್ತಿ. ವಿ.ಸೀ.ಯವರು ಭಾಗವಹಿಸಿದ ಸಭೆಗಳು ಅಸಂಖ್ಯಾತ. ಅವರು ಕವಿಗೋಷ್ಠಿ, ವಿಚಾರ ಸಂಕಿರಣ, ಸಮ್ಮೇಳನ ಮಾತ್ರವಲ್ಲದೆ, ರಾಷ್ಟ್ರೀಯ ಸಭೆಗಳಲ್ಲಿಯೂ ಭಾಗವಹಿಸಿ ತಮ್ಮ ವಿಚಾರಧಾರೆಯನ್ನು ಪ್ರಚುರಪಡಿಸಿದ ಉದ್ದಾಮ ಪಂಡಿತರು. 'ಪಂಪ'ನನ್ನು ಕುರಿತು ಕನ್ನಡ ಮತ್ತು ಇಂಗ್ಲೀಷ್ ಎರಡರಲ್ಲಿಯೂ ಕೃತಿ ರಚಿಸಿದ ಸಾಹಿತಿ.

ಹೊರನೋಟಕ್ಕೆ ಸಂಪ್ರದಾಯ ಶರಣರೆಂದು ಕಂಡರೂ ಕ್ರಾಂತಿವಾದಿಗಳು, ವಿಶಾಲ ಮನಸ್ಸುಳ್ಳವರು. ಕಾವ್ಯ, ಕಥೆ, ವಿಮರ್ಶೆ, ನಾಟಕ, ಎಲ್ಲದರಲ್ಲಿಯೂ ಬರೆದು ಅರವತ್ತಕ್ಕೂ

ಹೆಚ್ಚು ಕೃತಿಗಳನ್ನು ರಚಿಸಿದವರು. ವಿಚಾರತೆ ಮತ್ತು ಪ್ರಸನ್ನತೆ ಎರಡೂ ಆ ಒಂದೇ ವ್ಯಕ್ತಿಯಲ್ಲಿ ಅತಿ ಸುಲಭವಾಗಿ ಜನರಿಗೆ ಸಿಗಬಹುದಾದ ಸಂಪತ್ತು. ವಿವಿಧ ವಿಚಾರಗಳನ್ನು ಕುರಿತು ಅವರು ಬರೆದ ಬಿಡಿಬರಹಗಳ ಸಂಖ್ಯೆ ಅಪರಿಮಿತ.

ವಿ.ಸೀ. ಯವರ ಮಾತು ಲೋಕಪ್ರಿಯ. ಅವರ ಪುಸ್ತಕದ ಮುದ್ರಣದ ಅಂದಚಂದವೇ ಬಲು ಸೊಗಸು. ಸಂಪ್ರದಾಯಸ್ಥ ವಿ.ಸೀ. ಯವರಿಗೂ, ಸೊಗಸುಗಾರ ವಿ.ಸೀ.ಯವರಿಗೂ ನಿಕಟ ಸಂಬಂಧ. ಅವರು ನಾಡಿನ ಒಳಗೂ, ಹೊರಗೂ ಪ್ರಸಿದ್ಧರಾದ ಲೇಖಕರು. ನ್ಯಾಯ, ಧರ್ಮಗಳ ತಕ್ಕಡಿಯನ್ನು ತೂಗುವ ಯಜಮಾನ, ಕಲೋಪಾಸಕ, ಸಾಹಿತ್ಯದ ಕಾವ್ಯಪ್ರಕಾರವನ್ನು ಬೆಳಗಿದ ಕನ್ನಡ ರತ್ನ. ಅಂತಃಪ್ರಜ್ಞೆಗೆ ರನ್ನಗನ್ನಡಿ ಹಿಡಿದ ಮೇಧಾವಿ.

ವಿ.ಸೀ.ಯವರು ಕವಿಯಾಗಿ, ಪ್ರಾಧ್ಯಾಪಕರಾಗಿ, ಕನ್ನಡದ ಸುಪ್ರಜರಾಗಿ ಜೀವನವನ್ನು ಸಫಲಗೊಳಿಸಿಕೊಂಡವರು. ಹಿಂದಿನ ಕನ್ನಡ ಕವಿಗಳಲ್ಲಿ ಮೊದಲ ಪಂಕ್ತಿಗೆ ಪಾತ್ರರು. ಪ್ರಾಧ್ಯಾಪಕರಲ್ಲಿ, ಕನ್ನಡ ಕುಲದೀಪಕರಲ್ಲಿ ಕೂಡ ಶ್ರೇಷ್ಠಸ್ಥಾನ. ಶಾಸ್ತ್ರಕಾರ, ವಿಮರ್ಶಕ, ವಾಗ್ಮಿ, ಕಲಾರಸಿಕ, ಈ ಎಲ್ಲಾ ಅಂತರ್ವ್ಯಕ್ತಿಗಳೂ ಒಂದೇ ಉದಾತ್ತ ಸುಸಂಸ್ಕೃತ ಜೀವನದ ಅವಿಷ್ಕಾರವಾಗಿರುವುದು ವಿ.ಸೀ. ಯವರ ವ್ಯಕ್ತಿತ್ವದ ಪ್ರಮುಖ ಅಂಶ. ಅಷ್ಟೇ ಪ್ರಮುಖವಾದ ಮತ್ತೊಂದು ಅಂಶ ಅವರ ವ್ಯಕ್ತಿ ಸಾಮರ್ಥ್ಯ. ದೊರೆತ ಕೀರ್ತಿಗಿಂತ ಒಂದಡಿ ಎತ್ತರಕ್ಕೆ ನಿಂತ ಶೀಲ ಸಂಪನ್ನತೆಯ ಭದ್ರ ರಕ್ಷೆ. ಇಂದಿನ ಕನ್ನಡದ ಕವಿ ಸಂಕುಲದಲ್ಲಿ ಕರ್ಮಕುಶಲತೆಗೆ ಬೆರಳು ತೋರಬಹುದಾದ ಹಿರಿಯ ವ್ಯಕ್ತಿತ್ವ. ಅಂತೆಯೇ ಅವರ ಜೀವನದ ಹಲವು ಮಜಲು ಇಂದು ಕನ್ನಡತನ ರೂಪಿಸಿಕೊಳ್ಳಬಹುದಾದ ಬಾಳಿಗೆ ಒಂದು ಮಾದರಿ.

ಆಚಾರ್ಯ ಬಿ.ಎಂ.ಶ್ರೀ.ಯವರ ಪರಮ ಶಿಷ್ಯರಲ್ಲಿ ವಿ.ಸೀ. ಯವರು ಒಬ್ಬರು. ಶ್ರೀಯುತರ ಪಾಂಡಿತ್ಯದ ಪ್ರಭಾವ, ಅವರ ಇಂಗ್ಲೀಷ್ ಸಾಹಿತ್ಯದ ಅನುಭವ ವಿ.ಸೀ. ಯವರ ಮನಸ್ಸಿಗೆ ತಾಗಿತು. ತಾವು ಓದುವುದರ ಜೊತೆಗೆ ಸಾಹಿತ್ಯದ ಅಭ್ಯಾಸಕ್ಕೆ ತೊಡಗಿದರು. ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿಯೂ ದೊರಕಿತು. ಜೀವನದಲ್ಲಿ ಹೊಸ ಹುರುಪು, ಹೊಸತನ ಕಂಡುಕೊಳ್ಳಲು ಪ್ರಯತ್ನ ಸಾಗಿತು. ಪಾಶ್ಚಿಮಾತ್ಯದೇಶದ ಹಲವು ಪತ್ರಿಕೆಗಳನ್ನು ಅಂಚೆ ಮೂಲಕವೇ ತರಿಸಿಕೊಂಡು ಅದರ ಅಭ್ಯಾಸವೂ ಸಾಗಿತು.

ಇವರದು ಕವಿ ಹೃದಯ. ಭಕ್ತ ಕವಿಯ ಅಂತರಂಗ, ಹೃದಯ ಸಂಪತ್ತು, ಸೂಕ್ಷ್ಮ ದೃಷ್ಟಿ – ಇದು ವಿ.ಸೀ. ಯವರಿಗೆ ಜನ್ಮದಿಂದ ಬಂದ ಸೊತ್ತು. ಜೀವನದ ಪರಿಶುದ್ಧ ಪರಿಶ್ರಮದಿಂದ ಬಂದ ಸಾಧನೆಯ ಫಲ. ಜೀವನದ ತಳಬುಡವನ್ನೇ ಅಲುಗಿಸುವಂತಹ ಘೋರಕಷ್ಟ ಬಂದರೂ ತಾಳ್ಮೆಗೆಡದ ವಿವೇಕಿ. ವಿದ್ಯಾರ್ಥಿಗಳ ಜೊತೆ ಬೆರೆತು ಅವರ ಕಷ್ಟಕಾರ್ಪಣ್ಯವನ್ನು ನೀಗಿಸುವ ಮಹಾ ಸೇನಾನಿ. ಕಾರಂತರು, ಮಾಸ್ತಿಯವರು, ಗೋಕಾಕರು, ವಿ.ಸೀ. ಯವರ ಬಗ್ಗೆ ಕಂಡ ನೋಟ ಬಲು ಚಂದ. ಅವರೊಬ್ಬರು ರೂಪಾರಾಧಕರು. ಅವರ ವ್ಯಕ್ತಿತ್ವವನ್ನು ಸಾಮಾನ್ಯರಾದ ನಾವು ಅಳೆಯುವುದು ಕಷ್ಟಕರ.

ಬೆಂಗಳೂರು, ಮೈಸೂರು, ಹೊನ್ನಾವರ ಇವೆಲ್ಲವೂ ವಿ.ಸೀ. ಯವರ ವಿದ್ಯಾಪ್ರಸಾರದ ಕ್ಷೇತ್ರ. ಆಕಾಶವಾಣಿಯಲ್ಲಿ ಕೆಲವು ಕಾಲ ಸೇವೆ. ಕುಮಟಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದ ಅಗ್ರಸ್ಥಾನ. ಇದೊಂದು ಅದ್ಭುತ ಅದ್ಭುತ ಸಮ್ಮೇಳನ, ಬಹುಕಾಲ ಉಳಿಯುವಂತಹ ನೆನಪು. ಅಧ್ಯಕ್ಷ ಸ್ಥಾನದಿಂದ ವಿ.ಸೀ. ಯವರ ಪ್ರಸ್ತಾವನೆ, ಹೊಸನಾಂದಿ, ನವ್ಯಕಾವ್ಯದ ಹುಯಿಲಿನ ರಂಗಭೂಮಿ – ಇದೆಲ್ಲಕ್ಕೂ ಆಸರೆ, ಅವಕಾಶ ಕೊಟ್ಟು ವಾದ, ವಿವಾದಗಳಿಗೆ ಚೇತನ ತುಂಬಿದ ಲೌಕಿಕರು. ಹೊಗಳಿಕೆ, ತೆಗಳಿಕೆ ಎರಡೂ ಒಂದೇ ಎಂಬ ಭಾವನೆ. ಕಾಯಾ, ವಾಚಾ ಕೆಲಸ ಮಾಡುವುದೇ ಅವರ ಸಾಧನೆ. ಅವರ ಧ್ಯೇಯ ನಿಷ್ಠೆ, ಚಿತ್ತಪಸ್ಸು ಇಂದಿನ ಪೀಳಿಗೆಗೊಂದು ಆರಾಧನೆ. ಇವರ ಕಾವ್ಯದಲ್ಲಿ ಹಾವ, ಭಾವ, ಸಂಪ್ರದಾಯ, ದೀರ್ಘತಪಸ್ಸು, ತೀಕ್ಷ್ಣತೆ, ವ್ಯಾಕುಲತೆ, ಎಲ್ಲವೂ ಸಿಗಬಹುದಾದ ವಸ್ತು. ಶ್ರೇಷ್ಠತನದ ವಿಮರ್ಶೆ, ಪಾತ್ರಗಳ ಮೌಲ್ಯಗಳ ಅರಿವು, ಕಲ್ಪನೆಯ ಅಂತಸ್ತುಗಳು– ಎಲ್ಲವೂ ಒಂದು ಪರಿಮಿತಿಯಿಂದ ಕೂಡಿದ ವ್ಯಕ್ತಿ. ಸಮನ್ವಯ ಸಿದ್ಧಾಂತ ಹಲವು ವರ್ಷಗಳಿಂದಲೂ ಪ್ರವೃತ್ತಿಯಾಗಿಯೇ ಬೆಳೆದು ಬಂದ ಸಿದ್ಧಿ. ಎಲ್ಲ ವಿಚಾರಗಳನ್ನೂ ಸಹಾನುಭೂತಿಯಿಂದ ಪರಿಶೀಲಿಸಿ ನಿರ್ಣಯಕ್ಕೆ ಬರುವ ವಿ.ಸೀ.ಯವರು ತಾವು ನಡೆಯುವ ದಾರಿಯಲ್ಲಿ ಎಂದೂ ನಿಂತಿಲ್ಲ. ಅನುಭವದ ಆಳ ಅಗಲಗಳನ್ನು ಈ ವ್ಯಕ್ತಿತ್ವ ಸಂಪೂರ್ಣವಾಗಿ ಅರಿತು ಕೊಂಡಿರುವುದರಿಂದ ಇವರೊಬ್ಬ ಪರಿಪೂರ್ಣ ವ್ಯಕ್ತಿ, ಬಾಳಿನ ಹಿರಿಮೆಯನ್ನು ಅರಿತುಕೊಂಡ ದಿವ್ಯ ಶಕ್ತಿ, ಆದರ್ಶ ಜೀವನದ ಹಿರಿಯ ಸಾಕ್ಷಿ. ವಿ.ಸೀ. ಯವರ ಶತಮಾನೋತ್ಸವ ಸಂದರ್ಭದಲ್ಲಿ ಅವರಿಗೆ ಪ್ರಿಯವಾದ ಕೆಲಸಗಳು ನಡೆಯಲಿ. ಅವರ ಹೆಸರು, ಅವರ ಕನ್ನಡದ ಸೇವೆ ಇಂದಿನ ಜನರಿಗೆ ಮಾರ್ಗದರ್ಶಕವಾಗಲಿ.

ಮಾರ್ಗದರ್ಶಕ ಬೆಳಕು

ಕೆ. ಬಿ. ಪ್ರಭುಪ್ರಸಾದ್

ಮೈಸೂರು ಮಹಾರಾಜಾ ಕಾಲೇಜಿಗೆ ವಿದ್ಯಾರ್ಥಿಗಳಾಗಿ ಸೇರುತ್ತಿದ್ದ ಹಾಗೆ, ಕಾಲೇಜು ಹಾಸ್ಟೆಲಿನಲ್ಲಿ ಹಿರಿಯ ವಿದ್ಯಾರ್ಥಿಗಳು, ರಾಜ್ಯಕ್ಕೇ ಪ್ರಸಿದ್ಧವಾಗಿದ್ದ ಈ ಕಾಲೇಜಿನ ಹಿರಿಯ ಪರಂಪರೆ ಬಗ್ಗೆ ತಿಳಿಸಿ ನಮಗೆ ದೀಕ್ಷೆ ನೀಡಿದರು. ಕಾಲೇಜಿನ ಎಲ್ಲ ಅಧ್ಯಾಪಕರ, ಪ್ರಾಧ್ಯಾಪಕರ ಪರಿಚಯ, ಅಧ್ಯಯನ ಸಾಧನೆ, ಸಿದ್ಧಿಗಳನ್ನೂ, ಒಬ್ಬೊಬ್ಬರ ಬೋಧನಾ ರೀತಿ, ವೈಶಿಷ್ಟ್ಯಗಳನ್ನೂ, ವೈಯಕ್ತಿಕ ವಿಲಕ್ಷಣ ಸ್ವಭಾವಗಳನ್ನೂ ಕುರಿತು ಸ್ವಾರಸ್ಯವಾದ ಸಂಗತಿಗಳನ್ನೂ ದಿನ ದಿನವೂ ಬೆಳಗೂ ಬೈಗೂ ರುಚಿಗಟ್ಟಾಗಿ ನಮ್ಮ ಕಿವಿಗಳಿಗೆ ತುಂಬಿದರು. ಯಾವ ಯಾವ ಅಧ್ಯಾಪಕರು ಛೇಡನೆಗೆ, ವಿನೋದ ತಂತ್ರಗಳಿಗೆ ಒಳಗಾಗುತ್ತಿರುತ್ತಾರೆ, ಯಾರು ಯಾರಿಗೆ ಯಾವ ಯಾವ ಅಡ್ಡ ಹೆಸರು ಎಂಬುದೆಲ್ಲ ನಮಗೆ ತಿಳಿಯಿತು. ಪರಂಪರೆ ಮುಂದುವರಿಯಬೇಕಲ್ಲ! ಕೆಲವು ಅಧ್ಯಾಪಕರಂತೂ ಎಲ್ಲ ವಿದ್ಯಾರ್ಥಿಗಳ ಮೆಚ್ಚುಗೆಗೆ, ಆರಾಧನೆಗೆ ಪಾತ್ರರಾಗಿದ್ದರು. ಇನ್ನು ಕೆಲವರು ಅತ್ಯಂತ ಜನಪ್ರಿಯರಾಗಿದ್ದರು. ಬೇರೆ ಬೇರೆ ಕಾರಣಗಳಿಗಾಗಿ.

ನಮ್ಮ ಕ್ಲಾಸಿಗೆ ಬರುವ ಗುರುಗಳಲ್ಲಿ ವಿ.ಸೀ. ಅವರೂ ಒಬ್ಬರು ಎಂದು ತಿಳಿದಾಗ ಬಹಳ ಖುಷಿಯಾಯಿತು. ಹೆಮ್ಮೆಯೂ ಆಯಿತು. ವಿ.ಸೀ.ಯವರು ಕನ್ನಡ ಪಾಠವನ್ನು ಇಂಗ್ಲಿಷಿನಲ್ಲಿ ಮಾಡುತ್ತಾರೆಂದು ವಿದ್ಯಾರ್ಥಿಗಳಲ್ಲಿ ಜನಜನಿತವಾಗಿತ್ತು. ನನಗಿದು ಚೋದ್ಯ ವೆನಿಸಿತು. ತರಗತಿಯಲ್ಲಿ ಮೊಟ್ಟ ಮೊದಲ ಪಾಠದಲ್ಲಿಯೇ ಅನುಭವವಾಯಿತು, ಆ ಮಾತು ಪೂರ್ಣಸತ್ಯವೂ ಅಲ್ಲ, ಮಿಥ್ಯಾರೋಪವೂ ಅಲ್ಲ ಎಂದು. ಮೇಷ್ಟ್ರು ಕನ್ನಡದಲ್ಲೆ ಷುರು ಮಾಡಿದರು. ಮಧ್ಯೆ ಇಂಗ್ಲಿಷಿನಲ್ಲಿ ಯಾವುದೋ ಇಂಗ್ಲಿಷ್ ಉಕ್ತಿಯನ್ನು ಉದ್ಧರಿಸಿದರು. ಅದನ್ನು ವಿವರಿಸುವಾಗ ಹೆಚ್ಚಾಗಿ ಇಂಗ್ಲಿಷನ್ನೆ ಬಳಸಿದರು. ಇಂಗ್ಲಿಷಿನಲ್ಲಿ ಹೇಳಿದ ಪದವೊ, ನುಡಿಗಟ್ಟೋ, ವಾಕ್ಯವೊ–ಅದನ್ನು ಬೋರ್ಡಿನ ಮೇಲೆ ಎಲ್ಲೆಂದರಲ್ಲಿ ಹೇಗೆಂದರೆ ಹಾಗೆ ಗೀಚಿದರು. ಕೆಲವು ಸಲ ಕುಳಿತೇ ಕುರ್ಚಿಯನ್ನು ಸ್ವಲ್ಪ ಬೋರ್ಡಿನ ಕಡೆ ಓರೆಯಾಗಿ ತಿರುಗಿಸಿಕೊಂಡು ಕೈನಿಲುಕಿನಲ್ಲಿ ಬರೆಯುತ್ತಿದ್ದರು. ಬರೆದದ್ದನ್ನು ಒತ್ತಿ ಹೇಳುವಾಗ ಅದರ ಕೆಳಗೆ ಗೆರೆ ಎಳೆದು, ದನಿಯಲ್ಲಿ ಬಲ ಕೊಟ್ಟು, ಪುನರುಚ್ಚರಿಸಿ

ಪರಿಣಾಮವನ್ನು ಸಾಧಿಸುವರು. ಪಾಠ ಮುಗಿಯುವ ಹೊತ್ತಿಗೆ ಬೋರ್ಡೆಲ್ಲ ತುಂಬಿ ಹೋಗುತ್ತಿತ್ತು.

ಪಾಠದ ಮಧ್ಯೆ ಒಂದು ಮಾತು ಹೇಳುವರು. "ಈ ಪಾಠ, ಪರೀಕ್ಷೆ ಅಂತ ನಾ ಹೇಳುತಾ ಇಲ್ಲ. ಜೀವನ ದೊಡ್ಡದು. ಅದಕ್ಕೆ ನಿಮ್ಮನ್ನು ಸಿದ್ಧಗೊಳಿಸಬೇಕು. ಈ ಪುಸ್ತಕ, ಪಾಠ ಎಲ್ಲ ಮುಂದಿನ ಆ ಬದುಕಿಗೆ ಬೇಕಾದ ಮನೋಧರ್ಮವನ್ನು ಬೆಳಿಸಬೇಕು. ಬದುಕನ್ನು ಅರ್ಥಮಾಡಿಕೊಳ್ಳಲು, ಬದುಕನ್ನು ಪ್ರೀತಿಸಲು, ಬದುಕಿನ ಬಗ್ಗೆ ನೀವೆ ಸ್ವಂತವಾಗಿ ಆಲೋಚನೆ ಮಾಡಲು ಇವು ಸಹಾಯಕವಾಗದೆ ಹೋದರೆ ಯೂನಿವರ್ಸಿಟಿಯ ಶಿಕ್ಷಣವೆಲ್ಲ ವ್ಯರ್ಥ. ನಾಲ್ಕು ಕಾಸು, (ವ್ಯಂಗ್ಯವಾಗಿ, ಪರಮ ತಿರಸ್ಕಾರ ಭಾವವನ್ನು ನಗುವಿನಲ್ಲಿ ವ್ಯಕ್ತಪಡಿಸುತ್ತ) ಪುಡಿಗಾಸು! – ಸಂಪಾದಿಸೋ ಉದ್ಯೋಗ ದೊರಕಿಸಲು ಬಿ.ಎ., ಬಿ.ಎಸ್‌ಸಿ., ಎಂ.ಎ., ಎಂ.ಎಸ್ಸಿ. ಡಿಗ್ರಿ ಒದಗಿಯಾವು. That is secondary for me.... ನೀವು ಹೇಗೆ ಆಲೋಚಿಸುತ್ತೀರೋ.....? ! ನೀವೂ ಪರೀಕ್ಷೇನೆ ಮುಖ್ಯ ಅಂತ ಹೇಳಿದರೆ.... ಅದು.... ನಿಮ್ಮ ಹಣೇ ಬರಹ..... "ಎಂದು ಹೇಳುತ್ತಾ ಜೋರಾಗಿ ನಗುವರು. ಹೇಳುವಾಗ ಕೆಲವು ಮಾತು, ವಿಚಾರ ಚೆನ್ನಾಗಿ ಅಚ್ಚೊತ್ತಿ ನಿಲ್ಲಲಿ ಎಂದು ದನಿಯಲ್ಲಿ ಆ ಪದಗಳಿಗೆ, ಅಕ್ಷರಗಳಿಗೆ ಅತಿ ಒತ್ತು ಕೊಡುವರು. ಅದೇ ಮಾತನ್ನು ಎರಡು ಮೂರು ಬಾರಿ ಬೇರೆ ಬೇರೆ ರೀತಿಗಳಲ್ಲಿ ಗತ್ತಿನಲ್ಲಿ ಪುನರುಚ್ಚರಿಸುವರು – ತುಂಬಾ ಗಂಭೀರವಾಗಿ. ನಮ್ಮ ದೃಷ್ಟಿಕೋನ ಸರಿಯಾಗಿರಬೇಕು (ಸಣ್ಣತನದ್ದಾಗಿರಬಾರದು, ಸಂಕುಚಿತವಾದ್ದಾಗಿರಬಾರದು, ವಿಕಾರವಾಗಿರಬಾರದು) ಎಂಬ ಮಾತನ್ನಂತೂ ನಾನಾ ಸಂದರ್ಭಗಳಲ್ಲಿ ಒತ್ತಿ ಒತ್ತಿ ಪದೇ ಪದೇ ಹೇಳುವರು. ಹಾಗೆಂದು ಹಳೆಯದಕ್ಕೇ ಸಂಪ್ರದಾಯಕ್ಕೇ ಅವರು ಅಂಟಿಕೊಂಡವರಲ್ಲ. ತೀಕ್ಷ್ಣ ಚಿಕಿತ್ಸಕ, ವೈಚಾರಿಕ ದೃಷ್ಟಿಯಿಂದ ಎಲ್ಲ ನಂಬಿಕೆಗಳನ್ನೂ ತತ್ವಗಳನ್ನೂ ಒರೆಗೆ ಹಚ್ಚಿ ನೋಡುವವರು.

ಹಕ್ಸ್‌ಲಿ, ರಸ್ಸೆಲ್, ಕ್ಯಾಂಟ್, ಹೆಗೆಲ್, ಷೋಪೆನ್‌ಹಾವ್ಸ್, ಬರ್ನಾರ್ಡ್ ಷಾ, ಇಬ್ಸೆನ್, ಸಾಫೋಕ್ಲಿಸ್, ಯೂರಿಪೈಡಿಸ್, ಷೇಕ್ಸ್‌ಪಿಯರ್, ಷೆಲಿ, ಕೀಟ್ಸ್, ಬ್ಲೇಕ್, ಟಾಲ್ಸ್‌ಟಾಯ್, ಲಿನ್ ಯೂ ತಾಂಗ್, ಆನಂದವರ್ಧನ, ಮಮ್ಮಟ, ಪಂಪ, ರನ್ನ–ಹೀಗೆ ಅವರ ಪರಾಮರ್ಶೆಯ ಪರಿಧಿ ವಿಸ್ತಾರವಾದುದು, ವಿಶ್ವವ್ಯಾಪಕವಾದುದು. ಆ ಮಹನೀಯರ ಕೃತಿಗಳೊ, ಉದ್ಧೃತ ವಾಕ್ಯಗಳೊ (quotations) ಅವರ ಚಿಂತನೆ, ತತ್ವ–ಸಿದ್ಧಾಂತಗಳೊ, ದರ್ಶನಗಳೊ ಅವುಗಳನ್ನೆಲ್ಲ ತಮ್ಮ ಉಪನ್ಯಾಸದ ಬೀಸಿನಲ್ಲಿ ತರುವರು. ಆದರೆ ಎಲ್ಲವೂ ಸುಸಂಗತವಾಗಿ, ಸಂದರ್ಭೋಚಿತವಾಗಿ, ಪಾಠದ ನೆಲೆಯನ್ನು ಕಳೆದುಕೊಳ್ಳದೆ ಇರುತ್ತಿದ್ದವು. ಅವರ ತರಗತಿಯ ಒಂದು ಉಪನ್ಯಾಸ ಕೇಳಿದರೆ ಸಾಕು, ಎಷ್ಟೋ ಪುಸ್ತಕಗಳನ್ನು ಓದಿ ಪಡೆಯಬಹುದಾದ ವಿಪುಲ ಜ್ಞಾನದ ಸಾರವೆ ದೊರೆತ ಅನುಭವವಾಗುತ್ತಿತ್ತು. ಮೊದಲಿನಿಂದ ಕೊನೆಯವರೆಗೂ ಎಲ್ಲ ವಿದ್ಯಾರ್ಥಿಗಳ ಮನವನ್ನೂ ಸೆರೆಹಿಡಿದಿರುತ್ತಿತ್ತು ಅವರ ಮಾತಿನ ಮೋಡಿ. ನನಗಂತೂ ತುಂಬಾ ಇಷ್ಟವಾಗುತ್ತಿತ್ತು.

ವಿ.ಸೀ.ಅವರ ಭಾವಗೀತೆಗಳ ಪರಿಚಯ ಆ ಮೊದಲೇ ನನಗಾಗಿತ್ತು. 'ಮೃಗಶಾಲೆಯ ಸಿಂಹಗಳು' ಓದಿ ಕಣ್ಣೀರುಗರೆದಿದ್ದೆ. 'ಅಭೀ' ಓದುತ್ತ ತಲೆಯೆತ್ತಿ ಎದೆ ಸೆಟೆಸಿ ಅಂತರಂಗದ

ಗಹ್ವರದಲ್ಲಿ ಮಾರ್ದನಿಸುವ ಅಭೀಃ ಶಬ್ದವನ್ನು ಕೇಳುತ್ತಿದ್ದೆ.

ಮಣಿಯದಿಹ ಮನವೊಂದು, ಸಾಧಿಸುವ ಹಟವೊಂದು
ನಿಜದ ನೇರಕೆ ನಡೆವ ನಿಶ್ಚಲತೆಯೊಂದು
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು

ಈ ಸಾಲುಗಳು ನನ್ನ ಮನದ ಭಾವವಾಗುತ್ತ ನನ್ನ ವ್ಯಕ್ತಿತ್ವವನ್ನು ರೂಪಿಸುತ್ತಿರುವ ಅನುಭವವಾಗಿತ್ತು. 'ಕಸ್ಮೈ ದೇವಾಯ?' ಎತ್ತಿದ ಪ್ರಶ್ನೆ ಯುಗ ಯುಗಗಳಿಂದ ಮಾನವ ಮನ ಕಾಣುತ್ತ, ಪೂಜಿಸುತ್ತ, ಪ್ರಸನ್ನಗೊಳಿಸುತ್ತ ಬಂದ ದೇವರುಗಳೆಲ್ಲ ಅಳಿದು ಹೋಗುವ ವೈಜ್ಞಾನಿಕ ಯುಗದಲ್ಲಿ–

ಮಾನವನ ಸುಗುಣವೇ ದೈವವೊ
ಎಲ್ಲಿಗೂ ಹರಿಯದಿಹ ಸಂಶಯವೆ ಕೊನೆಯೊ!

ಎಂಬ ಆಶ್ಚರ್ಯದಲ್ಲಿ ಮುಕ್ತಾಯವಾಗುತ್ತದೆ. ಪ್ರಶ್ನೆ ಹಾಗೇ ಉಳಿಯುತ್ತದೆ. ಭಾವುಕತೆ, ವೈಚಾರಿಕತೆಗಳೆರಡನ್ನೂ ಕವಿತೆ ಕೆಣಕುತ್ತದೆ. ಮನ ಚಿಂತನೆಯಲ್ಲಿ ತೊಡಗುತ್ತದೆ.

ಮನೆ ತುಂಬಿಸುವ ಹಾಡಂತೂ ಓದಿದಷ್ಟೂ ಸಲ, ಯಾರಾದರೂ ಹಾಡಿದಷ್ಟೂ ಸಲ ಕಣ್ಣಲ್ಲಿ ನೀರು ತುಂಬುವ ಹಾಗಿದೆ.

ಈ ಕವಿತೆಗಳನ್ನು ಬರೆದ ಕವಿಯೆ ನಮಗೆ ಗುರುಗಳಾಗಿ ದೊರೆತಾಗ ಹೆಮ್ಮೆಯೆನಿಸಿತು. ವಿ.ಸೀ., ಕುವೆಂಪು, ಆ ಮೊದಲು ಪರಮೇಶ್ವರ ಭಟ್ಟರು, ಜಿ. ಪಿ. ರಾಜರತ್ನಂ ಅವರುಗಳನ್ನು ಗುರುಗಳಾಗಿ ಪಡೆದ ಭಾಗ್ಯಶಾಲಿ ನಾನು ಎಂದು ಈಗಲೂ ನೆನೆಸಿಕೊಳ್ಳುತ್ತೇನೆ. ವಿ.ಸೀ. ಯವರ ತರಗತಿಯ ಬೋಧನೆ ಸಹ ಅವರ ಕವನಗಳಷ್ಟೆ ಸತ್ವಪೂರ್ಣವಾಗಿ, ವೀರ್ಯವತ್ತಾಗಿ, ಧೀರನಿರ್ಭಯ ಮನೋಧರ್ಮದ ಅಭಿವ್ಯಕ್ತಿಯಾಗಿರುತ್ತಿತ್ತು. ಗುರುಗಳು ನಿಜಕ್ಕೂ ಕಾವ್ಯದ ಓಜಸ್ಸಿನಲ್ಲಿ, ಬಹುಶ್ರುತವಾದ ವಿದ್ವತ್ತಿನಲ್ಲಿ, ಪರಿಣಾಮ ಕಾರಿಯಾದ ಮಾತುಗಾರಿಕೆಯಲ್ಲಿ ಬಹು ಎತ್ತರದ, ಗೌರವ–ಘನತೆವೆತ್ತ ವ್ಯಕ್ತಿ. ಅವರ ಬಳಿ ಮಾತಾಡಲೇ ಭಯವಾಗುತ್ತಿತ್ತು. ಆದರೆ ಒಮ್ಮೆ ಅವರೊಂದಿಗೆ ಮಾತಾಡಿದ ಬಳಿಕ ಅವರೆಷ್ಟು ಸರಳ, ಸ್ನೇಹಶೀಲ, ಸ್ನೇಹಸುಲಭರು ಎಂದು ತಿಳಿಯಿತು. ಅವರ ಉಡುಪು ಅಡಿಯಿಂದ ಮುಡಿಯವರೆಗೆ ಶುಭ್ರ ಧವಳ. ಶುದ್ಧ ಬಿಳುಪಿನ ಮಲ್‌ಪಂಚೆ, ಹತ್ತಕೊರಳಿನ ಮಲ್‌ಷರಟು, ಅದನ್ನು ಮುಚ್ಚಿದ ಮುಚ್ಚು ಕಾಲರಿನ ಬಾದಾಮಿ ಹಾಲು ವರ್ಣದ ಕೋಟು (ಕೊರಳ ಹತ್ತಿರದ ಗುಂಡಿಗಳನ್ನವರು ಹಾಕುತ್ತಿರಲಿಲ್ಲ), ಮತ್ತು ಬಹು ಅಚ್ಚುಕಟ್ಟಾಗಿ ನೀಟಾಗಿ ಕಟ್ಟಿದ, ಶುಭ್ರ ಬಿಳಿಯ ಅಂಚಿಲ್ಲದ ಮೈಸೂರು ಪೇಟ, ಕನ್ನಡಕ. ಸೂಕ್ಷ್ಮವಾಗಿ ನಿರುಕಿಸುವ, ಒಳಹೊಕ್ಕು ನೋಡುವಂಥ ಹೊಳಪಿನ ಕಣ್ಣುಗಳು. ಹತ್ತ ಕತ್ತರಿಸಿದ ನೀಟಾದ ಮೀಸೆ. ನುಣ್ಣಗೆ ಕ್ಷೌರ ಮಾಡಿಕೊಂಡ ಕೆನ್ನೆ, ಗಲ್ಲ. ಅಷ್ಟು ಎತ್ತರವಲ್ಲ, ಅಷ್ಟು ಕುಳ್ಳಲ್ಲ. ತೆಳುವಾದ ಮೈಕಟ್ಟು. ಕಣ್ಣು–ತುಟಿಗಳಲ್ಲಿ ಮಂದಹಾಸ. ಅವರದು ಎಲ್ಲದರಲ್ಲೂ ಅಚ್ಚುಕಟ್ಟು, ಕಲಾತ್ಮಕತೆ, ರಸಜ್ಞತೆ. ಒಂದು ಪುಸ್ತಕದ ಮುದ್ರಣ, ಅದಕ್ಕೆ ಬಳಸುವ ಕಾಗದ,

ಹೊರಗವಚ, ಏನೇ ಇರಲಿ ಎಲ್ಲವೂ ಸುಂದರವಾಗಿರಬೇಕು. (ಅವರ 'ಗೀತೆಗಳು' ಕವನ ಸಂಕಲನವೇ ಸಾಕು ಉದಾಹರಣೆಗೆ) ದೋಷ ರಹಿತವಾಗಿರಬೇಕು. ಗುಣಮಟ್ಟ ಉತ್ಕೃಷ್ಟವಾಗಿರಬೇಕು. ಸೂಕ್ಷ್ಮ ಸೌಂದರ್ಯ ಪ್ರಜ್ಞೆ, ರಸಪ್ರಜ್ಞೆ ಅವರದು. ಕಾಫಿ, ತಿನಿಸು, ಊಟ, ತಾಂಬೂಲ, ಪ್ರತಿಯೊಂದೂ ಸೊಗಸಾದುದೇ ಆಗಿದ್ದರೆ ಮಾತ್ರ ಒಪ್ಪುವರು. ಕೊಂಚ ಅನ್ಯವಾಗಿದ್ದರೆ ಹೇಗೊ ಸಹಿಸಿಯಾರು. ಆದರೆ ಮೆಚ್ಚಿದ ಮಾತಿಲ್ಲ, ತೋರಿಕೆಗೆ ಸಹ ಇಲ್ಲ. ಸೌಜನ್ಯಕ್ಕಾಗಿ ಮೌನವಾಗಿದ್ದು ಬಿಡುವರು.

ತಮ್ಮ ವಿದ್ಯಾರ್ಥಿಗಳ ಬಗ್ಗೆ ತುಂಬಾ ಪ್ರೀತಿ. ಈ ಬಗ್ಗೆ ನಾನು ಒಂದು ಸ್ವಾರಸ್ಯವಾದ, ಮರೆಯಲಾಗದ, ಪ್ರಸಂಗವನ್ನು ಕೇಳಿದ್ದೆ. ನಿಜವೇ ಎಂದು ಸಂಶಯಬರುವಂತಹದು. ಆದರೆ ವಾಸ್ತವವಾಗಿ ನಡೆದುದೇ. ವಿ.ಸೀ. ಅವರ ನಿಕಟ ಪರಿಚಯವಿದ್ದವರಿಗೆ ಅದು ವಿಶೇಷವೆನಿಸುವುದೂ ಇಲ್ಲ. ಒಂದು ಸಲ ಐಚ್ಛಿಕ ಕನ್ನಡ ತರಗತಿಯ ಪಾಠದ ಪೀರಿಯಡ್ ವಿ.ಸೀ. ಯವರದು. ಇದ್ದವರು ಏಳೆಂಟು ವಿದ್ಯಾರ್ಥಿಗಳು ಮಾತ್ರ. ಕಾಯುತ್ತ ಕುಳಿತಿದ್ದರು. ಗುರುಗಳು ಹೆಚ್ಚು ಕಾಯಿಸದೆ ಬಂದರು. ಗೌರವ ಸೂಚಿಸಲು ಎಲ್ಲರೂ ಎದ್ದು ನಿಂತು, ಪಾಠ ಕೇಳಲು ಉತ್ಸುಕರಾಗಿ ಕುಳಿತರು. ಗುರುಗಳು ಎಲ್ಲರ ಕಡೆ ಒಮ್ಮೆ ಕಣ್ಣಾಡಿಸಿ ಎಲ್ಲರೂ ಬಂದಿರುವರೇ ಎಂದು ನೋಡಿದರು. ಪಾಠ ಷುರು ಮಾಡದೆ, ಮುಗುಳು ನಕ್ಕು, ಯಾರನ್ನೊ ನಿರೀಕ್ಷಿಸುತ್ತಿದ್ದಂತೆ ಬಾಗಿಲು, ಕಿಟಕಿ ಕಡೆ ನೋಡುತ್ತಿದ್ದರು. ಇದೊಂದೂ ಅರ್ಥವಾಗದೆ ವಿದ್ಯಾರ್ಥಿಗಳು ಗುರುಗಳನ್ನು ನೋಡುತ್ತಿದ್ದಂತೆ ಘಂ ಅಂತ ಮಸಾಲೆದೋಸೆ ವಾಸನೆ ಬಂದಿತು. ಮರುಕ್ಷಣ ಕಾಲೇಜು ಕ್ಯಾಂಟೀನಿನ ಮಾಣಿ ಟ್ರೇ ಹಿಡಿದುಕೊಂಡು ತಂದಿದ್ದ ಜಾಮೂನು ಬಟ್ಟಲುಗಳನ್ನು ವಿದ್ಯಾರ್ಥಿಗಳ ಮುಂದೆ ಇಟ್ಟ. ಅದರ ಹಿಂದೆಯೆ ಗರಿಗರಿ ಮಸಾಲೆ ದೋಸೆಯ ತಟ್ಟೆಗಳನ್ನು ಹಿಡಿದ ಇನ್ನೊಬ್ಬ ಮಾಣಿ. ಗುರುಗಳು ಅಪ್ಪಣೆ ಕೊಡಿಸಿದರು. ಮೊದಲು ತಿಂಡಿ, ಬಿಸಿ ಬಿಸಿಯಾಗಿರುವಾಗಲೆ ಆಗಿ ಬಿಡಲಿ. ಅನಂತರ ಪಾಠ. ಆಶ್ಚರ್ಯವೊ ಆಶ್ಚರ್ಯ!! ಎಲ್ಲರಿಗೂ ಹಸಿವಾಗಿದ್ದ ಕಾಲ. ಎದುರಿಗೆ ಬಾಯಲ್ಲಿ ನೀರೂರಿಸುವ ತಿಂಡಿ. ವಿದ್ಯಾರ್ಥಿಗಳ ಖುಷಿ ನೋಡಬೇಕು! ಎಂದಿಗಿಂತ ಹೆಚ್ಚು ತೃಪ್ತ ಮನಸ್ಸಿನಿಂದ ಪಾಠ ಕೇಳಿದರು. ವಿದ್ಯಾರ್ಥಿಗಳ ಮೇಲಿನ ಈ ಪ್ರೀತಿ ಅಭಿಮಾನ ಎಂತಹದು! ಸಲುಗೆಯಿದ್ದರೂ ಸದರಕ್ಕಿಳಿಯದಂತೆ ನೋಡಿಕೊಂಡು ವಿದ್ಯಾರ್ಥಿಗಳ ಮೇಲೆ ಸತ್ಭಾವ ಬೀರುವ ಗುರುಗಳು ಎಲ್ಲ ಕಾಲಕ್ಕೂ ವಿರಳ ಹಾಗೂ ಗೌರವಾರ್ಹರು.

ಒಮ್ಮೆ ಗುರುಗಳ ಮನೆಗೆ ಹೋಗುವ ಸಂದರ್ಭ ಬಂದಿತು. ಆಗ ಅವರು ತೋರಿದ ಮಮತೆ, ಆದರಗಳನ್ನು ನಾನು ಮರೆಯುವಂತೇ ಇಲ್ಲ. ಮನೆಯ ಹುಡುಗನೆಂಬಂತೆ ಬಹು ಆತ್ಮೀಯತೆಯಿಂದ ಮಾತಾಡಿಸಿ, "ಬಾರಯ್ಯಾ, ಒಳ್ಳೆ ಹೊತ್ತಿಗೆ ಬಂದೆ, ಬಹಳ ಸಂತೋಷ. ಇವತ್ತು ಪರಮಾಷಿಯಾಗಿ ಉಪ್ಪಿಟ್ಟು ಮಾಡಿದ್ದಾರೆ ಮನೆಯಲ್ಲಿ, ಜೊತೆಗೆ ತಿನ್ನೋಣ" ಎಂದು, ನನ್ನ ಸಂಕೋಚವೆಲ್ಲ ದೂರವಾಗುವ ಹಾಗೆ ವಾತ್ಸಲ್ಯ ತೋರಿ ಕೂರಿಸಿದರು. ಅವರು 'ಪರಮಾಷಿ' ಎಂದಿದ್ದ ಉಪ್ಪಿಟ್ಟು ನಿಜಕ್ಕೂ ಸೊಗಸಾಗಿತ್ತು. ಅವರಲ್ಲಿದ್ದ ರುಚಿಸೂಕ್ಷ್ಮತೆಯನ್ನು ನಾನು ಬೇರೆ ಯಾರಲ್ಲೂ ಕಾಣಲಿಲ್ಲ.

ಒಮ್ಮೆ ಅವರೂ, ಪ್ರೊ। ವೆಂಕಟರಾಮಪ್ಪನವರೂ ವಿಶ್ವವಿದ್ಯಾನಿಲಯದ

ಪ್ರಸಾರೋಪನ್ಯಾಸಕ್ಕೆಂದು ದಾವಣಗೆರೆಗೆ ಬಂದಿದ್ದರು. ನಮ್ಮ ಗುರುಗಳಿಬ್ಬರೂ ಬಂದಿದ್ದಾರೆಂದು ಖುಷಿಯಾಗಿ, ಸಂಭ್ರಮದಿಂದ ನಾನೂ, ನನ್ನ ಆತ್ಮೀಯ ಗೆಳೆಯ ಎಸ್ಕೆ ಅವರನ್ನು ನೋಡಲು ಪ್ರವಾಸ ಮಂದಿರಕ್ಕೆ ಹೋದೆವು. ನಮ್ಮ ಊರಿನ ವಿಶೇಷಗಳನ್ನೆಲ್ಲ ಮೈಸೂರಿನಲ್ಲಿ ಅವರ ಬಳಿ ಹೇಳುತ್ತಿದ್ದುದು ನೆನಪಾಯಿತು. ವಿ. ಸೀ. ಅವರಿಗೆ ಮಸಾಲೆ ದೋಸೆ ಎಂದರೆ ವಿಶೇಷ ಪ್ರೀತಿ. ನಮ್ಮೂರಿನ ಶಂಕರಪ್ಪ ಹೋಟೆಲಿಗೆ ಕರಕೊಂಡು ಹೋದೆವು. ಅಲ್ಲಿನ ಬೆಣ್ಣೆ ಕಾಯಿಸಿದ ತುಪ್ಪ ಹಾಕಿ ಮಾಡಿದ ಗರಿ ಗರಿ ಮಸಾಲೆ ದೋಸೆ ಗುರುದ್ವಯರಿಗೆ ಬಹಳ ಮೆಚ್ಚುಗೆಯಾಯಿತು. "ಹೀಗಿರಬೇಕು! ದೋಸೆ ಅಂದರೆ ಇದು! ಘಂ ಅಂತ ವಾಸನೆ ಬಂದಾಗಲೆ ನನಗೆ ಗೊತ್ತಾಯಿತು", ಎಂದರು ವಿ.ಸೀ. ಅನಂತರ ಎಸ್ಕೆ ವಸಂತಾ ಟಾಕೀಸ್ ಬಳಿ ಇದ್ದ ಪ್ರಸಿದ್ಧ ಬೀಡಾ ಅಂಗಡಿಯಿಂದ ಸ್ಪೆಷಲ್ ಬೀಡಾ ಮಾಡಿಸಿಕೊಂಡು ತಂದು ಕೊಟ್ಟ. ವಿ.ಸೀ.ಯವರು ಅದನ್ನು ಮೆಲ್ಲುತ್ತ ಏನೂ ಹೇಳಲಿಲ್ಲ. ನಾವು ಕುತೂಹಲದಿಂದ ಅವರ ಮುಖವನ್ನೇ ನೋಡುತ್ತಿದ್ದೆವು. ಅವರ ಬಾಯಿಂದಾಗಲಿ ಕಣ್ಣಿನಿಂದಾಗಲಿ ಏನೂ ಅಭಿವ್ಯಕ್ತವಾಗದಿರಲು ಕುಗ್ಗಿದೆವು. "ಹೇಗಿದೆ ಸಾರ್?" ಎಂದು ಕೇಳಿದೆ ತಡೆಯಲಾರದೆ. "ಪರವಾಗಿಲ್ಲ. ನೀವು ಹೇಳಿದಷ್ಟು ಉತ್ಕೃಷ್ಟವಾಗೇನೂ ಇಲ್ಲ", ಎಂದರು. "ಎಲ್ಲಾ ಸರಿ. ತಾಂಬೂಲದ ಎಲ್ಲ ಲವಾಜಾಮೇನೂ ಬಿದ್ದಿದೆ. ಆದರೆ ಕೊಬರಿ ಸ್ವಲ್ಪ ಮುಗ್ಗುಲಾಗಿದೆ," ಎಂದಾಗ ಪರಮಾಶ್ಚರ್ಯವಾಯಿತು. ಬೀಡಾಕ್ಕೆ ಹಾಕಿದ್ದ ಹತ್ತಾರು ಸುವಾಸನಾ ದ್ರವ್ಯಗಳ ಅಬ್ಬರದಲ್ಲಿ ಕೊಬರಿ ಕೊಂಚ ಮುಗ್ಗುಲಾಗಿರುವುದು ನನಗಂತೂ (ನಾನೂ ಮೂಗು–ವಾಸನೆ–ವಿಚಾರದಲ್ಲಿ ಸೂಕ್ಷ್ಮ ಎಂದೇ ಅನಿಸಿಕೊಂಡವನು) ಗೊತ್ತಾಗಲಿಲ್ಲ. ಮಾರನೆ ದಿನ ಬೀಡಾವಾಲನಿಗೆ ಈ ವಿಚಾರ ತಿಳಿಸಿದಾಗ ಆತ ಒಣ ಕೊಬ್ರಿ ತುರಿಯನ್ನು ತೆಗೆದು ಮೂಸಿ ನೋಡಿದ. ಬಾಯಲ್ಲೂ ಹಾಕಿಕೊಂಡು ನೋಡಿದ. "ಹೌದು ಸಾರ್. ಬರೀ ಕೊಬರಿ ತಿಂದು ಪರೀಕ್ಷೆ ಮಾಡಿ ನೋಡಿದರೆ ಮಾತ್ರ ಗೊತ್ತಾಗುವಷ್ಟು ನವುರಾಗಿ ಮುಗ್ಗುಲಾಗಿದೆ. ಛೇ, ನಾನೆಂಥವನು, ಸರಿಯಾಗಿ ಪರೀಕ್ಷಿಸದೆ ಹಾಕಿಬಿಟ್ಟೆ. ನಿಮ್ಮ ಮೇಷ್ಟ್ರು ಸಾಮಾನ್ಯರಲ್ಲ ಬಿಡಿ! ತಾಜಾ ಕೊಬರಿ ಹಾಕಿ ಬೇರೆ ಬೀಡಾ ಮಾಡಿಕೊಡ್ತೇನೆ ಮುಫತ್ತಾಗಿ. ಆಗ ಏನು ಹೇಳುತಾರೊ, ಕೇಳಿ" ಎಂದ. ಮೇಷ್ಟ್ರರಾಗಲೆ ಬೆಂಗಳೂರಿಗೆ ಹೋಗಿ ಆಯಿತು ಎಂದು ಹೇಳಿದಾಗ ತನ್ನ ಬೀಡಾ ನಪಾಸಾಯಿತು, ತನ್ನ ಖ್ಯಾತಿಯ ಮಾತಿರಲಿ, ದಾವಣಗೆರೆಯ ಮರ್ಯಾದೆಯನ್ನೇ ಕಳೆದೆನಲ್ಲಾ ಎಂದು ಬಹುವಾಗಿ ಪೇಚಾಡಿದ.

ಹೀಗೆ ಎಲ್ಲದರಲ್ಲೂ ಅವರ ಅಭಿರುಚಿ ಚುರುಕಾದುದು, ಸೂಕ್ಷ್ಮವಾದುದು, ಉತ್ಕೃಷ್ಟವಾದುದು. ಒಟ್ಟಿನಲ್ಲಿ ಅವರದು ಸುಸಂಸ್ಕೃತ ಶ್ರೀಮಂತ ಮನೋಧರ್ಮ, ತೀಕ್ಷ್ಣವಾದ ಮತಿ. ಹಾಗೆ ನೋಡಿದರೆ ಅವರು ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಪದವೀಧರರು. ಸಾಹಿತ್ಯ ಸೆಳೆದುಕೊಂಡು ಕನ್ನಡ ಅಧ್ಯಾಪಕರಾದರು, ಶ್ರೇಷ್ಠ ಕವಿಗಳಾದರು, ವಿಮರ್ಶಕರಾದರು. ನೃತ್ಯ, ಸಂಗೀತ, ಚಿತ್ರ ಕಲೆಗಳ ಭಾರತೀಯ ಪರಂಪರೆ, ಸಾಧನೆ ಸಿದ್ಧಿಗಳನ್ನು ಕುರಿತು ಅಧ್ಯಯನ ಮಾಡಿದರು. ಪಾಶ್ಚಾತ್ಯ ಚಿಂತನೆಯ ಪರಾಮರ್ಶೆ ಮಾಡಿದರು. ಇಷ್ಟೆಲ್ಲ ವಿದ್ವತ್ ಪ್ರೌಢಿಮೆಯಿದ್ದೂ, ತಿಳಿದವರೆಂಬ ಧೋರಣೆ ತಾಳದೆ, ಸ್ವಾಭಾವಿಕವಾದ ಸರಳತೆ, ಸರಸ–ಸಜ್ಜನಿಕೆಗಳನ್ನುಳಿಸಿಕೊಂಡರು.

ಅವರ ದೊಡ್ಡತನವನ್ನು ತೋರಿಸುವ ಒಂದು ಘಟನೆ ನೆನಪಾಗುತ್ತದೆ. ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘ ನಡೆಸಿದ ಸಣ್ಣ ಕಥಾ ಸ್ಪರ್ಧೆಯಲ್ಲಿ ನನಗೆ ದ್ವಿತೀಯ ಬಹುಮಾನ ಬಂತು. 'ದೃಷ್ಟಿ ಸಂಗಮ' ಎಂದು ಕಥೆಯ ಹೆಸರು. ವಿ.ಸೀ. ಅವರೂ ಅದರ ಒಬ್ಬ ತೀರ್ಪುಗಾರರಾಗಿದ್ದರು ಎಂದು ಕಾಣುತ್ತದೆ. ನನ್ನನ್ನು ಕಾಮನ್ ರೂಮಿಗೆ ಕರೆಸಿ, "ಕಥೆ ಚೆನ್ನಾಗಿದೆ. ಇಂತಿಂಥ ಕೊರತೆ ಇದ್ದು ಅದಕ್ಕೆ ಪ್ರಥಮ ಸ್ಥಾನ ತಪ್ಪಿ ದ್ವಿತೀಯ ಸ್ಥಾನ ದಕ್ಕಿತು. ಅಭಿನಂದನೆಗಳು" ಎಂದು ಹೇಳಿ ಸಣ್ಣ ಕಥೆಯ ರಚನೆಯಲ್ಲಿ ಗಮನಿಸಬೇಕಾದ ಅಂಶಗಳನ್ನು ಸಂಕ್ಷಿಪ್ತವಾಗಿ ತಿಳಿಸಿ, ಬರೆಯುತ್ತಾ ಇರಿ, ಕೈ ಪಳಗುತ್ತೆ, ಎಂದು ಪ್ರೋತ್ಸಾಹಿಸಿದರು. ಪ್ರಬುದ್ಧ ಕರ್ನಾಟಕದಲ್ಲಿ (ಆಗ ಅವರು ಅದರ ಸಂಪಾದಕರು) ಪ್ರಕಟಿಸುವುದಾಗಿಯೂ ಹೇಳಿದರು. ಸ್ವರ್ಗಕ್ಕೆ ಮೂರೇ ಗೇಣು ಎಂಬ ಸ್ಥಿತಿಯಲ್ಲಿದ್ದೆ. ನೆಲದ ಸಂಪರ್ಕ ತಪ್ಪಿದ ಭಾವನೆ! ಬಹುಮಾನ ಬಂದಿತು ಎಂದು ಕೋಡು ಮೂಡಲಿಲ್ಲ. ಈಗಲೂ ಸ್ವಪ್ರತಿಷ್ಠೆಗಾಗಿ ಈ ನೆನಪನ್ನು ಬರೆಯುತ್ತಿದ್ದೇನೆಂದು ಯಾರೂ ಭಾವಿಸಬಾರದು. ಹಿರಿಯ ಸಾಹಿತಿಗಳಾದ ಗುರುಗಳು ನನ್ನಂಥ ಕಿರಿಯನ ಅಕ್ಷರಾಭ್ಯಾಸವನ್ನೇ ಅಷ್ಟೊಂದು ದೊಡ್ಡದು ಮಾಡಿ, ಬೆನ್ನು ತಟ್ಟಿದರಲ್ಲಾ ಎಂಬ ಕೃತಜ್ಞತೆಯಿಂದ ನೆನಪು ಮಾಡಿ ಕೊಳ್ಳುತ್ತಿದ್ದೇನೆ. ಅವತ್ತೂ ಅದೇ ಭಾವನೆಯಿಂದ ಅವರಿಗೆ ವಂದಿಸಿ ಹಾಸ್ಟೆಲಿಗೆ ಹಿಂತಿರುಗಿದೆ. ಪ್ರಬುದ್ಧ ಕರ್ನಾಟಕದ ಸಂಚಿಕೆ ಬರುವುದನ್ನೆ ಕಾಯತೊಡಗಿದೆ. ಅಷ್ಟರಲ್ಲಿ ವಿ.ಸೀ. ಯವರು ಮತ್ತೆ ಹೇಳಿ ಕಳಿಸಿದರು. "ನಿನ್ನ ಕಥೆಯ ಇನ್ನೊಂದು ಪ್ರತಿ ಮಾಡಿ ತಗೊಂಡು ಬಾರಯ್ಯಾ. ಸ್ಪರ್ಧೆಗೆ ಕೊಟ್ಟುದನ್ನು ಎಲ್ಲೊ ಇಟ್ಟು ಮರೆತು ಬಿಟ್ಟಿದೀನಿ. ಸಿಕ್ಕುತ್ತಾ ಇಲ್ಲ. ಜೋಪಾನವಾಗೇನೊ ತೆಗೆದಿಟ್ಟೆ, ಎಲ್ಲಿ ಎಂಬುದು ಮರೆತು ಹೋಗಿದೆ." ಎಂದರು. ಅವರ ಪೇಚಾಟ ಸುವ್ಯಕ್ತವಾಗಿತ್ತು. "I am very sorry.... ಪಾಪ! ನಿನಗೆ ತೊಂದರೆ ಕೊಡುತಾ ಇದೇನೆ." ನನಗೇ ಸಂಕೋಚವಾಯಿತು. "ಚಿಂತಿಸಬೇಡ. ಪ್ರಬುದ್ಧ ಕರ್ನಾಟಕದ ಈ ಸಂಚಿಕೆಗೆ ಹಾಕ್ಕೋತೀನಿ. ನಾಳೆ ತಂದುಕೊಟ್ಟುಬಿಡು." "ಅದಕ್ಕಲ್ಲ ಸಾರ್ ನಾನು ಚಿಂತಿಸುತ್ತಿರೋದು. ನನ್ನ ಬಳಿ ಅದರ ಪ್ರತಿ ಇಲ್ಲ. ಮೂಲ ಬರಹವೇ ಅದು. ಪ್ರತಿ ಮಾಡಿಟ್ಟುಕೊಳ್ಳಲಾಗಲೇ ಇಲ್ಲ" ಎಂದಾಗ ಗುರುಗಳಿಗೆ ನಿಜಕ್ಕೂ ತೀರ ಬೇಸರವಾಯಿತು. "ಛೇ, ಎಂಥಾ ಕೆಲಸ ಆಗಿ ಹೋಯಿತು. ಇನ್ನು ಮೇಲೆ ನೆನಪಿಟ್ಟುಕೋ, ಯಾವಾಗಲೂ ಬರೆದದ್ದರ ಒಂದು ಪ್ರತಿ ತಪ್ಪದೆ ಮಾಡಿಟ್ಟುಕೊಳ್ಳಬೇಕಪ್ಪಾ. ಸರಿ, ಮತ್ತೊಮ್ಮೆ ಹುಡುಕಿ ನೋಡ್ತೀನೆ" ಎಂದರು. "ಸರಿ ಸಾರ್" ಎಂದು ಹೊರಟೆ. ಮತ್ತೆ ಕೂಗಿದರು. "ನೋಡು, ಸಾಧ್ಯವಾದರೆ ಅದೇ ಕಥೆಯನ್ನು ನೆನಪಿನಿಂದ ಬರೆದು ಕೊಡುತ್ತೀಯಾ? ಅದು ಕಷ್ಟದ ಕೆಲಸ ಎಂದು ನನಗೆ ಗೊತ್ತು. ಆದರೂ try ಮಾಡು," ಎಂದು ಮನವೊಲಿಸಿದರು.

ಕಥೆ ಸಿಕ್ಕಲಿಲ್ಲ. ನೆನಪಿನಿಂದಲೂ ಬರೆಯಲಿಕ್ಕಾಗಲಿಲ್ಲ. ಕಥೆ ಕಳೆದು ಹೋಯಿತೆ ಎಂದು ನನಗಂಥಾ ವ್ಯಥೆ ಆಗಲಿಲ್ಲ. ಆ ಸಂದರ್ಭದಲ್ಲಿ ವಿ.ಸೀ. ಅಷ್ಟು ಒದ್ದಾಡಿದ್ದು, ತುಂಬಾ ಕಿರಿಯ ಬರೆಹಗಾರನ ಬಗ್ಗೆ ಹಿರಿಯ ಸಾಹಿತಿಯಾದ ಅವರು ತೋರಿದ ಆಸ್ಥೆ, ಅಭಿಮಾನ ನನ್ನ ಮನವನ್ನು ತುಂಬಿ, ಅವರ ದೊಡ್ಡತನ, ಸೌಜನ್ಯ ನನ್ನ ಮೇಲೆ ತುಂಬಾ ಪ್ರಭಾವ ಬೀರಿದುವು.

ನಾನು ರಾಗ ಹಾಕಿ ಆಕಾಶವಾಣಿಯಲ್ಲಿ ಹಾಡುತ್ತಿದ್ದ ಕೆಲವು ಕನ್ನಡ ಭಾವಗೀತೆಗಳನ್ನು ತಾಳ-ಸ್ವರ-ಲಿಪಿ ಸಹಿತವಾಗಿ ಪುಸ್ತಕರೂಪದಲ್ಲಿ ಪ್ರಕಟಿಸಬೇಕೆಂಬ ಹುಚ್ಚು ಹತ್ತಿಸಿದ್ದರು ಒಬ್ಬ ಮಿತ್ರರು. ಗೆ. ಶಿವರುದ್ರಪ್ಪ, ಕಣವಿ ಪ್ರೋತ್ಸಾಹಿಸಿದರು. ಸರಿ. ನಾನು ಹಾಡುತ್ತಿದ್ದ ಭಾವಗೀತೆಗಳ ಕವಿಗಳ ಅನುಮತಿ ಬೇಡಿದೆ. ಪೂಜ್ಯ ಗುರುಗಳಾದ ಕುವೆಂಪು, ದ.ರಾ. ಬೇಂದ್ರೆ ಹಾಡು ಕೇಳಿದ್ದರು. ಸಂತೋಷದಿಂದ ಒಪ್ಪಿ ಹರಸಿದರು. ಗುರುಗಳಾದ ವಿ.ಸೀ. ಅವರು ಆಗ ಹೊನ್ನಾವರದ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದರು. ವಿಶ್ವವಿದ್ಯಾನಿಲಯದ ಕಾರ್ಯದ ಮೇಲೆ ಮೈಸೂರಿಗೆ ಬರುತ್ತಿದ್ದರು. ಒಮ್ಮೆ ಬಂದಾಗ ಈ ವಿಚಾರ ತಿಳಿಸಿ ಅನುಮತಿ ಬೇಡಿದೆ. "ಓ, ನೀವು ಹಾಡೋದುಂಟಾ? ನೀವೇ ರಾಗ ಹಾಕಿದ್ದೀರಾ? ಭೇಷ್. ಯಾವ ಗೀತೆಗಳು?" ಎಂದು ಕೇಳಿದರು. ಉತ್ಸಾಹದಿಂದ "ಬಲ್ಲವನು ನಾನೆಂದು ಬಲು ಮೆರೆದೆನಯ್ಯಾ" ಎಂಬ ಗೀತೆ, ಸಾರ್. ಅದೊಂದೇ. ಅದರಲ್ಲಿನ ಭಕ್ತಿಭಾವ ನನಗೆ ತುಂಬಾ ಹಿಡಿಸಿತು", ಎಂದೆ. "ಯಾವ ರಾಗದಲ್ಲಿ ಹಾಡುತ್ತೀರಿ?" ಕೇಳಿದರು. "ಮಾಲಕೌಂಸ್ ರಾಗದಲ್ಲಿ, ಸಾರ್" "ನೀವು ಹಾಡೋದನ್ನ ನಾ ಕೇಳಬೇಕಲ್ಲಾ. ಒಂದು ಕೆಲಸ ಮಾಡಿ. ನಾಳೆ ಇಷ್ಟೊತ್ತಿಗೆ ಬನ್ನಿ" ಎಂದರು. ಅವರ ಆಶಯ ಗೊತ್ತಾಯಿತು. ಪರೀಕ್ಷೆ ಮಾಡುವ ದೃಷ್ಟಿ ಅಲ್ಲ, ಸುಮ್ಮನೆ ಹಾಡು ಕೇಳುವ ಇಷ್ಟ, ಅಂತ. ಸರಿ, ಮಾರನೆ ಬೆಳಿಗ್ಗೆ ಅವರಿದ್ದ ಮಾಡರ್ನ್ ಹೋಟೆಲ್ ರೂಮಿಗೆ ಹೋದೆ. ಪ್ರಶಾಂತ ವಾತಾವರಣ. ಹಾಡಿದೆ. ಕಣ್ಣುಮುಚ್ಚಿ ಹಾಡು ಕೇಳುತ್ತ ತನ್ಮಯರಾದರು. ಹಾಡು ಮುಗಿದ ಮೇಲೂ ಎರಡು ನಿಮಿಷ ಅದೇ ಭಾವದಲ್ಲಿ ಮುಳುಗಿದ್ದು ನಂತರ ಮೆಲ್ಲಗೆ ಕಣ್ತೆರೆದು ಮುಗುಳು ನಗುತ್ತ "ಭೇಷ್, ಚೆನ್ನಾಗಿ ಹಾಡುತ್ತೀರಿ. ಕವನದ ಭಾವಕ್ಕೆ ರಾಗ ಸೊಗಸಾಗಿ ಹೊಂದುತ್ತೆ," ಎಂದರು. ನಾನು ಉಬ್ಬಿದೆ. ಕೃತಜ್ಞತೆಯಿಂದ ನಮಸ್ಕರಿಸಿ, "ತಮ್ಮ ಆಶೀರ್ವಾದ ಬೇಕು. ಸಾರ್," ಎಂದೆ. "ಓಹೋ, ಧಾರಾಳವಾಗಿ. ನನ ಒಪ್ಪಿಗೆ ಇದೆ. ಪ್ರಕಟಿಸಿರಿ," ಎಂದರು. ಅವರ ಇನ್ನೂ ಎಷ್ಟೋ ಗೀತೆಗಳಿವೆ. ಎಚ್. ಕೆ. ರಾಮಚಂದ್ರಮೂರ್ತಿ, ಎಸ್. ಅನಂತನಾರಾಯಣ ಕೆಲವನ್ನು ಚೆನ್ನಾಗಿ ಹಾಡಿ ಜನಪ್ರಿಯಗೊಳಿಸಿದ್ದರು.

ಪುಸ್ತಕ ಸಿದ್ಧವಾಯಿತು. ಮಿತ್ರರಾದ ಸಿಂಧುವಳ್ಳಿ ಅನಂತಮೂರ್ತಿ ಪ್ರಕಟಿಸಲು ಧೈರ್ಯದಿಂದ ಮುಂದಾದರು. (ಅದೇನು ಕಡಿಮೆಯ ಸಾಹಸವಲ್ಲ!) ಗೆ. ಕಣವಿ 'ಹಾಡೋಣ ಬಾ' ಎಂದು ಪುಸ್ತಕಕ್ಕೆ ಹೆಸರನ್ನಿಟ್ಟರು. ಹೀಗೆ ೧೯೭೧ ರಲ್ಲಿ ಪುಸ್ತಕ ಪ್ರಕಟವಾಯಿತು. ಅದರ ಒಂದು ಪ್ರತಿಯನ್ನು ಗುರುಗಳಿಗೆ ನಮಸ್ಕಾರ ಪೂರ್ವಕವಾಗಿ ಕೊಡಲು ಚಾಮರಾಜ ಪೇಟೆಯಲ್ಲಿದ್ದ ಅವರ ಮನೆಗೆ ಹೋದೆ. ಎಂದಿನ ಪ್ರೀತಿಯಿಂದ ಒಳಗೆ ಕರೆದೊಯ್ದು ಕೂರಿಸಿದರು. ಪುಸ್ತಕದ ಪ್ರತಿಯನ್ನು ಹಿಡಿದು ಸಂತೋಷಪಟ್ಟರು. ಆಗ ಅವರ ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ. ವಿಚಾರಿಸಿದ್ದಕ್ಕೆ, "ಏನಿಲ್ಲ. ಇದೆಲ್ಲ ದೇಹಧರ್ಮ, ವಯೋಧರ್ಮ, ಈಗ ವಾಸಿ," ಎಂದರು. ಅವರ ದೇಹ ಕೊಂಚ ಬಳಲಿದಂತೆ ಕಂಡಿತು. ಆದರೆ ಅವರ ಚೈತನ್ಯ ತಗ್ಗಿರಲಿಲ್ಲ, ಉತ್ಸಾಹ ಕುಂದಿರಲಿಲ್ಲ. ಅದೇ ಭಾವೋತ್ತೇಜಿತ ದನಿ, ಮಾತು! ಸದಾ ಸ್ಪಂದಿಸುವ ಅಂತಃಕರಣ, ಜಾಗ್ರತವಾದ ಪ್ರಜ್ಞೆ! ನಮ್ಮ ಗುರುಗಳು ಬೇಗ ಚೇತರಿಸಿಕೊಂಡು ನೂರು ಕಾಲ ಆರೋಗ್ಯವಾಗಿ, ಚೆನ್ನಾಗಿ

ಬದುಕಲಪ್ಪಾ, ದೇವರೇ, ಇಷ್ಟು ಕೃಪೆ ಮಾಡಿರಿ ಎಂದು ಮನದೊಳಗೇ ಪ್ರಾರ್ಥಿಸಿ ಮನೆಗೆ ಬಂದೆ.

ಇವು ನನ್ನವು, ಕೆಲವು ನೆನಪುಗಳು. ಮನದಲ್ಲಿ ಇನ್ನೂ ಹಚ್ಚ ಹಸಿರಾಗಿ, ಸವಿಯಾಗಿ, ಮಾರ್ಗದರ್ಶಕ ಬೆಳಕಾಗಿ ಉಳಿದಿವೆ.

ಆ ದಿನದ ಸೊಗಸನ್ನು ಸರಸವನು ಪುಳಕವನು
ಒಲುಮೆಯಲಿ ಭಕುತಿಯಲಿ ನೆನಸುತಿಹೆನು.

'ಆ ದಿನವ' ಮಾತ್ರವಲ್ಲ ಆ ದಿನಗಳ. ಬರಿದೆ ನೆನಸುತಿರುವುದಲ್ಲ–

ನಿಮ್ಮ ನೆನೆದಾಗೆಲ್ಲ ಹಿರಿಯಾಸೆ ಬಂದಪುದು
ನಿಮ್ಮ ನಗುವಿನ ಉಲಿಯು ಮಾರುಲಿಗೈವುದು
ನಿಮ್ಮಂತೆ ಸತ್ವಗಳ ಒಳತಿರುಳ ಬಲಿಯಿಸಲು
ಆಸೆ–ಉತ್ಸಾಹಗಳು ಉಬ್ಬಿ ಬಹವು.

ಗುರು ವಿ.ಸೀ. ಅವರ ನೂರರ ನೆನಪುಗಳಲ್ಲಿ ಈ ನೆನಪಿನ ಹೂವನ್ನೂ ಅವರ ಪಾದಗಳಲ್ಲಿ ಭಕ್ತಿಯಂಜಲಿಯೊಡನೆ ಅರ್ಪಿಸುವೆನು.

ರಸಜೀವಿ

"'ಓದು, ಬರಹದ ಶತ್ರು' ಎಂದು (ತಮಗೂ ಅನ್ವಯಿಸುವಂತೆ) ತೀ.ನಂ.ಶ್ರೀ. ಆಗಾಗ್ಗೆ ಹೇಳುತ್ತಿದ್ದುದುಂಟು. ಈ ಮಾತು ವಿ. ಸೀ. ಅವರಿಗೂ ಚೆನ್ನಾಗಿ ಹೊಂದುತ್ತದೆ. ವಿ.ಸೀ. ಅವರ ಓದುಗಾರಿಕೆ ಅಷ್ಟು ವಿಸ್ತಾರವಾದದ್ದು, ವೈವಿಧ್ಯಪೂರ್ಣವಾದದ್ದು. ಇಷ್ಟರ ಜೊತೆಗೆ, ಅವರ ಅಭಿರುಚಿಯ ವಿಷಯಗಳೋ! ನೃತ್ಯ, ಸಂಗೀತ, ಚಲನಚಿತ್ರ, ನಾಟಕ, ಚಿತ್ರಕಲೆ, ಉದ್ಯಾನವಿಹಾರ ಮುಂತಾದ ಅನೇಕ ಕಲಾಮಯ ಜೀವನ ಕ್ಷೇತ್ರಗಳು ಅವರ ಬದುಕನ್ನು ಹಂಚಿಕೊಂಡಿವೆ. ಈ ಮಧ್ಯೆ ಅವರ ಬರಹ, ಅದು ಕೂಡ ಕಡಿಮೆಯಲ್ಲ, ಜೊಳ್ಳು–ಪೊಳ್ಳು ಯಾವುದೂ ಇಲ್ಲ– ಎಷ್ಟು ಬಂದೀತು, ಎಂತು ಸಾಗೀತು? ಬರಹಗಾರ ವಿ.ಸೀ.ಯನ್ನು ಧ್ರುವಪ್ರದೇಶಗಳಲ್ಲಿ ಹರಿಯುವ ಹಿಮಪ್ರವಾಹದಲ್ಲಿ ತೇಲುವ ಮಂಜುಗೆಡ್ಡೆಗಳಿಗೆ ಹೋಲಿಸಬಹುದು. ಕಂಡು ತೇಲುವ ಭಾಗಕ್ಕಿಂತ ಕಾಣದೆ ಮುಳುಗಿರುವ ಭಾಗ ಹೆಚ್ಚು. 'Much of V. Si. consists in what he has not written'. ಎರಡು ಅರ್ಥಗಳಲ್ಲಿ ಇದು ನಿಜ; ಒಂದು ಅವರು ಮನಸ್ಸು ಮಾಡಿದ್ದರೆ ಬರೆದಿರುವುದರ ಹತ್ತು ಮಡಿ ಬರೆಯಬಹುದಾಗಿತ್ತು. ಇನ್ನೊಂದು, ಅವರ ವ್ಯಕ್ತಿತ್ವದ ಕೆಲವಂಶ ಅವರ ಬರಹಗಳಲ್ಲಿ ಹೊಮ್ಮಿದ್ದರೆ ಇನ್ನು ಕೆಲವಂಶ ಅವರ ಉಡುಪುತೊಡಪು, ಸ್ನೇಹ, ಸೌಜನ್ಯ, ಮಾತುಗಾರಿಕೆಯ ಸೊಗಸು, ಸತ್ವ, ಬದುಕಿನ ನೇಮನಿಷ್ಠೆ ಇವುಗಳಲ್ಲಿ ಹಾಗೆ ಹೀಗೆ ಮಿಂಚುತ್ತದೆ. ಹೊರಕ್ಕೆ ಹೇಗೂ ತೋರಗೊಡದೆ ಇರುವ ಅವರ ವ್ಯಕ್ತಿತ್ವದ ಬಹ್ವಂಶವನ್ನು ಪರಿಚಯ ಮಾಡಿಕೊಡುವುದಾದರೂ ಹೇಗೆ? ಬಹುಶಃ ಆ ಅಜ್ಞಾತಭಾಗ ಲಾಲ್‌ಬಾಗಿನ ಪ್ರತಿಯೊಂದು ಮರ ಗಿಡ ಬಳ್ಳಿಗೂ ಗೊತ್ತಿದ್ದರೂ ಇರಬಹುದು."

ಎಂ. ವಿ. ಸೀತಾರಾಮಯ್ಯ
'ವಿ.ಸೀ.–ಒಂ' ಪು. ೫೭–೫೮

ನನ್ನ ಗೌರವದ ಗುರುಗಳು

ಪ್ರಭುಶಂಕರ

೧೯೪೭ರಲ್ಲಿ ನಾನು ಮೈಸೂರಿನ ಮಹಾರಾಜಾ ಕಾಲೇಜಿಗೆ ಸೇರಿದ್ದು. ಎಂದರೆ ಐವತ್ತೊಂದು ವರ್ಷಗಳ ಹಿಂದೆ. ಆದರೂ ನನ್ನ ನೆನಪಿನಲ್ಲಿ ಹಚ್ಚ ಹಸಿರಾಗಿ ಉಳಿದಿರುವ ಗುರು ಶಿಖರಗಳಲ್ಲಿ ಒಂದು ವಿ.ಸೀ. ಅವರ ವ್ಯಕ್ತಿತ್ವ. ಐವತ್ತೊಂದು ವರ್ಷಗಳ ಕಾಲದ ಅನಂತರವೂ ಅವರು ನನಗೆ ಪ್ರಾತಃಸ್ಮರಣೀಯರಾಗಿ – ಏಕೆ ತ್ರಿಕಾಲ ಸ್ಮರಣೀಯರಾಗಿಯೇ– ಉಳಿದಿದ್ದಾರೆ.

ಮಹಾರಾಜಾ ಕಾಲೇಜಿಗೆ ಬರುವ ಮುನ್ನ ನಾನು ಬೆಂಗಳೂರಿನ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಎರಡು ವರ್ಷ ಓದಿದ್ದೆ. ಕನ್ನಡ ಇಲಾಖೆಯಲ್ಲಿ ಮಾತ್ರವಲ್ಲ, ಇಂಗ್ಲಿಷ್, ಅರ್ಥಶಾಸ್ತ್ರ ಮತ್ತು ಇತಿಹಾಸ – ಈ ಇಲಾಖೆಗಳಲ್ಲೂ ಯಾವುದೇ ಕಾಲದ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಗೌರವ ತರುವ ಶಕ್ತಿಯಿದ್ದ ಅಧ್ಯಾಪಕರುಗಳನ್ನು, ಇಂಟರ್ ಮೀಡಿಯೆಟ್ ತರಗತಿಯಲ್ಲೇ ಬೋಧಕರನ್ನಾಗಿ ಪಡೆಯುವ ಭಾಗ್ಯ ನನ್ನ ಪಾಲಿಗೆ ದೊರಕಿತ್ತು. ಶ್ರೀಯುತರುಗಳಾದ ತೀ. ನಂ. ಶ್ರೀಕಂಠಯ್ಯ, ಡಿ. ಎಲ್. ನರಸಿಂಹಾಚಾರ್ಯ, ಜಿ.ಪಿ. ರಾಜರತ್ನಂ, ಎಲ್. ಗುಂಡಪ್ಪ, ಎಂ. ವಿ. ಸೀತಾರಾಮಯ್ಯ– ಇಂಥವರು ಕನ್ನಡ ಇಲಾಖೆಯಲ್ಲಿ, ಶ್ರೀಯುತರುಗಳಾದ ಆರ್. ಗುರುರಾಜಾರಾಯರು, ಎಂ. ರಾಮರಾಯರು, ಕೆ. ನರಸಿಂಹಮೂರ್ತಿ, ಎಲ್. ಎಸ್. ಶೇಷಗಿರಿ ರಾಯರು, ಎಸ್. ಅನಂತ ನಾರಾಯಣ ಇಂಗ್ಲಿಷ್ ಇಲಾಖೆಯಲ್ಲಿ, ಶ್ರೀ ಎನ್. ಕಸ್ತೂರಿಯವರು ಇತಿಹಾಸ ಇಲಾಖೆಯಲ್ಲಿ – ಜ್ಞಾನ ಭಂಡಾರದ ವಜ್ರ ವೈಡೂರ್ಯಗಳನ್ನು ಲೀಲಾ ಜಾಲವಾಗಿ ನಮ್ಮ ಮುಂದೆ ಈಡಾಡಿ ನಮ್ಮ ಕಣ್ಣು ಕೋರೈಸುವಂತೆ ಮಾಡುತ್ತಿದ್ದ ಅಪ್ರತಿಮ ವಿದ್ವಾಂಸರು, ಅನುಪಮ ಬೋಧಕರು. ಇಂಥವರೆಲ್ಲ ನನ್ನ ಬೆನ್ನಿನಾಚೆಯ, ಎತ್ತರದ ವೇದಿಕೆಯ ವ್ಯಕ್ತಿಗಳಾಗಿ ಮಾತ್ರ ನನ್ನ ಪಾಲಿಗೆ ಉಳಿಯಲಿಲ್ಲ. ಪೂಜ್ಯರಾದ ನಾ. ಕಸ್ತೂರಿಯವರ ಒಲುಮೆಯಿಂದಾಗಿ ನನಗೆ ಮೇಲೆ ಹೇಳಿದ ಅನೇಕರ ಸಾನ್ನಿಧ್ಯ ಸುಲಭವಾಗಿ ಪ್ರಾಪ್ತವಾಗಿತ್ತು.

ಮೇಲೆ ಹೇಳಿದ ಮಹನೀಯರ ವರ್ಚಸ್ಸಿನ ವಲಯದಿಂದ ತಪ್ಪಿಸಿಕೊಂಡು ಬೆಂಗಳೂರನ್ನು ಬಿಟ್ಟು ಮೈಸೂರಿಗೆ ಬರುವುದು ಸುಲಭದ ಮಾತಾಗಿರಲಿಲ್ಲ. ಪರೀಕ್ಷೆಗಾಗಿ ಎಂದೂ ಹೆಚ್ಚು ಓದದ ನಾನು ಹೇಗೋ ಉನ್ನತ ಮಟ್ಟದಲ್ಲಿ ತೇರ್ಗಡೆಯಾಗಿದ್ದೆ. ಇಂಗ್ಲಿಷ್,

ಎಕನಾಮಿಕ್ಸ್, ತರ್ಕಶಾಸ್ತ್ರ, ಕನ್ನಡ ಹೀಗೆ ಯಾವುದೇ ಆನರ್ಸ್ ಕೋರ್ಸಿಗೆ ಸುಲಭವಾಗಿ ಪ್ರವೇಶ ದೊರೆಯುವಷ್ಟು ಅಂಕಗಳು ನನಗೆ ಬಂದಿದ್ದುವು. ನಾ. ಕಸ್ತೂರಿಯವರು ನನ್ನನ್ನು ಕರೆದು ಹೇಳಿದರು: "ನೋಡೋ, ಇಂಗ್ಲಿಷ್ ಆನರ್ಸಿಗೆ ಸೇರಿಕೋ. ನಾನು ಅಲ್ಲಿ ಬ್ರಿಟಿಷ್ ಚರಿತ್ರೆ ಪಾಠ ಹೇಳುತ್ತೇನೆ." ಹಾಗೆ ಮಾಡಿದ್ದರೆ ಅವರು ಮಾತ್ರವಲ್ಲದೆ ಇಂಗ್ಲಿಷ್ ಮತ್ತು ಕನ್ನಡ ಇಲಾಖೆಯ ಅನೇಕ ಹಿರಿಯ ವಿದ್ವಾಂಸರ ವಿದ್ವತ್ತಿನ ಪ್ರಯೋಜನವೂ ನನಗೆ ಲಭ್ಯವಾಗುತ್ತಿತ್ತು.

ಆದರೆ, ಯಾರನ್ನು ನಾನು ಅದುವರೆಗೂ ಕಂಡಿರಲಿಲ್ಲವೋ, ಆದರೆ ಯಾರ ತೇಜಃಪುಂಜ ಮೂರ್ತಿಯು ನನ್ನ ಮನೋಮಂದಿರದಲ್ಲಿ ಸ್ಥಾಪಿತವಾಗಿದ್ದುದು ಮಾತ್ರವಲ್ಲದೆ, ನನ್ನ ವ್ಯಕ್ತಿತ್ವವನ್ನೆಲ್ಲ ತುಂಬಿತ್ತೋ ಆ ವ್ಯಕ್ತಿಯ ದಿವ್ಯ ಆಕರ್ಷಣೆಯು ನನ್ನನ್ನು ಮೈಸೂರಿಗೆ ಕರೆಯುತ್ತಿರುವಂತೆ ಹಗಲೂ ಇರುಳೂ ಭಾಸವಾಗುತ್ತಿತ್ತು. ಕುವೆಂಪು. ಅವರ ಸನ್ನಿಧಿಯಲ್ಲ, ಸಾಮೀಪ್ಯವನ್ನು ಸವಿಯುತ್ತಾ ನಾಲ್ಕು ವರ್ಷಗಳ ಕಾಲ ಅವರ ಶಿಷ್ಯತ್ವವನ್ನು ಪಡೆಯುವ ಅವಕಾಶ ಕೈ ಬೀಸಿ ಕರೆಯುತ್ತಿರುವಾಗ ನಾನು ಮೈಸೂರಿಗೆ ಹೋಗದಿರುವುದು ಸಾಧ್ಯವೇ ಇರಲಿಲ್ಲ. ಹೋದೆ. ನನ್ನ – ಕುವೆಂಪು ಅವರ ಆತ್ಮೀಯ ಬಾಂಧವ್ಯದ ಕಥೆಯನ್ನು ಬೇರೆ ಕಡೆ ಹೇಳಿದ್ದೇನೆ.

ಮೈಸೂರಿಗೆ ಹೋದಾಗ ನನಗೆ ದೊರೆತ ಪರಮ ಭಾಗ್ಯಗಳಲ್ಲಿ ಒಂದು ಪೂಜ್ಯ ವಿ.ಸೀ. ಅವರ ಶಿಷ್ಯತ್ವ. ಆ ವೇಳೆಗೆ ಕನ್ನಡ ಸಾಹಿತ್ಯವನ್ನು ತಕ್ಕ ಮಟ್ಟಿಗೆ ಓದಿಕೊಂಡಿದ್ದ ನನಗೆ ವಿ.ಸೀ. ಅವರು ತಮ್ಮ ಕವಿತೆಗಳಿಂದ, 'ಪಂಪಾಯಾತ್ರೆ' ಪ್ರವಾಸ ಕಥನದಿಂದ ಪರಿಚಿತರಾಗಿದ್ದರು. ಅವರು ಪ್ರತ್ಯಕ್ಷರಾದದ್ದು ಹೀಗೆ: ಶುಭ್ರವಾದ ಬಿಳಿಯ ರುಮಾಲು– ಆ ರುಮಾಲನ್ನು ಕಟ್ಟುವ ಕಲೆಯ ಶಿಖರಕ್ಕೆ ಅವರು ಏರಲು ಪಟ್ಟ ಕಷ್ಟ ಎಂಬುದನ್ನು "ಮೈಸೂರು ರುಮಾಲು" ಎಂಬ ಹೆಸರಿನ ಅವರ ಪ್ರಬಂಧದಿಂದ ತಿಳಿಯಬಹುದು. ಸುಕ್ಕು ಕಾಣದ ಸೊಗಸಾದ ಮುಚ್ಚು ಕೊರಳಿನ ಕೋಟು, ಬಿಳಿಯ ಬಣ್ಣಕ್ಕೆ ಬಿಳುಪನ್ನು ನೀಡುವ ಗರಿಗರಿಯಾದ ಬಿಳಿಯ ಮಲ್ಲಿನ ಕಚ್ಚೆಪಂಚೆ, ಒಳ್ಳೆಯ ಅಭಿರುಚಿಯನ್ನು ಮೃದುವಾಗಿ ತೋರಿಸುವ ಚಪ್ಪಲಿ– ಇವು ಅವರ ಉಡುಪು.

ಕನ್ನಡ ಆನರ್ಸ್‌ನಲ್ಲಿ ನಾವಿದ್ದುದು ಏಳೆಂಟು ಮಂದಿ. ನಮ್ಮೊಡನೆ ಆತ್ಮೀಯವಾಗಿ ಮಾತನಾಡುವುದು ಎಲ್ಲ ಉಪಾಧ್ಯಾಯರಿಗೂ ಸಾಧ್ಯವಾಗುತ್ತಿತ್ತು. ವಿ.ಸೀ. ಅವರು ಕೆಲವೇ ಗಂಟೆಗಳ ಪಾಠದ ಅವಧಿಯಲ್ಲಿ ನಮ್ಮ ಅರ್ಹತೆಯನ್ನು ಅರ್ಥಮಾಡಿಕೊಂಡರು ಎಂದು ತೋರುತ್ತದೆ. ಆತ್ಮೀಯನಾಗಿ, ಮಕ್ಕಳಿಗೆ ಮನೆಯಲ್ಲಿ ತಂದೆ ತಾಯಿಗಳು ಏನನ್ನಾದರೂ ವಿವರಿಸಿ ಹೇಳುವಂತೆ ನಮಗೆ ವಿಷಯವನ್ನು ಬೋಧಿಸುತ್ತಿದ್ದರು. ನಮಗೆ ಅವರು ಬೋಧಿಸಬೇಕಾಗಿದ್ದ ವಿಷಯ ರತ್ನಾಕರವರ್ಣಿಯ ಭರತೇಶ ವೈಭವ. ಒಂದು ಅರ್ಥದಲ್ಲಿ ಅದನ್ನು ಪಾಠ ಹೇಳುವ ಉಪಾಧ್ಯಾಯರು ಅಷ್ಟೇನು ಕಷ್ಟ ಪಡಬೇಕಾಗುತ್ತಿರಲಿಲ್ಲ. ಆದರೆ ಅದನ್ನು ಅಷ್ಟು ಸುಲಭವಾಗಿ ವಿವರಿಸಿಬಿಟ್ಟಿದ್ದರೆ ಅದು ವಿ.ಸೀ. ಮೇಷ್ಟ್ರ ಪಾಠ ಆಗುತ್ತಿತ್ತೆ? ಈ ಪ್ರಶ್ನೆಗೆ ಉತ್ತರವೇ ವಿ.ಸೀ. ಅವರ ವಿಶಿಷ್ಟವಾದ ಬೋಧನಾ ಕ್ರಮ.

ಅವರ ಓದು ತುಂಬ ವಿಸ್ತಾರವಾದದ್ದು. ಅವರು ಅಧ್ಯಯನ ಮಾಡಿದ್ದು ಅರ್ಥ ಶಾಸ್ತ್ರ. ಅದನ್ನು ಅವರ ಕಾಲದಲ್ಲಿ ಮಹಾ ಮಹಾ ಪಂಡಿತರ ಸನ್ನಿಧಿಯಲ್ಲಿ ಕಲಿತದ್ದು. ಆ ಶಾಸ್ತ್ರ, ಜೊತೆಗೆ ರಾಜಕೀಯ ಶಾಸ್ತ್ರ ಅವರಿಗೆ ಕರಗತವಾಗಿತ್ತು. ಅರ್ಥಶಾಸ್ತ್ರದ ಪರಿಣತಿಗೆ ವಿ.ಸೀ.ಯವರು ಬರೆದು ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ "ಹಣ ಪ್ರಪಂಚ" ಸಾಕ್ಷಿ. ಆ ವಿಷಯದ ಮೇಲೆ ಅಷ್ಟು ಪಕ್ವ, ಸರಳ, ಆದರೆ ಪ್ರಮಾಣ ಭೂತವಾದ ಮತ್ತೊಂದು ಪುಸ್ತಕ ಕನ್ನಡದಲ್ಲಿದ್ದರೆ ಅದು ನನ್ನ ತಿಳಿವಿಗೆ ಮೀರಿದ್ದು.

ಇನ್ನು ರಾಜ್ಯಶಾಸ್ತ್ರದ ವಿಷಯ. ಕೆಲವು ವರ್ಷಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ವಿ.ಸೀ. ಅವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿತು. ಅವರು ಪದವಿಯನ್ನು ಸ್ವೀಕರಿಸಲು ಮೈಸೂರಿಗೆ ಬಂದು ವಿಶ್ವವಿದ್ಯಾನಿಲಯದ ಅತಿಥಿ ಗೃಹದಲ್ಲಿ ತಂಗಿದ್ದರು. ಅವರ ಕುಶಲವನ್ನು ವಿಚಾರಿಸಲು ಅಂದಿನ ಉಪಕುಲಪತಿಗಳು ನನ್ನನ್ನೂ ಕರೆದುಕೊಂಡು ಹೋದರು. ಉಪಕುಲಪತಿಗಳು ಒಂದು ಕಾಲಕ್ಕೆ ಅಧ್ಯಾಪಕರಾಗಿದ್ದಾಗ ವಿದ್ಯಾರ್ಥಿಗಳಿಗೆ ರಾಜ್ಯಶಾಸ್ತ್ರವನ್ನು ಬೋಧಿಸುತ್ತಿದ್ದರು. ಅದನ್ನು ತಿಳಿದುಕೊಂಡಿದ್ದ ವಿ.ಸೀ. ಅವರು ಇತ್ತೀಚೆಗೆ ಪ್ರಕಟವಾಗಿದ್ದ ರಾಜ್ಯಶಾಸ್ತ್ರದ ಮೇಲಿನ ಕೆಲವು ಪುಸ್ತಕಗಳನ್ನು ಹೆಸರಿಸಿ "ಅವಾದ ಮೇಲೆ ಇನ್ನು ಯಾವುವಾದರೂ ಪುಸ್ತಕಗಳು ಬಂದಿದೆಯೆ?" ಎಂದು ಕೇಳಿದರು. ಉಪಕುಲಪತಿಗಳು "ಇಲ್ಲ, ನಾನು ಈಚೀಚೆಗೆ ಯಾವುದೇ ಪುಸ್ತಕಗಳನ್ನು ಓದುವುದಕ್ಕೆ ಆಗುತ್ತಿಲ್ಲ" ಎಂದರು. ಎಂದರೆ ವಿ.ಸೀ. ಅವರು ತಮ್ಮ ಇಳಿವಯಸ್ಸಿನಲ್ಲೂ ತಮಗೆ ಪ್ರಿಯವಾದ ವಿಷಯಗಳನ್ನು ಕುರಿತಂತೆ ಹೊಸದಾಗಿ ಬಂದ ಪುಸ್ತಕಗಳನ್ನು ಗಮನಿಸುತ್ತಿದ್ದರು ಎಂದಾಯಿತು.

ಕನ್ನಡ ಸಾಹಿತ್ಯದಲ್ಲಿ ನಮ್ಮ ಮೇಷ್ಟ್ರು ಎಷ್ಟು ಆಳವಾದ ಪಾಂಡಿತ್ಯವನ್ನು ಗಳಿಸಿದ್ದರೋ ಅಷ್ಟೇ ಆಳವಾದ ಪಾಂಡಿತ್ಯವನ್ನು ಇಂಗ್ಲಿಷ್ ಮತ್ತು ಸಂಸ್ಕೃತ ಸಾಹಿತ್ಯಗಳ ವಿಷಯದಲ್ಲೂ ಸಂಪಾದಿಸಿದ್ದರು. ಜೊತೆಗೆ ನಿಶಿತ ಮತಿ. ಅವರು ಭರತೇಶ ವೈಭವವನ್ನು ಪಾಠ ಹೇಳುವಾಗ ಅವರಿಗೆ ಪರಿಚಯವಿದ್ದ ಎಲ್ಲ ಶಾಸ್ತ್ರಗಳ ತುಣುಕುಗಳು ನಮಗೂ ಲಭ್ಯವಾಗುತ್ತಿತ್ತು.

ಪರಮ ಪರಂಜ್ಯೋತಿ ಕೋಟಿ ಚಂದ್ರಾದಿತ್ಯ ಕಿರಣ ಸುಜ್ಞಾನ ಪ್ರಕಾಶ – ಇದು ಭರತೇಶ ವೈಭವದ ಮೊದಲ ಪಂಕ್ತಿ. ಪರಮ ಪರಂಜ್ಯೋತಿಯ ಸ್ವರೂಪ ಎಂಥದು? ಜೈನರ ಕಲ್ಪನೆಯಲ್ಲಿ ಅದೇನು? ಇನ್ನು ಅದು ಕೋಟಿ ಚಂದ್ರ ಸೂರ್ಯರ ಕಿರಣದಂತೆ ಪ್ರಕಾಶಿಸಿಪುದು ಎಂದರೇನು? – ಇತ್ಯಾದಿಗಳ ಮೇಲೆ ದೀರ್ಘಕಾಲ ಮಾತನಾಡುವರು. ಆ ಮಾತಿಗೆ ಪರಿಧಿ ಇಲ್ಲ. ಗ್ರೀಕ್ ಮೈಥಾಲಜಿ, ಉಪನಿಷತ್ತುಗಳು, ವಚನಗಳು ಎಲ್ಲದರ ಬೆಳಕು 'ಪರಮ ಪರಂಜ್ಯೋತಿ'ಯನ್ನು ಬೆಳಗಬೇಕು. ಆ ಸ್ವಾರಸ್ಯದಲ್ಲಿ ಮಾತನಾಡುವ ಗುರುಗಳಿಗೂ ಬರೆದುಕೊಳ್ಳುವ ಶಿಷ್ಯರಿಗೂ ಸಮಯದ ಪ್ರಜ್ಞೆ ಇರುತ್ತಲೇ ಇರಲಿಲ್ಲ. ಗಂಟೆ ಬಾರಿಸಿದ್ದೂ ಎಷ್ಟೋ ಸಲ ಕೇಳಿಸುತ್ತಿರಲಿಲ್ಲ. ನಾನು ನನ್ನ 'ಜನ ಮನ' ಪುಸ್ತಕದಲ್ಲಿ ವರ್ಣಿಸಿರುವ, ಆಗಿನ ಮಹಾರಾಜಾ ಕಾಲೇಜಿನಲ್ಲಿ ಹೆಸರುವಾಸಿಯಾಗಿದ್ದ, ಅಟೆಂಡೆನ್ಸ್ ರೆಜಿಸ್ಟರ್ ಪುಟ್ಟಯ್ಯನವರು ತಾವು ಯಾವಾಗಲೋ ಕೊಟ್ಟು ಹೋಗಿದ್ದ ಹಾಜರಿ

ಪುಸ್ತಕವನ್ನು ಹಿಂದಕ್ಕೆ ಕೇಳಲು ಬಂದಾಗ ಮೇಷ್ಟ್ರು ಪಾಠ ನಿಲ್ಲುತ್ತಿತ್ತು. ನಿಂತಿತಲ್ಲಾ ಎಂದು ನಮಗೆ ಬೇಸರವಾಗುತ್ತಿತ್ತು.

ಮೇಷ್ಟ್ರು ಪಾಠ ಹೇಳುವಾಗ ಕಪ್ಪು ಹಲಗೆಯನ್ನು ವಿಶೇಷವಾಗಿ ಬಳಸುತ್ತಿದ್ದರು. ಏನೋ ಒಂದು ಚುಕ್ಕಿ, ಒಂದು ಅಡ್ಡಗೆರೆ, ಒಂದು ಕ್ರಾಸ್, ಒಂದು ಇಂಟು (x); ಒಂದರಿಂದ ಒಂದಕ್ಕೆ ಲೈನ್ ಎಳೆಯುತ್ತಾರೆ, ಸೊನ್ನೆ ಸುತ್ತುತ್ತಾರೆ. ನಮಗೆ ಭಯ, ಏಕೆಂದರೆ ಅವರು ಹಾಗೆಲ್ಲ ಮಾಡುತ್ತ ಉದ್ವೇಗಗೊಳ್ಳುತ್ತಾರೆ. ಅವರ ಮಾತಿನಿಂದ ನಮಗೆ ವಿಷಯ ತಿಳಿಯಬೇಕೇ ಹೊರತು ಕಪ್ಪು ಹಲಗೆ ಮೇಲೆ ಅವರು ಬಿಡಿಸುವ ಚಿತ್ತಾರಗಳಿಂದ ಅಲ್ಲ. ಮೋರ್ಡು ನಮಗೆ ಆಗ ನವ್ಯ ಸಂಪ್ರದಾಯದ ಚಿತ್ರದಂತೆ ಕಾಣುತ್ತಿತ್ತು; ಸದ್ಯ ಮೇಷ್ಟ್ರು ಪಾಠ ನವ್ಯ ಕಾವ್ಯದಂತೆ ಇರುತ್ತಿರಲಿಲ್ಲ. ನಮ್ಮ ಪುಣ್ಯ.

ಉದ್ವೇಗ ಎಂದಾಗ ನೆನಪಾಗುತ್ತಿದೆ. ಭರತ ಚಕ್ರವರ್ತಿ ತೊಂಬತ್ತಾರು ಸಾವಿರ ಜನ ಸ್ತ್ರೀಯರನ್ನು ಮದುವೆಯಾದ ಎಂಬ ಮಾತಿದೆ. ಅದನ್ನು ಹೇಳುತ್ತಾ ವಿ.ಸೀ. ಅವರಿಗೆ ತುಂಬ ಕೋಪ ಬಂತು. ತೆಳ್ಳನೆಯ ದೇಹದ ಅವರು ಉದ್ವೇಗದಿಂದ ನಡುಗುವುದನ್ನು ನೋಡಿ ನಮಗೆ ತುಂಬ ಭಯವಾಯಿತು. ತೊಂಬತ್ತಾರು ಸಾವಿರ ಹೆಂಡಿರನ್ನು ಕಟ್ಟಿಕೊಂಡ ಭರತನೇ ನಡುಗಲಿಲ್ಲವೆಂದ ಮೇಲೆ ನಮ್ಮ ಮೇಷ್ಟ್ರು ಯಾಕಾದರೂ ನಡುಗುತ್ತಾರೆ ಎಂಬ ವಿನೋದ ನಮಗೆ. ಅವರ ಕೋಪ ಕೃಷ್ಣನ ಕಡೆಗೆ ತಿರುಗಿತು. ಹಿಂದೂ ಪುರಾಣಗಳಲ್ಲಿ ಕೃಷ್ಣ ಹದಿನಾರು ಸಾವಿರ ಸ್ತ್ರೀಯರನ್ನು ಕಟ್ಟಿಕೊಂಡ ಎಂದಿದೆಯಲ್ಲ, ನಮ್ಮ ಭರತ ಅವನಿಗೇನು ಕಡಿಮೆ ಎಂದು ಜೈನ ಪುರಾಣಕಾರರು ಅವನಿಗೆ ಅದರ ಆರರಷ್ಟು, ಎಂದರೆ ತೊಂಬತ್ತಾರು ಸಾವಿರ ಜನ ಸ್ತ್ರೀಯರನ್ನು, ಮದುವೆ ಮಾಡಿಸಿದ್ದಾರೆ. ಹೀಗಾಗಿ "ಕೃಷ್ಣಮೂಲಮನರ್ಥಾಯ" – ಕೃಷ್ಣನೇ ತಾನೆ ಭರತನ ಅವಸ್ಥೆಗೆ ಕಾರಣ? ಆದ್ದರಿಂದ ಶಿಕ್ಷೆಯಾಗಬೇಕಾದದ್ದು ಅವನಿಗೆ ಎಂಬುದು ನಮ್ಮ ಮೇಷ್ಟ್ರು ನಿರ್ಣಯ. ಅದಕ್ಕೆ ಅದೇ ಉದ್ವೇಗದಲ್ಲಿ ಹೇಳಿದರು– "ಕೃಷ್ಣ ಇದಾನಲ್ಲ ಅವನಿಗೆ.... ಅವನನ್ನ (ಇಷ್ಟು ಹೇಳಿ ಹಲ್ಲನ್ನು ಬಲವಾಗಿ ಕಚ್ಚುತ್ತಾ, ಬಲಗೈ ಮೇಲಕ್ಕೆತ್ತಿ) ಕಮಚಿ ತಗೊಂಡು ಹೊಡೀಬೇಕು!" ಕೃಷ್ಣನನ್ನು ಕುರಿತು ಅವರು ಹೇಳಿದ ವಾಕ್ಯವನ್ನು ನಾನೂ ನನ್ನ ಸಹಪಾಠಿಗಳೂ ಬಳಿಕ ಎಷ್ಟೋ ವರ್ಷಗಳ ಕಾಲ ನೆನೆದು ನಗುತ್ತಿದ್ದೆವು. ಹದಿನಾರು ಸಾವಿರ ಸ್ತ್ರೀಯರು ಕೊಡುತ್ತಿರುವ ಹಿಂಸೆಗೇ ಅಂಜದವನು ನಮ್ಮ ಮೇಷ್ಟ್ರು ವಿಧಿಸುವ ಶಿಕ್ಷೆಗೆ ಅವನು ಜಗ್ಗುತ್ತಾನೆಯೇ ಎಂದು ಹಾಸ್ಯ ಮಾಡುತ್ತಿದ್ದೆವು.

ಮೇಷ್ಟ್ರು ನಮಗೆ ತುಂಬ ಆಪ್ತರಾದದ್ದರಿಂದ ಪದೇ ಪದೇ ಕೃಷ್ಣಮೂರ್ತಿ ಪುರಂನ ಅವರ ಮನೆಗೆ ಹೋಗುತ್ತಿದ್ದೆವು. ಅವರ ಮನೆಯ ಮುಂದಿನ ಕೋಣೆಯಲ್ಲಿ ಅವರ ಓದು ಬರಹ ಎಲ್ಲ ನಡೆಯುತ್ತಿತ್ತು. ಕುರ್ಚಿ ಮೇಜು ಏನೂ ಇಲ್ಲ. ಒಂದು ಚಾಪೆ ಹಾಸಿರುತ್ತಿತ್ತು. ಅದರ ಮೇಲೆ, ಗೋಡೆಗೆ ಸೇರಿದಂತೆ ಒಂದು ಹಾಸುಗೆಯ ಸುರುಳಿ. ಮೇಷ್ಟ್ರು ಅದಕ್ಕೆ ಒರಗಿ ಕುಳಿತಿರುತ್ತಿದ್ದರು. ಮೊದಲ ದಿನ ಅವರನ್ನು ಮನೆಯಲ್ಲಿ ನೋಡ ಹೋದ ನಮಗೆ ಆಶ್ಚರ್ಯ. ಯಾವ ಸಂಪ್ರದಾಯಗಳೂ ಇಲ್ಲದೆ ನೇರವಾಗಿ ಅವರ ಕೋಣೆಗೆ ಹೋಗಬಹುದು ಎಂದಾಯಿತು. ಅವರು ಹಾಸಿಗೆ ಸುರುಳಿಗೆ ಒರಗಿ ಏನೋ ಓದುತ್ತಿದ್ದರು.

"ಬನ್ನಿ, ಬನ್ನಿ" ಎಂದು ಪ್ರೀತಿಯ ಸ್ವಾಗತ. ಅವರ ಪಕ್ಕದಲ್ಲೇ ಚಾಪೆಯ ಮೇಲೆ ನಾವು ಕುಳಿತೆವು. ನೇರವಾಗಿ ಸಾಹಿತ್ಯಕ ಚರ್ಚೆ. ನಾವು ಓದಬೇಕಾದ ಪುಸ್ತಕಗಳ ಹೆಸರುಗಳನ್ನು ಹೇಳುತ್ತಾರೆ, ನಾವು ಗುರುತು ಹಾಕಿಕೊಳ್ಳುತ್ತೇವೆ. ಮಾತು ಹರಿಯುತ್ತದೆ, ಎಲ್ಲ ಜ್ಞಾನ ಶಾಖೆಗಳನ್ನೂ ಬಾಚಿ ತಬ್ಬುತ್ತದೆ. ಇದ್ದಕ್ಕಿದ್ದಂತೆ ಕೇಳುತ್ತಾರೆ – "ಕಾರಂತರ ಇತ್ತೀಚಿನ ಕಾದಂಬರಿ ಓದಿದ್ದೀರಾ – "ಔದಾರ್ಯದ ಉರುಳಲ್ಲಿ?" ನಮಗೆ ಅದು ಪ್ರಕಟವಾಗಿರುವುದು ತಿಳಿಯದು. ಅವರಿಗೆ ಕಾರಂತರು ಪ್ರಿಯ ಲೇಖಕರು, ಪ್ರಿಯ ಮಿತ್ರರು ಕೂಡ. ಇಬ್ಬರಿಗೂ ಪರಸ್ಪರ ಪ್ರೀತಿ, ಗೌರವ. ಮಾತನಾಡುತ್ತಾ ಆಡುತ್ತಾ ಒಂದೋ ಎರಡೋ ಗಂಟೆ ಕಳೆಯುತ್ತವೆ. ಅವರು ನಮಗೆ ಹೋಗಲು ಯಾವ ಸೂಚನೆಯನ್ನೂ ನೀಡುತ್ತಿಲ್ಲ. ಅವರ ಸಮಯ ಹಾಳು ಮಾಡುತ್ತಿದ್ದೇವಲ್ಲ ಎಂದು ನಾವೇ ಹೊರಡುತ್ತೇವೆ. ಹೋಗುವಾಗ 'ಔದಾರ್ಯದ ಉರುಳಲ್ಲಿ' ಕೊಡುತ್ತಾರೆ. "ಮುಂದಿನ ಸಲ ಬರುವಾಗ ತನ್ನಿ. ಓದಿರಿ. ಚರ್ಚೆ ಮಾಡೋಣ." ಕೈ ಮುಗಿದು ಹೊರಡುತ್ತೇವೆ.

ಪ್ರತಿ ಸಲ ಅವರ ಮನೆಗೆ ಹೋದಾಗಲೂ ನಡೆಯುತ್ತಿದ್ದ ಒಂದು ಕ್ರಿಯೆಯನ್ನು ಹೇಳಲೇ ಬೇಕು. ವೃದ್ಧೆಯಾದ ಮಡಿ ಹೆಂಗುಸೊಬ್ಬರು, ಬೆನ್ನು ತುಂಬ ಬಾಗಿದವರು, ಒಂದು ಚೆಂಬಿನ ತುಂಬ ಬಿಸಿ ಬಿಸಿ ಕಾಫಿಯನ್ನು, ಜೊತೆಗೆ ನಾಲ್ಕೈದು ಲೋಟಗಳನ್ನೂ ತಂದು ನೆಲದ ಮೇಲಿಟ್ಟು ಹೋಗುವರು. ಘಂ ಎಂಬ ಕಾಫಿ ವಾಸನೆ ನಮಗೆ ತಟ್ಟುವುದು. ಮೇಷ್ಟ್ರು ನಾವು ಎಷ್ಟು ತಡೆದರೂ ಕೇಳದೆ ತಾವೇ ಅದನ್ನು ಲೋಟಗಳಿಗೆ ತುಂಬಿ ಕೊಡುವರು. ಒಮ್ಮೆಯೂ ಈ ಪದ್ಧತಿ ತಪ್ಪಿದ್ದಿಲ್ಲ. ಅನಂತರ ತಿಳಿದದ್ದು ಆ ವೃದ್ಧೆ ವಿ.ಸೀ. ಅವರ ತಾಯಿ ಎಂದು.

ಕಾಫಿಯ ಮಾತು ಬಂದಾಗಲೇ ಇದನ್ನೂ ಹೇಳಿ ಬಿಡಬೇಕು. ವಿ.ಸೀ. ಎಲ್ಲದರಲ್ಲೂ ಅಚ್ಚು ಕಟ್ಟು. ಊಟ ತಿಂಡಿಗಳ ವಿಷಯದಲ್ಲೂ ಹಾಗೇ ಎಂದು ಕೇಳಿದ್ದೆವು. ಕಾಫಿಯ ರುಚಿಯನ್ನು ನೋಡಿದಾಗ ಅದನ್ನು ತಯಾರಿಸುವುದರಲ್ಲಿ ಎಷ್ಟು ಎಚ್ಚರಿಕೆ ವಹಿಸುತ್ತಿದ್ದರು ಎಂಬುದು ಗೊತ್ತಾಗುತ್ತಿತ್ತು. ಆ ಸಮಯದಲ್ಲೋ, ಆ ಮೇಲೋ ನಾವು ವಿ.ಸೀ.ಯವರ ಕಾಫಿಯ ಶಿಸ್ತನ್ನು ಹೀಗೆ ಕೇಳಿದ್ದು ನೆನಪಾಗುತ್ತಿದೆ: ಅವರು ಡಿಕಾಕ್ಷನ್ನಿಗೆ ಹಾಲನ್ನು ಇಂಕ್‌ಫಿಲರ್‌ನಲ್ಲಿ – ಈಗ ಇದು ಮರೆಯಾದ ವಸ್ತು, ಪೆನ್ನಿಗೆ ಶಾಯನ್ನು ತುಂಬುತ್ತಿದ್ದ ಸಾಧನ – ಲೆಕ್ಕ ಹಾಕಿ ತೊಟಕಿಸುತ್ತಾರೆ ಎಂದು! ನಿಜವೋ ಸುಳ್ಳೋ, ಆದರೆ ಕಾಫಿಯ ಹದವನ್ನು ನೆನೆದರೆ ಅದನ್ನು ನಂಬೋಣ ಎನ್ನಿಸುತ್ತದೆ!

ಮತ್ತೆ ಅವರ ಬೋಧನಾ ವಿಧಾನಕ್ಕೆ ಹಿಂದಿರುಗೋಣ. ಕಾರಂತರ, ಮೇಲೆ ಹೇಳಿದ "ಔದಾರ್ಯದ ಉರುಳಲ್ಲಿ" ಕಾದಂಬರಿ ಓದಿ ಹಿಂದಿರುಗಿಸಲು ಹೋದಾಗ ಮೇಷ್ಟ್ರು "ಹೇಗಿದೆ ಕಾದಂಬರಿ?" ಎಂದು ಕೇಳಿಯೇ ಕೇಳಿದರು. ನಾನು 'ತುಂಬಾ ಬೋರ್ ಸಾರ್. ಕಷ್ಟ ಪಟ್ಟು ಓದಿದೆ' ಎಂದೆ. "ಏಕೆ ಬೋರ್, ಹೇಳುತ್ತೀರಾ?" ಎಂದು ಪ್ರಶ್ನೆ ಬಂತು. ನನಗಾಗ ೨೧ ವರ್ಷ ವಯಸ್ಸು. "ಮರಳಿ ಮಣ್ಣಿಗೆ" ಓದಿದ್ದೆ. "ಅದರಷ್ಟು ಇದು ಚೆನ್ನಾಗಿಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಲು ಹೊರಟವನೊಬ್ಬ, ಸದಾ ಇತರರಿಗೆ ನೆರವಾಗಲು ಬಯಸುತ್ತಾ ಕಷ್ಟಕ್ಕೆ ಸಿಕ್ಕಿಕೊಳ್ಳುತ್ತಾನೆ, ಸದಾ ಊರೂರು ಅಲೆಯುತ್ತಾನೆ,

ಇಷ್ಟೇ ವಸ್ತು. ಇದರಲ್ಲೇನು ಮಹತ್ವ?" ಎಂದು ನನ್ನ ಉತ್ತರ. ಮೇಷ್ಟ್ರು ಬೇಸರ ಪಟ್ಟುಕೊಳ್ಳಲಿಲ್ಲ. ನಮ್ಮ ನಾಡಿನ ಇತರ ಭಾಷೆಗಳ – ಮುಖ್ಯವಾಗಿ ಬಂಗಾಳಿ – ಪಶ್ಚಿಮದ ಕೆಲವು ದೊಡ್ಡ ಕಾದಂಬರಿಗಳ ವಸ್ತು, ಕಾದಂಬರಿಕಾರರು ಅದನ್ನು ನಿರ್ವಹಿಸಿರುವ ರೀತಿ, ಪಾತ್ರಗಳ ಬೆಳವಣಿಗೆ ಮುಂತಾದುವನ್ನು ಕುರಿತು ವಿಸ್ತಾರವಾಗಿ ವಿವರಿಸಿದರು. ಅದರಲ್ಲಿ ಎಷ್ಟು ನಮ್ಮಲ್ಲಿ ಎಷ್ಟು ಜನರ ತಲೆಗೆ ಹೋಯಿತೋ ತಿಳಿಯದು. ಆದರೆ ಇದು ಅವರ ಬೋಧನ ವಿಧಾನ. ನಾವು ಯಾರೂ ಕಲಿಯಲು ಕಷ್ಟವಾದದ್ದು. ಕಾರಂತರ ಕಾದಂಬರಿ "ಔಪಾರ್ಯದ ಉರುಳಲ್ಲಿ" ಉತ್ಕೃಷ್ಟ ಕಾದಂಬರಿ ಎಂದು ಅವರು ಸಾಧಿಸಲು ಹೊರಡಲಿಲ್ಲ ಎಂಬುದೂ ಮುಖ್ಯವಾದ ಮಾತೇ.

ನಾನು ಗುರುಗಳ ವಿಷಯದಲ್ಲಿ ಮಾಡಿರುವ ದೊಡ್ಡ ಅಪರಾಧವೊಂದನ್ನು – ತೀರ ಅಕ್ಷಮ್ಯವಾದದ್ದು ಅದು – ಇಲ್ಲಿ ನಿರೂಪಿಸುತ್ತೇನೆ. ವಿ.ಸೀ. ಯವರು ಒಳ್ಳೆಯ ಕವಿ. 'ವ್ಯಾಕ್ಷಿ–ದಾಳಿಂಬೆ', 'ಗೀತಗಳು' ಇತ್ಯಾದಿ ಸಂಕಲನಗಳನ್ನೂ, ಅವರ ಇತರ ಸಂಕಲನಗಳನ್ನೂ ತುಂಬ ಸೊಗಸಾಗಿ ಮುದ್ರಿಸಿದ್ದಾರೆ. ಆ ಕಾಲದಲ್ಲಿ ವಿ.ಸೀ.ಯವರ ಕವನ ಸಂಕಲನಗಳಿಗಿಂತ ಹೆಚ್ಚು ಸುಂದರವಾಗಿ – ಒಳ್ಳೆಯ ಕಾಗದ, ಒಳ್ಳೆಯ ಮುದ್ರಣ, ಒಳ್ಳೆಯ ವಿನ್ಯಾಸ, ಒಳ್ಳೆಯ ರಟ್ಟು – ಮುದ್ರಿತವಾಗಿರುವ ಪುಸ್ತಕಗಳನ್ನು ನಾನು ಕಂಡಿಲ್ಲ. ಇಂದಿಗೂ ಅವುಗಳ ಮೊದಲ ಮುದ್ರಣ ಸಿಕ್ಕಿದರೆ ಕಣ್ಣಿಗೆ ಒತ್ತಿಕೊಳ್ಳಬೇಕು, ತಲೆಯ ಮೇಲೆ ಇಟ್ಟುಕೊಳ್ಳಬೇಕು ಎನ್ನಿಸುತ್ತದೆ. ಆದರೂ ನನಗೆ ಕವನಗಳಾಗಿ ಅವು ಆ ವಯಸ್ಸಿಗೇ ಅಷ್ಟಾಗಿ ಮೆಚ್ಚುಗೆಯಾಗಲಿಲ್ಲ. ಆದ್ದರಿಂದ ೧೯೫೪ರಲ್ಲಿ ನಾನು ಆರಂಭ ಮಾಡಿದ "ಕನ್ನಡದಲ್ಲಿ ಭಾವಗೀತೆ" ಎಂಬ ಪ್ರಬಂಧದಲ್ಲಿ ವಿ.ಸೀ. ಅವರ ಕವನಗಳನ್ನು ವಿಶ್ಲೇಷಣೆಗೆ ಒಳಪಡಿಸಲಿಲ್ಲ. ಅದು ದೊಡ್ಡ ಲೋಪ ಎಂಬ ವಿಷಯ ಅನೇಕ ವರ್ಷಗಳ ಮೇಲೆ ನನಗೆ ಅರಿವಿಗೆ ಬಂತು. ಆದರೆ ಅಷ್ಟು ಹೊತ್ತಿಗೆ ನನ್ನ ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ಸಮಯ ಮೀರಿ ಹೋಗಿತ್ತು. ತುಂಬ ಜನಪ್ರಿಯವಾಗಿರುವ 'ನಮ್ಮ ಮನೆಯಂಗಳದಿ' ಮುಂತಾದ ಕವನಗಳನ್ನಾದರೂ ನನ್ನ ಥೀಸಿಸ್‌ನಲ್ಲಿ ವಿಶ್ಲೇಷಿಸಿದ್ದರೆ ನನ್ನ ಕೃತಿಯ ಗೌರವ ಹೆಚ್ಚುತ್ತಿತ್ತು. ನನ್ನ ಅಯ್ಕೆಯ ವಿಷಯದಲ್ಲಿ ನನಗಿದ್ದ ದುರಹಂಕಾರದಿಂದ ಕೂಡಿದ್ದ ಆತ್ಮವಿಶ್ವಾಸದಿಂದಾಗಿ ನಾನು ಅನೇಕ ಕವಿಗಳ ಕವನಗಳನ್ನು ಬಿಟ್ಟುಬಿಟ್ಟಿದ್ದೇನೆ. ಈಗ ಚಿಂತಿಸಿ ಫಲವಿಲ್ಲ.

ಆದರೆ ಮೇಷ್ಟ್ರು ಈ ನನ್ನ ಉದ್ಧಟತನವನ್ನು ಗಮನಕ್ಕೆ ತೆಗೆದುಕೊಂಡಂತೆ ಕಾಣಲಿಲ್ಲ. ಮುಂದೆ ನಾನು ಎಷ್ಟೋ ಸಲ ಅವರನ್ನು ಕಾಣಲು ಹೋಗಿದ್ದಾಗ ಹಿಂದಿನ ವಿಶ್ವಾಸದಿಂದಲೇ ಬರಮಾಡಿಕೊಂಡಿದ್ದಾರೆ. ಅಷ್ಟೇ ಅಲ್ಲ, ಅರವತ್ತರ ದಶಕದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಅವರು ಸಂಪಾದಿಸಿ ಹಿಂದಿಗೆ ಅನುವಾದ ಮಾಡಿಸಿ ಪ್ರಕಟಿಸಿದ ಕನ್ನಡ ಕವಿತೆಗಳ ಸಂಕಲನದಲ್ಲಿ ನನ್ನ 'ಅಂಗುಲೀ ಮಾಲ' ನಾಟಕದಲ್ಲಿ ನಾನು ರಚಿಸಿರುವ ಒಂದು ಕವನವನ್ನು ಸೇರಿಸಿಕೊಂಡಿದ್ದಾರೆ. ಎಷ್ಟಾದರೂ ಅವರು ದೊಡ್ಡವರು. ಎಲ್ಲ ಸಂದರ್ಭಗಳಲ್ಲೂ ದೊಡ್ಡವರಂತೆಯೇ ನಡೆದುಕೊಂಡರು.

ನಮ್ಮ ಮೇಷ್ಟ್ರು ಎಂದೂ ಶ್ರೀಮಂತರಾಗಲೇ ಇಲ್ಲ. ನಮಗೆ ಅವರು ಪಾಠ ಹೇಳಿದ್ದು ಒಂದೇ ವರ್ಷ. ಮರುವರ್ಷವೇ ಅವರು ಹೊಸದಾಗಿ ಸ್ಥಾಪಿತವಾದ ಚಿಕ್ಕಮಗಳೂರು

ಇಂಟರ್ ಮೀಡಿಯೆಟ್ ಕಾಲೇಜಿಗೆ ಸೂಪರಿಂಟೆಂಡೆಂಟಾಗಿ ಹೊರಟು ಹೋದರು. ಆಲ್ಲಿ ಅವರಿಗೆ ಸಂಬಳ ಜಾಸ್ತಿಯಾಯಿತು ಎಂದೇ ನಾನು ತಪ್ಪು ತಿಳಿದಿದ್ದೆ. ನೂರು ರೂಪಾಯಿ ಅಲೋಯೆನ್ಸ್ ಹೆಚ್ಚಾಗಿ ಕೊಡುತ್ತಿದ್ದರು ಅಷ್ಟೆ. ಅವರೂ ಅವರಷ್ಟು ವಯಸ್ಸಾದ ಇತರ ಹಿರಿಯ ವಿದ್ವಾಂಸರೂ ಪರೀಕ್ಷೆಯ ಕೆಲಸಕ್ಕೆಂದು (ಟ್ಯಾಬ್ಯುಲೇಷನ್ – ವಿದ್ಯಾರ್ಥಿಗಳಿಗೆ ಬಂದ ಅಂಕಗಳನ್ನು ರೆಜಿಸ್ಟರ್‌ನಲ್ಲಿ ಬರೆದು ಅವರು ಉತ್ತೀರ್ಣರೊ ಅನುತ್ತೀರ್ಣರೋ ಎಂದು ತಿಳಿಸುವ ಕೆಲಸ – ಅದಕ್ಕೆ ಆಗ, ಮೂರು ತಿಂಗಳ ಕೆಲಸಕ್ಕೆ ಕೊಡುತ್ತಿದ್ದ ಸಂಭಾವನೆ ೨೫೦ ರೂಪಾಯಿ) ಮೈಸೂರಿಗೆ ಬರುತ್ತಿದ್ದರು. ಕಾಲೇಜು ಹಾಸ್ಟೆಲ್‌ನಲ್ಲಿದ್ದು ಅಲ್ಲೋ ಹೊಟೇಲಿನಲ್ಲೋ ಊಟಮಾಡಬೇಕಾಗಿತ್ತು. ಅವರನ್ನು ನೋಡಿದಾಗ ದುಃಖವಾಗುತ್ತಿತ್ತು. ಇಷ್ಟು ದೊಡ್ಡ ಲೇಖಕರು, ವಿದ್ವಾಂಸರು ಇಷ್ಟು ಕಡಿಮೆ ಹಣಕ್ಕೆ ಇಂತಹ ಕೆಲಸಕ್ಕೆ ಬಾರದ ಕೆಲಸಕ್ಕೆ ಬರುತ್ತಾರಲ್ಲ ಎಂದು ದುಃಖ.

ನಾನು ಪ್ರಸಾರಾಂಗದ ನಿರ್ದೇಶಕನಾಗಿದ್ದಾಗ ಸಣ್ಣದಾಗಿ ಗುರು ಕಾಣಿಕೆ ಸಲ್ಲಿಸುವ ಅವಕಾಶ ದೊರಕಿತು. ನಾವು ವಿಶ್ವವಿದ್ಯಾನಿಲಯದ ಪಠ್ಯ ಪುಸ್ತಕಗಳಲ್ಲಿ ಆಯ್ದು ಸಂಕಲನಗಳಲ್ಲಿ ಸೇರಿಸಿಕೊಳ್ಳುತ್ತಿದ್ದ ಕನ್ನಡ ಕವನಗಳಿಗೆ ೨೫–೩೦ ರೂಪಾಯಿ ಗೌರವ ಧನ ನೀಡುತ್ತಿದ್ದೆವು. ವಿಶ್ವವಿದ್ಯಾನಿಲಯಕ್ಕೆ ಬರೆದು ನಾನು ಅದನ್ನು ೨೫೦ ರೂಪಾಯಿಗೆ ಏರಿಸಿದೆ. ವಿ.ಸೀ. ಅವರ ಎರಡು ಕವನಗಳನ್ನು ಸಂಕಲನದಲ್ಲಿ ಸೇರಿಸಿಕೊಂಡೆವು ಎಂದು ನೆನಪು. ಅದು ೬೦'ರ ದಶಕದಲ್ಲಿ. ವಿ.ಸೀ. ಯವರಿಗೆ ಕಾಗದ ಬರೆದು ವಿಷಯ ತಿಳಿಸಿದೆ. ಅವರು ಸಂತೋಷಪಟ್ಟು ಉತ್ತರ ಬರೆದರು. ಆದರೆ ಆ ಉತ್ತರ ಒತ್ತಿದ ವಿಷಾದದ ಮುದ್ರೆಯನ್ನು ಇನ್ನೂ ಅಳಿಸಿ ಹಾಕಲು ಸಾಧ್ಯವಾಗಿಲ್ಲ. ಏಕೆಂದರೆ ಅವರು ಬರೆದಿದ್ದರು: "ನನ್ನ ಮಗಳು ಅಳಿಯ ಕಾಶಿಯಲ್ಲಿರುವುದು ನಿಮಗೆ ಗೊತ್ತಿದೆ. ನಾನು ಕಾಶಿಗೆ ಹೋಗಿ ಬರಬೇಕೆಂದಿದ್ದೇನೆ. ನೀವು ನಿಗದಿ ಪಡಿಸಿರುವ ಹಣವನ್ನು ಈಗಲೇ ಕೊಟ್ಟರೆ ನನಗೆ ತುಂಬ ಉಪಕಾರವಾಗುತ್ತದೆ." ನಾನು ತರದೂದು ಮಾಡಿ ಹಣವನ್ನೇನೋ ಬೇಗ ಕಳುಹಿಸಿದೆ. ವಿಷಾದ ಏಕೆ ಗೊತ್ತೆ? ಮೇಷ್ಟ್ರು ನಿವೃತ್ತರಾಗಿದ್ದರು. ಹಣದ ಅಡಚಣೆಯಿಂದ ಅವರು ಪಾರಾಗಲೇ ಇಲ್ಲ ಎನ್ನುವ ಕಾರಣಕ್ಕೆ.

ಅವರು ತುಂಬ ಉದಾರಿಗಳಾಗಿ ಬಾಳಿದರು. ಮನೆಗೆ ಬಂದವರನ್ನು ಉಪಚರಿಸದೆ ಕಳುಹಿಸಿದ್ದೇ ಇಲ್ಲ. ಅಷ್ಟೇ ಅಲ್ಲ. ನಾನು ಬೆಂಗಳೂರಿನ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಲೆಕ್ಚರರ್ ಆಗಿ ೧೯೫೦ರಲ್ಲಿ ಹೋದಾಗ ವಿ.ಸೀ. ಅವರು ಸೆಂಟ್ರಲ್ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದರು. ಅವರನ್ನು ನೋಡಲು ಹೋಗುತ್ತಿದ್ದೆ. ಅವರೂ ನನ್ನ ಇನ್ನೊಬ್ಬರು ಪೂಜ್ಯ ಗುರುಗಳಾದ ಜಿ. ಪಿ. ರಾಜರತ್ನಂ ಅವರೂ ಒಂದೇ ಕೊಠಡಿಯಲ್ಲಿ ಇರುತ್ತಿದ್ದರು. ಅವರಿಗೆ ಕೊಟ್ಟಿದ್ದ ಕೊಠಡಿ ೫೦'ರ ದಶಕದಲ್ಲಿ ಕನ್ನಡವು ಯಾವ ದುರ್ದೆಶೆಯಲ್ಲಿತ್ತು ಎಂಬುದನ್ನು ಎತ್ತಿ ತೋರಿಸುತ್ತದೆ. ಸೆಂಟ್ರಲ್ ಕಾಲೇಜಿನಲ್ಲಿ ಅಂದು ಭಾರಿ ಭಾರೀ ಕೊಠಡಿಯಲ್ಲಿದ್ದ ಅನೇಕ ಪ್ರಾಧ್ಯಾಪಕರು ಈಗ ಅವರ ವಿಶಿಷ್ಟ ಅಧ್ಯಯನದ ವಿಷಯಗಳ ಕ್ಷೇತ್ರಗಳ ಜನರೂ ಸೇರಿದಂತೆ ಯಾರ ನೆನಪಿನಲ್ಲೂ ಉಳಿದಿಲ್ಲ. ಆದರೆ ನಮ್ಮ ನಾಡಿನ ಭಾಷೆಯ ಸಾಹಿತ್ಯಗಳಿಗೆ ಸೇವೆ ಸಲ್ಲಿಸಿ ಕೀರ್ತಿ.ಮಾಸದವರಾಗಿ

ಜನ ಮನದಲ್ಲಿ ಇಂದಿಗೂ ಉಳಿದಿರುವ ವಿ.ಸೀ. ಮತ್ತು ರಾಜರತ್ನಂ ಅವರಿಗೆ ವಿಶ್ವವಿದ್ಯಾನಿಲಯ ನೀಡಿದ್ದದ್ದು ಒಂದು ಸಣ್ಣ ಕೊಠಡಿ. ಅದರ ಹಿಂದೆ ಕಾಲೇಜಿನ ಕ್ಯಾಂಟೀನ್, ಮುಂದೆ ಸಾರ್ವಜನಿಕ ಮೂತ್ರಿ! ಅಲ್ಲೇ ಕೆಲಸ ಮಾಡಿ ಈ ಮಹಾವಿದ್ವಾಂಸರು ಕನ್ನಡವನ್ನು ಉಳಿಸಿ ಬೆಳಸುವ ಕಾರ್ಯವನ್ನು ನಡೆಸಿದರು.

ನಾನಲ್ಲ, ಯಾರೇ ಹೋದರೂ ಆತ್ಮೀಯತೆಯಿಂದ ಮಾತನಾಡಿಸಿ, ತಮ್ಮ ಕೊಠಡಿಗೇ ಮಸಾಲೆ ದೋಸೆ ಕಾಫಿ ತರಿಸಿಕೊಡುತ್ತಿದ್ದರು ವಿ.ಸೀ. ಹಾಗೂ ರಾಜರತ್ನಂ. ಅವನ್ನು ತರಿಸುವುದರಲ್ಲಿ ಅವರ ನಡುವೆ ಸ್ಪರ್ಧೆ ಇದ್ದಂತೆ ತೋರುತ್ತಿತ್ತು.

ನಾನು ವಿದ್ಯಾರ್ಥಿಯಾಗಿದ್ದಾಗ ವಿ.ಸೀ. ಅವರು ನನಗೆ ಮಾಡಿದ ಪರೋಪಕಾರ ವೊಂದನ್ನು ನೆನೆದು ಗುರುಸ್ಮೃತಿಗೆ ಮಂಗಳ ಹಾಡುತ್ತೇನೆ. ಅಂದಿಗೆ ಮಹಾರಾಜಾ ಕಾಲೇಜಿನಲ್ಲಿ ತೆಲುಗು ಅಧ್ಯಾಪಕರಾಗಿದ್ದ ರಾಳ್ಲಪಲ್ಲಿ ಅನಂತಕೃಷ್ಣ ಶರ್ಮ ಅವರನ್ನು ನನಗೆ ಪರಿಚಯ ಮಾಡಿಸಿದವರು ವಿ.ಸೀ. ಅನಂತಕೃಷ್ಣಶರ್ಮರಲ್ಲಿ ವಿ.ಸೀ. ಅವರಿಗೆ ಪೂಜ್ಯಭಾವ. ಶರ್ಮರು ಸಂಸ್ಕೃತ, ಪ್ರಾಕೃತ, ತೆಲುಗು, ಕನ್ನಡ, ಇಂಗ್ಲಿಷ್ ಜೊತೆಗೆ ಸಂಗೀತದಲ್ಲಿ ಅಸಾಧಾರಣ ವಿದ್ವಾಂಸರು. ಶಾಲೆಯಲ್ಲಿ ಹೆಚ್ಚೇನೂ ಕಲಿಯದಿದ್ದ ಶರ್ಮರು ಎಲ್ಲ ಶಾಖೆಗಳಲ್ಲೂ ವಿದ್ವತ್ತನ್ನು ಸ್ವಂತ ಶ್ರಮದಿಂದ ಗಳಿಸಿದವರು. ಅವರ ವಿಷಯ ಪ್ರತ್ಯೇಕ ಲೇಖನವನ್ನೇ ಬರೆದಿದ್ದೇನೆ. ಇಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ತೆಲುಗು ಸಾಹಿತ್ಯದ ವಿದ್ಯಾರ್ಥಿಯಲ್ಲದ ನನಗೆ ರಾಳ್ಲಪಲ್ಲಿ ಅನಂತಕೃಷ್ಣಶರ್ಮರ ಶಿಷ್ಯನಾಗುವ ಮಹಾಭಾಗ್ಯ ದೊರೆತದ್ದು ಪೂಜ್ಯ ಗುರುಗಳಾದ ಶ್ರೀ ವಿ. ಸೀತಾರಾಮಯ್ಯನವರ ಕೃಪೆಯಿಂದ.

ವಿದ್ಯಾರಣ್ಯ

"ಬಯಲಿನಲ್ಲಿ ನಿಂತವರಿಗೆ ಒಂದೊಂದು ಬಂಡೆಯೇ ದೊಡ್ಡ ಪರ್ವತವಾಗಿ ತೋರುತ್ತದೆ. ಆದರೆ ಎಲ್ಲ ದಿಕ್ಕುಗಳಲ್ಲೂ ಕ್ಷಿತಿಜದವರೆಗೆ ವಿಸ್ತರಿಸಿದ ಪರ್ವತ ಶ್ರೇಣಿಗಳಲ್ಲಿ ಸಂಚರಿಸುವವರಿಗೆ ಯಾವ ಎತ್ತರವೂ ಒಂದು ಅದ್ಭುತವೆಂದು ತೋರುವದೇ ಇಲ್ಲ. ಅವರ ಗಮನ ಅದಕ್ಕಿಂತ ಎತ್ತರವಾದ ಶಿಖರದೆಡೆಗೇ ಇರುತ್ತದೆ. ಹೀಗಾಗಿ ವಿ.ಸೀ.ಯವರ ವಿದ್ಯಾರಣ್ಯದಲ್ಲಿ ಪ್ರವೇಶ ಪಡೆದವರಿಗೂ ಕೂಡ ಅಲ್ಲಿ ಎತ್ತರವಾದ ಶಿಖರ ಯಾವದು? ಸಾಹಿತ್ಯವೊ? ಸಂಗೀತವೊ? ಅರ್ಥಶಾಸ್ತ್ರವೊ? ತತ್ವಶಾಸ್ತ್ರವೊ? ನಿಷ್ಠುರವಾದ ನ್ಯಾಯವೊ? ಹೆಂಗರುಳಿನ ಲೋಕ ಕಾರುಣ್ಯವೊ? ಯಾವುದೊ? ಯಾವುದೊ? ಎಂದು ದಿಗಿಲಾಗುತ್ತದೆ. ಆ ಪ್ರದೇಶಕ್ಕೆ ಪ್ರವೇಶಿಸುವ ಭಾಗ್ಯ ಒಮ್ಮೆ ದೊರೆತರೆ ಆ ಗುರು ತನ್ನ ಶಿಷ್ಯನ "ಯೋಗಕ್ಷೇಮಂ ವಹಾಮ್ಯಹಂ" ಎನ್ನುತ್ತಾರೆ. ಅಪರ ಜತೆ ನಡೆಯುವಾಗ ಎಷ್ಟು ಎತ್ತರಕ್ಕೆ ನಮ್ಮನ್ನು ಏರಿಸಿದ್ದಾರೆಂಬುದೇ ತಿಳಿಯುವುದಿಲ್ಲ. ಶಕ್ತವಾದ ಆ ಬುದ್ಧಿಯ ಸಂಚಾರ ಅಷ್ಟು ಲೀಲಾಜಾಲವಾಗಿ ನಡೆಯುತ್ತದೆ".

ಪಿ. ವಿ. ಜೋಶಿ

'ವಿ.ಸೀ.–ಒಳ್ಳೆ' ಪು. ೨೦೪

ನಗುಮೊಗದ ವಿ.ಸೀ.

ಎಂ. ಚಿದಾನಂದಮೂರ್ತಿ

ವಿದ್ಯಾರ್ಥಿಗಳಾಗಿದ್ದಾಗ ನಮಗೆ ಹಿರಿಯ ಕವಿಗಳೂ ಸಾಹಿತಿಗಳೂ ಕೇವಲ ಮಾನವರಾಗಿರಲಿಲ್ಲ, 'ಅತಿಮಾನವ'ರಾಗಿದ್ದರು; ಓದಬೇಕಾದ ವ್ಯಕ್ತಿಗಳಿಗಿಂತ ನೋಡಬೇಕಾದ 'ಪ್ರೇಕ್ಷಣೀಯ' ವ್ಯಕ್ತಿಗಳಾಗಿದ್ದರು. ದಾವಣಗೆರೆಯಲ್ಲಿದ್ದಾಗ ನಾನು ಅ.ನ.ಕೃ., ಬೇಂದ್ರೆ ಯವರನ್ನು ಕಂಡಾಗ ಅವರು ಏನು ಹೇಳುತ್ತಿದ್ದರು ಎಂಬುದರ ಕಡೆ ಗಮನವಿರುತ್ತಿರಲಿಲ್ಲ. ಅವರ ಪ್ರತಿಯೊಂದು ಚಲನವಲನವನ್ನು ಗಮನಿಸುತ್ತ ನೋಡುತ್ತ ಕುಳಿತಿರುತ್ತಿದ್ದೆ. ಅವರು ನಗುವುದು, ಅತ್ತ ಇತ್ತ ಕೈ ಬೀಸುವುದು ಇವು ಎಲ್ಲರಂತೆಯೇ ಇದ್ದರೂ ಒಂದು ಬಗೆಯ ವಿಶೇಷ ಭಾವನಾತ್ಮಕ ಪರಿವೇಷ, ಆ ಪರಿವೇಷಕ್ಕೆ "ದಿವ್ಯ" ಎಂಬ ವಿಶೇಷಣವನ್ನು ಸೇರಿಸಿದರೂ ಸರಿಯೇ, ಅವರನ್ನು ಆವರಿಸಿರುತ್ತಿತ್ತು. ಆನರ್ಸ್ ವಿದ್ಯಾರ್ಥಿಯಾದಾಗಲೂ ಅಂತಹ ಸ್ಥಿತಿಯಿಂದ ನಾನು ಹೊರ ಬಂದಿರಲಿಲ್ಲ. ಕುವೆಂಪು ಪಾಠ ಮಾಡುತ್ತ ಒಮ್ಮೆ ತಲೆಯೆತ್ತಿ ಮೇಲೆ ನೋಡಿದರೆ, ಕಿಟಕಿ ಕಡೆ ಕೈ ಚಾಚಿದರೆ ಅಲ್ಲಿ ಏನೋ ಅವರಿಗೆ ಕಾಣಿಸಿರಬೇಕೆಂದು ನಾನು ಆ ಕಡೆ ವಿಸ್ಮಯದಿಂದ ನೋಡುತ್ತಿದ್ದೆ. ಅಂತಹ 'ಅತಿಮಾನವ' ವ್ಯಕ್ತಿಗಳ ಪಟ್ಟಿಗೆ ಜಿ. ಪಿ. ರಾಜರತ್ನಂ, ಪು.ತಿ.ನ., ತ.ರಾ.ಸು., ನಿರಂಜನ, ಡಿ.ವಿ.ಜಿ., ಕಟ್ಟೀಮನಿ, ಮಾಸ್ತಿ, ವಿ.ಸೀ., ಎಂ.ಆರ್.ಶ್ರೀ. ಇನ್ನೂ ಹಲವರು ಸೇರಿದ್ದರು. ಅವರೆಲ್ಲರ ಉಪನ್ಯಾಸಗಳಿಗೆ ಆ ದಿನಗಳಲ್ಲಿ ಜನ ಕಿಕ್ಕಿರಿದು ತುಂಬುತ್ತಿದ್ದರು.

೧೯೫೪–೫೬ರಲ್ಲಿ ಕೋಲಾರದ ಇಂಟರ್‌ಮಿಡಿಯೆಟ್ ಕಾಲೇಜಿನಲ್ಲಿ ನಾನು ಕನ್ನಡ ಅಧ್ಯಾಪಕನಾಗಿ ಎರಡು ವರ್ಷ ಬಹು ಸಂತೋಷದ ದಿನಗಳನ್ನು ಕಳೆದೆ. ಅದಕ್ಕೆ ಮುಂಚೆ, ೧೯೫೩ರಲ್ಲಿ ತುಮಕೂರು ಪ್ರಥಮ ದರ್ಜೆ ಕಾಲೇಜಿನಲ್ಲಿ ಎಂಟು ತಿಂಗಳು ಉಪಾಧ್ಯಾಯನಾಗಿ ವಿದ್ಯಾರ್ಥಿಗಳ ಪ್ರೀತಿ ವಿಶ್ವಾಸದ ಜೊತೆ ಆತ್ಮವಿಶ್ವಾಸವನ್ನೂ ಗಳಿಸಿಕೊಂಡಿದ್ದೆ. ಅಲ್ಲಿಂದ (ತುಮಕೂರಿನಿಂದ) ಬೆಂಗಳೂರಿಗೆ ಎಷ್ಟೋ ಭಾನುವಾರ ರೈಲಲ್ಲಿ ಬಂದು ಮಲ್ಲೇಶ್ವರದಲ್ಲಿದ್ದ ಪು.ತಿ.ನ. ಅವರ ಮನೆಗೆ ಹೋಗಿ ಅವರಿಂದ ಬೇಂದ್ರೆಯವರ 'ಗಂಗಾವತರಣ' ಸಂಕಲನದ ಪದ್ಯಗಳನ್ನು ಪಾಠ ಹೇಳಿಸಿಕೊಂಡು, ಆ ಸಂಕಲನವನ್ನು ಪದವಿ ತರಗತಿಗಳಿಗೆ ಪಾಠ ಹೇಳಿ ಒಳ್ಳೆಯ ಉಪಾಧ್ಯಾಯ ಎನ್ನಿಸಿಕೊಂಡಿದ್ದೆ. ಕೋಲಾರಕ್ಕೆ ಹೋದ ಮೇಲೆ ಅಲ್ಲಿನ ಕಾಲೇಜಿನಲ್ಲಿದ್ದ ಕನ್ನಡ ಸಂಘಕ್ಕೆ ಮೊದಲನೆಯ ವರ್ಷ

(೧೯೫೪–೫೫) ಪು.ತಿ.ನ. ಅವರನ್ನು ಮುಖ್ಯ ಅತಿಥಿಯಾಗಿ ಕರಸಿದ್ದೆ. ಎರಡನೆಯ ವರ್ಷ (೧೯೫೫–೫೬) ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ವಿ.ಸೀ. ಯವರನ್ನು ಆಹ್ವಾನಿಸಲು ಅವರ ಮನೆಗೆ ಹೋದೆ. ಅದೇ ನಾನು ಮೊದಲ ಬಾರಿಗೆ ಅವರನ್ನು ಕಂಡದ್ದು. ಹಿರಿಯರನ್ನು, ಅದರಲ್ಲೂ ಪ್ರಖ್ಯಾತ ಸಾಹಿತಿಗಳನ್ನು ಕಂಡರೆ ನನಗೆ ಸೂಕ್ಷ್ಮವಾದ ಭಯ. ಆದರೆ ವಿ.ಸೀ. ನನ್ನನ್ನು ಅತ್ಯಂತ ಪ್ರೀತಿಯಿಂದ ಮಾತನಾಡಿಸಿದ ರೀತಿಯು ಆ ಭಯವನ್ನು ಹೋಗಲಾಡಿಸಿತು. ಕೋಲಾರಕ್ಕೆ ಬಂದರು; ಮಾತನಾಡಿದರು; ತಮ್ಮ ಭಾಷಣದಿಂದ, ಸರಳ ನಡೆನುಡಿಗಳಿಂದ ಜನರನ್ನು ಗೆದ್ದರು. ಆ ಕಾಲಕ್ಕೆ ಕೋಲಾರದಲ್ಲಿ ಸಾಹಿತ್ಯ ಪ್ರಿಯರ ಒಂದು ತಂಡವೇ ಇತ್ತು; ದೇಶಿಕಾಚಾರ್, ತಾತಾಚಾರ್, ತಂಗವೇಲು ಇವರು ತಕ್ಷಣ ನನಗೆ ಜ್ಞಾಪಕಕ್ಕೆ ಬರುವ ಹೆಸರುಗಳು. ವಿ.ಸೀ.ಯವರು ನಾನು ೧೯೫೩ರ ಕನ್ನಡ ಆನರ್ಸ್ ತಂಡದವನು ಎಂಬುದನ್ನು ಖಚಿತ ಪಡಿಸಿಕೊಂಡು ನನಗೆ ಬಹು ಹೆಮ್ಮೆಯೆನ್ನಿಸಿದ ಒಂದು ಮಾತು ಹೇಳಿದರು. ಆ ಬಿ.ಎ. (ಆನರ್ಸ್) ತಂಡದ ಉತ್ತರ ಪತ್ರಿಕೆಗಳು ಅವರಿಗೆ ಮೌಲ್ಯಮಾಪನಕ್ಕೆ ಬಂದಿದ್ದುವಂತೆ. ಅವುಗಳಲ್ಲಿ ಒಂದು ಉತ್ತರ ಪತ್ರಿಕೆಯ ಉತ್ತರಗಳು ಬಹು ಮೆಚ್ಚುಗೆಯಾಗಿ ಅವುಗಳನ್ನು ಮೈಸೂರಿನ ನನ್ನ ಉಪಾಧ್ಯಾಯರ ಜೊತೆ (ಬಹುಶಃ ಡಿ.ಎಲ್.ಎನ್. ಜೊತೆ) ಪ್ರಸ್ತಾಪಿಸಿದಾಗ ಅವು ನನ್ನ ಉತ್ತರ ಪತ್ರಿಕೆ ಎಂಬುದನ್ನು ಅವರು ತಿಳಿಸಿದ್ದರಂತೆ. ಒಂದು ಚಿಕ್ಕ ವಿಷಯ – ಆದರೆ ಚಿಕ್ಕ ವಯಸ್ಸಿನಲ್ಲಿ ದೊಡ್ಡವರ ಬಾಯಿಂದ ಬರುವ ಅಂತಹ ಮಾತುಗಳು ತಂದುಕೊಡುವ ಉತ್ಸಾಹ, ಸ್ಫೂರ್ತಿಗಳು ವರ್ಣನಾತೀತ.

ವಿ.ಸೀ. ಯವರನ್ನು ಹೆಚ್ಚು ಹತ್ತಿರದಿಂದ ಆತ್ಮೀಯವಾಗಿ ನೋಡಿದ್ದು ೧೯೬೯ರ ಆದಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನಾನು ಬಂದ ಮೇಲೆ. ಮೈಸೂರಿನ ಮನೆಯನ್ನು ಮಾರಿ ನಾನು ಬೆಂಗಳೂರಿನ ನಿವಾಸಿಯೂ ಆದೆ. ನನ್ನ ಮಿತ್ರರೊಬ್ಬರು ಅರೆ ತಮಾಷೆಯ ಧ್ವನಿಯಲ್ಲಿ ಈ ಕೆಳಗಿನ ಘಟನೆಯನ್ನು ನನಗೆ ಹೇಳಿದ್ದರು. ಮೈಸೂರಲ್ಲಿ ನನ್ನ ಗುರುಗಳಾಗಿದ್ದ ಉ. ಕಾ. ಸುಬ್ಬರಾಯಾಚಾರ್ಯರು – ಅವರ ಬಗ್ಗೆ ಪ್ರತ್ಯೇಕವಾಗಿಯೇ ಬರೆಯುವುದು ಬೇಕಾದಷ್ಟಿದೆ, ಅವರು ಒಬ್ಬ ನಿರ್ಮಲ ಮನಸ್ಸಿನ ನಿಜವಾದ ಸಾಧಕರಾಗಿದ್ದರು – ಅವರನ್ನು ಕುವೆಂಪು "ಶುಭ್ರಾಯಾಚಾರ್" ಎಂದು ಕರೆದುದರಲ್ಲಿ ಆಶ್ಚರ್ಯವೇನೂ ಇಲ್ಲ – ಯುವಕರಾಗಿದ್ದಾಗ ಅವರು ಒಮ್ಮೆ ವಿ.ಸೀ.ಯವರ ಮನೆಗೆ ಹೋಗಿ "ದೇವರನ್ನು ನೋಡಿರುವಿರಾ?" ಎಂಬ ಪ್ರಶ್ನೆ ಹಾಕಿದರಂತೆ, ತಮ್ಮ ಅಕೃತಕ ಸ್ವಭಾವಕ್ಕನುಗುಣವಾಗಿ. ಆ ಪ್ರಶ್ನೆಗೆ ವಿ.ಸೀ.ಯವರು ತಕ್ಷಣ ಉತ್ತರ ಕೊಡಲಿಲ್ಲವೆಂದೂ, ಒಳಗಿನಿಂದ ದೋಸೆ ತಂದು "ಇದೇ ದೇವರು, ತಗೊಳ್ಳಿ" ಎಂದು ಹೇಳಿದರಂತೆ. ಯುವಕ ಉ.ಕಾ.ಸು. ಅವರ ಬಗ್ಗೆ ವ್ಯಂಗ್ಯದ ಮಾತಾಡಲಿಲ್ಲ; ಆದರೆ ದೇವರ ಅಸ್ತಿತ್ವದ ಪ್ರಶ್ನೆಗೆ ಅವರು ಉತ್ತರಿಸದೆ, ಸದ್ಯಕ್ಕೆ ಈ ಲೋಕದಲ್ಲಿ ಚೆನ್ನಾಗಿ ಸುಖವಾಗಿ ಬದುಕುವುದೇ ಮುಖ್ಯವೆಂಬುದನ್ನು ಸೂಚಿಸಿದರು. ವಿ.ಸೀ. ಅವರೇನೂ ನಾಸ್ತಿಕರಲ್ಲ. ಭಾರತೀಯ ಸಂಸ್ಕೃತಿಯಲ್ಲಿ ಅದು ಸೃಷ್ಟಿಸಿರುವ ಸಂತರು ಋಷಿಗಳು ಇವರನ್ನು ಅತ್ಯಂತ ಗೌರವದಿಂದ ಕಂಡವರು. ಯುವಕರಾದ ಉ.ಕಾ.ಸು. ಅವರು ಸಂತೋಷದಿಂದ ಹಿಂದಿರುಗಿರಬೇಕು.

"ದೇವರು ಇದ್ದಾನೆಯೇ" ಎಂಬ ಪ್ರಶ್ನೆಗೆ ಬಾಯಿ ಮಾತಿನ ಉತ್ತರ ಸಿಗದಿದ್ದರೂ ವಿ.ಸೀ. ಯಂತಹ ಶ್ರೇಷ್ಠರಲ್ಲಿನ ಶ್ರೇಷ್ಠ ಗುಣವೇ ದೇವರು ಎಂಬುದು ಅವರಿಗೆ ಮನವರಿಕೆಯಾಗಿರಬೇಕು. ವಿ.ಸೀ. ಒಬ್ಬ ಶ್ರೇಷ್ಠ ಮಾನವರಾಗಿದ್ದರು.

ಮೈಸೂರಿನ ಆದರ್ಶಮಯ ಶೈಕ್ಷಣಿಕ ವಾತಾವರಣದಿಂದ ಬೆಂಗಳೂರಿನ ಬಿರುಸಿನ ರಾಜಕೀಯ ವಾತಾವರಣಕ್ಕೆ ಹೊಂದಿಕೊಳ್ಳುವುದು ಸ್ವಲ್ಪ ಕಷ್ಟವೇ ಆಯಿತು. ಮೈಸೂರು ಗ್ರಂಥಾಲಯಗಳಲ್ಲಿ ನನ್ನ ಅಧ್ಯಯನಕ್ಕೆ ಬೇಕಾದ ಗ್ರಂಥಗಳು ಲಭ್ಯವಾಗಿದ್ದುದಲ್ಲದೆ, ಆಲೋಚನೆಗಳನ್ನು ಹಂಚಿಕೊಳ್ಳಲು ಸಮಾನ ಮನಸ್ಕರು, ಮಾರ್ಗದರ್ಶನ ಪಡೆಯಲು ಹಿರಿಯರು ದೊರಕುತ್ತಿದ್ದರು. ಬೆಂಗಳೂರಿನಲ್ಲಿ ಆ ಸೌಲಭ್ಯಗಳು ಆಗ ಅಷ್ಟಾಗಿ ಇರದಿದ್ದರೂ ಆ ಕೊರತೆಗಳನ್ನು ಸ್ವಲ್ಪ ಮಟ್ಟಿಗೆ ತುಂಬಿಕೊಳ್ಳಲು ನಾನು ಪರಿಷತ್ ಮತ್ತು ಮಿಥಿಕ್ ಸೊಸೈಟಿ ಗ್ರಂಥಾಲಯಗಳಿಗೆ ಮರೆಹೋದೆ; ಮತ್ತು ಗ್ರಂಥಾಲಯಗಳನ್ನು ಅವಲಂಬಿಸಿದ್ದ ನನ್ನ ಸಂಶೋಧನೆಯ ವಸ್ತು ಮತ್ತು ರೀತಿಗಳನ್ನು ಸ್ವಲ್ಪ ಬದಲಾಯಿಸಿ ಹೆಚ್ಚು ಹೆಚ್ಚು ಕ್ಷೇತ್ರ ಕಾರ್ಯಾವಲಂಬಿಯಾದ ಅಧ್ಯಯನಗಳತ್ತ ಹೆಚ್ಚು ಗಮನ ಕೊಟ್ಟೆ. ಹಿರಿಯರಾದ ವಿ.ಸೀ., ಜಿ. ಪಿ. ರಾಜರತ್ನಂ, ರಂ. ಶ್ರೀ. ಮುಗಳಿ, ಜಿ. ಎಸ್. ಶಿವರುದ್ರಪ್ಪನವರು, ಅವರ ಜೊತೆ ಚರ್ಚೆ, ಕೆಲವೊಮ್ಮೆ ಅವರ ವೈಯಕ್ತಿಕ ಗ್ರಂಥ ಸಂಗ್ರಹಗಳ ಬಳಕೆ ಇವು ಇನ್ನೊಂದು ಕೊರತೆಯನ್ನೂ ಸ್ವಲ್ಪ ತುಂಬಿದುವು. ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯವನ್ನು ಬೆಳಸಲು ಉತ್ಸಾಹದಿಂದ ಮುಂದಾದೆ. ಅದರ ಫಲವಾಗಿ ಡಿ. ಎಲ್. ನರಸಿಂಹಾಚಾರ್, ಅ. ವೆಂಕಟಸುಬ್ಬಯ್ಯನವರ ವೈಯಕ್ತಿಕ ಸಂಗ್ರಹಗಳೂ ಡಾ। ಮುಗಳಿಯವರು ಬೆಳಸಿದ್ದ ಸಾಂಗ್ಲಿ ಕಾಲೇಜಿನ ಕನ್ನಡ ಗ್ರಂಥ ಭಂಡಾರವೂ ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥ ಭಂಡಾರಕ್ಕೆ ಸೇರುವಂತಾದುವು.

ವಿ.ಸೀ. ಯವರ ಮನೆ ಚಾಮರಾಜ ಪೇಟೆಯಲ್ಲಿ ಪರಿಷತ್ತಿಗೆ ತೀರ ಸಮೀಪದಲ್ಲಿತ್ತು. ಅವರು ನನಗೆ ಎಂದೂ ತರಗತಿಯ ಗುರುಗಳಾಗಿರದಿದ್ದರೂ ಅವರನ್ನು ನಾನು ಗುರು ಸಮಾನರೆಂದೇ ಭಾವಿಸಿದ್ದೆ. ಅವರ ಮನೆಗೆ ಹೋದಾಗ ನನ್ನನ್ನು ವಿಶೇಷವಾಗಿ ಆಕರ್ಷಿಸಿದ್ದು ಅವರ ಸರಳತೆ; ಮತ್ತು ಒಳ ಹೊರ ಶುಭ್ರತೆ. ಕಚ್ಚೆ ಪಂಚೆ, ಜುಬ್ಬ ದೇಹದ ಮೇಲೆ; ಮುಖದ ಮೇಲೆ ಆಪ್ಯಾಯಮಾನವಾದ ಎಳೆ ಬೆಳುದಿಂಗಳಿನ ನಗು. ಮನೆಯ ಮುಂಭಾಗದ ಕೋಣೆಯಲ್ಲಿ ಅವರ ಗ್ರಂಥ ಭಂಡಾರ. ಓದಲು ಬರೆಯಲು ಅಲ್ಲಿ ಕುರ್ಚಿ ಮೇಜುಗಳೇನೂ ಇರಲಿಲ್ಲ. ಚಾಪೆಯ ಮೇಲೆ ಕುಳಿತೇ ಅವರ ಓದು; ಬರೆಯಲು ಒಂದು ಚಿಕ್ಕ ಇಳಿಜಾರು ಮೇಜನ್ನು ಬಳಸುತ್ತಿದ್ದರು–ನೆಲದ ಮೇಲೆ ಕುಳಿತೇ ಬರೆಯುತ್ತಿದ್ದರು. ಅವರ ಮನೆಗೆ ಹೋದಾಗಲೆಲ್ಲ ಯುವಕ ಉ.ಕಾ.ಸು. ಅವರಿಗೆ ಆದ ಅನುಭವ – ತಿಂಡಿ ಅನುಭವ – ನನಗೂ ಆಗುತ್ತಿತ್ತು. ಆ ಕೊಠಡಿಯಲ್ಲಿ ಒಪ್ಪವಾಗಿ ಜೋಡಿಸಿದ ಪುಸ್ತಕಗಳು. ಅವುಗಳಲ್ಲಿ ಇಂಗ್ಲಿಷ್ ಪುಸ್ತಕಗಳೇ ಹೆಚ್ಚು. ಕನ್ನಡ ಸಾಹಿತ್ಯವಲ್ಲದೆ ಸಂಸ್ಕೃತ ಸಾಹಿತ್ಯವಂತೂ ಸರಿಯೇ, ಅರ್ಥಶಾಸ್ತ್ರವೇ ಮೊದಲಾದ ಸಾಮಾಜಿಕ ವಿಜ್ಞಾನಗಳಲ್ಲೂ ಅವರಿಗೆ ಆಸಕ್ತಿ ಮಾತ್ರವಲ್ಲ, ಒಳ್ಳೆಯ ಜ್ಞಾನವಿತ್ತು. ಅವರ ಕುತೂಹಲ, ತಿಳಿಯುವ ಹಂಬಲ ಇವು ಎಷ್ಟು ತೀವ್ರವಾಗಿದ್ದುವೆಂದರೆ, ತಾವೇ ಮಾತನಾಡುವುದಕ್ಕಿಂತ ನಾವು ಮಾತನಾಡಬೇಕೆಂದು

ಅವರು ಬಯಸುತ್ತಿದ್ದರು, ನಿರೀಕ್ಷಿಸುತ್ತಿದ್ದರು, ಅವಕಾಶ ಮಾಡಿಕೊಡುತ್ತಿದ್ದರು. ಅವರ ಆಸಕ್ತಿಗಳು ಹಲವಾರು. ಸಂಗೀತ ಶಾಸ್ತ್ರದಲ್ಲಿ ಅವರಿಗೆ ಉತ್ತಮ ಜ್ಞಾನವಿದ್ದುದಲ್ಲದೆ ಸಂಗೀತ ಪ್ರಿಯರೂ ಆಗಿದ್ದರು. ಯಾವುದೇ ವಿಷಯವಾದರೂ ನಿರರ್ಗಳವಾಗಿ, ಆದರೆ ಅತ್ಯಂತ ಸಮಂಜಸವಾಗಿ ಮಾತನಾಡಬಲ್ಲವರಾಗಿದ್ದರು.

ನನ್ನದು ಮುಖ್ಯವಾಗಿ ವಿದ್ವತ್ತಿನ ಸಂಶೋಧನೆಯ ಮಾರ್ಗ. ಅವು ಅವರಿಗೆ ಚೆನ್ನಾಗಿ ಪರಿಚಿತವೇ ಆಗಿದ್ದರೂ ಅವರದು ಮುಖ್ಯವಾಗಿ ಸಹೃದಯತೆಯ ವಿಮರ್ಶೆಯ ಮಾರ್ಗ. ಛಂದಸ್ಸಿನ ವಿಷಯದಲ್ಲಿ ನನ್ನ ಕೆಲವು ಸಂದೇಹಗಳನ್ನು ನಿವಾರಣೆ ಮಾಡಿಕೊಳ್ಳಲು ಅವರ ಬಳಿಗೆ ಒಂದೆರಡು ಬಾರಿ ಹೋಗಿದ್ದೆ. ಅವರ ಛಂದಸ್ಸಿನ ಗ್ರಹಿಕೆ ಸಂಗೀತ–ನಾದ–ಲಯ ಇವುಗಳ ಹಿನ್ನೆಲೆಯವಾಗಿದ್ದು ಅರ್ಥಪೂರ್ಣವಾದುದೂ ಆಗಿತ್ತು. ನನ್ನದು ಮಾಹಿತಿ ಕೇಂದ್ರಿತ ಸಂಶೋಧನ ದೃಷ್ಟಿಯ ಹುಡುಕಾಟವಾಗಿತ್ತು. ಅವರ ಕೆಲವು ಮಾತು, ವಿವರಣೆಗಳು ನನಗೆ ಅರ್ಥವಾಗುತ್ತಿರಲಿಲ್ಲವಾದರೂ ಅವರು ನನ್ನನ್ನು ಅರ್ಥಮಾಡಿಕೊಂಡು ಸ್ಪಂದಿಸುತ್ತಿದ್ದರು. ಎಲ್ಲರೂ ಎಲ್ಲವೂ ಆಗಿರಲು ಸಾಧ್ಯವಿಲ್ಲ; ಎಲ್ಲದಕ್ಕೂ ಅದರದರ ಸ್ಥಾನವಿದೆಯೆಂಬುದನ್ನು ಅವರು ಬಲ್ಲ ವಿವೇಕಿಗಳೂ ಆಗಿದ್ದರು. ಸಂಸ್ಕೃತ ಛಂದೋಗ್ರಂಥಗಳು ಅವರಿಗೆ ಸುಪರಿಚಿತವಾಗಿದ್ದುವು. ವಿ.ಸೀ. ಅವರ ಸಂಪರ್ಕದಿಂದ ನನ್ನ ಸಂಶೋಧನೆಗೆ ಬಹಳ ಸಹಾಯವಾಯಿತೆಂದು ಹೇಳಿದರೆ ತಪ್ಪಾದೀತು. ಆದರೆ ಅವರಿಂದ ನಾನು ಪಡೆದ ಉತ್ಸಾಹ, ಸ್ಫೂರ್ತಿಗಳು ನನ್ನ ಸಂಶೋಧನೆಗೆ ಮಾಡಿದ ಉಪಕಾರಗಳು ಬಹು ದೊಡ್ಡವು. ಇವೇ ಅಲ್ಲವೇ, ದೊಡ್ಡವರು ಕಿರಿಯರಿಗೆ ನೀಡಬೇಕಾದ್ದು. ಅವರ ಶುಭ್ರ ಜೀವನ ನನಗೆ ಮಾರ್ಗದರ್ಶಿಯಾಯಿತು. ಅವರು ದೊಡ್ಡ ಮಾತುಗಳನ್ನಾಡುತ್ತಿರಲಿಲ್ಲ, ಆದರೆ ದೊಡ್ಡದಾಗಿ ಆಲೋಚಿಸಿ ದೊಡ್ಡದಾಗಿ ಆದರೆ ಅವರ ದೃಷ್ಟಿಯಿಂದ ಸಹಜವಾಗಿ, ಸಾಮಾನ್ಯವಾಗಿ ಬದುಕಿದರು.

ನನ್ನ ಬಗ್ಗೆ ಒಂದು ಜಂಬದ ಮಾತನ್ನು ಹೇಳಿಕೊಳ್ಳಲೇಬೇಕು. ಅನೇಕರು ಅಸೂಯೆಪಡಬಹುದಾದ ಒಂದು ಅಂಶ ನನ್ನ ಬದುಕಿನಲ್ಲಿದೆ. ನನ್ನ ಬದುಕಿನಲ್ಲಿ ಗುರುಗಳಾಗಿ ಕಾಣಿಸಿಕೊಂಡವರು ಸಂಖ್ಯೆಯಲ್ಲಿ ಶ್ರೇಷ್ಠತೆಯಲ್ಲಿ ಬಹು ದೊಡ್ಡವರು. ಆ ಅದೃಷ್ಟ ಬಹಳ ಜನಕ್ಕೆ ಲಭ್ಯವಿರಲಾರದು. ನನ್ನ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಪಿಎಚ್.ಡಿ. ಪದವಿ ಪಡೆಯುವವರೆಗೆ, ಆಮೇಲೂ ನನಗೆ ದೊರಕಿದ ಗುರುಗಳು, ಗುರು ಸಮಾನರು ಅವರನ್ನು ನಾನು ಹನಿಗಣ್ಣಿಂದ ನೆನೆಯುತ್ತೇನೆ. ನನ್ನ ನೆನಪಿನ ಬಾಗಿಲನ್ನು ತೆರೆದು ಹಿಂದಕ್ಕೆ ಹಿಂದಕ್ಕೆ ಹೋದಂತೆ ಉದ್ದಕ್ಕೂ ದೀಪಗಳು ಮಂದ ಬೆಳಕನ್ನು ಬೀರುತ್ತ ಶಾಂತವಾಗಿ ಬೆಳಗುತ್ತಿರುವುದು ನನಗೆ ಮುದವನ್ನು ಕೊಡುತ್ತದೆ; ನಿರಾಸೆಯ ದಿನಗಳಲ್ಲಿ ಸ್ಫೂರ್ತಿಯಾಗುತ್ತವೆ, ಚೈತನ್ಯವಾಗುತ್ತವೆ. ದಿನ ಕಳೆದಂತೆ ಆ ದೀಪಗಳ ಹತ್ತಿರ ಹೋಗಿ ಅಲ್ಲೇ ಇರಲು ಹೆಚ್ಚು ಹೆಚ್ಚು ಬಯಸುತ್ತೇನೆ. ಆ ದೀಪಗಳಲ್ಲಿ ವಿ.ಸೀ. ಒಬ್ಬರು. ವಿ.ಸೀ. ನಮ್ಮೆಲ್ಲರ ಒಳಗಣ್ಣುಗಳಿಗೆ ಕಾಣುತ್ತಲೇ ಇದ್ದಾರೆ.

ನಾಡಿನ ಸಂಸ್ಕೃತಿಯನ್ನು ಕಟ್ಟುವವರು

ಜಿ. ಎಸ್. ಸಿದ್ಧಲಿಂಗಯ್ಯ

ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಕೆಲವರು ಎಷ್ಟೊಂದು ಸುಪರಿಚಿತರು ಎಂದರೆ ಅವರ ಪೂರ್ಣ ಹೆಸರನ್ನೆ ಹೇಳಬೇಕಾಗುತ್ತಿರಲಿಲ್ಲ – ಶ್ರೀ, ಮಾಸ್ತಿ, ಡಿ.ವಿ.ಜಿ., ಪು.ತಿ.ನ., ಎಂದುಬಿಟ್ಟರೆ ಸಾಕಾಗುತ್ತಿತ್ತು. ಅಂಥ ವಿರಳರ ಪಂಕ್ತಿಯ ವ್ಯಕ್ತಿತ್ವವುಳ್ಳವರು – ವಿ.ಸೀ. ಎಂದೇ ಖ್ಯಾತರಾದ ವಿ. ಸೀತಾರಾಮಯ್ಯನವರು.

ಅವರ ಶಿಷ್ಯನಾಗುವ ಭಾಗ್ಯ ನನ್ನದಲ್ಲ, ಏಕೆಂದರೆ ನಾನು ಓದಿದ್ದು ತುಮಕೂರು ಮತ್ತು ಮೈಸೂರುಗಳಲ್ಲಿ. ಆದರೆ ಅವರ ಬೋಧನಾಕ್ರಮದ ವೈಶಿಷ್ಟ್ಯಗಳ ಬಗ್ಗೆ ಸಾಕಷ್ಟು ಕೇಳಿಬಲ್ಲೆ. ಅವರ ವಾಗ್ಮಿತೆ ಕನ್ನಡದಲ್ಲಾಗಲಿ, ಇಂಗ್ಲಿಷಿನಲ್ಲಾಗಲಿ – ಅಪೂರ್ವವಾದದ್ದು, ಜೋಗದ ಜಲಪಾತ ಭೋರ್ಗರೆಯುವಂತೆ. ಉತ್ಸಾಹ ಅವರ ವಾಗ್ಮಿತೆಯ ಒಂದು ಪ್ರಧಾನ ಲಕ್ಷಣ. ಒಂದೊಂದು ಶಬ್ದವೂ ಶ್ರೋತೃವಿನ ಎದೆಯಲ್ಲಿಳಿದು ಅರಳಬೇಕು, ಅಂಥ ವಾಗ್ಮಿತೆ ಅವರದು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಂಥ ಕಾಲೇಜಿನಲ್ಲಿ ಕನ್ನಡ ಗೌರವದ ಸ್ಥಾನ ಪಡೆದಿತ್ತೆಂದರೆ ಅದಕ್ಕೆ ಪ್ರಮುಖವಾಗಿ ಇಬ್ಬರು ಕಾರಣ. ಒಬ್ಬರು ಯೆಂಡ್ಲುಡುಕ ರತ್ನ ಎಂದೇ ಪ್ರಸಿದ್ಧರಾದ ರಾಜರತ್ನಂ; ಮತ್ತೊಬ್ಬರು ಆಂಗ್ಲ ಭಾಷೆ–ಕನ್ನಡ ಭಾಷೆಗಳೆರಡರಲ್ಲೂ ಓತಪ್ರೋತವಾಗಿ ಬೋಧಿಸಬಲ್ಲ ಸಾಮರ್ಥ್ಯ ಪಡೆದಿದ್ದ ವಿ.ಸೀ. ಅವರು. ಇರಲಿ. ಅವರ ಭಾಷಣ ಕೇಳುವ ಅದೃಷ್ಟ ನನಗಿತ್ತೇ ಹೊರತು, ಮತ್ತೊಮ್ಮೆ ಹೇಳುತ್ತೇನೆ, ವಿದ್ಯಾರ್ಥಿಯಾಗುವ ಭಾಗ್ಯ ಇರಲಿಲ್ಲ. ಏಕೆಂದರೆ ಕೆಲವರನ್ನು ಗುರುಗಳನ್ನಾಗಿ ಪಡೆಯಬೇಕಾದರೂ ಪಡೆದು ಬಂದಿರಬೇಕು.

ವೈಯಕ್ತಿಕವಾಗಿ ನನ್ನ ಮತ್ತು ವಿ.ಸೀ. ಅವರ ಸಂಬಂಧ ಎರಡು ಪ್ರಸಂಗಗಳಿಗೆ ಸೀಮಿತ. ಒಂದು, ಐ.ಬಿ.ಎಚ್. ಪ್ರಕಾಶನ ಸಂಸ್ಥೆಗಾಗಿ ಕನ್ನಡ ಕವಿಗಳನ್ನು ಕುರಿತ ಗ್ರಂಥಗಳ ಮಾಲೆಯ ಸಂಪಾದಕರಾಗಿದ್ದಾಗ ಚಾಮರಸ ಕವಿಯ ಕವಿ ಕಾಲ ಸನ್ನಿವೇಶಗಳ ಬಗ್ಗೆ ನಾನು ಬರೆಯಲು ಒಪ್ಪಿಕೊಂಡ ವಿಚಾರ. ಇನ್ನೊಂದು ಪಂಪನನ್ನು ಕುರಿತು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗ ಏರ್ಪಡಿಸಿದ್ದ ವಿಚಾರಸಂಕಿರಣದಲ್ಲಿ ಒಂದು ಗೋಷ್ಠಿಯ ಅಧ್ಯಕ್ಷರಾಗಿ ಅವರು ಮಾತನಾಡಿದ ಸಂಬಂಧವಾದದ್ದು.

ಮೊದಲನೆಯ ಪ್ರಸಂಗಕ್ಕೆ ಸಂಬಂಧಿಸಿದಂತೆ ನಾನು ಆಗ ತಾನೇ ಹೊಸದಾಗಿ

ಆರಂಭಿಸಿದ ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗದಲ್ಲಿ ಪ್ರಾಚಾರ್ಯನಾಗಿದ್ದಾಗ ಆ ಪ್ರಬಂಧ ಬರೆಯಲು ಒಪ್ಪಿಕೊಂಡಿದ್ದೆ. ಸುಮಾರು ಮೂರು ಅಥವಾ ನಾಲ್ಕು ನೆನಪಿನೋಲೆಗಳು ಬಂದವು. ಸ್ವಭಾವತಃ ಸೋಮಾರಿಯಾದ ನಾನು – ಅದರಲ್ಲೂ ಬರೆಗುಲಿಯಾದ ನಾನು ಬರೆಯಬೇಕಾಗಿದ್ದ ವಿಷಯಕ್ಕೆ ಸಂಬಂಧಿಸಿದಂತೆ ಪೂರ್ಣ ಅಭ್ಯಾಸ ನಡಸಿ ಟಿಪ್ಪಣಿಗಳನ್ನು ಸಿದ್ಧಪಡಿಸಿಕೊಂಡಿದ್ದರೂ 'ಗ್ರಂಥಭಾಗ'ವನ್ನು ಬರೆದಿರಲಿಲ್ಲ. ಆಗ ವಿ.ಸೀ. ಅವರಿಂದ ಒಂದು ಪತ್ರ ರಾಮಬಾಣದಂತೆ ಬಂದಿತು. ಆ ಪತ್ರ ನನ್ನನ್ನು ಬಡಿದೆಬ್ಬಿಸಿತು. ಪತ್ರದ ತಿರುಳು ಇಷ್ಟು – "ಪ್ರಿಯ ಸಿದ್ಧಲಿಂಗಯ್ಯನವರೇ, ನಾನೊಪ್ಪಿಕೊಂಡಿರುವ ಕಾರ್ಯವನ್ನು ಮುಗಿಸಿ ಧನ್ಯನಾಗಬೇಕೆಂದಿದ್ದೇನೆ. ದಯವಿಟ್ಟು ನನ್ನೊಡನೆ ಸಹಕರಿಸಿ. ಗ್ರಂಥಭಾಗವನ್ನು ಬೇಗ ಕಳಿಸಿಕೊಡಿ. ಒಂದು ಪಕ್ಷ ಬರೆಯಲಾಗದಿದ್ದರೆ ನಿಸ್ಸಂಕೋಚವಾಗಿ ತಿಳಿಸಿ. ಅದರಲ್ಲಿ ತಪ್ಪು ತಿಳಿಯುವಂಥದ್ದೇನೂ ಇಲ್ಲ. ದಯವಿಟ್ಟು ಸಹಕರಿಸಿ". ಈ ಒಕ್ಕಣೆ ನೆನಪಿನಿಂದ ಮೂಡಿದ್ದು. ಆದರೆ ಅದರಲ್ಲಿ ಎರಡು ಮುಖ್ಯ ಅಂಶಗಳು ನನ್ನನ್ನೆಚ್ಚರಿಸಿದವು. ಒಂದು, ನನ್ನ ಸೋಮಾರಿತನದಿಂದಾಗಿ ಇನ್ನೊಬ್ಬರ ಯೋಜನೆಗೆ ಅಡ್ಡಿಯಾಗಬಾರದೆಂಬುದು. ಎರಡನೆಯದು, ನಾಡಿನ ಪ್ರಸಿದ್ಧ ವಿದ್ವಾಂಸರಲ್ಲೊಬ್ಬರೂ ಕವಿ ವಿಮರ್ಶಕರೂ ಆದ ಅವರ ಸೌಜನ್ಯ ಹಾಗೂ ಸಜ್ಜನಿಕೆಗಳು. ಬಹುಶಃ ಈ ಕಾರಣದಿಂದಾಗಿಯೇ ಇರಬೇಕು, ಸ್ನೇಹವನ್ನು ಕುರಿತು ಹೇಳುವಾಗ ಅವರು ಸ್ವರ್ಗದಲ್ಲಿ ಇಂಥ ಭಾಗ್ಯ ದೊರೆಯುವುದೇನು ಎಂದು ಪ್ರಶ್ನಿಸಿದ್ದು. ಮಾನವ ಸಂಬಂಧವನ್ನು ಗೌರವಿಸುವ ಆ ರೀತಿ ನನ್ನ ಹೃದಯವನ್ನು ತಟ್ಟಿತು. ಹದಿನೈದು ದಿನಗಳಲ್ಲಿ ಗ್ರಂಥಭಾಗ ಬರೆದು ಕಳುಹಿಸಿದೆ. ಒಂದೇ ವಾರದಲ್ಲಿ ಅವರ ಪ್ರತಿಕ್ರಿಯೆ ಒಂದು ಕಾರ್ಡಿನಲ್ಲಿ – ಒಂದು ದೊಡ್ಡ ಪತ್ರದಷ್ಟು ವಿಷಯಗಳನ್ನು ಒಳಗೊಂಡು ಬಂದಿತು. ಗ್ರಂಥಭಾಗವನ್ನು ಕುರಿತ ಬರವಣಿಗೆಯ ವಿಶ್ಲೇಷಣೆ, ಪ್ರಶಂಸೆ ಎಲ್ಲ ವಿ.ಸೀ. ಅವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತೆ. ಆ ಪತ್ರ ಇನ್ನೂ ನನ್ನಲ್ಲಿ ಜೋಪಾನವಾಗಿದೆ.

ಇನ್ನೊಂದು ಪ್ರಸಂಗ ಸ್ವಲ್ಪ ಅಪ್ರಿಯ ಅನ್ನಿಸಬಹುದು – ಮೊದಲ ನೋಟಕ್ಕೆ. ಆದರೆ ವಿ.ಸೀ. ವ್ಯಕ್ತಿತ್ವದ ಅರಿವಿನ ದಿಗಂತ ವಿಸ್ತಾರವಾಗುತ್ತಲೇ ಇದ್ದುದೇತಕ್ಕೆ ಎಂಬುದನ್ನು ಅದು ಧ್ವನಿಸುತ್ತದೆಂದು ನಾನು ಭಾವಿಸಿದ್ದೇನೆ.

ಮೊದಲೇ ತಿಳಿಸಿದಂತೆ ಬಹುಶಃ ಒಂದು ಗೋಷ್ಠಿಯ ಅಧ್ಯಕ್ಷ ಭಾಷಣ ಅದು. ಪಂಪನ ವಾಗ್ಗುಂಫನದ ಬಗ್ಗೆ ಓತಪ್ರೋತವಾಗಿ ಹರಿದಿತ್ತು ಅವರ ವಿಚಾರಧಾರೆ. ಮತ್ತೆ ಮಧ್ಯೆ ಮಧ್ಯೆ ಅವರ ವಿಚಾರಧಾರೆಗೆ ಉದಾಹರಣೆಯಾಗಿ ಉದ್ಧೃತವಾಗುವ ಪಂಪನ ಕಾವ್ಯೋಕ್ತಿಗಳು, ಪಂಪನ ರುಂದ್ರವಚನಾಮೃತ ವಾರಿಧಿ ಭೋರ್ಗರೆಯುತ್ತಾ ಬಂದಂತೆ ವಿ.ಸೀ. ಅವರು 'ಇದಱೊಳ್ ಶ್ವೇತಾತಪತ್ರ ಸ್ಥಗಿತ ದಶದಿಶಾಮಂಡಲಂ, ರಾಜಚಕ್ರಂ ಪುದಿದ ಬ್ಯಾಡಿತ್ತಡಂಗಿತ್ತಿದಱೊಳೆ....' ಪದ್ಯವನ್ನಿಡಿಯಾಗಿ ಉದ್ಧರಿಸಿದರು. ಕುರುಕ್ಷೇತ್ರದಲ್ಲಿ ದುಶ್ಶಾಸನ ಸತ್ತುಬಿದ್ದಿದ್ದಾನೆ. ಆಗ ದ್ರೌಪದಿಯನ್ನು ಕರೆಸಿದ ಭೀಮ ಆಕೆಯ 'ಜಡೆ'ಯ ಸ್ಫೂರ್ತ ಸತ್ವವನ್ನು ಈ ಪದ್ಯದಲ್ಲಿ ಉಲ್ಲೇಖಿಸುತ್ತಿದ್ದಾನೆ. ಅದನ್ನು ಮೂಳೆಯಾಳದ ಕೊಳವೆಗೂ ಇಳಿಯುವಂತೆ ನಿರೂಪಿಸಿ ವಿಶ್ಲೇಷಿಸುತ್ತ ವಿ.ಸೀ. ಅವರು ಹೇಳಿದ್ದು "ಎಲ್ಲಿದೆ

ಇಂಥ ಅಭಿವ್ಯಕ್ತಿ ಹೇಳಿ? ಪಂಪನಲ್ಲಲ್ಲದೆ ಇನ್ನೆಲ್ಲಿ ಇಂಥ ಅಭಿವ್ಯಕ್ತಿ ನೀವು ಕಂಡೀರಿ!" ಎಂದು ಪ್ರಶಂಸಾತ್ಮಕವಾಗಿ ಪ್ರಶ್ನಿಸಿದರು.

ಅವರ ಭಾಷಣ ಮುಗಿದ ಮೇಲೆ ನಾನು ಅವರನ್ನು ಸಮೀಪಿಸಿದೆ. ವಿ.ಸೀ. ಅವರ ಅಧ್ಯಯನದ ಹರಹು ಎಷ್ಟೆಂಬುದು ನನಗೆ ಗೊತ್ತಿಲ್ಲದ್ದಲ್ಲ. ಆದರೆ ನನ್ನನ್ನು ಕಾಡಿದ್ದು ಬೇರೆಯದೇ ಅಭಿವ್ಯಕ್ತಿ. ಅದು ಕುಮಾರವ್ಯಾಸನದು. ವಿರಾಟಪರ್ವದ ಪ್ರಸಂಗ ಅದು.

ಬಡಿಹೋರಿಯಾಗಿ, ಈ ನಪುಂಸರೊಡನೆ ಹುಟ್ಟಿದ ನಾನು ಮೂಗುಳ್ಳವನೆ ಎಂದು ತನ್ನನ್ನು ತಾನೇ ಛೇಡಿಸಿಕೊಂಡ ಭೀಮ 'ಕಾಮಿನಿಯ ಕೇಳಿಯಲಿ ನೆನೆವುದು' ಎಂದು ದ್ರೌಪದಿ ಚುಚ್ಚಿದಾಗ ಅಬ್ಬರಿಸಿದ್ದು – 'ಅಣ್ಣನಾಜ್ಞೆಯ ಗೆರೆಯ ದಾಂಟಿದೆ ದಾಂಟಿದೆನು–' ಎಂದು. ಆ ತರುವಾಯ ಬರುವ ಪದ್ಯ :

ಬಸುರ ಬಗಿವೆನು ಕೀಚಕನ ನಸು
ಮಿಸುಕಿದೊಡೆ ವೈರಾಟ ವಂಶದ
ಹೆಸರ ತೊಡೆವೆನು ನಮ್ಮನರಿದೊಡೆ ಕೌರವವ್ರಜವ
ಕುಸುರಿದರಿವೆನು ಭೀಮ ಕಷ್ಟವ
ನೆಸಗಿದನು ಹಾಯೆಂದರಾದೊಡೆ
ಮುಸುಡನಮರಾದ್ರಿಯಲಿ ತೇವೆನು ದೇವಸಂತತಿಯ

ಇಡೀ ಪದ್ಯವನ್ನುದ್ಧರಿಸಿ 'ಇಂಥ ಅಭಿವ್ಯಕ್ತಿಯೂ ಏಕೆ ಶ್ರೇಷ್ಠವಲ್ಲ?' ಎಂದೆ. ತಟ್ಟನೆ ವಿ.ಸೀ. ಪಂಪನ ಗುಂಗಿನಲ್ಲೇ ಇದ್ದವರು 'Nonsense' ಅಂದರು. ನನಗೇನೂ ಅದರಿಂದ ನೋವಾಗಲಿಲ್ಲ. ವಿ.ಸೀ. ವ್ಯಕ್ತಿತ್ವ - ವಿದ್ವತ್ತುಗಳ ಅರಿವಿದ್ದವನು ನಾನು. ಹೀಗಂದವರು ವಿ.ಸೀ. ಅಲ್ಲವೆ ಅಂದು ಸುಮ್ಮನಾದೆ. ಏಕೆಂದರೆ ಇದೇ ವಿ.ಸೀ.ಯೇ ಅಲ್ಲವೆ ಕೆ.ಎಸ್.ನ. ಅವರ ಕಾವ್ಯ 'ಶಿಲಾಲತೆ'ಯಿಂದ ಹೊಸ ಆಯಾಮವನ್ನೇ ಪಡೆದುಕೊಳ್ಳುವಂತೆ ಮಾಡಿದವರು?

ಮಾರನೆಯ ದಿನ ಅಂದಿನ ಹಂಗಾಮಿ ಕುಲಪತಿಯಾಗಿದ್ದ ಜಯರಾಮನ್, ಐ.ಎ.ಎಸ್. ಅವರು ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದವರಿಗೆಲ್ಲ 'ಟೀ' ಏರ್ಪಡಿಸಿದ್ದರು. ಅಂದು ಸಂಜೆ ಅಲ್ಲಿ ಹೋದಾಗ ಒಂದು ವಿಸ್ಮಯ ಎದುರಾಯಿತು. ವಿ.ಸೀ. ನೇರ ನನ್ನ ಬಳಿಗೆ ಬಂದರು – "ಪ್ರೊ. ಸಿದ್ಧಲಿಂಗಯ್ಯ, ನಿನ್ನೆ ನಾನು ಆವೇಶದಲ್ಲಿದ್ದೆನೆಂದು ತೋರುತ್ತೆ. ಹೌದು, ಪಂಪನ ಅಭಿವ್ಯಕ್ತಿಶಕ್ತಿ ಒಂದು ವಿಧವಾದರೆ ಕುಮಾರವ್ಯಾಸನದು ಮತ್ತೊಂದು. ಬಹುಶಃ ನಿನ್ನೆ ನಿಮಗೆ ನೋವು ಮಾಡಿದೆ...." ಅವರು ಮಾತು ಮುಂದುವರಿಸುತ್ತಿದ್ದರು. ನಾನೇ ತಡೆದೆ. "ಸರ್, ನಿನ್ನೆಯೇ ನೀವು Nonsense ಎಂದಾಗ– ಯಾರು ವಿ.ಸೀ. ಅಲ್ಲವೆ ಎಂದಿದ್ದೆ – ನಿಮಗೆ ನೆನಪಿರಬೇಕು – ನಿಮ್ಮದು ವಿಸ್ತಾರವಾಗುತ್ತಿರುವ ಜ್ಞಾನದ ಲೋಕದ ವ್ಯಕ್ತಿತ್ವ – ಹಾಗಾಗಿಯೇ ನಿಮ್ಮ ಮಾತುಗಳನ್ನು ನಾವು ಗೌರವಿಸುವುದು" ಎಂದಿದ್ದಂತೆ ನೆನಪು.

ಒಂದು ಮಾತು ಮಾತ್ರ ನಿಜ. ತಾನಾಡಿದ ಮಾತಿನ ಬಗ್ಗೆ, ಇನ್ನೊಬ್ಬರ ಅಭಿಪ್ರಾಯದ ಬಗ್ಗೆ ಅವರ ಹೃದಯ ಹೇಗೆ ತೆರೆದುಕೊಂಡಿರುತ್ತಿತ್ತು ಎನ್ನುವುದನ್ನು ಆ ಪ್ರಸಂಗ ಅರಿವು ಮಾಡಿಕೊಡುತ್ತದೆ ಎಂದು ನನಗನ್ನಿಸುತ್ತದೆ.

ವಿ.ಸೀ.ಯವರನ್ನು ಏಕೆ ನೆನೆಯಬೇಕು ಎಂದರೆ ಇಂಥ – ಇಂದು ಅಪರೂಪವಾಗುತ್ತಿರುವ – ವ್ಯಕ್ತಿತ್ವವುಳ್ಳವರು ಎಂಬ ಕಾರಣಕ್ಕಾಗಿ. ಅವರ ಕಾವ್ಯೈಕ ಪಕ್ಷಪಾತಕ್ಕಾಗಿ. ಕನ್ನಡದ ಅರಿವಿನ ದಿಗಂತಗಳನ್ನು ವಿಸ್ತರಿಸಲು ಯತ್ನಿಸಿದ ಚೇತನ ಎಂಬ ಕಾರಣಕ್ಕಾಗಿ. ಅಷ್ಟೇ ಅಲ್ಲ, ಅವರ ದಿವ್ಯ ಭಾವುಕತೆಗಾಗಿ. ಆ ಭಾವುಕತೆ ತನ್ನ ಮನೆಗೆ ಪ್ರವೇಶಿಸುವಾಗ ಎತ್ತರದ ವ್ಯಕ್ತಿತ್ವದ ವೆಂಕಣ್ಣಯ್ಯನವರು ಬಾಗಿಲುವಾಡ ಚಿಕ್ಕದಾಯಿತೆಂದು ತಲೆತಗ್ಗಿಸುವಂತಾಯಿತಲ್ಲ ಎಂದು ಬಾಗಿಲುವಾಡವನ್ನೇ ಎತ್ತರಿಸಿತ್ತು ಅಲ್ಲವೆ?

ಹೃದಯದ ಬಾಗಿಲುವಾಡ ಹೀಗೆ ಎತ್ತರವಾಗಿರುವ ಜನ ನಾಡಿನ ಸಂಸ್ಕೃತಿಯನ್ನು ಕಟ್ಟುವ ಜನ. ಅದಕ್ಕೆ ಅವರ ನೆನಪು ಒಂದು ಸ್ಫೂರ್ತಿ.

ಕನ್ನಡ ಕುಲರಸಿಕ

"ಸಾಹಿತ್ಯವನ್ನು ಒಂದು ಯೋಗವೆಂದು ಭಾವಿಸಿ ಉಪಾಸನೆ ಮಾಡಿರುವವರಲ್ಲಿ ವಿ.ಸೀ.ಯವರೊಬ್ಬರು. ಇಂಗ್ಲಿಷ್, ಕನ್ನಡ, ಸಂಸ್ಕೃತ, ಗ್ರೀಕ್ ಸಾಹಿತ್ಯಗಳ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲರು. ತಮ್ಮ ಮೆಚ್ಚಿನ ಕವಿಯನ್ನು ಹಲವರು ಮೆಚ್ಚುವಂತೆ ಮಾಡಬಲ್ಲರು. ರಸಾಭಿಜ್ಞತೆಗೇ ಲಕ್ಷ್ಯ ಕೊಟ್ಟು ನಿಷ್ಪಕ್ಷಪಾತ ದೃಷ್ಟಿಯಿಂದ ಕವಿಯ ಕೃತಿಯನ್ನು ವಿಮರ್ಶೆ ಮಾಡಬಲ್ಲರು. ಆಧುನಿಕ ಕನ್ನಡ ಕವಿಗಳ ಕಾವ್ಯಪ್ರಸಾರಕ್ಕೆ ವಿ.ಸೀ.ಯವರು ಮಾಡಿರುವ ಸೇವೆ ಅಪಾರ.

ಸಾಹಿತ್ಯ, ಅರ್ಥಶಾಸ್ತ್ರ ಎರಡೂ ವಿ.ಸೀ.ಯವರ ಜೀವನದುಸಿರು. ಅರ್ಥಶಾಸ್ತ್ರದಂಥ ಕ್ಲಿಷ್ಟವಿಷಯವನ್ನು ಸರ್ವಜನಪ್ರಿಯವಾಗುವಂತೆ ಬರೆಯುವ ಪ್ರತಿಭೆ ಸಾಧಾರಣವಾದುದಲ್ಲ. ಶಾಸ್ತ್ರೀಯ ವಿಷಯಗಳನ್ನು ಕನ್ನಡದಲ್ಲಿ ವಿವರಿಸುವುದು ಸಾಧ್ಯವಿಲ್ಲವೆಂಬ ವಾದವೂ ಒಂದಿತ್ತು. ವಿ.ಸೀ.ಯವರ 'ಹಣಪ್ರಪಂಚ' ಆ ವಾದಕ್ಕೆ ಸದುತ್ತರ.

ವಿ.ಸೀ.ಯವರ ಅಭಿರುಚಿ ಸಾಹಿತ್ಯ, ಅರ್ಥಶಾಸ್ತ್ರಗಳಿಗೇ ಅಡಕವಾಗಿಲ್ಲ. ಕರ್ನಾಟಕ ಸಂಗೀತದಲ್ಲಿ ವಿ.ಸೀ.ಯವರಿಗೆ ತುಂಬ ಪರಿಶ್ರಮವಿದೆ. ಭಾವಗೀತೆಗಳಿಗೆ ಅವರು ನಿಯೋಜಿಸಿರುವ ರಾಗಗಳು ಅವರ ಸಂಗೀತ ಜ್ಞಾನದ ಕುರುಹಾಗಿದೆ. ಉತ್ತರಾದಿ, ಪಾಶ್ಚಾತ್ಯ ಪದ್ಧತಿಯ ಗಾಯನವನ್ನೂ ವಿ.ಸೀ.ಯವರು ಅಭ್ಯಾಸ ಮಾಡಿದ್ದಾರೆ. ತ್ಯಾಗರಾಜರ ಕೀರ್ತನೆಗಳನ್ನು ಕೇಳಿ ಸುಖಿಸುವಷ್ಟೇ ಹಿಂದೂಸ್ಥಾನಿ ಚೀಸುಗಳನ್ನೂ ಪಾಶ್ಚಾತ್ಯ ಸಿಂಫೋನಿಗಳನ್ನೂ ಕೇಳಿ ಸುಖಿಸಬಲ್ಲರು.

ಚಿತ್ರಕಲೆಯ ಬಗ್ಗೆ ವಿ.ಸೀ.ಯವರಿಗಿರುವ ವಿಶ್ವಾಸಕ್ಕೆ ಅವರ ಗ್ರಂಥಗಳೇ ಸಾಕ್ಷಿ. ನಂದಲಾಲ ಬಸು, ವೆಂಕಟಪ್ಪನವರ ಕೃತಿಗಳಿಂದರೆ ವಿ.ಸೀ.ಯವರಿಗೆ ಪರಮ ಪ್ರೇಮ. ಅಜಂತೆಯ ಚಿತ್ರಗಳು, ಪಹರಿ ಸಂಪ್ರದಾಯದ ಚಿತ್ರಗಳು ಮತ್ತು ರಾಫೇಲ್, ಮೈಕೆಲ್ ಆಂಜಿಲೋ ಅವರ ಕೃತಿಗಳಿಂದರೆ ವಿ.ಸೀ. ಅವರ ಹೃದಯ ಹಿಗ್ಗಿನಿಂದ ಅರಳುತ್ತದೆ.

ವಿ.ಸೀ.ಯವರಿಗೆ ಕನ್ನಡದಲ್ಲಿ ಎಷ್ಟು ಪಾಂಡಿತ್ಯವಿದೆಯೋ ಇಂಗ್ಲಿಷಿನಲ್ಲಿಯೂ ಅಷ್ಟೇ ಪಾಂಡಿತ್ಯವಿದೆ. ಸೊಗಸಾದ ಇಂಗ್ಲಿಷ್ ಮಾತನಾಡಬಲ್ಲರು, ಬರೆಯಬಲ್ಲರು.

ಕನ್ನಡನಾಡಿನಲ್ಲಿ ಮಾತ್ರವೇ ಅಲ್ಲ, ಕನ್ನಡನಾಡಿನ ಹೊರಗೂ ಕನ್ನಡ ಸಾಹಿತ್ಯ, ಸಂಸ್ಕೃತಿಗಳಿಗೆ ಕೀರ್ತಿ ತಂದಿರುವ ರಸಿಕರಲ್ಲಿ ವಿ.ಸೀ.ಯವರೊಬ್ಬರು".

ಅ.ನ.ಕೃ.

'ರೂಪಾರಾಧಕ' ಪು. ೧೨-೧೩

ನೋವುಂಡು ನಲಿವು ನೀಡುವವರು

ಸಾ. ಶಿ. ಮರುಳಯ್ಯ

ಕಾಲೇಜು ಮುಗಿಸಿ ಚಾಮರಾಜಪೇಟೆಯ ಅಂಗಡಿ ಬೀದಿಯಲ್ಲಿರುವ ಬಸ್‌ಸ್ಟಾಪ್‌ನಲ್ಲಿ ಇಳಿದ ಕೂಡಲೆ ನನ್ನ ಕಾಲುಗಳು ನನ್ನ ಆದೇಶವಿಲ್ಲದೆ ಈಗ ನಾಮಕರಣ ಮಾಡಿಸಿಕೊಂಡಿರುವ ವಿ. ಸೀತಾರಾಮಯ್ಯ ಬೀದಿಗೆ ತಾವಾಗಿಯೇ ಹೊರಟು ಬಿಡುತ್ತಿದ್ದವು. ಎಷ್ಟೋ ಬಾರಿ ಅವುಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಸೋತದ್ದೂ ಉಂಟು. ವಿ.ಸೀ. ಬೀದಿಯ ಮುಖ್ಯ ಆಕರ್ಷಣೆ ವಿ.ಸೀ.ಯವರೆ! ನನ್ನ ಮನೆ (ಬಾಡಿಗೆ ಮನೆ) ಅವರ ನಿವಾಸಕ್ಕೆ ಸಮೀಪದಲ್ಲೆದ್ದುದರಿಂದ ಅವರನ್ನು ಒಂದು ದಿನ ಕಾಣದೆ ಹೋದರೆ ಏನನ್ನೋ ಕಳೆದುಕೊಂಡಂತಾಗುತ್ತಿತ್ತು. ಆ ಕಾರಣ ನಿತ್ಯ ಹೋಗ್ತಿದ್ದೆ, ಆಗಾಗ್ಗೆ ಹೋಗ್ತಿದ್ದೆ. ಹೋದಾಗಲೆಲ್ಲ ಕಾಫಿ ಖಂಡಿತ ಸಿಗುತ್ತಿತ್ತು. ಅನೇಕ ವೇಳೆ ಕಾಫಿಗಾಗಿಯೇ ಇವನು ಬರ್ತಾನೇನೊ ಅಂತಾ ಎಲ್ಲಿ ವಿ.ಸೀ.ಯವರ ಸೊಸೆ ತಿಳಿದುಕೊಂಡು ಬಿಡ್ತಾರೊ ಎಂಬ ಭಯ! ಆದರೆ ಅವರ ಮನೆಯವರು ಯಾರೂ ಅಂಥವರಲ್ಲ. ಅದೊಂದು ಬಗೆಯ ಗುರುಮನೆಯೇ ಆಗಿರುತ್ತಿತ್ತು. ವಿ.ಸೀ.ಯವರು ನನಗೆ ಗುರುಗಳಾಗಿ ಪಾಠ ಹೇಳಿರದಿದ್ದರೂ ನನ್ನ ಮನಸ್ಸು ಅವರನ್ನು ಗುರುಗಳೆಂದೇ ಗುರುತಿಸಿ ಗೌರವಿಸುತ್ತಿತ್ತು.

ಒಮ್ಮೆ ಹೀಗಾಯಿತು. ಮಾಮೂಲಿ ಸಂಜೆ ಅವರ ಮನೆಗೆ ಹೋದ ಕೂಡಲೆ ಹೇಳಿದರು: 'ನೋಡು ಮರುಳಯ್ಯ, ನನಗೆ ಬೇಕಾದವರು, ನನ್ನ ಶಿಷ್ಯರೇ, ಈ ಬೆಳಗ್ಗೆ ಒಂದು ರಾಜ್ಯೋತ್ಸವದ ಕಾರ್ಯಕ್ರಮಕ್ಕೆ ಒಪ್ಪಿಸಿಕೊಂಡು ಹೋದರಪ್ಪಾ.'

'ಸಂತೋಷ, ಹೋಗಿ ಬನ್ನಿ ಸಾರ್.'

'ಅಷ್ಟೇ ಅಲ್ಲ ಮಹಾರಾಯ, ನಿನ್ನನ್ನೂ ಭಾಷಣಕಾರನಾಗಿ ಕರೆದುಕೊಂಡು ಬರ್ತೀನಿ ಅಂತಾ ನಿನ್ನ ಪರವಾಗಿ ಮಾತುಕೂಡ ಕೊಟ್ಟು ಬಿಟ್ಟೆ!'

'ದೇವರೇ ಗತಿ! ನಿಮ್ಮ ಜೊತೆಯಲ್ಲಿ ಸೇವಕನಾಗಿ ಬರುವ ಅರ್ಹತೆ ನನ್ನದು. ಜೊತೆಯಲ್ಲಿ ಕೂತು ಭಾಷಣ ಬಿಗಿಯುವ ಸಾಮರ್ಥ್ಯ ಇಲ್ಲ.'

'ಅದೆಲ್ಲಾ ಬೇಡ, ಮುಂದಿನ ವಾರ ಸಿದ್ಧವಾಗಿ ಬಂದು ಬಿಡು; ಹೋಗಿಬರೋಣ'.

'ನೀವು ಕೂಡ ಯಾಕೆ ಒಪ್ಪಿಕೊಂಡ್ರೀ ಸಾರ್? ಇದು ಭಾಷಣ ಕೇಳೋ ಕಾಲ

ಅಲ್ಲ. ಭಾಷಣಕಾರರು ಅಂದ್ರೆ ಬೆಲೇನೂ ಕೊಡೊಲ್ಲ!' 'ಹಾಗಲ್ಲಪ್ಪ, ಅದು ನಮ್ಮ ರಾಜ್ಯದಲ್ಲೇ ಬಹು ದೊಡ್ಡ ಫ್ಯಾಕ್ಟರಿ. ಅಲ್ಲಿಗೆ ನಾನು ಹೋಗದೆ ಇದ್ರೆ ಬೇರೆ ಯಾವನೊ ಕನ್ನಡ ಸರಿಯಾಗಿ ಮಾತನಾಡೋಕೆ ಬರದೋನು ಹೋಗಿ, ಯದ್ವಾ ತದ್ವಾ ಮಾತಾಡಿ, ಆ ಜನರಲ್ಲಿ 'ಅಯ್ಯಯ್ಯೋ! ಕನ್ನಡ ಅಂದ್ರೆ ಇಷ್ಟೇನಾ? ಹೀಗೇನಾ?' ಅಂತಾ ಕನ್ನಡ ಭಾಷೆ ಬಗ್ಗೆ, ಕನ್ನಡ ಸಾಹಿತ್ಯದ ಬಗ್ಗೆ ದುರಭಿಪ್ರಾಯ ಮೂಡೋ ಹಾಗೆ ಮಾಡಿದ್ರೆ – ಅದು ಕನ್ನಡಕ್ಕಾದ ಅನ್ಯಾಯ ಅಲ್ವಾ? ಸ್ವಲ್ಪ ಕಷ್ಟ ಆಗುತ್ತೆ, ಆದರೂ ಜನರಲ್ಲಿ ಕನ್ನಡದ ಬಗ್ಗೆ ಸದ್ಭಾವನೆ ಮೂಡಿಸೋಕೆ ಹೋಗಬೇಕು. ಅದಕ್ಕೆ ಒಪ್ಪಿಕೊಂಡೆನಪ್ಪಾ. ನಿನ್ನನ್ನೂ ಕರಕೊಂಡು ಬರ್ತೀನಿ ಅಂತ ಕೂಡ ಅಂದೆ.'

ನವೆಂಬರ್ ಒಂದನೇ ತಾರೀಖು ಬಂತು. ಆ ದಿನ ರಜ ಇದ್ದದ್ದರಿಂದ ಶಿಸ್ತಾಗಿ ವಿ.ಸೀ. ಗುರುಗಳ ಮನೆಗೆ ಹೋದೆ. ಅವರ ಮನೆಯ ಮುಂದೆ ಫ್ಯಾಕ್ಟರಿ ಕಾರು ನಿಂತಿತ್ತು. ಇಬ್ಬರೂ ಕುಳಿತು ಕಾರ್ಖಾನೆಯ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಹೋದೆವು. ಕಾರ್ಯಕರ್ತರು ಕಾರ್ಖಾನೆಯ ಮಹಾದ್ವಾರದಲ್ಲಿ ನಮಗಾಗಿ ಕಾದು ನಿಂತಿದ್ದರು. ಇಬ್ಬರನ್ನೂ ಅಲ್ಲಿಳಿಸಿ ಹೇಳಿದರು, 'ಸಾರ್, ತಮ್ಮನ್ನು ಈ ದ್ವಾರದಿಂದ ವೇದಿಕೆಗೆ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗ್ತೇವೆ. ವೇದಿಕೆ ಇಲ್ಲಿಗೆ ಸುಮಾರು ಒಂದು ಅಥವಾ ಒಂದೂವರೆ ಫರ್ಲಾಂಗ್ ಆಗುತ್ತೆ' ಅಂದರು. ವಿ.ಸೀ.ಯವರು 'ಆಗಬಹುದು, ನಿಮ್ಮ ವ್ಯವಸ್ಥೆ ಹೇಗೋ ಹಾಗೆ ಮಾಡಿ' ಅಂದರು. ಕಾರು ಬಿಟ್ಟು ಕೆಳಗಿಳಿದು ಅರ್ಧ ಗಂಟೆಯಾದರೂ ತೆರೆದ ಜೀಪ್ ಬರಲಿಲ್ಲ! ಆದರೆ ಜನ ಮಾತ್ರ ಫೇರಾಯಿಸ್ತಾ ಇತ್ತು. ನಿಮಿಷ ನಿಮಿಷಕ್ಕೂ ತುಂಬಿದ ತೊರೆಯಂತೆ ನಾವಿದ್ದ ಬಳಿಗೆ ಹರಿದು ಬರುತ್ತಲೇ ಇತ್ತು! ಅದನ್ನು ನೋಡಿ ನನಗೆ ಖುಷಿ! 'ಛೇಷ್ ನನ್ನನ್ನು ನೋಡಲು ಇಷ್ಟು ಜನ ಬರ್ತಿದಾರೆ. ನಾನು ಸ್ವಲ್ಪ ಇಂಪಾರ್ಟೆಂಟ್ ವ್ಯಕ್ತಿ. ಅಲ್ಲದೆ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗ್ತಾರೆ. ಪ್ರೊ|| ವಿ.ಸೀ.ಯವರ ಜೊತೇನಲ್ಲಿ ಅಂದರೆ ಇದಕ್ಕಿಂತ ಭಾಗ್ಯ ಬೇರೆ ಇಲ್ಲ' ಅಂದುಕೊಂಡೆ.

ಅರ್ಧ ಮುಕ್ಕಾಲು ಗಂಟೆ ನಿಂತ ಮೇಲೆ ವಿ.ಸೀ.ಯವರು ಬ್ಯಾಡ್ಜ್ ತಗುಲಿಸಿಕೊಂಡಿದ್ದ ಒಬ್ಬ ಕಾರ್ಯಕರ್ತನನ್ನು ಕರೆದು ಕೇಳಿದರು – 'ಏನ್ರಪ್ಪಾ, ಯಾಕೆ ತಡ? ನಾವು ಎಷ್ಟು ಹೊತ್ತು ಹೀಗೆ ಇಲ್ಲಿ ನಿಲ್ಲೋದು? ಈ ಜನ ಬೇರೆ ಜಮಾಯ್ಸಿ ನೂಕ್ತಿದಾರೆ. ಏನಿದು?' ಅಂದರು. ಅದಕ್ಕೆ ಆತ ಹೇಳಿದ: 'ಸಾರ್, ಒಬ್ಬರು ಸಿನೆಮಾ ನಟರು – ಭಾರಿ ನಟರು– ಬರ್ತಿದಾರೆ. ಅವರು ಬರೋದು ಸ್ವಲ್ಪ ತಡ ಆಯ್ತು. ಅದಕ್ಕಾಗಿ ನಿಮ್ಮನ್ನು ನಿಲ್ಲಿಸಿದ್ವಿ. ಅವರು ಬಂದ ಕೂಡಲೆ ನಿಮ್ಮ ಜೊತೆಯಲ್ಲೇ ಜೀಪ್‌ನಲ್ಲಿ ಅವರದೂ ಮೆರವಣಿಗೆ' ಅಂದ. ಗುರುಗಳ ಮುಖದಲ್ಲಿ ಅಸಮಾಧಾನದ ಅಲೆ ಅಡ್ಡಾಡಿದವು. ಆದರೂ ಒಪ್ಪಿ ಬಂದ ಮೇಲೆ ನಮ್ಮ ಗೌರವ ನಾವು ಉಳಿಸಿಕೊಳ್ಳಬೇಕು ಎಂದುಕೊಂಡರೂಂತ ಕಾಣುತ್ತೆ, ಗಂಭೀರವಾಗಿ ಅತ್ತ ತಿರುಗಿಸಿಂತರು. ಎಷ್ಟೋ ಹೊತ್ತು ಕಾಯಿಸಿದ ಮೇಲೆ ಸಿನೆಮಾ ತಾರೆ ಬಂದ. ಬಂದ ಕೂಡಲೆ ಎಲ್ಲಿತ್ತೊ ಕಾಣೆ, ಕಲ್ಲು ಹೊಡೆಸಿಕೊಂಡ ಜೇನುಗೂಡಿನ ಜೇನುನೊಣಗಳಂತೆ ಜನ ಮುತ್ತಿಕೊಂಡು ಬಿಟ್ಟರು. ಅವನು ಕಾರಿನಿಂದ ಇಳಿಯುವುದೇ ಕಷ್ಟ ಆಯ್ತು. ಹೇಗೋ ಪ್ರಯಾಸಪಟ್ಟುಕೊಂಡು ಇಳಿದ. ಮುಂದೆ ಒಂದೆರಡು ಹೆಜ್ಜೆ ಇಟ್ಟು ನಮ್ಮನ್ನು

ಸಮೀಪಿಸುವುದರಲ್ಲಿದ್ದ. ಅಷ್ಟರಲ್ಲಿ ಜನರ ನೂಕಾಟ, ಕೂಗಾಟ ತಡೆಯಲಾರದಷ್ಟಾಯಿತು. ಜನರನ್ನು ಹತೋಟಿಗೆ ತರುವುದು ಪೊಲೀಸರಿಗೂ ಕಷ್ಟವಾಯಿತು. ಕಡೆಗೆ ತಡೆಯಲಾರದೆ ಪೊಲೀಸ್ ಇನ್ಸ್‌ಪೆಕ್ಟರ್ 'ಚಾರ್ಜ್' ಎಂದು ಜೋರಾಗಿ ಕೂಗಿ ಆಜ್ಞೆ ಮಾಡಿದ. ಕೂಡಲೆ ಪೊಲೀಸ್ ಪೇದೆಗಳು ಲಾಠಿ ಬೀಸಿದರು. ಮೊದಲ ಏಟು ನನಗೆ! ಗದ್ದಲದಲ್ಲಿ ಗುರುಗಳ ಗರಿಮುರಿಯದ ಪೇಟ ಹಿಂದು ಮುಂದಾಗಿತ್ತು. ಕಾರ್ಯಕ್ರಮ ಮುಗಿಸಿಕೊಂಡು ಮನೆಗೆ ಬರುವಾಗ ವಿ.ಸೀ. ಹೇಳಿದರು. 'ನೋಡಯ್ಯಾ, ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಇದು ನೆನಪಿರಲಿ. ಯಾವನಾದರೂ ರಾಜಕಾರಣಿ ಬರ್ತಾನೆ ಅಂತಿದ್ರೆ, ಒಂದು ಗಂಟೆ ತಡವಾಗಿ ಹೋಗು. ಯಾಕೆ ಅಂದರೆ ಅವನು ಸಮಯಕ್ಕೆ ಸರಿಯಾಗಿ ಅವನಪ್ಪನಾಣೆಗೂ ಬರೊಲ್ಲ. ಯಾವನಾದ್ರೂ ಸಿನಿಮಾ ತಾರೆ ಬರ್ತಾನೆ ಅಂತಿದ್ರೆ, ಒಂದು ಗಂಟೆ ಮುಂಚೆ ಹೋಗು. ಯಾಕೆ ಅಂದರೆ ಮನೆಗೆ ಹೋದ ಮೇಲೆ ನಿನ್ನ ಕೈ ಕಾಲುಗಳನ್ನು ಜೋಡಿಸಿಕೊಳ್ಳಬೇಕಾಗುತ್ತೆ!' 'ಅಲ್ಲಾ ಸಾರ್, ಇಷ್ಟೂ ಜನ ನಮ್ಮನ್ನ ನೋಡಲಿಕ್ಕೆ ಬಂದಿದ್ದಾರೆ ಅಂತ ತಿಳಿದಿದ್ದೆ.'

'ನಿನ್ನ ಭ್ರಾಂತು!'

'ಅದು ಸರಿ; ನಿಮ್ಮ ಕನ್ನಡದ ಆದರ್ಶ?'

'ಅದೂ ಅಷ್ಟೆ. ನಮ್ಮಕೆನ್ನೆಗೆ ನಾವೇ ಹೊಡಕೋಬೇಕು! ಮನಸ್ಸಿಗೆ ಸಹನೆ ಪಾಠಾನೂ ಕಲಿಸಬೇಕು. ಸಂಯಮದ ಪಾಠವನ್ನೂ ಕಲಿಸಬೇಕು. ಏನೇ ಆದರೂ ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ ಅನ್ನೋ ತೃಪ್ತಿ ನನಗಿದೆ. ನಿನಗೂ ಇದ್ದರೆ ಸಂತೋಷ' ಅಂದರು.

ನೋವುಂಡು ನಲಿವು ನೀಡುವ ವಿ.ಸೀ.ಯವರ ಹಿರಿಯ ಗುಣ ನನಗೆ ಮೆಚ್ಚಾಯಿತು.

ಅವರಿಗೆ ಸಾಹಿತ್ಯ ಅಕಾಡೆಮಿ ಪುರಸ್ಕಾರ ಬಂದಿದೆ ಎಂಬ ಸುದ್ದಿ ಬಂದ ದಿನ 'ಶುಭಾಶಯ'ಗಳನ್ನು ಹೇಳಲು ಹೋದೆ. ಆಗ ಅವರ ಮುಖದಲ್ಲಿ ಹಿಗ್ಗಿನ ಬುಗ್ಗೆಗಳು ಕುಣಿದಾಡಿದ್ದು ಕಾಣಲಿಲ್ಲ. ಆಗ ಅಂದುಕೊಂಡೆ: ದೊಡ್ಡವರು ದೊಡ್ಡವರೆ! ಸಂಸ್ಕೃತ ಶ್ಲೋಕವೊಂದು ಹೇಳುವಂತೆ 'ಜ್ಞಾನಿಗಳು ಸುಖದಲ್ಲಾಗಲಿ, ದುಃಖದಲ್ಲಾಗಲಿ ಒಂದೇ ರೀತಿ ಇರುತ್ತಾರೆ. ಸೂರ್ಯ ಮೂಡುವಾಗಲೂ ಕೆಂಪು, ಮುಳುಗುವಾಗಲೂ ಕೆಂಪು.' ವಿ.ಸೀ. ಅಂತಹ ತುಂಬಿದ ಕೊಡ!

ವಿ.ಸೀ.ಯವರೊಡನೆ ಸಂಭಾಷಿಸುವುದು ಒಂದು ಸುಶ್ರಾವ್ಯ ಸಂಗೀತ ಕೇಳಿದಂತೆ. ವಿಮರ್ಶೆ ಕುರಿತು ಅನೇಕ ಬಾರಿ ಅವರೊಡನೆ ಚರ್ಚಿಸಿದ್ದೇನೆ. ಅವರು ಭಾರತೀಯ ಕಾವ್ಯ ಮೀಮಾಂಸೆ, ಪಾಶ್ಚಾತ್ಯರ ಸಾಹಿತ್ಯ ವಿಮರ್ಶೆ ಓದಲು ಪ್ರೋತ್ಸಾಹಿಸುತ್ತಿದ್ದರು; ಅರ್ಥವಾಗದ್ದನ್ನೂ ಸರಳವಾಗಿ ಮನಮುಟ್ಟುವಂತೆ ವ್ಯಾಖ್ಯಾನಿಸುತ್ತಿದ್ದರು. ಆದರೆ ಅಷ್ಟೇ ಪ್ರಮಾಣದಲ್ಲಿ ಕೃತಿಯೊಂದರ ಬೆಲೆಕಟ್ಟುವಾಗ 'ನಿನ್ನದಾದ ಸ್ವೋಪಜ್ಞ ಪ್ರಜ್ಞೆ ಜಾಗ್ರತವಿರಲಿ, ಅನ್ಯರ ತತ್ವ, ಸಿದ್ಧಾಂತಗಳನ್ನಷ್ಟೇ ಮಾಪನವಾಗಿಟ್ಟುಕೊಳ್ಳಬೇಡ' ಎಂದು ಕಿವಿ ಮಾತು ಹೇಳುತ್ತಿದ್ದರು.

ಅವರ ಪುಟ್ಟ ಕೊಠಡಿ ಪುಸ್ತಕಗಳಿಂದ ತುಂಬಿರುತ್ತಿತ್ತು. ಅಲ್ಲಿ ಕುರ್ಚಿ ಮೇಜು ಯಾವುದೂ ಇಲ್ಲ. ನೆಲದ ಮೇಲೆ ಒಂದು ಚಾಪೆ. ಅದರ ಮೇಲೆ ಅವರು, ಇದಿರಿನಲ್ಲಿದ್ದ ಇನ್ನೊಂದು ಚಾಪೆಯ ಮೇಲೆ ನಾನು. ಅತ್ತ ಇತ್ತ ಕಣ್ಣಾಡಿಸಿದರೆ ಸಾಕಷ್ಟು ಕಾಗದದ ಚೂರುಗಳು ಸಿಗುತ್ತಿದ್ದುವು. 'ಇದೇನು ಸಾರ್' ಅಂದರೆ, 'ಇಲ್ಲಿ ಕೊಡು, ಇವು ನನ್ನ ಅಸ್ತಿಗಳು' ಎಂದು ನಗುತ್ತಿದ್ದರು. ಕಾಗದದ ಚೀಟಿಗಳನ್ನು ತೆರೆದು ನೋಡಿದರೆ, ಅದರ ಮೇಲೆ ಏನೋ ಒಂದು ಅಭಿಪ್ರಾಯ, ಅನಿಸಿಕೆ, ಚಿಂತನೆ; ಇಲ್ಲವೇ ಮಿಂಚಿ ಮೂಡಿದ ಒಂದು ಭಾವಗೀತ ಭಾಗ! ನನಗೆ ಆಶ್ಚರ್ಯವಾಗುತ್ತಿತ್ತು. ಬೆರಳಗಲದ ಕಾಗದದ ಮೇಲೂ ಬರಹ! 'ಸಾರ್, ದ್ರಾಕ್ಷಿ–ದಾಳಿಂಬೆ ಹರಡಿದ ನೀವು ಈ ಚೀಟಿಗಳ ಅಕ್ಷತೆ ಚೆಲ್ಲಿದ್ದೀರಿ ಈ ಕೊಠಡಿಯಲ್ಲಿ' ಎಂದೆ. ಅದಕ್ಕೆ ಕೂಡಲೇ ನಗುತ್ತಾ ಉತ್ತರಿಸಿದರು: 'ಸರಿಯಾಗಿ ಹೇಳಿದೆ. ದ್ರಾಕ್ಷಿ–ದಾಳಿಂಬೆ ಅರಿಸಿಕೊಂಡು ತಿನ್ನುತ್ತೇವೆ. ಮದುವೆ ಮುಂಜಿಗಳಲ್ಲಿ ಹಾಕಿದ ಅಕ್ಷತೆಯನ್ನು ತುಳಿದುಕೊಂಡು ತಿರುಗಾಡುತ್ತೇವೆ; ಕಡೆಗೆ ಪೊರಕೆಯಲ್ಲಿ ಗುಡಿಸಿ ಮೂಲೆಗೆ ತಳ್ಳುತ್ತೇವೆ. ಬಹುಶಃ ನನ್ನ ಈ ಅಕ್ಷತೆಗಳ ಗತಿಯೂ ಅದಾಗಬಹುದೋ ಏನೊ!' ಆಮೇಲಾಮೇಲೆ ಅವರ ಆರೋಗ್ಯವೂ ಕೆಡುತ್ತಾ ಬಂದಿತು, ಬರವಣಿಗೆಯೂ ನಿಲ್ಲುತ್ತಾ ಹೋಯಿತು.

ಈಗಲೂ ಗುರುಪುತ್ರರಲ್ಲಿ ಪ್ರಾರ್ಥನೆ – 'ಗುರುಗಳಿದ್ದ ಆ ಕೊಠಡಿಯಲ್ಲಿ ಅಲ್ಲಿ ಇಲ್ಲಿ ಅಕ್ಷತೆಯ ಕಾಳು ಸಿಕ್ಕರೆ ಜೋಪಾನವಾಗಿ ತೆಗೆದಿಡಿ' ಎಂದು.

ಪೂಜ್ಯ ವಿ.ಸೀ.ಯವರದು ನಾನು ಕಂಡಂತೆ ಬಹು ಎತ್ತರದ ನಿಲವು. ಅವರು ಕನ್ನಡದ ಸಹಸ್ರಕೂಟ ಚೈತ್ಯಾಲಯದ ಮಾನಸ್ತಂಭ.

ಗುರು ವಿ.ಸೀ.

"ನನಗೆ ಇಂಗ್ಲಿಷ್ ಛಂದೋರೂಪಗಳ ಹುಟ್ಟು, ಬೆಳವಣಿಗೆ, ವೈವಿಧ್ಯ, ಸ್ವಾರಸ್ಯ, ಸೊಬಗು, ಬೆಡಗುಗಳನ್ನೆಲ್ಲಾ ಮೊದಲು ತಿಳಿಸಿಕೊಟ್ಟವರು ವಿ.ಸೀ. ಅವರೇ. ಮಾಸ್ತಿ ಅವರ ಪದ್ಯ, ಗದ್ಯಗಳ ವೈಭವವನ್ನು ಸೋದಾಹರಣವಾಗಿ ಪರಿಚಯಿಸಿಕೊಟ್ಟವರೂ ಅವರೇ. ಶ್ರೀಯವರ 'ಇಂಗ್ಲಿಷ್ ಗೀತಗಳ' ಕವನಗಳನ್ನು ವಿಧವಿಧವಾಗಿ ಓದಿ, ಅವುಗಳ ಲಯ ನಾದಗಳನ್ನು ಪರಿಚಯಿಸಿಕೊಟ್ಟವರೂ ಅವರೇ. ನನ್ನಲ್ಲಿ ಸುಪ್ತವೂ ಗುಪ್ತವೂ ಆಗಿದ್ದ ಸೃಜನಗುಣವನ್ನು ಎಚ್ಚರಿಸಿ ಬೆಳಕಿಗೆ ತಂದ ಗುರು ವಿ. ಸೀತಾರಾಮಯ್ಯನವರು."

ಎಸ್. ವಿ. ಪರಮೇಶ್ವರಭಟ್ಟ
'ಪರಮೇಶ್ವರ ಪ್ರಶಸ್ತಿ' ಪು. ೧೩

ವಿ. ಸೀ. – ಒಂದು ಸ್ಮರಣೆ

ಡಿ. ಎಸ್. ಗುರುರಾಜರಾವ್

ವಿ.ಸೀ. ಅವರ ವ್ಯಕ್ತಿತ್ವ ಮತ್ತು ಸಾಹಿತ್ಯದ ಬಗ್ಗೆ ಸಾಕಷ್ಟು ಅಧ್ಯಯನ ನಡೆದಿದೆ. ಅವರ ಮಿತ್ರರು ವಿದ್ಯಾರ್ಥಿಗಳು ವಿಮರ್ಶಕರು ಅವರ ಮೇಲೆ ವಿಪುಲವಾಗಿ ಬರೆದಿದ್ದಾರೆ. ಸ್ವಯಂ ವಿ.ಸೀ. ಅವರೇ ತಮ್ಮ ಬರಹಗಳ ಬಗ್ಗೆ ದೀರ್ಘವಾಗಿ ಮಾತನಾಡಿದ್ದಾರೆ. ಆದರೂ ಅಂತರಂಗದಿಂದ ಅವರನ್ನು ಅರಿತವರಿಗೆ ಅವರ ಮೇಲೆ ಬರೆಯುವುದು ಮಾತನಾಡುವುದು ಇನ್ನೂ ಬೇಕಾದಷ್ಟಿದೆ ಎನ್ನಿಸುತ್ತದೆ. ಪ್ರಸಿದ್ಧವಾದ ಅವರ ಸರಳತೆ ಮಾತುಗಳಿಂದ ಪ್ರಶಂಸಿಸಿ ಮುಗಿಸಬಹುದಾದಂತಹ ವಿಷಯವಲ್ಲ. ವಿಶಿಷ್ಟ ಸಾಧನೆ ಎಚ್ಚರಿಕೆಗಳಿಂದ ಸಾಧಿಸಿಕೊಂಡ ಜೀವನ ಮಾರ್ಗ ಅವರದು.

ಐವತ್ತರ ದಶಕದಲ್ಲಿ ವಿ.ಸೀ. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು. ಅಷ್ಟು ಹೊತ್ತಿಗೆ ಅವರ ಮುಖ್ಯ ಕೃತಿಗಳೆಲ್ಲಾ ಪ್ರಕಟವಾಗಿದ್ದು ಅವರು ನಮ್ಮ ಹೆಸರಾಂತ ಬರಹಗಾರರಲ್ಲಿ ಒಬ್ಬರಾಗಿದ್ದರು. ಅವರ 'ಶಬರಿ', 'ಮನೆ ತುಂಬಿಸುವ ಹಾಡು' ಮುಂತಾದ ಕವನಗಳು ನಾಡಿನ ಮೂಲೆ ಮೂಲೆಗಳಲ್ಲೂ ಜನಪ್ರಿಯವಾಗಿದ್ದವು. ಆಗ ಹೊರ ಊರುಗಳಿಂದ ಆನರ್ಸ್ ಮತ್ತು ಎಂ. ಎ. ಪರೀಕ್ಷೆಗಳಿಗಾಗಿ ಬೆಂಗಳೂರು ಮೈಸೂರುಗಳಿಗೆ ಬರುವ ವಿದ್ಯಾರ್ಥಿಗಳಿಗೆ ವಿ.ಸೀ., ಕುವೆಂಪು, ಮುಂತಾದ ತಾರಾ ಅಧ್ಯಾಪಕರ ಸನ್ನಿಧಿಯಲ್ಲಿ ವ್ಯಾಸಂಗ ಮಾಡುವುದು ಸಂಭ್ರಮದ ವಿಷಯ. ಅಂತಹ ದಿನಗಳಲ್ಲೇ ಇಂಗ್ಲಿಷ್ ಆನರ್ಸ್ ಅಭ್ಯಾಸಕ್ಕೆಂದು ಬೆಂಗಳೂರಿಗೆ ಬಂದಾಗ ಕನ್ನಡ ಮೈನರ್ ಪಾಠಗಳನ್ನು ವಿ.ಸೀ. ಮತ್ತು ರಾಜರತ್ನಂ ಅವರುಗಳಿಂದ ಕಲಿಯುವ ಅವಕಾಶ ನನಗೆ ಸಿಕ್ಕಿದ್ದು.

ಕೆ. ಸಂಪದ್ಗಿರಿರಾಯರು (ನ್ಯಾಷನಲ್ ಕಾಲೇಜು) 'ಇಂಗ್ಲೀಷನ್ನು ಕನ್ನಡದಲ್ಲಿ ಕಲಿಸುತ್ತಾರೆ, ವಿ.ಸೀ. ಕನ್ನಡವನ್ನು ಇಂಗ್ಲೀಷಿನಲ್ಲಿ ಕಲಿಸುತ್ತಾರೆ' ಎಂಬ ಮಾತು ಆಗ ಪ್ರಖ್ಯಾತವಾಗಿತ್ತು. ಸಂಪದ್ಗಿರಿರಾಯರ ಬ್ರೂಟಸ್ಸಿನ 'ಸ್ನೇಹಿತರೇ, ರೋಮನ್ನರೇ ಮತ್ತು ದೇಶಬಾಂಧವರೇ' ಭಾಷಣದ ಬಗ್ಗೆ ಅನೇಕ ಹಿರಿಯ ವಿದ್ಯಾರ್ಥಿಗಳಿಂದ ಕೇಳಿದ್ದೆ. ಆದರೆ ವಿ.ಸೀ. ಅವರ ಕನ್ನಡ ಪಾಠಗಳನ್ನು ಇಂಗ್ಲೀಷ್ ಮೀಡಿಯಂನಲ್ಲಿ ಕೇಳುವ ಸಂದರ್ಭ ಒದಗಿದ್ದು ಸೆಂಟ್ರಲ್ ಕಾಲೇಜಿಗೆ ಬಂದ ಮೇಲೆ. "This poet Pampa" ಎಂದು

ಆರಂಭಿಸಿ ಒಂದು ಗಂಟೆ ನಿರರ್ಗಳವಾಗಿ ಮಾತನಾಡುವರು ವಿ.ಸೀ. ಆ ಮಾತುಗಳು ಈಗ ಯಾವುದೂ ಸ್ಮೃತಿಪಟಲದಲ್ಲಿ ಉಳಿದಿಲ್ಲ. ಆದರೆ ಅವರ ಸೌಮ್ಯಮುಖ, ಸರಳವೂ ಶುಭ್ರವೂ ಆದ ಉಡುಪು ಯಾರೂ ಮರೆಯುವಂತಹವುಗಳಲ್ಲ. ಅವರ ಕಾವ್ಯದಂತೆ ಅವರ ಉಡುಪೂ ಅವರ ವ್ಯಕ್ತಿತ್ವದ ಸೂಚಕ. ಅವರ ಮಟ್ಟಿಗೆ ಅವರು ವರ್ಣಿಸುತ್ತಿದ್ದ ರಸಿಕತೆ 'ನೇವೇಂದ್ರನಿಗೆ ಕಳೆ ಕೊಡುವ ಅಲಂಕಾರ' ಇದ್ದುದು ಅವರ ಜರತಾರಿರಹಿತ ಬಿಳಿಯ ರುಮಾಲಿನಲ್ಲಿ.

ನಾನು ಕಂಡಂತೆ ವಿ.ಸೀ. ಹಸನ್ಮುಖಿಯಲ್ಲ. ಮಾತಿಗೆ ಮುಂಚೆ ಮುಗುಳು ನಗೆ ನಕ್ಕು ಪ್ರಸನ್ನತೆಯನ್ನು ತೋರಿಸುವ tact ಅವರಿಗೆ ಗೊತ್ತಿರಲಿಲ್ಲವೆಂದು ತಿಳಿಯುತ್ತೇನೆ. ಅವರೆ ಎಂದೂ ಅವರು ಮುಖವನ್ನು ಗಂಟುಹಾಕಿಕೊಂಡವರಲ್ಲ. ಅವರ ಮುಖದ ಮೇಲೆ ಯಾವಾಗಲೂ ಒಂದು ವಿನಯದ ಗಡುಸಿಲ್ಲದ ಗಾಂಭೀರ್ಯವಿತ್ತು. ಅವರನ್ನು ನೋಡಿದೊಡನೆಯೇ ಎಲ್ಲರಲ್ಲೂ ಉಂಟಾಗುತ್ತಿದ್ದ ಭಾವನೆ ಇವರೊಬ್ಬ ಗೌರವಾರ್ಹ ಸಜ್ಜನ ವ್ಯಕ್ತಿ ಎನ್ನುವುದು. ಎಂತಹ ಹೊತ್ತಿನಲ್ಲೂ ಅಂತಹವರ ಬಗ್ಗೆ ಲಘುವಾಗಿ ಯೋಚಿಸುವುದು ಸಾಧ್ಯವಿಲ್ಲ.

ಆದರೂ ವಿ.ಸೀ. ಬಹಳ ಸುಲಭ ವ್ಯಕ್ತಿ. ಆಗಿನ ದಿನಗಳಲ್ಲಿ ಚರ್ಚಾಸ್ಪರ್ಧೆ ಕಾಲೇಜು ವಿದ್ಯಾರ್ಥಿಗಳ ಆಸಕ್ತಿಗೆ ಪಾತ್ರವಾದ ವಿಷಯಗಳಲ್ಲಿ ಮುಖ್ಯವಾದದ್ದು. ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ತಾವು ಮಾತನಾಡುವ ವಿಷಯಗಳ ಬಗ್ಗೆ ಅಧ್ಯಾಪಕರುಗಳಿಂದ points ಗಳನ್ನು ತಿಳಿದುಕೊಳ್ಳುವುದು ಆಗಿನ ವಾಡಿಕೆ. ಇಂತಹ ಸಂದರ್ಭಗಳಲ್ಲಿ ನಮಗೆ ಮೊದಲು ದೊರಕುತ್ತಿದ್ದ ಅಧ್ಯಾಪಕರು ವಿ.ಸೀ. ಚಾಮರಾಜಪೇಟೆಯ ಅವರ ಮನೆಗೆ ಯಾವ ವಿದ್ಯಾರ್ಥಿಯಾದರೂ ಯಾವ ಹೊತ್ತಿನಲ್ಲಾದರೂ ಹೋಗಬಹುದು. ಎಲ್ಲರಿಗೂ ಒಂದೇ ಆದರದ ಸ್ವಾಗತ. ಯಾರೂ ಅವರ ಮನೆಯಿಂದ ಕಾಫಿ ಕುಡಿಯದೆ ಬಂದಿದ್ದಿಲ್ಲ.

ಒಂದು ದೃಷ್ಟಿಯಿಂದ ವಿ.ಸೀ. ಅವರಿಗಿಂತ ರಾಜರತ್ನಂ ಅವರೇ ಹೆಚ್ಚು ಆಕರ್ಷಕ ವ್ಯಕ್ತಿ. ರಾಜರತ್ನಂ ಅವರಲ್ಲಿ ಒಂದು ವಿಶಿಷ್ಟ ಠೀವಿ, ದರ್ಪ ಇತ್ತು. ಅಸಂಭವವಾಗಿ ಯಾರಾದರೂ ತರಗತಿಯಲ್ಲಿ ಆಕಳಿಸಿದರೆ, ಗಡಿಯಾರ ನೋಡಿದರೆ ಅವರಿಗೆ ಕೋಪ ಬರುತ್ತಿತ್ತು; ಅರ್ಧದಲ್ಲೇ ಪಾಠವನ್ನು ನಿಲ್ಲಿಸಿ ಬಿಡುತ್ತಿದ್ದರು. ವಿ.ಸೀ. ತಮ್ಮ ಸಹನೆಯನ್ನು ಕಳೆದುಕೊಳ್ಳುತ್ತಿರಲಿಲ್ಲ. ವಿದ್ಯಾರ್ಥಿಗಳ ಬಗ್ಗೆ ಬೇಸರವಾದರೆ ಮುಖದಲ್ಲಿ ಒಂದು ಬಗೆಯ ನೋವನ್ನು ಪ್ರಕಟ ಮಾಡುವರು. ಆಗ ಅವರನ್ನು ನೋಡಿದ ಎಂತಹವನಿಗೂ ತನ್ನ ವರ್ತನೆಯ ಬಗ್ಗೆ ನಾಚಿಕೆಯಾಗಬೇಕು. ಇಲ್ಲವೇ ಹತ್ತಿರ ರಾಜರತ್ನಂ ಇದ್ದರೆ ಅವರ ಮುಂದೆ ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದರು. "ನೋಡಿ 'ರಾ' (ವಿ. ಸೀ. ರಾಜರತ್ನಂ ಅವರನ್ನು ಕರೆಯುತ್ತಿದ್ದ ರೀತಿ), ಇವರು ನಮ್ಮ ಪಾಠವನ್ನು ದಾಸಯ್ಯನ ಗೋಳು ಎಂದು ತಿಳಿದುಕೊಂಡಿದ್ದಾರೇಂತ ಕಾಣುತ್ತೆ" ಎಂದು ಅನ್ನುತ್ತಿದ್ದರು.

ನೋವು ವಿಷಾದಗಳನ್ನು ನುಂಗಿಕೊಳ್ಳುತ್ತಿದ್ದ ಈ ಸೌಮ್ಯತೆಯೇ ವಿ.ಸೀ. ಅವರಲ್ಲಿ ಕಾಣುತ್ತಿದ್ದ ಮೊದಲ ಗುಣ. ಅದೇ ಅವರ ಬರವಣಿಗೆಯ ಮೊದಲ ಗುಣವೂ ಆಗಿದೆ. ವಿ.ಸೀ. ಅವರ ವಿಷಯದಲ್ಲಿ ಬದುಕು, ಬರವಣಿಗೆ ಎಂದು ವಿಂಗಡಿಸುವುದು ಕಷ್ಟ. ಅವರ

ಬರಹಗಳಲ್ಲಿ ಜೀವನದ ಹೋರಾಟ ಬೆಲುವು ಭರವಸೆಗಳಿಗಿಂತ ಕರುಣೆ, ಒಲುಮೆ, ಕ್ಷಮೆ, ಸಹನೆ, ನಯದ ಒಳಗಣ್ಣು, ಮೂಕ ನೋವು ಇವುಗಳ ಬಗ್ಗೆ ಚಿಂತನೆಗಳು ಹೆಚ್ಚಾಗಿ ಇವೆ. ಅವರ ಕವನ ಸಂಗ್ರಹದಲ್ಲಿ 'ಪ್ರಾರ್ಥನೆ' ಎಂಬ ಶೀರ್ಷಿಕೆಯ ಪದ್ಯಗಳೇ ಹಲವು ಇವೆ. ಅವರಿಗೆ ಜೀವನವೇ ಒಂದು ಬಗೆಯ ಪ್ರಾರ್ಥನೆಯಾಗಿತ್ತು. ಛಲ, ಸೇಡು ತೀರಿಸಿಕೊಳ್ಳುವುದು, ಉರಿಸುವುದು, ನೋಯಿಸುವುದು ಅವರ ಸ್ವಭಾವಕ್ಕೆ ಒಗ್ಗದ ದಾರಿ. ಅವರು ಭಯ ಪಡುತ್ತಿದ್ದುದು ಕ್ರೌರ್ಯ, ಅಸಹನೆ ಮತ್ತು ರಕ್ಕಸತೆಗಳನ್ನು ಕಂಡು. ಅವರ ಪದ್ಯವೊಂದರಲ್ಲಿ ತಂದೆಯೊಬ್ಬ ಮಗನಿಗೆ ಛಲ ಬೇಡ, ಹಟ ಬೇಡ ಎಂದು ಬುದ್ಧಿ ಹೇಳುತ್ತಾನೆ. ಇದು ವಿ.ಸೀ. ಅವರೇ ಯಾರಿಗೂ ಹೇಳಿರಬಹುದಾದ ಮಾತು.

ಗಾಂಧಿಯನ್ನು ಕೊಂದ ಗೋಡ್ಸೆಯ ಬಗ್ಗೆ 'ನಾವೆಲ್ಲಾ ಹಾವು, ಅವನು ತಲೆ' ಅಂದರು ವಿ.ಸೀ. ಅದು ಬರಿಯ ಹೇಳಿಕೆಯಲ್ಲ. ಅವರು ಜೀವನವನ್ನು ನೋಡುತ್ತಿದ್ದ ಬಗೆಗೆ ಒಂದು ಉದಾಹರಣೆ. ಸ್ನೇಹ ವಿ.ಸೀ. ಅವರ ಬರವಣಿಗೆಯ ಇನ್ನೊಂದು ಮುಖ್ಯ ಧ್ವನಿ. ಸ್ವರ್ಗದಲ್ಲಿ ಸ್ನೇಹ ಇಲ್ಲವಾದರೆ ಅವರು ನೂರು ಜನ್ಮಗಳನ್ನು ಇಲ್ಲಿಯೇ ಕಳೆಯುವವರು. ಕರುಣೆ ಅನುಕಂಪಗಳು ಅವರ ಎಲ್ಲ ಬರಹಗಳಲ್ಲೂ ಮಿಡಿಯುತ್ತವೆ. ಅವರ ಮನೆ ತುಂಬಿಸುವ ಹಾಡನ್ನು ಅವರ ಉತ್ತಮ ಕವನಗಳಲ್ಲಿ ಒಂದು ಎಂದು ಕರೆಯಲಾಗದು. ಆದರೆ ಅದರಲ್ಲಿರುವ ಭಾವ ಕಾವ್ಯದ ಇತಿಮಿತಿಗಳಿಗಿಂತ ದೊಡ್ಡದಾದದ್ದು. ತಾನು ಹುಟ್ಟಿದ ಕುಲಮನೆಗಳಿಗೆ ಹೊರಗಾಗಿ ಇನ್ನೊಬ್ಬರ ಮನೆಗೆ ಮಡದಿಯಾಗಿ ಸೊಸೆಯಾಗಿ ಆ ಮನೆಯ ದೇವರುಗಳನ್ನೇ ತನ್ನ ದೇವರುಗಳನ್ನಾಗಿ ಒಪ್ಪಿಕೊಳ್ಳುವ ಹುಡುಗಿ ಕವಿಯ ಹೃದಯವನ್ನು ತುಂಬಿಕೊಳ್ಳುತ್ತಾಳೆ. ಇದೊಂದು ಬಗೆಯ **Commissioned** ಪದ್ಯ. ಮದುವೆಯಾಗಿ ಇನ್ನೊಬ್ಬರ ಮನೆಯನ್ನು ತುಂಬಿಸಲು ಹೋಗುವ ಹೆಣ್ಣು ಮಕ್ಕಳ ತಂದೆತಾಯಂದಿರೆಲ್ಲಾ ಕವಿಯ ಬಳಿ ಬಂದು ನಮಗೆ ಇಂಥದೊಂದು ಪದ್ಯವನ್ನು ಬರೆದುಕೊಡಿ ಎಂದು ಕೇಳಿ ಅದಕ್ಕೆ ಕವಿ ಉತ್ತರವಾಗಿ ಬರೆದುಕೊಟ್ಟಂತಿದೆ. ಪದ್ಯದ ಯಶಸ್ಸು ಇರುವುದು ಅತ್ಯಂತ ಮಾರ್ದವವಾದ ಸನ್ನಿವೇಶವೊಂದನ್ನು ಸಾರ್ವತ್ರಿಕವಾಗಿ ಆತ್ಮೀಯವನ್ನಾಗಿ ಮಾಡುವುದರಲ್ಲಿ.

ಹೀಗೆಯೇ ತನ್ನವರನ್ನೆಲ್ಲಾ ತೊರೆದು ಕೈ ಹಿಡಿದವನನ್ನೇ ನಂಬಿ ಸ್ವಂತ ಸಂತೋಷ ಸಂಭ್ರಮಗಳಾವುದೂ ಇಲ್ಲದೆ ಇರುಳಲ್ಲಿ ಕತ್ತಲು ಕಾಣದೆ ಹಗಲಲ್ಲಿ ಬಿಸಿಲಿಗೆ ಹಾಯದೆ ಗಂಡನಿಗಾಗಿಯೇ ದುಡಿಯುವ ನಮ್ಮ ಮಹಿಳೆಯರ ಬಗ್ಗೆ ವಿ.ಸೀ. ಅವರಿಗೆ ಅಗಾಧ ಕರುಣೆ ಇತ್ತು. ಅವರ ಕವನ ಒಂದರಲ್ಲಿ ಹೀಗೆ ಬವಣೆಪಟ್ಟ ಹೆಂಡತಿ ಒಬ್ಬಳು ಗಂಡನನ್ನು "ಬಿಟ್ಟು ಕೊಡಿ" (ಡೈವೋರ್ಸ್ ಕೊಡಿ ಎನ್ನುವ ಅರ್ಥದಲ್ಲಲ್ಲ) "ಸಾಕು ಈಸು ದಿನ ಕಂಡುಂಡುದೇ, ಎನಗೆ ಬಿಡುತೆ ನೀಡಿ" ಎಂದು ದುಃಖ ಪಡುತ್ತಾಳೆ. ಆದರೆ ವಿ.ಸೀ. ಪದ್ಯದ ಗೃಹಿಣಿ ಇಬ್ಸನಿನ ನೋರಾ ಅಲ್ಲ. ಅವಳ ಈ ಬೇಸರ ತಾತ್ಕಾಲಿಕವಾದದ್ದು. ಗಂಡನ ಯಾವುದೋ ಒಂದು ಪ್ರೀತಿಯ ಮಾತು ಮತ್ತೆ ಅವಳನ್ನು ಬಾಳಹದಕ್ಕೆ ತರುತ್ತದೆ. 'ನಾನಿಲ್ಲವೇ ನಿಮಗೆ' ಎನ್ನುತ್ತಾ ಪುನಃ ಬವಣೆಬಾಳನ್ನು ಸಂತೋಷದಿಂದ ಅಪ್ಪಿಕೊಳ್ಳುತ್ತಾಳೆ.

ವಿ.ಸೀ. ಅವರ ಬರಹಗಳನ್ನು ಕುರಿತು ಇಲ್ಲಿ ಮಾಡಿರುವ ಪ್ರಸ್ತಾಪ ಹೇಗೆ ಅವರ ಕಾವ್ಯ ಅವರ ಜೀವನದೃಷ್ಟಿಯಿಂದ ಬೇರೆಯಾದುದಲ್ಲ ಎಂಬುದನ್ನು ಸೂಚಿಸಲು. ಅವರನ್ನು

ಆರಂಭಿಸಿ ಒಂದು ಗಂಟೆ ನಿರರ್ಗಳವಾಗಿ ಮಾತನಾಡುವರು ವಿ.ಸೀ. ಆ ಮಾತುಗಳು ಈಗ ಯಾವುದೂ ಜ್ಞಾಪಕದಲ್ಲಿ ಉಳಿದಿಲ್ಲ. ಆದರೆ ಅವರ ಸೌಮ್ಯಮುಖ, ಸರಳವೂ ಶುಭ್ರವೂ ಆದ ಉಡುಪು ಯಾರೂ ಮರೆಯುವಂತಹವುಗಳಲ್ಲ. ಅವರ ಕಾವ್ಯದಂತೆ ಅವರ ಉಡುಪೂ ಅವರ ವ್ಯಕ್ತಿತ್ವದ ಸೂಚಕ. ಅವರ ಮಟ್ಟಿಗೆ ಅವರು ವರ್ಣಿಸುತ್ತಿದ್ದ ರಸಿಕತೆ 'ದೇವೇಂದ್ರನಿಗೆ ಕಳೆ ಕೊಡುವ ಅಲಂಕಾರ' ಇದ್ದುದು ಅವರ ಜರತಾರಿರಹಿತ ಬಿಳಿಯ ರುಮಾಲಿನಲ್ಲಿ.

ನಾನು ಕಂಡಂತೆ ವಿ.ಸೀ. ಹಸನ್ಮುಖಿಯಲ್ಲ. ಮಾತಿಗೆ ಮುಂಚೆ ಮುಗುಳು ನಗೆ ನಕ್ಕು ಪ್ರಸನ್ನತೆಯನ್ನು ತೋರಿಸುವ tact ಅವರಿಗೆ ಗೊತ್ತಿರಲಿಲ್ಲವೆಂದು ತಿಳಿಯುತ್ತೇನೆ. ಆದರೆ ಎಂದೂ ಅವರು ಮುಖವನ್ನು ಗಂಟುಹಾಕಿಕೊಂಡವರಲ್ಲ. ಅವರ ಮುಖದ ಮೇಲೆ ಯಾವಾಗಲೂ ಒಂದು ವಿನಯದ ಗಡುಸಿಲ್ಲದ ಗಾಂಭೀರ್ಯವಿತ್ತು. ಅವರನ್ನು ನೋಡಿದೊಡನೆಯೇ ಎಲ್ಲರಲ್ಲೂ ಉಂಟಾಗುತ್ತಿದ್ದ ಭಾವನೆ ಇವರೊಬ್ಬ ಗೌರವಾರ್ಹ ಸಜ್ಜನ ವ್ಯಕ್ತಿ ಎನ್ನುವುದು. ಎಂತಹ ಹೊತ್ತಿನಲ್ಲೂ ಅಂತಹವರ ಬಗ್ಗೆ ಲಘುವಾಗಿ ಯೋಚಿಸುವುದು ಸಾಧ್ಯವಿಲ್ಲ.

ಆದರೂ ವಿ.ಸೀ. ಬಹಳ ಸುಲಭ ವ್ಯಕ್ತಿ. ಆಗಿನ ದಿನಗಳಲ್ಲಿ ಚರ್ಚಾಸ್ಪರ್ಧೆ ಕಾಲೇಜು ವಿದ್ಯಾರ್ಥಿಗಳ ಆಸಕ್ತಿಗೆ ಪಾತ್ರವಾದ ವಿಷಯಗಳಲ್ಲಿ ಮುಖ್ಯವಾದದ್ದು. ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ತಾವು ಮಾತನಾಡುವ ವಿಷಯಗಳ ಬಗ್ಗೆ ಅಧ್ಯಾಪಕರುಗಳಿಂದ points ಗಳನ್ನು ತಿಳಿದುಕೊಳ್ಳುವುದು ಆಗಿನ ವಾಡಿಕೆ. ಇಂತಹ ಸಂದರ್ಭಗಳಲ್ಲಿ ನಮಗೆ ಮೊದಲು ದೊರಕುತ್ತಿದ್ದ ಅಧ್ಯಾಪಕರು ವಿ.ಸೀ. ಚಾಮರಾಜಪೇಟೆಯ ಅವರ ಮನೆಗೆ ಯಾವ ವಿದ್ಯಾರ್ಥಿಯಾದರೂ ಯಾವ ಹೊತ್ತಿನಲ್ಲಾದರೂ ಹೋಗಬಹುದು. ಎಲ್ಲರಿಗೂ ಒಂದೇ ಆದರದ ಸ್ವಾಗತ. ಯಾರೂ ಅವರ ಮನೆಯಿಂದ ಕಾಫಿ ಕುಡಿಯದೆ ಬಂದಿದ್ದಿಲ್ಲ.

ಒಂದು ದೃಷ್ಟಿಯಿಂದ ವಿ.ಸೀ. ಅವರಿಗಿಂತ ರಾಜರತ್ನಂ ಅವರೇ ಹೆಚ್ಚು ಆಕರ್ಷಕ ವ್ಯಕ್ತಿ. ರಾಜರತ್ನಂ ಅವರಲ್ಲಿ ಒಂದು ವಿಶಿಷ್ಟ ಠೀವಿ, ದರ್ಪ ಇತ್ತು. ಅಸಂಭವವಾಗಿ ಯಾರಾದರೂ ತರಗತಿಯಲ್ಲಿ ಆಕಳಿಸಿದರೆ, ಗಡಿಯಾರ ನೋಡಿದರೆ ಅವರಿಗೆ ಕೋಪ ಬರುತ್ತಿತ್ತು; ಅರ್ಧದಲ್ಲೇ ಪಾಠವನ್ನು ನಿಲ್ಲಿಸಿ ಬಿಡುತ್ತಿದ್ದರು. ವಿ.ಸೀ. ತಮ್ಮ ಸಹನೆಯನ್ನು ಕಳೆದುಕೊಳ್ಳುತ್ತಿರಲಿಲ್ಲ. ವಿದ್ಯಾರ್ಥಿಗಳ ಬಗ್ಗೆ ಬೇಸರವಾದರೆ ಮುಖದಲ್ಲಿ ಒಂದು ಬಗೆಯ ನೋವನ್ನು ಪ್ರಕಟ ಮಾಡುವರು. ಆಗ ಅವರನ್ನು ನೋಡಿದ ಎಂತಹವನಿಗೂ ತನ್ನ ವರ್ತನೆಯ ಬಗ್ಗೆ ನಾಚಿಕೆಯಾಗಬೇಕು. ಇಲ್ಲವೇ ಹತ್ತಿರ ರಾಜರತ್ನಂ ಇದ್ದರೆ ಅವರ ಮುಂದೆ ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದರು. "ನೋಡಿ 'ರಾ' (ವಿ. ಸೀ. ರಾಜರತ್ನಂ ಅವರನ್ನು ಕರೆಯುತ್ತಿದ್ದ ರೀತಿ), ಇವರು ನಮ್ಮ ಪಾಠವನ್ನು ದಾಸಯ್ಯನ ಗೋಳು ಎಂದು ತಿಳಿದುಕೊಂಡಿದ್ದಾರೇಂತ ಕಾಣುತ್ತೆ" ಎಂದು ಅನ್ನುತ್ತಿದ್ದರು.

ನೋವು ವಿಷಾದಗಳನ್ನು ನುಂಗಿಕೊಳ್ಳುತ್ತಿದ್ದ ಈ ಸೌಮ್ಯತೆಯೇ ವಿ.ಸೀ. ಅವರಲ್ಲಿ ಕಾಣುತ್ತಿದ್ದ ಮೊದಲ ಗುಣ. ಅದೇ ಅವರ ಬರವಣಿಗೆಯ ಮೊದಲ ಗುಣವೂ ಆಗಿದೆ. ವಿ.ಸೀ. ಅವರ ವಿಷಯದಲ್ಲಿ ಬದುಕು, ಬರವಣಿಗೆ ಎಂದು ವಿಂಗಡಿಸುವುದು ಕಷ್ಟ. ಅವರ

ಬರಹಗಳಲ್ಲಿ ಜೀವನದ ಹೋರಾಟ ಬೆಲುವು ಭರವಸೆಗಳಿಗಿಂತ ಕರುಣೆ, ಒಲುಮೆ, ಕ್ಷಮೆ, ಸಹನೆ, ನಯದ ಒಳಗಣ್ಣು, ಮೂಕ ನೋವು ಇವುಗಳ ಬಗ್ಗೆ ಚಿಂತನೆಗಳು ಹೆಚ್ಚಾಗಿ ಇವೆ. ಅವರ ಕವನ ಸಂಗ್ರಹದಲ್ಲಿ 'ಪ್ರಾರ್ಥನೆ' ಎಂಬ ಶೀರ್ಷಿಕೆಯ ಪದ್ಯಗಳೇ ಹಲವು ಇವೆ. ಅವರಿಗೆ ಜೀವನವೇ ಒಂದು ಬಗೆಯ ಪ್ರಾರ್ಥನೆಯಾಗಿತ್ತು. ಛಲ, ಸೋಡು ತೀರಿಸಿಕೊಳ್ಳುವುದು, ಉರಿಸುವುದು, ನೋಯಿಸುವುದು ಅವರ ಸ್ವಭಾವಕ್ಕೆ ಒಗ್ಗದ ದಾರಿ. ಅವರು ಭಯ ಪಡುತ್ತಿದ್ದುದು ಕ್ರೌರ್ಯ, ಅಸಹನೆ ಮತ್ತು ರಕ್ಕಸತೆಗಳನ್ನು ಕಂಡು. ಅವರ ಪದ್ಯವೊಂದರಲ್ಲಿ ತಂದೆಯೊಬ್ಬ ಮಗನಿಗೆ ಛಲ ಬೇಡ, ಹಟ ಬೇಡ ಎಂದು ಬುದ್ಧಿ ಹೇಳುತ್ತಾನೆ. ಇದು ವಿ.ಸೀ. ಅವರೇ ಯಾರಿಗೂ ಹೇಳಿರಬಹುದಾದ ಮಾತು.

ಗಾಂಧಿಯನ್ನು ಕೊಂದ ಗೋಡ್ಸೆಯ ಬಗ್ಗೆ 'ನಾವೆಲ್ಲಾ ಹಾವು, ಅವನು ತಲೆ' ಅಂದರು ವಿ.ಸೀ. ಅದು ಬರಿಯ ಹೇಳಿಕೆಯಲ್ಲ. ಅವರು ಜೀವನವನ್ನು ನೋಡುತ್ತಿದ್ದ ಬಗೆಗೆ ಒಂದು ಉದಾಹರಣೆ. ಸ್ನೇಹ ವಿ.ಸೀ. ಅವರ ಬರವಣಿಗೆಯ ಇನ್ನೊಂದು ಮುಖ್ಯ ಧ್ವನಿ. ಸ್ವರ್ಗದಲ್ಲಿ ಸ್ನೇಹ ಇಲ್ಲವಾದರೆ ಅವರು ನೂರು ಜನ್ಮಗಳನ್ನು ಇಲ್ಲಿಯೇ ಕಳೆಯುವವರು. ಕರುಣೆ ಅನುಕಂಪಗಳು ಅವರ ಎಲ್ಲ ಬರಹಗಳಲ್ಲೂ ಮಿಡಿಯುತ್ತವೆ. ಅವರ ಮನೆ ತುಂಬಿಸುವ ಹಾಡನ್ನು ಅವರ ಉತ್ತಮ ಕವನಗಳಲ್ಲಿ ಒಂದು ಎಂದು ಕರೆಯಲಾಗದು. ಅದರೆ ಅದರಲ್ಲಿರುವ ಭಾವ ಕಾವ್ಯದ ಇತಿಮಿತಿಗಳಿಗಿಂತ ದೊಡ್ಡದಾದದ್ದು. ತಾನು ಹುಟ್ಟಿದ ಕುಲಮನೆಗಳಿಗೆ ಹೊರಗಾಗಿ ಇನ್ನೊಬ್ಬರ ಮನೆಗೆ ಮಡದಿಯಾಗಿ ಸೊಸೆಯಾಗಿ ಆ ಮನೆಯ ದೇವರುಗಳನ್ನೇ ತನ್ನ ದೇವರುಗಳನ್ನಾಗಿ ಒಪ್ಪಿಕೊಳ್ಳುವ ಹುಡುಗಿ ಕವಿಯ ಹೃದಯವನ್ನು ತುಂಬಿಕೊಳ್ಳುತ್ತಾಳೆ. ಇದೊಂದು ಬಗೆಯ **Commissioned** ಪದ್ಯ. ಮದುವೆಯಾಗಿ ಇನ್ನೊಬ್ಬರ ಮನೆಯನ್ನು ತುಂಬಿಸಲು ಹೋಗುವ ಹೆಣ್ಣು ಮಕ್ಕಳ ತಂದೆತಾಯಂದಿರೆಲ್ಲಾ ಕವಿಯ ಬಳಿ ಬಂದು ನಮಗೆ ಇಂಥದೊಂದು ಪದ್ಯವನ್ನು ಬರೆದುಕೊಡಿ ಎಂದು ಕೇಳಿ ಅದಕ್ಕೆ ಕವಿ ಉತ್ತರವಾಗಿ ಬರೆದುಕೊಟ್ಟಂತಿದೆ. ಪದ್ಯದ ಯಶಸ್ಸು ಇರುವುದು ಅತ್ಯಂತ ಮಾರ್ದವವಾದ ಸನ್ನಿವೇಶವೊಂದನ್ನು ಸಾರ್ವತ್ರಿಕವಾಗಿ ಆತ್ಮೀಯವನ್ನಾಗಿ ಮಾಡುವುದರಲ್ಲಿ.

ಹೀಗೆಯೇ ತನ್ನವರನ್ನೆಲ್ಲಾ ತೊರೆದು ಕೈ ಹಿಡಿದವನನ್ನೇ ನಂಬಿ ಸ್ವಂತ ಸಂತೋಷ ಸಂಭ್ರಮಗಳಾವುದೂ ಇಲ್ಲದೆ ಇರುಳಲ್ಲಿ ಕತ್ತಲು ಕಾಣದೆ ಹಗಲಲ್ಲಿ ಬಿಸಿಲಿಗೆ ಹಾಯದೆ ಗಂಡನಿಗಾಗಿಯೇ ದುಡಿಯುವ ನಮ್ಮ ಮಹಿಳೆಯರ ಬಗ್ಗೆ ವಿ.ಸೀ. ಅವರಿಗೆ ಅಗಾಧ ಕರುಣೆ ಇತ್ತು. ಅವರ ಕವನ ಒಂದರಲ್ಲಿ ಹೀಗೆ ಬವಣೆಪಟ್ಟ ಹೆಂಡತಿ ಒಬ್ಬಳು ಗಂಡನನ್ನು "ಬಿಟ್ಟು ಕೊಡಿ" (ಡೈವೋರ್ಸ್ ಕೊಡಿ ಎನ್ನುವ ಅರ್ಥದಲ್ಲಲ್ಲ) "ಸಾಕು ಈಸು ದಿನ ಕಂಡುಂಡುದೇ, ಎನಗೆ ಬಿಡುತೆ ನೀಡಿ" ಎಂದು ದುಃಖ ಪಡುತ್ತಾಳೆ. ಆದರೆ ವಿ.ಸೀ. ಪದ್ಯದ ಗೃಹಿಣಿ ಇಬ್ಸನಿನ ನೋರಾ ಅಲ್ಲ. ಅವಳ ಈ ಬೇಸರ ತಾತ್ಕಾಲಿಕವಾದದ್ದು. ಗಂಡನ ಯಾವುದೋ ಒಂದು ಪ್ರೀತಿಯ ಮಾತು ಮತ್ತೆ ಅವಳನ್ನು ಬಾಳಹದಕ್ಕೆ ತರುತ್ತದೆ. 'ನಾನಿಲ್ಲವೇ ನಿಮಗೆ' ಎನ್ನುತ್ತಾ ಪುನಃ ಬವಣೆಬಾಳನ್ನು ಸಂತೋಷದಿಂದ ಅಪ್ಪಿಕೊಳ್ಳುತ್ತಾಳೆ.

ವಿ.ಸೀ. ಅವರ ಬರಹಗಳನ್ನು ಕುರಿತು ಇಲ್ಲಿ ಮಾಡಿರುವ ಪ್ರಸ್ತಾಪ ಹೇಗೆ ಅವರ ಕಾವ್ಯ ಅವರ ಜೀವನದೃಷ್ಟಿಯಿಂದ ಬೇರೆಯಾದುದಲ್ಲ ಎಂಬುದನ್ನು ಸೂಚಿಸಲು. ಅವರನ್ನು

ನೋಡದವರು ಅವರ ಬರಹಗಳಿಂದಲೇ ಅವರ ವ್ಯಕ್ತಿತ್ವವನ್ನು ಕಲ್ಪಿಸಿಕೊಳ್ಳಬಲ್ಲರು. ಅವರನ್ನು ನೋಡಿದ್ದವರಿಗೆ ಅವರ ಕಾವ್ಯ ಅವರ ಜೀವನ ವೇದಾಂತದ ಫಲ.

ವಿ.ಸೀ. ಶ್ರೇಷ್ಠ ಕವಿಗಳೇ? ಈ ಪ್ರಶ್ನೆಗೆ ವಿಮರ್ಶಕರು ಉತ್ತರ ಹೇಳಬೇಕು. ವಿ.ಸೀ. ಅವರಿಗೆ ತಮ್ಮ ಬರಹವೇ ಉತ್ತಮವಾದದ್ದು ಎಂಬ ದಿಟ್ಟ ಧೋರಣೆ ಇರಲಿಲ್ಲ. ಇಂಗ್ಲೀಷಿನ in a manner of speaking ಎಂಬ ಮಾತನ್ನು ಪ್ರಯೋಗಿಸಿ ಹೇಳಬಹುದಾದರೆ ಅವರಿಗೆ ಜೀವನಕ್ಕಿಂತ ಸಾಹಿತ್ಯ ದೊಡ್ಡದಾಗಿರಲಿಲ್ಲ. ಅವರಿಗೆ ಬರವಣಿಗೆ ತಾವು ಜೀವನದಲ್ಲಿ ನೋಡಿದ, ಸಾಧಿಸಿದ ಕ್ಷಮೆ ಔದಾರ್ಯ ಸಹಾನುಕಂಪ ಮುಂತಾದವುಗಳನ್ನು ಗುರುತಿಸುವುದಕ್ಕೆ ಒಂದು ಮಾರ್ಗವಾಗಿತ್ತು. ಅವರು ಯಾರನ್ನು ಒಪ್ಪಿಸಲೂ ಬರೆಯಲಿಲ್ಲ. ಅವರು ನನ್ನ ದಾರಿ ನನಗೆ ಎಂಬ ನಿಲುವಿನಲ್ಲೇ ಸಾಹಿತ್ಯ ವ್ಯವಸಾಯವನ್ನು ಮಾಡಿದರು. ಅವರೂ ಯುವಕ ವಿಮರ್ಶಕರೊಬ್ಬರು 'ನನ್ನ ತಂದೆ ತಾತಂದಿರಾಣೆಗೂ ಇವರ ಬರಹ ಕವಿತೆಯಲ್ಲ' ಅಂದಾಗ ಅವರಿಗೆ ನೋವಾಯಿತು. ತನ್ನ ಬರಹದ ಬಗ್ಗೆ ಒಳ್ಳೆಯ ಮಾತನಾಡಲಿಲ್ಲ ಎಂಬ ಕಾರಣದಿಂದಲ್ಲ, ಯಾರನ್ನೋ ತೆಗಳುವುದಕ್ಕಾಗಿ ಈ ಯುವಕ ತನ್ನ ಹಿರಿಯರ ಮೇಲೆ ಇಷ್ಟೊಂದು ಹೊರೆ ಹಾಕುತ್ತಿದ್ದಾನಲ್ಲ ಎಂದು. ಬದುಕು ಕಲ್ಪನೆಯ ಮಾಟವಲ್ಲ. ಅದನ್ನು ಇದೇ ಬಗೆಯಲ್ಲಿ ವರ್ಣಿಸಬೇಕು ಎಂಬ ಸಿದ್ಧಾಂತವಿಲ್ಲ. ನಿಜವನ್ನು ಅರಿಯುವ ಮನಸ್ಸು ಅದನ್ನು ಹೇಗೆ ಆದರೂ ಕಂಡೀತು – ಇದು ವಿ.ಸೀ. ಅವರ ನಿಲುವು.

ವಿ.ಸೀ. ಅವರ ಕಾವ್ಯಕ್ಕಿಂತ ಅವರ ವ್ಯಕ್ತಿತ್ವ ದೊಡ್ಡದು ಎಂದು ನನ್ನ ಇನ್ನೊಬ್ಬ ಗುರುಗಳಾದ ಎಲ್. ಎಸ್. ಶೇಷಗಿರಿ ರಾಯರು ಅಧಿಕಾರಯುತವಾಗಿ ಹೇಳಿದ್ದಾರೆ. ಬಹಳ ವರ್ಷ ವಿ.ಸೀ. ಅವರ ಸಹವಾಸದಲ್ಲಿ ಕಳೆದ ಎಲ್. ಎಸ್. ಎಸ್., ಕೆ. ಎಸ್. ನ., ಅಂತಹವರುಗಳಿಗೆ ವಿ.ಸೀ. ಅವರ ವ್ಯಕ್ತಿತ್ವದ ಆಳವಾದ ಪರಿಚಯ ಇರುವುದು ಸಹಜ. ಆದರೆ ಕೇವಲ ಎರಡೇ ವರ್ಷ ಅವರ ವಿದ್ಯಾರ್ಥಿ ಆಗಿದ್ದ ನನಗೂ ಒಮ್ಮೆ ಅವರ ಅದ್ಭುತ ಗುಣದ ಅನುಭವವಾಯಿತು.

ಕಾಲೇಜಿನ ಕ್ಯಾಂಟೀನಿನ ಹಿಂದೆ ಇದ್ದ ಚಿಕ್ಕ ಕೊಠಡಿಯೇ ಆಗಿನ ಕನ್ನಡ ಡಿಪಾರ್ಟ್‌ಮೆಂಟ್. ಕನ್ನಡ ಮೈನರ್ ಪಾಠಗಳು ಆ ಕೊಠಡಿಯಲ್ಲೇ ನಡೆಯುತ್ತಿದ್ದುದು. ಆಗ ಡಿಪಾರ್ಟ್‌ಮೆಂಟಿಗೆ ವಿ.ಸೀ. ಅವರನ್ನೋ ರಾಜರತ್ನಂ ಅವರನ್ನೋ ನೋಡಲು ಶಿವರಾಮ ಕಾರಂತ, ವೆಂಕಟರಾಮಪ್ಪ ಮುಂತಾದವರು ಆಗಾಗ ಬರುತ್ತಿದ್ದರು. ಒಂದು ಸಲ ಹೀಗೆ ಬಂದವರೊಬ್ಬರ ಮುಂದೆ – ಅವರು ಕು. ಶಿ. ಹರಿದಾಸಭಟ್ಟರು ಎಂದು ಜ್ಞಾಪಕ – ವಿ.ಸೀ. ನನ್ನನ್ನು ತೋರಿಸಿ "He is one of my best students" ಅಂದರು. ಅಂದು ಅವರ ಜತೆ ಇದ್ದ ವಿದ್ಯಾರ್ಥಿ ನಾನೊಬ್ಬನೇ. ಬೇರೆ ಯಾರಾದರೂ ಇದ್ದಿದ್ದರೆ ವಿ.ಸೀ. ಒಬ್ಬರನ್ನು ಪ್ರಶಂಸಿಸಿ ಇನ್ನೊಬ್ಬರನ್ನು ಬಿಟ್ಟು ಬಿಡುವಂತಹವರಲ್ಲ. ಅದಕ್ಕಿಂತ ಮುಖ್ಯವಾಗಿ ಆಗ ನಾನು ಅವರ ಮೆಚ್ಚುಗೆಗೆ ಅರ್ಹವಾಗುವಂತಹ ಯಾವ ಭರವಸೆಯನ್ನೂ ತೋರಿಸಿರಲಿಲ್ಲ. ಅಂತಹ ಸ್ಥಿತಿಯಲ್ಲಿ ವಿ.ಸೀ. ನಾನು ಸ್ವಲ್ಪವೂ ನಿರೀಕ್ಷಿಸದಿದ್ದ ಮೆಚ್ಚುಗೆಯ ಮಾತನ್ನು ಆಡಿ ನನ್ನನ್ನು ಚಕಿತಗೊಳಿಸಿದರು. ಮೂಲೆಯಲ್ಲಿ ನಿಂತಿದ್ದವನೊಬ್ಬನನ್ನು ಮುಂದಕ್ಕೆ ಕರೆದು ಅವನ ತಲೆಯ ಮೇಲೆ ಒಂದು ಜವಾಬುದಾರಿಯನ್ನು ಹೊರಿಸಿದರು.

ಉದ್ವೇಕ ಸ್ಥಿತಿಯಲ್ಲಿ ಮನಸ್ಸು ಹಿಡಿತದಲ್ಲಿ ಇರದಿರುವಾಗ ಕೋಪದ ಒಂದು ಮಾತನ್ನಾಡಿ ಮನಸ್ಸಿನ ಹೊಲೆಯನ್ನು ಕಳೆದುಕೊಳ್ಳುವುದೇ ಅಥವಾ ಕೋಪವನ್ನು ಅಡಗಿಸಿಕೊಳ್ಳುವುದೇ ಎಂಬ ಸ್ಥಿತಿಯಲ್ಲಿ ನಾವು ಕೋಪವನ್ನು ಹಿಡಿತದಲ್ಲಿಟ್ಟುಕೊಳ್ಳುವುದನ್ನು ಕಲಿತಿದ್ದೇವೆ. ಹಾಗೆಯೇ ನಮ್ಮ ಎದಿರಿನಲ್ಲಿ ಇಲ್ಲದಿರುವ ಒಬ್ಬರ ಬಗ್ಗೆ ಏನಾದರೂ ಅರೋಪದ ಮಾತನ್ನು ಆಡುವ ಪ್ರಸಂಗ ಬಂದಾಗ ನಾವು ಆ ಸಣ್ಣ ಮಾತನ್ನು ಆಡುವುದಿಲ್ಲ. ಇದು ನಾಗರೀಕತೆಯ ಶಿಷ್ಟಾಚಾರ ನಮಗೆ ಹೇಳಿಕೊಟ್ಟಿರುವ ಪಾಠ. ಆದರೆ ಒಂದು ಮೆಚ್ಚಿಗೆಯ ಮಾತನ್ನು ಆಡಬಹುದು ಅಥವಾ ಆಡದೆ ಇರಬಹುದು ಎಂಬ ಸಂದರ್ಭದಲ್ಲಿ ನಾವು ಬಹಳ ಜನ ಅಂತಹ ಮಾತನ್ನಾಡುವುದಿಲ್ಲ. ಅಂತಹ ಮಾತು ನಿರೀಕ್ಷಿಸಲ್ಪಡದಿದ್ದರೆ ಅಥವಾ ಆಡದಿದ್ದರೂ ಅದರಿಂದ ಸಭ್ಯತೆಗೆ ಲೋಪ ಬರುವುದಿಲ್ಲ ಎಂಬ ಸ್ಥಿತಿಯಲ್ಲಿ ಆಡದೆ ಉಳಿಯುವ ಪ್ರಸಂಗಗಳೇ ಹೆಚ್ಚು. ವಿ.ಸೀ ಇಂತಹ ಸಂದರ್ಭಗಳಲ್ಲಿ ತಮ್ಮ ಹಿರಿಮೆಯನ್ನು ಮೆರೆಸುತ್ತಿದ್ದರು. ಸಾಧಾರಣ ಶಿಷ್ಟಾಚಾರಗಳನ್ನು ಮೀರಿದ ಸೌಜನ್ಯ ಔದಾರ್ಯಗಳನ್ನು ತೋರಿಸುತ್ತಿದ್ದರು.

ನಾನೇ ಒಬ್ಬ ಅಧ್ಯಾಪಕನಾಗಿ ನೂರಾರು ವಿದ್ಯಾರ್ಥಿಗಳೊಡನೆ ಸಹಚರಿಸುವಾಗ ಹಲವು ಬಾರಿ ವಿ.ಸೀ. ತಂತ್ರವನ್ನು ಪ್ರಯೋಗಿಸಿ ಬಹುದೊಡ್ಡ ಗಳಿಕೆಗಳನ್ನು ಕಂಡಿದ್ದೇನೆ. ತಂತ್ರ ಎನ್ನುವುದು ನಾನು ಬಳಸಿರುವ ಮಾತು. ವಿ.ಸೀ. ಅವರಿಗೆ ಅದು ತಂತ್ರವಲ್ಲ; ವಿನಯ ಔದಾರ್ಯಗಳು ತನಗೂ ಬೇಕು, ಪ್ರಪಂಚಕ್ಕೂ ಬೇಕು ಎಂಬ ಶ್ರದ್ಧೆಯಿಂದ ಎಚ್ಚರತಪ್ಪದೆ ಪಾಲಿಸುತ್ತಿದ್ದ ನೀತಿ.

ಮುಪ್ಪು ಪ್ರಾಪ್ತವಾಗಿ ಹಳೆಯ ನೆನಪುಗಳನ್ನು ಮೆಲಕು ಹಾಕುವ ಇಂದಿನ ದಿನಗಳಲ್ಲಿ ನೈಜ ಸೌಜನ್ಯ, ಸಹನೆ, ತಗ್ಗಿ ನಡೆಯುವುದು ಮುಂತಾದ ಗುಣಗಳು ಜೀವನದಲ್ಲಿ ಏನು ಮಾಟಗಳನ್ನು ಮಾಡಬಲ್ಲವು ಎಂಬುದು ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಿದೆ. ವಿ.ಸೀ. ಈ ಗುಣಗಳಿಗೆಲ್ಲಾ ಮೂರ್ತಿವತ್ತಾಗಿದ್ದರು. ಅವರು ನನ್ನ ಬಗ್ಗೆ ಆಡಿದ ಪ್ರೋತ್ಸಾಹದ ಒಂದು ಮಾತು ನನ್ನನ್ನು ಇಂದಿಗೂ ಆಶೀರ್ವಾದದಂತೆ ರಕ್ಷೆಯಂತೆ ಹರಸುತ್ತಿದೆ. ಅವರನ್ನು ನೆನೆಯುವುದು ತಾಯಿಯನ್ನು ನೆನೆದಂತೆ.

ಗುರು ವಿ.ಸೀ. – ನಾನು ಕಂಡಂತೆ

ಶಾ. ಬಾಲುರಾವ್

ಮನುಷ್ಯ ಜೀವನದಲ್ಲಿ ಇಪ್ಪತ್ತು ಇಪ್ಪತ್ತೈದರ ನಡುವಿನ ವಯಸ್ಸು ಒಂದು ಸಂಧಿಕಾಲ. ಆ ವಯಸ್ಸಿನಲ್ಲಿ ಒದಗಿ ಬರುವ ಭಾಗ್ಯಕ್ಕೆ ತಕ್ಕಂತೆ ನಮ್ಮ ಇಡೀ ಜೀವನದ ಭವಿಷ್ಯ ರೂಪುಗೊಳ್ಳುತ್ತದೆ. ಆ ಹೊತ್ತಿನಲ್ಲಿ ನಮ್ಮ ಬಾಳಿಗೆ ಯಾವ ಪರಿಸರ ಎದುರಾಗುತ್ತದೆ, ಎಂತಹ ಸ್ನೇಹಿತರು ಜತೆಯಾಗುತ್ತಾರೆ, ಯಾವ ಬಗೆಯ ಗುರುಗಳು ದೊರೆತು ನಮಗೆ ದಾರಿದೀಪವಾಗುತ್ತಾರೆ, ಸ್ವತಃ ಆವರ ಆದರ್ಶಗಳ ಸ್ವರೂಪ, ಮಟ್ಟ ಎಂತಹದು, ನಮ್ಮ ಮುಂದೆ ತೆರೆದುಕೊಳ್ಳುವ ಬೌದ್ಧಿಕ, ಸಾಂಸ್ಕೃತಿಕ ಪ್ರಪಂಚ ಯಾವ ತೆರನಾದುದು ಎಂಬವೆಲ್ಲವೂ ಭಾಗ್ಯನಿರ್ಣಾಯಕ ವಿಷಯಗಳಾಗುತ್ತವೆ. ಇದೊಂದು ಅನುಭವ ಸಿದ್ಧವಾದ ಸತ್ಯ–ಕನಿಷ್ಠ ನನ್ನ ಮಟ್ಟಿಗೆ.

ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿ ಇಂಟರ್ ಮುಗಿಸಿ, ಬೆಂಗಳೂರಿಗೆ ಬಂದು, ಮುಂದೆ ಬಿ.ಎಸ್‌ಸಿ. ಮಾಡಲು ೧೯೫೦ರಲ್ಲಿ ಸೆಂಟ್ರಲ್ ಕಾಲೇಜು ಸೇರಿದೆ. ಆಗ ನನ್ನ ವಯಸ್ಸು ಇಪ್ಪತ್ತೊಂದು. ಕಾಲೇಜಿನಲ್ಲಿ ಪತ್ಯವಿಷಯ ಕಂಡಂತೆಯೇ ಇಂಗ್ಲಿಷ್, ಕನ್ನಡ ಮತ್ತು ಐಚ್ಛಿಕವಾಗಿ ಪಿ.ಸಿ.ಎಮ್.

ಇಂಟರ್‌ನಲ್ಲಿರುವಾಗಲೇ ಜತೆಯ ಒಬ್ಬಿಬ್ಬರು ಕನ್ನಡ ಸಾಹಿತ್ಯ ಪ್ರೇಮೀ ಮಿತ್ರರಿಗೆ ನಾನೇನೂ ಕಡಿಮೆಯಿಲ್ಲವೆನಿಸಿಕೊಳ್ಳುವ ಪೈಪೋಟಿಯಲ್ಲಿ ಆ ಕಾಲಕ್ಕೆ ಜನಪ್ರಿಯವಾಗುತ್ತಿದ್ದ ಕಾರಂತ, ಅ.ನ.ಕೃ., ತ.ರಾ.ಸು. ಅವರ ಕಾದಂಬರಿಗಳನ್ನೋದುವ ಚಟ ಬೆಳಸಿಕೊಂಡಿದ್ದೆ. ಕನ್ನಡದಲ್ಲಿ ಕವಿತೆಗಳನ್ನೂ ಕುರಕ ತೊಡಗಿ ಅವನ್ನು ಮೈಸೂರಿನ ಸಂಜೆ ಪತ್ರಿಕೆಗಳಲ್ಲಿ ಪ್ರಕಟಿಸಿದ್ದೆನಾದರೂ ಕನ್ನಡದ ಬಗ್ಗೆ ಯಾವ ವಿಶೇಷ ಮೋಹವೂ ಹುಟ್ಟಿರಲಿಲ್ಲ. ಒಲಿತ, ತುಡಿತಗಳೇನಿದ್ದರೂ ತಂದೆಯವರಿಂದ ಇಳಿದು ಬಂದಿದ್ದ ಇಂಗ್ಲಿಷ್ ಕಡೆಗೇಯೇ. ಕಾಲೇಜಿನಲ್ಲಿ ಕನ್ನಡವನ್ನು ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳಲು ಕಾರಣ ಬೇರೆ ಮಾರ್ಗವಿಲ್ಲದ್ದಕ್ಕೆ, ಯಾಂತ್ರಿಕವಾಗಿ. ಉಳಿದೊಂದು ಸಂಸ್ಕೃತ ಆಗಿನ್ನೂ ನನ್ನ ಪಾಲಿಗೆ ದೂರವೇ.

ಸೆಂಟ್ರಲ್ ಕಾಲೇಜಿನಲ್ಲಿ ಆ ಎರಡು ವರ್ಷ ನಮಗೆ ಕನ್ನಡಕ್ಕಿದ್ದ ಮೇಷ್ಟರೆಂದರೆ, ಒಬ್ಬರು ವಿ.ಸೀ. ಇನ್ನೊಬ್ಬರು ರಾಜರತ್ನಂ. ಮೂರನೆಯವರೊಬ್ಬರು – ಹೆಸರು

ಪ್ರಹ್ಲಾದರಾವ್ ಇರಬೇಕು – 'ಲೆಕ್ಕಕ್ಕುಂಟು, ಜಮಾಕ್ಕಿಲ್ಲ' ಎನ್ನುವ ತರದವರು. ಸದ್ಯ ಅವರು ನಮ್ಮ ಸೆಕ್ಷನ್‌ಗೆ ಮೇಷ್ಟರಾಗಿರಲಿಲ್ಲ. ಆ ಕಾಲಕ್ಕಾಗಲೇ ವಿ.ಸೀ., ರಾಜರತ್ನಂ, ಅವರ ಹೆಸರು ಮತ್ತೆ ಮತ್ತೆ ಕಿವಿಗೆ ಬಿದ್ದು, 'ಲೆಜೆಂಡ್ಸ್' ಆಗಿದ್ದರು. ವಿ.ಸೀ. ಅವರ 'ಕಾಲುಂಗುರ ರವ ಕೇಳಿ,' 'ನಮ್ಮ ಮನೆಯಂಗಳದಿ ಬೆಳೆದೊಂದು ಹೂವನು' ಮುಂತಾದ ಭಾವಗೀತೆಗಳನ್ನು ಕಾವ್ಯವಾಚನಗಳಲ್ಲಿ ಮೇಲಿಂದ ಮೇಲೆ ಕೇಳಿ, ಆ ಮೊದಲೇ ಅದಕ್ಕೆ ಮರುಳಾಗಿದ್ದೆ. ಹಾಗೆಯೇ, ಇನ್ನೂ ಬಹಳ ಹಿಂದೆ ಬಾಲ್ಯದಲ್ಲಿಯೇ ಸತ್ಯಶೋಧನ ಅವರಿಂದ ಪ್ರಕಟವಾಗುತ್ತಿದ್ದ ರಾಜರತ್ನಂ ಅವರ ಶಿಶುಸಾಹಿತ್ಯ, ಬಾಲಸಾಹಿತ್ಯಗಳ ಕೃತಿಗಳನ್ನೂ ಓದಿಕೊಂಡಿದ್ದೆ. ಹೀಗಾಗಿ ಮುಖತಃ ಕಂಡಿರದಿದ್ದರೂ ಅವರಿಬ್ಬರೂ ಪರೋಕ್ಷವಾಗಿ ಪರಿಚಿತರೇ. ಅವರೇ ಈಗ ಮೇಷ್ಟರಾಗಿದ್ದುದು ನನ್ನ ಪಾಲಿನ ಪುಣ್ಯವಿಶೇಷ.

ಬೆಂಗಳೂರಿನಲ್ಲಿ ನಾನಿದ್ದ ಮುಂದಿನ ಐದು ವರ್ಷಗಳಲ್ಲಿ, ಕಾಲೇಜು ಬಿಟ್ಟ ಮೇಲೆ ಪತ್ರಿಕೋದ್ಯಮಕ್ಕಿಳಿದು, 'ಲೇಖಕ' ಮಾಸಪತ್ರಿಕೆ ಮಾಡುವ ಹೊತ್ತಿಗೆ, ಕಲಾವಿದ ಆರ್. ಎಸ್. ನಾಯ್ಡು, ಅ.ನ.ಕೃ, ಅಡಿಗ ಮುಂತಾಗಿ ಹಲವರ ನಿಕಟವರ್ತಿಯಾದದ್ದು, 'ಡೆಕ್ಕನ್ ಹೆರಾಲ್ಡ್', 'ಪ್ರಜಾವಾಣಿ', 'ಜನಪ್ರಗತಿ'ಗಳ ಪತ್ರಿಕೋದ್ಯಮಿ ಮಿತ್ರರೆಲ್ಲ ಸೇರಿ ನನ್ನ ಬಳಗ ದೊಡ್ಡದಾದದ್ದು, ಗೋಖಲೆ ಸಾರ್ವಜನಿಕ ಸಂಸ್ಥೆ, ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ಗಳ ಕಾರ್ಯಕ್ರಮಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದುದು, ಎಂ. ಎಸ್. ಸತ್ಯುವಿನ ಗೆಳೆತನದಲ್ಲಿ ಇಂಗ್ಲಿಷ್ ಮತ್ತು ಕನ್ನಡ ನಾಟಕ ಮಂಡಳಿಗಳಲ್ಲಿ ಸಕ್ರಿಯ ಪಾತ್ರ ವಹಿಸಲು ತೊಡಗಿದ್ದು – ಇವೆಲ್ಲ ಸೇರಿ ನನ್ನ ಮುಂದಿನ ದಾರಿ ಇನ್ನು ಹಿಂದಿರುಗಲಾರದಷ್ಟು ಉದ್ದ, ನೇರ ತೆರೆದುಕೊಂಡದ್ದು ನನ್ನ ಭಾಗ್ಯದ ಮುಂದಿನ ಘಟ್ಟ.

ಮೊದಮೊದಲಿಗೆ ಕನ್ನಡ ಮೇಷ್ಟರುಗಳಿಬ್ಬರ ಬಗೆಗೂ ನಾವು ಹುಡುಗರಿಗೆ ಒಂದು ಬಗೆಯ ಉದಾಸೀನವೇ ಇತ್ತೆನ್ನಬೇಕು. ಅದಕ್ಕೆ ಕಾರಣ, ಅವರು ಕನ್ನಡ ಮೇಷ್ಟರೆಂದಲ್ಲ, ಅವರ ಕಂದಾಚಾರದ ಉಡಿಗೆ–ತೊಡಿಗೆಯ ಬಗ್ಗೆ ನಮಗಿದ್ದ ಪೂರ್ವಗ್ರಹ. ವಿ.ಸೀ. ಅವರ ರುಮಾಲು, ಕಚ್ಚೆಪಂಚೆ ಬೆಳ್ಳಗೆ ಗರಿಗರಿಯಾಗಿದ್ದರೂ, ಅವರು ನಮಗೆ ಕಾಣಿಸುತ್ತಿದ್ದುದು ಹಳೆಗಾಲದ ಪಂಡಿತರಂತೆಯೇ. ಇನ್ನು ರಾಜರತ್ನಂ ಅವರ ರೂಪವಿಶೇಷ: 'ಕ್ಲೋಸ್ ಕ್ರಾಫ್' ತಲೆಯ ಕುಳ್ಳಗಿನ ಬೆಳ್ಳನೆಯ ಆ ವ್ಯಕ್ತಿ ಕಾಣಿಸುತ್ತಿದ್ದುದು ಒಮ್ಮೆ ಯತಿಯಂತೆ, ಮತ್ತೊಮ್ಮೆ ಜಟ್ಟಿಯಂತೆ. ಅವರು ದ್ವಿ–ವೇಷಧಾರಿ. ಕ್ಲಾಸ್ ರೂಮಿನ ಹೊರಗೆಲ್ಲ ಇತ್ತ ಜುಬ್ಬವೂ ಅಲ್ಲ, ಅತ್ತ ಬನೀನೂ ಅಲ್ಲ ಅನ್ನುವಂತಹ ಬೆಳ್ಳನೆಯ ಒರಟು ಖಾದಿ ಅಂಗಿ, ದಟ್ಟಿಪಂಚೆ. ಕ್ಲಾಸಿಗೆ ಬರುವಾಗಷ್ಟೇ ಕಾಲೇಜಿನ ಮರ್ಯಾದೆ ಕಾಪಾಡಲು ಆ ದಟ್ಟಿಪಂಚೆ ಒಂದು ವಿಶೇಷ ರೀತಿಯ ಕಚ್ಚೆಗೆ ಮಾರ್ಪಟ್ಟು, ಮೇಲೊಂದು ನಸು ಹಸಿರು ಬಣ್ಣದ ಕೋಟಿನಂತಹ ಮೇಲಂಗಿ ತಗಲಿಕೊಳ್ಳುತ್ತಿತ್ತು. ಅದೇ ಇಂಗ್ಲಿಷ್, ಕೆಮಿಸ್ಟ್ರಿ, ಫಿಸಿಕ್ಸ್ ಮುಂತಾದ ಇತರ ವಿಷಯಗಳ ಅಧ್ಯಾಪಕರು, ಅವರಲ್ಲಿ ಕೆಲವರು ರುಮಾಲು ಸುತ್ತಿದರೂ, ಸೂಟು ಇಲ್ಲವೇ ಕೋಟು–ಪ್ಯಾಂಟು ತೊಟ್ಟು, ಟೈ ಕಟ್ಟಿ ಜಬರ್ದಾಗಿ ಬರುತ್ತಿದ್ದರು. ನಮ್ಮ ಕನ್ನಡ ಮೇಷ್ಟರುಗಳು ಸಹ ಏಕೆ ಹಾಗಿರಬಾರದು ಎಂಬುದು ನಮಗೆ ಬಿಡಿಸಲಾರದ ಪ್ರಶ್ನೆ. ಆದರೆ ಬರುಬರುತ್ತ ಇಂಗ್ಲಿಷ್ ಅಧ್ಯಾಪಕರು ಸಹ ವಿ.ಸೀ., ರಾಜರತ್ನಂ ಬಗೆಗೆ ತೋರಿಸುತ್ತಿದ್ದ ಗೌರವಾದರಗಳನ್ನು

ಗಮನಿಸಿದಾಗ ನಮ್ಮ ಪೂರ್ವಗ್ರಹ ಪೀಡೆ ತೊಡೆದು ಹೋಯಿತು. ವಿ.ಸೀ. ಅವರಿಗೆ ಸಲ್ಲುತ್ತಿದ್ದ ಗೌರವಕ್ಕೆ ಒಂದೆರಡು ಉದಾಹರಣೆ ಕೊಡುವುದಾದರೆ: ಒಮ್ಮೆ ಬ್ರಿಟನ್ನಿನಿಂದ ಬಂದಿದ್ದ ಒಬ್ಬ ಪ್ರೊಫೆಸರ್ ಇಂಗ್ಲಿಷ್ ಅಸೋಸಿಯೇಷನ್‌ನಲ್ಲಿ ಮಾತನಾಡುವವರಿದ್ದರು. ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಅನಂತರಾಮಯ್ಯನವರು ಖುದ್ದಾಗಿ ವಿ.ಸೀ. ಅವರ ಕೋಣೆಗೆ ಬಂದು 'ಇವತ್ತಿನದು ನಿಮ್ಮ ಮೀಸಲು ವಿಷಯ. ನೀವೇ ಅಧ್ಯಕ್ಷರಾಗಿ ನಡಸಿಕೊಡಬೇಕು' ಎಂದು ಕೇಳಿಕೊಂಡರು. ಇನ್ನೊಮ್ಮೆ ಅಲ್ಲಿ ವಿ.ಸೀ. ಅವರದೇ ಭಾಷಣವಿತ್ತು. ವಿಷಯ: 'Meaning and Value in Literature' ಯಾರೋ ಒಬ್ಬರು ಇಂಗ್ಲಿಷ್ ಮೇಷ್ಟರು 'in' ಪ್ರಿಪೋಸಿಷನ್ ಬಗ್ಗೆ ಅಭ್ಯಂತರವೆತ್ತಿ ಅದು 'of' ಇರಬೇಕಾಗಿತ್ತು ಅಂದದ್ದು ವಿ.ಸೀ. ಅವರ ಕಿವಿಗೆ ಬಿತ್ತು. ಅವತ್ತಿನ ಭಾಷಣದಲ್ಲಿ ಪ್ರಸ್ತಾವನೆಯಾಗಿ ವಿ.ಸೀ. 'in Literature', 'of Literature' ಗಳ ನಡುವಣ ವ್ಯತ್ಯಾಸವನ್ನು ಎತ್ತಿ ತೋರಿಸಿ, ಹೇಗೆ ಎರಡೂ ಬೇರೆ ಬೇರೆ ವಿಷಯಗಳಾಗುತ್ತವೆ ಎಂಬುದನ್ನು ವಿವರಿಸಿ ಆ ಇಂಗ್ಲಿಷ್ 'ಸ್ನಾಬ್'ಗಳ ಬಾಯಿ ಮುಚ್ಚಿಸಿದರು. ಇಂತಹ ಸಂಗತಿಗಳಿಗೆ ಸಾಕ್ಷಿಯಾದ ಮೇಲೆ ವಿ.ಸೀ. ಅವರ ಬೆಲೆ ನಮಗೆ ತಿಳಿದು, ಅವರ ಬಗ್ಗೆ ಆದರ ಗೌರವಗಳು ಗಟ್ಟಿಗೊಳ್ಳದೆ ಇರುವುದು ಹೇಗೆ?

ಬಿ.ಎಸ್‌ಸಿ.ಯಲ್ಲಿ ಕನ್ನಡಕ್ಕೆ ಗೊತ್ತಾಗಿದ್ದ ಪಠ್ಯಪುಸ್ತಕಗಳೆಂದರೆ ಬಸವಪ್ಪಶಾಸ್ತ್ರಿಗಳು ಅನುವಾದಿಸಿದ ಕಾಳಿದಾಸನ ಅಭಿಜ್ಞಾನ ಶಾಕುಂತಲ ನಾಟಕ ಮತ್ತು ಇನಾಂದಾರರ 'ಮೂರಾಬಟ್ಟೆ' ಕಾದಂಬರಿ. ಮೊದಲಿನದು ವಿ.ಸೀ. ಅವರ ಪಾಲಿಗೆ ಬಂದಿತ್ತು. ಕನ್ನಡ ತರಗತಿಗಳಾಗುತ್ತಿದ್ದುದು ಸೆಂಟ್ರಲ್ ಕಾಲೇಜು ವಿಸ್ತರಣದ ಆಚೆ ಕೊನೆಗಿದ್ದ ಗಣಿತಶಾಸ್ತ್ರ ಭವನದ ಮುಂಭಾಗದ ದೊಡ್ಡ ಸಭಾಂಗಣದಲ್ಲಿ. ಅದು 'ರಾಯಲ್ ಹಾಲ್.' ಇಡೀ ಕಾಲೇಜಿನಲ್ಲೇ ಅದಕ್ಕೆ ಸರಿಗಟ್ಟುವ ಇನ್ನೊಂದು ಸಭಾಂಗಣವಿರಲಿಲ್ಲ. ಉಳಿದ ಕಟ್ಟಡಗಳಿಗೆಲ್ಲ ಮಣ್ಣುಗೆಂಪಿನ ಬಣ್ಣ ಬಳಿದಿದ್ದರೆ ಇದೊಂದಕ್ಕೆ ಮಾತ್ರ ಹಳದಿ ಬಣ್ಣವಿದ್ದು ಅದು ತನ್ನದೇ ಬೇರೆತನ ಪಡೆದಿತ್ತು. ಒಂದು ವಿಷಯ ಅಥವಾ ಸಂಗತಿ ಮನಸ್ಸಿಗೆ ಹತ್ತಿರವಾಗಲು ಇಂತಹ ಅದರಾಚೆಯ ಅಂಶಗಳೂ ಕಾರಣವಾಗುತ್ತದೋ ಏನೊ!

ವಿ.ಸೀ. ಅವರ ಬೋಧನ ವಿಧಾನ ಮೊದಮೊದಲು ತುಂಬ ವಿಚಿತ್ರವಾಗಿ ಕಂಡು ಅದು ನಮಗೆ ಹಿಡಿಸದೇ ಹೋದದ್ದು ಆಶ್ಚರ್ಯವಲ್ಲ. ಅದರಲ್ಲಿ ಪದಶಯಾರ್ಥವಿಲ್ಲ, ಕಥಾ ನಿರೂಪಣೆಯಿಲ್ಲ, ಪಾತ್ರ ವಿವರಣೆಯಿಲ್ಲ, ಸಹಾಯಕವಾಗುವ ನೋಟ್ಸ್ ಇಲ್ಲ, ಪರೀಕ್ಷೆಯಲ್ಲಿ ಬರಬಹುದಾದ ಪ್ರಶ್ನೆಗಳ ಸಂಕೇತವಿಲ್ಲ, ಇದೆಂತಹ ಪಾಠ? ಇವರೆಂತಹ ಮೇಷ್ಟರು? – ಎಂದು ಅನಿಸಿದ್ದು ನಿಜ. ಆದರೆ ಮುನ್ನಡೆದಂತೆ ಅವರ ಪಾಠದ ವೈಖರಿ ತಿಳಿಯುತ್ತ ಬಂತು.

ಪಠ್ಯ ವಿಷಯ ಯಾವದೇ ಇರಲಿ, ವಿ.ಸೀ. ಅವರ ಕೈಯಲ್ಲಿ ಅದು ಒಣಮರವಲ್ಲ. ಒಣಮರವಾಗಿದ್ದುದು ಸಹ ಅವರ ಕೈ ತಾಕಿದೊಡನೆ ಚಿಗುರಿ, ಹಸಿರಾಗಿ, ನಾಲ್ಕೂ ಕಡೆ ನೂರಾರು ಬಿಳಿಲು ಬಿಟ್ಟುಕೊಂಡು ಒಂದು ವಿಶಾಲವೃಕ್ಷವಾಗಿ ಹರಡಿಕೊಳ್ಳುವುದು. ಅಷ್ಟೇ ಅಲ್ಲ, ಅದರ ಸುತ್ತಮುತ್ತಲೂ ಹಲವಾರು ಸಸಿ, ಮರಿಸಸಿಗಳು ಹುಟ್ಟಿಕೊಂಡು, ಅವೂ ಬೆಳೆದು, ಬಲಿತು, ಒಂದು ಸುಂದರ ವನವಾಗುವುದು. ಅವುಗಳ ಮಧ್ಯೆ ಅನೇಕ ಸಲ

ಮೂಲವೃಕ್ಷ ಇದ್ದೂ ಇಲ್ಲದಂತೆ ಕಣ್ಣು ಮುಚ್ಚಾಲೆಯಾಡುತ್ತ, ಬಂದು ಹೋಗಿ ಮಾಡುವುದು. ವಿ.ಸೀ. ಅವರ ಗುರುಗಳಾದ 'ಶ್ರೀ' ಅವರು ಪಾಠ ಮಾಡುತ್ತಿದ್ದುದೂ ಹೀಗೆಯೇ ಅಂತೆ. ತಮಗೆ ಆ ಬೋಧನ ವಿಧಾನ ಬಂದದ್ದು 'ಶ್ರೀ' ಅವರಿಂದಲೇ ಎಂದು ವಿ.ಸೀ.ಯೆ ಹೇಳಿದ್ದ ನೆನಪು.

ಇಡೀ ವಿಶ್ವಸಾಹಿತ್ಯದಲ್ಲೇ ಕಾಳಿದಾಸನ ಶಾಕುಂತಲ ನಾಟಕ ಅದರಲ್ಲಿ ಚಿತ್ರಿತವಾಗಿರುವ ಶಕುಂತಲೆಯ ಪಾತ್ರದಿಂದಾಗಿ ವಿ.ಸೀ. ಅವರ ಅತಿ ಮೆಚ್ಚಿನ ಕೃತಿ. ಅವರ ಹೆಂಗರುಳನ್ನು ಕಲಕಿ, ಅವರ ಮಾನಸಿಕತೆಯ ಒಂದು ಅವಿಭಾಜ್ಯ ಅಂಶವಾಗಿದ್ದ ಧರ್ಮಪಕ್ಷಪಾತವನ್ನು ಕೆರಳಿಸಲೆಂದೇ ಕಾಳಿದಾಸ ಅದನ್ನು ಬರೆದನೆನ್ನುವಷ್ಟರ ಮಟ್ಟಿನದು. ಅದರ ಒಂದೊಂದು ಸಂಗತಿ, ಸನ್ನಿವೇಶಗಳು, ಅಲ್ಲಿ ಸ್ಫುರಿಸುವ ರಸಭಾವಗಳು, ಅಲ್ಲಿನ ಸ್ನೇಹ, ಮಮತೆ, ಕರುಣೆ, ಪ್ರಕೃತಿಯ ಜೀವಂತತೆ, ಆಶ್ರಮದ ಪ್ರಶಾಂತ ಸೌಂದರ್ಯ, ಅಧರ್ಮದಲ್ಲಿ ಜನ್ಮ ತಳೆದು ತಂದೆ ತಾಯಿಗಳಿಂದ ಪರಿತ್ಯಕ್ತಳಾಗಿ, ಪರರ ಪ್ರೀತಿ ಕರುಣೆಗಳ ನೆರಳಲ್ಲಿ ಬೆಳೆದ ಹೆಣ್ಣು ಮಗಳೊಬ್ಬಳ ಮುಗ್ಧತನ, ತನ್ನದಲ್ಲದ ತಪ್ಪಿಗಾಗಿ ಅವಳಿಗೆ ಆಗುವ ಅನ್ಯಾಯ, ಅಪಮಾನ, ನೋವು – ಹೀಗೆ ಅದರ ಒಂದೊಂದು ಅಂಶವೂ ವಿ.ಸೀ. ಅವರ ಹೃದಯತಳವನ್ನು ಸ್ಪರ್ಶಿಸಿ, ಆ ಸಂದರ್ಭಕ್ಕೆ ತಕ್ಕಂತೆ ಅವರಲ್ಲಿ ಪ್ರತಿಸ್ಪಂದನವನ್ನುಂಟು ಮಾಡುತ್ತಿತ್ತು.

ಪಾಠ ಹೇಳುವಾಗ ವಿ.ಸೀ. ಅವರಿಗೆ ಪಠ್ಯಪುಸ್ತಕದ ಅವಶ್ಯಕತೆಯಿರುತ್ತಿರಲಿಲ್ಲ. ಕನ್ನಡ ಅನುವಾದದ, ಅದಕ್ಕಿಂತ ಹೆಚ್ಚಾಗಿ ಮೂಲ ಸಂಸ್ಕೃತ ಪಾಠದ ಪದಪದವೂ, ಅವರಿಗೆ ಕಂಠಸ್ಥವಾಗಿರುತ್ತಿತ್ತು. ಆದರೂ ಮುಂದಿನ ಸಾಲಿನ ಯಾವನಾದರೂ ಒಬ್ಬ ಹುಡುಗನಿಂದ ಪುಸ್ತಕ ಪಡೆದು ಮೇಜಿನ ಮೇಲಿಟ್ಟುಕೊಳ್ಳುತ್ತಿದ್ದರು. ಗದ್ಯ ಸಂಭಾಷಣೆ ಬಂದಾಗ ಮಾತ್ರ 'ರಿಲೀಫ್'ಗೊ ಎಂಬಂತೆ ಅದನ್ನು ತೆಗೆದು ನೋಡುವುದೆಷ್ಟೋ ಅಷ್ಟೆ. ಕನ್ನಡ ಅನುವಾದಕ್ಕಿಂತ ಹೆಚ್ಚಾಗಿ ಸಂಸ್ಕೃತ ಮೂಲವೇ ಪಾಠಕ್ಕೆ ಆಧಾರ. ಹಾಗೆಂದು ಕನ್ನಡ ಅನುವಾದದಲ್ಲಿನ ಶ್ರೇಷ್ಠ ಕಂದ ವೃತ್ತಗಳನ್ನು ನಿರ್ಲಕ್ಷಿಸುತ್ತಿರಲಿಲ್ಲ. ನಾಟಕದ ರಸಸ್ಥಾನಗಳನ್ನು ಅವು ಬಂದಬಂದಂತೆ ಗುರುತಿಸಿ, ಅವುಗಳ ಸವಿಸ್ತಾರ ವಿವರಣೆ ನೀಡುತ್ತಿದ್ದರು. ಪಾಠ ವೆಂದರೆ ಬರಿಯ ಮೇಲ್ಪೈ ಪದರಗಳನ್ನು ಕೆದಕುವುದಲ್ಲ, ಅದರ ಆಳಕ್ಕಿಳಿದು ತಮ್ಮ ಒಳನೋಟವನ್ನು ಮೂಡಿಸುವುದು ವಿ.ಸೀ. ಅವರ ವೈಶಿಷ್ಟ್ಯ. ನಾಂದೀಶ್ಲೋಕವಾದ 'ಯಾ ಸೃಷ್ಟಿಃ ಸ್ರಷ್ಟುರಾದ್ಯಾ ವಹತಿ ವಿಧಿ ಹುತಂ.....' ಅನ್ನು ಗಂಭೀರವಾಣಿಯಲ್ಲಿ ಮೊಳಗಿಸಿ, ಅಷ್ಟಮೂರ್ತಿಯ ಕಲ್ಪನೆಯಿಂದ ಪಾಠದ ಆರಂಭ.

ದುಷ್ಯಂತನ ಬೇಟೆಯ ವೈಖರಿಯ ವರ್ಣನೆ ಮುಗಿದು, ವೈಖಾನಸರು ಹೇಳುವ 'ಮೊರೆಯೇ, ಇದು ಆಶ್ರಮದ ಮೃಗ. ನಹಂತವ್ಯೋ ನ ಹಂತವ್ಯಃ' ಎಂಬಲ್ಲಿಗೆ ಬರುವಾಗ ಪಾಠದ ಬಿಸಿಯೇರುತ್ತಿತ್ತು. ಇಡೀ ನಾಟಕ ಹೇಗೆ ವನ್ಯಸಂಸ್ಕೃತಿಯ ಮೇಲೆ ನಾಗರಿಕ ಸಂಸ್ಕೃತಿ ನಡಸುವ ದಾಳಿಗೆ ಒಂದು 'ಮೆಟಫರ್', ಅಲ್ಲಿ ನಡೆಯುವುದು Rape of Nature, Rape of innocence (ಈ ಮಾತು ವಿ.ಸೀ. ಅವರ ಕಾಲಕ್ಕಿಂತ ಈಗ್ಗೆ ಹೆಚ್ಚು ಸಂಗತ!), ದುಷ್ಯಂತ ಶಕುಂತಲೆಯರು ಹೇಗೆ ಬೇರೆ ಬೇರೆ ಸಂಸ್ಕೃತಿಯ ಪ್ರತೀಕಗಳು, ಹೆಂಗ ಹೆಂಗಸರೇ ಇರುವಾಗ ಆಶ್ರಮಕ್ಕೆ ನುಗ್ಗಿ, ಒಬ್ಬ ಹಸುಳೆ ಹುಡುಗಿಯನ್ನು ಮರುಳು ಮಾಡಿ ಪ್ರಣಯಕ್ಕೆ

ತೊಡಗುವ ದುಷ್ಯಂತನ ಕುಟಿಲತೆ, ಅದಕ್ಕೆ ಬಲಿಬೀಳುವ ಶಕುಂತಲೆಯ ಮುಗ್ಧತೆಗಳು ಆ ಸಂಸ್ಕೃತಿಗಳಿಗೆ ಅನುಗುಣವಾದ ಗುಣಗಳು. ಪ್ರೇಮಾಂಕುರತೆಯೇನೋ ಸರಿಯೋ ಸರಿ, ಆದರೆ ಈಗಾಗಲೇ ಹಲವರು ಹೆಂಡಿರನ್ನು ರುಚಿ ನೋಡಿರುವ ದುಷ್ಯಂತನಿಗೆ ಕಣ್ವರು ಸೋಮತೀರ್ಥದಿಂದ ಹಿಂದಿರುಗಿ ಬಂದು, ಅವರ ಮದುವೆಯನ್ನು ವಿಧಿಪೂರ್ವಕವಾಗಿ ನಡೆಸಿಕೊಡುವವರೆಗೆ ಕಾಯಲಾರದಷ್ಟು ಕಾಮಾತುರತೆಯಾದರೆ ಅವನೆಂತಹ ದೊರೆ? ಅದೆಂತಹ ಉದಾತ್ತತೆ?

ಆ ಕಡೆ ಮೂರು, ಈ ಕಡೆ ಮೂರು ಅಂಕಗಳ ನಡುವಿನ ನಾಲ್ಕನೆಯ ಅಂಕ ಎಲ್ಲ ಅರ್ಥಗಳಲ್ಲಿಯೂ ನಾಟಕದ ಶಿಖರ. ದುರ್ವಾಸನ ಕೋಪ, ಶಾಪ. ಪಾಪ! ಒಬ್ಬ ಬಡ ಹುಡುಗಿಯ ಬಾಳು ದುಃಖದಲ್ಲಿ ತೊಯ್ಯುವಂತೆ ಶಾಪ ಕೊಡುವವನು ಅವನೆಂತಹ ಮಹರ್ಷಿ? ಅವನು ಮಾಡಿದ ತಪಸ್ಸೆಲ್ಲ ಇದಕ್ಕಾಗಿಯೇ? ಕಣ್ವರೂ ಅಷ್ಟೆ. ಶಕುಂತಲೆ ಗರ್ಭಿಣಿಯಾಗಿರುವ ಸ್ಥಿತಿಯಲ್ಲಿ ಅವಳನ್ನು ಗಂಡನ ಮನೆಗೆ ಅಟ್ಟುವುದೆಂದರೇನು? ಅವಳ ಮದುವೆಯನ್ನೇ ಒಪ್ಪಿಕೊಂಡ ಮೇಲೆ ಸಾಕುತಂದೆಯಾಗಿ ಅವಳ ಹೆರಿಗೆಯ ಜವಾಬ್ದಾರಿ ಅವರದಲ್ಲವೆ? ಅಥವಾ ಆ ಕಾಲದ ಸಂಪ್ರದಾಯದ ಪ್ರಕಾರ ಹೆರಿಗೆ ಗಂಡನ ಮನೆಯಲ್ಲಾಗುತ್ತಿತ್ತೆ? ಆಶ್ರಮದಲ್ಲೇ ಹೆರಿಗೆಯಾಗಲಿ ಎಂದಿದ್ದರೆ ನಾಟಕ ಬೆಳೆಯುವುದಾದರೂ ಹೇಗೆ? ನಾಟಕೀಯತೆಯಿಂದ ಕೂಡಿದಾಗಲೇ ಅಲ್ಲವೆ ನಾಟಕ ನಾಟಕವಾಗುವುದು?

ಚತುರ್ಥಾಂಕದ ಚತುಷ್ಟಯಗಳನ್ನು ವಿವರಿಸುವಾಗ ವಿ.ಸೀ. ಅವರ ಮುಖದಲ್ಲಿ ಅನುಕಂಪ ಸುರಿಯುತ್ತಿತ್ತು. ಕಣ್ವರ ದುಃಖ ಅವರ ದುಃಖ. ಅವುಗಳಲ್ಲಿ ಮೊದಲನೆಯದರಲ್ಲಿ ಬರುವ 'ಪೀಡ್ಯಂತೇ ಗೃಹಿಣಃ ಕಥಂ?' ಎಂಬ ಮಾತು ವಿ.ಸೀ. ಅವರ ಜೀವನಾನುಭವದೊಡನೆ ಬೆರೆತು ಅವರ ವಿಖ್ಯಾತ 'ಮನೆ ತುಂಬಿಸುವ ಹಾಡು' ಕವಿತೆಗೆ ಪ್ರೇರಣೆಯಾಗಿದೆಯೆಂದು ನನ್ನ ನಂಬಿಕೆ. ಶಕುಂತಲೆ 'ಬಾ' ಎಂದು ಕರಸಿಕೊಳ್ಳದೆಯೂ ಗಾಂಧರ್ವ ವಿವಾಹ ಮಾಡಿಕೊಂಡ 'ಗಂಡನಲ್ಲದ ಗಂಡ'ನ ಮನೆಗೆ ಗರ್ಭಿಣಿಯ ಅವಸ್ಥೆಯಲ್ಲಿ ಹೊರಡುವ ಸನ್ನಿವೇಶ ಬಂದಾಗ ವಿ.ಸೀ. ಅವರ ಕಂಠ ಗದ್ಗದಿತವಾಗುತ್ತಿತ್ತು. ಕಣ್ಣಿಂಚಿನಲ್ಲಿ ಒಂದೆರಡು ಹನಿ ಕಣ್ಣೀರು ಕಾಣಿಸಿಕೊಳ್ಳುತ್ತಿತ್ತು.

ಇದೇ ಭಾವ ಇನ್ನೂ ಹೆಚ್ಚು ಶಕುಂತಲೆ ರಾಜಾಸ್ಥಾನದಲ್ಲಿ ನಿಂತಾಗಿನ ಸಂದರ್ಭದಲ್ಲಿ. ಅದು ನ್ಯಾಯಾಲಯದ ಕಟಕಟೆಯಲ್ಲಿ ಒಬ್ಬ ಅನಾಥ ಹುಡುಗಿಯನ್ನು ನಿಲ್ಲಿಸಿ, ರಾಜ ದುಷ್ಯಂತ ತನ್ನ ತಪ್ಪಿಗೆ ಅವಳಿಗೆ ಶಿಕ್ಷೆ ವಿಧಿಸಿದಂತೆ! ಹೀಗೆ ವಿವರಿಸುವಾಗ ವಿ.ಸೀ. ದುರ್ವಾಸರ ಶಾಪದ ಪ್ರಸಂಗವನ್ನೇ ಬದಿಗೊತ್ತಿ, ಇಡೀ ನಾಟಕವನ್ನು ದೈವದಾಟದ ಬದಲು ಕೇವಲ ಒಂದು ಮಾನವೀಯ ಕಥನವನ್ನಾಗಿ ನೋಡುತ್ತಿದ್ದರೆನಿಸುತ್ತದೆ. ಕೊನೆಯಲ್ಲಿ ಶಾರ್ಙ್ಗರವ-ಶಾರದ್ವತರು ತಮ್ಮ ಜವಾಬ್ದಾರಿಯಿಂದ ಕೈ ತೊಳೆದುಕೊಂಡು ಶಕುಂತಲೆಯೊಬ್ಬಳನ್ನೇ ರಾಜಾಸ್ಥಾನದಲ್ಲಿ ಬಿಟ್ಟು ಹೋಗುವಾಗ 'ನೀವೂ ನನ್ನ ಕೈ ಬಿಡುವಿರಾ?' ಎಂಬ ಅವಳ ಆರ್ತನಾದ, ಹಿಂದೆಯೇ 'ನೀನಾದರೂ ನನ್ನನ್ನು ಕರೆದುಕೊ' ಎಂಬ ಚೀತ್ಕಾರ, ಅದು ಹೇಗೆ ರಾಮಾಯಣದ ಸೀತೆಯ ಅಗ್ನಿಪರೀಕ್ಷೆಯ ಪ್ರತಿಧ್ವನಿ ಎಂದು ವರ್ಣಿಸುವಾಗ ವಿ.ಸೀ. ಅವರ ಕಣ್ಣಲ್ಲಿ ಗಳಗಳ ಅಳು.

ಅದೇ ಆರನೆ ಅಂಕಕ್ಕೆ ಬಂದಾಗ, ವಿ.ಸೀ. ಅವರಲ್ಲಿ ಇನ್ನೊಂದು ಬಗೆಯ ಕಾವು ಕಾಣಿಸಿಕೊಳ್ಳುತ್ತಿತ್ತು. ಅದರ 'ಪ್ರವೇಶಕ'ದ ಬಿಸ್ತ ಮತ್ತು ನಗರರಕ್ಷಕರ ಪ್ರಕರಣ ಕಾವ್ಯದೃಷ್ಟಿಯಿಂದ ಮುಖ್ಯವಲ್ಲದಿರಬಹುದು. ಆದರೆ ವಿ.ಸೀ. ಅವರಿಗೆ ಬೇರೊಂದು ಕಾರಣಕ್ಕಾಗಿ ಅದು ಅರ್ಥಪೂರ್ಣ. ಈ ದೇಶದಲ್ಲಿ ಕಾಳಿದಾಸನ ಕಾಲದಿಂದ, ಅಂದರೆ ಒಂದೂವರೆ ಸಹಸ್ರ ವರ್ಷಗಳಿಗೂ ಹೆಚ್ಚು ಕಾಲದಿಂದ, ನಗರರಕ್ಷಕರು (ಈಗ ಪೊಲೀಸರು) ಕೊಂಚವೂ ಬದಲಾಗದೆ ಇದ್ದಂತೆಯೇ ಇದ್ದಾರೆ. ಯಾರ ಯಾರನ್ನೋ ಕಳ್ಳರೆಂದು ಹಿಡಿದುತಂದು ಥಳಿಸುತ್ತಾರೆ. ಮುಂದೆ ಅವರು ಕಳ್ಳರಲ್ಲವೆಂದು ಸಾಬೀತಾದಾಗ ಸ್ನೇಹ ನಟಿಸಿ, ಹಲ್ಲು ಗಿಂಜಿ ಅವರಿಂದ ತಮ್ಮ ಮದ್ಯದ ಖರ್ಚಿಗೆ ನಾಲ್ಕು ಕಾಸು ಕೀಳಲು ಯತ್ನಿಸುತ್ತಾರೆ. ಆಗಲೂ, ಈಗಲೂ! ಅಬ್ಬಾ!

ಇದೇ ಸಂದರ್ಭದಲ್ಲಿ ಅವರಿಗೆ ಸುಲ್ತಾನ ಪೇಟೆಯ ಗಣಪತಿ ಮೆರವಣಿಗೆಯ ಸಂದರ್ಭದಲ್ಲೋ ಏನೋ ನಡೆದ ಕೋಮುವಾರು ದಂಗೆ, ಪೊಲೀಸ್ ಅತ್ಯಾಚಾರ ನೆನಪಿಗೆ ಬರುತ್ತಿತ್ತು. ತಾವು ಅದೇ ಹಾಲಿನಲ್ಲಿ ಪಾಠ ಮಾಡುತ್ತಿದ್ದಾಗ, ಹೊರಗಡೆ ಹುಡುಗನೊಬ್ಬನಿಗೆ ಗುಂಡು ತಗಲಿದ ಪ್ರಸಂಗವನ್ನು ನೋವು ಹಾಗೂ ಕೋಪ ತುಂಬಿದ ಧ್ವನಿಯಲ್ಲಿ ನೆನೆಯುತ್ತಿದ್ದರು.

ಕೊನೆಯ ಸಪ್ತಮಾಂಕದಲ್ಲಿ ದುಷ್ಯಂತ ಶಕುಂತಲೆಯರ ಪುನಸ್ಸಮಾಗಮ, ನಡೆದುದೆಲ್ಲದರ ಪುನರಾವಲೋಕನ, ಪಶ್ಚಾತ್ತಾಪ, ಕ್ಷಮಾಯಾಚನೆ, ಸಮಾಧಾನ, ಸುಖಾಂತ. ಅದು ಎಂತಹ ಸುಖಾಂತ? ಸತ್ತರಷ್ಟೇ ದುರಂತವೆ? ಜೀವನ ವಸಂತದಲ್ಲಿ ಗಂಡ, ಮಗನೊಂದಿಗೆ ನಗುನಗುತ್ತ ಕಾಲ ಕಳೆಯಬೇಕಾಗಿದ್ದ ಕಾಲದಲ್ಲಿ ಶಕುಂತಲೆ ಅಗಾಧ ಅವಮಾನ, ದುಃಖಿಗಳನ್ನು ಅನುಭವಿಸಿದ್ದು ಯಾವ ದುರಂತಕ್ಕೆ ಕಡಿಮೆ ಎಂಬ ಚರ್ಚೆಯೊಂದಿಗೆ ವರ್ಷದ ಪಾಠ ಮುಗಿಯುತ್ತಿತ್ತು.

ಇದು ಪಾಠದ ಕೇಂದ್ರತಂತುವಾದರೆ ಅದರ ಜಾಡನ್ನು ಹಿಡಿದು ಬರುತ್ತಿದ್ದ ಅವೆಷ್ಟೋ ಉಪವಿಷಯಗಳು ಅದರ ಸುತ್ತ ಹೆಣೆದುಕೊಳ್ಳುತ್ತಿದ್ದವು: ಮಹಾಭಾರತದ ಶಕುಂತಲೆಗೂ ಕಾಳಿದಾಸನ ಶಕುಂತಲೆಗೂ ಇರುವ ವ್ಯತ್ಯಾಸ, ವಿಲಿಯಂ ಜೋನ್ಸ್‌ನ ಇಂಗ್ಲಿಷ್ ಭಾಷಾಂತರದ ಗುಣಮಟ್ಟ, ಶಾಕುಂತಲವನ್ನು ಕುರಿತು ಗೋಯ್ತೆ (ಗಯಟೆ) ಹೇಳಿದ ಮಾತು: "Would'st thou the young year's blossoms and the fruit of its decline..... Would'st thou the earth and heaven itself in one sweet name combine", ಮ್ಯಾಕ್ಸ್‌ಮುಲರ್ ಮುಂತಾಗಿ ದೇಶವಿದೇಶಗಳ ವಿದ್ವಾಂಸರು ಕೊಟ್ಟಿರುವ ಅಭಿಪ್ರಾಯಗಳು, ಬಸವಪ್ಪಶಾಸ್ತ್ರಿಗಳ ಅನುವಾದದ ಶ್ರೇಷ್ಠತೆ, ತಾವು ನೋಡಿದ ಆ ನಾಟಕದ ರಂಗ-ಪ್ರದರ್ಶನಗಳು, ಶಕುಂತಲೆ ಕಣ್ವಾಶ್ರಮದಿಂದ ಬೀಳ್ಕೊಡಿಗೆ ಪಡೆಯುವ ಸನ್ನಿವೇಶವನ್ನು ಕಲಾವಿದ ವೆಂಕಟಪ್ಪನವರು ಉಬ್ಬುಶಿಲ್ಪದಲ್ಲಿ ಮೂಡಿಸಿರುವ ಸೊಗಸು, ಬಂಗಾಲ್ ಸ್ಕೂಲ್‌ನ ಶಕುಂತಲೆಯನ್ನು ಕುರಿತ ವರ್ಣಚಿತ್ರಗಳು — ಹೀಗೆಯೇ ಇನ್ನೂ ಎಷ್ಟೋ.

ಕನ್ನಡ ತರಗತಿ, ಕನ್ನಡ ಪಠ್ಯಪುಸ್ತಕ. ಆದರೆ ಪಾಠ ನಡೆಯುತ್ತಿದ್ದುದೆಲ್ಲ ಇಂಗ್ಲಿಷ್ ಬೆರೆತ ಕನ್ನಡದಲ್ಲಿ. ವಿ.ಸೀ.ಗೆ ಸಿಕ್ಕಿದ್ದ ಬಿರುದು: 'The one and the only English

teacher of Kannada!' ಪಾಠ ಮಾಡುವಾಗ ಹಿಂಬದಿಯಲ್ಲಿ ಕಪ್ಪುಹಲಗೆ, ಮೇಜಿನ ಮೇಲೆ ಹಿಡಿಯಷ್ಟಾದರೂ ಸೀಮೆಸುಣ್ಣವಿರಬೇಕು. ದೃಷ್ಟಿ ತರಗತಿಯ ಕಡೆಗಿದ್ದರೂ ಹಿಂಬಾಚಿದ ಕೈ ಆ ಕಡೆ ನೋಡದೆಯೆ ಹಲಗೆಯ ಮೇಲೆ ಗೀಚುತ್ತಿರುತ್ತಿತ್ತು. ಆಡುತ್ತಿರುವ ಮಾತಿಗೆ ಒತ್ತು ಕೊಡುವಂತೆ ಅಲ್ಲಿ ಕೆಲವು ಮುಖ್ಯಪದಗಳು ಕಾಣಿಸಿಕೊಳ್ಳುತ್ತಿದ್ದವು. ಆ ಕಡೆ ನೋಡದೆಯೆ ಬರೆಯುತ್ತಿದ್ದುದರಿಂದ ಪದಗಳ ಮೇಲೆಯೇ ಪದಗಳು ಊರುತ್ತಿದ್ದವು. ಕೆಲವಕ್ಕೆ ದುಂಡುಸುತ್ತು. ಒಂದರಿಂದ ಇನ್ನೊಂದಕ್ಕೆ ಎಳೆದ ಬಾಣಗಳು, ಕಮಾನುಗಳು. ಪಾಠದ ಕೊನೆಗೆ ಇಡೀ ಕಪ್ಪುಹಲಗೆಯೊಂದು 'ಸರ್ರಿಯಲಿಸ್ಟ್' ಚಿತ್ರ, ಫ್ರೆಂಚ್ ಕವಿ–ಚಿತ್ರಕಾರ ಅಪೊಲಿನೇರ್ ರಚಿಸುತ್ತಿದ್ದ 'ಲಿಪಿಚಿತ್ರ'ಗಳನ್ನು ನೆನಪಿಗೆ ತರುವಂತೆ. ಆಗ ನಮ್ಮಲ್ಲಿ ಕ್ಯಾಮರಾ ಇದ್ದು ಅವುಗಳಮ್ಮೊಂದು ಚಿತ್ರ ತೆಗೆಯುವುದಾಗಿದ್ದಿದ್ದರೆ!

ಬರೆಯುತ್ತ ಹೋದಂತೆ ಸೀಮೆಸುಣ್ಣ ಪಟ್ ಪಟ್ ಎಂದು ಮುರಿದು ಕೆಳಬಿದ್ದು, ಕೈ ಮುಂದಿನ ಸೀಮೆಸುಣ್ಣಕ್ಕೆ ತಡಕುತ್ತಿತ್ತು. ಒಂದು ಗಂಟೆಯ ಅವಧಿ ಮುಗಿಯುವ ಹೊತ್ತಿಗೆ ಅವರ ಕೈ ಮೈ, ಬಟ್ಟೆಗಳೆಲ್ಲ ಧೂಳು. ಕೈಗಳಂತೂ ಮನೆಗೆ ಸುಣ್ಣ ಹೊಡೆಯುವವರಿದ್ದಂತೆ. ಆ ಕೈಯಲ್ಲೇ ಆಗಾಗ ಕಣ್ಣೊರಸಿಕೊಂಡು ಮುಖದ ಮೇಲೆ ಪಟ್ಟೆಗಳು. ಪಾಠ ಮುಗಿದ ಮೇಲೆ ಬಟ್ಟೆಯ ಮೇಲಿನ ಧೂಳನ್ನು ಜಾಡಿಸಿಕೊಳ್ಳುತ್ತ ವಿ.ಸೀ. ತಮ್ಮ ಅವತಾರಕ್ಕೆ ತಾವೇ ಮುಸಿಮುಸಿ ನಗುತ್ತಿದ್ದರು.

ನಾನು ಮೊದಲ ವರ್ಷದ ಬಿ.ಎಸ್ಸಿ.ಯಲ್ಲಿರುವಾಗ ಕನ್ನಡ ಆನರ್ಸ್‌ನಲ್ಲಿದ್ದ ಅನೇಕರ ಪರಿಚಯವಾಗಿ ಅವರೊಂದಿಗೆ ಸ್ನೇಹ ಕುದುರಿತು. ಇದಕ್ಕೊಂದು ಕಾರಣ, ಆನರ್ಸ್‌ನವರಿಗೂ ಕೆಲವು ಕಾಮನ್ ಕ್ಲಾಸ್‌ಗಳಿರುತ್ತಿದ್ದುದು. ಸಂಜೆ ಕಾಲೇಜು ಮುಗಿದ ಮೇಲೆ ನಾವು ಕನ್ನಡದವರೆಲ್ಲರೂ ಅಲ್ಲೇ ಎಲ್ಲಾದರೂ ಮರದ ಕೆಳಗೆ ಹರಟೆ, ಕಾಫಿಗಳಿಗೆ ಸೇರುತ್ತಿದ್ದೆವು. ಕನ್ನಡ ಸಾಹಿತ್ಯ, ಸಂಸ್ಕೃತಿ, ಕರ್ನಾಟಕ ಏಕೀಕರಣ, ಕನ್ನಡದ ಭವಿತವ್ಯಗಳಂತಹ ಗಂಭೀರ ವಿಷಯಗಳೂ ಚರ್ಚೆಗೆ ಬಲಿಯಾಗುತ್ತಿದ್ದವು. ಎಷ್ಟಾದರೂ ನಮ್ಮಲ್ಲಿ ಕೆಲವರು '–ಗೆ' ಕವಿಗಳಲ್ಲವೆ! ಮುಂದೆ ದೊಡ್ಡ ಸಾಹಿತಿಗಳಾಗುವ ಆಸೆ ಕಟ್ಟಿಕೊಂಡಿದ್ದವರಲ್ಲವೆ! '–ಗೆ' ಕವಿತೆಯೆಂದರೆ ದಿನವೂ ಎದುರಾಗುವ ಯಾವದಾದರೂ ಹುಡುಗಿಗೆ ಮನಸೋತು ಅವಳನ್ನು ಜೀವನ ದೇವತೆಯೆಂದು ಗ್ರಹಿಸಿ, ಅವಳನ್ನುದ್ದೇಶಿಸಿ ಬರೆದವು. ಉದಾಹರಣೆಗೆ, 'ನೀನಿಲ್ಲದೀ ಬಾಳು ಬರಿ ವ್ಯರ್ಥ / ಅದಕಿಲ್ಲ ಅರ್ಥ' ಇತ್ಯಾದಿ. ಇನ್ನು ಅವರ ಕಾವ್ಯನಾಮಗಳೋ, 'ಲೀಲಾಪ್ರಿಯ', 'ಗೀತಾಪ್ರಿಯ', ಮುಂತಾಗಿ.

ಕಾಲೇಜಿನಲ್ಲಿ ಇಂಗ್ಲಿಷ್ ಅಸೋಸಿಯೇಷನ್ ಒಂದು ಸಕ್ರಿಯವಾಗಿ ನಡೆಯುತ್ತಿದ್ದರೆ ಒಂದು ಕಾಲದಲ್ಲಿ ಭವ್ಯ ಇತಿಹಾಸವಿದ್ದ ಕರ್ನಾಟಕ ಸಂಘ ಹೇಳ ಹೆಸರಿಲ್ಲದಂತಾಗಿತ್ತು. ಹೀಗೇಕೆ? ನಾವು ಕನ್ನಡ ಭಕ್ತರೆಲ್ಲರೂ ಸೇರಿ ಕರ್ನಾಟಕ ಸಂಘವಾಗಬೇಕೆಂದು ರಾಜರತ್ನಂ ಬಳಿಗೆ ಅಹವಾಲು ಕೊಂಡುಹೋದೆವು. ಕನ್ನಡ ವಿಭಾಗ ಅರ್ಥಾತ್ ಕನ್ನಡ ಟೀಚರ್ಸ್ ರೂಮಿದ್ದದ್ದು ಕಾಲೇಜಿನ ಮಹಾದ್ವಾರದೊಳಗೆ ಪ್ರವೇಶ ಮಾಡಿದೊಡನೆಯೇ ಎದುರಾಗುತ್ತಿದ್ದ ಮೊದಲ ಕಟ್ಟಡದಲ್ಲಿ. ಅದರ ಮುಂಭಾಗದಲ್ಲಿ ಕಾಲೇಜಿನ 'ನರ್ವ್–ಸೆಂಟರ್' ಆಗಿದ್ದ ಅಯ್ಯರ್ ಹೋಟೆಲು. ಮುಂದೆ ಹಸಿರು ಮರಗಳ ಕೆಳಗೆ ಹಾಕಿದ್ದ ಕುರ್ಚಿ ಮೇಜುಗಳು.

ಸದಾ ಬಾಯಲ್ಲಿ ನೀರೂರಿಸುವ ದೋಸೆ, ಪಕೋಡಗಳ ಘಮ. ಕಟ್ಟಡದ ಹಿಂಬದಿಗೆ ಒಂದರ ಹಿಂದೊಂದರಂತೆ ಇದ್ದ ಎರಡು ಕೋಣೆಗಳೇ ಕನ್ನಡ ವಿಭಾಗ. ಅದರ ಹಿಂದೆ ಹತ್ತು ಹೆಜ್ಜೆಯಾಚೆ, ಅಕ್ಕಪಕ್ಕದ ಮಹಾವೀಥಿಗಳಲ್ಲಿ ಓಡಾಡುವವರೂ ಅಗತ್ಯ ಬಿದ್ದಾಗ ಒಳನುಗ್ಗುತ್ತಿದ್ದು, ಸದಾ ದುರ್ಗಂಧ ಬೀರುತ್ತಿದ್ದ ಕಕ್ಕಸು. ಅದರ ಹಿಂಬದಿಯ ಗೋಡೆಯ ಬಳಿ ಯಾವಾಗ ನೋಡಲಿ, ಹಿರಿಯ ಮೇಷ್ಟರುಗಳಿಬ್ಬರ ಕಣ್ಣು ತಪ್ಪಿಸಿ ಸಿಗರೇಟ್ ಎಳೆಯುತ್ತ ನಿಂತಿರುತ್ತಿದ್ದ ಕನ್ನಡದ ಮೂರನೆ ಮೇಷ್ಟರು. 'ಪಾಪ! ನಮ್ಮಿಂದಾಗಿ ಈತನಿಗೆ ಎಷ್ಟು ಕಷ್ಟ' ಎಂದು ವಿ. ಸೀ. ಅವರ ಅನುಕಂಪವಾದರೆ, 'ಇರಲಿ ಬಿಡಿ, ಹಾಗಾದರೂ ಸ್ವಲ್ಪ ವ್ಯಾಯಾಮವಾದ ಹಾಗಾಗುತ್ತೆ!' ಎಂದು ರಾಜರತ್ನಂ ಅವರ ಕೊಂಕುನುಡಿ.

ರಾಜರತ್ನಂ ನಮ್ಮ ಅಹವಾಲಿಗೆ ಉತ್ತರವಾಗಿ 'ಏನು, ನಿಮಗೆ ಕರ್ನಾಟಕ ಸಂಘ ಆಗಬೇಕೊ? ಎಷ್ಟು ಜನ ಸದಸ್ಯರನ್ನು ಮಾಡಿಸಲು ತಯಾರಿದ್ದೀರಿ?' ಎಂದು ಗುಡುಗುತ್ತ ಕೇಳಿದರು. ನಮ್ಮಲ್ಲಿ ಯಾವನೋ ಇತಿಮಿತಿ ತಿಳಿಯದವನೊಬ್ಬ 'ನೂರು ಜನ' ಅಂದ. 'ನೂರು ಅಂದರೆ ಎಷ್ಟು ಗೊತ್ತೊ? ತಿಂಗಳೊಳಗೆ ಇಪ್ಪತ್ತೈದು ಮೂವತ್ತು ಸದಸ್ಯರನ್ನು ಸಂಪಾದಿಸಿ ತನ್ನಿ, ಸಾಕು. ಆ ಮೇಲೆ ನೋಡೋಣ' ಎಂದು ನಮ್ಮ ಕೈಗೆ ರಸೀತಿ ಪುಸ್ತಕ ಕೊಟ್ಟರು. ಶುಲ್ಕ ತಿಂಗಳಿಗೆ ನಾಲ್ಕಾಣೆ. ಒಮ್ಮೊಮ್ಮೆ ದಿನನಿತ್ಯದ ಕಾಫಿಯ ಖರ್ಚಿಗೂ ದಿಕ್ಕಿಲ್ಲದ ಹುಡುಗರಿಗೆ ತಿಂಗಳಿಗೆ ನಾಲ್ಕಾಣೆಯ ಶುಲ್ಕವೆಂದರೆ ಜಾಸ್ತಿಯೇ. ಆದರೂ ತಿಂಗಳೊಳಗೆ ಅನೇಕರ ಶುಲ್ಕವನ್ನೂ ನಮ್ಮಲ್ಲಿ ದುಡ್ಡಿದ್ದವರು ತಮ್ಮ ಜೇಬಿಂದಲೇ ಹಾಕಿ, ಉಳಿದವರನ್ನು ಪುಸಲಾಯಿಸಿ, ಒತ್ತಾಯಿಸಿ, ಮುಂದೆ ನಾಟಕ ಮಾಡಿದಾಗ ಅದರಲ್ಲಿ ಪಾತ್ರ ಕೊಡಿಸುವ ಆಸೆ ತೋರಿಸಿ, ಆನರ್ಸ್‌ನ ಹುಡುಗಿಯರೆಲ್ಲ ಸದಸ್ಯರಾಗಿದ್ದಾರೆ ಎಂದು ಸುಳ್ಳು ಗಾಳಹಾಕಿ, ಹೇಗೋ ತಿಂಗಳ ಕೊನೆಯ ಹೊತ್ತಿಗೆ ಆರೇಳು ರೂಪಾಯಿ ಕೂಡಿಸಿ ರಾಜರತ್ನಂ ಬಳಿಗೆ ಕೊಂಡು ಹೋದೆವು. ಅವರಿಗೂ ನಮ್ಮ ಉತ್ಸಾಹವನ್ನು ಕಂಡು ಆಶ್ಚರ್ಯವೇ. ಅಂತೂ ಕರ್ನಾಟಕ ಸಂಘ ಶುರುವಾಯಿತು.

ಸಂಘದ ಕಾರ್ಯಕಲಾಪಗಳ ನೆಪದಲ್ಲಿ ಆಗಾಗ ಸಂಜೆಯ ಹೊತ್ತು ಕನ್ನಡ ವಿಭಾಗಕ್ಕೆ ಹೋಗುವ ಪರಿಪಾಟಿ ಮೊದಲಾಯಿತು. ರಾಜರತ್ನಂರಿಗಿಂತ ಹೆಚ್ಚಾಗಿ ಈಗ ವಿ.ಸೀ. ಹತ್ತಿರವಾದರು. ನಮ್ಮಲ್ಲಿ ಒಬ್ಬೊಬ್ಬರನ್ನೂ ವೈಯಕ್ತಿಕವಾಗಿ ಪರಿಚಯ ಮಾಡಿಕೊಂಡರು. ಯಾವ ಊರು? ತಂದೆ ತಾಯಿ ಯಾರು? ತರಗತಿಯ ಆಚೆ ಏನು ಓದುವ ಹವ್ಯಾಸವಿದೆ? ಇತರ ಆಸಕ್ತಿಗಳೇನು? ಮುಂತಾಗಿ. ತಾಯಿಯ ಕಡೆಯಿಂದ ನನ್ನ ಚಿಕ್ಕಪ್ಪ (ಅವರ ಹೆಸರು ಎಂ. ವೆಂಕಟನಾರಣಪ್ಪ) ಹಿಂದೆ ಮೈಸೂರು ಸರಕಾರದಲ್ಲಿ ಡೆವಲಪ್‌ಮೆಂಟ್ ಕಮೀಷನರ್ ಆಗಿದ್ದುದರಿಂದ ಅವರಿಗೆ ನಾನು ಹೆಚ್ಚು ಬೇಕಾದವನಾದೆ.

ಬರುಬರುತ್ತ ವಿ.ಸೀ. ಕಾಲೇಜು ಮುಗಿಸಿ ಮನೆಗೆ ಹಿಂದಿರುಗುವಾಗ ಅವರ ಜತೆ ಕೊಂಚ ದೂರ ಹೋಗುವ ರೂಢಿ ಬೆಳೆಯಿತು. ಕಾಲೇಜು ಬಿಟ್ಟು, ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಕಡೆಯಿಂದ ಕಬ್ಬನ್ ಪಾರ್ಕಿಗೆ ಹೋಗುವುದು. ಅಲ್ಲಿ ಆಗಾಗ್ಗೆ ಅವರ ಈಗ ವಿಖ್ಯಾತವಾಗಿರುವ ಆತಿಥ್ಯದಲ್ಲಿ, ಜಪಾನಿನ 'ಚಾನೋಯು' (ಚಹಸೇವನೆಯ ಅನುಷ್ಠಾನ)ವನ್ನು ನೆನಪಿಗೆ ತರುವಂತೆ, ಚಹಸೇವನೆ. ಅದು 'ಪಾಟ್'ನಲ್ಲಿಯೇ ಆಗಬೇಕು. ಎಂಟಾಣೆಯ

ಚಹಕ್ಕೆ ಬೇರೆಗೆ ಎಂಟಾಣೆ ಟಿಪ್ಸ್. ಟೀ ಚೆನ್ನಾಗಿತ್ತು ಅಂದರೆ 'ಇವೆಂತಹ ಟೀ? ಒಳ್ಳೆಯ ಡಾರ್ಜಲಿಂಗ್ 'ಲೀವ್ಸ್' ಇರಬೇಕು. ಬಿಸಿನೀರಿಗೆ ಬಿದ್ದೊಡನೆ ಅದು ಹೂವಿನಂತೆ ದಳದಳ ಅರಳಿಕೊಳ್ಳಬೇಕು. 'ಬೋನ್ ಚೈನಾ'ದಲ್ಲಿ ಕುಡಿಯಬೇಕು. ಆಗ ನೋಡಬೇಕು ಟೀಯ ಸೊಗಸು' ಎಂದೆಲ್ಲ ಟಿಪ್ಪಣಿ. ಇನ್ನು ಮಾತೊ? ಅದರ ವಿಷಯವೊ? ಕನ್ನಡ, ಸಂಸ್ಕೃತ, ಇಂಗ್ಲಿಷ್, ಐರೋಪ್ಯ ಎಲ್ಲ ಸೇರಿಸಂತೆ ಇಡೀ ಜಗತ್ತಿನ ಪ್ರಾಚೀನ-ಆಧುನಿಕ ಸಂಗೀತ, ರಂಗಭೂಮಿ, ಪರಂಪರೆ – ಆಧುನಿಕತೆ, ನೀತಿ-ನಡವಳಿಕೆ, ಇತಿಹಾಸ ಪುರುಷರು, ಅವರ ಓರೆಕೋರೆಗಳು, ಸಮಕಾಲೀನ ಸಾಹಿತ್ಯ – ಹೀಗೆ ಒಂದೆ, ಎರಡೆ? ನೂರಾರು. ಅವರ ವಂದಿಯಲ್ಲಿ ಜಾಲಾಡಿ ಹೋಗುತ್ತಿದ್ದವು. ಆ ಆ ಮಾತಿಗೆ ತಕ್ಕಂತೆ ಅಭಿನಯ. ನಡೆನುಡಿಯುತ್ತ ಯಾರದೋ ಮಾತನ್ನು ಒತ್ತಿ ಹೇಳಲು ಥಟ್ಟನೆ ನಿಲ್ಲುವುದು, ನಡುನಡುವೆ ಕೋಪ, ಹುಸಿನಗೆ, ವಿ.ಸೀ. ಅವರ ಮಾತು, ಅನೇಕ ವೇಳೆ ಹಿಂದುಮುಂದಿಲ್ಲದಿದ್ದರೂ, ಎಲೆಯಿಂದ ಎಲೆಗೆ, ಕೊಂಬೆಯಿಂದ ಕೊಂಬೆಗೆ, ಮರದಿಂದ ಮರಕ್ಕೆ ಧಾವಿಸುವ ಹಾರುಹಕ್ಕಿಯಿದ್ದಂತೆ. ಅದರ ಹೆಜ್ಜೆ ಹಿಡಿದು ಹಿಂಬಾಲಿಸುವುದು ಯಾರಿಗೂ ಕಷ್ಟವೇ. ಅವರಿಗೆ ತಾವು ಮಾತಾಡುವುದು ಕೇಳುವವರಿಗೆ ಅಗತ್ಯವೆಂದಲ್ಲ, ಅರ್ಥವಾಗುತ್ತದೆಯೆಂದಲ್ಲ, ಅದನ್ನು ಗ್ರಹಿಸುವ ಬೌದ್ಧಿಕ ಶಕ್ತಿ, ಸಂಸ್ಕಾರಗಳಿವೆಯೆಂದೂ ಅಲ್ಲ. ವಿ.ಸೀ. ತಮಗಾಗಿ ಮಾತನಾಡುತ್ತಿದ್ದರು. ಮಾತು ಅವರ ಬದುಕಿನ ಜೀವಾಳ. ಅದು ಅವರಿಗೆ ಉಸಿರಾಡುವಷ್ಟೇ ಸಹಜ ಹಾಗೂ ಅನಿವಾರ್ಯವಾದ ಕ್ರಿಯೆ. ಅವರ ಮಾತಿನ ವರಸೆಗೆ ಉದಾಹರಣೆಯಾಗಿ ಹೇಳುವುದಾದರೆ:*

"ರಂಗಾಭಿನಯದಲ್ಲಿ ವರದಾಚಾರ್ಯರನ್ನು ಮೀರಿಸಿದವರಿಲ್ಲ. ಅತನ ಹಾಡುಗಾರಿಕೆ ಇನ್ನೂ ಶ್ರೇಷ್ಠ. ಒಳ್ಳೆಯ ಚಿನ್ನದ ಕಂಠ. ಕಂದಪದ್ಯಗಳನ್ನು ಹಾಡುವುದರಲ್ಲಿ ಎತ್ತಿದ ಕೈ. ಒಂದು ಕಂದವನ್ನು ಅದೆಷ್ಟು ಬಗೆಯಾಗಿ ಹಾಡಿ ತೋರಿಸುತ್ತಿದ್ದರೊ! ಒಂದು ಸಲ ವೀಣೆ ಶೇಷಣ್ಣನವರೂ ಬಿಡಾರಂ ಕೃಷ್ಣಪ್ಪನವರೂ ಅವರ ನಾಟಕ ನೋಡಲು ಬಂದಿದ್ದರು. ರಂಗದ ಮೇಲಿದ್ದ ವರದಾಚಾರ್ಯರಿಗೆ ಸುದ್ದಿ ತಿಳಿಯಿತು. 'ರಾರಾಜಿಪಳು....' ಎಂಬ ಕಂದವನ್ನು ಕಾಂಬೋದಿ ರಾಗದಲ್ಲಿ ಮೂವತ್ತೈದು ನಿಮಿಷ ಹಾಡಿದರು. ಒಂದು ಕಂದ ಹಾಡಿ ಮುಗಿಸುವುದರೊಳಗೆ ಇಡೀ ರಾಗದ ಚಿತ್ರ ಕಣ್ಣಮುಂದೆ ಕಟ್ಟಿರುತ್ತಿತ್ತು. ಅದನ್ನು ಕೇಳಿ ಶೇಷಣ್ಣ ತಮಗೆ ತಾವೇ ಹೇಳಿಕೊಂಡರು, 'ಎಷ್ಟು ಚೆನ್ನಾಗಿ ಹಾಡ್ತೀಯೊ, ಮುಂಡೇಮಗನೆ, ಈ ನಾದ ನಮ್ಮ ವೀಣೇಲಿ ಬರೋದಿಲ್ವಲ್ಲೊ?"

ವಿ.ಸೀ. ಹಾಗೂ ಅವರ ಕೆಲವರು ಗೆಳೆಯರು ವಿದ್ಯಾರ್ಥಿಗಳಾಗಿದ್ದಾಗ ವರದಾಚಾರ್ಯರ ನಾಟಕಗಳನ್ನು ತಪ್ಪದೆ ನೋಡುತ್ತಿದ್ದರಂತೆ. ಅವರೆಲ್ಲರೂ ಸಂಗೀತಾಭ್ಯಾಸ ಮಾಡುತ್ತಿದ್ದವರು. ಆಗಾಗ ವಿಶ್ವೇಶ್ವರಪುರದ ಒಂದು ಪಾಳಿನಲ್ಲಿ ಕಲೆತು, ವರದಾಚಾರ್ಯರು ಹಾಡುತ್ತಿದ್ದ ಕಂದಗಳನ್ನು ಒಬ್ಬೊಬ್ಬರೂ ಹಾಡಿ, 'ಪರವಾಗಿಲ್ಲ, ಧ್ವನಿ ಕೆಟ್ಟಿಲ್ಲ' ಎಂದು ತಮಗೆ ತಾವೇ ಸಮಾಧಾನ ಮಾಡಿಕೊಳ್ಳುತ್ತಿದ್ದರಂತೆ.

---

* ಇದಕ್ಕೆ ನಾನು ಆಗಾಗ ಗುರುತು ಹಾಕಿಕೊಳ್ಳುತ್ತಿದ್ದ ಟಿಪ್ಪಣಿಗಳು ಆಧಾರ. ಇವುಗಳಲ್ಲಿ ಕೆಲವು ಅವರ 'ಸ್ಮೃತಿ ಚಿತ್ರಗಳು', 'ವ್ಯಕ್ತಿ ಚಿತ್ರಗಳು' ಗ್ರಂಥಗಳಲ್ಲಿ ಬಂದಿರಲೂಬಹುದು.

"ಚಿಕ್ಕ ರಾಮರಾಯರು ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡರು. ಬದುಕಿದ್ದಿದ್ದರೆ ವರದಾಚಾರ್ಯರನ್ನು ಮೀರಿಸುತ್ತಿದ್ದರು. ಅವರ ಸಂಗೀತ ಸಭೆಯಾದಾಗ ಕೊನೆಯಲ್ಲಿ ಕೋರಿಕೆ ಬಂದರೆ ಕಂದಗಳನ್ನು ಹಾಡುತ್ತಿದ್ದರು, ಅವು ಪೂರ್ಣ ಕೃತಿಗಳೋ ಎಂಬಂತೆ ವಿಸ್ತಾರವಾಗಿ."

ವಿ.ಸೀ. ಪ್ರಸ್ತಾಪಿಸುತ್ತಿದ್ದ ವಿಷಯಗಳಲ್ಲಿ ಕೆಲವು ದೀರ್ಘವಾದರೆ ಹೆಚ್ಚಿನವು ಕಿರಿದು, ನಿಮಿಷದ ಪುಡಿಗಳು:

"ಕನ್ನಡ, ಕನ್ನಡ ಎನ್ನುತ್ತೇವೆ. ಶುದ್ಧ ಕನ್ನಡದಲ್ಲಿ ಬರೆದ ಕಾವ್ಯ ಯಾವದಿದೆ? ಅಂತಹ ಒಂದು ಪ್ರಯತ್ನವೆಂದರೆ ಅಂಡಯ್ಯನ 'ಕಬ್ಬಿಗರ ಕಾವ'. ಅದರಲ್ಲೂ ತದ್ಭವ ರೂಪದಲ್ಲಿ ಸಂಸ್ಕೃತ ಪದಗಳೇ. ಸಂಸ್ಕೃತ ಬಿಟ್ಟು ಕನ್ನಡವಿಲ್ಲ."

'ಅಲಂಪು', 'ಕೆಂದ' ಪದಗಳಿಗೆ ಅರ್ಥ ನಿಶ್ಚಿತವಾಗಿಲ್ಲ. 'ಕೆಂದ' ಅಂದರೆ ಪ್ರಾಯಶಃ 'ಸಂಭೋಗ'ವಿರಬೇಕು. ಈಗಿನ 'ಕೆಯ್ → ಕೇದ'ಗಳಿಗೆ ಎಲ್ಲೋ ಸಂಬಂಧವಿರಬಹುದು.

"ಇಡೀ ಛಂದಸ್ಸೆಲ್ಲ ಸಮ, ಅರ್ಧಸಮ, ವಿಷಮ ಈ ಮೂರರಲ್ಲಿದೆ. ಅವಕಾಶವಾದರೆ ಮುಂದೆ ಇದನ್ನು ಎಲ್ಲಾದರೂ ವಿಶದವಾಗಿ ಬರೆಯಬೇಕು."

ಹೀಗೆಯೇ ಮಾತು ಧಾರೆ ಧಾರೆಯಾಗಿ ಬೀಳುತ್ತಿತ್ತು. ಅವರು ಮಾತಾಡುತ್ತ, ನಾವು ಕೇಳುತ್ತ ಪುಟ್ಟಣ್ಣ ಚೆಟ್ಟಿ ಟೌನ್‌ಹಾಲ್ ಬಳಿಗೆ ಬರುವಾಗ 'ಹೊತ್ತಾಯ್ತು, ಇನ್ನು ನೀವು ಹೋಗೀಪ್ಪ. ನೀವೂ ನಾಳೆಗೆ ಓದುಕೋಬೇಕಲ್ಲವೆ?' ಅನ್ನುತ್ತಿದ್ದರು. ಓದಿಕೊಳ್ಳುವುದು ಹಾಗಿರಲಿ, ಹಾಸ್ಟಲಿನಲ್ಲಿ ರಾತ್ರಿಯ ಊಟ ತಂಗಳಾಗಿಯೋ, ಮುಗಿದೋ ಹೋಗಿರುವುದಲ್ಲ ಎಂಬ ಆತಂಕದಲ್ಲಿ, ನಮಸ್ಕಾರ ಹೇಳಿ ದಡದಡ ಹಿಂದಿರುಗುತ್ತಿದ್ದೆವು.

ವಿ.ಸೀ. ಅವರ ಸಂಗದಲ್ಲಿ ಕೇಳಿದ್ದು ಸುಸಂಬದ್ಧತೆಯಿಲ್ಲದ ಬರಿಯ ತುಣುಕುಗಳಾದರೂ, ಅವುಗಳಲ್ಲಿನ ಅರ್ಥಪೂರ್ಣವಾದ ಉದ್ಧರಣೆ ಅಥವಾ ಬಿಡಿಶಬ್ದಗಳಿಂದಾಗಿ ಅವು ಮನಸ್ಸಿನ ಯಾವದೋ ಮೂಲೆಯಲ್ಲಿ ಅವಿತು ಕುಳಿತು, ಮುಂದೆಂದೊ ತಕ್ಕ ನೀರು ಗೊಬ್ಬರ ದೊರೆತಾಗ ಮೊಳಕೆಯೊಡೆದು ಈಗ ನಮ್ಮ ಶಾಶ್ವತ ಸಂಪತ್ತಿಯಾಗಿಲ್ಲವೆ? ಪಂಪ, ರನ್ನ, ಷೇಕ್ಸ್‌ಪಿಯರ್, ಇಬ್ಸೆನ್, ಗೋಯ್ತೆ, ಬರ್ನಾರ್ಡ್ ಷಾ, ಹಾಗೆಯೇ ಕಲಾ ಜಗತ್ತಿನಲ್ಲಿ ರೆಂಬ್ರಾಂಟ್, ರೆನ್ವಾ ಮುಂತಾಗಿ ಇನ್ನೂ ಹಲವರು ಈಗ ನಮ್ಮ ಮಾನಸಿಕತೆಯ ಒಂದು ಅವಿಭಕ್ತ ಅಂಶವಾಗಿ ಬದುಕಿಗೆ ತೃಪ್ತಿ ಸಂತೋಷಗಳನ್ನು ಕೊಡುತ್ತಿರುವುದು ವಿ.ಸೀ. ಎಂದೋ ಅವರುಗಳ ಬಗ್ಗೆ ಮಾಡಿದ ಅಲ್ಪ ಸೂಚನೆಗಳಿಂದಲೇ ಅಲ್ಲವೆ? ಶಿಕ್ಷಣದಲ್ಲಿ ಇದಕ್ಕೂ ಹೆಚ್ಚು ಏನು ಸಾಧ್ಯ?

ವಿ.ಸೀ. ಅವರನ್ನು ತೀರಾ ಹತ್ತಿರದಿಂದ ಬಲ್ಲವರಿಗೆ ಸಹ ಅವರ ಸ್ವಭಾವದಲ್ಲಿನ ಒಂದು ವಿಶಿಷ್ಟ ರೇಕಿನ ಪರಿಚಯವಾಗದೆ ಹೋಗಿರುವ ಸಾಧ್ಯತೆಯಿದೆ. ಅದೆಂದರೆ ಅವರ ಸರಸ, ವಿನೋದ ಪ್ರವೃತ್ತಿ. ಅದು ಸ್ಫುರಿಸುತ್ತಿದ್ದುದು ಅಪರೂಪವಾಗಿ ಒಮ್ಮೊಮ್ಮೆ ಮಾತ್ರ. ಲಘುವಾದ ಹಾಸ್ಯ, ವ್ಯಂಗ್ಯ ಬೆರೆತ ಅವರ ಕುಚೋದ್ಯಕ್ಕೆ ಗುರಿಯಾಗಿ ಅದರ ಚುರುಕನ್ನು ಸವಿಯಬಲ್ಲ, ಇಲ್ಲವೇ ಪ್ರತಿಯಾಗಿ ಕಿಡಿಗೆ ಕಿಡಿ ಹಾರಿಸಬಲ್ಲ ಸಮಾನಧರ್ಮಿಗಳು ಸಿಕ್ಕಾಗಲೇ ಅದು ಹೊರ ಹೊಮ್ಮುತ್ತಿದ್ದುದು. ಅಂಥವರಲ್ಲಿ ಮೋಟಗಾನಹಳ್ಳಿ ಸುಬ್ರಮಣ್ಯ

ಶಾಸ್ತ್ರಿಗಳು ಒಬ್ಬರು. ನಾನು ಶಾಸ್ತ್ರಿಗಳನ್ನು ಕಾಣುತ್ತಿದ್ದುದು ವಿ.ಸೀ. ಅವರ ಜತೆಯಲ್ಲಿದ್ದಾಗಲೇ, ಚಾಮರಾಜಪೇಟೆಯಲ್ಲಿ ಓಡಾಡುವಾಗ ಎಲ್ಲಾದರೂ, ಇಲ್ಲವೇ ಪರಿಷತ್ತಿನ ಆಂಗಣದಲ್ಲಿ. ಅವರು ವಿ.ಸೀ. ಅವರಿಗೆ ತುಂಬ ಆಪ್ತರಾದರೂ ಅದೇಕೋ ನಮ್ಮ ಸ್ನೇಹಿತರ ಬಳಗದಲ್ಲಿ ಅವರನ್ನು ಕಂಡರೆ ಯಾರಿಗೂ ಅಷ್ಟಾಗಿ ಗೌರವವಿರಲಿಲ್ಲ. ಹೊಟ್ಟೆಪಾಡಿಗೆ ಹಳ್ಳಿಯಿಂದ ಪಟ್ಟಣಕ್ಕೆ ಬಂದ ಬಡಬ್ರಾಹ್ಮಣನಂತೆ ಕಾಣುತ್ತಿದ್ದ ಅವರು ಸದಾ ನಿರುದ್ಯೋಗಿ. ಅವರ ವೇಷಭೂಷಣವೆಂದರೆ ಮಾಸಿದ ಷರಟು, ಕಚ್ಚೆ ಪಂಚೆ, ಮೇಲೊಂದು ಓಬೀರಾಯನ ಕಾಲದ ಕೋಟು, ಕರಿಯ ಟೋಪಿ, ಹಣೆಯ ಮೇಲೆ ಸಾದೊ, ವಿಭೂತಿಯೊ, ಗಂಧವೊ, ಕುಂಕುಮವೊ. ಎರಡು ಬೆರಳುಗಳ ನಡುವೆ ಸದಾ ಆಸ್ವಾದನೆಗೆ ಸಿದ್ಧವಾಗಿರುತ್ತಿದ್ದ ನಶ್ಯದ ಚಿಟಿಕೆ, ಮೂಗಿನ ಹೊಳ್ಳೆಗಳಲ್ಲಿ ಸಹ ಆ ನಶ್ಯದ ಹಿಂದಿನ ಸಂಸ್ಕರಣದ ಪಳೆಯುಳಿಕೆಯ ಪಟ್ಟೆಗಳು. ಮಾತು ಎಷ್ಟೋ ಅಷ್ಟು. ಅವರು ಎದುರಾದೊಡನೆ ವಿ.ಸೀ. ಅವರ ಮುಖ ತುಂಟು ನಗೆಯಿಂದ ತುಂಬಿಕೊಳ್ಳುತ್ತಿತ್ತು. ಶಾಸ್ತ್ರಿಗಳೊಡನೆ ಅವರ ಮಾತು ಅರೆಬರೆ ತೆಲುಗಿನಲ್ಲಿಯೇ.

'ಏಮಿ, ಶಾಸ್ತ್ರಿಗಾರು ಎಕ್ಕಡನಿಂಚಿ ದಯಚೇಸ್ತುನ್ನಾರು?'

ಶಾಸ್ತ್ರಿಗಳು ಇಂತಹ ಕಡೆಯಿಂದ ಎಂದೊಡನೆಯೇ

'ಅಯ್ಯೋ ಇಲ್ಲವೊ, ಇವತ್ತಿನ ಹರಟೆಯ ಕೋಟ!'

'ಹಾಗಲ್ಲ, ಮುಂದಿನ ವಾರ ಅವರ ಸ್ಕೂಲಿಗೆ ಯಾರೋ ದೊಡ್ಡ ಮನುಷ್ಯರು ಬರೋರಿದಾರಂತೆ. ಮಾತಾಡೋಕ್ಕೆ ಕರಸಿದ್ದರು.'

'ಓಹೋ, ಹಾಗಾದರೆ ಅವತ್ತಿನ ಪ್ರಶಂಸಾವಾಚನ ಬರೆಯೋಕ್ಕೆ ಕಾಂಟ್ರಾಕ್ಟ್ ಸಿಕ್ಕಿರಬೇಕು. ಎಷ್ಟು ಕಂದ? ಎಷ್ಟು ವೃತ್ತ?'

ಶಾಸ್ತ್ರಿಗಳಿಂದ ಉತ್ತರವಿಲ್ಲ.

'ಸುಮ್ಮನೆ ಹೀಗೆ ಇಲ್ಲಿ ಅಲ್ಲಿ ಅಲೆದಾಡೋ ಬದಲು, ಒಂದು ಕಡೆ ಪಟ್ಟು ಹಿಡಿದು ಕೂತು, ಏನಾದರೂ ಗಟ್ಟಿ ಕೆಲಸ ಮಾಡಬಾರದೆ? ಏನು ಹೇಳೋಣ?'

ಈಗ ಶಾಸ್ತ್ರಿಗಳ ಸರದಿ : 'ನನಗೂ ನಿಮ್ಮ ಹಾಗೆ ತಿಂಗಳು ತಿಂಗಳಿಗೆ ಬಿಟ್ಟಿ ಸಂಬಳ ಸಿಕ್ಕಿದ್ದರೆ ಹಾಗೇ ಮಾಡಬಹುದಾಗಿತ್ತು.'

'ಓಹೋ, ನಮಗೆ ಕೊಡೋದು ಬಿಟ್ಟಿ ಸಂಬಳವೊ?'

ಮಾತು ಹೀಗೆ ಮುಂದುವರಿಯುತ್ತಿತ್ತು. ಇಂಥ ಸಂಭಾಷಣೆಗಳಲ್ಲಿ ವಿ.ಸೀ. ಅವರದೇ ಮೇಲುಗೈ.

ಇದಾದ ಒಂದೆರಡು ವರ್ಷಗಳಲ್ಲೇ ಕಾಳಿದಾಸನ 'ಮಾಲವಿಕಾಗ್ನಿಮಿತ್ರ' ಶಾಸ್ತ್ರಿಗಳ ಅನುವಾದದಲ್ಲಿ ಹೊರ ಬಂತು. ಒಂದು ಸಂಜೆ ವಿ.ಸೀ. ಮನೆಗೆ ಕರೆದು ಅದರ ರಸವತ್ತಾದ ಭಾಗಗಳನ್ನು ಓದಿ ತೋರಿಸಿ, ಅದರ ಗುಣಶ್ಲಾಘನೆ ಮಾಡಿದಾಗಲೇ ನಮಗೆ ಶಾಸ್ತ್ರಿಗಳ ಶಕ್ತಿ ಸಾಮರ್ಥ್ಯಗಳ ಅರಿವಾದದ್ದು. ಅಂದ ಮಾತ್ರಕ್ಕೆ, ವಿ.ಸೀ. ಶಾಸ್ತ್ರಿಗಳನ್ನು ಛೇಡಿಸುವುದನ್ನು ಬಿಟ್ಟರೆಂದಲ್ಲ!

ನನಗೆ ನೆನಪಿರುವ ಇನ್ನೊಂದು ಇಂತಹದೇ ಸರಸ ಪ್ರಸಂಗ ಗೋಕಾಕರೊಂದಿಗೆ ನಡೆದದ್ದು, ೧೯೬೮ರ ಡಿಸೆಂಬರ್ ೨೧ರ ಸಂಜೆ. (ಇಷ್ಟು ಕರಾರುವಾಕ್ಕಾಗಿ ಹೇಳುವ ಕಾರಣ ಅದು ಹೇಗೋ ಆ ವರ್ಷದ ನನ್ನ ಡೈರಿಯಲ್ಲಿ ಅದರ ನಮೂದಿದೆ.) ಆ ವರ್ಷ ಕುವೆಂಪು ಅವರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿತ್ತು. ತೀರ್ಪುಗಾರರ ಸಮಿತಿಯಲ್ಲಿ ವಿ.ಸೀ. ಮತ್ತು ಗೋಕಾಕರು ಇದ್ದ ಕಾರಣ ಇಬ್ಬರೂ ದಿಲ್ಲಿಗೆ ಬಂದಿದ್ದರು. ೨೧ರ ಸಂಜೆ ದಿಲ್ಲಿಯ ಕರ್ನಾಟಕ ಸಂಘ ಕುವೆಂಪುಗೆ ಸನ್ಮಾನ ಏರ್ಪಡಿಸಿತ್ತು. ಯಾರ ಮರೆವೊ, ಅಸಡ್ಡೆಯೊ, ಅದಕ್ಕೆ ವಿ.ಸೀ. ಮತ್ತು ಗೋಕಾಕರಿಗೆ ಆಮಂತ್ರಣವಿರಲಿಲ್ಲ. ರವೀಂದ್ರ ಭವನದಲ್ಲಿ ಆ ಮೊದಲು ಏರ್ಪಡಿಸಿದ್ದ ಒಂದು ಸೆಮಿನಾರ್ ಮುಗಿದ ಮೇಲೆ ಎಲ್ಲರೂ ಹೊರ ಬಂದೆವು. ತಮ್ಮನ್ನು ಕರೆದಿಲ್ಲವೆಂದು ವಿ.ಸೀ. ಅವರಿಗೆ ಕೊಂಚ ಕೋಪವೂ ಇತ್ತು. 'ಅವರು ಕರೀದೇ ಹೋದರೆ ಕತ್ತೆ ಬಾಲವೇ ಹೋಯಿತು. ನಡೀರ್ರಿ, ಎಲ್ಲಾದರೂ ಹೋಟಲಲ್ಲಿ ಬಿಸಿಬಿಸಿ ಕಾಫಿ ಕುಡಿಯೋಣ' ಅಂದರು. ಜತೆಯಲ್ಲಿದ್ದ ಇನ್ನೂ ಒಬ್ಬಿಬ್ಬರು ಕನ್ನಡದವರನ್ನು ಕೂಡಿಸಿಕೊಂಡು ಎಲ್ಲರೂ ಕನಾಟ್‌ಪ್ಲೇಸಿನಲ್ಲಿದ್ದ ಮದರಾಸ್ ಹೋಟೆಲ್ಲಿಗೆ ಬಂದೆವು. ಚಳಿಗಾಲದ ಸಂಜೆ. ಬೋಂಡ, ಕಾಫಿಗೆ, ಆರ್ಡರ್ ಆಯಿತು. ಉದ್ದಕ್ಕೂ ವಿ.ಸೀ. ಅವರದೇ ಮಾತು. ಅವರ ಅವಿರಾಮ ವಾಗ್ಧಾರೆಗೆ ನಡುನಡುವೆ ಗೋಕಾಕ್ ಒಂದೊಂದು ಒತ್ತು ಕೊಡುತ್ತಿದ್ದರು. ಮಾತು 'ಇಸ್ತೆಟಿಕ್ಸ್'ಗೆ ತಿರುಗಿತು. ಅದಕ್ಕೆ ಸಂಬಂಧಿಸಿದ ಯಾವದೋ ಅಂಶವನ್ನು ವಿವರಿಸಲು ಗೋಕಾಕರ 'ಪಯಣ' ದಿಂದ 'ಸೌಂದರ್ಯಮೆಂಬರೀ.....' ಸಾಲುಗಳನ್ನು ವಿ.ಸೀ. ಉದ್ಧರಿಸಿದರು. ತಮ್ಮ ಕವಿತೆಯ ಸಾಲುಗಳನ್ನು ಉದ್ಧರಿಸಿದ್ದು ಗೋಕಾಕರಿಗೆ ಸಂತೋಷವೇ ಆಗಿರಬೇಕು. ಅಷ್ಟರಲ್ಲಿ ವಿ.ಸೀ. ಅವರ ಮೂಡ್ ಹಾಸ್ಯಕ್ಕೆ ತಿರುಗಿತು. "ಇವರ ಆ 'ಹಾಳ್' ಪುಸ್ತಕಾನ್ನ ನಾನು ರಿವ್ಯೂ ಮಾಡಿದ್ದೆ, ಅಲ್ಲವೇನ್ರಿ?" ಗೋಕಾಕರಿಗೆ ಮೈಸೂರು ಕಡೆಯ ಆ ಸಲಿಗೆಯ ದನಿಯ ಆ 'ರೀ' ಎಂಬ ಸಂಬೋಧನೆ (ಧಾರವಾಡದ ಕಡೆಯ ಆಡುಮಾತಿನ 'ರ್ರಿ' ಗೂ ಈ ಸಲಿಗೆಯ 'ರೀ' ಗೂ ಬಹಳ ವ್ಯತ್ಯಾಸವಿದೆ), ಅದಕ್ಕೂ ಹೆಚ್ಚಾಗಿ ತಮ್ಮ ಪುಸ್ತಕಕ್ಕೆ ಹಚ್ಚಿದ 'ಹಾಳು' ಪ್ರತ್ಯಯ ಹಿಡಿಸಲಿಲ್ಲವೆಂದು ಕಾಣುತ್ತದೆ. ಉತ್ತರವಾಗಿ, ಅವರೂ ಅಷ್ಟೇ ವ್ಯಂಗ್ಯವಾಗಿ ಅದೇ ಬಗೆಯ 'ರೀ' ಉಪಯೋಗಿಸಿ, ಮೇಲೆ 'ಹಾಳು' ಪದಕ್ಕೆ ಪ್ರಾಸ ಮಾಡಿ, ವಿ.ಸೀ. ಅವರ ಮಾತಿನ ಧಾಟಿಯನ್ನೇ ಅಣಕಿಸುವವರಂತೆ 'ಹೌದ್ರೀ, ನನ್ನ ಆ 'ಹಾಳು' ಪುಸ್ತಕದ 'ಬೀಳು' ಸಾಲುಗಳೇ ನಿಮಗೀಗ ಅರ್ಥಪ್ರಕಾಶಕ್ಕೆ ಬೇಕಾದವಲ್ಲ, ನೋಡ್ರಿ' ಎಂದು ಮಾರ್ಮಡಿದರು.

ಮಾತು ಮತ್ತೆಲ್ಲಿಗೋ ತಿರುಗಿತು. ಆ ಬೆಳಗ್ಗೆ ಗೋಕಾಕ್ ಹಿಂದೀ ಕವಿ ಬಚ್ಚನ್‌ರನ್ನು (ಹರಿವಂಶರಾಯ್) ಕಂಡಿದ್ದರಂತೆ. ಬಚ್ಚನ್ ಈಚೆಗೆ ಮಹಾಬಲಿಪುರಂ ನೋಡಿ ಬರಲು ಹೋಗಿದ್ದಾಗ ಅಲ್ಲಿ ಬರೆದ ಕೆಲವು ಕವಿತೆಗಳನ್ನು ಓದಿತೋರಿಸಿದರಂತೆ. ಅದರಲ್ಲೊಂದು ಗೋಕಾಕರಿಗೆ ತುಂಬ ಇಷ್ಟವಾಗಿತ್ತು. ಅದರ ತಾತ್ಪರ್ಯ: 'ತಾವು ಒಂದು ಕಲ್ಲು ಬಂಡೆಯಿದ್ದಂತೆ. ಯಾವದೋ ಅವ್ಯಕ್ತ ಶಿಲ್ಪಿಯ ಕೈಗಳು ತನ್ನನ್ನು ಕಡೆದು ಕವಿಯನ್ನಾಗಿ ಮಾಡುತ್ತಿವೆ. ಆ ಪ್ರಕ್ರಿಯೆಯಲ್ಲಿ ಹಾರಿದ ಕಲ್ಲಿನ ಚೂರುಗಳೇ ತಮ್ಮ ಕವಿತೆಗಳು. ತಮ್ಮ ನಿಜವಾದ ಸ್ವರೂಪ ಯಾವದೆಂದು ತಮಗಿನ್ನೂ ಗೊತ್ತಿಲ್ಲ.'

ವಿ.ಸೀ. ಹೇಳಿದರು: "ಬಿಡ್ರೀ ಬಿಡ್ರಿ, ಅದು ಬರೀ 'ಕ್ಷಿವರ್', ಹೆಚ್ಚೆಂದರೆ 'ಪ್ರೆಟಿ.'"

ಗೋಕಾಕ್ : "ಹಾಗಲ್ಲ. ಅದು 'ಸಬ್ಲೈಮ್' ಅಲ್ಲದೇ ಇರಬಹುದು. ಆದರೆ ಖಂಡಿತವಾಗಿ "ಬ್ಯೂಟಿಫುಲ್". ಸಾಂದರ್ಭಿಕವಾಗಿ, ವಿ.ಸೀ. ಬೈರನ್ ಕವಿಯ 'ಚೈಲ್ಡ್ ಹೆರಾಲ್ಡ್' ಕವಿತೆಯನ್ನು ನೆನಪು ಮಾಡಿಕೊಟ್ಟರು. ಅಲ್ಲಿ ಅವನು ಒಂದು ಹಾಳುಭೂಮಿಯಲ್ಲಿ ನಿಂತು ಇನ್ನೊಂದು ಹಾಳನ್ನು ಕುರಿತು ಯೋಚಿಸುವ ಕಲ್ಪನೆಯ ಮೆಚ್ಚಿಗೆಯಿಂದ ಮಾತು ಮುಗಿಯಿತು. ಬರಿಯ ಅವರಿಬ್ಬರೇ ಇದ್ದಿದ್ದರೆ ಇಷ್ಟೆಲ್ಲ ನಗೆಚಾಟಿಕೆಯ ಚಾಟಿಯೇಟುಗಳು ಮೂಡಿ ಉದುರುತ್ತಿದ್ದವೆ? ಮಾತು ಇನ್ನೂ ಹೆಚ್ಚು ಆತ್ಮೀಯ ಹಾಗೂ ಗಂಭೀರವಾಗುತ್ತಿರಲಿಲ್ಲವೆ? ಜತೆಯಲ್ಲಿ ಕೀಳುವ ಕಿರಿಯರಿದ್ದಾಗ ಅವರ ಮುಂದೆ ಈ ಬಗೆಯ ನಾಟಕೀಯತೆ ತಲೆ ಹಾಕುತ್ತದೆಯೊ ಹೇಗೆ? – ಎಂಬ ಅನುಮಾನ ನನ್ನನ್ನು ಯಾವಾಗಲೂ ಕಾಡಿದೆ. ಏನೇ ಆಗಲಿ, ಆ ದಿನ ನಮಗೆ ಆಧುನಿಕ ಕನ್ನಡ ಸಾಹಿತ್ಯದ ಇಬ್ಬರು ಹಿರಿಯ ಪ್ರಭೃತಿಗಳ ಮನೋಧರ್ಮ, ಅವರ ನಡುವಿನ ಸ್ನೇಹ ಸೌಹಾರ್ದಗಳ ಪರಿಚಯವಾಯಿತು.

ವಿ.ಸೀ. ಅವರಿಗೆ ಬದುಕಿನಲ್ಲಿ ತಮ್ಮದೇ ಮೌಲ್ಯಗಳಿದ್ದು ಅವನ್ನು ಜತನದಿಂದ ಕಾಪಾಡಿಕೊಂಡು ಬರುತ್ತಿದ್ದರು. ಆ ಮೌಲ್ಯಗಳಿಗೆ ಧಕ್ಕೆಯುಂಟಾದಾಗ, ಇಲ್ಲವೇ ಅವಕ್ಕೆ ವಿರುದ್ಧವಾದ ಪ್ರತಿಮೌಲ್ಯಗಳನ್ನು ಎದುರಿಸಬೇಕಾಗಿ ಬಂದಾಗ ಅವರಿಗೆ ತುಂಬ ನೋವುಂಟಾಗುತ್ತಿತ್ತು. ಒಂದು ಸಲ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಅವರದೊಂದು ಭಾಷಣವಿತ್ತು. ಆ ಕಾಲದಲ್ಲಿ ಸಂಸ್ಥೆಯಿದ್ದದ್ದು ನರಸಿಂಹರಾಜ ಕಾಲನಿಯಿಂದ ಪೂರ್ವಕ್ಕೆ ಹೊರಟು, ಗಾಂಧೀಬಜಾರ್ ಕಡೆಯಿಂದ ಬರುವ ಅಡ್ಡದಾರಿ ದಾಟಿ ನೇರ ಬಂದರೆ ಸಿಗುತ್ತಿದ್ದ ದೊಡ್ಡ ವರ್ತುಳದಲ್ಲಿ, ಬಲಗಡೆಗೆ, ಸುಮಾರು ಹತ್ತಿಪ್ಪತ್ತು ಜನ ಕೂಡಬಹುದಾದ ಒಂದು ಸಣ್ಣ ಕೋಣೆಯಲ್ಲಿ. ರಸ್ತೆಗೆ ಹತ್ತಿಕೊಂಡಂತಿದ್ದ ಆ ಕೋಣೆ ಸಂಸ್ಥೆಯ ಸಭಾಂಗಣ ಸಹ. ವಿ.ಸೀ. ಅವರದು ಒಂದು ಗಂಟೆಯ ಭಾಷಣವೆಂದು ಮೊದಲೇ ಗೊತ್ತಾಗಿತ್ತು. ಆಗ ಗುಂಡಪ್ಪನವರಿಗೆ ಸಹಾಯಕರಾಗಿ ಮೇಲುಗೆಲಸ ನೋಡಿಕೊಳ್ಳುತ್ತಿದ್ದ ಒಬ್ಬಿಬ್ಬರು ಯುವಕರಿದ್ದರು. ಉತ್ಸಾಹಿಗಳು, ಆದರೆ ಅವರಿಗೆ ಔಚಿತ್ಯಜ್ಞಾನ ಸಾಲದು. ಹಿಂದೆ ಕೆಲವು ಭಾಷಣಕಾರರು ಒಂದು ಗಂಟೆಯ ಭಾಷಣವಿದ್ದು ಎರಡೆರಡು ಗಂಟೆ ಕೊರೆದು ಹೋಗಿದ್ದ ನಿದರ್ಶನಗಳೇ ಹೆಚ್ಚಾಗಿದ್ದುದರಿಂದ ಅಂತಹದನ್ನು ತಡೆಯಲು ಒಂದು ಉಪಾಯ ಹೂಡಿದ್ದರು. ಒಂದು ಅಲಾರಂ ಗಡಿಯಾರ ತಂದು ಆರಕ್ಕೆ ಸೆಟ್ ಮಾಡಿಟ್ಟರೆ, ಗಂಟೆ ಹೊಡೆದಾಗ ಭಾಷಣಕಾರರಿಗೆ ಅವಧಿ ಮುಗಿದದ್ದು ಗೊತ್ತಾಗುತ್ತದೆ, ಅವರು ನಿಲ್ಲಿಸುತ್ತಾರೆ ಎಂದು ಅವರ ಎಣಿಕೆ.

ಅವತ್ತು ವಿ.ಸೀ. ಭಾಷಣ ಸರಿಯಾಗಿ ಐದಕ್ಕೆ ಶುರುವಾಯಿತು. ಯಾವದೋ ಸಾಹಿತ್ಯಕ್ಕೆ ಸಂಬಂಧಪಟ್ಟ ವಿಷಯ. ಜನ ಕೇಳುತ್ತಿದ್ದರು, ವಿ.ಸೀ. ಮಾತಾಡುವ ಹುರುಪಿನಲ್ಲಿದ್ದರು. ಭಾಷಣ ತೀವ್ರ ಗತಿಯಲ್ಲಿ ಸಾಗಿದ್ದಾಗ ಅಲಾರಂ ತನ್ನ ಕೆಲಸ ಮಾಡಿತು. ವಿ.ಸೀ.ಗೆ ಶಾಕ್ ಹೊಡೆದಂತಾಯಿತು. ಸಂದರ್ಭ ಅರ್ಥವಾಯಿತು. ವಾಕ್ಯದ ನಡುವೆಯೇ ಭಾಷಣ ನಿಲ್ಲಿಸಿ 'ಇಷ್ಟು ಹೊತ್ತು ಕೇಳಿದ್ದಕ್ಕೆ ಕೃತಜ್ಞ' ಎಂದು ಹೇಳಿ ಕೂತುಬಿಟ್ಟರು. ಅವರ ಮುಖದಲ್ಲಿ ನೋವು, ಸಿಟ್ಟು ಎದ್ದು ಕಾಣುತ್ತಿದ್ದವು. ಕಣ್ಣು ಕಿಡಿ ಕಾರುತ್ತಿತ್ತು. ಆ ಮೇಲೆ ಯಾರು ಎಷ್ಟು ಕ್ಷಮಾಪಣೆ ಕೇಳಿಕೊಳ್ಳಲಿ, ಬೇಡಿಕೊಳ್ಳಲಿ, ಭಾಷಣವನ್ನು ಮುಂದುವರಿಸಲಿಲ್ಲ.

ಮನೆಗೆ ಹಿಂದಿರುಗುವ ದಾರಿಯಲ್ಲಿ ಅವರಿಗೆ ಮಾತನಾಡಲಾರದಷ್ಟು ವ್ಯಥೆ. 'ಕಾಲ ಎಲ್ಲಿಗೆ ಬಂತಪ್ಪ? ಗುಂಡಪ್ಪನವರ ಸಂಸ್ಥೆಯಲ್ಲಿ ಹೀಗಾಗುವುದೆಂದರೇನು? ಶುದ್ಧ ಪೋಕರಿತನ' ಎಂದು ತಮಗೆ ತಾವೇ ಆಡಿಕೊಳ್ಳುವಂತೆ ಹೇಳಿ ಸುಮ್ಮನಾದರು. ಇಡೀ ದಾರಿ ಮೌನದಲ್ಲಿ ಕಳೆಯಿತು.

ಮೃದುಹೃದಯದ ವಿ.ಸೀ.ಗೆ ದುರಂತಗಳನ್ನು ಸಹಿಸಲಾಗುತ್ತಿರಲಿಲ್ಲ. ಸಾವು ಯಾರದ್ದೇ ಆಗಲಿ, ಅದನ್ನು ಎದುರಿಸಲಾರರು. ೧೯೫೩ರ ಸೆಪ್ಟೆಂಬರ್ ೧೮. ಹಿಂದಿನ ರಾತ್ರಿ 'ಭಕ್ತಿ ಭಂಡಾರಿ' ಎಂ. ಆರ್. ಶ್ರೀನಿವಾಸಮೂರ್ತಿಯವರು ಹಠಾತ್ತನೆ ವಾಂತಿಭೇದಿಯಿಂದ ತೀರಿಕೊಂಡಿದ್ದರು. ಆಗ ನಾನು 'ಲೇಖಕ' ಪತ್ರಿಕೆ ನಡಸುತ್ತಿದ್ದೆ. ಅದರಲ್ಲಿ ಸಂತಾಪ ಲೇಖನ ಬರೆಯಲು ಮೂರ್ತಿಯವರ ಬಗೆಗೆ ಕೆಲವು ವಿವರಗಳು ಬೇಕಾಗಿದ್ದವು. ವಿ.ಸೀ. ಅವರಿಂದ ಅದನ್ನು ದೊರಕಿಸಲು ಕಾಲೇಜು ಕಡೆ ಹೊರಟೆ. ಅವರು ಮೂರ್ತಿಯವರ ಅಂತ್ಯಕ್ರಿಯೆಗೆ ಹೋಗಿರಬಹುದು, ಸಿಗಲಾರರು ಎಂಬ ಅನುಮಾನವೇನೋ ಇತ್ತು. ಆದರೆ ನನ್ನ ಅನುಮಾನ ಸುಳ್ಳಾಗಿತ್ತು. ವಿ.ಸೀ. ತಮ್ಮ ಕೋಣೆಯಲ್ಲಿ ಒಬ್ಬರೇ ಕಣ್ಣನ್ನು ಒಳಹಾಯಿಸಿ, ಮಂಕಾಗಿ ಕುಳಿತಿದ್ದರು. 'ಅಂತ್ಯಕ್ರಿಯೆಗೆ ವಿ.ಸೀ. ಏಕೆ ಹೋಗಿಲ್ಲ? ಇವರಿಗೂ ಮೂರ್ತಿಯವರಿಗೂ ಗಾಢವಾದ ವಿರಸವೇನಾದರೂ ಇತ್ತೋ ಹೇಗೆ?' ಎಂಬೊಂದು ದುರ್ಯೋಚನೆ ಮನಸ್ಸಿನಲ್ಲಿ ಹಾದು ಹೋಯಿತು. ನಾನು ಬಂದು ನಿಂತಿದ್ದುದು ಅವರಿಗೆ ಬಹಳ ಹೊತ್ತು ಗೊತ್ತಾಗಲಿಲ್ಲ. ಕಣ್ಣು ತೆರೆದಾಗ 'ಕೂತ್ಕೊಳ್ಳಿ' ಅಂದರು. 'ಯಾಕೆ ಸಾರ್, ನೀವು ಅಂತ್ಯಕ್ರಿಯೆಗೆ ಹೋಗಲಿಲ್ಲವೆ?' ಎಂದು ಕೇಳಿದೆ. ವಿ.ಸೀ. ಕೊಂಚ ತಡೆದು, 'ಹೇಗೆ ಹೋಗಲಪ್ಪ? ಹತ್ತಾರು ವರ್ಷ ಅಪ್ತಸ್ನೇಹಿತರಾಗಿ ಜತೆ ಜತೆ ಓಡಾಡಿದ್ದೀವಿ. ಈಗ ಅವರ ಹೆಣ ಸುಡುವುದನ್ನು ನೋಡಲು ಹೋಗಬೇಕೆ? ಅದು ನನ್ನಿಂದಾಗೋಲ್ಲ. I want to keep him always alive and intact in my memory' ಎಂದವರೇ ಮಕ್ಕಳಂತೆ ಬಿಕ್ಕಿ ಬಿಕ್ಕಿ ಅಳತೊಡಗಿದರು. ವಿ.ಸೀ. ಅವರ 'ಪಂಪಾಯಾತ್ರೆ'ಯ ಪಾತ್ರಗಳಲ್ಲಿ ಎಂ.ಆರ್.ಶ್ರೀ. ಸಹ ಒಬ್ಬರೆಂದರೆ ಇಬ್ಬರ ನಡುವಣ ಸ್ನೇಹ ಅದೆಷ್ಟು ಗಾಢವಾಗಿತ್ತೆಂಬುದು ತಿಳಿಯುತ್ತದೆ.

ವಿ.ಸೀ. ಅವರೊಡನೆ ನನ್ನ ಸ್ನೇಹ ಸಂಬಂಧ ಮೂರು ದಶಕಗಳಿಗೂ ದೀರ್ಘಕಾಲ ಹರಡಿಕೊಂಡದ್ದು. ೧೯೫೧ರ ಕಾಲೇಜು ದಿನಗಳಲ್ಲಿ ಷುರುವಾಗಿ, ನನ್ನ ಬೆಂಗಳೂರು, ಹುಬ್ಬಳ್ಳಿಗಳ ಪತ್ರಿಕೋದ್ಯಮದ ಅವಧಿಯನ್ನು ದಾಟಿ, ೧೯೫೭ರಲ್ಲಿ ನಾನು ದಿಲ್ಲಿಗೆ ಬಂದ ನಂತರ ಅವರೂ ಸಾಹಿತ್ಯ ಅಕಾಡೆಮಿ, ಭಾರತೀಯ ಜ್ಞಾನಪೀಠಗಳ ಸಲಹಾ ಮಂಡಳಿಗಳ ಸದಸ್ಯರಾಗಿ ಇಲ್ಲಿಗೆ ಬರತೊಡಗಿದಾಗ ಅದು ಇನ್ನೂ ಹೆಚ್ಚು ಬಲವಾಯಿತು. ಆ ಸ್ನೇಹ ಸಂಬಂಧ ಅವರ ಕೊನೆಗಾಲದವರೆಗೆ ಚಾಚಿಕೊಂಡಿದ್ದರೂ ೧೯೭೪ರ ನಂತರ ಅವರು ದಿಲ್ಲಿಗೆ ಬರುವುದು ನಿಂತ ಮೇಲೆ ಕ್ಷೀಣವಾಯಿತು.

ಅವರು ದಿಲ್ಲಿಗೆ ಬಂದಾಗ ಇಳಿಯುತ್ತಿದ್ದುದು ಇಲ್ಲಿನ ದಿಲ್ಲಿ ವಿಶ್ವವಿದ್ಯಾಲಯದಲ್ಲಿ ಲೈಬ್ರೆರಿಯನ್ ಆಗಿದ್ದ ಎಚ್. ಎಸ್. ಪಾಟೀಲರಲ್ಲಿ, ಇಲ್ಲವೇ ನಮ್ಮ ಮನೆಯಲ್ಲಿ. ಹೀಗೆ ಸುಮಾರು ಕಾಲು ಶತಮಾನಗಳ ಕಾಲ ಅವರನ್ನು ಹತ್ತಿರದಿಂದ ಕಂಡಿದ್ದೇನೆ, ಅವರ

ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುವ ನೂರಾರು ಸಂಗತಿಗಳಿಗೆ ಸಾಕ್ಷಿಯಾಗಿದ್ದೇನೆ. ಅವರ ಅಗಾಧ ಪಾಂಡಿತ್ಯ, ಜ್ಞಾನ ಪಿಪಾಸೆ, ವಾಗ್ಮಿತೆ, ಸಜ್ಜನಿಕೆ, ದಯೀಹೃದಯಗಳಂತಹ ಹಿರಿಯ ಗುಣಗಳಿಗೆ ಮಾರುಹೋದಂತೆಯೇ ಅವರ ಅರೆಕೊರೆಗಳನ್ನು ಸಹ ಮನಸ್ಸಿನಲ್ಲಿಯೇ ತೂಗಿ ನೋಡಿದ್ದೇನೆ. ಅವುಗಳಲ್ಲಿ ಕೆಲವನ್ನಾದರೂ ಗುರುತಿಸದಿದ್ದರೆ ಚಿತ್ರ ಅಪ್ರಾಮಾಣಿಕವಾಗುತ್ತದೆ. ಅದು ಎಷ್ಟೇ ಸ್ವಾಭಾವಿಕವಾದರೂ ಅವರ ಮಾತುಕತೆಗಳಲ್ಲಿ ಪ್ರದರ್ಶಕತೆಯೋ ಎನ್ನುವ ಮಟ್ಟಿನ ತೋರಿಕೆ, ಅಭಿನಯಶೀಲತೆಗಳು ಒಡೆದು ಕಾಣುತ್ತಿದ್ದವು. ಅವರ ಮಾತಿನ ಧಾಟಿಗೂ ಅವರ ಕಾಲದ ಜತೆ ಸಾಹಿತಿಗಳ ಮಾತಿನ ಧಾಟಿಗೂ ಹೋಲಿಸಿ ನೋಡಿದರೆ (ಉದಾಹರಣೆಗೆ ಡಿ.ವಿ.ಜಿ., ತೀ.ನಂ.ಶ್ರೀ.) ಈ ಟೀಕೆಯ ಅರ್ಥ ಸ್ಪಷ್ಟವಾಗುತ್ತದೆ. ಹಾಗೆಯೇ ಅವರ ಸೌಂದರ್ಯೋಪಾಸನೆ, ರೂಪಾರಾಧನೆಗಳು ಸಹ. (ಕುಮಟಾ ಸಮ್ಮೇಳನಕ್ಕೆ ಅವರು ಅಧ್ಯಕ್ಷರಾದಾಗ ಅವರ ಶಿಷ್ಯರೂ ಮಿತ್ರರೂ ಸಮರ್ಪಿಸಿದ ಗೌರವ ಗ್ರಂಥದ ಹೆಸರು 'ರೂಪಾರಾಧಕ'!) ಅವರ ಈ ಗುಣ ಬಹುಮಟ್ಟಿಗೆ 'ಆರೋಪಿತ', ಅಂದರೆ ಇತರರು ಇದ್ದದ್ದನ್ನು ದೊಡ್ಡದು ಮಾಡಿ ಹೇಳಿ ಉಬ್ಬಿಸಿದ್ದು. ಆ ಗುಣ ಹೆಚ್ಚಾಗಿ abstract ಅಥವಾ 'ಅಭೌತಿಕ' ಸಹ. ಅಂದರೆ ಎದುರಿಗಿದ್ದ ಗುಲಾಬಿಯ ಮೇಲೆ ಕಣ್ಣಾಡಿಸದೆ ಎಂದೋ ಎಲ್ಲೋ ನೋಡಿದ್ದ ಮೊಗಲ್ ಚಿತ್ರವೊಂದರ ಗುಲಾಬಿಯನ್ನು ಹೊಗಳುವ ರೀತಿಯದು. ಮತ್ತೆ, ತಮ್ಮದಲ್ಲದ ಇನ್ನೊಂದು ಸಂಸ್ಕೃತಿಯ ನೀತಿ ನಡವಳಿಕೆಗಳನ್ನು ಕಂಡರೆ ಅಸಹಿಷ್ಣುತೆ. ಇಲ್ಲಿ ಚಳಿಗಾಲದಲ್ಲಿ ನಾನು ತೊಡುವ ಮುಸ್ಲಿಂ ಟೋಪಿಯನ್ನು ನೋಡಿ ಅವರಿಗೆ ಮೈ ಯುರಿಯಾಗುತ್ತಿತ್ತು. ಇನ್ನೂ ನಿದರ್ಶನಗಳನ್ನು ಕೊಟ್ಟು ಬೆಳಸಬಹುದು. ಆದರೆ ಆರಾಧಕ ಮನೋಧರ್ಮದ ಭಾರತೀಯ ಸಂಸ್ಕೃತಿಗೆ ಅದು ನಿಷಿದ್ಧ. (ವಿ.ಸೀ. ಸಹ ಅದನ್ನು ಸಹಿಸುತ್ತಿರಲಿಲ್ಲ!) ಜನ್ಮಶತಾಬ್ದಿಯ ಈ ಶುಭ ಮುಹೂರ್ತದಲ್ಲಿ ಹಿತವಾದುದಷ್ಟನ್ನೇ ಹೇಳಿ, ಉಳಿದವನ್ನು ಮನಸ್ಸಿನ ಮೂಲೆಗೆ ತಳ್ಳಬೇಕಾಗುತ್ತದೆ. ಇನ್ನು ಹೇಳಬಹುದಾದ 'less kind' ಜಾತಿಯವಲ್ಲಿ ಸಹ ಹೆಚ್ಚಿನವು ಪುಡಿ ಸಂಗತಿಗಳು. ನೆನೆದಾಗ ಅವು ಕೊಡುವ ಸುಖವೇ ಬೇರೆ ಬಗೆಯದು.

ಎಂ.ಎ. ಪರೀಕ್ಷೆಗೋ ಏನೊ ವಿ.ಸೀ. ಬರೆದ ಥೀಸಿಸ್‌ನ ವಿಷಯ 'Thrift' ('ಮಿತವ್ಯಯ') ಅಂತೆ. 'Imagine this most thriftless person writing about thrift' ಎಂದು ಅವರು ತಮ್ಮನ್ನು ತಾವೇ ಹಾಸ್ಯ ಮಾಡಿಕೊಂಡು ನಗುತ್ತಿದ್ದುದುಂಟು. ಅವರ 'ಧಾರಾಳ'ಕ್ಕೆ (ದುಂದುಗಾರಿಕೆ ಅಂದರೆ ಮಾತು ಖಚಿತವಾದರೂ ಅನಯವಾಗುತ್ತದೆ.) ಹಲವಾರು ನಿದರ್ಶನಗಳನ್ನು ಕೊಡಬಹುದು. ಒಂದು ಸಲ ಯಾವದೋ ಸಮಿತಿಯ ಸಭೆಯಲ್ಲಿ ಭಾಗವಹಿಸಲು ದಿಲ್ಲಿಗೆ ಬಂದಿದ್ದಾಗ ಅವರಿಗೆ ನೇಷನಲ್ ಬುಕ್ ಟ್ರಸ್ಟ್‌ನಿಂದ ಬರಬೇಕಾಗಿದ್ದ ಮುನ್ನೂರು ರೂಪಾಯಿ ಶಿಲ್ಕು ಸಂಭಾವನೆ ಅನಿರೀಕ್ಷಿತವಾಗಿ ನಗದಾಗಿ ಬಂತು. ವಿ.ಸೀ. ಅವರ ಖುಷಿಗೆ ಪಾರವೇ ಇಲ್ಲ. 'ನಡೀರಿ, ಇವತ್ತು ಇಡೀ ದಿಲ್ಲೀನ ಕೊಳ್ಳೆ ಹೊಡೆದು ಬರೋಣಂತೆ' ಅಂದರು. ದಿಲ್ಲಿಯ ಪೇಟೆಗಳಲ್ಲೆಲ್ಲ ಅವರಿಗೆ ಚಾಂದನೀ ಚೌಕ್ ಪ್ರಿಯ. ಏಕೆಂದರೆ ಅದು ಷಹಜಹಾನ್, ಜಹಾಂಗೀರರ ಕಾಲದ್ದೆಂದು. ಇತಿಹಾಸದೊಡನೆ ಅವರು ಜೀವಂತ ಸಂಬಂಧ ಸ್ಥಾಪಿಸಿಕೊಳ್ಳುತ್ತಿದ್ದುದು ಈ ರೀತಿ. ಅಲ್ಲಿಯ ಸುಪ್ರಸಿದ್ಧ ಘಂಟಾವಾಲನ ಅಂಗಡಿಯ ಮುಂದೆ ನಿಂತು ಒಂದಿಷ್ಟು ಸಿಹಿ ತಿಂದೆವು.

ಊರಿಗೆಂದು ಇನ್ನಷ್ಟು ಕಟ್ಟಿಸಿಕೊಂಡರು. ಇನ್ನೆಲ್ಲೋ ಕಚೋರಿ, ಸಾಮೋಸ; ಮತ್ತೊಂದು ಕಡೆ ಹಣ್ಣಿನ ತಾಜಾರಸ, ಇತ್ಯಾದಿ.

ವಿ.ಸೀ.ಗೆ ಈ ತೆರನಾದ ಸ್ವಾತಂತ್ರ್ಯಾನುಭವ ಬಹಳ ಪ್ರಿಯ. ಪಾಟೀಲರ ಸ್ಕೂಟರ್‌ನ ಪಿಲಿಯನ್ ಮೇಲೆ ಕೂತು, ದಿಲ್ಲಿಯ ಪೇಟೆಬೀದಿಗಳಲ್ಲಿ ಅಲೆದಾಡಲು ಹಾತೊರೆಯುತ್ತಿದ್ದರು (ತೆಗೆದಿದ್ದರೆ ಅದೂ ಒಂದು 'ಸ್ಮಾರಕ ಚಿತ್ರ' ವಾಗುತ್ತಿತ್ತು). ಇವೆಲ್ಲ ಬೆಂಗಳೂರಿನಲ್ಲಿ ದಕ್ಕುವುದಲ್ಲ. ಇಲ್ಲಿ ಇನ್ನೊಂದು ಹಿಂದಿನ ಸಂಗತಿ ನೆನಪಿಗೆ ಬರುತ್ತದೆ. ನನ್ನ ಕಾಲೇಜು ದಿನಗಳಲ್ಲಿ ಒಂದು ಇಳಿಸಂಜೆ ಬಳೇಪೇಟೆಯಲ್ಲಿ ಅವರೊಡನೆ ಹೋಗುತ್ತಿದ್ದಾಗ ಯಾರದೋ ಮಾತು ಬಂದು 'ಅವರು ತುಂಬ ಕೀರ್ತಿಶಾಲಿಗಳು, ಸಾರ್' ಅಂದೆ. ವಿ.ಸೀ. ಥಟ್ಟನೆ ನಿಂತು ನನ್ನ ರಟ್ಟೆ ಹಿಡಿದು 'ಕೀರ್ತಿ, ಏನು ಕೀರ್ತಿ? ಕೀರ್ತಿಗೆ ಮಣ್ಣು ಹಾಕ!' ಅಂದರು. 'ಅದೇಕೆ ಸರ್, ಹಾಗಂತೀರಿ?' ಅಂದೆ. ಅಲ್ಲೇ ಒಂದು ಗಲ್ಲಿಗೆ ತಿರುಗುವ ಮೂಲೆಯಲ್ಲಿ ಒಬ್ಬ ಬಿಸಿಬಿಸಿ ಈರುಳ್ಳಿ ಆಂಬೊಡೆ ಮಾಡಿ ಮಾರುತ್ತಿದ್ದ. ಬೆಂಗಳೂರಿನಲ್ಲಿ ಇಂತಹದು ಯಾವಾಗಿನಿಂದಲೂ ಇದ್ದದ್ದೆ ತಾನೆ. ಅವನ ಕಡೆ ಕೈ ತೋರಿಸುತ್ತ ಹೇಳಿದರು: 'ಅಲ್ಲಿ ನೋಡಿ, ಬಿಸಿಬಿಸಿ ಈರುಳ್ಳಿ ಆಂಬೊಡೆ. ತಿನ್ನಬೇಕು ಅನ್ನಿಸುತ್ತೆ. ಬಾಯಲ್ಲಿ ನೀರೂರುತ್ತೆ. ಜೇಬಿನಲ್ಲಿ ದುಡ್ಡಿದೆ. ಆದರೆ ಹಾಗೆ ತಿನ್ನೋಕಾಗುತ್ಯೆ? ಯಾರಾದರೂ ಗುರುತಿನವರು ನೋಡಿದರೆ ನಾಳೆ ಊರಲ್ಲೆಲ್ಲ ಗುಲ್ಲಾಗುತ್ತೆ. 'ಇವನಿಗೇನು ಬಂತು, ಕೇಡು. ಗಲ್ಲಿಗಲ್ಲೀಲಿ ನಿಂತುಕೊಂಡು ಆಂಬೊಡೆ ತಿಂತಾನೆ' ಅಂತಾರೆ. ಜತೆಗೆ ಹೆಂಡ ಕುಡೀತಾನೆ ಅಂತಲೂ ಅನ್ನಬಹುದು. ಗೊತ್ತಾಯ್ತೆ ಕೀರ್ತಿಯ 'ಲಿಮಿಟೇಷನ್'. 'Fame is dangerous. Fame kills your liberty' ಅಂದಿದ್ದರು. ಆ ಮಾತು ಅದೆಷ್ಟು ನಿಜ.

ಸರಿ, ಚಾಂದನೀ ಚೌಕದಲ್ಲಿ ನಡೆದಾಡುತ್ತ ಒಂದೊಂದು ಅಂಗಡಿಯ ಮುಂದೂ ನಿಂತು, ಅಲ್ಲೇನು ಮಾರುತ್ತದೆಂದು ಕಣ್ಣಾಡಿಸಿ ನೋಡುತ್ತ ಮುಂದುವರಿದರು. ಇದ್ದಕ್ಕಿದ್ದಂತೆ, ಒಂದು ಬಟ್ಟೆ ಅಂಗಡಿಯ ಮುಂದೆ ಬಂದಾಗ 'ಬನ್ನಿ, ಇಲ್ಲಿ ಏನು ಸಿಗುತ್ತೋ ನೋಡೋಣ' ಎಂದು ನನ್ನನ್ನೂ ನುಗ್ಗಿಸಿಕೊಂಡು ಅಂಗಡಿಯೊಳಗೆ ಬಂದರು. ಅಂಗಡಿಯ ಮಾಲಿಕ ಪಂಜಾಬಿ. ಸುಮಾರು ಐವತ್ತು ಐವತ್ತೈದು ವಯಸ್ಸಿನ ಕಟ್ಟುಮಸ್ತಾದ ಎತ್ತರದ ಆಳು. ಮುಟ್ಟಿದರೆ ಕೈಗೆ ಹತ್ತುವುದೇನೋ ಅನ್ನುವಂತಹ ಗುಲಾಬಿಗೆಂಪಿನ ಮೈಬಣ್ಣ. ಖಿದ್ದರ್ ಜುಬ್ಬ, ಪೈಜಾಮ ಹಾಕಿ, ಗಾಂಧೀ ಟೋಪಿ ತೊಟ್ಟಿದ್ದ. ತುಂಬ ವಿನಯದಿಂದ ಬರಮಾಡಿಕೊಂಡ. ಅವನೊಂದಿಗೆ ವಿ.ಸೀ. ಅವರ ಮಾತು ಇಂಗ್ಲಿಷಿನಲ್ಲಿ. ಅದರ ಹಿಂದೀ ರೂಪಾಂತರೀಕರಣ ನನ್ನದು. ಏನೇನೋ ಬಟ್ಟೆ ನೋಡಿದರು. ನೋಡು ನೋಡುತ್ತ ಒಂದೊಂದರ ನೇಯ್ಗೆ, ಬನಿ ಹೇಗೆ ಎಂದೆಲ್ಲ ಲೆಕ್ಚರ್ ಕೊಟ್ಟರು. ಕೊನೆಗೆ ರುಮಾಲಿಗೆ ಯಾವ ಬಟ್ಟೆಯಿದೆ ಎಂದು ಕೇಳಿದರು. ಅವನು ತೋರಿಸಿದ ನೂತಿ ಬಟ್ಟೆಗಳನ್ನೆಲ್ಲ ಬದಿಗೊತ್ತಿ 'ಸಿಲ್ಕ್‌ನಲ್ಲಿ ಇಲ್ಲವೆ?' ಅಂದರು. ಅವನು ಗಾಜಿನ ಕಪಾಟಿನಿಂದ ಒಂದು ವಿಶೇಷ ರೇಶಿಮೆಯ ಥಾನು ತೆಗೆದು ತೋರಿಸಿದ. ಬಟ್ಟೆ ತೆಳುವಾದ 'ಕ್ರೀಮ್' ಬಣ್ಣಕ್ಕಿದ್ದು ನವಿರಾಗಿತ್ತು. ವಿ.ಸೀ. ಅವರಿಗೆ ಖುಷಿಯಾಯಿತು. ಬೆಲೆ ಕೇಳಿದ್ದೆಷ್ಟೋ ಅಷ್ಟೆ. ಯಾವದೇ ತರನಾದ ಚೌಕಾಶಿಯೂ ಇಲ್ಲ, ಕಟಪಟೆಯೂ ಇಲ್ಲ. ಒಂದು ರುಮಾಲಿಗಾಗುವಷ್ಟು ಬಟ್ಟೆ

ಹರಿಸಿದರು. ಅಲ್ಲೇ, ತಾವು ಕಟ್ಟಿದ್ದ ರುಮಾಲು ತೆಗೆದು, ಹರಿಸಿದ ಹೊಸ ಸಿಲ್ಕನ್ನು ಉದ್ದಕ್ಕೆ ಪಟ್ಟಿಯಾಗಿ ಮಡಿಸಿ, ರುಮಾಲು ಕಟ್ಟಿ, ತಲೆಗಿಟ್ಟು, ಕನ್ನಡಿಯಲ್ಲಿ ಮುಖ ನೋಡಿಕೊಂಡರು. 'ಏನಾಗಿದೆ. ಕಟ್ಟಿಕೊಂಡು ಮಹಾರಾಜರ ದರ್ಬಾರಿಗೆ ಹೋಗಬಹುದು!' ಎಂದು ಶ್ಲಾಘಿಸಿಕೊಂಡರು.

ಹಣ ಕೊಟ್ಟು ರಸೀತಿ ಹರಿಸಿ ಹೊರಬರುವಾಗ, ಥಟ್ಟನೆ ನಿಂತು ಅಂಗಡಿಯವನ ಕಡೆ ತಿರುಗಿ 'ಇನ್ನೊಂದು ರುಮಾಲಿಗೆ ಬಟ್ಟೆ ಹರಿ' ಎಂದು ಹೇಳಿ, ಅದನ್ನೂ ಕೊಂಡರು.

ಹಿಂದಿರುಗಿ ಬರುತ್ತಿದ್ದಾಗ ದಾರಿಯಲ್ಲಿ 'That man looks like Motilal Nehru. ಅವರ ಹಾಗೇ ಎತ್ತರ, ಕೆಂಪು. ಅದಕ್ಕೇ ನಾನು ಇನ್ನೊಂದು ಕೊಂಡದ್ದು!' ಎಂದು ಸಮಜಾಯಿಷಿ ಹೇಳಿದರು. ನನ್ನ ಪ್ರಕಾರ ಮೋತೀಲಾಲ್ ನೆಹರೂ ಜವಾಹರಲಾಲರಂತಲ್ಲ. ಸ್ವಲ್ಪ ಕುಳ್ಳ, ದುಂಡು ಮುಖ. ಅಂಗಡಿಯವನಿಗೂ ಅವರಿಗೂ ಅಜಗಜಾಂತರ. 'ಇದೇನೂ ಹೊಸದಲ್ಲವಲ್ಲ!' ನನ್ನ ಬಾಯಿಂದ ಅರಿವಿಲ್ಲದೆಯೇ ವ್ಯಂಗ್ಯದ ಕಿಡಿ ಉದುರಿತು. ವಿ.ಸೀ. ನಡೆಯುತ್ತಿದ್ದವರು ನಿಂತು, ಹುಸಿ ಕೋಪ ನಟಿಸುತ್ತ 'My dear young man, you should learn to watch your words' ಎಂದರು. ಇಬ್ಬರೂ ನಕ್ಕೆವು.

ಆ ಸಲ ಅವರು ಹರಿದ್ವಾರಕ್ಕೂ ಹೋಗಿ ಬಂದರು. ಅಲ್ಲಿ ಅವರ ಒಬ್ಬ ಮಗಳು, ಅಳಿಯ, ಮೊಮ್ಮಗ ಇದ್ದರು. ವಾಪಸು ಬರುವಾಗ ಐದಾರು ಬೆತ್ತದ 'ವಾಕಿಂಗ್ ಸ್ಟಿಕ್ಸ್' ಕೊಂಡು ತಂದಿದ್ದರು. ಹರಿದ್ವಾರ ಬೆತ್ತಕ್ಕೆ ಪ್ರಸಿದ್ಧಿ. ಬೆತ್ತಕ್ಕೆ ಬೇಕಾದ ಒಂದು ವಿಶಿಷ್ಟ ಜಾತಿಯ ಮರ ಆ ಕಡೆ ಬೆಳೆಯುತ್ತದಂತೆ. ಅಷ್ಟೊಂದು ಬೆತ್ತ ಅವರಿಗೆ ಏಕೆ ಬೇಕಾಗಿತ್ತೋ ದೇವರೇ ಬಲ್ಲ!

ಆ ಸಲ ಇನ್ನೊಂದು ನಿದರ್ಶನೀಯ ಪ್ರಸಂಗ ನಡೆಯಿತು. ಆಗ ಚಳಿಗಾಲ. ಇಲ್ಲಿ ಒಳ್ಳೆಯ ಬಟಾಣಿ ಬರುವುದು ಆಗಲೇ, ಮೈಸೂರು–ಬೆಂಗಳೂರು ಕಡೆ ಅವರೇಕಾಯಿ ಬಂದಂತೆ. ಪೇಟೆಯಲ್ಲಿ ಉದ್ದಕ್ಕೂ ಎರಡೂ ಕಡೆ ರಾಶಿರಾಶಿ ಬಟಾಣಿ. ರೂಪಾಯಿಗೆ ನಾಲ್ಕೊ ಐದೊ ಕಿಲೋ. ಒಂದು ದಿನ ದಾರಿಯಲ್ಲಿ ಹೋಗುತ್ತಿದ್ದಾಗ ಅದು ವಿ.ಸೀ. ಅವರ ದೃಷ್ಟಿಗೆ ಬಿತ್ತು. ಊರಿಗೆ ಕೊಂಡು ಹೋಗಲು ಐದು ಕಿಲೋ ಬಟಾಣಿ ತೂಗಿಸಿದರು. ಚೀಲವನ್ನು ಹಿಡಿದೆತ್ತಿ ನೋಡಿ 'ಇಷ್ಟೆಯೇ, ಇನ್ನೊಂದೈದು ಕಿಲೋ ಹಾಕಿಸಿಬಿಡಿ. ರೊಟ್ಟಿ, ಉಪ್ಪಿಟ್ಟು, ಭಾತು ಎಲ್ಲ ಮಾಡಿಸಿ, ಗಡದ್ದಾಗಿ ತಿಂದು ಬಿಡೋಣಂತೆ' ಅಂದರು. ಅದನ್ನೂ ತೂಗಿಸಿದ್ದಾಯಿತು.

ಮಾರನೆ ದಿನ ಏರ್‌ಲೈನ್ಸ್ ಆಫೀಸಿನಲ್ಲಿ ಟಿಕೆಟ್ ಚೆಕ್ ಮಾಡಿಸಿ ಒಳಹೋಗುವಾಗ, ಅಲ್ಲಿನ 'ಇನ್–ಚಾರ್ಜ್' ವಿ.ಸೀ.ಯವರ ಸಾಮಾನಿನ ಮೊತ್ತ ನೋಡಿ, ಲಗ್ಗೇಜ್ ತೂಗಿಸಬೇಕೆಂದ. ಊರಿಂದ ತಂದಿದ್ದ ಸೂಟ್‌ಕೇಸು, ಬಟಾಣಿಯ ಚೀಲ, ಹರಿದ್ವಾರದ ಬೆತ್ತ ಇವಲ್ಲದೆ ವಿ.ಸೀ. ಕೈಗೆ ಬಂದ ಮುನ್ನೂರು ರೂಪಾಯಿಗೆ ಇನ್ನೂ ಏನೇನು ಕೊಂಡಿದ್ದರೊ! ಪ್ರಯಾಣದಲ್ಲಿ ಉಚಿತವಾಗಿ ಕೊಂಡು ಹೋಗಬಹುದಾಗಿದ್ದ ಇಪ್ಪತ್ತು ಕಿಲೋಗಿಂತ ಲಗ್ಗೇಜ್ ಏಳೆಂಟು ಕಿಲೋ ಜಾಸ್ತಿಯಿತ್ತು. ಅದರ ಬಾಬತ್ತು ಇಪ್ಪತ್ತು

ರೂಪಾಯಿ ಶುಲ್ಕ ಕೊಡಬೇಕಾಗಿ ಬಂತು. ವಿ.ಸೀ. 'ಏನಪ್ಪ, ಎರಡು ರೂಪಾಯಿನ ಬಟಾಣಿಗೆ ಇಪ್ಪತ್ತು ರೂಪಾಯಿ ಜುಲ್ಮಾನೆಯೇ? ತುಂಬ ದುಬಾರಿಯಾಯ್ತಲ್ಲಪ್ಪ' ಎಂದು ಬೆಪ್ಪಾಗಿ ನಿಟ್ಟುಸಿರು ಬಿಟ್ಟರು.

ಕೊನೆಯದೊಂದು ತಮಾಷೆಯ ಪ್ರಸಂಗವನ್ನು ಹೇಳಿ ಮುಗಿಸುತ್ತೇನೆ. ಆ ಸಲ ವಿ.ಸೀ. ಬೆಂಗಳೂರಿಗೆ ವಾಪಸು ಹೊರಡುವ ದಿನ. ಪ್ರಯಾಣಿಕರನ್ನು ಏರ್‌ಪೋರ್ಟಿಗೆ ಒಯ್ಯುವ ಬಸ್ಸಿಗೆ ಕಾಯುತ್ತ ಜನಪಥದ ಏರ್‌ಲೈನ್ಸ್ ಕಚೇರಿಯ ಮುಂದೆ ನಿಂತಿದ್ದೆವು. ಬೆಳಗಿನ ಎಂಟೊಂಬತ್ತು ಗಂಟೆ. ಹಿತಮಿತವಾದ ಚುಮುಚುಮು ಬಿಸಿಲು. ವಿ.ಸೀ. ತಮಗೆ ತಾವೇ 'ಅಲ್ಲಿರುವುದು ನಮ್ಮನೆ / ಬಂದೆವಿಲ್ಲಿಗೆ ಸುಮ್ಮನೆ' ಎಂಬ ಕವಿತೆಯ ಸಾಲುಗಳನ್ನು ರಾಗವಾಗಿಯೇ ಉದ್ಧರಿಸುತ್ತ 'ವೇದಾಂತ ಹೇಳೋದು ಸುಲಭ, ಇದನ್ನೆಲ್ಲ ಬಿಟ್ಟು ಹೋಗೋಕ್ಕೆ ಯಾರು ತಾನೆ ಇಷ್ಟಪಡ್ತಾರೆ' ಎಂದೇನೋ ಹೇಳುತ್ತಿದ್ದರು. ನಾನು ಕೈಯಲ್ಲಿ ಎಂಟಾಣೆ ಬಿಲ್ಲೆಯೊಂದನ್ನು ಆಡಿಸುತ್ತ ನಿಂತಿದ್ದೆ. ಕೈಯಲ್ಲಿದ್ದ ಬಿಲ್ಲೆ ಜಾರಿ ಅವರ ಕಾಲಿನ ಹತ್ತಿರ ಬಿತ್ತು. ಅದನ್ನು ಎತ್ತಿಕೊಳ್ಳಲು ಬಗ್ಗಿದೆ. ಅದೇ ಹೊತ್ತಿಗೆ ಏರ್‌ಪೋರ್ಟಿಗೆ ಹೋಗುವ ಬಸ್ಸು ಬಂತು. ವಿ.ಸೀ. ತಮಗೆ ನಮಸ್ಕಾರ ಮಾಡಲು ಬಗ್ಗಿದೆನೆಂದುಕೊಂಡು 'ಅದೆಲ್ಲ ಯಾಕಪ್ಪ? ವಿಶ್ವಾಸ ಒಂದಿದ್ದರೆ ಸಾಕು' ಅಂದರು. ಎಷ್ಟೇ ಆದರೂ ಅವರು ಅಂತಹ ಆಚರಣೆಗಳಲ್ಲಿ ಗಾಢ ವಿಶ್ವಾಸವಿಟ್ಟ ಕಳೆದೊಂದು ಕಾಲದವರು. ನಾನೋ, ಅವನ್ನು ಗೇಲಿ ಮಾಡುವ ಇತ್ತೀಚಿನ ಇನ್ನೊಂದು ಕಾಲದವನು. 'ಇಲ್ಲ, ನಮಸ್ಕಾರ ಮಾಡುತ್ತಿಲ್ಲ. ಬಿದ್ದ ಕಾಸನ್ನು ಎತ್ತಿಕೊಳ್ಳುತ್ತಿದ್ದೇನೆ' ಎಂದು ಹೇಳಿ ಅವರನ್ನೂ ಪೇಚಿಗೆ ಸಿಕ್ಕಿಸಿ, ನಾನೂ ಪೇಚಿಗೆ ಬೀಳಲೆ? ಅದರಿಂದ ಬಚಾವಾಗಲು, ಬಗ್ಗಿದ್ದ ನಾನು 'ಅಯ್ಯೋ, ಹಾಗಂದರೆ ಹೇಗೆ? ನೀವು ಪಾಠ ಹೇಳಿದ ಗುರುಗಳಲ್ಲವೆ?' ಎನ್ನುತ್ತ ಅವರ ಕಾಲುಮುಟ್ಟಿ ನಮಸ್ಕಾರ ಮಾಡಿಯೇ ಬಿಟ್ಟೆ. ವಿ.ಸೀ. ಅವರ ಕಣ್ಣು ತೇವಗೊಂಡಿತ್ತು.

ಸಂದರ್ಭ ಹಾಗೆ ತಿರುಗಿದ್ದು ಒಳ್ಳೆಯದೇ ಆಯಿತು. ಎಷ್ಟೇ ಆದರೂ ಅವರು ಹಿರಿಯರು, ಗುರುಗಳು. ಅಲ್ಲದೆ, ಅದೇ ನನ್ನ ಅವರ ಕೊನೆಯ ಭೇಟಿಯೂ ಆಗಿತ್ತು.

ಕನ್ನಡದ ಹಿರಿಯ ಆಚಾರ್ಯ

ಯು. ಆರ್. ಅನಂತಮೂರ್ತಿ

ನಾನು ಶ್ರೀ ವಿ. ಸೀತಾರಾಮಯ್ಯನವರಿಗೆ ಕೋಪ ಬರುವಂತೆ ಹಿಂದೊಮ್ಮೆ ನಡೆದುಕೊಂಡಿದ್ದೆ. ಅವರ ಕಾವ್ಯವನ್ನು ಸಪ್ಪೆ ಎಂದು ನಾನು ಕರೆದೆನೆಂಬುದನ್ನು ಮಾತ್ರವಲ್ಲ, ಅವರ ಹೆಸರನ್ನು ನಾನು ತಪ್ಪಾಗಿ ಬರೆದೆ ಎಂಬುದೂ ಅವರನ್ನು ಕೆಣಕಿತ್ತು. ಅಚ್ಚಿನ ತಪ್ಪೋ, ಅಥವಾ ನಾನೇ ಹಾಗೆ ಬರೆದೆನೋ— ತನ್ನನ್ನು 'ವೀ.ಸಿ' ಯೆಂದು ಲೇಖನದಲ್ಲಿ ಕರೆದ ನನ್ನನ್ನು ಅಣಕಿಸುತ್ತ ಸಪ್ಪೆಯೂ ಹೇಗೆ ಒಂದು ಸಾತ್ವಿಕವಾದ ರುಚಿಯೇ ಎಂದು ಮನಮುಟ್ಟುವಂತೆ ವಾದಿಸಿದ್ದರು. ನನ್ನ ಗುರುಗಳಿಗೆ ಗುರುವಾಗಿದ್ದ ಕನ್ನಡದ ಈ ಆಚಾರ್ಯರು ಎಳೆಯನೊಬ್ಬನ ಹುಂಬತನವೆಂದು ನನ್ನ ಬರವಣಿಗೆಯನ್ನು ನಿರ್ಲಕ್ಷ್ಯದಿಂದ ಕಾಣಬಹುದಿತ್ತು. ಬದಲಾಗಿ ನನ್ನನ್ನು ಸಮಾನನಂತೆ ಕಂಡು ಜಗಳಕ್ಕೆ ನಿಂತದ್ದು ಅವರ ಔದಾರ್ಯವನ್ನು ತೋರಿಸುತ್ತದೆ. ನಮಗೂ ಹಿಂದಿನ ತಲೆಮಾರಿಗೂ ಅವರು ಸೇತುವಾಗಿದ್ದರು. ಗೋಡೆಯ ಮೇಲೆ ಪುಸ್ತಕಗಳು ಸಾಲಾಗಿ ತುಂಬಿದ ತಮ್ಮ ಕೋಣೆಯಲ್ಲಿ ಚಾಪೆಯ ಮೇಲೆ ಕೂತು, ನಾವೆಲ್ಲ ಹುಟ್ಟುವ ಮೊದಲೇ ತಾವು ಎಲಿಯಟ್‌ನನ್ನೂ ಪೌಂಡ್‌ನನ್ನೂ ಓದಿದ್ದರೆಂಬುದಕ್ಕೆ ಪುರಾವೆಯಾಗಿ ಪುಸ್ತಕಗಳನ್ನು ಕಪಾಟಿನಿಂದ ಎಳೆದು, ಬಿಚ್ಚಿ ತೋರಿಸಿ, ನಿರರ್ಗಳವಾಗಿ ಇಂಗ್ಲಿಷಿನಲ್ಲಿ ವಾದಿಸುತ್ತಿದ್ದ ಅವರನ್ನು ನಮ್ಮಂಥವರು ಮೆಚ್ಚಿಕೆಯಲ್ಲೂ ಅನುಮಾನದಲ್ಲೂ ಕಂಡದ್ದುಂಟು. ಆಕಾಶವಾಣಿಯಲ್ಲಿ ಅವರಿದ್ದಾಗ ಕವಿತೆಯನ್ನು ಓದಲೆಂದು ನನ್ನನ್ನು ಕರೆಸಿಕೊಂಡವರು, ಕಾಫಿ ಕುಡಿಸಿ, ನೂರಾರು ಸಂಗತಿಗಳ ನಡುವೆ ಕೆ. ಎಸ್. ನ. ರವರ ಪದ್ಯವೊಂದನ್ನು ಉದಾಹರಿಸಿದರು. ಉತ್ಕಂಠರಾಗಿ ಅವರು ನುಡಿದ ಕ್ರಮವನ್ನು ನಾನು ಮರೆಯಲಾರೆ. 'ಕಣ್ಣೆಲ್ಲೋ ಎತ್ತರದಲಿ ತುಟಿ ದುಃಖದ ಬಿರುಕು' ಎಂಬ ಸಾಲುಗಳನ್ನು ಅವರು ವಾಚಿಸುವಾಗ ಮೊದಲ ಸಾಲಿನ ದೀರ್ಘ ಎರಡನೇ ಸಾಲಿನ ವಿಸರ್ಗಗಳಿಂದಾಗಿ ಪದ್ಯದ ಆರ್ಥ ಹೇಗೆ ಲಯದಲ್ಲೇ ಧ್ವನಿಸುತ್ತಿದೆಯೆಂದು ನನಗೆ ಕಾಣಿಸಿದ್ದರು.

ಒಮ್ಮೆ ಅವರ ಜೊತೆ ನಾನು ದೆಹಲಿಗೆ ಹೋಗಬೇಕಾಗಿ ಬಂತು. ಹೈದರಾಬಾದಿನಲ್ಲಿ ನಿಂತಿದ್ದ ವಿಮಾನವನ್ನು ಶ್ರೀ ಸತ್ಯಸಾಯಿಬಾಬಾರು ಏರಿದರು. ವಿಮಾನದ ತುಂಬ ಕಾನ್‌ಫರೆನ್ಸಿಗೆಂದು ಬಂದ ಹಲವು ಕುಲಪತಿಗಳು ಇದ್ದರು. ವಿಮಾನ ಏರಿದ ಮೇಲೆ

ಬಿಲ್ವಾಗಳನ್ನು ಬಿಚ್ಚಿದ್ದೇ ಒಬ್ಬೊಬ್ಬರಾಗಿ ಕುಲಪತಿಗಳು ಶ್ರೀ ಸಾಯಿಬಾಬಾರ ಕಾಲಿಗೆರಗಿ ವಿಭೂತಿ ಪಡೆದರು. ಒಬ್ಬಳು ಅಮೆರಿಕನ್ ಹುಡುಗಿ ತಾನು ಪಡೆದ ಘಮಘಮಿಸುವ ವಿಭೂತಿಯನ್ನು ನೆಕ್ಕುತ್ತ ಸುಖಿಸಿದಳು. ಎಲ್ಲರೂ ಬಾಬಾರ ಪಾದಸ್ಪರ್ಶ ಮಾಡಿದ ನಂತರ ತಲೆಯಲ್ಲಿ ಜುಟ್ಟಿದ್ದ ವಿ.ಸೀ. ಯವರನ್ನು ನಾನು ಕುತೂಹಲದಿಂದ ಕೇಳಿದೆ: "ನೀವು ಹೋಗಲ್ಲವ ಸಾರ್?" ಅವರು ಕೊಟ್ಟ ಉತ್ತರ ಇವತ್ತಿಗೂ ನನಗೆ ಅರ್ಥಗರ್ಭಿತವೆಂದು ಕಾಣುತ್ತದೆ: "ನಾನು ಹಳೇ ಕಾಲದವನಪ್ಪ." ಆಕ್ಸ್‌ಫರ್ಡಿನಲ್ಲಿ ಓದಿದ ಕ್ರಾಪು ತಲೆಯ ಪ್ರೊಫೆಸರ್ ಗೋಕಾಕರು ಬಾಬಾರ ಪಕ್ಕದಲ್ಲಿ ವಿನಯಶೀಲರಾಗಿ ಕೂತಿದ್ದರು.

ಗಣಿತಶಾಸ್ತ್ರದ ಜೀನಿಯಸ್ ರಾಮಾನುಜಂ ಬಗ್ಗೆ ಹಾರ್ಡಿ ಆಶ್ಚರ್ಯ ವ್ಯಕ್ತ ಪಡಿಸಿದ್ದಾನೆ; ವಿಚಾರದಲ್ಲಿ ನಿರಪೇಕ್ಷವಾದ ಮುಕ್ತ ಮನಸ್ಸಿನ ಶೋಧಕನಾಗಿ ರಾಮಾನುಜಂ ಎಲ್ಲ ಧರ್ಮಗಳನ್ನೂ ತತ್ತ್ವಗಳನ್ನೂ ಚರ್ಚಿಸುತ್ತಿದ್ದನಂತೆ; ಆದರೆ ಆಚಾರದಲ್ಲಿ ಮಾತ್ರ ಅವನು ಸಂಪ್ರದಾಯವಾದಿ. ಇಂಗ್ಲೆಂಡಲ್ಲಿ ತನ್ನ ಶಾಖಾಹಾರವನ್ನು ತಾನೇ ಧೋತಿಯುಟ್ಟೇ ತಯಾರಿಸಿ ಅತ ತಿನ್ನುತ್ತಿದ್ದುದಂತೆ. ಇಂಥವರಿಗೆ ಪಶ್ಚಿಮದ ಜೊತೆ ಗೊಂದಲವಿಲ್ಲ. ಹೊರಗಿನಿಂದ ಸ್ವೀಕಾರಾರ್ಹವೆನ್ನಿಸಿದ್ದನ್ನು ನಿರ್ಭಿಡೆಯಿಂದ ಇವರು ಪಡೆಯುತ್ತಾರೆ. ಪಶ್ಚಿಮದಿಂದ ಅವರು ಕಂಗಾಲಾಗುವುದಿಲ್ಲ. ವಿ.ಸೀ. ಇಂಥವರ ಪಾಲಿಗೆ ಸೇರಿದವರೇ ಇರಬೇಕು.

ವಿ.ಸೀ. ಬಗ್ಗೆ ನಾನು ಕೇಳಿದ ಕಥೆಗಳೆಲ್ಲವೂ ಅವರ ದೊಡ್ಡತನವನ್ನು ಸಾರುವಂಥವು. ಎತ್ತರದ ತ.ಸು. ವೆಂಕಣ್ಣಯ್ಯನವರು ತಮ್ಮ ಮನೆಯೊಳಗೆ ಬರುವಾಗ ಬಾಗಬೇಕಾಗಿ ಬರುತ್ತಿತ್ತೆಂದು ಬಾಗಿಲನ್ನೆ ಅವರು ಒಡೆಸಿ ಮತ್ತೆ ಕಟ್ಟಿಸಿದರಂತೆ. ಆಧುನಿಕ ಜೀವನದ ಒಂದಂಶವಾದ ಕ್ರೌರ್ಯ ಭೀಭತ್ಸಗಳನ್ನು ಜೀರ್ಣಿಸಿಕೊಳ್ಳಬಲ್ಲ ಶಕ್ತಿ ಕಾವ್ಯಕ್ಕಿರಬೇಕೆಂದು ನವ್ಯರು ಬಯಸಿದಾಗ ನವುರಾದ್ದನ್ನೆ ಇಷ್ಟಪಡುತ್ತಿದ್ದ ವಿ.ಸೀ.ಯವರ ಧೋರಣೆ ಪ್ರಸ್ತುತವೆಂದು ನಮಗೆ ಅನಿಸಲಿಲ್ಲ. ಆದರೆ ವಿ.ಸೀ. ಯವರ ನಿಷ್ಠೆ ಕೂಡ ಕಠೋರವಾದ್ದೆಂಬುದನ್ನು ಯಾವತ್ತೂ ಮರೆಯುವಂತಿರಲಿಲ್ಲ. ಯಾಕೆಂದರೆ ತಾವು ಸಾಹಿತ್ಯದಲ್ಲಿ ಇಷ್ಟಪಡುವ ನವುರನ್ನು ನಿತ್ಯದ ವ್ಯವಹಾರದಲ್ಲೂ, ಮಾನವೀಯ ಸಂಬಂಧಗಳಲ್ಲೂ ಅಳವಡಿಸಿಕೊಂಡ ಕನ್ನಡದ ಹಿರಿಯ ರೂಪಾರಾಧಕ, ಅವರು.

('ರುಜುವಾತು'ವಿನಿಂದ)

ವಿ.ಸೀ. ಒಂದು ನೆನಪು

ಜಿ. ರಾಮಕೃಷ್ಣ

ಹಿರಿಯರಾದ ಮಾನ್ಯ ವಿ.ಸೀ.ಯವರೊಡನೆ ನನ್ನ ಪರಿಚಯ ಅತ್ಯಲ್ಪ. ನಾನು ಅವರನ್ನು ಭೇಟಿಯಾಗಿದ್ದದ್ದು ಮೂರು-ನಾಲ್ಕು ಬಾರಿ ಮಾತ್ರ. ದೂರದಿಂದ ನೋಡಿದ್ದು, ಕೇಳಿದ್ದೇ ಹೆಚ್ಚು. ಒಮ್ಮೆ ಮಾತ್ರ ಅವರೊಡನೆ ಸಭೆಯೊಂದರಲ್ಲಿ ಪಾಲ್ಗೊಂಡಿದ್ದೆ. ಆಗ ಸುಮಾರು ನಾಲ್ಕು ಗಂಟೆಗಳ ಕಾಲ ಅವರೊಡನಿರುವ, ಪ್ರಯಾಣಿಸುವ, ಸಂದರ್ಭ ಒದಗಿ ಬಂದಿತ್ತು.

ನಾನು ಮೊದಲಿಗೆ ಅವರನ್ನು ನೋಡಿದ್ದು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ವಿಶ್ವವಿದ್ಯಾನಿಲಯದ ಪ್ರಸಾರಾಂಗವು ೧೯೫೯ರಲ್ಲಿ ಯೋಜಿಸಿದ್ದ ಒಂದು ಉಪನ್ಯಾಸ ಕಾರ್ಯಕ್ರಮದ ವೇಳೆಯಲ್ಲಿ. ಅವರು ಆಯ್ಕೆ ಮಾಡಿಕೊಂಡಿದ್ದ ವಿಷಯದ ಶೀರ್ಷಿಕೆಯಲ್ಲಿ 'ಅರ್ಥ' ಮತ್ತು 'ಮೌಲ್ಯ' ಎಂಬ ಪದ ಇದ್ದುದರಿಂದ ಅದು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ್ದಿರಬೇಕೆಂದು ನಮ್ಮಲ್ಲಿ ಹಲವರ ಕಲ್ಪನೆಯಾಗಿತ್ತು. ಅರ್ಥಶಾಸ್ತ್ರವನ್ನು ಆಳವಾಗಿ ವ್ಯಾಸಂಗ ಮಾಡಿದವರಾದ ವಿ.ಸೀ. ಆ ಬಗ್ಗೆ ಮಾತಾಡಬಲ್ಲವರೂ ಆಗಿದ್ದವರು. ಆದರೆ ಉಪನ್ಯಾಸ ಆರಂಭವಾದ ಮೇಲೆ ತಿಳಿಯಿತು, ಅದು ಅರ್ಥಶಾಸ್ತ್ರದ 'ಅರ್ಥ' ಅಲ್ಲ, ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದ್ದು ಎಂಬುದು. ಅವರ ಉಪನ್ಯಾಸವು ಮೂರು ದಿನ ಸಂಜೆಯ ವೇಳೆಯಲ್ಲಿತ್ತು; ಮೂರೂ ದಿನ ನಾನು ಹಾಜರಾಗಿದ್ದೆ. ಅನೇಕ ಬಾರಿ ವಿ.ಸೀ. ಯವರ ಹೆಸರು ಕೇಳಿದ್ದುದು ಈ ಹಾಜರಾತಿಗೆ ಕಾರಣವಾಗಿತ್ತೇ ವಿನಾ ಅವರ ಉಪನ್ಯಾಸವನ್ನು ಸಮರ್ಥವಾಗಿ ಅರ್ಥ ಮಾಡಿಕೊಂಡಿದ್ದುದಲ್ಲ. ಆಗ್ಗೆ ಉಪನ್ಯಾಸಗಳಿಗೆ ಹಾಜರಾಗುವ ಪದ್ಧತಿ ವಿದ್ಯಾರ್ಥಿಗಳಾದ ನಮ್ಮಲ್ಲಿ ಸಾಕಷ್ಟಿತ್ತು ಎನ್ನಬಹುದು. ವಿ.ಸೀ.ಯವರು ಏನು ಪ್ರತಿಪಾದಿಸಿದ್ದರೆಂಬುದು ಈಗ ಸುತರಾಂ ನನ್ನ ಸ್ಮೃತಿಯಲ್ಲಿ ಉಳಿದಿಲ್ಲ. ಪ್ರಸಾರಾಂಗದವರು ವಿ.ಸೀ.ಯವರ ಆ ಉಪನ್ಯಾಸಗಳನ್ನು ಅಚ್ಚುಮಾಡಿ ಪ್ರಕಟಿಸಿದ್ದರು ಮತ್ತು ನಾನೂ ಒಂದು ಪ್ರತಿಯನ್ನು ಕೊಂಡಿದ್ದೆ. ಈಗ ಅದನ್ನು ಓದಿದರೆ ಸ್ವಲ್ಪ ಅರ್ಥವಾದೀತೆಂಬ ಭಾವನೆ ಇದೆ; ಆದರೆ ಪುಸ್ತಕವನ್ನು ಯಾರು ತೆಗೆದುಕೊಂಡು ಹೋದರೋ – ಹೇಗೆ ಪತ್ತೆ ಹಚ್ಚುವುದು?

ನಂತರದ ದಿನಗಳಲ್ಲಿಯೂ ವಿ.ಸೀ. ಯವರ ಬೇರೆ ಕೃತಿಗಳನ್ನು ನಾನು ಓದಿದೆನೆಂದು

ಹೇಳಿಕೊಳ್ಳಲಾರೆ. ಅದನ್ನು ನಾನು ಮಾಡಿದ್ದು ೧೯೭೦ರ ದಶಕದಲ್ಲಿ ಮಾತ್ರವೇ ಎಂದರೆ ಆಶ್ಚರ್ಯವೆನಿಸುತ್ತದೆ. ಈಗಲೂ ಅವರ ಎಲ್ಲ ಕೃತಿಗಳನ್ನೂ ನಾನು ಅಭ್ಯಾಸ ಮಾಡಿಲ್ಲವೆಂಬುದನ್ನು ಸಂಕೋಚದಿಂದಲೇ ನಿವೇದಿಸಿಕೊಳ್ಳಬೇಕಾಗಿದೆ.

೧೯೭೦ರ ಏಪ್ರಿಲ್ ತಿಂಗಳಲ್ಲಿ ಲೆನಿನ್ ಜನ್ಮ ಶತಮಾನೋತ್ಸವ ನಡೆದಿತ್ತು. ಬೆಂಗಳೂರಿನಲ್ಲಿ ಆ ಸಂಬಂಧವಾಗಿ ಹತ್ತಾರು ಸಭೆಗಳು, ಸಮಾರಂಭಗಳು ಜರುಗಿದ್ದವು. ಅಂತಹ ಒಂದು ಸಮಾರಂಭವು ಎಚ್.ಎ.ಎಲ್. ಬಳಿಯ ಸಮುದಾಯ ಭವನದಲ್ಲಿ ಏರ್ಪಟ್ಟಿತ್ತು. ಅಲ್ಲಿಗೆ ಉಪನ್ಯಾಸಕಾರರಾಗಿ ಮಾನ್ಯ ವಿ.ಸೀ. ಯವರು ಮತ್ತು ನಾನು ಹೋಗಿದ್ದೆವು. ಅಂದಿನ ಅಧ್ಯಕ್ಷರು ಶ್ರೀ ಎಂ. ಸಿ. ನರಸಿಂಹನ್ ಅವರು. ಮೂರು ಮಂದಿಯೂ ವಿ.ಸೀ. ಯವರ ಮನೆಯಿಂದ ಹೊರಟು ಅಲ್ಲಿಗೇ ವಾಪಸ್ಸಾದೆವು. ಅದೊಂದೇ ಬಾರಿ ನಾನು ಅವರೊಡನೆ ಸುಮಾರು ನಾಲ್ಕು ಗಂಟೆಗಳ ಕಾಲ ಜೊತೆಯಲ್ಲಿದ್ದದ್ದು. "ವೇದ ಓದಿದ್ದೇನೆ ಎನ್ನುತ್ತೀರಿ, ಅಲ್ಲಿಂದ ಲೆನಿನ್ ಹತ್ತಿರ ಹೇಗಪ್ಪಾ ಬಂದುಬಿಟ್ಟಿರಿ?" ಎಂದು ವಿ.ಸೀ. ಯವರು ತಮ್ಮ ಛತ್ರಿಯಿಂದ ತಿವಿದದ್ದು ಚೆನ್ನಾಗಿ ಜ್ಞಾಪಕವಿದೆ. ಮೈಸೂರಿನ ಅವರ ಉಪನ್ಯಾಸಗಳ ಬಗ್ಗೆ ಪ್ರಸ್ತಾಪಿಸಿದ್ದಕ್ಕೆ ಅವರೆಂದರು: "ನಿಮಗೇನೂ ಅರ್ಥವಾಗಲಿಲ್ಲವೆಂದು ಹೇಳುತ್ತಿದ್ದೀರಿ. ಹೋಗಲಿ ಬಿಡಿ, ಅರ್ಥ ಮಾಡಿಕೊಂಡವರು ಮಾಡಿದ್ದು ಅಷ್ಟರಲ್ಲೇ ಇದೆ!"

ಎಚ್.ಎ.ಎಲ್. ಸಮಾರಂಭದಲ್ಲಿ ವಿ.ಸೀ. ಯವರ ಮಾತು ಕೇಳಿಸದಷ್ಟು ಗಲಾಟೆ. ಭಾಷಣಗಳ ನಂತರ ಯಾವುದೋ ಸೋವಿಯೆತ್ ಚಲನಚಿತ್ರ ತೋರಿಸುವುದಾಗಿ ಪ್ರಕಟಿಸಿದ್ದುದರಿಂದ ಸಭೆಯಲ್ಲಿ ಮಕ್ಕಳು ತುಂಬಿ ಹೋಗಿದ್ದರು. ಅವರು ಯಾರ ಭಾಷಣವನ್ನೂ ಕೇಳಲು ಬಂದಿರಲಿಲ್ಲ. ಸಂಯೋಜಕರಿಗೆ ಭಾರಿ ಮುಜುಗರ ಉಂಟಾಯಿತಾದರೂ ವಿ.ಸೀ. ಯವರು ನೆಮ್ಮದಿ ಕಳೆದುಕೊಂಡಂತೆ ತೋರಲಿಲ್ಲ. ಮನೆಗೆ ಹಿಂದಿರುಗಿದ ಮೇಲೆ ನಮ್ಮನ್ನು ಕೆಲಕಾಲ ಉಳಿಸಿಕೊಂಡು ಲೆನಿನ್ ಕಾಲದ ಕೆಲವು ಸಂಗತಿಗಳನ್ನು ವಿವರಿಸಿ ಹೇಳಿದರು. ಕಡೆಗೆ ಅವರೆಂದರು: "ಎಷ್ಟೋ ಜನ ಆಗಿಹೋಗಿದ್ದಾರೆ. ಎಲ್ಲಾ ಸಮಾನತೆಯನ್ನು ಹೇಳಿದವರೇ. ಆದರೆ ಅವನು ಮಾತ್ರ ನೋಡಿ, ಬೇರೆಯವರಂತಲ್ಲ." ಹೀಗೆ ಹೇಳುತ್ತಾ ವಿ.ಸೀ. ಯವರು ತಮ್ಮ ಮುಷ್ಟಿಯನ್ನು ಗಾಳಿಯಲ್ಲಿ ಬಲವಾಗಿ ತೀಡುತ್ತಾ ನಸುನಗುತ್ತಿದ್ದುದು ಇಂದು ನಡೆದದ್ದೋ ಎಂಬಷ್ಟು ಸ್ಫುಟವಾಗಿ ನನ್ನ ಮನಸ್ಸಿನಲ್ಲಿ ಉಳಿದಿದೆ. ಅಂದು ಅವರು ಲೆನಿನ್ ಕಾಲದ ಚರಿತ್ರೆಯ ಬಗೆಗಿನ ಕೆಲವು ಅಂಶಗಳನ್ನು ಒತ್ತಿ ಹೇಳಿದ್ದುದು ಕೂಡ ನನಗೆ ನೆನಪಿದೆ, ಅದನ್ನು ಹಲವು ಬಾರಿ ನಾನು ಚರ್ಚೆಗಳಲ್ಲಿ ಬಳಸಿಕೊಂಡಿದ್ದೇನೆ.

ವಿ. ಸೀ. ಯವರನ್ನು ಎರಡನೆಯ ಬಾರಿ ಅವರ ಮನೆಯಲ್ಲಿ ನಾನು ಭೇಟಿಮಾಡಿದ್ದು ಸಹ ಲೆನಿನ್ ಜನ್ಮ ಶತಮಾನೋತ್ಸವದ ಪ್ರಸಂಗದಲ್ಲೇ. ಡಾ. ಹಾ. ಮಾ. ನಾಯಕರ ನೇತೃತ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಆಗೊಂದು ರಾಷ್ಟ್ರಮಟ್ಟದ ವಿಚಾರ ಗೋಷ್ಠಿ ಏರ್ಪಡಿಸಿತ್ತು. ದೇವಿ ಪ್ರಸಾದ ಚಟ್ಟೋಪಾಧ್ಯಾಯ, ಕೆ.ಪಿ.ಎಸ್. ಮೆನನ್, ವಿ. ಆರ್. ಕೃಷ್ಣ ಅಯ್ಯರ್, ಜೋಸೆಫ್ ಮುಂಡಸ್ಸೇರಿ, ಮುಂತಾದವರೊಡನೆ ನಾನು ಗೋಷ್ಠಿಗಳಲ್ಲಿ ಭಾಗವಹಿಸುವುದಿತ್ತು. ನನ್ನ ಲೇಖನದಲ್ಲಿ ವಿ.ಸೀ. ಯವರ ಒಂದು ಕವನದ ಕೆಲವು

ಭಾಗಗಳನ್ನು ಉಲ್ಲೇಖಿಸಿದ್ದೆ. "ದ್ರಾಕ್ಷಿ-ದಾಳಿಂಬೆ" ಸಂಕಲನದಲ್ಲಿನ "ಕ್ರೋಧ ಕೇತನ" ಎಂಬುದು ಆ ಕವನ. (ಎಷ್ಟೋ ವರ್ಷಗಳ ನಂತರ ಚಿಕ್ಕಮಗಳೂರಿನ ಯುವ ಕಮ್ಯುನಿಸ್ಟ್ ಕಾರ್ಯಕರ್ತ ಶ್ರೀ. ಬಿ.ಕೆ. ಸುಂದರೇಶ್ ಅವರ ಗಮನಕ್ಕೆ ಆ ಕವನವನ್ನು ನಾನು ತಂದಿದ್ದೆ. ಅವರು ಅದನ್ನು ರೈತ-ಕಾರ್ಮಿಕರ ನಡುವೆ ಪ್ರಚಾರದ ಸಾಮಗ್ರಿಯನ್ನಾಗಿ ಮಾಡಿಕೊಂಡಿದ್ದರು). ಗೋಷ್ಠಿಯ ನಂತರ ಮೈಸೂರಿನ ಕೆಲವು ಗೆಳೆಯರು ಲೋಕಾಭಿರಾಮವಾಗಿ ಮಾತನಾಡುತ್ತಾ ಆ ಕವನದ ಬಗ್ಗೆ ಒಂದೆರಡು ಲಘುವಾದ ಟೀಕೆಗಳನ್ನು ಮಾಡಿದ್ದರು. ಅದಕ್ಕೆ ವಿ.ಸೀ. ಹೇಗೆ ಪ್ರತಿಕ್ರಿಯಿಸಬಹುದೆಂಬ ಕುತೂಹಲದಿಂದ ನಾನು ಅವರನ್ನು ಭೇಟಿಯಾದೆ. ನನ್ನ ಮಟ್ಟಿಗೆ ಅದೊಂದು ಅಪೂರ್ವವಾದ ಸಂವಾದ. ಪ್ರಸಕ್ತ ಅಂತರರಾಷ್ಟ್ರೀಯ ಹಿನ್ನೆಲೆಯಲ್ಲಿ ಆರ್ಥಿಕತೆ ಹೇಗೆ ನಮ್ಮಂತಹ ದೇಶಗಳನ್ನು ಹಿಂಡಿ ಹಿಪ್ಪೆ ಮಾಡುತ್ತಿದೆಯೆಂಬುದನ್ನು ಹತ್ತಾರು ನಿದರ್ಶನಗಳನ್ನು ಕೊಟ್ಟು ದೀರ್ಘವಾಗಿ ವಿ.ಸೀ. ವಿವರಿಸಿದರು. ಭಾರತದ ಯೋಜನೆಗಳು ಏಕೆ ನಿರರ್ಥಕವಾಗುತ್ತಿವೆಯೆಂದು ಹೇಳುವಾಗ ಅವರು ಗಾಢವಾಗಿ ವ್ಯಥಿಸುತ್ತಿದ್ದುದು ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿದೆ. ವ್ಯಾಖ್ಯಾನ ಮಾಡುತ್ತಾ ಮಾಡುತ್ತಾ ಕಣ್ಣಲ್ಲಿ ಎರಡು ಹನಿ ಹಾಕಿದರು ಕೂಡ. "ಕೋಟಿ ಖಂಡುಗ ಧಾನ್ಯ ಬೆಳೆಯಲು ಲಾಭ ಸಾಲದೆ ಸುಡುವರು", ಮುಂತಾದ ಸಾಲುಗಳನ್ನು ಅವರು ವ್ಯಾಖ್ಯಾನಿಸಿದ್ದುದನ್ನು ಸ್ವೀಜಿ ಮತ್ತು ಬರಾನ್ ರಚಿಸಿರುವ "ಮನಾಪಲಿ ಕ್ಯಾಪಿಟಲಿಸಂ" ಓದುವಾಗ ಪದೇ ಪದೇ ಜ್ಞಾಪಿಸಿಕೊಂಡಿದ್ದೇನೆ.

ಆ ಕವನದ ಬಗ್ಗೆ ಮೈಸೂರಿನ ಗೆಳೆಯರಲ್ಲಿ ಕೆಲವರು ಎತ್ತಿದ್ದ ಆಕ್ಷೇಪ ಇದು : ಅಲ್ಲಿ ನಿರೂಪಿಸಲಾಗಿರುವ ಅರ್ಥಶಾಸ್ತ್ರ ಪ್ರಮೇಯವನ್ನು ನಾವು ಸರ್ವಥಾ ಒಪ್ಪುತ್ತೇವೆ. ಕವನದ ಶೀರ್ಷಿಕೆಯೇ ಸ್ಫೂರ್ತಿದಾಯಕವಾಗಿದೆ. ಆದರೆ ಅಲ್ಲಿ ಕಾವ್ಯಾಂಶವೇನಿದೆ? ಕಡೆಯ ಭಾಗದಲ್ಲಿ 'ಅಸ್ಥಿಚರ್ಮದ ಭಾಗ್ಯವಂತ' ರನ್ನು ಕುರಿತು ಹೇಳಿರುವುದೆಲ್ಲಾ ಸೊಗಸಾಗಿದೆ. ಆದರೆ ಇಡೀ ಪದ್ಯದಲ್ಲಿ ಒಂದು ಪ್ರತಿಮೆಯಿಲ್ಲ, ಒಂದು ರೂಪಕವಿಲ್ಲ, ಇತ್ಯಾದಿ.

ನನ್ನ ನಿರೂಪಣೆಯನ್ನು ಕೇಳಿ ವಿ.ಸೀ. ಜೋರಾಗಿ ನಕ್ಕುಬಿಟ್ಟರು. "ಏನೋ ಅಪ್ಪಾ, ನೀವೆಲ್ಲಾ ಕಾಲೇಜುಗಳಲ್ಲಿ ಸಾಹಿತ್ಯ ಕಲಿಸುವ ವಿದ್ವಾಂಸರು. ಅದೂ ಆಧುನಿಕ ಸಾಹಿತ್ಯ ಕಲಿಸುತ್ತೀರಿ. ನೀವೇನೋ ಪದ್ಯ-ಗಿದ್ಯ ಬರೆಯುವವರಲ್ಲ ಎನ್ನುತ್ತೀರಿ, ಸಂತೋಷ. ನಿಮ್ಮ ಸಹೋದ್ಯೋಗಿಗಳು ಕವನ ರಚಿಸುತ್ತಾರೆ, ನಾಟಕ ಮಾಡುತ್ತಾರೆ, ವಿಮರ್ಶೆ ಬರೆಯುತ್ತಾರೆ, ಇನ್ನೂ ಏನೇನೋ ಮಾಡುತ್ತಾರೆ. ನನಗೆ ಅದೆಲ್ಲಾ ಅರ್ಥವಾಗುವುದಿಲ್ಲವೇನೋ! ಪ್ರತಿಮೆ, ರೂಪಕ, ಇವೆಲ್ಲಾ ಇವತ್ತಿನವೇ ಏನು? ನಮ್ಮ ಕವನಗಳಲ್ಲೂ ಅವು ಬಂದಿವೆಯೋ ಏನೋ, ಇರಲಿ. ಮುಖ್ಯವಿಷಯ ಏನೆಂದರೆ, 'ಕ್ರೋಧಕೇತನ' ಓದಿದವರೆಲ್ಲಾ ಅದನ್ನು ಹೀಗೆ ಟೀಕಿಸಿಲ್ಲ. ಪದ್ಯ ಓದುವುದಕ್ಕೆ ಇದೇ ವಿಧಾನ ಅಂತ ಹೇಳೋ ವಿಧಾತರು ಯಾರಪ್ಪಾ ಇವರು! ಅದನ್ನು ಓದಿ ನಿಮಗೆ ಏನೋ ಒಂದು ತೃಪ್ತಿ ತಂದಿದೆಯಲ್ಲಾ, ಅದೂ ವಿಮರ್ಶೆಯೇ ಅಲ್ಲವೆ? ಇಡೀ ಕವನ ಒಂದು ಪ್ರತಿಮೆ ಅಂತ ನೀವು ಹೇಳುತ್ತೀರಲ್ಲಾ, ಅದು ಸರಿ. ಅಂದರೆ, ನಾನು ಹಾಗಂತ ಯೋಚಿಸಿದ್ದೆ ಎಂದಲ್ಲ. ವಾಸ್ತವಿಕದ ಪ್ರಜ್ಞೆ ಪದ್ಯದಿಂದ ಬರಬಾರದು ಎಂಬ ನಿಯಮವೇನಾದರೂ ಉಂಟೆ? ಆ ಪ್ರತಿಮೆಯೂ ವಾಸ್ತವದ ತಿಳುವಳಿಕೆ ನೀಡುತ್ತದಲ್ಲ."

—ಇವೇ ಅವರ ವಾಕ್ಯಗಳೆಂದು ಹೇಳಲಾರೆ, ಆದರೆ ಅವರ ಇಂಗಿತ ಇದಾಗಿತ್ತು. ನನ್ನ ಪ್ರಕಾರ "ಕ್ರೋಧಕೇತನ" ನಿಜಕ್ಕೂ ಒಂದು ಉತ್ತಮ ಕವನ. "ನಮ್ಮ ಮನೆಯಂಗಳದಿ ಬೆಳಿದೊಂದು ಹೂವನ್ನು" ಕವಿಗಿಂತ "ಯಾರೊ ಬೆಳಿವರು, ಯಾರೊ ತಿಂಬರು" ಎಂದು ರೊಚ್ಚಿಗೇಳುವ ಕವಿ ನನಗೆ ಹೆಚ್ಚು ಸೊಗಸಾಗಿ ಕಾಣುತ್ತಾರೆ. ನನ್ನ ಮಟ್ಟಿಗೆ ವಿ.ಸೀ. ಪ್ರಭಾವಶಾಲಿಯಾಗಿರುವುದು ಹಾಗೆ.

ಇದಾದ ಮೇಲೆ ಇನ್ನೊಂದೆರಡು ಬಾರಿ ನಾನು ವಿ.ಸೀ.ಯವರನ್ನು ಭೇಟಿಯಾಗಿದ್ದೆ. ಆಗ ಭಾರತೀಯ ತತ್ತ್ವಶಾಸ್ತ್ರದ ಆಯಾಮಗಳನ್ನು ಕುರಿತಂತೆ ನಾನು ಒಂದೆರಡು ಅನಿಸಿಕೆಗಳನ್ನು ಅವರ ಮುಂದಿಟ್ಟೆ. ಅದನ್ನು ಸಹನೆಯಿಂದ ಕೇಳಿದರೇನೋ ಸರಿ, ಆದರೆ ಅದಕ್ಕೆ ಸಮ್ಮತಿ ಸೂಚಿಸಲಿಲ್ಲ. ಭಗವದ್ಗೀತೆಯ ಮೊದಲ ಅಧ್ಯಾಯದ ಪ್ರಶ್ನೆಗಳಿಗೆ ಉಳಿದ ಹದಿನೇಳು ಅಧ್ಯಾಯಗಳಲ್ಲಿ ಸಮಂಜಸವಾದ ತಾತ್ವಿಕ ಉತ್ತರವೇ ಇಲ್ಲವೆಂದು ನಾನು ವಾದಿಸಿದಾಗ ಸ್ವಲ್ಪ ಹುಬ್ಬು ಗಂಟಿಕ್ಕಿಕೊಂಡರು; ಆದರೆ ಅಸಮಾಧಾನದಿಂದ ನನ್ನನ್ನು ಬಯ್ಯಲಿಲ್ಲ. "ಇನ್ನೂ ಸ್ವಲ್ಪ ವಿಶಾಲವಾದ ದೃಷ್ಟಿಯಿಂದ ಆ ಮಹದ್ಗ್ರಂಥವನ್ನು ಅಭ್ಯಾಸ ಮಾಡಿ; ಆಗ ನಿಮ್ಮ ಭಾವನೆ ಬದಲಾಗುವುದೇನೋ ನೋಡೋಣಂತೆ," ಎಂದರು. ಹಾಗೆ ಅಭ್ಯಾಸ ಮಾಡಲು ಯತ್ನಿಸಿದ್ದೇನೆ, ಆದರೆ ಭಾವನೆ ಇನ್ನೂ ಬದಲಾಗುವ ಸೂಚನೆ ಕಂಡು ಬಂದಿಲ್ಲವೆಂದು ವಿ.ಸೀ.ಯವರಿಗೆ ನಾನು ಅರುಹುವ ಸುಯೋಗ ಕೂಡಿಬರಲಿಲ್ಲ.

ಅನುಪಮ ಓದುಗಾರಿಕೆ

"ಕಾವ್ಯವೇ ಆಗಲಿ, ನಾಟಕವೇ ಆಗಲಿ, ವಿ.ಸೀ.ಯವರು ಓದಬೇಕು, ಇತರರು ಕೇಳಬೇಕು, ಅದರ ರಮ್ಯತೆಯನ್ನು ಅನುಭವಿಸಬೇಕು. ವಿ.ಸೀ. ಅವರ ಓದುಗಾರಿಕೆಯಲ್ಲಿ ಜೀವಸ್ವರವಾಗಿ ಮಿಡಿಯುತ್ತಿದ್ದದ್ದು ಧ್ವನಿ.... ಹಳಗನ್ನಡವಾಗಲಿ ಹೊಸಗನ್ನಡವಾಗಲಿ, ಪದ್ಯವಾಗಲಿ ಗದ್ಯವಾಗಲಿ ನಾಟಕವಾಗಲಿ ವಿ.ಸೀ. ಅವರ ಕೊರಲಲ್ಲಿ ಒಂದು ಅಪೂರ್ವವಾದ ವರ್ಚಸ್ಸು, ಶಕ್ತಿ, ಮಾಧುರ್ಯಗಳಿಂದ ರೂಪುಗೊಂಡು ಹೊರಬರುತ್ತಿದ್ದವು. ಇವರ ಓದುಗಾರಿಕೆಯ ಬಾಣಿಯನ್ನು ಅನುಸರಿಸಿಹೋದವರು ಅಪರೂಪ, ಅನುಸರಿಸಿ ಗೆದ್ದವರಂತೂ ಇಲ್ಲವೆಂದೇ ಹೇಳಬೇಕು".

ಬಿ. ಜಿ. ಎಲ್. ಸ್ವಾಮಿ
'ಪಂಚಕಲಶ ಗೋಪುರ' ಪು. ೯೨

ಸೂಕ್ಷ್ಮಗ್ರಾಹಿ ವಿದ್ವಾಂಸ

ಟಿ. ಎ. ವೆಂಕಟಾಚಲಶಾಸ್ತ್ರೀ

ನಾನು ಕಂಡ ನನ್ನ ಕಾಲದ ಸಾಹಿತ್ಯ ಪ್ರಪಂಚದ ಧೀಮಂತರಲ್ಲಿ ವಿ.ಸೀ. ಧಾರಾಳವಾಗಿ ದೊಡ್ಡವರು. ನಾನು ಮೈಸೂರಿಗೆ ಓದುವುದಕ್ಕೆ ಎಂದು ಬರುವ ವೇಳೆಗೆ (೧೯೪೮) ಅವರು ಮೈಸೂರು ಮಹಾರಾಜಾ ಕಾಲೇಜಿನಿಂದ ಬೇರೆ ಕಡೆಗೆ ವರ್ಗವಾಗಿದ್ದರು. ಹೀಗಾಗಿ ಅವರ ವಿದ್ಯಾರ್ಥಿಯಾಗುವ ಸುಯೋಗದಿಂದ ನಾನು ವಂಚಿತನಾದೆ. ನಾನು ಅಧ್ಯಾಪಕನಾದ ಮೇಲೆ, ನಾನು ಕೆಲಸ ಮಾಡುತ್ತಿದ್ದ ಕಾಲೇಜಿನ ಕನ್ನಡ ಸಂಘದ ಉಪನ್ಯಾಸಕ್ಕೆ ಎಂದು ಅವರು ಒಮ್ಮೆ ಬಂದಿದ್ದರು. ಈಚೆಗೆ ಮೈಸೂರಿಗೆ ನಾನು ಬಂದ ಮೇಲೆ ಮಾನಸಗಂಗೋತ್ರಿಯ ಗಾಂಧೀಭವನದಲ್ಲಿ ಅವರ ಒಂದು ಉಪನ್ಯಾಸವಿತ್ತು. ಅಲ್ಲದೆ ನನ್ನ ವಿದ್ಯಾರ್ಥಿ ದೆಸೆಯಲ್ಲಿಯೇ, ಮಹಾರಾಜಾ ಕಾಲೇಜಿನಲ್ಲಿ ಅವರ ಒಂದೆರಡು ಭಾಷಣಗಳನ್ನು ಕೇಳಿದಂತೆ ನೆನಪು.

ಭಾಷಣಕಾರರಾಗಿ ವಿ.ಸೀ ಅವರ ಭಾಷಣದ ವಸ್ತು ವಿನ್ಯಾಸ, ನಿರೂಪಣೆಯ ವೈಖರಿ, ಹಾವಭಾವ ಸಹಿತವಾದ ಆಂಗಿಕ ಚರ್ಯೆಗಳು ಅನನ್ಯವಾದವು. ಅವರ ಶ್ರೋತೃಗಳು ಅವನ್ನು ಚೆನ್ನಾಗಿ ಬಲ್ಲರು. ಆ ಕಾಲದಲ್ಲಿ ಅವರ ಹಾಗೆ ಮಾತಾಡುತ್ತಿದ್ದವರು ಬೇರೆ ಯಾರಿದ್ದರೋ, ನನಗೆ ತಿಳಿಯದು. ಆಲೂರರು, ಬೇಂದ್ರೆಯವರು, ಅ.ನ.ಕೃ ಅವರು, ಸಿ.ಕೆ. ವೆಂಕಟರಾಮಯ್ಯನವರು ಹೀಗೆ ವಾಗ್ಮಿಗಳೆಂದು ಪ್ರಸಿದ್ಧರಾದ ಕೆಲವರ ಭಾಷಣಗಳನ್ನು ನಾನು ಕೇಳಿದ್ದರೂ, ವಿ.ಸೀ. ಅವರ ವಾಗ್ಮಿತೆಗೆ ಒಂದು ಪ್ರತ್ಯೇಕತೆಯುಂಟು ಎಂದೇ ನಾನು ಹೇಳಬೇಕು. ಹತ್ತಿರದಿಂದ ಅವರನ್ನು ಹೋಲುವವರು ಅ.ನ.ಕೃ. ಇವರ ನಡುವೆ ವ್ಯತ್ಯಾಸವೆಂದರೆ, ಅದು ಗುಡುಗು ಮಿಂಚಿನ ವ್ಯತ್ಯಾಸವಷ್ಟೆ. ಇಬ್ಬರದೂ ನಿರರ್ಗಳ ಧಾರೆಯ ವರ್ಚಸ್ವೀ ವಾಗ್ವೈಭವ.

ವಿ.ಸೀ. ಭಾಷಣದಲ್ಲಿ ಮಿಂಚಿನ ಸೆಳಕುಗಳು ಸಾಮಾನ್ಯ. ಅಲ್ಲಿ ಹತ್ತು ನೂರು ವಿಷಯಗಳು ಒಂದಕ್ಕೊಂದು ಸಂಘಟಿಸುತ್ತಿದ್ದುವು. ಪ್ರತಿಭೆಯ ಹೊಳಹುಗಳು ಹೊಮ್ಮಿಸುತ್ತಿದ್ದ ವಿಚಾರ ವಿಮರ್ಶೆಗಳು ಕೆಲಮಟ್ಟಿಗೆ ತರ್ಕಬದ್ಧ ಎಂಬುದಕ್ಕೆ ಎರವಾದರೂ ಅವು ಭಾವಸಂಪನ್ನ ವಿಸ್ಮಯಾವಹ ತತ್ತ್ವಾಲೋಕ ತರಂಗಗಳಾಗಿ ಸಿಡಿದೇಳುತ್ತಿದ್ದುವು.

ಒಮ್ಮೆ ಬೆಂಗಳೂರಿನ ಸೆಯಿಂಟ್ ಜೋಸೆಫ್ಸ್ ಕಾಲೇಜಿನ ಉಪನ್ಯಾಸಕ್ಕೆ ವಿ.ಸೀ.

ಬರುವಾಗ ಸುಮಾರು ೧೦–೧೫ ನಿಮಿಷ ತಡವಾಗಿತ್ತು. ಬಂದವರೇ ಮಾಡಬಾರದ್ದನ್ನು ಮಾಡಿದ ತಪ್ಪಿತಸ್ಥನ ಮುಖಭಾವದಲ್ಲಿ ಸಭೆಗೆ ಕೈಮುಗಿದು "ತಾವು ನನ್ನನ್ನು ಕ್ಷಮಿಸಬೇಕು, ಇನ್ನು ಈ ಜನ್ಮದಲ್ಲಿ ಹೀಗೆ ಮಾಡುವುದಿಲ್ಲ" ಎಂದು ಅವರು ಪ್ರಾರ್ಥಿಸಿದರು. ಅವರಂಥ ಪ್ರಸಿದ್ಧರಿಗೆ ಏಕೆ ಈ ದೈನ್ಯ? ಅವರು ಪರಮಸಾತ್ತ್ವಿಕರು ಎಂಬುದೇ ಉತ್ತರ. ಅದು ಸರ್. ಎಂ. ವಿ. ಅವರ ಆದರ್ಶಾನುಸಂಧಾನದ ಪರಿಣಾಮ.

ವಿ.ಸೀ. ಬೆಂಗಳೂರಿನ ಚಾಮರಾಜಪೇಟೆಯ ಬೀದಿಗಳಲ್ಲಿ, ಶಂಕರಮಠದ ಆವರಣದಲ್ಲಿ, ಇತರ ಇಷ್ಟವಾದ ಸ್ಥಳ ಸನ್ನಿವೇಶದಲ್ಲಿ ಸುತ್ತಾಡುವಾಗ ತಮ್ಮ ಪರಿಷ್ಕಾರವಾದ ಉಡುಗೆ ತೊಡುಗೆಗಳಿಂದ, ರಾಜ ಗಂಭೀರವಾದ ನಡಗೆಯಿಂದ, ಮಿಂಚುಗಣ್ಣಿನ ನೋಟದಿಂದ, ಸಹಚರರೊಂದಿಗೆ ಆಡುವ ಕಂಚುದನಿಯ ಮಾತಿನಿಂದ ತಮ್ಮ ಸುತ್ತ ಒಂದು ಪ್ರಭಾವಲಯವನ್ನು ನಿರ್ಮಿಸಿಕೊಂಡು ಒಬ್ಬ ಗಂಧರ್ವಪುರುಷನಾಗಿ ಕಾಣುತ್ತಿದ್ದರು.

ಒಂದೆರಡು ಸಲ ವಿ.ಸೀ. ಅವರ ಮನೆಗೆ ನಾನು ಹೋಗಿ ಬಂದದ್ದು ಉಂಟು. ಐಬಿಎಚ್ ಸಂಸ್ಥೆ ತಾನು ಪ್ರಕಟಿಸುತ್ತಿದ್ದ ಕವಿಕಾವ್ಯ ಪರಂಪರೆಯ ಪುಸ್ತಕವೊಂದಕ್ಕೆ ನನ್ನಿಂದಲೂ ಒಂದು ಬರಹವನ್ನು ಅಪೇಕ್ಷಿಸಿತು. ಅದನ್ನು ಶ್ರದ್ಧೆಯಿಂದಲೇ ಸಿದ್ಧಪಡಿಸಿ ಕಳಿಸಿದೆ. ಸುಮಾರು ೨೫ ವರ್ಷಗಳಿಗೂ ಹಿಂದಿನ ಮಾತು ಇದು. ಸಂಪಾದಕರಾಗಿ ಅವರು ಅದನ್ನು ಸಾವಕಾಶವಾಗಿ ಓದಿ, ಅದರ ಕೆಲವು ಓರೆಕೋರೆಗಳನ್ನು ನನ್ನ ಗಮನಕ್ಕೆ ಪತ್ರಮುಖೇನ ಬರೆದು ತಿಳಿಸಿದ್ದರು; ತಿದ್ದುಪಾಟಿಗೆ ನನ್ನ ಅನುಮತಿಯನ್ನು ಕೇಳಿದ್ದರು. ಕವಿ ಪ್ರಶಂಸೆಯಲ್ಲಿ ನಾನು ಪ್ರಕಟಿಸಿದ್ದ ಉತ್ಸಾಹವನ್ನು ಮೃದುವಾಗಿ ಪ್ರಶ್ನಿಸಿದ್ದರು. ಅವರ ಕೋರಿಕೆಯಂತೆ ಬರಹದಲ್ಲಿ ಅಲ್ಲಲ್ಲಿ ಸೇರಿಸಬೇಕಾದ ಉದಾಹರಣೆ ಪದ್ಯಗಳನ್ನು ಪ್ರತ್ಯೇಕವಾಗಿ ಅವರಿಗೆ ಬರೆದು ಕಳುಹಿಸಿದೆ; ಸ್ಥಳ ನಿರ್ದೇಶನವನ್ನೂ ಮಾಡಿದ್ದೆ. ಮಾಲೆಯ ಪುಸ್ತಕ ಪ್ರಕಟವಾಗುವುದು ತಡವಾದಾಗ, ನಾನು ನನ್ನ ಲೇಖನ ಸಂಕಲನಕ್ಕೆ ಅದನ್ನು ಬಳಸಿಕೊಳ್ಳಬಹುದೇ ಎಂದು ಕೇಳಿದ್ದೆನೆಂದು ತೋರುತ್ತದೆ; ಅದಕ್ಕೆ ನನಗೆ ನೀಡಿದ ಸಮಾಧಾನದಲ್ಲಿ ಅವರು ಅನೇಕ ಪರ್ಯಾಯಗಳನ್ನು ಸೂಚಿಸಿ, ತೊಡಕುಗಳನ್ನು ತಿಳಿಸಿ, ಸಂದರ್ಭವನ್ನು ಸ್ಪಷ್ಟಪಡಿಸಿದ್ದರು. ಆ ವೇಳೆ ಅವರು ಬರೆದ ಒಂದೆರಡು ಪತ್ರಗಳು ನನ್ನಲ್ಲಿವೆ.

ಇದೇ ಸುಮಾರಿನಲ್ಲಿ ನಾನು ವಿ.ಸೀ. ಅವರಿಗೆ ನನ್ನ ಎರಡು ಪುಸ್ತಕಗಳನ್ನು ಕಳಿಸಿಕೊಟ್ಟೆ. ಅವನ್ನು ಅವರು ಅಲ್ಲಲ್ಲಿ ಓದಿ, ನನಗೆ ಆರು ಪುಟಗಳ ಸುದೀರ್ಘಪತ್ರವನ್ನು ಬರೆದರು. ನನ್ನ 'ಕನ್ನಡ ಛಂದಃ ಸ್ವರೂಪ'ವನ್ನು ನಿಮಿತ್ತವಾಗಿಟ್ಟುಕೊಂಡು ತಮಗೆ ಛಂದಸ್ಸಿನ ವಿಷಯದಲ್ಲಿ ಹೇಗೆ ಆಸಕ್ತಿ ಹುಟ್ಟಿ ಬೆಳೆಯಿತು ಎನ್ನುವುದನ್ನೂ ಲಯ ಗಣಸ್ವರೂಪ ಮೊದಲಾದುವುಗಳ ಬಗೆಗೆ ತಮ್ಮ ವಿಚಾರಗಳು ಏನು ಎನ್ನುವುದನ್ನೂ ಈ ಕ್ಷೇತ್ರದಲ್ಲಿ ತಮ್ಮ ಕೃಷಿ ಏನು ಎನ್ನುವುದನ್ನೂ ಸಮೀಕ್ಷಿಸಿದ್ದಾರೆ, ಅವರು. ಆ ಪತ್ರವನ್ನು ನಾನು ಜೋಕೆಯಿಂದ ಉಳಿಸಿಕೊಂಡಿದ್ದೇನೆ. ವಿ.ಸೀ. ಅವರ ದೃಷ್ಟಿ ವಿಶೇಷದ ಛಂದೋವಿಚಾರ ವಿಮರ್ಶೆಗಳು ಅವರ ಲೇಖನ ಸಂಕಲನವಾದ 'ಸಾಹಿತ್ಯಾಲೋಕನ'ದಲ್ಲಿ ಒಗ್ಗೂಡಿ ಪರಿಶೀಲನೆಗೆ

ಮೊರೆಯುತ್ತಿರುವುದು ಸಮಾಧಾನಕರವಾದ ವಿಷಯವಾಗಿದೆ. ಅವರ ಛಂದೋ ವಿಚಾರಗಳು ಎಂದೂ ಶಾಸ್ತ್ರ ಜಡ ಅಲ್ಲ, ಮೀಮಾಂಸೆಯ ವಲಯದಲ್ಲಿ ನಡೆದಿರುವ ಚಿಂತನಗಳು ಎಂಬುದನ್ನು ಇಲ್ಲಿ ಎತ್ತಿ ಹೇಳಬೇಕು. ಆ ದಿಕ್ಕಿನಲ್ಲಿ ವಿಚಾರ ಮಾಡುವುದನ್ನು ಮುಂದಿನ ಸಂಶೋಧಕರಿಗೆ ಕಲಿಸಿದ ಮೊದಲಿಗರಲ್ಲಿ ಅವರು ಮುಖ್ಯರು.

ಐಬಿಎಚ್ ಸಂಸ್ಥೆ ವಿ.ಸೀ. ಅವರ ಮೃತಿಯ ತರುವಾಯದಲ್ಲಿ ಅಪೂರ್ಣವಾಗಿ ನಿಂತು ಹೋಗಿದ್ದ ಕವಿಕಾವ್ಯ ಪರಂಪರೆಯ ಯೋಜನೆಯಲ್ಲಿ ನನ್ನ ಸಹಕಾರವನ್ನು ಕೋರಿದ್ದು ಒಂದು ಸ್ವಾರಸ್ಯದ ಸಂಗತಿ. 'ಚಾಮರಸ' ಪುಸ್ತಕದ ಪ್ರಕಟನೆಯಲ್ಲಿ ನನ್ನಿಂದ ಸಂದ ಸ್ವಲ್ಪ ಕೈಂಕರ್ಯದಿಂದಾಗಿ ಆ ಹಿರಿಯರ ಹೆಸರಿನೊಂದಿಗೆ ಸಂಪಾದಕತ್ವದಲ್ಲಿ ನನ್ನ ಹೆಸರೂ ಸೇರುವ ಭಾಗ್ಯ ನನ್ನ ಪಾಲಿಗೆ ಬಂದಿತು.

ಮನೆಗೆ ಹೋಗಿದ್ದ ಒಂದೆರಡು ಸಂದರ್ಭಗಳಲ್ಲಿ ವಿ.ಸೀ. ನನ್ನೊಂದಿಗೆ ಹೃದಯ ಬಿಚ್ಚಿ ಮಾತಾಡಿದ್ದನ್ನು ನಾನು ಮರೆಯಲಾರೆ. ಆ ಮಾತಿನಲ್ಲಿ ಅವರ ಹೃದಯವಂತಿಕೆ, ಎಳೆಯ ಮಗುವಿನ ಮುಗ್ಧತೆ, ಸಾಹಿತ್ಯ ಸಲ್ಲಾಪದ ತವಕ ಒಟ್ಟಿಗೇ ಸೂಸುತ್ತಿದ್ದುವು. ಹಾಗೆಯೇ ಮಾತಾಡುತ್ತಿರಬೇಕೆನ್ನುವುದು ಅವರ ಆಸೆ, ಕೇಳುತ್ತಲೇ ಇರುವುದು ನಮ್ಮ ಭಾಗ್ಯ. ಇಂಥ ಒಂದು ಭೇಟಿಯಲ್ಲಿ ಅವರನ್ನು ನಾನು ಕಂಡಾಗ, ಅವರು ಚಾಪೆಯ ಮೇಲೆ ಕುಳಿತು ಹಾಸಿಗೆ ಸುರುಳಿಗೆ ಒರಗಿಕೊಂಡು, ಕನ್ನಡಕದ ತುದಿಯಿಂದ ವ್ಯಾಸಭಾರತದ ಯಾವುದೋ ಪರ್ವವನ್ನು ಓದುತ್ತಿದ್ದರು. ನನ್ನೊಂದಿಗೆ ನನ್ನ ಆಸಕ್ತಿಗೆ ಅನುಗುಣವಾಗಿ ಛಂದಸ್ಸಿನ ವಿಚಾರವನ್ನಿಷ್ಟು ಚರ್ಚಿಸಿದರು; ಠಾಕೂರರ ಬಂಗಾಳಿ ಕವಿತೆಯನ್ನು ಕುರಿತು ಮಾತಾಡಿದರು. ಬಹುಶಃ ಆಗಲೇ ಇರಬಹುದು, ನನ್ನನ್ನು ಬಾಗಿಲುವರೆಗೆ ಕಳಿಸಿಕೊಡಲು ಬಂದಾಗ ಮಾತು ವೆಂಕಣ್ಣಯ್ಯ – ಕೃಷ್ಣಶಾಸ್ತ್ರಿಗಳ ಸ್ನೇಹದ ಬಗ್ಗೆ ತಿರುಗಿತು; ಅದನ್ನು ಪ್ರಸ್ತಾವಿಸುವಾಗ ಅವರ ಕಣ್ಣುಗಳಲ್ಲಿ ನೀರು ತುಂಬಿತ್ತು; ಗಂಟಲ ಸೆರೆ ಉಬ್ಬಿತ್ತು; ಆಕಾಶದತ್ತ ಕೈಮಾಡಿ "ಅಂತಹವರನ್ನು ಈಗ ನಾವು ಎಲ್ಲಿ ತರೋಣಪ್ಪ?" ಎಂದರು. ಆ ಭಾವುಕತೆ ವಿ.ಸೀ. ಅವರ ವಿಶೇಷಲಕ್ಷಣ. "ನಾಲಗೆಗೆ ನಿಲುಕದಾ ನುಡಿಗಳುಂಟು। ನುಡಿಗಳಿಗು ನಿಲುಕದಾ ಭಾವವುಂಟು। ಭಾವಗಳ ಬೀಸುಬಲೆಯಲ್ಲಿ ದೊರೆಯದೆ ನುಸುಳಿ, ದಾಟಿರುವ ನೈಜ ಬೇರೊಂದು ಉಂಟು" ಎಂಬ ಬೇಂದ್ರೆಯವರ ಮಾತು ಇಲ್ಲಿ ನನ್ನ ನೆನಪಿಗೆ ಬರುತ್ತದೆ. ಆ ಮಾತಾದರೂ ವಿ.ಸೀ. ಅವರನ್ನೇ ಕುರಿತದ್ದು.

ಹೀಗೆಯೇ ಒಮ್ಮೆ ನನ್ನ ಪತ್ನಿಯ ಜೊತೆಯಲ್ಲಿ ನಾನು ಅವರನ್ನು ಕಂಡು ಬರಲು ಹೋಗಿದ್ದೆ. ಹೊರಡುವಾಗ, ಮನೆಯವರಿಗೆ ಹೇಳಿ, ಹೊರಗಿನಿಂದ ವೀಳಯದೆಲೆ ತೆಂಗಿನಕಾಯಿ ತರಿಸಿ ನನ್ನ ಪತ್ನಿಗೆ ತಾಂಬೂಲ ಕೊಡಿಸಿದರು. "ಚಿಕ್ಕವರು, ಏನೋ ಮಾತಾಡಿ ಕಳುಹಿಸಿದರಾಯಿತು" ಎಂಬುದಾಗಿ ಅವರು ತಿಳಿಯದೆ, ಮಾಡಿದ ಈ ಅತಿಥಿ ಸತ್ಕಾರ ವಿ.ಸೀ. ಸ್ವಭಾವವನ್ನು ಹೇಳುತ್ತದೆ. ಬಹುಶಃ ಸಂದರ್ಭ ಇದೇ ಇರಬೇಕು: ಎಂ. ವಿ. ಗುರುಬಸಪ್ಪ ಶೆಟ್ಟಿ ಎಂಬ ಮಿತ್ರರು ಜೊತೆಗಿದ್ದರು. ಹಾದಿಯಲ್ಲಿ ವಿ.ಸೀ. ಮನೆ ಹತ್ತಿರವಾಯಿತು ಎಂದು ಕಂಡಾಗ, ಅವರು "ಸಾರ್, ವಿ.ಸೀ. ಅವರಿಗೆ ವಯಸ್ಸಾಯಿತು;

ಯಾವಾಗಲೋ ಏನೋ; ದೊಡ್ಡವರು, ಹೋಗಿ ನೋಡಿ ಬರೋಣವೇ?" ಎಂದು ಹೇಳಿದ್ದು ಈಗಲೂ ಕಿವಿಯಲ್ಲಿ ಅನುರಣಿಸುತ್ತಿರುವಂತಿದೆ.

ವಿ.ಸೀ. ಅವರ ವಿಷಯದಲ್ಲಿ ಸಮಕಾಲೀನರಾದ ಹಿರಿಯ ಕನ್ನಡ ಸಾಹಿತಿಗಳಲ್ಲಿ ಹಲವರಿಗೆ ಅತಿಶಯವಾದ ಪ್ರೀತಿ ಗೌರವಗಳಿದ್ದುವು. ಅದನ್ನು ತಿಳಿಯ ಬಯಸುವವರು 'ವಿ.ಸೀ. ೭೫' ಸಂಭಾವನಾ ಗ್ರಂಥದಲ್ಲಿಯ ಬರಹಗಳನ್ನು ತಪ್ಪದೆ ನೋಡಬೇಕು. ಆದರೆ ಆ ಕಾಲದ ಕನ್ನಡ ಅಧ್ಯಾಪಕರು ಕೆಲವರು ಅವರ ವಿಷಯದಲ್ಲಿ ಏನೇನೋ ಮಾತಾಡಿ ಕೊಳ್ಳುತ್ತಿದ್ದುದನ್ನೂ ನಾನು ಕೇಳಿದ್ದೇನೆ. "ಅವರು ಕನ್ನಡ ಎಂ.ಎ. ಓದಲಿಲ್ಲ, ವ್ಯಾಕರಣಾದಿ ಶಾಸ್ತ್ರ ವಿಷಯಗಳಲ್ಲಿ ಅವರಿಗೆ ತಜ್ಞತೆ ಕಡಿಮೆ" ಇಂಥವು ಆ ಮಾತಿನ ಹಿಂದೆ ಇಣುಕುತ್ತಿದ್ದವು. ಇಂಥವರೂ ವಿ.ಸೀ. ಅವರ ಶಕ್ತಿ ಸಾಮರ್ಥ್ಯಗಳ ಬಗೆಗೆ ಕಣ್ಣು ಮುಚ್ಚಿದವರೇನಲ್ಲ; ಆದರೂ ಅವರ ಟೀಕೆ ಟಿಪ್ಪಣಿಗಳು ಅನುದಾರವಾಗಿದ್ದುವೆಂದೇ ನಾನು ತಿಳಿಯುತ್ತೇನೆ.

ವಿ.ಸೀ. ಅವರ ಅಭಿರುಚಿ ಸೂಕ್ಷ್ಮವಾದ್ದು, ಪರಿಷ್ಕಾರವಾದ್ದು, ನಯರುಚಿ ಸಂಪನ್ನವಾದ್ದು; ಮಾತುಕತೆಯಲ್ಲಿ, ಮೌಲ್ಯಮಾಪನದಲ್ಲಿ ಮಾತ್ರವಲ್ಲ, ಪುಸ್ತಕ ಅಚ್ಚು ಮಾಡಿಸುವಲ್ಲಿ ಸಹ. ಕನ್ನಡದಲ್ಲಿಯ ಪಠ್ಯವನ್ನು ಇಂಗ್ಲಿಷಿನಲ್ಲಿ ಪಾಠ ಹೇಳುವ ಪ್ರಾಗಲ್ಭ್ಯ ಅವರದು. ಕನ್ನಡ ಸಾಹಿತ್ಯದ ವಿಚಾರಗಳನ್ನು ಇಂಗ್ಲಿಷ್ ಮಾಧ್ಯಮದ ಮೂಲಕ ತಿಳಿಯ ಬಯಸುವ ನಮ್ಮ ಕಾಲದ ವಿದೇಶೀಯ ವಿದ್ವಾಂಸರಿಗೆ ಈಗ ವಿ.ಸೀ. ಅಂಥವರನ್ನು ಎಲ್ಲಿ ತಂದು ಕೊಡೋಣ? ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಇವುಗಳಲ್ಲಿ ಘನ ಪಾಂಡಿತ್ಯ ಗಳಿಸಿದ್ದ ಅವರಿಂದ ಎಂತಹ ಬೆಳಕು ಪಡೆಯುವ ಅವಕಾಶವನ್ನು ಅವರು ಕಳೆದುಕೊಂಡಿದ್ದಾರೆ ಎಂಬುದನ್ನು ನೆನೆದಾಗ ನನಗೆ ಕನ್ನಡದ ದೌರ್ಭಾಗ್ಯಕ್ಕೆ ಕೊರಗು ವಂತಾಗುತ್ತದೆ.

ವಿ.ಸೀ. ಬರಹಗಳ ಅಧ್ಯಯನ ಇನ್ನೂ ಸಮೀಚೀನವಾಗಿ ನಡೆಯಬೇಕಾಗಿದೆ. ಅವರ ಆಸಕ್ತಿಯ ವಿಷಯಗಳಾದ ಕವಿತೆ ಕಾವ್ಯಮೀಮಾಂಸೆಗಳ ವಿಷಯದಲ್ಲಿ ಅವರು ಪ್ರಕಟಿಸಿರುವ ಅಂತರ್ದೃಷ್ಟಿಯನ್ನು ಇನ್ನೂ ಸರಿಯಾಗಿ ಗುರುತಿಸಬೇಕಾಗಿದೆ. ವಿ.ಸೀ. ನೆನಪು ಎಂದೂ ಬೆಳುದಿಂಗಳ ಕಡಲಿನಲ್ಲಿ ಚಂದ್ರನಾವೆಯ ಮೇಲೆ ಹುಟ್ಟು ಹಾಕುತ್ತ ಸಾಗುವಂತೆ, ಅಚ್ಛೋದ ಸರಸ್ಸಿನ ಶೀತಲೋದಕವನ್ನು ಕುಡಿದು ದಣಿವಾರಿಸಿಕೊಳ್ಳುವಂತೆ, ಸೊಂಪಾದ ಸಾಲುಮರದ ಅಡಿಯಲ್ಲಿ ಎಳೆಯ ಬಿಸಿಲಿನ ಮೇಲೆ ಸುಖವಾಗಿ ಪಯಣಿಸಿದಂತೆ– ಹೃದಯಂಗಮವಾದುದು.

ಮೃದು ಮಧುರ ವ್ಯಕ್ತಿತ್ವ

ಚಿ. ನ. ಮಂಗಳಾ

೧೯೫೪ರಲ್ಲಿ. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಮೊದಲನೆ ಇಂಗ್ಲೀಷ್ ಆನರ್ಸ್ ತರಗತಿಗೆ ಸೀಟು ದೊರಕಿ ನಾನು ಅಲ್ಲಿ ಸೇರಿದೆ. ಇಂಗ್ಲೀಷ್ ಮೇಜರ್, ಮೈನರ್ ಏನು ತೆಗೆದುಕೊಳ್ಳುವುದು? ಇಂಟರ್ ಮೀಡಿಯೆಟ್ ಪರೀಕ್ಷೆ ಆದ ಮೇಲೆ ಆನರ್ಸ್ ಮೂರು ವರ್ಷ. ಅದರಲ್ಲಿ ಮೊದಲ ಎರಡು ವರುಷ ಮೇಜರ್ ಜೊತೆಗೆ ಒಂದು ಮೈನರ್ ಸಬ್ಜೆಕ್ಟ್ ಕನ್ನಡವನ್ನು ಓದಬೇಕೆಂದು ತೀರ್ಮಾನಿಸಿ ಅಪ್ಲಿಕೇಷನ್ ಫಾರಂನಲ್ಲಿ ಮೈನರ್–ಕನ್ನಡ ಎಂದು ಬರೆದೆ.

ಮಾರನೆಯ ದಿನ ನನಗೆ ಕರೆ ಬಂದಿತು.

"ನೀವು ಕನ್ನಡವನ್ನು ಓದಿದ್ದೀರಾ?"

"ಇಲ್ಲ, ಈಗ ಓದುತ್ತೇನೆ."

"ಈಗ ಸಾಧ್ಯವಿಲ್ಲ, ನೀವು ಇಂಟರ್ ಮೀಡಿಯೆಟ್‌ನಲ್ಲಿ ಓದಿರಬೇಕು."

"ನನಗೆ ಕನ್ನಡ ಬರುತ್ತೆ. ನಾನು ಮಿಡ್ಲ್ ಸ್ಕೂಲಿನಲ್ಲಿ ಓದಿದ್ದೇನೆ."

"ಅದು ಸಾಲದು. ನಿಮಗೆ ಇಲ್ಲಿ ಕನ್ನಡ ಕೊಡೋಕೆ ಆಗೋಲ್ಲ."

"ನನಗೆ ಕನ್ನಡ ಓದಬೇಕೆಂದು ಆಸೆಯಿದೆ. ನಾನು ಕಷ್ಟಪಟ್ಟು ಓದುತ್ತೇನೆ."

"ನೀವು ಮನೆಯಲ್ಲಿ ಓದಿ, ಕಾಲೇಜಿನಲ್ಲಿ ಸಾಧ್ಯವಿಲ್ಲ."

ನನಗೆ ನಿರಾಸೆಯಾಯಿತು. ಆದರೂ ಏನೂ ಮಾಡುವ ಹಾಗಿರಲಿಲ್ಲ.

ಆದರೆ ಒಂದೆರಡು ತಿಂಗಳಲ್ಲೇ ನನಗೆ ಸೆಂಟ್ರಲ್ ಕಾಲೇಜಿನಲ್ಲಿ ಸೀಟು ಸಿಕ್ಕಿ ನಾನು ಬೆಂಗಳೂರಿಗೆ ಬಂದೆ. ಮೈನರ್ ಏನು ತೆಗೆದುಕೊಳ್ಳುವುದು? ಕಾಲೇಜು ಬೇರೆಯಾದರೂ ವಿಶ್ವವಿದ್ಯಾಲಯ ಒಂದೆ ತಾನೆ? ಆಗ ಬೆಂಗಳೂರು ವಿಶ್ವವಿದ್ಯಾನಿಲಯ ಇರಲಿಲ್ಲ. ಸೆಂಟ್ರಲ್ ಕಾಲೇಜೂ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿತ್ತು.

ಹೀಗಾಗಿ ನಾನು ಮೈನರ್–ಸಿಮಾಂಟಿಕ್ಸ್ ಎಂದು ಫಾರಂನಲ್ಲಿ ಬರೆದು ಆ ತರಗತಿಗೆ ಹೋಗಿ ಕುಳಿತೆ. ಉಪಾಧ್ಯಾಯರು ಬಂದಿರಲಿಲ್ಲವಾಗಿ ತರಗತಿ ನಡೆಯಲಿಲ್ಲ. ಹೊರಗೆ ಬಂದು ಮರದ ಕೆಳಗೆ ನಿಂತೆ. ನಾನು ಬಿ. ಎ. ಆನರ್ಸ್ ಓದುವ ಕಾಲಕ್ಕೆ ಸೆಂಟ್ರಲ್

ಕಾಲೇಜಿನ ಇಂಗ್ಲೀಷ್ ವಿಭಾಗದಲ್ಲಿದ್ದ ದಿಗ್ಗಜಗಳೆಲ್ಲಾ ನಿವೃತ್ತರಾಗಿಯೋ ಇಲ್ಲವೇ ಬೇರೆಲ್ಲಾದರೂ ಹೊರಟು ಹೋಗಿಯೋ ಬೇರೆ ಅಧ್ಯಾಪಕರ ನೇಮಕವಾಗಿಲ್ಲದೆಯೋ– ಅಂತೂ ವರುಷಕ್ಕೆ ಆರು ತಿಂಗಳು ನಾವು ಮರಗಳ ಕೆಳಗೋ ಇಲ್ಲವೆ ನಿರ್ಮಾಣವಾಗುತ್ತಿದ್ದ ವಿಧಾನಸೌಧದ ಕಂಬಗಳನ್ನು ಸುತ್ತುತ್ತಲೋ ಕಾಲ ಕಳೆಯುತ್ತಿದ್ದೆವು. ಗ್ರಂಥಾಲಯಕ್ಕೆ ಹೋಗೋಣವೆಂದರೆ ಅಲ್ಲಿ ನಮಗೆ ಬೇಕಾದ ಪುಸ್ತಕಗಳಲ್ಲಿ ಮುಖ್ಯವಾದ ಹಾಳೆಗಳನ್ನು ಅವುಗಳನ್ನು ಬಿಟ್ಟಿರಲಾರದ ಪುಸ್ತಕ ಪ್ರೇಮಿಗಳು ಕತ್ತರಿಸಿ ಕೊಂಡೊಯ್ದು ನಮಗೆ ಆ ಹಾಳೆಗಳಿದ್ದ ಜಾಗವನ್ನಷ್ಟೇ ಬಿಟ್ಟು ಹೋಗಿದ್ದರು. ಅಲ್ಲದೆ ಗಣಿತ ವಿಭಾಗದ ಒಂದು ಮೂಲೆಯಲ್ಲಿದ್ದ ಇಂಗ್ಲೀಷ್ ವಿಭಾಗಕ್ಕೆ ತನ್ನದೆನ್ನುವ ಯಾವುದೇ ಅಸ್ತಿತ್ವದಿಂದ ಸಾಧಾರಣ ವಿದ್ಯಾರ್ಥಿ ವಿದ್ಯಾರ್ಥಿನಿಯರು ಆರಾಮವಾಗಿ ಹೊತ್ತು ಕಳೆಯಲು ಬೇಕಾದ ಎಲ್ಲಾ ಸೌಲಭ್ಯಗಳೂ ಅಲ್ಲಿದ್ದವು. ಹೀಗಾಗಿ ನಾನು ಸೆಂಟ್ರಲ್ ಕಾಲೇಜಿನ ಇಂಗ್ಲೀಷ್ ಆನರ್ಸ್ ವಿದ್ಯಾರ್ಥಿನಿಯಾಗಿ ತರಗತಿಯ ಒಳಗೆಗಿಂತ ಹೊರಗೆ ಕಾಲ ಕಳೆದದ್ದೇ ಹೆಚ್ಚು. ಇಂತಹ ವಾತಾವರಣದಲ್ಲಿ ಅಭ್ಯಾಸಕ್ಕೆ ಅಸ್ತಿಭಾರ ಹಾಕಿದ್ದು ಸೆಂಟ್ರಲ್ ಕಾಲೇಜಿನ ಕನ್ನಡ ವಿಭಾಗ.

ಆ ದಿನ ಸಿಮ್ಯಾಂಟಿಕ್ಸ್ ತರಗತಿಯಿಲ್ಲದೆ ಮರದ ಕೆಳಗೆ ನಿಂತಿದ್ದ ನನ್ನನ್ನು ಆಕರ್ಷಿಸಿದ್ದು ಶುಭ್ರ ಬಿಳಿಯ ಕಚ್ಚೆ ಪಂಚೆಯುಟ್ಟು, ಕೆನೆಯ ಬಣ್ಣದ ತುಂಬು ಕತ್ತಿನ ಕೋಟು ಧರಿಸಿ, ಜರಿಯಿಲ್ಲದ ಮೈಸೂರು ರುಮಾಲು ಸುತ್ತಿ, ಕೈಯಲ್ಲೊಂದು ಪುಸ್ತಕ ಹಿಡಿದು ಬಿರಿ ಬಿರಿ ನಡೆಯುತ್ತಿದ್ದ ವ್ಯಕ್ತಿ. ಇವರು ವಿ.ಸೀ. ಅಲ್ಲವೇ? ವಿ.ಸೀ. ಇಲ್ಲಿದ್ದಾರೆಯೇ? ಅವರನ್ನು ನೋಡಿ ಬರಬೇಕು. ವಿ.ಸೀ. ಅವರ ವಿಷಯ ನಮ್ಮ ತಂದೆಯವರು ಹೇಳುತ್ತಿದ್ದರು. ವಿ.ಸೀ. ನಮ್ಮ ತಂದೆಯವರಿಗೆ ಮೈಸೂರಿನ ಶಾರದಾ ವಿಲಾಸ ಶಾಲೆಯಲ್ಲಿ ಅಧ್ಯಾಪಕರಾಗಿದ್ದರಂತೆ. ಹೊಸಗನ್ನಡದ ಕೃತಿಗಳು ಪಠ್ಯ ಪುಸ್ತಕವಾದಾಗ, ಹಳೆಯ ಪಂಡಿತರೆಲ್ಲ ಮೂಗು ಮುರಿದಾಗ, ವಿ.ಸೀ. ಆ ಕತೆಗಳನ್ನು ಅದೆಷ್ಟು ಸ್ವಾರಸ್ಯವಾಗಿ ಹೇಳುತ್ತಿದ್ದರೆಂದು ನಮ್ಮ ತಂದೆ ನಮಗೆ ವರ್ಣಿಸುತ್ತಿದ್ದರು. ವಿ.ಸೀ. ಕ್ಲಾಸು ಮುಗಿಸಿ ಕೋಣೆಗೆ ಹಿಂತಿರುಗುತ್ತಿದ್ದರು. ನಾನು ಅವರನ್ನು ಹಿಂಬಾಲಿಸಿದೆ. ಹಿಂಭಾಗದಲ್ಲಿ ಒಂದು ಸಣ್ಣ ಕೋಣೆ, ಬಾಗಿಲು ತೆಗೆದು ಒಳಗೆ ಹೋದರು. ನಾನು ಹೋಗಲೋ ಬೇಡವೋ ಎಂದು ಅನುಮಾನಿಸಿ ಒಳಗೆ ಹೋದೆ. ಹೋದ ಕೂಡಲೆ ಎದುರಿಗೇ ಕಂಡವರು ಗಂಡುಗಲಿ ರಾಜರತ್ನಂ. ಅವರು ತಲೆಯೆತ್ತಿ ನನ್ನನ್ನು ನೋಡಿದ ರೀತಿಗೆ ನನಗೆ ಭಯವೇ ಆಯಿತು. ನಾನು ಮೆಲ್ಲಗೆ "ವಿ.ಸೀ. ಅವರನ್ನು ನೋಡಬೇಕಾಗಿತ್ತು." ಎಂದೆ. ಅವರು ಮಾತಾಡದೆ ಪಕ್ಕದಲ್ಲಿದ್ದ ಇನ್ನೊಂದು ಕೋಣೆಯತ್ತ ಕೈ ತೋರಿಸಿದರು. ಅಷ್ಟು ಹೊತ್ತಿಗೆ ವಿ.ಸೀ. ಅವರು ತಮ್ಮ ಕೋಟು ಬಿಚ್ಚಿ ಕುರ್ಚಿಗೆ ಹಾಕಿ ಕುಳಿತರು. ನಾನು ಮೆಲ್ಲಗೆ ಹೋಗಿ ಅವರ ಮುಂದೆ ನಿಂತೆ. ಕೋಣೆಗೆ ಬಂದವರೇ ಯಾವುದೋ ಪುಸ್ತಕದಲ್ಲಿ ಮುಳುಗಿದ್ದರು. ನಾನು ಎದುರಿಗೆ ನಿಂತಿದ್ದು ಅವರಿಗೆ ತಿಳಿಯಲಿಲ್ಲವೇನೋ. ನಾನು ಮೆಲ್ಲಗೆ "ನಮಸ್ಕಾರ ಸಾರ್" ಎಂದೆ. ಕೂಡಲೆ ತಲೆಯೆತ್ತಿ ನೋಡಿ ಅವರು ಮುಂದಿದ್ದ ಕುರ್ಚಿ ತೋರಿಸಿ,

"ಕೂತ್ಕೊಳ್ಳಿ, ಕೂತ್ಕೊಳ್ಳಿ.... ಏನಮ್ಮಾ ಬೇಕು" ಎಂದರು.

"ನಾನು ಸಿ. ನರಸಿಂಹಮೂರ್ತಿಯವರ ಮಗಳು ಮಂಗಳಾ. ಇಲ್ಲಿ ಇಂಗ್ಲೀಷ್

ಅನರ್ಸ್ ಸೇರಿಕೊಂಡಿದ್ದೀನಿ. ನೀವು ಬರ್ತಾ ಇದ್ದದ್ದು ನೋಡಿದೆ. ಸುಮ್ನೆ ನೋಡಿ ಹೋಗೋಣವೆಂದು ಬಂದೆ" ಎಂದೆ.

"ತುಂಬಾ ಸಂತೋಷ. ತುಂಬಾ ಸಂತೋಷ. ನರಸಿಂಹಮೂರ್ತಿ ಮಗಳೇ. ಮೂರ್ತಿ ನನ್ನ ವಿದ್ಯಾರ್ಥಿಯಾಗಿದ್ದರು. ಈಗ ದೊಡ್ಡ ಅಧಿಕಾರಿ. ತುಂಬ ಸಂತೋಷ...." ವಿ.ಸೀ. ಮೃದುವಾಗಿ, ಆತ್ಮೀಯವಾಗಿ ಮಾತನಾಡಿಸಿದರು. ನನ್ನಲ್ಲಿ ಒಂದು ಹೊಸ ಆಸೆ ಮೂಡಿತು.

"ಸರ್ ನಾನು ಕನ್ನಡ ಓದಬಹುದೇ?" ಎಂದೆ.

"ಧಾರಾಳವಾಗಿ." ಎಂದರು ವಿ.ಸೀ.

"ಇಲ್ಲಿ ಕಾಲೇಜಿನಲ್ಲಿ ಓದಬಹುದೆ? ಮೈನರ್ ಆಗಿ?"

"ಓದಿ ಅದಕ್ಕೇನಂತೆ."

"ಮೈಸೂರಿನಲ್ಲಿ ಆಗಲ್ಲ ಅಂತ ಹೇಳಿದರು."

"ಯಾಕಾಗೊಲ್ಲವಂತೆ? ಕಲಿಯೋಕೆ ನೀವಿದೀರ, ಹೇಳಿ ಕೊಡೋಕೆ ನಾವಿದೀವಿ: ಇಲ್ಲಿ ನಾನು, ಅವರು." (ರಾಜರತ್ನಂ ಅವರ ಕಡೆ ಬೆರಳು ತೋರಿಸಿದರು)

"ರೂಲ್ಸ್ ಇದೆಯಾ ಸಾರ್" ಎಂದೆ.

"ಅಯ್ಯೋ ರೂಲ್ಸ್ ಯಾರಿಗೋಸ್ಕರಾಮ್ಮಾ? ರೂಲ್ಸ್ ಇರಬೇಕಾದ್ದು ಅನುಕೂಲ ಮಾಡೋಕೆ. ಅನಾನುಕೂಲ ಮಾಡೋಕಲ್ಲ. ಎ. ಜಿ. ಗಾರ್ಡಿನರ್ ಬರೆದ ಎಸ್ಸೆ ಓದಿದೀರಾ? "ಆಲ್ ಎಬೌಟ್ ಎ ಡಾಗ್"? ನಾನು ಓದಿರಲಿಲ್ಲ. "ರೂಲ್ಸ್ ನಮಗಾಗಿ, ನಾವು ರೂಲ್ಸ್‌ಗಾಗಲ್ಲ." ನಿಮಗೆ ಕನ್ನಡ ಕಲೀಬೇಕೂಂತಿದ್ರೆ ಕಲೀರಿ, ನಾನು ಹೇಳಿ ಕೊಡ್ತೀನಿ" ಎಂದರು.

ನನಗಾದ ಸಂತೋಷ ಅಷ್ಟಿಷ್ಟಲ್ಲ.

"ಸಾರ್ ಹಳೆಗನ್ನಡ ಕಷ್ಟಾನ?"

"ಓದೋಕೆ ಮೊದ್ಲೇ ಕಷ್ಟಾನ ಅಂದ್ರೆ ನಾನೇನಮ್ಮಾ ಹೇಳಲಿ? ಇಲ್ಲಿ ನೋಡಿ–" ಎಂದವರೇ ತಮ್ಮ ಮುಂದಿದ್ದ ಪಂಪಭಾರತದಿಂದ ಒಂದು ಪದ್ಯ ಓದಿ ತೋರಿಸಿದರು. ಅ.ನ.ಕೃ. ಅವರ ಕನ್ನಡ ಭಾಷಣಗಳ ವಾಗ್ವೈಖರಿಯನ್ನು ಕೇಳಿ ಮೈಮರೆತಿದ್ದ ನಾನು ವಿ.ಸೀ. ಅವರ ಓದಿನ ಮೋಡಿಗೆ ಮರುಳಾದೆ.

ಮೈಸೂರಿನಲ್ಲಿ ಆಗದ್ದು ಬೆಂಗಳೂರಿನಲ್ಲಾಯಿತು. ಅದು ಹೇಗಾಯಿತು ಎನ್ನುವುದು ನನಗೆ ಇನ್ನೂ ಬಗೆ ಹರಿಯದಿರುವ ಸಮಸ್ಯೆ. ನಾನು ಕನ್ನಡದ ವಿದ್ಯಾರ್ಥಿನಿಯಾದೆ. ೧೯೫೪–೫೬ ಎರಡು ವರ್ಷ ಸಂಪೂರ್ಣ ವಿ.ಸೀ. ರಾಜರತ್ನಂ ಅವರ ಜೋಡಿ ಕನ್ನಡದ ಕಂಪನ್ನೂ ಕನ್ನಡದ ನವುರನ್ನೂ ಕನ್ನಡದ ಕೆಚ್ಚನ್ನೂ ನಮಗೆ ಕಲಿಸಿತು. ನಾನು ಒಮ್ಮೊಮ್ಮೆ ಇಂಗ್ಲೀಷ್ ತರಗತಿಯನ್ನೂ "ಚಕ್ಕರಿಸಿ" ಕನ್ನಡದ ತರಗತಿಗಳಿಗೆ ಹೋಗುತ್ತಿದ್ದುದನ್ನು ಕಂಡುಹಿಡಿದ ಇಂಗ್ಲೀಷ್ ಅಧ್ಯಾಪಕರೊಬ್ಬರು ಒಂದು ದಿನ ರೇಗಿ "ಅವಳಿಗೆ ಕನ್ನಡ ಡಿಪಾರ್ಟ್‌ಮೆಂಟೇ ಡಿಗ್ರಿ ಕೊಡಲಿ" ಎಂದಿದ್ದರಂತೆ.

ವಿ.ಸೀ. ನಮಗೆ ಪಂಪಭಾರತವನ್ನೂ, ಮಾಸ್ತಿಯವರ "ಯಶೋಧರಾ" ನಾಟಕವನ್ನೂ ಮಾಡಿದರು. ಹೆಣ್ಣು ಮಕ್ಕಳನ್ನು, ಹೆಣ್ಣು ಹೃದಯವನ್ನು ವಿ.ಸೀ. ಅವರು ಅರ್ಥ ಮಾಡಿಕೊಂಡ ಹಾಗೆ ಅರ್ಥ ಮಾಡಿಕೊಂಡವರು ವಿರಳ. ಆದ್ದರಿಂದಲೇ ಅವರ ಕವನ "ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು" ಕನ್ನಡಿಗರ ಕಣ್ಣಲ್ಲಿ ಇಂದಿಗೂ ಕಂಬನಿ ಮಿಡಿಸುವುದು.

ವಿ.ಸೀ. ಅವರ ಮನೆಗೆ ನಾನು ಅದೆಷ್ಟು ಬಾರಿ ಹೋಗಿ ಕೂತು ಹರಟಿದ್ದೇನೆಂದು, ಕಲಿತಿದ್ದೇನೆಂದು, ಕಾಫಿ, ತಿಂಡಿ ತಿಂದಿದ್ದೇನೆಂದು ಲೆಕ್ಕವಿಡುವುದಕ್ಕಾಗುವುದಿಲ್ಲ. ರಾಜರತ್ನಂ ಅವರಿಗೆ ನಾವು ಒಂದು ಪುಸ್ತಕ ಬರೆದು ಪ್ರಕಟಿಸಿ ಕಾಣಿಕೆಯಾಗಿ ಕೊಡಬೇಕೆಂದಾಗ ನಾನು ಅದರ ಹೊಣೆ ಹೊತ್ತಾಗಿ, ಸತ್ಯಶೋಧನದಿಂದ ಪೂಜ್ಯ ನಿಟ್ಟೂರರು ಅದನ್ನು ಪ್ರಕಟಿಸುತ್ತೇನೆಂದಾಗ ಅದರ ಕಾರ್ಯಾಗಾರ ವಿ.ಸೀ. ಅವರ ಮನೆ ಮತ್ತು ಮನೆಯ ಮುಂಭಾಗದ ಕೋಣೆ. ಆ ಕೋಣೆಯಲ್ಲಿ ಕುಳಿತು ನಾನು ಕಲಿತ ಜೀವನ ಪಾಠಗಳು ಹಲವು. ಗಂಟೆಗಟ್ಟಲೆ ಮಾತು, ಅಧ್ಯಯನ. ಮನೆಯಲ್ಲಿ ನಾನು ವಿ.ಸೀ. ಅವರ ಮನೆಗೆ ಹೋಗುತ್ತೇನೆಂದು ಹೇಳಿದರೆ ಮುಗಿಯಿತು, ಮೂರು ನಾಲ್ಕು ಗಂಟೆಗಳ ವಿಸಿಟ್ ಎಂದೇ ಅರ್ಥ. ಕಾಲೇಜಿನಲ್ಲೂ ಹಾಗೇ. ಅವರು ಪಾಠ ಮಾಡುವಾಗ, ಅದರಲ್ಲೂ "ಸ್ಪೆಷಲ್ ಕ್ಲಾಸ್" ಎಂದರೆ ಪಾಠ ಗಂಟೆಗಟ್ಟಲೆ; ಪಾಠದ ಮಧ್ಯೆ ತಿಂಡಿ, ತೀರ್ಥ, ಇಡ್ಲಿ, ವಡೆ, ಬೋಂಡಾ, ಬಜ್ಜಿ, ಕಾಫಿ, ಎಳನೀರು. "ನೀರೊಳಗಿದ್ದೂ ಬೆವತ ಈ ಉರಗ ಪತಾಕನ" ಕತೆಯನ್ನು ಅವರು ಹೇಳಿದ ರೀತಿಯನ್ನು ನಾನೆಂದೂ ಮರೆಯಲಾರೆ.

ಅವರು ತೀರಾ ಕಾಯಿಲೆ ಮಲಗುವ ಮೊದಲೊಮ್ಮೆ ಅವರ ಮನೆಗೆ ಹೋಗಿದ್ದೆ. ಬರುತ್ತೇನೆಂದು ಹಿಂದೆ ಒಂದು ದಿನ ಹೋದಾಗಲೆ ಹೇಳಿ ಬಂದಿದ್ದೆ. ಹೋದ ಕೂಡಲೇ ಮಲಗಿದ್ದವರೆದ್ದು ಎದುರಿನಲ್ಲಿದ್ದ ಮೇಜಿನ ಹಿಂದಿನಿಂದ ಒಂದು ಪೊಟ್ಟಣದಲ್ಲಿದ್ದ ಜಿಲೇಬಿ ತೆಗೆದುಕೊಟ್ಟರು. ಇನ್ನೊಂದು ಪೊಟ್ಟಣದಲ್ಲಿದ್ದ ದ್ರಾಕ್ಷಿ ಹಣ್ಣು ಮುಂದೆ ಹಿಡಿದರು. ನನಗೆ ಆಶ್ಚರ್ಯ. ಅದೇನೆಂದು ಕೇಳಿದೆ.

"ಸೊಸೆಯಂದಿರು ಮದುವೆಗೆಲ್ಲೋ ಹೋಗಿದ್ದಾರೆ. ನೀವು ಬಂದು ಹಾಗೇ ಹೋಗಬಾರದೆಂದು ನಾನು ಬರೋವಾಗ ಇಲ್ಲೇ ತಂದೆ." ಎಂದರು. ನನ್ನ ಕಣ್ಣು ಹನಿಗೂಡಿತು. ಅಷ್ಟರಲ್ಲೇ ಗೇಟು ಸದ್ದಾಗಿ ಅವರ ಸೊಸೆಯಂದಿರು ಮೊಮ್ಮಕ್ಕಳು ಬಂದರು. ನನ್ನ ಕೈಯಲ್ಲಿದ್ದ ಜಿಲೇಬಿ ಪೊಟ್ಟಣ ನೋಡಿ,

"ನೋಡಿ, ನೀವು ಬರೋದರೊಳಗೇ ನಾವು ಬಂದು ಬಿಡ್ತೀವಿ ಅಂತ ಹೇಳಿ ಹೋಗಿದ್ವಿ. ಆದರೂ ಮಾವನವರು ತಾವೇ ತಂದುಬಿಟ್ಟಿದ್ದಾರೆ. ನಾವೇನಾದರೂ ಅಕಸ್ಮಾತ್ ಬರದೆ ಹೋದರೆ ನೀವು ಹಾಗೇ ಹೋಗಿ ಬಿಡ್ತೀರೋ ಏನೋ ಅಂತ. ತಾಳಿ ಕಾಫಿ ಮಾಡಿಕೊಂಡು ಬರ್ತೀವಿ" ಎಂದರು.

ನನ್ನ ಅಂತರಂಗದ ಅನೇಕ ಅಳಲುಗಳನ್ನು ನಾನು ಅವರ ಮುಂದೆ ತೋಡಿಕೊಂಡಿದ್ದೆ. ಎಲ್ಲದಕ್ಕೂ ಅವರದ್ದು ಸ್ಪಷ್ಟ ಉತ್ತರ, ಖಚಿತವಾದ ಮಾರ್ಗ. ಅವರು

ನನಗೆ ಅನೇಕ ಸಲ ಹೇಳುತ್ತಿದ್ದ ಮಾತು: "ದಿ ಡೀಪರ್ ಯು ಗೋ ಇನ್ ಟು ದಿ ನೈಟ್, ದಿ ನಿಯರರ್ ಯು ಗೋ ಟು ದಿ ಮಾರ್ನಿಂಗ್."

ನಮ್ಮ ಕಾಲೇಜಿಗೆ ಎರಡು ಸಲ ಬಂದಿದ್ದರು. ಮೊದಲನೆಯ ಸಲ ಕಾರಂತರ ಜೊತೆಗೆ ಬಂದಿದ್ದರು. ನಮ್ಮ ವಿದ್ಯಾರ್ಥಿನಿಯರು ಹಾಡಿದ ಒಂದು ಹಾಡಿನ ಬಗ್ಗೆ ಕಾರಂತರು ಖಾರಂತರಾದಾಗ, ಟೀಕಿಸಿದಾಗ ವಿ.ಸೀ. ಹೇಳಿದರು. "ಏನೋ ಪಾಪ ಮಕ್ಕಳು ಹಾಡಿದರು, ಚೆನ್ನಾಗೇ ಹಾಡಿದರು. ಹಾಗೆಲ್ಲಾ ಹೇಳಿ ಅವರ ಮನಸ್ಸು ನೋಯಿಸಬಾರದು." ಇದು ವಿ.ಸೀ. ಅವರ ವ್ಯಕ್ತಿತ್ವ. ಮೃದು ಮಧುರ. ಅವರ ಮಾತು, ನಡೆ, ನುಡಿ, ಬರವಣಿಗೆ ಎಲ್ಲ ಶುಭ್ರ.

ಅವರಿಗೆ ಜೀವನದ ಬವಣೆ ತಿಳಿದಿರಲಿಲ್ಲವೆ? ತಿಳಿದಿತ್ತು. ತಮಗೆ ತಿಳಿದಿದೆ ಎಂದು ಕೊಳ್ಳುವವರಿಗಿಂತ ಹೆಚ್ಚಾಗಿಯೇ ತಿಳಿದಿತ್ತು. ಆದರೆ ಕಟುವಾಗಿ ಟೀಕಿಸುವುದಾಗಲಿ, ಮನಸ್ಸನ್ನು ನೋಯಿಸುವುದಾಗಲಿ, ಆಡಂಬರವಾಗಲಿ, ಅಬ್ಬರವಾಗಲಿ ಅವರ ವ್ಯಕ್ತಿತ್ವದಲ್ಲಾಗಲಿ, ಬರವಣಿಗೆಯಲ್ಲಾಗಲಿ ಇಲ್ಲ. ಎಲ್ಲದರಲ್ಲೂ ಒಂದು ಶಿಸ್ತು, ಅಚ್ಚುಕಟ್ಟು. ಎಲ್ಲದರಲ್ಲೂ ಆಸಕ್ತಿ; ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಸಂಗೀತ, ಸಾಹಿತ್ಯ, ನೃತ್ಯ, ನಾಟಕ. ವಿದ್ಯಾರ್ಥಿಗಳಲ್ಲಂತೂ ಅತ್ಯಂತ ಮಮತೆ.

ಧಾರವಾಡ ಸಾಹಿತ್ಯ ಸಮ್ಮೇಳನವಾದಾಗ ಹತ್ತೊಂಬತ್ತನೆಯ ಶತಮಾನದ ಸಾಹಿತ್ಯದ ಮೇಲೆ ನಾನೊಂದು ಪ್ರಬಂಧವನ್ನು ಓದಬೇಕಾಗಿತ್ತು. ೧೯ನೇ ಶತಮಾನದ ಕನ್ನಡ ಸಾಹಿತ್ಯದ ಬಗ್ಗೆ ನನಗೆ ಅಷ್ಟು ತಿಳಿದಿರಲಿಲ್ಲ. ನಾನು ಕನ್ನಡದ ಒಬ್ಬ ಖ್ಯಾತ ಅಧ್ಯಾಪಕ ವಿಮರ್ಶಕರನ್ನು ನನಗೆ ಪ್ರಬಂಧಕ್ಕೆ ಒಂದು ವಿಷಯ ಸೂಚಿಸಬೇಕಾಗಿ ಕೇಳಿದೆ. ಅವರು ಹೇಳಿದರು. "೧೯ನೇ ಶತಮಾನವೆ? ಅದರಲ್ಲೆಂಥಾ ಸಾಹಿತ್ಯ ಇದೇಮ್ಮಾ? ಏನೂ ಇಲ್ಲ" ಎಂದರು. ಸರಿ, ನಾನು ನೇರ ವಿ.ಸೀ. ಅವರ ಮನೆಗೋಡಿದೆ. ಅವರು ವಿಷಯ ಸೂಚಿಸಿದ್ದೇ ಅಲ್ಲದೆ ೧೯ನೇ ಶತಮಾನ ಹೇಗೆ ಆಧುನಿಕ ಕನ್ನಡ ಗದ್ಯಕ್ಕೆ ನಾಂದಿ ಎಂದು ಹೇಳಿ, ಮುಮ್ಮಡಿ ಕೃಷ್ಣರಾಜ ಒಡೆಯರ ಗದ್ಯ ಕಥಾನಕಗಳ ಬಗ್ಗೆ ನಾನು ಮಾತನಾಡಬೇಕೆಂದು ಸೂಚಿಸಿದ್ದರ ಜೊತೆಗೆ, ಅಲ್ಲೇ ಇದ್ದ ಶ್ರೀ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳಿಗೆ, ನನ್ನನ್ನು ಸಾಹಿತ್ಯ ಪರಿಷತ್ತಿಗೆ ಕರೆದುಕೊಂಡು ಹೋಗಿ ಅದಕ್ಕೆ ಬೇಕಾದ ಪುಸ್ತಕಗಳನ್ನು ತೆಗೆದುಕೊಡಬೇಕೆಂದೂ ಹೇಳಿದರು.

ನಾನು ಪ್ರಬಂಧ ಬರೆದಾದ ಮೇಲೆ ಪರಿಷ್ಕರಿಸಿಕೊಟ್ಟರು. ನಾನು ಧಾರವಾಡ ಸಮ್ಮೇಳನಕ್ಕೆ ಹೋದೆ. ನನಗೆ ಆಶ್ಚರ್ಯವೋ ಆಶ್ಚರ್ಯ. ಯಾರು ನನಗೆ ೧೯ನೇ ಶತಮಾನದಲ್ಲಿ ಸಾಹಿತ್ಯವೇ ಇರಲಿಲ್ಲ ಎಂದಿದ್ದರೋ ಅವರೇ ಅಲ್ಲಿ ಪ್ರಬಂಧ ಮಂಡಿಸಲು ಹಾಜರ್. ನನಗಿನ್ನೂ ಆಗ ೧೯ರ ಹುಮ್ಮಸ್ಸು. ಆ ಗೋಷ್ಠಿಯ ನಿರ್ದೇಶಕರು ಡಾ॥ ಮುಗಳಿಯವರೇ ಇರಬೇಕು. ಅವರಿಗೆ ಹೇಳಿ ನಾನು ಆಗ ಅವರಿಗಿಂತ ಮೊದಲು ಮಾತಾಡಲು ಅವಕಾಶ ಕೊಡಲು ಕೇಳಿಕೊಂಡೆ. ೧೯ನೇ ಶತಮಾನದ ಗದ್ಯದ ಪರಂಪರೆಯ ಉಗಮ ನೋಡಿ ಎಂದು ಆರಂಭಿಸಿ ಅವರ ಮುಖ ನೋಡಿದೆ. ಆದರೆ ಮುಖ ಪೆಚ್ಚಾಗಿತ್ತು. ಕೂಡಲೇ ನನಗನ್ನಿಸಿತು. ವಿ.ಸೀ. ಅವರ ಶಿಷ್ಯಳಾಗಿ ನಾನು ಹಾಗೆ

ಮಾತಬಾರದಾಗಿತ್ತು. ಇನ್ನೊಬ್ಬರ ಮನನೋಯಿಸುವ ಅಗತ್ಯವೇನು, ನಮಗೇನು ಹೇಳಲಿದೆಯೋ ಅದನ್ನು ಹೇಳಿದರಾಯಿತು.

ಕವಿಕಾವ್ಯ ಪರಂಪರೆ ಮಾಲೆಯಲ್ಲಿ ಸರ್ವಜ್ಞನ ಬಗ್ಗೆ ಕೃತಿ ರಚಿಸುವಾಗ ವಿ.ಸೀ. ನನ್ನನ್ನು ಮರೆಯಲಿಲ್ಲ. ಅದರ ಒಂದು ವಿಭಾಗದ ಬರವಣಿಗೆಯ ಹೊಣೆ ನನಗಿತ್ತು, ಬರವಣಿಗೆಗೆ ಬೇಕಾದ ಸಹಾಯವನ್ನೆಲ್ಲಾ ಮಾಡಿದರು.

ವಿ.ಸೀ. ಎರಡನೆಯ ಸಲ ನಮ್ಮ ಹೊಸ ಕಾಲೇಜಿಗೆ ಬಂದರು. ನೋಡಿ ಸಂತೋಷ ಪಟ್ಟರು. "ಇದೇ ನಿನ್ನ ಮನೆ. ಇಲ್ಲಿಯ ೧,೫೦೦ ವಿದ್ಯಾರ್ಥಿನಿಯರೇ ನಿನ್ನ ಮಕ್ಕಳು. ಇದನ್ನೆಲ್ಲಾ ಚೆನ್ನಾಗಿ ನೋಡಿಕೋಮ್ಮಾ ಇದಕ್ಕಿಂತ ಹೆಚ್ಚಿನ ಸಂತೋಷ ನಿನಗೆ ಬೇರೊಂದಿಲ್ಲ" ಎಂದರು. ಇದೇ ನನ್ನ ಭಾಗ್ಯ.

ರುಚಿಪಕ್ಷಪಾತಿ

"ಕೆಟಲಿನ ತುಂಬ ಟೀ ಕಷಾಯ; ಬೇರೆ ಬೇರೆಯಾಗಿ ಸಕ್ಕರೆ, ಹಾಲು; ಕುಡಿಯುವ ಬಟ್ಟಲು ತಟ್ಟೆಗಳು; ಚಮಚಗಳು; ಮತ್ತು ಇತರ ಪರಿಕರಗಳು ಬಂದಾದ ಬಳಿಕ ವಿ.ಸೀ. ಅವರು ಪಾತ್ರೆಗಳನ್ನೂ ಪರಿಕರಗಳನ್ನೂ ಕ್ರಮವಾಗಿ ಅಚ್ಚುಕಟ್ಟಾಗಿ ಜೋಡಿಸಿ, ಬಟ್ಟಲುಗಳಲ್ಲಿ ಕಷಾಯ ಸುರಿದು "ಹಾಲು ಸಕ್ಕರೆ ಹಾಕಿಕೊಳ್ಳಿ" ಎನ್ನುತ್ತಿದ್ದರು. ತಾವು ಒಂದು ಬಟ್ಟಲು ಕಷಾಯಕ್ಕೆ ಒಂದು ಚಮಚ ಹಾಲನ್ನು ಮಿಶ್ರಮಾಡಿಕೊಂಡು ತೂಕಮಾಡಿ ಸ್ವಲ್ಪ ಸಕ್ಕರೆ ಬೆರಸಿಕೊಂಡು, ನಿಧಾನವಾಗಿ ಕುಡಿಯುತ್ತಿದ್ದರು. ನನಗೆ ಈ ಬಗೆಯ ಟೀಯೂ ಒಂದೇ ಬಿಸಿನೀರೂ ಒಂದೇ; ಸತ್ವವಿಲ್ಲದ ಸಪ್ಪೆನೀರು. ಒಂದು ಕೆಟಲು ನೀರಿಗೆ ಅದೆಷ್ಟು ಸೊಪ್ಪು ಹಾಕುತ್ತಿದ್ದರೋ, ಕಷಾಯಕ್ಕೆ ಅಂಟುತ್ತಿದ್ದದ್ದು ತಿಳಿಹೊಂಬಣ್ಣ ಮಾತ್ರ. ನನ್ನದು ಒರಟು ದೇಹ, ಅದಕ್ಕಿಂತಲೂ ಒರಟುರುಚಿ. ತಿಳಿಯಾದ ನವುರಾದ ಮೃದುವಾದ ಸೂಕ್ಷ್ಮವಾದ ಹಗುರವಾದ ರುಚಿಗಳಿಗೆ ನನ್ನ ದೇಹ ಮನಸ್ಸುಗಳು ಜಗ್ಗವು. ಚೆನ್ನಾಗಿ ಊರಿದ ಕಪ್ಪು ಬಣ್ಣದ ಕಷಾಯ ಒಂದು ಬಟ್ಟಲು, ಮೂರು ನಾಲ್ಕು ಚಮಚ ಸಕ್ಕರೆ, ಹಾಲು ಬೆರಸದ ಟೀಯನ್ನು ಸಲಕ್ಕೆ ಆರು ಬಟ್ಟಲು ಗಟಗಟನೆ ಕುಡಿದು ಕುಡಿದು ಜಡ್ಡುಬಿದ್ದಿರುವ ನನಗೆ ವಿ.ಸೀ. ಯವರ ತಿಳಿ ಟೀ ಹೇಗೆ ತಾನೆ ಒಗ್ಗೀತು! ಆದರೂ ವಿ.ಸೀ. ಅವರು ಟೀ ಬೆರಸಿಕೊಳ್ಳುತ್ತಿದ್ದ ವಿಧಾನ, ಕುಡಿಯುತ್ತಿದ್ದ ಸಾವಧಾನ, ಪಡೆಯುತ್ತಿದ್ದ ಸಮಾಧಾನ, ಇವುಗಳನ್ನು ಕಂಡ ನನಗೆ, "ಅಯ್ಯೊ, ದೇವರೇ! ಮೃದು ರುಚಿಗಳನ್ನು ಅನುಭವಿಸಿ ಸವಿಯುವಂಥ ಯೋಗವನ್ನು ನನಗೇಕೆ ಕೊಟ್ಟಿಲ್ಲ? ಏನು ಪಕ್ಷಪಾತ!" ಎಂದು ಮೊರೆಯಿಡೋಣವೆನ್ನಿಸುತ್ತದೆ".

ಬಿ. ಜಿ. ಎಲ್. ಸ್ವಾಮಿ

'ಪಂಚಕಲಶ ಗೋಪುರ' ಪು. ೯೩-೯೪

ನೆನಪೇ ಒಂದು ಸುಖ

ಪಂಚಾಕ್ಷರಿ ಹಿರೇಮಠ

ಹಾಳತವಾದ ನಿಲುವು, ಗೋದಿ ಬಣ್ಣ, ತಲೆಗೆ ಶುಭ್ರವಾದ ಮೈಸೂರು ಪೇಟಾ, ಕೊರಳು ತುಂಬುವ ಕೋಟು, ಕಚ್ಚೆ ಹಾಕಿ ಸೊಗಸಾಗಿ ಉಟ್ಟ ಪಂಚೆ, ಕಣ್ಣಿಗೆ ಕನ್ನಡಕ, ಅದರ ಹಿಂದೆ ಕರುಣೆ ತುಂಬಿ ಹೊಳೆವ ಕಣ್ಣುಗಳು, ಎದುರಿಗೆ ಬಂದ ಮಿತ್ರರನ್ನು ಕಂಡಾ ಕ್ಷಣವೇ "ಹದುಳವೇ?" ಎಂದು ಕಣ್ಣರಳಿಸಿ ಕೇಳುವ ರೀತಿ – ಇದು ವಿ.ಸೀ. ವ್ಯಕ್ತಿತ್ವ, ಇದು ವಿ.ಸೀ. ರೀತಿ.

ಇಂಥ ನಮ್ಮ ವಿ.ಸೀ. ಅವರ ಸಾಹಿತ್ಯ ಸೇವೆ ತುಂಬ ದೀರ್ಘಕಾಲದ್ದು. ಏನಿಲ್ಲವೆಂದರೂ ಆರು ದಶಕದಷ್ಟು ಕಾಲ ಅವರು ಕನ್ನಡ ಸರಸತಿಯ ಸೇವೆಯಲ್ಲಿ ತಮ್ಮ ಜೀವ ಸವೆಸಿದರು. ನವೋದಯ ಕಾಲದ ಲೇಖಕರಲ್ಲಿ ವಿ.ಸೀ. ಹೆಸರು ತುಂಬ ದೊಡ್ಡದು. ಅಪರಂಪಾರವಾದ ವಿದ್ವತ್ತು. ಅದಕ್ಕೂ ಮಿಗಿಲಾದ ವಿನಯ. ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳು ಕರತಲಾಮಲಕ. ಅರ್ಥಶಾಸ್ತ್ರದಲ್ಲಿ ಅವರದು ಅದ್ಭುತವಾದ ನೈಪುಣ್ಯ. ಒಟ್ಟಿನಲ್ಲಿ ವಿ.ಸೀ. ಅವರ ಬರೆವಣಿಗೆಗೆ ಆಕಾಶದ ಹರವು, ಕಡಲ ಆಳವಿತ್ತು. ಅಪಾರ ಚಿಂತನಶೀಲ ವ್ಯಕ್ತಿತ್ವ ಅವರದು. ವಾತ್ಸಲ್ಯದಿಂದ ತುಂಬಿದ ಬದುಕು. ಸ್ನೇಹ ಅವರ ಪಾಲಿಗೆ ಒಂದು ಶೀಲವಾಗಿತ್ತು, ಧರ್ಮವಾಗಿತ್ತು. ಸೌಂದರ್ಯದ, ನಿಸರ್ಗದ ಪರಮ ಆರಾಧಕರಾಗಿದ್ದರು. ಅಪಾರ ಪರಿಶುದ್ಧತೆಯಿಂದ ಕೂಡಿದುದು ಅವರ ಪ್ರೇಮ, – 'ಸತ್ಯಂ ಶಿವಂ ಸುಂದರಂ' ಎಂಬ ತೆರದಿ. ಶುಭ್ರತೆ, ಅವರಲ್ಲಿ ಢಾಳವಾಗಿ ತೋರುತ್ತಿದ್ದ ಇನ್ನೊಂದು ದೊಡ್ಡ ಗುಣ.

ಅಪಾರ ಜೀವನೋತ್ಸಾಹ ಅವರಲ್ಲಿ ಸದಾ ತುಂಬಿ ತುಳುಕುತ್ತಿತ್ತು. ಮಾತು ಮಾತಿನಲ್ಲಿ ನಯ, ಸೊಗಸುಗಾರಿಕೆ, ಸ್ನಿಗ್ಧತೆ, ರಸಿಕತೆ ಎದ್ದು ಕಾಣುತ್ತಿತ್ತು. ವಿ.ಸೀ. ಅವರ ಮಾತುಗಳೆಂದರೆ "ಮುತ್ತು, ಮಾಣಿಕ್ಯ, ಸ್ಫಟಿಕದ ಸಲಾಕೆ." ಅವರ ಮಾತಿಗೆ ಅಂಥ ಚೆಲುವು, ಅಂಥ ಬೆಳಕು, ಅಂಥ ಪಾರದರ್ಶಕತೆ. ಅವರ ಮಾತು ಮಿಂಚಿನ ಗೊಂಚಲೂ ಹೌದು, ದ್ರಾಕ್ಷಿ ಗೊಂಚಲೂ ಹೌದು!

ಅವರ ಜೀವನಾನುಭವ ವಿಪುಲವಾದುದು. ಕಷ್ಟ ಕಾರ್ಪಣ್ಯ ಜೀವನದಲ್ಲಿ ಅನುಭವಿಸಿದ್ದರೂ, ಸದಾ ಪ್ರಸನ್ನಚಿತ್ತತೆ, ಅವರ ಮುಖದಲ್ಲಿ ರಾರಾಜಿಸುತ್ತಿತ್ತು. ಸದಾ ಸುಖ ನೀಡುವ, ಆಪ್ಯಾಯಮಾನವಾದ ಮಾತುಗಾರಿಕೆ ಅವರದು. ಕನ್ನಡ, ಇಂಗ್ಲಿಷ್

ಭಾಷೆಗಳಲ್ಲಿ ಅವರ ಉಪನ್ಯಾಸ ಕೇಳುವುದೆಂದರೆ, ನಮ್ಮ ಪಾಲಿಗೆ ಒಂದು ಹಬ್ಬ. ಭಾಷೆಯ ಲಾಲಿತ್ಯ, ಸೊಗಸು, ನಿರೂಪಣೆ ಅಂಥ ಅಪರೂಪದ್ದಾಗಿರುತ್ತಿತ್ತು.

'ವಿ.ಸೀ.' – ಈ ಎರಡಕ್ಷರದಲ್ಲಿ ನನಗೆ ಜೀನು–ಜೊನ್ನ ತುಂಬಿದ ಅನುಭವವಾಗುತ್ತದೆ. ಅವರನ್ನು ಕಾಣುವುದು, ಕಂಡು ಮಾತನಾಡುವುದು ನನಗೆ ಇವೆರಡೂ ತುಂಬ ಇಷ್ಟವಾಗಿದ್ದವು.

ವಿ.ಸೀ. ಅವರ ಬರೆವಣಿಗೆ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಬಹು ವಿಧ. 'ಮಹನೀಯರು', 'ಹಿರಿಯರು–ಗೆಳೆಯರು' ಮುಂತಾದ ವ್ಯಕ್ತಿ ಚಿತ್ರಣಗಳಲ್ಲಿ ಅವರು ತೋರಿದ ಉದಾರತೆ, ಇಲ್ಲಿಯ ಬರೆವಣಿಗೆಯಲ್ಲಿ ಕಂಡು ಬರುವ ತಾದಾತ್ಮ್ಯಭಾವ ನಿಜಕ್ಕೂ ಅಪರೂಪದ್ದು. ಜಿಜ್ಞಾಸುಗಳಿಗೆ ಅವರೊಂದಿಗಿನ ಸಂವಾದದಲ್ಲಿ, ಆಲಿಸುವ ಮಾತುಗಳಲ್ಲಿ ಒಂದು ಅಲೌಕಿಕ ಬೆಳಗುತ್ತಿರುವ ಅನುಭವವಾಗುತ್ತಿತ್ತು. ನನ್ನ ಅವರೊಂದಿಗಿನ ಒಡನಾಟದ ಅನುಭವದಿಂದ ಈ ಮಾತನ್ನು ಇಲ್ಲಿ ಹೇಳುತ್ತಿದ್ದೇನೆ. ವಿ.ಸೀ. ಎಂದೂ ಕೆಡಕಿನ, ಒರಟಾದ ಮಾತನ್ನು ಆಡಲೇ ಇಲ್ಲ. ಒಂದು ರೀತಿಯಲ್ಲಿ ಅವರಿಗೆ ವೈರಿಗಳೇ ಇರಲಿಲ್ಲ. ಇದ್ದವರೆಲ್ಲ 'ಮಹನೀಯರು', 'ಹಿರಿಯರು–ಗೆಳೆಯರು.'

ವಿ.ಸೀ. ಅವರ ಆಸಕ್ತಿಗೆ ಮೇರೆಯೆಂಬುದೇ ಇರಲಿಲ್ಲ. ಕಾವ್ಯ, ನಾಟಕ, ವಿಮರ್ಶೆ, ಪ್ರಬಂಧ, ಲಲಿತ ಬರೆವಣಿಗೆ, ವ್ಯಕ್ತಿ ಚಿತ್ರಣ, ಸಂಗೀತ, ನೃತ್ಯ, ಚಿತ್ರಕಲೆ, ಅರ್ಥಶಾಸ್ತ್ರ, ಹಣಕಾಸು ವ್ಯವಹಾರ, ಪ್ರಕೃತಿ ವೀಕ್ಷಣೆ, ಪ್ರವಾಸ – ಹೀಗೆ ನೂರೆಂಟು.

ಸ್ನೇಹ, ಚೆಲುವು, ಒಲವು – ಈ ಮೂರು ಬೇರೆ ಬೇರೆ ಹೇಳುವುದಕ್ಕಿಂತ ಕೇವಲ ವಿ.ಸೀ. ಎಂದರೆ ಸಾಕು – ಎಂದೆನ್ನಿಸುತ್ತದೆ ನನಗೆ.

ವಿ.ಸೀ. ಕಾವ್ಯದಲ್ಲಿಯ ಬೆಳವಣಿಗೆಯೆಂದರೆ ಚಿಂತನೆಯ ಬೆಳವಣಿಗೆ. ಧ್ವನಿ ಅವರ ಕಾವ್ಯದ ಇನ್ನೊಂದು ವಿಶೇಷ ಗುಣವೆಂದು ಹೇಳಬಹುದು. ಅವರ ಜೀವನದ ಸಾಧನೆ ಯಾವುದಕ್ಕಾಗಿತ್ತು – ಎಂಬುದನ್ನು ಅವರದೇ ಕವಿತೆಯ ಈ ಸಾಲುಗಳಲ್ಲಿ ನಾನು ಕಂಡಿದ್ದೇನೆ:

ನಾಡ ನಲಿಸುವ ಜೀವ
ಬಾಳ ನಗಿಸುವ ಜನವು
ಹುಟ್ಟಿ ಮರೆಯುವವರೆಗು
ಬದುಕು ಬದುಕೆ.....

ಇಂಥ ಜೀವ, ಇಂಥ ಜನ, ಇಂಥ ಬದುಕು ಬದುಕಿದವರು ವಿ.ಸೀ. ಅದೂ ಅಲ್ಲದೆ ಈ ಕವಿ ಬದುಕುವ ಬಲ, ಛಲ, ಆತ್ಮವಿಶ್ವಾಸ, ಆತ್ಮಾಭಿಮಾನ ಮನುಷ್ಯನಿಗೆ ನೀಡಿದವರು. ಅವರೇ ಮತ್ತೊಂದೆಡೆ ಹೀಗೆ ಹಾಡಿದ್ದುಂಟು:

ನಿನ್ನ ಬಲವೇ ನಿನಗೆ ಕಾಪಹುದು
ಹೆರರಾರ ಕಾವಲಿಗು ಕಾಯುತ್ತೆ ಬೇಡದಿರು
ಅಂಜದಿರು ಸೋಲದಿರು ಇರವ ಹಳಿದು

ಇರುವ ಬದುಕನ್ನು ಹಳಿಯದೇ, ಹೆರರ ಹಂಗಿಗಾಗಿ ಜೊಲ್ಲು ಸುರಿಸದೆ, ಬದುಕು ಸಾಗಿಸಬೇಕೆಂದು ಹೇಳಿದ ಈ ಕವಿ, ಅಪಾರ ಆತ್ಮಾಭಿಮಾನಿಯಾಗಿದ್ದರು.

ವಿ.ಸೀ. ಅವರ ಜೀವನ ಸಂಗೀತದಲ್ಲಿಯ ಆರೋಹಣದಂತೆ. ಅದು ಸದಾ ಊರ್ಧ್ವ ಮುಖಿಯಾಗಿತ್ತು. ಜೀವನವನ್ನು ತುಂಬ ಪ್ರೀತಿಸಿದವರು ವಿ.ಸೀ. ಬದುಕಿನಿಂದ ಎಂಥ ಕಷ್ಟದಲ್ಲಿಯೂ ವಿಮುಖರಾದವರಲ್ಲ, ಅವರು. ಹಾಗೆಂದು ಅವರು ಸದಾ ಸಂಸಾರದ ಹುಮಲಲ್ಲಿ ಸಿಕ್ಕು ತೊಳಲಾಡಿದವರಲ್ಲ. ಸುಮಾರು ಎಂಬತ್ತೈದು ವರ್ಷ ಸುದೀರ್ಘವಾಗಿ ಬದುಕಿದ ಜೀವ ವಿ.ಸೀ. ಅವರು ತಮ್ಮ ಇಳಿವಯಸ್ಸಿನಲ್ಲಿಯೂ ಸಾಹಿತ್ಯ ರಚನೆ ಮಾಡಿದರು. ಅವರ ಸಾಹಿತ್ಯ ಸೃಷ್ಟಿ ಸಣ್ಣದೇನಲ್ಲ. ಗಾತ್ರದಿಂದಲೂ, ಗುಣದಿಂದಲೂ ದೊಡ್ಡದೇ. ಅದರೆ ನನಗೆ ಅವರ ಬದುಕು, ಬದುಕಿದ ರೀತಿ, ನಾಲ್ಕು ಜನರ ಸುಖ ಮಃಖಿವಲ್ಲಿ ಪಾಲ್ಗೊಂಡುದು – ಬಹುದೊಡ್ಡದೆನ್ನಿಸಿದೆ. ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಅವರು ಪಡೆದ ಶಿಷ್ಯ ಸಂಪತ್ತು ಅಪಾರ. ಅವರು ತಮ್ಮ ವಿದ್ಯಾರ್ಥಿ ಸಮುದಾಯವನ್ನು ಮನಸಾರೆ ಪ್ರೀತಿಸಿದರು, ಅವರ ಒಳಿತಿಗಾಗಿ ಪ್ರಾಮಾಣಿಕವಾಗಿ ಶ್ರಮಿಸಿದರು.

ಸುಮಾರು ಮೂವತ್ನಾಲ್ಕು ವರ್ಷಗಳ ಹಿಂದಿನ ಮಾತು. ಅವರು ಆಗ ಹೊನ್ನಾವರ ಕಾಲೇಜಿಗೆ ಪ್ರಿನ್ಸಿಪಾಲರಾಗಿ ಉತ್ತರ ಕನ್ನಡ ಜಿಲ್ಲೆಗೆ ಬಂದಿದ್ದರು. ಆಗ ನನಗೆ ಇನ್ನೂ ಹತ್ತಿರವಾದರು. ಅವರ ಕಾಲೇಜು ನಾನು ಕೆಲಸ ಮಾಡುತ್ತಿದ್ದ ಕರ್ನಾಟಕ ವಿಶ್ವ ವಿದ್ಯಾಲಯಕ್ಕೆ ಸೇರಿತ್ತು. ಆಗಾಗ ಅವರು ಮೀಟಿಂಗಿಗಾಗಿ, ಕಾಲೇಜಿನ ಕೆಲಸಕ್ಕಾಗಿ ಧಾರವಾಡಕ್ಕೆ ಬರುತ್ತಿದ್ದರು. ಆಗೆಲ್ಲ ತಪ್ಪದೆ ನಾವು ಕೂಡುತ್ತಿದ್ದೆವು. ಹಲವು ಸಲ ನನ್ನ ಮನೆಗೂ ಬಂದು ಆತಿಥ್ಯ ಸ್ವೀಕರಿಸಿ, ಕೆಲಕಾಲ ಕಳೆದುದುಂಟು.

ಅದಕ್ಕೂ ಮೊದಲು ಬೆಂಗಳೂರಿಗೆ ಹೋದಾಗಲೆಲ್ಲ ನಾನು ಅವರನ್ನು ಕಾಣಲು ಅವರ ಮನೆಗೇ ಹೋಗುತ್ತಿದ್ದೆ. ಹೀಗೆ ಹೋದ ಒಂದು ಸಲ ತಮ್ಮ ಮಗಳನ್ನು ಕರೆದು "ಧಾರವಾಡದಿಂದ ಪಂಚಾಕ್ಷರಿ ಬಂದಿದ್ದಾರೆ. ಅವರಿಗೆ ಏನು ಕೊಡುತ್ತೀಯಾ?" ಎಂದು ಕೇಳಿದರು. ಆಕೆ ಒಳಗೆ ಹೋಗಿ ಬಟ್ಟಲು ತುಂಬ ಕೋಸಂಬರಿ ತಂದಿತ್ತರು. ಸೊಗಸಾಗಿತ್ತು, ವಿ.ಸೀ. ಅವರ ಬದುಕಿನಂತೆ.

ಸಾವಿರದೊಂಬೈನೂರ ಐವತ್ತರ ದಶಕವಿರಬೇಕು. ಗುಲ್ಬರ್ಗಾದ ಉಸ್ಮಾನಿಯಾ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ನಾನು ವಿದ್ಯಾರ್ಥಿಯಾಗಿದ್ದೆ. ಆಗ ಅಲ್ಲಿಯ ಕನ್ನಡ ಸಂಘದವರು ಅಖಿಲ ಕರ್ನಾಟಕ ವ್ಯಾಪ್ತಿಯ ಪ್ರಬಂಧ ಸ್ಪರ್ಧೆ ನಡೆಸಿದರು. ಆಗ ನಮಗೆ ಕನ್ನಡದ ಪ್ರಾಧ್ಯಾಪಕರಾಗಿದ್ದವರು ಪ್ರೊ. ತವಗ ಭೀಮಸೇನರಾವ್ ಅವರು. ನನ್ನನ್ನು ಕರೆದು "ಪಂಚಾಕ್ಷರಿ ಈ ಸ್ಪರ್ಧೆಗೆ ಪ್ರಬಂಧ ಕಳಿಸು" ಎಂದು ಹೇಳಿದರು. ವಿಷಯ: 'ಜೀವನ ಮತ್ತು ಸಾಹಿತ್ಯ' ವೆಂದಿತ್ತು. ಈ ಬಹುಮಾನ ವಿತರಣಾ ಸಮಾರಂಭಕ್ಕೆ ಬೆಂಗಳೂರಿನಿಂದ ಪ್ರೊ. ವಿ. ಸೀತಾರಾಮಯ್ಯನವರು ಬಂದಿದ್ದರು. ಬಹುಮಾನ ಕೊಡುತ್ತ ಅಂದು ವಿ.ಸೀ. ಅವರು "ಇಷ್ಟು ಚಿಕ್ಕ ವಯಸ್ಸಿನಲ್ಲಿ ಇಷ್ಟೊಂದು ಪ್ರಬುದ್ಧವಾದ ಪ್ರಬಂಧ ಬರೆದಿರುವಿರಿ. ಮುಂದೆ ನೀವು ಒಳ್ಳೆಯ ಬರೆಹಗಾರರಾಗುತ್ತೀರಿ ಎನ್ನುವಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ನೀವು ಓದಲು ಬೆಂಗಳೂರಿಗೆ ಬರುವುದಾದರೆ ನನಗಾದ ಸಹಾಯ ಮಾಡುವೆ." ಎಂದು ಅತ್ಯಂತ ಪ್ರೀತಿಯಿಂದ ಬೆನ್ನು ತಟ್ಟಿದರು. ಈ ವಾಕ್ಯ ಬರೆಯುತ್ತಿರುವಂತೆ ನಾನು, ಬೆನ್ನು ಮುಟ್ಟಿಕೊಂಡು ಅವರ ಹಸ್ತ ಸ್ಪರ್ಶದ ಸುಖ ಅನುಭವಿಸುತ್ತಿದ್ದೇನೆ. ಇದು ವಿ.ಸೀ. ತೋರಿದ

ಪ್ರೀತಿ. ನಾನು ಅವರಿಗೆ ಅಪರಿಚಿತನಾಗಿ ತೋರಲೇ ಇಲ್ಲ. ಮನುಷ್ಯ ಮಾತ್ರನನ್ನು ಪ್ರೀತಿಸುವ ವ್ಯಕ್ತಿ ಮಾತ್ರ ಹೀಗಿರಲು ಸಾಧ್ಯ. ಅಂದಿನಿಂದ ವಿ.ಸೀ. ನನ್ನವರಾಗಿ ಬಿಟ್ಟರು. ಮುಂದೆ ನಾನು ಧಾರವಾಡಕ್ಕೆ ಬಂದು, ಕರ್ನಾಟಕ ವಿಶ್ವವಿದ್ಯಾಲಯ ಸೇರಿದ ಮೇಲಂತೂ ನಮ್ಮ ಒಡನಾಟ ಹೆಚ್ಚಾಯಿತು. ಅವರು ಅಂದು ಭವಿಷ್ಯ ನುಡಿದಂತೆ, ಇಂದು ನಾನು ಕನ್ನಡ ಭಾಷೆಗೆ ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ಸಾಹಿತ್ಯದ ವಿವಿಧ ಪ್ರಕಾರದಲ್ಲಿ ನೀಡಿದ್ದೇನೆ. ಅವರ ಆಸೆಯನ್ನು ಈ ಮೂಲಕ ಪೂರೈಸಿದ್ದೇನೆಂಬ ಸಮಾಧಾನ ನನಗಿದೆ. ಅವರು ಜೀವನದುದ್ದಕ್ಕೂ ತಮ್ಮ ಮಿತ್ರರಿಗೆ, ಕಿರಿಯರಿಗೆ, ಶಿಷ್ಯರಿಗೆ ಬೆಳಕು ನೀಡುತ್ತ ಬದುಕಿದರು. ಇಂಥ ಮಹಾನುಭಾವರನ್ನು ನೆನೆಯುವುದೇ ಒಂದು ಸುಕೃತ.

ವಿ.ಸೀ. ಅವರು ಸುತ್ತಲಿನ ಬದುಕಿನಲ್ಲಿ ಸ್ನೇಹ, ಪ್ರೀತಿ ಹಂಚಿದರು. ಅದುವೇ ಅವರನ್ನು ಎಲ್ಲರೂ ನೆನೆಯುವಂತೆ ಮಾಡಿದೆ. ಅವರು ತಮ್ಮ "ಹಗಲು–ಇರುಳು" ಎಂಬ ಕವಿತಾ ಸಂಗ್ರಹದಲ್ಲಿ:

ಲೋಕದ ಕೆಳೆ, ವಿಶ್ವಾಸಗಳಿಗಿಂತ ಬೇರೆ
ಏನಿದೆ? ಅವು ಕಳೆಯೆ, ಶೂನ್ಯವೀ ನೆಲನು

ಎಂದಿದ್ದಾರೆ. ಎಷ್ಟೊಂದು ನಿಜ ಆ ಮಾತು. ಸ್ನೇಹ, ವಿಶ್ವಾಸಗಳಿಗಿಂತ ಮಿಗಿಲಾದುದು ಏನಿದೆ ಈ ಲೋಕದಲ್ಲಿ? ಅದನ್ನು ಧಾರಾಳವಾಗಿ ನಮಗೆ ನೀಡಿದ ವಿ.ಸೀ. ಅವರ ನಿತ್ಯಸ್ಮರಣೆ, ನಮ್ಮ ಪಾಲಿನ ಬರೀ ಕರ್ತವ್ಯ ಮಾತ್ರವಲ್ಲ, ಅದು ಕೃತಜ್ಞ ಮನಸ್ಸಿನ ಪ್ರತೀಕವೂ ಹೌದು.

ಬತ್ತದ ಸ್ಫೂರ್ತಿ, ಪ್ರೇರಣೆ

"ನಮ್ಮಲ್ಲಿ ಪುಸ್ತಕ ಪ್ರಕಟಣೆಯೂ ಒಂದು ಕಲೆ ಎಂದು ನಂಬಿದವರಲ್ಲಿ, ಆ ನಂಬಿಕೆಗೆ ಅನುಗುಣವಾಗಿ ತಮ್ಮ ಪುಸ್ತಕಗಳನ್ನು ಪ್ರಕಟಿಸಿದವರಲ್ಲಿ ವಿ.ಸೀ. ಮೊದಲಿಗರು; ಅಗ್ರಗಣ್ಯರು. 'ಕಾವ್ಯ ನಿರ್ಮಾಣದಂತೆಯೇ ಕಾವ್ಯ ಪ್ರಕಟನವೂ ಒಂದು ಕಲೆ' ಎಂಬುದು ಅವರ ಖಚಿತ ಅಭಿಪ್ರಾಯ....

ಕನ್ನಡ ಪುಸ್ತಕಗಳನ್ನು ಚೆಲುವಾಗಿ ಪ್ರಕಟಿಸುವ ಸಂಪ್ರದಾಯವನ್ನು ಆರಂಭಿಸಿದವರಲ್ಲಿ ವಿ.ಸೀ. ಮೊದಲಿಗರೆಂಬುದು ಈಗ ಚರಿತ್ರೆಯ ಅಂಶವಾಗಿದೆ. ತಮ್ಮ ಪುಸ್ತಕಗಳನ್ನು ಚೆಲುವಾಗಿ ಪ್ರಕಟಿಸುವವರಿಗೆಲ್ಲ ಅವರು ಬತ್ತದ ಸ್ಫೂರ್ತಿ, ಪ್ರೇರಣೆಯಾಗಿರುತ್ತಾರೆ".

ಹಾ. ಮಾ. ನಾಯಕ

'ಗ್ರಂಥಲೋಕ' ಸಂ. ೭, ಅಕ್ಟೋಬರ್ ೧೯೮೩

ಸ್ಫೂರ್ತಿಯ ಸೆಲೆ

ಕೃಷ್ಣಾನಂದ ಕಾಮತ್

ಕನ್ನಡದಲ್ಲಿ ಪ್ರಪ್ರಥಮವಾಗಿ, ಅಂದರೆ ೧೮೯೦ರಲ್ಲಿ, ಪ್ರವಾಸ ಕಥನವನ್ನು ಪ್ರಕಟಿಸಿದ ಶ್ರೇಯಸ್ಸು ಕವಿ, ನಾಟಕಕಾರ, ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿ ಅವರಿಗೆ ಸಲ್ಲುತ್ತದೆ. ತುಂಬ ವರ್ಷಗಳ ತರುವಾಯ, ೧೯೨೬ರಲ್ಲಿ ದ್ವಿತೀಯ ಸ್ಥಾನ, 'ಪಂಪಾಯಾತ್ರೆ' ಬರೆದ ವಿ. ಸೀತಾರಾಮಯ್ಯನವರಿಗೆ ಸೇರುತ್ತದೆ.

ಬಾಲಕನಾಗಿದ್ದಾಗಲೇ ವಿ.ಸೀ. ಅವರ ಈ ಕೃತಿಯನ್ನು ಓದಿ ಪ್ರಭಾವಿತನಾಗಿದ್ದೆ. ಕಂಡದ್ದನ್ನೆಲ್ಲ ಮನಸ್ಸಿಗೆ ಮುಟ್ಟುವಂತೆ ವರ್ಣಿಸುವ ಕಲಾವಿದನ ಕಣ್ಣು ಹಾಗೂ ಕವಿ ಹೃದಯ ಅವರದು ಎಂದು ಮುಂದೆ ಮತ್ತೆ ಮತ್ತೆ ಓದಿದ್ದನ್ನು ಸ್ಮರಿಸಿಕೊಳ್ಳುತ್ತಿದ್ದಾಗ ಅನಿಸತೊಡಗಿತು. ಚೇಳುಗಳ ಬಾಧೆಗೆ ಒಳಗಾದ ಪ್ರಸಂಗವಲ್ಲೂ ನವಿರಾದ ಹಾಸ್ಯ ಹೊರಹೊಮ್ಮಿಸುವ ಚಾಕಚಕ್ಯತೆ ಅವರಿಗಿತ್ತು. ಹತ್ತಿರದ ಗೇರುಸೊಪ್ಪಾದ ನಗರ ಬಸದಿಗಳನ್ನು ನೋಡಹೋದಾಗ, ಅಲ್ಲಿ ಹಾಳುಬಿದ್ದ ವಿಗ್ರಹಗಳು, ಶಿಲಾ ಶಾಸನಗಳನ್ನು ನೋಡುತ್ತಿದ್ದರೆ, 'ಪಂಪಾಯಾತ್ರೆ' ಕಣ್ಣೆದುರು ಬರುತ್ತಿತ್ತು. ಹಾಡುವಳ್ಳಿ (ಸಂಗೀತಪುರ) ವೀರಗಲ್ಲುಗಳು, ಜಿನಾಲಯ, ಇತರ ಅವಶೇಷಗಳು ಗೋಚರಿಸಿದಾಗ, ವಿ.ಸೀ. ಅವರು ಈ ಸ್ಥಳಗಳಿಗೆ ಭೇಟಿ ಕೊಟ್ಟಿದ್ದಿದ್ದರೆ, ಪ್ರವಾಸ ಕಥನ ಬರೆಯುವಂತಾಗಿದ್ದರೆ, ಇವೆಲ್ಲ ಅವರ ಕೃತಿಗಳಲ್ಲಿ ಹೇಗೆ ರೂಪಗೊಳ್ಳುತ್ತಿದ್ದಿರಬಹುದು! – ಎಂಬ ಕಲ್ಪನಾವಿಲಾಸ ಹರಿಯುತ್ತಿತ್ತು. ಅಷ್ಟೊಂದು ಮೆಚ್ಚಿಕೊಂಡ ಲೇಖಕರನ್ನೊಮ್ಮೆ ಕಣ್ಣಾರೆ ಕಾಣಬೇಕೆಂಬ ಲವಲವಿಕೆ ಉಂಟಾಯಿತು. ಆದರೆ ಕರಾವಳಿಯ ಚಿಕ್ಕ ಊರಿನಲ್ಲಿ ಶಾಲಾ ವಿದ್ಯಾರ್ಥಿಯಾಗಿದ್ದಾತನಿಗೆ ಬೆಂಗಳೂರಿನಲ್ಲಿರುತ್ತಿದ್ದ ವಿ.ಸೀ. ಅವರನ್ನು ಭೇಟಿ ಮಾಡುವದು ನನಸಾಗದ ಕನಸಾಗಿತ್ತು.

೧೯೫೩ರಲ್ಲಿ ಕುಮಟಾದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಮಾನ್ಯ ವಿ.ಸೀ. ಅವರು ಅಲಂಕರಿಸಲಿದ್ದಾರೆಂಬ ವಾರ್ತೆ ಓದಿ ಭಾರೀ ಸಂತೋಷ ಪಟ್ಟವರಲ್ಲಿ ನಾನೊಬ್ಬನಾಗಿದ್ದೆ. ನನ್ನೂರಾದ ಹೊನ್ನಾವರದಿಂದ ಕುಮಟಾ ಕೇವಲ ಹನ್ನೆರಡು ಮೈಲಿ ದೂರದಲ್ಲಿದ್ದರೂ, ಹೋಗಿ ಬರುವ ವಾಹನ ಸೌಕರ್ಯ ತೃಪ್ತಿಕರವಾಗಿರಲಿಲ್ಲ. ಅಂತೆಯೇ ಯಾರದೋ ಸಿಫಾರಸಿನಿಂದ, ಕುಮಟೆಯ ಪರಿಚಿತನೋರ್ವನ ಕೊಠಡಿಯಲ್ಲಿ ಮೂರು ದಿನ ವಾಸದ ಏರ್ಪಾಡು ಮಾಡಿಕೊಂಡೆ. ಈ ಅಪರೂಪದ ಕಾರ್ಯಕ್ರಮದ

ಸಂಪೂರ್ಣ ಲಾಭ ಪಡೆಯುವ, ಮುಖ್ಯತಃ ಮೆಚ್ಚಿನ ವಿ.ಸೀ. ಅವರ ಭಾವಚಿತ್ರವನ್ನು ಸೆರೆಹಿಡಿಯುವ, ಹಂಬಲ ಇದ್ದೇ ಇತ್ತು. ಅಂದಿನ ದಿನಗಳಲ್ಲಿ ಕ್ಯಾಮರಾ ನನ್ನಂಥ ವಿದ್ಯಾರ್ಥಿಗೆ ಎಟಕುವ ಸಾಧನವಾಗಿರಲಿಲ್ಲ. ನನ್ನ ಸಹವಾಸಿ ಎಲ್ಲಿಂದಲೋ ಹದಿನೇಳು ರೂಪಾಯಿಯ ಬಾಕ್ಸ್ ಕ್ಯಾಮರಾ ಪಡೆಯುವದರಲ್ಲಿ ಸಫಲನಾದ. ಫಿಲ್ಮಿಗಾಗಿ ಹಣ ಎಲ್ಲಿಂದ ತರುವದು? ಜಾತ್ರೆ, ತೇರು, ಹಬ್ಬ ಇತ್ಯಾದಿಗಳಿಗೆ ಅಜ್ಜ, ಸೋದರಮಾವ ಮುಂತಾದವರು ಕೊಡಮಾಡಿದ ಪುಡಿಗಾಸು, ವರ್ಷಗಳಿಂದ ಕಾದಿರಿಸಿದ್ದು, ಆಗ ನೆರವಿಗೆ ಬಂದಿತು. ಈ ಸುಲಭ ಸಾಮಗ್ರಿಗಳಿಂದಲೇ ವಿ.ಸೀ. ಅವರಂಥ ಸರಳ ವ್ಯಕ್ತಿಯ ಛಾಯಾಗ್ರಹಣ ಮಾಡುವ ಸಾಹಸದ ಕಲ್ಪನೆಯೇ ರೋಮಾಂಚಕಾರಿಯಾಗಿತ್ತು. ನನ್ನ ಈ ಅನುಭವಗಳೇ ವಿ.ಸೀ. ಅವರವೂ ಆಗಿದ್ದರೆ, ಅವರೆಷ್ಟು ಅವನ್ನು ರಸಭರಿತವಾಗಿಸಿ ಓದುಗರಿಗೆ ಉಣಬಡಿಸುತ್ತಿದ್ದರೋ! – ಅನಿಸಿತು.

ಸಾಹಿತ್ಯ ಸಮ್ಮೇಳನದ ಉದ್ಘಾಟನೆ ಇತ್ಯಾದಿ ಕಾರ್ಯಕಲಾಪಗಳಿಗೆ ವಿ.ಸೀ. ಅವರು ನಮ್ಮಗಳ 'ಖೋಲಿ'ಯ ಮುಂದಿನಿಂದಲೇ ಹಾದು ಹೋಗಬೇಕಾಗಿತ್ತು. ಹೀಗಾಗಿ ರಸ್ತೆಗೆ ಹೊಂದಿದ್ದ ಕಿರಿದಾದ ಕಿಟಕಿಗೆ ಅಂಟಿಕೊಂಡೇ ಕುಳಿತಿದ್ದೆ. ಸರಿಯಾಗಿ ಬೆಳಗಿನ ಒಂಬತ್ತು ಗಂಟೆಗೆ, ಅಧ್ಯಕ್ಷರು, ಶ್ರೀ ಗೌರೀಶ ಕಾಯಕಿಣಿ ಮತ್ತು ಇನ್ನಿತರ ಸಾಹಿತಿ ಬಂಧುಗಳೊಡನೆ ಪಾದಚಾರಿಗಳಾಗಿಯೇ ಹೊರಟಿದ್ದರು. ಅವರ ಓರಣವಾದ ಪೇಟಾ, ಶುಭ್ರವಾದ ಕೋಟು, ಗರಿಗರಿಯಾದ ಪಂಚೆಗಳೇ ಇವರು ವಿ.ಸೀ. ಎಂದು ಪರಿಚಯಿಸಿದವು. ಕಲ್ಪನೆಯಲ್ಲಿ ರೂಪಿಸಿಕೊಂಡ ವ್ಯಕ್ತಿ, ಸಾಕ್ಷಾತ್ ರೂಪ ತಾಳಿ ಕಾಣುವಂತಾದ ಪುಲಕ ಅಷ್ಟಿಷ್ಟಲ್ಲ! ಲಗುಬಗೆಯಿಂದ ತಿಂಡಿ ಮುಗಿಸಿ ಹತ್ತಿರದ ಗಿಬ್ ಹೈಸ್ಕೂಲಿನಲ್ಲೇ ತಲೆ ಎತ್ತಿ ನಿಂತ ಸಾಹಿತ್ಯ ಸಮ್ಮೇಳನದ ಮಹಾವೇದಿಕೆಯತ್ತ ಧಾವಿಸಿದೆ. ಪ್ರಾಸ್ತಾವಿಕ ಭಾಷಣಗಳು ಅದಾಗಲೇ ಪ್ರಾರಂಭವಾಗಿದ್ದವು. ಕನ್ನಡ ಸಾಹಿತ್ಯದಲ್ಲಿ, ಆದ, ಆಗಬೇಕಾದ ಬರವಣಿಗೆ, ಪ್ರಕಟನೆಗಳ ಕುರಿತಾದ ಗಂಭೀರ ವಿಚಾರಗಳು ತಲೆಗೆ ಹೋಗದಿದ್ದರೂ ಸಾಹಿತ್ಯ ದೇವಿಯ ಆರಾಧನೆ ನಡೆದಿದೆ, ಪಾಲುಗೊಳ್ಳುವ ಭಕ್ತನೆಂಬ ಭಯ–ಭಕ್ತಿಯಿಂದ ಸಾಧ್ಯವಿದ್ದಷ್ಟು ಮುಂದುಗಡೆಯ ಸಾಲಿನಲ್ಲಿ ಕುಳಿತು ವಿ.ಸೀ. ಅವರ ಫೋಟೊ ಕ್ಲಿಕ್ಕಿಸಲು ಸದಾ ಕಾಲ ಹೊಂಚು ಹಾಕುತಿದ್ದೆ. ಸಮಯ ಜಾರುತ್ತಲೇ ಇತ್ತು. ನಾನು ಒಯ್ದ ಕ್ಯಾಮರಾಕ್ಕೆ (ಫ್ಲ್ಯಾಶ್ ಅಲ್ಲ) ಬೆಳಕು ಒಂದಿಷ್ಟು ಕಡಿಮೆಯಾದರೂ ನಡೆಯುತ್ತಿರಲಿಲ್ಲ. ರಣರಣ ಬಿಸಿಲಲ್ಲಿ ಮಾತ್ರ ಚಿತ್ರವನ್ನು ಸೆರೆಹಿಡಿಯಲು ಸಾಧ್ಯವಿತ್ತು! ಬೆಳಕು ಅಸಮರ್ಪಕವಾಗಿದ್ದ ವೇದಿಕೆ, ಮಂಟಪ, ಪೆಂಡಾಲ್ ಆವರಣದಲ್ಲಿ ಕುಳಿತಾಗ, ಭಾಷಣ ಮಾಡುವಾಗ, ಚರ್ಚೆ ನಡೆದಾಗ ಕ್ಲಿಕ್ಕಿಸುವದು ಸಾಧ್ಯವೇ ಇರಲಿಲ್ಲ. ಹೇಗೆ ಮುಂದುವರಿಯುವದೆಂಬ ಯೋಜನೆಯಲ್ಲಿಯೇ ಮೊದಲ ದಿನ ಜಾರಿಕೊಂಡಿತು. ಮೂರನೆಯ ದಿನ ಏನಿದ್ದರೂ ಛಾಯಾಗ್ರಹಣ ಮಾಡಿಯೇ ತೀರುವದು ಎಂಬ ನಿರ್ಧಾರಕ್ಕೆ ಬಂದೆ. ಕರಾವಳಿಯ ತೀವ್ರ ಸೆಕೆ ಬೆವರುಗಳಿಂದಾಗಿಯೋ ಏನೋ, ವಿ.ಸೀ. ಅವರು ತಮ್ಮ ಸುವಿಖ್ಯಾತ ಪೇಟಾ, ಕೋಟುಗಳಿಗೆ ಅಲ್ಪ ವಿರಾಮ ಕೊಟ್ಟಿದ್ದರು! ಆದರಿಂದ ನನಗೆ ಸ್ವಲ್ಪ ನಿರಾಸೆಯೇ ಆಯಿತು. ಭೋಜನಕ್ಕಾಗಿ ಹೊರಗೆ ಹೊರಟಾಗ, ಕಾದೇ ನಿಂತಿದ್ದ ನಾನು, ಲಗುಬಗೆಯಿಂದ ಓಡಿ ಅವರತ್ತ ಹೋಗಿ, 'ನಿಮ್ಮದೊಂದು

ಫೋಟೊ ತೆಗೆಯಬಹುದೇ?' ಎಂದು ಹಿಂಜರಿಯುತ್ತ ಕೇಳಿದಾಗ, ಅಲ್ಲಲ್ಲ ವಿನಯದಿಂದ ಬಿನ್ನವಿಸಿಕೊಂಡಾಗ, 'ಓಹೋ! ಧಾರಾಳವಾಗಿ!' ಎನ್ನುತ್ತ ನಡುರಸ್ತೆಯಲ್ಲೇ ಕ್ಯಾಮರಾ ಇಮರಿಗೆ ಹೇಳದೆಯೇ ನನಗೆ ಅನುಕೂಲವಾಗುವಂತೆ, ನಿಂತೇ ಬಿಟ್ಟರು. ಅವರನ್ನು ಕ್ಲಿಕ್ಕಿಸುವಾಗ ಆದ ಪರಮಾನಂದ ನೆನೆಸಿಕೊಂಡರೆ ಇಂದಿಗೂ ಖುಷಿಯಾಗುತ್ತದೆ.

ಈ ಯಶಸ್ಸಿನಿಂದ ಹಿಗ್ಗಿದೆ. ಶಿವರಾಮ ಕಾರಂತರು ಬರುತ್ತಿದ್ದಂತೆ ಅವರಿಗೂ ಕೇಳಿಕೊಂಡೆ. ಅವರ ಕೈಯಲ್ಲಿ 'ಹನಿಡ್ಯೂ' ಸಿಗರೇಟಿನ ಡಬ್ಬ ಇತ್ತು. 'ನಿಮ್ಮ ಚಿತ್ರದಲ್ಲಿ ಇದರ ಪ್ರದರ್ಶನ ಬೇಡ!' ಎಂದು ತುಂಟ ನಗೆ ಬೀರಿ, ಬೆನ್ನ ಹಿಂದೆ ಅದನ್ನು ಹಿಡಿದು ನಿಂತು ಫೋಟೊ ತೆಗೆಸಿಕೊಂಡು ಸಹಕರಿಸಿದರು. ಸರಿ, ಸಫಲವಾಗುತ್ತಿದ್ದ ಇದೇ ತಂತ್ರವನ್ನು ಬಳಸಿ ಪ್ರೊ. ಎ. ಎನ್. ಮೂರ್ತಿರಾಯರು, ತೀ. ನಂ. ಶ್ರೀಕಂಠಯ್ಯನವರು, ದ. ರಾ. ಬೇಂದ್ರೆ, ಗೋಪಾಲಕೃಷ್ಣ ಅಡಿಗರು ಮೊದಲಾದವರನ್ನೆಲ್ಲ ನಿಲ್ಲಿಸಿಕೊಂಡು ಛಾಯಾ ಚಿತ್ರರೂಪದಲ್ಲಿ ಸೆರೆ ಹಿಡಿದೇ ಬಿಟ್ಟೆ! ಆ ಬಾಕ್ಸ್ ಕ್ಯಾಮರಾ ಚಿತ್ರಗಳೆಲ್ಲ ಪ್ರಥಮ ದರ್ಜೆಯವಲ್ಲವಾದರೂ ಚಾರಿತ್ರಿಕವಾಗಿ ದುರ್ಲಭವಾದವು. ಮಹಾಸಾಹಿತಿಗಳನ್ನೆಲ್ಲ ಅಲ್ಲಲ್ಲಿ ನಿಲ್ಲಿಸಿ ಕ್ಲಿಕ್ಕಿಸಿದ ಸಾಹಸವನ್ನೊಳಗೊಂಡವು. ಹೀಗಾಗಿ ನನ್ನೊಂದಿಗೆ ಭಾವಾತ್ಮಕ ನೆಂಟು ಹೊಂದಿದವು. ಆದ್ದರಿಂದ ಹೋದ ಕಡೆಯೆಲ್ಲ ತಪ್ಪದೇ ಕೊಂಡೊಯ್ಯುತ್ತಿದ್ದೆ. ಕಳೆದ ನಲವತ್ನಾಲ್ಕು ವರ್ಷಗಳಿಂದಲೂ ಅವನ್ನು ಸಂರಕ್ಷಿಸಿಕೊಂಡು ಬಂದಿದ್ದೇನೆಂದರೆ ಅವು ನನಗೆ ಎಷ್ಟು ಸಮೀಪದವೆಂಬ ಕಲ್ಪನೆ ಬಂದೀತು!

ಎಷ್ಟೋ ವರ್ಷಗಳ ಬಳಿಕ ಪ್ರೊ. ವಿ.ಸೀ. ಅವರು ನಮ್ಮ ಹೊನ್ನಾವರ ಊರಿನ ಕಾಲೇಜಿನ ಪ್ರಾಂಶುಪಾಲರಾಗಿ ಬಂದ ಬಳಿಕ ಒಮ್ಮೆ ಅಲ್ಲಿಯ ನ್ಯೂ ಇಂಗ್ಲಿಷ್ ಶಾಲೆಯಲ್ಲಿ ಒಟ್ಟಿಗೆ ಸೇರಿದ್ದೆವು. ಆದರೆ, ನಮ್ಮಲ್ಲಿ ಪರಸ್ಪರರನ್ನು ಪರಿಚಯಿಸುವ ಸೌಜನ್ಯದ ಪರಿಪಾಠ ಅಷ್ಟಾಗಿ ಬೆಳೆದು ಬಂದಿಲ್ಲ. ಹೀಗಾಗಿ ನಾನೊಬ್ಬ ಅಪರಿಚಿತನಾಗಿಯೇ ಉಳಿದೆ. ಮುಂದಾಗಿ ಹೋಗಿ, ಯಾರೊಬ್ಬರಿಗೂ ಪರಿಚಯ ಹೇಳಿಕೊಂಡು ಕೈಕುಲುಕುವ ಅಥವಾ ನಮಸ್ಕರಿಸುವ ಜಾಯಮಾನಕ್ಕೆ ಸೇರಿದವ ನಾನಲ್ಲ. ಮುಂದಿನ ಕೆಲ ದಿನ ಅಲ್ಲಿದ್ದಾಗ, ಕಡಲ ತೀರದ ವಿಹಾರಕ್ಕೆ ಅವರು ಹೊರಟಿದ್ದಾಗ, ನಾನು ವಿರುದ್ಧ ದಿಕ್ಕಿನಲ್ಲಿ ಗುಡ್ಡ ಬೆಟ್ಟಗಳತ್ತ ಹೊರಟದ್ದುಂಟು. 'ನಮಸ್ಕಾರ ಸರ್' ಅಂದಾಗ ಅವರೂ ನಮಸ್ಕರಿಸುತ್ತಿದ್ದರು. ಯಾರೋ ವಿದ್ಯಾರ್ಥಿ ಅಥವಾ ಅಲ್ಪಪರಿಚಿತನೆಂದು ಅವರು ಊಹಿಸಿಕೊಂಡು ಮುನ್ನಡೆಯುತ್ತಿದ್ದರು. ನಮ್ಮ ಊರವರ ಸಣ್ಣತನ, ಕಾಲೇಜಿನ ಹಣಕಾಸಿನ ದುರವಸ್ಥೆ, ಇತ್ಯಾದಿಯಿಂದಾಗಿ ಅವರು ಬೆಂಗಳೂರಿಗೆ ಹಿಂದಿರುಗಿದ್ದರು ಎಂಬ ಸುದ್ದಿ ಕೇಳಿ, ತುಂಬ ನೊಂದುಕೊಂಡವರಲ್ಲಿ ನಾನೊಬ್ಬನಾಗಿದ್ದೆ. ಅವರಿಂದ ಯಾವೊಂದು ಸಾಹಿತ್ಯಿಕ ಪ್ರಯೋಜನವನ್ನೂ ನಮ್ಮವರು ಪಡೆಯಲಿಲ್ಲ ಎಂಬ ಕೊರಗು ಇಂದಿಗೂ ಇದೆ.

ನನಗೆ ಸಾಹಿತ್ಯದಲ್ಲಿ ಆಸಕ್ತಿ ಇದ್ದರೂ, ನಾನೋರ್ವ ಸಾಹಿತಿ ಆಗಲು ಆಸೆ ಪಟ್ಟವನಲ್ಲ. ಶಾಲೆ–ಕಾಲೇಜುಗಳಲ್ಲಿ ಯಾವೊಂದು ಕತೆ, ಕವನ, ಪ್ರಬಂಧ, ಲೇಖ ಬರೆದವನಲ್ಲ. ಆದರೆ ಅಮೇರಿಕೆಯಲ್ಲಿ ಪಡೆದ ಅನುಭವಗಳನ್ನು ಪ್ರವಾಸ ಕಥನ ರೂಪದಲ್ಲಿ ರಚಿಸಲು ಆಮಂತ್ರಣ ಬಂದಾಗ, ಸಾಹಿತ್ಯದ ಈ ಪ್ರಕಾರದಲ್ಲಿ ಯಾರ ಮೇಲ್ಪಂಕ್ತಿ

ಅನುಸರಿಸಲಿ ಎಂಬ ಗೊಂದಲ ಆಗಲೇ ಇಲ್ಲ! ನನಗರಿಯದೆಯೇ ವಿ.ಸೀ. ಅವರು ಈ ಏಕಲವ್ಯನ ಗುರುಗಳಾಗಿ ಬಿಟ್ಟಿದ್ದರು! ನನ್ನ ಪ್ರಥಮ ಕೃತಿಯನ್ನು ತಿಳಿಯಾದ ಶೈಲಿಯಲ್ಲಿ, ನವಿರಾದ ಹಾಸ್ಯ ಲೇಪದಲ್ಲಿ ಬರೆದಿದ್ದೇನೆಂದು ವಿಮರ್ಶಕರು ಗುರುತಿಸುತ್ತಾರೆ. ಅದು ಅಪಾರ ಜನಪ್ರಿಯತೆ ಗಳಿಸಿತು. ಆರೇಳು ಮುದ್ರಣಗಳನ್ನು ಕಂಡಿತು. ಆ ಬಳಿಕ ಇನ್ನೂ ಐದು ಪ್ರವಾಸ ಕಥನಗಳು ಬೆಳಕು ಕಂಡಿವೆ. ಎಲ್ಲವುಗಳಲ್ಲಿ ಇವೇ ಸೂತ್ರಗಳ ಬಳಕೆಯಾಗಿದೆ. ಆದ್ದರಿಂದ ಮುಂದೊಮ್ಮೆ, ನನ್ನ ಪ್ರವಾಸ ಕಥನಗಳ ಆಳವಾದ ಅಭ್ಯಾಸವನ್ನು ಯಾರಾದರೂ ಕೈಕೊಂಡರೆ, 'ಇವರದು ವಿ.ಸೀ. ಪ್ರೋತ್ಸಾಹಿತ ಬರವಣಿಗೆ' ಎಂಬ ತೀರ್ಮಾನಕ್ಕೆ ಬಂದರೆ ಅಚ್ಚರಿಯಿಲ್ಲ!

ಅದ್ಭುತ ಸ್ಮೃತಿಶಕ್ತಿ

"ಅವರೊಡನೆ ಸಂಭಾಷಿಸುವುದೆಂದರೆ ಬೇರೊಂದು ಪ್ರಪಂಚದಲ್ಲಿ ವಿಹರಿಸುವುದೆಂಬಂತೆ. ಯಾವ ವಿಷಯವನ್ನಾದರೂ ಎತ್ತಿ ಆ ಬಗ್ಗೆ ಲಘುವಾಗಿ ಒಂದು ಮಾತು ನುಡಿದು ಕುಳಿತರೆ ಸಾಕು, ಆ ವಿಷಯಕ್ಕೆ ಸಂಬಂಧಿಸಿದ ಎಲ್ಲವನ್ನೂ ಹೇಳಿ, ಅಷ್ಟು ಸಾಲದು ಎಂಬಂತೆ ಬೇರೆ ವಿಷಯಗಳಿಗೂ ಸಂಬಂಧ ಕಲ್ಪಿಸಿ, ತಾವು ಹೇಳುವುದನ್ನು ಸಮರ್ಥಿಸಲೆಂಬಂತೆ ಆಗಾಗ ತಮ್ಮ ಪುಸ್ತಕದ ಬೀರುಗಳಿಂದ ನಾಲ್ಕಾರು ಪುಸ್ತಕ ಹೊರತೆಗೆದು ಇಂಥದೇ ಕಡೆ, ಯಾವುದೋ ಬಲ–ಎಡ ಪುಟದಲ್ಲಿಯೇ ಇವನು ಹೀಗೆ ಹೇಳಿದ್ದಾನೆ ಎಂದು ಹೇಳಿ, ಪುಟ ತೆರೆದು ಓದಿ ತೋರಿಸಿ ನಮ್ಮ ಮನಸ್ಸಿನ ಸಂದೇಹವನ್ನು ನಿವಾರಣೆಗೊಳಿಸುವಂತೆ ವಿಷಯದ ವಿವರಣೆ ನೀಡಬಲ್ಲರು. ಸ್ಮರಣಶಕ್ತಿ ಕುಂದುತ್ತಿದೆ ಎಂದು ಹೇಳುತ್ತಿರುವ ಈಗಲೂ ಅವರು ಬರಿಯ ಸ್ಮೃತಿಶಕ್ತಿಯಿಂದಲೇ ಉದಾಹರಿಸುವ ವಾಕ್ಯಗಳು, ಪದ್ಯಪಂಕ್ತಿಗಳು, ಶಬ್ದಜಾಲ ನಮ್ಮನ್ನು ವಿಸ್ಮಯಗೊಳಿಸುತ್ತವೆ. ಆಡುವ ಮಾತು, ಚರ್ಚಿಸುವ ವಿಷಯ ಯಾವುದಾದರೂ ಆಯಿತು; ರಾಜಕೀಯವಾಗಲಿ, ಆರ್ಥಿಕವಾಗಲಿ, ಸಾಮಾಜಿಕವಾಗಲಿ, ಕಲೆ ಸಾಹಿತ್ಯ ಸಂಗೀತ ಪ್ರಪಂಚಕ್ಕೆ ಸಂಬಂಧಿಸಿದ್ದಾಗಲಿ, ಮತಧರ್ಮ–ವೇದಾಂತಗಳನ್ನು ಕುರಿತದ್ದಾಗಲಿ–ಎಲ್ಲವೂ ಅವರ ಚರ್ಚೆಗೆ ಒಳಪಡತಕ್ಕವೇ. ಅವರ ಮಾತು ಕೇಳುತ್ತ ಕುಳಿತರೆ ಸಾಕು, ವಿಷಯಕ್ಕೆ ಸಂಬಂಧಿಸಿದ ಹತ್ತಾರು ಮುಖಗಳು ಕಣ್ಮುಂದೆ ಕಟ್ಟಿದಂತಾಗುತ್ತದೆ".

ಎಂ. ವಿ. ಪ್ರೇಮಕುಮಾರ್

'ವಿ.ಸೀ.–೭೫' ಪು. ೬೭

ದೊಡ್ಡವರು ದೊಡ್ಡಪರೇ

ಅ. ರಾ. ಮಿತ್ರ

೧೯೫೫. ನಾನು ಕೋಲಾರದ ಇಂಟರ್ ಮೀಡಿಯೆಟ್ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿ. ಕರ್ನಾಟಕ ಸಂಘದ ಕಾರ್ಯದರ್ಶಿಯೂ ಆಗಿದ್ದೆ. ವಿ. ಸೀ. ಯವರ ಸರಕಾರಿ ಸೇವೆಯ ಕೊನೆಯ ವರ್ಷ ಅದು ಎಂದು ನನ್ನ ನೆನಪು. ನನ್ನ ಗುರುಗಳಾದ ಚಿದಾನಂದ ಮೂರ್ತಿಯವರ ಬಳಿಗೆ ಕೋಲಾರದ ಗಣ್ಯರೊಬ್ಬರು – ಶ್ರೀ ಚಿಕ್ಕ ಚೆನ್ನಂಜಪ್ಪ ಶೆಟ್ಟಿ ಎಂದು ಕಾಣುತ್ತದೆ– ಬಂದು ತಮ್ಮ ವಿದ್ಯಾಗುರುಗಳಾಗಿದ್ದ ವಿ. ಸೀತಾರಾಮಯ್ಯ ನವರನ್ನು ಕರ್ನಾಟಕ ಸಂಘದ ವತಿಯಿಂದ ಕರೆಸಿ ಎಂದು ವಿನಂತಿಸಿದರು. ವಿ.ಸೀ. ಯವರ ಗೌರವಾರ್ಥ ನಗರದ ಗಣ್ಯರನ್ನೆಲ್ಲ ಆಹ್ವಾನಿಸಿ ಒಂದು ಭೋಜನ ಕೂಟ ನಡೆಸುವ ಜವಾಬ್ದಾರಿಯನ್ನೂ ಅವರೇ ಹೊತ್ತುಕೊಂಡಿದ್ದರು. ಕೋಲಾರಕ್ಕೆ ಪ್ರಸಿದ್ಧ ವಿದ್ವಾಂಸರು ಬರುವುದು ಅಪರೂಪವೇನೂ ಆಗಿರಲಿಲ್ಲ. ಎಸ್. ವಿ. ಪರಮೇಶ್ವರ ಭಟ್ಟ, ಜಿ. ಎಸ್. ಶಿವರುದ್ರಪ್ಪ, ಕಾಳಿಂಗರಾವ್, ಅರ್ಚಿಕ ವೆಂಕಟೇಶ, ನಾ. ಕಸ್ತೂರಿ, ಪು.ತಿ.ನ., ಅ.ನ.ಕೃ., ಜಿ. ಪಿ. ರಾಜರತ್ನಂ ಮೊದಲಾದ ಹಲವರನ್ನು ಕಂಡ ಪರಿಚಯ, ಭಾಷಣ ಪರಿಚಯ ನಮಗಿತ್ತು. ಪುರುಷೋತ್ತಂ ಎಂಬ ತತ್ತ್ವಶಾಸ್ತ್ರ ಪ್ರಾಧ್ಯಾಪಕರೊಬ್ಬರಂತೂ ತಮ್ಮ ವಾಗ್ಝರಿಯಿಂದ ನಮ್ಮನ್ನೆಲ್ಲ ಬೆರಗುಗೊಳಿಸಿ ಬಿಟ್ಟಿದ್ದರು. ಸ್ಥಳೀಯ ವಾಗ್ಮಿಗಳಾದ ದೇಶಿಕಾಚಾರ್, ಶ್ರೀನಿವಾಸ ತಾತಾಚಾರ್, ಪಟ್ಟಾಭಿರಾಮನ್ ಇವರುಗಳ ಭಾಷಣಗಳನ್ನೂ ನಾವು ಕೇಳಿದ್ದೆವು. ಹೀಗಾಗಿ "ಶಾಸ್ತ್ರದಿಂ, ಕೇಳ್ವೆಯಿಂ ಪರಿಕಿಸುವ ಬಳಕೆಯಿಂ, ಗೇಯ ದುರ್ಜೇಯ" ವೆನ್ನಿಸಿದ್ದ ನಮ್ಮ ಮನಸ್ಸು ಅಂದು ತನ್ನ ಬಿಗುಮಾನವನ್ನು ಕಳೆದುಕೊಂಡು ವಿ.ಸೀ.ಯವರ ಮಾತಿನ ಮೋಡಿಗೆ ಮರುಳಾಗಿ ಹೋಯಿತು. ಬೇಂದ್ರೆ, ಕಾಳಿದಾಸ, ಪಂಪ, ಇಬ್ಸೆನ್, ಕಾರ್ಲೈಲ್, ವಾಲ್ಟ್ ವಿಟ್‌ಮನ್, ಠಾಕೂರರು, ಎಮರ್ಸನ್ – ಎಷ್ಟೆಲ್ಲ ವಿಚಾರ ಪರರ ಭಾವಧಾರೆ. ನಮಗಂತೂ ಅದೊಂದು ಭಾಷಣವಲ್ಲ, ಒಂದು ನವಾನುಭವ ಎನ್ನಿಸಿಬಿಟ್ಟಿತ್ತು.

ಮುಂದೆ ನನಗೆ ವಿ.ಸೀ. ಯವರನ್ನು ನೋಡುವ ಅವಕಾಶವಾದದ್ದು ನಾನು ಬೆಂಗಳೂರಿನ ಸೆಯಿಂಟ್ ಜೋಸೆಫ್ ಕಾಲೇಜಿಗೆ ಅಧ್ಯಾಪಕನಾಗಿ ಬಂದಾಗ. ಸಂಜೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ, ನಿಘಂಟು ಕಚೇರಿಯಲ್ಲಿ ದುಡಿಯುತ್ತಿದ್ದೆ. ನಾನಿದ್ದುದು

ಕೋಟೆಯಲ್ಲಿ. ಹೀಗಾಗಿ ಹತ್ತಿರವೇ ಇದ್ದ ವಿ.ಸೀ.ಯವರನ್ನು ಕಾಣುವುದು ನನಗೆ ಆಗಾಗ ಸಾಧ್ಯವಾಗುತ್ತಿತ್ತು. ಹೊರಗೆ ಹೊರಟರೆ ತಮ್ಮ ಪೇಟದ ಪರಿವೇಷದಿಂದಾಗಿ ವಿ.ಸೀ. ಎಲ್ಲರ ಗಮನ ಸೆಳೆಯುತ್ತಿದ್ದರು. ಮನೆಯಲ್ಲಿ ಒಂದು ಮಲ್ ಬನಿಯನ್ ಹಾಕಿ ಕುಳಿತಿದ್ದರೂ ತಮ್ಮ ಪುಸ್ತಕ ಲೋಕದ ಪರಿವೇಷದಿಂದಾಗಿ ಅವರು ನಮ್ಮೆಲ್ಲರ ಗೌರವವನ್ನು ಸೆಳೆದುಕೊಳ್ಳುತ್ತಿದ್ದರು. ಪುಸ್ತಕ, ಪುಸ್ತಕ. ಒಪ್ಪವಾಗಿ ಜೋಡಿಸಿಟ್ಟ ಪುಸ್ತಕ ರಾಶಿಯ ಮೇಲೂ ಪುಸ್ತಕ. ಅವುಗಳ ಮಧ್ಯೆ ಒಂದು ಸಣ್ಣ ಇಳಿಜಾರು ಮೇಜನ್ನಿಟ್ಟುಕೊಂಡು ವಿ.ಸೀ. ಉಪವಿಷ್ಟರಾಗಿರುತ್ತಾರೆ. ನಮಸ್ಕಾರ ಮಾಡಿ ನೀವು ಕುಳಿತಿರೆಂದರೆ ಕೈ ಹಿಡಿದು ಮೈದಡವಿ ಕನ್ನಡಕವಗಲಕ್ಕೂ ಕಣ್ಣರಳಿಸಿ ನಿಮ್ಮ ಯೋಗಕ್ಷೇಮ ವಿಚಾರಿಸದೆ ಅವರು ಬೇರೆ ಯಾವ ಮಾತೂ ಆಡುತ್ತಿರಲಿಲ್ಲ. ಕಾಫಿ, ಟೀ ಕುಡಿಸದೆ ಯಾರನ್ನೂ ಹಿಂದಕ್ಕೆ ಕಳಿಸಿದ್ದಿಲ್ಲ. ನಾನು ಎಷ್ಟೊಂದು ಸಲ ಅವರ ಮನೆಗೆ ಹೋಗಿದ್ದೇನೆ. ಒಮ್ಮೆ ಕೂಡ ಒಂದು ಗಂಟೆಗೆ ಕಡಿಮೆ ಮಾತಾಡದೆ ಬಂದದ್ದಿಲ್ಲ.

ವಿ.ಸೀ. ಉತ್ತಮ ಭಾಷಣಕಾರರು ಎಂದುಕೊಂಡಿದ್ದೆ. ಅದಕ್ಕಿಂತ ಉತ್ತಮ ಸಂವಾದ ಪಟುಗಳು. ಆ ವರ್ಷದ ಕೇಂದ್ರ ಬಜೆಟ್‌ನಿಂದ ಹಿಡಿದು ಪುಸ್ತಕಗಳ ಕಡೆ ವಾಲಿ, ಹವಾಮಾನದ ಬೆನ್ನು ಹತ್ತಿ, ಆರೋಗ್ಯದ ವಿಷಯವನ್ನೆತ್ತಿಕೊಂಡು, ಎಂ.ಟಿ.ಆರ್.ನ ಪಾಕರುಚಿಗೆ ತಿರುಗಿ, ಸಿಟಿ ಮಾರ್ಕೆಟ್‌ನ ಹಣ್ಣಿನಂಗಡಿಗೆ ಹಾದು, ವೃತ್ತ ಪತ್ರಿಕೆಯ ಒಂದು ಸುದ್ದಿಯನ್ನು ದೀರ್ಘ ಆಲಾಪನೆಗೆ ಬಳಸಿಕೊಂಡು ಎಲ್ಲ ಲೋಕಗಳ ಅನ್ವೇಷಣೆಯಲ್ಲಿ ತೊಡಗುವುದು ಅವರ ಜಾಯಮಾನ. ನೆಪ ಮಾತ್ರಕ್ಕೆ ಕನ್ನಡವನ್ನು ಹಿಡಿದು ಹೊರಡುತ್ತಿದ್ದ ಅವರ ಮಾತಿನ ಜಾಡು ಇಂಗ್ಲಿಷ್ ಬಿರುಗಾಳಿಗೆ ಸಿಕ್ಕಿ ಮತ್ತೆ ಕ್ಷಿಪ್ರವಾಗಿ ಕನ್ನಡಕ್ಕೆ ಅದರಲ್ಲೂ ಹಳಗನ್ನಡಕ್ಕೆ ತಿರುಗಿ ಬಿಡುತ್ತಿತ್ತು. ಆಗ ನನ್ನ ಇಂಗ್ಲಿಷ್ ಜ್ಞಾನ ಎಷ್ಟು ಅದ್ಭುತವಾಗಿತ್ತೆಂದರೆ ಅವರೊಂದಿಗೆ ಮಾತನಾಡಿದ ದಿವಸವೆಲ್ಲ ರಾತ್ರಿ ಅವರು ಹೇಳಿದ ಕೆಲವು ಶಬ್ದಗಳಿಗೆ ನಿಘಂಟಿನಲ್ಲಿ ಅರ್ಥ ಹುಡುಕುತ್ತಿದ್ದೆ. ಈಗಿನ ಕನ್ನಡ ಎಂ.ಎ. ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆಯ ಮೇಲೆ ಇಷ್ಟು ಸಿಟ್ಟೇಕೆ? – ಎಂದು ಕೆಣಕಿ ನನ್ನ ಗುರುಗಳಾದ ಪ್ರಭುಶಂಕರರಂತೆ ವಿ.ಸೀ.ಯವರೂ ಒಳ್ಳೊಳ್ಳೆಯ ಇಂಗ್ಲಿಷ್ ಪುಸ್ತಕಗಳನ್ನು ಓದಲು ಕೊಡುತ್ತಿದ್ದರು.

ವಿ.ಸೀ. ನನಗೆ ನೇರವಾಗಿ ಪಾಠ ಹೇಳಿದ ತರಗತಿಯ ಗುರುಗಳಲ್ಲ. ಆದುದರಿಂದ ನನಗೆ ಮೊದಮೊದಲು ತುಂಬ ಅಳುಕು. ಆದರೆ ಅವರ ಸಹವಾಸ ಎಂದರೆ ತಣ್ಣೀರ ಸ್ನಾನದ ಹಾಗೆ. ತಣ್ಣೀರ ಸ್ನಾನ ಆರಂಭದಲ್ಲಿ ಕಷ್ಟ. ಮೊದಲ ಬೋಸಿ ಹೊಯ್ದುಕೊಂಡಾಗ ಬಚ್ಚಲೆಲ್ಲ ಓಡಾಡುವಂತಾಗುತ್ತದೆ. ಆದರೆ ಆ ಮೇಲೆ ಎಲ್ಲ ಸಲೀಸು. ಹೊಸಬರು ಎಂದುಕೊಳ್ಳಲೂ ಅವರು ಬಿಡುವುದಿಲ್ಲ. ಅವರ ಬಳಿ ಮಾತಿಗೆ ತೊಡಗಿ. ಎಲ್ಲ ಪರೆಗಳೂ ಕಳಚಿ ಹೋಗುತ್ತವೆ. ನೀವು ಜನ್ಮಾಂತರಗಳಿಂದ ಅವರ ಬಂಧುವೋ ಶಿಷ್ಯನೋ ಗೆಳೆಯನೋ ಆಗಿದ್ದಿರಿ ಎನಿಸುತ್ತದೆ. ಅಂಥ ಆತ್ಮೀಯ ಬೆಸುಗೆ.

ನಾನೊಬ್ಬ ಭಾಷಣಕಲಾಭ್ಯಾಸಿ. ಚಿಕ್ಕಂದಿನಿಂದಲೂ ಮನೆಯ ಒಳಗೇ ಓಡಾಡುತ್ತ ಹೇಗೆ ಮಾತಾಡಬೇಕೆಂಬುದನ್ನು ಅಭ್ಯಸಿಸಿದವನು. ಎಲ್ಲ ಉಪನ್ಯಾಸಕರ ಮಾತಿನ ಗತ್ತುಗಳನ್ನು ಸೂಕ್ಷ್ಮ ತನಿಖೆಗೆ ಒಳಪಡಿಸುವ ಹುಚ್ಚು ನನಗೆ. ಅವರ ಧ್ವನಿ ಕಾಕುಗಳು,

ಅಂಗಭರಂಗಿ, ಉಚ್ಚಾರಕ್ಷಮತೆ, ಸಭಾಸದರಲ್ಲಿ ಪ್ರತಿಸ್ಪಂದನ ಉಂಟು ಮಾಡುವ ಬಗೆ – ಈ ಎಲ್ಲ ನನಗೆ ಅಭ್ಯಾಸದ ವಸ್ತುವಾಗಿದೆ. ಅ.ನ.ಕೃ., ತ.ರಾ.ಸು., ನಾಡಿಗೇರ ಕೃಷ್ಣರಾಯ, ಸಾ. ಕಸ್ತೂರಿ, ಕೆ. ವೆಂಕಟರಾಮಪ್ಪ, ತೀ.ನಂ.ಶ್ರೀ., ಡಿ.ಎಲ್.ಎನ್., ಕುವೆಂಪು, ಜಿ. ಪಿ. ರಾಜರತ್ನಂ, ಶಿವರಾಮ ಕಾರಂತ, ಮಾಸ್ತಿ, ಡಿ.ವಿ.ಜಿ., ಎಸ್. ವಿ. ಪರಮೇಶ್ವರ ಭಟ್ಟ, ಬೇಂದ್ರೆ ಇವರೆಲ್ಲರ ಭಾಷಣಗಳನ್ನು ಕೇಳಿ ಅವರವರ ಭಾಷಣದ ವಿಶಿಷ್ಟ ಅಂಶಗಳನ್ನು ನಾನು ಪ್ರತ್ಯೇಕಿಸಿ ಹೇಳಬಲ್ಲೆ. ವಿ.ಸೀ. ಈ ಪಟ್ಟಿಯಲ್ಲಿ ಯಾವ ಸ್ತರದವರು ಎಂಬುದನ್ನೂ ನಾನು ಕೆಲವು ಸಂದರ್ಭಗಳಲ್ಲಿ ವಿಶ್ಲೇಷಿಸಿದ್ದೇನೆ. ಇಂಗ್ಲಿಷಿನಲ್ಲೂ ಕನ್ನಡದಷ್ಟೇ ಸಲೀಲವಾಗಿ ಮಾತನಾಡಬಲ್ಲವರಾಗಿದ್ದ ವಿ.ಸೀ.ಯವರ ಕನ್ನಡ ಉಪನ್ಯಾಸ ಎಂದರೆ ಕಣ್ಣಿಗೆ, ಕಿವಿಗೆ ಹಬ್ಬ. ಅವರು ಉತ್ತಮ ವಾಗ್ಮಿ ಎಂಬ ಸಂಗತಿ ಪುರಾಣ ಪ್ರಸಿದ್ಧವಾಗಿದ್ದುದರಿಂದ ಜನರೆಲ್ಲ ಸುಲಭವಾಗಿ ಭಾಷಣಕ್ಕೂ ಮುಂಚಿಯೇ ಅವರನ್ನು ಮೆಚ್ಚುವ ತೀರ್ಮಾನ ಮಾಡಿಕೊಂಡಿರುತ್ತಿದ್ದರು ಎಂದು ನನಗೆ ಗುಮಾನಿ.

ಇಷ್ಟಗಲ ಕಣ್ಣರಳಿಸಿ ತಲೆಯನ್ನು ಒಲೆಯುತ್ತ ಪುಟ್ಟ ಕೈಗಳಲ್ಲಿ ಎಲ್ಲ ದಿಕ್ಕುಗಳ ಶೂನ್ಯವನ್ನೂ ತಿವಿಯುತ್ತ ಅವರು ಮಾತಾಡುತ್ತಿದ್ದರೆ ಯಾರಿಗೂ ಸಮಯದ ಅರಿವೇ ಇರುತ್ತಿರಲಿಲ್ಲ. ಶಬ್ದಗಳ ಏರಿಳಿತದ ಸೊಬಗು, ಮಧ್ಯೆ ಮೌನದ ತುಂಬುಗಳು ವಿ.ಸೀ. ಭಾಷಣದ ವಿಶಿಷ್ಟತೆ. ನನಗೆ ಎಲ್ಲಕ್ಕಿಂತ ಮೆಚ್ಚಿಗೆಯಾದದ್ದೆಂದರೆ ಅವರು ವಿಷಯವನ್ನು ಹರಡುತ್ತಿದ್ದ ರೀತಿ. ಒಂದು ಶಬ್ದಕ್ಕೆ ಎಷ್ಟು ಪರ್ಯಾಯ ಶಬ್ದಗಳಿರಬಹುದೋ ಅಷ್ಟೂ ಅಯಾಚಿತವಾಗಿ ಅವರ ಬಾಯಿಂದ ಬರುತ್ತಿದ್ದುವು. ಮಾತಿನ ಸರಪಣಿಗೆ 'ಹರಹು' ಎಂಬ ಶಬ್ದ ಸಿಕ್ಕಿತೆನ್ನಿ, ವ್ಯಾಪ್ತಿ, ವಿಸ್ತಾರ, ಅಗಲ, ಆಳ, reach, expanse, ಸಂಚಾರ ಕ್ಷಮತೆ, ದೂರಸಂವಹನ ಸಾಮರ್ಥ್ಯ ಇಂಥ ಹತ್ತಾರು ಸಂವಾದೀ ಶಬ್ದಗಳನ್ನು ಹೇಳಿಯೇ ಅವರು ಮುಂದುವರಿಯುತ್ತಿದ್ದರು. ಒಂದು ಬಾರಿ ನಾನು ಈ ಅಂಶವನ್ನು ಪ್ರಸ್ತಾವಿಸಿದಾಗ 'ಪಾಠ ಹೇಳುವ ಮೇಷ್ಟರುಗಳಿಗೆ ಇವೆಲ್ಲ ಪಾಠವಾಗಿರುತ್ತದೆ' ಎಂಬ ನಗೆಯ ಉತ್ತರ ಬಂತು. ನವೋದಯದ ಸಾಹಿತ್ಯ ಕ್ರಾಂತಿಯ ಸಂದರ್ಭದಲ್ಲಿ ಹೊಸಗನ್ನಡ ಗದ್ಯದ ಮಹತ್ತ್ವವನ್ನು ವ್ಯಾಪಕವಾದ ಭಾಷಣ ಮಾಧ್ಯಮದ ಮೂಲಕ ಅಖಂಡ ಕರ್ನಾಟಕದಲ್ಲಿ ಸಾರಿದ ಕೀರ್ತಿಯಲ್ಲಿ ವಿ.ಸೀ.ಯವರದೂ ಸಿಂಹಪಾಲು ಎಂಬುದನ್ನು ಮರೆಯುವಂತಿಲ್ಲ. ಕರ್ನಾಟಕದಲ್ಲಿ ಇವರ ಉಪನ್ಯಾಸ ಭಾಗ್ಯದಿಂದ ವಂಚಿತವಾಗಿರುವ ಯಾವ ಜಿಲ್ಲೆಯೂ ಇಲ್ಲ ಎಂದು ಧೈರ್ಯವಾಗಿ ಹೇಳಬಲ್ಲೆ. ಬರಿಯ ಕನ್ನಡದಲ್ಲೇ ಅಲ್ಲದೆ ಬೆಂಗಳೂರು ನಗರದ ವಿವಿಧ ಭಾಷಿಕರ ಸಮಾರಂಭಗಳಲ್ಲೂ ವಿ.ಸೀ.ಯವರಿಗೆ ಪ್ರಮುಖ ಸ್ಥಾನವಿರುತ್ತಿತ್ತು. ವಿ.ಸೀ. ತಮ್ಮ ಬದುಕಿನ ರಸ್ತೆಯಲ್ಲಿ ಬರಹ–ಮಾತು ಎರಡು ಚಕ್ರಗಳ ವಾಹನವನ್ನು ಬಳಸಿ ಓಡಾಡಿದ್ದಾರೆ.

ಒಂದು ಘಟನೆ ಚೆನ್ನಾಗಿ ನೆನಪಿದೆ. ಅವರು ತುರ್ತಾಗಿ ಬರುವಂತೆ ಹೇಳಿ ಕಳಿಸಿದರು. ನಾನು ಹೋದೆ. ಅದೇ ವಾರ 'ಜನಪ್ರಗತಿ' ಯಲ್ಲಿ ಸಿ. ಕೆ. ವೆಂಕಟರಾಮಯ್ಯನವರ ಒಂದು ಅನುವಾದವನ್ನು (ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಕಟಣೆ) "ವ್ಯಾಖ್ಯಾನ ರೂಪಿಯಾದ ವಿಸ್ತೃತಾನುವಾದ" ಎಂಬ ಶೀರ್ಷಿಕೆಯಲ್ಲಿ ವಿಮರ್ಶಿಸಿದ್ದೆ. ಮೂಲದ ೮೦–೧೦೦

ಪುಟಗಳ ಕೃತಿ ಅನುವಾದದಲ್ಲಿ ೨೦೦ ಪುಟಗಳ ಐರಾವತವಾಗಿತ್ತು. ನನ್ನ ವಿಮರ್ಶೆಯಿಂದ ವಿ.ಸೀ. ನೊಂದುಕೊಂಡಿದ್ದುದು ಸ್ಪಷ್ಟವಾಗಿತ್ತು. ಹಿರಿಯರ ಅನುವಾದಗಳನ್ನು ಇಷ್ಟು ಉಗ್ರವಾಗಿ ಟೀಕಿಸಬಾರದು ಎಂಬುದು ಅವರ ವಾದ. ನಾನು ಮೂಲದ ಬರಹ, ಹಿಡಿತವಿಲ್ಲದ ಅನುವಾದದ ವಿಸ್ತಾರ ನಿರೂಪಣೆಯ ಬಗೆಗೆ ಹತ್ತಾರು ನಿದರ್ಶನಗಳ ಮೂಲಕ ಮನದಟ್ಟು ಮಾಡಿಕೊಡಲು ಹೋದೆ. ಆದರೆ ವಿ.ಸೀ. ನನ್ನ ವಾಕ್ ಧೋರಣೆಯ ಮೂಲವನ್ನು ಕೆದಕಿ, ವಿಮರ್ಶೆಯ ಶಿಸ್ತು ಸಭ್ಯತೆಗಳ ಬಗೆಗೆ ತುಂಬ ಅಚ್ಚುಕಟ್ಟಾಗಿ ವಿವರಿಸಿದರು. ನನ್ನ ನಿಲುವಿಗೆ ಅಂಟಿಕೊಂಡೂ ನಾನು ವಿ.ಸೀ.ಯವರ ಸಜ್ಜನಿಕೆಗೆ ನಿರುತ್ತರನಾದೆ.

ಇನ್ನೊಂದು ಪ್ರಸಂಗ: ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ದೇ. ಜವರೇಗೌಡ ಅವರ ಆದೇಶದ ಮೇರೆಗೆ ಆ ವರ್ಷ ಮೈಸೂರಿನಲ್ಲಿ ನಡೆಯಲಿದ್ದ ಯುವಜನ ಮೇಳಕ್ಕೆ ಒಬ್ಬ ಅತಿಥಿಯನ್ನು ಗೊತ್ತುಪಡಿಸಲು ಉ. ಕಾ. ಸುಬ್ಬರಾಯಾಚಾರ್ ನಮ್ಮ ಕಾಲೇಜಿಗೆ ಬಂದಿದ್ದರು. ನಾನು ಅವರ ಕೋರಿಕೆಯ ಮೇರೆಗೆ ಮೊದಲು ಗೋಕಾಕರ ಮನೆಗೆ ಉ.ಕಾ.ರನ್ನು ಕರೆದೊಯ್ದೆ. ಗೋಕಾಕರು ಯಾವುದೊ ಬೇರೆ ಕೆಲಸವಿದ್ದುದರಿಂದ ಬರಲು ನಿರಾಕರಿಸಿದರು. ಮುಂದೆ ಜಿ. ಪಿ. ರಾಜರತ್ನಂ ಅವರ ಮನ ಒಲಿಸಲು ಪ್ರಯತ್ನ ನಡೆಯಿತು. ಅವರಿಗೂ ಬಿಡುವಿರಲಿಲ್ಲ. ಕೊನೆಗೆ ವಿ.ಸೀ. ಯವರು ಬಂದರೆ ಸರಿಯೆ?– ಎಂದು ಕೇಳಿದೆ. 'ಅಯ್ಯೋ ಅಯ್ಯೋ, ಅಂಥವರನ್ನು ಒಪ್ಪಿಸಿಕೊಟ್ಟರೆ ಸಾವಿರ ನಮಸ್ಕಾರ' ಎಂದರು.

ವಿ.ಸೀ. ನಮ್ಮ ಗುರು ಉ.ಕಾ.ಸು. ಅವರನ್ನು ತುಂಬಾ ಆತ್ಮೀಯವಾಗಿ ಮಾತನಾಡಿಸಿದರು. 'ಮಿತ್ರರ ಜೊತೆ ಬಂದಿದ್ದೀರಿ. ಏನು ಹೇಳಿ' ಎಂದರು. ಆಚಾರ್ಯರ ಪರವಾಗಿ ನಾನು ಪ್ರವರ ಒಪ್ಪಿಸಿದೆ. ವಿ.ಸೀ. ಯವರು ಆ ವೇಳೆಗೆ ಸಾರ್ವಜನಿಕ ಉಪನ್ಯಾಸಗಳನ್ನು ನಿಲ್ಲಿಸಿದ್ದರು. ಆದರೆ ನಾನು ಹೋಗಿದ್ದುದರಿಂದ ನಿರಾಕರಿಸಲಾಗದೆ, 'ನಿಜ ಹೇಳಿ, ನೀವು ನನ್ನ ಬಳಿಗೇ ಮೊದಲು ಬರುತ್ತಿದ್ದೀರಾ?' ಎಂಬ ಮುಜುಗರದ ಪ್ರಶ್ನೆ ಹಾಕಿದರು. ಅವರು ಹಾಗೇಕೆ ಕೇಳಿದರೊ ಇನ್ನೂ ನನಗೆ ಅರ್ಥವಾಗಿಲ್ಲ. ಸುಳ್ಳೇ ಮನೆದೇವರಾದ ನಾನು ತಟಕ್ಕನೆ 'ಹೌದು ಸರ್, ನೇರವಾಗಿ ನಿಮ್ಮಲ್ಲಿಗೇ ಬರುತ್ತಿದ್ದೇವೆ' ಎಂದುಬಿಟ್ಟೆ. ಮಹಾಸತ್ಯಸಂಧರಾದ ಸುಬ್ಬರಾಯಾಚಾರ್ಯರು ಬಾಯಿ ಬಿಡುವುದಕ್ಕೂ ಅವಕಾಶ ಕೊಡದೆ ಸುಳ್ಳಿನ ಸರಪಳಿ ಪೋಣಿಸಿದೆ.

ನನ್ನ ಸುಳ್ಳಿನ ನಾದಲಹರಿಗೆ ತಾಳ ಹಾಕುವವರಂತೆ ಸುಬ್ಬರಾಯಾಚಾರ್ಯರೂ ಹೌದು ಎಂದರು. ವಿ.ಸೀ. ಒಪ್ಪಿಕೊಂಡರು. ಮನೆಯ ಬಾಗಿಲಿಗೇ ಕಾರು ಕಳಿಸಿ ಅವರನ್ನು ಕರೆಸಿಕೊಳ್ಳುವ ಮಾತುಕತೆಯಾಯಿತು. ಅಲ್ಲಿಗೆ ಈ ಕಾಂಡ ಮುಗಿಯಿತು ಎಂದು ಕೊಂಡಿದ್ದೆ. ಆದರೆ ವಿ.ಸೀ.ಯವರನ್ನು ಬೀಳ್ಕೊಂಡು ನಾವು ಗೊತ್ತುಮಾಡಿ ನಿಲ್ಲಿಸಿಕೊಂಡಿದ್ದ ಆಟೋ ಹತ್ತಿ ಮುಂದಿನ ಸರ್ಕಲ್ಲಿಗೆ ಬರುತ್ತೇವೆ, ಸುಬ್ಬರಾಯಾಚಾರ್ಯರು ರಿಕ್ಷಾ ನಿಲ್ಲಿಸುವಂತೆ ಹೇಳಿ ಬಿಕ್ಕಿ ಬಿಕ್ಕಿ ಅಳತೊಡಗಿದರು. "ಗುರುದ್ರೋಹ ಮಾಡಿಬಿಟ್ಟೆ, ಅವರಿಗೆ ಸುಳ್ಳು ಹೇಳಿಬಿಟ್ಟೆನಲ್ಲ....." –ಇದು ಸುಬ್ಬರಾಯಾಚಾರ್ಯರ ಪ್ರಲಾಪ ಗೀತೆಯ ಒಂದು

ಚರಣ. ನನಗೆ ದಿಕ್ಕು ತೋಚಲಿಲ್ಲ. "ಹಾಗಲ್ಲ ಸಾರ್, ಅಷ್ಟು ದೊಡ್ಡವರ ಬಳಿ ಹೋಗಿ 'ಬೇರೆ ಯಾರೂ ಒಪ್ಪಲಿಲ್ಲ, ನೀವು ಬರಬೇಕು' ಎಂದಿದ್ದರೆ ಆ ಜೀವಕ್ಕೆ ನೋವಾಗುತ್ತಿರಲಿಲ್ಲವೆ?" ಎಂದು ಬಗೆಬಗೆಯಾಗಿ ವಾದಿಸಿ ಅವರನ್ನು ಸಮಾಧಾನಗೊಳಿಸಿದೆ. ಬಾಬಯ್ಯನಾಣೆಗೂ ಹೇಳುತ್ತೇನೆ, ನನ್ನನ್ನು ಅಂತಹ ಪ್ರಜ್ಞೆಯ ಕೊಕ್ಕೆ ಕಾಡಿರಲಿಲ್ಲ.

ಮರುವಾರ ವಿ.ಸೀ. ಮನೆಗೆ ಹೋದಾಗ ವಿ.ಸೀ. ತುಂಬಾ ಉಲ್ಲಸಿತರಾಗಿದ್ದರು. "ಮೈಸೂರು ಪ್ರವಾಸ ತುಂಬ ಚೆನ್ನಾಗಿತ್ತು. ಅವರೆಲ್ಲರ ವಿಶ್ವಾಸಕ್ಕೆ ಏನು ಹೇಳಲಿ? ಯುವಜನರಂತೂ ತುಂಬ ಸಂತೋಷಗೊಂಡರು" ಎಂದು ಆನಂದದಿಂದ ಹೇಳಿದರು. ಆದರೆ ಸುಬ್ಬರಾಯಾಚಾರ್ಯರ ಮಾತಿನ ಹುಳ ನನ್ನ ತಲೆ ಕೊರೆಯಲಾರಂಭಿಸಿತ್ತು. ರಾಜರತ್ನಂ, ವಿ.ಸೀ. ಆಪ್ತ ಸ್ನೇಹಿತರು. ರಾಜರತ್ನಂ ಅವರೇನಾದರೂ ಪ್ರಾಸಂಗಿಕವಾಗಿ ಬಾಯಿ ಬಿಟ್ಟರೆ? ಗೋಕಾಕರೇನಾದರೂ ಮಾತಿಗೆ ಮಾತು ಬಂದಾಗ ಹೇಳಿ ಬಿಟ್ಟರೆ? ನಾನೇ ತಪ್ಪೊಪ್ಪಿಗೆಯನ್ನು ಮೆರೆದು ಕ್ಷಮೆ ಕೋರಲು ನಿಶ್ಚಯಿಸಿ, ಅವರಿಗೆ ನಡೆದ ಘಟನಾವಳಿಗಳನ್ನು ಧಾರಾವಾಹಿಯಾಗಿ ವಿವರಿಸಿದೆ. ವಿ.ಸೀ. ಜೋರಾಗಿ ನಕ್ಕು ಬಿಟ್ಟರು. "ಅಪ್ಪಾ! ನಾನೂ ಸಭೆ ಸಮಾರಂಭ ನಡೆಸಿದ್ದೇನೆ. ನನಗೆ ಈ ಸೂಕ್ಷ್ಮಗಳೆಲ್ಲ ಗೊತ್ತಿಲ್ಲ ಎಂದುಕೊಂಡಿರಾ? ಆ ಬಗ್ಗೆ ನನಗೇನೂ ಅಸಮಾಧಾನವಿಲ್ಲ" ಎಂದರು.

ನಾನು ನಿರಾಳವಾಗಿ ಉಸಿರಾಡಿದೆ. ನನ್ನ ಬಗೆಗೆ ನನಗೇ ನಾಚಿಕೆಯಾಯಿತು. ಅಂದಿನಿಂದ ಯಾವುದೇ ಕಾರಣಕ್ಕೂ ಸುಳ್ಳು ಹೇಳುವುದಿಲ್ಲ ಎಂದು ಪ್ರಬಲ ಪ್ರತಿಜ್ಞೆಯನ್ನು ಕೈಕೊಂಡೆ. ಒಂದೆರಡು ದಿನ ಪ್ರತಿಜ್ಞೆಯನ್ನು ಉಳಿಸಿಕೊಂಡ ಕೀರ್ತಿಯೂ ನನ್ನದಾಗಿದೆ. ವಿ.ಸೀ. ಬಗ್ಗೆ ನನಗನ್ನಿಸಿದ್ದು ಇಷ್ಟು:

ದೊಡ್ಡವರು ಎಷ್ಟೆಂದರೂ ದೊಡ್ಡವರೇ !

ನಾನು ಕಂಡ ವಿ.ಸೀ.

ಸುಮತೀಂದ್ರ ನಾಡಿಗ್

೧೯೫೩ ರಿಂದ ೧೯೫೬ ರವರೆಗೆ ನಾನು ಸೆಂಟ್ರಲ್ ಕಾಲೆಜ್‌ನಲ್ಲಿ ಇಂಗ್ಲಿಷ್ ಆನರ್ಸ್ ಓದುತ್ತಿದ್ದಾಗ, ಕನ್ನಡವನ್ನು ಮೈನರ್ ಸಬ್ಜೆಕ್ಟ್ ಆಗಿ ತೆಗೆದುಕೊಂಡಿದ್ದರಿಂದ ಪ್ರೊಫೆಸರ್ ವಿ. ಸೀತಾರಾಮಯ್ಯನವರ ಶಿಷ್ಯನಾಗುವ ಸುಯೋಗ ನನಗೆ ದೊರಕಿತ್ತು. ತರಗತಿಯಲ್ಲಿ ಕೂತು ಅವರು ಪಾಠಹೇಳುತ್ತಿದ್ದುದನ್ನು ಕೇಳುವುದೇ ಅಲ್ಲದೆ ನಾನು ಆಗಾಗ ಅವರ ಮನೆಗೂ ಹೋಗಿ ಬರುತ್ತಿದ್ದೆ. ಅವರು ಬಿ. ಎಂ. ಶ್ರೀ. ಯವರ ಇಂಗ್ಲಿಷ್ ಗೀತೆಗಳ ಬಗ್ಗೆ ಮಾತಾಡುತ್ತ

ಬೇಟಕಾರ ಬಂದ ಮಾದ,
ಹಹ್ಹಾ! ಏನು ಬೇಟವೋ!

ಎನ್ನುವ ಸಾಲುಗಳನ್ನು ಹೇಳಿದ ಮೇಲೆ ಮೂಲದಲ್ಲಿ

Duncan Gray came here to woo,
Ha ha! the wooing of it!

ಎನ್ನುವುದನ್ನು ಅರ್ಥಪೂರ್ಣವಾದ ಸ್ವರಭಾರ ಕೊಟ್ಟು, ಯತಿಗೆ ಮತ್ತು ಕಾಕುವಿಗೆ ತಕ್ಕ ಗಮನಕೊಟ್ಟು ಕಾವ್ಯವನ್ನು ಓದಿದ್ದು ನನಗೆ ನೆನಪಿದೆ. ಇನ್ನೊಂದು ಸಾರಿ ಪ್ರಗಾಥಗಳ ಬಗ್ಗೆ ಮಾತಾಡುತ್ತ "ನಾನೊಂದು ಸಮುದ್ರವನ್ನು ನೋಡಿ ಒಂದು ಪ್ರಗಾಥ ಬರೆಯಲಿಕ್ಕೆ ಹೊರಟೆ. 'ಕಡಲೇ' ಎಂದು ಸಮುದ್ರವನ್ನು ಸಂಬೋಧಿಸಿ ಕವಿತೆಯನ್ನು ಆರಂಭಿಸ ಬೇಕೆಂದಿದ್ದೆ. ಆದರೆ 'ಕಡಲೇ' ಎನ್ನುವ ಶಬ್ದ ಮೊದಲು ಮನಸ್ಸಿನಲ್ಲಿ ಬಂದು ಹುರಿಗಡಲೆ ನೆನಗಡಲೆ ಎಲ್ಲ ನೆನಪಾಗಿ, ಅಲ್ಲಿ ಬೇಕಾದ ಗಾಂಭೀರ್ಯಕ್ಕೆ ಧಕ್ಕೆ ಬಂತು. ಹಾಗಾಗಿ ಆ ಕವಿತೆಯನ್ನು ಬರೆಯಲಿಕ್ಕೆ ಆಗಲೇ ಇಲ್ಲ" ಎಂದು ಹೇಳಿದ್ದರು. ಛಂದಸ್ಸಿನ ಅನೇಕ ಸಾಧ್ಯತೆಗಳತ್ತ ನಮ್ಮ ಗಮನವನ್ನು ಸೆಳೆಯುತ್ತಿದ್ದ ಪ್ರೊಫೆಸರ್ ವಿ.ಸೀ. ತಮ್ಮ ಕಾವ್ಯದಲ್ಲೂ ಅನೇಕ ಪ್ರಯೋಗಗಳನ್ನು ಮಾಡಿದ್ದರು. ಕಾವ್ಯದ ಬಗ್ಗೆ ನನ್ನ ಆಸಕ್ತಿಯನ್ನು ಕೆರಳಿಸಿ, ಅನೇಕ ರೀತಿಯ ಪ್ರಯೋಗಗಳ ಕಡೆ ನನ್ನ ಗಮನವನ್ನು ಸೆಳೆದು, ಪುಸ್ತಕಗಳನ್ನೂ ಓದಲಿಕ್ಕೆ ಕೊಟ್ಟು, ೧೯೬೨ರಲ್ಲಿ ನನ್ನ ಮದುವೆಗೂ ಬಂದಿದ್ದ ವಿ.ಸೀ. ನನ್ನನ್ನು ಬೆಳೆಸಿದ ಗುರುಗಳಲ್ಲಿ ಒಬ್ಬರಾಗಿದ್ದರು.

* * *

ನಾನು ಆಗಾಗ ದಿನಚರಿಯನ್ನು ಬರೆಯುತ್ತಿದ್ದೆ. ಸೆಂಟ್ರಲ್ ಕಾಲೇಜ್ ದಿನಗಳ ಬಗ್ಗೆ ನನ್ನ ಡೈರಿಯಲ್ಲಿ ವಿ.ಸೀ. ಯವರ ಬಗ್ಗೆ ಬರೆದ ಕೆಲವು ವಿಷಯಗಳು ಕುತೂಹಲಕಾರಿಯಾಗಿವೆ. ೨೪.೧.೧೯೫೫ ಹೀಗೆ ಬರೆದಿದ್ದೇನೆ :

ವಿ.ಸೀ. ಜೊತೆಗೆ ಮಾತನಾಡಲು ಹೋದೆವು. ಯಾರೋ ಅವರನ್ನು ಭಾಷಣಕ್ಕೆ ಕರೆಯಲು ಬಂದಿದ್ದರು. ಅವರು ಹೋದ ಮೇಲೆ ವಿ.ಸೀ. ಹೇಳಿದರು "ಏನು ಮಾಡೋದಪ್ಪ, ಪುರುಸೊತ್ತೇ ಇಲ್ಲ. ಶನಿವಾರ ಮದ್ರಾಸಿಗೆ ಹೋಗ್ತೇನೆ. ಅಲ್ಲಿ ಎರಡು ಮೂರು ಕಾಲೇಜಿನವರು ಭಾಷಣಕ್ಕೆ ಕರೆದಿದಾರೆ. ಒಂದೇ ಕಡೆ ಸೇರುವುದಾದರೆ ಬರ್ತೇನೆ ಎಂದಿದೇನೆ. ಸಿಬಿಲ್ ಥಾರ್ನ್‌ಡೈಕ್ ಬಂದಿದಾಳೆ. ಇಂಗ್ಲಿಷ್ ಮಾತು ಕೇಳೋದಾದರೆ ಅವಳ ಬಾಯಲ್ಲಿ ಕೇಳಬೇಕು. ಇಲ್ಲಿ ಮೂರ್ನಾಕು ಜನಕ್ಕೆ ಹೇಳಿದೆ 'ಒಂದು ಸಾವಿರ ಸೇರಿಸಿಕೊಡಿ, ಅವಳನ್ನು ಕರೆಸಿ' ಅಂತ. 'ಮುದುಕಿ' ಅಂದುಬಿಟ್ಟರು. ಇನ್ನು ಅವಳು ಹೆಚ್ಚು ದಿವಸ ಬದುಕ್ತಾಳೊ ಇಲ್ಲವೊ. ನಾನೇ ಇರ್ತೀನೊ ಇಲ್ಲವೋ" ಎಂದರು.

ಹೀಗೆ ಮಾತಾಡುತ್ತಿದ್ದಾಗ ಬಿ. ಎಂ. ಶ್ರೀ. ವಿಷಯ ಬಂದು ಹೇಳಿದರು: "ಪ್ರಾಸಡಿ ಮೇಲೆ ಅವರು ನೋಟ್ಸ್ ಮಾಡಿದ್ದು ತುಂಬಾ ಚೆನ್ನಾಗಿದೆ. ಕನ್ನಡ ನುಡಿಯಲ್ಲಿ ಅದರ Fascimile ಬ್ಲಾಕ್ ಮಾಡಿಸಿ, ಇನ್ನು ಬೇರೆ ಯಾರಾದರೂ ತಮ್ಮದೂ ಅಂತ ಹೇಳಿಕೊಳ್ಳೋದಕ್ಕೆ ಮುಂಚೆ ಹಾಕಿಸಬೇಕು ಅಂತ ಮಾಡಿದ್ದೀನಿ."

೨೬.೧.೫೫ ರಿಪಬ್ಲಿಕ್ ಡೇ. ಮೂರ್ತಿ ಧ್ವಜಾರೋಹಣಕ್ಕೆ ಬಂದಿದ್ದ. ನನ್ನ ಭಾಷಣ ಆಯಿತು. ವಿ. ಸೀ. ಯವರ 'ಭಾಗ್ಯತಾರೆ' ಓದಿದೆ.

೩೧.೧೦.೫೫ ನಿನ್ನೆ ರಾತ್ರಿ 'ವಿಚಾರವಾಹಿನಿ' ಯನ್ನು ಉದ್ಘಾಟಿಸಲು, ವಿ.ಸೀ. ಮನೆಗೆ ಹೋದೆವು. ಮಾತನಾಡುತ್ತ 'ದೆಹಲಿಯಲ್ಲಿ ಕೆಲಸ ಸಿಕ್ಕಿತೇ ಸರ್' ಎಂದೆವು.

'ಏನಪ್ಪ, ನನಗೆ ಯಾರು ಕೆಲಸ ಕೊಡ್ತಾರೆ. We are all old people. ಹೋಗಿದ್ದೆ. ಸ್ನೇಹಿತರಿಗೆ 'ನಾನು ಮಾರಾಟಕ್ಕಿದ್ದೇನೆ' ಅಂತ ಹೇಳಿ ಬಂದೆ. ಕೊಳ್ಳುವವರು ಯಾರು? ಕೆಲಸ ಸಿಕ್ಕರೆ ಇನ್ನು ಮೂರು ವರ್ಷ ಆಚೆ ಇರ್ತೇನೆ. ಸಿಗದಿದ್ದರೆ ಇಲ್ಲೇ ಏನಾದ್ರೂ ಮಾಡ್ತೇನೆ. ಪೆನ್ಶನ್ ಸಾಕಾಗೋಲ್ಲ. ಮನೇಲ್ಲಿ ನಾವಿರೋದು ಹನ್ನೆರಡು ಜನ. ಮುನ್ನೂರು ರೂಪಾಯಿ ಕೊಟ್ಟು ಇಲ್ಲಿ ಇಟ್ಟುಕೊಳ್ಳುವವರಾದರೂ ಯಾರು?" ಎಂದರು.

"ಕರ್ನಾಟಕ ಕಾಲೇಜು...." ಎಂದಾಗ

"ಯಾವುದಕ್ಕೆ ಅಂತ ತೆಗೆದುಕೊಳ್ತಾರೆ. ಕನ್ನಡಕ್ಕೆ ಜಾಗಗಳೇ ಕಡಿಮೆ. ಎಕನಾಮಿಕ್ಸ್‌ಗೆ ಪಿ.ಎಚ್‌ಡಿ. ಡಿ.ಲಿಟ್ ಆದವರು ಬರ್ತಾರೆ. ನಮ್ಮನ್ನ ಯಾರು ಕೇಳ್ತಾರೆ? ನಾನು ಕನ್ನಡಕ್ಕೂ ಇಲ್ಲ, ಎಕನಾಮಿಕ್ಸಿಗೂ ಇಲ್ಲ, ನಮ್ಮವರೆ ನನ್ನನ್ನು

ರೆಕಗ್ನೈಸ್ ಮಾಡಲಿಲ್ಲ. ನನ್ನನ್ನ Staffer ಅಂತ consider ಮಾಡಲಿಲ್ಲ!" ಎಂದರು.

ರಾಜರತ್ನಂ ವಿಷಯಕ್ಕೆ ಮಾತು ತಿರುಗಿತು. "ಕರ್ನಾಟಕ ಸಂಘಕ್ಕೆ ಬಹಳ ದುಡಿದಿದಾರೆ. ಅವರಿಗೆ ದೊಡ್ಡದಾಗಿ ಮರ್ಯಾದೆ ಮಾಡಬೇಕು. ಏನೋ ಮಾಡೋಣ ಅನ್ನೋದರಲ್ಲಿ ನಾನೇ ಹೊರಡಬೇಕಾಯಿತು" ಎಂದರು. "ನಮಗೆ ಅವರು ಸಿಗೋದೆ ಇಲ್ಲ ಸರ್. ಅವತ್ತು ನೀವು ಬರೇ ಹಾರ ಹಾಕಿದ್ದಕ್ಕೆ 'ನನ್ನ ಫೋಟೋನೆ ತಂದಿಡುತ್ತಿದ್ದೆ' ಅಂದರಲ್ಲ" ಎಂದೆ.

"ಬಹಳ ದುಡಿದಿರೋ ಮನುಷ್ಯ" ಎಂದು ಸುಮ್ಮನಾದರು. ಅವರನ್ನು ನೋಡಿದರೆ ಇಷ್ಟು ದೊಡ್ಡ ವ್ಯಕ್ತಿಗೆ ನಮ್ಮ ಜನ ಬೆಲೆ ಕೊಡುವುದಿಲ್ಲವಲ್ಲ, ಜಾತಿಯ ಹೆಸರಿನಲ್ಲಿ ತಮಗೇ ನಷ್ಟ ಮಾಡಿಕೊಳ್ಳುತ್ತಾರಲ್ಲ ಎನಿಸುತ್ತದೆ.

೧೫.೧೦.೧೯೫೫ ಮಧ್ಯಾಹ್ನ ವಿ.ಸೀ. ಮನೆಗೆ ಹೋಗಿದ್ದೆ. ನಿನ್ನ ರಾತ್ರಿ ಲಂಕೇಶ್ ಜೊತೆಗೆ Originality ಬಗ್ಗೆ ಜಗಳವಾಡಿ, ಕಡೆಗೆ ವಿ.ಸೀ. ಏನು ಹೇಳುವರೋ ನೋಡೋಣ ಎಂದುಕೊಂಡೆ. ವಿ.ಸೀ. ಆಗತಾನೆ ಊಟ ಮುಗಿಸಿ ಕುಳಿತಿದ್ದರು. "ಏನು ಬಂದಿರಿ?" ಎಂದರು. ಎಂದಿನಂತೆ ಉತ್ತರ "ಸುಮ್ಮನೆ ಬಂದೆ." "ಕಾಲೇಜಿನಲ್ಲಿ ಹೊಸದಾಗಿ ಯಾರು ಯಾರು ಬಂದಿದಾರೆ?" ಅಂತ ಮೌನವನ್ನು ಅವರೇ ಮುರಿದರು.

"ರಾಮಾಮೃತಂ ಮತ್ತು ತಾರಾನಾಥ್" ಅಂತ ಹೇಳಿ, "ಸರ್, Originality ಎಂದರೇನು?" ಅಂತ ಕೇಳಿದೆ.

"ಲೇಖಕನ ವ್ಯಕ್ತಿತ್ವದ ಒಂದು ಭಾಗ. It is a part of his personality. ಅವನು ಹೇಳುವ ರೀತಿ ಅವನದೇ ಆಗಿರುತ್ತೆ. ಅವನ ಪದಗುಂಫನದಲ್ಲಿ ಅವನದೇ ರೀತಿ. ಅವನ ಹಾಗೆ ಯಾರೂ ಹೇಳಲಾರರು. Originality, ಟೆಕ್ನಿಕ್‌ನಲ್ಲಿ ಆಗಬಹುದು, ತೆಗೆದುಕೊಂಡ ವಿಷಯದಲ್ಲಿ ಆಗಬಹುದು. Keats ನ ವಿಷಯವಾಗಿ ಮೊನ್ನೆ Literary Supplement ನಲ್ಲಿ ಒಂದು article ಬಂದಿದೆ. ಅದರಲ್ಲಿ Ode to Nightingale ಪದ್ಯದಲ್ಲಿರುವ phrase ಗಳೆಷ್ಟೋ ಬೇರೆಯೊಬ್ಬಳ ಕವನದಲ್ಲಿರುವುದನ್ನು ತೋರಿಸಿದಾರೆ. ಆದರೆ Keats ನನ್ನ ಓದಿದಾಗ ಕೀಟ್ಸೇ ಬರೆದ ಹಾಗೆ ಅನ್ನಿಸುತ್ತೆ. What you take from others is not important, but what you make out of it, is important. ಒಂದು ಭಾವವನ್ನು ಒಬ್ಬ ತುಂಬ crude ಆಗಿ express ಮಾಡಿರಬಹುದು. ಅದನ್ನ ಇನ್ನೊಬ್ಬ ಛಾಲೆಂಜ್ ಮಾಡಬಹುದು, ಚೆನ್ನಾಗಿ ಹೇಳಬಹುದು" ಎಂದರು.

Rilke ಮೇಲಿನ ಪುಸ್ತಕವನ್ನು ನೋಡಿ "ದಯವಿಟ್ಟು ಕೊಟ್ಟಿರಿ, ಓದಿ ಕೊಡ್ತೇನೆ" ಅಂದೆ.

"ಯಾಕಪ್ಪ ಸುಮ್ಮನೆ ಓದ್ತೀರಾ? ಅವರನ್ನೆಲ್ಲ ಆ ಒಂದು group ನಲ್ಲೆ ಓದಬೇಕು. Leishman translate ಮಾಡಿದಾನೆ. ಆ್ಯಂಥಾಲಜಿಗಳು ಎಷ್ಟೋ ಬಂದಿದಾವೆ. ಅವನ್ನು ಓದಿ. ಅದರಲ್ಲೂ original ನಲ್ಲಿ ಓದಿದರೇ ಸೊಗಸು," ಎಂದು ಹೇಳಿ ಸ್ಪ್ಯಾನಿಶ್‌ನಲ್ಲಿಯೂ ಇಂಗ್ಲಿಷ್‌ನಲ್ಲಿಯೂ ಓದಿ ತೋರಿಸಿದರು.

"Original ನಲ್ಲಿರುವ native force ಅನುವಾದದಲ್ಲಿಲ್ಲ. This is a pale ghost of a translation" ಎಂದೆ. ಆಮೇಲೆ "ಮಾಯಕೋವಸ್ಕಿ ಚೆನ್ನಾಗಿ ಬರೀತಾನೆ. ತುಂಬ force ಇರುತ್ತೆ. ವಿಟ್‌ಮನ್ ಹಾಗೆ ಫ್ರೀಯಾಗಿ ಜನರ ಕವಿತೆ ಬರೀತಾನೆ" ಎಂದೆ.

ಅದಕ್ಕೆ ವಿ.ಸೀ. "ವಿಟ್‌ಮನ್‌ನಲ್ಲಿ Spirituality ಇರುತ್ತೆ. ಮಾಯಕೋವಸ್ಕಿ Revolution ನಲ್ಲಿ ಬರೆದವನು. ಸುಮ್ಮನೆ ಕೂಗ್ತಾನೆ" ಎಂದರು. ಸ್ವಲ್ಪ ಹೊತ್ತು ಬಿಟ್ಟು "ಸುಮ್ಮನೆ ಹೊಸತರ ಗೀಳು ಬೇಡ. Established works ನ ಮುಂಚೆ ಚೆನ್ನಾಗಿ ಓದಿ. ಅನಂತರ ನಮ್ಮ ಸುತ್ತಮುತ್ತ ಹೇಗೆ ಬರುತ್ತದೆ ನೋಡಿಕೊಂಡು ನಿಮ್ಮದೇ ಒಂದು ದಾರಿ ಕಂಡುಕೊಳ್ಳಬೇಕು" ಅಂದರು. "ಇನ್ನು ಬರುತ್ತೇನೆ" ಅಂದಾಗ "Rilke ಬೇಕಾದರೆ ಓದಿ ನೋಡಿ. ಪುಸ್ತಕ ಕೊಡಬಾರದು ಅಂತ ಏನೂ ಇಲ್ಲ" ಎಂದರು. ಕೈಮುಗಿದು ಹೊರಟೆ. ಬಾಗಿಲವರೆಗೂ ಜೊತೆಗೆ ಬಂದರು.

೧೪.೧೦.೫೫ನೇ ತಾರೀಖು ಕಾಲೇಜಿಗೆ ಹೋಗಿದ್ದೆವು. ಆಗ ಜಿ. ಪಿ. ಆರ್. ಹತ್ತಿರ ಹೋಗಿ "ವಿ.ಸೀ.ಯವರಿಗೊಂದು ಸಂಭಾವನೆ ಮಾಡಬೇಕೂಂತ ಇದ್ದೇವೆ" ಎಂದೆವು ನಾನು ಮತ್ತು ಲಂಕೇಶ.

"ಅದಕ್ಕೆ Committments ಏನು ಬೇಕು ಗೊತ್ತ?" ಎಂದು ರಾಜರತ್ನಂ ಕೇಳಿದರು.

"ಏನು?"

"ಎರಡು ಮೂರು ಸಾವಿರ ರೂಪಾಯಿ ಬೇಕು. ಲೇಖನಗಳನ್ನು ದೊರಕಿಸುವುದೂ ಕಷ್ಟ."

"ಅದನ್ನ ನಾವು ಮಾಡ್ತೇವೆ. Publishing ಕರ್ನಾಟಕ ಸಂಘ ಮಾಡಬಹುದಲ್ಲ?"

"ಅದಕ್ಕೆ ದುಡ್ಡು ಬೇಕಲ್ಲ."

"ಹಾ. ಮಾ. ನಾಯಕ ಮತ್ತು ಸುಬ್ಬಣ್ಣ ನಿಂತ ಹಾಗೆ ನಿಲ್ತೇವೆ. ಹುಡುಗರಿಂದ ಅಡ್ವಾನ್ಸ್ ತೆಗೆದುಕೊಂಡು ಕೊಡ್ತೇವೆ. ಉಳಿದದ್ದನ್ನು ನೀವು ಹಾಕಿಕೊಳ್ಳಿ" ಎಂದೆ.

"ನೀವೇ ನಿಂತು ಮಾಡಿದರೇನೊ ಪರವಾಗಿಲ್ಲ. ನೀವೇ ಏನಾದರೂ Means ಹುಡುಕಿ ಮಾಡುವುದಾದರೆ ಮಾಡಿ, ಸಂತೋಷ. ಹುಡುಗರ

ಕಾರ್ಯಕ್ರಮಗಳನ್ನು ನಿಲ್ಲಿಸುವುದಿಲ್ಲ. ಕರ್ನಾಟಕ ಸಂಘದಲ್ಲಿ ಅಷ್ಟು ದುಡ್ಡು ಇಲ್ಲ. ಏನೋ ವರ್ಷಕ್ಕೆ ಒಂದು ಸಾವಿರ ಹಾಗೂ ಹೀಗೂ ಖರ್ಚು ಮಾಡಬಹುದು. ಇನ್ನು ಸಾಲ ಮಾಡಿದರೆ, ನಾಳೆ ನಾನು ಹೊರಟು ಹೋದರೆ ತೀರಿಸೋರ್ಯಾರು? ನಿಮಗೆ ಇನ್ನೊಂದು ವಿಷಯ ಗೊತ್ತ? ದುಡ್ಡು ಯಾರು ಕೊಡ್ತಾರೆ? 'ಬಾಗಿನ' ತರಲಿಕ್ಕೆ ಏನೋ ೨೦೦-೩೦೦ ಕಲೆಕ್ಟ್ ಮಾಡಿ ಹಬ್ಬಕ್ಕೆ ಕೊಟ್ಟರು. ಆತ ಕೈಯಿಂದ ಹಾಕಿಕೊಂಡು ಮಾಡಿದ. ಈಗ ಪ್ರತಿಗಳು ಖರ್ಚಾಗದೆ ಉಳಿದಿವೆ. ಕಣ್ಣು ಕಣ್ಣು ಬಿಡುತಿದ್ದಾರೆ. ಹೇಗಾದರೂ ಖರ್ಚು ಮಾಡಿಸಿಕೊಡಿ ಅಂತ ಕೇಳ್ಲಿಕ್ಕೆ ಮೊನ್ನೆ ಪರಮೇಶ್ವರ ಭಟ್ಟರ ಜೊತೆಗೆ, ವೈಸ್ ಛಾನ್ಸಲರನ್ನ ಕೇಳ್ಲಿಕ್ಕೆ ಹೋಗಿದ್ದರಂತೆ. ಬಿ. ಎಂ. ಶ್ರೀ. ಯವರಿಗೆ ಕೊಟ್ಟ ಸಂಭಾವನಾಗ್ರಂಥಕ್ಕೆ ಮಾಸ್ತಿಯವರು ಮೂರುಸಾವಿರ ಸಾಲ ಮಾಡಿ ಮೊನ್ನೆ ತೀರಿಸಿದರು. ಪಂಜೆಯವರದ್ದನ್ನು ಹಾಗೇ ಉಳಿದದ್ದನ್ನು, ಕಾರಂತರು ತಮ್ಮ ಸ್ವಂತ ಪ್ರೆಸ್‌ನಲ್ಲಿ ಅಚ್ಚುಮಾಡಿದರು. ಈಗ ಇಷ್ಟೆತ್ತರ ರಾಶಿ ಬಿದ್ದಿದೆ! ವಿ.ಸೀ.ಯವರು ಇಲ್ಲಿದ್ದಾಗಲೇ ಕೃಷ್ಣಶಾಸ್ತ್ರಿಯವರಿಗೆ ಸಂಭಾವನ ಗ್ರಂಥ ತರಬೇಕೂಂತ ಮಾಡಿದ್ದರು. ಆದರೆ ಇನ್ನೂ ನನಗೆ, ಮಾಸ್ತಿಯವರಿಗೆ ಮತ್ತು ವಿ.ಸೀ.ಯವರಿಗೆ article ಕೊಡುವಷ್ಟು ಸಮಯ ಸಿಕ್ಕಿಲ್ಲ...." ಎಂದು ರಾಜರತ್ನಂ ಅವರು ಹೇಳುತ್ತಿದ್ದಾಗ, ಮಧ್ಯದಲ್ಲೇ ನಾನು ಕೇಳಿದೆ: "ಏನು ಸರ್, ಒಂದು article ಬರೀಲಿಕ್ಕಾಗೋದಿಲ್ಲವ?"

"ಸುಮ್ಮನೆ ಆಗುತ್ತದೆಯೆ" ಎಂದರು ರಾಜರತ್ನಂ, "ಏನೋ ಒಂದು ಬರೆದುಕೊಟ್ಟರೆ ಆಗುತ್ತದೆಯೆ? ಅದಕ್ಕೆ ತಕ್ಕ ತೂಕ ಬೇಡವೆ? ಅಂತೂ ಯೋಚಿಸಿ. ವಿ.ಸೀ. ಯವರನ್ನೆ ಕೇಳಿ. ಈ ವಿಷಯವಾಗಿ ಹೇಳ್ತಾರೆ" ಅಂದರು.

"ಸರಿ ಸರ್, ನಾವು ಬರ್ತೇವೆ."

"ಇಲ್ಲಿ ನೋಡಿ, ವಿ.ಸೀ ಯವರಿಗೆ ತರಬಾರದು ಅಂತ, ನನ್ನ personal ಏನೊ ಇದೆ ಅಂತ ತಿಳಿದುಕೊಳ್ಳಬೇಡಿ. ಒಂದು ರೀತಿಯಲ್ಲಿ ನನ್ನನ್ನು ಮುಂದೆ ತಂದವರೇ ಅವರು" ಎಂದು ರಾಜರತ್ನಂ ಹೇಳಿದರು.

* * *

ವಿ.ಸೀ.ಯವರು ನಿವೃತ್ತರಾದಾಗ ಸೆಂಟ್ರಲ್ ಕಾಲೇಜಲ್ಲಿ ಒಂದು ಬೀಳ್ಕೊಡಿಗೆ ಸಮಾರಂಭ ಇಟ್ಟುಕೊಂಡಿದ್ದೆವು. ನಾನು ಒಂದು ಪುಟ್ಟ ಭಾಷಣ ಮಾಡಿದ್ದೆ. ವಿ.ಸೀ. ಯವರ ಎದುರಿಗಿದ್ದಾಗ ಸಮುದ್ರದ ಎದುರಿಗಿದ್ದ ಹಾಗಿರುತ್ತೆ ಅಂತ ಹೇಳಿದ್ದೆ ಅಂತ ನೆನಪು. ಕಾರ್ಯಕ್ರಮ ಮುಗಿದ ಮೇಲೆ ವಿ.ಸೀ.ಯವರು "ಸುಮತೀಂದ್ರ now, I am content to die, to die" ಎಂದು ಹೇಳಿದ್ದು ನೆನಪಾಗುತ್ತಿದೆ.

* * *

ವಿ. ಸೀ. ಯವರ ಬಗ್ಗೆ ನನ್ನ ಡೈರಿಯಲ್ಲಿ ಇಷ್ಟೆಲ್ಲ ಬರೆದಿಟ್ಟಿದ್ದೇನೆ ಎಂದು ನನಗೇ ಆಶ್ಚರ್ಯವಾಗುತ್ತಿದೆ. ಈಗ ಬರೆದಿಟ್ಟದ್ದನ್ನು ನೋಡಿದರೆ, ನಾನು ಇನ್ನೂ ಎಷ್ಟೆಷ್ಟೊ ಬರೆದಿಡಬಹುದಾಗಿತ್ತಲ್ಲ, ವಿ.ಸೀ.ಯವರ ಬಗ್ಗೆ, ಅಡಿಗರ ಬಗ್ಗೆ, ರಾಜರತ್ನಂ, ಡಿ.ವಿ.ಜಿ., ಪು.ತಿ.ನ., ಮಾಸ್ತಿ, ಕಾರಂತ, ಬೇಂದ್ರೆ ಮೊದಲಾದ ಅನೇಕ ಹಿರಿಯರ ಬಗ್ಗೆ ವಿಷಯಗಳನ್ನು ಸಂಗ್ರಹಿಸಿ ಇಡಬಹುದಿತ್ತಲ್ಲ, ಸುಮ್ಮನೇ ಕಾಲಹರಣ ಮಾಡಿದೆನಲ್ಲ ಎಂದು ಬೇಸರವಾಗುತ್ತೆ. ವಿ.ಸೀ. ಯವರ ಇನ್ನೂ ಎರಡು ಮೂರು ದಾಖಲೆಗಳು ನನ್ನ ಡೈರಿಯಲ್ಲಿವೆ.

* * *

೪.೧೧.೧೯೫೫ ಸಂಜೆ ರಿಲ್ಕ್ ಪುಸ್ತಕ ಹಿಂತಿರುಗಿಸಲಿಕ್ಕೆ ವಿ.ಸೀ. ಮನೆಗೆ ಹೋಗಿದ್ದೆ. ಏನನ್ನೊ ಬರೆಯುತ್ತ ಕುಳಿತಿದ್ದರು. ಅವರ ತಾಯಿ 'ಒಳಗಿದ್ದಾರೆ' ಎಂದರು. 'ಬನ್ನಿ' ಎಂದು ಬರೆಯುವುದನ್ನು ಬದಿಗಿರಿಸಿದರು. ನಾನು ಮೌನವನ್ನೊಡೆದೆ.

"ಸರ್, ನಮ್ಮ ವಯಸ್ಸಿನವರು ವಿಮರ್ಶೆ ಮಾಡಬಹುದೆ?"

"ಅದಕ್ಕೇನಪ್ಪ, ಯಾಕೆ ಮಾಡಬಾರದು?"

"ನಮ್ಮ ಓದು, ಅನುಭವ ಸಾಲದಲ್ಲವೆ?"

"ಹೌದು, ಎಲ್ಲವನ್ನೂ ಯಾರು ಓದಿದಾರೆ? ನಮ್ಮ ವಿಮರ್ಶಕರೆಲ್ಲ ಡಾಂಟೆ ವರ್ಜಿಲ್ ಕಾಳಿದಾಸ ಭವಭೂತಿ ಎಲ್ಲರನ್ನೂ ಓದಿದ್ದಾರೇನು? ಎಷ್ಟರ ಮಟ್ಟಿಗೆ ನೋಡಬಲ್ಲರು ಅನ್ನೋದು ಮುಖ್ಯ. ಅದು ಅವರ ಬೆಲೆ ತಿಳಿಸುತ್ತೆ."

"ಅದು ಸರಿ. ಈಗ 'ರಾಮಾಯಣ ದರ್ಶನಂ'ನಲ್ಲಿ ಕೆಲವು ಕಡೆ ಓಟ ಮುಗ್ಗರಿಸುತ್ತೆ. ಅಂಥದನ್ನ ಹೇಳಬಹುದಲ್ಲ."

"ಇಂಥಲ್ಲಿ ಮುಗ್ಗರಿಸುತ್ತೆ ಅಂತ ಯಾವ ದೃಷ್ಟೀಲಿ ಹೇಳ್ಲಿಕ್ಕಾಗುತ್ತೆ? ಅವರು ಒಂದು ಭಾವವನ್ನು ಎತ್ತಿ ಹೇಳಲಿಕ್ಕೆ, ಅಥವಾ ಇನ್ನೊಂದನ್ನ ಕುಗ್ಗಿಸಲಿಕ್ಕೆ ಒಂದು ಮಾತ್ರೆ ಕಮ್ಮಿ ಮಾಡಬಹುದು, ಒಂದು ಮಾತ್ರೆ ಜಾಸ್ತಿ ಮಾಡಬಹುದು. ಅದು ಅವರೇ ಓದಿದಾಗ ತಿಳಿಯುತ್ತೆ."

"ಹಾಗಾದರೆ, ಬರೆದವರನ್ನೆಲ್ಲ ಎಲ್ಲಿ ತರೋಣ?"

"ಅದಕ್ಕೇನು ಮಾಡೋದಕ್ಕಾಗುತ್ತೆ?"

"ರಾಮಾಯಣ ದರ್ಶನಂನಲ್ಲಿ 'ನಕ್ಷತ್ರಮಯ ರಾತ್ರಿಯಂ ಧರಿಸಿ ಸೂರ್ಯನೆ ಶೋಭಿಪಂತೆ' ಎಂದಿದೆ. Context ನಲ್ಲಿ ನೋಡಿದರೂ ಅದಕ್ಕೇನೂ ಅರ್ಥ ಬರುವುದಿಲ್ಲ."

"ಹಾಗಲ್ಲ, it is so unimaginable ಅಂತ ಇರಬಹುದು. ಅಷ್ಟು ಜಾಜ್ವಲ್ಯಮಾನವಾಗಿತ್ತು ಎಂದಿರಬಹುದು. He has a rich experience of 30

years. ಹಾಗೆಲ್ಲ ನೋಡದೆ ಹೇಳೋಲ್ಲ. He started as one of the most imaginative poets, though unoriginal. If he read a single beautiful line in Keats or Shelley or Milton, he composed a poem."

ಅಷ್ಟು ಹೊತ್ತಿಗೆ ಅವರ ತಾಯಿ ಪುರಂದರದಾಸರ ಕೀರ್ತನೆಯೊಂದನ್ನು ಹೇಳುತ್ತಿದ್ದರು.

"ನೋಡಿ, ಆಕೆ ಹೇಳ್ತಿದಾಳೆ. ಜ್ವರ ಬಂದಿದೆ. ಅದು ಆಕೆ ಹೇಳೋ ರೀತಿ. ನಾನೊಂದು ರೀತಿ ಹೇಳ್ತೀನೆ. ಇನ್ನೊಬ್ಬರು ಇನ್ನೊಂದು ರೀತಿ ಹೇಳ್ತಾರೆ. ಯಾವ ರೀತಿ ಸರಿ? ಪುರಂದರದಾಸರ ಕೀರ್ತನೆಗಳಲ್ಲಿ ಏನಿದೆಯೊ ಅದು ಪುರಂದರದಾಸರೊ, ಅಥವಾ ಅವರೇನು ಇದ್ದರೋ ಅದು ಪುರಂದರದಾಸರೊ? What he lived is what he was"– ಎಂದು ಹೇಳಿ, ಮತ್ತೆ ಏನೋ ನೆನಪಾದವರ ಹಾಗೆ "I have heard one of the finest Kannada prose passages from the mouth of a mad woman. ಕೈಯಲ್ಲಿ ಒಂದು ಪೆನ್ಸಿಲ್ಲು, ಕಾಗದ ಇದ್ದಿದ್ದರೆ I would have recorded it. I could not memorise. ಹುಚ್ಚಾಗಿದ್ದವರೆಲ್ಲ ಹಾಗೆ ಹೇಳ್ಲಿಕ್ಕಾಗೋಲ್ಲ. ಏನೋ ಒಂದು moment" ಅಂದರು. ಸ್ವಲ್ಪ ಹೊತ್ತು ಮೌನ.

'ಸರ್, ಕೆ. ನರಸಿಂಹಮೂರ್ತಿ ಉಪನ್ಯಾಸ ಮಾಲೆಯಲ್ಲಿ ಒಂದು ಭಾಷಣ ಮಾಡಿದ್ದರು. ಜವರೇಗೌಡರು ಏನೇನೊ ಕೆಟ್ಟ ಮಾತು ಆಡಿದ್ದಾರೆ' ಅಂತ ನಾನು ಹೇಳಿದೆ.

"ಬರೆದಿದ್ದಾರೇನು?"

"ಹೌದು ಸರ್, ಅದನ್ನೇ ಲಂಕೇಶಪ್ಪ 'ಚಿತ್ರಗುಪ್ತ'ದಲ್ಲಿ ವಿಮರ್ಶೆ ಮಾಡಿದಾರೆ. ಅದಕ್ಕೆ ಕೆಲವರು ನಿಮಗೆ ಅನುಭವ ಸಾಲದು ಅನ್ನುತ್ತಾರೆ" ಎಂದು ಹೇಳಿದೆ.

ಆಗ ವಿ.ಸೀ.ಯವರು ತಮ್ಮ 'ಕವಿ ಕಾವ್ಯ ದೃಷ್ಟಿ' ಎನ್ನುವ ಪುಸ್ತಕವನ್ನು ತೆಗೆದು, ಅದರ ಮುನ್ನುಡಿಯಲ್ಲಿ ವಿಮರ್ಶೆ ಬಗ್ಗೆ ಅವರು ಬರೆದ ಮಾತುಗಳನ್ನು ತೋರಿಸಿ "ಫಟ್ಟಿಯಾಗಿ ಓದಿ" ಎಂದು ಹೇಳಿದರು. ಓದಿದೆ. ಓದುತ್ತ 'ಸಾರ್ವಕಾಲಿಕ' ಎನ್ನುವಲ್ಲಿ 'ಸರ್ವಕಾಲಿಕ' ಎಂದು ಓದಿದೆ. ಪ್ರಶ್ನಾರ್ಥಕ ವಾಕ್ಯವನ್ನು ಹೇಳಿಕೆಯಂತೆ ಓದಿದೆ. ಅಲ್ಲಲ್ಲಿ ತಿದ್ದಿದರು. ನಮಗೆ ಓದಲೂ ಬರುವುದಿಲ್ಲ ಎಂದು ನಾಚಿಕೆಯಾಯಿತು. ಓದಿದ ಮೇಲೆ "ಅದು ವಿಮರ್ಶೆಯ ಮೇಲೆ ನನ್ನ ಮಾತು" ಎಂದರು. ಆಮೇಲೆ ಲಂಕೇಶಪ್ಪನವರ ವಿಷಯವಾಗಿ "Why should you enter into controversies? ನಿಮ್ಮ ಮೇಷ್ಟ್ರನ್ನ defend ಮಾಡಬೇಕು ಅಂತ ಬರೀತೀರೇನು?" ಎಂದು ಕೇಳಿದರು.

"ಅಲ್ಲ ಸರ್, ನಮ್ಮ ಮೇಷ್ಟರು ಅಂತ ಅಂತೂ ಅಲ್ಲವೇ ಅಲ್ಲ. ಈಗ ಧಾರವಾಡದವರ ವಿಷಯವಾಗಿ ಆಡಿದರೂ ಅಷ್ಟೆ. ಕೆಟ್ಟ ಮಾತು ಆಡಬಾರದು. ವಿಮರ್ಶೆ ಮಾಡುವ ರೀತಿ ಇದಲ್ಲ ಅಂತ ಹೇಳುವುದಕ್ಕೆ ಅಷ್ಟೆ" ಅಂದೆ.

"When it is time to develop your muscles, why do you start already to give performances? ಚನ್ನಾಗಿ ಓದಿ."

"ಸರ್, ನೀವು Saintsbury "History of Criticism" ಕೊನೇ Volume ನಲ್ಲಿ Peroration ಚನ್ನಾಗಿದೆ, ಓದಿ ಎಂದಿದ್ದಿರಲ್ಲ, ಆ ಪುಸ್ತಕ ತಂದಿದ್ದೇನೆ, ಓದುತ್ತೇನೆ."

"ಈಗಲೇ ಓದಬೇಡಿ. ಆ ಪುಸ್ತಕ ಪೂರಾ ಓದಿದ ಮೇಲೆ Peroration ಓದಿ."

"ಗ್ರೀಕ್ ಮತ್ತು ಲ್ಯಾಟಿನ್ ವಿಮರ್ಶೆಗಳೆಲ್ಲ ಉಪಯೋಗವಾಗುವುದಿಲ್ಲವಲ್ಲ?"

"ಅದನ್ನೆಲ್ಲ ಈಗ ಯಾಕೆ ಓದಬೇಕು? ನಿಮ್ಮ ಪರೀಕ್ಷೆ ಆದ ಮೇಲೆ ನೋಡಿ. ಸುಮ್ಮನೆ ವಿಮರ್ಶೆಯಷ್ಟನ್ನೇ ಓದಬೇಡಿ. ಮೊದಲು ತುಂಬ ನಾಟಕಗಳನ್ನು, ಕವಿತೆಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ."

"ಹೌದು ಸರ್. ಈಗ ನನಗೂ ಹಾಗೇ ಅನ್ನಿಸಿದೆ. ಆನರ್ಸ್‌ಗೆ ಬಂದ ಮೊದಲ ಎರಡು ವರ್ಷ ಪುಸ್ತಕಗಳನ್ನೇ ಓದದೆ, ಒಂದೊಂದು ಪುಸ್ತಕದ ಮೇಲೆ ಎಂಟು ಹತ್ತು ಜನ ವಿಮರ್ಶಕರು ಬರೆದದ್ದನ್ನೇ ಓದಿದೆ. ಹೆಚ್ಚು ಪ್ರಯೋಜನವೇ ಆಗಲಿಲ್ಲ. ಎಲ್ಲ ಹುಡುಗರೂ ಹಾಗೇ ಮಾಡುತ್ತಾರೆ."

"ಅದಕ್ಕೇ ಪ್ರೊಫೆಸರ್ ಈಗಲ್‌ಟನ್ 'I abhor criticism' ಅಂತ ಹೇಳ್ತಿದ್ದರು. ಹುಡುಗರು ನಾಲ್ಕೈದು ಪುಸ್ತಕಗಳನ್ನಾದರೂ ಚೆನ್ನಾಗಿ ಓದಲಿ ಅಂತ ಹದಿನಾಲ್ಕು ಪುಸ್ತಕಗಳಲ್ಲಿ ಪ್ರಶ್ನೆ ಕೇಳಲು ಆರಂಭಿಸಿದರು."

"ಸರ್, 'ಸಾಹಿತ್ಯಿಕ' ಅನ್ನುವ ಪ್ರಯೋಗ ಸರಿಯೆ?"

"Pedantic. ಮುಗಳಿ ಮುಂತಾದ ಪಂಡಿತರು abstract form ಹಾಗಿರಬೇಕು ಅಂತ ಹೇಳ್ತಾರೆ. ಬಳಕೆಯಲ್ಲಿ ಬಂದಿರುವಾಗ 'ಸಾಹಿತಿ' ಅಂತ ಯಾಕೆ ಇಟ್ಟುಕೊಳ್ಳಬಾರದು? 'ಸಾಹಿತಿ' ಅಂದರೆ 'ಸರಸ್ವತಿ' ಅಂತಲೇ ಸಂಸ್ಕೃತದಲ್ಲಿ ಉಪಯೋಗಿಸ್ತಾರೆ. 'ಸಾಹಿತೀ ರಸವತೀ.....' ಮುಂದೇನೋ ಮರೆತಿದೆ. ಹಾಗೆಲ್ಲ ನೋಡೋದಾದ್ರೆ 'ಸಾಹಾಯ್ಯ' ಅಂತ ಹೇಳಬೇಕಾಗುತ್ತೆ. Judgement ಅನ್ನೋದರಲ್ಲಿ ಕೆಲವು ಸಾರಿ 'e' ಬಿಟ್ಟೇ ಹೋಗುತ್ತೆ. 'Psycho-analysis' ಹೇಗಾಗುತ್ತೆ? 'Psyche–analysis ಆಗಬೇಕು' ಅಂತ ಕೆಲವರು. ಭಾಷೆಯಲ್ಲಿ ಬಂದು ಹೋಗಿದೆ. 'ಸಣ್ಣಿಸು' ಅಂತಿರುವುದಕ್ಕೆ 'ದೊಡ್ಡಿಸು' ಅಂತ ಮಾಡ್ತಾರೆ. ಆ ಸಂದರ್ಭಕ್ಕೆ ಹೊಂದುವುದಾದರೆ, ವಿಶೇಷ ಅರ್ಥ ಕೊಡುವುದಾದರೆ, ಅಲ್ಲಿಗೆ ಬೇರೆ ಪದ ನಿಲ್ಲದೆ ಹೋದರೆ ಯಾಕೆ ಉಪಯೋಗಿಸಬಾರದು? ಸರಿಯಾಗಿ ಕಂಡದ್ದು pass ಆಗಿ ಹೋಗುತ್ತೆ." ಸ್ವಲ್ಪ ಹೊತ್ತು ಸುಮ್ಮನೆ ಕುಳಿತಿದ್ದೆವು.

"ನಿನ್ನೆ ರಾತ್ರಿ ಹತ್ತು ಗಂಟೆಯಿಂದ ಮನೆ ಬಿಟ್ಟು ಆಚೆ ಹೋಗಿಲ್ಲ. As a dead person I am lying. Dead to the outer world.... It is a fine experience" ಎಂದು ನಕ್ಕರು.

ವಿ.ಸೀ. ನಕ್ಕಾಗ ತುಂಬ ಚೆನ್ನ. ಬೂಟಾಟಿಕೆಯ ನಗು ಅದಲ್ಲ. ಅನುಭವ, ಪಾಂಡಿತ್ಯ, ವಯಸ್ಸು ಎಷ್ಟು ತುಂಬಿದೆಯೊ ನಗೆಯೂ ಅಷ್ಟೇ ತುಂಬಿ ಬಂದಿದೆ ಅವರಲ್ಲಿ.

"ಸ್ವಲ್ಪ ಇರಿ, ಮುಖ ತೊಳೆದು ಬರ್ತೇನೆ" ಎಂದು ಒಳಗೆ ಹೋದರು. ಅವರ

'ಕವಿ ಕಾವ್ಯ ದೃಷ್ಟಿ' ಓದುತ್ತ ಕುಳಿತುಕೊಂಡೆ. ಮನುಷ್ಯ ಹೇಗೋ ಹಾಗೆ, ಮಾತು ಹೇಗೋ ಹಾಗೆ, ಇರುವ ಶೈಲಿ ನೋಡಿದೆ. ವಯಸ್ಸಿಗೆ ತಕ್ಕಂತೆ ಬಂದ ಕೆಲವು ಮಾತು ಹುಡುಗನಾದ ನನಗೆ ನಗೆ ತಂದವು.

ವಿ.ಸೀ. ಬಂದರು. "ಹೊರಗೆ ಮಳೆ ಬರುತ್ತಿದೆಯೆ?" ಅಂತ ಕೇಳಿದರು. "Gloomy weather. ಮಳೆ ಬರಲಾರದು" ಎಂದೆ. ಎಂದಿನಂತೆ ಕೋಟು ಪೇಟ ಧರಿಸಿ, ಛತ್ರಿ ಹಿಡಿದು ಟ್ರಿಮ್ಮಾಗಿ ಹೊರಟರು.

ಹೋಗುವಾಗ ತಾಯಿಗೆ "ಅಮ್ಮ ಆಚೆಗೆ ಹೋಗಿ ಬರ್ತೇನೆ" ಎಂದು ಹೇಳಿದರು. ತಾಯಿಗೆ ಕೇಳಿಸಲಿಲ್ಲ. ಸ್ವಲ್ಪ ಹೊತ್ತು ಬಾಗಿಲಲ್ಲೇ ನಿಂತರು. ತಾಯಿಯ ಬಳಿ ಇದ್ದವರಾರೊ, ವಿ.ಸೀ. ಹೊರಟಿರುವುದನ್ನು ಅವರ ತಾಯಿಗೆ ತಿಳಿಸಿದರು. ವಿ.ಸೀ. ಸನ್ನೆ ಮಾಡಿ ತಿಳಿಸಿ ಬಂದರು.

ಪರಿಷತ್ತಿನ ಕಡೆ ಹೋಗುವ ದಾರಿಯಲ್ಲಿ "ಒಂದು ನಾಟಕ ಓದಿದರೆ, ಒಂದು ನಾಟಕ ಮನಸ್ಸಿನಲ್ಲಿಯೇ ಓದಿದರೆ, ಆಡಿದರೆ ಆಗುವ ಪರಿಣಾಮ ಬೇರೆ ಬೇರೆ. ಒಂದೊಂದರಲ್ಲೂ ಯಾವುದು ಕೊರತೆ ಅಂತ ನೋಡಬೇಕು. ಆಡಿದಾಗ, ಕೆಲವೊಮ್ಮೆ ನಟರು ತಾವೇ ಏನನ್ನೋ ಸೇರಿಸುತ್ತಾರೆ. ಪುಸ್ತಕದಲ್ಲಿ ಬರೆದ ಸಂಭಾಷಣೆ ಅದಕ್ಕೆ ಪೋಷಕವಾಗಿದೆಯೇ ಅಂತ ನೋಡಬೇಕು. ಅನುಭವ ತುಂಬಿ ಬರಬೇಕು" ಅಂದರು.

ಪರಿಷತ್ತು ಬಂತು. ನಮಸ್ಕರಿಸಿ ಹೊರಟು ಬಂದೆ.

Appendix

ನಾವು ಮಾತಾಡುತ್ತಿದ್ದಾಗ ಅವರ ಆರೇಳು ವರ್ಷದ ಮಗಳು ಬಂದು 'ಮಾವಯ್ಯ' ಅಂದಳು. ಕರೆದು ಮೈಮೇಲೆ ಮಲಗಿಸಿಕೊಂಡರು.

'ಮಾವಯ್ಯ ಅನ್ನುತ್ತಾಳಾ' ಎಂದು ಕೇಳಿದೆ.

'ಹುಂ. ನನ್ನ ತಂಗಿ ಮಕ್ಕಳು ಮಾವಯ್ಯ ಅನ್ನುತ್ತಿದ್ದರು. ಈಕೆಯೂ ಅಮ್ಮನಿಗೆ ಅತ್ತೆ, ನನಗೆ ಮಾವಯ್ಯ ಅನ್ನುತ್ತಾಳೆ' ಎಂದು ಅವಳ ಕಡೆ ತಿರುಗಿ "ಏನಮ್ಮ ಮೂರು ಕಾಸು ಏನು ಮಾಡಿದಿ?" ಅಂತ ಕೇಳಿದರು.

"ಮೇಡಂ ಕೈಗೆ ಕೊಟ್ಟೆ."

"ಯಾಕೆ ನಿಮ್ಮೇಡಮ್ಮಂಗೆ?"

"ಸರಸ್ವತೀ ಪೂಜೆಗೆ"

"ಮೂರು ಕಾಸಾ, ಸಾಕಾ?" ಎಂದು ನಕ್ಕರು.

* * *

ವಿ.ಸೀ. ಕಂಡರೆ ನನಗೆ ರಾಜರತ್ನಂಗಿಂತ ಹೆಚ್ಚು ವಿಶ್ವಾಸ, ಆತ್ಮೀಯತೆ. ರಾಜರತ್ನಂ ಯಾರನ್ನೂ ಹೆಚ್ಚು ಹತ್ತಿರ ಸೇರಿಸುವುದಿಲ್ಲ. ಮನೆಗಂತೂ ಯಾರೂ ಬರದಂತೆ

ನೋಡಿಕೊಳ್ಳುತ್ತಾರೆ. ತಮ್ಮ ಪುಸ್ತಕಗಳನ್ನಂತೂ ಹೊರಗೆ ಕೊಡುವ ಅಭ್ಯಾಸವನ್ನೇ ಇಟ್ಟಿಲ್ಲ. ವಿ.ಸೀ. ಹಾಗಲ್ಲ. ಅದಕ್ಕೇ ಅವರಲ್ಲಿ ಹೆಚ್ಚು ಅಭಿಮಾನವೋ ಏನೊ.

ಅವರೆದುರಿಗಿದ್ದಾಗ ಗಾಂಭೀರ್ಯದೆದುರು ಕುಳಿತವನಂತೆ – ಭಯವಂತೂ ಅಲ್ಲ – ಎಲ್ಲಿ ಅಪಚಾರವಾಗುವುದೊ ಎಂಬ ಅಂಜಿಕೆ. ನನಗಂತೂ ಅವರ ಜೊತೆಗಿದ್ದಾಗ ತುಂಬ ಸಂತೋಷವಾಗುತ್ತದೆ, ಕಾವ್ಯ ಓದಿದ ಅನುಭವವಾಗುತ್ತದೆ. ಸಮುದ್ರವನ್ನಂತೂ ನಾನು ನೋಡಿಲ್ಲ. ಆದರೆ ವಿ.ಸೀ. ಯವರ ತುಂಬು ಗಾಂಭೀರ್ಯದೆದುರು ಸಮುದ್ರ ಬಹುಶಃ ಹೀಗಿರಬಹುದೇ ಅಂದುಕೊಂಡಿದ್ದೇನೆ.

* * *

ವಿ.ಸೀ. ಯವರು ಒಂದು ನಾಟಕ ನಿರ್ದೇಶಿಸಿದ್ದರು ಅಂತ ಕಾಣುತ್ತೆ. ನಾನು ಅದನ್ನು ಟೀಕಿಸಿ ಯಾವುದೋ ಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆದಿದ್ದೆ ಅಂತ ಕಾಣುತ್ತೆ. ನಾನು ವಿ.ಸೀ. ಯವರ ಮನೆಗೆ Randolph Jarrel ಬರೆದ Poetry and the Age ಪುಸ್ತಕವನ್ನು ಹಿಂತಿರುಗಿಸಲಿಕ್ಕೆ ಹೋದಾಗ ೧೧.೮.೫೬ ರಂದು ವಿ.ಸೀ. ಯವರು ನನ್ನನ್ನು ಥರಾಟೆಗೆ ತೆಗೆದುಕೊಂಡರು.

"ಏನಪ್ಪ ನೀವು ಬರೆಯೋದು? ಮೊನ್ನೆ ಯಾರೋ ನಿಮ್ಮ ಕಾಗದ ತೋರಿಸಿದರು. It is simply clever. You want to be clever. ಯಾಕಪ್ಪ ಎಲ್ಲ insinuations? 'ಕವಿಗಳೇ ಡೈರೆಕ್ಟ್ ಮಾಡಿದ್ದಕ್ಕೆ ಹಾಗಿರಬೇಕು. ತಜ್ಞರೇ ಮುಂಚೆ ನೋಡಲಿಲ್ಲವೆ?' ಎಂದೆಲ್ಲ ಅಂದರೆ ಏನರ್ಥ? Why do you want to be personal? Why don't you be generous? No, no, this is not Criticism" ಅಂದರು ವಿ.ಸೀ.

ಅದಕ್ಕೆ ನಾನು ಹೇಳಿದೆ "ಅಲ್ಲ ಸರ್, ಪ್ರೋಗ್ರಾಂ ನನಗೆ ಚೆನ್ನಾಗಿ ಕಾಣಿಸಲಿಲ್ಲ. ಅದನ್ನ ನಾನು ಹೇಳಿದ್ದೆ. ಎಲ್ಲಿ ಚೆನ್ನಾಗಿರಲಿಲ್ಲ ಅಂತಾನೂ ಹೇಳಿದೆ. ಚೆನ್ನಾಗಿದ್ದದ್ದನ್ನೂ ಹೇಳಿದ್ದೇನೆ. ಆ ಕವಿತೆಗಳು ಚೆನ್ನಾಗಿರಲಿಲ್ಲ ಅಂತ ನಾನೇನು ಹೇಳಿರಲಿಲ್ಲ. First class ಆಗಿವೆ. ಆದರೆ performance ವಿಷಯ ನಾನು ಹೇಳಿದ್ದು."

"ಅಲ್ಲಪ್ಪ performance ಅಂತೀರಲ್ಲ. ಏನು performance? ಸರೋಜಾದೇವಿ ತೊಗೊಂಡಿದ್ವಿ, ಲಲಿತಾ ಶಿವರಾಂ ತೊಗೊಂಡಿದ್ವಿ. ತಾಳಕ್ಕೆ ಗಮನ ಕೊಟ್ಟಿದ್ರಿ ಅಂದ್ರೆ. What do you know about classical music? ಏನು ಸಂಪ್ರದಾಯ ಅಂದ್ರೆ? ಹಳೆಯ ರೀತಿ, ಹೊಸ ರೀತಿ ಎರಡನ್ನೂ ತರಲಿಕ್ಕೆ ಪ್ರಯತ್ನಿಸಿದೀವಿ. That is the best we can do. The poet is satisfied. I am satisfied. ನಾವೇನು ಮಾಡಲಿಕ್ಕೆ ಆಗುತ್ತೆ? ಸರಿಯಾಗಿ Practice ಗೆ ಬರೋಲ್ಲ. ೯ ರಿಂದ ೧೧ಕ್ಕೆ ನಾನು ಹೋಗಲಿಕ್ಕೆ ಆಗೋಲ್ಲ. ೩ ರಿಂದ ೪ಕ್ಕೆ ಅವರಿಗೆ ಆಫೀಸ್ ಅವರ್ಸು. ಸಾಯಂಕಾಲ ನಮ್ಮ ಕೆಲಸ ಮುಗಿದಿರುತ್ತೆ. ಏನಪ್ಪ ಮಾಡೋಣ? You should know our limitations. ಇದ್ದಿದ್ದರಲ್ಲಿ ಒಳ್ಳೆಯದನ್ನು ಮಾಡ್ಲಿಕ್ಕೆ ನೋಡ್ತೀವಿ."

"ಅದೆಲ್ಲ ನನಗೆ ಹೇಗೆ ತಿಳೀಬೇಕು ಸರ್."

"ನನ್ನನ್ನ ಕೇಳಿ. ತಿಳೀದೇ ಬರ್ಯೋದಕ್ಕೆ prejudice ಅನ್ನೋದು. ನೋಡಿದೋರು ಏನಂದ್ಕೋತಾರೆ? ಏ, ಮಟ್ಟ ಹಾಕಿದಾರೆ ಅಂತಾರೆ. ನೋಡಿ ಅಲ್ಲಿಗೆ ಎಷ್ಟೋ ಜನ ಬರ್ತಾರೆ. I am like a midwife ಕೆಲವು ಚೆನ್ನಾಗಿ ಬರ್ತವೆ. ಇನ್ನು ಕೆಲವಕ್ಕೆ ಕಿವಿ ಇರೋಲ್ಲ. ಕೆಲವಕ್ಕೆ ಮೂಗಿರೋಲ್ಲ. ಏನಪ್ಪ ಮಾಡೋದು? Even the creation is imperfect. That is a limit to God's omnipotence. ನಿಮಗೆ ನಾಳೆ ಒಂದೆರಡು features ಕೊಡ್ತೀನಿ. I will give you the best musicians, best actors. ನೀವು direct ಮಾಡಿ."

"ಅಲ್ಲ ಸರ್, ನಾನು ಒಂದು ಪದ್ಯ ಚನ್ನಾಗಿಲ್ಲ ಅಂತ ಹೇಳಬಲ್ಲೆ. ನೀನು ಅಂತಹ ಪದ್ಯ ಬರಿ ಅಂದರೆ?"

"ಹಾಗಲ್ಲಪ್ಪ ನಿಮಗೆ challenge ಅಲ್ಲ, ಮಾಡ್ತಿರೋದು" ಅಂತ ವಿ.ಸೀ.ಯವರು ಹೇಳ್ತಿದ್ದಾಗ, ಅಲ್ಲೇ ಕುಳಿತಿದ್ದ ಬಿ. ಎಸ್. ರಾಮರಾಯರು "ನೀವು ಮಾಡಿ ತೋರಿಸಿ" ಅಂದರು.

"ಅದೇ ಸರ್ ನಾನು ಹೇಳೋದು. ನನಗೆ ಸಂಗೀತದಲ್ಲಿ ಪರಿಶ್ರಮ ಇಲ್ಲ. ಆದರೆ ಒಳ್ಳೇದು ಕೆಟ್ಟದು ಅನ್ನುವುದನ್ನು ನಾನು ಹೇಳಬಲ್ಲೆ." ಅಂದೆ.

ಆಗ ವಿ.ಸೀ.ಯವರು "I didn't expect such a thing from you, Sumatheendra Nadig. You can do better things. ಸುಮ್ನೆ newspapers columns ಗೆ ಬರೀತಾ time ಯಾಕೆ waste ಮಾಡ್ಕೋತೀರ? I never wrote to newspapers. ನಾನು ಯಾವ newspapers ಗೂ ಬೆಲೆ ಕೊಡೋಲ್ಲ. Not even for thousand Deccan Heralds and hundred Hindus. I have quarreled many a time with the Editor of Hindu. ನನಗೇನಪ್ಪ, ಕೆಟ್ಟದು ತರಬೇಕು ಅಂತ ಇದೆಯ? ಚೆನ್ನಾಗಿಲ್ಲ, ಚೆನ್ನಾಗಿಲ್ಲ ಅಂತ ಕೂಗಿದರೆ, ಬರೀರಿ ನಮ್ಮನ್ನ ಕೆಲಸಕ್ಕೆ ಕರೆದವರಿಗೆ ಬುದ್ಧಿ ಇಲ್ಲಾಂತ. ನಾನೇನು ಕೆಲಸಕ್ಕೆ ಕೇಳಲಿಲ್ಲ. ಅವರೇ ಕರೆಸಿದರು. ನನಗೆ ಕನ್ನಡದಲ್ಲಿ ಪ್ರೀತಿ ಇದೆ. ಒಳ್ಳೇದು ಮಾಡಬೇಕು ಅಂತ ಇದೆ. ಅದಕ್ಕೋಸ್ಕರ ಒಪ್ಪಿಕೊಂಡೆ. ಜೊತೆಯಲ್ಲಿ ಏನೋ ನನ್ನ ಜೀವನಕ್ಕೂ ಸ್ವಲ್ಪ ಸಹಾಯ ಆಗುತ್ತೆ. ನಾನು ಹೀಗೆ ಹೇಳಿದೆ ಅಂತ ಬೇಜಾರು ಮಾಡಿಕೋಬೇಡಿ. ನಾನು ಹೇಳಬಾರದು ಅಂತಾನೂ ಅಂದುಕೊಂಡೆ. But I don't want to be dishonest at this age."

"ನೀವು ಹೇಳೋದು ಸರಿ, ಸರ್."

"This is always the case, Sumatheendra. The first thing the adolescents do is to call their fathers donkeys. ಎಲ್ಲ ಕಾಲದಲ್ಲೂ ಹೀಗೇನೆ"– ಅಂದು ಆಮೇಲೆ ನಗುತ್ತ "I am in one of my nastiest moods today. ನೀವು ಗ್ರಹಚಾರ ಕಾಡಿ ಬೆಳಿಗ್ಗೇನೆ ಬಂದಿದೀರ" ಅಂದರು. "ಏನೂ ಇಲ್ಲ ಸರ್. ನೀವು ಹೇಳಬೇಕಾದ್ದನ್ನ ಹೇಳಿದೀರಿ. ನನಗೇನೂ ಬೇಜಾರಿಲ್ಲ. ತಪ್ಪಿದ್ದರೆ ಯಾವಾಗಲೂ ತಿದ್ದಿಕೊಳ್ಳಲಿಕ್ಕೆ ನಾನು ಸಿದ್ಧ. ನನಗೂ ಸಹ ಮಾಡೋದನ್ನೆಲ್ಲ ಒಳ್ಳೇದೇ ಮಾಡಬೇಕು ಅಂತ ಇದೆ."

"Some of these people think that they are doing the best thing. Half-fried – ಈದೋವಲ್ಲ, ನೆಕ್ಕಿದೋವಲ್ಲ. We have known the literature of twenty languages. Clever ಆಗಿರೋದಕ್ಕೆ ನೋಡ್ತಾರೆ. ರಾಮಾಯಣದಿಂದ ನಾಲ್ಕು ಶ್ಲೋಕ ಎತ್ತಿ, ಕರೆ ಕಟ್ಟಿ, ಬಣ್ಣ ಹಾಕಿ, ಕುಸುರಿ ಕೆಲಸ ಮಾಡಿ, ಕಾಳಿದಾಸ ಮಾಡಿರೋ ಹಾಗೆ. ಅಲ್ಲ, ನಿಮ್ಮನ್ನು ಕುರಿತಲ್ಲ, ಈ ಮಾತು. But these people talk like that. You are yet young. You have got hundred years before you. ನೀವು ಇಲ್ಲಿಗೆ ಬರ್ತಾ ಇರ್ತೀರ ಅಂತ ಈ ಮಾತು ಹೇಳಿದೆ. ನಮ್ಮವರು ಅಂತ ಮಾತನಾಡೋದು ಅಷ್ಟೆ."

ನಾವು ಈ ಎಲ್ಲ ಚರ್ಚೆ ನಡೆಸಿದ್ದಾಗ ಯಾರೋ ಅಪ್ಪಣ್ಣ ಅಂತ ಒಬ್ಬ ಮುದುಕರು, Sanskrit audition ಗೆ ಹೋಗುತ್ತ, ಕನ್ನಡಕ್ಕೂ ಹೋಗಲು ಸಾಧ್ಯವೆ ಅಂತ ಕೇಳಲು ಬಂದಿದ್ದರು. ಇನ್ನೊಬ್ಬರು ಯಾರದೋ feature ಇದೆಯಂತೆ. ಅವರೂ ಬಂದಿದ್ದರು. ಅವರನ್ನೂ ಮಾತನಾಡಿಸುತ್ತ ವಿ.ಸೀ.ಯವರು ಇನ್ನೊಂದು ವಿಷಯ ಹೇಳಿದರು: "ಜಾಕ್ವೆಸ್ ಮ್ಯಾರಿಟೆಯ್ನ 'Creative Intuition in Art and Poetry ಓದುತ್ತಿದ್ದೇನೆ".

ನಾನು "ನೀವು ಓದಿಯಾದ ಮೇಲೆ ತೊಗೊಳ್ತೀನೆ" ಅಂದೆ.

ನಾನು ಹೊರಟಾಗ ವಿ.ಸೀ.ಯವರು "ಬೇಜಾರಾಯಿತೆ?" ಎಂದು ಕೇಳಿದರು. "ಇಲ್ಲ ಸರ್. ನಾಳೆ ನಾಡಿದ್ದರಲ್ಲಿ ಮತ್ತೆ ಬರುತ್ತೇನೆ" ಎಂದು ಹೇಳಿ ಬಂದೆ.

* * *

ವಿ.ಸೀ. ಯವರು ಹೇಳಿದ್ದು ಸರಿ. ನಾನು personal ಆಗಿ ಬರೆಯಬಾರದಿತ್ತು. 'ಚಿತ್ರಗುಪ್ತ'ದಲ್ಲಿ ಬರೆದದ್ದನ್ನು ನೋಡಿದರೆ, ಇನ್ನಷ್ಟು ರೇಗುತ್ತಾರೊ ಏನೊ. Even in my criticism I should be generous. I should study hard. I should do great things. I am for greater things.

* * *

೨೦.೯.೫೬ ಆಕಾಶವಾಣಿಯ ಆಫೀಸಿನಲ್ಲಿ ವಿ.ಸೀ.ಯವರನ್ನು ನೋಡಿದೆ. ಮೊದಲಿನ ವಿ.ಸೀ. ಅಲ್ಲ. "ಶರ್ಮರ feature ಹತ್ತು ನಿಮಿಷ ಆದ ಮೇಲೆ ಕೇಳಿದೆ" ಅಂದರು. "ಹೇಗಿದೆ ?" ಅಂತ ಕೇಳಿದೆ. "ಪೂರಾ ಕೇಳದೆ ಹೇಗಪ್ಪ ಹೇಳುವುದು" ಅಂದರು.

ಮೊದಲಿನ ವಿಶ್ವಾಸದ ರೀತಿ ಈಗಿಲ್ಲ. ಅಧಿಕಾರದ ವರ್ತನೆ ಅನ್ನಬಹುದೇನೊ. ನಾನು, ಶರ್ಮ ಅಡಿಗರ ಗುಂಪಿನ Spy ಇದ್ದ ಹಾಗೆ ವರ್ತಿಸಿದರು.

* * *

೨೧.೯.೫೬ ಬೆಳಿಗ್ಗೆ "ಸಾರಿಪುತ್ರನ ಕೊನೆಯ ದಿನಗಳು" ಓದಿದೆ. ಓದುತ್ತ ತುಂಬ

ಸಂತೋಷವಾಗಿ ಕಣ್ಣಿನಲ್ಲಿ ನೀರುಕ್ಕಿ ಹರಿಯಿತು. ನನಗೆ ಹಿಂದೆ ಎಷ್ಟೋ ಬಾರಿ ಸಂತೋಷ ಆದದ್ದುಂಟು. ಆದರೆ ಇಷ್ಟು ಸಂತೋಷ ಆಯಿತೇ? – ಅನಿಸುತ್ತದೆ. ನನ್ನ ಸ್ನೇಹಿತರ ಜೊತೆಗೆ ಮೈಗೆ ಮೈ ತಾಗಿಸಿ ಕುಳಿತಾಗ, ವಿ.ಸೀ.ಯವರ ಜೊತೆಗಿದ್ದಾಗ, ಪ್ರೀತಿಯ ಮಗುವೊಂದನ್ನು ಎತ್ತಿಕೊಂಡಾಗ, ಉತ್ತಮ ಭಾವ ಗೀತೆಯನ್ನು ಓದಿದಾಗ ಸಂತೋಷ ಆಗಿದೆ. ಆದರೆ ಇದು ಅವೆಲ್ಲಕ್ಕಿಂತ ದೊಡ್ಡದು ಎನ್ನುವಷ್ಟರ ಮಟ್ಟಿಗೆ ಸಂತೋಷವಾಗಿದೆ. ಮಾಸ್ತಿಯದೆಷ್ಟು ಹಿರಿಯ ಜೀವ. ಬುದ್ಧನನ್ನು ಅರ್ಥಮಾಡಿಕೊಂಡರು ಎನ್ನಲೆ? ಇಲ್ಲ, ಬದುಕನ್ನು ಅರ್ಥಮಾಡಿ ಕೊಂಡವರು ಎನ್ನುತ್ತೇನೆ. ಇಷ್ಟು ದಿನವಾದರೂ, ಬೆಂಗಳೂರಿಗೆ ಬಂದು ಮೂರು ವರ್ಷವಾದರೂ, ಅವರನ್ನು ಮಾತಾಡಿಸಿಲ್ಲವಲ್ಲ ನಾನು. ಮುಂದೆ ಇಂತಹ ಜನ ಸಿಗುವರೆ? ಸಿಕ್ಕಾರು. ಆದರೆ ಈಗ ಕಣ್ಣೆದುರು ಇದ್ದಾಗ....

Oh, how glad I am! How happy I am! I feel the fullness of life! ಎಲ್ಲರ ಎದುರಿಗೂ ಹೋಗಿ ಹೇಳಿಕೊಳ್ಳಲೆ ಎನಿಸಿದೆ. ನನಗಿಷ್ಟು ಸಂತೋಷವಾಯಿತಲ್ಲ ಎಂದು ಮತ್ತೆ ಸಂತೋಷ ಪಡುತ್ತಿದ್ದೇನೆ. ಇನ್ನೊಮ್ಮೆ ಓದೋಣ ಎನಿಸುತ್ತದೆ. ಈಗಲೇ ಓದಿದ ಸಂತೋಷವನ್ನು ಮೆಲುಕು ಹಾಕುವ ಸಂತೋಷ, ಓದಿದರೆ ಇನ್ನೊಮ್ಮೆ ಕಡಿಮೆಯಾದೀತೇನೊ ಅನಿಸುತ್ತದೆ.

ವಿ.ಸೀ.ಗೆ ನಾನು ಕೃತಜ್ಞ. ಕ್ಲಾಸಿನಲ್ಲಿ ವಿ.ಸೀ. 'ಯಶೋಧರಾ' ಪಾಠ ಮಾಡುವಾಗ ಈ ವಿಷಯ ಹೇಳದಿದ್ದರೆ, ಇದನ್ನು ಇಷ್ಟು ಬೇಗ ಓದುತ್ತಿದ್ದೆನೋ ಇಲ್ಲವೊ. ವಿ.ಸೀ. ಹೇಳಿದ್ದರು – "ಸಾರಿಪುತ್ರನ ಕೊನೆಯ ದಿನಗಳು", "ಯಶೋಧರಾ", "ಸುಬ್ಬಣ್ಣ" ಇವು ಮೂರು ಮಾಸ್ತಿ ಕಂಡ ಮಹಾಸಮಾಗಮಗಳು. ಒಂದಕ್ಕೊಂದಕ್ಕೆ ಹೋಲಿಸಿ ನೋಡಿ."

* * *

ಇದಿಷ್ಟನ್ನು ನಾನು ಡೈರಿಯಲ್ಲಿ ಬರೆದಿಟ್ಟಿದ್ದೆ. ಇದನ್ನೆಲ್ಲ ಓದಿದಾಗ, ನಾನು ಇನ್ನಷ್ಟನ್ನು ಬರೆದಿಡಬೇಕಿತ್ತು ಅನಿಸಿತು.

ಸಂಸ್ಕಾರ ಸಭ್ಯತೆಗಳ ಅಪೂರ್ವ ಚೇತನ

ಕೆ. ಎಸ್. ನಿಸಾರ್ ಅಹಮದ್

ವಿ.ಸೀ. ಅವರನ್ನು ನಾನು ಮೊದಲ ಸಲ ನೋಡಿದ್ದು ೧೯೫೨ರಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಎದುರು. ಯಾರೋ ಹಿರಿಯರೊಂದಿಗೆ ಮಾತಾಡುತ್ತ ನಿಂತಿದ್ದರು. ದೂರದಿಂದಲೇ ನಮಸ್ಕರಿಸಿದ್ದೆ. ಆಗ ನಾನು ಬೆಂಗಳೂರಿನ ಸರ್ಕಾರಿ ಇಂಟರ್ ಮೀಡಿಯೆಟ್ ಕಾಲೇಜಿನ ವಿದ್ಯಾರ್ಥಿ.

ಇದಕ್ಕೂ ಮುಂಚೆ ನಾನು ಹೊಸಕೋಟೆಯ ಮುನಿಸಿಪಲ್ ಪ್ರೌಢಶಾಲೆಯಲ್ಲಿ ಓದುತ್ತಿರುವ ಹೊತ್ತಿಗಾಗಲೇ ಅವರ ಕೆಲವು ಪದ್ಯಗಳು ಪಠ್ಯಪುಸ್ತಕದಲ್ಲಿ ಸೇರಿದ್ದವು. ಹೀಗಾಗಿ ಅವರ 'ಕೋಗಿಲೆ' 'ಮೃಗಶಾಲೆಯ ಸಿಂಹಗಳು' 'ಕಸ್ಮೈ ದೇವಾಯ' 'ಅಭೀ' ನನಗೆ ಮತ್ತು ನನ್ನ ಸಹಪಾಠಿಗಳಿಗೆ ಬಾಯಿಪಾಠವಾಗಿದ್ದವು. 'ಕೋಗಿಲೆ' ಪದ್ಯದ ಈ ಪ್ರಾರಂಭಿಕ ಸಾಲುಗಳು ಯೌವನಪೂರ್ವ ವಯಸ್ಸಿನ ಮೇಲೆ ಮೂಡಿಸಿದ್ದ ಭಾವತೀವ್ರತೆಯ ಪಡುಹ, ಚಿತ್ರಿಸಿದ್ದ ಆವರಣದ ಗುಂಗು ಬಹುಕಾಲ ಅಚ್ಚಳಿಯದೆ ಚಿತ್ತದಲ್ಲಿ ನೆಲಸಿತ್ತು:

ಹಿರಿಮಂಜು ಬಿಟ್ಟಿಲ್ಲ
ಚಳಿಗಾಲ ನಿಂತಿಲ್ಲ
ಮೈ ನಡುಕ ಹೋಗಿಲ್ಲ
ಇಬ್ಬನಿಯು ಸುರಿಮಳೆಯ ನಿಲ್ಲಿಸಿಲ್ಲ;
ಶಿಶಿರ ಸಾಮ್ರಾಜ್ಯಕ್ಕೆ ಚ್ಯುತಿಯು ಬಂದಿಲ್ಲ;
ಚ್ಯುತಿ ಬರುವುದೆಂಬೊಂದು ಚಿಹ್ನೆಯಿಲ್ಲ.

ಆಮೇಲೆ ಓದಿದ 'ಲಾಲ್‌ಬಾಗ್' 'ಕಾರಂಜಿಕೆರೆ ದಾರಿ' 'ಶತಂ ಜೀವೇಮ ಶರದಃ' 'ಗಡಿದಾಟು' ನನ್ನ ಮನಸ್ಸಿಗೆ ನೀಡಿದ ನಲಿವು, ತಿಳಿವು ಬಣ್ಣಿಸಲು ಅಸದಳವಾದಂಥವು. ನನ್ನ ಮನಸ್ಸು ಯಾವುದಾದರೂ ವಿಷಯದಿಂದ ಘಾಸಿಗೊಂಡಾಗ 'ಕಾರಂಜಿಕೆರೆ ದಾರಿ'ಯ ಚಿತ್ರದ ಕಲ್ಪನೆ ನೀಡುತ್ತಿದ್ದ ಸಾಂತ್ವನವೂ ಅಷ್ಟೆ, ಮಾತಿಗೆ ಮೀರಿದ್ದು.

೧೯೫೪ರ ವೇಳೆಗೆ ನಾನು ಭೂ ವಿಜ್ಞಾನದ ಬಿ.ಎಸ್ಸಿ. ಆನರ್ಸ್ ವಿದ್ಯಾರ್ಥಿಯಾಗಿ ಸೆಂಟ್ರಲ್ ಕಾಲೇಜನ್ನು ಸೇರಿದಾಗ ವಿ.ಸೀ. ನನ್ನ ಮೇಷ್ಟರಾದರು. ಅವರು ಶರಚ್ಚಂದ್ರರ 'ವಿಪ್ರದಾಸ' ಕಾದಂಬರಿಯ ಕನ್ನಡಾನುವಾದವನ್ನು ಬೋಧಿಸುತ್ತಿದ್ದರು. ಅದು ನಮಗೆ

ಅವಿಸ್ತೃತ ಪಠ್ಯ (Non-detail) ವಾಗಿತ್ತು. ಆದರೆ ವಿ.ಸೀ. ಅವರು ತಮ್ಮ ಪಾಠದ ವೈಖರಿಯಿಂದ ಅದನ್ನು detail ಆಗಿಸಿದ್ದರು.

ಸೆಂಟ್ರಲ್ ಕಾಲೇಜಿನ ಸೆನೆಟ್‌ಹಾಲ್ ಎಂದು ಈಗ ಕರೆಯಲ್ಪಡುವ ಕಟ್ಟಡ ಆಗ ಮ್ಯಾಥೆಮ್ಯಾಟಿಕ್ಸ್ ಬ್ಲಾಕ್ ಎಂದು ಪರಿಚಿತವಾಗಿತ್ತು. ಕನ್ನಡ ಮೊದಲುಗೊಂಡು ಎಲ್ಲ ಭಾಷೆಗಳ ತರಗತಿಗಳು ನಡೆಯುತ್ತಿದ್ದುದು ಈ ಕಟ್ಟಡದಲ್ಲಿ. ವಿ.ಸೀ. ಅವರೊಡನೆ ಜಿ. ಪಿ. ರಾಜರತ್ನಂ ಸಹ ನಮಗೆ ಮೇಷ್ಟರಾಗಿದ್ದರು. ಅವರು ಸಂಸ್ಕೃತದ ದಿಙ್ನಾಗ ಕವಿಯ 'ಕುಂದಮಾಲೆ' ನಾಟಕದ ಅನುವಾದವನ್ನು, ಜಿ. ಹನುಮಂತರಾಯರ 'ವಿಜ್ಞಾನ'ವನ್ನು ಪಾಠ ಹೇಳುತ್ತಿದ್ದರು.

ವಿ.ಸೀ. ಮತ್ತು ರಾಜರತ್ನಂ ಅವರ ಪಾಠಕ್ರಮ ಭಿನ್ನ ಹಾಗೂ ಸ್ವವಿಶಿಷ್ಟವಾಗಿತ್ತು. ರಾಜರತ್ನಂ ಪುಸ್ತಕದ ಸಾಲುಸಾಲನ್ನೂ ಓದಿ ಅರ್ಥವಿವರಣೆ ಮಾಡಿ ಮುನ್ನಾಗುತ್ತಿದ್ದರೆ, ವಿ.ಸೀ. ಒಂದು ಪುಟವನ್ನೊ ಅರ್ಧವನ್ನೊ ಓದಿ, ಪುಸ್ತಕವನ್ನು ಮುಚ್ಚಿ ಒಟ್ಟಂದದ ಅಭಿಪ್ರಾಯವನ್ನು ಮಂಡಿಸುತ್ತಿದ್ದರು. ಎಷ್ಟೋ ಸಲ ಅವರ ಪಾಲಿಗೆ ಪುಸ್ತಕ ಒಂದು ನೆಪ ಮಾತ್ರವಾಗಿರುತ್ತಿತ್ತು. ಅವರ ಅಗಾಧವಾದ ವ್ಯಾಸಂಗ, ವಿದ್ವತ್ತು ಮತ್ತು ಪ್ರಖರ ವಿಮರ್ಶಾ ವಿಚಾರಗಳ ಪ್ರಕಾಶನಕ್ಕೆ ಒಂದು ಮಾಧ್ಯಮವೋ ಎನ್ನಿಸುತ್ತಿತ್ತು.

ಅವರು ಇಡೀ ವರ್ಷ ಪಾಠ ಹೇಳಿದ್ದರೂ, ಕಾದಂಬರಿಯ ಪಾತ್ರ ವಿಶ್ಲೇಷಣೆ, ಕಥಾ ವಿನ್ಯಾಸ, ನಿರೂಪಣೆಗಳ ಬಗ್ಗೆ ಆಳವಾಗಿ ವಿಚಾರ ನಡೆಸಿದ್ದರೂ ನಮಗೆ ತುಂಬ ಮೆಚ್ಚಿಗೆಯಾದದ್ದು, ಮನಸ್ಸಿನಲ್ಲಿ ಉಳಿದದ್ದು ಅವರ ತಡೆ ಅರಿಯದ ವಾಕ್ಪ್ರವಾಹ, ಪಾಶ್ಚಾತ್ಯ ಕವಿ ವಿಮರ್ಶಕರ ಬಗೆಗಿನ ಅಪಾರ ಜ್ಞಾನ ಹಾಗೂ ಹೃದ್ಯವೆನ್ನಿಸುತ್ತಿದ್ದ ಅವರ ವಾಕ್ಯಗಳ ಅವಿರತ ಉದ್ಧರಣೆ. ಒಟ್ಟಿನಲ್ಲಿ ಪಠ್ಯೇತರ ತಿಳಿವಳಿಕೆ. ನಿಗದಿತ ಪಠ್ಯದ ಬಗೆಗೆ ವಿದ್ಯಾರ್ಥಿಗಳ ತಿಳಿವನ್ನು ಹೆಚ್ಚಿಸುವುದಕ್ಕಿಂತ, ಅಥವಾ ಹೆಚ್ಚಿಸುವುದರ ಜೊತೆಗೆ ಜಗತ್ ಸಾಹಿತ್ಯದರ್ಶನ ಮಾಡಿಸಿದ್ದು ಅಧಿಕ ಲಾಭಕರವೆಂದು ಈಗ ಅನ್ನಿಸುತ್ತಿದೆ.

ರಾಜರತ್ನಂ ಅವರಿಗೆ ಹೋಲಿಸಿದರೆ ವಿ.ಸೀ. ಅವರದು ಸುತ್ತು ಬಳಸಿನ ಮಾರ್ಗ. ಎಷ್ಟೆಲ್ಲ ಸಂಗತಿಗಳು, ಎಂಥೆಂಥ ಪ್ರಸ್ತಾವಗಳು, ಏನೆಲ್ಲ ವಿಚಾರಗಳು! ಇವು ಬೋಧನೆಯ ವಿಷಯವನ್ನು ಮರೆಕಟ್ಟಿ ತಂತಾನೆ ಮೆರೆಯುತ್ತಿದ್ದುದು ನಿಜ. ಹಳಿ ತಪ್ಪಿದ ವಿಷಯ ಹೇಗೋ ಅಂತಿಮವಾಗಿ ಸರಿ ಹಾದಿಗೆ ಹತ್ತುತ್ತಿದ್ದುದು ನಿಜ. ಆ ಹೊತ್ತಿಗೆ ನಮಗೆ 'ಯಾವುಯಾವುದೋ ವಿಚಾರಗಳು ಯಾಕೆ ಬೇಕಾಗಿದ್ದವು?' ಎಂದು ಅನ್ನಿಸುತ್ತಿದ್ದುದು ನಿಜ. ಆದರೆ ಆಮೇಲೆ ಜ್ಞಾಪಿಸಿಕೊಂಡಾಗ ಅವೆಲ್ಲ ಎಂಥ ಜೀವೋತ್ಕರ್ಷಕ ಗುಣವುಳ್ಳವು ಎಂದೆನ್ನಿಸಿ ತೃಪ್ತಿ, ಮುದ ನೀಡುತ್ತಿದ್ದುದೂ ಅಷ್ಟೇ ನಿಜ.

ಹೀಗಾಗಿ ವಿ.ಸೀ. ಅವರ ಪಾಠ ಪುಸ್ತಕ ವಿಧೇಯವಾಗಿರಲಿಲ್ಲ. ಅವರದು ಇಕ್ಕೆಲದ ಮರಗಳ ನಡುವಣ ಸೀದಾ ರಸ್ತೆಯ ಪಯಣವಲ್ಲ. ಆಗುಂಬೆಯೊ ಚಾರ್ಮಾಡಿಯೊ ಘಾಟಿನಲ್ಲಿ ಪ್ರವಾಸಿಸಿದ ಅಪೂರ್ವಾನುಭವ. ನೇರತೆ ಅಲ್ಲಿ ವರ್ಜ್ಯ. ಅಸಂಖ್ಯ ತಿರುವುಗಳೇ ಸ್ವಾಭಾವಿಕ, ಅದೇಯ. ಆದರೆ ಅದು ಕಣ್ಣೆದುರು ಹಾಯಿಸುತ್ತಿದ್ದ ನೋಟದ ಭವ್ಯ ವಿಲಾಸ, ವೈವಿಧ್ಯ ವಿಭವ, ಅಕ್ಷತ ಸಮೃದ್ಧಿ ಅವಾಕ್ಕಾಗಿಸುವಂಥದ್ದು. ಹೂವೊಂದರ ಮಕರಂದದಿಂದ

ತೃಪ್ತಿ ಹೊಂದುವಂಥದ್ದೇ ಆ ಜೀವ? ಹತ್ತಾರು ಕಡೆ ಸುತ್ತಬೇಕು, ವಿವಿಧ ಆಕರಗಳಿಂದ ಮಧುಸಂಚಯ ಮಾಡಬೇಕು. ಅದರಿಂದ ತಾನು ಪಟ್ಟ ಸಂತಸ ಸಂತೃಪ್ತಿಗಳನ್ನು ಬೇರೆಯವರಿಗೂ ಹಂಚಬೇಕು ಎನ್ನುವ ನಿಃಸ್ವಾರ್ಥ ಔದಾರ್ಯದ್ದು.

ಪಾಠದ ಸಮಯದಲ್ಲಿ ಯಾವುದಾದರೂ ಒಂದು ಪದ ವಿಶೇಷವೊ ಭಾಷಿತವೊ ಕಂಡು ಬಂದರೆ, ವಿನಿಲ್ಲವೆಂದರೂ ನಾಲ್ಕೈದು ನಿಮಿಷ ವಿವರಣೆ ನೀಡುತ್ತಿದ್ದರು. ಅದರ ಕುಲ ಗೋತ್ರಾದಿ ಮೂಲ ಚೂಲವನ್ನೆಲ್ಲ ಪಾತಾಳಗರಡಿಯಂತೆ ಜಾಲಾಡಿಸಿ, ಮನದಟ್ಟು ಮಾಡಿಸುತ್ತಿದ್ದರು. ಉದಾಹರಣೆಗೆ 'ವಿಪ್ರದಾಸ' ಕಾದಂಬರಿಯಲ್ಲಿ ಒಂದು ಕಡೆ 'ಥರಾಟೆ' ಎನ್ನುವ ಪದ ಬರುತ್ತದೆ. ಈ ಪದದ ನಿಷ್ಪತ್ತಿ ಹೇಗೆ? ಮೂಲ ಎಲ್ಲಿನದು? ಮೂಲ ಪದಕ್ಕೂ ಈಗಿನ ಅದರ ಅವತಾರಕ್ಕೂ ಆಗಿರಬಹುದಾದ ಅರ್ಥವ್ಯತ್ಯಾಸ ಅತಿಶಯದ್ದೊ ಹೀನವಾದದ್ದೊ ಇತ್ಯಾದಿ ವಿವರಗಳನ್ನೆಲ್ಲ ವಿ.ಸೀ. ನೆನಪಿನಲ್ಲಿ ನಾಟುವಂತೆ ನಿರರ್ಗಳವಾಗಿ ನಿರೂಪಿಸುತ್ತಿದ್ದರು. 'ಥರಾಟೆ' ಎನ್ನುವ ಪದ ಇಂಥಿಂಥ ಲೇಖಕರ ಈ ಈ ಕೃತಿಗಳಲ್ಲಿ ಕೊಂಚ ಅರ್ಥ ವ್ಯತ್ಯಾಸದೊಂದಿಗೆ, 'ಥರಾಟೆ' ಎಂಬ ರೂಪವ್ಯತ್ಯಾಸದೊಂದಿಗೆ ಪ್ರಯೋಗಗೊಂಡಿದೆ. ಅದರ ಮೂಲ ಕನ್ನಡವಲ್ಲ, ಇಂಗ್ಲಿಷ್. 'ಅಥಾರಿಟಿ' ಎನ್ನುವುದು ಅಪಭ್ರಂಶವಾಗಿ ಕನ್ನಡದಲ್ಲಿ 'ಥರಾಟೆ'ಯ ಗತಿಗಿಳಿದಿದೆ– ಇತ್ಯಾದಿಯನ್ನು ಸ್ವಾರಸ್ಯವಾಗಿ ಬಯಾನಿಸುತ್ತಿದ್ದಾಗ, ನಾವೆಲ್ಲ ಪಾಠವನ್ನು ಮರೆತು ಮಂತ್ರಮುಗ್ಧರಾಗಿ ಆಲಿಸುತ್ತಿದ್ದೆವು. ಅವರೇ ಬೇರೊಂದು ಸಂದರ್ಭದಲ್ಲಿ ಬರೆದಿರುವಂತೆ 'ಮರಗಳನ್ನು ಎಣಿಸಲು ತೊಡಗಿ ಕಾಡಿನ ಸ್ವರೂಪ ಮರೆಯಾಗುತ್ತಿತ್ತು.'

ನಾನು ಸೂಚಿಸಿದಂತೆ ಅವರ ಪಾಠಕ್ರಮ ಪುಸ್ತಕ ವಿಧೇಯವಲ್ಲ, ಪರೀಕ್ಷಾಧ್ಯೇಯಿಯಲ್ಲ. ಅಷ್ಟನ್ನು ಯಾರು ಬೇಕಾದರೂ ಮಾಡಬಹುದು. ಈ ಸೀಮಿತೋದ್ದೇಶದ ಜೊತೆಗೆ ವಿದ್ಯಾರ್ಥಿಗಳ ಒಟ್ಟಂದದ ತಿಳಿವಿನ ಮೇರೆಯನ್ನು ಹಿಗ್ಗಿಸುವ ಅಮೋಘ ಕಾಯಕಕ್ಕೆ ಅವರ ಪಾಠ ವಿಧಾನ ಒಲಿದಿತ್ತು. ಹೀಗಾಗಿ ತಾತ್ಕಾಲಿಕ ನಫೆಗಷ್ಟೇ ತಣಿಯದೆ ನಮ್ಮ ಹೃನ್ಮನಗಳನ್ನು ಮಲರಿಸುವ, ವಿಚಾರಪರತೆಯನ್ನು ಬಲಿಸುವ ದೀರ್ಘಕಾಲಿಕ ಪ್ರಯೋಜನವನ್ನು ಒಳಕೊಂಡಿತ್ತು. ಒಟ್ಟಿನಲ್ಲಿ ಶುಚಿ, ಸದಭಿರುಚಿ, ತಿಳಿವಳಿಕೆಗಳನ್ನು ಮನಗಾಣಿಸುವ ನಿಟ್ಟಿನಲ್ಲಿ ವಿ.ಸೀ. ಅವರ ಪಾಠಕ್ರಮ ಸಾಗಿದಂತೆ ಭಾಸವಾಗುತ್ತಿತ್ತು, ಅಲ್ಲ, ಯಾತ್ರೆ ಕೈಗೊಂಡಂತೆ ಇರುತ್ತಿತ್ತು.

ವಿ.ಸೀ. ಸೆಂಟ್ರಲ್ ಕಾಲೇಜಿನ ಪ್ರತಿಷ್ಠಿತ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದರೂ, ರಾಜರತ್ನಂ ಅವರಂತೆ ಅದರ ಕಾರ್ಯಭಾರವನ್ನು ಹೊತ್ತು ಮೂರು ಹೊತ್ತೂ ಅದರ ಏಳಿಗೆಯ ಬಗೆಗೆ; ವಿದ್ಯಾರ್ಥಿಗಳಿಂದ ಲೇಖನಗಳನ್ನು ಬರೆಸಿ, ಭಾಷಣಗಳನ್ನು ಮಾಡಿಸಿ, ಅವರನ್ನು ತರಪೇತುಗೊಳಿಸುವ ಬಗೆಗೆ ತಲೆ ಕೆಡಿಸಿಕೊಂಡವರಲ್ಲ. ಸೆಂಟ್ರಲ್ ಕಾಲೇಜಿನ ಸಸ್ಯವಿಜ್ಞಾನ ಇಲಾಖೆಯ ಪುಟ್ಟ ಉದ್ಯಾನದ ಬದಿಗಿದ್ದ ರೈಲು ಬೋಗಿಯಂತಹ ಕಡಿಮೆ ಅಗಲದ ಉದ್ದನೆಯ ಕಟ್ಟಡ (ಗಡಿಯಾರದ ಹಿಂಬದಿಯ ಬಲಭಾಗ) ಕನ್ನಡ ಇಲಾಖೆ-cum–ಕರ್ನಾಟಕ ಸಂಘದ ಕಾರ್ಯ ನಿರ್ವಾಹಕ ಕಛೇರಿಯಾಗಿತ್ತು.

ಅದರೊಳಗೆ ಕಾಲಿಟ್ಟರೆ ಕಣ್ ಸೆಳೆಯುತ್ತಿದ್ದುದು ಸಂಘದ ಪ್ರಕಟಿತ ಪುಸ್ತಕಗಳ

ಕಟ್ಟುಗಳ ರಾಶಿ. ಆ 'ಲಂಬೋದರ' ಕಟ್ಟಡದ ನಡುವೆ ಕಮಾನಿನ ಆಕಾರದ ಗೋಡೆಯ ಮೇಲೆ ಡಾ|| ಎ. ಆರ್. ಕೃಷ್ಣಶಾಸ್ತ್ರೀಯವರ ಹರಯವಂತ ಹಸನ್ಮುಖಿ ಸ್ಫುರದ್ರೂಪಿ ಭಾವಚಿತ್ರ. ಹತ್ತಿರದಲ್ಲೇ ಆಚಾರ್ಯ 'ಶ್ರೀ' ಮತ್ತು ಟಿ. ಎಸ್. ವೆಂಕಣ್ಣಯ್ಯನವರು. ಇನ್ನೊಂದು ಕಡೆ ಗೋಡೆಗೆ ಅನಿಸಿದಂತೆ ಬೆದಕು ನೋಟದ, ನುಣ್ಣನೆಯ ಮಂಡೆಯ ಉಕ್ಕಿನಂಥ ಗಡಸು ಮುಖಮುದ್ರೆಯ ಸಂಸರ ಛಾಯಾಕೃತಿ. ಇದರ ಬದಿಗೆ ಕಿಟಕಿಯ ಪಕ್ಕ ವಿ.ಸೀ. ಕೂರುತ್ತಿದ್ದರು. ಅವರ ಹಿಂದೆ ಎಂಟು-ಹತ್ತು ಅಡಿ ದೂರದ ಹಿಂದಿನ ಜಾಗದಲ್ಲಿ ರಾಜರತ್ನಂ ಅವರ ಕುರ್ಚಿಯಿರುತ್ತಿತ್ತು.

ವಿ.ಸೀ. ಅವರ ಮೇಜಿನ ಮೇಲೆ ಓರಣವಾಗಿ ಜೋಡಿಸಿಟ್ಟ ಹಲವಾರು ಹೊತ್ತಗೆಗಳು ದೂರದಿಂದಲೇ ಗಮನ ಸೆಳೆಯುತ್ತಿದ್ದವು. ನಾನು ೧೯೫೪-೫೫ರ ಸಾಲಿನ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದರಿಂದ ಪದೇ ಪದೇ ಕನ್ನಡ ಇಲಾಖೆಗೆ ಹೋಗಿ ಬರುತ್ತಿದ್ದೆ. ಕಾಲಿಟ್ಟೊಡನೆ ಪ್ರತ್ಯಕ್ಷವಾಗುತ್ತಿದ್ದ ದೃಶ್ಯ ಶುಭ್ರ ರುಮಾಲುಧಾರಿ, ಗರಿಗರಿಯಾದ ಬಿಳಿಯುಡುಪಿನ ವಿ. ಸೀ. ಅವರದು. ಸದಾ ಯಾವುದಾದರೊಂದು ಗ್ರಂಥದಲ್ಲಿ ಮಗ್ನರಾಗಿರುತ್ತಿದ್ದರು. ಯಾರೇ ಬಂದು ಹೋದರೂ ಅವರಿಗೆ ಆ ಕಡೆ ಪರಿವೆ ಇರುತ್ತಿರಲಿಲ್ಲ. ಗುಂಪುಗೂಡಿ ಬರುವ ವಿದ್ಯಾರ್ಥಿಗಳ ಮಾತಿನ ಸದ್ದಿನಿಂದ ಕೆಲವು ವೇಳೆ ಅವರ ಏಕಾಗ್ರತೆಗೆ ಭಂಗ ತಟ್ಟುತ್ತಿತ್ತು. ಆಗ ಅವರಿಗೆ ಭಯಭಕ್ತಿಯಿಂದ ನಮಸ್ಕರಿಸಿ ಮೆಲ್ಲಗೆ ಮಾತಾಡುತ್ತ ಹೆಜ್ಜೆ ಸಪ್ಪಳವಾಗದ ಹಾಗೆ ವಿದ್ಯಾರ್ಥಿಗಳು ಹೊರ ಬರುತ್ತಿದ್ದರು.

ಕೆಲವೊಮ್ಮೆ ಅವರು ವಿಶೇಷ ವ್ಯಾಸಂಗವಾಗಿ ಕನ್ನಡವನ್ನು ಆಯ್ಕೆ ಮಾಡಿಕೊಂಡ ಇಬ್ಬರು ಮೂವರು ಇಂಗ್ಲೀಷ್ ಆನರ್ಸ್ ವಿದ್ಯಾರ್ಥಿಗಳಿಗೆ ಹಳಗನ್ನಡ ಕಾವ್ಯವನ್ನು ಇಲಾಖೆಯಲ್ಲೇ ಬೋಧಿಸುತ್ತಿದ್ದುದನ್ನು ಕಾಣಬಹುದಿತ್ತು. ತುಂಬಿದ ತರಗತಿಯಲ್ಲಾಗಲಿ, ಇಲಾಖೆಯ ಖಾಸಗಿ ಎಡೆಯಲ್ಲಾಗಲಿ, ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಮುಂತಾದ ಸಾರ್ವಜನಿಕ ಸಭೆಗಳಲ್ಲಾಗಲಿ ವಿ.ಸೀ. ಅಪ್ಪಿತಪ್ಪಿಯೂ ಆವೇಶ ಭರದಿಂದ ಅಬ್ಬರಿಸುತ್ತ ನಾಟಕೀಯವಾಗಿ ಉಪನ್ಯಸಿಸುತ್ತಿರಲಿಲ್ಲ. ಒಂದು ಗಂಭೀರ ಸೌಮ್ಯತೆ, ಉತ್ಸಾಹಗೊಂಡರೂ ಅದನ್ನು ಪ್ರದರ್ಶನಕ್ಕಿಡದ ವಿಹಿತ ಸಂಯಮ; ಹೆಚ್ಚು ಏರುತಗ್ಗಿಲ್ಲದ ಧ್ವನಿಯಾದರೂ ಏಕತಾನವೆನ್ನಿಸದಂತೆ, ಸುಸ್ಪಷ್ಟವಾಗಿ ಕೇಳಿಸುವಂತೆ ತರಬೇತುಗೊಂಡ ಕಂಠ; ಮಾತಿನ ನಡುವೆ ಅವಶ್ಯಕವೆನ್ನಿಸುವಷ್ಟು ಆಂಗಿಕ ಅಭಿನಯ ಮತ್ತು ಅವರಿಗೇ ವಿಶಿಷ್ಟವಾದ ತಿಳಿನಗೆಯ ತರಂಗಮಯ ಗಹಗಹಿಕೆ— ಇವು ಸಂಸ್ಕಾರ ಸಭ್ಯತೆಗಳನ್ನು ಮೂರ್ತೀಭವಿಸಿಕೊಂಡ ಅಪೂರ್ವ ಚೇತನವೊಂದರ ಪರಿಚಯಲಾಭ ಮಾಡಿಕೊಂಡಂತೆ ಮನಸ್ಸಿಗೆ ಆಪ್ಯಾಯನಕರವೆನ್ನಿಸುತ್ತಿತ್ತು.

ಅವರ ತರಗತಿಯಲ್ಲಿ ಕೇವಲ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳೇ ಇರುತ್ತಿರಲಿಲ್ಲ. ಬೆಂಗಳೂರಿನಲ್ಲಿ ಆ ಕಾಲದಲ್ಲಿದ್ದ ಕಾಲೇಜುಗಳ - ಬಸಪ್ಪ, (ಈಗಿನ ರೇಣುಕಾಚಾರ್ಯ ಕಾಲೇಜ್), ವಿಜಯ, ಸೆಂಯಿಟ್ ಜೋಸೆಫ್, ನ್ಯಾಷನಲ್, ಆಚಾರ್ಯ ಪಾಠಶಾಲಾ-ವಿದ್ಯಾರ್ಥಿಗಳು ಸಹ ವಿ.ಸೀ. ಅವರ ಪಾಠ ಕೇಳಲು ಬಂದು ಕೂಡುತ್ತಿದ್ದರು. ಮೊದಲೇ ನಮ್ಮದು ಎಲ್ಲ ಆನರ್ಸ್ ತರಗತಿಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಯುಕ್ತ ತರಗತಿ.

ಅದರ ಸಂಖ್ಯೆ ಅರವತ್ತು-ಎಪ್ಪತ್ತು. ಇದರ ಜೊತೆಗೆ ಈ ಇತರೇ ಕಾಲೇಜಿನ ಹುಡುಗರು ಬೇರೆ. ಹೀಗಾಗಿ ತರಗತಿ ಕಾಲಿಡಲು ಜಾಗವಿಲ್ಲದಂತೆ ತುಂಬಿ ತುಳುಕುತ್ತಿತ್ತು. ಐವರು ಕೂರುವ ಡೆಸ್ಕಿನಲ್ಲಿ ಏಳೆಂಟು ಮಂದಿ ಗಿಡಿದಿರುತ್ತಿದ್ದರು. ಎಡೆ ಸಾಲದೆ ಕಿಟಕಿಯ ಮುಂಬಾಚಿನ ಮೇಲೂ ಕೂತಿರುತ್ತಿದ್ದ ದೃಶ್ಯ ಈಗಲೂ ಕಣ್ಣಿಗೆ ಕಟ್ಟಿದಂತಿದೆ.

ಹೀಗೆ, ಇಡೀ ತರಗತಿ ನೆರೆಯೇರಿದಂತೆ ವಿಜೃಂಭಿಸುತ್ತಿದ್ದರೂ ಕಮಕ್‌ಕಿಮಕ್ ಅನ್ನದೆ, ಒಂದು ಗಂಟೆಯ ಅವಧಿ ಕಳೆದದ್ದೇ ಗೊತ್ತಾಗದೆ, ವಿದ್ಯಾರ್ಥಿಗಳು ವಿ.ಸೀ. ಅವರ ಪಾಠವನ್ನು ಆಲಿಸುತ್ತ ಕೂತಿರುತ್ತಿದ್ದರು. ಎರಡು ವರ್ಷಗಳ ಅವಧಿಯಲ್ಲಿ ಒಮ್ಮೆಯಾದರೂ ವಿ.ಸೀ. ಸಹನೆ ಕಳೆದುಕೊಂಡು ರೇಗಿದ್ದು ನನಗೆ ನೆನಪಿಲ್ಲ. ಪಾಠ ಪ್ರಾರಂಭಿಸಿದ ಮೇಲೆ ಅವರು ತಮ್ಮ ಮಾತು, ವಿಚಾರ, ವಿಶ್ಲೇಷಣೆ, ವಿವರಣೆಗಳಲ್ಲಿ ತಲ್ಲೀನರಾಗಿ ಬಿಡುತ್ತಿದ್ದರು. ಈ ವಿಷಯದಲ್ಲಿ ರಾಜರತ್ನಂ ಅವರು ವಿ.ಸೀ. ಗಿಂತ ಬೇರೆ. ರಾಜರತ್ನಂ ಕೆಲವು ವೇಳೆ ಎಷ್ಟು ಸರಸಪ್ರಕೃತಿಯವರೋ ಅಷ್ಟೇ ಶಿಸ್ತುಗಾರರು. ತರಗತಿಯಲ್ಲಿ ಚೂರೂ ಸದ್ದಾಗಿ ಅವರ ಉಪನ್ಯಾಸಕ್ಕೆ ಭಂಗ ತರಬಾರದು, ಪಾಠದ ಮಧ್ಯೆ ವಿದ್ಯಾರ್ಥಿಗಳು ಮಾತಾಡಕೂಡದು, ಪ್ರಶ್ನೆ ಕೇಳಬಾರದು. ಅವೇನಿದ್ದರೂ ಪಾಠ ಮುಗಿದ ಮೇಲೆ.

ವಿದ್ಯಾರ್ಥಿಗಳ ತುಂಟತನ, ಕೀಟಲೆ ರಾಜರತ್ನಂ ಅವರಿಗೆ ಬೇಜಾರು ಬರಿಸಿದರೆ, ಅವರು ಪುಸ್ತಕಕ್ಕೆ ಅಂಟಿದ ಕಣ್ಣನ್ನು ಕೀಳದೆ, ಒಮ್ಮೆಯಾದರೂ ವಿದ್ಯಾರ್ಥಿಗಳ ಕಡೆ ದೃಷ್ಟಿ ಹಾಯಿಸದೆ, ಒಂದು ಗಂಟೆಯ ಕಾಲ ಪುಸ್ತಕವನ್ನು ಪಟಪಟನೆ ಓದುತ್ತ, ಉಪಚಾರಕ್ಕೆಂಬಂತೆ ಅಲ್ಲೊಂದು ಇಲ್ಲೊಂದು ವಿವರಣೆ ನೀಡುತ್ತ ಪಾಠ ಮುಗಿಸುತ್ತಿದ್ದರು. ತಪ್ಪನ್ನು ಮನ್ನಿಸುವಂತೆ ವಿದ್ಯಾರ್ಥಿಗಳು ಕ್ಲಾಸಿನ ಹೊರಗಡೆಯೊ, ಅವರ ಕೊಠಡಿಯಲ್ಲೊ ಬೇಡಿಕೊಂಡಾಗ ಅವರು ಮುಂದಿನ ತರಗತಿಯಲ್ಲಿ ಕೊಂಚ ಪ್ರಸನ್ನರಾಗುತ್ತಿದ್ದರು. ಕರ್ನಾಟಕ ಸಂಘಕ್ಕೆ ತಕ್ಕಷ್ಟು ಸಂಖ್ಯೆಯಲ್ಲಿ ಸದಸ್ಯರಾಗದಿದ್ದಾಗಲೂ ರಾಜರತ್ನಂ ತಮ್ಮ ಅಸಮಾಧಾನವನ್ನು ವ್ಯಂಗ್ಯಮಿಶ್ರಿತ ಟೀಕಾಸ್ತ್ರದ ಮುಖೇನ ತೋಡಿಕೊಳ್ಳುತ್ತಿದ್ದರು.

ವಿ.ಸೀ. ಅವರ ಪಾಠದ ಮತ್ತೊಂದು ವಿಶೇಷವೆಂದರೆ, ಕನ್ನಡದ ಜೊತೆ ಹೊಯ್‌ಕಯ್ಯಾಗಿ ಸೊಂಪಾಗಿ ಮೆರೆಯುತ್ತಿದ್ದ ಇಂಗ್ಲೀಷಿನ ಬಳಕೆ. ಎಷ್ಟೋ ವೇಳೆ ಇವೆರಡರ ಪ್ರಮಾಣ ಪೃಥ್ವಿಯ ಮೇಲೆ ನೆಲ ಮತ್ತು ಕಡಲುಗಳ ಹಂಚಿಕೆಯಷ್ಟು ಇರುತ್ತಿದ್ದುದೂ ಉಂಟು. ಅವರ ಓತಪ್ರೋತ ಇಂಗ್ಲಿಷ್ ವಾಗ್ಝರಿ, ಕೇಳರಿಯದ ಪದಗಳ ಪುಷ್ಕಳ ಬಳಕೆ ಹಾಗೂ ಚಾಟುನುಡಿಗಳ ಮನೋಜ್ಞ ಉಲ್ಲೇಖ ವಿದ್ಯಾರ್ಥಿಗಳಿಗೆ ಮೋಡಿ ಹಾಕಿ ಮೈಮರೆಸಿ ಬಿಡುವ ಪರಿಣಾಮಕಾರಿತೆಯದು. ಕೆಲವು ಸಲ ನಮಗೆ 'ಇವರು ಇಂಗ್ಲೀಷ್ ಅಧ್ಯಾಪಕರಾಗಬಾರದಿತ್ತೆ?' ಎಂದು ಅನ್ನಿಸಿದ್ದುಂಟು.

ವಿ.ಸೀ. ವಿದ್ಯಾರ್ಥಿಗಳ ಜೊತೆ ಮಾತಾಡುತ್ತಿದ್ದುದು ಕಡಿಮೆ. ಅವರಾಯಿತು, ಅವರ ಪುಸ್ತಕಗಳಾಯಿತು. ಕೆಲವೊಮ್ಮೆ ಸೆಂಟ್ರಲ್ ಕಾಲೇಜಿಗೆ ಅತಿಥಿಗಳಾಗಿ ರಾಷ್ಟ್ರಮಟ್ಟದ, ಅಂತರಾಷ್ಟ್ರೀಯ ಮಟ್ಟದ ವ್ಯಕ್ತಿಗಳು ಬರುತ್ತಿದ್ದುದುಂಟು. ಇತರ ಇಲಾಖೆಗಳ ಅನೇಕ ಅಧ್ಯಾಪಕರು ಅಂಥವರ ಕಾರ್ಯಕ್ರಮಗಳಲ್ಲಿ ಸಭಿಕರಾಗಿ ಪಾಲ್ಗೊಳ್ಳುತ್ತಿದ್ದರು. ಆದರೆ ವಿ.ಸೀ. ಅಲ್ಲಿ ಕಾಣಿಸಿಕೊಳ್ಳುತ್ತಿದ್ದದ್ದು ವಿರಳಾತಿವಿರಳ. ನನಗೆ ನೆನಪಿದ್ದಂತೆ ಶಿವರಾಮ

ಕಾರಂತರು, ನಮ್ಮ ಮುಂದಿನ ತರಗತಿಗೆ ಪಠ್ಯವಾಗಿದ್ದ ಅವರ "ಕುಡಿಯರ ಕೂಸು" ಕಾದಂಬರಿಯ ಬಗೆಗೆ ಉಪನ್ಯಾಸವನ್ನು ಭೌತವಿಜ್ಞಾನದ ಗ್ಯಾಲರಿ ಹಾಲ್‌ನಲ್ಲಿ ಮಾಡಿದಾಗ ಮತ್ತು ಇಂಗ್ಲೀಷ್ ಕವಿ ಸ್ಟಿಫೆನ್ ಸ್ಪೆಂಡರ್, "ಎನ್‌ಕೌಂಟರ್" ಪತ್ರಿಕೆಯ ಸಂಪಾದಕರಾಗಿ ಭಾರತ ಪ್ರವಾಸ ಕೈಕೊಂಡು ಬೆಂಗಳೂರಿಗೂ ಬಂದು ನಮ್ಮ ಕಾಲೇಜಿನ ಮ್ಯಾಥೆಮ್ಯಾಟಿಕ್ಸ್ ಬ್ಲಾಕ್‌ನ ಲೆಕ್ಚರ್ ಹಾಲ್ (ಈಗಿನ ಸೆನೆಟ್ ಹಾಲ್) ನಲ್ಲಿ ಭಾಷಣಮಾಡಿದಾಗ ವಿ.ಸೀ. ಬಂದಿದ್ದರು.

ಇಂಗ್ಲೀಷಾಗಲಿ, ಕನ್ನಡವಾಗಲಿ ಪದ್ಯಗಳನ್ನು ವಾಚಿಸುವುದರಲ್ಲಿ ವಿ.ಸೀ. ಅವರಿಗೆ ಸರಿಸಮರಾದವರನ್ನು ನಾನು ಕಂಡಿಲ್ಲ. ಅದೊಂದು ಮನೋಲ್ಲಾಸಕಾರಿಯಾದ ಅನುಭವ. ಒಂದು ಬಾರಿ, ಕ್ಲಾಸ್ ಮುಗಿದ ಮೇಲೆ ಅವರು ತಮ್ಮ ಕೊಠಡಿಗೆ ಹೋಗುವಾಗಿನ ಅರ್ಧ ಫರ್ಲಾಂಗು ದಾರಿಯಲ್ಲಿ, ಅವರಿಗೆ ಸ್ವಲ್ಪ ಬಳಕೆಯಾಗಿದ್ದ ನಾವು ಕೆಲವು ವಿದ್ಯಾರ್ಥಿಗಳು ನಮ್ಮ ಎಳಸು ಬುದ್ಧಿಯ ಪ್ರಶ್ನೆಗಳನ್ನು ಹಾಕುತ್ತ ನಡೆದಿರುವಾಗ ಬಿ.ಎಂ.ಶ್ರೀ. ಅವರ ಕವಿತೆಗಳ ಪ್ರಸ್ತಾವ ಬರಲಾಗಿ, ವಿ.ಸೀ. 'ಇಂಗ್ಲಿಷ್ ಗೀತ'ಗಳ "ಬೇಟಕಾರ ಬಂದ ಮಾದ, ಹಹ್ಹ! ಏನು ಬೇಟವೋ!" ಎಂದು ಶುರುವಾಗುವ ಪದ್ಯವನ್ನು ವಾಚಿಸಿದ ರೀತಿ ನಿನ್ನೆ ಮೊನ್ನೆ ನಡೆದಂತೆ ನೆನಪಿನಲ್ಲಿ ಹಚ್ಚಹಸುರಾಗಿದೆ. ಆಗ ಅವರು ತಮ್ಮ ಬೀಗದ ಕೈಯ ಚೈನನ್ನು ತೋರು ಬೆರಳಿನಿಂದ ಆಡಿಸಿ ಸುತ್ತುತ್ತಿದ್ದ ಚಿತ್ರ ಸಹ ಕಣ್ಣಿಗೆ ಕಟ್ಟಿದಂತಿದೆ – ಸುಮಾರು ನಾಲ್ಕೂವರೆ ದಶಕಗಳು ಕಳೆದಿದ್ದರೂ.

ಇಂಥದೇ ಅನುಭವ ನನಗೆ ಆಮೇಲೆ ಎಷ್ಟೋ ಸಲ ಆಗಿದೆ. ಪದಗಳ ಉಚ್ಚಾರದಲ್ಲಿನ ವಿಹಿತವಾದ ಒತ್ತು ಹಾಗೂ ತೇಲಿಕೆಗಳು, ಧ್ವನಿಯ ಏರಿಳಿವು, ಒಂದೇ ಓದಿನಿಂದ ಕವಿತೆಯ ಭಾವಾರ್ಥವನ್ನು ಸುವೇದ್ಯಗೊಳಿಸುತ್ತಿದ್ದ ಕಲಾತ್ಮಕ ಕೌಶಲ ದೀರ್ಘ ಪರಿಶ್ರಮದಿಂದ ಅವರು ಪ್ರಾಪ್ತಿಸಿಕೊಂಡಿದ್ದ ಫಲಿತಗಳು. ಅಂಥ ವಾಚನಗಳಲ್ಲಿ ಕೆಲವನ್ನಾದರೂ ಸುಲಭವಾಗಿ ಧ್ವನಿ ಮುದ್ರಿಸಿಕೊಳ್ಳುವ ಸೌಕರ್ಯ ಈಗಿನ ಹಾಗೆ ಆ ಕಾಲದಲ್ಲಿದ್ದಿದ್ದರೆ, ಅದರಿಂದ ನಮ್ಮ ಯುವ ಕವಿಗಳೂ ಕನ್ನಡದ ಅಧ್ಯಾಪಕರೂ ಬಹಳಷ್ಟು ಕಲಿಯಬಹುದಿತ್ತು.

೧೯೫೪ರ ಒಂದು ದಿನ ವಿ.ಸೀ. ಅವರ ಮನೆಗೆ ಹೋಗಿ ನನ್ನ ಕೆಲವು ಅಭ್ಯಾಸ ಮಟ್ಟದ ಪದ್ಯಗಳನ್ನು ಅಳುಕಿನಿಂದಲೇ ಕೊಟ್ಟು ಬಂದೆ. ಇದಕ್ಕೂ ಮುಂಚೆ ಸರ್ಕಾರಿ ಇಂಟರ್ ಮೀಡಿಯೆಟ್ ಕಾಲೇಜಿನ (ಅನಂತರದ ಗೌ॥ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜ್ ಅಥವಾ G.A.S. ಕಾಲೇಜ್) ವಿದ್ಯಾರ್ಥಿಯಾಗಿದ್ದಾಗ ಕನ್ನಡದ ಅಧ್ಯಾಪಕರಾಗಿದ್ದ ಎಲ್. ಗುಂಡಪ್ಪನವರಿಗೆ ನನ್ನ ಭಾವಾಲಾಪಗಳನ್ನು ತೋರಿಸಿದ್ದೆ. ಅವರು ಕೆಲವೊಂದು ತಿದ್ದು ಪಾಟುಗಳನ್ನು ಸೂಚಿಸಿದ್ದಲ್ಲದೆ, ಸಾರ್ವಜನಿಕ ಸಮಾರಂಭವೊಂದರಲ್ಲಿ ನನ್ನನ್ನು ಶ್ಲಾಘಿಸಿ ಪ್ರೋತ್ಸಾಹಿಸಿದ್ದರು. ಆ ಧೈರ್ಯದ ಮೇಲೆ ವಿ.ಸೀ. ಅವರಿಗೆ ನನ್ನ ಸ್ವಯಂಕೃತಾ ಪರಾಧಗಳನ್ನು ತೋರಿಸುವ ಧಾರ್ಷ್ಟ್ಯ ಬಂದಿತ್ತು.

'ವಿ.ಸೀ. ಎಲ್ಲರಂತಲ್ಲ, ತುಂಬ ಸ್ಟ್ರಿಕ್ಟ್. ಅವರಿಗೇಕೆ ಪದ್ಯಗಳನ್ನು ತೋರಿಸಿದೆ?' ಎಂದು ಕೆಲವು ಸ್ನೇಹಿತರು ಹೇಳಿದಾಗ ನನಗೆ ಕಸಿವಿಸಿ ಶುರುವಾಯಿತು. ಹದಿನೈದು ದಿನಗಳ

ಬಳಿಕ ಅಂಜುತ್ತಲೇ ಅವರ ಮನೆಗೆ ಹೋದೆ. ಅವರು ಪದ್ಯಗಳ ಮೇಲೆ ಕಣ್ಣಾಡಿಸಿರಬೇಕು. ಅವುಗಳಲ್ಲಿ ಒಂದೆರಡು ಪರವಾಗಿಲ್ಲವೆಂದು ಹೇಳಿ "ಬರೀತಾ ಹೋಗಿ. ಅದಕ್ಕಿಂತ ಮೊದಲು ಸಾಕಷ್ಟು ಸಿದ್ಧತೆ ಮಾಡಿಕೊಳ್ಳಿ. ಚೆನ್ನಾಗಿ ಓದಬೇಕು. ಹಿರಿಯ ಕವಿಗಳ ರಚನೆಗಳನ್ನು ಮನಸ್ಸಿಟ್ಟು ವ್ಯಾಸಂಗ ಮಾಡಬೇಕು. ಅಲ್ಲಿ ಬರುವ ಛಂದಸ್ಸು, ಲಯ, ಹೇಳುವ ರೀತಿಯನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು" ಎಂಬ ಸಲಹೆ ನೀಡಿದರು. ನಾನು ಅವರ ವಿದ್ಯಾರ್ಥಿ, ವಯಸ್ಸಿನಲ್ಲಿ ಅತ್ಯಂತ ಕಿರಿಯ ಎಂಬುದನ್ನೂ ಮರೆತು ಕೈಬಾಚಿನಲ್ಲಿದ್ದ ಕಪಾಟಿನಿಂದ Palgrave ನ Golden Treasury ಪುಸ್ತಕವನ್ನು ತೆಗೆದು ಒಂದೆರಡು ಆಂಗ್ಲಕವಿತೆಗಳನ್ನು ಅರ್ಥಪೂರ್ಣವಾಗಿ ಓದಿ ವಿವರಿಸಿದರು. ಆಮೇಲೆ, ಬೇಡವೆಂದರೂ ಕಾಫಿಯ ಸಮಾರಾಧನೆ ಆಯಿತು. ಅಂದ ಹಾಗೆ, ವಿ.ಸೀ. ಅವರ ಮನೆಗೆ ಆಮೇಲೆ ಲೆಕ್ಕವಿಲ್ಲದಷ್ಟು ಸಲ ಹೋದಾಗಲೂ, ಕಾಫಿ ಕುಡಿಯದೆ ಬಂದ ಜ್ಞಾಪಕ ನನಗಿಲ್ಲ.

ವಿ.ಸೀ. ಏನು ತಪ್ಪಿಸಿದರೂ ವಾಕಿಂಗ್ ತಪ್ಪಿಸುತ್ತಿರಲಿಲ್ಲ. ಇಂಥದೇ ನಿಷ್ಠೆ ಮಾಸ್ತಿಯವರಿಗೆ ಬಸವನಗುಡಿಯ ಕ್ಲಬ್‌ನ ಮೇಲಿತ್ತು. ಕೆ. ಎಸ್. ನರಸಿಂಹಸ್ವಾಮಿ ಅವರ ಜೊತೆ ಎರಡು ಮೂರು ಸಲ ನಾನೂ ವಿ.ಸೀ. ಅವರ ಜೊತೆ ವಾಯುವಿಹಾರದಲ್ಲಿ ಷಾಮೀಲಾದದ್ದುಂಟು. ಅದೊಂದು ಚೇತೋಹರ ಅನುಭವ. ಹತ್ತು ಪುಸ್ತಕಗಳ ಅಧ್ಯಯನ ಒದಗಿಸಬಹುದಾದ ತಿಳಿವನ್ನು ಒಂದೆರಡು ತಾಸುಗಳಲ್ಲಿ ಪಡೆಯಬಹುದಾದ ಅಪೂರ್ವ ಅವಕಾಶ.

ಆಗ ಕೆ. ಎಸ್. ನರಸಿಂಹಸ್ವಾಮಿ ಕೆಲಸಕ್ಕಿದ್ದ 'ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್' (C.I.T.B) ಕಛೇರಿ ವಿ.ಸೀ. ಅವರ ಮನೆಯ ಬಳಿ, ಕನ್ನಡ ಸಾಹಿತ್ಯ ಪರಿಷತ್ತಿನ ಪಕ್ಕದ ಕಟ್ಟಡದ ಮಹಡಿಯ ಮೇಲಿತ್ತು. ಕಛೇರಿ ಮುಗಿದ ಮೇಲೆ ಅವರೊಂದಿಗೆ ವಿ.ಸೀ. ಮನೆಗೆ ಹೋಗುತ್ತಿದ್ದೆ. ಆಮೇಲೆ ವಿ.ಸೀ.ಯವರ ಪರಮಮಿತ್ರರೂ ಸಂಸ್ಕೃತದ ಪ್ರಕಾಂಡ ವಿದ್ವಾಂಸರೂ ಆದ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಸೇರಿಕೊಳ್ಳುತ್ತಿದ್ದರು. ಅಲ್ಲಿಂದ ಮಕ್ಕಳ ಕೂಟವನ್ನು ದಾಟಿ ಮಾವಳ್ಳಿ ಸರ್ಕಲ್ಲಿನ ದಾರಿಹಿಡಿದು ಮುಂದೆ ಸಿಕ್ಕುತ್ತಿದ್ದ ಮಾವಳ್ಳಿ ಟಿಫಿನ್ ರೂಂಸ್ (M.T.R) ನಲ್ಲಿ ದೋಸೆ ಕಾಫಿ ಮುಗಿಸುತ್ತಿದ್ದೆವು.

ಆಗ ಎಂ.ಟಿ.ಆರ್. ಮಾವಳ್ಳಿಯ ಮಸೀದಿಯ ಪಕ್ಕದ ಚಿಕ್ಕ ಮಹಡಿಯ ಕಟ್ಟಡದಲ್ಲಿತ್ತು. ಒಂದು ಸಲ ತಿಂಡಿಯಾದ ಮೇಲೆ ನಾನು ಬಿಲ್‌ಗೆ ಕೈ ಚಾಚಿದೆ. ಸರಕ್ಕನೆ ವಿ.ಸೀ. ಅವರ ಕೈ ನನ್ನ ಪ್ರಯತ್ನಕ್ಕೆ ಅಡ್ಡ ಬಂದಿತು. ಅವರ ಮುಖದಲ್ಲಿ ಮುನಿಸು ಮೋಡಗಟ್ಟಿತ್ತು. ಕೊಂಚ ಗಡಸು ದನಿಯಲ್ಲೇ "ಕೂಡದು. ನೀವು ಕೊಡಬಾರದು" ಎಂದರು. ನಾನು ತಪ್ಪು ಮಾಡಿದವನಂತೆ "ಸಾರಿ, ಸಾರ್" ಎಂದೆ. ವಿ.ಸೀ. ಒಡನೆ ಮುಗುಳ್ನಕ್ಕು "ಹಿರಿಯರಿರುವಾಗ ಹಾಗೆಲ್ಲ ಕೊಡಬಾರದಪ್ಪ" ಎಂದರು. ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ನನ್ನ ಪರವಹಿಸಿ "ಗುರುಗಳ ಮೇಲಿನ ಪ್ರೀತಿಯಿಂದ ಹಾಗೆ ಮಾಡಿದರು. ಅದೇನು ದೊಡ್ಡ ತಪ್ಪೆ? ಗುರು ಕಾಣಿಕೆಯನ್ನು ಇನ್ನೊಮ್ಮೆ ಸಲ್ಲಿಸುವಿರಂತೆ ಬಿಡಿ" ಎಂದರು.

ಆಮೇಲೆ ಲಾಲ್‌ಬಾಗಿನ ಕೆಂಪು ಹೂಗಸೆ ಮರದ ಹತ್ತಿರದ ಹುಲ್ಲಿನ ಹಾಸಿನಲ್ಲಿ ಕುಳಿತೆವು. ನವ್ಯಕಾವ್ಯದ ಬಾಲ್ಯದ ದಿವಸಗಳು ಅವು. ವಿ.ಸೀ. ಕನ್ನಡ ನವ್ಯಕಾವ್ಯದ ಕೆಲವು ವೈಪರೀತ್ಯಗಳ, ಆ ನಮೂನೆಯ ವಿಮರ್ಶೆಯ ಅತಿರೇಕಗಳ ಬಗೆಗೆ ಕಟುವಾದ ಟೀಕೆಯನ್ನು ಮಾಡಿದರು. ಪ್ರಾಸಂಗಿಕವಾಗಿ ಆ ದಿವಸ ಅವರು ಎಜ್ರಾ ಪೌಂಡ್, ಟಿ. ಎಸ್. ಎಲಿಯಟ್, ಡಬ್ಲ್ಯು. ಎಚ್. ಆಡೆನ್, ಲೂಯಿ ಮೆಕ್ನೀಸ್, ಎಡಿತ್ ಸಿಟ್‌ವೆಲ್ ಮುಂತಾದ ಕವಿಗಳ ಬಗೆಗೆ, ಎಫ್. ಆರ್. ಲೀವಿಸ್, ಐ. ಎ. ರಿಚರ್ಡ್ಸ್‌ರಂಥ ವಿಮರ್ಶಕರ ಬಗೆಗೆ ಆಡಿದ ಮಾತುಗಳು ಮತ್ತು ಉಲ್ಲೇಖಿಸಿದ ವಾಕ್ಯಗಳು ಅವರ ಅಪಾರ ಅಧ್ಯಯನ, ಮನನಗಳ ಜೊತೆಗೇ ಅಮೋಘ ಜ್ಞಾಪಕ ಶಕ್ತಿಯ ಬಗ್ಗೆಯೂ ಸಾಕಷ್ಟು ಪುರಾವೆ ನೀಡಿದ್ದವು.

ಕತ್ತಲಾಗುವವರೆಗೆ ಸುಮಾರು ಒಂದೂವರೆ ಗಂಟೆ ಅಲ್ಲಿ ಕೂತಿದ್ದು ಆಮೇಲೆ ಲಾಲ್‌ಬಾಗಿನ ಪಶ್ಚಿಮ ದ್ವಾರದ ಮೂಲಕ ನ್ಯಾಷನಲ್ ಕಾಲೇಜ್ ದಾಟಿ, ಆ ಕಾಲಕ್ಕೆ ಅದರೆಮರಿಗಿದ್ದ ಸೈಂಧವ ವೃಕ್ಷಗಳ ನಿರಾಳ ರಸ್ತೆಯಲ್ಲಿ ಸಾಗಿ ಚಾಮರಾಜಪೇಟೆಗೆ ಬಂದಿದ್ದೆವು. ದಾರಿಯುದ್ದಕ್ಕೂ ವಿ.ಸೀ. ಮತ್ತು ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಏನೇನೋ ಚರ್ಚಿಸುತ್ತ ಬಂದಿದ್ದರು. ಶಾಸ್ತ್ರಿಗಳು ನಿರರ್ಗಳವಾಗಿ ಸಂಸ್ಕೃತದ ವಾಕ್ಯಗಳನ್ನು ಉದ್ಧರಿಸಿ ತಮ್ಮ ಮಾತುಗಳನ್ನು ಸಮರ್ಥಿಸಿಕೊಳ್ಳುತ್ತಿದ್ದರು. ಉದ್ದಕ್ಕೂ ಹೆಚ್ಚು ಮಾತನಾಡದೆ, ಆದರೆ ಎಲ್ಲವನ್ನೂ ಆಸಕ್ತಿಯಿಂದ ಆಲಿಸುತ್ತ ಇದ್ದವರು ಕೆ. ಎಸ್. ನರಸಿಂಹಸ್ವಾಮಿ.

ಒಂದು ಸಲ ವಿ.ಸೀ. ಅವರ ಮನೆಗೆ ಹೋಗಿದ್ದಾಗ, ಅಲ್ಲಿ ಕೆಲವರು ವಿ.ಸೀ. ಅವರೊಂದಿಗೆ ಮಾತಾಡುತ್ತ ಕುಳಿತಿದ್ದರು. ವಿಷಯ, ಯಥಾಪ್ರಕಾರ ಆಗ ತುಂಬ ಸುದ್ದಿ ಮಾಡಿದ್ದ ನವ್ಯ ಕಾವ್ಯ. ವಿ.ಸೀ. ಮಾತುಗಳ ಮಧ್ಯೆ ಫೇಬರ್ ಪ್ರಕಾಶನ ಹೊರತಂದಿದ್ದ ಟಿ. ಎಸ್. ಎಲಿಯಟ್‌ನ ಕವನ ಸಂಗ್ರಹ ತೆಗೆದು, 'ವೆಸ್ಟ್‌ಲ್ಯಾಂಡ್' (Wasteland) 'ಆ್ಯಷ್ ವೆಡ್ನಸ್ ಡೇ' (Ash Wednesday) ಮುಂತಾದ ಪದ್ಯಗಳನ್ನು ಓದಿ ವಿವರಿಸಿದರು. ಆ ಪುಸ್ತಕದ ಅಂಚಿನಲ್ಲಿ ಅವರು ತುಂಬಾ ಹಿಂದೆ ಮಾಡಿಕೊಂಡಿದ್ದ ಟಿಪ್ಪಣಿಗಳನ್ನು ತೋರಿಸುತ್ತ "ನಮ್ಮ ಇವೊತ್ತಿನ ಕನ್ನಡದ ಕವಿಗಳು ಎಲಿಯಟ್‌ನನ್ನು ಈಗ ಓದಿದ್ದಾರೆ. ಅವನನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಏನೇನೋ ಹೇಳ್ತಾರೆ, ಬರೀತಾರೆ. ನೋಡಿ, ನಾನು ೧೯೨೩ರಲ್ಲೇ ಅವನ ಕವನಗಳನ್ನು ಓದಿಕೊಂಡಿದ್ದೆ. ಇಂಗ್ಲಿಷ್ ನವ್ಯ ವಿಮರ್ಶಕರು ಅತನ ಬಗ್ಗೆ ಹೇಳಿದ್ದನ್ನು ತಿಳಿದುಕೊಂಡು, ಅವನ ಕವನಗಳನ್ನು ಅರ್ಥೈಸಲು ಪ್ರಯತ್ನಿಸಿದ್ದೆ. ಈಗಿನವರು ಅವನ ಹೆಸರನ್ನು ಪ್ರತಿಷ್ಠೆಗಾಗಿ ಬಳಸುತ್ತಾರೆಯೇ ವಿನಾ ಅವನ ಕೃತಿಗಳನ್ನು ಸರಿಯಾಗಿ ತಿಳಿದುಕೊಂಡಿಲ್ಲ" ಎಂದು, ತಮ್ಮ ಅಸಮಾಧಾನವನ್ನು ಕೀಳಿಯೂ ಕೇಳಿಸದ ತಗ್ಗಿದ ದನಿಯಲ್ಲಿ "ಈದೋವಲ್ಲ, ನೆಕ್ಕೋವಲ್ಲ" ಎಂದದ್ದು ಈಗಲೂ ಚೆನ್ನಾಗಿ ನನ್ನ ಸ್ಮೃತಿಯಲ್ಲಿ ನಾಟಿದೆ.

ವಿ.ಸೀ. ಅವರದು ಕನ್ನಡ ವಿಮರ್ಶೆ, ವಾಗ್ಮಿತೆಗಳಲ್ಲಿ ಅನನ್ಯವಾದ ಮಾದರಿ. ಅವರ ಹೊಸತನ ಕೆಲವು ಪೂರ್ವಾಭಿಪ್ರಾಯ ರೂಢಿತ ಅಸಹಿಷ್ಣುಗಳ ಬುದ್ಧಿಗೆ ವಿಷಯಾಂತರ

ಸ್ವರೂಪದ್ದೂ, ವಿದ್ವದ್ವಿದರ್ಶಕ ಆವುಟದ್ದೂ ಆಗಿ ಕಂಡಿದ್ದಿದೆ. ಖಾಸಗಿ ವಲಯದಲ್ಲಿ ಅವರ ಅಪಪ್ರಚಾರಕ್ಕೆ ಕುಮ್ಮಕ್ಕಿಸಿದ್ದೂ ಇದೆ. ಇದರಿಂದ ಅವರು ನೊಂದುಕೊಂಡದ್ದು ಅವರ ಮಾತುಗಳ ಕಹಿಯಲ್ಲಿ ಕೆಲವು ಸಲ ಪ್ರಕಟಗೊಳ್ಳುತ್ತಿತ್ತು. ತಮ್ಮ ಕವಿತೆಗಳನ್ನು ವಿಮರ್ಶಕರು ಸರಿಯಾದ ನಿಟ್ಟಿನಲ್ಲಿ ಅರ್ಥ ಮಾಡಿಕೊಳ್ಳದೆ ವಿನಾ ಕಾರಣ ಅಲಕ್ಷಿಸುತ್ತಿದ್ದಾರೆಂಬ ವಿಷಾದವೂ ಅವರಲ್ಲಿ ಮನೆಮಾಡಿದಂತೆ ನನಗೆ ಅವರ ಮಾತುಗಳಿಂದ ತಿಳಿದದ್ದುಂಟು. ವಿ.ಸೀ. ಅವರ ಕವನಗಳಲ್ಲಿ magic ನ ಗುಣ ಕಡಿಮೆಯಿರುವುದು ನಿಜ. ಕೆಲವೊಮ್ಮೆ logic, ಬುದ್ಧ್ಯಂಶಗಳೇ ಮೇಲುಗೈ ಆಗುವುದೂ ನಿಜ. ಆದರೆ ರೂಢಿಗತವಾದ ಅಲಂಕಾರ ನಿಬಿಡ, ಭಾವ ನಿರ್ಭರ ರಚನೆಗಳಿಗಿಂತ ಅವರದು ಭಿನ್ನ ಮಾರ್ಗ. ಚಿಂತನ ಶೀಲತೆ ಮತ್ತು ಪ್ರಾಯೋಗಿಕತೆ – ಛಂದೋಲಯ, ನುಡಿಮೆ, ಭಾವನೆಗಳ ಸೋಪಾನಪ್ರಾಯ ಬೆಳವಣಿಯಲ್ಲಿ – ವಿ.ಸೀ. ಅವರನ್ನು ಇತರ ನವೋದಯ ಕವಿಗಳಿಗಿಂತ ಬೇರೆಯಾದ ನೆಲೆಯಲ್ಲಿ ವಿವೇಚಿಸಬೇಕಾದ ಅಗತ್ಯವನ್ನು ಹೇಗೋ ಹಾಗೆ ಅವರ ಅನನ್ಯತೆಯನ್ನು ಗುರುತಿಸಲು ಚಾಲ್ತಿಯಲ್ಲಿರುವ ಮಾನದಂಡಗಳಿಗಿಂತ ಭಿನ್ನವಾದುವನ್ನು ಅವಲಂಬಿಸಬೇಕಾದ ಅನಿವಾರ್ಯವನ್ನೂ ಸೂಚಿಸುತ್ತವೆ. ವಿ.ಸೀ. ಅವರ ವಿಮರ್ಶೆಯ ಬಗೆಗೂ ಈ ಮಾತು ಅನ್ವಯವಾಗುತ್ತದೆ. ಈ ನಿಟ್ಟಿನಲ್ಲಿ ನಿಸ್ಪೃಹ ಹಾಗೂ ನ್ಯಾಯಯುತ ಪರಿಶೀಲನೆ ನಡೆದು ಅವರ ಸಾಹಿತ್ಯಕ ಸ್ಥಾನಮಾನವನ್ನು ಪುನರ್ನಿರ್ಣಯಿಸಬೇಕಾಗಿದೆ.

ನನ್ನ ಹೊಸ ಕವನ ಸಂಕಲನ ಪ್ರಕಟವಾದಾಗ ವಿ.ಸೀ. ಅವರಿಗೆ ಅದರ ಪ್ರತಿಯನ್ನು ಕೊಟ್ಟು ಬರುವುದು ವಾಡಿಕೆ. ಅವರು ಮೆಚ್ಚಿಕೊಂಡ ನನ್ನ ಒಂದೆರಡು ಕವಿತಾರಚನೆಗಳನ್ನು ಅವರು ಬಂದವರೆದುರು ಓದಿ ತಮ್ಮ ಸಂತೋಷವನ್ನು ಹಂಚಿಕೊಳ್ಳುತ್ತಿದ್ದರಂತೆ. ಇದನ್ನು ನನಗೆ ಹೊ. ರಾ. ಸತ್ಯನಾರಾಯಣರಾವ್, ಎಂ. ವಿ. ವೆಂಕಟೇಶಮೂರ್ತಿ ತಿಳಿಸಿದ್ದುಂಟು. ಅವರು ಭಾಗವಹಿಸಿದ, ಅಧ್ಯಕ್ಷತೆ ವಹಿಸಿದ ಅನೇಕ ಕವಿಗೋಷ್ಠಿಗಳಲ್ಲಿ ನಾನು ಪಾಲ್ಗೊಂಡಿದ್ದೇನೆ. ನಾನು ಪದ್ಯ ಓದುತ್ತಿದ್ದ ರೀತಿ ಅವರಿಗೆ ಹಿಡಿಸಿತ್ತೆಂದು ಕಾಣುತ್ತದೆ. ಇದರ ಬಗ್ಗೆ ಅವರು ಕೆ. ಎಸ್. ನರಸಿಂಹಸ್ವಾಮಿ ಅವರಿಗೆ ಹೇಳಿದ್ದುಂಟು. ನನ್ನ ಮೊದಲನೆಯ ಕವನ ಸಂಕಲನ 'ಮನಸು ಗಾಂಧಿಬಜಾರು' (೧೯೬೦)ವಿನಲ್ಲಿ ಬರುವ ಪದ್ಯವೊಂದರ 'ಚೈನೀ ಕನ್ಯೆಯ ಮಲ್ಲಿಗೆ ಹೂವಿನ ಚಿತ್ರದ ನೀಲಿಮ ಛತ್ರಿ। ಈ ಬೆಳುದಿಂಗಳ ರಾತ್ರಿ' ಎಂಬ ಸಾಲನ್ನು ನನ್ನ ಗೆಳೆಯರೆದುರು ವಾಚಿಸಿ "ಈ ಚಿತ್ರ ಎಷ್ಟು ಹೊಸದಾಗಿ ಕಣ್ಣಿಗೆ ಕಟ್ಟುವಂತಿದೆ ನೋಡಿ" ಎಂದಿದ್ದರಂತೆ. ಇಪ್ಪತ್ತೈದು ವರ್ಷಗಳ ಹಿಂದೆ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್‌ನ ಸಭಾಂಗಣದಲ್ಲಿ ಬೆಂಗಳೂರು ಆಕಾಶವಾಣಿ ಏರ್ಪಡಿಸಿದ ವಿಶೇಷ ಕವಿಸಮ್ಮೇಳನವೊಂದರ ಅಧ್ಯಕ್ಷತೆಯನ್ನು ವಿ.ಸೀ. ವಹಿಸಿದ್ದರು. ಆ ದಿನ ನನ್ನ 'ಅಮ್ಮ ಆಚಾರ ನಾನು' ಕವಿತೆಯನ್ನು ನಾಟಕೀಯವಾಗಿ ವಾಚಿಸಿದೆ. ವಿ.ಸೀ. ಗಲ್ಲಕ್ಕೆ ಕೈಯೂರಿ ಮನಸ್ಸಿಟ್ಟು ಆಲಿಸುತ್ತಿದ್ದವರು, ಶಿಖರಾವಸ್ಥೆಯ ಕೊನೆಯ ಪಂಕ್ತಿಯನ್ನು ನಾನು ನುಡಿದ ಒಡನೆ ಜೋರಾಗಿ ಗಹಗಹಿಸಿ ನಗಲಾರಂಭಿಸಿದರು. ಇದರಿಂದ ಪ್ರೇರಿತವೋ ಎನ್ನುವಂತೆ ಇಡೀ ಸಭೆ ಕಿವಿ ಗಡಚಿಕ್ಕುವಂತೆ ಚಪ್ಪಾಳೆ ತಟ್ಟಿ ನಗೆಯ ಕೋಲಾಹಲ ಎಬ್ಬಿಸಿತ್ತು. ಅಧ್ಯಕ್ಷ ಭಾಷಣದಲ್ಲಿ ಆ ಕವಿತೆಯ ಬಗೆಗೆ, ನನ್ನ ವಾಚನದ ಬಗೆಗೆ ವಿ.ಸೀ. ಕೆಲವು ಶ್ಲಾಘ್ಯ

ಮಾತುಗಳನ್ನಾಡಿದ್ದರು. ಆ ಬೆನ್ನು ಚಪ್ಪರಿಕೆಯ ಮೆಚ್ಚು ನುಡಿ ನನ್ನ ಪಾಲಿಗೆ ಅಲಿಖಿತ ಅನರ್ಘ್ಯ ಅರ್ಹತಾ ಪತ್ರದಂತಿದೆ.

೧೯೬೫ರಲ್ಲಿ ವಿ.ಸೀ. ಒಮ್ಮೆ ದಾರಿಯಲ್ಲಿ ಸಿಕ್ಕಿದಾಗ "ನಿಮ್ಮ ಕಾಲೇಜ್ ಲೈಬ್ರರಿಯಲ್ಲಿ 'ಎವೆರಿ ಮ್ಯಾನ್ ಸೀರಿಸ್'ನ ಇಬ್ಸನ್ ನಾಟಕಗಳಿವೆ. ಅವನ್ನು ತುಂಬಾ ಹಿಂದೆ ನಾನು ಓದಿದ್ದೆ. ಅವು ಎಷ್ಟಿದ್ದರೂ ಸರಿ, ಕೆಲವು ದಿನಗಳ ಮಟ್ಟಿಗೆ ತಂದು ಕೊಡಿ. ಕೆಲಸವಾದ ಮೇಲೆ ಮರಳಿಸುತ್ತೇನೆ" ಎಂದರು. ಇಬ್ಸೆನ್ ಬಗ್ಗೆ ಪುಸ್ತಕ ಬರೆಯಲು ಸಿದ್ಧತೆ ಮಾಡಿಕೊಳ್ಳುತ್ತಿರಬೇಕೆನ್ನಿಸಿ, ಅವನ Doll's House, Enemy of the People, Ghosts, Peer Gynt ಮುಂತಾದ ಏಳೆಂಟು ನಾಟಕಗಳನ್ನು ಮರುದಿನ ಅವರಿಗೆ ಕೊಟ್ಟು ಬಂದೆ. ಬಹಳ ಹಿಂದೆಯೇ ವಿ.ಸೀ. ಅವುಗಳನ್ನು ಓದಿ, ಅಲ್ಲಿಲ್ಲಿ ಟಿಪ್ಪಣಿ ಮಾಡಿದ್ದು, ಅವರ ಕೈ ಬರಹದ ಪರಿಚಯವಿದ್ದ ನನಗೆ, ಕಂಡಿತ್ತು. ತಿಂಗಳ ಅನಂತರ ಅವರು ಪುಸ್ತಕಗಳನ್ನು ವಾಪಸ್ಸು ಕೊಟ್ಟರು. ಆಗ–

ನಾನು : ಸಾರ್, ಪುಸ್ತಕ ಬರೆಯೋಕೆ ಪ್ರಾರಂಭಿಸಿದಿರ?

ವಿ.ಸೀ. : ಯಾವ ಪುಸ್ತಕವಪ್ಪ?

ನಾನು : ಅದೇ ಇಬ್ಸನ್‌ನ ನಾಟಕಗಳನ್ನು ಕುರಿತದ್ದು.

ವಿ.ಸೀ. : ಹಾಗಂತ ನಿಮಗೆ ಯಾರು ಹೇಳಿದರು?

ನಾನು : ನೀವು ಅಷ್ಟೆಲ್ಲ ಪುಸ್ತಕಗಳನ್ನು ತರಿಸಿಕೊಂಡಿರಲ್ಲ, ಪುಸ್ತಕ ಬರೆಯೋಕೆ ಸಿದ್ಧತೆಗೋಸ್ಕರ ಅಂತ ನಾನು ಭಾವಿಸಿದೆ.

ವಿ.ಸೀ. : (ನಸುನಗುತ್ತ) ಇಲ್ಲಪ್ಪ, ಬೆಂಗಳೂರು ಆಕಾಶವಾಣಿಯವರು ಇಬ್ಸನ್‌ನ ಕೃತಿಗಳನ್ನು ಕುರಿತು ಹದಿನೈದು ನಿಮಿಷದ ಭಾಷಣ ಮಾಡಬೇಕೆಂದು ಒತ್ತಾಯಿಸಿದರು. ಅದಕ್ಕೋಸ್ಕರ ಆ ಪುಸ್ತಕಗಳನ್ನು ಮತ್ತೊಮ್ಮೆ ಓದಬೇಕಾಗಿ ಬಂತು.

ಹದಿನೈದು ನಿಮಿಷಗಳ 'ಗಾಳಿಮಾತು'ಗಳಿಗೆ ಇಷ್ಟೆಲ್ಲ ಗಾಢ ಹಾಗೂ ಗಂಭೀರ ಸಿದ್ಧತೆ ಮಾಡುತ್ತಾರೆಯೆ? – ಎನಿಸಿ ನನಗೆ ವಿಸ್ಮಯವಾಯಿತು. ಯಾವುದೇ ತಯಾರಿಯಿಲ್ಲದೆ ಗಂಟೆಗಟ್ಟಲೆ, ಟನ್ನುಗಟ್ಟಲೆ ಭಾಷಣವನ್ನು ಉತ್ಪಾದಿಸಿ ಒಗಾಯಿಸುವ ಸಾಹಿತಿವರೇಣ್ಯರು ಕನ್ನಡಮ್ಮನ ಒಡ್ಡೋಲಗದಲ್ಲಿ ನಳನಳಿಸುತ್ತಿರುವಾಗ ವಿ.ಸೀ. ಅವರ ಈ ಪೂರ್ವಸಿದ್ಧತೆಗೆ ಏನೆನ್ನಬೇಕು! ಗುರು ಪರಂಪರೆಗೆ ಜಮೆಯಾದ ಹಿರಿಯರ ರೀತಿಯೇ ಆ ಬಗೆಯದೇನೋ.

೧೯೫೮ ಅಥವಾ ೧೯೫೯ ಇರಬೇಕು. ವಿ.ಸೀ. ಬೆಂಗಳೂರಿನ ಆಕಾಶವಾಣಿಯಲ್ಲಿ ಪ್ರೊಡ್ಯುಸರ್ ಹುದ್ದೆಯಲ್ಲಿದ್ದರು. 'ಕಾವ್ಯಧಾರೆ' ಕಾರ್ಯಕ್ರಮದಲ್ಲಿ ನನ್ನ ಸ್ವಕೃತಿಗಳ ವಾಚನವಿತ್ತು. ಹದಿನೈದು ನಿಮಿಷಗಳ ಈ ಕಾರ್ಯಕ್ರಮ ನೇರವಾಗಿ ಪ್ರಸಾರವಾಗುವಂಥದ್ದು. ರಾಘವೇಂದ್ರ ಇಟಗಿ ಅದಕ್ಕೆ ಸಂಬಂಧಿಸಿದ ಅಧಿಕಾರಿಗಳು. ಅವರಿಗೆ ವಿ.ಸೀ. ಮೇಲಿನವರು. ಪ್ರಸಾರಕ್ಕೆ ಮುಂಚೆ ವಿ.ಸೀ. ನನ್ನನ್ನು ತಮ್ಮ ಕೋಣೆಗೆ ಬರಮಾಡಿಕೊಂಡು ನಾನು ಓದಲಿರುವ ಪದ್ಯಗಳನ್ನು ನೋಡಬಯಸಿದರು. ನೇರ ಪ್ರಸಾರವಾದ್ದರಿಂದ ಅನುಚಿತ

ಹಾಗೂ ಆಕ್ಷೇಪಣೀಯ ಮಾತುಗಳು ಪ್ರಸಾರವಾಗಿ ಕೇಳುಗರಿಗೆ ಕಿರಿಕಿರಿಯಾಗಬಾರದೆಂದು ಈ ಮುನ್ನೆಚ್ಚರಿಕೆ ಹಾಗೂ 'ಸೆನ್ಸಾರ್ ಸೆಷನ್'.

ವಿ.ಸೀ. ಪದ್ಯಗಳನ್ನು ನೋಡುತ್ತಿದ್ದವರು ಒಮ್ಮೆ ಕತ್ತೆತ್ತಿ ನನ್ನ ಕಡೆ ನೋಡಿ "ಈ ಬಾಟಾ ಬೂಟು ಅನ್ನೋದನ್ನ ತೆಗೆದು ಹಾಕಿಯಪ್ಪ" ಅಂದರು. ನಾನು ಕಾರಣ ಕೇಳಿದಾಗ, 'ಅದೊಂದು ಖಾಸಗಿ ಸಂಸ್ಥೆಯ ಜಾಹೀರಾತಾಗುತ್ತದೆ. ಆಕಾಶವಾಣಿಯಲ್ಲಿ ಇಂಥವು ನಿಷಿದ್ಧ' ಅಂದರು. ನಾನು ಆ ಬಳಕೆಯನ್ನು ಸಮರ್ಥಿಸಿಕೊಳ್ಳುವಂತೆ ವಾದಿಸತೊಡಗಿದೆ. ವಿ.ಸೀ. ಅವರ ಸಹನೆ ಮೀರಿತು. ಕೊಂಚ ಬಿರುಸಾಗಿಯೇ "I don't want to argue with you. ಆ ಮಾತು ಬರೋ ಪದ್ಯ ಬಿಟ್ಟು ಬೇರೇದನ್ನು ಬೇಕಾದರೆ ಓದಬಹುದು. ಇಲ್ಲದಿದ್ದರೆ ನಿಮ್ಇಷ್ಟ" ಎಂದವರೇ ದಡದಡನೆ ಎದ್ದು ಹೊರಗೆ ಹೊರಟು ಹೋದರು. ಅವರೆಗೆ ಇಟಗಿ ಅಡಕತ್ತರಿಯಲ್ಲಿ ಸಿಕ್ಕಿದವರಂತೆ ಒಳಗೊಳಗೆ ನವೆಯುತ್ತಿದ್ದವರು ಈಗ ಬಾಯಿತೆರೆದರು: "ವಿನಾಕಾರಣ ಆ ಹಿರಿಯರ ಹತ್ತಿರ ವಾದಮಾಡಿ ಮನಸ್ಸನ್ನು ಕೆಡಿಸಿಬಿಟ್ಟಿರಿ. ಅವರು ಹೇಳಿದ್ದು ಸೆಂಟ್ ಪರ್‌ಸೆಂಟ್ ಕರೆಕ್ಟ್. ನಮಗೆ ಕೆಲವು ಪ್ರತಿಬಂಧಗಳಿವೆ. ಕೊಂಚ cool-headed ಆಗಿ ಆಲೋಚನೆ ಮಾಡಿ" ಎಂದರು. ನನಗೂ, ಯಾಕೋ ಇದೆಲ್ಲ ವಿಪರೀತಕ್ಕಿಟ್ಟುಕೊಂಡಿತು ಎನಿಸಿ, ಕೊನೆಗೆ "ಸರಿ. ಬಾಟಾ ಬೂಟು ಅನ್ನೋದರಲ್ಲಿ 'ಬಾಟಾ' ಪದವನ್ನು ತೆಗೆದು ಹಾಕಿ 'ಬೂಟು' ಅಂತ ಓದ್ತೇನೆ. ಲಯ ಕೆಟ್ಟರೂ ಸರಿ, ಕೊಂಚ ಎಳೆದು ಸರಿಪಡಿಸ್ತೇನೆ" ಎಂದೆ. ಅವರಿಗೆ ಸಮಾಧಾನವಾಯಿತು.

ವಿ.ಸೀ. ಅದನ್ನು ಕೇಳಿದರೋ ಇಲ್ಲವೋ ಗೊತ್ತಿಲ್ಲ. ತಿಂಗಳಾದ ಮೇಲೆ ನಾನು ಆಕಾಶವಾಣಿಯ ಕಾರ್ಯಕ್ರಮವೊಂದಕ್ಕೆ ಹೋಗಿದ್ದಾಗ, ಅಲ್ಲಿ ವಿ.ಸೀ. ಎದುರಾದರು. ನಾನು "ನಮಸ್ಕಾರ ಸಾರ್" ಎಂದೆ. ಅವರು ಯಥಾಪ್ರಕಾರದ ನಗುಮೊಗದಿಂದ "ನಮಸ್ಕಾರ. ಹೇಗಿದೀರಪ್ಪ" ಎಂದಾಗ, ನನ್ನ ಮನಸ್ಸನ್ನು ಕೊರೆಯುತ್ತಿದ್ದ ಕೊರಗಿನ ಕೀಟದಿಂದ ಬಿಡುಗಡೆ ಪಡೆದಂತಾಗಿ ನಿಟ್ಟುಸಿರು ಬಿಟ್ಟೆ.

ವಿ.ಸೀ. ಅವರು ೧೯೫೫ರಲ್ಲಿ ಸೆಂಟ್ರಲ್ ಕಾಲೇಜಿನಿಂದ ನಿವೃತ್ತಿ ಹೊಂದಿದರು. ಕರ್ನಾಟಕ ಸಂಘದ ವತಿಯಿಂದ ಅವರ ಗೌರವಾರ್ಥ ಏರ್ಪಡಿಸಿದ್ದ ಬೀಳ್ಕೊಡಿಗೆಯ ಸಮಾರಂಭದಂಥ ಮತ್ತೊಂದನ್ನು ನಾನು ಕಂಡಿಲ್ಲ. ಅದರಲ್ಲಿ ಪಾಲ್ಗೊಂಡವರ ಪಾಲಿಗೆ ಅದೊಂದು ಚಿರಸ್ಮರಣೀಯ ಅನುಭವವಾಗಿತ್ತು. ಹಾಗಾಗುವಂತೆ ಏರ್ಪಡಿಸಿದ ಅಗ್ಗಳಿಕೆ, ಕೀರ್ತಿ ರಾಜರತ್ನಂ ಅವರಿಗೆ ಸಲ್ಲಬೇಕು. ಅಂದಿನ ಸಮಾರಂಭದಲ್ಲಿ ಸೆಂಟ್ರಲ್ ಕಾಲೇಜಿನ ಕನ್ನಡದ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಹಲವು ಇಲಾಖೆಗಳ ಅಧ್ಯಾಪಕರು ಮಾತ್ರವಲ್ಲದೆ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ಡಾ। ಎ. ಆರ್. ಕೃಷ್ಣಶಾಸ್ತ್ರೀ, ಪ್ರೊ। ಡಿ. ಎಲ್. ನರಸಿಂಹಾಚಾರ್, ನಿಟ್ಟೂರು ಶ್ರೀನಿವಾಸರಾವ್, ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರೀ, ಬಿ.ಬಿ.ಡಿ. ಪ್ರೆಸ್‌ನ ಮಾಲೀಕರಾದ ಮಲ್ಯ, ಕೆ. ವಿ. ಅಯ್ಯರ್, ಕವಿ ಕೆ. ಎಸ್. ನರಸಿಂಹಸ್ವಾಮಿ ಮೊದಲಾದ ಗಣ್ಯರು ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಅನುಪಮ ಜೀವಕಳೆ, ಸಂಭ್ರಮ ಸಮನಿಸಿತ್ತು.

ಸಂಜೆ ಸಾಮೂಹಿಕ ಭಾವಚಿತ್ರ ತೆಗೆದಾದ ಮೇಲೆ ಮ್ಯಾಥೆಮ್ಯಾಟಿಕ್ಸ್ ಬ್ಲಾಕ್‌ನ ಮಹಡಿಯ ಎಡಭಾಗದ ವಿಶಾಲವಾದ ಉಪನ್ಯಾಸ ಕೊಠಡಿಯಲ್ಲಿ ಕಾರ್ಯಕ್ರಮ ಪ್ರಾರಂಭವಾಯಿತು. ವಿ.ಸೀ. ಅವರ ಅಧ್ಯಾಪನ ಜೀವನ, ಸಾಹಿತ್ಯ ಕೈಂಕರ್ಯ ಮುಂತಾದ ವಿಚಾರಗಳನ್ನು ಕುರಿತು ವಿದ್ಯಾರ್ಥಿಗಳಾದಿಯಾಗಿ ಹಲವು ಹಿರಿಯರು ಮಾತಾಡಿದರು. ತುಂಬ ಔಚಿತ್ಯಪೂರ್ಣವಾಗಿ, ಸಂಕ್ಷಿಪ್ತವಾಗಿ ಮತ್ತು ಹೃದಯಸ್ಪರ್ಶಿಯಾಗಿ ಆಡಿದ ಮಾತುಗಳು ಅಂದಿನ ಕಲಾತ್ಮಕ ವ್ಯವಸ್ಥೆಯ ಸಭೆಗೆ ತಕ್ಕಂತಿದ್ದವು. ಒಬ್ಬ ವಿದ್ಯಾರ್ಥಿಯ ಮಾತುಗಳಂತೂ ವಿ.ಸೀ. ಅವರ ಮನಸ್ಸಿನ ಮೇಲೆ ತುಂಬು ಪರಿಣಾಮ ಬೀರಿದ್ದವು. ವಿ.ಸೀ. ಅವರು ತಮ್ಮ ಅಭಿನಂದನೋತ್ತರ ಭಾಷಣದಲ್ಲಿ ಅದನ್ನು ನೆನಸಿಕೊಂಡು, ಭಾವಗದ್ಗದಿತರಾಗಿ ಷೇಕ್ಸ್‌ಪಿಯರ್‌ನ "ಒಥೆಲೊ" ನಾಟಕದ ನಾಯಕ, ಡೆಸ್ಡೆಮೋನಳನ್ನು ಸೈಪ್ರಸ್ ದ್ವೀಪದಲ್ಲಿ ಸಮಾಗಮಿಸಿದಾಗ ಹೊಮ್ಮಿಸಿದ ಆನಂದೋದ್ಗಾರದ ನುಡಿಗಳನ್ನು ಉದ್ಧರಿಸಿದರು. ಸಮಯೋಚಿತವಾದ ಭಾವೋತ್ಕಟೆಯನ್ನು ಪ್ರಕಟಿಸಿದ ಅವು ಹೀಗಿವೆ:–

"O my soul's Joy!
If after every tempest come such calms,
May the winds blow till they have wak'nd the death!
If it were now to die
'T were now to be most happy; for I fear,
My soul hath her content absolute
that now another comfort like this
succeeds in unknown fate."

(OTHELLO, Act II, Scene I)

"ಆಹಾ! ನನ್ನಾತ್ಮ ಸುಖವೇ
ಪ್ರತಿ ಚಂಡಮಾರುತದ ಬಳಿಕ ಇಂಥ ಸ್ತಬ್ಧತೆ ಮೂಡುವುದಾದರೆ,
ಮೃತ್ಯುವನ್ನೆಚ್ಚರಿಸುವ ತನಕ ಗಾಳಿಗಳು ಬಿರುಸಿಂದ ಬೀಸಲಿ....
ಸಾಯುವುದಾದರೀಗ, ಇದೇ ಮಹಾ ಹರ್ಷದ ಮುಹೂರ್ತವೆನ್ನಬೇಕು.
ನನ್ನಾತ್ಮ ಸಂತೃಪ್ತಿ ಎಷ್ಟು ಪರಿಪೂರ್ಣವೆಂದರೆ,
ಇಂಥ ಮತ್ತೊಂದು ತಣಿವು, ಕಂಡರಿಯದ
ಭವಿಷ್ಯದಲ್ಲಿ ಸಂಭವಿಸದೆಂಬ ಶಂಕೆ ನನಗಿದೆ."

(ಒಥೆಲೊ : ಅಂಕ ೨, ದೃಶ್ಯ ೧)
(ಈ ಅನುವಾದ ನನ್ನದು)

ಆ ಹೊತ್ತಿಗೆ ಕಿಟಕಿಯಾಚೆಗೆ ಚಂದ್ರನ ಪೂರ್ಣ ಬಿಂಬ ಉದಯಿಸಿ ಬೆಳ್ದಿಂಗಳನ್ನು ಹದವಾಗಿ ತಂಪಾಗಿ ಪಸರಿಸಿ, ಅಂದಿನ ಪರಿಸರಕ್ಕೆ ಅನ್ಯಾದೃಶ ಮಾಯೆಯನ್ನು ದಾನ ಮಾಡಿತ್ತು.

ಆಮೇಲಿನ ಭೋಜನದ ಅಚ್ಚುಕಟ್ಟು, ನಾವೀನ್ಯ ಹಾಗೂ ಸವಿ ಭಾಗವಹಿಸಿದವರಿಗಷ್ಟೇ ಹೃದಯವೇದ್ಯವಾದಂಥ ಸಂಗತಿ; ಬಡಮಾತಿನಲ್ಲಿ ಬಣ್ಣಿಸಲು ಅಸದಳ.

ತರಹಾವರಿ ಬಿಸಿಬಿಸಿಯಾದ, ತಿಂದಷ್ಟೂ ಬೇಕೆನ್ನಿಸುವ ಭಕ್ಷ್ಯಗಳ ಐಟಂಗಳು. ಕುಡಿಯಲು ಕೇಸರಿ ಬೆರೆಸಿದ ಸುವಾಸಿತ ನೀರು. ಬಿಡಿಸಿಟ್ಟ ರಸಭರಿತ ಕಿತ್ತಳೆಯ ತೊಳೆಗಳು, ಸಪ್ಪೋಟದ ಚೂರುಗಳು, ದ್ರಾಕ್ಷಿ, ರಸಬಾಳೆ, ದಾಳಿಂಬೆಗಳ ಧಾರಾಳ ಬೋನಸ್ ಬೇರೆ. ಎಲ್ಲಾ ಮುಗಿಯಬೇಕಾದರೆ ರಾತ್ರಿ ಒಂಬತ್ತು ಗಂಟೆಯಾಗಿತ್ತು. ವಿದ್ಯಾರ್ಥಿಗಳಾದಿಯಾಗಿ ಎಲ್ಲರೂ ವಿ.ಸೀ. ಅವರ ಕೈಕುಲುಕಿ ಬೀಳ್ಕೊಟ್ಟಾಗ ಅವರೆಲ್ಲರ ಕಣ್ಣು ತೇವ ಹೊಂದಿದ್ದವು; ವಿ.ಸೀ. ಅವರಿಗೆ ಮಾತು ಹೊರಡದೆ ಕೊರಲು ಬಿಗಿದಿತ್ತು.

ವಿ.ಸೀ. ತಮ್ಮ ಜೀವಿತದ ಕೊನೆಯ ಹಂತಗಳಲ್ಲಿ ಒಮ್ಮೆ 'ಪ್ರಾಸ್ಟೆಟ್ ಗ್ಲಾಂಡ್' ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಹಿಂಭಾಗದಲ್ಲಿರುವ ನರ್ಸಿಂಗ್ ಹೋಂ ಸೇರಿ, ಶಸ್ತ್ರ ಚಿಕಿತ್ಸೆ ಮುಗಿದು ಚೇತರಿಸಿಕೊಳ್ಳುತ್ತಿದ್ದಾಗ ನಾನು ಕೆಲವು ಗೆಳೆಯರೊಂದಿಗೆ ಅವರನ್ನು ಕಂಡು ಬರಲು ಹೋಗಿದ್ದೆ. ತಾಳಲಾಗದ ನೋವು ಅವರ ಚೇತನವನ್ನು ಘಾಸಿಗೊಳಿಸಿ ಅಧೀರವಾಗಿಸಿತ್ತು; ಬಹಳ ಸೊರಗಿ ಹೋಗಿದ್ದರು. "ಹೇಗಿದ್ದೀರಿ ಸಾರ್?" ಎಂದಾಗ ಅವರು ಅನುಭವಿಸುತ್ತಿದ್ದ ದುರ್ಭರ ಸಂಕಟವನ್ನು ತೋಡಿಕೊಳ್ಳಲು ಮಾತು ಸಾಲದಾಗಿತ್ತು. ಕ್ಷೀಣ ಸ್ವರದಲ್ಲಿ "ಜೀವನ ಬಹಳ ಯಾತನಾಮಯವಪ್ಪ. Life is so miserable. ಈ ಬಾಧೆ ಸಹಿಸೋದು ಸಾಧ್ಯವಿಲ್ಲ" ಎಂದರು. ಬದುಕನ್ನು ಆದ್ಯಂತ ಪ್ರೀತಿಸಿ, ಅತ್ಯಾಸ್ಥೆಯಿಂದ ಗೌರವಿಸಿ, ಅದರಲ್ಲಿ ಶುಚಿ ರುಚಿ ಸಂತೋಷ ತುಷ್ಟಿಗಳನ್ನು ಮನಗಾಣುತ್ತ ಬಂದಿದ್ದ, ಅವುಗಳನ್ನು ಯಥೇಚ್ಛವಾಗಿ ತಮ್ಮ ಗದ್ಯ ಪದ್ಯ ಕೃತಿಗಳಲ್ಲಿ ಶ್ಲಾಘಿಸಿದ್ದ ವಿ.ಸೀ. ಅವರ ಬಾಯಿಯಿಂದ ಹೊಮ್ಮಿದ ಈ ಹತಾಶೋದ್ಗಾರದಿಂದ ನಮ್ಮ ಮನಸ್ಸು ಕಲಕಿ ಹೋಯಿತು. ನನಗೆ ಆಗ 'ಕಾದಂಬರೀ' ಕಾವ್ಯದಲ್ಲಿ ಚಂದ್ರಾಪೀಡ, ಮಹಾಶ್ವೇತೆಯನ್ನು ಕಂಡು ಉದ್ಗರಿಸಿದ್ದು ನೆನಪಿಗೆ ಬಂತು: 'ಇಂತಪ್ಪವರುಂ ಅಳುವಂದಂ ಅದ್ಭುತಂ!' ಈ ಮಾತನ್ನು ನನ್ನ ಮನಸ್ಸು 'ಇಂತಪ್ಪವರುಂ ಅಳಲುವಂದಂ ದುಸ್ಸಹಂ!' ಎಂದು ಮಾರ್ಪಡಿಸಿಕೊಂಡಿತ್ತು.

ಇದಾದ ಕೆಲ ಸಮಯದ ಬಳಿಕ, ಅವರು ವಿಧಿವಶರಾಗುವುದಕ್ಕಿಂತ ಸ್ವಲ್ಪ ಮುಂಚೆ, ಅವರ ಒಂದಿಬ್ಬರು ಅಭಿಮಾನಿಗಳಿಂದ "ವಿ.ಸೀ. ಅವರಿಗೆ ಮನೆಯಲ್ಲೇ ಹುಟ್ಟು ಹಬ್ಬದ ಚಿಕ್ಕ ಸನ್ಮಾನ ಇಟ್ಟುಕೊಂಡಿದ್ದೇವೆ, ಬಂದು ಪಾಲ್ಗೊಳ್ಳಿ" ಎಂಬ ಕರೆ ಬಂದಿತು. ಅಂದು ವಿ.ಸೀ. ಅವರನ್ನು ಕಷ್ಟಪಟ್ಟು ಕುರ್ಚಿಯ ಮೇಲೆ ಕೂರಿಸಿದ್ದರು. ಆ ಹೊತ್ತಿಗಾಗಲೇ ಅವರು ದೈಹಿಕ ಹಾಗೂ ಮಾನಸಿಕವಾಗಿ ಬಸವಳಿದು ತೀರಾ ನಿಸ್ತೇಜರಾಗಿ ಹೋಗಿದ್ದರು. ಹಿಂದಿನ ದೀಪ್ತಿಮಂತ ಹೊಳಪು ಬಸಿದು ಹೋಗಿದ್ದ ಕಣ್ಣು ಹರಳಿಲ್ಲದ ಉಂಗುರದಂತೆ ಭಣಭಣಗುಟ್ಟಿದ್ದವು. ಮಾಲಾರ್ಪಣೆಯ ಬಳಿಕ ಶಾಲು ಹೊದಿಸಿ, ಕಾಷ್ಠದಂಡ (Walking stick) ನೀಡಿ ಆರೋಗ್ಯಕ್ಕೆ ಶುಭ ಕೋರಿದೆವು; ಹೊರಡುವುದಕ್ಕೆ ಮುಂಚೆ ಗೌರವಪೂರ್ವಕ ಪ್ರಣಾಮ ಸಲ್ಲಿಸಿದೆವು. ಅವರ ಕಣ್ಣು ತೇವಗೊಂಡು ಶೂನ್ಯವನ್ನು ದಿಟ್ಟಿಸಿದ್ದವು. ಕೋಣೆಯಲ್ಲಿ ಕವಿದಿದ್ದ ಅಸಹನೀಯ ಮೌನವನ್ನು ಭೇದಿಸಿ ಹೊರಬಂದಾಗ,

ವಿ.ಸೀ. ಅವರನ್ನು ಜೀವಂತವಾಗಿ ನಾವು ಕಾಣುತ್ತಿರುವುದು ಇದೇ ಕೊನೆಯ ಸಲ ಎಂದು ಅನ್ನಿಸಿರಲಿಲ್ಲ.

ವಿ.ಸೀ. ನನ್ನ ವಿದ್ಯಾಗುರುಗಳಷ್ಟೇ ಅಲ್ಲ, ನನ್ನ ಗದ್ಯದ ಮೇಲೆ ಗಣನೀಯ ಪ್ರಭಾವ ಬೀರಿರುವ ಹಿರಿಯರಲ್ಲಿ ಒಬ್ಬರು. ಅವರ 'ಕಾಲೆಜ್ ದಿನಗಳು', 'ಮಹನೀಯರು', 'ಮುಂಬಯಿವಾಸ', 'ಹಿರಿಯರು–ಗೆಳೆಯರು', 'ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ', 'ಕವಿಕಾವ್ಯದೃಷ್ಟಿ', 'ಸಾಹಿತ್ಯಾಲೋಕನ', 'ಸತ್ಯ ಮತ್ತು ಮೌಲ್ಯ', 'ವಾಲ್ಮೀಕಿ ರಾಮಾಯಣ' ಕೃತಿಗಳಿಂದ ಭಾಷಿಕ ಹಾಗೂ ವೈಚಾರಿಕವಾಗಿ ಉಲ್ಲೇಖನೀಯ ಪ್ರಯೋಜನ ಪಡೆದಿದ್ದೇನೆ. ವ್ಯಕ್ತಿಚಿತ್ರಣದಲ್ಲಿ, ವಿದ್ಯಾರ್ಥಿದೆಸೆಯ ಹಾಗೂ ತಾರುಣ್ಯಾವಧಿಯ ನೆನಪುಗಳನ್ನು ರೇಖಿಸುವಲ್ಲಿ ವಿ.ಸೀ. ಅವರನ್ನು ಮೀರಿಸಿದವರು ಮತ್ತೊಬ್ಬರಿಲ್ಲವೇನೋ. ಅವರ 'ಅಭೀ' ಎನ್ನುವಂಥ ಪ್ರಖರ ಓಜಸ್ಸುಳ್ಳ ಪದ್ಯಕ್ಕೆ ಸಾಟಿಯಾದದ್ದು ಕನ್ನಡದಲ್ಲಿ ವಿರಳ. ಅದರ ನಾಲ್ಕು ಸಾಲುಗಳಂತೂ ನನಗೆ ಅತ್ಯಂತ ಪ್ರಿಯ ಮತ್ತು ಅವು ಘೋಷಿಸುವ ರೀತಿಯಲ್ಲಿ ನನ್ನ ಭವಿಷ್ಯವನ್ನು ರೂಪಿಸಿಕೊಳ್ಳಬೇಕೆಂಬ ಸಂಕಲ್ಪವನ್ನು ನಾನು ವಿದ್ಯಾರ್ಥಿದೆಸೆಯಲ್ಲಿ ಎಷ್ಟು ಸಲ ಮಾಡಿದ್ದೆನೋ, ಅದೆಷ್ಟು ಸಲ ಅವನ್ನು ಉಚ್ಚರಿಸಿದ್ದೆನೋ:

ಮಣಿಯದಿಹ ಮನವೊಂದು, ಸಾಧಿಸುವ ಹಟವೊಂದು
ನಿಜದ ನೇರಕೆ ನಡೆವ ನಿಶ್ಚಲತೆಯೊಂದು
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು

ವಿ.ಸೀ. ಅವರ 'ಸಾಹಿತ್ಯ : ಸಂಪ್ರದಾಯ ಮತ್ತು ಹೊಸಮಾರ್ಗ' ಎಂಬ ವಿಮರ್ಶನ ಕೃತಿಯನ್ನು, 'ಅರಲು–ಬರಲು' ಹೆಸರಿನ ಕವಿತಾ ಸಂಗ್ರಹವನ್ನು ನಾನು ಅರವತ್ತರ ದಶಕದಲ್ಲಿ 'ಸುಧಾ' ವಾರಪತ್ರಿಕೆಯಲ್ಲಿ ವಿವರವಾಗಿ ಪರಾಮರ್ಶಿಸಿದ್ದೆ. ಅದು ವಿ.ಸೀ. ಅವರಿಗೆ ತೃಪ್ತಿ ನೀಡಿರಬೇಕು. ಹಾಗೆಯೇ, ಕೆಲವು ವರ್ಷಗಳ ಬಳಿಕ ಅದೇ ಪತ್ರಿಕೆಯಲ್ಲಿ ಕೆ. ಎಸ್. ನರಸಿಂಹಸ್ವಾಮಿ ಬಗೆಗೆ ಬರೆದ ಲೇಖನ ವಿ.ಸೀ. ಅವರ ಗಮನ ಸೆಳೆದಿತ್ತು. ಅದರಲ್ಲಿ ಕೆ. ಎಸ್. ನ. ಕಾವ್ಯಕ್ಕೆ ವಿ.ಸೀ. ಅವರ Mid–wifery ನಡೆದಿರುವುದನ್ನು ಸೂಚಿಸಿದ್ದೆ. ಲೇಖನದ ಬಗ್ಗೆ ತಮ್ಮ ಮೆಚ್ಚುಗೆಯನ್ನು ಸೂಚಿಸುವುದಕ್ಕೋಸ್ಕರ ನನ್ನ ಆಗಿನ ಶಿವಮೊಗ್ಗೆಯ ವಿಳಾಸವನ್ನು ವಿ.ಸೀ. ಕೇಳಿದ್ದರೆಂದು ಆ ಕಾಲದಲ್ಲಿ ಕೆ.ಎಸ್.ನ. ನನಗೆ ಹೇಳಿದ್ದರು.

ನಾನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದ (೧೯೮೪–೧೯೮೭) ಹೊತ್ತಿಗಾಗಲೇ ವಿ.ಸೀ. ಕಾಲವಶರಾಗಿದ್ದರು. ೧೯೮೫ರಲ್ಲಿರಬೇಕು, ಚಿಕ್ಕಮಗಳೂರಿನ ರೋಟರಿ ಕ್ಲಬ್ಬಿನ ಸಹಯೋಗದಲ್ಲಿ ವಿ.ಸೀ. ಅವರ ಸಾಹಿತ್ಯವನ್ನು ಕುರಿತಂತೆ ಒಂದು ಇಡೀ ದಿನದ ವಿಚಾರಗೋಷ್ಠಿಗಳನ್ನು ಹಾಗೂ ಕವಿಮೇಳವನ್ನು ಏರ್ಪಡಿಸಿದ್ದೆ. ನನ್ನ ಸಮಿತ್ರರೂ ಆ ಊರಿನ ಸಾಹಿತ್ಯ ಸಂಸ್ಕೃತಿಗಳ ಪೋಷಕರೂ ಆದ ಕೋದಂಡರಾಮ ಶೆಟ್ಟರು ಆ ಕಾರ್ಯಕ್ರಮದ ಬೆನ್ನೆಲುಬಾಗಿ ನಿಂತು ಮೀರಿದ ಯಶಸ್ಸು ಲಭಿಸುವಂತೆ ದುಡಿದಿದ್ದರು.

ಬೆಂಗಳೂರು, ಮೈಸೂರಿನಿಂದ ಬಂದಿದ್ದ ಸಾಹಿತಿಗಳು ವಿಚಾರ ಗೋಷ್ಠಿಗಳಲ್ಲಿ ಉಪಯುಕ್ತ ಹಾಗೂ ಮೌಲಿಕವಾದ ಮಾತುಗಳನ್ನಾಡಿದರು. ಬಹುಶಃ ವಿ.ಸೀ. ಅವರ ಸಾಹಿತ್ಯವನ್ನು ಕುರಿತಂತೆ ಈ ಮಟ್ಟದ ಕಾರ್ಯಕ್ರಮ ಹಿಂದೆ ನಡೆದಿರಲಾರದು. ಆಮೇಲೆ ನಡೆದದ್ದನ್ನು ನಾನು ಕಾಣೆ. ನನ್ನ ವಿದ್ಯಾಗುರು ಹಾಗೂ ಮೆಚ್ಚಿನ ಸಾಹಿತಿ ವಿ.ಸೀ. ಅವರಿಗೆ ಈ ನಿಮಿತ್ತದಿಂದ ನಾನು ಸಲ್ಲಿಸಿದ ಗೌರವಪೂರ್ಣ ಕಿಂಚಿತ್ ಸೇವೆ ನನಗೆ ತೃಪ್ತಿಯನ್ನು ತಂದಿದೆ.

ನಾಡು ನುಡಿ ಸಂಸ್ಕೃತಿಗಳ ರಾಯಭಾರಿ

"ನಾಡು ನುಡಿ ಸಂಸ್ಕೃತಿಗಳ ರಾಯಭಾರಿಯಂತೆ ಮೊದಲಿನಿಂದ ವಿ.ಸೀ. ಶ್ರಮಿಸುತ್ತಿರುವ ಸಂಗತಿ ಸರ್ವವಿದಿತ. ಕನ್ನಡವನ್ನು ಕೇಳುವವರಿಲ್ಲದೆ ತಾತ್ಸಾರದಿಂದ ಕಾಣುತ್ತಿದ್ದ ಕಾಲದಲ್ಲಿ ಸ್ವಂತ ವೆಚ್ಚದಿಂದ ಮೈಸೂರು ರಾಜ್ಯದ ಮೂಲೆ ಮೂಲೆಗಳಲ್ಲಿ ಮಾತ್ರವಲ್ಲದೆ ನೆರೆಹೊರೆಯ ಪ್ರಾಂತಗಳಲ್ಲಿಯೂ ಸುತ್ತಾಡಿ ಪ್ರಚಾರೋಪನ್ಯಾಸಗಳನ್ನು ಕೊಟ್ಟು, ಸ್ನೇಹವರ್ಗವನ್ನು ಕಟ್ಟಿ, ಅಭಿಮಾನವನ್ನು ಬೆಳಸಿ ಕನ್ನಡಕ್ಕೊಂದು ಸ್ಥಾನಮಾನವನ್ನು ದೊರಕಿಸಿದ್ದಾರೆ. ಮದರಾಸಿನ 'ಹಿಂದೂ' ಪತ್ರಿಕೆಗೆ ಹತ್ತು–ಹನ್ನೆರಡು ವರ್ಷಕಾಲ ಪ್ರತಿವಾರ ತಪ್ಪದಂತೆ ನಿರಂತರವಾಗಿ ಕಾವ್ಯಾವಲೋಕನಕಾರರಾಗಿದ್ದ ವಿ.ಸೀ. ಕನ್ನಡ ಕೃತಿಗಳನ್ನು ಕೃತಿಕಾರರನ್ನು ಹೊರನಾಡವರಿಗೆಲ್ಲ ಪರಿಚಯ ಮಾಡಿಕೊಟ್ಟಿದ್ದಾರೆ. ನೆರೆಹೊರೆಯ ನಾಡುಗಳಿಂದ, ವಿದೇಶದಿಂದ ಬೆಂಗಳೂರಿಗೆ ಬಂದ ಸಾಹಿತಿಗಳು ಕಲೆಗಾರರು ವಿದ್ವಾಂಸರನ್ನು ಮನೆಗೆ ಆಮಂತ್ರಿಸಿ ಹತ್ತಿರದ ಹತ್ತು ಮಂದಿ ಮಿತ್ರರನ್ನು ಆಸಕ್ತಿಯುಳ್ಳವರನ್ನು ನೆರಸಿ ಪರಿಚಯ ಮಾಡಿಕೊಡುವುದಲ್ಲದೆ ಅವರ ವಿಚಾರಧಾರೆಯನ್ನು ಅಭಿಪ್ರಾಯವನ್ನು ಕೇಳುವ ಅವಕಾಶ ಕಲ್ಪಿಸಿದ್ದಾರೆ".

ಎಂ. ವಿ. ಪ್ರೇಮಕುಮಾರ್
'ವಿ.ಸೀ.–೭೫' ಪು. ೭೦

ನೆನಪುಗಳ ಮೆಲುಕು

ಹಂಪ ನಾಗರಾಜಯ್ಯ

ವಿ.ಸೀ.ಯವರನ್ನು ನೆನೆಯುವುದು ಬಿರುಬಿಸಿಲಲ್ಲಿ ತೆಳು ತಂಗಾಳಿಗೆ ಮೈಯೊಡ್ಡಿದಂತೆ. ಅದೊಂದು ಸುಖಾನುಭವ. ನನಗಿಂತ ಬಹು ಹಿರಿಯರಾದ ವಿ.ಸೀ. ಅವರೊಂದಿಗೆ ನನಗಿದ್ದ ನಿಡುಗಾಲದ ನಿಕಟತೆಯನ್ನು ಸ್ಮರಿಸಿದರೂ ಸಾಕು ಹೃದಯ ಪ್ಲಾವಿತವಾಗುತ್ತದೆ. ಅವರೊಂದಿಗೆ ಸಾರ್ಥಕವಾಗಿ ಕಳೆದ ಅಮೃತಗಳಿಗೆಗಳು ನೂರಾರು. ತಕ್ಷಣಕ್ಕೆ ಸ್ಮೃತಿ ಪಥದಲ್ಲಿ ಹಾದು ಬರುವ ಕೆಲವು ಸಂದರ್ಭಗಳನ್ನು ಈ ಲೇಖನ ಬೊಗಸೆಯಲ್ಲಿ ಹಿಡಿದಿದ್ದೇನೆ.

ನಾನಿನ್ನೂ ಇಂಟರ್ ಮೀಡಿಯಟ್ ತರಗತಿಯಲ್ಲಿ (೧೯೫೩–೫೫) ಇರುವಾಗಲೇ ವಿ.ಸೀ.ಯವರು ಒಂದು ಆದರ್ಶ ಗುರಿ. ತುಮಕೂರಲ್ಲಿ, ಬೆಂಗಳೂರಲ್ಲಿ ಅವರ ಉಪನ್ಯಾಸಗಳಿಗೆ ಆಕರ್ಷಿತನಾಗಿದ್ದೆ. ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಬಿ.ಎ. (ಆನರ್ಸ್) ಓದುವ ವರ್ಷಗಳಲ್ಲಿ (೧೯೫೫–೫೮) ಅವರ ವಿಶೇಷ ಉಪನ್ಯಾಸಗಳನ್ನು ಆಲಿಸುವ ಅವಕಾಶ ಅಯಾಚಿತವಾಗಿ ಒದಗಿತ್ತು. ಅಲ್ಲದೆ ನನ್ನ ಆಚಾರ್ಯವೃಂದದಲ್ಲಿ ಮೇಲಾಳುಗಳಾದ ತೀ. ನಂ. ಶ್ರೀಕಂಠಯ್ಯ, ಡಿ. ಎಲ್. ನರಸಿಂಹಾಚಾರ್ ಮೊದಲಾದವರೊಂದಿಗೆ ವಿ.ಸೀ.ಯವರ ಆತ್ಮೀಯತೆಯಿತ್ತು. ಈ ಗುರುಗಳ ಬಳಗಕ್ಕೆ ಸೇರಿದ ವಿ.ಸೀ.ಯವರನ್ನೂ ನಾನು ಒಬ್ಬ ಗುರುವೆಂದೇ ಗೌರವದಿಂದ ನಮಸ್ಕರಿಸುತ್ತ ಬೆಳೆದೆನೆಂಬುದು ದಿಟ. ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗದ ಆಶ್ರಯದಲ್ಲಿಯೂ, ಮಹಾರಾಜಾ ಕಾಲೇಜಿನ ವತಿಯಿಂದಲೂ ನೀಡಿದ ಭಾಷಣಗಳಲ್ಲದೆ ನಮ್ಮ ತರಗತಿಯ ವಿದ್ಯಾರ್ಥಿಗಳಿಗೆಂದೇ ಪ್ರತ್ಯೇಕವಾಗಿ ಕೊಟ್ಟ ಉಪನ್ಯಾಸದ ಸಂದರ್ಭವೂ ಹಸಿರಾಗಿದೆ. ಎಸ್. ವಿ. ಪರಮೇಶ್ವರ ಭಟ್ಟರಂತೂ ವಿ.ಸೀ.ಯವರ ಉಪನ್ಯಾಸವನ್ನು ಸಾಭಿನಯ ಪೂರ್ವಕ ಪುನರಭಿನಯಿಸಿ, ಅನುಕರಿಸಿ ವಿದ್ಯಾರ್ಥಿಗಳಾದ ನಮ್ಮನ್ನು ನಕ್ಕು ನಗಿಸಿ ಹೊಟ್ಟೆಹುಣ್ಣಾಗಿಸುತ್ತಿದ್ದರು. ಆ ಅನುಕರಣೆಯಲ್ಲಿ ನವಿರು ವಿನೋದದ ಹೊರತು ಗೇಲಿಯ ಕಿಸುರು ಇರಲಿಲ್ಲ.

ಬೆಂಗಳೂರಲ್ಲಿ ನನ್ನ ಪರಿಚಯ ವಲಯ ದೊಡ್ಡದೆಂದೇ ಹೇಳಬೇಕು. ಇವರಲ್ಲಿ, ಕುರ್ಚಿ ಸೋಫಾಗಳ ಆಸರೆ ಒರಗುಗಳಿರದೆ ನೆಲದ ಹಾಸಿನ ಮೇಲೆ ಕೆಳಗೆ ಕುಳಿತು

ಮಾತನಾಡುವ ಸಂದರ್ಭ ಬಂದದ್ದು ಎರಡು ಕಡೆ; ಒಂದು, ಎಚ್ಚೆನ್ (ಹೊಸೂರು ನರಸಿಂಹಯ್ಯ) ಕೊಠಡಿಯಲ್ಲಿ ; ಇನ್ನೊಂದು, ನಮ್ಮ ವಿ.ಸೀ.ಯವರ ಮನೆಯಲ್ಲಿ. ಬಿಸಿಬಿಸಿ ವಡೆಯೊ ಬೋಂಡವೊ ತೇಂಗೊಳಲೊ ಬೆಣ್ಣೆ ಮುರುಕೊ ಉಪ್ಪಿಟ್ಟೊ (ಕಡೆಗೆ ಬಿಸ್ಕತ್ತೊ), ಸೊಗಸಾದ ಫಿಲ್ಟರ್ ಕಾಫಿಯೊಂದಿಗೆ ಆಸ್ವಾದಿಸುತ್ತ ಅವರ ಮನೆಯಲ್ಲಿ ಸಂಜೆಯ ಮಾತುಕತೆಯನ್ನು ಸವಿಯುವ ರಸಾನುಭವ ಇರುವ ಸಾಹಿತಿ ಮಿತ್ರರಿಗೆ ನಾನು ಪ್ರತ್ಯೇಕವಾಗಿ ವಿಸ್ತರಿಸಿ ಹೇಳಬೇಕಾದ ಪ್ರಮೇಯವಿಲ್ಲ; ಈ ಅಪೂರ್ವ ಹೃತ್‌ಸಂವೇದ್ಯ ಪುಳಕಾನುಭವ ಪರಿಚಯ ಇಲ್ಲದವರಿಗೆ ತಿಳಿಸುವ ಅಗತ್ಯವಿರಲಾರದು! ವಿ.ಸೀ.ಯವರ ಮನೆಯಲ್ಲಿ ಈ ಉಪಾಹಾರದ, ಉಪಚಾರದ ಶುಚಿರುಚಿಯ ಜತೆಗೆ ಮರೆಯದೆ ದಾಖಲಿಸಬೇಕಾದ್ದು ಅದರಲ್ಲಿನ ಅಕೃತಕ ನಿರಾಡಂಬರ ನಡೆ.

ನಡೆಕೋಲು ಹಿಡಿದು ಬೆಳಗ್ಗೆ – ಸಂಜೆ ಚಂಕ್ರಮಣ ಮಾಡುವಾಗ, ಮನೆಯೊಳಗೆ ಇರುವಾಗ ಕಚ್ಚೆಪಂಚೆ, ಬಿಳಿ ತೆಳುಮಲ್ಲಿನ ಬಟ್ಟೆಯಲ್ಲಿ ಹೊಲಿಸಿದ ನೆಟ್‌ಬನೀನು, ಕಾಲರಿಲ್ಲದ ಶರಟು ತೊಟ್ಟ ವಿ.ಸೀ.ಯವರನ್ನು ನೋಡಬಹುದು. ಉಳಿದಂತೆ ಅವರ ಪೋಷಾಕು ಗೊತ್ತೇ ಇದೆ; ನಿರಿ ನಿರಿ ಮಿರುಗುವ ಶುಭ್ರ ಶ್ವೇತ ಕಚ್ಚೆ ಪಂಚೆ, ಮುಚ್ಚುಕೋಟು, ಮೈಸೂರು ಪೇಟ (ಇದು ಜರಿ ಇರದ ಬಿಳಿ ರುಮಾಲು)! ಮನೆಯೊಳಗೆ ಕುಳಿತು ನಡಸುವ ಸಂಭಾಷಣೆ ಕುರಿತು ಹೇಳುತ್ತಿದ್ದೆ; ಅಲ್ಲಿನ ಅವರ ವಾಗ್‌ಲಹರಿ, ಅದುವರೆಗಿನ ಸಹಜೋಪಚಾರದ ಹಿತವನ್ನೂ ಇಕ್ಕಿಮೆಟ್ಟಿ ವಿಜೃಂಭಿಸುವಂತಹುದು. ಆ ಮಾತುಕತೆಯಲ್ಲಿ ವಿಚಾರದ ಹೊಳಹು ಸೆಳೆದು ನಿಲ್ಲಿಸುತ್ತಿತ್ತು. ಸಾಹಿತ್ಯ ಸಂಸ್ಕೃತಿ ಸಮಾಜಶಾಸ್ತ್ರ ಅರ್ಥಶಾಸ್ತ್ರ– ಹೀಗೆ ಸಾಹಿತ್ಯಪ್ರಪಂಚದಿಂದ ಹಣಪ್ರಪಂಚದವರೆಗೆ ಹಲವು ನೆಲೆಗಳಿಗೆ ಧಾವಿಸುತ್ತ ಚಿಮ್ಮುವ ಆಲೋಚನೆಯ ಪ್ರಭಾವಳಿಯಲ್ಲಿ ವಿಚಾರಗಳು ಮಿನುಗುತ್ತಿದ್ದುವು. ಒಮ್ಮೊಮ್ಮೆ ಮಾತಿನ ನಡುವೆ ಬೆನ್ನ ಹಿಂದಿನ ಪುಸ್ತಕದ ಕಪಾಟಿಗೆ ಕುಳಿತೇ ಕೈ ಹಾಕಿ ಯಾವುದೋ ನಿರ್ದಿಷ್ಟ ಪುಸ್ತಕವನ್ನು ಹೊರಗೆಳೆದು ಅದರ ಹಿರಿಮೆಯನ್ನು ಸಾರುತ್ತಿದ್ದರು. ಅವರ ಭಾವ ಸಂಪತ್ತು, ಕನ್ನಡದಲ್ಲಿ ಪ್ರಾರಂಭಿಸಿ, ಇಂಗ್ಲಿಷಿನಲ್ಲಿ ವಿಸ್ತಾರಗೊಂಡು, ಮತ್ತೆ ಕನ್ನಡಕ್ಕೆ ಇಳಿದು (ವಿ) ರಮಿಸುತ್ತಿತ್ತು. ಅವರ ವಿಮರ್ಶೆ ಒಂದು ಖಚಿತ ಕೇಂದ್ರಕ್ಕೆ ಬದ್ಧವಾಗದಿರುವಾಗಲೂ ಅದರಲ್ಲಿ ಪೃಥಕ್ಕಾದ ವಿಚಾರದ ಸೆಳಕುಗಳು ಹೊಳೆಯುತ್ತಿದ್ದುವು. ಸುಮಾರು ೨೫–೩೦ ಸಲವಾದರೂ ಅವರೊಂದಿಗೆ ಸಂಭಾಷಿಸಿದ ಅವಿಸ್ಮರಣೀಯ ಧನ್ಯತೆಯನ್ನು ಜ್ಞಾಪಿಸಿಕೊಳ್ಳುವ ಈ ಕ್ಷಣದಲ್ಲಿ ನನಗೆ ಅನಿಸುತ್ತಿರುವುದಿಷ್ಟು — ಪ್ರತಿಸಲವೂ ಒಂದು ಟೇಪ್ ರೆಕಾರ್ಡರಿನೊಂದಿಗೆ ಹೋಗಿದ್ದರೆ ಅವರ ಮಾತುಗಳೊಂದಿಗೆ ಚಿಂತನೆಯನ್ನೂ ತದ್ವತ್ತಾಗಿ ಸೆರೆಹಿಡಿದು ಕನ್ನಡ ಅಕ್ಷರ ಲೋಕಕ್ಕೆ ಉಳಿಸಿಕೊಡಬಹುದಿತ್ತಲ್ಲವೆ!

ಇಂಡಿಯಾ ಬುಕ್ ಹೌಸ್ (ಐ.ಬಿ.ಎಚ್) ನವರು ಅನಕೃ, ಶಿವರಾಮ ಕಾರಂತ ಮತ್ತು ವಿ.ಸೀ. – ಈ ಮೂವರು ಮಹಾನ್ ಸಾಹಿತಿಗಳ ಮುಂದಾಳಿಕೆಯಲ್ಲಿ ಮೂರು ಪ್ರತ್ಯೇಕ ಪುಸ್ತಕ ಮಾಲೆಯನ್ನು ಯಶಸ್ವಿಯಾಗಿ ಕೈಗೂಡಿಸಿದರು. ಈ ಮೂವರೂ ನನ್ನಿಂದಲೂ ನನ್ನಾಕೆ ಕಮಲಾ ಹಂಪನಾರಿಂದಲೂ ಪುಸ್ತಕಗಳನ್ನು ಬರಸಿ ಹರಸಿದರು. ವಿ.ಸೀ.ಯವರು ಎಂಥ ನಿಚ್ಚಳ ಅಂತಃಕರಣದ ಐಸಿರಿಯವರು ಎಂಬುದನ್ನು ನಿದರ್ಶನಪೂರ್ವಕ

ನಿರೂಪಿಸುವ ಅವಕಾಶವಿಲ್ಲಿ ಕಲ್ಪಿತವಾಗಿದೆ. ಐಬಿಎಚ್‌ನ 'ಕವಿ–ಕಾವ್ಯ ಮಾಲೆ'ಯ ಪುಸ್ತಕಗಳಿಗೆ ವಿ.ಸೀ. ಯವರು ಸಂಪಾದಕರು. ಆ ಮಾಲೆಗೆ ರನ್ನನನ್ನು ಕುರಿತು ಲೇಖನ ಬರೆಯಲು ನನ್ನನ್ನು ಕೇಳಿದಾಗ ಒಪ್ಪಿಕೊಳ್ಳಲು ಆಗಲಿಲ್ಲ. ಅದರಿಂದ ಅವರು ಅನ್ಯಥಾ ಭಾವಿಸದೆ ಮುಂದೆ ಕೆಲವು ತಿಂಗಳ ನಂತರ ಜನ್ನ ಕವಿಯ ಕಾವ್ಯ ಕುರಿತ ವಿಮರ್ಶೆಯ ಲೇಖನ ಅಪೇಕ್ಷಿಸಿದರು. ದುರಾದೃಷ್ಟವಶಾತ್ ಆಗಲೂ ನನ್ನ ಅನನುಕೂಲವನ್ನು ಅರಿಕೆ ಮಾಡಬೇಕಾಯಿತು. ಅಲ್ಲಿಗೂ ಅವರು ಬೇಸರಿಸಲಿಲ್ಲ. ಮತ್ತೆ ನಾಲ್ಕುವಾರ ಬಿಟ್ಟು ನಾಗಚಂದ್ರನ ಕಾವ್ಯದ ಅಭ್ಯಾಸಪೂರ್ಣ ಲೇಖನ ಬರೆಯಲು ಆದೇಶಿಸಿದರು. ಆಗಲೂ, ಒಂದು ರಾಷ್ಟ್ರೀಯ ಸಮಾವೇಶದಲ್ಲಿ ಪ್ರಬಂಧ ಮಂಡಿಸುವ ಸಿದ್ಧತೆಯಲ್ಲಿ ನಿರತನಾಗಿದ್ದುದರಿಂದ, ಆ ಹಿರಿಯರ ಸೂಚನೆಗೆ ಸ್ಪಂದಿಸಲು ಆಗಲಿಲ್ಲ. ಆದರೆ ಈ ಸರಣಿ ಇಲ್ಲಿಗೆ ನಿಲ್ಲಲಿಲ್ಲ. ಅವರ ಪ್ರೀತಿ ಬತ್ತದ ತೊರೆ. ಆ ಔದಾರ್ಯದ ತೆಕ್ಕೆಯಿಂದ ಬಿಡಿಸಿಕೊಳ್ಳಲು ಅವರು ಬಿಟ್ಟರೆ ತಾನೆ? ನಾಲ್ಕನೆಯ ಬಾರಿಗೆ ಅವರು ಪುನಃ ನೇಮಿಚಂದ್ರ ಕವಿಯ ಬಗ್ಗೆ ಲೇಖನ ಬರೆದು ಕೊಡಲೇಬೇಕೆಂದು ಆಗ್ರಹಿಸಿದರಲ್ಲದೆ ಮನೆಗೆ ಬರಮಾಡಿಕೊಂಡು ವಿವೇಕ ವಾಣಿ ಮೊಳಗಿಸಿದರು: "ತೊಂದರೆಗಳು ಯಾರಿಗೂ ತಪ್ಪಿದ್ದಲ್ಲ; ಕಷ್ಟಗಳ ನಡುವೆಯೇ ಈಜುತ್ತ ದಡ ಸೇರಬೇಕು. ಹಳೆಗನ್ನಡ ಕಾವ್ಯಗಳ ಮೇಲೆ ಒಳ್ಳೆಯ ಹಿಡಿತ ಇರುವವರು ಹೊಸಕಾಲದ ಮನಸ್ಸುಗಳಿಗೆ ತಿಳಿಸಿಕೊಡಬೇಕಾದ್ದು ನಮ್ಮ ಹೊಣೆಗಾರಿಕೆಯೂ ಹೌದು." ಅವರ ಮೆಚ್ಚುಗೆ ಗಳಿಸುವಂತೆ ಒಂದು ಲೇಖನ ಬರೆದುಕೊಟ್ಟು ಕೃತಾರ್ಥನಾದೆ; ವಿ.ಸೀ.ಯವರು ಅಕ್ಕರೆಯಿಂದಲೇ ಗೆಲ್ಲುವವರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಗೆ ನಾನು ಸ್ಪರ್ಧಿಸಿದಾಗ ನನ್ನ ನಾಮಪತ್ರಕ್ಕೆ ಸೂಚಕರಾಗಿ – ಅನುಮೋದಕರಾಗಿ ಮಾಸ್ತಿ, ಗೋಕಾಕ್, ಶ್ರೀರಂಗ, ಗೊರೂರು, ಮುಗಳಿ, ಶಿವರಾಮ ಕಾರಂತ, ಬಿ. ಪುಟ್ಟಸ್ವಾಮಯ್ಯ, ಪುತಿನ, ವಿ.ಸೀ., ಬಸವರಾಜ ಕಟ್ಟೀಮನಿ, ಚದುರಂಗ– ಮುಂತಾದ ಹೇಮಾ ಹೇಮಿಗಳು ಬೆಂಬಲಿಸಿದ್ದೊಂದು ಯೋಗಾಯೋಗ. ಚುನಾವಣೆಗೆ ಸ್ಪರ್ಧಿಸುವ ವಿಚಾರದಲ್ಲಿ ನಾನು ಇನ್ನೊಮ್ಮೆ ಯೋಚಿಸಬೇಕೆಂದೂ, ನನ್ನ ಓದುಬರಹಕ್ಕೆ ಇದು ದೊಡ್ಡ ಅಡ್ಡಿಯಾಗುತ್ತದೆಂದೂ ನೇರವಾಗಿ ಮುಲಾಜಿಲ್ಲದೆ ಮುಖಕ್ಕೆ ಹೇಳಿದವರು, ಸಾಹಿತ್ಯ ಪ್ರಪಂಚದ ಅತಿರಥ ಮಹಾರಥರಲ್ಲಿ ಮೂವರು ಮಾತ್ರ: ಕುವೆಂಪು, ವಿ.ಸೀ., ರಾಜರತ್ನಂ; ಕುವೆಂಪುರವರಂತೂ ನನ್ನ ನಾಮಪತ್ರಕ್ಕೆ ಸಹಿ ಮಾಡಲೇ ಇಲ್ಲ. ಈ ಹಿರಿಯರು ಹೇಳಿದ ಬುದ್ಧಿಮಾತು ಅಂದು 'ಸಿಹಿ' ಎನಿಸದಿದ್ದರೂ ಇವರನ್ನು ತಪ್ಪು ತಿಳಿದುಕೊಳ್ಳುವುದು ಸಾಧ್ಯವೇ ಇರಲಿಲ್ಲ. ನಾನು ಬರೆದಿರುವ ಪ್ರಬಂಧಗಳನ್ನು, 'ಹೆಸರಿನ ಸೊಗಸು' ಸಂಕಲನವನ್ನು ಎತ್ತಿ ಮುದ್ದಾಡಿದ ವಿ.ಸೀ.ಯವರ ವಾತ್ಸಲ್ಯವರ್ಷದಲ್ಲಿ ತೇಲಾಡಿದ್ದೇನೆ. ನಾನು ಕಸಾಪ ಅಧ್ಯಕ್ಷನಾಗಿ ಆರಿಸಿ ಬಂದ ಮೇಲೆ ಹರಸಿದರು, ಹತ್ತಾರು ಸಮಾರಂಭಗಳಿಗೆ ಅತಿಥಿಯಾಗಿ ಬಂದು ವಿಶ್ವಾಸ ತೋರಿದರು. ಕೆಲವು ಸಮಾರಂಭಗಳಿಗೆ ಸಭಿಕರಾಗಿಯೇ ಆಗಮಿಸಿದರೆಂಬುದನ್ನು ನಾನಿಲ್ಲಿ ಒತ್ತುಕೊಟ್ಟು ಹೇಳಬೇಕು; ಉಪನ್ಯಾಸಕರಾಗಿ ಕರೆದಾಗ ಮಾತ್ರ ಹೋಗಬೇಕೆಂಬ ಬಿಗುಮಾನ ಅವರಲ್ಲಿ ಇರಲಿಲ್ಲ. ದ. ರಾ. ಬೇಂದ್ರೆ ಯವರ ಚಿತಾಭಸ್ಮವನ್ನು ರೈಲ್ವೆ ನಿಲ್ದಾಣದಿಂದ ಮೆರವಣಿಗೆಯಲ್ಲಿ ತಂದು ಸಾರ್ವಜನಿಕ

ದರ್ಶನಕ್ಕಾಗಿ ಕಸಾಪ ಸಭಾಂಗಣದಲ್ಲಿ ಇರಿಸಿದ್ದು ಹಿರಿಯ ಸಾಹಿತಿಗಳಲ್ಲಿ ಮೂರ್ಧನ್ಯ ಪ್ರಾಯರಾದ ಮಾಸ್ತಿಯವರಿಗೆ ಸರಿ ಕಾಣಲಿಲ್ಲ. ಇದರಿಂದ ನಾನು ಮಾಡಿದ್ದು ತಪ್ಪಾಯಿತೇನೊ ಎಂಬ ಅಳುಕು ಉಂಟಾಯಿತು. ಆಗ ನನ್ನ ಅಧೀರತೆಯನ್ನು ಹೋಗಲಾಡಿಸಿದವರು ವಿ.ಸೀ.ಯವರು. ಅವರ ಉಪಕಾರದ ಹೊರೆ ನನ್ನ ಮೇಲೆ ಇನ್ನೂ ಇದೆ.

ವಿ.ಸೀ. ಯವರೊಂದಿಗೆ ನಾನು ಕೈಗೊಂಡ ಪ್ರವಾಸಗಳಲ್ಲಿ ವಿಶಿಷ್ಟವಾದ ಎರಡನ್ನು ಇಲ್ಲಿ ಉಲ್ಲೇಖಿಸುತ್ತೇನೆ. ನಾನಿನ್ನೂ ಕಸಾಪ ಕಾರ್ಯದರ್ಶಿ ಆಗಿದ್ದಾಗ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಲ್ಲಿ ಏರ್ಪಾಟಾಗಿದ್ದ, ಸೇಡಿಯಾಪು ಕೃಷ್ಣಭಟ್ಟರೂ ಉಪಸ್ಥಿತರಿದ್ದ ಆ ಸಮಾರಂಭದಲ್ಲಿ ವಿ.ಸೀ.ಯವರ ಅಮೋಘ ಭಾಷಣಕ್ಕೆ ಸಭೆ ಆನಂದ ತುಂದಿಲವಾಯಿತು. ಇನ್ನೊಂದು ನಾನು ಕಸಾಪ ಅಧ್ಯಕ್ಷನಾಗಿದ್ದಾಗ ಶಿವಮೊಗ್ಗ ಕರ್ನಾಟಕ ಸಂಘದವರು ಏರ್ಪಾಟು ಮಾಡಿದ್ದ ವಿ.ಸೀ. ಸನ್ಮಾನ ಸಮಾರಂಭ. ಊರಿನ ಹಸೂಡಿ ಕುಟುಂಬದವರ ಹಾಗೂ ಮಹಿಷಿ ನರಸಿಂಹಮೂರ್ತಿ ಅವರ ಮನೆಗಳಲ್ಲಿ ವಿ.ಸೀ.ಯವರಿಗೆ ಆತಿಥ್ಯವಿತ್ತು. ಅದೊಂದು ಅಪರೂಪದ ಸಮಾರಂಭ, ಭದ್ರಾವತಿ ಬಾನುಲಿಯ ಮೂಲಕ ನಾಡಿಗೆ ಬಿತ್ತರವಾಯಿತು, ಕನ್ನಡ ನುಡಿಯಲ್ಲೂ ಅದರ ವರದಿಯ ಪೂರ್ಣ ಪಾಠ ಅಚ್ಚಾಗಿದೆ. ವಿ.ಸೀ. ಅವರೊಂದಿಗೆ ಪ್ರವಾಸ ಸಂದರ್ಭದಲ್ಲಿ ಅವರ ಅನುಭವಜನ್ಯ ಸಂಪದದ ಝಳಕುಗಳು ತುಳುಕುತ್ತಿದ್ದುವು; ಇಂಥ ಶ್ರೀಗಂಧದ ಒಡನಾಟದಲ್ಲಿ, ಸಾಹಿತ್ಯ ಸಲ್ಲಾಪದಲ್ಲಿ ನಾನು ಬೆಳೆದೆನೆಂಬುದು ನನಗೆ ಹೆಮ್ಮೆಯಾಗುತ್ತದೆ.

ಇಷ್ಟು ಪ್ರೀತಿಯ ವಿ.ಸೀ.ಯವರು ನಿಧನರಾದಾಗ ನನ್ನ ಹಾಗೆ ಸಾಹಿತ್ಯವಲಯ ಕಣ್ಣೀರ್ಗರೆಯಿತು. ಅವರ ದಿವ್ಯಸ್ಮೃತಿಗೆ ಯೋಗ್ಯ ಸ್ಮಾರಕವಾಗುವ ರೀತಿಯಲ್ಲಿ ಶ್ರದ್ಧಾಂಜಲಿ ಕಾರ್ಯಕ್ರಮ ಏರ್ಪಡಿಸಿದ್ದೆ. ಕನ್ನಡ ನುಡಿಯ ವಿಶೇಷ ಸಂಚಿಕೆಯನ್ನು ಕ್ಷಿಪ್ರಾತಿಕ್ಷಿಪ್ರ ಗತಿಯಲ್ಲಿ ಅರ್ಥಪೂರ್ಣ ಲೇಖನ ಮತ್ತು ಚಿತ್ರಗಳೊಂದಿಗೆ ಹೊರತರಲು ನನಗೆ ಸಾಧ್ಯವಾದದ್ದು ಇಂದಿಗೂ ನನಗೆ ನೆಮ್ಮದಿ ಕೊಡುವ ಸಂಗತಿಗಳಲ್ಲೊಂದು. ವಿ.ಸೀ.ಯವರು ಇಪ್ಪತ್ತನೆಯ ಶತಮಾನದ, ನವೋದಯ ಸಾಹಿತ್ಯ ಸಂಪುಟದ ಹೊನ್ನ ಹಾಳೆ; ಆ ಪುಟಕ್ಕೆ ಇರುವುದು ಮಾಸದ ಚೆಲುವು.

ನೆನಪಿನಂಗಳದಿಂದ

ನಿರ್ಮಲಾ ಇನಾಂದಾರ್

ನಮ್ಮ ಮದುವೆಯಾದ ಹೊಸತರಲ್ಲಿ ನಾವು ಮೈಸೂರಿಗೆ ಹೋಗಿದ್ದೆವು; ನಮ್ಮ ಪ್ರಕಾಶಕರೂ ಮಿತ್ರರೂ ಆದ ಶ್ರೀ ಆರ್. ಎನ್. ಹಬ್ಬು (ಉಷಾ ಸಾಹಿತ್ಯ ಮಾಲೆ) ಅವರು ಮೈಸೂರಲ್ಲಿಯೇ ಇದ್ದರೂ ನಾವು ವಿ.ಸೀ. ಯವರಲ್ಲಿಯೇ ಇಳಿದುಕೊಂಡಿದ್ದೆವು. ವಿ.ಸೀ. ಯವರ ಮನೆಯಲ್ಲಿಯ ಅತಿಥಿ ಸತ್ಕಾರವೆಂದರೆ ಸ್ವರ್ಗಸಮಾನವಾದದ್ದು. ಅವರ ಹೆಂಡತಿ ನಮ್ಮನ್ನು ಬಹಳ ಅಕ್ಕರೆಯಿಂದ ನೋಡಿಕೊಂಡರು. ಅವರ ಮಕ್ಕಳೊಂದಿಗೆ ನನಗೂ ಕೈ ತುತ್ತು ಹಾಕಿ ಉಣಬಡಿಸಿದರು. ಮಹಾರಾಜಾ ಕಾಲೇಜಿನಲ್ಲಿ ನಮ್ಮ ಯಜಮಾನರ (ಪ್ರೊ. ವಿ. ಎಂ. ಇನಾಂದಾರ್) ಭಾಷಣವಾಯಿತು. "ನಿನ್ನ ಗಂಡನಿಗೆ ಭಾಷಣ ಮಾಡಲು ನಾನೇ ಕಲಿಸಿದ್ದು" ಎಂದು ವಿ.ಸೀ. ಯವರು ಹೆಮ್ಮೆಯಿಂದ ಹೇಳಿದ್ದರು.

ಶ್ರೀ ಹಬ್ಬು ಅವರ ಮನೆಯಲ್ಲೂ ಒಂದು ದಿನ ಊಟ ಉಪಚಾರವಾಯಿತು. ಮರುದಿನ ಬೆಳಗ್ಗೆ ನಮ್ಮ ಯಜಮಾನರು ವಿ.ಸೀ.ಯವರ ಜೊತೆಗೆ ಎಲ್ಲಿಯೋ ಹೋದರು. ಮಧ್ಯಾಹ್ನ ಶ್ರೀ ಕ. ವೆಂ. ರಾಘವಾಚಾರ್ಯರ ಮನೆಯಲ್ಲಿ ಊಟಕ್ಕೆ ಏರ್ಪಾಡಾಗಿತ್ತು. ಬೆಳಗಿನ ತಿಂಡಿಯಾದ ಮೇಲೆ ಹುಡುಗರ ಜೊತೆಗೆ ಹರಟೆ ಹೊಡೆಯುತ್ತ ಕೂತಿದ್ದೆ. "ಚಾಮುಂಡಿ ಬೆಟ್ಟ ಇಲ್ಲಿಂದ ಎಷ್ಟು ದೂರ" ಎಂದು ಮಕ್ಕಳನ್ನು ಕೇಳಿದೆ. ಅದಕ್ಕೆ ಅವರು "ಅದೇನು ಚಿಕ್ಕಮ್ಮ, ಅರ್ಧಗಂಟೆಯಲ್ಲಿ ಹೋಗಿ ಬಂದು ಬಿಡಬಹುದು" ಎಂದರು. "ಹಾಗಿದ್ದರೆ ವಿ.ಸೀ. ಮತ್ತು ನಮ್ಮ ಯಜಮಾನರು ಹಿಂತಿರುಗಿ ಬರುವಷ್ಟರಲ್ಲಿ ಬೇಗ ಹೋಗಿ ಬಂದು ಬಿಡುವಾ" ಎಂದು ಮಕ್ಕಳನ್ನು ಹುರಿದುಂಬಿಸಿ, ಒಳಗೆ ಅಮ್ಮನಿಗೂ ಹೇಳದೇ ಕೈಯಲ್ಲಿ ಒಂದು ಬಿಡಿಗಾಸೂ ಇಲ್ಲದೆ ಹಾಗೇ ಹೊರಟು ಬಿಟ್ಟೆವು. ಸ್ವಲ್ಪ ದೂರ ನಡೆದಾದ ಮೇಲೆ ಮೆಟ್ಟಲುಗಳನ್ನು ಹತ್ತಲು ತೊಡಗಿದೆವು. ೫೦೦ ಮೆಟ್ಟಲುಗಳನ್ನು ಹತ್ತಬೇಕಾದರೆ ಸುಸ್ತಾಯಿತು. ಬಿಸಿಲಿನ ಬೇಗೆ ಬೇರೆ. ಹತ್ತಿರದ ನಲ್ಲಿಯಲ್ಲಿ ನೀರು ಕುಡಿದು ಮತ್ತೆ ಏರತೊಡಗಿದೆವು. ಅಷ್ಟು ಹತ್ತಿ ಮೇಲೆ ಹೋದರೆ ಅಂದು ಶುಕ್ರವಾರ, ೧೨ ಗಂಟೆಯವರೆಗೆ ದೇವಸ್ಥಾನದ ಬಾಗಿಲು ತೆಗೆಯುವುದಿಲ್ಲವೆಂದು ಹೇಳಿದರು. ಯಜಮಾನರು ಮನೆಗೆ ಬಂದು 'ಎಲ್ಲಿ ಹೋದರೆಂದು ಕೇಳಿದರೆ?' ಎಂದು ನನಗೆ ಹೆದರಿಕೆಯಾಗಲು ತೊಡಗಿತು. ನಾವು ಅಮ್ಮನಿಗಾದರೂ ಹೇಳಿ ಬರಬೇಕಿತ್ತು ಎಂದು ಅನಿಸತೊಡಗಿತು.

ಒಂದು ಕಡೆ ಈ ಭಯವಾದರೆ ದೇವಿಯ ದರ್ಶನವಾಗಲಿಲ್ಲವೆಂದು ಇನ್ನೊಂದು ಕಡೆ ಅಸಮಾಧಾನ. ಅಂತೂ ನಾವು ಅಲ್ಲಿಂದ ಹೊರಟೆವು. ಇತ್ತ ವಿ.ಸೀ.ಯವರು ಮನೆಗೆ ಬಂದು 'ಎಲ್ಲಿದ್ದಾರೆ' ಎಂದು ಕೇಳಲು, ಅಮ್ಮ 'ಇಲ್ಲಿಯೇ ಮಕ್ಕಳ ಜೊತೆಗೆ ಮಾತನಾಡುತ್ತಿದ್ದಳು. ಪಕ್ಕದ ಮನೆಗೆ ಹೋಗಿರಬಹುದು', ಎಂದು ಹೇಳಿದರು. ಅಲ್ಲೆಲ್ಲ ಇಲ್ಲವೆಂದು ತಿಳಿದಾಗ ಎಲ್ಲಿಗೆ ಹೋದರು, ಮಕ್ಕಳು ಎಲ್ಲಿ ಕರೆದುಕೊಂಡು ಹೋದರು ಎಂದು ವಿ.ಸೀ. ಯವರು ಗಾಬರಿಯಿಂದ ಒಂದೆರಡು ಕಡೆಗೆ ಸುತ್ತಾಡಿ ಬಂದರೂ ನಮ್ಮ ಸುಳಿವು ಇರಲಿಲ್ಲ. ನಮ್ಮ ಯಜಮಾನರಿಗಂತೂ ಹೀಗೆ ಹೇಳದೇ ಹೋದದ್ದರಿಂದ ತುಂಬಾ ಕೋಪ ಬಂದಿತ್ತು. ಅದಕ್ಕೆ ಅವರು ವಿ.ಸೀ.ಯವರಿಗೆ "ನಡೆಯಿರಿ, ನಾವು ರಾಘವಾಚಾರ್ಯರ ಮನೆಗೆ ಹೋಗೋಣ, ಬಂದರೆ ಬರುತ್ತಾರೆ" ಎಂದು ಹೇಳಿ ಹೊರಟೇ ಬಿಟ್ಟರು. ನಾವು ಬರುವೆವೆಂದು ರಾಘವಾಚಾರ್ಯರು ಇತರ ಕೆಲವು ಸಾಹಿತಿಗಳನ್ನು ಊಟಕ್ಕೆ ಕರೆದಿದ್ದರು. ನಾವು ಬೆಟ್ಟ ಇಳಿದು ಬರುವಾಗ ನಾನು ಹುಡುಗರನ್ನು "ನಿಮಗೆ ರಾಘವಾಚಾರ್ಯರ ಮನೆ ಗೊತ್ತಿದೆಯೆ?" ಎಂದು ಕೇಳಿದೆ. ಅವರಲ್ಲಿ ಗುಂಡುವಿಗೆ ಮನೆ ಗೊತ್ತಿತ್ತು. ತಡವಾದುದರಿಂದ ನನ್ನನ್ನು ರಾಘವಾಚಾರ್ಯರ ಮನೆಗೆ ಬಿಟ್ಟು ಹುಡುಗರು ಮನೆಗೆ ಹೋದರು. "ಬಂದರು, ಬಂದರು" ಎಂದು ರಾಘವಾಚಾರ್ಯರು ನಗುತ್ತ ಒಳಗೆ ಹೋದರು. ವಿ.ಸೀ.ಯವರು ಹೊರಗೆ ಬಂದು "ಏನಮ್ಮ, ಇಷ್ಟು ಬಿಸಿಲಿನಲ್ಲಿ ಯಾಕೆ ಆ ಮಕ್ಕಳ ಜೊತೆಗೆ ಹೋದೆ? ನಾನು ನಿನ್ನನ್ನು ಕರೆದುಕೊಂಡು ಹೋಗುತ್ತಿದ್ದೆ" ಎಂದು ಅಕ್ಕರೆಯಿಂದ ಹೇಳಿದರು. ಆದರೆ ನಮ್ಮ ಯಜಮಾನರಿಗೆ ನಾನು ಜನರನ್ನು ಕಾಯಿಸಿದ್ದರಿಂದ ಕೋಪ ಬಂದಿತ್ತು. ಅವರು ಒಂದೂ ಮಾತು ಆಡಲಿಲ್ಲ. ನಾವು ಅಂದೇ ತಿರುಗಿ ಊರಿಗೆ ಹೊರಡುವವರಿದ್ದೆವು. ಊಟ ಮುಗಿಸಿ ವಿ.ಸೀ.ಯವರಲ್ಲಿಗೆ ವಾಪಸು ಬಂದೆವು. "ಈ ಮಕ್ಕಳು ಬೆಟ್ಟಕ್ಕೆ ಹೋಗುತ್ತೇವೆ ಎಂದು' ನನಗೆ ಹೇಳಬಾರದೇ? ಅವರಲ್ಲಿ ಊಟಕ್ಕೆ ಹೋಗುವುದಿದೆ, ಬೇಡ ಎಂದು ನಾನು ಹೇಳುತ್ತಿದ್ದೆ" ಎಂದು ಹೇಳಿ, ಪಾಪ, ಅವಳಿಗೆ ಹೇಗೆ ಗೊತ್ತಾಗಬೇಕು?" ಎಂದು ವಿ.ಸೀ. ನನ್ನನ್ನು ಸಮರ್ಥಿಸಿದರು.

* * *

ನಾವು ಧಾರವಾಡದಲ್ಲಿದ್ದಾಗ ವಿ.ಸೀ. ಅವರು ನಮ್ಮ ಮನೆಗೆ ಒಂದೆರಡು ಸಲ ಬಂದ ನೆನಪಿದೆ. ನಾನು ಚಿಕ್ಕ ಮಗು ಜಾನಕಿಯನ್ನು ಕರೆದುಕೊಂಡು ಆಗ ಬಂದಿದ್ದೆ. ವಿ.ಸೀ.ಯವರು ಮಗುವನ್ನು ನೋಡಿ ಬಹಳ ಸಂತೋಷ ಪಟ್ಟರು. "ನೀನೇಕೆ ಇಷ್ಟು ಸೊರಗಿ ಹೋಗಿದ್ದೀಯಾ?" ಎಂದು ಅವರು ತುಂಬ ಆಸ್ಥೆಯಿಂದ ಕೇಳಿದರು. ಅದಕ್ಕೆ ನಮ್ಮವರು " The compensation is the child" ಎಂದರು. ನಮ್ಮಲ್ಲಿ ಊಟ ಮಾಡಿದ ವಿ. ಸೀ. ಯವರು ನಮ್ಮ ಅತ್ತೆಯವರು ಮಾಡಿದ್ದ ಹೂರಣ ಹೋಳಿಗೆಯ ರುಚಿಯನ್ನು ವರ್ಣಿಸಿ ಹೊಗಳಿ ಸಂತೋಷದಿಂದ ಹೋದರು. ಆ ಮೇಲೆ ನಾವು ಮಂಗಳೂರಿಗೆ ಹೋದೆವು. ಅಲ್ಲಿದ್ದಾಗ ವಿ.ಸೀ. ಅವರು ಒಂದು ಸಲ ತಮ್ಮ ಹೆಂಡತಿ ಹಾಗೂ ಮಗಳನ್ನು ಕರೆದುಕೊಂಡು ಬಂದಿದ್ದರು. ಅವರ ಜೊತೆಗೆ ಶ್ರೀಮತಿ ಬನಶಂಕರಮ್ಮ ಬಂದಿದ್ದರು. ಅವರೆಲ್ಲ ಬರುವ ಸುದ್ದಿ ನನಗೆ ಮೊದಲೇ ನಮ್ಮ ಯಜಮಾನರು

ತಿಳಿಸಿದ್ದರಿಂದ ನಾನು ನಮ್ಮ ಧಾರವಾಡ ಕಡೆಯ ಸಕ್ಕರೆಯ ಹೋಳಿಗೆಯನ್ನು ಮಾಡಿದ್ದೆ. ವಿ.ಸೀ. ಯವರು ತಿಂದದ್ದು ಅರ್ಧ ಹೋಳಿಗೆಯಾದರೂ ಆಗಿನ ಅವರ ಸಂತೋಷ, ಅವರ ವರ್ಣನೆ ನನ್ನ ನೆನಪಿನಲ್ಲಿ ಇನ್ನೂ ಅಚ್ಚಳಿಯದೇ ಉಳಿದಿದೆ. ಆಗ ನಾನು, ಕಮಲು(ವಿ.ಸೀ. ಅವರ ಮಗಳು), ಬನಶಂಕರಮ್ಮ ಒಳಗೆ ಕುಳಿತು ಹರಟೆ ಹೊಡೆಯುತ್ತಾ ಇದ್ದಾಗ ವಿ.ಸೀ. "ನೀವು ಹೆಂಗಸರು ಹೊರಗೆ ಬರಬೇಕು, ಒಳ್ಳೆಯ ಸಾಹಿತ್ಯವನ್ನು ಓದಬೇಕು, ನಿಮ್ಮ ನೆರೆಹೊರೆಯವರನ್ನು ಸುಧಾರಿಸಲು ಪ್ರಯತ್ನಿಸಬೇಕು, ನೆಮ್ಮದಿಯಾಗಿ ಬಾಳಲು ಇಷ್ಟೆಲ್ಲ ನಿಮಗೆ ಸಹಾಯವಾಗುವುದು" ಎಂದು ಹೇಳುತ್ತಿದ್ದರು.

ಆ ಮೇಲೆ ಉಡುಪಿಯಲ್ಲಿ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಭಾಷಣಕ್ಕೆಂದು ವಿ.ಸೀ. ಬಂದಿದ್ದರು. ಅವರ ಜೊತೆಗೆ ಕೆ. ವೆಂಕಟರಾಮಪ್ಪ, ಕೆ. ಎಸ್. ನರಸಿಂಹಸ್ವಾಮಿ, ಮತ್ತೆ ಒಂದಿಬ್ಬರು ಬಂದಿದ್ದರು. ವಿ.ಸೀ. ಯವರಿಗೆ ಅನಾನುಕೂಲವಾಗಬಾರದೆಂದು ಅವರೊಬ್ಬರನ್ನು ನಮ್ಮ ಮನೆಯಲ್ಲಿ ಉಳಿಸಿಕೊಂಡು ಉಳಿದವರಿಗೆ ಹತ್ತಿರದ ಹೋಟೆಲಿನಲ್ಲಿ ಇಳಿಯುವ ವ್ಯವಸ್ಥೆಯನ್ನು ಮಾಡಿದ್ದರು. ವಿ.ಸೀ. ಯವರು ನಮ್ಮಲ್ಲಿ ಬಂದು ಇಳಿದುಕೊಂಡ ಅರ್ಧಗಂಟೆಯಲ್ಲಿಯೇ ಈ ಗೆಳೆಯರೆಲ್ಲರೂ ಸಾಮಾನು ಸಹಿತವಾಗಿ ನಮ್ಮಲ್ಲಿಗೇ ಬಂದು "ನಾವೂ ಇಲ್ಲಿಯೇ ಇರುತ್ತೇವೆ" ಎಂದು ಹೇಳಿದರು. ನಮ್ಮ ಯಜಮಾನರು "ಆಗಲಿ ಅದಕ್ಕೇನು?" ಅಂದರು. ಊಟ ಉಪಚಾರ ಹೇಗೋ ನಡೆಯಿತು. ರಾತ್ರಿ ಮಲಗಲು ಎಲ್ಲರಿಗೆ ಹಾಸಿಗೆ ಹೊದಿಕೆಯ ವ್ಯವಸ್ಥೆ ಆಯಿತು. ವಿ.ಸೀ., ವೆಂಕಟರಾಮಪ್ಪ ಹಾಗೂ ನಮ್ಮ ಯಜಮಾನರು ಸುಮಾರು ರಾತ್ರಿಯವರೆಗೆ ಹರಟೆ ಹೊಡೆಯುತ್ತಿದ್ದುದು ಕೇಳಿಸುತ್ತಿತ್ತು. ಅದೊಂದು ಮರೆಯಲಾರದ ಸಂತೋಷ ಕೂಟ.

* * *

ಧಾರವಾಡದಲ್ಲಿ ನಾವಿದ್ದಾಗ ವಿ.ಸೀ.ಯವರು ಕುಮಟಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ನಮ್ಮವರಿಗೂ ಆ ಸಮ್ಮೇಳನದಲ್ಲಿ ಭಾಗವಹಿಸಲು ಕರೆ ಬಂದಿತ್ತು. ಯಜಮಾನರು ನನ್ನನ್ನೂ ಕರೆದುಕೊಂಡು ಹೋಗಿದ್ದರು. ಸಮ್ಮೇಳನದ ಮೊದಲ ದಿನದ ಉದ್ಘಾಟನೆಯಾದ ಮೇಲೆ ಕೆಲವು ಸಮಯ ನಾವು ವಿ.ಸೀ.ಯವರು ಇಳಿದುಕೊಂಡ ಸ್ಥಳಕ್ಕೆ ಅವರನ್ನು ಭೆಟ್ಟಿಯಾಗಲು ಹೋಗಿದ್ದೆವು. ಆಗ ಮಾತು ಬಂದು ನಾನು ಮತ್ತು ಶ್ರೀಮತಿ ಬನಶಂಕರಮ್ಮ "ನೀವು ನಿಮ್ಮ ಸಮ್ಮೇಳನದಲ್ಲಿ ಮಹಿಳೆಯರಿಗೆ ಯಾವ ಸ್ಥಾನವನ್ನೂ ಕೊಟ್ಟಿಲ್ಲ" ಎಂದೆವು. "ನಿಮಗೆ ಯಾರು ಬೇಡವೆಂದವರು? ನೀವು ಅರ್ಧ ಗಂಟೆಯ ಕಾರ್ಯಕ್ರಮ ಮಾಡಲು ನಾನು ಸಮಿತಿಗೆ ಹೇಳಿ ಒಪ್ಪಿಗೆ ಪಡೆಯುವೆ" ಎಂದು ವಿ.ಸೀ. ಯವರು ನಮಗೆ ಒತ್ತಾಸೆ ನೀಡಿದರು. ಶಿವರಾಮ ಕಾರಂತರು "ನೀವೂ ನಮ್ಮ ಜೊತೆಗೆ ಬರಬೇಕು. ಚರ್ಚೆಮಾಡಬೇಕು. ಹಿಂದೆ ಉಳಿಯಬಾರದು" ಎಂದು ನಮ್ಮನ್ನು ಹುರಿದುಂಬಿಸಿದರು. ನಮ್ಮ ಮೇಲೆ ಜವಾಬದಾರಿ ಬಂದಿತೆಂದು ನಾವು ಅಲ್ಲಿ ಸೇರಿದ್ದ ಮಹಿಳೆಯರೊಂದಿಗೆ ಚರ್ಚಿಸಿ, ಅರ್ಧಗಂಟೆಯ ಕಾರ್ಯಕ್ರಮ ಕೊಡುವುದೆಂದು ನಿಶ್ಚಯ ಮಾಡಿದೆವು. ಬನಶಂಕರಮ್ಮ ಭಾಷಣ ಮಾಡುವುದು, ನಾನು ಭಾವಗೀತೆ ಹಾಡುವುದು, ಇನ್ನೊಬ್ಬರು ಅನುಭವ ಕಥನ, ಕವಿತಾ ವಾಚನ ಎಂದೆಲ್ಲ ಕಾರ್ಯಕ್ರಮವನ್ನು ಗೊತ್ತು

ಪಡಿಸಿದೆವು. ನಮ್ಮವರು "ನೀನು ಹೋಗಿ ಸಮುದ್ರದಂಡೆಯಲ್ಲಿ ಕುಳಿತು ಹಾಡುಗಳನ್ನು ಸರಿಯಾಗಿ ಪ್ರಾಕ್ಟಿಸ್ ಮಾಡಿಕೊಂಡು ಬಾ" ಎಂದು ಕಾರಿನಲ್ಲಿ ಕಳಿಸಿಕೊಟ್ಟರು. ಮರುದಿನ ನಮ್ಮ ಅರ್ಧಗಂಟೆಯ ಕಾರ್ಯಕ್ರಮ ಚೆನ್ನಾಗಿಯೇ ನಡೆಯಿತು. ವಿ.ಸೀ.ಯವರು "ಇನ್ನು ಪ್ರತಿ ವರ್ಷ ಮಹಿಳಾಗೋಷ್ಠಿಯನ್ನು ಏರ್ಪಡಿಸಲು ಪ್ರಾರಂಭ ಮಾಡುವಾ" ಎಂದು ಆಶ್ವಾಸನೆ ಕೊಟ್ಟರು. ಅಂದಿನ ಸಾಹಿತ್ಯ ಸಮ್ಮೇಳನದಲ್ಲಿ ಪಡೆದ ಸಂತೋಷ ಮರೆಯಲಾರದ್ದು.

* * *

ನಾವು ರಿಟಾಯರ್ ಆಗಿ ಬೆಂಗಳೂರಿಗೆ ಬಂದ ಮೇಲೆ ೧೦-೧೨ ದಿನಕ್ಕೊಮ್ಮೆ ವಿ.ಸೀ. ಅವರ ಭೇಟ್ಟಿಗೆಂದು ತಪ್ಪದೆ ಹೋಗುತ್ತಿದ್ದೆವು. ಮನೆಯಲ್ಲಿ ಏನೊಂದು ಅಡಚಣೆಯಿದ್ದರೂ ವಿ.ಸೀ.ಯವರ ಮನೆಗೆ ಹೋಗುವುದೆಂದರೆ ನನಗೆ ಎಲ್ಲಿಲ್ಲದ ಸಂಭ್ರಮ. ಪಿ. ವಿ. ಜೋಶಿ, ಅವರ ಹೆಂಡತಿ ಸೋನಕ್ಕ, ನಮ್ಮ ಯಜಮಾನರು – ಎಲ್ಲರೂ ಸೇರಿ ವಿ.ಸೀ. ಅವರ ಮನೆಗೆ ಹೋಗುತ್ತಿದ್ದುದುಂಟು. ಅನೇಕ ಸಲ ಜೋಶಿ, ವಿ.ಸೀ. ಮತ್ತು ನಮ್ಮ ಯಜಮಾನರಲ್ಲಿ ನಡೆಯುವ ಅನೇಕ ವಿಷಯಗಳ ಚರ್ಚೆಯನ್ನು, ಜೋಶಿ ಅವರ ವಾದವಿವಾದವನ್ನು ಕೇಳಿ, ಅವರೆಲ್ಲರ ವಿದ್ವತ್ತಿಗೆ ಅಚ್ಚರಿ ಪಟ್ಟದ್ದೂ ಇದೆ. ವಿ.ಸೀ. ಯವರು ನಯವಾಗಿ, ಆದರೆ ಖಚಿತವಾಗಿ ಮಾತನಾಡಿ ಜೋಶಿಯವರನ್ನು ಒಪ್ಪಿಸುವುದು, ನಮ್ಮವರು ಒಂದೊ ಎರಡೋ ಮಾತನಾಡಿ ತಮ್ಮ ಅಭಿಪ್ರಾಯವನ್ನು ತಿಳಿಸುವುದು ಸಾಮಾನ್ಯವಾಗಿ ಕಾಣಬಹುದಾಗಿದ್ದ ದೃಶ್ಯವಾಗಿತ್ತು. ಅಂತೂ ಅದೆಲ್ಲವನ್ನೂ ಕೇಳುತ್ತಾ ಕುಳಿತಾಗ ಹೊತ್ತು ಸರಿದದ್ದೇ ನಮಗೆ ತಿಳಿಯುತ್ತಿರಲಿಲ್ಲ. ಆ ನಡುವೆ ವಿ.ಸೀ.ಯವರ ಅತಿಥಿ ಸತ್ಕಾರ ಎರಡೆರಡು ಸಲ ಕಾಫಿ ತಿಂಡಿಯ ಸಮಾರಾಧನೆ ಎಲ್ಲವೂ ಮರೆಯುವಂತಿಲ್ಲ.

ವಿ.ಸೀ. ಯವರ ಮನೆಯಲ್ಲಿ ಯಾವ ಕಾರ್ಯಕ್ರಮವಾದರೂ, ಮದುವೆ ಸಮಾರಂಭವಾದರೂ ನಮಗೆ ಆಮಂತ್ರಣವಿರುತ್ತಿತ್ತು. ಪ್ರತಿವರ್ಷ ಅವರೆಕಾಳಿನ ಸೀಸನ್‌ನಲ್ಲಿ ಒಂದು ಸಲ ಹಿದುಕು ಅವರೆ ಕಾಳಿನ ಸಮಾರಾಧನೆ ಅವರಲ್ಲಿ ನಮಗೆಲ್ಲರಿಗೂ ಆಗಲೇ ಬೇಕು! ನಮ್ಮಲ್ಲಿ ಬಂದಾಗ, ನಮ್ಮ ಕಡೆಯ ಅಡಿಗೆಯ ರುಚಿ ನೋಡಿ ಹೊಗಳಿ ಮಾತನಾಡಿ ನಮ್ಮ ತೂಕ ಏರುವಂತೆ ಮಾಡುತ್ತಿದ್ದರು.

ಒಂದು ಸಲ ಜೋಶಿ ದಂಪತಿಗಳು, ನಾವು ಹಾಗೂ ವಿ.ಸೀ. ದಂಪತಿಗಳು ಎಲ್ಲರೂ ಸೇರಿ ಕಬ್ಬನ್ ಪಾರ್ಕ್‌ಗೆ ಹೋಗಿದ್ದೆವು. ತಿಂಡಿ ಪದಾರ್ಥ ಏನೇನು ಮಾಡಿಕೊಂಡು ಹೋಗಿದ್ದೆವೊ ನೆನಪಿಲ್ಲ. ಆದರೆ ವಿ.ಸೀ. ಮನೆಯವರು ಚಿಕ್ಕ ಬಾಳೆಎಲೆ, ಮೊಸರು ಅನ್ನ, ಉಪ್ಪಿನಕಾಯಿ ತಂದಿದ್ದ ನೆನಪು ಮಾಸದೆ ಉಳಿದಿದೆ. ವಿ.ಸೀ.ಯವರು ಅಚ್ಚು ಕಟ್ಟುತನದಿಂದ ಬಾಳೆಎಲೆಯನ್ನು ಕತ್ತರಿಸಿ ತಂದದ್ದು, ಅಮ್ಮ ಮೊಸರು ಅನ್ನವನ್ನು ಕಲಸಿ ತಂದದ್ದು ಅವರ ಅತಿಥಿ ಸತ್ಕಾರಕ್ಕೆ ಕಳಸವಿಟ್ಟಂತೆ.

ನಮ್ಮ ಚಿಕ್ಕ ಮಗಳು ಜಾನಕಿ ಮದುವೆ ಮಾಡಿಕೊಂಡು ಮೊದಲ ಸಲ ಬಂದಾಗ ಅಳಿಯ ಮಗಳನ್ನು ತಮ್ಮ ಮನೆಗೆ ಕರೆದು, ತಿಂಡಿ ತಿನಿಸು ಉಡುಗೊರೆ ನೀಡಿ ಅವರು

ಸುಳ್ಳೂ ಪಟ್ಟಿದ್ದು ಮರೆಯುವಂತಿಲ್ಲ. ಅಳಿಯಂದಿರು ಬರುವರೆಂದು ತಾವು ಸ್ವತಃ ಸಿಲ್ಕು ಸುಳ್ಳು ಹಾಕಿಕೊಂಡು ಜಾನಕಿಯನ್ನು 'ಸರಿಯಿದೆ ಏನಮ್ಮಾ?' ಎಂದು ಕೇಳಿದ್ದರಂತೆ.

ಅನೇಕ ಸಲ ನಮ್ಮನ್ನು ತಿ. ವಿ. ಗುಂಡಪ್ಪ, ಮಾಸ್ತಿ, ಕೆ. ವಿ. ಅಯ್ಯರ್ ಅವರ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಎಷ್ಟೋ ಸಲ ತಿಂಡಿ, ತಿನಿಸುಗಳ ಬಗ್ಗೆ, ಅವರ ಪ್ರೀತಿಯ 'ಗುಂಡಪ್ಪ'ನ ಅಂಗಡಿಯ ಸಹಿ ತಿನಿಸುಗಳ ಬಗ್ಗೆ ಮಾತು ನಡೆಯುತ್ತಿತ್ತು. ಅಲ್ಲದೇ ಅವರ ಜೊತೆಗೆ 'ಮಾವಳ್ಳಿ ಟಿಫಿನ್ ರೂಮ್ಸ್'ಗೆ ದೋಸೆ ತಿನ್ನಲು ಆಗಾಗ ಹೋಗುತ್ತಿದ್ದದ್ದು ವಿಶಿಷ್ಟ ಅನುಭವ. ವಿ.ಸೀ. ಅವರು ಜೊತೆಗಿದ್ದರೆ ಅಲ್ಲಿಯ ಸತ್ಕಾರದ ರೀತಿಯೇ ಬೇರೆ ಇರುತ್ತಿತ್ತು!

* * *

ವಿ.ಸೀ.ಯವರು ಹೊನ್ನಾವರದಲ್ಲಿ ಕೆಲವು ಕಾಲ ಕಾಲೇಜಿನ ಪ್ರಿನ್ಸಿಪಾಲರಾಗಿ ಕೆಲಸ ಮಾಡಿದರು. ಆಗಲೂ ನಾವು ಅಲ್ಲಿಗೆ ಹೋಗಿದ್ದೆವು. ಅನೇಕ ಸಾಹಿತಿಗಳೂ ಬಂದಿದ್ದರು. ಬೆಳ್ಗೆ ಎದ್ದ ಕೂಡಲೇ ಕಾಫಿ, ಭರ್ಜರಿ ತಿಂಡಿಗಳು, ಊಟ ಇವಕ್ಕೆ ಕೊರತೆಯೇ ಇರಲಿಲ್ಲ.

ನಾವು ಆ ದಿವಸವೇ ಹಿಂತಿರುಗುವವರಿದ್ದುದರಿಂದ ನಡು ಮಧ್ಯಾಹ್ನ ಹೊನ್ನಾವರದ ಬೀಚಿಗೆ ಕರೆದುಕೊಂಡು ಹೋಗಿದ್ದರು. ಸೃಷ್ಟಿಯ ಸೊಬಗನ್ನು ಎಷ್ಟು ಸವಿದರೂ ಅವರಿಗೆ ಕಡಿಮೆ ಅನಿಸುತ್ತಿತ್ತು. ಅವರ ಕವಿ ಹೃದಯ ಎಲ್ಲವನ್ನೂ ಮೃದು ಮಾತಿನಿಂದ ವ್ಯಕ್ತ ಪಡಿಸುತ್ತಿತ್ತು. ಅವರ ಭಾವಗೀತೆ 'ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು ನಿಮ್ಮ ಮಡಿಲೊಳಗಿಡಲು ತಂದಿರುವೆವು' ಎಂಬುದನ್ನು ಮಗಳನ್ನು ಅತ್ತೆಯ ಮನೆಗೆ ಕಳಿಸುವಾಗ ನಾನು ಅನೇಕ ಸಲ ಹಾಡಿರುವೆ.

ವಿ.ಸೀ. ಒಮ್ಮೆ ಆಸ್ಪತ್ರೆಯಲ್ಲಿದ್ದಾಗ ನೋಡಲು ಹೋಗಿದ್ದೆವು. ಅವರು ನನ್ನನ್ನು ಹತ್ತಿರ ಕರೆದು 'ನನಗೆ ಭಕ್ಕರಿ ತಿನ್ನಬೇಕೆನಿಸಿದೆ. ಮಾಡಿ ತರುವಿಯಾ?' ಎಂದು ಕೇಳಿದರು. ಮರುದಿವಸವೇ ಜೋಳದ ಭಕ್ಕರಿ, ಬೆಣ್ಣೆ, ಬದನೆಕಾಯಿಯ ಪಲ್ಯ ಮಾಡಿಕೊಂಡು ಹೋಗಿದ್ದೆ. ಅವರು ತಿಂದದ್ದು ಭಕ್ಕರಿಯಲ್ಲಿಯ ನಾಲ್ಕನೇ ಒಂದು ಭಾಗ. ಆದರೆ ಅವರ ಮುಖದಲ್ಲಿಯ ಸಮಾಧಾನದ ಕಳೆ ನೋಡುವಂತಿತ್ತು. ಆದರೆ ಅವರ ಅಂತ್ಯ ದರ್ಶನ ಪಡೆಯುವ ಭಾಗ್ಯ ನಮ್ಮದಾಗಿರಲಿಲ್ಲ. ನಮ್ಮವರಿಗೆ ಕಾಯಿಲೆಯಾಗಿ ಆಸ್ಪತ್ರೆಯಲ್ಲಿದ್ದರು. ಮರು ದಿವಸ ಮನೆಗೆ ಬಂದರೂ ಡಾಕ್ಟರರು ಹೋಗುವುದು ಬೇಡ ಎಂದು ಹೇಳಿದ್ದರಿಂದ ಸುಮ್ಮನಿರಬೇಕಾಯಿತು.

ನಾವು ಮೈಸೂರಲ್ಲಿದ್ದಾಗ ನಮ್ಮ ಯಜಮಾನರು ನಿತ್ಯವೂ ಕುಕ್ಕನ ಹಳ್ಳಿ ಕೆರೆಯತ್ತ ತಿರುಗಾಡಲು ಹೋಗುತ್ತಿದ್ದರು. 'ಇವೆಲ್ಲ ವಿ.ಸೀ.ಯವರು ಓಡಾಡಿದ ಸ್ಥಳಗಳು' ಎಂದು ಆಗೆಲ್ಲ ಅವರು ಹೇಳುತ್ತಿದ್ದರು. ಮೈಸೂರಲ್ಲಿಯ ಅನೇಕ ಸ್ಥಳಗಳನ್ನು ನೋಡಿದಾಗ ವಿ.ಸೀ. ಯವರ ಸೌಂದರ್ಯಪ್ರಜ್ಞೆ ಮತ್ತೆ ಮತ್ತೆ ಕಣ್ಮುಂದೆ ಕಟ್ಟುತ್ತದೆ. ಅವರ ವ್ಯಕ್ತಿತ್ವದ ಹಲವಾರು ಆತ್ಮೀಯ ಮುಖಗಳು ಮನಃ ಪಟಲದ ಮುಂದೆ ಸುಳಿಯುತ್ತವೆ. ನೆನಪುಗಳು ತಮ್ಮ ಸರಪಳಿಯ ಸುರುಳಿಯನ್ನೇ ಬಿಚ್ಚಿಕೊಳ್ಳತೊಡಗುತ್ತವೆ. ನನ್ನ ಜೀವನದಲ್ಲಿ ಅವೇ ನಂದಾದೀಪಗಳಂತೆ ದಾರಿ ತೋರಿಸಬಲ್ಲವೆಂದೂ ನಾನು ನಂಬಿದ್ದೇನೆ.

ನೆನಪಿನ ಹಿನ್ನೋಟದಲ್ಲಿ

ಸೂ. ಸುಬ್ರಹ್ಮಣ್ಯಂ

ವಿ.ಸೀ. ಅವರ ಶಿಷ್ಯರಲ್ಲೊಬ್ಬನಾಗುವ ಸೌಭಾಗ್ಯ ನನಗೆ ದೊರಕಿದ್ದು ನಾನು ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ (೧೯೫೩–೫೫). ಆಗ ನಮಗೆ ವಿ.ಸೀ.ಯನ್ನು ಕಂಡರೆ ವಿಶೇಷ ಗೌರವ ಹೆಮ್ಮೆಗಳಿದ್ದರೂ ಅವರನ್ನು ಮಾತನಾಡಿಸಲು ಏನೋ ಹಿಂಜರಿಕೆ, ಏನೋ ಹೆದರಿಕೆ. ಪ್ರಾಯಶಃ ಅವರು ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದುದರಿಂದ ಈ ಭಾವನೆ ಬೆಳೆಯಲು ಕಾರಣವಾಗಿರಬಹುದು. ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಕಾರ್ಯಕಲಾಪಗಳೆಲ್ಲವನ್ನೂ ಆಗ ಜಿ. ಪಿ. ರಾಜರತ್ನಂ ಅವರು ನಡೆಯಿಸಿ ಕೊಡುತ್ತಿದ್ದುದರಿಂದ ಅವರನ್ನು ನಾವು ಹೆಚ್ಚಾಗಿ ಸಂಪರ್ಕಿಸಬಹುದಾಗಿತ್ತು. ವಿ.ಸೀ. ಅವರಾದರೋ ನಮಗೆ ತರಗತಿಯ ಹೊರಗೆ ಮಿತಭಾಷಿಗಳಂತೆ ಕಂಡಿರಲು ಸಾಧ್ಯ; ಆದ್ದರಿಂದಲೇ ಅವರು ಸುಲಭ ಸಲುಗೆಗೆ ದೂರವಾಗಿದ್ದಂತೆ ನಮಗೆ ಭಾಸವಾಗಿರಬೇಕು. ಹಾಗಿದ್ದರೂ ಸಹ, ಆ ವರ್ಷ (೧೯೫೩) ಕುಮಟಾದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅವರು ಅಧ್ಯಕ್ಷರಾದಾಗ ನಮಗೇ ಏನೋ ಗೌರವ ದೊರಕಿದ ಭಾವನೆಯಿಂದ ನಾವು ಕೆಲವರು ಬೀಗಿದ್ದರೆ ಅತಿಶಯವೇನಲ್ಲ.

ಆದರೂ ವಿ.ಸೀ. ನಮಗೆ ಹತ್ತಿರವಾದರು. ಕಾರಣ ಅವರು ತಾವೇ ಬರೆದ 'ದ್ರಾಕ್ಷಿ–ದಾಳಿಂಬೆ' ಯನ್ನು ನಮಗೆ ಬೋಧಿಸಬೇಕಾಯಿತು. ಮೊದಲ ದಿನವೇ 'ನಾನು ಬರೆದ ಕವನಗಳನ್ನು ನಾನೇ ಹೇಗರಿ ಪಾಠ ಹೇಳೋದು! ಬೇರೆಯವರು ಅದನ್ನ ಹೇಳಿದರೆ ಚೆನ್ನ. ಯಾರ್ರೀ ಇದನ್ನ ಪಠ್ಯಪುಸ್ತಕವಾಗಿ ಇಟ್ಟವರು?' ಎಂದು ನಗೆಯಾಡಿದರು. ಆದರೆ, ದಿನಗಳುರುಳಿದಂತೆ ನಮ್ಮ ತರಗತಿಗೆ ಬೇರೆ ಬೇರೆ ತರಗತಿಗಳಿಂದಲೂ ವಿದ್ಯಾರ್ಥಿಗಳು ತುಂಬಿ ತುಳುಕಾಡುತ್ತಿದ್ದರು. ಕೊನೆ ಕೊನೆಗೆ ಕಿಟಕಿಯ ಕಟ್ಟೆಗಳ ಮೇಲೆಲ್ಲ ವಿದ್ಯಾರ್ಥಿಗಳು ಆಡುಕಿಕೊಂಡರು. ವಿ.ಸೀ. ಅದಕ್ಕೇನೂ ಆಕ್ಷೇಪವಾಡುತ್ತಿರಲಿಲ್ಲ. ತರಗತಿಯೂ ಅಷ್ಟೆ: ಗುಂಡುಸೂಜಿ ಬಿದ್ದರೂ ಕೇಳುವಷ್ಟು ನೀರವತೆಯಿರುತ್ತಿತ್ತು. ಕನ್ನಡವನ್ನು ಇಂಗ್ಲಿಷ್‌ನಲ್ಲಿ ಬೋಧಿಸುವ ಅವರ ಭಾಷಾ ಮೋಡಿಗೆ, ವಾಕ್ಪ್ರವಾಹಕ್ಕೆ ಮರುಳಾಗದವರಾರು?

ವಿ.ಸೀ. ಅವರನ್ನು ವಾದಕ್ಕೆಳೆಯುವುದೆಂದರೆ ಒಂದು ಜಲಪಾತದಡಿಯಲ್ಲಿ ಸ್ನಾನಕ್ಕೆ ಇಳಿದಂತೆ. ಅವರು ತಮ್ಮ ಅಭಿಪ್ರಾಯಗಳ ಓತಪ್ರೋತ ಸಲಿಲಧಾರೆಯೆರೆಯುತ್ತಿದ್ದರು.

ಅಲ್ಲಿ ಲೀಲಾಜಾಲವಾದ ವಾಗ್ಮಿತೆ, ಆಳವಾದ ಅಧ್ಯಯನಗಳಿಂದಾದ ಪಾಂಡಿತ್ಯದ ಪವಿತ್ರ ಪ್ರೇಕ್ಷಣೆಯಾಗುತ್ತಿತ್ತು; ಸೊಬಗಿನ ಸೇಚನೆಯಾಗುತ್ತಿತ್ತು; ವಿವಿಧ ಲೇಖಕರ, ಪರಿಣತರ ಹೇಳಿಕೆಗಳ ಉದ್ಧರಣವಾಗುತ್ತಿತ್ತು. ಮಾತನಾಡುವ ಶೈಲಿಗೆ ಅವರು ನೀಡುತ್ತಿದ್ದ ಧ್ವನಿ ವೈವಿಧ್ಯಗಳು, ಗತ್ತಿನ ಏರಿಳಿತಗಳು ಕೇಳುಗರನ್ನು ಮೂಕವಿಸ್ಮಿತರನ್ನಾಗಿಸುತ್ತಿತ್ತು. 'ವಿದ್ಯಾರ್ಥಿಯ ದೃಷ್ಟಿಯ ದಿಗಂತಗಳನ್ನು ವಿಸ್ತರಿಸುತ್ತಿದ್ದರು ವಿ.ಸೀ.'

ವಿ.ಸೀ. ನನಗೆ ಬೇರೆ ರೀತಿಯಲ್ಲಿಯೂ ಹತ್ತಿರದವರಾಗಿದ್ದರು. ಏಕೆಂದರೆ, ಅವರ ಮನೆ ಚಾಮರಾಜಪೇಟೆಯ ಎರಡನೇ ಮುಖ್ಯರಸ್ತೆಯಲ್ಲಿ ಮೊದಲನೆಯದಾಗಿತ್ತು. ನಮ್ಮದು ಅದೇ ಬೀದಿಯಲ್ಲಿ ಇಪ್ಪತ್ತನೆಯ ಮನೆ. ತಮ್ಮ ಮನೆಯ ಕೋಣೆಯಲ್ಲಿ ಸುತ್ತಲೂ ಪುಸ್ತಕಗಳ ಕಪಾಟಿನಿಂದ ಆವೃತರಾಗಿ, ಸುರುಳಿ ಸುತ್ತಿದ ಹಾಸಿಗೆಗೆ ಬೆನ್ನೊರಗಿಸಿ, ಚಾಪೆಯ ಮೇಲೆ ಕುಳಿತೋ ಅರೆ ಮಲಗಿಯೋ, ಓದುತ್ತಲೋ ರೇಡಿಯೋ ಕೇಳುತ್ತಲೋ ಇರುವ ವಿ.ಸೀ. ಅವರ ಚಿತ್ರ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ನಾನು ರಿಸರ್ವ್ ಬ್ಯಾಂಕ್‌ನಲ್ಲಿದ್ದುದರಿಂದ ಅವರು ತುಂಬ ಆಸಕ್ತಿಯಿಂದ ಅಧ್ಯಯನ ಮಾಡುತ್ತಿದ್ದ RBI Bulletin, Report on Currency and Finance ಮತ್ತು Annual Report ಗಳನ್ನು ಆಗಾಗ ಸರಬರಾಜು ಮಾಡುತ್ತಿದ್ದೆ. ಅವರು ಹಣಕೊಟ್ಟು ಚಂದಾದಾರರಾಗ ಬಯಸಿದ್ದರೂ ಅದನ್ನು ನಾನು ತಪ್ಪಿಸಿ, ನನ್ನ ಅಳಿಲುಸೇವೆಗೆ ಅವಕಾಶಮಾಡಿಕೊಂಡಿದ್ದೆ. ಆಗಾಗ ಸಂಜೆ ವೇಳೆ ಅವರನ್ನು ಕಾಣುತ್ತಲಿದ್ದೆ. ಕಂಡಾಗಲೆಲ್ಲ ಕಾಫಿಯ ಸಮಾರಾಧನೆ ತಪ್ಪದೆ ಸಾಗುತ್ತಿತ್ತು.

ಒಮ್ಮೆ ನಾನು 'Reserve Bank of India: Working and Functions' ಎಂಬ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸುವ ಆಶಯವನ್ನು ಅವರ ಮುಂದಿಟ್ಟೆ. ಆಗ ಅವರೆಂದರು: "ಅದನ್ಯಾಕಪ್ಪ ನೀವು ಮಾಡ್ತೀರಿ? ಬೇರೆ ಯಾರೋ ಅದನ್ನು ಮಾಡುತ್ತಿದ್ದಾರೆ." ಆ ಪುಸ್ತಕದ ಒಂದೆರಡು ಅಧ್ಯಾಯಗಳ ಅನುವಾದ ಮಾಡಿದ್ದ ನಾನು ಅದನ್ನು ಅಲ್ಲಿಗೇ ನಿಲ್ಲಿಸಿದೆ. ಆಮೇಲೆ ತಿಳಿಯಿತು: ವಿ.ಸೀ. ಅವರು ಇಂಥ ಪುಸ್ತಕಗಳು ಭಾರತದ ಇನ್ನಿತರ ಭಾಷೆಗಳಲ್ಲೂ ಬರಬೇಕು ಎಂದು ರಿಸರ್ವ್ ಬ್ಯಾಂಕಿನ ಆಗಿನ ಗೌರ್ನರ್ ಹಾಗೂ ಅವರ ಸ್ನೇಹಿತರಾಗಿದ್ದ ಶ್ರೀ ಎಚ್. ವಿ. ಆರ್. ಅಯ್ಯಂಗಾರ್ ಅವರಿಗೆ ಬರೆದಿದ್ದರಂತೆ. ಅದಕ್ಕೆ ಅವರು 'ನೀವೇ ಕನ್ನಡದಲ್ಲಿ ಆ ಕೆಲಸ ಮೊದಲು ಮಾಡಿ' ಎಂದು ಉತ್ತರಿಸಿದ್ದರಂತೆ. ಅದರ ಫಲವಾಗಿ ಭಾರತೀಯ ಭಾಷೆಗಳಲ್ಲಿ ಪ್ರಥಮವಾಗಿ ಕನ್ನಡದಲ್ಲಿ 'ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ: ಕ್ರಿಯಾಸ್ವರೂಪ ಮತ್ತು ಕಾರ್ಯಕಲಾಪಗಳು' ಪ್ರಕಟಗೊಂಡಿತು.

ನಿವೃತ್ತಿಯ ನಂತರ ವಿ.ಸೀ. ಬೆಂಗಳೂರು ಆಕಾಶವಾಣಿಯಲ್ಲಿ ಪ್ರೊಡ್ಯೂಸರ್ (Spoken word) ಆಗಿ ನೇಮಕಗೊಂಡರು. ಸ್ವಲ್ಪ ಕಾಲ ಕೆಲಸ ಮಾಡಿದ ನಂತರ ಅವರಿಗೆ ಕೊಡುತ್ತಿದ್ದ ಕೇಂದ್ರ ಸರ್ಕಾರದ ವೇತನದಲ್ಲಿ ಅವರ ನಿವೃತ್ತಿ ವೇತನವನ್ನು ಹಿಡಿದು ಕೊಳ್ಳುವುದಾಗಿ ಸೂಚಿಸಿದರಂತೆ. ವಿ.ಸೀ. ಇದನ್ನೊಪ್ಪದೆ ಆಕಾಶವಾಣಿ ಕೆಲಸಕ್ಕೆ ರಾಜೀನಾಮೆ ನೀಡಿದರು. ಅವರು ಆಕಾಶವಾಣಿಯಲ್ಲಿದ್ದ ಸಮಯದಲ್ಲಿ ನನ್ನ ಕೆಲವು ಕವನಗಳನ್ನು ಪ್ರಸಾರ ಮಾಡುವ ಸಲುವಾಗಿ ಅವರಿಗೆ ಕಳುಹಿಸಿದ್ದೆ. ಅವರು ಅದನ್ನು ಒಪ್ಪಿದಂತೆ

ಕಾಣಲಿಲ್ಲ. ಆಗ ಅವರೊಡನೆ ವಿಚಾರ ವಿನಿಮಯ ಮಾಡುತ್ತಾ ನನ್ನ ಅಭಿಪ್ರಾಯವನ್ನು ಪದೇ ಪದೇ ಸೂಚಿಸಿದ್ದಂತೆ ನೆನಪು. ಆಗ ಅವರೊಮ್ಮೆ ಅಂದರು: 'You are cantankerous.' ಈಗ ಅನ್ನಿಸುತ್ತಿದೆ ಪ್ರಾಯಶಃ ಇರಬಹುದು!

ವಿ.ಸೀ. ಅವರ ಭಾಷಣವೆನ್ನಿ, ಉಪನ್ಯಾಸವೆನ್ನಿ, ಮಾತುಗಾರಿಕೆ ಎನ್ನಿ – ಎಂದೂ ರಸವತ್ತಾಗಿರುತ್ತಿತ್ತು. ಒಮ್ಮೆ Saturday Review ಪತ್ರಿಕೆಯ ಸಂಪಾದಕ ನಾರ್ಮನ್ ಕಸಿನ್ಸ್ ಬೆಂಗಳೂರು Indian Institute of World Culture ನಲ್ಲಿ ಉಪನ್ಯಾಸ ನೀಡುವರಿದ್ದರು. ಆ ಸಮಾರಂಭಕ್ಕೆ ವಿ.ಸೀ. ಅಧ್ಯಕ್ಷರು ಎಂದು ನೆನಪು. ನಾರ್ಮನ್ ಕಸಿನ್ಸ್ ಭಾಷಣದ ನಂತರ ವಿ.ಸೀ. ಅಧ್ಯಕ್ಷ ಭಾಷಣ ಮಾಡಿ ಅಂದಿನ ವಿಷಯವನ್ನು ಕುರಿತು ಅಮೂಲಾಗ್ರವಾಗಿ ಜಾಲಾಡಿ ಸಭಿಕರನ್ನು ಸಾರಸ್ವತಸಾಗರದಲ್ಲಿ ತೇಲಾಡಿಸಿಬಿಟ್ಟರು. ಕೊನೆಯಲ್ಲಿ ನಾರ್ಮನ್ ಕಸಿನ್ಸ್ "ಇಂಥ ಮೇಧಾವಿ ಪಂಡಿತರ ಮುಂದೆ ನನ್ನ ಮಾತು ಪೇಲವವಾಯಿತು, ಸೂರ್ಯನ ಮುಂದಿನ ಸೊಡರಿನಂತೆ" ಎಂಬರ್ಥದ ಮಾತುಗಳನ್ನಾಡಿ ವಿ.ಸೀ. ಅವರ ವಿದ್ವತ್ತಿಗೆ, ವಿಷಯದ ಆಳ ವಿಸ್ತಾರಗಳ ಅಧ್ಯಯನಕ್ಕೆ, ವಾಕ್ಚಾತುರ್ಯಕ್ಕೆ ಮೆಚ್ಚುಗೆ ಸೂಚಿಸಿದರು.

ಬೆಂಗಳೂರಿನಲ್ಲಿ ಹಿಂದೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ವಾರ್ತಾಕೇಂದ್ರ, ಅಮೆರಿಕನ್ ಸಾಂಸ್ಕೃತಿಕ ಕೇಂದ್ರವಿದ್ದಿತು. ಅದರ ನಿರ್ದೇಶಕರಾಗಿದ್ದ ಗ್ಲಿನ್ ಎಲ್. ವುಡ್ ಎಂಬುವವರು ಆಗಾಗ ಕೆಲವು ಪ್ರಮುಖರನ್ನು ತಮ್ಮ ಮನೆಗೆ ಕರೆದು ಔತಣವೇರ್ಪಡಿಸುವ ಪರಿಪಾಠವಿಟ್ಟುಕೊಂಡಿದ್ದರು. ಬಂದ ಅತಿಥಿಗಳಿಗೆ ಅದ್ಭುತವಾದ ಸ್ವಾಗತವಾದ ನಂತರ ಪಾನೀಯಗಳು, ರಸಕವಳ ಎಲ್ಲವೂ 'ಸ್ವಯಂ ಸೇವಾ' ಪದ್ಧತಿಯಂತೆ. ನಡು ನಡುವೆ ಆಹ್ವಾನಿತರೊಡನೆ ವಿಚಾರ ವಿನಿಮಯಗಳು ಸಾಗುತ್ತಿದ್ದುವು. ಅಂಥ ಔತಣ ಕೂಟಕ್ಕೆ ವಿ.ಸೀ. ಒಮ್ಮೆ ಆಹ್ವಾನಿತರಾಗಿದ್ದರು. ಅಂದು ಬಂದಿದ್ದವರಲ್ಲಿ ನೃತ್ಯ ಪರಿಣತರಾದ ಶ್ರೀ ಕೃಷ್ಣರಾವ್ ದಂಪತಿಗಳೂ ಇದ್ದರು. ಆದರೆ ವಿ.ಸೀ.ಗೆ ಕಂಪನಿಕೊಟ್ಟವನು ನಾನೊಬ್ಬನೇ. ಏಕೆಂದರೆ, ನಾವು ಇಬ್ಬರೂ ಕಟ್ಟಾ ಶಾಖಾಹಾರಿಗಳು. ಹಾಗೆ ಬಂದು ಹೋದ ಆಹ್ವಾನಿತರಿಗೆ ಅನಂತರ ಉತ್ತಮ ಪುಸ್ತಕಗಳನ್ನು ನೆನಪಿನ ಕಾಣಿಕೆಯಾಗಿ ಕಳುಹಿಸಿ ಕೊಡುತ್ತಿದ್ದುದೂ ವುಡ್ ಅವರ ವಾಡಿಕೆ. ವಿ.ಸೀ. ಅವರಿಗೂ ಅಮೆರಿಕದ ಲೇಖಿಕರ ನಾಲ್ಕಾರು ಪುಸ್ತಕಗಳನ್ನು ಕಳುಹಿಸಿಕೊಟ್ಟರೆಂದು ನನ್ನ ನೆನಪು. ಅದರಲ್ಲಿ History of Art ಎಂಬ ಸಂಗ್ರಹ ಯೋಗ್ಯ ಹೊತ್ತಿಗೆಯೂ ಸೇರಿತ್ತು.

ಗ್ಲಿನ್ ವುಡ್‌ರಿಗೆ ಬೆಂಗಳೂರಿನಿಂದ ವರ್ಗವಾದಾಗ ಅವರಿಗೊಂದು ಬೀಳ್ಕೊಡುಗೆಯ ಉಪಾಹಾರ ಕೂಟವನ್ನು ವಿ.ಸೀ. ಏರ್ಪಡಿಸುವ ಸೌಜನ್ಯ ತೋರಿದರು. ಅಂದು ಅವರ ಕಿರುಕೋಣೆಯಲ್ಲಿ ಕುಳಿತು ವಿ.ಸೀ. ನೀಡಿದ ಸತ್ಕಾರವನ್ನೂ ಸಮಯೋಚಿತ ಸದ್ಭಾವನೆಗಳ ಸಿಂಚನವನ್ನೂ ಸವಿಯುವ ಪುಣ್ಯವನ್ನು ನಾವು ನಾಲ್ಕಾರು ಮಂದಿ ಮಾತ್ರ ಪಡೆದಿದ್ದೆವು. ಪ್ರೊ|| ವಿ. ಎಂ. ಇನಾಂದರ್ ಆಗ ಉಪಸ್ಥಿತರಿದ್ದರು. ಆದರೆ ಅವರು ಮಿತಭಾಷಿಯಾಗಿ ಬಹುಮಟ್ಟಿಗೆ ಮೌನವನ್ನೇ ಆಶ್ರಯಿಸಿದ್ದರು. ಸತ್ಕಾರಕ್ಕೆ ಪ್ರಕಾಶ್ ಕೆಫೆಯವರಿಂದ ವಿಶೇಷ ಏರ್ಪಾಡು ನಡೆದಿತ್ತು. ವಿದೇಶೀ ಅತಿಥಿ ಆಗಮಿಸುವರೆಂದು ಮೂರು ನಾಲ್ಕು ಕುರ್ಚಿಗಳೂ

ರೂಮಿಗೆ ಬಂದಿದ್ದುವು. ಆದರೆ ಯಾರೂ ಕುರ್ಚಿಯ ಮೇಲೆ ಕುಳಿತಂತೆ ನನಗೆ ನೆನಪಿಲ್ಲ, ಗ್ಲಿನ್ ವುಡ್ ಸಹಿತ. ಈ ಸತ್ಕಾರ ಗ್ಲಿನ್ ವುಡ್‌ರಿಗೆ ತುಂಬ ಹರ್ಷ ಕೊಟ್ಟಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಕಾಲಕ್ಕೆ ವಿ.ಸೀ. ಅವರನ್ನು ಅದರ ಕೆಲವೊಂದು ಚಟುವಟಿಕೆಗಳಲ್ಲಿ ತೊಡಗಿಸುವ ಕಾರ್ಯದಲ್ಲಿ ರಾಯಭಾರಿಯಾಗಿ ನಾನು ಕೆಲಸ ಮಾಡಿದೆನೆಂದು ಹೇಳಿಕೊಳ್ಳಲು ನನಗೆ ಹೆಮ್ಮೆಯೆನಿಸುತ್ತದೆ. ವಿ.ಸೀ. ಪರಿಷತ್ತಿನ ಚಟುವಟಿಕೆಗಳಿಂದ ಸ್ವಲ್ಪ ದೂರವೇ ಉಳಿದಿದ್ದಾಗ, ಆಗಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣ ಅವರೊಡನೆ ಸಮಾಲೋಚಿಸಿ ವಿ.ಸೀ. ಅವರನ್ನು ಪರಿಷತ್ತಿನ ಲಾಂಛನವನ್ನು ಆಯ್ಕೆ ಮಾಡುವ ಸಲುವಾಗಿ ಕೋರಿ ಒಪ್ಪಿಸಲಾಯಿತು. ವಿ.ಸೀ. ಅವರಿಂದಾಗಿ ಪರಿಷತ್ತಿಗೆ ಉತ್ತಮ ಲಾಂಛನವೊಂದು ದೊರೆಯುವಂತಾಯಿತು.

ಹಾಗೆಯೇ, ಐ.ಬಿ.ಎಚ್ ಪ್ರಕಾಶನದವರ 'ಕವಿ ಕಾವ್ಯ ಪರಂಪರೆ'ಯ ಪ್ರಧಾನ ಸಂಪಾದಕತ್ವವನ್ನು ವಹಿಸಿಕೊಳ್ಳುವಂತೆ ವಿ.ಸೀ. ಯವರ ಮನವೊಲಿಸಿ, ಅನಂತರ ಶ್ರೀ ಜಿ. ಕೆ. ಅನಂತರಾಮ್ ಅವರನ್ನು ಪರಿಚಯಿಸಿದುದಾಯಿತು.

ರಿಸರ್ವ್ ಬ್ಯಾಂಕ್ ಕನ್ನಡ ಸಂಘದ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಒಮ್ಮೆ ಅವರನ್ನು ಮುಖ್ಯ ಅತಿಥಿಗಳಾಗಿ ಬರಮಾಡಿಕೊಂಡಾಗ, ಅವರಿಗೆ ಏನು ಕಾಣಿಕೆ ಕೊಡುವುದು ಎಂಬ ಪ್ರಶ್ನೆ ಎದುರಾಯಿತು. ಆಗ ನಾನು ಅವರನ್ನೇ ಕೇಳಿದೆ. ಅವರ ಆಯ್ಕೆ ಆಗ ತಾನೆ ಪ್ರಕಟವಾಗಿದ್ದ ಲಾರ್ಡ್ ಕೇನ್ಸ್ ಅವರ ಅರ್ಥಶಾಸ್ತ್ರ ಕುರಿತ ಎರಡು ಸಂಪುಟಗಳು. ಅವು ದುಬಾರಿಯ ಪುಸ್ತಕಗಳಾಗಿದ್ದರೂ ಆ ಪುಸ್ತಕಗಳನ್ನು ಅವರಿಗೆ ಅರ್ಪಿಸಿ ನಾವು ಕೃತಕೃತ್ಯರಾದೆವು. ಆ ಸಂಪುಟಗಳನ್ನು ಕಂಡು ಅವರಿಗಾದ ಸಂತೋಷ ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತಿದೆ.

ವಿ.ಸೀ. ಅವರಿಗೆ ನನ್ನ ನಮನಗಳು.

ಸ್ವಚ್ಛ, ಸುಸಂಸ್ಕೃತ ಬದುಕು

ಲಲಿತಮ್ಮ ಡಾ. ಚಂದ್ರಶೇಖರ್

ಕಲೆ ಸಾಹಿತ್ಯ ಸಂಗೀತ ಅರ್ಥಶಾಸ್ತ್ರಗಳಲ್ಲಿ ಅಗಾಧವಾದ ವಿದ್ವತ್ತು ಪಾಂಡಿತ್ಯವನ್ನು ಪಡೆದು, ಜೀವನದುದ್ದಕ್ಕೂ ಅತ್ಯಂತ ಶುಚಿತ್ವದಿಂದ ಬದುಕಿ, ನೋಡುತ್ತಿದ್ದರೇನೇ 'ಈ ಮಹನೀಯರಿಗೆ ನಮಿಸಬೇಕು, ಗೌರವ ಕೊಡಬೇಕು' ಎಂಬ ಭಾವನೆ ತಾನೇ ತಾನಾಗಿ ಮನಸ್ಸಿನಲ್ಲಿ ಉಕ್ಕಿ ಬರುವಂಥ ವ್ಯಕ್ತಿತ್ವವನ್ನು ಹೊಂದಿದ್ದು, ಅರಳಿನಿಂತ ಮಲ್ಲಿಗೆ ಸುತ್ತೆಲ್ಲ ಸುಗಂಧ ಹರಡುವಂತೆ ಕಾಲಿಟ್ಟಲ್ಲೆಲ್ಲ ತಮ್ಮ ವ್ಯಕ್ತಿತ್ವದ ಪರಿಮಳವನ್ನು ಬಾಳಿನುದ್ದಕ್ಕೂ ಬೀರಿದ ಹಿರಿಯರು ಪ್ರೊ. ವಿ. ಸೀತಾರಾಮಯ್ಯನವರು.

ಜೂನ್ ೧೯೪೬: ಬೆಂಗಳೂರಿನ ಚಾಮರಾಜಪೇಟೆ ಎರಡನೇ ಕ್ರಾಸಿನ ನಮ್ಮ ಮನೆಯ ಮುಂದೆ ಕೊಕ್ಕರೆ ಗರಿಯನ್ನೂ ನಾಚಿಸುವಂಥ ಬಿಳಿನೆಯ ಸ್ವಚ್ಛ ಕಚ್ಚೆಪಂಚೆ ಉಟ್ಟು, ಅಷ್ಟೇ ಬಿಳಿಗಿನ ಅಚ್ಚು ಕಟ್ಟಾಗಿದ್ದು ಗರಿಮುರಿಯದ ಮೈಸೂರು ಪೇಟಾ ಧರಿಸಿ, ಬಿಳಿಯ ಷರಟು ಕ್ಲೋಸ್ ಕಾಲರ್ ಕೋಟು ತೊಟ್ಟು, ಸಾದಾ ಚಪ್ಪಲಿ ಮೆಟ್ಟಿ, ಕೈಯಲ್ಲಿ ವಾಕಿಂಗ್ ಸ್ಟಿಕ್ ಹಿಡಿದು ಹೋಗುತ್ತಿದ್ದ ಗಂಭೀರ ವ್ಯಕ್ತಿಯನ್ನು ಕಂಡು ಜಗಲಿಯ ಮೇಲೆ ಕೂತಿದ್ದ ನನ್ನ ಅತ್ತಿಗೆಯವರು 'ಇವರೇ ಪ್ರೊ. ವಿ.ಸೀ.' ಎಂದು ಹೇಳಿದಾಗ, ಅಲ್ಲೇ ಆಗಲೇ ಅವರಿಗೆ ವಂದಿಸಿ ಮಾತನಾಡಿಸಬೇಕು ಎನ್ನಿಸಿದ್ದುಂಟು. ಆದರೆ ನಾನಿನ್ನೂ ಆ ಮನೆಗೆ ಸೊಸೆಯಾಗಿ ಕಾಲಿಟ್ಟು ಮೂರು ದಿನಗಳಷ್ಟೇ ಆಗಿದ್ದುದರಿಂದ ಅಷ್ಟೊಂದು ದಿಟ್ಟತನದಿಂದ ಮಾತನಾಡಿಸಲು ಆಗಲಿಲ್ಲ.

ವಿ.ಸೀ. ಅವರ ತಾಯಿ ವೆಂಕಮ್ಮನವರು, ನಮ್ಮ ಅತ್ತೆ ಗೌರಮ್ಮನವರು ಚಿರಪರಿಚಿತರು. ಹಬ್ಬ ಹರಿದಿನಗಳಲ್ಲಿ, ಪೂಜೆ ಪುನಸ್ಕಾರ ಸಂದರ್ಭಗಳಲ್ಲಿ ಎರಡೂ ಮನೆಗೆ ಪರಸ್ಪರರು ಬಂದು ಹೋಗುವ ಪರಿಪಾಠವಿತ್ತು. ವಿ.ಸೀ. ಅವರ ಮಕ್ಕಳು ಚಿಕ್ಕ ಹುಡುಗರು ಬಂದು "ಗೌರಮ್ಮನವರು ಇದಾರಾ" ಎಂದು ಕೇಳಿದಾಗ "ಇದಾರೆ" ಎಂದರೆ, ಒಳಕ್ಕೆ ಬಂದು ಅವರಿಗೆ "ಅಜ್ಜಿ ಕೇಳಿದರು, ಏಕಾದಶಿ ಯಾವಾಗ ಬರುತ್ತೆ ಹೇಳಬೇಕಂತೆ" ಎನ್ನುತ್ತಿದ್ದರು. ನಮ್ಮ ಅತ್ತೆ ಏಕಾದಶಿ ಯಾವ ದಿನ ಎಂದು ಹೇಳಿ ಕಳಿಸುತ್ತಿದ್ದರು. "ಗೌರಮ್ಮನವರು ಹೇಳಿದ ದಿನವೇ ನಮ್ಮಮ್ಮನಿಗೆ ಏಕಾದಶಿ ಬರೋದು" ಎಂದು ವಿ.ಸೀ. ಹೇಳುತ್ತಿದ್ದರಂತೆ!

ನೂತನ ವಿವಾಹಿತ ಹೆಣ್ಣು ಮಕ್ಕಳು ಚೈತ್ರ ಮಾಸದಲ್ಲಿ ಮನೆ ಮನೆಗೂ ಹೋಗಿ ಮುತ್ತೈದೆಯರ ಕಾಲು ತೊಳೆದು ಅರಿಶಿನ ಕುಂಕುಮ ಕೊಡುವ ಆ ಕಾಲದ ಪದ್ಧತಿಯಂತೆ ನಾನು ವಿ.ಸೀ. ಅವರ ಮನೆಗೂ ಹೋಗಿ, ಅವರ ಪತ್ನಿ ಸರೋಜಮ್ಮನವರ ಕಾಲು ತೊಳೆದು, ಅವರಿಗೂ ಅವರ ಇಬ್ಬರು ಹೆಣ್ಣು ಮಕ್ಕಳಿಗೂ ಮಂಗಳದ್ರವ್ಯಗಳನ್ನು ಕೊಟ್ಟು ಬರುತ್ತಿದ್ದೆ.

ನಮ್ಮ ಯಜಮಾನರು (ಡಾ. ಚಂದ್ರಶೇಖರ್) ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಯಿಂದ ಹರಿಹರದ ಕಿರ್ಲೋಸ್ಕರ್ ಕಂಪೆನಿಗೆ ಮೂರು ತಿಂಗಳು ಕಾಲದ ಎರವಲು ಸೇವೆಯಲ್ಲಿ ಬಂದವರು, ಅಲ್ಲಿಯೇ ಔಷಧಾಲಯವನ್ನು ತೆರೆದು ನೆಲಸಿದರು. ನಾನೂ ಹರಿಹರ ಸೇರಿದ ಮೇಲೆ (೧೯೫೨) ಮೂರು ತಿಂಗಳಿಗೊ ಆರು ತಿಂಗಳಿಗೊ ಒಮ್ಮೆ ಬೆಂಗಳೂರಿಗೆ ನಮ್ಮ ಅತ್ತೆಯವರ ಮನೆಗೆ ಹೋಗುತ್ತಿದ್ದೆ. ಆಗೆಲ್ಲ ಸಂಜೆಯ ಹೊತ್ತು ನಮ್ಮ ಮನೆಯ ಮುಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಕಡೆಗೆ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳ ಜೊತೆ ತಪ್ಪದೆ ವಾಯುಸೇವನೆಗೆ ಹೋಗುತ್ತಿದ್ದ ವಿ.ಸೀ.ಯವರ ದರ್ಶನ ವಾಗುತ್ತಿತ್ತು.

ಬಾಲ್ಯದಿಂದ ಬರೆಯುವ ಹವ್ಯಾಸವಿದ್ದ ನನಗೆ ಆ ಮೂಲಕ ಅಂತರಂಗದ ಭಾವನೆಗಳನ್ನು ಬೇರೆಯವರೊಡನೆ ಹಂಚಿಕೊಂಡು ಬಾಳುವುದಕ್ಕಿಂತ ಹೆಚ್ಚಿನ ನೆಮ್ಮದಿ ಇನ್ನೇನಿದೆ ಎನ್ನಿಸಿತ್ತು. ಹಾಗೆ ಬರೆದು ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದ ಹಲವಾರು ಲೇಖನಗಳನ್ನು ಒಟ್ಟುಗೂಡಿಸಿ ಪುಸ್ತಕವಾಗಿ ಅಚ್ಚು ಮಾಡಿಸಿದೆ. ಬೆಂಗಳೂರಿಗೆ ಹೋದಾಗ ವಿ.ಸೀ. ಅವರಿಗೊಂದು ಪ್ರತಿಯನ್ನು ಕೊಟ್ಟು ನಮಸ್ಕಾರ ಮಾಡಿ ನಿಂತೆ.

"ಬಾಮ್ಮಾ, ಕೂತ್ಕೋ ಬಾ" ಎಂದು ಪಕ್ಕದಲ್ಲಿದ್ದ ಕುರ್ಚಿಯನ್ನು ತೋರಿಸಿದರು. ಕುಳಿತೆ.

ನಾನು ಕೊಟ್ಟ ಪುಸ್ತಕದ ಪುಟಗಳನ್ನು ತಿರುವಿ ಹಾಕಿ "ಏನಮ್ಮ, ನಮ್ಮ ಗೌರಮ್ಮನವರ ಸೊಸೆ, ನಮ್ಮ ಚಂದ್ರು ಹೆಂಡತಿ, ಚಂದ್ರು ನಮ್ಮ ಕಣ್ಮುಂದೆ ಬೆಳೆದ ಹುಡುಗ, ನೀನು ಬರೆದು ಪುಸ್ತಕ ಅಚ್ಚು ಮಾಡಿಸಿ ತಂದುಕೊಟ್ಟದ್ದು ತುಂಬಾ ಸಂತೋಷ" ಎಂದು ತಮ್ಮ ಅಭಿಮಾನ ಸಂತೋಷಗಳನ್ನು ವ್ಯಕ್ತಪಡಿಸಿದ್ದನ್ನು ನಾನು ಮರೆಯಲಾರೆ. ಮುಂದುವರಿದು "ಬರೆಯುವುದನ್ನು ಬಿಡಬೇಡ" ಎಂದೂ ಹೇಳಿದರು. ಅಷ್ಟರಲ್ಲಿ ಅವರ ಮಗಳು ಒಳಗಿನಿಂದ ಬಿಸಿ ಬಿಸಿ ಕಾಫಿ ತಂದು ಕೊಟ್ಟರು.

ವಿ.ಸೀ. ಅವರ ಮುಂದೆ ಇಕಾನಮಿಸ್ಟ್, ಲಿಸನರ್ ಇತ್ಯಾದಿ ಇಂಗ್ಲಿಷ್ ಪತ್ರಿಕೆಗಳಿದ್ದುವು. "ಈ ಪತ್ರಿಕೆಗಳು ನಿಮಗೆ ತುಂಬಾ ಇಷ್ಟವಾದದ್ದೆ?" ಎಂದು ಬಾಲಿಶ ಪ್ರಶ್ನೆಯನ್ನು ಕೇಳಿದೆ. "ಏನಮ್ಮ ಹೀಗೆ ಕೇಳ್ತೀಯ? ಸೂರ್ಯ ಹುಟ್ಟುವುದು ಎಷ್ಟು ಮುಖ್ಯವೊ, ಸಂತೋಷವೋ ಈ ಪತ್ರಿಕೆಗಳನ್ನು ಓದುವುದೂ ನನಗೆ ಅಷ್ಟೇ ಮುಖ್ಯ, ಸಂತೋಷ ಕಾರಣ" ಎಂದರು. ಅವರ ಅಭಿರುಚಿಯನ್ನು ಕಂಡು ನನಗೆ ವಿಸ್ಮಯವಾಯಿತು.

ಮರುವರ್ಷ ನನ್ನ ಸಣ್ಣಕತೆಗಳ ಸಂಗ್ರಹವೊಂದನ್ನು ಅಚ್ಚು ಮಾಡಿಸಿ, ಬೆಂಗಳೂರಿಗೆ ಹೋಗಿದ್ದಾಗ ವಿ.ಸೀ. ಅವರಲ್ಲಿಗೆ ಹೋಗಿ ಕೊಟ್ಟೆ. "ಏನಮ್ಮ, ಆಗಲೇ ಇನ್ನೊಂದು ಪುಸ್ತಕ

ಬರೆದು ಅಚ್ಚು ಮಾಡಿಸಿಬಿಟ್ಟಿಯ, ಭೇಷ್!" ಎಂದರು. ತಮ್ಮ ಪುಸ್ತಕ ಒಂದನ್ನು ಹಸ್ತಾಕ್ಷರ ಹಾಕಿ ನನಗೆ ಕೊಟ್ಟರು. ಆ ಬಳಿಕವೂ ನಾನು ಅಚ್ಚು ಮಾಡಿಸಿದ ಪುಸ್ತಕಗಳನ್ನು ವಿ.ಸೀ. ಯವರ ಮನೆಗೆ ಹೋಗಿ ತಪ್ಪದೆ ಕೊಟ್ಟು ಬರುತ್ತಿದ್ದೆ. ನನ್ನ ಎರಡನೆಯ ಮಗಳ ವಿವಾಹದ ಆರತಕ್ಷತೆಗೆ (೧೯೭೯) ವಿ.ಸೀ. ಬಂದಿದ್ದರು. ನಮ್ಮ ಬೀಗರಾದ ಶೇಷಗಿರಿರಾವ್ ವಿ.ಸೀ. ಅವರ ವಿದ್ಯಾರ್ಥಿಯಾಗಿದ್ದರಂತೆ. ಅರಳುಹುರಿದಂತೆ ಜಬರ್‌ದಸ್ತ್‌ನಿಂದ ಮಾತನಾಡುವ ಸ್ವಭಾವದ ಅವರು ವಿ.ಸೀ. ಯವರನ್ನು ಕಂಡುಕೂಡಲೇ ನಯವಿನಯ ಸೌಜನ್ಯತೆಯಿಂದ, ಏಕೆ ಭಯಭಕ್ತಿಯಿಂದ, ಕೈ ಮುಗಿದು 'ಸರ್' 'ಸರ್' ಎನ್ನುತ್ತ ನಿಂತಿದ್ದುದನ್ನು ಕಂಡಾಗ, ವಿ.ಸೀ. ಅವರ ಬಗೆಗೆ ಅವರಲ್ಲಿ ಕಲಿತ ವಿದ್ಯಾರ್ಥಿಗಳ ಗೌರವಭಾವನೆಗಳು ಎಂಥವು ಎಂಬುದರ ಅರಿವಾಯಿತು. ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ಶಿಸ್ತು, ಕರ್ತವ್ಯ ಶ್ರದ್ಧೆ, ತಾದಾತ್ಮ್ಯ ಭಾವನೆಗಳಿಂದ ಪಾಠ ಮಾಡಿದ್ದರೆ ಮಾತ್ರ ವಿದ್ಯಾರ್ಥಿಗಳಿಂದ ಈ ಬಗೆಯ ಭಕ್ತಿಗೌರವಗಳನ್ನು ಪಡೆಯಲು ಸಾಧ್ಯ ಎನ್ನಿಸಿತು.

ಇನ್ನೊಂದೆರಡು ಸಲ ಬೆಂಗಳೂರಿಗೆ ಹೋಗಿದ್ದಾಗ ಕಾರಣಾಂತರಗಳಿಂದ ವಿ.ಸೀ. ಅವರ ಮನೆಗೆ ಹೋಗಲಾಗಿರಲಿಲ್ಲ. ಆ ಹೊತ್ತಿಗೆ ಅವರ ಆರೋಗ್ಯವೂ ಕೆಟ್ಟಿತ್ತೆಂದು ಕೇಳಿದ್ದೆ. ಆನಂತರದಲ್ಲೊಮ್ಮೆ ಹೋಗಿದ್ದಾಗ, ನಮ್ಮ ಮನೆಯಿಂದ ಎರಡು ಮನೆ ದಾಟಿ ಮುಂದೆ ಅಡಿ ಇಡುತ್ತಿದ್ದೆ; ತಮ್ಮ ಮನೆಯ ಮುಂದೆ ನಿಂತಿದ್ದ ವಿ.ಸೀ. ನನ್ನನ್ನು ನೋಡಿ ಗುರುತಿಸಿ "ಬಾಮ್ಮ ಇಲ್ಲಿ" ಎಂದು ಕರೆದರು. ನಾನು ಹೋಗಿ ಅವರ ಮುಂದೆ ನಿಂತೆ.

"ಏಕಮ್ಮ ಈಚೆಗೆ ಬರ್ತಾ ಇಲ್ಲ? ಬರೆಯೋದನ್ನು ನಿಲ್ಲಿಸಿ ಬಿಟ್ಟಿದ್ದೀಯೇನು?" ಎಂದರು.

"ಇಲ್ಲ, ಬರೆಯುತ್ತಿದ್ದೇನೆ" ಎಂದೆ.

"ಮತ್ತೆ ಯಾಕೆ ಪುಸ್ತಕ ತಂದು ಕೊಡ್ತಾ ಇಲ್ಲ?"

"ನಿಮ್ಮ ಆರೋಗ್ಯ ಚೆನ್ನಾಗಿಲ್ಲ ಅಂತ ಕೇಳಿದೆ. ನಾನು ಬಂದು ಮಾತಾಡುತ್ತ ಕೂತರೆ ನಿಮಗೆ ಆಯಾಸ ಆಗಬಹುದೂಂತ ಬರಲಿಲ್ಲ" ಎಂದು ತಲೆತಗ್ಗಿಸಿ ಹೇಳಿದೆ.

"ಏನಮ್ಮ ನೀನು ಹೇಳೋ ಮಾತು? ನಮ್ಮ ಗೌರಮ್ಮನವರ ಸೊಸೆ, ನಮ್ಮ ಚಂದ್ರು ಹೆಂಡತಿ, ನಮ್ಮ ಕಣ್ಣ ಮುಂದೆ ಪುಟ್ಟ ಹುಡುಗಿ ಸೊಸೆಯಾಗಿ ಬಂದವಳು, ನೀನು ಬೆಳೆದು ಲೇಖಕಿಯಾಗಿ ಸ್ವಂತವಾಗಿ ಪ್ರಕಟಿಸಿ ಪುಸ್ತಕ ತಂದು ಕೊಟ್ಟಾಗ ನಾನು ಸಂತೋಷದಿಂದ ಓದುತ್ತಿದ್ದೆ. ವಯಸ್ಸಾದ ನಾನು ಈಗ ಆ ಸಂತೋಷಕ್ಕೂ ಅರ್ಹನಲ್ಲ ಎಂದು ತೀರ್ಮಾನ ಮಾಡಿಕೊಂಡು ಬಿಟ್ಟಿಯಾ? ವಯಸ್ಸಾದ ಕಾಲದಲ್ಲಿ ಯಾರಾದರೂ ನಮ್ಮನ್ನು ಜ್ಞಾಪಿಸಿಕೊಂಡು ಬಂದು ಮಾತನಾಡಿಸಿದರೆ, ಯೋಗಕ್ಷೇಮ ವಿಚಾರಿಸಿದರೆ, ತಾವು ಬರೆದ ಒಂದು ಪುಸ್ತಕ ತಂದುಕೊಟ್ಟರೆ ಅನಾರೋಗ್ಯದಲ್ಲಿ ಎಷ್ಟು ಸಮಾಧಾನ ಸಿಗುತ್ತೆ ಗೊತ್ತೇನಮ್ಮ?" ಎಂದರು. ಅವರ ಈ ವಾತ್ಸಲ್ಯ ಮಮತೆಯ ಎದುರು ನಾನು ಮಾತಿಲ್ಲದೆ ಮೂಕಳಾದೆ. ನನ್ನ ಕಣ್ಣುಗಳಿಂದ ಕಂಬನಿಗಳು ಉದುರಿದುವು.

ವಿ.ಸೀ. ಅವರ ನಿಧನವಾರ್ತೆಯನ್ನು ಆಕಾಶವಾಣಿ ಬಿತ್ತರಿಸಿದಂದು ನಾನು

ಹರಿಹರದಲ್ಲಿದ್ದೆ. ಬೆಂಗಳೂರಿಗೆ ಆ ಮೇಲೆ ಹೋಗಿದ್ದಾಗ ಅವರ ಮನೆಗೆ ಹೋಗಿ, ಅವರ ಮಕ್ಕಳೊಡನೆ ಮಾತನಾಡಿ ಬಂದೆ. ಅವರ ಮನೆಯ ಮುಂದಿನ ರಸ್ತೆಗೆ 'ವಿ.ಸೀತಾರಾಮಯ್ಯ ರಸ್ತೆ' ಎಂದು ನಾಮಕರಣವಾಗಿದ್ದು ನಾಮಫಲಕವನ್ನು ನಿಲ್ಲಿಸಿರುವುದನ್ನು ಕಂಡು "ಸದ್ಯ ಇಷ್ಟಾದರೂ ಆಯ್ತಲ್ಲ" ಎಂದುಕೊಂಡೆ. ಆದರೆ ಎದುರಿಗಿದ್ದ ಅವರ ಮನೆಯತ್ತ ದೃಷ್ಟಿ ಹರಿದಾಗ, ಇಂಗ್ಲೆಂಡಿಗೆ ಹೋಗಿದ್ದ ನನ್ನ ಹಿರಿಯ ಮಗಳು ಅಲ್ಲಿಂದ ಬರೆದಿದ್ದ ಕಾಗದವೊಂದರ ನೆನಪಾಯಿತು. ಅವಳು ಷೇಕ್ಸ್‌ಪಿಯರ್ ಹುಟ್ಟಿದ ಜಾಗವನ್ನು ನೋಡಲು ಹೋಗಿದ್ದಳಂತೆ. ಅಲ್ಲಿ ಅವನು ಹುಟ್ಟಿದ ಜಾಗ, ಓದಿದ ಶಾಲೆ, ಅತ ಬರೆಯುತ್ತಿದ್ದ ಮೇಜು ಇತ್ಯಾದಿ ಎಲ್ಲವನ್ನೂ ಸುವ್ಯವಸ್ಥಿತವಾಗಿ ಅಚ್ಚುಕಟ್ಟಾಗಿ ರಕ್ಷಿಸಿ ಇಟ್ಟಿದ್ದಾರಂತೆ. ಇಂಗ್ಲೆಂಡಿಗೆ ಹೋದ ಪ್ರವಾಸಿಗರು ಷೇಕ್ಸ್‌ಪಿಯರ್ ಹುಟ್ಟಿದ ಜಾಗವನ್ನು, ಅವನ ರಂಗಭೂಮಿಯನ್ನು ನೋಡಲು ತಪ್ಪದೆ ಹೋಗುವರಂತೆ. ಸಾಹಿತಿಗಳಿಗೆ, ನಾಟಕಕಾರರಿಗೆ, ಕಲಾವಿದರಿಗೆ, ಜನ ಸಾಮಾನ್ಯರಿಗೆ ಅದೊಂದು ಚಿರಂತನ ಯಾತ್ರಾ ಸ್ಥಾನವಾಗಿದೆಯಂತೆ. ನಮ್ಮ ಸಾಹಿತಿಗಳಿಗೂ ಇಂಥ ಗೌರವ ಅವರವರ ಗ್ರಾಮದಲ್ಲಿ, ಊರಿನಲ್ಲಿ, ರಾಜ್ಯದಲ್ಲಿ, ರಾಷ್ಟ್ರದಲ್ಲಿ ಸಿಕ್ಕಬೇಕು. ಸಾಹಿತಿಗಳು ಕಲಾವಿದರು ಬಾಳಿ ಬದುಕಿದ ತಾಣವನ್ನು, ಕತ್ತಲೆಯ ಮಿನುಗು ದೀಪದ ಬೆಳಕಿನಲ್ಲಿ ಕುಳಿತು ಅವರು ಬರೆದ ಜಾಗವನ್ನು, ಸಾಹಿತ್ಯ ಸರಸ್ವತಿ ಉದ್ಭವಿಸಿದ ಆ ತಾಣವನ್ನು ಅದು ಇದ್ದಂತೆಯೇ ಉಳಿಸಿ, ಶುಚಿಯಾಗಿ ಪರಿಶುದ್ಧವಾಗಿ ಇರಿಸಿ, ಸಾಹಿತ್ಯಾಸಕ್ತರು ಇಂದಿನ ಮುಂದಿನ ಪೀಳಿಗೆಯವರು ಅದನ್ನು ಬಂದು ನೋಡಿ ವಂದಿಸಿ ಆನಂದಿಸಿ ಹೋಗುವಂತೆ ಆದರೆ, ಅವರು ಬರೆದ ಸಾಹಿತ್ಯಕೃತಿಗಳನ್ನು ಅಲ್ಲಿರಿಸಿ ಎಲ್ಲರೂ ಅವನ್ನು ಕಂಡು ಆನಂದಿಸಿ ಅಭಿಮಾನ ತಳೆದು ಹೋಗುವಂತೆ ಆದರೆ – ಎಂಥ ಸಂತೋಷ ಸಿಕ್ಕುತ್ತದೆ! ಆದರೆ ಅದು ಎಂದಿಗೆ ಆದೀತು? ಯಾರು ಮಾಡಿಯಾರು?

ಹೃದಯವಂತ ವಿ.ಸೀ.

ಎಸ್. ಆರ್. ರಾಮಸ್ವಾಮಿ

ವಿ. ಸೀತಾರಾಮಯ್ಯನವರನ್ನು ಒಂದೇ ಮಾತಿನಲ್ಲಿ ವರ್ಣಿಸಬೇಕೆಂದರೆ ಅವರನ್ನು 'ಹೃದಯವಂತ' ಎನ್ನಬಹುದು. ವಿ.ಸೀ. ಅವರಿಗಿಂತ ಹೆಚ್ಚಿನ ಹೃದಯವಂತರನ್ನು ಕಲ್ಪಿಸಿಕೊಳ್ಳುವುದೂ ಕಷ್ಟ.

೧೯೭೦ರಲ್ಲಿ ಬೆಂಗಳೂರಿನಲ್ಲಿ ವಿ.ಸೀ. ಅವರಿಗೆ ಸಾರ್ವಜನಿಕ ಅಭಿನಂದನೋತ್ಸವ ನಡೆಯಿತು. ಅಗ್ರಶ್ರೇಣಿಯ ಸಾಹಿತಿಗಳು ವೇದಿಕೆಯ ಮೇಲಿದ್ದರು. ಪುರಭವನ ವಿ.ಸೀ. ಅವರ ಶಿಷ್ಯರಿಂದಲೂ ಅಭಿಮಾನಿಗಳಿಂದಲೂ ಕಿಕ್ಕಿರಿದಿತ್ತು. ಒಬ್ಬ ಭಾಷಣಕಾರರು ಹೇಳಿದರು:

"ಹೃದಯ ಎಂಬುದು ಎದೆಯ ಎಡಗಡೆಗೋ ಬಲಗಡೆಗೋ ಎಲ್ಲೋ ಇದೆ ಎಂದು ವೈದ್ಯ ಶಾಸ್ತ್ರಜ್ಞರು ಹೇಳುತ್ತಾರೆ. ಆದರೆ ಮೈಯಲ್ಲಿ, ಮೈಯಷ್ಟೂ ಹೃದಯವೇ ಆಗಿರುವ ವ್ಯಕ್ತಿ, ವಿ. ಸೀತಾರಾಮಯ್ಯನವರು."

ಇದು ವಿ.ಸೀ. ಅವರನ್ನು ಕುರಿತ ಯಥಾರ್ಥ ವರ್ಣನೆ. ಅವರ ಒಲುಮೆಯು ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಗಿಡ–ಮರಗಳಿಗೂ ವಿಸ್ತರಿಸಿತ್ತು. ಅವುಗಳೊಡನೆಯೂ ಅವರದು ಗಾಢ ನೆಂಟಸ್ತಿಕೆ.

ಲಾಲ್‌ಬಾಗಿಗೆ ಹೋದಾಗಲೆಲ್ಲ ಕೆಲವು ನಿರ್ದಿಷ್ಟ ಮರಗಳನ್ನು ನೋಡಿಯೇ ನೋಡುವರು. ಒಂದಷ್ಟು ಹೊತ್ತು ಕುಳಿತು ಆ ಮರಗಳನ್ನು ನೋಡಿ ಉಲ್ಲಸಿತರಾಗುವರು. ಜೊತೆಯಲ್ಲಿದ್ದ ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳಿಗೋ ಇತರರಿಗೋ ಆ ಮರ ಬೇರೆ ಬೇರೆ ಋತುಗಳಲ್ಲಿ ಹೇಗಿರುತ್ತದೆ ಎಂದೆಲ್ಲ ವರ್ಣಿಸುವರು. ಅಂಥ ಒಂದು ಬೂರುಗ ಮರದ ಬಗ್ಗೆ "That tree has haunted me for thirty–five years" ಎನ್ನುತ್ತಿದ್ದರು.

ಅವರು ಅನೇಕ ವರ್ಷ ಮಟಮಟ ಮಧ್ಯಾಹ್ನ ವಾಕಿಂಗ್ ಹೋದ ಕೃಷ್ಣರಾಜೇಂದ್ರ ರಸ್ತೆಯಲ್ಲಿ ನೂರು ವರ್ಷದ ಮರಗಳು ಒಂದೊಂದಾಗಿ ಕೆಳಗುರುಳಿದುದನ್ನು ಕಂಡು ಮರುಗಿದರು. ಮರಗಳ ಋತ್ವನುಗುಣ ಪರಿವರ್ತನೆಗಳಲ್ಲಿ ಮನುಷ್ಯ ಜೀವನದ ಏರುಪೇರುಗಳ ಬಿಂಬವನ್ನು ಕಂಡ ಕಾವ್ಯಜೀವಿ ಅವರು.

ಒಮ್ಮೆ ಯಾವುದೋ ಸಮಾರಂಭಕ್ಕೆ ವಿ.ಸೀ. ಅವರನ್ನು ಆಹ್ವಾನಿಸಲು ಕು.ಶಿ. ಹರಿದಾಸಭಟ್ಟರು ಬಂದಿದ್ದರು. ವಿ.ಸೀ. ಅವರು "ನೀವು ಈಗ ಬಂದು ಕರೆದದ್ದು ಬಹಳ ಒಳ್ಳೆಯದಾಯಿತು. ಖಂಡಿತ ಬರುತ್ತೇನೆ" ಎಂದರು. ಹರಿದಾಸಭಟ್ಟರು "ಈಗ ಎಂದಿರಲ್ಲ, ಏನು ವಿಶೇಷ?" ಎಂದು ಕೇಳಿದರು.

ವಿ.ಸೀ. ಹೇಳಿದರು: "ನನ್ನ ಮಕ್ಕಳು ಮನೆಯ ಹಿಂಭಾಗದಲ್ಲಿ ಬಾತ್‌ಹೌಸ್ ಕಟ್ಟಲು ತೀರ್ಮಾನಿಸಿದ್ದಾರೆ. ಅದಕ್ಕಾಗಿ ನಮ್ಮ ಹಿತ್ತಲಲ್ಲಿರುವ ಹಳೆಯ ಹಲಸಿನ ಮರವನ್ನು ಕಡಿದುಹಾಕುತ್ತಾರಂತೆ. ಆ ಘೋರ ಕಾರ್ಯ ನಡೆಯುವಾಗ ನಾನು ಇಲ್ಲಿ ಇರಬಯಸುವುದಿಲ್ಲ. ಆದ್ದರಿಂದ ಸಂತೋಷವಾಗಿ ನಿಮ್ಮ ಸಮಾರಂಭಕ್ಕೆ ಬರುತ್ತೇನೆ ಎಂದೆ."

ತಮ್ಮ ಅನುಚರರಲ್ಲಿಯೂ ಪರಿಚಾರಕರಲ್ಲಿಯೂ ವಿ.ಸೀ. ತೋರುತ್ತಿದ್ದ ಪ್ರೀತಿ ಅನುಕಂಪಗಳನ್ನು ನೋಡಿ ನಾನು ಮೂಕನಾಗುತ್ತಿದ್ದೆ. ಅವರ ಮಟ್ಟಿಗೆ ಅದು ಸಹಜ ವರ್ತನೆಯೇ ಆಗಿತ್ತು. ಅವರು ಅದೇನೋ ಒಂದು ವಿಶೇಷ ಸಂಗತಿ ಎಂದುಕೊಳ್ಳುತ್ತಲೇ ಇರಲಿಲ್ಲ. ಆದರೆ ನಮಗೆ ಅದು ವಿಶೇಷವೆನಿಸುತ್ತಿತ್ತು. 'ಇಂಥ ಸ್ಪಂದನ ನಮ್ಮ ಮನಸ್ಸಿನಲ್ಲೇಕೆ ಆಗುವುದಿಲ್ಲ?' ಎನಿಸಿ ನಮ್ಮ ದೃಷ್ಟಿಯಲ್ಲಿ ನಾವೇ ಕುಬ್ಜರಾಗುತ್ತಿದ್ದೆವು. ಅವರ ಉದಾತ್ತತೆಗೆ ಮನಸ್ಸಿನಲ್ಲೇ ನಮಿಸುತ್ತಿದ್ದೆವು.

ಮೂರು ತಿಂಗಳಿಗೋ ನಾಲ್ಕು ತಿಂಗಳಿಗೋ ಒಮ್ಮೆ ಅವರಿಗೆ ತಲೆಯ ಕ್ಷೌರಕರ್ಮಕ್ಕಾಗಿ ಅನೇಕ ವರ್ಷದ ಬಳಕೆಯ ಕ್ಷೌರಿಕನೊಬ್ಬ ಮನೆಗೇ ಬಂದು ಅವರಿಗೆ ಈ ಸೇವೆ ಸಲ್ಲಿಸಿ ಹೋಗುತ್ತಿದ್ದ. ವಿ.ಸೀ. ಆತನಿಗೆ ಸಾಮಾನ್ಯವಾಗಿ ಬೇರೆಡೆ ದೊರೆಯುತ್ತಿದ್ದುದಕ್ಕಿಂತ ಹೆಚ್ಚಿನ ಸಂಭಾವನೆಯನ್ನೇ ಕೊಡುತ್ತಿದ್ದರು. ಇದಕ್ಕಿಂತ ಹೆಚ್ಚಿನ ಸಂಗತಿ ಎಂದರೆ ಆತನಿಗೆ ಕಾಫಿ ತರಿಸಿಕೊಟ್ಟು ಆತನೊಡನೆ ತಾವೂ ಕಾಫಿ ಕುಡಿದು ಪ್ರೀತಿಯಿಂದ ಮಾತುಕತೆ ನಡೆಸುತ್ತಿದ್ದರು. ಅಲ್ಲದೆ ಪ್ರತಿಸಲವೂ ತಪ್ಪದೆ ಆತನಿಗೆ "ನೀನು ನನಗಾಗಿ ಇಲ್ಲಿಯವರೆಗೆ ಬಂದು ಇಷ್ಟೊಂದು ವರ್ಷಗಳಿಂದ ಸೇವೆ ಮಾಡಿದ್ದೀ. ನಿನಗೆ ನಾವು ಏನು ತಾನೆ ಕೊಡಬಲ್ಲೆವು? ದೇವರು ನಿನ್ನನ್ನೂ ನಿನ್ನ ಕುಟುಂಬದವರನ್ನೂ ಚೆನ್ನಾಗಿ ಇಟ್ಟಿರಲಿ" ಎಂದು ಹಾರೈಸಿ ಕಳಿಸುತ್ತಿದ್ದರು.

ಹಲವು ಸಲ ಆ ಕ್ಷೌರಿಕ ಕಣ್ಣೀರಿಟ್ಟು "ತಾವು ಇಷ್ಟು ದೊಡ್ಡವರು. ದಿನಗಳು ಬದಲಾದ ಮೇಲೂ ಹಿಂದಿನಂತೆಯೇ ನನ್ನನ್ನು ಕರೆದು ಈ ಸೇವೆಗೆ ಅವಕಾಶ ಕೊಡುತ್ತಿದ್ದೀರಿ. ನಮ್ಮನ್ನು ಇಷ್ಟು ಪ್ರೀತಿಯಿಂದ ಬೇರೆ ಯಾರು ಮಾತನಾಡಿಸುತ್ತಾರೆ ಸ್ವಾಮಿ!" ಎನ್ನುತ್ತಿದ್ದ.

ವಿ.ಸೀ. ಯವರೊಡನೆ ನಮ್ಮನ್ನು ಗಾಢವಾಗಿ ಬಂಧಿಸಿದ್ದ ಗುಣ ಇದು.

ಅವರು ಪ್ರಾಂಶುಪಾಲರಾಗಿ ಚಿಕ್ಕಮಗಳೂರು ಕಾಲೇಜಿನಲ್ಲಿ ಎರಡು ಮೂರು ವರ್ಷ ಕೆಲಸ ಮಾಡಿದ್ದರು– ೧೯೫೦ರ ದಶಕದಲ್ಲಿ. ಅಲ್ಲಿ ಅವರ ಅಟೆಂಡರ್ ಆಗಿದ್ದಾತನನ್ನು ಅತಿಶಯ ಪ್ರೀತಿಯಿಂದ ನಡೆಸಿಕೊಂಡರು. ಆಗಾಗ ಅವನ ಮನೆಗೆ ಹೋಗಿ ಕ್ಷೇಮಸಮಾಚಾರ ವಿಚಾರಿಸಿ ಬರುತ್ತಿದ್ದರು. ಕೆಲವು ವರ್ಷಗಳ ನಂತರ ಅವನ ಮಗಳಿಗೋ

ಮಗನಿಗೋ ಮದುವೆಯಾದಾಗ ಆ ವೇಳೆಗೆ ಚಿಕ್ಕಮಗಳೂರು ಬಿಟ್ಟಿದ್ದರೂ ವಿ.ಸೀ. ಆ ಮದುವೆಗಾಗಿ ಚಿಕ್ಕಮಗಳೂರಿಗೆ ಹೋಗಿ ವಧೂವರರನ್ನು ಹರಸಿ ಬಂದರು. ಆತ ಹೇಳುತ್ತಿದ್ದ: "ನನ್ನ ಸರ್ವೀಸಿನಲ್ಲಿ ಬಹಳ ಜನ ಪ್ರಿನ್ಸಿಪಾಲರನ್ನು ನೋಡಿದೆ. ಆದರೆ ನನ್ನ ಮನೆಯೊಳಕ್ಕೆ ಕಾಲಿರಿಸಿದ ಪ್ರಿನ್ಸಿಪಾಲರು ಇವರು ಮಾತ್ರ!" ೧೯೬೦ರ ದಶಕದಲ್ಲಿ ಹೊಸದಾಗಿ ಆರಂಭವಾದ ಹೊನ್ನಾವರ ಕಾಲೇಜಿನ ಪ್ರಾಂಶುಪಾಲರಾಗಿದ್ದಾಗಲೂ ವಿ.ಸೀ. ತಮ್ಮ ಸಹಕಾರಿ ಪರಿಜನರೊಡನೆ ಅತ್ಯಂತ ಔದಾರ್ಯದಿಂದ ನಡೆದುಕೊಂಡರು. ಅವರ ಮನೆಯಲ್ಲಿ ಕಸ-ಮುಸುರೆ ಕೆಲಸ ಮಾಡುತ್ತಿದ್ದಾಕೆಗೆ ನಿಯತವಾದ ಸಂಬಳವಲ್ಲದೆ ವರ್ಷಕ್ಕೊಮ್ಮೆ ಸೀರೆ-ಕುಪ್ಪಸ ಜೋಡಿಯನ್ನೂ, ಒಂದಷ್ಟು ಹಣವನ್ನೂ ವಿಶೇಷವಾಗಿ ಸಲ್ಲಿಸುತ್ತಿದ್ದರು. ಮತ್ತು ಇದನ್ನು ತಮ್ಮ ಮನೆಯವರ ಮೂಲಕ ಮಾಡುತ್ತಿದ್ದರು.

೧೯೭೧ರ ಮಧ್ಯಭಾಗ. ರಾತ್ರಿ ೮ ಗಂಟೆಯ ವೇಳೆಗೆ ವಿ.ಸೀ. ಅವರ ಮನೆಗೆ ಹೋದೆ. ಅಂದು ನಾಗಪಂಚಮಿಯಾಗಿದ್ದುದರಿಂದ ಕಡುಬಿನ ಸೇವೆ ನಡೆಯಿತು.

ವಿ.ಸೀ. ಏಕೋ ಕುಗ್ಗಿದ್ದರು. ಯಾವುದೋ ಹುಳು ಮನಸ್ಸನ್ನು ಹೊಕ್ಕಿರುವಂತೆ ತೋರಿತು. ಏನೆಂದು ವಿಚಾರಿಸಿದೆ. ಆಗ ಹೊರಕ್ಕೆ ಬಂತು ಸಂಗತಿ.

ಯಾವುದೋ ಬಾಬಿನಲ್ಲಿ ವಿ.ಸೀ. ಅವರ ಮಕ್ಕಳಿಗೆ ಮನೆಗೆಲಸದ ಹೆಂಗಸಿನ ವಿಷಯದಲ್ಲಿ ಅಸಮಾಧಾನವಾಗಿ "ನೀನು ಇನ್ನು ಮೇಲೆ ಕೆಲಸಕ್ಕೆ ಬರಬೇಡ, ಹೊರಟು ಹೋಗು" ಎಂದರಂತೆ. ಆ ಹೆಂಗಸು "ಹೋಗುತ್ತೇನೆ" ಎಂದು ಗೇಟಿನ ಕಡೆ ಹೆಜ್ಜೆ ಹಾಕಿದಳು. ಆಗ ವಿ.ಸೀ. ಹೊರಗೆ ಬಂದು ವಿಷಯ ಏನೆಂದು ಕೇಳಿದರು. ಕೆಲಸದವಳನ್ನು ಸಮಜಾಯಿಷಿ ಮಾಡಿ ಹಿಂದಕ್ಕೆ ಕರೆತಂದರು. "ನಾನು ಇಲ್ಲಿರುವವರೆಗೆ ನೀನು ನಮ್ಮ ಮನೆಯನ್ನು ಬಿಟ್ಟು ಹೋಗತಕ್ಕದ್ದಲ್ಲ. ಯಾರು ಏನೇ ಹೇಳಲಿ. ನೀನು ಹದಿನೈದು ವರ್ಷದಿಂದ ಪರಿಚಾರಿಕೆ ಮಾಡಿದ್ದೀ. ಬೇರೆಯವರಿಗೆ ಬೇಡವಾದರೆ ಅವರು ಬೇರೆ ಏರ್ಪಾಟು ಮಾಡಿಕೊಳ್ಳಲಿ. ನನಗಾಗಿ ನೀನು ಇಲ್ಲಿರತಕ್ಕದ್ದು."

ಆಮೇಲೆ ಮಕ್ಕಳನ್ನು ಕರೆದು ಕೇಳಿದ್ದರು:

"ಹದಿನೈದು ವರ್ಷದಿಂದ ಕೆಲಸಮಾಡಿರುವ ಆ ಹೆಂಗಸನ್ನು ನಿಂತಕಾಲ ಮೇಲೆ ಹೊರಡುವಂತೆ ಹೇಳಲು ನಿಮಗೇನು ಅಧಿಕಾರ? ನಿಮ್ಮ ಫ್ಯಾಕ್ಟರಿಯಲ್ಲಿ ನಿಮ್ಮನ್ನು ಹಾಗೆಯೇ ಹೋಗೆಂದರೆ ನೀವು ಸುಮ್ಮನೆ ಹೋಗುತ್ತೀರೇನು? ಫ್ಯಾಕ್ಟರಿಯಲ್ಲಾದರೆ ನಿಮಗೆ ಎಲ್ಲ ಸೌಕರ್ಯಗಳೂ ಬೇಕು. ನೀವು ಮಾಡುವ ಮಹಾ ಕೆಲಸಕ್ಕೆ ಬೋನಸ್ ಬೇಕು, ಆಸ್ಪತ್ರೆ ಸೌಲಭ್ಯ ಬೇಕು, ಕೆಲಸದಿಂದ ತೆಗೆದುಹಾಕುವಾಗ ಎಷ್ಟೋ ತಿಂಗಳ ನೋಟೀಸ್ ಬೇಕು, ರಿಟ್ರೆಂಚ್‌ಮೆಂಟ್ ಕಾಂಪೆನ್‌ಸೇಷನ್ ಬೇಕು, ಯಥೇಚ್ಛವಾಗಿ ರಜಗಳು ಬೇಕು. ನಿಮಗೆ ನಿಮ್ಮ ಫ್ಯಾಕ್ಟರಿಯಲ್ಲಿ ಕೊಡುವ ಸೌಕರ್ಯದಲ್ಲಿ ಹತ್ತರಲ್ಲೊಂದು ಭಾಗದಷ್ಟನ್ನಾದರೂ ನೀವು ಈ ಕೆಲಸದ ಹೆಂಗಸಿಗೆ ಕೊಟ್ಟಿದ್ದೀರೇನು? ಅವಳು ಎಷ್ಟು ದುಡಿದಿದ್ದಾಳೆ ನಿಮಗಾಗಿ! ಹಗಲೆನ್ನದೆ ರಾತ್ರಿಯೆನ್ನದೆ, ಭಾನುವಾರವೆನ್ನದೆ ಹಬ್ಬವೆನ್ನದೆ, ಅಂಗಡಿ ಸಾಮಾನು ತರುವುದು, ಹಾಲು ಮೊಸರು ತರಕಾರಿ ತರುವುದು, ಪಾತ್ರೆ ತೊಳೆಯುವುದು, ಮನೆ

ಚೊಕ್ಕಟ ಮಾಡುವುದು, ಎಲ್ಲ ಕೆಲಸವನ್ನೂ ತನ್ನ ಸ್ವಂತ ಕೆಲಸವೆಂಬಂತೆ ಮಾಡುತ್ತಾಳೆ. ಅವಳ ಶ್ರಮಕ್ಕಾಗಿ ನೀವು ಕೊಡುವ ಪ್ರತಿಫಲ ಇಷ್ಟೇನೆ? ಮನುಷ್ಯನಿಗೆ ಕೃತಜ್ಞತೆ ಎಂಬುದೇ ಬೇಡವೆ....?"

ವಾಸ್ತವವಾಗಿ ವಿ.ಸೀ. ಅವರ ಮಕ್ಕಳೂ ಅನುದಾರಿಗಳೇನಲ್ಲ. ಆಗ ನಡೆದಿದ್ದುದು ದೈನಂದಿನ ಒತ್ತಡಗಳ ಒಂದು ಕ್ಷಣಿಕ ಆವೇಶದ ಘಟನೆ, ಅಷ್ಟೆ. ಅನಂತರ ಎಲ್ಲವೂ ಸುಮುಖವಾಯಿತು.

ವಿ.ಸೀ.ಯವರನ್ನು ಹತ್ತಿರದಿಂದ ಕಂಡ ಎಲ್ಲರ ಮನಸ್ಸಿನಲ್ಲಿಯೂ ಅಚ್ಚಳಿಯದೆ ಉಳಿದಿರುವುದು ಅವರ ಅಸೀಮ ಹೃದಯವಂತಿಕೆ ಮತ್ತು ಔದಾರ್ಯದ ಈ ಮುದ್ರಿಕೆಯೇ.

* * *

ಒಮ್ಮೆ ವಿ.ಸೀ.ಯವರ ಹಸುಳೆತನ, ಓರೆಕೋರೆಗಳನ್ನು ಲೇವಡಿ ಮಾಡಿ ಲೇಖನ ಬರೆದೆ. ಅವರ ಭೋಳೆತನ, ನಸನಸೆಗಳನ್ನೆಲ್ಲ ಧಾರಾಳವಾಗಿ ಹಾಸ್ಯ ಮಾಡಿದ್ದೆ. ಪ್ರಕಟವಾದ ಮೇಲೆ ವಿ.ಸೀ. ಅವರಿಗೂ ಕೊಟ್ಟೆ. ಓದಿದರು. ಒಬ್ಬ ಸ್ನೇಹಿತರ ದಾಕ್ಷಿಣ್ಯಕ್ಕೊಳಗಾಗಿ ಜಾಮೀನುಗಾರರಾಗಿ ನಿಂತು, ಆ ಸ್ನೇಹಿತರು ಸಾಲ ತೀರಿಸದಿದ್ದಾಗ, ಸ್ವಯಂ ಪುರಂದರದಾಸರಾದ ವಿ.ಸೀ.ಯವರೇ ಹಣ ತೀರಿಸಬೇಕಾಯಿತು. ಈ ಪ್ರಸಂಗವನ್ನು ಆ ಮಿತ್ರಮಹಾಶಯರನ್ನು ಹೆಸರಿಸದೆ ನಾನು ನನ್ನ ಲೇಖನದಲ್ಲಿ ಉಲ್ಲೇಖಿಸಿದ್ದೆ.

ಲೇಖನವನ್ನು ಓದಿದ ಮೇಲೆ ವಿ.ಸೀ. ಅಂದರು:

"ಇದೊಂದು ಘಟನೆಯನ್ನು ಬಿಟ್ಟದ್ದರೆ ನಿಮ್ಮ ಗಂಟೇನು ಹೋಗುತ್ತಿತ್ತು? ಪಾಪ, ಅವನು ಇದನ್ನು ಓದಿದರೆ ನೊಂದುಕೊಳ್ಳುವುದಿಲ್ಲವೆ?"

ತಮ್ಮ ವ್ಯಕ್ತಿವೈಚಿತ್ರ್ಯಗಳನ್ನು ನಾನು ಗೇಲಿ ಮಾಡಿದ್ದ ಬಗ್ಗೆ ಅವರು ಒಂದು ಮಾತನ್ನೂ ಆಡಲಿಲ್ಲ.

ವಿ.ಸೀ. ಕಾಫಿ ವ್ಯಸನಿಗಳು. "ನಾನು ಕಾಫಿ ಕುಡಿದಿರುವಷ್ಟು ನೀವು ನೀರು ಕುಡಿದಿಲ್ಲ" ಎಂದು ನನ್ನನ್ನು ಆಗಾಗ ಮೂದಲಿಸುತ್ತಿದ್ದರು. ಕಾಫಿಯು ಗುಣದಲ್ಲಿಯೂ ಪ್ರಮಾಣದಲ್ಲಿಯೂ ಮಜಬೂತಾಗಿರಬೇಕು. ವಿದ್ಯಾರ್ಥಿಗಳು, ಸ್ನೇಹಿತರು, ಪತ್ರಿಕಾಕರ್ತರು, ವಿ.ಸೀ. ಯವರನ್ನು ಕೆಣಕುವುದಕ್ಕೆಂದೇ ಅವರಲ್ಲಿಗೆ ಹೋಗುವ ನಮ್ಮಂಥವರು, ಯಾರಾದರೂ ಅತಿಥಿಗಳು ವಿ.ಸೀ. ಅವರ ಕೋಣೆಯೊಳಕ್ಕೆ ಕಾಲಿಟ್ಟ ಐದು ನಿಮಿಷಗಳೊಳಗಾಗಿ ವಿ.ಸೀ. "ನೋಡು...." ಎಂದು ಕೂಗುವರು. ಈ "ನೋಡು...." ಎಂಬುದು ಪಾರಿಭಾಷಿಕ ಶಬ್ದ. ಇದಕ್ಕೆ ಎರಡು ಅರ್ಥ: (೧) ಭಾರ್ಯೆ ಸರೋಜಮ್ಮನವರನ್ನು ಉದ್ದೇಶಿಸಿದ ಸಂಬೋಧನೆ; (೨) ಅತಿಥಿಗಳು ಬಂದಿದ್ದಾರೆ, ಕಾಫಿ ತೆಗೆದುಕೊಂಡು ಬಾ. ಕೆಲವು ನಿಮಿಷಗಳೊಳಗಾಗಿ ಒಂದು ಪಾವಿನಷ್ಟು ಗಾತ್ರದ ಕಂಚಿನ ಲೋಟಗಳ ಭರ್ತಿ ಕಾಫಿ ಹಾಜರಾಗುವುದು.

ಅವರ "ನೋಡೂ" ಪರಿಭಾಷೆಯನ್ನು ಅವರ ಮಕ್ಕಳು ಹಾಸ್ಯ ಮಾಡುತ್ತಿದ್ದುದೂ

ಉಂಟು. ಒಂದು ಸಲ "ಬಚ್ಚಲುಮನೆಯಲ್ಲಿ ಯಾರಿದ್ದಾರೆ?" ಎಂದು ವಿ.ಸೀ. ಕೇಳಿದಾಗ ಅವರ ಕೊನೆಯ ಮಗಳು ಉಷಾ "ನೋಡೂ ಇದ್ದಾಳೆ" ಎಂದು ಉತ್ತರಿಸಿದ್ದಳು.

ವಿ.ಸೀ. ಅವರ ರುಮಾಲಿಗೆ ಅತ್ಯಂತ ಶ್ರೇಷ್ಠ ದರ್ಜೆಯ ಮಲ್‌ಬಟ್ಟೆಯೇ ಬೇಕು. ರುಮಾಲಿಗಾಗಲಿ, ಷರಟಿಗಾಗಲಿ, ಪಂಚೆಗಾಗಲಿ, ೧೭೦೩ ಜಾತಿಯ ಮಲ್‌ಗಿಂತ ಕಡಮೆಯಾದ ಯಾವುದರಿಂದಲೂ ವಿ.ಸೀ. ಅವರಿಗೆ ಸಮಾಧಾನವಿಲ್ಲ. ನಾವಿಬ್ಬರೂ ಯಾವುದೋ ಸಂದರ್ಭಕ್ಕಾಗಿ ಮದರಾಸಿಗೆ ಹೋಗಿದ್ದಾಗ, ಮಲ್‌ಬಟ್ಟೆಗಾಗಿ ಒಂದಾನೊಂದು ಪೇಟೆಬೀದಿಯ ಅಂಗಡಿ ಅಂಗಡಿಯಲ್ಲೂ ಅಜಮಾಯಿಷಿ ಮಾಡಬೇಕಾಯಿತು.

ವಿ.ಸೀ. ಅವರ ಮನಸ್ಸಿಗೆ ನೋವುಂಟು ಮಾಡಬೇಕಾದರೆ ಅವರ ರುಮಾಲು ಸರಿಯಾಗಿಲ್ಲವೆಂದು ಸೂಚಿಸಿದರೆ ಸಾಕು. ಇದಕ್ಕಿಂತ ಮರ್ಮಘಾತಕವಾದ ಟೀಕೆ ಬೇರೆಯಿಲ್ಲ. ಒಂದು ಸಲ ಯಾರೋ ಒಬ್ಬರು "ನಿಮ್ಮ ರುಮಾಲು ಏಕೋ ಮಾಮೂಲಿನ ಹಾಗಿಲ್ಲವಲ್ಲ?" ಎಂದು ಕೇಳಿಬಿಟ್ಟರಂತೆ. ಹಲವಾರು ದಿನಗಳಾದರೂ ಆ ಗಾಯ ಮಾಯಲಿಲ್ಲ. "ನೋಡಿ, ಅವರು ಹೀಗೆಂದುಬಿಟ್ಟರು" ಎಂದು ವಿ.ಸೀ. ಪ್ರಲಾಪ ಮಾಡಿದರು.

ಒಂದು ಸಲ ವಿ.ಸೀ. ಪಂಚೆಯ ಖರೀದಿಗೆ ಹೊರಟರು. ಜೊತೆಯಲ್ಲಿ ಫಿಸಿಕ್ಸ್ ಪ್ರೊಫೆಸರ್ ಪಿ. ಶ್ರೀನಿವಾಸರಾಯರನ್ನೂ ಕರೆದುಕೊಂಡು ಹೋಗಿದ್ದರು. ಇಬ್ಬರೂ ಬಳೆಪೇಟೆಯ ಅಂಗಡಿ ಅಂಗಡಿಯನ್ನೂ ಸುತ್ತಿದರು. ವಿ.ಸೀ. ಒಂದೊಂದು ಅಂಗಡಿಯಲ್ಲೂ ಇದ್ದ ನಮೂನೆಗಳನ್ನೆಲ್ಲ ತೆಗೆಸಿ ನೋಡಿ "ಇದು ತುಂಬ ದಪ್ಪ," "ಇದರ ಟೆಕ್ಸ್‌ಚರ್ ಚೆನ್ನಾಗಿಲ್ಲ," "ಇದು ನಯವಾಗಿಲ್ಲ," "ಇದರ ಕೌಂಟ್ ಸಾಲದು" ಹೀಗೆ ಹೇಳುತ್ತಾ ಬೇರೆ ಬೇರೆ ಅಂಗಡಿಗಳನ್ನು ತಲಾಷ್ ಮಾಡುತ್ತಲೇ ಹೋದರು.

ಕೊನೆಗೆ ಒಂದು ಅಂಗಡಿಯಲ್ಲಿ ಯಾವುದೋ ಒಂದು ಪಂಚೆ ಜೋಡಿ ಅಷ್ಟೇನೂ ಅಸಮರ್ಪಕವಲ್ಲವೆಂದು ವಿ.ಸೀ. ತೀರ್ಮಾನಿಸಿದರು. (ಕಾಲು ನೋಯುತ್ತಿತ್ತು, ವೇಳೆಯೂ ಮೀರಿತ್ತು.) ಅದರ ಬೆಲೆ ಎಷ್ಟೆಂದು ಕೇಳಿದರು. ಅಂಗಡಿಯವನು "ಜೊತೆಗೆ ೪೦ ರೂಪಾಯಿ" ಎಂದ. ವಿ.ಸೀ. ಕಿಸೆಯಲ್ಲಿ ನೋಡಿಕೊಂಡರು. ಅಲ್ಲಿದ್ದದ್ದು ೧೦ ರೂಪಾಯಿ ಮಾತ್ರ. ಒಂದು ಜೊತೆ ಇಲ್ಲದಿದ್ದರೆ ಹೋಗಲಿ, ಒಂದು ಒಂಟಿ ಕೊಳ್ಳಬೇಕಾದರೂ ಇನ್ನೂ ಹತ್ತು ರೂಪಾಯಿ ಊನವಾಗಿತ್ತು. ಶ್ರೀನಿವಾಸರಾಯರನ್ನು ಕೇಳಿದರು–

ವಿ.ಸೀ.: "ಶ್ರೀನಿವಾಸರಾವ್, ನಿಮ್ಮಲ್ಲಿ ಹತ್ತು ರೂಪಾಯಿ ಇದ್ದರೆ ಕೊಡುತ್ತೀರಾ? ಆಮೇಲೆ ವಾಪಸ್ ಮಾಡುತ್ತೇನೆ."

ಶ್ರೀ: (ಜೇಬನ್ನು ನೋಡಿಕೊಂಡು) "ಓಹೋ, ಕೊಡುತ್ತೇನೆ ಸೀತಾರಾಮಯ್ಯ, ಅದಕ್ಕೇನಂತೆ. ಆದರೆ ಈಗಲೇ ವ್ಯಾಪಾರಕ್ಕೆ ಏನು ಮುಹೂರ್ತ? ನಾಳೆಯೋ, ನಾಳಿದ್ದೋ ಬಂದು ಕೊಂಡುಕೊಂಡರಾಯಿತಲ್ಲ?"

ವಿ.ಸೀ.: "ಉಹುಂ, ಅರ್ಜೆಂಟಾಗೇ ಬೇಕಾಗಿದೆ, ಶ್ರೀನಿವಾಸರಾವ್. ನಾಳೆ ಆ ಸ್ಕೂಲಿನಲ್ಲಿ ಏನೋ ಫಂಕ್ಷನ್ ಇದೆಯಂತೆ. ನನ್ನನ್ನು ಅಧ್ಯಕ್ಷತೆಗೆ ಕರೆದಿದ್ದಾರೆ. ಹಳೆಯ ಪಂಚೆ

ಉಟ್ಟುಕೊಂಡು ಹೇಗೆ ಹೋಗುವುದು? ಹೊಸ ಪಂಚೆ ಮುರಮುರ ಅಂತ ಚೆನ್ನಾಗಿರುತ್ತದೆ. ಆದ್ದರಿಂದ ಈಗಲೇ ಕೊಂಡುಕೊಂಡು ಬಿಡೋಣ."

ರುಮಾಲು, ಕಚ್ಚೆಪಂಚೆ ಒರಣಾದ ಬಗ್ಗೆ ವಿ.ಸೀ. ಯವರಿಗೆ ಎಷ್ಟು ನಸನಸೆಯೋ, ಶಿವರಾಮ ಕಾರಂತರಿಗೆ ತಮ್ಮ ಉಡುಗೆಯ ಬಗ್ಗೆ ಅಷ್ಟೂ ನಿರ್ಲಕ್ಷ್ಯ. ಕೆಲವೊಮ್ಮೆ ಬನೀನನ್ನಷ್ಟೇ ಧರಿಸಿ ಹೆಗಲ ಮೇಲೆ ಟವಲನ್ನೇರಿಸಿ ಕಾರಂತರು ವಿ.ಸೀ. ಜೊತೆಗೆ ಸಂಚಾರ ಹೊರಟುಬಿಡುತ್ತಿದ್ದರು. ವಿ.ಸೀ.ಯವರಿಗೆ ಅದು ಮುಜುಗರ ತರುತ್ತಿತ್ತು. ಕಾರಂತರು ಒಮ್ಮೆ "ಯಾಕೆ ಏನೋ ಸಂಕಟಪಡುತ್ತಿದ್ದೀರಿ?" ಎಂದು ಕೇಳಿದರು. ವಿ.ಸೀ. ತಡೆದುಕೊಳ್ಳಲಾರದೆ, "ಹೀಗೆ ಹೊರಟರೆ ನಮ್ಮ ಕಡೆ ಶ್ಮಶಾನಕ್ಕೆ ಹೋಗುತ್ತಿದ್ದಾರೆ ಎನ್ನುತ್ತಾರೆ" ಎಂದರು. ಅದಕ್ಕೆ ಶಿವರಾಮ ಕಾರಂತರು ಕ್ಷಣವೂ ತಡಮಾಡದೆ "ಅಲ್ಲಿಗೇ ಹೊರಟದ್ದು ಎಂದು ಬಿಡಿ" ಎಂದರು.

* * *

ವಿ.ಸೀ. ಅವರು ಒಮ್ಮೆ ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಗೆ ಸೇರಲು ತೀರ್ಮಾನಿಸಿದ್ದರು. ವಿ.ಸೀ. ಅವರಿಗೆ ಮದುವೆಯಾಗಿತ್ತು. ಹಿಂದಿನ ದಿನ – ಗುರುವಾರ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳನ್ನು ಕಾಣಲು ಹೋದರು. ಶಾಸ್ತ್ರಿಗಳು ಹೇಳಿದ್ದು ಹೀಗೆ: "If you knew what I know, you wouldn't think of joining the Society."

ಸೊಸೈಟಿಗೆ ಸೇರಲು ವಿ.ಸೀ. ಅವರಿಗಿದ್ದ ಆಕರ್ಷಣೆ ಏನೆಂದು ಶಾಸ್ತ್ರಿಗಳು ಕೇಳಿದ್ದಕ್ಕೆ, ವಿ.ಸೀ. "ರಾಜಕೀಯವನ್ನಾಗಲಿ ಆರ್ಥಿಕ ಪ್ರಶ್ನೆಗಳನ್ನಾಗಲಿ ಬುದ್ಧಿವಂತರೊಡನೆ, ಮೇಧಾವಿಗಳೊಡನೆ ಚರ್ಚಿಸುವ ಅವಕಾಶವಾಗುತ್ತದೆ. ನನಗೆ ಅಂಥ ಸಹವಾಸ ಬೇಕಾಗಿದೆ" ಎಂದರು.

ಶಾಸ್ತ್ರಿಗಳು ಹೀಗೆಂದರಂತೆ: "ದೇಶದ ವಿದ್ಯಮಾನಗಳನ್ನು ಗುಂಡಪ್ಪನವರಿಗಿಂತ ಚೆನ್ನಾಗಿ ತಿಳಿದ ಪ್ರಾಜ್ಞರು ಎಲ್ಲಿಯಾದರೂ ನಿಮಗೆ ಸಿಕ್ಕಿಯಾರೆ? ಅದು ಭ್ರಾಂತಿ. ಗುಂಡಪ್ಪನವರಷ್ಟು ಸರ್ವತೋಮುಖ ಜ್ಞಾನ ಪಡೆದವರು ನಮ್ಮ ದೇಶದಲ್ಲಿ ಕೈಬೆರಳೆಣಿಸುವಷ್ಟಿದ್ದರೆ ಹೆಚ್ಚು."

ವಿ.ಸೀ. – ಡಿ.ವಿ.ಜಿ. ನಡುವಣ ಪ್ರೇಮ ಗಾಢವಾದ್ದು, ಮಾತಿಗೆ ಸಿಲುಕದುದು.

ಒಮ್ಮೆ ಡಿ.ವಿ.ಜಿ. ತೀವ್ರ ಮೂಲವ್ಯಾಧಿಯಿಂದ ನರಳುತ್ತಿದ್ದರು. ಅದಕ್ಕೆ ರೇಶ್ಮೆದಾರ ಸುಟ್ಟ ಪುಡಿಯನ್ನು ಲೇಪಿಸುವುದು ಉಪಶಮನಕಾರಿ ಎಂದು ಯಾರಿಂದಲೋ ಅರಿತ ವಿ.ಸೀ. ತಾವೇ ತಮ್ಮ ಕೈಯಿಂದಲೇ ಡಿ.ವಿ.ಜಿ.ಯವರಿಗೆ ಆ ಆರೈಕೆ ಮಾಡಿದ್ದರು. ವಿ.ಸೀ. ಯವರ ಇಂಥ ನಿರ್ವ್ಯಾಜ ಪ್ರೇಮವನ್ನು ಡಿ.ವಿ.ಜಿ. ಪದೇ ಪದೇ ಸ್ಮರಿಸುತ್ತಿದ್ದರು.

ಒಮ್ಮೆ ವಿ.ಸೀ. ಮೇಜಿನ ಮುಂದೆ ಕುರ್ಚಿಯಲ್ಲಿ ಕುಳಿತು ಯಾವುದೋ ಗ್ರಂಥಾವಲೋಕನ ಮಾಡುತ್ತಿದ್ದ ಫೋಟೋದೊಂದಿಗೆ ಲೇಖನ 'ಕರ್ಮವೀರ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆ ಚಿತ್ರವನ್ನು ನೋಡಿ ಡಿ.ವಿ.ಜಿ. ವ್ಯಾಖ್ಯೆ ಮಾಡಿದರು: "ಈ ನಿರ್ಭಾಗ್ಯ ಮುಂಡೇದು ಇಷ್ಟು ಆರಾಮವಾಗಿ ಯಾವತ್ತು ಕೂತುಕೊಂಡಿತ್ತು?"

ಡಿ.ವಿ.ಜಿಯವರಿಗೆ ಸಾರ್ವಜನಿಕ ಸನ್ಮಾನ ನಡೆಯಬೇಕೆಂದು ಆಗ್ರಹಿಸಿದವರು ವಿ.ಸೀ.

ಡಿ.ವಿ.ಜಿ.ಯವರ 'ಶ್ರೀಮದ್ಭಗವದ್ಗೀತಾ ತಾತ್ಪರ್ಯ' ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಾಗ ಅದರ ವಿತರಣೋತ್ಸವ ನಡೆಯಬೇಕೆಂದು ಕಾಳಜಿ ವಹಿಸಿದವರು ವಿ.ಸೀ. ಅದರಂತೆ ಗೋಖಲೆ ಸಂಸ್ಥೆಯಲ್ಲಿ ಒಂದು ಸಮಾರಂಭವೂ ನಡೆಯಿತು. ವಿ. ಕೃ. ಗೋಕಾಕ, ರಂ. ಶ್ರೀ. ಮುಗಳಿ, ಅಕಾಡೆಮಿಯ ಕಾರ್ಯದರ್ಶಿ ಜಾರ್ಜ್ ಮುಂತಾದವರು ಬಂದಿದ್ದರು. ಗೋಕಾಕರು ಭಾವಪೂರ್ಣವಾಗಿ ಮಾತನಾಡಿದರು.

ಡಿ.ವಿ.ಜಿ.ಯವರು ಮುಳಬಾಗಲಿನ ಮತ್ತಿತರ ನೆನಪುಗಳನ್ನು ದಾಖಲೆ ಮಾಡಬೇಕು ಎಂದು ವರ್ಷಗಳುದ್ದಕ್ಕೂ ಅವರನ್ನು ಒತ್ತಾಯಿಸಿದ್ದವರು ವಿ.ಸೀ. ಎಣಿಕೆ ಇಲ್ಲದಷ್ಟು ಸಲ ಅವರು ನನಗೆ ಹೇಳಿದ್ದುಂಟು: "ನೀವು ಅವರಿಗೆ ಹತ್ತಿರವಾಗಿದ್ದೀರಿ. ಹೇಗಾದರೂ ಈ ಕೆಲಸ ಆಗುವಂತೆ ನೀವು ಮುತುವರ್ಜಿ ವಹಿಸಬೇಕು."

ಸ್ವಾರಸ್ಯವೆಂದು ನನಗೆ ಕಂಡುಬಂದ ಪುಸ್ತಕಗಳನ್ನು ಅವರಿಗೂ, ಅವರಿಗೆ ಸ್ವಾರಸ್ಯವೆನಿಸಿದವನ್ನು ಅವರು ನನಗೂ ಕೊಡುವುದು ರೂಢಿಯಾಗಿತ್ತು. ಅವರು ವ್ರತಬುದ್ಧಿಯಿಂದ ಬಿಡದೆ ಓದುತ್ತಿದ್ದ "ಟೈಮ್ಸ್ ಲಿಟರರಿ ಸಪ್ಲಿಮೆಂಟ್," "ಇಕಾನಮಿಸ್ಟ್" ಪತ್ರಿಕೆಗಳ ಸ್ವಾರಸ್ಯಾಂಶಗಳನ್ನು ಹೆಕ್ಕಿ ತೆಗೆದು ಓದಿ ಹೇಳುತ್ತಿದ್ದರು. ಇದು ಕೆ. ಎಸ್. ನರಸಿಂಹಸ್ವಾಮಿ ಅವರಿಗೂ ನನಗೂ ಒಂದು ಒಳ್ಳೆಯ ಶಿಕ್ಷಣಾವಕಾಶವಾಗಿತ್ತು.

ನರಸಿಂಹಸ್ವಾಮಿಯವರ ಪದ್ಯಗಳ ಬಗ್ಗೆ ವಿ.ಸೀ. ಅವರಿಗೆ ಅಪಾರ ಮೆಚ್ಚಿಗೆ. ಕೆ.ಎಸ್.ನ. ಅವರ ಪದ್ಯಗಳಲ್ಲಿ ಅಧ್ಯಾಹಾರವಾಗಿದ್ದ ಎಷ್ಟೋ ಅಂಶಗಳನ್ನು ವಿ.ಸೀ. ಪ್ರತಿಪಾದಿಸುವಾಗ ಸ್ವಯಂ ಕೆ.ಎಸ್.ನ. ಅವರೇ ಅಚ್ಚರಿಗೊಂಡದ್ದುಂಟು. ವಿ.ಸೀ. ಹೇಳುತ್ತಿದ್ದ, ನೀಡುತ್ತಿದ್ದ ಎಷ್ಟೋ ವಿವರಣೆಗಳು ಇತರರಿಗೆ ಸುಲಭವಾಗಿ ಗಮನಕ್ಕೆ ಬರುತ್ತಿದ್ದವಂಥವಲ್ಲ.

ವಿ.ಸೀ.ಯವರ ಮಾನವೀಯ ಸಂಪನ್ನತೆಯೇ ಅವರ ಸಾಹಿತ್ಯ ವಿಮರ್ಶನೆಯನ್ನು ರೂಪಿಸಿತು ಎಂದು ಭಾವಿಸಿದರೆ ತಪ್ಪಾಗದು. ರಾಮಾಯಣದ ಸೀತೆಯನ್ನೋ ಭಾರತದ ಕುಂತಿಯನ್ನೋ ದ್ರೌಪದಿಯನ್ನೋ ಕುರಿತು ಮಾತನಾಡತೊಡಗಿದರೆ ವಿ.ಸೀ. ಅವರ ಕಣ್ಣು ತೇವವಾಗುತ್ತಿತ್ತು, ಗಂಟಲು ಗದ್ಗದವಾಗುತ್ತಿತ್ತು.

ವಿ.ಸೀ. ಸ್ವಭಾವತಃ ಒಬ್ಬ ಅತ್ಯಂತ ಸುಸಂಸ್ಕೃತ ವ್ಯಕ್ತಿ. ಸುಸಂಸ್ಕೃತಿಗೆ ಆದರ್ಶವೆಂದು ತೋರ್ಬೆರಳಿನಿಂದ ನಾವು ತೋರಿಸಬಹುದಾದವರು. ಅವರ ವಿದ್ವತ್ತು, ಬೋಧನರೀತಿ, ಸಾಹಿತ್ಯಸೃಷ್ಟಿ ಮೊದಲಾದವೆಲ್ಲ ಆ ಮೂಲ ಸಂಸ್ಕೃತಿಯ ಸಹಜ ವಿಕಾಸಗಳು.

"ನಿಮ್ಮ 'width' ಯಾರಿಗಿದೆ ಸೀತಾರಾಮಯ್ಯ!" ಎಂದು ಬಿ. ಎಂ. ಶ್ರೀ.ಯವರೂ ಅನೇಕ ಸಲ ಹೇಳುತ್ತಿದ್ದರಂತೆ.

ಸೌಜನ್ಯದ ಪ್ರಕಟಣೆಯಲ್ಲಿ ಅವರು ಸ್ವತಃ ಶ್ರಮವನ್ನು ಲೆಕ್ಕಿಸಿದವರಲ್ಲ. ೧೯೭೦ರ ಅಂತ್ಯದಲ್ಲಿ ಆರೋಗ್ಯ ಅಷ್ಟೇನು ಸಮರ್ಪಕವಾಗಿರಲಿಲ್ಲ. ಆದರೂ ಉತ್ಸಾಹದಿಂದ 'ಅಕ್ಷರ

ಹೊಸಕಾವ್ಯ' ಬಿಡುಗಡೆಯ ಸಮಾರಂಭಕ್ಕೆ ಹೋಗಿ ಬಂದರು. ಅದರಿಂದ ಖುಷಿಪಟ್ಟರು ಕೂಡ. "Younger people are carrying on the tradition" ಎಂದು ಸಂತೋಷ ವ್ಯಕ್ತಮಾಡಿದರು.

* * *

ವಿ.ಸೀ. ಅವರ ಬಗ್ಗೆ ತುಂಬ ಗೌರವ ತಳಿದಿದ್ದ ಎಚ್. ವಿ. ಆರ್. ಅಯ್ಯಂಗಾರ್ ಅವರು (ರಿಜರ್ವ್ ಬ್ಯಾಂಕಿನ ಗವರ್ನರ್ ಆಗಿದ್ದವರು) ಹೇಳಿದ "The fates have not dealt too kindly with V. Sitaramiah" ಎಂಬ ಮಾತು ವಿ.ಸೀ. ಅವರ ಜೀವನದ ವ್ಯಾವಹಾರಿಕ ಮುಖದ ಮೇಲಣ ಸಂಗ್ರಹ ವ್ಯಾಖ್ಯೆ.

ಒಮ್ಮೆಯಾವುದೋ ಊರಿಗೆ ಹೋಗಿ ವಿ.ಸೀ. ಅವರು ದೇಶದ ಸಂಪದಭಿವೃದ್ಧಿಯನ್ನು ಕುರಿತು ಭರ್ಜರಿಯಾಗಿ ಭಾಷಣ ಮಾಡಿದರು. ಅವರ ತತ್ತ್ವಪ್ರಣಾಳಿಕೆಯಲ್ಲಿ ಕೋಟಿ ಅರ್ಬುದ ನ್ಯರ್ಬುದಗಳಷ್ಟು ಹಣ ಲೀಲಾಜಾಲವಾಗಿ ಸುಳಿದಾಡಿತ್ತು. "ಒಂದು ದೇಶದ ಆಧುನಿಕೀಕರಣಕ್ಕೆ ಒಂದೆರಡು ಬಿಲಿಯ ರೂಪಾಯಿ ಏನು ಮಹಾ?" ಎಂದೆಲ್ಲಾ ವಾದ ಹೇಳಿದ್ದರು.

ಉಪನ್ಯಾಸವಾದ ಮೇಲೆ ವಿ.ಸೀ.ಯವರನ್ನು ಪಕ್ಕದಲ್ಲಿದ್ದ ಸುಬ್ಬರಾಯರೋ, ಶ್ರೀಕಂಠಯ್ಯನವರೋ ಕೇಳಿದರು: "ಉದ್ದುದ್ದ ಮಾತನ್ನೇನೋ ಆಡಿದಿರಿ. ಈಗ ನಿಮ್ಮ ಜೇಬಿನಲ್ಲಿ ಎಷ್ಟು ಹಣ ಇದೆ?"

ವಿ.ಸೀ.: "ನೀವು ದಯಮಾಡಿ ಬಸ್‌ಚಾರ್ಜ್ ಕೊಟ್ಟರೆ ವಾಪಸ್ ಹೋಗಿ ಮರ್ಯಾದೆಯಾಗಿ ಊರು ಸೇರಿಕೊಳ್ಳುತ್ತೇನೆ."

ಇದು ವಿ.ಸೀ. ಅವರ ಹಣ ಪ್ರಪಂಚ.

ಅಕ್ಕಿ ಬೇಳೆಗೆ ಪರದಾಟವಾದರೂ ಲಂಡನ್ನಿನಿಂದ 'ಇಕಾನಮಿಸ್ಟ್' ಪತ್ರಿಕೆಯ ಏರ್‌ಮೈಲ್ ಆವೃತ್ತಿ ತರಿಸುವುದನ್ನು ವಿ.ಸೀ. ನಿಲ್ಲಿಸರು. ಭಾರತೀಯ ಪತ್ರಿಕೆಗಳ ಜೊತೆಗೆ 'ಲಿಸ್ನರ್,' 'ಟೈಮ್ಸ್ ಲಿಟರರಿ ಸಪ್ಲಿಮೆಂಟ್,' 'ನ್ಯೂ ಸ್ಟೇಟ್ಸ್‌ಮನ್' – ಇವೆಲ್ಲಾ ವಿ.ಸೀ. ಅವರಿಗೆ ಉಚ್ಛ್ವಾಸ ನಿಃಶ್ವಾಸಗಳಿದ್ದಂತೆ ಪರಮಾವಶ್ಯಕ ಸಾಮಗ್ರಿ.

ದುಂದುಗಾರಿಕೆಯ ಪ್ರಸಂಗವೇನಾದರೂ ನಡೆದಾಗ "ನೀವು ಇಕನಾಮಿಕ್ಸ್‌ನಲ್ಲಿ ಮೆಡಲಿಸ್ಟ್" ಇತ್ಯಾದಿಯಾಗಿ ಸೂಚಕವಾಗಿ ಚುಚ್ಚು ಮಾತುಗಳನ್ನಾಡುವುದು ನನ್ನ ರೂಢಿ. "You are a killjoy" "ಏನು arch cynics ಅಪ್ಪ" – ಎಂದು ವಿ.ಸೀ. ಅವರ ಪ್ರತಿಕ್ರಿಯೆ.

ವಿ.ಸೀ. ಅವರ ಇಂಥ ಖಿಯಾಲಿಗಳನ್ನು ಬಲ್ಲ ಮಿತ್ರವರ್ಗಕ್ಕೆ ಒಂದು ಪ್ರಸಂಗ ಹಾಸ್ಯಾವಕಾಶವಾಯಿತು. ಒಬ್ಬ ಸ್ನೇಹಿತರು ನನ್ನನ್ನು ಕೇಳಿದರು:

ಅವರು: "Did you hear the joke of the year?"

ನಾನು: "ಇಲ್ಲವಲ್ಲ? ಏನು?"

ಅವರು: "V. Si. is delivering a lecture tomorrow. Guess what is the subject?"

ನಾನು: "ಏನು?"

ಅವರು:"Simple living!"

ದಿಲ್ಲಿಯಲ್ಲೋ ಮುಂಬಯಿಯಲ್ಲೋ ಯಾವುದೋ ಸಮ್ಮೇಳನವೆನ್ನಿ. ಅದರಲ್ಲಿ ಭಾಗವಹಿಸುವವರಿಗೆ ಮಾರ್ಗವ್ಯಯ ಕೊಡಲಾಗುವುದೆಂದು ಹಲವೇಳೆ ಏರ್ಪಾಟಾಗಿರುತ್ತದೆ. ಅಂಥ ಅನುಕೂಲ ಏನೂ ಇರಲಿ, ಇಲ್ಲದಿರಲಿ; ಪರಸ್ಥಳಕ್ಕೆ ಹೋಗುವುದೆಂದರೆ ವಿ.ಸೀ.ಗೆ ಎಳೆಯ ಮಕ್ಕಳಂತೆ ಆಸೆ, ಉತ್ಸಾಹ. ಇನ್ನು ರೈಲುಚಾರ್ಜು ಕೊಡುತ್ತೇವೆಂದರೆ ಸ್ವರ್ಗಕ್ಕೆ ಎರಡೇ ಮೆಟ್ಟಿಲು ಉಳಿದಂತೆ. ತತ್‌ಕ್ಷಣ ರಾಮ್‌ಮೋಹನ್ ಕಂಪೆನಿಗೆ ಯಾರನ್ನಾದರೂ ಅಟ್ಟಿ ಏರೋಪ್ಲೇನಿಗೆ ರಿಟರ್ನ್ ಟಿಕೆಟ್ ಬುಕ್ ಮಾಡಿಸುತ್ತಿದ್ದರು. ಸಮ್ಮೇಳನಕ್ಕೆ ಹೋಗಿ ಹಿಂದಿರುಗುವಷ್ಟರೊಳಗಾಗಿ ಸಂಸ್ಥೆಯವರು ಇವರಿಗೆ ಕೊಡುತ್ತೇವೆಂದು ಹೇಳಿದ್ದದ್ದರ ಮೂರುಪಟ್ಟು ಹಣ ವ್ಯಯವಾಗಿರುತ್ತಿದ್ದುದು ಅಪರೂಪವಲ್ಲ.

* * *

ತಮ್ಮ ಪುಸ್ತಕಗಳು ಅಂದವಾಗಿ ಮುದ್ರಿತವಾಗಬೇಕೆಂದು ವಿ.ಸೀ.ಯವರ ಚಪಲ. "ಇಲ್ಲಿ ಮೊರಾಕ್ಕೊ ಬೈಂಡಿಂಗ್ ಯಾರು ಮಾಡುತ್ತಾರೆ? ವೆಲ್ಲಂ ಬೈಂಡಿಂಗ್ ಯಾರಾದರೂ ಮಾಡಿಕೊಟ್ಟಾರೆ?" ಎಂದೆಲ್ಲ ವಿಚಾರಿಸುತ್ತಿದ್ದರು.

ಲೆಟರ್‌ಹೆಡ್ ಮಾಡಿಸುವುದರಲ್ಲಿ ವಿ.ಸೀ. ಅವರಿಗೂ ಪಿ. ಶ್ರೀನಿವಾಸರಾಯರಿಗೂ ಹಲವಾರು ವರ್ಷ ಪೈಪೋಟಿ ನಡೆಯುತ್ತಿತ್ತು. ಅವರು ಬಾಂಡ್ ಪೇಪರಿನಲ್ಲಿ ಮಾಡಿಸಿದರೆ ಇವರು ಪಾರ್ಚ್‌ಮೆಂಟ್ ಪೇಪರಿನಲ್ಲಿ, ಅವರು ಉದ್ದುದ್ದವಾಗಿ ಮಾಡಿಸಿದರೆ ಇವರು ಅಗಲಗಲವಾಗಿ –ಹೀಗೆ.

ತಮ್ಮ ಎಷ್ಟೋ ಕೃತಿಗಳು ಮುದ್ರಣ ಕಾಣದೆ ನಾಲ್ಕಾರು ವರ್ಷ ಕಪಾಟಿನಲ್ಲಿ ನಿದ್ರಿಸಬೇಕಾಗಿಬಂದದ್ದು ವಿ.ಸೀ. ಅವರ ದುರದೃಷ್ಟ. ಗ್ರಂಥ ಪ್ರಕಟಣೆಯಿಂದ ಅವರಿಗೆ ನಷ್ಟವಾದ ಸಂದರ್ಭಗಳೇ ಹೆಚ್ಚು. ಒಂದೆರಡು ಸಂದರ್ಭಗಳಲ್ಲಿ ಪ್ರಕಟಣೆಯ ಖರ್ಚನ್ನು ಹೊತ್ತುಕೊಳ್ಳುವುದಾಗಿ ಮಾತುಕೊಟ್ಟ ಪ್ರಕಾಶಕರು ಗ್ರಂಥ ಮುದ್ರಣವಾದ ಮೇಲೆ ಜಾರಿಕೊಳ್ಳಲು ಪ್ರಯತ್ನಿಸಿ, ಮುದ್ರಣದ ಬಿಲ್ ಕೊಡುವ ಬಗೆ ಹೇಗೆಂದು ವಿ.ಸೀ. ನಿದ್ದೆಕೆಟ್ಟದ್ದೂ ಉಂಟು.

ಅವರ ತುಂಬ ಪ್ರಖ್ಯಾತ ಪದ್ಯಸಂಕಲನಗಳು ಕೂಡ ಪುನರ್ಮುದ್ರಣ ಕಾಣಲು ಹಲವು ದಶಕಗಳೇ ಬೇಕಾದವು.

ವಿ.ಸೀ. ಅವರ ಗ್ರಂಥಗಳನ್ನು ಪ್ರಕಟಣೆ ಮಾಡಿದವರು ಅವರಿಗೇ ಒಂದು ಪ್ರತಿಯನ್ನು ಕಳಿಸದಿರುವ ಸಂದರ್ಭಗಳೂ ಉಂಟು. ಸರ್ಕಾರದ ಯಾವುದೋ ಇಲಾಖೆ ವಿ.ಸೀ.ಯವರಿಂದ ಗ್ರಂಥವೊಂದನ್ನು ಬರೆಯಿಸಿತು. ಮೂರು ನಾಲ್ಕು ವರ್ಷಗಳಾದ ಮೇಲೆ, ಬಳಿಪೇಟೆಯ ಯಾವುದೋ ಅಂಗಡಿಯಲ್ಲಿ ನಾನು ಅಕಸ್ಮಾತ್ ಅದರ ಪ್ರತಿಗಳನ್ನು ನೋಡಿದೆ. ನಾನೇ ಆ ಬರಹದಲ್ಲಿ ನೆರವಾಗಿದ್ದುದರಿಂದ ಅದು ನನ್ನ ಗಮನ ಸೆಳೆಯಿತು. ಗ್ರಂಥ ಪ್ರಕಟವಾಗಿದ್ದ ಸಂಗತಿ ವಿ.ಸೀ. ಅವರಿಗೆ ತಿಳಿದದ್ದು ಆಗಲೇ.

ಒಂದಾನೊಂದು ಪುಸ್ತಕವನ್ನು ವಿ.ಸೀ. ಪುನರ್ಮುದ್ರಣಕ್ಕಾಗಿ ಪರಿಷ್ಕರಿಸಬೇಕಾಗಿತ್ತು. ಆದರೆ ಅವರಲ್ಲಿ ಒಂದು ಪ್ರತಿಯೂ ಇರಲಿಲ್ಲ. ಅವರ ಮಗ ಸತ್ಯಣ್ಣನನ್ನು ಕರೆದು ಅಂಗಡಿಗಳಲ್ಲಿ ತಲಾಷ್ ಮಾಡಲು ಹೇಳಿದರು. ಎರಡು ದಿನಗಳ ನಂತರ ಸತ್ತಿ ಹೇಳಿದ:

"ಎಲ್ಲೂ ಸಿಕ್ಕಲಿಲ್ಲ ಮಾವಯ್ಯ. ಎಲ್ಲ ಅಂಗಡಿಗಳಲ್ಲೂ ಹುಡುಕಿದೆ."

"ಗುಜರಿಗಳಲ್ಲೂ ಇಲ್ಲವೇನೋ? ನನ್ನ ಪುಸ್ತಕಗಳನ್ನು ಮನೆಯಲ್ಲಿ ಯಾರು ಜೋಪಾನ ಮಾಡುತ್ತಾರೆ? ಗುಜರಿಗಳಲ್ಲಿ ಇರಲೇಬೇಕು."

"ಮೊದಲು ಕೊಂಡುಕೊಂಡಿದ್ದರೆ ತಾನೆ ಮಾವಯ್ಯ, ಗುಜರಿಗೆ ಹಾಕುವುದಕ್ಕೆ? ಮೊದಲೇ ಕೊಂಡುಕೊಳ್ಳದಿದ್ದರೆ?"

ವಿ.ಸೀ. ಅವರು ಸತ್ತಿಯ ಉತ್ತರವನ್ನು ಜ್ಞಾಪಿಸಿಕೊಂಡು ನಾಲ್ಕಾರು ದಿನಗಳವರೆಗೆ ನಗುತ್ತಿದ್ದರು.

* * *

೧೯೭೧ರ ಒಂದು ಘಟನೆ. ಒಮ್ಮೆ ವಿ.ಸೀ. ತಮ್ಮದೇ ಹಳೆಯ ಬರಹಕ್ಕಾಗಿ ಹುಡುಕಾಟ ನಡೆಸಿದ್ದರು. ತಮ್ಮ ಎಡಗಡೆಯ, ಹಿಂದಿನ ಕಪಾಟುಗಳನ್ನೆಲ್ಲ ಜಾಲಾಡಿದ್ದುದನ್ನು ನೋಡಿದೆ. ಯೋಗಾಯೋಗದಿಂದ–ಆ ಮೂಲಬರಹವನ್ನು ಅವರು ನನ್ನಿಂದ ಮಾಡಿಸಿದ್ದುದರಿಂದ ನನ್ನಲ್ಲಿ ಒಂದು ಪ್ರತಿ ಉಳಿದಿತ್ತು. ಅದನ್ನು ಒಯ್ದು ಅವರಿಗೆ ನೀಡಿದೆ. ಅವರು ಖುಷಿಪಟ್ಟು ಉದ್ಗರಿಸಿದರು:

"Thank you! what nuggets may have been lost but for your thoughtfulness!"

ಇಂಥ ಘಟನೆಗಳನ್ನು ವಿ.ಸೀ. ತಾವೇ ನೆನಪು ಮಾಡಿಕೊಂಡು ತಾವು ನಕ್ಕು ನಮ್ಮನ್ನೂ ನಗಿಸುತ್ತಿದ್ದರು. ತಮ್ಮನ್ನು ತಾವೇ ವಿಶ್ಲೇಷಿಸಿಕೊಂಡು ನಗುವ ಸಾಮರ್ಥ್ಯ ಅವರಿಗೆ ದೇವರು ಕೊಟ್ಟಿದ್ದ ದೊಡ್ಡ ವರ. ಅವರು ಜೀವನದ ಅನೇಕ ಏರುಪೇರುಗಳನ್ನು ಸಹಿಸಲಾಗಿದ್ದುದು ಈ ಬಲದಿಂದ.

ಅಡಿಗೆಮನೆಯ ಮೂಲೆಯಲ್ಲಿ ಬೆಚ್ಚಗೆ ಕುಳಿತು ತಾವು ಕಾಣದ, ಕೇಳದ ಯುದ್ಧಾದಿ ಸಂದರ್ಭಗಳನ್ನು ವರ್ಣಿಸುವ ಕವಿಗಳ ಅವಾಸ್ತವ ನಿರ್ಮಿತಿಗಳನ್ನೂ–ಕೂರಸಿಯ ಝಳಪನ್ನೂ ರಕ್ತದೋಕುಳಿಯನ್ನೂ–ವಿ.ಸೀ. ಗೋಖಲೆ ಸಂಸ್ಥೆಯ ಒಂದು ಉಪನ್ಯಾಸದಲ್ಲಿ ಪ್ರಸ್ತಾವಿಸಿ, ಒಂದು ಉದಾಹರಣೆಯನ್ನು ಹೇಳಿ ಸಭಿಕರಲ್ಲಿ ನಗುವಿನ ಲಹರಿ ಗಳನ್ನೆಬ್ಬಿಸಿದರು. ನಗು ಕೊಂಚ ಅಡಗಿದ ಮೇಲೆ ಹೇಳಿದರು ವಿ.ಸೀ.:

"I wrote these lines myself, thirty years ago!"

ಆಗ ಹೊರಟ ನಗುವಿನ ಹೊಳೆ ಮೊದಲಿನದನ್ನು ಮೀರಿಸಿತು.

ವಿ.ಸೀ. ಅವರಿಗೆ ಹೆಜ್ಜೆಹೆಜ್ಜೆಗೂ ಸಂದೇಹಗಳು. "ಹೀಗೆ ಹೇಳಿದರೆ ಈ ಪ್ರಶ್ನೆ ಏಳುತ್ತದೆ," "ಹಾಗೆ ಹೇಳಿದರೆ ಆ ಪ್ರಶ್ನೆ ಏಳುತ್ತದೆ" ಎಂಬ ಸಂದಿಗ್ಧತೆ ಅವರ ಮಾತಿನಲ್ಲೂ ಬರಹದಲ್ಲೂ ತುಂಬಿರುತ್ತದೆ. ಇದಕ್ಕೆ ಡಿ.ವಿ.ಜಿ.ಯವರ ಪ್ರತಿಕ್ರಿಯೆ:

"ಪ್ರಶ್ನೆಗಳೀನೋ ಎದ್ದುಬಿಡುತ್ತವೆ, ಸೀತಾರಾಮಯ್ಯ, ಆದರೆ ಉತ್ತರಗಳು ಎಳಬೇಕಲ್ಲ?"

ಹಾಗೆ ಪ್ರಶ್ನೆಯೆದ್ದ ಒಂದು ಸಂದರ್ಭ ನೆನಪಿಗೆ ಬರುತ್ತದೆ.

ವಿ.ಸೀ. ಯವರನ್ನು ಯಾವುದೋ ಸಾರ್ವಜನಿಕ ಕೂಟದಲ್ಲಿ ಸಂಧಿಸಿದ ಒಬ್ಬ ಮಹಾಶಯರು ಮಾರನೆಯ ದಿನ ಸಂಜೆ ನಡೆಯಲಿದ್ದ ಒಂದು ಗ್ರಂಥಪ್ರಕಟನ ಸಮಾರಂಭಕ್ಕೆ ಅವರನ್ನು ಕರೆದರು.

ಮಾರನೆಯ ದಿನ, ವಿ.ಸೀ.ಯವರನ್ನು ಸಂಶಯ ಪಿಶಾಚಿ ಹಿಡಿಯಿತು. ಬೆಳಗಿನಿಂದ ಒಂದೇ ಸಮನೆ ಚಿಂತಿಸಿದರು.

ಅಂತರ್ಧ್ವನಿ ೧: "ಎಲ್ಲಿಯೋ ಬೀದಿಯಲ್ಲಿ ಸಿಕ್ಕಿದಾಗ ಆತ ಕರೆದರೆ ನೀನು ಹೋಗಿಬಿಡುವುದೆ? ವಿಹಿತ ರೀತಿಯ ಆಹ್ವಾನವಿಲ್ಲದೆ ಏಕೆ ಹೋಗಬೇಕು?"

ಅಂತರ್ಧ್ವನಿ ೨: "ಗಣ್ಯರೆಲ್ಲ ಸೇರುವ ಆ ಸಂದರ್ಭಕ್ಕೆ ನೀನು ಹೋಗದಿದ್ದರೆ ನಷ್ಟ ನಿನಗೆ ತಾನೆ?"

ಅಂತರ್ಧ್ವನಿ ೩: "ನೀನು ಇನ್ನೂ ಚಲಾವಣೆಯಲ್ಲಿರುವ ನಾಣ್ಯ ಎಂದು ಜನರಿಗೆ ಗೊತ್ತಾಗಲು ಇದೊಂದು ಅವಕಾಶವಾಗುವುದಲ್ಲವೆ?"

ಇತ್ಯಾದಿ, ಇತ್ಯಾದಿ.

ಹೋಗುವುದು ಅನಾವಶ್ಯಕವೆಂದು ಕೆ. ಎಸ್. ನರಸಿಂಹಸ್ವಾಮಿಗಳೂ ನಾನೂ ಹೇಳಿದೆವು. ತಾತ್ಕಾಲಿಕವಾಗಿ ಹಾಗೇ ನಿರ್ಣಯವಾಯಿತು.

ಸಮಾರಂಭಕ್ಕೆ ಇನ್ನು ಅರ್ಧ ಗಂಟೆ ಉಳಿದಿದ್ದಾಗ ಥಟ್ಟನೆ ವಿ.ಸೀ. ಯವರ ನಿರ್ಣಯ ಟಾಂಗ್‌ಬಿರಾಂಗ್ ಆಯಿತು. ಧಿಗ್ಗನೆ ಎದ್ದು ನಿಂತು "ನಾನು ಹೋಗಿ ಬರುತ್ತೇನೆ" ಎಂದು ಸಿದ್ಧರಾದರು.

ಆಗ ಇನ್ನೊಂದು ಪ್ರಶ್ನೆ ಎದ್ದಿತು. ಕ್ಷೌರ ಮಾಡಿಕೊಳ್ಳಬೇಕೆ, ಬೇಡವೆ? ಸಮಾರಂಭಕ್ಕೆ ಪ್ರಮುಖ ವ್ಯಕ್ತಿಗಳು ಬರುತ್ತಾರಲ್ಲ? ಮತ್ತೆ ಜಿಜ್ಞಾಸೆ ಪ್ರಾರಂಭ. ಕ್ಷೌರಕರ್ಮ ಶುರು ಆಯಿತು. ಕೆಲವೇ ನಿಮಿಷಗಳು ಉಳಿದಿದ್ದವು. ಕ್ಷೌರ ಸಮರ್ಪಕವಾಗಿ ಆಗಲಿಲ್ಲ. ಕೈ ಆಯ ತಪ್ಪಿತು. ಬ್ಲೇಡು ತಗಲಿ ಬೆರಳುಗಳಿಂದ ರಕ್ತ ಬಂತು.

"ಇದು ಅಪಶಕುನ; ಹೋಗಬೇಡಿ ಮಾವಯ್ಯ" ಎಂದ, ಹಿರಿಯ ಮಗ ಕಿಟ್ಟಿ. ಕವಿಯೊಳು ಬಿತ್ತಿದನು ಭಯವ! ಕಿಟ್ಟಿ ಹೇಳಿದ್ದು, ಕೋತಿಗೆ ಇಂಗು ತಿನ್ನಿಸಿದಂತಾಯಿತು. ಸಾವಿರ ಕಾಲಿನ ಬಸವನಹುಳುವನ್ನು "ನೀನು ಯಾವ ಕಾಲನ್ನು ಮೊದಲು ಮುಂದಿಡುತ್ತೀ?" ಎಂದು ಕೇಳಿ ತಬ್ಬಿಬ್ಬು ಮಾಡಿದಂತಾಯಿತು.

ಅಂತೂ ಕಡೆಗೂ ಆಟೋರಿಕ್ಷಾ ಹತ್ತಿ ಹೊರಟೇ ಹೊರಟರು ದಿಗ್ವಿಜಯಕ್ಕೆ.

ಇಂಥ ಸಂದಿಗ್ಧಗಳು ವಿ.ಸೀ. ಅವರನ್ನು ಪದೇ ಪದೇ ಬಾಧಿಸುತ್ತಿದ್ದವು.

ವಿ.ಸೀ. ಅವರ ರಚನೆಗಳನ್ನೂ ಶೈಲಿಯನ್ನೂ ಟೀಕಿಸಿ ಕುಚೋದ್ಯ ಮಾಡುವುದು ಗೆಳೆಯ ಕೆ. ಎಸ್. ನರಸಿಂಹಸ್ವಾಮಿಗಳಿಗೂ ನನಗೂ ಬಹಳ ಇಷ್ಟವಾದ ಕೆಲಸ. ಒಂದು ಕವಿಸಮ್ಮೇಳನದಲ್ಲಿ ವಿ.ಸೀ., ಕೆ. ಎಸ್. ನ. ಇಬ್ಬರೂ ಪುರಂದರದಾಸರ ಮೇಲೆ ಕವಿತ್ವ

ಮಾಡಿ ಪತಿಸಿದರು. ಕೆ.ಎಸ್.ನ. ಉಪಾಯಗಾರರು; ಅವರ ಪದ್ಯದಲ್ಲಿ ಅರ್ಧಭಾಗ ದಾಸರದೇ ಮಾತುಗಳು ತುಂಬಿದ್ದವು. ವಿ.ಸೀ.ಯವರ ಕವನದಲ್ಲಿ ಆಶ್ಚರ್ಯ, ಅವಧಾರಣೆ, ಪ್ರಶ್ನೆಗಳ ಸುರಿಮಳೆ. ಮಾರನೆಯ ದಿನ ವಿಮರ್ಶೆ.

ವಿ.ಸೀ.: "You virtually put across Purandaradasa's lines as your own!"

ಕೆ.ಎಸ್.ನ: "ಪುರಂದರದಾಸರ ಮೇಲೆ ಪದ್ಯ ಬರೆಯಿರೆಂದರೆ ನೀವು ಅವರಿಗೇ ಪ್ರಶ್ನೆಗಳನ್ನು ಹಾಕಿಬಿಟ್ಟಿದ್ದೀರಲ್ಲ? "ಏನು," "ಏಸು"– ಎಂದೆಲ್ಲ ಝಾಡಿಸಿಬಿಟ್ಟಿದ್ದೀರಿ– ಏಸುವನ್ನೂ ಪದ್ಯದೊಳಕ್ಕೆ ತಂದುಬಿಟ್ಟಿದ್ದೀರಿ!"

ಅಲ್ಲಿಂದಾಚೆಗೆ ವಿ.ಸೀ.ಯವರು ಹೊಸದಾಗಿ ಏನು ಬರೆದರೂ, "ಅದರಲ್ಲಿ 'ಏಸು' ಬಂದಿದೆ ತಾನೆ?" ಎಂದು ಕೇಳುತ್ತಿದ್ದರು, ಕೆ.ಎಸ್.ನ.

ವಿ.ಸೀ.ಯವರ ಕಾಲ್ಪನಿಕತೆಗೂ ದಿನದಿನದ ಪ್ರಪಂಚದ ಒರಟುತನಕ್ಕೂ ಇರುವ ತರಂಗಾಂತರ ಭೇದವನ್ನು ಈ ಆಪಾತ ಆಭಾಸಗಳೂ ಟೀಕೆಗಳೂ ತೋರಿಸುತ್ತಿದ್ದವು. ವಿ.ಸೀ. ಯವರ ವ್ಯಕ್ತಿತ್ವಕ್ಕೆ ವಿಶೇಷ ಮೆರುಗು ಕೊಟ್ಟಿದ್ದುದೇ ಈ ಕಲ್ಪನಾವಿಲಾಸ. "ಒಂಟೆ ಬೇಕೆಂದರೆ ಅದರ ಡುಬ್ಬ ಜೊತೆಯಲ್ಲಿಯೇ ಇರುವುದಲ್ಲವೆ?" ಎಂದು ಅವರೇ ಆಗಾಗ ಹೇಳುತ್ತಿದ್ದರು.

ವಿ.ಸೀ. ಕಾಯಿಲೆ ಬಿದ್ದು ಆಸ್ಪತ್ರೆ ಸೇರಿದ್ದಾಗ ಅವರನ್ನು ನೋಡಲು ಹೋದೆ. ದೇಹದ ಒಂದು ಭಾಗದ ಎಕ್ಸ್‌ರೇ ತೆಗೆಯಲಾಗಿತ್ತು. ಆ ನೆಗೆಟಿವನ್ನು ಪರಿಶೀಲಿಸುತ್ತಿದ್ದಾಗ ವಿ.ಸೀ. ಅಂದರು: "ಇದೇನು ಪ್ರಾರಬ್ಧ! ಒಂದು ಒಳ್ಳೆಯ ಪೈಂಟಿಂಗ್ ಆದರೂ ತಂದುಕೊಟ್ಟರೆ ನೋಡಿ ಸಂತೋಷಪಡಬಹುದು. ಇದರಲ್ಲೇನಿದೆ ಡೆಪ್ತ್, ಫಾರ್ಮ್, ಕಾನ್‌ಫಿಗರೇಷನ್, ಲೆವೆಲ್ಸ್ – ಏನಿದೆ ಇದರಲ್ಲಿ? ನಮ್ಮ ಆಕ್ಯುಪೇಷನ್ ಬಿಟ್ಟರೆ ಬೇರೆ ಯಾವುದರಲ್ಲಿದೆ ಅಷ್ಟು ಸಂತೋಷ? ಒಳ್ಳೇ ಪದ್ಯ ಓದಬಹುದು, ಸೌಂದರ್ಯ ನೋಡಬಹುದು, ಸಂಗೀತ ಕೇಳಬಹುದು..... What a blessing!"

ಈ ಮನೋಭಾವವಿರುವವರನ್ನು ಮೆಚ್ಚದಿರುವುದು ಹೇಗೆ?

* * *

ವಿ.ಸೀ.ಯವರ ಮನಸ್ಸಿನ ನಿರ್ಮಲಾನಂದವೂ ತೀವ್ರ ಸಂವೇದನಶಕ್ತಿಯೂ ನಮ್ಮೆಲ್ಲನೇಕರ ಪಾಲಿಗೆ ಹಬ್ಬವಾಗಿತ್ತು, ಸಂಸ್ಕಾರಕಾರಿಯಾಗಿತ್ತು. ಅವರೊಡನೆ ಸರಸ ಸಲ್ಲಾಪದಲ್ಲಿ ನಾನು ಕಳೆದ ದಿನಗಳು ಲೆಕ್ಕವಿಲ್ಲದಷ್ಟು. ಅವರ ಕಾಂಟ್ರಡಿಕ್‌ಶನ್ಸ್–ಸ್ವವಿರೋಧವೆಂದು ತೋರುವ ಮನೋಭಂಗಿಗಳು ಅವರ ವ್ಯಕ್ತಿತ್ವದ ಸೊಗಸನ್ನು ಹೆಚ್ಚಿಸಿದ್ದವು, ಅವರನ್ನು ಪ್ರಿಯರನ್ನಾಗಿಸಿದ್ದವು, ಅವರ ಸಹವಾಸವನ್ನು ಉತ್ಸವವೆನಿಸಿದ್ದವು.

ವಿ.ಸೀ.ಯವರ ಕಾಲ್ಪನಿಕತೆ ಅವರ ವ್ಯವಹಾರಗಳ ಮೇಲೂ ಪ್ರಭಾವ ಬೀರುತ್ತಿದ್ದುದುಂಟು. ಒಟ್ಟನ್ನೂ ಸಗಟನ್ನೂ ಗ್ರಹಿಸುವ ಆತುರದಲ್ಲಿ ಅಂಕಿ ಅಂಶಗಳು, ಲೆಕ್ಕಾಚಾರ, ವಿವರ, ತಾರೀಖು, ದಾಖಲೆ– ಮುಂತಾದವು ಅವರ ಹಿಡಿತಕ್ಕೆ ಸಿಕ್ಕುತ್ತಿರಲಿಲ್ಲ.

ಒಮ್ಮೆ ಯಾರಿಗೋ ಕಾಗದ ಬರೆದರು, ಬಹಳ ಮುಖ್ಯವಾದ ಯಾವುದೋ ವಿಷಯವನ್ನು ಕುರಿತು. ಉತ್ತರಕ್ಕಾಗಿ ಕಾಯುತ್ತಾ ಕುಳಿತರು. ಹಲವಾರು ದಿನಗಳಾದರೂ ಜವಾಬು ಬರಲಿಲ್ಲ.

ಏಳಾರು ತಿಂಗಳಾದ ಮೇಲೆ ಎಂದೋ ವಿ.ಸೀ. ತಮ್ಮ ಸೂಟ್‌ಕೇಸಿನಲ್ಲಿ ಏನನ್ನೋ ಹುಡುಕುತ್ತಿದ್ದಾಗ ತಾವು ಬರೆದ ಕಾಗದವೇ ಕೈಗೆ ಸಿಕ್ಕಿತು! ಕಾಗದದ ವಿಷಯದ ಮುಖ್ಯತೆ ಅವರ ಮನಸ್ಸಿನ ವಿವರ ವಿವರವನ್ನೂ ಆವರಿಸಿ, ಬರೆದ ಕಾಗದವನ್ನು ಪೋಸ್ಟ್ ಮಾಡುವ ಕ್ಷುದ್ರಕಾರ್ಯವನ್ನು ಮರೆಯಿಸಿತ್ತು.

ರೋಟರಿ ಸಭೆಯೊಂದರಲ್ಲಿ – ವಿ.ಸೀ.ಯವರೂ ಅಲ್ಲಿದ್ದರು– ಕಾಗದಗಳನ್ನು ಅಂಚೆ ಇಲಾಖೆ ಸರಿಯಾಗಿ ರವಾನಿಸುತ್ತಿಲ್ಲವೆಂದು ಯಾರೋ ದೂರು ಮಾಡಿದಾಗ ಆಗಿನ ಅಂಚೆ ಇಲಾಖೆಯ ಪ್ರಮುಖ ಸಾರಂಗಪಾಣಿ ಹೇಳಿದರು:

"Well, unless you post the letters, it would be rather difficult for us to deliver them, you know!"

ವಿವರಾಂಶವನ್ನು ಗಮನಿಸದೆ ಹೋದ ಕಾರಣ, ಕನ್ನಡದಲ್ಲಿ ಬರೆಯಬೇಕೆಂದು ಪ್ರಕಾಶಕರು ನಿರೀಕ್ಷಿಸಿದ್ದ ಒಂದು ೨೫೦ ಪುಟದ ಪುಸ್ತಕವನ್ನು ವಿ.ಸೀ. ಇಂಗ್ಲಿಷಿನಲ್ಲಿ ಬರೆದಿದ್ದರು.

ನಮ್ಮಿಬ್ಬರಲ್ಲಿ ಪದೇ ಪದೇ ವಾದಕ್ಕೆ ವಿಷಯವಾಗುತ್ತಿದ್ದವು, ಶಬ್ದಪ್ರಯೋಗಗಳು, ಇಂಗ್ಲಿಷಿನ ಉಚ್ಚಾರಣೆ, ಇತ್ಯಾದಿ. ನಾನು 'ಹ್ಯಾರಸ್' ಎಂದರೆ ಅವರು 'ಹರಾಸ್' ಎನ್ನುವರು. ನಾನು 'ಎಂಬ್ಯಾರಸ್' ಎಂದರೆ ಅವರು 'ಎಂಬರಾಸ್' ಎನ್ನುವರು. ನಿಘಂಟುವನ್ನು ನೋಡಿದ ಮೇಲೂ ವಿಷಯ ಬಗೆಹರಿಯುತ್ತಿರಲಿಲ್ಲ; ವಿ.ಸೀ. ನಿಘಂಟು ವಿನಿಂದಾಚೆಗೆ ನೆಗೆಯುತ್ತಿದ್ದರು. "ಈ ಮಾತಿನ ಅರ್ಥ ಶಕ್ತವಾಗಿ ಬರಬೇಕಾದರೆ ಹೀಗೇ ಉಚ್ಚರಿಸಬೇಕು" ಎಂದೆಲ್ಲ 'ವಾದ' ಮಾಡುವರು. ಅವರ ಈ ನೆಗೆತಗಳು ಹೊಮ್ಮಲಿ ಎಂದೇ ನಾವು ಅವರನ್ನು ಕೆಣಕುತ್ತಿದ್ದುದು.

ನನ್ನ ಯಾವುದೋ ತಪ್ಪನ್ನು ಗುರುತಿಸುವ ಸಂದರ್ಭ ಬಂದಾಗ ಅವರು "ಈಗ ನೀವು ಸಿಕ್ಕಿಬಿದ್ದಿರಿ! ಮೊನ್ನೆಯ ಲೆಕ್ಕ ಸರಿಹೋಯಿತು!" ಎಂದು ಎಳೆವಯಸ್ಸಿನವರಂತೆ ನಗೆಯಾಡುತ್ತಿದ್ದರು. ಒಮ್ಮೆ ಅವಸರದಲ್ಲಿ ಕಾಲಿದಾಸನಿಗೆ ಬದಲಾಗಿ ಭವಭೂತಿ ಎಂದು ಬರೆದಿದ್ದೆ. "Now I have caught you on the lip!" ಎಂದರು.

ಇನ್ನೊಮ್ಮೆ ಅಭಿನವಕಾಲಿದಾಸ ಬಸವಪ್ಪಶಾಸ್ತ್ರಿಗಳ ಶಾಕುಂತಲ ಅನುವಾದದ ಬಗ್ಗೆ ಶ್ಲಾಘನೆಯ ಮಾತಾಡಿದೆ. "ಅದು ತುಂಬ ಪ್ರಾಮಾಣಿಕ ಅನುವಾದ" ಎಂದೆ.

ವಿ.ಸೀ. ಥಟ್ಟನೆ ನಕ್ಕು ಪ್ರತಿಕ್ರಿಯೆ ಹೇಳಿದರು: "Now you are educating me! ಪ್ರಾಮಾಣಿಕತೆ ಎನ್ನುವುದು literary criterion ಆದದ್ದು ಯಾವಾಗ?" ಎಂದು ಪ್ರಶ್ನೆಯನ್ನೆತ್ತಿ ವ್ಯಾಖ್ಯೆ ಮಾಡತೊಡಗಿದರು. ವಾಸ್ತವವಾಗಿ ಅವರೂ ಬಸವಪ್ಪಶಾಸ್ತ್ರಿಗಳ ಅನುವಾದವನ್ನು ಮೆಚ್ಚಿದ್ದವರೇ.

ಹೀಗೆ ಆದಾಗಲೆಲ್ಲ ವಿ.ಸೀ. ಅವರನ್ನು ಕೆದಕಿದ್ದು, ಕೆಣಕಿದ್ದು ನನಗೆ ಲಾಭಕಾರಿಯಾಗಿಯೇ ಪರಿಣಮಿಸುತ್ತಿತ್ತು.

ಕೆ. ಎಸ್. ನರಸಿಂಹಸ್ವಾಮಿಯವರೂ ನಾನೂ ವಿ.ಸೀ. ಅವರ ಸಹವಾಸಕ್ಕೆ ಹಾತೊರೆಯುತ್ತಿದ್ದುದು ಈ ಕಾರಣಗಳಿಂದ.

* * *

ಅವರೂ ನಾನೂ ಸಂಧಿಸಿದಾಗಲೆಲ್ಲ ಅವರು ನನ್ನನ್ನು "You are a fossil" "ನಿಮ್ಮವೇದ ಪುರಾಣ ಶಾಸ್ತ್ರಗಳೆಲ್ಲmumbo–jumbo" ಇತ್ಯಾದಿಯಾಗಿ ಟೀಕಿಸುವುದೂ, ನಾನು ಅವರ ವಾದವೆಲ್ಲ ಅಕಾಂಡತಾಂಡವವೆಂದು ಹೇಳುವುದೂ ನಮ್ಮಿಬ್ಬರಿಗೂ ರೂಢಿಯಾಗಿತ್ತು. ನನ್ನನ್ನು ಯಾರಿಗಾದರೂ ಪರಿಚಯ ಮಾಡಿಕೊಡಬೇಕಾದರೂ ಎಷ್ಟೋ ವೇಳೆ ವಿ.ಸೀ. "Here comes a grammarian. He stands for systems and codification. I am the opposite. I say, blast all your systems" ಎನ್ನುತ್ತಿದ್ದರು.

ಈ ವಾಗ್ವಾದವೆಲ್ಲ ನಗುವಿನಲ್ಲಿ ಪರ್ಯವಸಾನವಾಗುತ್ತಿದ್ದುದೂ ಮಾಮೂಲೇ. ಆದರೆ ವಿ.ಸೀ. ಅವರ ನೈತಿಕ–ಧಾರ್ಮಿಕ ಶ್ರದ್ಧೆ ಆಳವಾದದ್ದು. ಅವರ ನಾಸ್ತಿಕತೆ ಮೇಲುಮೇಲಿನದು. ಶಿವೆಯ ಲಾಂಛನವನ್ನಾಗಲಿ, ನಿತ್ಯಚಮನವನ್ನಾಗಲಿ, ಭೋಜನಪೂರ್ವದಲ್ಲಿ ಸಾದಿನ ಚುಕ್ಕೆಯಿಡುವುದನ್ನಾಗಲಿ, ಶಿವರಾತ್ರಿಯ ದಿನ ಸಕುಟುಂಬರಾಗಿ ಶಿವಾಲಯಕ್ಕೆ ಹೋಗಿ ದೇವರ ದರ್ಶನ ಮಾಡುವುದನ್ನಾಗಲಿ ವಿ.ಸೀ. ಎಂದಿಗೂ ಬಿಡಲಿಲ್ಲ. ಅವರ ಭಗವಚ್ಛ್ರದ್ಧೆ ಗಾಢವಾದದ್ದು.

ಒಂದು ದಿನ ರಾತ್ರಿ ಅವರು ಏಕೋ ತುಂಬಾ ನಿರುತ್ಸಾಹದ ಮನಃಸ್ಥಿತಿಯಲ್ಲಿದ್ದರು. ಸ್ವಲ್ಪ ಅನಾರೋಗ್ಯವೂ ಸೇರಿತ್ತು. ನಾನು ಕೊಠಡಿಯೊಳಕ್ಕೆ ಕಾಲಿಟ್ಟಾಗ ಅವರು ತಲೆಯ ಮೇಲೆ ಕೈಯಿಟ್ಟುಕೊಂಡು ಗೌಳಿಪಂತು ರಾಗದ "ತೆರ ತೀಯಗ ರಾದಾ" ಕೃತಿಯ ಕೊನೆಯ ಚರಣ "ವಾಗುರಮನಿ ತೆಲಿಯಕ ಮೃಗಗಣಮುಲು" ಗುನುಗಿಕೊಳ್ಳುತ್ತಿದ್ದರು. ಕಣ್ಣುಗಳಲ್ಲಿ ನೀರು. ನನ್ನನ್ನು ಕುಳಿತುಕೊಳ್ಳ ಹೇಳಿ, ತ್ಯಾಗರಾಜರ ಅಧ್ಯಾತ್ಮಿಕ ಸಮುನ್ನತಿಯನ್ನು ಪ್ರಶಂಸೆ ಮಾಡತೊಡಗಿದರು. ಕೆಲಕಾಲ ಮೌನವಾಗಿ ಕುಳಿತಿದ್ದೆವು. ಆಮೇಲೆ ವಿ.ಸೀ. ಹೇಳಿದರು:

"ಇವತ್ತು ಏಕೋ ಬೆಳಗಿನಿಂದ ಜೀವಕ್ಕೆ ತುಂಬ ಅಧೈರ್ಯ ಬಂದುಬಿಟ್ಟಿತ್ತು. ಮೂರುಹೊತ್ತೂ ಏನೇನೋ ನಾನ್ಸೆನ್ಸ್ ಮಾತನಾಡುತ್ತಿರುತ್ತೇನೆ– ದೈವನಿಂದೆ ಮಾಡುತ್ತಿರುತ್ತೇನೆ. ಮಧ್ಯಾಹ್ನ ತುಂಬ ನಿಶ್ಶಕ್ತಿ ತೋರಿತು, ಕುಸಿಯುವಂತಾಯಿತು. ಶಿವಾಪರಾಧ ಕ್ಷಮಾಪಣ ಸ್ತೋತ್ರ ಹೇಳಿಕೊಂಡೆ. ಇನ್ನೂ ಮನಸ್ಸು ಸ್ತಿಮಿತಕ್ಕೆ ಬರುತ್ತಿಲ್ಲ."

ಅಂದು ರಾತ್ರಿ ನನಗೂ ನಿದ್ರೆ ಬರಲಿಲ್ಲ.

* * *

ವಿ.ಸೀ.ಯವರನ್ನು ಕುರಿತು ಯೋಚಿಸ ಹೊರಟರೆ ಎಷ್ಟೋ ನೆನಪುಗಳು ಒತ್ತಿಕೊಂಡು ಬರುತ್ತವೆ. ಒಂದೆರಡನ್ನು ಬರೆದಿದ್ದೇನೆ. ವಿ.ಸೀ.ಯವರ ಬಗೆಗೆ ನನಗಿದ್ದ ಗೌರವ ಅಭಿಮಾನಗಳನ್ನು ಮಿತ್ರರೆಲ್ಲ ಬಲ್ಲರು. ವಿ.ಸೀ.ಯವರ ಸಹವಾಸಭಾಗ್ಯವನ್ನು ನನಗೆ ಕರುಣಿಸಿದುದಕ್ಕಾಗಿ ದೈವಕ್ಕೆ ನಾನು ಕೃತಜ್ಞತೆ ಸಲ್ಲಿಸದಿರಲಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ವಿ.ಸೀ.

ಜ್ಯೋತ್ಸ್ನಾ ಕಾಮತ್

ಮೂವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನವು ನಮ್ಮ ಊರಾದ ಕುಮಟಾದಲ್ಲಿ ೧೯೫೩ರ ಬೇಸಿಗೆಯಲ್ಲಿ ನಡೆಯಲಿದೆ ಎಂದು ವೃತ್ತ ಪತ್ರಿಕೆಗಳಲ್ಲಿ ಓದಿದಾಗ, ಕಾಲೇಜು ಮೆಟ್ಟಲು ಆಗಷ್ಟೇ ಹತ್ತಿದ್ದ ನಮಗೆಲ್ಲ ಭಾರೀ ಸಂತೋಷವಾಯಿತು. ಹೆಸರಾಂತ ಸಾಹಿತಿ ವಿ. ಸೀತಾರಾಮಯ್ಯನವರು ಅಧ್ಯಕ್ಷಸ್ಥಾನ ಅಲಂಕರಿಸಲಿದ್ದಾರೆಂದು ತಿಳಿದಾಗ ಇನ್ನೂ ಹೆಚ್ಚಿನ ಖುಷಿಗೆ ಕಾರಣ ಬೇರೆಯೇ ಆಗಿತ್ತು! ಅಂದಿನ ದಿನಗಳಲ್ಲಿ ಮೈಸೂರು ಮಹಾರಾಜರ ಆಶ್ರಯದಲ್ಲಿ ಹುಟ್ಟಿ ಬೆಳೆದು ಬರೆಯುತ್ತಿದ್ದ ಹೆಚ್ಚಿನ ಸಾಹಿತಿಗಳೆಲ್ಲ ಬ್ರಿಟಿಷ್ ಪ್ರಜೆಗಳಾಗಿದ್ದು ಮುಂಬೈ ಪ್ರಾಂತಕ್ಕೆ ಸೇರಿದ್ದವರನ್ನು, ಕನ್ನಡಿಗರಾಗಿದ್ದರೂ ತಮ್ಮವರೆಂದು ಭಾವಿಸುತ್ತಿರಲಿಲ್ಲ. ಆದರೆ ಕಾರಂತರಂತೆ ವಿ.ಸೀ. ಅವರು ಬರವಣಿಗೆಯ ಮೂಲಕವಾಗಲಿ, ಭೇಟಿಮಾಡಿ ಮಾತನಾಡಿದವರ ಮೂಲಕವಾಗಲಿ ನಾವು ತಿಳಿದುಕೊಂಡ ಹಾಗೆ, ನಮ್ಮವರೇ ಅನಿಸುತ್ತಿದ್ದರು. ಆದರೆ ಆ ತನಕ ಅವರ ದರ್ಶನ ಲಾಭ ಘಟಿಸಿರಲಿಲ್ಲ. ೧೯೨೬ರಷ್ಟು ಹಿಂದೆಯೇ ಪ್ರಕಟವಾದ ವಿ.ಸೀ. ಅವರ 'ಪಂಪಾಯಾತ್ರೆ' ಕಾಲು ಶತಕದ ಬಳಿಕವೂ ಜನಪ್ರಿಯವಾಗಿ ಮುಂದುವರೆದಿತ್ತು. ಪದ್ಯ ಪುಸ್ತಕದ ಅಂಗವಾಗಿಯೂ ಅದನ್ನು ಅಭ್ಯಸಿಸುವಂತೆ ಆದಾಗ ಹೊಸ ಅನುಭವದ ರಸದೂಟವಾಗಿತ್ತು. ಇದೊಂದು ಪ್ರವಾಸ ಕಥನ ಎಂದು ಪ್ರಸಿದ್ಧವಾಗಿದ್ದರೂ, ಪ್ರವಾಸಕಥನವು ಸಾಹಿತ್ಯ ಪ್ರಕಾರವಾಗಿ ಬೆಳೆಯದ ಆ ದಿನಗಳಲ್ಲಿ, ಶ್ರೇಷ್ಠ ದರ್ಜೆಯ ಪ್ರಬಂಧವೆಂದೂ ಹೆಚ್ಚಿನ ಮನ್ನಣೆಗೆ ಪಾತ್ರವಾಗಿತ್ತು.

ಸಾಹಿತ್ಯೋತ್ಸವದ ಸಿದ್ಧತೆ ನಡೆಯಿತು. ಕುಮಟೆಯ ಹೃದಯಸ್ಥಾನದಲ್ಲಿರುವ ಗಿಬ್ಬ್ ಹೈಸ್ಕೂಲಿನ ಕ್ರೀಡಾಂಗಣದಲ್ಲಿ ಭವ್ಯವಾದ ಮಂಟಪ ತಲೆಯೆತ್ತಿತು. ಊರಿನ ಖ್ಯಾತ ಕಲಾಕಾರರಾಗಿದ್ದ ಶ್ರೀ ರಾಮಚಂದ್ರ ಗುಡಿಗಾರರು ಹೊಯ್ಸಳ ಶೈಲಿಯ ಮಾದರಿಯಲ್ಲಿ ಸುಂದರವಾಗಿದ್ದ, ಭವ್ಯ, ಪ್ರವೇಶ ದ್ವಾರಗಳನ್ನು ನಿರ್ಮಿಸಿದರು. ಜಿಲ್ಲೆಯವರು ಉದಾರ ದೇಣಿಗೆಯಿತ್ತು ಪ್ರೋತ್ಸಾಹಿಸಿದರು. ಸಾರ್ವಜನಿಕ ಸಾರಿಗೆಯ ಬಸ್‌ಗಳಲ್ಲಿ, ಬಾಡಿಗೆಯ ಕಾರುಗಳಲ್ಲಿ ಸಾಹಿತಿಗಳು, ಸಾಹಿತ್ಯ ಪ್ರಿಯರು ಬಂದು ಇಳಿಯಲಾರಂಭಿಸಿದರು. ಮೀರಿದ ಕುತೂಹಲದಿಂದ ಸಾಹಿತಿಗಳನ್ನು ನೋಡಲು ನಾವೆಲ್ಲ ಕಾತರರಾಗಿದ್ದೆವು. ವಿ.ಸೀ. ಯವರನ್ನು ಗುರುತಿಸುವದು ಏನೇನೂ ಕಷ್ಟವಾಗಿರಲಿಲ್ಲ. ಅವರ ಸಾದಾ ಓರಣವಾದ,

ಆದರೆ ವಿಶಿಷ್ಟಪೂರ್ಣವಾದ ಪೇಟಾ ಒಂದೇ ಸಾಕಾಗಿತ್ತು, ವಿ.ಸೀ. ಅವರ ಠೀವಿಯ ವ್ಯಕ್ತಿತ್ವ ಸಾರಲು! ಅವರೇ ಬರೆದ 'ಮೈಸೂರು ರುಮಾಲು' ಪ್ರಬಂಧ ನಮಗೆಲ್ಲ ಅಚ್ಚುಮೆಚ್ಚಿನದಾಗಿತ್ತು. ಅದನ್ನು ಧರಿಸಿದ ವ್ಯಕ್ತಿಯನ್ನು ಸಾಕ್ಷಾತ್ ಕಂಡಾಗ ವಿದ್ಯುತ್ ಸಂಚಾರವಾಗದೇ ಇದ್ದೀತೆ? ನಾವು ಓದಿ ತಿಳಿದುಕೊಂಡ ಸಾಹಿತಿ ಎದುರಿಗಿದ್ದರು! ಶುಭ್ರ ವಸನಧಾರಿ. ಗರಿಗರಿ ಬಟ್ಟೆ ಜುಬ್ಬ ಶಲ್ಯಗಳು ಕರಾವಳಿಯ ಕಡುಬೇಸಿಗೆಯಲ್ಲೂ ಅವರ ಶುಚಿಯಾದ ಅಭಿರುಚಿಯನ್ನು ಸಾರಿ ಹೇಳುತ್ತಿದ್ದವು. ನಾವೆಲ್ಲ ಊಹಿಸಿಕೊಂಡಂತೆಯೇ ಇದ್ದರು ವಿ.ಸೀ. ಹಮ್ಮ-ಬಿಮ್ಮು ಇಲ್ಲದೇ ಕ್ಷಣದಲ್ಲಿ ಅಲ್ಲಿ ನೆರೆದ ಸಾಹಿತಿ, ಶ್ರೋತೃಗಳಲ್ಲಿ ಬೆರೆತು ಹೋದರು. ಎಲ್ಲರ ಉಭಯಕುಶಲೋಪರಿ ನಡೆಯಿತು. ವರಕವಿ ಬೇಂದ್ರೆ, ಪ್ರೊ. ಗೋಪಾಲಕೃಷ್ಣ ಅಡಿಗರು, ಪ್ರೊ. ತೀ.ನಂ.ಶ್ರೀ., ಪ್ರೊ. ಎ. ಎನ್. ಮೂರ್ತಿರಾಯರು, ತ.ರಾ.ಸು., ಬಿ. ಸಿ. ರಾಮಚಂದ್ರಶರ್ಮ, ಗೌರೀಶ ಕಾಯಕಿಣಿ ಮೊದಲಾದವರೆಲ್ಲ ಅಲ್ಲಿದ್ದರು. ಶಿವರಾಮ ಕಾರಂತರು, ಮೂರ್ತಿರಾಯರಂತೂ ವಿ.ಸೀ. ಅವರಿಗೆ ಆತ್ಮೀಯರು ಎಂಬಂತೆ ತೋರಿತು.

ಕುಮಟಾವಾಸದಲ್ಲಿ ಅವರಿಗೆ ಪ್ರಿಯವಾದ ಗರಿಗರಿ ಮಸಾಲೆ ದೋಸೆಯಾಗಲಿ, ಗಮಗಮಿಸುವ ಫಿಲ್ಟರ್ ಕಾಫಿಯಾಗಲಿ ಸಿಗುವಂತಿರಲಿಲ್ಲ. ಆದರೆ ವಿ.ಸೀ. ಅದನ್ನು ಗಮನಿಸಿದಂತೆ ತೋರಲಿಲ್ಲ! ಅವರಿಗೆ ಅಷ್ಟೇ ಪ್ರಿಯವಾದ ಕಡಲು ಆ ಊರಿನಲ್ಲಿದ್ದರೂ ಬಲು ದೂರ. ಇಲ್ಲದಿದ್ದರೆ ಅದರ ತೀರದಲ್ಲೆ ಠಾಣ್ಯ ಹಾಕುತ್ತಿದ್ದರೋ ಏನೋ! ಭೋರ್ಗರೆಯುವ ಸಮುದ್ರ ಸಮ್ಮೇಳನದ ಸ್ಥಳದಿಂದ ನಾಲ್ಕೈದು ಮೈಲಿ ದೂರವಿತ್ತು. ಬರು ಹೋಗುವ ವಾಹನ ಸೌಲಭ್ಯ ಇರಲಿಲ್ಲ. ಆದರೂ ಸಮುದ್ರ ದರ್ಶನ ಮಾಡುವ ಅವಕಾಶವನ್ನು ಅವರು ಹುಸಿ ಹೋಗಗೊಡಲಿಲ್ಲ. ನೀರಿನಿಂದ ತೊಯ್ದು ಗಟ್ಟಿಯಾದ ರೇವೆ ರಾಶಿ ತುಳಿಯುತ್ತ ಕಡಲಕಿನಾರೆಯನ್ನು ಅಳೆಯುತ್ತ ಹೊರಟವರಂತೆ ಬಲುದೂರದವರೆಗೆ ಒಂಟಿಯಾಗಿಯೊ ಆತ್ಮೀಯರೊಡನೆಯೊ ನಡೆದು ಹೋಗುವದು ಅವರ ಪದ್ಧತಿಯಾಗಿತ್ತು ಎಂದು ಕೇಳಿದ್ದೆವು.

ವಿ.ಸೀ. ಅತ್ಯುತ್ತಮ ಲೇಖಕರೆಂದು ಗೊತ್ತಿದ್ದರೂ ಅಪೂರ್ವ ಭಾಷಣಕಾರರೆಂದೂ ನಾವು ಅರಿಯುವಂತೆ ಆಯಿತು. ಒಂದು ಗಂಟೆಗಿಂತಲೂ ಹೆಚ್ಚಿನ ಅವರ ಅಧ್ಯಕ್ಷೀಯ ಭಾಷಣದಲ್ಲಿ ಅವರ ಕನ್ನಡ ಪ್ರೇಮ, ಕನ್ನಡ ಅಭಿಮಾನ ಉಕ್ಕಿ ಹರಿದಿತ್ತು. ಪ್ರೇಕ್ಷಕರನ್ನು ಮೂಕವಾಗಿಸಿತ್ತು. ರೋಚಕ ಘಟನೆಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುವಲ್ಲಿ, ಗಹನ ವಿಚಾರಗಳನ್ನು ತಿಳಿಯಾಗಿ ಮನಮುಟ್ಟುವ ರೀತಿಯಲ್ಲಿ ಹೇಳುವಲ್ಲಿ ಮಿಗಿಲಾದವರು ಅವರು. ಅವರ 'ಮೇಷ್ಟ್ರತನ'ದ ಯಾವ ಅಂಶವೂ ಲಭ್ಯವಿಲ್ಲದ ನಮಗೆ ಅದೊಂದು ಜೀವನದ ಅವಿಸ್ಮರಣೀಯ ಪ್ರಸಂಗವಾಗಿದ್ದರೆ ಆಶ್ಚರ್ಯವಿಲ್ಲ.

ಇತರ ಸಾಹಿತಿಗಳು ವಿಷಯಮಂಡನೆ ಮಾಡುತ್ತಿದ್ದಾಗ, ಪ್ರತಿಯೊಂದು ಶಬ್ದವನ್ನೂ ಆಲಿಸುತ್ತ, ತನ್ಮಯತೆಯಿಂದ ತಲೆದೂಗುವರು. ಧ್ವನಿವಿರಿಕೆ, ಉದ್ರೇಕದ ನುಡಿ, ಒತ್ತು ಶಬ್ದಗಳು ಅವರಿಗೆ ದೂರ. ಕುಮಟಾ ಸಮ್ಮೇಳನ ನವ್ಯ ಕಾವ್ಯವನ್ನು ಹುಟ್ಟು ಹಾಕಿದ ಸಂದರ್ಭಕ್ಕೆ ಹೆಸರಾಗಿದೆ. ಅಡಿಗರ ಕಾವ್ಯವಾಚನ, ನವ್ಯತೆಯ ಮಂಡನೆ, ಹಾಗೂ ಅಂಬಿಕಾತನಯದತ್ತರ ತೀವ್ರ ಖಂಡನೆ, ಆವೇಶ ಪೂರ್ಣ ಭಾಷಣಗಳು ದೊಡ್ಡ ಸುದ್ದಿ

ಮಾಡಿದವು. ಸ್ವತಃ ಹೆಸರಾಂತ ಕವಿಯಾಗಿದ್ದ ಸಮ್ಮೇಳನಾಧ್ಯಕ್ಷರು ಯಾವುದಕ್ಕೂ ಪ್ರತಿಕ್ರಿಯಿಸದೆ ಎಲ್ಲವನ್ನೂ ಅರ್ಥೈಸಿಕೊಂಡು, ತಾಳ್ಮೆಯಿಂದ ಪ್ರಸಂಗವನ್ನು ನಿರ್ವಹಿಸಿದ್ದು ಅಪೂರ್ವವಾಗಿತ್ತು.

ಹಲವು ವರ್ಷಗಳ ಬಳಿಕ ಕಡಲು, ನಿಸರ್ಗ, ಶಾಂತ ಪರಿಸರಗಳೇ, ಅವರಿಗೆ ಅತ್ಯಂತ ಪ್ರೀತಿಯ ವಿಚಾರಗಳೇ, ಹೊನ್ನಾವರ ಕಾಲೇಜಿನ ಪ್ರಾಂಶುಪಾಲರ ಸ್ಥಾನಕ್ಕೆ ಅವರನ್ನು ಆಕರ್ಷಿಸಿರಬೇಕು! ಅವರಿಗೆ ಕೊಡಮಾಡಿದ ನಿವಾಸ ಸ್ಥಾನ, ಸಹ್ಯಾದ್ರಿಯ ಗುಡ್ಡ –ಬೆಟ್ಟಗಳ ನಡುವೆ ಇತ್ತು. ಹೊಸ್ತಿಲಿನಿಂದಲೇ ಹಚ್ಚ ಹಸಿರಾದ ತೆಂಗಿನ ತೋಟಗಳು ಮಾವು ಬಾಳೆಯ ತೋಪು. ನಡು ನಡುವೆ ಹುಲ್ಲಿನ ಮಾಡಿನ ಗುಡಿಸಲುಗಳು. ಕೊಂಚವೇ ದೂರದಲ್ಲಿ ಭೋರ್ಗರೆಯುವ ಅರಬ್ಬೀ ಸಮುದ್ರ. ನಸುಕಿನಲ್ಲಿ ಹಕ್ಕಿಗಳ ಚಿಲಿಪಿಲಿ ನಾದವನ್ನು ಅಲಿಸುತ್ತ ಮೂಡಣ ದಿಕ್ಕಿನಲ್ಲಿ ಸೂರ್ಯ ಉದಯಿಸಿ ಕ್ಷಣಕ್ಷಣಕ್ಕೂ ಬೆಳಕು ಹೆಚ್ಚಿಸುತ್ತ ಏರಿ ಬರುತ್ತಿರುವ ದೃಶ್ಯ ನಿತ್ಯ ನೂತನವಾಗಿತ್ತು. ಸಾಯಂಕಾಲದ ಸೊಬಗು ಇನ್ನೊಂದು ಬಗೆಯದು. ಪಡುವಣ ದಿಕ್ಕೆಲ್ಲ ಓಕುಳಿಯಾಟದ ಕೆಂಬಣ್ಣ ಧರಿಸಿಕೊಂಡು ಕಡಲ ಅಕ್ಕಪಕ್ಕದ ಪ್ರಕೃತಿಯನ್ನೆಲ್ಲ ಮಾಯಾಲೋಕವಾಗಿಸಿ ಬಿಡುವದು. ಸ್ವಲ್ಪವೇ ಸಮಯ ಕಳೆದೊಡನೆ ಮೂಡಿ ಬರುವ ಶಾಂತ ಬೆಳದಿಂಗಳು ಕ್ರಮೇಣ ನದಿ, ಬೆಟ್ಟ, ಕಡಲುಗಳನ್ನೆಲ್ಲ ತನ್ನ ತೆಕ್ಕೆಯಲ್ಲಿ ಕೊಂಡೊಯ್ಯುವಂತೆ ತೋರುವದು. ಇಂಥ ಮೂರು ಸುಂದರ ಶಕ್ತಿಗಳ ತಾಣವಾದ ಹೊನ್ನಾವರ ಕಾಯಾ, ವಾಚಾ, ಮನಸಾ ಕವಿಯಾಗಿದ್ದ ವಿ.ಸೀ. ಅವರಿಗೆ ಇಷ್ಟವಾಗದೇ ಇದ್ದೀತೆ?

ಸ್ಥಳೀಯ ಪರಿಚಿತರೇ ಆಗಲಿ, ಸಾಹಿತ್ಯಾಸಕ್ತ ಆಗಂತುಕರೇ ಇರಲಿ, ಆಪ್ತರು, ಸ್ನೇಹಿತರು ಬರಲಿ, ಅವರೊಂದಿಗೆ ಸಮುದ್ರ ದರ್ಶನ, ಕಡಲ ತೀರದ ಅಲೆದಾಟ ಸಾಯಂಕಾಲ ಇದ್ದದ್ದೇ! ಚಹದ, ಎಳೆನೀರ ಸೇವನೆಯ ಜೊತೆಗೆ ಸಾಹಿತ್ಯ, ಕಲೆ, ರಾಜಕಾರಣ, ಅರ್ಥಶಾಸ್ತ್ರ ಚರ್ಚೆ ನಡೆದಿರುತ್ತಿತ್ತು. ವಿ.ಸೀ. ಅವರ ಆಸಕ್ತಿಯ ಕ್ಷೇತ್ರಗಳು ಇಷ್ಟೇ, ಇಂಥವೇ ಎಂದು ಹೇಳಲಿಕ್ಕುಂಟೆ? ಚರ್ಚೆಗೆ, ವಿಚಾರ ವಿನಿಮಯಕ್ಕೆ ಜೊತೆಯವರಿದ್ದರೆ ಸರಿ, ಇಲ್ಲವಾದರೆ ಏಕಾಕಿಯಾಗಿ ಕಡಲಿಗೆ ಜೊತೆ ಕೊಡುವವರು ಅವರು. ಏಳುತ್ತ ಬೀಳುತ್ತ ಇವರತ್ತ ಸಾಗಿ ಬರುತ್ತಿದ್ದ ತೆರೆಗಳಿಂದಾಗಿ ತೊಯ್ದು ಗಟ್ಟಿಯಾದ ರೇವೆಯನ್ನು ತುಳಿಯುತ್ತ ಹೋಗುವದು ಅವರಿಗೆ ಅಪರಿಮಿತ ಆನಂದ ಕೊಡುತ್ತಿತ್ತು. ಕಾಸರಕೋಡದ ಕಡಲು ತೀರ ಅವರ ಪ್ರೀತಿಯ ತಾಣ. ಈಗಿನ ಸ್ನೇಹಕುಂಜದಿಂದ ಅಪ್ಸರಕೊಂಡದವರೆಗೆ ವಿರಾಮವಾಗಿ ನಡೆದು ಕಡಲಿನೊಂದಿಗೆ ಮೌನಸಂಧಾನ ನಡೆಸುವರು. ಕತ್ತಲಾಗುತ್ತಿದ್ದರೆ ಮನಸ್ಸಿಲ್ಲದ ಮನಸ್ಸಿನಿಂದ ಸಂಗಡಿಗರೊಂದಿಗೆ ಹಿಂದಿರುಗುವರು.

ವಿ.ಸೀ. ಅವರು ಪ್ರಾಂಶುಪಾಲರ ಜವಾಬ್ದಾರಿಗಳನ್ನು ಒಪ್ಪಿಕೊಂಡಿದ್ದರಿಂದ, ವಿಮಾನ ಚಾಲಕನೋರ್ವನು ಎತ್ತಿನ ಗಾಡಿ ಓಡಿಸುವ ಸಾಹಸಕ್ಕೆ ಕೈ ಹಾಕಿದಂತೆ ಆಗಿತ್ತು! ಕರಾವಳಿಯ ವಿದ್ಯಾರ್ಥಿಗಳು ಹಿಂದೊಮ್ಮೆ ಕುಶಾಗ್ರಮತಿಗಳಾಗಿ ಧಾರವಾಡ, ಸಾಂಗ್ಲಿ, ಪುಣೆ, ಕೊಲ್ಲಾಪುರ ಕಾಲೇಜುಗಳಿಗೆ ಹೋಗಿ ಜಯಭೇರಿ ಹೊಡೆದದ್ದುಂಟು. ಆದರೆ ಆ ಬಳಿಕ ತಾಲೂಕು, ಹಿರೇ ಹಳ್ಳಿಗಳಲ್ಲೆಲ್ಲ ಕಾಲೇಜುಗಳು ಕಾಣಿಸಿಕೊಂಡವು. ಹೆಚ್ಚಿನ

ವಿದ್ಯಾರ್ಥಿ ವಿದ್ಯಾರ್ಥಿನಿಯರ ಉದ್ದೇಶ ವಿದ್ಯಾರ್ಜನೆಯಾಗಿರದೇ ನೌಕರಿಗೆ ಶಹರಿಗೆ ಜಿಗಿಯಲು ಪದವಿಯ ಸರ್ಟಿಫಿಕೇಟು ಪಡೆಯುವದೇ ಆಗಿತ್ತು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಸಾಹಿತ್ಯದಲ್ಲಿ ಒಳ್ಳೇ ಅಭಿರುಚಿಯುಳ್ಳ ಶಿಷ್ಯ ಕೋಟಿಯನ್ನು ಪಡೆದಿದ್ದ, ಉತ್ತಮ ಶಿಷ್ಯವೃಂದವನ್ನು ನಿರ್ಮಿಸಿದ್ದ ವಿ.ಸೀ. ಅವರಿಗೆ ಹೊಣೆಗೇಡಿ ವಿದ್ಯಾರ್ಥಿಗಳನ್ನು ನಿಯಂತ್ರಿಸಿ, ಅಡಳಿತ ನಡೆಸಬೇಕಾಗಿ ಬಂದಿತು. ಸಾಲದ್ದಕ್ಕೆ ಕಾಲೇಜನ್ನು ನಡೆಸುತ್ತಿದ್ದ ಅಡಳಿತ ವರ್ಗದಲ್ಲೇ ಎರಡು ಬಣಗಳು. ಒಳಜಗಳಕ್ಕೆ ಕೊನೆಯಿರಲಿಲ್ಲ. ಕಾಲೇಜಿನ ಬೊಕ್ಕಸವಂತೂ ಕಾಯಂ ಬರಿದು.

ಹೊಂದಾಣಿಕೆಗೆ ಇನ್ನೊಂದು ಹೆಸರಾಗಿ, ಹೊನ್ನಾವರದಲ್ಲಿ ಇದ್ದಷ್ಟು ಕಾಲ, ಕೊರತೆಗಳಲ್ಲಿ ಕೆಲವನ್ನು ನೀಗಿಸಲು ವಿ.ಸೀ. ಸರ್ವಪ್ರಯತ್ನ ನಡೆಸಿದರು. ಯುವ ಪೀಳಿಗೆಯ ಹಲವು ಕವಿ – ಸಾಹಿತಿಗಳನ್ನು ಪ್ರೋತ್ಸಾಹಿಸಿದರು. ಸ್ಥಳೀಯ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಪಾಲುಗೊಳ್ಳುತ್ತಿದ್ದರು. ಸ್ಕೂಲು, ಸಂಸ್ಥೆಗಳ ಹಿರಿಕಿರಿ ಕಾರ್ಯಕ್ರಮಗಳಿಗೂ ಹೋಗಿ ಬರುತ್ತಿದ್ದರು. ಬೆಂಗಳೂರಿನಿಂದ ಕೆಲ ಕಲಾಕಾರ ತಂಡದವರನ್ನು ಆಮಂತ್ರಿಸಿ ಹೊನ್ನಾವರದಲ್ಲಿ ನಾಟಕ ಶಿಬಿರ, ಪ್ರಯೋಗಗಳನ್ನು ಏರ್ಪಡಿಸಿದರು. ಕೊಂಕಣಿಗರ ಪಾಕವೈಶಿಷ್ಟ್ಯದ ರುಚಿ ನೋಡಿ ಮೆಚ್ಚಿಕೊಂಡದ್ದೂ ಉಂಟು! ಅಡಳಿತ ವರ್ಗದವರ ಕೀಟಲೆ, ಹಣಕಾಸಿನ ಅಭಾವಗಳು ತೀವ್ರವಾದಾಗ ಪ್ರಾಂಶುಪಾಲರ ಬೇಡಿಯಿಂದ ಬಿಡುಗಡೆ ಪಡೆಯದೇ ನಿರ್ವಾಹವಿರಲಿಲ್ಲ.

ನವ್ಯ ಕವಿ ಪ್ರೊ. ಗೋಪಾಲಕೃಷ್ಣ ಅಡಿಗರು, ಸಂಸ್ಕೃತದ ಘನ ವಿದ್ವಾಂಸರಾಗಿದ್ದ ಡಾ. ಕೆ. ಕೃಷ್ಣಮೂರ್ತಿಯವರಂಥ ಪ್ರತಿಭಾವಂತರು ಕೆಲ ವರ್ಷ ನಮ್ಮ ಜಿಲ್ಲೆಯಲ್ಲಿ ಸೇವೆ ಸಲ್ಲಿಸಿದರೂ ನಮ್ಮ ಜನ ಅವರ ವಿದ್ವತ್ತಿನ ಲಾಭ ಪಡೆಯದೇ ಹೋದರು. ವಿ.ಸೀ. ಅವರನ್ನೂ ಇದೇ ಗುಂಪಿಗೆ ಸೇರಿಸಿದ್ದಕ್ಕಾಗಿ ಈಗಲೂ ವ್ಯಥೆ ಪಡುವಂತೆ ಆಗುತ್ತದೆ.

ವಿ.ಸೀ. ಒಡನಾಟದ ನೆನಪುಗಳು

ಎನ್. ಆರ್. ನಾಯಕ

ಕನ್ನಡದ ಒಬ್ಬ ಅತ್ಯುತ್ತಮ ಗದ್ಯ ಲೇಖಕರೂ, ಹೆಸರಾಂತ ಕವಿ ವಿಮರ್ಶಕರೂ ಆದ ಡಾ. ವಿ. ಸೀತಾರಾಮಯ್ಯನವರನ್ನು ನಾನು ಮೊದಲು ಕಂಡದ್ದು ಅವರ 'ಪಂಪಾಯಾತ್ರೆ' ಗ್ರಂಥದ ಮೂಲಕ. ನಾನು ೧೯೫೨ರ ಸುಮಾರಿಗೆ ಓದಿದ ವಿ.ಸೀ. ಅವರ ಮೊದಲ ಗ್ರಂಥವದು. ಅದು ಅವರ ಆದ್ಯ ಕೃತಿಯೂ ಹೌದು. ಅದೇ ಸುಮಾರಿಗೆ ಅವರ 'ಮನೆ ತುಂಬಿಸುವುದು' ಕವನದ "ನಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು ನಿಮ್ಮ ಮಡಿಲೊಳಗಿಡಲು ತಂದಿರುವೆವು" ಮುಂತಾದ ಸೊಲ್ಲುಗಳನ್ನು ಬಾಲ್ಯದ ಭಾವುಕತೆಯಿಂದ ಹನಿಗಣ್ಣಾಗಿಸಿಕೊಂಡು ಓದಿ, ಹಾಡಲು ನನಗೆ ಚೆನ್ನಾಗಿ ಬರದಿದ್ದರೂ ಹಾಡಿ ಸುಖಿಸಿದ್ದೆ. ಅವರ "ಉಂಗುರ ಕಾಲ್ಗೆಜ್ಜೆ, ಥಳ ಥಳ ಝಣ ಝಣ, ತಕ ತೈಕ ಕುಣಿಯುತ್ತಾ ಬರುತಾಳೆ– ಸಿಂಗಾರಿ ಬರುತಾಳೆ, ಬಂಗಾರಿ ಬರುತಾಳೆ, ಚೆಂಗಾವಿ ಜರತಾರಿ ಉಡುತಾಳೆ" ಎಂಬ ನಾಟ್ಯ ಮಯೂರಿಯ 'ನಾಟ್ಯಾನುಕರಣ' ಗೀತಕ್ಕೆ ಮನಸೋತು ನಾನೂ ಗೀತ ಹಾಡಿಕೊಂಡು ಅಡ್ಡಾದಿಡ್ಡಿ ಕುಣಿದ ನೆನಪು. ಬಾಳನು ಶೋಧಿಸಿ ಶುಚಿಯನ್ನು ಬೆಳೆದು, ಇಹವನ್ನೇ ಪರವಾಗಿ ಅರಳಿಸ ಹೊರಟ ವಿ.ಸೀ. ಅವರ 'ವಿಶ್ವಾಸ' ಕವನವನ್ನು ಓದಿ ಮೆಚ್ಚಿ ಪ್ರಭಾವಿತನಾಗಿ ನಾನು ವಿ.ಸೀ. ಅವರ ವಿಷಯದಲ್ಲಿ ಒಂದು ಬಗೆಯ ಗೌರವ ವಿಶ್ವಾಸವನ್ನು ಒಡಮೂಡಿಸಿಕೊಂಡಿದ್ದೆ. ಆದರೂ ಅವರನ್ನು ಪ್ರತ್ಯಕ್ಷ ನೋಡುವ ಸದವಕಾಶ ನನಗೆ ಲಭಿಸಿರಲಿಲ್ಲ. ೧೯೫೩ ಡಿಸೆಂಬರ್‌ನಲ್ಲಿ ಕುಮಟೆಯಲ್ಲಿ ನಡೆಯುವ ೩೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ವಿ.ಸೀ. ಅವರು ಆಯ್ಕೆಗೊಂಡ ಸಮಾಚಾರವನ್ನು ಕೇಳಿ ಸಂತೋಷಗೊಂಡೆ. ಆಗ ನಾನಿನ್ನೂ ಹೈಸ್ಕೂಲ್ ವಿದ್ಯಾರ್ಥಿ. ನಮ್ಮ ಹೈಸ್ಕೂಲಿನ ಸಾಹಿತ್ಯಾಸಕ್ತ ಶಿಕ್ಷಕರು ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲಾ ಸೇರಿ, ಸಾಹಿತ್ಯ ಸಮ್ಮೇಳನವನ್ನು ನೋಡಲು ಕುಮಟೆಗೆ ಪ್ರವಾಸ ಹೊರಟೆವು. ಬಹುಶಃ ನಮ್ಮ ಜಿಲ್ಲೆಯಲ್ಲಾದ ಎರಡನೆಯ ಕನ್ನಡ ಸಾಹಿತ್ಯ ಸಮ್ಮೇಳನವದು. ಸಮ್ಮೇಳನಕ್ಕೆ ನೆರೆದ ಸಾವಿರಾರು ಜನಸಾಗರವನ್ನು ಭೇದಿಸಿಕೊಂಡು ನಾವು ಸಾಹಿತ್ಯ ಸಮ್ಮೇಳನದ ಹಂದರ ಪ್ರವೇಶಿಸಿ, ಅಧ್ಯಕ್ಷರಾದ ಆಕರ್ಷಕ ನಿಲುವಿನ ಮಾನ್ಯ ವಿ.ಸೀ. ಅವರನ್ನು ದೂರದಿಂದ ನೋಡುವ ಅವಕಾಶ ಪಡೆದೆವು. ಅಂದು ಸಭಾಧ್ಯಕ್ಷ ಸ್ಥಾನದಿಂದ ವಿ.ಸೀ. ಅವರು ಮಾಡಿದ ವಿದ್ವತ್‌ಪೂರ್ಣ ಅಧ್ಯಕ್ಷೀಯ ಭಾಷಣ, ಸಮ್ಮೇಳನದಲ್ಲಿ ನವ್ಯ ಕಾವ್ಯವನ್ನು ಕುರಿತು

ಡಾ|| ದ. ರಾ. ಬೇಂದ್ರೆ, ಡಾ|| ಶಿವರಾಮ ಕಾರಂತರಾದಿಯಾಗಿ ನಾಡಿನ ಹಿರಿಯ ಸಾಹಿತಿ ವಿದ್ವಾಂಸರು ನಡೆಸಿದ ಚರ್ಚೆ, ಚರ್ಚೆಯ ಬಹುಭಾಗ ಜನರಿಗೆ ಅರ್ಥವಾಗದೇ ಸಭಿಕರು ಎದ್ದು ಹೋಗುವಾಗ ಕೊನೆಗಳಿಗೆಯಲ್ಲಿ ಡಾ|| ಶಿವರಾಮ ಕಾರಂತರು ತಮ್ಮ ವಿಚಾರ ಪ್ರಚೋದಕ ಭಾಷಣದಿಂದ ಚರ್ಚೆಗೆ ಹೊಸ ತಿರುವು ಕೊಟ್ಟು ರಂಗೇರಿಸಿದ ಸಂದರ್ಭದಲ್ಲಿ ಎದ್ದು ಹೋದ ಪ್ರೇಕ್ಷಕರೆಲ್ಲ ಓಡಿ ಬಂದು ಸದ್ದು ಗದ್ದಲವಿಲ್ಲದೆ ಅವರ ಭಾಷಣ ಆಲಿಸಿದ್ದು ಎಲ್ಲವೂ ಇನ್ನೂ ನನ್ನ ಮನದಲ್ಲಿ ಹಚ್ಚ ಹಸುರಾಗಿಯೇ ಇದೆ.

ನಾನು ವಿ.ಸೀ. ಅವರನ್ನು ನಿಕಟವರ್ತಿಯಾಗಿ ನೋಡಿದ್ದು, ಹೊನ್ನಾವರದ ಎಂ.ಪಿ.ಇ. ಸೊಸೈಟಿಯವರು ದಿನಾಂಕ: ೧೦-೬-೬೪ ರಂದು ನನ್ನನ್ನು ಕನ್ನಡ ಉಪನ್ಯಾಸಕ ಹುದ್ದೆಯ ಸಂದರ್ಶನಕ್ಕೆ ಕರೆದ ಸಂದರ್ಭದಲ್ಲಿ. ಗರಿಗರಿಯಾದ ಶುಭ್ರ ಧೋತರವುಟ್ಟು, ಕ್ಲೋಜ್ ಕಾಲರಿನ ಹಾಲಕೆನೆಯ ಬಣ್ಣದ ಕೋಟು ತೊಟ್ಟು, ಬೆಳ್ಳಗಿನ ಮೈಸೂರು ರುಮಾಲು ಧರಿಸಿ, ಗಂಭೀರ ಮುಖ ಮುದ್ರೆಯಲ್ಲಿ ಕುಳಿತ ಕುಳ್ಳ ದೇಹದ ವಿ.ಸೀ. ಅವರು, ಸಂದರ್ಶನ ತೆಗೆದುಕೊಳ್ಳಲು ಕುಳಿತವರಲ್ಲಿ ಕಣ್ಣಿಗೆ ಢಾಳವಾಗಿ ಹೊಡೆದು ಕಾಣುವ, ನೋಡಿದ ತತ್‌ಕ್ಷಣದಲ್ಲಿ ನೋಟಕರಲ್ಲಿ ಗೌರವ ಭಾವನೆಯನ್ನು ಉದ್ದೀಪಿಸುವ ಘನವ್ಯಕ್ತಿಯಾಗಿ ಕಾಣುತ್ತಿದ್ದರು. ಕನ್ನಡ ಸಾರಸ್ವತ ಪ್ರಪಂಚದಲ್ಲಿ ಬಹುಶ್ರುತ ವಿದ್ವಾಂಸರೆಂದು ಖ್ಯಾತಿ ಗಳಿಸಿದ ವಿ.ಸೀ. ಅವರು ಅಂದು ನಡೆಸಿದ ಸಂದರ್ಶನ ಸಂದರ್ಭ ನನ್ನ ಬದುಕಿನಲ್ಲಿಯೇ ಅತ್ಯಂತ ಮಹತ್ವಪೂರ್ಣವಾದ ಕ್ಷಣವೆಂದು ನಾನು ಭಾವಿಸುತ್ತೇನೆ. ಆ ಮೊದಲು ನಾನು ಒಂದೆರಡು ಕಾಲೇಜುಗಳ ಸಂದರ್ಶನಕ್ಕೆ ಹೋಗಿ ಬಂದಿದ್ದೆ. ಅಲ್ಲೆಲ್ಲ ಸಂದರ್ಶನ ಕೇವಲ ಕಾಟಾಚಾರದ್ದು; ಸಂದರ್ಶನ ಪೂರ್ವದಲ್ಲಿಯೇ ಒಳಗಿಂದೊಳಗೇ ಯಾರನ್ನು ಆಯ್ಕೆ ಮಾಡಬೇಕೆಂದು ಪೂರ್ವ ನಿರ್ಧಾರವಾಗಿದ್ದ ಸಂದರ್ಶನಗಳವು. ಸಂದರ್ಶನದ ವೇಳಗೆ ವಿ.ಸೀ. ಅವರು ನಮಗೆ ಸಂಬಂಧಪಟ್ಟ ವಿಷಯದಲ್ಲಿ, ನಮ್ಮ ಅಧ್ಯಯನ ವ್ಯಾಪ್ತಿಯ ಮೂಲ ಚೂಲವನ್ನರಿಯಲು ಕೇಳಿದ ಪ್ರಶ್ನೆ ಉಪ ಪ್ರಶ್ನೆಗಳು, ಆ ಸಂದರ್ಭದಲ್ಲಿ ಅವರು ಅಭ್ಯರ್ಥಿಗಳ ಜೊತೆಗೆ ವ್ಯವಹರಿಸಿದ ಸೌಜನ್ಯಪೂರ್ಣ ನಡೆವಳಿಕೆ, ನಾವು ಕೊಟ್ಟ ಉತ್ತರಗಳನ್ನು ಸ್ವಸ್ಥ ಚಿತ್ತದಿಂದ ಕೇಳಿದ ತಾಳ್ಮೆ – ಎಲ್ಲವೂ ಒಟ್ಟಂದದಲ್ಲಿ ಸಂದರ್ಶನಕ್ಕೆ ಬಂದ ಅಭ್ಯರ್ಥಿಗಳಲ್ಲಿ ಆತಸ್ಥೈರ್ಯವನ್ನೇ ತುಂಬುತ್ತಿದ್ದವು–ಗೊಂದಲವನ್ನಲ್ಲ. ವಿಶ್ವವಿದ್ಯಾಲಯ ಹಾಗೂ ಕಾಲೇಜು ಮಟ್ಟದಲ್ಲಿ ಸಂದರ್ಶನಗಳನ್ನು ಹೇಗೆ ನಡೆಸಬೇಕೆನ್ನುವವರಿಗೆ ಮಾದರಿಯಾಗಿದ್ದವು ಅವರ ಸಂದರ್ಶನ ಕಾಲದ ನಡೆವಳಿಕೆಗಳು. ಅವರು ಸಂದರ್ಶನ ತೆಗೆದುಕೊಳ್ಳುವ ಈ ಮಾದರಿ ಮುಂದೆ ನಾನು ಅದೇ ಕಾಲೇಜಿನ ಪ್ರಾಚಾರ್ಯ ಹುದ್ದೆಯನ್ನು ಸ್ವೀಕರಿಸಿದಾಗ ನನಗೆ ಮಾರ್ಗದರ್ಶಿಯೂ ಆಯಿತೆಂದು ಈ ಸಂದರ್ಭದಲ್ಲಿ ಹೇಳಲೇಬೇಕು. ಹೊನ್ನಾವರದ ಆಡಳಿತ ಮಂಡಳಿಯವರು ಹಾಗೂ ಕಾಲೇಜಿನ ಪ್ರಥಮ ಪ್ರಾಚಾರ್ಯರಾಗಿ ಬಂದ ವಿ.ಸೀ. ಎಲ್ಲರೂ ಸಹ ವರ್ತಮಾನದಲ್ಲಿ ಅಪರೂಪವಾಗಿರುವ, ಸಂದರ್ಶನಕ್ಕೆ ಬಂದ ಅಭ್ಯರ್ಥಿಯ ಪಾಂಡಿತ್ಯ, ಪ್ರತಿಭೆಗಳಿಗೆ ಪ್ರಥಮ ಪ್ರಾಶಸ್ತ್ಯವನ್ನು ನೀಡುವವರೂ, ಅತ್ಯಂತ ಶುದ್ಧ ಹಸ್ತರೂ ಆಗಿರುವುದರಿಂದ, ಅಭ್ಯರ್ಥಿಗಳು ತಂದ ಗಣ್ಯರ ಶಿಫಾರಸು ಪತ್ರಕ್ಕೆ ಹೆಚ್ಚಿನ ಆದ್ಯತೆ ನೀಡದೆ, ಅಭ್ಯರ್ಥಿ ಪರೀಕ್ಷೆಯಲ್ಲಿ ಪಡೆದ ಅಂಕಗಳು

ಹಾಗೂ ಸಂದರ್ಶನದಲ್ಲಿ ಅತ ತೋರಿದ ಗುಣಮಟ್ಟವನ್ನನುಲಕ್ಷಿಸಿಯೇ ಉಪನ್ಯಾಸಕರ ಆಯ್ಕೆ ಮಾಡಿದ ಪ್ರಯುಕ್ತ ಯಾರ ಬೆಂಬಲವಿಲ್ಲದ, ಹಳ್ಳಿಯ ಮೂಲೆಯಲ್ಲಿದ್ದ ನನ್ನಂಥವನ ಆಯ್ಕೆಯಾದದ್ದು. ವಿ.ಸೀ. ಅವರಂಥ ಹಿರಿಯ ಚೇತನದ ಕೈಕೆಳಗೆ ಕೆಲಸ ಮಾಡುವ ಅವಕಾಶ ಲಭಿಸಿದ ಆ ಸಂದರ್ಭ ನನ್ನ ಬದುಕಿನ ಮಧುರ ಕ್ಷಣಗಳಲ್ಲೊಂದು.

ಕನ್ನಡ, ಇಂಗ್ಲಿಷ್ ಹಾಗೂ ಸಂಸ್ಕೃತ ಭಾಷೆಗಳಲ್ಲಿ ವಿ.ಸೀ. ಅವರ ಪಾಂಡಿತ್ಯವನ್ನು ಕಂಡ ನನಗೆ ಇವರ ಮುಂದೆ ನಾನೆಷ್ಟು ಚಿಕ್ಕವನು ಎನ್ನುವ ಕೀಳರಿಮೆ. ನನ್ನ ಹಾಗೂ ಅವರ ವಯೋಮಾನದ ಅಂತರ ಹಾಗೂ ಅವರು ಹಿರಿಯರು, ಪ್ರಾಚಾರ್ಯರು ಎನ್ನುವ ಗೌರವಾದರಗಳ ಕಾರಣದಿಂದಾಗಿ ನಾನು ಅವರ ಹತ್ತಿರ ಹೆಚ್ಚಾಗಿ ಬೆರೆಯುತ್ತಿರಲಿಲ್ಲ. ಆದರೆ ತಾನೊಬ್ಬ ಮಹಾ ವಿದ್ವಾಂಸ, ಕವಿ, ಪ್ರಾಚಾರ್ಯ ಎನ್ನುವ ಹಮ್ಮು ಬಿಮ್ಮುಗಳು ಅವರಲ್ಲಿ ಎಳ್ಳಷ್ಟೂ ಇರಲಿಲ್ಲ – ಆ ಮಾತು ಬೇರೆ. ವಿ.ಸೀ. ಅವರ ಜೊತೆಗೆ ಹೆಚ್ಚಿನ ಸಂಪರ್ಕವನ್ನಿಟ್ಟು ಕೊಂಡವರೆಂದರೆ ತತ್ತ್ವಜ್ಞಾನ ಉಪನ್ಯಾಸಕರಾದ ಕೆ. ಎಸ್. ಕಲ್ಲಾಪುರ ಹಾಗೂ ಗಣಿತ ಉಪನ್ಯಾಸಕರಾದ ಎಂ.ಎಲ್.ಸಿ. ಶಾಸ್ತ್ರೀಯವರು. ಇವರಿಬ್ಬರೂ ನನಗೆ ಅತ್ಯಂತ ಆತ್ಮೀಯರು. ನಾನು ವಿ.ಸೀ. ಅವರ ಸವಿ ಸಾನ್ನಿಧ್ಯದ ರುಚಿ ಕಂಡದ್ದು ಈ ಇಬ್ಬರ ಮೂಲಕವಾಗಿಯೇ. ಹೆಚ್ಚಾಗಿ ಕೆ. ಎಸ್. ಕಲ್ಲಾಪುರ ಅವರು ನಿತ್ಯ ಸಂಜೆ ಆರು ಗಂಟೆಗೆ ವಿ.ಸೀ. ಅವರ ಜೊತೆ ತಿರುಗಾಡಲು ಹೋಗುವ ರೂಢಿಯನ್ನಿಟ್ಟುಕೊಂಡಿದ್ದರು; ಇದಕ್ಕೆ ಕಾರಣ ವಿ.ಸೀ. ತಿರುಗಾಡಲು ಒಬ್ಬರೇ ಹೋಗುವುದು ಕಡಿಮೆ; ಯಾರಾದರೂ ಅವರ ಜೊತೆಗಿರುವುದೇ ಹೆಚ್ಚು. ವಿ.ಸೀ. ಮತ್ತು ಕಲ್ಲಾಪುರರ ಜೊತೆಗೆ ಎಂ.ಎಲ್.ಸಿ. ಶಾಸ್ತ್ರೀ ಮತ್ತು ನಾನು ವಾರಕ್ಕೊಮ್ಮೆಯಾದರೂ ಶರಾವತಿ ಸೇತುವೆ ಕಾಮಗಾರಿ ನಡೆಯುವೆಡೆ (ಆಗ ಶರಾವತಿಯ ಸೇತುವೆ ಪೂರ್ಣಗೊಂಡಿರಲಿಲ್ಲ) , ಇಲ್ಲವೇ ಶರಾವತಿ ಸಾಗರ ಸೇರುವೆಡೆಗೆ ವಾಯುಸೇವನೆಗೆ ಹೊರಟು ಒಂದೆಡೆ ಕುಳಿತು ಹರಟುವ ಪರಿಪಾಠವಿತ್ತು. ಈ ಸಂದರ್ಭದಲ್ಲೆಲ್ಲ ವಿ.ಸೀ. ಅವರು ತಮ್ಮ ಮೇಲೆ ಪ್ರಭಾವ ಬೀರಿದ ಬಿ.ಎಂ.ಶ್ರೀ., ಮಾಸ್ತಿ ವೆಂಕಟೇಶ ಅಯ್ಯಂಗಾರ, ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರೀ, ಡಿ.ವಿ.ಜಿ. ಆದಿಯಾಗಿ ಕನ್ನಡ ಸಾಹಿತಿ ದಿಗ್ಗಜಗಳ ಕುರಿತು ಹಾಗೂ ಕನ್ನಡ, ಇಂಗ್ಲೀಷ್ ಹಾಗೂ ಸಂಸ್ಕೃತ ಸಾಹಿತ್ಯ ಕೃತಿಗಳ ಬಗ್ಗೆ, ತಮ್ಮ ನೆಚ್ಚಿನ ಕಲಾವಿದರ ವಿಷಯವಾಗಿ ಮಾತಾಡುತ್ತಿದ್ದರೇ ಹೊರತು, ಇನ್ನೊಬ್ಬರ ಬಗ್ಗೆ ಅವಹೇಳನಕಾರಿ ಟೀಕೆ ಟಿಪ್ಪಣಿಗಳನ್ನು ಮಾಡುತ್ತಿರಲಿಲ್ಲ; ಸಣ್ಣತನದ ಮಾತನ್ನಾಡುತ್ತಿರಲಿಲ್ಲ. ಬಾಳ ಶುಚಿ ಕೆಡಿಸುವ ಕ್ಷುದ್ರತನದ, ಕಟಕಿಯುಕ್ತ ಕುಹಕ ಮಾತುಗಳು ಅವರಿಂದ ಹರದಾರಿ ದೂರ. ಅವರೊಡನಾಡಿದ ಈ ಪ್ರಸಂಗಗಳು, ಅಲ್ಲಿ ನಡೆಸಿದ ಸಾಹಿತ್ಯಕ ಚರ್ಚೆಗಳು ನನ್ನ ಬದುಕಿನಲ್ಲಿ ಬಂದು ಹೋದ ಅತ್ಯಮೂಲ್ಯ ಅವಸರಗಳು. ಕನ್ನಡ ಅಧ್ಯಾಪಕನಾದ ನಾನು ಹಲವಾರು ಬಾರಿ ನನ್ನ ಸಂದೇಹ ನಿವಾರಣೆಗಾಗಿ ವಿ.ಸೀ. ಅವರ ಜೊತೆ ಚರ್ಚಿಸಿದ್ದುಂಟು. ಆಗ ಅವರು ತಮ್ಮ ಅನಿಸಿಕೆಗಳನ್ನು ಹೇಳುವುದರ ಜೊತೆಗೆ, ನಮ್ಮಿಂದ ಅಭಿವ್ಯಕ್ತವಾದ ಭಿನ್ನ ರೀತಿಯ ಅಭಿಪ್ರಾಯಗಳನ್ನೂ ಸಹನೆ ಹಾಗೂ ಆಸಕ್ತಿಯಿಂದ ಕೇಳಿ, ತಮ್ಮ ಅಂತಃಸಾಕ್ಷಿಗೆ ಸರಿಕಂಡಲ್ಲಿ ಅವನ್ನು ಗೌರವಿಸಿ ಪ್ರೋತ್ಸಾಹಿಸುವ ಹೃದಯವೈಶಾಲ್ಯವನ್ನೂ ಹೊಂದಿದ್ದರು. ನಾವು

ಅವರಿಂದ ತೀರ ಭಿನ್ನ ನೆಲೆಯಲ್ಲಿ ನಿಂತಾಗ, "ನಿಮ್ಮ ಅಭಿಪ್ರಾಯ ಹೇಳಿ ತಪ್ಪಿಲ್ಲ, ಸಾಹಿತ್ಯ ವಿಮರ್ಶೆ ಅವರವರ ಭಿನ್ನ ಅಭಿರುಚಿಗೆ, ಹೊಂದಿದ ಬದ್ಧತೆಗೆ, ಬೆಳೆದ ಸಾಂಸ್ಕೃತಿಕ ಪರಿಸರದ ಪ್ರಭಾವಕ್ಕನು ಗುಣವಾಗಿ, ಬೇರೆಯಾಗುತ್ತದೆ. ಬೇರೆಯಾಗಲಿ. ಆದರೆ ಅಭಿಪ್ರಾಯ ಸ್ವಾತಂತ್ರ್ಯವುಂಟೆಂದು ಸಮಾಜ ಸ್ವಾಸ್ಥ್ಯವನ್ನು ಕೆಡಿಸುವ ವಿಚಾರ ವಿಮರ್ಶೆಗಳಿಂದ ದೂರವಿರುವುದು ಒಳ್ಳೆಯದು" ಎಂದು ಸೂಕ್ತವಾಗಿ, ಸೂಕ್ಷ್ಮವಾಗಿ ನಮ್ಮನ್ನು ಎಚ್ಚರಿಸುತ್ತಿದ್ದುದೂ ಉಂಟು.

ನಾನೊಮ್ಮೆ ವಿ.ಸೀ. ಅವರಲ್ಲಿ ಹೊನ್ನಾವರ ಕಾಲೇಜಿನಲ್ಲಿ ಕರ್ನಾಟಕ ಸಂಘವನ್ನು ಸ್ಥಾಪಿಸುವ ಪ್ರಸ್ತಾಪವನ್ನು ಮಾಡಿದೆ. "ಕಾಲೇಜಿನಲ್ಲಿ ಕರ್ನಾಟಕ ಸಂಘವೇಕಪ್ಪಾ? ಕರ್ನಾಟಕ ಸಂಘವನ್ನು ಕಾಲೇಜಿಗೆ ಮಾತ್ರ ಸೀಮಿತಗೊಳಿಸುವುದು ಬೇಡ. ಹೊನ್ನಾವರದ ಸಾರ್ವಜನಿಕರಲ್ಲಿಯೂ ಕನ್ನಡ ಸಾಹಿತ್ಯಾಸಕ್ತಿಯನ್ನು ಕುದುರಿಸುವುದು ಕನ್ನಡ ಅಧ್ಯಾಪಕರಾದ ನಿಮ್ಮ ಕರ್ತವ್ಯ. ಅದಕ್ಕಾಗಿ ಕಾಲೇಜು ಶಿಕ್ಷಕರ ಜೊತೆಗೆ ಸಾರ್ವಜನಿಕರನ್ನೊಳಗೊಂಡ ಕರ್ನಾಟಕ ಸಂಘವನ್ನು ಸ್ಥಾಪಿಸುವುದು ಸೂಕ್ತ; ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿ ಕನ್ನಡ ಕೈಂಕರ್ಯವನ್ನೆಸಗಿ" ಎಂದು ಕರ್ನಾಟಕ ಸಂಘದ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ವಿಸ್ತರಿಸಲು ಅವರು ಸಲಹೆಯಿತ್ತರು.

ವಿ.ಸೀ. ಅವರ ಸಲಹೆಯ ಮೇರೆಗೆ ೧೯೬೪ ಸೆಪ್ಟೆಂಬರ್ ಸುಮಾರಿಗೆ, ನಿವೃತ್ತ ನ್ಯಾಯಾಧೀಶರೂ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದವರೂ ಆದ ಮಾನ್ಯ ಎಂ. ಎಸ್. ಹೆಗಡೆ ಅವರನ್ನು ಅಧ್ಯಕ್ಷರನ್ನಾಗಿ, ಸ್ನೇಹಿತ ಎಂ.ಎಲ್.ಸಿ. ಶಾಸ್ತ್ರೀ ಅವರನ್ನು ಕಾರ್ಯದರ್ಶಿಯನ್ನಾಗಿ ಮಾಡಿಕೊಂಡು, ಹೊನ್ನಾವರದಲ್ಲಿ ಕರ್ನಾಟಕ ಸಂಘವನ್ನು ಹುಟ್ಟು ಹಾಕಿದೆವು. ಆ ಸಮಯದಲ್ಲಿ ಹೊನ್ನಾವರದ ಬಹು ಸಂಖ್ಯಾತರಲ್ಲಿ ಸಾಹಿತ್ಯ ವಿಷಯದಲ್ಲಿ ಹೆಚ್ಚಿನ ಆಸಕ್ತಿಯಿದ್ದಂತಿರಲಿಲ್ಲ. ಈ ಸಂದರ್ಭದಲ್ಲಿ ಒಂದು ಘಟನೆ ನೆನಪಾಗುತ್ತದೆ: ಕರ್ನಾಟಕ ಸಂಘದಲ್ಲಿ ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರ "ಅಶ್ವತ್ಥಾಮನ್" ನಾಟಕ ಕುರಿತು ವಿ.ಸೀ. ಅವರಿಂದ ಉಪನ್ಯಾಸ ಕಾರ್ಯಕ್ರಮವನ್ನು ಹೊನ್ನಾವರದ ನ್ಯೂ ಇಂಗ್ಲಿಷ್ ಸ್ಕೂಲಿನ ಸಭಾಭವನದಲ್ಲಿ ಏರ್ಪಡಿಸಲಾಗಿತ್ತು. ಉಪನ್ಯಾಸಕ್ಕೆ ನಿಗದಿಪಡಿಸಿದ ಸಂಜೆ ಆರು ಗಂಟೆಯ ಸಮಯಕ್ಕೆ ಸಭಾಭವನದಲ್ಲಿ ನೆರೆದ ಪೋಷಕರೆಂದರೆ ಕರ್ನಾಟಕ ಸಂಘದ ಅಧ್ಯಕ್ಷ ಎಂ. ಎಸ್. ಹೆಗಡೆ, ಕಾರ್ಯದರ್ಶಿ ಎಂ. ಎಲ್. ಸಿ. ಶಾಸ್ತ್ರೀ, ಕೆ. ಎಸ್. ಕಲ್ಲಾಪುರ ಮತ್ತು ನಾನು, ಇಷ್ಟು ಮಂದಿಯ ಹೊರತಾಗಿ ಹೊನ್ನಾವರದ ನಾಲ್ಕಾರು ಮಂದಿ ಗಣ್ಯರು – ಹೀಗೆ ಹತ್ತು ಹನ್ನೆರಡು ಜನರು ಮಾತ್ರ. ಕಾರ್ಯಕ್ರಮ ಸಂಯೋಜಿಸಿದ ನಮಗೆ ಆದ ಮುಜುಗರ ಅಷ್ಟಿಷ್ಟಲ್ಲ. ಆಗ ನಾವೆಲ್ಲಾ ಸೇರಿ "ಸರ್ ಕಾರ್ಯಕ್ರಮ ಮುಂದೂಡುವುದು ನೆಟ್ಟಗೆ" ಎಂದಾಗ ವಿ.ಸೀ. ಅವರು, "ಸಾಹಿತ್ಯ ಎಲ್ಲರಿಗೂ ಅಲ್ಲ. ಸಾಹಿತ್ಯಾಸಕ್ತರಾದ ಈ ಹತ್ತು ಜನರೇ ಅನಾಸಕ್ತ ಹತ್ತು ಸಹಸ್ರಕ್ಕೂ ಮಿಗಿಲು" ಎಂದು ಕಾರ್ಯಕ್ರಮ ಮುಂದುವರಿಸಲು ನಮಗೆ ಸೂಚಿಸಿದರು. ಅಂದಿನ ಕಾರ್ಯಕ್ರಮದ ಸಭಿಕರ ಅಭಾವವನ್ನು ಗಣನೆಗೆ ತೆಗೆದುಕೊಳ್ಳದೆ, ಬಿ. ಎಂ. ಶ್ರೀಕಂಠಯ್ಯನವರಲ್ಲಿ ಭಕ್ತಿ ಗೌರವವುಳ್ಳ ವಿ.ಸೀ. 'ಅಶ್ವತ್ಥಾಮನ್' ನಾಟಕದ ವಿಷಯದಲ್ಲಿ ಅಂದು

ಮಾಡಿದ ಭಾಷಣ ಅಮೋಘವಾಗಿತ್ತು. ನಾನು ಕೇಳಿದ ಅತ್ಯುತ್ತಮ ಭಾಷಣಗಳಲ್ಲಿ ಅದೊಂದಾಗಿತ್ತು.

ಹೊನ್ನಾವರದ ಜನತೆಯಲ್ಲಿ ಸಾಹಿತ್ಯಾಭಿರುಚಿಯನ್ನು ಕೆರಳಿಸಲು ವಿ.ಸೀ. ಅವರೇ ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರು ರನ್ನನ ಗದಾಯುದ್ಧ ಕಾವ್ಯವನ್ನಾಧರಿಸಿ ರಚಿಸಿದ "ಗದಾಯುದ್ಧ" ನಾಟಕವನ್ನು ಕಾಲೇಜು ಹಾಗೂ ಹೈಸ್ಕೂಲ್ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಒಟ್ಟಿಗೆ ಸೇರಿಸಿ ವೇದಿಕೆಯ ಮೇಲೆ ನಾಟಕೀಯವಾಗಿ ವಾಚಿಸಲು ನಿರ್ದೇಶಿಸಿದರು. ತಾವು ಸೂತ್ರಧಾರಿಯಾಗಿ ಹಿಂದೆ ನಿಂತರು. ಆ ಸಂದರ್ಭದಲ್ಲಿ ಅವರು ನೀಡಿದ ನಿರ್ದೇಶನ ಹಳೆಗನ್ನಡ ಕಾವ್ಯ, ನಾಟಕಗಳನ್ನು ಹೇಗೆ ಅರ್ಥಪೂರ್ಣವಾಗಿ ಓದಬೇಕೆಂಬ ವಿಷಯದಲ್ಲಿ ನಮಗೆ ನೀಡಿದ ಉನ್ನತ ಮಟ್ಟದ ಮಾರ್ಗದರ್ಶನವೂ ಆಗಿತ್ತು. ಗದಾಯುದ್ಧ ನಾಟಕದ ನಾಟಕೀಯ ವಾಚನದ ಮೂಲಕವಾಗಿ ನಾವು ಹೊನ್ನಾವರದ ಪ್ರೇಕ್ಷಕರನ್ನು ಸ್ವಲ್ಪ ಮಟ್ಟಿಗೆ ಆಕರ್ಷಿಸುವಲ್ಲಿ ಸಫಲರಾದೆವು. ಮುಂದೆ ಹೊನ್ನಾವರದ ಕರ್ನಾಟಕ ಸಂಘದಲ್ಲಿ ಆಕರ್ಷಕ ಉಪನ್ಯಾಸಗಳು, ಆಕರ್ಷಕ ಕಾರ್ಯಕ್ರಮಗಳು ನಡೆಯುತ್ತವೆಯೆಂಬ ವದಂತಿ ಸುತ್ತೆಲ್ಲ ಹಬ್ಬಿ ಕ್ರಮೇಣ ಸಾಹಿತ್ಯಾಸಕ್ತ ಪ್ರೇಕ್ಷಕ ವರ್ಗ ಹೆಚ್ಚುತ್ತಾ ಹೋಯಿತು. ನನಗೆ ತಿಳಿದ ಮಟ್ಟಿಗೆ ಕರ್ನಾಟಕ ಸಂಘದ ಎಲ್ಲ ಕಾರ್ಯಕ್ರಮಗಳಿಗೆ ಸ್ಥಾಯೀ ಭಾವಗಳಂತೆ ಬೆರೆತವರು ವಿ.ಸೀ. ಹಾಗೂ ನಾವು ನಾಲ್ಕಾರು ಜನ ಸ್ನೇಹಿತರು ಮಾತ್ರ. ಉಳಿದವರು ಕಾರ್ಯಕ್ರಮ ವಿಷಯ ಸಂದರ್ಭ ಸನ್ನಿವೇಶಗಳಿಗನುಗುಣವಾಗಿ ಸಂಚಾರಿ ಭಾವಗಳಂತೆ ಆಗೊಮ್ಮೆ ಈಗೊಮ್ಮೆ ಬಂದು ಹೋಗುವವರು. ಕರ್ನಾಟಕ ಸಂಘದಲ್ಲಿ ವಿ.ಸೀ. ಅವರು ಸಲಹೆಗಾರರಾಗಿ ನಿಂತು, ಅತ್ಯಮೂಲ್ಯವಾದ ನಮ್ಮ ಹಲವಾರು ಕಾರ್ಯಕಲಾಪಗಳಿಗೆ ಕಾರಣಕರ್ತರಾದರು. ವಿ.ಸೀ. ಅವರ ಸ್ನೇಹಿತರ ಬಳಗ ದೊಡ್ಡದು; ಅವರ ಆಮಂತ್ರಣಕ್ಕೆ ಓಗೊಟ್ಟು ದ. ರಾ. ಬೇಂದ್ರೆ, ಶಿವರಾಮ ಕಾರಂತ, ಪು. ತಿ. ನರಸಿಂಹಾಚಾರ್, ಕೆ. ಎಸ್. ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ಪಿ. ಕಾಳಿಂಗರಾವ್ ಮುಂತಾದ ಮಹನೀಯರು ಹೊನ್ನಾವರ ಕಾಲೇಜಿಗೆ ಹಾಗೂ ಕರ್ನಾಟಕ ಸಂಘಕ್ಕೆ ಅತಿಥಿಗಳಾಗಿ ಬಂದು, ಹೊನ್ನಾವರದ ನಾಗರಿಕರನ್ನು ತಮ್ಮ ಅಮೂಲ್ಯವಾದ ಉಪನ್ಯಾಸಗಳಿಂದ ಮೆಚ್ಚಿಸಿ ಹೋಗಿದ್ದಾರೆ. ವಿ.ಸೀ. ಅವರ ಮಾರ್ಗದರ್ಶನದಲ್ಲಿ ಅಖಿಲ ಕರ್ನಾಟಕ ಮಟ್ಟದ ಕವಿಗೋಷ್ಠಿಯನ್ನು ನಡೆಸಿದ ಖ್ಯಾತಿಯೂ ಹೊನ್ನಾವರದ ಕರ್ನಾಟಕ ಸಂಘಕ್ಕಿದೆ. ವಿ.ಸೀ. ಹುಟ್ಟು ಹಾಕಿದ ಈ ಕರ್ನಾಟಕ ಸಂಘವು ಅವರ ನಂತರದ ದಿನಗಳಲ್ಲಿಯೂ ಅಖಿಲ ಕರ್ನಾಟಕ ಮಟ್ಟದ ನಾಟ್ಯೋತ್ಸವ, ಜಾನಪದ ಕಲಾಮೇಳ, ನಾಟಕ ತರಬೇತಿ ಶಿಬಿರ, ಸಾಹಿತ್ಯಗೋಷ್ಠಿ, ಜಾನಪದ ಗೋಷ್ಠಿ, ಕವಿ ಸಮ್ಮೇಲನ – ಈ ಮುಂತಾದ ಹತ್ತು ಹಲವು ಕಾರ್ಯಕ್ರಮಗಳನ್ನು ಮಾಡಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಜೀವಂತ ಸಂಘವಾಗಿ ಕೆಲಸ ಮಾಡುತ್ತಿದೆ.

ಕಾಲೇಜಿನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಲ್ಲಿ ಸನ್ನಡತೆ ಹಾಗೂ ಶಿಸ್ತನ್ನು ವಿ.ಸೀ. ಬಯಸುತ್ತಿದ್ದರು; ಆದರೆ ಅದು ಮಿಲಿಟರಿ ಶಿಸ್ತಲ್ಲ, ಪ್ರೀತಿ ವಾತ್ಸಲ್ಯದಿಂದ ಹೇರುವ ಶಿಸ್ತು. ಕಾಲೇಜಿನ ವಿದ್ಯಾರ್ಥಿಗಳು ಚಡ್ಡಿ ಹಾಕಿ, ವಿದ್ಯಾರ್ಥಿನಿಯರು ಮಿನಿ ಸ್ಕರ್ಟ್ ತೊಟ್ಟು,

ಕಾಲೇಜಿಗೆ ಬರುವುದನ್ನು ಅವರು ನಿಷೇಧಿಸಿದರು. ಚಡ್ಡಿ ಹಾಕಿ ಕಾಲೇಜಿಗೆ ಬರುವ ಬಡ ವಿದ್ಯಾರ್ಥಿಗಳು, "ತಾವು ಬಡವರು, ಪ್ಯಾಂಟು ಹೊಲಿಸಿಕೊಳ್ಳಲು ಅಶಕ್ತರು" ಎಂದಾಗ ಚಡ್ಡಿಗಿಂತಲೂ ಕಡಿಮೆ ಬೆಲೆಗೆ ದೊರೆಯುವ ಮುಂಡವನ್ನುಟ್ಟು ಕಾಲೇಜಿಗೆ ಬರಲು ನಿರ್ದೇಶಿಸಿದರು. ಮಿನಿಸ್ಕರ್ಟ್ ತೊಡುವ ಹುಡುಗಿಯರನ್ನು ಕರೆದು ಪ್ರೀತಿಯಿಂದ, "ಇದು ಸರಿಯಲ್ಲಮ್ಮ, ಮೊಣಕಾಲು ಮುಚ್ಚುವ ಲಂಗ ತೊಟ್ಟು, ಇಲ್ಲವೇ ಸೀರೆಯುಟ್ಟು ಬನ್ನಿ" ಎಂದು ತಿಳಿಹೇಳಿ ಅವರು ಅಜ್ಞೆ ಪಾಲಿಸುವಂತೆ ನೋಡಿಕೊಂಡರು. ಕಾಲೇಜಿನ ಮೇಡಂ ಒಬ್ಬರು ತೋಳುರಹಿತ ಕುಪ್ಪಸ ತೊಟ್ಟು ಕಾಲೇಜಿಗೆ ಬಂದಾಗ, "ಅಮ್ಮ, ನಮ್ಮ ಉಡುಗೆ ತೊಡುಗೆ ವಿದ್ಯಾರ್ಥಿಗಳಿಗೆ ಮಾದರಿಯಾಗಬೇಕು" ಎಂದು ಪ್ರೀತಿಯಿಂದ ಹೇಳಿ, ಅವರು ಹಾಗೆ ಬರುವುದನ್ನು ತಡೆದರು. ಹಲವಾರು ಅವಿವಾಹಿತ ಉಪನ್ಯಾಸಕರಿಗೆ, "ನೋಡಪ್ಪ ಒಂದು ಸ್ಥಿರನೆಲೆ ಕಂಡುಕೊಂಡ ಮೇಲೆ, ವಿವಾಹ ವಯಸ್ಸಿನಲ್ಲಿ ಮದುವೆಯಾಗಬೇಕು. ಬೆಂಡೆಕಾಯಿ ಬಲಿತು ನಾರಾಗಬಾರದು, ನಾರು ಪ್ರಯೋಜನವಿಲ್ಲ, ಅಲ್ಲವೆ? ಬೇಗ ಮದುವೆ ಮಾಡಿಕೊಳ್ಳಿ" ಎಂದು ನಕ್ಕು ಮಮತೆಯಿಂದ ನುಡಿದು, ಯುವ ಅಧ್ಯಾಪಕರು ವಿವಾಹಬದ್ಧರಾಗುವಂತೆ ಮುತುವರ್ಜಿ ವಹಿಸುತ್ತಿದ್ದರು. ಇಲ್ಲೆಲ್ಲ ವಿ.ಸೀ. ಒಬ್ಬ ಕುಟುಂಬ ವತ್ಸಲ, ಹಿರಿಯ ಸಭ್ಯ ಗೃಹಸ್ಥನಂತೆ ವ್ಯವಹರಿಸುತ್ತಿದ್ದುದು ಗಮನಾರ್ಹ.

ಒಮ್ಮೆ ನಾನು ವಿ.ಸೀ. ಅವರ ಕೊಠಡಿಯಲ್ಲಿ ಏನೋ ಮಾತಾಡುತ್ತ ಕುಳಿತಿದ್ದಾಗ ಉಪನ್ಯಾಸಕರೊಬ್ಬರು ಕೆಂಡಮಂಡಲವಾಗಿ ವಿದ್ಯಾರ್ಥಿಯೊಬ್ಬನನ್ನು ಎಳೆತಂದು, ಪ್ರಾಚಾರ್ಯರ ಮುಂದೆ ನಿಲ್ಲಿಸಿ, "ನೋಡಿ ಸಾರ್, ಪಾಠ ಮಾಡುವಾಗ ಡಿಸ್ಟರ್ಬ್ ಮಾಡ್ತಾನೆ, ನಾನು ಪಾಠ ಮಾಡಬೇಕೋ ಹೇಗೆ?" ಎಂದು ಎಗರಾಡಿದರು. ಆಗ ವಿ.ಸೀ. ಮುಖ ಸಿಂಡರಿಸಿ, ಹುಡುಗನಿಗೆ, "ನೀನು ಕಾಲೇಜಿಗೆ ಬರುವುದು ಓದಲಿಕ್ಕೆ, ತಂಟೆ ಮಾಡಲಿಕ್ಕಲ್ಲ; ಇನ್ನೊಮ್ಮೆ ಈ ರೀತಿ ವರ್ತಿಸಿದರೆ ಕಾಲೇಜಿನಿಂದ ಹೊರ ಹೋಗಬೇಕಾಗುತ್ತದೆ" ಎಂದು ಗದರಿಸಿ ಕ್ಲಾಸಿಗೆ ಕಳಿಸಿಕೊಟ್ಟರು. ಹುಡುಗ ಹೋದ ಮೇಲೆ ಸಮಚಿತ್ತದಿಂದ ಅಧ್ಯಾಪಕರಿಗೆ, "ನೋಡಿ, ಎಷ್ಟೆಂದರೂ ಅವರು ಹುಡುಗರು, ನಾವು ಮಾರ್ಗದರ್ಶಕರು. ತಾಳ್ಮೆ ಕಳೆದುಕೊಳ್ಳಬಾರದು. ನಾವಿರುವುದು ಅವರನ್ನು ತಿದ್ದಲು. ನಾವೇ ತಾಳ್ಮೆ ತಪ್ಪಿ ವರ್ತಿಸಿದರೆ ಹೇಗೆ? ನಿಮ್ಮ ಕ್ಲಾಸು ಮುಗಿದ ಮೇಲೆ, ಹುಡುಗನೊಬ್ಬನನ್ನೇ ಕರೆದು ತಿಳಿಯ ಹೇಳಿ; ಆಗ ಆಗುವ ಪರಿಣಾಮವನ್ನು ನೋಡಿ" ಎಂದು ಶಿಕ್ಷಕರನ್ನು ವರ್ಗಕ್ಕೆ ಕಳಿಸಿ, ನನ್ನ ಹತ್ತಿರ, "ನೋಡಿ, ಶಿಕ್ಷಕರಾದವರು ಹೀಗೆ ರಂಪಾಟ ಮಾಡಿದರೆ ಹೇಗೆ? ಇವರು ಕರೆತಂದಾಗ ಆ ಹುಡುಗನೇನೋ ಬಂದ, ಆತ ಬರದೆ ಕೂಗಾಡಿದರೆ, ಮತ್ತೆ ಹತ್ತು ಮಂದಿ ಅವನ ಬೆನ್ನಿಗೆ ನಿಲ್ಲುತ್ತಾರೆ, ಕೂಗುತ್ತಾರೆ; ಆಗ ಕ್ಯಾಂಪಸ್ಸು ಕುರುಕ್ಷೇತ್ರವಾಗುತ್ತದೆ. ನಿಮ್ಮ ಸ್ನೇಹಿತರಿಗೆ ಕ್ಲಾಸು ಬಿಟ್ಟ ಮೇಲೆ ಆ ಹುಡುಗನನ್ನು ಕರೆದು, ಸಮಸ್ಯೆಯ ಮೂಲ ತಿಳಿದು, ಅವನನ್ನು ತಿದ್ದಲು ಹೇಳಿ. ಬೇಕಾದರೆ ನೀವೂ ಸಹ ಅವರ ಜೊತೆ ಸಹಕರಿಸಿ" ಎಂದರು. ನಾನು ಪ್ರಾಚಾರ್ಯರ ಕೊಠಡಿಯಿಂದ ಶಿಕ್ಷಕರ ಕೊಠಡಿಗೆ ಬಂದು ಕುಳಿತೆ. ಸ್ವಲ್ಪ ಸಮಯದ ಮೇಲೆ ಆ ಶಿಕ್ಷಕರು ಪಾಠ ಮುಗಿಸಿ ಶಿಕ್ಷಕರ ಕೊಠಡಿಗೆ ಬಂದು, ನನ್ನ ಹತ್ತಿರ, "ನಾಯಕರೇ ನೋಡಿ, ತಂಟೆಕೋರನನ್ನು ನಾನು ಹಿಡಿದುಕೊಟ್ಟರೆ, ಪ್ರಾಚಾರ್ಯರು ತೆಪ್ಪಗೆ ಹುಡುಗನನ್ನು

ಕ್ಲಾಸಿಗೆ ಕಳಿಸಿ, ನನಗೇ ಬುದ್ಧಿವಾದ ಹೇಳಿ ಕಳಿಸಿದರು. ಹೇಗಿದೆ ನಮ್ಮ ಪ್ರಾಚಾರ್ಯರ ಆಡಳಿತ ವೈಖರಿ?" ಎಂದು ಗೊಣಗಿದರು. ಆಗ ನಾನು, "ನನಗೆ ತಿಳಿದ ಮಟ್ಟಿಗೆ ಆ ಹುಡುಗ ಕೇಡಿಯಲ್ಲ, ಸಭ್ಯ. ನಾವೇ ಅವನನ್ನು ಕರೆಸಿ ಮಾತಾಡೋಣ" ಎಂದೆ. "ಬಿಡಿ ನೀವೆಲ್ಲ ಪುಕ್ಕರು. ನಾನು ಏನೆನ್ನುವುದನ್ನು ಆ ಹುಡುಗನಿಗೆ ತೋರಿಸುತ್ತೇನೆ" ಎನ್ನುತ್ತಿರುವಾಗಲೇ ಆ ಹುಡುಗ ಶಿಕ್ಷಕರ ಕೊಠಡಿಗೆ ಬಂದು ಆ ಶಿಕ್ಷಕರ ಹತ್ತಿರ, "ಸರ್ ನಿಮ್ಮ ಹತ್ತಿರ ಸ್ವಲ್ಪ ಮಾತಾಡಬೇಕಿತ್ತು?" ಎಂದ. ಆ ಶಿಕ್ಷಕರು ಮತ್ತೆ ಮತ್ತೆ ಅಬ್ಬರಿಸುತ್ತ "ನಿನ್ನ ಹತ್ತಿರ ಏನು ಮಾತಾಡುವುದು? ನಡೆ ಹೊರಕ್ಕೆ" ಎಂದಾಗ, ನಾನು ಶಿಕ್ಷಕರನ್ನು ಸಮಾಧಾನಪಡಿಸಿ "ಅವನು ಏನೆನ್ನುತ್ತಾನೆ ಎನ್ನುವುದನ್ನಾದರೂ ಕೇಳೋಣ" ಎಂದು ಹೇಳಿದೆ. ಆ ಹುಡುಗ, "ಸರ್ ದಯವಿಟ್ಟು ನಾನು ಹೇಳುವುದನ್ನು ಸ್ವಲ್ಪ ಕೇಳಿ; ಆಮೇಲೆ ನನ್ನ ತಪ್ಪಿದ್ದಲ್ಲಿ ನೀವು ನನ್ನನ್ನು ಶಿಕ್ಷಿಸಬಹುದು" ಎಂದ. ನಾವಿಬ್ಬರೂ ಶಿಕ್ಷಕರ ಕೊಠಡಿಯ ಹೊರ ಬಂದಾಗ ಆತ "ಸರ್ ಕ್ಲಾಸಿನಲ್ಲಿ ಗಲಾಟೆ ಮಾಡಿದವ ನಾನಲ್ಲ. ಗದ್ದಲ ಮಾಡಿದ ವ್ಯಕ್ತಿ ಯಾರೆಂದು ಇಡೀ ಕ್ಲಾಸಿಗೂ ಗೊತ್ತಿದೆ, ಅವರಿಗೂ ಗೊತ್ತಿದೆ. ನನ್ನ ಪಕ್ಕಕ್ಕೆ ಕುಳಿತ ಅವನ ಗಲಾಟೆಯಿಂದಾಗಿ ನನಗೆ ಪಾಠ ಕೇಳಲು ಆಗದಾಗ, 'ಸುಮ್ಮನಿರು, ಇಲ್ಲದಿದ್ದಲ್ಲಿ ಪ್ರೊಫೆಸರರಿಗೆ ಹೇಳುತ್ತೇನೆ'ಂದು, ನಾನು ಹೇಳಿದೆ. ಆತ 'ಹೇಳು ಹೋಗು. ನನಗೆ ಅವರೇನು ಮಾಡುತ್ತಾರೆ ನೋಡಿಕೊಳ್ಳುತ್ತೇನೆ' ಎಂದು ನನಗೇ ದಬಾಯಿಸುತ್ತಿರುವಾಗ, ಇವರು ಅವನಿಗೇನನ್ನೂ ಹೇಳದೇ ನನ್ನನ್ನೇ ಎಳೆದುಕೊಂಡು ಪ್ರಾಚಾರ್ಯರ ಕಡೆ ಹೋದರು. ನಾನು ಅಪರಾಧಿಯಲ್ಲ" ಎಂದು ಹೇಳಿದನಷ್ಟೇ ಅಲ್ಲ, ಅಪರಾಧಿಯ ಹೆಸರನ್ನೂ ದಿಟ್ಟತನದಿಂದ ಹೇಳಿದ. ಆದರೆ ಆ ಶಿಕ್ಷಕರು, ಮತ್ತೂ ಮತ್ತೂ ಆ ವಿದ್ಯಾರ್ಥಿಯನ್ನೇ ಅಪರಾಧಿಯಾಗಿಸಲು ಪ್ರಯತ್ನಿಸುತ್ತಿದ್ದರೇ ವಿನಃ ನಿಜವಾದ ಅಪರಾಧಿಯ ವಿರುದ್ಧ ಪ್ರಾಚಾರ್ಯರಿಗೆ ದೂರು ಸಲ್ಲಿಸಲು ಸಿದ್ಧರಿರಲಿಲ್ಲ. ನಮ್ಮಲ್ಲಿ ಬಹಳಷ್ಟು ಜನ ಮಾಡುವುದು ಹೀಗೇ; ನಿಗ್ರಹಿಸಲು ಆಗದ ಅಪರಾಧಿಗಳನ್ನು ಬದಿಗಿಟ್ಟು, ಪಾಪದವರನ್ನೇ ಬಲಿಕೊಡುವುದು. ವಿ.ಸೀ. ಅವರು ವ್ಯವಧಾನ, ಸಹನೆ ಕಳೆದುಕೊಂಡು, ಶಿಕ್ಷಕರ ದೂರಿನನ್ವಯ ಆ ವಿದ್ಯಾರ್ಥಿಗೆ ಶಿಕ್ಷೆ ನೀಡಿದ್ದಲ್ಲಿ ಒಬ್ಬ ನಿರಪರಾಧಿ ಶಿಕ್ಷೆಗೊಳಗಾಗುತ್ತಿದ್ದ.

ಕಾಲೇಜಿನ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಖರೀದಿಸುವಾಗ ಅಧ್ಯಾಪಕರು ಆಯ್ಕೆ ಮಾಡಿದ ಪುಸ್ತಕಗಳ ಯಾದಿಯನ್ನು ವಿ.ಸೀ. ಅವರು ಸ್ವತಃ ಪರಿಶೀಲಿಸಿ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುವ ಪುಸ್ತಕಗಳನ್ನು ಹೊಡೆದು ಹಾಕುತ್ತಿದ್ದರು. ಸುಪ್ರಸಿದ್ಧ ಸಾಹಿತಿಗಳ ಎಲ್ಲ ಪುಸ್ತಕಗಳನ್ನೂ ಗ್ರಂಥಾಲಯಕ್ಕೆ ತರಿಸುವ ಹವ್ಯಾಸ ನನ್ನದು. ಒಮ್ಮೆ ಕೆಲವು ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಬೇಡಿಕೆಗನುಸಾರವಾಗಿ ಪ್ರಸಿದ್ಧ ಸಾಹಿತಿಯೊಬ್ಬರ ಎಲ್ಲ ಕಾದಂಬರಿಗಳನ್ನೂ ಗ್ರಂಥಾಲಯಕ್ಕೆ ಖರೀದಿಸುವ ಪುಸ್ತಕಗಳ ಯಾದಿಯಲ್ಲಿ ಸೇರಿಸಿದಾಗ, ವಿ.ಸೀ. ಅವರು ಮೂರು ನಾಲ್ಕು ಪುಸ್ತಕಗಳತ್ತ ನನ್ನ ಗಮನ ಸೆಳೆದು, "ಈ ಪುಸ್ತಕಗಳನ್ನು ನೀವು ಓದಿದ್ದೀರಾ?" ಎಂದು ಕೇಳಿದರು. ವಾಸ್ತವಿಕವಾಗಿ ನಾನು ಆ ಪುಸ್ತಕಗಳನ್ನು ಓದಿರಲಿಲ್ಲ. ಆದಕ್ಕಾಗಿ, 'ಓದಿಲ್ಲ, ಆದರೆ ಆ ಪುಸ್ತಕಗಳಿಗೆ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಬೇಡಿಕೆಯಿದೆ', ಎಂದೆ. ಆಗ ಅವರು, "ಬೇಡಪ್ಪಾ, ಈ ಪುಸ್ತಕಗಳು

ಕೊಳೆ. ನಮ್ಮ ವಿದ್ಯಾರ್ಥಿಗಳು ಅವನ್ನು ಓದದಿರುವುದು ಒಳ್ಳೇದು" ಎಂದು ಅವನ್ನು ಯಾದಿಯಿಂದ ತೆಗೆಯಲು ಹೇಳಿದರು. ಓದುಗರ ಸದಭಿರುಚಿಯನ್ನು ಕೆರಳಿಸಿ, ಸತ್‌ಪ್ರೇರಣೆಯನ್ನು ನೀಡಬಲ್ಲ ಗ್ರಂಥಗಳು ಗ್ರಂಥಾಲಯಗಳಲ್ಲಿರಬೇಕು. ಬೇಡಿಕೆಯಿದೆಯೆಂದು ಉದ್ರೇಕವನ್ನು, ವಿಕಾರವನ್ನು ಕೆರಳಿಸುವ ಗ್ರಂಥಗಳನ್ನು ಗ್ರಂಥಾಲಯಗಳಲ್ಲಿಡುವುದು ಒಳಿತಲ್ಲವೆಂಬ ಅಭಿಪ್ರಾಯವುಳ್ಳವರು ವಿ.ಸೀ. ಅವರು.

ನಮ್ಮ ಕಾಲೇಜಿನ ವಿಜ್ಞಾನ ವಿಭಾಗವೊಂದರಲ್ಲಿ ವಿಶ್ವವಿದ್ಯಾಲಯ ನಿಗದಿಪಡಿಸಿದ ಶಿಕ್ಷಕ ಸಂಖ್ಯೆಗಿಂತ ಹೆಚ್ಚಿಗೆ ಶಿಕ್ಷಕರಿದ್ದರು. ಅವರಿಗೆ ಸಾಕಷ್ಟು ಕಾರ್ಯಭಾರವಿಲ್ಲದ ಪ್ರಯುಕ್ತ ಶಿಕ್ಷಕರ ಕೊಠಡಿಯಲ್ಲಿ ಬಿಡುವಿದ್ದ ಇತರ ಶಿಕ್ಷಕರನ್ನು ಕೂಡ್ರಿಸಿಕೊಂಡು ಚೆಸ್ಸು, ಕೇರಂ ಆಟಗಳಲ್ಲಿ ತೊಡಗಿರುತ್ತಿದ್ದರು. ಹೀಗಾಗಿ ಶಿಕ್ಷಕರ ಕೊಠಡಿಯಲ್ಲಿ ಗದ್ದಲ. ಒಮ್ಮೆ ತಿರುಗಾಡಲು ಹೋದಾಗ ವಿ.ಸೀ. ಈ ಗದ್ದಲದ ಬಗ್ಗೆ ಪ್ರಸ್ತಾಪ ಮಾಡಿದರು. ಆಗ ನಾವು ಕೆಲವರು "ಸರ್ ಕಾರ್ಯಭಾರ ಕಡಿಮೆಯಿದ್ದ ಅಧ್ಯಾಪಕರು, ಇಡೀ ದಿನ ಕೆಲಸವಿಲ್ಲದೆ ಆಟದಲ್ಲಿ ನಿರತರಾಗುತ್ತಾರೆ; ಆಡುವಾಗ ಗದ್ದಲ. ಗ್ರಂಥಾಲಯಕ್ಕೆ ಹೋಗೋಣವೆಂದರೆ ಗ್ರಂಥಾಲಯದಲ್ಲಿಯೂ ಅಭ್ಯಾಸಕ್ಕೆ ಸಾಕಷ್ಟು ಜಾಗೆಯಿಲ್ಲ. ಹೆಚ್ಚುವರಿ ಶಿಕ್ಷಕರನ್ನು ಮನೆಗೆ ಕಳಿಸಿದ ಹೊರತು ಗದ್ದಲು ತಪ್ಪಿದ್ದಲ್ಲ. ಸಿಬ್ಬಂದಿ ವರ್ಗದವರಿಗೆ ಸರಿಯಾಗಿ ತಿಂಗಳ ಪಗಾರ ಕೊಡಲು ಪರದಾಡುವ ಈ ಕಷ್ಟದ ಸಮಯದಲ್ಲಿ ಹೆಚ್ಚುವರಿ ಶಿಕ್ಷಕರನ್ನು ಏಕಿಟ್ಟುಕೊಳ್ಳಬೇಕು?" ಎಂದು ಸ್ವಲ್ಪ ಖಾರವಾಗಿಯೇ ಹೇಳಿದೆವು. ವಿ.ಸೀ. ಒಂದು ಕ್ಷಣ ಮಾತಾಡಲಿಲ್ಲ. ಅವರ ಮೌನ ನೋಡಿ ನಾವೂ ಮಾತು ಬೆಳೆಸಲಿಲ್ಲ. ಒಂದು ಕ್ಷಣ ಬಿಟ್ಟು, "ನೋಡಿ ಆ ವಿಜ್ಞಾನ ವಿಭಾಗ ತುಂಬಾ ದುರ್ಬಲವಾಗಿದೆ. ವಿಭಾಗದ ಮುಖ್ಯಸ್ಥರು ಚೆನ್ನಾಗಿ ಕೆಲಸ ನಿರ್ವಹಿಸುತ್ತಿಲ್ಲ. ಹೆಂಡತಿ ಮಕ್ಕಳಿರುವ ಅವರನ್ನು ಮನೆಗೆ ಕಳಿಸಲಿಕ್ಕಾಗುತ್ತದೆಯೇ? ಕಿರಿಯ ಅಧ್ಯಾಪಕರು ಖಾಯಂ ಆಗದವರಾದರೂ ಪರವಾಗಿಲ್ಲ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅವರನ್ನು ಉಳಿಸಿಕೊಳ್ಳಬೇಕಾಗಿದೆ" ಎಂದು ಮಾನವೀಯ ಅನುಕಂಪ ವ್ಯಕ್ತಪಡಿಸಿದಾಗ, ನಾವು ಸುಮ್ಮನಾದೆವು. ಆದರೂ ನನ್ನ ಒಳ ಮನಸ್ಸು, "ಆಡಳಿತ ಮಂಡಳಿ ಆರ್ಥಿಕ ದುಸ್ಥಿತಿಯಲ್ಲಿರುವಾಗ ಇಂಥ ಔದಾರ್ಯ ಎಷ್ಟರ ಮಟ್ಟಿಗೆ ಔಚಿತ್ಯಪೂರ್ಣ? ಹಿರಿಯ ಅಧ್ಯಾಪಕರಿಗೆ ಅವರ ಕಾರ್ಯ ನಿರ್ವಹಣೆಯ ಬಗ್ಗೆ ಅತೃಪ್ತಿ ಸೂಚಿಸಿ, ಪ್ರಾಚಾರ್ಯರು ಅವರಿಗೆ ಸುಧಾರಿಸಿಕೊಳ್ಳಲು ಮಾರ್ಗದರ್ಶನ ಮಾಡಬಹುದಿತ್ತಲ್ಲ? ಇನ್ನೂ ಖಾಯಂ ಆಗದ ಶಿಕ್ಷಕರನ್ನೇ ಕಾರ್ಯಭಾರವಿಲ್ಲದಿರುವಾಗ ತೆಗೆದು ಹಾಕಿದರೇನು ತಪ್ಪು?" ಎಂದೆಲ್ಲಾ ಹೇಳುತ್ತಿದ್ದರೂ ಅವರ ಔದಾರ್ಯದ ನಡೆವಳಿಕೆಗೆ ತಣ್ಣೀರೆರಚಲು ನಾನೂ ಮುಂದಾಗಲಿಲ್ಲ.

ಹೊನ್ನಾವರದಲ್ಲಿ ಕಾಲೇಜು ಆರಂಭವಾದಾಗ, ಪಿ.ಯು.ಸಿ ಕಲೆ ಮತ್ತು ವಿಜ್ಞಾನ ಎರಡೇ ಕ್ಲಾಸುಗಳು. ಕಲಾ ವಿಭಾಗದ ಅಧ್ಯಾಪಕರಿಗೆ ವಾರಕ್ಕೆ ಮೂರು ನಾಲ್ಕು ತಾಸು, ವಿಜ್ಞಾನ ವಿಭಾಗದವರಿಗೆ ಪಾಠ ಪ್ರಯೋಗ ಎಲ್ಲ ಸೇರಿಸಿ ಐದಾರು ತಾಸು ಮಾತ್ರ ಕಾರ್ಯಭಾರ. ಕಾಲೇಜಿನ ಆರಂಭಿಕ ಹಂತದಲ್ಲಿ ಬಹಳಷ್ಟು ಕಾಲೇಜಿನವರು ಆರ್ಥಿಕ ಭಾರವನ್ನು ತಗ್ಗಿಸಿಕೊಳ್ಳಲು ಪಿ.ಯು.ಸಿ ಮಟ್ಟದಲ್ಲಿ ಡೆಮಾನ್‌ಸ್ಟ್ರೇಟರ್‌ರನ್ನು ನೇಮಿಸಿಕೊಳ್ಳಲು ವಿಶ್ವವಿದ್ಯಾಲಯ ಸೂಚಿಸಿದರೂ ನೇಮಿಸಿಕೊಳ್ಳುತ್ತಿರಲಿಲ್ಲ. ಆದರೆ ನಮ್ಮ ಕಾಲೇಜಿನ

ಏಷ್ಟೂ ಉಪನ್ಯಾಸಕರು ತಾವು ಉಪನ್ಯಾಸಕರು, ಪ್ರಯೋಗ ಉಸ್ತುವಾರಿ ನೋಡಲು ನಾವು ಡೆಮಾನ್‌ಸ್ಟ್ರೇಟರ್ ಅಲ್ಲ, ಎಂಬ ಸಬೂಬು ಹೇಳಿ ಪ್ರತಿ ವಿಭಾಗಕ್ಕೂ ಡೆಮಾನ್‌ಸ್ಟ್ರೇಟರ್ ನೇಮಕಾತಿ ಮಾಡುವಂತೆ ಸೂಚಿಸಿ, ಆಡಳಿತ ಮಂಡಳಿಯ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬೀಳುವಂತೆ ಮಾಡಿದರು. ಈ ಆರ್ಥಿಕ ಹೊರೆಯನ್ನು ವಿ.ಸೀ. ಮನಸ್ಸು ಮಾಡಿದ್ದರೆ ತಪ್ಪಿಸಬಹುದಾಗಿತ್ತು. ಈ ವಿಷಯ ಪ್ರಸ್ತಾಪ ಮಾಡಿದಾಗ ವಿ.ಸೀ. "ಈ ಪ್ರಶ್ನೆ ಉಪನ್ಯಾಸಕರಲ್ಲೇ ಮೂಡಬೇಕಿತ್ತು. ವಿಶ್ವವಿದ್ಯಾಲಯದ ಕಾನೂನು ಮುಂದೆ ಮಾಡಿ, ಅವರು ಹಠ ಹಿಡಿದಾಗ ನಾನೇನು ಮಾಡಬೇಕಿತ್ತು? ವಿಜ್ಞಾನ ಉಪನ್ಯಾಸಕರು ದೊರಕುವುದು ಕಷ್ಟಕರವಾದ ಈ ಪ್ರಸಂಗದಲ್ಲಿ ಇಷ್ಟವಿದ್ದರೆ ಕೆಲಸ ಮಾಡಿ, ಇಲ್ಲದಿದ್ದರೆ ಹೊರಡಿ ಅನ್ನಬೇಕಿತ್ತೆ? ನಾನಷ್ಟು ಕಠೋರನಾಗಲಾರೆ" ಎಂದು ಸುಮ್ಮನಾದರು. ಯಾರ ಮನವನ್ನೂ ನೋಯಿಸದ ಹೃದಯ ವೈಶಾಲ್ಯ ಅವರದು; ಅದೇ ಅವರ ದೌರ್ಬಲ್ಯವೂ ಹೌದು. ಅವರ ಉನ್ನತ ವ್ಯಕ್ತಿತ್ವ, ಘನ ಪಾಂಡಿತ್ಯ, ಸಜ್ಜನಿಕೆಯನ್ನು ನೋಡಿದ ಸಜ್ಜನರು ಅವರಿಗೆ ತಲೆಬಾಗಿದರು, ಧೂರ್ತರು ಅದರ ದುರುಪಯೋಗ ಪಡಿಸಿಕೊಂಡರು.

ವಿ.ಸೀ. ಅವರ ಜೊತೆ ಅತ್ಯಂತ ಭಕ್ತಿ ಗೌರವ ಹಾಗೂ ಸ್ನೇಹ ಸಲುಗೆಯಿಂದ ನಡೆದುಕೊಳ್ಳುವ ಪ್ರಾಧ್ಯಾಪಕರೊಬ್ಬರು ಯಾವುದೋ ತಪ್ಪು ಗ್ರಹಿಕೆಯಿಂದ, ಅವರ ಜೊತೆಗೊಮ್ಮೆ ಒರಟಾಗಿ ವರ್ತಿಸಿ, ಅವರ ಮನಸ್ಸಿಗೆ ನೋವಾಗುವಂತೆ ಮಾಡಿ, ಅವರ ಸಮ್ಮುಖದಿಂದ ಹೊರಗೆದ್ದು ನಡೆದ ಸಂದರ್ಭದಲ್ಲಿ ನಾನೂ ಮೂಕ ಪ್ರೇಕ್ಷಕನಾಗಿ ಅಲ್ಲೇ ಕುಳಿತಿದ್ದೆ. ನನಗೂ ಆ ಸನ್ನಿವೇಶ ಆಘಾತವನ್ನೇ ಉಂಟು ಮಾಡಿತ್ತು. ಅದಕ್ಕೆ ಕಾರಣಕರ್ತರೂ ನನ್ನ ಸ್ನೇಹಿತರೇ; ಅವರ ಆ ಬಗೆಯ ವರ್ತನೆಯನ್ನು ಕಂಡು ನನಗೂ ಆಶ್ಚರ್ಯ. ವಿ.ಸೀ. ಅವರ ಅತಿ ಒಳ್ಳೆಯತನದ ಪರಿಣಾಮವಾಗಿ ಏನೋ ಚಿಕ್ಕ ಪ್ರಮಾದವೊಂದು ಘಟಿಸಿದೆ; ಅದನ್ನೇ ಅತಿ ದೊಡ್ಡದು ಮಾಡಿ, ನನ್ನ ಸ್ನೇಹಿತ ಅಧ್ಯಾಪಕರು ರೇಗಾಡುವ ಅವಶ್ಯಕತೆಯಿಲ್ಲವಾಗಿತ್ತು– ಎಂದು ನನ್ನ ಅನಿಸಿಕೆ. ಆದರೆ ಆ ಸಂದರ್ಭದಲ್ಲಿ ಏನೂ ಮಾತಾಡುವಂತಿರಲಿಲ್ಲ. ವಿ.ಸೀ. ಅವರು ಅವರ ಕೂಗಾಟವನ್ನು ಕೇಳಿ, ತಮ್ಮ ಸ್ಥಿಮಿತವನ್ನು ಕಳೆದುಕೊಳ್ಳದೆ ಮೌನವಾಗಿ ಕೇಳುತ್ತ ಕುಳಿತ ಚಿತ್ರ ಇಂದೂ ನನ್ನ ಕಣ್ಮುಂದಿದೆ. ಅವರ ಸ್ಥಾನದಲ್ಲಿ ಇನ್ನಾರಿದ್ದರೂ ಕ್ರುದ್ಧರಾಗದೆ ಉಳಿಯಲು ಸಾಧ್ಯವೇ ಇರಲಿಲ್ಲ. ವಿ.ಸೀ. ಅವರು ಒಮ್ಮೆ ದೀರ್ಘ ಶ್ವಾಸ ತೆಗೆದು ಸುಮ್ಮನಾದರು. ಎಂಥ ಸ್ಥಿತಪ್ರಜ್ಞ ಮನೋಭಾವ! ನಾನೊಮ್ಮೆ ಬೇರೆ ಸಂದರ್ಭದಲ್ಲಿ ಆ ಪ್ರಸ್ತಾಪವನ್ನು ಮಾಡಿದಾಗ, "ಈ ವಿಷಯದಲ್ಲಿ ನಾನು ಏನು ಹೇಳಲಿ? ಅದು ಅವರ ಸಂಸ್ಕೃತಿ" ಎಂದು ಹೇಳಿದರೇ ವಿನಃ ಅವರ ವಿಷಯದಲ್ಲಿ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ; ಮಾತಾಡಲಿಲ್ಲ.

ನಮ್ಮ ಕಾಲೇಜಿನ ವಾರ್ಷಿಕೋತ್ಸವದ ಸಂದರ್ಭ: ನಾಟಕದಲ್ಲಿ ಚೆನ್ನಾಗಿ ಅಭಿನಯಿಸಿದ ಇಬ್ಬರು ವಿದ್ಯಾರ್ಥಿ ಕಲಾವಿದರ ಅಭಿನಯ ಪಟುತ್ವವನ್ನು ಮೆಚ್ಚಿದ ಗಣ್ಯ ಪ್ರೇಕ್ಷಕರೊಬ್ಬರು ಕಲಾವಿದರಿಗೆ ಬಹುಮಾನ ನೀಡಲು ಬಂದಾಗ, ನಾಟಕ ನಿರ್ದೇಶಕನಾದ ನಾನು, ಅವರಿಗೆ ಪ್ರಾಚಾರ್ಯರ ಅನುಮತಿ ಪಡೆದು ಬರಲು ಹೇಳಿದೆ. ಅವರು ಸಿಟ್ಟಾಗಿ, "ಇವರದೊಂದು ಇಲ್ಲದ ಕಾನೂನು. ನಾವು ಎಷ್ಟೋ ವಾರ್ಷಿಕೋತ್ಸವಗಳನ್ನು

ನೋಡಿದ್ದೇವೆ; ವಿದ್ಯಾರ್ಥಿಗಳ ಪ್ರೋತ್ಸಾಹಕ್ಕಾಗಿ ಬಹುಮಾನ ನೀಡಿದ್ದೇವೆ" ಇತ್ಯಾದಿ ಗದ್ದಲವೆಬ್ಬಿಸಿದರು. ಅಲ್ಲಿದ್ದ ನನ್ನ ಸಹೋದ್ಯೋಗಿ ಅಧ್ಯಾಪಕರೂ ಸಹ ಅವರ ಪರವಾಗಿಯೇ ವಾದಿಸಿ, "ಬಹುಮಾನ ನೀಡುವುದರಲ್ಲಿ ತಪ್ಪೇನು? ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದಂತಾಗುತ್ತದೆ" ಎಂದರು. ವಿದ್ಯಾರ್ಥಿಗಳ ಮುಖದಲ್ಲಿಯೂ ಅದೇ ಭಾವನೆ ಮೂಡಿದಂತಿತ್ತು. ನಾನು ವಾದ ಬೆಳಸದೆ, "ನೋಡಿ ಸ್ವಾಮಿ, ನಾವು ಪ್ರಾಚಾರ್ಯರ ಅಪ್ಪಣೆಯಿಲ್ಲದೆ ಈ ಕಾರ್ಯವನ್ನು ನಿರ್ವಹಿಸಲಾಗದು. ಪ್ರಾಚಾರ್ಯರು ಮುಂದೆ ಕುಳಿತಿದ್ದಾರೆ, ಅವರ ಒಪ್ಪಿಗೆ ಪಡೆದು ಬನ್ನಿ" ಎಂದೆ. ಆಗ ಉಪನ್ಯಾಸಕರೊಬ್ಬರು ಆ ಗಣ್ಯರನ್ನು ಕರೆದುಕೊಂಡು ಪ್ರಾಚಾರ್ಯರ ಅನುಮತಿ ಪಡೆಯಲು ಹೋದರು; ಪ್ರಾಚಾರ್ಯರು ಅನುಮತಿಸಲಿಲ್ಲ. ಕಾರಣ ಕೇಳಿದಾಗ ಸ್ವಲ್ಪ ಗಂಭೀರವಾಗಿ ಉಪನ್ಯಾಸಕರನ್ನು ಕುರಿತು, "ಕಾರಣ ಹೇಳಲು ಇದು ಸಮಯವಲ್ಲ, ನಾಳೆ ಚೇಂಬರಿಗೆ ಬನ್ನಿ ಹೇಳುತ್ತೇನೆ. ಈ ಬಹುಮಾನ ನೀಡಲು ಬಂದ ಮಹನೀಯರ ಹೆಸರು ಪ್ರಕಟಿಸದೆ, ಧನ್ಯವಾದ ಹೇಳಿ, ಬಹುಮಾನ ನಿರಾಕರಣೆಗಾಗಿ ವಿಷಾದವನ್ನು ಸೂಚಿಸಿರಿ; ಇನ್ನು ಮುಂದೆ ಯಾರೂ ಬಹುಮಾನ ಪ್ರಕಟಿಸಬಾರದೆಂದು ಪ್ರೇಕ್ಷಕರಲ್ಲಿ ವಿನಂತಿಸಿ," ಎಂದು ಹೇಳಿ ಕಳಿಸಿದರು. ಮಾರನೆಯ ದಿನ ನಾವಿಬ್ಬರೂ ಪ್ರಾಚಾರ್ಯರ ಕೊಠಡಿಗೆ ಹೋದಾಗ, "ಈ ರೀತಿ ಬಹುಮಾನ ಘೋಷಿಸುವ ಕ್ರಮ ಸರಿಯಾದುದಲ್ಲ. ನಾಳೆ ಯಾರೋ ತಲೆ ಹಿಡುಕನೊಬ್ಬ ತನ್ನ ಕೀಳು ಅಭಿರುಚಿಯನ್ನು ಪ್ರದರ್ಶಿಸಿ ತನಗೆ ಬೇಕಾದವರಿಗೆ ಬಹುಮಾನ ನೀಡಿ, ನಿಜವಾಗಿಯೂ ಉನ್ನತ ಮಟ್ಟದಲ್ಲಿ ಅಭಿನಯಿಸಿದ ಕಲಾವಿದನನ್ನು ಕಡೆಗಣಿಸುವ ಸಾಧ್ಯತೆಯಿಲ್ಲದಿಲ್ಲ. ಯಾರೋ ಕಿಲಾಡಿಗಳು ಸುಮ್ಮನೆ ತಮಗಿಷ್ಟ ಬಂದ ಹುಡುಗಿಯರಿಗೆ ತಮಾಷೆಗೆ ಬಹುಮಾನ ನೀಡಿ, ಅವರನ್ನು ಮುಜಗರಕ್ಕೆ ಸಿಕ್ಕಿಸಬಹುದು. ಅಭಿನಯ ಪಟುಗಳಿಗೆ ಬಹುಮಾನ ನೀಡುವುದಾದಲ್ಲಿ, ನಾವು ಪರಿಣತರಾದವರನ್ನು ನಿರ್ಣಾಯಕರನ್ನಾಗಿ ನಿಯಮಿಸಿ ಅವರ ಸಲಹೆಯಂತೆ ಬಹುಮಾನ ನೀಡಬಹುದು" ಎಂದು ಸೂಚಿಸಿದರು. ಬಾಳಿನ ಶುಚಿತ್ವಕ್ಕೆ ಬೆಲೆಯಿತ್ತ ವಿ.ಸೀ. ಅವರು ಕೀಳು ಅಭಿರುಚಿಯ ಪ್ರೇಕ್ಷಕರಿಂದಾಗಬಹುದಾದ ತೊಂದರೆ ನಿವಾರಣೆಗಾಗಿ ಕೈಕೊಂಡ ಸುಮಾರ್ಗವಿದು. ಈ ಸತ್‌ಸಂಪ್ರದಾಯ ಕಾಲೇಜಿನಲ್ಲಿ ಇನ್ನೂ ಮುಂದುವರಿಯುತ್ತಿದೆ.

ಬಹುಶ್ರುತರಾದ ವಿ.ಸೀ. ಅವರು ಪಾಠ ಮಾಡುವಾಗ ಅವರ ವಿಚಾರ ವಿಮರ್ಶೆ ಹಲವು ಮಗ್ಗುಲುಗಳಲ್ಲಿ ಬಿಚ್ಚಿಕೊಳ್ಳುತ್ತಿತ್ತು. ತೀಕ್ಷ್ಣ ವೈಚಾರಿಕತೆಯಿಂದ ಇಡಿಕಿರಿದ ಅವರ ಪಾಠ ಪ್ರವಚನಗಳು ಕೇವಲ ಸಿಲೆಬಸ್ ನೋಡಿ, ಪಠ್ಯ ಪುಸ್ತಕಗಳನ್ನಷ್ಟೇ ಪರೀಕ್ಷಾ ದೃಷ್ಟಿಯಿಂದ ಅಭ್ಯಸಿಸುವ ನಮ್ಮ ವಿದ್ಯಾರ್ಥಿಗಳಿಗೆ ಅರಗಿಸಿಕೊಳ್ಳಲು ಕಷ್ಟವಾಗುತ್ತಿತ್ತು. ವಿದ್ಯಾರ್ಥಿಗಳಿಗೆ ನೋಟ್ಸ್ ಕೊಡುವ ಸಂಪ್ರದಾಯಕ್ಕೆ ವಿ.ಸೀ. ವಿರೋಧವುಳ್ಳವರಾಗಿದ್ದರು. ಆದ್ದರಿಂದ ಸಾಮಾನ್ಯ ದರ್ಜೆಯ ಬಹುಸಂಖ್ಯಾತ ವಿದ್ಯಾರ್ಥಿಗಳಿಗೆ, ಅವರು ಎಷ್ಟೇ ಆಕರ್ಷಕವಾಗಿ ಪಾಠವನ್ನು ಮಾಡಿದರೂ, ಅವರ ಪಾಠ ವಿದ್ಯಾರ್ಥಿಗಳಿಗೆ ಕಗ್ಗಂಟಾಗಿ, ತರಗತಿಯಲ್ಲಿ ಕುಳಿತುಕೊಳ್ಳುವವರ ಸಂಖ್ಯೆ ವಿರಳವಾಗಿರುತ್ತಿತ್ತು. ಅವರ ಪಾಠ ಪ್ರವಚನಗಳ ಪ್ರಭಾವ ಕೇವಲ ಪರೀಕ್ಷಾ ದೃಷ್ಟಿಯನ್ನಿಟ್ಟು ಓದುವ ಹೆಚ್ಚಿನ ವಿದ್ಯಾರ್ಥಿಗಳ

ಮೇಲೆ ಅಷ್ಟಾಗಿ ಆಗದೆ, ನೋಟ್ಸು ಕೊಡುವ, ಸಿಲೆಬಸ್ ನೋಡಿ ಪಾಠ ಹೇಳುವ ಅಧ್ಯಾಪಕರ ಪ್ರಭಾವವೇ ಹೆಚ್ಚಾಗಿ ಆಗುತ್ತಿರುವುದನ್ನು ಕಂಡ ನಾನು ಆಶ್ಚರ್ಯಪಟ್ಟೆ; ಹಾಗೆಯೇ ವಿದ್ಯಾರ್ಥಿಗಳನ್ನು ಪಠ್ಯಪುಸ್ತಕಗಳ ಹುಳಗಳನ್ನಾಗಿಸುವ ನಮ್ಮ ಬಹುಸಂಖ್ಯಾತ ಅಧ್ಯಾಪಕರ ಬೋಧನಾ ಕ್ರಮಕ್ಕೆ ಅಸಹ್ಯ ಪಟ್ಟೆ. ಹಿಂದೆ ವಿ.ಸೀ. ಅವರು ಬೆಂಗಳೂರಿನಲ್ಲಿ ಪಾಠ ಮಾಡುವಾಗ ಅವರ ವರ್ಗದ ವಿದ್ಯಾರ್ಥಿಗಳ ಹೊರತಾಗಿ ಬೇರೆ ಬೇರೆ ವರ್ಗದ ವಿದ್ಯಾರ್ಥಿಗಳೂ ಸಹ ಅವರು ಪಾಠ ಮಾಡುವುದನ್ನು ಕೇಳಲು ಬರುತ್ತಿದ್ದರೆನ್ನುವುದನ್ನು ಅವರ ವಿದ್ಯಾರ್ಥಿಗಳಿಂದ ನಾನು ಕೇಳಿ ತಿಳಿದಿದ್ದೆ. ಈ ಇಪ್ಪತ್ತು–ಇಪ್ಪತ್ತೈದು ವರ್ಷಗಳಲ್ಲಿ ನಮ್ಮಲ್ಲಿ ಎಂಥ ದುರಂತಮುಖಿ ಬದಲಾವಣೆ!

ಒಮ್ಮೆ ನಾನು ಮತ್ತು ನನ್ನ ಹೆಂಡತಿ, ವಿ.ಸೀ. ಅವರು ಆರಾಮವಿಲ್ಲದ ಸಮಾಚಾರ ಕೇಳಿ, ಅವರೆಡೆ ಹೋಗಿದ್ದೆವು. ನಾವು ಹೋದಾಗ, ವಿ.ಸೀ. ಹಾಸಿಗೆಯ ಮೇಲೆ ಒರಗಿಕೊಂಡೇ ಇದ್ದರು. ಅವರಿಗೆ ಒಂದು ಲೋಟ ಬಿಸಿ ನೀರು ಬೇಕಾಗಿತ್ತು; ಅದಕ್ಕಾಗಿ ತಮ್ಮ ಶ್ರೀಮತಿಯನ್ನು ಕರೆದು ವಾತ್ಸಲ್ಯಪೂರ್ಣತೆಯಿಂದ ಅವರು ಬಿಸಿ ನೀರಿಗಾಗಿ ಕೇಳಿದ ರೀತಿ, ಹೆಂಡತಿಯನ್ನು ಗೌರವಪೂರ್ಣವಾಗಿ ಕಂಡ ಬಗೆ ಅನುಕರಣೀಯವಾಗಿತ್ತು. ಇಂಥ ಪತಿಗಳಿದ್ದಲ್ಲಿ ಸ್ತ್ರೀಯರು ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುವ ಪ್ರಮೇಯವೇ ಬರುತ್ತಿರಲಿಲ್ಲವೇನೋ?

ವಿ.ಸೀ. ಆತಿಥ್ಯಕ್ಕೆ ಹೆಸರಾದವರು. ಅವರ ಮನೆಗೆ ಹೋದವರು ತಿಂಡಿ ಕಾಫಿಗಳಿಲ್ಲದೇ ಹಿಂದಿರುಗಲಾರರು. ಮನೆಯಲ್ಲಿ ಅನಾನುಕೂಲತೆಯಿದ್ದಲ್ಲಿ ಹೋಟೆಲಿನಿಂದಾದರೂ ಒಳ್ಳೆಯ ಕಾಫಿ, ತಿಂಡಿಗಳನ್ನು ತರಿಸಿ ಅತಿಥಿಗಳನ್ನು ಸತ್ಕರಿಸದೇ ಇರುತ್ತಿರಲಿಲ್ಲ. ರುಚಿಕರವಾದ ತಿಂಡಿ ಹೊನ್ನಾವರದ ಯಾವ ಹೋಟೆಲಿನಲ್ಲಿ ದೊರೆಯುತ್ತಿದೆಯೆನ್ನುವುದೂ ಅವರಿಗೆ ಗೊತ್ತು. ಸ್ಥಳೀಯ ತಿಂಡಿಗಳ ವಿಷಯದಲ್ಲಿ ಮೆಚ್ಚಿಗೆ ವ್ಯಕ್ತಪಡಿಸುವ ಸ್ವಭಾವ ಅವರದು. ಅವರು ಹೊನ್ನಾವರ ಕಾಲೇಜಿನಿಂದ ಸೇವಾ ನಿವೃತ್ತಿಯನ್ನು ಹೊಂದಿ, ಬೆಂಗಳೂರಿಗೆ ಹಿಂದಿರುಗುವಾಗ, ನಾನು ಮತ್ತು ನನ್ನ ಶ್ರೀಮತಿ ಅವರನ್ನು ನಮ್ಮ ಮನೆಗೆ ಊಟಕ್ಕೆ ಆಮಂತ್ರಿಸಿದೆವು. ಆಗ ವಿ.ಸೀ. "ಏನಮ್ಮಾ ಪತ್ರೊಡೆ ಮಾಡಿ ಬಡಿಸುತ್ತೀರಾ? ಅಂದರೆ ಬರುತ್ತೇನೆ" ಎಂದು ಹೇಳಿ ನಕ್ಕರು. ನನಗೂ ಪತ್ರೊಡೆಯ ರುಚಿ ಗೊತ್ತಿರಲಿಲ್ಲ. ನನ್ನ ಹೆಂಡತಿಗೂ ಅದನ್ನು ಮಾಡಿ ಗೊತ್ತಿಲ್ಲ. ಆದರೂ ಅವಳು ತತ್‌ಕ್ಷಣ "ಬನ್ನಿ ಸಾರ್ ಪತ್ರೊಡೆ ಮಾಡಿ ಬಡಿಸುತ್ತೇನೆ" ಎಂದು ಬಿಟ್ಟಳು. ನನಗೆ ಆಶ್ಚರ್ಯ. ಅಂತೂ ಅವಳು ಪತ್ರೊಡೆ ಮಾಡುವುದನ್ನು ತನಗೆ ಪರಿಚಿತರಾದ ಹವ್ಯಕರಿಂದ ಕಲಿತು ಮಾಡಿ ವಿ.ಸೀ. ಅವರಿಗೆ ಬಡಿಸಿದಳು. ಊಟ ಮಾಡಿದ ವಿ.ಸೀ. ಸಂತೋಷದಿಂದ "ಪತ್ರೊಡೆ ಚೆನ್ನಾಗಿದೆ" ಎಂದು ನನ್ನ ಹೆಂಡತಿಗೆ ಶಿಫಾರಸು ಪತ್ರ ನೀಡಿದ್ದನ್ನು ನಾನು ಇನ್ನೂ ಮರೆತಿಲ್ಲ. ಪತ್ರೊಡೆಯ ರುಚಿ ವಿಮರ್ಶೆಗಿಂತ ಅವರು ಸ್ತ್ರೀಯರನ್ನು ಗೌರವದಿಂದ ಕಾಣುವ ರೀತಿ ಆದರ್ಶ ಪ್ರಾಯವಾಗಿತ್ತು.

ನಾನು ಪಿ.ಯು.ಸಿ ಪರೀಕ್ಷೆಯ ಮೌಲ್ಯಮಾಪಕನಾಗಿ ೧೯೮೨ರ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿಗೆ ಹೋಗಿದ್ದಾಗ ವಿ.ಸೀ. ಅವರನ್ನು ಕೊನೆಯ ಬಾರಿಗೆ ಕಂಡೆ. ಆ ಸಂದರ್ಭ

ಹೃದಯ ಸ್ಪರ್ಶಿಯಾದದ್ದು. ಚಾಮರಾಜ ಪೇಟೆಯಲ್ಲಿರುವ ಅವರ ಮನೆಗೆ ಹೋಗಿ 'ಸರ್' ಎಂದು ಬಾಗಿಲು ತಟ್ಟಿದಾಗ, 'ಯಾರು?' ಎಂದು ಹೊರಗೆ ಬಂದ ದುರ್ಬಲ ದೇಹದ ಕಳಾಹೀನ ವಿ.ಸೀ. ಅವರನ್ನು ಕಂಡು ಕರಗಿ ಹೋದೆ. 'ನಾನು ಎನ್. ಆರ್. ನಾಯಕ' ಎನ್ನುತ್ತಿರುವಾಗಲೇ ಭಾವೋದ್ವೇಗದಿಂದ ನನ್ನ ಕೈ ಹಿಡಿದು ಒಳಗೆ ಕರೆತಂದರು. 'ಹೇಗಿದ್ದೀರಿ ಸರ್, ಕ್ಷೇಮ ತಾನೆ?' ಎಂದಾಗ, 'ಇದ್ದೇನಪ್ಪ ಹೀಗೆ, ದಿನ ಎಣಿಸುವುದು' ಎನ್ನುವಾಗಲೇ ಅವರ ಕಣ್ಣು ಮಂಜಾಗಿ ಹನಿಗೂಡಿತ್ತು; ಮಾತು ಗದ್ಗದಿತವಾಯಿತು. ನನಗೂ ಏನು ಮಾತಾಡಬೇಕೆಂಬುದೇ ತಿಳಿಯದಾಯ್ತು. ಕ್ಷಣಕಾಲ ಇಬ್ಬರ ಮಧ್ಯದಲ್ಲಿ ಮೌನ ಆವರಿಸಿತು. ಸ್ವಲ್ಪ ಹೊತ್ತಿನ ಮೇಲೆ ವಿ.ಸೀ. ಅವರು ಸಾವರಿಸಿಕೊಂಡು ನಿರಾಳವಾಗಿ ಉಸಿರು ಬಿಟ್ಟು, ಹೊನ್ನಾವರದ ಸ್ನೇಹಿತರೆಲ್ಲರನ್ನೂ ನೆನೆಸಿಕೊಂಡು ಕುಶಲ ಸಮಾಚಾರ ಕೇಳಿದರು. ನನ್ನನ್ನು ಕುರಿತು 'ಈಗೇನು ಬರೆಯುತ್ತಿದ್ದೀರಿ? ಇನ್ನೂ ಜಾನಪದ ಲೋಕದಲ್ಲೇ ಇದ್ದೀರಾ? ಸಾಹಿತ್ಯದ ಇತರ ಕ್ಷೇತ್ರದೆಡೆಗೂ ಗಮನ ಹರಿಸಿ. ನೀವು ಮನಸ್ಸು ಮಾಡಿದರೆ ಸಾಹಿತ್ಯದ ಉಳಿದ ಕ್ಷೇತ್ರಗಳಲ್ಲೂ ಚೆನ್ನಾಗಿ ಬರೆಯಬಲ್ಲಿರಿ, ಯೋಚಿಸಿ ನೋಡಿರಿ' ಎಂದೆಲ್ಲಾ ಸಾಹಿತ್ಯಕ್ಕೆ ಸಂಬಂಧಿಸಿದ ವಿಚಾರವನ್ನೇ ಮಾತಾಡಿದರು. ನಾನು ಅವರ ಜೊತೆ ಸುಮಾರು ಮುಕ್ಕಾಲು ತಾಸು ಕಳೆದು, ಕಾಫಿ ತಿಂಡಿ ಮುಗಿಸಿ, 'ನಮ್ಮಲ್ಲಿಗೊಮ್ಮೆ ಬನ್ನಿ ಸರ್' ಎಂದು ವಿ.ಸೀ. ಅವರಿಗೆ ವಂದಿಸಿ ಹೊರಡಲು ಸಿದ್ಧನಾದೆ. ಆಗ ನನ್ನ ಭುಜ ಹಿಡಿದು ಕುಲುಕಿ 'ಬೆಂಗಳೂರಿಗೆ ಬಂದಾಗಲೆಲ್ಲ ಬರುತ್ತಿರಿ. ನಿಮ್ಮನ್ನೆಲ್ಲ ಮತ್ತೆ ಕಾಣುತ್ತೇನೋ ಇಲ್ಲವೊ' ಎಂದು ಮತ್ತೆ ಭಾವೋದ್ರೇಕಕ್ಕೊಳಗಾಗಿ ಕಣ್ಣೀರಿಟ್ಟರು. ನಾನು ವಿ.ಸೀ. ಅವರ ಕಣ್ಣಲ್ಲಿ ಕಣ್ಣೀರು ಕಂಡದ್ದು ಅದೇ ಮೊದಲು ಮತ್ತು ಕಡೇಸಲ. ಅನಂತರ ನಾನು ವಿ.ಸೀ. ಅವರನ್ನು ಮತ್ತೆ ನೋಡಲಿಲ್ಲ. ಇಂದು ಇರುವುದು ಕೇವಲ ನೆನಪು.

ಕೋಮಲ ಪ್ರಕೃತಿಯವರು

"ವಿ.ಸೀ. ವಿಶೇಷವಾಗಿ ಸ್ನೇಹಪರರು. ಸ್ನೇಹಿತರೊಂದಿಗೆ ಸುಖಸಂಕಥಾವಿನೋದ ಗೋಷ್ಠಿಗಳಲ್ಲಿ ಪಾಲ್ಗೊಳ್ಳುವುದು ಅವರಿಗೆ ಪ್ರೀತಿಯ ಹವ್ಯಾಸವಾಗಿದ್ದಿತು. ಅವರ ಗೆಳೆಯರ ಬಳಗವೂ ದೊಡ್ಡದು. ಮೇಲಾಗಿ, ಅವರದ್ದು ಕೃತಜ್ಞತಾಭಾವ. ತಮಗೆ ಎಂದಾದರೂ ಹೇಗಾದರೂ ಸಂತೋಷವನ್ನೋ ಸಮಾಧಾನವನ್ನೋ ಒದಗಿಸಿದ ಪ್ರಸಂಗವಾಗಲಿ, ವ್ಯಕ್ತಿಯಾಗಲಿ ನೆನಪಿನಲ್ಲಿರಿಸಿಕೊಂಡು ಮೆಲಕುಹಾಕುತ್ತ ಸಂತೋಷಪಡುವರು; ತಮಗೆ ಒಂದಿಷ್ಟು ಉಪಕಾರಮಾಡಿದವರೆಂದರೆ ಅವರನ್ನೆಂದಿಗೂ ಮರೆಯರು. ಯಾರಾಗಲಿ ಅವರೊಡನೆ ವಿಶ್ವಾಸದಿಂದ ಮಾತನಾಡಲಿ, ಪ್ರೀತಿಯನ್ನೊ ಗೌರವವನ್ನೊ ತೋರಿಸಲಿ, ಕರಗಿ ನೀರಾಗುವರು, ಕಣ್ಣು ತೇವವಾಗುವುದು. ಅಷ್ಟು ಕೋಮಲ ಪ್ರಕೃತಿ ಅವರದ್ದು."

ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್
'ವ್ಯಕ್ತಿಚಿತ್ರ ಸಂಪುಟ' ಭಾಗ-೧, ಪು. ix

ಬದುಕ ಪ್ರೀತಿಸುವ ಚೈತನ್ಯ ತುಂಬಿದ ವಿ.ಸೀ.

ವಿಜಯಾ

ಹಟ ಮಾಡುವ ಮನಸ್ಸನ್ನು ಆಪ್ತವಾಗಿ ಆವರಿಸಿ, ಮೆದುವಾಗಿಸಿ ಕೈಹಿಡಿದು ನಡೆಸುವಂಥ ವ್ಯಕ್ತಿತ್ವ ವಿ.ಸೀ. ಅವರದು. ಅವರೊಂದಿಗಿನ ನನ್ನೊಡನಾಟದ ಬಗ್ಗೆ ಬಹಳಷ್ಟು ಹೇಳಬೇಕೆನಿಸುತ್ತಿತ್ತು. ಆದರೆ ಎಲ್ಲಕ್ಕೂ ಸೂಕ್ತವಾದ ವೇದಿಕೆ ಬೇಕು. ಎಲ್ಲ ವೇದಿಕೆಯಲ್ಲೂ ಅಂತರಂಗದ ಮಾತನ್ನು ಹೇಳಿಕೊಳ್ಳುವುದು ಸಾಧ್ಯವಿಲ್ಲ. ಹಾಗಾಗಿ ಎಷ್ಟೋ ಬರಹ–ಭಾಷಣಗಳು ಆಯಾ ಸಂದರ್ಭದ ಔಚಿತ್ಯಕ್ಕೆ ಮಾತ್ರವಾಗುವುದರಿಂದ ನಮ್ಮೊಳಗಿನ ಆಪ್ತ ಮೂಲೆಯಲ್ಲಿ ಬೆಚ್ಚನೆ ನೆನಪಾಗಿ ಕೂತಿರುವ ಎಷ್ಟೋ ವಿಷಯಗಳು ತೆರೆದುಕೊಳ್ಳುವುದೇ ಇಲ್ಲ. ಈ 'ವೇದಿಕೆ'ಯ ಮೂಲಕ ಆತ್ಮ ಚರಿತ್ರೆಯಂಥ ಬರಹವಲ್ಲದೆ ಬೇರೆಲ್ಲಿಯೂ ಹೇಳಿಕೊಳ್ಳಲು ಸಾಧ್ಯವಿರದ ಕೆಲವು ಆತ್ಮೀಯ ಕ್ಷಣಗಳನ್ನು ಇಲ್ಲಿ ನೆನೆಯುತ್ತಿದ್ದೇನೆ.

ವಿ.ಸೀ. ನನ್ನ ಬದುಕಿನಲ್ಲಿ ಬಹುಮುಖ್ಯ ಪಾತ್ರ ವಹಿಸಿದ ಕೆಲವೇ ಹಿರಿಯರಲ್ಲಿ ಒಬ್ಬರು; ಬಹುಮುಖ್ಯರು. ೧೯೭೦ರಲ್ಲಿ ಅವರೊಂದಿಗೆ ಪ್ರಾರಂಭವಾದ ವಿಶ್ವಾಸ ಬಹುಕಾಲ ನಡೆದು ಬಂತು. ಅದೊಂದು ಅಪೂರ್ವ ಬಂಧ; ಸಂಬಂಧ. ನನ್ನ ಬದುಕು–ಬರಹದ ಮುಖ್ಯ ಘಟ್ಟಗಳಲ್ಲಿ ಅವರ ಮಾರ್ಗದರ್ಶನ ಪಡೆದುಕೊಂಡೆ. ಒಂದು ಬದುಕನ್ನು ಎಂಥ ಸಮಯದಲ್ಲೂ ಪ್ರೀತಿಸುವುದು ಎಷ್ಟು ಮುಖ್ಯ, ಹೇಗೆ ಎಂಬುದನ್ನು ನನಗೆ ಕಲಿಸಿದವರು ವಿ.ಸೀ.

೧೯೭೦ರಲ್ಲಿ ಬಿ. ಎನ್. ಗುಪ್ತರಿಂದ 'ಮಲ್ಲಿಗೆ' ಮಾಸ ಪತ್ರಿಕೆಯನ್ನು ಬೆಂಗಳೂರು ಪ್ರೆಸ್ ಕೊಂಡುಕೊಂಡಿತು. ಬಾಪ್ಕೊ ಪ್ರಕಾಶನದಲ್ಲಿ 'ಮಲ್ಲಿಗೆ' ಪ್ರಕಟವಾಗಲು ಪ್ರಾರಂಭವಾಯಿತು. ಅಲ್ಲಿಯ 'ಬಿಸಿನೆಸ್ ಮ್ಯಾನೇಜ್‌ಮೆಂಟ್' ಪತ್ರಿಕೆಯನ್ನು ಸಂಪಾದಿಸುತ್ತಿದ್ದ ಶ್ರೀ ತಾಂಡವೇಶ್ವರ ಅವರು ಸಂಪಾದಕರಾಗಿದ್ದರು. ಆ ಸಂದರ್ಭದಲ್ಲಿ 'ಪ್ರಜಾಮತ' ಪತ್ರಿಕೆಯ ಮಹಿಳೆ, ಮಕ್ಕಳು ವಿಭಾಗಗಳನ್ನು ನಿರ್ವಹಿಸುತ್ತಿದ್ದ ನಾನು 'ಮಲ್ಲಿಗೆ'ಯ ಸಹಸಂಪಾದಕಿಯಾಗಿ ಸೇರಿದೆ. 'ಮಲ್ಲಿಗೆ'ಯಂಥ ಪತ್ರಿಕೆಯು ಸಾಹಿತ್ಯ ವಲಯದಲ್ಲೂ ತನ್ನ ಅಸ್ತಿತ್ವವನ್ನು ಸ್ಥಾಪಿಸಬೇಕೆಂಬ ಅಪೇಕ್ಷೆ ನಮ್ಮದು. ಆದರೆ ಹಿರಿಯ ಸಾಹಿತಿಗಳಾಗಲೀ, ಪ್ರಸಿದ್ಧರಾದ ಯುವ ಬರಹಗಾರರೇ ಆಗಲಿ, ಸ್ವಯಂ ಪ್ರೇರಿತರಾಗಿ ಆ ಪತ್ರಿಕೆಗೆ ಹೆಚ್ಚಾಗಿ ಬರಹಗಳನ್ನು ಕೊಡುತ್ತಿರಲಿಲ್ಲ. ಹಾಗಾಗಿ ಹಿರಿಯ ಸಾಹಿತಿಗಳ ಸಂದರ್ಶನಗಳನ್ನು ಪ್ರಕಟಿಸುವ ಯೋಜನೆ

ಹಾಕಿಕೊಂಡೆವು. ಮಾಸ್ತಿಯವರಿಂದ ಆರಂಭಿಸಿ ಅನೇಕ ಖ್ಯಾತನಾಮರನ್ನು ಸಂದರ್ಶಿಸುವ ಸದವಕಾಶ ನನ್ನದಾಗಿತ್ತು. ಹಾಗೆ ವಿ.ಸೀ. ಅವರ ಬಳಿಗೂ ನನ್ನನ್ನು ಕರೆದೊಯ್ದವರು ಶ್ರೀ ತಾಂಡವೇಶ್ವರ ಅವರೇ. ವಿ.ಸೀ. ನಮ್ಮನ್ನು ಹೊಸಬರು ಎಂದು ಪರಿಗಣಿಸಲೇ ಇಲ್ಲ. ನಮ್ಮ ಹೆಸರು ಹೇಳುತ್ತಿದ್ದ ಹಾಗೇ "ಬನ್ನಿ, ಬನ್ನಿ, ಗೊತ್ತು ಬನ್ನಿ" ಎಂದರು.

ಬೆರಗಾದ ನಮ್ಮತ್ತ ನೋಡಿ ನಗುತ್ತಾ "ನಾನು 'ಮಲ್ಲಿಗೆ' ಪತ್ರಿಕೆ ಓದುತ್ತಿದ್ದೇನೆ" ಅಂದರು.

ಕನ್ನಡ–ಇಂಗ್ಲಿಷ್ ಭಾಷೆಯ ಎಲ್ಲ ಪತ್ರಿಕೆಗಳೂ ಹಿರಿ–ಕಿರಿ ಭೇದವಿಲ್ಲದೆ ವಿ.ಸೀ. ಅವರ ಮನೆಯಲ್ಲಿ ಕಾಣಬಹುದಿತ್ತು. ದೇಶ–ವಿದೇಶಗಳಿಂದಲೂ ಪತ್ರಿಕೆಗಳನ್ನು ಚಂದಾ ಕೊಟ್ಟು ತರಿಸಿಕೊಳ್ಳುತ್ತಿದ್ದರು. ಸ್ವಚ್ಛವಾದ ಬಿಳಿಯ ಮೇಲು ಹೊದಿಕೆಯಿರುವ ಹಾಸಿಗೆ, ಒರಗು ದಿಂಬು, ಅದರ ಮೇಲೆ ಬಿಳಿಯ ಪಂಚೆ, ಮಲ್ಲಿನದೇ ಬನಿಯನ್ ತೊಟ್ಟ ನಗುಮುಖದ ವಿ.ಸೀ. ಕೈಯಲ್ಲೊಂದು ಪತ್ರಿಕೆ, ಪುಸ್ತಕ – ಅವರ ಸುತ್ತಲೂ ಬೀರುವಿನಲ್ಲಿ, ಮೇಜಿನಲ್ಲಿ, ಅಕ್ಕ–ಪಕ್ಕಗಳಲ್ಲಿ ಎಲ್ಲಿ ನೋಡಿದರೂ ಪುಸ್ತಕಗಳೇ ಪುಸ್ತಕಗಳು. ಅವುಗಳ ನಡುವೆ ವಿ.ಸೀ. ಕಳೆದುಹೋಗುತ್ತಿರಲಿಲ್ಲ. ಏನು ಕೇಳಿದರೂ ತಡಕಾಡದೆ ಅವರ ಕೈ ಗೊತ್ತಾದ ಜಾಗಕ್ಕೆ ಹೋಗಿ ಒಂದು ಪುಸ್ತಕ ಎತ್ತಿ, ಸಂದೇಹವಿಲ್ಲದೆ ಪುಟ ತಿರುವಿ ತಜ್ಞರ ಹೇಳಿಕೆಯ 'ಕೋಟ್ಸ್' ಸಹಿತ ಉತ್ತರ ಕೊಡಲು ಅವರಿಗೆ ಸಾಧ್ಯವಿತ್ತು.

'ಮಲ್ಲಿಗೆ' ಪತ್ರಿಕೆಯನ್ನು ಶುದ್ಧ ಅಭಿರುಚಿಯುಳ್ಳ ಜನಪ್ರಿಯ ಪತ್ರಿಕೆಯೂ ಆಗಿಸುವ ಬಗ್ಗೆ ಬಹಳ ಹೊತ್ತು ಚರ್ಚಿಸಿದರು. ಎಲ್ಲ ಬಗೆಯ ಓದುಗರೂ ಮುಖ್ಯ, ಧಾರಾವಾಹಿಗಳು, ಕಥೆಗಳು, ನಗೆ ಲೇಖನಗಳು ಇವಾವುವೂ ನಿರ್ಲಕ್ಷ್ಯಕ್ಕೆ ಒಳಗಾಗಬಾರದು ಎಂಬ ಎಚ್ಚರಿಕೆ ನೀಡಿದರು. ತಾಂಡವೇಶ್ವರ ಅವರು ಸಂಪಾದಿಸುತ್ತಿದ್ದ 'ಬಿಸಿನೆಸ್ ಮ್ಯಾನೇಜ್‌ಮೆಂಟ್' ಪತ್ರಿಕೆಯಲ್ಲಿ ಬರುತ್ತಿದ್ದ ಆ್ಯಂಡ್ರೂ ಕಾರ್ನಗಿಯನ್ನು ಕುರಿತ ಲೇಖನಗಳನ್ನು ಆಧರಿಸಿ ಕನ್ನಡದಲ್ಲಿ ವಿಶೇಷ ಲೇಖನಗಳನ್ನು ಕಥೆಯ ರೂಪದಲ್ಲಿ ನಾನು ಬರೆಯುತ್ತಿದ್ದೆ. ಅದನ್ನು ಗಮನಿಸುತ್ತಿದ್ದರು ವಿ.ಸೀ.!

"ನೀವು ಬರೆಯುತ್ತಿರುವ ಕಾರ್ನಗಿ ಕುರಿತ ಲೇಖನ ಕಥೆ–ಲೇಖನ–ನಾಟಕಗಳ ಮಿಶ್ರಣದ ಹಾಗೆ. ಓದಿಸಿಕೊಳ್ಳುತ್ತೆ. 'ಮಲ್ಲಿಗೆ' ಓದುಗರಿಗೆ ತಟ್ಟುವಂತಹ ಬರಹ" ಎಂತ ಮೆಚ್ಚಿಕೊಂಡರು. ವಿ.ಸೀ. ಅಂಥ ಹಿರಿಯರು ತಾಂಡವೇಶ್ವರ ಅವರ ಎದುರೇ ಹಾಗೆ ಹೇಳಿದಾಗ ನನಗೆ ಒಂದು ಕಡೆ ನಾಚಿಕೆ–ಭಯ ಎಲ್ಲ ಸೇರಿ ಬೆವೆತುಹೋಗಿದ್ದೆ.

"ಆ್ಯಂಡ್ರೂ ಕಾರ್ನಗಿಯನ್ನು ಮ್ಯಾನೇಜ್‌ಮೆಂಟ್ ಕಡೆಯವನು ಅಂತ ಶ್ರಮಿಕ ವರ್ಗ ಗುಮಾನಿಯಿಂದ ನೋಡುತ್ತೆ. ಆದರೆ ಆತ ಎಂಥ ಜೀನಿಯಸ್ ಅಂತ ಅರ್ಥಮಾಡಿಕೋಬೇಕು. ಇಂಡಸ್ಟ್ರಿಯಲ್ ಎಕನಾಮಿಕ್ಸ್ ಅನ್ನ ಸಮತೋಲದಲ್ಲಿಡೋಕೆ ಕಾರ್ನಗಿಯಂಥ ಮುತ್ಸದ್ದಿಗಳು ಬೇಕು. ಇಂಥ ಕಡೆ ಕೇವಲ ವರ್ಗ ಸಮರ ಅಂತ ಕೂರೋಕಾಗಲ್ಲ. ಬೆಟರ್‌ಮೆಂಟ್ ಆಫ್ ಲೇಬರ್ ಅಂದ್ರೆ ಮ್ಯಾನೇಜ್‌ಮೆಂಟ್ ಕುಸೀಬೇಕೂಂತಲ್ಲ...." ಅವರು ಸುದೀರ್ಘವಾಗಿ ಕಾರ್ನಗಿ ಬಗ್ಗೆಯೂ ಹೇಳತೊಡಗಿದರು. ಕಾರ್ನಗಿಯ ಅನೇಕ

ಹೇಳಿಕೆಗಳು, ಅವನ ಸಮಯಾವಧಾನದ ಘಟನೆಗಳು ಎಲ್ಲವೂ ಮಾತಿನಲ್ಲಿ ಉರುಳಿ ಬರುತ್ತಿದ್ದವು. ಮ್ಯಾನೇಜ್‌ಮೆಂಟ್ ಎಕ್ಸ್‌ಪರ್ಟ್ ಆಗಿದ್ದ ಶ್ರೀ ತಾಂಡವೇಶ್ವರ ಅವರೂ ಒಂದು ಕ್ಷಣ ತತ್ತರಿಸಿದರೇನೋ ಆ ದಿನ ಎನ್ನಿಸಿತು.

ಕೊನೆಗೂ ವಿ.ಸೀ. ಅವರ ಸಂದರ್ಶನ ಮಾಡಿಕೊಂಡೆ. ತಡೆದು ಒಂದು ಗೊತ್ತಾದ ದಿಕ್ಕಿನಲ್ಲಿ ಮಾತು ಬೆಳೆಸುವುದು ಸುಲಭದ ಕೆಲಸವಾಗಿರಲಿಲ್ಲ. ಹಲವು ಗಂಟೆಗಳೇ ಸರಿದಿದ್ದವು. ಒಂದಲ್ಲ, ನಾಲ್ಕು ಬಾರಿ ಒಳಗಿನಿಂದ ಕಾಫಿ ಸರಬರಾಜಾಗಿತ್ತು. ಗುರುತು ಹಾಕಿಕೊಂಡದ್ದೆಲ್ಲ ಅಕ್ಷರಕ್ಕಿಳಿಸಿ ಸಂದರ್ಶನ ಸಿದ್ಧ ಮಾಡಿಕೊಂಡೆ. ಒಮ್ಮೆ ನೋಡಿಬಿಡಿ ಎಂದೆ. ಓದಿ ಸಂತೋಷಪಟ್ಟರು. "ಇನ್ನು ಮುಂದೆ ನನ್ನ ಯಾವ ಮಾತನ್ನು ತೆಗೆದು ನೀವು ಬರಹದಲ್ಲಿ ಬಳಸಿಕೊಂಡರೂ, ಕೋಟ್ ಮಾಡಿದರೂ ನನ್ನ ಅಭ್ಯಂತರವಿಲ್ಲ. ಸರಿಯಾಗಿ ಬಳಸ್ತೀರಿ ಅಂತ ನಂಬಿಕೆ ಬಂತು" ಅಂತ ವಿ.ಸೀ. ಹೇಳಿದಾಗ ನಾನು ನೆಲದ ಮೇಲಿರಲಿಲ್ಲ.

"ಒಂದು ಮಾತ್ರ ನೆನಪಿಡಿ. ನನ್ನ ಹೆಸರು ಸರಿಯಾಗಿ ಬರೀಬೇಕು. ಸೀತಾರಾಮಯ್ಯ ಅಂದುಬಿಟ್ರೆ ಸರಿ. ಈ ವಿ.ಸೀ. ಅಂತಾರೆ ನೋಡಿ, ಆಗ 'ವಿ' ಪಕ್ಕದಲ್ಲಿ ದೀರ್ಘ ಹಾಕಿಬಿಡ್ತಾರೆ. ಅಂಥ ತಪ್ಪು ನೀವೂ ಮಾಡಬಾರದು" ಅಂದರು. ಎಲ್ಲ ವಿಷಯದಲ್ಲೂ ಅವರು ಇಂಥ ಚೊಕ್ಕತನ ನಿರೀಕ್ಷಿಸುತ್ತಿದ್ದರು.

ಆನಂತರದ ದಿನಗಳಲ್ಲಿ ವಿ.ಸೀ. ನನ್ನನ್ನು ತುಂಬ ಆತ್ಮೀಯವಾಗಿ ನಡೆಸಿಕೊಂಡರು. ನೀವು ಹೋಗಿ, ನೀನು, ಮಗಳೇ ಗಳ ವರೆಗೆ ನಾವು ವಿಶ್ವಾಸಿಗಳಾದೆವು. ನನಗೆ ಅವರು 'ಅಪ್ಪ' ಆದರು. ಎಲ್ಲ ವಿಷಯಗಳನ್ನು ಅವರ ಬಳಿ ಚರ್ಚಿಸುತ್ತಿದ್ದೆ.

'ಮಲ್ಲಿಗೆ'ಯಲ್ಲಿ ಕೆ. ಎಸ್.ನ. ಅವರ ಸಂದರ್ಶನ ಪ್ರಕಟವಾಯಿತು. ಒಂದು ಕಡೆ 'ಮೈಸೂರು ಮಲ್ಲಿಗೆಯ ಕವಿ' ಎಂದು ಬರೆದಿದ್ದೆ. ವಿ.ಸೀ. ಆ ಸಾಲನ್ನು ಅಂಡರ್‌ಲೈನ್ ಮಾಡಿ ಇಟ್ಟಿದ್ದರು. ನಾನು ಹೋದಾಗ

"ನೀನು ಹೀಗೆ ಬರೆಯಬಾರದಿತ್ತು. ಇದು ನರಸಿಂಹಸ್ವಾಮಿಗೆ ನೋವಾಗೋ ಮಾತು" ಅಂದರು.

"ಯಾಕೆ ಅಪ್ಪಾ, ನಾನು ತುಂಬ ಗೌರವದಿಂದ ಹೇಳಿದೇನೆ. ಆ ಕವಿತೆಗಳಿಂದ ಕೆ.ಎಸ್.ನ. ಒಂದು ಲೆಜೆಂಡ್ ಆಗಿಬಿಟ್ಟರಲ್ಲ."

"ಹೌದು, ನಿನ್ನ ಭಾವನೆ ನನಗೆ ಅರ್ಥ ಆಗುತ್ತೆ. ಆದರೆ ಈಚೆಗೆ ಸಾಹಿತ್ಯ ಕ್ಷೇತ್ರದಲ್ಲಿ ವಿಚಿತ್ರ ಗುಂಪುಗಾರಿಕೆ, ರಾಜಕೀಯ ತೂರಿಕೊಂಡುಬಿಟ್ಟಿದೆ. ಒಂದು ಗುಂಪು ಈ ಬಗೆಯ ಕವಿತೆಗಳನ್ನು ಜೊಳ್ಳು ಎಂದು ವಾದಿಸಲು ಪ್ರಾರಂಭಿಸಿದೆ. ನರಸಿಂಹಸ್ವಾಮಿಯನ್ನು ಗೇಲಿ ಮಾಡಿದ ಪದ್ಯಗಳನ್ನು ಬರೆದಿದಾರೆ" ಎಂತ ಕೊಂಚ ನೊಂದುಕೊಂಡೇ ಹೇಳಿದರು.

ಆನಂತರವೇ ನಾನು ಗೋಪಾಲಕೃಷ್ಣ ಅಡಿಗರು ಅಂಥದೊಂದು ಕವಿತೆ ಬರೆದಿದ್ದರೆಂದೂ, ಅದನ್ನಾಧರಿಸಿ ಯಾರೋ ನಾಟಕ ಮಾಡಲು ಪ್ರಯತ್ನಿಸಿದರೆಂಬ ವಿಷಯಗಳನ್ನು ಅವರಿವರಿಂದ ಕೇಳಿ ತಿಳಿದುಕೊಂಡೆ. ಕೆ.ಎಸ್.ನ. ಅವರ ಬಳಿ ಕ್ಷಮೆ

ಕೋರಿ, ವಿ.ಸೀ. ಹೇಳಿದ್ದರಿಂದ ತಿಳೀತು ಅಂತ ವಿವರಿಸಿದೆ. ಅವರು ನಕ್ಕುಬಿಟ್ಟರು. "ನೀವೇನೂ ಅಂತ ನಂಗೆ ಗೊತ್ತಿದೆ. ನಾನು ಬೇಜಾರಾಗೋಲ್ಲ" ಅಂದರು.

ಅನಂತರ ಕೆ.ಎಸ್.ನ. ಅವರ 'ತೆರೆದ ಬಾಗಿಲು' ಮೊದಲಾದ ಕವಿತೆಗಳು ಪ್ರಕಟವಾದವ್ವು, ಕೆ.ಎಸ್.ನ. ಯಾವ ಮುಲಾಜೂ ಇಲ್ಲದೆ ಸಭೆಗಳಲ್ಲಿ ಕೆಲವು ಘೋರಣೆಗಳನ್ನು ಟೀಕಿಸತೊಡಗಿದ್ದು, ಇಂದಿನವರೆಗೆ ಕೆ.ಎಸ್.ನ. ಅವರ ಸ್ಥಾನವನ್ನು ಯಾವುದೂ ಅಲುಗಾಡಿಸಲು ಸಾಧ್ಯವಾಗಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ನಾವು ಗೋಪಾಲಕೃಷ್ಣ ಅಡಿಗರೊಂದಿಗೂ ಇಂಥ ಅನೇಕ ಚರ್ಚೆಗಳನ್ನು ಮಾಡುತ್ತಿದ್ದೆವು. ಸ್ವಭಾವತಃ ಅಡಿಗರು ಹಾಗೆ ಯಾರನ್ನು ನೋಯಿಸುವವರಲ್ಲ. ಕೆ.ಎಸ್.ನ. ಬಗ್ಗೆ ಅವರು ಕಟುವಾಗಿ ವಿಮರ್ಶಿಸುತ್ತಲೂ ಇರಲಿಲ್ಲ. ಏನೇನೋ ನಡೆದು ಹೋದ ಕಾಲಘಟ್ಟವದು.

ವಿ.ಸೀ. ಎಂದರೆ ಕೆ.ಎಸ್.ನ.ಗೆ ಅಪಾರ ಗೌರವ. ಏನು ಹೇಳಿದರೂ ಒಲ್ಲೆ ಎನ್ನದೆ ನಿರ್ವಹಿಸುತ್ತಿದ್ದ ಗುರು–ಶಿಷ್ಯ ಸಂಬಂಧ. ಮಾತು ಮಾತಿಗೆ ಬಂದು 'ನರಸಿಂಹಸ್ವಾಮಿಗೆ ಗದ್ಯ ಬರೆಯೋದು ಕಷ್ಟ' – ಎಂತ ವಿ.ಸೀ. ಅಭಿಪ್ರಾಯಪಟ್ಟರು.

"ಸಾಧ್ಯ, ಅವರು ಯುವಜನ ಇಲಾಖೆಯ ಮ್ಯಾಗಝಿನ್ ಎಡಿಟ್ ಮಾಡ್ತಿಲ್ಲವಾ?" ಅಂತ ನನ್ನ ವಾದ.

'ಹಾಗಾದರೆ ಅವರ ಕೈಲಿ ಗದ್ಯ ಬರೆಸಿಬಿಡು ನೋಡ್ತಿನಿ.'

'ಬರೆಸ್ತೀನಿ ನೋಡಿ.... ಬರೆಸಿದ್ರೆ ಏನು ಕೊಡ್ತೀರಿ' ಹೀಗೆ ವಿ.ಸೀ. ಜೊತೆ ಸವಾಲು ಹಾಕಿ ಹೊರಟೆ.

'ನಾನು, ಗದ್ಯ ಬರೆಯೋದೇ' ಅನ್ನುತ್ತಲೇ ನನಗೆ 'ಇಲ್ಲ' ಎನ್ನಲಾಗದೇ ನಾಲ್ಕು ಪುಟದ ಒಂದು ಲೇಖನ ಬರೆದುಕೊಟ್ಟರು ಕೆ.ಎಸ್.ನ. ಆ ಲೇಖನದಲ್ಲೂ ವಿ.ಸೀ. ತಮ್ಮ ಕಾವ್ಯದ ಹಿಂದಿನ ಶಕ್ತಿ ಎಂಬ ಮಾತನ್ನು ಪುನರುಚ್ಚರಿಸಿದ್ದರು. ಅವರಿಬ್ಬರೂ ಒಬ್ಬರನ್ನೊಬ್ಬರು ಪ್ರಸ್ತಾಪಿಸದೇ ಇದ್ದುದು ತೀರಾ ಅಪರೂಪ. ಎಲ್ಲ ಮಾತುಕತೆಯಲ್ಲೂ ಸಹಜವಾಗೇ ಏಳುತ್ತಿದ್ದ ಅಭಿಪ್ರಾಯಗಳವು.

ಅಂತೂ ಕೆ.ಎಸ್.ನ. ಕೈಲಿ ಲೇಖನ ಬರೆಸಿದೆನೆಂಬ ಹಮ್ಮು–ಬಿಮ್ಮು ತುಂಬಿಕೊಂಡು ವಿ.ಸೀ. ಮನೆಗೆ ಹೋದೆ. ನನ್ನನ್ನು ನೋಡುತ್ತಲೇ ಅವರಿಗೆ ಅರ್ಥವಾಗಿ ಹೋಗಿತ್ತು.

"ಓ ಹೋ ಹೋ.... ಬಂದು ಬಿಟ್ಟ್ಯಾ.... ನರಸಿಂಹಸ್ವಾಮೀನ ಗೋಳು ಹೊಯ್ದೆಯಾ?" ಅನ್ನುತ್ತಲೇ ಆ ಲೇಖನ ಓದಿದರು.

"ನರಸಿಂಹಸ್ವಾಮಿ ಬರೆದಿದಾರೆ, ಆದರೆ...."

"ಯಾಕೆ, ಯಾಕೆ ಅಪ್ಪಾ, ಅಲ್ಲಿ ನೀವು ಏನೂ ಹುಡುಕೋಕೆ ಆಗೋಲ್ಲ. ಅದು ಕೆ.ಎಸ್.ನ. ಅವರೇ ಬರ್ದಿದ್ದು...." ಅಂದೆ ಆತಂಕದಿಂದ.

"ಹ್ಞಾ.... ಆತುರ ಮಾಡಿಕೋಬೇಡ. ಇದನ್ನು ಸರಿಯಾಗಿ ಓದು. ಇದೂ ಕವನವೇ.... ಸಾಲುಗಳನ್ನು ಉದ್ದವಾಗಿಡೋ ಬದಲು ಅಡ್ಡವಾಗಿಟ್ಟಿದ್ದಾರೆ. ಆತನಿಗೆ ಎಲ್ಲವೂ

ಕಾವ್ಯವೇ.... ಅತನ ಗದ್ಯವೂ ಪದ್ಯವೇ.... ಆಗೊಲ್ಲಮ್ಮ, ಅವರಿಗೆ ಕವಿತೆಯೇ ಉಸಿರು....''

ಕೆ.ಎಸ್.ನ. ಅವರ ಬಗ್ಗೆ ವಿ.ಸೀ. ಅವರಿಗಿದ್ದ ಅಭಿಮಾನ, ಅರ್ಥಮಾಡಿಕೊಂಡಿದ್ದ ಬಗೆಗೆ ಇದಕ್ಕಿಂತ ಹೆಚ್ಚಿನ ದೃಷ್ಟಾಂತ ಬೇಕೆ?

ನಾನು ನನ್ನ ಹಟ ಬಿಡಲಿಲ್ಲ. ''ನಾನು ಗೆದ್ದಿದೀನಿ ಅಂತ ಹೇಳಿ''

ಅವರು ಎಂದಿನ ಮೆಲ್ಲಗಿನ ದನಿಯಲ್ಲಿ ''ನೋಡೂ, ವಿಜಯ ಬಂದಿದಾಳೆ....'' ಅಂದರು.

'ಬಂದೇ' ಎನ್ನುತ್ತಲೇ ಅಮ್ಮ ಬಿಸಿ ಬಿಸಿ ಕಾಯಿ ಕಡುಬು, ಉದ್ದಿನ ಕಡುಬು, ತುಪ್ಪ, ಗಸಗಸೆ ಪಾಯಸ ತಂದಿಟ್ಟು ''ಹ್ಯಾಗಿದೀಯಮ್ಮ, ಮಕ್ಕಳು ಕ್ಷೇಮವಾಗಿದಾರೋ'' ಅಂದರು.

''ಈಗ ನೀನಿದನ್ನ ತಿಂದುಬಿಡು, ಆಮೇಲೆ ಮಾತಾಡೂವಂತೆ'' ಅನ್ನುತ್ತ ವಿ.ಸೀ. ''ಇನ್ನಷ್ಟು ತುಪ್ಪ, ಎರಡು ಕಾಯಿ ಕಡುಬು ತನ್ನಿ.... ಅಲ್ಲ ಈ ಕಡುಬು ಅಂಚಿನಲ್ಲಿ ಯಾಕೆ ಇಷ್ಟು ಒರಟಾಗಿದೆ? ಕಡುಬು ಬಿರುಸಾಗಬಾರದು. ಎಲ್ಲೋ ಅಕ್ಕಿ ಹಿಟ್ಟು ಸಣ್ಣಗೆ ಜರಡಿ ಆಡಿಲ್ಲ, ಅಥವಾ ಅಕ್ಕಿ ನೆನೆಸಿದ್ದು ಸಾಲದೂನ್ಸುತ್ತೆ.... ಈ ಉದ್ದಿನ ಕಡುಬಿಗೆ ಇನ್ನಷ್ಟು ಕಾಯಿ, ಕೊತ್ತಂಬರಿ ಬೇಕಿತ್ತು.... ಇದೆಲ್ಲ ನಮ್ಮ ತಾಯಿಯವರು ಮಾಡೋರು'' ಅಂತ ಒಂದಷ್ಟು ದೀರ್ಘ ವಿವರಕ್ಕೆ ಪ್ರಾರಂಭ.

''ಇಲ್ಲ ಅಪ್ಪ, ಎಲ್ಲ ಸರಿಯಾಗಿದೆ, ಚೆನ್ನಾಗಿದೆ'' ಅಂದರೂ ಬಿಡದೆ ಯಾವ್ಯಾವ ತಿಂಡಿ ಹ್ಯಾಗೆ ಇರಬೇಕು, ಹ್ಯಾಗೆ ಮಾಡಬೇಕು ಅಂತ ವ್ಯಾಖ್ಯಾನ ಪ್ರಾರಂಭಿಸಿದರು. ಬೆಂಗಳೂರಿನ ಯಾವ್ಯಾವ ಹೋಟೆಲ್‌ನಲ್ಲಿ ಮಸಾಲೆ ದೋಸೆ ಚೆನ್ನ, ಸಿಹಿ ತಿಂಡಿ ಚೆನ್ನ ಎಂತ ಪ್ರಾರಂಭಿಸಿ, ಕೃಷ್ಣಭವನ, ಗುಂಡಪ್ಪನ ಹೋಟ್ಲು, ಕಡೆಗೆ ಪ್ರಕಾಶ್ ಕೆಫೆಯವರೆಗೆ ವಿವರಗಳೇ ವಿವರಗಳು. ಕಡೆಗೂ ನೀನು ಗೆದ್ದೆ ಅನ್ನಲಿಲ್ಲ. ನಾನು ಕಡುಬಿನ ಸಮಿಯಲ್ಲಿ ಮಾತು ಕೇಳುತ್ತಾ ಎಲ್ಲ ಮರೆತೇಬಿಟ್ಟಿದ್ದೆ!

ಶಿವರಾಮ ಕಾರಂತರು, ವಿ.ಸೀ. ಬಗ್ಗೆ ಲೇಖನವೊಂದರಲ್ಲಿ ತಾವೆಲ್ಲ ಬೇಲೂರಿಗೆ ಹೋಗಿದ್ದು, ತಾವು ಅಲ್ಲಿನ ವಾಸ್ತು ಶಿಲ್ಪ ಕುರಿತು ಯೋಚಿಸುತ್ತಿದ್ದಾಗ ಸ್ವಂತ ಮನೆಯಲ್ಲಿಯೂ ಪೂಜೆಯನ್ನು ಮಾಡದ ವಿ.ಸೀ. ಅಲ್ಲಿಯ ಅರ್ಚಕರೊಂದಿಗೆ ಪೂಜೆಯ ಚರ್ಚೆ ನಡೆಸಿ ಪೂಜಾಫಲವಾಗಿ ಪೊಂಗಲ್ ಸಂಪಾದಿಸಿ ತಂದದ್ದು, ಹಸಿದಿದ್ದ ಕಾರಂತರೂ ಅದನ್ನು ತಿನ್ನುವ ಹಾಗೆ ಮಾಡಿದ್ದು, ಪೊಂಗಲ್‌ನ ಹದ, ತುಪ್ಪ, ಗೋಡಂಬಿ ಅಂತ ಮಾತಾಡಿದ್ದು ಇತ್ಯಾದಿ ಹೇಳಿ 'ಕವಿಯಾದವನಿಗೆ ರಸಾಸ್ವಾದನೆಯ ವಿಮರ್ಶಾಬುದ್ಧಿ ಚೆನ್ನಾಗಿರುತ್ತದೆ, ಬರಿಯ ಗದ್ಯಗಾಮಿಯಾದ ನನಗೆ ಅದು ಬರಲಾರದು' ಎಂದು ಬರೆದಿದ್ದರು. ಅದನ್ನು ನೆನಪು ಮಾಡಿ ವಿ.ಸೀ. ಅವರನ್ನು ಚುಡಾಯಿಸುತ್ತಿದ್ದೆ.

''ಅದು ಹಾಗಲ್ಲ.... ಮನುಷ್ಯನಿಗೆ ಎಲ್ಲದರಲ್ಲೂ ಶುಚಿ-ರುಚಿ ಇರಬೇಕು. ತಿನ್ನುವುದು ಒಂದು ಕಲೆ, ಎಲ್ಲ ಪಾಂಗಿತವಾಗಿ ಇರಬೇಕು. ಅದರ ಕಡೆ ಲಕ್ಷ್ಯವಿಲ್ಲ

ಅನ್ನೋದೇನೂ ಮೊಡ್ಡಸ್ತಿಕೆ ಅಲ್ಲ. ಕಾರಂತರಿಗೆ ರುಚಿಯಾದ್ದು ಕೊಟ್ರೆ ಬೇಡವಾಗುತ್ತೇನು?....” ಅಂತ ಮತ್ತೊಂದು ಭಾಷಣ.

ವಿ.ಸೀ. ಅವರನ್ನು ಛೇಡಿಸಿ, ರೇಗಿಸಿ ಖುಷಿ ಪಡುವುದು ನನಗೊಂದು ಆಟ. ಅವರಾಡುವ ಪ್ರತಿ ಮಾತಿನಲ್ಲೂ ಲೋಕಾನುಭವ ತುಂಬಿರುತ್ತಿತ್ತು. ಅವರ ಎಷ್ಟೋ ನೆನಪುಗಳು ಕಹಿ–ಸಿಹಿ ಅನುಭವಗಳು ತೆರೆದುಕೊಳ್ಳುತ್ತಿದ್ದವು.

ನಾನವರ ಮನೆಗೆ ಹೋದಾಗೆಲ್ಲ ಯಾವುದಾದರೊಂದು ಗ್ರಂಥದ ಮುಖ್ಯ ಭಾಗಗಳನ್ನು ತೆಗೆದು ಓದಿ ಹೇಳುತ್ತಿದ್ದರು.

ನನ್ನ ವೈಯಕ್ತಿಕ ಬದುಕಿನಲ್ಲಿ ಕೆಲವು ಅಸಂದರ್ಭಗಳು ಎದುರಾದವು. ತುಂಬ ಖಿನ್ನಳಾಗಿದ್ದೆ. ದಿಕ್ಕು ತೋರದ ಸ್ಥಿತಿ. ಶ್ರೀ ತಾಂಡವೇಶ್ವರ ಅವರು ಬೆಂಬಲಿಸಿ ನೆರವಾದರು. “ಸಪ್ಪಗೆ ಕೂರಬೇಡಿ, ವಿ.ಸೀ. ಮನೆಗೆ ಹೋಗಲಿಲ್ಲವೆ?” ಅಂತ ಅವರೇ ನನ್ನನ್ನು ಕಳಿಸುತ್ತಿದ್ದರು.

“ಕಾರ್ಯಕಾರಣಗಳು ಏನೇ ಇರಲಿ, ತಪ್ಪು ಸರಿಗಳ ಮಾತು ಬೇಡ. ಈಗ ಈ ದುರ್ಭರ ಪ್ರಸಂಗ ಬಂದೊದಗಿದೆ. ಈ ಘಟ್ಟ ದಾಟಬೇಕು ಅನ್ನೋದು ಮುಖ್ಯ. ಈಗ ಛಲ ಇರಲಿ, ಬದುಕಿ ತೋರಿಸಬೇಕು. ಲೋಕದ ನಿಂದೆ, ಆಪ್ತೇಷ್ಟರ ಕುಹಕ, ಎಲ್ಲವೂ ತೊಡರುಗಾಲುಗಳೇ.... ಇಲ್ಲಿ ಸ್ಥಿರವಾದ ಮನಸ್ಸು–ಕರ್ತವ್ಯಪ್ರಜ್ಞೆ ಬೆಳಕು ತೋರುತ್ತೆ. ಧೈರ್ಯವಾಗಿ ಮುನ್ನುಗ್ಗಬೇಕು” ಅಂತ ಸಮಾಧಾನ ಹೇಳಿದರು. “ಎಂದೂ ಸೋಲು ಅಂದುಕೋಬೇಡ. ಎಲ್ಲವೂ ಮತ್ತಷ್ಟು ಗಟ್ಟಿಯಾಗೋಕೇ ಒದಗೋ ಸಂದರ್ಭಗಳಿವು” ಅಂತ ಪದೇ ಪದೇ ಹೇಳುತ್ತಿದ್ದರು.

ನನ್ನ ಬಹುತೇಕ ಬರಹಗಳ ಹಿಂದೆ ಅವರ ಸಲಹೆ ಸಹಕಾರವಿತ್ತು. ಮಾಹಿತಿ ಒದಗಿಸುತ್ತಿದ್ದರು. ಏನು ಬರೆದು ಒಯ್ದರೂ ತಾಳ್ಮೆಯಿಂದ ಓದಿ, ಸರಿ–ತಪ್ಪುಗಳನ್ನು ಹೇಳಿ, ಚರ್ಚೆಯ ಮೂಲಕ ಸತ್ಯದ ಅರಿವಾಗುವಂತೆ ಮಾಡುತ್ತಿದ್ದರು. “ನಿನ್ನ ಅಭಿಪ್ರಾಯಗಳು ಸರಿ, ಹೊಸ ಆಲೋಚನೆಗಳೂ ಇರುತ್ತವೆ. ಆದರೆ ಅದಾವುದೋ ಉಗ್ರಕೋಪವಿದೆ. ಅದನ್ನು ಬಿಡಬೇಕು. ಒಂದು ಸಮಸ್ಯೆಗೆ ಒಂದೇ ಮುಖವಲ್ಲ, ಬೇರೆ ಬೇರೆ ಮಗ್ಗುಲಿನಿಂದ ನೋಡಬೇಕು. ಯಾರೋ ಒಬ್ಬರನ್ನು ಗುರಿ ಮಾಡುವ ಬದಲು ಅಂತಾಗುವುದರ ಹಿಂದೆ ಕೆಲಸ ಮಾಡಿದ ಇನ್ಯಾವ್ಯಾವ ಶಕ್ತಿ–ಪ್ರೇರಣೆ ಇದ್ದುವು ಅನ್ನೋದನ್ನ ಗುರುತಿಸಬೇಕು. ನೀನು ತೀರಾ ನೇರವಾಗಿ ನುಗ್ಗುತ್ತಿ.... ಡಿಕ್ಕಿ ಹೊಡೆಯುತ್ತೀ.... ಅದು ಕ್ರಮವಲ್ಲ....” ಎಂದು ಪದೇ ಪದೇ ಹೇಳುತ್ತಿದ್ದರು. ಲೇಖನಗಳ ಉಗ್ರತೆಯನ್ನು ಕಡಿಮೆ ಮಾಡಿಸುತ್ತಿದ್ದರು. ‘ಚಾವಟಿಯೇ ಮದ್ದಲ್ಲ’ ಎಂದು ತಿಳಿಸಿ ಹೇಳುತ್ತಿದ್ದರು. ನಾನು ಅಷ್ಟು ಸುಲಭದಲ್ಲಿ ನನ್ನ ಸ್ವಭಾವವನ್ನು ಬಿಟ್ಟುಕೊಟ್ಟವಳಲ್ಲ. ಆದರೆ ಆ ಎಲ್ಲ ಮಾತಿನ ಅರ್ಥ ಇಂದು ಇನ್ನಷ್ಟು ಚೆನ್ನಾಗಿ ಗ್ರಹಿಸಲು ಸಾಧ್ಯವಾಗುತ್ತಿದೆ. ಅನುಭವ ಬೇಕು, ಮನಸ್ಸು ಮಾಗಬೇಕು ಎನ್ನುವುದು ಇದಕ್ಕೇ ಇರಬೇಕು.

ನನಗೆ ವಿ.ಸೀ. ಅವರಿಂದ ‘ಅಶ್ವತ್ಥಾಮನ್’ ಓದಿಸಿ ಕೇಳಲು ಇಷ್ಟ. ಎಲ್ಲ ಬಿಟ್ಟು

ಓಡುತ್ತಿದ್ದೆ. ಹಾಗೆ ನೋಡಿದರೆ ಪಾತ್ರೇನ ಬಕ್ಕ ಬಾರಲು ಮಾಡಿದ ಹಾಗೆ ಕನ್ನಡ ಓದಿ ಬಿಡೋದಲ್ಲ. ಅದೂ ಒಂದು ಕಲೆ.... ಏರಿಳಿತ, ಭಾವಸ್ಫುರಣೆ.... ಪಾತ್ರಗಳ ಆಳಕ್ಕಿಳಿದ ಅನುಭವ ಆಗಬೇಕು. ಇದೆಲ್ಲ ಅವರ ಓದಿನಲ್ಲಿ ಕಂಡುಕೊಂಡೆ. ಮೈಮರೆತು ಕೂತುಬಿಡುತ್ತಿದ್ದೆ.

ಶಾಲೆಯಲ್ಲಿ 'ಸೊಹ್ರಾಬ್–ರುಸ್ತುಂ' ನಾಟಕವಾಡಿಸಿದಾಗ, ನನ್ನ ಮಕ್ಕಳಿಬ್ಬರೂ ಪಾತ್ರವಹಿಸಿದ್ದರು. ತಂದೆ–ಮಕ್ಕಳ ಮುಖಾಮುಖಿ. ಮಾತುಗಳ ರಭಸ.... ಕಿರಿಯ ಮಗ ಅಡ್ಡಿಯಿಲ್ಲ, ಯೋಧನ ಪಾತ್ರದಲ್ಲಿದ್ದ ಹಿರಿ ಮಗ ಬಾಯಿಪಾಠ ಒಪ್ಪಿಸುತ್ತಿದ್ದ. ವಿ.ಸೀ. ಅವನನ್ನು ಕರೆಸಿಕೊಂಡರು. 'ಹೀಗಲ್ಲ ಹೀಗೆ ಹೇಳು' ಎಂತ ತಿದ್ದಿದರು. ಮನಸ್ಸಿನಲ್ಲಿ ಎಂಥ ಭಾವನೆ ಬರಬೇಕೆಂದು ತಿಳಿಸಿಕೊಟ್ಟರು. ನಾಟಕ ಪ್ರದರ್ಶನದ ದಿನ ಮುಂದಿನ ಸೀಟಿನಲ್ಲಿ ವಿ.ಸೀ.! ನಾಟಕ ನೋಡಿದರು, ಹುಡುಗರಿಗೆ ಶಹಬ್ಬಾಸ್ ಎಂದರು. ಇದೆಲ್ಲವನ್ನೂ ಇಂದಿಗೂ ನೆನೆಯುತ್ತ "ಅವರೇ ಎದುರಿಗೆ ಕೂತಾಗ ನಾಟಕದ ಸಾಲೇ ಮರೆತಹಾಗಾಯ್ತು. ಅವರು ತಲೆ ಆಡಿಸಿ ಧೈರ್ಯ ತುಂಬಿದರು" ಎನ್ನುತ್ತಾನೆ ನನ್ನ ಮಗ ಗುರುಮೂರ್ತಿ.

'ಮಲ್ಲಿಗೆ' ಪತ್ರಿಕೆ ಬಿಟ್ಟು 'ತುಷಾರ'ದ ಸಹಸಂಪಾದಕಿಯಾಗಿ ಹೊಸ ಹುದ್ದೆ ಪಡೆಯುವಾಗ ವಿ.ಸೀ. ಅವರ ಸಲಹೆ ಕೇಳಿದೆ. ಆಗ 'ಮಲ್ಲಿಗೆ' ಪತ್ರಿಕೆ ABC ರಿಪೋರ್ಟ್ ಪ್ರಕಾರ ಅರವತ್ತೇಳು ಸಾವಿರದಷ್ಟು ಪ್ರಸಾರ ಇತ್ತು.

"ನೋಡು, ಇದೇ ಪೈಪೋಟಿ ಅನ್ನೋದು. ಈಗ ನಿನ್ನನ್ನು ಸ್ಥಳಾಂತರಿಸಿದರೆ, ಸರಿಯಾದೋರು ಬಂದು ಕೈಗೆತ್ತಿಕೊಳ್ಳೋವರೆಗೆ ಹೊಸ ಮಾಸ ಪತ್ರಿಕೆಗೆ ಸ್ಟ್ರಾಂಗ್ ಕಾಂಪಿಟಿಷನ್ ಇರಲ್ಲ. ಅಷ್ಟು ಹೊತ್ತಿಗೆ ಆ ಪತ್ರಿಕೆ ಸ್ಥಾನ ಭದ್ರ ಆಗಿಬಿಡುತ್ತೆ. ದೀಸ್ ಆರ್ ಆಲ್ ಬಿಸಿನೆಸ್ ಟ್ಯಾಕ್ಟಿಕ್ಸ್" ಎಂದಿದ್ದರು. ನನಗೆ ಆ ಮಾತಿನ ಅರ್ಥವೇ ಆಗಲಿಲ್ಲ. ಮಲ್ಲಿಗೆಯ ೨೫೦ ರೂ. ಸಂಬಳಕ್ಕಿಂತ 'ತುಷಾರ'ದ ನಾಲ್ಕು ನೂರು ಮತ್ತಿತರ ಸೌಲಭ್ಯವೇ ಮಹತ್ವದ ಸಂಗತಿಯೆನ್ನಿಸಿತ್ತು.

ನನ್ನ ತಂದೆ ಖಾಯಿಲೆಯಿಂದ ನರಳಿದರು. ಆಗಲೂ ವಿ.ಸೀ. ಸಮಾಧಾನ ತಂದುಕೋ ಅಂದರು. ಆದರೆ ವಿ.ಸೀ. ಅವರ ಹೆಂಡತಿ ನಮ್ಮೆಲ್ಲರ ಅಮ್ಮ ಹೋಗಿಬಿಟ್ಟರು. ಆಗ ನಾನೇನು ಹೇಳಲು ಸಾಧ್ಯವಿತ್ತು ಆ ಹಿರಿಯ ಜೀವಕ್ಕೆ....? ಅವರೆಂದೂ ಎದೆ ಬಿರಿಯುವಂತೆ ಅಳುವವರಲ್ಲ. ಭಯ ಹುಟ್ಟಿಸುವಂಥ ಮೌನ ತಲ್ಲಣಗೊಳಿಸಿತ್ತು.

ಅವರ ಮುಂದೆ ಹೋಗಿ ಕೂತರೆ ಮೌನವಾಗಿದ್ದುಬಿಡೋರು. ಒಮ್ಮೊಮ್ಮೆ ಸನಿಹದಲ್ಲೇ ಇದ್ದ ಡೈರಿ ತೆಗೆದು ಹೊಸ ಪದ್ಯಗಳನ್ನು ಓದುತ್ತಿದ್ದರು. ಅದನ್ನೋದುವಾಗ ಅವರ ಕಂಠ ಭಾರವಾಯಿತೇ–ಗದ್ಗದರಾದರೇ ವಿ.ಸೀ. ಅನ್ನಿಸುತ್ತಿತ್ತು. ಬಹಳ ಬೇಗ ಅದು ಅಲ್ಲವೋ ಎಂಬ ಹಾಗೆ ಸ್ಥಿತಪ್ರಜ್ಞರಾಗಿಬಿಡುತ್ತಿದ್ದರು.

ಬಹಳ ಕಾಲದ ಅನಂತರ ಅವರು 'ಉದಯವಾಣಿ' ದೀಪಾವಳಿ ಸಂಚಿಕೆಗಾಗಿ ಕೊಟ್ಟ ಒಂದು ಕವಿತೆಯ ಹೆಸರು 'ನೀನು'. ಅದು ಅಮ್ಮನನ್ನು ಕುರಿತದ್ದೇ ಹೌದೇ ಎಂದು ನಾನೆಂದೂ ಕೇಳಲಿಲ್ಲ. ನನ್ನ ಮನಸ್ಸಿಗೆ ಇಂದಿಗೂ ಆ ಪದ್ಯ ಅಮ್ಮನನ್ನು ನೆನೆದು ಬರೆದದ್ದೇ ಎಂದು ಭಾಸವಾಗುತ್ತದೆ.

ಬೆಳಕಿನಲಿ ಬರೆಯುತ್ತ ನಿನ್ನ ಹೆಸರ
ಕೆಲವೆಡೆಗಳಲ್ಲಿ ಬರಿ ಚೆಲುವಿನಾಕರ್ಷಣ
ಮಾತು ಸವಿ ಸಾವಿರ; ಕಾವಲ್ಲ, ಇದ್ದರವು ನಿನ್ನವಲ್ಲ
ಏನು ಬೇಕಿತ್ತು ನನಗೆ ಅದಕ್ಕಿಂತ ಬೇರೆ?

ಎರಡು ಜೀವಗಳ ಎಲ್ಲವನು ಅವರಿಸಿ, ಅರಸಿ
ಮೌನದಲಿ ಕರೆದು ನಡೆದು ನುಡಿಯದೆಯೆ ನಡೆಸಿದ್ದ ಚದುರು.
ಹಾಲಲ್ಲ, ಕೆನೆಯಲ್ಲ, ಕೆನೆಯ ಪರಿಮಳ
ಸುಳಿಗಾಳಿಯಲಿ ತೇಲಿ ಸುತ್ತ ಗಮಗಮಿಸುವಿಂಪು
ಏನನ್ನು ಬೇಡದೆಯೆ ಎಲ್ಲವನು ಕೊಂಡಿದ್ದೆ; ಈಗ?

ಕನಸಿನಾಚೆ, ನನಸಿನಾಚೆ, ಆಸೆಯಾಚೆಯ
ಪರಿಧಿಗಳ ದಾಟಿ ನೆನಪಿನಲ್ಲುಳಿದ ಸುಮನೋವಿಲಾಸ!

('ನಾನು' – ಉದಯವಾಣಿ, ದೀಪಾವಳಿ ವಿಶೇಷಾಂಕ – ೧೯೮೨)

ಅವರ ಬಹುದಿನಗಳ ಆಸೆಯಾಗಿದ್ದ ಲಂಡನ್ ಪ್ರವಾಸ ಈ ಹೊತ್ತು ಕೂಡಿಬಂದಿತ್ತು. ಅದೇನು ಸಡಗರ.... ಸಂಭ್ರಮ. ಏನೇನು ಕಾಣಬೇಕು, ಏನು ಮಾತಾಡಬೇಕು ಎಲ್ಲವನ್ನೂ ಪಟ್ಟಿ ಮಾಡಿಕೊಂಡಿದ್ದೇ ಮಾಡಿಕೊಂಡಿದ್ದು. ವಿದ್ಯಾರ್ಥಿ ಕಾಲದಿಂದಲೂ ಒಂದಿಲ್ಲೊಂದು ಕಾರಣಕ್ಕೆ ಕಮರುತ್ತಿದ್ದ ಆಸೆ ಈಗ ಕೈಗೂಡಿತ್ತು. ಭಾರತೀಯ ವಿದ್ಯಾಭವನದ ಆಹ್ವಾನದ ಮೇಲೆ ಲಂಡನ್ನಿಗೆ ಪ್ರಯಾಣ. ಉಕ್ಕಿದ ಸಂತೋಷವೇ ಅವರನ್ನು ಜಗ್ಗಿ ಹಿಡಿಯಿತೋ ಏನೋ ಅವರು ಅಸ್ವಸ್ಥರಾದರು; ಆಸ್ಪತ್ರೆಗೆ ದಾಖಲಾದರು. ಏನೂ ಮಾಡಲು ಆಗಲಿಲ್ಲ ಎಂಬ ವ್ಯಥೆಯನ್ನು ತುಂಬಿಕೊಂಡೇ ಹಿಂತಿರುಗಿದರು. ಅವರು ಏನು ಮಾತಾಡಿದರೂ 'ಆಗೋಲ್ಲ, ಆಗೋಲ್ಲ' ಶಬ್ದ ಇರುತ್ತೆ, ಅದೆಷ್ಟು ಸಲ ಬರುತ್ತೆ ಅಂತ ತಮಾಷೆ ಮಾಡುತ್ತ 'ನೀವು ನಿರಾಶಾವಾದಿ' ಎನ್ನುವವರೆಗೆ ಹೋಗಿದ್ದ ನನಗೆ ಈಗ ಅವರ 'ಆಗೋಲ್ಲ, ಸಾಧ್ಯವಾಗೋಲ್ಲ' ಶಬ್ದಕ್ಕೆ ವಿಶೇಷ ಅರ್ಥ ಕಂಡಿತ್ತು. ನಾವೆಲ್ಲ ಅದಕ್ಕಾಗಿ ದುಃಖಿಸಿದೆವು.

ಮಾತಾಡಿದಷ್ಟು ಹೊತ್ತೂ ಲಂಡನ್ನಿನ ಆಸ್ಪತ್ರೆಗಳು, ಶಿಸ್ತು–ಶಾಂತಿ–ಸೇವಾ ವೈಶಿಷ್ಟ್ಯ ಕುರಿತೇ ಇರುತ್ತಿತ್ತು. ಅಲ್ಲಿಯ ಫಲಕಗಳ ಮೇಲೆ ಬರೆದಿದ್ದ ಬರಹಗಳನ್ನು ನೆನಪಿನಲ್ಲಿಟ್ಟು ಹೇಳುತ್ತಿದ್ದರು. ಎಲ್ಲ ಹೇಳುತ್ತಲೇ ''ಇದೆಲ್ಲ ಹೇಳಿದರೆ ನನ್ನನ್ನು 'ಬ್ರಿಟಿಷರ ಬೂಟು ನೆಕ್ಕುವ ಗುಲಾಮ' ಎಂದು ಟೀಕಿಸಲೂಬಹುದು. ಆದರೆ ನನ್ನಲ್ಲಿ ಗುಣಕ್ಕೆ ಮತ್ಸರವಿಲ್ಲ, ನಾನು ಅಲ್ಲಿಗೆ ಹೋಗಿರದಿದ್ದರೆ ಈ ಖಾಯಿಲೆ ಇಲ್ಲೇ ಆಗಿದ್ದರೆ ನಾನು ಬದುಕುತ್ತಲೇ ಇರಲಿಲ್ಲ. ಮತ್ತೆ ತಾಯ್ನಾಡಿಗೆ ಸುರಕ್ಷಿತವಾಗಿ ಬರಲಿ ಎಂತಲೇ ಈ ಅವಘಡ ಅಲ್ಲಿ ಸಂಭವಿಸಿತು'' ಎನ್ನುವವರೆಗೆ ಅವರ ಮಾತು ಸಾಗುತ್ತಿತ್ತು. (ನಾನು ಅವರ ಇಂಥ ಮಾತುಗಳನ್ನೆಲ್ಲ ನನ್ನ ಅಂಕಣ ಬರಹಗಳಲ್ಲಿ ದಾಖಲಿಸಿದ್ದೇನೆ).

ತುರ್ತು ಪರಿಸ್ಥಿತಿಯ ದಿನಗಳಲ್ಲಿ ವಿ.ಸೀ. ಬೀದಿಗೆ ಬರಲಿಲ್ಲ. ಆದರೆ ಅವರ ಮಾತು ಉಗ್ರವಾಗಿರುತ್ತಿತ್ತು. ಅದೇ ಸಂದರ್ಭದಲ್ಲಿ ರಾಷ್ಟ್ರೀಕರಣಗೊಂಡ ಬ್ಯಾಂಕುಗಳು ಇತ್ಯಾದಿ

ವಿಷಯದಲ್ಲಿ ಅವರ ಚರ್ಚೆಯಲ್ಲಿ ಹೊಸ ಹೊಳಹುಗಳಿದ್ದವು. ಈ ಹೊತ್ತಿನಲ್ಲಿ ನಾನೂ ಕೆಲವು ಗಂಭೀರವಾದ ತೀರ್ಮಾನಗಳನ್ನು ತೆಗೆದುಕೊಂಡೆ. ಸಕ್ರಿಯವಾಗಿ ರಾಜಕಾರಣ–ಕಾರಣಗಳೊಂದಿಗೆ ಕೆಲಸ ಮಾಡಿದ್ದೂ ಉಂಟು. ಮಿತ್ರರೆಲ್ಲ ಎ. ಎಸ್. ಮೂರ್ತಿ ಅವರೊಂದಿಗೆ ಬೀದಿ ನಾಟಕ ಚಳುವಳಿ ಪ್ರಾರಂಭಿಸಿದೆವು. ನಾಟಕಗಳನ್ನು ಹೊಸ ಹೊಸದಾಗಿ ಬರೆಸಿ ಆಡಿದೆವು. ಊರೂರು ತಿರುಗಿದೆವು. ಈ ಹಂತದಲ್ಲಿ ನಾನು ಕಠಿಣವಾಗಿ ಬರೆದ ಕೆಲವು ಬರಹಗಳು–ಅಂಕಣಗಳು ಪ್ರಕಟವಾಗಲಿಲ್ಲ. ನನಗೆ ಉದ್ಯೋಗದ ಅಸ್ಥಿರತೆ ಕಾಡಿತು. ಆದರೆ ನನ್ನ ಪರಿಸ್ಥಿತಿಯಲ್ಲಿ ಬದುಕಿಗೆ ಒಂದು ದಾರಿ ಬೇಕೇ ಬೇಕಿತ್ತು. ವ್ಯವಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳುವುದಕ್ಕಿಂತ ಸ್ವಂತ ಉದ್ಯೋಗ ಪ್ರಾರಂಭಿಸುವುದೇ ಸರಿ ಎಂದು ತೀರ್ಮಾನಿಸಿ 'ಇಳಾ ಮುದ್ರಣ' ಪ್ರಾರಂಭಿಸಿದೆ. ಆ ನನ್ನ ನಿಲುವನ್ನು ಸಮರ್ಥಿಸಿ ಭೇಷ್ ಅಂದರು ವಿ.ಸೀ. "ಹಾಗೆಂದು ಕೆಲಸ ಬಿಡಬೇಡ, ಅಂಥ ದಿನ ಬಂದಾಗ ನೋಡೋಣ" ಎಂತ ಕಿವಿ ಮಾತೂ ಹೇಳಿದರು.

ವಿ.ಸೀ. ಅವರಿಗೆ 'ಇಳಾ ಮುದ್ರಣ'ದ ಬಗ್ಗೆ ಬಲು ಪ್ರೀತಿ. ಮುದ್ರಣಾಲಯದಲ್ಲಿ ಬಂದು ಕೂತು, ನಾನಿಲ್ಲದಿದ್ದರೆ ನನ್ನ ಹಿರಿಯ ಮಗನೊಟ್ಟಿಗೆ ಮಾತಾಡಿ, ಮುದ್ರಣದ ಅಚ್ಚುಕಟ್ಟಿನ ಬಗ್ಗೆ, ಅವನ ಸಂಜೆ ಕಾಲೇಜಿನ ಅಧ್ಯಯನದ ಬಗ್ಗೆ ಪುಟ್ಟ ಭಾಷಣ ಮಾಡಿ, ಮುದ್ರಣ ಯಂತ್ರದ ಮುಂದೆ ನಿಂತು 'ಇಂಕ್ ಜಾಸ್ತಿ ಬಿಡಬೇಡಿ' 'ಮೊಳೆ ಉಬ್ಬಿದೆ ಒಡೆದು ಹೋಗುತ್ತೆ' ಅಂತೆಲ್ಲ ಕೆಲಸಗಾರರ ಹತ್ತಿರವೂ ಹರಟಿ ಅನಂತರವೇ ಹೊರಡುತ್ತಿದ್ದರು.

ಪ್ರಾರಂಭಕ್ಕೆ ಅವರ ಲೆಟರ್‌ಹೆಡ್ ಕೆಲವನ್ನು ಮುದ್ರಿಸಿಕೊಂಡಾಗಂತೂ ಅದೆಷ್ಟು ಆತಂಕ! ಮೊಳೆ ಇಂಥಾದೇ ಇರಬೇಕು, ಇಲ್ಲೇ ಪೂರ್ಣ ವಿರಾಮ, ಅರ್ಧ ವಿರಾಮ ಇರಲಿ ಎಂಬುದರಿಂದ ಹಿಡಿದು ಅದೊಂದು ವಿಶಿಷ್ಟ ಕಾಂಬಿನೇಷನ್ ಕಲರ್ ಬೇರೆ. ಅದು, ಚಾಕಲೇಟ್ ಬಣ್ಣವಲ್ಲ, ಕಂದು ಬಣ್ಣವಲ್ಲ, ನೆಶ್ಯದ ಬಣ್ಣವೂ ಅಲ್ಲ, ತುಸು ಹೆಚ್ಚು ಕೆಂಪು–ಕಡಿಮೆ ಕಪ್ಪು ಸೇರಿಸಿದಾಗ ಬರುವ ಒಂದು ಶೇಡ್. ಕೊಂಚ ವ್ಯತ್ಯಾಸವಾದರೂ ಅವರಿಗೆ ಒಪ್ಪುದು. ಇದಲ್ಲದೇ ಅವರು ಪ್ರಾಯಃ ಇಂಗ್ಲೆಂಡ್‌ನಿಂದ ತಂದಿದ್ದು, ತರಿಸುತ್ತಿದ್ದ ಕಾಗದ.... ತುಂಬಾ ಉತ್ತಮ ಕಾಗದವದು. ಒಂದು ಹಾಳೆಯೂ ವೇಸ್ಟ್ ಆಗದ ಹಾಗೆ ಅವರು ಎಣಿಸಿಕೊಟ್ಟಷ್ಟು ಹಾಳೆಗಳಲ್ಲಿ ಲೆಟರ್‌ಹೆಡ್ ಮುದ್ರಿಸಿ ಕೊಡಬೇಕು. ಅದೊಂದು ಸಾಹಸವೇ ಅನ್ನಿಸಿಬಿಟ್ಟಿತ್ತು. ಪ್ರೂಫ್ ಕಳಿಸಿದರೆ, ಅದನ್ನು ಹಿಡಿದುಕೊಂಡು ನೇರವಾಗಿ ಪ್ರೆಸ್‌ಗೇ ಬಂದುಬಿಡುತ್ತಿದ್ದರು.... ಮುದ್ರಣಾಲಯದಲ್ಲಿ ಅಂದಿನಿಂದ ಇರುವ ಒಂದಿಬ್ಬರು ಕೆಲಸಗಾರರು ಇಂದಿಗೂ ಅದನ್ನೆಲ್ಲ ನೆನೆಯುತ್ತಾರೆ.

'ಉದಯವಾಣಿ'ಯ ದೀಪಾವಳಿ ಸಂಚಿಕೆಯ ಸಿದ್ಧತೆಗೆ ಮೊದಲು ವಿ.ಸೀ. ಅವರ ಬಳಿ ಚರ್ಚೆ ಮಾಡುತ್ತಿದ್ದೆ. ಆಯಾ ಸಂಚಿಕೆಯ ವಿಶೇಷ ಲೇಖನ ಕುರಿತು ಮಾತಾಡುವಾಗ ಅವರೂ ಹೊಸ ವಿಷಯ, ಅಂಥ ಲೇಖನವನ್ನು ಅಭ್ಯಾಸಪೂರ್ಣವಾಗಿ ಬರೆಯಬಲ್ಲ ಲೇಖಕರನ್ನು ಸೂಚಿಸುತ್ತಿದ್ದರು. ವಿಳಾಸ ಕೊಡುತ್ತಿದ್ದರು. ಅವರೇ ಪತ್ರ ಬರೆದು ಲೇಖನ ತರಿಸಿಕೊಟ್ಟದ್ದು ಉಂಟು.

ಒಮ್ಮೆ ಪಿ. ವಿ. ಜೋಶಿ ಅವರ ಮನೆಗೆ ಹೋದೆ. ಬಾಗಿಲು ತೆಗೆದ ವ್ಯಕ್ತಿಗೆ ನನ್ನ

ಪರಿಚಯ ಹೇಳಿಕೊಂಡೆ. "ಬನ್ನಿ.. ಬನ್ನಿ.. ವಿ.ಸೀ. ನಿಮ್ಮ ಬಗ್ಗೆ ಪತ್ರ ಬರೆದು ತಿಳಿಸಿದ್ದಾರೆ. ಅವರು ಹೇಳಿದ ಮೇಲೆ ಇಲ್ಲ ಅನ್ನೋಕಾಗುತ್ತಾ, ಖಂಡಿತಾ ಲೇಖನ ಕೊಡುತ್ತೇನೆ" ಎಂದರು. ಹಾಗೆ ಆನಂತರವೂ ಜೋಶಿಯವರಿಂದ ಹಲವು ಲೇಖನಗಳನ್ನು ಬರೆಸಲು ಸಾಧ್ಯವಾಯಿತು.

ರಾಜಕೀಯ, ವಾಣಿಜ್ಯ, ಹಣ ಪ್ರಪಂಚ ಮೊದಲಾದ ಅನೇಕ ಉತ್ತಮ ಲೇಖನಗಳು ಪ್ರಕಟವಾಗಲು ವಿ.ಸೀ. ಅವರದೇ ಪ್ರೇರಣೆ ಎಂದು ಹೇಳಲು ಸಂತೋಷವಾಗುತ್ತದೆ. ಮಣಿಪಾಲ ಮುದ್ರಣದ ಬಗ್ಗೆ ಅವರಿಗೆ ಸದಾ ಮೆಚ್ಚುಗೆ. ಆ ಬಗ್ಗೆ ಹೇಳುತ್ತಲೇ ಅವರ ಕಾಲದ ವೆಸ್ಲಿ ಪ್ರೆಸ್‌ನ ಕಥೆ ಹೇಳಲು ಮರೆತವರಲ್ಲ.

ಕೆಲಸದ ಒತ್ತಡದಲ್ಲಿ, ಒಮ್ಮೊಮ್ಮೆ ಅವರ ಮನೆಗೆ ಹೋಗಲು ಆಗದೆ ಭೇಟಿಯ ಅಂತರ ಹೆಚ್ಚುತ್ತಿತ್ತು. ಹಾಗೆ ಹೋದಾಗ, "ಏನು, ದೀಪಾವಳಿ ವಿಶೇಷಾಂಕ ಹತ್ತಿರ ಬಂತಾ? ಪದ್ಯ ಬೇಕೂಂತ ನನ್ನ ನೆನಪಾಯಿತಾ? ಹೋದರೆ ಮುದುಕ ಬರೀ ಹರಟೆ ಹೊಡೀತಾನೆ, ಬೇಗ ಬಿಡೋಲ್ಲ, ಅಂತ ಬರೋದೇ ಕಮ್ಮಿ ಮಾಡಿದ್ದಾ?" ಅಂತ ಮೂದಲಿಸುತ್ತಲೇ—

"ಬಾ.... ಬಾ.... ಹೊಸ ಕವಿತೆ ಇದೆ ನೋಡು" ಎಂದು ಅವರ ಡೈರಿ ತೆಗೆದು "ಯಾವುದು ಕೊಡಲಿ ನಿನಗೆ" ಅಂತ ಆರಿಸಲು ಪ್ರಾರಂಭಿಸೋರು. ನಾನು ಆಯ್ದ ಕವಿತೆಯ ಪ್ರತಿ ತೆಗೆಸಿಕೊಡೋರು. ಒಮ್ಮೊಮ್ಮೆ ನಾನೇ ಪ್ರತಿ ಮಾಡಲು ಹೋಗಿ ಅಕ್ಷರ ತಿಳೀದೇ ಕೇಳಿದಾಗ 'ಇಷ್ಟೂ ತಿಳಿಯದೇ' ಅಂತ ತಾವೇ ತಿದ್ದಿ ಕೊಡುತ್ತಿದ್ದರು.

ಅವರ ಕವಿತೆಯ ಕರಡು ಅವರೇ ತಿದ್ದಬೇಕು. ಮಣಿಪಾಲದಿಂದ ಅಂಚೆಯಲ್ಲಿ ಕಳಿಸಿದ್ದುಂಟು. ನಾನೇ ಬಂದರೆ ಕೈಲೇ ತಂದು ಅವರಿಗೆ ತೋರಿಸಿ 'ಈಗಿನ ಕಾಲದ ಹುಡುಗರಿಗೆ ಪ್ರೂಫ್ ತಿದ್ದಲೂ ಬರದು' ಅಂತ ಬೈಸಿಕೊಂಡು ಅವರೇ ತಿದ್ದಿದ ಕವಿತೆ ಕೊಂಡೊಯ್ಯುತ್ತಿದ್ದೆ.

ಐ.ಬಿ.ಎಚ್. ಸಂಸ್ಥೆಯ ಕವಿ ಕಾವ್ಯ ಪರಂಪರೆಯ ಸಂಪಾದಕರು ವಿ.ಸೀ. ಅವರ ನೆರವಿಗೆ ಹರಿಹರಪ್ರಿಯ ಇದ್ದು ಬರೆದುಕೊಡುವ, ಪ್ರತಿ ಎತ್ತುವ ಕೆಲಸವನ್ನು ನಿರ್ವಹಿಸುತ್ತಿದ್ದರು. ತಕರಾರಿಲ್ಲದೆ ಇರುವುದೇ ಅಪರೂಪವಾದ ಹರಿಹರಪ್ರಿಯ ಸಹ ಕರಾರುವಾಕ್ಕಾದ ಮನುಷ್ಯ, ಕೆಲಸವೂ ಚೆನ್ನ–ಸಂಭಾವನೆಗೂ ಖೋತ ಇಲ್ಲ ಎಂದು ತೃಪ್ತಿಯಿಂದ ಹೇಳುತ್ತಾರೆ. ಅಂಥ ಲೆಕ್ಕಾಚಾರದ ವ್ಯಕ್ತಿ ವಿ.ಸೀ.

ಕವಿಕಾವ್ಯ ಪರಂಪರೆ ಮಾಲೆಯ ಲೇಖನಗಳಲ್ಲಿ ಒಂದನ್ನು ಬನ್ನಂಜೆ ರಾಮಾಚಾರ್ಯರು ಬರೆಯಬೇಕಿತ್ತು. ನಾನು ವಿ.ಸೀ. ಹೇಳಿದ್ದನ್ನು ರಾಮಾಚಾರ್ಯರಿಗೆ, ಅವರು ಹೇಳಿದ್ದನ್ನು ವಿ.ಸೀ.ಗೆ ಹೇಳುತ್ತಾ ವಾಹಕಳ ಕೆಲಸ ಮಾಡುತ್ತಿದ್ದೆ. ವಿ.ಸೀ. ಅವರ ಕಟ್ಟುನಿಟ್ಟಿಗೆ ರಾಮಾಚಾರ್ಯರು ಹೊಂದಿಕೊಳ್ಳಲೇ ಇಲ್ಲ. ಈಗ–ಆಗ ಅನ್ನುತ್ತಲೇ ಕಡೆಗೂ ಆ ಲೇಖನ ಬರಲೇ ಇಲ್ಲ. "ಒಳ್ಳೆ ಬರಹಗಾರ, ವಿಚಾರವಂತ, ಓದಿಕೊಂಡಿದಾರೆ; ಅಂಥವರು ಹೀಗೆ ಬರೀದೇ ಇರೋದ್ರಿಂದ ದೊಡ್ಡ ನಷ್ಟವೇ ಆಗುತ್ತೆ" ಅಂತ ಸದಾ ವಿ.ಸೀ. ಗೊಣಗುತ್ತಲೇ ಇದ್ದರು.

ಆಗಲೇ ಅವರ 'ಅರಲು-ಬರಲು' ಸಂಕಲನ ಹೊರಬಂದಂತೆ ನೆನಪು. ಮುನ್ನುಡಿಯಲ್ಲಿ ಬಹಳಷ್ಟನ್ನು ಚರ್ಚಿಸಿದ್ದರು. ಅವರು ನಿರೀಕ್ಷಿಸಿದ ಹಾಗೆ ಆ ಕೃತಿಯನ್ನು ಸಾಹಿತ್ಯ ವಿಮರ್ಶೆ ಸ್ವಾಗತಿಸಲಿಲ್ಲ ಎಂಬ ಬೇಸರವೂ ಇತ್ತು ಅವರಿಗೆ. ವಿಮರ್ಶೆಯ ಕ್ಷೇತ್ರ ಅವರನ್ನ ಕವಿ ಎಂದು ಒಪ್ಪಿಕೊಳ್ಳಲು ಹಿಂದೇಟು ಹಾಕಿತ್ತು.

೧೯೭೬ರಲ್ಲೇ ವಿ.ಸೀ. ಅವರಿಗೆ ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಬಂತು. ಎಲ್ಲ ಕಾಲಕ್ಕೂ ದುಡಿಯುತ್ತ ಸ್ವಾರ್ಥತ್ಯಾಗ ಮಾಡಿಕೊಂಡ ವಿ.ಸೀ.ಗೆ ಈ ಗೌರವ ಬಂದದ್ದು ನಮಗೆಲ್ಲ ಖುಷಿಯ ಸಂಗತಿ. ಅದು ತುರ್ತು ಪರಿಸ್ಥಿತಿಯ ಘೋಷಣೆ ಇವ್ವ ಕಾಲ. ವಿ.ಸೀ. ಕೊಂಚ ಮಿಸುಕಾಡಿದ್ದರು. ಕಡೆಗೆ ವಿಶ್ವವಿದ್ಯಾಲಯವನ್ನು ಒಂದು ದೇವಸ್ಥಾನವೆಂದೇ ಭಾವಿಸುತ್ತಿದ್ದ ವಿ.ಸೀ. ಗೌರವದಿಂದಲೇ ಒಪ್ಪಿಕೊಂಡರು.

"ಮೈಸೂರಿಗೆ ಬರುತ್ತೀಯಾ?" ಅಂತ ಕರೆದರೂ ಹೋಗಲು ಸಾಧ್ಯವಾಗಿರಲಿಲ್ಲ. ಅಲ್ಲಿಂದ ಬಂದ ಮೇಲೆ ಕತೆ ಕತೆಯಾಗಿ ಹೇಳಿದರು. ಅವರ ಜೊತೆಗೇ ಕನ್ನಡ ಚಿತ್ರರಂಗದ ಹಿರಿಯ ನಟ ರಾಜ್‌ಕುಮಾರ್ ಅವರಿಗೂ ಡಾಕ್ಟರೇಟ್ ಬಂದಿತ್ತಲ್ಲ. ಆ ಕಾರಣಕ್ಕಾಗಿ ಸೇರಿದ್ದ ಚಲನಚಿತ್ರ ಅಭಿಮಾನಿಗಳು, ಪ್ರೀತಿಯ ನಟನಿಗೆ ತೋರಿದ ಪ್ರೀತ್ಯಾದರಗಳ ಉತ್ಕಟತೆ ಕುರಿತು "ಪ್ರಬಲವಾದ ಮಾಧ್ಯಮದ ಜನಪ್ರಿಯತೆಯ ಎದುರಿಗೆ ನಮ್ಮ ಸಾಹಿತ್ಯ, ಗೀಹಿತ್ಯ ನಿಂತುಕೊಳ್ಳಲಾರವು.... ನಾವು ಎಲ್ಲೋ ಆಗಿಬಿಟ್ಟೀವಿ" ಎಂದು ನಕ್ಕಿದ್ದರು. ರಾಜ್‌ಕುಮಾರ್ ಅವರನ್ನು ಮನಸಾರೆ ಮೆಚ್ಚಿಕೊಂಡಿದ್ದರು.

ವಿ.ಸೀ. ಅವರಿಗೆ ಸಿನಿಮಾ ಏನೂ ಹೊಸದಲ್ಲ. ಯಾವುದೇ ಅಭಿವ್ಯಕ್ತಿ ಮಾಧ್ಯಮದಲ್ಲೂ ಅವರು ಆಸಕ್ತರು. ಅನೇಕ, ನಮಗೆ ಹೊಸತು-ಕುತೂಹಲಕಾರಿ ಅನ್ನಿಸುವಂಥ ವಿಷಯಗಳನ್ನು ಹೇಳುತ್ತಿದ್ದರು. ಕನ್ನಡ ಚಿತ್ರರಂಗಕ್ಕೆ ಭವನಾನಿ ಅವರ ಕೊಡುಗೆ, ಆ. ನ. ಕೃಷ್ಣರಾಯರ ಪ್ರಯತ್ನಗಳು, ದೇವಿಕಾರಾಣಿಯವರ ಬಗ್ಗೆ – ಹೀಗೆ ಅದೆಷ್ಟೋ ಮಾತುಗಳು. ಅವರು 'ಪಾಪ-ಪುಣ್ಯ' ಚಿತ್ರಕ್ಕೆ ಕೆಲಸ ಮಾಡಿದ್ದು, ಪದ್ಮಚರಣ್, ದೊರೆಸ್ವಾಮಿ ಅಯ್ಯಂಗಾರ್ ಸಂಗೀತ – ಹೀಗೆ ಅವರ ಮಾತಿನಲ್ಲಿ ಒಂದೊಂದು ಘಟ್ಟದ ಇತಿಹಾಸವೇ ಇರುತ್ತಿತ್ತು.

ಎಷ್ಟೋ ಕಾಲದವರೆಗೆ 'ಎಮ್ಮೆ ಮನೆಯಂಗಳದಿ' ಕವಿತೆಯನ್ನು ಜನಪದ ಗೀತೆ ಅಂದುಕೊಂಡಿದ್ದ ನನಗೆ 'ಅದು ನನ್ನದೇ ಕವಿತೆ' ಅಂತ ವಿ.ಸೀ. ಹೇಳಿದಾಗ, ಅದನ್ನು ಚಲನಚಿತ್ರದಲ್ಲಿ ಬಳಸಿರುವ ಬಗ್ಗೆ ಮಾತಾಡಿದಾಗ ಅಚ್ಚರಿಯೋ ಅಚ್ಚರಿ!

"ಉದಯವಾಣಿ ದೀಪಾವಳಿ ಸಂಚಿಕೆಗೆ ಲೇಖನ-ಕವಿತೆ ಬರೆಸ್ತೀರಿ. ಚಂದವಾಗಿ ಪ್ರಕಟಿಸ್ತೀರಿ. ಸಂಭಾವನೆ ಕೂಡಾ ಬೇಗ ಕೊಡಿ. ಹಬ್ಬದ ಒಳಗೇ ಬಂದರೆ ಅದಕ್ಕೊಂದು ಅರ್ಥ ಇರುತ್ತೆ. ಮಕ್ಕಳಿಗೆ ಪಟಾಕಿ-ಸಿಹಿ ಅದರಲ್ಲೇ ತಂದುಕೊಡಬಹುದು" ಎಂಬ ಅಭಿಪ್ರಾಯ ಮುಂದಿಟ್ಟರು. ದೀಪಾವಳಿ ಸಂಚಿಕೆಯ ಕೆಲಸಕ್ಕೆ ಹೋದಾಗ ಈ ಮಾತನ್ನು ಎಂ.ಡಿ. ಅವರಿಗೆ ಹೇಳಿದೆ.

"ಆಗಬಹುದು, ಮೊದಲೇ ಕೊಡೋಣ" ಅಂದರು.

ಪಿ.ಸೀ. ಅವರಿಗೆ ಪತ್ರ ಬರೆದು, ಕೆಲಸ ಮುಗಿದಿದೆ. ಇಂಥ ದಿನ ಇಲ್ಲಿಂದ ಹೊರಟು ಬರುತ್ತೇನೆ, ನನಗೆ ಮೊದಲು ಸಿಹಿ ಕೊಡಿಸಬೇಕು ಅಂದಿದ್ದೆ.

ನಾನು ದೀಪಾವಳಿ ಸಂಚಿಕೆ, ಚೆಕ್ ಸಹಿತ ಕೊಂಡೊಯ್ದು ಎದುರಿಗೆ ನಿಂತಾಗ ಮಗನನ್ನು ಕರೆದು,

"ಹೋಗೋ, ಬೇಗ ಹೋಗಿ ಪ್ರಕಾಶ್ ಕೆಫೆಲಿ ಮೈಸೂರು ಪಾಕ್, ಏನಾದ್ರೂ ಖಾರ ತಗೊಂಬಾ" ಅಂತ ಓಡಿಸಿದರು. ಅದೆಲ್ಲ ನಾನು ತಿನ್ನುವವರೆಗೆ ದೀಪಾವಳಿ ಸಂಚಿಕೇನೂ ಕೈಗೆತ್ತಿಕೊಳ್ಳಲಿಲ್ಲ. "ಛೇಷ್.... ಇದಪ್ಪಾ ಶ್ರದ್ಧೆ ಅಂದ್ರೆ, ಹೀಗೆ ಮಾಡಬೇಕು ಕೆಲಸ...." ಅಂದರು.

ಅಲ್ಲಿಂದಾಚೆಗೆ ಬಹುಕಾಲ ಉದಯವಾಣಿ ಕಚೇರಿಯಲ್ಲಿ ಅದೇ ಸಂಪ್ರದಾಯ ನಡೆದುಬಂತು.

'ಸ್ನೇಹವಲಯ' ಎಂಬ ಸಂಸ್ಥೆ ಪ್ರಾರಂಭಿಸಿ ಹಲವು ಕಾರ್ಯಕ್ರಮಗಳನ್ನು ಮಾಡಿದೆವು. ಪಿ.ಸೀ. ಆಗ ಹೆಚ್ಚು ಓಡಾಡಲಾರರು. 'ಒಳ್ಳೆಯದು' ಎಂದು ಹೇಳಿ ಕಳಿಸುತ್ತಿದ್ದರು.

ಪಿ.ಸೀ. ಅವರ ಹುಟ್ಟು ಹಬ್ಬದ ಸಮಯ (೧೯೮೨ರಲ್ಲಿ ಎಂದು ನೆನಪು). 'ಸ್ನೇಹವಲಯ'ದ ಮಿತ್ರರೆಲ್ಲ (ರಚನಾ ರಾವ್, ಎ. ಎಸ್. ಮೂರ್ತಿ, ಹರಿಹರಪ್ರಿಯ, ಬಿ. ಶ್ರೀನಿವಾಸರಾಜು, ಎಚ್. ಎಸ್. ರಾಘವೇಂದ್ರರಾವ್, ಮೊದಲಾದವರು) ಸೇರಿ – ಅಂದು ವಿಶೇಷವಾಗಿ ಜಿ. ವೆಂಕಟಸುಬ್ಬಯ್ಯನವರನ್ನು, ಎಲ್. ಎಸ್. ಶೇಷಗಿರಿ ರಾಯರನ್ನು ಆಹ್ವಾನಿಸಿದ್ದೆವು – ಪಿ.ಸೀ. ಮನೆಗೆ ಹೋದೆವು. ತೀರಾ ಬಳಲಿಕೆ, ಮಲಗಿದ್ದರು. ಅವರಿಗೆ ಬಹಳ ಪ್ರೀತಿಯ ಮರ್ಕೈಸ್ಟ್ ಪಂಚೆ, ಡ್ರೈಫ್ರೂಟ್ಸ್, ಇತ್ಯಾದಿ ಕೊಂಡೊಯ್ದು ಕೊಟ್ಟು ಕೊಂಚ ಕಾಲ ಹರಟೆ ಹೊಡೆದವು.

ತಿಂಡಿ–ಕಾಫಿ ಕೊಟ್ಟರು. ಹೊರಟು ನಿಂತಾಗ ಕಳಿಸಿಕೊಡಲು ಗೇಟಿನವರೆಗೆ ಬಂದರು ಪಿ.ಸೀ.

"ಅಪ್ಪಾ, ನೀವು ವಿಶ್ರಾಂತಿ ತಗೊಳ್ಳಿ. ಆಯಾಸ ಆಗುತ್ತೆ, ನಡೆಯಬೇಡಿ" ಅಂದರೆ

"ಇಲ್ಲ, ನೀವೆಲ್ಲ ಬಂದಿದೀರಿ. ಈ ಪ್ರೀತಿ, ಸಂತೋಷ ತೋರಿಸಿದೀರಿ. ಇದೊಂಥರಾ ಟಾನಿಕ್ ನನಗೆ. ನಾನು ಖಂಡಿತಾ ಈಗಲೇ ಸಾಯೋಲ್ಲ" ಅಂತ ನಕ್ಕರು. ಕೈಯೆತ್ತಿ ಜೋಡಿಸಿ ನಿಂತರು. ಬೆನ್ನು ತುಸು ಬಾಗಿತ್ತು. ಮುಖದಲ್ಲಿ ಉಜ್ವಲವಾದ ಬೆಳಕು.... ಅದೊಂದು ಕಡೆದ ವಿಗ್ರಹ.... ಇನ್ನೂ ಕಣ್ಣ ಮುಂದೆ ಅದೇ ಚಿತ್ರವಿದೆ!

ಮತ್ತೊಮ್ಮೆ ಅವರ ಮನೆಗೆ ಹೋದಾಗ ಪಿ.ಸೀ. ತೀರಾ ಅಸ್ವಸ್ಥರು. ಅವರು ಏನೋ ಕೊಟ್ಟಿದ್ದ 'ಒಂದು ಕವಿತೆ ನನ್ನ ಬಳಿ ಇದೆ. ಅದನ್ನು ವಿಶೇಷಾಂಕಕ್ಕೆ ಬಳಸಿಕೊಳ್ಳಲೇ?' ಎಂದೆ.

"ಅವರೀಗ ಏನೂ ಹೇಳುವ ಸ್ಥಿತಿಯಲ್ಲಿಲ್ಲ. ನಿಮಗೆ ಸರಿಕಂಡ ಹಾಗೆ ಮಾಡಿ" ಅಂದರು ಅವರ ಮಗ.

ನಾನು ಮಣಿಪಾಲಕ್ಕೆ ಹೋದೆ. ಅವರ ಕವಿತೆ 'ಜಿಜ್ಞಾಸೆ' ಅಚ್ಚಾಯಿತು. ಅವರು ಕರಡು ತಿದ್ದಲಿಲ್ಲ. 'ತಪ್ಪುಗಳಾದಾವು. ಸರಿಯಾಗಿ ನೋಡಿಕೋ' ಎನ್ನಲಿಲ್ಲ. 'ಹೇಗಿದ್ದೀ' ಅಂತ ಕೇಳಿ ಮಣಿಪಾಲಕ್ಕೆ ಪತ್ರ ಬರೆಯಲಿಲ್ಲ. ಅಲ್ಲಿರುವಾಗಲೇ ನನಗೆ ವಿ.ಸೀ. ಇನ್ನಿಲ್ಲವಾದ ಸುದ್ದಿ ಬಂತು. ತಟ್ಟಾಡಿ ಹೋದೆ.... ೧೯೮೩ರ ವಿಶೇಷಾಂಕದಲ್ಲಿ ಅವರ 'ಜಿಜ್ಞಾಸೆ' ಕವಿತೆಯ ಜೊತೆಗೇ ಒಂದು ನುಡಿ ನಮನವನ್ನೂ ಸಲ್ಲಿಸಿದ್ದೆ. ಅಲ್ಲಿಂದೀವರೆಗೆ ಅವರಿಲ್ಲದ ಮನೆಗೆ ನಾನು ಹೋಗಿಯೇ ಇಲ್ಲ. ಇವತ್ತಿನವರೆಗೂ ಸಾಧ್ಯವಾಗಿಲ್ಲ; ಆಗುತ್ತಿಲ್ಲ.

'ಜಿಜ್ಞಾಸೆ' ಕವಿತೆಯಲ್ಲಿ :

ಎಂಟು ಶತಮಾನಗಳ ಹುಟ್ಟು ಖಂಡಖಂಡಾಂತರದಿಂದ
ಯೋಚಿಸಿದುದು, ಮಾಡಿದ್ದು, ಏಕತೆಯ ಬಯಸಿದ್ದು
ಬುಂಜಿ ಬಗೆಯಾದೀತೆ? ಮಾನವ ಮೀರಿದಾಕಾಂಕ್ಷೆಯಾಗಿ
ಸಾಧಿಸಿದರದು ತೃಪ್ತಿ, ಅರಿವು, ಶಾಂತಿ
ಇದಕಿಂತ ಬೇರಾವುದಿದೆ ಬದುಕಿನಲ್ಲಿ?

ಅನ್ನುತ್ತಾರೆ. ನನ್ನ ಜೀವನದ ಅನೇಕ ಸಂಕೀರ್ಣ–ಸಂದಿಗ್ಧ ಘಟ್ಟಗಳಲ್ಲಿ ಅವರು ಧೈರ್ಯ ತುಂಬಿದರು. ನನ್ನದೊಂದು ಲೇಖನಗಳ ಸಂಕಲನ 'ಸಂಕುಲ'ವನ್ನು 'ಬದುಕ ಪ್ರೀತಿಸುವ ಚೈತನ್ಯ ತುಂಬಿದ ವಿ.ಸೀ. ಅವರಿಗೆ' ಅರ್ಪಿಸಿದ್ದೇನೆ. ಆ ಲೇಖನಗಳೆಲ್ಲದರ ಹಿಂದೆ ಅವರ ನೆರವಿತ್ತು. ಅಂದು ಅವರು ಹೇಳಿದ್ದ ಮಾತನ್ನು ಪುಸ್ತಕದ ಮುನ್ನುಡಿಯಲ್ಲಿ ದಾಖಲಿಸಿದ್ದೇನೆ. ಅವರು ಪದೇ ಪದೇ ಹೇಳುತ್ತಿದ್ದ 'ನಿಧಾನ'ದ ಅರ್ಥ ಬದುಕಿನ ಈ ಸಂಜೆಯಲ್ಲಿ ಅರ್ಥವಾಗುತ್ತಾ ಅನುಭವಕ್ಕೆ ಬರುತ್ತಿದೆ; ಬೆಳಕು ತೋರುತ್ತಿದೆ.

ಸಾಗರವನ್ನು ಈಜುವ ಶಕ್ತಿಯಿದ್ದಾತ

"ವಿ.ಸೀ. ಅಂಥವರು ನಮ್ಮಲ್ಲಿ ಹುಟ್ಟಿದ್ದು ನಮ್ಮ ಅದೃಷ್ಟ, ಅವರ ದುರದೃಷ್ಟ. ದೊಡ್ಡ ಸಾಗರವನ್ನು ಈಜುವ ಶಕ್ತಿಯಿದ್ದಾತ ಸಣ್ಣಕುಂಟೆಯಲ್ಲಿ ಬದುಕಬೇಕಾಯಿತು. ವಿ.ಸೀ. ಅವರ ಮನೋವೈಶಾಲ್ಯದವರು, ಸೌಂದರ್ಯಸೂಕ್ಷ್ಮತೆಯುಳ್ಳವರು, ವಾಗ್ವೈಭವ್ಯವುಳ್ಳವರು ವಿದೇಶದಲ್ಲಿದ್ದಿದ್ದರೆ ದೊಡ್ಡ ವಿಶ್ವವಿದ್ಯಾಲಯದಲ್ಲಿ, ವಿದ್ವತ್ಪತ್ರಿಕೆಗಳಲ್ಲಿ ವಿಖ್ಯಾತರಾಗಿರುತ್ತಿದ್ದರು. ಬಂಗಾಳದಲ್ಲಿಯೋ ಮಹಾರಾಷ್ಟ್ರದಲ್ಲಿಯೋ ಜನಿಸಿದ್ದರೆ ಅವರ ಕೀರ್ತಿ ನಮ್ಮ ದೇಶದಲ್ಲೆಲ್ಲ ಹಬ್ಬಿರುತ್ತಿತ್ತು. ಕನ್ನಡದ ನಾವು ಅವರ ಗರಿಮೆಗೆ ತಕ್ಕ ಸಂಭಾವನೆಯಿರಲಿ ಸಮ್ಮಾನವನ್ನೂ ಮಾಡದೆ ಹೋದೆವು."

ಎಚ್. ವೈ. ಶಾರದಾಪ್ರಸಾದ್
'ಸಾರ್ಥಕ ಬದುಕು' ಪು. vii

ಗುರು ಸದೃಶರು

ಎಮ್. ರಾಮಚಂದ್ರ

ನನಗೆ ಪ್ರಾಥಮಿಕ ಶಾಲೆಯಲ್ಲಿ ಕನ್ನಡದ 'ಓನಾಮ'ವಾದಾಗ ನಾನು ಮೊದಲು ಓದಿದ ಹೆಸರುಗಳಲ್ಲಿ 'ವಿ.ಸೀ'. ಎಂಬುದು ಒಂದಾಗಿತ್ತು. ಆ ಕಾಲದಲ್ಲಿ ಶಿವರಾಮ ಕಾರಂತರ 'ಸಿರಿಗನ್ನಡ ಪಾಠಮಾಲೆ'ಯ ಪುಸ್ತಕಗಳು ನಮಗೆ ಕನ್ನಡ ಪಠ್ಯಗಳಾಗಿದ್ದುವು. ಒಂದು ತರಗತಿಯಲ್ಲಿ ವಿ.ಸೀ.ಯವರ 'ಹೂ ಕೊಳ್ಳಿ', ಮತ್ತೊಂದರಲ್ಲಿ 'ಮೃಗಶಾಲೆಯ ಸಿಂಹಗಳು' ಎಂಬ ಕವಿತೆಗಳನ್ನು ಓದಿದೆ. ಆ ಪ್ರಾಯದಲ್ಲಿ ನನ್ನ ಮನಃಸ್ಥಿತಿ ಹೇಗಿತ್ತೆಂಬುದನ್ನು ನಾನು ಈಗ ವರ್ಣಿಸಲಾರೆ. ಆದರೆ ಆ ಕವಿತೆಗಳ ಮೊದಲ ಓದಿನಿಂದಲೇ ನಾನು ವಿ.ಸೀ.ಯವರಿಗೆ ಮಾರು ಹೋದೆನೆಂಬುದು ನನಗೆ ಚೆನ್ನಾಗಿ ನೆನಪಿದೆ. ಏಕೆಂದರೆ ಹೆಚ್ಚು ಪ್ರಯತ್ನವೇನೂ ಇಲ್ಲದೆ ಆ ಕವಿತೆಗಳು ನನಗೆ ಕಂಠಪಾಠವಾದುವು. ಕನ್ನಡ ಭಾಷಾ ಸಾಹಿತ್ಯದಲ್ಲಿ ಬಾಲ್ಯಾರಭ್ಯ ನನಗೆ ಸಹಜವಾದ ಪ್ರೀತಿ ಇದ್ದುದರಿಂದ ಕ್ರಮೇಣ ಬಹುಜನಪ್ರಿಯ ಕವಿತೆ 'ಶಬರಿ'ಯನ್ನು, ಆಮೇಲೆ ತೇಜಸ್ವಿಯಾಗಿರುವ 'ಅಭೀ'ಯನ್ನು, ಆಮೇಲೆ ಕಾರಂತರನ್ನು ವರ್ಣಿಸುವ 'ಕಾಲನಟ' ಎಂಬುದನ್ನು ಓದಿದೆ, ಮೆಚ್ಚಿದೆ. ಯಾವುದೋ ಪಠ್ಯದಲ್ಲಿ ಅವರ 'ಪಂಪಾಯಾತ್ರೆ'ಯ ಒಂದು ಭಾಗ – ಪಂಪಾಸರೋವರ ವರ್ಣನೆಯನ್ನು ಓದಿ ಮರುಳಾದ ನನಗೆ ಆ ಇಡೀ ಪುಸ್ತಕವನ್ನೇ ಓದಬೇಕೆಂಬ ಆಸೆ ಬಲವಾಯಿತು. ಆದರೆ ಎಲ್ಲಿ ಕೇಳಿದರೂ ಹುಡುಕಿದರೂ ಅದರ ಪ್ರತಿ ಸಿಗಲಿಲ್ಲ. ಸಿಗಬೇಕಾದರೆ ಆರೇಳು ವರ್ಷ ಕಾಯಬೇಕಾಯಿತು. ಧಾರವಾಡದ ಸಮಾಜ ಪುಸ್ತಕಾಲಯದಲ್ಲಿ ಅದರ ಪ್ರತಿಯನ್ನು ಕಂಡಾಗ ನನಗಾದ ಸಂತೋಷ 'ಯುರೇಕಾ' ಎಂದು ಉದ್ಗರಿಸಿದ ಆರ್ಕಿಮಿದೀಸನದಕ್ಕಿಂತ ಕಡಮೆಯದ್ದಾಗಿರಲಿಲ್ಲ!

'ವರ್ಣ ಮಾತ್ರಂ ಕಲಿಸಿದಾತಂ ಗುರು' ಎಂಬುದು ಒಂದು ಸೂಕ್ತಿ. ಗುರುವೆಂದರೆ ಉಪನಿಷತ್ಕಾಲದಲ್ಲಿದ್ದಂತೆ ಹತ್ತಿರ ಕೂರಿಸಿ ಉಪದೇಶಿಸಿದವನೇ ಅಲ್ಲ, ಅಥವಾ ಆಧುನಿಕ ವ್ಯವಸ್ಥೆಯಲ್ಲಿರುವಂತೆ ತರಗತಿ ಕೋಣೆಯ ಪ್ರವಾಚಕನೇ ಅಲ್ಲ. ಯಾರ ವಾಙ್ಮಯವೋ, ಬೋಧನೆಯೋ, ಸಂದೇಶವೋ, ನಮ್ಮ ಮನಸ್ಸನ್ನು ಮುಟ್ಟಿ ತಿಳಿಗೊಳಿಸುತ್ತದೆಯೋ, ನಮ್ಮ ನೆನಪಿನಲ್ಲಿ ನಿಂತು ಬಾಳದಾರಿಗೆ ಬೆಳಕಾಗುತ್ತದೆಯೋ ಅಂತಹ ಮಹನೀಯರೆಲ್ಲ ಗುರುಗಳೇ ಹೌದು. ಅಂತಹವರನ್ನೇ ಕವಿ ಕುವೆಂಪು, 'ಲೋಕಗುರುಗಳೆ'ಂದು ಬಣ್ಣಿಸಿ, "ಬನ್ನಿ

ಮನ್ಮನೋಮಂದಿರಕೆ" ಎಂದು ಕರೆದದ್ದು! ಐವತ್ತು ವರ್ಷಗಳಷ್ಟು ಹಿಂದೆ, ನನಗೆ ಏಂಟೋ ಹತ್ತೋ ವರ್ಷವಾಗಿದ್ದಾಗ, ತಮ್ಮ ಬರೆಹಗಳ ಮೂಲಕ ನನ್ನ ಮನಮೊಳಕ್ಕೆ ಬಂದು ನನ್ನ ಬದುಕಿನಲ್ಲಿ ನೆಳಲಾಗಿ ಹರಡಿ, ಬರವಣಿಗೆಯಲ್ಲಿ ಬೆಳಕಾಗಿ ಹಬ್ಬಿದವರಲ್ಲಿ ಪಿ.ಸೀ.ಯವರೂ ಒಬ್ಬರು. ಆದುದರಿಂದ ಅವರು ನನ್ನ ಗುರು – ತಸ್ಮೈ ಶ್ರೀ ಗುರವೇ ನಮಃ.

ಹೀಗೆ ನಾನು ಹೆಸರು ಕೇಳಿದ, ಓದಿ ಮೆಚ್ಚಿದ, ಕ್ರಮೇಣ ಗುರು ಸದೃಶರೆಂದು ಭಾವಿಸಿದ ಪಿ.ಸೀ.ಯವರನ್ನು ನಾನು ಕಣ್ಣಾರೆ ಕಾಣುವ ಮೊದಲೇ ಅವರ ಮಾತನ್ನು ಕೇಳಿದ್ದೆ. ೧೯೫೪ರ ಅಗೋಸ್ತು ೧೫ರಂದು ಮೈಸೂರು ಆಕಾಶವಾಣಿ ನವ್ಯ ಸಾಹಿತ್ಯ ನಿರ್ಮಾಣವೆಂಬ ಡಿ.ವಿ.ಜಿ., ಮಾಸ್ತಿ, ಪಿ.ಸೀ., ಕಾರಂತ ಮತ್ತು ಕುವೆಂಪು ಅವರ ಭಾಷಣಗಳನ್ನು ಪ್ರಸಾರ ಮಾಡಿತು. ಜೆ. ಪಿ. ರಾಜರತ್ನಂ ಕಾರ್ಯಕ್ರಮ ಸಂಯೋಜಕರಾಗಿದ್ದರು. ಆರು ಮಂದಿ ಖ್ಯಾತನಾಮರ ಮಾತುಗಳನ್ನು ಏಕಕಾಲಕ್ಕೆ ಕೇಳಿ ನಾನು ಪುಲಕಿತನಾಗಿದ್ದೆ. ಆಗ ನಾನು ಹೈಸ್ಕೂಲು ವಿದ್ಯಾರ್ಥಿ.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನಾನು ಪ್ರಥಮ ವರ್ಷದ (೧೯೬೦) ಎಂ.ಎ. ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ಪ್ರೊ. ಎಸ್. ಎಸ್. ಮಾಳವಾಡರು ವಾರಕ್ಕೋ ಪಕ್ಷಕ್ಕೋ ಒಂದು 'ಸೆಮಿನಾರು' ಮಾಡುವ ಪ್ರಸ್ತಾವವನ್ನು ನಮ್ಮ ಮುಂದಿರಿಸಿ, ಮೊತ್ತ ಮೊದಲ ಸೆಮಿನಾರಿನಲ್ಲಿ ಯಾರು ಯಾವ ವಿಷಯದಲ್ಲಿ ಪ್ರಬಂಧ ಓದುತ್ತೀರಿ ಎಂದು ಕೇಳಿದರು. ನಾನು ಯಾವುದೋ ಮೊಂಡು ಧೈರ್ಯದಿಂದ, "ನಾನು ಓದುತ್ತೇನೆ, ಪಿ.ಸೀ.ಯವರ ಕವಿತೆಗಳ ಬಗ್ಗೆ ಬರೆದು ತರುತ್ತೇನೆ" ಎಂದೆ! ಹಾಗೆ ಹೇಳಿದುದನ್ನು ಮಾಡಿಯೂ ಬಿಟ್ಟೆ. ಪ್ರೊ. ಮಾಳವಾಡರಿಗೆ ತುಂಬ ಸಂತೋಷವಾಯಿತು. ಏನು ಕಾರಣವೋ ಪ್ರಸ್ತಾವಿತ ಸೆಮಿನಾರು ಹೆಚ್ಚು ಕಾಲ ನಡೆಯಲಿಲ್ಲ.

ಪಿ.ಸೀ. ಯವರ ಪ್ರಥಮ ದರ್ಶನ ನನಗಾದದ್ದು ೧೯೬೩ರ ಜನವರಿಯಲ್ಲಿ, ಮಂಗಳೂರು ಶ್ರೀ ರಾಮಕೃಷ್ಣಾಶ್ರಮದಲ್ಲಿ – ಸ್ವಾಮಿ ವಿವೇಕಾನಂದ ಶತಮಾನೋತ್ಸವಕ್ಕೆ ಅವರು ಆಮಂತ್ರಿತರಾಗಿದ್ದರು. ಆದಾಗಲೇ ನಾನು ವಿ.ಸೀ.ಯವರ ಬಗ್ಗೆ ಅವರಿವರಿಂದ ಕೇಳಿದ್ದೆ. 'ರೂಪಾರಾಧಕ' ಮತ್ತು 'ವಿ.ಸೀ.' ಎಂಬ ಎರಡು ಪುಸ್ತಕಗಳನ್ನು ಓದಿದ್ದೆ. ಅವರ ವೇಷ ಭೂಷಣ, ನಯವಿನಯ, ಋಜು ಜೀವನ, — ಇವನ್ನೆ ಹತ್ತಿರದಿಂದ ಬಲ್ಲವರು ಬಣ್ಣಿಸಿದ ರೀತಿಯಿಂದಾಗಿ ನನ್ನ ಮನಸ್ಸಿನಲ್ಲಿ ಅವರದೊಂದು ಚಿತ್ರವನ್ನು ರಚಿಸಿಕೊಂಡಿದ್ದೆ. ನಾನು ನೋಡಿದ ದಿನ ಅವರು ಕೋಟನ್ನು ತೊಟ್ಟಿರಲಿಲ್ಲ, ರುಮಾಲನ್ನು ಕಟ್ಟಿರಲಿಲ್ಲ, ಆಶ್ರಮದ ಪರಿಸರ ಎಂಬ ಕಾರಣವಾಗಿ ಇರಬಹುದು ಎಂದುಕೊಂಡೆ. ಆದರೆ ಅವರ ಹಿಂದಲೆಯಲ್ಲಿ ಸಣ್ಣದೊಂದು ಜುಟ್ಟನ್ನು ಕಂಡಾಗ ನನಗೆ ಸ್ವಲ್ಪ ಆಶ್ಚರ್ಯವಾಯಿತು. ನನ್ನಲ್ಲಿ ಜುಟ್ಟಿನ ಬಗೆಗೆ ತಿರಸ್ಕಾರಭಾವ ಸರ್ವಥಾ ಇರಲಿಲ್ಲವಾದರೂ ಆ ಕಾಲದಲ್ಲಿ ಅದು ಅಪಹಾಸ್ಯದ ವಸ್ತುವಾಗಿತ್ತು. ಪಿ.ಸೀ. ಯವರ ಜುಟ್ಟು ಕಂದಾಚಾರದ ಕೇತನವಾಗಿರಲಿಲ್ಲ, ಸಭ್ಯತೆಯ ಸಂಕೇತವಾಗಿತ್ತು ಎಂಬುದನ್ನು ನಾನು ಕಂಡುಕೊಳ್ಳಲು ತಡವೇನೂ ಆಗಲಿಲ್ಲ. ಪಿ.ಸೀ.ಯವರನ್ನು ಬಹುವಾದ ಸ್ನೇಹಾದರಗಳಿಂದ ಕಾಣುತ್ತಿದ್ದ ನನ್ನ ಪೂಜ್ಯ ಗುರು ಸೇಡಿಯಾಪು ಕೃಷ್ಣಭಟ್ಟರ ಜತೆಯಲ್ಲಿ ನಾನು ಆಶ್ರಮಕ್ಕೆ ಹೋದುದರಿಂದ ಪಿ.ಸೀ.ಯವರನ್ನು

ಸಮೀಪದಿಂದ ಕಂಡು, ಒಂದೆರಡು ಮಾತು ಆಡುವ ಅವಕಾಶ ನನಗೆ ಅನಾಯಾಸವಾಗಿ ಪ್ರಾಪ್ತವಾಯಿತು.

ವಿ.ಸೀ. ಯವರು ಮಂಗಳೂರಿಗೆ ಬರುತ್ತಾರೆ ಎಂಬುದನ್ನು ಆ ಮೊದಲೇ ನಾನು ಕೇಳಿದ್ದಿದ್ದುದರಿಂದ ಕಾರ್ಕಳದಲ್ಲಿ ನನ್ನ ಕಾರ್ಯಕ್ಷೇತ್ರವಾಗಿದ್ದ ಶ್ರೀ ಭುವನೇಂದ್ರ ಕಾಲೇಜಿಗೆ ಅವರನ್ನು ಆಮಂತ್ರಿಸಿದೆ. ಅದಕ್ಕೆ ವಿ.ಸೀ. ಯವರು ಬರೆದ ಉತ್ತರ ಅವರ ವ್ಯಕ್ತಿತ್ವಕ್ಕೆ ಹಿಡಿದ ಸಣ್ಣಮೊಂದು ಕನ್ನಡಿ; ನನ್ನ ಪಾಲಿಗೆ ಅದೊಂದು ಹೊನ್ನುಡಿ. ಈಗಲೂ ಅದನ್ನು ಎಚ್ಚರಿಕೆಯಿಂದ ಉಳಿಸಿಕೊಂಡಿದ್ದೇನೆ. ಇದು ಆ ಪತ್ರ:

ವಿ. ಸೀತಾರಾಮಯ್ಯ ಬೆಂಗಳೂರು
೨೬.೧೧.೧೯೬೨

"..... ನಾನು ಕಾರ್ಕಳವನ್ನು ನೋಡಿದ್ದೇನೆ. ಅಲ್ಲಿ ಒಂದೆರಡು ಉಪನ್ಯಾಸಗಳನ್ನು ನಾಡಹಬ್ಬದಲ್ಲಿ ಮಾಡಿದ ನೆನಪುಂಟು – ನನ್ನ ಅಪಕ್ವ ಕಾಲದಲ್ಲಿ. ಈಗ ಭಾಷಣಾದಿಗಳು ಬೇಸರವಾಗಿವೆ. ಏನು ಹೇಳಬೇಕೋ ತೋರುವುದೇ ಇಲ್ಲ.

ಕ್ರಿಕೆಟ್‌ನಲ್ಲಿ ಹೇಳುವಂತೆ ನಮ್ಮಂಥವರ Innings ಮುಗಿಯಿತು. ಯುವಕರೂ ಉತ್ಸಾಹಶಾಲಿಗಳೂ ಆದ ನಿಮ್ಮಂಥವರು ಮುಂದೆ ನಿಂತು ಎಲ್ಲವನ್ನೂ ನಿರ್ವಹಿಸಬೇಕು. ಅದನ್ನು ನೋಡಿ ಸಂತೋಷ ಪಡುವ ಭಾಗ್ಯ ಮುತ್ತೈದೆಯರಾದ ನಮ್ಮ ಪಾಲಿನದಾಗುತ್ತದೆ.

ನೀವು ನನ್ನ 'ಶಾಕುಂತಲ'ದ ಪ್ರಸ್ತಾಪ ಮಾಡಿದ್ದೀರಿ. ಎಲ್ಲಿಯಾದರೂ ವಿಶ್ವಾಸ ಕಂಡಾಗ ಅದಕ್ಕೆ ಕೃತಜ್ಞನಾಗುವ ಹರ್ಷ ನನ್ನ ಪಾಲಿಗೆ ಎಂದಿಗೂ ಇರಲಿ...."

ಸ್ವವಿಷಯದಲ್ಲಿ ನಿರಹಂಕೃತಿ, ಅನ್ಯರಲ್ಲಿ ವಿಶ್ವಾಸ, ಪ್ರೀತಿವಿಶ್ವಾಸಗಳಿಗೆ ಕರಗುವ ಮನೋಧರ್ಮ – ಇದು ವಿ.ಸೀ.ಯವರ ವೈಶಿಷ್ಟ್ಯ ಎಂಬುದನ್ನು ಆ ಸಣ್ಣ ಕಾಗದವೇ ಹೇಳುತ್ತಿತ್ತು. ಅದಾಗಲೇ ಮೂರನೆಯ ಮುದ್ರಣವಾಗಿ ಪ್ರಕಟಗೊಂಡಿದ್ದ ಅವರ 'ಶಾಕುಂತಲ ನಾಟಕ ವಿಮರ್ಶೆ'ಯನ್ನು ಓದಿ ಮೆಚ್ಚಿದುದಕ್ಕೆ ನನ್ನ ಪತ್ರದಲ್ಲಿ ತಿಳಿಸಿದ್ದೆ. ಸಾಹಿತ್ಯ ಕ್ಷೇತ್ರದಲ್ಲಿ ನಗಣ್ಯನಾಗಿದ್ದ ನನ್ನ ಸಣ್ಣದೊಂದು ಮೆಚ್ಚು ನುಡಿಯನ್ನು ವಿ.ಸೀ.ಯವರು ಎಷ್ಟು ಉದಾರವಾಗಿ, ಸಂತೋಷದಿಂದ ಪರಿಗ್ರಹಿಸಿದ್ದರೆಂಬುದೂ ಅವರ ಸೌಜನ್ಯಕ್ಕೆ ನಿದರ್ಶನವಾಗಿತ್ತು.

ಏಕೋ ಏನೋ ಮೊದಲಿನಿಂದಲೂ ನನಗೆ ನನ್ನ ಸಮವಯಸ್ಕರಾದ ಅಥವಾ ಸಮೀಪ ವಯಸ್ಕರಾದ, ಸೃಜನಶೀಲರೆಂದೋ ಕ್ರಾಂತಿಕಾರಿಗಳೆಂದೋ ('ಬುದ್ಧಿಜೀವಿ' ಎಂಬ ವಿಶೇಷಣದ ಚಾಲ್ತಿ ಇತ್ತೀಚೆಯದು) ಸಿದ್ಧ – ಪ್ರಸಿದ್ಧರಾದ ಲೇಖಕರೊಂದಿಗೆ ಆಪ್ತಾಗಿ ಬಳಕೆ ಇರಲಿಲ್ಲ. ಅದಕ್ಕೆ ನನ್ನ ಮನೋಧರ್ಮವೇ ಕಾರಣವಿರಬಹುದು. ಗುಂಪು–ಗದ್ದಲ ಕೆಸರಿನ ಎರಚಾಟಗಳೂ ನನ್ನ ಮನಸ್ಸಿಗೆ ಒಗ್ಗುವುದಿಲ್ಲ. ಸಾಹಿತ್ಯ ಒಂದು ಉದ್ಯಾನ, ಗೊಂಡಾರಣ್ಯ ಅಲ್ಲ. ಅಲ್ಲಿ ಎಲ್ಲ ಗಿಡಬಳ್ಳಿಗಳೂ ಮುಕ್ತವಾಗಿ ಬೆಳೆಯಬೇಕು, ಹಬ್ಬಬೇಕು, ಹೂಬಿಡಬೇಕು, ಕಂಪು ಹೊಮ್ಮಬೇಕು, ಸೊಂಪಾಗಿ ಕಾಣಬೇಕೆಂಬುದು ನನ್ನ ಹಂಬಲ.

ತಾವು ಬರೆದು ದೊಡ್ಡವರಾದುದಲ್ಲದೆ ಎಳೆಯರನ್ನೂ ಬೆನ್ನು ತಟ್ಟಿ ಹುರಿದುಂಬಿಸುತ್ತಾ ಸಾಹಿತ್ಯ ರಂಗದಲ್ಲಿ ಒಂದು ಸ್ನೇಹಮಯ – ಅನಸೂಯ ವಾತಾವರಣವನ್ನೆ ಸೃಷ್ಟಿಸುತ್ತಿದ್ದ ಜ್ಞಾನವೃದ್ಧ, ಪ್ರಾಯ ಪ್ರಬುದ್ಧ ಸಾಹಿತಿಗಳ ಸಾಮೀಪ್ಯ ಸಾಹಚರ್ಯಗಳೇ ನನಗೆ ಹೆಚ್ಚಾಗಿ ಬಂದುವು, ಸಂತೋಷವನ್ನು ತಂದುವು. ರಾಬರ್ಟ್ ಸದೇ ಎಂಬ ಆಂಗ್ಲ ಕವಿಯ 'ಕವಿಶಿಷ್ಯ' –The scholar ಎಂಬುದರ ಅನುವಾದ – (ಬಿ. ಎಂ. ಶ್ರೀ.ಯವರದು) ನನಗೆ ಪರಮ ಪ್ರಿಯವಾದ ರಚನೆ–

ಎತ್ತೆತ್ತ ಸುಳಿಸುವೆನೊ ಈ ಕಣ್ಣನತ್ತತ್ತ
ಹಳಮೆಯ ಮಹಾತ್ಮರನು ಪರಮ ಕವಿಗಳನು
ಬಳಸಿನಲಿ ಬಂದಿಹರ ಕಾಣುತಿಹೆನು–

ಎನ್ನುತ್ತಾನೆ ಆ ಕವಿ. ಅತ ವರ್ಣಿಸಿದುದು ಗ್ರಂಥ ಭಂಡಾರದಲ್ಲಿರುವ ಮಹಾ ಲೇಖಕರ ಕೃತಿಗಳನ್ನು. ನನ್ನ ಕಣ್ಣಿಗೆ – ಕನಕದಾಸನಿಗೆ ಬಾಳೆ ಹಣ್ಣಿಲ್ಲೂ ಶ್ರೀ ಕೃಷ್ಣನೇ ಕಂಡಂತೆ – ಎಲ್ಲೆಲ್ಲೂ ಪೈ, ಡಿ.ವಿ.ಜಿ., ಮಾಸ್ತಿಯಂತಹವರೇ ಕಾಣುತ್ತಾರೆ. ಅಂತಹ ಹಲವರು ನನ್ನನ್ನು ಅಕ್ಕರೆಯಿಂದ ಹತ್ತಿರಕ್ಕೆ ಕರೆದು ತಮ್ಮ ಕೈಗಳನ್ನು ನನ್ನ ತಲೆಯ ಮೇಲಿರಿಸಿ ಹರಸಿದರು ಎಂಬುದು ದೈವಾನುಗ್ರಹವೋ, ಪೂರ್ವಜನ್ಮದ ಸುಕೃತಫಲವೋ ಇರಬೇಕು. ನಾನು ಸದಾಕಾಲ ಸಂಸ್ಮರಿಸುವ ಸಾಹಿತಿ ಶ್ರೇಷ್ಠರಲ್ಲಿ ವಿ.ಸೀ. ಯವರೂ ಒಬ್ಬರು.

ಹಿಂದೆ ಹೇಳಿದಂತೆ ಮಂಗಳೂರು ಶ್ರೀ ರಾಮಕೃಷ್ಣಾಶ್ರಮದಲ್ಲಿ ವಿ.ಸೀ.ಯವರ ಪ್ರಥಮ ದರ್ಶನದ ಅನಂತರ ಅವರೊಂದಿಗಿನ ಪತ್ರ ವ್ಯವಹಾರ ಹೆಚ್ಚಿತು. ೧೯೬೫ರಲ್ಲಿ ಮೊದಲ ಸಲ ಬೆಂಗಳೂರಿನ ಮನೆಗೆ ಹೋಗಿ ಅವರನ್ನು ಕಂಡು, ಅವರ ಪ್ರೀತಿಯನ್ನು ಉಂಡದ್ದೂ ಆಯಿತು. ೧೯೭೦ರಲ್ಲಿ ಶ್ರೀ ಭುವನೇಂದ್ರ ಕಾಲೇಜಿನ ದಶಮಾನೋತ್ಸವ ಜರಗುವುದಿತ್ತು. ಅದರ ಅಂಗವಾಗಿದ್ದ 'ಮುದ್ದಣ ಕವಿ ಶತಮಾನೋತ್ಸವ'ದ ಅಧ್ಯಕ್ಷತೆ ವಹಿಸುವಂತೆ ವಿ.ಸೀ.ಯವರನ್ನು ಕಂಡು ಮಾತಾಡಿ ಒಪ್ಪಿಸಿದೆ. ದೂರ ಪ್ರಯಾಣದಿಂದ ಅವರಿಗೆ ಶರೀರ ಶ್ರಮ ಆಗದಂತೆ ವಿಮಾನಯಾನದ ವ್ಯವಸ್ಥೆ ಮಾಡಿದ್ದೆವು. ವಿ.ಸೀ. ಯವರ ಅಧ್ಯಕ್ಷತೆಯಲ್ಲಿ ಸುಂದರವಾಗಿ ನೆರವೇರಿದ ಮುದ್ದಣ ಶತಮಾನೋತ್ಸವದಲ್ಲಿ ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರೂ ಭಾಗವಹಿಸಿದ್ದರು. ಸ್ವತಃ ಡಾ. ಟಿ. ಎಂ. ಎ. ಪೈಯವರೇ ಭಾಷಣ ಮಾಡಿದರು. ವೇದಿಕೆಯಲ್ಲಿ ಆ ಮೂವರೂ ಹಸನ್ಮುಖಿಗಳಾಗಿ ಕುಳಿತಿರುವ ಒಂದು ಚಿತ್ರ ಈವೊತ್ತೂ ನನ್ನ ಕಣ್ಣ ಮುಂದಿದೆ.

ಎರಡು ವರ್ಷಗಳ ಬಳಿಕ ಮತ್ತೊಮ್ಮೆ ವಿ.ಸೀ.ಯವರನ್ನು ಮಂಗಳೂರಿಗೆ ಬರಮಾಡಿಕೊಳ್ಳುವ ಭಾಗ್ಯ ನನ್ನದಾಯಿತು. ಪಂಡಿತ ಶ್ರೇಷ್ಠ ಸೇಡಿಯಾಪು ಕೃಷ್ಣಭಟ್ಟರ ಎಪ್ಪತ್ತನೆಯ ಜನ್ಮ ದಿನ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ನಿಮಿತ್ತ ಅವರನ್ನು ಅಭಿನಂದಿಸುವ ಸಂದರ್ಭ ಅದಾಗಿತ್ತು. ವಿ.ಸೀ.ಯವರು ತಮ್ಮ ಸನ್ಮಿತ್ರ ಸೇಡಿಯಾಪು ಸಂಮಾನಕ್ಕಾಗಿ ಸಂತೋಷ ಪಟ್ಟರು, ಕಾರ್ಯಕ್ರಮವನ್ನು ಸೊಗಸಾಗಿ ನಡೆಯಿಸಿಕೊಟ್ಟರು. ಸಾಹಿತ್ಯ ಶಾರದೆಯ ಇಬ್ಬರು ವರಪುತ್ರರು ಹತ್ತಿರ ಹತ್ತಿರ ಕುಳಿತಿರುವ

ದೃಶ್ಯ ನನಗೆ ಶ್ವೇತಾಶ್ವತರೋಪನಿಷತ್ತಿನ 'ಒಂದೆ ಕೊಂಬೆಯಲಿ ಕುಳಿತಿಹವು ಎರಡು ಹಕ್ಕಿಗಳು' ಎಂಬ ಉಕ್ತಿಯನ್ನು ನೆನಪಿಗೆ ತಂದಿತು.

ಆ ಉತ್ಸವದ ಎರಡು ವರ್ಷಗಳ ಮೇಲೆ ಮಗದೊಮ್ಮೆ ವಿ.ಸೀ. ಯವರನ್ನು ಮಂಗಳೂರಿಗೆ ಬರಮಾಡುವ – ಅಲ್ಲ, ಕರಕೊಂಡು ಬರುವ – ಸದವಕಾಶ ನನ್ನದಾಯಿತು. ಪಂಚೆ ಶತಮಾನೋತ್ಸವಕ್ಕಾಗಿ ಉತ್ಸವ ಸಮಿತಿ ಮಾಸ್ತಿ, ವಿ.ಸೀ., ರಾಜರತ್ನಂ ಮುಂತಾದ ಸುವಿಖ್ಯಾತರನ್ನು ಆಮಂತ್ರಿಸಿತ್ತು. ಅವರಲ್ಲಿ ಮೊದಲ ಮೂವರನ್ನು ಜತೆಯಾಗಿ ಕಾರಲ್ಲಿ ಕರಕೊಂಡು ಬರುವುದಕ್ಕಾಗಿ ನಾನು ಬೆಂಗಳೂರಿಗೆ ಹೋಗಿದ್ದೆ. (ಗೊರೂರರು ಪ್ರತ್ಯೇಕವಾಗಿ ಬರುವುದಾಗಿ ತಿಳಿಸಿದ್ದರು.) ಸುದೂರ ಪ್ರಯಾಣದಲ್ಲಿ ಅಂತಹ ಹಿರಿಯರ ಸಹಚರನಾಗಿರುವುದು ನನಗೊಂದು ಪುಣ್ಯ ವಿಶೇಷವಾಗಿತ್ತು. ಬೆಂಗಳೂರಿಂದ ಮಂಗಳೂರು ತನಕ ಆ ಮೂವರೂ ಮಾತಾಡಿದ್ದೇ ಆಡಿದ್ದು, ಎಷ್ಟೊಂದು ಅನುಭವಗಳು, ಅಭಿಪ್ರಾಯಗಳು, ಕಥೆಗಳು, ಘಟನೆಗಳು! – ಅವನ್ನೆಲ್ಲ ನಾನು ಮೈಯ್ಯೆಲ್ಲ ಕಿವಿಯಾಗಿ ಕೇಳಿಯೇ ಕೇಳಿದ್ದು! ಆ ಸುಖ ಬಯಸಿದರೆ, ಹುಡುಕಿದರೆ ಸಿಗುವಂತಹದ್ದಲ್ಲ. ನನ್ನ ಜತೆಯಲ್ಲೇ ಇದ್ದ ಮಿತ್ರ ಎಂ. ವಿ. ವೆಂಕಟೇಶಮೂರ್ತಿಯವರೂ ಆ ಸುಖವನ್ನು ಪಡೆದರು, ನನ್ನೊಂದಿಗೆ ಹಂಚಿಕೊಂಡರು!

ಐಬಿಎಚ್ ಪ್ರಕಾಶನದವರಿಗಾಗಿ ವಿ.ಸೀ.ಯವರು 'ಕನ್ನಡ ಕವಿ ಕಾವ್ಯ ಪರಂಪರೆ'ಯಲ್ಲಿ ಹಳಗನ್ನಡ ಕಾವ್ಯ ಸಂಪಾದನೆಯ ಗುರುಭಾರವನ್ನು ವಹಿಸಿಕೊಂಡಾಗ (೧೯೭೦) ನನಗೊಂದು ಪತ್ರ ಬರೆದು, ಮುದ್ದಣ ಕವಿಯ 'ಶ್ರೀ ರಾಮಾಶ್ವಮೇಧ'ವನ್ನು ಕುರಿತು ವಿಮರ್ಶಾತ್ಮಕ ಲೇಖನವನ್ನು ಅಪೇಕ್ಷಿಸಿದರು. ನಾನು ನನ್ನ ಇತಿಮಿತಿಗಳನ್ನು ಯೋಚಿಸದೆ, ನಿಂತ ನೆಲೆಯಲ್ಲಿ ಅತ್ಯುತ್ಸಾಹದಿಂದ ಒಪ್ಪಿಗೆಯನ್ನು ತಿಳಿಸಿದೆ. ತಿಳಿಸಿದ ಮೇಲೆ ನನಗೆ ಅವಿವೇಕದ ಅರಿವಾಯಿತು. ಅಲ್ಲದೆ ಏನೇನೋ ಸಮಸ್ಯೆಗಳೂ ಕಾಣಿಸಿಕೊಂಡು, ಆ ಹಿರಿಯರ ಆಸೆಯನ್ನು ಸಕಾಲದಲ್ಲಿ ಪೂರೈಸುವುದು ನನಗೆ ಕಷ್ಟವೆಂದು ದಿನ ಕಳೆದಂತೆಲ್ಲ ತೋರಿತು. ವಿ.ಸೀ.ಯವರಿಂದ ಜ್ಞಾಪನಪತ್ರಗಳು ಬರುತ್ತಲೇ ಇದ್ದುವು. ಕಾಲಾವಕಾಶ ಕೇಳುತ್ತ ಹೋದೆ. ಮತ್ತೆ 'ಶ್ರೀ ರಾಮಾಶ್ವಮೇಧ ಕಷ್ಟ, ಮುದ್ದಣನ ಯಕ್ಷಗಾನ ಪ್ರಸಂಗ'ಗಳನ್ನು ಕುರಿತು ಬರೆಯುತ್ತೇನೆ ಎಂದು ತಿಳಿಸಿದೆ. ವಿ.ಸೀ. ಯವರು ಅದಕ್ಕೂ ಉದಾರವಾಗಿ ಸಮ್ಮತಿಸಿದರು. ಅದೂ ನನ್ನಿಂದಾಗಲಿಲ್ಲ. ಅವರು ಪಟ್ಟು ಬಿಡದೆ ಒಂದರ ಹಿಂದೆ ಒಂದರಂತೆ ಕಾಗದಗಳನ್ನು ಬರೆದರು, ಹೇಳಿ ಬರೆಯಿಸಿದರು; ಬೇಗ, ಆದಷ್ಟು ಬೇಗ, ಕೂಡಲೇ ಲೇಖನವನ್ನು ರವಾನಿಸುವಂತೆ ಒತ್ತಾಯಿಸಿದರು. ನಾನು ಇನ್ನು ಸ್ವಲ್ಪ, ಮತ್ತೂ ಸ್ವಲ್ಪ, ಸಮಯಾವಕಾಶ ಕೇಳುತ್ತಲೇ ಇದ್ದೆ. ಹೆಚ್ಚು ಕಡಮೆ, ಮೂರು ವರ್ಷ ಹೀಗೆ ಪತ್ರ ವ್ಯವಹಾರ ನಡೆಯಿತು. ವಿ.ಸೀ. ಯವರು ಕಾದು, ಕಾದು ಕೊನೆಗೆ 'ಅಯ್ಯಾ ಆಗುವುದಿಲ್ಲ ಎಂದಾದರೆ ಅದನ್ನಾದರೂ ತಿಳಿಸಿ' ಎಂದು ಬರೆದರು. ನಾನು ಬಡಜೀವ ಬದುಕಿತು ಎಂದು ವಿ.ಸೀ.ಯವರಿಗೆ ಕಾರ್ಕಳದಿಂದಲೇ ಕೈಮುಗಿದೆ, ಕ್ಷಮೆ ಕೋರಿದೆ, ಕೈ ಚೆಲ್ಲಿದೆ. ವಿ.ಸೀ. ಯವರಲ್ಲದೆ ಬೇರೆ ಯಾರೇ ಆಗಿರುತ್ತಿದ್ದರೂ ನನ್ನ ಹುಡುಗಾಟದ ಹೊಣೆಗೇಡಿತನಕ್ಕಾಗಿ ಕೆಂಡ ಕೆಂಡವಾಗಿ 'ಅಷ್ಟನ್ನು ಹೇಳುವುದಕ್ಕೆ ನಾಲ್ಕು ವರ್ಷ ಬೇಕಿತ್ತೇ' ಎಂದು ಕೇಳುತ್ತಿದ್ದರು.

ಆದರೆ ವಿ.ಸೀ. ಯವರ ಸಹನೆಗೆ, ಸೌಜನ್ಯಕ್ಕೆ, ಕ್ಷಮಾಶೀಲತೆಗೆ ಮಿತಿಯಿದ್ದರೆ ಅದು ಆಕಾಶವೆಂದೇ ತೋರಿತು.

ಈ ಪ್ರಕರಣದಿಂದಾಗಿ ನನ್ನಲ್ಲಿ ವಿ.ಸೀ.ಯವರ ಪ್ರೀತಿ, ವಿಶ್ವಾಸ ಕಿಂಚಿತ್ತೂ ಕಡಮೆಯಾಗಲಿಲ್ಲ. ಇಂತಹ ಪತ್ರ ವ್ಯವಹಾರ ನಡೆಯುತ್ತಿದ್ದಾಗಲೇ ಅವರನ್ನು ಕಾರ್ಕಳಕ್ಕೂ ಮಂಗಳೂರಿಗೂ ನಾನು ಕರೆದದ್ದು, ಅವರು ಬಂದದ್ದು! ಸೇಡಿಯಾಪು ಅಭಿನಂದನ (೧೯೭೨) ಕ್ಕಾಗಿ ಮಂಗಳೂರಿಗೆ ಬಂದು ಹೋದ ಮೇಲೆ ಅವರು ನನಗೆ ಹೀಗೆ ಬರೆದರು, ನನ್ನ ಮೇಲೆ ಪ್ರೀತಿಯ ಪನ್ನೀರನ್ನೇ ತಳಿದರು.

೭.೯.೧೯೭೨

"....ಮೂರು ದಿನಗಳ ಕಾಲ ತುಂಬ ಪ್ರೀತಿಯ ಆವರಣದಲ್ಲಿ ಕಾಲ ಕಳೆಯಿತು. ಇದೆಲ್ಲ ನಿಮ್ಮ ಕೊಡುಗೆ, ಅಲ್ಲಿನ ಗೆಳೆಯರ ಕೊಡುಗೆ.

ನಾನು ನನ್ನೊಡನೆ ಒಂದೇ ಪ್ರತಿ 'ಅರಲು ಬರಲು' ತಂದಿದ್ದೆ. ನಾನೇ ನಿಜವಾಗಿ ನಿಮಗೆ ಕೊಡಬೇಕಿತ್ತು. ರೂ. ೧೨೦೦೦–೧೫೦೦೦ ವೆಚ್ಚ ತಗಲಿದ ಕಾರ್ಯಕಲಾಪಗಳನ್ನು ಕೈಕೊಂಡು ನೆರವೇರಿಸಿದ್ದೀರಿ. ಅವೊತ್ತು ಅಡಿಗರು (ಕರ್ನಾಟಕ ಬ್ಯಾಂಕಿನ ಅಧ್ಯಕ್ಷರಾಗಿದ್ದ ಕೆ. ಸೂರ್ಯನಾರಾಯಣ ಅಡಿಗರು) ಹೇಳಿದಂತೆ ನಿಮ್ಮ ವ್ಯವಸ್ಥಾಪನ ಶಕ್ತಿಗೆ ಅದು ಸೂಚಿಕೆ. ಆ ಶಕ್ತಿಗಿಂತ ಅದರ ಹಿಂದೆ ನಿಮ್ಮನ್ನು ನಡಸುವ ಶಾಂತತೆ, ಸೌಜನ್ಯ, ಸಹನೆಗಳು ಇವು ದಿನ ದಿನಕ್ಕೆ ಬೆಳೆದು ಇನ್ನೂ ಹೆಚ್ಚು ಕಾರ್ಯಗಳನ್ನು ನೀವು ಸಾಧಿಸುವಂತಾಗಲಿ.

ಖಂಡಿತ ಪುಸ್ತಕದ ಬೆಲೆಯನ್ನು ಕಳಿಸಬೇಡಿ...."

ಮಿತ್ರ ದ. ಬಾ. ಕುಲಕರ್ಣಿಯವರು ತನ್ನದೊಂದು ವ್ಯಕ್ತಿಚಿತ್ರದಲ್ಲಿ ವಿ.ಸೀ.ಯವರನ್ನು 'ನಮ್ಮ ನಯದ ಪತಾಕೆ' ಎಂದು ಕರೆದಿದ್ದರು. ವಿ.ಸೀ.ಯವರ ಪತ್ರವನ್ನು ಓದಿದಾಗ ನಿಜವೆಂದು ತೋರಿತು. ಮಂಗಳೂರಿಗೆ ಬರುವಾಗ ಅವರು ತಂದಿದ್ದ 'ಅರಲು ಬರಲು' ಪ್ರತಿಯನ್ನು ಪೂಜ್ಯ ಸೇಡಿಯಾಪು ಅವರಿಗೆ ಒಪ್ಪಿಸಿದರು. ನಾನು ಆಸೆಪಟ್ಟೆ ಎಂಬ ಕಾರಣಕ್ಕಾಗಿ ಬೆಂಗಳೂರಿಗೆ ಹಿಂದಿರುಗಿದೊಡನೆಯೇ ನನಗೂ ಒಂದು ಪ್ರತಿ ಕಳುಹಿಸಿದರು. ಮಾತ್ರವಲ್ಲ, 'ಖಂಡಿತ ಪುಸ್ತಕದ ಬೆಲೆಯನ್ನು ಕಳಿಸಬೇಡಿ' ಎಂದು ತಾಕೀತು ಮಾಡಿದ್ದರು.

ಮಂಗಳೂರಿನ ಪಂಜೆ ಶತಮಾನೋತ್ಸವವನ್ನು ಮುಗಿಸಿ ಬೆಂಗಳೂರಿಗೆ ಹಿಂದಿರುಗಿದ ಮೇಲೂ ವಿ.ಸೀ. ಯವರು ನನಗೊಂದು ವಾತ್ಸಲ್ಯಪೂರ್ಣವಾದ ಪತ್ರವನ್ನು ಬರೆದರು.

೧೬.೨.೭೪

"....ಕಾರ್ಯಕ್ರಮಗಳೆಲ್ಲ ಚೆನ್ನಾಗಿ, ವಿಚಕ್ಷಣೆಯಿಂದ ನಡೆದುವು, ಇನ್ನಾವ ಒಳ–ಹೊರ ಸಂಕಷ್ಟಗಳೂ ನಮಗಾರಿಗೂ ಗೊತ್ತಾಗದಂತೆ. ಇಂಥ ಸಂದರ್ಭಗಳಲ್ಲಿ ಅವು ಅನಿವಾರ್ಯ. ನಿಮ್ಮ ಸಮಯನಿಷ್ಠೆ, ಕ್ರಿಯಾಸಾಧನೆ ನಿಜವಾಗಿ ಮೆಚ್ಚುವಂಥವು. ದೂರದ ಕಾರ್ಕಳದಿಂದ ಮಂಗಳೂರಿಗೆ ಬಂದು ಇದನ್ನು ನೆರವೇರಿಸಬೇಕಾದ್ದಕ್ಕೆ ನಿಮ್ಮ ಕ್ಷಮತೆಯೇ

ಆಧಾರ. ಕಾಲ ಕಳೆದಂತೆಲ್ಲ ಸಾವಿರಾರು ಜನರನ್ನು ಕೂಡಿಸಿ ಇಂಥ ಶುಭ ಸಮಾರಂಭಗಳನ್ನು ನೆರವೇರಿಸುವ ಶಕ್ತಿ ನಿಮಗೆ ಬರಲಿ; ನಿಮ್ಮಲ್ಲಿ ಉಳಿಯಲಿ....”

ವಿ.ಸೀ.ಯವರು, ವಿ.ಸೀ. ಯವರಂತಹ ಹಿರಿಯರು ನನ್ನನ್ನು ಹೀಗೆ ಹರಸಿದುದರಿಂದಲೇ ಈವರೆಗೆ ನಾನು ಸಾಹಿತ್ಯ ಸರಸ್ವತಿಯ ಪರಿಚಾರಿಕೆಯನ್ನು ಒಂದಲ್ಲೊಂದು ಬಗೆಯಲ್ಲಿ ಮಾಡಿಕೊಂಡು ಬರಲು ಸಾಧ್ಯವಾಗಿದೆ ಎಂಬುದನ್ನು ವಿನಮ್ರವಾಗಿ ವಿಜ್ಞಾಪಿಸುತ್ತಿದ್ದೇನೆ.

ಅದೇ ವರ್ಷ ‘ಪಂಪಾಯಾತ್ರೆ’ ಪುನರ್ಮುದ್ರಣವಾಯಿತು. ವಿ.ಸೀ.ಯವರು ಅದರದೊಂದು ಪ್ರತಿಯನ್ನು ನನಗೆ ಕಳುಹಿಸಿದರು, ಜತೆಯಲ್ಲೇ ಒಂದು ಕಾಗದವನ್ನೂ ಬರೆದರು. ಅದರಲ್ಲಿ “ನನ್ನ ಆದರಕ್ಕೆ ಪಾತ್ರರಾದ ನಿಮಗೆ ‘ಪಂಪಾಯಾತ್ರೆ’ಯ ಪ್ರತಿಯನ್ನು ಕಳುಹಿಸಿದ್ದೇನೆ, ಸ್ವೀಕರಿಸಬೇಕು. ನೀವು ಆ ಪುಸ್ತಕದ ಬಗ್ಗೆ ಲೇಖನ ಬರೆದಿದ್ದೀರಿ. ತುಂಬ ವಿಶ್ವಾಸವನ್ನು ತೋರಿದ್ದೀರಿ” ಎಂದು ಒಕ್ಕಣಿಸಿದ್ದರು. ‘ಪಂಪಾಯಾತ್ರೆ’ಯನ್ನು ಕುರಿತಾದ ನನ್ನದೊಂದು ಲೇಖನ ನಮ್ಮೂರ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅದೊಂದು ಪರಿಚಯ ರೂಪದ ಲಘು ಲೇಖನವಾಗಿತ್ತೇ ವಿನಾ ಪ್ರೌಢ ನಿಬಂಧವೇನೂ ಆಗಿರಲಿಲ್ಲ. ವಿ.ಸೀ. ಯವರು ಅದನ್ನು ಓದಿದ್ದರು ಮಾತ್ರವಲ್ಲ ನೆನಪಿಟ್ಟುಕೊಂಡಿದ್ದರು. “ಪರಗುಣ ಪರಮಾಣೂನ್ ಪರ್ವತೀ ಕೃತ್ಯ ನಿತ್ಯಂ। ನಿಜಹೃದಿ ವಿಕಸಂತಃ ಸಂತಃ” ಎಂಬ ಒಂದು ಸುಭಾಷಿತವಿದೆ. ಹನಿ ನೀರಲ್ಲೂ ಕಾಮನಬಿಲ್ಲಿನ ಚೆಲುವನ್ನು ಕಾಣುವುದು, ಹಾಗೆ ಕಂಡದ್ದನ್ನು ಬಾಯ್ತುಂಬ ಹೇಳಿ ಹಿಗ್ಗುವುದು ವಿ.ಸೀ.ಯವರಂತಹ ವಿಶಾಲದೃಕ್‌ಗಳಿಗೆ ಮಾತ್ರ ಸಾಧ್ಯ.

* * *

ಎಪ್ಪತ್ತರ ದಶಕದ ಕೊನೆಕೊನೆಗೆ ವಿ.ಸೀ.ಯವರ ಆರೋಗ್ಯ ಗಳಿತವಾಗುತ್ತಿದ್ದುದನ್ನು ಕೇಳಿ ತಿಳಿದಿದ್ದೆನಾದರೂ ನನಗೆ ಅವರನ್ನು ಹೋಗಿ ನೋಡಲಾಗಲಿಲ್ಲ. ಅದೇ ಕಾಲಕ್ಕೆ ಅವರು ಇಂಗ್ಲೆಂಡಿಗೆ ಹೋದರೆಂದೂ ಅಲ್ಲಿ ಅವರ ದೇಹಸ್ಥಿತಿ ಶಿಥಿಲವಾದುದುರಿಂದ ತಾವು ಅಲ್ಲಿ ಏನೇನು ನೋಡಬೇಕು ಎಂದಿದ್ದರೋ ಅವನ್ನು – ಪ್ರಾಯಃ ಆಕ್ಸ್‌ಫರ್ಡ್ ಯೂನಿವರ್ಸಿಟಿ, ಬ್ರಿಟಿಷ್ ಮ್ಯೂಸಿಯಮ್, ಷೇಕ್ಸ್‌ಪಿಯರನ ಜನಸ್ಥಳ ಮೊದಲಾದುವನ್ನು – ನೋಡಲಾಗದೆ ತೀವ್ರ ಖಿನ್ನತೆಯಿಂದ ಬೆಂಗಳೂರಿಗೆ ಹಿಂದಿರುಗಿದರೆಂಬ ಸುದ್ದಿಯೂ ಬಂತು.... ಮತ್ತೆ ಕೆಲವೇ ದಿನಗಳಲ್ಲಿ ವಿ.ಸೀ.ಯವರು ಕಾಲವಶರಾದರೆಂಬ ದುರ್ವಾರ್ತೆಯೂ ಎರಗಿತು. ನನಗೆ ಬೆಂಗಳೂರು ಪ್ರಿಯವಾಗಿದ್ದದ್ದು ಅಲ್ಲಿಯ ಲಾಲ್‌ಬಾಗ್, ಕಬ್ಬನ್ ಪಾರ್ಕ್, ವಿಧಾನಸೌಧಗಳಿಂದಾಗಿ ಅಲ್ಲ; ಡಿ.ವಿ.ಜಿ., ಮಾಸ್ತಿ, ವಿ.ಸೀ., ರಾಜರತ್ನಂ ಮೊದಲಾದವರು ಅಲ್ಲಿದ್ದಾರೆ ಎಂಬುದೇ ನನಗೆ ಮುಖ್ಯವಾಗಿತ್ತು. ಅವರೆಲ್ಲ ಒಬ್ಬೊಬ್ಬರೇ ಕಣ್ಮರೆಯಾಗುತ್ತಿದ್ದಂತೆ ನನ್ನ ಕಣ್ಣಿಂದ ಒಂದೊಂದೇ ಹನಿ ಉದುರಿತು. ವಿ.ಸೀ. ಯವರಿಗಾಗಿಯೂ ಕಣ್ಣರನ್ನು ಕರೆದು ಆ ಹನಿಗಳನ್ನೇ ಪೋಣಿಸಿ, “ನಮ್ಮ ಮನದಂಗಳದ ಹೂ ವಿ.ಸೀ.” ಎಂಬ ಒಂದು ಧ್ವನಿ ರೂಪಕವನ್ನು ಬರೆದೆ. ಮಂಗಳೂರು ಆಕಾಶವಾಣಿಯಲ್ಲಿ ಅದು ಪ್ರಸಾರವಾಯಿತು. ರೂಪಾರಾಧಕ ವಿ.ಸೀ.ಯವರಿಗೆ ಆ ರೂಪಕ ನನ್ನ ಶ್ರದ್ಧಾಂಜಲಿಯಾಗಿತ್ತು.

* * *

ವಿ.ಸೀ. ಯವರ ಬರೆಹಗಳನ್ನು ಹೆಚ್ಚು ಕಮ್ಮಿ ಎಲ್ಲವನ್ನೂ ನಾನು ಓದಿದ್ದೇನೆ. ನಾವು ಯಾರನ್ನು ಒಪ್ಪುತ್ತೇವೋ ಯಾವುದನ್ನು ಮೆಚ್ಚುತ್ತೇವೋ ಅವುಗಳದೊಂದು ಹಾಳೆ ನಮಗೇ ಅರಿವಾಗದಂತೆ ನಮ್ಮ ಮನಸ್ಸಿನ ಮೇಲೆ ಮಿದುವಾಗಿ ಹಾಸಿಕೊಳ್ಳುತ್ತದೆ: ನಮ್ಮ ಬದುಕು ಬರೆಹಗಳನ್ನು ಪ್ರಭಾವಿಸುತ್ತದೆ. ನಾನು ಅಂತಹದನ್ನು ಬೇಡ ಎನ್ನುವವನಲ್ಲ. 'ನಿಜದ ನೇರದ ಕಡೆಗೆ' ಅದು ಮುನ್ನಡೆಯಿಸುವಂತಿದ್ದರೆ ಬೇಡ ಎನ್ನುವುದಾದರೂ ಏಕೆ? ವಿ.ಸೀ. ಯವರ ಗದ್ಯಸಾಹಿತ್ಯ, ಅದರಲ್ಲೂ ಅವರ ವಿಮರ್ಶನ ವಿಧಾನ, ಅವರ ಭಾಷಾ ಶೈಲಿ– ಒಮ್ಮೊಮ್ಮೆ ಅವರ ಶಬ್ದ ಪ್ರಯೋಗ, ವಾಕ್ಯರಚನೆ, ಅಭಿಪ್ರಾಯ ಪ್ರಕಟನೆಗಳು ಕೊಂಚ ಜಿಗುಟಾಗಿ ತೋರಿದರೂ – ನನಗೆ ತುಂಬ ಪ್ರಿಯವಾಗಿವೆ. 'ಪಂಪಾಯಾತ್ರೆ', 'ಕಾಲೆಜ್ ದಿನ'ಗಳಲ್ಲಿರುವಂತೆ ಅವರ ಗದ್ಯಶೈಲಿ ಎಷ್ಟೋ ಸಲ ಕಾವ್ಯಗಂಧಿಯಾಗುತ್ತದೆ. ಅವರ ವ್ಯಕ್ತಿ ಚಿತ್ರಗಳಲ್ಲಿ ನನಗೆ ಹೆಚ್ಚಿನ ಒಲವು. 'ಮಹನೀಯರು', 'ಹಿರಿಯರು–ಗೆಳೆಯ'ರಂತಹ ಗ್ರಂಥಗಳಿರಲಿ, 'ಪಂಪಾಯಾತ್ರೆ'ಯ ಮುನ್ನುಡಿಯಲ್ಲಿ ಅವರು ರೇಖಿಸಿದ ಬೆಳ್ಳಾವೆ, ಎಂ.ಆರ್.ಶ್ರೀ., ಟಿ. ಎಸ್. ವೆಂ. ಮತ್ತು ಡಿ.ವಿ.ಜಿ; 'ಕಾಲೆಜ್ ದಿನಗಳ'ಲ್ಲಿ ಅವರು ನಿರೂಪಿಸಿದ ಗುರುಜನರು ಮತ್ತು ಸಹಪಾಠಿ ಸನ್ಮಿತ್ರರು ಇವರೆಲ್ಲ ಜೀವ ರಕ್ತ ಮಾಂಸ ತುಂಬಿ ಕಣ್ಮುಂದೆ ಸುಳಿದಂತೆ ಭಾಸವಾಗುತ್ತದೆ. 'ಶಿವರಾಮ ಕಾರಂತ'ರನ್ನು ಕುರಿತು ವಿ.ಸೀ.ಯವರು ಬರೆದಿರುವ ಅವೊಂದು ಚಿಕ್ಕ ಪುಸ್ತಕದ ಚೆಲುವಾದರೂ ಎಂತಹದು ಎನ್ನುತ್ತೀರಿ! – ಅಲ್ಪಕ್ಕೆ ತೃಪ್ತರಾಗದ ಪೂಜ್ಯ ಸೇಡಿಯಾಪು ಒಮ್ಮೆ ನನ್ನೊಂದಿಗೆ ಹೇಳಿದ್ದರು: "ಕಾರಂತರನ್ನು ಒಪ್ಪದವರೂ ವಿ.ಸೀ.ಯವರ ಪುಸ್ತಕವನ್ನು ಓದಿ ಮೆಚ್ಚಲೇಬೇಕು."

ಇನ್ನು ವಿ.ಸೀ. ಯವರ ಬದುಕು – ಅವರನ್ನು ರೂಪಾರಾಧಕ, ಸ್ನೇಹಶೀಲ, ನಯದ ಪತಾಕೆ ಹೀಗೆಲ್ಲ ಕರೆದು ಬರೆದವರಿದ್ದಾರೆ. ಅದನ್ನು ನಾನು ಈ ಲೇಖನದಲ್ಲಿ ಅಲ್ಲಲ್ಲಿ ಪ್ರಸ್ತಾವಿಸಿದ್ದೇನೆ. ವಿ.ಸೀ. ಸಭ್ಯತೆ–ಸಂಸ್ಕಾರಗಳ ಒಂದು ಮೂರ್ತರೂಪ. ಅವರ ರುಚಿ ಶುದ್ಧಿ, ಶುಚಿ ಜೀವನಗಳು ಉಡುಗೆ ತೊಡುಗೆಗಳಲ್ಲಿ, ಮಾತುಕತೆಗಳಲ್ಲಿ, ಊಟೆಸು ತಿನಿಸುಗಳಲ್ಲಿ ಎಲ್ಲದರಲ್ಲೂ ಸುವ್ಯಕ್ತ. ಅವರ ಮಾತು ಕೇಳಿದಾಗ ಮನದೊಳಗೆ ಒಂದು ಹೂ ಅರಳಿದಂತೆ, ಕೈ ಕುಲುಕಿದಾಗ ಯಾವುದೋ ರಸ ಸಂಚಾರವಾದಂತೆ, ಬೆನ್ನು ತಟ್ಟಿದಾಗ ಯಾವುದೋ ಸುಖೋಷ್ಣ ಅನುಭವವಾದಂತೆ ತೋರುತ್ತಿತ್ತು. ವಿ.ಸೀ.ಯವರು 'ವಿಶ್ವಾಸ' ವೆಂಬ ತಮ್ಮ ಕವಿತೆಯಲ್ಲಿ 'ಬಾಳನು ಶೋಧಿಸಿ ಶುಚಿಯನು ಬೆಳೆದರೆ ಇಹವೇ ಅರಳದೆ ಪರವಾಗಿ?' ಎಂದು ಕೇಳಿದ್ದಾರೆ. ಕೇಳಿದ್ದಾರೆ ಮಾತ್ರವಲ್ಲ, ಹಾಗೆಯೇ ಬಾಳಿದ್ದಾರೆ. ಎಲ್ಲ ಪರಿ ಮಮತೆಗಳಸತ್ಯ ಜೀವನವನ್ನು ಶೋಧಿಸಿದ ಮತ್ತು ಸಾಧಿಸಿದ ವಿ.ಸೀ.ಯವರ ಬಾಳು ನಮಗೊಂದು ಹೆದ್ದಾರಿ, ಅವರ ನೆನಪು ನಮಗೊಂದು ತಂಬೆಳಕು.

ಪರಿಶುದ್ಧ ಚೇತನ

ಎಸ್. ಪಿ. ಪದ್ಮಪ್ರಸಾದ್

ನಮ್ಮ ಮನೆಯಂಗಳದಿ ಬೆಳೆದೊಂದು ಹೂವಾಗಿ ಉದುರಿಹೋದ ಒಂದು ಪರಿಶುದ್ಧ ಚೇತನ — ವಿ.ಸೀ. ಅರ್ಥಶಾಸ್ತ್ರವನ್ನು ಕಾಲೇಜಿನಲ್ಲಿ ಅಭ್ಯಸಿಸಿ ಪದವಿ ಪಡೆದ ವಿ.ಸೀ. ಕನ್ನಡ, ಸಂಸ್ಕೃತ, ಇಂಗ್ಲೀಷು ಸಾಹಿತ್ಯಗಳನ್ನೂ ಆಳವಾಗಿ ಓದಿಕೊಂಡಿದ್ದು ಸ್ವಂತ ಆಂತರಿಕ ಅಭಿರುಚಿಯಿಂದ.

ಸದಭಿರುಚಿಗೆ ಇನ್ನೊಂದು ಹೆಸರು — ವಿ.ಸೀ. ಶ್ವೇತಶುಭ್ರವಾದ ಅವರ ಮೈಸೂರು ಪೇಟ, ಕಣ್ಣಲ್ಲಿ ಎಣ್ಣೆ ಹಾಕಿ ಹುಡುಕಿದರೂ ಕೊಳೆಯ ಕಣ ಕಾಣದ ಅವರ ಉಡುಗೆ, ಸ್ಫುರದ್ರೂಪಿಯಾದ (೭೫ರ ವಯಸ್ಸಿನಲ್ಲೂ) ಕಳೆತುಂಬಿದ ಅವರ ಮುಖ – ಇವೆಲ್ಲ ಒಂದೆಡೆಯಾದರೆ, ಕೆಲಸದಲ್ಲಿನ ಒಪ್ಪ ಓರಣ, ಊಟತಿಂಡಿಗಳಲ್ಲಿ ಅವರು ಬಯಸುತ್ತಿದ್ದ ರುಚಿ ಶುಚಿ, ಸಂತೋಷದಿಂದ ಊಟ ತಿಂಡಿಗಳನ್ನು ಸ್ವೀಕರಿಸುತ್ತಿದ್ದ ಅವರ ಪ್ರವೃತ್ತಿ — ಇವೆಲ್ಲ ಅವರ ಪರಿಚಿತರಿಗೆ ತಿಳಿದಿರುವ ವಿಷಯಗಳೇ. ಅವು ಅವರ ಸದಭಿರುಚಿಯ ಪ್ರತೀಕಗಳು. ಅವರ ಬರವಣಿಗೆಗಳಂತೂ ಸರಿಯೇ ಸರಿ — ಅವರ ಸುಸಂಸ್ಕೃತಿ, ಸುವಿಚಾರ, ಪ್ರೌಢಿಮೆಗಳಿಗೆ ಹಚ್ಚಿಟ್ಟ 'ದೀಪಗಳು' ಅವು.

ಇಂಥ ವಿ.ಸೀ. ೧೯೭೬–೭೭ರಲ್ಲಿ ಒಮ್ಮೆ ಶಿವಮೊಗ್ಗೆಗೆ ಬಂದಿದ್ದರು. ಅಲ್ಲಿನ ಕರ್ನಾಟಕ ಸಂಘದ ವತಿಯಿಂದ ಅವರಿಗೆ ಸನ್ಮಾನವಿತ್ತು. ಆಗಿನ್ನೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಗೊಂಡು ಆ ಸ್ಥಾನವನ್ನು ವಹಿಸಿಕೊಂಡಿದ್ದ ಶ್ರೀ ಹಂಪ ನಾಗರಾಜಯ್ಯನವರು (ಆಗಿನ್ನೂ ಅವರು 'ಡಾಕ್ಟರ್' ಆಗಿರಲಿಲ್ಲ) ಸಮಾರಂಭದ ಅಧ್ಯಕ್ಷರು. ಆ ದಿನ ವಿ.ಸೀ. ಅವರನ್ನು ಕಂಡ, ಅವರ ಮಾತುಗಳನ್ನು ಕೇಳಿದ ನೆನಪು ಹತ್ತಿರ ಹತ್ತಿರ ಕಾಲು ಶತಮಾನ ಸಂದರೂ ಹಸಿರಾಗಿ ಉಳಿದಿವೆ. ಪರಿಶುದ್ಧ ಪರಿಪಕ್ವ ಚೇತನವೊಂದರ ಕೆಲವು ನಿಷ್ಕಲ್ಮಶ ಮನೋಲಹರಿಗಳನ್ನು ಕಂಡ ದಿನವದು.

*　　*　　*

ಆ ದಿನ ಕಾರ್ಯಕ್ರಮದ ಆರಂಭಕ್ಕೂ ಕೆಲ ಘಂಟೆಗಳ ಮುನ್ನ ಹೋಟೆಲಿನ ಕೋಣೆಯಲ್ಲಿ ವಿ.ಸೀ. ಅವರೊಂದಿಗೆ ಮಾತನಾಡುತ್ತಾ ಕುಳಿತಿದ್ದೆ. ನನ್ನ ಪರಿಚಯವನ್ನು

ಕೇಳಿಕೊಂಡ ನಂತರ ಅವರು ಅವರೆಗಿನ ನನ್ನ ಬರವಣಿಗೆ, ಶಿವಮೊಗ್ಗೆಯ ಸಾಹಿತ್ಯಿಕ ಪರಿಸರ ಇತ್ಯಾದಿ ವಿಚಾರಗಳನ್ನು ಕೇಳುತ್ತಾ ಕುಳಿತಿದ್ದರು. ಕೋಣೆಯ ಇನ್ನೊಂದು ಕಡೆ ಹಂಪನಾ ತಮ್ಮನ್ನು ನೋಡಲು ಬಂದವರೊಡನೆ ಮಾತನಾಡುತ್ತಿದ್ದರು. ಅವರೊಂದಿಗೆ ಮಾತನಾಡುತ್ತಿದ್ದವರಲ್ಲಿ ತನ್ನನ್ನು ಜಿಲ್ಲಾ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷನನ್ನಾಗಿ ಮಾಡಬೇಕೆಂದು ಅವರನ್ನು ಪೀಡಿಸುತ್ತಿದ್ದ ಒಬ್ಬ ಸ್ವಯಂಘೋಷಿತ ಪ್ರತಿಭಾವಂತ ಹೈಸ್ಕೂಲು ಮಾಸ್ತರನೂ ಇದ್ದ. ಈತ ಕಾಲೇಜು ಲೆಕ್ಚರರ್ ಎನ್ನಿಸಿಕೊಳ್ಳಬೇಕೆಂದು ಪರದಾಡಿ ಒಂದು ಕಾಲೇಜಿನಲ್ಲಿ ವಾರಕ್ಕೆ ಒಂದು ಪೀರಿಯಡ್ಡಿನ ಉಪನ್ಯಾಸದ ಅವಕಾಶ ಪಡೆದುಕೊಂಡು ತನ್ನನ್ನು 'ಲೆಕ್ಚರರ್' ಎಂದು ಹೇಳಿಕೊಂಡು ತಿರುಗಾಡುತ್ತಿದ್ದ. ಈತ ಬಹಳ ಕಾಲದ ಪರಿಚಿತನಂತೆ ಬಂದು "ಹೋ, ಹೋ, ಹೋ" ಎಂದು ಗಡುಸಾಗಿ ನಗುತ್ತಾ ವಿ.ಸೀ.ಯವರ ಎರಡೂ ಕೈಗಳನ್ನು ತಾನೇ ಹಿಡಿದು ಕುಲುಕಿ ನಗುತ್ತಾ – "ಭಾಳ ದಿನ ಆಗಿತ್ತು ನಿಮ್ಮನ್ನು ನೋಡಿ. ಹೇಗಿದ್ದೀರಿ?" ಎಂದ. "ಚೆನ್ನಾಗಿದ್ದೇನೆ" ಎಂದು ಸೌಮ್ಯವಾಗಿ ಹೇಳಿದರು – 'We ಸೀ.' ಮನೋಭಾವದ ವಿ.ಸೀ. ಮತ್ತೆ ಆತ ಹೇಳಿದ – "ಅವತ್ತು ಪರಿಷತ್ತಿನಲ್ಲಿ ಒಂದು ಕಾರ್ಯಕ್ರಮದಲ್ಲಿ ನಿಮ್ಮನ್ನ ನೋಡಿದೆ, ಮಾತಾಡೋಕೆ ಆಗ್ಲಿಲ್ಲ. ಭಾಳ ಮುಂದೆ ಕೂತಿದ್ರಿ ನೀವು. ಹಾಗೇ ಬಂದ್ಬಿಟ್ಟೆ." ತನಗಿಂತ ಮೂವತ್ತು ವರ್ಷಕ್ಕೆ ಹಿರಿಯರಾದ ಅವರಿಗೇ ಅದರಿಂದ ನಷ್ಟವಾಯಿತು ಎಂಬಂತೆ ಮಾತನಾಡಿದ. "ಹೌದೇ?" ಎಂದು ಸೌಜನ್ಯದಿಂದ ಉದ್ಗರಿಸಿದ ವಿ.ಸೀ. – "ನೀವು ಏನು ಮಾಡುತ್ತಿದ್ದೀರಿ?" ಎಂದು ವಿಚಾರಿಸಿದರು. "ಇಲ್ಲಿ ಲೆಕ್ಚರರ್ ಆಗಿದ್ದೇನೆ" ಎಂದು ರಾಜಾರೋಷವಾಗಿ ಹೇಳಿದ — ಅವನ ಇತಿವೃತ್ತ ಎಲ್ಲವನ್ನೂ ಬಲ್ಲ ನನ್ನ ಎದುರಿಗೇ! ಸುಳ್ಳಿಗರ ಧೈರ್ಯವನ್ನು ಕಂಡು ನಾನು ಬೆರಗಾದೆ.

ಎಂಟು–ಹತ್ತು ನಿಮಿಷ ಅದೂ ಇದೂ ಮಾತಾಡಿದ ಆತ ಮುಂದೇನೂ ಮಾತನಾಡಲು ಬಂಡವಾಳವಿಲ್ಲದೆ "ನಾನಿನ್ನು ಬರ್ತೇನೆ, ಅಲ್ಲಿ ಫಂಕ್ಷನ್ ಹತ್ರ ಸ್ವಲ್ಪ ವ್ಯವಸ್ಥೆ ಮಾಡೋದಿದೆ" ಎಂದು ಇನ್ನೊಂದು ಬೊಗಳೆ ಹೊಡೆದು, ಪುನಃ ಅವರ ಕೈಯನ್ನೆತ್ತಿಕೊಂಡು ಕುಲುಕಿದ. ಗಣೇಶನಿಗೆ ಹೆಗ್ಗಣವೊಂದು ಷೇಕ್‌ಹ್ಯಾಂಡ್ ಕೊಟ್ಟಂತಿತ್ತು ಅದು.

ಅವನು ಹೋದ ಮೇಲೆ ವಿ.ಸೀ. ನನ್ನೆಡೆಗೆ ತಿರುಗಿ ಪಿಸುಮಾತಿನಲ್ಲಿ ಕೇಳಿದರು — "Actual ಆಗಿ ಏನಾಗಿದ್ದಾರಪ್ಪ ಇವರು?"

— ವ್ಯಕ್ತಿಗಳನ್ನು ತೂಗುವುದು ಪ್ರಾಜ್ಞರಿಗೆ ಎಷ್ಟು ಸರಳ!

* * *

ಅಂದು ಸಂಜೆ ಶಿವಮೊಗ್ಗೆಯ ಕರ್ನಾಟಕ ಸಂಘದಲ್ಲಿ ವಿ.ಸೀ. ಯವರಿಗೆ ಗಾಂಭೀರ್ಯ ಪೂರ್ವಕವಾದ ತುಂಬುಹೃದಯದ ಸನ್ಮಾನ ನಡೆಯಿತು. ಮಂಗಳವಾದ್ಯಗಳು ಪೂರ್ಣಕುಂಭಗಳು ಈ ಸಾರ್ಥಕ ಬದುಕು ಬಾಳಿದ ಹಿರಿಯರನ್ನು ಸ್ವಾಗತಿಸಿದವು. ಕರ್ನಾಟಕ ಸಂಘದ ಆವರಣದಲ್ಲಿ ವಿ.ಸೀ. ಒಂದು ತೆಂಗಿನ ಸಸಿಯನ್ನು ನೆಟ್ಟರು. ಆ ಸಂದರ್ಭದಲ್ಲಿ ವಿ.ಸೀ. ಅವರಿಗೆ ನೆರವಾಗುತ್ತಾ ನಾನು ಪಕ್ಕದಲ್ಲಿರುವುದನ್ನು ತೋರಿಸುವ ಚಿತ್ರ ನನ್ನ ಆಲ್ಬಮ್ಮಿನಲ್ಲಿನ

ಸ್ಮರಣೀಯ ಚಿತ್ರಗಳಲ್ಲೊಂದು. ವಿ.ಸೀ. ಅವರ ಹಿರಿಯ ಮಗನೂ ಈ ಸಂದರ್ಭದಲ್ಲಿ ಅವರ ಜೊತೆ ಬಂದಿದ್ದರೆಂದು ನೆನಪು.

ಅಂದಿನ ಸನ್ಮಾನ ಸಮಾರಂಭದಲ್ಲಿ ವಿ.ಸೀ. ಅವರಿಗೆ ಹಾಕಿದ ಹೂಮಾಲೆಗಳು ಗುಡ್ಡೆಯಂತಾದವು. ಅವರಿಗೊಂದು ಪುಟ್ಟ ಹಮ್ಮಿಣಿಯೂ ಸಮರ್ಪಿಸಲ್ಪಟ್ಟಿತೆಂದು ಕಾಣುತ್ತದೆ. ಅಭಿನಂದನ ಭಾಷಣಗಳಲ್ಲಿ ಅವರ ವಿದ್ವತ್ತು, ಅಚ್ಚುಕಟ್ಟುತನ ಹಾಗೂ ಸ್ನೇಹಕ್ಕೆ ಅವರು ಕೊಡುವ ಬೆಲೆ — ಇವೆಲ್ಲ ವಿಶೇಷವಾಗಿ ಪ್ರಸ್ತಾಪಿಸಲ್ಪಟ್ಟವು.

ಅಂದಿನ ಸನ್ಮಾನಕ್ಕೆ ಉತ್ತರ ಕೊಡುತ್ತ ವಿ.ಸೀ. ಆಡಿದ ಮಾತುಗಳಲ್ಲಿ ಅವರ ಬಹುಜ್ಞತೆ ಚೆನ್ನಾಗಿ ವ್ಯಕ್ತವಾಗುತ್ತಿತ್ತು. ಶಾಕುಂತಲ ಹಾಗೂ ಮೇಘದೂತದಿಂದ ಹಿಡಿದು ಆ ವರ್ಷದ ರಾಜ್ಯ ಬಜೆಟ್ಟಿನಲ್ಲಿ ತೋರಿಸಲಾಗಿದ್ದ ಒಂದು ಸಾವಿರ ಕೋಟಿ ರೂಪಾಯಿಗಳ ಖೋತಾವನ್ನು ಹೇಗೆ ತುಂಬಿಕೊಳ್ಳಲು ಸಾಧ್ಯ — ಎಂಬ ಅನುಮಾನದವರೆಗೆ ಅವರ ಆಲೋಚನೆಗಳು ಹೊಮ್ಮಿದವು. ಕುಳಿತುಕೊಂಡೇ ಮಾತನಾಡಿದ ಆ ಹಿರಿಯ ಕವಿಯ ಧ್ವನಿ ಎತ್ತರದ್ದೂ ಉಚ್ಚಾರಣೆ ಸ್ಪಷ್ಟವೂ ಆಗಿತ್ತು. ಕೇವಲ ಹತ್ತು ನಿಮಿಷಗಳ ಅಧ್ಯಕ್ಷ ಭಾಷಣ ಮಾಡಿದ ಹಂಪನಾ ಸನ್ಮಾನಿತರ ಪಾಂಡಿತ್ಯ, ಸಜ್ಜನಿಕೆ, ಸದಭಿರುಚಿಗಳನ್ನು ಮನಮುಟ್ಟುವಂತೆ ವಿವರಿಸಿದರು.

* * *

ಇವೆಲ್ಲಕ್ಕಿಂತಲೂ ಮಿಗಿಲಾಗಿ ಅಂದು ರಾತ್ರಿ ಅವರು ವಿಶ್ರಮಿಸಿಕೊಳ್ಳುವಾಗ ಹಂಪನಾ ಅವರಿಗೆ ವಿವರಿಸಿ ಹೇಳಿದ ಕೆಲವು ಮಾತುಗಳು ತುಂಬ ಗಮನಾರ್ಹವೂ ಒಳನೋಟದಿಂದ ಕೂಡಿದವೂ ಆಗಿದ್ದವು. ಅವರು ಅಂದು ವಿವರಿಸಿದ್ದು ಸಂಸಾರ ಸುಖದ ಬಗ್ಗೆ ನಮ್ಮ ಪ್ರಾಚೀನರು ಹೊಂದಿದ್ದ ಸಕಾರಾತ್ಮಕ ಮನೋಭಾವವನ್ನು. ಇದನ್ನು ವಿವರಿಸುವಾಗ ಅವರು ರತಿ–ಮನ್ಮಥ ಪರಿಕಲ್ಪನೆಯ ಅರ್ಥವನ್ನು ವಿವರಿಸಿದರು.

"ಸರಿಯಾದ ರೀತಿಯಲ್ಲಿ ಸುಖಪಡಬೇಕು ಅನ್ನೋದು ನಮ್ಮವರ ಆಶಯವಾಗಿತ್ತು. ಅದೂ ಧರ್ಮವೇ. ನೀನು ಮನ್ಮಥ. ನಿನ್ನಲ್ಲಿ ರೂಪವೂ ಸುದೃಢತೆಯೂ ಇವೆ. ಅಗೋ– ರತಿ ನಿನ್ನ ಹೆಂಡತಿ. ಆಕೆ ಸೌಂದರ್ಯದ ಮಾನವ ರೂಪ. Enjoy. ಸುಖವಾಗಿ ನೀವಿಬ್ಬರೂ ಬದುಕಿ...."

ಕೆಲವು ಶ್ಲೋಕಗಳನ್ನು ಉದ್ಧರಿಸುತ್ತಾ ವಿ.ಸೀ. ಈ ಸಾರಾಂಶದ ವಿವರಣೆ ನೀಡಿದ್ದು ಕೇವಲ ಹದಿನೈದು ನಿಮಿಷಗಳ ಕಾಲ ಮಾತ್ರ. ಆದರೆ ಅಷ್ಟು ಅಲ್ಪಕಾಲದ ಅವರ ಆ ಸ್ವಯಂ ಸ್ಫೂರ್ತ ಮಾತುಗಾರಿಕೆ ತುಂಬ ಬೋಧಪ್ರದವಾಗಿತ್ತು. ಹಂಪನಾ ಚಿಕ್ಕ ಹುಡುಗನಂತೆ ನಮ್ರವಾಗಿ ಅವರ ಮಾತುಗಳನ್ನು ಕೇಳುತ್ತಾ ಕುಳಿತಿದ್ದರು.

ರತಿ–ಮನ್ಮಥ ಪರಿಕಲ್ಪನೆ ಕುರಿತ ಅವರ ಅಂದಿನ ವಿವರಣೆಗೆ ಸಮಾನವಾದ ವ್ಯಾಖ್ಯಾನವನ್ನು ನಾನಿನ್ನೂವರೆಗೂ ಇನ್ನೊಂದೆಡೆ ಕೇಳಲಾಗಿಲ್ಲ.

ಪುಣ್ಯ ಪುರುಷ

ಅ. ಬಾ. ಶೆಟ್ಟಿ ಪೊಳಲಿ

ವಿ.ಸೀ. ಎಂಬ ಎರಡು ಅಕ್ಷರಗಳ ಆಂಗ್ಲೋ ಕನ್ನಡ ಮಿಶ್ರಿತ ಸಂಕ್ಷಿಪ್ತ ನಾಮದಿಂದ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ತ್ರಿವಿಕ್ರಮ ಸಾಧನೆ ಮಾಡಿದವರು ಡಾ. ವಿ. ಸೀತಾರಾಮಯ್ಯ. ಅವರಿಗಿಂತ ಹೆಚ್ಚು ಬರೆದ ಮಾಸ್ತಿ, ಕುವೆಂಪು, ಕಾರಂತರಂಥ ಕೆಲವು ಸಾಹಿತ್ಯ ದೈತ್ಯರನ್ನು ಬಿಟ್ಟರೆ ವಿ.ಸೀ. ಅವರು ನಮ್ಮ ನಾಡಿನ ಮುಖ್ಯ ಬರೆಹಗಾರರು.

ಪ್ರಾಧ್ಯಾಪಕರಾಗಿ ವಿ.ಸೀ. ಸಾವಿರಾರು ವಿದ್ಯಾರ್ಥಿಗಳಿಗೆ ಕನ್ನಡ ಬೋಧಿಸಿದ್ದಾರೆ. ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ ವಿ.ಸೀ. ಆಂಗ್ಲ ಭಾಷೆಯಲ್ಲಿ ಸಮರ್ಥ. ಆದರೆ ತನ್ನ ಗುರು ಬಿ.ಎಂ.ಶ್ರೀ.ಯವರಂತೆ ಕನ್ನಡದ ಬೋಧಕರಾಗಿ ಬಂದುದು, ನೂರಾರು ವಿದ್ಯಾರ್ಥಿಗಳನ್ನು ಸಾಹಿತಿಗಳಾಗಿ ರೂಪಿಸಲು ಪರಿಶ್ರಮಿಸಿದುದು, ರಾಜರತ್ನಂ, ನರಸಿಂಹಸ್ವಾಮಿ ಮೊದಲಾದ ಎಷ್ಟೋ ಅಗ್ರಮಾನ್ಯ ಸಾಹಿತಿಗಳ ಬೆನ್ನು ಚಪ್ಪರಿಸಿ ಮುನ್ನಡೆಸಿದುದು ಇಂದು ಇತಿಹಾಸದ ಮಾತಾಗಿದೆ. ಸಜ್ಜನ, ಸಭ್ಯ, ಶಾಂತ ಮತ್ತು ಎಲ್ಲರನ್ನೂ ಸಮದೃಷ್ಟಿಯಿಂದ ಕಂಡು ಅಖಿಲ ಕರ್ನಾಟಕದ ಮಾತ್ರವಲ್ಲ, ದೇಶದ ಇತರ ಭಾಷೆಗಳ ಸಾಹಿತಿಗಳಿಂದಲೂ ಗೌರವಕ್ಕೆ ಪಾತ್ರರಾದ ವಿರಳಾತಿ ವಿರಳರಲ್ಲಿ ವಿ.ಸೀ. ಇದ್ದಾರೆ ಎಂಬುದು ಅವರ ಅಭಿಮಾನಿಗಳ ಹೃದಯವುಕ್ಕಿಸುವ ತಥ್ಯ. ಇಂಥ ಮಹಾವ್ಯಕ್ತಿಯನ್ನು ಅಷ್ಟಿಷ್ಟು ಹತ್ತಿರದಿಂದಲೇ ತಿಳಿದಿದ್ದೇನೆ, ಅವರನ್ನು ನನ್ನ ಒಬ್ಬ ಗುರು ಎಂಬ ಆರಾಧನಾಭಾವದಿಂದ ಕಂಡಿದ್ದೇನೆ.

*　　*　　*

ಸುಮಾರು ೧೯೬೧ರಲ್ಲಿ ಮೊತ್ತಮೊದಲ ಬಾರಿ ವಿ.ಸೀ. ಅವರನ್ನು ಹತ್ತಿರದಿಂದ ಕಂಡು ಮಾತನಾಡುವ ಸಂದರ್ಭ ನನ್ನ ಪಾಲಿಗೆ ಒದಗಿತು. ಆ ಮೊದಲು ನಾನು ಹೀಗೆ ಕಂಡು ಮಾತನಾಡಿದ ಹಿರಿಯ ಸಾಹಿತಿಗಳು ದಿ. ರಾಷ್ಟ್ರಕವಿ ಗೋವಿಂದ ಪೈಗಳು ಒಬ್ಬರೇ. ಮಂಗಳೂರಲ್ಲಿ ದಿ. ತೆಕ್ಕುಂಜ ಗೋಪಾಲ ಕೃಷ್ಣ ಭಟ್ಟರನ್ನು ಮುಂದಿರಿಸಿಕೊಂಡು, ಈಗ 'ತರಂಗ'ದ ಸಂಪಾದಕರಾಗಿರುವ ಶ್ರೀ ಗುಲ್ವಾಡಿಯವರೂ ನಾನೂ ಕನ್ನಡ ಸಂಘವನ್ನು ಆ ವರ್ಷ ಪ್ರಾರಂಭಿಸಿದ್ದೆವು. ಇದಕ್ಕೆ ದಿ. ಗೋವಿಂದ ಪೈಗಳ ಆಶೀರ್ವಾದವನ್ನೂ ಪಡೆದಿದ್ದೆವು. ಸಂಘ ಪ್ರಾರಂಭವಾದ ಕೆಲವೇ ತಿಂಗಳುಗಳಲ್ಲಿ ವಿ.ಸೀ., ಗೋವಿಂದ

ಪೈಯವರನ್ನು ಕಾಣಲು ಮಂಜೇಶ್ವರಕ್ಕೆ ಬರುವರೆಂದು ನಮಗೆ ತಿಳಿಯಿತು. ನಾವು ಅವರಿಗೊಂದು ಪತ್ರ ಬರೆದು ಕನ್ನಡ ಸಂಘಕ್ಕೆ ಬರಬೇಕೆಂದು ಆಮಂತ್ರಿಸಿದೆವು. ತೆಕ್ಕುಂಜದವರ ಬಗೆಗೆ ವಿ.ಸೀ.ಗೆ ವಿಶ್ವಾಸವಿತ್ತು. ವಿ.ಸೀ. ಕುರಿತು ತೆಕ್ಕುಂಜದವರಿಗೆ ಅಪಾರ ಗೌರವವಿತ್ತು.

ಮಂಗಳೂರು ಸರಕಾರೀ ಕಾಲೆಜಿನ ಸಭಾಸದನದಲ್ಲಿ ಉಪನ್ಯಾಸ ಜರಗಿತ್ತು. ಅಂದು ಬಂದವರೆಲ್ಲ ಇಂಥ ವಿಚಾರ ಪರಿಪ್ಲುತವಾದ ಉಪನ್ಯಾಸ ಕೇಳದೆ ಎಷ್ಟೋ ಕಾಲವಾಗಿತ್ತು ಎಂದು ಪ್ರಶಂಸಿಸಿದರು. ಅವರ ವಚೋವಿಲಾಸವನ್ನು ಕೇಳುವುದೇ ಒಂದು ಭಾಗ್ಯ. ಸಾಹಿತ್ಯ ಎಂದರೆ ಹತ್ತು ಮಾರು ದೂರ ಓಡುತ್ತಿದ್ದ ಒಬ್ಬ ನಿವೃತ್ತ ಸರಕಾರೀ ಅಧಿಕಾರಿ ಆ ದಿನ ಬಂದವರು, ನೇರಾಗಿ ವಿ.ಸೀ. ಬಳಿಗೆ ಹೋಗಿ ತನ್ನ ಹೃತ್ಪೂರ್ವಕ ಅಭಿನಂದನೆ ಹೇಳಿದ ರೀತಿಯನ್ನು ನಾನು ಮರೆಯಲಾರೆ. ವಿ.ಸೀ.ಯವರಷ್ಟೇ ಹರೆಯದ ಅವರು ಇವರ ಕಾಲು ಹಿಡಿಯುವಷ್ಟು ಬಗ್ಗಿ ತನ್ನ ಪ್ರಣಾಮಗಳನ್ನು ಅರ್ಪಿಸಿದ್ದರು.

ಮಂಗಳೂರಿನಲ್ಲಿ ಆದ ಈ ಪರಿಚಯ ಅನತಿ ಕಾಲದಲ್ಲೇ ಆತ್ಮೀಯತೆಯ ರೂಪ ತಾಳಲು ಅವರ ಉದಾರತೆಯೇ ಕಾರಣ. ನಾನೂ ನನ್ನ ಒಬ್ಬ ಸ್ನೇಹಿತರೂ ಬೆಂಗಳೂರಿಗೆ ಹೋದವರು ಒಂದು ಬೆಳಗ್ಗೆ ಚಾಮರಾಜಪೇಟೆಯಲ್ಲಿದ್ದ ಅವರ ಮನೆಗೆ ಹೋದೆವು. ಮಂಗಳೂರಿನಿಂದ ಬಂದವರು, ಕನ್ನಡ ಸಂಘ ಎಂದ ಕೂಡಲೇ 'ಓಹೋ! ತೆಕ್ಕುಂಜದವರ ಕನ್ನಡ ಸಂಘ' ಎಂದು ನೆನಪಿಸಿಕೊಂಡು ಅವರ ಕೋಣೆಗೆ ಕರೆದುಕೊಂಡು ಹೋದರು. ಮುಂದೆ ಎರಡು ತಾಸು ಅವರ ಮಾತುಗಳನ್ನು ಕೇಳುವ ಭಾಗ್ಯ. ಅವರು ಹೇಗಿದ್ದಾರೆ, ಇವರು ಹೇಗಿದ್ದಾರೆ ಎಂದು ದಕ್ಷಿಣ ಕನ್ನಡದ ಹಲವು ಸಾಹಿತಿಗಳ ಕ್ಷೇಮ ಸಮಾಚಾರ ಕೇಳಿದರು. ಈ ಎಲ್ಲ ಸಾಹಿತಿಗಳ ಬಗೆಗೆ ಅವರಿಗೆ ವಿಶೇಷ ಗೌರವ. ಅವರ ಸೇವೆಯ ಮುಕ್ತ ಶ್ಲಾಘನೆ. ಈ ನಡುವೆ ಎರಡು ಬಾರಿ ಕಾಫಿ, ತಿಂಡಿಗಳಾದುವು.

ಅವರು ಅಂದು ಮಾತನಾಡಿದ ವಿಷಯಗಳಲ್ಲಿ ನನ್ನ ತಿಳುವಳಿಕೆ ತುಂಬ ಕಡಿಮೆಯಿತ್ತು. ಇನ್ನೂ ಪಿಯುಸಿ ವಿದ್ಯಾರ್ಥಿ. ವಿ.ಸೀ. ಅವರ ಕೆಲವು ಲಲಿತ ಪ್ರಬಂಧಗಳನ್ನೂ ಒಂದೆರಡು ಕವಿತೆಗಳನ್ನೂ ಓದಿದ್ದೆ. ಜನಪ್ರಿಯವಾದ ಅವರ ಗೀತೆ 'ಎಮ್ಮೆ ಮನೆಯಂಗಳದಿ ಬೆಳೆದೊಂದು ಹೂವನ್ನು' ಮೆಚ್ಚಿ ಕಂಠಪಾಠ ಮಾಡಿದ್ದೂ ಉಂಟು. ಅದಕ್ಕಿಂತ ಹೆಚ್ಚು ಗೊತ್ತಿರಲಿಲ್ಲ. ಆದರೆ ಅವರು ನಮ್ಮನ್ನು ಅವರ ಸಮಾನರು ಎಂಬಂತೆ ನಡೆಸಿಕೊಂಡರು. ಹಲವು ಇಂಗ್ಲಿಷ್ ಸಾಹಿತಿಗಳ ಸೂಕ್ತಿಗಳನ್ನು ಹೇಳಿ 'ಹಾಗಲ್ಲವೇ?' ಎಂದು ಕೇಳಿದರು. ನಮ್ಮದು ಹಾಂ, ಹೂಂ ಇಷ್ಟೇ. ಆದರೆ ಅವರ ಎದುರು ಇದ್ದಷ್ಟು ಹೊತ್ತು ಮುಜುಗರ ಪಟ್ಟದ್ದೇ ಇಲ್ಲ. ಅಜ್ಞಾನವೆಲ್ಲ ತಿಳಿದುದು ಅಲ್ಲಿಂದ ಹೊರಟ ಮೇಲೆಯೇ. ಇಂಥ ಒಂದು ಅನುಭವ ಮಂಜೇಶ್ವರದಲ್ಲಿ ಗೋವಿಂದ ಪೈಗಳ ಸಾನ್ನಿಧ್ಯದಲ್ಲಿ ಆಗಿತ್ತು. ಅವರೂ ಹಾಗೆಯೇ. ಹಿಂದಿನ ಕನ್ನಡ ಕವಿಗಳ ತೇದಿಯ ಕುರಿತಾದ ವಿವಾದಗಳನ್ನು ಹೇಳಿ ತನ್ನ ವಾದವನ್ನು ಮಂಡಿಸಲು ಇದ್ದ ಆಧಾರಗಳನ್ನು, ನಾವೇ ಇದಿರಾಳಿಗಳು ಎಂಬಂತೆ ಹೇಳಿದ ರೀತಿ ಇಂದೂ ನನ್ನ ಕಣ್ಮುಂದೆ ಇದೆ. ಕನ್ನಡದಲ್ಲಿ ಸಣ್ಣ ಕಥೆಗಳನ್ನು ಪಂಜೆಯವರು ಬರೆಯುತ್ತಿದ್ದಾಗ ಮಾಸ್ತಿಯವರ ಪ್ರಾಯವೆಷ್ಟೆಂದು ಗೊತ್ತೇ ಎಂದು ಅವರು ಸವಾಲೆಸೆದದ್ದೂ

ನನ್ನ ಕಿವಿಯಲ್ಲಿ ಮೊಳಗುತ್ತಿದೆ. ಆದರೆ ಅದು ಮಾಸ್ತಿಯವರ ವಿರುದ್ಧವಲ್ಲ; ಅವರ ಭಕ್ತರೆಂದು ಹೇಳಿ ವಿವಾದ ಎಬ್ಬಿಸುವವರ ವಿರುದ್ಧ ಎಂದು ಗೊತ್ತಾಗುವ ಪ್ರಾಯ ಆಗ ನನ್ನದಾಗಿರಲಿಲ್ಲ.

ಗೋವಿಂದ ಪೈಯವರೆಂದರೆ ವಿ.ಸೀ.ಗೆ ಬಹಳ ಗೌರವ. ಪಂಜೆ, ಮುಳಿಯ, ಉಗ್ರಾಣ, ಎಂ. ಎನ್. ಕಾಮತ್, ಹುರುಳಿ ಭೀಮರಾವ್, ಕಡೆಂಗೋಡ್ಲು— ಹೀಗೆ ದಕ್ಷಿಣ ಕನ್ನಡದ ಹಿರಿಯ ಸಾಹಿತಿಗಳ ಬಗ್ಗೆ ತನಗಿದ್ದ ಗೌರವವನ್ನು ಅವರಂತೆ ವ್ಯಕ್ತಪಡಿಸಿದವರು ಬಹಳ ಮಂದಿ ಇಲ್ಲ. ಪುತ್ತೂರಿನಲ್ಲಿ ಕಾರಂತರ ಮುತುವರ್ಜಿಯಲ್ಲಿ ಮೊಳಹಳ್ಳಿ ಶಿವರಾಯರ ಪ್ರೋತ್ಸಾಹದಿಂದ ಏರ್ಪಾಡಾಗುತ್ತಿದ್ದ ದಸರಾ ನಾಡಹಬ್ಬಕ್ಕೆ ಹೋದ ನೆನಪನ್ನು ಅವರು ಮಾಡಿಕೊಂಡರು. ಅಲ್ಲದೆ ಅಲ್ಲಿ ತಾನುಂಡ ವಿಶಿಷ್ಟ ಪಲ್ಯಗಳ ರುಚಿಯನ್ನೂ ಮಂಗಳೂರಲ್ಲಿ ತಾನು ಕೇಳಿದ ತಾಳಮದ್ದಳೆ ಕೂಟದ ಹೆಚ್ಚುಗಾರಿಕೆಯನ್ನೂ ಅವರು ಸ್ಮರಿಸಿದರು. ಯಕ್ಷಗಾನದ ಕಾರಣದಿಂದ ದಕ್ಷಿಣ ಕನ್ನಡ ಜಿಲ್ಲೆಯ ಅನಕ್ಷರಸ್ಥರು ಕೂಡಾ ಪೌರಾಣಿಕ ಕಥೆಗಳನ್ನು ಅಧಿಕಾರಯುತವಾಗಿ ಹೇಳಲು ಸಮರ್ಥರಾಗಿದ್ದಾರೆ ಎಂಬ ತಥ್ಯವನ್ನು ಅಭಿಮಾನದಿಂದ ಹೇಳಿದಾಗ, ಆ ಕಲೆಯ ಹುಟ್ಟೂರಿನವರಾದ ನಮ್ಮ ಹೆಮ್ಮೆಗೆ ಪಾರವಿಲ್ಲವಾಯಿತು. ಈ ಮಾತುಗಳನ್ನು ಹೇಳುವಾಗ ಅವರ ಮುಖದಲ್ಲಿ ಆನಂದದ ಕಾಂತಿ, ಕಣ್ಣುಗಳಲ್ಲಿ ತೃಪ್ತಿಯ ಬೆಳಕು, ಸ್ವರದಲ್ಲಿ ಆತ್ಮೀಯತೆಯ ಗದ್ಗದವಿತ್ತು.

ನವ್ಯ ಸಾಹಿತ್ಯದ ಕುರಿತು ಆಗ ನನಗೆ ಏನೇನೂ ಗೊತ್ತಿರಲಿಲ್ಲ ಎಂದು ಪ್ರಾಂಜಲವಾಗಿ ಒಪ್ಪಿಕೊಳ್ಳಬೇಕು. ಅರ್ಥವಾಗದ್ದೆಲ್ಲ ನವ್ಯ ಎಂಬ ಹಲವರ ಅಭಿಪ್ರಾಯವನ್ನು ಸತ್ಯವೆಂದು ಒಪ್ಪಿಕೊಳ್ಳುವ ಮನಃಸ್ಥಿತಿ ಇತ್ತು. ನವ್ಯರು ಅತೃಪ್ತಿಯನ್ನೇ ಮುಖ್ಯ ವಸ್ತುವನ್ನಾಗಿ ಬರೆಯುತ್ತಿದ್ದ ಬಗೆಗೆ ವಿ.ಸೀ. ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ತಾನು ನಿವೃತ್ತನಾಗುವಾಗ ನಾಲ್ಕು ನೂರು ರೂಪಾಯಿಗಳ ವೇತನ. ಆದರೆ ಈ ಜನಕ್ಕೆ ಸೇವೆ ತೊಡಗುವಾಗಲೇ ಅದಕ್ಕಿಂತ ಹೆಚ್ಚು ಸಿಗುತ್ತದೆ. ಇವರಿಗೆ ಮತ್ತು ಯಾಕಂತೆ ಅತೃಪ್ತಿ ಎಂದು ನನ್ನಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದರು. ಅದರ ಹಿಂದೆ ಒಂದಿಷ್ಟು ಸಾತ್ವಿಕ ಕ್ರೋಧವೂ ಇತ್ತೆಂದು ಅನಿಸುತ್ತಿದೆ.

ನಾವು ಹೋದ ದಿನ ಅವರ ಪತ್ನಿ ಇರಲಿಲ್ಲವೋ ಏನೋ! ಮಾರನೆಯ ದಿನ ಮಧ್ಯಾಹ್ನ ಊಟಕ್ಕೆ ಬರಬೇಕೆಂದು ಒತ್ತಾಯಿಸಿದರು. ಬೇಡವೆಂದು ಎಷ್ಟು ಹೇಳಿದರೂ ಬಿಡಲಿಲ್ಲ. 'ಎಲ್ಲಾದರೂ ಊಟ ಮಾಡಬೇಕು ತಾನೇ? ಇಲ್ಲಿಗೇ ಬನ್ನಿ' ಎಂದು ಅಪ್ಪಣೆ ಮಾಡಿದರು. ಅದು ಊಟವಾಗಿರಲಿಲ್ಲ; ಅತಿಥಿಗಳಿಗೆ ಮಾಡಿಸಿದ ಭೋಜನಕೂಟ. ಗೇರು ಬೀಜ ದ್ರಾಕ್ಷಿ ಧಾರಾಳ ಹಾಕಿದ ಶಾವಿಗೆ ಪಾಯಸವಿತ್ತು. ತಾನು ಹೇಳಿ ಮಾಡಿದ್ದಲ್ಲ, ಮನೆಯ ಒಡತಿ ಮಾಡಿಸಿದ್ದೆಂಬ ವಿವರಣೆ ಬೇರೆ.

೧೯೫೩ರಲ್ಲಿ ಕುಮಟೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ವಿ.ಸೀ ಅಧ್ಯಕ್ಷರು. ಅಲ್ಲಿ ಜರಗಿದ ಯಕ್ಷಗಾನ ಗೋಷ್ಠಿಯ ಅಧ್ಯಕ್ಷತೆ ವಹಿಸಿದವರು ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರು. ದಕ್ಷಿಣ ಕನ್ನಡದಲ್ಲಿ ತಾಳಮದ್ದಳೆ ಕೂಟಗಳಲ್ಲಿ ವಿದ್ವಾಂಸರು ಭಾಗವಹಿಸಿ ಅದಕ್ಕೆ ಘನತೆ ತಂದು ಕೊಡಲು ಕಾರಣರಾದ ಮೊದಲಿಗರಲ್ಲಿ ಅವರೂ ಒಬ್ಬ

ಪ್ರಮುಖರು. ಯಕ್ಷಗಾನ ಪ್ರಸಂಗಗಳನ್ನು ರಚಿಸಿ ಪ್ರಕಟಿಸಿದವರು; ಖ್ಯಾತ ಆಯುರ್ವೇದ ವೈದ್ಯರೂ ಆಗಿದ್ದರು. ಅಲ್ಲದೆ, ಯಕ್ಷಗಾನದ ಎಲ್ಲ ಅಂಗಗಳಲ್ಲೂ ಪರಿಣತರಾಗಿದ್ದರು. ಆ ಸಮ್ಮೇಳನಕ್ಕೆ ಬಂದಿದ್ದ ಅವರ ಪತ್ನಿ ಶ್ರೀಮತಿ ಗಿರಿಜಮ್ಮ, ಶ್ರೀಮತಿ ವಿ.ಸೀ.ಯವರು ಹಾಗೂ ಶ್ರೀಮತಿ ಬೇಂದ್ರೆಯವರು ನೋಡಲಿಕ್ಕೆ ಬಹುಮಟ್ಟಿಗೆ ಒಂದೇ ರೀತಿಯಲ್ಲಿದ್ದರಂತೆ. ಹೀಗೆಂದು ಆ ಸಮ್ಮೇಳನಕ್ಕೆ ಹೋಗಿ ಬಂದಿದ್ದ ನನ್ನ ಚಿಕ್ಕ ತಾಯಿ ಹೇಳಿದ ನೆನಪಿತ್ತು. ಗಿರಿಜಮ್ಮ ನಮ್ಮ ಮನೆಗೆ ಬಂದಿದ್ದರು. ಶ್ರೀಮತಿ ವಿ.ಸೀ. ಯವರ ಕೈಯಡುಗೆ ಉಣುವ ಭಾಗ್ಯ ನನಗೊದಗಿತೆಂದು ಆನಂದವಾಯಿತು. 'ಹೊರಗಿನ ರೂಪವಲ್ಲ ಕಣಾ, ಒಳಗಿನ ಹೃದಯವನು ನೋಡು' ಎಂಬ ಮಾತು ಇಂಥ ಸಂದರ್ಭಗಳಲ್ಲಿ ನಮ್ಮ ಅರಿವಿಗೆ ಬರುತ್ತದೆ. ತಾಯಿಯ ಮಮತೆಯನ್ನು ಅನುಭವಿಸಿದಂತೆ ಆ ಸಂದರ್ಭದಲ್ಲಿ ನನಗಾಯಿತು.

ತನ್ನ ಪತ್ನಿಯ ಕುರಿತು ವಿ.ಸೀ.ಯವರಿಗೆ ಅಗಾಧ ಪ್ರೇಮವಿತ್ತು. ಆಕೆ ಇನ್ನಿಲ್ಲ ಎಂದಾದ ಸಂದರ್ಭದಲ್ಲಿ ಅವರದನ್ನು ನಯವಾದ ಮಾತುಗಳಿಂದ ಹೇಳಿದ್ದು ನನ್ನ ನೆನಪಿನಲ್ಲಿದೆ. ಒಬ್ಬ ಪತ್ನಿಯಾಗಿ, ತಾಯಿಯಾಗಿ ಆಕೆ ಮನೆಯನ್ನು ನಡೆಸುವ ಆದರ್ಶಗೃಹಿಣಿಯಾಗಿ ಬಾಳಿದ ಕುರಿತು ಅವರಿಗೆ ಅಭಿಮಾನವಿತ್ತು. ಪಿತೃಭಕ್ತಿಯ ಮಕ್ಕಳಿಂದಾಗಿ, ಸಹನಶೀಲೆಯರಾದ ಸೊಸೆಯಂದಿರಿಂದಾಗಿ ಅವರ ಕೌಟುಂಬಿಕ ಜೀವನ ಕೊನೆಯ ದಿನದವರೆಗೂ ಕೊರೆಯಿಲ್ಲದೆ ನಡೆಯಿತು. ಇಂಥ ಪುಣ್ಯ ಬಹಳ ಜನಕ್ಕೆ ಸಿಗುವುದಿಲ್ಲ.

ವಿ.ಸೀ. ತುಂಬ ಶಿಸ್ತುಗಾರ. ಜತೆಯಲ್ಲಿ ಸೊಗಸುಗಾರ ಕೂಡಾ. ವೇಷ ಭೂಷಣ, ಊಟ ತಿಂಡಿ ತಿನಸು ಸಹಿತ ಎಲ್ಲವೂ ಅ–ಗ (A–1) ಆಗಿರಬೇಕೆಂದು ಅವರು ಬಯಸುತ್ತಿದ್ದರು. ಅದಕ್ಕಾಗಿ ಸ್ವಲ್ಪ ಹೆಚ್ಚು ಖರ್ಚಾದರೂ ಚಿಂತಿಲ್ಲ ಎಂದು ಅವರು ಹೇಳುತ್ತಿದ್ದರೆಂದು ಅವರನ್ನು ಬಲ್ಲವರು ಮೆಚ್ಚುಗೆ ಸಹಿತ ಲೇವಡಿ ಮಾಡಿದ್ದಾರೆ. ಮನೆಯಿಂದ ಹೊರ ಬಂದು ಎರಡು ಹೆಜ್ಜೆ ರಸ್ತೆಯಲ್ಲಿ ಹೋಗಬೇಕಾದರೂ ಪೂರ್ಣ ದಿರಿಸು – ಎಂದರೆ ಕಚ್ಚೆ, ಕೋಟು, ಮೈಸೂರು ರುಮಾಲು ಬೇಕೇ ಬೇಕಂತೆ.

ಅವರ ಈ ಮರ್ಜಿ ಆಗ ನಮಗೆ ಗೊತ್ತಿರಲಿಲ್ಲ. ನಾವು ಮಾತುಕತೆಯಾಡುತ್ತಿದ್ದಂತೆ ನನ್ನ ಸ್ನೇಹಿತರು ಬನೀನು ಮತ್ತು ಬರಿತಲೆಯಲ್ಲಿದ್ದ ಅವರ ಫೋಟೋ ತೆಗೆದರು. ಇದರಿಂದ ಅವರಿಗೆ ಬೇಸರವಾದೀತೆಂದು ನಾವು ಭಾವಿಸಿರಲಿಲ್ಲ. ಸಹಜ ಭಂಗಿಯ ಅಪೂರ್ವ ಚಿತ್ರ ತೆಗೆದೆನೆಂದು ನನ್ನ ಮಿತ್ರನಿಗೆ ಹೆಮ್ಮೆ. ತನ್ನ ಮಗನೇ ಜೋಡಿಸಿದ ರೇಡಿಯೋ ಶ್ರುತಿ ಮಾಡುತ್ತಿದ್ದಾಗ ತೆಗೆದ ಈ ಭಾವಚಿತ್ರದ ಒಂದು ಪ್ರತಿಯನ್ನು ಅವನು ಅವರಿಗೆ ಕಳುಹಿಸಿಕೊಟ್ಟ. ಮುಂದೊಂದು ಬಾರಿ ನಾನು ಹೋದಾಗ, 'ನಿಮ್ಮ ಸ್ನೇಹಿತರು ಹೇಳಿದ್ದಿದ್ದರೆ ನಾನು ಫೋಟೋಗೆ ಸಿದ್ಧನಾಗಿ ಬಿಡುತ್ತಿದ್ದೆ' ಎಂದರು. ಎಳೆಯರ ಕೆಲಸ ಎಂದು ಅವರು ನಮ್ಮನ್ನು ಕ್ಷಮಿಸಿದ್ದಿರಬೇಕು.

ವಿ.ಸೀ.ಯವರ ಮನೆಗೆ ಒಂದೈವತ್ತು ಬಾರಿಯಾದರೂ, ವರ್ಷಕ್ಕೆ ಎರಡು ಮೂರು ಸಲದಂತೆ, ಹೋಗಿದ್ದಿರಬೇಕು. ಹತ್ತು ನಿಮಿಷ ಇದ್ದು ಬರೋಣ ಎಂದು ಹೋದವನು, ಗಂಟೆಗಟ್ಟಲೆ ಅವರ ಮಾತು ಕೇಳಿ ಆ ಅನುಭವಾಮೃತ ಸವಿದು ಮನಸ್ಸಿಲ್ಲದ ಮನಸ್ಸಿನಿಂದ

ಎದ್ದು ಬಂದಿದ್ದೇನೆ. ಅವರ ಸಾದಾ ಕೋಣೆಯಲ್ಲಿ ಬಿಡಿಸಿದ ಚಾಪೆ, ಗೋಡೆಗೆ ಒರಗಿಸಿಟ್ಟ ದಿಂಬುಗಳು, ಸುತ್ತಲೂ ಬೀರುಗಳಲ್ಲಿ ಓರಣವಾಗಿ ತುಂಬಿದ್ದ ಪುಸ್ತಕಗಳ ರಾಶಿ. ಕೆಲವು ಗಾಜಿನ ರಕ್ಷೆ ಹಾಕಿದ ಅಮೂಲ್ಯ ಕಲಾಕೃತಿಗಳು ಗೋಡೆಗಳಲ್ಲಿ. ಅವರ ಸುತ್ತಮುತ್ತ ಕೆಲವು ಇಂಗ್ಲಿಷ್-ಕನ್ನಡ ಗ್ರಂಥಗಳು, ಹಲವು ಪತ್ರಿಕೆಗಳು. ದೇಶೀಯ ಮತ್ತು ವಿದೇಶೀಯ ಖ್ಯಾತ ಜರ್ನಲ್‌ಗಳೂ ಅವರಿಗೆ ಬರುತ್ತಿದ್ದುವು. ತನಗೆ ಬೇಕಾದ ಪುಸ್ತಕಗಳು ಇಂಥಲ್ಲೇ ಇವೆ ಎಂದು ಅವರಿಗೆ ಕರಾರುವಾಕ್ಕಾಗಿ ಗೊತ್ತಿತ್ತು ಎನ್ನುತ್ತಾರೆ.

ನಾನು ಅವರಲ್ಲಿಗೆ ಹೋಗುವಾಗ ಕೆಲವೊಮ್ಮೆ ಕೆಲವು ಮಿತ್ರರನ್ನು ಅವರನ್ನು ನೋಡಲಿಕ್ಕೆಂದೇ ಕರೆದುಕೊಂಡು ಹೋದುದುಂಟು. ಕೆಲವರು ಉತ್ಸಾಹದಿಂದ ಬಂದಿದ್ದರೆ ಒಂದಿಬ್ಬರು ನನ್ನ ದಾಕ್ಷಿಣ್ಯಕ್ಕಾಗಿ ಬಂದವರೂ ಇದ್ದಾರೆ. ಆದರೆ ಅಲ್ಲಿಂದ ಮರಳಿದ ಎಲ್ಲರಿಗೂ ಒಂದೇ ಬಗೆಯ ಅನುಭವ. ವಿ.ಸೀ. ದರ್ಶನವೆಂದರೆ ಒಂದು ಪುಣ್ಯ ಪುರುಷನನ್ನು ಕಂಡ ಸಾರ್ಥಕ್ಯ ಭಾವ. ಅವರು ಎಷ್ಟು ಹೊತ್ತು ಬೇಕಾದರೂ ಮಾಡನಾಡಲಿ, ಎಷ್ಟು ವಿಷಯಗಳ ಬಗೆಗೆ ಬೇಕಾದರೂ ಮಾತನಾಡಲಿ, ತನ್ನ ಬಗೆಗೆ ಒಂದೇ ಒಂದು ವಾಕ್ಯವನ್ನು ಕೂಡಾ ಆಡಿದ್ದು ನನಗೆ ನೆನಪಿಲ್ಲ. ಕವಿ ಕಾವ್ಯ ಪರಂಪರೆ ಮಾಲೆಯಲ್ಲಿ ಸಾಕಷ್ಟು ಸಾಹಿತಿಗಳಿಗೆ ಲೇಖನ ಬರೆಯಲು ಅವಕಾಶ ಕಲ್ಪಿಸಿಕೊಟ್ಟ ವಿ.ಸೀ.ಯವರು ಪಾಂಡಿತ್ಯ ಪೂರ್ಣ ಸಮೀಕ್ಷೆಗಳನ್ನು ಬರೆದಿದ್ದರು. ಲೇಖನಕ್ಕೆ ಆಮಂತ್ರಣ ಕೊಡುವಾಗಲೇ ಮುಂಗಡವನ್ನು ಪ್ರಕಾಶಕರಿಂದ ಕಳುಹಿಸಿದ ಉದಾಹರಣೆಗಳು ನನಗೆ ಗೊತ್ತಿದೆ. ಹಾಗೆ ಹಣ ಪಡೆದು ಕೂಡಾ ಲೇಖನ ಬರೆಯದವರು ಇದ್ದರು. ಅಂಥ ಸಮಯದಲ್ಲಿ ಮನಸ್ಸು ನೊಂದರೂ ಅವರ ಮಾತಿನಲ್ಲಿ ಕಹಿಯಿರಲಿಲ್ಲ. ಇತರರ ಪ್ರಶಂಸೆ ಮಾಡುವ ನೆವದಿಂದ, ತಮ್ಮ ವೈಯಕ್ತಿಕ ಸಾಧನೆ ಸಿದ್ಧಿಗಳನ್ನು ಕೊಚ್ಚಿಕೊಳ್ಳುವ ಹಲವರನ್ನು ನಾನು ಕಂಡಿದ್ದೇನೆ. ತನಗೆ ಸರಿಯಾದ ಗೌರವ ಸಿಗಲಿಲ್ಲವೆಂದು ಅವರು ವಿಷಾದ ಪಡುವುದನ್ನು ಕೇಳಿ ರೋಸಿ ಹೋಗಿದ್ದೇನೆ. ತಮಗಿಂತ ಕಡಮೆ ಯೋಗ್ಯತೆಯವರಿಗೆ ಗೌರವ ಸಿಕ್ಕಿತು; ತಮಗೆ ಸಿಗದಿರಲು ಅಂಥವರ ಪಿತೂರಿಯೇ ಕಾರಣವೆನ್ನುವವರೂ ಇದ್ದಾರೆ. ಆದರೆ ವಿ.ಸೀ. ಬಳಿಗೆ ಹೋದಾಗ, ಅಂದಿನ ದಿನಗಳಲ್ಲಿ ಹಿರಿಯರೆನಿಸಿದ ಕೆಲವರ ಬಗೆಗೂ ಇದನ್ನು ಅನ್ವಯಿಸಬಹುದು, ಅಂಥ ಕೆಳಮಟ್ಟದ ಮಾತುಗಳ ಲವಲೇಶವೂ ಇಲ್ಲದೆ ಮನಸ್ಸು ಪ್ರಶಾಂತವಾಗಿರುತ್ತದೆ. ಇದನ್ನೇ ನನ್ನ ಮಿತ್ರರು ಕೂಡಾ ಅನುಭವಿಸಿದ್ದರು.

ರಾಷ್ಟ್ರಕವಿ ಗೋವಿಂದ ಪೈಯವರಿಗೆ ಮಂಗಳೂರಲ್ಲಿ ಒಂದು ಸನ್ಮಾನ ಮಾಡಬೇಕೆಂದು ನಮಗೆಲ್ಲ ಆಸೆಯಿತ್ತು. ಅವರೂ ಹಲವು ಶರ್ತಗಳನ್ನೊಡ್ಡಿ, ಅದನ್ನು ಸ್ವೀಕರಿಸಲು ಒಪ್ಪಿದ್ದರು. ಆಗ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದೆವು. ಈ ಸನ್ಮಾನಕ್ಕೆ ಪೈಗಳು ಒಪ್ಪಿದರೆಂದು ತಿಳಿದು ಸಂತೋಷ ಪಟ್ಟವರಲ್ಲಿ ವಿ.ಸೀ. ಮುಖ್ಯರಾಗಿದ್ದರು. ಸಮಿತಿಯಲ್ಲಿದ್ದು ಹಲವು ಸೂಚನೆಗಳನ್ನಿತ್ತಿದ್ದರು. ಸನ್ಮಾನದ ದಿನಕ್ಕಿಂತ ಮೊದಲೇ ಪೈಗಳು ನಿಧನರಾದ ಕಾರಣ ನಾವು ಅವರ ಭಾವಚಿತ್ರವನ್ನು ಅನಾವರಣಗೊಳಿಸಿ ಶ್ರದ್ಧಾಂಜಲಿ ಅರ್ಪಿಸಬೇಕಾಯಿತು. ದಿ. ಪೈಗಳು ಈ ಸನ್ಮಾನಕ್ಕೆ ಒಪ್ಪಿರಲಿಲ್ಲ ಎಂಬಂಥ ಮಾತುಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಾಗ

ನಮಗೆ ಮುಖವಾಗಿತ್ತು. ಆಗ ನಮಗೆ ಸಮಾಧಾನ ಹೇಳಿದವರು ವಿ.ಸೀ. ಮುಂದೆ ಕುಂದಾಪುರದಲ್ಲಿ 'ದೀವಿಗೆ' ಶ್ರದ್ಧಾಂಜಲಿ ಗ್ರಂಥಕ್ಕೆ ಬರೆದ ತನ್ನ ಲೇಖನದಲ್ಲಿ ಅವರು ಈ ವಿಚಾರವನ್ನು ಸೂಚಿಸಿದ್ದರು.

ಶಿವರಾಮ ಕಾರಂತರ ಅರುವತ್ತೆಂಟನೆಯ ಹುಟ್ಟು ಹಬ್ಬವನ್ನು ಒಂದು ಸಾಹಿತ್ಯ ಸಮ್ಮೇಳನದಂತೆ ೧೯೬೯ರಲ್ಲಿ ಕು. ಶಿ. ಹರಿದಾಸ ಭಟ್ಟರು ಅಧ್ಯರ್ಯುಗಳಾಗಿ ಉಡುಪಿ ಎಂ.ಜಿ.ಎಂ. ಕಾಲೆಜಿನಲ್ಲಿ ಏರ್ಪಡಿಸಿದರು. ನಾಡಿನ ಮೂಲೆ ಮೂಲೆಗಳಿಂದ ಸಾಹಿತ್ಯಾಸಕ್ತರೂ ಕಾರಂತರ ಅಭಿಮಾನಿಗಳೂ ನೆರೆದು ಇದನ್ನು ಯಶಸ್ವಿಗೊಳಿಸಿದ್ದರು. ಸನ್ಮಾನ ಸಮಾರಂಭದ ಅಧ್ಯಕ್ಷರಾಗಿದ್ದವರು ವಿ.ಸೀ. ಅವರ ಅಂದಿನ ಭಾಷಣ ಒಂದು ಸ್ಮರಣಾರ್ಹ ಸನ್ನಿವೇಶ ಎನ್ನಬೇಕು. ಪ್ರಾಯದಲ್ಲಿ ತನಗಿಂತ ಮೂರು ವರ್ಷ ಎಂಟು ದಿನ ಕಿರಿಯರಾದ ಕಾರಂತರ ನೇರ ಮತ್ತು ನಿರ್ಭೀತ ವ್ಯಕ್ತಿತ್ವವನ್ನು ಎತ್ತಿ ಹೇಳಿ ಅವರು ಸಲ್ಲಿಸಿದ ಗೌರವ ಎಲ್ಲರ ಹೃದಯವನ್ನೂ ಗೆದ್ದಿತ್ತು.

ಕಾರಂತರಿಗೂ ವಿ.ಸೀ. ಅವರಿಗೂ ಇದ್ದ ಪರಸ್ಪರ ಸ್ನೇಹ ಸಂಬಂಧವನ್ನು ಎತ್ತಿ ಹಿಡಿದ ಒಬ್ಬ ಪುಣ್ಯ ಜೀವಿಯ ಬಗೆಗೆ ಒಂದು ಮಾತು ಇಲ್ಲಿ ಹೇಳಬೇಕು. ಸಾಹಿತ್ಯ ಪರಿಚಾರಿಕೆ ಮತ್ತು ಪೋಷಣೆಯಲ್ಲಿ ಸಾರ್ಥಕ್ಯ ಕಂಡ ನನ್ನ ಹಿರಿಯ ಸ್ನೇಹಿತರಾದ ದಿ. ಗುಂಡ್ಮಿ ರಾಮಕೃಷ್ಣ ಐತಾಳರಿಗೆ ಈ ಇಬ್ಬರ ಬಗೆಗೂ ಅಪಾರ ಗೌರವ. ವಿ.ಸೀ. ಅವರ ಒಕ್ಕಿನೆಯ ಹುಟ್ಟು ಹಬ್ಬವನ್ನು ಆಚರಿಸಲು ಬೆಂಗಳೂರಲ್ಲಿ ಐತಾಳರು ಮುಂದಾಗಿದ್ದು ನಿಟ್ಟೂರರ ಅಧ್ಯಕ್ಷತೆಯಲ್ಲಿ ಒಂದು ಅಭಿನಂದನ ಗ್ರಂಥ ಅರ್ಪಿಸಿದರು. ಗಮನಾರ್ಹ ಮೊತ್ತದ ಒಂದು ನಿಧಿಯನ್ನು ಒಪ್ಪಿಸಿದರು. ಕಾರಂತರು ಮತ್ತೆ ಮರಳಿ (ಕೋಟದ) ಮಣ್ಣಿಗೆ ಬರಲು ಅನುಕೂಲವಾಗುವಂತೆ, ತಾನೇ ಕಟ್ಟಿಸಿದ 'ಸುಹಾಸ'ವನ್ನು ಕಾರಂತರ ನಿವಾಸವಾಗಿ ಪರಿವರ್ತಿಸಿ, ಎಲ್ಲ ಅನುಕೂಲತೆಗಳನ್ನೂ ಒದಗಿಸಿ, ಕೋಟಕ್ಕೆ ಸ್ವಾಗತಿಸಿದವರೂ ದಿ. ಗುಂಡ್ಮಿಯವರೇ. ಬೆಂಗಳೂರಿಗೆ ಹೋದಾಗೆಲ್ಲ ನಾನು ಅವರ ಮನೆ ಅಥವಾ ಸರಸ್ವತಿ ಲಾಜ್‌ಗೆ ಹೋಗಿ ಕಾಫಿ ಕುಡಿದು ವಿ.ಸೀ.ಯವರ ಕುರಿತು ಏನಾದರೂ ಒಂದಿಷ್ಟು ಮಾತನಾಡುವುದು ಒಂದು ಕಾರ್ಯಕ್ರಮವೇ ಆಗಿತ್ತು. ದಿ. ಗುಂಡ್ಮಿಯವರ ತಮ್ಮ ದಿ. ಡಾ. ಚಂದ್ರಶೇಖರ ಐತಾಳರೂ ಈ ಅಣ್ಣ ತನಗೆ ನೀಡಿದ ಬೆಂಬಲವನ್ನು ಆಗಾಗ ಕೃತಜ್ಞತೆಯಿಂದ ಸ್ಮರಿಸಿ ತನ್ನ ಅಣ್ಣ ತನಗೆ ತಂದೆ ಎಂದು ಹೇಳುತ್ತಿದ್ದರು. ವಿ.ಸೀ. ನೆನಪಾದಾಗಲೆಲ್ಲ ಗುಂಡ್ಮಿಯವರ ನೆನಪಾಗದೆ ಇಲ್ಲ.

* * *

ಒಂದು ಬಾರಿ ನನ್ನ ಪತ್ನಿಯನ್ನು ವಿ.ಸೀ.ಯವರಲ್ಲಿಗೆ ಕರೆದುಕೊಂಡು ಹೋಗಿದ್ದೆ. ಅವರು ಆಗ ತುಂಬ ಕುಗ್ಗಿದ್ದರು. ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ. ತನಗ್ಯಾಕೆ ಸಾಹಿತಿಗಳ ಮನೆ ತುಳಿಯುವ ಕೆಲಸ ಎಂದು ಅವಳು ಉದಾಸೀನವಾಗಿಯೇ ಇದ್ದಳು. ಆದರೆ ಅಲ್ಲಿ ಹೋದಾಗ ನನ್ನ ಗುರುತಾದ ವಿ.ಸೀ. ಯವರು ಅವಳನ್ನು ಸ್ವಾಗತಿಸಿ 'ಬನ್ನಿ ತಾಯಿ, ಕುಳಿತುಕೊಳ್ಳಿ' ಎಂದು ಉಪಚರಿಸಿದರು. ಅನಂತರ ನಾವಿದ್ದ ಒಂದು ತಾಸು ಅವರು ಸಾಹಿತ್ಯದ ಕುರಿತು ಮಾತನಾಡಲಿಲ್ಲ. ಬದಲಾಗಿ, ಬಹಳ ಕಾಲದ ಅನಂತರ

ಬಂಧುಗಳೊಡನೆ ಕುಶಲ ವಿನಿಮಯ ಮಾಡುವಂತೆ ಮಾತನಾಡಿದರು. ನನ್ನ ಪತ್ನಿಯ ಗುರುಗಳಾಗಿದ್ದ ಶ್ರೀಮತಿ ರಾಧಾ ಎಲ್. ರಾಯರ ವಿಷಯ ವಿಚಾರಿಸಿದರು ಮತ್ತು ಅವರ ಗಂಡ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಒಬ್ಬ ಸಕ್ರಿಯ ಕಾರ್ಯಕರ್ತನಾಗಿದ್ದುದನ್ನು ನೆನಪು ಮಾಡಿಕೊಂಡರು. ನನ್ನ ಬಗೆಗೂ ನನ್ನಾಕೆಗೆ ಒಳ್ಳೆಯ ಮಾತುಗಳನ್ನು ಹೇಳಿದರು. ಮನೆಯಿಂದ ಹೊರಡುವ ಹೊತ್ತಿನಲ್ಲಿ ನನ್ನ ಪತ್ನಿಗೆ ತನ್ನ ಸೊಸೆಯಿಂದ ತೆಂಗಿನ ಕಾಯಿ ತಾಂಬೂಲ ಒಪ್ಪಿಸಿದರು. ಆಗ ಅವರ ಪತ್ನಿ, ಆ ತಾಯಿ, ಇರಲಿಲ್ಲ. ಆದರೆ ಸಂಪ್ರದಾಯಕ್ಕೆ ಚ್ಯುತಿಯಿಲ್ಲದಂತೆ, ಮನೆಗೆ ಬಂದ ಸುಮಂಗಲೆಯನ್ನು ಗೌರವದಿಂದ ಕಳುಹಿಸಿಕೊಟ್ಟರು. ಅದು ನಮ್ಮಿಬ್ಬರ ಬಾಳಿನಲ್ಲಿ ಒಂದು ಮರೆಯಲಾರದ ಘಟನೆ.

* * *

ಮಣಿಪಾಲದಲ್ಲಿ ಪ್ರೊ. ಜಿ. ಆರ್. ರೈಗಳು ಅಧ್ಯಕ್ಷರಾಗಿರುವ ಒಂದು ಸಾಹಿತ್ಯಾಸಕ್ತರ ಮಣಿಪಾಲ ಸಾಹಿತ್ಯ ಸಂಘ ೧೯೭೨ರಲ್ಲಿ ಅಸ್ತಿತ್ವಕ್ಕೆ ಬಂತು. ವಾರಕ್ಕೊಂದರಂತೆ ಸಾಹಿತ್ಯ ಕಾರ್ಯಕ್ರಮ ಏರ್ಪಡಿಸುತ್ತಿದ್ದೆವು. ದಿ. ಸೇಡಿಯಾಪು ನಮಗೆ ಸ್ಫೂರ್ತಿಯ ಸೆಲೆಯೂ ಮಾರ್ಗದರ್ಶಕರೂ ಆಗಿದ್ದರು.

೧೯೭೩ರಲ್ಲಿ ಮಾಸ್ತಿಯವರೂ ವಿ.ಸೀ.ಯವರೂ ಪಂಜೆಯವರ ಜನ್ಮ ಶತಾಬ್ದದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮಂಗಳೂರಿಗೆ ಬರಲಿರುವರೆಂದು ತಿಳಿಯಿತು. 'ಅಲ್ಲಿಯ ಕಾರ್ಯಕ್ರಮ ಮುಗಿಸಿ ಮಣಿಪಾಲಕ್ಕೆ ಬನ್ನಿ; ನಮ್ಮ ಸಂಘದ ಮೊದಲನೆಯ ವಾರ್ಷಿಕೋತ್ಸವ ನಡೆಸಿಕೊಡಿ' ಎಂದು ಆಮಂತ್ರಿಸಿದೆವು. ಇಬ್ಬರು ಹಿರಿಯರೂ ಪಂಜೆ ಶತಾಬ್ದ ಸಮಿತಿಯವರ ಒಪ್ಪಿಗೆ ಪಡೆದುಕೊಂಡರೆ, ಬರುತ್ತೇವೆ ಎಂದರು.

ಮಣಿಪಾಲಕ್ಕೆ ಬಂದವರು ಉಡುಪಿಯ ಕಾಲೇಜಿನಲ್ಲಿ ನಡೆಯುತ್ತಿದ್ದ ಬೆಳ್ಳಿ ಹಬ್ಬದ ಉತ್ಸವಕ್ಕೆ ಸೌಹಾರ್ದ ಸಂದರ್ಶನ ನೀಡಿದರು. ಅನಂತರ, ಸಂಜೆ ಸಾಹಿತ್ಯ ಸಂಘದ ವಾರ್ಷಿಕೋತ್ಸವ. ಮಾಸ್ತಿ ಅಧ್ಯಕ್ಷರು. ಡಾ. ಟಿ. ಎಂ. ಎ. ಪೈಯವರು ಸ್ಮರಣ ಸಂಚಿಕೆ 'ಪಾರಿಜಾತ'ದ ಬಿಡುಗಡೆ ಮಾಡಲಿಕ್ಕೆ. ವಿ.ಸೀ. ಪ್ರಧಾನ ಭಾಷಣಗಾರರು. ಆ ದಿನ ವಿ.ಸೀ.ಯವರು ಕರ್ನಾಟಕದ ಸಾಂಸ್ಕೃತಿಕ ವೈಭವವನ್ನು ಸುಮಾರು ಒಂದು ತಾಸು ವಿವರಿಸಿದ ರೀತಿ ಅನ್ಯಾದೃಶವಾದುದು. ಎಷ್ಟೋ ಮಂದಿಗೆ ತಾವು ವಿ.ಸೀ. ತರಗತಿಯಲ್ಲಿ ಒಂದು ಪಾಠ ಕೇಳಿದ ಅನುಭವವಾಯಿತಂತೆ. ಅವರು ಅಲ್ಲಿ ಇಲ್ಲಿ ಆಂಗ್ಲ ಭಾಷೆಯನ್ನು ಸೇರಿಸಿ ಮಾತನಾಡುತ್ತಿದ್ದರೂ ಅವರ ಆ ಶೈಲಿ ಸಹಜವಾಗಿತ್ತು. ಅವರು ಕನ್ನಡವನ್ನು ಇಂಗ್ಲಿಷ್‌ನಲ್ಲಿ ಕಲಿಸುತ್ತಿದ್ದರೆಂದು ಹಲವರು ಹೇಳಿದ್ದನ್ನು ಕೇಳಿದ್ದೆ. ಕೆಲವರು ಇಂಗ್ಲಿಷನ್ನು ಕನ್ನಡದಲ್ಲಿ ಕಲಿಸುತ್ತಿದ್ದುದನ್ನು ನೋಡಿದ್ದೂ ಉಂಟು. ಆದರೆ ಎರಡೂ ಭಾಷೆಗಳಲ್ಲಿ ಅಧಿಕಾರಯುಕ್ತವಾಗಿ ಮಾತನಾಡುವ, ಕಲಿಸುವ ಶಕ್ತಿ ಎಷ್ಟು ಜನಕ್ಕಿದೆ? ವಿ.ಸೀ.ಯವರು ಉಪನ್ಯಾಸ ನೀಡುತ್ತಿದ್ದಾಗ ಮಾತಿನ ಜತೆಯಲ್ಲಿ ಕೈಗಳೂ ಮೇಲೆ ಕೆಳಗೆ ಏರಿ ಇಳಿದು ತಾದಾತ್ಮ್ಯಗೊಳ್ಳುತ್ತಿದ್ದುವು. ಅವರದು ಬಿಗಿಯಾದ ಭಾಷೆಯಾದರೂ ತನಿಯಿತ್ತು, ಆತ್ಮೀಯತೆಯಿತ್ತು, ಹೃದಯವನ್ನು ನೇರವಾಗಿ ಹೊಗುವ ಗುಣವಿತ್ತು. ಇದು ಅವರ ಗದ್ಯದ ಗುಣ ಕೂಡಾ.

ವಿ.ಸೀ.ಯವರು ಕಿರಿಯರನ್ನು ಮುನ್ನಡೆಸುತ್ತಿದ್ದ ರೀತಿ ಗಾದೆಯ ಮಾತಾಗಿತ್ತು. ಈ ಕುರಿತು ಅವರ ನೇರ ಶಿಷ್ಯರು ಹಲವರು ಸಾಕಷ್ಟು ಹೇಳಿದ್ದಾರೆ. ೧೯೬೪ರಲ್ಲಿ ವಿ. ಗೋವಿಂದ ಪೈಗಳ 'ಹೆಬ್ಬೆರಳು' ಗೀತ ನಾಟಕದ ಕುರಿತು ನಾನು ಕುಂದಾಪುರ ಕನ್ನಡ ಸಂಘದಲ್ಲಿ ಮಾಡಿದ ಉಪನ್ಯಾಸವನ್ನು ಕಿರು ಹೊತ್ತಿಗೆಯಾಗಿ ಪ್ರಕಟಿಸಿದೆ. ಅದಕ್ಕೆ ವಿ.ಸೀ. ಅಶೀರ್ವಾದ ಬರೆದು ಇದು ಹಿರಿಯರಿಗೆ ಕಿರಿಯರು ಗೌರವಾರ್ಪಣೆ ಮಾಡುವ ಸರಿಯಾದ ಕ್ರಮ ಎಂದು ಪ್ರೋತ್ಸಾಹಿಸಿದರು. ನಾವು ಮಣಿಪಾಲದಲ್ಲಿ ಸಾಹಿತ್ಯ ಸಂಘದ ವತಿಯಿಂದ ಸೇಡಿಯಾಪು ಅವರ 'ತಥ್ಯದರ್ಶನ' ಎಂಬ ಪುಸ್ತಕ ಪ್ರಕಟಿಸಿದಾಗ ಅದಕ್ಕೆ ವಿ.ಸೀ. ಮುನ್ನುಡಿ ಬರೆದು ಗ್ರಂಥದ ಗೌರವವನ್ನು ಹೆಚ್ಚಿಸಿದರು. ಪ್ರಾದೇಶಿಕ ಭೇದ ಭಾವನೆಯಿಲ್ಲದ ಹಿರಿಯರು ಎಂದು ಸೇಡಿಯಾಪು ವಿ.ಸೀ. ಕುರಿತು ಗೌರವ ಹೊಂದಿದ್ದರು ಮತ್ತು ತನ್ನ ಪುಸ್ತಕಕ್ಕೆ ಅವರ ಮುನ್ನುಡಿ ಭೂಷಣ ಎಂದು ಭಾವಿಸಿದ್ದರು. ಸೇಡಿಯಾಪು ಪಾಂಡಿತ್ಯ ಮತ್ತು ಚಿಕಿತ್ಸಕ ದೃಷ್ಟಿಯನ್ನು ವಿ.ಸೀ. ಪ್ರಶಂಸಿಸಿ ಬರೆದ ಆ ಮುನ್ನುಡಿ ಅವರ ಸಹೃದಯತೆ ಮತ್ತು ಉದಾರತೆಯ ಪ್ರತೀಕವಾಗಿದೆ.

* * *

ವಿ.ಸೀ.ಯವರು ಹೊನ್ನಾವರದಲ್ಲಿ ಒಂದು ಹೊಸ ಕಾಲೆಜು ಆದಾಗ ಊರವರ ಆಮಂತ್ರಣ ಮನ್ನಿಸಿ ಅದರ ಮೊದಲ ಪ್ರಿನ್ಸಿಪಾಲ್ ಆದರು. ಅದೇ ಸಮಯ (೧೯೬೭–೬೯) ನಾನು ಸಾಂಗ್ಲಿಯಲ್ಲಿ ಉದ್ಯೋಗದಲ್ಲಿದ್ದೆ. ಆಗ ಹೊನ್ನಾವರ ಕಡೆಯ ಒಬ್ಬರು ಸಾಂಗ್ಲಿಯಲ್ಲಿ ಹೊಟೆಲ್ ನೌಕರಿಯಲ್ಲಿದ್ದವರ ಪರಿಚಯವಾಯಿತು. ತಮ್ಮೂರಿನಲ್ಲಿ ಆದ ಹೊಸ ಕಾಲೆಜಿಗೆ ಮಗನನ್ನು ಸೇರಿಸಬೇಕೆಂಬ ಆಸೆ ಅವರಿಗಿತ್ತು. ಆದರೆ ಫೀ ಕಟ್ಟಲು ಅಶಕ್ತರಾಗಿದ್ದರು. ನಾನು ಅವರಿಗೆ ಒಂದು ಮಾರ್ಗ ಸೂಚಿಸಿದೆ. ಕಾಲೆಜಿನ ಪ್ರಿನ್ಸಿಪಾಲ್ ವಿ.ಸೀ. ಅವರನ್ನು ಕಂಡು ಕಷ್ಟ ನಿವೇದಿಸಿಕೊಳ್ಳಿ, ಅಗತ್ಯಬಿದ್ದರೆ ನನ್ನ ಹೆಸರು ಹೇಳಿ ಎಂದಿದ್ದೆ. (ಹಾಗೆ ಹೇಳಿದ್ದು ಉದ್ಧಟತನವೆಂದು ಈಗ ನಾಚಿಗೆಯಾಗುತ್ತದೆ!) ಅದಾದ ಎರಡು ತಿಂಗಳಲ್ಲಿ ಅತ ಬಂದು ವಿ.ಸೀ. ಎಂದರೆ ದೇವರು ಎಂದು ಆನಂದಾಶ್ರು ಸುರಿಸುತ್ತ ಹೇಳಿದರು. ಇವರ ಕಷ್ಟ ಕೇಳಿ ತಿಳಿದ ವಿ.ಸೀ. ಫೀ ಮಾಫಿ ಮಾಡಿದ್ದಲ್ಲದೆ ಕೆಲವು ಪುಸ್ತಕಗಳನ್ನೂ ಕೊಡಿಸಿದರಂತೆ.

ಅವರ ಉದಾರತೆಯ ಕುರಿತು ಸೇಡಿಯಾಪು ಹೇಳಿದ ಒಂದು ಉದಾಹರಣೆ ಹೀಗಿದೆ. ಯಾರೋ ಸ್ನೇಹಿತರ ಆಪತ್ತಿಗೆ ನೆರವಾಗಲು ಸ್ವತಃ ಶ್ರೀಮಂತರಲ್ಲದ ವಿ.ಸೀ. ಅವರು ಒಂದು ಸಾಲಕ್ಕೆ ಜಾಮೀನು ಹಾಕಿದರಂತೆ. ಅನಂತರ ಇವರೇ ಆ ಸಾಲವನ್ನು ತೀರಿಸಬೇಕಾಗಿ ಬಂತಂತೆ. ಆದರೆ ತನ್ನನ್ನು ಹೀಗೆ ಸಾಲದ ಶೂಲಕ್ಕೆ ಬಲಿಕೊಟ್ಟ ಆ ಮಹನೀಯರ ಬಗೆಗೆ ವಿ.ಸೀ. ಎಂದು ಕೂಡಾ ಆಕ್ಷೇಪದ ಮಾತು ಹೇಳಲಿಲ್ಲವಂತೆ. ವಿ.ಸೀ. ಅವರ ನಿಧನಾನಂತರ ಕಾರಂತರು ಬರೆದ ಶ್ರದ್ಧಾಂಜಲಿಯ ಲೇಖನದಲ್ಲಿ ಇದನ್ನು ಪುಷ್ಟೀಕರಿಸುವಂಥ ಒಂದು ಮಾತು ಬರೆದಿದ್ದರು. ವಿ.ಸೀ. ಎಂದೂ ಯಾರ ಹುಳುಕನ್ನೂ ಎತ್ತಿ ಹೇಳಿದವರಲ್ಲ. ಇತರರ ಗುಣಗಳನ್ನು ಪ್ರಶಂಸಿಸುವ ಧಾರಾಳಿಯಾಗಿದ್ದರು.

ಸಾಹಿತ್ಯ ಪ್ರಪಂಚದಲ್ಲಿ ವಿ.ಸೀ. ಒಂದೆರಡು ಕಾದಾಟ ಮಾಡಿದ್ದುಂಟು. ಅದರಲ್ಲಿ

ವೈಯಕ್ತಿಕತೆಯ ಛಾಯೆ ಇರಲೇ ಇರಲಿಲ್ಲ. ಬರೇ ತತ್ತ್ವದ ಭಿನ್ನಾಭಿಪ್ರಾಯ. ಇವುಗಳಲ್ಲಿ ಒಂದು ಚರ್ಚೆ ಶ್ರೀ ಎಸ್. ವಿ. ರಂಗಣ್ಣ ಅವರು ಇವರ ಶಾಕುಂತಲ ವ್ಯಾಖ್ಯಾನದ ಬಗೆಗೆ ಎತ್ತಿದ ಆಕ್ಷೇಪಗಳ ಕುರಿತಾದುದು. ಇನ್ನೊಂದು, ನವ್ಯಸಾಹಿತಿಗಳು / ಕವಿಗಳು ತನ್ನಲ್ಲಿ ಕವಿತ್ವವೇ ಇಲ್ಲ ಎಂದು ಪರೋಕ್ಷವಾಗಿ ಆಕ್ಷೇಪಿಸುತ್ತಿರುವುದನ್ನು ಎತ್ತಿಕೊಂಡು, 'ಅರಳು ಬರಲು' ಮುನ್ನುಡಿಯಲ್ಲಿ ವಿಸ್ತೃತವಾಗಿ ನೀಡಿದ ಉತ್ತರ. ಆದರೆ ಅವರು ಬಳಸಿದ ಭಾಷೆ ಟಠಡಢಣವಲ್ಲ, ಒಂದು ಪೆಟ್ಟು ಎರಡು ತುಂಡಲ್ಲ. ನಯದ ಭಾಷೆ. ಬಹುಶಃ ರೇಶ್ಮೆ ವಸ್ತ್ರದಲ್ಲಿ ಸುತ್ತಿದ ಚಿನ್ನದ ಚೂರಿಯೆನ್ನಬಹುದೇ! ಬಗ್ಗಿ, ತಗ್ಗಿ, ವಿನಯದ ಭಾಷೆಯಲ್ಲಿ ನಿವೇದಿಸುವ ಅವರ ರೀತಿಯಲ್ಲಿ ನಯದ ಒಪ್ಪವನ್ನು, ನಮ್ಮ ಹಳೆಯ ಸಂಸ್ಕೃತಿಯ ಒಂದು ಪ್ರತೀಕವನ್ನು ಕಾಣುತ್ತೇವೆ. ಇದಿರಾಳಿಯನ್ನು ತೊಡೆತಟ್ಟಿ ಆಹ್ವಾನಿಸುವುದಲ್ಲ. 'ಒಂದಿಷ್ಟು ಉಂಡು ಹೊಟ್ಟೆ ತಂಪು ಮಾಡಿಕೊಂಡು ಆಯಾಸ ನಿವಾರಿಸಿ ಬಾ, ಚರ್ಚೆ ಮಾಡೋಣ' ಎಂಬ ಆದರದ ಆಮಂತ್ರಣ – ಇದು ಅವರ ಚರ್ಚೆಯ ವೈಖರಿ. ತನ್ನ ಕಾವ್ಯದ ಕುರಿತು ಅಷ್ಟು ಸಮರ್ಥನೆ ಅಗತ್ಯವಿತ್ತೇ ಎಂಬ ಸಂದೇಹ ಏಳುವಷ್ಟು ವಿಸ್ತೃತ ಚರ್ಚೆ ಮಾಡಿ ಆಯಕಟ್ಟು ನೋಡಿ ಗುದ್ದು ಕೊಟ್ಟಿದ್ದಾರೆ.

ಇಂಥ ವಿನಯಶಾಲಿಗಳಾದ ವಿ.ಸೀ.ಯವರು ಅಸಂಬದ್ಧತೆಯನ್ನು ಮಾತ್ರ ಸಹಿಸುತ್ತಿರಲಿಲ್ಲ. ಇದನ್ನು ಒಮ್ಮೆ ನಾನೇ ಕಣ್ಣಾರೆ ಕಂಡಿರುತ್ತೇನೆ. It was Unviseean– ಅವಿಸೀಯತೆ! – ಎಂದು ದಿಗ್ಭ್ರಮೆಗೊಂಡಿದ್ದೇನೆ. ಗುಲ್ಬರ್ಗದಾಚೆಯ ಹಿರಿಯರೊಬ್ಬರು ಎಷ್ಟೋ ವರ್ಷಗಳ ಮೇಲೆ ವಿ.ಸೀ. ಯವರನ್ನು ಕಂಡು ಗೌರವಾರ್ಪಣೆ ಮಾಡಲೆಂದು ಬಂದಿದ್ದರು. ನಾನೂ ಅಲ್ಲಿ ಇದ್ದೆ. 'ನೀವೀಗ ಏನು ಬರೆಯುತ್ತಿದ್ದೀರಿ?' ಎಂದು ವಿ.ಸೀ. ಕೇಳಿದಾಗ ಅವರು 'ಭಗವದ್ಗೀತೆಯನ್ನು ಕನ್ನಡ ಭಾಮಿನಿಷಟ್ಪದಿಯಲ್ಲಿ ಅನುವಾದಿಸುತ್ತಿದ್ದೇನೆ' ಎಂದರು. ವಿ.ಸೀ. ಗುಡುಗಿದರು. ಈ ಅನುವಾದದಿಂದ ಆಗುವ ಸಾಧನೆ ಏನು? ಫಲವೇನು? ಭಗವದ್ಗೀತೆಗೆ ಏನಾದರೂ ಹೊಸ ವ್ಯಾಖ್ಯಾನ ಮಾಡಿದ್ದೀರಾ? ಭಾಮಿನಿ ಈಗ ಯಾರಿಗಾಗಿ? – ಎಂಬೆಲ್ಲ ಪ್ರಶ್ನೆಗಳ ಮಾಲೆ ಕೇಳಿ ಆ ಹಿರಿಯರಿಗೆ ಕಕ್ಕಾಬಿಕ್ಕಿಯಾಯಿತು. ಇದೆಲ್ಲ ಒಂದೈದು ನಿಮಿಷದೊಳಗೆ ಮುಗಿಯಿತು. ಮತ್ತೆ ವಿ.ಸೀ. ಮೊದಲಿನ ಶಾಂತವ್ಯಕ್ತಿ. ತನ್ನ ಪ್ರತಿಕ್ರಿಯೆ ತೀಕ್ಷ್ಣವಾಗಿತ್ತೆಂದು ಪಶ್ಚಾತ್ತಾಪ ಪಟ್ಟರು. ಆ ಹಿರಿಯರ ಯೋಗಕ್ಷೇಮ ವಿಚಾರಿಸಿದರು. ಅಷ್ಟರಲ್ಲಿ ಕಾಫಿ ಬಂತು; ರಿಮ್ಮಾನ್ ಕಾಫಿ.

ವಿ.ಸೀ. ಯವರಿಗೆ ಕೊನೆಯ ಕೆಲವು ವರ್ಷ ಶ್ರವಣ ಶಕ್ತಿಯ ಅಭಾವವಿತ್ತು. ಈ ಮಧ್ಯೆ ಲಂಡನ್‌ನಲ್ಲಿ ಭಾರತೀಯ ವಿದ್ಯಾ ಭವನದ ನಿರ್ದೇಶಕರಾಗಿದ್ದ ಶ್ರೀ ಮತ್ತೂರು ಕೃಷ್ಣಮೂರ್ತಿಯವರ ಆಮಂತ್ರಣದಂತೆ ಇಂಗ್ಲೆಂಡ್‌ಗೆ ಉಪನ್ಯಾಸಗಳನ್ನು ನೀಡಲು ಹೋಗಿದ್ದರು. ಅಲ್ಲಿ ಅನಿರೀಕ್ಷಿತವಾಗಿ ಪಕ್ಷವಾತಕ್ಕೊಳಗಾದರು. ಅಲ್ಲಿ ತಕ್ಷಣ ದೊರಕಿದ ವೈದ್ಯಕೀಯ ನೆರವಿನಿಂದ ಚೇತರಿಸಿದರೂ ಬೆಂಗಳೂರಿಗೆ ಬಂದ ಮೇಲೆ ಅವರ ಶಿಷ್ಯ ಸಮಾನರಾಗಿದ್ದ ಸ್ಯಾಂಡೋ ಹಿರಿಯ ಸಾಹಿತಿ ಕೆ. ವಿ. ಅಯ್ಯರ್ ಸೇವೆಯಿಂದ ಮತ್ತೆ ದೇಹಶಕ್ತಿಗಳಿಕೆ ಸಾಧ್ಯವಾಯಿತು. ಆದರೆ, ಹೆಚ್ಚು ಓಡಾಡಲು ಆಗುತ್ತಿರಲಿಲ್ಲ. ಆಗೆಲ್ಲ, ನಾನು

ಅವರನ್ನು ನೋಡಲು ಹೋದರೆ ಮಾತು ಕಡಮೆ. ಅವರು ಏನು ಹೇಳಿದರೂ ನಾನು ತಲೆ ಅಲ್ಲಾಡಿಸುತ್ತಿದ್ದೆ. ಉತ್ತರ ಹೇಳಿದರೆ ನನ್ನ ತುಟಿಯ ಚಲನೆಯಿಂದ ಅವರು ಅರ್ಥ ಮಾಡಿಕೊಳ್ಳಲು ಪ್ರಯಾಸ ಪಡಬೇಕಾಗಿತ್ತು, 'ಏನೋಪ್ಪ! ಕೆ. ವಿ ಅಯ್ಯರ್ ಇಷ್ಟಾದರೂ ಆಗುವ ಹಾಗೆ ಮಾಡಿದ್ದಾರೆ. ಇನ್ನೆಷ್ಟು ದಿನವೋ' ಎಂದು ಮೇಲೆ ನೋಡುತ್ತಿದ್ದರು. ತನ್ನಷ್ಟಕ್ಕೆ ನಗುತ್ತಿದ್ದರು. ಅವರಿಗೆ ಸಮಾಧಾನ ಹೇಳಲು ನನ್ನ ಯೋಗ್ಯತೆಯೇನು? ಆಗೆಲ್ಲ ಹೊಟ್ಟೆ ಕಿವುಚಿದಂತಾಗುತ್ತಿತ್ತು.

ವಿ.ಸೀ. ಅವರ ಸೇವೆ ಮಾಡುವ ಭಾಗ್ಯ ನನಗೆ ಒದಗಿರಲಿಲ್ಲ. ಅವರಲ್ಲಿಗೆ ಹೋಗುವಾಗ ಒಮ್ಮೊಮ್ಮೆ ಮಂಗಳೂರಿನ ಹಲ್ವ, ಗೇರುಬೀಜ ಕೊಂಡು ಹೋಗಿ ಕೊಟ್ಟರೆ ಯಾಕಪ್ಪ ಎನ್ನುತ್ತಿದ್ದರು. ಒಂದು ಬಾರಿ ಅವರೇ ಒಂದು ಸೇವೆ ಮಾಡಿಸಿಕೊಂಡರು. ಅದು ಸೇವೆ ಅಲ್ಲ, ಒಂದು ಪುಣ್ಯವನ್ನು ನನಗೆ ಒದಗಿಸಿಕೊಟ್ಟದ್ದು. ಹೇಳಿಕೊಳ್ಳುವಂಥ ವಿಷಯವೇನೂ ಅದು ಆಗಿರಲಿಲ್ಲ. ವಿ.ಸೀ. ತನ್ನ ಪುಸ್ತಕಗಳು ಸುಂದರವಾಗಿ ಮುದ್ರಣವಾಗಬೇಕೆಂಬ ಆಸೆ ಇಟ್ಟುಕೊಂಡಿದ್ದವರು. ತನ್ನ ತಾರುಣ್ಯದಲ್ಲಿ ಅದನ್ನು ಮಾಡಿಸಿಕೊಳ್ಳಲು ಅವರು ಶ್ರಮಿಸಿದ್ದರು. ಅವರ 'ಅರಲು ಬರಲು' ಎಂಬ ಕೃತಿ ಪ್ರಕಟವಾಗುವಾಗ ಅದನ್ನು ತನಗೆ ಬೇಕಾದಂತೆ ವೈಭವದಿಂದ ಮುದ್ರಿಸಲು ಸಾಧ್ಯವಾಗಲಿಲ್ಲ ಎಂಬ ಅರೆಕೊರೆಯ ಭಾವನೆ ಅವರ ಮನಸ್ಸಿನಲ್ಲಿತ್ತು. ಅದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವೂ ಬಂತು. ಆಗ ಅವರನ್ನು ಅಭಿನಂದಿಸಲು ನಾನು ಹೋದಾಗ ನನ್ನ ಕೈಯಲ್ಲಿ ಎರಡು ಪ್ರತಿಗಳನ್ನು ನೀಡಿದರು. ಒಂದು ನನಗೆ ಆಶೀರ್ವಾದ ಪೂರ್ವಕ. ಇನ್ನೊಂದು ಯಾರಿಗೆಂದು ಅವರ ಮುಖ ನೋಡಿದೆ. "ಮಂಗಳೂರಲ್ಲಿ ಹಿಂದೆ ಮೊರಕ್ಕೊ ಚರ್ಮದಲ್ಲಿ ಪುಸ್ತಕ ಬೈಂಡ್ ಮಾಡುತ್ತಿದ್ದರು. ಬಾಸೆಲ್ ಮಿಶನ್ ಅಥವಾ ಕೊಡಿಯಾಲ ಬೈಲ್ ಪ್ರೆಸ್‌ನಲ್ಲಿ. ಈಗ ಮಾಡುತ್ತಾರೋ ನೋಡಿ. ಎಷ್ಟು ವೆಚ್ಚವಾದರೂ ಚಿಂತಿಲ್ಲ. ಇದೊಂದನ್ನು ಹಾಗೆ ಮಾಡಿಸಿ ಕಳುಹಿಸಿ. ಮೇಲೆ ಪುಸ್ತಕದ ಹೆಸರು ಚಿನ್ನದ ಅಕ್ಷರಗಳಲ್ಲಿರಲಿ" ಎಂದರು. ಇದನ್ನು ಹೇಳುವಾಗಲೂ ಅವರು ಸ್ವಲ್ಪ ಕುಗ್ಗಿದಂತೆ ಕಂಡಿತು.

ನನ್ನ ಪುಣ್ಯ. ಮಣಿಪಾಲ ಪವರ್ ಪ್ರೆಸ್‌ನಲ್ಲಿದ್ದ ಮುದ್ದಣ್ಣ (ಈಗ ಅವರೂ ದಿವಂಗತರು) ಆ ಪುಸ್ತಕವನ್ನು ವಿ.ಸೀ. ಅಪೇಕ್ಷಿಸಿದ ರೀತಿಯಲ್ಲೇ ಬೈಂಡ್ ಮಾಡಿ ಕೊಟ್ಟರು, ಅದನ್ನು ಅವರಿಗೆ ಕಳುಹಿಸಿಕೊಟ್ಟೆ. ವಿ.ಸೀ. ಅವರಿಗೆ ಸಂತೋಷವಾಗಿತ್ತು. ತನ್ನ ಅಪೇಕ್ಷೆಯನ್ನು ಹೀಗೆ ತೀರಿಸಿಕೊಂಡೆ ಎಂದು ಹೇಳಿ ನನ್ನ ಮೇಲೆ ವಿಶೇಷ ಅನುಗ್ರಹದಿಂದ ಒಂದು ಪತ್ರ ಬರೆದರು.

* * *

ಕರ್ನಾಟಕ ಸಂಸ್ಕೃತಿಯ ಸಾಕಾರವಾಗಿದ್ದ, ಜೇನಿನಂತೆ ನಾಲಗೆಗೆ ಸಿಹಿ, ಆರೋಗ್ಯಕ್ಕೆ ಹಿತವಾದ ಅಮೂಲ್ಯ ಸಾಹಿತ್ಯರಚನೆ ಮಾಡಿದ್ದ ವಿ.ಸೀ. ಅವರ ಜನ್ಮಶತಾಬ್ದದ ಈ ಸಂದರ್ಭದಲ್ಲಿ ಅವರಿಗೆ ನನ್ನ ಗೌರವಗಳನ್ನರ್ಪಿಸುವುದು ನನ್ನ ಪುಣ್ಯವೆಂದೇ ತಿಳಿದಿದ್ದೇನೆ.

ಪ್ರಾತಃಸ್ಮರಣೀಯರು

ಪಿ. ಎಂ. ಹೆಗಡೆ

ಯಾವ ಕವಿಯ ಕಾವ್ಯ ಜನರ ನಾಲಿಗೆಯ ಮೇಲಿರುವುದೋ – ಆ ಕವಿಗೆ ಸಾವಿಲ್ಲ. ನಾನು ಯಾವುದೋ ಹಳ್ಳಿಗೆ ಹೋದಾಗ ನವವಧುವನ್ನು ಅವಳ ಪತಿಯ ಮನೆಗೆ ಕಳುಹಿಸಿಕೊಡುವ ಸಂದರ್ಭ. ಮದುವೆಗೆ ಬಂದವರಲ್ಲಿ ಓರ್ವ ಮಹಿಳೆ ತನ್ನ ಸುಶ್ರಾವ್ಯ ಕಂಠದಿಂದ 'ನಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು ನಿಮ್ಮ ಮಡಿಲೊಳಗಿಡಲು ತಂದಿರುವೆವು' ಎಂಬ ವಿ.ಸೀ.ಯವರ ಕವನವನ್ನು ಹಾಡುತ್ತಿದ್ದಳು. ಕೇವಲ ಸ್ತ್ರೀಯರಷ್ಟೇ ಅಲ್ಲದೆ ಅಲ್ಲಿ ನೆರೆದಿದ್ದ ಪುರುಷರನೇಕರು ಕಣ್ಣೀರು ಸುರಿಸಿದ್ದನ್ನು ನಾನು ನನ್ನ ತೇವವಾದ ಕಣ್ಣುಗಳಿಂದ ನೋಡಿದ್ದೇನೆ. ಈ ಕವನವನ್ನು ಹಾಡಿದ ಮಹಿಳೆಗೆ ಅದು ಯಾರ ರಚನೆಯೆಂಬುದು ಗೊತ್ತಿರಲಿಲ್ಲ. ಅವಳಿಗೆ ಅದೊಂದು ಜನಪದಗೀತೆ. ಅವಳ ಹೃದಯದಾಳವನ್ನು ಸೇರಿದ ಗೀತೆ ಅದು.

ನಾನು ಪ್ರಥಮಸಲ ವಿ.ಸೀ.ಯವರನ್ನು ಕಂಡದ್ದು ೧೯೬೪ರ ಮೇ ತಿಂಗಳಲ್ಲಿ. ನನ್ನೊಡನೆ ಚಂದ್ರಶೇಖರ ಪಾಟೀಲ, ಸಿದ್ಧಲಿಂಗ ಪಟ್ಟಣಶೆಟ್ಟಿ, ಬಿ. ಟಿ. ದೇಸಾಯಿ ಹಾಗೂ ಗಿರಡ್ಡಿ ಗೋವಿಂದರಾಜ ಇದ್ದರು. ವಿ.ಸೀ. ಅವರು ಚಕ್ಕಳಪಕ್ಕಳದಲ್ಲಿ ಕುಳಿತು 'ಏಳು ಸಾಯಣ, ಕಟ್ಟು ಗ್ರಂಥವ, ಏಳು ಪಂಪಾಕ್ಷೇತ್ರಕೆ' ಎಂಬ ಪದ್ಯವನ್ನು ಅವರದೇ ಆದ ವಿಶಿಷ್ಟವಾದ ಪ್ರವಾಹೋಪಾದಿಯ ಧಾಟಿಯಲ್ಲಿ ವಾಚನಮಾಡಿ, ತನ್ನ ದೃಷ್ಟಿಯಲ್ಲಿ ಕಾವ್ಯವೆಂದರೇನು ಎಂಬುದನ್ನು ಸವಿಸ್ತಾರವಾಗಿ ವಿವರಿಸಿ, 'the aim of the poet is to realise the ideal and idealise the real' ಎಂದು ಹೇಳಿದ ಮಹತ್ವದ ಮಾತು ನೆನಪಿದೆ. ನಂತರ ಇಂಗ್ಲಿಷ್ ಕವಿಗಳಾದ ವರ್ಡ್ಸ್‌ವರ್ತ್ ಹಾಗೂ ಕೋಲ್‌ರಿಜ್ ಹೇಗೆ 'ಲಿರಿಕಲ್ ಬ್ಯಾಲಡ್ಸ್' ಪ್ರಕಟಿಸಿದರು ಮತ್ತು ಅವರೀರ್ವರೂ ವಿಭಿನ್ನ ಪ್ರತಿಭಾವಂತರಾಗಿಯೂ ಒಬ್ಬರಿಗೊಬ್ಬರು ಹೇಗೆ ಪೂರಕವಾಗಿದ್ದರೆಂಬುದನ್ನು ಸೋದಾಹರಣವಾಗಿ ವಿವರಿಸಿದ್ದರು. ಕೋಲ್‌ರಿಜ್‌ನ ಆಳವಾದ ಪಾಂಡಿತ್ಯದ ಬಗ್ಗೆ ವಿ.ಸೀ.ಯವರಿಗೆ ಅಗಾಧ ಗೌರವವಿತ್ತು. ರೊಮ್ಯಾಂಟಿಕ್ ಕಾವ್ಯದಿಂದ ಅತ್ಯಾಧುನಿಕ ಟಿ. ಎಸ್. ಎಲಿಯಟ್‌ವರೆಗೆ ಇಂಗ್ಲಿಷ್ ಕಾವ್ಯ ನಡೆದು ಬಂದ ದಾರಿಯನ್ನು ತಮ್ಮ ಸಮ್ಮೋಹಕ ವಾಗ್ಝರಿಯಿಂದ ನಮಗೆ ತೋರಿಸಿದ ನೆನಪು ನನ್ನಲ್ಲಿ ಇನ್ನೂ ಅಚ್ಚಳಿಯದೆ ಇದೆ.

ನಂತರ ನಾನು ಅವರನ್ನು ಕಂಡದ್ದು ಅವರು ಹೊನ್ನಾವರ ಕಾಲೇಜಿಗೆ ಪ್ರಾಂಶುಪಾಲರಾಗಿ ಬಂದಾಗ. ನಾನು ಮಿತ್ರ ಎಸ್. ಜಿ. ಭಟ್ಟರ ಮನೆಗೆ ಹೋಗಿದ್ದೆ. ಆಗ ಎಸ್. ಜಿ. ಭಟ್ಟರು ಅದೇ ವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಉಪನ್ಯಾಸಕರಾಗಿದ್ದರು. ನಾನು ವಿ.ಸೀ.ಯವರನ್ನು ಭೇಟಿಮಾಡುವ ಇಚ್ಛೆಯನ್ನು ಪ್ರಕಟಿಸಿದೆ. ಎಸ್. ಜಿ. ಭಟ್ಟರು ಸಂತೋಷದಿಂದ ನನ್ನನ್ನು ಅವರೆಡೆಗೆ ಕರೆದುಕೊಂಡು ಹೋಗಲು ಒಪ್ಪಿದರು. ಆಗ ಎಸ್. ಜಿ. ಭಟ್ಟರು ಹೇಳಿದ ಹಾಸ್ಯಭರಿತವಾದ ಹಾಗೂ ಅರ್ಥವತ್ತಾದ ಮಾತು ಇಂದೂ ನನಗೆ ನೆನಪಿದೆ. ''ಪಚನಶಕ್ತಿ ಹೆಚ್ಚಿಗೆ ಇದ್ದು, ಮಿದುಳಶಕ್ತಿ ಕಡಿಮೆ ಇರುವವರು ವಿ.ಸೀ.ಯವರನ್ನು ಕಂಡು ಅವರು ಸುರಿಸುವ ಜ್ಞಾನಧಾರೆಯಲ್ಲಿ ಮೀಯಲೇ ಬೇಕು. ಅವರೊಂದು ಜ್ಞಾನದ ಖಣಿ. ನಡೆದಾಡುವ ವಿಶ್ವಕೋಶ''. ನಾನು ಮತ್ತು ಪ್ರೊ. ಎಸ್. ಜಿ. ಭಟ್ಟ, ವಿ.ಸೀ.ಯವರ ಮನೆಗೆ ಹೋದಾಗ ಅವರು ಸಂಜೆಯ ವಾಯುವಿಹಾರಕ್ಕೆ ಸಿದ್ಧರಾಗಿದ್ದರು. ನಮ್ಮನ್ನು ಕಂಡೊಡನೆ ಆತ್ಮೀಯತೆಯಿಂದ ಕರೆದು ತಂಪಾದ ಪಾನೀಯ ಕೊಟ್ಟು 'ಹೊನ್ನಾವರದ ಸೆಕೆಯಲ್ಲಿ ಎಷ್ಟು ತಂಪು ಪೇಯ ಕುಡಿದರೂ ಕಡಿಮೆ' ಎಂದು ಹೇಳಿ ನನ್ನ ಮೋರೆ ಪರಿಚಿತವಾದದ್ದು ಎಂದಾಗ, ನಾನು ಅವರನ್ನು ಮೊದಲಬಾರಿಗೆ ಬೆಂಗಳೂರಿನಲ್ಲಿ ಭೇಟಿಯಾದ ಸನ್ನಿವೇಶ ವಿವರಿಸಿದೆ. ನಂತರ ನಾವೆಲ್ಲರೂ ವಾಯುವಿಹಾರಕ್ಕೆ ಹೊರಟೆವು. ನಾವು ಹೊರಟೊಡನೆ ಮತ್ತೆ ೨–೩ ಜನ ಉಪನ್ಯಾಸಕರು ನಮ್ಮೊಡನೆ ಬಂದು ಸೇರಿಕೊಂಡರು. ಸ್ವಲ್ಪ ದೂರ ನಡೆದ ನಂತರ ಓರ್ವ ಮುದಿ ಭಿಕ್ಷುಕಿ ಭಿಕ್ಷೆಗಾಗಿ ಕುಳಿತಿದ್ದು ಕಂಡಿತು. ವಿ.ಸೀ.ಯವರು ಒಂದೂ ಮಾತನಾಡದೆ ಅವಳ ಬಳಿಹೋಗಿ ಆ ಕಡೆ ಈ ಕಡೆ ನೋಡಿ ಕೋಟಿನ ಒಳ ಕಿಸೆಯಲ್ಲಿ ಕೈಯ್ಯೋಡಿಸಿ ಒಂದು ರೂಪಾಯಿ ನೋಟು ತೆಗೆದು ಅವಳ ಪಾತ್ರೆಯಲ್ಲಿ ಬಗ್ಗಿ ಹಾಕಿ ಮೇಲೆದ್ದಾಗ ಅವರ ಕಣ್ಣುಗಳು ಒದ್ದೆಯಾಗಿದ್ದವು. ಅವರು ಭಿಕ್ಷೆ ನೀಡುವಾಗ ಅಲ್ಲಿಯ ಉಪನ್ಯಾಸಕರಿಗಾಗಲೀ, ಪ್ರಾಂಶುಪಾಲರಿಗಾಗಲೀ ಸಂಬಳ ಸಿಗದೆ ೩–೪ ತಿಂಗಳುಗಳೇ ಸಂದಿದ್ದವು. ಆ ಕಾಲದಲ್ಲಿ ಅನುದಾನಕ್ಕೊಳಪಟ್ಟ ಎಲ್ಲ ಕಾಲೇಜುಗಳ ಸ್ಥಿತಿಯೂ ಇದೇ ಆಗಿತ್ತು. ಅವರು ಹೊನ್ನಾವರ ಕಾಲೇಜಿನಲ್ಲಿದ್ದಾಗ ನಡೆದ ಒಂದು ಘಟನೆಯನ್ನು ನನ್ನ ಮಿತ್ರ ಭಟ್ಟರು ವಿವರಿಸಿದ್ದು ನನಗೆ ಇನ್ನೂ ನೆನಪಿದೆ. ಆ ಕಾಲೇಜಿನ ಆರಂಭದಿಂದ ಕೆಲಸ ಮಾಡುತ್ತಿದ್ದ ಉಪನ್ಯಾಸಕರೊಬ್ಬರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಸರಿಯಾಗಿ ಪ್ರತಿ ತಿಂಗಳೂ ಸಂಬಳ ಕೊಡುವ ಬೆಂಗಳೂರಿನ ಯಾವುದೋ ಕಾಲೇಜು ಸೇರುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಅವರು ಅತ್ಯಂತ ಬಡವರಾದ್ದರಿಂದ ಅವರ ಜೀವನ ಸಂಬಳವನ್ನೇ ಅವಲಂಬಿಸಿತ್ತು. ಈ ವಿಷಯ ವಿ.ಸೀ.ಯವರಿಗೆ ಚೆನ್ನಾಗಿ ಗೊತ್ತಿತ್ತು. ಆ ಉಪನ್ಯಾಸಕರ ರಾಜೀನಾಮೆ ಪತ್ರ ಆಡಳಿತ ಮಂಡಳಿಯ ಮುಂದೆ ಬಂದಾಗ ಆ ಉಪನ್ಯಾಸಕರು ಖಾಯಂ ಹುದ್ದೆಯಲ್ಲಿ ಇದ್ದುದರಿಂದ ಅವರು ಮೂರು ತಿಂಗಳ ನೋಟಿಸು ಅಥವಾ ಮೂರು ತಿಂಗಳ ಸಂಬಳವನ್ನು ಆಡಳಿತ ಮಂಡಳಿಗೆ ಜಮಾ ಮಾಡಬೇಕೆಂಬ ನಿರ್ಣಯವನ್ನು ತೆಗೆದುಕೊಳ್ಳುವ ಹಂತದಲ್ಲಿದ್ದಾಗ ವಿ.ಸೀ.ಯವರು ಹೇಳಿದ ಮಾತು ನೌಕರರನ್ನು ಆಡಳಿತವರ್ಗ ಹೇಗೆ ನಡೆಸಿಕೊಳ್ಳಬೇಕು ಹಾಗೂ ಆಡಳಿತವರ್ಗ ನೌಕರರನ್ನು ಹೇಗೆ ಮಾನವೀಯತೆಯಿಂದ ಕಾಣಬೇಕು ಎಂಬುದಕ್ಕೆ ಹಿಡಿದ ಕನ್ನಡಿಯಾಗಿದೆ. ವಿ.ಸೀ. ಹೇಳಿದ್ದು ಇಷ್ಟೆ: ''ಆ ಉಪನ್ಯಾಸಕರು ನಮ್ಮಲ್ಲಿ ಸೇವೆಸಲ್ಲಿಸುತ್ತಿರುವಾಗ

ಅವರಿಗೆ ನಾವು ಯಾವ ಅನುಕೂಲತೆಯನ್ನೂ ಮಾಡಿಕೊಡಲಿಲ್ಲ. ಅಲ್ಲದೆ ಪ್ರತಿ ತಿಂಗಳು ಅವರಿಗೆ ಸರಿಯಾಗಿ ಸಂಬಳವನ್ನೂ ಸಂದಾಯ ಮಾಡಲು ಅಸಮರ್ಥರಾಗಿದ್ದೆವು. ಒಂದು ಸಂಸ್ಥೆಗೆ ಒಬ್ಬ ನೌಕರನ ಮೂರು ತಿಂಗಳ ಸಂಬಳ ೭೦೦-೮೦೦ ರೂಪಾಯಿ ಒಂದು ಭಾರವಲ್ಲ. ಆದರೆ ಆ ವ್ಯಕ್ತಿಗೆ ಅದು ದೊಡ್ಡ ಮೊತ್ತ. ಅವರು ಇಲ್ಲಿಂದ ಬೇರೆ ಕಡೆ ಹೋಗುತ್ತಿರುವುದು ಯಾವುದೇ ಅಪ್ರಿಯ ಘಟನೆ ಸಂಭವಿಸಿ ಅಲ್ಲ, ತನ್ನ ಜೀವನ ನಿರ್ವಹಣೆಗೆ ಅಲ್ಲಿ ಹೋರಾಟ ಕಡಿಮೆಯಾಗಬಹುದು ಎಂಬ ಉದ್ದೇಶದಿಂದ. ಕಾರಣ, ಅವರನ್ನು ಗೌರವದಿಂದ ಅವರಿಂದ ಯಾವ ಹಣವನ್ನೂ ಆಡಳಿತ ಮಂಡಳಿ ಪಡೆಯದೆ ಬೀಳ್ಕೊಡಬೇಕು. ಇದರಿಂದ ಆಡಳಿತ ಮಂಡಳಿಯ conscience ಗೆ ತೃಪ್ತಿ ಇರುವುದು ಹಾಗೂ ಆ ಉಪನ್ಯಾಸಕರು ಸಂಸ್ಥೆಗೆ ಆಭಾರಿಯಾಗಿರುವರು." ಈ ಮಾತಿನಂತೆ ಆ ಉಪನ್ಯಾಸಕರಿಂದ ಮೂರು ತಿಂಗಳ ಸಂಬಳ ಪಡೆಯದೆ ಅವರನ್ನು ಬೀಳ್ಕೊಟ್ಟರು. ವಿ.ಸೀ.ಯವರು ಹಾಕಿಕೊಟ್ಟ ಈ ಪರಂಪರೆ ಆ ಕಾಲೇಜಿನಲ್ಲಿ ಇನ್ನೂ ಅಸ್ತಿತ್ವದಲ್ಲಿದೆಯೆಂದು ನಾನು ಕೇಳಿದ್ದೇನೆ.

೧೯೬೫-೬೬ರಲ್ಲಿ ಶಿರಸಿಯ ಎಂ. ಎಂ. ಮಹಾವಿದ್ಯಾಲಯಕ್ಕೆ ಅವರನ್ನು ಕರೆಸಿದ್ದರು. ಆಗ ಅವರು ಅಭಿವೃದ್ಧಿಶೀಲ ದೇಶಗಳ ಆರ್ಥಿಕ ಬೆಳವಣಿಗೆ ಕುರಿತು ನಿರರ್ಗಳವಾಗಿ ಮಾತನಾಡಿದ್ದು ನನ್ನ ಸ್ಮೃತಿಪಟಲದ ಮೇಲೆ ಅಚ್ಚಳಿಯದೆ ಇದೆ. ಅವರ ಭಾಷಣ ಮುಗಿದ ಮೇಲೆ ಅವರು ಉಪನ್ಯಾಸಕರ ಕೊಠಡಿಗೆ ಬಂದರು. ಪ್ರಾಂಶುಪಾಲರು ನಮ್ಮನ್ನು ಔಪಚಾರಿಕವಾಗಿ ಪರಿಚಯಿಸಿದ ನಂತರ, ತಮ್ಮ ಕಾಲೇಜಿನಲ್ಲಿ ಕೀಟ್ಸ್ ಹಾಗೂ ಶೆಲ್ಲಿಯವರ ಕವನಗಳನ್ನು ತಾವು ಕಲಿಸುತ್ತಿರುವುದಾಗಿಯೂ ಆದರೆ ಅಲ್ಲಿ 'ರೆಫರೆನ್ಸ್' ಪುಸ್ತಕಗಳ ಕೊರತೆ ಇರುವುದಾಗಿಯೂ ಹೇಳಿದರು. ನನ್ನದೇ ಆದ ಎರಡು ಪುಸ್ತಕಗಳನ್ನು ಅವರಿಗೆ ಕೊಟ್ಟೆ. ಧನ್ಯತೆಯಿಂದ ಸ್ವೀಕರಿಸಿ ತಮ್ಮ ಕೆಲಸವಾದ ಮೇಲೆ ವಾಪಸ್ ಕಳುಹಿಸಿಕೊಡುವುದಾಗಿ ಹೇಳಿದರು. ಆದರೆ ಆ ವರ್ಷ ಕಳೆದರೂ ಪುಸ್ತಕಗಳು ಇನ್ನೂ ಏಕೆ ವಾಪಸ್ ಬರಲಿಲ್ಲವೆಂದು ಯೋಚಿಸುತ್ತಿರುವಾಗ ಅವರಿಂದ ಕ್ಷಮೆಕೋರಿ ಒಂದು ಪತ್ರ ಬಂತು. (ಆ ಪತ್ರವನ್ನು ಕಳೆದುಕೊಂಡಿದ್ದಕ್ಕೆ ನನಗೆ ಇನ್ನೂ ಖೇದವಿದೆ) ಯಾವುದೋ ವಿದ್ಯಾರ್ಥಿ ಆ ಪುಸ್ತಕಗಳನ್ನು ಪಡೆದು ತಿರುಗಿ ಅವರಿಗೆ ಮುಟ್ಟಿಸಲಿಲ್ಲವಾದುದಕ್ಕೆ ಅವರು ನನ್ನಲ್ಲಿ ಕ್ಷಮೆ ಯಾಚಿಸಿದ್ದರು.

ಎರಡು ಸಾತ್ವಿಕ ಚೇತನಗಳ ಹಾರ್ದಿಕ ಭೇಟಿಯ ಚಿತ್ರವನ್ನು ನನ್ನ ಅಂತಃಚಕ್ಷು ಚಿತ್ರೀಕರಿಸಿಕೊಂಡಿದೆ. ಎಂ. ಎಂ. ಕಾಲೇಜಿಗೆ ಬಂದಾಗ ದಿವಂಗತ ಬಿ. ಎಚ್. ಶ್ರೀಧರರು ವಿ.ಸೀ.ಯವರಿಗೆ ಸಾಲಿ ರಾಮಚಂದ್ರರಾಯರು ನನ್ನ ಮನೆಯಲ್ಲಿದ್ದ ವಿಚಾರ ತಿಳಿಸಿದರು. ಕೂಡಲೆ ಅತ್ಯಂತ ಲವಲವಿಕೆಯಿಂದ ಸಾಲಿಯವರನ್ನು ಕಾಣುವ ತಮ್ಮ ಇಚ್ಛೆಯನ್ನು ವಿ.ಸೀ.ಯವರು ವ್ಯಕ್ತಪಡಿಸಿದರು. ಆಗ ಅಲ್ಲಿಯೇ ನಾನಿದ್ದುದರಿಂದ ಅವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದೆ. ಸಾಲಿಯವರನ್ನು ನೋಡಿದೊಡನೆ ವಿ.ಸೀ.ಯವರು ಬಗ್ಗಿ ಅವರ ಪಾದಗಳಿಗೆ ನಮಸ್ಕರಿಸಿದರು. ಅವರು ಮೇಲೆದ್ದಾಗ ಅವರ ಕಣ್ಣುಗಳಲ್ಲಿ ಹಾಗೂ ಸಾಲಿಯವರ ಕಣ್ಣುಗಳಲ್ಲಿ ಅಶ್ರು ತುಂಬಿದ್ದನ್ನು ನಾನು ನೋಡಿ ಎಂಥ ಸಾತ್ವಿಕ ಚೇತನಗಳ

ಹಾರ್ದಿಕ ಮಿಲನವೆಂದುಕೊಂಡೆ! ಉಭಯಕುಶಲೋಪರಿಯಾದ ನಂತರ ವಿ.ಸೀ.ಯವರು ಹೇಳಿದ ಮಹತ್ವಪೂರ್ಣ ವಿಷಯ ಬೆಳಕಿಗೆ ಬಂತು. 'ಮಾಸ್ತಿಯವರು ತಮ್ಮ ಜನ್ಮದಿನದಂದು ನಿಮ್ಮನ್ನು ಬೆಂಗಳೂರಿಗೆ ಕರೆಯಿಸಿಕೊಂಡು ನಿಮಗೆ ನಮಸ್ಕರಿಸುತ್ತಿದ್ದುದು ನನಗೆ ನೆನಪಿದೆ' ಎಂದು ವಿ.ಸೀ. ಹೇಳಿದಾಗ ಈ ಹಿರಿಯ ಚೇತನಗಳು ಒಬ್ಬರಿಗೊಬ್ಬರು ಇಟ್ಟುಕೊಂಡ ಗೌರವ ಹಾಗೂ ಆದರಗಳು ಎಷ್ಟು ಅದ್ಭುತವಾಗಿದ್ದವು ಎಂದೆನಿಸಿತು. ಸಾತ್ವಿಕತೆ ಹಾಗೂ ಪರಸ್ಪರ ಗೌರವಾದರಗಳು ನಶಿಸುತ್ತಿರುವ ಈ ದಿನಗಳಲ್ಲಿ ಸಾತ್ವಿಕತೆಯ ಸಾಕಾರಮೂರ್ತಿಯಾದ, ಕ್ರಿಯಾಶೀಲ ಪ್ರತಿಭಾನ್ವಿತರಾದ, ಆಗಸದಗಲ ಹೃದಯಿಗಳಾದ ವಿ.ಸೀ.ಯವರು ನಮಗೆ ಪ್ರಾತಃಸ್ಮರಣೀಯರು.

ನವನವೋನ್ಮೇಷವಿರುತ್ತಿತ್ತು

"ಕೆಲವರು ಉಪಾಧ್ಯಾಯರು ಪ್ರತಿ ವರ್ಷವೂ ಹೇಳಿದ್ದೇ ಹೇಳಿ ಸುಖಿಸುವಂಥವರು, ಹಳೆಯ ಟೇಪನ್ನು ಮತ್ತೆ ಕೇಳಿಸಿದಂತೆ. ವಿ.ಸೀ. ಹಾಗಲ್ಲ. ಅವರ ಪಾಠದಲ್ಲಿ ಪ್ರತಿಸಲವೂ ಒಂದು ಹೊಸತನವಿರುತ್ತಿತ್ತು. ನವನವೋನ್ಮೇಷವಿರುತ್ತಿತ್ತು. ಅರಿತವರ ಆಪ್ತಸಭೆಯಲ್ಲಿ ಸಂಗೀತಗಾರ ರಾಗದ ಹೊಸ ಪದರುಗಳನ್ನು ರೇಕುಗಳನ್ನು ಬಿಡಿಸಿ ತೋರಿಸಿದಂತೆ ವಿ.ಸೀ. ಯವರ ತರಗತಿಗಳಲ್ಲೂ ಸಾರ್ವಜನಿಕ ಭಾಷಣಗಳಲ್ಲಿಯೂ ಒಂದು ಅನೂಹ್ಯತೆ, ಒಂದು ಸಡಗರ ಯಾವಾಗಲೂ ಇರುತ್ತಿತ್ತು. ಎತ್ತರದಲ್ಲಿಟ್ಟ ದೀಪಮಾಲೆಯನ್ನು ಹೊತ್ತಿಸಿ ಬೆಳಗಿಸುತ್ತಿದ್ದಾರೆಯೇ ಎನಿಸುತ್ತಿತ್ತು."

ಎಚ್. ವೈ. ಶಾರದಾಪ್ರಸಾದ್
'ಸಾರ್ಥಕ ಬದುಕು' ಪು. vi

ವಿಶಿಷ್ಟ ಸೀಮಾಪುರುಷ

ಜಿ. ಅಶ್ವತ್ಥನಾರಾಯಣ

'ಸಜ್ಜನರ ಸಂಗ ಹೆಜ್ಜೇನು ಸವಿದಂತೆ' ಎಂಬುದು ಸರ್ವಜ್ಞನ ನುಡಿ. ಹೆಜ್ಜೇನಿನ ಹಾಗೆ ಸಜ್ಜನರ ಮಾತುಕತೆಗಳು ರುಚಿಯಷ್ಟೇ ಅಲ್ಲ, ಆರೋಗ್ಯವರ್ಧಕವೂ ಹೌದು. ಎಷ್ಟೋ ಜನರು ಸಜ್ಜನರ ಹಾಗೆ ಕಾಣಿಸಿಕೊಳ್ಳುತ್ತಾರೆ. ಅವರ ಬಳಿ ಹೋದಾಗ ಅವರು ಹೆಜ್ಜೇನು ಆಗಿರದೆ ಹೆಜ್ಜೇನಿನ ಹುಳ ಆಗಿರುತ್ತಾರೆ. ಆದರೆ ವಿ.ಸೀ. ಹಾಗಲ್ಲ. ನಿಜವಾಗಿಯೂ ರುಚಿಕರ ಮಧು, ಸತ್ಸಂಗದ ಸವಿಯ ಹೆಜ್ಜೇನು. ಹೆಬ್ಬೇನು, ಮೈಸೂರು ರುಮಾಲಿನ ಹಾಗೆ ಅಂದಚಂದದ ಸೌಂದರ್ಯಪ್ರಜ್ಞೆಯ ಸೀಕರಣೆ. ಸವಿಯುವಂಥ ಮಾತುಗಳು. ಭಾವಸ್ಫುರಣೆಯಲ್ಲಿ ಕಿರಿಯರಿಗೆ ಸ್ಫೂರ್ತಿಯ ಗೀತೆಗಳು, ಬೆಳಕಿನ ದೀಪಗಳು, ವಿ.ಸೀ.

ವಿ.ಸೀ. ಅವರ ಮಕ್ಕಳಲ್ಲಿ ಒಬ್ಬನಾದ ಸತ್ಯನಾರಾಯಣ ಅರ್ಥಾತ್ ಸತ್ಯ ನನ್ನ ಬಾಲ್ಯದ ಸಹಪಾಠಿ. ಪ್ರೈಮರಿ ಮಾಧ್ಯಮಿಕ ಶಾಲೆಗಳಲ್ಲಿ ಒಟ್ಟಿಗೆ ಓದಿದ ಗೋಲಿ ಗೆಳೆಯರಲ್ಲಿ ಒಬ್ಬ. ಅವರ ಮನೆ ೨ನೇ ರಸ್ತೆಯಲ್ಲಾದರೆ ನಮ್ಮನೆ ೪ನೇ ರಸ್ತೆಯಲ್ಲಿ. ಇಬ್ಬರಿಗೂ ಆಟದ ಮೈದಾನ ಕೋಟೆ ಶಾಲೆ ಮೈದಾನ – ಶಾಲೆಯ ವೇಳೆಯಲ್ಲಿ. ಉಳಿದಾಗ ವಿ.ಸೀ. ಮನೆ ಮುಂದೆ, ಇಲ್ಲವೇ ವಿ.ಸೀ. ಮನೆಯಲ್ಲಿ ಹಿಂದಿದ್ದ ಹಲಸಿನ ಮರದ ಬುಡ ಆಟದಂಗಳ. ಆಗ ವಿ.ಸೀ.ಗೆ ತಮ್ಮ ಹುಡುಗನ ಜತೆ ಆಡೋ ಹುಡುಗರಲ್ಲಿ ನಾನೊಬ್ಬ. ಆಗ ನಮಗೆ ಪಠ್ಯ ಪುಸ್ತಕದಲ್ಲಿ ಅವರ 'ಕಾದಿರುವಳು ಶಬರಿ ರಾಮ ಬರುವನೆಂದು' ಪದ್ಯ ಇತ್ತು. ಸತ್ಯ, ನಮ್ಮಪ್ಪ ಬರೆದಿದ್ದು ಅಂತ ಹೆಮ್ಮೆಯಿಂದ ಹೇಳಿಕೊಂಡಾಗ ನಾವೆಲ್ಲಾ ಹೌದೇನೋ ಎಂದು ಅವರನ್ನು ಗಮನಿಸಿ ನೋಡಿದ್ದು. ಕಾರಂತರು ಅವರ ಮನೆಗೆ ಆಗಾಗ ಬರುತ್ತಿದ್ದರು. ಅವರು ಢಂ ಢಂ ಢೋಲು ಪದ್ಯಗಳ ಕಾರಂತರು – 'ಬಾಲ ಪ್ರಪಂಚ'ದ ಕಾರಂತರಷ್ಟೆ ನಮಗೆ ಪರಿಚಯ. ಯಾರೋ ಇವರು ಎಂದಾಗ ಸತ್ಯ 'ಗೊತ್ತಿಲ್ವಾ ಕಾರಂತರು ಕಣೋ, ಏನೇನೋ ಬರೆದಿದ್ದಾರೆ. ನಮ್ಮಪ್ಪನಿಗೆ ತುಂಬಾ ಬೇಕಾದವರು. ಬರ್ತಾ ಇರ್ತಾರೆ' ಎಂದಾಗ ಕಿಟಕಿಯಲ್ಲಿ ಬಗ್ಗಿ ನೋಡಿದಾಗ, ಕಾರಂತರು 'ಯಾರು ನೀವು, ಏನು ಬೇಕು?' ಎಂದು ಕೇಳಿದಾಗ, ನಾವೆಲ್ಲ ಪರಾರಿ. ಆಮೇಲೆ 'ನಮ್ಮಪ್ಪ ಕರೀತಿದ್ದಾರೆ' ಎಂದು ಸತ್ಯ ನಮ್ಮನ್ನು ಕರೆದುಕೊಂಡು ಹೋದಾಗ, ನಮ್ಮ ಹುಡುಗನ ಸ್ನೇಹಿತರು ಅಂತ ವಿ.ಸೀ. ಹೇಳಿದಾಗ, ಕಾರಂತರು ಏನೇನೋ ಮಾತಾಡಿಸಿದರು. ಅವೆಲ್ಲಾ ನೆನಪಿಲ್ಲ. ನಿಮ್ಮ ಢಂಢಂ ಡೋಲು

ಪದ್ಯ ಓದಿದ್ದೇನೆ, ತುಂಬಾ ಚೆನ್ನಾಗಿದೆ ಎಂದಾಗ, "ಹೌದಾ ಸಂತೋಷ" ಎಂದಾಗ, ವಿ.ಸೀ. ನಮ್ಮೆಲ್ಲರ ಕೈಗೆ ಹಣ್ಣು ಕೊಟ್ಟರು. ಆಮೇಲೆ ಆ ಜಾಗದಿಂದ ಪರಾರಿ; ಹೊರಗೆ ಹಣ್ಣಿಗೆ ಕಿತ್ತಾಟ; ಕಾಗೆ ಎಂಜಲು ಮಾಡಿ ಬಾಯಲ್ಲಿ ಷರಟಿನ ಬಟ್ಟೆ ಮೂಲಕ ಕಚ್ಚಿ ಎಲ್ಲರಿಗೂ ಪಾಲುಮಾಡಿಕೊಟ್ಟಿದ್ದು ಈಗಲೂ ನೆನಪಿದೆ. ಆಮೇಲೆ ವಿ.ಸೀ. ನಮ್ಮನ್ನು ಆಗಾಗ ಕರೆದು ಹಣ್ಣು ಕೊಡುತ್ತಿದ್ದುದು, ಮಾತಾಡಿಸುತ್ತಿದ್ದುದು ನೆನಪು. ಮಾತಾಡಿದ್ದು ಏನೂ ನೆನಪಿಲ್ಲ. ಹೀಗೆ ವಿ.ಸೀ. ಬಾಲ್ಯದಲ್ಲಿ ನಮಗೆ 'ಹಣ್ಣು ಕೊಟ್ಟ ಮಾವ', 'ಸತ್ಯನ ಅಪ್ಪ'.

ಹಣ್ಣು ಎಂದಾಗ ನೆನಪಾಗುತ್ತೆ, ರುಚಿ–ಶುಚಿಗಳಲ್ಲಿ ವಿ.ಸೀ. ಅವರ ಅಭಿರುಚಿ ಅತ್ಯುನ್ನತ ಮಟ್ಟದ್ದು. ಬಹುಶಃ ನಮ್ಮ ಸಾಹಿತಿಗಳಲ್ಲಿ ಎಲ್ಲೋ ಒಬ್ಬಿಬ್ಬರಲ್ಲಿ ಕಂಡು ಬರುವಂಥ ಅಪೂರ್ವ ಗುಣ.

ಅವರು ಕಾಫಿ–ಟೀ ಮಾಡಿಕೊಡುವ ವಿಧಾನವಂತೂ ಬಲ್ಲವರೇ ಬಲ್ಲರು ಅದರ ಸವಿಯ! ಠೀವಿಯ! ವೈಖರಿಯ! ನಿಜವಾಗಿ ಅಮೃತಹಸ್ತದ 'ರಸಪೂರ ಜನ್ಯೆ' ಪಾನೀಯ.

ವಿ.ಸೀ. ಅವರಿಗೆ ಶ್ರೀಮಂತಿಕೆ ಹಣ–ಕಾಸಿನಲ್ಲಿರಲಿಲ್ಲ; ಸ್ನೇಹದಲ್ಲಿ, ಪ್ರೀತಿಯಲ್ಲಿ, ಅಂತಃಕರಣದಲ್ಲಿ, ಚೆಲುವಿನಾರಾಧನೆಯಲ್ಲಿ ಶ್ರೀಮಂತಿಕೆ ಪಡದಿದ್ದ ರೂಪಾರಾಧಕರವರು.

ಅವರ ಅಂತಃಕರಣ ಜನಗಳ ಬಗೆಗಷ್ಟೇ ಅಲ್ಲ, ಗಿಡಮರಗಳ ಬಗ್ಗೆ ಇದ್ದುದು ವಿಶಿಷ್ಟವಾದ್ದು. ನಮ್ಮ ಸಾಹಿತಿಗಳಲ್ಲಿ ಬರವಣಿಗೆಯಲ್ಲಿ ಗಿಡಮರಪ್ರೇಮ ತೋರಿಸುವವರು ಇದ್ದಾರೆ, ನಿಜಜೀವನದಲ್ಲಿ ಅಲ್ಲ. ಬಿ. ಜಿ. ಎಲ್. ಸ್ವಾಮಿ ಅಂಥ ವಿಜ್ಞಾನಿ–ಸಾಹಿತಿಗಳು, ಸರ್. ಸಿ. ವಿ. ರಾಮನ್ ಅಂಥವರು, ಅವರೆಲ್ಲಾ ಅಪವಾದ ಬಿಡಿ! ವಿ.ಸೀ. ಅವರ ಮನೆಯ ಅಂಗಳದಲ್ಲಿ ಇದ್ದ ಹಲಸಿನ ಮರ ಕಡಿಯುವ ಸಂದರ್ಭ ಬಂದಾಗ ಅವರು ಆ ದೃಶ್ಯ ನೋಡಲಾರೆ ಎಂದು ಊರಿನಲ್ಲಿರಲಿಲ್ಲ. ಅವರಿಗೆ ಲಾಲ್‌ಬಾಗ್ ಬಹಳ ಪ್ರಿಯ. ಅವರ ಸಂಜೆಯ ಉಸಿರಾಟ ಲಾಲ್‌ಬಾಗಿನಲ್ಲಿ. ನಾನೂ ಹಲವಾರು ಬಾರಿ ಅವರೊಂದಿಗೆ ಲಾಲ್‌ಬಾಗಿಗೆ ಸಂಜೆ ವಾಯುವಿಹಾರದಲ್ಲಿ ಪಾಲ್ಗೊಂಡಿದ್ದೇನೆ. ಅದೊಂದು ಅಪೂರ್ವ ಅನುಭವ. ಆ ವಾಯು ಸಂಚಾರದ ಗುತ್ತಿಗೆ ತ್ರಿಮೂರ್ತಿಗಳದು: ಕೆ. ಎಸ್. ನರಸಿಂಹಸ್ವಾಮಿ, ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿ ಮತ್ತು ವಿ.ಸೀ. ಈ ಕವಿ–ಶಾಸ್ತ್ರಿ–ರಸಿಕತ್ರಯರು ಸಾಹಿತ್ಯ ಪರಿಷತ್ತಿನಲ್ಲಿ ಸಂಧಿಸಿ ವಾಕಿಂಗ್ ಹೊರಟರೆ ಅದರ ವೈಖರಿಯೇ ವೈಖರಿ. ದಟ್ಟಿಪಂಚೆ, ಹೆಗಲ ಮೇಲೆ ಶಲ್ಯದ ಕೆ.ಎಸ್.ನ.; ಛತ್ರಿ ಹಿಡಿದ ಮೈಸೂರು ರುಮಾಲು, ಕಚ್ಚೆಕೋಟಿನ ಶಿಸ್ತಿನ ವಿ.ಸೀ.; ಕಚ್ಚೆ ಪಂಚೆ, ಕ್ಲೋಸ್‌ಕಾಲರ್ ಕೋಟು, ನಶ್ಯದ ಡಬ್ಬಿ, ಕರಿಟೋಪಿ, ಹಣೆಮೇಲೆ ಗಂಧದ ಆಜಾನುಬಾಹು ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ – ಈ ಮೂವರ ಸವಾರಿ ನೋಡುವವರ ಕಣ್ಣಿಗೆ ಹಬ್ಬ; ಸಾಹಿತ್ಯ ಯಾತ್ರೆ.

ಸಾಹಿತ್ಯ ಯಾತ್ರೆ ಎಂದೆ, ಹೌದು. ಮೂರು ಜನರ ಜತೆ ಅಪೂರ್ವಕ್ಕೆ ಒಂದೆರಡು ಸಲ ನಾನೂ ಬಾಲ ಹಿಡಿದಿದ್ದೆ. ವಿ.ಸೀ. ಮಾತಾಡುತ್ತಾ ಮಾತಾಡುತ್ತಾ ಪೃಷ್ಠಕ್ಕೆ ಕೊಡೆ ಊರಿಕೊಂಡು ಪುಟ್ಟಪುಟ್ಟ ಉಪನ್ಯಾಸಗಳನ್ನು ಕೊಟ್ಟು ಮುಂದೆ ಚಲಿಸುತ್ತಿದ್ದರು. ಅದಕ್ಕೆ

ತಕ್ಷಂತೆ ಕ್ರಿಯೆ, ಪ್ರತಿಕ್ರಿಯೆ ಶಾಸ್ತ್ರಿ, ಕೆ.ಎಸ್.ನ. ಅವರಿಂದ ಬರುತ್ತಿದ್ದ ರೀತಿ, ಆ ವಾಕಿಂಗ್ ವೈಖರಿ, ನೋಟ, 'ಬಣ್ಣಿಸಲು ಬಾಯಿಲ್ಲವಯ್ಯಾ'!

ವಿ.ಸೀ. ಮಾತು ಬಹುಮಟ್ಟಿಗೆ ವಿಶ್ವಕೋಶ ಮಾದರಿ; ಗಗನಸಂಚಾರಿ ಹಕ್ಕಿಯಂತೆ. ಕಥೆ, ಕಾದಂಬರಿ, ಪದ್ಯ, ಶಾಸ್ತ್ರ, ಸಂಸ್ಕೃತ, ಇಂಗ್ಲಿಷ್, ಬಿ.ಎಂ.ಶ್ರೀ., ಅಶ್ವತ್ಥಾಮನ್, ಥಾಮಸ್ ಹಾರ್ಡಿ, ಬೇಕನ್, ಅಮರುಕ, ಕಾಳಿದಾಸ, ಡಿವಿಜಿ., – ಅವರ ವಿಷಯವಾರಿಧಿಗೆ ಎಲ್ಲೆಕಟ್ಟೇ ಇಲ್ಲ. ಅದಕ್ಕೆ ವಿನೋದದ ಲೇಪನದ ಜತೆಗೆ ಸವಾಲಾಗಿ ಬೇರೆ ದಿಕ್ಕಿನಿಂದ ವ್ಯಂಜನ ನೀಡುತ್ತಿದ್ದ ರಂಜಕರು ಎಂದರೆ ಮೋಟಗಾನಹಳ್ಳಿ ಅವರು. ರಾಮಾಯಣದ ಉಲ್ಲೇಖಗಳನ್ನು, ದೇವಿಭಾಗವತ, ಕಾಳಿದಾಸ, ಭಾಸ, ಪುರಾಣಗಳ ನಿದರ್ಶನಗಳ ಜತೆಗೆ ಅವರ ಅನ್ಯೋಕ್ತಿಗಳ ಉದಾಹರಣೆ ಅದ್ಭುತ.

ಅವರ ಸಂಚಾರ ನಕ್ಷೆ ಪರಿಷತ್ತಿನಿಂದ ನ್ಯಾಷನಲ್ ಕಾಲೇಜು ಸಾಲುಮರದ ರಸ್ತೆ (ಈಗ ಹಾಳುಮರದ ರಸ್ತೆ), ವಾಣಿವಿಲಾಸರಸ್ತೆಯಿಂದ ಲಾಲ್‌ಬಾಗ್ ಪ್ರವೇಶಿಸಿ ಒಳಗೆಲ್ಲಾ ಸುತ್ತಾಡಿ, ಮಹಾದ್ವಾರದಿಂದ ಮಿನರ್ವಾ ಟಾಕೀಸ್ ರೋಡಿನಿಂದ ಸ್ಕೌಟ್ ಹೆಡ್‌ಕ್ವಾರ್ಟರ್ಸ್ ಮುಂದೆ ಹಾಯ್ದು, ಪರಿಷತ್ತಿನ ಕಡೆ ಇಲ್ಲವೆ ಶಾಸ್ತ್ರಿಗಳ ಮನೆ ಕಡೆಯಿಂದ ಬೆದರುತ್ತಿದ್ದರು. ಒಮ್ಮೊಮ್ಮೆ ದಿಕ್ಕು ಬದಲಾಯಿಸಿ ಮಿನರ್ವಾ ಕಡೆಯಿಂದ ಹೊರಟು ಸವಾರಿ ಲಾಲ್‌ಬಾಗ್ ಮೂಲಕ ನ್ಯಾಷನಲ್ ಕಾಲೇಜ್ ಕಡೆಯಿಂದ ಬಂದಿದ್ದೂ ಉಂಟು. ಹೇಗೆ ಸುತ್ತುಬರಲಿ, ಯಜ್ಞಪ್ಪನ ಹೋಟೆಲಿನ – ಅರ್ಥಾತ್ ಈಗ ಎಂಟಿಆರ್‌ನ – ದೋಸೆ ಆತಿಥ್ಯ ತಪ್ಪಿದ್ದಲ್ಲ. ಒಂದೆರಡು ಬಾರಿ ನನಗೂ ಅದು ಲಭ್ಯವಾಗಿದೆ. ಅವರ ದೋಸೆ ಪ್ರಬಂಧ, ಒಂದು ಕಾಲದ ಎಂಟಿಆರ್ ದೋಸೆಯ ವರ್ಣನೆಯೇ ಆಗಿದೆ. ಒಮ್ಮೊಮ್ಮೆ ತ್ರಿಕಂಪೆನಿ ಜಮಾಯಿಸುತ್ತಿರಲಿಲ್ಲ. ಶಾಸ್ತ್ರಿ – ಕೆಎಸ್‌ನ ಸಿಗದಿದ್ದಾಗ, ಇನ್ಯಾರನ್ನಾದರೂ ಜತೆ ಹಾಕಿಕೊಂಡು ಹೋಗುತ್ತಿದ್ದರು. ಒಂಟಿತನ ಅವರಿಗೆ ವಾಯುವಿಹಾರದಲ್ಲಿ ಅಭ್ಯಾಸವಿಲ್ಲ. ಅಂಥ ಸಂದರ್ಭಗಳಲ್ಲಿ ಕೆಲವೊಮ್ಮೆ ನಾನು ಅವರೊಡನೆ ಹೊರಟುಬಂದಿದ್ದೇನೆ. ಆಗ ದಾರಿಯುದ್ದಕ್ಕೂ ನನಗೆ ಶ್ರೀಕೃಷ್ಣ ಅರ್ಜುನನಿಗೆ ಉಪದೇಶಿಸಿದಂತೆ ಬೋಧೆ. ತೆರೆದ ಬಾಗಿಲು ಅವರ ಅರಿವಿನ ಮಿಂಚು. ಸ್ವಾರಸ್ಯವಾಗಿ ಸಾಹಿತ್ಯದ ಭಾಗಗಳನ್ನು, ಚಿಟ್ಟೆ ಕಥೆಗಳನ್ನು, ಕವಿಗಳ ಮನೋ ಧರ್ಮಗಳನ್ನು ವಿವರಿಸುತ್ತಿದ್ದರು. ಅವರಿವರ ಬಗ್ಗೆ ವೈಯಕ್ತಿಕವಾಗಿ ಮಾತನಾಡುತ್ತಿರಲಿಲ್ಲ. ಯಾವುದೇ ಒಂದು ನಿಲವು, ಸಾಹಿತ್ಯಧೋರಣೆ, ಪಂಥದ ದೃಷ್ಟಿಯಿಂದ ವ್ಯಕ್ತಿಗಳ ವಿಚಾರ ಅವರ ಮಾತಿನಲ್ಲಿ ಸುಳಿಯುತ್ತಿತ್ತು.

ಬೆಳ್ಳಾವೆ, ಬಿ.ಎಂ.ಶ್ರೀ., ವೆಂಕಣ್ಣಯ್ಯ, ಕರ್ಪೂರ ಶ್ರೀನಿವಾಸರಾವ್ ಮೊದಲಾದವರ ಬಗ್ಗೆ ಅವರ ಸಾಹಿತ್ಯದ ಸಂಗತಿಗಳನ್ನು ಹೇಳುತ್ತಿದ್ದರು. ಅದೊಂದು ರಸದೌತಣ. ನೆನಪಿಟ್ಟುಕೊಳ್ಳಲು ಸಾಧ್ಯವಿಲ್ಲದಷ್ಟು ಸಂಖ್ಯೆಯಲ್ಲಿ ಸಂಗತಿಗಳನ್ನು ಸ್ವಾರಸ್ಯಕರವಾಗಿ ಚಿತ್ರಿಸುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದ ಕಟ್ಟಡದ ಉದ್ಘಾಟನೆಯು ಕರ್ಪೂರ ಶ್ರೀನಿವಾಸರಾಯರಿಂದ ಆದ ಬಗೆಯನ್ನು ಒಮ್ಮೆ ವರ್ಣಿಸಿದ್ದರು. ಆಗ ಕರ್ಪೂರ ಶ್ರೀನಿವಾಸರಾಯರು ವಯಸ್ಸಾಗಿ, ಸ್ಥೂಲಕಾಯರಾಗಿ ಬಹುಶಃ ಅನಾರೋಗ್ಯವುಂಟಾಗಿ, ಹೊರಗೆ ಬರುವುದೇ ಕಷ್ಟವಾಗಿತ್ತಂತೆ. ಬೇರೆ ಯಾರ ಕೈಲಾದರೂ

ಉದ್ಘಾಟನೆ ಮಾಡಿಸಿಕೊಳ್ಳಿ ಎಂದರಂತೆ. ಆದರೆ ಉಳಿದವರು ಒಪ್ಪಲಿಲ್ಲ. ಹಾಗಾಗಿ ಅವರು ಬರಲೇಬೇಕಾಯಿತು. ಆಗ ಅವರು ಹಳೆಯ ಕಾರಲ್ಲಿ ಕುಳಿತು ಬಂದು ಕಾರಿನಿಂದ ಇಳಿಯದೆ ರಸ್ತೆಯಲ್ಲಿ ನಿಲ್ಲಿಸಿದ ಕಾರಿನಿಂದಲೇ ಕುಳಿತ ಕಡೆಯಿಂದಲೇ ಶಿಲಾಫಲಕಕ್ಕೆ ಕಟ್ಟಿದ ಬಟ್ಟೆಯನ್ನು ಉದ್ದನೆಯ ಹಗ್ಗದಿಂದ ಎಳೆದು ಉದ್ಘಾಟನೆ ನೆರವೇರಿಸಿದರಂತೆ. ಇಂಥಾ ಎಷ್ಟೋ ದಾಖಲಾಗದ ಸಂಗತಿಗಳನ್ನು ಅವರು ಮಾತಿನ ನಡುವೆ ಹೇಳುತ್ತಿದ್ದರು. ಹಿಂದಿನ ತಲೆಮಾರಿನ ವ್ಯಕ್ತಿಗಳ ವ್ಯಕ್ತಿತ್ವತ ಅನೇಕ ಮುಖಗಳ ಪರಿಚಯ ಅವರೊಡನೆ ಮಾತಾಡಿದಾಗ, ಸಂಭಾಷಿಸಿದಾಗ ತಿಳಿಯುತ್ತಿತ್ತು. ಹಿಂದಿನ ಕಥೆ ಹೇಳುವ, ಅದರಲ್ಲೂ ಕಿರಿಯರಿಗೆ ಉತ್ಸಾಹದಿಂದ ಬಣ್ಣಿಸಬಲ್ಲ, ಹಿರಿಯ ಸಾಹಿತಿಗಳು ಎಷ್ಟು ಮಂದಿ ಇದ್ದಾರೆ ಎಂಬ ಪ್ರಶ್ನೆ ನನ್ನನ್ನು ಕಾಡಿದೆ. ಒಮ್ಮೆ, ಮಳೆ ಬರುತ್ತೆ, ಈವತ್ತು ಲಾಲ್‌ಬಾಗಿಗೆ ಹೋಗುವುದು ಬೇಡ ಎಂದು ನ್ಯಾಷನಲ್ ಕಾಲೇಜಿನ ಬ್ಯಾಸ್ಕೆಟ್‌ಬಾಲ್ ಗ್ರೌಂಡಿನಲ್ಲಿ ಕುಳಿತರು. ಅಂದು ಅವರ ಎಡ–ಬಲ ಭುಜಗಳು (ಶಾಸ್ತ್ರಿ–ಕೆಎಸ್‌ನ) ಇರಲಿಲ್ಲ. ನಾನೊಬ್ಬನೇ ಅವರಿಗೆ ಸಂಗಾತಿ. ಆಗ ಅವರು ಬಿ.ಎಂ.ಶ್ರೀ. ಅವರ ಪಾಂಡಿತ್ಯ ಭಾಷೆಗಳ ಪರಿಚಯ, ಇವುಗಳನ್ನು ಕುರಿತು ಹೇಳುತ್ತಾ 'ಪಂಪಭಾರತ'ದ ಸಂಪಾದನಾ ಕಾರ್ಯ ಪರಿಷತ್ತಿನಲ್ಲಿ ಸಾಗಿದ್ದು, ಶಿಶುಪಾಲ ವಧೆ ಪ್ರಸಂಗದಲ್ಲಿ ಬರುವ (೬–೪೨) ಒಂದು ಮಾತನ್ನು 'ತೆಕಳೆ' ಎಂದು ಓದಿ ಅರ್ಥವಾಗದೆ ಪರಿಷತ್ತಿನ ಪಂಪಭಾರತದ ಸಂಪಾದಕರು ಬಿಎಂಶ್ರೀ ಅವರಲ್ಲಿ ಪ್ರಸ್ತಾಪಿಸಿದರಂತೆ. ಇದಾವ ಪದ 'ತೆಕಳೆ' ಎಂದು ಅವರು ಸ್ವಲ್ಪ ಚಿಂತಿಸಿ ನಾಳೆ ಹೇಳುತ್ತೇನೆ ಎಂದು ಮಾರನೇ ದಿನ ಹೇಳಿದರಂತೆ: ಅದು ಒಂದೇ ಪದ ಅಲ್ಲ, 'ತೆ! ಕಳೆ ಕಳೆ'' ತೆ' ಎಂದರೆ 'ಚಿಃ' ಎಂದು ಉದ್ಗಾರದ ಅನ್ವಯ ಎಂದು ಹೇಳಿ ಬಿಡಿಸಿ, ಅರ್ಥ ತಿಳಿಸಿದರಂತೆ. ತಮಿಳು ಭಾಷೆಯಲ್ಲಿ 'ತೆ' ಎಂದರೆ 'ಛೀ' ಎಂದರ್ಥವಿದೆ ಎಂದು ಹೇಳಿದ ನೆನಪು. (ಇನ್ನೊಂದು ಪ್ರತಿಯಲ್ಲಿ 'ಉಚ್ಚಳಿಸಿ ನುಡಿದಂತೆ ಕಳೆ ಕಳೆ ಹರಿಗೆತ್ತಿದ ನರ್ಘ್ಯಂ' ಎಂದೇ ಅಚ್ಚಾಗಿದೆ ಈಗಲೂ ಕೆಲವು ಮುದ್ರಣಗಳಲ್ಲಿ) ಡಿಎಲ್‌ಎನ್ ದೀಪಿಕೆಯಲ್ಲಿ ಸರಿಯಾಗಿ ಬಿಡಿಸಿದ್ದಾರೆ 'ತೆ! ಕಳೆ ಕಳೆ' ಎಂದು. ಇಂಥಾ ಎಷ್ಟೋ ಸಂಗತಿಗಳನ್ನು ವಿ.ಸೀ. ಪುಂಖಾನುಪುಂಖವಾಗಿ ತಿಳಿಸುತ್ತಿದ್ದರು. ಇಂಥಾ ಸಂಚಾರಿ ಜ್ಞಾನಕೋಶದ ಸಾಹಿತಿಗಳ ಸಹವಾಸ ಈಗೆಲ್ಲಿ?

ವಿ.ಸೀ. ಅವರಿಗೆ ಲಾಲ್‌ಬಾಗ್ ಎಷ್ಟು ಪ್ರಿಯವೆಂದರೆ ಅಲ್ಲಿನ ಗಿಡಮರಗಳ ಶಾಸ್ತ್ರೀಯ ಹೆಸರುಗಳು, ಅವುಗಳ ಇತಿಹಾಸ, ಯಾವ ಯಾವ ಕಾಲಗಳಲ್ಲಿ ಅವು ಹೂ ಹಣ್ಣು ಬಿಡುತ್ತವೆ ಇತ್ಯಾದಿ ಎಲ್ಲ ತಿಳಿದಿತ್ತು. ನನಗೆ ಅವರು 'ಈ ಗಿಡ ನೋಡಿ ಇದರ ವೈಶಿಷ್ಟ್ಯ ಇದು, ಈ ಮರ ನೋಡಿ ನಮ್ಮ ದೇಶದ್ದಲ್ಲ, ಆದರೆ....' ಎಂದು ಬಣ್ಣಿಸಿದ್ದರು. ಒಮ್ಮೆ ಲಾಲ್‌ಬಾಗಿನಲ್ಲಿ ಅವರೊಡನೆ ಬರುತ್ತಿದ್ದಾಗ ಲಾಲ್‌ಬಾಗಿನ ಮೈನ್ ಗೇಟಿನ ಬಳಿ ಬರುವಾಗ 'ಬನ್ನಿ, ಇಲ್ಲಿ ಸ್ವಲ್ಪ ಕೂಡೋಣ' ಎಂದರು. ಸರಿ ಎಂದೆ. ಅವರು ಚಿಕ್ಕವರನ್ನು ಬಹುವಚನದಲ್ಲೇ ಮಾತಾಡಿಸುತ್ತಿದ್ದರು. ಹೆಣ್ಣುಮಕ್ಕಳನ್ನು 'ಏನ್ ತಾಯಿ, ಬನ್ನಿ ತಾಯಿ' ಎನ್ನುತ್ತಿದ್ದರು. ಅವರ ಕೆಲವು ವಿದ್ಯಾರ್ಥಿನಿಯರು 'ನಾವಿನ್ನೂ ಹುಡುಗೀರು, ಪ್ರೊಫೆಸರು ನಮ್ಮನ್ನು ತಾಯಿಪಟ್ಟ ಕೊಟ್ಟು ಪ್ರಮೋಷನ್ ಕೊಡ್ತಿದ್ದಾರೆ' ಅಂತಿದ್ದರು, ತಮಾಷೆಗಾಗಿ. ಎಲ್ಲಾ ಹೆಣ್ಣುಮಕ್ಕಳಿಗೂ ವಿ.ಸೀ. ಅವರ ಬಗ್ಗೆ ತುಂಬಾ ಪೂಜ್ಯಭಾವನೆ ಇತ್ತು. ಒಮ್ಮೆ

ಲಾಲ್‌ಬಾಗಿನಲ್ಲಿ ಹೋಗುತ್ತಿದ್ದಾಗ ಕಡ್ಲೆಕಾಯಿನವನು ಬಂದಾಗ ಅದನ್ನು ಹಾಕಿಸಿಕೊಳ್ಳಲು ನಾನು ಕರ್ಚಿಫ್ ತೆಗೆದರೆ ವಿ.ಸೀ. ಬೇಡಿ, ಬೇಡಿ, ಸ್ವಲ್ಪ ಇರಿ ಎಂದು ಹೇಳಿ ಅಲ್ಲೇ ಜಪಾನೀ ಬ್ರಿಡ್ಜ್ ಹತ್ತಿರದ ಮರಗಳ ಬಳಿ ಹೋಗಿ ಅಲ್ಲಿದ್ದ ಮರವೊಂದರಿಂದ ಎರಡು ಎಲೆ ಕಿತ್ತು ತಂದರು. ಅದರಲ್ಲಿ ಒಂದು ನನಗೆ ಕೊಟ್ಟು ಇದರಲ್ಲಿ ಹಾಕಿಸಿಕೊಳ್ಳಿ ಅಂದರು. ನೋಡಿದರೆ, ಸುರುಳಿಎಲೆ, ಒಳಿ ಕಾಗದದಲ್ಲಿ ಪೊಟ್ಟಣ ಕಟ್ಟಿದಂತೆಯೇ ಬೆಳೆದಿತ್ತು. (ನೀರು ಹಾಕಿದರೂ ಸೋರುವುದಿಲ್ಲವಂತೆ!) ಅದು ಕಂಡು ನನಗೆ ಅಚ್ಚರಿಯೋ ಅಚ್ಚರಿ. ನಾನೂ ಬೇಕಾದಷ್ಟು ಬಾರಿ ಲಾಲ್‌ಬಾಗಿನಲ್ಲಿ ತಳಾಯಿಸಿದವನೇ! ಯಾವುದಾದರೂ ದಪ್ಪ ಪುಸ್ತಕ ಒಂದೇ ಉಸಿರಿಗೆ ಓದಿ ಮುಗಿಸಬೇಕಾದರೆ ಲಾಲ್‌ಬಾಗಿನ ಮರಗಳ ಗಿಡಗಳ ಬುಡವೇ ನಮಗೆ ವಾಚನಸ್ಥಾನ. ಆದರೂ ನಮ್ಮ ಕಣ್ಣಿಗೆ ಆ ಗಿಡ ಕಾಣಿಸಲಿಲ್ಲ, ಅಲ್ಲೇ ಓಡಾಡಿದ್ದರೂ. ವಿ.ಸೀ. ಅವರ ಗಿಡಮರವೀಕ್ಷಣೆ ಅಂಥದ್ದು. ಕದಂಬರ ಇತಿಹಾಸ, ಮಯೂರನ ಕಥೆಯನ್ನು ರೋಮಾಂಚಕಾರಿಯಾಗಿ ಹೇಳಿ 'ಕದಂಬ ವೃಕ್ಷ'ವನ್ನು ಲಾಲ್‌ಬಾಗಿನಲ್ಲಿ ತೋರಿಸಿದವರೂ ಅವರೇ.

ಸಾಹಿತ್ಯ ಪರಿಷತ್ತಿಗೂ ವಿ.ಸೀ.ಗೂ ನಂಟು ಬಹಳ. ಅದಕ್ಕಾಗಿ ದುಡಿದು ಜೀವತೇದವರಲ್ಲಿ ಅವರೊಬ್ಬರು. ಅವರು ಪರಿಷತ್ತಿಗೆ ನಡದೇ ಬರುತ್ತಿದ್ದರು. ಕಾರು, ರಿಕ್ಷಾ ಮನೆಗೆ ಕಳಿಸಿದರೆ ಒಪ್ಪುತ್ತಿರಲಿಲ್ಲ (ಅವರಿಗೆ ವಯಸ್ಸಾದಾಗಲೂ). ಅವರು ತೀರಿಕೊಳ್ಳಲು ಕೆಲವು ತಿಂಗಳ ಹಿಂದೆ ಎಂದು ಕಾಣುತ್ತೆ, ಪರಿಷತ್ತಿನ ಕಾರ್ಯಕ್ರಮದ ಉದ್ಘಾಟನೆಗೆ ಅವರು ಬರುವುದಿತ್ತು. ಅಂದು ಅವರ ಆರೋಗ್ಯವೂ ಅಷ್ಟು ಚೆನ್ನಾಗಿರಲಿಲ್ಲ. ಆದರೂ ಅವರು ಕಾರು ಕಳಿಸುತ್ತೇನೆ ಎಂದರೂ ಬೇಡ ಎಂದು, ತಮ್ಮ ಇಬ್ಬರು ಮಕ್ಕಳ ನೆರವಿನಿಂದ ನಡೆದೇ ಬಂದರು. ಹೀಗೆ ಮಾಡಬಹುದೇ ಎಂದು ನಾನು ಕೇಳಿದಾಗ, 'ಕನ್ನಡ ದೇವಿಯ ಸೇವೆಮಾಡುವ ಲೆಂಕರು ನಾವು, ಹಣಕ್ಕಾಗಿ ಕೆಲಸಮಾಡುವ ಕೂಲಿಗಳಲ್ಲ' ಎಂದರು. 'ಇದು ಶಾರದಾಮಂದಿರ' ಎಂದರು.

ನಿಯಮಪಾಲನೆ ಅವರಿಗೆ ಮುಖ್ಯವಾಗಿತ್ತು. ತಮ್ಮ ವೈಯಕ್ತಿಕ ಅಗತ್ಯಗಳನ್ನು ಅದಕ್ಕಾಗಿ ಬದಿಗೊತ್ತುತ್ತಿದ್ದರು. ಇನ್ನೊಬ್ಬರಿಗೆ ನೆರವಾಗುವಾಗಲೂ ತಮ್ಮ ವೈಯಕ್ತಿಕ ಅವಶ್ಯಕತೆಗಳನ್ನು ಅವರು ಗಮನಿಸುತ್ತಿರಲಿಲ್ಲ. ತಮ್ಮಿಂದ ಅಪಚಾರವಾಯಿತು ಎನಿಸಿದರೂ ತುಂಬಾ ಮನನೊಂದುಕೊಳ್ಳುತ್ತಿದ್ದರು.

ಒಮ್ಮೆ ಸಾಹಿತ್ಯ ಪರಿಷತ್ತಿನಲ್ಲಿ ಪುಸ್ತಕ ಭಂಡಾರಿಗಳನ್ನು (ಆಗ ಶಿವಮೂರ್ತಿ ಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು) ಯಾವುದೋ ಪುಸ್ತಕ ಓದಲು ಎರವಲಿಗೆ ಕೇಳಿದೆ. ನಾನು ಸದಸ್ಯನಾಗಿದ್ದೆ. ನರಸಿಂಹಾಚಾರ್ ಎಂಬುದಾಗಿ ಆ ಪುಸ್ತಕ ಭಂಡಾರಿಗಳ ಹೆಸರು. ಅವರು "ಕೊಡೊಲ್ಲ, ಅದು ರೆಫೆರನ್ಸ್ ಬುಕ್" ಎಂದರು. ಗೋಗರೆದರೂ ಕೊಡಲಿಲ್ಲ. ಸರಿ ಅಲ್ಲೇ ಕುಳಿತು ಓದುತ್ತಿದ್ದೆ. ಆಗ ಪರಿಷತ್ತು ಬೆಳಿಗ್ಗೆ – ಮಧ್ಯಾಹ್ನ ಇತ್ತು. ಮಧ್ಯೆ ವಿರಾಮ. ಬೆಳಿಗ್ಗೆ ಓದಲು ಪ್ರಾರಂಭಿಸಿದವನು ಮಧ್ಯಾಹ್ನ ಮುಂದುವರೆಸಲು ಳಕ್ಕೆ ಪರಿಷತ್ತಿಗೆ ಹೋಗಿ ಓದುತ್ತಿದ್ದೆ. ಆಗ ವಿ.ಸೀ. ಬಂದರು. 'ಏನಪ್ಪಾ, ನಾನು ಕೆಲವು ಪುಸ್ತಕಗಳನ್ನು ಕಳಿಸಿಕೊಡಲು ಚೀಟಿ ಕೊಟ್ಟಿದ್ದೆ; ಪುಸ್ತಕಗಳು ಬರಲೇ ಇಲ್ಲವಲ್ಲಾ' ಎಂದರು. ನಾನು ಎರವಲು ಕೇಳಿದ್ದ

ಪುಸ್ತಕವನ್ನು ಅವರೂ ಕೇಳಿದ್ದರು. ಪುಸ್ತಕ ಭಂಡಾರಿ "ಸಾರ್ ಸದಸ್ಯರೊಬ್ಬರು ಗಲಾಟೆ ಮಾಡಿದರು. ಅದಕ್ಕೇ ನೀವು ಕೇಳಿದ ಪುಸ್ತಕ ಕಳಿಸಲು ಆಗಲಿಲ್ಲ" ಎಂದರು. ಆಗ ಅಲ್ಲೇ ಓಮತ್ತಾ ಕುಳಿತಿದ್ದ ನಾನು ವಿ.ಸೀ. ಅವರಿಗೆ ಹೇಳಿದೆ. "ನೋಡಿ ಸಾರ್, ನಾನು ಕೇಳಿದರೆ ರೆಫೆರನ್ಸ್ ಬುಕ್ಸ್, ಕೊಡೊಲ್ಲ ಅಂದ್ರು! ನಿಮಗೆ ಕಳಿಸುತ್ತಿದ್ದರು. ಅದು ಹೇಗೆ ಕೊಡ್ತೀರಿ ಅವರಿಗೆ? ಅವರು ಬೇಕಾದ್ದು ಇರಬಹುದು. ಆದರೆ ಪರಿಷತ್ತಿನ ನಿಯಮದ ದೃಷ್ಟಿಯಲ್ಲಿ ಅವರೂ ಸದಸ್ಯರೇ, ನಾನೂ ಸದಸ್ಯನೇ ಎಂದೆ. ತಪ್ಪೇನಿದೆ ಸಾರ್?" ಎಂದೆ. ಆಗ ವಿ.ಸೀ. ನಕ್ಕು "ಅಲ್ಲಪ್ಪಾ, ನೀವೂ ಒಂದೇ, ನಾನೂ ಒಂದೇನಾ ಈ ಸಂಸ್ಥೆಗೆ? ನಾನು ಕೈಲಾದ್ದು ಸೇವೆ ಸಲ್ಲಿಸಿದ್ದೇನೆ. ನಾನೊಂದು ಪುಸ್ತಕ ಎರವಲು ಪಡೆದರೆ ತಪ್ಪೇ? ನನಗಿಲ್ಲೇ ಕುಳಿತು ಓದಲು ಆಗೋಲ್ಲಾಪ್ಪ, ಅದಕ್ಕೆ ಕೇಳಿದ್ದು" ಎಂದರು. "ಅದೆಲ್ಲಾ ಸರಿ ಸಾರ್, ನಿಯಮದ ದೃಷ್ಟಿಯಲ್ಲಿ ನಾನು ಕೇಳಿದ್ದು ತಪ್ಪೇ ಹೇಳಿ. ನಿಮಗೆ ಕೊಡಬೇಡಿ ಎಂದು ನಾನು ಹೇಳುತ್ತಿಲ್ಲ. ಆದರೆ ನನಗೇಕೆ ಕೊಡಬಾರದು? ನಾನೂ ಸದಸ್ಯನೇ, ನೀವೂ ಸದಸ್ಯರೇ ಅಲ್ಲವೆ? ನಿಯಮಗಳು ಒಬ್ಬೊಬ್ಬರಿಗೆ ಒಂದೊಂದೋ? ಎಲ್ಲರಿಗೂ ಒಂದೇಯೊ?" ಎಂದು ಕೇಳಿದೆ. ವಿ.ಸೀ. ಒಂದುಕ್ಷಣ ಸುಮ್ಮನಿದ್ದು "ಇಲ್ಲಾ ನೀವು ಹೇಳೋದು ಸರಿ" ಎಂದು ಹೇಳಿ, ನರಸಿಂಹಾಚಾರ್ ಕಡೆ ತಿರುಗಿ ನೋಡಿ "ಬಿಡುವಾದಾಗ ನಾನಿಲ್ಲಿಯೇ ಬಂದು ನೋಡ್ತೇನೆ' ನಂಗೂ ಕಳಿಸಬೇಡಿ" ಎಂದು ಹೇಳಿ ಹೊರಟರು. ಮಾರನೇ ದಿನ ಅವರು ಹೇಳಿದ ಮಾತು ನನ್ನ ಮನಸ್ಸನ್ನು ಕೊರೀತಿತ್ತು. "ನಾನು ಈ ಸಂಸ್ಥೆಗೆ ಕೈಲಾದ ಸೇವೆ ಸಲ್ಲಿಸಿದ್ದೇನೆ. ನಾನೊಂದು ಪುಸ್ತಕಾನ ಎರವಲು ಪಡೆದರೆ ತಪ್ಪೇ?" ಎಂಬ ಮಾತೂ ಮತ್ತು ಸಾಹಿತಿಗಳ ಸಾಹಿತ್ಯ ರಚನೆಗೆ ಸಾಹಿತ್ಯ ಪರಿಷತ್ತು ನೆರವಾಗದಿದ್ದರೆ ಇನ್ಯಾರು ಆಗಬೇಕು? – ಎನ್ನಿಸಿತು. ಅವರು ಮಾರನೇ ದಿನ ಪರಿಷತ್ತಿನ ಬಳಿ ಸಿಕ್ಕಾಗ "ಸಾರ್ ನಾನು ನಿನ್ನೆ ನಿಮ್ಮ ಜತೆ ತಪ್ಪಾಗಿ ಮಾತನಾಡಿದೆನೆ" ಎಂದು ಕೇಳಿದೆ. ಆಗ ಅವರು ಹೇಳಿದರು "ಇಲ್ಲಪ್ಪಾ, ಖಂಡಿತ ಇಲ್ಲ. ನಾವು ಹಳೆ ತಲೆಮಾರಿನವರು. ನಮ್ಮ ದೃಷ್ಟಿಯಲ್ಲಿ ಯೋಚಿಸುತ್ತೇವೆ. ನೀವು ಈಗಿನ ಯುವಕರು. ನಿಮ್ಮಂಥವರು ಇನ್ನೊಂದು ರೀತಿ ಯೋಚಿಸುತ್ತೀರಿ. ನಿಮ್ಮ ಯೋಚನೆಗಳನ್ನು ತಪ್ಪು ಎನ್ನಲು ಸಾಧ್ಯವಿಲ್ಲ. ನಿನ್ನೆ ನೀವು ನಿಯಮದ ದೃಷ್ಟಿಯಿಂದ ಹೇಳಿದ ಮಾತು ಸರಿ ಇತ್ತು. ಅದಕ್ಕೇ ನಾನು ಪುಸ್ತಕ ತೊಗೊಂಡು ಹೋಗಲಿಲ್ಲ" ಎಂದರು. ಯಥಾಪ್ರಕಾರ "ಬರ್ತೀರಾ ಹೋಗೋಣ" ಎಂದರು ಲಾಲ್‌ಬಾಗಿಗೆ. (ಅಂದು ಮೋಟಗಾನಹಳ್ಳಿ ಬಂದಿರಲಿಲ್ಲ) ಎಂಟಿಆರ್ ದೋಸೆ ತಪ್ಪಲಿಲ್ಲ. ಇದು ವಿ.ಸೀ.

ವಿ.ಸೀ. ಅವರ ಆಮೂಲಾಗ್ರ ಅಭ್ಯಾಸ ನನ್ನ ಮೇಲೆ ಪ್ರಭಾವ ಬೀರಿದೆ. ಯಾವುದೇ ಗ್ರಂಥದ ಅಭ್ಯಾಸಕ್ಕೆ ಅದರ ಮೂಲವನ್ನು ಪೂರ್ಣ ನೋಡುವುದು ಅವರ ಅಭ್ಯಾಸ. ಮೂಲ ಸಂಸ್ಕೃತ ಭಾರತವನ್ನು ಕುಮಾರವ್ಯಾಸ ಭಾರತದ ಪ್ರತಿಯಲ್ಲಿ ಅನೇಕ ಪಾಠಾಂತರಗಳನ್ನು ಸಂದೇಹಗಳನ್ನು ಪದಗಳ ಅರ್ಥಗಳನ್ನು ಗುರುತಿಸಿದ್ದಾರೆ. ಚೂಪಾಗಿ ಪೆನ್ಸಿಲ್ ಸೀಸ ಹೆರೆದು ಅತಿ ಸಣ್ಣದಾಗಿ ಬರೆಯುವುದು ಅವರ ಪದ್ಧತಿ. ಕರ್ಣಪರ್ವ ಪಾಠ ಮಾಡುವಾಗ ಅವರ ಟಿಪ್ಪಣಿಗಳಿಂದ ತುಂಬಾ ಉಪಕೃತನಾಗಿದ್ದೇನೆ. ಮೂಲವನ್ನು ಹೋಲಿಸಿ ಕುಮಾರವ್ಯಾಸನ ಭಾರತಕ್ಕೆ ಅವರು ಹಾಕಿದ ಟಿಪ್ಪಣಿಗಳನ್ನು ಕಂಡು

ಬೆರಗಾಗಿದ್ದೇನೆ. ನನಗೆ ಅವರು ಮನೆಯಲ್ಲಿ, ದಾರಿಯಲ್ಲಿ, ಮತ್ತೆ ಸಭೆಗಳಲ್ಲಿ ಆಡಿದ ಅವರ ಮಾತುಗಾರಿಕೆ, ವಿಷಯ ಪ್ರತಿಪಾದನೆ, ವಿಚಾರಗಳ ಬಾಹುಳ್ಯ, ಆ ವ್ಯಕ್ತಿಯ ಭಾವಭಂಗಿ ಭಣಿತಿಗಳು ಕಣ್ಣಿಗೆ ಕಟ್ಟಿದಂತಿವೆ. ಇಂಗ್ಲಿಷಿನ ವಾಕ್ಯಗಳನ್ನು ಪದ್ಯಭಾಗಗಳನ್ನು ಮತ್ತು ಕನ್ನಡದ ಕಾವ್ಯಭಾಗಗಳನ್ನು ಅವರು ಉಚ್ಚರಿಸುವ ರೀತಿ, ಉಚ್ಚಾರದ ವಿಧಾನ ಮರೆಯಲಾಗದ್ದು. ಒಬ್ಬ ಸುಸಂಸ್ಕೃತ ವಿದ್ವಾಂಸ, ಆತ್ಮೀಯ ಅಧ್ಯಾಪಕ, ಸರಸ ಸಾಹಿತಿ, ಸದ್ಸಹಸ್ಥ ಮತ್ತು ಸಹೃದಯಿ, ಕಿರಿಯರ ಸ್ನೇಹಪ್ರಿಯ ಮಾರ್ಗದರ್ಶಿ ವ್ಯಕ್ತಿ. ನಮ್ಮ ಸಮಾಜದಲ್ಲಿ, ಸ್ವಾತಂತ್ರ್ಯ ಪೂರ್ವದಲ್ಲಿ ಸಾಹಿತಿಗಳಲ್ಲಿ ಕಂಡುಬರುತ್ತಿದ್ದುದಕ್ಕೆ ಮಾದರಿ. ಅಂಥವರು ನನ್ನಂಥ ಯುವಜನರ ಮೇಲೆ ಪ್ರಭಾವ ಬೀರುತ್ತಿದ್ದುದಕ್ಕೆ ವಿ.ಸೀ. ಅತ್ಯುತ್ತಮ ಮಾದರಿ. ಅವರು ವ್ಯಕ್ತಿ ಅಲ್ಲ, ಶಕ್ತಿ!

ಜೀವಂತ ಜ್ಞಾನಕೋಶ

"ವಿ.ಸೀ. ಅವರ ಅಸಂಖ್ಯ ಶಿಷ್ಯಬಳಗದಲ್ಲಿ ನಾನೂ ಒಬ್ಬ ಎಂದು ಹೇಳಿಕೊಳ್ಳುವ ಹಮ್ಮು ನನಗೆ. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ನಾಗವರ್ಮನ 'ಕರ್ನಾಟಕ ಕಾದಂಬರಿ'ಯನ್ನು ವಿ.ಸೀ. ನಮಗೆ ಬೋಧಿಸಿದರು. ಅವರ ಪಾಠ ಎಂದರೆ ಮರೆಯಲಾಗದ ಸುಂದರ ಅನುಭವ. ಕಣ್ಣಿಗೆ ಕಟ್ಟುವಂತೆ ಮಾತುಗಳಲ್ಲಿ ಚಿತ್ರ ರಚಿಸುತ್ತಿದ್ದ ಅವರ ರೀತಿ ಅವರದೇ. ಅವರ ಮಾತಿನ ಓಟ, ಧಾಟಿ, ಏರಿಳಿತ, ಕನ್ನಡ ಭಾಷೆಯನ್ನು ಅದಕ್ಕೆ ಸ್ವಲ್ಪವೂ ನೋವಾಗದಂತೆ ಬಳಸಿಕೊಂಡ ರೀತಿ, ತಮ್ಮದೇ ಧ್ವನಿಯನ್ನು ದುಡಿಸಿಕೊಂಡ ಬಗೆ - ಈ ಎಲ್ಲ ವಿ.ಸೀ. ವೈಶಿಷ್ಟ್ಯ. ಮೂಲ ಪಾಠದ ಜಾಡು ಬಿಡದೆಯೇ ವಿ.ಸೀ.ಯವರು ಶಿಷ್ಯರನ್ನು ತಮ್ಮ ಮಾತಿನ ಮಂಟಪದಲ್ಲಿ ಕುಳ್ಳಿರಿಸಿಕೊಂಡು ಸಾಹಿತ್ಯ, ಸಂಗೀತ, ಕಲೆ, ನಾಟಕ, ಸಂಸ್ಕೃತಿ ಪ್ರಪಂಚಗಳಲ್ಲಿ ಸುತ್ತಾಡಿಸುತ್ತಿದ್ದರು. ಅವರ ಪಾಠ- ಅದೊಂದು ಜೀವಂತ ಜ್ಞಾನಕೋಶ. ಸೂಕ್ಷ್ಮಾತಿಸೂಕ್ಷ್ಮವಾದ ಅವರ ವಾಚಾಭಿನಯ, ಹಸ್ತಾಭಿನಯಗಳು ಹಿತಮಿತವಾಗಿ ಬೆರೆದು ನಮ್ಮನ್ನು ಮರುಳುಗೊಳಿಸುತ್ತಿದ್ದ ರೀತಿ ಬರೆದು ಬಣ್ಣಿಸುವಂಥದಲ್ಲ. ವಿ.ಸೀ. ಅವರ ಒದಿನ ವೈಶಾಲ್ಯ, ತಲಸ್ಪರ್ಶಿ ಅಧ್ಯಯನ, ಒಂದೊಂದೂ ಮಾತಿನ ಮನನ ಅಚ್ಚರಿಗೊಳಿಸುವಂಥದು. ತಮಗೆ ಸಂದುಬಂದ ಸುಜ್ಞಾನ- ವಿಜ್ಞಾನಗಳ ಸಂಪದವನ್ನೆಲ್ಲ ವಿದ್ಯಾರ್ಥಿಗಳಿಗೆ ಕೂಡಲೇ ಧಾರೆ ಎರೆಯಬೇಕೆಂಬ ಆತುರ, ತಿಳಿಸಲಾಗಲಿಲ್ಲವಲ್ಲ ಎಂಬ ಆತಂಕ. ಈ ವೈಶಿಷ್ಟ್ಯಗಳ ಕಾರಣ ಅಂದಿನ ರಸಿಕ, ವಿದ್ವಾಂಸ ಅಧ್ಯಾಪಕರ ನಡುವೆ ವಿ.ಸೀ. ತಾವೇ ತಾವಾಗಿ ವಿಜೃಂಭಿಸಿದರು."

ಎಚ್. ಕೆ. ರಂಗನಾಥ್
'ವ್ಯಕ್ತಿಚಿತ್ರ ಸಂಪುಟ' ಭಾಗ-೧, ಪು. xxxvii

ಅಪರೂಪದ ಜೀವ

ಕೆ. ಎಸ್. ಕಲ್ಲಾಪುರ

ಹೊನ್ನಾವರದಲ್ಲಿ ೧೯೬೪ರ ಶೈಕ್ಷಣಿಕ ವರ್ಷದಿಂದ ಪ್ರಾರಂಭವಾಗಲಿದ್ದ ಕಾಲೇಜಿನ ಉಪನ್ಯಾಸಕರ ಹುದ್ದೆಗಳಿಗೆ ಅದೇ ಜೂನ್ ೧೦ ರಂದು ಸಂದರ್ಶನ ಇತ್ತು. ತರ್ಕಶಾಸ್ತ್ರ ಮತ್ತು ಮನೋವಿಜ್ಞಾನದ ಉಪನ್ಯಾಸಕ ಹುದ್ದೆಗೆ ಸಂದರ್ಶನಕ್ಕಾಗಿ ನಾನು ೯ನೇ ತಾರೀಖಿನಂದು ನನ್ನೂರಾದ ಹಾನಗಲ್ಲಿನಲ್ಲಿ ಬಸ್ಸೇರಿದೆ. ನನ್ನ ಮುಂದಿನ ಸೀಟಿನಲ್ಲಿ ರುಮಾಲು (ಮೈಸೂರಿನ ಪೇಟಾ) ಸುತ್ತಿಕೊಂಡು ಧೋತರ ಉಟ್ಟುಕೊಂಡ ಒಬ್ಬ ಹಿರಿಯರನ್ನು ಗಮನಿಸಿದ್ದೆ. ೪–೫ ತಾಸಿನ ಪ್ರವಾಸವಾಗಿದ್ದರಿಂದ ಅವರನ್ನು ಸರಿಯಾಗಿ ನೋಡಲು, ಅವರ ಮಾತುಗಳನ್ನು ಕೇಳಲು ಅವಕಾಶವಿತ್ತು. ಅವರ ಮಾತುಗಳಿಂದ, ಅವರು ಮೈಸೂರು ಕಡೆಯವರೆಂದೂ ಹೊನ್ನಾವರಕ್ಕೇ ಹೊರಟವರೆಂದೂ ತಿಳಿಯಿತು.

ಸಮುದ್ರವನ್ನೇ ನೋಡದ ನನಗೆ ಕಡಲತೀರದ ಹೊನ್ನಾವರದಲ್ಲಿ ರಾತ್ರಿ ಮಲಗಿದಾಗ ರೈಲುಗಾಡಿ ಚಲಿಸಿದ ಶಬ್ದದ ಅನುಭವ. ಅಲ್ಲಿಗೆ ರೈಲು ಸಂಪರ್ಕವಿಲ್ಲವೆಂಬುದು ಗೊತ್ತಿದ್ದದ್ದರಿಂದ, ಮರುದಿನ ವಿಚಾರಿಸಿದಾಗ, ಅದು ಸಮುದ್ರದ ಅಲೆಗಳ ಶಬ್ದ ಎಂದು ತಿಳಿದು ಪೆಚ್ಚಾದೆ. ಅಂದೇ ಸಂದರ್ಶನ. ಕಾಲೇಜಿಗೆ – ಒಂದು ಸಣ್ಣ ಕಟ್ಟಡ – ಹೋಗಿ, ನನ್ನ ಸರದಿ ಬಂದಾಗ ಒಳಗೆ ಹೋಗಿ ಕುಳಿತವರ ಕಡೆ ಕಣ್ಣು ಹಾಯಿಸಿದಾಗ, ಹಿಂದಿನ ದಿನ ಬಸ್ಸಿನಲ್ಲಿ ನನ್ನ ಮುಂದಿನ ಸೀಟಿನಲ್ಲಿ ಕುಳಿತ ರುಮಾಲಿನ ಹಿರಿಯರನ್ನು ಕಂಡೆ. ನಂತರ ಗೊತ್ತಾಯಿತು ಅವರೇ ವಿ.ಸೀ.ಯವರೆಂದು, ಮತ್ತು ಕಾಲೇಜಿನ ನಿಯೋಜಿತ ಪ್ರಾಚಾರ್ಯರು ಎಂದು. ಹೀಗಿತ್ತು ನನ್ನ ಹಾಗೂ ವಿ.ಸೀ.ಯವರ ಭೆಟ್ಟಿಯ ಆರಂಭ.

ನೇಮಕಾತಿ ಪತ್ರ ಬಂದು ಕೆಲಸಕ್ಕೆ ೧೯೬೪ ಜುಲೈ ೧ ರಂದು ಹಾಜರಾದೆ. ಪೂರ್ವಜನ್ಮದ ಸುಕೃತವೆಂಬಂತೆ ಅಂದಿನಿಂದಲೇ ವಿ.ಸೀ.ಯವರ ಸಾಮೀಪ್ಯ ಆರಂಭವಾಗಿ ಅವರು ಅಲ್ಲಿ ನಾಲ್ಕು ವರ್ಷ ಪ್ರಾಚಾರ್ಯರಾಗಿದ್ದಾಗ ಮತ್ತು ತದನಂತರವೂ ಬಾಂಧವ್ಯ ಹೆಚ್ಚುತ್ತಾ ಹೋಯಿತೆಂಬುದು ನನ್ನ ಪುಣ್ಯವಿಶೇಷ. ಸುಮಾರು ಇಪ್ಪತ್ತು ವರ್ಷಗಳ ಅವರೊಡನೆಯ ಒಡನಾಟ ಒಂದು ದುರ್ಲಭ ಭಾಗ್ಯ. ಆ ಭಾಗ್ಯ ನನ್ನದಾಗಿದ್ದಕ್ಕೆ ಹೆಮ್ಮೆ ಪಟ್ಟಿದ್ದೇನೆ, ಧನ್ಯನಾಗಿದ್ದೇನೆ.

ಕಾಲೇಜು ಅದೇ ವರ್ಷ ಪ್ರಾರಂಭವಾಗಿದ್ದರಿಂದ ಮೊದಲನೆ ವರ್ಷದ ತರಗತಿ – ಕಲಾ ವಿಭಾಗದಲ್ಲೊಂದು ಮತ್ತು ವಿಜ್ಞಾನ ವಿಭಾಗದಲ್ಲೊಂದು ಮಾತ್ರ. ಹೀಗಾಗಿ ಶಿಕ್ಷಕರಿಗಾಗಲಿ ಅಥವಾ ಶಿಕ್ಷಕೇತರ ಸಿಬ್ಬಂದಿಯವರಿಗಾಗಲಿ ಕೆಲಸ ಕಡಿಮೆಯೇ. ತಮ್ಮ ತಮ್ಮ ಪಾಠಗಳನ್ನು ಮುಗಿಸಿಕೊಂಡು ಮನೆಗೆ ಹೋಗಲು ಅನುಮತಿಯನ್ನು ವಿ.ಸೀ. ಕೊಟ್ಟಿದ್ದರು, ಒಂದು ಸೂಚನೆಯೊಂದಿಗೆ : 'ಮನೆಯಲ್ಲಿ ಕೋಣೆಯಲ್ಲಿ ಪಾಠಗಳ ಸಿದ್ಧತೆ ಮಾಡಿಕೊಳ್ಳಿ, ನಿದ್ರೆ ಮಾಡಿದರೂ ಚಿಂತೆಯಿಲ್ಲ, ಪೇಟೆಯಲ್ಲಿ ಮಾತ್ರ ತಿರುಗಾಡಬೇಡಿ' ಎಂಬುದು. ಶಿಕ್ಷಕರ ಗೌರವಕ್ಕೆ ಧಕ್ಕೆ ಬರಬಾರದೆಂಬ ಕಾಳಜಿ!

ಅವರು ಮಾತ್ರ ನಾಲ್ಕು ವರ್ಷ ಪ್ರತಿದಿನ ತಪ್ಪದೇ ಎರಡೂ ಹೊತ್ತು ಕಾಲೇಜಿಗೆ ಬರುತ್ತಿದ್ದರು. ಮುಂಜಾನೆ ೧೦ ಗಂಟೆ ಹೊತ್ತಿಗೆ ಬಂದು ಮಧ್ಯಾಹ್ನ ೧ ಗಂಟೆಗೆ ಮನೆಗೆ ಹೋಗಿ, ಊಟ ವಿಶ್ರಾಂತಿ ಮುಗಿಸಿಕೊಂಡು ಪುನಃ ಮೂರು ಗಂಟೆಗೆ ಕಾಲೇಜಿನ ಕಡೆಗೆ, ಸಂಜೆ ೫ ಗಂಟೆಯವರೆಗೆ ಕೆಲಸ ಇರಲಿ ಇಲ್ಲದಿರಲಿ ಇದ್ದು ಮನೆಗೆ ಹೊರಡುವುದು ವಾಡಿಕೆ. ಮಳೆ ಇರಲಿ, ಬಿಸಿಲಿರಲಿ, ನಾಲ್ಕು ವರ್ಷ ಇದು ತಪ್ಪದ ಕ್ರಮ. ಒಂದು ಸಲ ನಾನು ಕೇಳಿಯೂ ಬಿಟ್ಟೆ, "ಸರ್, ಮಧ್ಯಾಹ್ನ ಕೆಲಸ ಇರುವುದಿಲ್ಲ. ಸುಮ್ಮನೆ ಗುಡ್ಡ ಹತ್ತಿ ಆಯಾಸ ಮಾಡಿಕೊಂಡು ಬರುವ ಅವಶ್ಯಕತೆ ಏನಿದೆ?" ಅವರ ಉತ್ತರ "ನನಗೆ ಸಂಬಳ ಕೊಡುತ್ತಾರಪ್ಪ, ಕೆಲಸ ಇರಲಿ, ಇಲ್ಲದಿರಲಿ, ನಾನು ಕಚೇರಿಯಲ್ಲಿ ನಿಗದಿತ ಸಮಯದವರೆಗೆ ಇರಬೇಕಾದ್ದು ನನ್ನ ಧರ್ಮ. ವ್ಯವಸ್ಥಾಪಕ ಮಂಡಳಿಯವರು ಯಾರಾದರೂ ಕಾಲೇಜಿಗೆ ಬಂದಾಗ ಪ್ರಿನ್ಸಿಪಾಲರು ಇಲ್ಲವೆಂದಾಗಬಾರದು," – ನನ್ನನ್ನು ಚುಚ್ಚಿತು.

ಒಂದು ದಿನ – ಮೊದಲನೇ ಮಳೆಗಾಲ – ಕಾಲೇಜಿಗೆ ಹೊರಡಬೇಕಿತ್ತು. ಅಷ್ಟರಲ್ಲಿ ಮಳೆ ಬೀಳಲಾರಂಭಿಸಿದಾಗ "ಹೇಗಪ್ಪಾ ಹೋಗುವುದು....' ಎಂಬ ಸಮಸ್ಯೆ ಅವರಿಗೆ ಎದುರಾಯಿತು. (ಅಲ್ಲಿಯ ಮಳೆಯ ವೈಭವ ನೋಡಿಯೇ ತಿಳಿಯಬೇಕು. ದಿನವಿಡೀ, ಏಕೆ, ವಾರವಿಡೀ ಸತತ ರಪರಪ ರಭಸದ ಮಳೆ!) ಆಗ ಸಣ್ಣ ಮಕ್ಕಳು ಕೊಡೆಹಿಡಿದು ಶಾಲೆಗೆ ಹೊರಟಿದ್ದನ್ನು ವಿ.ಸೀ. ನೋಡಿದರು. "ಇಂಥ ಮಳೆಯಲ್ಲಿ ಈ ಮಕ್ಕಳು ನಿರಾಯಾಸವಾಗಿ ಹೋಗುವಾಗ ನನಗೇನು ಧಾಡಿ?" ಅಂದು ಹೊರಟೇಬಿಟ್ಟರು.

ವಿ.ಸೀ. ಯವರ ಮನಸ್ಸು ಬಹಳ ಮೆದು. ಮೊದಲನೆಯ ವರ್ಷ ಕಾಲೇಜಿಗೆ ಬರುತ್ತಿದ್ದ ಪೋಲಿಯೋಪೀಡಿತ ಒಂದು ಹುಡುಗಿ, ಸೈಕಲ್ ರಿಕ್ಷಾದಲ್ಲಿ ಕಾಲೇಜಿನವರೆಗೆ ಬಂದು ೮–೧೦ ಮೆಟ್ಟಿಲುಗಳನ್ನು (ಕಾಲೇಜಿನ ಕಟ್ಟಡ ರಸ್ತೆಯಿಂದ ಎತ್ತರದಲ್ಲಿತ್ತು) ತೆವಳಿಕೊಂಡು ಹತ್ತಿ ಹಾಗೆಯೇ ಸುಮಾರು ೧೦೦ ಅಡಿ ಬಂದು ಕೊಠಡಿ ಸೇರಬೇಕಾಗಿತ್ತು. ನಿತ್ಯ ಈ ದೃಶ್ಯ ನೋಡಿದ ವಿ.ಸೀ. ಬಹಳ ನೊಂದು, ಪರಿಹಾರಕ್ಕಾಗಿ ಯೋಚಿಸಿದರು. ಮೆಟ್ಟಲು ದಾಟಿ ಸ್ವಲ್ಪ ದೂರ ಹೋಗಿ ಹೊರಳಿ ಕಂಪೌಂಡಗೋಡೆಗುಂಟ ರಿಕ್ಷಾ ಬರಲು ಸಾಧ್ಯವಿತ್ತು. ಒಳಗೆ ಬರಲು ಗೋಡೆ ಒಡೆಯಬೇಕಾಗಿತ್ತು. ವಿ.ಸೀ. ಯಾರ ಪ್ರತಿಕ್ರಿಯೆಗೂ ಲೆಕ್ಕಿಸದೆ ಗೋಡೆ ಕೆಡವಿಸಿ ರಿಕ್ಷಾ ಕೊಠಡಿವರೆಗೆ ಬರುವಂತೆ ಮಾಡಿದರು.

ಕೆಲವೊಮ್ಮೆ ತಮಾಷೆ ಎನಿಸಬಹುದಾದಂಥ ಘಟನೆಗಳೂ ನಡೆದವು. ಆಗ ಬಹಳಷ್ಟು ಹುಡುಗರು ಚಡ್ಡಿ(Halfpant) ಮತ್ತು ಹುಡುಗಿಯರು ಸ್ಕರ್ಟ್ ಹಾಕಿಕೊಂಡು

ಬರುವುದು ರೂಢಿ. ವಿದ್ಯಾರ್ಥಿಗಳು ತಮ್ಮ ಮೊಳಕಾಲು ಮಂಡಿ ಕಾಣಿಸುವಂಥ ಉಡುಗೆ ಹಾಕಿಕೊಂಡು ಬರಬಾರದೆಂದು ನೋಟೀಸು ಹಾಕಿಸಿದಾಗ ಸ್ವಲ್ಪ ಕೋಲಾಹಲವಾದಂತಾಯಿತು. ಒಂದು ದಿನ ಪ್ರಾಚಾರ್ಯರ ಕೊಠಡಿಯಲ್ಲಿ ಮಾತನಾಡುತ್ತಾ ಕುಳಿತಾಗ, ಒಬ್ಬ ಹುಡುಗಿ – ಬೆಳ್ಳಗಿನ ಸ್ಫುರದ್ರೂಪಿ ಹಾಗೂ ಒಳ್ಳೆ ಮೈಕಟ್ಟು ಇದ್ದಂಥವಳು – ಮಿನಿಸ್ಕರ್ಟಿನಲ್ಲಿ ಏತಕ್ಕೋ ಒಳಗೆ ಬಂದಾಗ ವಿ.ಸೀ. ಯವರ ಪ್ರತಿಕ್ರಿಯೆಯ ಫಲವೇ ಆ ನೋಟೀಸು. ಆ ಹುಡುಗಿ ಹೋದನಂತರ ನನ್ನನ್ನು ಕುರಿತು "....ಏನಪ್ಪಾ ನಮ್ಮ ಮೇಷ್ಟರನ್ನು ದೇವರೇ ಕಾಪಾಡಬೇಕು...." ಈ ಉದ್ಗಾರದ ಹಿಂದೆ ಮಾನವಸಹಜ ಗುಣಾವಗುಣಗಳ ಪ್ರಮಾಣಿಕ ಅರಿವು ಎಷ್ಟು!

ನೋಡಿದ ಯಾರಲ್ಲೂ ಗೌರವ ಹುಟ್ಟಿಸುವಂಥ ಅವರ ವ್ಯಕ್ತಿತ್ವ, ಜೊತೆಗೆ ಕಡಿಮೆ ವಿದ್ಯಾರ್ಥಿಗಳು, ಹೀಗಾಗಿ ಆಡಳಿತ ಒಂದರ್ಥದಲ್ಲಿ ಸಮಸ್ಯೆಯಾಗಿರಲಿಲ್ಲ. ಹೊಸತಾದ್ದರಿಂದ ಎಲ್ಲ ವಿಭಾಗಗಳಲ್ಲಿ ಸತ್‌ಪರಂಪರೆಗೆ ಬುನಾದಿ ಅವರ ಉದ್ದೇಶವಾಗಿತ್ತು. ಒಂದೆರಡು ಬಾರಿ ಇದು ಆಡಳಿತ ವರ್ಗದವರೊಡನೆ ಘರ್ಷಣೆಗೂ ಕಾರಣವಾಯಿತು.

ಕಾಲೇಜಿನ ಆರ್ಥಿಕ ಸ್ಥಿತಿ ಅಷ್ಟಕ್ಕಷ್ಟೆ. ಸ್ವಂತ ಕಟ್ಟಡವಿರಲಿಲ್ಲ. ಸ್ಥಳೀಯರಿಂದ ವಂತಿಕೆರೂಪದ ಹಣ ಮೊದಲ ವರ್ಷಕ್ಕೇ ಕರಗಿತು. ಅಲ್ಲಿಂದ ಶುರುವಾಯಿತು ಬವಣೆ. ಆಡಳಿತದ ಚುಕ್ಕಾಣಿ ಹಿಡಿದ ಪ್ರಾಚಾರ್ಯರಿಗೇ ಮೊದಲು ಬಿಸಿ ತಾಗುವುದು ಸಹಜ. ಆ ಕಾರಣದಿಂದ ಕಾಲೇಜಿನ ವ್ಯವಹಾರಗಳಿಗೆ ಧಕ್ಕೆ ಕುಂದು ಬಾರದಂತೆ, ಅವರಿರುವ ನಾಲ್ಕು ವರ್ಷಗಳ ಕಾಲ ಸತತ ಶ್ರಮಿಸಿದ ವ್ಯಕ್ತಿ ವಿ.ಸೀ. ತಮ್ಮ ಸ್ವಂತ ಆದರ್ಶಗಳನ್ನು ಬದಿಗಿಟ್ಟು ಸಂಸ್ಥೆಯ ಒಟ್ಟಾರೆ ಹಿತಕ್ಕಾಗಿ ದುಡಿದಂಥವರು. ಒಮ್ಮೆ ೨–೩ ತಿಂಗಳು ಸಂಬಳ ಕೊಡದೆ, ಕೊಡಲಾಗದೇ ಬಾಕಿ ಉಳಿದಾಗ, ಸರಕಾರದಿಂದ ಬರಬೇಕಿದ್ದ ಸಹಾಯಧನವೂ ಸಮಯಕ್ಕೆ ಸರಿಯಾಗಿ ಬಾರದಿದ್ದಾಗ ಅವರೇ ಬೆಂಗಳೂರಿನಲ್ಲಿರುವ ಕಚೇರಿಗೆ – ಜೊತೆಗೆ ನನ್ನನ್ನೂ ಕರೆದುಕೊಂಡು – ತೆರಳುವ ಪ್ರಸಂಗ. ಅಂದಿನ ದೃಶ್ಯ ಇಂದಿಗೂ ನನ್ನ ಕಣ್ಣ ಮುಂದಿದೆ. (ಇಂಥ ಎಷ್ಟೋ ದೃಶ್ಯಗಳೂ ಸಹ). ಕಚೇರಿಯ ಒಳಗೆ ಪ್ರವೇಶಿಸಿದಂತೆ ಅಧಿಕಾರಿಗಳು ಎದ್ದು ನಿಂತು "ನಮಸ್ಕಾರ ಸಾರ್...." ಎಂದು ಆಸನಕೊಟ್ಟು ಕೂಡ್ರಿಸಿ ವಿಚಾರಿಸಿದಾಗ, ಬಂದ ಉದ್ದೇಶ ಹೇಳಿದ್ದಕ್ಕೆ ಅವರ ಪ್ರತಿಕ್ರಿಯೆ ನಂಬಲಾಗದ್ದು. "ಸಾರ್, ನಿಮ್ಮಂಥವರೆಲ್ಲ ಇಲ್ಲಿ ಬರಬಾರದು ಸಾರ್, ನೀವು ಹೋಗಿ ಸಾರ್, ಮಾಡಿ ಕಳಿಸ್ತೀವಿ...." ಇವರ ಉತ್ತರವೂ ಅಷ್ಟೇ ಮಾರ್ಮಿಕವಾಗಿತ್ತು. "ನನಗೋಸ್ಕರ ಬಂದಿಲ್ಲಪ್ಪ, ೨–೩ ತಿಂಗಳಿಂದ ಮೇಷ್ಟರಿಗೆ ಸಂಬಳ ಇಲ್ಲ. ಕಷ್ಟದಲ್ಲಿದ್ದಾರೆ ಅದಕ್ಕೆ...." ಎಂಥ ಸನ್ನಿವೇಶ!

ಕಾಲೇಜಿನ ಮೊದಲನೆಯ ಬ್ಯಾಚ್ ಪದವಿ ಪರೀಕ್ಷೆಗೆ ಕೂಡ್ರಬೇಕಾದ ಸಂದರ್ಭ. ಕನಿಷ್ಠ ಸೌಕರ್ಯಗಳಿಲ್ಲದ್ದರಿಂದ ಹಾಗೂ ತೇವಣಿ ಹಣ ಕಟ್ಟದೇ ಇದ್ದದ್ದರಿಂದ ಪರೀಕ್ಷಾ ಕೇಂದ್ರ ಮಂಜೂರು ಮಾಡುವದಿಲ್ಲವೆಂದು ವಿಶ್ವವಿದ್ಯಾಲಯದವರು ತಿಳಿಸಿಬಿಟ್ಟರು. ವಿ.ಸೀ. ಧಾರವಾಡಕ್ಕೆ ಹೋಗಿ ಉಪಕುಲಪತಿಯವರನ್ನು ಭೇಟಿಮಾಡಿ ಒಂದು ರೀತಿಯ ಹೋರಾಟ ಮಾಡಿ ಪರೀಕ್ಷಾ ಕೇಂದ್ರ ಮಂಜೂರು ಮಾಡಿಸಿಕೊಂಡೇ ಬಂದರು. ಅವರ ವ್ಯಕ್ತಿತ್ವಕ್ಕೆ, ಅವರ ವಾದಕ್ಕೆ ಗೌರವ ಕೊಟ್ಟು ಒಪ್ಪಿಗೆ ನೀಡಿದ್ದರು. ಅವರ ವಾದದ ಸಾರಾಂಶ

ಹೀಗಿತ್ತು : ೧. ಅಡಳಿತ ವರ್ಗದವರ ತಪ್ಪಿಗಾಗಿ ಮುಗ್ಧಮಕ್ಕಳಿಗೆ ಶಿಕ್ಷೆ ಕೂಡದು, ೨. ಮಗಳನ್ನು ಹೆತ್ತು, ಬೆಳಿಸಿ ಬೇರೊಬ್ಬರ ಮನೆಯಲ್ಲಿ ಮದುವೆ ಮಾಡಿಕೊಡುವುದು ನ್ಯಾಯವೆ?

ಮೊದಲನೇ ವರ್ಷದ ಒಂದೆರಡು ತಿಂಗಳು ಕಳೆಯುವಷ್ಟರಲ್ಲಿ ನಾನು ವಿ.ಸೀ.ಯವರಿಗೆ ಹತ್ತಿರದವನಾಗಿಬಿಟ್ಟೆ. ಯಾವ ಜನ್ಮದ ಪುಣ್ಯವೋ ನಾ ಕಾಣೆ? ಆಗಿನಿಂದ ಪ್ರತಿದಿನ ೩-೪ ತಾಸು - ಕಾಲೇಜಿನ ಸಮಯದ ಹೊರತಾಗಿ - ಅವರೊಡನೆ ಇರುವುದು ನಿತ್ಯದ ಕ್ರಮವಾಯಿತು. ಸಂಜೆ ಅವರೊಡನೆ ಅವರ ಮನೆಗೆ, ನಂತರ ನಾನು ನನ್ನ ಮನೆಗೆ ಹೋಗಿ ಪುನಃ ಅವರ ಮನೆಗೆ ಬರುತ್ತಿದ್ದೆ. ಇಬ್ಬರೂ ಕೂಡಿ ತಪ್ಪದೇ ವಾಕಿಂಗಿಗೆ, ನದೀ ತೀರದತ್ತ. ಶರಾವತಿ ನದಿಗೆ ಸೇತುವೆ ಕೆಲಸ ನಡೆದ ಸಮಯ ಅದು. ಅದಕ್ಕೆ ಕೂಡುರಸ್ತೆಗಾಗಿ ಮತ್ತು ತಮ್ಮ ಇಂಜನಿಯರಿಂಗ ಉದ್ದೇಶಕ್ಕಾಗಿ ನದಿಯ ನೀರಿನ ಮಟ್ಟದಿಂದ ಸುಮಾರು ೨೫ ಅಡಿ ಎತ್ತರದಲ್ಲಿ ಕಟ್ಟಲಾಗಿದ್ದ ಸಣ್ಣ ಸಿಮೆಂಟಿನ ಕಟ್ಟೆ. ಅದರ ಮೇಲೆ ಕತ್ತಲಾಗುವವರೆಗೆ ಕುಳಿತು ಅವರ ಅನುಭವಗಳನ್ನು ವಿಚಾರಗಳನ್ನು ತನ್ಮಧ್ಯೆ, ಸೃಷ್ಟಿಸೌಂದರ್ಯದ ವರ್ಣನೆಯನ್ನು ಕೇಳಿ ನೋಡಿ ಮನೆಗೆ ಹಿಂತಿರುಗುವುದು, ನಾಲ್ಕು ವರ್ಷಗಳ ಕಾಲ ಅವಿಚ್ಛಿನ್ನವಾಗಿ ನಡೆದುಬಂದ ಕ್ರಮ. ಒಂದೊಂದು ಸಾರಿ, ಸರಕಾರಿ ಆಸ್ಪತ್ರೆಯ ಹಿಂಭಾಗದಲ್ಲಿ (ಅದೊಂದು ಬೆಟ್ಟದ ತುದಿ, ಕೆಳಗೆ ಒಮ್ಮೆಲೆ ೩೦ ಅಡಿ ಕೊರಕಲು, ಅಲ್ಲಿ ಮನೆ, ರೋಡು ಇತ್ಯಾದಿ) ಒಂದು ಸುಂದರ ತಾಣದಲ್ಲಿ ಕುಳಿತು ಶರಾವತಿಯ ಮತ್ತು ಶರಾವತಿ ಅರಬ್ಬೀ ಸಮುದ್ರ ಸೇರುವ ರಮ್ಯ ದೃಶ್ಯ ನೋಡುತ್ತ ಹರಟೆ ಸಾಗುತ್ತಿತ್ತು.

ಹರಟೆಯ ವಿಷಯಕ್ಕೆ ಸೀಮೆ ಎಂಬುದೇ ಇರಲಿಲ್ಲ. ದರ್ಶನ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಕಾವ್ಯ, ಕಲೆ, ನಾಟಕ ಎಲ್ಲವೂ ಸಂದರ್ಭಕ್ಕೆ ಸರಿಯಾಗಿ ಸೇರಿ ಮೃಷ್ಟಾನ್ನವಾಗಿರುತ್ತಿದ್ದುದೇ ಅವರ ಮಾತಿನ ವೈಶಿಷ್ಟ್ಯ. ಇಷ್ಟೆಲ್ಲ ಓದಿ, ಅರಗಿಸಿಕೊಂಡು, ತನ್ನದಾಗಿಸಿಕೊಂಡು ಅಷ್ಟೇ ಸಮರ್ಥವಾಗಿ ಹಾಗೂ ಸ್ವತಂತ್ರ ರೀತಿಯಲ್ಲಿ ಬೇರೊಬ್ಬರಿಗೆ ಅರ್ಥ ಆಗುವ ಹಾಗೆ ಹೇಳುವ ಅವರ ಯೋಗ್ಯತೆ ಅಚ್ಚರಿಪಡುವಂಥಾದ್ದು. ವಾಕಿಂಗ್ ಮುಗಿಸಿ ಅವರು ಮನೆಗೆ ಹೋದನಂತರ (ಅವರ ಮನೆ ಮೊದಲು, ನಂತರ ನನ್ನ ಮನೆ) ನಾನು ಮನೆಗೆ ಮರಳುವಾಗ ರಾತ್ರಿ ೮ ಗಂಟೆ. ಮೊದಲನೆಯ ವರ್ಷ ನಾನೊಬ್ಬನೇ ಇದ್ದದ್ದರಿಂದ ಸಮಯದ ಸಮಸ್ಯೆ ಎಲ್ಲಿ? ಎರಡನೆಯ ವರ್ಷ ನನ್ನ ತಾಯಿಯನ್ನು ಕರೆದುಕೊಂಡು ಬಂದೆ, ಆಗಲೂ ಹಾಗೇ ಸಾಗಿತು. ನನ್ನ ತಾಯಿಗೆ ವಿಷಯ ಗೊತ್ತಿತ್ತು. ಅವರೆಂದೂ ಪ್ರಶ್ನೆ ಮಾಡುವದಾಗಲಿ, ಅಡ್ಡಿಪಡಿಸುವದಾಗಲಿ ಮಾಡಿದವರಲ್ಲ. ಮೂರನೆಯ ವರ್ಷ ಮದುವೆ ಮಾಡಿಕೊಂಡು ಹೆಂಡತಿಯನ್ನು ಕರೆದುಕೊಂಡು ಬಂದೆ. (ನಾನು ಮದುವೆಯಾಗಿ ಸಂಸಾರ ಹೂಡುವದನ್ನು ನೋಡಬೇಕೆಂಬ ಆಸೆ ಮೊದಲು ವಿ.ಸೀ. ಅವರೇ ವ್ಯಕ್ತಪಡಿಸಿದ್ದರು) ಆ ವರ್ಷವೂ ಮೊದಲಿನಂತೆ ಸಂಜೆ ಅವರೊಡನೆ ಕಳೆಯುತ್ತಿದ್ದೆ. ಅದಕ್ಕೆ ಒಂದು ದಿನ "....What sort of a young man you are! Take leave and run away with your wife..." ಎಂದಾಗ ನವದಂಪತಿಗಳ ಸಂಬಂಧ ಹಾಗೂ

ಭಾವನೆಗಳ ಬಗೆಗಿನ ಅವರ ಕಾಳಜಿಯ ಅರಿವಾಯಿತು. ಮತ್ತೊಬ್ಬರ ವ್ಯಕ್ತಿ-ಸ್ವಾತಂತ್ರ್ಯವನ್ನು ಅತಿಕ್ರಮಿಸದೇ ಇರುವುದು ಅವರ ಗುಣವಿಶೇಷಗಳಲ್ಲೊಂದು. ವಿವಾಹ ನಂತರದ ಎರಡು ವರ್ಷ ಸಹ ದಿನಚರಿ ಮೊದಲಿನಂತೇ ಇತ್ತು. ನನ್ನ ಹೆಂಡತಿ ಯಾವತ್ತೂ ಅಪಸ್ವರ ಎತ್ತಲಿಲ್ಲ, ಆಕ್ಷೇಪ ಮಾಡಲಿಲ್ಲ. ಪೂರ್ಣಸಹಕಾರವಿತ್ತ ಅಕೆಗೆ ನಾನು ಕೃತಜ್ಞ. ವಿ.ಸೀ.ಯವರೂ ಮೆಚ್ಚಿ "…. ಇಂಥ ಹೆಣ್ಣುಮಕ್ಕಳು ತುಂಬಾ ಅಪರೂಪ, ನೀನು ಪುಣ್ಯವಂತನಪ್ಪ…." ಎಂದಾಗ ನನಗೂ ಹೆಮ್ಮೆ.

ಸೌಜನ್ಯ, ವಿನಮ್ರತೆ, ಮೃದುತ್ವಗಳಂಥ ಸಾತ್ವಿಕ ಗುಣಗಳಿಗೆ ಪ್ರಸಿದ್ಧರಾದ ವಿ.ಸೀ.ಯವರ ನಿಷ್ಠುರತೆಯನ್ನೊಮ್ಮೆ ಕಂಡೆ! ಮೊದಲನೆಯ ವರ್ಷದ ಕೊನೆಗೆ ವಾರ್ಷಿಕ ಸ್ನೇಹ ಸಮ್ಮೇಲನದ ಮನರಂಜನಾ ಕಾರ್ಯಕ್ರಮ ನಡೆದ ಸಂದರ್ಭ. ಒಂದು ಹುಡುಗಿಯ ನೃತ್ಯ ಚೆನ್ನಾಗಿತ್ತೆಂದು ವಿ.ಸೀ.ಯವರ ಹಿರಿಯ ಮಗಳು ಮೆಚ್ಚಿ, ಪ್ರೋತ್ಸಾಹರೂಪದ ಹಣ ಪ್ರಕಟಿಸಲು ನನಗೆ ಹೇಳಿದರು. ನಾನು ಹಿಂದು-ಮುಂದು ನೋಡದೇ ವೇದಿಕೆಯಿಂದ ಘೋಷಿಸಿಯೇ ಬಿಟ್ಟೆ. ಕಾರ್ಯಕ್ರಮಗಳೆಲ್ಲ ಮುಗಿದ ಮೇಲೆ ನಾನಿದ್ದಲ್ಲಿಗೆ ಬುಸುಗುಟ್ಟುತ್ತಾ ಬಂದು "ಯಾರ್ರೀ ನಿಮಗೆ ಹೇಳಿದ್ದು ಈ ಅಧಿಕ ಪ್ರಸಂಗತನ ಮಾಡಲಿಕ್ಕೆ…." ಎಂದು ಎಲ್ಲರೆದುರಿಗೇ ಪ್ರಶ್ನಿಸಿ ಮುಂದುವರಿಸಿದರು "….ಇದರ ಪರಿಣಾಮ ಗೊತ್ತೇನ್ರಿ…. ನಾಳೆ ಒಬ್ಬ ರೌಡಿ ಹುಡುಗ ಬೇಕೂಂತ ಇದೇ ರೀತಿ ಒಬ್ಬ ಹುಡುಗಿಗೆ ಆಸೆ ತೋರಿಸಬಹುದು…." ಸುಮ್ಮನೆ ಕೆಳಗೆ ಮುಖ ಹಾಕಿಕೊಂಡು ನಿಲ್ಲುವದನ್ನು ಬಿಟ್ಟು ಬೇರೆ ದಾರಿಯೇ ಇರಲಿಲ್ಲ ನನಗೆ. ಅಂಥ ಮುಂದಾಲೋಚನೆ ನಮಗೆಲ್ಲಿ? ಮನೆಯ ದಾರಿಯಲ್ಲಿಯೂ ಪರಿಣಾಮಗಳ ಬಗ್ಗೆ ಮಾತು ನಡೆದೇ ಇತ್ತು. ಕೊನೆಗೆ "….I know you are offended…. yes, I want you to be offended…." ಎಂದು ಹೇಳಿದಾಗ ಅವರ ನಿಷ್ಠುರತೆಯ ರುಚಿ ಕಂಡೆ. ಅಷ್ಟಕ್ಕೇ ಮುಗಿಯಲಿಲ್ಲ, ಮನೆಗೆ ಹೋದ ನಂತರ ಮಗಳಿಗೂ ಆಯಿತು ಮಂಗಳಾರತಿ!

ಇಂಥದೇ ಮತ್ತೊಂದು ಘಟನೆ, ಶ್ರೀ ಅ.ನ.ಕೃ. ಹೊನ್ನಾವರಕ್ಕೆ ಬಂದಾಗ, ನನ್ನ ಕಣ್ಣೆದುರಿಗೇ ನಡೆಯಿತು. ಅವರು ಹೊನ್ನಾವರಕ್ಕೆ ಬಂದ ಸುದ್ದಿ ವಿ.ಸೀ.ಯವರಿಗೆ ತಿಳಿಯಿತು. ಅದೇಕೋ ಅ.ನ.ಕೃ. ವಿ.ಸೀ.ಯವರನ್ನು ಭೆಟ್ಟಿಯಾಗಲು ಬರಲಿಲ್ಲ. ಇವರೇ ಹೇಳಿಕಳಿಸಿದಾಗ ಅ.ನ.ಕೃ., ವಿ.ಸೀ. ಮನೆಗೆ ಬಂದರು. ಆಗ ವಿ.ಸೀ. "…. ಏನ್ರೀ ಕೃಷ್ಣರಾವ್, ನಾನು ಈ ಊರಲ್ಲಿದ್ದಾಗ, ನೀವು ಇಲ್ಲಿಗೆ ಬಂದರೂ, ನನ್ನ ಮನೆಗೆ ಬರೋದಿಲ್ಲಾಂದ್ರೆ ಏನ್ರೀ ಇದರರ್ಥ? ನನ್ನ ಬರವಣಿಗೆ, ವಿಚಾರ ನಿಮಗೆ ಹಿಡಿಸದೇ ಇರಬಹುದು. ಆ ವಿಷಯಗಳಲ್ಲಿ ನಾವಿಬ್ಬರೂ ಒಬ್ಬರನ್ನೊಬ್ಬರು ಟೀಕಿಸಲೂ ಬಹುದು. ….ಆದರೆ…." ಹೀಗೆಂದು ಸಣ್ಣ ಮಕ್ಕಳಿಗೆ ಗದರಿಸಿದ ಹಾಗೆ ಹೇಳಿದಾಗ ನನಗೆ ಆಶ್ಚರ್ಯ. ಅ.ನ.ಕೃ. ಏನೋ ಸಬೂಬು ಹೇಳಿ ಆತಿಥ್ಯ ಸ್ವೀಕರಿಸಿ ಹೊರಟುಹೋದರು.

ಗುರುಭಕ್ತಿಯ ಬಗ್ಗೆ ಪುರಾಣದ ಕತೆಗಳಲ್ಲಿ ಕೇಳಿದ್ದ ನನಗೆ, ಅದನ್ನು ಕಣ್ಣಾರೆ ನೋಡುವ ಸದವಕಾಶ ವಿ.ಸೀ.ಯವರು ನಾಲ್ಕು ವರ್ಷಗಳ ಕಾಲ ಹೊನ್ನಾವರದಲ್ಲಿದ್ದಾಗ, ನಂತರ ಬೆಂಗಳೂರಲ್ಲಿ ಒದಗಿ ಬಂದಿತ್ತು. ಕಾಲೇಜಿನಂಥ ಶಿಕ್ಷಣ ಸಂಸ್ಥೆಗಳಲ್ಲಿ

ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಲು ಹೆಸರಾಂತ ವ್ಯಕ್ತಿಗಳನ್ನು ಆಮಂತ್ರಿಸುವುದು ಸಾಮಾನ್ಯ ಕ್ರಮ. ವಿ.ಸೀ. ಹೊನ್ನಾವರದ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ನಾಲ್ಕು ವರ್ಷ ಆದದ್ದೇ ಬೇರೆ. ಇಲ್ಲಿ ಆಮಂತ್ರಣ ಇರಲಿಲ್ಲ. ಬದಲಾಗಿ, ವಿ.ಸೀ.ಯವರು ಇದ್ದಾರೆಂದು ತಿಳಿದ ಅವರೇ ಹುಡುಕಿಕೊಂಡು ಕಾಲೇಜಿಗೆ ಬರುತ್ತಿದ್ದದ್ದು ಬಹುಶಃ ಬೇರೆಲ್ಲೂ ನಡೆಯದ ಸಂಗತಿ. ಹೊನ್ನಾವರಕ್ಕೆ ಅಥವಾ ಹತ್ತಿರದ ಊರುಗಳಿಗೆ ಯಾವುದೇ ಕಾರಣಕ್ಕಾಗಿ ಬಂದಂಥ ಉನ್ನತ ಅಧಿಕಾರಿಗಳು, ಮಂತ್ರಿಗಳು, ಸಮಾಜದ ಧುರೀಣರು ನೇರ ಕಾಲೇಜಿಗೆ ಬರುತ್ತಿದ್ದುದು ನಮಗೆ ಹಾಗೂ ವಿದ್ಯಾರ್ಥಿಗಳಿಗೆ ಅಚ್ಚರಿಯ ವಿಷಯ. ಆಗ ಫೋನೂ ಇರಲಿಲ್ಲ ತಿಳಿಸಿ ಬರಲು. ಅವರನ್ನು ಸ್ವಾಗತಿಸಲು, ಆತಿಥ್ಯ ಏರ್ಪಡಿಸಲು ಸುಂದರ ಕಟ್ಟಡ ಅಥವಾ ಪರಿಕರಗಳಾವುವೂ ಇರಲಿಲ್ಲ. ಅವರಿಗೆ ಬೇಕಾದದ್ದು ವಿ.ಸೀ.ಯವರ ಭೇಟಿ, ಉಳಿದದ್ದೆಲ್ಲ ಗೌಣ ಎಂಬುದು ಸ್ಪಷ್ಟ ಕಾಣುತ್ತಿತ್ತು. ಬಂದವರಲ್ಲಿ ಹೆಚ್ಚಿನವರು ತಮ್ಮನ್ನು ವಿ.ಸೀ.ಯವರ ವಿದ್ಯಾರ್ಥಿಗಳೆಂದು ಗುರುತಿಸಿಕೊಂಡು ಭಕ್ತಿಯಿಂದ, ನಮ್ರತೆಯಿಂದ ಮಾತನಾಡಿದಾಗ ನಮಗೂ ವಿದ್ಯಾರ್ಥಿಗಳಿಗೂ ನಂಬಲಾಗದ ವಿಚಿತ್ರ ಅನುಭವ. ಹಾಗೆ ಬಂದವರಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯದ ಆಗಿನ ಮುಖ್ಯ ನ್ಯಾಯಾಧೀಶ ಶ್ರೀ ಹೊಂಬೇಗೌಡ, ನ್ಯಾಯಾಧೀಶ ಶ್ರೀ ಪಾಪಾರೆಡ್ಡಿ, ಕೇಂದ್ರ ಮಂತ್ರಿಯಾಗಿದ್ದ ಶ್ರೀ ವಿ.ಕೆ.ಆರ್.ವಿ. ರಾವ್, ರಾಜ್ಯದ ಮಂತ್ರಿಯಾಗಿದ್ದ ಶ್ರೀ ಕಂಠಿ, ಆಗಿನ ಲೋಕಸಭಾ ಸದಸ್ಯ ಹಾಗೂ ಸಮಾಜ ಸುಧಾರಕ ಶ್ರೀ ದಿನಕರ ದೇಸಾಯಿ, ಕರ್ನಾಟಕ ವಿಶ್ವವಿದ್ಯಾಲಯದ ಆಗಿನ ಉಪಕುಲಪತಿ ಶ್ರೀ ಡಿ. ಸಿ. ಪಾವಟೆ, ಶ್ರೀ ಹರಿದಾಸಭಟ್ಟ, ಶ್ರೀ ವಿ. ಎಂ. ಇನಾಮ್‌ದಾರ್ ಪ್ರಮುಖರು.

ಈ ಸಂದರ್ಭದಲ್ಲಿ ಮತ್ತೊಂದು ಘಟನೆಯನ್ನು ಉಲ್ಲೇಖಿಸಲೇಬೇಕು. ಕರ್ನಾಟಕ ರಾಜ್ಯ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕಿ ನಮ್ಮ ಕಾಲೇಜಿಗೆ ಅಧಿಕೃತ ಭೇಟಿ ನೀಡುತ್ತಾರೆಂದು ತಿಳಿದಾಗ ಅವರ ಮನವೊಲಿಸಿ (ಅವರೂ ವಿ.ಸೀ.ಯವರ ವಿದ್ಯಾರ್ಥಿನಿ) ಹೊನ್ನಾವರದಲ್ಲಿ ೨-೩ ದಿನ ಉಳಿಯುವಂತೆ ಮತ್ತು ಕಾಲೇಜಿನ ವಾರ್ಷಿಕಸ್ನೇಹ ಸಮ್ಮೇಲನಕ್ಕೆ ಮುಖ್ಯ ಅತಿಥಿಯಾಗುವಂತೆ ವಿ.ಸೀ. ಏರ್ಪಾಡು ಮಾಡಿದರು. ಎಂದಿನಂತೆ ವಿ.ಸೀ.ಯವರ ಗುಣಗಾನ ಮುಖ್ಯ ಅತಿಥಿಗಳಿಂದ ಕೇಳಿ ನಾವು ಹಾಗೂ ಊರಿನ ಜನ (ಸಭಿಕರು) ವಿ.ಸೀ.ಯವರ ವ್ಯಕ್ತಿತ್ವದ ಎತ್ತರ ಎಷ್ಟೆಂದು ಊಹಿಸುವಂತಾಯಿತು. ನಿರ್ದೇಶಕಿ ಹೊರಡುವ ದಿನ ವಿ.ಸೀ. ಯವರ ಮನೆಯಲ್ಲಿ ಊಟಕ್ಕೆ ವ್ಯವಸ್ಥೆಯಾಗಿತ್ತು. ಊಟಕ್ಕೆ ಅವರು ಹಾಗೂ ಅವರ ತಂಗಿ (ಅವರ ತಂಗಿಯೂ ಜೊತೆಗೆ ಬಂದಿದ್ದರು). ನಾನಂತೂ ಆಮಂತ್ರಣವಿಲ್ಲದ ಅತಿಥಿ. ನೆಲದ ಮೇಲೆ ಬಾಳೆ ಎಲೆ ಹಾಕಿ ಇಬ್ಬರಿಗೂ ಪ್ರೀತಿಯಿಂದ ಬಡಿಸಿದರು ವಿ.ಸೀ.ಯವರ ಪತ್ನಿ ಸರೋಜಮ್ಮ. ಅಷ್ಟೇ ಪ್ರೀತಿಯಿಂದ ಗುರುಭಕ್ತಿಯಿಂದ ಗುರುಪತ್ನಿಯ ಆತಿಥ್ಯ ಸ್ವೀಕರಿಸಿದರು ಆ ಇಬ್ಬರೂ. ವಿ.ಸೀ. ಏತಕ್ಕೋ ಒಳಗೆ ಹೋಗಿದ್ದರು; ಊಟ ಮುಗಿಯಿತು. ಇಬ್ಬರೂ ಊಟ ಮುಗಿಸಿ ಊಟದ ಎಲೆ ಮಡಿಚಿ ಎತ್ತುವ ಸಿದ್ಧತೆಯಲ್ಲಿದ್ದದ್ದನ್ನು ಗಮನಿಸಿದ ನಾನು ತಕ್ಷಣ ಒಳಗೆ ಹೋಗಿ ತಿಳಿಸಿದೆ. ವಿ.ಸೀ.ಯವರು ಹೊರಗೆ ಬಂದವರೆ "....ಏನಮ್ಮಾ ನೀವು ಹೀಗೆ ಮಾಡುವದೇ? ಏನನ್ಯಾಯ...."

ಎಂದಾಗ ಅವರು "ತಪ್ಪೇನಿಲ್ಲ ಸಾರ್" ಅನ್ನುವದೆ? ಇಡೀ ರಾಜ್ಯದ ಎಲ್ಲ ಕಾಲೇಜುಗಳ ಮೇಲಿನ ಉನ್ನತ ಅಧಿಕಾರಿ ಆಕೆ. ವಿ.ಸೀ. ಹೊಸತಾಗಿ ಪ್ರಾರಂಭವಾದ ಒಂದು ಸಣ್ಣ ಕಾಲೇಜಿನ ಪ್ರಿನ್ಸಿಪಾಲರು; ಆದರೆ ಆಗ ಅವರು ಪ್ರಿನ್ಸಿಪಾಲರಲ್ಲ, ಆಕೆ ಅಧಿಕಾರಿ ಅಲ್ಲ. ಆಕೆಗೆ ಅವರು ಗುರು. ಎಂಥ ಗುರುಭಕ್ತಿ! ಆ ದೃಶ್ಯ ನನ್ನ ಕಣ್ಣುಗಳನ್ನು ತೇವವಾಗಿಸಿತು.

ಅದೇ ಸಣ್ಣ ಮನೆಗೆ ಶ್ರೀ ರಾಮಕೃಷ್ಣ ಹೆಗಡೆ ಪತ್ನೀಸಮೇತ ಬಂದು ಆತಿಥ್ಯ ಸ್ವೀಕರಿಸಿ ಗೌರವ ವ್ಯಕ್ತಪಡಿಸಿದ್ದನ್ನು ಈ ಕಣ್ಣುಗಳು ನೋಡಿವೆ. ಶಿವರಾಮ ಕಾರಂತರು ಹಾಗೂ ವಿ.ಸೀ. ಅಪ್ತ ಸ್ನೇಹಿತರೆಂಬುದು ಎಲ್ಲರಿಗೂ ಗೊತ್ತಿದ್ದ ಸಂಗತಿ. ವೈಚಾರಿಕವಾಗಿ ಇಬ್ಬರಲ್ಲೂ ಅಷ್ಟೇ ಭಿನ್ನಾಭಿಪ್ರಾಯವಿತ್ತೆಂಬುದೂ ಅಷ್ಟೇ ಸತ್ಯ. ಕಾರಂತರು ಹೊನ್ನಾವರಕ್ಕೆ ಬಂದಾಗ ವಿ.ಸೀ.ಯವರ ಮನೆಯಲ್ಲಿ ಊಟಕ್ಕೆ ಏರ್ಪಾಡಾಗಿತ್ತು. ಸಹಜವಾಗಿ ಊಟ ಮುಗಿಯುತ್ತಾ ಬಂದಂತೆ ಮಾತು ಎಲ್ಲೆಲ್ಲೋ ಹೋಗಿ ಕೊನೆಗೆ ನನ್ನನ್ನುದ್ದೇಶಿಸಿ "....ಈ ಮನುಷ್ಯನಿಗೆ ನೆಹರು ಅಂದರೆ **obsession**, ನೀನು ಇವರ ಮಾತಿಗೆ ಬಲಿ ಬೀಳಬೇಡ...." ಎಂದು ಕಾರಂತರು ಹೇಳಿದಾಗ, ವಿ.ಸೀ. ಜೋರಾಗಿ ನಕ್ಕುಬಿಟ್ಟರು ಅಷ್ಟೇ. ಕಾರಂತರಿಗೆ ನೆಹರುರವರ ಬಗ್ಗೆ ಅಷ್ಟೊಂದು ಒಳ್ಳೆ ಅಭಿಪ್ರಾಯ ಇಲ್ಲವೆಂಬುದು ಆಗ ನನಗೆ ತಿಳಿಯಿತು.

ವಿ.ಸೀ.ಯವರ ಪತ್ನಿ ಶ್ರೀಮತಿ ಸರೋಜಮ್ಮನವರ ಆತಿಥ್ಯದ ಸವಿ ಉಂಡವರು ಮರೆಯದಂಥ ಅನುಭವ ಹೊಂದಿದ್ದಾರೆಂದು ನನ್ನ ನಂಬಿಕೆ. ಅವರ ಆತಿಥ್ಯ ಪ್ರೀತಿ, ಅಂತಃಕರಣ, ಸ್ನೇಹ ಹಾಗೂ ಸೌಜನ್ಯ ಇವೆಲ್ಲವುಗಳ ವಿಶಿಷ್ಟ ರಸದೌತಣ. ಅದು ಜಾತಿ, ಮತ, ಶೈಕ್ಷಣಿಕ ಅಥವಾ ಆರ್ಥಿಕ ಅಂತಸ್ತು ಮೀರಿದ್ದು. ಎಲ್ಲರೂ ಸಮಾನರು. ಅವರ ಮನೆಗೆಲಸಗಳ ಸಹಾಯಕ್ಕೆಂದು ಒಬ್ಬ ಸಹಾಯಕ ಗೊತ್ತುಮಾಡಲ್ಪಟ್ಟಿದ್ದ. ಅವನೊಬ್ಬ ಯುವಕ. ಸರೋಜಮ್ಮ ಅವನನ್ನು ಮನೆಯ ಹುಡುಗನಂತೆ ಅಕ್ಕರೆಯಿಂದ ಕರೆದು ಒತ್ತಾಯ ಮಾಡಿ ತಿಂಡಿಕೊಡುತ್ತಿದ್ದುದು ನನಗೆ ವಿಚಿತ್ರವಷ್ಟೇ ಅಲ್ಲ, ಕೆಲವೊಮ್ಮೆ ಸಿಟ್ಟೂ ತಂದಿತ್ತು, ಅವನಿಗೇಕೆ ಇಷ್ಟು ಒತ್ತಾಯ ಎಂದು. ವಿ.ಸೀ.ಯವರು ಅವನ ಬಟ್ಟೆ, ನಶ್ಯದ ಚಟ ಇತ್ಯಾದಿಗಳ ಬಗ್ಗೆ ಪದೇ ಪದೇ ಮಮತೆಯಿಂದ ಹೇಳಿ, ಅವನಲ್ಲಿ ಮಾರ್ಪಾಡು ತಂದಿದ್ದು ಒಂದು ಪವಾಡ. ಒಬ್ಬ ಪ್ರಿನ್ಸಿಪಾಲ ತನ್ನ ಸೇವಕನೊಬ್ಬನನ್ನು ನಡೆಸಿಕೊಂಡ ರೀತಿ ಇದು. ಮತ್ತೊಬ್ಬ ಅವರಿಗೆ ಪ್ರಿಯವಾದ ಚಿಗುರೆಲೆ ತಂದುಕೊಡುತ್ತಿದ್ದ. ಅಷ್ಟೇ ಅಲ್ಲ, ತೆಂಗಿನಕಾಯಿ ಇತ್ಯಾದಿ ಕೆಲವು ಸಾಮಾನುಗಳನ್ನು ಪೂರೈಸುತ್ತಿದ್ದ. ಅದಕ್ಕಾಗಿ, ಸಹಜವಾಗಿ, ಮುಂಗಡಹಣ ಪಡೆದು ತನ್ನದೇ ರೀತಿಯಲ್ಲಿ ಲೆಕ್ಕ ಕೊಡುವುದು ಕ್ರಮ. ಆ ಲೆಕ್ಕ ಸರಿ ಇರುತ್ತಿರಲಿಲ್ಲವೆಂಬುದು ವಿ.ಸೀ.ಯವರಿಗೆ ಗೊತ್ತಿದ್ದರೂ, ನಾನು ಗಮನಕ್ಕೆ ತಂದಾಗಲೂ ನಕ್ಕುಬಿಡುತ್ತಿದ್ದರು. ಬಂದಾಗೆಲ್ಲ ಅವನಿಗೂ ತಪ್ಪುತ್ತಿರಲಿಲ್ಲ ತಿಂಡಿ, ತೀರ್ಥ!

ಅವರ ಮನೆಗೆ ಮುಂಜಾನೆ, ಮಧ್ಯಾಹ್ನ, ಸಂಜೆ ಅಥವಾ ರಾತ್ರಿ ಯಾರೇ ಬಂದರೂ ಕನಿಷ್ಠ ಪಕ್ಷ ಕಾಫಿ ತೆಗೆದುಕೊಳ್ಳದೇ ಹೋಗುವ ಹಾಗೇ ಇಲ್ಲ. ಅದು ಕಾನೂನು. ಶ್ರೀಮತಿ ಸರೋಜಮ್ಮ ಅನ್ನಪೂರ್ಣೆ. ದಿನದ ಯಾವ ಸಮಯದಲ್ಲಾದರೂ ವಿ.ಸೀ.ಯವರ ಕರೆಯಂತೆ ತಿಂಡಿ, ಕಾಫಿ ಬೇಸರಿಸದೇ ಅಕ್ಕರೆಯಿಂದ ಪೂರೈಸುತ್ತಿದ್ದ ಅಪರೂಪದ ಗೃಹಿಣಿ. ಕೆಲವೊಮ್ಮೆ ಅವರ ಮಾನಸಿಕ ಸ್ಥಿತಿ ಸರಿ ಇಲ್ಲದಿದ್ದಾಗ ಮಾತ್ರ ಅದಕ್ಕೆ ವ್ಯತ್ಯಯ.

ಮನೆಯಲ್ಲಿಯ ವಿಚಿತ್ರ ಸನ್ನಿವೇಶಗಳ ಫಲಸ್ವರೂಪವಾಗಿ ಕಾಣಿಸಿಕೊಂಡ ಮಾನಸಿಕ ಅಸ್ವಾಸ್ಥ್ಯ ಕೊನೆಯವರೆಗೂ ಅವರನ್ನು ಆಗಾಗ ಕಾಡಿದ್ದು ಒಂದು ದೊಡ್ಡ ದುರಂತ. ಅದಾವುದೂ ತಮ್ಮ ಪತ್ನಿಯ ಬಗೆಗಿನ ಪ್ರೀತ್ಯಾದರದಲ್ಲಿ ಎಳ್ಳಷ್ಟೂ ಕುಂದುಬರದಂತೆ ಜೀವನ ನಡೆಸಿದ್ದು ವಿ.ಸೀ. ಯವರ ಮಹಾನ್ ವ್ಯಕ್ತಿತ್ವ.

ವಿ.ಸೀ.ಯವರ ಖಾಸಗಿ ಜೀವನದ ಬಗ್ಗೆ ಬಾಲ್ಯದಿಂದ ಮುಪ್ಪಿನವರೆಗೆ – ಅವರ ಬಾಯಿಂದಲೇ ಕೇಳಿದ, ೧೯೬೪ರ ಜುಲೈ ನಂತರ ಸ್ವತಃ ಕಂಡ ನನಗೆ, ಅವರು ಮಾನಸಿಕ ಸ್ವಾಸ್ಥ್ಯ ಕಳೆದುಕೊಳ್ಳದೇ ಇದ್ದದ್ದು ಆಶ್ಚರ್ಯವೆನಿಸಿದೆ. ಜೀವನದುದ್ದಕ್ಕೂ ಪದೇ ಪದೇ ಕಹಿಯನ್ನುಂಡರೂ ನೀಲಕಂಠನಂತೆ – ಸದಾ ಹಸನ್ಮುಖಿಯಾಗಿ, ಚಿಂತನಶೀಲರಾಗಿ, ಕ್ರಿಯಾಶೀಲರಾಗಿ, ಎಲ್ಲಕ್ಕಿಂತ ಹೆಚ್ಚಾಗಿ – ನನ್ನ ಅಭಿಪ್ರಾಯದಲ್ಲಿ – ಸಿನಿಕರಾಗದೇ, ಅಷಾಢಭೂತಿಯಾಗದೇ, ಪ್ರಾಮಾಣಿಕರಾಗಿ, ಮಾತು ಕೃತಿಗಳ ನಡುವೆ ಅಂತರ ಮಾಡದವರಾಗಿ, ಒಬ್ಬ ಪರಿಪೂರ್ಣ ಮಾನವರಾಗಿ ಜೀವಿಸಿದ ಮಹಾನ್ ಚೇತನ. ಅದೇಕೋ ಅವರ ಮನದ ಆಳದಲ್ಲಿ ಒಂದು ನೋವು ಉಳಿದುಹೋಗಿತ್ತು: ಅವರು ಪ್ರೊಫೆಸರ್ ಹುದ್ದೆಗೆ ಏರದಿದ್ದುದು. ಯಾರಾದರೂ ಅವರನ್ನು 'ಪ್ರೊಫೆಸರ್' ಎಂದು ಸಂಬೋಧಿಸಿದಾಗ '....no, I was not a Professor..' ಎಂದು ತಕ್ಷಣ ನೋವು–ಸಿಟ್ಟುಗಳನ್ನೊಳಗೊಂಡ ಪ್ರತಿಕ್ರಿಯೆ ಕಾಣಿಸುತ್ತಿದ್ದದ್ದನ್ನು ಕಂಡು ನನಗೆ ಸೋಜಿಗ. ಅವರ ಶಿಕ್ಷಕ ವೃತ್ತಿ ಜೀವನವನ್ನು ಪೂರ್ಣ ಅವರ ಬಾಯಿಂದಲೇ ಕೇಳಿ ತಿಳಿದಾಗ, ಸ್ವಲ್ಪಮಟ್ಟಿಗೆ ಆ ನೋವಿನ ಹಿನ್ನೆಲೆಯ ಅರ್ಥ ಆಯಿತೆಂದುಕೊಂಡಿದ್ದೇನೆ. ಆದೊಂದು ಕಹಿ ಅವರನ್ನು ಕೊನೆಯವರೆಗೂ ಕಾಡಿತ್ತು. "....ಏಕೋಪ್ಪಾ ಈ bitterness ಉಳಿದುಬಿಟ್ಟಿದೆ. ಮನಸ್ಸಿನಿಂದ ಕಿತ್ತುಹಾಕಲು ಆಗಲೇ ಇಲ್ಲ...." ಎಂದು ಒಂದು ದಿನ ನುಡಿದರು.

ವಿ.ಸೀ.ಯವರಿಗೆ ಹಿರಿಯರಲ್ಲಿ ಬಹಳ ಗೌರವ. ಹೊನ್ನಾವರದ ಹತ್ತಿರದ ಸಣ್ಣ ಊರು ಕರ್ಕಿ. ಅಲ್ಲಿಯ ಹಾಸ್ಯಗಾರ ಕುಟುಂಬ ಯಕ್ಷಗಾನಕ್ಕೆ ಬಹಳ ಪ್ರಸಿದ್ಧ. ಪರಮಯ್ಯ ಹಾಸ್ಯಗಾರ ಅವರು ೮೦ ದಾಟಿದ ಯಕ್ಷಗಾನ ಪಟು. ಅವರ ಕಲಾ ಹಿರಿಮೆ ಕೇಳಿದ್ದ ವಿ.ಸೀ. ಅವರನ್ನು ಭೆಟ್ಟಿಯಾಗಿ, ಅವರಿಂದ ಯಕ್ಷಗಾನದ ಬೇರೆ ಬೇರೆ ಪ್ರಸಂಗಗಳ ಅಭಿನಯದ ತುಣುಕುಗಳನ್ನು ನೋಡಿ ಧನ್ಯತೆ, ಕೃತಜ್ಞತೆಯ ಭಾವ ಹೊಂದಿದ್ದ ಆ ದಿನದ ವಿ.ಸೀ. ಪೂರ್ಣ ಭಿನ್ನರಾಗಿ ಕಂಡಿದ್ದರು. ಪರಮಯ್ಯ ಹಾಸ್ಯಗಾರರನ್ನು ಮನೆಗೆ ಬರಮಾಡಿಕೊಂಡು ಅವರಿಗೆ ನೀಡಿದ ಗೌರವ ಆದರ್ಶಪ್ರಾಯ. ಅದಕ್ಕೆ ತಕ್ಕಂತೆ ಅನ್ನುವ ಹಾಗೆ ಪರಮಯ್ಯ ಹಾಸ್ಯಗಾರರು ಆ ಇಳಿ ವಯಸ್ಸಿನಲ್ಲಿ, ವಿ.ಸೀ.ಯವರ ವಿನಂತಿಯಂತೆ ವೇಷ ಹಾಕಿಕೊಂಡು ಕೀಚಕನ ಪಾತ್ರ ಅದ್ಭುತವಾಗಿ ಅಭಿನಯಿಸಿದರು.

ಒಮ್ಮೆ ಹಿರಿಯರ ಒತ್ತಾಯಕ್ಕೆ ಕಟ್ಟುಬಿದ್ದು ಸಹೋದ್ಯೋಗಿ ಮಿತ್ರರೊಬ್ಬರಿಗೆ ಜಾಮೀನು ಹಾಕಿ, ಆ ಮಿತ್ರರು ತಮ್ಮನ್ನು 'ದಿವಾಳಿ' ಎಂದು ಘೋಷಿಸಿಕೊಂಡದ್ದರಿಂದ ವಿ.ಸೀ.ಯವರು ತಮ್ಮ ಮನೆ ಮಾರಿ ಹಣ ತುಂಬಬೇಕಾಯಿತು! ಇದಾದ ಎಷ್ಟೋ ವರ್ಷಗಳು ಕಳೆದರೂ ಆ ಮಿತ್ರ ಹಣ ತಿರುಗಿಕೊಡುವ ಮಾತೇ ಆಡದಿದ್ದರೂ ವಿ.ಸೀ. ಮಾತ್ರ ಎಂದಿನಂತೆ ಸ್ನೇಹ ಮುಂದುವರಿಸಿಕೊಂಡು ಹೋದರು. ಒಂದು ದಿನ ನಾನು

ಸ್ವಲ್ಪ ನಿಷ್ಠೂರವಾಗಿ ಆ ಬಗ್ಗೆ ಕೇಳಿದಾಗ "ನೋಡಪ್ಪ ಕೊಡುವ ಶಕ್ತಿ, ಮನಸ್ಸು ಇದ್ದರೆ ಕೊಟ್ಟೇ ಕೊಡುತ್ತಾನೆ. ಇಲ್ಲವಾದರೆ ನಾನು ಕೇಳಿ ಆತನಿಗೆ ಮುಜುಗರ ಮಾಡಬಹುದು ಅಷ್ಟೇ...." ಎಂದಾಗ ಇವರೆಂಥ ಮನುಷ್ಯ ಎಂಬ ದೊಡ್ಡ ಪ್ರಶ್ನೆ ನನ್ನ ಮುಂದೆ. ಆ ಮಿತ್ರ ತೀರಿಕೊಂಡಾಗ ನಾನು ಬೆಂಗಳೂರಿನಲ್ಲೇ (ವಿ.ಸೀ.ಯವರ ಮನೆಯಲ್ಲೇ) ಇದ್ದೆ. ಮೃತರ ಮಗ ಬಂದು ವಿ.ಸೀ.ಯವರಿಗೆ ಸುದ್ದಿ ಮುಟ್ಟಿಸಿದಾಗ ಇವರು ತಕ್ಷಣ ಹೋಗಿ ಮಿತ್ರನ ಕೊನೆ ದರ್ಶನ ಮಾಡಿಕೊಂಡು ಕುಟುಂಬದವರಿಗೆ ಸಾಂತ್ವನ ಹೇಳಿ ಬಂದರು. ಇದೆಂಥ ಮಾನವೀಯತೆ!

ವಿ.ಸೀ. ಯವರದು ಅಪರೂಪದ ಹಾಗೂ ಅದ್ಭುತವಾದ ಸಹೃದಯತೆ. "....ಒಬ್ಬ ಪಂಡಿತ ಮತ್ತೊಬ್ಬ ಪಂಡಿತನನ್ನು ಕಂಡು ನಾಯಿಯಂತೆ ಗುರ್ ಎನ್ನುತ್ತಾನೆ...." ಎಂಬ ಸಂಸ್ಕೃತದ ಮಾತು ವಿ.ಸೀ.ಯವರಿಗೆ ಸರ್ವಥಾ ಅನ್ವಯಿಸದು. ಮತ್ತೊಬ್ಬರ ಹಿರಿಮೆಯನ್ನು– ಅದು ಸಾಹಿತ್ಯದಲ್ಲೇ ಆಗಿರಲಿ ಅಥವಾ ಇನ್ನಾವ ಕ್ಷೇತ್ರದಲ್ಲೇ ಆಗಿರಲಿ – ಗುರುತಿಸಿ, ಎತ್ತಿತೋರಿಸಿ, ಪ್ರೋತ್ಸಾಹಿಸಿ ಸಂತೋಷಪಡುವಂಥ ಅತ್ಯಂತ ಅಪರೂಪದ ಗುಣ ಅವರದು. ಕರ್ನಾಟಕ ರಾಜ್ಯದ ಹಳೆಯ ಮೈಸೂರು ಪ್ರಾಂತದ ಹೊರಗಿನ ಸಾಹಿತಿಗಳ ಸಂಪರ್ಕ ಹೊಂದಿದ ಪ್ರಥಮರೆಂಬ ಶ್ರೇಯಸ್ಸು ಅವರಿಗಿದೆ. ಅದೇ ರೀತಿ ದೇಶದ ಇತರ ರಾಜ್ಯಗಳ ಸುಪ್ರಸಿದ್ಧ ಸಾಹಿತಿಗಳ, ಕಲಾವಿದರ ಸ್ನೇಹ ಗೌರವ ಗಳಿಸಿದ ಕೆಲವೇ ಕೆಲವರಲ್ಲಿ ವಿ.ಸೀ. ಒಬ್ಬರು. ಚಿತ್ರಕಲೆ, ನೃತ್ಯ, ಸಂಗೀತ ಹಾಗೂ ನಾಟಕ ಈ ಕ್ಷೇತ್ರಗಳಲ್ಲೂ ಉತ್ತಮ ವಿಮರ್ಶಕರೆಂಬ ಖ್ಯಾತಿ. ಹೊರರಾಜ್ಯಗಳಿಂದ ಬಂದ ಪ್ರಸಿದ್ಧ ಕಲಾವಿದರು ವಿ.ಸೀ. ಯವರನ್ನು ಕಂಡು ಮಾತನಾಡಲಿಕ್ಕೆ ಇಚ್ಛಿತರಾಗಿದ್ದುದು ಅವರ ಅನೇಕ ನಿಕಟವರ್ತಿಗಳಿಗೆ ಗೊತ್ತಿದ್ದ ಸಂಗತಿ.

೧೯೬೯. ಕೇರಳದ ಎರ್ನಾಕುಲಂ ಹತ್ತಿರ ಐದನೇ ಅಖಿಲಭಾರತ ಲೇಖಿಕರ ಸಮ್ಮೇಳನ ನಡೆಯಿತು. "....ಎಲ್ಲಾ ನಮೂನೆ ಜನ ಬರ್ತಾರೆ, ತಮಾಷೆ ಇರ್ತದೆ, ಬರತೀರೇನ್ರೀ....?" ಎಂದು ಕೇಳಿದಾಗ ನನಗೆ ಸ್ವಾಭಾವಿಕವಾಗಿ ಖುಷಿ. ಅವರೊಡನೆ ಅವರ ಮಗ ಸತ್ಯನಾರಾಯಣ, ನಾನು ಹಾಗೂ ನನ್ನ ಸಹೋದ್ಯೋಗಿ ಮಿತ್ರ ಚೆನ್ನಕೇಶವ ಶಾಸ್ತ್ರಿ ಹೊರೆಟೆವು. ನಾವು ರೈಲು ನಿಲ್ದಾಣದಲ್ಲಿ ಇಳಿಯುತ್ತಲೇ ಸ್ವಯಂಸೇವಕರು ಬಂದು ಸ್ವಾಗತಿಸಿ – ಎಲ್ಲ ಆಹ್ವಾನಿತರನ್ನೂ ಅದೇ ರೀತಿ – ಕರೆದುಕೊಂಡು ಹೋಗಿ ಎರ್ನಾಕುಲಂದ ಒಂದು ಹೊಟೆಲ್‌ನಲ್ಲಿ – ಉಡುಪಿ ಮೂಲದವರ ಭಾರತ ಟೂರಿಸ್ಟ್ ಹೋಂ – ಉಳಿಯಲು ವ್ಯವಸ್ಥೆ ಮಾಡಿದರು. ಸಮ್ಮೇಳನ ವ್ಯವಸ್ಥೆ ಎಷ್ಟು ಅಚ್ಚುಕಟ್ಟಾಗಿತ್ತೆಂಬುದನ್ನು ವಿ.ಸೀ. ಯವರ ಮಾತಿನಿಂದಲೇ ತಿಳಿಯಬಹುದು: "....easily the best I have seen...." ಎಂದರು. ನಮಗಂತೂ ಸಂತೋಷ: ಜೊತೆಗೆ ಕಲಿಯ ತಕ್ಕಂಥ ಬಹಳ ಸಂಗತಿಗಳನ್ನು ನೋಡಲು ಅವಕಾಶವಿತ್ತು. ವಿ.ಸೀ. ಯವರನ್ನು ಕೇರಳದ ಸಾಹಿತಿಗಳು, ಅಭಿಮಾನಿಗಳು, ವ್ಯವಸ್ಥಾಪಕ ಧುರೀಣರು ಎಷ್ಟು ಗೌರವದಿಂದ ಕಂಡರೆಂಬುದನ್ನು ನೋಡಿ ನಮಗೂ ಹೆಮ್ಮೆ. ಯಾವುದಾದರೊಂದು ಗೋಷ್ಠಿಯನ್ನುದ್ದೇಶಿಸಿ ಮಾತನಾಡಲು ಅವರಿಂದ ವಿನಂತಿ ಬಂದಾಗ ಅಷ್ಟೇ ನಮ್ರತೆಯಿಂದ ಇವರು "....I

had my innings, let the young blood get a chance...." ಎಂದು ಉತ್ತರಿಸಿದಾಗ ವಿ.ಸೀ. ಯವರ ಸುಸಂಸ್ಕೃತಿಯ ಮತ್ತೊಂದು ಮುಖ ಕಾಣಲು ಸಿಕ್ಕಿತು. ಹೊರಡುವ ಮೊದಲು ವ್ಯವಸ್ಥಾಪಕ ಧುರೀಣರು ವಿ.ಸೀ. ಯವರಿಗೆ ಸಂಭಾವನಾ ಹಣ ಕೊಡಲು ಬಂದಾಗ "....ನಾನು ಯಾವ ಗೋಷ್ಠಿಯಲ್ಲೂ ಭಾಗವಹಿಸಿಲ್ಲವಾದ್ದರಿಂದ ಈ ಹಣ ಸ್ವೀಕರಿಸಲು ನನಗೆ ಹಕ್ಕಿಲ್ಲ...." ಎಂದು ನಕ್ಕು ನಿರಾಕರಿಸಿಬಿಟ್ಟರು!

ಸಾಹಿತ್ತಿಕ ಕ್ಷೇತ್ರದಲ್ಲಿ, ದೇಶದ ಅತಿ ಉನ್ನತ ಪ್ರಶಸ್ತಿಗಳಲ್ಲೊಂದಾದ 'ಜ್ಞಾನಪೀಠ' ಪ್ರಶಸ್ತಿ ಸ್ಥಾಪಿತವಾದಾಗ ನಿರ್ಣಾಯಕ ಮಂಡಳಿಗೆ ಕನ್ನಡವನ್ನು ಪ್ರತಿನಿಧಿಸಲು ವಿ.ಸೀ. ಯವರನ್ನು ಆರಿಸಿದ್ದು, ಹೊರರಾಜ್ಯಗಳಲ್ಲಿ ಅವರಿಗಿದ್ದ ಖ್ಯಾತಿಯ ಮತ್ತೊಂದು ಉದಾಹರಣೆ. ೨–೩ ವರ್ಷಗಳ ನಂತರ ತಾವಾಗಿ ಆ ಸ್ಥಾನ ಬಿಟ್ಟುಕೊಟ್ಟು ಬೇರೊಬ್ಬರ ಹೆಸರನ್ನು ಸೂಚಿಸಿದ್ದು ಅವರ ಔದಾರ್ಯದ ಒಂದು ಸಂಕೇತ. ಇಂಥದೊಂದು ಸಂದರ್ಭದಲ್ಲಿ ಶ್ರೀರಂಗರು ವಿ.ಸೀ. ಯವರಿಗೆ ತಮ್ಮ ಕೃತಜ್ಞತೆ ವ್ಯಕ್ತಪಡಿಸಲು ಅವರ ಮನೆಗೆ – ಬೆಂಗಳೂರಲ್ಲಿ – ಬಂದರು. ಆಗ ನಾನು ಅಲ್ಲೇ ಇದ್ದೆ. ಆ ಭೇಟಿ, ಓಹ್....! ವಿ.ಸೀ. ಯವರು ಕೋಣೆಯಿಂದ ಹೊರಗೆ ಬಂದು ಸ್ವಾಗತಿಸಿ "Oh! event of the year....!" ಅಂದಾಗ ಅಲ್ಲಿನ ವಾತಾವರಣದ ಸೊಬಗೇ ಬೇರೆ.

ಬೆಂಗಳೂರಿನ ಚಾಮರಾಜಪೇಟೆಯಲ್ಲಿಯ ಆ ಮನೆ ಎಂಥೆಂಥ ಮಹಾನುಭಾವರನ್ನು ಬರಮಾಡಿಕೊಂಡಿಲ್ಲ! ಸಮಾಜದ ಎಲ್ಲ ಸ್ತರದ ಜನರಿಗೂ ಅಲ್ಲಿ ಅವರಿಂದ ಅದೇ ಪ್ರೀತಿಯ ಸ್ವಾಗತ. "....ಬನ್ನಿ ....ಬನ್ನಿ...." ಭೇದಭಾವ ಅಲ್ಲಿಲ್ಲ. ವಿ.ಸೀ. ಯವರ ಆ ಚಿಕ್ಕ ಕೋಣೆ: ಅಲ್ಲಿ ಸುತ್ತಲೂ ಪುಸ್ತಕಗಳಿಂದ ತುಂಬಿದ ಕಟ್ಟಿಗೆಯ ಕಪಾಟುಗಳು, ಶೆಲ್ಫುಗಳು; ಒಂದೇ ಒಂದು ಹಳೆಯಕಾಲದ ಮರದ ಕುರ್ಚಿ, ೧–೨ ಚಾಪೆಗಳು. ಮತ್ತಾವ ಪೀಠೋಪಕರಣಗಳೂ ಇಲ್ಲ. ವಿ.ಸೀ. ಯವರಿಗೆ ಬೆನ್ನಿಗೆ / ತಲೆಗೆ ಇಟ್ಟುಕೊಳ್ಳಲು ದಿಂಬು. ಯಾರೇ ಬಂದರೂ ಚಾಪೆಯೇ ಆಸನ. ಅಲ್ಲಿಯ ಪವಿತ್ರ ವಾತಾವರಣದಿಂದಾಗಿ ಆಸನ ಅಲ್ಲಿ ಗೌಣ. ಅವರೊಡನೆ ಕೆಲಸಮಯ ಕಳೆದಾಗ ನಮ್ಮಂಥವರಿಗೆ ಧನ್ಯತೆಯ ಭಾವ, ಇನ್ನು ಕೆಲವರಿಗೆ ಸ್ನೇಹದ ಸಿಂಚರ, ಮತ್ತೂ ಕೆಲವರಿಗೆ ವೈಚಾರಿಕ ರಸದೂಟ.

ವಿ.ಸೀ. ಯವರ ನಿಸರ್ಗ ಪ್ರೇಮ ಅದಮ್ಯವಾದದ್ದು. ಹೊನ್ನಾವರದಲ್ಲಿ ಸಂಜೆ 'ವಾಕಿಂಗ್'ಗೆ ನದೀತೀರಕ್ಕೆ ಹೋದಾಗ; ನದಿಯ ಪ್ರವಾಹದ ಎರಡೂ ದಂಡೆಗಳ ಮೇಲಿನ ತೆಂಗಿನ ಮರಗಳ, ನದಿಯಲ್ಲಿ ಹೋಗುತ್ತಿದ್ದ ಸಣ್ಣಸಣ್ಣ ದೋಣಿಗಳ, ದೂರದಿಂದ ಕಾಣುವ ನದಿ ಮತ್ತು ಸಮುದ್ರಗಳ ಸಂಗಮದ, ಹಾರಾಡುವ ಹಕ್ಕಿಗಳ, ಒಂದೇ ಎರಡೇ, ಕಾಣುವ ಎಲ್ಲ ಸಸ್ಯಗಳ, ಪ್ರಾಣಿಗಳ ವರ್ಣನೆ ಅವರಿಂದ ಕೇಳುವದೇ ಚೆಂದ. ಪ್ರತಿದಿನವೂ ಅವುಗಳಿಗೆ ಹೊಸ ವ್ಯಾಖ್ಯಾನ, ಹೊಸ ಹಿನ್ನೆಲೆ, ಬೇರೆ ಬೇರೆ ಕವಿಗಳ – ನಮ್ಮ ಹಾಗೂ ಪಾಶ್ಚಾತ್ಯ – ದೃಷ್ಟಿಕೋನ. ಶರಾವತಿಯ ಸೇತುವೆ ಪೂರ್ಣ ಮುಗಿದ ನಂತರ ಉದ್ದಕ್ಕೂ ಎರಡೂ ಕಡೆ ನಿಯಾನ್ ದೀಪ ಹಾಕಿಸಿದರೆ ಎಷ್ಟು ಸುಂದರವಾಗಿರಬಹುದೆಂದು ಕಲ್ಪಿಸಿ, ಊರಿನ ಹಿರಿಯ ನಾಯಕ ಧುರೀಣರಿಗೆ ಸೂಚನೆಯನ್ನು ಕೊಟ್ಟಿದ್ದರು. ದಶಕಗಳು ಕಳೆದರೂ ಆ ದಿಶೆಯಲ್ಲಿ ಪ್ರಯತ್ನ ನಡೆಯದೇ ಇರುವುದು ಸೌಂದರ್ಯಪ್ರಜ್ಞೆಯ ಕೊರತೆಯ ದ್ಯೋತಕವೊ ಏನೋ! ಆ ಮೆದುಳು ಅದ್ಭುತವಾದದ್ದು. ಮೇಲೆ ಕಾಣುವುದು ಸಮುದ್ರದ

ಹಿಮಪರ್ವತದ ತುದಿಯಂತೆ. ಅದರ ಆಳ-ಅಗಲ ತಿಳಿಯಲಸಾಧ್ಯ. ಆ ಮನಸ್ಸು ಬದರೀನಾಥದ ಅಲಕನಂದಾ ನೀರಿನಂತೆ ನಿರ್ಮಲ.

ಅವರ ವಯಸ್ಸು ಹುರುಪು ಹುಮ್ಮಸ್ಸಿಗೆ ಅಡ್ಡಬಾರದು. ಒಂದು ಸಂಜೆ – ಶುಕ್ಲಪಕ್ಷ ಚತುರ್ದಶಿ – ಕಾಲೇಜಿನಿಂದ ಮನೆಗೆ ಹೊರಟಾಗ, ಹುಣ್ಣಿಮೆಯ ಬೆಳದಿಂಗಳ ಮಾತು ಬಂದು, ಸಮುದ್ರ ತೀರದಲ್ಲಿ ಹುಣ್ಣಿಮೆಯ ಚಂದ್ರನ, ಬೆಳದಿಂಗಳ ನೋಟ ನೋಡತಕ್ಕಂಥದು ಇತ್ಯಾದಿ ಹೇಳುತ್ತಾ "....ಅಲ್ಲರೀ ಇವತ್ತು ಚತುರ್ದಶಿ, ನಾವೇಕೆ ನದಿದಾಟಿ ಸಮುದ್ರ ದಂಡೆಗೆ ಹೋಗಬಾರದು....?" ಅನ್ನೋದೆ! ನಾನೂ ಅದುವರೆಗೆ ಆ ದೃಶ್ಯ ಕಂಡಿರಲಿಲ್ಲ. ಕೂಡಲೇ "....ಆಗಲಿ ಸರ್, ದೋಣಿ ವ್ಯವಸ್ಥೆ ಮಾಡುತ್ತೇನೆ...." ಎಂದೆ. ಉತ್ತರವಾಗಿ ಮುಗುಳುನಗುತ್ತಾ "....ಬರೀ ಒಣ ಒಣ ವ್ಯವಸ್ಥೆ ಅಲ್ರೀ.... ಏನಾದರೂ ತಿಂಡಿ...." ಏನನ್ನಬೇಕು ಈ ಮನಸ್ಸಿಗೆ! ಸಂಜೆ ಏಳುಗಂಟೆಗೆ ನದಿದಾಟಿ ಸಮುದ್ರ ದಂಡೆಯ ಮೇಲೆ ೨ ತಾಸು ಕಾಲ ಕಳೆದು ತಿಂಡಿ ಖರ್ಚುಮಾಡಿ ಕಾಫಿ ಕುಡಿದು ಸುಮಧುರ ನೆನಪಿನೊಂದಿಗೆ ಹಿಂದಿರುಗಿದೆವು.

ಇದಾದ ಸುಮಾರು ೧೦ ವರ್ಷಗಳ ನಂತರ ವಿ.ಸೀ. ಯವರು ಹೊನ್ನಾವರದ ನಮ್ಮ ಮನೆಯ ಅಂಗಳದಲ್ಲಿ ಕುಳಿತು ಹುಣ್ಣಿಮೆಯ ರಾತ್ರಿ ೨ ಗಂಟೆಯವರೆಗೆ ಆ ಶುದ್ಧ ಬೆಳದಿಂಗಳನ್ನು – ಫೆಬ್ರುವರಿಯಲ್ಲಿ – ನೋಡಿ, ಆಗೀಗ ಅತ್ತಿಂದಿತ್ತ ತಿರುಗಾಡುತ್ತಾ "....beautiful.... beautiful...." ಎನ್ನುತ್ತಾ ಸಂತೋಷಪಟ್ಟಿದ್ದನ್ನು ನೋಡಿ ನಾನು ಮತ್ತು ಮಿತ್ರ ಎಂ. ವಿ. ವೆಂಕಟೇಶಮೂರ್ತಿ ಸಂತಸಪಟ್ಟಿದ್ದೇವೆ. ಅದೊಂದು ಅವಿಸ್ಮರಣೀಯ, ಆದರೆ ಅಷ್ಟೇ ವಿಚಿತ್ರ ಸಂದರ್ಭ. ಆ ವರ್ಷ ನಮ್ಮ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಲನದ ಮುಖ್ಯ ಅತಿಥಿಯ ಆಯ್ಕೆ ಬಗ್ಗೆ ವಿವಾದ ಉಂಟಾಗಿ, "ವಿ.ಸೀ. ಯವರು ಬಂದರೆ ಮಾತ್ರ ನಮ್ಮ ಸಹಕಾರ, ಇಲ್ಲವಾದರೆ ಇಲ್ಲ"ವೆಂದು ವಿದ್ಯಾರ್ಥಿ ಮುಖಂಡರು ಹೇಳಿದಾಗ, ವಿ.ಸೀ. ಯವರನ್ನು ಒಪ್ಪಿಸಿ ಕರೆದುಕೊಂಡು ಬರುವ ಭಾರ ಸ್ವಾಭಾವಿಕವಾಗಿ ನನ್ನದಾಯಿತು. ಆಗ ಅವರ ಆರೋಗ್ಯ ತೃಪ್ತಿಕರವಾಗಿರಲಿಲ್ಲ. ೧೯೬೮ರಲ್ಲಿ ಅವರು ನಿವೃತ್ತರಾಗಿ ಹೋದನಂತರ ಮರಳಿ ಹೊನ್ನಾವರಕ್ಕೆ ಬಂದಿರಲಿಲ್ಲ. ಅವರಿಗೆ ಅತ್ಯಂತ ಪ್ರಿಯವಾಗಿದ್ದ ನದಿ ಹಾಗೂ ಸಮುದ್ರತೀರ ಮತ್ತೊಮ್ಮೆ ಅವರಿಗೆ ತೋರಿಸಬೇಕೆಂಬ ಇಚ್ಛೆ ನನಗೂ ಇತ್ತು. ನನ್ನ ಬಲವಂತಕ್ಕೆ ಒಪ್ಪಿ "....You know what you are doing....? You may have to bring back my corpse...." ಎಂದು ನಕ್ಕಿದ್ದರು. ಏನೋ ಹುಚ್ಚುಧೈರ್ಯದಿಂದ ನಗುತ್ತಾ "ಹಾಗೇ ಆಗಲಿ ಸರ್...." ಎಂದೆ. ಮಿತ್ರ ಎಂ. ವಿ. ವೆಂಕಟೇಶಮೂರ್ತಿಯವರನ್ನು ಒಪ್ಪಿಸಿ, ಅವರನ್ನೂ ಜೊತೆಗೆ ಬರುವಂತೆ ವಿನಂತಿಸಿದೆ. ಆಗ ಹೊನ್ನಾವರಕ್ಕೆ ಬಂದಾಗ ನಮ್ಮ ಮನೆಯಲ್ಲಿಯೇ ಉಳಿಯಲು ವ್ಯವಸ್ಥೆಯಾಗಿತ್ತು. ಆ ರಾತ್ರಿ ೨ ಗಂಟೆ ಸುಮಾರಿಗೆ ಎದ್ದು ಹೊರಗೆ ಬಂದು ಕುಳಿತು ಬೆಳದಿಂಗಳನ್ನು ನೋಡಿ ತೆಗೆದ ಉದ್ಗಾರವದು! ಕಾಲೇಜಿನ ಎಲ್ಲ ಕಾರ್ಯಕ್ರಮಗಳೂ ಚೆನ್ನಾಗಿಯೇ ನಡೆದವು. ಮರುದಿನ ಕಾಲೇಜಿನ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿ, ಹಳೇ ವಿದ್ಯಾರ್ಥಿಗಳು ಹಾಗೂ ಕೆಲವು ನಾಗರಿಕರನ್ನುದ್ದೇಶಿಸಿ ತಮ್ಮ ಸಹಜ ಧಾಟಿಯಲ್ಲಿ ಮಾತನಾಡಿದರು. ಅದೇ ಅವರ ಕೊನೆಯ ಸಾರ್ವಜನಿಕ ಭಾಷಣ. ಸಂಜೆ ಕಾಸರಕೋಡಿನ

ಸಮುದ್ರತೀರಕ್ಕೆ ಹೋಗಿ, ನೆನಪುಗಳನ್ನು ಮೆಲುಕು ಹಾಕುತ್ತಾ ಉದ್ದಕ್ಕೂ ನಡೆದು ಹರ್ಷಪಟ್ಟರು. ಮರಳಿ ಬೆಂಗಳೂರಿಗೆ, ದೇವರ ದಯೆಯಿಂದ ಏನೂ ತೊಂದರೆ ಆಗದೇ ಅವರ ಮನೆ ಮುಟ್ಟಿದಾಗ, ನನಗೆ ಸಮಾಧಾನ ಹಾಗೂ ಸಂತೃಪ್ತಿ.

ವಿ.ಸೀ. ಯವರಿಗೆ ಪಶ್ಚಿಮ ಕರಾವಳಿಯ ಬಗ್ಗೆ ವಿಶೇಷ ಒಲವು, ಆಕರ್ಷಣೆ. ಧಾರೇಶ್ವರದ, ಕಾಸರಕೋಡಿನ 'ಬೀಚ್'ಗಳ ಮೇಲೆ ಅಡ್ಡಾಡುತ್ತಾ ಅದೆಷ್ಟು ಸಂತೋಷ ಅವರಿಗೆ! ಆಗ ಅವು ಕಲುಷಿತಗೊಳ್ಳದೇ ಅಷ್ಟೇ ಸುಂದರವಾಗಿದ್ದವು. ಧಾರೇಶ್ವರದ ಬೀಚನ್ನು ಟೆನಿಸ್ ಆಟದ ಮೈದಾನಕ್ಕೆ ಹೋಲಿಸಿದ್ದಲ್ಲದೇ "....ಇಲ್ಲಿ ಒಳ್ಳೇ running race ನಡೆಸಬಹುದಪ್ಪ...." ಎಂದಿದ್ದರು. ಮರವಂತೆ ಸಮುದ್ರತೀರದ ಮೇಲೆ ಸಾಹಿತ್ಯ, ಕಲೆ, ನಾಟಕ, ನೃತ್ಯ ಇವೆಲ್ಲವುಗಳ ಉತ್ಸವ ಏರ್ಪಡಿಸಬೇಕೆಂಬ ಕನಸು ಕಂಡಿದ್ದರವರು. ಅದಕ್ಕೆಲ್ಲ ಹಣದ ಕೊರತೆ ಎಂಬ ಮಾತು ಬಂದಾಗ ಅವರದೇ ಸಲಹೆ: ರೆವೆನ್ಯೂ ಸ್ಟ್ಯಾಂಪಿನ ೧೦ ಪೈಸೆ ಮೌಲ್ಯ ಒಂದೇ ತೆರನಾಗಿರದೇ ಹಂತಗಳನ್ನಾಗಿ ಮಾಡಿ ಹೆಚ್ಚಿಸಬೇಕೆಂದು, ಹೆಚ್ಚಿನ ಆದಾಯ ಇಂಥ ಉತ್ಸವಗಳಿಗೆ ಮೀಸಲಾಗಿಡಬೇಕೆಂದು. ಅವರ ಅರ್ಥಶಾಸ್ತ್ರ ಜ್ಞಾನದ ವ್ಯಾವಹಾರಿಕತೆಯನ್ನು ಇದು ತೋರಿಸುತ್ತದೆ. (ಮೂರು ದಶಕಗಳ ಹಿಂದೆ ವಿ.ಸೀ. ಯವರು ಹೇಳುತ್ತಿದ್ದುದನ್ನು ಈಚೆಗೆ ಸರ್ಕಾರ ಮಾಡಿದೆಯಾದರೂ ಹೆಚ್ಚಿನ ಹಣಗಳಿಕೆ ಮಾತ್ರ ಆ ಉದ್ದೇಶಗಳಿಗೆ ವಿನಿಯೋಗವಾಗುವದಿಲ್ಲ) ಭಟ್ಕಳದಿಂದ ಮರವಂತೆ–ಕುಂದಾಪುರದಿಂದ ಉತ್ತರಕ್ಕೆ ೧೦–೧೫ ಕಿ.ಮಿ. ದೂರದ ಹೆದ್ದಾರಿಯ ಒಂದು ಕಡೆ ನದಿ ಮತ್ತೊಂದು ಕಡೆ ಅರಬ್ಬೀ ಸಮುದ್ರವಿದ್ದ ಅದ್ಭುತ ರಮ್ಯ ದೃಶ್ಯ ನಡುವಿನ ಪ್ರದೇಶದಲ್ಲಿ ಎಲ್ಲಾದರೂ ಒಂದು ಕಡೆ ಸಣ್ಣ ಮನೆಮಾಡಿ ವಾಸಿಸಬೇಕೆಂಬ ಅವರ ಅಂತರಾಳದ ಇಚ್ಛೆ ಬಹಳ ಜನರಿಗೆ ಗೊತ್ತಿರಲಾರದು. ಸಮುದ್ರತೀರದ ಮೇಲೆ ರಾಷ್ಟ್ರೀಯ ಮಟ್ಟದ ಕಲಾ ಉತ್ಸವ ನಡೆಸಬೇಕೆಂಬ ಅವರ ಹೆಬ್ಬಯಕೆ ಈಡೇರದಿದ್ದರೂ ಹೊನ್ನಾವರದಲ್ಲಿ ಸಣ್ಣ ಪ್ರಮಾಣದಲ್ಲಾದರೂ ಒಂದು ಕವಿ ಸಮ್ಮೇಲನ ನಡೆಸಿ ಜಿಲ್ಲೆಯ ಹಾಗೂ ರಾಜ್ಯದ ಕೆಲವು ಪ್ರಸಿದ್ಧ ಸಾಹಿತಿಗಳನ್ನು ನೋಡುವ ಕೇಳುವ ಸದವಕಾಶವನ್ನು ವಿದ್ಯಾರ್ಥಿಗಳಿಗೆ, ಊರಿನ ಸಾಹಿತ್ಯ ಪ್ರೇಮಿಗಳಿಗೆ ಒದಗಿಸಿಕೊಟ್ಟರು.

ವಿ.ಸೀ. ಹೊನ್ನಾವರದಲ್ಲಿದ್ದಾಗ, ಅವರು ಎಲ್ಲೆಲ್ಲಿ ಅತಿಥಿಗಳಾಗಿ ಭಾಷಣಕಾರರಾಗಿ ಹೋಗಿದ್ದಾರೋ, ಅಲ್ಲಲ್ಲೆಲ್ಲ ಅವರೊಡನೆ ನಾನೂ ಇರುತ್ತಿದ್ದೆ. ಅವರ ಪಾಂಡಿತ್ಯ, ವಾಗ್ವಿಲಾಸ ಕಂಡು ದಿಂಙ್ಮೂಢನಾಗಿದ್ದೇನೆ. ಮಾತು ಪ್ರಾರಂಭಿಸಿ ಕೆಲವು ನಿಮಿಷಗಳಲ್ಲಿ ಅವರ ಎರಡೂ ಕೈಗಳು ಕೋಟಿನ ಜೇಬುಗಳಲ್ಲಿ ಹೋದವೆಂದರೆ ಮಾತಿಗೆ 'ಕಾವು' ಬಂದಿತೆಂದರ್ಥ. ನಂತರ ನಿರರ್ಗಳವಾಗಿ ವಿಷಯದ ಬೆಳವಣಿಗೆ, ಹರವು, ಆಳ, ಸಂಬಂಧಿಸಿದ ಇತರ 'ಸರಕಿ'ನ ಹೆಣಿಕೆ, ಆಯಾ ವಿಷಯಗಳಲ್ಲಿನ ದಿಗ್ಗಜರ ವಿಚಾರಗಳ ನಿಖರ ಉದ್ಧರಣೆ – ಹೀಗೆ ಸಾಗಿ, ಕೊನೆಗೆ ಮೂಲ ವಿಷಯಕ್ಕೆ ಬಂದು ಮುಕ್ತಾಯವಾದಾಗ, ಕೇಳುಗರಿಗೆ ಯಾವುದೋ ಲೋಕಕ್ಕೆ ಹೋಗಿ ಬಂದ ಅವ್ಯಕ್ತ ಅನುಭವ. ಅವರ ಮಾತು ಜೀವಕಳೆಯಿಂದ ತುಂಬಿದಂಥಾದ್ದು. ಸಂದರ್ಭಕ್ಕೆ ತಕ್ಕಂತೆ ಮಾತಿನ ಮೇಲೆ ಒತ್ತು, ಆವೇಶ, ಭಾವ ಇವೆಲ್ಲವೂ ಮಾತಿಗೆ ವಿಶೇಷ ಮೆರಗು ಕೊಡುತ್ತಿದ್ದವು.

ಅವರ ಪಾಂಡಿತ್ಯದ, ನೆನಪಿನ ಶಕ್ತಿಯ ಒಂದು ಉದಾಹರಣೆ ಕೊಡಬಯಸುತ್ತೇನೆ. ಕರ್ನಾಟಕ ವಿಶ್ವವಿದ್ಯಾಲಯದವರು "ಸಾಹಿತ್ಯ: ಸಂಪ್ರದಾಯ – ಹೊಸಮಾರ್ಗ" ಈ ವಿಷಯ ಕುರಿತು ಧಾರವಾಡದಲ್ಲಿ ಮಾತನಾಡಬೇಕೆಂದೂ, ಅದನ್ನು ಮುದ್ರಿಸಿ ಪ್ರಕಟಿಸಲು, ಬರೆದು ಕಳಿಸಬೇಕೆಂದೂ ಕೇಳಿಕೊಂಡಿದ್ದರು. ವಿ.ಸೀ. ಯವರು ಬರೆದುಕೊಳ್ಳಲು ನನಗೆ ಹೇಳಿದಾಗ ಸಂತೋಷದಿಂದಲೇ ಒಪ್ಪಿಕೊಂಡೆ. 'ವಾಕಿಂಗ್' ಹೋಗಿ ಬಂದ ನಂತರ ಪ್ರತಿದಿನ ಕನಿಷ್ಠ ಅರ್ಧ ತಾಸು ಈ ಕೆಲಸ ಸಾಗಿತು. ಅದೊಂದು ಅದ್ಭುತ ಅನುಭವ. ಹೊರಗಿನ ಕೋಣೆಯಲ್ಲಿ ಕುರ್ಚಿಯ ಮೇಲೆ ಕುಳಿತು, ತಮ್ಮ ಎರಡೂ ಕೈಗಳಿಂದ ತಲೆ ಹಿಡಿದುಕೊಂಡು, ಒಮ್ಮೆ ಮೇಲೆ, ಒಮ್ಮೊಮ್ಮೆ ಎದುರಿಗೆ ನೋಡುತ್ತಾ ಉದ್ದಕ್ಕೂ ಪುಸ್ತಕ ಓದಿದ ಹಾಗೆ ಹೇಳುತ್ತಾ ಹೋಗುತ್ತಿದ್ದರು. ಒಂದು ಸಲವಾದರೂ ಪುಸ್ತಕವನ್ನಾಗಲಿ, ಪತ್ರಿಕೆಯನ್ನಾಗಲಿ ನೋಡಲಿಲ್ಲ! (ಅದು ೧೫೦ ಪುಟಗಳ ಪುಸ್ತಕವಾಗಿದೆ) ಆ ಪುಸ್ತಕ ಓದಿ ಅದರಲ್ಲಿಯ ವಿಷಯ ಪ್ರತಿಪಾದನೆ, ವಿಶ್ಲೇಷಣೆ, ತುಲನೆ, ಅನೇಕ ವಿಮರ್ಶಕರ, ಲೇಖಕರ ಅಭಿಪ್ರಾಯಗಳ ಸೇರ್ಪಡೆ, ಗಾತ್ರ ಇವೆಲ್ಲವುಗಳನ್ನು ಗ್ರಹಿಸಿದಾಗ ನನ್ನ ಈ ಅನುಭವಕ್ಕೆ ಹೆಚ್ಚಿನ ಮಹತ್ವ ಬರುವದರ ಜೊತೆ ಅವರ ವ್ಯಕ್ತಿತ್ವದ ಎತ್ತರದ ಬಗ್ಗೆಯೂ ಗೊತ್ತಾಗದಿರದು.

ಅದೇ ವಿಷಯ – 'ಸಾಹಿತ್ಯ: ಸಂಪ್ರದಾಯ–ಹೊಸಮಾರ್ಗ' – ಕುರಿತು ಉಪನ್ಯಾಸ ನೀಡಲು ವಿ.ಸೀ. ಧಾರವಾಡಕ್ಕೆ ಹೋದಾಗ ಪ್ರತಿಸಲದಂತೆ ನಾನೂ ಜೊತೆಗಿದ್ದೆ. ಉಪನ್ಯಾಸ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದು, ತಿರುಗಿ ಹೊರಡುವ ಮುಂಚೆ, ಸ್ನೇಹಿತರಾದ ಶಂ.ಬಾ. ಜೋಶಿ ಹಾಗೂ ದ.ರಾ. ಬೇಂದ್ರೆಯವರನ್ನು ಭೆಟ್ಟಿಯಾಗುವದೆಂದು ಮೊದಲೇ ನಿಶ್ಚಯವಾಗಿತ್ತು. ಅದಕ್ಕೂ ಮೊದಲು ಹೋಳೀಕಟ್ಟಿಯವರ ಆಗ್ರಹದ ಮೇರೆಗೆ, ಸ್ಥಳೀಯ ವಿದ್ಯಾರಣ್ಯ ಹೈಸ್ಕೂಲಲ್ಲಿ – ನನ್ನ ಹೆಂಡತಿ ಕಲಿತ ಶಾಲೆ – ಶಿಕ್ಷಕರನ್ನು ಹಾಗೂ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಆಗ ನನ್ನ ಹೆಂಡತಿ ಧಾರವಾಡದಲ್ಲೇ – ಅಕೆಯ ತವರು ಮನೆ – ಇದ್ದದ್ದರಿಂದ ಅಕೆಯೂ ಹೆಮ್ಮೆಯಿಂದ ಸಭೆಯಲ್ಲಿ ಹಾಜರಿದ್ದಳು. ಬೇಂದ್ರೆಯವರಿಗೆ ಹಾಗೂ ಜೋಶಿಯವರಿಗೆ ಮೊದಲೇ ಸೂಚನೆಕೊಟ್ಟು ತರುವಾಯ ಸಾಧನಕೇರಿಗೆ ಹೊರಟೆವು. ಮೊದಲು ಜೋಶಿಯವರ ಮನೆಗೆ ಹೋಗಿ ಉಭಯಕುಶಲೋಪರಿ ಮಾತನಾಡಿ, ಅಲ್ಲಿಂದ ಹತ್ತಿರದಲ್ಲೇ ಇದ್ದ ಬೇಂದ್ರೆಯವರ ಮನೆಗೆ ಹೊರಟಾಗ ಜೋಶಿ ನಮ್ಮೊಡನೆ ಮಾತನಾಡುತ್ತಾ ಬಂದು ಬೇಂದ್ರೆಯವರ ಮನೆಯ ಒಳಗೂ ಪ್ರವೇಶಿಸಿದರು. ಅದೊಂದು ಅಘಟಿತ ಘಟನೆ! ಬೇಂದ್ರೆ ಮತ್ತು ಜೋಶಿಯವರ ವೈರತ್ವ ಬಹಳ ಜನರಿಗೆ ಗೊತ್ತಿದ್ದ ಸಂಗತಿ. ಹೀಗಿದ್ದಾಗ ಜೋಶಿಯವರು ಬೇಂದ್ರೆಯವರ ಮನೆಯೊಳಗೆ ಬರುವುದು ಒಂದು ಪವಾಡವೇ! "....ಅಂತೂ ಈ ದಶಕದ ಪವಾಡಕ್ಕೆ ನಾನು ಕಾರಣನಾದೆ...." ಎಂದು ವಿ.ಸೀ. ನಕ್ಕರು.

ಹೀಗೊಮ್ಮೆ ವಿ.ಸೀ.ಯವರ ಜೊತೆ ಹೋದಾಗ ವಿಚಿತ್ರ ಪೇಚಿನ ಸ್ಥಿತಿ ಎದುರಿಸುವಂತಾಯಿತು. ಕುಮಟಾ ಕಾಲೇಜಿನಲ್ಲಿ ಪ್ರಾಧ್ಯಾಪಕರೂ, ಜಾನಪದ ಸಾಹಿತ್ಯದಲ್ಲಿ ಹೆಸರು ಮಾಡಿದವರೂ ಆದ ಎಲ್. ಆರ್. ಹೆಗಡೆ, ವಿ.ಸೀ.ಯವರನ್ನು ತಮ್ಮೂರಾದ

ಹೆಗಡೆಗೆ – ಕುಮಟಾ ಹತ್ತಿರದ ಸಣ್ಣಹಳ್ಳಿ – ಆಮಂತ್ರಿಸಿದರು. ಅಲ್ಲಿ ಪ್ರಾಥಮಿಕ ಶಾಲೆಯ ವಿಶೇಷ ಉತ್ಸವ. ಒಲ್ಲದ ಮನಸ್ಸಿನಿಂದ ಹೆಗಡೆಯವರ ಸ್ನೇಹಕ್ಕೆ ಕಟ್ಟುಬಿದ್ದು ಒಪ್ಪಿದ್ದರಿವರು. ಅದು ಸಂಜೆ ಕಾರ್ಯಕ್ರಮ. ಅಂದು ನಮ್ಮ ಮನೆಯಲ್ಲಿ ತಾಯಿ ಒಬ್ಬರೇ ಇದ್ದರಲ್ಲದೇ ರಾತ್ರಿ ವಿಶೇಷ ಪೂಜಾ ಕಾರ್ಯಕ್ರಮ. ಆ ಕಾರಣಕ್ಕಾಗಿ ಹೆಗಡೆಗೆ ನಾನು ಬರುವದಿಲ್ಲೆಂದೆ. ತಕ್ಷಣ ಹುಸಿಕೋಪದಿಂದ "ಏನ್ರೀ ಅಂಥಾ ಪೂಜೆ....? ಬೇಗ ಬಂದು ಬಿಡೋಣ ನಡೀರಿ...." ಎಂದು ಒತ್ತಾಯಿಸಿದಾಗ ಉಪಾಯವಿಲ್ಲದೇ ಹೊರಟೆ. ದಾರಿಯಲ್ಲಿ "....ಏನಪ್ಪಾ ಈ Primary School ಮಕ್ಕಳಿಗೆ ಏನೂಂತ ಹೇಳಬೇಕಪ್ಪಾ...." ಎಂದು ನನ್ನ ಕಡೆ ನೋಡಿದಾಗ ಥಟ್ಟನೆ ಅದೇಕೋ ನಕ್ಕುಬಿಟ್ಟೆ. "....ಏನ್ರೀ ನನ್ನ ಸಂಕಟ ನನಗೆ, ನಿಮಗೆ ತಮಾಷೆನಾ?" ಎಂದು ಗದರಿಸಿದರು. ಕಾರ್ಯಕ್ರಮ ಶುರುವಾಯಿತು. ಮುಖ್ಯ ಅತಿಥಿಯೊಡನೆ ಹೋಗಿದ್ದೆನಾದ್ದರಿಂದ ನನಗೆ ಮುಂದಿನ ಸಾಲಿನಲ್ಲಿ ಆಸನ. ಆದರೆ ಅಂದು ಮಾತ್ರ ಅವರ ಮಾತಿನಲ್ಲಿ ನನಗೆ ಏನೂ ಆಸಕ್ತಿ ಇರಲಿಲ್ಲ. ನನ್ನ ಗಮನ ಸಮಯದ ಕಡೆಗೆ. ನನ್ನ ಸಮಯ ಮೀರುತ್ತಿದ್ದಂತೆ ಸಹಜವಾಗಿ ನಾನು ನನ್ನ ವಾಚು ನೋಡಿದೆ. ಭಾಷಣ ಮಾಡುತ್ತಿದ್ದ ವಿ.ಸೀ. ಅದನ್ನು ಗಮನಿಸಿ, ತಕ್ಷಣ ಮಾತು ನಿಲ್ಲಿಸಿ "....ಹೌದರಿ, ನನಗೆ ಗೊತ್ತಿದೆ, ಟೈಮಾಯಿತು, ನೀವೇನೂ ವಾಚ್ ನೋಡಬೇಕಾದ್ದಿಲ್ಲ...." ಎಂದಾಗ ನನ್ನ ಸ್ಥಿತಿ!

ವಿ.ಸೀ.ಯವರಿಗಿಂತ ನಾನು ಸುಮಾರು ೪೦ ವರ್ಷ ಕಿರಿಯವನು. ಅದಕ್ಕಿಂತ ಹೆಚ್ಚಾಗಿ, ಜ್ಞಾನ–ಅನುಭವಗಳ ದೃಷ್ಟಿಯಿಂದ ಬಹಳ ಚಿಕ್ಕವನು. ಅವರೆಂದೂ ಈ ಅಂತರವನ್ನು ತೋರುವ ರೀತಿ ನಡೆದುಕೊಂಡದ್ದಿಲ್ಲ. (ಇತರ ಯಾರೊಡನೆಯೂ ಅಷ್ಟೆ) ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಿ.ವಿ.ಜಿ., ಕೆ. ವಿ. ಅಯ್ಯರ್ ಇವರ ಮನೆಗೆ ಕರೆದುಕೊಂಡು ಹೋಗಿ "...This is my young friend...." ಎಂದು ಪರಿಚಯಿಸಿ ಕೊಟ್ಟಾಗ ನನಗೆ ಅವ್ಯಕ್ತ ಆನಂದ ಹಾಗೂ ಹೆಮ್ಮೆ. ವಿ. ಕೃ. ಗೋಕಾಕರು ಆಗ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ. ಒಂದು ದಿನ ವಿ.ಸೀ. "ಏನ್ರೀ ಗೋಕಾಕರನ್ನ ಭೇಟ್ಟಿಯಾಗ್ತಿರೇನ್ರೀ....?" ಎಂದಾಗ ಬೇಡವೆನ್ನುತ್ತೇನೆಯೆ? ಅವರಿಗೆ ತಿಳಿಸಿ ಹೊರಟೆವು. ಮಹಾರಾಣಿ ಕಾಲೇಜಿನ ಪಕ್ಕದ ಕಂಪೌಂಡಿನಲ್ಲಿಯ ಹಳೆಯ ಕಲ್ಲಿನ ಕಟ್ಟಡ ಅವರ ಅಧಿಕೃತ ನಿವಾಸ. ಗೋಕಾಕರು ಆತ್ಮೀಯವಾಗಿ ಹಾಗೂ ಗೌರವದಿಂದ ಸ್ವಾಗತ ಕೋರಿದರು. ಅಲ್ಲೂ ಅಷ್ಟೇ "....This is my young friend...." ಅಷ್ಟಕ್ಕೇ ನಿಲ್ಲದೇ "....ನಿಮ್ಮ ಧಾರವಾಡದವರ್ರೀಪಾ...." ಎಂದು ನಕ್ಕರು. ಅವರಿಬ್ಬರ ಸಂಭಾಷಣೆ ಪೂರ್ಣ ಇಂಗ್ಲಿಷ್ ಸಾಹಿತ್ಯಕ್ಕೆ ಸೀಮಿತವಾಗಿತ್ತು. ನಾನು ಮೂಕಪ್ರೇಕ್ಷಕ. ಗೋಕಾಕರು ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾಗಿದ್ದಾಗ, ನಾನು ಅಲ್ಲಿ ವಿದ್ಯಾರ್ಥಿ. ಅವರ ಪ್ರಿನ್ಸಿಪಾಲಗಿರಿಯನ್ನು, ಭಾಷಣದ ಠೀವಿಯನ್ನು ನೋಡಿದವನೇ. ಆದರೆ ಇಲ್ಲಿಯ ಸನ್ನಿವೇಶ ಬೇರೆಯೇ. ಆ ಹೆಸರಾಂತ ಗೋಕಾಕರು ವಿ.ಸೀ. ಯವರೊಡನೆ, ವಿದ್ಯಾರ್ಥಿಗಳು ಶಿಕ್ಷಕರೆದುರು ತಡವರಿಸುವಂತೆ ಮಾತನಾಡುತ್ತಿದ್ದದ್ದನ್ನು ಗಮನಿಸಿ ಆಶ್ಚರ್ಯವಾಗಿತ್ತು. ಹೊರಗೆ ಬಂದ ನಂತರ ಕೇಳಿಯೇ ಬಿಟ್ಟೆ ಹೀಗೇಕೆಂದು. ವಿ.ಸೀ. ಜೋರಾಗಿ ನಕ್ಕು "....ಪರವಾಗಿಲ್ಲರೀ – not bad...hm..." ಎಂದಾಗ ಅವರ ಮತ್ತೂ ಒಂದು ಮುಖದ ಪರಿಚಯವಾಗಿತ್ತೆನಗೆ.

ಕೆ. ವಿ. ಅಯ್ಯರ್ ವಿ.ಸೀ.ಯವರ ಆಪ್ತ ಸ್ನೇಹಿತರಲ್ಲೊಬ್ಬರು. ಅವರ ಪರಿಚಯ ಮಾಡಿಕೊಟ್ಟದ್ದಲ್ಲದೇ, ನನ್ನ ಕಾಲು ನೋವಿನ ಚಿಕಿತ್ಸೆಗಾಗಿ, ಅವರಿಗೆ ಹೇಳಿ ಒಪ್ಪಿಸಿ ಒಂದು ತಿಂಗಳು ಅವರ ಮನೆಯಲ್ಲೇ – ಒಂದು ಕೋಣೆಯಲ್ಲಿ ಇರುವ ವ್ಯವಸ್ಥೆ ಮಾಡಿದರು. ಆ ರೀತಿ ಇನ್ನೂ ಕೆಲವರಿದ್ದರು. ಊಟ, ತಿಂಡಿ, ಕಾಫಿ ಎಲ್ಲ ಅಲ್ಲೇ. ಊಟವಂತೂ ಅಯ್ಯರ ಮತ್ತು ಕುಟುಂಬದವರ ಜೊತೆಯಲ್ಲೇ. ಅದೊಂದು ವಿಶಿಷ್ಟ ಅನುಭವ. ಆ ಅವಧಿಯಲ್ಲಿ ಅಯ್ಯರ ಅವರ ವ್ಯಕ್ತಿತ್ವದ ಪರಿಚಯ ತಕ್ಕಮಟ್ಟಿಗೆ ಆಯಿತೆನ್ನಬಹುದು. ಅವರ ಮಾತು ಬಹಳ ಮೃದು, ಮಿತಭಾಷಿ. ಮಿಲಿಟರಿ ಶಿಸ್ತು. ಆಗ 'ಸಮುದ್ಯತಾ' ಕಥಾ ಸಂಕಲನದ ಮುದ್ರಣ ನಡೆದಿತ್ತು. ಪ್ರತಿದಿನ ರಾತ್ರಿ ಊಟವಾದ ನಂತರ "ಕೃಷ್ಣಮೂರ್ತಿ...." (ನನ್ನನ್ನು ಕೃಷ್ಣಮೂರ್ತಿ ಎಂದು ಕರೆದದ್ದು ಅವರೊಬ್ಬರೇ. ನಮ್ಮ ಕಡೆ ಅಡ್ಡೆಸರು ಕರೆಯುವುದೇ ರೂಢಿ) ಎಂದು ಕರೆಯುತ್ತಿದ್ದರು. ಅದೆಷ್ಟು ಮಧುರವಾಗಿತ್ತೆಂದರೆ ಇಂದಿಗೂ ನನ್ನ ಕಿವಿ ಅದನ್ನು ಮರೆತಿಲ್ಲ. ಅವರ ಹೊರಗಿನ ಕೋಣೆಯಲ್ಲಿ 'ಸಮುದ್ಯತಾ'ದ ಒಂದೊಂದು ಕಥೆಯ ಭಾಗ ಓದಿ ಹೇಳುತ್ತಿದ್ದಾಗ ಆ ಇಂಪಾದ ಭಾವನೆಗಳಿಂದ ತುಂಬಿದ, ನಾಟ್ಯಶೈಲಿಯ ಓದು ಮನಸ್ಸಿನಾಳಕ್ಕೆ ಹೊಕ್ಕು ಮುದವನ್ನು ಕೊಡುತ್ತಿತ್ತು. ಅಲ್ಲಿಗೆ ಹೋದ ಮೊದಲನೆಯ ದಿನವೇ ಅವರಿಗೆ ಸ್ವಲ್ಪ ದುಡ್ಡು ಕೊಟ್ಟಿದ್ದೆ. ಹೊರಡುವ ದಿನ – ವಿ.ಸೀ.ಯವರ ಒಪ್ಪಿಗೆ ಪಡೆದು – ಬಿಲ್ ಕೇಳಿದಾಗ "ಏನಿಲ್ಲ, ಅವತ್ತು ಕೊಟ್ಟಿದ್ದೀಯಲ್ಲಪ್ಪಾ, ಸಾಕು ಅಷ್ಟೆ...." ಅಂದುಬಿಟ್ಟರು. ಎಂಥ ಔದಾರ್ಯ? ಅದಕ್ಕೇ ವಿ.ಸೀ. ಯವರ ಆಪ್ತರಲ್ಲೊಬ್ಬರು.

ವಿ.ಸೀ.ಯವರ ಪರಿಚಯ ಆದಾಗಿನಿಂದ ಅವರ ಕೊನೆಯುಸಿರಿನವರೆಗೆ ಪ್ರತಿ ವರ್ಷ ಕನಿಷ್ಠ ಎರಡು ಸಾರೆಯಾದರೂ ನಾನು ಬೆಂಗಳೂರಿಗೆ ಬಂದು ಅವರ ಮನೆಯಲ್ಲಿ ಠಿಕಾಣಿ ಹಾಕುತ್ತಿದ್ದೆ. ಬಂದಾಗೆಲ್ಲ ಏನಿಲ್ಲೆಂದರೂ ೧೫–೨೦ ದಿನ ವಾಸ್ತವ್ಯ. ವಿ.ಸೀ. ಯವರಲ್ಲದೇ ಅವರ ಪತ್ನಿ, ಮಕ್ಕಳು, ಸೊಸೆಂದಿರು ಎಲ್ಲರೂ ಪ್ರೀತಿ ಆದರಗಳ ಧಾರೆಯನ್ನೇ ಎರೆದಿದ್ದಾರೆ. ಅವರಿಗೆ ನಾನೆಷ್ಟು ಕೃತಜ್ಞನಾದರೂ ಕಡಿಮೆ. ನನ್ನ ಮುಖ್ಯ ಉದ್ದೇಶ ವಿ.ಸೀ.ಯವರೊಡನೆ ಇರುವದಾಗಿತ್ತು. ಪ್ರತಿದಿನ ಮುಂಜಾನೆ ಸುಮಾರು ೧೦ ಗಂಟೆಗೆ ಸಂಜೆ ೫ ಗಂಟೆಗೆ ವಾಕಿಂಗ್ ನಿತ್ಯಕ್ರಮ. ಗೆಳೆಯ ವೆಂಕಟೇಶಮೂರ್ತಿ ಬ್ಯಾಂಕಿಗೆ ಹೋಗುವ ಮುನ್ನ ಅರ್ಧಗಂಟೆಯಾದರೂ ಇದ್ದು, ಬರೆದುಕೊಳ್ಳುವದು ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದರು. ರಜೆ ಇದ್ದಾಗ ಅವರ ಹೆಚ್ಚಿನ ಸಮಯ ವಿ.ಸೀ.ಯವರ ಮನೆಯಲ್ಲೇ.

ವಿ.ಸೀ. ಯವರ ಆರೋಗ್ಯ ಸರಿ ಇರುವವರೆಗೆ ನ್ಯಾಷನಲ್ ಹೈಸ್ಕೂಲು ಮೈದಾನಕ್ಕೆ ಅಥವಾ ಲಾಲ್‌ಬಾಗಿಗೆ ಹೋಗಿ ಅರ್ಧತಾಸು – ಲಾಲ್‌ಬಾಗದಲ್ಲಿ ಮಾತ್ರ ಕನಿಷ್ಠ ಒಂದು ತಾಸು – ಕುಳಿತು ಬರುವುದು ವಾಡಿಕೆ. ಆರೋಗ್ಯ ಕ್ಷೀಣಿಸಿದಂತೆ ಚಾಮರಾಜಪೇಟೆಯ ರಾಮೇಶ್ವರ ದೇವಸ್ಥಾನದವರೆಗೆ ಮಾತ್ರ. ದಾರಿಯುದ್ದಕ್ಕೂ 'ನಮಸ್ಕಾರ', 'ಚೆನ್ನಾಗಿದ್ದೀರಾ....?' ಇತ್ಯಾದಿ ಬಿಡುವಿಲ್ಲದೇ ನಡೆಯುವ ಸ್ಪಂದನ. ಅದಾವುದೂ ಇಲ್ಲದಿದ್ದಾಗ ಹಳೆಯ ನೆನಪುಗಳು, ಯಾವುದೋ ವ್ಯಕ್ತಿಯ, ಸಾಹಿತ್ಯ ಕೃತಿಯ ಹಿರಿಮೆ ಕೊಂಡಾಡುವುದು ಇತ್ಯಾದಿ.

ಒಂದು ದಿನ ಹೀಗೇ ಮಾತನಾಡುತ್ತಿದ್ದಾಗ ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರ ಬಗ್ಗೆ ಹೇಳುತ್ತಾ "…. You ought to see a man like that…. It is worth making a trip

to Tirupathi...." ಎಂದರು. ಮುಂದುವರಿಸಿ, "ಯಾಕ್ರೀ ನಾವು ತಿರುಪತಿಗೆ ಹೋಗಬಾರದು?" ಎನ್ನುತ್ತಾ ನನ್ನ ಮುಖ ನೋಡಿದರು. ಒಂದು ಕ್ಷಣ ಇವರೆಂಥ ಮನುಷ್ಯ, ಏನು ಮನಸ್ಸು ಎಂದೆನಿಸಿತು. ಸ್ವಲ್ಪ ವಿಚಾರ ಮಾಡಿ "....ಇಲ್ಲಾ ಸರ್, ನಮ್ಮ ಮನೆಯಲ್ಲಿ ಒಬ್ಬರೇ ಹೋಗುವ ಹಾಗಿಲ್ಲ. ಗಂಡ-ಹೆಂಡತಿ ಇಬ್ಬರೂ ಹೋಗುವ ಸಂಪ್ರದಾಯ...." ಎಂದೆ. ಅವರು ಅಷ್ಟಕ್ಕೆ ಸುಮ್ಮನಿರದೇ "..... ಅದಕ್ಕೇನಂತೆ? Send a telegram to your brother...." (ಆಗ ನನ್ನ ಹೆಂಡತಿ, ಆರು ತಿಂಗಳ ನಮ್ಮ ಮಗಳೊಡನೆ ಧಾರವಾಡದಲ್ಲಿದ್ದಳು) ಎಂದು ಸ್ವಲ್ಪ ಜೋರಾಗೇ ಹೇಳಿದಾಗ ಉಪಾಯವಿಲ್ಲದೇ "...ಆಗಲಿ ಸರ್...." ಎಂದೆ.

ವೈವೀಸಂಕಲ್ಪವೆಂಬಂತೆ ಗೆಳೆಯ ವೆಂಕಟೇಶಮೂರ್ತಿ ಅದೇ ಸಮಯದಲ್ಲಿ ಧಾರವಾಡಕ್ಕೆ ಹೊರಟಿದ್ದರು. ಅವರಿಗೆ ನನ್ನ ಹೆಂಡತಿ ಹಾಗೂ ಮಗಳನ್ನು ಕರೆದುಕೊಂಡು ಬರುವ ಜವಾಬ್ದಾರಿ ವಹಿಸಿ ಆಯಿತು. ವಿ.ಸೀ. ಅವರ ಪತ್ನಿ ಸರೋಜಮ್ಮ, ನಾನು, ನನ್ನ ಹೆಂಡತಿ ಮತ್ತು ಮಗಳು ತಿರುಪತಿಗೆ ಹೊರಟೂ ಆಯಿತು! ಶರ್ಮರಿಗೆ ನಮ್ಮ ಭೇಟಿಯ ಬಗ್ಗೆ ಮೊದಲೇ ತಿಳಿಸಲಾಗಿತ್ತು. ನಮಗಾಗಿ ಅವರ ಮಗ ಡಾ. ಜಯಂತರು – ವೆಂಕಟೇಶ್ವರ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರು – ಬಸ್ ನಿಲ್ದಾಣದಲ್ಲಿ ಕಾಯುತ್ತಿದ್ದರು. ನಮ್ಮನ್ನು ಹತ್ತಿರದ ವಸತಿಗೃಹದ ಕೊಠಡಿಗೆ ಕರೆದೊಯ್ದು, ಮರುದಿನ ಮುಂಜಾನೆ ಬರುವದಾಗಿ ಹೇಳಿ, ಒಬ್ಬ ಯುವಕನನ್ನು ಪರಿಚಯಿಸಿ – ನಂತರ ತಿಳಿಯಿತು, ಆತ ಚಿತ್ತೂರು ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕನೆಂದು – ಆತ ಅಲ್ಲೇ ಇರುವನೆಂದೂ ನಮಗೇನೇ ಬೇಕಿದ್ದರೂ ಆತನಿಗೆ ಹೇಳಬೇಕೆಂದೂ ತಿಳಿಸಿ ಹೊರಟರು. ಮರುದಿನ ಮುಂಜಾನೆ ಬಂದು ಅನಂತಕೃಷ್ಣಶರ್ಮರು ಕೊಟ್ಟ ಒಂದು ಪತ್ರ – ಶ್ರೀ ವೆಂಕಟೇಶ್ವರ ದೇವಸ್ಥಾನದ ಮುಖ್ಯ ಆಡಳಿತಾಧಿಕಾರಿಗೆ ಬರೆದ ಪತ್ರ – ಕೊಟ್ಟು ದೇವರ ದರ್ಶನ ಮಾಡಿಕೊಂಡು ನಂತರ ಮನೆಗೆ ಬರಬೇಕೆಂದು ಹೇಳಿದ್ದಾರೆಂದು ತಿಳಿಸಿ ನಮ್ಮನ್ನು ಒಂದು ಟ್ಯಾಕ್ಸಿಯಲ್ಲಿ ಕೂಡ್ರಿಸಿ ಹೊರಟುಹೋದರು. ವಿ.ಸೀ.ಯವರಿಗೆ ಪತ್ರ ತೋರಿಸಿ ವಶೀಲಿ ಹಚ್ಚಿ ದರ್ಶನ ಮಾಡುವುದು ಬೇಡವಾಗಿತ್ತು. ಅದಕ್ಕಾಗಿ "ಏನಾದರೂ ಸೇವೆ ಮಾಡಿಸೋಣಪ್ಪ...." ಎಂದಾಗ "ಹಾಗೇ ಆಗಲಿ ಸರ್...." ಎಂದೆ. ಆದರೆ ನಡೆದದ್ದೇ ಬೇರೆ. ಅಂದು ೪೦೦ ರೂ. ಕೆಳಗಿನ ಎಲ್ಲ ಸೇವೆಗಳನ್ನೂ ರದ್ದು ಮಾಡಲಾಗಿದೆಯೆಂದು ಧ್ವನಿವರ್ಧಕ ಕೂಗುತ್ತಿತ್ತು. ಅಷ್ಟು ಹಣ ನಮ್ಮ ಹತ್ತಿರ ಇರಲಿಲ್ಲ. "....ಏನಪ್ಪಾ ಮಾಡೋದು...." ಎಂದು ಉಪಾಯವಿಲ್ಲದೇ ಪಾರುಪತ್ಯದಾರರಿಗೆ – ಮುಖ್ಯ ಆಡಳಿತಾಧಿಕಾರಿ – ಪತ್ರ ಮುಟ್ಟಿಸಿದಾಗ, ಅವರು ಕೂಡಲೇ ಗೌರವದಿಂದ ನೇರವಾಗಿ ಕರೆದುಕೊಂಡು ಹೋಗಿ ದೇವರ ಎದುರಿಗೇ ನಿಲ್ಲಿಸಿದರು! ದರ್ಶನ ಮಾಡಿಕೊಂಡು ಧನ್ಯತೆಯ ಭಾವದಿಂದ ಹೊರಬಂದು, ಬೆಟ್ಟ ಇಳಿದು ಟ್ಯಾಕ್ಸಿಯಲ್ಲಿ ಸೀದಾ ಶರ್ಮರ ಮನೆಗೆ ಹೋದಾಗ ಅವರಿಗೆಲ್ಲ, ಇಷ್ಟು ಬೇಗ ದರ್ಶನ ಹೇಗೆ ಲಭ್ಯವಾಯಿತೆಂದು ಆಶ್ಚರ್ಯ! ನಡೆದದ್ದನ್ನು ಹೇಳಿದಾಗ ಶರ್ಮರಾಡಿದ ಮಾತು: "....ನಾನು ಇಷ್ಟು ವರ್ಷಗಳಿಂದ ಇಲ್ಲಿದೀನಿ. ಎಷ್ಟೋ ಜನ ನೆಂಟರಿಷ್ಟರು ಬಂದು ಹೋಗ್ತಾರೆ. ಇದುವರೆಗೂ ನಾನು

ಯಾರಿಗೂ ಪತ್ರ ಕೊಟ್ಟಿಲ್ಲ. If I do not give it to V. Sitaramiah, to whom else should I give it....?" ಆಗ ಅವರಿಬ್ಬರ ಪರಸ್ಪರ ಸ್ನೇಹ–ಗೌರವದ ಮಟ್ಟ ಎಂತಹದೆಂಬುದರ ಅರಿವಾಯಿತು. ಶರ್ಮರದು ಕನ್ನಡ, ತೆಲುಗು, ಪ್ರಾಕೃತ, ಸಾಹಿತ್ಯ ಸಂಸ್ಕೃತ, ಸಂಗೀತ – ಇವೆಲ್ಲ ಕ್ಷೇತ್ರಗಳಲ್ಲಿ ಬಹುದೊಡ್ಡ ಹೆಸರು. ಅಂದು ಅವರೊಡನೆ ಒಂದು ತಾಸು ಕಳೆದ ನಂತರ ವಿ.ಸೀ. ಶರ್ಮರ ಬಗ್ಗೆ ಆಡಿದ ಮಾತಿನ ಸತ್ಯ ಗೊತ್ತಾಯಿತು. ಅವರ ಮನೆಯಲ್ಲಿ ಮೊದಲ ಬಾರಿ ನಾನು ಪುಳಿಯೋಗರೆ ತಿಂದೆ. ಆ ರುಚಿ ಮರೆಯಲು ಸಾಧ್ಯವೇ ಇಲ್ಲ. ಆನಂತರ ವಿ.ಸೀ.ಯವರಿಂದ 'ಪುಳಿಯೋಗರೆ' ಬಗ್ಗೆ ಪುಟ್ಟ, ಆದರೆ ಅಷ್ಟೇ ರುಚಿಕರ ವ್ಯಾಖ್ಯಾನ.

ವಿ.ಸೀ.ಯವರ ರಸಾಸ್ವಾದನೆ ಸಾಹಿತ್ಯ, ಕಲೆ, ನೃತ್ಯ, ನಾಟಕ ಇವುಗಳಿಗೆ ಮಾತ್ರ ಸೀಮಿತವಾಗಿರದೇ ಊಟ–ತಿಂಡಿಗಳಿಗೂ ಹರಡಿತ್ತೆನ್ನುವುದು ಅನೇಕರಿಗೆ ಗೊತ್ತಿದ್ದ ಸಂಗತಿ. ಅವರು, ಅವರ ಸ್ನೇಹಿತರು, ಇಡ್ಲಿ ಒಂದು ಹೊಟೆಲ್ಲಿನಲ್ಲಿ, ವಡೆ ಮತ್ತೊಂದರಲ್ಲಿ, ಕಾಫಿ ಇನ್ನೊಂದರಲ್ಲಿ – ಯಾವುದು ಎಲ್ಲಿ ಶ್ರೇಷ್ಠವೋ ಅಲ್ಲಿ – ಸೇವಿಸುತ್ತಿದ್ದರೆನ್ನುವುದು ತಮಾಷೆ ಎನಿಸಿದರೂ ಸತ್ಯವಾದದ್ದು. ಗುಣಮಟ್ಟದ ವಿಷಯದಲ್ಲಿ – ಅದು ಸಾಹಿತ್ಯವೇ ಇರಲಿ, ಊಟ–ತಿಂಡಿಯೇ ಆಗಿರಲಿ, ವೇಷಭೂಷಣವಾಗಿರಲಿ, ಉಪಯೋಗಿಸುವ ವಸ್ತುಗಳೇ ಆಗಿರಲಿ – ಅವರು ರಾಜಿ ಮಾಡಿಕೊಳ್ಳುವ ಮನುಷ್ಯನಲ್ಲ. ಅಲ್ಲಿ ಖರ್ಚು ಗೌಣ. ಅವರ ಶಬ್ದದಲ್ಲೇ ಹೇಳುವದಾದರೆ "....nothing less than the best...." ಅವರ ಪಂಚೆ, ಪೇಟಾ, ಪುಸ್ತಕಗಳ ಮುದ್ರಣ, ಭೇಟಿಕೊಡುವ ಹೊಟೆಲ್ಲುಗಳು, ಅಷ್ಟೇ ಏಕೆ ಸಿನಿಮಾಗಳು ಇದಕ್ಕೆ ಸಾಕ್ಷಿ. 'ಲಿಡೊ' ಚಿತ್ರಮಂದಿರದಲ್ಲಿ 'ಡಾ. ಝಿವಾಗೊ' ಸಿನಿಮಾ ನಡೀತಿತ್ತು. ಅದರ ಬಗ್ಗೆ ಪತ್ರಿಕೆಗಳಲ್ಲಿ ಓದಿದ್ದ ಅವರು "ಒಳ್ಳೇ ಸಿನೇಮಾ ಅಂತ ಕಾಣುತ್ತೆ, ಹೋಗೋಣವೆ....?" ನಾನು ಬೇಡ ಎನ್ನುತ್ತೇನೆಯೆ! ಗೆಳೆಯ ವೆಂಕಟೇಶಮೂರ್ತಿ, ನಾನು ಮತ್ತು ವಿ.ಸೀ. ಮೂವರೂ ಹೋಗುವದೆಂದು ಖಚಿತವಾಯಿತು. "ಸಿನೇಮಾ ನೋಡಿಕೊಂಡು ಊಟಾನೂ ಹೊಟೆಲ್ಲಿನಲ್ಲಿ ಮಾಡಿಕೊಂಡೇ ಬರೋದು. ಖರ್ಚೆಲ್ಲಾ ನನ್ನದು ತಿಳೀತಾ...." ಎಂದು ಅಪ್ಪಣೆಯಾಯಿತು. ಸಿನೇಮಾ ಚೆನ್ನಾಗೇ ಇತ್ತು. ದಾರಿಯಲ್ಲಿ 'ಬೃಂದಾವನ್'ನಲ್ಲಿ ಊಟ ಮುಗಿಸಿ ಮನೆಗೆ ಬಂದೆವು.

ವಿ.ಸೀ.ಯವರಿಗೂ ಬೆಂಗಳೂರಿನ ಸುಪ್ರಸಿದ್ಧ ಹೊಟೆಲ್ಲುಗಳಾದ ಎಂ.ಟಿ.ಆರ್ ಮತ್ತು ಬಳೇಪೇಟೆಯ ಶ್ರೀ ಕೃಷ್ಣಭವನ ಇವುಗಳಿಗೂ ವಿಶೇಷ ನಂಟು. ಅವುಗಳಲ್ಲಿಯ ತಿಂಡಿತಿನಿಸುಗಳ ರಸವತ್ತಾದ ವರ್ಣನೆ ಅವರ ಬಾಯಿಂದ ಎಷ್ಟೋ ಸಾರೆ ಕೇಳಿದ್ದೆ. ಒಂದು ಸಂಜೆ "....ನಡೀರಿ ಶ್ರೀಕೃಷ್ಣಭವನಕ್ಕೆ ಹೋಗೋಣ.... ದೋಸೆ ರುಚಿ ನೋಡುವಿರಂತೆ...." ಎಂದು ಹೊರಡಿಸಿದರು. ಹೊಟೆಲ್ ಪ್ರವೇಶಿಸಿದ ಕೂಡಲೇ 'ಗಲ್ಲೆ' ಮೇಲೆ ಕುಳಿತ ವ್ಯಕ್ತಿ ತಕ್ಷಣ ಎದ್ದು ಗೌರವದಿಂದ ನಮಸ್ಕರಿಸಿ "....ಬನ್ನಿ ಸಾರ್, ಬಹಳ ದಿನಾ ಆಯ್ತು ನಿಮ್ಮನ್ನೋಡಿ...." ಎಂದು ಮಾಲೀಕರಿಗೆ ಸುದ್ದಿ ಮುಟ್ಟಿಸಿದ. ಅವರೂ ಅಷ್ಟೇ ಗೌರವ ಆದರದಿಂದ ಬರಮಾಡಿಕೊಂಡು – ಗಂಡಿನ ಬೀಗರನ್ನು ಬರಮಾಡಿಕೊಂಡ ಅನುಭವ ನನಗೆ – ಮಹಡಿಯ ಮೇಲೆ ಕರೆದುಕೊಂಡು ಹೋಗಿ Special room ನಲ್ಲಿ

ಕೂಡಿಸಿದರು. ಉಭಯ ಕುಶಲೋಪರಿಯ ನಂತರ ಮಾಮೂಲಿನಂತೆ "....this is my young friend...." ಎಂದು ಪರಿಚಯಿಸಿ "....ನಿಮ್ಮ ಮಸಾಲೆ ದೋಸೆ ರುಚಿ ತೋರಿಸಲಿಕ್ಕೆ ಕರೆದುಕೊಂಡು ಬಂದೆ...." ಎಂದರು. ಆತ "ಸಾರಿ ಸಾರ್, ಈ ದಿನ Chief cook ರಜಾ. ದೋಸೆ ಸಾಧಾರಣ.... ನಿಮಗೆ ಬೇಡ ಸಾರ್..." ಎನ್ನುವದೆ! ವಿ.ಸೀ. ನನ್ನ ಕಡೆ ತಿರುಗಿ "....ನಿಮ್ಮ ಅದೃಷ್ಟ ಚೆನ್ನಾಗಿಲ್ರಿ. ನಾನೇನು ಮಾಡ್ಲಿ....?" ಎಂದು ನಕ್ಕರು. ಎಂಥ ಮಾನವೀಯ ಸಂಬಂಧ! ಮತ್ತೊಂದು ದಿನ ಎಂ.ಟಿ.ಆರ್ ಯಾತ್ರೆ ಆಯಿತು. ಅಲ್ಲೂ ಅದೇ ರೀತಿಯ ಸ್ವಾಗತ. ನನಗೋ ಆಶ್ಚರ್ಯ. ಎಲ್ಲರಿಗೂ ಗೊತ್ತಿದ್ದಂತೆ ಅಲ್ಲಿ ಮೊದಲು ನಿರೀಕ್ಷಣಾ ಕೊಠಡಿಯಲ್ಲಿ ಕುಳಿತು ಸರದಿಗಾಗಿ ಕಾಯಬೇಕು. ಆದರೆ ಯಜಮಾನರು, ವಿ.ಸೀ.ಯವರನ್ನು – ಜೊತೆಗೆ ನನ್ನನ್ನೂ – ಹಿಂದಿನ ಕೊಠಡಿಗೆ (ಅವರ ಕಛೇರಿ) ಕರೆದುಕೊಂಡು ಹೋಗಿ, ಮಾತುಕತೆ ಆದ ನಂತರ ಅಲ್ಲೇ ತಿಂಡಿ ಸರಬರಾಜು!

ವಿ.ಸೀ.ಯವರಿಗೆ ಪತ್ರವ್ಯವಹಾರವೂ ಪ್ರಿಯವಾದದ್ದೇ. ಹೊನ್ನಾವರ ಕಾಲೇಜಿಂದ ನಿವೃತ್ತಿ ಪಡೆದು ಬೆಂಗಳೂರಿಗೆ ಹೋದ ನಂತರ ನಿಯಮಿತವಾಗಿ ಬರೆಯುತ್ತಿದ್ದರು. ಆಗಲೇ ಅವರ ಅಕ್ಷರಗಳು ಓದಲಸಾಧ್ಯ ಮಟ್ಟಕ್ಕೆ ಬಂದಿದ್ದವು. ಹಲವಾರು ವರ್ಷ ಅವರ ಕೈಬರಹ ಓದಿದ ನನಗೆ, ಅವರ ಪತ್ರ ಓದಿ ಅರ್ಥಮಾಡಿಕೊಳ್ಳುವುದು ಸಾಧ್ಯವಾಗಿತ್ತೆಂಬುದು ಹೆಮ್ಮೆ ತಂದಿತ್ತು. ಸಾಮಾನ್ಯವಾಗಿ ನಾನೂ ಉತ್ತರ ಬರೆಯುತ್ತಿದ್ದೆ. ಒಮ್ಮೆ ಅದೇಕೋ – ಬಹುಶಃ ಆಲಸ್ಯದಿಂದಾಗಿ – ಬಹಳ ದಿನಗಳವರೆಗೆ ಬರೆಯದೇ ನಂತರ ಭೆಟ್ಟಿಯಾದಾಗ, ಸ್ವಲ್ಪ ಹುಸಿಕೋಪದಿಂದ "....ಏನ್ರೀ ಪತ್ರ ಬರೀಲೇ ಇಲ್ಲ...." ಎಂದು ಕೇಳಿಯೇ ಬಿಟ್ಟರು. "....ಇಲ್ಲಾ ಸರ್, ಏನೂ ವಿಷಯ ಇರಲಿಲ್ಲ.... ಅದಕ್ಕೆ...." ಎಂದು ರಾಗ ತೆಗೆದೆ. "ಪತ್ರ ಬರೀಲಿಕ್ಕೆ ವಿಷಯ ಯಾಕ್ರೀ ಬೇಕು.... ನಾನು ಜೀವಂತ ಇದ್ದೇನೆ, ನೀವು ಜೀವಂತ ಇದ್ದೀರೋ ಇಲ್ಲೋ....? ಅಂತ ಬರೆದರೆ ಸಾಕು...." ಎಂದು ನಗುವುದೆ? ಆ ಮನಸ್ಸನ್ನು ಏನೆಂದು ವರ್ಣಿಸಬೇಕು? ಶಬ್ದಗಳ ವೈಫಲ್ಯ ಇಂಥ ಸಂದರ್ಭಗಳಲ್ಲಿ ಸ್ಪಷ್ಟ.

ವಿ.ಸೀ. ಯವರಿಗೆ ಮೂಲವ್ಯಾಧಿಯ ತೊಂದರೆ ಬಹಳ ವರ್ಷಗಳಿಂದ ಇದ್ದು ಕೊನೆಗೊಮ್ಮೆ ಶಸ್ತ್ರಚಿಕಿತ್ಸೆ ಮಾಡಲೇಬೇಕಾದ ಪ್ರಸಂಗ ಬಂದಿತು. ಆಗ ನನಗೊಂದು ಪತ್ರ: "....ಈ ದಿನಾಂಕದಂದು ಶಸ್ತ್ರಚಿಕಿತ್ಸೆ ನಡೆಯಲಿದೆ...." ಬದುಕಿ ಉಳಿಯುತ್ತೇನೋ ಇಲ್ಲವೋ ಎಂಬ ಸಂದೇಹ ವ್ಯಕ್ತ. ನಾನು ಅಂದೇ ಬೆಂಗಳೂರಿಗೆ ಹೊರಟು ಬಂದೆ. ಆಸ್ಪತ್ರೆಯಲ್ಲಿ ಇಡೀ ದಿನ ಇರುತ್ತಿದ್ದಾಗ, ಒಮ್ಮೆ "ಅದೇಕೋ ಹಾಳು ಮೋಹ ಜೀವದ ಮೇಲೆ, ಅದಕ್ಕೇ ಬರೆದೆ...." ಎಂದಾಗ ನನ್ನ ಕಣ್ಣು ತೇವ. ಅವರನ್ನು ಕಾಣಲೆಂದು ಮಾಸ್ತಿಯವರು ಬಂದರು. ವಿ.ಸೀ. ಹಾಸಿಗೆಯಿಂದ ಎದ್ದು ಅವರನ್ನು ಬರಮಾಡಿಕೊಂಡಾಗ, ಮಾಸ್ತಿ ವಿ.ಸೀ.ಯವರನ್ನು ಅಪ್ಪಿಕೊಂಡು ಗಲ್ಲಕ್ಕೆ ಮುದ್ದಿಟ್ಟ ದೃಶ್ಯ ಮರೆಯಲಸಾಧ್ಯ. ನನ್ನ ಹತ್ತಿರ ಕೆಮೆರಾ ಇಲ್ಲವಲ್ಲೆಂದು ಬಹಳ ನೊಂದೆ. ಅದೇನು ವಾತ್ಸಲ್ಯಭರಿತ ಸಂಬಂಧ!

ವಿ.ಸೀ. ಇಂಗ್ಲೆಂಡಿಗೆ ಹೊರಡುವುದು ಖಚಿತವಾದಾಗಲೂ ಅದೇ ತರಹದ ಒಂದು ಪತ್ರ ಅವರಿಂದ ಬಂತು. ನನಗೂ ಅವರನ್ನು ಬೀಳ್ಕೊಡುವ ಆಸೆ, ಹೊರಟು ಬಂದೆ. ಅಲ್ಲಿಯೂ ಅವರ ವಿಧಿ ಕೈ ಕೊಟ್ಟಿತು. ಅಲ್ಲಿಗೆ ಹೋದ ಮರುದಿನವೇ ಲಕ್ವಹೊಡೆಯಬೇಕೆ!

ಏನೆಲ್ಲ – ಸಾಹಿತಿಗಳು, ದಾರ್ಶನಿಕರು ಕಲಿತ ಶಾಲಾ–ಕಾಲೇಜುಗಳನ್ನು, ಗ್ರಂಥಾಲಯಗಳನ್ನು, ಹೂದೋಟಗಳನ್ನು ನೋಡಬೇಕೆಂಬ – ಆಸೆ ಇಟ್ಟುಕೊಂಡುಹೋಗಿದ್ದರೋ, ಅದಾವುದೂ ಈಡೇರದೆ ಆಸ್ಪತ್ರೆ ಸೇರಬೇಕಾಯಿತು. ಅಲ್ಲಿ ಮಾತ್ರ ಅವರಿಗೆ ಅದೃಷ್ಟ ಒಲಿದಿತ್ತೆನ್ನಬಹುದು. ಶ್ರೇಷ್ಠಮಟ್ಟದ ಔಷಧ ಉಪಚಾರ ದೊರಕಿದ್ದರಿಂದ ಶೇಕಡ ೯೦ರಷ್ಟು ಸಾಮಾನ್ಯಸ್ಥಿತಿಗೆ ಬರುವಂತಾಯಿತು. ಅಂತಹ ಸ್ಥಿತಿಯಲ್ಲೂ ಅಲ್ಲಿಯ ಆಸ್ಪತ್ರೆಯ ವ್ಯವಸ್ಥೆ, ವೈದ್ಯರ, ದಾದಿಯರ ಸೇವಾನಿಷ್ಠೆ ಮೆಚ್ಚಿ ಮುಕ್ತಕಂಠದಿಂದ ಹೊಗಳಿದ್ದಲ್ಲದೇ, ಇದ್ದಷ್ಟು ಕಾಲ ಅವರೊಡನೆ ಬೇರೆಬೇರೆ ವಿಷಯ ಕುರಿತು ಚರ್ಚಿಸಿ ಅವರೆಲ್ಲರ ಪ್ರೀತಿ ಹಾಗೂ ಗೌರವಕ್ಕೆ ಪಾತ್ರರಾದರು.

ಆರ್ಥಿಕ ಮುಗ್ಗಟ್ಟು ವಿ.ಸೀ. ಯವರನ್ನು ಬಾಲ್ಯದಿಂದಲೂ ಕಾಡಿತ್ತು. ಅವರೆಂದೂ ಎದೆಗುಂದಲಿಲ್ಲ, ಸಿನಿಕತನ ಬೆಳೆಸಿಕೊಳ್ಳಲಿಲ್ಲ; ಸಮಾಜವನ್ನು ದೂಷಿಸಿ ಅದರಿಂದ ದೂರವಿದ್ದವರಲ್ಲ. ಹಣ, ಅವರ ಅಭಿರುಚಿಗೆ, ರಸಾಸ್ವಾದನೆಗೆ ಅಡ್ಡ ಬರಲಿಲ್ಲವೆಂದರೆ ತಪ್ಪಾಗಲಾರದು. ಆ ಬಗ್ಗೆ ಅವರು ತಲೆಕೆಡಿಸಿಕೊಂಡವರೂ ಅಲ್ಲ. "....I belong to the Expenditure School...." ಎಂದು ಆಗಾಗ ಅವರು ಹೇಳುತ್ತಿದ್ದುದು ವಸ್ತು ಸ್ಥಿತಿ. ಸಮಾಜದಲ್ಲಿ, ಅದರ ಕಟ್ಟಳೆಗಳಲ್ಲಿ ಅವರಿಗೆ ಅಪಾರ ನಂಬಿಕೆ. ದೇವರು–ಧರ್ಮ ಇವುಗಳಲ್ಲಿ ನಂಬಿಕೆ ಇತ್ತಾದರೂ ಕರ್ಮಠರಾಗಲಿಲ್ಲ. ಅವರಿಗೆ ಹುಟ್ಟಿ ಬೆಳೆದ ನೆಲ, ಪರಿಸರ ಇವೇ ಕರ್ಮಭೂಮಿ. ಅದಕ್ಕಾಗಿಯೇ "....I belong to this Earth...." ಎನ್ನುತ್ತಿದ್ದರವರು. ಇದೇ ಅರ್ಥ, ಅವರ ಪದ್ಯದ "ಸ್ವರ್ಗದೊಳಗೀ ಸ್ನೇಹ ದೊರೆವುದೇನು?" ಸಾಲುಗಳಲ್ಲಿ ಎದ್ದು ಕಾಣುತ್ತದೆ.

ಚಿಕ್ಕಂದಿನಿಂದಲೂ ಕಷ್ಟಕಾರ್ಪಣ್ಯವನ್ನು ಅನುಭವಿಸಿದರೂ ಶಿಕ್ಷಣ ಮುಂದುವರಿಸಿ ಕೊಂಡು, ಪ್ರಶಸ್ತಿಸಹಿತ ಪದವಿಗಳನ್ನು ಪಡೆದು, ಜ್ಞಾನದಾಹವನ್ನು ಯಾವುದೇ ಒಂದು ಕ್ಷೇತ್ರಕ್ಕೆ ಸೀಮಿತಗೊಳಿಸದೆ ಹಲವು ಕ್ಷೇತ್ರಗಳಿಗೆ ವಿಸ್ತರಿಸಿಕೊಂಡು, ಎಲ್ಲ ಕ್ಷೇತ್ರಗಳಲ್ಲಿಯೂ ವಿಶಿಷ್ಟ ಪ್ರತಿಭೆ–ಸ್ಥಾನ ಗಳಿಸಿ, ಕಲ್ಪನೆಗೂ ಮೀರಿದ ಸಾಂಸಾರಿಕ ನೋವುಗಳನ್ನೆಲ್ಲ ನುಂಗಿ, ಸರ್ವದಾ ನಗುಮುಖ ತೋರುತ್ತ, ಮಾನವೀಯ ಸಂಬಂಧಗಳನ್ನು ಪ್ರೀತಿಸಿ, ಗೌರವಿಸಿ ಬೆಳೆಸಿದಂಥ, ನುಡಿದಂತೆ ನಡೆದಂಥ, ಸರಳ–ಸಹಜ ಜೀವನ ಸಾಗಿಸಿದಂಥ, 'ಗುಣಕ್ಕೆ ಮತ್ಸರವುಂಟೆ' ಎಂಬ ಮಾತನ್ನು ಆಚಾರ–ವಿಚಾರಗಳೆರಡರಲ್ಲೂ ತೋರಿಸಿದಂಥ, ಅತ್ಯಂತ ಕಠಿಣ ಪರಿಸ್ಥಿತಿಯಲ್ಲೂ ತಾವು ನಂಬಿದ ಮೌಲ್ಯಗಳನ್ನು ಬಿಡದೇ ಧೈರ್ಯಗೆಡದೇ, ಮಾನಸಿಕ ಹಾಗೂ ಬೌದ್ಧಿಕ ಸಮತೋಲ ಮತ್ತು ಕ್ಷಮತೆಯನ್ನು ಕಾಪಾಡಿಕೊಂಡು ಬಂದಂಥ ಬಹು ಅಪರೂಪದ ಜೀವ ವಿ.ಸೀ.ಯವರದು. ಅವರಿಗೆ ನನ್ನ ನಮನ.

ಅಂತಿಮ ದರ್ಶನ

ಚಿರಂಜೀವಿ

ವಿ.ಸೀ. ಚಾಮರಾಜಪೇಟೆ ಎರಡನೆ ಬೀದಿಯಲ್ಲಿದ್ದಾರೆಂದು ಗೊತ್ತಿತ್ತು. ಬೆಂಗಳೂರು ವಿಮಾನ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿಕೊಂಡ ಹೊಸದರಲ್ಲಿ ಕಥೆಗಾರ ಗೆಳೆಯ ಈಶ್ವರಚಂದ್ರ ಅಲ್ಲಿಯೆ ಹತ್ತಿರ ಒಂದು ಬಾಡಿಗೆ ಮನೆ ಮಾಡಿಕೊಂಡಿದ್ದರು. ಒಮ್ಮೆ ಅವರ ಮನೆಗೆ ಹೋದಾಗ ಎದುರಿನಲ್ಲೆ ಮೂಲೆಯಲ್ಲಿದ್ದ ಹಳೆಯ ಮನೆಯೊಂದನ್ನು ತೋರಿಸಿ ಹೇಳಿದ್ದರು: 'ಇದು ಗೊತ್ತಲ್ಲ ನಿಮ್ಗೆ, ಇದು ವಿ.ಸೀ. ಮನೆ'.

ವಿ.ಸೀ. ಸುಪ್ರಸಿದ್ಧ ಹಿರಿಯ ಕನ್ನಡ ಲೇಖಕರೆಂದು ಗೊತ್ತಿತ್ತು. ಅವರು ಬರೆದಿದ್ದ 'ಸೊಹ್ರಾಬ್–ರುಸ್ತುಂ' ನಾಟಕವನ್ನು ನನ್ನ ಶಾಲೆಯಲ್ಲಿ ಆಡಿದ್ದರು. ಆದರೆ ಯಾವತ್ತೂ ಅವರನ್ನು ನೋಡಿರಲಿಲ್ಲ. ವಿ.ಸೀ. ಅವರು ಬರೆದ ಕೃತಿಗಳನ್ನು ಓದಿರಲಿಲ್ಲ. ಆದರೂ ಅನೇಕ ಕನ್ನಡ ಮಹನೀಯರ ಹಾಗೆ ವಿ.ಸೀ. ಅವರೂ ನನ್ನ ಹೃದಯದಲ್ಲಿ ನೆಲೆಸಿದ್ದರು. ನೂರು ಹೆಜ್ಜೆಗಳಾಚೆಯಿಂದ ಅವರ ಮನೆ ನೋಡಿದಾಗ ಮನಸ್ಸಿಗೆ ತುಂಬಾ ಖುಷಿಯಾಯಿತು. ಅದೇಕೊ ನಾವು ಅವರ ಮನೆಯೊಳಗೆ ಹೋಗಿ ಅವರನ್ನು ಭೇಟಿಮಾಡಲಿಲ್ಲ. ಮುಂದೆ ಹೊಸದಾಗಿ ಪ್ರಕಟವಾದಾಗ ಅವರ 'ಕಾಲೆಜ್ ದಿನಗಳು' ಮತ್ತು 'ಮಹನೀಯರು' ಕೃತಿಗಳನ್ನು ಓದಿದೆ. ಅವರು ಬರೆಯುವ ಆತ್ಮೀಯ ಶೈಲಿ, ಹಿರಿಯರ ಬಗ್ಗೆ ಆತ್ಮೀಯತೆ, ಅವರ ನೆನಪು – ಇವುಗಳನ್ನು ನೋಡಿ ಅವರ ಬಗ್ಗೆ ತುಂಬಾ ಗೌರವವುಂಟಾಯಿತು.

ಪತ್ರಕರ್ತನಾಗಿ 'ತರಂಗ' ಸೇರಿದ ಮೇಲೆ ಒಂದು ದಿನ, ಈಶ್ವರಚಂದ್ರ ಅವರ ವಿಮಾನ ಕಾರ್ಖಾನೆ ಸಹೋದ್ಯೋಗಿಯಾಗಿದ್ದ ವಿ.ಸೀ. ಪುತ್ರ ಕೃಷ್ಣಮೂರ್ತಿ ಅವರು ಆಹ್ವಾನಿಸಿ, ಅವರ ಮನೆಗೆ ಹೋದೆ. ವಿ.ಸೀ. ಮುದುರಿ ಕುಳಿತಿದ್ದರು. ಆ ಹಳೆಯ ಮನೆಯ ಮುಂಭಾಗದ ಕೊಠಡಿ. ಹಳೆಯದೊಂದು ಕುರ್ಚಿ, ಸುತ್ತಲೂ ಪುಸ್ತಕಗಳು. ಪಕ್ಕದ ಮುಖ್ಯರಸ್ತೆಯಿಂದ ಧೂಳು ಬರುತ್ತದೆಂದು ಕಿಟಕಿ ಮುಚ್ಚಿಬಿಟ್ಟಿದ್ದರು. ಎದುರು ರಸ್ತೆಯ ಕಿಟಕಿಯನ್ನು ಅರ್ಧಂಬರ್ಧ ತೆಗೆದಿದ್ದರು. ತುಂಬಾ ಚಿಕ್ಕ ಕೊಠಡಿ. ಕಿಟಕಿ ಬದಿಯಲ್ಲೊಂದು ಮರದ ಮಂಚದ ಮೇಲೆ ವಿ.ಸೀ. ಕುಳಿತಿದ್ದರು. ಕೃಷ್ಣಮೂರ್ತಿ ನನ್ನನ್ನು ಪರಿಚಯಿಸಿದರು. ವಿ.ಸೀ. ತುಂಬು ಗೌರವದಿಂದ ಮಂಚದಿಂದ ಕೆಳಗಿಳಿದು ಅಲುಗಾಡುತ್ತಾ ಬಂದು ನನ್ನ ಕೈಹಿಡಿದುಕೊಂಡರು, ಮಧುರವಾಗಿ ನಕ್ಕರು. 'ತುಂಬಾ ಸಂತೋಷ, ಬನ್ನಿ ಬನ್ನಿ' –

ಎಂದರು. ಗಟ್ಟಿಯಾಗಿ ಹಿಡಿದ ಕೈಯನ್ನು ಬಿಡಲೇ ಇಲ್ಲ. ಅವರ ಮುಖದ ಹತ್ತಿರ ಹತ್ತಿರಕ್ಕೆ ಬಂದುಬಿಟ್ಟಿದ್ದೆ. ಆ ಹಿರಿಯರ ಇಷ್ಟೊಂದು ಪ್ರೀತಿ ಆತ್ಮೀಯತೆಯನ್ನು ನೋಡಿ ಮಾತು ಹೊರಡದೆ ಸಂಕೋಚದಿಂದ ನಿಂತೆ.

ನಾನು ಫೋಟೋಗಳಲ್ಲಿ ನೋಡಿದ್ದ ವಿ.ಸೀ. – ಕಾಲೆಜ್ ಪ್ರೊಫೆಸರ್‌ಗೆ ತಕ್ಕಂತೆ ಭವ್ಯವಾಗಿ ಅಲಂಕೃತರು. ಸೊಗಸಾದ ಗರಿಗರಿ ಕಚ್ಚೆಪಂಚೆ, ಕ್ಲೋಸ್ಡ್‌ಕಾಲರ್ ಕೋಟು, ನೋಡಿದ ಕೂಡಲೇ ಮರ್ಯಾದೆ ಪಡೆದುಕೊಳ್ಳುವಂಥ ಮೈಸೂರು ರುಮಾಲು, ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದ್ದ ವ್ಯಕ್ತಿತ್ವ. ಮತ್ತೆ, ಅಲ್ಲಿ ಇಲ್ಲಿ ವಿ.ಸೀ. ಅವರ ಬಗ್ಗೆ ಓದಿದ್ದ ಅವರ ಮಾತುಗಾರಿಕೆ, ನಯನಾಜೂಕು ವರ್ತನೆ – ಇವೆಲ್ಲ ನೆನಪಿಗೆ ಬಂತು. ಆದರೆ ಇಂದು ನೋಡಿದ ವಿ.ಸೀ. ಪೇಟವಿಲ್ಲದ ಬಾಡಿದ ಮುಖ, ಕಚ್ಚೆಯಿಲ್ಲದ ಪಂಚೆ, ಷರಟು, ಮೇಲೊಂದು ಬೆಚ್ಚನೆ ಸ್ವೆಟರ್ ರೀತಿಯದ್ದು, ಪೂರ್ತಿ ಬೋಳುತಲೆ, ಬೆಳ್ಳಗಾಗಿ ಹೋಗಿದ್ದ ತುಂಬು ಮಿಸೆ, ಮುಖದ ಮೇಲೆ ಏನೋ ಒಂದು ಯೋಚನೆಯ – ಚಿಂತೆಯ ಗೆರೆಗಳು. ನನಗೊಂದು ಕುರ್ಚಿತಂದು ಹಾಕಿ ನಾನು ಕುಳಿತುಕೊಳ್ಳುವವರೆಗೂ, ಕಾಫಿ ಕೊಡುವವರೆಗೂ ಅವರು ಬಿಡಲಿಲ್ಲ. 'ಕೂತ್ಕೊಳ್ಳಿ, ಕೂತ್ಕೊಳ್ಳಿ, ಕಾಫಿ ಕೊಡು, ಕಾಫಿ ಕೊಡು' – ಎಂದು ಹೇಳುತ್ತಲೇ ಇದ್ದರು.

ಅವರನ್ನು ಈ ಘಟ್ಟದಲ್ಲಿ ನೋಡಿದಾಗ ಮನಸ್ಸು ಚುರುಕ್ಕೆಂದಿತು. ಎಂಥ ಅದ್ಭುತ ವ್ಯಕ್ತಿ, ಆಕರ್ಷಕ ವ್ಯಕ್ತಿ, ಕರ್ನಾಟಕವೆಲ್ಲ ಓಡಾಡಿದ್ದ, ಹಿರಿಯರು ಗೌರವಿಸಿದ ವ್ಯಕ್ತಿ – ಇಂದು ಹೀಗಾಗಿದ್ದಾರಲ್ಲ ಎನಿಸಿತು. ಅವರು ಎದ್ದು ಎರಡು ಹೆಜ್ಜೆ ಹಾಕುವಾಗ ದೇಹ ಅಲುಗಾಡಿ ಬೀಳುವ ಹಾಗಾಗುತ್ತಿತ್ತು. ಆದರೂ ಅವರು, ನನ್ನನ್ನೊಬ್ಬ ಅತಿಗಣ್ಯವ್ಯಕ್ತಿ ಎಂಬಂತೆ ಓಡಾಡುತ್ತಾ, ಮಾತನಾಡುತ್ತಾ, ಕೈಹಿಡಿದುಕೊಳ್ಳುತ್ತ ನಡೆದುಕೊಂಡರು. ಅವರೊಂದಿಗೆ ಏನು ಮಾತನಾಡಬೇಕೆಂದು ತಿಳಿಯಲಿಲ್ಲ. 'ಹೇಗಿದ್ದೀರಿ?' ಎಂದರೆ, 'ಇದ್ದೀನಿ, ಇದ್ದೀನಿ, ಹೀಗಿದ್ದೀನಿ' ಎಂದು ಕೈಹಿಡಿದು ಏನೇನೊ ಹೇಳತೊಡಗುತ್ತಿದ್ದರು. 'ಚೆನ್ನಾಗೇ ಇದ್ದೀರ, ಆರೋಗ್ಯವಾಗಿದ್ದೀರ, ಏನೂ ಯೋಚ್ನೆ ಮಾಡ್ಬೇಡಿ' – ಎಂದರೆ, 'ನಂದೆಲ್ಲಾ ಮುಗಿದುಹೋಯ್ತು, ಎಲ್ಲಾ ಮುಗಿದುಹೋಯ್ತು' ಎನ್ನತೊಡಗಿದರು. ಆ ಹಿರಿಯರಿಗೆ ಏನು ಹೇಳಬೇಕೆಂದೇ ತೋರಲಿಲ್ಲ. ಬಹುಶಃ, ಅವರಿಗೆ ಯಾವುದೋ ಒಂದು ರೀತಿ 'ಅರಳು–ಮರಳು' ಎನ್ನುವಂಥ ಸ್ಥಿತಿ ಆಕ್ರಮಿಸಿಕೊಂಡಿತ್ತೇನೊ? ಏನೋ ಹೇಳಲು ಹೊರಟವರಿಗೆ ನೆನಪು ಕೈಕೊಡುತ್ತಿತ್ತು, ಮರೆಯುತ್ತಿತ್ತು. 'ಓ, ಮರ್ತೋಯ್ತು, ಮರ್ತೋಯ್ತು' ಎನ್ನುತ್ತಿದ್ದರು. ಕಣ್ಣುಗಳು ತೇವವಾಗುತ್ತಿದ್ದವು.

ಕೃಷ್ಣಮೂರ್ತಿ ಅವರು ವಿ.ಸೀ. ಅವರ ಹಳೆಯ ಫೋಟೋಗಳನ್ನು ಆಲ್ಬಂಗಳನ್ನು ತಂದರು. ಅದನ್ನು ನಾನು ನೋಡುತ್ತಿದ್ದಾಗ ವಿ.ಸೀ. ಮುಖ ಇದ್ದಕ್ಕಿದ್ದ ಹಾಗೆಯೇ ಅರಳುತ್ತಿತ್ತು. ಇದು ಕಾರಂತರ ಜೊತೆಗೆ, ಇದು ಗೋವಿಂದ ಪೈ ಜೊತೆಗೆ, ಸಮುದ್ರ ತೀರದಲ್ಲಿ ಕಾರಂತರೊಂದಿಗೆ ಓಡಾಟ, ಈ ಫೋಟೋಗಳನ್ನು ಕಾರಂತರೇ ತೆಗೆದದ್ದು ಎಂದು ಒಂದೊಂದಾಗಿ ತೋರಿಸಿದರು. ಮೈಸೂರು ಮಹಾರಾಜ ಕಾಲೆಜ್‌ನ ಗ್ರೂಪ್ ಫೋಟೋ ನೋಡಿ, ಒಬ್ಬೊಬ್ಬರನ್ನೂ ತೋರಿಸುತ್ತ ಹೆಸರು ಹೇಳತೊಡಗಿದರು. ಆ ಕಾಲದ ತಮ್ಮ

ಸಹೋದ್ಯೋಗಿಗಳನ್ನು ಒಡನಾಡಿಗಳನ್ನು ಗುರುತಿಸಿದರು. 'ಇನ್ನೂ ಇರ್ಬೇಕು ತೋರ್ಸು' ಎಂದು ಮಗನಿಗೆ ಹೇಳಿದರು. 'ಆ ಫೋಟೋ ತೊಗೊಂಡ್ಯಾ, ಈ ಫೋಟೋ ತೊಗೊಂಡ್ಯಾ' ಎಂದು ನೆನಪಿಸಿದರು. ಏನೋ ಹೇಳಲು ಹೊರಟು ನೆನಪು ಬರದೆ, ತಬ್ಬಿಬ್ಬಾಗಿ, 'ಹೋ' ಎಂದು ಜೋರಾಗಿ ನಕ್ಕು ಚಿಂತಾಕ್ರಾಂತರಾಗುತ್ತಿದ್ದರು.

ಬಹಳ ಹೊತ್ತು ಅವರೊಂದಿಗೆ ಕುಳಿತಿದ್ದೆ. 'ಹೋಗ್ಬಿಟ್ಟು ಬರ್ತೀನಿ' ಎಂದು ಹೇಳಿದಾಗ, 'ಹೋಗಬೇಡಿ, ಇನ್ನೂ ಇರಿ' ಎಂಬಂತೆ ಆತ್ಮೀಯತೆಯಿಂದ ಮುಖವನ್ನೇ ನೋಡುತ್ತಿದ್ದರು. ಅವರು ಬೇಸರಪಟ್ಟುಕೊಂಡಾರು ಎಂದು ಇನ್ನೂ ಸ್ವಲ್ಪ ಹೊತ್ತು ಹಾಗೆಯೇ ಇದ್ದದ್ದಾಯಿತು. 'ಹೋಗ್ಬಿಟ್ಟು ಬರ್ತೀನಿ' ಎಂದು ಮತ್ತೆ ಹೇಳಿದಾಗ, ಮೃದುವಾಗಿ ಅವರ ಕೈಹಿಡಿತದಿಂದ ಬಿಡಿಸಿಕೊಂಡಾಗ, ಬಿಡಲಾರದೆ ಅವರು ಬಿಟ್ಟಿದ್ದರು. ಅವರ ಕೊಠಡಿಯಿಂದ ಹೊರಗೆ ಹೆಜ್ಜೆಹಾಕಿದಾಗ, ಲಗುಬಗೆಯಿಂದ ತಾವೂ ಅಲುಗಾಡುತ್ತ ಹೊರಗೆ ಹೆಜ್ಜೆಯಿಟ್ಟರು. ಕೃಷ್ಣಮೂರ್ತಿ ಒಂದು ಕಡೆ, ನಾನೊಂದು ಕಡೆ ಅವರನ್ನು ಹಿಡಿದುಕೊಂಡು ಹೊರಗೆ ಇಳಿಸಿಕೊಂಡೆವು. ಗೇಟಿನವರೆಗೂ ಬಂದು, ಗೇಟು ಹಿಡಿದು ನಿಂತು ನನ್ನನ್ನು ಬೀಳ್ಕೊಟ್ಟರು. ಅವರು ಸ್ನೇಹ ಆತ್ಮೀಯತೆಯಿಂದ ಕೈಬೀಸುತ್ತ ಗೇಟು ಹಿಡಿದು ನಿಂತದ್ದನ್ನು ನಾನು ಎಂದಿಗೂ ಮರೆಯಲಾರೆ.

ಇನ್ನೊಂದು ದಿನ ಅವರ ಫೋಟೋ ತೆಗೆಯಲು ಛಾಯಾಗ್ರಾಹಕ ಬಿ. ಎನ್. ರಾಜಶೇಖರ್ ಅವರೊಂದಿಗೆ ಹೋದಾಗ ಆತ್ಮೀಯತೆಯಿಂದ ಸ್ವಾಗತಿಸಿದರು. ಒಂಟಿಯಾಗಿ ಕುಳಿತಿದ್ದರು. ಅವರನ್ನು ನೋಡಲು, ಮಾತನಾಡಲು ಯಾರೊ ಬಂದರು ಎಂದಕೂಡಲೇ ಉತ್ಸಾಹಿತರಾಗಿದ್ದರು, ಕೈಹಿಡಿದುಕೊಂಡರು. 'ಈಚೀಚೆಗೆ ಇವ್ರನ್ನ ನೋಡೋಕ್ಕೆ ಯಾರೂ ಬರಲ್ಲ, ಇವ್ರಿಗೂ ಬೇಜಾರು' ಎಂದರು ಕೃಷ್ಣಮೂರ್ತಿ. 'ನಮ್ಮಾಯಿ ಹೋದ್ಮೇಲಂತೂ ಅರ್ಧ ಆಗೋದ್ರು. ಅಮೇಲೆ ಕೆ. ವಿ. ಅಯ್ಯರ್ ಹೋದ್ಮೇಲಂತೂ ಹಾಸುಗೆ ಹಿಡಿದ್ಬಿಟ್ರು. ಮರೆವು ಬೇರೆ ಜಾಸ್ತಿ ಆಗೋಯ್ತು, ಕಿವಿ ಅಷ್ಟಾಗಿ ಕೇಳೊಲ್ಲ' ಅಂದರು ಕೃಷ್ಣಮೂರ್ತಿ. ವಿ.ಸೀ. ಅರ್ಧಂಬರ್ಧ ಕೇಳಿಸಿಕೊಂಡವರಂತೆ ಮುಲುಗಿದರು.

'ನಿಮ್ಮ ಫೋಟೋ ತೆಗೀಬೇಕೂಂತ ಬಂದಿದೀವಿ' ಎಂದಾಗ, ಕ್ಯಾಮೆರಾ ಹಿಡಿದು ಅವರ ಹತ್ತಿರ ಬಂದಾಗ, 'ನನ್ನ ಫೋಟೋ ಯಾಕ್ಬೇಕು, ನಂದೆಲ್ಲ ಆಗೋಯ್ತು. ಐ ಯ್ಯಾಮ್ ಫಿನಿಷ್ಡ್' ಎಂದರು. 'ನೀವು ಯಾವತ್ತೂ ಫಿನಿಷ್ಡ್ ಅಲ್ಲ, ನಿಮ್ಮ ಸಾಹಿತ್ಯಸೃಷ್ಟಿ ಎಂದೆಂದಿಗೂ ನಿಮ್ಮನ್ನ ಉಳಿಸಿಟ್ಟಿರತ್ತೆ' ಎಂದಾಗ 'ಐಯ್ಯಾಮ್ ಓವರ್, ಐಯ್ಯಾಮ್ ಓವರ್' ಎಂದು ಗೊಣಗಿಕೊಂಡರು.

ಮತ್ತೆ, ನಾವು ಕುಳಿತುಕೊಳ್ಳುವವರೆಗೂ, ಕಾಫಿ ಕುಡಿಯುವವರೆಗೂ ಅವರು ಬಿಡಲಿಲ್ಲ. ಅವರ ಮನೆಯೊಳಗೆ ಒಂದಿಷ್ಟು ಓಡಾಡಬೇಕೆಂದು ಮನೆಯೊಳಗೆ ಹೋದೆ. ಅವರೂ ತಪ್ಪು ಹೆಜ್ಜೆ ಹಾಕುತ್ತ ಜೊತೆಗೇ ಬಂದರು, ನನ್ನೊಂದಿಗೆ ನಡೆದಾಡಿದರು.

ಕೊನೆಗೆ ಗೇಟಿನವರೆಗೂ ಬಂದು ಬೀಳ್ಕೊಟ್ಟರು. ಅವರ ಮುಖದ ಮೇಲೆ ದುಃಖದ ನೆರಳು. ಮಗಳನ್ನು ಅತ್ತೆ ಮನೆಗೆ ಕಳುಹಿಸುವಷ್ಟೆ ನೋವಿನಿಂದ ನಮ್ಮನ್ನು ಕಳುಹಿಸಿಕೊಟ್ಟರು. 'ಆಗಾಗ ಬರ್ತಿರಿ' ಎಂದರು. 'ಖಂಡಿತಾ, ಆಗಾಗ ಬರ್ತಿರ್ತೀವಿ' ಎಂದು ಹೋಗಿದ್ದಾಯಿತು.

ಆದರೆ, ಮತ್ತೆ ಅವರನ್ನು ಜೀವಂತವಾಗಿ ನೋಡುವುದಿಲ್ಲ ಎನ್ನುವುದು ನಮಗೆ ಗೊತ್ತಿರಲಿಲ್ಲ. ಯಾರದೋ ಮನೆಯಲ್ಲಿದ್ದಾಗ ದಿಢೀರನೆ ಬರಸಿಡಿಲಿನಂತೆ ಸುದ್ದಿ ಬಂದು ಬಡಿಯಿತು (೪ ಸೆಪ್ಟೆಂಬರ್ ೧೯೬೩): 'ವಿ.ಸೀ. ಈ ಬೆಳಗಿನ ಝಾವ ಕೊನೆಯುಸಿರೆಳೆದರು'. ಮೊನ್ನೆ ಮೊನ್ನೆ ಅವರ ಆತ್ಮೀಯತೆ–ಪ್ರೀತಿಯನ್ನು ಅನುಭವಿಸಿದ್ದೆ. ಅಗಲೇ ಅವರಿಲ್ಲ. ಅವರ ಮನೆಗೆ ಓಡಿದೆ.

ಚಿರನಿದ್ರೆಯಲ್ಲಿ ಅವರು ಮಲಗಿದ್ದರು. ಸುದ್ದಿ ನಿಧಾನವಾಗಿ ಹರಡುತ್ತ ಒಬ್ಬೊಬ್ಬರಾಗಿ ಬರುತ್ತಿದ್ದರು. ಅವರ ಮುಖವನ್ನೇ ನೋಡುತ್ತ ನಿಂತೆ. ಅದೇ ಸೌಮ್ಯ, ಸಂಕೋಚದ ಮುಖ, ಬೋಳುತಲೆ, ಆದರೆ ಚಟುವಟಿಕೆಯಿಲ್ಲ.

ಗೇಟಿನಾಚೆ ಬರುವಾಗ, ಅವರು ನನ್ನ ಹಿಂದೆಯೆ ಬರುತ್ತಿರುವಂತೆ ಅನ್ನಿಸಿತು. ನಡುಗುವ ಕೈಯ್ಯಿಂದ, ಅಲುಗಾಡುತ್ತ ನಿಂತು ಗೇಟನ್ನು ಮುಚ್ಚಿದಂತೆ ಅನ್ನಿಸಿತು. 'ಹೋಗ್ಬಿಟ್ಟು ಬನ್ನಿ' ಎಂಬಂತೆ ಕೈಬೀಸುತ್ತಿರುವಂತನ್ನಿಸಿತು.

ಉತ್ತಮ ಸಂಸ್ಕೃತಿಯ ಪ್ರತಿನಿಧಿ

"ಕೇವಲ ಪುಸ್ತಕ ಬರೆದು ಒಂದು ದೇಶ ಉದ್ಧಾರವಾಗಿಲ್ಲ, ಉಪನ್ಯಾಸದಿಂದಲೇ ಒಂದು ಜನಾಂಗ ಉದ್ಧಾರವಾಗಿಲ್ಲ; ಅದರ ಉತ್ತಮ ಸಂಸ್ಕೃತಿಯಿಂದ ಅದು ತಲೆಯೆತ್ತಿ ಬಾಳುತ್ತದೆ. ಸಾಹಿತ್ಯ ಪ್ರಪಂಚದಲ್ಲಿ ಅಂಥ ಒಂದು ಉತ್ತಮ ಸಂಸ್ಕೃತಿಯ ಪ್ರತಿನಿಧಿಗಳು ವಿ.ಸೀ. ಅವರು...."

ಕೆ. ಎಸ್. ನರಸಿಂಹಸ್ವಾಮಿ
'ಉಪವನ' ಪು. ೮೮

ಚಿಕ್ಕಮೂರ್ತಿ, ದೊಡ್ಡಕೀರ್ತಿ

ಕೌಂಡಿನ್ಯ

'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎನ್ನುತ್ತದೆ ಕನ್ನಡದ ನಾಣ್ಣುಡಿಯೊಂದು. ನಿಜ, ವಿ.ಸೀ. ಅವರ ಮೂರ್ತಿ ಚಿಕ್ಕದೇ ಸರಿ. ಆದರೆ ಅವರ ಕೀರ್ತಿ ಶ್ರೇಯೋ ಸಾಧನೆಗಳಲ್ಲಿ, ಜ್ಞಾನ ಹಾಗೂ ಸೃಜನಶೀಲ ಸಾಹಿತ್ಯ ಸಂಪತ್ತಿನ ದಿಗಂತದಲ್ಲಿ ಹಿರಿಯ ಪ್ರಮಾಣದವೇ ಆಗಿವೆ.

ಅವರದು ಸಾಧಾರಣ ಕೃಶ ಮೈಕಟ್ಟು, ಮಧ್ಯಸ್ಥ ನಿಲುವಿನ ತನುಕಾಯ. ತೆಳ್ಳನೆಯ ತುಸು ಮುಂದೆ ಬಾಗಿದ ಎದೆಕಟ್ಟು. ಸ್ವಲ್ಪ ನಾಚುವ ಪ್ರವೃತ್ತಿಯ ಸರಳ ತೆರೆದ ಹೃದಯದ ಸ್ನೇಹಪರ ಮುಖಚರ್ಯೆ. ತಲೆಯಲ್ಲಿ ಸಂಪ್ರದಾಯಶೀಲ ಚಿಹ್ನೆಯಾಗಿ ಮೊಟಕು ಪಿಳ್ಳೆ ಜುಟ್ಟು. ತುಟಿಗಳ ಅಂಚಿನಲ್ಲಿ ಆಗಾಗ ಕಾಣಿಸಿಕೊಳ್ಳುವ ಮುಗ್ಧ ನಗೆ ಛಾಯೆ. ಲವಲವಿಕೆಯ ಕಣ್ಣುಗಳಲ್ಲಿ ಕುಡಿಮಿಂಚುಗಳ ಹೊಳಪು. ಕೇಳುಗರಿಗೆ ನುಡಿಕಟ್ಟಿನ 'ನಾದದ ನವನೀತ'. ಭಾಷಣ, ಪ್ರವಚನ, ಮಿತ್ರವೃಂದದ ಮಾತಿನ ಒಡನಾಟಗಳಲ್ಲಿ ಹಿತಮಿತ ಲಯಬದ್ಧ ಮಿಡಿತ. ವಿದ್ಯಾರ್ಥಿಗಳ ಮನಬುದ್ಧಿಗಳನ್ನು ಒಮ್ಮೆಲೇ ತನ್ನತ್ತ ಸೆಳೆದುಕೊಳ್ಳುವ ವಾಗ್ಝರಿಯ ಛಾಪು ಮೋಡಿಗಳು, ಶುದ್ಧ ಮುಗ್ಧ ರಸಿಕ ಸಂಪತ್ತಿನ ನಡೆನುಡಿ, ಸೌಶೀಲ್ಯಭರಿತ ದೃಷ್ಟಿ, ವೇಷಭೂಷಣಗಳಲ್ಲಿ ಎದ್ದುಕಾಣುವ ಅಚ್ಚುಕಟ್ಟು, ಶಿಸ್ತು, ಸರಳ ಸ್ವಚ್ಛತೆ ಸುಸಂಸ್ಕಾರಗಳ ಪ್ರತಿಫಲನ.

ತೆಳುವಾದ ನಯವಾದ ೧೭೦೩ ಮಲ್ ಪಂಚೆ, ಇಲ್ಲವೇ ಒಂದೇ ಎಳೆಸರಿಗೆ ಅಂಚಿನ ಗೆರೆಯ ಬಿಳಿಯ ಧೋತ್ರ, ತಲೆಯ ಮೇಲೆ ಬಿಳಿಯ ಮಲ್ ಪೇಟಾ, ಇಸ್ತ್ರಿ ಎಳಿಕುಂದದ ಮುಚ್ಚುಕುತ್ತಿಗೆಯ ಕೋಟು— ಹೀಗೆ ಒಟ್ಟಾರೆ ಸಾತ್ವಿಕ ಸಂಸ್ಕಾರದ ಮಾನವೀಯ ವ್ಯಕ್ತಿತ್ವ ವಿ.ಸೀ. ಅವರದು. ಅವರ ನಿತ್ಯ ಬಾಳಿನಲ್ಲಿ, ನಡೆನುಡಿ ವ್ಯವಹಾರಗಳಲ್ಲಿ, ಅವರ ಅಧ್ಯಾಪಕ ವೃತ್ತಿ ಜೀವನದ ಪಾಠ ಪ್ರವಚನಗಳಲ್ಲಿ, ಬೌದ್ಧಿಕ ಮತ್ತು ಸಾಹಿತ್ಯ ಕವಿಗೋಷ್ಠಿಗಳಲ್ಲಿ, ಸಭೆ ಸಮ್ಮೇಳನಗಳ ಭಾಷಣಗಳಲ್ಲಿ, ಸೃಜನಶೀಲ ಕಾವ್ಯನಿರ್ಮಿತಿಯಲ್ಲಿ, ಇತರ ಸಾಹಿತ್ಯ ಪ್ರಕಾರಗಳ ವ್ಯವಸಾಯಗಳಲ್ಲಿ, ಕವಿಕಾವ್ಯ ಮಿಮಾಂಸೆಯ ವೈಚಾರಿಕ ಚಿಂತನೆ ಧೋರಣೆಗಳಲ್ಲಿ, ಅವರ ಆಪ್ತ ಮಿತ್ರವರ್ಗ ಅಧ್ಯಾಪಕ ವರ್ಗಗಳ ನಡುವಣ ಸರಸಸಲ್ಲಾಪಗಳ ಸಾಹಚರ್ಯದಲ್ಲಿ, ಶುದ್ಧ ಕಲಾಭಿಜ್ಞತೆಯ

ಮಾನವೀಯ ಪ್ರೇಮ ತುಂಬಿದ ಸುಸಂಸ್ಕೃತ ಹೃದಯಾಂತರಾಳದಲ್ಲಿ, ಲೌಕಿಕ ಪಾರಮಾರ್ಥಿಕಗಳ ನಡುವಣ ಸಾತ್ವಿಕ ಒದುಕಿನಲ್ಲಿ, 'ಗುರು', 'ವಿದ್ಯೆ', 'ಒದುಕು', 'ಸಂಸ್ಕೃತಿ' ಎಂಬ ಶಬ್ದಗಳ ಅರ್ಥಮೌಲ್ಯಗಳ ಸಾರಸಂಪತ್ತನ್ನು ವಾಸ್ತವಿಕೆಯ ಹಿನ್ನೆಲೆಯಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಅವರು ಪ್ರತಿಬಿಂಬಿಸುತ್ತಿದ್ದರೆಂಬುದು ನನ್ನ ವಿಶ್ವಾಸ, ನಂಬಿಕೆ. ಅವರು ವ್ಯಾಸಂಗ ಮಾಡಿದ ಸ್ವರ್ಣ ಕಾಲದ ಗುರು ಪರಂಪರೆ ಅವರನ್ನು ಹಾಗೆ ರೂಪಿಸಿತ್ತೆಂದೇ ನನ್ನ ಕಲ್ಪನೆ. ಡಾ. ಎಸ್. ರಾಧಾಕೃಷ್ಣನ್, ಎನ್. ಎಸ್. ಸುಬ್ಬರಾಯರು, ಬಿ. ಎಂ. ಶ್ರೀಕಂಠಯ್ಯ, ಡಾ. ರಾಧಾಕುಮುದ ಮುಖರ್ಜಿ, ಪ್ರೊ. ಕೆ. ಟಿ. ಷಾ, ಪ್ರೊ. ಎಂ. ಹಿರಿಯಣ್ಣನವರು, ಪ್ರೊ. ಸಿ. ಆರ್ ರೆಡ್ಡಿ, ರಾಳ್ಳಪಲ್ಲಿ ಅನಂತಕೃಷ್ಣಶರ್ಮರು– ಇಂಥ ಘಟಾನುಘಟಿ ತಲೆಮಾರಿನವರ 'ಸರಸ್ವತೀ ದೇಗುಲ'ವೆನಿಸಿದ್ದ ಅಂದಿನ ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗಮಾಡಿ 'ಸೈ' ಎನ್ನಿಸಿಕೊಂಡವರು ವಿ.ಸೀ.

ಎಪ್ಪತ್ತೆಂಟು ವರ್ಷಗಳ ಹಿಂದೆ ನನ್ನ ಸಹೃದಯಿ ಗೆಳೆಯ ಶ್ರೀ ಗರ್ಗೇಶ್ವರಿ ವೆಂಕಟಸುಬ್ಬಯ್ಯನವರು ಮತ್ತು ನಾನು ಆಗ ತಾನೇ ಸ್ಥಾಪಿತವಾಗಿ ಆರಂಭವಾಗಿದ್ದ ಶಾರದಾ ವಿಲಾಸ ಪ್ರೌಢಶಾಲೆಯ ಹಾಗೂ ಆ ಶಾಲೆಯ ಅಂದಿನ ಅಧ್ಯಾಪಕ ವರ್ಗದಲ್ಲೊಬ್ಬರಾದ ವಿ.ಸೀ. ಅವರ ಅತ್ಯಂತ ಹಳೆಯ ವಿದ್ಯಾರ್ಥಿಗಳು. ನಮ್ಮ ಶಾಲೆಗೆ ಆಗ ತಮಾಷೆಯ ಗೇಲಿಯ ಅಡ್ಡ ಹೆಸರಿನ್ನೊಂದಿತ್ತು – 'ತಡಿಕೆ ಸ್ಕೂಲೆಂದು'! ನಮ್ಮ ಶಾಲೆಯು ಅಂದಿನ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಕಟ್ಟಡದಲ್ಲಿತ್ತು. ತರಗತಿಗಳಿಗೆ ಪ್ರತ್ಯೇಕ ಪ್ರತ್ಯೇಕ ಕೊಠಡಿಗಳಿರಲಿಲ್ಲ. ಇದ್ದ ಉದ್ದುದ್ದದ ಹಜಾರಗಳ ಮಧ್ಯೆ ಬಿದಿರುಚಾಪೆಯ ಗೋಡೆಗಳನ್ನು ಉಪಯೋಗಿಸಿ ತರಗತಿಗಳನ್ನು ಪ್ರತ್ಯೇಕಗೊಳಿಸಿದ್ದರು. ಅವೇನೂ ಶಬ್ದ ನಿಯಂತ್ರಣ ನಿರೋಧಕ ಗೋಡೆಗಳಲ್ಲವಷ್ಟೆ. ನಮ್ಮ ತರಗತಿಯ ಬೇರೊಬ್ಬ ಉಪಾಧ್ಯಾಯರ ಗೈರು ಹಾಜರಿಯಲ್ಲಿ ವಿದ್ಯಾರ್ಥಿಗಳ ಶಬ್ದಾಡಂಬರದ ಸದ್ದು ಗದ್ದಲ ಕುರಿತು ಹೇಳಬೇಕೆ? ಪಕ್ಕದ ತರಗತಿಯಲ್ಲಿ ಪಾಠ ಮಾಡುತ್ತಿದ್ದ ವಿ.ಸೀ. ಅದನ್ನು ಅಲ್ಲಿಗೇ ನಿಲ್ಲಿಸಿ, ನಮ್ಮ ತರಗತಿಗೆ ನುಗ್ಗಿದವರೇ ಅಲ್ಲಿದ್ದ ಕಪ್ಪು ಹಲಗೆಯ ಮೇಲೆ ನೊಬೆಲ್ ಪ್ರಶಸ್ತಿ ವಿಜೇತ ಕವಿ ರವೀಂದ್ರನಾಥ ಠಾಕೂರರ 'ಗೀತಾಂಜಲಿ' ಯಲ್ಲಿನ ಪದ್ಯದ ಸಾಲುಗಳನ್ನು ಬರೆದು, ಅದರ ಭಾವಾರ್ಥ ಬರೆಯಬೇಕೆಂದು ನಮಗೆ ತಾಕೀತು ಮಾಡಿ, ತಮ್ಮ ತರಗತಿಗೆ ಹೋಗಲನುವಾದರು! ಆ ಪದ್ಯದ (ನನಗೆ ಈಗ ಜ್ಞಾಪಕ ಇರುವಷ್ಟು) ಕೆಲವು ಸಾಲುಗಳನ್ನು ಇಲ್ಲಿ ಕಾಣಿಸುತ್ತೇನೆ–

Where the mind is without fear and
the head is held high;
Where knowledge is free;
Where the world has not been broken up
into fragments by narrow domestic walls...
Into that heaven of freedom, my Father,
let my country awake.

ಪದ್ಯದ ಸಾಲುಗಳು ಅರ್ಥವಾಗದೆ ಪಿಳಿಪಿಳಿ ಕಣ್ಣು ಮಿಟುಕಿಸುತ್ತ ನಾವು ಸ್ತಬ್ಧರಾಗಿ

ಕುಳಿತೆವು. ನಮ್ಮ ಕಷ್ಟವೇನೆಂದು ಗ್ರಹಿಸಿ, ನಮ್ಮತ್ತ ಮೆಲುನಗೆ ಬೀರಿ, ಅಂದು ನಮ್ಮ ತರಗತಿಯಲ್ಲೇ ಉಳಿದು, ಆ ಪದ್ಯದ ಅರ್ಥಭಾವಗಳ ವಿವರಣೆಯನ್ನು ವಿ.ಸೀ. ತಾವೇ ಮಾಡತೊಡಗಿದರು,– ಪಕ್ಕದ ತರಗತಿಯ ವಿದ್ಯಾರ್ಥಿಗಳನ್ನೂ ಸೇರಿಸಿಕೊಂಡು!

ಅಬ್ಬಾ ! ಅದೇನು ಓತಪ್ರೋತ ವಾಕ್ಯವಾಹಿನಿ ! ಆ ಪದ್ಯದ ಸಾಲುಗಳ ಅರ್ಥ ಭಾವಗಳ ವಿವರಣೆಯ ವೈಭವವೇನು, ಸೊಗಸೇನು! ಅವರ ಉತ್ಸಾಹ, ಆವೇಶಗಳ ಸಂಪತ್ತೇನು! ನಾನು ಮುಂದೆ, ತಾನು ಮುಂದೆ ಎಂದು ಅವರ ಬಾಯಿಯಿಂದ ಹೊರಡುತ್ತಿದ್ದ ಮಾತುಗಳ ಮೋಡಿಯೇನು! ಕನ್ನಡ ಇಂಗ್ಲಿಷ್ ಮಿಶ್ರಣದ ಆ ಪಾಠ ಪ್ರವಚನವಂತೂ ನನ್ನನ್ನು 'ಗೀತಾಂಜಲಿ' ಕಾವ್ಯವನ್ನು ಮುಂದೆ ಓದಲೇಬೇಕೆಂದು ಪ್ರಚೋದಿಸಿತು. ಹೌದು, ಮುಂದೊಂದು ದಿನ ಅದನ್ನು ನಾನು ಓದಿ ಆನಂದಿಸಿದೆನು. ಅವರ ಪಾಠ ಪ್ರವಚನದ ಪ್ರಭಾವ ಅಂಥದು. ಎಷ್ಟೇ ಆಗಲಿ, ವಿ.ಸೀ. ಅವರದೂ ಅಂಥದೇ ಕವಿಹೃದಯವಲ್ಲವೆ? ಕಾವ್ಯದ ಸೌಂದರ್ಯ, ಕವಿಯ ಪ್ರತಿಭಾ ಸಂಪನ್ನ ಕಲ್ಪನಾಚಾತುರ್ಯ, ಕಾವ್ಯದ ಭಾಷೆಯ ಮಾಧುರ್ಯಗಳನ್ನು ತಮ್ಮೊಂದಿಗೆ ಇತರರೂ ಅನುಭವಿಸಬೇಕೆಂಬ ಉತ್ಕಟೇಚ್ಛೆ ಅವರದು.

"ಗುರುಕೃಪ ಅಂಜನ ಪಯೋ ಮೇರೆ ಭಾಯಿ" ಎನ್ನುತ್ತದೆ ಒಂದು ಹಿಂದೀ ಸಂತವಾಣಿ. ಅಂಥ 'ಗುರುಕೃಪೆ' ಅಪ್ರಾರ್ಥಿತವಾಗಿ ಆಕಸ್ಮಿಕವಾಗಿ ನನಗೆ ಒದಗಿ ಬಂತು. ಆಗ ತಾನೇ ಕಾಲೇಜಿಗೆ ಸೇರಿದ್ದೆ ಮೈಸೂರಿನಲ್ಲಿ. ರಿಕ್ತದೆಸೆ, ಮನೆತಪ್ಪಿದ ಅಕ್ಕ, ತಂದೆಯನ್ನು ಕಳೆದುಕೊಂಡ ನಾನು, ಅನಾಥೆಯಾದ ತಾಯಿ, ಊಟಕ್ಕೆ ಕಷ್ಟ ಕಾರ್ಪಣ್ಯದ ಸಂಸಾರ. ನನ್ನ ವಿದ್ಯಾಭ್ಯಾಸ ಈ ನಿಟ್ಟಿನಲ್ಲಿ ಸಾಗಬೇಕಾದ ಸಂದಿಗ್ಧ ಪರಿಸ್ಥಿತಿ! ಒಂದು ದಿನ ವಿ.ಸೀ. ಅವರ ದರ್ಶನಯೋಗ ಲಭಿಸಿತು. ನನ್ನ ಕಷ್ಟಕಾರ್ಪಣ್ಯ, ಯೋಗಕ್ಷೇಮ ಇತ್ಯಾದಿ ವಿಚಾರಿಸಿದವರೇ ಕನಿಕರಿಸಿ, ಚೌಬೀನೆ ವ್ಯಾಪಾರಿಗಳಾಗಿದ್ದ ಶ್ರೀಮಂತ ನೀಲಕಂಠರಾಯರ ಮನೆಗೆ ನನ್ನನ್ನು ಜೊತೆಯಲ್ಲಿ ಅಂದೇ ಕರೆದೊಯ್ದರು. ಅವರ ಮನೆಯ ಸಂಬಂಧಿಗಳ ಮಗ ಹೈಸ್ಕೂಲು ವಿದ್ಯಾರ್ಥಿಗೆ 'ಪಾಠದ ಮನೆಮೇಷ್ಟ್ರ' ಕೆಲಸವನ್ನು ನನಗೆ ಕೊಡಿಸಿದರು, ಮಾಹೆಯಾನ ಇಪ್ಪತ್ತು ರೂಪಾಯಿಗಳ ಟ್ಯೂಶನ್ ಫೀಸ್‌ನೊಂದಿಗೆ.

ಆ ಬಾಲಕ ಮೂರು ವರ್ಷದ ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿಸುವವರೆಗೂ ಆ ಕೆಲಸ ಮುಂದುವರಿಯಿತು. ಇದೆಂಥ ಬಾಂಧವ್ಯ, ಎಂಥ ಗುರುಕೃಪೆ! ವಿ.ಸೀ. ಅವರೂ ನೀಲಕಂಠರಾಯರ ಔದಾರ್ಯದ ಸವಿಯನ್ನು ಉಂಡೆವರೇ. ಅವರಿಗೂ ಶ್ರೀಮಂತ ರಾಯರಿಗೂ ಒಳ್ಳೆಯ ಬಾಂಧವ್ಯವಿತ್ತು. ವಿ.ಸೀ. ಮೈಸೂರು ಬಿಟ್ಟು ಬೆಂಗಳೂರಿಗೆ ತೆರಳಿದಾಗ ಆ ಬಾಂಧವ್ಯದ ಸವಿನೆನಪಿನ ಸಂಕೇತವಾಗಿ ರಾಯರು ಮನೆಯಲ್ಲಿ ನಿತ್ಯವೂ ಕುಳಿತುಕೊಳ್ಳುತ್ತಿದ್ದ ಒಂದು ಮರದ ಕುರ್ಚಿಯನ್ನು ಅವರಿಂದ ಕೇಳಿ ಪಡೆದು ತಂದು ವಿ.ಸೀ. ತಮ್ಮ ಕೋಣೆಯಲ್ಲಿಟ್ಟು ಕೊಂಡಿದ್ದರು! ಒಂದು ಸಲ ಚಾಮರಾಜಪೇಟೆಯ ಅವರ ಮನೆಗೆ ಹೋದಾಗ ಮಾತಿಗೆ ಮಾತು ಬಂದು ಆ ಕುರ್ಚಿಯ ಕಥೆಯನ್ನು ನನಗೆ ಹೇಳಿದರು. ತಮ್ಮ ಕೋಣೆಯ ಎದುರು ಗೋಡೆಯ ಒಂದಂಚಿನಲ್ಲಿ ಅದು ಸ್ಥಾಪಿತವಾಗಿತ್ತು. ವಿ.ಸೀ. ಅವರ ಮನಸ್ಸಿನಲ್ಲಿ ಶ್ರೀ ನೀಲಕಂಠರಾಯರು ಆ ಕುರ್ಚಿಯ ಮೇಲೆ ಎಂದೂ ಉಪಸ್ಥಿತರಾಗಿದ್ದಂತೆ

ಗೌರವ, ಕೃತಜ್ಞತೆಯ ಭಾವನೆಯಿತ್ತು. ಅದನ್ನು ವೀಕ್ಷಿಸಿದಾಗಲೆಲ್ಲ ಅವರಿಗೆ ರಾಯರ ದರ್ಶನವಾದಂತೆ ಭಾಸ. ಅಷ್ಟು ಪವಿತ್ರಭಾವ ಅವರಿಗೆ ಆ ಕುರ್ಚಿಯಲ್ಲಿ. ಎಂಥ ಭವ್ಯ ಸ್ಮರಣೆ, ಏನು ನಿಚ್ಚಳ ನಿಷ್ಠೆ! ಮನೆಗೆ ಬಂದ ಅತಿಥಿಗಳನ್ನು ವಿ.ಸೀ. ಅದರ ಮೇಲೆ ಕೂರಿಸುತ್ತಿದ್ದರೇ ಹೊರತು ಸ್ವಯಂ ತಾವೆಂದೂ ಅದರ ಮೇಲೆ ಕುಳಿತವರಲ್ಲವಂತೆ. ಅಂಥ ಅಪಚಾರ ಆ ಸುಸಂಸ್ಕೃತ ಹೃದಯಕ್ಕೆ ಸಲ್ಲ!

ಈ ಶತಮಾನದ ಕಳೆದ ೩-೪ನೆಯ ದಶಕಗಳು ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗಳ ಪುನರುತ್ಥಾನದ ಕಾಲ; ನವೋದಯದ ಕಾಲ. ಅದರ ಮಾರ್ಗದರ್ಶಕ ನೇತಾರರು ಬಿ. ವೆಂಕಟನಾರಣಪ್ಪ, ಬಿ.ಎಂ.ಶ್ರೀ., ಎ.ಆರ್.ಕೃ., ಡಿ.ವಿ.ಜಿ., ಮಾಸ್ತಿ, ಪಂಜೆ ಮುಂತಾದವರು. ಅಂದಿನ ನವೋದಯದ ಕಾವ್ಯಸೃಷ್ಟಿ, ಇನ್ನಿತರ ಸಾಹಿತ್ಯಪ್ರಕಾರಗಳ ಬೆಳೆ ಬಲುಹುಲುಸು, ಸಮೃದ್ಧ. ಅದು ಪಾಶ್ಚಿಮಾತ್ಯ ಪೌರಸ್ತ್ಯ ಸಾಹಿತ್ಯ ಸಂಸ್ಕೃತಿಗಳ ಮಧುರ ಮಿಲನ ಬಾಂಧವ್ಯಗಳ ಸುವರ್ಣ ಸಂಧಿಕಾಲ. ಹೊಸ ನೋಟದ, ಹೊಸ ಮಾರ್ಗ ಧಾಟಿ ತಂತ್ರಗಳ ಕಾವ್ಯಮಾದರಿಯ ಭಾವಾವೇಶಪೂರಿತ ಲವಲವಿಕೆಯ ಯುಗ. ಬೇಂದ್ರೆ, ಪೈ, ಗೋಕಾಕ್, ಆನಂದಕಂದ, ಕುವೆಂಪು, ಪುತಿನ – ಇಂಥ ಕವಿದಿಗ್ಗಜಗಳ ಸಾಲಿನಲ್ಲಿ ಸಮಸಮವಾಗಿ ನಿಂತವರು ವಿ.ಸೀ. 'ಲಿರಿಕ್ ಪೊಯೆಟ್ರಿ' ಯ ಈ ಕವಿಕಾವ್ಯಪರಂಪರೆಯ ಹಿಂದೆಯೇ ಕನ್ನಡ ಭಾವಗೀತವಾಚನ ಗಾಯನಗಳ ಸುಶ್ರಾವ್ಯ ಗಾಯಕ ತಂಡವೊಂದೂ ಸಿದ್ಧವಾಗಿ ನಿಂತಿತು. ಆ ಗೋಷ್ಠಿಯ ಖ್ಯಾತನಾಮರ ಸಾಲಿನಲ್ಲಿ ತೀರ ಕೊನೆಯವನಾಗಿ ನಾನೂ "**also ran**". ಇದೇ ಸಮಯದಲ್ಲಿ ಎಂ. ವಿ. ಗೋಪಾಲಸ್ವಾಮಿಯವರ ಖಾಸಗೀ 'ಪೈಲಟ್' ಹಾಗೂ 'ಪ್ರಯೋಗಾತ್ಮಕ' ಆಕಾಶವಾಣಿಯ ಮೈಸೂರು ಬಾನುಲಿ ಕೇಂದ್ರದಲ್ಲಿ ಹಲವು ವರ್ಷ ಭಾವಗೀತ ವಾಚನ ಕಾರ್ಯಕ್ರಮಗಳನ್ನು ನಾನು ನಡಸಿಕೊಡುತ್ತಿದ್ದೆ. ಅದನ್ನು ಹೇಗೊ ಅರಿತಿದ್ದ ವಿ.ಸೀ. ಕನ್ನಡ ಸಾಹಿತ್ಯ ಪರಿಷತ್ತಿನ ಅಂದಿನ ವಾರ್ಷಿಕ ವಸಂತ ಸಾಹಿತ್ಯೋತ್ಸವಗಳ ಸಮಾರಂಭಗಳಲ್ಲಿ ನನಗೂ ಭಾವಗೀತ ವಾಚನದ ಕಾರ್ಯಕ್ರಮಗಳನ್ನು ಎರಡು ವರ್ಷ ಕೊಡಿಸಿಕೊಟ್ಟಿದ್ದರು.

ನಾನೊಬ್ಬ 'ಮಧುಕರವೃತ್ತಿ'ಯವನು; ಸಾಹಿತ್ಯ ಸಂಸ್ಕೃತಿಗಳ ಪ್ರೇಮಿ ಮಾತ್ರ. ಸೃಜನ ಶೀಲ ಕವಿಯಲ್ಲ, ಸಾಹಿತಿಯಲ್ಲ, ಕವಿ ಕಾವ್ಯ ವಿಮರ್ಶಕ ತಜ್ಞನೂ ಅಲ್ಲ. ಸಾಮಾನ್ಯ ಸಹೃದಯ ಮಾತ್ರನಾದ ನಾನು ವಿ.ಸೀ. ಅವರ ಸಾಹಿತ್ಯ ಕೃತಿಗಳನ್ನು ಓದಿ ಸಂತಸಪಡುತ್ತಿದ್ದುದಷ್ಟೇ ನನ್ನ ಭಾಗ್ಯ. ಅವರ 'ಆಗ್ರಹ' ನಾಟಕ, 'ಶಾಕುಂತಲ ನಾಟಕ ವಿಮರ್ಶೆ'ಗಳು ನನ್ನ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿವೆ. 'ಆಗ್ರಹ' ನಾಟಕ ನನ್ನದೊಂದು 'ದುರಾಗ್ರಹಿ' ಎಂಬ ನಾಟಕ ರಚನೆಗೆ ಸ್ಫೂರ್ತಿ ಕೊಟ್ಟಿತು. 'ಶಾಕುಂತಲ ನಾಟಕ ವಿಮರ್ಶೆ' ಓದಿ, ನಾನೇಕೆ ನನ್ನ ತಿಳಿವು ಸಂಸ್ಕಾರಗಳ ಇತಿಮಿತಿಯಲ್ಲಿ ಆ ನಾಟಕ ವಿಮರ್ಶೆಗೆ ಕೈ ಹಚ್ಚಬಾರದು ಎಂಬ ಅಸಾಧ್ಯ ಹುಚ್ಚಿನ ಕಾವು ಒತ್ತಡಗಳ ಗುಂಗಿನಲ್ಲಿ, ಕನ್ನಡದ ಕಾಳಿದಾಸ ಬಸವಪ್ಪಶಾಸ್ತ್ರಿಗಳ 'ಅಭಿಜ್ಞಾನ ಶಾಕುಂತಲ' ಭಾಷಾಂತರ ನಾಟಕದ ಮೇಲೆ ಮೊದಲ ಐದು ಅಂಕಗಳವರೆಗೆ ಎಲ್ಲಿಲ್ಲದ ಉತ್ಸಾಹ ಆವೇಶಗಳ ಒತ್ತಡದಲ್ಲಿ 'ನಾಟಕ ವಿಮರ್ಶೆ' ಎಂಬ ಬಾಲಿಶ ಸಾಹಸವನ್ನೂ ಮಾಡಿಯೇ ಬಿಟ್ಟೆ. ಇನ್ನೇನು ಆರನೆಯ ಅಂಕವನ್ನು ಕುರಿತು

ಬರೆಯಲು ಕುಳಿತಾಗ ಬಿಹಾರ್ ರಾಜ್ಯದ ಜಮಷೆಡ್‌ಪುರದಲ್ಲಿ ವಿಜ್ಞಾನಿಯಾಗಿದ್ದ ನನ್ನ ಮಗ ನೀರುಪಾಲಾಗಿ ಅಕಾಲ ಮೃತ್ಯುವಿಗೆ ತುತ್ತಾದ ಸುದ್ದಿ ಬಂದು, ಆ ಬರವಣಿಗೆ ಅಲ್ಲಿಗೇ ಸ್ಥಗಿತವಾಯಿತು. ಇಂದಿನವರೆಗೂ ಮತ್ತೆ ಆ ಲೇಖನಕ್ಕೆ ಕೈ ಹಾಕಲು ಮನಸ್ಸಾಗಲಿಲ್ಲ. ನನ್ನ 'ಜಬಾಲಾ' ನಾಟಕಕ್ಕೆ ವಿ.ಸೀ. ಅವರ 'ಸೆಳೆ' ಎಂಬ ಭಾವಗೀತೆಯನ್ನು ಅಲ್ಲಿನ ಒಂದು ಪ್ರೇಮ ಸನ್ನಿವೇಶದಲ್ಲಿ ಬಳಸಿಕೊಂಡಿದ್ದೇನೆ, ಅವರಿಗೆ ಋಣಿಯಾಗಿ.

ವಿ.ಸೀ. ಸಂಗೀತ ಬಲ್ಲವರು. ವೈಣಿಕ ಚಿತ್ರಕಲಾಪಟು ಕೆ. ವೆಂಕಟಪ್ಪನವರಂಥ ಪ್ರಸಿದ್ಧ ಕಲಾವಿದರ ಆಪ್ತಮಿತ್ರರು. ಅವರ ಕಲಾಭಿಜ್ಞತೆಗೆ ಅವರು ಪ್ರಕಟಿಸಿರುವ ಕವನ ಸಂಕಲನಗಳ ಹೊರಮೈ ಅಂದ-ಚೆಂದಗಳು, ಗ್ರಂಥಗಳ ಹೊರಗೂ ಒಳಗೂ ರಂಜನೀಯವಾಗಿ ಅಳವಡಿಸಿರುವ ಕಲಾವಂತಿಕೆಯ ಚಿತ್ರಗಳು ಸಾಕ್ಷಿಯಾಗಿವೆ.

'ವಿದ್ಯಾ ದದಾತಿ ವಿನಯಂ' ಎನ್ನುವ ಮಾತಿಗೆ ವಿ.ಸೀ. ನಿದರ್ಶನವಾಗಿದ್ದರು. ಅವರದು ಹಿರಿದಾದ ಕೀರ್ತಿ, ಸಾರ್ಥಕವಾದ ಬದುಕು.

ಅಪರಂಜಿಯಂಥ ಮನುಷ್ಯ

"ವಿ.ಸೀ. ದೊಡ್ಡ ಮನುಷ್ಯರಲ್ಲಿ ದೊಡ್ಡ ಮನುಷ್ಯರು. ಅಪರಂಜಿಯಂಥ ಮನುಷ್ಯ. ಸತ್ಯವಂತ, ನಿಷ್ಠಾವಂತ, ಶುಚಿಯಾದ ಜೀವನ ನಡೆಸಿ ಕೀರ್ತಿಶಾಲಿಯಾದರು. ಅವರು ಎಂಥೆಂಥವರನ್ನು ಕಂಡಿದ್ದರು, ಪರಿಚಯ ಮಾಡಿಕೊಂಡಿದ್ದರು ಎಂಬುದು ಅದ್ಭುತ. ಅವರು ಸಂಸ್ಕೃತಿಯ ಮೇಲ್ಪಂಕ್ತಿಯಾಗಿದ್ದರು."

ಮಾಸ್ತಿ ವೆಂಕಟೇಶ ಅಯ್ಯಂಗಾರ್
'ಕನ್ನಡ ನುಡಿ' ಸಂ. ೪೬, ಪು. ೫

ತೇ ಹಿ ನೋ ದಿವಸಾ ಗತಾಃ

ಗರ್ಗೇಶ್ವರಿ ವೆಂಕಟಸುಬ್ಬಯ್ಯ

ಅನೇಕ ದಕ್ಷರಾದ ವಿದ್ವಾಂಸರಾದ ಉಪಾಧ್ಯಾಯರಿಂದ ಮಾರ್ಗದರ್ಶನ ಪಡೆಯುವ ಸುಯೋಗ ನನಗೆ ದೊರಕಿದ್ದರೂ, ಹೈಸ್ಕೂಲಿನ ಓದಿನ ನೆನಪು ಬಂದಾಗ ಮೊದಲು ಜ್ಞಾಪಕಕ್ಕೆ ಬರುವ ಉಪಾಧ್ಯಾಯರು ಶ್ರೀಯುತರಾದ ಕೆ. ಆರ್. ರಾಮಸ್ವಾಮಿಯವರು, ವಿ. ಸೀತಾರಾಮಯ್ಯನವರು ಮತ್ತು ಬಿ. ಕೃಷ್ಣರಾಯರು; ಕಾಲೇಜು ಓದಿನ ನೆನಪು ಬಂದಾಗ, ಡಾ. ಎಂ. ವಿ. ಗೋಪಾಲಸ್ವಾಮಿ ಮತ್ತು ಪ್ರೊ. ಕೆ. ಬಿ. ಮಾಧವ.

ಎರಡನೆಯ ವರ್ಷದ ಆರಂಭದಲ್ಲಿಯೇ ಶ್ರೀ ಸೀತಾರಾಮಯ್ಯನವರು ಮುಂಬಯಿಗೆ ತೆರಳಿದ್ದರು. ಹೀಗಾಗಿ ಹೈಸ್ಕೂಲಿನ ಕೊನೆಯ ವರ್ಷದಲ್ಲಿ ಅವರು ನಮಗೆ ಪಾಠಮಾಡಿದ್ದು ಮಾತ್ರ ನೆನಪಿನಲ್ಲಿದೆ. ಆ ವರ್ಷ ಅವರು ನಮ್ಮ ತರಗತಿಯವರಿಗೆ ಇಂಗ್ಲಿಷ್ ಗದ್ಯ ಮತ್ತು ಅರ್ಥಶಾಸ್ತ್ರ (Economics) – ಅದನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದವರಿಗೆ (ಅದು ನನ್ನ ಐಚ್ಛಿಕ ವಿಷಯವಾಗಿರಲಿಲ್ಲ) – ಗಳನ್ನು ಕಲಿಸುತ್ತಿದ್ದರು. ನಮ್ಮ ಪಠ್ಯಭಾಗದಲ್ಲಿ ಸೇರಿದ್ದ ಅಡಿಸನ್ನನ Party Spirit ಎಂಬ ಪ್ರಬಂಧವನ್ನು ಅವರು ಸ್ವಾರಸ್ಯಕರವಾಗಿ ಬೋಧಿಸಿದ್ದು ಈಗಲೂ ಚೆನ್ನಾಗಿ ನೆನಪಿದೆ.

ನಮ್ಮ ಇಂಗ್ಲಿಷ್ ಉಪಾಧ್ಯಾಯರಿಬ್ಬರೂ ವಿದ್ಯಾರ್ಥಿಗಳ ಮೆಚ್ಚಿಗೆಯನ್ನು ಗಳಿಸಿದವರಾಗಿದ್ದರೂ, ಅವರ ವ್ಯಕ್ತಿತ್ವ ಮತ್ತು ಪಾಠ ಕ್ರಮಗಳು ತುಂಬ ಭಿನ್ನವಾಗಿದ್ದುವು. ಕೃಷ್ಣರಾಯರು ದೃಢಕಾಯದ ದಿಟ್ಟ ನಿಲುವಿನ ಮಾತುಪರ ಪ್ರವೃತ್ತಿಯವರು (Extrovert type). ನಮ್ಮ ಶಾಲೆಯಲ್ಲಿ ತರಗತಿಗಳ ಮಧ್ಯೆ ಗೋಡೆಗೆ ಬದಲಾಗಿ ಬಿದಿರು ತಡಿಕೆಗಳನ್ನು ಉಪಯೋಗಿಸಿದ್ದುದರಿಂದ, ರಾಯರು ಪಾಠಹೇಳುತ್ತಿದ್ದಾಗ ಪಕ್ಕದ ತರಗತಿಯಲ್ಲಿ ಅಲ್ಲಿನ ಉಪಾಧ್ಯಾಯರ ಪಾಠ ಸರಿಯಾಗಿ ಕೇಳಿಸುವುದು ಸ್ವಲ್ಪ ಕಷ್ಟವೇ! ಅವರು ಸೈಕಲ್ ಕಚ್ಚೆಹಾಕಿ ಪಂಚೆಯುಡುತ್ತಿದ್ದರು.

ಸೀತಾರಾಮಯ್ಯನವರ ಆಕೃತಿ ಚಿಕ್ಕದು. ನಡತೆಯಲ್ಲಿ ನಯಹೆಚ್ಚು. ಮಾತು ಮೃದು. ಅವರದು ಅಂತರ್ಮುಖಿ ಸ್ವಭಾವ (Introvert nature). ವಿಷಯಗಳನ್ನು ನಿಧಾನವಾಗಿ ವಿವರಿಸಿ ಪಾಠಮಾಡುತ್ತಿದ್ದರು. ತೀಡಿ ಉಟ್ಟ ಮಲ್ ಕಚ್ಚೆ ಪಂಚೆ, ಮುಚ್ಚಿದ ಕತ್ತಿನ ಅಂಗಿ ಮತ್ತು ಜರಿಯಿಲ್ಲದ ಇಸ್ತ್ರಿ ಮಾಡಿದ ಬಿಳಿಯ ಮಲ್ ರುಮಾಲು – ಇವು ಅವರ

ಉಡುಪು. ಅವರು ಸ್ವಾಭಿಮಾನದಲ್ಲಿ ಕೃಷ್ಣರಾಯರಿಗೇನೂ ಕಮ್ಮಿಯಲ್ಲದಿದ್ದರೂ, ಇತರರಿಗೆ ನೋವಾಗುವಂತೆ ಅದನ್ನು ಪ್ರದರ್ಶಿಸುತ್ತಿರಲಿಲ್ಲ.

ಶಾರದಾ ವಿಲಾಸ ಹೈಸ್ಕೂಲಿನಲ್ಲಿನ ತಮ್ಮ ಅನುಭವಗಳನ್ನು ಸೀತಾರಾಮಯ್ಯನವರೇ ಹೀಗೆ ಹೇಳಿದ್ದಾರೆ:

"ನನ್ನ ೪೦–೪೫ ವರ್ಷಗಳ ಉಪಾಧ್ಯಾಯ ವೃತ್ತಿಯ ಅನುಭವದಲ್ಲಿ ಆ ಹೈಸ್ಕೂಲು ವಿದ್ಯಾರ್ಥಿಗಳಿಂದ ಸಿಕ್ಕಿದಷ್ಟು ಪ್ರೀತಿ, ಭಕ್ತಿ ವಿಶ್ವಾಸ, ಸಹಜ ಸೌಜನ್ಯ, ಉದಾರ ನಿರ್ವಂಚನೆ, ನಿಷ್ಕಪಟತೆ ಬೇರೊಂದು ಕಡೆ ಸಿಕ್ಕಿಲ್ಲವೆನ್ನಿಸುತ್ತದೆ." (ಸ್ಮೃತಿಚಿತ್ರ ಸಂಪುಟ, ಕಾಲೇಜ್ ದಿನಗಳು: ಪುಟ ೧೫೮)

"ಆ ಪ್ರೀತಿಗೆ ಅಲ್ಲಿ ಕೆಲಸ ಮಾಡಿದ ಎಲ್ಲ ಉಪಾಧ್ಯಾಯರ ಕೃತಜ್ಞತೆಯ ಕಾಣಿಕೆ ಅಜೀವ ಕೊಡಬೇಕೆನ್ನಿಸುತ್ತದೆ. ಅಲ್ಲಿ ನಾನು ಕೆಲಸ ಮಾಡಿದ ಕಾಲ ಮಾನವತೆಯ ದೃಷ್ಟಿಯಿಂದ ನನಗೆ ಚಿನ್ನದ ಕಾಲ. ಆ ಹುಡುಗರು ಮಾಡಲೊಪ್ಪದ ಕೆಲಸವಿಲ್ಲ. ಇಂದಿಗೂ ಶಾರದಾ ವಿಲಾಸ ಹೈಸ್ಕೂಲಿನ ವಿದ್ಯಾರ್ಥಿಗಳ ಪ್ರೀತಿ, ನಿಷ್ಠೆ ನನ್ನ ಬದುಕಿನ ಒಂದು ದೊಡ್ಡ ಸ್ಫೂರ್ತಿಯೂ ಸಂತೋಷವೂ ಆಗಿ ಉಳಿದಿದೆ." (ವ್ಯಕ್ತಿಚಿತ್ರ ಸಂಪುಟ: ಭಾಗ ೧, ಎಂ. ವೆಂಕಟಕೃಷ್ಣಯ್ಯ (ತಾತಯ್ಯ), ಪುಟಗಳು ೯, ೧೦)

ಎಂಥ ಮನ ಮಿಡಿಸುವ, ಉದಾರವಾದ ಮಾತುಗಳು!

ಆ ಶಾಲೆಯಲ್ಲಿ ಅವರ ವಿದ್ಯಾರ್ಥಿಯಾಗಿದ್ದ ಯಾರು ಇದನ್ನು ಓದಿದರೂ ಧನ್ಯತಾ ಭಾವವುಂಟಾಗದಿರದು.

ನಾನು ಎಸ್.ಎಸ್.ಎಲ್.ಸಿ. ಮುಗಿಸಿ ಶಾರದಾ ವಿಲಾಸ ಹೈಸ್ಕೂಲನ್ನು ಬಿಟ್ಟ ಮೇಲೆ ಐದು ವರ್ಷ ಸೀತಾರಾಮಯ್ಯನವರು ಅಲ್ಲೇ ಉಪಾಧ್ಯಾಯರಾಗಿದ್ದರು. ಅನಂತರ ೧೯೨೮ರಲ್ಲಿ ಬೆಂಗಳೂರಿಗೆ ಇಂಟರ್ ಮೀಡಿಯೆಟ್ ಕಾಲೇಜಿನ ಕನ್ನಡ ಅಧ್ಯಾಪಕರಾಗಿ ಹೊರಟು ಹೋದರು. ಈ ಅವಧಿಯಲ್ಲಿ ದಾರಿಯಲ್ಲಿ ಕಂಡಾಗ ವಂದಿಸುವುದಕ್ಕಿಂತ ಹೆಚ್ಚಿನ ಸಂಪರ್ಕ ಅವರೊಡನೆ ನನಗೆ ಇರಲಿಲ್ಲ. ಅವರು ವರ್ಗವಾಗಿ ಮತ್ತೆ ಮೈಸೂರಿಗೆ ಬರುವುದಕ್ಕೆ ಮೊದಲೇ ನಾನು ಮೈಸೂರನ್ನು ಬಿಟ್ಟು ಪುಣೆಯಲ್ಲಿ ನೆಲಸಿದ್ದೆ.

ನಾನು ಪುಣೆಗೆ ಹೋಗುವುದಕ್ಕೆ ಮುಂಚೆ ಅವರ ಪಂಪಾಯಾತ್ರೆ, ಹಣ ಪ್ರಪಂಚ, ಸೊಹ್ರಾಬ್ ರುಸ್ತುಂ ಇವುಗಳನ್ನೂ, ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾಗಿದ್ದ ಕೆಲವು ಕವಿತೆಗಳನ್ನೂ ಓದಿದ್ದೆ. ಮನೆ ತುಂಬಿಸುವ ಹಾಡನ್ನು ಎಷ್ಟೋ ಬಾರಿ ಓದಿ ಕಣ್ಣು ತುಂಬಿಸಿಕೊಂಡಿದ್ದೆ. ಆಧುನಿಕ ಕನ್ನಡ ಕವಿತೆಗಳಲ್ಲಿ ನನಗೆ ಅಷ್ಟಾಗಿ ಅಭಿರುಚಿ ಯುಂಟಾಗಿರಲಿಲ್ಲವಾದುದರಿಂದ ಅವರ ಕವಿತಾ ಸಂಗ್ರಹಗಳನ್ನು ನಾನು ಓದಿರಲಿಲ್ಲ.

ಸೀತಾರಾಮಯ್ಯನವರನ್ನು ಮತ್ತೆ ನಾನು ಕಂಡದ್ದು ನಾನು ಬೆಂಗಳೂರಿಗೆ ಬಂದು ನೆಲಸಿದ ನಂತರ. ೧೯೭೨ರಲ್ಲಿ ನನ್ನ ಮಗನ ಮದುವೆಗೆ ಆಹ್ವಾನಿಸಲು ಹೋಗಿದ್ದೆ. ಸುಮಾರು ಅರ್ಧ ಶತಮಾನದಷ್ಟು ಹಿಂದಿನ ನನ್ನ ವಿದ್ಯಾರ್ಥಿದಿನಗಳನ್ನು ಒಡನೆ ನೆನಪಿಗೆ ತಂದುಕೊಂಡು, "ಹುಡುಗ ಚುಟುಕ ಉತ್ತರ ಬರೆದರೂ ಹೆಚ್ಚು ಅಂಕ ಕೊಡಲೇ

ಬೇಕಾಗುತ್ತಿತ್ತು" ಎಂದು ಹೇಳಿ, ಅವರನ್ನು ನೋಡಲು ಬಂದಿದ್ದ ಮತ್ತೊಬ್ಬರಿಗೆ ನನ್ನ ಪರಿಚಯ ಮಾಡಿಕೊಟ್ಟರು. ಅದುವರೆಗಿನ ನನ್ನ ಜೀವನ ವಿವರಗಳನ್ನೆಲ್ಲ ಕೇಳಿ ತಿಳಿದು ಸಂತೋಷ ಪಟ್ಟರು.

ಅಲ್ಲಿಂದ ಮುಂದೆ, ಆಗಾಗ ಅವರ ಮನೆಯಲ್ಲಿಯೋ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿಯೋ ಅವರ ದರ್ಶನ ಪಡೆದು ಅವರೊಡನೆ ಮಾತನಾಡುವ ಅವಕಾಶ ಸಿಕ್ಕುತ್ತಿತ್ತು.

"ತೇ ಹಿ ನೋ ದಿವಸಾ ಗತಾಃ"

ಧೀರಚೇತನ

"ವಿ.ಸೀ.ಯವರದು ಧೀರಚೇತನ. 'ಕಸ್ಮೈ ದೇವಾಯ' ಕವಿತೆಯ ಮೂಲಕ ತತ್ವಜ್ಞಾನದ ಕೊನೆಯ ಹಂತದ ಭಾವ ಚಿಮ್ಮಿದ ಸೀತಾರಾಮಯ್ಯನವರ ಕವಿತೆ ಹೊಮ್ಮಿದ ವಿಚಾರಕ್ಕಿಂತ ಆಧುನಿಕವಾದುದು ಬೇರೆ ಇಲ್ಲ. ಮನುಷ್ಯನ ಒಳ್ಳೆಯತನಕ್ಕಿಂತ ಮಿಗಿಲಾದ ದೈವತ್ವವಿಲ್ಲವೆಂಬ ತತ್ವ ಪ್ರತಿಪಾದಿಸಿದ ಸತ್ವಶಾಲಿ ಕವಿ ವಿ.ಸೀ. ಮದರಾಸಿನ ಸಮುದ್ರ ದಂಡೆಯಲ್ಲಿ ವಿ.ಸೀ. ಅವರ 'ಅಭೀಃ' ಕವನವನ್ನು ಓದಿ ತಿಳಿಸಿದಾಗ, ಆ ಕಂಠದಿಂದ ಹೊರಬಂದ ಶಬ್ದ ಸಮುದ್ರದ ಅಲೆಗಳ ಗಂಭೀರ ಘೋಷಕ್ಕೆ ಸಾಟಿಯಾಗಿತ್ತು."

ಮಾಸ್ತಿ ವೆಂಕಟೇಶ ಅಯ್ಯಂಗಾರ್
'ಕನ್ನಡ ನುಡಿ' ಸಂ. ೪೬, ಪು. ೫೫

ಪುಣ್ಯಸ್ಮರಣೆ

ಬಿ. ಪಿ. ರಾಧಾಕೃಷ್ಣ

ನನಗೆ ಕನ್ನಡದಲ್ಲಿ ಆಸಕ್ತಿ ಹುಟ್ಟಿಸಿ ನನ್ನ ಜೀವನವನ್ನು ಬೆಳಗಿಸಲು ಕಾರಣರಾದವರು ಇಬ್ಬರು. ಎಳೆಯ ವಯಸ್ಸಿನಲ್ಲಿ ನನ್ನನ್ನು ಪಕ್ಕದಲ್ಲಿ ಕೂರಿಸಿಕೂಂಡು ತಮ್ಮ ಸುಮಧುರ ಕಂಠದಿಂದ ಕನ್ನಡ ಹಾಡುಗಳನ್ನು ಹಾಡಿ ರಮಿಸಿದ ಅಜ್ಜಿ ಆ ಇಬ್ಬರಲ್ಲಿ ಮೊದಲಿಗರು. ಬಾಲ್ಯ ಕಳೆದು ನಾನು ಯುವಕನಾಗಿ ಕಾಲೇಜು ಹೊಸ್ತಿಲನ್ನು ಮುಟ್ಟಿದ ಮೇಲೆ ಕಾವ್ಯಪಾಠ ಹೇಳಿಕೊಟ್ಟು ನನ್ನೆದುರಿಗೆ ಹೊಸದೇ ಆದ ಒಂದು ಪ್ರಪಂಚವನ್ನು ಸೃಷ್ಟಿಸಿದ ಗುರು ವಿ.ಸೀ. ಇನ್ನೊಬ್ಬರು. ಈ ವ್ಯಕ್ತಿಗಳನ್ನು ನಾನು ಎಂದಿಗೂ ಮರೆಯುವಂತಿಲ್ಲ.

ಅಜ್ಜಿ ನನಗೆ ಮೊದಲು ಕಲಿಸಿದ ಪದ್ಯ ಕುಮಾರವ್ಯಾಸನದು. ಎಪ್ಪತ್ತೈದು ವರ್ಷಗಳಿಗೂ ಹಿಂದೆ ಕೇಳಿದ ಆ ಪದ್ಯದ ಇಂಪು ಇಂದಿನವರೆಗೂ ಮರೆಯದೆ ನನ್ನ ಮನಸ್ಸು ಆನಂದದಿಂದ ಓಲಾಡುವಂತೆ ಮಾಡಿದೆ.

ಇಂದುವದನೆಯ ಸಂತವಿಟ್ಟು ಮು
ಕುಂದ ರಥವೇರಿದನು ಕುಂತೀ
ನಂದನರು ತಳುಹುತ್ತ ಬಂದರು ಕಮಲಲೋಚನನ

ಈ ಸಾಲುಗಳನ್ನು ನನ್ನ ಅಜ್ಜಿ ಏಕೆ ಆರಿಸಿಕೊಂಡರೊ, ಚಿಕ್ಕಮಕ್ಕಳಾದ ನಮ್ಮ ಕೈಯಲ್ಲಿ ಅದೇಕೆ ಮೇಲಿಂದ ಮೇಲೆ ಹೇಳಿಸುತ್ತಿದ್ದರೂ ನಾನು ತಿಳಿಯೆ. ಆದರೆ ಅವರ ಮನಸ್ಸು ಎಷ್ಟು ಶುಚಿಯಾದದ್ದು, ಅವರ ರುಚಿ ಎಷ್ಟು ಸಂಪನ್ನವಾದದ್ದು ಎನ್ನುವುದು ಮಾತ್ರ ಎದ್ದು ಕಾಣುತ್ತದೆ. ಕನ್ನಡ ಹಾಡುಗಳನ್ನು ಅಲ್ಲದೆ ಅಜ್ಜಿ ಅನೇಕ ತೆಲುಗು ಪದಗಳನ್ನೂ ಇಂಪಾಗಿ ಹಾಡುತ್ತಿದ್ದರು. ಅದರಲ್ಲಿ ಒಂದು ನೆನಪಿನಲ್ಲಿ ಉಳಿದಿದೆ.

ಎಂತ ದಯೋ ದಾಸುಲ ಪೈ
ಪಂತಂಬುನಿ ಮಕರಿಬಟ್ಟಿ ಬಾಧಿಂಪಂಗ
ಶ್ರೀಕಾಂತುಡು ಚಕ್ರಮಂಪೆನು
ರಾಜುಗಾಯ ದತ್ತಾತ್ರಯ

ಗಜೇಂದ್ರ ಮೋಕ್ಷ ಪ್ರಸಂಗವನ್ನು ವಿವರಿಸುವ ಈ ಪದ್ಯ ಸೊಗಸಿನದು. ವಿ.ಸೀ. ಯವರ ಅಜ್ಜಿಯೂ ಈ ಪದವನ್ನು ಹಾಡಿಕೊಳ್ಳುತ್ತಿದ್ದರಂತೆ!

ಹೀಗೆ ಎಳೆತನದಿಂದಲೇ ಬೆಳೆದು ಬಂದ ಕನ್ನಡದ ಮೇಲಿನ ಒಲವು ಕುಡಿಯೊಡೆದು ನನ್ನ ಬುದ್ಧಿ ಜೀವನ ಅರಳಲು ಸಾಧ್ಯವಾದದ್ದು ನನ್ನ ವಿದ್ಯಾಗುರುಗಳಾದ ವಿ.ಸೀ.ಯವರ ಕೃಪೆಯಿಂದ. ಹೈಸ್ಕೂಲು ವಿದ್ಯಾಭ್ಯಾಸ ಮುಗಿಸಿ, ಆಗ ತಾನೆ ಇಂಟರ್ ಮೀಡಿಯೆಟ್ ಕಾಲೇಜು ಸೇರಿದ್ದ ತರುಣನ ಮೇಲೆ ವಿ.ಸೀ. ಅವರ ಪಾಠಕ್ರಮ ಎಂಥ ಪ್ರಭಾವ ಬೀರಿತು ಎನ್ನುವುದನ್ನು ಈಗಾಗಲೇ ಸ್ಮರಿಸಿಕೊಂಡಿದ್ದೇನೆ. ಇಂದಿನ ಸಂದರ್ಭದಲ್ಲಿ ಅದನ್ನು ಮತ್ತೆ ನೆನಪಿಗೆ ತಂದು ಕೊಂಡು ಮೆಲುಕು ಹಾಕಬೇಕೆನ್ನಿಸುತ್ತದೆ.

ಪಾಠಕ್ಕೆಂದು ವಿಧಿಸಿದ್ದ ಕೃತಿ 'ಹರಿಶ್ಚಂದ್ರ ಕಾವ್ಯಸಂಗ್ರಹ.' ಆ ಪುಸ್ತಕ ಆಗ ತಾನೆ ವಿಶ್ವವಿದ್ಯಾನಿಲಯದ ಪ್ರಕಟನೆಯಾಗಿ ಹೊರಬಿದ್ದಿತ್ತು. ಈ ಗ್ರಂಥವನ್ನೇ ಆ ವರ್ಷ ಇಂಟರ್ ಮೀಡಿಯೆಟ್ ತರಗತಿಯ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿ ವಿಧಿಸಿದ್ದರು. ಇಂಥ ಉತ್ತಮ ಕಾವ್ಯವನ್ನು ಗುರುಗಳ ಮೂಲಕ ಅಭ್ಯಾಸ ಮಾಡುವ ವಿದ್ಯಾರ್ಥಿಗಳಲ್ಲಿ ನಾವು ಮೊದಲಿಗರಾಗಿದ್ದೆವು.

ವಿ.ಸೀ. ಅವರು ಅಂಥ ಎತ್ತರದ ಆಳೇನೂ ಅಲ್ಲ. ಆದರೆ ಅವರು ತೀಡಿ ಉಟ್ಟ ಕಚ್ಚೆಪಂಚೆ, ಮಿರುಮಿರುಗುತ್ತಿರುವ ಬಾದಾಮಿ ಬಣ್ಣದ ರೇಷ್ಮೆಯ ಮುಚ್ಚುಕೋಟು, ಸೊಗಸಾಗಿ ಕಟ್ಟಿದ ಕೊಕ್ಕರೆಗರಿಯಂತೆ ಶುಭ್ರವಾದ ಗರಿಗರಿಯಾಗಿ ಕಾಣುವ ಬಿಳಿಯ ರುಮಾಲು— ಇವು ಯಾರನ್ನೆ ಆಗಲಿ, ಮೊದಲ ಬಾರಿಗೇ ಆಕರ್ಷಿಸುವಂಥವು. ಹೀಗೆ ಆಚ್ಛಾದಿತರಾಗಿ ಬಂದ ಅವರನ್ನು ಕಂಡು ವಿದ್ಯಾರ್ಥಿಗಳಾದ ನಮ್ಮಲ್ಲಿ ಗೌರವ ವಿಶ್ವಾಸಗಳು ತಾವಾಗಿಯೇ ಹುಟ್ಟಿಕೊಂಡವು. ಇನ್ನು ಅವರ ಬಾಯಿಂದ ಹೊರಬಿದ್ದ ವಾಕ್‌ಪ್ರವಾಹವನ್ನು ಕೇಳಿದ ಮೇಲಂತೂ ಪ್ರೀತ್ಯಾದರಗಳು ಇನ್ನೂ ಹೆಚ್ಚಿದವು.

ಹರಿಶ್ಚಂದ್ರ ಕಾವ್ಯದ ಪೀಠಿಕಾ ಭಾಗದ ಮೊದಲ ಕೆಲವು ಪದ್ಯಗಳು ಬಹು ಸುಂದರವಾದವು. ಅವುಗಳ ಸೊಗಸೇ ಸೊಗಸು. ಮೊದಲ ಪದ್ಯ ವಿರೂಪಾಕ್ಷನ ಸ್ತುತಿ:

ಶ್ರೀಪತಿಗೆ ಸೊಬಗನು,
ಉಡುಪತಿಗೆ ಶಾಂತಿಯನು,
ವಾಣೀಪತಿಗೆ ಚಾತುರ್ಯಮಂ
ದಿವಸ್ಪತಿಗೆ ಪ್ರತಾಪಮಂ
ಸುರಪತಿಗೆ ಭೋಗಮಂ
ರತಿಪತಿಗೆ ಮೂಲೋಕವಾವರಿಸುವ ರೂಪಂ,
ಸರಿತ್ಪತಿಗೆ ಗಂಭೀರತೆಯನು,
ಸ್ವಾಹಾಪತಿಗೆ ತೇಜಮಂ,
ಕೊಟ್ಟ ಗುರುಮೂರ್ತಿ ಪಂಪಾಪತಿ ವಿರೂಪಾಕ್ಷನ್,
ಎಮಗೆ ಇಷ್ಟಸಿದ್ಧಿಯಂ ಮಾಳ್ಕಿ, ಸಂತೋಷದಿಂದ.

ಹೀಗೆ ಹೊಮ್ಮಿತು ವಿ.ಸೀ. ಯವರ ಬಾಯಿಂದ ರಾಘವಾಂಕನ ಕವಿವಾಣಿ. ವಿದ್ಯಾರ್ಥಿಗಳು ನಾವು ಮಂತ್ರಮುಗ್ಧರಾಗಿ ಕೇಳುತ್ತಿದ್ದೆವು. ನಾವು ಯಾವುದೋ ಬೇರೆ ಲೋಕವನ್ನು ಸೇರಿದ್ದೇವೆಂಬ ಅನುಭವವಾಗುತ್ತಿತ್ತು. 'ಶ್ರೀಪತಿಗೆ ಸೊಬಗನು' ಎನ್ನುವುದರಿಂದ

ಮೊದಲುಗೊಂಡು, 'ಎಮಗೆ ಇಷ್ಟಸಿದ್ಧಿಯಂ ಮಾಳ್ಕೆ' ಎನ್ನುವವರೆಗೂ, ಒಂದಿಷ್ಟೂ ತಡವರಿಸದೆ ನಿರರ್ಗಳವಾಗಿ ಹರಿದು ಬಂದ ವಾಕ್ಪ್ರವಾಹ ವಿದ್ಯಾರ್ಥಿಗಳಾದ ನಮ್ಮ ಮನಸ್ಸಿನ ಮೇಲೆ ಎಂಥ ಸತ್ಪರಿಣಾಮ ಉಂಟುಮಾಡಿತೆನ್ನುವುದನ್ನು ವಿವರಿಸಿ ಹೇಳಲಾರೆ.

ಪ್ರಪಂಚದ ಎಲ್ಲ ಶಕ್ತಿಗಳೂ ಗುರುಮೂರ್ತಿ ವಿರೂಪಾಕ್ಷನಿಂದ ವರವಾಗಿ ಬಂದಂತೆ, ಗುರುವಿನಿಂದ ಶಿಷ್ಯರಿಗೂ ವಿದ್ಯೆ ಒಲಿಯಲಿ, ಎನ್ನುವ ಉದಾತ್ತ ಮನೋಭಾವದಿಂದ ಕೂಡಿದ ಈ ಮನೋಹರವಾದ ಮೊದಲನೆಯ ಪದ್ಯ ನಮ್ಮ ವಿದ್ಯಾರಂಭಕ್ಕೆ ನಾಂದಿಯಾಯಿತು. ಅರುವತ್ತು ವರ್ಷಗಳು ಸರಿದು ಹೋಗಿದ್ದರೂ ಈ ನಿಡುಗಾಲದ ಅಂತರದಲ್ಲಿ ಎಷ್ಟೋ ವಿಷಯಗಳು ಮರೆತು ಹೋಗಿದ್ದರೂ, ಈ ಪದ್ಯವನ್ನು ವಾಚಿಸಿದ ಗುರು ವಿ.ಸೀ. ಯವರ ಚಿತ್ರ ಮಾತ್ರ ಮನಸ್ಸಿನಲ್ಲಿ ಅಚ್ಚಳಿಯದೆ ಇಂದಿನವರೆಗೂ ಉಳಿದಿದೆ.

ಮುಂದೆ ಇಂದ್ರನ ವೈಭವದ ವರ್ಣನೆ ಬರುತ್ತದೆ.

ಪರುಷವಂಗಣದ ಕಲು,
ಸುರಭಿ ಕರಹಂ,
ಕಲ್ಪತರು ವನಂ,
ಸ್ವರ್ಗ ನಿಜದೇಶ,
ಅಮರರ್ ಆಳ್,
ಮೇರು ಕೇಳೀ ಶೈಲ,
ಅಮೃತವೇ ಮನೆಯ ಬೀಯಂ
ವರರಂಭೆ ಸೂಳೆ!.....

ವಿ.ಸೀ. 'ವರರಂಭೆ ಸೂಳೆ' ಎನ್ನುವ ಕಡೆ ತಮ್ಮ ಓದುಗಾರಿಕೆಯನ್ನು ನಿಲ್ಲಿಸಿ, ಹುಡುಗರತ್ತ ಹುಬ್ಬೇರಿಸಿ ನೋಡಿದರು. ಉಚ್ಚಾರಣೆಯಲ್ಲಿದ್ದ ಪಲುಕನ್ನು, ನುಡಿಯಲ್ಲಿನ ಕಾಕನ್ನು ಕೇಳಬೇಕಿತ್ತು. ಹುಡುಗರು ನಾವು ಹುಚ್ಚೆದ್ದು ಹೋದೆವು.

ಅಲ್ಲಿಂದಾಚೆಗೆ ವಸಿಷ್ಠ ವಿಶ್ವಾಮಿತ್ರರ ನಡುವಿನ ಕಲಹ, ವಿಶ್ವಾಮಿತ್ರರ ರೋಷದಿಂದೊಡಗೂಡಿದ ಭರ್ತ್ಸನೆಯ ಮಾತು, ವಸಿಷ್ಠರ ಶಾಂತವಾದ ಉತ್ತರ, ಹರಿಶ್ಚಂದ್ರ ಚಂದ್ರಮತಿಯರ ವರ್ಣನೆ, ಬೇಟೆಯ ವರ್ಣನೆ, ವಿಶ್ವಾಮಿತ್ರನ ಸೃಷ್ಟಿಯಾದ ಗಾಯಕಿಯರ ರೂಪುಲಾವಣ್ಯ, ಅವರೊಡನೆ ಹರಿಶ್ಚಂದ್ರನ ಸಂಭಾಷಣೆ, ಸವಾಲಿಗೆ ಜವಾಬು, ಹರಿಶ್ಚಂದ್ರ ರಾಜ್ಯ ಕಳೆದು ಕೊಂಡು ದೇಸಿಗನಂತೆ ಅಯೋಧ್ಯೆ ಬಿಟ್ಟು ಹೊರಟಿದ್ದು, ಅವನು ಅನುಭವಿಸಿದ ಕಷ್ಟ ಪರಂಪರೆ, ಹೆಂಡತಿ ಮಕ್ಕಳನ್ನು ಮಾರಿದ್ದು, ಹಾವುಕಚ್ಚಿ ರೋಹಿತಾಶ್ವನ ಮರಣ, ಚಂದ್ರಮತೀ ವಿಲಾಪ– ಹೀಗೆ, ಕಥೆ ಬೆಳೆಯುತ್ತ ಹೋಗುತ್ತದೆ. ಆ ಒಂದೊಂದು ಪ್ರಸಂಗದ ಸೊಗಸನ್ನು ಎತ್ತಿ ತೋರಿಸಿದವರು ನಮ್ಮ ಗುರು ವಿ.ಸೀ. ಅವರಿಂದ ಆದ ಉಪಕಾರವನ್ನು ನಾವು ಎಂದಿಗಾದರೂ ಮರೆಯಲಾದೀತೆ?

ವಿ.ಸೀ. ಯವರ ಕಾವ್ಯಪಾಠ ಕೇಳುವವರೆಗೂ ನಾವು ಕೂಪಮಂಡೂಕಗಳಂತೆ ಬೆಳೆದಿದ್ದೆವು. ಈಗ ಒಮ್ಮೆಗೇ ನಮ್ಮ ದೃಷ್ಟಿ ವಿಶಾಲವಾಯಿತು. ಪದಗಳ ಅರ್ಥಕ್ಕಿಂತ ಹೆಚ್ಚಾಗಿ

ಅವುಗಳ ಧ್ವನಿ ನಮ್ಮ ಮೇಲೆ ಹೆಚ್ಚಿನ ಪರಿಣಾಮ ಉಂಟುಮಾಡಿತು. ನಾಲಿಗೆಯ ಮೇಲೆ ಕವಿಯ ಮಾತುಗಳು ನಲಿಯತೊಡಗಿದವು. ಅರ್ಥಕಲ್ಪನೆ ಅರಳುತ್ತ ಹೋಯಿತು, ಸುಪ್ತವಾಗಿದ್ದ ಭಾವನಾ ಪ್ರಪಂಚ ಎಚ್ಚರಗೊಂಡಿತು. ಇವೆಲ್ಲವೂ ಗುರುಪ್ರಸಾದದಿಂದ ನಮಗೆ ಲಭ್ಯವಾಯಿತು. ಈ ರೀತಿ ಶ್ರದ್ಧಾಭಕ್ತಿಪೂರ್ವಕವಾಗಿ ಕಾವ್ಯವ್ಯಾಸಂಗಕ್ಕೆ ಪ್ರೇರಣೆ ನೀಡಿದವರು ಗುರು ವಿ.ಸೀ.

ಮೊದಲನೆಯ ವರ್ಷದಲ್ಲಿ ಅವರು ಪಾಠ ಹೇಳಿದ್ದು 'ಹರಿಶ್ಚಂದ್ರ ಕಾವ್ಯ'ವಾದರೆ ಎರಡನೆಯ ವರ್ಷದ ಪತ್ಯ ಪುಸ್ತಕಗಳು ಡಿ.ವಿ.ಜಿ. ಯವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಮತ್ತು ಅವರದೇ ಆದ ಪದ್ಯ ಸಂಕಲನ 'ನಿವೇದನ'. ನಮ್ಮ ಪುಣ್ಯಕ್ಕೆ ಈ ಶ್ರೇಷ್ಠವಾದ ಕೃತಿಗಳು ಪತ್ಯ ಪುಸ್ತಕಗಳಾಗಿ ಆಯ್ಕೆಯಾಗಿದ್ದವು. ಅವುಗಳ ಸಾರವನ್ನು ನಮಗೆ ಒದಗಿಸಿದರು. ವಿ.ಸೀ. ಡಿ.ವಿ.ಜಿ.ಯವರ ಬಗ್ಗೆ ನಮ್ಮಲ್ಲಿ ಅಪಾರ ಗೌರವ ಬೆಳೆಯಲು ಕಾರಣರಾದರು. ಡಿ.ವಿ.ಜಿ. ಯವರ ಹೆಚ್ಚುಗಾರಿಕೆಯನ್ನು ವಿದ್ಯಾರ್ಥಿಗಳಾದ ನಮಗೆ ಅವರು ತೋರಿಸಿಕೊಟ್ಟ ರೀತಿ ಎಂದೆಂದಿಗೂ ಮರೆಯತಕ್ಕದ್ದಲ್ಲ.

ಮೇಲೆ ನೋಡೆ ಕಣ್ಣ ತಣಿಪ
ನೀಲ ಪಟದಿ ವಿವಿಧ ರೂಪ
ಜಾಲಗಳನು ಬಣ್ಣಿಸಿರ್ಪ
ಚಿತ್ರಚತುರನಾರ್
ಕಾಲದಿಂದ ಮಾಸದಾ
ವಿಚಿತ್ರವೆಸಪನಾರ್

ಎನ್ನುವ 'ನಿವೇದನ'ದ ಮೊದಲ ಪದ್ಯದಿಂದ ಹಿಡಿದು

ಕಂಡುಕಂಡುದನೆಲ್ಲ ಬೇಡುವರು ನಾವಲ್ಲ
ಉಂಡು ಸುಖಿಪೆವು ಕೈಗೆ ಬಂದ ಫಲವ
ಎಮ್ಮ ಸುಖವೆಮಗಿಹುದು ನಿಮ್ಮ ದುಗುಡವು ನಿಮಗೆ
ನಿಮ್ಮೂರು ನಮಗೆ ಸಾಕ್ಯೆ— ಸಖರೆ

ಎನ್ನುವ 'ದಾರಿಗರ ಹಾಡಿನ' ಕೊನೆಯ ಸಾಲಿನವರೆಗೆ, ವಿದ್ಯಾರ್ಥಿಗಳಾದ ನಾವು ಒಂದು ದಿನವೂ ಒಂದು ಗಳಿಗೆಯೂ ಬೇಸರಿಸದಂತೆ, ಹೊಸ ಹೊಸ ರಸಾನುಭವವನ್ನು ಮಾಡಿಸುತ್ತಾ ಹೋದರು. ಅವರ ಪಾಠಕ್ರಮದ ರೀತಿಯ ಸೊಗಸನ್ನು, ಕಾವ್ಯದ ಜೀವ ಜೀವಾಳವೆಲ್ಲವನ್ನು ಅವರು ಹೊರಹೊಮ್ಮಿಸುತ್ತಾ ಹೋದ ಬಗೆಯನ್ನು ಬರವಣಿಗೆಯಲ್ಲಿ ವಿವರಿಸಿ ಹೇಳುವುದು ಕಷ್ಟ. ಎಂದೆಂದಿಗೂ ಶಿಷ್ಯರಾಗಿಯೇ ಉಳಿದು ಗುರುವಿನ ಮುಖದಿಂದ ಹೊಮ್ಮುತ್ತಿದ್ದ ವಾಗ್ಧಾರೆಯ ಸೊಗಸನ್ನು ಆಸ್ವಾದಿಸುತ್ತ ಕುಳಿತಿರೋಣವೆ ಎನ್ನಿಸುತ್ತಿತ್ತು. ಅಷ್ಟು ನಮ್ಮ ಮನಸ್ಸನ್ನು ಸೂರೆಗೊಂಡಿದ್ದರು ಅವರು.

ಮಾತ ಮೂದಲಿಸುತ್ತಿರುವ ಕೊಡಗಿನ ಮಹಾರಣ್ಯ ಸರಣಿ; ಕ್ಷೀರಾಸೇಚನೆ ಧಾರೆಯಂತೆ ಸುರಿವ ಜೋಗದ ನೀರ ಬೀಳು, ಆ ಸರೌದ್ರ ಸಂಮೋಹನ ಕಾವ್ಯಾಶ್ರಯೆ, ಕನ್ನಡಿಗರ ಭಾಗ್ಯನಿಧಿ ಕಾವೇರಿಯ ಸಂಭ್ರಮ, ಲಾವಣ್ಯ ಲೀಲೆ; ದೀನ, ಅಲ್ಪಾಕಾರದಿಂದ

ಬಂದು ಅತಿಶಯ ನಯದಿಂದ ನೆಲವನ್ನು ಬೇಡಿ ಹರಿಯಷ್ಟೇ ಕಿರಿಯನ್ನಾಗಿಸಿದ ಬಲಿ ಚಕ್ರವರ್ತಿಯ ಪಾರಮ್ಯ – ಇವುಗಳನ್ನು ಅವರು ವಿವರಿಸಿದ ರೀತಿಯನ್ನು ನಾವು ಹೇಗೆ ಮರೆತೇವು? ಇನ್ನು ಬೇಲೂರು ಶಿಲಾಬಾಲಿಕೆಯರ ಚೆಲುವೋ, ಅವರನ್ನು ವಿವಿಧ ರೀತಿಯಲ್ಲಿ ಸಂಬೋಧಿಸುವ ಚದುರೋ – ಶೃಂಗಾರವಲ್ಲರೀ, ಮಾಧುರ್ಯ ಮಂಜೂಷೆ, ಮುಗ್ಧ ಮೋಹನ ವದನೆ, ಪ್ರಣಯ ಪ್ರರೂಹೆ, ಸೌಂದರ್ಯ ಮುದ್ರಿಕೆ, ಚಿತ್ತವೇಧಿನಿ– ವಿ.ಸೀ ಯವರ ಬಾಯಿಂದ ನಿರರ್ಗಳವಾಗಿ ಹೊರಬರುತ್ತಿದ್ದ ವಾಕ್‌ಧಾರೆ ಯುವಕರಾದ ನಮ್ಮನ್ನು ಹುಚ್ಚೆಬ್ಬಿಸಿತ್ತು.

ಇಂಥ ರಸಚೌತಣವನ್ನು ವರ್ಷದ ಉದ್ದಕ್ಕೂ ಒದಗಿಸಿ ನಮ್ಮನ್ನು ಕೃತಾರ್ಥರನ್ನಾಗಿಸಿದವರು ವಿ.ಸೀ. ಅಂದು ಅವರು ಕಲಿಸಿದ ಪಾಠ, ಆ ಕರ್ಣರಸಾಯನ ಅದನ್ನು ನೆನಪಿಗೆ ತಂದುಕೊಳ್ಳುವ ಮನದಲ್ಲಿ ಭಾಗ್ಯನಿಧಿಯಾಗಿ ಉಳಿದಿದೆ. ವಿ.ಸೀ. ಯವರಿಗೂ ತಮ್ಮ ಬರವಣಿಗೆಗಿಂತ ಹೆಚ್ಚಾಗಿ ವಿದ್ಯಾರ್ಥಿಗಳಲ್ಲಿ ವಿದ್ಯೋತ್ಸಾಹವನ್ನು ತುಂಬಲು ಪಟ್ಟ ಪ್ರಯತ್ನವೇ ಹೆಚ್ಚಿನ ಸಂತೋಷವನ್ನು ಕೊಟ್ಟಿತ್ತೆಂದು ನನ್ನ ಊಹೆ. "In his collective influence he made innumerable pulses of knowledge and thought vibrate in his generation" ಎಂದು ಮಾರ್ಲೆ ಹೇಳಿದ ಮಾತನ್ನು ವಿ.ಸೀ.ಯವರಿಗೆ ಅನ್ವಯಿಸಬಹುದು. ನಮ್ಮ ಪೀಳಿಗೆಯ ಯುವಕರ ಬುದ್ಧಿಯ ಬೆಳವಣಿಗೆಗೆ ವಿ.ಸೀ. ಅವರಿತ್ತ ಕೊಡುಗೆ ಅಪಾರ. ಅವರಿಗೆ ಈ ಪಾಠ ಹೇಳುವ ಕಲೆ ಹೇಗೆ ಸಿದ್ಧಿಸಿತ್ತೊ, ಅದನ್ನು ಯಾರಿಂದ ಕಲಿತರೊ? ಅವರ ಗುರುಗಳೂ ಸಾಮಾನ್ಯ ವ್ಯಕ್ತಿಗಳೇನಲ್ಲ. ಸರ್ವಪಲ್ಲಿ ರಾಧಾಕೃಷ್ಣನ್, ಎನ್. ಎಸ್. ಸುಬ್ಬರಾವ್, ಜೆ. ಸಿ. ರಾಲೊ, ಕಟ್ಟಿಮಂಚಿ ರಾಮಲಿಂಗಾರೆಡ್ಡಿ, ಎಂ. ಹಿರಿಯಣ್ಣ, ಬಿ. ಎಂ. ಶ್ರೀಕಂಠಯ್ಯ – ಎಲ್ಲ ಎಂಥ ಘಟಾನುಘಟಿಗಳು. ಇವರೆಲ್ಲರ ಕಲೆಯನ್ನೂ ದಕ್ಕಿಸಿಕೊಂಡು ತಮ್ಮ ವೇಷಭೂಷಣಗಳಲ್ಲಿ ಹೇಗೊ ತಮ್ಮ ಪಾಠಕ್ರಮದಲ್ಲಿಯೂ ಕೂಡ ವಿಶೇಷ ಬಗೆಯ ಶೈಲಿಯನ್ನು ರೂಪಿಸಿಕೊಂಡಿರುವುದು ಕಾಣುತ್ತದೆ. 'ಅಪೂರ್ವ ಹೃದಯವಂತಿಕೆಯ, ಬಹುಮುಖ ವಿದ್ವತ್ತೆಯ, ಅತ್ಯಂತ ಮಾನವೀಯ ವ್ಯವಹಾರದ ಶುಭ್ರಚೈತನ್ಯ' ವಿ.ಸೀ. ಅವರದು. ಅವರನ್ನು ಎಷ್ಟು ನೆನೆಸಿಕೊಂಡರೂ ಮನ ದಣಿಯದು. ಅವರನ್ನು ಗುರುವಾಗಿ ಪಡೆದ ನಾವು ಧನ್ಯರು, ನಿಸ್ಸೀಮ ಪುಣ್ಯರು ಎಂದು ನನ್ನ ದೃಢ ನಂಬಿಕೆ.

* * *

ತಮ್ಮ ವಿದ್ಯಾಗುರುಗಳೂ ಸಾಹಿತ್ಯ ಪರಿಷದುಪಾಧ್ಯಕ್ಷರೂ ಆಗಿದ್ದ ಬಿ. ಎಂ. ಶ್ರೀ.ಯವರನ್ನು ಅವರ ಅರುವತ್ತನೆಯ ಹುಟ್ಟುಹಬ್ಬದ ದಿನ ಕಾಣಲು ವಿ.ಸೀ. ಹೋದಾಗ ಶ್ರೀಯವರು ಜೇನ್ ಆಸ್ಟೆನ್‌ಳ 'ಎಮ್ಮಾ' ಕಾದಂಬರಿಯನ್ನು ಹಿಡಿದು ಹೊರಬಂದರಂತೆ. ಇನ್ನು ಬೇರೆ ಯಾವ ಮಾತನ್ನು ಆಡದೆ 'ಇವಳು ನೋಡಿ, ಸೀ. ಎಷ್ಟು ಚೆನ್ನಾಗಿ ಬರೆದಿದ್ದಾಳೆ' ಎಂದು ಒಂದು ಭಾಗವನ್ನು ಓದಿ, ಅಲ್ಲಿನ ಅರ್ಥವಂತಿಕೆಯನ್ನು ವಿವರಿಸಿದರಂತೆ. ಆ ಸಂದರ್ಭದಲ್ಲಿ ವಿ.ಸೀ. ಸೇಂಟ್‌ಬೂವ್ ಎಂಬ ವಿಮರ್ಶಕನ ಮಾತನ್ನು ನೆನಪಿಗೆ ತಂದುಕೊಳ್ಳುತ್ತಾರೆ.

ಬಂದು ಅತಿಶಯ ನಯದಿಂದ ನೆಲವನ್ನು ಬೇಡಿ ಹರಿಯಸ್ಥೇ ಕಿರಿಯನ್ನಾಗಿಸಿದ ಬಲಿ ಚಕ್ರವರ್ತಿಯ ಪಾರಮ್ಯ – ಇವುಗಳನ್ನು ಅವರು ವಿವರಿಸಿದ ರೀತಿಯನ್ನು ನಾವು ಹೇಗೆ ಮರೆತೇವು? ಇನ್ನು ಬೇಲೂರು ಶಿಲಾಬಾಲಿಕೆಯರ ಚೆಲುವೋ, ಅವರನ್ನು ವಿವಿಧ ರೀತಿಯಲ್ಲಿ ಸಂಬೋಧಿಸುವ ಚದುರೋ – ಶೃಂಗಾರವಲ್ಲರೀ, ಮಾಧುರ್ಯ ಮಂಜೂಷೆ, ಮುಗ್ಧ ಮೋಹನ ವದನೆ, ಪ್ರಣಯ ಪ್ರರೂಹೆ, ಸೌಂದರ್ಯ ಮುದ್ರಿಕೆ, ಚಿತ್ತವೇಧಿನಿ– ವಿ.ಸೀ ಯವರ ಬಾಯಿಂದ ನಿರರ್ಗಳವಾಗಿ ಹೊರಬರುತ್ತಿದ್ದ ವಾಕ್‌ಧಾರೆ ಯುವಕರಾದ ನಮ್ಮನ್ನು ಹುಚ್ಚೆಬ್ಬಿಸಿತ್ತು.

ಇಂಥ ರಸದೌತಣವನ್ನು ವರ್ಷದ ಉದ್ದಕ್ಕೂ ಒದಗಿಸಿ ನಮ್ಮನ್ನು ಕೃತಾರ್ಥರನ್ನಾಗಿಸಿದವರು ವಿ.ಸೀ. ಅಂದು ಅವರು ಕಲಿಸಿದ ಪಾಠ, ಆ ಕರ್ಣರಸಾಯನ ಅದನ್ನು ನೆನಪಿಗೆ ತಂದುಕೊಳ್ಳುವ ಮನದಲ್ಲಿ ಭಾಗ್ಯನಿಧಿಯಾಗಿ ಉಳಿದಿದೆ. ವಿ.ಸೀ. ಯವರಿಗೂ ತಮ್ಮ ಬರವಣಿಗೆಗಿಂತ ಹೆಚ್ಚಾಗಿ ವಿದ್ಯಾರ್ಥಿಗಳಲ್ಲಿ ವಿದ್ಯೋತ್ಸಾಹವನ್ನು ತುಂಬಲು ಪಟ್ಟ ಪ್ರಯತ್ನವೇ ಹೆಚ್ಚಿನ ಸಂತೋಷವನ್ನು ಕೊಟ್ಟಿತ್ತೆಂದು ನನ್ನ ಊಹೆ. "In his collective influence he made innumerable pulses of knowledge and thought vibrate in his generation" ಎಂದು ಮಾರ್ಲೆ ಹೇಳಿದ ಮಾತನ್ನು ವಿ.ಸೀ.ಯವರಿಗೆ ಅನ್ವಯಿಸಬಹುದು. ನಮ್ಮ ಪೀಳಿಗೆಯ ಯುವಕರ ಬುದ್ಧಿಯ ಬೆಳವಣಿಗೆಗೆ ವಿ.ಸೀ. ಅವರಿತ್ತ ಕೊಡುಗೆ ಅಪಾರ. ಅವರಿಗೆ ಈ ಪಾಠ ಹೇಳುವ ಕಲೆ ಹೇಗೆ ಸಿದ್ಧಿಸಿತ್ತೊ, ಅದನ್ನು ಯಾರಿಂದ ಕಲಿತರೊ? ಅವರ ಗುರುಗಳೂ ಸಾಮಾನ್ಯ ವ್ಯಕ್ತಿಗಳೇನಲ್ಲ. ಸರ್ವಪಲ್ಲಿ ರಾಧಾಕೃಷ್ಣನ್, ಎನ್. ಎಸ್. ಸುಬ್ಬರಾವ್, ಜೆ. ಸಿ. ರಾಲೊ, ಕಟ್ಟಿಮಂಚಿ ರಾಮಲಿಂಗಾರೆಡ್ಡಿ, ಎಂ. ಹಿರಿಯಣ್ಣ, ಬಿ. ಎಂ. ಶ್ರೀಕಂಠಯ್ಯ – ಎಲ್ಲ ಎಂಥ ಘಟಾನುಘಟಿಗಳು. ಇವರೆಲ್ಲರ ಕಲೆಯನ್ನೂ ದಕ್ಕಿಸಿಕೊಂಡು ತಮ್ಮ ವೇಷಭೂಷಣಗಳಲ್ಲಿ ಹೇಗೊ ತಮ್ಮ ಪಾಠಕ್ರಮದಲ್ಲಿಯೂ ಕೂಡ ವಿಶೇಷ ಬಗೆಯ ಶೈಲಿಯನ್ನು ರೂಪಿಸಿಕೊಂಡಿರುವುದು ಕಾಣುತ್ತದೆ. 'ಅಪೂರ್ವ ಹೃದಯವಂತಿಕೆಯ, ಬಹುಮುಖ ವಿದ್ವತ್ತೆಯ, ಅತ್ಯಂತ ಮಾನವೀಯ ವ್ಯವಹಾರದ ಶುಭ್ರಚೈತನ್ಯ' ವಿ.ಸೀ. ಅವರದು. ಅವರನ್ನು ಎಷ್ಟು ನೆನೆಸಿಕೊಂಡರೂ ಮನ ದಣಿಯದು. ಅವರನ್ನು ಗುರುವಾಗಿ ಪಡೆದ ನಾವು ಧನ್ಯರು, ನಿಸ್ಸೀಮ ಪುಣ್ಯರು ಎಂದು ನನ್ನ ದೃಢ ನಂಬಿಕೆ.

* * *

ತಮ್ಮ ವಿದ್ಯಾಗುರುಗಳೂ ಸಾಹಿತ್ಯ ಪರಿಷದುಪಾಧ್ಯಕ್ಷರೂ ಆಗಿದ್ದ ಬಿ. ಎಂ. ಶ್ರೀ.ಯವರನ್ನು ಅವರ ಅರುವತ್ತನೆಯ ಹುಟ್ಟುಹಬ್ಬದ ದಿನ ಕಾಣಲು ವಿ.ಸೀ. ಹೋದಾಗ ಶ್ರೀಯವರು ಜೇನ್ ಆಸ್ಟೆನ್‌ಳ 'ಎಮ್ಮಾ' ಕಾದಂಬರಿಯನ್ನು ಹಿಡಿದು ಹೊರಬಂದರಂತೆ. ಇನ್ನು ಬೇರೆ ಯಾವ ಮಾತನ್ನು ಆಡದೆ 'ಇವಳು ನೋಡಿ, ಸೀ. ಎಷ್ಟು ಚೆನ್ನಾಗಿ ಬರೆದಿದ್ದಾಳೆ' ಎಂದು ಒಂದು ಭಾಗವನ್ನು ಓದಿ, ಅಲ್ಲಿನ ಅರ್ಥವಂತಿಕೆಯನ್ನು ವಿವರಿಸಿದರಂತೆ. ಆ ಸಂದರ್ಭದಲ್ಲಿ ವಿ.ಸೀ. ಸೇಂಟ್‌ಬೂವ್ ಎಂಬ ವಿಮರ್ಶಕನ ಮಾತನ್ನು ನೆನಪಿಗೆ ತಂದುಕೊಳ್ಳುತ್ತಾರೆ.

"There comes a season in our lives when, all our travels being ended, all our experiments made, we have no keener enjoyments than to study and deeply meditate upon the things we know, to relish what we feel, just as when we see and meet again those we love: pure delights of heart and the taste in maturity. It is then that the word Classic assumes its real meaning, and is defined for every man of taste by a favourite and irresistable choice. Then the taste is formed and definite; our good sense is consummated, if it is ever to come. We have no time to try nor the desire to go forth in search of discoveries. We are satisfied with the friends we have, who have been proved so by long intercourse. Old wines, old books, old friends...."

ಪ್ರಗತಿವಾದಿಗಳಿಗೆ, ಕ್ರಾಂತಿಕಾರರಿಗೆ ಇದೆಲ್ಲವೂ ಕ್ಷೀಣ, ವ್ಯರ್ಥಾಲಾಪ ಎಂದು ತೋರಬಹುದು. ಮುದಿಬರಹವೆಂದು ಅವರು ಜರೆದಾರು. ಆದರೆ ನಮಗೆ ಉತ್ತಮ ಸಾಹಿತ್ಯಾವಲೋಕನದಿಂದ ಒದಗಬೇಕಾದ್ದು ಮನಸ್ಸಿಗೆ ನೆಮ್ಮದಿ, ಶಾಂತಿ. ಸಾಹಿತ್ಯದಿಂದ ನಾವು ಅಪೇಕ್ಷಿಸುವುದು ಇದನ್ನು. ಈ ಮನೋಧರ್ಮವನ್ನು ನಮ್ಮಲ್ಲಿ ಬಲಿಯಿಸಿದವರು ವಿ.ಸೀ.

ವಿ.ಸೀ.ಯವರಲ್ಲಿ ನಾನು ಕಂಡ ಅತಿದೊಡ್ಡ ಗುಣ ಅವರ ನಿರಹಂತೆ. ತಮ್ಮನ್ನೇ ಮುಂದುಮಾಡಿಕೊಂಡು ಅವರು ಎಂದೂ ಮುನ್ನುಗ್ಗಿದವರಲ್ಲ. ತಮ್ಮ ಕವನಗಳನ್ನು ಎಂದೂ ವಾಚನಮಾಡಿದವರಲ್ಲ. ಶ್ರೀಯವರು ತಮ್ಮ 'ಕನ್ನಡ ಬಾವುಟ' ಪದ್ಯಗಳ ಸಂಕಲನದಲ್ಲಿ ಉತ್ತಮ ಕವನಗಳನ್ನು ಸೇರಿಸಲು ವಿ.ಸೀ.ಯವರನ್ನು ಕೇಳಿದಾಗ, ತಮ್ಮ ಕವನಗಳಲ್ಲಿ ಒಂದನ್ನೂ ಸೂಚಿಸಿದೆ ಹೋದರಂತೆ. ಇದು ಇಂದಿನ ಪ್ರಜಾರಾಜ್ಯದಲ್ಲಿ ಅಪರೂಪವಾಗುತ್ತಿರುವ ಗುಣ. ಡಿ.ವಿ.ಜಿ. ಒಂದು ಸಂದರ್ಭದಲ್ಲಿ ಹೇಳಿರುವಂತೆ 'ಇಂದು ಬದುಕಬೇಕೆನ್ನುವವನು ಅನುದಿನವೂ ಬೊಬ್ಬೆಯಿಡುತ್ತಿರಬೇಕು'. ಆದರೆ ವಿ.ಸೀ. ಅಂಥ ವರ್ಗಕ್ಕೆ ಸೇರಿದವರಲ್ಲ. ಅವರು ಕೊನೆಯವರೆಗೂ ವಿನಯ ಸಂಪನ್ನತೆಯ ಸಾಕಾರ ಮೂರ್ತಿಯೇ ಆಗಿ ಉಳಿದರು. ಅವರ ಹೆಚ್ಚುಗಾರಿಕೆಯೆಂದರೆ ಇದೇ.

* * *

ಒಟ್ಟು ಕನ್ನಡ ನಾಡಿನ ಹಿತವನ್ನೇ ಗುರಿಯಾಗಿಟ್ಟುಕೊಂಡು ನಾಡಿನ ಮೂಲೆ ಮೂಲೆಗಳಿಗೂ ಭೇಟಿಕೊಟ್ಟು, ಅಲ್ಲಿನವರೆಲ್ಲರ ಸ್ನೇಹವನ್ನು ಸಂಪಾದಿಸಿ, ಅವರ ಮನೆಯವರೊಡನೆ ಬೆರೆತು, ಮನೆಗಳಲ್ಲಿ ಸಂಕೋಚವಿಲ್ಲದೆ ವ್ಯವಹರಿಸಿ, ಅವರು ಪ್ರೀತಿಯಿಂದಿತ್ತ ಊಟವನ್ನು ಉಂಡು, ಅದರ ಸವಿಯನ್ನು ಕಂಡಕಂಡಾಗಲೆಲ್ಲ ಕೊಂಡಾಡಿ,

ಅವರೆಲ್ಲರ ನೆನಪಿನಲ್ಲಿ ಉಳಿದವರು ವಿ.ಸೀ. ಇದನ್ನು ಕಂಡೇ ಇರಬೇಕು, ಶ್ರೀಯವರು ತಮ್ಮ ಕೊನೆಯ ದಿನಗಳಲ್ಲಿ ವಿ.ಸೀ. ಅವರನ್ನು ಕುರಿತು "We shall be the living human bridges across the Tungabhadra" ಎಂದು ಕಳಕಳಿಯಿಂದ ಕೇಳಿಕೊಂಡಿದ್ದು. ಗುರುವಿನ ಆದೇಶವನ್ನು ಅಕ್ಷರಶಃ ವಿ.ಸೀ. ಪಾಲಿಸಿದರು. ಎಲ್ಲರಿಗೂ ಬೇಕಾದವರಾಗಿ ಬಾಳಿದರು.

ನಾನು ವಿ.ಸೀ.ಯವರ ಹತ್ತಿರದ ಒಡನಾಡಿಯಲ್ಲ. ಅವರನ್ನು ದೂರದಿಂದ ಕಂಡು ಗೌರವಿಸುವದೇ ನಾನು ಪಡೆದುಕೊಂಡು ಬಂದ ಭಾಗ್ಯ. ಎಲ್ಲೊ ಎರಡು ವರ್ಷಗಳ ಕಾಲ ಮಾತ್ರ ಅವರ ಶಿಷ್ಯನಾಗಿ ಕುಳಿತು ಅವರ ವಾಕ್ಸಂಪತ್ತಿನಿಂದ ಪುಳಕಿತನಾಗಿದ್ದದ್ದುಂಟು. ಅದೇ ಅನುಭವವೇ ಕನ್ನಡದಲ್ಲಿ ಉತ್ಸಾಹವನ್ನು ಜೀವನದಲ್ಲಿ ಸಾರ್ಥಕ್ಯವನ್ನು ಬೆಳಸಿಕೊಂಡು ಬಂದಿದೆ. ವಿ.ಸೀ. ಅವರಿಗೆ ನೂರು ವರ್ಷದ ಕಾಣಿಕೆಯನ್ನು ಎಲ್ಲರೂ ಅರ್ಪಿಸುತ್ತಿರುವ ಈ ಸಂದರ್ಭದಲ್ಲಿ ನನ್ನದೂ ಒಂದು ಕಿರಿಯ ಹಣತೆಯನ್ನು ಹಚ್ಚಿ, ಆ ಹಿರಿಯ ಜೀವಕ್ಕೆ ನಮಸ್ಕರಿಸುತ್ತೇನೆ.

ಕನ್ನಡ ಸಂಸ್ಕೃತಿಯ ಪುಣ್ಯ

"ವಿ.ಸೀ. ಸೊಗಸಾದ ಉಪಾಧ್ಯಾಯರಾಗಿದ್ದರು. ತಮ್ಮ ಕೆಲಸಗಳಲ್ಲಿ ತುಂಬಾ ನಿಷ್ಠಾವಂತರಾಗಿದ್ದರು. ಅವರ ಸಾಹಿತ್ಯ ವಿಮರ್ಶೆ ಮಾಡಬೇಕಾದರೆ ಇಂಗ್ಲಿಷ್ ಓದಬೇಕು, ಸಂಸ್ಕೃತ ಅಭ್ಯಾಸ ಮಾಡಿರಬೇಕು; ಹೀಗಾದಾಗ ಅವರ ಸಾಹಿತ್ಯ ವಿಮರ್ಶೆ ಮಾಡುವುದು ಸಾಧ್ಯ. ಇಂಥ ದಕ್ಷ ಮತ್ತು ಸಹೃದಯಿಯನ್ನು ಪಡೆದಿರುವುದು ಕನ್ನಡ ಸಂಸ್ಕೃತಿಯ ಪುಣ್ಯ."

ಮಾಸ್ತಿ ವೆಂಕಟೇಶ ಅಯ್ಯಂಗಾರ್
'ಕನ್ನಡ ನುಡಿ' ಸಂ. ೪೬, ಪು. ೫೫

ಆದರ್ಶ ಗುರು

ಎಚ್. ಎಸ್. ದೊರೆಸ್ವಾಮಿ

ವಿ.ಸೀ. ನನ್ನ ಆದರ್ಶ ಗುರುಗಳು. ಅವರ ಸಭ್ಯತೆ, ಪಾಂಡಿತ್ಯ, ವಾಕ್‌ಶಕ್ತಿ, ಕವಿವಾಣಿ, ಶಿಸ್ತು, ಓರಣ, ಇವು ಚುಂಬಕದಂತೆ ನನ್ನನ್ನು ಆಕರ್ಷಿಸಿದವು. ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ವಿ.ಸೀ. ನಮಗೆ ಮೊದಲನೆಯ ವರ್ಷ ಪುಟ್ಟಪ್ಪನವರ 'ರಾಮಕೃಷ್ಣಪರಮಹಂಸ', ಎರಡನೆಯ ವರ್ಷ 'ಹರಿಶ್ಚಂದ್ರ ಕಾವ್ಯ'ದ ಪಾಠ ಮಾಡಿದರು. ಈ ಮೂಲಕ ವಿ.ಸೀ. ನಮ್ಮನ್ನು ಕನ್ನಡ ಸಾಹಿತ್ಯಕ್ಕೆ ಪ್ರವೇಶ ಮಾಡಿಸಿದರು.

ಅದಕ್ಕಿಂತ ಹೆಚ್ಚಾಗಿ ನಮಗೆ ಅವರು ಕನ್ನಡ ದೀಕ್ಷೆ ನೀಡಿದರು ಎಂದರೆ ಉತ್ಪ್ರೇಕ್ಷೆಯಾಗಲಾರದು. ವಿ. ಸೀತಾರಾಮಯ್ಯನವರು ಪಠ್ಯಪುಸ್ತಕದಲ್ಲಿರುವುದನ್ನು ಕಡ್ಡಾಯವಾಗಿ ಬೋಧಿಸುತ್ತಿದ್ದರು ನಿಜ. ಆದರೆ ಅದನ್ನು ಅತ್ಯಂತ ಆಕರ್ಷಕವಾಗಿ ಬೋಧಿಸುತ್ತಿದ್ದರು. ಕವಿಹೃದಯವನ್ನು ಬೋಧನೆಯ ಸಂದರ್ಭದಲ್ಲಿ ನಮಗೆ ಮನವರಿಕೆ ಮಾಡಿಕೊಡುತ್ತಿದ್ದರು. ಪಾಠ ಹೇಳುವ ಈ ಸಂದರ್ಭದಲ್ಲಿ ಅವರು ಜೀವನ ಸಮಸ್ಯೆಗಳ ಸರಮಾಲೆಯನ್ನೇ ನಮ್ಮ ಮುಂದೆ ತೆರೆದಿಡುತ್ತಿದ್ದರು. ಜನಜೀವನವನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಪೃಥಕ್ಕರಿಸುತ್ತಿದ್ದರು. ನಾನೊಬ್ಬ ಮನುಷ್ಯನಾಗಿರಬೇಕಾದರೆ, ಸಾರ್ವಜನಿಕ ಸಮಸ್ಯೆಗಳ ಬಗ್ಗೆ ನನಗೆ ಕಾಳಜಿ ಹುಟ್ಟಿರಬೇಕಾದರೆ, ಕನ್ನಡ, ಕನ್ನಡನಾಡು, ಕನ್ನಡಿಗರ ಸಮಸ್ಯೆಗಳ ವಿಚಾರಕ್ಕೆ ಆಸಕ್ತಿ ಹುಟ್ಟಿರಬೇಕಾದರೆ ಅದಕ್ಕೆ ನನ್ನ ವಿದ್ಯಾಗುರುಗಳಾದ ವಿ.ಸೀ., ಬಿ.ಎಂ.ಶ್ರೀ., ಮತ್ತು ಎ. ಆರ್. ಕೃಷ್ಣಶಾಸ್ತ್ರಿಗಳು ಬಹುಮಟ್ಟಿಗೆ ಕಾರಣರು ಎಂದು ಹೆಮ್ಮೆಯಿಂದ ಹೇಳುತ್ತೇನೆ.

ನನ್ನ ಅದೃಷ್ಟಕ್ಕೆ ನಾನು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ನನಗೆ ಷೇಕ್ಸ್‌ಪಿಯರ್ ನಾಟಕದ ಪಾಠ ಹೇಳಿದವರು ಬಿ.ಎಂ.ಶ್ರೀ. ಇಂಗ್ಲಿಷ್ ನಾಟಕದ ಸಂಭಾಷಣೆಗಳನ್ನು ಚೊಕ್ಕ ಕನ್ನಡದಲ್ಲಿ ಹಾವಭಾವಗಳೊಂದಿಗೆ ಅವರು ಹೇಳುತ್ತಿದ್ದುದು ಇನ್ನೂ ನನ್ನ ದೃಕ್ಪಟಲದಲ್ಲಿ ಹಸುರಾಗಿ ಉಳಿದಿದೆ.

ಅದೇ ವರ್ಷ ಬಿ.ಎಂ.ಶ್ರೀ. ಅವರು ಕನ್ನಡಸಾಹಿತ್ಯ ಪರಿಷತ್ತಿನಲ್ಲಿ 'ಕನ್ನಡ ಜಾಣ' ಪರೀಕ್ಷೆಯನ್ನು ಏರ್ಪಡಿಸಿದರು. ನಾನು ಕನ್ನಡ ಜಾಣ ಪರೀಕ್ಷೆಗೆ ಕೂತ ಮೊದಲನೆಯ ತಂಡದ ವಿದ್ಯಾರ್ಥಿ. ಅದೊಂದು ಸುಯೋಗ. ನಮ್ಮ ಪಠ್ಯ ಪುಸ್ತಕಗಳ ರಚನೆ ಮಾಡಿದವರೇ ನಮಗೆ ಅಧ್ಯಾಪಕರು. 'ಕನ್ನಡ ಬಾವುಟ', 'ಕನ್ನಡ ಕೈಪಿಡಿ' ಕರ್ತೃ ಬಿ.ಎಂ.ಶ್ರೀ. ಅವರು,

'ಮಂಡೋದರಿ' ನಾಟಕ ರಚಿಸಿದ ಸಿ. ಕೆ. ವೆಂಕಟರಾಮಯ್ಯನವರು, 'ನಾಗರಿಕ' ನಾಟಕ ರಚಿಸಿದ ಎಂ. ಆರ್. ಶ್ರೀನಿವಾಸಮೂರ್ತಿಯವರು ತಾವು ರಚಿಸಿದ ಕೃತಿಗಳನ್ನು ಕುರಿತು ಬೋಧನೆ ಮಾಡುತ್ತಿದ್ದರು.

ಅದೇ ಸಂದರ್ಭದಲ್ಲಿ ಪಂಪರಾಮಾಯಣ, ರನ್ನನ ಗದಾಯುದ್ಧ, ರಾಮಾಶ್ವಮೇಧಂ, ಪಾಠಗಳನ್ನು ಮಾಡಿದವರು ಸೀತಾರಾಮಯ್ಯನವರು. ಹಳಿಗನ್ನಡ ಸಾಹಿತ್ಯ ಅವಲೋಕನಕ್ಕೆ ಕೈಹಿಡಿದು ನನ್ನನ್ನು ನಡೆಸಿದರು ಅವರು ಎಂದು ಕೃತಜ್ಞತೆಯಿಂದ ನಾನು ನೆನೆಯುತ್ತೇನೆ. ಕನ್ನಡದ ಕಡೆಗೆ ಅವರಿಗಿದ್ದ ಒಲವೇ ಅರ್ಥಶಾಸ್ತ್ರದ ಎಂ.ಎ. ಪದವೀಧರರಾಗಿದ್ದ ಸೀತಾರಾಮಯ್ಯನವರನ್ನು ಕನ್ನಡದ ಅಧ್ಯಾಪಕರಾಗಲು ಪ್ರೋತ್ಸಾಹಿಸಿದ್ದು.

ಗರಿಗರಿ ಇಸ್ತ್ರಿ ಮಾಡಿದ ಮಲ್ ಪಂಚೆಯ ಪಂಚಕಚ್ಚೆ, ಕೊಕ್ಕರೆ ಬಿಳುಪಿನ ಮೈಸೂರು ರುಮಾಲು, ರೇಷ್ಮೆಯ ಮುಚ್ಚುಕುತ್ತಿಗೆ ಕೋಟು, ಮಿನುಗುವ ಪಾದರಕ್ಷೆ— ಇವು ಅವರ ವೇಷಭೂಷಣ. ಒಂದು ದಿನವೂ ಅಪ್ಪಿ ತಪ್ಪಿ ಕೂಡ ಅವರು ಮಾಸಲು ಬಟ್ಟೆ ಅಥವಾ ಕಡಿಮೆ ಬೆಲೆಯ ದಪ್ಪ ಬಟ್ಟೆ ಬಳಸಿದವರಲ್ಲ. ಮನೆಯಲ್ಲಿರಬೇಕಾದರೆ ಮಾತ್ರ ಕಚ್ಚೆಪಂಚೆ, ಅರ್ಧ ದಟ್ಟಿ ಪಂಚೆ, ಒಂದು ಒಳ ಬನೀನು ಅವರ ಸಮವಸ್ತ್ರವಾಗಿರುತ್ತಿತ್ತು.

ವಿದ್ಯಾರ್ಥಿಗಳನ್ನಾಗಲಿ, ಮಿತ್ರರನ್ನಾಗಲಿ, ಆಗಂತುಕರನ್ನಾಗಲಿ, ಅವರು ಎಂದೂ ಏಕವಚನದಲ್ಲಿ ಮಾತನಾಡಿಸಿದ್ದಿಲ್ಲ. 'ಏನ್ರೀ ಹೇಗಿದ್ದೀರಿ' ಎಂದು ಸಂಬೋಧಿಸಿಯೇ ನಮ್ಮನ್ನು ತಮ್ಮ ಮನೆಗೆ ಅವರು ಸ್ವಾಗತಿಸುತ್ತಿದ್ದುದು. ಯಾರೇ ಬರಲಿ ಅವರಿಗೆ ಕಾಫಿ ಆತಿಥ್ಯ ಆಗಲೇಬೇಕು. ಕಾಫಿ ನೀಡಲು ಬೇಕಾದ ಸಕಲ ಸಿದ್ಧತೆಯನ್ನೂ ಅವರೇ ಖುದ್ದಾಗಿ ಮಾಡಬೇಕು. ಅವರ ಮನೆಯಲ್ಲಿ ಕಾಫಿ ಕುಡಿದವರು ಯಾರೂ ಅದರ ರುಚಿಯನ್ನು ಮರೆಯಲು ಸಾಧ್ಯವಿಲ್ಲ. ತಾವೇ ಹದವಾಗಿ ಡಿಕಾಕ್ಷನ್ ಇಳಿಸಿ ಹಾಲು ಕಾಯಿಸಿ ಸಕ್ಕರೆ ಸಮೇತ ತಾವು ಕೂಡುತ್ತಿದ್ದ ಹಜಾರದಲ್ಲಿ ತಮ್ಮ ಪಕ್ಕದಲ್ಲಿ ತಂದಿರಿಸಿಕೊಳ್ಳುತ್ತಿದ್ದರು. ಅವರೇ ಡಿಕಾಕ್ಷನ್ ಹಾಲು, ಸಕ್ಕರೆಗಳನ್ನು ಸರಿಪ್ರಮಾಣದಲ್ಲಿ ಬೆರೆಸಿ ಬಂದವರಿಗೆ ನೀಡುತ್ತಿದ್ದರು. ಶುಚಿತ್ವಕ್ಕೆ ಹೆಸರಾಗಿದ್ದ ಮಾವಳ್ಳಿ ಟಿಫಿನ್ ರೂಮ್ಸ್‌ಗೆ ತಪ್ಪದೆ ಭೇಟಿ ನೀಡುತ್ತಿದ್ದರು. ಪ್ರತಿದಿನ ಸಂಜೆ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳ ಅಥವಾ ಕೆ. ಎಸ್. ನರಸಿಂಹಸ್ವಾಮಿಯವರ ಜೊತೆಗೆ ಲಾಲ್‌ಬಾಗಿನವರೆಗೆ ಪಾದಯಾತ್ರೆ ಮಾಡಿ, ಲಾಲ್‌ಬಾಗಿನಲ್ಲಿ ಗಾಳಿಸಂಚಾರ ಕೈಗೊಂಡು ಮಾವಳ್ಳಿ ಟಿಫಿನ್ ರೂಂಸ್‌ನಲ್ಲಿ ಡಬ್ಬಲ್ ಬೆಣ್ಣೆ ಮಸಾಲೆ ತಿಂದು ಬರುತ್ತಿದ್ದರು ವಿ.ಸೀ. ಪರಿಷತ್ತಿನಲ್ಲಿ ಕಾರ್ಯಕ್ರಮಗಳು ಇದ್ದ ದಿನಗಳನ್ನು ಹೊರತು ಪಡಿಸಿ, ಉಳಿದ ಎಲ್ಲಾ ದಿನಗಳಲ್ಲೂ ಮಾವಳ್ಳಿ ಟಿಫಿನ್ ರೂಮ್ಸ್ ಭೇಟಿ ಕಾರ್ಯಕ್ರಮ ಕಡ್ಡಾಯವಾಗಿ ಇರುತ್ತಿತ್ತು. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಸಮಯದಲ್ಲಿ ನನ್ನ 'ಗುರು'ಗಳನ್ನು ಕಾಣಲು ನಾನು ಬೆಂಗಳೂರಿನಿಂದ ಹೋಗಿದ್ದೆ. ಅಧ್ಯಾಪಕರ ಕೊಠಡಿಯಲ್ಲಿ ಕುಳಿತಿದ್ದ ಶ್ರೀಯುತರು ನನ್ನನ್ನು ನೋಡಿದ ಕೂಡಲೇ ಎದ್ದು ಬಂದು ಕುಶಲ ಸಂಭಾಷಣೆ ನಡೆಸಿ, ಕಾಲೇಜ್ ಕ್ಯಾಂಟೀನ್‌ಗೆ ಕರೆದೊಯ್ದರು. ಮಾಣಿಯನ್ನು ಕರೆದು "ಎರಡು ಪ್ಲೇಟ್ ಬಿಸಿಬಿಸಿ ಜಿಲೇಬಿ, ಎರಡು ಪ್ಲೇಟ್ ಗರಿಗರಿ ಡಬಲ್ ಬೆಣ್ಣೆ

ಮಸಾಲೆ, ಎರಡು ಒಳ್ಳೆ ಕಾಫಿ ಕೊಡು" ಎಂದರು. ತಿಂಡಿ ತಿನಸು ತಿನ್ನುವುದರಲ್ಲೂ ಬಹಳ ಅಚ್ಚುಕಟ್ಟು ಅವರದಾಗಿತ್ತು.

ನಮ್ಮ ಮೇಷ್ಟ್ರು ಕನ್ನಡಕ್ಕಾಗಿ, ಕನ್ನಡನಾಡಿನ ರಚನೆಗಾಗಿ ತುಂಬ ಕೆಲಸ ಮಾಡಿದ್ದಾರೆ. ಏಕೀಕರಣಕ್ಕಾಗಿ, ಏಕೀಕೃತ ಕರ್ನಾಟಕ ರಚನೆಗಾಗಿ ಪ್ರಚಾರ ಪ್ರವಾಸವನ್ನು ಕನ್ನಡ ನಾಡಿನ ಉದ್ದಗಲಕ್ಕೂ ಕೈಗೊಂಡ ಕೀರ್ತಿ ಅವರದು. ವಸಂತ ಸಾಹಿತ್ಯೋತ್ಸವದ ನೆಪದಲ್ಲಿ ಕನ್ನಡ ನಾಡಿನ ಎಲ್ಲ ಕನ್ನಡ ಸಂಘ ಸಂಸ್ಥೆಗಳಿಗೂ ಭೇಟಿ ಇತ್ತು, ತಮ್ಮ ವಾಗ್ಮೈಖರಿಯಿಂದ, ನಾಡುನುಡಿಗಳ ಬಗ್ಗೆ ಕನ್ನಡ ಜನತೆಯಲ್ಲಿ ಅಭಿಮಾನ ಮೂಡಿಸಿದವರು ವಿ.ಸೀ. ಆದ್ದರಿಂದ ಕನ್ನಡನಾಡಿನ ಉದಯಕ್ಕೆ ದುಡಿದ ಪ್ರಾತಃಸ್ಮರಣೀಯರಾದ ಆಲೂರು ವೆಂಕಟರಾಯರು, ಮುಮ್ಮಡಿ ಕೃಷ್ಣರಾಯರು, ಕಡಪಾ ರಾಘವೇಂದ್ರ ರಾಯರು, ಬಿ. ಎಂ. ಶ್ರೀಕಂಠಯ್ಯನವರು, ಅ. ನ. ಕೃಷ್ಣರಾಯರು, ಮಾಸ್ತಿ ವೆಂಕಟೇಶಯ್ಯಂಗಾರ್ಯರು, ಬೆನಗಲ್ ರಾಮರಾಯರು, ಪಂಜೆ ಮಂಗೇಶರಾಯರು, ಕೋಟ ಶಿವರಾಮ ಕಾರಂತರು ಅವರ ಪಂಕ್ತಿಗೆ ಸೇರಿದ ಮತ್ತೊಬ್ಬ ಅಗ್ರಗಣ್ಯರು ವಿ. ಸೀತಾರಾಮಯ್ಯನವರು ಎಂದು ಹೆಮ್ಮೆಯಿಂದ ನಾನು ನೆನೆಯುತ್ತೇನೆ.

ಅಜಾತಶತ್ರು

"ವಿ.ಸೀ.ಯವರ ಸ್ನೇಹವಾದ ನಂತರ ಅವರ ಪೂರ್ಣ ಪರಿಚಯ ಮಾಡಿಕೊಂಡೆ. ಪರಿಚಯವಾದ ಪ್ರತಿಹಂತದಲ್ಲೂ ಅವರು ನನಗೆ ಉತ್ತೇಜನ ನೀಡುತ್ತಿದ್ದರು. ಒಳ್ಳೆಯ ಗುಣಗಳನ್ನು ಗುರುತಿಸುವ ಸ್ವಭಾವ ಅವರಿಗೆ ಮೈಗಂಟಿತ್ತು. ಅವರ ಜೊತೆ ಮಾತನಾಡುವುದೆಂದರೆ ಅದೊಂದು ಬಗೆಯ ರಸದೂಟವಿದ್ದಂತೆ ಅನಿಸುತ್ತಿತ್ತು. ಯಾವಾಗಲೂ ಸೌಮ್ಯವಾಗಿರುತ್ತಿದ್ದ ಅವರಿಗೆ ಒಂದೊಂದು ಸಲ ಯಾವುದಾದರೂ ಸುದ್ದಿಗಳ ಮೂಲಕ ನಾನೇ ಸಿಟ್ಟುಬರುವಂತೆ ಕೀಟಲೆ ಮಾಡುತ್ತಿದ್ದೆ. ಆದರೆ ಸಾಹಿತ್ಯದ ವಿಷಯದಲ್ಲಿ ತುಂಬ ಎತ್ತರದ ವ್ಯಕ್ತಿಯಾಗಿದ್ದ ಅವರು ಸಾಹಿತಿಯಾದರೂ ಅಜಾತಶತ್ರುವಾಗಿದ್ದರು."

ಶ್ರೀರಂಗ

'ಕನ್ನಡ ನುಡಿ' ಸಂ. ೪೬, ಪು. ೨

ಸಮರ್ಥ ಉಪಾಧ್ಯಾಯರು

ಆರ್. ಎಸ್. ರಾಮರಾವ್

ವಿ.ಸೀ. ಅವರು ನಮಗೆ ಮೇಷ್ಟ್ರರಾಗಿದ್ದರು. ಆಗ ನಾವು ಅವರನ್ನು ಉಪನ್ಯಾಸಕರು ಎಂದೇನು ಭಾವಿಸಿರಲಿಲ್ಲ, ಹಾಗೆ ಕರೆಯುತ್ತಲೂ ಇರಲಿಲ್ಲ. 'ಕನ್ನಡ ಮೇಷ್ಟ್ರು' ಎಂದೇ ಗೌರವಿಸುತ್ತಿದ್ದೆವು. ನಮಗೆ ಕನ್ನಡ ಪಂಡಿತರೂ ಗುರುಗಳಾಗಿದ್ದರು. ಆದರೆ 'ವಿ.ಸೀ.' ಅವರೇ ನಮಗೆ ಆಗ ನಿಜವಾದ ಮೇಷ್ಟ್ರರಾಗಿದ್ದರು. ಅದಕ್ಕೆ ಮುಖ್ಯ ಕಾರಣ ಅವರು ನಮಗೆ ಕನ್ನಡವನ್ನು ವಿಶೇಷವಾಗಿ 'ಇಂಗ್ಲಿಷ್' ಮಾಧ್ಯಮದ ಮೂಲಕ ಕಲಿಸುತ್ತಿದ್ದರು. 'ಸಂಸ್ಕೃತ' ಭಾಷಾ ಜ್ಞಾನ ಅಂದಿನ ಕನ್ನಡ ಕಲಿಕೆಗೆ ಅವಶ್ಯಕವಾಗಿದ್ದರೂ ಹೊಸದೃಷ್ಟಿಯನ್ನು ಹೊಂದಿದ್ದ ಇಂಗ್ಲಿಷ್ ಭಾಷಾ ಮಾಧ್ಯಮ ನಮಗೆ ಹೆಚ್ಚು ಪ್ರಿಯವಾಗಿತ್ತು. ನಮ್ಮ ಪಾಠ ನಮಗೆ ಹೆಚ್ಚು ಅರ್ಥವತ್ತಾಗಿ ಅರಿವಾಗುತ್ತಿತ್ತು. ಅವರ ಪಾಠ ವಿದ್ಯಾರ್ಥಿಗಳಲ್ಲಿ ಎಷ್ಟು ಆಸಕ್ತಿಯನ್ನು ಹುಟ್ಟಿಸಿತ್ತು ಎಂದರೆ, ಸಂಸ್ಕೃತ ವಿದ್ಯಾರ್ಥಿಗಳಷ್ಟೇ ಅಲ್ಲದೆ, ಇತರ ವಿಷಯಗಳನ್ನು ಆರಿಸಿಕೊಂಡು ಅಭ್ಯಾಸಮಾಡುತ್ತಿದ್ದ ಹಲವಾರು ವಿದ್ಯಾರ್ಥಿಗಳು ವಿ.ಸೀ. ಅವರ ಪಾಠಕ್ಕೆ ಆಸಕ್ತಿಯಿಂದ ಬರುತ್ತಿದ್ದರು. ಏಕೆಂದರೆ ಆಂಗ್ಲ ಮಾಧ್ಯಮದಲ್ಲಿ ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಮೂಲಕ ಕನ್ನಡದ ಮಹತ್ವವನ್ನು, ಭವ್ಯತೆಯನ್ನು, ಭಾವಸಂಪತ್ತನ್ನು ಹೃದಯ ಮುಟ್ಟುವಂತೆ ಪಾಠ ಹೇಳುತ್ತಿದ್ದ ಅವರ ವಾಗ್ವೈಖರಿ ನಾನು ಸಂಸ್ಕೃತವನ್ನು ಐಚ್ಛಿಕವಾಗಿ ಆರಿಸಿಕೊಂಡು, ಅದರಿಂದ ವಿದ್ಯಾರ್ಥಿ ವೇತನವನ್ನು ಪಡೆಯುತ್ತಿದ್ದರೂ ಮುಂದೆ 'ಕನ್ನಡ' ವನ್ನು ಪ್ರೌಢ ವ್ಯಾಸಂಗಕ್ಕಾಗಿ (ಎಂ. ಎ. ಪರೀಕ್ಷೆಗಾಗಿ) ಆರಿಸಿಕೊಂಡಿದ್ದು, ಮೇಷ್ಟ್ರರಿಂದ 'ಕನ್ನಡ'ದ ಮಹತ್ವವನ್ನೂ ಸ್ವಾರಸ್ಯವನ್ನೂ ಆಳವನ್ನೂ ಅರಿತಿದ್ದರಿಂದ. ಅದಕ್ಕೆ ನಾನು ಅವರಿಗೆ ಇಂದಿಗೂ ಋಣಿಯಾಗಿದ್ದೇನೆ. ಅವರ ನೆನಪು, ಅವರ ಪಾಠಕ್ರಮ ನನ್ನಲ್ಲಿ ಅಳಿಸಿಹೋಗದೆ ಹೊಸದಾಗಿಯೇ ಸ್ವಚ್ಛವಾಗಿಯೇ ನೆಲಸಿ ನಿಂತಿದೆ.

ಅವರು ನಮಗೆ ಎರಡು ಪಠ್ಯ ಪುಸ್ತಕಗಳನ್ನು ಪಾಠ ಹೇಳಿದರು. ಒಂದು ಮಾಸ್ತಿಯವರ 'ಯಶೋಧರ ನಾಟಕ', ಇನ್ನೊಂದು ನಾಗವರ್ಮನ 'ಕಾದಂಬರಿ'. ಆ ಎರಡು ಪಠ್ಯ ಪುಸ್ತಕಗಳಲ್ಲಿ ಅವರು ಪಾಠ ಮಾಡಿದ ಎರಡು ಪ್ರಸಂಗಗಳು ಇಂದಿಗೂ ಮರೆಯದೆ ಜೀವಂತವಾಗಿ ನನ್ನ ಮನಸ್ಸಿನಲ್ಲಿ ದೃಢವಾಗಿ ನಿಂತುಬಿಟ್ಟಿವೆ.

*　　*　　*

'ಯಶೋಧರಾ' ನಾಟಕದ ಆರನೆಯ ಸ್ಥಾನದಲ್ಲಿ, ಬುದ್ಧ ಯಶೋಧರೆಯ ಅಂತಃಪುರಕ್ಕೆ ಬರುವ ದೃಶ್ಯವಿದೆ. ರಾಣಿಯ ಸಖಿ ಸೇವಿಕೆ ಅಂಬಿಕೆ ಬುದ್ಧನ ಬರುವಿಕೆಯನ್ನು ವರ್ಣಿಸುತ್ತಿರುತ್ತಾಳೆ. ಆಗ ಬುದ್ಧನ ಶಿಷ್ಯರಾದ ಅಂಬಾಪಾಲ, ಆನಂದ ಅವರು ಮೊದಲು ಬಂದು ಯಶೋಧರೆಗೆ ಸಂತೋಷವನ್ನುಂಟು ಮಾಡುತ್ತಾರೆ. ಅವಳ ಪೂರ್ವಾಶ್ರಮದ ಪತಿಯ ಮಹಿಮೆಯನ್ನೂ ಸಾಧನೆಯನ್ನೂ ಸಿದ್ಧಿಯನ್ನೂ ವರ್ಣಿಸಿ ಹೊಗಳುತ್ತಾರೆ. ಯಶೋಧರೆ ಅಂಬಿಕೆಯ ಮೂಲಕ ಆ ಗುರುವಿನ ಸ್ವಾಗತಕ್ಕೆ ಸಜ್ಜುಗೊಳಿಸುತ್ತಾಳೆ. ಕೊನೆಗೆ ಬುದ್ಧ ನಿರ್ಧಾರ ಕೈಗೊಂಡು 'ಪತ್ನಿ'ಯ ಬಳಿಗೆ ಅವಳನ್ನು ತ್ಯಾಗಮಾಡಿ ಅವಳ ಒಪ್ಪಿಗೆಯನ್ನು ಪಡೆಯದೆ ಹೋದುದನ್ನು ನೆನಪಿಸಿಕೊಂಡು ತಪ್ಪೊಪ್ಪಿಗೆ ನಿವೇದಿಸಿಕೊಳ್ಳುವನಂತೆ ಅಂತಃಪುರಕ್ಕೆ ಬರುತ್ತಾನೆ. ಆಗ ಯಶೋಧರೆ ಮಗುವನ್ನು ಕರೆಸಿಕೊಂಡು ಬುದ್ಧನು ಒಳಗೆ ಬಂದಾಗ ಆರತಿಯ ತಟ್ಟೆಯನ್ನು ಅವನ ಪಾದದ ಸಮೀಪ ಇಟ್ಟು ಅಂಬಿಕೆಗೆ ಹೇಳುತ್ತಾಳೆ.

'ಅಡಿಯ ಮುಟ್ಟಬಹುದೇ ಕೇಳು'.

'ಹಿರಿಯರಿಗೆ ಗುರುಗಳಿಗೆ ಪಾದಮುಟ್ಟಿ ನಮಸ್ಕರಿಸುವುದು ರೂಢಿ. ಅದರೆ ಇಲ್ಲಿನ ಸಂಬಂಧ ಅತಿಸೂಕ್ಷ್ಮವಾದುದು.' ಗಂಡ ಹೆಂಡತಿಯ ಸಂಸರ್ಗವನ್ನು ತ್ಯಜಿಸಿ ವಿರಾಗಿಯಾಗಿ ಹೊರಟು ಹೋಗಿದ್ದಾನೆ. ಎಷ್ಟೋ ವರ್ಷಗಳ ನಂತರ ಹೆಂಡತಿಯ ಬಳಿಗೆ ಗುರುವಾಗಿ, ಸಂನ್ಯಾಸಿಯಾಗಿ ಬಂದಿದ್ದಾನೆ. ಅವರ ಪಾದಗಳನ್ನು ಸ್ಪರ್ಶಿಸಿ ನಮಸ್ಕಾರ ಮಾಡಿದರೆ ತಪ್ಪಾಗುತ್ತದೆಯೋ ಎಂಬ ಅಂಜಿಕೆಯಿಂದ ಅಂಬಿಕೆಯ ಮೂಲಕ ತನ್ನ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾಳೆ. ಆ ಬುದ್ಧ ಯಶೋಧರೆಗೇ ನೇರವಾಗಿ ಉತ್ತರಿಸುವಂತೆ,

'ಮುಟ್ಟಿದೊಡೆ ತಪ್ಪಲ್ಲ; ಮುಟ್ಟದಿದ್ದರೆ ಒಳಿತು' ಎನ್ನುತ್ತಾನೆ.

ವಿ.ಸೀ. ಅವರು ಈ ಸಾಲು ಓದಿದಾಗ, ಅದರ ಅರ್ಥವನ್ನು ಸ್ಪಷ್ಟಪಡಿಸಲು ಯತ್ನಿಸಿದಾಗ, ಕುತೂಹಲದಿಂದ, ಆಸಕ್ತಿಯಿಂದ ಕೇಳುತ್ತಿದ್ದ ನಮಗೆ ಒಂದು ಸಂದೇಹ ಮೂಡಿ ಬಂತು. 'ಲೋಕೋದ್ಧಾರಕ್ಕಾಗಿ ವೈರಾಗ್ಯವನ್ನು ಮೂಡಿಸಿಕೊಂಡು, ಪತ್ನಿಯ ಮನೆಗೆ ಎಂದರೆ ತನ್ನ ಪೂರ್ವಾಶ್ರಮದ ಅಂತಃಪುರಕ್ಕೆ, ದೃಢ ಮನಸ್ಸಿನಿಂದ ಪ್ರವೇಶಿಸಿದ ಸಿದ್ಧನಾದ ಬುದ್ಧ 'ಹೆಂಡತಿಯ' ಪ್ರಶ್ನೆಗೆ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಒಳಿತು ತಪ್ಪಿನ ಭಾವಗಳನ್ನು ವಿಶೇಷಿಸುವಂತೆ ಉತ್ತರಿಸುವುದು ಸರಿಯೆ? ಯಶೋಧರೆಗೆ ಈ ಮಾತು ಹೇಳಬಹುದೆ? ಈ ದ್ವಂದ್ವಾರ್ಥದ ಮಾತುಗಳಲ್ಲಿ ಅವಳು ಯಾವುದನ್ನು ಸ್ವೀಕರಿಸಬೇಕು? ಇಂಥ ಮಾತು ಬುದ್ಧನಂಥ ವೈರಾಗ್ಯ ಮೂರ್ತಿಗೆ ಒಪ್ಪತಕ್ಕುದೇ?' ಎಂದು ಕೇಳಿದೆವು. ಈ ಪ್ರಶ್ನೆ ತತ್‌ಕ್ಷಣ ಅವರ ಆಲೋಚನಾ ಸೂತ್ರವನ್ನು ಅಲ್ಲಾಡಿಸಿತು. 'ಈ ಮಾತು ಈಗ ನಿಮಗೆ ಅರ್ಥವಾಗುವುದಿಲ್ಲ. ಬುದ್ಧನ ಮನಸ್ಸು ಯಶೋಧರೆಗೆ ಅರ್ಥವಾಗಿದೆ, ಅಷ್ಟು ಸಾಕು' ಎಂದರು. ಆಗ ನಾವು ಕೇಳಿದೆವು :

'ಸರ್ ನಾವು ನಿಮ್ಮ ಕ್ಲಾಸಿಗೆ ಸ್ವಲ್ಪ ಲೇಟಾಗಿ ಬರುತ್ತೇವೆ. 'May I come in Sir' ಎಂದು ಕೇಳುತ್ತೇವೆ. ಆಗ 'ನೀವು ಬಂದರೆ ಒಳಿತು, ಬರದಿದ್ದರೆ ತಪ್ಪಿಲ್ಲ' ಎನ್ನುತ್ತೀರಾ? ಆಗ ನಾವು ಬರಬೇಕೋ ಬೇಡವೋ?' ಎಂದು ಮರು ಪ್ರಶ್ನೆ ಹಾಕಿದೆವು.

'It is your decision' ಎಂದರು. ನಾವು ಅಲ್ಲಿಗೇ ಸುಮ್ಮನಾಗದೆ 'ನಿಮಗೆ ಯಾವುದು ಸರಿ, ನಿಷ್ಕೃಷ್ಟವಾಗಿ ಹೇಳಿ ಸರ್' ಎಂದೆವು. ಆಗ ಅವರಿಗೆ ಸ್ವಲ್ಪ ಕೋಪ ಬಂದಿರಬೇಕು.

'Go and complain to the Superintendent' ಎಂದರು.

ಇಲ್ಲಿ ದೂರು ಕೊಡುವ ಪ್ರಸಂಗವೇನೂ ಇರಲಿಲ್ಲ, ಏಕೆಂದರೆ ನಾವು ಕ್ಲಾಸಿನ ಒಳಗೇ ಇದ್ದೆವು. ಕಡೆಗೆ ಅವರು 'ಈ ವಾಕ್ಯದ (ಎಂದರೆ ಬುದ್ಧನ ಉತ್ತರದ) ಅರ್ಥ ಸರಿಯಾಗಿ ತಿಳಿಯಬೇಕಾದರೆ ನಿಮಗೆ ಇನ್ನೂ ಸ್ವಲ್ಪ ವಯಸ್ಸಾಗಬೇಕು' ಎಂದುಬಿಟ್ಟರು.

ತರಗತಿ ಆಗ ಸ್ವಲ್ಪ ಗಡಿಬಿಡಿಯಾಗಿತ್ತು. ನಮ್ಮಸ್ಥಿತಿಯೂ ಸ್ವಲ್ಪ ಇರಸುಮುರುಸಾಗಿತ್ತು. ಮೇಷ್ಟ್ರು ಆ ವಾಕ್ಯದ ಅರ್ಥವನ್ನು ಮುಂದೆ ಸ್ಪಷ್ಟಪಡಿಸುತ್ತಿದ್ದರೋ ಏನೋ, ಆ ವೇಳೆಗೆ ಗಂಟೆಯಾಯಿತು. ಪೀರಿಯಡ್ ಮುಗಿಯಿತು.

ಮುಂದಿನ ಪೀರಿಯಡ್‌ನಲ್ಲಿ ನಾವು ಆ ಪ್ರಶ್ನೆಯನ್ನು ತಿರುಗಿ ಎತ್ತಲಿಲ್ಲ. ಮೇಷ್ಟ್ರು ಅದನ್ನು ಜ್ಞಾಪಿಸಿಕೊಳ್ಳಲಿಲ್ಲ. ಆದರೆ ಪಾಠ ಮುಂದುವರಿದಾಗ ಅವರು ಆ ಸಂದರ್ಭವನ್ನು ವಿವರಿಸುವಂತೆ ಕಂಡುಬಂದಿತು. ಯಶೋಧರೆ 'ತಪ್ಪಿಲ್ಲದಿರುವುದೇ ಸಾಕೆನಗೆ' ಎಂದು ಪಾದವನ್ನು ಮುಟ್ಟಿ ಕಣ್ಣಿಗೆ ಒತ್ತಿಕೊಂಡು ನಮಸ್ಕರಿಸುವಳು.

ಆಗ ಉಪಾಧ್ಯಾಯರು 'ನೋಡಿದಿರಾ, ಯಶೋಧರಾ ಒಳಿತಾಗಿ ನಡೆದುಕೊಳ್ಳದಿದ್ದರೂ ತಪ್ಪಾಗಿ ನಡೆದುಕೊಳ್ಳಲಿಲ್ಲ' ಎಂದರು.

"ಈ ವಾಕ್ಯದ ಉದ್ದೇಶ ಬುದ್ಧನಲ್ಲಿದ್ದಿರಬಹುದಾದ ಒಂದು ಸಂಶಯದ ಪರಿಹಾರ. ತಾನು ವಿರಾಗಿ. ಹೆಣ್ಣಿನ ಸ್ಪರ್ಶಸುಖವನ್ನು ತ್ಯಜಿಸಿದ್ದಾನೆ. ಅದರಲ್ಲಿ ಗೆದ್ದಿದ್ದಾನೆ ಎಂಬ ದೃಢ ನಂಬಿಕೆ ಅವನಲ್ಲಿದೆ. ಹೆಂಡತಿ ತನ್ನನ್ನು ಸ್ಪರ್ಶಿಸಿದರೆ ತನ್ನ ಮನಸ್ಸು ಚಂಚಲವಾಗಲಾರದು. ಆದರೂ ಅಂಥ ಅವಕಾಶಕ್ಕೆ, ಪರೀಕ್ಷೆಗೆ ಏಕೆ ಎಡೆಕೊಡಬೇಕು ಎಂಬ ಮನೋಭಾವ ಅವನಲ್ಲಿದ್ದಿರಬೇಕು. ಆದ್ದರಿಂದ 'ಮುಟ್ಟದಿದ್ದರೆ ಒಳಿತು' ಎಂದಿರಬೇಕು. ಹಾಗೆ ಮುಟ್ಟಿದರೆ, ಅದರಿಂದ ತನ್ನ ಜಿತೇಂದ್ರಿಯತ್ವ ಅಲುಗಾಡಲಾರದು ಎಂಬ ಮನಸ್ಸು ಅವನಲ್ಲಿ ದೃಢವಾಗಿದೆ. ಆದ್ದರಿಂದ ಅವನು ತನ್ನ ಪರೀಕ್ಷೆಯೂ ಆಗಲಿ ಎಂಬ ಉದ್ದೇಶದಿಂದ, 'ಮುಟ್ಟಿದರೆ ತಪ್ಪಿಲ್ಲ' ಎಂದು ಹೇಳಿರಬೇಕು. ಅದೊಂದು ರೀತಿಯ ಆತ್ಮಪರೀಕ್ಷೆ. ಆಗಿ ಹೋಗಲಿ ಎಂದೆನ್ನಿಸಿರಬೇಕು. ಈ ಗಂಡು ಹೆಣ್ಣುಗಳ ಸಂಬಂಧ ವೈರಾಗ್ಯಕ್ಕೆ ಎಂಥ ಅಡ್ಡಿ ಎಂಬುದು ಅವನಿಗೆ ಗೊತ್ತಿದೆ. 'ಸ್ತ್ರೀಯರಿಗೆ ದೀಕ್ಷೆ ಕೊಡುವೊಡೆ ನಾನು ಮೊಳೆಯಿಟ್ಟ ಧರ್ಮದಾಯುಷ್ಯದಲಿ ಅರ್ಧ ಅಳಿವುದು' ಎಂಬುದು ಬುದ್ಧನ ನಂಬಿಕೆ. ಇದಕ್ಕೆ ಕಾರಣ ಸ್ತ್ರೀ ಪುರುಷರ ಸಾನ್ನಿಧ್ಯ, ಅದು ಇಬ್ಬರ ಉದ್ಧಾರಕ್ಕೂ ವೈರಾಗ್ಯದ ಸಾಧನೆಗೂ ಅಡಚಣೆಯಾಗುತ್ತದೆಂಬುದೇ ಬುದ್ಧನ ಭಾವನೆ. ಅದರ ಅಂಶ ಅವನ ಮಾತಿನ 'ಮುಟ್ಟದಿದ್ದರೆ ಒಳಿತು' ಎಂಬ ವಾಕ್ಯದಲ್ಲಿದೆ.

'ಇನ್ನೊಂದು ದೃಷ್ಟಿಯಿಂದ ಬುದ್ಧನ ಈ ಹೇಳಿಕೆಯಲ್ಲಿ ಮತ್ತೊಂದು ಅಭಿಪ್ರಾಯವೂ ಇದೆ. ಅದು ಹತ್ತಾರು ವರ್ಷಗಳಿಂದ ಗಂಡನಿಂದ ದೂರವಿದ್ದು ಈಗ ಅವನ ಸಂಪರ್ಕ

ಒದಗಿ ಬಂದಾಗ ಆಕೆಯ ಮನಸ್ಸು ಹೇಗಿದೆ ಎಂಬುದನ್ನು ಪರೀಕ್ಷಿಸುವ ಆಶಯ. ಯಶೋಧರೆ, ಪೂರ್ವಾಶ್ರಮದ ಬುದ್ಧನ ಪತ್ನಿ, ಅವನೊಡನೆ ಸಂಸಾರ ಮಾಡಿದವಳು. ಅವನಿಂದ ಪುತ್ರರತ್ನವನ್ನು ಪಡೆದವಳು. ಅವಳನ್ನು ತ್ಯಜಿಸಿ, ಅವಳಿಗೆ ಹೇಳದೆ ಅವಳ ಕಾಮತೃಷ್ಣೆಯ ಮನಸ್ಸು ತನ್ನ ವೈರಾಗ್ಯದ ಸಾಧನೆಗೆ ಎಲ್ಲಿ ಅಡ್ಡ ಬರುತ್ತದೆಯೋ ಎಂದು ಹೆದರಿ, ಅರ್ಧ ರಾತ್ರಿಯಲ್ಲಿ ಅರಮನೆಯಿಂದ ಹೊರಟು ಹೋದ ಬುದ್ಧ ಈಗ ಜಿತೇಂದ್ರಿಯನಾಗಿದ್ದಾನೆ. ಅವನಿಗೆ ವಿಷಯಾಸಕ್ತಿಯಿಲ್ಲ. ಹೆಣ್ಣಿನ ಜೊತೆಯ ಬಾಳು ಬೇಕಾಗಿಲ್ಲ. ತಾನು ಆ ಬಾಳನ್ನು ಗೆದ್ದಿದ್ದಾನೆ. ಆದ್ದರಿಂದ ಹರೆಯದ ಪತ್ನಿ ತನ್ನನ್ನು ಪೂರ್ವ ಸಂಬಂಧದಿಂದ ಬಯಸುವ ಇಚ್ಛೆಯಿದ್ದು ಅವನ ಶರೀರದ ಸ್ಪರ್ಶದಿಂದ ಅವಳ ಮನಸ್ಸು ವಿಚಲಿತವಾದರೆ, ತನ್ನ ಜಿತೇಂದ್ರಿಯತ್ವಕ್ಕೆ ಅಳುಕುಂಟಾಗಬಹುದೇನೊ ಎಂಬ ಶಂಕೆಗಿಂತ ವಿಶೇಷವಾಗಿ ಅವಳಲ್ಲಿಯೇ ಕಾಮ ವಿಕಾರವುಂಟಾದರೆ ಹೇಗೆ? ಆ ಭಾವನೆ ಮೂಡದ ಹಾಗಿರಬೇಕಾದರೆ ಅವಳು ತನ್ನ ಶರೀರವನ್ನು ಸ್ಪರ್ಶಿಸಬಾರದು. ಅವಳು ಒಂದು ಪಕ್ಷ ಮಾನಸಿಕವಾಗಿ ಕಾಮ ವಾಸನೆಯನ್ನು ತೊಡೆದು ಹಾಕಿದ್ದರೂ ಶರೀರದ ಸ್ಪರ್ಶ ಅದನ್ನು ಪ್ರಚೋದಿಸಿದರೆ, ಅವಳಲ್ಲಿ ಇದ್ದಿರಬಹುದಾದ ಸಹಜ ಭಾವನೆಗೆ ತಾನೇ ಪ್ರೇರಣೆ ನೀಡಿದಂತಾಗುವುದಿಲ್ಲವೆ? ಅಂದ ಮೇಲೆ ಈ ವಿಷಯದಲ್ಲಿ ಅವಳ ಮನೋನಿಗ್ರಹವನ್ನೂ ಪರೀಕ್ಷಿಸುವುದು ಬುದ್ಧನ ಇಷ್ಟವಾಗಿತ್ತು ಎಂಬ ಅಂಶ ಅವನ 'ಮುಟ್ಟದಿದ್ದರೆ ಒಳಿತು' ಎಂಬ ಮಾತಿನಲ್ಲಿ ಅಡಕವಾಗಿದೆ. ಇದು ಯಶೋಧರೆಯಲ್ಲಿರಬಹುದಾದ ಪತಿಪತ್ನಿಯರ ಶಾರೀರಿಕ ಸಂಬಂಧದ ಕಾಮ ಭಾವನೆಯನ್ನು ಅರಿಯುವ ಗುರಿಯನ್ನು ಹೊಂದಿದೆ. ಬುದ್ಧನ ಈ ವಿಚಾರತೀಕ್ಷ್ಣತೆ ಅವನು ತಾನು ತಪಸ್ಸಿನಿಂದ ಸಾಧಿಸಿದ ವೈರಾಗ್ಯದ ಗೆಲುವನ್ನು ಮನೆಯಲ್ಲೇ ಇದ್ದುಕೊಂಡು, ಪತಿಯ ಅಗಲಿಕೆಯಿಂದ ಬಹುಶಃ ನರಳುತ್ತ ಅತ್ತೆ, ಮಾವ, ಮಗ, ಸಖಿಯರು ಇವರ ಸಾಂಸಾರಿಕ ಭಾವನೆಗಳ ಮಧ್ಯದಲ್ಲಿ ಬದುಕುತ್ತ ಇರುವ ಯಶೋಧರೆಯಲ್ಲಿ ಎಷ್ಟರ ಮಟ್ಟಿಗೆ ವ್ಯಾಪಕವಾಗಿದೆ, ಇಲ್ಲವೆ ಆಕೆಯೂ ಗಂಡನ ಸಾಧನೆ ಸಿದ್ಧಿಗಳನ್ನು ಅರಿತು ತಾನೂ ವಿರಾಗಿಯಾಗಿದ್ದಾಳೆಯೇ ಎಂಬುದನ್ನು ಕಂಡುಕೊಳ್ಳುವ ಭಾವನೆಯೂ ಅವನದು'.

ಬುದ್ಧನ ಈ 'ಅಡ್ಡಗೋಡೆಯ ದೀಪದಂತಿರುವ ಹೇಳಿಕೆಯಲ್ಲಿ ಇಷ್ಟೊಂದು ಅರ್ಥವಿದೆ' ಎಂಬುದನ್ನು ಮೇಷ್ಟ್ರು ವಿವರಿಸಿದರು. ಈ ವಿವರ 'ಒಂದೇ ಪಾಠ'ದಲ್ಲಿ ಬರಲಿಲ್ಲ ಎಂಬುದು ನೆನಪು. ಬೇರೆ ಬೇರೆ ದಿನಗಳಲ್ಲಿ ಪಾಠ ಮಾಡುತ್ತಾ ಮಾಡುತ್ತಾ ಸಂದರ್ಭ ಒದಗಿದಾಗಲೆಲ್ಲ Flash Back ನಂತೆ ತಿಳಿಸಿದರು. ಬಹುಶಃ ಇದಕ್ಕೆ ಕಾರಣ ವಿದ್ಯಾರ್ಥಿಗಳಾದ ನಮಗೆ ಈ 'ಭೋಗ ತ್ಯಾಗಗಳ' – ಅದರಲ್ಲೂ ಶರೀರಕ್ಕೆ ಸಂಬಂಧಿಸಿದ– ಭಾವನೆಗಳನ್ನು ಒಂದೇ ಸಲ ಹೇರುವುದಕ್ಕಿಂತ ಕ್ರಮಕ್ರಮವಾಗಿ ಪಾಠ ಹೇಳುತ್ತಾ ತಿಳಿಸಬೇಕೆಂಬುದೇ ಆಗಿರಬೇಕು.

* * *

ಅವರ ಇನ್ನೊಂದು ಪಾಠದ ಸಂದರ್ಭ 'ಕಾದಂಬರಿ'ಯಲ್ಲಿ ಬರುವ ಪ್ರೇಮ ಮತ್ತು ಪ್ರಣಯ ಪ್ರಸಂಗಕ್ಕೆ ಸಂಬಂಧಿಸಿದ್ದು. ವಿ.ಸೀ. ಅವರಿಗೆ 'ಕಾದಂಬರಿ' ತುಂಬ ಪ್ರಿಯವಾದ

ಕಾವ್ಯ. ಅದು ಯಾವ 'ಧರ್ಮ'ವನ್ನೂ ವಸ್ತುವನ್ನಾಗಿ ಆಳವಡಿಸಿಕೊಂಡ ಕಾವ್ಯವಲ್ಲ. ಅದೊಂದು ನಿರ್ಬಾಧಿತವಾದ, ಶುದ್ಧವಾದ, ಅಕಳಂಕವಾದ ಪ್ರೇಮ ಕಾವ್ಯ. ಅದರ ವಸ್ತು ನೈಜವಾಗಿ ಮಹಾಶ್ವೇತೆ–ಪುಂಡರೀಕರ ಮತ್ತು ಚಂದ್ರಾಪೀಡ–ಕಾದಂಬರಿ ಅವರ ಪ್ರೇಮೋದ್ಭವಕ್ಕೆ, ಅದರ ಬೆಳವಣಿಗೆಗೆ ಸಿದ್ಧಿಗೆ ಸಂಬಂಧಪಟ್ಟ ವಿಷಯವನ್ನು ಒಳಗೊಂಡದ್ದು.

'Love at first sight' ಎಂಬ ಮಾತನ್ನು ನಾವು ಈಚೆಗೆ ವಿಶೇಷವಾಗಿ ಹೇಳುತ್ತಿರುತ್ತೇವೆ. ಈ 'Love' ನ ಶಕ್ತಿ ಎಷ್ಟು ಪ್ರಾಮಾಣಿಕವಾದದ್ದು, ಎಷ್ಟು ಆಳವಾದದ್ದು ಎಂಬುದರ ವೈಶಿಷ್ಟ್ಯ ನಮಗೆ ಅರ್ಥವಾಗುವುದಿಲ್ಲ. ಈ 'ಲವ್'ನಲ್ಲಿ ಪ್ರೇಮದ ಬಗೆಗೆಯಾಗಲಿ, ವ್ಯಕ್ತಿಯ ಸ್ವಭಾವ ಗುಣದೋಷಗಳನ್ನಾಗಲಿ ಕುರಿತು ನಾವು ಚಿಂತಿಸುವುದಿಲ್ಲ. ಇದು ಬರಿಯ ಹೆಣ್ಣು ಗಂಡುಗಳ ಬಾಹ್ಯ ಸೌಂದರ್ಯಕ್ಕೆ ಅನ್ವಯಿಸುವಷ್ಟರ ಮಟ್ಟಿಗೆ ಮಾತ್ರ ಸೀಮಿತವಾಗಿರುತ್ತದೆ. ನಮ್ಮಲ್ಲಿ ಹೇಳುವ 'ಕನ್ಯಾ ವರಯತೇ ರೂಪಂ' ಎಂಬ ಮಾತು ಇಲ್ಲಿ ಅನ್ವರ್ಥವಾಗುತ್ತದೆ. ಈ 'ರೂಪ' ದ ಆಕರ್ಷಕ ಗುಣ ತಾತ್ಕಾಲಿಕವಾದುದಷ್ಟೇ ಹೊರತು ಅತ್ಯಂತ ಗಾಢವಾಗಿ ನಿಂತು ವಿವಾಹ ಜೀವನದಲ್ಲಿ 'ಪ್ರಣಯ' ದ ಬಲಿಷ್ಠ ಆಧಾರವಾಗಿ ಸಂಸಾರವನ್ನು ಸುಖಿಮಯವನ್ನಾಗಿ ಮಾಡುವುದು ಅಪರೂಪ ಮತ್ತು ಅಪವಾದ. ಬದುಕಿನಲ್ಲಿ 'ರೂಪ' ದಿಂದ ಅಂಟಿದ ಬಾಳು 'ನನಗೂ ನಿನಗೂ ಅಂಟಿದ ನಂಟಿನ ಕೊನೆ'ಯನ್ನು ಬಲ್ಲವರು ಬಹಳಿಲ್ಲ. ಆದ್ದರಿಂದ 'ಕಾದಂಬರಿ'ಯಲ್ಲಿ ಬರುವ 'ಮೊದಲ ನೋಟದ ಪ್ರೇಮ'ದ ಸೌಂದರ್ಯವನ್ನು, ಅದರ ತೀವ್ರತೆಯನ್ನು, ಅದರ ನಂಟನ್ನು ತಿಳಿಯುವ ಎರಡು ಪ್ರಸಂಗಗಳು ಚಿಂತನಾರ್ಹವಾಗಿವೆ, ವಿಮರ್ಶಾರ್ಹವಾಗಿವೆ. ಈ ಸಂದರ್ಭಗಳನ್ನು ನಮಗೆ ವಿ.ಸೀ. ಅವರು 'ಕಾದಂಬರೀ' ಪಾಠದಲ್ಲಿ ವಿವರಿಸಿದ ಬಗೆ ಅಪೂರ್ವವಾಗಿತ್ತು. ಅವರ ವಿದ್ವತ್ತು, ಕಾವ್ಯಾಭ್ಯಾಸದ ಆಳ ಅಗಲಗಳು, ಗಂಡು ಹೆಣ್ಣುಗಳಲ್ಲಿ ಪ್ರಥಮ ಉದ್ಭವವಾಗುವ 'ಕಾಮ' ಭಾವನೆ, ಅದರ ಸ್ವರೂಪವನ್ನು ಅರ್ಥ ಮಾಡಿಕೊಂಡಿದ್ದ ಅವರ ಆಳವಾದ ಚಿಂತನೆ, ವಾದಸಾಮರ್ಥ್ಯ ಆ ಪಾಠಗಳಲ್ಲಿ ಸಮಂಜಸವಾಗಿತ್ತು, ಭಾವ ಗರ್ಭಿತವಾಗಿತ್ತು, ಗಂಭೀರವಾಗಿತ್ತು. ಈ ಪಾಠ ಒಂದು 'ಪಿರಿಯಡ್'ಗೆ ಮಾತ್ರ ಮೀಸಲಾಗಿರಲಿಲ್ಲ. ಪ್ರಸಂಗ ಬಂದಾಗ ಕೊಟ್ಟ ವಿವರಣೆ 'ಪಠ್ಯ' ವಿಷಯ ಮುಗಿಯುವವರೆಗೂ ಒಂದಲ್ಲ ಒಂದು ರೀತಿಯಿಂದ ಮೆಲುಕು ಹಾಕುತ್ತಲೇ ಇದ್ದುದು, ನಮ್ಮ ಮನಸ್ಸಿನಲ್ಲಿ ತಿರುವಿ ಹಾಕಿ ಜೀರ್ಣವಾಗುತ್ತಿತ್ತು. ಇಂದಿಗೂ ಅವರ ಪಾಠ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿರುವುದೇ ಅದಕ್ಕೆ ಸಾಕ್ಷಿ.

ಮಹಾಶ್ವೇತೆ ಪುಂಡರೀಕನನ್ನು ಮೊದಲ ಬಾರಿಗೆ ನೋಡಿದಾಗ ಅವಳಲ್ಲಿ ಅವನನ್ನು ಕುರಿತು ಹುಟ್ಟಿದ ಪ್ರೇಮ ಸಂದರ್ಭ ಒಂದು. ಚಂದ್ರಾಪೀಡ ಕಾದಂಬರಿಯನ್ನು ಮೊದಲು ನೋಡಿದಾಗ ಅವರಿಬ್ಬರಲ್ಲಿ ಪ್ರೇಮ ಹುಟ್ಟಿದ ಸಂದರ್ಭ ಎರಡನೆಯದು.

ಈ ಪ್ರೇಮಿಗಳು ಬೇರೆ ಬೇರೆ ಅಂತಸ್ತಿನವರು, ಬೇರೆ ಬೇರೆ ಲೋಕದವರು. ಮಹಾಶ್ವೇತೆ, ಕಾದಂಬರಿಯರು ಗಂಧರ್ವರು; ಪುಂಡರೀಕ ಚಂದ್ರಾಪೀಡರು ದೇವಾಂಶ ಸಂಭೂತರಾದರೂ ಮಾನವರು ಗಂಧರ್ವಲೋಕದ ಅಪ್ಸರೆಯರಲ್ಲಿ ಮಾನವಲೋಕದ ಸುಂದರ ಪುರುಷರಲ್ಲಿ ಸಂಭವಿಸಿದ 'ಪ್ರಣಯ' ಎಷ್ಟು ಉತ್ತಮ ಮಟ್ಟದ್ದು, ಎಷ್ಟು

ಶ್ರೇಷ್ಠವಾದದ್ದು, ಎಷ್ಟು ಸುಸಂಸ್ಕೃತವಾದದ್ದು, ಎಷ್ಟು ಸತ್ತ್ವಶಾಲಿಯಾದದ್ದು ಎಂದು ಕವಿ ವರ್ಣಿಸಿರುವ ವೈಲಕ್ಷಣ್ಯವನ್ನು ವಿ.ಸೀ. ಅವರು ಬಹು ಸ್ಪಷ್ಟವಾಗಿ, ಮನೋಹರವಾಗಿ, ಎಷ್ಟು ಮನೋಜ್ಞವಾಗಿ, ಗಂಭೀರವಾಗಿ ತಿಳಿಸಿಕೊಟ್ಟರು ಎಂಬುದರಿಂದ ಅವರ 'ಕಾವ್ಯಾರ್ಥಚಿಂತನ' ಯಾವ ಎತ್ತರದಲ್ಲಿ ಎಷ್ಟು ವಿಸ್ತಾರವಾಗಿ ಇತ್ತು ಎಂಬುದನ್ನು ನಾವು ಮನಗಂಡೆವು.

*　　*　　*

ವಿ.ಸೀ. ಅವರು ಸಮರ್ಥ ಉಪಾಧ್ಯಾಯರು ಎಂದು ಹೇಳಿದೆ. ಬಹು ವರ್ಷಗಳ ವರೆಗೆ ಅವರು ಬೆಂಗಳೂರಿನ 'ವಿಜ್ಞಾನ' ಕಾಲೇಜುಗಳ ಉಪನ್ಯಾಸಕರಾಗಿದ್ದರು. ಬಿ.ಎಂ.ಶ್ರೀ. ಅವರು ಇಂಗ್ಲಿಷ್ ಪ್ರಾಧ್ಯಾಪಕರು. ಶ್ರೀ ಅವರ ಇಂಗ್ಲಿಷ್ ಪಾಠಕ್ರಮವನ್ನು ವಿ.ಸೀ. ವಿಶೇಷವಾಗಿ ಮೆಚ್ಚಿಕೊಂಡವರು. ಅವರಂತೆಯೇ ವಿ.ಸೀ. ಅವರೂ ಪಾಠ ಹೇಳುತ್ತಾ ಅನುಭವ ಪಡೆದಿದ್ದರು. ಆಗ ಕನ್ನಡ ಉಪಾಧ್ಯಾಯ ವರ್ಗಕ್ಕೆ ಹಳತನ್ನು ಮರೆಯದ ಹೊಸತನ್ನು ಮೆಚ್ಚಿದ ಎ.ಆರ್.ಕೃ. ಅವರು ಮುಖ್ಯಸ್ಥರಾಗಿದ್ದರು. ಆ ಇಬ್ಬರ ಮೆಚ್ಚಿಕೆಯನ್ನು ಪಡೆದವರು ಉಪನ್ಯಾಸಕ ವಿ.ಸೀ. ಅವರು. ಅವರಿಗೆ ತರಗತಿಗಳಿಗೆ ಪಾಠ ಹೇಳಲು ಒಂದು ಗಂಟೆಯ ಅವಧಿ ಸಾಲದು. ಹೆಚ್ಚು ಕಾಲಬೇಕು. ಆದ್ದರಿಂದ ವರ್ಷದ ಕೊನೆಯಲ್ಲಿ ವಿಶೇಷ ತರಗತಿಗಳನ್ನು ತೆಗೆದುಕೊಂಡು ಪಠ್ಯಭಾಗವನ್ನು ಮುಗಿಸುತ್ತಿದ್ದರು. ೧೯೪೪ರಲ್ಲಿರ ಬಹುದು, ಅವರಿಗೆ ಮೈಸೂರಿನ ಮಹಾರಾಜಾ ಕಾಲೇಜಿಗೆ ವರ್ಗವಾಯಿತು. ಅದು ನಾನು ಎಂ.ಎ. ಮುಗಿಸಿ ಬೆಂಗಳೂರಿಗೆ ಹಿಂದಿರುಗುವ ವರ್ಷ. ನಾನು ಅವರ ಹಳೆಯ ವಿದ್ಯಾರ್ಥಿ. ಅವರು ಬಂದಾಗ ನಾನು ಅವರನ್ನು ಕಾಣಲು ಅವರ ಮನೆಗೆ ಹೋಗಿದ್ದೆ. ನನ್ನೊಡನೆ ಮೈಸೂರಿನ ಕನ್ನಡ ಉಪಾಧ್ಯಾಯರುಗಳು ಪಾಠಮಾಡುವ ಕ್ರಮಗಳನ್ನು ಕುರಿತು ಪರಿಚಯ ಮಾಡಿಕೊಳ್ಳಲು ಇಷ್ಟಪಟ್ಟರು. ಒಂದು ದಿವಸ ಅವರ ಮನೆಗೆ ಊಟಕ್ಕೆ ಆಹ್ವಾನಿಸಿದ್ದರು. ನನಗೆ ತುಂಬ ಸಂತೋಷವಾಯಿತು. ಅವರು ನನ್ನ ಮೇಲಿಟ್ಟಿದ್ದ ಶಿಷ್ಯ ವಾತ್ಸಲ್ಯ, ಪ್ರೀತಿವಿಶ್ವಾಸಗಳಿಗೆ ನಾನು ಮಾರುಹೋದೆ. ಅಲ್ಲಿ ಅವರಿಗೆ 'ಸಾಹಿತ್ಯ ಚರಿತ್ರೆ'ಯ ಪಾಠದ ವಿಷಯವನ್ನು ಹಂಚಿದ್ದರು. ವಿ.ಸೀ. ಅವರಿಗೆ ಆ ವಿಷಯ ಹೊಸದು. ಬೆಂಗಳೂರಿನ ಕಾಲೇಜಿನಲ್ಲಿನ ಪಾಠವಿಷಯಗಳಿಗೂ ಮೈಸೂರಿನ ಮಹಾರಾಜಾ ಕಾಲೇಜಿನ ಪಾಠ ವಿಷಯಗಳಿಗೂ ಅಂತರವಿತ್ತು. ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪ್ರೌಢ ವ್ಯಾಸಂಗ, ಅಲ್ಲಿ ಆನರ್ಸ್ ಎಂಬ ತರಗತಿಗಳಿದ್ದವು. ಅವುಗಳಲ್ಲಿ ಆಳವಾದ ಅಭ್ಯಾಸ ನಡೆಯುತ್ತಿದ್ದವು. ವಿ.ಸೀ. ಅವರಿಗೆ ಅಲ್ಲಿನ ಅಭ್ಯಾಸ ಕ್ರಮ ಹೊಸದು. ಅದರ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸಿದರು. ಅಲ್ಲಿನ ವಿದ್ವಾಂಸರು ಪಾಠ ಹೇಳಿದ ಕ್ರಮ ಮತ್ತು ನಾನು ಕಲಿತ ರೀತಿಯನ್ನು ನಾನು ಅರ್ಥಮಾಡಿಕೊಂಡಿದ್ದಂತೆ ಹೇಳಿದೆ. ಆಗಿನ ದಿನಗಳಲ್ಲಿ ವಿಜ್ಞಾನ ಕಾಲೇಜಿನ ಉಪಾಧ್ಯಾಯರು ಗಳಲ್ಲಿ ಒಂದು ರೀತಿಯ ತಾರತಮ್ಯ ಭಾವನೆಗಳು ಬೆಳೆದುಕೊಂಡು ಬಂದಿದ್ದವು. ಆದರೆ ವಿ.ಸೀ. ಅವರು ಅಲ್ಲಿನ ಯಾವ ಉಪಾಧ್ಯಾಯರ ಬಗೆಗಾಗಲಿ, ಅವರ ವಿದ್ವತ್ತಿನ ಬಗೆಗಾಗಲಿ ಯಾವುದೇ ರೀತಿಯ ಸಂಶಯದ ಭಾವನೆಗಳನ್ನು ಹೊಂದಿರಲಿಲ್ಲ. ಎಲ್ಲರ ಬಗೆಗೆ ಗೌರವವಿತ್ತು, ಪ್ರಶಂಸೆಯಿತ್ತು. ಆದರೂ ತಾವು 'ಬೆಂಗಳೂರಿನ ಮೇಷ್ಟ್ರು' ಎಂಬ ಸಂಕುಚಿತ

ಮನೋಭಾವನೆಯನ್ನು ಅವರೆಲ್ಲಿ ತಳೆದಿರುತ್ತಾರೋ ಎಂಬ ಅಳುಕು ಇದ್ದಿರಬಹುದು, ಪ್ರೌಢ ವಿದ್ವತ್ತನ್ನು ಪ್ರತಿಪಾದಿಸುವ ವಿಚಾರದಲ್ಲಿ. ಆದರೆ ಅದು ಅವರ ವಿನಯ, ಸೌಶೀಲ್ಯದ ಭಾವನೆ ಅಷ್ಟೆ. ಅವರು ಮೈಸೂರಿನ ಕಾಲೇಜಿನಲ್ಲೂ ಹೆಸರುಗಳಿಸಿದರು; ವಿದ್ಯಾರ್ಥಿಗಳ ಪ್ರೇಮ ಪುರಸ್ಕಾರಗಳನ್ನು ಪಡೆದರು.

ಕುಮಟಾದಲ್ಲಿ ನಡೆದ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವರು ಮಾಡಿದ ಭಾಷಣ ಅದ್ಭುತವಾದದ್ದು, ಅಮೋಘವಾದದ್ದು. ಬರೆದದ್ದನ್ನು ಓದದೆ ವೇದಿಕೆಯ ಮೇಲೆ ನಿಂತು ಮಾಡಿದ ಭಾಷಣ ಅವರ ವಾಗ್ಮಿತೆಯನ್ನು ಪ್ರತ್ಯಕ್ಷೀಕರಿಸಿತು. ಅವರೊಬ್ಬ ವಾಗ್ಮಿಗಳು ಹಾಗೂ ವಾದಿಗಳು. ಹಿಂದಿನ ರಾಜಾಸ್ಥಾನಗಳಲ್ಲಿ 'ಕವಿ, ಗಮಕಿ, ವಾದಿ, ವಾಗ್ಮಿ' ಎಂಬ ಸಾಹಿತ್ಯದ ಚತುರ್ಮುಖರು ಇದ್ದರಂತೆ. ಅವರೆಲ್ಲ ಬೇರೆ ಬೇರೆ ವ್ಯಕ್ತಿಗಳು. ವಿ.ಸೀ. ಅವರು ಈ ನಾಲ್ಕು ಬಗೆಯ ವಿದ್ವತ್ತನ್ನು ಏಕೀಭವಿಸಿಕೊಂಡು ಒಬ್ಬರಾಗಿದ್ದವರು. 'ಗಮಕಿ' ಯಾಗದಿದ್ದರೂ ಗಮಕವನ್ನು ತಮ್ಮ ಕವಿತೆಗಳಲ್ಲಿ ಅಡಗಿಸಿಟ್ಟವರು.

ವಿ.ಸೀ. ಅವರದು ಅಚ್ಚುಕಟ್ಟಿನ ಕೆಲಸ. ಅವರ ಪ್ರತಿಯೊಂದು ಕೆಲಸದಲ್ಲೂ ಕುಶಲತೆ ಎದ್ದು ಕಾಣುತ್ತಿತ್ತು. ಅದು ಅವರ ವೇಷಭೂಷಣದಲ್ಲೂ ಕಣ್ಣು ಸೆಳೆಯುವಂತೆ ಗೋಚರಿಸುತ್ತಿತ್ತು. ಅವರಿಗೆ ಅಗಿನ ನವಿರಾದ ೧೭೦೩ ಮಲ್ಲಿನ ಪಂಚೆಯೇ ಬೇಕು. ಪುಂಡರೀಕ ಉಟ್ಟಿದ್ದ ಪಂಚೆಯ ನಯ ವರ್ಣನೆಯನ್ನು ನೆನಸಿಕೊಳ್ಳಬಹುದು. ಅದೇ ಗುಣದ ವಸ್ತ್ರವೂ ಅವರ ಪೇಟಕ್ಕೆ ಬೇಕು. ಎಂ.ಆರ್.ಶ್ರೀ., ಬಿ.ಎಂ.ಶ್ರೀ. ಅವರು ಧರಿಸುತ್ತಿದ್ದ ರುಮಾಲು ಜರತಾರಿ ಅಂಚಿನದು; ಆದರೆ ವಿ.ಸೀ. ಅವರ ರುಮಾಲು ಶುಭ್ರ, ಬಿಳಿಯ ಅಂಚಿಲ್ಲದ ಪೇಟ. ಅದನ್ನು ಕಟ್ಟುವುದರಲ್ಲೂ ಅವರದೇ ಕೌಶಲ್ಯ, ಜಾಣ್ಮೆ, ಚಮತ್ಕಾರ. ಅದರಲ್ಲಿ ಎಲ್ಲೂ ಸುಕ್ಕಿರಬಾರದು. ಅವರೇ ಸುತ್ತಿಕೊಳ್ಳಬೇಕು. ಸ್ವಲ್ಪ ಹೆಚ್ಚು ಕಡಿಮೆ ಆದರೆ, ಅದರ ಮೇಲೆ ಕೋಪ. ಅದನ್ನು ಸರಿಮಾಡಿ ಸುತ್ತಲಾಗಲಿಲ್ಲವಲ್ಲ ಎಂಬ ಬಗೆಗೆ ತಮ್ಮ ಮೇಲೆ ಕೋಪ. ಅವರ ಮುಚ್ಚುಗುಂಡಿ ಕೋಟು, ರೇಷ್ಮೆ ಬಟ್ಟೆಯದು. ಅದರ ಬಣ್ಣ ನಸು ಹಳದಿ ಇದ್ದರೆ ಅವರಿಗೆ ಇಷ್ಟ. ವಿ.ಸೀ. ಅವರಿಗೆ ತಮ್ಮ 'ಹಸ್ತಾಕ್ಷರ'ದ ಬಗೆಗೆ ಅಸಮಾಧಾನ. ಅದೊಂದು ರೀತಿಯ ದ್ವೇಷ. ಅವರ ಅಕ್ಷರ ಸುಂದರವಲ್ಲ, ಗೀಚು. ತಮ್ಮ ಬರವಣಿಗೆಯನ್ನು ಸಿಕ್ಕು ಎನ್ನುತ್ತಾರೆ ಅವರೇ. ಏಕೆ ಎಂದರೆ ತಮ್ಮ ಉತ್ತಮ ಸುಂದರ ಭಾವನೆಯ ಅಭಿವ್ಯಕ್ತಿಗೆ ಸ್ಪಷ್ಟ, ಅಸ್ಖಲಿತ, ಸುಂದರ ಅಕ್ಷರಗಳಿಲ್ಲವಲ್ಲ ಎಂದು. ವಿ.ಸೀ. ಅವರು ತಮ್ಮ ಪ್ರಕಟಣೆಗಳಿಗೂ ಹೆಚ್ಚಿನ ಮುತುವರ್ಜಿ ವಹಿಸುತ್ತಿದ್ದರು. ಪುಸ್ತಕಕ್ಕೆ ಬಳಸಿದ ಕಾಗದ, ಅದರ ಅಚ್ಚು, ಅದರ 'ಮುದ್ರಾಕ್ಷರ'ಗಳ ಲಿಕ್ಕಾಚಾರ ಎಲ್ಲದರಲ್ಲೂ ಅವರದು ಕಲಾದೃಷ್ಟಿ. ತಮ್ಮ ಈ ಬರವಣಿಗೆಯನ್ನು ಜನ ಹೇಗೆ ಸ್ವೀಕರಿಸುತ್ತಾರೆ ಎಂಬುದಕ್ಕೆ ಅವರು ಕೊಟ್ಟ ಉತ್ತರ: 'ನಾನು ಕೃತಿ ರಚಿಸಿದ್ದೇನೆ. ಅದು ನನ್ನ ಮಗು. ಅದನ್ನು ಚೆನ್ನಾಗಿ ಸುಂದರವಾಗಿ, ಆಕರ್ಷಕವಾಗಿ ಅಲಂಕರಿಸಿದ್ದೇನೆ. ಜನದ ಮಡಲಿಗೆ ಒಪ್ಪಿಸಿದ್ದೇನೆ. ಅದನ್ನು ಸಾಕುವುದು ಬಿಡುವುದು ಅವರಿಗೆ ಸೇರಿದ್ದು. ನಾನು ಹೆತ್ತ ಮಗುವಾದರೂ ಜನರೇ, ನನ್ನ ಸಹೃದಯರೇ ಅದರ ಸಾಕು ತಾಯಿ.'

ಇಂಥ ಅಪೂರ್ವ ಸ್ವಭಾವದ ನಡೆನುಡಿಯ, ಕರ್ತವ್ಯ ನಿಷ್ಠೆಯ ವ್ಯಕ್ತಿ ವಿ.ಸೀ. ಅವರು.

ಕನ್ನಡ ನಾಡಿನಲ್ಲಿ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅವರೊಬ್ಬ ಗೌರವಾನ್ವಿತ ಮಹಾಪುರುಷರು.

ज्ञाननिधि

"ನಿಜವಾದ ಅರ್ಥದಲ್ಲಿ ವಿ.ಸೀ. ಜ್ಞಾನನಿಧಿ. ತಾವು ಓದಿ ಚಿಲುಮು ಕಂಡುದನ್ನು ತಮ್ಮಲ್ಲಿಗೆ ಬಂದವರಿಗೆ, ತಮ್ಮ ವಿದ್ಯಾರ್ಥಿಗಳಿಗೆ ಹೇಳಲೇಬೇಕು. ನಿರಾಡಂಬರದ ಅವರ ಮನೆಯ ಮುಂದಿನ ದೊಡ್ಡ ಕೊಠಡಿಯನ್ನು ಚಿಕ್ಕದನ್ನಾಗಿ ಮಾಡಿದ ಪುಸ್ತಕ ಕಪಾಟುಗಳು - ಅವುಗಳಲ್ಲಿ ಸಂಸ್ಕೃತ, ಕನ್ನಡ, ಇಂಗ್ಲಿಷ್, ಬಂಗಾಳಿ ಭಾಷೆಗಳಲ್ಲಿನ ಸಾಹಿತ್ಯಕೃತಿಗಳು, ಅರ್ಥಶಾಸ್ತ್ರ, ರಾಜನೀತಿಶಾಸ್ತ್ರ, ತತ್ವಶಾಸ್ತ್ರ, ಚರಿತ್ರೆ, ಸಂಗೀತ, ನಾಟಕ, ಚಲನಚಿತ್ರ ಹೀಗೆ ಹತ್ತು ಹಲವು ವಿಷಯಗಳಿಗೆ ಸಂಬಂಧಪಟ್ಟ ಗ್ರಂಥಗಳು, ಪತ್ರಿಕೆಗಳು, ನಿಯತಕಾಲಿಕೆಗಳು ಒಂದನ್ನೊಂದು ಒತ್ತಿ ನಿಂತಿರುತ್ತಿದ್ದವು. ಇಂಥ ಪುಸ್ತಕ ಪ್ರಪಂಚದ ನಡುವೆ ಹಾಸಿಗೆಯ ಸುರುಳಿಗೆ ಒರಗಿ ಈ ಘನ ವಿದ್ವಾಂಸ, ವಿದ್ಯಾರ್ಥಿಗಳನ್ನೊಳಗೊಂಡು ಬಳಿಗೆ ಬಂದವರನ್ನೆಲ್ಲ ಅಂತಃಕರಣದ ಆತಿಥ್ಯದಿಂದ ಆದರಿಸಿ, ಅವರಿಗೆ ಬಳಲಿಕೆಯಾಗದೆ, ತುಂಬಿ ತಣಿಯುವಂತೆ, ಏನೆಂಥ ವಿಷಯಗಳ ಎಳೆಸೆಳಕುಗಳನ್ನು ದೃಷ್ಟಾಂತ, ಸಾಮತಿ, ವೇದ, ವಿನೋದಗಳೊಂದಿಗೆ ತಿಳಿಯ ಹೇಳುವ ರೀತಿ, ಓದಿ ತೋರಿಸುವ ಮೋಡಿ – ಒಂದು ಅಪರೂಪದ ಅನುಭವ. ನಿಂತಲ್ಲಿ, ಕುಳಿತಲ್ಲಿ, ನಡೆದಲ್ಲಿ ಅವರ ಸಾನ್ನಿಧ್ಯ – ಸಹವಾಸವೆಂದರೆ ಸತ್ಯಾರ್ಥದ ಗುರುಕುಲ. ಇದು ಅನುಭವದ ಮಾತು."

ಎಚ್. ಕೆ. ರಂಗನಾಥ್
'ಸಮಗ್ರ ನಾಟಕ' ಪು. vi-vii

ಅಮರಸ್ಮೃತಿ

ಕೆ. ಎಸ್. ನಾರಾಯಣಸ್ವಾಮಿ

ಶುಭ್ರವಾದ ಜೀವನ, ಶುಭ್ರಚಾರಿತ್ರ್ಯ, ಶುಭ್ರ ಅಭಿರುಚಿ, ಶುಭ್ರ ಪ್ರೀತಿವಾತ್ಸಲ್ಯ, ಹೀಗೆ ಗುಣಸಂಪನ್ನರಾದ ಗುರುಗಳು ವಿರಳ. ಜ್ಞಾನ, ಪಾಂಡಿತ್ಯ, ವ್ಯಾಸಂಗ, ಸತತ ಪರಿಶ್ರಮ ಇವುಗಳಿಂದ ಜೀವನೋತ್ಸಾಹ ತುಂಬಿ ತುಳುಕುತ್ತದೆ, ಹಿರಿದಾಗುತ್ತದೆ ಎಂದು ನುಡಿಗಳಿಂದಷ್ಟೇ ಅಲ್ಲದೆ ನಡೆಯಿಂದಲೂ ವಿದ್ಯಾರ್ಥಿಗಳ ಮನಸ್ಸನ್ನು ತುಂಬಿದ್ದ ನಮ್ಮ ಕಾಲೇಜು ಮೇಷ್ಟ್ರುಗಳಲ್ಲಿ ಗಣ್ಯರಾಗಿದ್ದವರು ವಿ. ಸೀತಾರಾಮಯ್ಯನವರು. ನಮಗವರು ಪೂಜ್ಯ ವಿ.ಸೀ. ಅವರ ತರಗತಿಗಳಲ್ಲಿ ದಿನದಿನವೂ ಏನೋ ಒಂದು ಹೊಸ ಉತ್ಸಾಹ, ಆನಂದ ತುಂಬಿರುತ್ತಿತ್ತು. ಧಾರಾಳವಾಗಿ ಇಂಗ್ಲಿಷ್ ಬಳಸುತ್ತಿದ್ದರು. ಹಾಸ್ಯ ಬಿಂದುಗಳ ಕಚಗುಳಿಗಳು ಹೇರಳವಾಗಿಯೇ ಇರುತ್ತಿದ್ದವು. ಎಲ್ಲರೂ ಹಸನ್ಮುಖಿರಾಗಿರಬೇಕು, ಗಮನವಿಟ್ಟು ಕೇಳಬೇಕು, ಆನಂದ ಪಡಬೇಕು ಎಂಬ ಶಿಕ್ಷಣ ಕ್ರಮ ಅವರಿಗೆ ಸಿದ್ಧಿಸಿದ್ದ ಕಲೆ. ಕೆಲವರು ಅಭ್ಯಾಸ ಬಲದಿಂದ "I see" ಎನ್ನುತ್ತಿದ್ದಂತೆ, ಸೀತಾರಾಮಯ್ಯ ಇಡೀ ತರಗತಿ "we see" ಎನ್ನುವಂತೆ ಮಾಡುತ್ತಿದ್ದರು. ಅವರು ವಿ.ಸೀ. ಆದದ್ದು ಆ ಅರ್ಥದಲ್ಲಿ. ಶಿಕ್ಷಣ ಗುರುಶಿಷ್ಯರ ಸಹಯೋಗವಾಗಬೇಕೆಂಬ ಆಕಾಂಕ್ಷೆಯಿಂದ ಪಾಠ ಹೇಳುತ್ತಿದ್ದ ಮರೆಯಲಾಗದ ಮೇಷ್ಟ್ರು ವಿ. ಸೀತಾರಾಮಯ್ಯ.

ಆಗ ಹಳೆಯ ಮೈಸೂರು ಸಂಸ್ಥಾನದಲ್ಲಿ ಒಂದೇ ವಿಶ್ವವಿದ್ಯಾನಿಲಯ. ಪದವಿ ಕಾಲೇಜುಗಳು ಕೇವಲ ಎರಡು. ಮೈಸೂರಿನಲ್ಲಿ ಮಾನವಿಕ ಶಾಸ್ತ್ರಗಳು, ಬೆಂಗಳೂರಿನಲ್ಲಿ ವಿಜ್ಞಾನ ಶಾಸ್ತ್ರಗಳು. ಎರಡು ವರ್ಷಗಳ ಇಂಟರ್ (ಈಗ ಪಿಯುಸಿ) ಓದುವುದಕ್ಕೂ ಈ ಎರಡೇ ಕಾಲೇಜುಗಳು. ಬೆಂಗಳೂರಿನ ದಂಡು ಪ್ರದೇಶದಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ ಸೇರಿದ್ದ ಸೆಂಟ್ ಜೋಸಫ್ ಕಾಲೇಜಿತ್ತು. ಅಲ್ಲಿ ಒಂದು ವಿಚಿತ್ರವಾದ ವಿದೇಶೀ–ಸ್ವದೇಶೀ ಮಿಶ್ರಣದ ಪರಿಸರ. ಬೆಂಗಳೂರು ನಗರವೇ ಬೇರೆ, ಈ ದಂಡು ಪ್ರದೇಶವೇ ಬೇರೆ ಎನ್ನುವಂತಿತ್ತು. ನಾವು ಓದುತ್ತಿರುವಾಗ ಸ್ವಾತಂತ್ರ್ಯ ಸಂಗ್ರಾಮದ ಹವೆ ಬಲವಾಗಿ ಬೀಸುತ್ತಿದ್ದುದರಿಂದ ಈ ಪ್ರತ್ಯೇಕತೆ ಎದ್ದು ಕಾಣುತ್ತಿತ್ತು. ರಾಜರ ಮೈಸೂರು ಪ್ರಜೆಗಳು ರಾಜಭಕ್ತಿಸಂಪನ್ನರು ಎಂಬ ಪ್ರತೀಕ. ಆದರೆ ಕನ್ನಡ ಅಧ್ಯಾಪಕರಲ್ಲಿ ಬಹುಮಂದಿ ಸ್ವಾತಂತ್ರ್ಯ ಸಮರದ ಬೆಂಬಲಿಗರು.

೧೯೩೭-೩೮-೪೦: ಈ ವರ್ಷಗಳಲ್ಲಿ ವಿ.ಸೀ. ಸೆಂಟ್ರಲ್ ಕಾಲೇಜಿನಲ್ಲಿ ನಮಗೆ ಪಾಠ ಹೇಳುತ್ತಿದ್ದರು. ನಾವು ಕೆಲವರು ಮೈಸೂರಿನಲ್ಲಿ ಇಂಟರ್ ಮುಗಿಸಿ ಬಂದಿದ್ದೆವು. ವಿ.ಸೀ. ಅವರಿಗೆ ಮೈಸೂರು ಅತ್ಯಂತ ಪ್ರಿಯವಾದ ಕ್ಷೇತ್ರ. ಅದಕ್ಕಾಗಿ ಅವರಿಗೆ ನಮ್ಮಲ್ಲಿ ವಿಶೇಷವಾದ ವಾತ್ಸಲ್ಯ. ಕೃಷ್ಣಶಾಸ್ತ್ರಿಗಳು, ವೆಂಕಟರಾಮಪ್ಪನವರು ಅಂದಿನ ಇತರ ಕನ್ನಡ ಅಧ್ಯಾಪಕರು. ನಮ್ಮ ಬಲ-ದೌರ್ಬಲ್ಯಗಳನ್ನು, ಓರೆ-ಕೋರೆಗಳನ್ನು, ಸಂಸ್ಕೃತಿ ಬರ್ಬರತೆಗಳನ್ನು ತಿದ್ದಿ ನಡೆಸಿದವರು ಸೀತಾರಾಮಯ್ಯ. ಕನ್ನಡದ ಸ್ಥಾನ ಆಗ ಅಸಡ್ಡೆಯ ಎರಡನೇ ಭಾಷೆ. ಇಂಗ್ಲಿಷಿನದೇ ಪ್ರಭುತ್ವ. ಅದರಲ್ಲೂ ವಿಜ್ಞಾನದ ವಿದ್ಯಾರ್ಥಿಗಳಿಗೆ ಅದು ಒಂದು "Native Language," ಕೇವಲ ಮನೆಮಾತು, ಹಳ್ಳಿಗರ ಭಾಷೆ, ಪ್ರಗತಿಗೆ ಅನವಶ್ಯಕವಾದ ವಿಷಯ. ಎಲ್ಲವೂ ವಿದೇಶೀ ಆಗಿದ್ದ ವಾತಾವರಣದಲ್ಲಿ ನಮಗೆ ಸ್ವಾಭಿಮಾನವನ್ನು ಬೆಳಿಸಿದ ಗುರುಗಳೆಂದರೆ ಮೈಸೂರಿನಲ್ಲಿ ಕುವೆಂಪು, ಬೆಂಗಳೂರಿನಲ್ಲಿ ವಿ.ಸೀ. ದೇಶವ್ಯಾಪಿಯಾಗುತ್ತಿದ್ದ ಸ್ವಾತಂತ್ರ್ಯಾಕಾಂಕ್ಷೆಯನ್ನು ಪರಿಚಯಿಸಿ, ಬೆಳಿಸಿ, ಪೋಷಿಸಲು ಅವರು ಧಾರೆಯೆರೆದ ಜ್ಞಾನಭಂಡಾರ ಅಮೋಘ. ಪಠ್ಯಪುಸ್ತಕಗಳ ಭಾಗ ಕೇವಲ ಒಂದು ನೆಪವಾಗಿದ್ದು ಕನ್ನಡದ ಅತ್ಯುತ್ಕೃಷ್ಟ ಸಾಹಿತ್ಯಕೃತಿಗಳನ್ನು ತಿಳಿಯ ಹೇಳುತ್ತಿದ್ದರು. ಅವರ ಅಪರಿಮಿತ ವಾಗ್ವೈಭವ, ಪದಸಂಪತ್ತು, ಅಧಿಕಾರವಾಣಿ, ವಿವರಣೆಯ ವೈಖರಿ, ದಿಟ್ಟ ನಿಲುವುಗಳು ಅವರ ಪಾಠದ ಗಂಟೆಯಲ್ಲಿ ನಮ್ಮನ್ನು ಮೈಮರಸಿ, ಮನಸ್ಸು ತುಂಬಿಸಿ, ಉದಾತ್ತ ಕಲ್ಪನಾಲೋಕಕ್ಕೆ ಸೆಳೆದೊಯ್ದು ಬಿಡುತ್ತಿತ್ತು. ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಮೈಸೂರು ಮಹಾರಾಜಾ ಕಾಲೇಜಿನ ಗುರುಸಮುಚ್ಚಯದ ವೈಭವೋಪೇತ ವರ್ಣನೆಗಳು ಅವರ ವಾಗ್ಝರಿಯಲ್ಲಿ ತುಂಬಿರುತ್ತಿದ್ದವು. ಕಾಲೇಜಿನ ಶಿಕ್ಷಣ ಎಂದರೆ ಕೇವಲ ಕುರುಡು ಪಾಠವಲ್ಲ. ಸ್ನೇಹ, ಉತ್ಸಾಹ, ಪರಸ್ಪರ ತಿಳುವಳಿಕೆ, ಲೋಕದೃಷ್ಟಿ, ನಡವಳಿಕೆ, ಆರೋಗ್ಯಕರ ಅಭಿರುಚಿಗಳು, ಬಾಳಿನ ಒಪ್ಪ ಓರಣಗಳು, ಸಂಯಮ, ಸ್ವಾಭಿಮಾನಗಳನ್ನೆಲ್ಲ ರೂಪಿಸುವ ಕಮ್ಮಟವಾಗಬೇಕು; ಕೇವಲ ಅಂಕಗಳ ಗಳಿಕೆಯಿಂದ ಜಂಭ ಪಡುವ ಡಾಂಭಿಕರಾಗಿ ಬೆಳೆಯಬಾರದು ಎನ್ನುವುದನ್ನು ವಿ.ಸೀ. ಅವರಂತೆ ಮನದಟ್ಟು ಮಾಡಿಕೊಟ್ಟವರು ಅತಿ ವಿರಳ. ವಿದ್ಯಾರ್ಥಿಯ ಸಂಸ್ಕಾರಕ್ಕೆ, ಶೀಲಕ್ಕೆ ಬೆಳಕು ಹರಿಸಿ ಕಡೆದು ನಿಲ್ಲಿಸುವ ಸಾಮರ್ಥ್ಯ ಶಿಕ್ಷಣಕ್ಕಿರದಿದ್ದರೆ ಅದು ಶುಷ್ಕ ಪಾಂಡಿತ್ಯವಾದೀತು ಎನ್ನುತ್ತಿದ್ದರು. ಶಿಕ್ಷಣದ ಫಲ ನಮ್ಮ ಸುಂದರ ಬದುಕು, ಗಂಭೀರ ವಿಚಾರ ಶಕ್ತಿ, ವ್ಯಕ್ತಿತ್ವ ವಿಕಾಸದ ಸಾಧನ. ಈ ಆದರ್ಶದ ಕಡೆಗೆ ವಿದ್ಯಾರ್ಥಿಗಳನ್ನು ಒಲಿಸಿ, ಕೈ ಹಿಡಿದು ನಡೆಸಿದ ಮುಕ್ತ ಮನಸ್ಸಿನ ಮೇಷ್ಟ್ರು ಎನಿಸಿದ್ದರು ಮರೆಯಲಾಗದ ವಿ.ಸೀ.

ವಿ.ಸೀ. ಅವರ ವಿದ್ಯಾರ್ಥಿ ವಾತ್ಸಲ್ಯ ಮರೆಯಲಾಗದ ನೆನಪು. ಅವರ ಮನೆ ಚಾಮರಾಜಪೇಟೆ ಎರಡನೇ ರಸ್ತೆಯಲ್ಲಿ. ನಾವು ಕೆಲವು ವಿದ್ಯಾರ್ಥಿಗಳು ಅದರ ಹಿಂದಿನ ರಸ್ತೆಯಲ್ಲಿ ಬಾಡಿಗೆ ಕೋಣೆ ಮಾಡಿಕೊಂಡಿದ್ದೆವು. ಕಾಲೇಜಿನಿಂದ ಸಂಜೆ ಹೊರಟು ಬರುವಾಗ ವಿ.ಸೀ. ಅವರ ಜೊತೆ ನಡೆದು ಬರುತ್ತಿದ್ದುದುಂಟು. ಆ ಪಾದಯಾತ್ರೆಗಳು ನಮ್ಮ ತರಗತಿಗಳಿಗಿಂತಲೂ ಹೆಚ್ಚು ಬೋಧಕವಾಗಿರುತ್ತಿದ್ದವು. ದಾರಿಯಲ್ಲಿ ಅವೆನ್ಯೂ ರಸ್ತೆಯಲ್ಲಿದ್ದ ರಾಮಮೋಹನ ಕಂಪನಿ ಮತ್ತು ಕೋಟೆಯಲ್ಲಿದ್ದ ಸತ್ಯಶೋಧನ ಪುಸ್ತಕ

ಭಂಡಾರಗಳಿಗೆ ಭೇಟಿಯಿತ್ತು ಕನ್ನಡದಲ್ಲಿ ಹೊಸ ಸಾಹಿತ್ಯ ಗ್ರಂಥಗಳನ್ನು ಪರಿಚಯಿಸಿ ಕೊಡುತ್ತಿದ್ದರು. ಅವರ 'ಗೀತಗಳು' (೧೯೩೧) ಮತ್ತು 'ದೀಪಗಳು' (೧೯೩೩) ಈ ಕವನ ಸಂಕಲನಗಳು ಪ್ರಕಟವಾಗಿದ್ದವು. ಬೇಂದ್ರೆ, ಕುವೆಂಪು, ಬಿ.ಎಂ.ಶ್ರೀ. ಇವರುಗಳ ಗ್ರಂಥ ಅವಲೋಕಿಸಿ ಅದರ ಬಗ್ಗೆ ತಿಳಿಯ ಹೇಳುತ್ತಿದ್ದರು. ಕಾವ್ಯಗಳ ರಸಾಸ್ವಾದನೆಗೆ ಬೇಕಾದ ಮನೋಧರ್ಮ ರೂಢಿಸಿಕೊಳ್ಳುವ ಅಭ್ಯಾಸ ಮಾಡಿಸುತ್ತಿದ್ದರು. ತಿಂಗಳಿನ ಮೊದಲ ವಾರ ಕೆಲವು ವೇಳೆ ಚಿಕ್ಕಪೇಟೆಗೆ ತಿರುಗಿ 'ಆನಂದಭವನ'ಕ್ಕೆ ಕರೆದೊಯ್ದು ಬಾದಾಮಿ ಹಲ್ವ, ರವೆದೋಸೆಗಳ ಔತಣ ಮಾಡಿಸುತ್ತಿದ್ದರು. ಆಗೆಲ್ಲ ತಮ್ಮ ವಿದ್ಯಾರ್ಥಿ ದೆಸೆಯ ಕಡುಬಡತನದ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು. ತಮ್ಮನ್ನು ಪ್ರೀತಿಯಿಂದ ಕಂಡು ಸಲಹಿದ ದಾತೃಗಳ ಬಗ್ಗೆ ಮಾತನಾಡುವಾಗ ಅವರ ಕಂಠ ಗದ್ಗದಿತವಾಗುತ್ತಿತ್ತು. ಕಣ್ಣುಗಳು ತೇವಗೊಳ್ಳುತ್ತಿದ್ದವು. ಮೈಸೂರಿನ ಜನರ ಔದಾರ್ಯ ಹೇಗೆ ತಮ್ಮನ್ನು ಒಬ್ಬ ವ್ಯಕ್ತಿಯನ್ನಾಗಿ ಮಾಡಿತು ಎಂದೆಲ್ಲ ವಿವರಿಸುತ್ತಿದ್ದರು. ನಮಗೆ ಎಂಥ ಹತ್ತಿರದ ವಾತ್ಸಲ್ಯಮಯಿ ಈ ಮಾರ್ಗದರ್ಶಕರು ಎಂಬ ಭಾವನೆ ತುಂಬಿ ಬರುತ್ತಿತ್ತು. ಯಾವ ಹಿರಿತನದ ಡಾಂಭಿಕತೆಯೂ ಸುಳಿಯುತ್ತಿರಲಿಲ್ಲ. ಅವರ ಮನೆಯವರೆಗೂ ಹೋಗುತ್ತಿದ್ದೆವು. ಸಣ್ಣ ಮನೆಯಲ್ಲಿ ಚಿಕ್ಕದೊಂದು ಕೋಣೆ ಅವರದು. ನೆಲಕ್ಕೆ ಚಾಪೆ, ಒಂದು ಸುರುಳಿ ಸುತ್ತಿದ ಹಾಸಿಗೆ, ದಿಂಬು. ಬಂದವರೆಲ್ಲ ಕೆಳಗೆ ಕುಳಿತುಕೊಳ್ಳುತ್ತಿದ್ದರು. ಅದರಿಂದ ಯಾವ ಘನತೆಗೂ ಕುಂದು ಬರದು ಎಂದು ಆಗಿನ ಭಾವನೆಯಿತ್ತು. ವಿದ್ಯಾವಿನಯ ಸಂಪನ್ನರಾದ ಹಿರಿಯರ ಬಳಿ ಕುಳಿತು ಮಾತನಾಡುವುದೇ ಒಂದು ಭಾಗ್ಯ ಎನ್ನುವವರೇ ಬರುತ್ತಿದ್ದರು. ಸಾಹಿತಿ ಸ್ನೇಹಿತರಂತೂ ದಿನವೂ ಅಲ್ಲಿ ಬರುತ್ತಿದ್ದುದುಂಟು. ವಿ.ಸೀ. ಅವರ ಕೋಣೆಯ ಬಾಗಿಲು ಹೊರಬಾಗಿಲಿಗಿಂತ ಸ್ವಲ್ಪ ಎತ್ತರವಾಗಿತ್ತು. 'ಹೀಗೇಕೆ?' ಎಂದಾಗ "ಪೂಜ್ಯರಾದ ವೆಂಕಣ್ಣಯ್ಯನವರೋ ವೆಂಕಟನಾರಣಪ್ಪನವರೋ ಒಳಗೆ ಬರುವಾಗ ತಲೆತಗ್ಗಿಸಿ ಬರುವಂತಾಗಬಾರದು ಎಂದು ಹೆಚ್ಚಿಸಿದೆ. ಅವರೆಲ್ಲ ಆರಡಿಯವರು, ನಿಜಾರ್ಥದಲ್ಲಿ ಎತ್ತರದ ವಿದ್ವಾಂಸರು" ಎಂದು ಹೇಳಿದಾಗ ನಾವು ಮೂಕವಿಸ್ಮಿತರಾದೆವು. ತರಗತಿಯಲ್ಲಿ ಎಂಥ ನಿಷ್ಠುರ ಗುರುಗಳು ಎನಿಸಿದ್ದವರು ಇಲ್ಲಿ ಎಂಥ ಕೋಮಲ ಮನಸ್ಸಿನ ಸಹೃದಯರು ಎಂದು ನಮಗೆನಿಸುತ್ತಿತ್ತು.

ವಿ.ಸೀ. ಅವರ ಪ್ರಭಾವವಲಯದೊಳಕ್ಕೆ ಬಂದವರು ಅವರ ಕಲಾಭಿಜ್ಞತೆಯ, ಸೌಂದರ್ಯ ಪ್ರಜ್ಞೆಯ, ಶ್ರೇಷ್ಠ ಅಭಿರುಚಿಗಳ, ರಸಾಸ್ವಾದನೆಯ ಮನೋಧರ್ಮಕ್ಕೆ ಮಾರು ಹೋಗದವರಿರಲಿಲ್ಲ. ಆಗಿನ ಬೆಂಗಳೂರಿನಲ್ಲಿ ಇದ್ದುದು ಎರಡೇ ಕಾಲೇಜುಗಳು. ಒಂದು ಸೆಂಟ್ರಲ್ ಕಾಲೇಜು, ಮತ್ತೊಂದು ಇಂಜನಿಯರಿಂಗ್ ಕಾಲೇಜು. ಎರಡಕ್ಕೂ ಸೇರಿ ಒಂದೇ ವಿದ್ಯಾರ್ಥಿ ಸಂಘ, (ಸ್ಟೂಡೆಂಟ್ಸ್ ಯೂನಿಯನ್) ಅದಕ್ಕಾಗಿಯೇ ನಿರ್ಮಿತವಾಗಿದ್ದ ಸುಂದರ ಕಟ್ಟಡದಲ್ಲಿ ಈಗ ನ್ಯಾಯಶಾಸ್ತ್ರ ಕಾಲೇಜಿದೆ. ಕನ್ನಡದ ಕಾರ್ಯಕ್ರಮಗಳು ಸ್ವಲ್ಪ ಆದರೆ ಸತ್ವಪೂರ್ಣವಾಗಿರುತ್ತಿದ್ದವು. ಉತ್ಸಾಹಿಗಳಿಗೆಲ್ಲ ಸ್ಫೂರ್ತಿ ಚಿಲುಮೆ ವಿ.ಸೀ. ಅವರೇ. ನಾಟಕ ಮತ್ತು ಶಾಸ್ತ್ರೀಯ ಸಂಗೀತದಲ್ಲಿ ವಿ.ಸೀ. ಅವರಿಗೆ ವಿಶೇಷ ಜ್ಞಾನಸಂಪತ್ತಿತ್ತು. ಆ ಕಾಲಕ್ಕೆ ಚಾಮರಾಜಪೇಟೆಗೇ ಸೇರಿದಂತಿದ್ದ ಥಿಯಸಾಫಿಕಲ್ ಸೊಸೈಟಿ ಕಟ್ಟಡಕ್ಕೆ ಸೇರಿ ಅದರ

ಹಿಂಭಾಗಕ್ಕಿದ್ದ ಜಿಂಕ್‌ಷೀಟ್ ಛಾವಣಿಯ 'ಶಂಕರಯ್ಯ ಹಾಲ್'ನಲ್ಲಿ ಗಾಯನ ಸಮಾಜದ ಎಲ್ಲ ಸಂಗೀತ ಕಛೇರಿಗಳೂ ನಡೆಯುತ್ತಿದ್ದವು. ಪ್ರಖ್ಯಾತ ಗಾಯಕರೆಲ್ಲರೂ ಅಲ್ಲಿ ಹಾಡಿದ್ದಾರೆ. ಇನ್ನೂರು ಮುನ್ನೂರು ಜನ ಒಳಗೆ ನೆಲದ ಮೇಲೆ, ಹೊರಗೆ ಪಡಸಾಲೆಯಲ್ಲಿ ಕುಳಿತು ಕೇಳುತ್ತಿದ್ದೆವು. ಮೈಕಾಸುರನ ಹಾವಳಿಯೂ ಇಲ್ಲ. ಹೊರಗೆ ಈಗಿನ ಬೆಂಗಳೂರಿನಂತೆ ಶಬ್ದ ಮಾಲಿನ್ಯವೂ ಇಲ್ಲ. ಅಲ್ಲಿ ಡಿ.ವಿ.ಜಿ., ವಿ.ಸೀ., ಸಂಪದ್ಗಿರಿರಾವ್ ಮುಂತಾದ ಹಿರಿಯರು ಜೊತೆಯಲ್ಲೇ ಕುಳಿತಿರುತ್ತಿದ್ದರು. ಕಛೇರಿ ಮುಗಿದ ನಂತರ ವಿ.ಸೀ. ಅವರೊಡನೆ ಕಛೇರಿಯ ವಿಮರ್ಶೆ. ಈ ಬೋಧೆಯಿಂದ ನಮಗೆ ಕರ್ನಾಟಕ ಶಾಸ್ತ್ರೀಯ ಸಂಗೀತದ ಅಭಿರುಚಿ ವಿಶೇಷವಾಗಿ ಬೆಳೆಯಿತು.

ಅಷ್ಟೇ ಅಲ್ಲ; ಬೆಂಗಳೂರಿಗೆ ಆಗಾಗ ಆಗಮಿಸುತ್ತಿದ್ದ ಭಾರತದ ಶ್ರೇಷ್ಠ ವಿದ್ವಾಂಸರ, ಮಹಾಮಹಿಮರ, ಪ್ರಸಿದ್ಧ ವಾಗ್ಮಿಗಳ ಉಪನ್ಯಾಸಗಳನ್ನು ತಪ್ಪಿಸಿಕೊಳ್ಳಬೇಡಿ ಎಂದು ವಿ.ಸೀ. ಒತ್ತಿ ಹೇಳುತ್ತಿದ್ದರು. ತಾವೂ ಅಲ್ಲಿದ್ದು ನಮ್ಮ ಆಸಕ್ತಿಯನ್ನು ಗಮನಿಸಿ ಪ್ರೋತ್ಸಾಹಿಸುತ್ತಿದ್ದರು. ಅವರ ಗುರುಗಳಾಗಿದ್ದ ಡಾ. ರಾಧಾಕೃಷ್ಣನ್, ಆಗ ಸುಪ್ರಸಿದ್ಧರಾಗಿದ್ದ ಶ್ರೀನಿವಾಸ ಶಾಸ್ತ್ರಿಗಳು ಶ್ರೀಮತಿ ಸೋಫಿಯ ವಾಡಿಯ, ಸಿ. ರಾಜಗೋಪಾಲಾಚಾರಿ, ಸಿ. ಎಫ್ ಆಂಡ್ರೂಸ್, ಪಂಡಿತ ತಾರಾನಾಥ ಮುಂತಾದವರು ವಿಶೇಷವಾಗಿ ಬೆಂಗಳೂರಿಗೆ ಬರುತ್ತಿದ್ದರು. ವಿ.ಸೀ. ಅವರು ಮತ್ತೆ ತರಗತಿಯಲ್ಲಿ ಆ ಭಾಷಣಗಳನ್ನು ವಿಶ್ಲೇಷಿಸುತ್ತಿದ್ದರು. ಅವರ ವಿವರಣೆಯಲ್ಲೇ ಒಂದು ಮೋಜು ಇರುತ್ತಿತ್ತು. ಶ್ರೀನಿವಾಸ ಶಾಸ್ತ್ರಿಗಳ ಮಾತು "comes like butter on oil, so smooth so soft"; ರಾಧಾಕೃಷ್ಣನ್‌ರದು "like arrows straight to your brains and intellect"; ಆಂಡ್ರೂಸರದು "devotional and artistic, he combines both Tagore and Gandhi" – ಹೀಗೆ ಪುಂಖಾನು ಪುಂಖವಾಗಿ ವಿವರಿಸಿ, ನಮ್ಮ ದೇಶದ ಮಹಾ ಚೇತನಗಳಲ್ಲಿ ಅಭಿಮಾನ ಹೆಚ್ಚಿಸಿದರು. ನಾನು ಆ ಕಾಲಕ್ಕೆ ಖಾದಿ ಧರಿಸಲು ಪ್ರಾರಂಭಿಸಿದ್ದೆ. ಆಗಾಗ್ಗೆ ವಿ.ಸೀ. ಆ ಒರಟು ಬಟ್ಟೆಯನ್ನು ಗಮನಿಸಿ "You see young man! My patriotism is not measured by the roughness of my cloth" ಎಂದು ಟೀಕಿಸುತ್ತಿದ್ದರು. ನಾವು ಖಾದಿಯನ್ನು "Livery of freedom and patriotism" ಎನ್ನುತ್ತಿದ್ದೆವು. ಎಲ್ಲ ಮಾತುಕತೆಗಳೂ ನಮ್ಮ ಚಿಂತನೆಗೆ ಗ್ರಾಸವಾಗುತ್ತಿದ್ದವು. ಅದು ವಿ.ಸೀ. ಅವರ ಮಾರ್ಗ.

ಗುರುದೇವ ರವೀಂದ್ರನಾಥ ಠಾಕೂರರ ಬಗ್ಗೆ ವಿ.ಸೀ. ಅವರಿಗೆ ಅಪಾರವಾದ ಭಕ್ತಿಪೂರ್ವಕ ಗೌರವ. ಅವರ ಬರಹಗಳಿಂದ ಅನೇಕ ಭಾಗಗಳನ್ನು ಬಣ್ಣಿಸುತ್ತಾ ಅವರ ವ್ಯಕ್ತಿತ್ವ ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಿದ್ದರು. ತಾವು ವಿದ್ಯಾರ್ಥಿಯಾಗಿದ್ದಾಗ ಮೈಸೂರಿಗೆ ೧೯೧೯ರಲ್ಲಿ ರವೀಂದ್ರರು ಬಂದಿದ್ದರು. ವಿ.ಸೀ. ಆಗ ಮಹಾರಾಜಾ ಕಾಲೇಜಿನಲ್ಲಿ ಮೇಧಾವಿ ವಿದ್ಯಾರ್ಥಿ. ತಾವು ಆ ಮಹಾಕವಿಯನ್ನು ಭೇಟಿಯಾಗಿದ್ದ ಸುವರ್ಣ ಸಂದರ್ಭವನ್ನು ಮೈಸೂರು ನಗರದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಹೇಗೆ ಕಂಡರೆಂದು ವಿವರಿಸುವಾಗ ಭಾವಪರವಶರಾಗಿಬಿಟ್ಟರು. ಆ ವರ್ಣನೆಯ ವೈಖರಿ ನಮ್ಮ ನೆನಪಿನಲ್ಲಿ ಅಚ್ಚಳಿಯದೆ ಉಳಿದಿದೆ. ಅರವತ್ತು ವರ್ಷಗಳಿಗಾಚೆಯೂ ನೆನೆದು ರೋಮಾಂಚಗೊಳ್ಳುತ್ತೇನೆ.

೧೯೭೧ರಷ್ಟು ಈಚೆಗೆ 'ಕಾಲೇಜು ದಿನಗಳು' ಎಂದು ಪ್ರಕಟಿಸಿದ ವಿ.ಸೀ. ಅವರ ಸುಂದರ ಗ್ರಂಥದಲ್ಲಿ ಪುಟ ಪುಟಗಳಷ್ಟು ದೀರ್ಘವಾಗಿ ಆ ಸುಂದರ ಘಳಿಗೆಯನ್ನವರು ಬರೆದಿದ್ದಾರೆ. ನಮಗೆ ಅತ್ಯಂತ ಪ್ರಿಯವಾಗಿದ್ದ ಮೈಸೂರು ನಗರದ ಸೌಂದರ್ಯ ಸಂಸ್ಕೃತಿಗಳನ್ನೂ, ಕಲಾತ್ಮಕ ಪರಿಸರವನ್ನೂ ವಿ.ಸೀ. ಅವರಂತೆ ಬಣ್ಣಿಸುವುದು ಮಿಕ್ಕವರಿಗೆ ಶಕ್ಯವಾಗದು. ಆ ವರ್ಣನೆಯ ಕಡೆಯಲ್ಲಿ "ಭೋಗ, ವಿಲಾಸ, ಸೌಂದರ್ಯ ಇವುಗಳ ಕಲ್ಪನೆಯೇ ವಿದ್ಯಾರ್ಥಿಗಳಿಗೆ ಆಗದೆ ಹೋದರೆ ಬಾಳು ಒಣಗುತ್ತದೆ. ಅದಕ್ಕೆ ಆಗಬೇಕಾದ ಶುಚಿ ಸಂಸ್ಕಾರಗಳಲ್ಲಿ ಕೆಲವದರ ಪರಿಚಯವೇ ಇಲ್ಲದಂತಾಗಿ ಮನಸ್ಸು ಬರಡಾಗುತ್ತದೆ. ಸಾವಿರ ವಿಲಾಸಗಳ ಸೌಭಾಗ್ಯ, ಸವಿ, ಸುವರ್ಣತೆ ಬಾಳಿಗೆ ಪರಿಚಿತವಾಗಿರಬೇಕು" ಎಂದಿದ್ದಾರೆ. ಇದು ವಿ.ಸೀ. ಅವರ ಜೀವನಸೌಂದರ್ಯದ ತತ್ತ್ವಶಾಸ್ತ್ರ. ಯಾವ ಸಂಕೋಚವೂ ಇಲ್ಲದೆ ತಮ್ಮ ವಿದ್ಯಾರ್ಥಿಗಳಿಗೆ ಅದನ್ನು ಧಾರಾಳವಾಗಿ ಧಾರೆಯೆರೆದ ಮಹನೀಯರು ವಿ.ಸೀ.

೧೯೩೭–೪೦ರ ಅವಧಿಯಲ್ಲಿ ಎರಡನೇ ಮಹಾಯುದ್ಧ ಜಗತ್ತನ್ನೆಲ್ಲ ಆವರಿಸಿ ನಿಂತಿತ್ತು. ಭಾರತದ ಸ್ವಾತಂತ್ರ್ಯ ಚಳುವಳಿ ಒಂದು ನಿರ್ಣಾಯಕ ಘಟ್ಟವನ್ನು ತಲುಪಿತ್ತು. ಸುತ್ತಲೂ ಹುಚ್ಚೆದ್ದು ಹರಿಯುತ್ತಿದ್ದ ಅರಾಜಕತೆ, ಹಿಂಸೆ, ರಾಕ್ಷಸ ರಾಜಕೀಯಗಳನ್ನು ಕಂಡು ದೇಶ ನಿರ್ವಿಣ್ಣವಾಗುತ್ತಿತ್ತು. ವಿಮರ್ಶಕ ವಿ.ಸೀ. ಅನೇಕ ವೇಳೆ ತುಂಬ ನೋವಿನಿಂದ ಅಂದಿನ ಪರಿಸ್ಥಿತಿಯ ಬಗ್ಗೆ ಚಿಂತಿಸುತ್ತಿದ್ದರು. ಸತ್ಯಾಗ್ರಹದ ಮೂಲಮಂತ್ರಗಳಾದ ಪ್ರೇಮ ಮತ್ತು ಸತ್ಯದ ಅರಿವೇ ಇಲ್ಲದೆ ಜನಜಂಗುಳಿ ವರ್ತಿಸುತ್ತಿದೆ ಎಂದು ಅನೇಕ ವೇಳೆ ತರಗತಿಗಳಲ್ಲಿ ತಾಳ್ಮೆಯಿಂದ ತಿಳಿಯ ಹೇಳುತ್ತಿದ್ದರು. ದೇಶದ ಸ್ವಾತಂತ್ರ್ಯದ ಬಗ್ಗೆ ಭಾವನಾತ್ಮಕ ಸಹಾನುಭೂತಿ ಇದ್ದರೂ ಸುತ್ತಲೂ ನಡೆಯುತ್ತಿದ್ದ ವಿದ್ಯಾರ್ಥಿ ಮುಷ್ಕರಗಳಲ್ಲಿ, ಬಹಿಷ್ಕಾರ ಚಳುವಳಿಗಳಲ್ಲಿ, ರಾಜಕೀಯ ಮೆರವಣಿಗೆ ಪ್ರದರ್ಶನಗಳಲ್ಲಿ ನಡೆಯುತ್ತಿದ್ದ ವಿಧ್ವಂಸಕ ಕೃತ್ಯಗಳಿಗಾಗಿ ವಿ.ಸೀ. ವಿಶೇಷವಾಗಿ ಮರುಗುತ್ತಿದ್ದರು. ನಮ್ಮ ದಾಸ್ಯ ವಿಮೋಚನೆ ನೂರು ಮುಖಗಳಲ್ಲಿ ಫಲಿತವಾಗಬೇಕು ಎಂದು ಒತ್ತಿ ಹೇಳುತ್ತಿದ್ದರು. ನಮ್ಮ ಚಳುವಳಿಗಳು ಸಮಗ್ರವಾಗಿ, ವ್ಯಾಪಕವಾಗಿ ರಾಷ್ಟ್ರಜೀವನವನ್ನು ಪರಿವರ್ತಿಸುವಂತಾಗಲು ನಿಜವಾದ ಸತ್ಯಾಗ್ರಹ ಮಾರ್ಗವೊಂದೇ ತಾರಕ ಎನ್ನುತ್ತಿದ್ದರು. ದೇಶ ಭಾಷೆಗಳ ಉತ್ಥಾನವೂ ಅದರಲ್ಲಿ ಅತಿಮುಖ್ಯ ಭಾಗವಾಗಿತ್ತು. ಜನತೆಯ ಸ್ವಾಭಿಮಾನ ಜಾಗೃತಗೊಳ್ಳಲು ಕನ್ನಡ ಪುಷ್ಪವಾಗಿ, ತೇಜಸ್ವಿಯಾಗಿ, ಸರ್ವವ್ಯಾಪಕವಾಗಿ ಬೆಳೆದು ನಿಲ್ಲಬೇಕು ಎಂದು ಭಾವಪರವಶರಾಗಿ ಬೋಧಿಸುತ್ತಿದ್ದರು. ಅವರ 'ಅಭೀ' ಕವನ ನಮ್ಮ ಮುಷ್ಕರ ಮೆರವಣಿಗೆಗಳಲ್ಲಿ ಒಂದು ಸ್ಫೂರ್ತಿದಾಯಕ ಮಂತ್ರವೆನಿಸಿತ್ತು. ಅದನ್ನು ನೆನೆದಾಗಲೆಲ್ಲ ಅಂದಿನ ಆ ವಿಶಿಷ್ಟ ಸಂಗ್ರಾಮದ ಗಾಂಧೀಯುಗ ಮತ್ತೆ ಕಲ್ಪನೆಯಲ್ಲಿ ಮೂಡಿ ರೋಮಾಂಚನವಾಗುತ್ತದೆ. ಆ ಕವನದ ಸಾಲುಗಳು ಕೆಲವು ಹೀಗಿದ್ದವು :–

ಕಾಡಮೌನವ ಸೀಳಿ ಹಬ್ಬುತಿದೆ ಕೇಳುತಿದೆ
ಬಿತ್ತರದ ದಿಕ್ತಟಗಳಡ್ಡಿ ದಾಟುತಿದೆ!
ಉಳಿದೆಲ್ಲ ನುಡಿಗಳನು ಮುಳುಗಿಸುತ ಮೊಳಗುತಿದೆ
ಬಾಳ ಹೆದ್ದಾರಿಯನು ಹಿಡಿದೆತ್ತಿ ತೋರುತಿದೆ
ಅಭೀಃ! ಅಭೀಃ! ಅಭೀಃ! ಎಂಬಮೃತವಾಣಿಯದು

ಮೂವತ್ತು ಶತಮಾನಗಳ ಮೆಟ್ಟಿ ಕೇಳುತಿದೆ
ಕಾಲದಾ ಕರೆಯಂಬಿನಾಚೆಯಿಂದ.

ಮಣಿಯದಿಹ ಮನವೊಂದು, ಸಾಧಿಸುವ ಹಟವೊಂದು
ನಿಜದ ನೇರಕೆ ನಡೆವ ನಿಶ್ಚಲತೆಯೊಂದು
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು.

ಗಾಂಧೀಜಿಯ ತಾರಕಮಂತ್ರಗಳಾಗಿದ್ದ ಸತ್ಯನಿಷ್ಠೆ, ನಿರ್ಭಯತೆ, ಬಲಿದಾನಗಳ ಸತ್ಯಾಗ್ರಹ ಸಂದೇಶ ನಮ್ಮದೆಗಳಲ್ಲಿ ತುಂಬಿ ತುಳುಕುತ್ತಿತ್ತು.

ಮಾನವೀಯತೆಯೇ ಮೈವೆತ್ತಂತಿದ್ದ ವಿ.ಸೀ. ಅವರ ಸುಕೋಮಲ ಕಾವ್ಯಧಾರೆ ಮತ್ತೊಂದು ವಾಹಿನಿಯಾಗಿ ನಮ್ಮ ಹೃದಯಗಳನ್ನು ಸೂರೆಗೊಂಡಿತ್ತು. ಅವರ 'ಮನೆ ತುಂಬಿಸುವ ಹಾಡು' ನಮ್ಮ ಜೀವನದುದ್ದಕ್ಕೂ ಸುಸಂಸ್ಕೃತ ಮಧ್ಯಮ ವರ್ಗದವರ ಮದುವೆಗಳಲ್ಲಿ ಅತ್ಯಂತ ನವುರಾದ ಭಾವನಾತ್ಮಕ ಬಾಂಧವ್ಯ ತಂತುಗಳನ್ನು ಹೆಣೆದು ನಿಲ್ಲಿಸುತ್ತಲೇ ಬರುತ್ತಿದೆ. ವಧುವಿನ ತಾಯಿ ತಂದೆಯರು ತಮ್ಮ ಪ್ರೀತಿಯ ಮಗಳನ್ನು ಗಂಡನ ಮನೆಯವರಿಗೆ ಒಪ್ಪಿಸಿ ಕೊಡುವಾಗ ಈ ಹಾಡು ಇಡೀ ವಾತಾವರಣವನ್ನೇ ಪಾವನಗೊಳಿಸಿ ಒಂದು ಪವಿತ್ರ ಸಂಕೇತವಾಗಿ ಹೃದಯ ಮನಸ್ಸುಗಳನ್ನು ತುಂಬಿ ನಿಂತು ಬಿಡುತ್ತದೆ. ಆ ಘಳಿಗೆಯಲ್ಲಿ ತೇವವಾಗುವ ಕಣ್ಣುಗಳನ್ನು ಒರಸಿಕೊಳ್ಳದ ಬಂಧುಗಳೇ ಇರುವುದಿಲ್ಲ. ಮದುವೆಯ ಶಾಸ್ತ್ರ ವಿಧಿಗಳ ಅಂಗವಾಗಿಯೇ ಜೀವಂತವಾಗಿ ಉಳಿದಿರುವ ವಿ.ಸೀ. ಅವರ ಮಾತೃಹೃದಯದ ಛಾಯೆ ಇದು. ಅದರ ಸಾಲುಗಳನ್ನು ನೆನೆಯುವುದು ಒಂದು ದಿವ್ಯಾನುಭವ.

ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು
ನಿಮ್ಮ ಮಡಿಲೊಳಗಿಡಲು ತಂದಿರುವೆವು,
ಕೊಳ್ಳಿರೀ ಮಗುವನ್ನು ಎಮ್ಮ ಮನೆ ಬೆಳಕನ್ನು
ನಿಮ್ಮ ಮನೆಯನು ತುಂಬಲೊಪ್ಪಿಸುವೆವು.

ಈ ಕೋಮಲ ಭಾವ, ಈ ವಾತ್ಸಲ್ಯಧಾರೆ, ಈ ಬಾಂಧವ್ಯ ಸಂಸಾರಜೀವನದ ಅಮೃತ ಕುಂಭ. ವಿ.ಸೀ. ಅವರ ಕವಿ ಹೃದಯ ಈ ಬಾಳ ಸೊಬಗನ್ನು ಕಂಡುಕೊಂಡ ರೀತಿ ಅತ್ಯಂತ ಸುಂದರವಾದುದು.

ಮಲ್ಲಿಗೆ ಬಿಳುಪಿನ ತೆಳುವಾದ, ಆಗ ಪ್ರಸಿದ್ಧವಾಗಿದ್ದ ೧೭೦೩ ಮಲ್ಲಿನ ಒಪ್ಪವಾಗಿ ಕಲಾತ್ಮಕವಾಗಿ ತೀಡಿ ಉಟ್ಟ ಮೈಸೂರು ರೀತಿಯ ಕಚ್ಚೆ ಪಂಚೆ, ತೆಳು ಬಾದಾಮಿ ಬಣ್ಣದ ಉದ್ದವೂ ಅಲ್ಲದ ಗಿಡ್ಡೂ ಅಲ್ಲದ ಅಚ್ಚುಕಟ್ಟಾಗಿ ಹೊಲೆದ ಎದೆಮುಚ್ಚಿದ ಕೋಟು, ಪಂಚೆಯ ಬಿಳುಪಿನೊಡನೆ ಸ್ಪರ್ಧಿಸುತ್ತಿದ್ದಂತಿದ್ದ ಬಿಗಿಯಾದ ಸಮವಾದ ಪಟ್ಟೆಗಳ ಜೋಡಣೆಯ ಅಂಚಿಲ್ಲದ ಅಂದವಾದ ಮೈಸೂರು ಪೇಟ, ತೆಳುವಾದ ಬಳುಕು ದೇಹಕ್ಕೆ ಒಪ್ಪುವ ಉಡಿಗೆಯಲ್ಲಿ ವಿ.ಸೀ.ಅವರ ರೂಪ ಕಣ್ಣಿಗೆ ಕಟ್ಟಿ ನಿಂತಿದೆ. ಮೃದು ಮಂದಹಾಸ,

ವಿನಯಶೀಲತೆ, ಸಂಕೋಚ ಪ್ರವೃತ್ತಿ, ನುಡಿನಡೆಗಳ ಸಾಮರಸ್ಯ— ಇವು ನಮ್ಮ ಹೃದಯಗಳನ್ನು ತುಂಬಿತ್ತು. ಆಚಾರ್ಯ ವಿ.ಸೀ. ಒಂದು ಅಮರಸ್ಮೃತಿ. ಅವರ ಗುರು ರಾಧಾಕೃಷ್ಣನ್ ಅವರ ಉಡುಗೆ, ಗಾಂಭೀರ್ಯ, ವಾಗ್ವೈಭವ, ಆಳವಾದ ಜ್ಞಾನ ಭಂಡಾರ, ಕೋಮಲ ಹೃದಯ, ವಿದ್ಯಾರ್ಥಿಗಳಲ್ಲಿ ಪ್ರೀತಿ, ಪ್ರತಿಭೆ, ಎಲ್ಲದರಲ್ಲೂ ಪಡಿಯಚ್ಚಿನಂತಿದ್ದ ವ್ಯಕ್ತಿಶ್ರೇಷ್ಠರು ನಮ್ಮ ಮರೆಯಲಾಗದ ಮೇಷ್ಟ್ರು ವಿ.ಸೀ.

ಜನ್ಮ ಶತಾಬ್ದಿಯ ಸುಸಂದರ್ಭದಲ್ಲಿ ಅವರ ಸ್ಮರಣೆ ಒಂದು ಪುಣ್ಯ ವಿಶೇಷ.

"ಅಂದು ನಮ್ಮೊಡನಿದ್ದ ಉದಾರ ಚರಿತರಿಲ್ಲೀಗ?
ಎಡವಿ ಬೀಳಲು ಕೈ ಹಿಡಿದೆತ್ತಿ ಕಣ್ಣೊರಸುವರಾರು;
ಮನೆಯಲ್ಲಿ, ಶಾಲೆಯಲಿ, ಊರಿನಲಿ, ನಾಡಿನಲಿ
ಅರಸರಸಿ ಹಣ್ಣಾಗಿಹೆವು ಸಂವೇದನಾ ಶೀಲರನು॥ ದಾರಿಹೋಕ॥

ಹೊಳೆದದ್ದು ತಾರೆ, ಉಳಿದದ್ದು ಆಕಾಶ

"ವಿ.ಸೀ. ಅವರ ಓದಿನ ವಿಸ್ತೀರ್ಣ ಅಸೀಮ. ಅವರು ಬರೆದದ್ದಕ್ಕಿಂತ ಮಾತಿನಲ್ಲಿ ಮಿಂಚಿ ಹೋದದ್ದು, ಬರೆಯದೆ ಉಳಿದದ್ದು ಅತ್ಯಧಿಕ. ಹಾಗೆಂದು ಭಾಷೆಯಲ್ಲಿ ಸಂಭವಿಸಿದ್ದು ಸ್ವಲ್ಪವೆಂದು ಇದರ ತಾತ್ಪರ್ಯವಲ್ಲ. ನಮಗೆ ಕಾಣುವ ಬಾನಿನ ನಕ್ಷತ್ರರಾಶಿ ಕಡಿಮೆಯೇನಲ್ಲ; ಆದರೆ ಅಂತರಿಕ್ಷದ ಮಹದ್ವಿಸ್ತಾರದಲ್ಲಿ ಅಗೋಚರವಾಗಿ ಅಡಗಿರುವ ಆಕಾಶಕಾಯಗಳು ಇನ್ನೆಷ್ಟೋ! 'ಹೊಳೆದದ್ದು ತಾರೆ, ಉಳಿದದ್ದು ಆಕಾಶ'; ವಿ.ಸೀ. ಅವರ ಮಟ್ಟಿಗಂತೂ ಈ ಕವಿಸೂಕ್ತಿ ನೂರಕ್ಕೆ ನೂರುಪಾಲು ಸತ್ಯ."

ಕೆ. ಎಸ್. ನಿಸಾರ್ ಅಹಮದ್
'ಪ್ರಜಾಮತ' (೨೭-೧-೯೧)

ವಿದ್ಯಾರ್ಥಿಯಾಗಿದ್ದದ್ದು ಭಾಗ್ಯ

ಡಿ. ಎಂ. ಚಂದ್ರಶೇಖರ್

ಸುಮಾರು ೬೦ ವರ್ಷಗಳ ಹಿಂದೆ ನಾನು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಪ್ರೊ. ವಿ. ಸೀತಾರಾಮಯ್ಯನವರು ಆ ಕಾಲೇಜಿನಲ್ಲಿ ಕನ್ನಡ ವಿಭಾಗದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದರು. ನಾನು ಅವರ ವಿದ್ಯಾರ್ಥಿಯಾಗಿದ್ದದ್ದು ನನ್ನ ಭಾಗ್ಯವೆಂದೇ ನಾನು ಭಾವಿಸಿದ್ದೇನೆ.

ಪ್ರೊ. ವಿ. ಸೀತಾರಾಮಯ್ಯನವರು "ವಿ.ಸೀ." ಎಂದೇ ಸಾಮಾನ್ಯವಾಗಿ ಕರೆಯಲ್ಪಟ್ಟಿದ್ದರು. ಇಷ್ಟು ವರ್ಷಗಳು ಕಳೆದರೂ ಅವರ ನೆನಪು ನನ್ನಲ್ಲಿ ಅಚ್ಚಳಿಯದೆ ನಿಂತಿದೆ. ಅವರ ವ್ಯಕ್ತಿತ್ವ ಬಹಳ ಆಕರ್ಷಕವಾದದ್ದು. ಸುಮಾರು ಐದು ಅಡಿ ಆರು ಅಂಗುಲ ಎತ್ತರದ ತೆಳುವಾದ ದೇಹ, ಶುಭ್ರವಾದ ಮಲ್ ಪಂಚೆ, ರೇಷ್ಮೆಯ ಮುಚ್ಚುಕಾಲರಿನ ಕೋಟು, ಜರತಾರಿ ಅಂಚು ಇಲ್ಲದ ಬಿಳಿಯ ಪೇಟ; ಇವು ಅವರ ವಸ್ತ್ರ ವಿನ್ಯಾಸ. ಎಲ್ಲದರಲ್ಲೂ ಅವರದು ಅಚ್ಚುಕಟ್ಟು. ಅವರು ಸ್ನೇಹಪರರು, ವಿನಯಶೀಲರು ಮತ್ತು ಯಾರ ಮನಸ್ಸನ್ನೂ ನೋಯಿಸದ ವ್ಯಕ್ತಿ. ಆದರೆ ಅವರ ಅಭಿಪ್ರಾಯಗಳು ಸ್ಪಷ್ಟವಾಗಿದ್ದವು. ಅವುಗಳನ್ನು ಸ್ಪಷ್ಟವಾಗಿ ಹೇಳಲು ಅವರು ಹಿಂಜರಿಯುತ್ತಿರಲಿಲ್ಲ.

ವಿ.ಸೀ. ಯವರದು ಬಹು ಮುಖ ಪ್ರತಿಭೆ. ಅವರು ಅರ್ಥಶಾಸ್ತ್ರದಲ್ಲಿ ಎಂ.ಎ. ಪದವೀಧರರು. ಅಲ್ಪಕಾಲ ಮುಂಬೈನಲ್ಲಿ ಭಾರತ ಸರ್ಕಾರದ ಕಚೇರಿಯೊಂದರಲ್ಲಿ ಕೆಲಸ ಮಾಡಿದ್ದರೆಂದು ಕೇಳಿದ್ದೆ. ಕನ್ನಡದಲ್ಲಿ ಅರ್ಥಶಾಸ್ತ್ರದ ಮೇಲೆ ಒಂದು ಅತ್ಯುತ್ತಮ ಪುಸ್ತಕವನ್ನು ಅವರು ಬರೆದಿದ್ದಾರೆ.

ನಂತರ ಅವರು ಕನ್ನಡದ ಅಧ್ಯಾಪಕರಾಗಿ ತಮ್ಮ ಸಹಸ್ರಾರು ವಿದ್ಯಾರ್ಥಿಗಳಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ಅಭಿರುಚಿ ಮೂಡಿಸಿದರು. ಅವರು ದೊಡ್ಡ ಕನ್ನಡ ಸಾಹಿತಿಗಳು ಮತ್ತು ಕವಿಗಳು. ಕನ್ನಡ ಸಾಹಿತ್ಯ ಸಮ್ಮೇಳನದ ಒಂದು ಅಧಿವೇಶನದಲ್ಲಿ ಅವರು ಅಧ್ಯಕ್ಷರಾಗಿದ್ದರು. ಅವರ ಮೊದಲನೆಯ ಕಾವ್ಯ ಸಂಕಲನ "ಗೀತಗಳು." ಈ ಪುಸ್ತಕವನ್ನು ಅವರು ಆಗಿನ ಕಾಲಕ್ಕೆ ಪ್ರಸಿದ್ಧವಾದ "ಬೆಂಗಳೂರು ಪ್ರೆಸ್" ಮುದ್ರಣಾಲಯದಲ್ಲಿ ಬಹಳ ಅಂದವಾಗಿ ಒಳ್ಳೆಯ ಕಾಗದದ ಮೇಲೆ ಮುದ್ರಣ ಮಾಡಿಸಿದ್ದರು. ಅವರ ಮೆಚ್ಚಿನ ಕಲಾವಿದರಾದ ಶ್ರೀ ವೆಂಕಟಪ್ಪನವರ ನಾಲ್ಕಾರು ಕಲಾಕೃತಿಗಳ ಭಾವಚಿತ್ರಗಳೂ ಆ ಪುಸ್ತಕದಲ್ಲಿ ಇದ್ದವು.

ಆಗಿನ ಕಾಲದಲ್ಲಿ ಕನ್ನಡದಲ್ಲಿ ಪ್ರಕಟವಾದ ಪುಸ್ತಕಗಳನ್ನು ಕೊಳ್ಳುವವರ ಸಂಖ್ಯೆ ಅತ್ಯಲ್ಪ. ಈ ಪುಸ್ತಕದ ಪ್ರಕಟಣೆಯಿಂದ ಅವರಿಗೆ ಆರ್ಥಿಕವಾಗಿ ನಷ್ಟವೇ ಆಗಿರಬೇಕು. ಆದರೆ ಏನು ಮಾಡಿದರೂ ಸೊಗಸಾಗಿರಬೇಕು, ಅಂದವಾಗಿರಬೇಕು ಎಂದು ಅವರ ಸದಭಿರುಚಿ.

ವಿ.ಸೀ. ಯವರು ಕಲೋಪಾಸಕರು, ಸೌಂದರ್ಯೋಪಾಸಕರು. ಸಾಹಿತ್ಯವೇ ಅಲ್ಲದೆ ಚಿತ್ರಕಲೆ, ಸಂಗೀತ, ನಾಟಕ, ನೃತ್ಯ, ಶಿಲ್ಪ, ಚಲನಚಿತ್ರ ಮೊದಲಾದ ಎಲ್ಲಾ ಕಲಾಮಾಧ್ಯಮಗಳೂ ಅವರಿಗೆ ಪ್ರಿಯವಾಗಿದ್ದವು. ಆಗಿನ ದಿನಗಳು ಇಂಗ್ಲಿಷ್ ಭಾಷೆಯ ಚಲನಚಿತ್ರಗಳ ಸುವರ್ಣಯುಗ. ಬೆಂಗಳೂರಿಗೆ ಬಂದ ಒಳ್ಳೆಯ ಇಂಗ್ಲಿಷ್ ಚಲನ ಚಿತ್ರಗಳನ್ನು ಅವರು ಸಾಮಾನ್ಯವಾಗಿ ನೋಡುತ್ತಿದ್ದರು. ಆಗ ಸೌತ್‌ಪೆರೇಡ್ ಎಂದು, ಈಗ ಮಹಾತ್ಮಗಾಂಧಿ ರಸ್ತೆ ಎಂದು ಕರೆಯಲ್ಪಡುವ ರಸ್ತೆಯಲ್ಲಿರುವ ಓರಿಯಂಟಲ್ ವಿಮಾ ಸಂಸ್ಥೆಯ ಕಟ್ಟಡದ ಸೌಂದರ್ಯವನ್ನು ಅವರು ಒಂದು ಸಾರಿ ತಮ್ಮ ಪಾಠಪ್ರವಚನದಲ್ಲಿ ವಿವರಿಸಿದ್ದರು.

ವಿ.ಸೀ. ಯವರ ಪಾಠಕ್ರಮ ವೈಶಿಷ್ಟ್ಯಪೂರ್ಣವಾದದ್ದು. ಹೇಳುವ ವಿಚಾರಗಳನ್ನು ಸ್ಪಷ್ಟವಾಗಿ ಒತ್ತಿಹೇಳುತ್ತಿದ್ದರು. ಕನ್ನಡದಲ್ಲಿ ಪಾಠ ಮಾಡುವಾಗ ಇಂಗ್ಲಿಷ್ ಪದಗಳನ್ನೂ ವಾಕ್ಯಗಳನ್ನು ಧಾರಾಳವಾಗಿ ಬಳಸುತ್ತಿದ್ದರು. ಹೇಳುವುದನ್ನು ಪರಿಣಾಮಕಾರಿಯಾಗಿ ಹೇಳಬೇಕೆಂಬುದು ಅವರ ಉದ್ದೇಶ. ಅವರು ಪಾಠ ಮಾಡುವಾಗ ಒಂದು ಗಂಟೆ ಅವಧಿ ಹೇಗೆ ಕಳೆಯುತ್ತಿತ್ತೋ ಎಂಬುದು ವೇಳೆ ಗಂಟೆ ಬಾರಿಸಿದಾಗ ಮಾತ್ರ ಗೊತ್ತಾಗುತ್ತಿತ್ತು. ವಿದ್ಯಾರ್ಥಿಗಳ ಗಮನ ಅವರ ಮಾತುಗಳ ಮೇಲೆ ಪೂರ್ಣವಾಗಿ ಕೇಂದ್ರೀಕೃತವಾಗಿರುತ್ತಿತ್ತು.

ಒಂದು ಸಾರಿ ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದ ಆಶ್ರಯದಲ್ಲಿ "ಪ್ರಜಾ ಪ್ರಭುತ್ವ" ಎಂಬ ವಿಚಾರದಲ್ಲಿ ಅವರು ಎರಡು ಗಂಟೆಗಳಷ್ಟು ದೀರ್ಘವಾಗಿ ಭಾಷಣ ಮಾಡಿದರು. ಅವರು ಇನ್ನೂ ಒಂದು ಗಂಟೆ ತಮ್ಮ ಭಾಷಣವನ್ನು ಮುಂದುವರಿಸಿದ್ದರೂ ಸಭಿಕರು ಯಾರೂ ಎದ್ದುಹೋಗುತ್ತಿರಲಿಲ್ಲ. ಅವರ ವಾಗ್ಮಿತೆ ಅಷ್ಟು ಮೋಹಕವಾಗಿತ್ತು.

ಶಿಕ್ಷಕರ ವೃತ್ತಿಯ ಮೇಲೆ ವಿ.ಸೀ. ಯವರಿಗೆ ಅಪಾರ ಅಭಿಮಾನ. ಅವರು ಸರ್ಕಾರದ ಸೇವೆಯಿಂದ ನಿವೃತ್ತರಾದ ಮೇಲೆಯೂ ಕೆಲವು ವರ್ಷಗಳು ಖಾಸಗೀ ಕಾಲೇಜೊಂದರ ಪ್ರಾಂಶುಪಾಲರಾಗಿದ್ದರು.

ಅವರು ಇಂಗ್ಲಿಷ್ ಸಾಹಿತ್ಯವನ್ನು ಬಹಳ ವಿಸ್ತಾರವಾಗಿ ಓದಿದ್ದರು. ಅವರು ತಮ್ಮ ಇಳಿವಯಸ್ಸಿನಲ್ಲಿ ಇಂಗ್ಲೆಂಡ್ ದೇಶಕ್ಕೆ ಆಹ್ವಾನಿತರಾಗಿ ಪ್ರವಾಸ ಹೋದಾಗ ಇಂಗ್ಲಿಷ್ ಸಾಹಿತ್ಯದಲ್ಲಿ ತಾವು ಓದಿದ್ದ ಊರುಗಳು, ಬೀದಿಗಳು, ಸ್ಥಳಗಳನ್ನು ಮತ್ತು ಕಟ್ಟಡಗಳನ್ನು ನೋಡಲು ಬಹಳ ಆಸಕ್ತಿಯನ್ನು ತೋರಿಸಿದರು ಎಂದು ನಾನು ಕೇಳಿದ್ದೆ. ಆದರೆ ಅವರ ಆ ಆಶಯ ಕೈಗೂಡದೆ ಹೋಯಿತೆಂದೂ ಕೇಳಿದ್ದೆ.

ವಿ.ಸೀ. ಯವರ ವಿದ್ಯಾರ್ಥಿಗಳು ಅವರನ್ನು ಎಂದೂ ಮರೆಯಲಾರರು.

ನಿಚ್ಚಳ ನೆನಪುಗಳು

ಸಿ. ವಿ. ಗೋವಿಂದರಾವ್

ವಿ.ಸೀ. ಯವರು ನನ್ನ ಪೂಜ್ಯ ಗುರುಗಳು; ನನ್ನ ಜೀವನಕ್ಕೆ ಎರಡು ಸಲ ಹೊಸ ತಿರುವುಗಳನ್ನು ಕೊಟ್ಟವರು; ನನಗೆ ಪ್ರಾತಃಸ್ಮರಣೀಯರು.

ನನಗೆ ಅವರ ಪ್ರಥಮ ದರ್ಶನವಾದದ್ದು ೧೯೩೮ರಲ್ಲಿ; ಬೆಂಗಳೂರಲ್ಲಿ ನಡೆದ ಪರಿಷತ್ತಿನ ವಸಂತ ಸಾಹಿತ್ಯೋತ್ಸವ ಸಂದರ್ಭದಲ್ಲಿ. ಆಗ ನಾನು ದೇಶೀಯ ವಿದ್ಯಾಶಾಲೆಯಲ್ಲಿ ಆರನೆಯ ಫಾರಂನಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಆ ಕಾಲದಲ್ಲಿ ದೊಡ್ಡ ದೊಡ್ಡ ಉತ್ಸವ ಸಮಾರಂಭಗಳಲ್ಲಿ ನಮ್ಮ ಶಾಲೆಯ ಸ್ವಯಂ ಸೇವಕರನ್ನು ವಿವಿಧ ಕಾರ್ಯಗಳಿಗೆ ಅಪೇಕ್ಷಿಸುತ್ತಿದ್ದುದು, ನಿಯೋಜಿಸುತ್ತಿದ್ದುದು ಒಂದು ವೈಶಿಷ್ಟ್ಯ. ಸುಮಾರು ೧೫–೨೦ ವಿದ್ಯಾರ್ಥಿಗಳ ನಿಯೋಜನೆಯನ್ನು ನಮ್ಮ ಮುಖ್ಯೋಪಾಧ್ಯಾಯರಾದ ಶ್ರೀಮಾನ್ ಸಂಪದ್ಗಿರಿರಾಯರು ಮಾಡಿದ್ದರು. ಇವರಲ್ಲಿ ನಾನೂ ಒಬ್ಬ.

ಒಂದು ದಿನ ಹಗಲು ಹನ್ನೊಂದು ಗಂಟೆಯ ಸಮಯ. ಪರಿಷತ್ತಿನ ಮುಖ್ಯದ್ವಾರದ ಬಳಿ ನಾನು ಸಂಪದ್ಗಿರಿರಾಯರೊಡನೆ ಮಾತನಾಡುತ್ತಿದ್ದೆ. ಆಗ ಯಾರೋ ಗರಿಗರಿ ಅಚ್ಚಬಿಳಿ ಕಚ್ಚೆಪಂಚೆ, ಇಸ್ತ್ರಿಯಾಗಿದ್ದ ರೇಶ್ಮೆಯ ಅಂಗಿ, ಶುಭ್ರವಾಗಿ ಕಿರೀಟಪ್ರಾಯವಾಗಿದ್ದ ರುಮಾಲು ಧರಿಸಿದ್ದ ತೆಳು ದೇಹದ ವ್ಯಕ್ತಿಯೊಬ್ಬರು ರಾಯರನ್ನು ಮಾತನಾಡಿಸಿದರು. ಆಮೇಲೆ ನನ್ನ ಕಡೆ ದೃಷ್ಟಿಹಾಯಿಸಿ "ಏನಪ್ಪಾ ಈ ನಕ್ಷತ್ರಿಕನನ್ನು ಎಲ್ಲಿಂದ ತಂದಿರಿ?" ಎಂದು ನಕ್ಕು ತಮ್ಮ ಮಾತನ್ನು ಒಂದೆರಡು ನಿಮಿಷ ಮುಂದುವರಿಸಿ, ಹೊರಟು ಹೋದರು. ರಾಯರು ನನ್ನನ್ನು ನೋಡಿ "ಅವರು ಯಾರು ಗೊತ್ತೇನೊ? ವಿ. ಸೀತಾರಾಮಯ್ಯನವರು, ಪರಿಷತ್ತಿನ ಕೋಶಾಧಿಕಾರಿಗಳು" ಎಂದು ತಿಳಿವಳಿಕೆ ಕೊಟ್ಟರು. ನನ್ನ ಆಗಿನ ರೂಪ, ವೇಷ, ಉಡುಪು ವಿ.ಸೀ. ಯವರಿಗೆ ನನ್ನ ಹೊಸನಾಮಕರಣ ಮಾಡುವುದಕ್ಕೆ ಸ್ಫೂರ್ತಿಕೊಟ್ಟಿರಬಹುದು. (ಮುಂದೆ ೧೯೭೨–೭೩ ರಲ್ಲಿ ಅವರು ಮೈಸೂರಿಗೆ ಬಂದಿದ್ದಾಗ ಇದನ್ನು ಅವರಿಗೆ ನೆನಪಿಸಿದಾಗ ಮೋಹಕವಾಗಿ ನಕ್ಕು "ಏನೋಪ್ಪ ಏನೆಂದೆನೊ, ಬೇಸರಪಟ್ಟುಕೊಳ್ಳಬೇಡಿ" ಎಂದದ್ದುಂಟು.)

* * *

೧೯೩೯–೪೧ರ ಕಾಲ: ವಿ.ಸೀ. ಇಂಟರ್ ಮೀಡಿಯೆಟ್ ಕಾಲೇಜಲ್ಲಿ ಕನ್ನಡ

ವಿಭಾಗದ ಮುಖ್ಯಸ್ಥರು. ಮೃಚ್ಛಕಟಿಕ ನಾಟಕವನ್ನು ನಾನಿದ್ದ 'ಬ' ಸೆಕ್ಷನ್ನಿಗೆ ಬೋಧಿಸಿದರು. ಈ ಎರಡು ವರ್ಷಗಳ ಅವಧಿಯಲ್ಲಿ ನಾನು ಚಾಮರಾಜಪೇಟೆಯ ಐದನೆಯ ರಸ್ತೆಯ ಕೊನೆಯಲ್ಲಿ ಗುಡ್ಡದ ಪಕ್ಕದಲ್ಲಿ ಒಬ್ಬ ಮಹನೀಯರ ಮನೆಯಲ್ಲಿದ್ದು ವಿದ್ಯಾರ್ಜನೆ ಮಾಡುತ್ತಿದ್ದೆ. ಕಾಲೇಜಿಗೆ ಹೋಗುವ ಮಾರ್ಗದಲ್ಲಿ ವಿ.ಸೀ. ಯವರ ಮನೆಯನ್ನು ಹಾದು, ಮಾರ್ಕೆಟ್, ಅವೆನ್ಯೂ ರಸ್ತೆ ಮೂಲಕ ಮೈಸೂರು ಬ್ಯಾಂಕ್ ವೃತ್ತವನ್ನು ದಾಟಬೇಕು. ಸುಮಾರು ೩೫-೪೦ ನಿಮಿಷಗಳ ನಡಿಗೆ. ಕೆಲವು ದಿವಸ ಮನೆ ಬಿಡುವುದು ತಡವಾಗಿ ಸ್ವಲ್ಪ ದೂರ ಓಡಬೇಕಾಗಿಬರುತ್ತಿತ್ತು. ಇಂಥ ಕೆಲವು ವೇಳೆ ವಿ.ಸೀ. ಯವರು ತಾವು ಕಾಲೇಜಿಗೆ ಬರುತ್ತಿದ್ದ ಜಟಕಾ ಗಾಡಿಯಲ್ಲಿ ನನ್ನನ್ನೂ ಕೂರಿಸಿಕೊಂಡು ಮೊದಲನೆಯ ಪೀರಿಯಡ್ಡನ್ನು ಕಳೆದುಕೊಳ್ಳದಂತೆ ಮಾಡುತ್ತಿದ್ದರು.

ಅಂಥದೇ ಒಂದು ದಿನ "ಏನಪ್ಪಾ ನೀನು ಎಲ್ಲಿ ವಾಸ? ಇಷ್ಟೇಕೆ ಆತುರ, ಆತುರವಾಗಿ ಕಾಲೇಜಿಗೆ ಬರುತ್ತೀ?" ಎಂದು ಕೇಳಿಬಿಟ್ಟರು. ನಾನು ಮೌನವಾಗಿದ್ದುದನ್ನು ಕಂಡು "ಹೇಳು ಸಂಕೋಚಪಡಬೇಕಿಲ್ಲ" ಎಂದರು. "....ಮಹನೀಯರ ಮನೆಯಲ್ಲಿದ್ದೇನೆ" ಎಂದೆ. "ಏನಪ್ಪಾ ಆ ಮನೆಯಲ್ಲಿ ಹೇಗಿದ್ದೀ? ಅದು ಹುತ್ತ, ಹುತ್ತ" ಎಂದು ನಿಟ್ಟುಸಿರು ಬಿಟ್ಟರು. ಅವರಿಗೆ ಆ ಮಹನೀಯರ ಗೃಹದ ಆಗುಹೋಗುಗಳೆಲ್ಲ ಸಂಪೂರ್ಣವಾಗಿ ತಿಳಿದಿದ್ದುದು ಆಗ ನನ್ನ ಅರಿವಿನಲ್ಲಿರಲಿಲ್ಲ. ದೇಶೀಯ ವಿದ್ಯಾಶಾಲೆಯ ನಂತರ ಹೇಗಾದರೂ ವಿದ್ಯಾರ್ಜನೆಯನ್ನು ಮಾಡಲೇಬೇಕೆಂಬ ಆಸೆ, ಹಂಬಲ, ಹಟ ನನ್ನನ್ನು ಯಾವ ಪರಿಸ್ಥಿತಿಗೂ ಹೊಂದಿಕೊಳ್ಳುವಂತೆ ಮಾಡಿತ್ತು.

ಇಲ್ಲಿ ನಾನು, ನನ್ನ ಸಹಪಾಠಿಗಳು ಮಾತ್ರ ಕಂಡ ಒಂದು (ಅಸಹನೀಯ) ಸಂದರ್ಭವನ್ನು ಪ್ರಸ್ತುತಪಡಿಸುವುದು ಉಚಿತವಲ್ಲವಾದರೂ ನನ್ನ ಮಟ್ಟಿಗೆ ಉಚಿತವೇ. ಇಂಟರಿನ ಎರಡನೇ ವರ್ಷದ ಮಧ್ಯಭಾಗ. ಎರಡನೆಯ ಪೀರಿಯಡ್ ಎಂದು ನೆನಪು. ಎಂದಿನಂತೆ ಕಿಕ್ಕಿರಿದ ತರಗತಿಯಲ್ಲಿ ವಿ.ಸೀ. ಅವರದೇ ಆದ ಆವೇಶಪೂರ್ಣ ಪಾಠದ ಮೋಡಿ ನಮ್ಮೆಲ್ಲರನ್ನೂ ಮುಗ್ಧರನ್ನಾಗಿ ಮಾಡಿತ್ತು. ಇದೇನೂ ಹೊಸದಲ್ಲ. ಅವರ ಪ್ರತಿ ಪೀರಿಯಡ್ಡಿನಲ್ಲೂ ಆಗುತ್ತಿದ್ದ ಅನುಭವ ಭಾವಪರವಶತೆಯೇ. ಈ ರಸದೂಟದ ಮಧ್ಯದಲ್ಲಿ ವಿ.ಸೀ. ಥಟ್ಟನೆ ಮಾತು ನಿಲ್ಲಿಸಿಬಿಟ್ಟರು. ಎಲ್ಲರಿಗೂ ಆಶ್ಚರ್ಯ, ಆತಂಕ. ಕೈಯಲ್ಲಿದ್ದ ಸೀಮೆಸುಣ್ಣವನ್ನು ತಲೆತಗ್ಗಿಸಿ ಮೇಜಿನ ಮೇಲೆ ಕುಟ್ಟುತ್ತಿದ್ದರು. ಆಗ ವೈಸ್ ಛಾನ್ಸೆಲರ್ ಆಗಿದ್ದ ಎನ್. ಎಸ್. ಸುಬ್ಬರಾಯರು ಬಾಗಿಲ ಬಳಿ ನಿಂತಿದ್ದರು. ಒಳಗೆ ಬರಲಿಲ್ಲ; ಬರಲು ವಿ.ಸೀ. ಯವರು ಆಹ್ವಾನಿಸಲಿಲ್ಲ. ತಲೆ ಎತ್ತಲೂ ಇಲ್ಲ. ಸುಬ್ಬರಾಯರು ಎರಡು ನಿಮಿಷ ನಿಂತರು. ಎಲ್ಲರಿಗೂ ಯಾವುದೋ ಅನಿರ್ವಚನೀಯ ತಳಮಳ. ಬಳಿಕ ಸುಬ್ಬರಾಯರು ಮುಂದೆ ಹೊರಟು ಹೋದರು. ಅವರ ಹಿಂದೆ ಆಗ ರೆಜಿಸ್ಟ್ರಾರರಾಗಿದ್ದ ಪಿಚ್ಚಮುತ್ತು, ಕಾಲೇಜಿನ ಸೂಪರಿಂಟೆಂಡೆಂಟರಾಗಿದ್ದ ಶೇಷ ಅಯ್ಯಂಗಾರ್ ಇಬ್ಬರೂ ಮುಂದೆ ಸರಿದ ಮೇಲೆ, ವಿ.ಸೀ. ಯವರು ಒಂದು ದೀರ್ಘ ನಿಟ್ಟುಸಿರು ಬಿಟ್ಟು "ಪಾಠ ಮುಂದುವರಿಸು ಎಂದು ಹೇಳಬೇಕಾಗಿತ್ತು, ಹೇಳುತ್ತಿದ್ದೆ" ಎಂದು ತಮ್ಮ ಬೋಧನೆಯನ್ನು ಮುಂದರಿಸಿದರು. ನಡೆದ ಸಂದರ್ಭದ ಮೂಲ ತರಗತಿಯ ಯಾರಿಗೂ

ತಿಳಿಯಲಿಲ್ಲ. ಮೈಸೂರಿನಲ್ಲಿ ಮುಂದೊಮ್ಮೆ ಇದನ್ನು ಅವರಿಗೆ ನೆನಪಿಸಿ 'ಅದರ ಕಾರಣ ತಿಳಿಯಬಹುದೇ?' ಎಂದೆ. ಸುಬ್ಬರಾಯರು ವಿ.ಸೀ. ಅವರ ಗುರುಗಳಾಗಿದ್ದು ಅವರ ಜೀವನದ, ಅಧ್ಯಾಪಕ ವೃತ್ತಿಯ ಒಂದು ಸ್ತರದಲ್ಲಿ ನಡೆದ ಕಹಿಸಂಗತಿಯನ್ನು ಸೂಕ್ಷ್ಮವಾಗಿ ತಿಳಿಸಿದರು. ಅದರ ಸೂಕ್ಷ್ಮ, ಇರಿತ, ಮೊನಚು ಅವರಲ್ಲಿ ಎಷ್ಟು ಆಳವಾಗಿ ಇಳಿದಿತ್ತೆಂಬುದು ಅರ್ಥವಾಯಿತು. ಇದು ಅನುಭವಿಸಿದವರಿಗೆ ಮಾತ್ರ ಅರ್ಥವಾಗುವಂಥದು.

* * *

ಎರಡು ವರ್ಷಗಳ ಇಂಟರ್ ವಿದ್ಯಾರ್ಜನೆ ಹೇಗೋ ಮುಗಿಯುತ್ತ ಬಂತು. ಉಚಿತ ವಿದ್ಯಾರ್ಥಿ ವೇತನವಿದ್ದುದರಿಂದ ತಿಂಗಳು ತಿಂಗಳೂ ಶುಲ್ಕ ಕೊಡಬೇಕಿರಲಿಲ್ಲ. ಆದರೆ ಮೂವತ್ತು ರೂಪಾಯಿನ ಪರೀಕ್ಷೆ ಬಂದೇ ಬಂದಿತು. ಬೇಕಾದ ಪರೀಕ್ಷಾ ಶುಲ್ಕವಿಲ್ಲ ನನ್ನಲ್ಲಿ. ಅಲ್ಲಿ ಇಲ್ಲಿ ಬೇಡಿ ಸುಮಾರು ೧೦–೧೨ ರೂಪಾಯಿಗಳನ್ನು ಗಳಿಸಿದ್ದೆ. ಮಧ್ಯಾಹ್ನ ಸುಮಾರು ಎರಡು ಗಂಟೆಯ ಸಮಯ. ಕಾಲೇಜಿನ ಮುಖ್ಯದ್ವಾರದ ಸುಮಾರು ನೂರು ಅಡಿ ದೂರದಲ್ಲಿ ಒಂದು ಸಣ್ಣ ಮರದಡಿ ಕಲ್ಲು ಬೆಂಚಿನ ಮೇಲೆ ಎಲ್ಲ ಆಸೆಯನ್ನೂ ಬಿಟ್ಟು ತರಗತಿಗೆ ಹೋಗದೆ ಕುಳಿತಿದ್ದೆ. ನನ್ನ ಮೇಲೆ ನನಗೇ ಪರಿವೆಯಿರಲಿಲ್ಲ. ಬಹುಶಃ ಅದೇ ಸಮಯದಲ್ಲಿ ವಿ.ಸೀ. ಯವರು ಸೆಂಟ್ರಲ್ ಕಾಲೇಜಿನ ಪೂರ್ವದ್ವಾರದಿಂದ ಬಂಧರೆಂದು ಕಾಣುತ್ತದೆ. ನನ್ನ ಬಳಿ ಬಂದುದೂ ನನಗರಿವಿಲ್ಲ. "ಏನು, ಆಕಾಶವೇ ತಲೆಯ ಮೇಲೆ ಕಳಚಿ ಬಿದ್ದಂತೆ ಕೂತಿದ್ದೀಯಲ್ಲ. ಏನು ನಿನ್ನ ತೊಂದರೆ?" ಎಂದು ಅವರದೇ ಆದ ರೀತಿಯಲ್ಲಿ ದಟ್ಟಿಸಿದರು. ನಾನು ಎದ್ದು ನಿಂತು ಮೌನವಾಗಿದ್ದೆ. "ಹೇಳು, ಏನು ವಿಷಯ?" ಎಂದರು. ನಾನು ನನ್ನ ಸ್ಥಿತಿಯನ್ನು ತಿಳಿಸಿದೆ. "ಇಷ್ಟೇ ತಾನೆ? ಹೋಗು ಕ್ಲಾಸಿಗೆ. ನಿನ್ನಲ್ಲಿರುವ ದುಡ್ಡನ್ನು ಇಲ್ಲಿ ಕೊಡು" ಎಂದು ಹೇಳಿ ಹೊರಟು ಹೋದರು. ಆ ದಿನದ ಕೊನೆಯ ಪೀರಿಯಡ್ಡಿನಲ್ಲಿ ಒಬ್ಬ ಜವಾನ ಬಂದು ಅಧ್ಯಾಪಕರಿಗೆ ಈ ರಸೀದಿಯನ್ನು ಈ ಹುಡುಗನಿಗೆ ಕೊಡಬೇಕಂತೆ ಎಂದು ಹೇಳಿ ಹೊರಟುಹೋದ. ಪರೀಕ್ಷಾ ಶುಲ್ಕ ಸಂದಾಯವಾಗಿದ್ದ ರಸೀತಿ ಅದು. ದಿಕ್ಕು ಕಾಣದ ಅಂಥ ನಿರಾಶೆಯಲ್ಲಿ ವಿ.ಸೀ. ನನ್ನ ಪಾಲಿನ ದೇವತೆಯಾಗಿ ಬಂದರು; ಅವಿಸ್ಮರಣೀಯರಾದರು.

ಮುಂದೆ ಈ ಸಂದರ್ಭವನ್ನು ಅವರ ನೆನಪಿಗೆ ತಂದೆ. "ಏನೋಪ್ಪ, ನೀನು ಏನೋ ಹೇಳುತ್ತಿದ್ದೀ. ನನಗೂ ಹೀಗೇ ಆಗಿದ್ದುಂಟು. ನಾನು ಮಾಡಿದ್ದರಲ್ಲಿ ಏನೂ ಹೆಚ್ಚಿಲ್ಲ" ಎಂದು ಬಿಟ್ಟರು. ಸುಹೃದಯರು ತಾವು ಮಾಡಿದ್ದನ್ನು ಎಷ್ಟು ಸುಲಭವಾಗಿ ಮರೆತು ಬಿಡುವರು! ಅದು ಅವರ ನಿರ್ವ್ಯಾಜ ಸಹಜ ಗುಣ! ಇಂಥ ಗುಣ ದೊಡ್ಡವರಲ್ಲಿ ಮಾತ್ರವೇ ಪ್ರಕಾಶವಾಗುವುದು ಎಂದು ನನ್ನ ನಂಬಿಕೆ.

* * *

೧೯೪೧–೪೩: ಮತ್ತೆ ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂಬ ಅದೇ ಮನಸ್ಸಿನ ಒತ್ತಡ. ಹೇಗೆ ಎನ್ನುವುದೇ ಸಮಸ್ಯೆ. ಇಂಟರ್ ಮೀಡಿಯೆಟ್ ಪರೀಕ್ಷೆ ಮುಗಿಯುತ್ತಲೇ ಮುಂದೇನೆಂಬ ಯಾವ ಯೋಚನೆಗೂ ಗಮನ ಕೊಡದೆ "ಹುತ್ತ" ದಿಂದ ಪಾರಾದೆ. ಒಂದು ವಿಧದಲ್ಲಿ ಇದು ನನಗೆ ಮುಕ್ತಿಯೇ. ಆಗ ಊಟಕ್ಕೆ ಏನು ಮಾಡುತ್ತಿದ್ದೆನೊ ನೆನಪಿಲ್ಲ; ಮಲಗುವುದಂತೂ ರಾಮಕೃಷ್ಣಾಶ್ರಮದ ಹೊರಜಗುಲಿಯ ಮೇಲೆ. ಒಂದು

ವಾರದ ನಂತರ ಮಿತ್ರರೊಬ್ಬರ ಸಹಾಯದಿಂದ ಖಾದಿ ಭಂಡಾರದಲ್ಲಿ ಬೇಸಿಗೆ ರಜ ಮುಗಿಯುವವರೆಗೆ ಕೆಲಸ ಮಾಡಿ, ಊಟ ಉಡುಪುಗಳಿಗಾಗುವ ಹಣವನ್ನು ಸಂಪಾದಿಸಿದ್ದಾಯಿತು. ತಿಂಗಳಿಗೆ ಮೂರು ರೂಪಾಯಿ ಬಾಡಿಗೆಯಂತೆ ಒಂದು ರೂಮನ್ನು ವಿಶ್ವೇಶ್ವರಪುರದಲ್ಲಿ ಮಾಡಿಕೊಂಡೆ. ಸೆಂಟ್ರಲ್ ಕಾಲೇಜಿಗೆ ಸೇರಿಕೊಳ್ಳುವುದಕ್ಕೆ ಬೇಕಾದ ಶುಲ್ಕವನ್ನೂ ಸಿದ್ಧಮಾಡಿಕೊಂಡೆ. ಇಂಟರ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಸೆಂಟ್ರಲ್ ಕಾಲೇಜಿಗೆ ಪ್ರವೇಶಕ್ಕಾಗಿ ಅಪ್ಲಿಕೇಷನ್ ಹಾಕಿದೆ. ಭೌತಶಾಸ್ತ್ರದಲ್ಲಾಗಲಿ ಗಣಿತಶಾಸ್ತ್ರದಲ್ಲಾಗಲೀ ಆನರ್ಸ್ ತರಗತಿಗೆ ಸೇರಲು ನನಗಿಂತಲೂ ಹೆಚ್ಚು ಅಂಕಗಳನ್ನು ಗಳಿಸಿದ್ದ ವಿದ್ಯಾರ್ಥಿಗಳಿದ್ದುದರಿಂದ ನನಗೆ ಅರ್ಹತೆ ಇಲ್ಲವಾಗಿ, ಬಿ.ಎಸ್.ಸಿ ಒಂದೇ ನನಗೆ ತೆರೆದ ಶಿಕ್ಷಣಭಾಗವಾಯಿತು. ಆದರೆ ಕನ್ನಡದಲ್ಲಿ ನನಗೆ ಶೇ ೭೦ ಅಂಕಗಳು ಬಂದಿದ್ದವು. ಈ ಭರವಸೆಯಿಂದ ವಿ.ಸೀ. ಯವರನ್ನು ಕಂಡು ಆನರ್ಸ್ ವಿಭಾಗಕ್ಕೆ ಅನುಮತಿ ಸಿಗಬಹುದೇ ಎಂದು ವಿನಂತಿಸಿ ಕೊಂಡೆ. ಆಗ ಕುವೆಂಪುರವರು ಕನ್ನಡ ಪ್ರಾಧ್ಯಾಪಕರಾಗಿದ್ದರು. ವಿ.ಸೀ. ಯವರು ಸ್ವಲ್ಪ ಗಡಸು ಧ್ವನಿಯಲ್ಲಿ "ಇಲ್ಲಿ ಕನ್ನಡ ಆನರ್ಸ್ ಭಾಗವಿಲ್ಲ. ಇಪ್ಪತ್ತು ವರ್ಷ ಕನ್ನಡ ಅಧ್ಯಾಪಕನಾಗಿರುವ ನನ್ನನ್ನು ನೋಡಿಲ್ಲವೇ ನೀನು? ಕನ್ನಡವಂತೆ ಕನ್ನಡ. ಪ್ರಪಂಚ ವಿಸ್ತಾರವಾಗಿದೆ; ಅದರಲ್ಲಿ ನಿನಗೂ ಸ್ಥಳವಿದೆ. ನಿನ್ನ ಜೀವನ ಸುಖವಾಗಬೇಕಾದರೆ ಎಂಜಿನಿಯರಿಂಗ್ ಓದು" ಎಂದುಬಿಟ್ಟರು. ಕನ್ನಡಾಧ್ಯಯನದ ಆಸೆ ಅಲ್ಲಿಗೆ ಕಮರಿತು. ಆದರೆ ವಿದ್ಯಾಭ್ಯಾಸ ನಿಲ್ಲಲಿಲ್ಲ.

೧೯೪೧ ಸೆಪ್ಟೆಂಬರ್‌ವರೆಗೂ ಮಾಸಿಕ ಶುಲ್ಕ ಕೊಟ್ಟು ಉಚಿತ ವಿದ್ಯಾರ್ಥಿವೇತನಕ್ಕೆ ಪ್ರಾರ್ಥನೆ ಸಲ್ಲಿಸಿದ್ದೆ. ಆದರೆ ಸಿಗುವುದೆಂಬ ಭರವಸೆ ಎಲ್ಲಿಂದ ಬರಬೇಕು? ನನ್ನ ಸಹಪಾಠಿಗಳು ಒಂದು ಮಧ್ಯಾಹ್ನ "ಗೋವಿಂದರಾಯರೆ, ಪ್ರಿನ್ಸಿಪಾಲರ ಆಫೀಸಿನ ನೋಟೀಸ್ ಬೋರ್ಡ್‌ನ್ನು ನೋಡಿ ಬನ್ನಿ" ಎಂದರು. ಯಾವುದೋ ಅನಿರ್ವಚನೀಯ ಭಯವಾಯಿತು. ಮಾಸಿಕಶುಲ್ಕ ಸಂದಾಯವಾಗಿಲ್ಲದ್ದರಿಂದ ನನ್ನನ್ನು ಕಾಲೇಜಿನಿಂದ ಹೊರಹಾಕಿರಬಹುದೆಂಬ ಶಂಕೆ ಬಲಿಯಿತು. ಹೋಗಿ ನೋಡಿದೆ; ನನ್ನನ್ನು ನಾನೇ ನಂಬಲಿಲ್ಲ! "--ಗೆ ಡಾಬ್ಸ್ ವಿದ್ಯಾರ್ಥಿ ವೇತನವನ್ನು ಕನ್ನಡದಲ್ಲಿ ಹೆಚ್ಚು ಅಂಕ ಪಡೆದಿರುವ ಕಾರಣ, ಮಾಸಿಕ ಎಂಟು ರೂಪಾಯಿನಂತೆ ದಯಪಾಲಿಸಲಾಗಿದೆ. ಇದರೊಂದಿಗೆ ಉಚಿತ ವಿದ್ಯಾರ್ಥಿವೇತನವೂ ಸೇರಿದೆ" ಎಂಬ ಒಕ್ಕಣೆಯನ್ನು ಎರಡೆರಡು ಬಾರಿ ಓದಿದೆ. ತಿಂಗಳಿಗೆ ಎಂಟು ರೂಪಾಯಿಗಳು! ಮಾಸಿಕ ಶುಲ್ಕವಿಲ್ಲ! ಇನ್ನೆರಡು ವರ್ಷಗಳ ಅಭ್ಯಾಸ ಸುಗಮ, ಕಳೆದ ಐದು ವರ್ಷಗಳು ಹಿಂಡಿಹಿಪ್ಪೆ ಮಾಡಿದ್ದ ಕಾರ್ಪಣ್ಯದಿಂದ ಮುಕ್ತಾಯ! ಈ ಅನನುಭವನೀಯ ಮನಃಸ್ಥಿತಿ ನನ್ನನ್ನು ೩-೪ ದಿವಸ ಈ ವಸುಂಧರೆ ಮೇಲೆತ್ತಿ ಗಾಳಿಯಲ್ಲಿ ಓಲಾಡಿಸುತ್ತಿದ್ದಂತೆ ಭಾಸವಾಯಿತು. ನಾನು ಐಶ್ವರ್ಯವಂತನಾದೆ, ಸ್ವತಂತ್ರನೂ ಆದೆ! ಇಲ್ಲಿ ಪ್ರಸ್ತುತವಾಗಿರುವುದು ನನ್ನ ಈ ಕತೆಯಲ್ಲ. ಇದರ ಹಿಂದಿನ ಪ್ರಭಾವ ನಿಸ್ಸಂದೇಹವಾಗಿ ವಿ.ಸೀ. ಯವರದೇ ಎಂಬ ಖಚಿತ ನಂಬಿಕೆ. (ಅಷ್ಟು ಹೊತ್ತಿಗೆ ಕುವೆಂಪು ಮೈಸೂರಿಗೆ ವರ್ಗವಾಗಿದ್ದರು) ಇಲ್ಲಿಯೂ ಅವರ ಶಿಷ್ಯನಲ್ಲಿನ ವಿಶ್ವಾಸ, ಅನುಕಂಪ ವರವಾಗಿ ಪರಿಣಮಿಸಿತು. ಅವರು ಹುಸಿಕೋಪದಿಂದ ಅಂಕುರಿಸಿದ ಪ್ರೇರಣೆ ಆಶೀರ್ವಾದವೇ ಆಗಿ, ನನ್ನೆದೆಯ ಪ್ರವೃತ್ತಿಗೆ ನೀರೆರೆದು ಮುಂದೆ ಎಂಜಿನಿಯರನ್ನಾಗಿಯೂ ಮಾಡಿತು. ನನ್ನ ಮುಂದಿನ ಜೀವನದ ಪ್ರಗತಿ ಇವರ ವರ ಪ್ರಸಾದವೇ.

* * *

೧೯೬೦ರ ಆದಿಯಲ್ಲಿ ನಾನು ಮೈಸೂರಿನಲ್ಲಿರುವ ಪ್ರಾದೇಶಿಕ ಶಿಕ್ಷಣ ವಿದ್ಯಾಲಯದಲ್ಲಿ ಪ್ರಾಂಶುಪಾಲನಾಗಿದ್ದೆ. ಆ ವಿದ್ಯಾಲಯದಲ್ಲಿ ಪ್ರತಿವರ್ಷವೂ ಕೆ. ಎಂ. ಪಣಿಕ್ಕರರ ಹೆಸರಲ್ಲಿ ಒಂದು ಭಾಷಣವನ್ನು ಗಣ್ಯ ವ್ಯಕ್ತಿಗಳಿಂದ ಮಾಡಿಸುವ ಒಂದು ಪದ್ಧತಿ. ನನ್ನ ಸಹೋದ್ಯೋಗಿಗಳೊಡನೆ ಯೋಚಿಸಿ, ಒಂದು ವರ್ಷ (೧೯೬೨?) ವಿ.ಸೀ.ಯವರನ್ನು ಆಹ್ವಾನಿಸುವುದೆಂದು ತೀರ್ಮಾನಿಸಿದೆ. ಕಾರಣಾಂತರ ನಾನು ಬೆಂಗಳೂರಿಗೆ ಬಂದಿದ್ದಾಗ ಅವರನ್ನು ಕಂಡು ಈ ವಿಷಯ ತಿಳಿಸಿದೆ. ಸಂತೋಷದಿಂದ ಒಪ್ಪಿಕೊಂಡರು. ಭಾಷಣದ ಹಿಂದಿನ ದಿವಸ ನಾನೇ ಬಂದು ನಮ್ಮ ವಿದ್ಯಾಲಯದ ವಾಹನದಲ್ಲಿ ಅವರನ್ನು ಮೈಸೂರಿಗೆ ಕರೆದುಕೊಂಡು ಹೋದೆ. ನನ್ನ ಮನೆಯಲ್ಲಿಯೇ ಇರಿಸಿಕೊಂಡೆ. ಆ ರಾತ್ರಿಯ ಅವರ ಭೋಜನದ ರೀತಿ, ವಿಚಕ್ಷಣೆ ಮುಂದಿನ ಎರಡು ದಿನಗಳಿಗೆ ಮಾರ್ಗದರ್ಶಿಯಾಯಿತು. ಮರುದಿನ ಕಾಲೇಜಿನಲ್ಲಿ ಸಹೋದ್ಯೋಗಿಗಳನ್ನು ಪರಿಚಯಿಸಿ, ಎಲ್ಲ ಭಾಗಗಳಿಗೂ ಕರೆದುಕೊಂಡು ಹೋಗಿ, ಕಡೆಯಲ್ಲಿ ಲೈಬ್ರರಿಗೆ ಕರೆತಂದೆ. ಪುಸ್ತಕರಕ್ಷಣೆ, ಸ್ವಚ್ಛತೆ, ವಿದ್ಯಾರ್ಥಿಗಳು ನಡಸುತ್ತಿದ್ದ ವ್ಯಾಸಂಗ— ಇವನ್ನು ಮೆಚ್ಚಿದ ವಿ.ಸೀ. 'ಲೈಬ್ರರಿ ಎಂದರೆ ಹೀಗಿರಬೇಕು' ಎಂದರು.

ಸಂಜೆ ನಾಲ್ಕು ಗಂಟೆಗೆ ಭಾಷಣ. ನಮ್ಮ ವಿದ್ಯಾರ್ಥಿಗಳೂ ಸಹೋದ್ಯೋಗಿಗಳೂ ವಿಶ್ವವಿದ್ಯಾನಿಲಯದ ಅಧ್ಯಾಪಕರೂ ಸೇರಿ ಸುಮಾರು ಸಾವಿರ ಮಂದಿ ನೆರೆದಿದ್ದರು. ವಿ.ಸೀ. ಯವರನ್ನು ವೇದಿಕೆಗೆ ಆಹ್ವಾನಿಸಿ ಸಭೆಗೆ ಪರಿಚಯ ಮಾಡಿಕೊಡುವಾಗ ನಾನು ಪ್ರೊ. ವಿ.ಸೀ.ಯವರಿಗೆ ನಾಲ್ಕು ವರ್ಷಗಳು ವಿದ್ಯಾರ್ಥಿಯಾಗುವ ಯೋಗ ಪಡೆದಿದ್ದೆನೆಂದೂ, ಅರ್ಧ ಕನ್ನಡ – ಅರ್ಧ ಇಂಗ್ಲಿಷ್‌ಗಳಲ್ಲಿ ಬೋಧಿಸುವ ವೈಭವವನ್ನು ಸವಿಯುವ ಭಾಗ್ಯವಿತ್ತೆಂದೂ ಹೇಳಿಬಿಟ್ಟೆ. ವಿ.ಸೀ. ಭಾಷಣ ಪ್ರಾರಂಭಿಸಿ "ನಿಮ್ಮ ಪ್ರಾಂಶುಪಾಲರು ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ಕನ್ನಡಕ್ಕೆ ಅಭಿಮಾನವಿರಲಿಲ್ಲ. ತಿರಸ್ಕಾರವೇ ಹೆಚ್ಚಾಗಿತ್ತು. ಕನ್ನಡ ವಿಭಾಗ ಯಾವುದೋ ಅಮುಖ್ಯ ಭಾಗವಾಗಿ, ಇಂಗ್ಲಿಷಿನಲ್ಲಿ ಮಾತನಾಡುವುದೇ ಬೋಧಿಸುವುದೇ ಸರಿಯಾದ ವಿಧಾನವೆನ್ನುವ ಭಾವನೆ ಆ ವಿದ್ಯಾರ್ಥಿಗಳಲ್ಲಲ್ಲದೆ ಅಧ್ಯಾಪಕರಲ್ಲೂ ಮನೆ ಮಾಡಿಕೊಂಡಿದ್ದ ಕಾಲ ಅದು" ಎಂದು ಹೇಳಿ, ಮುಖ್ಯ ವಿಷಯಕ್ಕೆ ಪ್ರವೇಶ ಮಾಡಿದರು. ಭಾಷಣ ಇಂಗ್ಲಿಷಿನಲ್ಲೇ. ಸುಮಾರು ಒಂದು ಗಂಟೆಯ ಕಾಲ ನಿರರ್ಗಳವಾಗಿ ಹರಿದ ವಾಕ್ಪ್ರವಾಹದಲ್ಲಿ ಮಂತ್ರಮುಗ್ಧವಾದಂತೆ ತಲ್ಲೀನವಾಗಿ ಹೋಗಿತ್ತು ಅಂದಿನ ಸಭೆ. ಭಾಷಣ ಮುಕ್ತಾಯವಾದ ನಂತರ ವಿ.ಸೀ. ಕೆಲವು ಪರಿಚಯಸ್ಥರೊಂದಿಗೆ ಮಾತನಾಡುತ್ತಿದ್ದಾಗ ವಿಶ್ವವಿದ್ಯಾನಿಲಯದ ನನ್ನ ಕೆಲವು ಮಿತ್ರರು "ಈ ವಾಗ್ಝರಿ, ಈ ಘೋರಣೆಯ ಭಾಷಣಗಳೇ ಈಗ ಬಹು ಅಪರೂಪವಾಗುತ್ತಿವೆ" ಎಂದು ಮೆಚ್ಚಿಕೊಂಡರು. ಈ ಭಾಷಣ ಒಂದು ಮರೆಯಲಾಗದ ಅನುಭವವಾಗಿ ರೂಪಗೊಂಡಿತು ಅನೇಕರಲ್ಲಿ.

ಮರುದಿವಸ ವಿ.ಸೀ. ಯವರು ತಮ್ಮ ಮಿತ್ರರು ಕೆಲವರನ್ನು ಕಾಣುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಬೆಳಗಿನ ಉಪಹಾರವನ್ನು ಮುಗಿಸಿ ವಾಹನದಲ್ಲಿ ಹೊರಟೆವು. ಆ ಸ್ನೇಹಿತರನ್ನು ವಿ.ಸೀ. ಕಂಡಾಗ ಜೊತೆಯಲ್ಲಿದ್ದ ನನಗೆ ಸನ್ಮಿತ್ರತ್ವದ ಅಭಿಮಾನ, ಸರಸ, ಒಲವು, ಇವುಗಳ ವೈಭವ ಕಾಲ, ಪ್ರಾದೇಶಿಕ ದೂರಗಳ ಅಂತರದ ಪ್ರಭಾವಕ್ಕೆ ಮಣಿಯದ ಒಂದು ದಿವ್ಯಶಕ್ತಿ ಎಂಬ ಅನುಭವವಾಯಿತು. ಉನ್ನತ ವ್ಯಕ್ತಿಗಳಲ್ಲಿ ವ್ಯಕ್ತವಾಗತಕ್ಕ ಉನ್ನತಸಂಬಂಧ ಜ್ಯೋತಿಸ್ವರೂಪವೇ. ಮನೆಗೆ ಹಿಂದಿರುಗಿ ಅಲ್ಪವಿರಾಮವಾದ ಮೇಲೆ

ಭೋಜನಕ್ಕೆ ಆಹ್ವಾನಿಸಿದೆ. ಅಗ್ರದ ಬಾಳೆ ಎಲೆ, ಚಾಪೆಯ ಆಸನ, ಕುಳಿತ ಪದ್ಮಾಸನ, ಮಾಡಿದ ಅಡುಗೆಯ ಬಡಿಸುಗೆ— ಇವು ಹಿಂದಿನ ದಿನದಂತೆಯೇ. ಭೋಜನ ಮಾಡುತ್ತ ಕರಿದ ಶಾವಿಗೆಯ ಪಾಯಸವನ್ನು ಬಡಿಸಿದಾಗ "ಶ್ಯಾವಿಗೆ ಪಾಯಸ ಹೀಗಿರಬೇಕು. ತಾಯಿ, ಇನ್ನೊಂದು ಸೌಟು ಬಡಿಸಿ" ಎಂದು ಬಡಿಸಿಸಿಕೊಂಡು ನಿಧಾನವಾಗಿ ಸವಿದರು. ನನ್ನ ಶ್ರೀಮತಿಗೂ ನನಗೂ ಎಲ್ಲಿಲ್ಲದ ಆನಂದ. ಇನ್ನಾವುದನ್ನೂ ಪ್ರಶಂಸಿಸದೆ ಬಾಳೆಯ ಎಲೆ, ಪಾಯಸವನ್ನಾದರೂ ಮೆಚ್ಚಿದರಲ್ಲ ಎಂಬ ಸಂತೋಷ. ಅವರ ಊಟದ ವೈಖರಿ, ನಯ, ಪರಿಕರ ಮೆಚ್ಚುವ ರೀತಿ ಇವು ಒಂದು ಸುಸಂಸ್ಕೃತ ಜೀವನದ ಅನುಕರಣೀಯ ಅನುಭವವೆನಿಸಿತು. ತಾಂಬೂಲವಾದ ಮೇಲೆ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು, ಬೆಂಗಳೂರಿಗೆ ಪ್ರಯಾಣ.

ದಾರಿಯಲ್ಲಿ ಮಾರುಕಟ್ಟೆಯ ಮುಖಾಂತರ ಹೋಗೋಣವೆಂದರು. ಅಲ್ಲಿಳಿದು ಒಂದು ವೀಳೆಯದೆಲೆ ಬುಟ್ಟಿಯ ಮುಂದೆ ನಿಂತು "ಒಂದಿನ್ನೂರು ಚಿಗುರೆಲೆ ಕಟ್ಟಿಕೊಡಮ್ಮ, ಎಷ್ಟಾದರೂ ತಗೋ" ಎಂದರು. ಎಲೆಮಾರುವ ಹೆಂಗಸು 'ಬುದ್ಯೋರು ಎಷ್ಟೋ ದಿವಸದ ಮೇಲೆ ಬಂದರು' ಎಂದವಳೇ ಅರಿಸಿ ಅರಿಸಿ ಇನ್ನೂರು ಎಲೆಯನ್ನು ತಾವರೆ ಎಲೆಯಲ್ಲಿಟ್ಟು ಕಟ್ಟಿಕೊಟ್ಟಳು. ನನಗೆ ಆಶ್ಚರ್ಯ, ಆ ಹೆಂಗಸು ಲೆಕ್ಕ ಮಾಡಿ ಸ್ವಲ್ಪವನ್ನು ಹಿಂದಿರುಗಿಸಲು ಬಂದಾಗ "ಬೇಡ, ಇಟ್ಟುಕೋ" ಎಂದುಬಿಟ್ಟರು, ಹೊರಟರು. ಈ ರಸಿಕತೆಯ ಧಾರಾಳ ಭಾವ ನನಗೊಂದು ಹೊಸ ಅನುಭವ.

ಮೈಸೂರನ್ನು ಬಿಟ್ಟು ಸ್ವಲ್ಪ ದೂರ ಬಂದ ಮೇಲೆ ವಿ.ಸೀ.ಯವರು ವಾರ್ಷಿಕ ಭಾಷಣ ಪಣಿಕ್ಕರವರ ಹೆಸರಿನಲ್ಲಿ ವ್ಯವಸ್ಥೆ ಮಾಡಿರುವುದಕ್ಕೆ ಕಾರಣವೇನಾದರೂ ಉಂಟೇ ಎಂದು ಕೇಳಿದರು. ಪ್ರಾದೇಶಿಕ ವಿದ್ಯಾನಿಲಯ ಪಣಿಕ್ಕರವರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿದ್ದಾಗ ಸ್ಥಾಪಿತವಾಗಿದ್ದರ ನೆನಪಿನಲ್ಲಿ ಅದು ನಡೆಯುತ್ತಿದೆ ಎಂದು ತಿಳಿಸಿದೆ. ವಿ.ಸೀ. ಅವರು ಒಂದು ನಿಟ್ಟುಸಿರುಬಿಟ್ಟು "ಅವರ ಪ್ರಭಾವದಿಂದ ಕರ್ನಾಟಕಕ್ಕೆ ಕಾಸರಗೋಡು ಸೇರಬೇಕಾದದ್ದು ತಪ್ಪಿ ಹೋಯಿತು" ಎಂದು ರಾಜ್ಯ ಪುನರ್ವಿಂಗಡಣೆಯಾದ ಸಂದರ್ಭದಲ್ಲಿ ಕರ್ನಾಟಕಕ್ಕೆ ಆದ ಆ ಅನ್ಯಾಯದ ಹಿನ್ನೆಲೆಯನ್ನು ವಿವರಿಸಿ, ಪಣಿಕ್ಕರ್ ಗೋವಿಂದವಲ್ಲಭ ಪಂತ್ ಇಬ್ಬರಿಂದಾಗಿ ಹೇಗೆ ಕಾಸರಗೋಡು ನಮಗೆ ದಕ್ಕದಾಯಿತು, "ಸ್ವಾರ್ಥಪರಾಯಣರಾದ ಉನ್ನತವ್ಯಕ್ತಿಗಳೂ ನೀತಿ ನಿಯಮಗಳನ್ನು ಗಾಳಿಗೆ ತೂರಿ ಹೇಗೆ ಯಾವ ಅಳುಕು, ಕರ್ತವ್ಯ ಪ್ರಜ್ಞೆಯ ಬಾಧೆಗೂ ಸಂಪೂರ್ಣಹೊರತಾಗಿ ಬಿಡುವರು" ಎಂದು ತಿಳಿಸಿದರು. ವಿ.ಸೀ. ಯವರ ಕನ್ನಡ ಪ್ರೇಮ, ಕರ್ನಾಟಕದ ಏಕೀಕರಣದಲ್ಲಿ ಅವರು ವಹಿಸಿದ ನಿಕಟಪಾತ್ರ ಒಂದು ಭಾಷಣದಿಂದ ಪ್ರಚೋದಿತವಾಗಿ ಮತ್ತೆ ನೋವನ್ನು ಒದಗಿಸಿತು. ಪಣಿಕ್ಕರರ ಈ ಉಪಕಾರ ಕರ್ನಾಟಕಕ್ಕೆ ಇಂದೂ ಒಂದು ಬಗೆಹರಿಯದ ನೋವೇ, ಇರಿತವೇ ಆಗಿದೆಯಷ್ಟೆ!

ಆ ಸಂಜೆ ಆರು ಗಂಟೆಯ ಹೊತ್ತಿಗೆ ಬೆಂಗಳೂರು ಸೇರಿದೆವು. ವಿ.ಸೀ. ಯವರನ್ನು ಮನೆಯಲ್ಲಿ ಬಿಟ್ಟು, ಕೊಟ್ಟ ಕಾಫಿಯನ್ನು ಕುಡಿದು, ಮೈಸೂರಿಗೆ ವಾಪಸ್ಸಾದೆ. ಆ ಮೂರು ದಿನಗಳ ಅನುಭವ ನಾಲ್ಕು ವರ್ಷಗಳ ಶಿಷ್ಯತ್ವದಲ್ಲಿ ಪಡೆದ ಜ್ಞಾನಕ್ಕಿಂತ ಮಿಗಿಲಾದುದೂ ಆನಂದದಾಯಕವಾದುದೂ ಆಗಿತ್ತು.

* * *

ನವೆಂಬರ್ ೧೯೮೦: ನಾನು ನಿವೃತ್ತನಾಗಿ ದೆಹಲಿಯಿಂದ ಬೆಂಗಳೂರಿಗೆ ಬಂದೆ. ಆಮೇಲೆ ಒಂದೆರಡು ಬಾರಿ ವಿ.ಸೀ. ಯವರ ದರ್ಶನ ಮಾಡಿದ್ದೆನೆಂದು ನೆನಪು. ೧೯೮೩ರಲ್ಲೊಮ್ಮೆ ಇದ್ದಕ್ಕಿದ್ದಂತೆ ಅವರನ್ನು ನೋಡಬೇಕೆಂಬ ಉತ್ಕಟ ಇಚ್ಛೆಯಾಯಿತು. ಯಾಕೆಂಬುದು ನನಗೆ ತಿಳಿಯದು. ಅಷ್ಟು ಹೊತ್ತಿಗೆ ಅವರ ಆರೋಗ್ಯ ಕೆಟ್ಟಿತ್ತೆಂದು ತಿಳಿದು ಬಂದಿತ್ತು. ಅವರಿಗೊಪ್ಪುವಂಥ ಒಂದು ಜೊತೆ ಪಂಚೆ, ಆ ಕಾಲದಲ್ಲಿ ಸಿಕ್ಕುವ ಫಲಪುಷ್ಪಗಳನ್ನು ತೆಗೆದುಕೊಂಡು ನನ್ನ ನೆರೆಮನೆಯ ಮಿತ್ರರೊಡನೆ ಸಂಜೆ ಅವರ ಮನೆಗೆ ಹೋದೆ. ಮನೆಯ ಮುಂಭಾಗದಲ್ಲಿ ಬೆತ್ತದ ಕುರ್ಚಿಯಲ್ಲಿ ವಿ.ಸೀ. ಕುಳಿತಿದ್ದರು. ಒಬ್ಬ ಮಗಳೂ ಮಗನೂ ಬಳಿಯಲ್ಲಿದ್ದರು. ಅವರ ಪಾದಗಳಿಗೆ ಪುಷ್ಪಗಳನ್ನು ಅರ್ಪಿಸಿ ತಂದಿದ್ದ ಕಾಣಿಕೆಯನ್ನು ಮುಂದೆ ಹಿಡಿದೆ. ಯಾವ ಚಲನೆ, ಭಾವ ವ್ಯತ್ಯಾಸವೂ ಕಾಣಬರಲಿಲ್ಲ. ದೃಷ್ಟಿ ಸ್ಮೃತಿಚೈತನ್ಯಗಳು ಅವರನ್ನು ಬಹುಮಟ್ಟಿಗೆ ತ್ಯಜಿಸಿದ್ದವೆಂಬುದು ಅರ್ಥವಾಯಿತು. ನನ್ನ ಮೇಲೆ ನನ್ನ ನಿಯಂತ್ರಣ ತಪ್ಪಿತು. ೧೫–೨೦ ನಿಮಿಷ ತಡೆಯಲಾರದೆ ಬಿಕ್ಕಿ ಬಿಕ್ಕಿ ಅತ್ತುಬಿಟ್ಟೆ. ಯಾವ ಮನಃಪರಿಣಾಮವಾಯಿತೊ ಏನೊ "ಕಾಫಿ ಕೊಡು, ಕಾಫಿ ಕೊಡು" ಎಂದರು. ಇನ್ನು ಅಲ್ಲಿ ಹೆಚ್ಚು ಕಾಲ ಇರಲಾಗಲಿಲ್ಲ. ಕಾಫಿ ಕುಡಿದು ಮಿತ್ರರೊಡನೆ ಮನೆಗೆ ಹಿಂತಿರುಗಿದೆ. ಎಂಥ ವ್ಯಕ್ತಿಗೆ ಅಂತ್ಯಕಾಲದಲ್ಲಿ ಎಂಥ ದಾರುಣ ವಿಧಿ ನೃತ್ಯ ಕಾಡಿತು? ಇದು ಬೇಕಿತ್ತೆ? ಅಥವಾ ಯಾವುದೋ ಪೂರ್ವಜನ್ಮದ ಕಷ್ಟ ತೆತ್ತು ನಿವೃತ್ತಿ ಪಡೆಯಬೇಕಿತ್ತೊ? – ಎಂಬ ಯೋಚನೆ ನನ್ನನ್ನು ಎರಡು ಮೂರು ದಿವಸ ಬಿಡದೆ ಕಾಡಿತು.

ಐದಾರು ದಿನಗಳ ನಂತರ ವೃತ್ತ ಪತ್ರಿಕೆ ವಿ.ಸೀ. ಯವರ ಮರಣವಾರ್ತೆಯನ್ನು ಪ್ರಕಟಿಸಿತು. ನನಗೆ ಅಂತ್ಯದರ್ಶನ ಲಭಿಸಲಿಲ್ಲ. ಸಂಜೆ ಅವರ ಮನೆಗೆ ಹೋದೆ. ಅವರ ಅಳಿಯ, ನನ್ನ ಪೂರ್ವ ಸಹಪಾಠಿ, ಪಿ. ಎನ್. ವೆಂಕಟೇಶಮೂರ್ತಿ ದೂರದ ಹರಿದ್ವಾರದಿಂದ ಬಂದಿದ್ದರು. ಗುರುಗಳ ಸಂಸಾರದವರಿಗೆ ಸಾಂತ್ವನ ಹೇಳುವ ಶಕ್ತಿ, ಯೋಗ್ಯತೆ ನನ್ನಲ್ಲಿರಲಿಲ್ಲ. ಮೌನವಾಗಿ ೧೫–೨೦ ನಿಮಿಷ ನಿಂತಿದ್ದು ಹಿಂದಿರುಗಲು ಹೊರಟೆ. ಬಾಗಿಲಲ್ಲಿ ಅವರ ಮಗಳು ನನಗೆ "ತಂದೆಯವರು ಹೋದ ವಾರ ನೀವು ಹೊರಟುಹೋದ ಎರಡು ದಿನಗಳ ಮೇಲೆ 'ಅವತ್ತು ಬಂದಿದ್ದವರು ಯಾರು? ಅವರೇಕೆ ದುಃಖಿಪಟ್ಟರು?' ಎಂದು ಕೇಳಿದರು. ವಿಷಯ ತಿಳಿದ ಮೇಲೆ ಹಣೆಯನ್ನು ತಟ್ಟಿಕೊಂಡು 'ಬಂದರು, ಕರೆದುಕೊಂಡು ಹೋದರು, ಮನೆಯಲ್ಲಿರಿಸಿಕೊಂಡರು, ಭಾಷಣ ಮಾಡಿಸಿದರು, ದುಡ್ಡುಕೊಟ್ಟು ಕಳಿಸಿದರು ಮರೆತುಹೋಯಿತಲ್ಲ' ಎಂದು ಪರಿತಪಿಸಿದರು" ಎಂದರು. ಅವರ ಶಿಷ್ಯರಲ್ಲಿ ನೋಡಬಂದವರಲ್ಲಿ ನಾನೇ ಕಡೆಯವನು ಎಂದೂ ಹೇಳಿದರು. ನನ್ನ ಮೇಲಿನ ನಿಯಂತ್ರಣವು ಸಡಿಲವಾಗುತ್ತ ಬಂದು ಕಣ್ಣುಗಳಿಂದ ನೀರು ಹರಿಯಲಾರಂಭಿಸಿತು. ಹಿಂದಿನ ವಾರದ ಮನಃಸ್ಥಿತಿ ಮತ್ತೆ ಮರುಕಳಿಸೀತೆಂದು ಹೊರಟುಬಿಟ್ಟೆ.

ವಿ.ಸೀ. ಯವರ ಆ ದರ್ಶನವೇ ಕಡೆಯ ದರ್ಶನ. ಅವರಿಗೆ ಅರ್ಪಿಸಿದ ಅಲ್ಪ ಕಾಣಿಕೆಯೇ ಕಡೆಯ ಕಾಣಿಕೆ. ಈಗ ವಿ.ಸೀ.ಯವರಿಲ್ಲ. ಆದರೆ ಅವರ ತರಗತಿಯ ಬೋಧನೆಯ ಭಂಗಿ, ಆವೇಶ, ಮೋಡಿ, ಗತ್ತುಗಳು ಮಾತ್ರವೇ ನನ್ನ ಸ್ಮೃತಿಯಲ್ಲಿ ನಿಚ್ಚಳವಾಗಿ ಉಳಿದಿವೆ. ಕಾಲ ಇದನ್ನು ಅಳಿಸುವ ಶಕ್ತಿ ಪಡೆದಿಲ್ಲ.

ಹಾಲುಜೇನು ಕೂಡಿದಂತಿರುತ್ತಿದ್ದ ಪಾಠ

ಬಿ. ಎ. ಕೃಷ್ಣಮೂರ್ತಿ

ಸುಮಾರು ೫೮ ವರ್ಷಗಳ ಹಿಂದಿನ ನೆನಪು. ನಾನು ಆಗತಾನೆ ಪ್ರೌಢಶಾಲೆಯನ್ನು ಬಿಟ್ಟು ಆಗಿನ ಇಂಟರ್‌ಮೀಡಿಯೆಟ್ ಕಾಲೇಜನ್ನು ಸೇರಿದ್ದೆ. ಶಾಲೆಯಲ್ಲಿದ್ದಾಗ ಅಲ್ಲಿನ ಶಿಸ್ತು ಒಂದು ರೀತಿಯಲ್ಲಿ ಉಸಿರುಕಟ್ಟುವಂತಹದು. ಶಾಲೆ ಬೆಳಿಗ್ಗೆ ಹನ್ನೊಂದು ಘಂಟೆಗೆ ಪ್ರಾರಂಭವಾದರೆ ಸಂಜೆ ಐದರವರೆಗೆ ಸತತವಾಗಿ ಪಾಠ ಪ್ರವಚನಗಳಿರುತ್ತಿದ್ದವು. ಮಧ್ಯೆ ಒಂದು ಅರ್ಧ ಘಂಟೆ ವಿರಾಮವೇನೋ ಇದ್ದರೂ ಅದು ನಮಗೆ ಆ ಕಾಲದಲ್ಲಿ ಅಂತಹ ಬಿಡುವೆಂದೇನೂ ಅನ್ನಿಸುತ್ತಿರಲಿಲ್ಲ. ತರಗತಿಗಳನ್ನು ತಪ್ಪಿಸುವಂತಿಲ್ಲ. ಬೇಕಾಗಲೀ ಬೇಡವಾಗಲೀ ಕಡ್ಡಾಯವಾಗಿ ತರಗತಿಯಲ್ಲಿ ಕುಳಿತಿರಲೇಬೇಕು. ಇಂತಹ ಕಟ್ಟುನಿಟ್ಟಿನ ನಿರ್ಬಂಧದಿಂದ ಹೊರ ಬಂದದ್ದು ಇಂಟರ್ ಕಾಲೇಜಿಗೆ ಸೇರಿದ ಮೇಲೇ. ಅಲ್ಲಿ ಒಂದೊಂದು ಘಂಟೆಗೆ ಒಂದೊಂದು ವಿಷಯದ ಮೇಲೆ ಪಾಠ. ಉಪನ್ಯಾಸಕರು ಬಂದು ಪಾಠ ಹೇಳುವಾಗ ಹೆಚ್ಚಿನವರು ವಿದ್ಯಾರ್ಥಿಗಳನ್ನು ಗಮನಿಸುತ್ತಿರಲಿಲ್ಲ. ಕೆಲವು ವಿದ್ಯಾರ್ಥಿಗಳು ಹಾಜರಿ ತೆಗೆದುಕೊಂಡ ಮೇಲೆ ಮೆತ್ತಗೆ ತರಗತಿಯಿಂದ ಅದೃಶ್ಯವಾಗುತ್ತಿದ್ದರು. ಇಂತಹ ಒಂದು ಸ್ವಾತಂತ್ರ್ಯದ ಸನ್ನಿವೇಶವು ಪ್ರೌಢಶಾಲೆಯಿಂದ ಬಂದ ನಮಗೆ ವರದಾನವಾಗಿತ್ತು. ಆದರೆ ಈ ಸ್ವಾತಂತ್ರ್ಯಕ್ಕೆ ಸ್ವಯಂ ನಿರ್ಬಂಧವು ಕೆಲವೊಮ್ಮೆ ಬರುತ್ತಿತ್ತು. ಅತ್ಯುತ್ತಮ ಉಪನ್ಯಾಸಕರು ನಮಗೆ ಪ್ರಿಯವಾದ ವಿಷಯಗಳ ಮೇಲೆ ಪಾಠಮಾಡುವಾಗ ನಾವು ಎಷ್ಟು ತೊಂದರೆಗಳಿದ್ದರೂ ತರಗತಿಗಳಿಗೆ ಹಾಜರಾಗಿ ಕೂತಿರುತ್ತಿದ್ದೆವು. ನನಗೆ ಕನ್ನಡ ಭಾಷೆಯ ಮೇಲೆ ಮೊದಲಿನಿಂದಲೂ ಅತ್ಯಂತ ಆದರ, ಅಭಿಮಾನ ಮತ್ತು ಕನ್ನಡದ ಪುಸ್ತಕಗಳನ್ನು ಓದುವ ಹುಚ್ಚು ಬೇರೆ. ಆಗ ಎಲ್ಲವೂ ಇಂಗ್ಲಿಷ್‌ಮಯ. ಇಂಗ್ಲಿಷ್ ಪುಸ್ತಕಗಳನ್ನು ಓದಿ ಅದೇ ಭಾಷೆಯಲ್ಲಿ ಮಾತನಾಡುವುದು ಒಂದು ರೀತಿಯ ಹೆಚ್ಚುಗಾರಿಕೆಯಾಗಿತ್ತು. ಅನೇಕ ಕಾಲೇಜುಗಳಲ್ಲಿ ಭಾರತೀಯ ಭಾಷಾ ಉಪನ್ಯಾಸಕರನ್ನು ವಿದ್ಯಾರ್ಥಿಗಳು ತಾತ್ಸಾರದಿಂದ ನೋಡುತ್ತಿದ್ದರಲ್ಲದೇ ಅವರ ತರಗತಿಗಳಲ್ಲಿ ಗಲಾಟೆ ಮಾಡುವುದು, ಕಾಗದದ ವಿಮಾನಗಳನ್ನು ಮಾಡಿ ಎಸೆಯುವುದು, ಅಥವಾ ರಾಚಾ ರೋಷವಾಗಿ ತರಗತಿಯಿಂದ ಎದ್ದು ಹೋಗುವುದು ನಡೆಯುತ್ತಿತ್ತು. ಇಂತಹ ಒಂದು ಪರಿಸ್ಥಿತಿಯಲ್ಲಿ ನಾನು ಇಂಟರ್ ಕಾಲೇಜನ್ನು ಪ್ರವೇಶಿಸಿದಾಗ ನನಗೆ ಒಂದು ಆಶ್ಚರ್ಯವೇ ಕಾದಿತ್ತು. ನಮಗೆ ಕನ್ನಡ ಕಲಿಸುವವರು ಮೂವರು ಘಟಾನುಘಟಿ ಅಧ್ಯಾಪಕರು.

ಶ್ರೀಮಾನ್ ವಿ. ಸೀತಾರಾಮಯ್ಯನವರು, ಆಗ ಅವರು ಪ್ರೊಫೆಸರು ಆಗಿರಲಿಲ್ಲ; ಶ್ರೀ ಜಿ. ಪಿ. ರಾಜರತ್ನಂ ಮತ್ತು ಶ್ರೀ ಕೆ. ಎಸ್. ಧರಣೇಂದ್ರಯ್ಯನವರು. ಇವರುಗಳು ಭಾಷಾ ಅಧ್ಯಾಪಕರಾಗಿದ್ದರು. ಇವರುಗಳ ತರಗತಿಗಳಲ್ಲಿ ಯಾವ ವಿದ್ಯಾರ್ಥಿಯೂ ಬಾಲ ಬಿಚ್ಚುತ್ತಿರಲಿಲ್ಲ. ಇವರುಗಳ ವೇಷಭೂಷಣಗಳಲ್ಲಿಯೂ ತುಂಬಾ ವ್ಯತ್ಯಾಸವಿತ್ತು. ರಾಜರತ್ನಂ ಅವರು ಒಂದು ಖಾದಿ ಪೈಜಾಮ ಮತ್ತು ಖಾದೀ ಜುಬ್ಬ ಧರಿಸಿ ಬರುತ್ತಿದ್ದರು. ಅವರದು ಕಂಚಿನ ಕಂಠ. ಅವರು ಬಂದರೆ ತರಗತಿಯಲ್ಲಿ ವಿದ್ಯುತ್ ಸಂಚಾರ. ಗಂಡುಭಾಷೆ, ವಿಷಯಗಳನ್ನು ಬೋಧಿಸುವಾಗ ಅವರದೇ ವೈಯಕ್ತಿಕ ಪ್ರತಿಭೆ. ವಿ.ಸೀ. ಯವರಾದರೋ ಯಾವಾಗಲೂ ಶುಭ್ರವಾದ ಬಿಳಿ ಕಚ್ಚೆ ಪಂಚೆ, ಮುಚ್ಚು ಕಾಲರಿನ ಕೋಟು, ತಲೆಯ ಮೇಲೆ ಜರಿ ಇಲ್ಲದ ಬಿಳಿ ಪೇಟ. ಮುಖದಲ್ಲಿ ಯಾವಾಗಲೂ ಗಾಂಭೀರ್ಯ. ಇವರ ಪಾಠಗಳು ಹಾಲುಜೇನು ಕೂಡಿದಂತಿರುತ್ತಿತ್ತು. ಆಗ ನಮಗೆ 'ಕನ್ನಡ ಬಾವುಟ' ಎಂಬ ಪದ್ಯಗಳ ಪುಸ್ತಕವು ಪಠ್ಯವಾಗಿತ್ತು. ಈಗಲೂ ನನಗೆ ನೆನಪಿರುವುದು ವಿ.ಸೀ. ಯವರು ಈ ಪುಸ್ತಕದಲ್ಲಿದ್ದ ಕವನಗಳನ್ನು ವಿವರಿಸುತ್ತಿದ್ದ ಧಾಟಿ.

ನಾನು ಕಾಲೇಜು ಬಿಟ್ಟ ಅನೇಕ ವರ್ಷಗಳ ಮೇಲೆ ಅವರನ್ನು ಮಣಿಪಾಲದಲ್ಲಿ ಮತ್ತೆ ಭೇಟಿ ಆದೆ. ಅವರು ನಮ್ಮ ಮನೆಗೆ ಉಪಹಾರಕ್ಕೂ ಬಂದಿದ್ದರು. ಆಗ ಅವರನ್ನು ಅವರೇ ರಚಿಸಿದ "ಕಸ್ಮೈ ದೇವಾಯ" ಎಂಬ ಕಾವ್ಯದ ಬಗೆಗೆ ಪ್ರಶ್ನೆ ಮಾಡಿದೆ. ಅದರೊಳಗೆ

ಅಂದಿನಾ ದೇವರುಗಳೆಲ್ಲ ಮಡಿದುರುಳಿಹರು
ಇಂದ್ರ ವರುಣರು ಧನದ ಮಿತ್ರ ಪೂಷಣರು

ಎಂದಿತ್ತು. ನಾನು ಅವರನ್ನು "ಏನು ಸಾರ್ ನೀವು ದೇವರನ್ನು ನಂಬುತ್ತೀರಾ?" ಎಂದು ಕೇಳಿದೆ. ಆಗ ಅವರು "ನಾನು ಖಂಡಿತ ನಾಸ್ತಿಕನಲ್ಲ" ಎಂದು ಹೇಳಿ, ಒಂದು ಹದಿನೈದು ನಿಮಿಷ ದೇವರ ಇರುವಿನ ಬಗೆಗೆ ತರ್ಕಬದ್ಧವಾಗಿ ಮಾತನಾಡಿದರು.

ಇಂತಹ ಸರಳ, ನಿರಹಂಕಾರಿ ವಿದ್ವಾಂಸರ ಬಳಿ ಮಾತನಾಡುವ ಮತ್ತು ಅವರ ಪಾಠ ಕೇಳುವ ಅವಕಾಶ ನನಗೆ ಸಿಕ್ಕಿದ್ದು ನನ್ನ ಪುಣ್ಯವೆಂದೇ ಈಗಲೂ ಭಾವಿಸುತ್ತೇನೆ.

ಅಸಾಧಾರಣ ಪ್ರೌಢಿಮೆಯ ವಿ.ಸೀ.

ಡಿ. ನಂಜುಂಡಯ್ಯ

ನಾನು ಕಾಲೇಜಿಗೆ ಸೇರುವುದಕ್ಕೆ ಮುಂಚೆಯೇ ವಿ.ಸೀ.ಯವರ ಪರಿಚಯವಿತ್ತು. ಅವರ ವಾಚಾಳತ್ವ ಮತ್ತು ಪ್ರೌಢಿಮೆಯ ವಿಚಾರವನ್ನು ಕೇಳಿದ್ದೆ. ನಾನು ಓದುತ್ತಿದ್ದ ನ್ಯಾಷನಲ್ ಹೈಸ್ಕೂಲಿನಲ್ಲಿ ಒಂದು ಪದ್ಧತಿಯಿತ್ತು. ಮಹಾಪುರುಷರ ವಿಚಾರದಲ್ಲಿ ಪ್ರಮುಖ ಮೇಧಾವಿಗಳನ್ನು ಕರೆಯಿಸಿ ಉಪನ್ಯಾಸ ಮಾಡಿಸುತ್ತಿದ್ದರು. ಅಂತಹ ಮೇಧಾವಿಗಳಲ್ಲಿ ವಿ.ಸೀ.ಯವರೂ ಒಬ್ಬರು. ವಿ.ಸೀ. ಯವರ ಹುಟ್ಟೂರಾದ ಬೂದಿಗೆರೆ ನಮ್ಮ ಮಾವನವರ ಊರು. ಆಗಾಗ್ಗೆ ನಮ್ಮ ಮಾವನವರು ವಿ. ಸೀ.ಯವರ ವಿಚಾರ ಹೇಳುತ್ತಿದ್ದುದನ್ನು ಕೇಳಿದ್ದೆ.

ನಾನು ೧೯೪೦-೪೨ರಲ್ಲಿ ಬೆಂಗಳೂರು ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದೆ. ವಿ.ಸೀ.ಯವರು ಆ ಕಾಲದಲ್ಲಿ ಅದೇ ಕಾಲೇಜಿನಲ್ಲಿ ಕನ್ನಡದ ವಿಭಾಗದಲ್ಲಿದ್ದರು. ಅವರ ಜೊತೆ ಶ್ರೀ ಜಿ. ಪಿ. ರಾಜರತ್ನಂ ಮತ್ತು ಡಿ. ವಿ. ಶೇಷಗಿರಿರಾಯರು ಇದ್ದರು. ವಿ.ಸೀ.ಯವರು ಎ. ಎನ್. ಮೂರ್ತಿರಾಯರ "ಸಾಕ್ರೆಟೀಸನ ಕೊನೆಯ ದಿನಗಳ"ನ್ನೂ ಜಿ. ಪಿ. ರಾಜರತ್ನಂ ಅವರು ಸಿ. ಕೆ. ವೆಂಕಟರಾಮಯ್ಯನವರ "ಗೌತಮಬುದ್ಧ" ವನ್ನೂ ಡಿ. ವಿ. ಶೇಷಗಿರಿರಾಯರು "ಪಂಪರಾಮಾಯಣ"ವನ್ನೂ ತೆಗೆದುಕೊಳ್ಳುತ್ತಿದ್ದರು.

ವಿ.ಸೀ.ಯವರು ಮೊದಲನೆಯ ಟರ್ಮ್‌ನಲ್ಲಿ ಕೇವಲ ಎರಡು ವಾಕ್ಯಗಳಷ್ಟು ಪಾಠವನ್ನು ಮಾಡಿದ್ದರು! ಮೊದಲ ಟರ್ಮ್ ಪರೀಕ್ಷೆ ಹತ್ತಿರ ಬಂದಾಗ ವಿದ್ಯಾರ್ಥಿಗಳನ್ನು ಒಂದು ಸಂಶಯ ಕಾಡಿತ್ತು. ಅವರೆಗೆ ಎರಡೇ ವಾಕ್ಯಗಳನ್ನು ಮಾಡಿರುವಾಗ ವಿ.ಸೀ. ಯವರು ಏನು ಪ್ರಶ್ನೆಗಳನ್ನು ಕೊಟ್ಟಾರು ಎಂಬುದು. ಒಂದು ಸಲ ಧೈರ್ಯಮಾಡಿ ಒಬ್ಬ ವಿದ್ಯಾರ್ಥಿ ವಿ.ಸೀ. ಯವರನ್ನು ಕೇಳಿಯೇ ಬಿಟ್ಟರು. ಅದಕ್ಕೆ ವಿ.ಸೀ. ಯವರು "Do not bother. I can complete the whole book within one period and I can set hundred questions within two sentences only" ಎಂದರು. ಹುಡುಗರು ಸ್ತಬ್ಧರಾದರು. ಅವರ ಪ್ರಕಾರ "ಪುಸ್ತಕದಲ್ಲಿ ಎಲ್ಲವೂ ಇರುವುದಿಲ್ಲ. ತಿಳಿಯಬೇಕಾದ ವಿಷಯಗಳು ಬೇಕಾದಷ್ಟಿವೆ." ಅವರ ಉಪನ್ಯಾಸ ಒಂದು ವಿಷಯಕ್ಕಾಗಲಿ ಅಥವಾ ಒಂದು ಸೀಮಿತಕ್ಕಾಗಲಿ ಒಳಪಟ್ಟಿರುತ್ತಿರಲಿಲ್ಲ. ಎಲ್ಲಾ ವಿಷಯಗಳಲ್ಲಿ ಅವರ ಪ್ರೌಢಿಮೆ ಅಸಾಧಾರಣವಾದದ್ದು. ಅದು ಒಂದು ದೈವಿಕ ಅನುಗ್ರಹವೆಂದೇ ಹೇಳಬೇಕು.

ಮಾಮೂಲಿನಂತೆ ಒಂದು ಸಲ ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು 'ಇನ್ಸ್‌ಪೆಕ್ಷನ್'ಗೆ ಬಂದರು. ವಿ.ಸೀ.ಯವರು ಅವರನ್ನು ತರಗತಿಗೆ ಕರೆದುಕೊಂಡು ಬಂದರು; ಮಾಮೂಲಿನಂತೆ ತಮ್ಮ ಪಾಠವನ್ನು ಮಾಡಿದರು. ಅವರ ಪದ್ಧತಿ ಅಥವಾ ಧಾಟಿಯಲ್ಲಿ ಏನೂ ವ್ಯತ್ಯಾಸವಿರಲಿಲ್ಲ.

ನಾನು ಜೂನ್ ೧೯೪೩ರಲ್ಲಿ ಮೈಸೂರಿಗೆ ಹೋದೆ. ಆಗಿನ ಕಾಲದಲ್ಲಿ ಬೆಂಗಳೂರಲ್ಲಿ ಆರ್ಟ್ಸ್ (ಕಲಾವಿಭಾಗ) ಇರಲಿಲ್ಲ. ವಿಜ್ಞಾನ ವಿಷಯಗಳ ವ್ಯಾಸಂಗ ಬೆಂಗಳೂರಿನಲ್ಲಿ, ಆರ್ಟ್ಸ್ ವ್ಯಾಸಂಗ ಮೈಸೂರಿನಲ್ಲಿತ್ತು. ಅದೇ ಕಾಲದಲ್ಲಿ ವಿ.ಸೀ.ಯವರು ಬೆಂಗಳೂರಿನಿಂದ ಮೈಸೂರು ಮಹಾರಾಜಾ ಕಾಲೇಜಿಗೆ ವರ್ಗವಾಗಿ ಬಂದರು. ಮಹಾರಾಜ ಕಾಲೇಜಿನಲ್ಲಿ ವಿ.ಸೀ.ಯವರು, ಎನ್. ಅನಂತರಂಗಾಚಾರ್ಯರು ಮತ್ತು ಎ. ಆರ್. ಕೃಷ್ಣಶಾಸ್ತ್ರಿಗಳು ಇದ್ದರು. ಮೈಸೂರು ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಕೆ. ವೆಂಕಟರಾಮಪ್ಪನವರು ಮತ್ತು ಪ್ರೊ. ಡಿ. ಎಲ್. ನರಸಿಂಹಾಚಾರ್ಯರು ಇದ್ದರು. ನಮ್ಮ ತರಗತಿಗೆ ವಿ.ಸೀ.ಯವರು ಯಾವ ಪಾಠವನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಸೀನಿಯರ್ ಬಿ.ಎ. ವಿಭಾಗಗಳನ್ನೂ ಸೇರಿಸಿ ಕ್ಲಾಸಿಗೆ 'ಶಾಕುಂತಲ' ನಾಟಕವನ್ನು ತೆಗೆದುಕೊಳ್ಳುತ್ತಿದ್ದರು. ಆ ಕಾಲದಲ್ಲಿ ನಮ್ಮ ತರಗತಿಗೆ ವಿರಾಮ ಇದ್ದುದರಿಂದ, ಆಸಕ್ತಿ ಇದ್ದ ಹುಡುಗರೆಲ್ಲರೂ ಅವರ ಉಪನ್ಯಾಸ ಕೇಳಲು ಹೋಗುತ್ತಿದ್ದೆವು. ಅದೊಂದು ಅಪೂರ್ವ ಅನುಭವವೆಂದೇ ಹೇಳಬೇಕು. ಕೃಷ್ಣಶಾಸ್ತ್ರಿಗಳು ಬಿ. ವೆಂಕಟಾಚಾರ್ಯರ 'ವಿಷವೃಕ್ಷ'ವನ್ನೂ ಎನ್. ಅನಂತರಂಗಾಚಾರ್ಯರು ಬಿ.ಎಂ.ಶ್ರೀ. ಅವರ 'ಅಶ್ವತ್ಥಾಮನ್' ನಾಟಕವನ್ನೂ ತೆಗೆದುಕೊಳ್ಳುತ್ತಿದ್ದರು.

ನನ್ನ ವೈಯಕ್ತಿಕ ತಿಳಿವಳಿಕೆಯಲ್ಲಿ ವಿ.ಸೀ. ಅವರ ವಿಚಾರದಲ್ಲಿ ಕೆಳಗೆ ಕಾಣಿಸಿರುವ ವಿಷಯವನ್ನು ತಿಳಿದಿರುತ್ತೇನೆ:

೧. ಅವರು ಉಪನ್ಯಾಸ ಮಾಡುತ್ತಿದ್ದ ರೀತಿ ಅಸಾಧಾರಣವಾದದ್ದು. ಅವರ ಜ್ಞಾನಭಂಡಾರ ಸೀಮಿತವಲ್ಲದ್ದು. ಅವರ ಜ್ಞಾನಕೋಶಕ್ಕೆ ಒಂದು ಮಿತಿಯಿಲ್ಲ. ಅವರ ಪಾಠ ವೈಖರಿಯನ್ನು ದೇವರ ಅನುಗ್ರಹವೆಂದೇ ತಿಳಿಯಬೇಕು. ಗಂಗಾನದಿಯ ಪ್ರವಾಹದಂತಿರುತ್ತಿತ್ತು ಅವರ ಉಪನ್ಯಾಸ.

೨. ತರಗತಿಯಲ್ಲಿದ್ದ ಕಪ್ಪುಹಲಗೆ ಅವರ ಜ್ಞಾನಾರ್ಜನೆಗೆ ಏನೇನೂ ಸಾಲದು. ಒಂದು ಅಂಗುಲ ಸ್ಥಳವೂ ಖಾಲಿ ಇರುತ್ತಿರಲಿಲ್ಲ. ಅವರ Vocabulary ಸೀಮಿತವಲ್ಲದ್ದು.

೩. ಅವರ ವಿದ್ಯಾಭ್ಯಾಸ ಅರ್ಥಶಾಸ್ತ್ರದಲ್ಲಾದರೂ ಅವರ ಉದ್ಯೋಗ ಕನ್ನಡದಲ್ಲಿ ಉಪನ್ಯಾಸಕರು. ಇದೊಂದು ವೈಶಿಷ್ಟ್ಯವೇ. ಅವರಿಗೆ ಗೊತ್ತಿಲ್ಲದ, ಅನುಭವವಿಲ್ಲದ ವಿಚಾರವೇ ಇರುತ್ತಿರಲಿಲ್ಲ. ಒಂದು ಮಾತಿನಲ್ಲಿ ಹೇಳುವುದಾದರೆ, ಅವರು ಒಂದು ವಿಶ್ವಕೋಶವೆಂದೇ ಹೇಳಬೇಕು.

೪. ಒಂದು ದಿನವಾದರೂ "ಗಲಾಟೆ ಮಾಡಬೇಡಿ" ಎಂಬ ಮಾತನ್ನು ಅವರಿಂದ ಕೇಳಲಿಲ್ಲ ಮತ್ತು ಆ ವಿಚಾರದಲ್ಲಿ ವಿದ್ಯಾರ್ಥಿಗಳಿಗೆ ಅವರು ಒಂದು ಮಾತೂ ಹೇಳಲಿಲ್ಲ. ಇದು ವಿದ್ಯಾರ್ಥಿಗಳಲ್ಲಿ ಅವರಿಗಿದ್ದ ಗೌರವವನ್ನೂ ತೋರಿಸುತ್ತದೆ.

೫. ತರಗತಿ ಬಿಟ್ಟರೆ ಅವರು ವಿದ್ಯಾರ್ಥಿಗಳನ್ನು ಹೊರಗಡೆ ಕಾಣುತ್ತಿದ್ದ ಮತ್ತು ವಿಚಾರಿಸುತ್ತಿದ್ದ ರೀತಿ ಬಹಳ ಶ್ಲಾಘ್ಯವಾದದ್ದು. ಅವರ ಅಂತಃಕರಣ, ಸ್ನೇಹಭಾವ ಮತ್ತು ಸಮಾನತೆ ಆತ್ಮೀಯವಾದ್ದು, ಅನುಕರಣೀಯವಾದ್ದು.

೬. ಅವರದು ಉಪಕರಿಸುವ, ಸಹಾಯ ಹಸ್ತ ನೀಡುವ ಸ್ವಭಾವ. ನನ್ನದೇ ಒಂದು ವೈಯಕ್ತಿಕ ವಿಚಾರವನ್ನು ತಿಳಿಸಲು ಇಷ್ಟಪಡುತ್ತೇನೆ. ನಾನು ಬಡಕುಟುಂಬದಲ್ಲಿ ಹುಟ್ಟಿದವನು. ನಮ್ಮ ತಂದೆಯವರಿಗೆ ಸರಿಯಾದ ಆದಾಯವಿರಲಿಲ್ಲ. ನಮ್ಮ ಊರಿನ ಶಾನುಭೋಗರಾಗಿದ್ದುದರಿಂದ ವರ್ಷಕ್ಕೆ ಎಪ್ಪತ್ತೈದು ರೂಪಾಯಿಗಳ ಪೋಟಿಗೆ ಬರುತ್ತಿತ್ತು. ನಮ್ಮ ದೊಡ್ಡ ಅಣ್ಣನವರಿಗೆ ಪ್ರೈಮರಿ ಶಾಲೆಯ ಮೇಷ್ಟರಾಗಿ ತಿಂಗಳಿಗೆ ಹದಿನೈದು ರೂಪಾಯಿ ಸಂಬಳ. ಮನೆಯಲ್ಲಿ ಸುಮಾರು ೯–೧೦ ಜನಗಳು. ಇದರಿಂದ ನನಗೋ ಲೋಯರ್ ಸೆಕೆಂಡರಿ ಆಗುವುದೇ ಕಷ್ಟವಾಗಿತ್ತು. ಅಂಥಾದ್ದರಲ್ಲಿ ನಮ್ಮ ಚಿಕ್ಕಪ್ಪ ಮತ್ತು ಚಿಕ್ಕಮ್ಮನವರ ಸಹಾಯದಿಂದ ಸ್ವಲ್ಪ ಸ್ವಲ್ಪವೇ ಮುಂದಕ್ಕೆ ಓದಿದೆ. ವಿ.ಸೀ.ಯವರು ಕೊಡಿಸಿದ ಹಾಫ್ ಫ್ರೀ ಸ್ಟೂಡೆಂಟ್‌ಪಿಷ್‌ನಿಂದಾಗಿ ಇಂಟರ್ ಮೀಡಿಯೆಟ್ಟನ್ನು, ಮಹಾರಾಜ ಕಾಲೇಜಿನಲ್ಲಿ ಬಿ.ಎ. ಅನ್ನು ಓದಿ ಮುಗಿಸಿದೆ. ಇದು ಅವರ ಅಂತಃಕರಣವನ್ನೂ ಸಹಾಯ ಮಾಡುವ ಮನೋವೃತ್ತಿಯನ್ನೂ ತೋರಿಸುತ್ತದೆ.

೭. ಪಾಠ ಮಾಡುವಾಗ ಆಗಲಿ, ಉಪನ್ಯಾಸದಲ್ಲಿಯಾಗಲಿ ಒಂದು ಠೀವಿಯಿಂದ, ಒಂದು ಅಧಿಕಾರವಾಣಿಯಿಂದ ಹೇಳುವ ಸ್ವಭಾವ ಅವರದು. ಅವರು ಯಾವಾಗಲಾದರೂ ಯಾವ ವಿಚಾರದಲ್ಲಿಯಾಗಲಿ ತೀರ್ಮಾನಕ್ಕೆ ಬರಲಾಗದಿದ್ದರೆ, ತಮ್ಮ ಅಧಿಕಾರ ರೀತಿಯ ಗತ್ತಿನ ಮಾತನ್ನು ಮೆಲ್ಲಗೆ ಮಾಡಿ ಬಹಳ ಸಣ್ಣ ದನಿಯಲ್ಲಿ "ಏನು ಮಾಡುವುದು? ಕೆಲವು ವೇಳೆ ಹಾಗಾಗುತ್ತೆ. ಯತ್ನವಿಲ್ಲ, ನಾವು ಕೇಳಬೇಕಾಗುತ್ತೆ, ಮಾಡಬೇಕಾಗುತ್ತೆ, ಬೇರೆ ದಾರಿ ಇಲ್ಲ" ಎನ್ನುತ್ತಿದ್ದುದು ಅವರ ಸ್ವಭಾವ.

ಮಾನವೀಯತೆಯ ಮಹಾವ್ಯಕ್ತಿ

ವಿ. ಸತ್ಯನಾರಾಯಣ

ವಿ.ಸೀ. ಅವರ ಹೆಸರನ್ನು ಕೇಳಿದ್ದು ನಾನು ಲೋಯರ್ ಸೆಕೆಂಡರಿ (ಈಗಿನ ಏಳನೆಯ ತರಗತಿ)ಯಲ್ಲಿದ್ದಾಗ. ಆಗ ನನ್ನ ಗುರುಗಳಾಗಿದ್ದ ಚೆನ್ನಬಸಪ್ಪನವರು ತಮ್ಮ ಗುರು ವಿ.ಸೀ. ಅವರ "ಮನೆ ತುಂಬಿಸುವ ಹಾಡ"ನ್ನು ಇಂಪಾಗಿ, ಭಾವಪೂರ್ಣವಾಗಿ ಹಾಡಿ ತೋರಿಸಿದಾಗ. ಅಂದಿನಿಂದ ವಿ.ಸೀ. ಅವರನ್ನು ಕಾಣಬೇಕೆಂಬ ಹಂಬಲ ಮನದಲ್ಲಿ ಮೂಡಿತ್ತು.

ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಕಾಂಗ್ರೆಸ್ ನಾಯಕ ಶ್ರೀ ನಾರಿಮನ್ ಬೆಂಗಳೂರಿಗೆ ಬಂದಿದ್ದರು. ಅವರ ಭಾಷಣದ ಸಂದರ್ಭದಲ್ಲಿ ಪೊಲೀಸರು ಬೆಂಗಳೂರಿನ ಇಂಟರ್ ಮೀಡಿಯೆಟ್ ಕಾಲೇಜಿನೊಳಕ್ಕೆ ನುಗ್ಗಿ ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ ಮಾಡಿದಾಗ, ಅದನ್ನು ಪ್ರತಿಭಟಿಸಿದವರು ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದ ವಿ.ಸೀ. ಎಂದು ಕೇಳಿ ಅವರ ಬಗ್ಗೆ ವಿಶೇಷ ಅಭಿಮಾನ ಗೌರವಗಳು ಮೂಡಿದ್ದವು.

೧೯೪೧ರಲ್ಲಿ ನಾನು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೇಲೆ ಬೆಂಗಳೂರಿನ ಇಂಟರ್ ಮೀಡಿಯೆಟ್ ಕಾಲೇಜ್ ಸೇರಿದ ನಂತರ ಎರಡು ವರ್ಷಗಳ ಕಾಲ ವಿ.ಸೀ. ಅವರ ಪಾಠ ಪ್ರವಚನಗಳನ್ನು ಸವಿಯುವ ಸದವಕಾಶ ದೊರೆಯಿತು. ಆ ಅವಧಿಯಲ್ಲಿ ಮಾಸ್ತಿಯವರ "ಆದಿಕವಿ ವಾಲ್ಮೀಕಿ", ಡಿ.ವಿ.ಜಿ. ಯವರ "ವಿದ್ಯಾರಣ್ಯ ವಿಜಯ" ಕೃತಿಗಳ ಸಾರಸರ್ವಸ್ವದ ಪರಿಚಯ ಮಾಡಿಕೊಟ್ಟರು. ವಾರ್ಷಿಕ ಪರೀಕ್ಷೆಗೆ ಫೀಸ್ ತುಂಬಲು ಬಡ ವಿದ್ಯಾರ್ಥಿಗಳಿಗೆ ನೆರವು ನೀಡುವಲ್ಲಿ ಅವರದು ಕೊಡುಗೈ. ತಮ್ಮ ಜೇಬು ಬರಿದಾಗುವವರೆಗೂ ಅದಕ್ಕೆ ಬಿಡುವಿಲ್ಲ.

ಇದೇ ಅವಧಿಯಲ್ಲಿ ರವೀಂದ್ರನಾಥ ಟಾಗೋರರ ನಿಧನವಾಯಿತು. ಅಂದು ಶೋಕಸಭೆಯಲ್ಲಿ ಟಾಗೋರರನ್ನು ಕುರಿತು ಭಾಷಣ ಮಾಡಿದವರು ವಿ.ಸೀ. ಅವರೊಬ್ಬರೇ. ಆಗ ಅವರು ಇಂಗ್ಲಿಷ್‌ನಲ್ಲಿ ಭಾಷಣ ಮಾಡಿದ್ದನ್ನು ಮೊದಲ ಬಾರಿಗೆ ಕೇಳುವ ಅವಕಾಶ ನಮಗೆ ದೊರೆಯಿತು.

೧೯೪೩ರ ಮೇ ತಿಂಗಳಲ್ಲಿ ಇಂಟರ್ ಮೀಡಿಯೆಟ್ ಪರೀಕ್ಷೆಯ ಫಲಿತಾಂಶ ಹೊರಬಿತ್ತು. ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದೆ. ನಾನು ಮತ್ತು ನಮ್ಮ ಅಣ್ಣ

ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನ ಮುಂದಿನ ರಸ್ತೆಯಲ್ಲಿ ಬರುತ್ತಿದ್ದೆವು. ವಿ.ಸೀ. ಮಹಿಳಾ ಸೇವಾ ಸಮಾಜದ ಕಡೆಯಿಂದ ಹೊರಟಿದ್ದರು. "ಏನಪ್ಪಾ ಏನಾಯಿತು?" ಎಂದರು. "ಸೆಕೆಂಡ್ ಕ್ಲಾಸಲ್ಲಿ ಪಾಸಾಗಿದೆ" ಎಂದೆ. "ಮುಂದೇನು?" ಎಂದರು. "ಮೈಸೂರಿಗೆ ಹೊರಡಬೇಕೆಂದಿದ್ದೇನೆ" ಎಂದೆ. (ಆ ಕಾಲದಲ್ಲಿ ಪದವಿ ತರಗತಿಗೆ ಸೇರಬೇಕಾದರೆ ರಾಜ್ಯದ ಆರ್ಟ್ಸ್ ವಿದ್ಯಾರ್ಥಿಗಳೆಲ್ಲ ಮೈಸೂರಿನ ಮಹಾರಾಜಾ ಕಾಲೇಜಿಗೇ ಬರಬೇಕಾಗಿತ್ತು) "ಯೋಚನೆ ಮಾಡಬೇಡಿ, ಹೊರಡಿ, ನನಗೂ ಮೈಸೂರಿಗೆ ವರ್ಗವಾಗಿದೆ. ಎಲ್ಲ ಅನುಕೂಲವಾಗುತ್ತೆ, ಬನ್ನಿ" ಎಂದರು.

೧೯೪೭ ಜೂನ್‌ನಲ್ಲಿ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ತರಗತಿಗೆ ಸೇರಿದೆ. ವಾರಾನ್ನ ಮಾಡಿಕೊಂಡು ಓದು ಮುಂದುವರಿಸುವುದು ಎಂದು ತೀರ್ಮಾನಿಸಿದೆ. ವಿ.ಸೀ. ಅವರ ಮನೆಯಲ್ಲೂ ಒಂದು ವಾರ ಸಿಕ್ಕಿತೆಂದು ಬೇರೆ ಹೇಳಬೇಕಾಗಿಲ್ಲ. ಊಟಕ್ಕೆ ಯಾವಾಗ ತೊಂದರೆಯಾದರೂ ಅವರ ಮನೆಗೆ ಬರಬೇಕೆಂದು ಶಾಶ್ವತವಾದ ಆಮಂತ್ರಣ ಇದ್ದೇ ಇತ್ತು. ಕೆಲವು ವಿಶೇಷ ಸಂದರ್ಭಗಳ ಪರಿಣಾಮವಾಗಿ ನಾನು ಕೆಲವೇ ದಿನಗಳಲ್ಲಿ ಕನ್ನಡ ಆನರ್ಸ್‌ಗೆ ಸೇರಬೇಕಾಯಿತು. ವಿ.ಸೀ. ಅವರ ಸಲಹೆಯಂತೆ ತೆಲುಗು ಭಾಷೆಯನ್ನು 'ಮೈನರ್ ಲಾಂಗ್ವೇಜ್' ಆಗಿ ತೆಗೆದುಕೊಂಡದ್ದರಿಂದ ಶ್ರೀ ರಾಳ್ಲಪಲ್ಲಿ ಅನಂತಕೃಷ್ಣಶರ್ಮರ ಶಿಷ್ಯನಾಗುವ ಸದವಕಾಶ ದೊರೆಯಿತು.

ಒಂದು ದಿನ ಮೊದಲನೆಯ ಪೀರಿಯಡ್‌ನಲ್ಲಿ ಹಾಜರಿದ್ದ ನಾನು ಮುಂದಿನ ಪೀರಿಯಡ್ ಹೊತ್ತಿಗೆ ಜ್ವರ (ಮಲೇರಿಯಾ) ಬಂದ ಕಾರಣ ವಿ.ಸೀ. ಅವರ ತರಗತಿಗೆ ಹಾಜರಿರಲು ಆಗಲಿಲ್ಲ. ಈ ಸಂಗತಿ (ಜ್ವರ ಬಂದ ಸಂಗತಿ) ತಿಳಿಯದ ಅವರು ನಾನು ಅವರ ತರಗತಿಗೆ ಚಕ್ಕರ್ ಹೊಡೆದೆನೆಂದು ಭಾವಿಸಿ ಅಸಮಾಧಾನಗೊಂಡರೆಂದು ಗೊತ್ತಾಯಿತು. ಜ್ವರವಿದ್ದುದರಿಂದ ಮಾರನೆಯ ದಿನವೂ ನಾನು ಕಾಲೇಜಿಗೆ ಹೋಗಲಾಗಲಿಲ್ಲ. ವಿ.ಸೀ. ಅವರ ಮನಸ್ಸಿಗೆ ಸಮಾಧಾನವಾಗದೆ ನನ್ನ ಸಹಪಾಠಿಗಳಿಂದ ನನ್ನ ಅನಾರೋಗ್ಯದ ವಿಷಯ ತಿಳಿದುಕೊಂಡು ನಾನು ವಾಸವಾಗಿದ್ದ ಕೋಣೆಯನ್ನು ಹುಡುಕಿಕೊಂಡು ಬಂದು ನನ್ನ ದೇಹಸ್ಥಿತಿ ವಿಚಾರಿಸಿ "ಮನೆಗೆ ನಡಿ" ಎಂದು ಕೂತರು. ಗುರುವಿನ ಈ ಮಮತೆ ಎಷ್ಟು ಜನಕ್ಕೆ ಸಿಕ್ಕೀತು?

ವಿ.ಸೀ. ಅವರ ಹಿರಿಯ ಮಗಳು ಶ್ರೀಮತಿ ಕಮಲಾಳ ಮದುವೆ ಮುಗಿಸಿಕೊಂಡು ಅವರು ಮತ್ತು ನಾನು ಬೆಂಗಳೂರಿನಿಂದ ಮೈಸೂರಿಗೆ ಹಿಂತಿರುಗಿದೆವು. ಟಾಂಗಾದವನು ಮನಬಂದಂತೆ ಬಾಡಿಗೆ ಕೇಳಿದ್ದರಿಂದ ಅವರು ನಡೆದುಕೊಂಡೇ ಮನೆಗೆ ಹೋಗುವುದೆಂದು ತೀರ್ಮಾನಿಸಿ ಶಾರದಾ ವಿಲಾಸ ಹೈಸ್ಕೂಲಿನ ಹಿಂಭಾಗದಲ್ಲಿದ್ದ ತಮ್ಮ ಮನೆಯ ಕಡೆಗೆ ನಡೆದೇಬಿಟ್ಟರು. ಅವರ ಕೈಯಲ್ಲಿದ್ದ ಹಾಸಿಗೆ ಸುರಳಿಯನ್ನು ನನ್ನ ಕೈಗೆ ಕೊಡಿರೆಂದು ಎಷ್ಟು ಕೇಳಿಕೊಂಡರೂ ಕೊಡದೆ ಅಷ್ಟು ದೂರ ತಾವೇ ತೆಗೆದುಕೊಂಡು ಹೋದರು. ತಮ್ಮ ವೈಯಕ್ತಿಕ ಕೆಲಸಗಳನ್ನು ತಪ್ಪಿ ಸಹಿತ ತಮ್ಮ ಶಿಷ್ಯರ ಕಡೆಯಿಂದ ಮಾಡಿಸುತ್ತಿರಲಿಲ್ಲ.

ಕಾಲೇಜಿಗೆ ರಜೆಯಿದ್ದ ದಿನಗಳಲ್ಲಿ special class ತೆಗೆದುಕೊಂಡರೆ ನಮಗೆ ಹೊಟ್ಟೆ ತುಂಬ ತಿಂಡಿ ಕೊಡಿಸಿ ನಂತರವೇ ಪಾಠ ಪ್ರಾರಂಭಿಸುತ್ತಿದ್ದುದು.

ಒಮ್ಮೆ "ಭಾರತದ ಹಣಕಾಸಿನ ಪರಿಸ್ಥಿತಿ, ಅದನ್ನು ಉತ್ತಮ ಪಡಿಸಲು ಸಲಹೆಗಳು" ಎಂಬ ವಿಷಯವಾಗಿ ವಿ.ಸೀ. ಇಂಗ್ಲಿಷಿನಲ್ಲಿ ಭಾಷಣ ಮಾಡುವರು ಎಂಬುದನ್ನು ಕೇಳಿ ವಿದ್ಯಾರ್ಥಿಗಳಿಗೆಲ್ಲಾ ಆಶ್ಚರ್ಯ. ಕನ್ನಡದ ಈ ಪ್ರಾಧ್ಯಾಪಕರು ಅರ್ಥಶಾಸ್ತ್ರದ ವಿಷಯವನ್ನು ಕುರಿತು ಇಂಗ್ಲಿಷಲ್ಲಿ ಮಾಡುವ ಭಾಷಣವನ್ನು ಕೇಳಲು ಸಭಾಂಗಣ ತುಂಬಿಹೋಗಿತ್ತು.

ಗುಲ್ಬರ್ಗದ ಕನ್ನಡ ಸಾಹಿತ್ಯ ಸಂಘವು ನಡೆಸುತ್ತಿದ್ದ ನಾಡಹಬ್ಬದ ಕಾರ್ಯಕ್ರಮಕ್ಕೆ ಒಮ್ಮೆ ವಿ.ಸೀ. ಅವರನ್ನು ಆಮಂತ್ರಿಸಲಾಗಿತ್ತು. ಹಿಂದಿನ ದಿನ ಕಾರ್ಯಕ್ರಮಕ್ಕೆ ಆಗಮಿಸಿದ್ದ ಆಮಂತ್ರಿತರು ಕಾವ್ಯವಾಚನ ನಡೆಸಿದ್ದರು. ಶ್ರೋತೃಗಳಿಗೆ ಅದು ಅಷ್ಟು ಹಿಡಿಸಿರಲಿಲ್ಲ. ಎರಡನೆಯ ದಿನ ಬಂದಿದ್ದ ವಿ.ಸೀ. ಅವರೂ ಕಾವ್ಯವಾಚನವನ್ನೇ ಮಾಡುವುದಾಗಿ ಹೇಳಿದರು. ಕೂಡಲೇ ನಾನು "ಸಾರ್, ನಿನ್ನೆ ಕಾವ್ಯವಾಚನ ಕಾರ್ಯಕ್ರಮ ಹೀಗಾಯಿತು. ಆದ್ದರಿಂದ ನೀವು ಭಾಷಣ ಮಾಡುವುದೇ ಉತ್ತಮ" ಎಂದೆ. ಇದರಿಂದ ಅಸಮಾಧಾನಗೊಂಡ ಅವರು "ಏನು? ನೀನೂ ಹೀಗೆ ಹೇಳುತ್ತೀಯಾ? I take this as a challenge. I stake all my prestige and do ಕಾವ್ಯವಾಚನ only" ಎಂದರು. ಸಭೆಗೆ ಬಂದವರೆ, ಸಭಿಕರನ್ನು ಉದ್ದೇಶಿಸಿ "ಇಂದು ನಾನು ಕಾವ್ಯವಾಚನವನ್ನು ಮಾಡುತ್ತೇನೆ. ನಿಮಗೆ ಬೇಸರ ಎನಿಸಿದರೆ ಕೈ ಎತ್ತಿ. ಕೂಡಲೆ ಕಾವ್ಯವಾಚನ ನಿಲ್ಲಿಸಿ ಭಾಷಣ ಆರಂಭಿಸುತ್ತೇನೆ" ಎಂದು ಹೇಳಿ ಕಾವ್ಯವಾಚನ ಪ್ರಾರಂಭಿಸಿದರು. ಕೊನೆಯವರೆಗೂ ಯಾರೂ ಕೈ ಎತ್ತಲಿಲ್ಲ. ಸಭಿಕರೆಲ್ಲ ಸಂತೃಪ್ತರಾಗಿದ್ದರು.

ನಾನು ಆನರ್ಸ್ ಎರಡನೆಯ ವರ್ಷದಲ್ಲಿದ್ದಾಗ ವಿ.ಸೀ. ಡಾ|| ಎ. ಎನ್. ನರಸಿಂಹಯ್ಯನವರಿಗೆ ಹೇಳಿ ದಿ. ವಿಠ್ಠಲರಾವ್ ಶೇಷಣ್ಣ ಉಚಿತ ವಿದ್ಯಾರ್ಥಿ ನಿಲಯದಲ್ಲಿ ನನಗೆ ಸ್ಥಾನ ದೊರಕಿಸಿಕೊಟ್ಟರು. ಎಂ.ಎ. ಪರೀಕ್ಷೆ ಮುಗಿಯುತ್ತಿದ್ದಂತೆಯೇ ೧೯೪೭ರ ಜುಲೈನಲ್ಲಿ ಗುಲ್ಬರ್ಗದ ನೂತನ ವಿದ್ಯಾಲಯದಲ್ಲಿ ನೌಕರಿಗೆ ಶಿಫಾರ್ಸು ಮಾಡಿ ನಾನು ಒಂದು ಕಡೆ ನೆಲೆ ನಿಲ್ಲುವಂತೆ ಮಾಡಿದರು.

೧೯೪೧ ರಿಂದ ೧೯೪೭ರವರೆಗಿನ ಆರು ವರ್ಷಗಳ ಕಾಲ ಕಾಲೇಜಿನಲ್ಲಿ ವಿ.ಸೀ. ಅವರ ಪಾಠ, ಪ್ರವಚನಗಳನ್ನು ಸವಿಯುವ ಸೌಭಾಗ್ಯ ನನಗೊಬ್ಬನಿಗೇ ದೊರೆಯಿತೆಂದು ತೋರುತ್ತದೆ. ಅನ್ನವಿಟ್ಟ, ವಿದ್ಯೆ ಕೊಟ್ಟ, ಉದ್ಯೋಗ ಕೊಡಿಸಿ ನನ್ನನ್ನು ಮಾನವನನ್ನಾಗಿ ಮಾಡಿದ ಮಹಾವ್ಯಕ್ತಿ ವಿ.ಸೀ.

ನಮ್ಮ ಮೇಷ್ಟ್ರು

ಸಿ. ಆರ್. ರಾವ್

ಅನೇಕ ರವಿವಾರಗಳಂತೆಯೇ ಅದೂ ಒಂದು ರವಿವಾರ. ಒಂದು ಸಾಹಿತ್ಯ ಕಾರ್ಯಕ್ರಮಕ್ಕಾಗಿ ನೆರೆದಿದ್ದ ಗೆಳೆಯರೊಂದಿಗೆ ಹರಟೆ ಹೊಡೆಯುತ್ತಿದ್ದಾಗ ಬಂತು ಸಿಡಿಲಿನಂತೆ, ವಿ. ಸೀ. ಮಡಿದರೆಂಬ ವಾರ್ತೆ. ಕೂಡಲೇ ದಿವಂಗತರ ಮನೆಗೆ ಧಾವಿಸಿದೆ. ಶುಭ್ರವಾದ ಬಿಳೀ ಬಟ್ಟೆಯನ್ನು ಹೊದ್ದು ಮಲಗಿದ್ದರು ವಿ. ಸೀ. ಸಹಜವಾಗಿಯೇ ಅನೇಕ ನೆನಪುಗಳು ನನ್ನನ್ನು ಮುತ್ತಿದುವು.

ಅದೇ ಮನೆಯಲ್ಲಿ, ಅದೇ ಕೊಠಡಿಯಲ್ಲಿ, ಎರಡು ವರ್ಷದ ಹಿಂದೆ (ಅಕ್ಟೋಬರ್ ಎರಡರಂದು) ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲು ಕೆಲವು ಸ್ನೇಹಿತರ ಜೊತೆ ಹೋಗಿ ಅವರಿಗೆ ಪ್ರಿಯವಾದ ಅಪ್ಪಟ ಬಿಳಿಯ ಪಂಚೆ ಮತ್ತು ಜುಬ್ಬದ ಬಟ್ಟೆ (೧೭೦೩ ಮಲ್ಲು ಇಲ್ಲವಾಗಿದೆಯಾಗಿ ಅದಕ್ಕೆ ಸಮನಾದುದನ್ನು ಕೊಂಡಿದ್ದೆವು!) ಕೊಟ್ಟಿದ್ದು; ಅದಕ್ಕೂ ಎರಡು ವರ್ಷದ ಹಿಂದೆ ಅವರ "ಹಿರಿಯರು–ಗೆಳೆಯರು" ಪುಸ್ತಕದಲ್ಲಿ ನುಸುಳಿದ್ದ ಒಂದು ತಪ್ಪನ್ನು ಅವರ ಗಮನಕ್ಕೆ ತರಲು ಹೋಗಿದ್ದು; ಆಗ ಅವರು ಮುಖ ಸಿಂಡರಿಸಿಕೊಂಡೇ ಮೆಚ್ಚುಕೆಯನ್ನು ವ್ಯಕ್ತಪಡಿಸಿದ್ದು – ಹೀಗೆ ಹಿಂದೆ ಹೋಗುತ್ತಾ ಸುಮಾರು ನಾಲ್ಕು ದಶಕಗಳನ್ನು ದಾಟಿ, ಆಗಿನ ಬೆಂಗಳೂರು ಇಂಟರ್ ಮೀಡಿಯಟ್ ಕಾಲೇಜಿನ ಒಂದು ಕೊಠಡಿಯನ್ನು ಹೊಕ್ಕೆ, ಮಾನಸಿಕವಾಗಿ.

ಕನ್ನಡ ತರಗತಿ; ಪಠ್ಯಪುಸ್ತಕ ಡಿ.ವಿ.ಜಿ. ಯವರ "ಶ್ರೀ ವಿದ್ಯಾರಣ್ಯ ವಿಜಯ"; ಸೂತ್ರಧಾರ, ಕಂದಪದ್ಯಗಳನ್ನೊಳಗೊಂಡ ಸಾಂಪ್ರದಾಯಿಕ ನಾಟಕ. ನನ್ನ ಸಹಪಾಠಿಗಳಲ್ಲಿ ಕೆಲವರಾಗಲೇ ಅದನ್ನು ಕಬ್ಬಿಣದ ಕಡಲೆ ಎಂದು write off ಮಾಡಿಬಿಟ್ಟಿದ್ದರು! ಇನ್ನೊಂದು ಪಠ್ಯಪುಸ್ತಕ ಸಿ.ಕೆ.ವಿ. ಯವರ "ಗೌತಮ ಬುದ್ಧ"; ಸರಿ, ತೇರ್ಗಡೆಯಾಗಲು ಅಗತ್ಯವಾದ ೩೫ ಅಂಕಗಳಿಗೆ "ಬುದ್ಧಂ ಶರಣಂ ಗಚ್ಛಾಮಿ" ಎಂದು ನಿರ್ಧರಿಸಿದ್ದರು. ಅಂದು ವಿದ್ಯಾರಣ್ಯ ವಿಜಯವನ್ನು ಪಾಠ ಮಾಡಲು ವಿ.ಸೀ. ಬರುತ್ತಾರೆಂದು ನಮ್ಮಲ್ಲಿ ಕೆಲವರಿಗಂತೂ ತುಂಬ ಖುಷಿಯಾಯಿತು. ಅದುವರೆಗೆ ವಿ.ಸೀ. ಯವರು ಸಾಕಷ್ಟು ಪ್ರಸಿದ್ಧರಾಗಿದ್ದರು. ಆ ಪ್ರಸಿದ್ಧಿಗೆ ಅನೇಕ ಕಾರಣಗಳಿದ್ದರೂ, ನನ್ನ ಮೆಚ್ಚಿಕೆಗೆ ಇದ್ದ ಕಾರಣಗಳಿಂದರೆ – ಅವರು ಬರೆದಿದ್ದ "ಪಂಪಾಯಾತ್ರೆ", ಅವರು ಅರ್ಥಶಾಸ್ತ್ರದಲ್ಲಿ

ಎಂ.ಎ. ಎಂಬುದು ಮತ್ತು ಅವರು ಕನ್ನಡ ಪಾಠವನ್ನು ಇಂಗ್ಲಿಷಿನಲ್ಲಿ ಮಾಡುತ್ತಾರೆ ಎಂಬುದು. ಈ ಮುಪ್ಪುರಿಗೊಂಡು, ಅಂದಿನ ತರಗತಿಗೆ ಅವರು ಬರುವುದನ್ನು ಕಾಯುತ್ತಿದ್ದೆ. ವಿ.ಸೀ. ಬಂದರು. ನಮ್ಮ ಮೇಷ್ಟ್ರು ಬಂದರು.

ಅವರ ಉಡುಪಿನ ಶಿಸ್ತು ಇತ್ಯಾದಿ ನಾನು ಹೇಳುವುದಿಲ್ಲ. ಅವರು ಬರಿಗೈಯಲ್ಲಿ ಬಂದರೆಂಬುದು ಆಶ್ಚರ್ಯದ ಸಂಗತಿ – ಎಂದರೆ ಪಠ್ಯಪುಸ್ತಕವನ್ನು ತಂದಿರಲಿಲ್ಲ. ನಾನು ಮುಂದಿನ ಬೆಂಚಿನಲ್ಲಿ ಕೂತಿದ್ದೆನಾದುದರಿಂದ ನನ್ನ ಪುಸ್ತಕವನ್ನು ಕೊಟ್ಟೆ. ಮೊದಲು ನಾಟಕ ಪ್ರಕಾರದ ಬಗ್ಗೆ ಪ್ರಾಸ್ತಾವಿಕವಾಗಿ ಒಂದು ೧೫ ನಿಮಿಷ ಹೇಳಿದರು. ನಂತರ ಓದಲು ಶುರು ಮಾಡಿದರು. ಮೊದಲಿಗೇ ಒಂದು ಕಂದ:

"ಪ್ರಣವವಿಬೋಧಕ ವದನಂ
ಪ್ರಣತ ಶ್ರೇಯೋನಿಕೇತನಂ ಪ್ರಾಜ್ಞಧನಂ"

ಎಂದು ಪ್ರಾರಂಭವಾಗುತ್ತದೆ. ಒಂದುಸಲ ಇಡೀ ತರಗತಿಯ ಮೇಲೆ ಕಣ್ಣು ಹಾಯಿಸಿ, 'ಕಂದದ ಎರಡನೇ ಸಾಲಿನಲ್ಲಿ ಪದವಿಭಾಗ ಮಾಡುವಾಗ ಹೆಚ್ಚು ಕಡಿಮೆಯಾದರೆ ಎಂತಹ ಅಭಾಸವಾಗುತ್ತದೆ ನೋಡಿ' ಎಂದು ಸೂಚ್ಯವಾಗಿ ಹೇಳಿ ಮುಂದುವರಿಸಿದರು. ಒಂದನೇ ಭಾಗದ ಮೂರನೆಯ ದೃಶ್ಯದಲ್ಲಿ ಪರಾಂಕುಶಭಟ್ಟನು ಜನರನ್ನು ಯವನರಿಗೆ ಎದುರಾಗಿ ಹುರಿದುಂಬಿಸುತ್ತಾನೆ. ಜನರೆಲ್ಲ ಉತ್ಸಾಹದಿಂದ ಕೈಗೆ ಸಿಕ್ಕಿದ ಆಯುಧಗಳನ್ನು ಹಿಡಿದು ಯವನರನ್ನು ಸದೆಬಡಿಯುವುದಾಗಿ ಘೋಷಿಸಿ ನಿಷ್ಕ್ರಮಿಸುತ್ತಾರೆ. ಆಗ

ಪರಾಂಕುಶ : ಏನೂ ಅರಿಯದ ಈ ಜನರಿಗೇನೋ ಆವೇಶವನ್ನು ತಂದುದಾಯಿತು; ಇದರಿಂದಾಗುವ ಫಲವನ್ನು ಮಾತ್ರ ಹೇಳಿಕೊಳ್ಳುವ ಹಾಗಿಲ್ಲ.

ಎಂಬ ಮಾತನ್ನು ಆಡುತ್ತಾನೆ. ನಾನು ನನ್ನ ಪದ್ಧತಿಯ ಪ್ರಕಾರ ನಾಟಕವನ್ನು ಮೊದಲೇ ಓದಿ ಬದಿಟಿಪ್ಪಣಿ ಹಾಕಿದ್ದೆ. ಈ ಮಾತುಗಳು ಷೇಕ್ಸ್‌ಪಿಯರ್‌ನ 'ಜೂಲಿಯಸ್ ಸೀಸರ್' ನಾಟಕದಲ್ಲಿ ಮಾರ್ಕ್ ಆಂಟೊನಿಯ "Mischief, thou art afoot; take thou what course thou wilt" ಎಂಬ ಮಾತುಗಳನ್ನು ನೆನಪಿಗೆ ತರುತ್ತವೆಯೆಂದು ಟಿಪ್ಪಣಿ ಬರೆದಿದ್ದೆ. ವಿ. ಸೀ. ಯವರೂ ಅದೇ ಮಾತನ್ನೇ ಹೇಳಿದರು. ನಾನು ಬರೆದಿದ್ದ ಟಿಪ್ಪಣಿಯನ್ನು ಗಮನಿಸಿದರು. ನನ್ನ ಕಡೆ ಒಂದು ಮೆಚ್ಚಿಕೆಯ ನೋಟ ಹಾಯಿಸಿ ಪಾಠ ಮುಂದುವರೆಸಿದರು. ತರಗತಿಯು ಮುಗಿದನಂತರ ನನಗೆ ನನ್ನ ಪುಸ್ತಕವನ್ನು ಹಿಂತಿರುಗಿಸುವಾಗ ಮತ್ತೊಮ್ಮೆ ಒಂದೆರಡು ಒಳ್ಳೆಯ ಮಾತಾಡಿದರು. ನನಗೆ ಹಿಗ್ಗೋ ಹಿಗ್ಗು. ಎಷ್ಟು ಹಿಗ್ಗೆಂದರೆ ಮುಂದಿನ ಗಣಿತದ ತರಗತಿಗೆ ಚಕ್ಕರ್ ಹಾಕಿ (ಮೊದಲೇ ಗಣಿತ, ಅದರಲ್ಲೂ Calculus) ಆಗ ತುಂಬ ಜನಪ್ರಿಯವಾಗಿದ್ದ ಬಿ. ಟಿ. ರಾಮಯ್ಯನ ಹೋಟೆಲಿಗೆ ಹೊರಟು ಬಿಟ್ಟೆ!

ಮುಂದುವರೆದಂತೆ ನಾಟಕದಲ್ಲಿನ ಅನೇಕ ಸನ್ನಿವೇಶಗಳ ಬಗ್ಗೆ ವಿ.ಸೀ. ಯವರೊಡನೆ ಚರ್ಚೆಮಾಡುವ ಸಂದರ್ಭಗಳು ಬಂದುವು. ಅವುಗಳಲ್ಲಿ ಒಂದು ಹೀಗಿದೆ– ಮೂರನೆಯ ಭಾಗದ ಎರಡನೆಯ ದೃಶ್ಯದಲ್ಲಿ ವಿದ್ಯಾರಣ್ಯರು ಹರಿಹರನಿಗೆ ಮಾರ್ಗದರ್ಶನ ಮಾಡುತ್ತಾ ಒಂದು ಸೂಚನೆಯನ್ನು ಕೊಡುತ್ತಾರೆ:

"ನಿನಗೆ ಮಿತ್ರರಾಗಿ ಬರುವ ಸಕಲ ಹಿಂದೂ ರಾಜರೂ ಪಾಳೆಯಗಾರರೂ
ನಿನ್ನ ಛತ್ರಚ್ಛಾಯೆಯಲ್ಲಿ ಸುಖಿಸಬಹುದೆಂದೂ, ಹಾಗೆ ಮಾಡದವರು
ನನ್ನ ಯೋಧರು ಹಾಕುವ ಸಂಕೋಲೆಗಳಲ್ಲಿ ದುಃಖಿಸಬೇಕಾಗುವು
ದೆಂದೂ ಚೈತ್ರ ಪತ್ರಿಕೆಯನ್ನು ಬರೆಯಿಸಿ ಕಳುಹಿಸು."

ಇದು "Fascist Fiat" ಎಂದು ಟಿಪ್ಪಣಿ ಮಾಡಿದ್ದೆ. ಆಗ ಎರಡನೆ ಜಾಗತಿಕ ಯುದ್ಧದ ಕಾಲ. ಹಿಟ್ಲರ್ ಯೂರೋಪಿನ ರಾಷ್ಟ್ರಗಳನ್ನು ಒಂದೊಂದಾಗಿ ಕಬಳಿಸುತ್ತಿದ್ದ ಕಾಲ. ವಿ.ಸೀ. ಯವರು ನನ್ನ ಅಭಿಪ್ರಾಯವನ್ನು ಒಪ್ಪಿಯೂ ಒಪ್ಪದಂತೆ ಮಾತನಾಡಿದರು. ಅಂದಿನ ಅಂತರರಾಷ್ಟ್ರೀಯ ರಾಜಕಾರಣದ ಚೌಕಟ್ಟಿನಲ್ಲಿ ನನ್ನ ವಿಶ್ಲೇಷಣೆ ತಾತ್ವಿಕವಾಗಿ ಸರಿಯೆಂದು ಕಂಡರೂ, ನಾವು ಓದುತ್ತಿದ್ದ ನಾಟಕದ ಕಾಲಮಾನದ ಚೌಕಟ್ಟಿನಲ್ಲಿ ವಿದ್ಯಾರಣ್ಯರನ್ನು ಹಿಟ್ಲರನಿಗಿಂತಲೂ ಬಿಸ್ಮಾರ್ಕ್‌ಗೆ ಹೋಲಿಸಬಹುದೆಂದರು. "It was a case of consolidation" ಎಂದು ವಾದಿಸಿದರು. ಆಗ ನನಗೆ ಅವರ ವಾದ ಅಷ್ಟಾಗಿ ಹಿಡಿಸಲಿಲ್ಲ.

ಅಂದಿನ ದಿನಗಳಲ್ಲಿ ಅವರು ಶಂಕರಪುರದಲ್ಲಿ ವಾಸ ಮಾಡುತ್ತಿದ್ದರು. ನಾನೂ ಅಲ್ಲಿಯೇ ಒಂದು ಕೊಠಡಿಯಲ್ಲಿ ಇರುತ್ತಿದ್ದೆ. "ಹತ್ತಿರವೇ ಇದ್ದೀರಲ್ಲ, ಯಾವಾಗಲಾದರೂ ಮನೆ ಕಡೆ ಬನ್ನಿ" ಎಂದರು.

ಅವರ ಶಂಕರಪುರದ ಮನೆಗೆ ಎರಡು ಬಾರ್ತಿ ಹೋಗಿದ್ದೆ. ಮೊದಲನೆಯ ಸಲ ಹೋಗಿದ್ದಾಗ ನಮ್ಮ ದೇಶದ ರಾಜಕೀಯ ವಾತಾವರಣ, ಯುದ್ಧದ ಬಗ್ಗೆ ಕಾಂಗ್ರೆಸ್ ಧೋರಣೆ ಎಷ್ಟು ಸರಿ ಎಂದು ಸುದೀರ್ಘವಾಗಿ ಚರ್ಚೆ ಮಾಡಿದೆವು. ಆಗ ಗಾಂಧೀಜಿಯವರ ಅತ್ಯಂತ ಹಿರಿಯ ಕೊಡುಗೆ "Ethical evaluation of political doctrines" ಎಂದು ಹೇಳಿದುದನ್ನು ತುಂಬ ಮೆಚ್ಚಿಕೊಂಡರು. Ethics ಮೇಲೆ Hartmann ಓದಿಯೆಂದರು. ಆಗಲೂ ನನಗೆ ಅವರು ಮೇಷ್ಟ್ರೇ ಆಗಿದ್ದರು.

ಎರಡನೆಯ ಸಲ ಹೋದುದು ಎಮ್. ಎನ್. ರಾಯ್ ಅವರ "ಇಂಡಿಪೆಂಡೆಂಟ್ ಇಂಡಿಯಾ" ಎಂಬ ನಿಯತಕಾಲಿಕಕ್ಕೆ ಚಂದಾದಾರರಾಗಿರಿ ಎಂದು ಕೇಳಲು. ಕೆಲವು ಪ್ರತಿಗಳನ್ನೂ ತೆಗೆದುಕೊಂಡು ಹೋಗಿದ್ದೆ. ತಿರುವಿ ಹಾಕಿದರು. ಕಾಲೇಜ್ ಮೇಷ್ಟ್ರು ಯಾರಾದರೂ ಚಂದಾದಾರರಾಗಿದ್ದಾರೆಯೇ ಎಂದು ಪಟ್ಟಿ ನೋಡಿದರು. ಓ. ಕೆ. ನಂಬಿಯಾರ್ ಹೆಸರು ಮಾತ್ರ ಇತ್ತು. ತಾವು ಚಂದಾದಾರರಾದರು. ಆಗಾಗ್ಗೆ ಅವರೊಡನೆ ಚರ್ಚೆ ಮಾಡುತ್ತಲೇ ಇದ್ದೆ. ವಿಷಯ ಹೆಚ್ಚಾಗಿ ರಾಜಕಾರಣ ಮತ್ತು ಅರ್ಥಶಾಸ್ತ್ರ. ಆಗತಾನೇ ಸಿ. ಎನ್. ವಕೀಲ್ ಬರೆದಿದ್ದ "The Falling Rupee" ಎಂಬ Pamphlet ಪ್ರಕಟವಾಗಿತ್ತು. ಅದನ್ನು ಚರ್ಚಿಸುತ್ತಾ ನಮ್ಮ ರೂಪಾಯಿಯನ್ನು ಇಂಗ್ಲೆಂಡಿನ ಪೌಂಡಿಗೆ ತಳಕು ಹಾಕಿದ ರೀತಿ, Gold Standard, Gold Exchange Standard ಇವುಗಳ ಮೇಲೆಲ್ಲ ಅದ್ಭುತವಾಗಿ ತಿಳಿಹೇಳಿದರು. ಅವರ ಜೊತೆಯಲ್ಲಿ ಪ್ರತಿಸಲ ಮಾತನಾಡಿದಾಗಲೂ "ಮೇಷ್ಟ್ರೆಂದರೆ ಇವರಯ್ಯ" ಎಂಬ ಭಾವನೆ ಬರುತ್ತಿತ್ತು.

ಪಿ.ಸೀ. ಯವರನ್ನು ಕವಿಯೆಂದು, ವಿಮರ್ಶಕರೆಂದು, ವಿನೇಸೋ ಎಂದು ಜನರು ಗುರುತಿಸುತ್ತಾರೆ. ನಾನು ಮಾತ್ರ ಅವರನ್ನು ಗುರುತಿಸುವುದು "ನಮ್ಮ ಮೇಷ್ಟ್ರು" ಎಂದೇ.

ಈ ಎಲ್ಲ ನೆನಪುಗಳೂ ಸುಳಿದು ಹೋಗುವ ಹೊತ್ತಿಗೆ ಮೇಷ್ಟ್ರು ದೇಹ ಹೊರಗೆ ತಂದರು. ಅಂತಿಮ ಪ್ರಯಾಣಕ್ಕೆ ಸಿದ್ಧತೆ ನಡೆದಿತ್ತು. ಅವರನ್ನು ಬೀಳ್ಕೊಡಲು ಯಾವ ಮಾತು ಹೇಳುವುದು ಎಂಬ ಪ್ರಶ್ನೆಗೆ ಉತ್ತರ ತಾನಾಗಿಯೇ ಬಂತು – ಷೇಕ್ಸ್‌ಪಿಯರನ "Good night, sweet prince, and flights of angels sing thee to thy rest."

('ಅಂಕಣ'ದಿಂದ)

ಸೌಭಾಗ್ಯ ಸಮಸ್ತಕ್ಕೂ ಮಿಡಿಯುತ್ತಿದ್ದವರು

"ಎಲ್ಲಕ್ಕಿಂತ ಮುಖ್ಯವಾಗಿ, ದಿನಜೀವನದ ಸೌಭಾಗ್ಯ ಸಮಸ್ತಕ್ಕೂ ಅವರು ಮಿಡಿಯುತ್ತಿದ್ದರು. ನೀಲ ನಿರಭ್ರ ಆಕಾಶದ ಸೊಬಗು; ಕಗ್ಗತ್ತಲೆಯ ದಟ್ಟ ಹರಹು; ಆಗ ತಾನೆ ಒಡೆಯುತ್ತಿರುವ ಬಿಗುರು; ಹೂ ತುಂಬಿದ ಬಳ್ಳಿ, ಗಿಡ, ಮರ, ಮರದ ಮುಡಿ (Tree tops); ಶುಚಿಯಾದ ರುಚಿಯಾದ ಊಟ, ತಿಂಡಿ; ಕೊನೆಗೆ ಉತ್ತಮವಾದ ಒಂದು ನಗೆಯ ಲಾಸ್ಯ, ಕಣ್ಣ ಮಿನುಗು, ಬೈತಲೆಯ ಒಪ್ಪ ಓರಣ; ಉತ್ತಮವಾದ ಒಂದು ಗದ್ಯಸಾಲು, ಪದ್ಯಪಂಕ್ತಿ, ಪದಪ್ರಯೋಗ, ಅರ್ಥವಿಶೇಷ; ರಾಗದ ಒಂದು ನುಡಿತ, ಹೆಜ್ಜೆಯ ಗೆಜ್ಜೆ ದನಿ, ಬಳುಕುವ ಒಂದು ರೇಖಿನ- ಯಾವುದೂ ಆಗಬಹುದು; ಜೀವಂತವಾಗಿ ಅವರು ಅದಕ್ಕೆ ಮಿಡಿಯುತ್ತಿದ್ದರು, ಪ್ರತಿಕ್ರಿಯಿಸುತ್ತಿದ್ದರು, ಮುಕ್ತಕಂಠದಿಂದ ಶ್ಲಾಘಿಸಿ ಒಂದು ಹೃದಯ ಸಂವಾದವನ್ನೇ ಆಗ ತೆರೆದು ಕಾಣಿಸುತ್ತಿದ್ದರು."

'ಸುಮನಾ'

'ಪಿ. ಸೀತಾರಾಮಯ್ಯ' ಪು. ೧೧೬

ನವಿರಾದ ನಡೆಯವರು

ಜಿ. ಎ. ನರಸಿಂಹಮೂರ್ತಿ

ಪೂಜ್ಯ ವಿ.ಸೀ. ಅವರನ್ನು ಕಂಡವರೆಲ್ಲರಿಗೂ ಅವರ ಶುಚಿ, ನಯ, ನವಿರು, ಒಪ್ಪ, ಓರಣ ಎದ್ದು ಕಾಣಿಸುತ್ತಿತ್ತು. ಇದರ ಮೂಲ ಅವರ ಹುಟ್ಟಿನಲ್ಲೇ ಇತ್ತು. ಅವರು ವೈದಿಕ ಮನೆತನದವರು. ಹಾಗೆಂಬುದರ ಆಡಂಬರಗಳು ಕಾಣುತ್ತಿರಲಿಲ್ಲ. ಆದರೂ ನಿತ್ಯ ಆಚಮನ, ಹಣೆಗೆ ತಪ್ಪದೆ ಸಾದಿನ ಬೊಟ್ಟು ಮತ್ತು ತಲೆಯಲ್ಲಿ ಶಿಖೆ ಕಾಣಿಸುತ್ತಿದ್ದುವು. ಪೂರ್ವ ಸಂಸ್ಕಾರ ವಿಶೇಷದಿಂದಲೇ ಶುಚಿ ಮೊದಲಾದ ಎಲ್ಲ ಗುಣಗಳೂ ಅವರಲ್ಲಿ ತೋರಿಕೊಂಡಿದ್ದವು. ಪೂರ್ವಿಕರ 'ಮಡಿ' ಎನ್ನುವುದು ಶುಚಿಯ ಪರಾಕಾಷ್ಠೆಯಷ್ಟೆ!

ಅವರದು "ಸಬಾಹ್ಯಾಭ್ಯಂತರ ಶುಚಿಃ." ಹೊರಗಿನ ಪೋಷಾಕು ದಶಕಗಳು ಕಳೆದರೂ ಒಂದೇ ರೀತಿಯಲ್ಲಿತ್ತು. ಸಾಹಿತ್ಯ ಪ್ರಪಂಚದಲ್ಲಿ ಹೆಸರಾಗಿದ್ದ ಮಹಿಳೆಯೊಬ್ಬರು, ಆಂಗ್ಲ ನಡವಳಿಕೆಗೆ ಮಾರು ಹೋದವರು, ಇವರನ್ನು ಲಕ್ಷಿಸಿ "ನಾಜೂಕಾದ ವೇಷ ಧರಿಸಬೇಕು" ಎಂದರಂತೆ. ಅದಕ್ಕೆ ವಿ.ಸೀ. ಅವರು "ನಾಜೂಕು ಎಂದರೆ ನಿಮ್ಮ ವ್ಯಾಖ್ಯೆ ಏನು?" ಎಂದು ಕೇಳಿ ಅವರನ್ನು ಸುಮ್ಮನಾಗಿಸಿದರಂತೆ! ಅದೇ ಶುಭ್ರವಾದ ಪಂಚೆ, ಕೋಟು ಮತ್ತು ಅತಿ ಶುಭ್ರವಾದ ಬಿಳಿಪೇಟ. ಇದು ಬದಲಾದುದೇ ಇಲ್ಲ. ಹಾಗೆಯೇ ಅವರ ಮನಸ್ಸು. ಯಾವುದನ್ನೂ ಬಯಸಲಿಲ್ಲ. ಬರದುದಕ್ಕೆ ಕೊರಗಲಿಲ್ಲ. "ಬರುವುದೆಲ್ಲ ಬರಲಿಯೆಂದು ಕೊಡುವ। ಕಾಲಕೊಂಡು ಪೋಪುದೆಂದು ನಂಬುತೆ। ವಿಧಿಯ ಕೆರಳು ಕೋಪವೆಂದು ಅಳುಕದಂತಿರು। ಎಡರು ಶರದ ಘೃತವೆಂದು ಮಣಿಯದಂತಿರು॥" ಎಂದು ಮುಗಿಬಿದ್ದ ಮನಸಿನವರನ್ನು ಹುರಿದುಂಬಿಸುವ ಕಾಯಕವನ್ನು ಜೀವನವೆಲ್ಲ ನಡೆಸಿದರು.

ವಿ.ಸೀ. ಅವರಿಗೆ ಕಷ್ಟ ಕೋಟಲೆಗಳು ಬಂದವು. ನಂಬಿದ ಮಿತ್ರರು ಅವರ ಸಾಲಕ್ಕೆ ಇವರನ್ನು ಹೊಣೆ ಮಾಡಿದರು. ಆಗಲೂ ಬಿರುನುಡಿ ಬರಲಿಲ್ಲ, ಯಾರಿಗೂ ಹೇಳಿಕೊಳ್ಳಲಿಲ್ಲ. ಬೆನ್ನು ಬಗ್ಗಿಸಿ, ಹೊತ್ತ ಸಾಲವನ್ನು ತೀರಿಸಿದರು. "ಎನ್ನ ಪಾಡೆನಗಿರಲಿ, ಅದರ ಸವಿಯನ್ನಷ್ಟೇ ಉಣಿಸುವೆನು ರಸಿಕ ನಿನಗೆ, ಕಲ್ಲು ಸಕ್ಕರೆಯಂಥ ನಿನ್ನೆದೆಯು ಕರಗಿದರೆ ಅದರ ಸವಿಯನ್ನುಣಿಸು ಎನಗೆ" ಎಂಬ ಕ್ರಾಂತದರ್ಶಿಯ ನುಡಿಯ ಮೂರ್ತಿ ಸ್ವರೂಪವಾಗಿದ್ದವರು ಶ್ರೀ ವಿ.ಸೀ.

ಪಿ.ಸೀ. ಅವರು ನಿತ್ಯಪೂಜೆ ಮಾಡದೆ ಇರಬಹುದು. ಶಿವರಾತ್ರಿ ಮಾತ್ರ ಮನೆಯವರೆಲ್ಲರೊಡನೆ ಶಿವಾಲಯಕ್ಕೆ ಹೋಗಿ ಬರುತ್ತಿರಬಹುದು. ಆದರೆ ಇವರಲ್ಲಿ ಪರವಸ್ತುವಿನ ಅಸ್ತಿತ್ವದಲ್ಲಿ ಅಸ್ತಿಕ್ಯ ಮನೋಭಾವ ಪ್ರಬಲವಾಗಿತ್ತು. ನಾವು ಕೇಳಿದ್ದನ್ನೆಲ್ಲ ಕೊಡುವ 'ದೈವ' ಎಲ್ಲಿದೆ? ವಿಧಿಯಂತೆ ಜೀವನ ನಡೆದುಹೋಗುತ್ತಿದೆ ಎಂದು ನಂಬಿದ್ದವರು ಶ್ರೀ ಪಿ.ಸೀ. ಇದೇ ನಂಬಿಕೆ ಪೂಜ್ಯ ಡಿ.ವಿ.ಜಿ. ಅವರಲ್ಲೂ ಕಾಣುತ್ತೇವೆ.

ಶ್ರೀ ಡಿ.ವಿ.ಜಿ. ಅವರು ವೇದಾಂತ ಶಾಸ್ತ್ರವನ್ನು ಗುರುಮುಖೇನ ಅಧ್ಯಯನ ಮಾಡಿದ್ದರು. ಅದರೂ ದೈವದ ಬಗ್ಗೆ ಅವರಿಗೆ ಬಂದ ಸಂಶಯಗಳೇ ಶ್ರೀ ಪಿ.ಸೀ ಅವರಿಗೂ ಬಂದಿತ್ತು.

ಆರನರಸುತೆ ಹೋಗಿ ಹವಿಸನೀಯಲು ಬೇಕೋ
ಆವ ಶೀಲವನವರು ಜಗದಿ ಬಿತ್ತುವರೋ
ಇಲ್ಲದಿರೆ ಬೇರಾವ ದೇವರೇ ಬಾರರೋ
ಇಲ್ಲದೊಂದಕೆ ಹೆಸರನಿತ್ತು ಕರೆಯುವೆವೊ
ಇಲ್ಲದಿರೆ ಮಾನವನ ಸುಗುಣವೇ ದೈವವೋ
ಎಲ್ಲಿಗೂ ಹರಿಯದಿಹ ಸಂಶಯವೇ ಕೊನೆಯೋ!

ಎಂದು ವಿ.ಸೀ.ಯವರು ಹೇಳಿದರೆ, ಶ್ರೀ ಡಿ.ವಿ.ಜಿ. ಅವರು

ಹಳಿಯ ಭಕ್ತಿ ಶ್ರದ್ಧೆಯಳಿಸಿ ಹೋಗಿವೆ ಮಾಸಿ ।
ಸುಳಿದಿಲ್ಲವಾವ ಹೊಸದರ್ಶನದ ಹೊಳಪೂ ॥
ಪಳಗಿದ್ದ ಮನೆ ಬಿದ್ದ ಕುಂಟ ಕುರುಡನ ತೆರದಿ ।
ತಳಮಳಿಸುತಿದೆ ಲೋಕ ಮಂಕುತಿಮ್ಮ ॥

ಎಂದಿದ್ದಾರೆ.

ಜೀವನದಲ್ಲಿ ಎದುರಾಗುವ ದುಃಖ ದುಮ್ಮಾನಗಳಿಂದ ಮನಸ್ಸನ್ನು ಬಿಡಿಸಿ, ಪಾವಿತ್ರ್ಯವನ್ನು ಕಾಪಾಡಿ, ಮೇಲಿನ ಮಟ್ಟಕ್ಕೆ ಅದನ್ನು ಒಯ್ಯುವ ಕ್ರಿಯೆಗೆ ಸದಾ ಒತ್ತು ಕೊಡುತ್ತಿದ್ದರು. ಸರ್ವಜಯಕ್ಕೂ ಮನಸ್ಸಿನ ಸಂತೋಷವೇ ಕಾರಣ ಎಂದು ನಂಬಿದ್ದರು. "ಸಂತಸವ ತಾಳು ಬೇಡುವೆನು ಕೊರಗ ಬೇಡಿಂತು। ಸ್ವಾಂತದಾಯಸವ ನೀಗಿ ಹಾಸವನು ಬೀರು" ಎಂಬುದೇ ಅವರ ಉಪದೇಶ. ಅಂಥಾ ಮನಸ್ಸಿನಿಂದ

ಮಾನವನೆತ್ತರ ಆಗಸದೇರಿಗೆ
ಏರುವವರೆಗೂ ಏನೇವು;
ಮಾನವ ಹೃದಯಕೆ ವಿಶ್ವ ವಿಶಾಲತ
ಹಾಯುವವರೆಗೂ ಹಾದೇವು

ಇದನ್ನು ಸಾಧಿಸಲು ಅವರು ಸೂಚಿಸಿರುವ ಉಪಾಯ ಹೀಗಿದೆ: "ನಮ್ಮ ಜೀವನ

ಸುಭಗವಾಗಬೇಕಾದರೆ, ಸಾಧನೆ ದೊಡ್ಡದಾಗಬೇಕಾದರೆ, ಎಲ್ಲ ದೇಶ, ಎಲ್ಲ ಕಾಲಗಳಲ್ಲಿಯೂ ದೊಡ್ಡದೆನಿಸಿದ್ದನ್ನು ಗುರುತಿಸಬೇಕು, ಪ್ರೀತಿಸಬೇಕು, ಪೂಜಿಸಬೇಕು." ಇದು ಅವರು ಸ್ವತಃ ಆಚರಿಸಿದುದೇ ಆಗಿತ್ತು.

೧೯೪೨ ನೇ ಇಸವಿ. ಶ್ರೀ ಪಿ.ಸೀ. ಅವರು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡದ ಮೇಷ್ಟ್ರು. ಆಗ ನಾನು ಅವರ ವಿದ್ಯಾರ್ಥಿ. ಅತ್ಯಪೂರ್ವ ಒಫಾದ ಅವರ ಪಾಠ ಕೇಳುವ ಭಾಗ್ಯ ನನ್ನದಾಗಿತ್ತು.

'ಶಾಕುಂತಲ' ನಾಟಕ ಪಾಠ. ಶ್ರೀ ಬಸವಪ್ಪ ಶಾಸ್ತ್ರಿಗಳ ಪತ್ಯ ನಮ್ಮ ಕೈಯಲ್ಲಿ. ಆದರೆ ಮೇಷ್ಟ್ರ ಬಾಯಲ್ಲಿ ಬೇರೆ ಬೇರೆ ಭಾಷೆಗಳ ಪಾಠ, ಅವುಗಳ ವೈವಿಧ್ಯ, ವೈಶಿಷ್ಟ್ಯ ಗಂಗಾಪ್ರವಾಹದಂತೆ ಗಂಭೀರವಾಗಿ ಹರಿದು ಬರುತ್ತಿತ್ತು. ಪ್ರತಿ ಸನ್ನಿವೇಶವನ್ನು ವಿವರಿಸುವಾಗಲೂ ಅದರಲ್ಲಿ ಬರುವ ಮಾನವೀಯ ಲಕ್ಷಣಗಳನ್ನು ಎತ್ತಿ ತೋರಿಸುವುದು ನಮ್ಮ ಮೇಷ್ಟ್ರ ವಿಶಿಷ್ಟ ಕ್ರಮ.

ವಿಜ್ಞಾನದ ಪಾಠ ಬಲು ಪೆಡಸು. ಅದಾದ ಮೇಲೆ ನಡೆಯುವ ಶ್ರೀ ಪಿ.ಸೀ. ಅವರ ಪಾಠ ಮನಸ್ಸನ್ನು ಹುರಿದುಂಬಿಸಿ, ಗಂಗಾಸ್ನಾನ ಮಾಡಿದ ಪಾವಿತ್ರ್ಯವನ್ನು ತಂದು ಕೊಡುತ್ತಿತ್ತು.

ಅವರು ಪಾಠ ಮಾಡುವಾಗಲೂ ಮನೆಯಲ್ಲಿ ಮಾತಾಡುವಾಗಲೂ ಒಂದೇ ರೀತಿಯ ಭಾಷಾ ಪಾವಿತ್ರ್ಯವನ್ನು ಉಳಿಸಿಕೊಂಡು ಬರುತ್ತಿದ್ದರು. ಅವರು ಕನ್ನಡ ಪಾಠವನ್ನು ಇಂಗ್ಲೀಷಿನಲ್ಲಿ ಮಾಡುತ್ತಾರೆಂಬ ಕೂಗು ಇತ್ತು. ಅದು ಅವರ ಭಾವ ಪ್ರಕಾಶಕ್ಕೆ ಬೇಕಾದ ಭಾಷೆಗಳನ್ನೆಲ್ಲ ಬಳಸುತ್ತಿದ್ದುದುರಿಂದ ಹಾಗೆನಿಸಬಹುದಾಗಿತ್ತು. ಅವರ ಭಾವಪ್ರವಾಹ ಭಾಷಾ ಚೌಕಟ್ಟನ್ನು ಒಡೆದು ವಿಶ್ವತೋಮುಖವಾಗುತ್ತಿದ್ದುದನ್ನು ಕಾಣಬಹುದಾಗಿತ್ತು.

ಕನ್ನಡದ 'ಲೇಸಾಗಿ' ಎಂಬ ಪದ ಬಂದಾಗ ತೆಲುಗಿನ 'ಲೆಸ್ಸಗಾ' ಜತೆಗೂಡಿಸುತ್ತಿದ್ದರು. ಹಾಗೆಯೇ 'ಪಶ್ಯತಿ'ಗೆ 'Perceive' ಜತೆಯಾಗುತ್ತಿತ್ತು. ಈ ಸಮನ್ವಯತ್ವ ಪ್ರತಿ ಗಂಟೆಯಲ್ಲೂ ಅನುಸ್ಯೂತವಾಗಿ ಸಾಗುತ್ತಿತ್ತು.

ಅವರನ್ನು ಗುರ್ತಿಸುವ ಅಕ್ಷರದ್ವಯಕ್ಕೆ ನಾನಾ ವ್ಯಾಖ್ಯೆಗಳು ಪ್ರಚಲಿತದಲ್ಲಿದ್ದವು. 'ಕೊರವಂಜಿ,' "ವಿ.ಸೀ. ಎಂದರೆ ವಿಕ್ಟೋರಿಯ ಕ್ರಾಸ್ ಪಡೆದವರೆ?" ಎಂದರೆ, ಡಾ. ವಿನಾಯಕ ಕೃಷ್ಣ ಗೋಕಾಕರು ಎಲ್ಲೆಲ್ಲೂ "We See" ಎಂದೇ ಹೇಳುತ್ತಿದ್ದರು.

ಅವರು ಕಿರಿಯರನ್ನು ಹೇಗೆ ಪ್ರೋತ್ಸಾಹಿಸುತ್ತಿದ್ದರು ಎಂಬುದಕ್ಕೆ ಒಂದೆರಡು ಸ್ವಂತ ಅನುಭವಗಳನ್ನು ತಿಳಿಸುತ್ತಿದ್ದೇನೆ:

ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ ಪೂಜ್ಯ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳು ಹುಟ್ಟು ಹಾಕಿದ್ದು. ರಾಜ್ಯದ ಮೊಟ್ಟ ಮೊದಲ ಸಂಘ ಇದು. ಅನಂತರ ಪ್ರಸಿದ್ಧರಾದ

ಅನೇಕ ಸಾಹಿತಿಗಳು ಇವರ ಕಾರ್ಯದರ್ಶಿ ಆಗಿದ್ದವರು. ಹೀಗಾಗಿ ಈ ಪದವಿಗೆ ಅಂದು ಪ್ರಾಮುಖ್ಯತೆ ಇತ್ತು. ಆಚಾರ್ಯ ಬಿ.ಎಂ.ಶ್ರೀ. ಅವರು ಸಂಘದ ಅಧ್ಯಕ್ಷರು, ವಿ.ಸೀ. ಅವರು ಉಪಾಧ್ಯಕ್ಷರಲ್ಲಿ ಒಬ್ಬರು.

೧೯೪೨ನೇ ಇಸವಿಯಲ್ಲಿ ಸಂಘದ ಕಾರ್ಯದರ್ಶಿ ಚುನಾವಣೆ ನಡೆಯಿತು. ವಿ.ಸೀ. ಅಧ್ಯಕ್ಷತೆ ವಹಿಸಿದ್ದರು. ನಾನು ಚುನಾಯಿತನಾದೆ. ಕೂಡಲೇ ವಿ.ಸೀ. ಅವರು ನನ್ನನ್ನು ವೇದಿಕೆಗೆ ಕರೆದು 'Congratulations Secretary Sahib' ಎಂದು ಕೈಕುಲುಕಿದರು. ಅಷ್ಟು ಹಿರಿಯರು ಏನೂ ಅಲ್ಲದ ಹದಿನೆಂಟು ವರ್ಷದ ಹುಡುಗನೊಬ್ಬನಿಗೆ ಎಂಥಾ ಪ್ರೋತ್ಸಾಹ ಕೊಟ್ಟರು! ಈ ಸನ್ನಿವೇಶದಿಂದ ಆ ಹುಡುಗನ ಜೀವನ ಮಾರ್ಗವೇ ಬದಲಾಯಿಸಿತು.

ಸಂಘದ ಕಾರ್ಯಕ್ರಮ ರೂಪಿಸುವಾಗ ವಿ.ಸೀ. ಅವರ ಮಾರ್ಗದರ್ಶನ ಬಹಳ ಸಹಾಯಕವಾಗಿತ್ತು. ಆ ವರ್ಷ ನಾಲ್ಕು ದಿನ ನಡೆಸಿದ ಗೀತಾ ಜಯಂತಿ ಕಾರ್ಯಕ್ರಮದಲ್ಲಿ ಮೊದಲ ದಿನ "ಗೀತೆಯ ಕೃಷ್ಣ" ಎಂಬ ವಿಷಯವಾಗಿ ವಿ.ಸೀ. ಅವರೇ ಮಾತಾಡಿದರು. ಶ್ರೀ ಕೃಷ್ಣನ ಮಾನವೀಯತೆಯ ಬಗೆಗೆ ಹೆಚ್ಚು ಒತ್ತು ಕೊಟ್ಟಿದ್ದರು.

ಅದೇ ವರ್ಷ ಶ್ರೀ ಟಿ. ಎಸ್. ವೆಂಕಣ್ಣಯ್ಯ ಸ್ಮಾರಕ ಅಂತರ ಕಾಲೇಜು ಚರ್ಚಾಸ್ಪರ್ಧೆ ಟೌನ್ ಹಾಲ್‌ನಲ್ಲಿ ನಡೆಯಿತು. ಆಗ ಇಂಥಾ ಸ್ಪರ್ಧೆಗಳು ವರ್ಷಕ್ಕೆ ಒಂದೋ ಎರಡೋ ಇರುತ್ತಿದ್ದವು. ಶ್ರೀ ಡಿ.ವಿ.ಜಿ. ಅವರು ಸ್ಪರ್ಧೆಯ ಅಧ್ಯಕ್ಷತೆ ವಹಿಸಿದ್ದರು. ನಾನು ಮತ್ತು ಎಲ್. ಎಸ್. ಶೇಷಗಿರಿ ರಾವ್ ಭಾಗವಹಿಸಿದ್ದೆವು. ಇಬ್ಬರಿಗೂ ಬಹುಮಾನದ ಕಪ್‌ಗಳು ಬಂದವು. ಜತೆಗೆ ನಮ್ಮ ಕಾಲೇಜಿಗೆ ಪರ್ಯಾಯ ಪಾರಿತೋಷಕ ಕರಂಡ ಬಂತು.

ರಾತ್ರಿ ೯ ಗಂಟೆ ಆಗಿತ್ತು. ಆಗಲೇ ಮೇಷ್ಟ್ರಿಗೆ ಕರಂಡ ತೋರಿಸಬೇಕೆಂದು ನಾವಿಬ್ಬರೂ ಅವರ ಮನೆಗೆ ಹೋದೆವು. ನಮಗೋ ಒಳಗೇ ಭಯ. ಮೆಲ್ಲಗೆ ಬಾಗಿಲು ಶಬ್ದ ಮಾಡಿದೆವು. 'ಬನ್ನಿ' ಎಂಬ ಮೇಷ್ಟ್ರವಾಣಿ ಕೇಳಿಸಿತು. ಒಳಗೆ ಹೋಗಿ, ಕರಂಡ ಅವರ ಕೈಗಿತ್ತು ನಮಸ್ಕರಿಸಿದೆವು. ಮೇಷ್ಟ್ರು ಆ ಕರಂಡವನ್ನು ಕೈಲಿ ಹಿಡಿದು ತುಂಬು ಕಣ್ಣಿಂದ ನೋಡುತ್ತ, ನಮ್ಮಿಬ್ಬರ ಭುಜವನ್ನೂ ವಾತ್ಸಲ್ಯದಿಂದ ಅದುಮಿ, ಸಂತೋಷಪಟ್ಟರು. ಸ್ಪರ್ಧೆಯ ವಿವರಗಳನ್ನು ನಿಧಾನವಾಗಿ ಕೇಳಿ ಆನಂದಿಸಿದರು. ಸಾರ್ವಜನಿಕ ಜೀವನದಲ್ಲಿ ನಾನು ಕೆಲಸ ಮಾಡಲು ಈ ಆಶೀರ್ವಾದವೇ ಮೂಲವಾಯಿತು.

ಇದೆಲ್ಲ ನಡೆದ ಇಪ್ಪತ್ತು ವರ್ಷಗಳ ನಂತರ, ಕರ್ನಾಟಕ ಸಂಘದ ಕಾರ್ಯಕ್ರಮವೊಂದಕ್ಕೆ ಕಾಲೇಜಿಗೆ ಹೋಗಿದ್ದೆ. ಪೂಜ್ಯ ಮಾಸ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮ ಮುಗಿದು ಹೊರಕ್ಕೆ ಬಂದೆ. ಅಲ್ಲಿದ್ದ ವಿ.ಸೀ. ಅವರು 'ಕಾರು ತಂದಿರುವೀರೇನಪ್ಪ?' ಎಂದು ಕೇಳಿದರು. 'ಹೂಂ' ಎಂದೆ. 'ಬುಲ್ ಟೆಂಪಲ್ ರಸ್ತೆ ತಾನೆ ನೀವಿರುವುದು?' ಎಂದರು. 'ಹೌದು ಸಾರ್, ತಾವೂ ಬರಬಹುದು' ಎಂದೆ. 'ಮಾಸ್ತಿ ಅವರನ್ನು ಕರೆದುಕೊಂಡು ಹೋಗಿ' ಎಂದರು.

ನಾನು ಸಂತೋಷದಿಂದ ಪೂಜ್ಯ ಮಾಸ್ತಿ ಅವರನ್ನು ಕಾರಿನಲ್ಲಿ ಕೂರಿಸಿದೆ. ವಿ.ಸೀ. ಅವರನ್ನು ಕುರಿತು 'ತಾವೂ ಬರಬಹುದಲ್ಲ, ಮನೆಯಲ್ಲಿ ಬಿಡುತ್ತೇನೆ' ಎಂದೆ. ವಿ.ಸೀ. ಅವರು ಕೈ ಬೀಸುತ್ತ 'ಹೊರಡಿ' ಎಂದು ನಿರ್ಧಾರವಾಗಿ ತಿಳಿಸಿಬಿಟ್ಟರು.

ದೊಡ್ಡವರು ಹೋಗುವಾಗ ಮಾರ್ಗ ಮಧ್ಯೆ ತಮ್ಮ ಮನೆಯಲ್ಲಿ ಇಳಿದು ಕೊಳ್ಳುವುದು ಸೌಜನ್ಯವಲ್ಲ ಎಂಬ ನವಿರಾದ ನಡೆ ನಮ್ಮ ಮೇಷ್ಟ್ರು ವಿ.ಸೀ. ಅವರದು.

ಜೀವನದ ಧ್ಯೇಯವೇನು?

"ಒಂದು ದಿನ ಸಂಜೆ ವಿ.ಸೀ.ಯವರನ್ನು ಕಾಣಬೇಕೆಂದು ಹೊರಟೆ. ಕೃಷ್ಣಮೂರ್ತಿಪುರದಲ್ಲಿದ್ದ ಅವರ ಮನೆಯನ್ನು ಹುಡುಕಿಕೊಂಡು ಸೇರುವಾಗ ಸಂಜೆ ೬ ಗಂಟೆಯಾಗಿತ್ತು. ಅವರ ಮನೆಯ ಮುಂದಿನ ತೋಟದಲ್ಲಿ ಹಸುರಿತ್ತು. ಬಾಗಿಲ ಬಳಿ ಹೋಗಿ "ಸರ್" ಎಂದೆ. ಒಳಗಡೆಯಿಂದ ಅತಿ ಎತ್ತರವಲ್ಲದ, ತೆಳ್ಳಗಿದ್ದ ವ್ಯಕ್ತಿಯೊಬ್ಬರು ಬಂದು, "ಏನು? ಯಾರು ಬೇಕಾಗಿತ್ತು" ಎಂದು ಕೇಳಿದರು. "ವಿ.ಸೀ.ಯವರನ್ನು ಕಾಣಬೇಕಾಗಿದೆ" ಎಂದೆ. :"ಬನ್ನಿ" ಎಂದು ಹೇಳಿ ಒಳಗಡೆ ಕರೆದುಕೊಂಡು ಹೋಗಿ ಕುಳ್ಳಿರ ಹೇಳಿದರು.

"ನೀವು ಓದುತ್ತಿದ್ದೀರಾ? ಯಾವ ತರಗತಿ—" ಎಂದೆಲ್ಲ ಕೇಳಿದರು.

ನಾನು ಉತ್ತರ ಕೊಟ್ಟೆ.

"ನಿಮ್ಮನ್ನು ಒಂದು ವಿಷಯ ಕೇಳಬೇಕೆಂದು ಬಂದಿದ್ದೇನೆ" ಎಂದೆ.

"ಕೇಳಿ; ತಿಳಿದುದನ್ನು ಹೇಳುತ್ತೇನೆ."

"ಜೀವನದ ಧ್ಯೇಯವೇನು?"

"ಕುಳಿತುಕೊಳ್ಳಿ, ಬಂದೆ" ಎಂದು ಹೇಳಿ ವಿ.ಸೀ.ಯವರು ಒಳಗಡೆ ಹೋದರು. ಸ್ವಲ್ಪ ಹೊತ್ತಿನಲ್ಲಿಯೆ ಒಂದು ತಟ್ಟೆಯಲ್ಲಿ ಉಪ್ಪಿಟ್ಟನ್ನೂ ಒಂದು ಲೋಟದಲ್ಲಿ ಕಾಫಿಯನ್ನೂ ತಂದು ಮೇಜಿನ ಮೇಲಿಟ್ಟು "ತೆಗೆದುಕೊಳ್ಳಿ" ಎಂದರು. ನನಗೆ ಸ್ವಲ್ಪ ಸಂಕೋಚವಾಯಿತು. ಅಪರಿಚಿತನಾದ ನನ್ನನ್ನು ಸುಪರಿಚಿತನಂತೆ ಕಂಡ ಅವರ ಔದಾರ್ಯವನ್ನು ಕಂಡು ವಿಸ್ಮಯದಿಂದ ಮೂಕನಾದೆ. "ಸಂಕೋಚ ಬೇಡ, ತೆಗೆದುಕೊಳ್ಳಿ" ಎಂದರು ವಿ.ಸೀ. ಮತ್ತೆ! ತಟ್ಟೆಯನ್ನು ಕೈಗೆ ತೆಗೆದುಕೊಂಡೆ. ಅಷ್ಟರಲ್ಲಿ ಶ್ರೀ ಶಿವರಾಮ ಕಾರಂತರು ಅಲ್ಲಿಗೆ ಬಂದರು.

"ಇವರಾರು ಗೊತ್ತೇ?" ಎಂದು ಕೇಳಿದರು ವಿ.ಸೀ.

"ಇಲ್ಲ, ಸಾರ್!"

"ಇವರೇ ಶಿವರಾಮ ಕಾರಂತರು."

"ಹೌದು, ನಾನೇ ಶಿವರಾಮ ಕಾರಂತ" ಎಂದು ನಕ್ಕರು ಕಾರಂತರು.

ಶಿವರಾಮ ಕಾರಂತರ ಕಡೆ ತಿರುಗಿ, "You see, this young man wants to know the aim of life" ಎಂದು ಹೇಳಿದರು. ಕಾರಂತರು ನನ್ನ ಕೈಲಿದ್ದ ತಟ್ಟೆಯನ್ನು ಕಂಡು "ಮೊದಲು ಕೈಲಿದ್ದುದನ್ನು ತೆಗೆದುಕೊಳ್ಳಿ, ಎಲ್ಲ ಚೆನ್ನಾಗಿ ಅರ್ಥವಾಗುತ್ತದೆ" ಎಂದರು. ವಿ.ಸೀ.ಯವರು ನಕ್ಕರು. ನಾನು ಬೇಗ ಬೇಗ ತಟ್ಟೆಯಲ್ಲಿದ್ದುದನ್ನು ಪೂರೈಸಿ ಕಾಫಿ ಕುಡಿದು ಮುಗಿಸಿದೆ. ವಿ.ಸೀ. ನನ್ನ ಕಡೆ ನೋಡಿ, "ಒಳ್ಳೆಯ ಜೀವನ ನಡೆಸಿ, ನಾಲ್ಕು ಜನರಿಗೆ ಉಪಕಾರಿಯಾಗಿ, ಜಗತ್ತಿನ ಸಂದೇಶಕ್ಕೆ ಸದಾ ಎಚ್ಚತ್ತಿರಬೇಕು. We must always be receptive to the world" ಎಂದರು."

ಉ. ಕಾ. ಸುಬ್ಬರಾಯಾಚಾರ್
'ರೂಪಾರಾಧಕ' ಪು. ೨೯-೩೦

ಶಿಷ್ಯಚಿತ್ತಾಪಹಾರಕ

ಎನ್. ಎಸ್. ರಾಮಸ್ವಾಮಿ ಅಯ್ಯರ್

ನನ್ನ ವಿದ್ಯಾಗುರುಗಳಾದ ವಿ.ಸೀ. ಯವರ ನೆನಪು ಆಗಾಗ್ಗೆ ಮರುಕಳಿಸುತ್ತಿರುತ್ತದೆ. ನಾನು ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗ ಅವರ 'ಅಭಿಜ್ಞ' ಎಂಬ ಕವನವನ್ನು ಸ್ಪರ್ಧೆಗಾಗಿ ಅರಿಸಿದ್ದರು. ಪ್ರೊ. ಜಿ. ವೆಂಕಟಸುಬ್ಬಯ್ಯನವರು ತೀರ್ಪುಗಾರರಲ್ಲಿ ಒಬ್ಬರಾಗಿದ್ದರು. ನನಗೆ ಪ್ರಥಮ ಬಹುಮಾನ ದೊರಕಿತು. ವಿ.ಸೀ. ಯವರ ಪರಿಚಯ ನನಗೆ ಆದದ್ದು ಹೀಗೆ – ಅವರ ಕವನದ ಮೂಲಕ. ಅದರಲ್ಲಿನ ಕೆಲವು ಸಾಲುಗಳು ಅವರ ಜೀವನದಲ್ಲಿ ಹಾಸುಹೊಕ್ಕಾಗಿದ್ದುವು – 'ಮಣಿಯದಿಹ ಮನವೊಂದು; ಸಾಧಿಸುವ ಹಟವೊಂದು; ನಿಜವ ನೇರಕೆ ನಡೆವ ನಿಶ್ಚಲತೆಯೊಂದು; ಅನ್ಯಾಯಕೆಂದೆಂದು ಬಾಗದೆಚ್ಚರವೊಂದು; ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು.' ಒಬ್ಬ ಮನುಷ್ಯನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಗುಣಗಳು ಇವು.

೧೯೪೨ ರಿಂದ ೪೪ರ ಕಾಲದಲ್ಲಿ ವಿ.ಸೀ. ಯವರು ಮಹಾರಾಜಾ ಕಾಲೇಜಿದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಐಚ್ಛಿಕ ಕನ್ನಡ ವಿದ್ಯಾರ್ಥಿಗಳಿಗೂ 'ಶಾಕುಂತಲ' ನಾಟಕವನ್ನು ದ್ವಿತೀಯ ಭಾಷೆಯ ಕನ್ನಡ ವಿದ್ಯಾರ್ಥಿಗಳಿಗೂ ಬೋಧಿಸುತ್ತಿದ್ದರು. ಅವರು ಬೋಧಿಸುತ್ತಿದ್ದ ರೀತಿ ಅನ್ಯಾದೃಶವಾದುದು. ಶಾಕುಂತಲ ನಾಟಕವನ್ನು ಬೋಧಿಸುತ್ತಿದ್ದುದು ನಮ್ಮೆಲ್ಲರ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರುತ್ತಿತ್ತು. ಆಂಗ್ಲ ಭಾಷೆ, ಸಂಸ್ಕೃತ ಭಾಷೆ ಹಾಗೂ ಕನ್ನಡ ಭಾಷೆಯ ವಿಮರ್ಶನ ಗ್ರಂಥಗಳಿಂದ ವಿಪುಲವಾಗಿ ಹೇಳಿಕೆಗಳನ್ನು ಪುನರುಚ್ಚರಿಸುತ್ತಿದ್ದರು. ತರಗತಿಯು ನಿಶ್ಶಬ್ದವಾಗಿರಬೇಕು. ಸದ್ದುಗದ್ದಲವಿದ್ದ ಅವರ ಏಕಾಗ್ರಚಿತ್ತತೆಯನ್ನು, ತನ್ಮಯತೆಯನ್ನು ಕೆಡಿಸಬಾರದು. ಒಮ್ಮೆ ತರಗತಿಯಲ್ಲಿ ಏನೋ ಗದ್ದಲ. ವಿ.ಸೀ. ಅವರಿಗೆ ಕೋಪ ಬಂದು 'ಪಾಠದ ಬಗ್ಗೆ ಕಾಳಜಿಯಿಲ್ಲದಿದ್ದ ವಿದ್ಯಾರ್ಥಿಗಳು ತರಗತಿಯಿಂದ ಹೊರಕ್ಕೆ ಹೋಗಬಹುದು' ಎಂದರು. ಯಾವೊಬ್ಬನೂ ಹೊರಹೋಗಲಿಲ್ಲ. ಗದ್ದಲ ನಿಂತಿತು. ಆದರೆ ಒಬ್ಬನೇ ವಿದ್ಯಾರ್ಥಿ ಎದ್ದು ಹೊರನಡೆದ! ಪಾಠ ಮುಗಿದು ಗುರುಗಳು ತರಗತಿಯಿಂದ ಹೊರಕ್ಕೆ ಬಂದಾಗ ಆ ವಿದ್ಯಾರ್ಥಿಯು ತನ್ನ ನಡತೆಯು ತಪ್ಪೆಂದು ಭಾವಿಸಿ ವಿ.ಸೀ. ಯವರ ಕ್ಷಮಾಯಾಚನೆ ಮಾಡಿದ. ಆಗ ಗುರುಗಳು ಅವನಿಗೆ ಛೀಮಾರಿ ಹಾಕಿದ್ದು, ಅವರ ಮುಖ ಕೋಪದಿಂದ ಕೆಂಪಾಗಿದ್ದುದನ್ನು ನೆನಸಿಕೊಂಡರೆ ಈಗಲೂ ಭಯವಾಗುತ್ತೆ.

ವಿ.ಸೀ. ಅವರ ಶಿಷ್ಯವಾತ್ಸಲ್ಯ ಅಪಾರ. ವಾರ್ಷಿಕ ಸಾರ್ವತ್ರಿಕ ಪರೀಕ್ಷೆಗಳಿಗೆ ಮುನ್ನ ಪಠ್ಯ ಪುನರಾವರ್ತನೆಯ ಉಪನ್ಯಾಸಗಳನ್ನು ನೀಡುತ್ತಿದ್ದರು. ಎಲ್ಲ ವಿದ್ಯಾರ್ಥಿಗಳೂ ಕಡ್ಡಾಯವಾಗಿ ಅವುಗಳಿಗೆ ಹಾಜರಾಗಬೇಕು. ತರಗತಿಯಲ್ಲಿ ನಾವಿದ್ದುದು ಎಂಟು ಮಂದಿ. ನನಗೆ ಗೃಹಕೃತ್ಯದ ತೊಂದರೆಗಳಿಂದಾಗಿ ನಾನು ಹಾಜರಾಗಲು ಸಾಧ್ಯವಿಲ್ಲವೆಂದು ಅವರಲ್ಲಿ ನಿವೇದಿಸಿಕೊಂಡೆ. ಅವರು ಒಪ್ಪಿಗೆ ಕೊಟ್ಟರು. ಕಡೆಯ ದಿನ ಎಲ್ಲರಿಗೂ ಸಿಹಿ ಹಂಚಿ, ಹರಸಿದರು. ನನಗೆ ಆ ದಿನ ಹಾಜರಿರಬೇಕೆಂದು ಹೇಳಿಕಳುಹಿಸಿದರು. ನಾನು ಹಾಜರಾದೆ. ಎಲ್ಲ ಮುಗಿದ ನಂತರ ನನ್ನ ಯೋಗಕ್ಷೇಮ ವಿಚಾರಿಸಿದರು. ನಾನು ಯಾರನ್ನು ನೋಡಿಕೊಳ್ಳಲು ತರಗತಿಗೆ ಬರದೆ ನಿಂತೆನೋ ಅವರು ತೀರಿಕೊಂಡ ಸಂಗತಿಯನ್ನು ಅವರಿಗೆ ತಿಳಿಸಿದೆ. ಬಹುವಾಗಿ ವಿಷಾದಪಟ್ಟು 'ಪರೀಕ್ಷೆಯಲ್ಲಿ ಸಾಧ್ಯವಾದಷ್ಟೂ ಚೆನ್ನಾಗಿ ಬರೆ, ಒಳ್ಳೆಯದಾಗಲಿ' ಎಂದು ಸಾಂತ್ವನ ಹೇಳಿದರು. ಪಾಸೇನೋ ಆಯಿತು, ಉತ್ತಮ ದರ್ಜೆ ಕೈತಪ್ಪಿತು.

ನಾನು ಮೈಸೂರಿಗೆ ಹೋದಾಗಲೆಲ್ಲ ಅವರನ್ನು ನೋಡಿ ಬರುತ್ತಿದ್ದೆ. ನಮ್ಮೆಲ್ಲರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. ಒಳ್ಳೆಯದಾಗಲಿ ಎಂದು ಹೇಳಿಕಳುಹಿಸುತ್ತಿದ್ದರು.

* * *

ಭಾರತವು ೧೯೪೭ರಲ್ಲಿ ಸ್ವಾತಂತ್ರ್ಯ ಪಡೆಯಿತಷ್ಟೆ. ಎಲ್ಲೆಲ್ಲೂ ಹೊಸಹುರುಪು, ಸಂಭ್ರಮ, ಸಂತಸ. ನಾನು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದಲ್ಲಿ ಪ್ರೌಢಶಾಲೆಯಲ್ಲಿ ಒಂದು ವರ್ಷ ಮುಖ್ಯೋಪಾಧ್ಯಾಯನಾಗಿದ್ದೆ. ಆಗ ವಿ.ಸೀ. ಚಿಕ್ಕಮಗಳೂರು ಕಾಲೇಜಿನಲ್ಲಿದ್ದರು. , ಗಾಂಧೀ ಜಯಂತಿ ಕಾರ್ಯಕ್ರಮವನ್ನು ನಮ್ಮ ಶಾಲೆಯಲ್ಲಿ ಹಮ್ಮಿಕ್ಕೊಂಡಿದ್ದು, ಅವರನ್ನು ಭಾಷಣ ಮಾಡಲು ಕೇಳಿಕೊಂಡೆ. ಅವರು ನನ್ನ ಬೇಡಿಕೆಗೆ ಒಪ್ಪಿ ಬಂದರು. ಕಾರ್ಯಕ್ರಮ ಪ್ರಾರಂಭವಾಗುವ ಮುನ್ನ ಹೊರಗೆ ಕುಳಿತು ಮಾತನಾಡುತ್ತಿದ್ದೆವು. ಆಕಾಶವು ಮೋಡದಿಂದ ತುಂಬಿ ಮಳೆ ಬರುವುದರಲ್ಲಿತ್ತು. ಒಳಕ್ಕೆ ಹೋಗೋಣವೆಂದೆ. ಹನಿಗಳ ಪರದೆ, ಅದು ಮಾಡುವ ಶಬ್ದ ಕೇಳಿಸುತ್ತೆ, ಎಂದೆ. ಮಳೆ ಬಂತು, ಮುಂದೆ ಸಾಗಿತು. ನಾವು ಸ್ವಲ್ಪ ತೊಯ್ದೆವು. ಅವರಿಗೆ ಏನಿಲ್ಲದ ಸಂತೋಷ. ಅಂದು ಅವರು ಗಾಂಧೀಜಿಯವರ ಜೀವನ–ಸಾಧನೆಗಳನ್ನು ಕುರಿತು ಸುಮಾರು ಒಂದೂವರೆ ಗಂಟೆಗಳ ಕಾಲ ಭಾವಪರವಶರಾಗಿ ಭಾಷಣ ಮಾಡಿದರು. ಸಭೆ ಅವರ ಭಾಷಣವನ್ನು ಆಲಿಸುತ್ತ ಎಲ್ಲವನ್ನೂ ಮರೆತು ತಲ್ಲೀನವಾಗಿತ್ತು. ಎಲ್ಲರೂ ಸಂತೋಷಿಸಿದರು. ಭಾಷಣ ಬಹಳ ಚೆನ್ನಾಗಿತ್ತು. ಗಾಂಧೀಜಿಯವರನ್ನು ಕುರಿತು ಇಂತಹ ಭಾಷಣವನ್ನು ಇದುವರೆಗೂ ಕೇಳಿರಲಿಲ್ಲ ಎಂದು ಹಲವರು ಉದ್ಗರಿಸಿದರು. ಇದನ್ನು ನನ್ನ ಜೀವನದಲ್ಲಿ ಮರೆಯಲಾಗದ ಸಂದರ್ಭವೆಂದು ನಾನು ಭಾವಿಸಿದ್ದೇನೆ.

ಅವರ ನಿಸರ್ಗ ಪ್ರೇಮ ಅಪಾರ. ಕಾರ್ಯಕ್ರಮ ಮುಗಿದ ನಂತರ ಮನೆಗೆ ತೆರಳಿದೆವು. ನಮ್ಮದು ಗಂಡುಬಿಡಾರ. ಅಡಿಗೆ ಮಾಡಿ, ಊಟ, ವಿಶ್ರಾಂತಿ. ಮಾರನೆಯ ಬೆಳಿಗ್ಗೆ ಎದ್ದು ಕಾಫಿ ಸೇವಿಸಿಯಾಯಿತು. ಗುರುಗಳು 'ನನಗೇನಾದರೂ ಕೆಲಸವಿದೆಯೇನಪ್ಪಾ?' ಎಂದರು. ನಾನು ಏನೆಂದು ಉತ್ತರಿಸಲಿ? ಎಂತಹ ಸರಳ ಸ್ವಭಾವ! ಏನೂ ಹೇಳದೆ

ಕಿಟಕಿಯ ಬಳಿ ಒಂದು ಕುರ್ಚಿ ಹಾಕಿ ಕೂರಿಸಿದೆ. ಎದುರಿಗೆ ಸುಮಾರು ಒಂದು ಮೈಲು ದೂರ ಬೆಟ್ಟದ ಕಣಿವೆ. ದಟ್ಟವಾಗಿ ಮಂಜು ಮುಸುಕಿದೆ, ಉದಯ ಸೂರ್ಯನ ಕಿರಣಗಳು ಅದರ ಮೇಲೆ ಬಿದ್ದು ಮಂಜು ಮುಂದೆ ಮುಂದೆ ಓಡುವಂತೆ ಕಾಣುತ್ತಿದೆ. ಆ ದೃಶ್ಯವನ್ನು ನೋಡಿ ಮೈಮರೆತು ಕುಳಿತಿದ್ದು, ಸ್ವಲ್ಪ ಹೊತ್ತಾದ ಮೇಲೆ 'ಎಂತಹ ಸೊಗಸಾದ ದೃಶ್ಯ!' ಎಂದು ಉದ್ಗರಿಸಿದರು. ಉಪಹಾರಾನಂತರ ಅವರಿಗೆ ನಮಸ್ಕರಿಸಿ, ಬಸ್ಸಿನಲ್ಲಿ ಚಿಕ್ಕಮಗಳೂರಿಗೆ ಕಳುಹಿಸಿಕೊಟ್ಟೆವು.

ಅವರಿಗೆ ಕರ್ನಾಟಕ ಹಾಗೂ ಪಾಶ್ಚಿಮಾತ್ಯ ಸಂಗೀತಗಳಲ್ಲಿದ್ದ ಅಭಿರುಚಿ, ಪಾಂಡಿತ್ಯ, ಕಾಡುಮೇಡುಗಳಲ್ಲಿನ ಅವರ ಅಲೆದಾಟ ಇತ್ಯಾದಿಗಳನ್ನು ವರ್ಣಿಸಿ ಮುಗಿಯದು. ಅವರ ನೆನಪೇ ನನಗೆ ಶ್ರೀರಕ್ಷೆ. ಶಿಷ್ಯಚಿತ್ತಾಪಹಾರಕರು ಅವರು. ಅವರನ್ನು ವಂದಿಸಿ ವಿರಮಿಸುತ್ತೇನೆ.

ಸೌಂದರ್ಯ ಪ್ರಜ್ಞೆ, ಹೃದಯವಂತಿಕೆ

"ಬಿಟ್ಟು ಹನ್ನೊಂದು ವರ್ಷವಾದ ಮೇಲೆ ವಿ.ಸೀ. ಮತ್ತೊಮ್ಮೆ ಹೊನ್ನಾವರಕ್ಕೆ ಕಾಲೆಜಿನ ಉತ್ಸವ ಒಂದಕ್ಕೆ ಮುಖ್ಯ ಅತಿಥಿಯಾಗಿರಲು ಒಪ್ಪಿ ಹೋದರು. ನಾವೂ ಅವರೊಡನೆ ಹೋಗಿದ್ದೆವು. ಅಂದು ಪೂರ್ಣಿಮೆ. ಆ ರಾತ್ರಿ ಅಲ್ಲಿ ಇಳಿದುಕೊಂಡಿದ್ದ ಅಧ್ಯಾಪಕಮಿತ್ರರ ಮನೆ ಗುಡ್ಡಪ್ರದೇಶದಲ್ಲಿ, ಎತ್ತರದಲ್ಲಿ ಇತ್ತು. ಮನೆಯ ಕಾಂಪೌಂಡಿನ ವಿಶಾಲ ಅಂಗಳದಲ್ಲಿ, ಮನೆಯಾಚೆ ಹೊರಗೆ, ಎದುರಿಗೆ ಕಣ್ಣು ದೃಷ್ಟಿ ಹಾಯುವವರೆಗೆ ನೆಲಸಿದ್ದ ಭೂವಿಸ್ತಾರದಲ್ಲಿ, ಮೇಲೆ ವಿಶಾಲ ಆಕಾಶದಲ್ಲಿ ಎಲ್ಲವನ್ನೂ ತೋಯಿಸುವಂತೆ, ಎಲ್ಲೆಲ್ಲೂ ತಾನೇತಾನಾಗಿ ಹರಡಿದ್ದ ಬೆಳುದಿಂಗಳಿನ ವೈಭವವನ್ನು ಕಾಣುತ್ತ, ಅನುಭವಿಸುತ್ತ, ಆನಂದಿಸುತ್ತ ಆ ರಾತ್ರಿ ಹನ್ನೆರಡೂವರೆ–ಒಂದು ಗಂಟೆಯವರೆಗೂ ವಿ.ಸೀ. ಹೊರಗೇ ಕುಳಿತಿದ್ದರು. ಹತ್ತಾರು ದಿನ ಆ ಸೊಬಗನ್ನು ನೆನಸಿಕೊಂಡು ಹೊಗಳಿದ್ದೂ ಹೊಗಳಿದ್ದೇ. ಎರಡು ತಿಂಗಳ ನಂತರ ಹೊನ್ನಾವರದ ಆ ಅಧ್ಯಾಪಕ ಮಿತ್ರರು ಬೆಂಗಳೂರಿಗೆ, ಇವರಲ್ಲಿಗೆ ಬಂದಿದ್ದಾಗ ಇದ್ದಕ್ಕಿದ್ದಂತೆ ಅಂದು ಸಂಜೆ ನಮ್ಮಿಬ್ಬರು ಮೂವರನ್ನು ವಿ.ಸೀ. ಎಂ.ಟಿ.ಆರ್.ಗೆ ಕರೆದೊಯ್ದರು. ಸಿಹಿ ಖಾರ ಕಾಫಿ ಕೊಡಿಸಿದರು. 'ಏತಕ್ಕೆ ಗೊತ್ತೆ?' ಎಂದರು. ಇಲ್ಲವೆಂದು ತಲೆಯಾಡಿಸಿದೆವು. "ಆ ರಾತ್ರಿ ಕಂಡ ಬೆಳುದಿಂಗಳಿನ ನೆನಪಿಗೆ– Let us celebrate it!" ಎಂದು ಆ ಸವಿಯನ್ನು ಮರುಕೊಳಿಸಿದರು. ಇಂಥ ಸೌಂದರ್ಯಪ್ರಜ್ಞೆಗೆ, ಹೃದಯವಂತಿಕೆಗೆ ಏನೆನ್ನೋಣ?"

'ಸುಮನಾ'

'ವಿ. ಸೀತಾರಾಮಯ್ಯ' ಪು. ೧೧೬-೧೧೭

ನಾ ಕಂಡ ವಿ.ಸೀ.

ಬಿ. ಎಸ್. ವೆಂಕಟರಾವ್

ನನ್ನ ಹಿರಿಯ ಆತ್ಮೀಯರೂ, ಪೂಜ್ಯ ಗುರುಗಳೂ ಆಗಿದ್ದ ಪ್ರೊ. ವಿ.ಸೀತಾರಾಮಯ್ಯ (ವಿ.ಸೀ.) ನವರ ಪರಿಚಯವು ನನಗೆ ೧೯೪೦ರಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯಿತು. ನಾನೂ ಚಾಮರಾಜಪೇಟೆಯಲ್ಲಿಯೇ ವಾಸಿಸುತ್ತಿದ್ದುದರಿಂದ ಅವರನ್ನು ಪರಿಷತ್ತಿನಲ್ಲಿಯೂ, ಅವರ ಮನೆಯಲ್ಲಿಯೂ ಆಗಾಗ ಭೇಟಿಮಾಡುತ್ತಿದ್ದೆ. ತದನಂತರ ೧೯೪೪ರಿಂದ ೧೯೪೭ರವರೆಗೆ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಅವರ ವಿದ್ಯಾರ್ಥಿಯಾಗಿದ್ದೆ. ಆಗ ಅವರೊಡನೆ ನನ್ನ ಸಂಬಂಧ ನಿಕಟವಾಗಿತ್ತು.

ವಿ.ಸೀ. ಯವರು ವೈಯಕ್ತಿಕವಾಗಿಯೂ, ಅಧ್ಯಾಪಕರಾಗಿಯೂ, ಸಾಹಿತಿಗಳಾಗಿಯೂ ಬಹು ದೊಡ್ಡ ಚೇತನರಾಗಿದ್ದರು ಎಂಬುದು ಸರ್ವವೇದ್ಯ. ನಾನು ಅವರ ಕವನಗಳನ್ನು ಓದಿ ಆನಂದಿಸಿದ್ದೇನೆ, ಅವರ ಶಿಷ್ಯ ವಾತ್ಸಲ್ಯವನ್ನು ಅನುಭವಿಸಿದ್ದೇನೆ, ಮತ್ತು ಅವರ ಪಾಠ ಪ್ರವಚನಗಳಿಂದ ಅತಿಶಯ ಉಪಯೋಗ ಪಡೆದಿದ್ದೇನೆ.

ವಿ.ಸೀ. ಯವರು ಬಹು ಸರಳ ಮನೋಭಾವದವರಾಗಿದ್ದರು. ಅವರ ಸರಳತನವು ಅವರ ಚಿಂತನೆ, ಮಾತು, ಬರವಣಿಗೆ, ಪಾಠ ಹೇಳುವ ವಿಧಾನ, ವೈಯಕ್ತಿಕ ನಡವಳಿಕೆ, ಧರಿಸುತ್ತಿದ್ದ ಉಡುಪು– ಇವೆಲ್ಲದರಲ್ಲಿಯೂ ಗೋಚರವಾಗುತ್ತಿತ್ತು. ಭಗವದ್ಗೀತೆಯಲ್ಲಿ ಹೇಳಿರುವಂತೆ "ಅನುದ್ವೇಗಕರಂ ವಾಕ್ಯಂ, ಸತ್ಯಂ, ಪ್ರಿಯಹಿತಂ ಚ ಯತ್....." ಆಗಿತ್ತು ಅವರ ಮಾತು. ಎಲ್ಲರೊಡನೆಯೂ ಮೃದುವಾಗಿ ಮಾತನಾಡುತ್ತಿದ್ದರು. ಕೋಪಿಸಿಕೊಂಡು ಎತ್ತರ ಧ್ವನಿಯಲ್ಲಿ ಅವರು ಮಾತನಾಡಿದ್ದನ್ನು ನಾನು ಎಂದೂ ಕೇಳಿಲ್ಲ. ಕಾಲೇಜಿನಲ್ಲಿ ಪಾಠ ಮಾಡುವಾಗ ಯಾರಾದರೂ ಮಾತಾಡಿ ಶಬ್ದಮಾಡಿದರೆ ಕುರ್ಚಿಯಿಂದ ಎದ್ದು ಮೆಲುದನಿಯಲ್ಲಿ "ನೀವು ಅಥವಾ ನಾನು" (Either you or I) ಎಂದು ಹೇಳುತ್ತಿದ್ದರು. ಕೂಡಲೇ ತರಗತಿಯು ನಿಶ್ಶಬ್ದವಾಗುತ್ತಿತ್ತು.

ವಿ.ಸೀ. ಯವರು ಪೂರ್ಣ ವಿದ್ವಾಂಸರು; ಆದುದರಿಂದ ನಿಗರ್ವಿಗಳೂ, ವಿನಯ ಸಂಪನ್ನರೂ ಆಗಿದ್ದರು. ಡಿ.ವಿ.ಜಿ.ಯವರು ಬರೆದಿರುವ "ವನಸುಮದೊಲೆನ್ನ ಜೀವನವು ವಿಕಸಿಸುವಂತೆ ಮನವನನುಗೊಳಿಸು ಹೇ ಗುರುವೇ" ಎಂಬ ಮಾತು ವಿ.ಸೀ. ಯವರ ಜೀವನದ ಒಂದು ತತ್ವವಾಗಿತ್ತು. ಅವರು ಹೆಸರಾಂತ ಸಾಹಿತಿಗಳೂ, ಅಧ್ಯಾಪಕರೂ ಮತ್ತು

ವಯಸ್ಸಿನಲ್ಲಿ ನನಗಿಂತ ಬಹು ದೊಡ್ಡವರಾಗಿದ್ದರೂ ಹದಿನಾಲ್ಕು ವರ್ಷದ ಹುಡುಗನಾದ ನನ್ನೊಡನೆ ಬಹುವಚನದಲ್ಲಿಯೇ ಮಾತನಾಡುತ್ತಿದ್ದರು. ಎಂತಹ ದೊಡ್ಡತನ!

ಸಂವೇದನಾಶೀಲತೆ ಮತ್ತು ಉಪಕಾರ ಪ್ರವೃತ್ತಿ ವಿ.ಸೀ. ಯವರ ಸಹಜ ಗುಣಗಳಾಗಿದ್ದುವು. ಅವರ ವೈಯಕ್ತಿಕ ಸಮಸ್ಯೆಗಳು ಏನೇ ಇರಲಿ, ಬೇರೆಯವರ ಕಷ್ಟ ನಷ್ಟಗಳ ಬಗ್ಗೆ ಅತಿಶಯ ಅನುಕಂಪ ತೋರುತ್ತಿದ್ದರು. ದೊಡ್ಡವರಿಗಾಗಲೀ, ಚಿಕ್ಕವರಿಗಾಗಲೀ ತಮ್ಮ ಕೈಲಾದಷ್ಟು ಸಹಾಯ ಮಾಡುತ್ತಿದ್ದರು. ಭಗವದ್ಗೀತೆಯಲ್ಲಿ ಹೇಳಿರುವಂತೆ ಅವರು "ಸುಹೃತ್" ಆಗಿದ್ದರು— ಉಪಕಾರ ಅಥವಾ ಪ್ರತ್ಯುಪಕಾರ ಬಯಸದೆ ಇತರರ ಕಷ್ಟಕ್ಕೆ ಒದಗುತ್ತಿದ್ದರು. ನಾನು ಅವರ ವಿದ್ಯಾರ್ಥಿಯಾಗಿದ್ದಾಗ ಧನಾರ್ಜನೆ ಮಾಡಲು ಎರಡು ರೀತಿಯಲ್ಲಿ ನನಗೆ ಸಹಾಯ ಮಾಡಿದರು (೧) ಮೈಸೂರು ಆಕಾಶವಾಣಿಯಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದ ಶ್ರೀ ಎ. ಎನ್. ಮೂರ್ತಿರಾಯರೊಡನೆ ನನ್ನ ಬಗ್ಗೆ ಮಾತನಾಡಿ ಆ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಏರ್ಪಾಡು ಮಾಡಿದರು. ಈ ಏರ್ಪಾಡು ವಿ.ಸೀ.ಯವರ ಸಹಾಯದಿಂದ ಆಯಿತು ಎಂಬುದು ಶ್ರೀ ಮೂರ್ತಿರಾಯರಿಂದ ತಿಳಿಯಿತೇ ಹೊರತು ವಿ.ಸೀ. ಯವರು ನನಗೆ ಹೇಳಲಿಲ್ಲ (೨) ೧೯೪೫ ಮತ್ತು ೧೯೪೬ನೇ ಇಸವಿಗಳಲ್ಲಿ ಅವರು ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥ ಪ್ರಕಾಶನ ಶಾಖೆಗಾಗಿ ಸಣ್ಣ ಪುಸ್ತಕಗಳನ್ನು ಬರೆಯುತ್ತಿದ್ದರು. ಆ ಪುಸ್ತಕಗಳ ಹಸ್ತ ಪ್ರತಿಗಳ ಉಕ್ತಲೇಖನವನ್ನು ನಾನು ಅವರ ಮನೆಗೆ ಹೋಗಿ ಮಾಡುತ್ತಿದ್ದೆ. ಅವರು ನನ್ನ ಮೆಚ್ಚಿನ ಗುರುಗಳಾದ್ದರಿಂದ ನಾನು ಆ ಕೆಲಸವನ್ನು ಫಲದಾಸೆಯಿಲ್ಲದೆ ಆನಂದದಿಂದ ಮಾಡಲು ಸಿದ್ಧನಾಗಿದ್ದೆ ಮತ್ತು ಮಾಡಿದೆ. ಆದರೆ ಅವರು ಮಾತ್ರ ನನ್ನಿಂದ ಪ್ರತಿಫಲವಿಲ್ಲದ ಸೇವೆ (Free Service) ಯನ್ನು ಸ್ವೀಕರಿಸುತ್ತಿರಲಿಲ್ಲ. ನನಗೆ ಯೋಗ್ಯವಾದ ಗೌರವ ಧನವನ್ನು ನೀಡುತ್ತಿದ್ದರು. ನಾನು ಉಕ್ತ ಲೇಖನ ಮಾಡಿದ ಹೊತ್ತಿಗೆಗಳಲ್ಲಿ ನನ್ನ ಪದ್ಯ ಪುಸ್ತಕವಾಗಿದ್ದ ಬಿ.ಎಂ.ಶ್ರೀ. ಯವರ ಅಶ್ವತ್ಥಾಮನ್ ನಾಟಕವೂ ಸೇರಿತ್ತು. ಈ ನಾಟಕಕ್ಕೆ ವಿ.ಸೀ.ಯವರು ಬರೆದ ವಿಮರ್ಶೆಯಿಂದ ನನ್ನ ಪರೀಕ್ಷೆಗೂ ಸಹಾಯವಾಯಿತು. ನಿಜವಾಗಿಯೂ ವಿ.ಸೀ. ಉದಾರ ಹೃದಯರಾಗಿದ್ದರು!

ಪದವೀಧರನಾದ ಮೇಲೆ ನೌಕರಿಯ ಅನ್ವೇಷಣೆಯಲ್ಲಿದ್ದಾಗ, ನಾನು ಅವರನ್ನು ಕೇಳದಿದ್ದರೂ ಅವರಾಗಿಯೇ ಅವರ ಪರಿಚಯಸ್ಥರಾದ, ಮದ್ರಾಸಿನ ಹಿಂದೂ ಪತ್ರಿಕೆಯ ಅಸಿಸ್ಟೆಂಟ್ ಎಡಿಟರರಾದ ಶ್ರೀ ಎ. ರಘುನಾಥ ಅಯ್ಯರ್‌ರವರಿಗೆ ಶಿಫಾರಸು ಪತ್ರ ಬರೆದು ಕೊಟ್ಟರು. ನಾನು ಮದ್ರಾಸಿನಲ್ಲಿ ಅಯ್ಯರ್‌ರವರನ್ನು ಭೇಟಿಮಾಡಿ ವಿ.ಸೀ.ಯವರ ಪತ್ರ ತಲುಪಿಸಿದಾಗ ಅವರು ಕೂಡಲೇ ಪತ್ರಿಕೆಯಲ್ಲಿ ಸಬ್ ಎಡಿಟರ್ ಹುದ್ದೆಯನ್ನು ಕೊಡುತ್ತೇನೆಂದು ಆಶ್ವಾಸನೆ ನೀಡಿದರು. ಆದರೆ ಕಾರಣಾಂತರದಿಂದ ನಾನು ಆ ಕೆಲಸ ಒಪ್ಪಿಕೊಳ್ಳಲಿಲ್ಲ. ಆ ಘಟನೆಯಿಂದಾಗಿ ಅಯ್ಯರ್‌ರವರಿಗೆ ವಿ.ಸೀ. ಯವರಲ್ಲಿ ಎಷ್ಟು ಗೌರವವಿತ್ತು ಎಂದು ನನಗೆ ಅರಿವಾಯಿತು. ಎಂತಹ ಉದ್ವೇಗಕರ ಪರಿಸ್ಥಿತಿಯಲ್ಲಿಯೂ ಅವರು ತಾಳ್ಮೆಯ ಮೂರ್ತಿಯಾಗಿರುತ್ತಿದ್ದರು. ಅವರ ತಾಳ್ಮೆಯನ್ನು ಅನುಕರಿಸುವುದು ಸುಲಭ ಸಾಧ್ಯವಲ್ಲ. ಆದರೂ ನನ್ನ ವೈಯಕ್ತಿಕ ಜೀವನದಲ್ಲಿ ಅವರ ಪ್ರವೃತ್ತಿಯನ್ನು ಅನುಸರಿಸಲು ನಾನು ಪ್ರಯತ್ನ ಪಟ್ಟಿದ್ದೇನೆ.

ಸ್ತ್ರೀಯರಲ್ಲಿ ವಿ.ಸೀ. ಯವರಿಗೆ ಗೌರವ ಮತ್ತು ಅನುಕಂಪವಿತ್ತು. ಅವರಿಗೆ ಅವರ ಮಾತೃಶ್ರೀಯವರಲ್ಲಿ ಎಷ್ಟು ಗೌರವವಿತ್ತು ಎಂಬುದನ್ನು ನಾನು ಸ್ವಯಂ ನೋಡಿಬಲ್ಲೆ. ಒಂದೆರಡು ಬಾರಿ ಈ ವಿಷಯ ನಮ್ಮ ಸಂಭಾಷಣೆಯಲ್ಲಿಯೂ ಬಂದಿತ್ತು. ಅವರೇ ಹೇಳಿಲ್ಲವೆ? '– 'ಧನ್ಯೆ, ತ್ಯಾಗವ ಗೈವೆ। ನಿನ್ನಾತ್ಮವರ್ಪಿಸುವ ಇನಿತು ಹಿರಿ ದಾನಕೆ। ಪಾತ್ರನಹೆನೆಂತು?" ಎಂದು. ಈ ಮಾತು ತಾಯಿ, ಹೆಂಡತಿ, ಮಗಳು, ಎಲ್ಲ ಸ್ತ್ರೀ ಸಮುದಾಯಕ್ಕೂ ಅನ್ವಯಿಸುತ್ತದೆ ಎಂಬುದು ಸರ್ವವೇದ್ಯ. "ಕಠಿಣಗಳ ನೆಳಲ್ ಸುಳಿಯಲ್ ಅದುರಿ ಬಾಡುವಳು" ಎಂದಿದ್ದಾರೆ ಇನ್ನೊಂದು ಕವನದಲ್ಲಿ.

ವಿ.ಸೀ. ಯವರಿಗೆ ಉಚ್ಚ ಮಟ್ಟದ ಶಿಷ್ಯ ವಾತ್ಸಲ್ಯವಿತ್ತು ಎಂಬುದು ಅವರ ವಿದ್ಯಾರ್ಥಿಗಳಿಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ.

೧೯೫೦ರ ಉತ್ತರಾರ್ಧದಲ್ಲಿರಬೇಕು, ಒಮ್ಮೆ ಅವರೂ ನಾನೂ ಬೆಂಗಳೂರಿಗೆ ಒಟ್ಟಿಗೆ ಪ್ರಯಾಣ ಮಾಡಿದೆವು. ಮೈಸೂರು ರೈಲ್ವೆ ನಿಲ್ದಾಣದಲ್ಲಿ ಅವರ ಭೇಟಿಯಾಯಿತು. ಅವರು ಉತ್ತಮ ಶ್ರೇಣಿಯ ರೈಲು ಡಬ್ಬದಲ್ಲಿ ಪ್ರಯಾಣ ಮಾಡಬಹುದಾಗಿದ್ದರೂ, ನನ್ನೊಡನೆ ಮೂರನೇ ದರ್ಜೆಯ ಡಬ್ಬದಲ್ಲಿ ಪ್ರಯಾಣ ಮಾಡಿದರು. ಸುಮಾರು ಮೂರೂವರೆ ಗಂಟೆಗಳ ಕಾಲ ಒಟ್ಟಿಗೆ ಕುಳಿತು ಮಾತನಾಡುತ್ತ ಪ್ರಯಾಣ ಸಾಗಿಸಿದೆವು. ಮದ್ದೂರು ಬಂದಾಗ ಕಾಫಿ ತಿಂಡಿ ಒಟ್ಟಿಗೆ. ಬೆಂಗಳೂರಿನಲ್ಲಿ ಕುದುರೆ ಗಾಡಿಯಲ್ಲಿ ಚಾಮರಾಜಪೇಟೆಗೆ ಪ್ರಯಾಣ. ನನ್ನೊಡನೆ ಸಹಪಾಠಿಯಂತೆ ವರ್ತಿಸಿದರು. ಕಾಲೇಜಿನಲ್ಲಿ ಕನ್ನಡ ಪಾಠ ಕಲಿತಿದ್ದಕ್ಕಿಂತ, ಜೀವನದಲ್ಲಿ ಉಪಯುಕ್ತವಾಗುವ ಮೌಲ್ಯಗಳ ಬಗ್ಗೆ ಅರಿಯುವ ಅಪೂರ್ವ ಅವಕಾಶ ನನಗೆ ಅಂದು ದೊರಕಿತು!

ವಿ.ಸೀ.ಯವರಿಗೆ ದೇವರಲ್ಲಿ ನಂಬಿಕೆ ಮತ್ತು ಭಕ್ತಿ ಇತ್ತು ಎಂದು ನನ್ನ ಅನಿಸಿಕೆ. ಈ ಬಗ್ಗೆ ಇತರ ವಿದ್ಯಾರ್ಥಿಗಳಾಗಲೀ, ವಿಮರ್ಶಕರಾಗಲೀ ಏನು ಅಭಿಪ್ರಾಯ ಪಡುವರೋ ನನಗೆ ತಿಳಿಯದು. ಅವರ "ಕಸ್ಮೈ ದೇವಾಯದಲ್ಲಿ" ಅವರು 'ಎಲ್ಲಿಗೂ ಹರಿಯದಿಹ ಸಂಶಯವೆ ಕೊನೆಯೋ' ಎಂದಿದ್ದರೂ, ಅವರ ಬಹುತೇಕ ಕವನಗಳಿಂದ (ಮೊರೆ, ನಿನ್ನ ಕೃಪೆ, ಶಬರಿ, ಕ್ಷೇಮಕಾರಿ) ಅವರಿಗೆ ದೇವರಲ್ಲಿ ನಂಬಿಕೆ ಮತ್ತು ಭಕ್ತಿ ಇದ್ದವು ಎಂದು ಅರಿವಾಗುತ್ತದೆ. ೧೯೫೯ರ ಭೇಟಿಯಲ್ಲಿ ಅವರೊಡನೆ ನನ್ನ ವೈಯಕ್ತಿಕ ಸಮಸ್ಯೆಯ ಬಗ್ಗೆ ಮಾತನಾಡುತ್ತಿದ್ದಾಗ ಅವರಾಡಿದ ಮಾತುಗಳಿಂದಲೂ ಈ ಭಾವನೆ ನನಗೆ ಉಂಟಾಯಿತು. "ದೇವರು ದೊಡ್ಡವನು. ಅವನ ಆಶೀರ್ವಾದ ನಿಮ್ಮ ಮೇಲೆ ಇದೆ. ನಿಮಗೆ ಈಗ ದೊಡ್ಡ ಸಂಬಳದ ಕೆಲಸ ಇದೆ. ಆನಂದದಿಂದ ಜೀವನ ಮಾಡಿರಿ."

ನಾನು ಅವರನ್ನು ಕೊನೆಯ ಸಲ ಭೇಟಿಮಾಡಿದ್ದು ಬಹುಶ ೧೯೬೩ರ ಪೂರ್ವಾರ್ಧದಲ್ಲಿ. ಆಗ ಅವರ ಆರೋಗ್ಯ ಅಷ್ಟು ಉತ್ತಮವಾಗಿರಲಿಲ್ಲ. ಪಕ್ಕದಲ್ಲಿ ಕೂಡಿಸಿ ಕೊಂಡು ನನ್ನ ಯೋಗಕ್ಷೇಮ ವಿಚಾರಿಸಿದರು. ಅವರ ಮನೆಯಲ್ಲಿದ್ದ ಕಿರಿಯರೊಬ್ಬರು ಅವರಿಗಾಗಿ ಒಂದು ಲೋಟ ಕಾಫಿ ತಂದಿಟ್ಟರು. ವಿ.ಸೀ.ಯವರು ಆ ಲೋಟವನ್ನು ನನ್ನ ಕೈಗೆ ಕೊಟ್ಟು ಕುಡಿಯಹೇಳಿದರು. ನಾನು ಅಂದೆ – "ಸಾರ್ ನಿಮಗಾಗಿ ತಂದಿರುವ ಕಾಫಿಯನ್ನು ನೀವು ಮೊದಲು ಕುಡಿಯಬೇಕು. ಮೇಲಾಗಿ ನಿಮ್ಮ ಮೈ ಸ್ವಸ್ಥವಾಗಿಲ್ಲ. ಅದರ

ಅವಶ್ಯಕತೆ ನಿಮಗೆ ಮೊದಲು". ಅವರು ಉತ್ತರಿಸಿದರು: "ನನಗೂ ಕಾಫಿ ಬರುತ್ತದೆ. ನಾನು ಕುಡಿದೇ ಕುಡಿಯುತ್ತೇನೆ. ಈಗ ನೀವು ಕುಡಿಯುವುದು ಮುಖ್ಯ." ಎಂತಹ ಶಿಷ್ಯ ವಾತ್ಸಲ್ಯ!

ವಿ.ಸೀ. ಯವರ ಮೆಚ್ಚಿನ ಶಿಷ್ಯರಲ್ಲಿ ನಾನೂ ಒಬ್ಬನಾಗಿದ್ದೆ ಎಂದು ಕ್ಷಮಾರ್ಹ ಹೆಮ್ಮೆಯಿಂದ ಹೇಳಬಲ್ಲೆ.

ಅಂತಃಕರಣದ ಕಳಕಳಿ, ಕೊರಗು

"People who have lost reverence have lost a great deal" ಎಂದ ಎಜ್ರಾ ಪೌಂಡ್‌ನ ಮಾತನ್ನು ವಿ.ಸೀ. ಅದೆಷ್ಟು ಸಲ ನೆನೆಯುತ್ತಿದ್ದರೊ! ಇಂದು ನಾವು ಆ 'reverence' ಕಳೆದುಕೊಂಡಿದ್ದೇವೆಂದು ಅವರಿಗೆ ದೊಡ್ಡ ಕೊರಗು. ನಮ್ಮದು ದೊಡ್ಡದೇಶ, ನಾವು ದೊಡ್ಡಜನ, ನಮ್ಮ ಸಾಹಿತ್ಯ ಸಂಸ್ಕೃತಿ ನಾಗರಿಕತೆ ದೊಡ್ಡವು; ಆದರೆ ಇಂದು ಅದೆಲ್ಲ ಯಾರಿಗೂ ಬೇಕಿಲ್ಲವಾಗಿದೆ. ಕ್ಷುದ್ರ ಆಸಕ್ತಿಗಳನ್ನು ಬೆಳೆಸಿಕೊಂಡು ನಾವು ಸಣ್ಣ ಮನಸ್ಸಿನ, ನಡತೆಯ, ಆಕಾಂಕ್ಷೆಯ ಜನವಾಗುತ್ತಿದ್ದೇವೆ. ಮಹತ್ವಾಕಾಂಕ್ಷೆಯೇ ಇಲ್ಲವಾಗಿದೆ. ನಮ್ಮ ಸ್ಥಿತಿ ಇನ್ನೂ ಬಹು ಹಿಂದೆ ಟಾಗೋರರು ವರ್ಣಿಸಿದ್ದ "We are still ragpicking from others' dust-bin" ಎಂಬಂತೆಯೇ ಇದೆ. ಯಾರೂ ಇದನ್ನು ಅರ್ಥಮಾಡಿಕೊಳ್ಳುತ್ತಿಲ್ಲ; ಶಾಲಾಕಾಲೆಜುಗಳಲ್ಲಿನ ವಿದ್ಯಾ ಶಿಕ್ಷಣ ಇದನ್ನು ತಿಳಿಸುತ್ತಿಲ್ಲ. ನಮ್ಮ ದೊಡ್ಡ ಪರಂಪರೆಯನ್ನು, ಸಂಸ್ಕೃತಿಯನ್ನು ಬೆಳಸುವತ್ತ ಗಮನ ಹೋಗುತ್ತಿಲ್ಲ ಎಂಬ ವೆತೆ, ಕೊರಗು ಅವರಲ್ಲಿತ್ತು. ಅದನ್ನು ಎತ್ತಿ ನುಡಿವಾಗೆಲ್ಲ ಅವರ ಅಂತಃಕರಣದ ಕಳಕಳಿ ಎದ್ದು ಕಾಣುತ್ತಿತ್ತು."

'ಸುಮನಾ'

'ವಿ. ಸೀತಾರಾಮಯ್ಯ' ಪು. ೧೧೮

ಸಂಸ್ಕೃತಿಯ ಸಾಕಾರ ರೂಪ

ಡಿ. ಆರ್. ವೆಂಕಟರಮಣ

"ಎಮ್ಮ ಮನೆಯಂಗಳದಿ ಬೆಳಿದೊಂದು ಹೂವನ್ನು, ನಿಮ್ಮ ಮಡಿಲೊಳಗಿಡಲು ತಂದಿರುವೆವು, ಕೊಳ್ಳಿರೀ ಮಗುವನ್ನು, ಎಮ್ಮ ಮನೆ ಬೆಳಕನ್ನು, ನಿಮ್ಮ ಮನೆಯನು ತುಂಬಲೊಪ್ಪಿಸುವೆವು" – ಈ ಪದ್ಯವನ್ನು ನಮ್ಮ ಡ್ರಾಯಿಂಗ್ ಮೇಷ್ಟರೊಬ್ಬರು ಹೈಸ್ಕೂಲಿನಲ್ಲಿ ರಾಗವಾಗಿ ಓದಿದಾಗ ನನ್ನ ಕಣ್ಣಲ್ಲಿ ನೀರು ತುಂಬಿ ಬಂತು. ಮದುವೆ ಎಂದರೇನು, ಹೆಣ್ಣೊಪ್ಪಿಸುವುದೆಂದರೇನು ಎಂಬುದು ಇನ್ನೂ ನನಗೆ ತಿಳಿಯದ ಕಾಲ ಅದು. ಅದರೂ ವಿ.ಸೀ. ಅವರ ಈ ಸಾಲುಗಳು ನನ್ನ ಮನಸ್ಸಿನ ಮೇಲೆ ಒತ್ತಿದ ಮುದ್ರೆ, ಬೀರಿದ ಪರಿಣಾಮ ಇಂದಿಗೂ ಹಾಗೇ ಉಳಿದಿದೆ. ಇದು ನನಗೆ ವಿ.ಸೀ. ಅವರ ಮೊದಲ ಪರಿಚಯ.

ಮೈಸೂರಿನಲ್ಲಿ ಇಂಟರ್ ಮಿಡಿಯೇಟ್ ಕಾಲೇಜಿನಲ್ಲಿ ಓದುತ್ತಿದ್ದಾಗ ೧೯೪೫–೪೭ರವರೆಗೆ 'ಕರ್ನಾಟಕ ಕಾದಂಬರೀ ಸಂಗ್ರಹ'ವನ್ನು ನಮಗೆ ಪಾಠ ಹೇಳಿದವರು ವಿ.ಸೀ. ಯವರು. ವಿ.ಸೀ. ಯವರ "ಟಿಪಿಕಲ್" ಆದ ಪಾಠ ಬೋಧನೆ ಅದು. ಹಳೆಗನ್ನಡದ ಪದ್ಯಕ್ಕೆ ಎಲ್ಲ ವಿವರಣೆಯೂ ಇಂಗ್ಲಿಷಿನಲ್ಲೇ! ಬಾಣಭಟ್ಟನು ಚಿತ್ರಿಸಿರುವ ಸಂಸ್ಕೃತಿಯ ಸೌಂದರ್ಯ, ನಾಗವರ್ಮನು ಅದನ್ನು ಕನ್ನಡದಲ್ಲಿ ತಂದಿರುವ ಸೊಗಸು, ಭಾರತೀಯ ನಾಗರಿಕತೆ ಮತ್ತು ಸಂಸ್ಕೃತಿಯ ಹಿರಿಮೆ ಇವೆಲ್ಲದರ ಒಂದು ದರ್ಶನ ಆ ಪಾಠದಲ್ಲಿರುತ್ತಿತ್ತು. ಭಾರತೀಯ ಸಂಸ್ಕೃತಿಯ ಪರಿಚಯ ನನಗೆ ಮೊದಲು ಆದದ್ದು ವಿ.ಸೀ. ಯವರ ಈ ಪಾಠಗಳಿಂದಲೇ. ಪದ್ಯಗಳ ಛಂದಸ್ಸು, ಅಲ್ಲಿ ಬರುವ ಅಲಂಕಾರ, ವ್ಯಾಕರಣ ವಿಶೇಷ ಇವುಗಳನ್ನೂ ಅವರು ಒತ್ತಿ ಹೇಳುತ್ತಿದ್ದರು.

'ಕಾದಂಬರಿ'ಯಲ್ಲಿ ಬರುವ ವ್ಯಕ್ತಿಗಳ ಬಾಹ್ಯ ಸೌಂದರ್ಯ ಮತ್ತು ಇಂದಿನ ನಮ್ಮ ದೇಶದ ಜನರ ದೇಹವಿಕಾರ ಇದನ್ನು ಹೋಲಿಸಿ ಹೇಳುತ್ತಿದ್ದದ್ದು ನನಗೆ ಇನ್ನೂ ನೆನಪಿದೆ. 'ಕಾದಂಬರಿ' ಕಾವ್ಯದಲ್ಲಿ ಶೃಂಗಾರಕ್ಕೆ ತಪಸ್ಸು ಹೇಗೆ ಸಾಧನವಾಗಿದೆ, ಕ್ಷಣಿಕ ಕಾಮವೂ ಕಷ್ಟದ ಮೂಸೆಯಲ್ಲಿ ಕರಗಿ, ಕಾಲದ ಒರೆಗಲ್ಲಿನಲ್ಲಿ ಪರೀಕ್ಷಿತವಾಗಿ ಶಾಶ್ವತ ಪ್ರೇಮದಲ್ಲಿ ಪರಿಣಮಿಸಿದುದಕ್ಕೆ ಪುಂಡರೀಕ–ಮಹಾಶ್ವೇತೆಯರ ಕಥೆ ಹೇಗೆ ಒಂದು ದೊಡ್ಡ ನಿದರ್ಶನ ಎಂಬುದನ್ನು ವಿಸ್ತಾರವಾಗಿ ವಿವರಿಸುತ್ತಿದ್ದರು. ಅವರ ಪಾಠಗಳಿಗೆ ಮೂರು ಗಂಟೆಗಳ ಸ್ಪೆಷಲ್ ಕ್ಲಾಸುಗಳೂ ಇರುತ್ತಿದ್ದು, ಕಾಲ ಹೋದದ್ದೇ ತಿಳಿಯುತ್ತಿರಲಿಲ್ಲ.

ನಾನು ಸ್ವಲ್ಪ ದಡ್ಡ ವಿದ್ಯಾರ್ಥಿಯಾದದ್ದರಿಂದ ಮೊದಲನೆ ಬೆಂಚ್‌ನಲ್ಲಿ ಕುಳಿತಿದ್ದರೂ ನನಗೆ ವ್ಯಕ್ತಿಶಃ ಅವರ ಪರಿಚಯವಾಗಲಿಲ್ಲ. ಅವರ ದೊಡ್ಡತನದ ಪರಿಚಯವೂ ಆಗಲಿಲ್ಲ ಎಂದೇ ಹೇಳಬೇಕು. ಮುಂದೆ ೧೯೫೮ರಿಂದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಮತ್ತು ಪೂಜ್ಯ ಡಿ.ವಿ.ಜಿ.ಯವರ ಸಂಪರ್ಕಗಳ ಕಾರಣದಿಂದ ನನಗೆ ವಿ.ಸೀ. ಯವರ ಹೆಚ್ಚಿನ ಪರಿಚಯದ ಭಾಗ್ಯ ಒದಗಿಬಂತು.

ನಮ್ಮ ಗೋಖಲೆ ಸಂಸ್ಥೆಯ ವ್ಯಾಸಂಗ ಗೋಷ್ಠಿಯ ವಾರ್ಷಿಕ ಉತ್ಸವದ ಸಮಯದಲ್ಲಿ ನಡೆಯುತ್ತಿದ್ದ ಸ್ಪರ್ಧೆಗಳ ವಿಜೇತರಿಗೆ ಬಹುಮಾನವಾಗಿ ಕೊಡಲು ವಿ.ಸೀ. ಯವರು ಪುಸ್ತಕಗಳನ್ನು ಉದಾರವಾಗಿ ಕೊಡುತ್ತಿದ್ದರು. ತಾವು ಬಹಳ ಹಣ ಖರ್ಚುಮಾಡಿ ತರಿಸುತ್ತಿದ್ದ "ಟೈಮ್ಸ್ ಲಿಟರರಿ ಸಪ್ಲಿಮೆಂಟ್", "ಬಿ.ಬಿ.ಸಿ. ಲಿಸನರ್" ಮತ್ತು "ದಿ ಇಕಾನಮಿಸ್ಟ್" ಪತ್ರಿಕೆಗಳನ್ನು ತಾವು ಓದಿಯಾದ ಮೇಲೆ ಗೋಖಲೆ ಸಂಸ್ಥೆಗೆ ಕೊಡುತ್ತಿದ್ದರು. ಅದನ್ನು ತರಲು ನಾನು, ನನ್ನ ಸ್ನೇಹಿತರು ಶ್ರೀ ರಾಮಚೈತನ್ಯ ಹೋಗುತ್ತಿದ್ದೆವು. ತಡವಾಗಿ ಹೋದರೆ "ಇದನ್ನು ನಿನಗೆ ಕೊಡುವುದಿಲ್ಲ, ಇದರಲ್ಲಿ ನಿನಗೆ ಆಸ್ಥೆ ಇಲ್ಲವೆಂದು ತೋರುತ್ತದೆ" ಎಂದು ಕೋಪವನ್ನು ನಟಿಸಿದರೂ ವಿಶ್ವಾಸವಾಗಿ ಮಾತನಾಡಿಸಿ, ಕಾಫಿಯನ್ನೊ ಟೀಯನ್ನೊ ಕೊಟ್ಟು, ಪ್ರಪಂಚ ವಿಚಾರಗಳನ್ನು ಕುರಿತು ಸಂಭಾಷಿಸುತ್ತಿದ್ದರು, ಪತ್ರಿಕೆಗಳನ್ನು ಕೊಡುತ್ತಿದ್ದರು. ಹೀಗೆ ಒಂದು ಸಲ ಹೋದಾಗ ಒಬ್ಬ ತರುಣ ಕವಿಗೆ ಕವಿತೆಗೆ ತೀವ್ರವಾದ ಅನುಭವ ಎಷ್ಟು ಅವಶ್ಯ ಎಂಬುದನ್ನು ವಿವರಿಸುತ್ತಿದ್ದರು. ಹಾಗೆಯೇ ಒಂದು ಹುಲಿ ತನ್ನ ಬೇಟೆಯನ್ನು ಹೇಗೆ ಆಕ್ರಮಿಸುತ್ತದೆ ಎಂಬುದನ್ನು ಕುರಿತು ಅವರು ವರ್ಣಿಸಿದ್ದು ನನಗೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ.

ಶ್ರೀ ಡಿ.ವಿ.ಜಿ. ಯವರಿಗೆ ಕಾರ್ಮಿಕರ ಸಂಘಟನೆಯ ವಿಚಾರದಲ್ಲಿ, ಸಮಾಜವಾದದ ವಿಚಾರದಲ್ಲಿ ಒಲವೇನೂ ಇರಲಿಲ್ಲ. ಇದು ವಿ.ಸೀ. ಯವರಿಗೆ ಒಂದು ಕುಂದಾಗಿ ಕಂಡು ಬಂದಿತು. ಆ ದೆಸೆಯಲ್ಲಿ ಡಿ.ವಿ.ಜಿ. ಯವರ ಆಲೋಚನೆ ಏಕೊ ಬೆಳೆಯಲಿಲ್ಲವೆಂದೇ ವಿ.ಸೀ. ಅವರ ಅಭಿಪ್ರಾಯ. ಆದರೆ ಡಿ.ವಿ.ಜಿ. ಯವರ ನಿಶಿತವಾದ ಬುದ್ಧಿಶಕ್ತಿಯಲ್ಲಿ, ವಿಚಾರ ಪರಿಪ್ಲುತತೆಯಲ್ಲಿ ವಿ.ಸೀ. ಯವರಿಗೆ ತುಂಬಾ ಮೆಚ್ಚಿಕೆ. "ಬೇರೆಯವರು ಹತ್ತು ವಿಧವಾದ ವಾದಗಳನ್ನು ಮುಂದಿಟ್ಟು ಆ ವಿಷಯದಲ್ಲಿ ಹೇಳಲು ಇನ್ನು ಏನೂ ಉಳಿದಿಲ್ಲವೆಂದು ತಿಳಿದಿದ್ದಾಗ, ಗುಂಡಪ್ಪನವರು ಹನ್ನೊಂದನೆಯದೊಂದು ವಾದವನ್ನು ಮುಂದಿರಿಸುತ್ತಾರೆ" ಎಂದು ಹೇಳುತ್ತಿದ್ದರು. ಒಂದು ಲೇಖನದಲ್ಲಿ ಡಿ.ವಿ.ಜಿ. ಯವರನ್ನು ಕುರಿತು "His was a massive intellect" ಎಂದು ಅವರು ಬರೆದಿದ್ದು ಜ್ಞಾಪಕಕ್ಕೆ ಬರುತ್ತದೆ. ಡಿ.ವಿ.ಜಿ. ಯವರನ್ನು ಕುರಿತು ಅವರು ಇಂಗ್ಲಿಷಿನಲ್ಲಿ ಒಂದು ಗ್ರಂಥವನ್ನೂ ಮೈಸೂರು ವಿಶ್ವವಿದ್ಯಾಲಯಕ್ಕೆ ಬರೆದಿರುವುದನ್ನು ಸ್ಮರಿಸಬಹುದು.

ಒಂದು ಸಲ ನನ್ನ ಮಗಳು ರುಕ್ಮಿಣಿ ವಿ.ಸೀ. ಯವರನ್ನು ನೋಡಬೇಕೆಂದು ಬಯಸಿದಾಗ, ಅವಳನ್ನು ಅವರ ಮನೆಗೆ ಕರೆದುಕೊಂಡು ಹೋಗಿದ್ದೆ. ಅವರು ಅವಳನ್ನು ತುಂಬಾ ಪ್ರೀತಿ, ವಿಶ್ವಾಸಗಳಿಂದ ಮಾತನಾಡಿಸಿ, ನಾನು ಕೊಠಡಿಯಿಂದ ಆಚೆಗೆ ಹೋದಾಗ ಪುಸ್ತಕಗಳ ಸಾಲಿನ ಹಿಂದೆ ದಾಸ್ತಾನು ಮಾಡಲ್ಪಟ್ಟಿದ್ದ ಗೋಡಂಬಿ, ದ್ರಾಕ್ಷಿಗಳನ್ನು

ಕೊಟ್ಟಿದ್ದುದು ನನಗೆ ಇಂದಿಗೂ ಜ್ಞಾಪಕವಿದೆ. ಅವಳಿಗಂತೂ ವಿ.ಸೀ. ಯವರ ದರ್ಶನ ಒಂದು ಅವಿಸ್ಮರಣೀಯ ಹೃದಯಸಂಪತ್ತಾಗಿದೆ.

ವಿ.ಸೀ. ಯವರು ಗೋಖಲೆ ಸಂಸ್ಥೆಯಲ್ಲಿ ನಡೆಯುತ್ತಿದ್ದ ಅನೇಕ ಉಪನ್ಯಾಸಗಳಿಗೆ ಬರುತ್ತಿದ್ದದ್ದುಂಟು. ಆಗೆಲ್ಲ ಅವರು ಡಿ.ವಿ.ಜಿ. ಯವರೊಡನೆ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ, ಕೆಳಗೆ ಜಮಖಾನದ ಮೇಲೆ ಕುಳಿತುಕೊಳ್ಳುತ್ತಿದ್ದರು. ಅನಂತರ ಅವರು ಉಪನ್ಯಾಸಗಳಿಗೆ ಹೋಗುವುದು ಕಡಿಮೆಯಾದಾಗ ನಮ್ಮಲ್ಲಿ ನಡೆಯುತ್ತಿದ್ದ ಭೋಜನ ಕೂಟಗಳಿಗೆ ಬರುತ್ತಿದ್ದರು. ಅಲ್ಲಿ ಬರುತ್ತಿದ್ದ ಜನರೊಡನೆ ಬೆರೆತು "ಇಲ್ಲಿ ಬರುವ ಜನ ಒಂದು ಬಗೆಯವರು, ಅವರೊಡನೆಯ ಸಂಪರ್ಕ ಒಂದು ಸಂಸ್ಕಾರ" ಎಂದು ಹೇಳುತ್ತಿದ್ದರು.

ಡಿ.ವಿ.ಜಿ. ಯವರಿಗೂ, ವಿ.ಸೀ. ಯವರಿಗೂ ಇದ್ದ ಪ್ರೀತಿ ವಿಶ್ವಾಸ, ಗೌರವಗಳು ಅಪೂರ್ವವಾದದ್ದು. "He can be trusted with a woman or money" ಎಂಬುದು ಡಿ.ವಿ.ಜಿ. ಯವರ ಅಭಿಪ್ರಾಯ. ಹಾಗೆಯೇ ಗುಂಡಪ್ಪನ ಹೋಟೆಲ್‌ನಿಂದ ಬಿಸಿಬಿಸಿಯಾದ ಜಿಲೇಬಿಗಳನ್ನು ತಂದು ಡಿ.ವಿ.ಜಿ.ಯವರಿಗೆ ಕೊಟ್ಟು ತಮ್ಮ ಪ್ರೀತಿಯನ್ನು ವಿ.ಸೀ. ಯವರು ತೋರಿಸುತ್ತಿದ್ದರು.

ಹೀಗೆ ಹತ್ತಿರದಿಂದ ವಿ.ಸೀ.ಯವರನ್ನು ಕಂಡು, ಅವರ ಮಾತುಗಳನ್ನು ಕೇಳಿ, ಅವರ ವಿದ್ವತ್ತನ್ನೂ ಹಿರಿಮೆಯನ್ನೂ ಕಾಣುವ ಭಾಗ್ಯ ನನ್ನದಾಯಿತು. ವಿ.ಸೀ. ಯವರನ್ನು ಕುರಿತು ಶ್ರೀಮಾನ್ ಬಿ. ಪಿ. ರಾಧಾಕೃಷ್ಣರವರು ಈಚೆಗೆ ಬರೆದಿರುವ ಜೀವನ ಚರಿತ್ರೆಗೆ 'ಸಾರ್ಥಕ ಬದುಕು' ಎಂಬ ಹೆಸರನ್ನು ಕೊಟ್ಟಿದ್ದಾರೆ. ನಿಜವಾಗಿಯೂ ವಿ.ಸೀ. ಯವರದು ಒಂದು ಸಾರ್ಥಕ ಬದುಕು. ನಮ್ಮ ಭಾರತೀಯ ಸಂಸ್ಕೃತಿಯ ಸಾಕಾರ ರೂಪವಾಗಿದ್ದವರು ಅವರು. ಸಾಹಿತ್ಯದ ರುಚಿ, ಸಂಸ್ಕೃತಿಯ ಬೆಳಕು, ಶುಚಿಯಾದ ಜೀವನ ಇವುಗಳೆಲ್ಲದರ ಸಂಮಿಳನವನ್ನು ನಾವು ಅವರಲ್ಲಿ ಕಾಣುತ್ತೇವೆ. ಇಂಥವರ ದರ್ಶನ, ಸಂಪರ್ಕ ಮತ್ತು ನೆನಪು ನಮಗೆ ಒಂದು ಭಾಗ್ಯ.

ಪ್ರಾತಃಪೂಜ್ಯ

ಎಂ. ನರೇಂದ್ರಬಾಬು

ನಾನಾಗ ಮೊದಲನೇ ಇಂಟರ್ ಮೀಡಿಯೆಟ್ ತರಗತಿಯಲ್ಲಿ ಓದುತ್ತಿದ್ದೆ. ನಮ್ಮ ತರಗತಿಯ ಕನ್ನಡ ಪಾಠಗಳನ್ನು ಪೂಜ್ಯ ಡಿ. ಎಲ್. ನರಸಿಂಹಾಚಾರ್ಯರು ತೆಗೆದುಕೊಳ್ಳುತ್ತಿದ್ದರು. ಅವರು ಒಮ್ಮೆ ವಿದ್ಯಾರ್ಥಿಗಳನ್ನು ಅವರ ಅನುಭವದ ಪ್ರಯಾಣವೊಂದರ ಬಗ್ಗೆ ಪ್ರಬಂಧವನ್ನು ಬರೆಯಲು ಹೇಳಿದರು. ನಾನೂ ಬರೆದೆ. ಕೆಲವು ದಿನಗಳ ನಂತರ ಆ ಪ್ರಬಂಧ "ಪ್ರಬುದ್ಧ ಕರ್ನಾಟಕದಲ್ಲಿ" ದಲ್ಲಿ ಅಚ್ಚಾಯಿತು. ಅದನ್ನು ಆಚಾರ್ಯರೇ ತರಗತಿಯಲ್ಲಿ ಹೇಳಿದರು. ಆಗ ಆ ಪತ್ರಿಕೆಗೆ ಸಂಪಾದಕರಾಗಿದ್ದವರು ಪೂಜ್ಯ ವಿ.ಸೀ. ಅವರು. ಆಚಾರ್ಯರು ನನ್ನ ಲೇಖನವನ್ನು ವಿ.ಸೀ. ಯವರಿಗೆ ತೋರಿಸಿದರಂತೆ. ಅದರಲ್ಲಿ ಅವರಿಗೆ ಏನು ಕಂಡಿತೋ? ಅಚ್ಚಾಗಿ ಹೋಯಿತು. ಮಾಧ್ಯಮಿಕ ಶಾಲೆಯಿಂದ ನನಗೆ ಮಕ್ಕಳ ಕತೆ, ಪದ್ಯಗಳನ್ನು ಬರೆಯುವುದೂ ಹಿಂದೀ ಸಿನಿಮಾ ಹಾಡುಗಳಿಗೆ ಕನ್ನಡ ಭಾಷೆಯ ಮಾತುಗಳನ್ನು ಜೋಡಿಸಿ, ಸಮಾರಂಭಗಳಲ್ಲಿ ಹಾಡುವುದೂ ಪ್ರವೃತ್ತಿಯಲ್ಲಿ ಬಂದಿತ್ತು. ಆದರೆ ವಿ.ಸೀ.ಯವರ ಈ ಕೃಪೆ ನನ್ನ ಬದುಕಿನ ದಾರಿಯನ್ನೇ ಬದಲಾಯಿಸಿಬಿಟ್ಟಿತು.

ಮುಂದೆ ವಿ.ಸೀ. ಯವರು ಒಂದೆರಡು ಬಾರಿ 'ಒಂದು ಸಣ್ಣ ಕತೆ ಬರಿಯಪ್ಪ ನೋಡೋಣ' ಎಂದೂ ಹೇಳಿದರು. ಬರೆದೆ; ಅವರು ಅದನ್ನು ಹರಿಸಿ ಹಾಕಿದರು. ಇನ್ನೊಂದನ್ನು ಬರೆದೆ; ಅದನ್ನೂ ಹರಿಸಿಹಾಕಿದರು. ಆದರೆ 'ಬರೆಯುವುದನ್ನು ಬಿಡಬೇಡಪ್ಪ' ಎಂದೂ ಹೇಳಿದರು. 'ರೇವು' ಎನ್ನುವ ಕತೆಯನ್ನು ಬರೆದು ಅಳುಕಿನೊಂದಿಗೆ ಅವರ ಕೈಯಲ್ಲಿಟ್ಟೆ. ಮುಂದಿನ 'ಪ್ರಬುದ್ಧ ಕರ್ನಾಟಕ'ದ ಸಂಚಿಕೆಯಲ್ಲಿ ಅದು ಅಚ್ಚಾಯಿತು. ಸ್ನೇಹಿತರು ಕತೆಯನ್ನು ಹೊಗಳಿದರು. ನಾನು ವಿ.ಸೀ.ಯವರ ಅಭಿಪ್ರಾಯ ಕೇಳಿದೆ. 'ಓಹೋಹೋ ಬಂದು ಬಿಟ್ಟಿರಾ, ದೊಡ್ಡ ಕೃತಿ ಒಂದಕ್ಕೆ ವಿಮರ್ಶೆ ಕೇಳೋಕ್ಕೆ! ಹೋಗಿ ಹೋಗಿ, ಕೆಲಸ ನೋಡಿ' ಎಂದು ಏನೋದ ತುಂಬಿದ ನಗೆನಕ್ಕು ಕಳಿಸಿಬಿಟ್ಟರು.

ಅವರು ಹೇಳಿದ ಕೆಲಸದಲ್ಲಿ ಆಸಕ್ತಿ ತುಂಬಿಬಂತು. ಭಾವಗೀತೆಗಳನ್ನು ರಚಿಸಿ ಕಾಲೇಜು ಸಭಾಂಗಣದಲ್ಲಿ ಹಾಡುವುದು, ಸಣ್ಣಕತೆಗಳನ್ನು ಬರೆದು ಪತ್ರಿಕೆಗಳಲ್ಲಿ ಅಚ್ಚಾದುದನ್ನು ನೋಡಿ ಸ್ಫೂರ್ತಿ ತುಂಬಿಕೊಳ್ಳುವುದು, ಇಂಥವು ನನ್ನ ಓದಿಗಿಂತ ಹೆಚ್ಚಿನ

ಆಸಕ್ತಿಯನ್ನು ಕೆರಳಿಸಿದವು. ಒಂದೆರಡು ಕಾಲೇಜು ಏಕಾಂಕ ನಾಟಕಗಳಲ್ಲಿ ಪಾತ್ರವಹಿಸಿ, ಅಭಿನಯದ ರುಚಿಯನ್ನೂ ಕಂಡೆ. ಆ ವಾತಾವರಣದಲ್ಲಿ ಅಗತ್ಯ ಕಂಡು ಬಂದು 'ರಂಗಣ್ಣನ ರಥ'ವೆಂಬ ಏಕಾಂಕ ನಾಟಕ ಬರೆದೆ. ಮಹಾರಾಜಾ ಕಾಲೇಜಿನ 'ಸ್ವಸ್ತಿಕ್ ಸಾಹಿತ್ಯ ಸಂಘ'ದ ಆಶ್ರಯದಲ್ಲಿ ಅದನ್ನು ಪ್ರಯೋಗಿಸಿದೆವು. ಈ ನಾಟಕವನ್ನು ವಿ.ಸೀ.ಯವರು 'ಒಂದು ಕ್ರೂಡ್ ಮಾಸ್ಟರ್ ಪೀಸ್' ಎಂದು ಕರೆದದ್ದು ನನ್ನ ಪಾಲಿಗೆ ಮಹಾಭಾಗ್ಯವೆನಿಸಿತು. ಆ ಅಭಿಪ್ರಾಯವನ್ನು ನಾನು ಕೇಳಿಸಿಕೊಂಡಿದ್ದು ಇನ್ನೊಬ್ಬರೊಡನೆ ಅವರು ಆ ಮಾತನ್ನಾಡಿದಾಗ. ವಿ.ಸೀ. ಅವರ ಮಾತುಗಳು ಮೇಲುನೋಟಕ್ಕೆ ಸ್ವಲ್ಪ ತೀಕ್ಷ್ಣ, ಆದರೆ ಅವರ ಹೃದಯ ಅವರ ಉಡುಗೆ ತೊಡಿಗೆಗಳಂತೆಯೇ ಶುಭ್ರ, ಸರಳ. ವಿದ್ಯಾರ್ಥಿಗಳಲ್ಲಿ ಅವರು ತೋರುತ್ತಿದ್ದ ಪ್ರೀತಿ ಅಗೋಚರ, ಆದರೆ ಅಮೂಲ್ಯ.

'ಸ್ವಸ್ತಿಕ್ ಸಾಹಿತ್ಯ ಸಂಘ'ವು ತನ್ನ ವಾರ್ಷಿಕೋತ್ಸವ ಸಂದರ್ಭದಲ್ಲಿ ಮಹಾರಾಜಾ ಹಾಗೂ ಇಂಟರ್ ಮಿಡಿಯೇಟ್ ಕಾಲೇಜು ಎರಡೂ ಕಾಲೇಜುಗಳಿಗೆ ಸೇರಿದಂತೆ ನಾನಾ ಕಲಾ ಸ್ಪರ್ಧೆಗಳೇರ್ಪಡಿಸಿತ್ತು. ಸಣ್ಣಕತೆ, ಪದ್ಯ, ದಾಸರ ಪದಗಳ ಗಾಯನದಲ್ಲಿ ನನಗೇ ಮೊದಲ ಬಹುಮಾನಗಳು ಬಂದಿದ್ದವು. ವಾರ್ಷಿಕೋತ್ಸವದಲ್ಲಿ ಬಹುಮಾನ ವಿತರಣೆಯನ್ನು ವಿ.ಸೀ.ಯವರ ಹಸ್ತದಿಂದ ಮಾಡಿಸಿಕೊಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜುಗಳ ವಿದ್ಯಾರ್ಥಿಗಳಿಗೆಂದು ಕಥನ ಕವಿತಾ ಸ್ಪರ್ಧೆಯೊಂದು ಪ್ರತಿವರ್ಷ ನಡೆಯುತ್ತಿತ್ತು. ಅತ್ಯುತ್ತಮ ಕವನಕ್ಕೆ ಬಿ.ಎಂ.ಶ್ರೀ. ಸುವರ್ಣ ಪದಕವನ್ನು ನೀಡಿ ಗೌರವಿಸಲಾಗುತ್ತಿತ್ತು. ಆವರೆಗೆ ಆ ಪದಕವನ್ನು ಕುವೆಂಪು, ರಾಜರತ್ನಂ, ಗೋಪಾಲಕೃಷ್ಣ ಅಡಿಗರಂತಹ ಮಹಾಕವಿಗಳು ಗಳಿಸಿದ್ದ ಹಿನ್ನೆಲೆ. ಗೆಳೆಯರು ನನ್ನನ್ನೂ ಆ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಒತ್ತಾಯಪಡಿಸಿದರು. ನಾನು ಆ ಸ್ಪರ್ಧೆಯಲ್ಲಿ ಪ್ರವೇಶಿಸುವುದು ವ್ಯರ್ಥವೇನೊ ಎನ್ನಿಸಿದಾಗ 'ವಿ.ಸೀ. ಯವರನ್ನೇ ಕೇಳು' ಎಂದರು. ಅಂಜುತ್ತಂಜುತ್ತ 'ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದೇ?' ಎಂದು ಕೇಳಿದೆ. 'ಓಹೋಹೋ – ನೀವು ಬಿ.ಎಂ.ಶ್ರೀ. ಚಿನ್ನದ ಪದಕ ಪಡೆಯಬೇಕೋ? ಅದೇನು ಬರೀತೀರೋ ಬರೆದು, ರಿಜಿಸ್ಟ್ರಾರ್ ಆಫೀಸಿನಲ್ಲಿರುವ ಪೆಟ್ಟಿಗೆಗೆ ಹಾಕಿ' ಎಂದು ನಕ್ಕರು.

ಕೊನೆಯ ದಿನಕ್ಕೆ ಹತ್ತು ದಿನ ಮುಂಚಿತವಾಗಿಯೇ 'ಚಿರದುಃಖಿ' ಎಂಬ ಕಥನಕವನವನ್ನು ಮುಗಿಸಿದೆ. ಯಾರಿಗೆ ತೋರಿಸುವುದಕ್ಕೂ ಅಂಜಿಕೆ. ವಿ.ಸೀ.ಯವರಿಗೆ ತೋರಿಸುವ ಧೈರ್ಯವೇ ಇರಲಿಲ್ಲ. ಕೊನೆಯ ದಿನದವರೆಗೂ ತಿದ್ದುತ್ತ, ಬೆದರುತ್ತ ಅವರು ಹೇಳಿದಂತೆ ಆ ಮರದ ಪೆಟ್ಟಿಗೆಗೆ ನನ್ನ ಕೃತಿಯನ್ನು ಹಾಕಿಬಿಟ್ಟೆ. ಕೆಲವು ದಿನಗಳ ನಂತರ ನನ್ನ ಹೆಸರಿಗೆ ತಂತಿಯೊಂದು ಬಂತು. ಬಿಡಿಸಿನೋಡಿದೆ. ೧೯೪೫ನೇ ವರ್ಷದ 'ಬಿ.ಎಂ.ಶ್ರೀ.' ಚಿನ್ನದ ಪದಕ ನನಗೆ ದೊರಕಿದೆ ಎಂಬ ಸಂದೇಶವಿತ್ತು. ನನಗೆ ತುಂಬಾ ರೋಮಾಂಚನವಾಯಿತು! ಹಿರಿಯರ ಕಾಲಿಗೆ ಬಿದ್ದು ಕುಣಿದಾಡಿದೆ. ಮುಂದಿನ ಎರಡು ದಿನಗಳಲ್ಲೂ ಕಾಲೇಜಿನಲ್ಲಿ ವಿ.ಸೀ.ಯವರ ದರ್ಶನ ಸಿಕ್ಕದೇ ಕಂಗಾಲಾದೆ. ಕಾಲೇಜು ಸಾಂಸ್ಕೃತಿಕ ಸಮಾರಂಭವೊಂದು ಏರ್ಪಾಡಾಗಿ, ಅದರಲ್ಲೇ ಆ ಪದಕ ಪ್ರದಾನವನ್ನು ನಡೆಸುವುದೆಂದು ತೀರ್ಮಾನವಾಯಿತು. ಆ ಸಮಾರಂಭದ ಅಧ್ಯಕ್ಷತೆಯೂ ವಿ.ಸೀ.ಯವರಿಗೇ

ಒಪ್ಪಿಸಲಾಗಿದ್ದದ್ದು ಒಂದು ಯೋಗಾಯೋಗ. ಆ ಪದಕವನ್ನು ನೀಡುತ್ತಾ ಅವರು ನನಗೊಂದು ಸಲಹೆಯನ್ನು ಕೊಟ್ಟರು: 'ಇನ್ನು ಮೇಲೆ ಪದ್ಯ, ಭಾವಗೀತೆಗಳನ್ನು ಬರೆಯದೆ ಗದ್ಯದಲ್ಲೇ ನಿನ್ನ ಪ್ರವೃತ್ತಿಯನ್ನು ಮುಂದುವರಿಸುವುದು ಒಳ್ಳೆಯದು' ಎಂದು. ಆ ಹೊತ್ತಿಗೇ ಚಲನಚಿತ್ರರಂಗದಲ್ಲಿ ಕೆಲಸವನ್ನು ಆರಂಭಿಸಿದ್ದ ನಾನು 'ಸ್ವರಗಳಿಗೆ ಸಾಹಿತ್ಯ ಬರೆಯುವ ಅವಕಾಶ ಒಂದನ್ನು ಕೊಡಿ' ಎಂದು ಬೇಡಿದೆ. 'ಆಸ್ತು' ಎಂದರು. ಅಂದಿನಿಂದ ನಾನು ಪದ್ಯ, ಭಾವಗೀತೆಗಳ ರಚನೆಯನ್ನು ಕೈಬಿಟ್ಟೆ.

ದಶಕಗಳು ಕಳೆದವು. ನಾನು ಕಾದಂಬರಿಕಾರನಾಗಿ ಕೆಲವು ವರ್ಷ ಕಳೆದು, ನಂತರ ಚಲನಚಿತ್ರ ಸಾಹಿತಿಯಾಗಿ ವೃತ್ತಿ ನಡೆಸುತ್ತಿದ್ದು, ಮೈಸೂರು, ಮದರಾಸುಗಳಲ್ಲಿ ಜೀವನ ನಡೆಸಿ ಬೆಂಗಳೂರಿನಲ್ಲಿ ನೆಲಸಿದೆ. ೧೯೭೦ರಲ್ಲಿ ಒಮ್ಮೆ ಚಲನಚಿತ್ರ ನಿರ್ಮಾಪಕ–ನಿರ್ದೇಶಕ ಶ್ರೀ ಎಂ. ವಿ. ಕೃಷ್ಣಸ್ವಾಮಿ ನನಗೆ ಹೇಳಿಕಳಿಸಿದರು. ವಿ.ಸೀ. ಯವರ 'ಶ್ರೀಶೈಲ ಶಿಖರ' ಎಂಬ ನಾಟಕವನ್ನು 'ಪಾಪ ಪುಣ್ಯ' ಎಂಬ ಶೀರ್ಷಿಕೆಯಲ್ಲಿ ಚಿತ್ರೀಕರಿಸುವುದಾಗಿಯೂ ಅದರ ಸಂಭಾಷಣೆಯನ್ನು ನಾನು ಬರೆಯಬೇಕೆಂದು ವಿ.ಸೀ.ಯವರೇ ತೀರ್ಮಾನಿಸಿರುವರೆಂದೂ ಅವರು ಹೇಳಿದರು. ಆ ಸಂಬಂಧದಲ್ಲಿ ವಿ.ಸೀ. ಅವರನ್ನು ಅವರ ಮನೆಯಲ್ಲಿ ಭೇಟಿಮಾಡಿ ದರ್ಶನ ಪಡೆದೆ. ಅವರನ್ನು ಕಂಡು ಬಹಳ ವರ್ಷಗಳು ಕಳೆದಿದ್ದರೂ ಅದೇ ಶುಭ್ರ ಉಡುಪಿನ ಮಂಗಳಾಕೃತಿ. 'ನಿಮ್ಮನ್ನು ಮದರಾಸಿನಲ್ಲೆಲ್ಲಾ ಹುಡುಕಿಸಿದರಂತಲ್ಲಪ್ಪ; ನೀವು ಬೆಂಗಳೂರಿನಲ್ಲೇ ಇದ್ದೀರಂತೆ? ಸಿನಿಮಾಕ್ಕೆ ತಕ್ಕಂತೆ ಸಂಭಾಷಣೆ ಬರೆಯೋಕ್ಕೆ ನನಗೆ ಬರೋಲ್ಲಪ್ಪ. ಬಾಬುವಿನ ಕೈಲಿ ಬರೆಸಿ ಅಂತ ಹೇಳಿದೆ' ಎಂದರು. 'ತಮ್ಮ ನೆನಪಿನಲ್ಲಿ ನಾನೂ ಒಬ್ಬನಿದ್ದೇನಲ್ಲ ಸರ್, ಅದೇ ನನ್ನ ಸೌಭಾಗ್ಯ' ಎಂದೆ.

ನಾನು ಪ್ರತಿದಿನ ಮುಂಜಾನೆ ಕೈಮುಗಿವ ದೈವಗಳಲ್ಲಿ ವಿ.ಸೀ. ಒಬ್ಬರು.

ದೊಡ್ಡತನಕ್ಕೆ ಇನ್ನೊಂದು ಹೆಸರು

ಸಿ. ಎಚ್. ಪ್ರಹ್ಲಾದರಾವ್

ವಿ.ಸೀ. ಎಂಬ ಎರಡು ಅಕ್ಷರಗಳಲ್ಲಿರುವ ಶಕ್ತಿಯನ್ನು ಆವಾಹಿಸುವ ಮಂತ್ರ ನನ್ನಲ್ಲಿಲ್ಲ. ನಾನು ಕನ್ನಡವನ್ನು ಸಾಹಿತ್ಯ, ಭಾಷೆ ಮುಂತಾದ ಯಾವುದೇ ವಿದ್ವತ್ತಿನ ನೆಲೆಯಲ್ಲಿ ಅಭ್ಯಾಸ ಮಾಡಿದವನಲ್ಲ. ವಿ.ಸೀ. ಅವರ ಲೋಕ ಝಗಝಗಿಸುವ ನಕ್ಷತ್ರಗಳ ಲೋಕ; ನನ್ನದು ಬೆಡಗು ಬಣ್ಣಗಳಿಲ್ಲದ ಶ್ರೀ ಸಾಮಾನ್ಯನ ಪ್ರಪಂಚ. ನನಗೆ ವಿ.ಸೀ. ಯವರ ಬಗ್ಗೆ ಬರೆಯಲು ಉಳಿದಿರುವುದು ಒಂದೆರಡು ನೆನಪುಗಳು.

ನಾನು ಆಗ ತಾನೇ ಮೈಸೂರಿಗೆ ಬಂದು ಶಾರದಾ ವಿಲಾಸ ಹೈಸ್ಕೂಲ್ ಸೇರಿದ್ದೆ (೧೯೩೭). ವಿ.ಸೀ. ನಮ್ಮ ಶಾಲೆಯಲ್ಲಿ ಕಾವ್ಯವಾಚನ ಮಾಡಿದರು. ಅವರು ಅಂದು ಓದಿದ 'ಅಭಿಣಿ' ಈಗಲೂ ಕಿವಿಯಲ್ಲಿ ಅವರ ಧ್ವನಿಯ ವೈವಿಧ್ಯ ಪಡೆದು ನೆಲೆಸಿದೆ. ವಿ.ಸೀ. ಅವರನ್ನು ಪರಿಚಯ ಮಾಡಿಕೊಡುತ್ತಾ ಅವರನ್ನು 'ವೈಸ್ ಛಾನ್ಸೆಲರ್' ಎಂದೂ ಕರೆಯುತ್ತಾರೆಂದು ಹೇಳಿದುದು ನೆನಪಿದೆ.

ಮಹಾರಾಜಾ ಕಾಲೇಜ್ ಸೇರಿ ಬಿ.ಎ. ವಿದ್ಯಾರ್ಥಿಯಾದಾಗ ಮತ್ತೆ ನನಗೆ ವಿ.ಸೀ. ಸಿಕ್ಕರು. ಅವರು ನಮಗೆ ಕನ್ನಡ ಕಲಿಸಿದ ಮೇಷ್ಟ್ರು. An unbending disciplinarian! ಅವರು ಪ್ರವೇಶಿಸಿದ ನಂತರ ಯಾರಿಗೂ ಪ್ರವೇಶವಿಲ್ಲ. ತರಗತಿಯಲ್ಲಿ ಗುಜುಗುಜು ಮಾತಿಗೆ ನಿರ್ಬಂಧ.

ಒಂದು ದಿನ ಹಿಂದಿನ ಬೆಂಚಿನಿಂದ ಯಾರೊ ಮೆಲ್ಲಗೆ ಶಿಳ್ಳು ಹಾಕಿದರು! 'Who is that?' ಯಾರೂ ಏಳಲಿಲ್ಲ. 'Get up if you have courage!' ಎಂದು ವಿ.ಸೀ. ಗುಡುಗಿದರು. ಆಗಲೂ ಯಾರೂ ಏಳಲಿಲ್ಲ. ವಿ.ಸೀ. ಮತ್ತೆ ಸವಾಲು ಹಾಕಿದರು. ಪದ್ಮನಾಭ ನನ್ನ ಸ್ನೇಹಿತ, ಛಲವಾದಿ, ಅವನು ನಿರಪರಾಧಿ ಎಂದು ಹೇಳಬಲ್ಲೆ, ಈಗ ಅವನು ಎದ್ದುನಿಂತ! ಅವನಿಗೆ ತರಗತಿಯ ಮಾನ ಮುಖ್ಯವಾಗಿತ್ತು. 'I shall complain to the Principal' ಎಂದುದಕ್ಕೆ ಉತ್ತರವಾಗಿ 'You may complain to the Vice Chancellor' ಎಂದು ಹೇಳಿ ತರಗತಿಯನ್ನು ಬಿಟ್ಟು ಹೊರಟೇಹೋದ! ತರಗತಿಯಲ್ಲಿ ಬಿಕ್ಕಟ್ಟಿನ ಮೌನ.

ವಿ.ಸೀ. ಅವರ ದೊಡ್ಡತನ ಪರಿಚಯವಾದದ್ದು ಹೀಗೆ: ಮಾರನೆಯ ದಿನ

ತರಗತಿಯಲ್ಲಿ ಪದ್ಮನಾಭನನ್ನು ಉದ್ದೇಶಿಸಿ, 'Mr. Padmanabh, I saw you last evening on the other side of the road. I called you, but you went away' ಎಂದು ವಿ.ಸೀ. ಹೇಳಿದಾಗ ಬಿಕ್ಕಟ್ಟು ಕರಗಿತು.

ಈ ಅವಧಿಯಲ್ಲಿ ನನ್ನ ಸಹಪಾಠಿ, ಮಿತ್ರ, ಪ್ರಕಾಶಕ ಡಿ.ವಿ.ಕೆ. ಮೂರ್ತಿ ನನಗೊಂದು ಉದ್ಯೋಗ ಕಲ್ಪಿಸಿಕೊಟ್ಟ. ವಿ.ಸೀ. ಅವರು ಹೇಳಿದ್ದನ್ನು ನಾನು ಬರೆದುಕೊಳ್ಳಬೇಕು. ಅದು ಒಪ್ಪತ್ತಿನಲ್ಲಿ ಮುಗಿದುದು ಹೀಗೆ. ಅವರ ಪ್ರಥಮ ವಾಕ್ಯವನ್ನು ಬರೆದುಕೊಳ್ಳಲು ನನಗುಂಟಾದ ಪ್ರಯಾಸವನ್ನು ಗಮನಿಸಿ, ವಿ.ಸೀ. ಬಹುವಚನದ ಗೌರವದೊಡನೆ ನನಗೆ ಹೇಳಿದರು, 'ನಿಮಗೆ ಕನ್ನಡದಲ್ಲಿ ಬರೆಯುವ ಅಭ್ಯಾಸವಿಲ್ಲ ಎಂದು ಕಾಣುತ್ತದೆ.' ನನಗೊ ಬಿಡುಗಡೆಯ ಸಂಭ್ರಮ!

ನಾನು ಬಿ.ಎ. ಮುಗಿಸಿದ ಹೊಸತು. ನಾನು ವಿದ್ಯಾರ್ಥಿಯಾದಾಗ ಓದಿದವನಲ್ಲ. ಈಗ ಓದಬೇಕೆಂಬ ಹಂಬಲ. ನಾನು ಬೆಂಗಳೂರಿನಲ್ಲಿ ನೌಕರಿ ಸೇರಿದ್ದೆ. ಆದರೆ ಏನು ಓದಬೇಕು, ಎಲ್ಲಿ ಆರಂಭಿಸಬೇಕು ಎಂಬ ಪ್ರಶ್ನೆಗೆ ಉತ್ತರ ಬೇಕಾಗಿತ್ತು. ಆಗ ವಿ.ಸೀ. ಚಿಕ್ಕಮಗಳೂರು ಕಾಲೇಜಿನ ಸೂಪರಿಂಟೆಂಡೆಂಟ್ ಆಗಿದ್ದರು. ಮಾರ್ಗದರ್ಶನಕ್ಕೆ ಅವರೇ ಸರಿ ಎಂದು ಅವರಿಗೊಂದು ದೀರ್ಘ ಪತ್ರ ಬರೆದೆ.

ಅವರು ಎರಡೊ ಮೂರೊ ಪುಟಗಳಲ್ಲಿ ನನಗೆ ಬರೆದ ಜವಾಬನ್ನು ಬಹಳ ದಿವಸ ಜೋಪಾನ ಮಾಡಿದ್ದೆ. ಅದರಲ್ಲಿದ್ದ ಒಂದು ಸಾಲಿನ ಅರ್ಥ ನನಗೆ ಈಗಲೂ ಆಗಿಲ್ಲ. ಅದು, 'You have a style – much better than mine.' ಅವರು ಆಗಲೇ ಪ್ರಸಿದ್ಧ ಲೇಖಕರು. 'ದಿ ಹಿಂದೂ' ಪತ್ರಿಕೆಯ ಭಾನುವಾರದ ಸಂಚಿಕೆಯಲ್ಲಿ ಅವರು ಬರೆಯುತ್ತಿದ್ದ book reviews ಓದಿ ಬೆರಗಾಗುತ್ತಿದ್ದೆ. ಏನೂ ಬರೆಯದ, ಅಪ್ರಬುದ್ಧ ಹಳೆ ವಿದ್ಯಾರ್ಥಿಗೆ ಅವರು ನೀಡಿದ ಶಿಫಾರಸು!

ಚಾಮರಾಜಪೇಟೆಯಲ್ಲಿ ನಮ್ಮ ಮನೆಯ ಸಮೀಪದಲ್ಲೇ ಅವರ ಮನೆ. ಖಿಯಾಲಿ ಬಂದಾಗ ಅವರ ಕೋಣೆಯನ್ನು ಪ್ರವೇಶಿಸುತ್ತಿದ್ದೆ. ಕಾಫಿ ತರಿಸುತ್ತಿದ್ದರು. ನಾನು ಕಾಫಿ ಬೋರ್ಡ್‌ನಲ್ಲಿ ಕೆಲಸ ಮಾಡುತ್ತಿದ್ದೆ. 'ಏನಪ್ಪ, ಮೊದಲು (ಹೆಬ್ಬೆಟ್ಟು ತೋರಿಸಿ) ಇಷ್ಟು ಗಾತ್ರದ ಪ್ಲಾಂಟೇಶನ್ ಕಾಫಿ ಬೀಜ ಸಿಕ್ಕುತ್ತಿತ್ತು. ಈಗ ಅದೆಲ್ಲ ಎಲ್ಲಿ? ಬೇರೆ ದೇಶಗಳಿಗೆ ಕಳಿಸುವುದೇನೋ ಸರಿ, ಆದರೆ ನಮ್ಮವರಿಗೂ ಒಳ್ಳೆ ಪದಾರ್ಥ ಬೇಡವೆ?' ಇನ್ನು ಅವರ ಮನೆಯಲ್ಲಿ ಕೊಡುತ್ತಿದ್ದುದೊ, ಯಾವ ಹೊತ್ತೇ ಆದರೂ ಸರಿ, ದೊಡ್ಡ ಬಟ್ಟಲು ತುಂಬ ಬಿಸಿಬಿಸಿ ಕಾಫಿ.

ಅವರು ಮಾತಿಗೆ ಶುರುಮಾಡಿದರೆ ಇಂಥದೇ ವಿಷಯವೆಂದಿಲ್ಲ. ಯಾವುದೇ ವಿಷಯವಾಗಲಿ, ನಿಖರವಾದ ತಿಳಿವಳಿಕೆ. ಮಧ್ಯೆ ಮಧ್ಯೆ ಗಂಟೆ ಎಷ್ಟು ಎಂದು ತಿಳಿಯಲು ಅವರು ಗಡಿಯಾರವನ್ನು ನೋಡುವ ಬದಲು ರೇಡಿಯೊ ತಿರುಗಿಸುತ್ತಿದ್ದರು — ಬಿ.ಬಿ.ಸಿ. ಕಾರ್ಯಕ್ರಮದಿಂದ ಗಂಟೆ ಹೇಳುತ್ತಿದ್ದರು.

ದೊಡ್ಡತನಕ್ಕೆ ಇನ್ನೊಂದು ಹೆಸರು 'ವಿ.ಸೀ.'

ತಸ್ಮೈ ಶ್ರೀ ಗುರವೇ ನಮಃ

ಟಿ. ಎ. ಲಕ್ಷ್ಮೀನಾರಾಯಣ ಶೆಟ್ಟಿ

ಈಗ್ಗೆ ಐವತ್ತು ವರ್ಷಗಳ ಹಿಂದೆ ನಾನು ತುಮಕೂರಿನಂಥ ಒಂದು ಸಣ್ಣ ಊರಿನಿಂದ ಬಿ.ಎ. ಕಲಿಯಲು ಮೈಸೂರಿಗೆ ಹೋಗಿದ್ದೆ. ಮಹಾರಾಜ ಕಾಲೇಜು ಆಗಿನ ದಿನಗಳಲ್ಲಿ ಅತ್ಯಂತ ಪ್ರತಿಷ್ಠಿತ ಕಾಲೇಜು. ಆಗ ಕಲಾ ವಿಷಯಗಳನ್ನು ಓದುವುದಕ್ಕೆ ಇದ್ದ ಕಾಲೇಜು ಅದೊಂದೇ. ವಿದ್ವತ್ ಶೃಂಗಗಳೆನಿಸಿದ ಆಗಿನ ಗುರುವರ್ಗವನ್ನು ನೆನೆಸಿಕೊಳ್ಳುವುದೇ ಒಂದು ರೋಚಕ ಅನುಭವ. ಇಂಗ್ಲಿಷಿಗೆ ಪ್ರೊ. ಈಗಲ್‌ಟನ್, ರಾಜನೀತಿ ಶಾಸ್ತ್ರಕ್ಕೆ ಪ್ರೊ. ಎಂ. ವಿ. ಕೃಷ್ಣರಾವ್, ತತ್ವಶಾಸ್ತ್ರಕ್ಕೆ ಡಾ. ಪುರುಷೋತ್ತಮ್, ಕನ್ನಡಕ್ಕೆ ವಿ.ಸೀ., ಕುವೆಂಪು, ಕ.ವೆಂ. ರಾಘವಾಚಾರ್ ಇವರುಗಳಿಲ್ಲ ಬರುತ್ತಿದ್ದರು. ಇವರಲ್ಲಿ ಒಬ್ಬೊಬ್ಬರೂ ತಮ್ಮ ತಮ್ಮ ವಿಷಯಗಳಲ್ಲಿ ಅಗಾಧ ಪಾಂಡಿತ್ಯ ಉಳ್ಳವರು. ವಿ.ಸೀ. ಅವರ ಶಿಷ್ಯನಾಗಿ ಅವರ ಪದತಲದಲ್ಲಿ ಕುಳಿತು ಕನ್ನಡವನ್ನು ಕಲಿತದ್ದು ನನ್ನ ಪೂರ್ವಜನ್ಮದ ಪುಣ್ಯವೆಂದೇ ನನ್ನ ಎಣಿಕೆ. ೧೯೪೫ ರಿಂದ ೪೭ ರವರೆಗೆ ಎರಡು ವರ್ಷಗಳ ಕಾಲ ಅವರು ನನ್ನ ಗುರುಗಳಾಗಿದ್ದರು.

ವಿ.ಸೀ. ಅವರನ್ನು ನೋಡಿದ ಕೂಡಲೇ ಎದ್ದು ಕಾಣುತ್ತಿದ್ದುದು ಅವರ ಉಡುಪಿನ ಸರಳತೆ ಮತ್ತು ಸ್ವಚ್ಛತೆ. ಅವರ ಉಡುಪೆಂದರೆ ಅದು ಕರ್ನಾಟಕವನ್ನು ಪ್ರತಿಬಿಂಬಿಸುವಂಥದು. ಕಲಾಪತ್ತಿಲ್ಲದ ಆಡಂಬರ ರಹಿತ, ಅವರೇ ವರ್ಣಿಸಿರುವ ಮೈಸೂರು ರುಮಾಲು. ಅದು ಯಾವಾಗಲೂ ಶುಭ್ರ, ಸ್ವಚ್ಛ. ಅವರು ಉಡುತ್ತಿದ್ದುದು ಯಾವಾಗಲೂ ಬಿಳಿಯ ತಿದ್ದಿ ತೀಡಿದಂಥ ಗರಿಗರಿಯಾದ ಕಚ್ಚಿಪಂಚೆ. ಅದಕ್ಕೆ ಹೊಂದುವ ಬಿಳಿಷರ್ಟ್, ಬಾದಾಮಿ ಬಣ್ಣದ ಕ್ಲೋಸ್ ಕಾಲರ್ ಕೋಟು. ಅದು ಯಾವತ್ತೂ ಇಸ್ತ್ರಿ ಇಲ್ಲದೆ ಇರುತ್ತಿರಲಿಲ್ಲ. ಇಂಥ ಬಿಳಿ ದಿರಸಿಗೆ ಹೊಂದುವಂಥ ಬಿಳಿ ಕರ್ಚೀಫು. ಹಣೆಯ ಮೇಲೆ ಕಂಡೂ ಕಾಣದ ಹಾಗೆ ಗಂಧದ ಗೆರೆ, ಸಾದಿನ ಕರಿಯ ಬೊಟ್ಟು. ಯಾವಾಗಲೂ ನುಣುಪಾಗಿ ಕ್ಷೌರಮಾಡಿಕೊಂಡ ಮುಖ. ಆ ಮುಖದ ವರ್ಚಸ್ಸು ಅವರಿಗೇ ವಿಶಿಷ್ಟ. ಆಡಂಬರ ರಹಿತ ಸರಳ ಫ್ರೇಮಿನ ಕನ್ನಡಕ. ಒಟ್ಟಿನಲ್ಲಿ ನೋಡಿದ ಕೂಡಲೇ ಗೌರವ ಹುಟ್ಟಿಸುವಂಥ ವ್ಯಕ್ತಿತ್ವ. ಇದು ನಾನು ಈಗ್ಗೆ ಐವತ್ತು ವರ್ಷಗಳಿಗೂ ಹಿಂದೆ ಕಂಡ ವಿ.ಸೀ. ಅವರ ಬಹಿರ್ ಆಕೃತಿ.

ಇನ್ನು ವಿ.ಸೀ. ಅವರ ದನಿ ಅತ್ಯಂತ ಮೆಲುದನಿ; ಕ್ಷೀಣವೆಂದೇ ಹೇಳಬಹುದಾದಂಥದು.

ಅವರ ತರಗತಿಯ ಉಪನ್ಯಾಸಗಳ ಭಾಷೆ ಯಾವತ್ತೂ ಆಡಂಬರ ರಹಿತ, ಸರಳ. ತರಗತಿಗೆ ಸಂಪೂರ್ಣ ಸಿದ್ಧತೆ ಮಾಡಿಕೊಂಡೇ ಬಂದಿರುತ್ತಿದ್ದರು. ಅವರದು ತುಂಬಾ ಸೂಕ್ಷ್ಮವಾದ, ಅಷ್ಟೇ ನವುರೂ ನಾಜೂಕು ಆದ ವ್ಯಕ್ತಿತ್ವ. ಸತ್ಯಸಂಧತೆ ಅವರ ಹಿರಿಯಗುಣ. ತುಸು ಮುಂಗೋಪಿ, ಆದರೆ ತುಂಬಾ ದಯಾಳು ಹೃದಯಿ. ವಿದ್ಯಾರ್ಥಿಗಳ ಕಷ್ಟ ಕೇಳಿದ ಕೂಡಲೇ ಕರಗಿ ಬಿಡುತ್ತಿದ್ದರು. ಅವರ ಕಷ್ಟಗಳಲ್ಲಿ ನೆರವಾಗುತ್ತಿದ್ದರು. ಸಂಸಾರದ ಖರ್ಚಿಗೆ ಆಗಿ ಉಳಿಸಿದ ಅಲ್ಪ ಸ್ವಲ್ಪ ಹಣವನ್ನು ಬಡವಿದ್ಯಾರ್ಥಿಗಳಿಗೆ ಕಾಲೇಜಿನ ಶುಲ್ಕ ತುಂಬಿಸಲೆಂದೋ ಪುಸ್ತಕ ಕೊಳ್ಳುವ ಸಲುವಾಗಿಯೋ ಕೊಟ್ಟು ಬಿಡುತ್ತಿದ್ದರು.

ಅವರು ಯಾವಾಗಲೂ ಹಾಜರಿ ಹಾಕುತ್ತಿದ್ದುದು ಅತ್ಯಂತ ಕೆಳದನಿಯಲ್ಲಿ. ವಿದ್ಯಾರ್ಥಿಗಳು ತರಗತಿಯಲ್ಲಿ 'ಅಲರ್ಟ್' ಆಗಿದ್ದಾರೆಯೋ ಇಲ್ಲವೊ ಎಂದು ಪರೀಕ್ಷಿಸಲು ಹೀಗೆ ಮಾಡುತ್ತಿದ್ದರು. ಅವರೊಬ್ಬ ಶಿಸ್ತಿನ ಸಿಪಾಯಿ. ವಿದ್ಯಾರ್ಥಿಗಳಿಂದಲೂ ನೂರಕ್ಕೆ ನೂರರಷ್ಟು ಶಿಸ್ತು ನಿರೀಕ್ಷಿಸುತ್ತಿದ್ದರು. ವಿದ್ಯಾರ್ಥಿಗಳಲ್ಲಿ ಏನಾದರೂ ಅಶಿಸ್ತಿನ ನಡವಳಿಕೆ, ತರಗತಿಯಲ್ಲಿ ನಿರಾಸಕ್ತಿ ಕಂಡಾಗ, ಅಂಥ ನಡವಳಿಕೆಯನ್ನು ಸರಿಪಡಿಸುವವರೆಗೂ ಬಿಡುತ್ತಿರಲಿಲ್ಲ. ವಿದ್ಯಾರ್ಥಿಯನ್ನು ತಮ್ಮ ಕೊಠಡಿಗೆ ಕರೆಸಿ ಬುದ್ಧಿ ಹೇಳುತ್ತಿದ್ದರು. ಸಂಸ್ಕಾರಕ್ಕೆ ಸ್ವಲ್ಪವೂ ಮುಕ್ಕಾಗದ ಹಾಗೆ ವ್ಯಕ್ತಿತ್ವ ಬೆಳಸಿಕೊಳ್ಳಬೇಕೆಂದು ಹೇಳುತ್ತಿದ್ದರು. ಅವರು ತರಗತಿ ಪ್ರಾರಂಭಿಸುವುದಕ್ಕೆ ಮುಂಚೆಯೇ ವಿದ್ಯಾರ್ಥಿಗಳು ತರಗತಿಗೆ ಬಂದು ಕುಳಿತಿರಬೇಕಿತ್ತು. ಅವರದು ಬಹು ನಿಷ್ಠುರ ಸಮಯ ಪಾಲನೆ. ಎಂದೂ ತಡಮಾಡದೆ, ಕರಾರುವಾಕ್ಕಾಗಿ ಗಂಟೆ ಹೊಡೆದ ಕೂಡಲೇ ಬರುವ ಪರಿಪಾಠ.

ಒಮ್ಮೆ ಸುಬ್ಬಯ್ಯನೆಂಬ ವಿದ್ಯಾರ್ಥಿ ವಿ.ಸೀ. ಪಾಠ ಪ್ರಾರಂಭಿಸಿದ ಮೇಲೆ, ಮೆಲ್ಲಗೆ ಸದ್ದಿಲ್ಲದೆ ಅರುಗಿನಲ್ಲಿ ನಡೆದು ಬಂದು ಗ್ಯಾಲರಿ ಹತ್ತಿದ. ವಿ.ಸೀ. ಅವರ ಕಣ್ಣು ಕಿವಿ ಬಲು ಚುರುಕು. ಅವರು ಎಡಗಣ್ಣಿನಲ್ಲಿ ಗಮನಿಸಿದರು. ತರಗತಿ ಮುಗಿದ ನಂತರ ತಮ್ಮ ಕೊಠಡಿಗೆ ಕರೆಸಿ ಲಘುವಾಗಿ ಛೀಮಾರಿ ಹಾಕಿ, 'ಈಗ ಕ್ಷಮಿಸಿದ್ದೇನೆ. ಇನ್ನೊಮ್ಮೆ ಹೀಗೆ ಮಾಡಬೇಡ. ನೀನು ಹೀಗೆ ತಡವಾಗಿ ಬಂದದ್ದರಿಂದ ನನ್ನ **attention divert** ಆಯಿತು. ಅಷ್ಟೇ ಅಲ್ಲ, ಹುಡುಗರದ್ದೂ **divert** ಆಯಿತು. ಹೀಗೆ ಪಾಠವನ್ನು ಕೆಡಿಸಬೇಡ' ಎಂದು ಹೇಳಿದರು.

ವಿ.ಸೀ. ಅವರ ಪಾಠದ ರೀತಿಯಂತೂ ಅಪೂರ್ವ. 'ಡೆಡಿಕೇಟೆಡ್' ಅನ್ನುತ್ತಾರಲ್ಲ, ಆ ರೀತಿಯದು. ಅವರದು ಚಿತ್ತಾಪಹಾರಿಯಾದ ವಾಗ್ವಿಲಾಸ. ಪಾಠಮಾಡುವಾಗ ತಮ್ಮನ್ನು ತಾವು ಮರೆತು ಬಿಡುತ್ತಿದ್ದರು. ಆ ಗಂಭೀರವಾದ ವಾಗ್ಝರಿಯಲ್ಲಿ ಅಪಹಾಸ್ಯ, ಲಘು ಹಾಸ್ಯಗಳಿಗೆ ಎಂದೂ ಎಡೆ ಇರುತ್ತಿರಲಿಲ್ಲ. ನಮಗಂತೂ ಕಾಲ ಸರಿದದ್ದೇ ಗೊತ್ತಾಗುತ್ತಿರಲಿಲ್ಲ. ರಾಮಾಯಣ, ಮಹಾಭಾರತಗಳ ವಿಷಯ ಬಂದಿತೆಂದರೆ ಮೈದುಂಬುತ್ತಿದ್ದರು. ಶ್ರೀರಾಮನ ಆದರ್ಶ, ಲಕ್ಷ್ಮಣನ ಸೋದರ ಭಾವ, ಆಂಜನೇಯನ ಭಕ್ತಿ, ವಿಧೇಯತೆ, ಸೀತೆಯ ಪ್ರೇಮ, ಕೌಸಲ್ಯೆಯ ವಾತ್ಸಲ್ಯ, ದಶರಥನ ಪ್ರೀತಿ ಮತ್ತು ಪ್ರಜಾಹಿತ ಬುದ್ಧಿಗಳನ್ನು ಎಷ್ಟು ವರ್ಣಿಸಿದರೂ ತೃಪ್ತಿ ಇರುತ್ತಿರಲಿಲ್ಲ. ಶ್ರೀ ಕೃಷ್ಣನ ಅದ್ವಿತೀಯ ಪಾತ್ರ ಕುರಿತು, ಅರ್ಜುನನ ಧೈರ್ಯ, ಧರ್ಮರಾಯನ ಧರ್ಮಬುದ್ಧಿ ಇವನ್ನು ಕುರಿತು ಹೃದಯಕ್ಕೆ ನಾಟುವ

ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಿದ್ದುದನ್ನು ಮರೆಯುವಂತೆಯೇ ಇಲ್ಲ. ಇಂಗ್ಲಿಷ್ ಸಾಹಿತ್ಯದಿಂದ, ಸಂಸ್ಕೃತ ಸಾಹಿತ್ಯದಿಂದ ಧಾರಾಳವಾಗಿ ಉದಾಹರಿಸುತ್ತಿದ್ದುದು ವಿ.ಸೀ. ಅವರ ವೈಶಿಷ್ಟ್ಯ.

ವಿ.ಸೀ. ಅತ್ಯಂತ ನಿರ್ಮತ್ಸರರು. ತಮ್ಮ ಸಹೋದ್ಯೋಗಿಗಳು ಮತ್ತು ಸಮಕಾಲೀನರಲ್ಲಿ ಇರುವ ವಿದ್ವತ್ತನ್ನು ಮನಃಪೂರ್ವಕವಾಗಿ, ಪಾತ್ಯತೀತವಾಗಿ ಗೌರವಿಸುವ ಪರಿಶುದ್ಧ ಹೃದಯ ಅವರದು.

ಇಂಗ್ಲಿಷ್ ಪ್ರಾಧ್ಯಾಪಕ ಈಗ್ಲ್ಟನ್ ಅವರ ಬಗ್ಗೆ ಅವರಿಗೆ ಅಪಾರ ಗೌರವ. ತಮ್ಮ ಸಹೋದ್ಯೋಗಿಯಾಗಿದ್ದ ಪ್ರೊ. ಕೆ. ವಿ. ಪುಟ್ಟಪ್ಪನವರ ಬಗ್ಗೆ, ಅವರ ಕಾವ್ಯದ ಬಗ್ಗೆ ಉನ್ನತ ಭಾವನೆಗಳನ್ನು ವ್ಯಕ್ತ ಪಡಿಸುತ್ತಿದ್ದರು. ಅವರ ಕವನಗಳಿಂದ ಸಾಲುಗಳನ್ನು ಉದಾಹರಿಸುತ್ತಿದ್ದರು. ಗುಣಕ್ಕೆ, ವಿದ್ವತ್ತಿಗೆ ಗೌರವ ತೋರಿಸುವ ಸಂದರ್ಭ ಬಂದಾಗ ಪ್ರಿನ್ಸಿಪಾಲರಾದಂಥ ಡಾ. ಎಂ. ವಿ. ಗೋಪಾಲಸ್ವಾಮಿ ಅವರನ್ನು ಅವರ ಕೊಠಡಿಯ ಕಡೆ ತೋರ್ಬೆರಳನ್ನೆತ್ತಿ ತೋರಿ ಗೌರವಿಸುವಂಥ ವೈಶಾಲ್ಯ ಅವರಲ್ಲಿತ್ತು. ತತ್ವಶಾಸ್ತ್ರ ಬೋಧಿಸುತ್ತಿದ್ದ ಡಾ. ಪುರುಷೋತ್ತಮ್ ಅವರ ಇಂಗ್ಲಿಷಿನ ಪದಗಳ ಜೋಡಣೆ, ಅಭಿವ್ಯಕ್ತಿ, ಅವರ ಭಾಷಾ ಪ್ರೌಢಿಮೆಯನ್ನು ಉದಾಹರಿಸಿ, ವಿದ್ಯಾರ್ಥಿಗಳಿಗೆ ಅದನ್ನು ಮೇಲ್ಪಂಕ್ತಿಯಾಗಿಟ್ಟು ಕೊಳ್ಳಬೇಕೆಂದು ಹೇಳುತ್ತಿದ್ದರು. ರಾಜ್ಯಶಾಸ್ತ್ರದಲ್ಲಿ ಪ್ರವೀಣರಾಗಿದ್ದ ಡಾ. ಎಂ. ವಿ. ಕೃಷ್ಣರಾಯರ ಆಳವಾದ ವಿದ್ವತ್ತಿನ ಬಗ್ಗೆ ಎಷ್ಟೋ ಸಲ ವಿದ್ಯಾರ್ಥಿಗಳಿದುರು ತಮ್ಮ ಕೊಠಡಿಯಲ್ಲಿ ಪ್ರಸ್ತಾಪಿಸಿದ್ದೂ ಉಂಟು.

ಸಂಜೆಯ ಹೊತ್ತಿನಲ್ಲಿ ಅನೇಕ ವೇಳೆ ಕುಕ್ಕನ ಹಳ್ಳಿಯ ಕೆರೆಯ ಏರಿಯ ಮೇಲಿನಿಂದ ಕ್ರಾಫರ್ಡ್ ಹಾಲ್ ಕಡೆಗೆ ನಡೆಯುತ್ತ ಪೆನ್ಸಿಲ್, ಹಾಳೆ ಇಟ್ಟುಕೊಂಡು ಏನಾದರೂ ಗುರುತು ಹಾಕಿಕೊಳ್ಳುತ್ತಿದ್ದುದನ್ನು ಕಂಡಿದ್ದೇನೆ. ಬಹುಶಃ ಯಾವುದೋ ಪ್ರಬಂಧಕ್ಕೋ, ಲೇಖನಕ್ಕೋ ಟಿಪ್ಪಣಿ ಮಾಡಿಕೊಳ್ಳುತ್ತಿದ್ದರೇನೋ. ಡಿ.ವಿ.ಜಿ., ಮಾಸ್ತಿ, ಶಿವರಾಮ ಕಾರಂತರು, ಜಿ. ಪಿ. ರಾಜರತ್ನಂ, ಅ.ನ.ಕೃ., ಇವರೊಂದಿಗೆ ಅವರಿಗೆ ತುಂಬ ಬಳಕೆ ಇರುತ್ತಿತ್ತು. ಒಮ್ಮೆ ಯಾವುದೋ ಸಭೆ ಇರಬೇಕು – ಮಾಸ್ತಿ, ಡಿ.ವಿ.ಜಿ, ಕಾರಂತ, ವಿ.ಸೀ. ಅನಕೃ, ಜಿ. ಪಿ. ರಾಜರತ್ನಂ ಇವರೆಲ್ಲ ಒಟ್ಟಾಗಿ ಕುಳಿತಿದ್ದುದನ್ನು ನೋಡಿದ ನೆನಪಿದೆ. ಮಾಸ್ತಿಯವರ ವಿಷಯವಾಗಿ ಅವರಿಗೆ ತುಂಬ ಗೌರವ. ಮಾಸ್ತಿ ನಮ್ಮ ದೇಶದ ಆಸ್ತಿ ಎಂದು ತರಗತಿಗಳಲ್ಲಿ ಹೇಳುತ್ತಿದ್ದರು. ವಿ.ಸೀ. ಮಾತುಗಾರಿಕೆ ಮೋಡಿ ಮಾಡುವಂಥದು. ತರಗತಿಯಾಗಲಿ, ಸಾರ್ವಜನಿಕ ಸಭೆಯಾಗಲಿ, ಸರಸ್ವತಿಯ ಸಂಪೂರ್ಣ ಕಟಾಕ್ಷ ಸಾಧಿಸಿ ಕೊಂಡವರಂತೆ, ಜನರ ಹೃದಯ ಸೂರೆಗೊಳ್ಳುವ ಹಾಗೆ ಮಾತನಾಡುತ್ತಿದ್ದರು.

ವಿದ್ಯಾರ್ಥಿ ದೆಸೆ ಮುಗಿದ ಎಷ್ಟೋ ವರ್ಷಗಳ ನಂತರ, ಒಮ್ಮೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಿಕ್ಕಾಗ, ತಾವು ಒಂದು ಸಲ ತುಮಕೂರಿಗೆ ಬರಬೇಕು ಎಂದು ಕೇಳಿಕೊಂಡೆ. ಯಾಕೆ ಅಂದರು. ನಾವು ಒಂದು ಕಲ್ಯಾಣ ಮಂಟಪ ಕಟ್ಟಿಸಿದ್ದೀವಿ, ಅಲ್ಲಿಗೆ ಬರಬೇಕು ಎಂದೆ. ವಿ.ಸೀ. ತುಮಕೂರಿಗೆ ದಯಮಾಡಿಸಿದರು. ನಮ್ಮ ಕಲ್ಯಾಣ ಮಂದಿರದಲ್ಲಿ ಭಾಷಣ ಮಾಡಿದರು. ನನಗಂತೂ ಜನ್ಮ ಸಾರ್ಥಕವೆನಿಸಿದಷ್ಟು ಸಂತೋಷವಾಯಿತು.

ತಸ್ಮೈ ಶ್ರೀ ಗುರವೇ ನಮಃ.

(ನಿರೂಪಣೆ : ಪ್ರೊ. ರಾ. ಲಕ್ಷ್ಮೀನಾರಾಯಣ)

ಗುರುವರ್ಯ

ರತ್ನಮ್ಮ

೧೯೧೮–೧೯: ಮೈಸೂರಿನಲ್ಲಿ ನಡೆದ ಘಟನೆ. ಒಂದು ರಾತ್ರಿ ಪಕ್ಕದ ಮನೆಯಿಂದ ಹೃದಯ ವಿದ್ರಾವಕವಾಗಿ ಅಳುತ್ತಿರುವ ಧ್ವನಿ ಕೇಳಿದ ವೆಂಕಮ್ಮನವರು ತಕ್ಷಣ ಪಕ್ಕದ ಮನೆಯತ್ತ ಓಡಿದರು. ಬೀದಿ ಬಾಗಿಲಿಗೆ ಚಿಲಕ ಹಾಕಿರಲಿಲ್ಲ. ಹಜಾರದಲ್ಲಿ ತುಂಬು ಗರ್ಭಿಣಿ ಲಕ್ಷ್ಮಿದೇವಿ ಬಿದ್ದುಕೊಂಡು ಹೊರಳಾಡುತ್ತಿದ್ದಳು. ಮನೆಯಲ್ಲಿ ಯಾರೂ ಇಲ್ಲ. ನೆತ್ತಿ ನೀರೊಡೆದು ಹೆರಿಗೆಯ ಕಡೆಯ ಹಂತದಲ್ಲಿ ಆಕೆ ಇದ್ದಳು. ವೆಂಕಮ್ಮ ಹುಡುಗಿಗೆ ಧೈರ್ಯ ಹೇಳಿ ತಾವೇ ಹೆರಿಗೆ ಮಾಡಿದರು. ಹಂಡೆಯಲ್ಲಿ ಬಿಸಿ ನೀರು ಕಾದಿದ್ದಿತು. ಮಗು ಬಾಣಂತಿಯರನ್ನು ತೊಳೆದು ಉಪಚರಿಸಿ ತಮ್ಮ ಮನೆಯಿಂದ ಕಾಫಿ ತರಿಸಿ ಬಾಣಂತಿಗೆ ಕುಡಿಸಿದರು. ಲಕ್ಷ್ಮಿದೇವಿಯ ಪತಿ ಬರುವವರೆಗೆ ಮಗುವಿನ ಉಪಚಾರ ಮಾಡುತ್ತಿದ್ದರು. ಪಾರ್ಸಿ ನಾಟಕ ಕಂಪನಿಯ ಪ್ರಖ್ಯಾತ ನಾಟಕ ನೋಡಿ ಬೆಳಗಿನ ಜಾವ ಲಕ್ಷ್ಮಿದೇವಿಯ ಪತಿ, ಅವನ ತಂದೆ ಮತ್ತು ಮನೆಯ ಸದಸ್ಯರುಗಳು ನಿಧಾನವಾಗಿ ಮನೆಗೆ ಬಂದರು. ಬಹಳ ವಯಸ್ಸಾಗಿದ್ದ ಗಂಡ ಮತ್ತು ಹುಡುಗಿ ಲಕ್ಷ್ಮಿಯ ವಿಷಮ ದಾಂಪತ್ಯದಿಂದ (ಎರಡನೆ ಹೆಂಡತಿ) ಸದಾ ಜಗಳಗಳಿಂದ ಕುರುಕ್ಷೇತ್ರವಾಗಿದ್ದ ಮನೆ. ವೆಂಕಮ್ಮನವರು ಪತಿಗೆ ಬುದ್ಧಿ ಹೇಳಿ ಸಂಸಾರದ ಗುಟ್ಟು ತಿಳಿಸಿದರು. ಹೆಂಡತಿ ಸಾಯುವುದು ಸುಲಭ. ಆದರೆ ಇನ್ನೊಬ್ಬಳನ್ನು ತರುವುದು ಕಷ್ಟ.

ವೆಂಕಮ್ಮನವರು ಋಷಿಪಂಚಮಿ ಮಾಡಿದ್ದ ಮಡಿ ಹೆಂಗಸು. ಹೊಲೆಮನೆ ಮೈಲಿಗೆ ಮುಟ್ಟಬಾರದು. ಆದರೆ ಆ ಕ್ಷಣದ ಪರಿಸ್ಥಿತಿಯಲ್ಲಿ ತಾವು ಮಡಿ ಹುಡಿ ಲೆಕ್ಕಿಸದೆ ತಾಯಿ, ಮಗುವನ್ನು ರಕ್ಷಿಸಿ ಎರಡು ಜೀವಗಳನ್ನು ಉಳಿಸಿದರು. ಮನುಷ್ಯ ಬಾಂಧವ್ಯ. ಅನಾಥ ಹೆಂಗಸಿನ ರಕ್ಷಣೆ ಮಾಡಿದರು. ಇಂತಹ ಪುಣ್ಯಾತ್ಗಿತ್ತಿ ತಾಯಿ ಹೆತ್ತ ಮಗ ವಿ.ಸೀ. ಅವರು ಉದಾರಹೃದಯಿಗಳಾದುದರಲ್ಲಿ ಹೆಚ್ಚುಗಾರಿಕೆಯಿಲ್ಲ.

ಮುಂದೆ ಲಕ್ಷ್ಮಿದೇವಿ ಮೂರು ಮಕ್ಕಳ ತಾಯಿಯಾಗಿ ವಿಧವೆಯಾಗಿ ಮಹಾ ಸಂಕಟಕ್ಕೆ ಒಳಗಾದರು. ಕಷ್ಟದಲ್ಲಿ ಮಕ್ಕಳು ಬೆಳೆದರು. ಆಸ್ತಿ ಪಾಲಾಗುವ ಸಮಯವೂ ಬಂದಿತು. ತಾತನ ವಿಲ್ ಪ್ರಕಾರ ಬಲಮಗನಿಗೆ ಎರಡರಷ್ಟು ಆಸ್ತಿ. ಅದನ್ನು ಒಪ್ಪಲೇಬೇಕು. ಹೆಣ್ಣುಮಕ್ಕಳಿಗೆ ಪಾಲಿಲ್ಲ. ಆದರೆ ವಿ.ಸೀ. ಮತ್ತಿತರರ ಮಧ್ಯಸ್ಥಿಕೆಯಿಂದ ನೆಪಮಾತ್ರದ ಮದುವೆ ಖರ್ಚು ದೊರೆಯಿತು.

ನಾನೇ ಆ ಲಕ್ಷ್ಮೀದೇವಮ್ಮನ ಎರಡನೆಯ ಮಗಳು.

* * *

೧೯೪೬-೪೭: ಕನ್ನಡ ಆನರ್ಸ್ ಮೊದಲ ವರ್ಷದ ವಿದ್ಯಾರ್ಥಿಯಾಗಿ ಮಹಾರಾಜಾ ಕಾಲೇಜಿಗೆ ಸೇರಿದೆ. ವಿ.ಸೀ.ಯವರ ಮನೆಗೆ ಹೋಗಿ ಹಿಂದಿನ ಪರಿಚಯ ಹೇಳಿಕೊಂಡು ಅವರ ಹೆಂಡತಿ ಶ್ರೀಮತಿ ಸರೋಜಮ್ಮನವರ ವಿಶ್ವಾಸ ಗಳಿಸಿದೆ. ಅವರು ಸಹ ನನ್ನ ತಾಯಿಯ ಸ್ನೇಹಿತರು. ಹೇಗೆ ಸ್ನೇಹಿತರಾಗಿದ್ದರೋ ಗೊತ್ತಿಲ್ಲ. ಸರೋಜಮ್ಮ ಕರೆಯಾಗ ನಮ್ಮ ತಾಯಿ "ಹಾಳು ಮುಖದಲ್ಲಿ ಬರಲಾರೆ" ಎಂದು ಅಲವತ್ತುಕೊಂಡರು.

ನಾನು ನಂಜನಗೂಡಿನಿಂದ ರೈಲಿನಲ್ಲಿ ಮೈಸೂರು ಕಾಲೇಜಿಗೆ ಬಂದು ವ್ಯಾಸಂಗಮಾಡಿ ವಾಪಸ್ಸು ಊರಿಗೆ ಹೋಗುತ್ತಿದ್ದೆ. ಚಾಮರಾಜಪುರಂ ಸ್ಟೇರ್ಷಗೆ ಅವರ ಮನೆ ಸ್ವಲ್ಪ ಹತ್ತಿರದಲ್ಲಿತ್ತು. ರೈಲು ಲೇಟಾದಾಗ ಅವರ ಮನೆಗೆ ಹೋಗಿ ಅವರ ಲೈಬ್ರರಿಯ ಪುಸ್ತಕ ಪರಿಚಯ ಮತ್ತು ಸರೋಜಮ್ಮನವರ ಕಂಚಿನ ಲೋಟದ ಕಾಫಿಯ ಪರಿಮಳ ಎರಡನ್ನೂ ಅನುಭವಿಸುತ್ತಿದ್ದೆ. ಅವರ ಅಡಿಗೆಯಲ್ಲಿ ರಸಿಕತೆ ಮತ್ತು ಶ್ರೀಮಂತಿಕೆ ಎದ್ದು ಕಾಣುತ್ತಿತ್ತು. ಕುರುಕುಲು ತಿಂಡಿಗಳಂತೂ ಪರಮ ವೈಭವದಿಂದ ಮೆರೆಯುತ್ತಿದ್ದವು.

ಕಾಲೇಜಿನಲ್ಲಿ ವಿ.ಸೀ. ಯವರು ನಮ್ಮ ತರಗತಿಗೆ ರಾಘವಾಂಕನ "ಸೋಮನಾಥ ಚಾರಿತ್ರ್ಯ" ಗ್ರಂಥದ ಮೇಲೆ ಭಾಷಣ ಮಾಡುತ್ತಿದ್ದರು. ಪುಸ್ತಕ ಮುಚ್ಚಿಟ್ಟು ಇಂಗ್ಲೀಷಿನಲ್ಲಿ ನಿರರ್ಗಳವಾಗಿ ಸ್ವಲ್ಪಹೊತ್ತು ಭಾಷಣಮಾಡಿ ಅದನ್ನೇ ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದಾಗ ನಾವು ನೋಟ್ಸ್ ಬರೆದುಕೊಳ್ಳುತ್ತಿದ್ದೆವು. ಅವರಾಗಿ ಡಿಕ್ಟೇಟ್ ಮಾಡಿದವರಲ್ಲ. ನಾವಾಗಿ ಬರೆದುಕೊಂಡರೆ ಬೇಡವೆಂದವರಲ್ಲ.

ಒಂದು ಉದಾಹರಣೆಗೆ ಬದಲು ಹತ್ತು ಉದಾಹರಣೆ ತಿರುಗಾ ಮುರುಗಾ ವಿವರಿಸಿ ವಿಷಯವನ್ನು ಮನದಟ್ಟು ಮಾಡುವ ಹೆಚ್ಚುಗಾರಿಕೆ ಅವರದು.

ಮೊದಲು ಕನ್ನಡ ಸಾಹಿತ್ಯ ಚರಿತ್ರೆ – ಜೈನರ ವೈಭವ – ವೀರಶೈವರ ಅಭ್ಯುದಯ – ಬಿಜ್ಜಳನ ಕೊಲೆ – ವೀರಶೈವಧರ್ಮದ ಸರ್ವತೋಮುಖವಾದ ಅಭಿವೃದ್ಧಿ – ವಿಹಂಗಮ ನೋಟ – ಇತ್ಯಾದಿ.

* * *

ನಾನು ಬೆಂಗಳೂರು ಮಹಾರಾಣಿ ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿದ್ದಾಗ – ಪ್ರೊ. ಎಂ. ಆನಂದರಾವ್ ಮುಖ್ಯಸ್ಥರಾಗಿದ್ದಾಗ ೭೧-೭೨ರಲ್ಲಿ ವಿ.ಸೀ. ಯವರನ್ನು ಭಾಷಣಕ್ಕಾಗಿ ಕರೆಯುವ ಸದವಕಾಶ ಲಭಿಸಿತು. ಅದರಿಂದಾಗಿ ಅವರ ಮನೆಗೆ ಹೋಗಿ ಸರೋಜಮ್ಮನವರನ್ನು ಕಂಡೆ. ಕಂಚಿನ ಲೋಟದ ಬದಲು ಸ್ಟೀಲ್ ಲೋಟದಲ್ಲಿ ಕಾಫಿ, ತುಂಬ ಶ್ರೀಮಂತ ಚಿತ್ರಾನ್ನ, ಹಲ್ವ ಕೊಟ್ಟರು. ಆದರೆ ಅವರ ಮುಖದಲ್ಲಿ ಆಯಾಸ ಸುಸ್ತು ಎದ್ದು ಕಾಣುತ್ತಿತ್ತು. ಹಾಗೆಂದು ಕೆಲಸ ಕಡಿಮೆ ಮಾಡಿಕೊಂಡಿರಲಿಲ್ಲ.

ವಿ.ಸೀ. ಯವರ ಅಂದಿನ ಭಾಷಣದ ವಿಷಯ—

"ಸೀತೆಯ ರಾಜನೀತಿ ವಿಚಕ್ಷಣತೆ"

ದಂಡಕಾರಣ್ಯಕ್ಕೆ ಬಂದ ರಾಮ ಅಲ್ಲಿನ ಋಷಿಮುನಿಗಳ ಆಶಯದಂತೆ ರಾಕ್ಷಸರನ್ನು ಕೊಂದು ನಾಶಮಾಡಲು ವಚನ ನೀಡುತ್ತಾನೆ.

ಅವರೆಲ್ಲ ತೆರಳಿದನಂತರ ಏಕಾಂತದಲ್ಲಿ ಸೀತೆ ಪತಿಯೊಂದಿಗೆ ಚರ್ಚಿಸುತ್ತ ನುತಿಯುತ್ತಾಳೆ:

"ಹೊಸಸ್ಥಳ – ರಾಕ್ಷಸರು ನಮಗೇನೂ ಕೇಡುಮಾಡಿಲ್ಲ. ಶತ್ರುಗಳಾಗಿಲ್ಲ, ಋಷಿಗಳು ಏನೂ ಒಳಿತು ಕೊಟ್ಟಿಲ್ಲ! ನಿಷ್ಕಾರಣವಾಗಿ ಮುಂದುವರಿದು ಯುದ್ಧಕ್ಕೆ ಸಿದ್ಧವಾಗಿ ರಕ್ತಪಾತವಾಗಬೇಕೆ?"

ಎಳೆ ಎಳೆಯಾಗಿ ಸೀತೆಯ ರಾಜಕೀಯ ಸಾಮಾಜಿಕ, ಪರಿಸರ ಪ್ರಜ್ಞೆಗಳನ್ನು ಬಿಡಿಸುತ್ತಾ ವಿಶ್ಲೇಷಿಸುತ್ತ ಯುವರಾಣಿಯಾಗಿದ್ದ ಮೈಥಿಲಿಯ ಮಾನಸಿಕ ಆಂದೋಲನವನ್ನು ವಿವರಿಸುತ್ತ ವಿ.ಸೀ. ಸುಮಾರು ಮುಕ್ಕಾಲು ಘಂಟೆ ಭಾಷಣ ಮಾಡಿದರು. ರಾಮನ ಸ್ವಾಭಿಮಾನ, ಅತ್ಯಾಭಿಮಾನಗಳು ಮುಂದಿನ ವಿಪತ್ತಿಗೆ ಕಾರಣವಾಯಿತೆಂಬ ಅಂಶ ಸ್ಪಷ್ಟಪಡಿಸಿದರು.

*　　*　　*

೧೯೭೯ ಡಿಸೆಂಬರ್‌ನಲ್ಲಿ ಮತ್ತೊಮ್ಮೆ ಅವರ ಮನೆಗೆ ಹೋದೆ. ತಾಯಿ ಇಲ್ಲದ ತೌರಿಗೆ ಬಂದ ಅನುಭವ! ಆದರೂ ತಕ್ಷಣ ಮನಸ್ಸನ್ನು ಹತೋಟಿಗೆ ತಂದುಕೊಂಡೆ. ಅವರೂ ಕೂಡ ಬಹಳ ಬಳಲಿದ್ದರು. ಆದರೂ ನನ್ನ ಕೆಲಸ ಬಹಳ ಸಲೀಸಾಗಿ ಹೂವಿನ ಹಾರ ಎತ್ತಿದಂತೆ ನಡೆಸಿಕೊಟ್ಟರು. ಸಂತೋಷದಿಂದ ನನ್ನ ನಾದಿನಿಯ ಮದುವೆ ಅವರ ಪ್ರಿಯಶಿಷ್ಯನ ಸಂಗಡ ನಡೆದು ಅವರು ನನ್ನ ನಾದಿನಿಗೂ ಅಕ್ಕರೆಯ 'ಮಾವಯ್ಯ' ಆದರು.

ವಿ.ಸೀ. ಗುರುಗಳು ಎನ್ನುವುದಕ್ಕಿಂತ ಮಿಗಿಲಾಗಿ ನನ್ನ ಪೋಷಕರು, ಕಷ್ಟಕ್ಕಾದವರು ಎಂಬ ತುಂಬು ಕೃತಜ್ಞತಾ ಭಾವದಿಂದ ಅವರನ್ನು ಸ್ಮರಿಸಿ ವಂದಿಸುತ್ತೇನೆ.

ನಲ್ಮೆಯ ನೆನಪುಗಳು

ನೀಲತ್ತಹಳ್ಳಿ ಕಸ್ತೂರಿ

ವಿ. ಸೀ. ಅವರು ನನಗೆ ಪರಿಚಯವಾದದ್ದು ಅವರ ಸಾಕ್ಷಾತ್ ದರ್ಶನಕ್ಕೆ ಎಷ್ಟೊ ವರ್ಷ ಮುಂಚೆಯೆ. ಆಗ ನಾನು ಇನ್ನೂ ಹುಡುಗ. ಗೋಲಿ ಆಡುತ್ತಿದ್ದ ಬಾಲ. ನಮ್ಮ ಕಿವಿಗೆ ಆಗ ಬೀಳುತ್ತಿದ್ದ ಹಾಡು "ಎಮ್ಮ ಮನೆಯಂಗಳದಿ ಬೆಳಿದೊಂದು ಹೂವನ್ನು ನಿಮ್ಮ ಮಡಿಲೊಳಗಿಡಲು ತಂದಿರುವೆವು." ಈ ಹಾಡು ಆ ಕಾಲದಲ್ಲಿ ಜನರ ನಾಲಿಗೆಗಳಲ್ಲಿ ನಲಿದದ್ದೂ ನಲಿದದ್ದೇ. ಜಿ. ಪಿ. ರಾಜರತ್ನಂ ಅವರ "ಬಣ್ಣದ ತಗಡಿನ ತುತ್ತೂರಿ" ಎಳೆಯ ಮಕ್ಕಳ ಬಾಯಿಯಲ್ಲಿ ಕುಣಿಯುತ್ತಿತ್ತು, ಅವರನ್ನು ಕುಣಿಸುತ್ತಿತ್ತು. ಪ್ರಾಯದ ಚಿಗುರು ಮೀಸೆಯವರ ಮನವನ್ನು "ಮೈಸೂರು ಮಲ್ಲಿಗೆ"ಯ ಇಂಪು ತುಂಬಿರುತ್ತಿತ್ತು. ಸ್ವಲ್ಪ ಪ್ರೌಢರನ್ನು ಕರಗಿಸುತ್ತಿದ್ದುದು "ಎಮ್ಮ ಮನೆಯಂಗಳದಿ". ಹಳೆಯ ಮೈಸೂರಿನ ಸೀಮೆಯಲ್ಲಿ ನಡೆಯುತ್ತಿದ್ದ ಮದುವೆಗಳಲ್ಲಿ, ಉರುಟಣೆಯ ಹಾಡು, ಆರತಿಯ ಹಾಡು ಇರುತ್ತಿದ್ದ ಹಾಗೆಯೇ ಈ 'ಮನೆ ತುಂಬಿಸುವ ಹಾಡೂ' ಇದ್ದೇ ಇರುತ್ತಿತ್ತು. ನನ್ನ ಹಿರಿಯ ಬಂಧುವೊಬ್ಬರು ಅಂಥ ಸಂದರ್ಭಗಳಲ್ಲಿ ಇದನ್ನು ಹಾಡುತ್ತಿದ್ದರು. ಕೇಳುತ್ತಿದ್ದ ವಯಸ್ಕರೆಲ್ಲ ಒತ್ತಿ ಬರುತ್ತಿದ್ದ ಉಮ್ಮಳವನ್ನು ಅದುಮಿಟ್ಟುಕೊಂಡು ಸೋಗಿನ ನಗೆ ಬೀರಲು ಹೋಗುತ್ತಿದ್ದರು. ನನಗೆ ಆಗ ಹಾಡಿನ ಅರ್ಥ ಎಷ್ಟು ಆಗುತ್ತಿತ್ತೊ ಕಾಣೆ. ಆದರೆ ಈ ಹಾಡು ತುಂಬ ಕರುಣಾಜನಕ, ಮನ ಕರಗಿಸುವಂಥದು ಎಂದು ಅರಿವಾಗುತ್ತಿತ್ತು. ನಾನು ಬಲಿತ ಹಾಗೆ ಕ್ರಮೇಣ ಹಾಡಿನ ಇಂಗಿತ ಮನಸ್ಸನ್ನು ತಟ್ಟಲು ಆರಂಭಿಸಿತು. ಹಾಗೆ ವಿ.ಸೀ. ಹೆಸರು ನಾನು ಕೇಳಿದ್ದು.

ಇದೇ ಹಾಡಿನಂತೆಯೆ ಇನ್ನೊಂದು "ಮೃಗಶಾಲೆಯ ಸಿಂಹಗಳು" ನಮ್ಮ ಮಾಧ್ಯಮಿಕ ತರಗತಿಯ ಪಠ್ಯಪುಸ್ತಕದಲ್ಲಿತ್ತು. ಅದೂ ನಮ್ಮ ಮನ ತುಂಬಿತ್ತು. ಹಾಡಿನ ಭಾವಕ್ಕೂ, ಹೊರಗೆ ನಾಡಿನಲ್ಲಿ ಆವರಿಸಿದ್ದ ಬಿಡುಗಡೆಯ ಹೋರಾಟದ ಭಾವಕ್ಕೂ ಸ್ಪಷ್ಟ ಸಂಬಂಧ ನನಗೂ ಅರಿವಾಗುತ್ತಿತ್ತು. ಬಂಧನದಲ್ಲಿ ಸಿಕ್ಕಿ ಕೊರಗುತ್ತಿದ್ದ ಮೃಗರಾಜನ ಪಾಡು, ಪಾರತಂತ್ರ್ಯದಲ್ಲಿ ಸೊರಗುತ್ತಿದ್ದ ಭಾರತದ ಸ್ಥಿತಿಯನ್ನೇ ಪ್ರತಿಬಿಂಬಿಸುತ್ತಿದ್ದುದು ಅರ್ಥವಾಗುತ್ತಿತ್ತು.

ನನ್ನ ಮನಸೆಳೆದ ಇನ್ನೂ ಒಂದು ಹಾಡು "ಕಾದಿರುವಳು ಶಬರಿ, ರಾಮ ಬರುವನೆಂದು." ಇದಂತೂ ಪದ್ಯವಾಚನ ಸ್ಪರ್ಧೆಯಲ್ಲಿ ನನಗೆ ಸುಲಭವಾಗಿ ಒದಗಿಬರುತ್ತಿದ್ದ ಸರಕು.

ಈ ಮೂರು ಹಾಡುಗಳೂ ನನ್ನನ್ನು ಎಳೆತನದಲ್ಲಿಯೆ, ಕವಿಯನ್ನು ಕಾಣದೆಯೆ, ಕವಿಯ ಬಗ್ಗೆ ಏನೂ ಗೊತ್ತಿಲ್ಲದೆಯೆ, ಕವಿಯ ಹತ್ತಿರಕ್ಕೆ ಒಯ್ದಿದ್ದವು.

ಇನ್ನೂ ಒಂದು ನೆನಪಾಗುತ್ತದೆ. ತುಮಕೂರಿನ ಹೊಸ ಮಾಧ್ಯಮಿಕ ಶಾಲೆ (ಕೋತಿ ತೋಪು ಸ್ಕೂಲು)ಯಲ್ಲಿ ನಾನು "ಸೊಹ್ರಾಬ್ ರುಸ್ತುಂ" ನಾಟಕದ ದೃಶ್ಯವನ್ನು ಅಭಿನಯಿಸಿದ್ದು. ಅದು ವಿ.ಸೀ. ಅವರದೇ ಕೃತಿ ಎಂದು ಗೊತ್ತಾದದ್ದು ಎಷ್ಟೊ ಕಾಲದ ಮೇಲೆ.

ಪ್ರೌಢಶಾಲೆಗೆ ಬರುವ ವೇಳೆಗೆ ಹಲಕೆಲವು ಸಾಹಿತಿಗಳ ಹೆಸರುಗಳು ನಮಗೆ ಗೊತ್ತಾಗುತ್ತಿದ್ದವು. ಬೇಂದ್ರೆ, ಕುವೆಂಪು, ನರಸಿಂಹಸ್ವಾಮಿ, ಡಿವಿಜಿ, ವಿ.ಸೀ., ಇತ್ಯಾದಿ. ನನ್ನ ಮೂಗಿನ ಕೆಳಗೆ ಕಪ್ಪುಗೆರೆ ಮೂಡುತ್ತಿದ್ದ ಜೊತೆಗೇ ಮನಸ್ಸಿನಲ್ಲಿ ಕನ್ನಡ ಸಾಹಿತ್ಯದ ಕಡೆಗೆ ಒಲವೂ ಮೂಡಹತ್ತಿತ್ತು. ಆ ಹೊಸ ಉರುಬಿನಲ್ಲಿ ನಾನು ಓದಿದ ಹಲವಾರು ಉತ್ತಮ ಕೃತಿಗಳಲ್ಲಿ ಒಂದು "ಪಂಪಾಯಾತ್ರೆ" ವಿ.ಸೀ. ಅವರ ಪ್ರವಾಸ ಕಥನ. ಹಾಳು ಹಂಪೆಯಲ್ಲಿ ಅಲೆದಾಡಿದ ಗೆಳೆಯರ ಗುಂಪಿನ ಅನುಭವ, ಆಗ ಮನಸ್ಸಿನಲ್ಲಿ ನೆಲೆಗೊಂಡ ಆ ಸಣ್ಣ ಪುಸ್ತಕದ ನೆನಪು ಇಂದಿಗೂ – ೫೦ ವರ್ಷಗಳ ನಂತರವೂ – ಹಸಿರಾಗಿಯೇ ಇದೆ.

ಹೀಗೆ ವಿ.ಸೀ. ನನಗೆ ಎಳೆತನದಿಂದ ಹತ್ತಿರದವರಾಗಿದ್ದರು. ನನ್ನಂತೆ ಎಷ್ಟು ಸಾವಿರ ಮಂದಿಗೊ!

* * *

ಅವರ ಪ್ರತ್ಯಕ್ಷ ದರ್ಶನ ಆದದ್ದು ನಾನು ಸೆಂಟ್ರಲ್ ಕಾಲೇಜಿಗೆ ಬಿ.ಎಸ್.ಸಿ ತರಗತಿಗೆ ಸೇರಿದಾಗಲೇ. ೧೯೫೦–೫೧, ೫೧–೫೨ ಈ ಎರಡೂ ವರ್ಷ ಅಲ್ಲಿ ನಮಗೆ ಮಹಾಗುರುಗಳಿಬ್ಬರ ನೇರ ಸಂಪರ್ಕ, ಸನ್ನಿಧಿ. ವಿ. ಸೀತಾರಾಮಯ್ಯ ಹಾಗೂ ಜಿ. ಪಿ. ರಾಜರತ್ನಂ, ಈ ಇಬ್ಬರ ಹೆಸರೂ ಜನಜನಿತವಾಗಿತ್ತು. ನಮಗಂತೂ ಬೆರಗು ಸೇರಿದ ಭಯ ಭಕ್ತಿ ಇವರಲ್ಲಿ. ಕನ್ನಡ ಸಾರಸ್ವತ ಲೋಕದಲ್ಲಿ ಪ್ರಖ್ಯಾತರು ಇಬ್ಬರೂ. ಆದರೆ ಕಾಲೇಜಿನಲ್ಲಿ ಅವರ ಕಚೇರಿ ಕೋಣೆ ನೋಡಿದರೆ, ರಾಮ ರಾಮ. ಕನ್ನಡದ ದುಃಸ್ಥಿತಿಗೆ ಕನ್ನಡಿ ಆ ಕೋಣೆ. ಈಗ ಸೆಂಟ್ರಲ್ ಕಾಲೇಜಿನ ದಕ್ಷಿಣ ತುದಿಯಲ್ಲಿ ಪುಸ್ತಕಾಲಯದ ಭವ್ಯ ಕಟ್ಟಡ ಇದೆಯಲ್ಲ, ಅಲ್ಲಿದ್ದುದು ಹಳೆಯ ಕ್ಯಾಂಟೀನು ಮನೆ. ಅದೇ ಕೆಂಪು ರಾಡಿ ಬಣ್ಣ. ಆ ಮನೆಯ ಹಿಂಭಾಗದ ಕೋಣೆ ಕನ್ನಡ ಮೇಷ್ಟ್ರ ಕಾರ್ಯಾಲಯ. ಅದನ್ನು ತಲಪಲು ಕ್ಯಾಂಟೀನಿನ ಅಡುಗೆ ಮನೆಯಿಂದ ಬರುತ್ತಿದ್ದ ದುರ್ನಾತದ ಚರಂಡಿ – ವೈತರಣಿ ನದಿ–ದಾಟಿ ಹೋಗಬೇಕು. ಯಾವಾಗಲೊ ಒಮ್ಮೊಮ್ಮೆ ನಾವು ಹೋಗುತ್ತಿದ್ದುದು. ದಿನವೂ ಹಲವು ಸಲ ದಾಟುತ್ತಿದ್ದರಲ್ಲ ವಿ.ಸೀ., ಜಿ. ಪಿ. ಅವರು! ಹೇಗೆ ದಾಟುತ್ತಿದ್ದರೊ. ಚರಂಡಿ ನಾತ ಏನಿದ್ದರೆ ಏನು, ದಾಟಿದ ಮೇಲೆ ಕೋಣೆಯಲ್ಲಿ ಇದ್ದುದು ಕನ್ನಡ ಪೆಂಪಿನ ಕಂಪು. ಎರಡು ದಿಗ್ಗಜಗಳ

ಮೇಲಾಗಿ, ಪ್ರಾಯಶಃ ಕಾಲೇಜಿನಲ್ಲಿ ಆಗ ವಿ.ಸೀ., ಜಿ.ಪಿ. ಗಳಿಗೆ ಸಿಗುತ್ತಿದ್ದ ಗೌರವ ಆದರ ಬೇರೆ ಯಾರಿಗೂ, ಪ್ರಿನ್ಸಿಪಾಲರಿಗೂ, ದೊರಕುತ್ತಿರಲಿಲ್ಲ ಅಂದರೆ ಯಾರೂ ತಪ್ಪು ಭಾವಿಸಲಾರರು. ಎಷ್ಟೊ ಜನ ಅಧ್ಯಾಪಕರು ಪಕ್ಕದಲ್ಲಿ ಹಾದು ಹೋಗುತ್ತಿದ್ದರೂ ಯಾರೂ ಗಮನಿಸುತ್ತಲೇ ಇರಲಿಲ್ಲ. ಆದರೆ ಕೊಕ್ಕರೆ ಗರಿಯ ಕಚ್ಚೆ ಪಂಚೆ, ಕೊರಳು ಮುಚ್ಚುವ ಬಾದಾಮಿ ನಸು ಬಣ್ಣದ ಕೋಟು, ಗರಿಗರಿಯಾದ ಮೈಸೂರು ಪೇಟ, ತುಸು ಒಂದು ಪಕ್ಕಕ್ಕೆ ಬಾಗಿದ ಶರೀರ, ಮುಖದಲ್ಲಿ ಗಾಂಭೀರ್ಯ, ಕೈಯಲ್ಲಿ ಪುಸ್ತಕ ಹಿಡಿದು ಸದ್ದಿಲ್ಲದೆ ಬರುತ್ತಿದ್ದ ವಿ.ಸೀ. ಅವರನ್ನೊ, ದಪ್ಪನೆಯ ಖಾದಿ ಮುಂಗಚ್ಚೆ ಪಂಚೆ, ಮೊಣಕಾಲಿನವರೆಗಿನ ಖಾದಿ ಕೋಟು, ಮೋಟು ತಲೆಯ ಕ್ರಾಪು, ನೆಲ ನಡುಗಿಸುವ ನಡಿಗೆಯ ಜಿ. ಪಿ. ಅವರನ್ನೊ ದೂರದಲ್ಲಿ ಕಂಡರೇ ಸಾಕು, ಹುಡುಗರೆಲ್ಲ 'ಹೋಷಿಯಾರ್' ಆಗಿ ಬಿಡುತ್ತಿದ್ದೆವು. ದಾರಿಯಲ್ಲಿ ಯಾರೂ ಅಡ್ಡ ಬಾರರು. ಕಾಲೇಜು ಭವನಗಳ ವರಾಂಡಗಳಲ್ಲಿ ಅಡ್ಡಾಡುತ್ತಿದ್ದವರೆಲ್ಲ ಸದ್ದಿಲ್ಲದೆ ಸರಿದು ಒಳಗೆ ಹೋಗಿ ಗಂಭೀರವಾಗಿ ಕುಳಿತುಕೊಳ್ಳುವರು. ಹುಡುಗರಿಗೆ ಮೋಡಿ ಮಾಡುವ ನಿಲುವು ಆ ಗುರುಗಳದು.

ವಿ.ಸೀ. ಎರಡು ವರ್ಷ ನಮಗೆ ಪಾಠ ಹೇಳಿದ್ದು ಬಸವಪ್ಪಶಾಸ್ತ್ರಿಗಳ "ಕರ್ನಾಟಕ ಶಾಕುಂತಲ ನಾಟಕ" ಹಾಗೂ ಪುತಿನ ಅವರ ಪ್ರಬಂಧ ಸಂಕಲನ "ಈಚಲು ಮರದ ಕೆಳಗೆ." ವಾಸ್ತವವಾಗಿ ಎರಡು ವರ್ಷ ನಡೆದ ಪಾಠ ಶಾಕುಂತಲವೇ. ಬಸವಪ್ಪ ಶಾಸ್ತ್ರಿಗಳ ಪುಸ್ತಕಕ್ಕೆ ನಡುನಡುವೆ ಖಾಲಿ ಹಾಳೆ ಹಾಕಿಸಿ ಬೈಂಡು ಮಾಡಿಸಿದ್ದು ವಿ.ಸೀ. ಅವರ ಪ್ರತಿ. ಆ ಖಾಲಿ ಹಾಳೆಗಳಲ್ಲಿ ಕಾಳಿದಾಸನ ಮೂಲದ ಶ್ಲೋಕಗಳು, ಒಂದೊಂದು ಪೀರಿಯಡ್ಡಿನಲ್ಲಿ ಮೂರು ನಾಲ್ಕು ಶ್ಲೋಕ ಮುಗಿದರೆ ಹೆಚ್ಚು. ಎಷ್ಟೊ ಪಾಠ ವಿವರಣೆಗೆ ಇಂಗ್ಲೀಷೇ. ಸೀಮೆ ಸುಣ್ಣದಲ್ಲಿ ಬರೆಯವುದು ಬೇರೆ. This is Kanva Ashrama on the earth and this one is Maricha Ashrama in the celestial sphere. The story takes place in both and bridges the two." ಇದನ್ನೆಲ್ಲ ಗೆರೆ ಬಾಣ ಎಳೆದು ವಿವರಿಸುವುದು. ಕೊನೆಗೆ ಎರಡನೆಯ ವರ್ಷ ಪ್ರಬಂಧಕ್ಕೆ ಕಾಲ ಸಾಲದೆ ಹೋಯಿತು. ಎರಡು ಮೂರು ತರಗತಿಗಳನ್ನು ಒಂದೆರಡು ಸ್ಪೆಷಲ್ ತರಗತಿಗಳಲ್ಲಿ ಕಲೆಹಾಕಿ, ಮುಗಿಸಬೇಕಾಯಿತು. ಶಾಕುಂತಲವನ್ನಂತೂ ಅರೆದು ಕುಡಿಸಿಬಿಟ್ಟರು.

ವಿ.ಸೀ. ತರಗತಿ ಕೋಣೆಗೆ ಬರುತ್ತಲೇ, ಬಾಗಿಲು ಹಾಕಿಸಿಬಿಡುವರು. ಮೆಲುದನಿಯಲ್ಲಿ ಹಾಜರಿ ತೆಗೆದುಕೊಳ್ಳುವುದು. ಯಾರಾದರೂ ಎಚ್ಚರವಾಗಿಲ್ಲದೆ 'ಪ್ರೆಸೆಂಟ್ ಸರ್' ಹೇಳದಿದ್ದರೆ, ಹಾಜರಿ ಹೋದಂತೆಯೆ. ಎದುರು ಮಾತಾಡಲು ಯಾರಿಗೂ ಎದೆ ಇರುತ್ತಿರಲಿಲ್ಲ. ಅನಂತರ ಪಾಠ ನಿರಂತರವಾಗಿ ಒಂದು ಗಂಟೆ. ಒಂದು ದಿನದ ಪ್ರಸಂಗ ಇನ್ನೂ ಚೆನ್ನಾಗಿ ನೆನಪು. ನಾಟಕದಲ್ಲಿ ಶಕುಂತಲೆಯ ಸಖಿ ಅನಸೂಯೆ, ಪ್ರಿಯಂವದೆಯರ ಮಾತುಗಳ ಪಾಠ. "ನೋಡಿ, ನಾಗೇಂದ್ರ ಇದಾನಲ್ಲ, ಈಗ ಸಿನಿಮಾನಟ, ಆತ ಚಿಕ್ಕವನಾಗಿದ್ದಾಗ ವರದಾಚಾರ್ ಕಂಪನಿಯಲ್ಲಿ ಅನಸೂಯೆ ಪಾರ್ಟು ಮಾಡುತ್ತಿದ್ದ. ಥೇಟ್ ಹುಡುಗಿಯೇ. ಎಷ್ಟು ಚೆನ್ನಾಗಿ ಹೆಣ್ಣು ಪಾರ್ಟು ಮಾಡುತ್ತಿದ್ದನೊ!" ಎಂದು ನೆನಸಿಕೊಂಡರು, ವಿವರಿಸಿದರು. ನಮಗೆ ಒಳಗೇ ಮುಸಿಮುಸಿ ನಗು. ಕಾರಣ,

ಮೊದಲನೆಯ ಬೆಂಚಿನಲ್ಲಿ ಇದ್ದ ವಿದ್ಯಾರ್ಥಿ ಕೃಷ್ಣಪ್ರಸಾದ್, ಅದೇ ನಾಗೇಂದ್ರರಾಯರ ಮಗ. ಆತನಿಗೆ 'ಕೆನ್ನೆ ಕೆಂಪಾದುದಾಗ'! ಕೃಷ್ಣಪ್ರಸಾದ್ ಮುಂದೆ ಖ್ಯಾತ ಛಾಯಾಗ್ರಾಹಕರಾದರು. ಶಾಕುಂತಲದ ಮೂಲಕ, ವಿ.ಸೀ. ಕಾಳಿದಾಸ, ಬಸವಪ್ಪಶಾಸ್ತ್ರಿ, ಇಡೀ ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನೇ ಅಚ್ಚೊತ್ತಿದರು ನಮ್ಮ ಮನಸ್ಸಿನಲ್ಲಿ.

ವಿ. ಸೀ. ಮೇಲಿಂದ ಮೇಲೆ ಹೇಳುತ್ತಿದ್ದ ಮಾತು ಅಂದೂ ಪ್ರಸ್ತುತ, ಇಂದೂ ಅಷ್ಟೆ. ಕವಿಗಳ ಬಗ್ಗೆ ಗಾದೆ ಇದೆ "ಪದ್ಯ ಬರೆಯೋನಿಗೆ ಮಧ್ಯಾಹ್ನಕ್ಕಿಲ್ಲ" ಎಂದು. ಅಂಥದೇ ಇಂಗ್ಲಿಷ್ ಮಾತು ವಿ.ಸೀ. ಹೇಳುತ್ತಿದ್ದರು, "Seven mighty states claimed Homer dead / Through whose streets the living Homer begged for bread" – ಪಾಶ್ಚಾತ್ಯ ಮಹಾಕವಿ ಹೋಮರ್ ಬದುಕಿದ್ದಾಗ ಹೊಟ್ಟೆಗಿಲ್ಲದೆ ಅಲೆಯುತ್ತಿದ್ದ, ಆತ ಸತ್ತಾಗ, ಏಳು ರಾಜ್ಯಗಳು ಅವನು ತನ್ನವ ತನ್ನವ ಎಂದು ಕಿತ್ತಾಡಿದವಂತೆ.

ಕಾಲೇಜು ಬಿಟ್ಟ ಮೇಲೆ ವಿ.ಸೀ. ಅವರ ನಿತ್ಯ ಸಂಪರ್ಕ ತಪ್ಪಿತು. ಆದರೇನು ನಮ್ಮ ವಿ.ಸೀ., ಕವಿ ವಿ.ಸೀ., ವಿದ್ವಾಂಸ ವಿ.ಸೀ., ಚಿಂತನ ಶೀಲ ವಿ.ಸೀ., ಸಹೃದಯಿ ಸುಸಂಸ್ಕೃತ ಮಹಾಶಯ ವಿ.ಸೀ. ನನ್ನ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಗೊಂಡಿದ್ದರು. ಇಂದೂ ಹಾಗೆಯೆ.

ಬಹುವರ್ಷದ ನಂತರ, ಒಮ್ಮೆ ಅವರನ್ನು ನಮ್ಮ ಗಾಂಧೀ ಸಾಹಿತ್ಯ ಸಂಘಕ್ಕೆ ಕರೆದೆವು. ಸಂದರ್ಭ ಗಮಕದ ಗುರು ಹು. ಮ. ರಾಮಾರಾಧ್ಯರಿಗೆ ಗೌರವಾರ್ಪಣೆ. ಆ ವೇಳೆಗೆ ನಮ್ಮ ಸಿದ್ದವನಹಳ್ಳಿ ಕೃಷ್ಣ ಶರ್ಮಾಜಿ ಕಾಯಿಲೆಯಿಂದ ಬಳಲಿ ಮೆತ್ತಗಾಗಿದ್ದರು. ಬೇಡ ಎಂದರು ನಿಲ್ಲದೆ, "ನಮ್ಮ ಮೇಷ್ಟ್ರು ಸನ್ಮಾನ, ನಾನು ಬರುತ್ತೇನೆ" ಎಂದು ಬಂದಿದ್ದರು. ಪಾದರಸದಂತೆ ಸದಾ ಕ್ರಿಯಾಶೀಲರೂ ನಕ್ಕು ನಗಿಸುವ ಉತ್ಸಾಹದ ಚಿಲುಮೆಯೂ ಆಗಿದ್ದವರು ಈಗ ಬಾಡಿದ ಸೊಪ್ಪಾಗಿದ್ದರು. ಒಂದು ಮೂಲೆಯ ಕುರ್ಚಿಯಲ್ಲಿ ಕಂಡೂ ಕಾಣಿಸದಂತೆ ಕೂತಿದ್ದರು. ವಿ.ಸೀ. ಬಂದರು, ನೋಡಿದರು. ಹತ್ತಿರ ಹೋಗಿ, "ಎಟ್ಲುನ್ನಾರು" ಎಂದು ಮಾತಾಡಿಸಿದರು. ಅಷ್ಟೆ. ಅವರ ಗಂಟಲು ಕಟ್ಟಿತು, "ನೋಡಲಾರೇಪ್ಪ, ನೋಡಲಾರೆ, ಶರ್ಮ ಹೀಗೆ ಆಗಿಹೋಗಿದಾರಲ್ಲ" ಎಂದು ಪಿಸುಗುಟ್ಟುತ್ತ ಇತ್ತ ಬಂದರು. ಅಂದಿನ ಅವರ ಮಾತಿನಲ್ಲೂ ದುಃಖ ತುಂಬಿತ್ತು.

ಇನ್ನೊಮ್ಮೆ ನಮಗೆ ಒಂದು ಹುಚ್ಚು ಹಿಡಿಯಿತು, ಬಿ.ಎಂ.ಶ್ರೀ. ಅವರ 'ಅಶ್ವತ್ಥಾಮನ್' ನಾಟಕ ಆಡಬೇಕು ಎಂದು. ಆಗ ಆ ನಾಟಕ ಹೆಚ್ಚು ಕಡಿಮೆ ಗತವೈಭವ ಆಗಿತ್ತು. ಅಂಥ ಅಪರೂಪದ ಕೃತಿಗಳನ್ನೇ ಎತ್ತಿಕೊಳ್ಳಬೇಕು ಎಂಬ ಒಂದು ವಿಚಿತ್ರ ಉಮೇದು ನಮಗೆ. ಸಾಕಷ್ಟು ಅಭ್ಯಾಸ ಮಾಡಿದೆವು. ವೇಷಭೂಷಣ, ನಡಿಗೆ, ನಿಲುವು ಇತ್ಯಾದಿ ಪರಿಕರಗಳ ಬಗ್ಗೆ ಯಾರಾದರು ಹಿರಿಯ ವಿದ್ವಾಂಸರನ್ನು ಕೇಳುವುದು ಸರಿ ಎನಿಸಿತು. ಚಟ್ಟನೆ ಹೊಳೆದ ಹೆಸರು ವಿ.ಸೀ. ಒಂದು ಭಾನುವಾರ ನಾವು ೭–೮ ಮಂದಿ ಚಾಮರಾಜಪೇಟೆಯ ವಿ.ಸೀ. ಮನೆಗೆ ಧಾಳಿಯಿಟ್ಟೆವು. ಸದ್ದಿಲ್ಲದೆ ಗಂಭೀರವಾಗಿ ಒಬ್ಬರ ಹಿಂದೆ ಒಬ್ಬರು ಅವರ ಕೋಣೆಯನ್ನು ಹೊಕ್ಕು ನಿಂತೆವು. ಸುತ್ತಲ ಗೋಡೆಗೂ ಅನಿಸಿದ ರ್‍ಯಾಕುಗಳಲ್ಲಿ ಪುಸ್ತಕಗಳ ಜೋಡಣೆ. ನಡುವೆ ಚಾಪೆಯಲ್ಲಿ ಗೋಡೆಗೆ ಒರಗಿಕೊಂಡು ವಿ.ಸೀ.

ಮಫ್ತಿ ವೇಷ; ರುಮಾಲು, ಕೋಟು ಇಲ್ಲ. ತೆಳುವಾದ ಮಲ್ ಬನೀನು. ಆಗಲೇ ನಮ್ಮ ಕಣ್ಣಿಗೆ ಬಿದ್ದದ್ದು ಅವರ ಸಣ್ಣ ಪಿಳ್ಳಜುಟ್ಟು. ವಿ.ಸೀ. ನಮ್ಮನ್ನು ಕೂರಿಸಿದರು, ಕಾಫಿ ತರಿಸಿಕೊಟ್ಟರು.

ತರಗತಿಯಲ್ಲಿ ಹೇಗೊ ಹಾಗೆ ಮಾತು ಆರಂಭಿಸಿದರು. ಗ್ರೀಕ್ ಪ್ರಾಚೀನ ನಾಟಕ ಪರಂಪರೆ. ಈಸ್ಕಿಲಸ್, ಯೂರಿಪಿಡಿಸ್, ಸೊಫೋಕ್ಲಿಸ್ ಇತ್ಯಾದಿ ನಾಟಕಕಾರರ ಕತೆ. ಅಶ್ವತ್ಥಾಮನ್‌ಗೆ ಮೂಲವಾದ 'ಅಗಮೆಮ್ನಾನ್,' ಅದರ ಪಾತ್ರ, ರಂಗವ್ಯೂಹ, ಗ್ರೀಕ್ ಬಯಲು ರಂಗಭೂಮಿ, ಕನ್ನಡದ ನಾಟಕ ಪರಂಪರೆ, ಬಿ.ಎಂ.ಶ್ರೀ. ಅನುವಾದ, ನಾಟಕದ ತಿರುಳು, ಹೃದಯ, ಆಶಯ— ಬೆಳಿಗ್ಗೆ ೯ ಕ್ಕೆ ತೊಡಗಿದ ಪಾಠ ಮುಗಿಸಿದಾಗ ೧೨ ಗಂಟೆ. ಮುಗಿಸಿದರು ಅಷ್ಟೆ, ಪಾಠ ನಿಜಕ್ಕೂ ಮುಗಿದಿರಲಿಲ್ಲ. ನಮಗೆ ಆದ ಅನುಭವ 'ಬೆರಗು' ಮಾತ್ರ. ನಾಟಕದ ವಿಷಯ ಎಷ್ಟು ಗೊತ್ತಾಯಿತೋ ಇರಲಿ, ವಿ.ಸೀ. ಅವರ ಜ್ಞಾನವೈಶಾಲ್ಯ, ಅರಿವಿನ ಆಳ, ನೆನಪಿನ ಅಗಾಧತೆ ನಮ್ಮ ಬಾಯಿ ಮುಚ್ಚಿಸಿತ್ತು. ನಡುನಡುವೆ ಅವರು "ನೋಡಿ ಆ ಎಡಗಡೆ, ಎರಡನೆಯ ಪುಸ್ತಕ ಸ್ವಲ್ಪ ತೆಗೆದುಕೊಳ್ಳಿ" ಎನ್ನುವರು. ಅದು ಗ್ರೀಕ್ ನಾಟಕ ಕುರಿತ ಗ್ರಂಥ. ಅದರಲ್ಲಿ ಬಯಲು ರಂಗನಾಟಕಗಳ ಚಿತ್ರ ತೋರಿಸುವರು. ಹೀಗೆ ಸೋದಾಹರಣ ಉಪನ್ಯಾಸ. ನಾವೆಲ್ಲ ಶಬ್ದಶಃ ಮೂಕರಾಗಿ ಮರಳಿದೆವು. ನಾವು ಬಯಲಿನಲ್ಲಿ ಬಿಟ್ಟಿ ಆಡಲು ಹವಣಿಸಿದ್ದೆವು. ಇನ್ನೇನು ಬಣ್ಣ ಬಳಿದುಕೊಳ್ಳಬೇಕು ಎನ್ನುವಾಗ ಎಲ್ಲಿಂದಲೊ ಬಂದ ಮಳೆ ಮೂರು ದಿನ ಕಷ್ಟಪಟ್ಟು ನಾವೇ ನಿಲ್ಲಿಸಿದ್ದ ರಂಗಮಂಟಪವನ್ನೂ, ನಮ್ಮ ಉತ್ಸಾಹವನ್ನೂ ನೆಲಸಮ ಮಾಡಿಬಿಟ್ಟಿತು. ಆದರೆ ಚಪಲ ಬಿಡಬೇಕಲ್ಲ, ಒಂದೇ ವಾರದಲ್ಲಿ, ನಮ್ಮ ಶರ್ಮಾಜಿಯವರ ಪ್ರೋತ್ಸಾಹದಿಂದ, ಮಲ್ಲೇಶ್ವರದ ಸೇವಾಸದನದಲ್ಲಿ 'ಅಶ್ವತ್ಥಾಮನ್' ಆಡಿಯೆ ಬಿಟ್ಟು ನಮ್ಮ ಮಹದಾಸೆಯನ್ನು ಪೂರೈಸಿ ಕೊಂಡೆವು.

ಕೊನೆಯ ಸಲ ವಿ.ಸೀ. ಅವರನ್ನು ಕಂಡದ್ದು ಮಫ್ತಿಯಲ್ಲಿಯೆ, ಪೇಟ ಕೋಟು ಇಲ್ಲದೆ. ಅಂದು ಮಂಗಳವಾರ ೧೩-೩-೧೯೭೯. ಸಂಜೆ ಸುಮಾರು ಆರು. ಮಲ್ಲೇಶ್ವರದಲ್ಲಿ ಮನೆಯಿಂದ ದಾಪುಗಾಲು ಹಾಕುತ್ತ ೧೭ನೆಯ ಕ್ರಾಸ್ 'ವಿದೇಹ'ಕ್ಕೆ ಹೊರಟಿದ್ದೆ. ಅಲ್ಲಿ ಮಧ್ಯಾಹ್ನ ನಮ್ಮ ಜಿ. ಪಿ. ರಾಜರತ್ನಂ 'ವಿದೇಹ'ರಾಗಿದ್ದರು. ಆಫೀಸಿನಿಂದ ಬಂದ ಮೇಲೆ, ಗಿಡಕ್ಕೆ ನೀರು ಹಾಕುತ್ತಿದ್ದ ನನಗೆ ಗೆಳೆಯ ಶ್ರೀ ನಂಜುಂಡಯ್ಯನವರಿಂದ ಸುದ್ದಿ ತಿಳಿದಿತ್ತು. ಸ್ತಂಭಿತನಾಗಿದ್ದೆ. ಎಚ್ಚರ ತಪ್ಪಿದವನಂತೆ ಧಾವಿಸುತ್ತಿದ್ದೆ. ಮಾರ್ಗೋಸಾ ರಸ್ತೆ ಮೂಲೆಯಲ್ಲಿ ವಿ.ಸೀ. ಬರುತ್ತಿದ್ದರು. ತಮ್ಮ ಆಪ್ತ ಗೆಳೆಯನ ಅಂತಿಮ ದರ್ಶನ ಮಾಡಿ ವಾಪಸ್ಸು ಬರುತ್ತಿದ್ದರು. ಪೇಟ ಕೋಟು ಇರಲಿಲ್ಲ. ಹಣ್ಣಾದ ಜೀವ ನಲುಗಿತ್ತು. ಮೆಲ್ಲಗೆ ನಡೆ. ಜೊತೆಗೆ ಒಬ್ಬರು. "ನಮಸ್ಕಾರ ಸಾರ್" ಎಂದೆ. "ಆಯಿತಪ್ಪ, ರಾಜರತ್ನಂ ಹೋಗಿಬಿಟ್ಟರು. ಹೋಗಿ ನೋಡಿ" ಎಂದರು. "ಸಾರ್, ನೀವು ಹೇಗೆ ಮನೆಗೆ ಹೋಗುತ್ತೀರಿ" ಎಂದು ಕೇಳಿದೆ. ಜೀವಂತವಿರುವ ಈ ಹಿರಿಯರ ಬಗ್ಗೆ ನನಗೆ ಚಿಂತೆ. "ಜೊತೆಗೆ ಇದಾರಪ್ಪ" ಎಂದರು. ಮೆಲ್ಲನೆ ಕೈಕೋಲು ಊರಿಕೊಂಡು ಬಸ್

ನಿಲುಗಡೆಯತ್ತ ಹೆಜ್ಜೆ ಹಾಕಿದರು. ಒಂದೆರಡು ನಿಮಿಷ ಅವರನ್ನು ನೋಡುತ್ತ ನಿಂತೆ. ಅನಂತರ 'ವಿದೇಹ'ಕ್ಕೆ ಓಡಿದೆ.

ವಿ.ಸೀ. ದೈವಾಧೀನರಾದುದು ನನಗೆ ತಿಳಿದುದು ಮರುದಿನವೇ, ಪತ್ರಿಕೆಯಿಂದಲೇ. ನಿಧನರಾದ ಸಂಜೆ ನಾನು ಶಂಕರಪುರಕ್ಕೆ ಹೋಗಿದ್ದೆ. ಶಂಕರ ಮಠದಲ್ಲಿ ಮಹಾಭಾರತ ಸಂಪುಟದ ಬಿಡುಗಡೆ ಕಾರ್ಯಕ್ರಮದ ನಂತರ ಮನೆಗೆ ಮರಳಿದೆ. ಗುರುವಿನ ಅಂತ್ಯದರ್ಶನ ನನಗೆ ಲಭ್ಯವಿರಲಿಲ್ಲ.

ಏನೊ ನನ್ನ ಪುಣ್ಯ, ಅಂಥ ಮಹಿಮರ ಶಿಷ್ಯತ್ವವಾದರೂ ಸಿಕ್ಕಿತ್ತಲ್ಲ!

ಶಾಕುಂತಲವನ್ನು ಅಷ್ಟು ಅಕ್ಕರೆಯಿಂದ ನಮಗೆ ಏಕೆ ಹೇಳಿಕೊಡುತ್ತಿದ್ದರು ಎಂದು ಯೋಚಿಸಿದ್ದೇನೆ ಎಷ್ಟೊ ಸಲ. ಶಾಕುಂತಲ ನಾಟಕ ವಿಮರ್ಶೆ ಎಂಬ ಪುಸ್ತಕವನ್ನೂ ವಿ.ಸೀ. ಬರೆದಿದಾರೆ. ಹಿಂದೆಯೇ "ಎಮ್ಮ ಮನೆಯಂಗಳದಿ" ಹಾಡಿನ ಸಾಲು ನೆನಪಾಗಿ ಉತ್ತರ ನೀಡುತ್ತದೆ. ಆ ನಾಟಕದ ನಾಲ್ಕನೆಯ ಅಂಕದ ನಾಲ್ಕು ಶ್ಲೋಕಗಳು, ಕಣ್ವಋಷಿ ತನ್ನ ಸಾಕು ಮಗಳನ್ನು ಬೀಳ್ಕೊಡುವಾಗಿನ ಮಾತು! – ಯಾರನ್ನು ಕರಗಿಸುವುದಿಲ್ಲ? ಮದುವೆಗಳಲ್ಲಿ ಹೆಣ್ಣು ಮಕ್ಕಳನ್ನು ಕಳಿಸಿಕೊಡುವುದು ಇಂದಿಗೂ ಮನಕರಗಿಸುವ ಅನುಭವವೇ. ಬೇರೆಯವರಲ್ಲಿ ನೋಡಿದೇನೆ. ನಮ್ಮ ಮಕ್ಕಳನ್ನು ಕಳಿಸಿಕೊಟ್ಟಾಗಲೂ ಸ್ವತಃ ಅನುಭವಿಸಿದೇನೆ. "ಈ ಇವರೆ ನಿನ್ನವರು, ಇವರ ದೇವರುಗಳೆ ನಿನ್ನ ದೇವರುಗಳು. ಎರಡು ಮನೆ ಹೆಸರು ಖ್ಯಾತಿಗಳು ಬೆಳೆವಂತೆ ತುಂಬಿದಾಯುಸ್ಸಿನಲಿ ಬಾಳಿ ಬದುಕು" ಎನ್ನುವ ವೇಳೆಗೆ ಮಾತು ಹೊರಡುವುದಿಲ್ಲ. "ತುಂಬಿದಾಯುಸ್ಸಿನಲ್ಲಿ ಕೂಳ ಗದುಕು" ಎಂದು ಕೊನೆಗೊಳ್ಳುವ ಇದರ ಕೊರವಂಜಿಯ ಅಣಕವಾಡನ್ನು ನೆನೆಸಿಕೊಂಡು ನಗಲು ಯತ್ನಿಸಿದರೂ ಅದು ಮೂಲ ಅನುಭವದ ಆರ್ದ್ರತೆಯನ್ನು ಅರಿಸುವುದೇ ಇಲ್ಲ.

ವಿ.ಸೀ. ಅವರ ನಲ್ಮೆಯ ನೆನಪಿಗೆ ದೊರೆತ ಅವಕಾಶಕ್ಕೆ ನಾನು ಕೃತಜ್ಞ.

ಗುರು ವಿ.ಸೀ.

ಬಿ. ಎನ್. ಸಂಪತ್

ವಿ.ಸೀ. ಯವರನ್ನು ಉದ್ದಾಮ ಪಂಡಿತರೆಂದು ಕರೆದರೆ ಅವರನ್ನು ಕೇಳರಿಯದ ಈ ಪೀಳಿಗೆಯವರಿಗೆ ಅದು ಕೇವಲ 'ಕ್ಲೀಷೆ' ಯಾಗಿ ತೋರಬಹುದು. ಅವರು ಉಣಿಸಿದ ರಸದೌತಣದ ರುಚಿಯನ್ನು ಅವರ ಸಾವಿರಾರು ವಿದ್ಯಾರ್ಥಿಗಳು ಇಂದೂ ಚಪ್ಪರಿಸುತ್ತಿದ್ದೇವೆ. ಅವರು ಕನ್ನಡವನ್ನು ಬೋಧಿಸುತ್ತಿದ್ದ ರೀತಿ ಅಪೂರ್ವವಾದದ್ದು. ವಿ.ಸೀ. ಯವರು ತುಲನಾತ್ಮಕ ಅಧ್ಯಯನಕ್ಕೆ ಎತ್ತಿದ ಕೈ. ಇಂಗ್ಲಿಷ್ ಸಾಹಿತ್ಯದ ಪರಿಚಯವನ್ನು ಅವರು ಕನ್ನಡ ತರಗತಿಯಲ್ಲಿ ಮಾಡಿಕೊಡುತ್ತಿದ್ದ ರೀತಿ ಯಾರನ್ನೂ ಬೆರಗುಗೊಳಿಸುತ್ತಿತ್ತು. ಅನ್ಯ ಭಾಷಾ ಸಾಹಿತ್ಯ ಪರಿಚಯವನ್ನು ಅವರು ಕೇವಲ ತಮ್ಮ ಪಾಂಡಿತ್ಯ ಪ್ರದರ್ಶನಕ್ಕೋಸ್ಕರ ಮಾಡಿದವರಲ್ಲ. ಅಗಾಧವಾದ ವಿಶ್ವ ಸಾಹಿತ್ಯವನ್ನು ಆದಷ್ಟು ತಮ್ಮ ವಿದ್ಯಾರ್ಥಿಗಳಿಗೆ ಪರಿಚಯಿಸಿ ಕೊಡುವ ತವಕ, ಆಸೆ.

ನಲವತ್ತಾರು ವರ್ಷಗಳ ಹಿಂದೆ ಸೆಂಟ್ರಲ್ ಕಾಲೇಜಿನಲ್ಲಿ ವಿ.ಸೀ.ಯವರ ವಿದ್ಯಾರ್ಥಿಯಾಗಿರುವ ಸೌಭಾಗ್ಯ ನನಗೆ ದೊರಕಿತ್ತು. ಸೆಂಟ್ರಲ್ ಕಾಲೇಜ್ ಬಿಟ್ಟ ಮೇಲೆ ಸುಮಾರು ಇಪ್ಪತ್ತು ವರ್ಷ ನಾನು ವಿ.ಸೀ. ಯವರನ್ನು ಭೇಟಿ ಮಾಡಿರಲಿಲ್ಲ. ಈ ಮಧ್ಯೆ ನಾನು ಕಾನೂನು ಅಧ್ಯಯನ ಮುಗಿಸಿ ಕಾಶೀ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕನಾಗಿ ಸೇರಿದ್ದೆ. ಗಂಗೆಯ ದಡದ ಮೇಲಿನ ಹನುಮಾನ್ ಘಾಟಿನಲ್ಲಿ ನನ್ನ ವಾಸ. ದಿನವೂ ಗಂಗೆಯಲ್ಲಿ ಮಿಂದು ಘಾಟಿನ ಮೇಲಿರುವ ಹನುಮಾನ್ ಮಂದಿರಕ್ಕೆ ಭೇಟಿ ಕೊಡುವುದು ನನ್ನ ನಿತ್ಯ ಕರ್ಮದ ಅವಿಭಾಜ್ಯ ಅಂಗ. ನಾನು ಸ್ನಾನ ಮಾಡುತ್ತಿದ್ದ ಶಿವಾಲ ಘಾಟಿನಿಂದ ಹನುಮಾನ್ ಘಾಟಿಗೆ ಇಕ್ಕಟ್ಟಾದ ಓಣಿಯ ಮೂಲಕ ಪ್ರವೇಶ. ಮೂವರು ಒಟ್ಟಿಗೆ ನಿಂತರೆ ಬಂದಾಗುವಷ್ಟು ವಿಶಾಲವಾದ ಗಲ್ಲಿ!

ಚಳಿಗಾಲದ ಒಂದು ಬೆಳಿಗ್ಗೆ. ಗಂಗೆಯಲ್ಲಿ ಸ್ನಾನ ಮಾಡಿ ಯಥಾಪ್ರಕಾರ ಮನೆಯ ಕಡೆಗೆ ಹೊರಟಿದ್ದೆ. ಹನುಮಾನ್ ಮಂದಿರಕ್ಕೆ ಹತ್ತು ಗಜ ದೂರದಲ್ಲಿ ಜಗಲಿಯ ಮೇಲೆ ವೃದ್ಧರೊಬ್ಬರು ನಿಂತಿರುವುದು ಕಂಡು ಬಂದಿತು. ಪರಿಚಯದ ಮುಖ. ಶಾಲು ಹೊದ್ದಿದ್ದರು. ಅವರನ್ನು ವಿ.ಸೀ. ಎಂದು ಗುರುತಿಸಲು ಎರಡು ನಿಮಿಷಗಳಾಯಿತು. ಏಕೆಂದರೆ ಕ್ಲೋಸ್ ಕಾಲರ್ ಕೋಟು ಮತ್ತು ಗರಿಕೆದರದ ಮೈಸೂರು ರುಮಾಲನ್ನು ಬಿಟ್ಟು

ವಿ.ಸೀ. ಯವರನ್ನು ಬೇರೆ ಉಡುಪಿನಲ್ಲಿ ಚಿತ್ರಿಸಿಕೊಂಡಿರಲಿಲ್ಲ. 'ನಮಸ್ಕಾರ ಸಾರ್' ಎಂದೆ. 'ನಮಸ್ಕಾರನಪ್ಪಾ' ಎಂದು ವಿ.ಸೀ. ಪ್ರತಿ ವಂದಿಸಿದರು. 'ನಾನು ನಿಮ್ಮ ವಿದ್ಯಾರ್ಥಿಯಾಗಿದ್ದೆ ಸಾರ್, ಇಪ್ಪತ್ತು ವರ್ಷಗಳ ಹಿಂದೆ' ಎಂದು ಪರಿಚಯಿಸಿಕೊಂಡೆ. 'ಗೊತ್ತಪ್ಪಾ' ಎಂದು ವಿ.ಸೀ. ಯವರು ಹೇಳಿದರೂ ಗುರುತಿಸಿದರೋ ಇಲ್ಲವೋ ಎನ್ನುವ ಅನುಮಾನ ಮನಸ್ಸಿನಲ್ಲಿ ಮೂಡಿತ್ತು. ಅದೇ ಬೆಳಿಗ್ಗೆ ವಿ.ಸೀ. ಯವರು ಹರಿದ್ವಾರದಿಂದ ಬಂದಿದ್ದರೆಂದು ತಿಳಿಯಿತು. ದೆಹಲಿಯಲ್ಲಿ ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯ ಮೀಟಿಂಗ್ ಮುಗಿಸಿಕೊಂಡು ಹರಿದ್ವಾರದಲ್ಲಿನ ಹಿರಿಯ ಮಗಳನ್ನು ನೋಡಿಕೊಂಡು ಕಾಶಿಗೆ ಬಂದಿದ್ದರು. ಕಾಶಿಯಲ್ಲಿ ಅವರ ಎರಡನೆಯ ಮಗಳು ಸುನಂದಮ್ಮ ಮತ್ತು ಅವರ ಯಜಮಾನರು ವಿಶ್ವನಾಥ ಶರ್ಮರ ವಾಸ.

'ಏನಪ್ಪಾ ಮಾಡ್ತಿದ್ದೀರಾ' ಎಂದು ವಿ.ಸೀ. ಪ್ರಶ್ನಿಸಿದರು. 'ಕಾಶೀ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ರೀಡರ್ ಆಗಿದ್ದೇನೆ ಸಾರ್' ಎಂದು ತಿಳಿಸಿದೆ. ವಿಶ್ವವಿದ್ಯಾನಿಲಯದಲ್ಲಿ ನಾನು ಅಧ್ಯಾಪಕನಾಗಿರುವುದು ಕೇಳಿ ವಿ.ಸೀ. ಯವರಿಗೆ ಸಂತೋಷವಾಯಿತು. ನಾನು ಕಾನೂನು ವಿಭಾಗದಲ್ಲಿರುವುದು ತಿಳಿದು ಕುತೂಹಲದಿಂದ 'ಯಾವ ವಿಷಯ ತಗೊಳ್ತಿದ್ದೀರಾ' ಎಂದು ಕೇಳಿದರು. 'ಸ್ನಾತಕ ವಿದ್ಯಾರ್ಥಿಗಳಿಗೆ ಕುಟುಂಬ ವಿಧಿಯನ್ನು, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಹಿಂದೂ ವಿಧಿಶಾಸ್ತ್ರವನ್ನು ತೆಗೆದುಕೊಳ್ಳುತ್ತಿದ್ದೇನೆ' ಎಂದು ತಿಳಿಸಿದೆ. 'ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಹಿಂದೂ ವಿಧಿಶಾಸ್ತ್ರ ಹೇಳಿಕೊಡುವುದು ಗೌರವ ಸೂಚಕ' ಎಂದು ವಿ.ಸೀ. ಮೆಚ್ಚುಗೆ ವ್ಯಕ್ತಪಡಿಸಿದರು.

ವಿ.ಸೀ. ನನ್ನನ್ನು ಅಲ್ಲಿಗೇ ಬಿಡಲಿಲ್ಲ. 'ಯಾವ ಯಾವ ಪುಸ್ತಕ ಕನ್‌ಸಲ್ಟ್ ಮಾಡ್ತೀರಾ?' ಎಂದು ಪ್ರಶ್ನಿಸಿದರು. ನಾನು ಕೆಲವು ಸ್ಮೃತಿಗಳ ಮತ್ತು ಸೂತ್ರಗಳ ಹೆಸರುಗಳನ್ನು ಸೂಚಿಸಿ 'ಹೆಚ್ಚಾಗಿ ಕಾಣೆಯವರ 'ಧರ್ಮ ಶಾಸ್ತ್ರದ ಇತಿಹಾಸ' ವನ್ನೇ ಆಧಾರ ಮಾಡಿಕೊಂಡಿದ್ದೇನೆ ಸಾರ್' ಎಂದು ತಿಳಿಸಿದೆ. ಭಾರತ ರತ್ನ ಪಿ. ವಿ. ಕಾಣೆಯವರ 'ಧರ್ಮಶಾಸ್ತ್ರದ ಇತಿಹಾಸ' ಐದು ಸಂಪುಟ ಎಂಟು ಭಾಗಗಳಲ್ಲಿ ಸುಮಾರು ೬೫೦೦ ಪುಟಗಳ ಬೃಹದ್ಗ್ರಂಥ. ಈ ಮೇರುಕೃತಿಗೆ ಸಾಟಿಯಾದ ಗ್ರಂಥಗಳು ವಿಶ್ವ ಸಾಹಿತ್ಯದಲ್ಲಿ ಕಡಿಮೆ ಎಂದು ಪಾಶ್ಚಾತ್ಯ ವಿದ್ವಾಂಸರ ಮತ ಕೂಡ. ಅನೇಕ ವಿಷಯಗಳೊಡನೆ ಕಾಣೆಯವರು ಈ ಗ್ರಂಥದಲ್ಲಿ ಹಿಂದೂ ಸಮಾಜದಲ್ಲಿ ಕಾನೂನಿನ ಉಗಮ ಮತ್ತು ವಿಕಾಸಗಳ ಬಗ್ಗೆ ವಿಸ್ತೃತ ವಿವರ ನೀಡಿದ್ದಾರೆ. ವಿ.ಸೀ. ಯವರು ಈ ಗ್ರಂಥದ ಮೇಲೆ ತಮ್ಮ ವಿಚಾರವನ್ನು ವ್ಯಕ್ತಪಡಿಸಲಾರಂಭಿಸಿದರು. ಕಾಣೆಯವರ ಕೃತಿಯಲ್ಲಿ ಕಂಡು ಬರುವ ಕೆಲವು ನ್ಯೂನತೆಗಳ ಕಡೆಗೆ ನನ್ನ ಗಮನ ಹರಿಸಿದರು. ಅವರ ವಿಮರ್ಶೆ ಆ ಗ್ರಂಥದ ಆಳವಾದ ಅಧ್ಯಯನವನ್ನು ಎತ್ತಿ ತೋರಿಸುತ್ತಿತ್ತು. ವಿ.ಸೀ. ಯವರು ಕಾಣೆಯವರ ಗ್ರಂಥದ ಬಗ್ಗೆ ನನಗೆ ಮತ್ತೊಂದು ದೃಷ್ಟಿಕೋನವನ್ನು ಒದಗಿಸಿದ್ದರು.

ಸ್ವಲ್ಪ ಹೊತ್ತಾದ ಮೇಲೆ ವಿ.ಸೀ. ಯವರು ತಟ್ಟನೆ "ಹಿಂದೂ ವಿಧಿಶಾಸ್ತ್ರವನ್ನು ಪಾಶ್ಚಾತ್ಯ ವಿಧಿ ಶಾಸ್ತ್ರದೊಡನೆ ಹೋಲಿಸುತ್ತೀರಾ ತಾನೇ?" ಎಂದು ನನ್ನನ್ನು ಪ್ರಶ್ನಿಸಿದರು. ಪಾಶ್ಚಾತ್ಯ ವಿಧಿ ಶಾಸ್ತ್ರವನ್ನು ಮತ್ತೊಬ್ಬರು ತೆಗೆದುಕೊಳ್ಳುತ್ತಾರೆಂದೂ ನಾನು ಕೇವಲ ಹಿಂದೂ

ವಿಧಿ ಶಾಸ್ತ್ರವನ್ನು ಬೋಧಿಸುತ್ತಿದ್ದೇನೆಂದೂ ಸ್ವಲ್ಪ ಸಂಕೋಚದಿಂದ ತಿಳಿಸಿದೆ. ವಿ.ಸೀ. ಯವರಿಗೆ ನನ್ನ ಉತ್ತರ ಹಿಡಿಸಲಿಲ್ಲವೆನ್ನುವುದು ಅವರ ಮುಖಚರ್ಯೆಯಿಂದಲೇ ತಿಳಿಯಿತು. ನನಗೆ ಸ್ವಲ್ಪ ಮುಜುಗರವೂ ಆಯಿತು. ''ಅಲ್ಲಪ್ಪಾ ಆಸ್ಟಿನ್, ಸ್ಯಾವಗ್ನಿ, ಪೌಂಡ್ ಮತ್ತು ಕೆಲ್ಸನ್ನರ ವಿಚಾರಗಳನ್ನು ವಿಜ್ಞಾನೇಶ್ವರ, ಜೀಮೂತವಾಹನ, ಮಿತ್ರಮಿಶ್ರರಿಗಿಂತ ಹೆಚ್ಚಿನ ವಿಚಾರಗಳಿಗೆ ಹೋಲಿಸಿದರೆ ತಾನೇ ಮಕ್ಕಳಿಗೆ ವಿಷಯ ಚೆನ್ನಾಗಿ ಅರ್ಥವಾಗೋದು'' ಎಂದು ವಿ.ಸೀ.ಯವರು ಕಳಕಳಿಯಿಂದ ನುಡಿದಾಗ ನನಗೆ ಪರಮಾಶ್ಚರ್ಯವಾಯಿತು. ವಿ.ಸೀ.ಯವರಿಗೆ ಪಾಶ್ಚಾತ್ಯ ವಿಧಿ ಶಾಸ್ತ್ರದಲ್ಲಿ ಇಷ್ಟು ಆಳವಾದ ಜ್ಞಾನವಿರುವುದು ನನಗೆ ಸೋಜಿಗವಾಗಿ ತೋರಿತು.

ಈ ಶತಮಾನದ ಆದಿಯಲ್ಲಿ ಪಾಶ್ಚಾತ್ಯ ವಿಧಿ ಶಾಸ್ತ್ರದಲ್ಲಿ ಮಿನುಗಿದ ತಾರೆಗಳು ರಾಸ್ಕೊ ಪೌಂಡ್ ಮತ್ತು ಹ್ಯಾನ್ಸ್ ಕೆಲ್ಸನ್ನರವರು. ವಿ.ಸೀ. ಯವರು ಕೆಲ್ಸನ್ನನ ಪ್ರಸಿದ್ಧ ಸಿದ್ಧಾಂತವಾದ ''ಕಾನೂನಿನ ಶುದ್ಧ ವೈಜ್ಞಾನಿಕ ದೃಷ್ಟಿ''ಯ ಬಗ್ಗೆ ತಮ್ಮ ವಿಶ್ಲೇಷಣೆ ಆರಂಭಿಸಿದರು. ಕೆಲ್ಸನ್ನನ ಈ ಸಿದ್ಧಾಂತವನ್ನು ಕಾನೂನಿನ ಸ್ನಾತಕೋತ್ತರ ಪದವೀಧರರೂ ಕಬ್ಬಿಣದ ಕಡಲೆಯೆಂದು ಭಾವಿಸುವುದು ಸಹಜ. ಕಾಶಿಯಲ್ಲಿನ ಇಕ್ಕಟ್ಟಾದ ಗಲ್ಲಿಯಲ್ಲಿ ಇಳಿವಯಸ್ಸಿನ ವಿ.ಸೀ. ಯಾವ ತಯಾರಿಯೂ ಇಲ್ಲದೆ ಈ ಕಠಿಣ ಸಿದ್ಧಾಂತದ ಮೇಲೆ ವಿಮರ್ಶಾತ್ಮಕ ಭಾಷಣ ಮಾಡುತ್ತಿದ್ದರೆ ಮಂತ್ರಮುಗ್ಧನಾಗಿ ನಾನು ಕೇಳುತ್ತಾ ನಿಂತಿದ್ದೆ. ನಮ್ಮಿಬ್ಬರ ನಡುವೆ ಒಂದು ಭಾರಿ ಗೂಳಿ ಹೋದದ್ದು ನಮ್ಮ ಗಮನಕ್ಕೆ ಬರಲಿಲ್ಲ. ನಮ್ಮ ಮಾತುಕತೆ ಮುಕ್ಕಾಲು ಗಂಟೆಗೂ ಮೀರಿತ್ತು. ಗಂಗೆಗೆ ಹೋಗಿ ಬರುತ್ತಿದ್ದ ಜನರು ನಮ್ಮಿಬ್ಬರನ್ನು ಪಿಳಿಪಿಳಿ ನೋಡುತ್ತಿದ್ದರು. ಕೊರೆಯುತ್ತಿದ್ದ ಆ ಚಳಿಯಲ್ಲಿ ಕೈಯಲ್ಲಿದ್ದ ಒದ್ದೆಯ ಬಟ್ಟೆ ಗಂಟನ್ನು ನಾನು ಕೈಯಿಂದ ಕೈಯಿಗೆ ಬದಲಾಯಿಸುತ್ತಿದ್ದುದನ್ನು ನೋಡಿದ ವಿ.ಸೀ. ಯವರ ಮಗಳು ಸುನಂದಮ್ಮ ''ಒಳಗೆ ಬಂದು ಸ್ವಲ್ಪ ಕಾಫಿ ಕುಡಿದು ನಿಮ್ಮ ಮಾತು ಮುಂದುವರೆಸಿ'' ಎಂದು ವಿ.ಸೀ. ಯವರ ಭಾಷಣಕ್ಕೆ ಬ್ರೇಕು ಹಾಕಿದರು.

ವಿ.ಸೀ.ಯವರಿಗೂ ಕಾನೂನಿಗೂ ಸಂಬಂಧ ಹೇಗೆ ಏರ್ಪಟ್ಟಿತು ಎನ್ನುವ ವಿಚಾರ ತಿಳಿಯುವ ಕುತೂಹಲದಿಂದ ನಾನು 'ಇದನ್ನೆಲ್ಲಾ ನೀವು ಯಾವಾಗ ಓದಿದ್ದು ಸಾರ್' ಎಂದು ಕೇಳಿದೆ. 'ಅದೇನಪ್ಪಾ ನಾನು ಮುಂಬಯಿ ಲಾ ಕಾಲೇಜಿಗೆ ಸೇರಿದ್ದಾಗ ಓದಿದ್ದು' ಎಂದು ತಾವು ಇಪ್ಪತ್ತರ ದಶಕದಲ್ಲಿ ಕೆಲವು ತಿಂಗಳು ಮುಂಬಯಿ ಲಾ ಕಾಲೇಜಿನಲ್ಲಿದ್ದುದನ್ನು ಜ್ಞಾಪಿಸಿಕೊಂಡರು. ಐವತ್ತು ವರ್ಷಗಳ ಹಿಂದೆ ಓದಿದ್ದ ವಿಷಯವನ್ನು ಯಾವ ತಯಾರಿಯೂ ಇಲ್ಲದೆ ಸ್ಪಷ್ಟವಾಗಿ, ಸೂಕ್ಷ್ಮವಾಗಿ, ರಸವತ್ತಾಗಿ ನಡುಬೀದಿಯಲ್ಲಿ ವಿ.ಸೀ. ವಿಮರ್ಶಿಸಿದ್ದರು. ಆ ಮಹಾನುಭಾವರ ತಲೆಯಲ್ಲಿ ಬ್ರಹ್ಮ ಕಂಪ್ಯೂಟರನ್ನೇನಾದರೂ ಜೋಡಿಸಿದ್ದನೇನೋ ಎನ್ನಿಸಿತು.

ಆ ದಿನದ ಅನುಭವ ನನಗೆ ಎಷ್ಟು ಸ್ಫೂರ್ತಿದಾಯಕವಾಗಿತ್ತೆಂದರೆ ಅಂದಿನಿಂದ ನಾನು ತುಲನಾತ್ಮಕ ಅಧ್ಯಯನಕ್ಕೆ ಹೆಚ್ಚು ಗಮನ ನೀಡಲಾರಂಭಿಸಿದೆ. ಅಂದಿನವರೆವಿಗೂ ಕನ್ನಡ ಗುರುಗಳಾದ ವಿ.ಸೀ. ಯವರನ್ನು ನಾನು ಅಂದಿನಿಂದ ಕಾನೂನಿನ ಗುರುಗಳ ರೂಪಿನಲ್ಲಿ ವಂದಿಸಿದೆ.

('ಮಯೂರ'ದಿಂದ)

ವಿ.ಸೀ.ಯವರ ತರಗತಿಗಳಲ್ಲಿ....

ಖಜಾನೆ ಕೃಷ್ಣಮೂರ್ತಿ

ನಾನವರ ವಿದ್ಯಾರ್ಥಿಯಾಗಿದ್ದದ್ದು ೧೯೫೦–೫೨ರಲ್ಲಿ: ಮೂವತ್ತೈದು ವರ್ಷಗಳ ಹಿಂದೆ: ಸೆಂಟ್ರಲ್ ಕಾಲೇಜಿನಲ್ಲಿ.

ಈ ಕಾಲೇಜಿನ ವಿಸ್ತಾರ ಮತ್ತು ಗಾಂಭೀರ್ಯದ ಮುಂದೆ ನನ್ನೂರು ಶಿವಮೊಗ್ಗೆಯ ಕಾಲೇಜು (ಈಗಿನ ಸಹ್ಯಾದ್ರಿ, ಅಂದಿನ ಇಂಟರ್ ಮೀಡಿಯಟ್ ಕಾಲೇಜು) ಒಂದು ಆಟದ ಪದಾರ್ಥ.

ಇಲ್ಲಿ ಒಂದೊಂದು ಇಲಾಖೆಗೇ ಪ್ರತ್ಯೇಕ ಕಟ್ಟಡಗಳು. ಮುಂಗಡೆ ಅವೆನ್ಯೂ ರಸ್ತೆಯಿಂದ ಮುಂದುವರೆಯುವ ಹೆಬ್ಬಾಗಿಲಿನಿಂದ ಪ್ರವೇಶಿಸಿದರೆ ಮೊದಲಿನಲ್ಲಿ ಸಿಕ್ಕುವುದೇ ಕ್ಯಾಂಟೀನ್ ಕಟ್ಟಡ. ಅದಕ್ಕೆ ತಗಲಿದಂತೆಯೇ ಕನ್ನಡ ಇಲಾಖೆ. ಅಲ್ಲಿಯೇ ಶ್ರೀ ವಿ.ಸೀ., ಶ್ರೀ ರಾಜರತ್ನಂ ಇರುತ್ತಿದ್ದುದು. ನಂತರ ಫಿಜಿಕ್ಸ್ ಬ್ಲಾಕ್. ನಂತರ ಸಸ್ಯಶಾಸ್ತ್ರ, ಭೂಗರ್ಭಶಾಸ್ತ್ರ, ಪ್ರಾಣಿಶಾಸ್ತ್ರ ವಿಭಾಗ, ಪುಸ್ತಕ ಭಂಡಾರ, ಪ್ರಿನ್ಸಿಪಾಲರ ಕಚೇರಿಗಳನ್ನೊಳಗೊಂಡ ಗಡಿಯಾರದ ಗೋಪುರ, ನಂತರ ಬರುವ ಕೆಮಿಸ್ಟ್ರಿ ವಿಭಾಗ. ಆಮೇಲೆ ಗಣಿತ ಶಾಸ್ತ್ರ ವಿಭಾಗದ ಕಟ್ಟಡ, ಅಲ್ಲಿಯೇ ನಮಗೆ ಬಹುಮಟ್ಟಿಗೆ ವಿ.ಸೀ. ರಾಜರತ್ನಂರವರ ತರಗತಿಗಳು ನಡೆಯುತ್ತಿದ್ದ ಕೊಠಡಿಗಳಿದ್ದುದು!

ಮೊದಲ ದಿನ ವಿ.ಸೀ. ನಮ್ಮ ತರಗತಿಗೆ ಬಂದಾಗ ಅವರಲ್ಲಿ ನಮಗಂತಹ ಆಕರ್ಷಣೆಯೇನೂ ಕಾಣಿಸಲಿಲ್ಲ. ಸಿಂಬಿ ರುಮಾಲಿನ, ಮುಚ್ಚು ಕಾಲರ್ ಕೋಟಿನ, ಕಚ್ಚೆ ಪಂಚೆಯ ಶಾನುಭೋಗರ ರೂಪಕ್ಕೂ ಕನ್ನಡ ಮೇಷ್ಟ್ರ ರೂಪಕ್ಕೂ ಯಾವಾಗಲೂ ತಳಿಕೆ. ಅದೇ ರೀತಿಯ ಮೈಸೂರು ರುಮಾಲು ಧರಿಸಿ–ಮುಚ್ಚು ಕಾಲರ್ ಕೋಟು – ಕಚ್ಚೆ ಪಂಚೆ ಧರಿಸಿ ಬರುತ್ತಿದ್ದ ವಿ.ಸೀ. ಯವರು ಶಿವಮೊಗ್ಗೆ ಕಡೆಯಿಂದ ಬಂದಂತಹ ವಿದ್ಯಾರ್ಥಿಗಳನ್ನಷ್ಟು ಆಕರ್ಷಿಸಲಿಲ್ಲ.

ಶಿವಮೊಗ್ಗೆಯ ಕಾಲೇಜಿನಲ್ಲಿ ಪೂರ್ಣ ಸೂಟು ಬೂಟು ಟೈ ಧರಿಸಿ, ಕ್ರಾಪ್ ಬಿಟ್ಟು ಮೂರ್ತಿರಾಯರ 'ಹಗಲುಗನಸುಗಳಿ'ಂದ 'ಲಲಿತೆಯ ವಿದ್ಯಾಭ್ಯಾಸ'ವನ್ನೋ ಸಂಸರ 'ವಿಗಡ ವಿಕ್ರಮರಾಯ'ನನ್ನೋ ಓದುತ್ತಾ–ನಿಮಿಷಕ್ಕೆ ಎರಡೂವರೆ ಸಾರಿ ನಗಿಸುತ್ತಿದ್ದ–ಯುವಕರಂತಹ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರ ಆಕರ್ಷಣೆ ವಿ.ಸೀ.ಯವರಲ್ಲಿ ಕಾಣಿಸಲಿಲ್ಲ.

ಆದರೆ ಕ್ರಮೇಣ ಅವರ ಪ್ರಭಾವದ ಬಲೆ ಪಸರಿಸುತ್ತ ಬಂದು ಒಂದು ದಿನ ನಮಗೇ ತಿಳಿಯದಂತಹ ಸ್ಥಿತಿಯಲ್ಲಿ ಆ ಬಲೆಯಲ್ಲಿ ನಾವು ಸಿಕ್ಕಿಕೊಂಡಾಯಿತು.

ಆರಂಭದ ಒಂದು ತರಗತಿಯಲ್ಲಿ ಅವರ ಪಾಠದ ಮಧ್ಯೆ ಶಾಲೆಯೊಂದನ್ನು ತಪಾಸಣೆ ಮಾಡಬಂದಿದ್ದ ಇನ್‌ಸ್ಪೆಕ್ಟರ್‌ನ ಕತೆ ಬಂತು. ಎಲ್ಲ ತಪಾಸಣೆ ಮುಗಿದ ನಂತರ ಆತ ರಿಪೋರ್ಟು ಪುಸ್ತಕದಲ್ಲಿ ಬರೆಯುತ್ತಾ "ಅಧ್ಯಾಪಕರು ಶ್ರಮವಹಿಸಿ ಅಸಕ್ತಿಯಿಂದ ಕೆಲಸ ಮಾಡಿದ್ದಾರೆ. ವಿದ್ಯಾರ್ಥಿಗಳು ಎಲ್ಲದರಲ್ಲೂ ಬುದ್ಧಿವಂತರು (ಇದೆಲ್ಲ ಇಂಗ್ಲಿಷಲ್ಲಿ ಬರೆದದ್ದು), ಆದರೆ "ವೀಕ್ ಇನ್ ಸ್ಪೆಲಿಂಗ್" ಎಂದು ಸೂಚಿಸಿ ತಾನೇ 'ಡಬ್ಲ್ಯು ಈ ಈ ಕೆ' (week) ಬರೆದು ಹೋಗಿದ್ದರಂತೆ" ಎಂದು ಹೇಳಿ ಇಡೀ ತರಗತಿಯನ್ನೇ ನಗೆಗಡಲಲ್ಲಿ ಮುಳುಗಿಸಿಬಿಟ್ಟರು. ಆ ಸಂದರ್ಭದಲ್ಲಿ 'ಮೃಗಶಾಲೆಯ ಸಿಂಹಗಳು', 'ಕಾಲನಟ', 'ಎಮ್ಮೆ ಮನೆಯಂಗಳದಿ'ಯಂತಹ ಗಂಭೀರ ಪದ್ಯಗಳ ಕರ್ತೃ ಇವರೇನೆ?.... ಎನಿಸಿದ್ದುಂಟು.

ನಮಗವರು ಮೊದಲ ವರ್ಷ ಎ. ಆರ್. ಕೃಷ್ಣಶಾಸ್ತ್ರಿಗಳು ಸಂಪಾದಿಸಿದ 'ಭಾಷಣಗಳು-ಲೇಖನಗಳು' ಪ್ರಬಂಧಗುಚ್ಛ ಬೋಧಿಸಿದ್ದರೆ ದ್ವಿತೀಯ ವರ್ಷದಲ್ಲಿ ಶಿವರಾಮ ಕಾರಂತರ 'ಔದಾರ್ಯದ ಉರುಳಲ್ಲಿ' ಓದಿದ್ದರು.

ಅವರ ಧ್ವನಿ ಶಕ್ತಿಯುತವಾದದ್ದು, ಉದ್ವೇಗಪೂರಿತವಾದದ್ದು. ಅಂತರಂಗದಲ್ಲಿ ಹುದುಗಿದ ಯಾವುದೋ ಹಳೆಯ ದುಃಖದ ನೆನಪು ಉಕ್ಕಿ ಬಂದಾಗ ಗಂಟಲುಬ್ಬಿದವರು ಹೇಗೆ ಮಾತಾಡುತ್ತಾರೋ ಹಾಗೆ ಅವರ ಧ್ವನಿ ಮಾತು. ಅದೇ ಧ್ವನಿಯಲ್ಲಿ ಗಂಟೆಗಟ್ಟಲೆ ಮಾತಾಡುತ್ತಿದ್ದರು.

ಕನ್ನಡದಲ್ಲಿ ಆರಂಭವಾದ ಎರಡು ಮೂರು ವಾಕ್ಯಗಳು ಆಡಿ ಮುಗಿವುದರೊಳಗಾಗಿ-ಶ್ರೋತೃಗಳು ನಮಗೇ ತಿಳಿಯದಂತೆ ಇಂಗ್ಲಿಷಿಗೆ ಜಾರಿಬಿಡುತ್ತಿದ್ದರು. ಅವರದ್ದು ಎಂತಹ ಸುಂದರವಾದ ಇಂಗ್ಲಿಷು! ನಮಗದರ ವ್ಯಾಮೋಹ ಉಂಟಾದ್ದೇ ಅವರ ತರಗತಿಗಳಲ್ಲಿ!

ಅದೇ ಕಾಲದಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ನನ್ನ ಇಂಗ್ಲಿಷ್ ಅಧ್ಯಾಪಕರಾಗಿದ್ದ ಶ್ರೀ ಎಲ್. ಎಸ್. ಶೇಷಗಿರಿರಾಯರೂ ಒಮ್ಮೆ ವಿ.ಸೀ. ಯವರ ವಿದ್ಯಾರ್ಥಿಯಾಗಿದ್ದವರು. ಅವರ ಕ್ಲಾಸಿನಲ್ಲಿ ವಿ.ಸೀ. ಯವರು ಬಸವಪ್ಪಶಾಸ್ತ್ರಿಗಳ 'ಕರ್ನಾಟಕ ಶಾಕುಂತಲ' ಓದುವಾಗ ದುಷ್ಯಂತನ ಕಣ್ವಾಶ್ರಮ ಪ್ರವೇಶ ಕಾಲದಲ್ಲಿ ವಿ.ಸೀ. ಹೇಳಿದ್ದ 'Here is temporal authority entering the domain of spiritual authority' ಎಂಬ ಇಂಗ್ಲಿಷ್ ಉದ್ಧೃತವಾಕ್ಯ ಸಾಲದೆ?

ವಿ.ಸೀ. ಯವರ ಬೋಧನೆ ಎಷ್ಟು ಗಂಭೀರವೊ-ಅವರು ಹಾರಿಸುತ್ತಿದ್ದ ಹಾಸ್ಯ ಚಟಾಕಿಗಳೂ ಅಷ್ಟೇ ಗಂಭೀರ; ಸಾಮಯಿಕ, ರಂಜಕ. ಒಂದು ಪೀರಿಯಡ್ ಅವರದ್ದು ತಪ್ಪಿಹೋದರೆ ನಮಗೆ ಅಪಾರ ನಷ್ಟವಾದ ಅನುಭವ!

* * *

ಆ ವರ್ಷದ ಕ್ಲಾಸುಗಳಲ್ಲಿ ಒಂದೇ ಉಸಿರಲ್ಲಿ ಅವರೋದಿದ ಸಂಸ್ಕೃತ ಪದ್ಯ 'ಸಾನಂದಂನಂದಿ ಹಸ್ತಾಹತ.... ಮುರಜರವಾಹೂತ ನಾಸಾಗ್ರಂಧ್ರಾತ್'. ನಡುನಡುವೆ ನಿಲ್ಲಿಸಿ ಶಬ್ದಗಳನ್ನಿತ್ತಿಕೊಂಡು "ನಂದಿ ಹಸ್ತಾಹತ = ನಂದಿಯಿಂದ ಬಾರಿಸಲ್ಪಟ್ಟ; ಮುರಜರವ ಆಹೂತ = ಡಮರುಗದ ಶಬ್ದ; ಕೌಮಾರ = ಕುಮಾರಸ್ವಾಮಿ, ಬಹಿರ್ = ಅವನ ವಾಹನ ನವಿಲು" ಎನ್ನುತ್ತ, ಅದರ ಪೀಡೆಗೆ ಭಯಪಟ್ಟ ಉರಗ (ವಿಷತಿ ಫಣೆವತೌ) ನಾಸಾಗ್ರಂಧ್ರಾತ್ - ಮೂಗಿನ ಹೊಳ್ಳೆಯಲ್ಲಿ ಹೇಗೆ ಹೊಕ್ಕು ಕುಳಿತಿತ್ತು ಎಂಬುದನ್ನು ಅಲ್ಲಿ ಬಾಗಿ ಇಲ್ಲಿ ಬಳುಕಿ, ಕೊನೆಯಲ್ಲಿ "ಭೋಗ ಸಂಕೋಚ ಭಾಜೀ...." ಎಂದು ಆ ಸಾಲನ್ನ ಆರೋಹಣದಿಂದ ಅವರೋಹಣದ ಕಡೆಗೆ ಎರಡೂವರೆ ಮೀಟರಿನಷ್ಟು ಉದ್ದ ಎಳೆದುದನ್ನು ಮರೆಯಲಾದೀತೆ!

ಅದರಂತೆ ಅವರೋದಿದ ಸುಮತಿ ಪದ್ಯ - "ವಿಸೃಟಿಕೆಯ್ಯದಿ ಪ್ರಸ್ತುತಂ" ಮತ್ತು ಸಂಸ್ಕೃತದ ಜರ್ಬು ಜೋರುಗಳನ್ನು ತೋರಿಸುವ "ನಿಸ್ತುಲೋರಸ್ತುಲನ್ಯಸ್ತ ವಸ್ತು ಸ್ವಸ್ತಿ ಕೃದಸ್ತುವಃ."

ಈ ಒಂದೊಂದೂ ನನ್ನ ಮನಃಪಟಲದ ಮೇಲೆ ಮರೆಯಲಾರದ ಮುದ್ರೆಯೊತ್ತಿವೆ!

* * *

ಅದೇ ಪ್ರಬಂಧ ಸಂಗ್ರಹದಲ್ಲಿ ಬರುವ ರಾಘವಾಂಕನ ಹರಿಶ್ಚಂದ್ರ ಕಾವ್ಯ ಸಂಗ್ರಹಕ್ಕೆ ಸಂಬಂಧಿಸಿದ ಮತ್ತೊಂದು ಪಠ್ಯ ಭಾಗವಿತ್ತು.

ಸಂದರ್ಭ: ಲೋಹಿತಾಶ್ವನ ಮರಣ, ಚಂದ್ರಮತಿಯ ಪ್ರಲಾಪ. ವಿ.ಸೀ.ಯವರ ವರ್ಣನೆಯಿಂದ ನಾವೆಲ್ಲ ಕಣ್ಣೀರು ತುಂಬಿ ಗದ್ಗದಿತರಾಗಿದ್ದೆವು. ಮಗನ ದೇಹವನ್ನರಸಿ ಬಂದ ಚಂದ್ರಮತಿ ಅವನ ಶವವನ್ನು ತೊಡೆಯ ಮೇಲೆ ಹಾಕಿಕೊಂಡು ರೋದಿಸುತ್ತಿದ್ದಾಳೆ. ಮಗ ಸತ್ತದ್ದು ಆಕೆಗೆ ದುಃಖ ತಂದಿದೆ; ಚಂದ್ರವಂಶಕ್ಕೇ ಅಪಮಾನ ತಂದಿದೆ. ಅದಕ್ಕಾಕೆ ಪ್ರಲಪಿಸಿದ "ಅರಿ ರಾಯರೊಳು ಕಾದು ಮಡಿದಾತನಲ್ಲ" ಸಾಲುಗಳನ್ನೋದುತ್ತ ವಿ.ಸೀ. ಒಂದು ವಾತಾವರಣವನ್ನೆ ಸೃಷ್ಟಿಸಿ-ಇಂಗ್ಲಿಷಿನಲ್ಲಿ ವಿವರಿಸುತ್ತ - "ಚಕ್ರವರ್ತಿ ಹರಿಶ್ಚಂದ್ರನ ಏಕಮಾತ್ರ ಪುತ್ರನಾಗಿ ಕ್ಷತ್ರಿಯ ಕುಲದಲ್ಲಿ ಜನಿಸಿ - ಆ ಕುಲಕ್ಕೆ ಯೋಗ್ಯವಾದ ರೀತಿಯಲ್ಲಿ ಯುದ್ಧ ರಂಗದಲ್ಲಿ ಕಾದಿ ಮಡಿಯದೆ-ಬೇಡಿದವರಿಗೆ ತನ್ನೊಡಲನ್ನು ಭಾಗ ಮಾಡಿ ಮಾಡಿ ಕೊಟ್ಟು ಮಡಿಯದೆ - ಮುನಿವರರ ಯಾಗವನ್ನು ಕಾದು ಮಡಿಯದೆ - ಲೋಕದ ಜನರ ನಗೆಗೆಡೆಯಾಗಿ-ಹುಳ್ಳಿಯಂ ತರ ಹೋಗಿ, ಕಾಡೊಳಗೆ ಬಡ ಹಾವು ಕಚ್ಚಿ ಮಡಿವರೆ?"

ಅದು....! ಆಕೆಯ ಸಂಕಟ! ಎಂತಹ ಉದಾತ್ತ ಭಾವನೆ! - ಎಂದು ಗದ್ಗದಿತರಾಗಿ ಮಾತಾಡುತ್ತಿದ್ದವರು ನನ್ನಂತಹ ಹಲವರ ನೀರು ತುಂಬಿದ ಕಣ್ಣುಗಳನ್ನು ಕಂಡು-ಏನನ್ನಿಸಿತೋ!-ತಕ್ಷಣ ದನಿ ಬದಲಾಯಿಸಿದರು!

"ನೋಡಿ, ನೀವು ಸೈಕಲ್ ವೇಗವಾಗಿ ಬಿಡಿ.... ಬೇಕಾದರೆ ಡ್ಯಾಶ್ ಹೊಡೀರಿ.... ಆದರೆ ಹಾಗೆ ಹೊಡೆಯುವಾಗ ಸರಿಯಾದ ವಾಹನಕ್ಕೆ ನೋಡಿಕೊಂಡು ಹೊಡೀರಿ.

ಸರಕಾರಿ ವಾಹನಗಳಿಗೆ ಡಿಕ್ಕಿ ಹೊಡೆದು ಕಣ್ಮುಚ್ಚಿದಿರೋ, ಅವರ ಖರ್ಚಲ್ಲೇ ದಫನ್ ಆದರೂ ಆಗುತ್ತೆ. ಅದು ಬಿಟ್ಟು ಹೆಂಡದ ಲಾರೀಗೆ ಡಿಕ್ಕಿ ಹೊಡೆದು ಸಾಯೋದೆ?"

"ಅ....ದು....ಚಂದ್ರಮತಿಯ ದುಃಖ"ಎಂದು ಹುಬ್ಬು ಹಾರಿಸಿ–ಅವರ ಗುರುಗಳು ಶ್ರೀ ಸಿ. ಆರ್. ರೆಡ್ಡಿಯವರು ನಗುತ್ತಿದ್ದಂತಹ ನಗು ನಕ್ಕರು.

ಪರಿಣಾಮ–ವಿವರಣೆ ಅನಗತ್ಯ....

* * *

ಅವರ ತರಗತಿಯಲ್ಲಿ ವಿದ್ಯಾರ್ಥಿಗಳು ತುಂಬ ತದೇಕಚಿತ್ತರಾಗಿ ಕೂತಿರಬೇಕಿತ್ತು. ಅತ್ತಿತ್ತ ನೋಡಬಾರದು. ಒಂದೋ ಅವರ ಮಾತು, ಪಾಠ ಕೇಳುತ್ತಿರಬೇಕು. ಇಲ್ಲವೇ ಪುಸ್ತಕದಲ್ಲಿನ ಆ ಸಾಲುಗಳನ್ನು ನೋಡುತ್ತಿರಬೇಕು. ಎಲ್ಲ "ಅದಬ್." ಸ್ವಲ್ಪ ವ್ಯತ್ಯಾಸವಾದರೂ ತೀರಿತು.

ಅವರದ್ದು ಅಹಿಂಸಾ ಮಾರ್ಗ. ತಟಕ್ಕನೆ ಪುಸ್ತಕ ಮುಚ್ಚಿ ವೇದಿಕೆ ಇಳಿದು ತರಗತಿ ಬಿಟ್ಟು ನಡೆದು ಬಿಡುತ್ತಿದ್ದರು. ಕೈ ಕಡಿತದಿಂದ ಮುಂಗೈ ಮಣಿಕಟ್ಟು ಕೆರೆದುಕೊಂಡ ನನ್ನ ಒಂದು ಕೃತ್ಯ ಅವರಿಗೆ ಇವನು "ಗಂಟೆ–ಗಡಿಯಾರ ನೋಡುತ್ತಿದ್ದಾನೆ" ಎಂದೆನ್ನಿಸಿ ಆ ಕೆಲಸ ಮಾಡಿದ ನನಗೆ ಮಂಗಳಾರತಿಯಾಗಿತ್ತು. (ಅದೇ ರೀತಿ ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಡೀನ್‌ರಾಗಿದ್ದ ಶ್ರೀ ಉ. ಕ. ಸುಬ್ಬರಾಯಾಚಾರ್ಯರಿಗೂ ಆಗಿತ್ತಂತೆ!) ವಿ.ಸೀ. ಅವರಿಗೆ ಸಿಟ್ಟು ಬರುತ್ತಿದ್ದುದು ಕಡಿಮೆ–ಬಂದರೆ ಮುಗಿಯಿತು. ಯಾರ ಮುಖವನ್ನೂ ನೋಡುತ್ತಿರಲಿಲ್ಲ.

ಒಮ್ಮೆ ರಾಮಾಯಣದ 'ಸೀತಾಪರಿತ್ಯಾಗ' ಭಾಗದ ಯಾವುದೋ ಮಾತು ಬಂದು ಮರ್ಯಾದಾ ಪುರುಷೋತ್ತಮ ಶ್ರೀ ರಾಮಚಂದ್ರನನ್ನೇ ಬಿಡಲಿಲ್ಲ ಅವರು!

"ಅಣ್ಣ, ಅಗ್ನಿಪರೀಕ್ಷೆಯಾದಂದೇ ಅತ್ತಿಗೆ ಪರಮ ಪವಿತ್ರಳೆಂದು ನಿನಗೆ ನಂಬಿಕೆ ಬರಲಿಲ್ಲವೆ! ಈಗ ಗರ್ಭಿಣಿಯಾದ ಅದೇ ಸೀತಾಮಾತೆಯನ್ನು ಪುನಃ ಕಾಡಿನಲ್ಲಿ ಬಿಟ್ಟು ಬರಲು ಹೇಳುತ್ತಿದ್ದೀಯಲ್ಲ. ಹಾಗಿದ್ದಲ್ಲಿ ಅವಳನ್ನು ಕರೆತಂದುದಾದರೂ ಏತಕ್ಕೆ!" ಎಂದು ನಮ್ರನಾಗಿ ಲಕ್ಷ್ಮಣ ರಾಮನನ್ನು ಕೇಳುತ್ತಾನೆ.

ಅದಕ್ಕೆ ರಾಮ ಕೊಟ್ಟ ಉತ್ತರವಾದರೂ ಎಂಥದ್ದು?

"I wanted to establish my superiority in this world" ಎಂದು ಬಿಡಬೇಕೆ ಆ ರಾಮ?

"ನಾನೇನಾದರೂ ಅಲ್ಲಿದ್ದಿದ್ದರೆ ಗುಂಡಿಟ್ಟು ಹಾರಿಸಿಬಿಡುತ್ತಿದ್ದೆ ಆ ರಾಮನ್ನ" ಎಂದವರು ಕ್ರೋಧತಪ್ತರಾಗಿ ಗರ್ಜಿಸಿಬಿಟ್ಟರು!

ಇದು ಸೀತಾದೇವಿಗಾದ ಅನ್ಯಾಯದ ಪ್ರಖರತೆಯ ಪರಿಣಾಮ–ಎನ್ನಿಸಿತು ನಮಗೆ. ಅನ್ಯಾಯವಾಗುತ್ತಿದೆ ಎಂದು ಕಣ್ಣಿಗೆ ಕಂಡ ಮೇಲೂ ಸುಮ್ಮನಿರುವುದು ಅನ್ಯಾಯವಲ್ಲವೆ? ವಿ.ಸೀ. ಸುಮ್ಮನಾಗರು!

ಈ ಇಪ್ಪತ್ತನೆಯ ಶತಮಾನದಲ್ಲೂ ಕೆಲವು ಗಂಡಂದಿರು ಅಚ್ಚ ಸಂಸ್ಕೃತ ಶಬ್ದಗಳಲ್ಲಿ ತಮ್ಮ ಹೆಂಡಂದಿರನ್ನು ಬಯ್ಯುತ್ತಾ ಹೀಯಾಳಿಸುವುದನ್ನು ಹೇಳುತ್ತಾ "ಒಬ್ಬ ಬಾಂಡಾಲ ಮೊನ್ನೆ ಹೆಂಡತಿಯನ್ನು ಹಾ....ಗಿತ್ತಿ....ಂಡೆ....ಕೋರ....ಂಡೆ.... ಎಂದು ಬೈತಿದ್ದ ರೀ. ಆ ಅಯೋಗ್ಯ ಬದುಕಿರೋವರೆಗೆ ಆಕೆಗೆ ಆ ...ಂಡೆ ಪಟ್ಟ ಹೇಗೆ ಬಂದೀತು!" ಎಂದರು. ಅಂತಹವರ ಜನ್ಮ ಜಾಲಿಸುವಾಗ ಅವರ ಉಗ್ರ ಮುಖ ನೋಡಲಾಗುತ್ತಿರಲಿಲ್ಲ.

* * *

ಶಬ್ದಗಳ ವ್ಯುತ್ಪತ್ತಿ (PHILOLOGY) ಯನ್ನವರು ವಿವರಿಸುವ ರೀತಿಯೂ ಅಷ್ಟೇ ಸೊಗಸಿನದು! ಪಾಠದ ನಡುವೆ ಬರುವ ಒಂದೊಂದು ಶಬ್ದವನ್ನು ತಟಕ್ಕನೆ ಎತ್ತಿಕೊಂಡು ಅದರ ಉಗಮ–ಉಪಯೋಗಗಳನ್ನು ವಿವರಿಸುವರು.

ಒಮ್ಮೆ ಎಲ್ಲಿಯೋ "ಈ ಹೆಂಗಸು" ಎಂಬ ಶಬ್ದ ಕಣ್ಣಿಗೆ ಬಿದ್ದು ಓದು ನಿಲ್ಲಿಸಿದರು. ಹೆಂಗಸು=ತಪ್ಪು ಅದು. ಹೆಂಗುಸು ಇರಬೇಕು. ಹೇಗೆ ಬಂತೂಂತೀರಿ? ಪೆಣ್‌ಕೂಸು=ಪೆಣ್ಣೂಸು; ಪೆಣ್ಣೂಸು; ಪೆಂಗುಸು=ಹೆಂಗುಸು; ಇದನ್ನು ಹೇಳುವಾಗ ಮೊದಲು ನಿಧಾನವಾಗಿ ಆರಂಭಿಸಿ–ವೇಗವನ್ನು ಹೆಚ್ಚಿಸುತ್ತ ಕೊನೆಯ ಶಬ್ದವನ್ನು ತಟಕ್ಕನೆ ನುಡಿಯಬೇಕು!

ಅದೇ ರೀತಿ ಗಂಡಸು ತಪ್ಪು. ಅದು ಗಂಡುಸು. ತಿಳೀತೆ! ಅದು ಹೆಂಗುಸು, ಹೆಂಗಸು ಅಲ್ಲ; ಗಂಡುಸು, ಗಂಡಸು ಅಲ್ಲ ಎಂದು ಸಾಧಿಸುವರು.

ಹಾಗೇ "ವೀಳೆಯ; ವೀಟೆಯ; ವೀಡೆಯ; ವೀಡಾ; ಬೀಡಾ...."

"ವ್ಯಾಪಾರಿ; ಬೇಪಾರಿ; ಬೇಹಾರಿ; ನಿಮ್ಮ ಬ್ಯಾರಿ" ಹೇಗಿದೆ? ಎಂದು ಸಾಧಿಸಿ ನಮ್ಮನ್ನು ನಲಿಸಬೇಕು!

ಕೆಲವು ಶಬ್ದಗಳನ್ನೂ ಪದಸಮುಚ್ಚಯಗಳನ್ನೂ ನಾವು ಅರ್ಥ ತಿಳಿಯದೆ ಕ್ಲೀಷೆಯಾಗಿ ಕುರುಡಾಗಿ ಬಳಸುತ್ತೇವೆ – ಉದಾಹರಣೆಗೆ "ಚಾಚೂ ತಪ್ಪದೆ."

ಏನಿದು? ಹೇಗೆ ಬಂತು ಹೇಳಿ? – ಅಂತ ಯಾರನ್ನಾದರೂ ಕೇಳಿದರೆ ಬಹುಜನ ಉತ್ತರ ಕೊಡಲಾರರು. ವಿ.ಸೀ. ಯವರ ತರಗತಿಯಲ್ಲೇ ನಮಗದರ ಅರ್ಥವಾದದ್ದು.

"ಅದು ಚಾಚೂ ತಪ್ಪದೇ–ಅಲ್ಲ; ಚಾ....ಚೂ ....ಎಂದರೆ– ಚ–ಚಾ–ಚಿ–ಚೀ–ಚು–ಚೂ.... ಎಂದರೆ–ಕಾಗುಣಿತ ಕೂಡ ತಪ್ಪದೆ– ಅಂತ!

ಇವಿಷ್ಟು ಕನ್ನಡ ವಾಕ್ಯವೈಭವವಾದರೆ ಇಂಗ್ಲಿಷ್ ಇನ್ನೂ ಮಜ!

ಒಮ್ಮೆ "WOMAN" ಅವರ ಕೈಗೆ ಸಿಕ್ಕಳು. "Woo–means to make love." "So woman is she that woos the man. She is woman because she woos the man" ಎಂದು ವ್ಯಾಖ್ಯಾನಿಸುತ್ತಾ ಆ woo ಎಂಬುದನ್ನು ಎರಡಿಂಚಿನಿಂದ ಎಂಟು ಇಂಚು ಎಳೆದು ರಾಗ ವಿಸ್ತಾರಮಾಡುವರು. ಮಧ್ಯೆ ಮಧ್ಯೆ ಸಂದರ್ಭ ಬಿದ್ದಾಗ ತಮ್ಮ ಬಾಲ್ಯದ ನೆನಪುಗಳನ್ನು ಜೋಡಿಸಬೇಕು.

ಇಲ್ಲಿ ಈಗಿನ ಟಿಪ್ಪು ಸುಲ್ತಾನ್ ಅರಮನೆ ಎದುರಿಗೆ 'ವಾಣಿವಿಲಾಸ' ಇರುವ ಪ್ರದೇಶ

ಈ ಶತಮಾನದ ಆದಿಯಲ್ಲಿ ಒಂದು ಪಾಳು–ನಿರ್ಜನ ಪ್ರದೇಶ. ಅಲ್ಲಿ ಚಾಮರಾಜಪೇಟೆ ಹುಡುಗರು ಆಡಲು ಸ್ಥಳ ಮಾಡಿಕೊಂಡಿದ್ದರು.

ಬ್ರಿಟಿಷರ ಅಳ್ವಿಕೆಯ ಕಾಲ ಅದು. ಅವರ ವಿರುದ್ಧ ಇಲ್ಲಿಯ ಜನ ಅಹಿಂಸಾತ್ಮಕ ಹೋರಾಟ ನಡೆಸುತ್ತಿದ್ದ ಕಾಲ. ವಿ.ಸೀ.ಯವರೂ ಅವರ ಮಿತ್ರರೂ ಸೇರಿ 'ಭಾರತ ಪುತ್ರ ಮಂಡಳಿ' ಎಂಬ ಸಂಘ ಸ್ಥಾಪಿಸಿದ್ದರಂತೆ. ಕಾಲ ಚೆನ್ನಾಗಿತ್ತು. ಮೂರು ಕಾಸು ಕೊಟ್ಟರೆ ತೋಳುದ್ದ ಕಾಗದದ ಪೊಟ್ಟಣ ಕಟ್ಟಿ ಅದರ ತುಂಬ ಕಾರಾಪುಡಿ ಕೊಡುತ್ತಿದ್ದರಂತೆ. ಅದೇ ಮೂರು ಕಾಸು ಕೊಟ್ಟರೆ ಒಂದು ದೊಡ್ಡ ಬೊಂಬಾಯಿ ಬೋಂಡಾ ಕೊಡುತ್ತಿದ್ದರು.

ಈ ಭಾರತ ಪುತ್ರ ಮಂಡಳಿಯವರು ಪ್ರತಿ ಸಂಜೆ ಅಲ್ಲಿ ಸೇರಿ ಇಂಗ್ಲಿಷರ ವಿರುದ್ಧ ಘೋಷಣೆಗಳನ್ನು ಕೂಗಿ ಗಂಟಲು ಹರಿದುಕೊಂಡದ್ದಕ್ಕೊ ಏನೋ ಈ ಕಾರಾಪುಡಿ–ಬೋಂಡಾಗಳ ಸಂಹಾರ ಮಾಡಿ ಬ್ರಿಟಿಷರ ವಿರುದ್ಧ ಸೇಡು ತೀರಿಸಿಕೊಂಡಷ್ಟೇ ಧನ್ಯಮನೋಭಾವದಿಂದ ಮನೆಗೆ ಹಿಂದಿರುಗುತ್ತಿದ್ದರಂತೆ. ಭಾರತ ಪುತ್ರ ಮಂಡಳಿಯವರಿಗೆ ಬಹುಶಃ ಇದೊಂದೇ ಕಾರ್ಯಕ್ರಮವಿದ್ದಿರಬೇಕು!

ಇದು ಮೊದಲ ವರ್ಷದ ವೈಭವ.

* * *

ಮರುವರ್ಷ ಶಿವರಾಮ ಕಾರಂತರ 'ಔದಾರ್ಯದ ಉರುಳಲ್ಲಿ' ಕಾದಂಬರಿ ಪಠ್ಯಪುಸ್ತಕ. ಮತ್ತೆ ವಿ.ಸೀ. ನಮಗೆ ಅದನ್ನು ಬೋಧಿಸಲು ಪ್ರವಾಚಕರಾಗಿ ಬಂದರು.

ಆ ಕಾದಂಬರಿಯ ನಾಯಕ ರಾಧಾಕೃಷ್ಣ ತಂದೆಯ ಕ್ಷೇಮಕ್ಕಲ್ಲದ ನಕ್ಷತ್ರದ ಹುಡುಗಿಯನ್ನು ಮದುವೆಯಾಗಿ ಆ ತಂದೆ ತೀರಿಕೊಂಡು ರಗಳೆಯಾಗುವ ಘಟನೆ ಬರುತ್ತದೆ.

ವಿ. ಸೀ. ಆಗ ಪ್ರಚಲಿತ ಕನ್ಯಾ ಪ್ರದರ್ಶನವೊಂದರ ವಿವರಣೆ ನೀಡಬೇಕು. "ತಂದೆ ಮಗನೊಂದಿಗೆ ಕನ್ಯೆ ನೋಡಲು ಬಂದಿದ್ದಾನೆ– (ಆ ಜನಕ! ಆಮ್ಲಜನಕ) ತನ್ನ ಸ್ವಂತ ಮನೇಲಿ ಅಂತೂ ಅವಂದು ACTIVE VOICE. ಅದೇ ದೌಲತ್ತು ಕನ್ಯೆಯ ಮನೇಲೂ ಮಾಡೋದೆ! ಏನು ಠೇಂಕಾರ ಅವಂದು?

ಹಾ....ಹುಂ.... ತಿಂಡಿ ತಕ್ಕೊಂಡುಬನ್ನಿ.... ಕಾಫಿ ತನ್ನಿ.... ಹುಂ.... ಆಯಿತೋ? ಕನ್ಯೆ ಕರೆಸಿ.... ....ಅಂತ ಒಂದಾದ ಮೇಲೆ ಒಂದು ಹುಕುಂ ಮಾಡುತ್ತಿದ್ದಾನೆ. ಅವರು ಭಯ ಭಕ್ತಿಗಳಿಂದ ಕನ್ಯೇನ ಕರೆತಂದು ಎದುರಿಗೆ ಕೂರಿಸುತ್ತಾರೆ....

ಈ ಮನುಷ್ಯ ಎದುರಿಗಿರಿಸಿದ್ದ ತಾಂಬಾಣದಲ್ಲಿನ ತಾಂಬೂಲವನ್ನೆಲ್ಲ ಸಂಹಾರಮಾಡಿ ಪಕ್ಕದವರೊಬ್ಬರ ಡಬ್ಬಿಯಿಂದ ನಸ್ಯ ಕೇಳಿ ಕೇಳಿ ಇಸಕೊಂಡು ಪಡೆದು ಮೂಗಿಗೇರಿಸುತ್ತ – ಕನ್ಯಾ ವೀಕ್ಷಣೆ ಮಾಡುತ್ತಾ.... "ಚೆನ್ನಾಗಿದ್ದಾಳೆ; ತುಮ್....ಬ ಚೆನ್ನಾಗಿ. ಇವಳನ್ನು ನನ್ನ ಮೊದಲನೇ ಹುಡುಗ ಮಾಡಿಕೋಭೌದು. ಅವನಲ್ದಿದ್ರೆ – ಎರಡನೆಯವನು; ಅವನೂ "ಇಲ್ಲ" ಅಂದ್ರೆ ಮೂರನೆಯವನಿದಾನೆ. ಅವರ್ಯಾರೂ "ಬೇಡ" ಅಂದ್ರೆ.... ನಾನೇ

ಮಾಡಿಕೊಂಡುಬಿಡ್ತೀನಿ" ಎಂದದ್ದನ್ನು ತಟಕ್ಕನೆ ನುಡಿದು ಮಾಡಿದ ಅಭಿನಯ ೧೯೫೧ರದ್ದು.... ನನ್ನ ಮನಸ್ಸಲ್ಲಿ ಅದರ ಅಚ್ಚು ಇನ್ನೂ ಅಳಿದಿಲ್ಲ.

ಅಷ್ಟರಲ್ಲಿ ಅವರಿಗೆ ಕೊನೆಯ ಬೆಂಚಲ್ಲಿ ಕೂತು ಅರೆನಿದ್ರೆ ಮಾಡುತ್ತಿದ್ದ – ತೂಕಡಿಸುತ್ತಿದ್ದ ಒಬ್ಬ ನತದೃಷ್ಟ ಕಣ್ಣಿಗೆ ಬಿದ್ದ. ಪಿ.ಸೀ. ಅವನ ಪಕ್ಕದ ಹುಡುಗನಿಗೆ ಸೂಚಿಸಿ ಅವನನ್ನು ತಿಪಿ – ಎಂದು ಸಂಜ್ಞೆ ಸೀಡಿದರು.... ನಾವೆಲ್ಲ ಗಾಬರಿಯಾದೆವು. "ಪ್ರಳಯಕರ್ತ ಶ್ರೀ ತಾಂಡವೇಶ್ವರ" ಆಗಿಬಿಡುತ್ತೆ; ಆ ಮಹಾಪಾಪಿಯ ಸಂಹಾರವಾಗಿ ಕ್ಲಾಸು ಇಂದು ಇಲ್ಲಿಗೆ ಮುಗಿಯುತ್ತದೆ.... ಎಂದೆಲ್ಲ ಚಿಂತೆಯಾಯಿತು.

ಆತ–ತಿಪಿದ.... ನಿದ್ದೆಗಣ್ಣವನು ಎದ್ದ. ಅವನಿಗೆ ನಿದ್ರಾಭಂಗ–ಗುರುಗಳಿಗೆ ತಪೋಭಂಗವಾದ್ದು ಗೊತ್ತಿಲ್ಲ ಅವನಿಗೆ! ಒಂದು ಕ್ಷಣ–ನಿಶ್ಶಬ್ದ ಗಂಭೀರಸ್ಥಿತಿ, ತಕ್ಷಣ,

"ಏನಪ್ಪ ಇದು ಅನ್ಯಾಯ! ನಿಮಗೇಂತ್ಲೇನೆ ನಾನು ಸ್ವಾರಸ್ಯವಾದ ಮದುವೆ ವಿಷಯ ಮಾತಾಡ್ತಿದೀನಿ– ನೀವು ನಿದ್ದೆ ಮಾಡ್ತಿದೀರಲ್ರೀ...." ಎಂದುಬಿಟ್ಟರು.

ಕಾರಂತರು ಬರೀಬೇಕು. ಆದರೆ ಅದನ್ನು ಓದಿದರೆ ಪಿ.ಸೀ.ನೇ ಓದಬೇಕು. ಪಾತ್ರದ ಮಾತುಗಳಿಗೆ ತಕ್ಕಂತಹ ಭಾವ – ಧ್ವನಿ – ಅದರ ಬದಲಾವಣೆ (modulation) ಗಳನ್ನೆಲ್ಲ ಹೊರಡಿಸುವಲ್ಲಿ ಪಿ.ಸೀ.ಯವರದೇ ಒಂದು ವೈಶಿಷ್ಟ್ಯ.

ಮತ್ತೆ ಆ ಕಾದಂಬರಿ!

ನಾಯಕ ರಾಧಾಕೃಷ್ಣ ಹೊಳೆಯ ದಡದಲ್ಲಿ ತನ್ನಿಬ್ಬರು ಮಿತ್ರರಿಗೆ ಹುಳಿ ಮಾವಿನಕಾಯಿ ತಂದು (ವಂಡಸ ಗ್ರಾಮದ್ದು) ಅಟ್ಟು ಬಡಿಸಿದ ಒಂದು ಆಹಾರ ಪದಾರ್ಥ (ಅದನ್ನ ಅಂಬಟು ಎನ್ನಲೆ?)

ಅಂಬಟು ಎಂದರೇನು – ಅದನ್ನ ತಿಂದೇ ನೋಡಬೇಕು. ಬೇರೆ ಕಡೆ ಜನಕ್ಕೆ ನಮ್ಮ ಪದಾರ್ಥಗಳ ಹೆಸರು ಹೇಳಿದರೆ ಏನಾದರೂ ಕಲ್ಪನೆಯಾಗುತ್ತದೆಯೆ ಅವರಿಗೆ? – ಎನ್ನುತ್ತ ಇಂಗ್ಲಿಷಲ್ಲಿ ಆರಂಭಿಸಿದರು.

"ಒಂದು ಸಾರಿ ಒಬ್ಬ ವಿದೇಶೀಯ ಇಂಡಿಯಾಕ್ಕೆ ಬಂದ. ಅವನಿಗೆ ಇಲ್ಲಿಯ ಜಿಲೇಬಿ ನೋಡಿ ಅದರ ಮೇಲೆ ಅತಿ ಮೋಹ ಉಂಟಾಯಿತು. ಅದನ್ನು ನೋಡಿದಷ್ಟೂ ಆಶ್ಚರ್ಯ! ತಿಂದಷ್ಟೂ ಆನಂದ.... ಹಾಕಿಸಿಕೊಂಡು ತಿಂದದ್ದೇ ತಿಂದದ್ದು! ಬಡಿಸಿದವರನ್ನು ಕೇಳಿದ– "ಇದನ್ನೇನಂತ ಕರಿತೀರಿ?"

"ಜಿಲೇಬಿ" ಎಂದು ಉತ್ತರ.

"ಜಿಲೇಬೀ?.... ಹೇಗೆ ಮಾಡ್ತೀರಿ ಇದನ್ನ? How do you inject this sweet juice into them?" ಎಂದು ಉದ್ಗರಿಸಿದನಂತೆ. ಹೀಗಿರೋವಾಗ ಅಂಬಟು ಅಂದರೆ ಏಂಥದು ಎಂದು ಕ್ಲಾಸಲ್ಲಿ ಹೇಗೆ ಹೇಳಲಿ? ತಿಂದು ನೋಡಬೇಕು...."

* * *

ಇಂಥವರ ಕ್ಲಾಸ್‌ಗಳಿಗೂ– ಕಾಟಾಚಾರಕ್ಕೆ ಬಂದು– ಅಂಗಾಗ–ಶೃಂಗಾರ–ಅಲಂಕಾರಭರಿತವಾಗಿ ಬರುತ್ತಿದ್ದು ಹಾಜರಿ ಹಾಕಿ ಹೋಗುತ್ತಿದ್ದ ವಿದ್ಯಾರ್ಥಿವೇತನ–

ಉಚಿತ ವಿದ್ಯಾರ್ಥಿನಿಲಯ ಸೌಕರ್ಯ ಮೊದಲಾದ ಸೌಲಭ್ಯ ಪಡೆಯುತ್ತಿದ್ದ ಶ್ರೀಮಂತ ವಿದ್ಯಾರ್ಥಿಗಳೂ ಬರುತ್ತಿದ್ದರು. We are here just for a degree ಎಂದವರು ರಾಜಾರೋಷವಾಗಿಯೇ ಹೇಳುತ್ತಿದ್ದರು. ಇಂಥವರ ನಡವೆಯೂ ಜ್ಞಾನದಾಹಿಗಳಾಗಿ, in the real sense of education, ವಿದ್ಯ + ಅರ್ಥಿಗಳಾಗಿಯೂ ಹಲವರಿದ್ದರು. ಈ ನಮಗೆಲ್ಲ ವಿ.ಸೀ. ಯವರ ತರಗತಿಗಳಲ್ಲಿ ಹೊಸತೊಂದು ಲೋಕವೇ ಸೃಷ್ಟಿಯಾಗುತ್ತಿತ್ತು. ವಿ.ಸೀ. ಯವರ ಓದುಗಾರಿಕೆಯಿಂದಾಗಿ ಕಾರಂತರ ಆ ಕಾದಂಬರಿಯ ಪಾತ್ರಗಳೆಲ್ಲ ಜೀವಂತವಾಗಿ ಕಣ್ಮುಂದೆ ಬಂದು ನಟಿಸಿ ಕುಣಿದಾಡಿ ಹೋಗುತ್ತಿದ್ದುವು. ನಾವೆಲ್ಲ ಮನೋಪ್ರಪಂಚದಲ್ಲಿ ಆ ಪಾತ್ರಗಳೊಂದಿಗೆ ಕನ್ನಡ ಜಿಲ್ಲೆಗಳಲ್ಲೆಲ್ಲಾ ಸುತ್ತಾಡಿದ್ದೇವೆ.

ಕನ್ನಡ ಇಲಾಖೆಯ ಪಕ್ಕದ ಕ್ಯಾಂಟೀನಿನಲ್ಲೇ ಕಾಫಿ ಕುಡಿದು ನಾನು– ಚಂದ್ರಶೇಖರ–ಮಾಧು ಮೂರು ಜನ ಎದುರಿನ ಹುಲ್ಲು ಹಾಸಿನ ಮೇಲೆ ಕುಳಿತು ತರಗತಿಗಳಲ್ಲಿ ನಡೆದದ್ದನ್ನು ಅಣಕವಾಡಿ ಅಭ್ಯಾಸ ಮಾಡಿಕೊಳ್ಳುತ್ತಿದ್ದೆವು. ಮಾಧು "ಸಾನಂದಂ ನಂದಿಹಸ್ತಾಹತ" ಹೇಳಿ ಅಣಕಿಸಿದರೆ, ನಾನು "How do you inject this sweet juice into them?" ಮಾಡಿ ತೋರಿಸುತ್ತಿದ್ದೆ. ಇದಕ್ಕೆ ತಾನು ಹಿಂದೆ ಬೀಳಬಾರದೆಂದು ನಮ್ಮ ಚಂದ್ರು "ಹರಬಿಲಾಸ ಶಾರದಾರವರ 'ಹಿಂದೂ ಸುಪೀರಿಯಾರಿಟಿ'ಯಿಂದ ಒಂದೇ....ಸಮನೇ" ಎಂದು ವಿ.ಸೀ. ಯವರನ್ನನುಕರಿಸುವುದರಲ್ಲಿದ್ದಾಗ, ಅನತಿ ದೂರದಲ್ಲಿ ಅವರೇ ಹೋಗುತ್ತಿರಬೇಕೆ!

ಪುಣ್ಯಕ್ಕೆ ಅವರಿಗೆ ಕೇಳಿಸಲಿಲ್ಲ.... ಬದುಕಿದೆವು!

ಇನ್ನು ವಿ.ಸೀ.ಯವರ ಕೈಬರಹ: ಬ್ರಹ್ಮ ಬರಹ. ಕ್ಲಾಸಲ್ಲಿ ಅವರು ಬೋರ್ಡ್ ಮೇಲೆ ಬರೆಯುವ ರೀತಿಯನ್ನು ಅವರ ವಿದ್ಯಾರ್ಥಿಗಳಾಗಿದ್ದವರೆಲ್ಲ ನೋಡಿದ್ದಾರೆ. ನಮ್ಮ ಕಡೇನೇ ನೋಡುತ್ತಾ– ಮಾತು ಆಡಾಡುತ್ತ –ಸೀಮೆಸುಣ್ಣದಿಂದ– ಆಗ್ನೇಯದಿಂದ ವಾಯವ್ಯ – ಈಶಾನ್ಯದಿಂದ ನೈರುತ್ಯಕ್ಕೆ ಗೀಚಿ ಗೀಚಿ ಬರೆದು ಬರೆದು ಬೋರ್ಡು ತುಂಬಿಸಿಬಿಡುತ್ತಿದ್ದರು.

ಲೈಬ್ರರಿಯಲ್ಲಿ ದಿಕ್ಕಿಕ್ಕೊಂದು ಹೆಜ್ಜೆಗೊಂದು ಪುಸ್ತಕಗಳು ತೆರೆದುಕೊಂಡು ಎಲ್ಲೆಂದರಲ್ಲಿ ಬಿದ್ದಿದ್ದರೆ–ಓಹೋ ಚಕ್ರವರ್ತಿ ನೆಪೋಲಿಯನ್ ಬಂದು ಹೋಗಿರಬೇಕು–ಎಂದು ಪ್ಯಾರಿಸ್‌ನ ಜನ ಭಾವಿಸುತ್ತಿದ್ದರಂತೆ. ಅಂತೆಯೇ ಕನ್ನಡ ತರಗತಿಯ ಬೋರ್ಡು ನೋಡಿಯೇ–ಓಹೋ ಹೋದ ಪಿರಿಯಡ್‌ನಲ್ಲಿ ಇಲ್ಲಿ ವಿ.ಸೀ. ಇದ್ದಿರಬೇಕು–ಎಂದು ಇಲ್ಲಿಯವರು ಸುಲಭವಾಗಿ ಊಹಿಸುತ್ತಿದ್ದರು.

ಮುಂದಿನ ಕಾಲಗಳಲ್ಲಿ ನಾನವರ ಬಳಿ ಹೊನ್ನಾವರದಲ್ಲಿ (ವಿದ್ಯಾರ್ಥಿಗಳಿಗೆ ಗುರುವೃತ್ತಿ) ಶಿಷ್ಯವೃತ್ತಿ ಮಾಡಿದ ಜೀವಿತದಲ್ಲಿ ನನಗೆ ಅವರು ಎರಡು ಕಾಗದ ಬರೆದಿದ್ದರು. ಈಗ ಅವುಗಳಲ್ಲಿ ಒಂದರ ಕವರು ಮಾತ್ರ ಉಳಿದಿದೆ. ಇನ್ನೊಂದನ್ನು ಅವರ ನೆನಪಿಗಾಗಿ ಇರಿಸಿಕೊಂಡ ವಸ್ತುಗಳಲ್ಲಿ ಬಲು ಜತನದಿಂದ ಸೇರಿಸಿಟ್ಟಿದ್ದೇನೆ. ಅದರಲ್ಲಿ 'ಡಿಯರ್ ಖಜಾನೆ' ಎಂಬುದನ್ನು ಬಿಟ್ಟು ಉಳಿದುದನ್ನು ಇಂದಿಗೂ ಓದಲಾಗಿಲ್ಲ. ಒಂದು ಕಾಲಕ್ಕೆ ಅವರ ಕೈ ಬರಹ ಚೆನ್ನಾಗಿದ್ದಿರಬೇಕು.

ಅತಿ ಸುಂದರ ಕೈಬರಹವೆಂದು ಹೊಗಳಿಸಿಕೊಳ್ಳುತ್ತಿದ್ದ ನನ್ನ ಕನ್ನಡ ಇಂಗ್ಲಿಷ್ ಬರಹವೇ ಇಂದು ಗುರುಗಳ ಬರಹಕ್ಕಿಂತ ಗೋಜಾಗಿ ಕೊಂಗಾಗುತ್ತಿವೆ. ಅಣ್ಣನ ಮಗನೋ–ನನ್ನ ಮಗಳೋ ಬರೆದುಕೊಡಬೇಕು ನನಗೆ! ಇನ್ನು ವಿ.ಸೀ. ಯವರಿಗೆ ಹೇಗಾಗಿರಲಾರದು!

How can we forget those days? Those classes? And above all, that man!?

Man ಅಂದ ಕೂಡಲೇ ಇನ್ನೊಂದು ಸಂಗತಿ ನೆನಪಿಗೆ ಬರುತ್ತಿದೆ....

ಯಾವುದೋ ಸಂದರ್ಭದಲ್ಲಿ ಅವರು ಬೋರ್ಡ್ ಮೇಲೆ MAN ಮತ್ತು man ಎಂಬೆರಡು ಶಬ್ದಗಳನ್ನು ಬರೆದು–ಏನು ವ್ಯತ್ಯಾಸ–ಎಂದು ಸವಾಲ್ ಮಾಡಿದರು.

ಆ ವಯಸ್ಸಲ್ಲಿ ನಮ್ಮಂತಹ ಬೆಪ್ಪುಗಳಿಗೆ ಅದರ ಅರ್ಥ ಸುಳುಹು ಸೂಕ್ಷ್ಮಗಳು ಹೊಳೆದಾವೆ? ಏನೇನೋ ಉತ್ತರ ಕೊಟ್ಟು ನಮ್ಮ ಅಜ್ಞಾನ ಪ್ರದರ್ಶನ ಮಾಡಿದೆವು.

"ಸರಿಯಾಗಿ ನೋಡ್ರಿ.... ಮೊದಲನೇ MAN Capital letters.... ದೊಡ್ಡಕ್ಷರ.... ಅಂದರೆ ದೊಡ್ಡಮನುಷ್ಯ. ಎರಡನೇ man ಸಣ್ಣಕ್ಷರ, ಅರ್ಥಾತ್ ಸಣ್ಣ ಮನುಷ್ಯ.

These are the two types of men. Man and the successful man.

ಹಣ, ಅಧಿಕಾರ, ದೌಲತ್ತು, ದಂಭ, ದರ್ಪ ಎಲ್ಲ ಇದ್ದು ಸುಖದಿಂದಿರುವ – but who have lost all human qualities are successful men.

On the contrary, those who are chained to ethics and principles, cannot get anything in life except sorrows, sufferings, misery, poverty, penury and pain, still they boldly face the storm, these are MEN" ಎಂದಿದ್ದರು.

ನಾನು ಯಾರೋ ಏನೋ ಅವರಿಗೆ!I am a fallen Lucifer! And he was the champion of the poor, the fallen and forlorn!

ನನ್ನನ್ನು ಅವರ ಅತಿ ಆತ್ಮೀಯರ ವೃತ್ತದಲ್ಲಿದ್ದವನೆಂದು ಹಲವರು ತಪ್ಪು ಕಲ್ಪನೆ ಮಾಡಿಕೊಂಡಿದ್ದಾರೋ ಏನೊ! ಅವರು ನನ್ನ ಗುರು. ಅವರ ಎದುರು ನಿಂತದ್ದು ನನಗೆ ನೆನಪಿಲ್ಲ. ಪಕ್ಕದಲ್ಲೊ ಹಿಂಬದಿಯಲ್ಲೊ ಅದೂ ಒಂದು ಗೌರವಯುತವಾದಷ್ಟು ಅಂತರದಲ್ಲಿ ನನ್ನ ಸ್ಥಾನ. ಅಷ್ಟು ಅಂತರದಿಂದಲೇ ಅವರನ್ನು ಕಂಡು ಅವರ ಮಾತು ಭಾವ ಭಂಗಿಗಳನ್ನೆಲ್ಲ ಅಭ್ಯಸಿಸಿ ಅವರಂತೆ ನಡೆಯಲು ಯತ್ನಿಸಿ ವಿಫಲನಾಗಿದ್ದೇನೆ. ಹಾಗೆ ನೋಡಿದರೆ ನಮ್ಮ ಕಲ್ಲಾಪುರ ಕೃಷ್ಣಮೂರ್ತಿ ಮತ್ತು "ಆ ಜಾನ್ಸನ್ನನ ಬಾಸ್ಟೆಲ್" ಎಂ. ವಿ. ವೆಂಕಟೇಶಮೂರ್ತಿ ನನಗಿಂತ ಸಾವಿರಪಟ್ಟು ಹೆಚ್ಚು ಆತ್ಮೀಯರು. ಅವರಿಬ್ಬರನ್ನು ಕಂಡರೆ ನನಗೆ ಒಂದು ತರಹ ಹೊಟ್ಟೆಕಿಚ್ಚು! ಈ ದ್ರೋಣಾಚಾರ್ಯರಿಗೆ ಅವರಿಬ್ಬರು ಪಾಂಡುಪುತ್ರರು.... ನಾನವರ ಏಕಲವ್ಯ!

('ಕಸ್ತೂರಿ'ಯಿಂದ)

ಪ್ರೀತಿ ಗೌರವಗಳನ್ನು ಗೆದ್ದ ಹಿರಿಯರು

ಎಸ್. ದತ್ತಾತ್ರಿ

ಎರಡು ವರ್ಷಗಳ ವಿದ್ಯಾರ್ಥಿ ಜೀವನಕ್ಕೆ ಸಂಬಂಧಿಸಿದಂತೆ ಸುಮಾರು ೪೫–೪೬ ವರ್ಷಗಳ ಹಿಂದಿನ ಮಾತು. ೧೯೫೧–೫೨ ಮತ್ತು ೧೯೫೨–೫೩ ಇವೇ ಆ ಎರಡು ವರ್ಷಗಳು. ಆಗಿನ ದಿನಗಳಲ್ಲಿ ನಾವು ಬೇರೆ ಬೇರೆ ಊರಿನವರು ಬೆಂಗಳೂರಿನ ಸೆಂಟ್ರಲ್ ಕಾಲೇಜ್‌ಗೇ ವಿಜ್ಞಾನ ಪದವಿ ಗಳಿಸಲು ಬರಬೇಕಿತ್ತು; ಕೆಲವರು ಮೈಸೂರಿಗೂ ಹೋಗಬಹುದಿತ್ತು. ಹಳೆಯ ಮೈಸೂರು ರಾಜ್ಯದಲ್ಲಿ ಈ ಎರಡೇ ಸ್ಥಳಗಳಲ್ಲಿ ಆಗ ಡಿಗ್ರಿಗೆ ಓದುವ ಅವಕಾಶ ಇದ್ದುದು. ಹಾಗಾಗಿ ಎರಡು ವರ್ಷದ ಬಿ.ಎಸ್ಸಿ.ಗೆ ಓದಲು ಬಂದ ವರ್ಷಗಳು ಅವು. 'ಚೆನ್ನಬಸವನಾಯಕ,' 'ನಾದಲೀಲೆ,' 'ಬೆರಳ್‌ಗೆ ಕೊರಳ್' ಮತ್ತು 'ಸಾಹಿತ್ಯಶಕ್ತಿ' ನಮಗೆ ಗೊತ್ತುಮಾಡಿದ್ದ ಕನ್ನಡ ಪಠ್ಯಪುಸ್ತಕಗಳು. ಬರೆದವರು, ಅನುಕ್ರಮವಾಗಿ, ಶ್ರೀನಿವಾಸ, ಅಂಬಿಕಾತನಯದತ್ತ, ಕುವೆಂಪು ಮತ್ತು ಡಿ.ವಿ.ಜಿ. ಪಾಠ ಹೇಳಿದವರು ನಮ್ಮ ತರಗತಿಗೆ ಮೊದಲೆರಡಕ್ಕೆ ವಿ.ಸೀ., ಕೊನೆಯೆರಡಕ್ಕೆ ಜಿ. ಪಿ. ರಾಜರತ್ನಂ. 'ಚೆನ್ನಬಸವನಾಯಕ' ಕಾದಂಬರಿಯನ್ನು ನಮಗೆ ವಿ.ಸೀ. ಎರಡು ವರ್ಷ ಪೂರ್ತಿ ಪಾಠ ಮಾಡಿದರು. ವಾರಕ್ಕೆ ಎರಡು ಪೀರಿಯೆಡ್‌ಗಳೆಂದು ಕಾಣುತ್ತದೆ; ಅವು ಬಲು ವೈಭವದ ಪೀರಿಯೆಡ್‌ಗಳು.

ಮೊದಲ ವರ್ಷದ ಮೊದಲನೆಯ ಪೀರಿಯೆಡ್‌ಗೆ 'ಚೆನ್ನಬಸವನಾಯಕ' ಕಾದಂಬರಿಯನ್ನು ಕೈಯಲ್ಲಿ ಹಿಡಿದು ವಿ.ಸೀ. ತರಗತಿಗೆ ಪ್ರವೇಶಿಸಿದ್ದು ನನಗೆ ನೆನಪಿದೆ. ಹಿಂದಿನ ವರ್ಷಗಳಲ್ಲಿ ನಾವು ಅಭ್ಯಾಸ ಮಾಡಿದ್ದ 'ಅಭೀ', 'ಕಾದಿರುವಳು ಶಬರಿ' ಪದ್ಯಗಳನ್ನೂ, ಕೆಲವು ಮದುವೆ ಮನೆಗಳಲ್ಲಿ ಕೇಳಿದ್ದ 'ಎಮ್ಮ ಮನೆಯಂಗಳದಿ' ಹಾಡನ್ನೂ ರಚಿಸಿದವರು ಇವರೇಯೆ ಎಂದು ಹರ್ಷಪಟ್ಟಿದ್ದೆ ನಾನು. ಹೌದೂ ಅಲ್ಲವೊ ಎನ್ನುವಂತೆ ತುಸು ಬಾಗಿದಂತೆ ಕಂಡ, ತೆಳು ಮೈಯ, ಅಷ್ಟೇನೂ ಎತ್ತರ ಅಲ್ಲದ ಆದರೆ ಕುಳ್ಳಂತೂ ಅಲ್ಲ ವಿ.ಸೀ. ಶುಭ್ರ ಅಚ್ಚ ಬಿಳಿಯ ಬಣ್ಣದ ಅಂಚಿಲ್ಲದ ಪೇಟ – 'ಮೈಸೂರು ರುಮಾಲು'– ಕಟ್ಟಿದವರಲ್ಲವೇ ಅವರು! ಕೊರಳು ಮುಚ್ಚುವ (ಕ್ಲೋಸ್ ಕಾಲರ್) ಕೋಟು; ನೀಟಾಗಿ ಉಟ್ಟ ಮಲ್ ಕಚ್ಚೆಪಂಚೆ; ಕಾಲಿಗೆ ಆಡಂಬರ ಎನ್ನಿಸದ ಚಪ್ಪಲಿ. ವೇದಿಕೆ ಹತ್ತಿ ಕತ್ತನ್ನು ತುಸು ತಗ್ಗಿಸಿ ಕನ್ನಡಕದ ಮೇಲ್ಭಾಗದ ಗಾಜಿನ ಮೂಲಕ ಇಡೀ ತರಗತಿಯನ್ನೇ ಒಂದು

ಸುತ್ತು ಮೇಲಿಂದ ಕೆಳಗೆ ಈ ಕಡೆಯಿಂದ ಆ ಕಡೆಗೆ ಅಳೆದು, ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ 'Sit down' ಎಂದು ಗದುಸಿಲ್ಲದೆ ನುಡಿದರು. ಹಾಜರಿ ತೆಗೆದುಕೊಳ್ಳುವಾಗ ನಡುನಡುವೆ ಹಾಜರಿ ಕೊಡುವವರನ್ನು ಗಮನಿಸುತ್ತಿದ್ದರೆಂದು ತೋರುತ್ತದೆ. ಕನ್ನಡದಲ್ಲಿ ಪ್ರಾರಂಭಗೊಂಡ ಅವರ ಮಾತು ಅದ್ಯಾವ ಕ್ಷಣದಲ್ಲಿ ಇಂಗ್ಲಿಷ್‌ಗೆ ದಾಟಿತ್ತೊ ತಿಳಿಯದು. ಕನ್ನಡವನ್ನು ತಾತ್ಸಾರ ಮಾಡಬಾರದೆಂದು ಎಚ್ಚರಿಸಿದರು. "Remember, I will suck your blood in the exam" ಎಂದು ಬಲಗೈ ಮುಷ್ಟಿಯನ್ನು ಭದ್ರವಾಗಿ ಒಳಮುಖವಾಗಿ ಬಿಗಿದು ಮುಖದತ್ತ ಒಯ್ಯುವಂತೆ ನಟಿಸಿದರು. "Freeship and half–freeship students, in particular, beware!" ಎಂದು ನಕ್ಕರು. ಅದೊಂದು ವಿಶಿಷ್ಟ ನಗು; ಅಬ್ಬರದ ಅಥವಾ ಗಹಗಹಿಸುವ guffaw (ಗಫಾ) ಅಲ್ಲ. ಅದರಲ್ಲಿ ಕೊಂಕಿರಲಿಲ್ಲ, ತೆಗಳಿಕೆ ಇರಲಿಲ್ಲ. ಪರೀಕ್ಷೆಯ ಹಿಂದಿನ ದಿವಸ ಕನ್ನಡ ಓದಿಕೊಂಡು ಪರೀಕ್ಷೆಯಲ್ಲಿ ಪಾಸ್ ಮಾಡಿ ಬಿಡಬಹುದು ಎಂದು ಕನ್ನಡವನ್ನು ಲಘುವಾಗಿ ಕಾಣುತ್ತಿದ್ದ ಹುಡುಗರ ಬಗೆಗೆ ಅಲ್ಲಿ ವಿನೋದ ಸೇರಿದ ಎಚ್ಚರಿಕೆಯ ಭಾವವಿತ್ತು.

'ಚೆನ್ನಬಸವನಾಯಕ' ಒಂದು ಚಾರಿತ್ರಿಕ ಕಾದಂಬರಿ. ಬಿದನೂರು ಸಂಸ್ಥಾನದ ಬೀಳಿನ ದಿನಗಳ ಚಿತ್ರಣ ಅಲ್ಲಿದೆ. ಚರಿತ್ರೆ ಮತ್ತು ಚಾರಿತ್ರಿಕ ಕಾದಂಬರಿ – ಇವುಗಳ ಲಕ್ಷಣ, ವೈಶಿಷ್ಟ್ಯ ಮತ್ತು ವ್ಯತ್ಯಾಸಗಳನ್ನು ಕುರಿತು ಸ್ಥೂಲವಾಗಿ ಪರಿಚಯಿಸಿ, ಗತಿಸಿದ ವಿಶೇಷ ಘಟನೆಗಳಿಂದ ಕೂಡಿದ ಕಾಲವೊಂದರ ವ್ಯಕ್ತಿಗಳು, ಅವರ ವರ್ತನೆ, ಆಗಿನ ಸಮಾಜ, ಸನ್ನಿವೇಶ, ಸಂದರ್ಭ, ಪ್ರಸಂಗಗಳು, ನೆಲೆ ಬೆಲೆಗಳು, ಸಮುದಾಯದ ಬದುಕು, ಆಸೆ–ಆಕಾಂಕ್ಷೆಗಳು ಮುಂತಾದುವನ್ನು ಜೀವಂತವಾಗಿ ನಮ್ಮ ಕಣ್ಮುಂದೆ ಕಡೆದು ನಿಲ್ಲಿಸುವ ಶಿಲ್ಪಚಾತುರ್ಯ ಕಾದಂಬರಿಕಾರನದಾದರೆ, ಚರಿತ್ರಕಾರನದು ಸಾಮಾನ್ಯವಾಗಿ ಅಂದಿನ ಸತ್ಯಸಂಗತಿಗಳನ್ನು ಕಾಲಾನುಕ್ರಮವಾಗಿ ದಾಖಲಿಸಿ ವ್ಯಾಖ್ಯಾನಿಸುವುದು; ಚಾರಿತ್ರಿಕ ಕಾದಂಬರಿ, ನಿಜ ಅರ್ಥದಲ್ಲಿ, ಚರಿತ್ರೆ ಅಲ್ಲ; ಚಾರಿತ್ರಿಕ ಅಂಶಗಳು ಮತ್ತು ಸತ್ಯಕ್ಕೆ ಎರವಾಗದಂತೆ ಎಚ್ಚರವಹಿಸಿ ಅವುಗಳ ಆಧಾರದ ಮೇಲೆ ನೆಯ್ದ ಕಲ್ಪನೆಯ ಹಾಸು ಅದು. ಚರಿತ್ರೆ ಮತ್ತು ಕಲ್ಪನೆಗಳ ಹದವಾದ ಮಿಶ್ರಣ. ಚಾರಿತ್ರಿಕಾಂಶಗಳನ್ನೇ ಕೃತಿಯಲ್ಲಿ ಅತಿಯಾಗಿ ಗಿಡಿದರೆ ಕೃತಿ ಗೊಡ್ಡು ಪುರಾಣವಾಗುತ್ತದೆ; ಕಲ್ಪನೆಯೇ ಅತಿಯಾದರೆ ಚಾರಿತ್ರಿಕ ಸತ್ಯದಿಂದ ಕೃತಿ ದೂರ ಸರಿದು ಮತ್ತೇನೊ ಆಗುತ್ತದೆ ಎಂದು ವಿವರಿಸಿ, ಚಾರಿತ್ರಿಕ ಕಾದಂಬರಿಕಾರನಿಗೆ ಇರಬೇಕಾದ ಎಚ್ಚರ, ಅವನು ವಹಿಸಬಹುದಾದ ಸ್ವಾತಂತ್ರ್ಯದ ಇತಿಮಿತಿಗಳೇನೆಂದು ಹೇಳಿ, ಮಾಸ್ತಿಯವರು 'ಚೆನ್ನಬಸವನಾಯಕ' ದಲ್ಲಿ ಹೇಗೆ ಸಮತೋಲನವನ್ನು ಸಾಧಿಸಿದ್ದಾರೆನ್ನುವುದನ್ನು ಕಾದಂಬರಿಯ ಸೂಕ್ಷ್ಮ ಅವಲೋಕನದಿಂದ ಕಂಡುಕೊಳ್ಳಬಹುದೆಂದು ಪಿ.ಸೀ. ಹೇಳಿದರು.

'ಚೆನ್ನಬಸವನಾಯಕ'ವನ್ನು ಒಂದು ಪಂಕ್ತಿಯನ್ನೂ ಬಿಡದಂತೆ ಓದಿ ಪಾಠ ಮಾಡಿದರು ಪಿ.ಸೀ. ಮೇಲು ನೋಟಕ್ಕೆ ಕಾದಂಬರಿಯ ಕತೆ ಸರಳ ಎನಿಸಿತು. ಹಿರಿಯ ಅರಸ ತೀರಿಕೊಂಡಿದ್ದಾನೆ; ಅವನ ರಾಣಿ ಅಧಿಕಾರವನ್ನು ತನ್ನ ಕೈಯಲ್ಲೇ ಇಟ್ಟುಕೊಂಡಿದ್ದಾಳೆ; ವಯಸ್ಸಿಗೆ ಬಂದ ಮಗನಿಗೆ ಅದನ್ನು ಹಸ್ತಾಂತರಿಸಲು ಒಲ್ಲಳು; ನಿಂಬಯ್ಯನೆಂಬುವ ಮನೆವಾರ್ತೆಯವನೊಡನೆ ರಾಣಿಗೆ ಸಲಿಗೆ ಇದೆ ಎನ್ನುವ ಸುದ್ದಿ ಹರಡಿದೆ; ಮಗನಿಗೆ ಅದು

ತಿಳಿದು ಅವನ ಮನಸ್ಸು ಮುದುಗರಗೊಂಡಿದೆ; ರಾಜ್ಯಪಟ್ಟವಿಲ್ಲದ ಅವನು ವೇಷ ಮರಸಿಕೊಂಡು ಅಲೆಯುತ್ತಿದ್ದಾನೆ; ಸಂಸ್ಥಾನದ ಹಿರಿಯರಾದರೊ ಆಡಲಾರರು, ಅನುಭವಿಸಲಾರರು – ಇಂಥ ಇಕ್ಕಟ್ಟಿನ ಸ್ಥಿತಿ ಅವರದು. ಅತಂತ್ರವಾದ ಬಿದನೂರನ್ನು ಹೈದರಾಲಿ ವಶಪಡಿಸಿಕೊಳ್ಳುತ್ತಾನೆ; ರಾಣಿ ಮತ್ತು ನಿಂಬಯ್ಯ ಸೆರೆಯಾಗುತ್ತಾರೆ; ನಾಯಕ ಸಾಯುತ್ತಾನೆ. ಬಿದನೂರು ಸಂಸ್ಥಾನ ಅವನತಿ ಹೊಂದುತ್ತದೆ.

'ಚೆನ್ನಬಸವನಾಯಕ' ಘಟನೆಗಳಿಂದ ತುಂಬಿರುವ ಕಾದಂಬರಿ. ವಿಷಾದದ ಛಾಯೆ ಇಡೀ ಕಾದಂಬರಿಯನ್ನು ಆವರಿಸಿದೆ. ಅರಮನೆಯನ್ನು ಹೊರತುಪಡಿಸಿ ಉಳಿದಂತೆ ಬಿದನೂರಿನ ಜೀವನ ಮಾಮೂಲಿನಂತೆ ಕಂಡು ಬರುತ್ತದೆ. ಮಲ್ಲಿಗೆ – ಸಗುನರ ಮುಗ್ಧಪ್ರೇಮದ ಒಳಗತೆಯೊಂದು ಕೂಡ ಅರಳಿದೆ. ಬಗೆಬಗೆಯ ಪಾತ್ರಗಳು; ಸಂಕೀರ್ಣವಾದುವು, ಸರಳವಾದುವು. ಶಾಂತವ್ವ, ನೇಮಯ್ಯ, ಮಲ್ಲಿಗೆ–ಸಗುನರಂಥ ಕಲ್ಪಿತ ಪಾತ್ರಗಳೂ ವೀರಮ್ಮಾಜಿ, ನಿಂಬಯ್ಯ, ಚೆನ್ನಬಸವನಾಯಕ, ಮುಂತಾದ ನಿಜಜೀವನದಲ್ಲಿ ನಡೆದಾಡಿದ ಪಾತ್ರಗಳೂ ಇವೆ. ಕಾದಂಬರಿಯ ಓಟಕ್ಕೆ, ಸಾಂಗತ್ಯಕ್ಕೆ ಎಲ್ಲೂ ಊನ ಬಂದಿಲ್ಲ. ಕಾದಂಬರಿ ಹೇಗೆ ಬೆಳೆಯುತ್ತದೆ, ಪಾತ್ರಗಳ ವಿಶ್ಲೇಷಣೆ ಹೇಗೆ, ಅವು ಆಡುವ ಮಾತಿನ ಹಿಂದಡಗಿರಬಹುದಾದ ಮರ್ಮ, ಧ್ವನಿ ಏನು; ಜರುಗುವ ಘಟನೆಗಳಲ್ಲಿ, ಪಾತ್ರಗಳ ನಡವಳಿಕೆಯಲ್ಲಿ, ಮಾತಿನಲ್ಲಿ, ನಿತ್ಯಜೀವನದ ವ್ಯವಹಾರದಲ್ಲಿ ದುರಂತದ ಛಾಯೆ ನುಸುಳಿ ಹೇಗೆ ಕಾದಂಬರಿಯನ್ನು ತುಂಬುತ್ತದೆ; ಚೆನ್ನಬಸವನಾಯಕನ ನಿಷ್ಕ್ರಿಯತೆ, ನಿರಾಸಕ್ತಿ, ವೇಷ ಮರಸಿಕೊಂಡು ಬೂದಿಬಸವನಾಗಿ ಅವನ ಅಲೆಮಾರಿತನ; ವೀರಮ್ಮಾಜಿಯ ಅಧಿಕಾರ ವ್ಯಾಮೋಹದ ದೌರ್ಬಲ್ಯ, ಬಿದನೂರಿನ ರಾಷ್ಟ್ರಜೀವನದಲ್ಲಿ ವಿಶಿಷ್ಟ ಪಾತ್ರವಿದ್ದ ನೇಮಯ್ಯ ತನ್ನ ಸ್ಥಾನ ಬಲವನ್ನು ಪ್ರಯೋಗಿಸದೆ ಕ್ರಿಯಾಶೀಲನಾಗದಿದ್ದುದು ಆತನ, ಬಹುಶಃ, ಅತಿರೇಕದ್ದೆನ್ನಬಹುದಾದ ನಿಷ್ಠೆ ಸಂಯಮಗಳು – ಈ ಕಾರಣಗಳಿಂದಾಗಿ, ಈ ಮೂವರಿಂದಾಗಿ 'ತಾಯ ಮಡಿಲಲ್ಲಿ ನೆಮ್ಮದಿಯಿಂದ ಮಲಗಿದ್ದ ಮಗು' ವಿನ ಹಾಗಿದ್ದ ಬಿದನೂರು ನಲುಗಿ ಹೋದುದು; ಅತ್ತ ಮೈಸೂರು ರಾಜಮನೆತನದ ನಿಸ್ಸಹಾಯಕತೆ, ಹೈದರಾಲಿ ಪ್ರಬಲನಾದುದು; ಅವನ ವ್ಯವಹಾರ ಕುಶಲತೆ, ಕುಟಿಲತೆ, ರಾಜಮಾತೆಯೊಡನೆ ನಡೆದುಕೊಳ್ಳುವಾಗ ಆತ ತೋರುವ ಚಾಲಾಕಿತನ – ಒಟ್ಟಿನಲ್ಲಿ ಆತನ ಹೊಂತಕಾರತೆ; "ಎಲ್ಲ ಶಿವನ ಆಟ, ಶಿವನ ಇಚ್ಛೆ" ಎಂದು ಹಿರಿಯ ಮತದ ಅಯ್ಯ ನುಡಿಯುವಾಗ ಮಾನವನನ್ನು ಮೀರಿ ನಿಂತು ಅವನ ಬದುಕನ್ನು ನಿಯಂತ್ರಿಸುತ್ತಿರುವ ಹೊರಗಿನ ಶಕ್ತಿ–ವಿಧಿಯ ಕೈವಾಡವಿದೆಯೆನ್ನುವ ಧ್ವನ್ಯರ್ಥ – ಹೀಗೆ ಅದೆಷ್ಟೋ ಅಂಶಗಳನ್ನು ಎತ್ತಿ ತೋರಿಸುತ್ತ, ವಿಶ್ಲೇಷಿಸುತ್ತ ಪಾಠ ಮಾಡಿದ ವೈಖರಿ ಪಿ.ಸೀ. ಅವರದು. ತಾಯಿಯ ವಾತ್ಸಲ್ಯ ಮತ್ತು ತಾಯ್ತನ ಎಂಥ ಸಂದರ್ಭದಲ್ಲೂ ಹೇಗೆ ಮೇಲುಗೈ ಸಾಧಿಸುತ್ತದೆನ್ನುವುದನ್ನು ಪಿ.ಸೀ. ವಿವರಿಸಿದ ಒಂದು ಸಂದರ್ಭವನ್ನು ನಿದರ್ಶನವಾಗಿ ಕೊಡಬಹುದೇನೊ (ನೆನಪಿಗೆ ಬಂದಂತೆ): ರಾಣಿ ವೀರಮ್ಮಾಜಿ ಅಧಿಕಾರವನ್ನು ತನ್ನ ಕೈಯಲ್ಲೇ ಇಟ್ಟುಕೊಳ್ಳಬೇಕೆಂಬ ಹಂಬಲ ಉಳ್ಳವಳು; ತಾನು ಇಷ್ಟಪಟ್ಟ ಹೆಣ್ಣನ್ನು (ಸಣ್ಣವ್ವ) ಮಗನಿಗೆ ತಂದುಕೊಳ್ಳುವಲ್ಲಿ ಆಕೆ ವಿಫಲಳಾಗಿದ್ದಾಳೆ; ಬದಲಿಗೆ ಬಂದ ಸೊಸೆ ಶಾಂತವ್ವ; ಶಾಂತವ್ವನ ಸಾತ್ವಿಕತೆಯನ್ನು

ವೀರಮ್ಮಾಜಿ ಬಲ್ಲಳು, ಆದರೂ ಆಕೆಯ ಬಗ್ಗೆ ಅಭಿಮಾನ ತೋರಳು; ಮಗನಿಗೆ ಅಧಿಕಾರ ವಹಿಸಿದರೆ ಪಟ್ಟದರಸಿಯಾಗಿ ಶಾಂತವ್ವ ಮತ್ತು ಆಕೆಯ (ಸಾಕು) ತಂದೆ ನೇಮಯ್ಯ ಇವರುಗಳ ಪ್ರಭಾವದಿಂದಾಗಿ ತಾನು ಮೂಲೆಗುಂಪಾಗಬಹುದೆಂಬ ಸಂಶಯ, ಅಪನಂಬಿಕೆ ಆಕೆಗೆ ಇದ್ದೀತು, ಸಹಜವಾಗಿ; ಮೇಲಾಗಿ ತನಗೆ ಮನೆವಾರ್ತೆಯವನೊಡನೆ ಇರುವ ಸಲಿಗೆ, ಮಗನಿಗೆ ಇದು ತಿಳಿದಿರುವುದು, ಮನಸ್ತಾಪ ಉಂಟಾಗಿರುವುದು, ಜನತೆ ನಾಯಕ ಯಾವಾಗ ಪಟ್ಟಕ್ಕೆ ಬರುತ್ತಾನೆ ಎಂದು ಕಾತರಿಸುತ್ತಿರುವುದು – ಅಧಿಕಾರ ಕಳೆದುಕೊಂಡು ತನ್ನ ಬದುಕಿಗೆ ಕುತ್ತು ತಂದುಕೊಳ್ಳುವುದನ್ನು ಆಕೆ ಇಷ್ಟಪಟ್ಟಾಳೆ? ಅಧಿಕಾರದಲ್ಲಿರಬೇಕೆಂಬ ದೌರ್ಬಲ್ಯದ ತೀವ್ರತೆ ಬೇರೆ. ಇಷ್ಟೆಲ್ಲ ಇರುವಾಗ ಚೆನ್ನಬಸವನಾಯಕನನ್ನು ಮುಗಿಸಿಬಿಡ ಬಹುದೆಂದು ನಿಂಬಯ್ಯ ಸೂಚ್ಯವಾಗಿ ಹೇಳುತ್ತಾನೆ. ತಕ್ಷಣ ರಾಣಿ ವೀರಮ್ಮಾಜಿ, "ವಯ್ಯಾ ನಿಂಬಯ್ಯ, ಜೋಕೆ, ನಾಯಕ ಎಷ್ಟಾದರೂ ನನ್ನ ಮಗ" ಎನ್ನುತ್ತ ನಿಂಬಯ್ಯನನ್ನು ಎಚ್ಚರಿಸುತ್ತಾಳೆ. ಮಗನ ಸಾವಿನ ಕಲ್ಪನೆಯನ್ನೂ ಆಕೆ ಮಾಡಲಾರಳು! ಆಕೆಯ ಮನಸ್ಸಿನಲ್ಲಿ ನಿಂಬಯ್ಯನ ಸೂಚನೆ ಆಸೆಯನ್ನು ಚಿಗುರಿಸುವ ಬದಲು, ಮಗನ ಜೀವದ ಬಗ್ಗೆ ಕಳವಳ, ಆತಂಕ, ಭೀತಿಗಳು ಮುತ್ತುತ್ತವೆ. ಕಾರಣ, ಎಚ್ಚರಿಕೆ ನೀಡುತ್ತಾಳೆ. ತಾಯ್ತನ ಸಾಧಿಸಿದ ಗೆಲುವು ಇದು. ಹೆತ್ತ ಮಗನ ಕ್ಷೇಮ ಚಿಂತನೆಯ ಸೆಲೆ ತಾಯಿಯಾದವಳಲ್ಲಿ ಎಂದಾದರೂ ಬತ್ತೀತೆ? ಮಗ ಹೇಗಿದ್ದರೇನು? ಎಲ್ಲ ತಾಯಂದಿರಂತೆಯೇ ವೀರಮ್ಮಾಜಿ ಕೂಡ !

'ಚೆನ್ನಬಸವನಾಯಕ' ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟಿದೆಯಷ್ಟೆ. ನಾವು ಓದುವ ಸಮಯಕ್ಕೆ ಅದು ಪ್ರಕಟವಾಗಿ ಎರಡು ಮೂರು ವರ್ಷಗಳಾಗಿದ್ದೀತು. ಆ ಕಾದಂಬರಿಯ ಹಿರಿಮೆಯನ್ನು ನಮಗೆ ಆಗಲೇ ವಿವರಿಸಿದ್ದರು ವಿ.ಸೀ.!

* * *

'ನಾದಲೀಲೆ' ಬೇಂದ್ರೆಯವರ ಅತ್ಯುತ್ತಮ ಕವನ ಸಂಕಲನಗಳಲ್ಲಿ ಒಂದು. ಎರಡನೆಯ ವರ್ಷದ ಕೊನೆಯಲ್ಲಿ ಒಂದು ದಿವಸ ಸ್ಪೆಷಲ್‌ಕ್ಲಾಸ್ ತೆಗೆದುಕೊಂಡು ಸುಮಾರು ಮೂರು ನಾಲ್ಕು ತಾಸುಗಳವರೆಗೆ 'ನಾದಲೀಲೆ'ಯನ್ನು ವಿ.ಸೀ. ವಿವರಿಸಿದರೆಂದು ನೆನಪು. ಭಾವಗೀತೆಯ ಹುಟ್ಟು, ಸ್ವರೂಪ–ಲಕ್ಷಣ, ಅದರ ಅಡಕ, ಅದಕ್ಕೆ ವಿಷಯವಾಗಬಲ್ಲ ವಸ್ತು, ಕನ್ನಡಕ್ಕೆ ವಿಶಿಷ್ಟ ಪ್ರಕಾರವಾಗಿ ಅದು ಬಂದುದು ಮತ್ತು ಆ ಪ್ರಕಾರದಲ್ಲಿ ಹೆಸರು ಮಾಡಿರುವ ಕವಿಗಳು – ಮುಂತಾಗಿ ಅನೇಕ ಪ್ರಸ್ತುತ ವಿಷಯಗಳನ್ನು ವಿವರಿಸಿ, ಬೇಂದ್ರೆಯವರ ಕವನ ಸಂಕಲನದಲ್ಲಿರುವ ಕವನಗಳ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸ್ಥೂಲ ವಿಂಗಡಣೆ ಹಾಗೂ ಅವನ್ನು ಅಭ್ಯಾಸ ಮಾಡುವ ರೀತಿಯನ್ನು ತಿಳಿಸಿದರು ವಿ.ಸೀ. ಬೇಂದ್ರೆಯವರೇ ಸಂಗ್ರಹದ ಕೊನೆಯಲ್ಲಿ ಕೊಟ್ಟಿರುವ ಭಾವಸಂದರ್ಭ ಸೂಚಿಯು ಕವನಗಳನ್ನು ಗ್ರಹಿಸುವಲ್ಲಿ ನೆರವಿಗೆ ಬರುತ್ತದೆ ಎಂದು ನೆನಪಿಸಿದರು. "ಕೋಲು ಸಖೀ", "ಭೃಂಗದ ಬೆನ್ನೇರಿ..." "ಬಂತಿದೊ ಶೃಂಗಾರ ಮಾಸ...", "ನೀ ಹೀಂಗ ನೋಡಬ್ಯಾಡ ನನ್ನ.....", "ನಾನು ಬಡವಿ..." ಮುಂತಾದ ಕೆಲವು ಕವನಗಳನ್ನು ಓದಿ ವಿವರಿಸಿದರು. ಓದುಗನ ಯೋಗ್ಯತೆಗೆ ಅನುಗುಣವಾಗಿ

ಭಾವಗೀತೆ ತನ್ನನ್ನು ತೆರೆದಿಟ್ಟುಕೊಳ್ಳುತ್ತದೆ, ಒಂದು ಅರ್ಥದಲ್ಲಿ ಅದು ಓದುಗನ ಮಾಪಕ ಎಂದರು. ನಾವು ಕವನಗಳನ್ನು ಕಂಡಂತೆ, ಅರ್ಥಮಾಡಿಕೊಂಡಂತೆ ಪರೀಕ್ಷೆಯಲ್ಲಿ ಬರೆಯಬೇಕೆಂದೂ, ನಾವು ನಾವು ಗ್ರಹಿಸಿದ್ದೂ ಕವನದ ಅರ್ಥವೇ ಎಂದೂ ಹೇಳಿದರು! ವಿ.ಸೀ. ಹೇಳಿದ್ದು ನಮಗೆ ಥಂಡಿಯಾಗಿ ಗ್ರಾಸವೊದಗಿಸಿತ್ತೆನ್ನುವುದು ಪ್ರಶ್ನೆಪತ್ರಿಕೆ ನಮ್ಮ ಕೈಗೆ ಬಂದಾಗ ನಮಗೆ ತಿಳಿಯಿತು.

ಕವನಗಳನ್ನು ಓದುವ ವಿ.ಸೀ. ಅವರ ರೀತಿ ವಿಶಿಷ್ಟವಾಗಿ ಅವರದೇ. "ನೀ ಹೀಂಗ ನೋಡಬ್ಯಾಡ ನನ್ನ"ದ "ಅತ್ತಾರ ಅತ್ತು ಬಿಡು..... ತಡೀಬ್ಯಾಡ ಬಿಕ್ಕ" ಎನ್ನುವ ಸಾಲಿನಲ್ಲಿ ಬರುವ "ಬಿಕ್ಕ" ಪದವನ್ನು ಅವರು ಉಚ್ಚರಿಸಿದ ರೀತಿ ಅನನ್ಯ. "ಹಗಲಿನಾಗ ಚಂದಿರನ ಹೆಣ ತೇಲಿ ಬಂದ್ಹಾಂಗ" ಎನ್ನುವ ಸಾಲನ್ನು ವಿವರಿಸಿದ್ದು, ಕವನಕ್ಕೆ ಹಿನ್ನೆಲೆಯಾಗಿ ಸಂದರ್ಭವೊಂದನ್ನು ಕಟ್ಟಿ ಕವನವನ್ನು ಓದಿ ಅರ್ಥೈಸಿದ ಬಗೆ ಮರೆಯಲಾಗದಂಥದು. ಬೇಂದ್ರೆಯವರ ಕವನಗಳಲ್ಲಿ ನಿರಂತರವಾಗಿ ಹರಿಯುವ ಪ್ರಾಸ ವಿನ್ಯಾಸ, ಮಾತಿನ ಚಮತ್ಕಾರ, ಓಟ, ಲಾಸ್ಯ, ಶಬ್ದ ಮಾಂತ್ರಿಕತೆ, ಲಯಬದ್ಧವಾಗಿ ನಲಿಯುವ ಸಾಲುಗಳು, ಜಾನಪದದ ಸೊಗಡು, ಆಡುಮಾತು ಕಾವ್ಯಮಯವಾಗಿ ಧ್ವನಿಸುವುದು, ಶಬ್ದಶಬ್ದಗಳೊಡನೆ ಬೇಂದ್ರೆಯವರು ಆಡುವ ಚಕ್ಕಂದ – ಹೀಗೆ ಹಲವು ಹತ್ತು ಅಂಶಗಳನ್ನು ಜೊತೆಜೊತೆಗೇ ವಿವರಿಸುತ್ತಿದ್ದ ವಿ.ಸೀ. ಅವರ ಪಾಠ ಅಮೋಘ. ಅದು ವಿವರಣೆಗೆ ಎಟುಕದ್ದು; ಅನುಭವ ವೇದ್ಯ ಮಾತ್ರ. ವಿ.ಸೀ. ಪಾಠದ ಬಗೆ ಹೀಗಿತ್ತು ಎಂದು ನನ್ನಂಥವನು ಹೇಳ ಹೊರಡುವುದು ಬರಡಾಗುತ್ತದೆ, ಜಾಳಾಗುತ್ತದೆ.

ಒಂದು ಕವನ ತನ್ನ ಒಡಲಲ್ಲಿ ಬಚ್ಚಿಟ್ಟುಕೊಂಡಿರುವ ಭಾವಸಂಪತ್ತಿಯನ್ನು, ಅರ್ಥವನ್ನು ಓದುಗ ಗ್ರಹಿಸಬೇಕಾದರೆ ಅವನು ಕಾವ್ಯಕ್ಕೆ ಸ್ಪಂದಿಸುವವನಾಗಬೇಕು ಮತ್ತು ಕವನವನ್ನು ಓದುವ ಮರ್ಮವನ್ನು ಅರಿತಿರಬೇಕೆನ್ನುವುದು ವಿ.ಸೀ. ಅವರ ಓದುಗಾರಿಕೆಯಿಂದ ಸ್ಪಷ್ಟವಾಗುತ್ತಿತ್ತು. ವಿ.ಸೀ. ಸ್ವತಃ ಕವಿ; ಸಾಹಿತ್ಯದಲ್ಲಿ ಆಳಿಮುಳುಗಿದವರು, ಓದುಗಾರಿಕೆಯಲ್ಲಿ ವಿಶಿಷ್ಟತೆಯನ್ನು ಮೆರೆಯುವವರು; ಎಂದ ಮೇಲೆ ಹೇಳಬೇಕೇನು?

* * *

ವಿ.ಸೀ. ಸದಭಿರುಚಿಯುಳ್ಳವರು; ವಿಚಾರಶೀಲರು; ಮೇಲ್ನೋಟಕ್ಕೆ ಶ್ರೀಮದ್ಗಾಂಭೀರ್ಯದವರೆಂದು ಕಂಡರೂ ಮೃದುತ್ವ ಅವರ ಜಾಯಮಾನ ಎಂದೇ ಕಾಣುತ್ತದೆ. ಸಾಹಿತ್ಯ, ಸಂಗೀತ, ಶಿಲ್ಪ, ನಾಟಕ – ಕೊನೆಗೆ ಸಿನೆಮಾ ಕೂಡ!; ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಧರ್ಮಶಾಸ್ತ್ರ – ಹೀಗೆ ಹಲವು ಹತ್ತು ಕ್ಷೇತ್ರಗಳಲ್ಲಿ ಅಪಾರವಾದ ಪರಿಶ್ರಮ ಪಡೆದಿದ್ದವರು ಅವರು ಎನ್ನುವುದು ಪಾಠ ಮಾಡುತ್ತಿದ್ದಾಗ ಅವರು ಕೊಡುತ್ತಿದ್ದ ಸಾಮ್ಯ–ಸಾಮತಿಗಳಿಂದ, ಉದ್ಧರಿಸುತ್ತಿದ್ದ ವಾಕ್ಯಗಳಿಂದ, ಆಲೋಚನಾ ವಿಲಾಸದಿಂದ ವ್ಯಕ್ತವಾಗುತ್ತಿದ್ದುವು. ಸಹೃದಯತೆ, ಸಹಾನುಭೂತಿ; ಚೆಲುವನ್ನು, ಒಳಿತನ್ನು ಕಾಣಬೇಕು – ಕಾಣಿಸಬೇಕು ಈ ನಿಟ್ಟಿನತ್ತ ಅವರ ಓಲು, ಒಲವು. ಮಾತಿನ ರೀತಿಯಲ್ಲಿ, ಅಭಿಪ್ರಾಯ ನಿರೂಪಣೆಯ ಸ್ಪಷ್ಟತೆಯಲ್ಲಿ, ಇಂಗ್ಲಿಷ್‌ನಲ್ಲಿ ಕನ್ನಡದಲ್ಲಿ ನಿರರ್ಗಳವಾಗಿ ಹರಿಯುತ್ತಿದ್ದ ಅವರ ವಾಕ್

ಪ್ರವಾಹದ ಗಂಭೀರತೆಯಲ್ಲಿ, ಶಬ್ದ ಅರ್ಥ, ಧ್ವನಿ, ಸಂದರ್ಭಗಳು ಸ್ಪಷ್ಟವಾಗುವಂತೆ ಮಾಡುತ್ತಿದ್ದ ಅವರ ಓದುಗಾರಿಕೆಯಲ್ಲಿ, ಅಧ್ಯಯನದ ವ್ಯಾಪ್ತಿ ವಿಸ್ತಾರಗಳಲ್ಲಿ, ಎಂಥವರನ್ನೂ ಬೆರಗುಗೊಳಿಸಬಲ್ಲಂಥ ನೆನಪಿನ ಶಕ್ತಿಯಲ್ಲಿ, ಲೋಕಾನುಭವದಲ್ಲಿ — ಏಕೆ, ಒಂದೇ ಅರ್ಥದ ವಿವಿಧ ಛಾಯೆಗಳನ್ನು ಹಾಯಿಸುವ ಬೇರೆ ಹತ್ತು ಪದಗಳನ್ನು ತಡೆಯಿಲ್ಲದೆ ಹೇಳುವ ವಾಗ್ವಿಲಾಸದಲ್ಲಿ, ಪಿ.ಸಿ. ಅವರಂಥ ಬೋಧಕರು ದೊರಕುವುದು ದುರ್ಲಭವೆನ್ನುವುದಂತೂ ನಿಸ್ಸಂಶಯ.

ಬೋಧಕನಾಗಿ ಯಶಸ್ಸುಗಳಿಸಬೇಕಾದರೆ ವ್ಯಕ್ತಿಗೆ ಸ್ವರೂಪಯೋಗ್ಯತೆ (ಎಂದರೆ ಪರ್ಸನ್ಯಾಲಿಟಿ) ಇರಬೇಕು ಎನ್ನುತ್ತಾರೆ ಡಿ.ಪಿ.ಜಿ. ಸ್ವರೂಪಯೋಗ್ಯತೆಯೆನ್ನುವುದು ಹಲವು ಗುಣಗಳ ಸಮ್ಮೇಳನ. ಐದು ಅಂಥ ಗುಣಗಳನ್ನೂ, ಆ ಗುಣಗಳ ಒಳಗುಣಗಳನ್ನೂ ನಿರೂಪಿಸುತ್ತಾರೆ ಡಿ.ಪಿ.ಜಿ.ಯವರು. ಅವು ಇವು : (೧) ವರ್ಚಸ್ಸು –ಮುಖದ ಗೆಲುವು; ಕಳೆ; ಕಾಂತಿ. ಚೆಲುವು ಕುಟುಕುಗಳಲ್ಲ; ಬುದ್ಧಿಯ ಚಾಕಚಕ್ಯದಿಂದಲೂ ದೇಹಾರೋಗ್ಯದಿಂದಲೂ ಉಂಟಾಗುವ ಪ್ರಕಾಶ. (೨) ಪ್ರಸನ್ನತೆ – ಎಂದರೆ ವಿಶ್ವಾಸ ಹುಟ್ಟಿಸುವ ಮುಖಭಾವ; ನೋಡಿದರೆ ಹುಡುಗರು ಬೆದರದೆ ಮಾತನಾಡಬೇಕೆಂದೆನಿಸಬೇಕು; ಉಗ್ರತೆ ವಕ್ರತೆಗಳಿಂದ ದೂರವಾಗಿರುವುದು. (೩) ಗಾಂಭೀರ್ಯ – ಗೌರವ ಹುಟ್ಟಿಸುವ ಮಾತು ಮತ್ತು ನಡವಳಿಕೆ; ಆತನಲ್ಲಿ ಯಾವುದೊ ಮಹತ್ತರ ಸಂಗತಿ ಇರುವುದೆಂಬ ಭಾವ ಮತ್ತು ಅದನ್ನು ಕೇಳಿ ತಿಳಿದುಕೊಳ್ಳಬೇಕೆಂಬ ಕುತೂಹಲ ಶಿಷ್ಯರ ಮನಸ್ಸಿನಲ್ಲಿ ಸದಾ ಉಂಟಾಗುತ್ತಿರಬೇಕು. (೪) ವಾಕ್ ಶುದ್ಧಿ – ಮಾತಿನ ಸರಿಯಾದ ನುಡಿತ; ಮುಖ್ಯ ಸಾಧನ ಮಾತ್ರ. ಬೋಧನೆಯ ಸಾರ್ಥಕತೆ ವಾಕ್ಸಾಮರ್ಥ್ಯಕ್ಕೆ ಅನುಗುಣ. (೫) ಸ್ವಸ್ಥಾನ ವಿಜ್ಞಾನ – ಸಮಾಜದಲ್ಲಿ ತನಗೆ ದೊರೆತಿರುವ ಸ್ಥಾನವೆಂಥಾದ್ದು, ತನಗಿರುವ ಗುಣಶಕ್ತಿಗಳೇನು, ಆ ಶಕ್ತಿಗಳನ್ನು ತನ್ನ ಕರ್ತವ್ಯಗಳಿಗೆ ಹೇಗೆ ವಿನಿಯೋಗಿಸಿದರೆ ತನ್ನ ಬಾಳು ಸಾರ್ಥಕವಾಗುತ್ತದೆಂಬ ಸ್ಪಷ್ಟಗ್ರಹಿಕೆ. ಡಿ.ಪಿ.ಜಿ. ಹೇಳುವ ಇಂಥ 'ಪರ್ಸನ್ಯಾಲಿಟಿ' ಇವ್ವ ಅತಿ ವಿರಳ ಬೋಧಕರಲ್ಲಿ ಪಿ.ಸಿ. ಒಬ್ಬರು.

* * *

ಮೊದಲನೆಯ ವಾರ್ಷಿಕ ಪರೀಕ್ಷೆಯ ನಮ್ಮ ಉತ್ತರ ಪತ್ರಿಕೆಗಳನ್ನು ಪಿ.ಸಿ. ವಿತರಿಸಲು ಬಂದಾಗ 'I will suck your blood....' ಎಲ್ಲರಿಗೂ ನೆನಪಾಗಿರಬೇಕು! ಉತ್ತರ ಪತ್ರಿಕೆಗಳ ಕಟ್ಟನ್ನು ಕೆಳಗು ಮೇಲಾಗಿಟ್ಟುಕೊಂಡು ಕೊನೆಯ ರಿಜಿಸ್ಟರ್ ನಂಬರ್‌ನ ಪತ್ರಿಕೆಯಿಂದ ಮೊದಲು ಮಾಡಿ ವಿತರಿಸುತ್ತ ಬಂದರು. ಯಾವ ವಿದ್ಯಾರ್ಥಿಯ ಉತ್ತರದ ಬಗೆಗೂ ಏನೊಂದು ಮಾತನ್ನೂ ಅವರು ಆಡಲಿಲ್ಲ. ಮೊದಲನೆಯ ವರ್ಷದಲ್ಲಿ ನಾನು half–freeship ವಿದ್ಯಾರ್ಥಿ; ನನ್ನ ಸರದಿ ಬಂದಾಗ ನನ್ನ ಉಸಿರು ಬಾಯಿಗೆ ಬಂದಿತ್ತು. ಪತ್ರಿಕೆಯನ್ನು ನನ್ನ ಕೈಗೆ ಕೊಡುತ್ತ 'keep it up' ಎಂದಷ್ಟೆ ಹೇಳಿದರು. ಆ ಕ್ಷಣ ಅಪೂರ್ವ ಅನುಭವ! ಬಿ.ಎಸ್ಸಿ. ಮೊದಲನೆಯ ಪರೀಕ್ಷೆಯಲ್ಲಿ ಇಡೀ ಕಾಲೇಜಿಗೆ ನನ್ನದು ಕನ್ನಡದಲ್ಲಿ ಅತ್ಯಧಿಕ ಅಂಕ! ಆದ್ದರಿಂದ ಡಾಜ್ಸ್ ಎಂಬ ಮಹಾಶಯನ ಹೆಸರಿನಲ್ಲಿದ್ದ ಸ್ಕಾಲರ್‌ಷಿಪ್

ನನಗೆ ಸಿಕ್ಕಿತು. ಪಿ.ಸೀ. ಅವರ ಆಶಯವನ್ನು ವ್ಯರ್ಥಗೊಳಿಸುವಲ್ಲಿ ಮಾತ್ರ ನಾನು ಸಫಲನಾದೆ. ಯಾಕೆ ಹಾಗಾಯಿತು? ಹೇಳಿದರೆ ಏನೂ ಸಬೂಬುಗಳು ಎಂದಾಗುತ್ತದೆ.

* * *

೧೯೬೪ ಎಂದು ನೆನಪು. ನಾನು ಕೇಂದ್ರ ಸರ್ಕಾರದ ಆದಾಯ ತೆರಿಗೆ ಇಲಾಖೆಯಲ್ಲಿದ್ದೆ. ಪೆನ್‌ಷನ್‌ದಾರರು ಮತ್ತು ಪೋಲೀಸ್ ಇಲಾಖೆಯವರ ಆದಾಯ ತೆರಿಗೆ file ಗಳನ್ನು ನಾನು ನೋಡಿಕೊಳ್ಳುತ್ತಿದ್ದೆ. ರೆಸಿಡೆನ್ಸಿ ಬಿಲ್ಡಿಂಗ್‌ನ ಒಂದು ಭಾಗದಲ್ಲಿ , ನಮ್ಮ ಇಲಾಖೆಯ ಸಂಬಳದ ವಿಭಾಗದ ಕಛೇರಿಯಿತ್ತು. ಪಿ.ಸೀ. ಆ ವೇಳೆಗಾಗಲೇ ನಿವೃತ್ತರಾಗಿ ಬಹಳ ವರ್ಷಗಳಾಗಿದ್ದುವಷ್ಟೆ. ಹಿಂದಿನ ಯಾವುದೊ ಒಂದೆರಡು ವರ್ಷಗಳ ತೆರಿಗೆ ಕಟ್ಟಿದ ಬಗ್ಗೆ ಅವರಿಂದ ವಿವರಗಳನ್ನು ತರಿಸಿಕೊಳ್ಳಬೇಕಾಗಿತ್ತಾದ್ದರಿಂದ ಅವರಿಗೆ ಒಂದು ಸೂಚನಾ ಪತ್ರ ಹೋಗಿತ್ತು. ಗೊತ್ತು ಮಾಡಿದ ದಿವಸ ಪಿ.ಸೀ. ಬಂದು ನಮ್ಮ ಸೂಪರ್ ವೈಸರ್‌ರವರನ್ನು ಕಂಡರು. ಅವರು ನನಗೆ ಹೇಳಿ ಕಳುಹಿಸಿದರು. ಪಿ.ಸೀ.ಗೆ ಹೋಗಿದ್ದ ಪತ್ರವನ್ನು ನನಗೆ ತೋರಿಸುತ್ತ, "ಇವರು ಯಾರೂಂತ ಗೊತ್ತೇನ್ರಿ" ಎಂದು ಕೇಳಿದರು. ಪಿ.ಸೀ. ಯಾರೆಂಬುದು ನನಗೆ ಗೊತ್ತಿದ್ದ ವಿಷಯ ನಮ್ಮ ಸೂಪರ್‌ವೈಸರ್‌ಗೆ – ಪಿ.ಸೀ.ಗೂ ಸಹ – ಹೇಗೆ ಗೊತ್ತಾಗಬೇಕು! ನಾನು ಸೆಂಟ್ರಲ್ ಕಾಲೇಜಿನಲ್ಲಿ ಪಿ.ಸೀ. ಅವರ ವಿದ್ಯಾರ್ಥಿಯಾಗಿದ್ದೆನೆಂದು ಹೇಳಿದೆ. ಪಿ.ಸೀ.ಗೆ ಸಂತೋಷ. "ಹೌದೇನಪ್ಪ! It's very nice to see my student here!" ಎಂದರು. "ಏನಪ್ಪಾ ಈ ನೋಟೀಸು" ಎಂದು ಕೇಳಿದರು. ಅಂದಿನ File ಗಳನ್ನೆಲ್ಲ ನಾನಾಗಲೇ ನಮ್ಮ ಆಫೀಸರ್‌ಗೆ ಕಳುಹಿಸಿದ್ದೆ. "ಅಂಥಾದ್ದೇನಿಲ್ಲ, ಸರ್. Some clarification ಅಷ್ಟೆ. ಆಫೀಸರ್‌ನ ನೋಡಿ ಬಿಡಿ ಸರ್" ಎಂದೆ. "ಆಗಲಪ್ಪಾ, Is he free now?" ಎಂದು ಕೇಳಿದರು. ಒಂದು ರೀತಿಯಲ್ಲಿ ಅವರು ಸದಾ free ನೆ. ನಾವು ಒಳಗೆ ಹೋಗುವ ಹೊತ್ತಿಗೆ file –ಅನ್ನು ನೋಡಿದ್ದರೆಂದು ಕಾಣುತ್ತದೆ. ಸ್ವತಃ ಅವರೇ ಬಾಗಿಲಿಗೆ ಬಂದು ಪಿ.ಸೀ. ಅವರ ಎರಡು ಹಸ್ತಗಳನ್ನೂ ತಮ್ಮ ಹಸ್ತಗಳಲ್ಲಿರಿಸಿಕೊಂಡು ಒಳಗೆ ಕರೆದುಕೊಂಡು ಹೋಗಿ, ಅವರನ್ನು ಕೂತುಕೊಳ್ಳಲು ಹೇಳಿ, ನಂತರ ತಾವು ಕುಳಿತರು. ನನ್ನ ಕಡೆ ತಿರುಗಿ ತಾವು ಪಿ.ಸೀ. ಅವರ ಶಿಷ್ಯರಾಗಿದ್ದರೆಂದರು. ಪಿ.ಸೀ. ಹೆಸರಾಂತ ಬರಹಗಾರರೆಂದೂ ಮೇಲಾಗಿ ಅರ್ಥಶಾಸ್ತ್ರದಲ್ಲಿ ಪರಿಣತರೆಂದೂ ನನಗೆ ಹೇಳಿದರು! ತೆರಿಗೆ ಬಾಕಿಯ ವಿಷಯ ಪ್ರಸ್ತಾಪವಾಗಲೇ ಇಲ್ಲ! ಕೃಷಿ, ಕೃಷಿ ಕ್ಷೇತ್ರದಲ್ಲಿನ ಆರ್ಥಿಕ ತೊಂದರೆಗಳು ಎಂದೆಲ್ಲ ಏನೇನೊ ಮಾತನಾಡಿದರು. 'ಹೀಗಾದರೆ ಹೇಗೆ ಸರ್' ಎಂದು ಪಿ.ಸೀ.ಯನ್ನು ಕೇಳಿದರು. ಪಿ.ಸೀ. ಅವಾಕ್ಕಾಗಿದ್ದರು. ನನಗೆ ತಲೆ ಬುಡ ತಿಳಿಯಲಿಲ್ಲ. ಪಿ.ಸೀ. "Sir, about this....." ಎನ್ನುವಷ್ಟರಲ್ಲೇ ನಮ್ಮ ಆಫೀಸರ್ "ಎಲ್ಲಾ ಸರಿಯಾಗಿದೆ ಸಾರ್. ಯಾವುದೋ TDS ನ ವಿವರ ನಮಗೆ ಸಿಕ್ಕಿಲ್ಲಾಂತ ಕಾಣುತ್ತೆ. ನಾವು ಅದನ್ನು ತರಿಸಿಕೊಂಡು verify ಮಾಡ್ತೀವಿ. Forget the notice, Sir" ಎಂದು ಬಿಟ್ಟರು. ತಮ್ಮ ಆಲ್ಮೀರಾದಿಂದ ಕಪ್ಪು ಸಾಸರ್‌ಗಳನ್ನು ತೆಗೆದು ಮೊದಲೇ ತರಿಸಿಟ್ಟಿದ್ದ ಹಾಲನ್ನು ಹಾಳತವಾಗಿ ಕಪ್ಪುಗಳಿಗೆ ಸುರಿದು ಪಿ.ಸೀ.ಗೆ ಕೊಟ್ಟು, ನನಗೂ 'ತಗೋಳ್ಳಪ್ಪಾ ಮಹಾಶಯಾ' ಎಂದರು. ತಮ್ಮ ಛೇಂಬರಿಂದ ಪಿ.ಸೀ. ಯವರೊಡನೆ ಹೊರಬಾಗಿಲಿನವರೆಗೂ ಬಂದು, ಅವರನ್ನು

ಬೀಳ್ಕೊಡುತ್ತ, "ಏನೋ ಸರ್, ಈ ನೆಪದಿಂದಲಾದ್ರೂನೂ ತಮ್ಮನ್ನು ನೋಡುವ ಹಾಗಾಯ್ತು, ತಮ್ಮ ಜೊತೆ ಮಾತಾಡುವ ಅವಕಾಶ ಸಿಕ್ಕಿತು" ಎಂದು ಕೈಮುಗಿದರು. ವಿ.ಸೀ. "ತುಂಬ ಸಂತೋಷ, ತುಂಬ ಸಂತೋಷ" ಎಂದು ಕೈಮುಗಿದು ಹೊರಟರು.

* * *

ಬೇಂದ್ರೆಯವರು ತೀರಿಕೊಂಡಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಸಂತಾಪ ಸೂಚಕ ಸಭೆ ಏರ್ಪಡಿಸಿತ್ತು. ಪರಿಷತ್ತಿನ ಸಭಾಂಗಣವನ್ನು ಆ ಮುಂಚೆಯೇ ಇನ್ಯಾವುದೊ ಕಾರ್ಯಕ್ರಮಕ್ಕೆ ಮೀಸಲಾಗಿ ಕಾದಿರಿಸಿದ್ದರಿಂದ ವಜ್ರಮಹೋತ್ಸವ ಕಟ್ಟಡದ ಮಹಡಿಯಲ್ಲಿನ ವಿಶಾಲವಲ್ಲದ ಸಭಾಂಗಣದಲ್ಲಿ, ಸಂತಾಪ ಸೂಚಕ ಸಭೆ ನಡೆಯುವುದಾಗಿತ್ತು. ಸಭೆಯ ವಿಷಯ ವಿ.ಸೀ. ಅವರಿಗೆ ತಿಳಿದು ತಾವೂ ಸಭೆಯಲ್ಲಿ ಹಾಜರಿರಬೇಕೆಂದು ಚಡಪಡಿಸಿದರಂತೆ. ಅವರಿಗೆ ಆ ಸಮಯಕ್ಕೆ ದೇಹಾರೋಗ್ಯ ಸರಿ ಇರಲಿಲ್ಲ; ಮಾತನಾಡುವುದೂ, ಬಹುಶಃ ಬಲು ಕಷ್ಟವಾಗಿತ್ತು. ಆದರೂ ಮಗನ ಜೊತೆಗೂಡಿ ಮಹಡಿ ಹತ್ತಿ ಮೆಲ್ಲಗೆ ಹೆಜ್ಜೆಗಳನ್ನು ಇಡುತ್ತಾ ಬಂದು ಮುಂದಿನ ಸಾಲಿನ ಕುರ್ಚಿಯ ಮೇಲೆ ಕುಳಿತು, ಬೆರಗುಗಣ್ಣುಗಳಿಂದ ಸುತ್ತಮುತ್ತ ನೋಡಿದರು. ಮಾಸ್ತಿ, ಗೋಕಾಕ್, ಮುಂತಾದ ಸಾಹಿತಿ ಗಣ್ಯರು ಸಭೆಗೆ ಬಂದಿದ್ದರು. ಸಭೆ ಇನ್ನೇನು ಪ್ರಾರಂಭವಾಗಬೇಕು. ಅಷ್ಟರಲ್ಲೇ ಯಾವುದೋ ಕಾರಣಕ್ಕಾಗಿ ಸ್ವಲ್ಪ ವಾಗ್ವಾದ ಗೊಂದಲ ಶುರುವಾಯಿತು! ಆತಂಕಗೊಂಡ ವಿ.ಸೀ.ಯನ್ನು ತಕ್ಷಣ ಅವರ ಮಕ್ಕಳು ಕರೆದುಕೊಂಡು ಹೊರಟರು. ಬಿ. ಪಿ. ರಾಧಾಕೃಷ್ಣ ಅವರು ವಿ.ಸೀ. ಬಗ್ಗೆ "ಸಾರ್ಥಕ ಬದುಕು" ಎನ್ನುವ ಪುಸ್ತಕವನ್ನು ಬರೆದಿದ್ದಾರೆ. ಪುಸ್ತಕದ 'ಕೊನೆಯ ಅಂಕ' ಎನ್ನುವ ಭಾಗದಲ್ಲಿ ವಿ.ಸೀ. ತಮ್ಮ ಮನೆಯ ಮುಂಬಾಗಿಲಿನಲ್ಲಿ ನಿಂತಿರುವ ಚಿತ್ರ ಇದೆ. ಪರಿಷತ್ತಿನ ಅಂದಿನ ಸಭೆಗೆ ವಿ.ಸೀ. ಬಂದಾಗ ಹಾಗೇ ಇದ್ದರು.

ವಿ.ಸೀ. ಎಂದೊಡನೆಯೇ ನನ್ನ ಕಣ್ಮುಂದೆ ಬರುವ ಚಿತ್ರ ಆ ಸೊಗಸಾದ ಪೇಟ, ಆ ಕ್ಲೋಸ್ ಕಾಲರ್ ಕೋಟು, ಕಚ್ಚೆಪಂಚೆ; ಕುರ್ಚಿಯ ಮೇಲೆ ಕುಳಿತು ಪಾಠ ಪ್ರಾರಂಭಿಸಿದರೆಂದರೆ! ಆ ವಾಗ್ಮಿತೆ, ಆ ವಾಗ್ವಿಲಾಸ, ಆ ಬೋಧನಾ ವೈಖರಿ, ಇಂಗ್ಲಿಷ್ ಕನ್ನಡಗಳ ವಾಗ್ಝರಿ – ವೈಭವದ ಪೀರಿಯೆಡ್‌ಗಳು ಅವು. ನನ್ನ ಆತ್ಮೀಯ ಸ್ನೇಹಿತ ಹೇಳುವಂತೆ "We saw a sea in V. ಸೀ."

ಒಂದು ನೆನಪು

ಕಮಲಾ ರಾಮಸ್ವಾಮಿ

೧೯೫೩. ಮಾರ್ಚಿ ತಿಂಗಳ ಮೊದಲ ವಾರ. ಬೆಳಿಗ್ಗೆ ೧೦.೩೦ ಘಂಟೆಗೆ ಸರಿಯಾಗಿ ವಿ.ಸೀ. ಯವರು ನಮ್ಮ ತರಗತಿಯೊಳಗೆ ಕಾಲಿಟ್ಟರು. ಮೊದಲ ಬಾರಿಗೆ ಅವರನ್ನು ಅಧ್ಯಾಪಕರನ್ನಾಗಿ ನೋಡಿದ್ದು. ತಲೆಗೆ ಅಚ್ಚ ಬಿಳಿಯ ಪೇಟ, ಬೂದು ಬಣ್ಣದ ಕೋಟು, ಬಿಳಿಯ ಕಚ್ಚೆಪಂಚೆ, ಕಪ್ಪು ಕಟ್ಟಿನ ಕನ್ನಡಕ, ಕಾಲಿಗೆ ಚಪ್ಪಲಿ, ಕೈಯಲ್ಲಿ ಪುಸ್ತಕ ಹಿಡಿದು ಅವರು ಒಳಗೆ ಬಂದರು.

ಸುಮಾರು ೩೫–೪೦ ವಿದ್ಯಾರ್ಥಿನಿಯರಿದ್ದ ಕಕ್ಷೆ. ಮಹಾರಾಣಿ ಕಾಲೇಜು. ಕೊನೆಯ ವರ್ಷ ಬಿ.ಎ. ಪರೀಕ್ಷೆಗೆ ತಯಾರಿ ನಡೆದಿತ್ತು. ಆರ್ಟ್ಸ್ ವಿಭಾಗದವರಿಗೆ "ಆರ್ಟ್ಸ್ ಕನ್ನಡ" ಎಂಬ ವಿಶೇಷ ವಿಷಯವಿತ್ತು. ಆ ವರ್ಷದ ಪಠ್ಯ ಪುಸ್ತಕಗಳಂತೂ ಕಬ್ಬಿಣದ ಕಡಲೆ; 'ಸಾಹಿತ್ಯ ಶಕ್ತಿ' (ಡಿವಿಜಿ) 'ನಾದಲೀಲೆ' (ಬೇಂದ್ರೆ) "ಚೆನ್ನಬಸವನಾಯಕ" ಮತ್ತು "ಆದಿಕವಿ ವಾಲ್ಮೀಕಿ" (ಮಾಸ್ತಿ). ಬಿ.ಎ. ಕನ್ನಡದ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅನುಕೂಲ ವಾಗಲಿ ಎಂದು ಪ್ರಿಪರೇಟರಿ ರಜೆಯಲ್ಲಿ ಸೆಂಟ್ರಲ್ ಕಾಲೇಜಿನ ಅಧ್ಯಾಪಕ ವರ್ಗದವರಿಂದ 'ಜನರಲ್ ಲೆಕ್ಚರ್ಸ್' ಏರ್ಪಡಿಸುತ್ತಿದ್ದರು. ನನ್ನದೂ ಅದೇ ವಿಷಯವಾದ್ದರಿಂದ ವಿ.ಸೀ. ಅವರ ಉಪನ್ಯಾಸವನ್ನು ಕೇಳುವ ಸೌಭಾಗ್ಯ ನನ್ನದಾಗಿತ್ತು.

"ಪರೀಕ್ಷೆಗಾಗಿ ಇರುವ ಈ 'ನಾದಲೀಲೆ' ಕವನ ಸಂಗ್ರಹದಿಂದ ಹಲವಾರು ಕವನಗಳನ್ನು ನಿಮಗಾಗಿ ವಿವರಿಸುತ್ತೇನೆ. ಅರ್ಥವಾಗದಿದ್ದರೆ ಸಂಕೋಚವಿಲ್ಲದೆ ಕೇಳಿ, ಹೇಳುತ್ತೇನೆ. ನಿಮಗಾಗಲೇ ಈ ಪುಸ್ತಕವನ್ನು ನಿಮ್ಮ ಉಪನ್ಯಾಸಕಿಯರು ಹೇಳಿಕೊಟ್ಟಿದ್ದಾರೆ. ಇದು ಬರಿಯ ರಿವಿಜನ್ – ಪರಿಷ್ಕರಣ. ಈ ದಿನ ನಾನು "ಭಾವಗೀತ" ಕವನದಿಂದ ಪ್ರಾರಂಭಿಸುತ್ತೇನೆ. "ಅಂಬಿಕಾತನಯದತ್ತ"ರ ಈ ಕವನ ಬಹಳ ಸುಂದರ ಹಾಗೂ ಅರ್ಥ ಪೂರ್ಣವಾದದ್ದು. ಕವನ, ಭಾವಗೀತೆಯನ್ನು ಬರೆಯುವ ಕವಿಗೆ ಪ್ರೇರಣೆ, ಸ್ಫೂರ್ತಿ ಏನು, ಹೇಗೆ, ಎಂದೆಲ್ಲಾ ಪ್ರಶ್ನೆ ಸಾಮಾನ್ಯರನ್ನು ಕಾಡಿಸುತ್ತೆ. ಕವಿಗೆ, ಅದರಲ್ಲೂ ದ.ರಾ. ಬೇಂದ್ರೆಯಂತಹ ಕವಿಗೆ, ನಿತ್ಯ ಜೀವನದ ಚಿತ್ರದಲ್ಲೇ ತನ್ನ ಕಲ್ಪನೆ ಚಿಂತೆಯ ಹೊಳೆ ಹರಿಯುವುದನ್ನು ಕಂಡು ಕಾವ್ಯವನ್ನು ಸೃಷ್ಟಿಮಾಡುತ್ತಾರೆ. ಈ 'ಭಾವಗೀತೆ'ಯನ್ನೇ

ಉದಾಹರಣೆಯನ್ನಾಗಿ ತೆಗೆದುಕೊಳ್ಳೋಣ. ಇದರ ಹುಟ್ಟು ಯಾವಾಗ, ಹೇಗೆ ಆಯಿತೆಂದು ನೋಡೋಣ.

ಬೇಂದ್ರೆಯವರ ಆರೋಗ್ಯ ಸಮರ್ಪಕವಾಗಿರಲಿಲ್ಲ. ಹಾಗಾಗಿ ನಾಲ್ಕು ದಿನ ಆಸ್ಪತ್ರೆಯಲ್ಲಿದ್ದರು. ಮನೆಗೆ ಹಿಂದಿರುಗಿಲು ಅಪ್ಪಣೆ ಸಿಕ್ಕಿತು. ಹುಷಾರಾದ ನಂತರ ಅವರ ಅಣ್ಣನೋ, ಗೆಳೆಯನೋ, ಅವರನ್ನು ಮನೆಗೆ ಕರೆದುಕೊಂಡು ಹೋಗಲು ಬಂದರು. ಆಸ್ಪತ್ರೆಯ ಆವರಣದಲ್ಲಿ ಮರವೊಂದರ ಕೆಳಗೆ ಅವರನ್ನು ಕುಳ್ಳಿರಿಸಿ ಗಾಡಿ ಮಾಡಿಕೊಂಡು ಬರಲು ಅವರು ಹೋದರು. ಬೇಂದ್ರೆಯವರು ಮರದ ನೆರಳಿನಲ್ಲಿ ಕೂತು ನೆಲವನ್ನೇ ನಿಟ್ಟಿಸುತ್ತಿದ್ದರು. ಅಲ್ಲೇ ಒಂದು ಸುಳಿಗಾಳಿ ಎದ್ದು, ಬಿದ್ದ ತರಗೆಲೆಯೊಂದನ್ನು ಸುಳಿಯಲ್ಲಿ ಸಿಕ್ಕಿಸಿ ಮೆಲ್ಲಗೆ ಗುಂಡಗೆ ತಿರುಗಿತು. ಅದೇ ಸಮಯಕ್ಕೆ ದುಂಬಿಯೊಂದು ಗುಂಯ್ ಗುಡುತ್ತಾ ಹಾದು ಹೋಯಿತು. ಕವಿಯ ಹೃದಯಕ್ಕೆ ಅಷ್ಟೇ ಸಾಕು! ಮೂಡಿ ಬಂತು

ಭೃಂಗದ ಬಿನ್ನೇರಿ ಬಂತು ಕಲ್ಪನಾವಿಲಾಸಾ
ಮಸೆದ ಗಾಳಿ ಪಕ್ಕ ಪಡೆಯುತಿತ್ತು ಸಹಜ ಪ್ರಾಸಾ

ಎಂಬ "ಭಾವಗೀತ"! ಎರಡನೆಯ ಸಾಲನ್ನು ಹೇಳುವಾಗ ವಿ.ಸೀ.ಯವರು ಎರಡೂ ಕೈಗಳನ್ನು ಮಸೆದು ತೋರಿಸುತ್ತಾ ಹೇಳಿದ್ದು ಕಣ್ಣಿಗೆ ಕಟ್ಟಿದಂತಿದೆ. ಪ್ರಾಸ ಕವನಕ್ಕೆ ಜೀವಾಳ. ರಾಗಬದ್ಧವಾಗಿ ಹಾಡಲು, ಓದಲು ಕವನಕ್ಕೆ ಪ್ರಾಸ ನೃತ್ಯಕ್ಕೆ ತಾಳವಿದ್ದಂತೆ. ದುಂಬಿ ಗಾಳಿಯಲ್ಲಿ ಹಾರಿದಾಗ ಅದರ ರೆಕ್ಕೆಗಳು ಬೀಸುವ ಗಾಳಿಗೆ ಮಸೆದು ಬರುವ "ಗುಂಗುಂ ಗಾನ." ಆ ಗಾನವಾದರೋ ಎಂತಹದ್ದು? ಓಂಕಾರದ ನಾದಕ್ಕಿಂತ 'ಕಿಂಚಿದೂನ' – ಸ್ವಲ್ಪ ಕಡಿಮೆ, ಅಷ್ಟೇ! ಆ ಭೃಂಗದ ಕೆಲಸವಾದರೂ ಏನು? ಹೂವಿನಿಂದ ಹೂವಿಗೆ ಹಾರಿ ಮಧುವನ್ನು ಹೀರುವುದು, ನೋವು, ನಲಿವು! ಹಾಗೆಯೇ ಬಾಳಿನಲ್ಲಿ ಕೂಡಾ, ಸಾವು ನೋವು, ಸೋಲು ಗೆಲವು ಎಲ್ಲವೂ. ಇದನ್ನೆಲ್ಲಾ ನೋಡಿದ ಸೃಷ್ಟಿಯ ಚೆಲುವು ಹಾಕುತ್ತಿತ್ತು ಆ ಗಾನಕ್ಕೆ ತಾಳ. ಅದನ್ನು ಕಂಡು ಕಾಲ ಕೇಳಿದನಂತೆ "ಬಂತೆಲ್ಲಿಗೆ?" "ಮಾತು ಮಾತು ಮಥಿಸಿ ಬಂದ ನಾದದ ನವನೀತಾ" ಮಾತು ಮಾತು ಕಡೆದು ಬಂದ ಮೃದು, ಮಧುರ ಬೆಣ್ಣೆಯಂತಹ "ಭಾವಗೀತೆ" ಅರ್ಥವೂ ಇಲ್ಲ, ಸ್ವಾರ್ಥವೂ ಇಲ್ಲದ ಬರಿಯ ಭಾವಗೀತಾ." ಹೀಗೆ ವರಕವಿ ದ. ರಾ. ಬೇಂದ್ರೆಯವರ ಕವನದ ಪರಿಚಯವನ್ನು ಮಾಡಿಕೊಟ್ಟರು ವಿ.ಸೀ. ೪೫ ವರ್ಷಗಳು ಕಳೆದರೂ ನನ್ನ ನೆನಪಿನಲ್ಲಿ ಹಚ್ಚ ಹಸುರಾಗಿದೆ.

ಮುಂದಿನ ಕ್ಲಾಸಿನಲ್ಲಿ 'ಪಾರಿಜಾತ'ವನ್ನು ವರ್ಣಿಸುತ್ತಿದ್ದರು. ಪರೀಕ್ಷೆ ಪಾಠ ಎಲ್ಲಾ ಮರೆತು ಅವರು ವರ್ಣಿಸುತ್ತಿದ್ದ ದಿವ್ಯ ಹೂವಿನ ಮಂಪರಿನಲ್ಲಿದ್ದೆವು. "ಮಣ್ಣು ನೆಲದ ಹೂವೇ ಅಲ್ಲ, ಗರ್ವ, ದರ್ಪ ಇದಕೆ ಇಲ್ಲ" ಅಷ್ಟು ಹೊತ್ತಿಗೆ ಕಾರಿನ ಕರ್ಕಶ ಹಾರನ್ನು ಕ್ಲಾಸಿನ ಮುಂಭಾಗದಲ್ಲೇ ಕೇಳಿಸಿತು. ಹನ್ನೆರಡರ ಸಮಯ. ತರಗತಿಯಲ್ಲಿದ್ದ ಹುಡುಗಿಯ ಮನೆಯ ಕಾರು, ಮತ್ತೊಮ್ಮೆ ಹಾರನ್ನು ಅರಚಿತು. ವಿ.ಸೀ ಪುಸ್ತಕ ಮುಚ್ಚಿ ಎರಡು ಕ್ಷಣ ಸುಮ್ಮನಾದರು. "ಕಾರು ಬಂದಿರುವವರು ಎದ್ದು ಹೋಗಬಹುದು. ಬೇಗ ಹೊರಟರೆ, ಮಿಕ್ಕವರಿಗೆ ಅನುಕೂಲ" ಎಂದರು, ಬಹಳ ನಯವಾಗಿ, ಹುಬ್ಬಗಂಟಿಕ್ಕದೆ. ಆಗಿನ ಕಾಲದಲ್ಲಿ

ಹರಿನಲ್ಲಿ ಬರುತ್ತಿದ್ದ ಹುಡುಗಿಯರು ಬೆರಳಿಗೆಸುವಷ್ಟು. ಸಿರಿವಂತ ಮನೆಯ ಹೆಣ್ಣು ಮಗಳು. ಅವಳಿಗೆ ಏಳಲೂ ಭಯ. ವಿ.ಸೀ. ಯವರಿಗೆ ಕಷ್ಟ ಅರ್ಥವಾಗಿರಬೇಕು: ಕಣ್ಣು ಮುಚ್ಚಿ ಕುಳಿತು "ಈಗ ಎದ್ದು ಹೋಗಿ" ಎಂದರು. ಎಲ್ಲರೂ 'ಗೊಳ್' ಎಂದು ನಕ್ಕರು. ವಿ.ಸೀ.ಯವರು ವಿದ್ಯಾರ್ಥಿನಿಯರನ್ನು ನಡೆಸಿಕೊಂಡ ಬಗೆ ಇದು.

ನಮ್ಮ ಕಾಲದ ಕವಿಗಳು ಬರೆದ ಕವಿತೆಗಳ ಮಟ್ಟ ಬಲು ಹೆಚ್ಚಿನದು ಎಂದು ಆಗ ಅನ್ನಿಸಿತ್ತು. ಇಂದೂ ಅದು ಹಾಗೆಯೇ ಉಳಿದಿದೆ. ಕುವೆಂಪು, ಅಂಬಿಕಾತನಯದತ್ತ, ಕೆ.ಎಸ್.ನ., ವಿ.ಸೀ. ಇವರುಗಳು ರಚಿಸಿದ ಜೀವಂತ ಕವನಗಳು ಬಾಳಿನ ಯಾವ ಮೆಟ್ಟಿಲಾದರೂ ಸರಿ, ಪ್ರಭಾವ ಬೀರದೆ ಇರದು. ರಾಷ್ಟ್ರ ಪ್ರೇಮದ ವೀರಗೀತೆಗಳಾಗಲಿ, ಬದುಕನ್ನು ಪ್ರತಿಬಿಂಬಿಸುವ ಹರಕೆಯ ಹಾಡಾಗಲಿ, ಯೌವನದ ಪ್ರಣಯ ಕವನಗಳಾಗಲಿ, ತತ್ವದರ್ಶನವಾಗಲಿ ಮನವನ್ನು ಸೂರೆಗೊಂಡು, ಕನಸಿನಲ್ಲಿ ವಿಹರಿಸುವಂತೆ ಮಾಡುವ, ಮೌಲ್ಯಗಳನ್ನು ಎತ್ತಿ ಹಿಡಿದು, ಮಾರ್ಗದರ್ಶನ ಮಾಡುವಂತಹ ಹಿರಿಮೆಯ ಕೃತಿಗಳು.

* * *

ನನ್ನ ತಂದೆ ರಾ.ಶಿ. ಯವರಿಗೆ ವಿ.ಸೀ. ಎಂದರೆ ಬಹಳ ಗೌರವ, ಆದರ, ಪ್ರೀತಿ. ಅವರನ್ನು ತಮ್ಮ ಆರಾಧ್ಯ ಕವಿ ಎಂದೇ ಕರೆಯುತ್ತಿದ್ದರು. ಅವರ "ಸಾಕ್ಷಿ ಸಂಕಲಿಕೆ" (ಬಾಳವಚನಗಳು) ಎಂಬ ಹೊತ್ತಿಗೆಯಲ್ಲಿ "ಸಾಷ್ಟಾಂಗವೆರಗಿ ಅರ್ಪಣೆ ಶ್ರೀ ವಿ.ಸೀ. ಅವರಿಗೆ" ಎಂದು ಕೆಳಗಿನ ಸಾಲುಗಳನ್ನು ಬರೆದಿದ್ದಾರೆ.

ಅರ್ಪಿಸುವೆ ವಿ.ಸೀ. ನಿಮಗಿದನು ಬಾಗಿ ।
ತಪ್ಪಿಲ್ಲ ಎನಿಸುತಿದೆ ನುಡಿ ನಿಮ್ಮ ಮೆದ್ದವಗೆ ॥
ಒಪ್ಪುವಿರಿ ನೀವಿದನು ಒಳದನಿಯು ಉಲಿಯುತಿದೆ ।
ಮುಪ್ಪಾದ ನನಗಿಂದು ಒಪ್ಪುತಪ್ಪುಗಳೊಂದೆ ॥

'ಕೆಣಕೋಣು ಬಾರ' ಎಂಬ ಅಣಕವಾಡುಗಳನ್ನು ರಾ.ಶಿ.ಯವರು ಬರೆದಾಗ ವಿ.ಸೀ. ಯವರ ಕವನಗಳನ್ನೂ ಅಣಕವಾಡಿದ್ದರು. ಆ ಸಮಯದಲ್ಲಿ ನಾನಿನ್ನೂ ನನ್ನ ತೌರಿನಲ್ಲೇ ಇದ್ದುದು ನನ್ನ ಸುದೈವ. ತಂದೆಯವರು ವಿ.ಸೀ.ಯವರ ಕವನಗಳನ್ನು ಓದಿ ಹೇಳುತ್ತಿದ್ದರು. ವಿ.ಸೀ. ಯವರ ಹೆಂಗರುಳು, ಹೆಣ್ಣು ಮಕ್ಕಳನ್ನು ಕಾಣುವ ರೀತಿ, ಒಲವು, ಗೌರವ ಮೆಚ್ಚಬೇಕಾದ್ದು. ಅವರ ಕನಿಕರ, ಅನುಕಂಪ ಎಲ್ಲವನ್ನೂ ಅವರ ಕವನಗಳು ಬಿಚ್ಚಿ ತೋರಿಸಿವೆ.

ಎಲ್ಲೋ ಹುಟ್ಟಿ, ಬೆಳೆದು, ಯಾರನ್ನೋ ಕೈ ಹಿಡಿದು ಏಳು ಹೆಜ್ಜೆ ಹಾಕಿ, ಜೀವನದ ಸಂಗಾತಿಯೆಂಬ ಪವಿತ್ರ ಬಂಧನದಲ್ಲಿ ಸಿಲುಕಿ ಬಾಳನ್ನು ಕಳೆಯುವುದು ಆಗಿನ ಕಾಲದ ರೀತಿಯಾಗಿತ್ತು. ಸಂಸಾರದಲ್ಲಿ ಗಂಡು, ಹೆಣ್ಣಿನ ಕುಂದುಕೊರತೆಗಳನ್ನು ಎತ್ತಿ ತೋರಿಸದೆ, ಹೆಣ್ಣು, ಗಂಡಿನ ಒಳ್ಳೆಯ ಗುಣಗಳನ್ನು ಎತ್ತಿಹಿಡಿದರೆ ಪರಸ್ಪರ ಪ್ರೇಮ ಬೆಳೆದು ಬಾಳು ಸಮರಸದ ಜೀವನ ಎನ್ನಿಸುವುದು.

ಹೆಜ್ಜೆಗಳೀಳನು ಈಗಿಡುವಂತೆಯೆ
ತಲೆಗಳನೇಳನು ನಡೆದೇವು
ಮಕ್ಕಳು ಮರಿ ಮೊಮ್ಮಕ್ಕಳ ಹಾಲಿಗೆ
ನಡೆನುಡಿ ಸಕ್ಕರೆ ಬೆರಸೇವು. (ಸಪ್ತಪದಿ)

ವಿ.ಸೀ.ಯವರ 'ಹೆಣ್ಣೊಪ್ಪಿಸುವ ಹಾಡು' ಎಂದೇ ಹೆಸರಾಗಿರುವ "ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು" ಎಂಬ ಹಾಡನ್ನು ಕೇಳಿದಾಗ ಕಣ್ಣೀರು ಮಿಡಿಯದವರು ಯಾರು? 'ಗೋವಿನ ಹಾಡಿ'ನಷ್ಟೇ ಪ್ರಚಲಿತವಾಗಿದೆ ಈ ಗೀತೆ. ರಾ.ಶಿ.ಯವರು ವಿ.ಸೀ.ಯವರ ಕವನ ಓದುವಾಗ ಭಾವುಕತೆಯಿಂದ ತುಂಬಿ ಹೋಗುತ್ತಿದ್ದರು. "ನೋಡು ಮಗಳೇ, ಬಾಳಿನಲ್ಲಿ ಬೇಸರ ಬೇಗೆ ಬವಣೆಗಳು ಕಾಡುವಾಗ ವಿ.ಸೀ. ಯವರ ಗೀತೆಗಳನ್ನು ಓದಿದಾಗ, ಮನಸ್ಸು ಹಗುರವಾಗುತ್ತದೆ. ಏನೋ ಒಂದು ರೀತಿಯ ಸಮಾಧಾನವನ್ನು ಕೊಟ್ಟು ಹೃದಯದ ಭಾರವನ್ನು ಕಡಿಮೆಮಾಡುವಂತಹ ಕವನಗಳವು. ನಿಂತ ನೆಲೆಯ ಕೆಸರನ್ನು ಮರೆಯದೆ ಗಗನದತ್ತ ಭಾವನಾಲಹರಿಯನ್ನು ತೇಲಿ ಬಿಡುವುದರಲ್ಲಿ ವಿ.ಸೀ. ಯಶಸ್ವಿಯಾಗಿದ್ದಾರೆ" ಎನ್ನುತ್ತಿದ್ದರು.

"ಕಷ್ಟ ಸಂಕಟಗಳು ಯಾರಿಗೆ ಇರುವುದಿಲ್ಲ? ಎಲ್ಲರಿಗೂ ಇದ್ದದ್ದೇ. ಅದೆಲ್ಲಾ ವೈಯಕ್ತಿಕ. ಅಂತರಂಗದಲ್ಲಿ ಇರಬೇಕು. ಸಂಕಟ ಹೆಚ್ಚಾಗಿ ಅತ್ತರೆ ತಲೆದಿಂಬಿಗೆ ಮಾತ್ರ ತಿಳಿದಿರಬೇಕು. ಅದು ಪ್ರದರ್ಶನಕ್ಕಲ್ಲ" ಎಂಬ ವಿ.ಸೀ.ಯವರ ಮಾತುಗಳನ್ನು ತಂದೆಯವರು ಪದೇ ಪದೇ ಹೇಳುತ್ತಿದ್ದರು.

ಬಾಳಿನಲ್ಲಿ ನೂರೆಂಟು ಮಾತುಗಳನ್ನು ಆಡಬಹುದು, ಆದರೆ ನುಡಿದಂತೆ ನಡೆವವರು ಅಪರೂಪ. ಅಂತಹ ಅಪರೂಪದ ವ್ಯಕ್ತಿತ್ವ ಈ ಮಹಾನುಭಾವರದ್ದು. "ಯುವ ಜನರ ಮನ ಒಲಿಸಿಕೊಂಡು, ಹಿತವಿಹಿತ ಪಥದಲ್ಲಿ ನಡೆಯುವಂತೆ ಪ್ರೇರೇಪಿಸುವುದು ಬರಹಗಾರನ ಆದ್ಯ ಕರ್ತವ್ಯ." "Sense of Ethical Values ಅನ್ನು ಸರ್ವಥಾ ಮರೆಯಬಾರದು" ಎಂದು ವಿ.ಸೀ. ಒತ್ತಿ ಒತ್ತಿ ಹೇಳುತ್ತಿದ್ದರು.

ಒಂದಿಷ್ಟು ನೆನಪುಗಳು

ಜಿ. ಎಸ್. ಅವಧಾನಿ

'ದೇವರೇನ್ನಿಜವೊ ನಿಜವಲ್ಲೊ ನಿಮ್ಮಂಥ ಬಾಳೊಂದು ನಿಜದ ನಿಜವು' ಎನ್ನುವ ಮಾತಿನಲ್ಲಿ ಹುಸಿಯಿಲ್ಲ. ಈ ವಾಣಿ ಕವಿ ವಿ.ಸೀ. ಯವರದು. ಗಾಂಧೀಜಿಯ ಕುರಿತು ಕವಿ ಕಟ್ಟಿಕೊಟ್ಟ ಚಿತ್ರ. ಮತ್ತೆ ಮತ್ತೆ ಮೆಲುಕು ಹಾಕಬಹುದಾದ ಈ ಸಾಲು ಸ್ವತಃ ವಿ.ಸೀ.ಯವರಿಗೂ ಅನ್ವಯಿಸುತ್ತದೆ. ವಿ.ಸೀ.ಯವರನ್ನು ಕಂಡ, ಕೇಳಿದ, ಓದಿದ, ಸಹವಾಸ-ವಾತ್ಸಲ್ಯದ ತೆಕ್ಕೆಯಲ್ಲಾಡಿದ ಯಾವನೇ ಆಗಲಿ ಮೇಲಿನ ಮಾತನ್ನು ನಿರಾಕರಿಸುವುದಿಲ್ಲ, ಮರೆಯುವುದಿಲ್ಲ.

ಕನ್ನಡದ ನವೋದಯದ ದಿಗ್ಗಜಗಳಲ್ಲೊಬ್ಬರಾಗಿ ನಾಡು ನುಡಿಯ ನರನಾಡಿಗಳಲ್ಲಿ ಸುದೀರ್ಘಕಾಲ ಚೈತನ್ಯದ ಧಾರೆ ಸುರಿಸಿದ ಸುಸಂಸ್ಕೃತ ಸುಮನಸರು ಅವರು. 'ಬಂದುದಕೆ ಭಯಪಡದೆ' ಬದುಕನ್ನು 'ನಂಬಿ'ದರು. 'ಅಂಬಿ'ನ ಹಾಗೆ 'ಗುರಿ'ಯನ್ನು ಅರಸುತ್ತ 'ಮಾನವನೆತ್ತರ ಅಗಸವೇರಿಗೆ' ಏರುತ್ತ ಏರುತ್ತ ನಡೆದರು. ಸುಮಾರು ಎಂಟು ದಶಕಗಳ ಕಾಲ ಈ ನೆಲದ ಸಾಂಸ್ಕೃತಿಕ, ಸಾಹಿತ್ಯಿಕ, ಶೈಕ್ಷಣಿಕ ಸಂದರ್ಭದಲ್ಲಿ ಕ್ರಿಯಾತ್ಮಕವಾಗಿ ತೊಡಗಿಕೊಂಡು ಅನೂನ ಸಿದ್ಧಿಗೆ ಕಾರಣರಾದರು. ಕಾವ್ಯ, ವಿಮರ್ಶೆ, ನಾಟಕ, ಪ್ರಬಂಧ, ಅರ್ಥಶಾಸ್ತ್ರ, ಕಲಾರಾಧನೆ, ಬೋಧನೆ, ಕನ್ನಡದ ಏಕೀಕರಣ, ರಾಜಕೀಯ ಚಿಂತನಗಳಲ್ಲೆಲ್ಲ ಅವಿಸ್ಮರಣೀಯರಾಗಿ ಬಾಳಿದ ಮಹಾಮಾನವತಾವಾದಿ ಸೆಪ್ಟೆಂಬರ್ ೪, ೧೯೮೩ರಂದು ಭೌತಪ್ರಪಂಚದಿಂದ ದೂರಾಗಿ ನಮ್ಮೆಲ್ಲರ ಪಾಲಿಗೆ ಬರೇ ನೆನಪಾಗಿ ಉಳಿದು ಹೋದರು. ತಮ್ಮ ಹಿಂದೆ ಅಸಂಖ್ಯಾತ ಅಭಿಮಾನಿಗಳನ್ನು, ಶಿಷ್ಯರನ್ನು, ಬಂಧು ಬಾಂಧವರನ್ನು – ಎಲ್ಲಕ್ಕಿಂತ ಮುಖ್ಯವಾಗಿ ಮಾದರಿಯಾಗಬಲ್ಲ ತಮ್ಮ ಬದುಕನ್ನು – ಬಿಟ್ಟು ನಡೆದರು.

ಅವರ ಅಪಾರ ವಿದ್ಯಾರ್ಥಿಗಳ ಬಳಗದಲ್ಲಿ ಒಬ್ಬನಾಗಿ ಒಳಗೊಳ್ಳುವ ಅದೃಷ್ಟ ನನ್ನಂತಹ ಹಳ್ಳಿಗಾಡಿನ ಹುಡುಗನಿಗೆ ಸಿಗುತ್ತದೆ ಎಂಬುದನ್ನ ಕನಸಿನಲ್ಲೂ ಕಲ್ಪಿಸುವಂತಿರಲಿಲ್ಲ. ಅದೆಂಥ ಯೋಗಾಯೋಗವೊ? ನನ್ನ ಪಾಲಿಗೆ ಅಂಥ ಸದವಕಾಶ ಒದಗಿತು. ನಾನಿಂದು ಹೀಗೆ ಇಷ್ಟಾಗುವಲ್ಲಿ – ಅಂದರೆ ಏನಾದರೂ ಕಿಂಚಿತ್ ಬೆಳವಣಿಗೆ, ಬರವಣಿಗೆ ಮೈಗೂಡಿಸಿಕೊಳ್ಳುವಲ್ಲಿ, ಅಂಶಿಕವಾಗಿಯಾದರೂ ಚಲನಶೀಲತೆ ಗಳಿಸಿಕೊಂಡಿದ್ದೇ ಆದರೆ ಅದು ವಿ.ಸೀ. ಯವರ ಗುರುತ್ವದ ಫಲ ಎಂಬುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಲೇಬೇಕು.

೧೯೬೪ರಲ್ಲಿ ಹೊನ್ನಾವರದಲ್ಲಿ ಪದವಿ ಕಾಲೇಜು ಪ್ರಾರಂಭವಾಯಿತು. ಇದೇನೂ ಮಹತ್ವದ ಸಂಗತಿ ಆಗಿರಲಿಕ್ಕಿಲ್ಲ. ಆದರೆ ಕಾಲೇಜಿನ ಪ್ರಥಮ ಪ್ರಾಚಾರ್ಯರಾಗಿ ವಿ.ಸೀ. ಈ ಕಡಲ ತಡಿಯ ಊರಿಗೆ ಬಂದರು ಎನ್ನುವುದು ನಮ್ಮಂಥವರ ಪಾಲಿಗೆ ಬಹುದೊಡ್ಡ ಸುದ್ದಿ. ಅಪರೂಪದ ಅಯಾಚಿತ ಲಾಭ. ನಾಲ್ಕು ವರ್ಷಗಳ ಕಾಲ ಈ ಜಿಲ್ಲೆಯ ಜನಜೀವನದ ನಡುವೆ ನಿಂತು ಸಹೃದಯತೆಯ, ಸುಸಂಸ್ಕೃತಿಯ, ನುಡಿ ಪ್ರೇಮದ ಬೀಜವನ್ನು ಬಿತ್ತಿದರು. ಮಕ್ಕಳ ಭವಿಷ್ಯದ ಸೇತುವೆಯಾದ ಕಾಲೇಜನ್ನು ನಿಜವಾದ ಅರ್ಥದಲ್ಲಿ ಅವರ ಒಳ–ಹೊರಗಿನ ಸತ್ವದೊಡನೆ ಲಾಲಿಸಿ, ಪಾಲಿಸಿ ಭದ್ರತಳಪಾಯ ಕಟ್ಟಿಕೊಟ್ಟರು. ನೂರಾರು ಹುಡುಗರ ಬದುಕಿನಲ್ಲಿ ಜೀವ ತುಂಬಿದರು.

ಎರಡು ವರ್ಷ ೧೯೬೬ ರಿಂದ ೬೮ ರ ಅವಧಿಯಲ್ಲಿ ಅವರ ವಿದ್ಯಾರ್ಥಿಯಾಗಿ ಅವರೊಡನೆ ಕಳೆದ ದಿನಗಳು ನನ್ನೊಳಗೆ ಇವತ್ತಿಗೂ ಹಚ್ಚಹಸಿರಾಗಿ ಹೊನ್ನಕಿರೀಟ ಹೊತ್ತು ನಿಂತಿದೆ. ಕಾಲೇಜಿಗೆ ಸೇರುವ ಮೊದಲೇ ವಿ.ಸೀ. ಯವರ ಹೆಸರನ್ನು ಕೇಳಿದ್ದೆ. ಅವರ 'ಮನೆ ತುಂಬಿಸುವ ಹಾಡು' ಮತ್ತು 'ಶಬರಿ' ಕವಿತೆಗಳನ್ನು ಓದಿದ್ದೆ. ಹೈಸ್ಕೂಲಿನ ಪಠ್ಯಪುಸ್ತಕಗಳಲ್ಲಿ ಪ್ರಕಟವಾಗಿದ್ದ ಅವರ ಕವಿತೆಗಳನ್ನು ನನ್ನ ಸೀಮಿತ ಬುದ್ಧಿಯ ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದೆ. 'ಮನೆ ತುಂಬಿಸುವ ಹಾಡು' ಆಗಲೇ ಹೆಣ್ಣುಮಕ್ಕಳ ಬಾಯಲ್ಲಿ ನೆಲೆಸಿ ಜನಪ್ರಿಯವಾಗಿತ್ತು. ಮದುವೆಗಳಲ್ಲಿ ಹೆಣ್ಣೊಪ್ಪಿಸುವಾಗ ಈ ಹಾಡು ಕಿವಿಗೆ ಬೀಳದೇ ಇರುತ್ತಿರಲಿಲ್ಲ. ಹೇಳುವವರ ಮತ್ತು ಕೇಳುವವರ ಕಣ್ಣುಗಳಲ್ಲಿ ಕಂಬನಿಯನ್ನುಕ್ಕಿಸುವ ತೀವ್ರ ಭಾವಸ್ಪಂದನ ಕವಿತೆಯುದ್ದಕ್ಕೂ ರಸಸ್ಯಂದಿಯಾಗಿ ಆವರಿಸಿಕೊಂಡಿತ್ತು. ಆದರೆ ಈ ಕವಿತೆ ರಚನೆಯಾದ ಹಿನ್ನೆಲೆಯನ್ನು ವಿ.ಸೀ. ಯವರಿಂದಲೇ ಅನಂತರ ಕೇಳಿ ಬೆರಗುಗೊಂಡಿದ್ದೂ ಸುಳ್ಳಲ್ಲ.

೧೯೬೫ರ ಬೇಸಿಗೆಯಲ್ಲೊಂದು ದಿನ. ನಾನಾಗ ಹೈಸ್ಕೂಲಿನಲ್ಲಿ ಓದುತ್ತಿದ್ದೆ. ಸಹಪಾಠಿ ಗೆಳೆಯ ಎಸ್. ಪಿ. ಹೆಗಡೆ (ಸಾಹಿತ್ಯ, ವಿಜ್ಞಾನಗಳಲ್ಲಿ ಗಾಢವಾದ ಆಸಕ್ತಿಯಿದ್ದ, ಒಳ್ಳೆಯ ಮಾತುಗಾರನಾಗಿದ್ದ ಈತ ತನ್ನ ತುಂಬು ತಾರುಣ್ಯದಲ್ಲೆ ೧೯೮೧ರಲ್ಲಿ ಆಕಸ್ಮಿಕವಾಗಿ ನಿಧನ ಹೊಂದಿದ) ಶಾಲೆಯ ಬಿಡುವಿನ ವೇಳೆಯಲ್ಲಿ ಗುಟ್ಟಾಗಿ ಒಂದು ಸುದ್ದಿ ಹೇಳಿದ. 'ಇವತ್ತು ಸಾಯಂಕಾಲ ಕಡತೋಕಾಕ್ಕೆ ವಿ.ಸೀ. ಬರ್ತಾರಂತೆ, ಹೋಗೋಣ' ಎಂದ. ನಮಗೋ, ಹೋಗುವ ತವಕ. ಕ್ಲಾಸನ್ನು ತಪ್ಪಿಸಿದರೆ ಲೋಕೇಶ್ವರ ಮಾಸ್ತರರಿಂದ ದಂಡನೆಗೆ ಒಳಗಾಗುವ ಭಯ. ಕ್ಷಣಕಾಲ ತೊಳಲಾಡಿದೆವು. ಕೊನೆಗೂ ಒಂದು ಉಪಾಯ ಹುಡುಕಿದೆವು. ಗೊಬ್ಬರ ಕಂಬಳ ಇತ್ತು ಎಂದು ಹೇಳಿದರಾಯ್ತು ಅಂತ ಧೈರ್ಯ ತಂದುಕೊಂಡು, ಅಂಥ ಅವಕಾಶ ತಪ್ಪಿಸಿಕೊಳ್ಳಬಾರದು ಎಂದು ಕ್ಲಾಸಿಗೆ ಚಕ್ಕರ್ ಹೊಡೆದು, ಅರೆಅಂಗಡಿಯಿಂದ ಕಡತೋಕಾ ಹೈಸ್ಕೂಲಿಗೆ ಹೊರಟೆವು. ನಾಲ್ಕೋ, ನಾಲ್ಕೂವರೆಗೋ ಕಾರ್ಯಕ್ರಮ. ಉರಿಬಿಸಿಲಿನಲ್ಲಿ, ಸುಡುರಸ್ತೆಯಲ್ಲಿ ಆರು ಕಿ.ಮೀ. ದೂರ ಅಗದಿ ಗಡಿಬಿಡಿಯಿಂದ ಹೆಜ್ಜೆಕಿತ್ತಿಡುತ್ತ ಹೋಗಿ ತಲುಪಿ ಕಾದೆವು.

ಅಚ್ಚ ಮಲ್ಲಿಗೆ ಅರಳಿ ನಿಂತ ಉಡುಗೆಯಲ್ಲಿ ವಿ.ಸೀ. ಬಂದರು. ಐದು, ಐದೂವರೆ ಅಡಿ ಎತ್ತರ. ಮಫತ್‌ಲಾಲ್ ಪಂಚೆ, ಕ್ಲೋಸ್ ಕಾಲರ್ ಕೋಟು, ಗರಿ ಮುರಿಯದ

ಮೈಸೂರು ರುಮಾಲು. ಉರೂಟು ಕನ್ನಡಕದೊಳಗೆ ಹೊಳಹೊಳೆವ ಕಣ್ಣುಗಳು. ಅಂದವರು ಮಾಡಿದ ಭಾಷಣ ನೆನಪಿಲ್ಲ. ಅರ್ಥ ಆದರಲ್ಲವೆ ನೆನಪಿರುವುದು? ಮೈಯೆಲ್ಲ ಕಿವಿಯಾಗಿ ಕೂತಿದ್ದೆವು. ಆದರೆ ಆ ಅವರ ನಿಲುವು, ಧ್ವನಿ, ಹಾವಭಾವ, ನಗುನಗುತ ಹಾರಿಸಿದ ಹಾಸ್ಯ ಚಟಾಕಿ ಈಗಲೂ ಕಣ್ಣು ಕಿವಿಗಳಲ್ಲಿ ಅನುರಣನಗೊಳ್ಳುತ್ತಿರುವುದೊಂದು ರೋಮಾಂಚಕ ಅನುಭವ.

ಅವತ್ತು ನಡೆದ ಒಂದು ಘಟನೆ ಮರೆಯುವಂತದ್ದೇ ಅಲ್ಲ. ಒಂದಿಷ್ಟು ಸಣ್ಣಸಣ್ಣ ಹುಡುಗರು ಮುಂದೆ ಕೂತಿದ್ದರು. ಎಲ್ಲ ನಮ್ಮಂಥ ಹೈಸ್ಕೂಲು ಮಕ್ಕಳು. ವಿ.ಸೀ. ಯವರ ಮಾತನ್ನು ಅರ್ಥಮಾಡಿಕೊಳ್ಳುವ ಗಾಂಭೀರ್ಯವಾಗಲಿ, ತಾಳ್ಮೆಯಾಗಲಿ ಇಲ್ಲದ ಕಾಲ, ವಯಸ್ಸು. ತಂತಮ್ಮಲ್ಲಿಯೇ ಹರಟೆ ಹೊಡೆಯುತ್ತಿದ್ದರು. ಮೈಮೇಲಿನ ಖಬರ್ ಇಲ್ಲದ ಹಾಗೆ ಗದ್ದಲದಲ್ಲಿ ಮುಳುಗಿದ್ದರು. ವಿ.ಸೀ. ಕ್ಷಣ ಹೊತ್ತು ಮಾತು ನಿಲ್ಲಿಸಿ ಅವರನ್ನೇ ನೋಡಿದರು, ಅಷ್ಟೇ. ಅದೇ ಮೊದಲು, ಅದೇ ಕಡೆ. ಮತ್ತೆಂದೂ ಅವರು ಇಲ್ಲಿದ್ದಷ್ಟು ದಿನ ಯಾವ ಶಾಲೆಗೂ ಭಾಷಣಕ್ಕೆ ಹೋಗಲಿಲ್ಲ. ನಿಜ, ವರ್ಗದಲ್ಲಾಗಲಿ, ಸಾರ್ವಜನಿಕ ಉಪನ್ಯಾಸಗಳಲ್ಲಾಗಲಿ ಗೌಜು-ಗದ್ದಲವನ್ನು ಅವರೆಂದೂ ಸಹಿಸುತ್ತಿರಲಿಲ್ಲ.

ನಾವು ಪಿ.ಯು.ಸಿ.ಯಲ್ಲಿ ೨೦೦ ಹುಡುಗರು. ಇಂಗ್ಲಿಷ್ ಕಾವ್ಯ ಪಾಠ ವಿ.ಸೀ. ಯವರದು. ಯಾವ ಮೂಲೆಯಲ್ಲಿ ಯಾರೇ ಆಗಲಿ ತುಸು ಅಲ್ಲಾಡಿದರೆ, ಪಿಸುಗುಟ್ಟಿದರೆ ಅವರಿಗದು ತಕ್ಷಣ ತಿಳಿದುಬರುತ್ತಿತ್ತು. ಆಗ ಅಂಥವರ ಗ್ರಹಚಾರವನ್ನೇ ಬಿಡಿಸುತ್ತಿದ್ದರು. ಕನ್ನಡವಿರಲಿ, ಅರ್ಥಶಾಸ್ತ್ರವಾಗಿರಲಿ, ಅಥವಾ ವ್ಯಾಕರಣದ ಪಾಠವಾಗಿರಲಿ – ಅದೇ ನಿಲುವು, ಅದೇ ಶಿಸ್ತಿನ ಶೈಲಿ. ಅವರೊಂದು ನಡೆದಾಡುವ ವಿಶ್ವಕೋಶವಿದ್ದಂತೆ. ಅವರ ಆಸಕ್ತಿಯ ವಿಷಯಗಳಿಗೆ, ಅವರ ಅಧಿಕಾರಯುತ ಅಧ್ಯಾಪನದ ಪ್ರೌಢಿಮೆಗೆ ಯಾರೂ ಬೆರಗಾಗಲೇಬೇಕು. ಕರ್ನಾಟಕ ಸಂಗೀತವಾಗಿರಲಿ, ಚಿತ್ರಕಲೆಯಾಗಿರಲಿ, ರಾಜ್ಯಶಾಸ್ತ್ರವಾಗಿರಲಿ, ತರ್ಕಶಾಸ್ತ್ರವಾಗಿರಲಿ ಅಳತೆಗೆ ಸಿಗದ ಅಧ್ಯಯನ, ಅನುಭವ ಅವರದು.

ಅವರ ಪಾಠಗಳಿಗೆ ನಾವೆಷ್ಟು ಹಪಹಪಿಸುತ್ತಿದ್ದೆವೋ, ಅಷ್ಟೇ ಭಯಪಡುತ್ತಲೂ ಇದ್ದೆವು. ಯಾಕೆಂದರೆ ನಡುನಡುವೆ ಅವರು ಪ್ರಶ್ನೆ ಕೇಳಿಬಿಡುತ್ತಿದ್ದರು! ಅವರಾಗ ಪದವಿ ತರಗತಿಗೆ ಹರಿಶ್ಚಂದ್ರ ಕಾವ್ಯ ಪಾಠ ಮಾಡುತ್ತಿದ್ದರು. ನಮಗಲ್ಲಿ ಕೂರುವ ಅಭಿಲಾಶೆ ಇದ್ದರೂ, ನಾವು ಪಿ.ಯು.ಸಿ. ಹುಡುಗರಾದ್ದರಿಂದ ಅಲ್ಲಿ ಹೋಗಲು ಅವಕಾಶ, ಅನುಮತಿ ಇದ್ದಿರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅವರನ್ನು ಕೇಳುವ ಧೈರ್ಯವೇ ಇರಲಿಲ್ಲ. ಹಾಗಾಗಿ ಅವರು ಹರಿಶ್ಚಂದ್ರ ಕಾವ್ಯ ಪಾಠ ಹೇಳುವಾಗ ಬಾಗಿಲ ಪಕ್ಕದಲ್ಲಿ, ಅವರ ಮೂಗಾಳಿಗೂ ಸಿಗದ ಹಾಗೆ, ಉಸಿರು ಕಟ್ಟಿದವರ ಹಾಗೆ ನಿಂತು ಕೇಳುತ್ತಿದ್ದೆವು. ತಮಾಶೆಯೆಂದರೆ ಅವರು ಹರಿಶ್ಚಂದ್ರ ಕಾವ್ಯವನ್ನ ಒಮ್ಮೊಮ್ಮೆ ಇಂಗ್ಲಿಷಿನಲ್ಲೇ ವಿವರಿಸುತ್ತಿದ್ದರು!

ಇನ್ನೊಂದು ವಿಚಾರವನ್ನು ಇಲ್ಲಿ ಪ್ರಸ್ತಾಪಿಸಬಹುದು. ನಮ್ಮಲ್ಲೀಗ ನೋಟ್ಸ್ ಹಾವಳಿ ವಿಪರೀತವಾಗಿದೆ. ನೋಟ್ಸ್ ಕೊಡದಿದ್ದ ಅಧ್ಯಾಪಕರ ಬಗೆಗೆ ವಿದ್ಯಾರ್ಥಿಗಳಲ್ಲಿ ಒಂದು ರೀತಿಯ ಜುಗುಪ್ಸಾ ಭಾವ ಬೆಳೆಯುತ್ತಿದೆ. ಆದರೆ ನಮ್ಮ ವಿ.ಸೀ. ನೋಟ್ಸ್ ಕೊಡುವುದಕ್ಕೆ ಕಡು ವಿರೋಧಿ. ಒಮ್ಮೆ ಸ್ನೇಹಿತ ಶಾನಭಾಗ 'ಸರ್, ನೋಟ್ಸ್' ಅಂದ. ವಿ.ಸೀ. ಹುಬ್ಬು

ಗಂಟಿಕ್ಕಿ ಕೈಬೆರಳುಗಳನ್ನು ಹಣೆಯ ಮೇಲಿಟ್ಟು 'ಹೂಂ.... ಇಲ್ಲಿ.... ಇಲ್ಲಿ ನೋಟ್ಸ್ ಬರೆದುಕೊಳ್ಳಿ' ಎಂದು ಗದರಿದರು. ವಿದ್ಯಾರ್ಥಿಗಳೆಂದೂ ಪರಾವಲಂಬಿ, ಪಲಾಯನವಾದಿ ಆಗಬಾರದು. ತರಗತಿಗಳಲ್ಲಿ ತನ್ಮಯತೆಯಿಂದ ವಿಷಯ ಗ್ರಹಿಸಬೇಕು. ಆ ಮೇಲೆ ತಾನೇ ಸ್ವತಃ ಆಕರಗ್ರಂಥಗಳ, ಅಧ್ಯಾಪಕರ ಸಹಾಯದಿಂದ ಟಿಪ್ಪಣಿ ತಯಾರಿಸಿಕೊಳ್ಳಬೇಕು. ಸ್ವಂತಿಕೆ ಬೆಳೆಸಿಕೊಳ್ಳಬೇಕು ಎಂಬುದು ಅವರ ಖಚಿತ ಅಭಿಪ್ರಾಯ. ಬರೇ ಪುಸ್ತಕದ ಹುಳುಗಳಾಗುವುದನ್ನೂ ಸಹ ಅವರು ಇಷ್ಟಪಡುತ್ತಿರಲಿಲ್ಲ. ಒಂದಿಷ್ಟು ಪಠ್ಯವನ್ನೊ, ಸಿದ್ಧ ಉತ್ತರವನ್ನೊ ಕಂಠಪಾಠ ಮಾಡಿ ಬರೆಯುವ ಪ್ರವೃತ್ತಿಯನ್ನು ಖಂಡಿಸುತ್ತಿದ್ದರು. ವಿಷಯವನ್ನು ತಿಳಿದುಕೊಳ್ಳುವುದು ಮುಖ್ಯವೇ ವಿನಾ ಅದನ್ನು ಮಕ್ಕಿ ಕಾ ಮಕ್ಕಿ ಉಗುಳುವುದು ಮಹತ್ವದ್ದಲ್ಲ ಎಂಬುದನ್ನು ಯಾವಾಗಲೂ ನಮಗೆ ಹೇಳುತ್ತಿದ್ದರು.

ವಿದ್ಯಾರ್ಥಿಗಳ ನಂಬರುಗಳನ್ನು ಕೂಗಿ ಹಾಜರಿ ಹಾಕುವ ಅಭ್ಯಾಸ ಅವರಿಗಿದ್ದಿಲ್ಲ. 'ನೀವೇನು ಕೈದಿಗಳೇ? ಜೈಲರನಂತೆ ನಾನು ನಿಮ್ಮ ನಂಬರು ಕರೆಯಬೇಕೆ?' ಎಂದು ನಗಾಡುತ್ತಿದ್ದರು. ಎಲ್ಲರ ಹೆಸರು ಕರೆದೇ ಹಾಜರಿ ತೆಗೆದುಕೊಳ್ಳುತ್ತಿದ್ದರು. ಅಕಸ್ಮಾತ್ ಒಂದೇ ಒಂದು ದಿನ ಅವರ ಕ್ಲಾಸಿಗೆ ಚಕ್ಕರ್ ಹಾಕಿದರೂ ಅವರಿಗದು ತಿಳಿದುಬಿಡುತ್ತಿತ್ತು. ಮರುದಿನ ವಿಚಾರಿಸದೇ ಇರುತ್ತಿರಲಿಲ್ಲ. ಸುಳ್ಳು ಹೇಳಿ ತಪ್ಪಿಸಿಕೊಳ್ಳುವಂತಿರಲಿಲ್ಲ. ವಿ.ಸೀ.ಯವರೆಂದೂ ಸಿಲಬಸ್ ಮುಗಿಸುವ ಲೆಕ್ಕಾಚಾರದ ಮೇಷ್ಟ್ರಾಗಿರಲಿಲ್ಲ. ವಿಷಯವನ್ನು ಮನದಟ್ಟು ಮಾಡಿಕೊಡುತ್ತ ಇಡೀ ಬದುಕಿನ ಸತ್ಯಗಳನ್ನು, ಗೂಢಗಳನ್ನು ಕಣ್ಣೆದುರಿಗಿಡುತ್ತಿದ್ದರು. ಅವರು ಹೇಳಿದ 'ಉಕ್ತಿ'ಗಳನ್ನೆಲ್ಲ ಬರೆದಿಟ್ಟುಕೊಂಡಿದ್ದರೆ ಅದೇ ಒಂದು ಉತ್ತಮ ಗ್ರಂಥವಾಗಬಹುದಿತ್ತು. ಅರ್ಥಶಾಸ್ತ್ರದ ಕ್ಲಾಸಿನಲ್ಲೊಮ್ಮೆ 'ಭಾರತೀಯನ ತಲಾ ಆದಾಯ ಒಂದು ದಿನದ ಚಟ್ನಿಗೆ ಸಾಲದು' ಎಂದಿದ್ದರು. ಸಂಸ್ಕೃತಿಗೆ ಒತ್ತುಕೊಟ್ಟು ಯಾವತ್ತೂ ವ್ಯಕ್ತಿಯ ಅಂತರಂಗದ ವಿಕಾಸಕ್ಕೆ, ಸ್ವೋಪಜ್ಞತೆಯಿಂದ ಬೆಳೆಯುವುದಕ್ಕೆ ಅವಕಾಶ ತೆರೆದಿಡುತ್ತಿದ್ದರು. 'What is culture? What we cultivate is culture' ಎಂದು ಪದೇ ಪದೇ ಹೇಳುತ್ತಿದ್ದರು. ವಿದ್ಯಾರ್ಥಿಗಳಲ್ಲಿನ ಪ್ರತಿಭೆ ಗುರುತಿಸಿ ಅದು ಸ್ವಯಂ ರೂಪುಗೊಳ್ಳುವುದಕ್ಕೆ ಮಾರ್ಗದರ್ಶನ ಮಾಡುತ್ತಿದ್ದರು.

ನಾನು ಹೈಸ್ಕೂಲಿನಲ್ಲಿರುವಾಗಲೇ ಕವಿತೆ ಬರೆಯಲು ಪ್ರಾರಂಭಿಸಿದ್ದೆ. ಅವುಗಳನ್ನು ದಿ. ಗ. ಶ. ಸರ್ಪಕರ್ಣೇಶ್ವರರು ತಮ್ಮ 'ಸಾಧನಾ' ಪತ್ರಿಕೆಯಲ್ಲಿ ಪ್ರಕಟಿಸಿ ಪ್ರೋತ್ಸಾಹಿಸಿದ್ದರು. ಕಾಲೇಜು ಸೇರಿದ ಮೊದಲ ದಿನಗಳಲ್ಲಿ ಒಮ್ಮೆ ವಿ.ಸೀ.ಯವರ ಛೇಂಬರಿಗೆ ಹೋದಾಗ 'ಕವಿತೆ ಬರೀತೀರಂತೆ? ಹೂಂ ಬರೀರಿ.... ಚೆನ್ನಾಗಿ ಬರೆಯಬೇಕು' ಅಂದರು. ನನಗೋ ಭಯ, ಸಂಕೋಚ. ಕಾಲೇಜು ಸೇರಿ ಬಹಳ ದಿನಗಳವರೆಗೂ ಇದೇ ಅವಸ್ಥೆ. ಅವರೆದುರು ನಿಂತು ಮಾತಾಡುವುದಕ್ಕೇ ಆಗದ ಅಳುಕು. ಅವರಾದರೋ ನಮ್ಮ ಅಂಜಿಕೆ ಸಂಕೋಚಗಳನ್ನು ಕಿತ್ತೊಗೆದು ಧೈರ್ಯ, ಆತ್ಮಸ್ಥೈರ್ಯ ತುಂಬಿಕೊಳ್ಳಲು ಸದಾ ಪ್ರೇರಣೆ ನೀಡುತ್ತಿದ್ದರು. ಇಂಗ್ಲಿಷ್ ಮಾತಾಡಲು ಬರುವುದಿಲ್ಲ, ಎಲ್ಲಿ ತಪ್ಪುತ್ತದೋ ಏನೋ ಎಂದು ಅನುಮಾನಿಸುವವರಿಗೆ, ಕೀಳರಿಮೆಯಿಂದ ಬಳಲುವವನಿಗೆ ಅವರು ಹೇಳುತ್ತಿದ್ದ ಮಾತು ಇದು – 'ನೀವು ಚಿಕ್ಕವರಾಗಿರುವಾಗಲೇ ನಡೆಯೋದಕ್ಕೆ ಕಲಿತಿದ್ದಿರಾ? ಏಳ್ತಾ ಬೀಳ್ತಾ

ನಡೆಯೋದು ಅಭ್ಯಾಸ ಆದ ಹಾಗೆ ಆಡ್ತಾ ಆಡ್ತಾ ಭಾಷೆ ಹಿಡಿತಕ್ಕೆ ಬರ್ತದೆ. ಬೇರೆಯವರು ನಗ್ತಾರೆ ಅಂತ ನೀವು ಮಾತಾಡೋದನ್ನ ಬಿಡಬಾರ್ದು. ತಪ್ಪು ಯಾರಲ್ಲಿ ಇಲ್ಲ ಹೇಳಿ? ತಿದ್ದಿಕೊಳ್ಳುವುದನ್ನ ಕಲೀಬೇಕಪ್ಪ.'

ಒಮ್ಮೆ ಹೀಗಾಯಿತು. ಕಾಲೇಜು ಸೇರಿ ಹೆಚ್ಚು ದಿನ ಆಗಿರಲಿಲ್ಲ. ಲಾಲಬಹದ್ದೂರ ಶಾಸ್ತ್ರಿಯವರ ಪುಣ್ಯತಿಥಿಯೋ, ಶ್ರದ್ಧಾಂಜಲಿ ಸಭೆಯೋ ಸರಿಯಾಗಿ ನೆನಪಿಲ್ಲ – ಏರ್ಪಾಡಾಗಿತ್ತು. ಆಗ ಸ್ವಂತ ಕಟ್ಟಡ ಇರಲಿಲ್ಲ. ತೆಂಗಿನ ಗರಿಯಿಂದ ಕಟ್ಟಿದ ಉದ್ದನೆಯ ಹಾಲ್ ಇತ್ತು. ನಾವೆಲ್ಲ ಅವನ್ನ ಶೆಡ್ಡು ಎಂದು ಕರೆಯುತ್ತಿದ್ದೆವು. ಶೆಡ್ಡಿನಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು ಸೇರಿದ್ದರು. ನಾನು ಹಿಂದೆ ನಿಂತುಕೊಂಡಿದ್ದೆ. ಕಾರ್ಯಕ್ರಮ ಶುರುವಾಯಿತು. ವಿ.ಸೀ. ಮೊದಲು ಮಾತಾಡಿದರು. ಕೆಲವು ಅಧ್ಯಾಪಕರೂ ಮಾತಾಡಿದರು. ನಂತರ ಒಮ್ಮೆಲೆ ವಿ.ಸೀ. 'ವಿದ್ಯಾರ್ಥಿಗಳ ಪರವಾಗಿ ಅವಧಾನಿ ಮಾತನಾಡ್ತಾರೆ' ಎಂದು ಬಿಟ್ಟರು! ನನಗೆ ದಿಗಿಲು, ಅಳುಕು. ಕಂಗಾಲಾದೆ. ನಾನೆಂದೂ ಭಾಷಣ ಮಾಡಿದವನೇ ಅಲ್ಲ. ಶಾಲಾ ದಿನಗಳಲ್ಲಿ ನಾಟಕಗಳಲ್ಲಿ ಪುಟ್ಟ ಪಾತ್ರ ಮಾಡಿ ಅಭ್ಯಾಸವಿತ್ತು. ವೇದಿಕೆಯಲ್ಲಿ ವಿ.ಸೀ. 'ಹೂಂ.... ಬನ್ನಿ' ಎಂದು ತಮ್ಮ ಎಡಗೈ ಬೆರಳುಗಳಿಂದ ಮೇಜು ಕುಟ್ಟಿ ಕರೆಯತೊಡಗಿದರು. ನಾನು ದಿಕ್ಕು ತೋಚದೆ ಬೆವರುತ್ತ ನಿಂತೇ ಇದ್ದೆ. ಹಿಂದೆ ನಿಂತಿದ್ದ ಪ್ರೊ. ಕೃಷ್ಣಮೂರ್ತಿ ಕಲ್ಲಾಪುರ 'ಹೋಗಿ, ತಡಮಾಡಬೇಡಿ. ಅವ್ರು ಕೋಪಿಸ್ಕೋತಾರೆ' ಎಂತಂದರು. ಆದದ್ದು ಆಗಲಿ ಎಂದು ನಡೆದೆ. ವೇದಿಕೆ ಏರಿದೆ. ಎದುರು ತುಂಬ ಜನ, ಜನ. ಮಾತೇ ಹೊರಡಲಿಲ್ಲ. ವಿ.ಸೀ. ಹತ್ತಿರ ಬಂದರು. ಹೆಗಲ ಮೇಲೆ ಕೈಯಿಟ್ಟು 'ಹೂಂ ಹೆದರ್ಕೋಬೇಡಿ ಮಾತಾಡಿ' ಅಂದರು. ಅದಾವ ವಿದ್ಯುತ್‌ಸ್ಪರ್ಶವೋ ಗೊತ್ತಿಲ್ಲ. ಮಾತು ಸರಾಗ ಹೊರಟಿತು! ಬೇಗ ಬೇಗ ಅಲ್ಲಿಂದ ಕೆಳಗಿಳಿದು ಬಂದೆ. ನನ್ನ ಜೀವನದ ಮೊದಲ ಭಾಷಣ ಅದು. ಆ ರೋಮಾಂಚಕ ಘಟನೆ ಆಗದಿ ಜೀವಂತವಾಗಿ ನನ್ನೊಳಗಿನ್ನೂ ಕಾವು ಕೊಟ್ಟಿದೆ.

ಅನುಕರಣೆಯನ್ನು ಅವರು ಸುತರಾಂ ಸಹಿಸುತ್ತಿದ್ದಿಲ್ಲ. ಕಾವ್ಯ ಸೃಷ್ಟಿಯ ಬಗೆಗೆ, ಭಾಷಾ ಬಳಕೆಯ ಬಗೆಗೆ ಇದೇ ನಿಲುವು ಅವರದು. ಸ್ವಂತಿಕೆಗೇ ಹೆಚ್ಚಿನ ಮಹತ್ವ ಕೊಡುತ್ತಾರೆ. ನಾನು ಕವಿತೆ ಬರೆದಾಗ ಅವರೆದುರು ಓದಿ ತೋರಿಸುತ್ತಿದ್ದೆ. ಅವರು ಹಾಗಲ್ಲ ಹೀಗೆ ಎಂದು ಆತ್ಮೀಯವಾಗಿ ತಿದ್ದುವುದು ವಾಡಿಕೆಯಾಗಿತ್ತು. ಒಂದು ಸಲ ಕವಿತೆಯೊಂದರಲ್ಲಿ 'ಮನಂಬುಗು' ಎಂಬ ಪದ ಬಳಸಿದ್ದೆ. ಹಾಗಂದರೆ ಏನು ಅಂತ ಕೇಳಿದರು. ಅರ್ಥ ಹೇಳಿದೆ. ಆಗ ನಗುತ್ತ 'ಹಾಗೆ ಸರಳವಾದ ಶಬ್ದಗಳನ್ನು ಬಳಸಿದರೆ ಏನಾಗುತ್ತೆ? ಇವತ್ತಿನ ಭಾಷೆಯನ್ನು ಮೈಗೂಡಿಸಿಕೊಳ್ಳಬೇಕಪ್ಪ' ಎಂದರು. ಅವರು ಸನಾತನಿಯಂತೆ ಕಂಡರೂ ಆಧುನಿಕತೆಯತ್ತ ಕಿಟಕಿ ಬಾಗಿಲು ಮುಚ್ಚಿಕೊಂಡವರಲ್ಲ.

ಹೊಸಗನ್ನಡ ಸಾಹಿತ್ಯದಲ್ಲೂ ಅವರದ್ದು ಅಧಿಕಾರವಾಣಿ ಎನ್ನುವುದು ಅವರ ವಿಮರ್ಶೆಗಳನ್ನು ಓದಿದರೆ ಸ್ಪಷ್ಟವಾಗುತ್ತದೆ.

ವಿ.ಸೀ. ಮಹಾಮಾನವತಾವಾದಿ. ನೊಂದವರ, ಅಸಹಾಯಕರ ಬಗೆಗೆ ಎಣೆಯಿಲ್ಲದ ಅನುಕಂಪ. ನೋವು ನುಂಗಿದ ಜೀವ ಅವರದು. ಕಡುಬಡತನದಲ್ಲಿ ಬದುಕಿ ಬಂದ ವ್ಯಕ್ತಿ.

ಮೊದಲನೆಯ ವರ್ಷದ ವಾರ್ಷಿಕ ಪರೀಕ್ಷೆ ಹತ್ತಿರವಾಗಿದ್ದರೂ ಟರ್ಮ್‌ಫೀ ತುಂಬಲು ನನ್ನಿಂದ ಸಾಧ್ಯವಾಗಿರಲಿಲ್ಲ. ಫೀ ತುಂಬದಿದ್ದರೆ ಹಾಲ್‌ಟಿಕೆಟ್ ಕೊಡುತ್ತಿರಲಿಲ್ಲ. ಅದಿಲ್ಲದೆ ಪರೀಕ್ಷೆಗೆ ಕೂರುವಂತಿರಲಿಲ್ಲ. ನನ್ನ ಅಸಹಾಯಕತೆಯನ್ನು ಅವರಲ್ಲಿ ಹೇಳಿಕೊಂಡೆ. ಆಗ ಅವರು 'ನಿನ್ನ ಕಷ್ಟ ಅರ್ಥ ಆಗತ್ತೆ. ಏನ್ ಮಾಡೋಣ ಹೇಳು?' ಅಂದವರೆ, ಪರೀಕ್ಷೆಯ ಮೊದಲ ದಿನ ವಿ.ಸೀ. ಕಾಲೇಜಿನ ಸಿಬ್ಬಂದಿ ಭಂಡಾರಿಯವರನ್ನು ರೂಮಿಗೆ ಕಳಿಸಿ "ಕಾಲೇಜಿಗೆ ಬರುವಾಗ ಡಾಕ್ಟರ್ ಕರ್ಕಿಯವರನ್ನು ಕಂಡು ಬರಬೇಕೆಂದು ಪ್ರಿನ್ಸಿಪಾಲರು ಹೇಳಿದ್ದಾರೆ" ಎಂಬ ಸಂದೇಶ ತಲುಪಿಸಿದರು. ವಿ.ಸೀ. ಹೇಳಿದಂತೆ ಡಾಕ್ಟರರನ್ನು ಕಂಡೆ. ಎಂಬತ್ತು ರೂಪೈ ಕೊಟ್ಟರು. ನನ್ನ ಪರೀಕ್ಷೆಯ ಸಮಸ್ಯೆ ಬಗೆಹರಿಯಿತು. ಇದಲ್ಲವೆ ವಿ.ಸೀ. ಮಹಿಮೆ? ನನ್ನಂಥವರು . ಎಷ್ಟು ಜನ ಅವರ ಕೃತಜ್ಞತೆಯ ಋಣಭಾರದಲ್ಲಿ ಬೆಳೆದಿದ್ದಾರೋ?

ಪರೀಕ್ಷೆ ಮುಗಿಯಿತು. ರಜೆ ಆರಂಭವಾದ ತಕ್ಷಣ ಇನ್ನು ಮುಂದೆ ಓದು ಸಾಧ್ಯವಿಲ್ಲ ಅಂತನಿಸಿ ಧಾರವಾಡದ ಭಾರತ ಪ್ರಕಾಶನದಲ್ಲಿ ಕೆಲಸಕ್ಕೆ ಸೇರಿಕೊಂಡೆ. ಮುಂದಿನ ಕಾಲೇಜು ಶಿಕ್ಷಣ ನನ್ನ ಮಟ್ಟಿಗೆ ಕೇವಲ ಕನಸೆಂದು ತಿಳಿದುಕೊಂಡಿದ್ದೆ. ರಜೆ ಕಳೆದು ಕಾಲೇಜು ಪುನರಾರಂಭವಾಯಿತು. ನನ್ನ ದಾಯಾದಿ ಬಂಧುವಿನ ಹತ್ತಿರ ನನ್ನ ಕುರಿತು ವಿಚಾರಿಸಿ ಪತ್ರ ಬರೆದು ಕಾಲೇಜಿಗೆ ಬಂದು ಸೇರಲು ವಿ.ಸೀ. ಹೇಳಿದರಂತೆ. ಅವನ ಪತ್ರ ಕಂಡು ಕೂಡಲೇ ನೌಕರಿಬಿಟ್ಟು ಬಂದೆ. "ನಿಮ್ಮಂಥವರೆಲ್ಲ ಹೀಗಾಗಬಾರದಪ್ಪ. ಏನಿಲ್ಲ ಅಂದ್ರೂ ಒಂದು ಡಿಗ್ರಿ ಪಡೆದುಕೊಳ್ಳಬೇಕು. ಚೆನ್ನಾಗಿ ಓದಬೇಕು" ಎಂದು ಆತ್ಮೀಯವಾಗಿ ಗದರಿದರು. ಮರುಮಾತಾಡದೆ ಓದು ಮುಂದರಿಸಿದೆ. ಬಹುಶಃ ವಿ.ಸೀ. ಯವರಲ್ಲದೇ ಇದ್ದಿದ್ದರೆ ನನ್ನ ಜೀವನ ಏನಾಗುತ್ತಿತ್ತೋ ಗೊತ್ತಿಲ್ಲ. ಎಲ್ಲಿಯೋ ಹೇಳ ಹೆಸರಿಲ್ಲದಂತಾಗಿ ಅನಾಮಿಕನಾಗಿ ಹೋಗಿಬಿಡುತ್ತಿದ್ದೆ ಎಂಬುದನ್ನು ನೆನೆದರೆ ನನ್ನ ಭಾಷೆ ಮೂಕವಾಗುತ್ತದೆ. ಭಾವ ಆರ್ದ್ರವಾಗುತ್ತದೆ. ನನ್ನ ಬಾಳಿನ ತಿರುವಿಗೆ ಕಾರಣರಾದ ಕಾರಣಪುರುಷ ಅವರೆಂಬುದನ್ನು ಹೇಗೆ ತಾನೆ ಮರೆಯಲು ಸಾಧ್ಯ?

ಅವರು ಇಲ್ಲಿದ್ದಷ್ಟು ಕಾಲವೂ ಹೊನ್ನಾವರ ಸಾಹಿತಿಗಳ ಯಾತ್ರಾಸ್ಥಳವಾಗಿತ್ತು. ನಾವೆಲ್ಲ ಹಿರಿಯ ಸಾಹಿತಿಗಳನ್ನು ಕಾಣುವ, ಕೇಳುವ ಸಂಭ್ರಮದ ವಾತಾವರಣ ನಿರ್ಮಾಣವಾಗಿತ್ತು. ಬೇಂದ್ರೆ, ಕಾರಂತ, ಪು.ತಿ.ನ., ದಿನಕರ ದೇಸಾಯಿ, ನರಸಿಂಹಸ್ವಾಮಿ, ಇನಾಂದಾರ, ಎಕ್ಕುಂಡಿ, ಅಕಬರ ಅಲಿ, ಕು.ಶಿ. ಹರಿದಾಸ ಭಟ್ಟ, ಗೌರೀಶ ಕಾಯ್ಕಿಣಿ, ಶ್ರೀರಂಗ, ಡಾ. ವಿ.ಕೆ.ಆರ್.ವಿ. ರಾವ್, ಜಿ. ಎಸ್. ಆಮೂರ, ಹೃದಯನಾಥ ಕುಂಜು, ಡಾ. ಟಿ.ಎಂ.ಎ. ಪೈ, ಟಿ.ಎ. ಪೈ ಮೊದಲಾದವರು ಬಂದಿದ್ದು ಅವರ ಕಾಲಕಿರ್ದಿಯಲ್ಲಿಯೆ. ಶ್ರೀರಂಗರು ಬಂದಾಗ ವಿ.ಸೀ.ಯವರಿಗೆ ಸಖಿತ್ ಜ್ವರ. "ನಾನಿದ್ದೇನೆ ಅಂತ ಅವರು ಇಲ್ಲಿಗೆ ಬಂದಿದ್ದಾರೆ. ನಾನು ಹೇಗೆ ಮನೇಲಿ ಇರಲಪ್ಪ?" ಎಂದು ಆ ಉರಿವ ಜ್ವರದಲ್ಲೂ ಕಾಲೇಜಿಗೆ ಬಂದಿದ್ದರು. ಆಮೂರರು ಬಂದಾಗ ಕರ್ನಾಟಕ ಸಂಘದಲ್ಲಿ ಒಂದು ವಿಶಿಷ್ಟ ಕಾರ್ಯಕ್ರಮ. ಸಭೆಯಲ್ಲಿಯೇ ಅತಿಥಿಗಳಿಗೆ ವಿ.ಸೀ. ವಿಷಯ ಸೂಚಿಸಬೇಕು. ರಾಮಾಯಣ ದಲ್ಲಿನ ಒಂದು ಪ್ರಸಂಗ. ವನವಾಸದ ಸಂದರ್ಭದಲ್ಲಿ ರಾಮ ರಾಕ್ಷಸರ ನಾಶಕ್ಕೆ ಹೊರಟಾಗ

ಸೀತೆ 'ನಿನಾಕಾರಣ, ನಮ್ಮನ್ನು ದ್ವೇಷಿಸದ ಅವರನ್ನು ವಧಿಸಿ ಹಿಂಸೆ ಮಾಡುವುದು ಸರಿಯೆ? ಎಂದು ನೀತಿ ಮಾತು ಹೇಳುತ್ತಾಳೆ. ಸೀತೆ ಹೀಗೆ ಉಪದೇಶಿಸುವುದು ಸರಿಯೆ?' ಎಂಬುದನ್ನು ಪ್ರಸ್ತಾಪಿಸಿ ಸಮಸ್ಯೆಯನ್ನು ವಿ.ಸೀ. ಮಂಡಿಸಿದರು. ಅವರ ಅನುಭವ ಸೂಕ್ಷ್ಮದೃಷ್ಟಿ ತಳಿದ ಆಳ ಅಗಲಗಳಿಗೆ ಇದೊಂದು ನಿದರ್ಶನ, ಅಷ್ಟೆ. ಅವರು ಇಲ್ಲಿದ್ದಾಗಲೇ ೧೯೬೮ರಲ್ಲಿ ಪಿ.ಇ.ಎನ್ ಸಮ್ಮೇಳನ ಹಾಗೂ ಕವಿಗೋಷ್ಠಿ ನಡೆಯಿತು. ಆಗ ವಿ.ಸೀ. ಯವರ ಜತೆ ಎರಡು ಮೂರು ದಿನ ಬಂದಿದ್ದ ಕವಿಗಳಿಲ್ಲರ ಜತೆ ಓಡಾಡುವ ಅವಕಾಶ ನನಗೆ ಸಿಕ್ಕಿತ್ತು. ಆಗಿನ ಒಂದು ಘಟನೆ ಈಗಲೂ ಮರೆತಿಲ್ಲ. ವಿ.ಸೀ. ಯವರ ಮನೆಯಲ್ಲಿ ಕವಿಗಳಿಲ್ಲರಿಗೂ ಉಪಹಾರ ಏರ್ಪಾಡಾಗಿತ್ತು. ನಾನೂ ಅಲ್ಲೇ ಇದ್ದೆ. ಕಾಫಿ ಕುಡಿಯಲು ನನ್ನನ್ನೂ ಕರೆದರು. ನಾನು ಬೇಡ ಅಂದೆ. ಆಗ ವಿ.ಸೀ. 'ನೋಡಪ್ಪ, ಎಲ್ಲರೂ ಇರುವಾಗ ನೀನೊಬ್ಬನೇ ಬೇರೆ ಆಗಿ ಇರಬಾರ್ದು. ಹಿರಿಯರು ಕರೆದಾಗ ಒಲ್ಲೆ ಎಂದು ಹೇಳುವುದು ಸಭ್ಯತೆ ಅಲ್ಲ' ಅಂತ ಮೃದುವಾಗಿ ಹೇಳಿ ಬದುಕಿನ ಪಾಠ ಹೇಳಿಕೊಟ್ಟರು.

೧೯೬೪ರಲ್ಲಿ ಕರ್ನಾಟಕ ಸಂಘವನ್ನು ಸ್ಥಾಪಿಸಿ ಸಾರ್ವಜನಿಕರ ಜೀವನದಲ್ಲಿ ಸಾಂಸ್ಕೃತಿಕ ಆಸಕ್ತಿ, ಅಭಿರುಚಿಯ ಬಿತ್ತನೆ ಮಾಡಿದವರು ಅವರೇ. ನಿಯಮಿತವಾಗಿ ಉಪನ್ಯಾಸ ಗೋಷ್ಠಿ, ಕಾವ್ಯವಾಚನಗಳನ್ನು ಏರ್ಪಡಿಸುತ್ತಿದ್ದರು. ಸರಿಯಾದ ಜನ ಸಿಗದಿದ್ದಾಗ ತಾವೇ ಸ್ವತಃ ಹಳಗನ್ನಡ ಕಾವ್ಯಗಳ ಪರಿಚಯ ಮಾಡಿಕೊಡುತ್ತಿದ್ದರು. ಜನ ಬರಲಿ ಬಿಡಲಿ, ಕಾರ್ಯಕ್ರಮಗಳನ್ನು ಮಾತ್ರ ತಪ್ಪಿಸುತ್ತಿರಲಿಲ್ಲ. ಶ್ರೀಯವರ ಗದಾಯುದ್ಧ ನಾಟಕವನ್ನು ನಮ್ಮ ಕಡೆಯ 'ತಾಳಮದ್ದಳೆ' ಅಥವಾ 'ಬೈಠಕ್ಕಿ'ನ ರೂಪದಲ್ಲಿ ಪ್ರಸ್ತುತ ಪಡಿಸಿದ್ದನ್ನು ಬಹುಶಃ ಕೆಲವರಾದರೂ ನೆನಪಿನಲ್ಲಿಟ್ಟುಕೊಂಡಿರಬಹುದು.

ಎಲ್ಲ ಖಾಸಗಿ ಕಾಲೇಜುಗಳಂತೆ ಇಲ್ಲೂ ಆರ್ಥಿಕ ಅಡಚಣೆ ಇತ್ತು. ಅಂತಹ ಅನಾನುಕೂಲತೆಗಳ ನಡುವೆಯೂ ಅವರು ಕಾಲೇಜನ್ನು ಪ್ರೀತಿಯಿಂದ ಕಟ್ಟಿ ಬೆಳೆಸಿದ ರೀತಿ ಅನನ್ಯವಾದುದು. ಸಂಸ್ಥೆಯ ಘನತೆ, ಗಾಂಭೀರ್ಯವನ್ನ ಹೆಚ್ಚಿಸಿದರು. ಶಿಸ್ತು, ಶೀಲ, ನೀತಿಗಳನ್ನು ಕಟ್ಟು ನಿಟ್ಟಾಗಿ ರೂಪಿಸುವಲ್ಲಿ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಮಹಾಜನ ವರದಿಯ ಅನುಷ್ಠಾನದ ಒತ್ತಾಯಕ್ಕಾಗಿ ರಾಜ್ಯದಲ್ಲೆಲ್ಲ ವಿದ್ಯಾರ್ಥಿ ಚಳುವಳಿ ನಡೆಯಿತು. ಇಲ್ಲಿಯೂ ಸ್ಟ್ರೈಕ್ ಮಾಡಲು ಹುಡುಗರು ಮುಂದಾದರು. ವಿ.ಸೀ. ಛೇಂಬರಿನಿಂದ ಹೊರಗೆ ಬಂದು ಮೆಟ್ಟಿಲುಗಳ ಮೇಲೆ ನಿಂತು "ಸ್ಟ್ರೈಕ್ ಮಾಡ್ತೀರಾ? ಮಾಡಿ, ಮಾಡಿ. ಇಲ್ಲಿ ಸೀಮೆಸುಣ್ಣ ತಗಳೋದಕ್ಕೆ ಕಾಸಿಲ್ಲ. ನೀವು ಸ್ಟ್ರೈಕ್ ಮಾಡ್ತೀರಿ, ಅಲ್ವೆ?" ಎಂದ ರೀತಿಯನ್ನು ಈಗಲೂ ಮರೆಯಲಾಗುವುದಿಲ್ಲ. ಆ ಧ್ವನಿಯ ಬಿರುಸು, ಬಿಸಿ ಇಲ್ಲೆಲ್ಲ ಸುಳಿದಾಡಿದ ಹಾಗಾಗುತ್ತಿದೆ. ಹುಡುಗಿಯರು ಮಿನಿಸ್ಕರ್ಟ್, ಮಿಡಿಯನ್ನು ಹುಡುಗರು ಚಡ್ಡಿಯನ್ನು ಹಾಕಿಕೊಂಡು ಕಾಲೇಜಿಗೆ ಬರಬಾರದು ಎನ್ನುವ ಕಾನೂನನ್ನೇ ಜಾರಿಗೆ ತಂದಿದ್ದರು. ಅಪ್ಪಿ ತಪ್ಪಿ ಕೆಲವು ಹುಡುಗಿಯರು ಮಿನಿಯಲ್ಲಿ ಬಂದರೆ ವಿ.ಸೀ.ಯವರ ಕಣ್ಣು ತಪ್ಪಿಸಿಯೇ ಓಡಾಡಬೇಕಾಗುತ್ತಿತ್ತು. ಲುಂಗಿ ಉಟ್ಟರೆ ಅದನ್ನು ಮೇಲಕ್ಕೆತ್ತಿ ಕಟ್ಟದೇ, ಇಳಿ ಬಿಟ್ಟರಬೇಕಾಗಿತ್ತು. ತೊಡೆಯನ್ನು ಬೆತ್ತಲೆಯಾಗಿ ತೆರೆದು ತೋರಿಸುವುದು ಆರೋಗ್ಯಕರವಲ್ಲ ಎಂಬುದು ಅವರ ದೃಷ್ಟಿ. ಬಣ್ಣ ಬಣ್ಣದ ವೇಷ–ಭೂಷಣಗಳಲ್ಲಿ ಕಾಣಿಸಿಕೊಳ್ಳುವ ಇಂದಿನ

ದಿನಗಳಲ್ಲಿ ವಿ.ಸೀ.ಯವರ ದೃಷ್ಟಿ ಕಂದಾಚಾರದ್ದು ಅಂತ ಕೆಲವರಿಗೆ ಅನಿಸಬಹುದು. ಬಾಲ್ಯದಲ್ಲಿಯೆ ಸಂಸ್ಥೆಗೊಂದು ಭದ್ರತಳಹದಿ ನಿರ್ಮಿಸಿ, ಸ್ಥಾನಮಾನಗಳ ಮನ್ನಣೆ ದೊರೆವಂತೆ ರಕ್ಷಿಸಿದ ದಾತಾರರು ಅವರು. ಅವರ ಮಾತಿನಲ್ಲೇ ಹೇಳುವುದಾದರೆ ಕಾಲೇಜು ಮಕ್ಕಳ ಭವಿಷ್ಯದ ಸೇತುವೆ. ಅದರ ಸರ್ವಾಂಗೀಣ ರಕ್ಷಣೆ ಹಾಗೂ ಬೆಳವಣಿಗೆಯ ಹೊಣೆ ಎಲ್ಲರದು. ಶಿಕ್ಷಕರು, ವಿದ್ಯಾರ್ಥಿಗಳು, ಪಾಲಕರು ಈ ಜವಾಬ್ದಾರಿಯ ಅರಿವನ್ನು ಮರೆಯಬಾರದು ಎಂಬುದೇ ಅವರ ಕಳಕಳಿ. ೧೯೭೯ ರಲ್ಲಿ ನಮ್ಮ ಕಾಲೇಜಿನ ವಾರ್ಷಿಕೋತ್ಸವಕ್ಕೆ ಅತಿಥಿಯಾಗಿ ಬಂದಾಗ ಹಳೆ ವಿದ್ಯಾರ್ಥಿ ಸಂಘದ ಸಭೆಯಲ್ಲಿ ಅವರು ಆಡಿದ ಮಾತುಗಳಲ್ಲೂ ಈ ಅಂಶ ತುಂಬಿಕೊಂಡಿರುವುದನ್ನು ಗಮನಿಸಬಹುದು.

೧೯೬೮ರಲ್ಲಿ ತಮ್ಮ ಎಪ್ಪತ್ತನೇ ವಯಸ್ಸಿನಲ್ಲಿ ಕಾಲೇಜಿನ ಮೊದಲ ಬ್ಯಾಚ್ ವಿದ್ಯಾರ್ಥಿಗಳನ್ನು ಹೊರಕಳಿಸಿ ತಾವೂ ಬೆಂಗಳೂರಿಗೆ ಹೊರಟು ನಿಂತರು. ಆಗ ಇಡೀ ಹೊನ್ನಾವರದ ಜನತೆ ಕೃತಜ್ಞತೆಯ ಭಾರದಲ್ಲಿ ವಿ.ಸೀ. ಯವರ ಸಾಮೀಪ್ಯದ ಸುವರ್ಣಾವಕಾಶದಿಂದ ದೂರಾಗುವ ದುಃಖದಲ್ಲಿ ಬಾಗಿ ನಿಂತಿತ್ತು, ಬೀಗಿ ಬಿರಿದಿತ್ತು.

ಅವರೊಡನೆ ಕಳೆದ ಕ್ಷಣಕ್ಷಣಗಳೂ ಜೀವಂತವಾಗಿ ಮೈಮನಗಳನ್ನು ಆವರಿಸಿಕೊಂಡಿದೆ. ಮಾತು ಮಾತಿನಲ್ಲಿ ಬದುಕಿನ ಹೊಸ ಹೊಸ ಪಾಠಗಳನ್ನೇ ತೆರೆದು ಇಡುತ್ತಿದ್ದರು. ತಮ್ಮ ಅನುಭವಗಳ ಕಣಜದಿಂದ, ಕಾವ್ಯ ಕೃತಿಗಳ ಉಲ್ಲೇಖದಿಂದ ಹತ್ತು ಹಲವು ಸಂಗತಿಗಳನ್ನು ಮನದಟ್ಟು ಮಾಡಿಕೊಡುತ್ತಿದ್ದರು. ವೆಂಕಣ್ಣಯ್ಯ, ಮಾಸ್ತಿ, ಕುವೆಂಪು, ರಾಧಾಕೃಷ್ಣನ್, ಸುಬ್ಬರಾವ್, ಕಾರಂತ ಮೊದಲಾದವರ ಕುರಿತು ಹೇರಳ ಮಾಹಿತಿ ಒದಗಿಸುತ್ತಿದ್ದರು. 'ಇಂತಹವರೆಲ್ಲ ಇದ್ದ ಕಾಲದಲ್ಲಿ, ನೆಲದಲ್ಲಿ ನಾವಿದ್ದೆವು ಅನ್ನೋದೇ ದೊಡ್ಡದು' ಎನ್ನುತ್ತಿದ್ದರು. ಒಮ್ಮೆ ಕೋಪ ಬಂದಂತೆ ಕಂಡರೂ ಮರುಗಳಿಗೆಯಲ್ಲಿ ಮುಕ್ತವಾಗಿ ನಕ್ಕು ಎಲ್ಲವನ್ನೂ ಮರೆವ ಮೃದುಹೃದಯಿ ಅವರು.

೧೯೬೯ರಲ್ಲಿ ನಾನು ಮತ್ತು ಜಿ.ಯು. ಭಟ್ ಸೇರಿ 'ವಿ.ಸೀ.–೭೧' ಎಂಬ ಸಂಭಾವನಾ ಗ್ರಂಥ ಪ್ರಕಟಿಸುವ ಸಾಹಸ ಮಾಡಿದೆವು. ಅವರೆಂದೂ ಇಂಥ ಸನ್ಮಾನ, ಹೊಗಳಿಕೆಯನ್ನು ಇಷ್ಟ ಪಡುವವರೇ ಅಲ್ಲ. ರಾಜ್ಯ ಸರಕಾರ ಎರಡು ಸಲ ನೀಡಿದ ಪ್ರಶಸ್ತಿಯನ್ನು ಯಾವ ಮುಲಾಜೂ ಇಲ್ಲದೆ ನಿರಾಕರಿಸಿದ್ದನ್ನ ಸ್ಮರಿಸಿಕೊಳ್ಳಬಹುದು. ನಮ್ಮಲ್ಲಿ ಬಹುಮಾನ ಕೊಡಿಸಿ ಎಂದು, ತಮ್ಮ ಪುಸ್ತಕಗಳನ್ನು ಪಠ್ಯವನ್ನಾಗಿಸಿ ಎಂದು ತಾವಾಗಿ ಹಪಹಪಿಸುವ ಸಾಹಿತಿಗಳೂ ಇದ್ದಾರೆ! ಆದರೆ ವಿ.ಸೀ.ಯಂತಹವರು ಎಷ್ಟು ಜನ ಇದ್ದಾರು? ಸಂಭಾವನಾ ಗ್ರಂಥದ ವಿಚಾರವಾಗಿ ನಾವು ಹಿಡಿದ ಪಟ್ಟು ಬಿಡಲಿಲ್ಲ. ಕೊನೆಗೂ ನಮ್ಮ ವರಾತಕ್ಕೆ ಒಪ್ಪಿಗೆ ಕೊಟ್ಟರು. ಕಿರು ಅವಧಿಯಲ್ಲಿ – ನಮ್ಮ ಆಗಿನ ಹುಡುಗುತನದ ಅನುಭವದ ಬಂಡವಳಿನಲ್ಲಿ – ಒಂದು ಕೃತಿ ಸಿದ್ಧ ಪಡಿಸಿದೆವು. ವಿ.ಸೀ. ಹುಟ್ಟಿದ ದಿನವೆ ೨–೧೦–೧೯೬೯ ರಂದು ಗ್ರಂಥ ಬಿಡುಗಡೆ ಕಾರ್ಯಕ್ರಮ ಇಟ್ಟುಕೊಂಡೆವು. ಆಮಂತ್ರಣ ಪತ್ರಿಕೆಯನ್ನು ವಿ.ಸೀ.ಯವರಿಗೆ ಕಳಿಸಿದೆವು. ಯೋಗಾಯೋಗವೆಂದರೆ ಸಮಾರಂಭದ ಅಧ್ಯಕ್ಷರು ಕಾಲೇಜಿಗೆ ಹೊಸದಾಗಿ ಬಂದ ಪ್ರಿ. ಸಿ.ಸೀತಾರಾಮಯ್ಯನವರಾಗಿದ್ದರು. ಆಮಂತ್ರಣ ನೋಡಿ ವಿ.ಸೀ. ತಕ್ಷಣ ಬರೆದರು: 'ನಾನು ಅಧ್ಯಕ್ಷತೆ ವಹಿಸುತ್ತೇನೆಂದು

ಬರೆದಿದ್ದೀರಿ. ಇಂಗ್ಲಿಷಿನಲ್ಲಿ ಒಂದು ಪದಸಮುಚ್ಚಯವಿದೆ. Presiding over one's own funeral ಎಂದ ಹಾಗಾದೀತು, ಕ್ಷಮಿಸಿ.' ಮತ್ತೆ ಅದೇ ಪತ್ರದ ಕೊನೆಯಲ್ಲಿ "ಕಾಗದದ ಮೊದಲ ಭಾಗದಲ್ಲಿ ತಮ್ಮ ಕಾಲೇಜಿನ ಈಗಿನ ಪ್ರಿನ್ಸಿಪಾಲರ ಹೆಸರಿರುವುದನ್ನು ಸರಿಯಾಗಿ ಓದದೇ ಅವಿವೇಕದ ಮಾತಾಡಿದ್ದೇನೆ. ನನ್ನ ಸ್ವಭಾವ ಲಕ್ಷಣ ಇದು. ಅವಸರ–ತಪ್ಪು–ಪಶ್ಚಾತ್ತಾಪ" ಎಂದೂ ಸಹ ಬರೆಯುವುದನ್ನು ಮರೆತಿರಲಿಲ್ಲ. ತಮ್ಮ ಮಾತು–ಕೃತಿಗಳನ್ನೇ ಸಮರ್ಥಿಸಿಕೊಳ್ಳಲು ಹೆಣಗಾಡುವವರ ನಡುವೆ ಈ ಇಂತಹ ವ್ಯಕ್ತಿಗಳು ತುಂಬಾ ಅಪರೂಪ ಅಲ್ಲವೆ?

೧೯೭೦ರಲ್ಲಿ ಸ್ನಾತಕೋತ್ತರ ಓದು ಮುಂದರಿಸುವ ಆಸೆಯಿಂದ ಮಂಗಳೂರಿನ ಮಂಗಳಗಂಗೋತ್ರಿಗೆ ಸೇರುವುದಕ್ಕಾಗಿ ವಿ.ಸೀ. ಯವರಿಂದ ಒಂದು ಶಿಫಾರಸು ಪತ್ರ ಬರೆಸಿಕೊಂಡು ಹೋಗಿ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರನ್ನು ಭೆಟ್ಟಿಯಾದೆ. ಆಗ ಎಸ್. ವಿ. ಪಿ. "ಅಯ್ಯೋ ಪತ್ರದ ಅವಶ್ಯಕತೆ ಯಾಕಿತ್ತು ಮಾರಾಯರೆ? ನೀವು ವಿ.ಸೀ.ಯವರ ವಿದ್ಯಾರ್ಥಿ ಎಂದು ಹೇಳಿದರೆ ಸಾಕಿತ್ತು" ಎಂದು ಹೇಳಿ, "ನಾನೂ ಅವರ ಶಿಷ್ಯನಾಗಿದ್ದೆ" ಎಂದು ಆಗಿನ ದಿನಗಳನ್ನು ನೆನಪಿಸಿಕೊಂಡರು. ವಿ.ಸೀ.ಯಂಥವರ ಶಿಷ್ಯತ್ವವೇ ಒಂದು ಸರ್ಟಿಫಿಕೇಟ್ ಆಗಿದ್ದ ಕಾಲವೂ ಒಂದಿತ್ತಲ್ಲ ಎನ್ನುವುದೇ ಒಂದು ಮಹತ್ವದ ಸಂಗತಿ.

೧೯೬೯ ರಲ್ಲಿ ನನ್ನ ಮೊದಲ ಕವನ ಸಂಕಲನ "ಬೆಂಕಿ ಬಳ್ಳಿ" ಪ್ರಕಟವಾಯಿತು. ಅದನ್ನು ವಿ.ಸೀ.ಯವರಿಗೇ ಅರ್ಪಿಸಿದ್ದೆ. ಪುಸ್ತಕವನ್ನೋದಿ ಅವರು ಬರೆದ ಪತ್ರ ಒಂದು ಅಪೂರ್ವ ಲೇಖನದಂತಿದೆ. ಸಾಹಿತ್ಯ ಮತ್ತು ಜೀವನದ ಸಂದರ್ಭದಲ್ಲಿ ಮಾರ್ಗದರ್ಶಕ ಮಾತುಗಳಿವೆ. ಆದ್ದರಿಂದ ಇದ್ದಕ್ಕಿದ್ದ ಹಾಗೆ ಅದನ್ನು ಇಲ್ಲಿ ಇಡುತ್ತಿದ್ದೇನೆ–

"....ನೀವು ಕಳಿಸಿಕೊಟ್ಟ "ಬೆಂಕಿಬಳ್ಳಿ" ಮುಟ್ಟಿತು. ನನಗೆ ಅದನ್ನು ಅರ್ಪಿಸಿ ಕೊಂಡಿರುವುದು ನಿಮ್ಮ ವಿಶ್ವಾಸ. ಇದಕ್ಕೆ ನಾನು ನಿಮಗೆ ಏನು ಮಾಡಿದೆನೊ ತಿಳಿಯದಾಗಿದೆ. ಏನಾದರೂ ಪ್ರಯೋಜನವಾಗಿದೆಯೆಂದುಕೊಂಡರೆ ಅದು ನೀವಂದುಕೊಂಡದ್ದು. ರವಿ ಕಾಣದುದನ್ನು ಕವಿ ಕಾಣುತ್ತಾನಂತಲ್ಲ? ಆಗಿಂದ ಈಗಿಗೆ ನಿಮ್ಮ ಲೇಖನಿ ಪಳಗಿದೆ. ಭಾವಗಳು ಕೂಡಿಕೊಳ್ಳುತ್ತಾ ಬರುತ್ತಿವೆ. ಬರವಣಿಗೆಯ ತಂತ್ರ ಚತುರವಾಗುತ್ತಿದೆ. ಸಂತೋಷ. ಶಕ್ತಿಯನ್ನು ಬಳಸಿಕೊಳ್ಳಿ.

ನನ್ನ ಸಂಬಂಧವನ್ನು ಈ ಪುಸ್ತಕಕ್ಕೆ ಹಾಯಿಸಿರುವುದರಿಂದ ಒಂದೆರಡು ಮಾತು ಹೇಳಬಹುದೇನೊ. ಇಷ್ಟು ದೊಡ್ಡದಾಗಿ ಬರೆಯಬೇಕಿರಲಿಲ್ಲ. ಬರೆದಿದ್ದೇನೆ, ಅವಿವೇಕ.

ಹಳಗಾಲದ ಜರಠ ನಾನು. ನಮ್ಮ ತಲೆಮಾರಿನವರಿಗೆ ಬೀಡಿ, ಸಿಗರೇಟು, ವ್ಹಿಸ್ಕಿ, ಲೈಂಗಿಕ ವಾಚಕಗಳ ಧಾರಾಳ – ಬರವಣಿಗೆಯಲ್ಲಿ ಅಷ್ಟೇನೂ ಪ್ರಿಯವಲ್ಲ. ನಾಲ್ಕಕ್ಷರದ ಮಾತುಗಳಿಂದ ಇಂಗ್ಲೀಷಿನಲ್ಲಿ ಹೇಳುವುದನ್ನು ಅವರು ಬಳಸಿ ದೊಡ್ಡಕ್ರಾಂತಿಯನ್ನು ಮಾಡುತ್ತಿದ್ದೇವೆನ್ನುತ್ತಿದ್ದಾರೆ. ಕ್ರಾಂತಿ ಅವರ ತಲೆಯಲ್ಲಿದೆ, ಅಷ್ಟೆ. ನಮ್ಮ ತಲೆಯ ಎಲುಬು ಸೆಡೆತಿರಬೇಕು. ಮಿಡುಕೂ ಜಂಪೂ ಹೋಗಿರಬೇಕಲ್ಲವೆ? ಹುಡುಗರ ಧಾರಾಳಾಕಾಂಕ್ಷೆ ಎಂದಿಗೂ ಹೆಚ್ಚೇ. ಆದ್ದರಿಂದ ಅವರು ಅದಕ್ಕೆ ಎಡೆಗೊಡುವುದು ಸಹಜ. ಕೇವಲ ಚೇಷ್ಟೆಗೆ ಬರೆಯುವುದೂ, ಸಾಧಾರಣ ಒಂದು ಹೆಣ್ಣು ಮೈಯನ್ನು ಕಾಣದವರೂ ಪ್ರೇಮವನ್ನು

ಸುಸಂಸ್ಕೃತರಾಗಿ ಮಾತನಾಡುವರು, ಚಿಟ್ಟಿ ಕಟ್ಟುವರೆಲ್ಲಿ. ಆದರೆ ಒಂದು ಮಾತನ್ನು ಹೇಳುವುದಿಲ್ಲ. ನಿಷ್ಠುರವಾದ ಅನುಭವ ಒಂದು ಹೆಣ್ಣಿನ ಕಂಠಮಧ್ಯ ಆಲ್ಲಿ, ಫೋನುಮಾಡಿದರೆ ಆ ಸಂಖ್ಯೆಯನ್ನು ಕರಿತು ಗೀರುವ ಬರುತ್ತಿನೆ. ಆಚಾರ್ಯನ್ನು ಕರಿತು ಕೇಳುಗಿ ನುಡಿಸುವುದಿರಲಿ, ಫೂಬಿಸುವುದು ಕೂಡ ಅಕ್ಷಮಾರ್ಹವಾಗಿದೆ. ಇಂದು ಇಂಗ್ಲೀಷಿನಲ್ಲಿ, ಫ್ರೆಂಚಲ್ಲಿ, ಆಮೇರಿಕಾದಲ್ಲಿ ಮಾತನಾಡುವುದೆಲ್ಲ ನಾವೂ ಮಾತನಾಡಿದ್ದೇವೆ, ಆದೆಲ್ಲ ಸರಿಯೆಂದು ಭಾವಿಸಿ, ಆವರಲ್ಲಿಯೂ ಮಾತ್ಸಾರ್ಯವೂ ಬೆಳ್ಳಿಯೂ ಕ್ಷೀಣಿಸುತ್ತಿದೆ. ನೆರೆಗಳು ಬಂದಾಗ ಕೊಳೆ, ಕೆಸರು, ಹಸಿರು ತೇಲಿ ಬರುತ್ತವೆ. ನಿರಂತರ ನೆರೆಯಾಗಿ ಬಿಟ್ಟಿರೆ, ಕಷ್ಟ. ಹೊಸ ವಿಮರ್ಶಕರೆಂಬವರು ತಮ್ಮ ತಲೆ ತುರಿಕೊಳ್ಳುವುದಕ್ಕಾಗಿ ಆಲ್ಲಿನ ಮಾತುಗಳನ್ನೆಲ್ಲ ಬಳಸಿ ಎಳೆಹಿಳ ಬರಹಗಳೂ ಎತ್ತುಗಡೆ ಕೊಡುತ್ತಿವೆಯಾಗಿ ನುಸಿ ತಿಂದ ಈ ಹಳತಲೆಗಳ ಮಾತು ಹೀಗೆಯಾಯ್ತು.

ಎಲ್ಲ ಯೌವ್ವನಕ್ಕೂ ವಯಸ್ಸು ಬರುತ್ತದೆಯೆಂಬುದು ನಮ್ಮಿಂ ತರುವ ಸಂಗತಿ. ಉಚ್ಚಿ, ಸಸಿಯ ಆಂಗೋಪಾಂಗ, ಗುಣಸಂಪತ್ತಿದು ಏಕಾಂತದಲ್ಲಿ ಕೂಡ ಆತನ ಕೆಲವು ಮಾತುಗಳನ್ನು ಬಳಸದ ಹೊರತು ನಮ್ಮತೆ, ಸ್ವಾತಂತ್ರ್ಯ, ಪ್ರತಿಮೆ ಸಿದ್ಧಿಸದೆಂದುಕೊಂಡರೆ ಬಳಸಿ ನೋಡಿ ಪರೀಕ್ಷಿಸಬಹುದು. ಈಗ ನಾಟಕಗಳಲ್ಲಿ, ಸಿನಿಮಾಗಳಲ್ಲಿ, **kissing** ಮಾಮೂಲಾಗಿದೆಯಂತೆ. ಏನು ಮಹಾ ಸಾಹಸವೊ! ರತಿಗೆ ಅವಕಾಶ ಕೊಡುತ್ತಾರಂತೆ. ಆಗಬಹುದು. ತಮಗೆ ಶಕ್ತಿ, ಅವಕಾಶ ಇಲ್ಲದವರು ಅದನ್ನು ಚಿತ್ರ ರೂಪಾಗಳಲ್ಲಿ ಕಂಡು ನಿಜಕ್ಕೆ ಪ್ರತ್ಯಾಮ್ನಾಯ ಪಡೆಯಬಹುದು. ಬೆತ್ತಲೆ ಅಷ್ಟೇನೂ ಸೊಗಸಲ್ಲ, **1/100 or 1%** ಬೇಲಿಯಾಗಿರಬೇಕೆನೊ. ಇವನ್ನೆಲ್ಲ ಪ್ರಕಾಶವಾಗಿ ಹಾಡಬಹುದೆಂದರೆ ಆ ಸ್ವಾತಂತ್ರ್ಯಕ್ಕೆ ಧಿಕ್ಕಾರವೊ, ಕಲ್ಪಿಸಿದವರೊ ಅನ್ವಯಿಸಬೇಕು, ಮಾತ್ರ. ಹುಳ ಹಿಂಡಿನ ರುಚಿ. ಅದಕ್ಕೆ ನಾಲ್ಕು ಕಾಲವಿದ್ದು ಸಿಗೂಡಿದರೆ ಹಿತ ರುಚಿಯೆಂಬುದುಂಟು. ಹಿಂಡ ಮಾದಕ. ಎತ್ತೇತಕ್ಕೊ ನಡೆಯುತ್ತದೆ. ರಕ್ಷಣೆಗೆ, ಸ್ವಾಸ್ಥ್ಯಕ್ಕೆ ಮಾತ್ರವೇ ಅಲ್ಲ, ಲೋಟಗೆ ಹೊತೆಯಬೇಕೆಂದು ಮಾಡ್ಡಾಗದ ಹುಡುಗಿಯನ್ನು ಬಿಚ್ಚಿರಿಸಿದರೆ ಅದೂ ಮೋಜೇ, ಸ್ವಲ್ಪ ಸಮಯ. ಎಷ್ಟು ಹೊತ್ತು ಮಾತಲಾಡೀತು? ಕೆಲವು ಬಾಲ ಅಭ್ಯಾಸಗಳು ಆಗಮಾದರೆ ಮೇಲು. ಸ್ಪಿಕ್ಕಿ, ಸಂಗ ಇತ್ಯಾದಿ. ಒಂದು ಸಲ ಅದಕ್ಕೆ ಬಿದ್ದವರು ಮೇಲೇಳುವುದಿಲ್ಲ, ಎಚ್ಚರಿಕೆ. ಅಸ್ಮಾತ್ಕೆಲ್ಲ್ 'Art for Art's sake' ಎಂದು ಹಾಡಾದ. ಜೈಲಿಗೆ ಹೋದ. ಆವನು ಸಲಿಂಗ ಪ್ರಣಯವನ್ನು ಸಾಧಿಸಿದ. ಇಂದು ಇನ್ನೂ ಎತ್ತೇತಕ್ಕೊ ಮನಸ್ಸು ಮಾರ್ಗ ಯುವಕರನ್ನು ಎಳೆಯುತ್ತಿದೆ. ಸಭಾ, ಸ್ತ್ರಾಮಾಣಿಕ, ಪ್ರಜಾ ಎಂದು ನಾಲ್ಕು, ಕತ್ತೆಯನ್ನು ಅನುಸರಿಸುವುದು ಮಾನವತ್ವಕ್ಕೆ ಹೀನಾಯವಾಗೀತು. ಹಿತಮಿತಗಳಿಗೆ ಸುಲಭವಾಗಿ ಓಲು ಬರುವುದಿಲ್ಲ. ಸಭಸವಾದ್ದೆಲ್ಲ ಸರಿಯಲ್ಲ, ಸುಂದರವೂ ಅಲ್ಲ. ಬಾಳಲ್ಲಿ ವಿಕಾರಗಳಿಲ್ಲ ಎಂದು ಯಾರು ಹೇಳಿದರು? ಬೌದ್ಧರ ಎಂದು ಪಂಥ ಯಾವುದಕ್ಕೂ ಹೇಸದೆ ನಡೆಯಿಕೊಂಡಿದ್ದರಿಂದ ಈ ಹುಟ್ಟು ನಾಡಿನಲ್ಲಿ ಅದರ ಹುಟ್ಟೆ ಅಡಗಿ ಹೋಯಿತು. ಈ ನಾಡ ಚರಿತ್ರೆಯಲ್ಲಿ ಏನೇನೋ ಆಗಿದೆ. ತಂದೆ ಹೆಸರಲ್ಲಿ ಪಿಂಡ ಹಾಕಿದಾಗ ತಂದೆಯಲ್ಲದ ಬೇರೊಂದು ಕೈ ನೀರಿನಿಂದ ಎದ್ದು ಆ ಪಿಂಡ ತನ್ನದೆಂದುಕೊಂಡು! ತನಗೆ ಪುತ್ರ ಬೇಕೆಂದು ಗೇಯ

ಖುಷಿಯನ್ನೂ ಹೆಂಡತಿಯನ್ನೂ ಸಾಲ ಕೇಳಿದ ಪ್ರಸಂಗಗಳುಂಟು. ಇನ್ನೂ ಏನೇನೊ. ಅದನ್ನೆಲ್ಲ ಹೇಳಿ ಏನು ಪ್ರಯೋಜನ? ಇಷ್ಟರ ಮೇಲೆ ಕವಿಗಳಿಗೆ ಹೇಳುವವರು ಯಾರು?

ಮನಸ್ಸಿನ ಶುಚಿ, ಸಂಪನ್ನತೆ, ಔದಾರ್ಯಗಳು, ದೊಡ್ಡ ಅನುಭವ ಲೋಕ ಕಲ್ಯಾಣಕ್ಕೆ ಅಗತ್ಯ ಎಂದು ಮಾತ್ರ ನಾನು ಹೇಳಬಯಸುತ್ತೇನೆ. ನಿಮ್ಮ ಕವಿತಾ ಶಕ್ತಿಯನ್ನು ಯಾರೆಷ್ಟು ಹೊಗಳಲಿ ನಿಮ್ಮ ಮಾತು, ಬಾಳು, ಯೋಚನೆ ಕೊಳೆಯಾಗುವುದು ಬೇಡ. ಅನುಭವ ದೊಡ್ಡದು ಮಾಡಿಕೊಳ್ಳಿ. ಹಳತೋ, ಹೊಸತೋ – ಸಾಹಿತ್ಯ ತಂತ್ರ ಯಾವುದಾದರೂ ಆಗಲಿ, ಹೇಳುವುದನ್ನು ಹೇಳಿ ಮುಗಿಸಿ. ಹೇಳಲು ಅದು ಯೋಗ್ಯವಾಗಿರಲಿ. ಕೇಳಿದವನಿಗೆ ಧೈರ್ಯ ಶಕ್ತಿ ತರುವಂಥದಾಗಲಿ. ಮುಂದಿನದಕ್ಕೆ ನಿಮ್ಮ ಶಕ್ತಿ ಧೊಡ್ಡದಾಗಲಿ.... ಸಾಕಲ್ಲ?

೨೧-೧೧-೧೯೬೯ ಇಂತೀ ನಿಮ್ಮವ
ಬೆಂಗಳೂರು ವಿ. ಸೀತಾರಾಮಯ್ಯ

೧೯೬೮ರಲ್ಲಿ ಇಲ್ಲಿಂದ ಬೆಂಗಳೂರಿಗೆ ಹೊರಡುವ ಮೊದಲ ದಿನ ರಾತ್ರಿ ನಮ್ಮನ್ನ ಹತ್ತಿರ ಕೂರಿಸಿಕೊಂಡು ಹೇಳಿದ್ದರು. "ಏನೆಂದು ಹರಸಲಪ್ಪ? ಶ್ರೀರಾಮ ಸೀತೆ ಜಿಂಕೆಗಾಗಿ ಹಠ ಮಾಡಿದಾಗ ಅವಳಿಗೊಂದು ಮಾತು ಹೇಳಿದ. 'ಹೆಣ್ಣಿಗೆ ಶೀಲವೇ ಅತ್ಯುತ್ತಮ ಆಭರಣ' ಅಂತ. ಆ ಮಾತನ್ನೇ ನಾನೂ ನಿಮಗೆ ಹೇಳ್ತಾ ಇದೇನೆ. ಅದನ್ನ ಕಾಯ್ದುಕೊಳ್ಳಿ. ನಿಮಗೆಲ್ಲ ಒಳ್ಳೆಯದಾಗಲಿ." ಅವರ ಮನೆಯಲ್ಲಿ ಕುಡಿದ ಕಾಫಿಗಳಂತೆ, ತಿಂದ ಮೋಸೆಗಳಂತೆ, ಇವತ್ತಿಗೂ ನಮ್ಮ ಪಾಲಿಗೆ ಅವರ ಮಾತುಗಳು ಮನಸ್ಸಿನಾಳದಲ್ಲಿ ಹರಳುಗೊಂಡಿದೆ. ೧೯೭೪ರಲ್ಲಿ ಬಂಟ್ವಾಳದಲ್ಲಿ ಪಂಜೆ ಮಂಗೇಶರಾಯರ ಶತಮಾನೋತ್ಸವ ಸಮಾರಂಭ. ನಾನಾಗ ಧರ್ಮಸ್ಥಳದಲ್ಲಿ ಅಧ್ಯಾಪಕನಾಗಿ ಕೆಲಸ ಮಾಡುತ್ತಿದ್ದೆ. ವಿ.ಸೀ. ಯವರೂ ಕಾರ್ಯಕ್ರಮಕ್ಕೆ ಬರುತ್ತಾರೆ ಎಂದು ತಿಳಿದು ಅಲ್ಲಿಗೆ ಹೋಗಿ ಅವರನ್ನು ಕಂಡು ಬಾಗಿದಾಗ ಬಿಗಿದಪ್ಪಿಕೊಂಡು 'ನೀವೆಲ್ಲ ಒಂದೊಂದು ಉದ್ಯೋಗದಲ್ಲಿ ನೆಲೆ ನಿಂತಿದ್ದು ಕಂಡು ತುಂಬ ಸಂತೋಷ ಆಯ್ತಪ್ಪ' ಎಂದು ಹರಸಿದ್ದರು. ಆ ಕಣ್ಣ ಕಾಂತಿಯನ್ನು, ಆ ವಾತ್ಸಲ್ಯದ ದನಿಯನ್ನು ಹೇಗೆ ನನ್ನೆದೆಯಿಂದ ಕಿತ್ತೊಗೆಯಲಿ?

ಬರೆಯುತ್ತ ಬರೆಯುತ್ತ ನೂರಾರು ಘಟನೆಗಳು ಮುಂದೆ ಬಂದು ನಿಲ್ಲುತ್ತವೆ. ಯಾವುದನ್ನು ಬಿಡುವದು? ಯಾವುದನ್ನು ಹೇಳುವುದು? ಅವರ ದೊಡ್ಡತನವನ್ನ ಔದಾರ್ಯವನ್ನ ಈ ನಾಡಿನ ಹತ್ತು ಸಮಸ್ತರು ಉಂಡು ಅನುಭವಿಸಿದ್ದಾರೆ. ಅಂಥ ಸಾವಿರ ಸಾವಿರ ಸಂಖ್ಯೆಗಳಲ್ಲಿ ನಾನೂ ಒಂದು ಅಂಕೆ, ಅಷ್ಟೆ. ಅವರೊಡನೆ ತುಂಬ ಸಲುಗೆಯಿಂದ ವರ್ತಿಸುವ ಜನಗಳಲ್ಲೊಬ್ಬನಾಗಿ ಕೆಲವು ದಿನಗಳನ್ನಾದರೂ ಕಳೆಯುವ ಅವಕಾಶ ನನ್ನದಾಗಿತ್ತು ಎನ್ನುವುದೇ ಒಂದು ಅಭಿಮಾನದ ಸಂಗತಿ. ಇಂತಾದ್ದೇ ಒಂದು ಕ್ಷಣದಲ್ಲಿ 'ಸರ್, ನೀವು ಸಿನಿಮಾ ನೋಡೋದಿಲ್ವಾ?' ಎಂದು ಕೇಳಿದ್ದೆ. ಅದಕ್ಕವರು ಹೇಳಿದ್ದರು– "ಅಯ್ಯೋ ನಾನಿಲ್ಲಿ ಕುಳಿತೇ ಸಿನಿಮಾ ಏನು, ಕಥೆ ಏನು, ಏನೇನಾಗ್ತದೆ ಅನ್ನೋದನ್ನೆಲ್ಲ ಹೇಳಬಲ್ಲೆ. ಆ ಹಾಡನ್ನು ಕೇಳಿದರೆ ಇದೆಲ್ಲ ಅರ್ಥ ಆಗದೆ ಇರುತ್ತೆ" ಎಂದರು! (ಅವರಿಲ್ಲಿ ಉಳಿದುಕೊಂಡಿದ್ದ ಮನೆಯ ತುಸು ದೂರದಲ್ಲೆ ಥಿಯೇಟರು ಇತ್ತು!)

ನಮ್ಮ ಜಿಲ್ಲೆಯ ಕಡಲು ಬೆಟ್ಟಗಳನ್ನು, ಜನಜೀವನವನ್ನು, ಸಂಸ್ಕೃತಿಯನ್ನು ಯಕ್ಷಗಾನವನ್ನು ಪ್ರೀತಿಸುತ್ತಿದ್ದ ವಿ.ಸೀ. ಇನ್ನಿಲ್ಲ ಎಂಬುದನ್ನು ಒಪ್ಪಿಕೊಳ್ಳುವುದಾದರೂ ಹೇಗೆ? ಯಾಕೆಂದರೆ ಈ ಸುವಿಶಾಲ ಸಮುದ್ರ, ದಟ್ಟವಾಗಿ ಎತ್ತರ ಎತ್ತರಕ್ಕೆ ಹಸಿರುಕ್ಕಿ ನಿಂತ ಪರ್ವತಗಳಾಚೆ ನೀಲಿಯೊಸರುವ ಬಾನು....ಬಯಲುಗಳ ಮಹಾಮೌನದಲ್ಲಿ ವಿ.ಸೀ. ತಪಕ್ಕನೆ ಮೂಡಿಬಿಡುತ್ತಾರೆ. 'ಬೆಳವಣಿಗೆಗೆ ಬಾನೇ ಮಿತಿ' ಎಂಬ ಅವರ ಮಾತು, ಮುಖ ಮೂಗು ಪಡೆದುಕೊಳ್ಳುತ್ತದೆ. ಯಾಕೆಂದರೆ ಅವರು ಮೊಗೆದದ್ದು ಆಕಾಶ, ಅಗೆದದ್ದು ಭೂಮಿ. ಇಷ್ಟಾಗಿಯೂ ವಾಸ್ತವದ ಕಟು ಸತ್ಯವಾಗಿ, ಒಳಗಿನದೇನನ್ನೋ ಕಳಿದುಕೊಂಡ ಯಾತನೆಯಾಗಿ ಉರಿಯುತ್ತದೆ. ಆ ಮಹಾಚೇತನದ ಎದುರು ನಾನೆಂಬುದೆಲ್ಲ ಕರಗಿ ಕುಬ್ಜವಾಗಿ ಹೋಗುತ್ತದೆ....

ಕಣ್ಮರೆಯಾದ ಪರಂಪರೆ

"ವಿ.ಸೀ. ಅವರನ್ನು ನೆನೆಸಿಕೊಂಡಾಗಲೆಲ್ಲಾ ನನಗೆ ನಮ್ಮ ತಲೆಯ ಮೇಲಣ ಸೂರಿನ ನೆನಪಾಗುತ್ತದೆ. ಕುಳಿತಲ್ಲಿ, ನಿಂತಲ್ಲಿ, ವಾಸಮಾಡುವಲ್ಲಿ ಸದಾ ನಮ್ಮೊಡನಿರುವ ಸೂರು ನಮಗೆಲ್ಲಾ ಪರಿಚಿತ. ಕಣ್ಣಿಗೆ ಕಂಡರೂ ಕೈಗೆ ಎಟುಕದಷ್ಟು ಎತ್ತರ. ವಿ.ಸೀ. ಅವರ ವ್ಯಕ್ತಿತ್ವವೂ ಹಾಗೆಯೇ. ಮಿತ್ರರಿಗೂ ಶಿಷ್ಯರಿಗೂ ನಿಲುಕದ ಎತ್ತರ.

ವಿ.ಸೀ. ಹೋದರು. ಅವರೊಂದಿಗೆ ಒಂದು ಪರಂಪರೆಯೂ ಕಣ್ಮರೆಯಾಯಿತು".

ಎಚ್ಚೆಸ್ಕೆ

'ಸುಧಾ' (೨೫.೯.೧೯೮೩)

IV

ವಂದನ

ಧೀಮಂತ ವ್ಯಕ್ತಿ

ಬಾಪು ರಾಮಣ್ಣ

ನಾನು ಬೆಂಗಳೂರಿನಲ್ಲಿದ್ದಾಗ ಆಗಾಗ ವಿ.ಸೀ. ಅವರ ಮನೆಗೆ ಹೋಗುತ್ತಿದ್ದೆ. ಮುಖ್ಯವಾಗಿ ನನ್ನ ಸಾಹಿತ್ಯಾಭಿರುಚಿಯಿಂದಾಗಿ, ಅವರಲ್ಲಿ ಸದಾ ನಡೆಯುತ್ತಿದ್ದ ಕನ್ನಡ ದಿಗ್ಗಜಗಳ ಕಾವ್ಯ, ಶಾಸ್ತ್ರ, ವಿಮರ್ಶೆ ಚರ್ಚೆಯಲ್ಲಿ ನಾನು ಕೇವಲ ಶ್ರೋತೃ ಹಾಗೂ ವೀಕ್ಷಕನಾಗಿರುತ್ತಿದ್ದೆ. ಆ ಗೋಷ್ಠಿಯಲ್ಲಿ ಹೆಚ್ಚು ಕಡಿಮೆ ಸದಾ ಹಾಜರಾಗುತ್ತಿದ್ದವರೆಂದರೆ ಶಿವರಾಮ ಕಾರಂತರು. ವಿ.ಸೀ. ಮತ್ತು ಕಾರಂತರ ಸ್ನೇಹ ಎಷ್ಟು ಗಾಢವಾಗಿತ್ತೆಂದರೆ 'ಗಳಸ್ಯ ಕಂಠಸ್ಯ' ಎಂಬ ಸ್ನೇಹಕ್ಕೆ ಸಾಕ್ಷಿಯಾಗಿ ಅವರು ಯಮಳರೋ ಎಂಬ ಭ್ರಮೆಯನ್ನು ಹುಟ್ಟಿಸುತ್ತಿತ್ತು.

ವಿ.ಸೀ. ಅಷ್ಟು ಎತ್ತರದ ಆಳೂ ಅಲ್ಲ, ಕುಳ್ಳಾಗಿಯೂ ಇರಲಿಲ್ಲ. ತೆಳ್ಳಗಿನ ಮೈ ಕಟ್ಟು, ಗೋಧಿಬಣ್ಣದ ತೀಕ್ಷ್ಣ ನಯನ, ಕತ್ತು ಮುಚ್ಚುವ ಅಂಗಿಯನ್ನು ಸದಾ ಧರಿಸಿರುತ್ತಿದ್ದರು. ಕಚ್ಚೆ ಪಂಚೆ ಹಾಗೂ ತಲೆಗೆ ರುಮಾಲು. ರುಮಾಲಿನ ವಿಷಯದಲ್ಲಂತೂ ಬಹು ಆಸಕ್ತಿ. ಅದು ಮನಸ್ಸಿಗೆ ಒಪ್ಪುವಂತೆ ಸರಿಯಾಗಿ ಬರುವವರೆಗೂ ಪ್ರಯತ್ನ ಸಾಗುತ್ತಿತ್ತು. ಅದರಿಂದಾಗಿಯೇ ಅವರು "ಅದಕ್ಕೆ ಮನಸ್ಸು ಬರಬೇಕು" ಎಂದು ಹೇಳುತ್ತಿದ್ದರು! ಎಂಥ ಅಪೂರ್ವ ವಿನೋದ ವ್ಯಾಖ್ಯಾನ! ನಿರ್ಜೀವ ಬಟ್ಟೆಗೂ ಜೀವ ಕಳೆ ತುಂಬುವ ಸಾಹಸ!

ವಿ.ಸೀ. ಗದ್ಯದಲ್ಲಿ ಹೇಗೊ ಪದ್ಯದಲ್ಲಿಯೂ ಪರಿಣತರಾಗಿದ್ದರು. ಅವರ 'ಮನೆ ತುಂಬಿಸುವ ಹಾಡು' ರಚನೆಯು ಬಹುಪ್ರಸಿದ್ಧವಾಗಿತ್ತು. ಮದುವೆಗಳಲ್ಲಿ ಈ ಕವಿತೆಯನ್ನು ಹೆಣ್ಣು ಮಕ್ಕಳು ಸುಶ್ರಾವ್ಯವಾಗಿ ಭಾವಪೂರಿತವಾಗಿ ಹಾಡುತ್ತಿದ್ದರು. ಆಗೆಲ್ಲ ಅಲ್ಲಿ ಒಂದು ಅಪೂರ್ವ ಗಂಭೀರ ವಾತಾವರಣವು ಸೃಷ್ಟಿಯಾಗುತ್ತಿತ್ತು. ಇವರ ಇನ್ನೊಂದು ಕವಿತೆ 'ಕಾದಿರುವಳು ಶಬರಿ ರಾಮ ಬರುವನೆಂದು' ಎಂಬುದೂ ಅಷ್ಟೇ ಪ್ರಸಿದ್ಧವಾದ ಗೀತ. ರಾಮ ದರ್ಶನಕ್ಕೆ ಶಬರಿಯು ಹಂಬಲಿಸುತ್ತಿರುವಾಗ ಲೋಕಾಭಿರಾಮನು ಬಂದು ಅವಳ ಅಪೂರ್ವ ಸೇವೆಯನ್ನು ಸ್ವೀಕರಿಸಿದಾಗ ಶಬರಿಯು ಭಾವವಶಳಾಗಿ ಮೈಮರೆತು ವರ್ತಿಸುವ ದೃಶ್ಯ ವರ್ಣನಾತೀತ.

ವಿ.ಸೀ. ಕಾಫೀ ಭಕ್ತರು. "ನಾನು ಕಾಫೀ ಸೇವಿಸಿದಷ್ಟು ನೀವು ಯಾರೂ ನೀರನ್ನೂ

ಕುಡಿದಿರಲಾರಿರಿ" ಎಂದೇ ಅವರು ಹೇಳುತ್ತಿದ್ದರು! ಹೀಗಾಗಿ ಅವರಲ್ಲಿ ಒಂದು ಟೀಕೆ ಅವತರಿಸಿತು. ಅದು ಹೀಗೆ: 'ದೇವತೆಗಳೀನಾದರೂ ಒಂದು ವೇಳೆ ನಮ್ಮ ಭೂಲೋಕಕ್ಕೆ ಇಳಿದು ಬಂದು ಕೇವಲ ಅರ್ಧಕಪ್ ಕಾಫಿ ಸೇವಿಸಿದ್ದರೆ, ಅವರು ಅಮೃತ ಕುಡಿಯುವುದನ್ನೇ ಬಿಟ್ಟು ಕಾಫೀ ಭಕ್ತರಾಗುತ್ತಿದ್ದರು.' ಈ ವ್ಯಾಖ್ಯಾನ ಅವರ ಹಾಸ್ಯಪ್ರಿಯತೆಗೆ ಸಾಕ್ಷಿ. ಇವರ ಉಪನ್ಯಾಸವನ್ನು ಹಲವಾರು ಬಾರಿ ಕೇಳಿರುವ ನಾನು ಖಚಿತತೆಯ ಪಾಂಡಿತ್ಯವನ್ನು ಅಲ್ಲಿ ಕಂಡಿದ್ದೇನೆ.

ಅವರು ಸರಳತೆಯ ಪ್ರಿಯರು. ಮುಖ್ಯವಾಗಿ ಸ್ನೇಹಪರತೆ, ಹೃದಯವಂತಿಕೆ, ಸಹನೆ, ಸಮಾಧಾನ, ಅನುಕಂಪಕ್ಕೆ ಹೆಸರಾದವರು. ಭೋಜನದಲ್ಲೂ ಅವರದು ಅಚ್ಚುಕಟ್ಟು, ಶಿಸ್ತು. ಅವರ ಮನೆಯಲ್ಲಿ ಸದಾ ಅತಿಥಿ ಅಭ್ಯಾಗತರಿಗೆ, ಸಾಹಿತಿ ಸ್ನೇಹಿತರಿಗೆ ಸೇವೆ ಸಲ್ಲುತ್ತಿತ್ತು. ನಾನು ಅವರಲ್ಲಿಗೆ ಹೋದಾಗಲೆಲ್ಲ ಕಾಫೀ ತಿಂಡಿ ತಪ್ಪದೆ ಸಾಗುತ್ತಿತ್ತು.

ಒಂದು ಸಲ ಅವರಲ್ಲಿಗೆ ನಾನು ಹೋಗಿದ್ದಾಗ ಸುಮಾರು ಕತ್ತಲೆಯಾಗಿದ್ದು ಮನೆಗೆ ಹೋಗಲು ಉದ್ಯುಕ್ತನಾದಾಗ, ಅವರು ನನ್ನನ್ನು ನಮ್ಮ ಮನೆಯ ಹತ್ತಿರದವರೆಗೂ ಬಂದು ಬೀಳ್ಕೊಟ್ಟುದನ್ನು ನಾನೆಂದಿಗೂ ಮರೆಯಲಾರೆ. ಅಂಥ ಅನುಕಂಪ ಅವರದು!

ವಿ.ಸೀ. ಒಬ್ಬ ಧೀಮಂತ ವ್ಯಕ್ತಿ. ಜೀವನದ ನಾನಾ ಮುಖಗಳಲ್ಲಿ ತಮ್ಮ ಅಪೂರ್ವ ಸಾಧನಶಕ್ತಿಯನ್ನು ಮೆರೆದವರು. ಕನ್ನಡ ನಾಡಿನ ಚಿರಸ್ಮರಣೀಯರಲ್ಲಿ ಒಬ್ಬರು. ಪ್ರಾತಃ ಸ್ಮರಣೀಯರಾದ ಮಹಾನುಭಾವರು. ಇವರ ಪ್ರೀತಿ ಆದರವನ್ನು ಉಂಡ, ಇವರ ಪರಿಚಯ ಭಾಗ್ಯವನ್ನು ಪಡೆದಿದ್ದ ನಾನು ಧನ್ಯ.

ನಾವೂ ಒಳ್ಳೆಯ ಊಟ ಉಪಚಾರ ಕಂಡಿದ್ದೇವೆ

"ನಾವೂ ಒಳ್ಳೆಯ ಊಟ ಉಪಚಾರ ಕಂಡಿದ್ದೇವೆ; ಬಗೆಬಗೆಯಾದ ಒಳ್ಳೆಯ ಪುಸ್ತಕಗಳನ್ನು ಓದಿದ್ದೇವೆ; ವಿಧವಿಧವಾದ ಚೆಲುವನ್ನು ನೋಡಿ, ನಮ್ಮ ಪಾಲಿಗೆ ಬಂದುದನ್ನು ಸವಿದಿದ್ದೇವೆ; ಒಳ್ಳೆಯ ಸಂಗೀತ, ಚಿತ್ರ, ನಾಟ್ಯ, ಶಿಲ್ಪಗಳನ್ನು ಕೇಳಿ ನೋಡಿ ಆನಂದಿಸಿದ್ದೇವೆ; ಹತ್ತು ಮಂದಿ ಹಿರಿಯರ ಬದುಕನ್ನೂ ಕೆಳೆಯರ ಪ್ರೀತಿಯನ್ನೂ ಅನುಭವಿಸಿದ್ದೇವೆ; ನಾಡಿನ ಸುತ್ತಸುತ್ತಿ ದುಂಬಿಯಂತೆ ಅದರ ಭೌಮಶೃಂಗಾರವನ್ನುಂಡು, ಕಾಲು, ಕಾನು, ಮಲೆ, ಬಾನು, ಕಡಲು ಬಯಲು, ಹಗಲು ಇರುಳು, ಮಳೆ ಬಿಸಿಲು, ತೆಂಗಾಳಿ, ತಾರಾಗ್ನಿ, ಹಿಮಮಣಿ, ಹಕ್ಕಿ ಹೂ, ಪಶು ಪಕ್ಷಿ ಪ್ರಾಣಿ, ವೇಷ, ಭೂಷ, ರಾಗ, ರೂಪ, ರಸ, ಗಂಧ, ಸ್ಪರ್ಶ; ನೋಟ, ಬೆಡಗು – ಕಂಡು, ಅವನ್ನು ಹೃದಯದಲ್ಲಿ ತುಂಬಿಕೊಂಡು ಮೈಮರೆತಿದ್ದೇವೆ. ಇದನ್ನು Paganism ಎಂಬವರು ಎನ್ನಲಿ. ಇಲ್ಲಿನದು ನಿರೀಶ್ವರತೆಯಾದರೆ, ಈಶ್ವರನ ಐಶ್ವರ್ಯದ ಬಲುಪಾಲು ಬೆಂಡೆಂದು ನನ್ನ ಭಾವನೆ. ಇಲ್ಲ, Humanist ಎಂದು ಕರೆದು ಓಸರಿಸಿದರೆ ನನಗೆ ಅಸಮಾಧಾನವಿಲ್ಲ."

ವಿ.ಸೀ.

'ಹೆಜ್ಜೆಪಾಡು', ಪು. xiii

ಗೌರವಾಸ್ಪದ ಗುರು

ಹೊ. ಶ್ರೀನಿವಾಸಯ್ಯ

ಕಾಲೇಜಿನಲ್ಲಿ ಸಂಸ್ಕೃತ ನನ್ನ ಎರಡನೆಯ ಭಾಷೆಯಾದುದರಿಂದ ಕನ್ನಡದ ಅಧ್ಯಾಪಕರ ವಿದ್ಯಾರ್ಥಿಯಾಗಿರಲು ಸಾಧ್ಯವಾಗಲಿಲ್ಲ. ಆದರೆ ಪದವಿ ಪೂರ್ವದ ತರಗತಿಯಲ್ಲಿ ಓದುವಾಗ, ಕನ್ನಡ ಮತ್ತು ಸಂಸ್ಕೃತ ಯಾವುದೇ ತರಗತಿಯಾಗಿದ್ದರೂ ಅಧ್ಯಾಪಕರು ರಸವತ್ತಾಗಿ ಪಾಠ ಮಾಡುತ್ತಿದ್ದರೆ ಹಿಂದಿನ ಬೆಂಚಿನಲ್ಲಿ ಕುಳಿತು ಅವರ ಪಾಠಕ್ಕಿಂತ ಹೆಚ್ಚಾಗಿ ಅವರ ಮಾತುಗಳನ್ನು ಕೇಳುವುದು ನನಗೂ ನನ್ನ ಕೆಲವು ಸಹಪಾಠಿಗಳಿಗೂ ಅಭ್ಯಾಸವಾಗಿತ್ತು. ರಾಜರತ್ನಂ, ರಾಮಚಂದ್ರಯ್ಯ, ವಿ.ಸೀ. ಇವರುಗಳು ಈ ಗುಂಪಿಗೆ ಸೇರಿದ ಉಪಾಧ್ಯಾಯರು. ಬಿಡುವಿದ್ದ ವೇಳೆಯಲ್ಲಿ ವ್ಯರ್ಥವಾಗಿ ಕಾಲವನ್ನು ಕಳೆಯದೆ ಅವರ ತರಗತಿಗಳಲ್ಲಿ ಹೋಗಿ ಕುಳಿತುಕೊಂಡಿದ್ದರೆ, ಮುಖ ನೋಡಿ ಆ ಉಪಾಧ್ಯಾಯರು ಸುಮ್ಮನಾಗುತ್ತಿದ್ದರು. ಹೊರಗಡೆ ಬಂದಾಗ ಕೇಳುತ್ತಿದ್ದರೂ ತಮ್ಮ ತರಗತಿಗಳಿಗೆ ಬಂದು ಕುಳಿತುಕೊಳ್ಳಲು ಅಡ್ಡಿ ಮಾಡುತ್ತಿರಲಿಲ್ಲ. ನಾವು ಆಸಕ್ತರಾಗಿದ್ದುದನ್ನು ನೋಡಿ ಸಂತೋಷ ಪಡುತ್ತಿದ್ದರು. ಹೀಗೆ ಬೆಳೆದುದು ವಿ.ಸೀ.ಯವರಲ್ಲಿ ನನ್ನ ಶಿಷ್ಯತನ. ಮುಂದೆ ಸಿದ್ಧವನಹಳ್ಳಿ ಕೃಷ್ಣಶರ್ಮರ ನಾಯಕತ್ವದಲ್ಲಿ ಮಲ್ಲೇಶ್ವರದಲ್ಲಿ ಗಾಂಧೀ ಸಾಹಿತ್ಯ ಸಂಘವು ಪ್ರಾರಂಭವಾದ ಮೇಲೆ, ಸಂಘದ ಕಾರ್ಯಕ್ರಮಗಳಿಗೆ ಕರೆಯಲು ಹೋಗುತ್ತಿದ್ದೆನಾಗಿ ವಿ.ಸೀ. ಯವರ ಪರಿಚಯ ಚೆನ್ನಾಗಿ ಆಯಿತು. ಯಾವಾಗ ಕರೆದರೂ ವಿ.ಸೀ. ಯವರು ಕಾರ್ಯಕ್ರಮಕ್ಕೆ ಬರುತ್ತಿದ್ದರು; ಯುವಕರ ರಚನಾತ್ಮಕ ಚಟುವಟಿಕೆಗಳನ್ನು ಕಂಡು ನಮ್ಮ ಬೆನ್ನು ತಟ್ಟುತ್ತಿದ್ದರು.

ಗರಿಗರಿಯಾಗಿ ಕಾಣುವ ಮೈಸೂರು ಪೇಟ, ನೀಳವಾದ ಮುಚ್ಚು ಕುತ್ತಿಗೆಯ ಕೋಟು, ಅಚ್ಚ ಬಿಳಿಯ ಕಚ್ಚೆ ಪಂಚೆ, ಕಾಲಿನಲ್ಲಿ ಚಪ್ಪಲಿ, ಕೈಯಲ್ಲಿ ಛತ್ರಿ ಅಥವಾ ವಾಕಿಂಗ್ ಸ್ಟಿಕ್ ಹಿಡಿದಿರುತ್ತಿದ್ದು, ಮೃದು ಮಂದಹಾಸ ಬೀರುತ್ತಿದ್ದ ವಿ.ಸೀ. ಅವರು ಆಗಿನ ಯುವಕರಿಗೆ ಗೌರವಾಸ್ಪದ ಗುರುಗಳಾಗಿದ್ದರು.

ಒಂದು ಪ್ರಸಂಗವನ್ನಂತೂ ನಾನು ಮರೆಯಲಾರೆ. ೧೯೪೨ರ ಅಕ್ಟೋಬರಲ್ಲೆಂದು ಕಾಣುತ್ತದೆ: ಬೊಂಬಾಯಿನ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡ, ಮುಂಬಯಿ ಕಾರ್ಪೋರೇಷನ್‌ನ ಮೇಯರ್ ಆಗಿದ್ದ ಕೆ. ಎಫ್. ನಾರಿಮನ್ ಮೈಸೂರು ದಸರಾ ಕಾಲದಲ್ಲಿ ನಡೆದ ಸ್ಥಳೀಯ

ಸಂಸ್ಥೆಗಳ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಬಂದಿದ್ದರು. ಸಮ್ಮೇಳನ ಮುಗಿದ ಮೇಲೆ ಮೈಸೂರು ಬೆಂಗಳೂರುಗಳಲ್ಲಿ ಅವರು ಹಲವಾರು ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಿದರು. ನಾರಿಮನ್‌ರ ಭಾಷಣ ಕೇಳಲು ಬೆಂಗಳೂರಿನ ಬನಪ್ಪ ಪಾರ್ಕಿನಲ್ಲಿ ನಡೆದ ಸಭೆಯಲ್ಲಿ ನಲವತ್ತು ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು. ಅವರು ಭಾಷಣ ಮಾಡುತ್ತಿದ್ದಾಗ ಪೊಲೀಸ್ ಇನ್ಸ್‌ಪೆಕ್ಟರ್ ವೇದಿಕೆಯ ಮೇಲಕ್ಕೆ ನುಗ್ಗಿ ನಾರಿಮನ್‌ರು ಐದು ನಿಮಿಷದಲ್ಲಿ ಭಾಷಣ ಮುಗಿಸುತ್ತೇನೆಂದು ಹೇಳಿದರೂ ಕೇಳದೆ ಅವರ ಕೈ ಹಿಡಿದು ಕೆಳಕ್ಕಿಳಿಸಿದರು. ಈ ಅಪಚಾರದ ಕಾರ್ಯಕ್ರಮವನ್ನು ನೋಡಿ ಜನ ಕೆರಳಿದರು. ಆ ಬಳಿಕ ನಾರಿಮನ್ನರನ್ನು ದಸ್ತಗಿರಿ ಮಾಡಿ ಸಂಸ್ಥಾನದ ಗಡಿಯಿಂದ ಆಚೆಗೆ ಕರೆದುಕೊಂಡು ಹೋಗಿ ಬಿಟ್ಟರು. ಸಂಸ್ಥಾನದ ಅತಿಥಿಯಾಗಿ ಬಂದಿದ್ದ ಒಬ್ಬ ಗಣ್ಯ ವ್ಯಕ್ತಿಯನ್ನು ಅಪಮಾನಗೊಳಿಸಿದ್ದಕ್ಕೆ ಜನ ಸಿಟ್ಟಿಗೆದ್ದರು; ಪ್ರತಿಭಟನೆ ನಡೆಸಿದರು. ಪೊಲೀಸರು ಶಾಂತವಾಗಿ ನಿಂತಿದ್ದ ಜನರ ಮೇಲೆ ಲಾಠಿ ಚಾರ್ಜು ಮಾಡಿದರು; ನಂತರ ಐಜಿಪಿ ಹ್ಯಾಮಿಲ್ಟನ್ ಗುಂಡು ಹಾರಿಸಿದರು. ಪೊಲೀಸರ ಗುಂಡಿಗೆ ಸಿಕ್ಕಿ ಯುವಕನೊಬ್ಬ ಸತ್ತ. ಶಸ್ತ್ರಸಿದ್ಧ ಪೊಲೀಸರು ಇಂಟರ್ ಮೀಡಿಯೆಟ್ ಕಾಲೇಜಿನ ಆವರಣದೊಳಕ್ಕೆ ನುಗ್ಗಿ ತರಗತಿಗಳ ಹೊರಗೆ ಒಳಗೆ ಇದ್ದ ವಿದ್ಯಾರ್ಥಿಗಳನ್ನು ಹೊಡೆದರು. ಆಗ ಅಧ್ಯಾಪಕರಾಗಿದ್ದ ವಿ.ಸೀ. ಯವರಿಗೂ ಪೊಲೀಸರ ಹೊಡೆತ ಬಿತ್ತು. ಇದನ್ನು ಕಂಡು ವಿದ್ಯಾರ್ಥಿಗಳು ಉದ್ವೇಗಗೊಂಡರು. ಪೊಲೀಸರ, ವಿದ್ಯಾರ್ಥಿಗಳ, ಜನರ ಮಧ್ಯೆ ಅನೇಕ ಘರ್ಷಣೆಗಳಾದುವು. ಅನೇಕ ಯುವಕರು ದಸ್ತಗಿರಿಯಾದರು. ನಾರಿಮನ್‌ರಿಂದ ಪ್ರಾರಂಭವಾದ ಗಲಾಟೆ ವಿ.ಸೀ.ಯವರು ಲಾಠಿ ಏಟು ತಿಂದಿದ್ದರಿಂದಾಗಿ ಕಾಲೇಜು ಯುವಕರಲ್ಲಿ ಒಂದು ಜಾಗೃತಿ ಬೆಳೆಯಿತು. ಆಗಿನ ಅಧ್ಯಾಪಕರು ನೇರವಾಗಿ ಚಳವಳಿಗಳನ್ನು ಮಾಡದಿದ್ದರೂ ವಿದ್ಯಾರ್ಥಿಗಳಿಗೆ ಮತ್ತು ಯುವಕರಿಗೆ ಪರೋಕ್ಷವಾಗಿ ದೇಶಾಭಿಮಾನ, ಸ್ವಾತಂತ್ರ್ಯ ಚಳುವಳಿಯ ಬಗೆಗೆ ತಿಳಿವಳಿಕೆ ಕೊಟ್ಟು ಅವರನ್ನು ಹುರಿದುಂಬಿಸುತ್ತಿದ್ದರು. ವಿ.ಸೀ. ಯವರೂ ಈ ಗುಂಪಿಗೆ ಸೇರಿದವರೇ.

ವಿ.ಸೀ. ಕನ್ನಡ ಇಂಗ್ಲಿಷ್ ಸಂಸ್ಕೃತ ಅರ್ಥಶಾಸ್ತ್ರಗಳಲ್ಲಿ ಪಂಡಿತರು. ಕಲಾಜೀವಿಗಳು. ಅತ್ಯಂತ ಸರಳ ಜೀವಿಗಳು. ಅವರ ಜೊತೆಯಲ್ಲಿ ಮಾತನಾಡುವುದು ರಸದೌತಣ ವೆನಿಸುತ್ತಿತ್ತು. ರಾಜಕೀಯ ಕಲೆ ಸಾಹಿತ್ಯ ನೃತ್ಯ ವಿಜ್ಞಾನ ಸಂಸ್ಕೃತಿ ಸಂಗೀತ – ಯಾವ ವಿಷಯದಲ್ಲಿಯಾದರೂ ತುಂಬು ತಿಳಿವಳಿಕೆ, ನಿರರ್ಗಳವಾದ ಮಾತು. ಸರಳತೆಯ ಜೊತೆಗೆ ತಿಳಿಹಾಸ್ಯವೂ ಉಂಟು. ಸ್ನೇಹಪರರು, ವಿಚಾರವಂತರು. ಅನೇಕರಿಗೆ ಸಾಹಿತ್ಯ ಕೃಷಿಗೆ ಸ್ಫೂರ್ತಿದಾಯಕರಾಗಿದ್ದವರು. ಅವರ ಮಾತಿನಲ್ಲಿ, ಸಾಹಿತ್ಯದಲ್ಲಿ ರಾಷ್ಟ್ರಾಭಿಮಾನ ಎದ್ದು ಕಾಣುತ್ತಿತ್ತು.

ನಾನು ಜರ್ಮನಿಗೆ ಹೋಗಿ ಬಂದ ಮೇಲೆ ಗುರುಗಳಾದ ಸಿದ್ಧವನಹಳ್ಳಿ ಕೃಷ್ಣಶರ್ಮರು "ನಿಮ್ಮ ಅನುಭವವನ್ನು ಸಂಪೂರ್ಣವಾಗಿ ಬರೆಯಿರಿ" ಎಂದು ಆದೇಶಿಸಿದರು. ನನಗೆ ಪ್ರವಾಸದ ಅನುಭವವನ್ನು ಕುರಿತು ಹೇಗೆ ಬರೆಯಬೇಕೆಂದು ತಿಳಿಯದು. ಆ ಬಗೆಯ ಪುಸ್ತಕಗಳನ್ನು ಹುಡುಕಿದೆ. ಸಿಕ್ಕಿದ ಮೊದಲ ಪ್ರವಾಸ ಸಾಹಿತ್ಯ ಪುಸ್ತಕ ವಿ.ಸೀ. ಯವರ 'ಪಂಪಾಯಾತ್ರೆ.' ಆ ಪುಸ್ತಕದಲ್ಲಿ ವಿ.ಸೀ.ಯವರು

ವರ್ಣನೆಯೊಂದಿಗೆ ಭಾವನೆಗಳನ್ನು ಬೆರೆಸಿ ಸ್ವಚ್ಛಂದವಾಗಿ ಬರೆದಿದ್ದಾರೆ. ಎರಡೆರಡು ಸಾರಿ ಓದಿ ಅದರಲ್ಲಿ ಇರುವ ಕೆಲವು ಬರಹದ ರೂಪಗಳನ್ನು ಮಾದರಿಯಾಗಿ ತೆಗೆದುಕೊಂಡು ನನ್ನ ಅನುಭವ ಕಥನವನ್ನು ಬರೆಯಬೇಕು ಎನ್ನಿಸಿತು. ಪ್ರವಾಸ ಸಾಹಿತ್ಯದ ಪುಸ್ತಕಗಳೇ ಹೆಚ್ಚಾಗಿ ಇಲ್ಲದಿದ್ದ ಕಾಲದಲ್ಲಿ ನನ್ನ "ನಾ ಕಂಡ ಜರ್ಮನಿ" ಪುಸ್ತಕ ಹೊರಬರಲು ಉತ್ತೇಜನ ಮತ್ತು ಧೈರ್ಯ ಕೊಟ್ಟದ್ದು ವಿ.ಸೀ. ಅವರ "ಪಂಪಾಯಾತ್ರೆ" ಎಂದು ಕೃತಜ್ಞತೆಯಿಂದ ನೆನೆಯುತ್ತೇನೆ.

ವಿ.ಸೀ. ಯವರ ಬಗ್ಗೆ ಎಷ್ಟು ಬೇಕಾದರೂ ಬರೆಯಬಹುದು. ಇಂಥವರು ಇದ್ದ ಕಾಲದಲ್ಲಿಯೇ ನಾನೂ ಬದುಕಿ ಬಾಳಿದೆನಲ್ಲಾ ಎಂದು ಸಂತೋಷ ಪಡುತ್ತಿದ್ದೇನೆ.

ನನ್ನ ಜೀವನ ದರ್ಶನ

"ನನಗೆ ಇಷ್ಟು ನಿಜ: ಬದುಕಿನಲ್ಲಿ ದುಃಖವಿರುವಂತೆ ಸಂತೋಷವೂ ಇದೆ. ಹಗೆಯಿರುವಂತೆ ಕೆಳೆ ಇದೆ. ನಿಷ್ಠುರತೆ, ವಂಚನೆ ಇರುವಂತೆ ನಯ ಪ್ರಾಮಾಣಿಕತೆ ಇವೆ. ಕಷ್ಟದಲ್ಲಿ ಇರುವಾಗ ಯಾರೋ ಒಬ್ಬರಾಡಿದ ಮಾತು ಅಮೃತಸತ್ವವಾಗಬಲ್ಲದು. ಕೋಟಿಕರ್ಕಶ ಕೊಲ್ಲುತ್ತಿರುವಾಗ, ಮೌನದಲ್ಲಿ ಮರೆಯಲ್ಲಿ ನಮಗಾಗಿ ಬಾಚಿಹಿಡಿವ ಕೈಕೆಲ, ಕೊಡುವ ಧೈರ್ಯ, ನುಡಿವ ತುಟಿಯ ಒಂದು ಅಲುಗು, ಮಾತು, ಕಣ್ಣಿನ ಒಂದು ಸ್ನೇಹದ ಮಿನುಗು ಸಾಕು – ತಾರಣೆಗೆ, ಉಳಿಸುವುದಕ್ಕೆ, ಬದುಕಿನಲ್ಲಿ ನಂಬಿಕೆ ಸ್ಥಾಪಿಸುವುದಕ್ಕೆ. ಈ ಲಕ್ಷಣ ಮಾನವತೆಯ ಪರಮಲಕ್ಷಣ. ಇದು ನರಲೋಕದ ಸೌಭಾಗ್ಯ. ಈ ಸೌಭಾಗ್ಯ ಎಷ್ಟು ಹೊಮ್ಮಿದರೂ ಕಡಮೆಯೇ ಎನ್ನಿಸುತ್ತದೆ ನನಗೆ. ಅದನ್ನು ಸವಿಯುವ ಭೋಗ, ಸಾಧಿಸುವ ಯೋಗ ಸಾಹಿತ್ಯಯೋಗ. ಲೋಕ ಕ್ಷಣಿಕವೇನು? ಆಗಲಿ. ಈ ಸೌಂದರ್ಯ, ಮೈತ್ರಿ ನಶ್ವರವೇ ಆಗಲಿ. ಪ್ರೀತಿ ನನಗೆ ದಿವ್ಯ. ಬಾಳಿಗೆ ನಾನು ಕೃತಜ್ಞ ಎಂಬ ಕವಿನುಡಿಗಳಿವೆ. ಆ ಸುಖೋಷ್ಣತೆ, ಆ ಕರುಳ ಕರುಣೆ ನನಗೂ ಸಾಕು. ಅದನ್ನು ಎರೆವವರು ಬಂಧುಗಳು, ಲೋಕವೆಲ್ಲ ನಿರ್ಘೃಣವಾಗಿ ಕೈಬಿಟ್ಟ ಕಾಲದಲ್ಲಿ ಎಲ್ಲಿನದೋ ಒಂದು ಪ್ರೀತಿ, ಧೈರ್ಯ ಕಂಡಾಗ ನನಗೆ ಮಾನವನ ಬದುಕು ಸಾರ್ಥಕವಾದಂತೆ ಕಾಣುತ್ತದೆ. ಹತ್ತು ಯುಗಗಳ ಕಷ್ಟವನ್ನು ದಾಟಬಲ್ಲೆನೆಂಬ ದೃಢ, ಸ್ಫೂರ್ತಿ ಬರುತ್ತವೆ. ರಾಜ್ಯಸಾಮ್ರಾಜ್ಯಗಳ ದರ್ಪವನ್ನು ಪ್ರತಿಭಟಿಸಬಲ್ಲೆನೆಂಬ ನಿಶ್ಚಯ, ಸಾಹಸ ಉಂಟಾಗುತ್ತವೆ. ಈ ನಂಬಿಕೆ ನನಗೆ ಸಾಕು."

ವಿ. ಸೀ.

'ಲಲಿತ ಪ್ರಬಂಧ ಸಂಪುಟ' ಪು. ೧೩೯-೧೪೦

ನಮ್ಮ ಊರಿನ ಅಳಿಯಂದಿರು

ಸಿ. ಎನ್. ಬಸವರಾಜ್

ವಿಜಯಪುರದ ಮಾಧ್ಯಮಿಕ ಶಾಲೆಯಲ್ಲಿ ನಾನು ವ್ಯಾಸಂಗ ಮಾಡುತ್ತಿದ್ದಾಗ, ನನ್ನ ವಿದ್ಯಾಗುರುಗಳಾಗಿದ್ದ ಕನ್ನಡ ಪಂಡಿತ ಕೀರ್ತಿಶೇಷ ಶ್ರೀ ಕಟ್ಟಿಮನೆ ಕೃಷ್ಣರಾಯರು ಕನ್ನಡ ಭಾಷಾ ಪಾಠ ಮಾಡುತ್ತಿದ್ದರು. ಅವರ ಬೋಧನಾ ಕ್ರಮ ಅದ್ವಿತೀಯವಾದದ್ದು. ವಿದ್ಯಾರ್ಥಿಗಳನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಮನ ಮಿಡಿಯುವಂತೆ ಪಾಠ ಮಾಡುತ್ತಿದ್ದರು. ಶ್ರೀ ಕೃಷ್ಣರಾಯರು ಕಣ್ತೆರೆಸಿದ ಗುರುಗಳು ಮತ್ತು ನನಗೆ ಪ್ರಾತಃ ಸ್ಮರಣೀಯರು. ನಮ್ಮ ಕನ್ನಡ ಪಠ್ಯಪುಸ್ತಕದಲ್ಲಿದ್ದ 'ಕಾದಿರುವಳು ಶಬರಿ ರಾಮ ಬರುವನೆಂದು' ಪದ್ಯವನ್ನು ಹಾವಭಾವಗಳಿಂದ ಸುಶ್ರಾವ್ಯವಾಗಿ ಹಾಡುವ ಅಭ್ಯಾಸವನ್ನು ನಮಗೆ ಮಾಡಿಸಿದ್ದರು. ನನ್ನ ಕುತೂಹಲ ಕೆರಳಿಸಿದ ಈ ಪದ್ಯದ ಕವಿ ವಿಷಯವಾಗಿ ವಿವರವಾಗಿ ಅಭ್ಯಾಸ ಮಾಡಿದಾಗ ಈ ಪದ್ಯದ ಕರ್ತೃ ವಿ.ಸೀ. ಯವರು, ಅವರು ನಮ್ಮ ತಾಲ್ಲೂಕಿನವರು ಎಂದು ತಿಳಿಯಿತು. ಹೆಚ್ಚು ವಿವರಗಳಿಗಾಗಿ ಶೋಧ ನಡೆಸಿದಾಗ ನಮ್ಮ ಊರಿನ ಅಳಿಯಂದಿರು ಎಂದು ತಿಳಿದು ತುಂಬಾ ಹೆಮ್ಮೆಯಾಯಿತು. ಇನ್ನಷ್ಟು ವಿವರಗಳಿಗಾಗಿ ನನ್ನ ಮಾತೃಶ್ರೀಯವರನ್ನು ಸಂಪರ್ಕಿಸಿದಾಗ, ಶ್ರೀಮತಿ ವಿ.ಸೀ.ಯವರು ನಮ್ಮ ಮನೆಯ ಮುಂಭಾಗದಲ್ಲಿದ್ದು, ನಮ್ಮ ತಾಯಿಯ ಓರಗೆಯವರೆಂದು ಗೊತ್ತಾಗಿ ಅವರನ್ನು ನೋಡಬೇಕು, ಅವರೊಡನೆ ಮಾತನಾಡಬೇಕೆಂಬ ಹಂಬಲ ಹೆಚ್ಚಾಯಿತು.

ನನ್ನ ವೈಯಕ್ತಿಕ ಕಾರಣಗಳಿಗಾಗಿ ಎಸ್.ಎಸ್.ಎಲ್.ಸಿ.ಗೆ ವ್ಯಾಸಂಗವನ್ನು ಮುಗಿಸಿ ಬದುಕಿಗಾಗಿ ವೃತ್ತಿಯನ್ನು ಅವಲಂಬಿಸುವಲ್ಲಿ ವಿದ್ಯುತ್ ಗುತ್ತಿಗೆದಾರನಾದೆ. ವೃತ್ತಿ ಕಾರ್ಯ ನಿಮಿತ್ತ ಬೆಂಗಳೂರಿಗೆ ಹೋದಾಗಲೆಲ್ಲಾ ಶ್ರೀ ವಿ.ಸೀ.ಯವರನ್ನು ನೋಡಬೇಕೆಂಬ ಹಂಬಲ ಹೆಚ್ಚಾಯಿತು. ನನ್ನ ಹಿರಿಯ ಮಿತ್ರ ಸಾಹಿತ್ಯ ಆಕಾಂಕ್ಷಿ ಬಿ. ಮುನಿನಾರಾಯಣಪ್ಪ ಸಾಮಾನ್ಯವಾಗಿ ನನ್ನ ಸಂಗಾತಿಯಾಗಿರುತ್ತಿದ್ದ. ನಾವಿಬ್ಬರೂ ಕೂಡಿ ವಿ.ಸೀ.ಯವರನ್ನು ಕಾಣಲು ಚಾಮರಾಜಪೇಟೆಯ ಅವರ ಮನೆಗೆ ಹೋಗುತ್ತಿದ್ದೆವು. ವಿ.ಸೀ.ಯವರ ಸೌಜನ್ಯ, ಸಹೃದಯತೆ ನಮ್ಮನ್ನು ಬೆರಗು ಗೊಳಿಸುತ್ತಿದ್ದವು. ಅವರ ಮನೆಯ ಚಿಕ್ಕ ಕೋಣೆಯ ಸಾಹಿತ್ಯ ಕೃತಿಗಳ ಮಧ್ಯೆ ನಮ್ಮನ್ನು ಬರಮಾಡಿಕೊಂಡು ತುಂಬಾ ಆತ್ಮೀಯವಾಗಿ ಮಾತನಾಡಿಸುತ್ತಿದ್ದರು. ನಾವು ಹೋದಾಗಲೆಲ್ಲಾ ಯಾರಾದರೊಬ್ಬರು ಹಿರಿಯ ಸಾಹಿತಿಗಳು ಅವರೊಡನೆ ವಿಚಾರ ವಿನಿಮಯ ಮಾಡುತ್ತಿದ್ದುದು ನಾವು ಕಾಣುತ್ತಿದ್ದ ಸಾಮಾನ್ಯ ದೃಶ್ಯ. ಸಾಹಿತ್ಯ–ಶೈಕ್ಷಣಿಕ

ವಿಷಯಗಳಲ್ಲಿ ನಮ್ಮ ಸಂಶಯಗಳಿಗೆ ಸೂಕ್ತ ಪರಿಹಾರ ನೀಡಿ ಸಂತಸಗೊಳಿಸುತ್ತಿದ್ದರು. ಅವರ ಶ್ರೇಷ್ಠ ಕೃತಿ 'ಹಣ ಪ್ರಪಂಚ'ದ ವಿಷಯದಲ್ಲಿ, ನಾವು ಓದಿದ್ದ ವಿ.ಸೀ.ಯವರ ಇನ್ನಿತರ ಕೃತಿಗಳು ಮತ್ತು ಸಮಕಾಲೀನ ಸಾಹಿತಿಗಳ ಬರಹಗಳ ವಿಷಯಗಳಲ್ಲಿ ನಮ್ಮ ಸಂಶಯಗಳನ್ನು ನಿವಾರಣೆ ಮಾಡುತ್ತಿದ್ದರು. ಅವರೊಡನಿದ್ದ ರಸ ನಿಮಿಷಗಳು ನಿಜಕ್ಕೂ ನಮಗೆ ಅಮೃತಗಳಿಗೆಯಾಗಿದ್ದವು.

ವಿ.ಸೀ.ಯವರನ್ನು ರಾಜ್ಯೋತ್ಸವ ಸಮಾರಂಭಕ್ಕೆ ಒಮ್ಮೆ ವಿಜಯಪುರಕ್ಕೆ ಕರೆದೊಯ್ಯ ಬೇಕೆಂಬ ಹಂಬಲ. ನಾನು ಹೋದಾಗೆಲ್ಲಾ ಈ ವಿಷಯವನ್ನು ಪ್ರಸ್ತಾವಿಸುತ್ತಿದ್ದೆ. ಅವರು ತುಂಬಾ ಸೌಜನ್ಯದಿಂದ ನಿರಾಕರಿಸುತ್ತಿದ್ದರು. ನನ್ನ ಬಿನ್ನಹವನ್ನು ಅವರು ನಿರಾಕರಿಸಲಾಗದೆ ಒಮ್ಮೆ ಒಪ್ಪಿದರು. ನನಗೆ ತುಂಬ ಸಂತೋಷವಾಯಿತು. ಆ ಉತ್ಸಾಹದ ಭರದಲ್ಲಿ ವಿ.ಸೀ.ಯವರ ತೂಕಕ್ಕೆ ಸರಿದೂಗುವ ವ್ಯಕ್ತಿಗಳನ್ನು ಆರಿಸಬೇಕೆಂದು ನಿರ್ಣಯಿಸಿದೆ. ಅವರ ವ್ಯಾಸಂಗದ ಸಹಪಾಠಿಗಳೂ ನನ್ನ ಪ್ರೀತಿ ಗೌರವಗಳಿಗೆ ಕಾರಣರೂ ಆಗಿದ್ದ ಶ್ರೇಷ್ಠ ರಾಜಕಾರಣಿ ಕೀರ್ತಿಶೇಷ ಟಿ. ಸಿದ್ಧಲಿಂಗಯ್ಯನವರನ್ನೂ ಅಂದಿನ ವಿಧಾನ ಸಭಾಧ್ಯಕ್ಷೆಯಾಗಿದ್ದ ದಿವಂಗತ ಶ್ರೀಮತಿ ಕೆ. ನಾಗರತ್ನಮ್ಮನವರನ್ನೂ ಅಂದಿನ ವಿಧಾನಸಭಾ ವಿರೋಧ ಪಕ್ಷದ ಯಶಸ್ವೀನಾಯಕರಾಗಿದ್ದ ಎಚ್. ಡಿ. ದೇವೇಗೌಡರನ್ನೂ ಆಹ್ವಾನಿಸಿದ್ದೆವು. ಎಲ್ಲ ಆಹ್ವಾನಿತ ಅತಿಥಿಗಳೂ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಸಭಿಕರನ್ನು ಉದ್ದೇಶಿಸಿ ವಿ.ಸೀ.ಯವರು ಮಾತನಾಡಿದರು. ಅದಿನ್ನೂ ನನ್ನ ಕಿವಿಯಲ್ಲಿ ದನಿಗೊಡುತ್ತಿದೆ. ವಿಜಯಪುರದ ಜನರ ಪ್ರೀತಿ ವಿಶ್ವಾಸ ಗೌರವಗಳನ್ನು ತುಂಬಾ ಕೃತಜ್ಞತೆಯಿಂದ ಸ್ಮರಿಸಿದರು.

ವಿ.ಸೀ.ಯವರ ಕೃತಿಗಳು ನನಗೆ ನೀಡಿರುವ ಸ್ಫೂರ್ತಿಯನ್ನು ಇಲ್ಲಿ ಪ್ರಸ್ತಾವಿಸಲಾರೆ. ಅವರು ನನಗೆ ಪ್ರಾತಃಸ್ಮರಣೀಯರು.

ನನಗೆ ತುಂಬಾ ಪ್ರಿಯ

"ನನ್ನ ಮನಸ್ಸು ದಿನಜೀವನಕ್ಕೆ ಮಣೆಯುತ್ತದೆ. ಇಲ್ಲಿನ ನೋವು, ನಿರಾಸೆ, ಪ್ರೀತಿ, ಇಲ್ಲಿಯ ಔದಾರ್ಯ, ಸ್ನೇಹದ ನೆರವು, ಕಾರುಣ್ಯ ನನಗೆ ತುಂಬಾ ಪ್ರಿಯ.

Your chilly stars I can forgo
This warm kind world is all I know.

ಎಂದೂ,

All beauteous things for which we live
By laws of time and space decay;
But oh! the very reason why
I clasp them, is because they die.

ಎಂದು ನುಡಿದ ಕವಿಯ ಮಾತು ನನಗೆ ಬಹುಮೆಚ್ಚಿನದು. ಅದರಲ್ಲಿ ಜೀವನದ ಪ್ರೇಮವಿದೆ; ಅಬ್ಬರವಿಲ್ಲ, ಪೆಗ್ಗೆಯಿಲ್ಲ; ವಿನಯದ ಸಂತೋಷವಿದೆ. ಅಲ್ಲದೆ ನಿತ್ಯ, ಅನಂತ ಎಂಬ ಮೋಹಗಳಿಂದ ಕಾಲವನ್ನೂ ಚಲಿಸುವ ಜಗತ್ತಿನ ವ್ಯವಹಾರಗಳನ್ನೂ ನಿರಾಕರಿಸಿ ನಮ್ಮ ತಾತ್ವಿಕ ಚಿತ್ತವೃತ್ತಿಯೇ ಒಡವಾಯಿತೇನೋ, ಆ ಮಟ್ಟಿಗೆ ಅಸತ್ಯವಾಯಿತೇನೋ ಎನ್ನಿಸುತ್ತದೆ, ಕೆಲವೇಳೆ ನನಗೆ."

ವಿ.ಸೀ.

'ಹೆಜ್ಜೆಪಾಡು', ಪು. xii-xiii

ಒಂದು ಪುಣ್ಯ ಸ್ಮರಣೆ

ಎನ್. ನಂಜುಂಡಶಾಸ್ತ್ರೀ

ವಿ.ಸೀ.ಯವರ ನೇರ ಶಿಷ್ಯನಾಗುವ ಸೌಭಾಗ್ಯ ನನ್ನದಾಗಿರಲಿಲ್ಲ, ಆದರೆ ಅವರ ಸಹೋದ್ಯೋಗಿಯಾಗುವ ಭಾಗ್ಯ ನನಗೆ ಒದಗಿ ಬಂದಿತು.

ಆ ಕಾಲದಲ್ಲಿ (೧೯೩೭–೧೯೪೨) ಮೈಸೂರಿನ ಎರಡು ಕಾಲೇಜುಗಳಲ್ಲಿ ಕನ್ನಡ ವಿಭಾಗದಲ್ಲಿ ಸೇವೆಸಲ್ಲಿಸುತ್ತಿದ್ದವರೆಲ್ಲರೂ ಘಟಾನುಘಟಿಗಳೇ. ಟಿ. ಎಸ್. ವೆಂಕಣ್ಣಯ್ಯನವರು, ತೀ. ನಂ. ಶ್ರೀಕಂಠಯ್ಯನವರು, ಡಿ. ಎಲ್. ನರಸಿಂಹಾಚಾರ್ಯರು, ಕೆ. ವಿ. ಪುಟ್ಟಪ್ಪನವರು, ವಿ.ಸೀ.ಯವರು, ಎ. ಆರ್. ಕೃಷ್ಣಶಾಸ್ತ್ರಿಗಳು, ಮತ್ತು ಜಿ. ಪಿ. ರಾಜರತ್ನಂ ರವರು. ಕೊನೆಯಲ್ಲಿ ಹೆಸರಿಸಿರುವ ಮಹಾಶಯರು ಮಾತ್ರ ಖಾದಿ ಷರಾಯಿ, ಷೂಸು ಮತ್ತು ಕ್ಲೋಸ್ಡ್ ಕಾಲರ್ ಕೋಟು ಧರಿಸಿ, ಯಾವ ಶಿರೋಭೂಷಣವೂ ಇಲ್ಲದೆ ೧೯೩೮ರಲ್ಲಿ ನಮಗೆ ಮೇಷ್ಟ್ರರಾಗಿ ಬಂದರು. ಅವರ ಕಂಚು ಕಂಠ, ಉನ್ನತ ಮಟ್ಟದ ಹಾಸ್ಯಪ್ರಚೋದನಾಶಕ್ತಿ (cheap jokes ಅಲ್ಲ), ವಾಗ್ಝರಿ, ವಿಷಯ ನಿರೂಪಣಾ ಸಾಮರ್ಥ್ಯ ಮತ್ತು ಶಿಸ್ತುಪಾಲನೆ ನಮ್ಮೆಲ್ಲರ ಎಳೆಯ ಮನಸ್ಸನ್ನು ಸೂರೆಗೊಂಡವು.

ದಿನದ ಕಟ್ಟಕಡೆಯ ಪೀರಿಯಡ್‌ನಲ್ಲಿ ಅವರು ಪಾಠ ಮಾಡಬೇಕಾಗಿ ಬಂದುದರಿಂದ ಹುಡುಗರನ್ನು ಹತೋಟಿಯಲ್ಲಿಡಲು ಒಂದು ಉಪಾಯವನ್ನು ಕಂಡು ಹಿಡಿದರು. "ನೀವೆಲ್ಲ ಕನ್ನಡ ಕುವರರು. ನಿಮ್ಮಲ್ಲಿ ಅನೇಕರು ಮುಂದೆ ಸಾಹಿತಿಗಳಾಗುವವರು. ಎಲ್ಲಿ ನೋಡೋಣ, ನಿಮ್ಮ ಮನಸ್ಸಿನ ಮೇಲೆ ಅತ್ಯಂತ ಪರಿಣಾಮ ಉಂಟುಮಾಡಿರುವ, ನಿಮ್ಮ ಜೀವನದ ಘಟನೆ ಇಲ್ಲವೆ ಸಂಗತಿಯೊಂದನ್ನು ಪ್ರಾಮಾಣಿಕವಾಗಿ, ಲಕ್ಷಣವಾಗಿ ಬರೆಯಿರಿ."

ಜಿ. ಪಿ. ರಾಜರತ್ನಂರವರನ್ನು ಬಿಟ್ಟು ಮೇಲೆ ಸೂಚಿಸಿರುವ ಉಳಿದ ಕನ್ನಡ ಅಧ್ಯಾಪಕರುಗಳೆಲ್ಲ ಕಚ್ಚೆ ಪಂಚೆ, ಕ್ಲೋಸ್ಡ್ ಕಾಲರ್ ಕೋಟು ಮತ್ತು ಮೈಸೂರು ಪೇಟಾದಲ್ಲಿ ರಾರಾಜಿಸುತ್ತಿದ್ದರು. ಕೆ. ವಿ. ಪುಟ್ಟಪ್ಪನವರು (೧೯೩೮ರಲ್ಲಿ ಅವರು ಸಾಕ್ಷಾತ್ ಮನ್ಮಥ ರೂಪಿಗಳಾಗಿದ್ದು, ಸ್ವಾಮಿ ವಿವೇಕಾನಂದರನ್ನು ಹೋಲುತ್ತಿದ್ದರು) ಮಾತ್ರ ಪೇಟಾವನ್ನಾಗಲಿ, ಟೋಪಿಯನ್ನಾಗಲಿ ಧರಿಸುತ್ತಿರಲಿಲ್ಲ. ಈ ಪೇಟಾಧಾರಿ ಕನ್ನಡ ಅಧ್ಯಾಪಕರುಗಳಲ್ಲಿ ಎದ್ದು ಕಾಣುತ್ತಿದ್ದವರು ತೀ. ನಂ. ಶ್ರೀಕಂಠಯ್ಯನವರು ಮತ್ತು ವಿ.ಸೀ.

ಯವರು. ತೀ. ನಂ. ಶ್ರೀ.ಯವರು ವಿ.ಸೀ. ಯವರಿಗಿಂತ ತುಸು ಎತ್ತರವಾಗಿದ್ದರು. ಇಬ್ಬರೂ ಕನ್ನಡಕ ಧರಿಸುತ್ತಿದ್ದರು. ಕಣ್ಣಿನ ಕಾಂತಿ, ಮುಖದ ವರ್ಚಸ್ಸು, ಅಂತರಂಗದ ಓಜಸ್ಸು ಮತ್ತು ನಿರರ್ಗಳ ಮಾತಿನ ವೈಖರಿಯ ಜೊತೆಗೆ ಈರ್ವರಿಗೂ ಆಳವಾದ ಪಾಂಡಿತ್ಯವಿತ್ತು, ಬಹುಮುಖ ಪ್ರತಿಭೆ ಇತ್ತು, ನಾಲ್ಕಾರು ಭಾಷಾ ಸಾಹಿತ್ಯದ ಪರಿಚಯವಿತ್ತು.

ಮಹಾರಾಜ ಕಾಲೇಜಿನ Senior Common Room ನಲ್ಲೇ ವಿಶೇಷವಾಗಿ ಇರುತ್ತಿದ್ದ ವಿ.ಸೀ.ಯವರು ಆಗ ಅಲ್ಲಿ ಇಂಗ್ಲಿಷ್ ಅಧ್ಯಾಪಕನಾಗಿದ್ದ ನನ್ನ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿದರು. ಇದಕ್ಕೆ ಕಾರಣವಿಲ್ಲದೆ ಇಲ್ಲ. ಅವರ ಮಲ್ ಪಂಚೆ, ಸಿಲ್ಕ್ ಕೋಟು, ಗರಿಗರಿ ರುಮಾಲು, ನಗುಮುಖ, ಆಕರ್ಷಕ ಧ್ವನಿ ಒಂದು ಕಾರಣವಾದರೆ, ಅವರ ಮಾತಿನ ಮಾಧುರ್ಯ ಮತ್ತು ತರ್ಕಬದ್ಧವಾದ ನೈಪುಣ್ಯ ಮತ್ತೊಂದು ಕಾರಣ. ಕನ್ನಡ ಸಾಹಿತ್ಯದ ಆಳವಾದ ಪಾಂಡಿತ್ಯದ ಜೊತೆಗೆ ಅರ್ಥಶಾಸ್ತ್ರದಲ್ಲೂ ಅವರು ಸಾಕಷ್ಟು ಪರಿಶ್ರಮ ಹೊಂದಿದ್ದರು. ಆಗಿನ ಕಾಲದ, ಮದರಾಸಿನ ಪ್ರಸಿದ್ಧ ದಿನ ಪತ್ರಿಕೆಯಾದ 'ದಿ ಹಿಂದೂ'ವಿನಲ್ಲಿ ವಿ.ಸೀ.ಯವರು ಅರ್ಥಶಾಸ್ತ್ರಕ್ಕೆ, ಸಾಹಿತ್ಯಕ್ಕೆ ಸಂಬಂಧಿಸಿದ ಗ್ರಂಥಗಳ ವಿಮರ್ಶೆ ಬರೆಯುತ್ತಿದ್ದರು. ಇವೆಲ್ಲಕ್ಕಿಂತ ಮಿಗಿಲಾಗಿ, ಇಂಗ್ಲಿಷ್ ಲೆಕ್ಚರರ್ ಆಗಿದ್ದ ನನಗೆ Impress ಮಾಡಿದ ಅಂಶ, ವಿ.ಸೀ. ಯವರ ಇಂಗ್ಲಿಷ್ ಶಬ್ದಗಳ, references ನ ಮತ್ತು quotations ಗಳ ಧಾರಾಳವಾದ ಬಳಕೆ. ಇತರ ಕನ್ನಡ ಅಧ್ಯಾಪಕರಂತೆ ಅವರು ಅಷ್ಟೇನೂ "ಮಡಿವಂತ"ರಾಗಿಲಿಲ್ಲ.

ಒಮ್ಮೆ ರಾಘವಾಂಕನ ಹರಿಶ್ಚಂದ್ರ ಕಾವ್ಯದ ಭಾಷಾ ಶೈಲಿಗೆ ಸಂಬಂಧಿಸಿದ ಪ್ರಸ್ತಾಪ ಬಂದಾಗ ಸಂಸ್ಕೃತ ವಿಭಾಗದ ಎನ್. ಶಿವರಾಮ ಶಾಸ್ತ್ರಿಗಳು ಕಾಳಿದಾಸನ ಸುಪ್ರಸಿದ್ಧ "ವಾಗರ್ಥಾ....."ವನ್ನು ಉದಾಹರಿಸಿದರು. ತಕ್ಷಣ ವಿ.ಸೀ.ಯವರು ಫ್ರಾನ್ಸ್ ದೇಶದ ಸುಪ್ರಸಿದ್ಧ ಕವಿಯ "The style is the man" ಎಂದು ಹೇಳಿ, ಮರುಕ್ಷಣದಲ್ಲೇ ಷೇಕ್ಸ್‌ಪಿಯರ್‌ನ "The apparel oft proclaims the man" ಎಂಬ quotation ಅನ್ನು ಉಲ್ಲೇಖಿಸಿ ಭಾಷಾ ಶೈಲಿಯ ಮಹತ್ವವನ್ನು ವಿವರಿಸಿದರು. ಒಬ್ಬ ಲೇಖಕನ ಶೈಲಿ ಅವನ ವ್ಯಕ್ತಿತ್ವದ ಸೂಚಕ ಮತ್ತು ಅವನ ಮನಸ್ಸಿನ ಕೈಗನ್ನಡಿ ಇದ್ದಂತೆ ಎಂದು ಭಾವಪೂರ್ಣವಾಗಿ ವಿಶ್ಲೇಷಿಸಿದರು. ಇಂತಹ ಚರ್ಚೆಗಳು ಮಹಾರಾಜಾ ಕಾಲೇಜಿನ 'ಕಾಮನ್ ರೂಂ'ನ ಆ ಕಾಲದ ಒಂದು ವಿಶಿಷ್ಟ ಲಕ್ಷಣವಾಗಿತ್ತು.

"The apparel oft proclaims the man" ಎಂಬ ಷೇಕ್ಸ್‌ಪಿಯರ್‌ನ ನಿರ್ದಿಷ್ಟ ನಿಲುವು ನಮ್ಮ ವಿ.ಸೀ.ಯವರನ್ನು ಲಕ್ಷಣವಾಗಿ ಚಿತ್ರಿಸುತ್ತದೆ. ಅವರು ಧರಿಸುತ್ತಿದ್ದ ಶುಭ್ರ ವಸ್ತ್ರ– ಪಂಚೆ, ಕೋಟು, ಪೇಟ ಅವರ ಶುಭ್ರ ಚಾರಿತ್ರ್ಯದ ಉಜ್ವಲ ವ್ಯಕ್ತಿತ್ವದ ಸಂಕೇತವಾಗಿತ್ತು. "ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು...." ಎಂಬ ಸೊಗಸಾದ ಕವನವನ್ನು ರಚಿಸಿ ಕಾವ್ಯೋಪಾಸಕರೆಲ್ಲರ, ಕನ್ಯಾಪಿತೃಗಳ ಮತ್ತು ಮುಗ್ಧ ಮದುವಣಗಿತ್ತಿಯರೆಲ್ಲರ ಮನವನ್ನು ಸೂರೆಗೊಂಡ ಕವಿವರ್ಯ ವಿ. ಸೀ. ಯವರು ತಮ್ಮ apparel ನಂತೆ ಎಲ್ಲದರಲ್ಲೂ ನೀಟಾಗಿ, spick and span ಆಗಿದ್ದರು. ಮಾತು–ಕಥೆ,

ನಡೆ-ನುಡಿ, ನಿಲವು-ನಿರ್ವಹಣೆ, ದೃಷ್ಟಿ-ದೃಗುಗಳೆಲ್ಲವೂ ಸ್ವಚ್ಛ, ಸರಳ ಮತ್ತು ಸಂಪ್ರದಾಯಬದ್ಧ.

ಅವರ ಶುಭ್ರ ವಾಕ್ಕು, ವಸನ ಮತ್ತು ವದನಗಳ ಹಿಂದೆ ಮಿಡಿಯುತ್ತಿದ್ದುದು ಅನುಕಂಪ ಮತ್ತು ಕರುಣೆಗಳಿಂದ ತುಂಬಿದ ಮಾನವೀಯ ಹೃದಯ. ತಮ್ಮ ನೆಚ್ಚಿನ ಸ್ನೇಹಿತರನ್ನು ಗಾಢವಾಗಿ ಪ್ರೇಮಿಸುತ್ತಿದ್ದ ಅವರು (**Friendship is the marriage of true minds** ಎಂದು ಕವಿವಾಣಿ) ಆ ಸ್ನೇಹಿತರ ವ್ಯಾಧಿ-ವ್ಯಸನಗಳಿಂದ ಕಂಪಿಸುತ್ತಿದ್ದರು. ಅಂತಹ ಆಪ್ತಮಿತ್ರರು ಅಗಲಿದಾಗ ವಿ.ಸೀ. ಯವರಿಗಾಗುತ್ತಿದ್ದ ದುಃಖ ಸಂಕಟಗಳು ಅವರ್ಣನೀಯ. ವಿ.ಸೀ. ಯವರ ಆಪ್ತ ಮಿತ್ರ ದೇವುಡು ನರಸಿಂಹಶಾಸ್ತ್ರಿಗಳು ಡಯಾಬಿಟಿಸ್ ಕಾರಣದಿಂದ ಎರಡು ಕಾಲುಗಳನ್ನೂ ಕಳೆದುಕೊಂಡು ದೀನಸ್ಥಿತಿಗೆ ಇಳಿದು, ಅಕಾಲ ಮೃತ್ಯುವಿಗೂ ಒಳಗಾದರು. ಬೆಂಗಳೂರಿನ ಆಕಾಶವಾಣಿಯವರು ದೇವುಡು ಅವರಿಗೆ ಅಶ್ರುತರ್ಪಣ ಕಾರ್ಯಕ್ರಮವೇರ್ಪಡಿಸಿ ವಿ.ಸೀ. ಯವರನ್ನು ಮಾತುಗಳನ್ನಾಡುವಂತೆ ಪ್ರಾರ್ಥಿಸಿತು. ನಾಲ್ಕು ಮಾತುಗಳಾಡುವುದರೊಳಗೆ ವಿ. ಸೀ. ಯವರ ಕಂಠ ಬಿಗಿದು ಬಂದು ಅವರು ಗದ್ಗದಿತರಾದರು, ಬಿಕ್ಕಿ ಬಿಕ್ಕಿ ಅಳಲು ಮೊದಲು ಮಾಡಿದರು; ಮಾತು ನಿಂತೇ ಹೋಯಿತು. ಅಂದು ಅವರು ದಿಟವಾಗಿ ನೀಡಿದ್ದು ಅಶ್ರುತರ್ಪಣವೇ!

ವಿ.ಸೀ. ಯವರಷ್ಟು ಮೃದು, ಮಧುರ, ಮಾನವೀಯ ವ್ಯಕ್ತಿಗಳು ಈ ನಮ್ಮ ಅಮಾನವೀಯ ಪ್ರಪಂಚದಲ್ಲಿ ಅತಿ ವಿರಳ. ನ್ಯೂಮನ್ ಎಂಬ ಇಂಗ್ಲಿಷ್ ಕವಿಯು **define** ಮಾಡಿರುವ **Gentleman** ಅನ್ನು ಸಂಪೂರ್ಣವಾಗಿ ಹೋಲುವ ಏಕೈಕ ವ್ಯಕ್ತಿ ಸಜ್ಜನ ಶ್ರೇಷ್ಠ ವಿ.ಸೀ.ಯವರು.

"ವಿದ್ಯೆ ಓದುಗಳು ಪಾಂಡಿತ್ಯವೊಂದನ್ನೇ ಅಲ್ಲ ನಿರ್ಮಾಣ ಮಾಡುವುದು; ಸ್ವತಂತ್ರನಾದ ಒಬ್ಬೊಬ್ಬ ಮನುಷ್ಯನನ್ನು. ಇದು ಜೀವಶಿಲ್ಪ, ದೇವಕಲ್ಪ. ಕಾಲೇಜುಗಳಲ್ಲಿ ನಾವು ಕಲಿಯುವುದು ಪ್ರಯೋಗಶಾಲೆಗಳಲ್ಲಿ ಮಾಡಿದ ಪರೀಕ್ಷಾ ಪ್ರಯೋಗಗಳಂತೆ. ಅಲ್ಲಿ ಕಲಿತುದು ಅಭ್ಯಾಸ; ಪೂರ್ವ ಸಿದ್ಧತೆ. ಅಧಿಕಾರದ ಗಳಿಕೆ. ನಾಳೆ ಲೋಕ ಜೀವನದಲ್ಲಿ ಅದು ನಮ್ಮನ್ನು ಹೇಗೆ ನಡಸುತ್ತದೆ, ನಾವು ಹೇಗೆ ನಡೆದುಕೊಂಡರೆ ನಮಗೆ ಅದು ಯಾವ ಧಾತು ಕಲ್ಪಿಸಿಕೊಡುತ್ತದೆ ಎಂಬ ತಿಳಿವು ಮಾತ್ರ ಅಲ್ಲಿ ನಮಗೆ ದೊರಕುವ ಸೌಭಾಗ್ಯ. ಉಳಿದುದು ನಾವು ನಡೆದುಕೊಳ್ಳಬೇಕಾದ ನಡೆ. ನಮ್ಮ ನಡೆಯಲ್ಲಿ ನಾವು ಕಾಣಿಸುವ ಧೈರ್ಯ, ಸ್ಥೈರ್ಯ, ಉತ್ಸಾಹಗಳಲ್ಲಿ ನಮ್ಮ ವಿದ್ಯೆ, ಶಿಕ್ಷಣ, ವ್ಯಾಸಂಗ ಫಲಿಸಬೇಕು.

'ಸಾ ವಿದ್ಯಾ ಯಾ ವಿಮುಕ್ತಯೇ' ಎನ್ನುತ್ತಾರೆ ವೇದಾಂತದಲ್ಲಿ; ಅಧ್ಯಾತ್ಮವಾದದಲ್ಲಿ. ಅದು ಪರಾವಿದ್ಯೆ. ಇನ್ನೊಂದರ್ಥದಲ್ಲಿ ಈಗಾಗಲೇ ಫಲಿಸುತ್ತದೆ. ವ್ಯವಹಾರ ಪ್ರಪಂಚದ ಇನ್ನೊಂದರ್ಥದಲ್ಲಿ. ಈ ವಿಮುಕ್ತಿ ಸಕಲರಿಗೂ ದೊರೆಯುವಂತಾಗಬೇಕು; — ಅಜ್ಞಾನದಿಂದ, ಅರೆ ತಿಳಿವಿನಿಂದ, ಅಹಂಕಾರಗಳಿಂದ, ಕೃಪಣತೆಗಳಿಂದ. ಅರೆ ಸತ್ಯ, ಅಸತ್ಯಗಳಲ್ಲಿ ಮನಸ್ಸನ್ನು ಕೊಳಸದೆ, ಸತ್ಯದ ಕಡೆ, ಧರ್ಮದ ಕಡೆ, ಶುಚಿಯ ಕಡೆ ಮನಸ್ಸು ಆಸೆ ನಡತೆ ಸಮಸ್ತ ಮಿತಿಗಳಿಂದ ಬಿಡುಗಡೆಗೊಳ್ಳುವಂತೆ ಆದರೆ ಇಲ್ಲಿ ಮುಕ್ತಿ ದೊರೆತೀತು. ಆಸೆ ಆ ಬಗೆಗೆ ವಿದ್ಯಾರ್ಥಿಗೆ ಬರಬೇಕು. ಅದು ಈಡೇರುವಂತೆ ಬೋಧಕರೂ ಶಿಕ್ಷಕರೂ ಆವರಣ, ಅನುಕೂಲ ಕಲ್ಪಿಸಬೇಕು. ಕಲಿತುದನ್ನು ನಡಸಿಕೊಂಡರೆ ತಾನೆ ಜೀವದ ಸಾರ್ಥಕ್ಯ?"

ವಿ.ಸೀ.

'ಕಾಲೆಜ್ ದಿನಗಳು' ಪು. ೨೫೧-೫೨

ವಿ.ಸೀ. ನೆನಪು

ಜಿ. ಟಿ. ನಾರಾಯಣರಾವ್

ಗಮಕಿ ಮೈ. ಶೇ. ಅನಂತಪದ್ಮನಾಭರಾಯರು ನನಗೆ ಬಾಲ್ಯದಲ್ಲಿ ಕನ್ನಡ ಛಂದಸ್ಸು ಬೋಧಿಸಿದ ಗುರುಗಳು. ಅವರೂ ನನ್ನ ತಂದೆಯವರೂ ಸಹಪಾಠಿಗಳು. ಅಕ್ಕಪಕ್ಕದ ಮನೆಗಳಲ್ಲಿ ವಾಸ. ಕರ್ನಾಟಕದ ಹಿರಿಯ ಸಾಹಿತಿಗಳು, ಗಮಕಿಗಳು, ವಿದ್ವಾಂಸರು ಯಾರು ಮಡಿಕೇರಿಗೆ ಬಂದರೂ ಅವರ ಬಿಡಾರ ರಾಯರಲ್ಲಿ. ನನಗೆ ಮುಫತ್ತಾಗಿ ಅವರ ದರ್ಶನ ಮತ್ತು ಮಾತು ಕತೆ ಕೇಳುವ ಯೋಗ ಒದಗುತ್ತಿದ್ದುವು.

ಆ ಬೇಸಗೆಯಲ್ಲಿ (ಪ್ರಾಯಶಃ ೧೯೪೬) ನಾನು ರಜೆಗೆಂದು ತವರಿಗೆ ಮರಳಿದ್ದೆ. ಒಂದು ಮುಂಜಾನೆ ರಾಯರೆಂದರು. "ಇಂದು ವಿ.ಸೀ. ನಮ್ಮಲ್ಲಿಗೆ ಬರುತ್ತಾರೆ. ನಾಳೆ ಬೆಳಗ್ಗೆ ನಾವು ಕಾರಿನಲ್ಲಿ ನಾಪೋಕ್ಲಿಗೆ ಹೋಗುವವರಿದ್ದೇವೆ. ನೀನೂ ಬಾ."

ಮರುದಿನ ಕಾರ್ ಬಂದಿತು. ವಿ.ಸೀ. ಆಸೀನರಾದರು. ತುಸುದೂರದಲ್ಲಿ ಅಳುಕಿನಿಂದ ನಿಂತಿದ್ದ ನನ್ನನ್ನು ಗುರುಗಳು ಅವರಿಗೆ ಪರಿಚಯಿಸಿದರು: "ಇವರೇ ಜಿ. ಟಿ. ನಾರಾಯಣರಾವ್, ಮದರಾಸಿನಲ್ಲಿ ಗಣಿತ ಎಂ. ಎ. ಓದುತ್ತಿದ್ದಾರೆ."

"ಓಹೋಹೋ, ತಾವೆಯೋ ನಾರಾಯಣರಾವ್! ಧನ್ಯನಾದೆ!" ವಿ.ಸೀ. ಉದ್ಗಾರ. ಈ ಅನಿರೀಕ್ಷಿತ ಅವಧಾರಣೆಗಳಿಂದ ತಬ್ಬಿಬ್ಬಾಗಿದ್ದ ನನಗೆ ವಿ.ಸೀ.ಯವರೇ ಮುಂದಿನ ಸುಳುಹು ನೀಡಿ ಬಿಕ್ಕಟ್ಟನ್ನು ನಗೆಹೊನಲಾಗಿ ಹರಿಸಿದರು: "ಕಟ್ಟಡವು ಹೊಲಸು ದುರ್ವಾಸನೆಯು ಇಲ್ಲಿ!" ಎಷ್ಟು ಚೆನ್ನಾಗಿ ಅಣಕ ಮಾಡಿದ್ದೀರಪ್ಪ ಮದ್ರಾಸನ್ನು. ಆಮೇಲೆ 'ಮುದ್ರಾಡಿ ಆಚಾರ್ಯರೊದ್ದಾಡಿ ಬರೆದಿಹರು ಪದ್ಯವನು ಭಾವ ವಿಷಯಗಳಿರದೆಯೆ.' ಸದ್ಯ ಬದುಕಿದೆ: ನನ್ನ ಪದ್ಯಕ್ಕೆ ನಿಮ್ಮ ಅಣಕ ಚಾಟಿ ಬೀಳಲಿಲ್ಲ." ಆದದ್ದೇನು? ಟಿ. ಪಿ. ಕೈಲಾಸಮ್ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ (ಮದ್ರಾಸು) ಅಂಗವಾಗಿ ಪ್ರಕಟಿಸಿದ್ದ ಸವಿಸಂಚಿಕೆಯಲ್ಲಿದ್ದ ಕಳಪೆ ಪದ್ಯಗದ್ಯಗಳ ಮೇಲೆ ಧಾರಾಳವಾಗಿ ಕೈಯಾಡಿಸಿ ಅಣಕನುಡಿಗಳನ್ನು ಹೊಸೆದಿದ್ದೆ. ವಿ.ಸೀ.ಯವರ ಪದ್ಯ ('ಇಂದ್ರ' ಎಂದು ನೆನಪು) ಸೊಗಸಾಗಿದ್ದುದರಿಂದ ಅದರ ಪಕ್ಕದಲ್ಲಿ "ಚೆನ್ನಾಗಿದೆ" ಎಂದು ಮಾತ್ರ ಬರೆದಿದ್ದೆ.

*　　*　　*

"ಒಳ್ಳೆಯದನ್ನು ಹೆಸರು ನೆಟ್ಟ ಕೆಟ್ಟುವಿಲ್ಲ." ವಿ.ಸೀ. ಕುರಿತ ಖಾರಂತರ ಈ ಚಾಟೂಕ್ತಿಗೆ ಒಪ್ಪುವಿದುವಂತೆ ಕ. ವೆಂ. ರಾಘವಾಚಾರ್ಯರು ಬೆಂಗಳೂರಿನಲ್ಲಿ ನಡೆದ (೧೯೬೭ರ ಅಂದಾಜು) ವಿ.ಸೀ. ಶಂಮಾನ ಸಮಾರಂಭದಲ್ಲಿ ಆಡಿದ ನುಡಿ: "ನಮ್ಮ ವಿ.ಸೀ. ರೂಪಾಯಿಗೆ ಹದಿನಾರಾಣೆ ಅಷ್ಟೂ ಚಿನ್ನ. ತುರುವಾದರೂ ತಾಮ್ರ ಬೆರೆತಿದ್ದರೆ, ಪಾಪ, ಅಂದುಕೊಂಡಿದ್ದೇನೆ."

* * *

ವಿ.ಸೀ.ಯವರ ಪ್ರಮುಖ ಕೃತಿಗಳನ್ನು ('ಹಣಪ್ರಪಂಚ', 'ಪಂಪಾಯಾತ್ರೆ', ಇತ್ಯಾದಿ) ಓದಿದ್ದೇನೆ. ಭಾಷಣಗಳನ್ನು ಆಲಿಸಿದ್ದೇನೆ. ಅವರ ಕೊಠಡಿ ಚೈತಕ್ಕಿನ ರಸಾಸ್ವಾದನೆಯನ್ನೂ ಮಾಡಿದ್ದೇನೆ. ಅವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತೀರ ತಡವಾಗಿ ಬಂದಿತು. ಅದು ಘೋಷಿತವಾದ ಆ ಮುಂಜಾನೆ (೧೯೬೯ರ ಅನಂತರ) ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ತೀರ ಅನಿರೀಕ್ಷಿತವಾಗಿ ಕಂಡೆ. ಅಭಿನಂದನೆಗಳನ್ನು ಅರ್ಪಿಸಿದೆ. "ನನಗದರಲ್ಲಿ ಆಸಕ್ತಿ ಇಲ್ಲ" ಎಂದು ತೀರ ನಿರ್ಲಿಪ್ತರಾಗಿ ನುಡಿದರು.

* * *

ವಿಜ್ಞಾನಿಗಳಾಗಿ ಮಾತ್ರವೇ ಅಲ್ಲ, ಮನುಷ್ಯರಾಗಿಯೂ ಮ್ಯಾಕ್ಸ್‌ಪ್ಲಾಂಕ್ (೧೮೫೮–೧೯೪೭) ಮತ್ತು ಆಲ್ಬರ್ಟ್ ಐನ್‌ಸ್ಟೈನ್ (೧೮೭೯–೧೯೫೫) ಉತ್ತುಂಗ ಯುಗ ಪುರುಷರು, ಪರಸ್ಪರ ಗೌರವಾದರ ದೀಪ್ತರಾದವರು. ಪ್ಲಾಂಕ್ ಮಹಾಶಯರಿಗೆ ವಯಸ್ಸು ಅರವತ್ತು ತುಂಬಿದಾಗ (೧೯೧೮), ಬರ್ಲಿನ್‌ನಲ್ಲಿ ಏರ್ಪಡಿಸಿದ್ದ ಸಂಮಾನ ಸಮಾರಂಭದಲ್ಲಿ ಐನ್‌ಸ್ಟೈನ್ ನುಡಿನಮನ ಸಲ್ಲಿಸಿದರು. ಆ ಕಾವ್ಯಾತ್ಮಕ ಭಾಷಣದ ಪ್ರಥಮ ಪರಿಚ್ಛೇದವನ್ನು ಹಾಗೆಯೇ ಉದ್ಧರಿಸಿದ್ದೇನೆ:— 'ಪ್ಲಾಂಕ್' ಇರುವಲ್ಲಿ 'ವಿ.ಸೀ.' ಎಂದು ಓದಿಕೊಳ್ಳಬೇಕಾಗಿ ಸೂಚನೆ; ಅದೇ ರೀತಿ 'ವಿಜ್ಞಾನ'ದ ಬದಲು 'ಸಾಹಿತ್ಯ.'

"ವಿಜ್ಞಾನ ದೇವಾಲಯದೊಳಗಿನ ಮಂದಿರಗಳು ಅಸಂಖ್ಯ. ನಿಜಕ್ಕೂ ಇಲ್ಲಿ ನೆಲಸಿರುವ ವ್ಯಕ್ತಿಗಳು ವಿವಿಧ, ಅಂತೆಯೇ ಅವರನ್ನು ಇಲ್ಲಿಗೆ ಮುನ್ನಡೆಸಿರುವ ಉದ್ದೇಶಗಳು ಕೂಡ. ತಮ್ಮ ಶ್ರೇಷ್ಠ ಬುದ್ಧಿ ಶಕ್ತಿ ಬಗೆಗಿನ ಅಭಿಮಾನ ಪ್ರಜ್ಞೆಯಿಂದ ವಿಜ್ಞಾನವನ್ನು ವರಿಸುವವರು ಬಲು ಮಂದಿ. ವಿಜ್ಞಾನ ಇವರ ವಿಶೇಷ ಕ್ರೀಡೆ. ಇಲ್ಲಿ ಇವರು ಸ್ಪಷ್ಟ ಅನುಭವವನ್ನೂ ತಮ್ಮ ಆಶೋತ್ತರಗಳ ಈಡೇರಿಕೆಯನ್ನೂ ನಿರೀಕ್ಷಿಸುತ್ತಾರೆ. ಕೇವಲ ಲೌಕಿಕ ಪ್ರಯೋಜನಗಳ ಸಲುವಾಗಿ ತಮ್ಮ ಮಿದುಳ ನಿರ್ಮಿತಿಗಳನ್ನು ಈ ಪವಿತ್ರ ಪೀಠಕ್ಕೆ ಸಮರ್ಪಿಸಿರುವ ಅನೇಕರನ್ನೂ ಕಾಣುತ್ತೇವೆ. ಈಗ, ದೇವದೂತನೊಬ್ಬ ಬಂದು ಈ ಎರಡೂ ವರ್ಗಗಳಿಗೆ ಸೇರಿದವರನ್ನು ದೇವಾಲಯದಿಂದ ಉಚ್ಚಾಟಿಸಿದುವಾದರೆ ಇಲ್ಲಿಯ ಜನಸಂಖ್ಯೆ ಕಡಿದಾಗಿ ಇಳಿಯುವುದು ಖರೆ. ಇಂತಿದ್ದರೂ ಇಲ್ಲಿ ವರ್ತಮಾನ ಮತ್ತು ಗತಕಾಲಗಳ ಕೆಲಮಂದಿ ಉಳಿದೇ ಇರುತ್ತಾರೆ. ನಮ್ಮ ಪ್ಲಾಂಕ್ ಇವರಲ್ಲೊಬ್ಬರು ಎಂದೇ ಅವರ ಬಗೆಗೆ ನಮ್ಮ ಆದರ."

ಅವರಿಗೆ ಅವರೇ ಹೋಲಿಕೆ

ನಾ. ನಾಗಪ್ಪ

'ವಿ.ಸೀ.' ಎಂದು ಪ್ರಸಿದ್ಧರಾದ ಶ್ರೀ ವಿ. ಸೀತಾರಾಮಯ್ಯನವರು ಓದಿದ್ದು ಅರ್ಥಶಾಸ್ತ್ರ, ಆದರೆ ಪಾಠ ಹೇಳಿದ್ದು ಕನ್ನಡ ಸಾಹಿತ್ಯ. ಇವರು ಶ್ರೀ ಎನ್. ಎಸ್. ಸುಬ್ಬರಾಯರ ಶಿಷ್ಯರು. ಅರ್ಥಶಾಸ್ತ್ರದಲ್ಲಿ ಡಿಗ್ರಿ ಪಡೆದು ಬೊಂಬಾಯಿಯಲ್ಲಿ ಕೆಲಸ ಮಾಡುತ್ತಿದ್ದ ವಿ.ಸೀ. ಅವರನ್ನು ಮೈಸೂರಿಗೆ ಕರೆತಂದು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಬೋಧಿಸಲು ನೇಮಿಸಿದವರು ಶ್ರೀ ಸುಬ್ಬರಾಯರು. ಅವರೇ ನನಗೂ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಕೊಟ್ಟು ಕಾಪಾಡಿದವರು.

ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜನೀತಿ ಮುಂತಾದ ವಿಷಯಗಳನ್ನು ಕುರಿತು ಕನ್ನಡ ಭಾಷೆಯಲ್ಲಿ ಗ್ರಂಥಗಳನ್ನು ಬರೆಯಬೇಕು, ಬರೆಯಿಸಬೇಕು ಎಂಬ ಹಂಬಲ ಶ್ರೀ ಸುಬ್ಬರಾಯರಿಗಿತ್ತು. ಅದನ್ನು ಎಷ್ಟೋ ವೇಳೆ ಅವರು ಭಾಷಣಗಳಲ್ಲಿಯೂ ಹೇಳುತ್ತಿದ್ದರು. ಇದನ್ನು ಎಲ್ಲರೂ ಒಪ್ಪತಕ್ಕದ್ದೇ. ಆ ಕಾಲದಲ್ಲಿ 'ಹಣ ಪ್ರಪಂಚ' ಎಂಬ ಒಂದು ಶಾಸ್ತ್ರಗ್ರಂಥವನ್ನು ಬರೆದವರು ಶ್ರೀ ವಿ. ಸೀತಾರಾಮಯ್ಯನವರು. ಅದು ಅರ್ಥಶಾಸ್ತ್ರವನ್ನು ಕುರಿತು ಕನ್ನಡದಲ್ಲಿ ಬರೆದ ಪ್ರಥಮ ಗ್ರಂಥ.

ವಿ.ಸೀ. ಬಹಳ ದಿವಸ ಬೆಂಗಳೂರಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರು. ಅವರು ಮೈಸೂರಿಗೆ ವರ್ಗವಾಗಿ ಮಹಾರಾಜಾ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಬಂದಾಗ, ನಾನು ಅಲ್ಲೇ ಅಧ್ಯಾಪಕನಾಗಿದ್ದೆ. ಅವರು ಪ್ರಬುದ್ಧ ಕರ್ನಾಟಕದ ಸಂಪಾದಕರಾಗಿ ಆ ಪತ್ರಿಕೆಯ ಮಟ್ಟವನ್ನು ಮೇಲ್ದರ್ಜೆಗೆ ಏರಿಸಿದರು. ಅವರು ಸಂಪಾದಕರಾಗಿದ್ದಾಗ ಆ ಪತ್ರಿಕೆಯ ರಜತ ಮಹೋತ್ಸವವು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಆಚರಿಸಲ್ಪಟ್ಟಿತು. ಆ ಸಂದರ್ಭದಲ್ಲಿ ಕೃಷ್ಣಶಾಸ್ತ್ರಿಗಳು ಆ ಕಾಲೇಜಿನ ಕನ್ನಡ ಪ್ರೊಫೆಸರ್ ಆಗಿದ್ದರು. ವಿ.ಸೀ. ವಿಶ್ವವಿದ್ಯಾನಿಲಯದ ಅಧ್ಯಾಪಕ ಮತ್ತು ಅಧ್ಯಾಪಕೇತರ ವರ್ಗದವರಿಗೆ ಯೂನಿವರ್ಸಿಟಿ ಯೂನಿಯನ್ ಉಪಾಹಾರ ಗೃಹದಲ್ಲಿ ಎಲ್ಲರಿಗೂ ಅಗ್ರದ ಬಾಳೆ ಎಲೆ ಹಾಕಿಸಿ ಔತಣ ಮಾಡಿಸಿದರು. ಪ್ರಬುದ್ಧ ಕರ್ನಾಟಕದ ಆ ಉತ್ಸವದ ನೆನಪು ಈಗಲೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ.

ವಿ.ಸೀ. ಕನ್ನಡ ಜಗತ್ತಿನಲ್ಲಿ ಹೆಸರಾದವರು. ಕನ್ನಡ ಭಾಷೆಯನ್ನು ಎತ್ತಿಹಿಡಿದವರ

ಗುಂಪಿಗೆ ಸೇರಿದವರು. ಇಂಗ್ಲಿಷಿಗೆ ಮತ್ತು ಸಂಸ್ಕೃತಕ್ಕೆ ಹೆಚ್ಚು ಪ್ರಾಶಸ್ತ್ಯವಿದ್ದ ಅವರ ಕಾಲದಲ್ಲಿ ಕನ್ನಡದ ಬಾವುಟವನ್ನು ಎತ್ತಿ ಹಿಡಿದ ಮುಖ್ಯರಲ್ಲಿ ವಿ.ಸೀ. ಒಬ್ಬರು. ಯಾವ ಕನ್ನಡೇತರ ವಿದ್ವಾಂಸರು – ಹಿಂದೀ ಕವಿಗಳು, ತೆಲುಗು ಪಂಡಿತರು ಮುಂತಾದವರು – ಬೆಂಗಳೂರಿಗೆ ಬಂದರೂ ವಿ.ಸೀ. ಅವರ ಮನೆಯಲ್ಲೇ ಆತಿಥ್ಯ. ಶ್ರೀ ಶಿವರಾಮ ಕಾರಂತರೂ ವಿ.ಸೀ. ಅವರಲ್ಲೇ ಇಳಿದುಕೊಳ್ಳುತ್ತಿದ್ದರು. ವಿ.ಸೀ. ಅವರ ಸ್ನೇಹ ಪ್ರಪಂಚ ದೊಡ್ಡದು. ಅವರು ಒಬ್ಬೊಬ್ಬರೇ ಗಾಳಿ ಸಂಚಾರಕ್ಕೆ ಹೋದವರೇ ಅಲ್ಲ. ಅವರ ಜೊತೆಯಲ್ಲಿ ಒಂದು ಹಿಂಡು ಜನ ಇರುತ್ತಿತ್ತು. ಅವರೆಲ್ಲರಿಗೂ ಯಜ್ಞಪ್ಪನ ಹೊಟೇಲಿನಲ್ಲಿ ಮಸಾಲೆದೋಸೆ ಮತ್ತು ಕಾಫಿ ಆತಿಥ್ಯ ವಿ.ಸೀ. ಅವರದ್ದೇ. ಅವರು ಹೊಟೇಲಿನಲ್ಲಿ ಇನ್ನೊಬ್ಬರಿಗೆ ದುಡ್ಡುಕೊಡಲು ಎಂದೂ ಬಿಡುತ್ತಿರಲಿಲ್ಲ.

ವಿ.ಸೀ. ಅವರ ಕಾವ್ಯಾಭಿರುಚಿ ಎಷ್ಟು ಚೊಕ್ಕವಾಗಿತ್ತೋ ಜೀವನದಲ್ಲಿ ಉಪಯೋಗಿಸುತ್ತಿದ್ದ ವಸ್ತುಗಳ ಸಂಗ್ರಹದಲ್ಲಿಯೂ ಅಷ್ಟೇ ಸದಭಿರುಚಿ ಇದ್ದಿತು. ಅವರಿಗೆ ಚಿಗುರು ವಿಳ್ಳೇದೆಲೆ, ಬಣ್ಣ ಕಟ್ಟಿದ ಅಡಿಕೆಯೇ ಆಗಬೇಕು. ಅವರ ಉಡುಪೂ ಸಹ ಓರಣವಾಗಿರುತ್ತಿತ್ತು. ಶುಭ್ರವಾದ ಕಚ್ಚೆ ಪಂಚೆ, ಬಿಳಿ ಪೇಟ, ಕ್ಲೋಸ್ ಕಾಲರ್ ಕೋಟು ಮತ್ತು ಛತ್ರಿಯಿಂದ ಸುಶೋಭಿತರಾಗಿರುತ್ತಿದ್ದರು.

ವಿ.ಸೀ. ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ವಿಪುಲವಾಗಿ ಗ್ರಂಥ ರಚನೆ ಮಾಡಿದ್ದಾರೆ. ಇವರಿಗೆ ಮೈಸೂರು ವಿಶ್ವವಿದ್ಯಾಲಯವು ಗೌರವ ಡಿ.ಲಿಟ್. ಪದವಿಯನ್ನು ಪ್ರದಾನ ಮಾಡಿ ಗೌರವಿಸಿದೆ. ಕನ್ನಡ ಸಾಹಿತ್ಯ ಪರಿಷತ್ತಿಗೆ ದುಡಿದವರಲ್ಲಿ ವಿ.ಸೀ. ಅಗ್ರಗಣ್ಯರು. ಆಗಿನ ಕಾಲದಲ್ಲಿ ದುಡಿಯುವುದೊಂದೇ ಲಾಭ. ಜನರ ಹೊಗಳಿಕೆಗೆ ಅಥವಾ ತೆಗಳಿಕೆಗೆ ವಿ.ಸೀ. ಎಂದೂ ಮನಸ್ಸು ಕೊಟ್ಟವರಲ್ಲ. ಅವರು ಅನೇಕ ಕನ್ನಡ ಬರವಣಿಗೆಗಾರರನ್ನು ಬೆನ್ನು ತಟ್ಟಿ ಮುಂದಕ್ಕೆ ತಂದರು. ಅವರ ಪೈಕಿ ಈಚೆಗೆ ಪಂಪ ಪ್ರಶಸ್ತಿಯಿಂದ ಗೌರವಿಸಲ್ಪಟ್ಟ ಶ್ರೀ ಕೆ. ಎಸ್. ನರಸಿಂಹಸ್ವಾಮಿಯವರು ಒಬ್ಬರು. ಅವರು ಕನ್ನಡ ಕವಿಗಳಲ್ಲಿ ಪ್ರಥಮ ಪಂಕ್ತಿಯಲ್ಲಿ ಸ್ಥಾನ ಪಡೆಯುವಂತೆ ಪ್ರೋತ್ಸಾಹಿಸಿದವರು ವಿ.ಸೀ.

ವಿ.ಸೀ. ಅವರ 'ಪಂಪಾಯಾತ್ರೆ' ನನಗೆ ತುಂಬ ಉತ್ಕೃಷ್ಟವಾದದ್ದೆಂದು ಅನಿಸಿತು. ಕನ್ನಡ ಭಾಷೆಯಲ್ಲಿ ಹೊರಬಂದ ಆ ಗ್ರಂಥ ಪ್ರಪ್ರಥಮ ಯಾತ್ರಾ ಸಾಹಿತ್ಯ ಕೃತಿ. ಹಂಪೆಯ ಯಾತ್ರೆಗೆ ಹೋಗಿದ್ದ ವಿ.ಸೀ. ಡಿ.ವಿ.ಜಿ., ಎಂ. ಆರ್. ಶ್ರೀನಿವಾಸ ಮೂರ್ತಿ, ವೆಂಕಣ್ಣಯ್ಯನವರು ಮತ್ತು ಯಜಮಾನರು (ಅಂದರೆ ಶ್ರೀ ಬೆಳ್ಳಾವೆ ವೆಂಕಟ ನಾರಣಪ್ಪನವರು)— ಎಲ್ಲರೂ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾಂತವರು. ಆ ಗ್ರಂಥದಲ್ಲಿ ಈ ಮಿತ್ರ ವೃಂದದ ಹಾಸ್ಯಲಾಸ್ಯ, ಹುಡುಗತನ, ಚಾರಿತ್ರಿಕ ದೇವಸ್ಥಾನಾದಿಗಳ ದರ್ಶನಾಭಿಲಾಷೆ, ನಮ್ಮ ಸಂಸ್ಕೃತಿಯ ಹಿರಿಮೆ ಮತ್ತು ಯಾತ್ರಾ ಸವಿಯಲ್ಲಿ ಇರತಕ್ಕ abandonment ಬಹಳ ಸೊಗಸಾಗಿ ಚಿತ್ರಿತವಾಗಿದೆ. ಕರ್ನಾಟಕ ಹಿಂದಿ ಪ್ರಚಾರ ಸಮಿತಿಗಾಗಿ ಆ ಗ್ರಂಥವನ್ನು ನಾನು ಸಂತೋಷದಿಂದ ಹಿಂದಿಗೆ ಅನುವಾದಿಸಿದ್ದೇನೆ. ಹಿಂದೀ ಅನುವಾದವನ್ನು ಓದುವವರೆಲ್ಲರೂ ವಿ.ಸೀ. ಅವರನ್ನು ಹೊಗಳುವವರೇ. ಈ ಗ್ರಂಥದ ಮೂಲಕ ಇಡೀ ಹಿಂದೀ ಸಾಹಿತ್ಯ ಜಗತ್ತಿಗೆ ವಿ.ಸೀ. ಅವರ ಪರಿಚಯವಾಗಿದೆ.

ವಿ.ಸೀ. ಅವರು ಸಮಾಜಕ್ಕೆ ಬೇಕಾದ ಸಾಹಿತ್ಯವನ್ನು ಕನ್ನಡದಲ್ಲಿ ತಂದವರು. ಸಂಸ್ಕೃತ, ಪರ್ಷಿಯನ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಜೀವನದ ಎಲ್ಲಾ ಸನ್ನಿವೇಶಕ್ಕೆ ಮೆರಗು ತರುವ ಸಾಹಿತ್ಯವು ವಿಪುಲವಾಗಿದೆ ಎಂದು ಹೇಳುತ್ತಾರೆ. ಸಮಾಜವನ್ನು ಕುರಿತು ಕನ್ನಡ ಸಾಹಿತ್ಯ ಕೃತಿಗಳನ್ನು ರಚಿಸಿದ ಕೀರ್ತಿ ವಿ.ಸೀ. ಅವರಿಗೆ ಸಲ್ಲುತಕ್ಕದ್ದು. ಸಮಾಜದ ಅರ್ಧ ಭಾಗ ಸ್ತ್ರೀಯರದು. ಅವರ ಜೀವನದಲ್ಲಿ ಅತ್ಯಂತ ಮಾರ್ಮಿಕವಾದ, ಕರುಳನ್ನು ಕಲಕತಕ್ಕ ಸನ್ನಿವೇಶ – ಮದುವೆಯಾದ ಮಗಳನ್ನು ಗಂಡನ ಮನೆಗೆ ಕಳುಹಿಸುವ ಸಂದರ್ಭ. ಆಗ ಹೇಳತಕ್ಕ ವಿ.ಸೀ. ಅವರು ರಚಿಸಿರುವ ಕೃತಿಯನ್ನು ಅಳದೇ ಹೇಳುವ ಯಾವ ಹೆಂಗಸರನ್ನೂ ನಾನು ಕಾಣೆ. ಸ್ನೇಹ ವಾತ್ಸಲ್ಯಮಿಶ್ರಿತ ಶೋಕ ಉಕ್ಕಿ ಬಂದು ಹಾಡು ಹೇಳುವವರ ಕಂಠವು ಗದ್ಗದಿತವಾಗುತ್ತದೆ. ಈ ಹಾಡು ವಿ.ಸೀ. ಅವರ ಸಹೃದಯತೆಗೆ ಶಾಶ್ವತವಾದ ಸಾಕ್ಷಿ.

ವಿ.ಸೀ. ಕನ್ನಡಕ್ಕೆ ಒಬ್ಬರೇ. ಅವರಿಗೆ ಅವರೇ ಹೋಲಿಕೆ. ಅಂಥ ನಿಸ್ಪೃಹರು, ಸ್ನೇಹಿಗಳು ಕನ್ನಡದಲ್ಲಿ ಇನ್ನಿಲ್ಲ. ಅವರ ಹೆಸರು ಕನ್ನಡ ಸಾಹಿತ್ಯೇತಿಹಾಸದಲ್ಲಿ ಶಾಶ್ವತವಾಗಿ ನಿಲ್ಲುವುದು.

ಸಾಹಿತ್ಯದಿಂದ ನಾನು ಬಯಸಿದ್ದೇನು?

"ನಾನು ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದು ತತ್ವಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ. ನಮ್ಮ ನಾಡಿನ ಇತಿಹಾಸ, ಸಂಸ್ಕೃತಿಗಳನ್ನು ಅರಿಯಬೇಕೆಂದು ಅವನ್ನು ಆಯ್ದೆ. ಆತ್ಮ ಸಂತೋಷಕ್ಕಾಗಿ – 'ಆತ್ಮ' ಎಂಬ ಮಾತು ನನಗೆ ತುಂಬಾ ಎತ್ತರದ್ದು – ಸಾಹಿತ್ಯದಲ್ಲಿ ನನ್ನ ಪ್ರೀತಿ ಉಂಟಾಯಿತು ಎನ್ನುತ್ತೇನೆ. ಅಲ್ಲಿ ಮಾತ್ರ ಮಾನವತೆ, ಕಾರುಣ್ಯ, ಸೌಹಾರ್ದ ಇವೆ; ದೀನರಿಗೆ, ದುರ್ಬಲರಿಗೆ, ಅಕ್ಷಮ್ಯವಾದ ತಪ್ಪು ಮಾಡಿದವರ ಪರವಾಗಿ ಕೂಡ ಕಣ್ಣೀರಿದೆ; ಅಂತಃಕರಣಗಳನ್ನು ಶೋಧಿಸುವ, ಶುದ್ಧಿಗೊಳಿಸುವ, ಮನಸ್ಸಿನ ಒಟ್ಟು ಉತ್ತಾನತೆಗೂ ವಿಶಾಲತೆಗೂ ಅವಕಾಶ ಅಲ್ಲಿ ಇದೆಯಾಗಿ ಆ ಕಡೆ ನನ್ನ ಪ್ರೀತಿ ಬೆಳೆಯಿತು. ಹಾಗೆ ಅಂತರಂಗದ ಪ್ರವೃತ್ತಿಗಳಿಗೆಲ್ಲ ಸಾಹಿತ್ಯ ವಾಣಿಯಾಗಬಲ್ಲದು; ನಮ್ಮ ಸಮಸ್ತ ಹೃತ್‌ಸಾಹಸಕ್ಕೂ ಸ್ವನಿವೇದನೆ ಅಲ್ಲಿ ಆಗುವುದಕ್ಕಿಂತ ಬೇರಲ್ಲಿ ಶಕ್ಯವಿಲ್ಲವೆಂಬುದು ತಿಳಿದುದಾಗಿತ್ತು. ಸೈನ್ಯ ರಾಜ್ಯಗಳ ಬಲಕ್ಕಿಂತ, ಸಂಪತ್ತಿನ ಸಾಧನೆಗಿಂತ ಆ ಶಕ್ತಿ ಹಿರಿಯದು. ಉಳಿದುವೆಲ್ಲ ಸಾಧನಗಳು, ವಿಧಾನ, ನಿರ್ಮಾಣತಂತ್ರ ಎನ್ನಿಸಿತು. ಮುಖ್ಯವಾಗಿ ಸಾಹಿತ್ಯದಲ್ಲಿ ಒಂದು ವ್ಯಕ್ತಿಯ ಆತ್ಮಸಂಪರ್ಕ ದೊರೆಯುತ್ತದೆ; ಅದು ವಿಶಾಲವಾಗಬೇಕು. ಅದರ ಮೂಲಕ ತನಗೂ ಸುತ್ತಮುತ್ತಲಿಗೂ ಒಂದು ಸಜ್ಜನತೆಯ ಪ್ರಭಾವ ವಿಕಾಸಗೊಳ್ಳದಿದ್ದರೆ ಬಾಳು ವ್ಯರ್ಥ ಎನ್ನಿಸಿತು."

ವಿ.ಸೀ.

ಕಂಡವರೆಂದೂ ಮರೆಯಲಾರರು

ದೇವಂಗಿ ಟಿ. ಚಂದ್ರಶೇಖರ

ಅದೊಂದು ಸುವರ್ಣಯುಗ. ೧೯೪೪. ಮೈಸೂರು ಮಹಾರಾಜ ಕಾಲೇಜಿನ ಅಂದಿನ ದಿನಗಳು. ಪ್ರೊಫೆಸರುಗಳಿಂದಲೂ ಅಧ್ಯಾಪಕರಿಂದಲೂ ತುಂಬಿ ತುಳುಕುತ್ತಿದ್ದ ಆ ಶಾರದಾ ಮಂದಿರವು ನಿಜವಾಗಿಯೂ alma mater.

ಅಂದಿನಿಂದ ಇಂದಿನವರೆಗೂ ನಾನು ಸದಾ ಇಂಗ್ಲಿಷ್ ಮತ್ತು ಕನ್ನಡ ಕವಿತೆಗಳ ಗುಂಗಿನಲ್ಲೇ ಇರುತ್ತೇನೆ. ಏಕೋ ಏನೋ ಅರಿಯೆ. ಅನೇಕರು ಕವಿಗಳು. ಆದರೆ ಥಟ್ಟನೆ ನೆನಪಿಗೆ ಬರುವವರಲ್ಲಿ, ಸ್ಮೃತಿ ಪಥದಲ್ಲಿ ಸುಳಿದಾಡುವವರಲ್ಲಿ ವಿ.ಸೀ. ಅಗ್ರಗಣ್ಯರು. ಹೀಗೆ 'ನುಡಿ ಸೋತ ಮೂಕ ಪ್ರೇಮ' ಬಾಳಿನಲ್ಲಿ ಬೆಸೆದು ಬಿಟ್ಟಿದೆ.

ಆಗ, ನಾನು ಮೈಸೂರು ಮಹಾರಾಜ ಕಾಲೇಜಿನ ಪಕ್ಕದ ಯುವರಾಜ ಕಾಲೇಜಿನಲ್ಲಿ ಸೀನಿಯರ್ ಇಂಟರ್ ಮೀಡಿಯೆಟ್ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಆ ವರ್ಷ ಫೇಲಾಯಿತು. ಮುಂದೆ ಓದಲಿಲ್ಲ. ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಸೌಭಾಗ್ಯ ನನಗೆ ದೊರೆಯಲಿಲ್ಲ. ಆದರೆ, ಮಹಾರಾಜ ಕಾಲೇಜಿಗೂ ಯುವರಾಜ ಕಾಲೇಜಿಗೂ ಮಧ್ಯೆ ಕೊಂಡಿಯಾಗಿ ಮಾರ್ಪಟ್ಟಿತ್ತು, ಅಂದಿನ ಮಹಾರಾಜ ಕಾಲೇಜಿನ ಕರ್ನಾಟಕ ಸಂಘ. ಅಲ್ಲಿ ನಮ್ಮ ಚಟುವಟಿಕೆಗಳು ಕ್ರೋಢೀಕೃತವಾಗಿರುತ್ತ, ತಾಯಿ–ಮಕ್ಕಳ ಬೆಸುಗೆಯಂತಿತ್ತು ಆ ಸಂಘ. ಅದರ ಅಧ್ಯಕ್ಷರಾಗಿ ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳವರೂ ಉಪಾಧ್ಯಕ್ಷರು ಹಾಗೂ ಕೋಶಾಧಿಕಾರಿಗಳಾಗಿ ಪ್ರೊ. ವಿ. ಸೀತಾರಾಮಯ್ಯನವರೂ ಜಂಟಿ ಕಾರ್ಯದರ್ಶಿಗಳಾಗಿ ಆರಕಲಗೂಡು ಎ. ಆರ್. ನಾಗಪ್ಪ ಎಂಬ ವಿದ್ಯಾರ್ಥಿಯೂ ಮತ್ತು ನಾನೂ ಇದ್ದೆವು. ಈ ಅನ್ಯೋನ್ಯ ಬಾಂಧವ್ಯ ನನಗೆ ವಿ.ಸೀ. ಅವರನ್ನು ಹತ್ತಿರ ತಂದಿತ್ತು.

ಒಮ್ಮೆ ಕಾಲೇಜಲ್ಲಿರುತ್ತ, ಈ ಕರ್ನಾಟಕ ಸಂಘದ ಕಾರ್ಯಕ್ರಮವೊಂದರ ನಿಮಿತ್ತ ಅವರನ್ನು ಕಾಣಲು ಅಧ್ಯಾಪಕರ ಕೊಠಡಿಗೆ ಹೋದೆ. ಅಲ್ಲಿ ಅವರೂ ಸಂಗೀತಶಾಸ್ತ್ರಜ್ಞರಾದ ಗುರುವರ್ಯ ಶ್ರೀ ರಾಳ್ಳಪಳ್ಳಿ ಅನಂತ ಕೃಷ್ಣಶರ್ಮರೂ ಏನೋ ಗಹನವಾದ ವಿಚಾರದಲ್ಲಿ ತೊಡಗಿದ್ದರು. ಅಷ್ಟು ಹೊತ್ತಿಗೆ ವಿ.ಸೀ. ಅವರಿಗೆ ರಾಮಯ್ಯರ್ ಹೊಟೇಲಿಂದ ಮಾಣಿ 'ಟೀ ಟ್ರೇ' ತಂದ. ಅದರಲ್ಲಿ ಡಿಕಾಕ್ಷನ್ ಒಂದರಲ್ಲಿ, ಹಾಲು ಇನ್ನೊಂದು ಗಾಜಿನ ಮಿಳ್ಳೆಯಲ್ಲಿ, ಸಕ್ಕರೆ ಬೇರೊಂದು ಪಿಂಗಾಣಿ ಕಪ್ಪಿನಲ್ಲಿ ಇದ್ದುವು. ವಿ.ಸೀ. ಅವರು, ಅವರೇ

ಟೀ ಕೆಟಲಿಂದ ಕಪ್ಪಿಗೆ Stainer ಅಲ್ಲಿ ಸೋಸಿ, ಅದಕ್ಕೆ ಬೇಕಾಗುವಷ್ಟು ಹಾಲು, ಸಕ್ಕರೆ ಬೆರೆಸಿಕೊಂಡು ಕುಡಿಯುತ್ತಿದ್ದರು. ನನ್ನನ್ನು ಕಂಡೊಡನೆ ನನಗೂ ಟೀ ಇತ್ತು, ಅಂದಿನ ಕರ್ನಾಟಕ ಸಂಘದ ಸಂಜೆಯ ಕಾರ್ಯಕ್ರಮದ ಪ್ರಸ್ತಾಪವೆತ್ತಿದರು. "ಏನಪ್ಪಾ, ಈಗ ನಿಮಗೆ ಬಿಡುವು ಇದ್ದರೆ, ಶಿವರಾಮ ಕಾರಂತರನ್ನು ಹೋಗಿ ಕಂಡು, ಕರ್ನಾಟಕ ಸಂಘದ ಪರವಾಗಿ ಆಹ್ವಾನಿಸಿ ಕರೆತರಬೇಕು. ಅವರು ಮೈಸೂರಿಗೆ ಬಂದಿದ್ದಾರೆ. 'ಉಷಾ ಸಾಹಿತ್ಯ ಮಾಲೆ'ಯ ಸಂಪಾದಕರಾದ ಶ್ರೀ ಆರ್. ಎನ್. ಹಬ್ಬು ಅವರ ಮನೆಯ ಮಹಡಿಯಲ್ಲಿ ಇದ್ದಾರೆ. ಹೋಗಿ ನೋಡಿ" –ಎಂದು ತಿಳಿಸಿದರು. ಅದರಂತೆ ಮೊತ್ತ ಮೊದಲ ಬಾರಿಗೆ ನಾನು ಶಿವರಾಮ ಕಾರಂತರನ್ನು ಭೇಟಿಯಾದೆ. ಅವರು ನಮ್ಮ ಆಹ್ವಾನವನ್ನು ಸ್ವೀಕರಿಸಿ ಕಾರ್ಯಕ್ರಮವನ್ನು ಸಾಂಗವಾಗಿ ನಡೆಸಿಕೊಟ್ಟರು. ತಮ್ಮ ಗೀತನಾಟಕ 'ಕಿಸಾ ಗೋತಮಿ'ಯ ಭಾಗವೊಂದನ್ನೂ ಅಂದು ಕಾರಂತರು ಬಹು ಮನೋಜ್ಞವಾಗಿ ಅಭಿನಯಿಸಿದರು.

ಶ್ರೀ ವಿ.ಸೀ. ಯವರು ಸಂಘದ ಎಲ್ಲ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಅವರು ನಿರರ್ಗಳ ವಾಗ್ಮಿಗಳಾಗಿದ್ದರು. ವಿಷಯ ಮಂಡನೆ, ವಿದ್ವತ್ತು, ಅದರ ಹರಹು, ವಿಸ್ತಾರ, ಆಳ ಎಲ್ಲವೂ ಅವರ ವಾಗ್ಮಿತೆಯಲ್ಲಿ ಮೇಳವಿಸಿ ಹುಡುಗರನ್ನು ಹುರಿದುಂಬಿಸುತ್ತಿದ್ದುವು. ಅವರ ವಾಗ್ಮಿತೆ, ಮಳೆಗಾಲದ ತುಂಬು ಹೊಳೆಯಂತೆ ಮೈದುಂಬಿ ಸಾಗುತ್ತಿತ್ತು.

ಒಮ್ಮೆ ಕಾಲೇಜಲ್ಲಿ ಶ್ರೀ ದ. ರಾ. ಬೇಂದ್ರೆಯವರ ಸುಪ್ರಸಿದ್ಧ ಕವನವಾದ 'ಮೂರ್ತಿ' ಎಂಬ ಕವಿತೆಯನ್ನು ಅವರು ಅರ್ಥವತ್ತಾಗಿ ವಾಚಿಸಿದ್ದು ನನಗೆ ನೆನಪಿದೆ. ಆಗ ಕವಿತೆಗಳನ್ನು ವಾಚಿಸುತ್ತಿದ್ದವರು ಕೆ. ವಿ. ಪುಟ್ಟಪ್ಪನವರು, ವಿ. ಸೀತಾರಾಮಯ್ಯನವರು, ಜಿ. ಪಿ. ರಾಜರತ್ನಂ ಮತ್ತು ಕೆ. ಎಸ್. ನರಸಿಂಹಸ್ವಾಮಿ ಅವರು. ಇದು ಕನ್ನಡಿಗರಿಗೆ ಕಾವ್ಯ ವಾಚನ ಕಲೆಯಲ್ಲಿ ಅಭಿರುಚಿಯನ್ನು ಒದಗಿಸಿತು. ಧಾರವಾಡದ ಕಡೆ ಕವಿ ದ. ರಾ. ಬೇಂದ್ರೆ ಅವರು ತಮ್ಮ ಕವಿತೆಗಳನ್ನು ಅಮೋಘವಾಗಿ ವಾಚಿಸುತ್ತಿದ್ದರು.

ವಿ.ಸೀ. ಅವರ ರಸಿಕತೆ, ಸಂಗೀತದ ಒಲವು, ಕಲಾಭಿಜ್ಞತೆ ಅನನ್ಯವಾದುವು.

ವಿ.ಸೀ. ಚಿಕ್ಕಮಗಳೂರು ಕಾಲೇಜಲ್ಲಿ ಪ್ರಿನ್ಸಿಪಾಲರಾಗಿದ್ದ ದಿನಗಳಲ್ಲಿ ಆ ಊರಲ್ಲಿದ್ದ ನಮ್ಮ ಬಂಧುಗಳನ್ನು ನೋಡಲು ಹೋಗಿದ್ದೆ. ಆಗ ವಿ.ಸೀ. ಅವರು ತಮ್ಮ ಕಾಲೇಜಲ್ಲಿ ನನ್ನಿಂದ ಕಾವ್ಯವಾಚನವನ್ನು ಏರ್ಪಡಿಸಿದ್ದು ನನ್ನ ಸುಯೋಗ.

ಬೇಸಿಗೆಯ ರಜೆಯ ದಿನಗಳಲ್ಲೊಮ್ಮೆ ಶ್ರೀ ಕೆ. ವಿ. ಪುಟ್ಟಪ್ಪನವರು ಮಲೆನಾಡ ಕಡೆ ಕನ್ನಡದ ಆಚಾರ್ಯ ಶ್ರೀಯವರನ್ನೂ ವಿ.ಸೀ. ಅವರನ್ನೂ ನಮ್ಮ ಊರಿಗೆ ಕರೆತಂದಿದ್ದರು. ೧೯೩೬ರಲ್ಲಿ ಪುಟ್ಟಪ್ಪನವರ ಮದುವೆಯ ಸುಸಂದರ್ಭದಲ್ಲಿ ವಿ.ಸೀ. ಅವರಿಗೆ ಉಡುಗೊರೆಯಾಗಿ ಕವನವೊಂದನ್ನು ರಚಿಸಿ ಕಳಿಸಿದ್ದರು. ಅದು ಬಹಳ ಸುಶ್ರಾವ್ಯವಾದ ಕವಿತೆ. ಅದರ ಶೀರ್ಷಿಕೆ 'ಸಪ್ತಪದಿ'; ಅವರ 'ಹೆಜ್ಜೆಪಾಡು' ಕವನ ಸಂಗ್ರಹದಲ್ಲಿದೆ.

ವಿ.ಸೀ. ಅವರ ಕವಿತೆಗಳೆಲ್ಲ ಶ್ರೇಷ್ಠ ಮಟ್ಟದವು. ಅವುಗಳ ಗೇಯತೆ, ಲಯ ಬದ್ಧತೆ, ರಾಗತಾಳ ವಿನ್ಯಾಸ ಹೊಸತೊಂದು ಬೆಳಕು ನೀಡುತ್ತಿತ್ತು. ಕಾವ್ಯಲೋಕದಲ್ಲಿ ಅವರ ಶಬರಿ,

ಕಾಲನಟ, ಲಾಲ್‌ಬಾಗ್, ಮನೆ ತುಂಬಿಸುವುದು, ಅಭೀಃ, ಕಸ್ಮೈ ದೇವಾಯ, ಹೆಮ್ಮರ, ಸಂಕ್ರಾಂತಿ, ಶಿವರಾತ್ರಿ, ಉಂಗುರ ರವ, ಸಪ್ತಪದಿ, ಇಂಥವು ಇನ್ನೆಷ್ಟೋ!

ವಿ.ಸೀ. ಅವರ ಪುಸ್ತಕಗಳು ಅಂದಚೆಂದದ ಹೊರಕವಚಗಳನ್ನು ಹೊಂದಿ, ಅಚ್ಚುಕಟ್ಟಾದ ಸವಿಮುದ್ರಣವನ್ನೊಳಗೊಂಡಿರುತ್ತಿತ್ತು.

ಅವರು ದಿನವೂ ಧರಿಸುತ್ತಿದ್ದ ಗರಿಗರಿಯಾದ ಮಲ್ ರುಮಾಲು, ಹಾಲ್ಗಿನೆ ಬಿಳುಪಿನ ಮುಚ್ಚು ಕುತ್ತಿಗೆಯ ಕೋಟು, ಶುಭ್ರವಾದ ಮಲ್ ಪಂಚೆ, ಮರೆಯಲಾಗದ ಛತ್ರಿ – ಇವು ಶುಭ್ರತೆಯನ್ನು ನೆನಪಿಗೆ ತಂದು ಅವರ ವ್ಯಕ್ತಿತ್ವವನ್ನು ಕಣ್ಣಿಗೆ ಕಟ್ಟಿ ನಿಲ್ಲಿಸುತ್ತವೆ. ಅವರನ್ನು ಕಂಡವರು ಅವರನ್ನು ಎಂದೂ ಮರೆಯಲಾರರು.

ವಿಮರ್ಶೆಯಲ್ಲಿ ಕೊನೆಯ ಮಾತೆಂಬುದಿಲ್ಲ

"ವಿಮರ್ಶೆಯಲ್ಲಿ ಕೊನೆಯ ಮಾತೆಂಬುದಿಲ್ಲ. ಕಾವ್ಯದ ಅರ್ಥವೆಂಬುದು ರುಚಿ, ಅನುಭವ, ತಾರತಮ್ಯಜ್ಞಾನ ಇರುವವರೆಲ್ಲರೂ ತಾವು ತಾವು ಮಾಡಿಕೊಳ್ಳುವ ಅರ್ಥ, ಅವರ ಬೆಲೆ, ವಿನೋದ, ತರ್ಕ, ತೀರ್ಮಾನ, ಸುಹೃತ್. ಬಗೆಬಗೆಯ ಸಾಹಿತ್ಯ ಪರಿಚಯ, ಮೇಧಾಶಕ್ತಿ ಇದ್ದಂತೆಲ್ಲ ಅವರು ತಮ್ಮ ತಮ್ಮ ಕೈಲಾಸಗಳಲ್ಲಿ ಆಳಬಹುದು. ಉಳಿದೆಲ್ಲಕ್ಕಿಂತ ತಮ್ಮ ಕೈವಲ್ಯವೇ ಮೇಲಿನದೆನ್ನಬಹುದು. ಒಂದು ತೀರ್ಮಾನ ಹೊಳೆದ ಕೂಡಲೇ ಅದರ ಪರವಾಗಿ ವಾದ, ತರ್ಕ, ಹಟ ಸಹಜ; ಬೇರೆಯವುಗಳ ಖಂಡನಕ್ಕೆ ಮನಸ್ಸು ತುಯ್ಯುತ್ತದೆ. ಇದು ಸಾಮಾನ್ಯ ಮಾನವ ಮನೋವೃತ್ತಿ. ಆದರೆ ನನ್ನ ಅಭಿಪ್ರಾಯವೇ ಸರ್ವಶ್ರೇಷ್ಠವೆಂದು ಯಾರು ಹೇಳುವುದೂ ಧಾರ್ಷ್ಟ್ಯವಾದೀತು. ನನಗೆ ನೀರಸ ಎಂಬುದು ಸಹಜ. ಅದು ನೀರಸ ಎನ್ನುವುದು ಬೆಲೆಯ ಮಾತು. ವ್ಯಕ್ತಿಯ ಪಕ್ಷಪಾತ ಆಯಾ ವ್ಯಕ್ತಿಯ ಜೀವನ ಚರಿತ್ರೆಯ ಅಂಶ; ಅದರ ಪ್ರಕಾಶನ ಮಾತ್ರ. ಅದು ಸುಷ್ಠುವಾದ ವಿಮರ್ಶೆಯಾಗಬೇಕಾಗಿಲ್ಲ."

ವಿ.ಸೀ.

'ಅಭಿಜ್ಞಾನ ಶಾಕುಂತಲ ನಾಟಕ' ಪು. ೧೦

ವಿಮರ್ಶೆ ಒಂದು ಪಂಜು; ರಾಜದಂಡವಲ್ಲ

"ವಿಮರ್ಶೆ ಎಲ್ಲ ಸಂದರ್ಭಗಳಲ್ಲಿಯೂ ಸಹನಶೀಲವಾಗಿರಬೇಕು. ವಿವೇಕಯುತವಾದ ಸಾಕಲ್ಯವನ್ನು ಪಡೆಯಬೇಕು. ಅದು ಸಾಹಿತ್ಯ ಸೃಷ್ಟಿಗೆ ಪ್ರೇರೇಪಣೆ ಕೊಡಬೇಕು; ನಡಸಬೇಕು. ಹಳ್ಳ-ಕೊಳ್ಳ ಎಲ್ಲಿದೆ ಮಾರ್ಗದಲ್ಲಿ ಎಂಬುದನ್ನು ತೋರಿಸಬೇಕು. ಎಲ್ಲಿ ಯಾವುದಾದರೂ ಒಂದು ಭಾಗ ಕೆಟ್ಟಿತು, ನೀರಸವಾಯಿತು, ಬೇಸರ ತಂದೀತು – ಎಂದು ತಿಳಿಸಬೇಕು.... ವಿಮರ್ಶೆ ಒಂದು ಪಂಜು; ರಾಜದಂಡವಲ್ಲ."

ವಿ.ಸೀ.

ಪಿಇಎನ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಿಂದ

ನಿರ್ಮಲ, ಉದಾತ್ತ ಜೀವನ

ಆದ್ಯ ರಾಮಾಚಾರ್ಯ

ಜೀವನದುದ್ದಕ್ಕೂ ಯಾವ ಪೂರ್ವ ಸಿದ್ಧತೆಗಳಿಲ್ಲದೆ ಗಂಗಾಮಾತೆಯು ತನ್ನ ಸನ್ನಿಧಿಗೆ ನನ್ನನ್ನು ಆಗಾಗ ಬರಮಾಡಿಕೊಳ್ಳುತ್ತಿದ್ದಾಳೆ. ಹರಿದ್ವಾರದ ಹರಿ ಕಿ ಪೈರಿ ಸ್ನಾನಘಟ್ಟದಲ್ಲಿ ನಿಂತಾಗ, ಪ್ರತಿಸಲವೂ ತಪ್ಪದೆ ವಿ.ಸೀ. ಯವರ ನೆನಪಾಗುತ್ತದೆ. ಆ ಪೂಜ್ಯರು ಗಂಗೆಯನ್ನು ಕುರಿತು ರಚಿಸಿದ ಕಾವ್ಯದ ಸಾಲುಗಳು ಸ್ಮರಣೆಗೆ ಬರುತ್ತವೆ. ಆ ಪದ್ಯವು ತೆರೆತೆರೆಯಾಗಿ ಹೃದಯಾಂತರಾಳದಲ್ಲಿ ಹರಿಯುತ್ತಿರುವಂತೆ ಭಾಸವಾಗುತ್ತದೆ. ಹೃದ್ಗತವಾದ ಅನುಭವಾಮೃತದಿಂದಾಗಿ ಮುಂದೊಂದು ಕ್ಷಣದಲ್ಲಿ ವ್ಯಕ್ತರೂಪದಲ್ಲಿ ಕಣ್ಮುಂದೆ ಬಂದು ನಿಂತಂತೆ ಭಾಸವಾಗುತ್ತದೆ. ಅವರು ಶಿರೋಧಾರಣ ಮಾಡುತ್ತಿದ್ದ ಶುಭ್ರವಾದ ಪೇಟಾ ಪ್ರವಾಹದ ಮುಂಭಾಗದ ಗಿರಿಶಿಖರಗಳ ಮೇಲೆ ಕಾಣಬರುವ ಹಿಮಾಚ್ಛಾದಿತ ಪರ್ವತಗಳನ್ನು ಕಂಡಂತೆ ಭಾಸವಾಗುತ್ತದೆ. ಧರಿಸಿದ ಕೋಟು ಹಿಮಗಿರಿಯ ಮೇಲೆ ಹಾದು ಹೋಗುವ ಮೋಡಗಳ ಆಕಾರದಲ್ಲಿ ಕಾಣುತ್ತದೆ. ಅವರುಟ್ಟ ಕಚ್ಚೆ ಪಂಚೆಯ ನಿಲುಗೆಗಳು ಗಂಗಾಪ್ರವಾಹದ ಅಲೆಗಳು ಹೊಯ್ದಾಡಿದಂತೆ ಭಾಸವಾಗುತ್ತದೆ. ಗಂಗೆಯ ಸನ್ನಿಧಿಗೆ ಹೋದಾಗಲೆಲ್ಲ ಅವರ ಇಂಥ ರೂಪವನ್ನು ಕಂಡಿದ್ದೇನೆ.

ವಿ.ಸೀ. ಯವರ ಜೀವನವೂ ಈ ಗಂಗೆಯಂತೆ ಬಹು ನಿರ್ಮಲ. ಅವರದು ಬಹು ಉದಾತ್ತವಾದ ಜೀವನ. ಇಂಥ ಮಹಾನುಭಾವರ ಶಿಷ್ಯ ಕೋಟಿಯಲ್ಲಿ ನಾನೂ ಒಬ್ಬನೆಂದು ಹೇಳಿಕೊಳ್ಳುವ ಭಾಗ್ಯದಿಂದ ನಾನು ವಂಚಿತನೆಂಬ ಬೇಸರವೂ ನನಗಿಲ್ಲ. ಇಪ್ಪತ್ತೈದು ವರುಷಗಳಿಂದ ನಾನು ಅವರನ್ನು ಕಂಡವನು. ಕೂಗಳತೆಯಲ್ಲಿ ನಮ್ಮಿಬ್ಬರ ವಾಸಸ್ಥಾನವಿತ್ತು. ಈ ಸಾಮೀಪ್ಯವೇ ಒಂದು ದಿನ ಅವರತ್ತ ಆಕರ್ಷಿಸುವಂತೆ ಮಾಡಿತು.

ವಿ. ಸೀ. ಯವರು ಅತ್ಯುನ್ನತ ಪದವೀಧರರಾಗಿಯೂ ಶ್ರೇಷ್ಠ ಶಿಕ್ಷಕರಾಗಿಯೂ ಕುಟುಂಬವತ್ಸಲರಾಗಿಯೂ ಸ್ನೇಹಜೀವಿಗಳಾಗಿಯೂ ಅಪ್ಪಟ ಸನಾತನ ಸಂಪ್ರದಾಯವಾದಿಗಳಾಗಿಯೂ ಬಾಳಿದವರು. ಅವರೆಂದೂ ಆಂಗ್ಲಭಾಷೆಗೇ ತಮ್ಮನ್ನು ಸಮರ್ಪಿಸಿಕೊಂಡವರಲ್ಲ. ಕಮಲ ಪತ್ರದಂತೆ ಅವರ ಆಂಗ್ಲಭಾಷಾ ಮೋಹವಿತ್ತು. ಅವರು ಒಳ್ಳೇ ಸಂಸ್ಕಾರದೊಂದಿಗೆ ಸಂಸ್ಕೃತಿಯ ಆರಾಧಕರಾಗಿ ಬಾಳಿದವರು. ಸ್ನಾನ ಸಂಧ್ಯೆಯೊಂದಿಗೆ ಹಣೆಯಲ್ಲಿ ಶ್ರೀಗಂಧಧಾರಿಗಳಾಗಿ ತಮ್ಮ ಶಾರದಾ ನಿವಾಸಕ್ಕೆ (ಕೋಣೆಗೆ) ಬಂದು ಕುಳಿತಾಗ

ಅವರೊಬ್ಬ ಸಾಧಕರಾಗಿ ತೋರುತ್ತಿದ್ದರು. ಅವರು ಸಂಗ್ರಹಿಸಿದ ಗ್ರಂಥ ಭಂಡಾರವು ಬಹು ಮೌಲ್ಯದ್ದಾಗಿತ್ತು.

ಶ್ರೀ ಕೃಷ್ಣನ ಜೀವನವನ್ನು ಕುರಿತು ಅವರಿಂದ ರಚಿತವಾದ ಕೃತಿಯನ್ನಭ್ಯಾಸ ಮಾಡಿದ ನಂತರ ಮನಸ್ಸು ಅವರನ್ನು ಕಾಣಲು ಹಂಬಲಿಸತೊಡಗಿತು. ನಾನು ಕರ್ಣನ ಜೀವನವನ್ನು ಆಧರಿಸಿ ರಾಧೇಯ ಎಂಬ ಗ್ರಂಥ ರಚಿಸಲು ವಿಷಯಗಳನ್ನು ಸಂಗ್ರಹಿಸುತ್ತಲಿದ್ದೆ. ಮಹಾಭಾರತದ ಕಥೆಯಲ್ಲಿ ಕೃಷ್ಣನಂತೆ ಕರ್ಣನ ಪಾತ್ರವೂ ಸಹ ಅಸಾಮಾನ್ಯ. ಅದುದರಿಂದ ಅನೇಕ ಸಲ ಆ ಪೂಜ್ಯರನ್ನು ಭೇಟಿಯಾಗತೊಡಗಿದೆ. ಕುಮಾರವ್ಯಾಸನ ಕೃತಿಯಲ್ಲಿ ವರ್ಣಿತವಾದ ಕರ್ಣನ ಪಾತ್ರವನ್ನು ಬಹು ಮನೋಜ್ಞವಾಗಿ ಅವರು ವಿವರಿಸಿದರು. ನನ್ನ ಶಂಕೆಗಳಿಗೆಲ್ಲ ಸಮಾಧಾನವು ದೊರಕಿತು. ಒಂದು ರೀತಿಯಲ್ಲಿ ಎಲ್ಲರಂತೆ ನಾನೂ ಅವರ ಶಿಷ್ಯನೆಂಬ ಭಾವನೆ ಮೂಡಿತು.

ಪ್ರತಿ ದಿನವೂ ಸಾಯಂಕಾಲ ಗೋಧೂಳಿ ಸಮಯವಾದೊಡನೆ ನೀಟಾಗಿ ಉಡುಪನ್ನು ಧರಿಸಿ ತಲೆಯ ಮೇಲೆ ಶುಭ್ರವಾದ ಪೇಟಾ ಇಟ್ಟುಕೊಂಡು ಅವರು ಶ್ರೀ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಹಾಗೂ ಮೈಸೂರು ಮಲ್ಲಿಗೆಯ ಕವಿ ಶ್ರೀ ಕೆ. ಎಸ್. ನರಸಿಂಹಸ್ವಾಮಿಗಳೊಂದಿಗೆ ವಾಯು ವಿಹಾರಕ್ಕೆ ಹೊರಡುತ್ತಿದ್ದರು. ಮಾರ್ಗಮಧ್ಯದಲ್ಲಿ ನನ್ನ ತಂದೆಯವರ ಭೇಟಿಯಾದಾಗ ಉಭಯ ಕುಶಲೋಪರಿಗಳಾದ ನಂತರ ಮುಂದರಿಯುತ್ತಿದ್ದರು.

ವಿ.ಸೀ.ಯವರು ಒಮ್ಮೆ ಧಾರವಾಡಕ್ಕೆ ಹೊರಟು ನಿಂತಿದ್ದರು. "ನನಗೆ ಉತ್ತರ ಕರ್ನಾಟಕದಲ್ಲಿಯೂ ಬಹು ಜನ ಮಿತ್ರರಿದ್ದಾರೆ. ಅವರನ್ನೆಲ್ಲ ನೋಡಿಕೊಂಡು ಬರಬೇಕೆಂದೇ ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇನೆ..." ಎಂದು ಹೇಳಿದರು. ಆಗ ನನ್ನ ನಾಡಿನ ಬಗ್ಗೆ ನನಗೆ ಅವ್ಯಕ್ತವಾದ ಆನಂದಾನುಭವವಾಯಿತು. ಬಯಲುನಾಡಿನ ವಿಜಾಪುರದವನಾದ ನನ್ನನ್ನು ಕಂಡಾಗಲೆಲ್ಲಾ 'ಹ್ಯಾಂಗಿದ್ದೀರಿ' ಎಂದು ಮಾತನ್ನಾರಂಭಿಸುವುದು ಅವರ ವಾಡಿಕೆಯಾಗಿತ್ತು. ಅವರನ್ನು ಕಂಡಾಗಲೆಲ್ಲಾ ಕವಿ ಕಾಳಿದಾಸನು ವರ್ಣಿಸಿದ "ನಗಾಧಿರಾಜ" ಎಂಬ ಸಾಲು ಸ್ಮರಣೆಗೆ ಬರುತ್ತಿತ್ತು.

ತುಂಬ ಮೃದು ಸ್ವಭಾವದ ಆ ಹಿರಿಯರನ್ನು ಕಳೆದುಕೊಂಡಾಗ ಬಹು ದೊಡ್ಡ ನಿಧಿಯನ್ನೇ ಕಳೆದುಕೊಂಡಂತೆನಿಸಿತು. ಎಷ್ಟೋ ದಿನ ಮನಸ್ಸು ಮುದುಡಿಕೊಂಡಂತೆನಿಸುತ್ತಿತ್ತು. ಆದರೆ ಗಂಗೆಯ ಸನ್ನಿಧಿಗೆ ಹೋಗಿ ನಿಂತಾಗ, ಪುನಃ ಮನಸ್ಸು ಪುಳಕಿತಗೊಂಡು, ಜಾಹ್ನವಿಯನ್ನು ವರ್ಣಿಸಿದ ಅವರ ಗೀತದ ಸಾಲುಗಳು 'ಗಂಗಾ ಗಂಗಾ' ಎಂದು ನುಡಿದಂತಹ ಅನುಭವವಾಗುತ್ತಿತ್ತು. ವಿ.ಸೀ. ಕಣ್ಮರೆಯಾಗಿರಬಹುದು; ಆದರೆ ಅವರ ಕೃತಿಗಳು ಮಾತ್ರ ಗಂಗಾ ಪ್ರವಾಹದಂತೆ ಎಂದಿಗೂ ಓತಪ್ರೋತವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ವಿ. ಸೀ. ನೆನಪುಗಳು

I

೧೯೩೦ರ ದಶಕದಲ್ಲಿ ದಕ್ಷಿಣ ಕನ್ನಡದ ಪುತ್ತೂರಲ್ಲಿ ದಸರಾ ಮಹೋತ್ಸವವು ತುಂಬಾ ವಿಜೃಂಭಣೆಯಿಂದ ಜರುಗುತ್ತಿತ್ತು. ಅದರ ಚಾಲಕರು ದಿ. ಶ್ರೀ ಮೊಳಹಳ್ಳಿ ಶಿವರಾಯರು ಮತ್ತು ಅವರ ವಕೀಲ ಬಂಧುಗಳು. ಈ ಉತ್ಸವದಲ್ಲಿ ಮನೋರಂಜನೆಯ ಕಾರ್ಯಕ್ರಮವನ್ನು ಕೋಟ ಶಿವರಾಮ ಕಾರಂತರು ನಡಸಿಕೊಡುತ್ತಿದ್ದರು. ಇದಲ್ಲದೆ ಸಾಹಿತ್ಯೋತ್ಸವವನ್ನೂ ನಡಸಿಕೊಡುತ್ತಿದ್ದರು. ವಿಶ್ವವಿಹಾರಿಯಾದ ಕಾರಂತರಿಗೆ ಮೈಸೂರು ಧಾರವಾಡ ಕಡೆಯ ಸಾಹಿತಿಗಳ ಸ್ನೇಹ, ಪರಿಚಯ ಇತ್ತು. ಇದರಿಂದಾಗಿ ಈ ದಸರಾ ಮಹೋತ್ಸವದ ಸಾಹಿತ್ಯೋತ್ಸವಕ್ಕೆ ಹಲವಾರು ಸಾಹಿತಿಗಳು ಬರುತ್ತಿದ್ದರು. ನಾನು ಆ ದಶಕದಲ್ಲಿ (ಅಂದರೆ ೧೯೩೦–೧೯೩೬ರ ವರೆಗೆ) ವಿದ್ಯಾರ್ಥಿಯಾಗಿ ಮಂಗಳೂರು, ಮದ್ರಾಸಿಗೆ ಹೋಗಿದ್ದೆ. ನನಗೆ ಶ್ರೀ ಮಾಸ್ತಿಯವರನ್ನೂ ಶ್ರೀ ಬೇಂದ್ರೆಯವರನ್ನೂ ಕಂಡು, ಕೇಳಿ ಉಲ್ಲಾಸಪಟ್ಟ ನೆನಪಿದೆ. ಈ ಸಮಯದಲ್ಲಿ ವಿ. ಸೀತಾರಾಮಯ್ಯನವರೂ ಹಲವಾರು ಬಾರಿ ಬಂದಿರಬೇಕು. ಆದರೆ ನಾನು ಅವರನ್ನು ಪ್ರತ್ಯಕ್ಷವಾಗಿ ಕಂಡದ್ದು ನಮ್ಮ ಮದುವೆಯ ಸಮಯದಲ್ಲಿ. ವಧುವಿನ (ನನ್ನ) ತಂದೆ ಶ್ರೀ ಮೊಳಹಳ್ಳಿ ಶಿವರಾಯರೂ ವರನ ತಂದೆ ಶ್ರೀ ಪಂಜೆ ಮಂಗೇಶರಾಯರೂ ವಿ.ಸೀ. ಯವರಿಗೆ ತುಂಬಾ ಆತ್ಮೀಯರಾದ ಕಾರಣ, ದೂರದ ಬೆಂಗಳೂರಿನಿಂದ ಒಂದೆರಡು ದಿವಸಗಳ ನಿರಂತರ ಪ್ರಯಾಣ ಮಾಡಿ ವಿ.ಸೀ.ಯವರು ಪುತ್ತೂರು ತಲುಪಿದ್ದರು.

ನಮ್ಮ ತಂದೆ ಶ್ರೀ ಮೊಳಹಳ್ಳಿ ಶಿವರಾಯರು ನನ್ನ ವಿವಾಹವನ್ನು ಶಾಸ್ತ್ರೋಕ್ತವಾಗಿ ತುಂಬಾ ವಿಜೃಂಭಣೆಯಿಂದ ಜರುಗಿಸಿದರು. ಮನೆಯ ಮುಂದಿನ ಅಂಗಳವೆಲ್ಲಾ ಅಲಂಕರಿಸಿದ ಚಪ್ಪರ ಕಟ್ಟಿಸಿದ್ದರು. ಮದುವೆ ಮಂಟಪವಂತೂ ತುಂಬಾ ಸುಂದರವಾಗಿ ಸಜ್ಜಾಗಿತ್ತು. ಮನೆ ತುಂಬಾ ಸಂಬಂಧಿಕರು ಮಕ್ಕಳೊಡಗೂಡಿ ಬಂದಿದ್ದರು.

ಮದುವಣಿಗಳ ಬಳಗ ಉಳಿದುಕೊಳ್ಳುವುದಕ್ಕೆ ಶಿವರಾಯರ ಮನೆಗೆ ಎದುರಾಗಿರುವ ಪ್ರವಾಸಿ ನಿಲಯದಲ್ಲಿ ಏರ್ಪಾಡು ಮಾಡಿದ್ದರು. ನನ್ನ ಭಾವ ಶ್ರೀ ಪಡುಕೋಣೆ ರಮಾನಂದರಾಯರ ಗ್ರಾಮಫೋನನ್ನು ಅಲ್ಲಿ ಇರಿಸಲಾಗಿತ್ತು. ಆಗಿನ ಕಾಲದ ಜನಪ್ರಿಯ ಸಂಗೀತಗಾರರ ಮತ್ತು ಪಾಶ್ಚಾತ್ಯ ಶಾಸ್ತ್ರೀಯ ಸಂಗೀತಗಾರರ ರೆಕಾರ್ಡ್ಸ್ ಅನ್ನು ಅಲ್ಲಿ ಇರಿಸಿದ್ದರು.

ನನ್ನ ಕಿರಿಯ ನಾದಿನಿ ಶಾಂತಾ (ರಾಮೇಶ್ವರ ರಾವ್) ಆಗ ಚಿಕ್ಕ ಹುಡುಗಿ. ಆಕೆಗೆ ಆಗಲೂ ಈಗಲೂ ಸಂಗೀತವೆಂದರೆ ಪ್ರಾಣ. ಮದ್ರಾಸಿನಿಂದ ಬಂದ ನನ್ನ ದೊಡ್ಡಪ್ಪನ ಮಕ್ಕಳು (ನನ್ನ ತಂಗಿಯರು) ಸಾಧಾರಣ ಶಾಂತಾಳ ಸಮವಯಸ್ಕರಾಗಿದ್ದು ಅವರು ಕೂಡಾ ಇಂಗ್ಲಿಷ್ ಶಾಲೆಯಲ್ಲಿ ಕಲಿಯುತ್ತಿದ್ದುದರಿಂದ ಆಗಿನ ಜನಪ್ರಿಯ ಇಂಗ್ಲಿಷ್ ಹಾಡುಗಳನ್ನೂ ಕ್ರಿಸ್‌ಮಸ್ ಸಮಯದಲ್ಲಿ ಹಾಡುವ ಹಾಡುಗಳನ್ನೂ ಇಂಪಾಗಿ ಹಾಡುತ್ತಿದ್ದರು. ಇವನ್ನು ಶ್ರೀ ವಿ. ಸೀ. ಯವರು ತುಂಬಾ ಮೆಚ್ಚುಗೆಯಿಂದ ಕೇಳುತ್ತಿದ್ದರು. ಇದಲ್ಲದೇ ವಿ.ಸೀ. ಅವರು ನನ್ನ ಅಣ್ಣ ಮುಕುಂದರಾಯರೊಡನೆಯೂ ಮತ್ತು ಶ್ರೀ ಪಂಜೆ ರಾಮರಾಯರೊಡನೆಯೂ ಪಾಶ್ಚಾತ್ಯ ಸಂಗೀತಗಾರರಾದ ಬಾಖ್, ಬಿಠೋವನ್ ಮುಂತಾದವರ ವಿವಿಧ ಶೈಲಿಗಳ ವಿಷಯ ಮಾತನಾಡುತ್ತಿದ್ದುದು ನನಗೆ ಚೆನ್ನಾಗಿ ನೆನಪಿದೆ. ಇದು ಸಂಗೀತ ಪ್ರಪಂಚದಲ್ಲಿ ವಿ.ಸೀ.ಯವರಿಗೆ ಇದ್ದ ಆಸಕ್ತಿ ಮತ್ತು ವಿದ್ವತ್ತನ್ನು ತೋರಿಸುತ್ತದೆ.

ನಮ್ಮ ಬಾಳಿನ ಬಹುಕಾಲವನ್ನು ದೂರದ ಬಿಹಾರಿನಲ್ಲೂ ಉತ್ತರ ಪ್ರದೇಶದಲ್ಲೂ ಕಳೆದೆವು. ಕೆಲವು ವರ್ಷಗಳ ಕಾಲ ನಾವು ಕೊಯಮತ್ತೂರಿನಲ್ಲಿರುವಾಗ ವರ್ಷಕ್ಕೊಮ್ಮೆಯಾದರೂ ಬೆಂಗಳೂರಿಗೆ ಬರುತ್ತಿದ್ದೆವು. ಹಾಗೆ ಬಂದಾಗೆಲ್ಲ ವಿ.ಸೀ.ಯವರನ್ನು ಸಂದರ್ಶಿಸಿ, ಅವರ ಆತಿಥ್ಯವನ್ನು ಸ್ವೀಕರಿಸಿ, ಅವರದೇ ಆದ ಮೃದು ನುಡಿಗಳನ್ನು ಕೇಳಿ ತುಂಬಾ ಆನಂದದಿಂದ ಹಿಂದಿರುಗುವುದು ನಮ್ಮ ರೂಢಿಯಾಗಿತ್ತು.

ವಿ.ಸೀ.ಯವರಲ್ಲಿ ಎದ್ದು ಕಾಣುತ್ತಿದ್ದ ಇನ್ನೊಂದು ಗುಣವೆಂದರೆ ಅವರ ವಿಶಾಲ ಹೃದಯ ಮತ್ತು ಕಡಲತೀರದ ಕನ್ನಡಿಗರಲ್ಲಿ ಅವರು ತೋರಿದ ಅಪಾರ ಪ್ರೇಮ. ಪುತ್ತೂರಿಗೋ ಮಂಗಳೂರಿಗೋ ಬಂದಾಗಲೆಲ್ಲಾ ತೀರ್ಥಯಾತ್ರೆ ಮಾಡುವವರಂತೆ ಮಂಜೇಶ್ವರದಲ್ಲಿದ್ದ ವಯೋವೃದ್ಧ ಗೋವಿಂದ ಪೈಯವರನ್ನು ವಿ.ಸೀ. ತಪ್ಪದೇ ಭೇಟಿಯಾಗಿ ಬರುತ್ತಿದ್ದರು.

ಬಿಳಿ ಉಡುಪಿನ, ಚಿಕ್ಕ ಗಾತ್ರದ, ಆಳವಾದ ವಿದ್ವತ್ತಿನ ವಿ.ಸೀತಾರಾಮಯ್ಯನವರ ವ್ಯಕ್ತಿತ್ವವು ಅಗಾಧವಾದುದು. ಅವರನ್ನು ನೋಡಿ ಮಾತಾಡಿಸಿ ಸಂತೋಷ ಪಟ್ಟ ನಾವು ಧನ್ಯರು.

ಶ್ರೀಮತಿ ವರದಾ ರಾಮರಾವ್ ಪಂಜೆ

II

ವಿ.ಸೀ. ಅವರನ್ನು ನಾನು ಮೊದಲು ಕಂಡದ್ದು ನನ್ನ ಹನ್ನೆರಡನೇ ವಯಸ್ಸಿನಲ್ಲಿ, ಅವರು ದಕ್ಷಿಣ ಕನ್ನಡದ ಪುತ್ತೂರಿಗೆ ದಸರಾ ಮಹೋತ್ಸವಕ್ಕೆ ಆಮಂತ್ರಿತರಾಗಿ ಬಂದಾಗ (೧೯೩೫). ಅವರನ್ನು ಕಂಡಾಗ ನನ್ನ ಗಮನಕ್ಕೆ ಬಂದದ್ದು ಅವರ ಅಚ್ಚುಕಟ್ಟಾದ, ಶುಚಿಯಾದ ಉಡುಗೆ, ರುಮಾಲು, ಅವರ ಸಾತ್ವಿಕ ಮೆಲ್ನುಡಿ, ವಿನಯ, ಉತ್ತಮ ಮಟ್ಟದ ಸಂಸ್ಕಾರ. ಮುಂದಿನ ವರ್ಷಗಳಲ್ಲಿ ನಾನು ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಶಿಕ್ಷಣಕ್ಕಾಗಿ

ಬಂದಾಗ ಅವರ ಪರಿಚಯ ದೃಢವಾದಂತೆ, ನಾನು ಕಂಡ ಅವರ ಉಡುಪಿನ ಸ್ವಚ್ಛತೆ ಶುಚಿಗಳನ್ನು ಅವರ ಒಳಗಿನ ವ್ಯಕ್ತಿತ್ವದಲ್ಲೂ ಕಂಡೆ. ಅವರ ಆಳವಾದ ವಿದ್ವತ್ತು, ಅವರಿಗಿದ್ದ ಆಸಕ್ತಿಗಳ ವೈವಿಧ್ಯ, ಅವರ ಮಿತ್ರಕೂಟದ ವಿಸ್ತಾರ – ಇವೆಲ್ಲವೂ ಪರಿಚಯವಾದವು. ನನ್ನ ತಾರುಣ್ಯಕ್ಕೆ ಸಹಜವಾದ ಅಪಕ್ವ ಆಶೆಗಳು – ಆಂಗ್ಲ ಸಾಹಿತ್ಯ, ಸಿನಿಮಾ, ನಾಟಕ, ಪಾಶ್ಚಾತ್ಯ ಮತ್ತು ಭಾರತೀಯ ಸಂಗೀತ ಇವೆಲ್ಲವನ್ನೂ ಆದಷ್ಟು ಬೇಗ ಅರಿಯಬೇಕೆಂಬ ಹುಚ್ಚು ಬಾಲಿಶ ಆಕಾಂಕ್ಷೆಗಳು ನನ್ನನ್ನು ಪೀಡಿಸುತಿದ್ದವು. ಅಂತಹ ಸಂದರ್ಭದಲ್ಲಿ ವಿ.ಸೀ.ಯವರ ಮನೆಗೆ ಆಗಾಗ್ಗೆ ಹೋಗುತ್ತಿದ್ದ ನನಗೆ ಅವರ ಮಾತುಗಳನ್ನು ಕೇಳಿದಾಗ ಅವರ ಪಾಂಡಿತ್ಯ; ನನಗೆ ಆಸಕ್ತಿಯಿದ್ದ ವಿಷಯಗಳಲ್ಲಿ ಅವರಿಗಿದ್ದ ಆಳವಾದ ಜ್ಞಾನ ಇವೆಲ್ಲ ನನ್ನ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿದವು. 'ವಿವಿಧ ವಿಷಯಗಳಲ್ಲಿ ಆಸಕ್ತಿ ಇದ್ದರೆ ಸಾಲದು, ಅವುಗಳ ಅಧ್ಯಯನದ ಸಾಧನೆಯೂ ಅವಶ್ಯ' ಎಂಬ ಪಾಠ ಅವರಿಂದ ನನಗೆ ದೊರಕಿತು. ಪ್ರತಿ ಬಾರಿಯೂ ಅವರ ಮನೆಗೆ ಹೋದಾಗ, ಅವರು ಪ್ರೀತಿಯಿಂದ ಕೊಟ್ಟ ಅದ್ವಿತೀಯವಾದ ಕಾಫಿಯನ್ನು ಹೀರುತ್ತಾ ಅವರ ಚೇತೋಹಾರಿ ಮಾತುಗಳನ್ನು ಕೇಳುತ್ತಾ ನಾನು ಕಳೆದ ಅಮೂಲ್ಯ ಸಮಯ, ನನಗೆ ಯಾವ ಶಿಕ್ಷಣ ಸಂಸ್ಥೆಯೂ ಒದಗಿಸಲಾರದ ಜ್ಞಾನವನ್ನು ದಯಪಾಲಿಸಿದೆ.

ನಮ್ಮ ಬಳಗಕ್ಕೂ ವಿ.ಸೀ.ಯವರಿಗೂ ಮೈತ್ರಿ ಬೆಳೆದು, ಓರ್ವ ಹಿರಿಯಣ್ಣನಂತೆ ಆತ್ಮೀಯಭಾವದಿಂದ ಅವರು ನಮ್ಮೊಡನೆ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಫಲವಾಗಿ, ನಮ್ಮ ತೀರ್ಥರೂಪ ಶ್ರೀ ರಮಾನಂದರಾಯರ ಹಾಗೂ ಮಾತೃಶ್ರೀ ಸೀತಾದೇವಿಯವರ ಕುರಿತು ವ್ಯಕ್ತಿ ಚಿತ್ರವನ್ನೂ ಬರೆದು, ಅವರ ಬಗ್ಗೆ ತಮಗಿದ್ದ ಪ್ರೀತಿ ಆದರಗಳನ್ನು ಪ್ರಕಟಿಸಿದರು. ಕಾರ್ಯಾರ್ಥವಾಗಿ ಮಂಗಳೂರು, ಪುತ್ತೂರು, ಮದ್ರಾಸು, ಮುಂಬಯಿಗಳಿಗೆ ಬಂದಾಗೆಲ್ಲ ಅವರು ನಮ್ಮಲ್ಲೇ ಉಳಿದುಕೊಳ್ಳುತ್ತಿದ್ದರು ಅಥವಾ ನಮ್ಮಲ್ಲಿ ಒಮ್ಮೆಯಾದರೂ ಬಂದು ನೋಡಿ ಹೋಗುತ್ತಿದ್ದರು. ಮುಂಬಯಿಯ ಬಾಂದ್ರಾದಲ್ಲಿದ್ದ ನಮ್ಮ ಮನೆಗೆ ಒಮ್ಮೆ ಬಂದಾಗ, ಭೋಜನದ ನಂತರ ಚಾಪೆಯ ಮೇಲೆ ಕೂತು ನಮ್ಮೊಡನೆ ಅವರು ಮಾತುಕತೆ ನಡೆಸುತ್ತಿದ್ದಾಗ, ಪಕ್ಕದ ಮನೆಯ ಮಹಡಿಯಲ್ಲಿದ್ದ ದಂಪತಿಗಳು ಅವರನ್ನು ಕಿಟಿಕಿಯ ಮೂಲಕ ನೋಡಿ ಗುರುತಿಸಿ ಕೆಳಗಿಳಿದು ಬಂದು ಅವರಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ತಮ್ಮ ಪರಿಚಯವನ್ನು ತಿಳಿಸಿದರು. ತುಂಗಭದ್ರಾ ತೀರದ 'ಪ್ರೇಮಾಯತನ'ದ ಪಂಡಿತ ತಾರಾನಾಥ ರಾಯರ ತಂಗಿಯ ಮಗಳಾದ ಆಕೆಯೂ ಆಕೆಯ ಡಾಕ್ಟರ್ ಪತಿಯೂ ಹಿಂದೆ ವಿ.ಸೀ. ಯವರ ಶಿಷ್ಯರಾಗಿದ್ದರಂತೆ. ವಿ.ಸೀ.ಯವರ ಶಿಷ್ಯವರ್ಗ ಭಾರತದಲ್ಲೂ ವಿದೇಶಗಳಲ್ಲೂ ಹರಡಿದ್ದಾರೆ, ಅವರನ್ನು ಅತ್ಯಂತ ಗೌರವ ಭಕ್ತಿಗಳಿಂದ ಸ್ಮರಿಸುತ್ತಾರೆ.

ಶ್ರೀ ವಿ.ಸೀ. ಯವರು ಖರೀದಿಸುವ ವಸ್ತು ಉತ್ತಮ ಗುಣಮಟ್ಟದ್ದಾಗಿರಬೇಕು, ಕಳಪೆ ವಸ್ತು ಅವರಿಗೆ ಸಲ್ಲ ಎಂದು ನಾನು ಕೇಳಿದ್ದೆ. ಇದರ ಪ್ರತ್ಯಕ್ಷ ನಿದರ್ಶನ ನನಗೆ ಸಿಕ್ಕಿದ್ದು ನಾನು ಅವರ ಜೊತೆ ಮುಂಬಾಯಿಯ ಪ್ರಸಿದ್ಧ ವಾಣಿಜ್ಯ ಕೇಂದ್ರವಾದ "ಫೋರ್ಟ್" ಪ್ರದೇಶದಲ್ಲಿ ಸುತ್ತಾಡುತ್ತಿದ್ದಾಗ. ಅವರ ಕೋಟಿನ ಗುಂಡಿಯೊಂದು ಕಳಚಿ

ಬಂದಿತ್ತು. ಅದೇ ತರಹದ ಗುಂಡಿಯ ಶೋಧನೆಗಾಗಿ ಸುಮಾರು ಐದಾರು ಮೈಲೂ ಒಂದೆರಡು ತಾಸೂ ಸುತ್ತಾಡಿ ವಿಫಲರಾದೆವು. ಯಾವ ಅಂಗಡಿಯಲ್ಲಿ ಕಂಡ ಗುಂಡಿಯೂ ಅವರು ಉಪಯೋಗಿಸುವ ವಿಶಿಷ್ಟ ಮುತ್ತಿನ ಚಿಪ್ಪಿನ ಗುಂಡಿಯ –Mother of Pearls– ಗುಣ ಮಟ್ಟಕ್ಕೆ ಬಾರದಿದ್ದುದರಿಂದ ಅದನ್ನು ಅವರು ಯಾವುದೇ ಸಂಕೋಚವಿಲ್ಲದೆ ನಿರಾಕರಿಸುತ್ತಿದ್ದರು. ಕಡೆಗೆ "ಶಂಕ್ರೂ, ಏನು ಊರಪ್ಪಾ ನಿಮ್ಮ ಮುಂಬೈ! ನಮ್ಮ ಬೆಂಗಳೂರೇ ವಾಸಿಯಲ್ಲಪ್ಪಾ; ಅಲ್ಲಿ ಇಂತಹ (ಹೆಸರು ಹೇಳಿ) ಅಂಗಡಿಯಲ್ಲಿ ಯಾವಾಗ ಬೇಕಾದರೂ ಇದನ್ನು ಪಡೆಯಬಲ್ಲೆ" ಎಂದರು.

ವಿ.ಸೀ. ಅಂತಹ ಸೌಮ್ಯ, ನಿರಾಡಂಬರ ಪ್ರೇಮ ಮೂರ್ತಿ ನಮ್ಮ ಬಾಳ್ವೆಯಲ್ಲಿ ಅಕಸ್ಮಾತ್ತಾಗಿ ದೊರೆತು ನಮ್ಮ ಜೀವನವನ್ನು ಶ್ರೀಮಂತಗೊಳಿಸಿದುದು, ನಮಗೆ ದೇವರು ಕರುಣಿಸಿದ ಅಮೂಲ್ಯ ಭಾಗ್ಯವೆಂದೇ ತಿಳಿದಿದ್ದೇವೆ.

ಪಡುಕೋಣೆ ಪ್ರಭಾಶಂಕರ ರಾವ್

III

೧೯೩೪ರಲ್ಲಿ ನಡೆದ ಚಿಕ್ಕ ಘಟನೆ. ಆದರೆ ಅದರ ನೆನಪು ಇಂದಿನವರೆಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ಆಗ ನನ್ನ ವಯಸ್ಸು ಒಂಬತ್ತು ವರ್ಷ. ಮಂಗಳೂರಿನ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಕಲಿಯುತ್ತಿದ್ದೆ. ಶಾಲಾಪಾಠಗಳು ಪ್ರಾರಂಭವಾಗುವ ಮುಂಚೆ ಪ್ರತಿದಿನ ಬೆಳಿಗ್ಗೆ ಶಾಲಾ ಮಕ್ಕಳೆಲ್ಲಾ ಒಟ್ಟು ಸೇರಿ ಪ್ರಾರ್ಥನೆ ಹಾಡುವ ಪದ್ಧತಿ. ವಾರಕ್ಕೆ ಒಂದು ಬಾರಿ ಯಾರಾದರೂ ಒಬ್ಬ ಅತಿಥಿ, ಪ್ರಸಿದ್ಧ ಕವನ ಒಂದನ್ನು ಓದುವ ಪದ್ಧತಿ ಇತ್ತು. ಇಂತಹ ಒಂದು ಸಂದರ್ಭದಲ್ಲಿ ನಮ್ಮ ಮುಂದೆ ನಿಂತು ನಮಗೆ ಮಾಸ್ತಿಯವರ "ಮದಲಿಂಗನ ಕಣಿವೆ"ಯನ್ನು ಭಾವಯುತವಾಗಿ ಓದಿದವರು ಶ್ರೀ ವಿ.ಸೀ. ಈಗಲೂ – ಅರವತ್ತನಾಲ್ಕು ವರುಷಗಳ ಅನಂತರವೂ – ಆ ಕವಿತೆಯಲ್ಲಿನ ದುರಂತ ಹಸಿರಾಗಿ ನನ್ನ ಮನಸ್ಸಿನಲ್ಲಿ ಉಳಿದಿದೆ. ಆ ಬೆಳಿಗ್ಗೆ ಅವರ ಕವಿತಾ ವಾಚನ ಕೇಳಿದ ನಮಗೆಲ್ಲಾ ಕಣ್ಣೀರು. ನಮ್ಮ ನಮ್ಮ ದರ್ಜೆಗಳಿಗೆ ಹೋಗುತ್ತಾ ಕಣ್ಣು ಒರಸುತ್ತಾ ಒಬ್ಬರನ್ನೊಬ್ಬರು ಮುಗ್ಧ ಭಾವನೆಯಿಂದ "ನೀನು ಯಾಕೆ ಅಳುತ್ತಿ?" ಎಂದು ವಿಚಾರಿಸಿ, "ಎಷ್ಟು ಒಳ್ಳೆ ಕವಿತೆ! ಎಷ್ಟು ಚೆನ್ನಾಗಿ ಓದಿದರು!" ಎಂಬ ನಮ್ಮ ಮಾತುಗಳು ಇನ್ನೂ ಕೇಳುತ್ತಿವೆ!

ಕವಿತೆ ಬರೆಯುವುದರಲ್ಲಿ ಪಾಂಡಿತ್ಯವಿದೆ, ನಿಜ. ಅದನ್ನು ರಸವತ್ತಾಗಿ ಓದಿ, ಕೇಳುವವರ ಮನಸ್ಸನ್ನು ಕದಡಿಸುವುದರಲ್ಲೂ ಜಾಣತನ ಬೇಕು. ಈ ವಿಶಿಷ್ಟ ಗುಣ ವಿ.ಸೀ. ಯವರಲ್ಲಿ ಇತ್ತು.

ಅನಂತರ ಈ ಮಹನೀಯರನ್ನು ಭೇಟಿಯಾದದ್ದು, ನಾನು ಪಡುಕೋಣೆ ರಮಾನಂದರಾಯರ ಸೊಸೆಯಾಗಿ ಮನೆ ಮಾಡಿದ ನಂತರ. ಮುಂಬಾಯಿಯಲ್ಲಿ, ನಮ್ಮ ಮತ್ತು ನಮ್ಮ ಇಬ್ಬರು ಮಕ್ಕಳ ವಸತಿ ಇತ್ತು. ಮನೆ ಚಿಕ್ಕದು. ಆದರೆ ತುಂಬಾ ಅತಿಥಿಗಳು

ಬಂದು ಹೋಗುತ್ತಿದ್ದರು. ೧೯೬೩ರಲ್ಲಿ ವಿ.ಸೀ.ಯವರೂ ನಮ್ಮ ಅತಿಥಿಯಾಗಿ ಬಂದರು. ವಿ.ಸೀ.ಯವರ ಶುಭ್ರವಾದ ಬಿಳಿ ರುಮಾಲನ್ನು ನೋಡಿದೊಡನೆ "ಓ, ಇವರೇ ಮದಲಿಂಗನ ಕಣಿವೆ ಓದಿದವರು" ಎಂದು ನೆನಪಾಯ್ತು. ಅದೇ ಮಹನೀಯರು ನಮ್ಮಲ್ಲಿ ಅತಿಥಿಯಾಗಿ ಬಂದಿದ್ದಾರೆಂದೂ ಹೆಮ್ಮೆ ಪಟ್ಟೆ. ಅವರು ನಮ್ಮ ಆತಿಥ್ಯದಲ್ಲಿ ಹೆಚ್ಚೇನೂ ಅಪೇಕ್ಷಿಸದೆ ನಾನು ಬಡಿಸಿದ ಸಾಧಾರಣ ಮಟ್ಟದ ಊಟ ತಿಂಡಿಗಳನ್ನು ತುಂಬ ಪ್ರೀತಿಯಿಂದ ಉಂಡರು. ನಮ್ಮ ಜೊತೆ ಕುಳಿತು ಬಹಳ ವಿಶ್ವಾಸದಿಂದ ಮಾತು ಕಥೆ ಆಡಿದರು. ಎರಡು ದಿವಸ ಇದ್ದು, ನಮ್ಮಲ್ಲಿ ಅವರು ತೋರಿಸಿದ ಆ ವಾತ್ಸಲ್ಯವನ್ನು ನಾನು ಎಂದೂ ಮರೆಯಲಾರೆ. ಯಾವ ಪರಿಸ್ಥಿತಿಗೂ ಹೊಂದಿಕೊಂಡು, ತಾನೂ ಆನಂದಿಸಿ, ಬೇರೆಯವರಿಗೂ ತೃಪ್ತಿ, ಆನಂದಗಳನ್ನು ಕೊಡುವ ಉದಾತ್ತ ಭಾವನೆ, ಅಪರೂಪದ ಗುಣ ಅವರಲ್ಲಿತ್ತು.

ವಿ.ಸೀ. ಯವರು ಮತ್ತೊಮ್ಮೆ ೧೯೭೨ರಲ್ಲಿ ನಮ್ಮ ಮದರಾಸಿನ ಮನೆಗೆ ಬಂದಿದ್ದರು. ಅವರಿಗೆ ನಮ್ಮ ಕುಟುಂಬದ ಮೇಲಿರುವ ಪ್ರೀತಿ ಆದರಗಳೋ, ಅಥವಾ ನಮಗೆ ಅವರ ಕುರಿತ ಭಕ್ತಿ ಮರ್ಯಾದೆಗಳೋ, ಹಾಗೆ ನಮ್ಮನ್ನು ಆಗಾಗ್ಗೆ ಒಟ್ಟು ಗೂಡಿಸುತ್ತಿದ್ದುವು. ನಮ್ಮಲ್ಲಿ ಅವರು ಬಂದಾಗಲೆಲ್ಲಾ ನನಗಂತೂ ಇದೊಂದು ನಮ್ಮ ಪೂರ್ವ ಜನ್ಮದ ಪುಣ್ಯವೆಂದು ತಿಳಿಯುತ್ತಿದ್ದೆ.

ನನಗೆ ಬಣ್ಣದ ಚಿತ್ರಗಳನ್ನು ಬರೆಯುವ ಹುಚ್ಚು ಇತ್ತು. ನಾನು ಮಾಡಿದ್ದ ಒಂದು ಚಿತ್ರವನ್ನು ನೋಡಿ "ಇದರ ರೇಖೆಗಳು ಸಮತೋಲಕ್ಕೆ ಬಂದಿಲ್ಲ. ಬಣ್ಣಗಳೂ ಚೆನ್ನಾಗಿ ಸೇರಿ ಬಂದಿಲ್ಲ" ಎಂದು ವಿ.ಸೀ.ಯವರು ನಿರ್ದಾಕ್ಷಿಣ್ಯವಾಗಿ ವಿಮರ್ಶಿಸಿದರು. ಇದನ್ನು ಕೇಳಿದೊಡನೆ "ನಾನೊಬ್ಬ ಉತ್ತಮ ಚಿತ್ರಗಾರಳು" ಎಂಬ ನನ್ನ ಅಹಂಭಾವ ಇಳಿಯಿತು. "ಯಾಕೆ ಹಾಗೆ ಹೇಳಿದಿರಿ? ದಯವಿಟ್ಟು ವಿಶದವಾಗಿ ತಿಳಿಸಿ" ಎಂದು ಅವರನ್ನು ಕೇಳಿಕೊಂಡೆ. ಅವರನ್ನು ಬರಿಯ ಬರಹಗಾರರೆಂದೇ ನಾನು ತಿಳಿದುಕೊಂಡಿದ್ದೆ. ಆದರೆ ನನ್ನ ಪ್ರಶ್ನೆಗೆ ಉತ್ತರವಾಗಿ, ನನ್ನ ಚಿತ್ರದ ಕೊರತೆಗಳನ್ನು ಸರಳವಾದ ಮಾತುಗಳಲ್ಲಿ ಅವರು ವಿವರಿಸಿದಾಗ, ನನ್ನ ತಪ್ಪು ಅರಿವಾಯಿತು. ಇಷ್ಟು ಸರಳವಾಗಿ ಕಾಣುವ ಈ ಮಹನೀಯರ ಬುದ್ಧಿ ಕೌಶಲ್ಯ ಮತ್ತು ಸೌಂದರ್ಯ ಪ್ರಜ್ಞೆ ಎಷ್ಟು ಆಳವಾಗಿದೆ ಎಂದು ಮನದಟ್ಟಾಗಿ, ಅವರ ಬಗೆಗೆ ಅಭಿಮಾನ ಪಟ್ಟೆ. "ಯಾವ ಸಂದರ್ಭದಲ್ಲೂ ಸಮತೋಲ ಮನಸ್ಸು ಇರಬೇಕು" ಎಂದು ಬಹಳ ಬಾರಿ ಕೇಳುತ್ತಿರುತ್ತೇವೆ. ಅಂಥ ಸಮತೂಕದ ಮನಸ್ಸು ಇರುವ ವ್ಯಕ್ತಿತ್ವವನ್ನು ಶ್ರೀ ವಿ. ಸೀ. ಯವರಲ್ಲಿ ನಾನು ಮೊದಲ ಬಾರಿ ಕಂಡೆ. ಮಿತ ಮಾತುಗಾರರೂ ಮೃದು ಸ್ವಭಾವದವರೂ ಆದ ಶ್ರೀ ವಿ. ಸೀತಾರಾಮಯ್ಯನವರಲ್ಲಿ ಎಂತಹ ಪರಿಸ್ಥಿತಿಗಳು ಬಂದರೂ ಅದನ್ನು ಸಮತೋಲ ಮನಸ್ಸಿನಿಂದ ಎದುರಿಸಬಲ್ಲ ಸತ್ತ್ವ, ಶಕ್ತಿ ಇದ್ದುವು.

ಆ ಶುಭ್ರ ಶ್ವೇತ ರುಮಾಲು ಮುಚ್ಚಿದ್ದ ಅವರ ತಲೆಯಲ್ಲಿ ಅಡಗಿದ್ದ ಅಸಾಧಾರಣ ಬುದ್ಧಿಶಕ್ತಿಗೂ ಅವರ ಹೃದಯದಲ್ಲಿ ಮನೆಮಾಡಿಕೊಂಡಿದ್ದ ಅಪಾರ ಪ್ರೀತಿ ವಿಶ್ವಾಸಗಳಿಗೂ ನನ್ನ ನಮನ.

ಶ್ರೀಮತಿ ವೃಂದಾ ಪಡುಕೋಣೆ

IV

"ಸಾಹಿತಿ" ವಿ.ಸೀ. ಯವರ ಪರಿಚಯ ನನಗೆ ಹೆಚ್ಚಿಲ್ಲ. ಆದರೆ, 'ಸಾಹಿತ್ಯ ಪ್ರೀತಿ'ಯಿಂದಾಗಿಯೇ ಅವರಿಗೂ ನನ್ನ ತವರು ಮನೆಯವರಿಗೂ ಅಂದರೆ, ಶ್ರೀ ಪಡುಕೋಣೆ ರಮಾನಂದ – ಸೀತಾದೇವಿಯವರಿಗೂ, "ಅಂಟಿದ ನಂಟಿನ ಕೊನೆ ಬಲ್ಲವರಾರು?" ಎಂಬುದು ಮಾತ್ರ ಹೇಳಲು ಅಸಾಧ್ಯ!

ವಿ.ಸೀ. ಯವರ ಎರಡು ಕವಿತೆಗಳನ್ನು ನಾನು ಅನೇಕ ಸಲ ಹಾಡಿದ್ದೇನೆ. ನಾನು ಕಲಿಯುತ್ತಿದ್ದ ಪುತ್ತೂರಿನ ಶಾಲೆಯಲ್ಲಿ 'ಶಾಲಾ ಇನ್ಸ್‌ಪೆಕ್ಷನ್' ಬಂದಾಗ, ನಮ್ಮ ವರ್ಗದ ಉಪಾಧ್ಯಾಯಿನಿ, ನನ್ನಿಂದ ವಿ.ಸೀ. ಯವರ "ಎಮ್ಮೆ ಮನೆಯಂಗಳದಿ" ಕವಿತೆಯನ್ನು ಹಾಡಿಸುತ್ತಿದ್ದರು. ಆಗ, ಬಂದ ಆ ಶಾಲಾ ಇನ್ಸ್‌ಪೆಕ್ಟರ್ ಅಲ್ಲದೆ ಮಿಕ್ಕ ಉಪಾಧ್ಯಾಯಿನಿಯರ ಕಣ್ಣುಗಳೂ ತೇವಗೊಳ್ಳುತ್ತಿದ್ದುದನ್ನು ನಾನು ಈಗಲೂ ಮರೆಯಲಾರೆ. ಅನಂತರ, ಪುಣೆ, ಮುಂಬೈಗಳಲ್ಲಿ ಕನ್ನಡ ಹಾಡುಗಳನ್ನು ಹಾಡುವ ನನ್ನ ಕಾರ್ಯಕ್ರಮವಿದ್ದಾಗ, ಆ ಹಾಡನ್ನು ಹಾಡಿ ಮುಗಿಸಿದಾಗ, ಚಪ್ಪಾಳೆಯ ಗದ್ದಲವಿರದೆ ಮೌನದ ವಾತಾವರಣವಿರುತ್ತಿತ್ತು. ಅಷ್ಟು ಹೃದಯ ಸ್ಪರ್ಶಿಯಾಗಿದೆ ಆ ಕವಿತೆ. ಕಾರ್ಯಕ್ರಮ ಮುಕ್ತಾಯಗೊಳಿಸುವಾಗ, ಈ ಕಡೆಯ ರೂಢಿಯಂತೆ, 'ಭೈರವಿ' ರಾಗದಲ್ಲಿ ವಿ.ಸೀ. ಯವರ "ಕಾದಿರುವಳು ಶಬರಿ" ಹಾಡುವ ರೂಢಿ ಇಟ್ಟುಕೊಂಡಿದ್ದೆ. ಇಷ್ಟೇ ನನಗೆ ಅವರ ಸಾಹಿತ್ಯದ ಪರಿಚಯ.

ಎಂದೆಂದೂ ಶುಭ್ರವಾದ ಅಚ್ಚುಕಟ್ಟಿನ ಉಡುಗೆ ತೊಡುಗೆ, ಅವರಿಗೆಂದೇ ಹೇಳಿ ಮಾಡಿಸಿದಂತಿದ್ದ "ಮೈಸೂರು ರುಮಾಲು", ಎಳೆ ನಗು ಸೂಸುವ ಸೌಮ್ಯವಾದ ಮುಖಚರ್ಯೆ, ಎಲ್ಲಕ್ಕೂ ಮಿಕ್ಕಿ, ಕೇಳುವವರ ಮನಸ್ಸನ್ನು ಗೆಲ್ಲುವ ಅವರ ಮಾತಿನ ಓಘ: ಇದು ಅವರ ವ್ಯಕ್ತಿತ್ವ, ನಾನು ಕಂಡಂತೆ.

ನನ್ನ ಮದುವೆ ಆಗಿ ಮಹಾರಾಷ್ಟ್ರಕ್ಕೆ ಬಂದಾಗ, ವಿ.ಸೀ. ಯವರು ಈ ಕಡೆ ಬಂದಾಗಲೆಲ್ಲಾ "ರಮಾನಂದರ ಮಗಳನ್ನು ನೋಡಿ ಹೋಗೋಣ" ಎಂದು, ಸ್ವಲ್ಪ ಸಮಯಕ್ಕಾದರೂ ಬಂದು, ನಮ್ಮೆಲ್ಲರ ಕ್ಷೇಮ ಸಮಾಚಾರ ತಿಳಿದುಕೊಂಡು ಹೋಗುತ್ತಿದ್ದರು. ಹಾಗೆ ಬಂದು ಹೋಗುವಾಗೆಲ್ಲ "ಚಿಕ್ಕಪ್ಪ ಬಂದು ಹೋದರೀಗ" ಎಂಬ ಭಾವನೆಯನ್ನು ಹಿಂದೆ ಬಿಟ್ಟು ಹೋಗುತ್ತಿದ್ದರು.

ಒಮ್ಮೆ ನಮ್ಮ ತಂದೆ ವಿ.ಸೀ. ಯವರಲ್ಲಿಂದ ಬಂದೊಡನೆ, ಅವರ ಟೀ ಸೇವನೆಯ ವಿಷಯ ವರ್ಣಿಸುತ್ತಿದ್ದಾಗ ನನಗೂ ಅದರ ರುಚಿ ನೋಡುವ ಆಸೆಯಾಯಿತು! ಆಗ ನನಗೆ ೧೫–೧೬ ವಯಸ್ಸಿರಬಹುದೇನೋ. ಒಮ್ಮೆ ಅವರೊಡನೆ ನಾನು ವಿ.ಸೀ. ಯವರಲ್ಲಿಗೆ ಹೋದೆ. ಸುಂದರವಾದ ಕಪ್ಪುಗಳಲ್ಲಿ ಟೀ ತಂದಿಟ್ಟಿದ್ದರು. "ಕವಿ" ವಿ.ಸೀ ಅದರ ವರ್ಣನೆ ಮಾಡುತ್ತಿದ್ದರು. "ಹೊಸ ಜೇನಿನಂತಹ ಅದರ ಬಣ್ಣ, ವರ್ಣಿಸಲಾಗದಂತಹ ಅದರ ಪರಿಮಳ, ಹೆಚ್ಚೂ ಅಲ್ಲದ ಕಡಿಮೆಯೂ ಇರದ ಅದರ ಲಘುತ್ವ" (lightness) ಇತ್ಯಾದಿ ಇತ್ಯಾದಿ. ಹೀಗೆ ಹೇಳುತ್ತಾ, ಅವರೂ ನನ್ನ ತಂದೆಯವರೂ ಟೀಯನ್ನು ನಿಧಾನವಾಗಿ, ರುಚಿಪೂರ್ವಕವಾಗಿ ಸೇವಿಸುತ್ತಿದ್ದರು. ನಾನು ಆತುರದಿಂದ ಒಂದು ಗುಟುಕು

ಕುಡಿದೆ. ಆಗ ಮಾತ್ರ, 'ಕವಿ' ಆಗಿರದ ನನಗೆ, 'ಅಯ್ಯೋ, ಹಾಲು ಸಕ್ಕರೆ ಬೆರೆಸದೇ ಇದ್ದ ಈ "ಕಷಾಯ" not my cup of tea' ಅನ್ನಿಸಿತ್ತು.

ಪ್ರತಿಯೊಂದರಲ್ಲೂ ಸೌಂದರ್ಯವನ್ನೇ ಕಾಣುವ, ಪ್ರತಿಯೊಬ್ಬರಲ್ಲೂ ಸದ್ಗುಣಗಳನ್ನೇ ನೋಡುವ ಅಪರೂಪದ ಗುಣ ವಿ.ಸೀ.ಯವರಲ್ಲಿತ್ತು. "ವಿ.ಸೀ.ಯವರನ್ನುವಂತೆ, ನಾವು ಮನುಷ್ಯರಲ್ಲಿ ಸಾಧ್ಯವಾದಷ್ಟು ಸದ್ಗುಣಗಳನ್ನು ನೋಡುವ ಅಭ್ಯಾಸ ಮಾಡಿಕೊಂಡರೆ, ಜೀವನದ ಪಥದಲ್ಲಿ ಬರುವ ತೊಡಕುಗಳನ್ನು ಎದುರಿಸಲು ಸುಲಭವಾಗುತ್ತದೆ" ಎಂದು ನಮ್ಮಮ್ಮ ಯಾವಾಗಲೂ ವ್ಯಾಖ್ಯಾನಿಸಿಕೊಳ್ಳುತ್ತಿದ್ದರು.

ಇಂಥ ಶ್ರೇಷ್ಠ ವ್ಯಕ್ತಿಯ ನೆನಪು ನಮ್ಮಲ್ಲಿ ಸದಾ ಕಾಲಕ್ಕೂ ಹಸಿರಾಗಿರುತ್ತದೆ.

ಜಯವಂತಿ ದಿ. ಹಿರೇಬೆಟ್

"ಈ ಸಣ್ಣ ಪುಸ್ತಕದಲ್ಲಿನ ಐದು ಕಥೆಗಳೂ ಮೂಲ ಮಹಾಭಾರತದಿಂದ ಎತ್ತಿಕೊಂಡವು: — ಆ ಕಥೆಯಲ್ಲಿ ನಡುನಡುವೆ ಬರುವ ಉಪಕಥೆಗಳು. ನಮ್ಮ ಸಂಸ್ಕೃತಿ ಮೊದಲಿನಿಂದಲೂ ಯಾವ ದಾರ್ಢ್ಯದಲ್ಲಿ ನಡೆದಿದೆ, ಯಾವ ಪಕ್ಷಪಾತಕ್ಕೆ ಬೆಲೆ ಕೊಟ್ಟಿದೆ ಎಂಬುದನ್ನು ತೋರಿಸುವುವು. ಇವೊತ್ತಿಗೂ ಹೊಸತೆನ್ನಬಹುದಾದ ರೀತಿ, ರಚನೆ ಅಲ್ಲಿ ಪ್ರತಿಫಲಿಸುತ್ತವೆ. ಕಥೆಗಳು ಹಿಂದಿನವಾದರೇನು? ಅವುಗಳಲ್ಲಿ ಎಲ್ಲ ಕಾಲದ ಮಾನವ ಜೀವನದ ಸತ್ಯದರ್ಶನ ಉಂಟು. ಎದೆಯ ಆಳದಲ್ಲಿ ಕುಳಿತು ಮನುಷ್ಯನನ್ನು ಶುಚಿಗೂ ಧೃತಿಗೂ ಧರ್ಮಕ್ಕೂ ನಡಸುವ ಪ್ರಭಾವಗಳ ಪರಿಚಯ ಅಲ್ಲಿ ದೊರಕುತ್ತದೆ. ಆ ಕಾಲಕ್ಕೂ ಈ ಕಾಲಕ್ಕೂ ಹೊರ ವ್ಯತ್ಯಾಸ ಎಷ್ಟೇ ಇದ್ದರೂ ಈ ಜನವೇ ಹಿಂದೆ ಬದುಕಿದ ಬಾಳು ಅದು; ಅದರ ಹದ ಇಂದಿಗೂ ಸ್ಫೂರ್ತಿದಾಯಕವೇ. ಆದುದರಿಂದ ಅದು ಹಳತಲ್ಲ. ಇಂದಿನದು ಮಾತ್ರ ಹೊಸತು, ಹಿಂದಿನ ಕಾಲದ್ದು ಹಳತು ಹಳಸಲು ಎಂಬ ಮಾತು ಅಸತ್ಯ. ಹಳತು ಹೊಸತು ಎಂಬ ಮಾತು ಹೆಚ್ಚಾಗಿ ಜೀವಗುಣಕ್ಕೆ ಸಂಬಂಧಿಸಿದ್ದು, ಬರಿಯ ಕಾಲಮಾನಕ್ಕಲ್ಲ. ಜೀವಂತ ಪ್ರಭಾವ ಎಲ್ಲೆಲ್ಲಿ ಹರಿಯುವುದೋ ಹೊಮ್ಮುವುದೋ ಅಲ್ಲೆಲ್ಲ ಸನಾತನವಾದ, ಅಮೃತವಾದ ಚೈತನ್ಯವಿರುತ್ತದೆ. ಅಂಥ ಶಕ್ತಿ ಈ ಕಥೆಗಳಲ್ಲಿದೆ. ಸ್ವಲ್ಪ ವಯಸ್ಸಾದ ನಮ್ಮ ಜನಕ್ಕೆ ಈ ಪುರಾಣ ಕಥೆಗಳು ಸುಮಾರು ಪರಿಚಿತವೆಂದರೂ ಈ ಕಾಲದ ಸಣ್ಣ ವಯಸ್ಸಿನವರಿಗೆ ಪರಿಚಿತವಲ್ಲ. ಅವರ ತಿಳಿವಿಗೆ ಇಂಥವು ಬರಬೇಕೆಂಬ ಉದ್ದೇಶದಿಂದ ಇವನ್ನು ಇಲ್ಲಿ ಮಾಲೆ ಮಾಡಿದೆ. ಅಲ್ಲದೆ ಮಹಾಕೃತಿಗಳನ್ನು ಪ್ರತಿಯೊಂದು ಕಾಲದವರೂ ತಮ್ಮ ಕಾಲಕ್ಕೆ ಒಪ್ಪುವಂತೆ ಅರ್ಥಮಾಡಿಕೊಳ್ಳುವುದು ಶಕ್ಯ. ಆದ್ದರಿಂದ ನಮ್ಮ ಕಾಲಕ್ಕೆ ಅವು ಹೇಗೆ ಕಾಣುತ್ತವೆ ಎಂಬುದನ್ನು ಇವೊತ್ತಿನವರಿಗೆ ಹೇಳುವ ಕಾರ್ಯ ಅನಾವಶ್ಯಕವಲ್ಲ. ಇದು ಹಿಂದಿನ ಕಾಲಕ್ಕೆ ಕಾಣಿಕೆ; ಇಂದಿನ ಕಾಲದ ಪ್ರಯೋಜನ."

ವಿ.ಸೀ.

'ಮಹಾಭಾರತದ ಐವರು ಮಾನ್ಯರು' ಪು. ೧೨೬

ನೆನಪಿನ ಸುರುಳಿಯಿಂದ

ಬಿ. ಆರ್. ವಾಡಪ್ಪಿ

ನಾನು ವಿ.ಸೀ. ಯವರನ್ನು ಮೊದಲು ಕಂಡದ್ದು ೧೯೫೦ರಲ್ಲಿ ಎಂದು ನೆನಪು. 'ವಿ.ಸೀ. ಅವರು ಧಾರವಾಡಕ್ಕೆ ಬರುವವರಿದ್ದಾರೆ' ಎಂದು ಸುದ್ದಿ ಕೇಳಿದ್ದ ನಾನು ಅಂದು ಸಾಯಂಕಾಲ ಮನೋಹರ ಗ್ರಂಥಭಾಂಡಾರಕ್ಕೆ ಕಾಲಿಟ್ಟಾಗ – ಅಲ್ಲಿ ವಿ.ಸೀ. ಯವರು ಕುಳಿತಿದ್ದರು! ದ.ಬಾ.ಕು. ಸಹಜ ನಗೆಯೊಂದಿಗೆ 'ಇವರು ಬಿ. ಆರ್. ವಾಡಪ್ಪಿ, ಶಿಕ್ಷಕರು ಹಾಗೂ ಸಾಹಿತಿಗಳು' ಎಂದಾಗ ನಾನು ನಮಸ್ಕಾರ ಹೇಳಿ ಎದುರಿನಲ್ಲಿ ಕುಳಿತುಕೊಂಡೆ. ವಿ.ಸೀ. ಅವರು ಮುಗುಳು ನಗೆ ನಕ್ಕು 'ನಿಮ್ಮೆರಡು ಲೇಖನ ನೋಡಿದ್ದೇನೆ,' ಎಂದರು. ಆಗ ನನಗಾದ ಸಂತೋಷ ಅಷ್ಟಿಷ್ಟಲ್ಲ! ವಿ.ಸೀ. ಅಂತಹ ದೊಡ್ಡ ಸಾಹಿತಿಗಳು ನನ್ನ ಲೇಖನ ಓದಿದ್ದಾರೆಂಬುದೇನು ಸಾಮಾನ್ಯವಲ್ಲ ಎಂಬುವ ಹೆಮ್ಮೆ ನನಗಾಯಿತು! ಅಷ್ಟರಲ್ಲಿಯೇ ಚಹ ಬಂದಿತು. ವಿ.ಸೀ. ಅವರು ತಮ್ಮ ಕರವಸ್ತ್ರ ತೆಗೆದು ಚಹದ ಕಪ್ಪಿನ ಅಂಚನ್ನು ಚೆನ್ನಾಗಿ ಒರೆಸಿ 'ಟೀ' ಕುಡಿಯಹತ್ತಿದರು. ಆಗ ಅವರು ಕುಳಿತ ಸಹಜ ರೀತಿ, ಆ ಕನ್ನಡಕದ ಹಿಂದಿನ ಅವರ ನೋಟ, ಶುಭ್ರ ಮೈಸೂರ ರುಮಾಲು, ಕ್ಲೋಜ ಕಾಲರ ಕೋಟು – ಎಲ್ಲಾ ಇಂದಿಗೂ ನನ್ನ ಮನದಲ್ಲಿ ಹಸಿರು ಹಸಿರಾಗಿಯೇ ಉಳಿದಿವೆ. ವಿ.ಸೀ. ಸಜ್ಜನಿಕೆಯ ಸಾಕಾರ ಮೂರ್ತಿ!

ವಿ.ಸೀ.ಯವರ ಭಾಷಣ ಅಂದು ವಿದ್ಯಾವರ್ಧಕ ಸಂಘದಲ್ಲಾಯಿತು. ಸಭೆ ಕಿಕ್ಕಿರಿದು ತುಂಬಿತ್ತು. ಯಾವ ವಿಷಯವನ್ನೆತ್ತಿಕೊಂಡು ಮಾತನಾಡಿದರೊ ನನಗೆ ನೆನಪಿಲ್ಲ. ಆದರೆ ಅದು ಆಧುನಿಕ ಸಾಹಿತ್ಯದ ಬೆಳವಣಿಗೆ ಕುರಿತಾಗಿ ಇದ್ದಿತು ಎಂಬುದು ಮಾತ್ರ ನಿಶ್ಚಿತ! ಮರುದಿನ ಕರ್ನಾಟಕ ಕಾಲೇಜಿನಲ್ಲಿ ಅರ್ಥಶಾಸ್ತ್ರವನ್ನು ಕುರಿತು ಇಂಗ್ಲಿಷಿನಲ್ಲಿ ಭಾಷಣ ಮಾಡಿದರು. ಜನ ಮೆಚ್ಚಿಕೊಂಡರಲ್ಲದೆ ಅವರ ಸರಳ ಸಜ್ಜನಿಕೆಯನ್ನು ಕೊಂಡಾಡಿದರು.

ನನ್ನ ಸ್ನೇಹಿತರಾದ ಶ್ರೀ ವ್ಹಿ. ಕೆ. ಹೋಳಿಕಟ್ಟಿಯವರು ಕನ್ನಡ ಪಠ್ಯ ಪುಸ್ತಕ ಸಂಪಾದಿಸಬೇಕಾಗಿತ್ತಂತೆ. ಅವರು ವಿ.ಸೀ. ಅವರಿಗೆ ಒಂದು ಪ್ರಬಂಧ ಕೊಡಲು ಕೇಳಿದಾಗ, 'ಇಲ್ಲಿಯವರೆಗೇಕೆ ಬಂದಿರಿ? ಬಿ. ಆರ್. ವಾಡಪ್ಪಿಯವರ ಪ್ರಬಂಧ ಒಂದನ್ನು ತೆಗೆದು ಕೊಳ್ಳಿ' ಎಂದು ನಕ್ಕರಂತೆ. ಈ ಮಾತನ್ನು ಶ್ರೀ ಹೋಳಿಕಟ್ಟಿ ಅವರು ಹೇಳಿ ನನ್ನ ಪ್ರಬಂಧ 'ತಾರಕಂಬಗಳು' ಎಂಬುದನ್ನು ಪಠ್ಯಕ್ಕೆ ಆಯ್ದುಕೊಂಡರು. ಹೀಗಿದೆ ವಿ.ಸೀ. ಅವರ

ಮನೋಧರ್ಮ! 'ಮಿಂಚಿನ ಬಳ್ಳಿ'ಯ ಸಂಪಾದಕರಾದ ಬುರ್ಲಿ ಬಿಂದು ಮಾಧವರು ನನ್ನ ಪ್ರಬಂಧ ಸಂಕಲನ 'ಸುಳಿಗಾಳಿ' ಎಂಬುದನ್ನು ತಮ್ಮ ಮಾಲೆಯಲ್ಲಿ ಪ್ರಕಟಿಸಿದರು. ಆ ಸಂಕಲನಕ್ಕೆ ವಿ.ಸೀ. ಅವರು ಮುನ್ನುಡಿ ಬರೆದು ಉಪಕರಿಸಿದ್ದಾರೆ.

ಮುನ್ನುಡಿಯಲ್ಲಿ ಅವರು ಹೇಳಿರುವ ಈ ಮಾತುಗಳು ಪ್ರಬಂಧ ಸಾಹಿತ್ಯದ ಜೀವಾಳದಂತಿವೆ: "ಭಾವಗೀತೆಯಲ್ಲಿನಷ್ಟು – ಸಣ್ಣಕತೆಯಲ್ಲಿನಷ್ಟು ಏಕಾಗ್ರತೆ, ಗಾಢತೆ, ಹರಟೆಯಲ್ಲಿ ಇಲ್ಲದಿದ್ದರೂ – ಇದ್ದರೆ ಪೀಡೆಯಾಗಬಲ್ಲದು ಕೂಡ – ಅಲ್ಲಿ ಮನಸ್ಸಿನ ಒಂದು ಹದದ ವಿಲಾಸ, ಆ ವಿಷಯವನ್ನು ಕುರಿತಾಗಿ, ಹಗುರಾಗಿ ಆಡುತ್ತಿರುತ್ತದೆ. ಆ ಆಟದಲ್ಲಿ ಅಲ್ಲಿನ ಏಕತೆಯನ್ನೂ ಏಕಕೇಂದ್ರತೆಯನ್ನೂ ಅರಿಯಬೇಕೇ ಹೊರತು, ಬೆರಳಿಟ್ಟು ಅದನ್ನು ತೋರಿಸುವದು ಕಷ್ಟ. ಯಾವುದೇ ವಿಷಯವನ್ನು ಕುರಿತು ಮನಸ್ಸು ಆಡತೊಡಗುತ್ತದೆ. ಅದರ ಓಟ ಹೀಗೇ, ಇಷ್ಟೇ ಎಂದು ಹೇಳುವದು ಸುಲಭವಲ್ಲ. ಎಳೆಗಾಳಿಯ ಜಾಡನ್ನು ಗುರುತಿಸುವದು ಹೇಗೆ?" ಎಂದು ಹೇಳುತ್ತ, "ಹರಟೆಯಲ್ಲಿ ನಗೆಗೂ ಮೃದು ಹಾಸ್ಯಕ್ಕೂ ಬೆಲೆ ಹೆಚ್ಚು. ಹಾಲಿಗಿಂತ ಕೆನೆ, ಕೆನೆಗಿಂತ ಅದರ ಪರಿಮಳ, ಆ ಪರಿಮಳಕ್ಕಿಂತ ಸುಳಿಗಾಳಿಯಲ್ಲಿ ಆ ಪರಿಮಳದ ಚದುರ ಹರವು" ಎಂದು ಹೇಳಿರುವ ಮಾತುಗಳು ಪ್ರಬಂಧ ಸಾಹಿತ್ಯದ ನೈಜ ಸ್ವರೂಪವನ್ನು ಗಾಢವಾಗಿ ಗುರುತಿಸಿದಂತಿದೆ.

ನಾನು ವಿ.ಸೀ. ಅವರನ್ನು ಬಹಳಷ್ಟು ಸಲ ಕಂಡಿದ್ದೇನೆ. ಆದರೆ 'ಜಯಂತಿ' ಪತ್ರಿಕೆಯ ಕಚೇರಿಯಲ್ಲಿ ಕವಿ ಕೃಷ್ಣಶರ್ಮ ಬೆಟಗೇರಿಯವರೊಡನೆ ಹರಟೆ ಹೊಡೆಯುತ್ತಿದ್ದಾಗ, ಅವರ ಜೊತೆ ಜೊತೆಯಾಗಿ ಮಾತನಾಡಿ ನಮಸ್ಕರಿಸಿ ಕೈಕುಲುಕಿ ನಿಂತುಕೊಂಡ ವಿ.ಸೀ. ಅವರ ನಿಲುವು, ಮುಗುಳು ನಗೆ ಇನ್ನೂ ನನ್ನ ನೆನಪಿನ ಸುರುಳಿಯಲ್ಲಿ ಚಿರಂತನ ಹಸಿರು!

ನಡೆ ಮನವೆ ನಿನ್ನಷ್ಟಕ್ಕೆ ನೀನು

ಒಬ್ಬರಿಗೆ ನನ್ನ ಬಗೆಯೊಪ್ಪಲ್ಲ; ಕವಿತೆ ಇನ್ನೊಬ್ಬರಿಗೆ,
ಚಿಂತೆಯೇಕೆ? ಅವರನೊಪ್ಪಿಸಲು ನಾ ಬರೆದೆನೆ?
ಬಗೆಗೆ ಏನೊ ಚಪಲ; ಬೆರಳ್ಗೆ ಲೇಖನಿಗೆ ಬೇಸಾಯ.
ಇದ ಕೇಳಿ, ನೋಡಿ ನಗಬಹುದು ಅವರಿವರು
ಯಾರಿಗಾದರೂ ಒಪ್ಪಿತೇ, ಆಯಿತು; ಇಲ್ಲದಿರೆ ಬೇಡ.
ನನಗೆ ತಿಳಿದಂತೆ ತಾನೆ ಬರೆದೇನು, ಬದುಕೇನು ನಾನು?
ನುಡಿದೇನು, ನಡೆದು ಮುಗಿಸೇನು? ನನ್ನದದು ಅಷ್ಟೆ.
ಅವರವರ ಗರಿಮೆ ಹಿರಿಮೆ ಅವರವರವು.
ಚಿಂತನ ಸ್ವತಂತ್ರ; ಮಣಿತ ಮತ್ತಾರಿಗಿಲ್ಲ;
ಯಾರಿಗಾರೂ ಅಲ್ಲ.
ನಡೆ ಮನವೆ ನಿನ್ನಷ್ಟಕ್ಕೆ ನೀನು.

ವಿ.ಸೀ.

'ಹಗಲು-ಇರುಳು' ಪು. ೪೬

ಮಾನವತೆಯ ಮಂದಾರ

ಅಮೃತ ಸೋಮೇಶ್ವರ

ಬಿ.ಎಂ.ಶ್ರೀ. ಅವರ ಪ್ರಖ್ಯಾತ ಶಿಷ್ಯರಲ್ಲಿ ಒಬ್ಬರಾದ ಪ್ರೊ. ವಿ. ಸೀತಾರಾಮಯ್ಯನವರು ನಮ್ಮ ಸಂಸ್ಕೃತಿ ಸ್ತಂಭಗಳಲ್ಲಿ ಒಂದೆನಿಸಿದವರು. ಔದಾರ್ಯ, ಮಾಧುರ್ಯ, ಸೌಂದರ್ಯೋಪಾಸನೆ, ಶುಚಿ ರುಚಿ ಪ್ರೀತಿ, ಜೀವನ ಶ್ರದ್ಧೆ, ರಸಿಕತೆ, ಕಲಾಪ್ರೇಮ, ಅವಿಶ್ರಾಂತ ವ್ಯಾಸಂಗ, ಆಡಂಬರವಿಲ್ಲದ ಶಿಷ್ಟತೆ ಇತ್ಯಾದಿಗಳನ್ನು ಬದುಕಿನ ಭಾವಘಟಕ ಗಳನ್ನಾಗಿ ಮಾಡಿಕೊಂಡಿದ್ದ ವಿ.ಸೀ. "ನಮ್ಮ ನಯದ ಪತಾಕೆ" ಎಂಬ ಶ್ಲಾಘನೆಗೆ ಪಾತ್ರರಾದವರು. ಸಾಹಿತ್ಯ ಕಲಾ ಪ್ರಪಂಚದಲ್ಲಿ ಮೇರು ಪ್ರತಿಭೆಗಳು ದೊರಕಬಹುದು; ಆದರೆ ವಿ.ಸೀ.ಯವರಂಥ ಮಾನವೀಯ ಗುಣ ಸಂಪತ್ತಿನ ಸೌಜನ್ಯಮೂರ್ತಿಗಳು ಸಿಗುವುದು ಕಷ್ಟ.

ಹಿರಿಯ ಸಾಹಿತಿಗಳಲ್ಲಿ ವಿಶೇಷ ಗೌರವಾದರ ಹೊಂದಿದ್ದರೂ ನನ್ನ ಸಂಕೋಚ ಪ್ರಕೃತಿಯ ದೆಸೆಯಿಂದ, ವಿ.ಸೀ.ಯವರಂಥ ಹಿರಿಯರಲ್ಲಿ ವಿಶೇಷ ಪರಿಚಯ, ಸಂಪರ್ಕ ಬೆಳೆಯಿಸುವ ವಿಚಾರಕ್ಕೆ ನಾನು ಹೋಗಿರಲಿಲ್ಲ. ಕೆಲವೇ ಕೆಲವು ಸಂದರ್ಭಗಳಲ್ಲಿ ಅವರ ಭಾಷಣಗಳನ್ನು ಕೇಳಿ, "ಅಬ್ಬ, ಎಂಥ ಪ್ರಾಜ್ಞತೆ!" ಎಂದು ಬೆರಗಾಗಿದ್ದೆ. ಒಮ್ಮೆ ನನ್ನದೊಂದು ಪುಟ್ಟ ಪುಸ್ತಕವನ್ನು ಅವರಿಗೆ ಕಾಣಿಕೆಯಾಗಿ ಕೊಟ್ಟಿದ್ದೆ. ತುಂಬ ಪ್ರೀತಿಯಿಂದ ಬೆನ್ನು ತಟ್ಟಿದ್ದರು.

ಮಂಗಳೂರಲ್ಲಿ ಜರಗಿದ ಪಂಜೆ ಶತಮಾನೋತ್ಸವ ಹಾಗೂ ಸೇಡಿಯಾಪು ಕೃಷ್ಣಭಟ್ಟರ ಸನ್ಮಾನ ಉತ್ಸವಗಳಿಗೆ ವಿ.ಸೀ. ಅವರು ಬಂದಿದ್ದರು. ತುಂಬು ವಿಶ್ವಾಸ, ಅಭಿಮಾನ, ಉಲ್ಲಾಸ, ಉತ್ಸಾಹಗಳಿಂದ ಆ ಸಮಾರಂಭಗಳಲ್ಲಿ ಅವರು ಪಾಲುಗೊಂಡಿದ್ದರು. ದಕ್ಷಿಣ ಕನ್ನಡದ ಮೇಲೆ ವಿ.ಸೀ. ಅವರಿಗೆ ವಿಶೇಷ ಅಭಿಮಾನ. ಪಂಜೆ, ಗೋವಿಂದ ಪೈ, ಡಾ. ಶಿವರಾಮ ಕಾರಂತ, ಕಡೆಂಗೋಡ್ಲು ಶಂಕರಭಟ್ಟ, ಸೇಡಿಯಾಪು ಕೃಷ್ಣಭಟ್ಟ ಮೊದಲಾದ ಹಿರಿಯ ಸಾಹಿತಿಗಳ ಪ್ರಭಾವ ಹಾಗೂ ಸ್ನೇಹ ಅದಕ್ಕೆ ಮುಖ್ಯ ಕಾರಣವಿರಬೇಕು.

ವಿ.ಸೀ. ಅವರ ನಡವಳಿಕೆಯ ನಯ ನಾಜೂಕು, ಅವರ ಆದರಾತಿಥ್ಯ, ಬಹುಶ್ರುತತೆ ಇತ್ಯಾದಿಗಳ ಬಗೆಗೆ ಸಾಕಷ್ಟು ಕೇಳಿದ್ದೆ. ಕೆಲವು ನಿಮಿಷಗಳ ಮಟ್ಟಿಗಾದರೂ ಅವರ

ಮನೆಯಲ್ಲಿ ಒಮ್ಮೆ ಅವರನ್ನು ಸಂಧಿಸಬೇಕೆಂಬ ಆಸೆಯನ್ನು ಹೊತ್ತಿದ್ದೆ. ಒಮ್ಮೆ ಬೆಂಗಳೂರಿಗೆ ಹೋದವನು, ಮಿತ್ರ ಶ್ರೀ ಬಾಲಕೃಷ್ಣ ಶೆಟ್ಟಿ, ಪೊಳಲಿ ಅವರೊಂದಿಗೆ ವಿ.ಸೀ.ಯವರ ಮನೆಗೆ ಹೋಗುವ ಸದವಕಾಶವನ್ನು ಪಡೆದೆ. ವಿ.ಸೀ.ಯವರ ಪ್ರೀತಿಯ ಮಾತುಗಳನ್ನು, ರುಚಿಕಟ್ಟಾದ ಕಾಫಿಯ ಸವಿಯನ್ನು ಆಸ್ವಾದಿಸುವ ಭಾಗ್ಯ ಒದಗಿದುದನ್ನು ಮರೆಯುವಂತಿಲ್ಲ. ಅಂದು ಬಹಳ ಹೊತ್ತೇನೂ ನಾವು ಅಲ್ಲಿ ಇರಲಿಲ್ಲ. ವಿ.ಸೀ.ಯವರು ಆಡಿದ ಮಾತುಗಳು ಇಂದು ಖಚಿತವಾಗಿ ನೆನಪಿನಲ್ಲಿ ಇಲ್ಲವಾದರೂ ಸಾಹಿತ್ಯ ಮತ್ತು ಜೀವನಕ್ಕೆ ಸಂಬಂಧಪಟ್ಟ ಲೋಕಾಭಿರಾಮದ ಮಾತುಗಳನ್ನು ಆಡಿದ್ದರೆಂದು ಮಸುಕು ನೆನಪು. ಅವರ ಮನೆಯಿಂದ ಹೊರಟು ಬರುವಾಗ ದೊಡ್ಡ ಧನ್ಯತೆಯ ಭಾವವೊಂದು ಮನಸ್ಸಿನಲ್ಲಿ ನೆಗೆದು ನಿಂತಿತ್ತು.

ಮುಂದೊಂದು ದಿನ ವಿ.ಸೀ.ಯವರ ಪತ್ರವೊಂದು ನನಗೆ ಬಂದಾಗ ಆನಂದಾಶ್ಚರ್ಯಗಳಿಂದ ಓದಿ ನೋಡಿದೆ. ಐ.ಬಿ.ಎಚ್. ಸಂಸ್ಥೆಗಾಗಿ ಮುದ್ದಣ ಕವಿಯ ಬಗೆಗೆ ಒಂದು ಗ್ರಂಥವನ್ನು ಸಂಕಲಿಸಿ ಕೊಡುವ ಹೊಣೆಯನ್ನು ಅವರು ಹೊತ್ತಿದ್ದರು. ಮುದ್ದಣನ 'ಶ್ರೀ ರಾಮಪಟ್ಟಾಭಿಷೇಕ' ಕಾವ್ಯದ ಕುರಿತಾಗಿ ಒಂದು ವಿಮರ್ಶಾತ್ಮಕ ಲೇಖನವನ್ನು ನಾನು ಬರೆದುಕೊಡಬೇಕಾಗಿ ಅವರು ಅಪೇಕ್ಷಿಸಿದ್ದರು. ನನಗೆ ಸಂತೋಷವೂ ಭಯವೂ ಒಟ್ಟೊಟ್ಟಿಗೇ ಆದವು. ನಾನು ಆ ಕಾಲಕ್ಕೆ ಕೆಲವು ಕತೆ, ಕವಿತೆ, ಲೇಖನ ಇತ್ಯಾದಿಗಳನ್ನು ಬರೆದಿದ್ದರೂ ವಿಮರ್ಶೆಯ ಕ್ಷೇತ್ರಕ್ಕೆ ಕಾಲಿರಿಸಿರಲಿಲ್ಲ. ಆ ಲೇಖನದ ವಿಚಾರ ಕಾಲಬದ್ಧವಾಗಿತ್ತು. ಸಕಾಲಕ್ಕೆ ನನಗೆ ಬರೆಯಲಾಗಲಿಲ್ಲ. ನನ್ನ ಅಶಕ್ತತೆಯನ್ನು ವಿ.ಸೀ.ಯವರಿಗೆ ಬರೆದು ತಿಳಿಸಿ ಕ್ಷಮೆ ಕೋರಿದೆ. ಅವರು ಆಗ ಏನೆಂದುಕೊಂಡರೊ ತಿಳಿಯೆ.

ಆ ಮೇಲೆ ಒಂದು ಸಮಾರಂಭ ಸಂದರ್ಭದಲ್ಲಿ ವಿ.ಸೀ.ಯವರನ್ನು ಕಂಡು ನಮಸ್ಕಾರ ಸಲ್ಲಿಸಲು ಹೋದಾಗ "ಅದೇಕೆ ನೀವು ಲೇಖನ ಬರೆಯಲು ಹಿಂದೆಗೆದಿರಿ? ನೀವು ಬರೆಯಬಹುದಾಗಿತ್ತಲ್ಲ? ಏನು ತೊಂದರೆಯಾಯಿತು?" ಎಂದು ಕಕ್ಕುಲತೆಯಿಂದಲೇ ಕೇಳಿದರು. ನಾನು "ಸಾರಿ ಸರ್" ಎಂದು ಪೆಚ್ಚು ನಗೆ ಸೂಸಿದೆ. ಕಿರಿಯನಾಗಿದ್ದ ನನ್ನಲ್ಲಿ ವಿಶ್ವಾಸವಿರಿಸಿ ವಾತ್ಸಲ್ಯದಿಂದ ಲೇಖನ ಬರೆಯಲು ಅವರು ಕೋರಿದ್ದರೂ ಅವರಿಗೆ ಈ ವಿಚಾರದಲ್ಲಿ ಅವಿಧೇಯತೆ ತೋರಿಸಲು ಕಾರಣವಾದ ನನ್ನ ಅಧೈರ್ಯವನ್ನು ಶಪಿಸಿದೆ.

ವಿ.ಸೀ. ಯವರ ಸಾಹಿತ್ಯ ಕೃತಿಗಳ ಕುರಿತಾಗಿ ನಾನಿಲ್ಲಿ ವಿಶೇಷವಾಗಿ ಹೇಳಬೇಕಾಗಿಲ್ಲ. ಒಂದೇ ಮಾತಿನಲ್ಲಿ ಹೇಳುವುದಿದ್ದರೆ ಶುದ್ಧ ಸುಸಂಸ್ಕೃತ ಚೇತನವೊಂದರ ನಿರ್ಮಲ ಸಹವಾಸ ಸುಖವನ್ನು ಅವರ ಕೃತಿಗಳು ನೀಡುತ್ತವೆನ್ನಬಹುದು.

ಮಹಾನುಭಾವ

ಎಂ. ಎಸ್. ಅಪ್ಪ

ಮಂದಹಾಸ, ಮೈಸೂರು ರುಮಾಲು, ಮುಖದಲ್ಲಿ ಎದ್ದು ಕಾಣುವ ಕಪ್ಪಂಚಿನ ಕನ್ನಡಕ, ಮುಚ್ಚಿದೆಯ ನೀಳ ಕೋಟು, ಶುಭ್ರ ಶ್ವೇತ ನೀಳ್ಗಚ್ಚೆ, ಕೈಯಲ್ಲೊಂದು ಕರೀಕೊಡೆ, ಗಂಗಾ ಪ್ರವಾಹದಂತೆ ನಿರರ್ಗಳ ಒಲವಿನ ಬೆನ್ನುಡಿ, ಕಂಡ ಪ್ರತಿ ಅಪರಿಚಿತರಿಗೂ ಆಪ್ಯಾಯಮಾನವಾಗುವಂತಹ ಧೀಮಂತ ವ್ಯಕ್ತಿತ್ವ. ಮೋಹನದಾಸ ಕರಮಚಂದ ಗಾಂಧಿ ಜನಿಸಿದ ದಿನವೇ ಜನನ. ಆಚಾರ್ಯಪಟ್ಟ. ಅರ್ಥಶಾಸ್ತ್ರದಲ್ಲಿ ಪಾಂಡಿತ್ಯ. ಆ ಮೂಲಕ ಸಾಹಿತ್ಯ ಪ್ರಪಂಚಕ್ಕೆ ವಿಶಿಷ್ಟ ಕೊಡುಗೆ. ಅವಿನಾಭಾವ ಸಂಬಂಧಕ್ಕೆ ಅನ್ವರ್ಥನಾಮ, ಜೀವಂತಸಾಕ್ಷಿ. ಪ್ರಾಚಾರ್ಯ, ಕವಿ, ಪ್ರಬಂಧಕಾರ. ವಿಮರ್ಶಕ, ಬಹುಶ್ರುತ. ಸರಳ ಸಜ್ಜನಿಕೆಯ ಸಾಕಾರ ಮೂರ್ತಿ. ಕಡಲಿನ ಕರೆಗೆ ಕವಿಗೊಟ್ಟ ಕೂಸು. ನಿಡುಗಾಲದ ಗೆಳೆಯ. ೩೬ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷ, ಸರಸ್ವತೀ ಪ್ರಸನ್ನ, ಅನುಗ್ರಹೀತ. ಆಂಗ್ಲರಿಗೆ ಪಂಪ, ಪುರಂದರದಾಸ, ಡಿ. ವಿ. ಗುಂಡಪ್ಪ, ಕೆ. ವೆಂಕಟಪ್ಪ, ಸರ್. ಎಂ. ವಿಶ್ವೇಶ್ವರಯ್ಯ, ವಾಲ್ಮೀಕಿ ಇವರನ್ನು ಮನೋಜ್ಞವಾಗಿ ಚಿತ್ರಿಸಿ ಪರಿಚಯಿಸಿದಾತ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ. ಅರ್ಥಶಾಸ್ತ್ರದಲ್ಲಿ ಎಂ. ಎ ಪದವೀಧರ. ಬೆಂಗಳೂರು ಇಂಟರ್ ಮೀಡಿಯೆಟ್ ಹಾಗೂ ಸೆಂಟ್ರಲ್ ಕಾಲೇಜುಗಳಲ್ಲಿ ಕನ್ನಡ ಉಪಪ್ರಾಧ್ಯಾಪಕ. ೧೯೫೦ ರಿಂದ ನಿವೃತ್ತಿಯ ತನಕ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ :– ಇವರೇ ವಿ.ಸೀ. ಎಂದು ಖ್ಯಾತನಾಮರಾಗಿ ಎಂಭತ್ತ ನಾಲ್ಕು ಸಂವತ್ಸರಗಳ ತುಂಬು ಜೀವನ ನಡೆಸಿ ಬಾಳಿದ ಡಾ. ವಿ. ಸೀತಾರಾಮಯ್ಯ ಅವರು.

ಕಣ್ಣಾಸ್ಪತ್ರೆಯಿಂದ ಟಿ. ಸಿ. ಎಂ. ರಾಯನ್ ವೃತ್ತದೆಡೆಗೆ ಕ್ರಮಿಸಿದರೆ ಎಡಕ್ಕೆ ಅಪೆಕ್ಸ್ ಬ್ಯಾಂಕು, ಪ್ರಕಾಶ್ ಕೆಫೆ; ಬಲಕ್ಕೆ ಟಿ. ಪಿ. ಕೈಲಾಸಂ ಹುಟ್ಟಿದ ಮನೆ – 'ವೈಟ್ ಹೌಸ್'. (ಈಗ ಮಧುವನ ಹೋಟಲಾಗಿದೆ) ಇವುಗಳನ್ನು ದಾಟಿ ರಾಯನ್ ಸರ್ಕಲ್‌ನಲ್ಲಿ ಎಡಕ್ಕೆ ತಿರುಗಿ ತುಸು ದೂರ ಮುಂದರಿದು ಬಲಕ್ಕೆ ಹೊರಳಿದರೆ ಸಿಗುವುದೇ ವಿ. ಸೀತಾರಾಮಯ್ಯ ರಸ್ತೆ. ರಸ್ತೆ ಫಲಕದೆದುರಿಗಿರುವ ಮೂಲೆ ಮನೆಯೇ ಹಲವು ದಶಕಗಳು ವಿ.ಸೀ. ಅವರಿದ್ದ ನಿವಾಸ.

ವಿ.ಸೀ. ಇದ್ದಾಗಿಗೂ ಈಗ್ಗೂ ಈ ಮನೆಯ ಸ್ವರೂಪ ಬದಲಾಗಿದೆ. ಆಗ ಮಹಡಿ

ಇದ್ದಿಲ್ಲ; ಈಗ ಮಹಡಿ ಮೇಲಿದ್ದಿದೆ. ಆಗ ಅವಿಭಕ್ತವಾಗಿದ್ದ ವಿ.ಸೀ. ಕುಟುಂಬ ಈಗ ವಿಭಕ್ತವಾಗಿದೆ. ಆಗ ವಿ.ಸೀ. ಇದ್ದರು; ಈಗ ಭೌತಿಕವಾಗಿ ವಿ.ಸೀ. ಅಲ್ಲಿಲ್ಲ. ಆದರೂ ಹಳೇ ತಲೆಮಾರಿನ ಸಾಹಿತ್ಯ ಪ್ರೇಮಿಗಳಿಗೆ, ವಿ.ಸೀ. ಅವರ ಪರಿಚಿತರಿಗೆ, ನಿಕಟವರ್ತಿಗಳಿಗೆ ಈ ಪರಿಸರ ಸಂದರ್ಶಿಸಲು ಆನಂದ; ನೆನಪಿಸಿಕೊಳ್ಳಲು ನವಚೇತನ ತರುವುದೆಂಬ ವಿಚಾರದಲ್ಲಿ ಎರಡು ಮಾತಿಲ್ಲ.

ವಿ.ಸೀ. ಅವರಿಗೆ ಯಾರೂ ಹೊಸಬರಲ್ಲ. ಮೊತ್ತ ಮೊದಲ ಬಾರಿಗೆ ಭೇಟಿ ಆದ ವ್ಯಕ್ತಿಗೂ ಅವರು ನೀಡುತ್ತಿದ್ದ ಸ್ವಾಗತ, ಆತಿಥ್ಯ, ಆತ್ಮೀಯತೆ, ಆದರದ ಮಾತುಕತೆ ಎಷ್ಟೋ ವರ್ಷಗಳಿಂದ ಬಲ್ಲ ವ್ಯಕ್ತಿಯೊಡನೆ ವ್ಯವಹರಿಸುವಂತಿರುತ್ತಿತ್ತು. ಅವರೊಡನೆ ಸಂಪರ್ಕಕ್ಕೆ ಬಂದ ಯಾವುದೇ ವ್ಯಕ್ತಿಗೆ, ಅವರ ಜೊತೆ ದೀರ್ಘ ಒಡನಾಟ, ಸಂಪರ್ಕ ಇಟ್ಟುಕೊಳ್ಳಬೇಕೆಂಬ ಅಂತರಿಕ ಭಾವನೆ ಗೌರವಗಳು ತನ್ನಿಂ ತಾನೇ ಬೆಳೆಯುವಂತಿತ್ತು. ವಿಷಯ ಯಾವುದೇ ಇರಲಿ, ವಿ.ಸೀ. ಅವರ ನಿರರ್ಗಳ ಶಬ್ದ ಸಂಪತ್ತು, ಓತಪ್ರೋತ ವಾಗ್ಝರಿ, ಆಳವಾದ ಪಾಂಡಿತ್ಯ ಇವುಗಳ ವಿಶ್ವರೂಪ ದರ್ಶನ ಸಂದರ್ಶಿಸಿದವರಿಗಾಗುತ್ತಿತ್ತು.

ನಮ್ಮ ಕುಟುಂಬದ ಹೆಣ್ಣು ಮಗಳು ವಿಜಯಾ ವಿ.ಸೀ. ಅವರ ಸೊಸೆಯಾದಳು. ಈ ನಂಟು, ಪುತ್ತೂರಿನ ಗಂಟು ನನ್ನನ್ನು ವಿ.ಸೀ. ಅವರ ಸಮೀಪಕ್ಕೆ ಸರಾಗವಾಗಿ ಹೋಗುವಂತೆ ಮಾಡಿದವು. ಹೀಗಾಗಿ ನಾನು ಆಗಾಗ ವಿ.ಸೀ. ಅವರಲ್ಲಿಗೆ ಹೋಗಿಬರುತ್ತಿದ್ದೆ. ಆತ್ಮೀಯ ಗೆಳೆಯ ಶ್ರೀ ಎಂ. ಮಲ್ಲಿಕಾರ್ಜುನಯ್ಯ ಅವರ ಸಖ್ಯದಿಂದ ಈ ಸಂಪರ್ಕ ಬಲಗೊಂಡಿತು. ಈ ಭೇಟಿಗಳಲ್ಲಿ ಅವರ "ನೋಡೂ" ಸಂಬೋಧನೆಯ ಪ್ರತ್ಯಕ್ಷ ಅನುಭವ ನನಗಾಗುತ್ತಿತ್ತು. ಗಂಟೆಗಟ್ಟಲೆ ಅವರ ಪಾಂಡಿತ್ಯ ಪೂರ್ಣ ಪ್ರವಾಹದಲ್ಲಿ ಮಿಂದು ತಲ್ಲೀನನಾಗುತ್ತಿದ್ದೆ; ಆತ್ಮೀಯತೆಯ ಆನಂದ ಕಾನನದಲ್ಲಿ ವಿಹರಿಸುತ್ತಿದ್ದೆ; ಅನೇಕ ವೈಯಕ್ತಿಕ ಅನುಭವಗಳ ಉಲ್ಲೇಖಗಳನ್ನು ಅವರ ಬಾಯಿಂದ ಕೇಳಿ ಮೈಮರೆಯುತ್ತಿದ್ದೆ.

೧೯೭೩ರಲ್ಲಿ ಎಂ.ಇ.ಎಸ್. ಕಾಲೇಜಿನಿಂದ ನಾನು ಪುತ್ತೂರು ವಿವೇಕಾನಂದ ಕಾಲೇಜಿಗೆ ವರ್ಗಾಯಿಸಿಕೊಂಡೆ. ಆಹ್ವಾನದ ಮೇಲೆ ಅಲ್ಲಿಯ ಪ್ರಾಂಶುಪಾಲಿಕೆಯ ಪಟ್ಟ ವಹಿಸಿಕೊಳ್ಳುವ ಸಂದರ್ಭ ಒದಗಿ ಬಂದಿತ್ತು. ಒಂದು ಭೇಟಿಯ ನಂತರ ಕಾಲೇಜಿನ ಪರಿಸರ, ಪ್ರಾರಂಭಕ್ಕೆ ಕಾರಣರಾದ ಮಹನೀಯರ ಮಾಹಿತಿ ಸಂಗ್ರಹಿಸಿದೆ. ಆ ಪಟ್ಟಿಯಲ್ಲಿ ಕೋಟ ಶಿವರಾಮ ಕಾರಂತರ ಹೆಸರೂ ಇತ್ತು. ದಸರಾ ದಿನಗಳಲ್ಲಿ ಪುತ್ತೂರಲ್ಲಿ ಆಚರಿಸಲಾಗುತ್ತಿದ್ದ ನಾಡಹಬ್ಬದ ಪ್ರಸ್ತಾಪ ಬಂದಾಗಲೆಲ್ಲಾ, ಕಾರಂತರ ಸಾಂಸ್ಕೃತಿಕ ಚಟುವಟಿಕೆಗಳು, ಕವಿಗೋಷ್ಠಿಗಳು, ವಿಚಾರ ಸಂಕಿರಣಗಳನ್ನು ಒಳಗೊಂಡ ಅನೇಕ ವಿನೂತನ ಪ್ರಯೋಗ, ಸಾರಸ್ವತ ಲೋಕದ ದಿಗ್ಗಜಗಳ ಪಾಲ್ಗೊಳ್ಳುವಿಕೆ ಇತ್ಯಾದಿ ಪ್ರಸ್ತಾಪ ನನ್ನ ಕಿವಿಗೆ ಆಗಾಗ ಬೀಳುತ್ತಿದ್ದುವು. ವಿ.ಸೀ. ಅವರೂ ಈ ನಾಡಹಬ್ಬಗಳಲ್ಲಿ ತಪ್ಪದೇ ಭಾಗವಹಿಸುತ್ತಿದ್ದ ಸಾರಸ್ವತ ದಿಗ್ಗಜಗಳಲ್ಲೊಬ್ಬರೆಂದು ಕಾರಂತರೇ ಉಲ್ಲೇಖ ಮಾಡಿದ್ದನ್ನು ನಾನು ಅನೇಕ ಬಾರಿ ಕೇಳಿದ್ದೇನೆ. ಹಾಗೆಯೇ ವಿ.ಸೀ ಬಗ್ಗೆ ಹೇಳುವಾಗಲೆಲ್ಲಾ ಕಾರಂತರು ಅದೆಷ್ಟು ಗೌರವ, ಸಂಯಮದಿಂದ ಮಾತನಾಡುತ್ತಿದ್ದರು ಎಂಬುದನ್ನೂ ಗಮನಿಸಿದ್ದೇನೆ.

ನಾನು ಪುತ್ತೂರಿನಲ್ಲಿರುವ ವಿಚಾರ ವಿ.ಸೀ. ಅವರಿಗೆ ಗೊತ್ತಾಗಿ ಭೇಟಿಯಾದಾಗಲೆಲ್ಲಾ

ತಮ್ಮ ಪುತ್ತೂರು ಸಂಬಂಧದ ಬಗ್ಗೆ, ಅಲ್ಲಿಯ ದಸರಾ ನಾಡಹಬ್ಬದ ಸಡಗರ, ವೈಖರಿ ವಿಜೃಂಭಣೆಗಳ ಬಗ್ಗೆ ಸ್ವಾರಸ್ಯವಾಗಿ ಮಾತಾಡುತ್ತಿದ್ದರು. ಕಾರಂತರ ಸ್ನೇಹ, ಅಭಿಮಾನ, ಅವರ ನಿರಂತರ ಚಟುವಟಿಕೆಗಳ, ಜನಪ್ರಿಯತೆಯ ಬಗ್ಗೆ ಗಂಟೆಗಟ್ಟಲೆ ವ್ಯಾಖ್ಯಾನಿಸುತ್ತಿದ್ದರು.

ಒಂದು ಭೇಟಿಯ ಸಂದರ್ಭದಲ್ಲಿ ಪುತ್ತೂರು ಅಲಸಂಡೆ ಕಾಯಿಯ ಬಗ್ಗೆ ದೀರ್ಘ ಪ್ರಬಂಧವನ್ನೇ ಮಂಡಿಸಿದರು. ಅಲಸಂಡೆಯ ಮೊಗರು, ರುಚಿ, ಪರಿಮಳಗಳನ್ನು ಕುರಿತು ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿಟ್ಟರು. ಅನಂತರ ನಾನು ಪುತ್ತೂರಿಂದ ಬೆಂಗಳೂರಿಗೆ ಬರುವಾಗಲೆಲ್ಲಾ ಸಾಧಾರಣವಾಗಿ ಒಂದೆರಡು ಕಟ್ಟು ಬಿಳೀ ಮೊಗರು ಅಲಸಂಡೆಯನ್ನು ಹಿಡಿದುಕೊಂಡು ಬರುತ್ತಿದ್ದೆ. ಮೊದಲು ವಿ.ಸೀ. ಅವರಲ್ಲಿಗೆ ಹೋಗಿ ಅದನ್ನೊಪ್ಪಿಸಿದಾಗಲೇ ನನಗೆ ತೃಪ್ತಿ. ಇದೊಂದು ಕರ್ತವ್ಯ ಎಂದೇ ಪರಿಗಣಿಸಿ ಆ ಪರಿಪಾಠವನ್ನು ನಡೆಸಿಕೊಂಡು ಬಂದಿದ್ದೆ.

ಒಮ್ಮೆ ಹೀಗೇ ಅಲಸಂಡೆ ತೆಗೆದುಕೊಂಡು ಹೋಗಿದ್ದೆ.

"ಯಾಕಪ್ಪಾ ಇಷ್ಟು ತೊಂದರೆ ತಗೊಳ್ತೀರಾ" ಎಂದರು ವಿ.ಸೀ.

"ನನ್ನ ಸಂತೋಷಕ್ಕೇಕೆ ನಿಮ್ಮ ಅಡ್ಡಿ" ಎಂದಿದ್ದೆ.

ಹೀಗೊಮ್ಮೆ ಅಲಸಂಡೆ ತಂದು ಅವರಿಗೊಪ್ಪಿಸಿ, ಮಾತನಾಡಿ ಹೋಗೋಣವೆಂದು ವಿ.ಸೀ. ಅವರ ಮನೆಗೆ ಹೋಗಿದ್ದೆ. ನಾವಿಬ್ಬರೂ ಮಾತಾಡುತ್ತಿದ್ದಂತೆಯೇ 'ರಾಶಿ' (ಡಾ. ಎಂ. ಶಿವರಾಂ) ಪ್ರತ್ಯಕ್ಷರಾದರು. ಅವರೀರ್ವರ ಸಂವಾದ ಸ್ವಾರಸ್ಯವಾಗಿತ್ತು. ನಡುವೆ ಅದೆಷ್ಟೋ ಗುಣವಾಚಕಗಳ ಸಮೃದ್ಧ ಭಾಷೆಯಲ್ಲಿ ವಿ.ಸೀ. ನನ್ನನ್ನು 'ರಾಶಿ' ಅವರಿಗೆ ಪರಿಚಯಿಸಿದರು. ಅವುಗಳಲ್ಲಿ ನಾನೆಷ್ಟಕ್ಕೆ ಅರ್ಹ, ಪಾತ್ರ ಎಂದು ಕ್ಷಣಕ್ಷಣಕ್ಕೆ ನನ್ನಲ್ಲಿ ನಾನೇ ಪ್ರಶ್ನಿಸಿಕೊಳ್ಳುತ್ತಿದ್ದೆ. "ಪರಗುಣ ಪರಮಾಣೂನ್ ಪರ್ವತೀ ಕೃತ್ಯ ನಿತ್ಯಂ ನಿಜ ಹೃದಿ ವಿಕಸಂತಃ ಸಂತಃ" ಎಂಬ ಆರ್ಯೋಕ್ತಿ ನೆನಪಿಗೆ ಬಂತು.

ಸೆಂಟ್ರಲ್ ಕಾಲೇಜಿನ ಇತಿಹಾಸದಲ್ಲಿ ವಿ.ಸೀ. ಅಜರಾಮರರಾಗಿದ್ದಾರೆ. An Economist by Education and Qualification, Turned a Literatteur of Excellence by accident ಎಂದು ನನ್ನೊಬ್ಬ ಆಪ್ತಮಿತ್ರ ಸೆಂಟ್ರಲ್ ಕಾಲೇಜು ವಿದ್ಯಾರ್ಥಿ ವಿ.ಸೀ. ಅವರ ಬಗ್ಗೆ ಆಗಾಗ್ಗೆ ಹೇಳುತ್ತಿದ್ದರು.

ಸಾಹಿತ್ಯದರ್ಶನ ಅವರ ಒಲವಿನ ಹವ್ಯಾಸ. ಕನ್ನಡ ಸಾಹಿತ್ಯವನ್ನು ಇಂಗ್ಲಿಷ್ ಮಾಧ್ಯಮದ ಮೂಲಕ ಬೋಧಿಸುವ, ಪರಿಚಯಿಸುವ ಅದ್ವಿತೀಯ ಪಾಂಡಿತ್ಯ, ಕಲೆ ವಿ.ಸೀ. ಅವರಿಗೆ ರಕ್ತಗತವಾಗಿತ್ತು. ಅದೊಂದು ಮಾಂತ್ರಿಕನ ಮೋಡಿಯ ಹಾಗೆ, ನಭೂತೋ ಎಂಬಂತೆ. ಭಾಷೆ, ಭಾಷಣ, ನಡೆ, ನುಡಿ, ಎಲ್ಲವೂ ಒಪ್ಪ, ಓರಣ, ಅಚ್ಚುಕಟ್ಟು, ಬಿಚ್ಚಿದ ಹೊತ್ತಿಗೆ. ಶಿಷ್ಯ ಕೋಟಿಯ ಪ್ರೀತಿ ವಾತ್ಸಲ್ಯ ಗೌರವಾದರಗಳು ಅವರನ್ನು ಶ್ರೀಮಂತಗೊಳಿಸಿ ಜೀವನದಲ್ಲಿ ಸಂತೃಪ್ತಿಯನ್ನು ಮೂಡಿಸಿದ್ದವು. ಎಂಥ ಸಂಕಷ್ಟದಲ್ಲೂ ವಿ.ಸೀ. ಅವರ ಮಂದಹಾಸ, ಸ್ನೇಹಮಯ ಅಂತಃಕರಣಗಳಿಗೆ ಚ್ಯುತಿ ಬರಲೇ ಇಲ್ಲ. ಪ್ರಾಮಾಣಿಕತೆ, ಶಿಸ್ತು ಅವರಿಗೆ ತೋರುಗಂಬಗಳಾಗಿದ್ದುವು.

ಪ್ರಸಾರಾಂಗದ ಭಾಷಣಗಳಿಗೆ, ಇನ್ನಿತರ ಉಪನ್ಯಾಸಗಳಿಗೆ ಅವರು ನಿರಂತರ ಪ್ರವಾಸ ಮಾಡುತ್ತಿದ್ದುದುಂಟು. ಎಂಥ ಪ್ರಚೋದನೆಯಲ್ಲೂ ಅವರು ಸುಳ್ಳು ಪ್ರವಾಸದ ಬಿಲ್ಲನ್ನು ಸಲ್ಲಿಸಿ ಹೆಚ್ಚು ಹಣ ಪಡೆದದ್ದೇ ಇಲ್ಲ. ಇವತ್ತಿನ ಪರಿಸ್ಥಿತಿಗೆ ಇದನ್ನು ಹೋಲಿಸಿ ನೋಡಿದರೆ ವಿ.ಸೀ. ಅವರ ಪ್ರಾಮಾಣಿಕತೆ, ಆದರ್ಶ ಎಷ್ಟು ಶ್ರೇಷ್ಠ ಮಟ್ಟದ್ದು ಎಂಬ ಅರಿವಾಗುತ್ತದೆ. ಗುರುಸ್ಥಾನದ ಹೆಗ್ಗಳಿಕೆ ಇಂತಹ ಆದರ್ಶ ಪ್ರಾಧ್ಯಾಪಕರಿಂದ ಕಾಪಾಡಲ್ಪಟ್ಟಿದೆ. ನೂರಕ್ಕೆ ನೂರಾರು ಪಟ್ಟು ಅಪ್ಪಟ ಅಧ್ಯಾಪಕರಾಗಿ ಬಾಳಿದ್ದರಿಂದಲೇ ಅಂಥವರು ಅಮರರಾಗಿ, ಸರ್ವವಂದ್ಯರಾಗಿ, ಸರ್ವಪೂಜ್ಯರಾಗಿ ಯಾವ ಕಾಲಕ್ಕೂ ಸಲ್ಲುತ್ತಾರೆ. ತಮ್ಮದೇ ಸಾರಸ್ವತ ಲೋಕದಲ್ಲಿ ವಿಹರಿಸುತ್ತಾ ಆಮಿಷಗಳಿಂದ ವಿಮುಖರಾಗಿ ಉಪದೇಶಕ್ಕನುಸಾರವಾಗಿ ಆಚರಿಸುತ್ತಾ ತಮ್ಮ ಆದರ್ಶಗಳನ್ನು ರಕ್ಷಿಸಿಕೊಂಡು ಬಂದು ಸಾಮಾಜಿಕ ಜೀವನದಲ್ಲಿ ಉಜ್ವಲ ಜ್ಯೋತಿಯಾಗಿ ಬೆಳಗಿದ ಮಹಾನುಭಾವರು ವಿ.ಸೀ.

ಕನ್ನಡ ನಾಡು

ಬಾನಿನಗಲಕೆ ನೆಲಸಿ ದೆಸೆದೆಸೆಗೆ ಕಟ್ಟಿ
ನಡೆ ನೋಟಕೆರಚಿರುವ ಕಸ್ತೂರಿನಾಡು;
ಅಗೆದಲ್ಲಿ ಹೊಳೆಹೊನ್ನು, ನುಡಿಯು ದಾಂಗುಡಿ ಹಾಡು
ಅಡಿತಳದ ಅರಿಮೆಟ್ಟು, ಗಂಡುಮೆಟ್ಟು—
ವೀರ ಸಿರಿ ಕಲೆಬೀಡು ಎನ್ನ ತಾಯ್ನಾಡು.

ಕಂಡಲ್ಲಿ ಗುಣಕೆ ಕೈಮುಗಿದು ಕೊಂಡಾಡಿ ಕರೆವ,
ಎತ್ತಿ ಮಡಿಲಲಿ ತೂಗಿ ಜಗಕೆಲ್ಲ ತೋರಿ ತಣಿವ,
ಹಾಲ್ ಬೆಣ್ಣೆ ಹೆಚ್ಚೇನು ಕೆನೆಮೊಸರನೂಡಿ
ಒಳ್ಪನುಪಚರಿಸಿ ಉಪಚರಿಸಿ ಮಣಿವ
ಧನ್ಯ ದಾನದ ನೆಲೆಯು ಎಮ್ಮ ಹೊನ್ನಾಡು.

ವಿ.ಸೀ.

'ಕದಂಬ' ಪು. ೨೧-೨೨

ಚೈತನ್ಯ ಚಿಮ್ಮಿಸುವ ಸಂಜೀವಿನಿ

ವಸಂತ ಕುಷ್ಟಗಿ

ವಿ.ಸೀ. ಎಂದರೇ ಸವಿ, ಸಿಹಿ. ಆ ಹೆಸರಿನಲ್ಲಿ ತವರಿನ ತಂಪಿದೆ; ಪ್ರೀತಿ ವಿಶ್ವಾಸಗಳ ಕಂಪಿದೆ. ಅವರ ಪರಿಚಯ ನನಗಾದ ಘಟನೆ ಇಂದಿಗೂ ರೋಮಾಂಚನೀಯ. ಅದು ಮರೆಯದ ನೆನಪು: ಸದಾ ಜಾಗ್ರತವಿಡುವ ಕೆನೆ ಹಾಲು ಜೇನಿನ ರುಚಿ; ಸದಾ ನೆಮ್ಮದಿಗೊಳಿಸುವ ಮಂದಾರದ ಸೊಬಗಿನ ಮೈಸಿರಿ.

ನಾನಾಗ ಆರನೆಯ ತರಗತಿಯ ವಿದ್ಯಾರ್ಥಿ. ಕಲಬುರ್ಗಿಯಲ್ಲಿ ನಾಡಹಬ್ಬಗಳು ನಡೆಯುತ್ತಿದ್ದು ಸ್ವಾತಂತ್ರ್ಯ ಸಂಪಾದನೆಗಾಗಿ ಹೋರಾಟ ನಡೆಯುತ್ತಿದ್ದ ಕಾಲ. ಹೈದರಾಬಾದ್ ಸಂಸ್ಥಾನವು ನಿಜಾಂನ ಆಡಳಿತದಲ್ಲಿದ್ದು, ಉರ್ದುವಿನ ಒತ್ತಡದಲ್ಲಿ ಕನ್ನಡವು ಕುತ್ತೆಸರು ಬಿಡುತ್ತಿದ್ದ ಕಾಲ. ಆದರೂ ನಾಡಹಬ್ಬಗಳು ಕನ್ನಡದ ಬೆಳಕನ್ನು ಬೆಳಗುತ್ತ ಭಾರತದ ವಿಜಯಕ್ಕಾಗಿ ಸ್ಫೂರ್ತಿ ಸೆಲೆಯಾಗಿದ್ದ ಕಾಲ. ಆಗ ಅಂತಹ ಚೈತನ್ಯಮಯ ಹುಮ್ಮಸ್ಸಿನ ಮನಸ್ಸುಗಳು ಸಾವಿರದವಿದ್ದರೂ ಮೈಸೂರಿನಿಂದ ಮಾಸ್ತರರನ್ನು ಕರೆಸಿ ಕನ್ನಡ ಕಲಿಯಬೇಕಿತ್ತು! ಇಂತಹ ಪ್ರಸಂಗದಲ್ಲಿ ಸುಮಾರು ೧೯೪೬ರಲ್ಲಿ ವಿ. ಸತ್ಯನಾರಾಯಣರು ನೂತನ ವಿದ್ಯಾಲಯಕ್ಕೆ ಕನ್ನಡ ಮಾಸ್ತರರಾಗಿ ಬಂದರು. ಅವರು ಎಂ. ಎ. ಪದವೀಧರರು; ಸುವರ್ಣಪದಕ ವಿಜೇತರು. ಈ ಮಾಸ್ತರರಿಗೆ ಹೊಸ ಹೊಸ ಕನ್ನಡ ಪುಸ್ತಕಗಳನ್ನು ಕೊಂಡು ಓದಿಸಂಗ್ರಹಿಸುವ ಹವ್ಯಾಸ. ಹೀಗಾಗಿ ಅವರ ಮನೆಯ ತುಂಬೆಲ್ಲ ಪುಸ್ತಕಗಳು! ಆಗ ಅವರಿಗಿನ್ನೂ ಮದುವೆಯಾಗಿರಲಿಲ್ಲ. ಕನ್ನಡಕ್ಕೆ ಮನಸೋತ ಹುಚ್ಚು ಹುಡುಗರನ್ನೆಲ್ಲ ಮನೆಯಲ್ಲಿ ಇರಿಸಿಕೊಂಡು ತಾವೂ ಹೊತ್ತು ಕಳೆಯುತ್ತಿದ್ದ ಕಾಲ. ನನ್ನ ಮೇಲೆ ಮತ್ತು ನನ್ನ ಇನ್ನೊಬ್ಬ ಸ್ನೇಹಿತರ ಮಗನ ಮೇಲೆ ಬಹಳ ಪ್ರೀತಿ. ಹೀಗಾಗಿ ಶಾಲೆಯ ಪಾಠ ಪ್ರವಚನಗಳ ಅನಂತರ ಸದಾ ನಾನು ಅವರ ಮನೆಯಲ್ಲಿಯೇ ಇರುವುದು ರೂಢಿಯಾಯಿತು.

ಒಂದು ದಿವಸ ಸ್ಟೊವ್ ಹೊತ್ತಿಸಿ ಹಾಲು ಕಾಯಿಸಿ, ಹಾಲಿನ ಬೋಗಣಿಯ ಮೇಲೊಂದು ಪುಸ್ತಕವನ್ನು ಅಡ್ಡಲಾಗಿಟ್ಟು ಮುಚ್ಚಿದೆ. ರಾತ್ರಿ ನಮ್ಮ ಮಾಸ್ತರರು ಬಂದು ಪುಸ್ತಕವನ್ನು ತೆಗೆದುನೋಡಿ ಕಿಡಿಕಿಡಿಯಾದರು. ಆ ಪುಸ್ತಕ ವಿ.ಸೀ. ಅವರ 'ದೀಪಗಳು'. ಅಲ್ಲಿಯ 'ಮನೆ ತುಂಬಿಸುವುದು' ಹಾಡು ಹಾಲಿನಲ್ಲಿ ನೆನೆದು ಕೆನೆಯ ಕಲೆಯಿಂದ ಕೂಡಿ

ಹೋಗಿತ್ತು. ಆ ಹಾಡನ್ನು ಆಗಾಗ ಮಾಸ್ತರರು ನಮ್ಮೆದುರಿಗೆ ಹಾಡಿ ಹಾಡಿ ವಿ.ಸೀ. ಅವರ ಅಂತರಂಗದ ಅಂಗಳದಲ್ಲಿ ಅರಳಿದ ಹೂವಿನ ಅಂದವನ್ನು ನಮಗೆಲ್ಲ ತೋರಿಸುತ್ತಿದ್ದರು. ಅವರ ದಂಗು ಬಡೆದ ಮುಖಚರ್ಯೆಯನ್ನು ಕಂಡು ನಾನು, ನನ್ನ ಗೆಳೆಯ ತಪ್ಪುಗಾರರಾಗಿ ನಿಂತೆವು. ನಮ್ಮ ಮುಖ ಕಪ್ಪಿಟ್ಟಿದ್ದವು. ಕನಿಕರಗೊಂಡ ಮಾಸ್ತರರು ನಮ್ಮ ತಲೆ ನೇವರಿಸಿ "ನೋಡೀಪ್ಪಾ, ವಿ.ಸೀ. ನಮ್ಮ ವಿದ್ಯಾಗುರು, ಸಂಸ್ಕೃತಿಯ ಗುರು. ಅವರ ವ್ಯಕ್ತಿತ್ವವೇ ಆ ಹಾಡು. ಅದನ್ನು ಹೀಗೆ ಉಪಯೋಗಿಸುವುದೆ?" ಎಂದು ನೋವು ಬೆರಸಿ ಮಾತನಾಡಿದರು. ಮರುಕ್ಷಣವೇ ಅಂತಃಕರಣ ತುಂಬಿದ್ದ ದನಿಯಲ್ಲಿ "ಇರಲಿ ಪರವಾಗಿಲ್ಲ. ನಮ್ಮ ಗುರುಗಳ ವ್ಯಕ್ತಿತ್ವವನ್ನು ಸಾಕ್ಷಾತ್ಕಾರಗೊಳಿಸಿದ ಈ ಕವಿತೆಗೆ ನೀವು ಹಾಲು ಕುಡಿಸಿದ್ದೀರಿ, ಕೆನೆ ತಿನಿಸಿದ್ದೀರಿ. ನೀವು ಕೂಡ ನನ್ನ ಬಾಳ ಹಾಲಕೆನೆ. ನಿಮ್ಮ ಬದುಕು ಹಾಲು ಕೆನೆಯಾಗಲಿ, ಜೇನ ಹೊಳೆಯಾಗಲಿ" ಎಂದರು. ಹೀಗೆ ನಮ್ಮ ಗುರುವಿನ ಗುರು ವಿ.ಸೀ. ನಮಗೂ ಮಹಾಗುರುವಾಗಿ ಪರಿಣಮಿಸಿದರು. ಆ ದಿನದಿಂದ ನಾನು ಶಬರಿಯಂತೆ ಅವರ ದರ್ಶನಕ್ಕಾಗಿ ಕಾದೆ.

ಕಾಲ ಪಕ್ವವಾಯಿತು. ಹೈದರಾಬಾದ್ ಸಂಸ್ಥಾನವು ನಿಜಾಂನ ಕಪಿಮುಷ್ಟಿಯಿಂದ ವಿಮುಕ್ತಿ ಪಡೆದು ಭಾರತದ ಒಕ್ಕೂಟವಾಯಿತು. (೧೯೪೮) ಕಲಬುರ್ಗಿಯಲ್ಲಿ ಕನ್ನಡದ ಡಿಂಡಿಮವು ಸಡಗರದಿಂದ ಕೇಳತೊಡಗಿತು. ನಾಡಹಬ್ಬಗಳಿಗೆ ವಿಶಿಷ್ಟ ಶಕ್ತಿ ಉತ್ಸಾಹ ಮೂಡಿತು. ಪ್ರೊ. ಭೀಮಸೇನರಾಯರು ಕರ್ನಾಟಕದ ಶ್ರೇಷ್ಠರನ್ನೆಲ್ಲ, ಸಾಹಿತ್ಯದ ದಿಗ್ಗಜರನ್ನೆಲ್ಲ ಕಲಬುರ್ಗಿಗೆ ಕರೆಸಿ ಪರಿಚಯ ಮಾಡಿಸತೊಡಗಿದರು. ಅಂತಹ ದಿನಗಳಲ್ಲಿ ವಿ.ಸೀ. ಅವರೂ ಕಲಬುರ್ಗಿಗೆ ಬಂದಿಳಿದು ನಮಗೆಲ್ಲ ದರ್ಶನ ಕೊಟ್ಟರು. (೧೯೫೦) ಬಿಳಿಯ ಹೊಳಪಿಗೆ ಹೊಳಪಾಗಿ ತೀಡಿದ ಮೈಸೂರು ಪೇಟ, ಕ್ಲೋಸ್ ಕಾಲರ್ ಕೋಟು, ನೀಟಾಗಿ ನಿರಗಿಗಳನ್ನು ಹಾಕಿ ಮಾಟಾಗಿ ಉಟ್ಟುಕೊಂಡ ಬಿಳಿಯ ಮರ್ಸಿರೈಸಡ್ ಧೋತ್ರ, ಬಾಯಿ ತುಂಬಿ ಮಿನುಗುವ ನಗೆ, ಮುಖದ ತುಂಬೆಲ್ಲ ಮಾಗಿದ ಮನುಷ್ಯತ್ವವೇ ಕುಣಿಯುತ್ತಿರುವ ನಗಿನವಿಲು, ಪೂರ್ಣ ಪ್ರಜ್ಞತ್ವದ ಗಾಂಭೀರ್ಯದ ನಿಲವು– ಇದನ್ನೆಲ್ಲ ಕಣ್ಣಾರೆ ಕಂಡಾಗ ನಮ್ಮ ಮಾಸ್ತರರು ನನ್ನ ಮನದಲ್ಲಿ ಅಚ್ಚೊತ್ತುವಂತೆ ಮೂಡಿಸಿದ್ದ ವಿ.ಸೀ. ಚಿತ್ರ ಸತ್ಯಸಾಕ್ಷಾತ್ಕಾರವಾಯಿತು. ನಮಸ್ಕರಿಸಿದಾಗ ವಿ.ಸೀ. ಅವರ ಕೈ ನನ್ನ ತಲೆಯ ಮೇಲಾಡಿ ನನ್ನ ಮೈ ಮನಗಳೆಲ್ಲ ಕಾವ್ಯವಾದುವು.

ಆ ಸಂಜೆ ನಾಡಹಬ್ಬದ ಉತ್ಸವದಲ್ಲಿ ವಿ.ಸೀ. ಅವರ ಉಪನ್ಯಾಸ, ಶಾಕುಂತಲ ನಾಟಕವನ್ನು ಕುರಿತು. ಎಳೆಯ ಮಕ್ಕಳನ್ನೂ ಕಾಳಿದಾಸರನ್ನಾಗಿಸಿ ಶಾಕುಂತಲವನ್ನು ದರ್ಶಿಸಿಕೊಟ್ಟರು. ಕಣ್ವಾಶ್ರಮದ ಚಿತ್ರವನ್ನು ಬಿತ್ತರಿಸುವಾಗ ಕವಿ–ಸಹೃದಯ ಭಾಷಣಕಾರ–ಶ್ರೋತೃ ಎಲ್ಲರೂ ಒಂದಾಗಿ ತನ್ಮಯವಾಗಿದ್ದರು. ಶಕುಂತಲೆಯು ಕಣ್ವರ ಆಶ್ರಮವನ್ನು ಬಿಟ್ಟು ದುಷ್ಯಂತನಲ್ಲಿಗೆ ಹೊರಟಳು. ವಿ.ಸೀ. ಮೆಲುದನಿಯಲ್ಲಿ ತಮ್ಮದೇ ಕವಿತೆ 'ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು' ಹೇಳತೊಡಗಿದರು. ನೆರೆದಿದ್ದ ಶ್ರೋತೃಗಳ ಕಣ್ಣುಗಳು ಹೊಳೆಯಾಗಿ ಹರಿದವು; ಮನಸ್ಸು ಆರ್ದ್ರಗೊಂಡವು. ಅದೇ ಸಮಯಕ್ಕೆ ಆಕಾಶದಲ್ಲಿಯೂ ಮಿಂಚೊಡೆದು ಹನಿಯಲಾರಂಭಿಸಿತು. ಸ್ವಲ್ಪವೇ ಹೊತ್ತಿನಲ್ಲಿ ಧಾರಾಕಾರವಾಗಿ

ಮಳೆಯೂ ಸುರಿಯಿತು. ಸಭಿಕರು ಆ ಮಳೆಯಿಂದ ತತ್ತರಿಸದೆ ಕುಳಿತಲ್ಲಿಯೇ ಕುಳಿತಿದ್ದರು. ವಿ.ಸೀ. ಭಾಷಣ ಮುಂದುವರೆಸಿದರು. ಮಳೆಯಲ್ಲಿಯೇ ಅಂದು ಎರಡು ಗಂಟೆ ಮಾತನಾಡಿದರು. ಭಾಷಣ ಮುಗಿಯಿತು; ಮಳೆಯೂ ನಿಂತಿತು. ಆವರೆಗೆ ಸ್ತಂಭೀಭೂತರಾಗಿ ಕುಳಿತಿದ್ದ ಶ್ರೋತೃವೃಂದವೂ ಎಚ್ಚೆತ್ತಿತು.

ಆ ಸನ್ನಿವೇಶವು ವಿ.ಸೀ. ಅವರ ಅಗಾಧವಾದ ಪಾಂಡಿತ್ಯ, ಪಾಂಡಿತ್ಯಕ್ಕೆ ಸೊಬಗಾಗಿ ಬಂದ ಅವರ ಅನುಭವ ಸಾಮರಸ್ಯ, ಅದರ ಬಗೆ ಬಿಚ್ಚುವ ರೀತಿ, ಅಂತಃಕರುಣೆಯಿಂದ ಸಹಜವಾಗಿ ಮೂಡಿ ಬಂದ ಸರಳ ಸೌಜನ್ಯದ ಅವರ ಮಾತಿನಲ್ಲಿಯ ಜೇನು ಇವೆಲ್ಲದರ ಪರಿಣಾಮವನ್ನು –ಮಳೆಯಿರಲಿ ಬಿಸಿಲಿರಲಿ, ಅರಲಿರಲಿ ಬರಲಿರಲಿ– ಅವರ ನಿಲವಿಗೆ, ಅಂತರಾಳದ ಬೆಳಗಿಗೆ ಯಾವ ತರಹದ ವ್ಯತ್ಯಯವಿಲ್ಲದೆ – ಲೋಕ ಆಸ್ವಾದಿಸಿದ್ದು ಇನ್ನೂ ನನ್ನ ನೆನಪಿನ ಅಂಗಳದಲ್ಲಿ ಉಳಿದು, ವರ್ತಮಾನಕ್ಕೆ ಸ್ಫೂರ್ತಿ ನೀಡುವ ಸಂಚಾಗಿ ಮರೆಯದ ಮಾಸದ ಜೀವ ಸಂಜೀವಿನಿಯಾಗಿದೆ.

ಇಂತಹ ಸೊಬಗನ್ನುಂಡ ನಾನು ಮುಂದೆ ವಿ.ಸೀ. ಭಾವಗೀತಗಳನ್ನೆಲ್ಲ ಹತ್ತು ಹತ್ತು ಸಲ ಓದಿದೆ. ಕೆಲವು ಸಲ ಅಂತರಾಳವನ್ನು ಮುಟ್ಟಿ ಆ ಕಾವ್ಯ ಸಾಮ್ರಾಜ್ಯದ ಧೀಮಂತ ಪ್ರಜೆಯಾದೆ. ಕೆಲವು ಸಲ ಆ ಆಳಕ್ಕೆ ಮುಟ್ಟದಲೇ ಹೋದಾಗ, ಪ್ರೊ. ತವಗರನ್ನು ಮೊರೆಹೋಗುತ್ತಿದ್ದೆ. ಹೈಸ್ಕೂಲಲ್ಲಿದ್ದಾಗ ವಿ. ಸತ್ಯನಾರಾಯಣರು ವಿ.ಸೀ. ಬಗ್ಗೆ ಸಾಕಷ್ಟು ಪ್ರಭಾವ ಬೀರಿದ್ದರು. ಮುಂದೆ ಕಾಲೇಜಿನಲ್ಲಿ ಭೀಮಸೇನರಾಯರು ವಿ.ಸೀ. ಬದುಕು ಬರೆಹದ ಬಗೆಗೆ ವಿಶೇಷ ಕುತೂಹಲವನ್ನು ಕೆರಳಿಸಿದರು.

ತವಗರು ಹೈದರಾಬಾದ್ ಕರ್ನಾಟಕದ ಕನ್ನಡ ರಾಯಭಾರಿಯಾಗಿದ್ದವರು. ಹೀಗಾಗಿ ಆಗಾಗ ಅವರು ಬೆಂಗಳೂರು– ಮೈಸೂರುಗಳಿಗೆ ಕನ್ನಡದ ಕೆಲಸಕ್ಕೆ ಹೋಗುತ್ತಿದ್ದರು. ತವಗರೂ ಸರಳ ಸೌಜನ್ಯದ ನಿರಾಡಂಬರ ಜೀವಿ. "ವಿ.ಸೀ. ಅವರ ಮನೆ ನಮಗೆ ನಮ್ಮ ತಾಯಿಯ ತವರು. ನಾನೇಕೆ ಛತ್ರದಲ್ಲಿಯೊ ಹೊಟೇಲಲ್ಲಿಯೊ ಇಳಿಯಬೇಕು?" ಎನ್ನುತ್ತಿದ್ದವರು. ಅದರಂತೇ ತಮ್ಮ ಸ್ನೇಹವನ್ನು ಕಾಪಾಡಿಕೊಂಡು ಬಂದವರು. ವಿ.ಸೀ. ಅವರದೂ ಸ್ನೇಹಕ್ಕಾಗಿ ಅದೇ ಮಟ್ಟದ ಧಾರಾಳತನ. ಹೀಗಾಗಿ ಬೆಂಗಳೂರಿಗೆ ಕ.ಸಾ.ಪ.ನ ಕೆಲಸಕ್ಕೆ ಹೋದಾಗಲೆಲ್ಲ ತವಗರಿಗೆ ಚಾಮರಾಜಪೇಟೆಯಲ್ಲಿನ ವಿ.ಸೀ. ಅವರ ಮನೆಯ ವಾಸ. ಅಷ್ಟೇ ಅಲ್ಲ, ಅವರಿಗೆ ವಿ.ಸೀ. ಕುಟುಂಬವೆಲ್ಲ ಅದೇ ಮಂದಹಾಸದ ಒಕ್ಕಲು.

ಆ ಮನೆಗೆ ತವಗರು ನನ್ನನ್ನೂ ಒಮ್ಮೆ ಕರೆದುಕೊಂಡು ಹೋದರು. ವಿ.ಸೀ. ಅವರಿಗೆ ಆಗ ಸುಮಾರು ಎಂಭತ್ತು ಇರಬೇಕು. ತಮ್ಮ ಅಭ್ಯಾಸದ ಕೋಣೆಯಲ್ಲಿ ಹಾಸಿಗೊರಗಿಕೊಂಡು ಕಾರ್ಲ್‌ಮಾರ್ಕ್ಸ್ ಓದುತ್ತಿದ್ದರು. ಸುತ್ತೆಲ್ಲ ಪತ್ರಿಕೆಗಳು. ಗೋಡೆಗೆ ಅನಿಸಿಟ್ಟಿದ್ದ ಕಪಾಟುಗಳಲ್ಲಿ ಶ್ರೇಷ್ಠ ಗ್ರಂಥಗಳು ಸಂಚಯವಾಗಿದ್ದುವು. ಓದಿನ ಏಕಾಗ್ರತೆಯಲ್ಲಿದ್ದ ಅವರು ಸ್ವಲ್ಪ ಹೊತ್ತಿನ ನಂತರ ನಮ್ಮನ್ನು ಗುರುತಿಸಿ 'ಅಯ್ಯೊ, ತುಂಬಾ ಹೊತ್ತಾಯಿತೇನೊ, ಕಾಯಿಸಿಬಿಟ್ಟೆ' ಎಂದು ಸ್ವಾಗತಿಸಿದರು. ಒಳಗೆ ಹೋಗಿ ಬಿಸಿ ಚಕ್ಕಲಿಯ ತಟ್ಟೆ ತಂದಿಟ್ಟರು. ಬಿಸಿ ಬಿಸಿ ಕಾಫಿಯೂ ಬಂತು. ಈ ಮಧ್ಯೆ ಬಸವಣ್ಣ, ಪುರಂದರದಾಸ ಹಾಗೂ ಕಾರ್ಲ್‌ಮಾರ್ಕ್ಸ್‌ರನ್ನು ಕುರಿತು ತಾವು ಮನನ ಮಾಡಿಕೊಂಡಿದ್ದ ಪದರುಗಳನ್ನೆಲ್ಲ ಬಿಚ್ಚಿ ತೋರಿಸಿದರು. ಭಾರತೀಯರ

ಬದುಕಿನ ತತ್ವಜ್ಞಾನದ ಪರಿಯನ್ನು ಬಣ್ಣಿಸಿದರು. ವಚನಗಳನ್ನು, ಹರಿದಾಸರ ಹಾಡುಗಳನ್ನು ಉದ್ಧರಿಸಿ 'ನಮ್ಮ ಮೇರುಕೃತಿಗಳಿಲ್ಲ ಇಂಗ್ಲಿಷಿಗೆ, ಜಗತ್ತಿನ ಬೇರೆ ಬೇರೆ ಭಾಷೆಗಳಿಗೆ ಅನುವಾದ ಆಗಬೇಕು. ನೋಡಿ ತವಗ್, ಆಗ ಕನ್ನಡದ ಹಿರಿಮೆ ಜಗತ್ತಿಗೆ ಗೊತ್ತಾಗುತ್ತದೆ' ಎನ್ನುತ್ತ, 'ಇದು ಮುಂದಿನ ಶತಮಾನದಲ್ಲಿ ಆಗಿಯೇ ಆಗುತ್ತದೆ' ಎಂದು ಆಶಾವಾದಿಗಳಾಗಿ ನಮ್ಮನ್ನು ಬೀಳ್ಕೊಟ್ಟರು. ಅವರ ಮನೆಯಿಂದ ಹೊರಬಂದ ನಾನು ಅವರ ಮಾತುಗಳಲ್ಲಿ ತುಂಬಿದ್ದ ಬೆಳಕಿನಿಂದ ಅಭ್ಯಂಜನ ಸ್ನಾನ ಮಾಡಿದ್ದೆ.

ವಿ.ಸೀ. ಪಂಚಭೂತಗಳಲ್ಲಿ ಲೀನರಾದ ದಿನ ಬೆಂಗಳೂರಿನಲ್ಲಿಯೇ ಇದ್ದರೂ ಅವರ ಅಂತಿಮ ದರ್ಶನದಿಂದ ನಾನು ವಂಚಿತನಾದೆ. ಅದಕ್ಕೂ ಋಣ ಬೇಕಷ್ಟೆ! ಆ ದಿನವನ್ನು ನೆನೆದಾಗಲೆಲ್ಲ ನನ್ನನ್ನು ಮಂಕು ಆವರಿಸುತ್ತದೆ. ಇನ್ನೊಂದು ಕ್ಷಣ–

"ಮತಿ ಇದೆ, ಖತಿಯಿದೆ, ಕಲ್ಪನೆಯ ತಾಂಡವವಿದೆ,
ಹೊಸತು ಪುಳಕದಿ ಕಂಡು ಮೈಮರೆವ ಉತ್ಸವವಿದೆ;
ಎದೆಯಿದೆ, ಎದೆಯ ಪರಿಧಿಯ ನೂಕಿ ದಾಟಿಡುವ ಸಾಹಸವಿದೆ;
ಅಭಿಮಾನದಲಿ ಮೂಲೋಕ ಸೋದರ್ಯವೆಂದರಿತು
ಕೊರಳ್ಕಟ್ಟಿ ಸವಿಯುಂಬ ಹುಮ್ಮಸವಿದೆ.
ಎರಡೈದು ಬೆರಳಲ್ಲು ಕೈ ಚಳಕ ತವಕಿಸಿರಲು
ಹೊಸ ಸೃಷ್ಟಿ ಕುಸುರಿಯನು ರೂಪಿಸುತಿದೆ,
ನಿಲು ಹೆಜ್ಜೆ, ಮುನ್ನಡೆವ ಹೆಜ್ಜೆ, ಜಾನು ಜಂಘೆಗಳ
ಬಲ, ವೀರ್ಯ
ನಡೆಯ ನಿರ್ಭೀತಿಗಳಿಗೂರೆ ಆ ಹೆಜ್ಜೆ ಹರಡು;
ಪದತಲದಿ ತಾಯ್ನೆಲನು; ಸ್ಥಿರೆ, ಧಾತ್ರಿ ಓವೋ ವಸುಂಧರೆ!
ಎಲ್ಲಕ್ಕು ಮೊದಲೆಂತೊ ಎಲ್ಲಕ್ಕು ಕೊನೆಯ ನೆಲಸಂತೇ;
ಕಣ್ಬೊಲದೊಳಾಡುತಿವೆ ಸುವಿಶಾಲ ನೀಲಗಗನ
ಹೊಸ ಹೊಸತು ಮಂಡಲವ ನಿರ್ಮಿಸುವ ಜ್ಯೋತಿಃಪ್ರಕಾಶಗಳು;
ನಾಳೆ ಸಾಹಸಕೆಲ್ಲ ಹಸರ, ಆಟದ ಹೊಲ; ಗರಿಮೆ ಗಳಿಕೆ–
ಗಳೆಲ್ಲ ನೆಲಸುದಾಣ.
ಇನ್ನೇನು ಬೇಕು ನರಗೆ, ಮಾನವಗೆ, ಮಾನವಂತನಿಗೆ?"

–ಎಂಬ ಅವರ ಕವನದ ಸಾಲುಗಳು ಮನದ ಕಣ್ಣುಗಳ ಮುಂದೆ ಸರಿದು ಹೋದಾಗ, ಕವಿದ ಮಂಕು ಹರಿದು ಮತ್ತೆ ಕಾರ್ಯೋನ್ಮುಖಿನಾಗುತ್ತೇನೆ. ಹೀಗೆ ವಿ.ಸೀ. ನೆನಪಿನ ಬುತ್ತಿ ಸಾಹಿತ್ಯ ಶಕ್ತಿಗೆ, ಬದುಕಿನ ಇರುವಂತಿಗೆಗೆ ವಿಕಾಸವನ್ನು, ಚೈತನ್ಯವನ್ನು ಚಿಮ್ಮಿಸುವ ಸಂಜೀವಿನಿಯಾಗಿದೆ; ಪುರುಷ ಪ್ರಯತ್ನಕ್ಕೆ ಆತ್ಮ ಪ್ರತ್ಯಯವನ್ನು ನೀಡುವ ಧೀಶಕ್ತಿಯಾಗಿದೆ.

ಅಪೂರ್ವ ವ್ಯಕ್ತಿತ್ವ

ಏರ್ಯ ಲಕ್ಷ್ಮೀನಾರಾಯಣ ಆಳ್ವ

ವಿ.ಸೀ. ಯವರನ್ನು ನಾನು ಮೊತ್ತ ಮೊದಲು ಕಂಡುದು, ಅರಿತುದು ಅವರ 'ಪಂಪಾಯಾತ್ರೆ'ಯ ಮೂಲಕ. ನನ್ನ ಓದಿನ ಪ್ರಾರಂಭದ ದಿನಗಳಲ್ಲಿ ಹತ್ತಾರು ಬಗೆಯಿಂದ ನನ್ನ ಮನಸ್ಸನ್ನು ಸೂರೆಗೊಂಡ ಪುಸ್ತಕ 'ಪಂಪಾಯಾತ್ರೆ'. ಒಂದು ಐತಿಹಾಸಿಕ ಕ್ಷೇತ್ರದ ಪರಿಚಯ ಮಾಡುವ ಮೂಲಕ ವಿ.ಸೀ. ತನ್ನ ವ್ಯಕ್ತಿತ್ವವನ್ನೇ ಅಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ. ಭಾಷೆಯ ಸರಳತೆ, ತಿಳಿಹಾಸ್ಯದ ಮೆರುಗು ವಿಷಯದ ಗಾಂಭೀರ್ಯಕ್ಕೆ ಎಲ್ಲೂ ಕುಂದು ತಾರದಿರುವುದು ಅಲ್ಲಿನ ಹಿರಿಮೆ. ಜೊತೆಗೆ ಕಾದಂಬರಿಯೊಂದರ ಸೆಳೆತ ಎಳೆತಗಳು ಆ ಪುಸ್ತಕವನ್ನು ಕನ್ನಡ ಸಾಹಿತ್ಯ ಲೋಕದಲ್ಲಿ ಚಿರನೂತನವಾಗಿಸಿವೆ. ಹೀಗೆ ವಿ.ಸೀ. ನನ್ನಂತರಂಗದಲ್ಲೂ ಚಿರಂತನವಾಗಿ ಉಳಿಯಲು 'ಪಂಪಾಯಾತ್ರೆ'ಯೇ ಮೊದಲ ಮತ್ತು ಮುಖ್ಯವಾದ ಕಾರಣ.

ಹೀಗೆ ಒಂದು ಸಾಹಿತ್ಯಕೃತಿಯ ಮೂಲಕ ಮೊತ್ತ ಮೊದಲು ಚಿತ್ರಿಸಿಕೊಂಡಿದ್ದ ವಿ.ಸೀ. ವ್ಯಕ್ತಿ ಚಿತ್ರವನ್ನು ಮುಂದಿನ ದಿನಗಳಲ್ಲಿ ಸ್ವಲ್ಪ ದೂರದಿಂದ ಪ್ರೇಕ್ಷಕನಾಗಿ ಕೂತು ಅವರ ಭಾಷಣಗಳನ್ನು ಕೇಳುವ ಮೂಲಕ ಸ್ವಲ್ಪ ಹತ್ತಿರದಿಂದ ಕಾಣುವಂತಾಯಿತು.

ನಾನು ಅವರನ್ನು ತೀರಾ ಹತ್ತಿರದಿಂದ ಕಂಡು, ಮಾತಾಡಿ, ಪರಿಚಯಿಸಿಕೊಳ್ಳುವ ಅವಕಾಶವಾದುದು ಈ ಶತಮಾನದ ಏಳನೆಯ ದಶಮಾನದ ಹೊತ್ತಿಗೆ, ಪಂಜೆ ಮಂಗೇಶರಾಯರ ಶತಮಾನೋತ್ಸವದ ಹೊರೆಯನ್ನು ನಾನು ಹೊತ್ತ ಸಂದರ್ಭದಲ್ಲಿ.

ಪಂಜೆ ಶತಮಾನೋತ್ಸವವನ್ನು ಅತ್ಯಂತ ಅದ್ದೂರಿಯಿಂದ ಮಂಗಳೂರಿನಲ್ಲಿ ಮೂರು ದಿನಗಳ ಕಾಲ ನಡೆಸಬೇಕೆಂದು ಬಯಸಿ, ನಾಡಿನ ಎಲ್ಲ ಹಿರಿಕಿರಿಯ ಸಾಹಿತಿಗಳನ್ನೂ ಆಮಂತ್ರಿಸಬೇಕೆಂದು ಆಶಿಸಿದಾಗ, ಮೊತ್ತ ಮೊದಲು ನೆನಪಾದ ಹಿರಿಯರ ಸಾಲಿನಲ್ಲಿ ವಿ.ಸೀ. ಯವರು ಇದ್ದರು. ಅವರನ್ನು ಸ್ವತಃ ಭೇಟಿಯಾಗಿ ಶತಮಾನೋತ್ಸವಕ್ಕೆ ಆಮಂತ್ರಿಸಲು ಬೆಂಗಳೂರಿನ ಚಾಮರಾಜ ಪೇಟೆಯಲ್ಲಿದ್ದ ಅವರ ಮನೆಗೆ ಹೋಗಿದ್ದೆ. ಹಳೆಯಕಾಲದ ಸಾಧಾರಣವಾಗಿದ್ದ ಮನೆಯಲ್ಲಿ ಅತ್ಯಂತ ಸರಳವಾದ ವೇಷಭೂಷಣಗಳಿಂದ ನಯವಾದ ಮಾತುಗಳಿಂದ ಸ್ವಾಗತಿಸಿ ಮಾತಾಡಿಸಿದ ವಿ.ಸೀ. ಯವರು ನನ್ನಲ್ಲಿ ತೀರಾ ಆತ್ಮೀಯತೆಯನ್ನು ಹುಟ್ಟಿಸಿದರು. ಬಂದ ವಿಚಾರವನ್ನು ಕೇಳಿದರು. ಪಂಜೆ ಶತಮಾನೋತ್ಸವದ

ವಿಚಾರ ಕೇಳಿ ತುಂಬು ಆನಂದ ಪಟ್ಟರು. ಆಗ ಅರಳಿನಿಂತ ಅವರ ಮುಖದ ಚಿತ್ರ ಈಗಲೂ ನನ್ನಂತರಂಗದಲ್ಲಿ ಅಚ್ಚೊತ್ತಿದಂತಿದೆ. ನಮ್ಮ ಕೆಲಸಕ್ಕೆ ತುಂಬು ಪ್ರೋತ್ಸಾಹ ನೀಡಿದರು. ಖಂಡಿತವಾಗಿಯೂ ಸಮಾರಂಭಕ್ಕೆ ಬರುವುದಾಗಿ ಭರವಸೆ ಇತ್ತರು. ಆನಂತರ ರುಚಿಶುಚಿಯಾದ ಕಾಫಿಯನ್ನು ಕುಡಿಸಿ ಕಳುಹಿಸಿಕೊಟ್ಟರು. ಈ ಮೊದಲ ಭೇಟಿಯೆ ಆ ಹಿರಿಯರ ಕುರಿತು ಆದರ, ಅಭಿಮಾನ, ಪ್ರೀತಿಗಳನ್ನು ಹುಟ್ಟಿಸಿತು.

ಮುಂದೆ ಮಂಗಳೂರಲ್ಲಿ ನಡೆದ ಪಂಜೆ ಶತಮಾನೋತ್ಸವದ ಸಮಾರಂಭಕ್ಕೆ ವಿ.ಸೀ. ಬಂದರು. ಪಂಜೆಯವರ ಸಮಗ್ರ ಬರಹಗಳ ನಾಲ್ಕು ಸಂಪುಟಗಳನ್ನು ಬಿಡುಗಡೆ ಮಾಡಿ ಅತ್ಯಂತ ಹೃದಯ ಸ್ಪರ್ಶಿಯಾಗಿ ಮಾತಾಡಿದರು. ಶ್ರೋತೃಗಳ ಮನಸ್ಸನ್ನು ಸೂರೆಗೊಂಡರು.

ಸಮಾರಂಭಕ್ಕೆ ಬಂದವರು ಎರಡು ದಿನ ಮಂಗಳೂರಲ್ಲಿ ನಮ್ಮ ಜೊತೆ ಇದ್ದರು. ಆಗ ಅವರ ತೀರಾ ನಿಕಟ ಪರಿಚಯ ನನಗಾಯಿತು. ಗರಿಗರಿಯಾದ ಮೈಸೂರು ಪೇಟಾ, ನೀಟಾದ ಕೋಟು, ಶುಭ್ರ ಧೋತಿಯ ಕಚ್ಚೆಯಲ್ಲಿ ವೇದಿಕೆಯಿಂದ ಗಂಭೀರವಾಗಿ ಕಾಣಿಸುತ್ತಿದ್ದ ಈ ಹಿರಿಯ, ಗೌರವಾನ್ವಿತರ ಅಂತರಂಗ ಎಷ್ಟು ಸರಳವಾದುದು, ಮುಗ್ಧವಾದುದು, ಪ್ರೇಮಮಯವಾದುದು ಎಂಬುದರ ಅರಿವು ನನಗೆ ಆ ದಿನಗಳಲ್ಲಿ ಆಯಿತು. ಹಿರಿಯರ ಕುರಿತು ಆದರ, ಕಿರಿಯರ ಕುರಿತು ಪ್ರೇಮ ಇವೆರಡರ ಸಂಗಮವಾಗಿದ್ದರು ವಿ.ಸೀ. ಅವರು ಕಿರಿಯ ಸಾಹಿತ್ಯಾಸಕ್ತರನ್ನು ಬೆನ್ನುತಟ್ಟಿ ಪ್ರೋತ್ಸಾಹಿಸುವ ಬಗೆ ಅನನ್ಯವಾದುದು. ಅದು ಕೃತಕವಲ್ಲ; ಜನಪ್ರಿಯತೆಯ ತೋರಿಕೆಗಾಗಿ ಅಲ್ಲ; ಅಂತರಂಗದ ಆಳದಿಂದ ಬಂದ ನಿರ್ಮಲ ಹೃದಯದ ಸಹಜ ವಿಚಾರವಾಗಿತ್ತು.

ಅರ್ಥಶಾಸ್ತ್ರದ ಅಧ್ಯಯನ ಮಾಡಿದ್ದರೂ ಸಾಹಿತ್ಯ, ಕಲೆ, ಸಂಗೀತ, ನೃತ್ಯಗಳಲ್ಲಿ ತುಂಬು ಆಸಕ್ತಿ. ರಾಜಕೀಯ, ವಿಜ್ಞಾನಗಳಲ್ಲಿ ಸಾಕಷ್ಟು ಜ್ಞಾನ. ಗಾಂಭೀರ್ಯದ ಜೊತೆಗೆ ಹಾಸ್ಯ ಪ್ರಜ್ಞೆ, ರಸಜ್ಞತೆ. ಜಗತ್ತಿನ ಎಲ್ಲ ವಿಚಾರಗಳನ್ನು ಕಂಡು, ಅರಿತುಕೊಳ್ಳುವ ತಹತಹ. ಹತ್ತಾರು ಸ್ಥಾನಮಾನಗಳನ್ನು ಪಡೆದೂ ಅಹಂಕಾರದ ಲೇಪ ಅಂಟದ ತಿಳಿ ಮನಸ್ಸು. ಒಟ್ಟಿನಲ್ಲಿ ಜಗದಗಲ ಯುಗದಗಲ ಹಬ್ಬಿದ ಜ್ಞಾನವನ್ನೆಲ್ಲ ತನ್ನದಾಗಿಸಿಕೊಳ್ಳುವ ತೃಷೆ ವಿ.ಸೀ. ಅವರದು. ಇಂತಹ ಅಪೂರ್ವ ವ್ಯಕ್ತಿತ್ವವೊಂದರ ಅಲ್ಪಾವಧಿಯ ಸಂಪರ್ಕವಾದರೂ ನನಗೆ ದೊರೆತುದು ನನ್ನ ಭಾಗ್ಯವೆಂದೇ ನಾನು ಭಾವಿಸಿದ್ದೇನೆ.

ನೆನಪೇ ನಿತ್ಯ ಚೈತನ್ಯದಾಯಿ

ಬಿ. ಎಸ್. ಗುಂಡೂರಾವ್

'ವಿ.ಸೀ.' ಎಂದೊಡನೆ ಮನಸ್ಸಿನ ತೆರೆಯ ಮೇಲೆ ಮೂಡುವ ಚಿತ್ರ ಗರಿಗರಿ ಬಿಳಿ (ಜರಿಯಿಲ್ಲದ) ರುಮಾಲು, ಕ್ಲೋಸ್ ಕಾಲರ್ ಕೋಟು, ಶುಭ್ರವಾದ ಬಿಳಿಯ ಮಲ್ ಕಚ್ಚೆ ಪಂಚೆ, ವಿನಯ, ಗಾಂಭೀರ್ಯ, ಪಾಂಡಿತ್ಯ, ಸಹೃದಯತೆ, ವಿದ್ವತ್ತು, ಸಂಸ್ಕೃತಿ – ಇವುಗಳಿಂದ ತುಂಬಿದ, ಅವುಗಳ ಭಾರದಿಂದಲೋ ಎಂಬಂತೆ ಸ್ವಲ್ಪ ಕತ್ತು ಬಗ್ಗಿಸಿ ನಡೆವ, ನಡೆ; ಮಾತಿಗೆ ನಿಂತರೆ ನಿರರ್ಗಳವಾಗಿ ಹರಿಯುತ್ತಿದ್ದ ವಾಗ್ಧರಿ; ಇಂಗ್ಲಿಷ್, ಸಂಸ್ಕೃತ, ಹಳೆಗನ್ನಡ, ಹೊಸಗನ್ನಡ ಕಾವ್ಯಗಳಿಂದ ಸಮಯೋಚಿತವಾಗಿ ಉದ್ಧೃತವಾಗುತ್ತಿದ್ದ ಸಾಲುಗಳು; ಇವುಗಳು ನಿರ್ಮಿಸುತ್ತಲಿದ್ದ ಸಾಹಿತ್ಯದ ಸುಂದರ ಲೋಕ.

ನಾನು ಅವರನ್ನು ನೋಡುವ ವೇಳೆಗೆ ಅವರು ಸೆಂಟ್ರಲ್ ಕಾಲೇಜಿನಿಂದ ನಿವೃತ್ತರಾಗಿದ್ದರು. ಆದರೂ ಸೆಂಟ್ರಲ್ ಕಾಲೇಜಿನ ಗಾಳಿಯಲ್ಲಿ ಅವರ ಕೀರ್ತಿ ಮಂದಾನಿಲದಂತೆ ಸುಳಿಯುತ್ತಿದ್ದುದನ್ನು ನೆನಪಿಸಿಕೊಳ್ಳಬಹುದು. ಅವರ ವಿದ್ಯಾರ್ಥಿಯಾಗಿದ್ದವರು ಅವರು ಕನ್ನಡವನ್ನು ಇಂಗ್ಲಿಷ್‌ನ ಸಹಾಯದಿಂದ ಬೋಧಿಸುತ್ತಿದ್ದ ವೈಖರಿಯನ್ನೂ ಅದರಿಂದ ತಾವು ಪಡೆದ ರೋಮಾಂಚನವನ್ನೂ ನೆನಪಿಸಿಕೊಳ್ಳುತ್ತಿದ್ದರು. (ಕೇವಲ ಪರೀಕ್ಷೆಯನ್ನೆ ಗುರಿಯಾಗಿ ಹೊಂದಿದ್ದವರು 'ಇವೆಲ್ಲಾ ಪರೀಕ್ಷೆಗೆ ಬರತ್ತಾ?' ಎಂದೂ ಕೇಳುತ್ತಿದ್ದರಂತೆ)

ಆಗಿನ ಕಾಲಕ್ಕೆ ಅವರ 'ಅಭೀ', 'ವಿಶ್ವಾಸ', 'ಮೃಗಶಾಲೆಯ ಸಿಂಹಗಳು'– ಮುಂತಾದ ಕವನಗಳ ಸಾಲುಗಳು ಯುವಕರ ನಾಲಿಗೆಯ ಮೇಲೆ ಒಲಿದು ನಲಿದಾಡುತ್ತಲಿದ್ದವು.

ಲಾ ಕಾಲೇಜಿನಲ್ಲಿ ಗೋಖಲೆ ಸಂಸ್ಥೆಯಲ್ಲಿ ಕರ್ನಾಟಕ ಸಂಘದಲ್ಲಿ ಆಗಾಗ ಅವರ ಭಾಷಣಗಳು ಏರ್ಪಾಟಾಗುತ್ತಿದ್ದವು. ಅವುಗಳಿಗೆ ಎಳ್ಳು ಹಾಕಿದರೆ ಬೀಳದಂತಹ ಜನ ಸಂದಣಿ. (ಈಗ ಕಾಲ ಬದಲಾಗಿದೆ. ಈಗಿನ ಜನಸಂದಣಿಯ ನಡುವೆ ಆನೆಗಳೂ ನಡೆದಾಡಬಹುದು) ಒಮ್ಮೆ 'ಬಾದಾಮಿ ಹೌಸ್'ನಲ್ಲಿ ಆಗ ಇದ್ದ ಯು.ಎಸ್.ಐ.ಎಸ್. ಸಂಭಾಂಗಣದಲ್ಲಿ ವಿ.ಸೀ. ಅವರಿಂದ "ಅಶ್ವತ್ಥಾಮನ್" ನಾಟಕದ ವಾಚನ ಏರ್ಪಾಟಾಗಿತ್ತು. "ಅಶ್ವತ್ಥಾಮನ್" ನಾಟಕವೆಂದರೆ ನಮಗೆಲ್ಲ ಹುಚ್ಚು ಹಿಡಿಸಿದ್ದವರು, ನಮ್ಮ ಪೂಜ್ಯ

ಗುರುಗಳಾದ ಶ್ರೀ ಜಿ. ಪಿ. ರಾಜರತ್ನಂ ಅವರು. ವಿ.ಸೀ. ಅವರ ಆ ನಾಟಕದ ವಾಚನವು ವಿಶಿಷ್ಟ ಅನುಭವವಾಗಿರುತ್ತದೆಂದು ನಾನು ಕೇಳಿದ್ದೆ. ಆದ್ದರಿಂದ ಆ ವಾಚನ ಕಾರ್ಯಕ್ರಮಕ್ಕೆ ತಪ್ಪದೇ ಹೋಗಿದ್ದೆ. ಆಗ ಪೂರ್ವೋಕ್ತ ನಿಲುವಿನ ವಿ.ಸೀ. ಅವರು ವೇದಿಕೆಯನ್ನೇರಿದರು. ನನ್ನ ಪಕ್ಕದಲ್ಲಿ ಕುಳಿತಿದ್ದ ಮಿತ್ರರೊಬ್ಬರು "Every inch a Professor" ಎಂದು ನನ್ನ ಕಿವಿಯಲ್ಲಿ ಪಿಸುಗುಟ್ಟಿದರು. (ವಿಧಿಯ ವ್ಯಂಗ್ಯವೆಂದರೆ 'ಪ್ರೊಫೆಸರ್' ಎಂದು ಜನರಿಂದ ಗೌರವಿಸಲ್ಪಡುತ್ತಿದ್ದ ವಿ.ಸೀ. ಅವರಿಗೆ ವಿಶ್ವವಿದ್ಯಾನಿಲಯ ಪ್ರೊಫೆಸರ್ ಹುದ್ದೆ ನೀಡಲಿಲ್ಲ) ಆ ಸಭಿಕರಲ್ಲಿ ನಾಟಕದ ಹಿನ್ನೆಲೆಯನ್ನು ಮಾತ್ರ ನಾವು ಪಡೆಯಲು ಸಾಧ್ಯವಾದರೂ ಕೆಲವು ಭಾಗಗಳ ವಾಚನ ಮಾಡಿದರು. ಪೂರ್ವಭಾವಿಯಾಗಿ ಅವರು ನೀಡಿದ ಗ್ರೀಕ್ ರಂಗಭೂಮಿ, ರುದ್ರ ನಾಟಕದ ಹಿನ್ನೆಲೆ, 'ಶ್ರೀ' ಅವರು ಆ ನಾಟಕವನ್ನು ಪುನಃಸೃಷ್ಟಿಗೆ ಆಯ್ಕೆ ಮಾಡಿಕೊಂಡ ಔಚಿತ್ಯ, ಅಶ್ವತ್ಥಾಮನಿಗೂ–ಸೋಫೋಕ್ಲಿಸ್‌ನ ಆಯಾಸ್ (ಇದನ್ನು ಏಜಾಕ್ಸ್ ಎಂದೂ ಹೇಳುತ್ತಾರೆ) ಪಾತ್ರಕ್ಕೂ ನಡುವೆ ಇರುವ ಸಾಮರಸ್ಯಗಳನ್ನು ವಿವರಿಸಿದರು. ಹಾಗೆಯೇ ಚಿರಂಜೀವಿಯಾದ ನಮ್ಮ ಪೌರಾಣಿಕ ಅಶ್ವತ್ಥಾಮನು ಈ ನಾಟಕದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಚಿತ್ರಿಸಿದ್ದ 'ಶ್ರೀ' ಅವರ ಔಚಿತ್ಯ ಪ್ರಜ್ಞೆಯ ಬಗ್ಗೆ ಆಗ ಉಂಟಾಗಿದ್ದ ಗೊಂದಲ ಮುಂತಾದ ಈ ಐತಿಹಾಸಿಕ ವಿಷಯಗಳು ಕೇಳುಗರ ಮನಃಪಟಲದ ಮೇಲೆ ಅನುಕ್ರಮವಾಗಿ ಹಾಯ್ದು ಹೋದವು. ಅದೊಂದು ರಸಾನುಭವ. ಅಶ್ವತ್ಥಾಮನು ತಾನು ಕೊಂದದ್ದು ಪಾಂಡವ ಸೈನ್ಯವನ್ನಲ್ಲ, ಕುರಿಯ ಮಂದೆಯನ್ನು ಎಂದು ತಿಳಿದಾಗ, ತನ್ನ ದುಃಖವನ್ನೆಲ್ಲಾ 'ಅಯ್ಯೊ, ಪಾಪಿ' ಎಂಬ ಎರಡು ಪದಗಳಲ್ಲಿ ಭಟ್ಟಿಯಿಳಿಸಿರುವುದನ್ನು ವಿವರಿಸಲು ಆ ಪದಪುಂಜವನ್ನು ವಿವಿಧ ರೀತಿಗಳಲ್ಲಿ ಓದಿ ರಸಾನುಭವ ಮಾಡಿಸಿದ್ದು ನೆನಪಿನಲ್ಲಿ ಈಗಲೂ ಅಚ್ಚಳಿಯದೇ ಉಳಿದಿದೆ.

ನಾನು ಅಧ್ಯಾಪಕನಾಗಿದ್ದ ವಿವೇಕವರ್ಧಿನೀ ಶಾಲೆಯಲ್ಲಿ ಮಕ್ಕಳಿಗೆ ಹಿರಿಯ ಸಾಹಿತಿಗಳನ್ನು ಪರಿಚಯಿಸುವ ಕಾರ್ಯಕ್ರಮವು ನಡೆಯುತ್ತಿತ್ತು. ಪೂಜ್ಯ ರಾಜರತ್ನಂ, ಸಿದ್ಧನವನಹಳ್ಳಿ ಕೃಷ್ಣಶರ್ಮಾ, ತೀ. ನಂ. ಶ್ರೀಕಂಠಯ್ಯ, ರಂ. ಶ್ರೀ. ಮುಗಳಿ, ತಿ.ತಾ. ಶರ್ಮ ಮುಂತಾದವರನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ, ಅವರ ಭಾಷಣವನ್ನು ಕೇಳಿಸುವ ಪುಣ್ಯಾವಕಾಶ ನನ್ನದಾಗಿತ್ತು. ಹಾಗೆಯೇ ವಿ.ಸೀ. ಅವರನ್ನೂ ಅಲ್ಲಿಗೆ ಕರೆದೊಯ್ಯಬೇಕೆಂಬ ಮಹದಾಶೆಯಿಂದ ನನ್ನ ಅಣ್ಣನವರೂ ವಿ.ಸೀ. ಅವರ ಶಿಷ್ಯರೂ ಆದ ಶ್ರೀ ಸಾಮಗ ದತ್ತಾತ್ರಿ ಅವರೊಡನೆ ಅವರ ಮನೆಗೆ ಹೋದೆ. ಕೊಠಡಿಯ ನಾಲ್ಕು ಗೋಡೆಗಳಿಗೂ ಆನಿಸಿಟ್ಟಿದ್ದ ಶೆಲ್ಫ್‌ಗಳಲ್ಲಿ ನೀಟಾಗಿ ಆದರೆ ನಿಬಿಡವಾಗಿ ಸೇರಿಸಿಟ್ಟಿದ್ದ ಪುಸ್ತಕಗಳ ಮಧ್ಯೆ, ಚಾಪೆಯ ಮೇಲೆ ಒಂದು ಜಾರು ಮೇಜಿನೆದುರು ವಿ.ಸೀ. ಕುಳಿತು ನಮ್ಮನ್ನು ವಿಶಾಲವಾದ ನಗೆಯೊಡನೆ "ಬನ್ನಿ ಬನ್ನಿ" ಎಂದು ಸ್ವಾಗತಿಸಿದರು. "ನೋಡೂ" ಎಂದು ಮನೆಯವರನ್ನು ಕರೆದು ಕಾಫಿ ಕೊಡಿಸಿದರು. ಅವರು ನಮ್ಮ ಕಾರ್ಯಕ್ರಮಕ್ಕೆ ಬರಲಿಲ್ಲ. "ನಾನು ಆ ಚಿಕ್ಕ ಮಕ್ಕಳಿಗೆ ಮಾತನಾಡಲಾರೆನಪ್ಪ. ರಾಜರತ್ನಂ ಅವರನ್ನು ಕರೀರಿ. ನಿಮ್ಮ ದಾಕ್ಷಿಣ್ಯಕ್ಕೆ ಬಂದು ನಾನು ಆ ಮಕ್ಕಳಿಗೆ ಮಾತನಾಡಿದರೆ, ಅದು ಅವಕ್ಕೆ ಹಿಂಸೆ, it will be cruel , ಬ್ಯಾಡಿ" ಎಂದರು. ತುಂಬ ಹೊತ್ತು ಮಾತನಾಡಿ ಕಳಿಸಿದರು. ಅವರು "ಒಲ್ಲೆ" ಎಂದದ್ದಕ್ಕೆ ನಮಗೆ

ಬೇಸರವಾಗಲಿಲ್ಲ. ಮಕ್ಕಳ ಮೇಲಿನ ಅವರ ಕಾಳಜಿ ಅರ್ಥವಾಯಿತು. ಕೆಲವರು ಗಂಟಿಗಟ್ಟಲೆ ಮಕ್ಕಳಿಗೆ ಅರ್ಥವಾಗದ ಮಾತನಾಡಿ ಅವರನ್ನು ಗೋಳು ಹೊಯ್ದುಕೊಂಡದ್ದು ನನ್ನ ಪ್ರತ್ಯಕ್ಷ ಅನುಭವ.

೧೯೭೯ ರಲ್ಲಿ ಡಾ. ಜಿ. ಪಿ. ರಾಜರತ್ನಂ ಅವರು ದೇವರ ಶ್ರೀಪಾದಗಳನ್ನು ಸೇರಿದರು. ಅವರ ನೆನಪಿಗಾಗಿ 'ರಾಜ ಮಾರ್ಗ' ಎಂಬ ಒಂದು ಉದ್ಗ್ರಂಥವನ್ನು ನಾವು ತಂದೆವು. ಅದಕ್ಕೆ ಹಾರೈಕೆ ಕೇಳುವುದಕ್ಕೆ ನಾನೂ ಶ್ರೀ ಸೂರ್ಯನಾರಾಯಣ ಚಡಗರೂ ಅವರನ್ನು ಭೇಟಿಯಾದೆವು. ಆಗಲೇ ಅವರ ಶಕ್ತಿ ಕುಂದುತ್ತ ಬಂದಿತ್ತು. ಮಾತು ಸ್ಪಷ್ಟವಿರಲಿಲ್ಲ. ಆದರೂ ಕಷ್ಟಪಟ್ಟುಕೊಂಡೇ ರಾಜರತ್ನಂ ಅವರನ್ನು ನೆನಪಿಸಿಕೊಂಡರು. ಒಂದು ಸಂದೇಶವನ್ನು ಉಕ್ತಲೇಖನದ ಮೂಲಕ ನೀಡಿದರು. ಅದು ಆ ಗ್ರಂಥದಲ್ಲಿ ಪ್ರಮುಖವಾಗಿ ಪ್ರಕಟವಾಗಿದೆ.

ತಮ್ಮ ಕೃತಿ ರಚನೆ, ಅಧ್ಯಾಪನ, ಉಪನ್ಯಾಸಗಳ ಮೂಲಕ ಅವರು ಮಾಡಿದ ಕನ್ನಡವನ್ನು ಕಟ್ಟುವ ಕೆಲಸ ಅವಿಸ್ಮರಣೀಯವಾಗಿದೆ. ಆದರೆ ಹೆಚ್ಚು ಉಲ್ಲೇಖವಾಗದ, ಆದರೆ ತುಂಬ ಸೃಜನಾತ್ಮಕ ಕೆಲಸವೆಂದರೆ, ಸೆಂಟ್ರಲ್ ಕಾಲೇಜಿನಲ್ಲಿ ಅವರು ನಡೆಸಿದ 'ಹೊಸಗನ್ನಡ ಕವಿತೆಯನ್ನು ಓದುವ ವಿಧಾನ' ಕುರಿತ ಉಪನ್ಯಾಸ ತರಗತಿಗಳು.

ಹೊಸಗನ್ನಡ ನವೋದಯ ಕಾಲದ ಸಾಹಿತ್ಯ ಶಿಲ್ಪಿಗಳೂ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ 'ಪಂಚ ಕಲಶ ಗೋಪುರ'ದ ಐದನೆಯ ಕಲಶವೂ ಆಗಿದ್ದ ಪೂಜ್ಯ ವಿ.ಸೀ. ಅವರ ನೆನಪೇ ನಿತ್ಯ ಚೈತನ್ಯದಾಯಿ.

ಲಾಲ್‌ಬಾಗ್

ಕೆಂಪುವೂ ಸಾಲ್ಮರನ ದಾರಿಯಲಿ ನಡೆ ನಡೆದು
ಕೆಂಪುತೋಟಕೆ ಬನ್ನಿ ವಿಶ್ರಾಂತಿಗೆ,
ಒಮ್ಮೆಗೇ ಕಾಣುವುವು ಬಿಳಿ ಹಸುರು ಕೆಂಪುಗಳು
ಕಣ್ಣ ರಂಜಿಸಿ ಕೊಳುವ ಎಲ್ಲ ರಂಗುಗಳು.

ಎಲ್ಲೆಲ್ಲು ತಳಿರು, ಹೂ, ಎಲ್ಲೆಲ್ಲು ಹಸುರುಗಳು
ಹಸುರು ಹೊಂಗೆಂಪುಗಳ ಮೇಲಾಟವು
ಮರದ ಇಂಬಿಗೆ ಬಾಗಿ ಬಳುಕುತಿರುವೆಳಲತೆಯು
ತಳಿರ ತೂಗುಯ್ಯಾಲೆ ಹೂತೊಂಗಲು.

ಹಕ್ಕಿ ಹೂ ತಳಿರುಗಳ ಹರಡು ಸೌಂದರ್ಯಗಳ
ಸುಗ್ಗಿ ಸಂಭ್ರಮದೊಳಾಳಿ ಬನ್ನಿ
ಮಧುಮಾಸದೀ ಸವಿಯ ಬೆಡಗು ಹೋಹುದು ಬೇಗ
ನಡೆವಾಗ ಇದನುಣಲು ಓಡಿಬನ್ನಿ.

ವಿ.ಸೀ.

'ಕದಂಬ' ಪು. ೧೫೫-೧೭

ಹೂವಿನೊಡನೆ ನಾರು

ರಾಮಚಂದ್ರ ಉಚ್ಚಿಲ

ವಿ.ಸೀ. ಎಂದೊಡನೆ ನನ್ನ ಕಣ್ಣಿಗೆ ಕಟ್ಟುವುದು ಅವರೊಡನೆ ನಾನು ಕೆಮರಾಧಾರಿಯಾಗಿ ಮುಂಬಯಿಯಲ್ಲಿ ಸುತ್ತಾಡಿದ ದಿನಗಳು. ಅವರ ಪರಿಚಯವಾದುದು ಸ್ನೇಹಿತರಾದ ಡಾ. ಶ್ರೀನಿವಾಸ ಹಾವನೂರ್ ಮೂಲಕ, –ಮುಂಬಯಿಯಲ್ಲಿ. ಅದಕ್ಕೂ ಮೊದಲು ಅವರ ಬರೆಹಗಳನ್ನು, ಕವಿತೆಗಳನ್ನು ನಾನು ಓದಿದ್ದೆ. ಪಂಪಾಯಾತ್ರೆ, ಶಬರಿ, ಮನೆ ತುಂಬಿಸುವುದು, ಕಣ್ತುಂಬ ನೋಡೆಮ್ಮ ಹರಸು ತಾಯಿ— ಮುಂತಾದವುಗಳನ್ನು ಓದಿ ಮೆಚ್ಚಿಕೊಂಡಿದ್ದೆ. ಇಷ್ಟರಿಂದಲೆ ಅವರ ಬಗೆಗೆ ಬರೆಯುವುದು ಸ್ವಲ್ಪ ಧಾರ್ಷ್ಟ್ಯವೂ ಆದೀತೆಂಬ ಅಳುಕು ಇರುವುದು ಸ್ವಾಭಾವಿಕವಾದುದು. ಆದರೂ ಒಮ್ಮೆ ಮುಂಬಯಿಗೆ ಬಂದಾಗ ಅವರೊಡನೆ ಒಂದೆರಡು ದಿನ ನಾನು ಚಿತ್ರಗ್ರಾಹಿಯಾಗಿ ತಿರುಗಾಡಬೇಕಾಯಿತು.

ವಿ.ಸೀ.ಯವರು ಮುಂಬಯಿಯ ಕಸ್ಟಮ್ಸ್‌ಖಾತೆಯಲ್ಲಿ ಒಮ್ಮೆ ಉದ್ಯೋಗಿಯೂ ಆಗಿದ್ದರಂತೆ. ತಾನು ಉದ್ಯೋಗಿಯಾಗಿ ಇದ್ದ ಕಸ್ಟಮ್ಸ್‌ಖಾತೆಯ ಕಚೇರಿಗಳು ಇನ್ನೂ ಅಲ್ಲೇ ಇವೆಯೇ ಎಂದು ಕೇಳಿ ಖಚಿತ ಪಡಿಸಿಕೊಂಡು ಅವರು ನನ್ನೊಡನೆ 'ಬಲ್ಲಾರ್ಡ್ ಎಸ್ಟೇಟ್'ನ ಕಸ್ಟಮ್ಸ್ ಕಚೇರಿಯ ಕೆಲವು ಚಿತ್ರಗಳನ್ನು ತೆಗೆದುಕೊಡಬೇಕೆಂದು ಹೇಳಿದರು. ನಾನು ಒಳ್ಳೆಯ ಛಾಯಾಚಿತ್ರಕಾರ ಅಲ್ಲವೆಂದು ನನಗೆ ಗೊತ್ತಿದ್ದರೂ ಕಸ್ಟಮ್ಸ್ ಕಚೇರಿಗಳ ಚಿತ್ರ ತೆಗೆಯಲು ಅದೇ ಕಸುಬು ಮಾಡುವ ಚಿತ್ರಗ್ರಾಹಿಗೆ ದುಬಾರಿ ಹಣ ತೆರುವುದೇಕೆಂದು ನನಗೆ ಅನಿಸಿ, ವಿ.ಸೀ. ಯವರೊಡನೆ 'ನಾನು ತೆಗೆದರೆ ಆದೀತೆ' ಎಂದು ಕೇಳಿ 'ಆದೀತು' ಎಂದು ಅವರು ಒಪ್ಪಿದ ಮೇಲೆಯೇ, ಆ ಕೆಲಸ ಮುಗಿಸಿ ತೆಗೆದ ಚಿತ್ರಗಳನ್ನು ಎನ್‌ಲಾರ್ಜ್ ಮಾಡಿಸಿ ಅವರ ಕೈಗೆ ಕೊಟ್ಟಿದ್ದೆ. ಅವುಗಳನ್ನು ನೋಡಿ 'ನನ್ನ ಉದ್ದೇಶಕ್ಕೆ ಇವು ಧಾರಾಳ ಸಾಕು' ಎಂದೂ ವಿ.ಸೀ. ಹೇಳಿದ್ದರು. ಆ ಚಿತ್ರಗಳಲ್ಲಿ ಕೆಲವು ನನ್ನಲ್ಲಿಯೂ ಇದ್ದುವು; ಅವುಗಳ ನೆಗೆಟಿವ್ ಕೂಡಾ ಇತ್ತು. ಈಗ ಯಾವುದನ್ನೂ ನಾನು ಉಳಿಸಿಕೊಂಡಿಲ್ಲ. ಆ ಚಿತ್ರಗಳಲ್ಲಿ ಕೆಲವನ್ನು ಅವರು ತಮ್ಮ 'ಮುಂಬಯಿವಾಸ : ನೆನಪುಗಳು' ಪುಸ್ತಕದಲ್ಲಿ ಬಳಸಿಕೊಂಡರು.

ವಿ.ಸೀ. ಯವರು ಮುಂಬಯಿಗೆ ಕಾರ್ಯಾಂತರದಿಂದ ಆಗಾಗ ಬರುತ್ತಿದ್ದರು. ಒಮ್ಮೊಮ್ಮೆ ಅವರೊಡನೆ ಶಿವರಾಮ ಕಾರಂತರೂ ಇರುತ್ತಿದ್ದುದುಂಟು. ಆಗ ವಿ.ಸೀ.

ಪ್ರಾಯಃ ಹೊನ್ನಾವರದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರೆಂದು ನನ್ನ ನೆನಪು. ಮುಂಬಯಿಯಲ್ಲಿ ನಾವು ರಾತ್ರಿ ಶಾಲೆಯ ವಿದ್ಯಾರ್ಥಿಗಳ ಮೂಲಕ ಮುದ್ದಣ ಜಯಂತಿಯನ್ನು ಆಚರಿಸುತ್ತಿದ್ದೆವು. ಅಖಂಡ ಇಪ್ಪತ್ತೈದು ವರ್ಷ ರಾತ್ರಿ ಶಾಲೆಯ ಹುಡುಗರು ಈ ಜಯಂತಿಯನ್ನು ಆಚರಿಸುತ್ತಿದ್ದರು. ಮುದ್ದಣ ಜಯಂತಿಗೆ ಅಧ್ಯಕ್ಷರಾಗಿ, ಅತಿಥಿಯಾಗಿ ವಿ.ಸೀ. ಯವರು ಎಂದಾದರೂ ಬಂದಿದ್ದರೋ ಇಲ್ಲವೊ ಎಂಬುದು ನನಗೆ ನೆನಪಿಗೆ ಬರುತ್ತಿಲ್ಲ. ಆದರೆ ವಿ.ಸೀ. ಯವರಿಗೆ ಮುದ್ದಣನ ಬಗೆಗೆ ವಿಶೇಷ ಪ್ರೀತಿ ಆದರಗಳಿದ್ದುವೆಂಬುದನ್ನು ನಾನು ಬಲ್ಲೆ.

ಮುದ್ದಣ ಶತಮಾನೋತ್ಸವ ೧೯೭೦ರಲ್ಲಿ ಜರುಗಿದಾಗ ಆ ಉತ್ಸವ ಸಮಿತಿ 'ಮಹಾಕವಿ ಮುದ್ದಣ ಮತ್ತು ಯಕ್ಷಗಾನ ಚರಿತ್ರೆ' ಎಂಬ ಗ್ರಂಥವನ್ನು ಪ್ರಕಟಿಸಿತ್ತು. ಅದರಲ್ಲಿ ಮುದ್ದಣನ ಕೃತಿಗಳ ಸಮೀಕ್ಷೆಯನ್ನು – ರಾಮಾಶ್ವಮೇಧವನ್ನು ಹೊರತುಪಡಿಸಿ– ನಾನು ಬರೆದಿದ್ದೆ. ಬೆಂಗಳೂರಿನ ಇಂಡಿಯಾ ಬುಕ್ ಹೌಸ್ ಪ್ರಕಟನ ಸಂಸ್ಥೆ ಕವಿ ಕಾವ್ಯ ಪರಂಪರೆ ಎಂಬ ಶೀರ್ಷಿಕೆಯಲ್ಲಿ ಕನ್ನಡ ಕವಿಗಳ, ಅವರ ಕಾವ್ಯದ ಬಗೆಗೆ ಗ್ರಂಥಗಳನ್ನು ಪ್ರಕಟಿಸುತ್ತಿತ್ತು. ಮೊದಲಿನ ಅನೇಕ ಪುಸ್ತಕಗಳನ್ನು ವಿ.ಸೀ.ಯವರ ಸಂಪಾದಕತ್ವದಲ್ಲಿ ಅವರು ಪ್ರಕಟಿಸಿದ್ದರು. ಮುದ್ದಣನ ಕುರಿತಾದ ಗ್ರಂಥಕ್ಕೆ ಅವರೇ ಸಂಪಾದಕರಾಗಿದ್ದರು. ವಿ.ಸೀ. ಡಾ. ಹಾವನೂರರೊಡನೆ ಸಮಾಲೋಚನೆ ನಡೆಸಿ, ಮುದ್ದಣನ ಕಾಲ, ದೇಶ, ವರ್ತಮಾನಗಳ ಬಗೆಗೆ ಸ್ವತಃ ಹಾವನೂರರೇ ಬರೆಯಬೇಕೆಂದೂ ರಾಮಾಶ್ವಮೇಧದ ಬಗೆಗೆ ಡಾ. ಲಕ್ಷ್ಮೀನಾರಾಯಣ ಭಟ್ಟರು ಬರೆಯಬೇಕೆಂದೂ, ಉಳಿದ ಯಕ್ಷಗಾನ ಕೃತಿಗಳು, ಅದ್ಭುತ ರಾಮಾಯಣ ಮತ್ತು ಶ್ರೀ ರಾಮ ಪಟ್ಟಾಭಿಷೇಕಗಳ ಕುರಿತು ಈಗಾಗಲೇ ನಾನು ಬರೆದುದನ್ನು ಸಂಸ್ಕರಿಸಿ ಕೊಡಬೇಕೆಂದೂ ನಿರ್ಣಯಕ್ಕೆ ಬಂದರು. ಈ ವಿಷಯವನ್ನು ಡಾ. ಹಾವನೂರ್ ನನಗೆ ಬರೆದು ತಿಳಿಸಿದರು. 'ದೇವತೆಗಳು ಕಾಲಿಡಲು ಭಯಪಡುವ ಪ್ರದೇಶದಲ್ಲಿ' ನನ್ನಂಥವನೊಬ್ಬ ಪ್ರವೇಶಿಸುವಂತಾಯಿತು! ವಿ.ಸೀ. ಯವರೂ ಈ ಬಗ್ಗೆ ನನಗೆ ಬರೆದು ತಿಳಿಸಿದರೆಂದು ನೆನಪು. ನನಗದು ಸುಲಭವಾಗಿತ್ತು. ಹಿಂದೆ ಬರೆದುದನ್ನು ಪ್ರಾಯಃ ವಿಸ್ತರಿಸಿ, ಸಂಸ್ಕರಿಸಿ ಐಬಿಎಚ್ ಸಂಸ್ಥೆಗೆ ಕಳುಹಿಸಿಕೊಟ್ಟೆ.

ಡಾ. ಹಾವನೂರ್ ಮುಂಬಯಿಯ ಪ್ರತಿನಿಧಿಯಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ನೇಮಕವಾಗಿದ್ದರು. ಅವರೇ ಅಕಾಡೆಮಿಯ ಅಧ್ಯಕ್ಷರಿಗೆ ಹೇಳಿ ನನ್ನನ್ನು ನೇಮಕ ಮಾಡಿಸಿದ್ದರು. ೨ ವರ್ಷಗಳ ಆ ಅವಧಿಯಲ್ಲಿ ನಾಲ್ಕಾರು ಬಾರಿ ವಿ.ಸೀ. ಯವರನ್ನು ಅವರ ಮನೆಯಲ್ಲಿ ಕಂಡು ಮಾತಾಡುವ ಅವಕಾಶ ನನಗೆ ಒದಗಿಬಂತು. ಅಕಾಡೆಮಿಯ ಸರ್ವಸದಸ್ಯರ ಸಭೆ ಬೆಳಿಗ್ಗೆ ಹತ್ತು ಗಂಟೆಗೆ ಸೇರಿ ಮಧ್ಯಾಹ್ನ ಒಂದು ಗಂಟೆಯೊಳಗೆ ಮುಗಿಯುತ್ತಿತ್ತು. ನಾನು ರಾತ್ರಿ ಬಸ್ಸಿನಲ್ಲಿ ಬಂದು ಬೆಳಿಗ್ಗೆ ಹೋಟೆಲಿನಲ್ಲಿ ಸ್ನಾನ ಮುಗಿಸಿ, ಬ್ಯಾಗ್ ಅಲ್ಲೇ ಇಟ್ಟು, ಜಯನಗರದಲ್ಲಿರುವ ನಿರಂಜನರ ಮನೆಗೆ ಹೋಗಿ ಚಾ ಕುಡಿದು, ಹರಟೆ ಹೊಡೆದು, ಸರ್ವಸದಸ್ಯರ ಸಭೆಗೆ ಹಾಜರಾಗಿ ಅದನ್ನು ಮುಗಿಸಿ, ಅಲ್ಲೇ ಎಲ್ಲಾದರೂ ಊಟಮಾಡಿ ಅಲ್ಲಿ ಇಲ್ಲಿ ಸುತ್ತಾಡಿ, ನಾಲ್ಕು ಗಂಟೆಯಾಗುವಾಗ ಸಾಹಿತ್ಯ ಪರಿಷತ್ತಿನ ಹತ್ತಿರವಿರುವ ವಿ.ಸೀ. ಯವರ ಮನೆಗೆ ಹೋಗುತ್ತಿದ್ದೆ. ಅಲ್ಲಿ ಒಂದಷ್ಟು ಹೊತ್ತು ಮಾತಾಡಿ,

ರಿಕ್ಷಾ ಹಿಡಿದು ಪುನಃ ಹೋಟೆಲಿಗೆ ಬಂದು, ಬ್ಯಾಗ್ ಎತ್ತಿಕೊಂಡು ಮಂಗಳೂರಿನ ಬಸ್ ಹಿಡಿಯುತ್ತಿದ್ದೆ. ವಿ.ಸೀ. ಅವರು ಮಾತಾಡಲಿಕ್ಕೆ ತೊಡಗಿದರೆಂದರೆ ಕೇಳುವವರು ಮಂತ್ರಮುಗ್ಧರಾಗುತ್ತಿದ್ದರು. ಅವರ ಅನುಭವ, ವಿದ್ವತ್ ಅಗಾಧವಾದುದು. ಅವರನ್ನು ಭೆಟ್ಟಿಯಾದ ಸಂದರ್ಭಗಳಲ್ಲಿ ನಾನು ಒಂದೋ ಎರಡೋ ಪ್ರಶ್ನೆ ಕೇಳಿರಬಹುದು. ಅದಕ್ಕೆ ಉತ್ತರವಾಗಿ ಅವರು ಎಷ್ಟೋ ಹೊತ್ತು ತಮಗೆ ಆ ಬಗ್ಗೆ ಅನಿಸಿದ್ದನ್ನು, ಸಣ್ಣ ಮಕ್ಕಳಿಗೂ ತಿಳಿವ ರೀತಿಯಲ್ಲಿ ಹೇಳುತ್ತಿದ್ದರು. ಅಲ್ಲಿ ಆಗ ನಾನು ಕಾಣುತ್ತಿದ್ದುದು ಒಬ್ಬ ವಿಶಿಷ್ಟ ಅಧ್ಯಾಪಕನನ್ನು. ಅವರ ಅಧ್ಯಾಪನ ನನ್ನ ಮೇಲೆ ಎಷ್ಟು ಪರಿಣಾಮ ಬೀರಿತ್ತೆಂದರೆ ಮತ್ತೆ ನಾನು ಪ್ರಶ್ನೆ ಕೇಳುವುದಷ್ಟೆ ಮಾಡಿ ಸುಮ್ಮನಾಗುತ್ತಿದ್ದೆ.

ವಿ.ಸೀ. ಆಧುನಿಕ ಕವಿಗಳು. ನಾನು ತಿಳಿದಂತೆ ನಾಲ್ಕಾರು ಕವಿತಾ ಸಂಕಲನಗಳನ್ನು ಅವರು ಬರೆದು ಪ್ರಕಟಿಸಿದ್ದರು. ಅವರ ಕವಿತೆಗಳ ಬಗೆಗೆ ನಾಡಿನ ವಿಮರ್ಶಕರು – ಕನ್ನಡ ವಿಮರ್ಶಕರು – ಅದೇಕೋ ಹೆಚ್ಚಿನ ಗಮನ ಹರಿಸಿದಂತೆ ಕಾಣುವುದಿಲ್ಲ. ಅಷ್ಟೇ ಅಲ್ಲ, ಅಲ್ಲಲ್ಲಿ ಅವಕಾಶ ಸಿಕ್ಕಿದಲ್ಲೆಲ್ಲ ಅವರ ಕವಿತೆಗಳನ್ನು ತಮ್ಮ ಮೌಲ್ಯಮಾಪನದಿಂದ ಅಳೆದು ವಿಮರ್ಶಿಸಿದ್ದರು. ಅವರ ಕವಿತೆಗಳನ್ನು ತಾವು ಅಪೇಕ್ಷಿಸುವ ಒಂದು ಗುಣ ಹೀನತೆಗಾಗಿ 'ಸಪ್ಪೆ' ಎಂದವರೂ ಉಂಟು. ಅದರಿಂದ ವಿ.ಸೀ. ತುಂಬ ನೊಂದುಕೊಂಡರು. ಆದರೆ ಅಷ್ಟಕ್ಕೇ ಬಿಡದೆ ತಮ್ಮ ಕವಿತಾ ಸಂಕಲನಗಳ ಮರುಮುದ್ರಣದಲ್ಲಿ ತಾವೇ ಮುನ್ನುಡಿ ಬರೆಯುತ್ತ, ಅಂತಹ ಅಭಿಪ್ರಾಯಗಳನ್ನು ವಿವರವಾಗಿ ಚರ್ಚಿಸುತ್ತ, ನಯವಾಗಿ ಪ್ರತಿಕ್ರಿಯಿಸಿದ್ದೂ ಉಂಟು.

ವಿ.ಸೀ. ಯವರ ಬೌದ್ಧಿಕ ಕ್ಷಿತಿಜದ ಆಳ ಅಗಲ ಹಿರಿದಾದದ್ದು. ಅದನ್ನು ವಿವರವಾಗಿ ಹೇಳುವುದು, ಅವರನ್ನು ನಾಲ್ಕಾರು ಬಾರಿ ಮಾತ್ರಕ್ಕೆ ಕಂಡು ಮಾತಾಡಿಸಿದ ನನ್ನ ಎಣಿಕೆಗೆ ಮೀರಿದ್ದು. ಆದರೆ ಈ ನಾಲ್ಕಾರು ಬಾರಿಯಾದರೂ ಅವರನ್ನು ಕಂಡು ಮಾತಾಡಿಸುವ ಯೋಗ ದೊರಕಿದ ನಿಗೂಢವನ್ನು ಪ್ರಸ್ತಾವಿಸಿ ಈ ಬರೆಹ ಮುಗಿಸುತ್ತೇನೆ. ಅದು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ನಾನು ಕಾಸರಗೋಡಿನ ಪ್ರತಿನಿಧಿಯಾಗಿ ನೇಮಕವಾದ ಕತೆ. ವಾಸ್ತವವಾಗಿ ನಾನು ಮಂಗಳೂರು ತಾಲೂಕಿನವನು. ಆದರೆ ನನ್ನ ಊರಿರುವುದು ಕರ್ನಾಟಕ–ಕೇರಳದ ಗಡಿಯ ಪಕ್ಕದಲ್ಲಿ. ಆ ಊರು ಕಾಸರಗೋಡಿಗೆ ಸೇರಿದ್ದೆಂದು ತಿಳಿದುಕೊಂಡು ನನಗೂ ಅಕಾಡೆಮಿಯಲ್ಲಿ ಒಂದು ಪ್ರಾತಿನಿಧ್ಯ ದೊರೆಯಿತು. ಅದರಿಂದ ಲಾಭವಾದದ್ದು ವಿ.ಸೀ. ಯವರ ಕೊನೆಯ ದಿನಗಳಲ್ಲಿ ಅವರನ್ನು ಕಂಡು ಮಾತಾಡಿಸುವ ಅವಕಾಶ, ಅವರ ವಿಚಾರಗಳನ್ನು ಆಸಕ್ತಿಯಿಂದ ಕೇಳುವ ಭಾಗ್ಯ. ಅದೇ ಒಂದು ವಿಶೇಷವಲ್ಲವೆ?

ಸ್ಮರಣೆಯೇ ಪವಿತ್ರ

ಸುರೇಂದ್ರ ದಾನಿ

ನಾನು ವಿ.ಸೀ.ಯವರನ್ನು ಬಹಳ ಹತ್ತಿರದಿಂದಾಗಲಿ, ವಿಶೇಷ ಪರಿಚಯದಿಂದಾಗಲಿ ಬಲ್ಲೆನೆಂಬ ಅಭಿಮಾನ ನನಗಿಲ್ಲ. ಆದರೆ ಅವರ ಅಗಾಧ ಪಾಂಡಿತ್ಯ ಮತ್ತು ಉನ್ನತ ವ್ಯಕ್ತಿತ್ವಕ್ಕೆ ಮಾರು ಹೋದವರಲ್ಲಿ ನಾನೊಬ್ಬ ಎಂದು ಕೈ ಎತ್ತಿ ಹೇಳಬಲ್ಲೆ.

೧೯೬೦ರ ದಶಕ. ಆಗ ನಾನು ಬೆಂಗಳೂರಿನಲ್ಲಿದ್ದೆ. ನಮ್ಮ ಪತ್ರಿಕೆಗೆ ಅಲ್ಲಿಯ ಹಿರಿಯರನ್ನು ಲೇಖನ ಬರೆಯುವಂತೆ ಕೇಳಿಕೊಳ್ಳುವ ಹೊಣೆಯನ್ನು ನನಗೆ ಒಪ್ಪಿಸಿದ್ದರು. ಆ ಸಂದರ್ಭದಲ್ಲಿ ನಾನವರನ್ನು ಕಾಣಲು ಹೋಗಿದ್ದೆ. ಆಗ ಅವರು ಚಾಮರಾಜಪೇಟೆಯ ಎರಡನೇ ಬೀದಿಯಲ್ಲಿದ್ದರು. ತೀರ ಚಿಕ್ಕದಾದ ನಿರಾಡಂಬರ ಮನೆ. ಅವರು ಕೂಡುವ ಕೋಣೆಯೂ ಅಷ್ಟೇ. ಯಾವ ಪೀಠೋಪಕರಣಗಳಿಲ್ಲದೆ ನೆಲದ ಮೇಲೆ ಚಾಪೆ ಹಾಸಿಕೊಂಡೇ ಕೂಡುತ್ತಿದ್ದರು. ಅವರ ಓದು ಬರಹಗಳಿಗೂ ಅಷ್ಟೇ. ಮನೆಯಲ್ಲಿ ಅವರೆಂದೂ ಮೇಜು ಕುರ್ಚಿಗಳನ್ನು ಉಪಯೋಗಿಸಲೇ ಇಲ್ಲ. ವೇಷ ಭೂಷಣಗಳಲ್ಲೂ ಅಷ್ಟೇ. ಮನೆಗೆ ಯಾರೋ ಅತಿಥಿಗಳು ಬಂದಿದ್ದಾರೆಂದು ವಿಶೇಷ ಬಟ್ಟೆಯನ್ನು ಧರಿಸುವ ವಿಚಾರವೇ ಅವರಿಗೆ ಬರುತ್ತಿರಲಿಲ್ಲ. ಎಷ್ಟೋ ಸಲ ಅವರನ್ನು ನಾನು ಧೋತರ ಮತ್ತು ಬನಿಯನ್ ಧರಿಸಿಯೇ ಬಂದಿದ್ದವರೊಡನೆ ಗಂಟೆಗಟ್ಟಲೆ ಮಾತನಾಡುತ್ತಿದ್ದುದನ್ನು ಕಂಡಿದ್ದೇನೆ.

ವಿ.ಸೀ.ಯವರನ್ನು ನಾನು ಆ ಮೊದಲೇ ನೋಡಿರಲಿಲ್ಲವೆಂದಲ್ಲ. ಮೊಹರೆ ಹಣುಮಂತರಾಯರಿದ್ದಾಗ ಅವರನ್ನೊಮ್ಮೆ ಹುಬ್ಬಳ್ಳಿಗೆ ಕರೆಯಿಸಿಕೊಂಡು 'ಸಂಯುಕ್ತ ಕರ್ನಾಟಕ'ದ ಪರವಾಗಿ ಸತ್ಕರಿಸಲಾಗಿತ್ತು. ಅಷ್ಟರಲ್ಲೇ ನಾನು ಅವರ 'ಪಂಪಾಯಾತ್ರೆ' ಮತ್ತು ಇತರ ಕೆಲ ಬರಹಗಳ ಮೂಲಕ ಅವರ ವ್ಯಕ್ತಿತ್ವದ ಬಗ್ಗೆ ಒಂದು ಚಿತ್ರವನ್ನು ಮೂಡಿಸಿಕೊಂಡಿದ್ದೆ. ನಾನು ಮನದಲ್ಲಿ ರೂಪಿಸಿಕೊಂಡ ವ್ಯಕ್ತಿತ್ವಕ್ಕೂ ಪ್ರತ್ಯಕ್ಷ ಪರಿಚಯ ಮಾಡಿಕೊಂಡಾಗ ಕಂಡ ವ್ಯಕ್ತಿತ್ವಕ್ಕೂ ಬಹಳ ವ್ಯತ್ಯಾಸವಿರಲಿಲ್ಲ. ಅವರೊಡನೆ ಮಾತಾಡಿದಷ್ಟೂ ವಿಚಾರ ವಿನಿಮಯ ನಡೆಸಿದಷ್ಟೂ ಅವರ ಪಾಂಡಿತ್ಯದ ಆಳದ ಬಗ್ಗೆ ಮೂಗಿನ ಮೇಲೆ ಬೆರಳಿಟ್ಟು ಅಚ್ಚರಿ ಪಡುವಂತಾಗುತ್ತಿತ್ತು. ಲಂಡನ್ 'ಇಕಾನಮಿಸ್ಟ್' ಪತ್ರಿಕೆಯನ್ನು ನಿಯಮಿತ ಚಂದಾದಾರರಾಗಿ ಅವರು ತರಿಸಿ ಓದುತ್ತಿರುವದನ್ನು ನೋಡಿ

ನಾನು ತಲೆದೂಗಿದೆ. ಕೆಲವೇ ಪ್ರತಿಷ್ಠೆಯ ಗ್ರಂಥಾಲಯಗಳಲ್ಲಿ ಮಾತ್ರ ಅದು ನೋಡಲು ಸಿಗುತ್ತಿತ್ತೇ ಹೊರತು ವೈಯಕ್ತಿಕವಾಗಿ ಚಂದಾ ತುಂಬಿ – ಅದರಲ್ಲಿಯೂ Air mail ನಲ್ಲಿ– ಅದನ್ನು ತರಿಸಿಕೊಳ್ಳುವವರನ್ನು ನಾನು ನೋಡಿದ್ದು ಅದೇ ಮೊದಲು.

ಅವರು ನಮ್ಮ ಪತ್ರಿಕೆಗೆ ತಮ್ಮ ಕಾಲೇಜು ದಿನಗಳನ್ನು ಕುರಿತು ಲೇಖನ ಮಾಲೆಯನ್ನು ಬರೆಯಲೊಪ್ಪಿದರು. ಅದರಲ್ಲೂ ಅಷ್ಟೇ ನಿಖರವಾದ ಶಿಸ್ತು ಮತ್ತು ಚೊಕ್ಕಟತನ. ಅವರೆಂದೂ ತಮ್ಮ ಲೇಖನಕ್ಕಾಗಿ ನನ್ನನ್ನು ಕಾಯಿಸಲಿಲ್ಲ. ನಿಗದಿತ ದಿನಕ್ಕೆ ಸಮಯಕ್ಕೆ ಸರಿಯಾಗಿ ಲೇಖನ ತಲುಪುತ್ತಿತ್ತು. ಅವರ ಕೈಬರಹ ಅಷ್ಟೊಂದು ಸುಂದರವೆಂದು ಹೇಳಲಾಗದಿದ್ದರೂ ಸುವಾಚ್ಯವಾಗಿರುತ್ತಿತ್ತು. ಆದರೆ ಲೇಖನಗಳನ್ನು ಸ್ವಹಸ್ತದಿಂದಲೇ ಅವರು ಬರೆಯುತ್ತಿದ್ದುದು ಅಪರೂಪ. ತಮ್ಮ ಕಿರಿಯ ಮಿತ್ರರಿಗೆ ಹೇಳಿ ಬರೆಸುತ್ತಿದ್ದರು.

ವಿ.ಸೀ.ಯವರದು ತುಸು ಗಂಭೀರ ಸ್ವಭಾವ. ಎಲ್ಲರೊಡನೆ ಸುಲಭವಾಗಿ ಬೆರೆಯುವವರಲ್ಲ. ಮಾತುಕತೆಯಲ್ಲೂ ಅಷ್ಟೇ. ಒಣ ಹರಟೆಯೆಂಬುದರಲ್ಲಿ ಅವರಿಗೆ ಆಸ್ಥೆ ಇರಲಿಲ್ಲ. ವಿಷಯಗಳನ್ನು ಗಂಭೀರವಾಗಿ ಚರ್ಚಿಸುವಲ್ಲಿ ಅವರ ಒಲವು ಜಾಸ್ತಿ. ಒಮ್ಮೊಮ್ಮೆ ಹಾಗೆ ಮಾತಾಡುವಾಗ ಆವೇಶವೂ ಕಂಡು ಬರುತ್ತಿತ್ತು. ಹಾಗೆಂದು ಅವರು ಹಟಮಾರಿಗಳಾಗಿರಲಿಲ್ಲ. ಎರಡನೆಯವರ ವಾದವನ್ನೂ ಶಾಂತವಾಗಿ ಕೇಳಿಕೊಳ್ಳುತ್ತಿದ್ದರು.

ಅವರದು ಪ್ರಾಮಾಣಿಕತೆಯ ಪರಾಕಾಷ್ಠೆ. ಅವರಿಗದು ನಿತ್ಯ ಜೀವನವಾಗಿತ್ತು, ಜೀವನದ ಉಸಿರಾಗಿತ್ತು. ಆದ್ದರಿಂದ ಅವರ ಸ್ಮರಣೆಯೇ ಇಂದು ಪವಿತ್ರವೆನಿಸೀತು ಎಂದರೆ ಅತಿಶಯೋಕ್ತಿ ಅಲ್ಲ.

ವಿಶ್ವಾಸ

ಮಾನವನೆತ್ತರ ಆಗಸದೇರಿಗೆ
ಏರುವ ವರೆಗೂ ಏರೇವು;
ಮಾನವ ಹೃದಯಕೆ ವಿಶ್ವವಿಶಾಲತೆ
ಹಾಯುವ ವರೆಗೂ ಹಾದೇವು.

ಇಹದಲಿ ಒಪ್ಪಲು ಆಗದ ಪರವನು
ಬಯಕೆಯು ಕರೆವುದೆ ಕೈಬಾಚಿ?
ಬಾಳನು ಶೋಧಿಸಿ ಶುಚಿಯನು ಬೆಳೆದರೆ
ಇಹವೇ ಅರಳದೆ ಪರವಾಗಿ?

ವಿ.ಸೀ.

ಅತ್ಯಪರೂಪ ವ್ಯಕ್ತಿ

ನರಸಿಂಹಸ್ವಾಮಿ

ವಿ.ಸೀ. ಅವರಿಗೂ ನಮ್ಮ ತಂದೆ ಶ್ರೀ ಹಿರಿಯಣ್ಣ ಶರ್ಮಾ ಅವರಿಗೂ ಬಹಳ ಸ್ನೇಹ. ನಮ್ಮ ತಂದೆ ಬೆಂಗಳೂರಿನ ಬಳೇ ಪೇಟೆಯಲ್ಲಿ "ರಾಮಮೋಹನ ಕಂಪನಿ" ಮುದ್ರಣಾಲಯ ಮತ್ತು ಪ್ರಕಟನ ಸಂಸ್ಥೆಯನ್ನು ನಡೆಸುತ್ತಿದ್ದುದರಿಂದ, ವಿ.ಸೀ. ಅವರು ೧೯೨೩ರಿಂದ ಬಹಳ ಪರಿಚಿತರು. ನಮ್ಮ ತಂದೆ ಅವರ ಕೆಲವು ಪುಸ್ತಕಗಳನ್ನು ಪ್ರಕಟಿಸಿದ್ದರು. ಪ್ರಕಟನ ಸಂಸ್ಥೆಯನ್ನು ೧೯೩೫ರಲ್ಲಿ ಮುಚ್ಚಿದ್ದರೂ ವಿ.ಸೀ. ಮತ್ತು ನಮ್ಮ ತಂದೆಯವರ ಸ್ನೇಹ ಮೊದಲಿಗಿಂತ ಜಾಸ್ತಿಯಾಗಿತ್ತು. ನಮ್ಮ ತಂದೆಯವರು ಹಳ್ಳಿಯಿಂದ ಬೆಂಗಳೂರು, ಮೈಸೂರಿಗೆ ಬಂದಾಗಲೆಲ್ಲಾ ವಿ.ಸೀ. ಅವರ ಮನೆಗೆ ಹೋಗಿ, ಮನೆಯವರೆಲ್ಲರ ಆರೋಗ್ಯ ವಿಚಾರಿಸಿ, ಹೊಸ ಬರಹದ ಮುನ್ನಡೆಯನ್ನು ಚರ್ಚಿಸಿ ಕಾಫಿ ಕುಡಿದು, ಅವರ ಹಸ್ತಾಕ್ಷರವುಳ್ಳ ಹೊಸ ಪುಸ್ತಕಗಳ ಪ್ರತಿಗಳನ್ನು ಪಡೆದು ಬರುತ್ತಿದ್ದರು. ನಾನು ಚಿಕ್ಕವನಾಗಿದ್ದಾಗ ಕೆಲವು ಸಾರಿ ನಮ್ಮ ತಂದೆಯ ಜೊತೆ ವಿ.ಸೀ. ಅವರ ಮನೆಗೆ ಹೋಗಿದ್ದು ನೆನಪುಂಟು.

೧೯೪೬ರ ಜೂನ್‌ನಲ್ಲಿ ನಾನು ಮೈಸೂರಿನ ಆಗಿನ ಇಂಟರ್ ಮೀಡಿಯೆಟ್ ಕಾಲೇಜಿಗೆ ದಾಖಲಾದೆ. ಆ ಸಮಯದಲ್ಲಿ ಮೈಸೂರಿಗೆ ಬಂದಿದ್ದ ನಮ್ಮ ತಂದೆ ನನ್ನನ್ನು ಶಾರದಾ ವಿಲಾಸ ಕಾಲೇಜಿನ ಹಿಂಭಾಗದಲ್ಲಿದ್ದ ವಿ.ಸೀ. ಅವರ ಮನೆಗೆ ಕರೆದುಕೊಂಡು ಹೋದರು. ವಿ.ಸೀ. ಅವರ ಕೋಣೆಯ ಗೋಡೆಯ ಸುತ್ತಲೂ ಇದ್ದ ಕಪಾಟುಗಳಲ್ಲಿ ಅಸಂಖ್ಯ ಪುಸ್ತಕಗಳನ್ನು ಓರಣವಾಗಿ ಜೋಡಿಸಿಟ್ಟಿದ್ದರು. ಮೂಲೆಯ ಮೇಜಿನ ಮೇಲೆ ಅನೇಕ ಇಂಗ್ಲಿಷ್ ಮತ್ತು ಕನ್ನಡದ ನಿಯತಕಾಲಿಕೆಗಳೂ ಮತ್ತು ದಿನ ಪತ್ರಿಕೆಗಳೂ ಇದ್ದವು. ಕೋಣೆಯ ಮಧ್ಯದಲ್ಲಿ ನೆಲದ ಮೇಲೆ ಹಾಸಿದ್ದ ಚಾಪೆಯ ಮೇಲೆ ಒಂದು ಹಾಸಿಗೆಯನ್ನು ಸುತ್ತಿ ಇಟ್ಟಿದ್ದರು. ನಾವು ಕೋಣೆಯನ್ನು ಪ್ರವೇಶಿಸಿದೊಡನೆ, ಚಾಪೆಯ ಮೇಲೆ ಹಾಸಿಗೆಗೆ ಒರಗಿಕೊಂಡು ದಿನಪತ್ರಿಕೆಯನ್ನು ಓದುತ್ತಿದ್ದ ವಿ.ಸೀ. ಅವರು "ಬನ್ನಿ ಶರ್ಮಾ, ಇದೇನು ಮೈಸೂರಿಗೆ ಬಂದಿದ್ದೀರಿ. ಜೊತೆಯಲ್ಲಿರುವವರಾರು?" ಎಂದು ಪ್ರಶ್ನಿಸಿ ಕುಳಿತುಕೊಳ್ಳಲು ಸೂಚಿಸಿದರು. ನಾವು ಚಾಪೆಯ ಇನ್ನೊಂದು ಭಾಗದಲ್ಲಿ ಕೂತೆವು. ನನ್ನನ್ನು ಪರಿಚಯಿಸಿದ ಕೂಡಲೆ "ಯಾವ ಊರಲ್ಲಿ ಎಸ್.ಎಸ್.ಎಲ್.ಸಿ ಮಾಡಿದಿರಿ? ಕಾಲೇಜಿಗೆ ಸೇರಿಸಲು

ಯಾರಿಗಾದರೂ ಹೇಳಬೇಕೆ?" ಎಂದೆಲ್ಲಾ ವಿಚಾರಿಸಿದರು. ನಾನು ಸಿ.ಬಿ.ಜಿ ತೆಗೆದುಕೊಂಡು ಜೂನಿಯರ್ ಇಂಟರ್‌ಗೆ ಸೇರಿದ್ದೇನೆಂದೂ ಲಕ್ಷ್ಮೀಪುರಂನಲ್ಲಿರುವ ಹೊ. ಕ. ಹಾಸ್ಟೆಲಿನಲ್ಲಿ ಪ್ರವೇಶ ಪಡೆದಿರುವುದಾಗಿಯೂ ತಿಳಿಸಿದೆನು. ಒಳಗಿನಿಂದ ಕಾಫಿ ಬಂತು. ವಿ.ಸೀ. ಅವರು "ಶರ್ಮಾ, ನೀವೇನೂ ಯೋಚನೆ ಮಾಡಬೇಡಿ. ನಿಮ್ಮ ಹುಡುಗನನ್ನು ನಾನು ನೋಡಿಕೊಳ್ಳುತ್ತೇನೆ" ಎಂದರು. "ನೀವು ತಿಂಗಳಿಗೆ ಒಂದೆರಡು ಸಾರಿ ಈ ಹೊತ್ತಿಗೆ ನಮ್ಮ ಮನೆಗೆ ಬಂದು ನನ್ನಿಂದಾಗಬೇಕಾದ ಎಲ್ಲ ಸಹಾಯವನ್ನೂ ಪಡೆದು ಕೊಳ್ಳಿ. ಯಾವುದಕ್ಕೂ ದಾಕ್ಷಿಣ್ಯ ಪಟ್ಟುಕೊಳ್ಳಬೇಡಿ. ಅವಶ್ಯ ಎನಿಸಿದರೆ ಮಹಾರಾಜಾ ಕಾಲೇಜಿನಲ್ಲೇ ನೋಡಿ" ಎಂದು ನನ್ನನ್ನು ಹುರಿದುಂಬಿಸಿದರು.

ನಾನು ವಿ.ಸೀ. ಅವರ ಮನೆಗೆ ಆಗಾಗ್ಗೆ ಹೋಗಿ ಬರುತ್ತಿದ್ದೆ. ಆಗಸ್ಟ್ ೧೯೪೬ರಲ್ಲಿ ಒಂದು ದಿನ ವಿ.ಸೀ. ಅವರು "ಹಾಫ್ ಫ್ರೀಷಿಪ್‌ಗೆ ಅರ್ಜಿ ಹಾಕಿದ್ದೀರಾ" ಎಂದರು. ನನ್ನ "ಹೂಂ" ಕೇಳಿದ ತಕ್ಷಣ "ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ಅಡ್ವೊಕೇಟ್ ಕೃಷ್ಣಪ್ಪನವರು ಇದ್ದಾರೆ. ಅವರನ್ನು ಹೋಗಿ ನೋಡಿ" ಎಂದು ತಿಳಿಸಿದರು. ಅದರಂತೆ ನಾನು ಶ್ರೀ ಕೃಷ್ಣಪ್ಪನವರನ್ನು ಭೆಟ್ಟಿ ಆದಾಗ ಅವರು "ವಿ.ಸೀ. ಅವರು ಹೇಳಿದ ಮೇಲೆ ಮುಗಿದೇ ಹೋಯಿತು. ನಿನಗೆ ಹಾಫ್ ಫ್ರೀಷಿಪ್ ಆಯಿತೆಂದೇ ತಿಳಿದುಕೋ" ಎಂದರು. ವಿ.ಸೀ. ಅವರ ಬಗ್ಗೆ ಬೇರೆಯವರ ವಿಶ್ವಾಸ ಮತ್ತು ಗೌರವ ಎಷ್ಟಿತ್ತೆಂದು ತಿಳಿಯುತ್ತದೆ.

ನಾನು ಮೈಸೂರಿನಲ್ಲಿ ಇಂಟರ್ ಮೀಡಿಯೆಟ್ ಮುಗಿಸಿ ೧೯೪೮ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ದಾಖಲಾದೆ. ವಿ.ಸೀ. ಆಗ ಬೆಂಗಳೂರಲ್ಲಿದ್ದರು. ಬೆಂಗಳೂರಲ್ಲೂ ನಾನು ವಿ.ಸೀ. ಅವರ ಚಾಮರಾಜಪೇಟೆಯ ಮನೆಯಲ್ಲಿ ತಿಂಗಳಿಗೆ ಒಂದೆರಡು ಬಾರಿ ಅವರನ್ನು ಭೆಟ್ಟಿ ಆಗುತ್ತಿದ್ದೆ. ಒಂದು ಬಾರಿ "ಎಲ್ಲಾ ಪುಸ್ತಕಗಳನ್ನು ತೆಗೆದು ಕೊಂಡಿದ್ದೀರಾ" ಎಂದು ವಿಚಾರಿಸಿ, ಕುಳಿತಿದ್ದವರು ಎದ್ದು ಹೋಗಿ ಎದುರಿಗಿದ್ದ ಕಪಾಟಿನಲ್ಲಿ ಕೆಲವು ಪುಸ್ತಕಗಳನ್ನು ಹುಡುಕಿ, ಅಲ್ಲಿದ್ದ ಶ್ರೀಮಾನ್ ಡಿ. ವಿ. ಗುಂಡಪ್ಪನವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಪುಸ್ತಕವನ್ನು ನನಗೆ ಕೊಟ್ಟು "ಈ ವರ್ಷದ ಈ ಪಠ್ಯಪುಸ್ತಕವನ್ನು ಕೊಂಡುಕೊಳ್ಳಬೇಡ" ಎಂದು ಹೇಳಿದರು. ಆ ಪುಸ್ತಕ ಈಗಲೂ ನನ್ನಲ್ಲಿದೆ.

ವಿ.ಸೀ. ಅವರು ಎಕನಾಮಿಕ್ಸ್‌ನಲ್ಲಿ ಎಂ. ಎ. ಮಾಡಿದ್ದರೂ ಕನ್ನಡದ ಬೋಧಕರಾಗಿದ್ದರು. ಅವರು ಕನ್ನಡವನ್ನು ಇಂಗ್ಲೀಷಿನಲ್ಲಿ ಪಾಠ ಮಾಡುತ್ತಿದ್ದರೆಂದು ಅವರ ಶಿಷ್ಯರು ಹೇಳುತ್ತಿದ್ದರು. ನನಗೆ ಕಾಲೇಜಿನಲ್ಲಿ ಅವರ ತರಗತಿಯಲ್ಲಿ ಕುಳಿತು ಪಾಠವನ್ನು ಕೇಳುವ ಸುಯೋಗವೂ ಇತ್ತು. ಎಂತಹವರೂ ಸುಲಭವಾಗಿ ಕನ್ನಡವನ್ನು ಕನ್ನಡ ಮತ್ತು ಇಂಗ್ಲೀಷಿನಲ್ಲಿ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ತಿಳಿಸುತ್ತಿದ್ದರು. ವಿ.ಸೀ. ಅವರದ್ದು ಸರಳ ಬದುಕು. ಯಾವಾಗಲೂ ಅಚ್ಚ ಬಿಳುಪಿನ ವಸ್ತ್ರಗಳಲ್ಲೇ ಇರುತ್ತಿದ್ದರು. ಮನೆಯಲ್ಲಿ ಮಲ್ ಪಂಚೆ, ಮಲ್ಲಿನ ತುಂಡು ತೋಳಿನ ಅಂಗಿ. ಹೊರಗೆ ಬಂದಾಗ ಬಿಳಿಯ ಕಚ್ಚೆಯ ಪಂಚೆ, ಬಿಳಿಯ ಶರ್ಟು, ಕುತ್ತಿಗೆವರೆಗೆ ಮುಚ್ಚುವ ಕೋಟು, ತಲೆಯ ಮೇಲೆ ಮಲ್ಲಿನ ಪೇಟ, ಕನ್ನಡಕ, ಚಪ್ಪಲಿ, ಈ ಉಡುಪಿನಲ್ಲೇ ಅವರು ಎಲ್ಲರಿಗೂ ಪರಿಚಿತರು.

೧೯೫೦ರ ಕೊನೆಯಲ್ಲಿ ನಾನು ಕುಣಿಗಲ್ಲಿನ ಟೌನ್ ಹೈಸ್ಕೂಲಿನಲ್ಲಿ ಉಪಾಧ್ಯಾಯನಾಗಿ ಕೆಲಸ ಮಾಡುತ್ತಿದ್ದೆ. ಆಗ ವಿ.ಸೀ. ಅವರನ್ನು ನಮ್ಮ ಶಾಲೆಯ ವಾರ್ಷಿಕ ದಿನಾಚರಣೆಯ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಬೇಕೆಂದು ಬೆಂಗಳೂರಿಗೆ ಹೋಗಿ ಕೇಳಿ ಕೊಂಡೆ. ಅವರ ಜೊತೆಗೆ ಪ್ರೊ. ಸಿ. ಆರ್. ನರಸಿಂಹಶಾಸ್ತ್ರಿಗಳು ಅಧ್ಯಕ್ಷರಾಗಿರಲು ಒಪ್ಪಿಕೊಂಡಿರುವುದಾಗಿ ತಿಳಿಸಿದೆ. ವಿ.ಸೀ. ತಮ್ಮ ಒಪ್ಪಿಗೆಯನ್ನು ಸೂಚಿಸಿದರು. ಸಮಾರಂಭದ ದಿನ ವೇಳೆಗೆ ಸರಿಯಾಗಿ ಇಬ್ಬರೂ ಆಗಮಿಸಿದರು. ಕುಣಿಗಲ್ಲಿನ ಪ್ರವಾಸಿ ಮಂದಿರಲ್ಲಿ ಅವರನ್ನು ಇಳಿಸಲಾಗಿತ್ತು. ಸಂಜೆ ವಾರ್ಷಿಕ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ, ಅವರ ಮನಮುಟ್ಟುವಂತೆ, ವಿದ್ಯಾರ್ಥಿ ಜೀವನದ ಸುಖ ದುಃಖಗಳನ್ನೆಲ್ಲಾ ವರ್ಣಿಸಿ, ಅಮೋಘ ಕರತಾಳಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು. ನಂತರ ಬಹುಮಾನಗಳನ್ನು ವಿತರಿಸಿ, ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರುಗಳು ಆಡಿದ ನಾಟಕಗಳನ್ನು ವೀಕ್ಷಿಸಿ, ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಮಾರನೆ ದಿನ ಪ್ರವಾಸಿ ಮಂದಿರದ ಪಕ್ಕದಲ್ಲಿದ್ದ 'ಕುಣಿಗಲ್ ಸ್ಪಡ್ ಫಾರಂ'ಗೆ ಭೇಟಿ ನೀಡಿ' ಕುದುರೆಗಳನ್ನು ಬೆಳೆಸುವ ರೀತಿಯನ್ನು ಆಮೂಲಾಗ್ರವಾಗಿ ಪರಿಚಯ ಮಾಡಿಕೊಂಡರು. ಸಾಹಿತ್ಯಾಭ್ಯಾಸದ ಜೊತೆಗೆ ಇತರ ಹವ್ಯಾಸಗಳ ಬಗ್ಗೆ ಅವರಿಗಿದ್ದ ಆಸಕ್ತಿಯನ್ನು ಇದು ತೋರಿಸುತ್ತದೆ.... ವಿಶ್ರಮಿಸುತ್ತಿದ್ದಾಗ ಕುಣಿಗಲ್ ಹೈಸ್ಕೂಲಿನ ಕಾರ್ಯದರ್ಶಿಯಾಗಿದ್ದ ಶ್ರೀಮಾನ್ ಕೆ. ವಿ. ಗೋವಿಂದ ಶೆಟ್ಟರಿಗೆ, ತಮ್ಮ 'ಬೆಳುದಿಂಗಳು' ಮತ್ತು "ಭಾರತದ ಐವರು ಮಹನೀಯರು" ಎಂಬ ಪುಸ್ತಕಗಳನ್ನು ಅಚ್ಚು ಮಾಡಿಸಿ ಪ್ರಕಟಿಸಲು ಯಾವ ಷರತ್ತನ್ನೂ ಹಾಕದೆ ಒಪ್ಪಿಗೆಯಿತ್ತರು. ಇದೇ ಅವರ ದೊಡ್ಡ ಗುಣ.

ವಿ.ಸೀ. ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ ನಿವೃತ್ತರಾದ ಮೇಲೆ ಉತ್ತರ ಕನ್ನಡ ಜಿಲ್ಲೆಯ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದಾಗಲೂ ಕೆಲವೊಮ್ಮೆ ಭೆಟ್ಟಿಯಾಗುತ್ತಿದ್ದೆ.

ನಮ್ಮ ತಂದೆಯವರ ೮೦ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ವಿ.ಸೀ. ಅವರನ್ನು ಸಮಾರಂಭಕ್ಕೆ ಆಹ್ವಾನಿಸಲು ಹೋಗಿದ್ದೆ. "ಓಹೋ ಶರ್ಮನಿಗೆ ಎಂಭತ್ತು ವರ್ಷ ಆಗಿ ಹೋಯ್ತು. ಖಂಡಿತ ಬರುತ್ತೇನೆ. ಆದರೆ ಹೆಚ್ಚು ಹೊತ್ತು ಉಳಿಸಿಕೊಳ್ಳಬೇಡಿ" ಎಂದು ಸಂತೋಷದಿಂದ ಒಪ್ಪಿಗೆ ಕೊಟ್ಟರು. ಅಂದು ಹೋಮ ಪೂಜೆ ನಡೆಯುತ್ತಿದ್ದಾಗಲೇ ವಿ.ಸೀ. ಅವರು ಆಗಮಿಸಿ ಎದುರಿಗೇ ಕೂತು ಎಲ್ಲವನ್ನೂ ವೀಕ್ಷಿಸಿ, ಆಗಮಿಸಿದ್ದ ಶ್ರೀಮಾನ್ ಗೊರೂರು ರಾಮಸ್ವಾಮಿ ಐಯ್ಯಂಗಾರ್ ಜೊತೆ ಮಾತಾಡಿ, ಭೋಜನದ ನಂತರ ಇಬ್ಬರೂ ನಮ್ಮ ತಂದೆಯನ್ನು ಅಭಿನಂದಿಸಿ ಜೊತೆಯಲ್ಲಿ ತಮ್ಮ ಮನೆಗಳಿಗೆ ಹೊರಟರು. ಇದೇ ವಿ.ಸೀ. ಅವರು ನಮ್ಮ ಮನೆಗೆ ಕೊಟ್ಟ ಕೊನೆಯ ಭೇಟಿ.

ನಮ್ಮ ತಂದೆ–ತಾಯಿಯವರು ವಾರಣಾಸಿಗೆ ಹೋಗಲು ನಿಶ್ಚಯಿಸಿದಾಗ, ವಾರಣಾಸಿಯಲ್ಲಿದ್ದ ಅವರ ಮಗಳ ಮನೆಯಲ್ಲೇ ಇಳಿದು ಕೊಳ್ಳಲು ಸೂಚಿಸಿ, ಅವರಿಗೆ ಪತ್ರ ಬರೆದು, ಅನುಕೂಲಗಳನ್ನು ಏರ್ಪಡಿಸಿ ಕೊಟ್ಟಿದ್ದರು. ನಮ್ಮ ತಾಯಿ ಈಗಲೂ ಅದನ್ನು ನೆನೆಸಿಕೊಳ್ಳುತ್ತಾರೆ.

ವಿ.ಸೀ. ಅವರು ನಿಧನರಾದಂದು ನಮ್ಮ ತಂದೆಯವರ ಜೊತೆ ಹೋಗಿ, ಅವರ ಮನೆಯವರ ದುಃಖದಲ್ಲಿ ಭಾಗಿಗಳಾಗಿದ್ದೆವು. ನಮ್ಮ ತಂದೆಯವರು ಕಡೆಯವರೆಗೂ ಅಲ್ಲಿದ್ದು, ಅಂತಿಮ ಸಂಸ್ಕಾರ ಮುಗಿಸಿಕೊಂಡು ಹಿಂತಿರುಗಿದರು.

ವಿ.ಸೀ. ಅವರಂಥ ವ್ಯಕ್ತಿ ಅತ್ಯಪರೂಪ. ಅವರಿಗೆ ನಮ್ಮ ಗೌರವಪೂರ್ವಕ ನಮನ.

ಹೆಮ್ಮರ

ಅವರವರ ಆತ್ಮವನು ಅವರೆ ಬಲಿಸಲು ಬೇಕು
ಅವರ ಆಕೃತಿ ಮೂರ್ತಿ ತಿದ್ದಿಕೊಳಬೇಕು
ಅವರವರ ದರ್ಶನಕೆ ಸಲ್ಲುವಾದರ್ಶಗಳ
ನೇಮಗಳ ಹೊತ್ತವರೆ ಸಾಧಿಸಲು ಬೇಕು.
ಕಲೆಯಿಲ್ಲ ಕುಲವಿಲ್ಲ ಕೆಳೆಯಿಲ್ಲ ಪದವಿಲ್ಲ
ಇಹಪರದಹಂಕಾರವೊಂದಿಲ್ಲ ಸಾಧನಗಳೆದುರು.
ತನ್ನ ಧರ್ಮವ ತಾನು ಅಪ್ಪಿಕೊಂಡೆತ್ತುತ್ತೆ
ಅಳುಕದೆಯೆ ಬಳುಕದೆಯೆ ಅಡಿಯಿಡಲು ಬೇಕು.
ಸೋಲು ನೋವನು ನುಂಗಿ ಕಲ್ಲೆದೆಯ ಮಿದುಗೈದು
ಸಹನೆ ಕರುಣೆಗಳಮೃತವೆರೆಯುತಿರಬೇಕು
ಬೆಳಕು ನೆಳಲುಗಳಂತೆ ಏಳ್ಗೆ ಬೀಳೆನ್ನುತ್ತೆ
ಮನವ ಸಮತೆಗೆ ಹೂಡಿ ನಲಿಯುತಿರಬೇಕು—
—ತಾಳಿಕೊಳ್ಳಲು ಬೇಕು ಏನೆಲ್ಲವನು, ಮಗುವೆ,
ತಿರುಳ ಬಲಿಸಲು ಬೇಕು ಹಿರಿಬಾಳನೆಳಸುವವರು.

ವಿ.ಸೀ.

'ಕದಂಬ' ಪು. ೧೫೮

ಸದ್ಭಾವನೆಯ ಸಹೃದಯರು

ಬಿ. ಎಸ್. ಕೇಶವರಾವ್

ವಿ.ಸೀ. ಅವರ ನೇರ ಪರಿಚಯವಾಗಲೀ ನಿಕಟ ಸಂಪರ್ಕವಾಗಲೀ ನನಗೆ ಇರಲಿಲ್ಲ. ಹತ್ತಾರು ಸಭೆಗಳಲ್ಲಿ ನೂರಾರು ಜನ ಕಂಡಂತೆ ನಾನೂ ಅವರನ್ನು ಅಲ್ಲಿಲ್ಲಿ ಕಂಡಿದ್ದೆ. ಅವರ ವಿದ್ವತ್ಪೂರ್ಣ ಮಾತುಗಳನ್ನು ಕೇಳಿದ್ದೆ. ಒಂದೆರಡು ಕಡೆ ಅವರು ಮಾತು ಮುಗಿಸಿದ ಬಳಿಕ 'ನೀವಾಡಿದ ಮಾತುಗಳು ಬಹಳ ಚೆನ್ನಿತ್ತು' ಎಂದು ಅಂದ ಹತ್ತು ಮಂದಿಯ ಜೊತೆಗೆ ನಾನೂ ಮತ್ತೊಬ್ಬ, ಹನ್ನೊಂದನೆಯವನು, ಅಷ್ಟೆ.

ನಾನು ತುಮಕೂರಿನ ಪಾಲಿಟೆಕ್ನಿಕ್ಕಿನಲ್ಲಿ ಉಪನ್ಯಾಸಕನಾಗಿ ಸೇವೆ ಸಲ್ಲಿಸುತ್ತಿದ್ದ ಕಾಲ. ಆಗೊಮ್ಮೆ ನಮ್ಮ ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭಕ್ಕೆ ಇಬ್ಬರು ಖ್ಯಾತ ಸಾಹಿತಿಗಳನ್ನು ಗೊತ್ತು ಮಾಡುವ ಉದ್ದಿಶ್ಯದಿಂದ ಬೆಂಗಳೂರಿಗೆ ಬಂದೆ. ನಾನು ಕಾಣಬೇಕೆಂದಿದ್ದ ಇಬ್ಬರ ಪೈಕಿ ಒಬ್ಬರು ವಿ. ಸೀತಾರಾಮಯ್ಯನವರು; ಇನ್ನೊಬ್ಬರು ಕೆ. ವಿ. ಅಯ್ಯರ್‌ರವರು.

ಮೇಲೆ ತಿಳಿಸಿದಂತೆ ವಿ.ಸೀ. ಅವರ ಪರಿಚಯ ನನಗೆ ಅಷ್ಟಾಗಿ ಇರಲಿಲ್ಲ. ಆದರೆ ಪ್ರೊ. ಕೆ. ವಿ. ಅಯ್ಯರ್‌ರವರ ಪರಿಚಯ ಚೆನ್ನಾಗಿತ್ತು. ದಾವಣಗೆರೆ, ಚಿಂತಾಮಣಿ ಪಾಲಿಟೆಕ್ನಿಕ್ ಸಮಾರಂಭಗಳಿಗೂ ಒಂದೆರಡು ಬಾರಿ ಕರೆದೊಯ್ದದ್ದರಿಂದ, ಮತ್ತೆ ಹತ್ತಾರು ಬಾರಿ ನಾನಾ ಕಾರಣದಿಂದ ಭೇಟಿಯಾಗಿದ್ದುದರಿಂದ, ಅಯ್ಯರ್‌ರವರು ನನಗೆ ಸುಪರಿಚಿತರಾಗಿದ್ದರು.

ಬೆಂಗಳೂರಿಗೆ ಬಂದವನೆ ಮೊದಲು ನೇರವಾಗಿ ವಿ.ಸೀ. ಅವರ ಮನೆಗೆ ಹೋದೆ. ಇದ್ದರು. ಅವರ ಮಾಮೂಲು ದಿರಿಸು–ಅಂಚಿಲ್ಲದ ಸಾದಾ ಸಿಂಪಲ್ ಮೈಸೂರು ಪೇಟ, ಕ್ಲೋಸ್ ಕಾಲರ್ ಕೋಟು, ಶ್ವೇತ ಶುಭ್ರ ಮಲ್ ಕಚ್ಚೆಪಂಚೆ, ಗುಂಡು ಫ್ರೇಮಿನ ಕನ್ನಡಕ ಇವುಗಳನ್ನು ಧರಿಸಿ ಎಲ್ಲಿಗೋ ಹೊರಡಲು ಸಿದ್ಧರಾಗಿದ್ದಂತೆ ತೋರುತ್ತಿದ್ದ ವಿ.ಸೀ. ಮನೆಯ ಮುಂಬಾಗಿಲಿಗೆ ಎದುರಾಗಿ ಒಳಬಾಗಿಲ ಪಕ್ಕಕ್ಕಿದ್ದ ಮರದ ಕುರ್ಚಿಯಲ್ಲಿ ಕುಳಿತಿದ್ದರು. ನೋಡಿದೊಡನೆ 'ನಮಸ್ಕಾರ ಸರ್' ಎಂದೆ ವಿನಯದಿಂದ. ದಿಟ್ಟಿಸಿದ ವಿ.ಸೀ. 'ಯಾರಪ್ಪ ನೀವು? ಏನಾಗ್ಬೇಕಿತ್ತು?' ಎಂದರು ಮೆಲುದನಿಯಲ್ಲಿ. ಬಂದಿದ್ದ ವಿಚಾರವನ್ನು ತಿಳಿಸಿದೆ. ಆಲಿಸಿದ ವಿ.ಸೀ. ಒಂದು ತೆರನಾದ ಸಂಕಟದಿಂದ 'ನಿಮ್ಮ ಕಾಗದ ತಲಪಿತು. ಆದ್ರೆ ಅದೆಲ್ಲಾ

ಈಗ ಆಗೋಲ್ಲಾಪ್ಪ. ನಾನು ಸಭೆ ಸಮಾರಂಭಗಳಿಗೆ ಹೋಗೋದ್ನ ನಿಲ್ಲಿಸಿ ಶಾನೆ ದಿನಗಳಾಯ್ತು. ಆರೋಗ್ಯ ಸರಿಯಾಗಿದ್ರೆ ತಾನೇ ಅಧ್ಯಕ್ಷ, ಅತಿಥಿ, ಇತ್ಯಾದಿ? ನನಗೆ ಅಲ್ಲಾಡೋಕ್ಕು ಆಗೋಲ್ರೀ, ಹಾಳು ಬೆನ್ನೋವು. I am under regular treatment, ಕ್ಷಮಿಸಿ' ಎಂದರು.

ಸರಿ, ಮಾಡುವುದೇನು? 'ಅಯ್ತು ಸರ್, I am sorry for troubling you. ಬರ್ತೀನಿ' ಎಂದು ಕೈ ಮುಗಿದೆ. ಕಣ್ಮುಚ್ಚಿಕೊಂಡಿದ್ದ ಅವರು ಆ ಸ್ಥಿತಿಯಲ್ಲಿ 'ಆಗಬಹುದು, ಹೋಗಿ ಬನ್ನಿ' ಎಂಬಂತೆ ತಲೆಯಾಡಿಸಿದರು.

ಹೊರ ಬಂದವನೆ ಅವರ ಮನೆ ತಿರುವಿನಲ್ಲಿ ಸಿಗರೇಟು ಉರುಬುತ್ತ ನಿಂತಿದ್ದೆ. ಅಷ್ಟರಲ್ಲಿ ಮನೆ ಮುಂದೆ ಬಂದ ರಿಕ್ಷಾದಲ್ಲಿ ವಿ.ಸೀ. ಅವರನ್ನು ಅವರ ಕಡೆಯವರೊಬ್ಬರು ಮೆಲ್ಲನೆ ನಡೆಸಿಕೊಂಡು ಬಂದು ಕೂರಿಸಿ, ಅವರೂ ಪಕ್ಕದಲ್ಲಿ ಕೂರುತ್ತಿದ್ದಂತೆ, ಅದು ಎತ್ತಲೋ ಹೊರಟು ಹೋಯಿತು.

'ಪಾಪ, ಸೂಟಿಯಾಗಿದ್ದ ವಿ.ಸೀ. ಅವರ ಸ್ಥಿತಿ ಹೀಗೆ ಹದಗೆಟ್ಟಿದೆಯಲ್ಲಾ' ಎಂದು ನೊಂದುಕೊಂಡ ನಾನು ಹತ್ತಿರದಲ್ಲಿದ್ದ ಹೋಟೆಲೊಂದಕ್ಕೆ ಹೋಗಿ ತಿಂಡಿ ಕಾಫಿ ಮುಗಿಸಿ, ಬಳಿಕ ಕೆ. ವಿ. ಅಯ್ಯರ್‌ರವರನ್ನು ಕಾಣಲು ಜೆ. ಸಿ. ರೋಡಿನಲ್ಲಿದ್ದ ಅವರ ವ್ಯಾಯಾಮ ಶಾಲೆಗೆ ಹೋದೆ. ವಿಚಾರಿಸಿದೆ. ಅಯ್ಯರ್‌ರವರು ಒಳಗಿದ್ದಾರೆಂಬುದು ಅಲ್ಲಿದ್ದವರೊಬ್ಬರಿಂದ ತಿಳಿಯಿತು. ನಾನು ಬಂದಿರುವ ವಿಚಾರವನ್ನು ಅವರಿಗೆ ತಿಳಿಸಿ ಎಂದು ಅವರಿಗಂದವನೇ ಅಯ್ಯರ್‌ರವರ ಆಗಮನಕ್ಕಾಗಿ ಕಾಯುತ್ತ ಒಳಕೋಣೆಯಲ್ಲಿ ಕೂತೆ.

ಅಲ್ಲಿ ನನ್ನೆದುರಿಗೆ ತುಸುದೂರದಲ್ಲಿ ಗೋಡೆಯ ಪಕ್ಕಕ್ಕೆ ಒಂದು ಉದ್ದನೆಯ ಬೆಂಚು. ಅದರ ಮೇಲೊಬ್ಬರು ವೃದ್ಧರು. ಮಂಡಿಯ ಮೇಲಕ್ಕೆ ಎಳೆದು ಕೊಂಡು ತೊಡೆಸಂದಿಗೆ ತುರುಕಿಕೊಂಡಿದ್ದ ಪಂಚೆಯನ್ನುಳಿದು ಮತ್ತಾವ ವಸ್ತ್ರವೂ ಅವರ ಮೈ ಮೇಲಿರಲಿಲ್ಲ. ಹಿಂದೆ ಪಿಳುಜುಟ್ಟು ಕಾಣುವಂತೆ ಸೂರಿನತ್ತ ಎತ್ತಿದ್ದ ಮುಖವನ್ನು ವಾರೆಯಾಗಿ ಗೋಡೆಗಾನಿಸಿಕೊಂಡು, ಕಾಲ್ಗಳೆರಡನ್ನು ಒಂದರ ಮೇಲೊಂದೆಂಬಂತೆ ಮಡಿಚಿಕೊಂಡು, ಗುಂಡು ಫ್ರೇಮಿನ ಕನ್ನಡಕ ಧಾರಿಯಾಗಿ ಕಣ್ಮುಚ್ಚಿ ಕುಳಿತಿದ್ದ ವೃದ್ಧರನ್ನು ದಿಟ್ಟಿಸಿದಾಗ ಅವರು 'ಎಮಕೆ ಗಾಂಧಿ'ಯ ತದ್ರೂಪು ಎಂದೆನ್ನಿಸಿತು.

ಕೆಲ ನಿಮಿಷಗಳು ಕಳೆಯಿತು. ಆಗ ತಾನೆ ತೊಳೆದು ಕೊಂಡಿದ್ದ ಕೈಗಳನ್ನು ಒರೆಸಿಕೊಳ್ಳುತ್ತ ಬಂದ ಅಯ್ಯರ್‌ತವರು ನನ್ನನ್ನು ಕಾಣುತ್ತಲೆ 'ನೀನು ಬರೆದ ಕಾಗದ ಬಂತಯ್ಯ. ನೀನು ಸೂಚಿಸಿರುವ ಡೇಟು ನನಗೆ ಸೂಟಾಗೋಲ್ಲಾ. I am sorry. ಇನ್ಯಾವಾಗಲಾದ್ರೂ ಬರ್ತೀನಿ' ಅಂದವರೆ, ಆ ವೃದ್ಧರತ್ತ ತಿರುಗಿ 'Table is free. ನೀವು ಒಳಕ್ಕೆ ನಡೀರಿ, ಅಯ್ಯ. ಎರಡು ನಿಮಿಷ ಈತನನ್ನು ಕಳಿಸಿ ಬಂದ್ಬಿಡ್ತೀನಿ' ಅನ್ನಲು ಆ ವೃದ್ಧರು ನಿಧಾನವಾಗೆದ್ದು ಆಸರೆಗೆಂಬಂತೆ ಗೋಡೆ ಹಿಡಿದು ಸವರುತ್ತ ಒಳಗೆ ಹೋದರು.

ಅನಂತರ ನನ್ನತ್ತ ತಿರುಗಿದ ಅಯ್ಯರ್‌ರವರು 'ಓ. ಕೇ., ಬೇರೆ ಯಾರನ್ನಾದ್ರು

ಟ್ರೈ ಮಾಡು, ಬೆಂಗ್ಳೂರಲ್ಲೇನು ಬೇಕಾದಷ್ಟು ಜನ ಸಿಗ್ತಾರೆ' ಅಂದು ನಕ್ಕರು.. ನಾನು 'ಸಿಗ್ತಾರೆ ಸಾರ್, ಆದ್ರೆ ಒಪ್ಕೊಳೊಲ್ಲಾ. ಇಲ್ಲಿಗೆ ಬರೋ ಮುಂಚೆ ವಿ.ಸೀ. ಅವರನ್ನ ಕಂಡಿದ್ದೆ. ಅವರಿಗೆ ಆರೋಗ್ಯವೇ ಚೆನ್ನಾಗಿಲ್ಲ, ಅವರೂ ಆಗೋಲ್ಲಾಂದ್ರು' ಅಂದೆ.

ಕೇಳಿದ ಅಯ್ಯರ್‌ರವರು 'ಪಾಪ, ಹೇಗಪ್ಪಾ ಬರ್ತಾರೆ? ನೀನೇ ನೋಡಿದ್ಯಲ್ಲ, ಪಕ್ಕದಲ್ಲಿರೊ ರೂಮೊಳಕ್ಕೆ ಹೋಗ್ಬೇಕಾದ್ರೂ ಎಷ್ಟು ಕಷ್ಟ ಪಟ್ಕೊಂಡು ಹೋದ್ರು ನೋಡು' ಎಂದಾಗ, ಅಲ್ಲಿಯವರೆಗೂ ನನ್ನೆದುರು ಬೆಂಚಿನ ಮೇಲಿದ್ದವರು ವಿ.ಸೀ.ಯವರೇ ಎಂಬುದರ ಅರಿವಾಗಿ ಅರೆಕ್ಷಣ ದಂಗಾಗಿ ಹೋದೆ.

ಮಾಮೂಲು ವೇಷದಲ್ಲಿ ವಿ.ಸೀ. ಅವರನ್ನು ಅನೇಕ ಬಾರಿ ಕಂಡಿದ್ದ ನನಗೆ ಅಂದು ಅಯ್ಯರ್‌ರವರಿಂದ ಮಸಾಜ್ ಮಾಡಿಸಿಕೊಳ್ಳಲು ಬಂದಿದ್ದ ಅವರನ್ನು ಆ ವಿಚಿತ್ರ ವೇಷದಲ್ಲಿ ಗುರುತಿಸುವುದೂ ಸಾಧ್ಯವಾಗಲಿಲ್ಲ.

* * *

೧೯೫೧–೫೨ ಇರಬಹುದು. ಮೈಸೂರಿನ ಶಾರದಾ ವಿಲಾಸ ಕಾಲೇಜಿನವರು ಅಲ್ಲಿಯ ಬಡವಿದ್ಯಾರ್ಥಿಗಳ ಸಹಾಯಾರ್ಥವಾಗಿ ರಂಗಾಚಾರ್ಲು ಪುರಭವನದಲ್ಲಿ ಒಂದು ನಾಟಕವನ್ನಾಡಿದರು. ಅದು ಆ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದ ವಿ. ನಾಗರಾಜರಾಯರ ನಿರ್ದೇಶಕತ್ವದಲ್ಲಿ ಆಡಿದ ವಿ.ಸೀ. ಅವರ ನಾಟಕ 'ಆಗ್ರಹ'. ಅದರಲ್ಲಿ ನಾಗರಾಜರಾಯರದ್ದೇ ಬಲಭೀಮನ ಪಾರ್ಟು. ಇವರನ್ನು ದಪ್ಪವಾಗಿ ಮಾರ್ಪಡಿಸಲು ಒಳಗೆ ಸುಪ್ಪತ್ಗೆ ಷರಟು. ಮತ್ತೆ, ಉದ್ದ ಅಡಿ ಅಗಲ ಎತ್ತರ ಸುತ್ತಳತೆ ಸಲೆ – ಇದಾವ ಅಳತೆಗೂ ಒಪ್ಪಿಗೆಯಾಗದಂತಿದ್ದ ಗೋಪಾಲಕೃಷ್ಣ ಅಡಿಗರದ್ದು ಕೃಷ್ಣನ ಪಾರ್ಟು. ವಿದ್ಯಾರ್ಥಿಯಾಗಿದ್ದ ಕುಳ್ಳು ತೆಳು ಮಾ. ಹಿರಣ್ಣಯ್ಯನೇ ದುರ್ಯೋಧನ. ಮತ್ತೊಬ್ಬ ವಿದ್ಯಾರ್ಥಿ ಲೇಡಿ ರಾಮನಾಥನದು ದ್ರೌಪದಿಯ ಪಾತ್ರ.

ಹೀಗೆ ಪಾತ್ರಗಳಿಗೊಪ್ಪದವರು ಪಾತ್ರಧಾರಿಗಳಾಗಿರುವ ವಿಷಯ ತಿಳಿಯುತ್ತಲೆ, 'ಆಗ್ರಹ' ನಾಟಕವನ್ನು ಬರೆದಿದ್ದ ವಿ.ಸೀ. ನಿಜಕ್ಕೂ ಆಗ್ರಹಗೊಂಡಿದ್ದರು. ಆದರೆ ಇಂಥವರಿದ್ದೂ ನಾಟಕ ನೀಟಾಗಿ ನಡೆಯಿತೆಂಬುದನ್ನು ನೋಡಿದವರೊಬ್ಬರು ತಿಳಿಸಿದಾಗ, ಆಗ್ರಹವನ್ನು ತೊರೆದ ವಿ.ಸೀ. ಸಂತಸದಿಂದ ನಗುತ್ತಾ ಆನಂದವನ್ನು ಅನುಗ್ರಹಿಸಿದರಂತೆ. ಈ ನಾಟಕದ ಬಗ್ಗೆ ಮಾತನಾಡುತ್ತ ಗೆಳೆಯರಾಗಿದ್ದ ಅಡಿಗರಿಗೆ ವಿ.ಸೀ. ಅವರು 'ನೀವು ನನ್ನ ನಾಟಕವನ್ನಾಡಿದ್ದು ಸಂತೋಷ. ಆದರೊಂದು ಸಂಶಯ. 'ಕೃಷ್ಣ' ನಿಮ್ಮಷ್ಟು ಕುಳ್ಳಗಿರಲಿಕ್ಕಿಲ್ಲ, ಅಲ್ಲವೇ?' ಎನ್ನಲು ನಕ್ಕ ಅಡಿಗರು 'ಆ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಆ 'ಕೃಷ್ಣ' ವಿ.ಸೀ. ಅವರಂತೆ ತೆಳ್ಳಗೆ ಉದ್ದಕ್ಕಿರಲಿಲ್ಲ ಅನ್ನುವ ಮಾತನ್ನೂ ನಾನು ಒಪ್ಪುತ್ತೇನೆ' ಎಂದಾಗ ಗಹಗಹಿಸಿ ನಕ್ಕ ವಿ.ಸೀ. 'ಅದೂ ಒಪ್ಪಬೇಕಾದ ಮಾತೇ' ಅಂದರಂತೆ. ಇದು ವಿ.ಸೀ. ಅವರಲ್ಲಿದ್ದ ಸರಸ ಮನೋಧರ್ಮ.

* * *

ವಿ.ಸೀ. ಅವರಲ್ಲಿದ್ದ ಮತ್ತೊಂದು ಮಹೋನ್ನತ ಗುಣವೆಂದರೆ ಅವರು ಇತರರ ಉತ್ತಮ ಬರೆಹಗಳನ್ನು ಮೆಚ್ಚಿ ಪ್ರಶಂಸಿಸುತ್ತಿದ್ದುದು. ಕೈಲಾಸಂ ಬರೆಹವೆಂದರೆ ವಿ.ಸೀ. ಅವರಿಗೆ ಅಪ್ಯಾಯಮಾನ. ಒಂದು ನಿದರ್ಶನ. ಅವರ ಬರೆಹವನ್ನು ಇಂಗ್ಲಿಷರಿಗೂ ಪರಿಚಯಿಸಿ ಕೊಡಬೇಕೆಂಬುದು ವಿ.ಸೀ. ಅವರ ಆಸೆ. ಕಾರ್ಯೋನ್ಮುಖರಾದರು. ಕೈಲಾಸಂ ರಚಿಸಿದ್ದ ಕೆಲವು ಆಂಗ್ಲ ಗೀತೆಗಳನ್ನು ಇಂಗ್ಲೆಂಡಿನಲ್ಲಿ ಪ್ರಕಟವಾಗುತ್ತಿದ್ದ ಪ್ರಸಿದ್ಧ ಮಾಸಪತ್ರಿಕೆ 'ಲಂಡನ್ ಮರ್‌ಕ್ಯುರಿ'ಗೆ ಕಳುಹಿಸಿದರು. ಅದರ ಸಂಪಾದಕ ಸರ್ ಜಾನ್‌ಸ್ಟ್ಕ್ಲೈರ್‌ಗೆ ಕೈಲಾಸಂರ ಪರಿಚಯವನ್ನು ಸೂಕ್ಷ್ಮವಾಗಿ ತಿಳಿಸಿ, ಇವರ ಕವನಗಳನ್ನು 'ಮರ್‌ಕ್ಯುರಿ'ಯಲ್ಲಿ ಪ್ರಕಟಿಸಬೇಕೆಂದು ಬರೆದಿದ್ದರು. ಆದರೆ, ಏಕೋ ಏನೋ, ಆತ ಅವುಗಳನ್ನು ಪ್ರಕಟಿಸಲಿಲ್ಲ. ವಿ.ಸೀ. ಅವರ ಕ್ಷಮೆ ಕೋರಿ, ಕಳಿಸಿದ್ದ ಕೈಲಾಸಂರ ಕವನಗಳನ್ನು ಹಿಂದಿರುಗಿಸಿದ. ಆದರೆ ವಿ.ಸೀ. ಸುಮ್ಮನಿರಲಿಲ್ಲ. 'ಕೈಲಾಸಂರವರ ಕವನಗಳಲ್ಲಿ ಅಡಕವಾಗಿರುವ ಭಾವನೆಗಳು, ಪ್ರತಿಮೆಗಳು ನಿಮಗೆ ಅರ್ಥವಾದಂತಿಲ್ಲ. ಈ ಕವನಗಳು ನಿಮ್ಮ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದರೆ ನಿಮ್ಮ ಪತ್ರಿಕೆಯ ಘನತೆ ಹೆಚ್ಚುತ್ತಿತ್ತು. ಅಂತಹ ಅವಕಾಶವನ್ನು ನಿಮ್ಮ ಪತ್ರಿಕೆ ಖಂಡಿತವಾಗಿಯೂ ಕಳೆದುಕೊಂಡಿತು' ಎಂದು ಬರೆದರಂತೆ. ಆ ತರುವಾಯ ಅವನ್ನು ವಿ.ಸೀ. 'ತ್ರಿವೇಣಿ' ಇಂಗ್ಲಿಷ್ ಪತ್ರಿಕೆಯಲ್ಲಿ ಪ್ರಕಟಿಸಿದರು.

ಇಂತಹ ಸದ್ಭಾವನೆಯ ಸಹೃದಯರು ನಮ್ಮಲ್ಲಿ ಅತಿವಿರಳ.

ಉಳಿವುದೇನು?

ಸತ್ತ ಮೇಲೆ ಉಳಿವುದೇನು?
ಪುಸ್ತಕವೆ, ವಿದ್ವತ್ತೆ, ನೆನಪೆ, ಗೈಮೆಯೆ?
ಹತ್ತು ಜನಕಿತ್ತ ನೆರವೆ? ನಟ್ಟು
ನಡಸಿದ ಸುವ್ಯವಸ್ಥೆಗಳೆ? ಗುಣವೆ?
ಹೊರಪ್ರಪಂಚಕೆ ಹಿರಿಯವಿವು ಸರಿಯೆ.
ಅದಕಿಂತ ಚೆಲುವಾದ್ದು ನರನ ಪಾಲಿಗೆ
ಇವೆಯೆ ಎಂದೀರಿ; – ಇದೆ...
ಕಂಡವರಿಗೆ, ಬಳಿಗೆ ಬಂದವರಿಗೆ
ಯಾವ ತೆರನ ಮನುಜನಿವನೆಂಬ ಇಂಪು,
ಅವನು ಕಾಣಿಸಿದಾ ಆದರ, ಜೀವನೋತ್ಸಾಹ,
ತುಂಬು ನೆಮ್ಮದಿ; ಚಿತ್ತ ಚಾಂಚಲ್ಯವಿಲ್ಲದ್ದು....
ಲೋಕದ ಕೆಳೆ, ವಿಶ್ವಾಸಗಳಿಗಿಂತ ಬೇರೆ
ಏನಿದೆ?

ವಿ.ಸೀ.

'ಹಗಲು-ಇರುಳು' ಪು. ೭೪

ಅಳಿಸಲಾಗದ ಸುಂದರ ಚಿತ್ರ

ಎಂ. ಎಸ್. ಮೂರ್ತಿ

ವಿ.ಸೀ. ಅವರ ಕೃತಿಗಳನ್ನು ಅಷ್ಟಾಗಿ ನಾನು ಓದಿರದಿದ್ದರೂ ಅದು ಹೇಗೊ ಅವರ ಬಗ್ಗೆ ನನ್ನಲ್ಲಿ ಗೌರವ ಭಾವನೆ ಮೂಡಿತ್ತು. ಅವರ 'ಎಮ್ಮ ಮನೆಯಂಗಳದಿ' ಗೀತೆ ಆಕಾಶವಾಣಿಯಲ್ಲಿ ಪ್ರಸಾರವಾಗುವ ಮುನ್ನ ಮತ್ತು ನಂತರ 'ಈ ಗೀತೆಯನ್ನು ರಚಿಸಿದವರು ವಿ.ಸೀ.' ಎಂದು ಅಲ್ಲಿಯ ಉದ್ಘೋಷಕರು ಹೇಳುವಾಗೆಲ್ಲ ನನ್ನ ಕಿವಿ ನೆಟ್ಟಗಾಗುತ್ತಿತ್ತು. ಕಾರಣ ಇಷ್ಟೇ: ಚಾಮರಾಜಪೇಟೆಯಲ್ಲಿ ಐದಾರು ದಶಕಗಳಿಂದ ವಾಸವಾಗಿದ್ದ ನಮಗೆ ಆ ಬಡಾವಣೆಯಲ್ಲಿ ವಾಸಿಸುತ್ತಿದ್ದ ಪ್ರಖ್ಯಾತರ ಹೆಸರುಗಳು ಎಲ್ಲಿ ಕಂಡರೂ, ಕೇಳಿದರೂ 'ಅವರು ನಮ್ಮವರು', 'ನಮಗೆ ಹತ್ತಿರದವರು' ಎಂಬಂತೆ ಭಾಸವಾಗುತ್ತಿತ್ತು. ಆಗೆಲ್ಲ ಚಾಮರಾಜಪೇಟೆಯ ರಾಯನ್ ಸರ್ಕಲ್‌ಗೆ ಹತ್ತಿರವಿದ್ದ ಹಳೆಯ ಕಾಲದ ಅವರ ಕಾಂಪೌಂಡು ಮನೆ, ಕಾಂಪೌಂಡಿನ ಮೇಲೆ ಹಬ್ಬಿಸಿದ್ದ ಮಲ್ಲಿಗೆಯ ಬಳ್ಳಿ, ಪುಟ್ಟ ಅಂಗಳದ ಜಾಲರಿಗೆ ಹೊಂದಿಕೊಂಡಿದ್ದ ಬಾಗಿಲು ಇತ್ಯಾದಿ ಅಪ್ಪಟ ದೇಸೀ ವಾತಾವರಣ ಕಣ್ಮುಂದೆ ಕಟ್ಟುತ್ತಿತ್ತು. ಆ ಕಡೆ ಹಾದು ಹೋಗುವಾಗೆಲ್ಲ ವಿ.ಸೀ.ಯವರು ಒಳಗೆ ಇರಬಹುದು ಎಂಬ ಕುತೂಹಲದಿಂದ ಅತ್ತ ಒಮ್ಮೆ ನೋಡಿಯೇ ಮುನ್ನಡೆಯುವುದು ಅಭ್ಯಾಸವಾಗಿತ್ತು.

ಎಪ್ಪತ್ತರ ಆ ದಶಕದಲ್ಲಿ ನನಗಿದ್ದ ಅನೇಕ ಆಸಕ್ತಿಗಳಲ್ಲಿ ಸಾಹಿತ್ಯ ಸಂಗೀತಗಳಲ್ಲಿ ವಿಶೇಷವಾಗಿ ತೊಡಗಿಸಿಕೊಂಡಿದ್ದೆ. ಆಗಾಗ ನಡೆಯುತ್ತಿದ್ದ ವಿಚಾರ ಸಂಕಿರಣ, ಸಾಹಿತ್ಯ ಚರ್ಚೆಗಳಿಗೆ ತಪ್ಪದೆ ಹೋಗಿ 'ಇಡೀ ಕನ್ನಡ ಸಾಹಿತ್ಯ ನಮ್ಮದೇ ಸೊತ್ತು' ಎನ್ನುವಂತೆ ಹೆಮ್ಮೆಯಿಂದ ಕುಳಿತು, ಅಲ್ಲಿ ನಡೆವ ಸಾಹಿತ್ಯ ಚರ್ಚೆಯನ್ನು, ಸಾಹಿತಿಗಳ ಅದ್ಭುತ ವಾಕ್‌ಪ್ರವಾಹವನ್ನು ಕೇಳಿ ಆನಂದಿಸುತ್ತಿದ್ದೆ. ಅಂತಹ ಕಮ್ಮಟಗಳಲ್ಲಿ, ಗೋಷ್ಠಿಗಳಲ್ಲಿ ಆಗಾಗ ವಿ.ಸೀ. ಅವರ ಹೆಸರೂ ಬರುತ್ತಿತ್ತು. ಅನೇಕ ಸಾಹಿತಿಗಳಿಗೆ ಗುರುಗಳಾಗಿ, ಸ್ನೇಹಿತರಾಗಿ ಇದ್ದವರು ಅವರು. ಅವರು ಮಾಡುತ್ತಿದ್ದ ಪಾಠದ ಬಗ್ಗೆ, ಅವರ ನಡಾವಳಿಗಳ ಬಗ್ಗೆ, ಅವರ ಜೀವನಶ್ರದ್ಧೆ-ಶಿಸ್ತನ್ನು ಕುರಿತು, ಅವರ ಆತ್ಮೀಯತೆಯನ್ನು ನೆನಪು ಮಾಡಿಕೊಂಡು ಪ್ರೀತಿಯಿಂದ ಮಾತನಾಡುತ್ತಿದ್ದ ಸಾಹಿತಿಗಳ ಮಾತುಗಳನ್ನು ತನ್ಮಯನಾಗಿ ಕೇಳುತ್ತಿದ್ದೆ. ನಾನು ಅವರ ಶಿಷ್ಯನಾಗದಿದ್ದುದಕ್ಕೆ ಬೇಸರವಾಗುತ್ತಿತ್ತು.

ನಾನು ಪಿಯುಸಿ ಓದುತ್ತಿದ್ದ ಸಂದರ್ಭದಲ್ಲಿ ದಿ. ಅ. ನ. ಸುಬ್ಬರಾಯರ 'ಕಲಾ ಮಂದಿರ'ದಲ್ಲಿ ಆರ್ಟ್ ಡಿಪ್ಲೋಮಾಗೆ ಸೇರಿದ್ದೆ. ಒಬ್ಬರನ್ನು ಎದುರಿಗೆ ಕೂಡಿಸಿ ಯಥಾವತ್ತು ಅವರ ಭಾವಚಿತ್ರ ರಚಿಸುವುದೆಂದರೆ ನನಗೆ ಸಂಭ್ರಮ. ಅನೇಕರು ನಾನು ಹಾಗೆ ರಚಿಸಿದ ಕಲಾಕೃತಿಗಳನ್ನು ಇಷ್ಟಪಡುತ್ತಿದ್ದದ್ದು ನನ್ನ ಉತ್ಸಾಹವನ್ನು ಇಮ್ಮಡಿಗೊಳಿಸುತ್ತಿತ್ತು. ರಷ್ಯಾದ ಮಹಾನ್ ಕಲಾವಿದ ಇಲ್ಯಾ ರೆಪಿನ್ ಆಗ ನನಗೆ ಹೆಚ್ಚು ಕುತೂಹಲ ಕೆರಳಿಸಿದ್ದ ಕಲಾವಿದ. ಮನುಷ್ಯನ ವಿಭಿನ್ನ ಆಂತರಿಕ ವ್ಯಕ್ತಿತ್ವವನ್ನು ಕಲಾತ್ಮಕವಾಗಿ ಸೆರೆಹಿಡಿದಿದ್ದ ಅಸಂಖ್ಯ ಕೃತಿಗಳನ್ನು ಅವನು ರಚಿಸಿದ್ದ. ಸಾಹಿತಿ ಟಾಲ್‌ಸ್ಟಾಯ್ ರೆಪಿನ್‌ನ ಸ್ನೇಹಿತ. ಅವರಿಬ್ಬರೂ ಸುತ್ತಾಡಿ ಕಳೆದ ಸಮಯಗಳನ್ನು, ಸಂದರ್ಭಗಳನ್ನು ರೆಪಿನ್ ತನ್ನ ಕೃತಿಗಳ ಮೂಲಕ ದಾಖಲಿಸಿದ್ದಾನೆ. ಅಲ್ಲಿ ಟಾಲ್‌ಸ್ಟಾಯ್ ಬಗ್ಗೆ ರೆಪಿನ್ ಇರಿಸಿಕೊಂಡಿದ್ದ ಆತ್ಮೀಯತೆ, ಪ್ರೀತಿ ಸಂಕೀರ್ಣವಾಗಿ ವ್ಯಕ್ತವಾಗಿದೆ, ಅವನ ಕಲಾಕೌಶಲ್ಯದೊಂದಿಗೆ. ಹೀಗೆ ರೆಪಿನ್‌ನ ಕೃತಿಗಳ ಗುಂಗು ಆವರಿಸಿದ್ದ ಆ ಸಮಯದಲ್ಲಿ ನನ್ನ ಅನೇಕ ಮಿತ್ರರನ್ನು, ಮಿತ್ರರಲ್ಲದವರನ್ನು ಕೂರಿಸಿ ಅವರ ಹಾಗೇ ಕೃತಿ ರಚಿಸಲು ಪ್ರಯತ್ನಿಸುತ್ತಿದ್ದೆ.

ಒಂದು ದಿನ ಎಂದಿನಂತೆ ವಿ.ಸೀ.ಯವರ ಮನೆಯ ಮುಂದೆ ಹಾದು ಹೋಗುತ್ತಿದ್ದಾಗ ಮಾಮೂಲು ಕುತೂಹಲದಿಂದ ಮನೆಯ ಕಡೆ ತಿರುಗಿನೋಡಿದೆ! ಬಿಳಿಯ ಪಂಚೆ, ಬನಿಯನ್, ಹೆಗಲ ಮೇಲೊಂದು ಬಿಳಿಯ ಟೊವೆಲ್ ಹಾಕಿಕೊಂಡಿದ್ದ ಬೋಳುತಲೆಯ ವಯಸ್ಕರೊಬ್ಬರು ಅಂಗಳದಲ್ಲಿ ಕುಳಿತಿದ್ದುದು ಕಂಡಿತು. ಅವರೇ ವಿ.ಸೀ. ಆಗಿರಲಾರರೆಂದು ಅನಿಸಿ ಹಿಂದಕ್ಕೆ ಬಂದಂತೆ ಬಂದು, ಪುನಃ ಅದೇ ದಾರಿಯಲ್ಲಿ ಹಾದು ಹೋದೆ; ಮುಖ ಅವರದೇ! ಫೋಟೋದಲ್ಲಿ ಬಿಳಿಯ ರುಮಾಲು, ಮುಚ್ಚುಕುತ್ತಿಗೆಯ ಕೋಟುಗಳಲ್ಲಿ ವಿ.ಸೀ.ಯವರನ್ನು ಕಂಡಿದ್ದ ನನಗೆ ಅವರ ಈ ಸರಳ ಉಡುಪಿನಿಂದಾಗಿ ಗುರುತು ಹತ್ತದಾಯಿತು. ಅಂತೂ ಮೊದಲ ಬಾರಿಗೆ ಆ ಮಹಾನ್ ವ್ಯಕ್ತಿಯನ್ನು ಕಂಡಂತಾಗಿ ಸಂತೋಷವಾಯಿತು. ಹೇಗಾದರೂ ಮಾಡಿ ಅವರನ್ನು ಭೇಟಿಯಾಗಬೇಕು, ಅವರದೊಂದು ಚಿತ್ರ ರಚಿಸಬೇಕು ಎಂಬ ಉತ್ಕಟ ಅಭಿಲಾಷೆ ಮೂಡಿತು.

ಅನಂತರ ಒಂದೊ ಎರಡೊ ವರ್ಷ ಕಳೆದಿರಬೇಕು. ತಟ್ಟನೆ ನಾನು ಅಂದುಕೊಂಡಿದ್ದ ಈ ಎಲ್ಲ ನೆನಪಾಗಿ ಇಷ್ಟು ದಿನ ಸುಮ್ಮನಾದುದಕ್ಕೆ ಬೇಸರವಾಗಿ, ಮಾರನೆಯ ದಿನವೇ ವಿ.ಸೀ. ಅವರನ್ನು ಭೇಟಿಯಾಗಲು ನಿರ್ಧರಿಸಿದೆ. ಮಾರನೆಯ ದಿನ ಅವರ ಮನೆಯ ಕಬ್ಬಿಣದ ಗೇಟನ್ನು ತೆಗೆದು ಒಳನಡೆದೆ. ಅಂಗಳದ ಹತ್ತಿರ ನಿಂತು 'ಸಾರ್' ಎಂದೆ.

ನಿಧಾನವಾಗಿ ಅದೇ ಬೋಳು ತಲೆಯ, ಬಿಳಿಯ ಪಂಚೆ, ಬನಿಯನ್, ಟೊವೆಲ್ ಹೊದೆದಿದ್ದ ವಿ.ಸೀ.ಯವರು ತಮ್ಮ ನಗುಮುಖದೊಂದಿಗೆ ಬಾಗಿಲು ತೆರೆದರು, ಯಾವ ಅನುಮಾನವೂ ಇಲ್ಲದಂತೆ; ಮನೆಗೆ ತಮ್ಮ ಮೊಮ್ಮಗ ಬಂದರೆ ಬಾಗಿಲು ತೆಗೆಯುವಂತೆ. ನನಗೆ ಸಂಕೋಚವಾಯಿತು. ನನಗೆ ಮಾತನಾಡಲು ಅವಕಾಶ ಕೊಡದೆ 'ಬನ್ನಿ, ಕುಳಿತುಕೊಳ್ಳಿ' ಎಂದು ಮೂಲೆಯಲ್ಲಿದ್ದ ಒಂದು ಕುರ್ಚಿ ತೋರಿಸಿದರು. ಕುಳಿತು ನನ್ನ ಪರಿಚಯ ಹೇಳಿಕೊಂಡೆ. 'ಒಂದು ನಿಮಿಷ' ಎಂದು ಒಳ ಹೋದವರೇ ಹಿಂದಿರುಗಿ,

ಪುಟ್ಟ ತಟ್ಟೆಯಲ್ಲಿ ಬಿಸಿಬಿಸಿ ಚಕ್ಕುಲಿ ತಂದು ನನ್ನ ಮುಂದೆ ಹಿಡಿದು "ತಗೊಳ್ಳಿ" ಎಂದರು. ನನಗೆ ಏನೂ ತೋಚದಾಯಿತು. ಸಂಕೋಚದಿಂದ 'ಸಾರ್....' ಎಂದು ಪ್ರಾರಂಭಿಸುವುದನ್ನು ತಡೆಯುತ್ತ "ತಿನ್ನಿ, ನೀರು ತರುತ್ತೇನೆ" ಎಂದು ಒಳಗೆ ಹೋದರು. ತಿಂದು ಮುಗಿಸಿದೆ. ನೀರು ಕೊಟ್ಟು "ನೀವು ಕಾಫಿ ಕುಡೀತೀರಿ ತಾನೆ?" ಎಂದು ಉತ್ತರಕ್ಕೂ ಕಾಯದೆ ಪುನಃ ಒಳಕ್ಕೆ ಹೋದ ಅವರು, ಸ್ವಲ್ಪ ಹೊತ್ತಿನ ಬಳಿಕ ತಮ್ಮ ಟೊವೆಲ್ ಅಂಚಿನಿಂದ ಬಿಸಿ ತಾಗದಂತೆ ಕಾಫಿ ಲೋಟವನ್ನು ಹಿಡಿದು ತಂದು ನನ್ನ ಕೈಲಿರಿಸಿ "ಬಿಸಿ ಇದೆ" ಎಂದು ಹೇಳಿ ನನ್ನೆದುರಿಗೇ ಕುಳಿತರು. ಕಿರಿಯನಾದ, ಅಪರಿಚಿತನಾದ ನನಗೆ ಇಂಥಾ ಆತಿಥ್ಯ ನೀಡಿದ ಆ ಹಿರಿಯರ ಮುಂದೆ ನಾನು ಮುದುಡಿಹೋಗಿದ್ದೆ.

"ಈಗ ಹೇಳಿ, ಏನು ವಿಷಯ?"

ವಿಷಯ! ನನಗೆ ಮರೆತೇ ಹೋಗಿತ್ತು. ತಡವರಿಸಿ ಹೇಳಿದೆ – "ನಿಮ್ಮದೊಂದು ಚಿತ್ರ ನಾನು ಮಾಡಬೇಕು. ಅದಕ್ಕಾಗಿ ನಿಮ್ಮ ಬಿಡುವಿನ ದಿನ, ಸಮಯ ತಿಳಿದುಕೊಂಡು ಹೋಗಲು ಬಂದಿದ್ದೇನೆ" ಎಂದೆ.

"ನನ್ನ ಚಿತ್ರ ಮಾಡ್ತೀರಾ!" ಎಂದು ನಕ್ಕರು. ಇಂದಿಗೂ ಆ ನಗು ನನಗೆ ನೆನಪಿದೆ. ಏನು ಉತ್ತರಿಸಬೇಕೊ ತೋಚದೆ ಸುಮ್ಮನಿದ್ದೆ.

"ಮುಂದಿನ ಶುಕ್ರವಾರ ಆಗಬಹುದಾ?" ಎಂದರು.

"ಆಗಬಹುದು" ಎಂದೆ, ಸಂಭ್ರಮದಿಂದ. ಮುಗಿಯಿತು ಅಲ್ಲಿಗೆ.

ಅವರು ಹೇಳಿದ ಶುಕ್ರವಾರ ಬಂತು, ಹೋಯಿತು. ಮುಂದಿನ ಹಲವು ಶುಕ್ರವಾರಗಳೂ ಬಂದು ಹೋದವು. ನನಗೆ ಮಾತ್ರ ಅದೇನು ಮಂಕು ಕವಿದಿತ್ತೊ – ನನ್ನ ಅಂದಿನ ಹೊಯ್ದಾಟದ ದಿನಗಳಲ್ಲಿ. ನಾನು ಮಾತಿಗೆ ತಪ್ಪಿದೆ. ನಾನೇ ಬಹುವಾಗಿ ಆಸೆಪಟ್ಟು ಪಡೆದ ಅಂಥ ಸುವರ್ಣಾವಕಾಶವನ್ನು ಮರೆತೆ, ಮರೆತೇಬಿಟ್ಟೆ! ಎಲ್ಲಿಯವರೆಗೆ ಎಂದರೆ ವಿ.ಸೀ.ಯವರ ಸಾವಿನ ಸುದ್ದಿ ತಿಳಿಯುವವರೆಗೂ....

ಆ ದಿನ ವಿ.ಸೀ.ಯವರ ಸಾವಿನ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿ ನಡುಗಿಹೋದೆ. ನನ್ನನ್ನು ಅಷ್ಟು ಆದರದಿಂದ, ಆತ್ಮೀಯತೆಯಿಂದ ಕಂಡವರನ್ನು ಮರೆತೆನಲ್ಲ ಎಂದು ನನ್ನ ಅಸಹಾಯಕತೆಯ ಬಗ್ಗೆ, ನನ್ನ ಪರಿಸ್ಥಿತಿಯ ಬಗ್ಗೆ ಹಳಿದುಕೊಂಡೆ. ನನ್ನ ಬಗೆಗೆ ನನಗೇ ಜಿಗುಪ್ಸೆಯುಂಟಾಯಿತು. ಏನು ಮಾಡಲೂ ತೋಚದೆ ನೇರ ಅವರ ಮನೆಯ ಹತ್ತಿರಕ್ಕೆ ಬಂದೆ. ನನ್ನೆದೆ ಹೊಡೆದುಕೊಳ್ಳುತ್ತಿತ್ತು. ನಾನು ನಿರಂತರವಾಗಿ ಕಾಣುತ್ತಿದ್ದ ಗೇಟು ಈಗ ಕಾಣುತ್ತಿರಲಿಲ್ಲ; ತುಂಬಾ ಜನ ಸೇರಿದ್ದರು. ದೂರವೇ ನಿಂತು ಮನಸ್ಸಿನಲ್ಲಿಯೇ ನಮಸ್ಕರಿಸಿದೆ. ಎಷ್ಟು ಹೊತ್ತು ಹಾಗೆಯೇ ನಿಂತಿದ್ದೆನೊ ಗೊತ್ತಿಲ್ಲ, ತಪ್ಪು ಮಾಡಿದ ಅಪರಾಧಿಯಂತೆ. ಇನ್ನು ನಿಲ್ಲಲು ಸಾಧ್ಯವಾಗದಾದಾಗ ಕಾಲೆಳೆಯುತ್ತಾ ಮನೆಗೆ ಬಂದೆ. ಅಂದು ನನ್ನ ಬದುಕಿನಲ್ಲಿ ನಾನು ತುಂಬಾ ನೊಂದುಕೊಂಡ ದಿನವಾಗಿತ್ತು.

ಅದಾಗಿ ತಿಂಗಳುಗಳೊ ವರ್ಷವೋ ಕಳೆದಿರಬೇಕು. ನನ್ನ ಪರೀಕ್ಷೆಗಳೊಂದಿಗೆ ಕಾಲೇಜು ಮುಗಿದು, ಕಲಾ ಡಿಪ್ಲೋಮಾ ಆಗತಾನೆ ಪಡೆದಿದ್ದೆ. ಒಂದು ದಿನ

ಗಾಂಧೀಬಜಾರಿನ ಡಿವಿಜಿ ರಸ್ತೆಯಲ್ಲಿ ನಡೆದು ಬರುತ್ತಿದ್ದೆ. ಎದುರಿಗೆ ಮಧ್ಯವಯಸ್ಸಿನ ಮಹಿಳೆಯೊಬ್ಬರು ಬರುತ್ತಿದ್ದರು. ನನಗೆ ಅವರ ಗುರುತು ಹತ್ತಲಿಲ್ಲ, ಆದರೆ ಅವರು ಗುರುತು ಹಿಡಿದು ನಿಂತರು. ನಾನೂ ನಿಂತೆ. "ನೀವು ಮೂರ್ತಿ ಅಲ್ಲವಾ?" ಎಂದರು. "ಹೌದು" ಎನ್ನುವಷ್ಟರಲ್ಲಿ ನನಗೂ ಅವರ ನೆನಪು ಮೂಡಿತು. ವಿ.ಸೀ. ಅವರ ಸೊಸೆ! ನಾನು ಭೂಮಿಗಿಳಿದು ಹೋದೆ. ನನ್ನ ಅಕ್ಷಮ್ಯ ಅಪರಾಧ ನೆನಪಾಗಿ ತುಂಬಾ ಸಂಕೋಚದಿಂದ ಹೇಗೆ ನನ್ನ ಅಸಹಾಯಕ ಸ್ಥಿತಿಯನ್ನು ಅವರಿಗೆ ವಿವರಿಸುವುದು ಎಂದು ಸಂಕಟಪಡುತ್ತಿರುವಾಗಲೇ ಅಕೆ ಹೇಳಿದರು: "ನೀವು ಹೀಗೆ ಮಾಡಬಾರದಿತ್ತು."

ನಾನು ತಲೆ ತಗ್ಗಿಸಿ "ಹೌದು ಮೇಡಂ, ತಪ್ಪಾಯಿತು" ಎಂದೆ.

ಅಕೆ ಹೇಳಿದ ಕೊನೆಯ ಮಾತು ನನ್ನ ಕರುಳನ್ನು ಹಿಂಡಿತು. "ನೋಡಿ; ಅವತ್ತು ಶುಕ್ರವಾರ ನೀವು ಬರ್ತೇನೆ ಎಂದದ್ದಕ್ಕೆ ಅವರು ಆರೋಗ್ಯ ಸರಿಯಿಲ್ಲದಿದ್ದರೂ ಬೇಗ ಎದ್ದು ಸ್ನಾನ ಮಾಡಿ ನಿಮಗಾಗಿ ಕಾಯುತ್ತಿದ್ದರು. 'ಪಾಪ, ಆ ಹುಡುಗ ಬರ್ತಾನೆ, ನಾನು ರೆಡಿಯಾಗಿರಬೇಕು, ಆತನನ್ನ ಕಾಯಿಸೋದು ಬೇಡ' ಎಂದು."

ನಾನು ಏನನ್ನೂ ಹೇಳಲಿಲ್ಲ. ದೀನನಾಗಿ ಅವರ ಮುಖ ನೋಡಿ "ಬರುತ್ತೇನೆ" ಎಂದಷ್ಟೇ ಹೇಳಿ ಹೊರಟುಬಿಟ್ಟೆ. ದಾರಿಯಲ್ಲಿ "ನನ್ನ ಚಿತ್ರ ಮಾಡ್ತೀರಾ!" ಎಂದಾಗಿನ ವಿ.ಸೀ. ಅವರ ಮುಖ ನೆನಪಾಗಿ ನನ್ನ ಕಣ್ಣು ತೇವಗೊಂಡಿತು. ಇಂತಹ ತಪ್ಪನ್ನು ಇನ್ನೆಂದೂ ಮಾಡಬಾರದೆಂದು ನಿರ್ಧರಿಸಿದೆ.

ಅಂದಿನಿಂದ ಇಂದಿನವರೆಗೆ ನೀಡಿದ ಸಮಯವನ್ನು ಕಾಪಾಡಿಕೊಂಡು ಬಂದಿದ್ದೇನೆ. ಐದು ನಿಮಿಷ ತಡವಾದರೂ ನನಗೆ ಮಾನಸಿಕವಾಗಿ ಕಸಿವಿಸಿಯಾಗುತ್ತದೆ. ಆ ಕೆಲಸ ಪೂರ್ಣಗೊಳ್ಳುವವರೆಗೂ ಆತಂಕವಾಗುತ್ತಿರುತ್ತದೆ. ಕಲೆಯಿಂದ ಶಿಸ್ತನ್ನೂ ನಾನು ಕಲಿತಿದ್ದೇನೆ. ನಮ್ಮ ಬದುಕಿಗೆ ಶಿಸ್ತು ತುಂಬಾ ಮುಖ್ಯ ಎಂದು ನನಗೆ ಮನದಟ್ಟಾಗಿದೆ. ಆದರೂ ಎಲ್ಲೋ ಒಂದು ಕಡೆ ನನ್ನ 'ಅಪರಾಧೀ ಪ್ರಜ್ಞೆ' ನನ್ನನ್ನು ಇಂದಿಗೂ ಕಾಡುತ್ತಲೇ ಇದೆ, ಆ ಹಿರಿಯರನ್ನು ಹಾಗೆ ಕಾಯಿಸಬಾರದಿತ್ತೆಂದು.

ಆ ದಿನ ಪ್ರತ್ಯಕ್ಷ ಕಂಡ ವಿ.ಸೀ. ಅವರ ನಿಷ್ಕಲ್ಮಶ 'ದೇಸೀ' ನಗುವನ್ನು ಈವತ್ತಿನ ನನ್ನ ಗೆರೆಗಳಲ್ಲಿ ನಮ್ರನಾಗಿ ರೂಪಿಸಿದ್ದೇನೆ. ಆದರೂ ಅಂದು ನನ್ನ ಮನಸ್ಸಿನಲ್ಲಿ ದಾಖಲಾದ ಆ 'ನಗು'ವಿಗೆ ನನ್ನ ಈ ಚಿತ್ರ ಖಂಡಿತಾ ಹೋಲಲಾರದೆಂಬುದಂತೂ ಸತ್ಯ.

ಅದೊಂದು ಅಳಿಸಲಾಗದ ಸುಂದರ ಚಿತ್ರ!

ಅನುಬಂಧ
ಮತ್ತು
ಲೇಖಕರ ವಿಳಾಸ

ಅನುಬಂಧ–1

ವಿ.ಸೀ. ಬದುಕಿನ ಮೈಲಿಗಲ್ಲುಗಳು

(ಅ) ವ್ಯಕ್ತಿಜೀವನ

1899	ಜನನ, ಬೂದಿಗೆರೆ (ಬೆಂಗಳೂರು ಜಿಲ್ಲೆ), ಅಕ್ಟೋಬರ್ 2. ತಂದೆ : ಹುಲ್ಲೂರು ವೆಂಕಟರಾಮಯ್ಯ; ತಾಯಿ : ಬೂದಿಗೆರೆ ದೊಡ್ಡವೆಂಕಮ್ಮ.
1906–07	ಬೆಂಗಳೂರಿಗೆ ಬಂದದ್ದು : ವಿದ್ಯಾಭ್ಯಾಸಕ್ಕೆ.
1907–16	ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ : ಬೆಂಗಳೂರು : ಚಾಮರಾಜಪೇಟೆ ಮುನಿಸಿಪಲ್ ಪ್ರಾಥಮಿಕ ಶಾಲೆ; ಎ. ವಿ. ಸ್ಕೂಲ್, ಕೋಟೆ; ಸರ್ಕಾರಿ ಪ್ರೌಢಶಾಲೆ–ಇತ್ಯಾದಿಯಲ್ಲಿ.
1917–20	ಕಾಲೆಜ್ ಶಿಕ್ಷಣ : ಮೈಸೂರು ಮಹಾರಾಜಾ ಕಾಲೆಜಲ್ಲಿ, ಬಿ.ಎ. ಪದವಿ; ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ದರ್ಶನಗಳಲ್ಲಿ (ಸರ್ ಶೇಷಾದ್ರಿ ಬಂಗಾರ ಪದಕ ಅರ್ಥಶಾಸ್ತ್ರದಲ್ಲಿ – 1920).
1920–22	ಸ್ನಾತಕೋತ್ತರ ಶಿಕ್ಷಣ : ಮಹಾರಾಜಾ ಕಾಲೆಜ್, ಮೈಸೂರು. ಎಂ.ಎ. ಪದವಿ : ಅರ್ಥಶಾಸ್ತ್ರ–ರಾಜ್ಯಶಾಸ್ತ್ರಗಳಲ್ಲಿ.
1920–28	ಉಪಾಧ್ಯಾಯರಾಗಿ ಕೆಲಸ ಮಾಡಿದ್ದು : ಶಾರದಾ ವಿಲಾಸ ಹೈಸ್ಕೂಲು, ಮೈಸೂರು. (1922 ರಲ್ಲಿ ಆರೆಂಟು ತಿಂಗಳು ಕಾನೂನು (Law) ಕಲಿಯಲು ಬೊಂಬಾಯಿಗೆ ಹೋಗಿದ್ದು ; ಅಲ್ಲಿ ಡೆಪ್ಯುಟಿ ಕಂಟ್ರೋಲರ್ ಆಫ್ ಕರೆನ್ಸಿ ಆಫೀಸಿನಲ್ಲಿ ಕೆಲಸ ಬಿಟ್ಟು ಉಳಿದೆಲ್ಲ ಕಾಲ).
1925	ಮದುವೆ : ವಿಜಯಪುರದಲ್ಲಿ; ಪತ್ನಿ : ಶ್ರೀಮತಿ ಸರೋಜಮ್ಮ. ಮಕ್ಕಳು : 4 ಗಂಡು; 3 ಹೆಣ್ಣು
1928–55	ಕನ್ನಡ ಉಪನ್ಯಾಸಕರಾಗಿ ನೇಮಕ : ಮೈಸೂರು ವಿಶ್ವವಿದ್ಯಾನಿಲಯ; ಬೆಂಗಳೂರು–ಮೈಸೂರುಗಳಲ್ಲಿ ಸೇವೆ. ನಿವೃತ್ತರಾದಾಗ ಉಪಪ್ರಾಧ್ಯಾಪಕರು (Asst. Professor). (1948 ರಿಂದ 50ರ ವರೆಗೆ ಎರಡು ವರ್ಷ ಚಿಕ್ಕಮಗಳೂರಿನ ಸರ್ಕಾರಿ ಕಾಲೆಜಲ್ಲಿ ಸೂಪರಿಂಟೆಂಡೆಂಟರಾಗಿದ್ದುದೂ ಇಲ್ಲಿ ಸೇರಿದೆ).
1956–58	ಆಲ್ ಇಂಡಿಯ ರೇಡಿಯೊ : ಆಕಾಶವಾಣಿ –ಬೆಂಗಳೂರು ಕೇಂದ್ರದಲ್ಲಿ Producer, Spoken Word.
1964–68	ಹೊನ್ನಾವರದ ಮಲೆನಾಡು ಪ್ರೋಗ್ರೆಸ್ಸಿವ್ ಎಜುಕೇಶನ್ ಸೊಸೈಟಿಯವರು ಆರಂಭಿಸಿದ ಆರ್ಟ್ಸ್ ಮತ್ತು ಸೈನ್ಸ್ ಕಾಲೆಜಿನ ಪ್ರಥಮ ಪ್ರಿನ್ಸಿಪಲರಾಗಿ ಕೆಲಸ ಮಾಡಿದ್ದು.
1974	ಪತ್ನೀವಿಯೋಗ : ಲಂಡನ್ ಯಾತ್ರೆ; ಪಾರ್ಶ್ವವಾಯು ಪೀಡಿತರಾಗಿ ಹಿಂದಿರುಗಿದ್ದು.
1983	ನಿಧನ, ಸೆಪ್ಟೆಂಬರ್ 4.

(ಆ) ಸಾಹಿತ್ಯಕ ಜೀವನ

1923 ಪ್ರಥಮ ಕವನ ಪ್ರಕಟಣೆ : ಪ್ರಬುದ್ಧ ಕರ್ನಾಟಕ (ಸಂ. 5; ಸಂ. 1 'ಒಲವು')

1928 ಪ್ರಥಮ ಕೃತಿ ಪ್ರಕಟಣೆ : 'ಪಂಪಾಯಾತ್ರೆ' – ಪ್ರವಾಸ ಕಥನ.

1931 ಅಧ್ಯಕ್ಷರು : ಕವಿ ಸಮ್ಮೇಳನ, ಕಾರವಾರ.

1934–42 ಕೋಶಾಧಿಕಾರಿ, ಕ.ಸಾ.ಪ; ಕಾವ್ಯಾವಲೋಕನಕಾರರು, ಮದರಾಸಿನ 'ಹಿಂದೂ' ಪತ್ರಿಕೆಗೆ.

1936 ಅಧ್ಯಕ್ಷರು, ಕರ್ನಾಟಕ ವ್ಯಾಪಾರಿಗಳ ಸಮ್ಮೇಳನ, ಹಂಪೆ.

1939–42 ಸಂಪಾದಕತ್ವ 'ಕ.ಸಾ.ಪ. ಪತ್ರಿಕೆ', ಬೆಂಗಳೂರು.

1943–48 ಸಂಪಾದಕತ್ವ 'ಪ್ರಬುದ್ಧ ಕರ್ನಾಟಕ', ಮೈಸೂರು.

1953 ಅಧ್ಯಕ್ಷರು, ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ, ಕುಮಟಾ.

1954 ಅಧ್ಯಕ್ಷರು, ಮುಂಬಯಿ ಪ್ರಾಂತ ಭಾಷಾ ಸಮ್ಮೇಳನ, ಗದಗ್.

1954–70 ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯತ್ವ (ಕನ್ನಡ).

1955–56 ಸಂಪಾದಕತ್ವ, 'ಸಾಹಿತ್ಯ ಪರಿಷತ್ ಪತ್ರಿಕೆ', 'ಕನ್ನಡ ನುಡಿ', ಬೆಂಗಳೂರು.

1965–68 ಭಾರತೀಯ ಜ್ಞಾನಪೀಠಪ್ರಶಸ್ತಿ ಸಲಹಾ ಮಂಡಲಿ ಸದಸ್ಯತ್ವ (ಕನ್ನಡ).

1970 'ಮಹನೀಯರು' ಗ್ರಂಥ ಬಿಡುಗಡೆ; ಸನ್ಮಾನ : ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ, ಬೆಂಗಳೂರು.

ಗಣ್ಯ ಸಾಹಿತಿ ಪ್ರಶಸ್ತಿ–ರಾಜ್ಯ ಸರ್ಕಾರದಿಂದ (ಒಪ್ಪಿಕೊಳ್ಳಲಿಲ್ಲ) 'ಮಹನೀಯರು' ಕೃತಿಗೆ ಪ್ರಶಸ್ತಿ.

ಕೇರಳ ಸಾಹಿತ್ಯ ಪರಿಷತ್ತಿನ ರಜತೋತ್ಸವ ಸಮಾರಂಭದ ಉದ್ಘಾಟನೆ.

1971 ಸಂಪಾದಕರು : 'ಕವಿ ಕಾವ್ಯ ಪರಂಪರೆ' ಸಾಹಿತ್ಯ ಮಾಲೆ, ಐಬಿಎಚ್ ಪ್ರಕಾಶನ, ಬೆಂಗಳೂರು.

1973 ರಾಜ್ಯ ಸರ್ಕಾರದಿಂದ ಆಜೀವ ಗೌರವ ವೇತನ. ರಾಜ್ಯ ಸಾಹಿತ್ಯ ಅಕಾಡೆಮಿಯ ಕಾರ್ಯಕಾರಿ ಮಂಡಲಿಗೆ ಸದಸ್ಯರಾಗಿ ಸರ್ಕಾರದಿಂದ ಆಯ್ಕೆ; ಒಪ್ಪಿಕೊಳ್ಳಲಿಲ್ಲ.

ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ : 'ಅರಲು–ಬರಲು' ಕವನ ಸಂಕಲನಕ್ಕೆ.

'ವಿ. ಸೀ. 75' ಸಂಭಾವನಾ ಗ್ರಂಥದ ಪ್ರಕಟಣೆ.

1976 ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟೊರೇಟ್ ಪದವಿ ಪ್ರದಾನ.

1978 ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ; 'ಕೃಷ್ಣಚಾರಿತ್ರ' ಕೃತಿಗೆ ಮಾನವಿಕಶಾಸ್ತ್ರ ವಿಭಾಗದಲ್ಲಿ ರಾಜ್ಯ ಸರ್ಕಾರ ಪ್ರಶಸ್ತಿ.

ಅನುಬಂಧ–2

(ಕ) ವಿ.ಸೀ. ಕೃತಿಗಳು

(ಅ) ಕವನ ಸಂಗ್ರಹಗಳು

ಗೀತಗಳು (೧೯೩೧); ದೀಪಗಳು (೧೯೩೩); ನೆಳಲು–ಬೆಳಕು (೧೯೩೫); ದ್ರಾಕ್ಷಿ–ದಾಳಿಂಬೆ (೧೯೪೮); ಹೆಜ್ಜೆಪಾಡು (೧೯೫೮); ಕದಂಬ (ಆಯ್ದ ಕವಿತೆ) (೧೯೭೦); ಅರಲು–ಬರಲು (೧೯೭೨); ಹಗಲು–ಇರುಳು (೧೯೮೧).

(ಆ) ಗದ್ಯ ಕೃತಿಗಳು

ಪಂಪಾಯಾತ್ರೆ (೧೯೨೮); ಸೊಹ್ರಾಬ್–ರುಸ್ತುಂ (೧೯೩೦); ಆಗ್ರಹ (೧೯೩೧); ಹಣಪ್ರಪಂಚ (೧೯೩೭); ಕರ್ನಾಟಕ ಕಾದಂಬರಿ (೧೯೪೦); ಅಭಿಜ್ಞಾನ ಶಾಕುಂತಲ ನಾಟಕ ವಿಮರ್ಶೆ (೧೯೪೩); ಅಶ್ವತ್ಥಾಮನ್ (೧೯೪೬); ಭಾರತದ ರಾಜ್ಯಾಂಗ ರಚನೆ (೧೯೪೭); ವ್ಯವಹಾರ ಧರ್ಮ (೧೯೪೯); ಭಾರತದ ಐವರು ಮಾನ್ಯರು (೧೯೫೧); ಕವಿ ಕಾವ್ಯ ದೃಷ್ಟಿ (೧೯೫೫); ಶಿವರಾಮ ಕಾರಂತರು (೧೯೫೬); ಬೆಳುದಿಂಗಳು (೧೯೫೯); ಶ್ರೀಶೈಲ ಶಿಖರ (೧೯೬೦); ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ (೧೯೬೧); ಭಾರತದಲ್ಲಿ ಯೋಜನೆ (೧೯೬೨); ಸಾಹಿತ್ಯ : ಸಂಪ್ರದಾಯ ಮತ್ತು ಹೊಸಮಾರ್ಗ (೧೯೬೭); ಸೀಕರಣೆ (೧೯೭೦); ಚ್ಯವನ (೧೯೭೦); ಮಹನೀಯರು (೧೯೭೦); ಕಾಲೇಜ್ ದಿನಗಳು (೧೯೭೧); ಎರಡು ನಾಟಕಗಳು: ಆಗ್ರಹ ಮತ್ತು ಚ್ಯವನ (೧೯೭೧); ಸತ್ಯ ಮತ್ತು ಮೌಲ್ಯ (೧೯೭೨); ವಾಲ್ಮೀಕಿ ರಾಮಾಯಣ (೧೯೭೬); ಕಲಾನುಭವ (೧೯೭೬); ಒಳ್ಳೆಯ ಮನುಷ್ಯ, ಒಳ್ಳೆಯ ಬದುಕು (೧೯೭೬); ಮುಂಬಯಿ ವಾಸ : ನೆನಪುಗಳು (೧೯೭೬); ಮಹಾಕವಿ ಪಂಪ (೧೯೭೬); ಮಹಾಭಾರತದ ಕೃಷ್ಣಚಾರಿತ್ರ (೧೯೭೮); ಪಟ್ಟಬಂಧ (೧೯೭೯); ಸಾಹಿತ್ಯಾಲೋಕನ (೧೯೭೯); ಸಾರ್ವಜನಿಕ ಜೀವನದಲ್ಲಿ ಅಧಿಕಾರ, ಶಕ್ತಿ, ಪ್ರಭಾವ ಮಂಡಲಗಳು (೧೯೭೯); ಹಿರಿಯರು–ಗೆಳೆಯರು (೧೯೮೦); ಸಂವಿಧಾನ ಮತ್ತು ಕಾನೂನು (೧೯೯೩); ಜ್ಞಾನ–ವಿಜ್ಞಾನ, ಸಾಹಿತ್ಯಾಲೋಕನ, ಭಾಗ II ಮತ್ತು III (ಅಪ್ರಕಟಿತ).

(ಇ) ಇಂಗ್ಲಿಷಲ್ಲಿ

ಮಯಾಕವಿ ಪಂಪ (೧೯೭೭); ವೆಂಕಟಪ್ಪ (೧೯೭೮); ಪುರಂದರದಾಸ (೧೯೭೧); ಎಂ. ವಿಶ್ವೇಶ್ವರಯ್ಯ (೧೯೭೧); ವಾಲ್ಮೀಕಿ ರಾಮಾಯಣ (೧೯೭೨); ಡಿ. ವಿ. ಗುಂಡಪ್ಪ (೧೯೭೨); ಪಂಜೆ ಮಂಗೇಶರಾವ್ (೧೯೭೮); ಅಭಿಜ್ಞಾನ ಶಾಕುಂತಲ ನಾಟಕ ವಿಮರ್ಶೆ; ಮಹಾಭಾರತದ ಕೃಷ್ಣಚಾರಿತ್ರ; ಭಾರತದ ಐವರು ಮಾನ್ಯರು (ಮೂರೂ ಅಪ್ರಕಟಿತ).

(ಈ) ಅನುವಾದಿತ

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ: ಕ್ರಿಯಾಸ್ವರೂಪ ಮತ್ತು ಕಾರ್ಯಕಲಾಪಗಳು (೧೯೫೯); ಭಾರತ ಸ್ವಾತಂತ್ರ್ಯ ಗಳಿಸಿತು (೧೯೬೩); ಪಿಗ್‌ಮೇಲಿಯನ್ (೧೯೬೩); ಬಂಗಾಳಿ ಸಾಹಿತ್ಯ ಚರಿತ್ರೆ (೧೯೬೬); ಮೇಜರ್ ಬಾರ್ಬರ (೧೯೬೮); ತ್ಯಾಗರಾಜ (೧೯೬೯); ಪುರಂದರದಾಸ (೧೯೭೯); ಮೋಬಿ ಡಿಕ್ (೧೯೮೨); ಪಂಚೆ ಮಂಗೇಶರಾವ್ (೧೯೮೫); ಮಿಷನ್ ವಿತ್ ಮೌಂಟ್‌ಬ್ಯಾಟನ್ (ಅಪ್ರಕಟಿತ).

(ಉ) ಇನ್ನಿತರ

ಇತರ ಅನೇಕ ಬಿಡಿ ಲೇಖನ, ಅವಲೋಕನ–ಇಂಗ್ಲಿಷ್, ಕನ್ನಡ ನಿಯತಕಾಲಿಕೆಗಳಲ್ಲಿ; ಪ್ರಸಾರ ಭಾಷಣಗಳು – ಇಂಗ್ಲಿಷಲ್ಲಿ, ಕನ್ನಡದಲ್ಲಿ; 'ಪ್ರಜಾಮತ'ದಲ್ಲಿ 'ಲೋಕಸಮೀಕ್ಷೆ' ವಾರಲೇಖನಗಳು (೧೯೬೦–೬೧); ಚಿಂತನ, ನೆನಪು, ಲಘುಪ್ರಬಂಧ ಇತ್ಯಾದಿ.

(ಖ) ವಿ. ಸೀ. ಕುರಿತು ಕೃತಿಗಳು

1. "ರೂಪಾರಾಧಕ" (ವಿ.ಸೀ. ಮತ್ತು ಅವರ ಕೃತಿ ಪರಿಚಯ) ಸಂ. ಡಾ. ಹಾ. ಮಾ. ನಾಯಕ; ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೫೩.
2. "ವಿ. ಸೀ" (ಕವಿಕಾವ್ಯ ಪರಿಚಯ) ಸಂ: ಎಸ್. ಅನಂತನಾರಾಯಣ, ಪ. ವಿ. ಚಂದ್ರಶೇಖರ; ಪ್ರ: ಗೆಳೆಯರ ಬಳಗ, ದಾವಣಗೆರೆ – ಅರಸೀಕೆರೆ, ೧೯೫೩.
3. "ವಿ.ಸೀ. ಎಪ್ಪತ್ತೊಂದು" ಸಂ: ಜಿ. ಯು. ಭಟ್, ಜಿ. ಎಸ್. ಅವಧಾನಿ, ಪ್ರ: ಸಾಧನ ಪ್ರಕಾಶನ, ಹೊನ್ನಾವರ (ಉ.ಕ), ೧೯೬೯.
4. "ವಿ.ಸೀ." ಲೇ: ಕೆ. ಎಸ್. ನರಸಿಂಹಸ್ವಾಮಿ; ಪ್ರ: ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜ್, ಉಡುಪಿ, ೧೯೭೦.
5. "ವಿ.ಸೀ. ೭೫" (ಸಂಭಾವನಾ ಗ್ರಂಥ) ಸಂ: ವಿ. ಎಂ. ಇನಾಂದಾರ್; ವಿ.ಸೀ. ಸತ್ಕಾರ ಸಮಿತಿಗಾಗಿ ಪ್ರ: ಐಬಿಎಚ್ ಪ್ರಕಾಶನ, ಗಾಂಧೀನಗರ, ಬೆಂಗಳೂರು, ೧೯೭೪.
6. ವಿ. ಸೀತಾರಾಮಯ್ಯ ('ವಿ.ಸೀ.'): ಬದುಕು, ಬರಹ, ವ್ಯಕ್ತಿತ್ವ ಲೇ: 'ಸುಮನಾ'; ಪ್ರ. ಐಬಿಎಚ್ ಪ್ರಕಾಶನ, ಗಾಂಧೀನಗರ, ಬೆಂಗಳೂರು, ೧೯೮೫.
7. "ಸಾರ್ಥಕ ಬದುಕು" (ವಿ.ಸೀ. ಜೀವನ, ಸಾಹಿತ್ಯ ಮತ್ತು ಸಾಧನೆ): ಲೇ: ಬಿ. ಪಿ. ರಾಧಾಕೃಷ್ಣ ಪ್ರ: ವಿ.ಸೀ. ಸಂಪದ, ಬೆಂಗಳೂರು–೮೫, ೧೯೯೭.

ವಿ.ಸೀ. ಸಮಗ್ರ ಸಾಹಿತ್ಯ ಸಂಪುಟ

('ಸಂಪದ'ದ ಪ್ರಕಟಣೆಗಳು)

1. "ಸ್ನೇಹ–ವಿಶ್ವಾಸ" (1990) – ಸಮಗ್ರ ಕಾವ್ಯ ಸಂಪುಟ (ಅರವತ್ತು ಅಪ್ರಕಟಿತ ಕವನಗಳೂ ಸೇರಿವೆ) ಡೆಮಿ 704 ಪುಟ, ಪ್ರೊ. ಎಲ್. ಎಸ್. ಶೇಷಗಿರಿ ರಾವ್ ಅವರ ಪ್ರಸ್ತಾವನೆಯೊಡನೆ. ಬೆಲೆ : ಸಾಧಾರಣ ಪ್ರತಿ: ರೂ.85/– ಅರೆಕ್ಯಾಲಿಕೊ (ಮ್ಯಾಪ್‌ಲಿಥೊ ಕಾಗದ) ಪ್ರತಿ : ರೂ. 120/–

2. "ಸಮಗ್ರ ಲಲಿತ ಪ್ರಬಂಧ ಸಂಪುಟ" (1992) ಡೆಮಿ 375 ಪುಟ, ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರ ವಿಶೇಷ ಪ್ರಸ್ತಾವನೆಯೊಡನೆ. ಬೆಲೆ : ರೂ. 80/–

3. "ಸಮಗ್ರ ನಾಟಕ" (1993) ಡೆಮಿ 576 ಪುಟ, ಡಾ. ಎಚ್. ಕೆ. ರಂಗನಾಥ್ ಅವರ ಪ್ರಸ್ತಾವನೆಯೊಡನೆ. ಬೆಲೆ : ಸಾಧಾರಣ ಪ್ರತಿ ರೂ. 85/– ಅರೆಕ್ಯಾಲಿಕೊ ಪ್ರತಿ: ರೂ. 120/–

4. "ವ್ಯಕ್ತಿ ಚಿತ್ರ ಸಂಪುಟ" ಭಾಗ I ಮತ್ತು II (1996) ಡೆಮಿ 424 ಮತ್ತು 348 ಪುಟಗಳು (50 ಛಾಯಾ ಚಿತ್ರಗಳೂ ಸೇರಿ), ವಿದ್ಯಾಲಂಕಾರ ಪ್ರೊ. ಎಸ್. ಕೆ. ರಾಮಚಂದ್ರರಾವ್ ಅವರ ಪ್ರಸ್ತಾವನೆಯೊಡನೆ. ಬೆಲೆ : ರೂ. 125/– ಮತ್ತು ರೂ. 110/–

5. "ಸ್ಮೃತಿ ಚಿತ್ರ ಸಂಪುಟ" (1997) ಡೆಮಿ 437 ಪುಟ, (5 ಛಾಯಾ ಚಿತ್ರಗಳೂ ಸೇರಿ) ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ಪ್ರಸ್ತಾವನೆ ಮತ್ತು ಡಾ। ಪಿ. ವಿ. ನಾರಾಯಣ ಅವರ ಮುನ್ನುಡಿಯೊಡನೆ. ಬೆಲೆ : ರೂ. 140/–

6. "ವಿಮರ್ಶೆ : ಸಂಪುಟ ೧ – ಇತಿಹಾಸ ಕಾವ್ಯಗಳು" (1998) ಡೆಮಿ 480 ಪುಟ, ವಿದ್ವಾನ್ ಎನ್. ರಂಗನಾಥ ಶರ್ಮಾ ಅವರ ಉಪೋದ್ಘಾತದೊಡನೆ. ಬೆಲೆ : ರೂ. 160/–

ಈ ಸಂಪುಟದ ಲೇಖಕರು, ವಿಳಾಸ

I ಕಾವ್ಯಾಂಜಲಿ

1. ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ – ಈಗ ದಿವಂಗತರು
2. ಡಾ. ದ. ರಾ. ಬೇಂದ್ರೆ ”
3. ಪ್ರೊ. ಎಂ. ವಿ. ಸೀತಾರಾಮಯ್ಯ ”
4. ಪ್ರೊ. ವೇಣುಗೋಪಾಲ ಸೊರಬ ”
5. ಡಾ. ಕೆ. ಎಸ್. ನರಸಿಂಹಸ್ವಾಮಿ, ನಂ. 467, “ಕಾವ್ಯಶ್ರೀ”, 2 ನೇ ಬ್ಲಾಕ್, ಎರಡನೇ ಕ್ರಾಸ್, ಬನಶಂಕರಿ 3 ನೇ ಸ್ಟೇಜ್, 3 ನೇ ಫೇಸ್, ಬೆಂಗಳೂರು–85.
6. ಡಾ. ಜಿ. ಎಸ್. ಶಿವರುದ್ರಪ್ಪ, ನಂ. 867, ‘ಚೈತ್ರ,’ 18 ನೇ ಮೈನ್, ಬನಶಂಕರಿ 2 ನೇ ಸ್ಟೇಜ್, ಬೆಂಗಳೂರು–70
7. ಪ್ರೊ. ಆರ್. ಜಿ. ಕುಲಕರ್ಣಿ (ಸಾಕ್ಷಿ), ಪ್ಲಾಟ್ ನಂ. 102 (ಸೈಟ್ ನಂ. 21–22) ಶ್ರೀನಿವಾಸ ಅಪಾರ್ಟ್‌ಮೆಂಟ್, ಚಿಕ್ಕಲಸಂದ್ರ, ಸುಬ್ರಹ್ಮಣ್ಯಪುರ ಪೋಸ್ಟ್, ಬೆಂಗಳೂರು–61
8. ಪ್ರೊ. ಕ. ವೆಂ. ರಾಜಗೋಪಾಲ, MIG ನಂ. 41, 80 ಅಡಿ ರಸ್ತೆ, ಕೆಂಗೇರಿ ಸೆಟಲೈಟ್ ಟೌನ್, 2 ನೇ ಸ್ಟೇಜ್, ಬೆಂಗಳೂರು–60
9. ಪ್ರೊ. ಸುಜನಾ, ನಂ. 7–A/1, ಗೋಕುಲಂ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು–12
10. ಪ್ರೊ. ನಾ. ಗೀತಾಚಾರ್ಯ, ಗೌ. ಕಾರ್ಯದರ್ಶಿ, ಬಿ.ಎಂ.ಶ್ರೀ. ಪ್ರತಿಷ್ಠಾನ, ನ.ರಾ. ಕಾಲೋನಿ, ಬೆಂಗಳೂರು–19

II ಸ್ಮರಣ

1. ಡಾ. ಶಿವರಾಮ ಕಾರಂತ – ಈಗ ದಿವಂಗತರು
2. ಡಾ ರಂ. ಶ್ರೀ. ಮುಗಳಿ ”
3. ಪಿ. ವಿ. ಜೋಶಿ ”
4. ಡಾ. ಜಿ. ಎಸ್. ದೀಕ್ಷಿತ್, ನಂ. 1, ನವೋದಯನಗರ, ಧಾರವಾಡ
5. ಪ್ರೊ. ಎಸ್. ಆರ್. ಮಳಗಿ, ನಂ. 10–B, 1 ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10

6. ಪ್ರೊ. ಕೌಲಗಿ ಶೇಷಾಚಾರ್, 'ಅಪರ್ಣಾ', ನಂ. 5/1, ಸೀತಾವಿಲಾಸ ರಸ್ತೆ, ಮೈಸೂರು–24
7. ಪ್ರೊ. ಜಿ. ವೆಂಕಟಸುಬ್ಬಯ್ಯ, ನಂ. 58, 31 ನೇ ಕ್ರಾಸ್, 7 ನೇ ಬ್ಲಾಕ್, ಜಯನಗರ, ಬೆಂಗಳೂರು–41
8. ಶ್ರೀ ಎನ್. ಕೆ. ಕುಲಕರ್ಣಿ, 'ಪರಿಮಳ', ಆನಂದನಗರ, ರೈಲ್ವೆ ಗೂಡ್ಸ್‌ಶೆಡ್ ಬಳಿ, ಧಾರವಾಡ–7
9. ಪ್ರೊ. ಎಸ್. ವಿ. ಪರಮೇಶ್ವರ ಭಟ್ಟ, 'ಶ್ರುತಿ', ನಂ. 3–3–41/I, ದೇವಸ್ಥಾನದ ಹಿಂಭಾಗದ ರಸ್ತೆ, ಅಂಬಲಪಾಡಿ, ಉಡುಪಿ–3
10. ಡಾ. ಕೆ. ಎಸ್. ನರಸಿಂಹಸ್ವಾಮಿ ('ಕಾವ್ಯಾಂಜಲಿ' ವಿಭಾಗ ನೋಡಿ)
11. ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಅಂಚೆ ಪೆರಡಾಲ–671551 ಕಾಸರಗೋಡು ತಾ॥
12. ವಿದ್ವಾನ್ ಎನ್. ರಂಗನಾಥ ಶರ್ಮಾ, ನಂ. 831, 4 ನೇ ಮೈನ್, ಹೊಸಹಳ್ಳಿ ಎಕ್ಸ್‌ಟೆನ್ಷನ್, ಬೆಂಗಳೂರು–40
13. ಶ್ರೀ ಸಮೇತನಹಳ್ಳಿ ರಾಮರಾವ್, 'ಕೋಟೆಮನೆ' ನಂ. 518, 4 ನೇ ಮೈನ್, ಗೋಕುಲ 3 ನೇ ಹಂತ, ಮೈಸೂರು–2
14. ಶ್ರೀ ಬನ್ನಂಜೆ ರಾಮಾಚಾರ್ಯ, ಸರ್ವಜ್ಞ ಕುಟೀರ, ಕಡೆಕಾರು, ಉಡುಪಿ–3
15. ಶ್ರೀ ಕೆ. ನರಸಿಂಹಮೂರ್ತಿ, ಐ.ಎ.ಎಸ್. (ನಿ) ನಂ. 5, 27 ನೇ ಕ್ರಾಸ್, ಗೀತಾ ಕಾಲನಿ, ಜಯನಗರ, ಬೆಂಗಳೂರು–11
16. ಪ್ರೊ. ಜೆ. ಆರ್. ಲಕ್ಷ್ಮಣರಾವ್, 'ಮೈತ್ರಿ', 12 ನೇ ಮೈನ್, ಸರಸ್ವತೀಪುರಂ, ಮೈಸೂರು–9
17. ಶ್ರೀ ಎನ್. ವ್ಯಾಸರಾಯ ಬಲ್ಲಾಳ, 'ಉತ್ತರಾಯಣ', ನಂ. 1064, ಕುಮಾರ ಸ್ವಾಮಿ ಬಡಾವಣೆ, 1 ನೇ ಫೇಸ್, ಬೆಂಗಳೂರು–78.
18. ಶ್ರೀ ಎಚ್. ವೈ. ಶಾರದಾ ಪ್ರಸಾದ್, ನಂ. 19, ಮೈತ್ರಿ ಅಪಾರ್ಟ್‌ಮೆಂಟ್, A–3, ಪಶ್ಚಿಮ ವಿಹಾರ್, ನವದೆಹಲಿ–63
19. ಡಾ. ಎಚ್. ಕೆ. ರಂಗನಾಥ್, ನಂ, 942, 23 ನೇ ಮೈನ್, 4 ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು–11
20. ಪ್ರೊ. ಕು. ಶಿ. ಹರಿದಾಸಭಟ್, ಕುಂಜಿಬೆಟ್ಟು, ಉಡುಪಿ–2
21. ಪ್ರೊ. ಎಲ್. ಎಸ್. ಶೇಷಗಿರಿ ರಾವ್, 'ಜ್ಯೋತಿ', ನಂ. 267, 3 ನೇ ಬ್ಲಾಕ್, ಜಯನಗರ, ಬೆಂಗಳೂರು–11
22. ಡಾ. ಬಿ. ಸಿ. ರಾಮಚಂದ್ರಶರ್ಮ, 'ಪರಾಶರ', ನಂ. 222, 39 ನೇ 'ಸಿ' ಕ್ರಾಸ್, 5 ನೇ ಬ್ಲಾಕ್, ಜಯನಗರ, ಬೆಂಗಳೂರು–41

23. ಪ್ರೊ. ಎಚ್. ಕೆ. ರಾಮಚಂದ್ರಮೂರ್ತಿ, ನಂ. 209, 10 ನೇ 'ಬಿ' ಕ್ರಾಸ್, ಜೆ. ಪಿ. ನಗರ 1 ನೇ ಫೇಸ್, ಬೆಂಗಳೂರು–78

24. ಪ್ರೊ. ಎನ್. ಬಸವಾರಾಧ್ಯ, ನಂ. 743, 3 ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10

25. ಪ್ರೊ. ಎಸ್. ಕೆ. ರಾಮಚಂದ್ರರಾವ್, ನಂ. 305. 1 ನೇ ಬ್ಲಾಕ್, 6 ನೇ ಕ್ರಾಸ್, ಜಯನಗರ, ಬೆಂಗಳೂರು–11

26. ಶ್ರೀ ಶೇಷನಾರಾಯಣ, 'ಅಭಿಷೇಕ', 1 ನೇ ಮೇನ್, 3 ನೇ ಕ್ರಾಸ್, ಶ್ರೀನಿವಾಸ ಕಲ್ಯಾಣ ಮಂದಿರದ ಹಿಂಭಾಗ, ಮತ್ತೀಕೆರೆ, ಬೆಂಗಳೂರು–54

27. ಪ್ರೊ. ಚೆನ್ನವೀರ ಕಣವಿ, 'ಚಿಂಬಿಳಕು', ಕಲ್ಯಾಣನಗರ, ಧಾರವಾಡ–7

28. ಪ್ರೊ. ಕೀರ್ತಿನಾಥ ಕುರ್ತಕೋಟಿ, ನಂ. 1, ದೇಸಾಯಿ ಕಾಲನಿ, ಯೂನಿವರ್ಸಿಟಿ ಕ್ರಾಸ್, ಧಾರವಾಡ– 3

29. ಶ್ರೀ ಮತ್ತೂರು ಕೃಷ್ಣಮೂರ್ತಿ, ನಂ. 21–22, ಚಿತ್ರಕೂಟ ಅಪಾರ್ಟ್‌ಮೆಂಟ್, 18 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–3

30. ಶ್ರೀ ಎಸ್. ಎನ್. ಶಿವಸ್ವಾಮಿ, 67, ಬಸಪ್ಪ ಲೇ ಔಟ್, ಹನುಮಂತನಗರ, ಬೆಂಗಳೂರು–19

31. ಶ್ರೀ ಟಿ. ಮಹಾಬಲೇಶ್ವರ ಭಟ್ಟ, ನಂ. 73, 'ಸುದರ್ಶನ', ಮಾರಿಕಾಂಬ ರಸ್ತೆ, ಸಾಗರ–1

32. ಡಾ. ಕೆ. ಬಿ. ಪ್ರಭುಪ್ರಸಾದ್, ನಂ. 11, ದೇವಸ್ಥಾನ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು–12

33. ಡಾ. ಪ್ರಭುಶಂಕರ, ನಂ. 1006, E ಮತ್ತು F ಬ್ಲಾಕ್, ಕುವೆಂಪುನಗರ, ಮೈಸೂರು–23

34. ಡಾ. ಎಂ. ಚಿದಾನಂದಮೂರ್ತಿ, 'ಮಿಂಚು', ನಂ. 6/A, 4 ನೇ ಕ್ರಾಸ್, 11 ನೇ ಮೈನ್, ವಿಜಯನಗರ II ಫೇಸ್, ಬೆಂಗಳೂರು–40

35. ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ, 'ಲಲಿತಕೃಪ', ನಂ. 203, 7 ನೇ 'ಎ' ಮೈನ್, ಆರ್. ಪಿ. ಸಿ. ಲೇ ಔಟ್, ವಿಜಯನಗರ ಈಸ್ಟ್, ಬೆಂಗಳೂರು–40

36. ಡಾ. ಸಾ. ಶಿ. ಮರುಳಯ್ಯ, 'ರಾಗಿಣಿ', ನಂ. 3, ಸರ್ವಿಸ್ ರಸ್ತೆ, ವಿಜಯನಗರ 2 ನೇ ಹಂತ, ಬೆಂಗಳೂರು–40

37. ಪ್ರೊ. ಡಿ. ಎಸ್. ಗುರುರಾಜರಾವ್ ನಂ. 325, 'ಕಲ್ಪನಾ', 15 ನೇ ಕ್ರಾಸ್, 8 ನೇ ಮೈನ್, ಜಯನಗರ 2 ನೇ ಬ್ಲಾಕ್, ಬೆಂಗಳೂರು–11

38. ಶ್ರೀ ಶಾ. ಬಾಲುರಾವ್, ನಂ. 131, 'ಕಾವೇರಿ', ಜೆ–ಎಕ್ಸ್‌ಟೆನ್ಷನ್, ಲಕ್ಷ್ಮೀನಗರ, ದೆಹಲಿ–92

39. ಡಾ. ಯು. ಆರ್. ಅನಂತಮೂರ್ತಿ, 498, 'ಸುರಗಿ', HIG ಮನೆ, 6ನೇ 'ಎ' ಮೈನ್, II ಸ್ಟೇಜ್, ರಾಜಾಮಹಲ್ ವಿಲಾಸ್ ಎಕ್ಸ್‌ಟೆನ್ಷನ್, ಬೆಂಗಳೂರು–94

40. ಡಾ. ಜಿ. ರಾಮಕೃಷ್ಣ, ನಂ. 713, ವಿಜಯ ಮ್ಯಾನ್‌ಷನ್, 1ನೇ ಮೈನ್, ಆರ್. ಪಿ. ಸಿ. ಲೇ ಔಟ್, ಬೆಂಗಳೂರು–40

41. ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ, 'ಬ್ರಾಹ್ಮೀ', ನಂ. 68–ಬಿ, ಆಶ್ರಮ ರಸ್ತೆ, 3ನೇ ಬ್ಲಾಕ್, ಜಯಲಕ್ಷ್ಮೀಪುರಂ, ಮೈಸೂರು–12

42. ಡಾ. ಚಿ. ನ. ಮಂಗಳಾ – ಈಗ ದಿವಂಗತರು

43. ಡಾ. ಪಂಚಾಕ್ಷರಿ ಹಿರೇಮಠ, ಜಯನಗರ, ಧಾರವಾಡ–1

44. ಡಾ. ಕೃಷ್ಣಾನಂದ ಕಾಮತ್, 110, ಶಶಿಕಿರಣ್ ಅಪಾರ್ಟ್‌ಮೆಂಟ್ಸ್, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–55

45. ಪ್ರೊ. ಅ. ರಾ. ಮಿತ್ರ, ನಂ. 51, 8ನೇ ಕ್ರಾಸ್, ಮಹಾಲಕ್ಷ್ಮೀಪುರಂ (ಅಂಚೆ ಕಚೇರಿ ಎದುರು) ಬೆಂಗಳೂರು–86

46. ಡಾ. ಸುಮತೀಂದ್ರ ನಾಡಿಗ, ನಂ. 38, 'ಅಪೂರ್ವ', 1ನೇ ಮೈನ್, 3ನೇ ಫೇಸ್, ಬನಶಂಕರಿ 3ನೇ ಸ್ಟೇಜ್, ಬೆಂಗಳೂರು–85

47. ಪ್ರೊ. ಕೆ. ಎಸ್. ನಿಸಾರ್ ಅಹಮದ್, 'ಹಮೀದಾ ಹೈದರ್', ನಂ. 341, ಪದ್ಮನಾಭನಗರ, ಬನಶಂಕರಿ 2ನೇ ಸ್ಟೇಜ್, ಬೆಂಗಳೂರು–70

48. ಡಾ. ಹಂಪ ನಾಗರಾಜಯ್ಯ, 'ಸ್ವನಿಮಾ', ನಂ. 1079, 18–ಎ ಮೈನ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10

49. ಶ್ರೀಮತಿ ನಿರ್ಮಲಾ ಇನಾಂದಾರ್, 1204/28, ಡೆಕ್ಕನ್ ಜಮಖಾನಾ, ಶಿವಾಜಿನಗರ, ಪುಣೆ–4

50. ಶ್ರೀ ಸೂ. ಸುಬ್ರಹ್ಮಣ್ಯಂ, 'ವನಸುಮ', ನಂ. 711, 4ನೇ ಬ್ಲಾಕ್, ಜಯನಗರ, ಬೆಂಗಳೂರು–11

51. ಶ್ರೀಮತಿ ಲಲಿತಮ್ಮ ಡಾ. ಚಂದ್ರಶೇಖರ್, ಸಪ್ತಗಿರಿ, ಹರಿಹರ–1

52. ಶ್ರೀ ಎಸ್. ಆರ್. ರಾಮಸ್ವಾಮಿ, ಪ್ರಧಾನ ಸಂಪಾದಕರು, 'ಉತ್ಥಾನ', ಕೇಶವಶಿಲ್ಪ, ಕೆಂಪೇಗೌಡನಗರ, ಬೆಂಗಳೂರು–19

53. ಡಾ. ಜ್ಯೋತ್ಸ್ನಾ ಕಾಮತ್, 110, ಶಶಿಕಿರಣ್ ಅಪಾರ್ಟ್‌ಮೆಂಟ್ಸ್, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–55

54. ಡಾ. ಎನ್. ಆರ್. ನಾಯಕ, ಸುಹಾಸ, ಉದಯಗಿರಿ, ಎಸ್.ಡಿ.ಎಂ. ಕಾಲೇಜ್ ಬಳಿ, ಹೊನ್ನಾವರ–581334

55. ಡಾ. ವಿಜಯಾ, 153, 4ನೇ ಮೈನ್, 8ನೇ ಕ್ರಾಸ್, ಚಾಮರಾಜಪೇಟೆ, ಬೆಂಗಳೂರು–18

56. ಪ್ರೊ. ಎಮ್. ರಾಮಚಂದ್ರ, 'ಅಕ್ಷರ', ತೆಳ್ಳಾರ್ ಕ್ರಾಸ್ ರಸ್ತೆ, ಕಾರ್ಕಳ–574104

57. ಡಾ. ಎಸ್. ಪಿ. ಪದ್ಮಪ್ರಸಾದ್, ಪ್ರಾಂಶುಪಾಲರು, ಶ್ರೀ ಟಿ. ವಿ. ವಿ. ಶಿಕ್ಷಣ ಮಹಾವಿದ್ಯಾಲಯ, ಮಧುಗಿರಿ–572132

58. ಶ್ರೀ ಅ. ಬಾ. ಶೆಟ್ಟಿ ಪೊಳಲಿ, ಶ್ರೀ ದೇವೀಪ್ರಸಾದ, ಪರ್ಕಳ–576123

59. ಪ್ರೊ. ಪಿ. ಎಂ. ಹೆಗಡೆ, 'ಪೂರ್ಣಿಮಾ', ಹೊಸಪೇಟೆ ಎಕ್ಸ್‌ಟೆನ್ಷನ್, ಸಿರಸಿ–581401

60. ಪ್ರೊ. ಜಿ. ಅಶ್ವತ್ಥನಾರಾಯಣ, ನಂ. 95, 34ನೇ 'ಬಿ' ಕ್ರಾಸ್, 16ನೇ ಮೈನ್, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು–41

61. ಪ್ರೊ. ಕೆ. ಎಸ್. ಕಲ್ಲಾಪುರ, ನಂ. 46, ರಾಜೀವನಗರ, ಬನಶಂಕರಿ 3ನೇ ಸ್ಟೇಜ್, 4ನೇ ಫೇಸ್, ಬೆಂಗಳೂರು–85

62. ಶ್ರೀ ಚಿರಂಜೀವಿ, 'ಶ್ರೇಯಸ್', 3390/49, 3ನೇ ಕ್ರಾಸ್, 5ನೇ ಮೈನ್, ಆರ್. ಪಿ. ಸಿ. ಲೇ ಔಟ್, ವಿಜಯನಗರ 2ನೇ ಸ್ಟೇಜ್, ಬೆಂಗಳೂರು–40

III ನಮನ

63. 'ಕೌಂಡಿನ್ಯ' (ಶ್ರೀ ಎನ್. ಎಸ್. ವೆಂಕಟಸುಬ್ಬರಾವ್) ನಂ. 11–1, 'ಶ್ರೀ ಕೃಪ', 1ನೇ ಕ್ರಾಸ್, ಮಾಡೆಲ್ ಕಾಲನಿ, ಯಶವಂತಪುರ, ಬೆಂಗಳೂರು–22

64. ಪ್ರೊ. ಗರ್ಗೇಶ್ವರಿ ವೆಂಕಟಸುಬ್ಬಯ್ಯ, ನಂ. 20, 'ಗಣೇಶಧಾಮ', 9ನೇ ಮೈನ್, 2ನೇ ಕ್ರಾಸ್, ರಾಜಾಮಹಲ್ ವಿಲಾಸ ಎಕ್ಸ್‌ಟೆನ್ಷನ್, ಬೆಂಗಳೂರು–80

65. ಡಾ. ಬಿ. ಪಿ. ರಾಧಾಕೃಷ್ಣ, 243, 5ನೇ ಮೈನ್, ಚಾಮರಾಜಪೇಟೆ, ಬೆಂಗಳೂರು–18

66. ಶ್ರೀ ಎಚ್. ಎಸ್. ದೊರೆಸ್ವಾಮಿ, 18/B, (ಮಹಡಿ ಮನೆ), 7ನೇ ಕ್ರಾಸ್, ನ. ರಾ. ಕಾಲೋನಿ, ಬೆಂಗಳೂರು–19

67. ಶ್ರೀ ಆರ್. ಎಸ್. ರಾಮರಾವ್, 669, 2 ನೇ ಮೈನ್, 7ನೇ ಬ್ಲಾಕ್, ಬನಶಂಕರಿ 3ನೇ ಸ್ಟೇಜ್ (ಹೊಸಕೆರೆಹಳ್ಳಿ), ಬೆಂಗಳೂರು–85

68. ಶ್ರೀ ಕೆ. ಎಸ್. ನಾರಾಯಣಸ್ವಾಮಿ, 768–9, 8ನೇ ಕ್ರಾಸ್, ಎಂ. ಪಿ. ಬಡಾವಣೆ, ವಿಜಯನಗರ, ಬೆಂಗಳೂರು–40

69. ನ್ಯಾಯಮೂರ್ತಿ ಡಿ. ಎಂ. ಚಂದ್ರಶೇಖರ್, ಕುಮಾರ ಕೃಪ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು–1

70. ಪ್ರೊ. ಸಿ. ವಿ. ಗೋವಿಂದರಾವ್, 484, 13 ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು–27

71. ಪ್ರೊ. ಬಿ. ವಿ. ಕೃಷ್ಣಮೂರ್ತಿ, 44, 'ಇಂದಿರಗಿರಿ', HIG ಹುಡ್ಕೊ, ಮಣಿಪಾಲ 576119

72. ಶ್ರೀ ಡಿ. ನಂಜುಂಡಯ್ಯ – ಈಗ ದಿವಂಗತರು

73. ಶ್ರೀ ವಿ. ಸತ್ಯನಾರಾಯಣ, ನಂ. 10–3–10, ಎನ್. ವಿ. ಲೇ ಔಟ್, ಗುಲಬರ್ಗಾ–3

74. ಶ್ರೀ ಸಿ. ಆರ್. ರಾವ್ – ಈಗ ದಿವಂಗತರು

75. ಶ್ರೀ ಜಿ. ಎ. ನರಸಿಂಹಮೂರ್ತಿ, 'ಕತೆಗಾರ', ಬುಲ್ ಟೆಂಪಲ್ ರಸ್ತೆ, ಬೆಂಗಳೂರು–19

76. ಶ್ರೀ ಎನ್. ಎಸ್. ರಾಮಸ್ವಾಮಿ ಅಯ್ಯರ್, ಬಿ.ಎಂ.ಶ್ರೀ. ಪ್ರತಿಷ್ಠಾನ, ನ. ರಾ. ಕಾಲೋನಿ, ಬೆಂಗಳೂರು–19

77. ಶ್ರೀ ಬಿ. ಎಸ್. ವೆಂಕಟರಾವ್, ನಂ. 23, 9 ನೇ ಮೈನ್, ವಿನಾಯಕನಗರ, ಮೈಸೂರು–12

78. ಶ್ರೀ ಡಿ. ಆರ್. ವೆಂಕಟರಮಣನ್, ಮಲ್ಲಿಕಾರ್ಜುನ ರಸ್ತೆ, ಶೃಂಗೇರಿ–577139

79. ಶ್ರೀ ಎಂ. ನರೇಂದ್ರಬಾಬು, 1149, 5 ನೇ 'ಬಿ' ಕ್ರಾಸ್, ಪ್ರಕಾಶನಗರ, ಬೆಂಗಳೂರು–21

80. ಶ್ರೀ ಸಿ. ಎಚ್. ಪ್ರಹ್ಲಾದರಾವ್, 201, 37 ನೇ 'ಎ' ಕ್ರಾಸ್, 9 ನೇ ಬ್ಲಾಕ್, ಜಯನಗರ, ಬೆಂಗಳೂರು–69

81. ಶ್ರೀ ಟಿ. ಎ. ಲಕ್ಷ್ಮೀನಾರಾಯಣಶೆಟ್ಟಿ, ಜವಳಿ ವ್ಯಾಪಾರಿ, ತುಮಕೂರು

82. ಪ್ರೊ. ಎಸ್. ರತ್ನಮ್ಮ, ನಂ. ಸಿ. ಎಚ್. 36, 5 ನೇ ಮೈನ್, ಸರಸ್ವತೀಪುರಂ, ಮೈಸೂರು–9

83. ಶ್ರೀ ನೀಲತ್ತಹಳ್ಳಿ ಕಸ್ತೂರಿ, 68(29), 'ಮಿಥಿಲಾ', 4 ನೇ ದೇವಸ್ಥಾನ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–3

84. ಪ್ರೊ. ಬಿ. ಎನ್. ಸಂಪತ್, ನಂ. 32, ಜಲದರ್ಶಿನಿ ಲೇ ಔಟ್, ರಾಜಾಮಹಲ್ ವಿಲಾಸ್ ಎಕ್ಸ್‌ಟೆನ್ಷನ್ 2 ನೇ ಸ್ಟೇಜ್, ಬೆಂಗಳೂರು–94

85. ಪ್ರೊ. ಖಿಜಾನೆ ಕೃಷ್ಣಮೂರ್ತಿ, 'ಸುಕೃತ', 704, 4 ನೇ ಕ್ರಾಸ್, 9 ನೇ ಮೈನ್, ಆರ್. ಪಿ. ಸಿ. ಲೇ ಔಟ್, ಬೆಂಗಳೂರು–40

86. ಶ್ರೀ ಎಸ್. ದತ್ತಾತ್ರಿ, ಐ.ಆರ್.ಎಸ್. (ನಿ), 131, 'ತೇಜಸ್', ನೆಹರೂ ರಸ್ತೆ, ಗಿರಿನಗರ 1 ಸ್ಟೇಜ್, ಬನಶಂಕರಿ 3 ನೇ ಸ್ಟೇಜ್, ಬೆಂಗಳೂರು–85

87. ಶ್ರೀಮತಿ ಕಮಲಾ ರಾಮಸ್ವಾಮಿ, 410, "ಬಕುಳಾಲಯ" ಮೊದಲನೆ ಲಿಂಕ್ ರಸ್ತೆ, 5ನೇ ಮೈನ್, 3ನೇ ಬ್ಲಾಕ್, ಜಯನಗರ, ಬೆಂಗಳೂರು–11

88. ಪ್ರೊ. ಜಿ. ಎಸ್. ಅವಧಾನಿ, 'ಚಾರಣ', ಕೆ. ಇ. ಬಿ. ಹಿಂಭಾಗ, ಪ್ರಭಾತನಗರ, ಹೊನ್ನಾವರ (ಉ. ಕ) 581334

IV ವಂದನ

89. ಶ್ರೀ ಬಾಪು ರಾಮಣ್ಣ, 229, 12ನೇ ಮೈನ್, 2ನೇ ಕ್ರಾಸ್, ಸರಸ್ವತೀಪುರಂ, ಮೈಸೂರು–9

90. ಡಾ. ಹೊ. ಶ್ರೀನಿವಾಸಯ್ಯ, 102, 6ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–3

91. ಶ್ರೀ ಸಿ. ಎನ್. ಬಸವರಾಜ್, ವಿಜಯಪುರ (ಬೆಂಗಳೂರು ಜಿಲ್ಲೆ)

92. ಪ್ರೊ. ಎನ್. ನಂಜುಂಡಶಾಸ್ತ್ರೀ, 105/D, 29ನೇ 'ಎ' ಕ್ರಾಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು–82

93. ಪ್ರೊ. ಜಿ. ಟಿ. ನಾರಾಯಣರಾವ್, ನಂ. 8, 'ಅತ್ರಿ', ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತೀಪುರ, ಮೈಸೂರು–9

94. ಪ್ರೊ. ನಾ. ನಾಗಪ್ಪ, 'ಸಾಕೇತ', 8/10, ಬುಲ್ ಟೆಂಪಲ್ ರಸ್ತೆ, ಶಂಕರಪುರಂ, ಬೆಂಗಳೂರು–4

95. ಶ್ರೀ ದೇವಂಗಿ ಚಂದ್ರಶೇಖರ, ದೇವಂಗಿ ಅಂಚೆ–577415 (ತೀರ್ಥಹಳ್ಳಿ ತಾಲ್ಲೂಕು)

96. ಶ್ರೀ ಆದ್ಯ ರಾಮಾಚಾರ್ಯ, 114–Y, 'ಭೀಮರಥಿ', 4ನೇ ಕ್ರಾಸ್, ಬನಶಂಕರಿ 3ನೇ ಸ್ಟೇಜ್, ನೂರಡಿ ರಿಂಗ್ ರಸ್ತೆ, ಬೆಂಗಳೂರು–85.

97. ಶ್ರೀಮತಿ ವರದಾ ರಾಮರಾವ್ ಪಂಜೆ
98. ಶ್ರೀ ಪಡುಕೋಣೆ ಪ್ರಭಾಶಂಕರರಾವ್
99. ಶ್ರೀಮತಿ ವೃಂದಾ ಪಡುಕೋಣೆ

} A/6, ಆನಂದಾಶ್ರಮ, 10ನೇ ಮೈನ್, ಮಲ್ಲೇಶ್ವರಂ, ಬೆಂಗಳೂರು–3

100. ಶ್ರೀಮತಿ ಜಯವಂತಿ ದಿ. ಹಿರೇಬೆಟ್, 25, ವಿಶ್ವಜಿತ್ ಕೋ–ಆಪ್. ಹೌಸಿಂಗ್ ಸೊಸೈಟಿ, ಪುಣೆ–16

101. ಪ್ರೊ. ಬಿ. ಆರ್. ವಾಡಪ್ಪಿ, ಅನುಗ್ರಹ, ಸಪ್ತಾಪುರ, ಧಾರವಾಡ–1

102. ಪ್ರೊ. ಅಮೃತ ಸೋಮೇಶ್ವರ, 'ಒಲುಮೆ', ಕೋಟೆಕಾರು–574152

103. ಪ್ರೊ. ಎಂ. ಎಸ್. ಅಪ್ಪ, 744, 4ನೇ ಮೈನ್, ಪಶ್ಚಿಮ ಕಾರ್ಡ್ ರಸ್ತೆ, 2ನೇ ಸ್ಟೇಜ್, ಮಹಾಲಕ್ಷ್ಮೀಪುರಂ, ಬೆಂಗಳೂರು–86

104. ಪ್ರೊ. ವಸಂತ ಕುಷ್ಟಗಿ, ಎಂ. ಐ. ಜಿ. 26, ಆದರ್ಶನಗರ, ಮೊದಲ ಹಂತ, ಕಲಬುರಗಿ 585105

105. ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ, ಸಾಕೇತ, ಮೋಡಂಕಾಪು – 574219

106. ಪ್ರೊ. ಬಿ. ಎಸ್. ಗುಂಡೂರಾವ್ 44/3. 9 ನೇ ಮೈನ್, 46 ನೇ ಕ್ರಾಸ್, 4 ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10

107. ವಿದ್ವಾನ್ ಶ್ರೀ ರಾಮಚಂದ್ರ ಉಚ್ಚಿಲ, ವಾಣೀವಿಲಾಸ, ಸೋಮೇಶ್ವರ, ಉಚ್ಚಿಲ–574104

108. ಶ್ರೀ ಸುರೇಂದ್ರದಾಸ, 36, 'ತೃಪ್ತಿ' ಕುಮಾರವ್ಯಾಸನಗರ, ಹುಬ್ಬಳ್ಳಿ–31

109. ಶ್ರೀ ನರಸಿಂಹಸ್ವಾಮಿ, 57, 3 ನೇ ಕ್ರಾಸ್, ಸೆಂಟ್ರಲ್ ಎಕ್ಸೈಸ್ ಲೇ ಔಟ್, ವಿಜಯನಗರ, ಬೆಂಗಳೂರು–40

110. ಶ್ರೀ ಬಿ. ಎಸ್. ಕೇಶವರಾವ್, 41/41 ವಿಜಯಲಕ್ಷ್ಮೀನಿಲಯ, 12 ನೇ ಕ್ರಾಸ್, 13 ನೇ ಮೈನ್, ಪದ್ಮನಾಭನಗರ, ಬೆಂಗಳೂರು–70

111. ಶ್ರೀ ಎಂ. ಎಸ್. ಮೂರ್ತಿ, ನಂ. 132 (ಮಹಡಿ ಮನೆ), ಗಾಂಧೀಬಜಾರ್ ಸರ್ಕಲ್, ಬಸವನಗುಡಿ, ಬೆಂಗಳೂರು–4